ಫೋನ್ ನಂ. ೭೭೪ || ವಂದೇ ಮಾತರಂ || ಇಂದಿನ ಪತ್ರಿಕೆ ೮ ಕಾಸು

ಸಂಪುಟ ೫] ಭಾನುವಾರ ೧—೬—೪೭ [ಸಂಚಿಕೆ ೨೫೨

ದೆಹಲಿಯಲ್ಲಿ ನಾಳೆ ನಾಯಕರ ಸಮ್ಮೇಳನ

...ರಸಭೆಯಲ್ಲಿ ಸ್ವತಂತ್ರರ ಸಭಾ ಪರಿತ್ಯಾಗ

ಅವಿಶ್ವಾಸ ಪ್ರಕರಣದ ಬಿಕ್ಕಟ್ಟಿನ ಪರಿಹಾರ

ಮೈಸೂರು ೧

...ರಸಭೆಯ ಅಧಿವೇಶನವು ನಿನ್ನೆ ಮ... ಶ್ರೀ ರಾಮಚಂದ್ರರಾವ್ ಬೋಂ...ರವರ ಅಧ್ಯಕ್ಷತೆಯಲ್ಲಿ ಜರುಗಿತು. ...ಸಭೆಗಳ ವರದಿಯನ್ನು ಅಂಗೀಕರಿ...ನ ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚ... ಬಂದಿದ್ದ ನಿರ್ಣಯವನ್ನು ಪರಿಶೀಲಿ... ಉಪಾಧ್ಯಕ್ಷರು ೬-೫-೪೭ ರಲ್ಲಿ ಕಳಿದ ...ಭಾವರದಿಯನ್ನು ಅಂಗೀಕರಿಸಬೇಕೆಂ... ಶ್ರೀ ಟಿ ಮರಿಯಪ್ಪನವರು ತಿದ್ದುಪಡಿ...ವನ್ನು ಸೂಚಿಸಿದರು. ಶ್ರೀ ಬಿ ನಾ...ಣಸ್ವಾಮಿಯವರು ಅದನ್ನು ಸಮ...ದರು ಶ್ರೀಗಳಾದ ಅಗರಂ ರಂಗಯ್ಯ ಎಸ್ ನಂಜಪ್ಪ, ಎ ಕೃಷ್ಣಮೂರ್ತಿರಾಯ ಎಲ್ ರಾಮಚಂದ್ರರಾಯರುಗ...ಮಾತನಾಡಿ, ಕೆಲವು ದಿನಗಳಿಂದ ಪುರ...ದಲ್ಲಿ ತಲೆದೋರಿರುವ ಬಿಕ್ಕಟ್ಟಿನ ಪರಿ...ಕ್ಕೆ ಇದು ಸೂಕ್ತವಾದ ಮಾರ್ಗವೆಂದೂ ...ಕ್ಷರು ಇದನ್ನು ಅರಿಯಬೇಕೆಂದೂ ಹೇ... ಅಧ್ಯಕ್ಷರು ಮಾತನಾಡಿ ಬಂದಿನ ...ಯನ್ನು ಪುಸ್ತಕದಲ್ಲಿ ಸೇರಿಸುವ ಬಗ್ಗೆ ...ರದ ಅಭಿಪ್ರಾಯವನ್ನು ಕೇಳಲಾಗಿದೆ ...ಮು ಹೇಳಿದರು ಕಾಂಗ್ರೆಸ್ ಪಕ್ಷದ ...ಂದಕ್ಕೆ ಸಮಾಧಾನ ಹೇಳಿ ಸರ್ಕಾರದ ...ವು ಯಾವಾಗ ಬರುತ್ತದೆಯೋ ...ಮುಂದೆ ಸೂಕ್ತ ವ್ಯವಸ್ಥೆ ಮಾಡಬ...ದು ತಿಳಿಸಿದರು. ಸಭೆಯ ಕಾರ್ಯಕ...ಗಳ ವರದಿಯು ಪುಸ್ತಕದಲ್ಲಿ ಮೇಲ್ಕಂ...ಸ ಸಭೆಯ ವರದಿಯನ್ನು ಸೇರಿಸ...ದೇ ಅಥವಾ ಇಲ್ಲವೇ ಎಂಬ ವಿಷಯ...ಕೇಳಲಾಗಿದೆಯೇ ವಿನಾ ಸದರಿ ವಿ...ಗಳನ್ನು ಈ ಸಭೆಯಲ್ಲಿ ಸ್ಥಿರಪಡಿಸಬ...ಬೇ ಇಲ್ಲವೇ ಎಂಬುದನ್ನು ಕೇಳಲಾಗಿಲ್ಲ ...ಕದಲ್ಲಿ ಸೇರಿಸುವ ವಿಚಾರವಾಗಿ ಸ...ದಿಂದ ಬರುವ ಸಲಹೆಯೇ ಅದನ್ನು ...ಸುವ ವಿಷಯವನ್ನು ಅನ್ವಯಿಸು...ವುದು ತಿಳಿಸಲಾಯಿತು. ಶ್ರೀಗಳಾ... ವೆಂಕಟೇಶಯ್ಯ ಮತ್ತು ಮಹಮದ್ ...ರವರು ತಿದ್ದುಪಡಿಯನ್ನು ವಿರೋಧಿ... ತಮ್ಮ ವಿರೋಧವನ್ನೂ ಸಮಂ...ವಾಗಿ ಅಧ್ಯಕ್ಷರು ಹೇಳಿದರು. ನಂತ...ದ್ದುಪಡಿಯು ೧೫-೨ ಓಟುಗಳಿಂದ ಅಂ...ರವಾಯಿತು

...ಸ್ಪಟ್ಟ ಈ ರೀತಿ ಪರಿಹಾರವಾಗಿ ಪೌ...ಸಭೆಯು ತನ್ನ ಮಾಮೂಲು ಕಾರ್ಯಕಲಾ...ವ ಮುಂದುವರಿಸಲು ಅವಕಾಶವಾಯಿ...

ಅನಂತರ ಮೇ ಮಾಹೆ ಸಾಧಾರಣ ...ಸ ಕಾರ್ಯಕಲಾಪಗಳು ಆರಂಭವಾ... ಆಗ ಶ್ರೀ ಎ ವೆಂಕಟೇಶಯ್ಯನವ ಮೇಲ್ಕಂಡ ತಿದ್ದುಪಡಿಗೆ ಅಧ್ಯಕ್ಷರು ಅ...ನುಮತಿ ಕೊಟ್ಟದ್ದೂ, ಅದು ಅಂಗೀಕಾರವಾ...ದ್ದೂ ಕ್ರಮಬದ್ಧವಲ್ಲವೆಂದೂ, ಅದ... ಈ ಸಭೆಯಲ್ಲಿ ಕಾವು ಪಿ ... ...ರವರೂ ಭಾಗವಹಿಸುವುದಿಲ್ಲವೆಂ...ಹೇಳಿ ಸಭೆಯಿಂದ ಇಬ್ಬರೂ ಹೊ...ದರು. ಆ ವೇಳೆ ಸಭೆಯ ಮ...ಸ್ಥರು ನ್ಯಾಯವಾದಿಗಳು ನಮಿಸ ಪು...

ಹಿಂದೀ ತರಗತಿಗಳು

ಮೈಸೂರಿನ ದಯಾನಂದ... ...ಮ ಕಾಂಗ್ರೆಸ್ ಕಚೇರಿ, ದೊಡ್ಡಪೇಟೆ ... ...ವನ ಸಂಘ ಮತ್ತು

ಮದ್ರಾಸ್ ಗೌರ್ನರ್‌ಗಿರಿಗೆ ಸರ್ ಮಿರ್ಜಾರವರು ?

— ಸರ್ ಮಿರ್ಜಾ ಇಸ್ಮೇಯಿಲರು ದೆಹಲಿ ಸಮ್ಮೇಳನವಾದ ನಂತರ ಹೈದರಾಬಾದಿನ ಪ್ರಧಾನಿಗಳ ಅಧಿಕಾರವನ್ನು ಬಿಟ್ಟು ಕೊಡುವರೆಂದು ಹೇಳಲಾಗಿದೆ. ಅವರ ಸ್ಥಾನಕ್ಕೆ ಹಿಂದೆ ಇದೇ ಸ್ಥಾನದಲ್ಲಿದ್ದ ಛತ್ತಾರಿ ನವಾಬರೇ ಬರುವ ನಿರೀಕ್ಷಣೆ ಇದೆ. ಸರ್ ಮಿರ್ಜಾರವರು ಮದ್ರಾಸಿನ ಗೌರ್ನರಾಗಿ ನೇಮಕವಾಗುವರೆಂದು ದೆಹಲಿಯಲ್ಲಿ ಹೇಳಲಾಗುತ್ತಿದೆ.

ಪಂಜಾಬಿನಲ್ಲಿ ಮತ್ತೆ ಪ್ರಳಯ

ಪಂಜಾಬಿನ ಪ್ರಳಯ ಪಾರ್ಕ ಮತ್ತೆ ಬರಲು ಆರಂಭವಾಗಿದೆ. ಕೋಮು ... ಮದಾಂಧರ ಉನ್ಮಾದಕರವಾದ ಪೈಶಾಚಿಕ ಪ್ರವೃತ್ತಿಯ ಫಲವಾಗಿ ಗುರುಗಾಂ ಜಿಲ್ಲೆಯ ೩೦ ಗ್ರಾಮಗಳು ಅಗ್ನಿದೇವನಿಗೆ ಆಹುತಿಯಾದುವು. ಪ್ರಾಂತವು ಜನಗಳನ್ನು ಬಾಚಿಕೊಂಡು ಹೋಗಿರುವುದರಿಂದ ಸತ್ತವರ ಸಂಖ್ಯೆ ಖಚಿತವಾಗಿ ಗೊತ್ತಾಗಿಲ್ಲ. ಮಿಲಿಟರಿಯವರು ಈ ಪ್ರದೇಶದಲ್ಲಿ ಕಾವಲಿದ್ದಾರೆ.

ಮಕ್ಕಳ ಕೂಟ

ಉದಕಮಂಡಲ ೩೦

ವಿಹಾರಕ್ಕಾಗಿ ಬಂದಿರುವವರ ಮಕ್ಕಳುಗಳ ಕೂಟವೊಂದನ್ನು ಮಾರ್ಡನ್ ಹಿಂದೂ ಹೋಟೇಲಿನ ಮಾಲೀಕರಾದ ಶ್ರೀ|| ಕೆ. ಸೀತಾರಾಮಯ್ಯರವರು ಕಳೆದ ೨೭ನೇ ತಾ|| ಏರ್ಪಡಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಕೊಳ್ಳೇಗಾಲದ ರಾಣಿಯವರು ವಹಿಸಿದ್ದರು. ಆಟಗಳಲ್ಲಿ ಚಿ|| ಕೀರ್ತಿವರ್ಮ ಮತ್ತು ಕುಮಾರಿ ಕೃಷ್ಣವೇಣಿ ಟ್ರೀಯ ಛಾಲೆಂಜ್ ಬಹುಮಾನಗಳನ್ನು ಪಡೆದರು. ಅಧ್ಯಕ್ಷಿಣಿಯವರು ಮಾತನಾಡಿ ಶ್ರೀ|| ರಾಯರು ಮಕ್ಕಳ ಮೇಲಿಟ್ಟಿರುವ ಮಮತೆಯನ್ನು ಪ್ರಶಂಸಿಸಿದರು.

ನೂತನ ...ಯ ಸರ್ಕಾರದ ಬಿಎನವಲ್ಲಿರುವ ಹಿಂದೂಸ್ಥಾನ್ ಸಭೆಗಳಲ್ಲಿ ಸಾಗರದಿಂದ ಪ್ರತಿ ದಿನ ಹಿಂದೀ ತರಗತಿಗಳ ಆರಂಭವಾಗುವುದು ... ವಾಕಾಶವನ್ನು ಉಪಯೋಗಿಸಿ ಕೊಳ್ಳಬೇಕಾಗಿ ಪ್ರಾರ್ಥಿಸಲಾಗಿದೆ.

ಬೇರೆಬೇರೆ ಮತಗಳಲ್ಲಿದ್ದರೂ ನಾವೆಲ್ಲಾ ಭಾರತೀಯರು

ಭಾರತದಲ್ಲಿ ವಿವಿಧ ಭಾಷೆಗಳೂ, ಬೇರೆ ಬೇರೆ ಮತಧರ್ಮಗಳೂ, ಶರಿತವಾದ ಜೀವನದ ರೀತಿನೀತಿಗಳೂ ಇದ್ದರೂ, ನಾವೆಲ್ಲಾ ಭಾರತೀಯರು. ನಾವು ಯಾವ ಮತಕ್ಕೇ ಸೇರಲಿ ಎಲ್ಲರೂ ಸಹೋದರರು, ಎಲ್ಲರೂ ಭಾರತಜನನಿಯ ಮಕ್ಕಳು. ನಮ್ಮ ನಾಗರಿಕತೆಯ ವೈಶಿಷ್ಟ್ಯಕ್ಕಾಗಿ ನಾವು ಹೆಮ್ಮೆಪಡಬೇಕು. ಭೌಗೋಳಿಕವಾಗಿ ಭಾರತವು ಒಂದು ಪ್ರತ್ಯೇಕವಾದ ಪ್ರದೇಶ. ಅದರ ಭವಿಷ್ಯವನ್ನು ವಿವೇಕದಿಂದಲೂ, ದೂರಾಲೋಚನೆಯಿಂದಲೂ ನಾವು ನಿರ್ಧರಿಸಬೇಕು. ಅನುಭವದ ವಾಣಿಯು ಹಿರಿಯರ ಕಿವಿಗೆ ಬೀಳದಿರಬಹುದು. ನಾಡಿನ ಯುವಕರಾದರೂ ಅನುಭವದ ಫಲವನ್ನು ಗಮನಿಸಿ ವಿವೇಕದಿಂದ ವರ್ತಿಸಬೇಕು. ಭಾರತದ ಹಿರಿಮೆಯನ್ನು ಎತ್ತಿಹಿಡಿದು ಪ್ರಪಂಚದಲ್ಲಿ ಗಣ್ಯಸ್ಥಾನ ದೊರಕಿಸಿಕೊಡುವುದು ನಮ್ಮ ಕರ್ತವ್ಯ-ಎಂಬುದಾಗಿ ಸರ್ ಮಿರ್ಜಾ ಇಸ್ಮೇಯಿಲರು ದೆಹಲಿಯಲ್ಲಿ ಯುವಕರಿಗೆ ಸಂದೇಶವನ್ನಿತ್ತಿದ್ದಾರೆ.

೧೯೫೦ ರಲ್ಲಿ ನಾಜಿ ಪಕ್ಷದ ಪುನರುಜ್ಜೀವನ

ನಾಜಿಪಕ್ಷದ ಅಗ್ರೇಸರರಲ್ಲೊಬ್ಬರಾದ ಮಾರ್ಟಿನ್ ಬೋರ್ಮನ್ನರು ಇನ್ನೂ ಬದುಕಿದ್ದಾರೆ. ಸ್ಪೇನಿನಲ್ಲಿ ಅವರು ತಮ್ಮ ಪಕ್ಷದ ಸಂಘಟನೆಗಾಗಿ ಗುಪ್ತರೀತಿಯಿಂದ ಪ್ರಯತ್ನಿಸುತ್ತಿದ್ದಾರೆ. ಬೇಗನೆ ಜರ್ಮನಿಗೆ ಮರಳಿ ಅವರು ಬರುವರು. ೧೯೫೦ ರಲ್ಲಿ ನಾಜಿ ಪಕ್ಷವು ಪುನರುಜ್ಜೀವನ ಹೊಂದುವುದೆಂದು ತಮಗೆ ಅವರೇ ತಿಳಿಸಿರುವುದಾಗಿ ಪತ್ರಿಕಾಕರ್ತರೊಬ್ಬರು ವರದಿಮಾಡಿರುತ್ತಾರೆ.

ಜಮಖಂಡಿಯಲ್ಲಿ ಮಂತ್ರಿಗಳ ಚುನಾವಣೆ

ಜಮಖಂಡಿ ಶಾಸನ ಸಭೆಯ ವಿಶೇಷ ಅಧಿವೇಶನವು ಮೊನ್ನೆ ನಡೆದು ಮಂತ್ರಿಮಂಡಲದಲ್ಲಿ ೩ ಮಂದಿ ಇರಬೇಕೆಂದು ನಿರ್ಧರಿಸಿ, ಶ್ರೀ ಜೋಶೀ ಮತ್ತು ಶ್ರೀ ಜತ್ತಿಯವರನ್ನು ಮಂತ್ರಿಗಳನ್ನಾಗಿ ಆರಿಸಲಾಯಿತು. ಸಭೆಯು ರಾಜ್ಯಾಂಗ ಸಭೆಗೂ ಪ್ರತಿನಿಧಿಯನ್ನು ಆರಿಸಿತು. ಪ್ರತಿಯೊಂದ ಹಿಂದಿರುಗಿದ ನಂತರ ಮಂತ್ರಿಗಳಿಗೆ ಅಧಿಕಾರ ವಹಿಸಿಕೊಡ ಪ್ರವಾಗಿ ವ ಜಾರಾಜರು ಸಂದೇಶವಿತ್ತಿದ್ದಾರೆ.

ಕೋರಂ ಇಲ್ಲದ ಬಗ್ಗೆ ಹಕ್ಕುಬಾಧ್ಯತಾ ಪ್ರಶ್ನೆ

ಅಧ್ಯಕ್ಷರ ರೂಲಿಂಗಿಗೆ ಗುಪ್ತರವರ ಪ್ರತಿಭಟನೆ

ಸ್ವಂ ಸು. ಪ್ರೋ|] ಬೆಂಗಳೂರು ೧

ಮೊನ್ನೆ ದಿನ ಕೋರಂ ಇಲ್ಲದೆ ಪ್ರ||ಪ್ರ|| ಸಭೆಯ ಕಾರ್ಯಕಲಾಪಗಳು ನಡೆದುವೆಂಬ ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ಶ್ರೀ ಗುಪ್ತ ಮತ್ತು ಭೂಪಾಳಂರವರು ಎತ್ತಿದ್ದರಷ್ಟೆ. ಈ ವಿಷಯವು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಲ್ಪಡಲು ಅರ್ಹವಾದುದಲ್ಲವೆಂದು ಅಧ್ಯಕ್ಷರಾದ ಡಾ|| ರಾಮಯ್ಯರವರು ತಿಳಿಸಿದರು. ಈ ಅಂಶವನ್ನು ನಿರ್ಧರಿಸಲು ಸಭೆಗೆ ಬಿಡಬೇಕೇ ವಿನಃ ಅಧ್ಯಕ್ಷರೇ ತಳ್ಳಿಹಾಕಬಾರದೆಂದು ಹೇಳಿ ಶ್ರೀ ಗುಪ್ತರು ಪ್ರತಿಭಟಿಸಿದರು. ರೂಲಿಂಗ್ ಕೊಟ್ಟಾಗಿರುವುದರಿಂದ ಪುನಃ ಈ ವಿಚಾರದ ಚರ್ಚೆಗೆ ಅವಕಾಶವಿಲ್ಲವೆಂದು ಅಧ್ಯಕ್ಷರು ಹೇಳಿದರು.

ಸೌದೆ ಇದ್ದಲುಗಳ ಅಭಾವದ ಬಗ್ಗೆ ನಿಲುವಳಿ ನಿರ್ಣಯವು ಶ್ರೀ|| ಪದ್ಮನಾಭರವರಿಂದ ಮಂಡಿಸಲ್ಪಟ್ಟಿತು. ಶ್ರೀಮತಿ ಸುನಂದಾದೇವಿ ಮತ್ತು ಶ್ರೀಗಳಾದ ರಾಮರಾಜಯ್ಯಂಗಾರ್, ಭೂಪಾಳಂರವರು ಅನುಮೋದಿಸಿದರು. ಹಕ್ಕು ಬಾಧ್ಯತೆಗಳ ಸಮಿತಿಗೆ ಚುನಾವಣೆ ನಡೆಯುತ್ತಿದ್ದುದರಿಂದ ಅನೇಕ ಸದಸ್ಯರು ಹೊರಟು ಹೋಗಿದ್ದರು. ಆದ್ದರಿಂದ ಮತ್ತೆ ಸಭೆಯಲ್ಲಿ ಕೋರಂ ಇಲ್ಲದೆ ಈ ವಿಷಯವೂ ಅಲ್ಲಿಗೆ ಮುಕ್ತಾಯಗೊಂಡಿತು.

ನಾಳೆ ದೆಹಲಿಯಲ್ಲಿ ಮುಖಂಡರ ಸಮ್ಮೇಳನ

ದೆಹಲಿಯಲ್ಲಿ ನಾಳೆ ನಾಯಕರ ಸಮ್ಮೇಳನವು ಜರುಗುವುದು. ವೈಸರಾಯರು ತಮ್ಮ ಹೊಸ ಯೋಜನೆಯನ್ನು ಮಂಡಿಸುವ ಮುನ್ನ ಮೇ ೧೬ ನೇ ತಾ|| ಬ್ರಿಟಿಷ್ ಮಂತ್ರಿ ನಿಯೋಗದವರು ಸೂಚಿಸಿದ ಯೋಜನೆಯನ್ನು ನಾಯಕರು ಒಪ್ಪುವಂತೆ ಕಟ್ಟಕಡೆಯ ಪ್ರಯತ್ನವೊಂದನ್ನು ಮಾಡುವರೆಂದೂ, ಅದು ವಿಫಲವಾದರೆ ತಮ್ಮ ಯೋಜನೆಯನ್ನು ಅವರು ಜಾರಿಗೆ ತರುವರೆಂದೂ ಹೇಳಲಾಗಿದೆ. ನಾಳಿದ್ದು ರೇಡಿಯೋ ಮೂಲಕ ಅವರ ಭಾಷಣ ಮಾಡುವರೆಂದೂ ಮಾರನೇ ದಿನ ಪತ್ರಿಕಾ ಸಮ್ಮೇಳನವನ್ನು ನಡೆಸಿ ಹೊಸ ಯೋಜನೆಯನ್ನು ವಿವರಿಸುವರೆಂದೂ ತಿಳಿದು ಬಂದಿದೆ.

ವಿವಾಹ ಮಹೋತ್ಸವಗಳು

ಮೈಸೂರು ೩೦

ಪ್ರಾರಂಭದ ಶಿಕ್ಷಣಾಧಿಕಾರಿ ಶ್ರೀ ಟಿ ವೆಂಕಟರಮಣಯ್ಯನವರ ಸೋದರ ಸೊಸೆ ಸೌ|| ಕಮಲಮ್ಮನವರನ್ನು ಶ್ರೀ ಎಂ ಶಂಬಯ್ಯನವರ ಪುತ್ರ ಚಿ|| ರಾಮಚಂದ್ರನಿಗೂ

ಹೊಸತೋಟ ವಾರ್ಡ್ ನಾರಾಯಣ ಶಂಕರು ತಮ್ಮ ಕುಮಾರಿ ಸೌ|| ಕಲಕಗಂಗರವರನ್ನು ಬೆಂಗಳೂರು ಚೀಫ್ ಇಂಜಿನಿಯರ್ ಆಫೀಸು ಶ್ರೀ ಎಲ್ ಶ್ರೀಕಂಠಯ್ಯನವರ ಪುತ್ರ ಶ್ರೀ ಬಿ ಎಸ್. ಕೃಷ್ಣಮೂರ್ತಿಗೂ

ನಂಜನಗೂಡು ಅಡ್ವೊಕೇಟ್ ಶ್ರೀ|| ಎಸ್ ನಾರಾಯಣರಾಯರ ಮಗ ಶ್ರೀ|| ಎಸ್ ಎನ್ ವೆಂಕಟರಾಮುರಿಗೆ ಕೃಷ್ಣರಾಜನಗರದ ಶ್ರೀ ಹೆಚ್ ನರಸಿಂಗರಾಯರ ಪುತ್ರಿ ಬಿ|| ತನ್ನ ಕನ್ಯಾದಾನವನ್ನೂ ಕೊಟ್ಟು ವಿವಾಹ ಮಹೋತ್ಸವಗಳು ನಿನ್ನೆ ವೈಭವದಿಂದ ಜರುಗಿದುವು.

ಸಾಧ್ವಿ

ತಾ॥ ೧-೬-೪೭ ಭಾನುವಾರ

ಜಿನ್ನಾರವರಿಗೆ ಮಹಾತ್ಮರ ಕರೆ

ಭಾರತದ ಸಮಸ್ಯೆಯ ಪರಿಹಾರಕ್ಕಾಗಿ ಬ್ರಿಟಿಷ್ ಸರ್ಕಾರದ ಅಭಿಪ್ರಾಯವನ್ನು ನಾಳೆ ವೈಸರಾಯರು ಹೊರಗೆಡಹಲಿರುವರಷ್ಟೆ. ಈ ವೇಳೆಗೆ ಅನ್ಯಾಯಕ್ಕೆ ಪ್ರಾಮುಖ್ಯತೆಯನ್ನು ಕೊಡಲಾಗದೆಂದೂ, ಭಾರತೀಯರೇ ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳಬೇಕೆಂದೂ ಮಹಾತ್ಮರು ಇತ್ತೀಚೆಗೆ ಒತ್ತಿ ಹೇಳುತ್ತಿದ್ದಾರೆ. ಪಾಕಿಸ್ಥಾನ ರಚನೆಗಾಗಿ ಅವರು ಬ್ರಿಟಿಷರ ಕಡೆ ನೋಡಬಾರದೆಂದು ಅವರು ಹೇಳಿ ಮಿ॥ ಜಿನ್ನಾರವರು ತಮ್ಮ ಮುಸಿಯುಕ್ತಿಯೇ ಭಾರತ ನಾಯಕರ ಸಮ್ಮೇಳನವೊಂದನ್ನು ನಡೆಸಲೆಂದು ಸೂಚಿಸಿದ್ದಾರೆ. ಭಾರತದ ರಾಜಕೀಯ ಸಂಸ್ಥಾನಗಳಲ್ಲಿ ಇದುವರೆಗೆ ನಡೆದಿರುವ ಪ್ರಕರಣಗಳೆಲ್ಲಕ್ಕಿಂತಲೂ ಇದು ಒಂದು ಹೆಜ್ಜೆ ಮುಂದೆ ಹೋಗುತ್ತದೆ.

ಇದುವರೆಗೆ ಪ್ರತಿನಿಧಿಗಳು ಸಂಧಾನವನ್ನು ನಡೆಸಿರುವರು. ಬ್ರಿಟಿಷ್ ಸಂಸ್ಥಾನದವರು ಬಂದು ಯೋಜನೆ ಪರಿಷತ್ತುಗಳನ್ನು ನಡೆಸಿರುವರು. ... ... ಸರ್ವ ಪಕ್ಷ ಸಮ್ಮೇಳನಗಳನ್ನು ... ... ಕಾಂಗ್ರೆಸ್ಸಿನ ಇತ್ತೀಚೆಗೆ ... ... ರಾಜಕೀಯ ... ... ಪರಿಶೀಲಿಸಬೇಕೆಂದು ... ... ಅದರಿಂದ ಇವುಗಳಿಂದ ಯಾವ ಪ್ರಯೋಜನವೂ ಆಗಿರುವುದಿಲ್ಲ.

ಪಕ್ಷಗಳ ನಡುವೆ ಈಗ ಸಮ್ಮೇಳನವನ್ನು ... ... ಮಹಾತ್ಮರು ... ... ಜಿನ್ನಾರವರಿಗೆ ... ... ಸಾಧ್ಯವಿಲ್ಲ ... ... ಪ್ರತ್ಯೇಕ ಭಾವನೆಯನ್ನು

ವಿರೋಧಾಭಿಪ್ರಾಯಗಳನ್ನು ಸೂಚಿಸುತ್ತಿರುವ ಲೀಗಿನವರು ಶಾಂತರಾಗಿಯೇ ಈ ಬಗೆಯ ಸಮ್ಮೇಳನವನ್ನು ... ಸಂಭವವು ತೋರುವುದಿಲ್ಲ.

ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕಾಗಿ ಬ್ರಿಟಿಷ್ ಸರ್ಕಾರದವರು ಹಿಂದೆ ಹೊರಡಿಸಿರುವ ಘೋಷಣೆಯು ಸರ್ವರಿಗೂ ಬಾಧ್ಯವಾಗಿರುವುದೆಂದೂ, ಅದರಲ್ಲಿ ಏನನ್ನೂ ಬದಲಾವಣೆ ಮಾಡಲಾಗದೆಂದೂ, ಅದೇ ಬ್ರಿಟಿಷರ ಅಂತಿಮ ವಾಕ್ಯವೆಂದೂ, ಅದರಿಂದ ಹಿಂದೆ ಹೋದರೆ ಬ್ರಿಟಿಷರು ವಿಶ್ವಾಸಘಾತಕತನವನ್ನು ಮಾಡಿದಂತಾಗುವುದೆಂದೂ ಮಹಾತ್ಮರು ಹೇಳುತ್ತಿದ್ದಾರೆ. ಆದರೆ ಲೀಗಿನವರು ಮಾತ್ರ ಮೇ ೧೬ರ ಘೋಷಣೆಯನ್ನು ಇನ್ನೂ ಅಂಗೀಕರಿಸಿರುವುದಿಲ್ಲ. ಅವರನ್ನು ತೃಪ್ತಿ ಪಡಿಸಲು ಬ್ರಿಟಿಷ್ ಸರ್ಕಾರದವರು ಈಗ ಏನಾದರೂ ಬದಲಾವಣೆಗಳನ್ನು ಮಾಡುವುದಾದರೆ ಭಾರತೀಯರು ಸಿದ್ಧ. ಅವರು ಈಗ ಮಾಡಿದ ತಮ್ಮ ಮಾತಿಗೆ ... ... ಅಧಿಕಾರವನ್ನು ... ವ್ಯವಸ್ಥೆ ಮಾಡಿ, ಬರುವ ವರ್ಷ ಇಲ್ಲಿಂದ ಹೊರಡಲು ಅನುಮಾಡಿಕೊಳ್ಳಬೇಕೆಂಬುದೇ ಸಕಲ ಭಾರತೀಯರ ಇಂದಿನ ... ಯಾಗಿದೆ.

ಬಂಗಲೆ ಮಾರಾಟಕ್ಕಿದೆ

ಮೈಸೂರು ವಾಣೀವಿಲಾಸ ಮೊಹಲ್ಲಾ ಟೆಂಪಲ್ ರೋಡು ೨೨೦೬ ನೇ ನಂಬರು ಬಂಗಲೆ, ಗ್ಯಾರೇಜ್ ಮತ್ತು ಔಟ್ ಹೌಸು ಸೈಟಿನ ವಿಸ್ತೀರ್ಣ ೬,೦೦೦ ಚದರ ಗಜಗಳು. ಕಾಂಪೌಂಡಿನಲ್ಲಿ ತೆಂಗಿನ ಗಿಡಗಳೂ ಹಣ್ಣು ಮತ್ತು ಹೂವಿನ ಗಿಡಗಳೂ ಇವೆ. ಬಾಕಿ ವಿಚಾರಗಳನ್ನು ಕೆಳಗೆ ಕಂಡವರಿಂದ ಪಡೆಯಬಹುದು.

ಕೆ. ಅನಂತರಾಮಯ್ಯ,
೨೮೬೦, ೧೦ ನೇ ಕ್ರಾಸ್ ರೋಡು,
ವಾಣೀವಿಲಾಸ ಮೊಹಲ್ಲಾ, ಮೈಸೂರು

Edited printed and published by A. R. Nagarajan at the Sadhvi Press D. Subbaiah Road, Mysore.

ಲಂಕೆಗೆ ಗಿರಿಯವರು

ಸಿಂಹಳ ದ್ವೀಪದಲ್ಲಿ ಭಾರತದ ಪ್ರತಿನಿಧಿಯಾಗಿರುವ ಶ್ರೀ ಎಂ. ಎಸ್. ಅಣೆಯವರ ಸ್ಥಾನದಲ್ಲಿ ಮದ್ರಾಸಿನ ಮಾಜಿ ... ಮಂತ್ರಿಗಳಾದ ಶ್ರೀ ವಿ. ವಿ. ಗಿರಿಯವರನ್ನು ಭಾರತ ಸರ್ಕಾರವು ನೇಮಿಸಿ...

RAJKAMA...

Morning Shows from 30-... for 4 days daily at 10-30

Appointment with Crime

It is a first run in the c...

ಮನೆ ಕ್ರಯಕ್ಕಿದೆ

ಮೈಸೂರು ಕೃಷ್ಣಮೂರ್ತಿಪುರಂ ... ನೇ ನಂಬರ್ ಮನೆ ... ಔಟ್ ಹೌಸ್ ಸಹ ಇವೆ. ವಿವರಗಳಿಗೆ ... ರೋಡು ೯೭೭ ನೇ ನಂಬರು ... ಯಲ್ಲಿ ವಿಚಾರಿಸಿ.

BANGALORE RACES 1947.

ಬೆಂಗಳೂರು ರೇಸಸ್ 1947.

ಜೂನ್ 1, 7, 11, 14, 18, 21 ಮತ್ತು 25 ರಲ್ಲಿ

ಟ್ರಿಪ್ ಪೋಕ್ಸ್ ಮತ್ತು ಟೋಟಲೈಜೇಟರ್ಸ್

ರೂ 2 ಸ್ಪ್ಲಿಟ್ ಮತ್ತು ರೂ. 5 ಟ್ರೆಬಲ್ ಈವೆಂಟ್

Ist ಟೋಟ್ ರೂ 10 IInd ಟೋಟ್ ರೂ. 5

ಪ್ರವೇಶ: ಮೊದಲನೇ ತರಗತಿ .... ಪುರುಷರು ರೂ 6 ಒಂದು ದಿನಕ್ಕೆ

„ „ .. ಸ್ತ್ರೀಯರು ರೂ. 4 „

ಎರಡನೇ ತರಗತಿ ಪುರುಷರು ಅಥವಾ ಸ್ತ್ರೀಯರು ರೂ 2 „

ಶ್ರೀ ಕೃಷ್ಣ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : . ಫೋನ್ 4

ಚಿನ್ನ, ಬೆಳ್ಳಿ, ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್

ರಾಜಕಮಲ್,

ತಾ॥ ೩೦-೫-೪೭ ರಿಂದ

ಆರನೇ ವಾರ

ಪ್ರತಿ ದಿನ ೩ ಆಟಗಳು

ಅಪೆರಾ ಟಾಕೀಸ್, ಮೈಸೂರು

೨-೬-೪೭ ರಿಂದ ೭ ನೇ ವಾರ

ರಾಜಕುಮಾರಿ

Morning Shows from 30-5-47

SUN BONNET SUE

ಹರಾಜು ನೋಟೀಸು

... ...

... ಎಂ. ವೆಂಕಟಪ್ಪಶೆಟ್ಟಿ,
ಮೈಸೂರು ಗ್ಯಾರೇಜ್.

★ ವುಡ್‌ಲ್ಯಾಂಡ್ಸ್, ಮೈಸೂರು ★

1-6-47 ರಿಂದ

ತಕ್ಕಿರಿದ ೫ ನೇ ವಾರ

ಪ್ರತಿ ದಿನ ೩ ಆಟಗಳು

ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಆಟ ಉಂಟು.

★ ನಾವು ಇಬ್ಬರು ★

(ತಮಿಳು)

... ಆರ್. ಮಹಾಲಿಂಗಂ, ಜಯಲಕ್ಷ್ಮಿ, ... ಆರ್. ... ಮುತ್ತುರಾಮನ್ ...

ಫೋ॥ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨—೬—೪೭ [ಸಂಚಿಕೆ ೪೧

ಹಿಂದೂಸ್ಥಾನವನ್ನೇ ಬರೋಡ ಸೇರುವುದು

ನಗರದಲ್ಲಿ ಮುಂಜಾಗ್ರತೆ ಕ್ರಮ

ಮೈಸೂರು ೨

ಈ ದಿನ ದೆಹಲಿಯಲ್ಲಿ ನಾಯಕರ ಸಮ್ಮೇಳನವು ನಡೆಯುತ್ತಿರುವುದರಿಂದ ಆದರ ಪ್ರತಿಕ್ರಿಯೆಗಳ ಬಗ್ಗೆ ಮುಂಜಾಗ್ರತೆಯನ್ನು ಕೈಗೊಳ್ಳಲು ರಾಜಧಾನಿಯ ನಾನಾಭಾಗಗಳಲ್ಲಿ ಪೊಲೀಸ್ ಪಹರೆಯನ್ನು ಇಡಲಾಗಿದೆ. ರಿಸರ್ವ್ ಪೊಲೀಸ್ ಪಡೆಗಳು ಅವರು ಬೇರೆ ಪ್ರಮುಖ ಸ್ಥಳಗಳಲ್ಲಿ ಗಸ್ತು ತಿರುಗಿದುವು

ಶ್ರೀ ಸತ್ಯನಾರಾಯಣ ವ್ರತ

ಚಾಮುಂಡಿ ಎಕ್ಸ್‌ಟೆನ್‌ಷನ್ ೯ ನೇ ಬ್ಲಾಕ್ ೧೦೬೩-೧೫ ನೇ ನಂಬರ್ ಮನೆಯ ಅಮ್ಮನವರ ಸನ್ನಿಧಾನದಲ್ಲಿ ಪೌರ್ಣಿಮಾ ಚಂದ್ರಗ್ರಹಣದ ಪ್ರಯುಕ್ತ ವಿಶೇಷ ಪೂಜಾವಿಧಿಗಳೂ, ಸತ್ಯನಾರಾಯಣವ್ರತವೂ ನಡೆಸಲ್ಪಡುತ್ತದೆ

ಕಟ್ಟಡ ಕಲಸಗಾರರ ಸಂಘ

ಮೈಸೂರು ನಗರದ ಕಟ್ಟಡದ ಕೆಲಸಗಾರರ ಸಂಘದ ಸಭೆಯು ನಿನ್ನೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಕೆ ಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ॥ ಪಿ ಗೋಪಾಲಕೃಷ್ಣಶೆಟ್ಟಿ ಭಾಷಣ ಮಾಡಿ ಸಂಘದ ಉದ್ದೇಶ ಮತ್ತು ಪ್ರಯೋಜನಗಳನ್ನು ವಿವರಿಸಿದರು. ಸಂಘದ ನಿಯಮಗಳನ್ನು ರಚಿಸಿ ರಿಜಿಸ್ಟರ್ ಮಾಡಿಸುವುದಕ್ಕೂ, ಬ್ಯಾಂಕಿಂಗ್ ಖಾತೆಯನ್ನು ತೆರೆಯುವುದಕ್ಕೂ ಕಾರ್ಯಕಾರಿ ಸಮಿತಿಗೆ ಪೂರ್ಣ ಅಧಿಕಾರ ವಹಿಸಿಕೊಡುವ ನಿರ್ಣಯವೂ ಅಂಗೀಕರಿಸಲ್ಪಟ್ಟಿತು

ಉದಾರ ದಾನ

ಶ್ರೀ॥ ಎಲೆ ತೋಟದ ಸಿದ್ದಣ್ಣನವರ ಮಕ್ಕಳು ಶ್ರೀ॥ ಕೆಂಪಣ್ಣನವರ ಕುಮಾರಿ ಪುಟ್ಟಮ್ಮನವರ ವಿವಾಹವು ಪಾಲಹಳ್ಳಿಯ ಮಾಲಿ ಪೊಲೀಸ್ ಗೌಡರ ಮೊಮ್ಮಕ್ಕಳು ಶ್ರೀ॥ ಚಿಕ್ಕಪುಟ್ಟಣ್ಣನವರೊಡನೆ ನಡೆದ ಸಂದರ್ಭದಲ್ಲಿ ವಧೂವರರ ಕಡೆಯವರು ೨೫ ರೂಗಳನ್ನು ಒಕ್ಕಲಿಗರ ಯುವಕರ ಸಂಘಕ್ಕೆ ಉದಾರವಾಗಿ ದಾನವಿತ್ತಿದ್ದಾರೆ.

ಕೀರ್ತನ ಕಲಾನಿಧಿ

ಮೈಸೂರಿನ ಗಮಕಿ ರಾಮಕೃಷ್ಣಶಾಸ್ತ್ರಿಗಳವರು ಶಿವಮೊಗ್ಗೆಯಲ್ಲಿ ಪಂಡಿತ ಮಂಡಲದ ಆಶ್ರಯದಲ್ಲಿ ನಡೆದ ವಿದ್ವತ್ಸಭೆಯಲ್ಲಿ ಅತ್ಯುತ್ತಮವಾಗಿ ಮಾಡಿದ ಕೀರ್ತನೆಯನ್ನು ಕೇಳಿ ಸಂತೋಷಿಸಿ ಶ್ರೀ॥ ದ್ವಾರಕಾ ಪೀಠಾಧೀಶ್ವರರಾದ ಶ್ರೀ॥ ಜಗದ್ಗುರು ಶಂಕರಾಚಾರ್ಯ ಶ್ರೀ॥ ಅಭಿನವ ಸಚ್ಚಿದಾನಂದ ತೀರ್ಥ ಮಹಾರಾಜರು ಅವರಿಗೆ ಕೀರ್ತನ ಕಲಾನಿಧಿ ಎಂಬ ಪ್ರಶಸ್ತಿಯನ್ನು ವಸ್ತ್ರಾಂಬರದೊಡನೆ ಅನುಗ್ರಹಿಸಿದ್ದಾರೆ.

ಮಾರ್ಕೆಟ್ ಬಾಡಿಗೆದಾರರ ಸಭೆ

ಮೈಸೂರು ದೇವರಾಜ ಮಾರ್ಕೆಟ್ಟಿನಲ್ಲಿ ಅಂಗಡಿಗಳನ್ನು ಬಾಡಿಗೆಗೆ ಪಡೆದುಕೊಂಡು ವ್ಯಾಪಾರ ನಡೆಸುತ್ತಿರುವವರ ಸಭೆಯು ನಿನ್ನೆ ಸಂಜೆ ಮಾರ್ಕೆಟ್ ಮಹಡಿಯ ಮೇಲೆ ಶ್ರೀ ಟಿ ಸಿ. ನಟರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪುರಸಭೆಯವರು ಅಂಗಡಿ ಬಾಡಿಗೆಯನ್ನು ಹೆಚ್ಚು ಮಾಡಲಿರುವುದನ್ನು ರದ್ದು ಮಾಡಬೇಕೆಂದು ಪ್ರಾರ್ಥಿಸಿ ಪುರಸಭಾಧ್ಯಕ್ಷರನ್ನೂ, ಸದಸ್ಯರನ್ನೂ ಭೇಟಿ ಮಾಡಿ ತಮ್ಮ ಕಷ್ಟಗಳನ್ನು ನಿವೇದಿಸಿಕೊಳ್ಳಲು ಒಂದು ನಿಯೋಗ ನೇಮಿಸಲಾಯಿತು.

ಪ್ರತಿ ಘಂಟೆಗೂ ದೆಹಲಿಯಿಂದ ಲಂಡನ್ನಿಗೆ ವರದಿ

ವೈಸರಾಯರು ಮಂಡಿಸಲಿರುವ ಹೊಸ ಯೋಜನೆಯಲ್ಲಿ ಅನೇಕ ಅಂಶಗಳು ಬೇರೆ ಬೇರೆ ರೀತಿಯಲ್ಲಿ ಸೂಚಿಸಲ್ಪಟ್ಟಿರುವುದರಿಂದ ಅವುಗಳ ಬಗ್ಗೆ ನಾಯಕರ ಪ್ರತಿಕ್ರಿಯೆಯನ್ನು ಅರಿತು ವರ್ತಿಸುವುದು ಅವಶ್ಯಕವೆಂತಲೂ, ಆದ್ದರಿಂದ ಪ್ರತಿ ಘಂಟೆಗೂ ವೈಸರಾಯರು ದೆಹಲಿಯಿಂದ ಬ್ರಿ॥ ಪ್ರಧಾನಿ ಮಿ॥ ಅಟ್ಲಿಯವರಿಗೆ ವರದಿ ಮಾಡಲು ವಿಶೇಷ ವ್ಯವಸ್ಥೆ ಮಾಡಲಾಗಿದೆಯೆಂದೂ ತಿಳಿದು ಬಂದಿದೆ

ರೈಲ್ವೆ ದರ ಮತ್ತಷ್ಟು ಹೆಚ್ಚುವುದೇ ?

ರೈಲ್ವೆ ಕೆಲಸಗಾರರ ಬೇಡಿಕೆಗಳನ್ನು ಪರಿಶೀಲಿಸಿ ವರದಿಮಾಡಲು ನೇಮಕವಾಗಿದ್ದ ಶ್ರೀ ರಾಜಾಧ್ಯಕ್ಷರು ಈಗ ಒಪ್ಪಿಸಿರುವ ಯೋಜನೆಯನ್ನು ಸದ್ಯದಲ್ಲೇ ಜಾರಿಗೆ ತರಲಾಗುವುದೆಂದೂ, ಇದರಿಂದ ರೈಲ್ವೆ ದರವನ್ನು ಮತ್ತಷ್ಟು ಹೆಚ್ಚಿಸಬೇಕಾಗಬಹುದೆಂದೂ ತಿಳಿದುಬಂದಿದೆ

ದೇವಾಲಯ ಪ್ರವೇಶ

ಮದ್ರಾಸ್ ಪ್ರಾಂತ್ಯದಲ್ಲಿರುವ ದೇವಸ್ಥಾನಗಳಿಗೆಲ್ಲಾ ಹರಿಜನರು ಪ್ರವೇಶಿಸಲು ಅಧಿಕಾರ ಕೊಡುವ ಶಾಸನವು ಈ ದಿನದಿಂದ ಜಾರಿಗೆ ಬರುವುದು. ತಿರುಪತಿ ದೇವಸ್ಥಾನದ ಬಗ್ಗೆ ಟ್ರಸ್ಟಿಗಳಾದ ಮಹಂತರು ತಡೆ ಹಾಕಿದ್ದ ಅಡ್ಡಿಯನ್ನು ರದ್ದು ಮಾಡುವಂತೆ ಮದ್ರಾಸ್ ಸರ್ಕಾರವು ಸೂಚಿಸಿ ಅಲ್ಲಿಗೂ ಹರಿಜನರಿಗೆ ಪ್ರವೇಶಾಧಿಕಾರವನ್ನು ಕೊಡಲು ನಿರ್ಧರಿಸಿದೆ

ರಾಷ್ಟ್ರ ವಿಭಜನೆಯಾದರೆ ಬರೋಡ ಹಿಂದೂಸ್ಥಾನಕ್ಕೆ

ಬರೋಡ ಸಂಸ್ಥಾನವು ಅಖಂಡ ಭಾರತದ ಪರವಾಗಿಯೇ ಇರುವುದು. ಒಂದು ವೇಳೆ ಭಾರತವು ವಿಭಾಗಿಸಲ್ಪಟ್ಟರೆ ನಾವು ಹಿಂದೂಸ್ಥಾನಕ್ಕೆ ಸೇರುವೆವು—ಎಂಬುದಾಗಿ ಬರೋಡದ ಪ್ರಧಾನಿಗಳಾದ ಸರ್ ಬಿ. ಎಲ್. ಮಿತ್ರರವರು ತಿಳಿಸಿದ್ದಾರೆ. ಬಂಗಾಳ ಮತ್ತು ಪಂಜಾಬುಗಳ ವಿಭಜನೆ ಅನಿವಾರ್ಯವೆಂದು ಅವರು ಹೇಳಿದ್ದಾರೆ. ತಮ್ಮ ಸಂಸ್ಥಾನದಲ್ಲಿ ಸುಧಾರಣೆಗಳನ್ನು ಜಾರಿಗೆ ತರಲಾಗುವುದೆಂದೂ, ಶಾಸನಸಭೆಯ ಮುಂದೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸೂಚಿಸಲಾಗುವುದೆಂದೂ ಅವರು ತಿಳಿಸಿದ್ದಾರೆ.

ಪ್ರತಿನಿಧಿ ಸಭೆಯ ಹಕ್ಕುಬಾಧ್ಯತಾ ಸಮಿತಿ

ಸ್ವಂ. ಸು ಫೋ॥] ಬೆಂಗಳೂರು ೨

ಶ್ರೀಗಳಾದ ಎಂ ವಿ ಕೃಷ್ಣಪ್ಪ, ಎ. ಜಿ ಸಲೀಂ, ಟಿ ಎಲ್. ನಾರಾಯಣಸ್ವಾಮಿ ತಿಮ್ಮಪ್ಪಗೌಡ, ಶಿವರುದ್ರಪ್ಪ, ಎಸ್. ಎಚ್ ಸಿದ್ದಲಿಂಗಯ್ಯ, ಎಸ್. ವಿ. ಕೃಷ್ಣಮೂರ್ತಿರಾವ್ ಮತ್ತು ಎಸ್ ರಾಮಪ್ಪನವರು ಪ್ರಜಾಪ್ರತಿನಿಧಿ ಸಭೆಯ ಹಕ್ಕುಬಾಧ್ಯತಾ ಸಮಿತಿಗೆ ಚುನಾಯಿತರಾಗಿದ್ದಾರೆ ಶ್ರೀಗಳಾದ ಎ ಜಿ. ರಾಮರಾವ್ ಮತ್ತು ಎಚ್ ಸಿ. ದೇವರಾಜೇ ಅರಸಿನವರನ್ನು ಅಧ್ಯಕ್ಷರು ನಾಮಕರಣ ಮಾಡಿದ್ದಾರೆ. ನ್ಯಾಯಾಂಗ ಸಚಿವರಾದ ಮಿ॥ ಒ. ಎಸ್ ಎಂ ಸಲೀಂರವರು ಈ ಸಮಿತಿಯ ಅಧ್ಯಕ್ಷರಾಗಿರುವರು

ರಾಮದುರ್ಗ ಸಂಸ್ಥಾನದಲ್ಲಿ ಸುಧಾರಣೆ

ಜವಾಬ್ದಾರಿ ಸರ್ಕಾರ ಸ್ಥಾಪನೆಯ ಗುರಿಗೆ ಅನುಗುಣವಾಗಿ ಶಾಸನ ಸಭೆಯಿಂದ ಇಬ್ಬರು ಮಂತ್ರಿಗಳನ್ನೂ ಚುನಾಯಿಸಿಕೊಳ್ಳಲು ಹೊಸ ಸುಧಾರಣೆಯನ್ನು ರಾಮದುರ್ಗ ಸಂಸ್ಥಾನದಲ್ಲಿ ಜುಲೈ ೧ ರಿಂದ ಜಾರಿಗೆ ತರುವುದಾಗಿ ಅಲ್ಲಿನ ಮಹಾರಾಜರು ಘೋಷಿಸಿದ್ದಾರೆ ದಿವಾನರು ಅವರಿಂದಲೇ ನೇಮಿಸಲ್ಪಡುವರು ಬ್ರಿಟಿಷ್ ಪ್ರಾಂತ್ಯದಲ್ಲಿರುವ ಮಂತ್ರಿಗಳಿಗಿರುವಷ್ಟು ಅಧಿಕಾರವನ್ನು ತಮ್ಮ ಮಂತ್ರಿಗಳಿಗೂ ಕೊಡಲಾಗುವುದೆಂದು ಅವರು ತಿಳಿಸಿರುವರು.

ವಿವಾಹೋಪನಯನಗಳು

ವಿಶ್ವವಿದ್ಯಾಲಯದ ಆಫೀಸ್ ಅಕೌಂಟೆಂಟ್ ಶ್ರೀ ಎಂ.ವಿ ವೆಂಕಟಕೃಷ್ಣಯ್ಯನವರು ತಮ್ಮ ಕುಮಾರಿ ಸೌ॥ ಜಯಲಕ್ಷ್ಮಿಯನ್ನು ಕೋಲಾರದ ಪುರಸಭಾ ಸದಸ್ಯರಾದ ಶ್ರೀ ಕೆ ವೆಂಕಟರಾಮಯ್ಯನವರ ಮಗ ಶ್ರೀ॥ ಕೆ ವಿ ಸುಬ್ಬರಾಯರಿಗೂ

ನಾಟಕರತ್ನ ಶ್ರೀ ಜಿ ಹೆಚ್ ವೀರಣ್ಣನವರು ತಮ್ಮ ಕುಮಾರಿ ಸೌ॥ ಗಿರಿಜಾಂಬೆಯನ್ನು ಹನುಮಂತಪುರದ ಶ್ರೀ ರುದ್ರಪ್ಪನವರ ಕುಮಾರ ಶ್ರೀ ಚನ್ನಪ್ಪನವರಿಗೂ ಕೊಟ್ಟು ಕಳೆದ ೨೯ನೇ ತಾ॥ ವೈಭವದಿಂದ ವಿವಾಹವನ್ನು ಜರುಗಿಸಿದರು.

ಮೈಸೂರಿನ ವಿಂಡ್ಸರ್ ಇಂಡಸ್ಟ್ರೀಸ್ ಮಾಲೀಕರಾದ ಶ್ರೀ ಬಿ ಎನ್ ಸುಬ್ಬರಾಯರು ತಮ್ಮ ಕುಮಾರ ಚಿ॥ ಬಿ ಎಸ್ ನಾಗರಾಜಯ್ಯನಿಗೆ ಕಳೆದ ೨೯ನೇ ತಾ॥ ಉಪನಯನವನ್ನು ಚಾಮುಂಡಿಪುರದಲ್ಲಿ ನೆರವೇರಿಸಿದರು

ತೆಂಗಿನಕಾಯಿಯ ಬೆಲೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು ಫೋ॥] ಬೆಂಗಳೂರು ೨

ತೆಂಗಿನಕಾಯಿಯ ಬೆಲೆಯು ಆರು ಆಣೆಯಿಂದ ಎಂಟು ಆಣೆಯ ವರೆಗೆ ಎಲ್ಲ ಮೀರಿ ಹೆಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ, ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಿ ಜನಗಳಿಗೆ ತೆಂಗಿನಕಾಯಿ ಸುಲಭವಾಗಿ ಒದಗುವಂತೆ ಮಾಡಲಾಗುವುದೆಂದೂ ಈ ದಿನ ಪ್ರತಿನಿಧಿ ಸಭೆಯಲ್ಲಿ ಶ್ರೀ ಬಿ ಟಿ ಬಸಪ್ಪಶೆಟ್ಟರ ಪ್ರಶ್ನೆಗೆ ಸರ್ಕಾರದ ಜನರಲ್ ಕಾರ್ಯದರ್ಶಿಗಳು ಉತ್ತರವೀಯುತ್ತಾ ತಿಳಿಸಿದರು.

ಕಳೆದ ೩೧ ನೇ ತಾ॥ ಶ್ರೀ॥ ಗುಣ್ಣರವರು ಮಾತನಾಡುತ್ತಾ "ಅಧ್ಯಕ್ಷರು ಸಭಾಸ್ಥಾನವನ್ನು ವಹಿಸಿಕೊಳ್ಳಲು ಯೋಗ್ಯತೆಯನ್ನು ಪಡೆದಿಲ್ಲ" ಎಂಬುದಾಗಿ ತಿಳಿಸಿದುದು ಈ ಸಭೆಯ ಹಕ್ಕುಬಾಧ್ಯತೆಗೆ ಲೋಪ ತಂದಿದೆಯೆಂದು ಶ್ರೀ॥ ಕೆ. ಚಿಕ್ಕಲಿಂಗಯ್ಯನವರು ಸೂಚನೆಯೊಂದನ್ನು ತಂದರು. ಶ್ರೀ ಎಸ್. ವಿ. ಕೃಷ್ಣಮೂರ್ತಿಯವರು ತಿದ್ದುಪಾಟೊಂದನ್ನು ತಂದು, ಹಕ್ಕುಬಾಧ್ಯತಾ ಪ್ರಶ್ನೆಯನ್ನು ಸಭೆಯ ಕಾರ್ಯಕಲಾಪಗಳನ್ನು ಬದಿಗೊತ್ತಿ ಕೂಡಲೇ ತರಬೇಕೆಂದೂ, ಈಗ ತಂದಿರುವುದು ಕ್ರಮವಿರುದ್ಧವೆಂದೂ ಹೇಳಿದರು. ಶ್ರೀಯುತ ಲೋಪ ಮತ್ತು ಹಕ್ಕುಬಾಧ್ಯತಾ ಪ್ರಶ್ನೆಯನ್ನು ಪರಿಶೀಲಿಸಿ ನಾಳೆ ಉತ್ತರ ಹೇಳುವುದಾಗಿ ಅಧ್ಯಕ್ಷರು ತಿಳಿಸಿದರು.

ಶ್ರೀ ಭೂಪಾಳಂರವರು ಮತ್ತೊಂದು ಸೂಚನೆಯನ್ನು ೩೦ ನೇ ತಾ॥ ಕೋರಂ ಇಲ್ಲದಾಗ ಸಭೆ ನಡೆದುದು ಅಕ್ರಮವೆಂದೂ ಅಲ್ಪಸಂಖ್ಯಾತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸಭೆಯ ಕಾಲವನ್ನು ವ್ಯತ್ಯಾಸಮಾಡಿರುವುದು ಬಹುಸಂಖ್ಯಾತ ಸದಸ್ಯರ ಹಕ್ಕಿಗೆ ಲೋಪ ಬಂದಿದೆಯೆಂದು ಹೇಳಿದರು. ಮೊನ್ನೆ ದಿನ ಕಾವು ಕೊಟ್ಟ ರೂಲಿಂಗನ್ನು ತಮ್ಮ ಪ್ರತಿಷ್ಠೆಯ ರೀತಿಯಲ್ಲಿ ಡೆಯೆಂದು ಹೇಳಿ ಈ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು.

ಬೀಡಿ ಕೆಲಸಗಾರರ ಬೇಡಿಕೆ

ಸ್ವಂ. ಸು] ಗುಂಡ್ಲುಪೇಟೆ ೩೧

ಇಲ್ಲಿನ ಡೈಮಂಡ್ ಬೀಡಿ ಫ್ಯಾಕ್ಟರಿಯ ಮಾಲೀಕರು ೨೮ ನೇ ತಾ॥ ಬುಧವಾರದಿಂದ 'ಲಾಕ್‌ಔಟ್' ಮಾಡಿ ಕೆಲಸಗಾರರಿಗೆ ಕೆಲಸವನ್ನೇ ಕೊಟ್ಟಿರಲಿಲ್ಲ. ಡಿ॥ ಲೇಬರ್ ಕಮೀಷನರ ಪ್ರಯತ್ನದಿಂದ ಫ್ಯಾಕ್ಟರಿಯು ಈ ದಿನದಿಂದ ತೆರೆಯಲ್ಪಟ್ಟಿತು. ಕಳೆದ ೩ ದಿನಗಳ ಮಜೂರಿಯನ್ನು ಕೊಡಬೇಕೆಂದೂ, ಸದರಿ 'ಲಾಕ್‌ಔಟ್' ಕಾನೂನು ವಿರುದ್ಧವೆಂದೂ, ರಿಜಿಸ್ಟ್ರಾರವರು ಘೋಷಿಸಬೇಕೆಂದೂ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಬೋರನಾಯ್ಕರು ಪ್ರಾರ್ಥಿಸಿದ್ದಾರೆ.

ಪಾಕಿ ಬಿಟ್ಟಿಗಾಗಿ ಪ್ರಾರ್ಥನೆ

ಸ್ವಂ ಸು] ಚಾಮರಾಜನಗರ ೩೧

ಮೋಟಾರು ಡ್ರೈವರುಗಳೆಲ್ಲರೂ ಪಾಕಿ ಬಿಡುವನ್ನು ಕೊಡಬೇಕೆಂಬ ಒತ್ತಾಯವಿದೆಯಷ್ಟೆ. ಆದರೆ ಅಭಾವವಿರುವುದರಿಂದ ಈ ಊರಿನ ಡ್ರೈವರುಗಳು ಪಾಕಿ ಬಿಟ್ಟಿ ಕೊಡಿಸಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆಂದು ಗೊತ್ತಾಗಿದೆ

ಸಾಧ್ವಿ

ತಾ|| ೨-೬-೪೭ ಸೋಮವಾರ

ಇಂದಿನ ಸಮಾರಂಭ

ಭಾರತ ರಾಜಕೀಯ ಸಂಧಾನಗಳಲ್ಲಿ ಈ ದಿನ ನಡೆಯುವ ನಾಯಕರುಗಳ ಸಮ್ಮೇಳನವು ಒಂದು ಅತ್ಯಂತ ಮಹತ್ವಪೂರ್ಣವಾದ ಪ್ರಕರಣ. ಬರುವ ವರ್ಷ ಭಾರತವನ್ನು ಬಿಟ್ಟು ಹೋಗುವುದಾಗಿ ಬ್ರಿಟಿಷರು ಸಾರಿದ್ದರೂ, ಹಾಗೆ ಬಿಟ್ಟು ಹೋಗುವುದಕ್ಕೆ ಮಾಡಬೇಕಾದ ಪೂರ್ವ ಸಿದ್ಧತೆಯ ವಿಚಾರದಲ್ಲಿ ವಿಶೇಷ ಜಿಜ್ಞಾಸೆಯು ಹೊರಟಿರುತ್ತದೆ. ಆದಷ್ಟು ಬೇಗ ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸುವುದಕ್ಕಾಗಿ ವೈಸರಾಯರು ಯೋಜನೆಯೊಂದನ್ನು ಸಿದ್ಧಗೊಳಿಸಿರುತ್ತಾರೆ. ಅದಕ್ಕೆ ಬ್ರಿಟಿಷ್ ಸರ್ಕಾರದ ಅಂಗೀಕಾರವನ್ನು ಪಡೆದಿರುತ್ತಾರೆ. ಅದನ್ನು ಜಾರಿಗೆ ತರಲು ಸಂಪೂರ್ಣ ಅಧಿಕಾರವನ್ನೂ ಪಡೆದು ಬಂದಿರುತ್ತಾರೆ.

ಕಾಂಗ್ರೆಸ್ ಲೀಗ್ ಮತ್ತು ಸಿಖ್ ನಾಯಕರುಗಳಿಗೆ ಈ ದಿನ ವೈಸರಾಯರು ತಮ್ಮ ಯೋಜನೆಯನ್ನು ವಿವರಿಸುವರು. ನಾಯಕರು ಸಭೆಯಲ್ಲಿಯೇ ಅದರ ವಿಷಯದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ಸೂಚಿಸುವರು. ಅನಂತರ ವೈಸರಾಯರು ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ವ್ಯವಸ್ಥೆ ಮಾಡುವರು. ಬ್ರಿಟಿಷ್ ನಿಯೋಗದವರು ಕೊಟ್ಟ ಸಲಹೆಗಳಿಗೆ ಅನುಸಾರವಾಗಿ ಕಳೆದ ಮೇ ೧೬ ರಲ್ಲಿ ಬ್ರಿಟಿಷ್ ಸರ್ಕಾರದವರು ಮಾಡಿದ ಘೋಷಣೆಯನ್ನು ಅಂಗೀಕರಿಸುವಂತೆ ವೈಸರಾಯರು ಮತ್ತೊಮ್ಮೆ ಕಟ್ಟಕಡೆಯ ಪ್ರಯತ್ನವನ್ನು ನಡೆಸುವರೆಂದೂ, ಅದಕ್ಕೆ ಮುಖಂಡರು ಒಪ್ಪದಿದ್ದರೆ ತಮ್ಮ ಹೊಸ ಯೋಜನೆಯನ್ನು ಜಾರಿ ಮಾಡುವರೆಂದೂ ಹೇಳಲಾಗುತ್ತದೆ.

ವೈಸರಾಯರ ಹೊಸ ಯೋಜನೆಯ ಪ್ರಕಾರ ಹಿಂದೂಸ್ಥಾನವು ಇಬ್ಭಾಗ ಮಾಡಲ್ಪಡುವುದೆಂದೂ, ಬಂಗಾಳ ಮತ್ತು ಪಂಜಾಬುಗಳು ವಿಭಾಗಿಸಲ್ಪಡುವುವೆಂದೂ ಹೇಳಲಾಗಿದೆ. ವಿಭಜನೆಯ ವಿಚಾರದಲ್ಲಿ ದೇಶದ ಹಲವು ಕಡೆಗಳ ಅಭಿಪ್ರಾಯಗಳು ಬಲವಾಗಿ ವಿರೋಧವಾಗಿ ರೂಪುಗೊಂಡಿವೆ. ಪಾಕಿಸ್ಥಾನ ಅಥವಾ ಹಿಂದೂಸ್ಥಾನದ ಸಮಸ್ಯೆಯನ್ನು ಬಗೆಹರಿಸುವುದು ಭಾರತದ ಪ್ರತಿನಿಧಿಗಳ ಕರ್ತವ್ಯವೇ ಹೊರತು ಬ್ರಿಟಿಷರದಲ್ಲವೆಂದು ಮಹಾತ್ಮರವರು ಒತ್ತಿ ಹೇಳುತ್ತಿದ್ದಾರೆ. ಆದಷ್ಟು ಬೇಗನೆ ಈ ದೇಶವನ್ನು ಬಿಟ್ಟು ಹೋಗುವುದು ಮಾತ್ರ ಬ್ರಿಟಿಷರ ಕರ್ತವ್ಯವೆಂದೂ ಅವರು ಸಾರುತ್ತಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಈ ದಿನ ದೆಹಲಿಯಲ್ಲಿ ಮುಖಂಡರುಗಳ ಸಮ್ಮೇಳನವು ನಡೆಯುತ್ತಿದೆ. ಸಕಲ ಭಾರತೀಯರ ಗಮನವೂ ಅತ್ತ ಕಡೆ ತಿರುಗಿರುತ್ತದೆ. ಈ ಸಮ್ಮೇಳನದಲ್ಲಿ ಪ್ರಜೆಗಳ ನಿಜವಾದ ಹಕ್ಕುಬಾಧ್ಯತೆಗಳಿಗೆ ಮನ್ನಣೆ ದೊರೆತು ಬ್ರಿಟಿಷರು ಭಾರತದ ವ್ಯವಹಾರವು ಶಾಂತಿ ಸೌಹಾರ್ದಗಳಿಂದ ಇತ್ಯರ್ಥವಾಗಲೆಂದು ಎಲ್ಲರೂ ಹಾರೈಸಬೇಕಾಗಿದೆ.

Edited printed and published by
S. Nagarajan at the Sadhvi Press
Subbaiah Road Mysore.

ವಾರ ಭವಿಷ್ಯ

ತಾ|| ೨-೬-೪೭ ರಿಂದ ೯-೬-೪೭ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ- ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಅಧಿಕ, ಮಾನಸಿಕ ಚಿಂತೆ ಹೆಚ್ಚು ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ ಮಿತ್ರರಿಂದ ಸಹಾಯ ಮಂಗಳ ಕಾರ್ಯಗಳಿಗಾಗಿ ಪ್ರವಾಸ ತಾ|| ೩, ೫, ೭ ಲಾಭ, ಮಿತ್ರದರ್ಶನ

ವೃಷಭ- ಆರೋಗ್ಯ ಉತ್ತಮ, ಧನಲಾಭ ಚೆನ್ನಾಗಿರುತ್ತದೆ, ಖರ್ಚು ಕಡಿಮೆ ವ್ಯಾಪಾರ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ಧಾರ್ಮಿಕ ಕಾರ್ಯಗಳಿಗಾಗಿ ವಿಶೇಷ ಖರ್ಚು ತಾ|| ೫, ೮ ಲಾಭ, ಪ್ರವಾಸ,

ಮಿಥುನ- ಆರೋಗ್ಯ ಕೆಡುತ್ತದೆ, ಧನಲಾಭ ಸಾಧಾರಣ, ಖರ್ಚು ಹೆಚ್ಚಾಗುವುದು, ಶತ್ರುಗಳಿಂದ ಕೆಲಸ ಕಾರ್ಯಗಳಿಗೆ ಅಡಚಣೆ, ಮಿತ್ರರಿಂದ ತಿರಸ್ಕಾರ, ಬಂಧುಗಳಿಂದ ಅಪಮಾನ, ಪ್ರವಾಸದಿಂದ ಅಪಘಾತ ತಾ|| ೫, ೬, ೮ ಚಿಂತೆ, ನಷ್ಟ.

ಕಟಕ- ಆರೋಗ್ಯ ಸಾಧಾರಣ ಮಾನಸಿಕ ಚಿಂತೆ ಹೆಚ್ಚು ಸಾಂಸಾರಿಕ ಸ್ಥಿತಿ ಉತ್ತಮ, ವ್ಯಾಪಾರಾದಿಗಳಲ್ಲಿ ಪ್ರಗತಿ ಅಧಿಕಾರ ವರ್ಗದವರಿಂದ ಸನ್ಮಾನ, ತಾ|| ೪ ೫ ಪರೋಪಕಾರಕ್ಕಾಗಿ ಖರ್ಚು, ಸಂತೋಷ

ಸಿಂಹ- ಆರೋಗ್ಯ ಉತ್ತಮವಾಗಿರುತ್ತದೆ, ಆರ್ಥಿಕ ಸ್ಥಿತಿ ಉತ್ತಮ, ಖರ್ಚು ಕಡಿಮೆ, ವ್ಯಾಪಾರ ವ್ಯವಹಾರಗಳಲ್ಲಿ ಅಧಿಕಾರ ವರ್ಗದವರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ಬಂಧುಗಳ ಆಗಮನದಿಂದ ಖರ್ಚು ಹೆಚ್ಚು ತಾ|| ೪, ೫, ೭ ಲಾಭ ಪ್ರವಾಸ.

ಕನ್ಯಾ-ಆರೋಗ್ಯ ಚೆನ್ನಾಗಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನ ಲಾಭ ಉತ್ತಮ ವಿಷಭೋಜನಾದಿಗಳಿಗಾಗಿ ಖರ್ಚು, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ, ಅಧಿಕಾರಿ ವರ್ಗದವರಿಂದ ವ್ಯವಹಾರಗಳಿಗೆ ಪ್ರೋತ್ಸಾಹ ತಾ|| ೩, ೫, ೮ ಲಾಭ ಸಂತೋಷ,

ತುಲಾ- ಆರೋಗ್ಯ ಉತ್ತಮ ಧನಲಾಭ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು ವ್ಯಾಪಾರ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ಕೆಲಸ ಕಾರ್ಯಗಳಲ್ಲಿ ಅಡಚಣೆ ಹೆಚ್ಚು, ಕೌಟುಂಬಿಕ ಆರೋಗ್ಯ ಸ್ಥಿತಿ ಕೆಡುವುದು, ತಾ|| ೫, ೬, ೮ ಚಿಂತೆ, ಅಶಾಂತಿ

ವೃಶ್ಚಿಕ-ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಕಡಿಮೆ, ಧನಾದಾಯ ಸಾಧಾರಣ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೩, ೪, ೬ ಲಾಭ, ಮಿತ್ರ ದರ್ಶನ

ಧನುಸ್ಸು- ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಾಭಾವ ವಿಶೇಷವಾಗಿ ಕೌಟುಂಬಿಕ ಉಪದ್ರವಗಳು ಹೆಚ್ಚುವುವು. ಶತ್ರುಗಳ ಕಿರುಕುಳ ಕಡಿಮೆಯಾಗುವುದು, ಮಂಗಳ ಕಾರ್ಯಗಳಿಗಾಗಿ ಅಧಿಕ ಧನವ್ಯಯ, ತಾ|| ೪, ೬ ಪ್ರವಾಸ, ಅಶಾಂತಿ.

ಮಕರ- ಪ್ರಾಕೃತಿಕ ಸ್ಥಿತಿ ಉತ್ತಮವಾಗಿರುವುದು, ಮಾನಸಿಕ ಚಿಂತೆ ಕಡಿಮೆ ಧನಲಾಭ ಸಾಧಾರಣ, ಮಿತ್ರರಿಂದ ಮನ್ನಣೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ|| ೫, ೭ ಚಿಂತೆ, ಅಪಘಾತ.

ಕುಂಭ- ದೇಹಸ್ಥಿತಿ ಚೆನ್ನಾಗಿರುತ್ತದೆ, ಧನ ಲಾಭ ಉತ್ತಮ, ಖರ್ಚು ಕಡಿಮೆ ವ್ಯಾಪಾರದಲ್ಲಿ ಲಾಭ, ಅಧಿಕಾರಿ ವರ್ಗದವರಿಂದ ಸತ್ಕಾರ, ಮಂಗಳ ಕಾರ್ಯಗಳಿಗಾಗಿ ಖರ್ಚು ಮತ್ತು ಪ್ರವಾಸ, ತಾ|| ೪, ೬ ಚಿಂತೆ, ಅಶುಭವಾರ್ತೆ.

ಮೀನ- ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಕಡಿಮೆ, ಖರ್ಚು ಹೆಚ್ಚು, ವ್ಯಾಪಾರ ವ್ಯವಹಾರಗಳಲ್ಲಿ ಅನಾಸಕ್ತಿ, ಮಿತ್ರರಿಂದ ಮತ್ತು ಬಂಧುಗಳಿಂದ ತಿರಸ್ಕಾರ, ಪ್ರವಾಸದಿಂದ ಬಂಧು ದರ್ಶನ, ತಾ|| ೫, ೭ ಲಾಭ, ಪ್ರವಾಸ.

ವುಡ್‌ಲ್ಯಾಂಡ್ಸ್, ಮೈಸೂರು.

1-6-47 ರಿಂದ
ಶಿಕ್ಷರಿದ ೫ ನೇ ವಾರ
ಪ್ರತಿ ದಿನ ೩ ಆಟಗಳು
ನಾವು ಇಬ್ಬರು
(ತಮಿಳು)
:- ಪಾತ್ರ :-
ಟಿ. ಆರ್ ಮಹಾಲಿಂಗಂ,
ಜಯಲಕ್ಷ್ಮಿ, ಟಿ ಆರ್.
ರಾಮಚಂದ್ರ ಮುಂತಾದವರು.

ರಾಜಕಮಲ್,
ತಾ|| ೩೦-೫-೪೭ ರಿಂದ
ಆರನೇ ವಾರ
ಪ್ರತಿ ದಿನ ೨ ಆಟಗಳು
ಕೃಷ್ಣವೇಣಿ
ರಘುರಾಮಯ್ಯ

Dalvoy High School, Mysore.

Applications from graduates with (1) P C M (2) C B. Z., (3) History, (4) English as optional subjects are invited so as to reach the undersigned not later than 6-6-1947

B. V NANJUNDIAH,
Head Master.

ವೈಸರಾಯರ ಹೊಸಯೋಜನೆ

ಬ್ರಿಟಿಷ್ ಸರ್ಕಾರವು ಕಳೆದ ಮೇ ೧೬ ನೇ ತಾ|| ಹೊರಡಿಸಿದ ಘೋಷಣೆಯನ್ನು ಕಾರ್ಯರೂಪಕ್ಕೆ ತರಲು ಆತಿಸಿದೆ. ಆದರಂತೆ ವೈಸರಾಯರು ಜೂನ್ ೩ ನೇ ತಾ|| ತಮ್ಮ ಹೊಸ ಯೋಜನೆಯಲ್ಲಿ ಈ ಅಂಶಗಳನ್ನು ಹೊರಗೆಡಹುವರೆಂದು ಲಂಡನ್ನಿನಲ್ಲಿ ಹೇಳಲಾಗುತ್ತಿದೆ:- ಎ, ಬಿ, ಸಿ, ಗುಂಪುಗಳನ್ನು ಸಮೂಹಿಸಲಾಗುವುದು; ಈಗಿರುವ ರಾಜ್ಯಾಂಗ ಸಭೆ 'ಎ' ಗುಂಪನ್ನು ಪ್ರತಿನಿಧಿಸುವುದು ಬಿ ಮತ್ತು ಸಿ ಗುಂಪುಗಳಿಗೆ ಪ್ರತ್ಯೇಕ ರಾಜ್ಯಾಂಗ ಸಭೆಯನ್ನು ರಚಿಸಲಾಗುವುದು ಈಗಿನ ಕೇಂದ್ರ ಸರ್ಕಾರವನ್ನು ರದ್ದುಗೊಳಿಸಲಾಗುವುದು ಡೊಮಿನಿಯನ್ ಸ್ಥಾನಮಾನಗಳನ್ನಿತ್ತು: ದೇಶಾಂಗ, ರಕ್ಷಣೆ ಮತ್ತು ಸಂಚಾರ ಸಂಬಂಧಗಳು ಇಡೀ ಭಾರತಕ್ಕೆ ಅನ್ವಯಿಸುವಂತೆ ಮಾಡಿ, ಅವುಗಳಿಗೆ ಪಂ|| ನೆಹರು, ಸ|| ಬಲದೇವಸಿಂಗ್ ಮತ್ತು ಮಿ|| ಲಿಯಾಖತ್ ಅಲಿಖಾನರನ್ನು ಮಂತ್ರಿಗಳನ್ನಾಗಿ ಆರಿಸಿಕೊಂಡು ಇತರ ಡೊಮಿನಿಯನ್ನುಗಳಲ್ಲಿರುವಂತೆ ವೈಸರಾಯರು ಗೌರ್ನರ್ ಜನರಲ್ಲಾಗಿರುವರು; ಈ ಕೇಂದ್ರ ಮಂತ್ರಿಮಂಡಲಕ್ಕೆ ಲಗತ್ತಾಗಿರುವಂತೆ ಎಲ್ಲ ವರ್ಗದ ಪ್ರಾತಿನಿಧ್ಯ ಪಡೆದ ಒಂದು ಚಿಕ್ಕ ಮಂತ್ರಿ ಮಂಡಲವನ್ನು ನೇಮಿಸುವರು. ಅದರಲ್ಲಿ ಯಾವ ರಾಜ್ಯಾಂಗ ಸಭೆಗೂ ಸೇರದ ಸಂಸ್ಥಾನದ ಪ್ರತಿನಿಧಿಗಳೊಬ್ಬರು ಇರತಕ್ಕದ್ದು. ಬಂಗಾಳ ಮತ್ತು ಪಂಜಾಬ್ ವಿಭಜನೆಯ ಪ್ರಶ್ನೆಯು ಅಮೇರಿಕ ಸಂಯುಕ್ತ ಸಂಸ್ಥಾನದ ಪ್ರತಿನಿಧಿಯಿರುವ ಸಮಿತಿಯೊಂದರಿಂದ ಪರಿಶೀಲಿಸಲ್ಪಡುವುದು ಅಸ್ಸಾಂ ಮತ್ತು ಗಡಿನಾಡುಗಳಲ್ಲಿ ಪ್ರಜಾಭಿಪ್ರಾಯ ನಡೆಯುವುದು.

ಮನೆ ಕ್ರಯಕ್ಕಿದೆ
ಮೈಸೂರು ಕೃಷ್ಣಮೂರ್ತಿಪುರಂ ೧೩೧೭ ನೇ ನಂಬರ್ ಮನೆ ದೀಪ, ನಲ್ಲಿ, ಔಟ್‌ಹೌಸ್ ಸಹ ಇವೆ ವಿವರಗಳಿಗೆ ೧೧ ಕಾರೋಡು ೯೭೭ ನೇ ನಂಬರು ಮನೆಯಲ್ಲಿ ವಿಚಾರಿಸಿ.

ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೯—೬—೪೭ [ಸಂಚಿಕೆ ೨೫೪

ಈಸೂರು ಬಂದಿಗಳ ಬಿಡುಗಡೆಗೆ ಒತ್ತಾಯ

ದಲಿಯಲ್ಲಿ ಮುಖಂಡರ ಸಮ್ಮೇಳನ

ಗಾಂಧೀಜಿಯವರಿಗೆ ವೈಸರಾಯರ ವಿಶೇಷ ಕರೆ

ದಲಿಯಲ್ಲಿ ನಿನ್ನೆ ವೈಸರಾಯರು ಮುಖಂಡರುಗಳನ್ನು ಆಹ್ವಾನಿಸಿ ಸಮ್ಮೇಳನವ ನಡೆಸಿದರು. ಕಾಂಗ್ರೆಸ್ಸಿನ ಪರವಾಗಿ ನೆಹರು, ಶ್ರೀ ಪಟೇಲ್, ಆಚಾರ್ಯ ಕೃಪಲಾನಿಯವರೂ, ಸಿಖ್ ಪಂಗಡದ ಪರವಾಗಿ ಸ॥ಬಲದೇವ ಸಿಂಗರೂ, ಲೀಗ್ ಪರವಾಗಿ ಮಿ॥ ಜಿನ್ನಾ, ಮಿ॥ ಲಿಯಾಖತ್ ಖಾನ್ ಮತ್ತು ಮಿ॥ ಅಬ್ದುಲ್ ರಬ್ ನಿಷ್ಠರ್‌ರವರೂ ಅದರಲ್ಲಿ ಭಾಗಿಗಳಾಗಿದ್ದರು. ಸಮ್ಮೇಳನವು ೧೦ ಘಂಟೆಗೆ ಆರಂಭವಾಗಿ ೨ ಘಂಟೆಗಳ ಕಾಲ ನಡೆದು ಮುಗಿಯಿತು. ಅದಾದ ನಂತರ ಮಿ॥ ಜಿನ್ನಾರವರು ಅಲ್ಲೇ ಉಳಿದು ಸ್ವಲ್ಪಕಾಲ ವೈಸರಾಯರೊಡನೆ ಮಾತುಕತೆ ನಡೆಸಿದರು. ಅವರೂ ಹೊರಟು ಹೋದ ಮೇಲೆ ವೈಸರಾಯರು ಮಹಾತ್ಮ ಗಾಂಧಿಯವರನ್ನು ಫೋನಿನ ಮೂಲಕ ಭೇಟಿಗಾಗಿ ಆಹ್ವಾನಿಸಿದರು. ಅದರಂತೆ ಗಾಂಧೀಜಿಯವರು ವೈಸರಾಯರ ಭವನಕ್ಕೆ ತೆರಳಿ ಮುಕ್ಕಾಲು ಗಂಟೆಕಾಲ ಅವರೊಡನೆ ಮಾತುಕತೆ ನಡೆಸಿದರು. ಮುಖಂಡರ ಸಮ್ಮೇಳನ ಮತ್ತೆ ಈ ದಿನ ನಡೆಯುವುದು. ಬ್ರಿ॥ ಯೋಜನೆಯನ್ನು ಕಾಂಗ್ರೆಸ್ ಮತ್ತು ಲೀಗ್ ಕಾರ್ಯಕಾರಿ ಸಮಿತಿಗಳು ಪರಿಶೀಲಿಸುವೆ.

ಕೋಟಾ ಮತ್ತು ಬೂಂದಿ ಸಂಸ್ಥಾನಗಳಲ್ಲಿ ಸುಧಾರಣೆ

ಗ್ಲೋಬ್] ಜಯಪುರ ೩೦

ಸದ್ಯದಲ್ಲಿಯೇ ಕೋಟಾ ಮತ್ತು ಬೂಂದಿ ಸಂಸ್ಥಾನಗಳಲ್ಲಿ ರಾಜ್ಯಾಂಗ ಸುಧಾರಣೆಯ ಬಗ್ಗೆ ಘೋಷಣೆಯನ್ನು ಹೊರಡಿಸಲಾಗುವುದು. ಇದೇ ಮೊದಲನೆಯದಾಗಿ ಸಂಸ್ಥಾನಗಳಲ್ಲಿ ಪ್ರಜಾಮಂಡಲಗಳ್ಳಿ ಪಾಲಿಸಾದ ಮಂತ್ರಿಗಳನ್ನು ನೇಮಿಸಲಾಗುವುದು. ಬೂಂದಿ ಸಂಸ್ಥಾನವು ರಾಜಪುಟಾಣದ ಇತರ ಎರಡು ಸಂಸ್ಥಾನಗಳೊಂದಿಗೆ ಸೇರಿ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದು.

ಭಾರತಕ್ಕೆ ಡೊಮಿನಿಯನ್ ಅಂತಸ್ತು

ವೈಸರಾಯರು ಭಾರತದ ಮುಖಂಡರುಗಳನ್ನು ಭೇಟಿ ಮಾಡುವ ಸಂದರ್ಭದಲ್ಲಿ ಭಾರತಕ್ಕೆ ಕೂಡಲೇ ಡೊಮಿನಿಯನ್ ಸ್ಟೇಟಸ್ಸಿನ ಸೂಚನೆಯನ್ನು ಕೊಡುವರೆಂದು ತಿಳಿದುಬಂದಿದೆ. ಬಂಗಾಳ ಮತ್ತು ಪಂಜಾಬುಗಳನ್ನು ವಿಭಾಗಿಸುವುದಲ್ಲದೆ ಮುಸ್ಲಿಂರಿಗೆ ಪಾಕಿಸ್ತಾನವನ್ನು ಕೊಡಲಾಗುವುದು. ಅಲ್ಲದೆ ಸಿಖ್ಖರು ಪಾಕಿಸ್ತಾನದಿಂದ ಪ್ರತ್ಯೇಕವಾಗಿರಲು ಅವಕಾಶವಿರುವುದಾಗಿಯೂ ಹೇಳಲಾಗಿದೆ. ಉಭಯ ಪಕ್ಷಗಳಿಗೂ ಒಪ್ಪಂದವಾಗದಿದ್ದಲ್ಲಿ ಹಿಂದೂಸ್ಥಾನ, ಪಾಕಿಸ್ತಾನಗಳೆರಡಕ್ಕೂ ಪ್ರತ್ಯೇಕ ಡೊಮಿನಿಯನ್ ಸ್ಥಾನವನ್ನು ಕೊಡಲಾಗುವುದು. ರಾಜಕೀಯ ಪಕ್ಷಗಳು ಕಾಲಹರಣ ಮಾಡದೆ ನಿರ್ದಿಷ್ಟವಾದ ಉತ್ತರವನ್ನು ಬೇಗ ಕೊಡಬೇಕೆಂದು ತಿಳಿಸಲಾಗಿದೆ. ಎರಡು ಭಾಗಗಳಿಗೂ ಒಬ್ಬನೇ ಗೌರ್ನರ್ ಜನರಲ್ ಇರುವುದರಿಂದ ಸೈನ್ಯ ವಿಭಜನೆಗೆ ಅವಶ್ಯಕತೆಯೇ ಇರುವುದಿಲ್ಲ.

ಧಾನ್ಯ ಸಂಗ್ರಹದಲ್ಲಿ ದಬ್ಬಾಳಿಕೆ

ನಿಲುವಳಿ ನಿರ್ಣಯದ ಅಂಗೀಕಾರ

ಸ್ವಂ ಸು ಫೋ] ಬೆಂಗಳೂರು ೩

ಹಾಸನದ ಜಿಲ್ಲೆಯಲ್ಲಿ ಅಧಿಕಾರಿಗಳು ಬಲಾತ್ಕಾರದಿಂದ ದವಸ ಸಂಗ್ರಹಿಸುತ್ತಾ ಅಲ್ಲಿನ ಜನರಿಗೆ ಕೊಡುತ್ತಿರುವ ಹಿಂಸೆಯನ್ನು ಪರಿಶೀಲಿಸುವ ಬಗ್ಗೆ ನಿಲುವಳಿ ಸೂಚನೆಯು ಪ್ರಜಾಪ್ರತಿನಿಧಿ ಸಭೆಯಲ್ಲಿ ನಿನ್ನೆ ಚರ್ಚಿಸಲ್ಪಟ್ಟು ಅಂಗೀಕಾರವಾಯಿತು. ಶ್ರೀ ಗುಪ್ತ ಮಂಜುನಾಥದದರವರು ಹಾಸನಜಿಲ್ಲೆಯ ಜಿಲ್ಲಾಧಿಕಾರಿಗಳೂ, ಇತರ ನೌಕರರೂ ಆಹಾರ ಸಂಗ್ರಹಿಸಲು ಅನುಸರಿಸಿದ ಅಕ್ರಮ ವರ್ತನೆಗಳನ್ನು ವಿವರಿಸಿದರು. ದೈವೀಕ್ಷಣಾದ ಶ್ರೀ ಗುರುದತ್‌ರವರು ಚರ್ಚೆಗೆ ಉತ್ತರವಿತ್ತು ಅವನ್ನೆಲ್ಲಾ ಕಾನೂನ ನಡೆಸಲಾಗುತ್ತಿದೆಯೆಂದೂ ಈ ಬಗ್ಗೆ ಮೊನ್ನೆ ಒಂದು ಆಜ್ಞೆಯನ್ನು ಹೊರಡಿಸಲಾಗಿದೆಯೆಂದೂ ತಿಳಿಸಿದರು.

ಹಕ್ಕುಬಾಧ್ಯತಾ ಸಮಿತಿಯ ವರದಿ ಬಿದ್ದುಹೋಯಿತು

೧೯೪೬ ರ ಬಡ್ಜೆಟ್ ಅಧಿವೇಶನದಲ್ಲಿ ಕೋರಂ ಇಲ್ಲದಾಗ ನಡೆದ ಸಭಾ ವರದಿಯ ಭಾಗವನ್ನು ಪುಸ್ತಕದಿಂದ ತೆಗೆದುಹಾಕಬೇಕೆಂದು ಹಕ್ಕುಬಾಧ್ಯತಾ ಸಮಿತಿಯು ಒಮ್ಮತ ಸದಸ್ಯರು ತೀರ್ಮಾನಿಸಿದ್ದ ವರದಿಯು ಸಭೆಯಲ್ಲಿ ಚರ್ಚೆಯಾಗಿ ೧೨-೧೧ ಓಟುಗಳಿಂದ ಬಿದ್ದುಹೋಯಿತು.

ಗ್ರಹಣಕ್ಕಾಗಿ ರೈಲ್ವೆ ಸೌಕರ್ಯ

ಮೈಸೂರು ೩

ಈ ದಿನ ಚಂದ್ರಗ್ರಹಣದ ಪ್ರಯುಕ್ತ ಸ್ನಾನಕ್ಕಾಗಿ ಶ್ರೀರಂಗಪಟ್ಟಣಕ್ಕೆ ಹೋಗುವವರ ಸಲುವಾಗಿ ಸಾಕಾದಷ್ಟು ಜನ ಪ್ರಯಾಣಿಕರಿದ್ದರೆ ರಾತ್ರಿ ೧೧ ಗಂಟೆಗೆ ಸ್ಪೆಷಲ್ ಟ್ರೈನನ್ನು ಬಿಡಲಾಗುವುದೆಂದೂ, ರಾತ್ರಿ ೨-೩೦ ಗಂಟೆಗೆ ಅದು ಅಲ್ಲಿಂದ ವಾಪಸು ಹೊರಡುವುದೆಂದೂ ತಿಳಿದುಬಂದಿದೆ.

ನೆಯ್ಗೆ ಶಿಕ್ಷಣದ ಆರಂಭ

ಖದ್ದರ್ ಹರಿಜನ ಸಂಘದವರು ದಿವಾನರ ಅಗ್ರಹಾರದಲ್ಲಿರುವ ಮಹಿಳಾ ಸದನದಲ್ಲಿ ನಿನ್ನೆ ಸಂಜೆ ನೆಯ್ಗೆ ಶಿಕ್ಷಣದ ಆರಂಭೋತ್ಸವವನ್ನು ನೆರವೇರಿಸಿದರು. ಪ್ರಾರ್ಥನೆಯಾದ ನಂತರ ಶ್ರೀ ಎಂ ಲಕ್ಷ್ಮೀನಾರಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಶ್ರೀ ಎಸ್ ರಂಗಾಚಾರ್, ಜಿ ಕೆ ಕುಮಾರಸ್ವಾಮಿ ಮತ್ತು ಶ್ರೀಕಂಠಯ್ಯನವರು ಮಾತನಾಡಿ, ಖಾದಿ ಪ್ರಚಾರ, ನೆಯ್ಗೆ ಶಿಕ್ಷಣದ ಅವಶ್ಯಕತೆಗಳನ್ನು ವಿವರಿಸಿದರು.

ಅಮೃತಸರದಲ್ಲಿ ಘರ್ಷಣೆ

ಅಮೃತಸರದಲ್ಲಿ ಪುನಃ ಗಲಭೆಯು ಆರಂಭವಾಗಿದೆ. ಅನೇಕ ಕಡೆಗಳಲ್ಲಿ ಘರ್ಷಣೆಗಳೂ, ಬೆಂಕಿಹೊತ್ತಿಸುವ ಪ್ರಸಂಗಗಳೂ ನಡೆದಿರುವುದಾಗಿ ವರದಿಯಾಗಿದೆ. ಪೋಲೀಸರು ಗುಂಡುಹಾರಿಸಿದರು. ಗಲಭೆಯು ಪರಿಣಾಮವಾಗಿ ಮೂರು ಪ್ರಾರ್ಥನಾ ಮಂದಿರಗಳು ಭಸ್ಮವಾದುವು, ೩ ಜನರು ಸತ್ತು ೧೭ ಜನರಿಗೆ ಗಾಯಗಳಾಗಿವೆ.

ಸರ್ಕಾರಿ ನೌಕರರ ಉಪವಾಸ ವ್ರತ

ಗ್ಲೋಬ್] ದೆಹಲಿ ಮೇ ೩೦

ಭಾರತ ಸರ್ಕಾರದ ನೌಕರರು ತಮಗೆ ಬೇರೆ ಉದ್ಯೋಗವನ್ನೊದಗಿಸದೆ ತಮ್ಮನ್ನು ಕೆಲಸದಿಂದ ತೆಗೆದುಹಾಕಬಾರದೆಂದು ತಿಳಿಸಿ ಸಲ್ಲಿಸಿದ್ದ ಪ್ರಾರ್ಥನೆಯ ಬಗ್ಗೆ ಜೂನ್ ೫ ನೇ ತಾ॥ ಉಪವಾಸ ವ್ರತವನ್ನು ಆಚರಿಸುವರು. ಅದೇ ದಿನ ಮಧ್ಯಾಹ್ನ ೧೦ ನಿಮಿಷಗಳ ಕಾಲ ಶಾಂತಿಯಾತ್ರೆ ಜರುಗುವುದು.

ಸಿಂಧು ಪ್ರಾಂತ್ಯದಲ್ಲಿ ಹಿಂದೂ ಮುಸ್ಲಿಮರ ನೌಕರಿ ಪ್ರಮಾಣ

ಸಿಂಧು ಪ್ರಾಂತ್ಯದ ಸರ್ಕಾರಿ ನೌಕರಿಯಲ್ಲಿ ಮುಸ್ಲಿಮರಿಗೆ ಶೇ॥ ೭೦ ಸ್ಥಾನಗಳನ್ನೂ ಮುಸ್ಲಿಮೇತರರಿಗೆ ಶೇ॥ ೩೦ ರಷ್ಟು ಸ್ಥಾನಗಳನ್ನು ಕೊಡಲಾಗುವುದೆಂದು ಸರ್ಕಾರದ ಪ್ರಕಟಣೆ ಹೊರಟಿದೆ. ಇದುವರೆವಿಗೆ ಈ ಪ್ರಮಾಣವು ಶೇ॥ ೬೦ ಮತ್ತು ೪೦ ಇದ್ದಿತು.

ಸರ್ಕಾರಿ ನೌಕರರೂ ಸತ್ಕಾರ ಸಮಾರಂಭಗಳೂ

ಗ್ಲೋಬ್] ನಾಗಪುರ ೩೦

ಸರ್ಕಾರಿ ನೌಕರರ ವರ್ಗ ಮತ್ತು ನಿವೃತ್ತಿ ಕಾಲದಲ್ಲಿ ನಡೆಸುವ ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸಕೂಡದೆಂದು ಸಂಯುಕ್ತ ಪ್ರಾಂತದ ಸರ್ಕಾರವು ಅವರಿಗೆ ತಿಳಿಸಿ ಆಜ್ಞೆ ಮಾಡಿದೆ. ಇಂತಹ ಸಮಾರಂಭಗಳಲ್ಲಿ ಭಾಗವಹಿಸದೆ ವಿ.ಶಮ್ಮಯರ ಬಗ್ಗೆ ಅವರು ಇತರರಿಗೆ ಮೇಲ್ಪಂಕ್ತಿ ಹಾಕಲೆಂದು ಕೋರಲಾಗಿದೆ.

ಉಪಾಧ್ಯಕ್ಷರ ಚುನಾವಣೆ

ಸಾಲಿಗ್ರಾಮ ೩೧

ಇಲ್ಲಿನ ಪುರಸಭೆಯ ಉಪಾಧ್ಯಕ್ಷರ ಚುನಾವಣೆಯಲ್ಲಿ ಶ್ರೀ. ಎಸ್ ಜೆ ತಮ್ಮಯ್ಯನವರು ೮ ಓಟುಗಳನ್ನು ಪಡೆದು ಜಯಶೀಲರಾಗಿದ್ದಾರೆ. ಇವರ ಪ್ರತಿಸ್ಪರ್ಧಿಗಳಾದ ಶ್ರೀ ಎಸ್ ವಿ ನಾಗೇಂದ್ರನ್‌ರವರಿಗೆ ೬ ಓಟುಗಳು ಬಂದುವು.

ಈಸೂರು ಬಂದಿಗಳನ್ನು ಬಿಡಲು ಇನ್ನೂ ಪರಿಶೀಲನೆ

ಪ್ರಾ॥ ಪ್ರ॥ ಸಭೆಯಲ್ಲಿ ಪ್ರಶ್ನೆಗೆ ಉತ್ತರ

ಸ್ವಂ ಸು. ಫೋ] ಬೆಂಗಳೂರು ೩

ಈಸೂರು ಪ್ರಕರಣದಲ್ಲಿ ಶಿಕ್ಷೆಗೊಳಗಾದವರ ಪೈಕಿ ೧೧ ಮಂದಿಯನ್ನು ರಾಜಕುಮಾರಿಯವರ ಜನನದ ಸಂದರ್ಭದಲ್ಲಿ ಬಿಡುಗಡೆಮಾಡಲಾಗಿದೆ. ಉಳಿದ ೭ ಮಂದಿಯು ಗುರುತರವಾದ ಅಪರಾಧವನ್ನು ಮಾಡಿರುವುದರಿಂದ ಅವರ ಖುಲಾಸೆಯನ್ನು ಪರಿಶೀಲಿಸಲಾಗುತ್ತಿದೆ ಎಂಬುದಾಗಿ ಈ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ ಬೃಂಗಾರಪ್ಪನವರ ಪ್ರಶ್ನೆಗೆ ನ್ಯಾಯಾಂಗ ಕಾರ್ಯದರ್ಶಿಗಳು ಉತ್ತರವಿತ್ತರು. ಉಪಪ್ರಶ್ನೆಗಳಿಗೆ ಉತ್ತರವೀಯುತ್ತಾ ಕಳೆದ ಸಭೆಯಲ್ಲಿ ಈ ಬಗ್ಗೆ ಆದ ನಿರ್ಣಯವನ್ನು ಗಮನಿಸಿ, ರಾಜಕುಮಾರಿಯವರ ಜನನದ ಸಂದರ್ಭದಲ್ಲಿ ಆ ಖುಲಾಸೆ ಮಾಡಲಾಯಿತೆಂದೂ, ಈಗ ಹಾಲಿ ಜುರಂಗದಲ್ಲಿರುವವರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವವರು ಯಾರೂ ಇಲ್ಲವೆಂದು ಹೇಳಿದರು.

ಧಕ್ಕೆಕ್ಕಾಗಿ ಈ ಸಭೆಗೆ ಬರುವರೆಂದು ಕಾಂಗ್ರೆಸ್ಸಿನವರ ಮೇಲೆ ಮಿ॥ಖಲೀಲ್ ಮತ್ತು ಇನ್ನೊಬ್ಬರು ಆರೋಪಣೆ ಮಾಡಿದರೆಂದು ಶ್ರೀ ಗುಪ್ತರವರೂ ಮತ್ತು ಪತ್ರಿಕೆಯೊಂದರಲ್ಲಿ ತಮ್ಮ ಬಗ್ಗೆ ತಪ್ಪು ವರದಿ ಬಂದಿದೆಯೆಂದು ಶ್ರೀ ಎಚ್ ಸಿ ದಾಸಪ್ಪನವರೂ ಸೂಚಿಸಿದ್ದ ಹಕ್ಕುಬಾಧ್ಯತಾ ನಿರ್ಣಯಗಳನ್ನು ಅಧ್ಯಕ್ಷರು ತಳ್ಳಿಹಾಕಿದರು.

ಅನಂತರ ಬಡ್ಜೆಟ್ಟಿನ ಮೇಲೆ ಭಾಷಣಗಳು ಆರಂಭವಾದುವು. ವೈಸರಾಯಿಯ ಮಿ॥ ಅಹಮದ್ ಖಾನರು ಬಜೆಟ್ಟು ಪರಬರಾದು ಮತ್ತು ಹಕೋಟೆ ವಿಚಾರವಾಗಿ ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಶ್ರೀ ಎಸ್. ವಿ ಕೃಷ್ಣಮೂರ್ತಿಗಳು ಮಾತನಾಡಿ, ಸರ್ಕಾರದ ಆರ್ಥಿಕ ಸ್ಥಿತಿಯನ್ನು ಕಟುವಾಗಿ ಟೀಕಿಸಿದರು. ಮುಂದುವರಿದ ವೈಸೂರು ಎಲ್ಲ ವಿಧದಲ್ಲೂ ಹಿಂದೆ ಬೀಳುತ್ತಿರುವುದು ಶೋಚನೀಯವಾದ ವಿಚಾರವೆಂದರು. ಸರ್ಕಾರದ ಹಣಕಾಸಿನ ಸ್ಥಿತಿಯು ಕಳೆ ಕಳೆದಾಗಿ ಸಂಸ್ಥಾನವು ನಗೆಪಾಟಲಿಗೆ ಈಡಾಗಿದೆಯೆಂದು ಹೇಳಿ ಧರ್ಮ ರತ್ನಾಕರ ಗೋಪಾಲರಾಯರ ಪ್ರಕರಣವೇ ಇದಕ್ಕೆ ಸಾಕ್ಷಿಯಾಗಿದೆಯೆಂದರು. ಸರ್ಕಾರದಲ್ಲಿ ದಕ್ಷತೆಯಿಲ್ಲದೆ ಅನೀತಿ ತಾಂಡವಾಡುತ್ತಿದೆ. ಲಂಚ ಮುಂತಾದ ಪ್ರಸಂಗಗಳ ವಿಚಾರ ವರ್ಣಿಸಲಸದಳವಾಗಿದೆ. ಸಚಿವಾಲಯದಲ್ಲಿನ ನೀತಿ ಖಂಡನೀಯವಾಗಿದೆ. ಜವಾಬ್ದಾರಿ ಸರ್ಕಾರವೇ ಇದಕ್ಕೆ ಪರಿಹಾರವೆಂದೂ ಹೇಳಿದರು. ಭಾರತವು ವಿಭಾಗಿಸಲ್ಪಟ್ಟರೆ ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಪಾಕಿಸ್ತಾನಕ್ಕೆ ಕೊಡಬಾರದೆಂದು ಶ್ರೀ ಭೂಮಾಲಿಂಗರವರು ಒತ್ತಿ ಹೇಳಿದರು. ರಾ॥ ಎಂ. ರಾಮಸ್ವಾಮಿಯವರು ಮಾತನಾಡಿ, ಸಂಸ್ಥಾನದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಸಾಗುತ್ತಿವೆಯೆಂದೂ, ಪ್ರಭುಗಳ ಸಂದೇಶವು ರಾಜಕೀಯ ಪ್ರಗತಿಯನ್ನು ಸೂಚಿಸುವುದೆಂದೂ ಹೇಳಿದರು.

ಹೈದರಾಬಾದು ಪ್ರಧಾನಿ

ಛತ್ತಾರಿ ನವಾಬರನ್ನು ಹೈದರಾಬಾದಿನ ಪ್ರಧಾನಿಯನ್ನಾಗಿ ಸರ್ ಮಿರ್ಜಾರವರ ಸ್ಥಾನದಲ್ಲಿ ನೇಮಿಸಲಾಗಿದೆಯೆಂದೂ, ಇವರು ಒಂದು ವರ್ಷಕಾಲ ಅಧಿಕಾರದಲ್ಲಿರುವುದಾಗಿಯೂ ವರದಿಯಾಗಿದೆ.

ಸಾಧ್ವಿ

ತಾ|| ೩-೬-೪೭ ಮಂಗಳವಾರ

ಮೈಸೂರು ಸಂಸ್ಥಾನವು ತ್ರಿಶಂಕು ಸ್ವರ್ಗವಾಗಬಾರದು

ರಾಜ್ಯಾಂಗ ಸಭೆಯಲ್ಲಿ ಸೇರಲು ಇನ್ನೂ ಮೈಸೂರು ಸಂಸ್ಥಾನವು ನಿರ್ಧರಿಸಿಲ್ಲದಿರುವ ಬಗ್ಗೆ ಅಖಿಲ ಭಾರತ ಸಂಸ್ಥಾನ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಒಂದು ಹೇಳಿಕೆಯನ್ನಿತ್ತು ಮೈಸೂರು ಸಂಸ್ಥಾನವು ತ್ರಿಶಂಕುವಿನ ಸ್ಥಾನವನ್ನು ಅವಲಂಬಿಸಬಾರದೆಂದು ಹೇಳಿದ್ದಾರೆ. ಒಂದು ಬಾರಿ ರಾಜ್ಯಾಂಗ ಸಭೆಯಲ್ಲಿ ಸೇರುವುದಾಗಿ ಘೋಷಿಸಿ, ಈಗ ಸಂಶಯ ಸ್ಥಿತಿಯಲ್ಲಿರುವುದು ಮೈಸೂರಿನಂತಹ ಉನ್ನತ ರಾಜ್ಯಕ್ಕೆ ತರವಲ್ಲವೆಂದು ತಿಳಿಸಿದ್ದಾರೆ.

ಮೈಸೂರು ಮುಸ್ಲಿಂ ಸಂಸ್ಥಾನವಲ್ಲ; ಪಾಕಿಸ್ತಾನದಲ್ಲಿ ಅದು ಸೇರುವಂತಿಲ್ಲ; ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಸಣ್ಣಪುಟ್ಟ ಸಂಸ್ಥಾನಗಳು ಸೇರುವುದು ಸಾಧ್ಯವಿಲ್ಲ; ಆದ್ದರಿಂದ ಮೈಸೂರು ಮತ್ತು ಇಂತಹ ಇತರ ಸಂಸ್ಥಾನಗಳು ಭಾರತದ ಯೂನಿಯನ್ನಿನಲ್ಲಿಯೇ ಸೇರಬೇಕು; ಇಲ್ಲದಿದ್ದರೆ ಅಂತರಾಳದಲ್ಲಿ ಪರದಾಡಬೇಕು-ಎಂಬುದಾಗಿಯೂ ಡಾಕ್ಟರ್ ಪಟ್ಟಾಭಿಯವರು ತಿಳಿಸಿರುವರು.

ಬರೋಡೆಯ ದಿವಾನರಾದ ಸರ್ ಬಿ. ಎಲ್ ಮಿತ್ತರ್‌ರವರು ನೆನ್ನೆ ಈ ವಿಷಯದಲ್ಲಿ ಕೊಟ್ಟಿರುವ ಹೇಳಿಕೆಯು ದಿಟ್ಟತನದಿಂದ ಕೂಡಿರುತ್ತದೆ. ಅಖಂಡ ಭಾರತಕ್ಕಾಗಿಯೇ ಬರೋಡೆಯು ಶ್ರಮಿಸುವುದೆಂದೂ, ಒಂದು ವೇಳೆ ಭಾರತದ ವಿಭಜನೆಯಾದರೆ ಬರೋಡೆಯು ಹಿಂದೂಸ್ಥಾನದೊಳಗೇ ಸೇರುವುದೆಂದೂ ಅವರು ಸ್ಪಷ್ಟವಾಗಿ ನುಡಿದಿದ್ದಾರೆ. ಇದು ನಿಜವಾಗಿಯೂ ದೇಶಾಭಿಮಾನ ಪೂರಿತವಾದ ಹೇಳಿಕೆಯೇ ಸರಿ.

ನಮ್ಮ ದಿವಾನರಾದರೋ ಬ್ರಿಟಿಷ್ ಸರ್ಕಾರದ ಘೋಷಣೆಯಾಗುವವರೆಗೆ ಕಾದು ನೋಡಬೇಕೆಂದು ಹೇಳಿರುತ್ತಾರೆ. ಕಳೆದ ನವರಾತ್ರಿ ಅಧಿವೇಶನದಲ್ಲಿ ಅವರು ಕೊಟ್ಟ ಹೇಳಿಕೆಗೆ ಇದು ವ್ಯತಿರೇಕವಾಗಿರುತ್ತದೆ. ಬ್ರಿಟಿಷ್ ಸರ್ಕಾರದ ಯೋಜನೆಯನ್ನು ಮೈಸೂರು ಅಂಗೀಕರಿಸಿದೆಯೆಂದೂ, ಆದ್ದರಿಂದ ಮೈಸೂರು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದೆಂದೂ, ತಾವೇ ಇಲ್ಲಿನ ಪ್ರತಿನಿಧಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗುವುದಾಗಿಯೂ ಹೇಳಿದ್ದರು. ಆದರೆ ಈಗ ಪರಿಸ್ಥಿತಿಯು ಬದಲಾಯಿಸಿದೆಯೆಂದೂ, ವೈಸರಾಯರ ಹೇಳಿಕೆಗಾಗಿ ಕಾಯಬೇಕೆಂದೂ ಅವರು ಹೇಳುತ್ತಿರುವುದು ಅತ್ಯಂತ ಅಸಮಂಜಸವಾಗಿರುತ್ತದೆ.

ಮಹಾತ್ಮ ಗಾಂಧಿಯವರು ಮೊನ್ನೆ ಸಂಸ್ಥಾನಾಧೀಶರುಗಳಿಗೆ ವಿಶೇಷವಾದ ಮನವಿಯೊಂದನ್ನು ಮಾಡಿಕೊಂಡಿರುತ್ತಾರೆ. ಇನ್ನು ಮುಂದೆ ಯಾವುದೇ ರಾಜ್ಯಾಧಿಕಾರಿಗೆ ಬಂದರೂ ಪ್ರಜೆಗಳ ಇಚ್ಛಾನುಸಾರದಂತೆಯೇ ಪ್ರಭುತ್ವವು ನಡೆಯುವಂತಾಗುವುದೆಂದು ಹೇಳಿದ್ದಾರೆ. ಕಾಲಗತಿಯನ್ನನುಸರಿಸಿ, ರಾಜರುಗಳು ಸಾಂವಿಧಾನಿಕ ಪ್ರಭುಗಳಾ...

ವಿದ್ಯಾರ್ಥಿಗಳ ಕಷ್ಟ

ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಜೂನಿಯರ್ ಬಿ. ಎಸ್ ಸಿ. ತರಗತಿಯ ೧೮೦ ಹುಡುಗರಲ್ಲಿ ೩೫ ಜನರನ್ನು, ಡಾ|| ಇಂಟರಿನಲ್ಲಿ ೧೩೦ ರ ಪೈಕಿ ೫೦ ಮಂದಿಯನ್ನೂ ಮೇಲಿನ ತರಗತಿಗೆ ಕೇರ್ಗಡೆ ಮಾಡಿಸಿಲ್ಲ. ಕಳೆದ ವರ್ಷವೆಲ್ಲಾ ಸರಿಯಾಗಿ ಪಾಠಪ್ರವಚನಗಳೇ ನಡೆದಿಲ್ಲ. ಪ್ರಯೋಗ ತರಗತಿಗಳ ವಿಚಾರ ಹೇಳಬೇಕಾಗಿಯೇ ಇಲ್ಲ. ಹೀಗಿದ್ದರೂ ಕೇರ್ಗಡೆ ವಿಚಾರದಲ್ಲಿ ಈ ನೀತಿ ಅನುಸರಿಸಿರುವುದು ಸರಿಯಲ್ಲ. ಇತರ ಕಾಲೇಜುಗಳಲ್ಲಿ ಕೇರ್ಗಡೆಯಾಗದವರ ಸಂಖ್ಯೆ ಕೇವಲ ಇರದಷ್ಟು ಇಲ್ಲದಿರುವುದರಿಂದ ವಿಶ್ವವಿದ್ಯಾನಿಲಯದವರು ಈ ವಿಚಾರವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ಉಪಕಾರ ಮಾಡಬೇಕೆಂದು ಪ್ರಾರ್ಥಿಸಿ ಹಲವು ನೊಂದ ವಿದ್ಯಾರ್ಥಿಗಳು ಪತ್ರವೊಂದನ್ನು ಬರೆದಿದ್ದಾರೆ.

ಗ ಭಾರತ ರಾಜ್ಯಾಂಗ ನಿರ್ಮಾಣದಲ್ಲಿ ಸಹಕರಿಸಬೇಕೆಂದು ಕೋರಿದ್ದಾರೆ. ನಮ್ಮ ಶ್ರೀಮನ್ಮಹಾರಾಜರವರೂ ಸಹ ಪಟ್ಟಕ್ಕೆ ಬಂದಾಗ ಪ್ರಜಾಪ್ರಭುತ್ವದಲ್ಲಿಯೂ, ತಮ್ಮ ಪ್ರಜಾ ಕೋಟಿಯಲ್ಲಿಯೂ ಅಚಲವಾದ ಪ್ರೀತಿ, ವಿಶ್ವಾಸಗಳನ್ನು ವ್ಯಕ್ತಪಡಿಸಿರುತ್ತಾರೆ. ಎಂದ ಮೇಲೆ ಮೈಸೂರಿನಲ್ಲಿ ಪ್ರಜಾ ಪ್ರಭುತ್ವವನ್ನು ಸ್ಥಾಪಿಸುವುದಕ್ಕೂ ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಕ್ಕೂ ಯಾವ ಅಭ್ಯಂತರವೂ ಇರುವುದಿಲ್ಲ. ದಿವಾನರು ತಮ್ಮ ಸಂದಿಗ್ಧ ವರ್ತನೆಯನ್ನು ಮಾರ್ಪಡಿಸಿ ಧೈರ್ಯದಿಂದ ಮುಂದುವರೆದು ಭಾರತದ ರಾಜ್ಯಾಂಗ ನಿರ್ಮಾಣ ಕಾರ್ಯದಲ್ಲಿ ಮೈಸೂರು ಸಂಸ್ಥಾನವು ಪಾತ್ರ ವಹಿಸುವಂತೆ ಕೂಡಲೇ ವ್ಯವಸ್ಥೆ ಮಾಡುವುದು ವಿಹಿತವಾಗಿರುತ್ತದೆ.

ಈ ದಿನ ಸಂಜೆ ೭ ಗಂಟೆಗೆ: ರಾಯರ ರೇಡಿಯೊ ಭಾಷಣ

ನೆಹರೂ, ಜಿನ್ನಾ, ಬಲದೇವ ಸಿಂಗ ಭಾಷಣ ಮಾಡುವರು

ಮುಖಂಡರ ಸಮ್ಮೇಳನದ ವಿಚಾರ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಈ ದಿನ ಸಂಜೆ ೭ ಗಂಟೆಗೆ ರೇಡಿಯೋ ಮೂಲಕ ಭಾಷಣ ಮಾಡುವರು. ಅದು ಮುಗಿದೊಡನೆಯೇ ಬ್ರಿಟಿಷ್ ಸರ್ಕಾರದ ಹೊಸ ಯೋಜನೆಯನ್ನು ಲಂಡನ್ ಮತ್ತು ಭಾರತಗಳಲ್ಲಿ ಏಕಕಾಲದಲ್ಲಿ ಪ್ರಕಟಿಸಲಾಗುತ್ತದೆ. ಅಲ್ಲದೆ ೭-೩೦ ರಿಂದ ಪಂ|| ನೆಹರುರವರೂ, ೭-೪೦ ರಿಂದ ಮಿ|| ಜಿನ್ನಾರವರೂ, ೭-೫೦ ರಿಂದ ಸ|| ಬಲದೇವಸಿಂಗರೂ ರೇಡಿಯೋ ಮೂಲಕ ಭಾಷಣ ಮಾಡುವರು. ಇವುಗಳನ್ನೆಲ್ಲಾ ಮೈಸೂರು ಆಕಾಶವಾಣಿಯ ಮೂಲಕ ಪುನಃ ಪ್ರಸಾರ ಮಾಡಲಾಗುವುದು.

ಭಾರತದಾದ್ಯಂತವೂ ಮುಂಜಾಗ್ರತೆ ಕ್ರಮಗಳು

ವೈಸರಾಯರು ಪ್ರಕಟಿಸಲಿರುವ ಹೊಸ ಯೋಜನೆಯಿಂದ ಉಂಟಾಗಬಹುದಾದ ಪರಿಸ್ಥಿತಿಯನ್ನು ಕಾಯಲು ಬೊಂಬಾಯಿ, ಕಲ್ಕತ್ತಾ, ಲಾಹೋರ್, ದೆಹಲಿ ಮುಂತಾದ ಪ್ರಮುಖ ನಗರಗಳಲ್ಲಿಯೂ, ಇತರ ಸ್ಥಳಗಳಲ್ಲಿಯೂ ತೀವ್ರವಾದ ಮಿಲಿಟರಿ ಪಡೆಯನ್ನು ಇಟ್ಟು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ನೇಪಾಳಕ್ಕೆ ಶ್ರೀ ಪ್ರಕಾಶ್

ಗ್ಲೋಬ್] ದೆಹಲಿ ೩

ನೇಪಾಳ ಸರ್ಕಾರದ ಪ್ರಾರ್ಥನೆಯಂತೆ ಅಲ್ಲಿನ ಸರ್ಕಾರಕ್ಕೂ, ಕಾಂಗ್ರೆಸ್ಸಿಗೂ ಸ್ನೇಹ ಸೌಹಾರ್ದವನ್ನು ಉಂಟುಮಾಡುವ ಉದ್ದೇಶದಿಂದ ಕೇಂದ್ರ ಶಾಸನ ಸಭೆಯ ಸದಸ್ಯರಾದ ಶ್ರೀ ಶ್ರೀ ಪ್ರಕಾಶರನ್ನು ಪಂ|| ನೆಹರೂರವರು ನಿಯೋಜಿಸಿದ್ದಾರೆ. ಈ ವಾರದಲ್ಲಿ ಅವರು ನೇಪಾಳಕ್ಕೆ ತೆರಳುವರು.

ನಾಯಿಕೆಮ್ಮಿನ ಔಷಧಿ

7-8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರಲು—ಉಬ್ಬಸಕ್ಕೆ (Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮ ಶೂಲೆ ಮತ್ತು (Tonsils) ಗಲಾಯುಕ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್ ಪಂಡಿತರು, ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ರಾಜಕಮಲ್,

ತಾ|| ೩೦-೫-೪೭ ರಿಂದ

ಆರನೇ ವಾರ

ಪ್ರತಿ ದಿನ ೩ ಆಟಗಳು

ಕೃಷ್ಣವೇಣಿ ರಘುರಾಮಯ್ಯ

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸಲಿಗೆಯಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮಯ್ಯ, ಡಿ|| ಬೋರ್ಡ್ ವೈದ್ಯ, ಅರಕಲವಾಡಿ ಚಾಮರಾಜನಗರ ತಾ||

Edited printed and published by A. R. Nagarajan at the Sadhvi Press D. Subbaiah Road Mysore

ವುಡ್‌ಲ್ಯಾಂಡ್ಸ್, ಮೈಸೂರು

1-6-47 ರಿಂದ

ಚಿಕ್ಕರಿದ ೫ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

ಬೈಕಮಿಲು

-: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರನ್ ಮುಂತಾದವರು.

ನಿಮಗೆ ಬೇಕಾಗಬಹುದಾದ ಇನ್ನಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೨. : : ಫೋನ್ ೪೯೧

BANGALORE RACES 1947.

ಬೆಂಗಳೂರು ರೇಸಸ್ 1947.

ಜೂನ್, ~~...~~ 14, 18, 21 ಮತ್ತು 25 ರಲ್ಲಿ

ಬುಕ್ ಮೇಕರ್ಸ್ ಮತ್ತು ಟೋಟಲೈಸೇಟರ್ಸ್

ರೂ. 2 ಸ್ಪೆಷಲ್ ಮತ್ತು ರೂ 5 ಟ್ರಿಬಲ್ ಟಿಕೆಟ್

Ist ಟೋಟ್ ರೂ. 10 IInd ಟೋಟ್ ರೂ. 5

ಪ್ರವೇಶ- ಮೊದಲನೇ ತರಗತಿ .... ಪುರುಷರು ರೂ. 6 ಒಂದು ದಿನಕ್ಕೆ

" " .... ಸ್ತ್ರೀಯರು ರೂ. 4 "

ಎರಡನೇ ತರಗತಿ ಪುರುಷರು ಅಥವಾ ಸ್ತ್ರೀಯರು ರೂ 2 "

ರೋ॥. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೪—೬—೪೭ [ಸಂಚಿಕೆ ೨೫೪

ಬ್ರಿ॥ ಯೋಜನೆಯ ಬಗ್ಗೆ ರಾಷ್ಟ್ರನಾಯಕರ ಮನವಿ

…ತದ ಬಗ್ಗೆ ಬ್ರಿ॥ ಸರ್ಕಾರದ ಪ್ರಕಟಣೆ

…ಯರ ಮತ್ತು ನಾಯಕರುಗಳ ಭಾಷಣ

…ನ್ನೆ ಸಂಜೆ ೭ ಗಂಟೆಗೆ ಸರಿಯಾಗಿ ದೆ… ಅಖಿಲ ಭಾರತ ರೇಡಿಯೋ ಕೇಂ… ವೈಸರಾಯರಾದ ಲಾರ್ಡ್ ಮೌಂ… …ಟನ್ನರು ಅಧಿಕಾರ ವರ್ಗಾವಣೆಯ… …ದಲ್ಲಿ ಭಾಷಣಮಾಡುತ್ತಾ ಈ ರೀ… …ದರು:—

…ರತದ ಐಕ್ಯತೆಗಾಗಿ ನಾನು ಬಹಳ ಪ್ರ… …ಪಟ್ಟೆ ಆದರೆ ಅದು ಫಲಕಾರಿಯಾಗ… …ಮ ವಿಚಾರದಲ್ಲಿ ಮೇ ೧೬ ನೇ ತಾ॥ …ನಿಯೋಗದವರು ಹೊರಡಿಸಿದ ಯೋ… …ೕ ಸರ್ವೋತ್ಕೃಷ್ಟವಾದ ಮಾರ್ಗವೆಂ… …ನು ಇನ್ನೂ ನಂಬಿದ್ದೇನೆ. ಆದರೆ …ನೆಯಿಂದ ಹೊಸ ಹಾದಿ ಹಿಡಿಯು…ಗಿದೆ. ಯಾರನ್ನೂ ಬಲವಂತದಿಂದ …ರ ಪ್ರದೇಶಕ್ಕೆ ಸೇರಬೇಕೆಂದು ಸೂ…ವುದಿಲ್ಲ. ತಮ್ಮ ನಿರ್ಧಾರಗಳನ್ನು ಪ್ರ… ಮಾಡುವುದು ಆವಶ್ಯಕ ಆದರಿಂ… ಮಾಡಲಾಗುವುದು. ಗಡಿ ನಿರ್ಧಾ… …ಮಿತಿಯೊಂದನ್ನು ನೇಮಿಸಲಾಗುವು… ಅಧಿಕಾರ ವರ್ಗಾವಣೆಯನ್ನು ಆದ… …ಶೀಘ್ರ ಮಾಡಲಾಗುವುದು. ಲಂಡ… ಭಾರತ ಕಛೇರಿಯನ್ನು ವಜಾಮಾಡಿ… …ಗಿ ಬೇರೆ ವ್ಯವಸ್ಥೆ ಕೈಗೊಳ್ಳಲಾಗು… ಇದಕ್ಕೆಲ್ಲಾ ಬೇಕಾದ ಶಾಸನವನ್ನು …ಷ್ಲೀ ಪಾರ್ಲಿಮೆಂಟು ಮಾಡುವುದು. …ದಲ್ಲಿ ಅರಾಜಕತೆಯನ್ನು ನಿರ್ನಾಮ …ಲು ನಿರ್ಧರಿಸಲಾಗಿದೆ ಪ್ರಜೆಗಳೆ… ಗಾಂಧಿ-ಜಿನ್ನಾ ಶಾಂತಿಸಂದೇಶವನ್ನು …ಸಿ ಸೌಹಾರ್ದದಿಂದ ಶಾಂತಿ, ಶಿಸ್ತು… ಕಾಪಾಡಬೇಕಾಗಿದೆ ಸಾರ್ವಭೌಮ… …ರವರು ಭಾರತದ ಪ್ರಜೆಗಳಿಗೆ ಶ… …ಭಾಶಯಗಳನ್ನು ಅರ್ಪಿಸುತ್ತಾರೆ ಈಗ… …ರಿಸುವ ಯೋಜನೆ ದೋಷರಹಿತವೆಂ… …ಳಲಾಗುವುದಿಲ್ಲ. ಸ್ನೇಹ, ಸೌಹಾ… …ಸಹಕಾರದಿಂದ ಅದು ಯಶಸ್ವಿಯಾಗ… …ಗದೆ

ಯೋಜನೆಯ ವಿವರ

…ನಂತರ ಬ್ರಿಟಿಷ್ ಸರ್ಕಾರದ ಹೊಸ …ಜನೆಯನ್ನು ಹೊರಗೆಡಹಲಾಯಿತು. …ಸಂಕ್ಷಿಪ್ತ ಪರಿಚಯ ಈರೀತಿ ಇದೆ ಅ… …ಗ ಬೇರೆಬೇರೆ ಅಂಶಗಳನ್ನು ವಿವರಿ…ಸಿದೆ ಈಗಿರುವ ರಾಜ್ಯಾಂಗ ಸಭೆಯು …ಡೆಯೂ ನಡೆದುಕೊಂಡುಹೋಗುವು… ಭಾರತವು ಅಖಂಡವಾಗಿರಬೇಕೆ ಅಥ… ವಿಭಾಗಿಸಲ್ಪಡಬೇಕೆ ಎಂಬ ಅಂಶವನ್ನು …ಕ್ಯ ಶಾಸನ ಸಭೆಗಳು ನಿರ್ಧರಿಸುವುವು …ಜಾಬ್ ಮತ್ತು ಬಂಗಾಳಾ ಪ್ರಾಂತ್ಯಗಳ ಮುಸ್ಲಿಂ ಮತ್ತು ಮುಸ್ಲಿಮೇತರ ಪ್ರ… …ಗಳನ್ನಾಗಿ ವಿಂಗಡಿಸುವ ಬಗ್ಗೆ ಸದರಿ …ಸಭೆಗಳ ಬೇರೆಬೇರೆ ಭಾಗಗಳ ಪ್ರತಿ… …ಗಳ ಅಭಿಪ್ರಾಯದಂತೆ ನಡೆಯಲಾಗು… ಸಿಲ್ಹೆಟ್ ಜಿಲ್ಲೆಯನ್ನು ಅಸ್ಸಾಂ …ತ್ಯದಿಂದ ಪ್ರತ್ಯೇಕಿಸಿ, ಪೂರ್ವಬಂಗಾ… …ಗೆ ಸೇರಿಸಲಾಗುವುದು ಗಡಿಪ್ರದೇಶ …ವನ್ನು ನೆರೆಯ ಪ್ರಾಂತ್ಯಗಳ ಸರ್ಕಾರ …ನ ಒಪ್ಪಂದಕ್ಕೆ ಒಳಬೇಕಾಗಿದೆ ಭಾರ… ವಿಭಾಗವಾದರೆ ಆಗ್ನೆ ಗಡಿನಾಡು ಪ್ರಾಂ… …ಯಾವ ಭಾಗಕ್ಕೆ ಸೇರಬೇಕೆಂಬ ಬ… …ಕ್ಕಿನ ಪ್ರಜೆಗಳ ಅಭಿಪ್ರಾಯ …ಕೊಳ್ಳಲಾಗುವುದು ವಿಭಾಗವಾಗ… …ದಿರಲಿ ಭಾರತಕ್ಕೆ …

ಗಳೊಳಗೆ ಡೊಮಿನಿಯನ್ ಸ್ಥಾನವನ್ನು ಕೊಡಲಾಗುವುದು ಸಂಸ್ಥಾನಗಳ ವಿಚಾರದಲ್ಲಿ ಬ್ರಿ॥ನಿಯೋಗದವರು ಮೇ ೧೬ ರಲ್ಲಿ ಹೊರಡಿಸಿದ ಯೋಜನೆಯೇ ಅನ್ವಯಿಸುವುದು ಅಧಿಕಾರ ವರ್ಗಾವಣೆಯ ವಿವರಗಳನ್ನೆಲ್ಲಾ ವೈಸರಾಯರೇ ನೋಡಿಕೊಳ್ಳುವರು.

ಬ್ರಿಟಿಷ್ ಸರ್ಕಾರದ ಈ ಯೋಜನೆಯನ್ನು ಒಪ್ಪಿರುವುದಾಗಿ ಕಾಂಗ್ರೆಸ್, ಲೀಗ್ ಮತ್ತು ಸಿಖ್ ಪ್ರತಿನಿಧಿಗಳು ವೈಸರಾಯರಿಗೆ ತಿಳಿಸಿರುತ್ತಾರೆ

ನೆಹರೂರವರ ಭಾಷಣ

ಭಾರತ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷರಾದ ಪಂ॥ ನೆಹರೂರವರು ಅನಂತರ ಮಾತನಾಡಿ, ಇದುವರೆವಿಗೆ ಅನೇಕ ಗಂಡಾಂತರಗಳನ್ನು ದೇಶವು ಎದುರಿಸಿರುವುದಾಗಿಯೂ, ಮುಂದೆಯೂ ಹಲವು ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಿದೆಯೆಂದೂ ಹೇಳಿದರು ಅಖಂಡ ಸ್ವತಂತ್ರ ಭಾರತದ ಸ್ಥಾಪನೆಗಾಗಿ ಅನೇಕ ಹೋರಾಟಗಳು ನಡೆದಿವೆ ನಾನಾವಿಧವಾದ ತ್ಯಾಗಮಾಡಲಾಗಿದೆ ಭಾರತವು ವಿಶ್ವದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದಿದೆ ಭಾರತದ ಭವಿಷ್ಯವು ಪ್ರಜೆಗಳಿಂದಲೇ ನಿರ್ಧರಿತಬೇಕಾಗಿದೆಯೇ ಹೊರತು, ಪಸ್ಟೇ ಒಳ್ಳೆಯವರೂ, ಪ್ರಭಾವಶಾಲಿಗಳೂ ಆದಾಗ್ಯೂ ಹೊರಗಿನವರಿಂದ ತೀರ್ಮಾನಿಸಲ್ಪಡಲಾರದು ಈ ಯೋಜನೆಯನ್ನು ನಾವು ಅಂಗೀಕರಿಸಿ, ಆದರಂತೆಯೇ ನಾವು ನಮ್ಮವರಿಗೆಲ್ಲಾ ಶಿಫಾರಸ್ ಮಾಡುತ್ತೇವೆ ಆದರೆ ಈ ಬಗ್ಗೆ ನಮಗೆ ಸಂತೋಷವಿಲ್ಲ ಚರಿತ್ರಾರ್ಹವಾದ ಪ್ರಾಚೀನ, ಭೌಗೋಳಿಕ, ಸಾಂಸ್ಕೃತಿಕ ಸಂಬಂಧವನ್ನು ಪಡೆದಿರುವ ನಮ್ಮ ಹೃದಯಗಳನ್ನು ಬದಲಾಯಿಸಲು, ಅಥವಾ ಬೇರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ ಮಹಾತ್ಮ ಗಾಂಧಿಯವರ ಮಾರ್ಗದರ್ಶನದಿಂದಲೇ ನಾವು ಇಲ್ಲಿಯವರೆಗೆ ಬಂದಿದ್ದೇವೆ ಅವರ ಮೇಲ್ಪಂಕ್ತಿ, ಹಿತೋಕ್ತಿ ಆಶೀರ್ವಾದಗಳೇ ನಮ್ಮನ್ನು ನಮ್ಮ ಧ್ಯೇಯಸಾಧನೆಗಾಗಿ ಮುಂದೆ ಒಯ್ಯಬೇಕಾಗಿದೆ” ಎಂದು ಹೇಳಿದರು

ಮುಸ್ಲಿಂ ಲೀಗಿನ ನೀತಿ

ಪಕ್ಷಲೀಯು ಲೀಗ್ ಅವರಣದಲ್ಲಿ ಹೊಸ ಯೋಜನೆಯ ಬಗ್ಗೆ ಆಶಾಭಾವನೆ ಮೂಡಿದೆ ಆದರೂ, ಅ॥ ಭಾ॥ ಮುಸ್ಲಿಂ ಲೀಗ್ ಕೌನ್ಸಿಲಿನ ಸಭೆಯನ್ನು ಇದೇ ೯ ನೇ ತಾ॥ ಕರೆದು ಈ ಯೋಜನೆಗೆ ಅಂಗೀಕಾರ ಪಡೆಯಬೇಕಾಗಿದೆ-ಎಂಬುದಾಗಿ ಮಿ॥ ಜಿನ್ನಾರವರು ಭಾಷಣ ಮಾಡುತ್ತಾ ತಿಳಿಸಿದರು.

ಕೊಲ್ಹಾಪುರದಲ್ಲಿ ಸುಧಾರಣೆ

ಕೊಲ್ಹಾಪುರದ ಮಹಾರಾಜರು ಕಳೆದ ಭಾನುವಾರ ತಮ್ಮ ಸಿಂಹಾಸನಾರೋಹಣ ಸಮಾರಂಭದ ಸಂದರ್ಭದಲ್ಲಿ ಸಂಸ್ಥಾನದ ರಾಜ್ಯಾಂಗ ಸುಧಾರಣೆಗಳನ್ನು ಘೋಷಿಸಿರುವರು ಆದರಂತೆ ಮಂತ್ರಿಮಂಡಲದಲ್ಲಿ ಪ್ರಧಾನಿಯನ್ನೊಳಗೊಂಡ ಇಬ್ಬರು ಅಧಿಕಾರಿ ಮಂತ್ರಿಗಳೂ, ನಿಮ್ನ ವರ್ಗದವರನ್ನು ಪ್ರತಿನಿಧಿಸುವ ಒಬ್ಬರನ್ನೊಳಗೊಂಡು ಶಾಸನ ಸಭೆಯಿಂದ ಚುನಾಯಿತರಾದ ಮೂರು ಜನ ಖಾಸಗಿ ಮಂತ್ರಿಗಳೂ ಇರುವರು. ಶಾಸನ ಸಭೆಯಲ್ಲಿ ೪೪ ಚುನಾಯಿತ ಮತ್ತು ೭ ನಾಮಕರಣ ಸದಸ್ಯರಿರುವರು ಪ್ರತಿನಿಧಿ ಸಭಾ, ಮತ್ತು ಜಹಗೀರುದಾರರು ಮತ್ತು ವಿವಿಧ ಹಿತಗಳನ್ನು ಪ್ರತಿನಿಧಿಸುವ ಸದಸ್ಯರುಗಳ ‘ ಪ್ರಜಾಮಂಡಲ ’ ವೆಂಬ ಎರಡು ಸಭೆಗಳುವುವು ಸಂಸ್ಥಾನಕ್ಕೆ ಪ್ರತ್ಯೇಕವಾದ ಶ್ರೇಷ್ಠ ನ್ಯಾಯಸ್ಥಾನವೊಂದನ್ನು ಸ್ಥಾಪಿಸಲಾಗುವುದು

ನಾಳೆ ಗುರುವಾರ ಸೇರುವ ಅಚ್ಚುಪಿನ ಸಮ್ಮೇಳನದಲ್ಲಿ ಅವರು ಯುನೈಟೆಡ್ ಮೇಲೆ ಯುದ್ಧವನ್ನು ಘೋಷಿಸುವರು ಎಂಬುದಾಗಿ ಡಮಾಸ್ಕಸ್ಸಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಗಡಿನಾಡಿನಲ್ಲಿ ನಡೆಯುತ್ತಿರುವ ಲೀಗ್ ಚಳುವಳಿಯನ್ನು ನಿಲ್ಲಿಸಲಾಗುವುದೆಂದೂ ಜನರು ಶಾಂತಿಯಿಂದ ವರ್ತಿಸಿ ಬ್ರಿ॥ ರಿಂದ ಅಧಿಕಾರವನ್ನು ಪಡೆಯಬೇಕೆಂದೂ ಶಿಸ್ತನ್ನು ಕಾಪಾಡಬೇಕೆಂದೂ ಅವರು ಹೇಳಿದರು.

ವಿಭಜನೆ ಬಹಳ ಕಾಲ ಬಾಳಲಾರದು

ಬ್ರಿ॥ ಹೊಸ ಯೋಜನೆಯಿಂದ ತಮಗೆ ಸಂತೋಷವಾಗಿದೆಯೆಂದು ಯಾರೂ ಭಾವಿಸಬಾರದೆಂದು ಸ॥ ಬಲದೇವ ಸಿಂಗರು ತಮ್ಮ ಭಾಷಣದಲ್ಲಿ ವಿನಂತಿ ಮಾಡಿಕೊಂಡರು ಈಗಿನ ನಮ್ಮ ನಿರ್ಧಾರವು ಸ್ನೇಹ ಸೌಹಾರ್ದದಿಂದಾದ ರಾಜಿಯಲ್ಲ ಒಂದು ನಿರ್ಧಾರ ಮಾತ್ರ ಸಹಸ್ರಾರು ವರ್ಷಗಳಿಂದ ಬಂದ ನಮ್ಮ ಸಂಬಂಧವು ತಾತ್ಕಾಲಿಕವಾಗಿ ದೂರವಾಗಬಹುದು , ಆದರೆ ಈ ವಿಭಜನೆಯು ಬಹುಕಾಲ ಬಾಳಲಾರದು. ಏನೇ ಬರಲಿ ಘಂಟಾಘೋಷವನ್ನು ಸರ್ವವಿಧದಲ್ಲೂ ಕೊನೆಗಾಣಿಸಲು ಸರ್ಕಾರವು ನಿರ್ಧರಿಸಿದೆ. ಅಧಿಕಾರ ವರ್ಗಾವಣೆಯು ಶಾಂತಿಯಿಂದ ನಡೆಯಲು ಎಲ್ಲರೂ ಸಹಕರಿಸಬೇಕು -ಎಂಬುದಾಗಿಯೂ ಅವರು ತಿಳಿಸಿದರು

ಸರ್ಕಾರ ಎತ್ತಿದ ಸಾಲವೆಲ್ಲಾ ಹೊರಗಿನವರಿಗೆ ಮೀಸಲು

ಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರ

(ಸ್ವಂ ನ್ಯೂ.ಸ್ಟೋ) ಬೆಂಗಳೂರು ೪

ಮೈಸೂರು ಸರ್ಕಾರದವರು ಎತ್ತಿದ ೫ ಕೋಟಿ ರೂ. ಗಳಲ್ಲಿ ಮೈಸೂರಿನವರಿಂದ ೨೦ ಲಕ್ಷ ರೂ. ಗಳನ್ನು ತೆಗೆದುಕೊಳ್ಳಲಾಗಿದೆ. ದಳ್ಳಾಳಿಗಳಿಗೆ ನೂರಕ್ಕೆ ಒಂದಾಣೆ ದರಂತೆ ಶುಲ್ಕ ಕೊಡಲಾಗಿದೆ. ಭಾರತ ಸರ್ಕಾರದಲ್ಲಿ ಠೇವಣಿ ಇಟ್ಟಿರುವ ಮೊಬಲಗನ್ನು ಹೇಳಲು ಸಾಧ್ಯವಿಲ್ಲ. ಇಷ್ಟು ಭಾರಿ ಮೊಬಲಗಿನ ಸಾಲ ದೊರಕುವ ಬಗ್ಗೆ ಸಂದೇಹ ಹುಟ್ಟಿ ಹೊರಗಡೆ ದಳ್ಳಾಳಿಗಳಾದ ಸ್ಟಾಕ್ ಬ್ರೋಕರ್ ಕಂಪೆನಿಯವರ ಸಹಾಯ ಪಡೆಯಲಾಯಿತು-ಎಂಬುದಾಗಿ ಈ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ ಹಾಲಹಳ್ಳಿ ಸೀತಾರಾಮಯ್ಯನವರ ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಹಣಕಾಸಿನ ಕಾರ್ಯದರ್ಶಿಗಳು ತಿಳಿಸಿದರು.

ಬ್ರಿಟಿಷ್ ಯೋಜನೆಯನ್ನು ಕಾಂಗ್ರೆಸ್, ಸಿಖ್ ಮತ್ತು ಮುಸ್ಲಿಂ ಲೀಗಿನವರು ಅಂಗೀಕರಿಸಿರುವುದಕ್ಕಾಗಿ ಅವರನ್ನು ಅಭಿನಂದಿಸುವ ಬಗ್ಗೆ ಶ್ರೀಗಳಾದ ಎಂ. ಪಿ. ಜೋಯಿಸ್, ಎಸ್. ವಿ. ಕೃಷ್ಣಮೂರ್ತಿ, ಭೂಪಾಳಂ, ಮತ್ತು ನೂರ್‌ಹುಸೇನರು ಕಳುಹಿಸಿದ್ದ ವಿಶೇಷ ನಿರ್ಣಯವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು ಆ ಸ್ಥಾನದಲ್ಲಿರಲು ಅನರ್ಹರೆಂದು ಮೊದಲಾಗಿ ಶ್ರೀ ಗುಪ್ತರವರು ಹಿಂದೆ ಹೇಳಿದ್ದರೆಂದೂ ಅದು ಸಭೆಯ ಹಕ್ಕುಬಾಧ್ಯತೆಗಳಿಗೆ ಚ್ಯುತಿಯನ್ನುಂಟುಮಾಡಿದೆಯೆಂದೂ ಶ್ರೀ ಕೆ ಚನ್ನಲಿಂಗಯ್ಯನವರು ತಂದಿದ್ದ ಹಕ್ಕುಬಾಧ್ಯತಾ ಸೂಚನೆಯನ್ನು ಸಭೆಯು ಚರ್ಚಿಸುತ್ತಿದೆ.

ಸೆಪ್ಟೆಂಬರಿನಲ್ಲಿ ರೆಸಿಡೆನ್ಸಿಗಳ ರದ್ದು

೧೯೪೮ ರ ಜೂನ್ ಅಂತ್ಯದೊಳಗಾಗಿ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡುವುದಾಗಿ ಮಾಡಿರುವ ಘೋಷಣೆಯ ಅಂಗವಾಗಿ ಬರುವ ಸೆಪ್ಟೆಂಬರ್ ಅಥವಾ ಈ ವರ್ಷಾಂತ್ಯದೊಳಗೆ ಸಂಸ್ಥಾನಗಳಲ್ಲಿರುವ ರೆಸಿಡೆನ್ಸಿಗಳನ್ನೆಲ್ಲಾ ರದ್ದುಮಾಡಲಾಗುವುದೆಂದು ತಿಳಿದು ಬಂದಿದೆ

ರೀವಾ ಸಂಸ್ಥಾನದಲ್ಲಿ ಸುಧಾರಣೆ

ರೀವಾ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಾಗಿ ನೇಮಕವಾಗಿದ್ದ ಸಮಿತಿಯು ಈ ರೀತಿ ಸಲಹೆಯಿತ್ತಿದೆ ಚುನಾಯಿತ ಸದಸ್ಯರ ಬಹುಮತದಿಂದ ಕೂಡಿದ ಶಾಸನ ಸಭೆಯನ್ನು ಕೂಡಲೇ ರಚಿಸುವುದು ; ಶಾಸನ ಸಭೆಯ ಚುನಾಯಿತ ಸದಸ್ಯರಿಂದ ಕೂಡಿದ ಮಂತ್ರಿ ಮಂಡಲವನ್ನು ರಚಿಸುವುದು , ಸ್ಥಳೀಯ ಸಂಸ್ಥೆಗಳ ನಿರ್ಮಾಣ ಮತ್ತು ರಾಜ್ಯಾಂಗ ಸಭೆ ಸಲಹೆಯ ಆಧಾರದ ಮೇಲೆ ಹಕ್ಕು ಬಾಧ್ಯತೆಗಳ ವಿಚಾರವಾಗಿ ಘೋಷಣೆ ಹೊರಡಿಸುವುದು ಇವುಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಸಮಿತಿಯು ರೀವಾ ಮಹಾರಾಜರಿಗೆ ಸಲಹೆ ಇತ್ತಿದೆ. ಅಲ್ಲದೆ ತಾತ್ಕಾಲಿಕವಾಗಿ ಸರ್ಕಾರಕ್ಕೆ ಸಲಹೆ ಕೊಡಲು ೫ ಜನ ನಾಮಕರಣದ ಮತ್ತು ೨೦ ಜನ ಚುನಾಯಿತ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ರಚಿಸಬೇಕೆಂದೂ ಸಹ ತಿಳಿಸಿರುತ್ತದೆ

ಸಾಧ್ವಿ

ತಾ|| ೪-೬-೪೭ ಬುಧವಾರ

ಹೊಸ ಅಧ್ಯಾಯ

ಭಾರತದ ಭವಿಷ್ಯ ರಾಜ್ಯಾಂಗದ ಬಗ್ಗೆ ವೈಸರಾಯರು ಸಿದ್ಧಗೊಳಿಸಿರುವ ಯೋಜನೆಯು ನಿನ್ನೆ ಪ್ರಕಟವಾಯಿತಷ್ಟೆ. ಇದು ಭಾರತ ಮತ್ತು ಬ್ರಿಟನ್ನುಗಳ ಬಾಂಧವ್ಯದಲ್ಲಿ ಒಂದು ಪ್ರಾಮುಖ್ಯವಾದ ಪ್ರಕರಣವಾಗುತ್ತದೆ. ವಿವಿಧ ರಾಜಕೀಯ ಪಂಗಡಗಳಲ್ಲಿ ಒಂದು ಒಪ್ಪಂದವಾಗಿರುವುದಿಲ್ಲವಾದರೂ, ಈ ಯೋಜನೆಯು ಒಂದು ನಿರ್ಧಾರದಂತೆ ಇರುತ್ತದೆ. ಯಾರಿಗೂ ಸಂಪೂರ್ಣವಾದ ಸಂತೃಪ್ತಿಯನ್ನು ಇದು ಉಂಟುಮಾಡಿರುವುದಿಲ್ಲ. ಆದರೂ ಇಂದಿನ ಸಮಯ, ಸನ್ನಿವೇಶಗಳಿಗೆ ಅನುಗುಣವಾಗಿ ಈ ಯೋಜನೆಯನ್ನು ಅನಿವಾರ್ಯದಿಂದ ಎಲ್ಲರೂ ಅಂಗೀಕರಿಸಿರುವರು. ಹೊಸ ಯೋಜನೆಯು ಕೇವಲ ತಾತ್ಕಾಲಿಕವಾದುದೆಂದೂ, ಅಂತಿಮ ನಿರ್ಧಾರವನ್ನು ಭಾರತೀಯರೇ ಮಾಡಿಕೊಳ್ಳಬೇಕೆಂದೂ ಹೇಳಲಾಗಿದೆ. ರಾಷ್ಟ್ರ ವಿಭಜನೆ ಈ ರೀತಿಯು ತಮಗೆ ಸಮ್ಮತವಿರಲಿಲ್ಲವೆಂದು ವೈಸರಾಯರು ಹೇಳಿದ್ದಾರೆ. ಕಾಂಗ್ರೆಸ್ಸಿಗೂ ಸಹ ಇದು ಇಷ್ಟವಿರುವುದಿಲ್ಲ. ಮಹಾತ್ಮರಂತೂ ಎಲ್ಲ ಬಗೆಯ ವಿಭಜನೆಯನ್ನೂ ತೀವ್ರವಾಗಿ ವಿರೋಧಿಸುತ್ತಲೇ ಇದ್ದಾರೆ. ಆದರೆ ಮುಸ್ಲಿಂ ಲೀಗಿನವರು ತಮ್ಮ ಪ್ರತ್ಯೇಕತಾ ನೀತಿಯನ್ನು ಒತ್ತಾಯಪಡಿಸಿದುದರಿಂದ ಬ್ರಿಟಿಷರು ತಮ್ಮ ಹಿಂದಿನ ಸೂಚನೆಯನ್ನು ಜಾರಿಗೆ ತರಲು ಇಷ್ಟಪಡಲಿಲ್ಲ. ಆದ್ದರಿಂದ ಬಂಗಾಳ ಮತ್ತು ಪಂಜಾಬುಗಳು ವಿಭಾಗವಾಗಬೇಕೆಂದೂ ಕಾಂಗ್ರೆಸ್ಸು ಒತ್ತಾಯಪಡಿಸಿತು. ಅದರ ಫಲವಾಗಿ ವೈಸರಾಯರು ಇಂದಿನ ಯೋಜನೆಯನ್ನು ಸಿದ್ಧಗೊಳಿಸಿ, ಅದಕ್ಕೆ ಬ್ರಿಟಿಷ್ ಸರ್ಕಾರದ ಒಪ್ಪಿಗೆಯನ್ನೂ ಪಡೆದು ಬಂದಿದ್ದಾರೆ.

ಸಂಯುಕ್ತ ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಅನೇಕ ವರ್ಷಗಳಿಂದ ಹೋರಾಡಿದ ತಾವು ಈ ಯೋಜನೆಗೆ ಬಹಳ ದುಃಖದಿಂದಲೇ ಒಪ್ಪಿಕೊಂಡಿರುವುದಾಗಿ ಪಂಡಿತ ನೆಹರೂರವರು ಹೇಳಿರುತ್ತಾರೆ. ಈ ಯೋಜನೆಯ ಮೂಲಕವೂ ಕಾಲಕ್ರಮದಲ್ಲಿ ಇಡೀ ಹಿಂದೂಸ್ಥಾನದ ಸ್ವಾತಂತ್ರ್ಯ ಸಾಧನೆಯನ್ನು ಈಡೇರಿಸಿಕೊಳ್ಳಬಹುದೆಂಬ ಆಶೋತ್ತರವು ತಮಗೆ ಇರುವುದಾಗಿ ಅವರು ತಿಳಿಸಿರುತ್ತಾರೆ.

ಮುಸ್ಲಿಂ ಲೀಗಿನವರೂ ಹೊಸ ವಿಧಾನವನ್ನು ಅಂಗೀಕರಿಸುವ ನಿರೀಕ್ಷಣೆಯಿದೆ. ಇದರ ಮೂಲಕ ತಮ್ಮ ಗುರಿಯಾದ ಪಾಕೀಸ್ತಾನವನ್ನು ಸಾಧಿಸುವ ಬಯಕೆಯೂ ಅವರಿಗಿರುತ್ತದೆ. ಸಿಖ್ ಜನಾಂಗದವರಿಗೆ ಮಾತ್ರ ಇದು ಸಮರ್ಪಕವಾಗಿರುವಂತೆ ಕಂಡುಬಂದಿಲ್ಲ. ಆದರೂ ಪಂಜಾಬಿನ ವಿಭಜನೆಯ ಕ್ರಮವನ್ನು ಅವರ ಮುಂದಿನ ವರ್ತನೆಯು ಅವಲಂಬಿಸುತ್ತದೆ.

ಈ ನಿರ್ಧಾರದಿಂದ ಸದ್ಯಕ್ಕೆ ಭರತಖಂಡವು ಡೊಮಿನಿಯನ್ ಸ್ಥಾನವನ್ನು ಪಡೆಯಲಿರುವುದು. ಆದರೆ ಇಲ್ಲಿ ಎರಡು ಡೊಮಿನಿಯನ್ನುಗಳು ಕಲ್ಪಿತವಾಗುವುವು. ಬ್ರಿಟಿಷರು ಸಂಸ್ಥಾನಗಳೊಡನೆಯಾಗಲೀ, ಪ್ರಾಂತ್ಯಗಳೊಡನೆಯಾಗಲೀ ಯಾವ ಬಗೆಯ ಒಪ್ಪಂದವನ್ನೂ ಮಾಡಿಕೊಳ್ಳುವುದಿಲ್ಲವೆಂದು ಹೇಳಲಾಗಿದೆ.

ಸದ್ಯದಲ್ಲಿ ಶಾಂತಿ ಮತ್ತು ಶಿಸ್ತುಗಳ ಪಾಲನೆಗೆ ಸಂಪೂರ್ಣ ಗಮನ ಕೊಡಲಾಗುವುದು. ಪುಂಡಾಟವನ್ನು ನಿರ್ದಾಕ್ಷಿಣ್ಯದಿಂದ ನಿರ್ಮೂಲಗೊಳಿಸಲಾಗುವುದು. ಇದೊಂದು ಅತ್ಯಂತ ಅಗತ್ಯವಾದ ವಿಷಯವೇ ಸರಿ. ಯಾವ ಬಗೆಯ ರಾಜ್ಯಾಂಗ ವ್ಯವಸ್ಥೆಯು ಏರ್ಪಡಬೇಕಾದರೂ ಸಂಪೂರ್ಣವಾದ ಶಾಂತವಾತಾವರಣವು ನೆಲೆಸಿರಬೇಕು.

ಬ್ರಿಟಿಷ್ ಸರ್ಕಾರದ ಹೊಸ ಯೋಜನೆಯು ಸರ್ವರಿಗೂ ಸಂಪೂರ್ಣವಾದ ಸಮಾಧಾನವನ್ನುಂಟುಮಾಡುವುದಿಲ್ಲ. ಆದರೆ ಅನಿವಾರ್ಯವಾಗಿ ಭಾರತದ ನಾಯಕರು ಇದನ್ನು ಅಂಗೀಕರಿಸಿರುವರು. ಸದ್ಯದ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ ಉತ್ತಮವಾದ ಮಾರ್ಗವು ಇಲ್ಲವೆಂದು ಅವರು ಅದಕ್ಕೆ ಸಮ್ಮತಿಯನ್ನು ಸೂಚಿಸಿರುವರು. ಇದು ಯಶಸ್ವಿಯಾಗಬೇಕಾದರೆ ಬ್ರಿಟಿಷ್ ಪ್ರಭುತ್ವದವರ ಪ್ರಾಮಾಣಿಕತೆಯೇ ಪ್ರಾಮುಖ್ಯವಾದ ಅಂಶ. ತಾವು ಹೇಳಿರುವಂತೆ ಬರುವ ವರ್ಷದೊಳಗಾಗಿ ಅವರು ಇಲ್ಲಿಂದ ಹೊರಡಬೇಕು. ಮತ್ತು ಇಲ್ಲಿ ಬೇರೆ ಯಾವ ಬಗೆಯ ಸಾಮ್ರಾಜ್ಯ ಷಾಹಿಯ ಬೀಜಾಂಕುರಗಳನ್ನೂ ಬಿತ್ತಬಾರದು. ಅವರು ಹಾಗೆ ಮಾಡಿದರೆ ಈಗಲೂ ಈ ಯೋಜನೆಯಿಂದ ದೇಶಕ್ಕೆ ಒಳ್ಳೆಯದೇ ಆಗುವ ಸಂಭವವಿರುತ್ತದೆ. ಇಲ್ಲವಾದರೆ ಮತ್ತೆ ಮನಃಕಷಾಯಗಳಿಗೂ, ಘರ್ಷಣೆಗಳಿಗೂ ಅವಕಾಶವಾಗುತ್ತದೆ.

ವಿಚ್ಛೇದನಕ್ಕಿಂತಲೂ ವಿಭಾಗವೇ ಲೇಸೆಂಬ ತತ್ವವನ್ನು ಕಾಂಗ್ರೆಸ್ಸು ಅನುಸರಿಸಿರುತ್ತದೆ. ಎಂದಾದರೊಂದು ದಿನ ದೂರ ಸರಿದಿರುವ ಪ್ರಾಂತಗಳೂ ಅಖಂಡ ಭಾರತದಲ್ಲಿ ಬಂದು ಸೇರುವುವೆಂಬ ನಂಬಿಕೆಯು ಅದಕ್ಕೆ ಇರುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳು ಸ್ಥಾಪಿತವಾದಾಗಲೂ ಸಹ ಹಲ ಕೆಲವು ಪ್ರಾಂತಗಳು ಅದರಲ್ಲಿ ಸೇರದೆ ಹೊರಗೇ ಇದ್ದುವು. ಆದರೆ ಕ್ರಮೇಣ ಒಂದೊಂದಾಗಿ ಅವುಗಳೆಲ್ಲವೂ ಬಂದು ಸೇರಿದುವು. ಸಂಯುಕ್ತ ಸಂಸ್ಥಾನದ ಸ್ವತಂತ್ರ ಆಡಳಿತದ ಪ್ರತಿಭೆಯು ಅವುಗಳನ್ನು ಆಕರ್ಷಿಸಿ ಅಲ್ಲಿನ ಪ್ರಜೆಗಳೂ ಅಮೆರಿಕದ ಪ್ರಜೆಗಳಾಗುವಂತೆ ಮಾಡಿತು. ಅದರಂತೆಯೇ ಭಾರತದಲ್ಲಿ ಮುಂದೆ ರಚಿತವಾಗಲಿರುವ ಹೊಸ ರಾಜ್ಯಾಂಗವೂ ಆದರ್ಶಪ್ರಾಯವಾಗಿ ಕೆಲಸ ಮಾಡಿ ನಲವತ್ತು ಕೋಟಿ ಭಾರತೀಯರನ್ನೂ ತನ್ನ ಮಡಿಲಿನಲ್ಲಿ ಒಳಗೊಳ್ಳುವುದೆಂಬ ಆಶೋತ್ತರವು ರಾಷ್ಟ್ರ ನಾಯಕರಲ್ಲಿ ರೂಢಮೂಲವಾಗಿರುತ್ತದೆ. ತತ್ಕಾಲದಲ್ಲಿ ರಾಷ್ಟ್ರವು ಇಬ್ಭಾಗವಾಯಿತೆಂಬ ದುಃಖವು ಅನೇಕ ದೇಶಬಾಂಧವರನ್ನು ಬಾಧಿಸಬಹುದಾದರೂ ಶೀಘ್ರದಲ್ಲಿಯೇ ಭಾರತೀಯರೆಲ್ಲರೂ ಒಂದೇ ಸ್ವತಂತ್ರ ಪ್ರಭುತ್ವದಲ್ಲಿ ಸೇರಿ ಒಂದೇ ತಾಯಿಯ ಮಕ್ಕಳಂತೆ ವರ್ತಿಸುವರೆಂಬ ನಂಬಿಕೆಯು ಇರುತ್ತದೆ. ಇಂದಿನ ರಾಷ್ಟ್ರ ವಿಭಜನೆಯ ಯೋಜನೆಯು ಮುಂದಿನ ರಾಷ್ಟ್ರ ಸಂಯೋಜನೆಗೆ ಪೀಠಿಕೆಯಾಗಿ ಪ್ರಜಾಭಿಪ್ರಾಯದಂತೆಯೇ ಪ್ರಭುತ್ವವು ನಡೆಯುವಂತೆ ಆಗುವ ಕಾಲವು ಬೇಗನೆ ಬರಲೆಂಬುದೇ ನಲವತ್ತು ಕೋಟಿ ಭಾರತೀಯರ ಇಂದಿನ ಹೃತ್ಪೂರ್ವಕವಾದ ಪ್ರಾರ್ಥನೆಯಾಗಿರಬೇಕು.

Edited printed and published by R. Nagarajan at the Sadhvi Press Subbaiah Road Mysore

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ನಾಯಿಕೆಮ್ಮಿನ ಔಷಧಿ

7-8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮ ಶೂಲೆ ಮತ್ತು (Tonsils) ಗಲಾಯುತ ಇವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪಂಡಿತರು, [illegible]

ಬರ್ಮಾ ಪ್ರವೇಶಕ್ಕೆ ಅವಕಾಶ

೧೯೪೨ ರಲ್ಲಿ ಬರ್ಮವನ್ನು ತ್ಯಜಿಸಿದ್ದ ಭಾರತೀಯರು ಮತ್ತು ಚೀಣೀಯರೆಲ್ಲರೂ ಪುನಃ ಅಲ್ಲಿಗೆ ಪ್ರವೇಶಿಸಲು ಅವಕಾಶವಿತ್ತಿರುವುದಾಗಿ ಅಲ್ಲಿನ ಸರ್ಕಾರದವರು ತಿಳಿಸಿರುತ್ತಾರೆ.

ಚೀಣಾದಲ್ಲಿ ನೃತ್ಯಕ್ಕೆ ನಿಷೇಧ

ಚೀಣಾದ ಎಲ್ಲಾ ಉಪಹಾರ ಮಂದಿರಗಳಲ್ಲೂ, ಕ್ಲಬ್ಬುಗಳಲ್ಲೂ ಬ್ರಿಟಿಷ್ ಸಂಪ್ರದಾಯದ ನೃತ್ಯವನ್ನು ನಿಷೇಧಿಸಿ ರಾಜಕೀಯ ಸಮಿತಿಯು ಆಜ್ಞೆ ಹೊರಡಿಸಿದೆ.

ರಾಜಕಮಲ್,

ತಾ|| ೩೦-೫-೪೭ ರಿಂದ

ಆರನೇ ವಾರ

ಪ್ರತಿ ದಿನ ೨ ಆಟಗಳು

ಗೊಲ್ಲಭಾಮ

ಹರಾಜು ನೋಟೀಸು

ರನ್ನಿಂಗ್ ಕಂಡಿಷನ್ನಿನಲ್ಲಿರುವ ಹಲವು ಮೋಟಾರುಕಾರುಗಳು, ಬಸ್ಸುಗಳು ಮತ್ತು ಲಾರಿಗಳು 1917 ನೇ ಜೂನ್ 21 ಮತ್ತು 22 ನೇ ತಾರೀಖುಗಳಲ್ಲಿ ಬೆಳಗ್ಗೆ 9 ಘಂಟೆಯಿಂದ 1 ಘಂಟೆವರೆಗೆ ಮೈಸೂರು ಪ್ಯಾಲೇಸ್ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

ವಿವರಗಳಿಗಾಗಿ, 1947 ನೇ ಜೂನ್ 7 ಮತ್ತು 14 ನೇ ತಾರೀಖುಗಳ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗಲಿರುವ ಪ್ರಕಟಣೆಯನ್ನು ದಯವಿಟ್ಟು ನೋಡಿ.

ಸೂಪರಿಂಟೆಂಡೆಂಟ್,
ಪ್ಯಾಲೇಸ್ ಗ್ಯಾರೇಜ್.

ಪ್ರತಿಬಂಧಕಾಜ್ಞೆ ವಾಪಸ

ಮೈಸೂರು ಸಂಸ್ಥಾನಕ್ಕೆ ಬರಕೂಡದು ಬೊಂಬಾಯಿಯ ಶಾಸನ ಸಭಾ ಸದಸ್ಯರಾದ ಶ್ರೀ ಎಂ. ಹೆಚ್. ಶಾವರ ಮೇಲೆ ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಮೈಸೂರು ಸರ್ಕಾರದವರು ವಾಪಸು ತೆಗೆದುಕೊಂಡಿದ್ದಾರೆ.

ಬ್ರಾಂಚ್ ಪೋಸ್ಟಾಫೀಸು ಸಬ್ ಆಫೀಸು ಆಗಬೇಕು

ಕೃಷ್ಣಮೂರ್ತಿಪುರದಲ್ಲಿರುವ ಬ್ರಾಂಚ್ ಪೋಸ್ಟಾಫೀಸು ಜಯನಗರ, ಅಧಿಕ[illegible] ಟಕಪುರ ಮುಂತಾದೆಡೆಗಳಿಗೆ ಸಮೀಪವಾಗಿದೆ. ಆದರೆ ಅಲ್ಲಿಯ ವರ್ತಕರು ವಾ[illegible] ಕಚೇರಿಗಳಿಗೆ ಮುಖ್ಯವಾಗಿ ಬೇಕಾದ ಸೇವಿಂಗ್ಸ್ ಬ್ಯಾಂಕ್, ಪೋಸ್ಟಲ್ ಆರ್ಡರ್, ಇನ್ಷೂರೆನ್ಸ್ ಮುಂತಾದ ವಿಷಯಗಳಲ್ಲಿ ಅದು ಸಹಕಾರಿಯಾಗಿಲ್ಲ. ಆದುದರಿಂದ ಈ ಬ್ರಾಂಚ್ ಆಫೀಸನ್ನು ಸಬ್ ಆಫೀಸನ್ನಾಗಿ ಮಾಡಬೇಕೆಂದು ಇಲಾಖಾಧಿಕಾರಿಗಳನ್ನು ಪ್ರಾರ್ಥಿಸಿ ಅಲ್ಲಿಯ ನಿವಾಸಿಗಳಲ್ಲೊಬ್ಬರು ಪತ್ರ ಬರೆದಿದ್ದಾರೆ.

ಗಿರಿಜಾಕಲ್ಯಾಣ

ರಾಜಧಾನಿಯ ಶ್ರೀ ತ್ರಿನಯನೇಶ್ವರ ಸ್ವಾಮಿಯವರ ಗಿರಿಜಾಕಲ್ಯಾಣ ಮಹೋತ್ಸವವು ಇದೇ ೬ ನೇ ತಾ|| ಶುಕ್ರವಾರದಿಂದ ಆರಂಭವಾಗುವುದು. ೮ ನೇ ತಾ|| ಧನುರ್ಲಗ್ನದಲ್ಲಿ ಧಾರಾ ಮಹೋತ್ಸವವೂ, ೯ ನೇ ತಾ|| ಶಯನೋತ್ಸವವೂ ನಡೆಯುವುವು.

ವಿವಾಹ ಮಹೋತ್ಸವ

ಮೈಸೂರಿನ ಪ್ರಸಿದ್ಧ ವರ್ತಕರಾದ ಶ್ರೀ ಜಿ. ಕೆ. ಡಿ. ಭರಮಯ್ಯನವರು ತಮ್ಮ ಕುಮಾರಿ ಸೌ|| ಜಯಮ್ಮನನ್ನು ಶ್ರವಣಬೆಳಗೊಳದ ಶ್ರೀ ಸಿ. ಸಿ. ಚೆಲುವಪ್ಪನವರ ಕುಮಾರ ಚಿ|| ಸುಕುಮಾರರವರಿಗೆ ಕೊಟ್ಟು ಕಳೆದ ಶನಿವಾರ ವಿವಾಹವನ್ನು ವೈಭವದಿಂದ ನೆರವೇರಿಸಿದರು.

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ
ಪಂಡಿತ್ ಕೆ. ವಿ. ವೆಂಕಟರಾಮಯ್ಯ,
ಡಿ|| ಬೋರ್ಡ್ ವೈದ್ಯ, ಅರಕಲವಾಡಿ.
ಚಾಮರಾಜನಗರ ತಾ||

ವುಡ್‌ಲ್ಯಾಂಡ್ಸ್

1-6-47 ರಿಂದ

ಕಿಕ್ಕಿರಿದ ೫ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು (ತಮಿಳು)

-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರನ್ ಮುಂತಾದವರು.

ರೋ. ನಂ. ೩೫   ॥ ವಂದೇ ಮಾತರಂ ॥   ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫]   ಗುರುವಾರ ೫—೬—೪೭   [ಸಂಚಿಕೆ ೨೫೫

ಆಗಸ್ಟ್ ೧೫ ರೊಳಗೆ ಡೊಮಿನಿಯನ್ ಸ್ಥಾನ

...ಶ್ವರರಾಯರ ಆಗಮನ

ಮೈಸೂರು ೫

...ಪ್ರಾಸಿನ ದೂಜ ಪಾರ್ಲಿಮೆಂಟಿನ ...ದಸ್ಯರುಗಳೂ, ಆಂಧ್ರ ದೇಶದ ಕಾಂ...ನಾಯಕರೂ ಆದ ಶ್ರೀ॥ ಎ. ಕಾಳೇ...ಶ್ವರರು ರಾಜಧಾನಿಗೆ ಬಂದಿರುತ್ತಾರೆ ...ನಾಳೆ ಸಂಜೆ ೬॥ ಘಂಟೆಗೆ ಕಾಂಗ್ರೆ...ರಿಗೆ ಭೇಟಿ ಕೊಡುವರು. ಕಾಂ...ಗ್ರೆಸ್ಸಿಗರೆಲ್ಲರೂ ಬರಬೇಕಾಗಿ ಕೋರ...

...ಹ್ಮಣ ವಿದ್ಯಾರ್ಥಿ ನಿಲಯ

...ಲ ಮೈಸೂರು ಬ್ರಾಹ್ಮಣ ಸಭೆ ...ಮೈಸೂರು ವಿದ್ಯಾರ್ಥಿ ನಿಲಯದಲ್ಲಿ ...ಮಹಾಶಯರ ಉದಾರ ಸಹಾ...ದ ಇಪ್ಪತ್ತೈದು ಜನ ಶ್ರಮಶಕ್ತ...ರ ವಿದ್ಯಾರ್ಥಿಗಳಿಗೆ ಊಟ ಮತ್ತು ...ಕಾಶಯಾಗಳನ್ನು ಏರ್ಪಡಿಸಿರುವು...ದಯಷ್ಟೆ. ಸದರಿ ವಿದ್ಯಾರ್ಥಿ ನಿಲ...ದ ಈ ಸಾರಿ ಪಠಿಸ ಬಿ. ಎ. ಪರೀ...ಕ್ಷೆಗೆ ಕುಳಿತಿದ್ದ ನಾಲ್ಕು ಜನ ವಿದ್ಯಾರ್ಥಿಗ...ಳು ಮೂರು ಜನ ಸಂಪೂರ್ಣವಾಗಿ ...ಒಬ್ಬರು ಎರಡು ಭಾಗದಲ್ಲೂ, ಇಂ...ಜಿನಿಯರಿಂಗ್ ಸ್ಕೂಲು ಪರೀಕ್ಷೆಗೆ ಹೋಗಿ...ದ್ದ ಜನರ ಪೈಕಿ ನಾಲ್ಕು ಜನರೂ ...ತೇರ್ಗಡೆ ಹೊಂದಿರುತ್ತಾರೆ. ಬ್ರಾಹ್ಮಣ ...ಸಭೆಯವರು ಹೆಚ್ಚಾಗಿ ಪ್ರೋತ್ಸಾಹಿಸ...ಬೇಕೆಂದು ಕಾರ್ಯದರ್ಶಿ ಶ್ರೀ॥ ಎ. ಲಿಂಗ...ಣ್ಣನವರು ಪ್ರಾರ್ಥಿಸಿರುತ್ತಾರೆ.

ಬ್ರಹ್ಮೋತ್ಸವ

...ಚಾಮರಾಜಪೇಟೆ ಕುದಿಗದಲ್ಲಿರುವ ಶ್ರೀ ...ರಾಮಾನುಜರ ದೇವಾಲಯದ ...ಡೆಯುವ ಶ್ರೀ ಶ್ರೀನಿವಾಸ ಸ್ವಾಮಿ ...ಬ್ರಹ್ಮೋತ್ಸವದ ಅಂಗವಾಗಿ ೫ ...ನೇ ತಾ॥ ಅಂಕುರಾರ್ಪಣವೂ, ...ತಾ॥ ಕಲ್ಯಾಣೋತ್ಸವವೂ, ೮ ನೇ ...ಗುರುನಕ್ಷತ್ರ ಮಹೋತ್ಸವವೂ ನಡೆ...ವು

ನೃತ್ಯ ಪ್ರದರ್ಶನ

...ಸೂರಿನ ಶ್ರೀ ಸರಸ್ವತೀ ಸಂಗೀತ ...ಜದ ಆಶ್ರಯದಲ್ಲಿ ತಿರುವಾಂಕೂರಿನ ...ಗಜೇರಿ ಘಟನ ಕಲಾ ಮಂಡಲಿಯು ...ಉಂಶವಾದ ನೃತ್ಯಗಳನ್ನು ೧೧-೬-...ಭಾನುವಾರ ನಡೆಸಲೇರ್ಪಾಡಾಗಿ...ದೆ

...ಪ್ಯಾಲೆಸ್ಟೈನ್ ಸಮಿತಿಗೆ ಅರಬ್ಬರ ಬಹಿಷ್ಕಾರ

...ಲೆಸ್ಟೈನ್ ಸಮಸ್ಯೆಯನ್ನು ಪರಿಶೀಲಿ...ಪ್ರಪಂಚ ಸಂಸ್ಥೆಯು ನೇಮಿಸಿದ ಕ...ಮಿಷನ್ನಿನಲ್ಲಿ ಭಾಗವಹಿಸದೆ ಅದನ್ನು ಬ...ಹಿಷ್ಕರಿಸಬೇಕೆಂಬುದಾಗಿ ಅರಬ್ ಹೈಯ್ಯ...ಕಮಿಟಿಯವರು ತಿಳಿಸಿರುವರು. ಈ ...ನಿರ್ಣಯವೊಂದನ್ನು ಮಾಡಲಾಗು...ದ. ಹೇಳಲಾಗಿದೆ.

...ಭಾರತದ ಪ್ರಶ್ನೆಗೆ ಚರ್ಚಿಲರ ವಿರೋಧವಿಲ್ಲ

...ಬ್ರಿಟಿಷ್ ಸರ್ಕಾರದವರು ಭಾರತದ ಬ...ಗ್ಗೆ ಮಾಡಿದ ಘೋಷಣೆಯನ್ನು ಪ್ರಧಾನಿ ...ಅಟ್ಲಿಯವರು ಕಾಮನ್ಸ್ ಸಭೆಯಲ್ಲಿ ...ತಿಳಿಸಿದರು. ಪಾರ್ಲಿಮೆಂಟಿನ ಅಧಿವೇ...ಶನದಲ್ಲಿಯೇ ಅಧಿಕಾರ ವರ್ಗಾವಣೆಯ ...ಶಾಸನ ತರಲಾಗುವುದೆಂದು ಹೇಳಿ...ದ. ವಿರೋಧ ಪಕ್ಷದ ನಾಯಕರಾ...ದ ಶ್ರೀ ಚರ್ಚಿಲರು ಭಾರತಕ್ಕೆ ಡೊಮಿನಿ...ಯನ್ ಸ್ಥಾನ ಕೊಡಲು ತರುವ ಯಾವ ...ಶಾಸನವನ್ನೂ ವಿರೋಧಿಸುತ್ತಿಲ್ಲವೆಂದು ...ಹೇಳಿದರು.

ಗಲಭೆಯ ನಾಯಕರು ರಾಜರ ಅತಿಥಿ

ಗ್ಲೋಬ್]   ಕೈರೋ ೨

ಮೊರಾಕೊ ಗಲಭೆಗಳ ನಾಯಕರಾಗಿದ್ದು ಗಡೀಪಾರಾಗಿದ್ದ ಮಿ॥ ಅಬ್ದುಲ ಕರೀಂಖಾನರು ಈಜಿಪ್ಟಿನ ಫರೂಕ್ ದೊರೆಗಳ ಅತಿಥಿಗಳಾಗಿದ್ದಾರೆ. ಅವರಿಗೆ ಆಶ್ರಯ ಕೊಟ್ಟಿರುವುದಕ್ಕಾಗಿ ಫ್ರೆಂಚ್ ಸರ್ಕಾರದವರು ಈಜಿಪ್ಟಿಗೆ ಪ್ರತಿಭಟನೆಯನ್ನು ಸೂಚಿಸಿದ್ದಾರೆ.

ಹೊಸ ಘೋಷಣೆಯ ಬಗ್ಗೆ ಮೈಸೂರಾಯರ ವಿವರಣೆ

ಅಖಂಡ ಭಾರತದ ಸ್ಥಾಪನೆಗಾಗಿ ಮಾಡಿದ ಪ್ರಯತ್ನಗಳು ಸಫಲವಾಗದೆ ವಿಭಜನೆಯೇ ಆಗಬೇಕಾಗಿದೆ, ಆಗಸ್ಟ್ ಅಂತ್ಯದೊಳಗೆ ಭಾರತದಲ್ಲಿ ಡೊಮಿನಿಯನ್ ಅಥವಾ ಡೊಮಿನಿಯನ್ನುಗಳು ಸ್ಥಾಪನೆಯಾಗುವುವು. ವಿಭಜನೆಯೇ ಅನಿವಾರ್ಯವೆಂದು ನಿಶ್ಚಯವಾದರೆ ಆಗ ಅದನ್ನು ಜಾರಿ ಮಾಡಲಾಗುವುದು; ಗಡಿ ನಿರ್ಣಯದ ಬಗ್ಗೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನಿರ್ಮಿಸಲಾಗುವುದು; ಈ ಸಮಿತಿಯು ಸಿಖ್ಖರ ಗಡಿ ಪ್ರಶ್ನೆಯನ್ನೂ ಇತ್ಯರ್ಥಪಡಿಸುವುದು; ಪ್ರಜಾಭಿಪ್ರಾಯ ಪಡೆಯಬಹುದಾದ ಪ್ರದೇಶಗಳಲ್ಲಿ ಅದನ್ನು ಪಡೆಯಲು ಯಾವ ರಾಜಕೀಯ ಪಕ್ಷಕ್ಕೂ ಪಕ್ಷಪಾತ ತೋರದ ಬ್ರಿ॥ ಸೈನ್ಯಾಧಿಕಾರಿಗಳನ್ನು ನೇಮಿಸಲಾಗುವುದು; ಎಂಬುದಾಗಿ ಮೈಸೂರಾಯರು ನಿನ್ನೆ ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಬ್ರಿ॥ ಘೋಷಣೆಯ ಬಗ್ಗೆ ವಿವರಣೆಯನ್ನಿತ್ತಿದ್ದಾರೆ. ರಾಷ್ಟ್ರ ವಿಭಜನೆಯಾದರೆ ಆಗ ಸೈನ್ಯ ವಿಭಜನೆಯೂ ಆಗುತ್ತದೆ; ಅವರಿ ಎರಡು ರಾಷ್ಟ್ರಗಳೂ ಪರಸ್ಪರ ಒಪ್ಪಂದ ಮಾಡಿಕೊಂಡಲ್ಲಿ ಒಂದು ಸಂಯುಕ್ತ ಸೇನೆಯು ಸ್ಥಾಪನೆಯಾಗುವುದು, ಅಧಿಕಾರ ವರ್ಗಾವಣೆಯ ನಂತರ ಬ್ರಿಟನ್ನಿಗೆ ಅಲ್ಪ ಸಂಖ್ಯಾತರ ರಕ್ಷಣೆಯ ಬಗ್ಗೆ ಯಾವ ಜವಾಬ್ದಾರಿಯೂ ಇರುವುದಿಲ್ಲವಾದರೂ ಭವಿಷ್ಯ ಭಾರತದಲ್ಲಿ ಅವರ ಹಿತರಕ್ಷಣೆಗೆ ಕುಂದುಂಟಾಗಲಾರದು— ಎಂದೂ ಅವರು ಹೇಳಿರುವರು.

ಸೌದೆ ಅಭಾವ

ಸ್ವಂ ಸ.]   ಶ್ರೀರಂಗಪಟ್ಟಣ ೪

ಇತ್ತೀಚೆಗೆ ಸೌದೆ ಅಭಾವವು ಹೆಚ್ಚಿದೆ. ಧಾರಣೆಯೂ ವಿಪರೀತ ಹೆಚ್ಚು. ಬೆಲೆ ಕೊಟ್ಟರೂ ಸಿಕ್ಕದೆ ತೊಂದರೆಯಾಗಿದೆ. ಅಧಿಕಾರಿಗಳು ಶೀಘ್ರ ಕಾರ್ಯತತ್ಪರರಾಗಬೇಕೆಂದು ಪ್ರಾರ್ಥಿಸಲಾಗಿದೆ.

ಇನ್ನು ೨ ತಿಂಗಳಲ್ಲಿ ಡೊಮಿನಿಯನ್ ಅಂತಸ್ತು

— —

ತಾತ್ಕಾಲಿಕ ಸರ್ಕಾರ ಅಥವಾ ಸರ್ಕಾರಗಳಿಗೆ ಆಗಸ್ಟ್ ೧೫ ನೇ ತಾ॥ ನೊಳಗಾಗಿ ಡೊಮಿನಿಯನ್ ರಾಜ್ಯಾಂಗವನ್ನು ವಹಿಸಲು ಬ್ರಿಟಿಷ್ ಸರ್ಕಾರವು ನಿರ್ಧರಿಸಿದೆಯೆಂದು ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಮೊನ್ನೆ ದಿನ ಭಾರತದ ನಾಯಕರುಗಳಿಗೆ ತಿಳಿಸಿರುವುದಾಗಿ ವರದಿಯಾಗಿದೆ. ಬ್ರಿಟಿಷರು ಹೊರಟು ಹೋಗಲು ಆತುರರಾಗಿದ್ದಾರೆಂದೂ, ರಾಜಕರುಗಳು ತಮ್ಮ ಭವಿಷ್ಯವನ್ನು ಕೂಡಲೇ ನಿರ್ಧರಿಸಿಕೊಳ್ಳಬೇಕೆಂದೂ ಸಹ ಅವರು ಹೇಳಿರುವರು. ಈ ವರ್ಷವೇ ಭಾರತೀಯರಿಗೆ ಅಧಿಕಾರವನ್ನು ವಹಿಸಿ ಯಾವಾಗ ಹೋಗಲು ಹೇಳಿದರೆ ಆಗ ಹೊರಡಲು ಬ್ರಿಟಿಷರು ಸಿದ್ಧರಾಗಿರುವುದಾಗಿಯೂ ಅವರು ತಿಳಿಸಿರುವರು.

ಪೂರ್ವ ಪಾಕಿಸ್ತಾನ ನಿವಾರಣೆಗೆ ಸಂಧಾನ

——

ಪೂರ್ವ ಬಂಗಾಳವನ್ನು ಹಿಂದೂಸ್ತಾನಕ್ಕೂ ಪೂರ್ವ ಪಂಜಾಬನ್ನು ಪಾಕಿಸ್ತಾನಕ್ಕೂ ಸೇರಿಸಿ ಪ್ರಾಂತ ವಿಭಜನೆಯನ್ನು ತಪ್ಪಿಸಲು ಪರಸ್ಪರ ಸಂಧಾನ ನಡೆಯುವುದೆಂದು ವರದಿಯಾಗಿದೆ. ಪ್ರತ್ಯೇಕವಾದ ಬಂಗಾಳದ ಪಾಕಿಸ್ತಾನ ಪೂರ್ವ ಪಾಕಿಸ್ತಾನ ರಕ್ಷಣೆಯು ಕಷ್ಟವಾಗುವುದರಿಂದ ಮಿ॥ ಜಿನ್ನಾರವರು ಅದನ್ನು ಬಿಟ್ಟು ಪಂಜಾಬನ್ನು ಬಲಪಡಿಸಿಕೊಳ್ಳಲು ಇಷ್ಟಪಡಬಹುದೆಂದೂ ಹೇಳಲಾಗಿದೆ.

ಹೌಸ್ ಕಮಿಟಿ ಚುನಾವಣೆ

——

ಸ್ವಂ.ಸು ಪ್ರೋ]   ಬೆಂಗಳೂರು ೫

ಪ್ರ ಪ್ರ॥ ಸಭೆಯ ಗೃಹ ಸಮಿತಿಗೆ ಈ ಕೆಳಗೆ ಕಂಡವರು ಸದಸ್ಯರಾಗಿ ಚುನಾಯಿತರಾಗಿರುವರು: ಶ್ರೀಗಳಾದ ಎ ಟಿ ಬಸವಲಿಂಗೇಗೌಡ, ಬಿ ಗೋವಿಂದಪ್ಪ, ಜಿ ಜನಾರ್ದನನಾಯ್ಡು, ಸಿ ಎ ಲಿಂಗಪ್ಪಗೌಡ, ರಕ್ಷಮ್ಮ ಮಾಧವರಾವ್, ರಷೀದ್ ಖಾನ್, ಎಂ ಸುಬ್ಬಯ್ಯ ಮತ್ತು ಮರಿ ತಿಂಪಯ್ಯ, ರಾವ್ ಬಹದ್ದೂರ್ ಎಂ ರಾಮಸ್ವಾಮಿ ಮತ್ತು ಶ್ರೀಮತಿ ಗಂಗಮ್ಮನವರನ್ನು ನಾಮಕರಣ ಮಾಡಲಾಗಿದೆ. ಮಂತ್ರಿಮಂಡಲದ ಶ್ರೀ॥ ಎಲ್ ಸಿದ್ದಪ್ಪನವರು ಈ ಸಮಿತಿಯ ಅಧ್ಯಕ್ಷರಾಗಿರುವರು.

ಉಪಾಧ್ಯಾಯರುಗಳ ಸಂಬಳ

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೆ

ಸ್ವಂಸುಪ್ರೋ]   ಬೆಂಗಳೂರು ೫

ಪ್ರೈಮರಿ ಮಿಡಲ್ ಮತ್ತು ಹೈಸ್ಕೂಲುಗಳ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸುವಂತೆ ಅರ್ಜಿಗಳು ಬಂದಿರುವುದಾಗಿಯೂ ಅವರಿಗೆ ತಾತ್ಕಾಲಿಕ ಪರಿಹಾರವನ್ನು ಕೊಡಲಾಗಿದೆಯೆಂದೂ, ಸರ್ಕಾರಿ ಉದ್ಯೋಗದಲ್ಲಿರುವವರ ಸಂಬಳಗಳನ್ನು ಪುನರ್ವಿಮರ್ಶೆ ಮಾಡಲು ಸಮಿತಿಯೊಂದನ್ನು ನೇಮಿಸಲಾಗಿದೆಯೆಂದೂ ಈ ದಿನ ಪ್ರ॥ ಪ್ರ॥ ಸಭೆಯಲ್ಲಿ ವಿದ್ಯಾ ಇಲಾಖೆಯ ಕಾರ್ಯದರ್ಶಿಗಳು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಇನಾಂದಾರರುಗಳು ತಮ್ಮ ಗ್ರಾಮಗಳನ್ನು ಮಾರಲು ಮುಂದೆ ಬಂದಂತೆಲ್ಲಾ ಸರ್ಕಾರದವರು ಸರಳಾರಿಯಾದ ಗ್ರಾಮಗಳನ್ನು ಯುಕ್ತವಾದ ಬೆಲೆ ಕೊಟ್ಟು ಕೊಂಡುಕೊಳ್ಳುವರೆಂದು ಶ್ರೀ॥ ಎಚ್. ಸಿ ದಾಸಪ್ಪನವರು ... ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ಮತ್ತೆ ಕ್ರಿಯಾಲೋಪವೇ?

ಶ್ರೀ॥ ಚಿಕ್ಕಲಿಂಗಯ್ಯನವರು ಎತ್ತಿದ ಹಕ್ಕುಬಾಧ್ಯತಾ ಸೂಚನೆಯ ಮೇಲೆ ಸಭೆಯಲ್ಲಿ ವಿಶೇಷ ಚರ್ಚೆ ನಡೆಸಿದ್ದಾಗ್ಯೂ ಇದರ ಮೇಲೆ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಅಧ್ಯಕ್ಷರು ತಾವಾಗಿಯೇ ಅದನ್ನು ಹಕ್ಕುಬಾಧ್ಯತಾ ಸಮಿತಿಗೆ ಹಾಕಿದುದು ಸರಿಯಲ್ಲವೆಂದು ಶ್ರೀ॥ ಟಿ ಎ ಗುಪ್ತರು ಒಂದು ಹಕ್ಕುಬಾಧ್ಯತಾ ಸೂಚನೆಯನ್ನು ತಂದರು. ತಮ್ಮ ರೂಲಿಂಗಿಗೆ ಇದು ವಿರೋಧವಾಗಿರುವುದೆಂದು ಹೇಳಿ ಅಧ್ಯಕ್ಷರು ಅದನ್ನು ತಳ್ಳಿ ಹಾಕಿದರು.

ಬಡ್ಜೆಟ್ ಭಾಷಣಗಳು

ನಿನ್ನೆ ದಿನ ಬಡ್ಜೆಟ್ ಮೇಲಿನ ಭಾಷಣಗಳು ಮುಂದುವರಿದುವು. ಶ್ರೀ॥ ಎಚ್ ಸಿ ದೇವರಾಜೇ ಅರಸಿನವರು ಮಾತನಾಡಿ, ಸಂಸ್ಥಾನದಲ್ಲಿ ರೈಲ್ವೆ ಬೋರ್ಡೊಂದನ್ನು ರಚಿಸಬೇಕೆಂದೂ, ಬಲಾತ್ಕಾರದ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂದೂ ಹೇಳಿದರು.

ವಿದ್ಯಾರ್ಥಿನಿಯರಿಗೆ ಗೃಹ ಶಿಕ್ಷಣವನ್ನು ಕೊಡಬೇಕೆಂದೂ, ವಾಹನ ಸೌಕರ್ಯವನ್ನು ಏರ್ಪಡಿಸಬೇಕೆಂದೂ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಸೂಚಿಸಿದರು.

ಮಲೆನಾಡಿನ ರಸ್ತೆಯ ದುರವಸ್ಥೆಯನ್ನು ಮಿ॥ ವಿಡಲ್‌ಟೇರವರು ವರ್ಣಿಸಿ ಅಲ್ಲಿ ಅನೇಕ ಅಪಘಾತಗಳು ಸಂಭವಿಸುತ್ತಿವೆಯೆಂದು ಹೇಳಿದರು. ಅಪಘಾತಗಳು ಸಂಭವಿಸಿದರೆ ಅಧಿಕಾರಿಗಳ ಸಂಬಳವನ್ನು ಹಿಡಿದು ಪರಿಹಾರವನ್ನು ಕೊಡಿಸಬೇಕೆಂದೂ ಸೂಚಿಸಿದರು.

ಮುಸ್ಲಿಂ ಲೀಗಿನ ಮಿ॥ ಬಾಸಿತ್‌ಖಾನರವರು ಮಾತನಾಡಿ ಮುಸಲ್ಮಾನರಿಗೆ ಸೈನ್ಯ ಮತ್ತು ಪೋಲೀಸುಗಳಲ್ಲಿ ಶೇ॥ ೫೦ ರಷ್ಟನ್ನೂ, ಇತರ ನೌಕರಿಗಳಲ್ಲಿ ಮೂರನೇ ಒಂದು ಭಾಗದಷ್ಟನ್ನೂ ಮೀಸಲಾಗಿಡಬೇಕೆಂದು ಹೇಳಿದರು.

೨ ಮೊನ್ನೆ ಮೈಸೂರಾಯರು ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡಲು ದೆಹಲಿಯ ರೇಡಿಯೋ ಭವನಕ್ಕೆ ಹೋದಾಗ ಹಿಂದೂ ವಿದ್ಯಾರ್ಥಿ ಫೆಡರೇಷನ್ನಿನ ಮೂವರು ವಿದ್ಯಾರ್ಥಿಗಳು ಪ್ರತಿಭಟನೆಯ ಉದ್ಗಾರಗಳನ್ನು ಮಾಡುತ್ತಿದ್ದುದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟಿರುವರೆಂದು ವರದಿಯಾಗಿದೆ.

ಸಾಧ್ವಿ

ತಾ॥ ೫-೬-೪೭ ಗುರುವಾರ

ಸಂಸ್ಥಾನಗಳ ಭವಿಷ್ಯ

ಬ್ರಿಟಿಷ್ ಸರ್ಕಾರದವರ ಹೊಸ ಯೋಜನೆಯಿಂದ ಭರತಖಂಡವು ಇಬ್ಭಾಗ ಮಾಡಲ್ಪಡುವುದು ಸರಿಯಷ್ಟೆ. ಸಂಸ್ಥಾನಗಳು ಒಂದಲ್ಲ ಮತ್ತೊಂದು ಭಾಗವನ್ನು ಸೇರಲೇಬೇಕೆಂದು ಹೇಳಲಾಗಿದೆ. ಅವುಗಳು ಸ್ವತಂತ್ರವಾಗಿ ಉಳಿಯಲು ಉತ್ತೇಜನ ಕೊಡುವುದಿಲ್ಲವೆಂದು ವೈಸರಾಯರು ಹೇಳಿದ್ದಾರೆ. ಈ ಸಂಸ್ಥಾನಗಳು ಎಷ್ಟೇ ದೊಡ್ಡವಾಗಿದ್ದರೂ ನೇರವಾಗಿ ಬ್ರಿಟಿಷ್ ಸಾಮ್ರಾಜ್ಯದ ಬೇರೆ ಬೇರೆ ಡೊಮಿನಿಯನ್ನುಗಳಾಗಿ ಇರಲು ಅವಕಾಶವಿಲ್ಲವೆಂದೂ ಸಹ ತಿಳಿಸಿದ್ದಾರೆ. ಎಂದ ಮೇಲೆ ವಿಶ್ವ ಜನಾಂಗ ಸಂಸ್ಥೆಯಲ್ಲಿ ಅವುಗಳು ಸ್ಥಾನವನ್ನು ಬಯಸುವುದು ಕೇವಲ ಕನಸಿನ ಮಾತೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಭರತಖಂಡದ ಯಾವ ಭಾಗದಲ್ಲಿ ತಾವು ಸೇರಬೇಕೆಂಬುದನ್ನು ಸಂಸ್ಥಾನಗಳೇ ನಿರ್ಧರಿಸಿಕೊಳ್ಳಲು ಅವು ಸ್ವತಂತ್ರವಾಗಿರುವುವೆಂದೂ, ಅದರಲ್ಲಿ ಬ್ರಿಟಿಷ್ ಸರ್ಕಾರದವರು ಕೈಹಾಕ ಕೂಡದೆಂದೂ ಸಹ ವೈಸರಾಯರು ಹೇಳಿದ್ದಾರೆ. ಆದುದರಿಂದ ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಐಯ್ಯರ್‌ರವರು ಹೇಳುತ್ತಿದ್ದಂತೆ ತಮ್ಮ ಸಂಸ್ಥಾನವು ಒಂದು ಪ್ರತ್ಯೇಕ ಸ್ವತಂತ್ರ ರಾಜ್ಯವಾಗಿ ಉಳಿಯುವುದೆಂಬ ಮಾತಿಗೆ ಬೆಲೆ ಇರುವುದಿಲ್ಲ. ಇನ್ನು ಮುಂದೆ ಸಂಸ್ಥಾನಗಳು ಹಿಂದೂಸ್ಥಾನದಲ್ಲಿರಬೇಕು, ಇಲ್ಲದಿದ್ದರೆ ಪಾಕಿಸ್ಥಾನದಲ್ಲಿ ಸೇರಬೇಕು.

ಯಾವ ರಾಜ್ಯಾಂಗವನ್ನು ಸಂಸ್ಥಾನಗಳು ಸೇರಬೇಕೆಂಬ ವಿಚಾರದಲ್ಲಿ ಸದ್ಯದಲ್ಲಿಯೇ ಸ್ವಲ್ಪ ಪಟ್ಟಿನ ಜಗ್ಗಾಟವು ಏಳುವುದು ಸಹಜ. ಬರೋಡಾ ಸಂಸ್ಥಾನವು ಈ ಬಗ್ಗೆ ಉತ್ತಮವಾದ ಮೇಲ್ಪಂಕ್ತಿಯನ್ನು ಈಗಾಗಲೇ ಹಾಕಿಬಿಟ್ಟಿದೆ. ಸಂಯುಕ್ತ ಭಾರತದ ಸ್ಥಾಪನೆಯು ಆಗದೆ ರಾಷ್ಟ್ರವಿಭಜನೆಯು ಬಂದರೆ ತಮ್ಮ ಸಂಸ್ಥಾನವು ಹಿಂದೂಸ್ಥಾನದೊಡನೆಯೇ ಸೇರುವುದೆಂದು ಅವರು ಈಗಾಗಲೇ ಘೋಷಿಸಿದ್ದಾರೆ. ಇತರ ಅನೇಕ ಸಂಸ್ಥಾನಗಳೂ ಇದೇ ಉದ್ದೇಶದಿಂದಲೇ ಇಂದಿನ ರಾಜ್ಯಾಂಗ ಸಭೆಯಲ್ಲಿ ಕಲೆತು ಕೆಲಸ ಮಾಡುತ್ತಿವೆ. ಇನ್ನೂ ಯಾವ ನಿರ್ಧಾರವನ್ನೂ ಮಾಡದೆ ಅಷ್ಟಗೋಡೆ ಬೇಲಿಯಂತಿರುವ ಸಂಸ್ಥಾನಗಳು ಈ ಕೂಡಲೇ ತೀರ್ಮಾನಕ್ಕೆ ಬರಬೇಕಾಗಿದೆ.

ಮುಸ್ಲಿಂ ರಾಜರುಗಳ ಅಧೀನದಲ್ಲಿರುವ ಹಲಕೆಲವು ರಾಜ್ಯಗಳು ಪಾಕಿಸ್ಥಾನದಲ್ಲಿ ಸೇರಲು ಪ್ರಯತ್ನಪಡಬಹುದು. ಆದರೆ ಅವುಗಳಲ್ಲಿರುವ ಬಹು ಸಂಖ್ಯಾತ ಪ್ರಜೆಗಳಿಗೆ ಇದು ರುಚಿಸುವುದಿಲ್ಲ. ಬಲಾತ್ಕಾರವಾಗಿ ಪಾಕಿಸ್ಥಾನದಲ್ಲಿ ಸೇರಲು ಅವುಗಳು ಪ್ರಯತ್ನಿಸಿದರೆ ಅಲ್ಲಿ ಪ್ರಬಲವಾದ ಘರ್ಷಣೆಗಳು ಏಳಬಹುದು. ಬಹುಸಂಖ್ಯಾತ ಪ್ರಮಾಣದಂತೆ ರಾಷ್ಟ್ರ ವಿಭಜನೆಯನ್ನು ಮಾಡುವ ತತ್ವಕ್ಕೆ ಅನುಗುಣವಾಗಿ ಸಂಸ್ಥಾನ ಪ್ರಜೆಗಳ ಇಷ್ಟದಂತೆ ನಡೆಯಲು ಏರ್ಪಾಡು ಮಾಡುವುದು ಹಿತವಾಗಿರುತ್ತದೆ. ಸಂಸ್ಥಾನಗಳ ಭದ್ರತೆಯು ಇನ್ನು ಮುಂದೆ ಅಲ್ಲಿನ ಪ್ರಜೆಗಳ ಪ್ರೀತಿ ವಿ

ಕೋಮುವಾರು ಹೆಸರಿನಲ್ಲಿ ಅಪಪ್ರಚಾರ

ಬಾಣಸವಾಡಿ ಪಿ. ೩

ಇಲ್ಲಿನ ಗ್ರಾಮ ವಿದ್ಯಾ ಪ್ರಚಾರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ವಿದ್ಯಾಸಂಸ್ಥೆ ಮತ್ತು ವಿದ್ಯಾರ್ಥಿ ನಿಲಯದ ಮೇಲೆ ಪುಂಡರೆಯು ಚುನಾವಣೆಯಲ್ಲಿ ಸೋಂದ ಹಲವರು ಸಂಘದ ಹೈಸ್ಕೂಲಿನಲ್ಲಿ ಕೋಮುವಾರು ಪಕ್ಷಪಾತವಿದೆಯೆಂದು ಸುಮ್ಮನೆ ಅಪಪ್ರಚಾರ ಕೈಗೊಂಡು ಪುರಸಭೆಯ ಆಶ್ರಯದಲ್ಲಿ ಹೈಸ್ಕೂಲನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಶಾಲೆಯಲ್ಲಿ ಕೋಮುವಾರು ದೃಷ್ಟಿಯನ್ನೇ ದೂರಮಾಡಿ, ಎಲ್ಲರಿಗೂ ಅರ್ಹತೆಯ ಮೇಲೆ ರಿಯಾಯಿತಿಗಳನ್ನು ಕೊಡಲಾಗುತ್ತಿದೆ. ಆದ್ದರಿಂದ ಮಹಾಜನರು ಇಂತಹ ಅಪಪ್ರಚಾರಕ್ಕೆ ಕಿವಿಗೊಡಬಾರದೆಂದು ಶ್ರೀಗಳಾದ ಎ. ವೆಂಕಟಪ್ಪ, ಡಿ. ವೆಂಕಟಾಚಲಶೆಟ್ಟಿ, ಎಸ್. ಕರಿಯಪ್ಪ ಮುಂತಾದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ಸ್ಥಾನಗಳ ಬೆಂಬಲವನ್ನು ಅವಲಂಬಿಸಿರುತ್ತದೆಯೇ ಹೊರತು ಪರಕೀಯ ಅಸ್ತ್ರ ಶಸ್ತ್ರಗಳ ಸಹಾಯವನ್ನಲ್ಲ.

ಇನ್ನಾದರೂ ಮೈಸೂರು ಸಂಸ್ಥಾನವು ಈ ಬಗ್ಗೆ ಬೇಗನೆ ತನ್ನ ನಿರ್ಧಾರವನ್ನು ಮಾಡಲೆಂದು ನಾವು ಹಾರೈಸುತ್ತೇವೆ. ಮೈಸೂರಿನ ಪ್ರಗತಿ ಸಂಸ್ಕೃತಿ, ಪುರೋಭಿವೃದ್ಧಿ ಮತ್ತು ಭವಿಷ್ಯದ ಅಭ್ಯುದಯಗಳು ಇದನ್ನು ಹಿಂದೂಸ್ಥಾನದಲ್ಲಿಯೇ ಇರಲು ಪ್ರೇರೇಪಿಸುತ್ತವೆ. ಪಾಕಿಸ್ಥಾನಕ್ಕೂ ಮೈಸೂರಿಗೂ ಯಾವ ಬಗೆಯ ಹೊಂದಿಕೆಯೂ ಇರಲಾರದು. ಆದ್ದರಿಂದ ಕೂಡಲೇ ಮೈಸೂರಿನ ಪ್ರತಿನಿಧಿಗಳನ್ನು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ನಮ್ಮ ಪ್ರಭುಗಳವರು ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಸೇರಿಸಿ ಚುನಾಯಿತ ಪ್ರತಿನಿಧಿಗಳನ್ನು ಆರಿಸಿ ಸಂಸ್ಥಾನದ ಮತ್ತು ಭಾರತದ ಶ್ರೇಯೋಭಿವೃದ್ಧಿಯಲ್ಲಿ ಸಹಕರಿಸಬೇಕೆಂದು ನಾವು ಕೋರುತ್ತೇವೆ.

ರಾಜಕಮಲ್,

ತಾ॥ ೭-೬-೪೭ ರಿಂದ

ಏಳನೇ ವಾರ

ಪ್ರತಿ ದಿನ ೩ ಆಟಗಳು

ಗೋಲಭಾಮ

6-6-47 ರಿಂದ 4 ದಿನಗಳು

ಪ್ರತಿದಿನ ಬೆಳಗ್ಗೆ 10.30 ಕ್ಕೆ

ಔರತ್

ಅಥವಾ

ಸ್ತ್ರೀ

—: ಭೂಮಿಕೆ :—

ಸುರೇಂದ್ರ, ಸರ್ದಾರ್ ಅಖ್ತರ್.

Edited printed and published by A. R. Nagarajan at the Sadhvi Press D. Subbaiah Road Mysore

ಕಾರ್ಮಿಕ ನಾಯಕರ ಆಮರಣಾಂತ ಉಪವಾಸ

ಹುಬ್ಬಳ್ಳಿಯ ಭಾರತ ಗಿರಣಿ ಕೆಲಸಗಾರರಿಗೂ, ಆಡಳಿತ ವರ್ಗದವರಿಗೂ ಹೆಚ್ಚಿನ ಕೂಲಿ, ಬೋನಸ್, ತುಟ್ಟಿ ಭತ್ಯೆಗಳನ್ನು ಕುರಿತು ವಿವಾದದಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ಇನ್ನೂ ನಿವಾರಣೆಯಾಗದಿರುವುದರಿಂದ ಅದು ಇತ್ಯರ್ಥವಾಗದಿದ್ದರೆ ತಾವು ಆಮರಣಾಂತ ಉಪವಾಸ ಕೈಗೊಳ್ಳುವುದಾಗಿ ಹೇಳಿ ರಾಷ್ಟ್ರೀಯ ಗಿರಣಿ ಮಜದೂರ್ ಸಂಘದ ಕಾರ್ಯದರ್ಶಿಗಳಾದ ಶ್ರೀ॥ ಎಸ್. ಬಿ. ದೇಶಪೂರೆಯವರು ನೆನ್ನೆಯಿಂದ ಉಪವಾಸ ವ್ರತವನ್ನು ಆರಂಭಿಸಿರುವರೆಂದು ವರದಿಯಾಗಿದೆ.

ಶಾಲಾ ಪ್ರವೇಶಕ್ಕೆ ತೊಂದರೆ

ಸ್ವಂ ಸು] ಚಾಮರಾಜನಗರ ೩

ಇಲ್ಲಿನ ಮಾಧ್ಯಮಿಕ ಶಾಲೆಯ ಮೊದಲನೇ ತರಗತಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುತ್ತಿಲ್ಲ. ಈಗ ೩ ಸೆಕ್ಷನ್‌ಗಳಲ್ಲಿ ೧೦೦ ಮಂದಿ ವಿದ್ಯಾರ್ಥಿಗಳಿಗೆ ಅವಕಾಶ ದೊರೆತಿದೆ. ಇನ್ನೂ ನೂರಾರು ವಿದ್ಯಾರ್ಥಿಗಳು ಸ್ಥಳಕ್ಕಾಗಿ ಪರದಾಡುತ್ತಿದ್ದಾರೆ. ಕೂಡಲೇ ಅಧಿಕಾರಿಗಳು ಇದನ್ನು ಗಮನಿಸಿ ಸಾಧ್ಯವಾದಷ್ಟು ಹೆಚ್ಚಿಗೆ ಸೆಕ್ಷನ್‌ಗಳನ್ನು ತೆರೆಯಬೇಕಾಗಿದೆ.

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರದಲ್ಲಿ ಈ ವರ್ಷ ಮಾಧ್ಯಮಿಕ ಶಾಲಾ ಪ್ರಥಮ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಏರ್ಪಡಿಸಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯು ಮಿತಪಡಿಸಲ್ಪಟ್ಟಿರುವುದರಿಂದ, ಅಪೇಕ್ಷಿಸುವವರು ತಮ್ಮ ಮಕ್ಕಳನ್ನು ಇದೇ ತಿಂಗಳು ೧೫ ನೇ ತಾರೀಖಿನೊಳಗೆ ಸೇರಿಸಬೇಕಾಗಿ ಕೋರಲಾಗಿದೆ.

ವುಡ್‌ಲ್ಯಾಂಡ್ಸ್

1·6·47 ರಿಂದ

ಚಿಕ್ಕರಿದ ೫ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

ಬಿ(ತಮಿಳು)

—: ಪಾತ್ರ :—

ಟಿ. ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ. ಆರ್.

ರಾಮಚಂದ್ರ ಮುಂತಾದವರು.

ಗರ್ಭ ರಕ್ಷಿಣಿ

ಅನೇಕರು ಅನುಭವ ಸಿದ್ಧವಾದ

ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ

ಪಂಡಿತ್ ಕೆ. ವಿ. ವೆಂಕಟರಾಮಯ್ಯ,

ಡಿ॥ ಬೋರ್ಡ್ ವೈದ್ಯ, ಅರಸಲವಾಡಿ.

ಚಾಮರಾಜನಗರ ತಾ॥

ಬೀಡಿ ಕೆಲಸಗಾರರ ಮುಷ್ಕರ

ಸ್ವಂ ಸು] ಗುಂಡ್ಲುಪೇಟೆ ೩

ಶ್ರೀನಿವಾಸ್ ಬೀಡಿ ಕಾರ್ಖಾನೆ ಮಾಲೀಕರು ಕೆಲಸಗಾರರ ಬೇಡಿಕೆಗಳಿಗೆ ಒಪ್ಪದಿರುವುದರಿಂದಲೂ ೪ ಆರ್ ಅವಾರ್ಡ್ ಬೀಡಿ ಕಾರ್ಖಾನೆಯಲ್ಲಿ ಕೆಲಸಗಾರರನ್ನು ತೆಗೆದು ಹಾಕಲು ಯತ್ನಿಸುತ್ತಿದ್ದುದರಿಂದಲೂ ಇಲ್ಲಿನ ಎಲ್ಲಾ ಬೀಡಿ ಕೆಲಸಗಾರರೂ ನಿನ್ನೆಯಿಂದ ಮುಷ್ಕರ ಹೂಡಿರುತ್ತಾರೆ. ಬೀಡಿ ಮೂಟೆಗಳನ್ನು ಸಾಗಿಸಲು ಮೋಟಾರು ಬಸ್ಸಿನವರು ನಿರಾಕರಿಸಿ, ಕೆಲಸಗಾರರಿಗೆ ಬೆಂಬಲ ನೀಡಿದ್ದಾರೆ. ಕಾರ್ಖಾನೆ ಮಾಲೀಕರು ಪೋಲೀಸರ ಸಹಾಯದಿಂದ ಕೆಲಸಗಾರರ ಮುಖಂಡರಿಗೆ ತೊಂದರೆ ಕೊಡುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ಕೊಡಲಾಗಿದೆ. ಅಮಲ್ದಾರರು ಮಧ್ಯಸ್ಥಿಕೆ ವಹಿಸಲು ಬಂದಿದ್ದಾರೆ. ಜಿಲ್ಲಾಧಿಕಾರಿಗಳೂ ಬರುವ ನಿರೀಕ್ಷಣೆ ಇದೆ.

ಸಾಧ್ವಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಶ್ರೀ

ಗಣೇಶಾ ಟಾಕೀಸ್

6—6—47 ರಿಂದ

ದಿನ ವಹಿ 3 ಆಟಗಳು

T. R ರಾಜಕುಮಾರಿ,

P. U. ಚಿನ್ನಪ್ಪ,

ನಟಿಸಿರುವ ತಮಿಳು ಚಿತ್ರ

ವಿಕಟ ಯೋಗಿ

Morning Shows on 6th, 7th, 8th, and 9th at 10-30 A. M.

LON CHANEY

In

Mummy's Ghost

showing for the first time in Mysore.

Office of the President,
City Municipal Council,
Mysore, Dated 3—6—47.

NOTIFICATION.

Applications are invited for the post of a Clock-Winder for the maintenance of the Tower and Office Clocks of the City Municipality Mysore. Only those who are specialists in this field need apply with copies of Testimonials etc., on or before 15th June 1947, stating the minimum remuneration expected.

K. G. KATWEY
For President,

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೬—೬—೪೭ [ಸಂಚಿಕೆ ೨೫೬

ಬ್ರಿಟಿಷ್ ಸಾರ್ವಭೌಮರು ಬರೀ ರಾಜರಾಗುವರು

ಮೈಸೂರು ಹಿಂದೂರಾಜ್ಯವೂ ಅಲ್ಲ ಮುಸ್ಲಿಂ ರಾಜ್ಯವೂ ಅಲ್ಲ

ಪ್ರ|| ಪ್ರ|| ಸಭೆಯಲ್ಲಿ ಕೋಲಾಹಲ ಮತ್ತು ಕ್ಷಮಾಪಣೆ

ಸ್ವಂ.ಸು. ಪ್ರೋ] ಬೆಂಗಳೂರು ೬

ನಿನ್ನೆ ಪ್ರ|| ಪ್ರ|| ಸಭೆಯಲ್ಲಿ ಮುಸ್ಲಿಂ ಲೀಗ್ ಸದಸ್ಯರಾದ ಮಿ|| ಎಂ. ಎ. ಅಲಂರವರು ಬಡ್ಜೆಟ್ಟಿನ ಮೇಲೆ ಮಾತನಾಡುತ್ತಿದ್ದಾಗ ಸ್ವಲ್ಪ ಬಿಸಿ ವಾತಾವರಣವು ಉಂಟಾಯಿತು. ಎಲ್ಲಾ ಪ್ರಜೆಗಳ ಹಿತರಕ್ಷಣೆಯಲ್ಲಿಯೂ ಸರ್ಕಾರದವರು ತೋರುತ್ತಿರುವ ಶ್ರದ್ಧೆಯನ್ನು ಅವರು ಶ್ಲಾಘಿಸಿ ಈಚಿನ ಕೋಮುವಾರು ಗಲಭೆಗಳಲ್ಲಿ ಕೆಲವು ಹಿಂದೂ ಪುಂಡರು ಮುಸ್ಲಿಮರ ಮೇಲೆ ಸೇಡಿನಿಂದ ಧಾಳಿ ನಡೆಸಿದರೆಂದು ಹೇಳಿದಾಗ ಸಭೆಯಲ್ಲಿ ವಿಶೇಷವಾದ ಪ್ರತಿಭಟನೆಯು ಉಂಟಾಯಿತು. ಅವರು ತಮ್ಮ ಮಾತುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಲಾಯಿತು. ಅಧ್ಯಕ್ಷರು ಅವರಿಗೆ ಸರಿಯಾದ ರೀತಿಯಲ್ಲಿ ಮಾತನಾಡುವಂತೆ ಸೂಚನೆಕೊಟ್ಟರು. ಮುಂದುವರಿದು ಮತ್ತೆ ಮಿ|| ಅಲಂರವರು ಮಾತನಾಡುವಾಗ ಮೈಸೂರು ಹಿಂದೂಸಂಸ್ಥಾನವೂ ಅಲ್ಲ; ಮುಸ್ಲಿಂ ಸಂಸ್ಥಾನವೂ ಅಲ್ಲ, ಎಂದು ಹೇಳಿದಾಗ ಮತ್ತೂ ಹೆಚ್ಚಿನ ಕೋಲಾಹಲವು ಉಂಟಾಯಿತು. ಸಂಸ್ಥಾನದ ಮತ್ತು ಶ್ರೀಮನ್ಮಹಾರಾಜರವರ ಕೀರ್ತಿಗೆ ಇಂತಹ ಹೇಳಿಕೆಗಳಿಂದ ಕಳಂಕವುಂಟಾಗುವುದೆಂದು ಹೇಳಿ ಶ್ರೀ ಬಿ.ಎಸ್. ಗುಪ್ತರವರು ಪ್ರತಿಭಟನೆಯನ್ನೆತ್ತಿದರು.

ಅಲಂರವರ ಮಾತುಗಳು ಉಚಿತವಲ್ಲವೆಂದೂ, ಅದಕ್ಕಾಗಿ ಅವರು ಕ್ಷಮಾಪಣೆ ಕೇಳಬೇಕೆಂದೂ ಅಧ್ಯಕ್ಷರು ಹೇಳಿದಮೇಲೆ ಅವರು ಹಾಗೆಯೇ ಮಾಡಿದರು.

ಮೇಲ್ಕಂಡ ಹೇಳಿಕೆಯನ್ನು ವರದಿಯ ಪುಸ್ತಕದಿಂದ ತೆಗೆದುಹಾಕಬೇಕೆಂದು ಸದಸ್ಯರು ಹೇಳಲಾಗಿ ಅದರಂತೆಯೇ ಮಾಡುವಂತೆ ಅಧ್ಯಕ್ಷರು ತಿಳಿಸಿದರು.

ಐಕ್ಯತೆಗಾಗಿ ಜಿನ್ನಾರವರಿಗೆ ಮಹಾತ್ಮರ ಕರೆ

ಕಾಂಗ್ರೆಸ್ಸು ಹಿಂದಿನಿಂದ ಭಾರತ ವಿಭಜನೆಗೆ ಸಮ್ಮತಿಯನ್ನಿತ್ತಿಲ್ಲ. ಆದರೆ ದೇಶಾದ್ಯಂತವೂ ತಲೆದೋರಿರುವ ಅಶಾಂತಿ ಮತ್ತು ಕೋಮುವಾರು ಘರ್ಷಣೆಗಳನ್ನು ತಡೆಗಟ್ಟಲು ಅದು ಆ ರೀತಿ ಮಾಡಬೇಕಾಯಿತು—ಎಂಬುದಾಗಿ ಮಹಾತ್ಮ ಗಾಂಧಿಯವರು ಬ್ರಿ|| ಯೋಜನೆಯ ವಿಚಾರವಾಗಿ ಹೇಳಿರುವರು. ಬ್ರಿಟಿಷರು ಕೊಟ್ಟಿರುವ ಈ ಯೋಜನೆಯು ಒಂದು ತೀರ್ಪಲ್ಲ; ಅಥವಾ ಬಲವಂತದಿಂದ ಹೊರಿಸಲ್ಪಟ್ಟುದೂ ಇಲ್ಲ; ಈಗ ಲೀಗಿನವರೂ, ಜಿನ್ನಾರವರೂ ಕಾಂಗ್ರೆಸ್ಸಿಗೆ ಆಹ್ವಾನವಿತ್ತು ಶಾಂತಿಸ್ಥಾಪನೆಗೆ ಅನುಕೂಲವಾಗುವಂತೆ ಪರಸ್ಪರ ಒಪ್ಪಂದ ಮಾಡಿಕೊಳ್ಳಬೇಕು. ಐಕ್ಯಭಾರತದಿಂದ ಪ್ರತ್ಯೇಕವಾಗಿರುವ ಭಾರತಯೂನಿಯನ್ನಿಗೆ ಸೇರಲು ಅಪೇಕ್ಷಿಸದ ಯಾವ ಭಾಗವನ್ನೂ ಕಾಂಗ್ರೆಸ್ಸು ಒತ್ತಾಯದಿಂದ ಸೇರಿಸಿಕೊಳ್ಳಲು ಬಯಸುವುದಿಲ್ಲ; ಈಗ ಆಗಿಹೋಗಿರುವುದನ್ನು ಬದಲಾಯಿಸುವುದು ಅಸಾಧ್ಯ; ಆದರೆ ವೈಸರಾಯರು ಹೇಳುವಂತೆ ಪರಸ್ಪರ ಒಪ್ಪಂದದಿಂದ ಮಾತ್ರ ಅದನ್ನು ಬದಲಾಯಿಸಬಹುದು ಎಂದೂ ಅವರು ತಿಳಿಸಿರುವುದಾಗಿ ವರದಿಯಾಗಿದೆ.

ಮೈಸೂರು ಹಿಂದೂಸ್ಥಾನಕ್ಕೇ ಸೇರಬೇಕು

ಮೈಸೂರು ಸಂಸ್ಥಾನವು ಮುಂದೆ ರಚಿತವಾಗಲಿರುವ ಭಾರತದ ಹಿಂದೂ ಯೂನಿಯನ್ನಿಗೇ ಸೇರಬೇಕು ಮತ್ತು ಅದಕ್ಕಾಗಿ ಅಲ್ಲಿನ ರಾಜ್ಯಾಂಗ ಸಭೆಗೆ ಕೂಡಲೇ ಪ್ರತಿನಿಧಿಗಳನ್ನು ಕಳುಹಿಸಲು ಏರ್ಪಡಿಸಬೇಕು—ಎಂಬುದಾಗಿ ಒತ್ತಾಯಪಡಿಸಿ ಪ್ರ|| ಪ್ರ|| ಸಭೆಯ ಪ್ರೋಗ್ರೆಸಿವ್ ಪಕ್ಷವು ಡೆಹಲಿಯಲ್ಲಿರುವ ದಿವಾನರಿಗೆ ತಂತಿಯನ್ನು ಕಳುಹಿಸಿದೆ.

ಪಾಕಿಸ್ತಾನದಲ್ಲಿ ಸೇರಲು ಸಿಕ್ಕರಿಗೆ ಕರೆ

ತಮ್ಮ ರಕ್ಷಣೆಗಾಗಿ ಸಿಕ್ಕರಿಗೆ ಈಗ ಸಿದ್ಧವಾಗಿರುವ ಮಾರ್ಗವೆಂದರೆ ಪಾಕಿಸ್ತಾನಕ್ಕೆ ಸೇರಿ ತಮ್ಮ ಏಕಮತ್ಯವನ್ನು ರಕ್ಷಿಸಿಕೊಂಡು ಬರುವುದೇ ಆಗಿದೆ—ಎಂದು ಪಂಜಾಬಿನ ಮುಸ್ಲಿಂ ಲೀಗ್ ನಾಯಕರಾದ ಮಿ|| ಫಿರೋಜ್ ಖಾನ್ ನೂನರು ಹೇಳಿದ್ದಾರೆ.

ನರೇಂದ್ರ ಮಂಡಲದ ರದ್ದು

ಪರಮಾಧಿಕಾರವು ಬ್ರಿಟಿಷರಿಂದ ಸಂಸ್ಥಾನಗಳಿಗೇ ವರ್ಗಾಯಿಸಲ್ಪಡುವುದರಿಂದ ಇನ್ನು ಮುಂದೆ ನರೇಂದ್ರ ಮಂಡಲದ ಆವಶ್ಯಕತೆ ಇರುವುದಿಲ್ಲವೆಂದು ರಾಜರುಗಳು ತಮ್ಮ ಅಭಿಪ್ರಾಯವನ್ನು ವೈಸರಾಯರಿಗೆ ತಿಳಿಸುತ್ತಾರೆ. ಭೂಪಾಲ್ ನವಾಬರು ಈಗಾಗಲೇ ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಇತ್ತಿರುತ್ತಾರೆ.

ವೀಣಾವಾದನ

ಮೈಸೂರು ೬

ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಸಾಧ್ವಿ ಆಫೀಸು ಮಹಡಿಯಮೇಲೆ ಈ ದಿನ ರಾತ್ರಿ ೯ ಗಂಟೆಗೆ ಆ|| ವಿ|| ಶ್ರೀ ಎಸ್. ಪದ್ಮನಾಭರಾಯರ ವೀಣಾವಾದನವು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಗೀತಾ ಪ್ರವಚನ

ಮೈಸೂರು ಚಾಮುಂಡಿ ಅಗ್ರಹಾರದ ಹಿಂಭಾಗದ ಬಂಡೀಕೇರಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಈಗ್ಗೆ ಎರಡು ತಿಂಗಳಿಂದಲೂ ಶ್ರೀ ಮಾಲೂರು ಚಕ್ರವರ್ತಿಯವರಿಂದ ಗೀತಾ ಪ್ರವಚನವು ನಡೆಯುತ್ತಲಿದ್ದು ಇದೇ ೯ ನೇ ತಾ|| ಸೋಮವಾರ ಸಾಯಂಕಾಲ ೬-೩೦ ಗಂಟೆಗೆ ಮಂಗಳಾ ಶಾಸನಕ್ಕೆ ಏರ್ಪಾಡು ಮಾಡಿರುತ್ತದೆ. ಆಸ್ತಿಕ ಮಹಾಶಯರೆಲ್ಲರೂ ದಯಮಾಡಿಸಿ ಶ್ರೀನಿವಾಸ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಮೈಸೂರಿನಲ್ಲಿ ಪಾಕಿಸ್ತಾನ ಚಳುವಳಿ

ಪ್ರ|| ಪ್ರ|| ಸಭೆಯಲ್ಲಿ ನಿಲುವಳಿ ಸೂಚನೆ

ಸ್ವಂ ಸು. ಪ್ರೋ] ಬೆಂಗಳೂರು ೬

ಇತ್ತೀಚೆಗೆ ಸಂಸ್ಥಾನದ ಮುಸ್ಲಿಂ ಲೀಗಿನವರು ಮೈಸೂರು ಸಂಸ್ಥಾನವನ್ನು ಪಾಕಿಸ್ತಾನದ ಒಂದು ಅಂಗವಾಗಿ ಮಾಡಲು ನಡೆಸುತ್ತಿರುವ ಪ್ರಯತ್ನದಿಂದ ಹಿಂದೂಗಳ ಮನಸ್ಸಿನಲ್ಲಿ ಉಂಟಾಗಿರುವ ಕಳವಳವನ್ನು ಪರಿಶೀಲಿಸಲು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ನಿನ್ನೆ ದಿನ ಪ್ರ|| ಪ್ರ|| ಸಭೆಯಲ್ಲಿ ನಿರ್ಣಯವೊಂದನ್ನು ಸೂಚಿಸಿದರು. ಆದರೆ ಅಧ್ಯಕ್ಷರು ಅದಕ್ಕೆ ಅವಕಾಶ ಕೊಡದೆ ಅದನ್ನು ತಳ್ಳಿ ಹಾಕಿದರು.

ಪಕೋಟೆ ಅಕ್ಕಿಗಳ ಪರಿಣಾಮವಾಗಿ ಬೆಲ್ಲದ ಸರಬರಾಜು ಸಮರ್ಪಕವಾಗಿಲ್ಲದೆ ಅದು ಮಹಾಜನರಿಗೆ ದೊರೆಯದೆ ಇರುವ ವಿಷಯದಲ್ಲಿ ಶ್ರೀ ಭೂಪಾಳಂರವರು ತಂದ ಮತ್ತೊಂದು ನಿರ್ಣಯವನ್ನೂ ಸಹ ತಳ್ಳಿ ಹಾಕಲಾಯಿತು.

ಪೆಟ್ರೋಲಿನ ಅಭಾವದಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಆಹಾರ ವಸ್ತುಗಳನ್ನು ಸಾಗಿಸಲು ತೊಂದರೆಯುಂಟಾಗಿ ಅವುಗಳು ಹಾಗೆಯೇ ಕೊಳೆಯುತ್ತಿರುವ ವಿಚಾರವನ್ನು ಪರಿಶೀಲಿಸಲು ಶ್ರೀ ಭೂಪಾಳಂರವರು ಮತ್ತೊಂದು ನಿಲುವಳಿ ನಿರ್ಣಯವನ್ನು ತಂದಿದ್ದರು. ಪೆಟ್ರೋಲ್ ಸರಬರಾಜನ್ನು ಹೆಚ್ಚಿಸುವುದಾಗಿ ಸರ್ಕಾರದವರು ತಿಳಿಸಿದ ಮೇಲೆ ಅವರು ನಿರ್ಣಯವನ್ನು ವಾಪಸು ತೆಗೆದುಕೊಂಡರು.

ಚಕ್ರವರ್ತಿಗಳ ಸ್ಥಾನ ಕೇವಲ ರಾಜತ್ವಕ್ಕೆ ಇಳಿಯುವುದು

ಆಗಸ್ಟ್ ೧೫ ನೇ ತಾ||ನಿಂದ ಭಾರತಕ್ಕೆ ಡೊಮಿನಿಯನ್ ಅಂತಸ್ತು ಬರುವುದರಿಂದ ಬ್ರಿಟಿಷ್ ಸಾರ್ವಭೌಮರ ಬಿರುದು ಇತರ ಡೊಮಿನಿಯನ್ನುಗಳಲ್ಲಿರುವಂತೆ 'ಇಂಡಿಯಾ ಚಕ್ರವರ್ತಿ ಸಾರ್ವಭೌಮ' ಎಂಬುದರಿಂದ ಕೇವಲ 'ಇಂಡಿಯಾ ರಾಜರು' ಎಂಬುದಾಗಿ ಬದಲಾಯಿಸಲ್ಪಡುವುದು. ಅಂದಿನಿಂದ ಎಲ್ಲಾ ಪ್ರಾಂತೀಯ ಗವರ್ನರುಗಳ ಸ್ಥಾನಗಳೂ ರದ್ದಾಗುವುವು. ಮುಂದಿನ ಸರ್ಕಾರವು ಸೂಚಿಸುವವರನ್ನೇ ಗೌರ್ನರ್-ಜನರಲ್ಲರನ್ನಾಗಿ ನೇಮಿಸಲಾಗುವುದು.

ಸರ್ಕಾರದ ನೀತಿಯ ಖಂಡನೆ

ಕಾಂಗ್ರೆಸ್ ನಾಯಕರ ಬಡ್ಜೆಟ್ ಭಾಷಣ

ಸ್ವಂ ಸು. ಪ್ರೋ] ಬೆಂಗಳೂರು ೬

ಶ್ರೀ ಬಿ. ಎಸ್. ಗುಪ್ತರವರು ಆಯವ್ಯಯದ ಮೇಲೆ ಭಾಷಣಮಾಡಿ ಈ ರೀತಿ ನುಡಿದರು:-ಇಂದಿನ ಮಂತ್ರಿಮಂಡಲದಲ್ಲಿ ಪ್ರಜೆಗಳಿಗೆ ವಿಶ್ವಾಸವಿಲ್ಲ. ಅವರು ತಯಾರು ಮಾಡಿರುವ ಆಯವ್ಯಯ ಪಟ್ಟಿಯೂ ಸಹ ಪ್ರಜಾವಿಶ್ವಾಸವನ್ನು ಹೊಂದಿರುವುದಿಲ್ಲ. ಪ್ರಜಾಪ್ರತಿನಿಧಿಗಳಿಗೆ ಉತ್ತರವಾದಿಗಳಾದ ಮಂತ್ರಿಮಂಡಲದಿಂದ ಸಿದ್ಧಗೊಳಿಸಲ್ಪಟ್ಟ ಆಯವ್ಯಯ ಪಟ್ಟಿಯೇ ಅಂಗೀಕಾರಕ್ಕೆ ಅರ್ಹವಾಗಿರುತ್ತದೆ. ಇತ್ತೀಚೆಗೆ ರಾಜಭಕ್ತಿಯ ವೇಷವೊಂದು ಸಂಸ್ಥಾನದಲ್ಲಿ ತಲೆದೋರಿ ಸಮಸ್ತವನ್ನೂ ಆಕ್ರಮಿಸಲು ತೊಡಗಿರುತ್ತದೆ. ರಾಜಭಕ್ತಿಯು ಯಾರೊಬ್ಬರಿಗೂ ಮೀಸಲಾಗಿರುವ ವಸ್ತುವಲ್ಲ. ಆದರೆ ಕೆಲವರು ಮಾತ್ರ ತಾವೇ ರಾಜಭಕ್ತರೆಂದು ಹೇಳಿಕೊಂಡು ಮನಸ್ಸುಬಂದಂತೆ ವರ್ತಿಸಲು ತೊಡಗಿದ್ದಾರೆ.

ಸಕಲ ಪಂಗಡಗಳವರಿಗೂ ಸಮಾನವಾದ ಅವಕಾಶಗಳಿರಬೇಕೆಂದು ಹೇಳುವ ಮತ್ತೊಂದು ವ್ಯಾಧಿಯು ಹುಟ್ಟಿಕೊಂಡಿರುತ್ತದೆ. ಎಲ್ಲರಿಗೂ ಸಮಾನವಾದ ಅವಕಾಶವಿರಬೇಕೆಂದು ಕಾಂಗ್ರೆಸ್ಸೂ ಸಹ ಹೇಳುತ್ತದೆ. ಆದರೆ ಇದರಿಂದ ದೇಶಕ್ಕಾಗಲೀ ಅಥವಾ ಯಾವ ಪಂಗಡಕ್ಕೇ ಆಗಲಿ ಹಾನಿಯುಂಟಾಗಬಾರದು.

ಮೈಸೂರನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂದು ನಡೆಯುತ್ತಿರುವ ಚಳುವಳಿಗೆ ಸರ್ಕಾರದವರು ಅವಕಾಶವಿತ್ತಿರುವುದು ಅತ್ಯಂತ ಶೋಚನೀಯವಾದ ವಿಚಾರ. ನಮ್ಮ ಪೊಲೀಸ್ ಶಾಖೆಯವರ ಕೆಲಸಕಾರ್ಯಗಳು ಬಹಳ ಅಸಮರ್ಪಕವಾಗಿವೆ. ಅವರ ಗೂಢಚಾರ ವರ್ಗದಿಂದ ಯಾರಿಗೂ (ಮಂತ್ರಿಗಳಿಗೂ ಸಹ) ರಕ್ಷಣೆಯಿರುವುದಿಲ್ಲ.

ಅನೇಕ ವಿಷಯಗಳಲ್ಲಿ ನಮ್ಮ ಸರ್ಕಾರದವರು ಬ್ರಿಟಿಷ್ ಇಂಡಿಯಾದ ರಬ್ಬರ್ ಸ್ಟಾಂಪಿನಂತೆ ಕೆಲಸಮಾಡುತ್ತಿದ್ದಾರೆ. ಆದರೂ ಅಲ್ಲಿ ಜಾರಿಗೆ ಬಂದಿರುವ ರಾಜಕೀಯ ಸುಧಾರಣೆಗಳನ್ನು ಮಾತ್ರ ಇಲ್ಲಿ ತಂದಿರುವುದಿಲ್ಲ. ಜನರ ಆಕಾಂಕ್ಷೆಗಳನ್ನು ಈಡೇರಿಸಿರುವುದಿಲ್ಲ. ಕೇವಲ ಅಧಿಕಾರವೇ ಮುಖ್ಯವಲ್ಲವೆಂಬುದನ್ನೂ, ಪ್ರಜಾವಿಶ್ವಾಸವೇ ಮುಖ್ಯವೆಂಬುದನ್ನೂ ಅವರು ಅರಿಯಬೇಕು.

ಅಧಿಕಾರವಿರುವವರನ್ನು ಪ್ರಶ್ನಿಸತಕ್ಕ ಅಧಿಕಾರ ಹೊಂದಿರುವ ಜನರಿಗೆ ಸರ್ಕಾರ ತಲೆಬಾಗಬೇಕು" ಎಂದು ಹೇಳಿ ಆಡಳಿತದ ಲೋಪದೋಷಗಳನ್ನು ಟೀಕಿಸಿ ಶ್ರೀ ಗುಪ್ತರವರು ತಮ್ಮ ಭಾಷಣವನ್ನು ಮುಕ್ತಾಯಮಾಡಿದರು.

ಇನ್ನು ೨ ತಿಂಗಳಲ್ಲಿ ಸಂಬಳ ಸಮಿತಿ ವರದಿ

ಪ|| ಪ್ರ|| ಸಭೆಯಲ್ಲಿ ನಿನ್ನೆ ಸಂಬಳ ಸಾರಿಗೆಗಳ ವಿಷಯದಲ್ಲಿ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಸಂಬಳ ಸಮಿತಿಯವರಿಗೆ ವರದಿಯನ್ನು ಕೂಡಲೇ ಒಪ್ಪಿಸಲು ಸೂಚನೆ ಕೊಟ್ಟಿರುವುದಾಗಿಯೂ, ಇನ್ನು ಎರಡು ತಿಂಗಳಲ್ಲಿ ಆ ವರದಿಯು ಸರ್ಕಾರಕ್ಕೆ ಬರುವುದೆಂದೂ, ಅನಂತರ ಸರ್ಕಾರದ ಆಜ್ಞೆ ಹೊರಬೀಳುವುದೆಂದೂ ಸರ್ಕಾರದವರು ತಿಳಿಸಿರುವರು

ಸಾಧ್ವಿ

ತಾ|| ೬-೬-೪೭ ಶುಕ್ರವಾರ

ಈಸೂರು ಬಂದಿಗಳ ಪ್ರಶ್ನೆ

ಪ್ರಜಾಪ್ರತಿನಿಧಿ ಸಭೆಯಲ್ಲಿ ಈಸೂರಿನ ಬಂದಿಗಳ ಬಿಡುಗಡೆಯ ಪ್ರಶ್ನೆಯು ಮತ್ತೆ ಬಂದಿದ್ದಿತು. ಈ ವಿಷಯವು ಇನ್ನೂ ಸರ್ಕಾರದವರ ಪರಿಶೀಲನೆಯಲ್ಲಿದೆಯೆಂಬುದಾಗಿ ಉತ್ತರ ಬಂದಿತು. ಇನ್ನೂ ಏಳು ಜನ ಸೈದಿಗಳು ಕಾರಾಗೃಹದಲ್ಲಿರುವರೆಂದೂ, ಅವರ ಪೈಕಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುವವರು ಯಾರೂ ಇಲ್ಲವೆಂದೂ ತಿಳಿಸಲಾಯಿತು. ಅವರುಗಳು ಮಾಡಿದ ಅಪರಾಧದ ಗುರುತ್ವವೇ ಅವರು ಇನ್ನೂ ಬಂಧನದಲ್ಲಿರಲು ಕಾರಣವೆಂದು ಸರ್ಕಾರದವರು ಹೇಳಿದರು.

ಸರ್ಕಾರದವರ ಈ ಉತ್ತರವು ಎಷ್ಟು ಸಮರ್ಪಕವೋ ಅಷ್ಟು ಅಸಮಂಜಸವೂ ಆಗಿರುತ್ತದೆ. ರಾಜಕುಮಾರಿಯವರ ಜನನ ಕಾಲದಲ್ಲಿ ಹಲವರನ್ನು ಬಿಡುಗಡೆ ಮಾಡಲಾಯಿತೆಂದು ಸರ್ಕಾರದವರು ಹೇಳಿದ್ದಾರೆ. ಆ ಸಮಯದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದವರೆಲ್ಲರೂ ಬಿಡುಗಡೆ ಹೊಂದಿದರು. ಈ ಏಳು ಜನರು ಮಾತ್ರ ಇನ್ನೂ ಬಂಧನದಲ್ಲಿಯೇ ಉಳಿಸಲ್ಪಟ್ಟರು. ಇವರುಗಳ ಅಪರಾಧವು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದವರ ಅಪರಾಧಕ್ಕಿಂತಲೂ ಹೆಚ್ಚಾಗಿತ್ತೆಂದು ಸರ್ಕಾರದವರು ಹೇಳಲಾರರೆಂದು ನಾವು ನಂಬಿದ್ದೇವೆ. ಎಲ್ಲ ಅಪರಾಧಿಗಳೂ ಒಂದೇ ಒಂದು ವಿಚಾರಣೆಗೆ ಗುರಿಯಾಗಿ ಶಿಕ್ಷಿಸಲ್ಪಟ್ಟರು.

ಈಸೂರಿನ ಪ್ರಕರಣದಲ್ಲಿ ಎರಡು ಪ್ರತ್ಯೇಕ ವಿಚಾರಣೆಗಳು ನಡೆದು ಅವುಗಳ ತೀರ್ಪಿನಲ್ಲಿ ಒಂದಕ್ಕೊಂದು ತೀವ್ರವಾದ ಭಿನ್ನತೆಯುಂಟಾಗಿರಬಹುದು ಎಲ್ಲರಿಗೂ ತಿಳಿದ ವಿಷಯ. ಅಪರಾಧಿಗಳಲ್ಲಿರೂ ಕೊಲೆಯ ಉದ್ದೇಶವನ್ನು ಹೊಂದಿರಲಿಲ್ಲವೆಂಬ ಅಭಿಪ್ರಾಯವನ್ನು ಎರಡನೇ ಮೊಕದ್ದಮೆಯ ನ್ಯಾಯಾಧೀಶರು ಸೂಚಿಸಿದ್ದಾರೆ. ಈಗ ಅವುಗಳ ವಿಮರ್ಶೆಯು ಅಪ್ರಸ್ತುತ.

ಹಳೆಯ ನೆನಪುಗಳನ್ನು ಈಗ ತಂದುಕೊಳ್ಳ ಪ್ರಯೋಜನವಿಲ್ಲ. ಆ ಪ್ರಕರಣದಲ್ಲಿ ಆಗಬಾರದುದೆಲ್ಲಾ ಆಗಿ ಹೋಯಿತು. ಇನ್ನಾದರೂ ಅವರ ರಕ್ಷಣೆಯನ್ನು ನಿವೃತ್ತಿ ಮಾಡುವುದು ಅಗತ್ಯ. ಇದೇ ಬಗೆಯ ವ್ಯಕ್ತಿಗಳೆಲ್ಲರೂ ಇತರ ಪ್ರದೇಶಗಳಲ್ಲಿ ಬಿಡುಗಡೆ ಹೊಂದಿದ್ದಾರೆ. ನಮ್ಮಲ್ಲಿಯೂ ಅವರುಗಳನ್ನು ಬಿಟ್ಟುಬಿಡಬೇಕೆಂದು ಇಡೀ ದೇಶದವರೆಲ್ಲರೂ ಕೇಳುತ್ತಿದ್ದಾರೆ. ಪ್ರಜಾಪ್ರತಿನಿಧಿ ಸಭೆಯೂ ಸಹ ಏಕವಾಕ್ಯತೆಯಿಂದ ನಿರ್ಣಯ ಮಾಡಿರುತ್ತದೆ. ಈಗಾಗಲೇ ಸೈದಿಗಳು ಐದು ವರ್ಷ ಕಾಲ ಕಾರಾಗೃಹವಾಸವನ್ನು ಅನುಭವಿಸಿದ್ದಾರೆ. ಬಹಳ ಕಾಲ ವಿಳಂಬ ಮಾಡಿ ಅವರನ್ನು ಬಿಡುಗಡೆ ಮಾಡಿದರೆ ಅದರಲ್ಲಿ ಯಾವ ಘನತೆ, ಗಾಂಭೀರ್ಯಗಳೂ ಇರುವುದಿಲ್ಲ. ಆದ್ದರಿಂದ ಈಗಲಾದರೂ ಸರ್ಕಾರದವರು ಪ್ರಜಾಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಲೇ ಈ ಸೈದಿಗಳನ್ನು ಬಿಡುಗಡೆ ಮಾಡುವುದು ಸಾಧುವಾಗಿರುತ್ತದೆ.

Edited printed and published by A. S. Nagarajan at the Sadhvi Press D Subbaiah Road Mysore

ವೈಸರಾಯರೊಡನೆ ಮತ್ತೆ ನಾಯಕರ ಭೇಟಿ

ಆಚಾರ್ಯ ಕೃಪಲಾನಿ, ಪಂಡಿತ ನೆಹರೂ, ಸರ್ದಾರ್ ಪಟೇಲ್, ಸರ್ದಾರ್ ಬಲದೇವಸಿಂಗ್, ಮಿ|| ಜಿನ್ನಾ, ಲಿಯಾಕತ್ ಆಲಿಖಾನ್, ಸರ್ದಾರ್ ಅಬ್ದುಲ್ ರಬ್ ನಿಸ್ತಾರ್-ಇವರುಗಳು ನಿನ್ನೆ ಮತ್ತೆ ವೈಸರಾಯರನ್ನು ಭೇಟಿ ಮಾಡಿ ದೇಶದ ವಿಭಜನೆಯ ನಂತರ ಜಾರಿಗೆ ಬರಬೇಕಾದ ಆಡಳಿತದ ವಿಷಯದಲ್ಲಿ ಚರ್ಚಿಸಿದರೆಂದು ವರದಿಯಾಗಿದೆ. ಇವರು ಮತ್ತೆ ನಾಳೆ ವೈಸರಾಯರನ್ನು ಭೇಟಿ ಮಾಡುವರು.

ಗೊಡ್ಡು ಹಸುವಿನಿಂದ ಹಾಲು

ಮಂಡ್ಯದ ಪಶು ವೈದ್ಯಶಾಲೆಯ ಡಾ|| ಡಿ. ಎನ್. ವಾಸುದೇವ ಮೊದಲಿಯಾರರು ಸಾತನೂರಿನ ಕೊಪರ್‌ವೈಟರ್ ಶ್ರೀ ಹಜಾರಿಯವರ ಗೊಡ್ಡು ಹಸುವಿನ ಮೇಲೆ ಲಂಡನ್ ನಗರದ ಬರೋಗ್‌ವೆಲ್ ಕಂಪೆನಿಯವರ ಸ್ಟಿಲ್ ಬಸ್ಟಾಲ್ ಎಂಬ ಇಂಜೆಕ್ಷನ್ ಪ್ರಯೋಗ ನಡೆಸಿ ಅದು ಒಂದು ಸೇರು ಹಾಲು ಕರೆಯುವಂತೆ ಮಾಡಿರುವುದಾಗಿ ವರದಿಯಾಗಿದೆ. ಏಳೂವರೆ ರೂ. ವೆಚ್ಚದಿಂದ ೩೦ ದಿನಗಳ ಔಷಧ ಪ್ರಯೋಗ ನಡೆಸಿದರೆ ಗೊಡ್ಡು ಹಸುವು ೯ ತಿಂಗಳ ಕಾಲ ಹಾಲು ಕರೆಯುವುದೆಂದು ಹೇಳಲಾಗಿದೆ.

ಪ್ರತ್ಯೇಕ ರಾಜ್ಯಕ್ಕಾಗಿ ಸಿಕ್ಕರ ನಿರ್ಧಾರ

ಚೀನಾಬ್ ಮತ್ತು ಸಟ್ಲೆಜ್ ನದಿಗಳ ಮಧ್ಯ ಪ್ರದೇಶಗಳಲ್ಲಿ ಪಟಿಯಾಲಾ ಮತ್ತು ನಾಭಾ ಸಂಸ್ಥಾನಗಳನ್ನೊಳಗೊಂಡ ಪ್ರತ್ಯೇಕ ಸಿಖ್ ರಾಜ್ಯವನ್ನು ರಚಿಸಿಕೊಳ್ಳಲು ಸಿಕ್ಕರು ನಿರ್ಧರಿಸಿರುವರೆಂದು ವರದಿಯಾಗಿದೆ.

ಇನ್ನೊಂದು ನರೇಂದ್ರ ಮಂಡಲಕ್ಕಾಗಿ ಭೂಪಾಲರ ಯತ್ನ

ಭಾರತದ ಬಗ್ಗೆ ಹೊರಡಿಸಿರುವ ಯೋಜನೆಯಲ್ಲಿ ಕೆಲವಂಶಗಳು ಸ್ಪಷ್ಟವಾಗಿಲ್ಲದಿರುವುದರಿಂದ ಅದು ಜಯಪ್ರದವಾಗುವುದರಲ್ಲಿ ಹಲವು ಮುಖಂಡರುಗಳು ಸಂದೇಹಪಡುತ್ತಿರುವರು. ಅದರಲ್ಲಿ ಸಂಸ್ಥಾನಗಳ ಪ್ರಸ್ತಾಪವಿಲ್ಲದಿರುವುದರಿಂದ ಅವು ತಮ್ಮ ದಾರಿಯನ್ನೇ ಹಿಡಿಯಬಹುದು. ಭೂಪಾಲಿನ ನವಾಬರು ರಾಜರ ಪ್ರತ್ಯೇಕವಾದ ಮತ್ತೊಂದು ಗುಂಪನ್ನು ರಚಿಸಲು ಪ್ರಯತ್ನ ಪಡುತ್ತಿರುವುದಾಗಿ ವರದಿಯಾಗಿದೆ. ಈ ಬಗ್ಗೆ ಲಂಡನ್ನಿಗೆ ನಿಯೋಗವೊಂದನ್ನು ಕಳುಹಿಸಲಾಗುವುದೆಂದು ಊಹಿಸಲಾಗಿದೆ.

ಮೈಸೂರು ಮೇಲ್ಪಂಕ್ತಿ ಹಾಕಲಿ

ಭಾರತದ ಈಗಿನ ಪರಿಸ್ಥಿತಿಯಲ್ಲಿ ಸಂಸ್ಥಾನಗಳು ಸ್ವತಂತ್ರವಾಗಿ ನಿರಂಕುಶವಾಗಿ ಉಳಿಯಲಾರವು; ಸಂಸ್ಥಾನಗಳೂ, ಸಂಸ್ಥಾನಾಧೀಶರುಗಳೂ ಉಳಿಯಬೇಕಾದರೆ ಭಾರತ ಕೇಂದ್ರ ಸರ್ಕಾರದೊಡನೆ ಅವು ಒಂದು ಒಪ್ಪಂದಕ್ಕೆ ಬರಲೇಬೇಕು, ಭವಿಷ್ಯ ಭಾರತದ ರಾಜ್ಯಾಂಗವನ್ನು ರಾಜರೂ, ಅವರ ಸರ್ಕಾರಗಳೂ ಮಾತ್ರವೇ ನಿರ್ಧರಿಸುವಂತಿಲ್ಲ. ಪ್ರಜಾಭಿಪ್ರಾಯವೂ ಅತ್ಯವಶ್ಯಕ. ಮುಂದುವರಿದ ಮಾದರಿ ಸಂಸ್ಥಾನವಾದ ಮೈಸೂರು ಈ ಬಗ್ಗೆಯೂ ಆದರ್ಶಪ್ರಾಯವಾದ ರೀತಿಯಲ್ಲಿ ನಡೆಯಬೇಕು ಎಂಬುದಾಗಿ ಬಿಕನೇರ್ ಪ್ರಧಾನಿ ಸರ್ದಾರ್ ಫಣಿಕ್ಕರರು ಹೇಳಿರುವರು.

ಶ್ರೀರಂಗಪಟ್ಟಣ ಉತ್ಸವ : ಉರುಳಿತು

ಕಳೆದ ಮಂಗಳವಾರ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಯ ವರ ಕುದುರೆಯ ಉತ್ಸವವು ನಡೆಯುತ್ತಿದ್ದಾಗ ಮೇಲಿದ್ದ ಕುದುರೆ ವಾಹನವು ಕಳ್ಚಿ ... ಶ್ರೀರಂಗನಾಥರ ವಿಗ್ರಹದೊಡನೆ ಉರುಳಿ ಬಿದ್ದಿತು. ಇದೇ ... ದಲ್ಲಿಯೇ ಏನೋ ಕೇಡು ಸಂಭವಿಸುವುದೆಂದು ಕೆಲವರು ಭಾವಿಸಿರುವರು. ... ನ್ನು ಸ್ಥಿರಪಡಿಸಲೋ ಎಂಬಂತೆ ಸಮಯದಲ್ಲಿ ಅಲ್ಲಿಯೇ ಹೋಗುತ್ತಿದ್ದ ಟಾಂಗಾ ಗಾಡಿಯ ಕುದುರೆಯು ... ತಪ್ಪಿ ಕೆಳಗೆ ಬಿದ್ದು ಕೂಡಲೇ ... ಹೇಳಲಾಗಿದೆ.

ರಾಜಕಮಲ್,
ತಾ|| ೬-೬-೪೭ ರಿಂದ
ಏಳನೇ ವಾರ
ಪ್ರತಿ ದಿನ ೨ ಆಟಗಳು
ಗೋಲಭಾಮ
(ತೆಲುಗು)
6-6-47 ರಿಂದ
ಪ್ರತಿ ದಿನ ಬೆಳಗ್ಗೆ 10.30 ಕ್ಕೆ
ಔರತ್ ಅಥವಾ ಸ್ತ್ರೀ
—: ಭೂಮಿಕೆ :—
ಸುರೇಂದ್ರ, ಸರ್ದಾರ್ ಅಖ್ತರ್.

ಶ್ರೀ ಗಣೇಶಾ ಟಾಕೀಸ್
6—6—47 ರಿಂದ
ದಿನವಹಿ 3 ಆಟಗಳು
T. R ರಾಜಕುಮಾರಿ,
P. U. ಚಿನ್ನಪ್ಪ,
ನಟಿಸಿರುವ ತಮಿಳು ಚಿತ್ರ
ವಿಕಟ ಯೋಗಿ
Morning Shows on 6th, 7th, 8th, and 9th at 10-30 A. M.
LON CHANEY In
Mummy's Ghost
showing for the first time in Mysore

ವುಡ್‌ಲ್ಯಾಂಡ್ಸ್
1-6-47 ರಿಂದ
ಕಿಕ್ಕಿರಿದ ೫ ನೇ ವಾರ
ಪ್ರತಿ ದಿನ ೩ ಆಟಗಳು
ನಾವು ಇಬ್ಬರು
—: ಪಾತ್ರ :—
ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರನ್ ಮುಂತಾದವರು

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು
ಅಶೋಕ
ಗರ್ಭಾಶಯರೋಗ ನಿವಾರಿಣಿ

ಅಶೋಕ ಋತು ದೋಷಗಳನ್ನು ನಿರ್ಮೂಲಿಸಿ ಪೂರ್ಣ ಸ್ತ್ರೀತ್ವವನ್ನು ಸಾಧಿಸುವಲ್ಲಿ ಯಂತ್ರವಾದ ದಿವ್ಯೌಷಧವನ್ನು ಬಿಡದೆ ಸೇವಿಸಿದರೆ, ನಿಮ್ಮ ಜೀವಮಾನವಿಡೀ ಪರಮಾವಧಿಯಾದ ಮಂದಾನಂದವನ್ನು ... ದೆ ಒದಗಿಸಬಲ್ಲುದು.
ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್.... ಮದರಾಸ್

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ
—: ನಮ್ಮಲ್ಲಿ ವಿಚಾರಿಸಿ. :—
ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.
ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್
ಅಶೋಕ ರಸ್ತೆ, ಮೈಸೂರು.
ಸ್ಥಾಪಿತ ೧೯೩೨ ... ಫೋನ್ ೪೦೧

ಪೋ॥. ನಂ. ೩೨೨ | ಶ್ರೀ ವಂದೇ ಮಾತರಂ | ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೬—೬—೪೭ [ಸಂಚಿಕೆ ೨೩೭

ರಾಷ್ಟ್ರನಾಯಕರಿಗೆ ಮೈಸೂರಿನ ಅಭಿನಂದನೆ

...ಕಿಸ್ತಾನಕ್ಕೆ ಸೇರಲು ...ಮರೆ ಮನವಿಯೇ ?

...ಪ್ರ॥ ಸಭೆಯಲ್ಲಿ ಪ್ರಶ್ನೆ

ಪ್ರೋ॥] ಬೆಂಗಳೂರು ೬ ...ವತಿ ಕಾರ್ಖಾನೆಯಲ್ಲಿ ಕೆಲಸಮಾ...ಲಗಾರರಿಗೆ ಮನೆ ಕಟ್ಟಿಕೊಳ್ಳಲು ...೦ ರೂಪಾಯಿಗಳನ್ನು ಸಹಾಯ...ದ್ದಾಗಿ ಈ ದಿನ ಪ್ರ॥ಪ್ರ॥ ಸಭೆಯ...ಕೊಂದಕ್ಕೆ ಉತ್ತರಕೊಡುತ್ತಾ ಸ...ರು ತಿಳಿಸಿದರು

...ಸ್ತಾನಕ್ಕೆ ಮೈಸೂರು ಸೇರಬೇಕೆಂ...ಸಲ್ಮಾನರಿಂದ ಮನವಿ ಬಂದಿದೆ ...ಯಾಗಿ ಶ್ರೀ ಎಸ್. ವಿ. ಕೃಷ್ಣ...ಯವರು ಕೇಳಿದ ಪ್ರಶ್ನೆಗೆ ಇಲ್ಲವೆಂ...ರದವರು ಉತ್ತರವಿತ್ತರು.

...ನದ ಪೋಲೀಸ್ ದಳದವರ ಕೆಲ...ವನ್ನು ಪರಿಶೀಲಿಸಿ ಸುಧಾರಣೆಮಾ...ಸಮಿತಿಯೊಂದನ್ನು ರಚಿಸಲು ಶ್ರೀ॥ ...ಸುಬ್ಬರವರು ತಂದಿರುವ ಬಜೆಟ್ ...ದ ಮೇಲೆ ಚರ್ಚೆನಡೆಯುತ್ತಿತ್ತು.

...ದ್ರಾಸ್ ಮಂತ್ರಿಗಳಿಗೆ ...ಡಿಮೆ ಸಂಬಳ

...ರ್ಚ್ ಪ್ರಾಂತ್ಯದ ಮಂತ್ರಿಗಳು ಇ...ಪಡೆಯುತ್ತಿದ್ದ ಒಂದು ...ವಿರ ...ಬಳದಲ್ಲಿ ಅವರು ...ವಾ ...ಯ ...ಕ್ಕೆ ರೂ ಕಡಿಮೆಮಾಡಿಕೊಂಡು ...ಬಂದೆ ೮೫೦ ರೂ ಸಂಬಳದ ಮೇಲೆ ...ಮಾಡಲು ನಿರ್ಧರಿಸಿರುವರೆಂದು ...ಗಿದೆ.

...ಟಿಷ್ ಯೋಜನೆಗೆ ...ವರ್ಕರರ ವಿರೋಧ

...] ಬೊಂಬಾಯಿ ೪ ...ಮಹಾಸಭಾ ನಾಯಕರಾದ ...ಡಿ. ಸಾವರ್ಕರರು ಬ್ರಿಟಿಷರ ಹೊ...ಜನೆಯನ್ನು ವಿರೋಧಿಸಿ ಈ ರೀತಿ ...ರು ಕೇಂದ್ರ ಭಾರತದಿಂದ ಪ್ರ...ದ ಸ್ವತಂತ್ರ ಮುಸ್ಲಿಂ ರಾಜ್ಯಸ್ಥಾ...ಗುವುದನ್ನು ನಾವು ತೀವ್ರವಾಗಿ ...ಸಬೇಕು ... ಸತ್ಯಬಾಹಿರವಾದ ಮ...ತದ ಆತ್ಮಹತ್ಯದ ನಾಗರಿಕ್ಕೆ ...ಬಲ ಕೊಡಲಾರೆವು ಬ್ರಿಟಿಷ ...ಮೇಲೆ ಒತ್ತಾಯದಿಂದ ಪಾಕಿ...ಸ್ತಾನ ಹೇರಿದರೆ ಅದು ಬೇರೆ ವಿಷ...ಯಾಗಾದರೂ ಕೂಡ ಆ ಮುಸ್ಲಿಂ...ಳು ಅಖಂಡ ಭಾರತದೊಡನೆ ...ಹೋರಾಡುತ್ತೇವೆ. ...ಇದರ ...ಪ್ರತಿಭಟನೆಯನ್ನು ಸೂಚಿಸ...ಕಾಲವಾದ ಒಂದು ದಿನವನ್ನು ...ವಾಗಿ ಆಚರಿಸಬೇಕು ಅಖಂಡ ...ಸ್ತಾನದ ಧ್ಯೇಯದಿಂದ ಪಾಕಿಸ್ತಾ...ಇಲ್ಲದಿರಲಿ ಬಂಗಾಳ, ಸಿಂಧು ಮುಸ್ತ...ಗ ಲ್ಲಿ ನೂರುಹಿಂದೂ ಬಹುಸಂ...ಪ್ರಾಂತ್ಯಗಳನ್ನು ನಿರ್ಮಿಸಬೇಕು, ...ಜಿಲ್ಲೆಯಂತೆಯೇ ಸಿಂಧು ... ಹಿಂದೂ ಬಹುಸಂಖ್ಯಾತ ಜಿಲ್ಲೆ ...ಂದೂಸ್ತಾನವನ್ನು ಸೇರುವ ಒಗ್ಗ...ಭಿಮತವನ್ನು ಸೂಚಿಸಲು ಅವ...ಬೇಕು; ಅಖಂಡ ಭಾರತದ ...ಬ್ರಿಟನ್ನನ್ನು ಒತ್ತಾಯ ಪಡಿಸ...ರೂ ಸಹ ಕಾಂಗ್ರೆಸ್ ಮಂತ್ರಿಮಂ...ಪಾಕಿಸ್ತಾನ ರಚನೆಯನ್ನು ಅಂ...ದಂತೆ ಅವರಿಗೆ ಬಲವಂತಪಡಿಸಿ...ಬು

ಪಾನನಿರೋಧ ನೀತಿಯ ವಂಚನೆ

ಕಾಂಗ್ರೆಸ್ ಅಧ್ಯಕ್ಷರ ಟೀಕೆ

ಸ್ವಂ. ಸು. ಪ್ರೋ॥] ಬೆಂಗಳೂರು ೬

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ನಿನ್ನೆ ಪತ್ರಿಕಾ ಸಮ್ಮೇಳನವನ್ನು ನಡೆಸಿ ಪಾನನಿರೋಧ ಸಮಿತಿಯ ವರದಿಯನ್ನು ಕಟುವಾಗಿ ಟೀಕಿಸಿದರು. ಅದು ವಂಚನೆಯಿಂದ ಕೂಡಿದೆಯೆಂದು ವರ್ಣಿಸಿದರು. ಮದ್ಯಪಾನವನ್ನು ಕಡಿಮೆ ಮಾಡುವ ಬದಲು ಕಳ್ಳಭಟ್ಟಿಕಾಯಿಸುವಿಕೆಗೆ ಅದು ಅವಕಾಶಕಲ್ಪಿಸಿರುವುದೆಂದು ಹೇಳಿದರು. ಈ ಯೋಜನೆಯು ಬಂಡವಾಳಗಾರರಿಗೆ ಯಾರಿಗೂ ಉಪಯೋಗವಾಗುವುದಿಲ್ಲ ನೆಂದು ಅಭಿಪ್ರಾಯಪಟ್ಟರು.

ಹಡಗಿನಲ್ಲಿ ಹತ್ತು ವರ್ಷದ ಹಿಂದಿನ ಶವ

ಗ್ಲೋಬ್] ಕೈರೋ ೩

ಮೊರಾಕೋ ದೇಶದ ದಂಗೆಕೋರರ ಮುಖಂಡರಾದ ಅಬ್ದುಲ್ ಕರೀಂರವರ ತಾಯಿಯ ... ಗಳಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಹಡಗಿನಲ್ಲಿ ಹೋಗುತ್ತಿದ್ದಾಗ ಸತ್ತು ಹೋಗಿದ್ದಳು. ಈಗ ಮಾರ್ಸೇಲ್ಸ್ ಕಡೆ ಪ್ರಯಾಣ ಮಾಡುತ್ತಿದ್ದ ಹಡಗಿನಲ್ಲಿ ಅವಳ ಶವ ದೊರಕಿದೆ.

ವಿದ್ಯೋದಯ ಹೈಸ್ಕೂಲ್

ಟಿ. ನರಸೀಪುರದಲ್ಲಿ ಸಾರ್ವಜನಿಕರ ಸಹಾಯದಿಂದ ನಡೆಯುತ್ತಿರುವ ಹೈಸ್ಕೂಲಿನ ಸಂಸ್ಥೆಯು, ಮಾಧ್ಯಮಿಕ ಶಾಲೆಯನ್ನೂ ನಡೆಸಲು ವಿದ್ಯಾ ಇಲಾಖೆಯಿಂದ ಅನುಮತಿ ದೊರೆತಿದೆ. ಇದೇ ಮಾಹೆ ೭ ನೇ ತಾರೀಖಿನಿಂದ ಎರಡು ಶಾಲೆಗಳೂ ಪ್ರಾರಂಭವಾಗುತ್ತವೆ. ಮಹಾಜನರು ಎಂದಿನಂತೆ ಪ್ರೋತ್ಸಾಹವಿತ್ತು ಈ ಶಾಲೆಗಳ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಪರೀಕ್ಷಾ ಫಲಿತಾಂಶ

ಸ್ವಂ.ಸು.] ಶ್ರೀರಂಗಪಟ್ಟಣ ೫

ಇಲ್ಲಿನ ಗೌ॥ ಬಾಯ್ಸ್ ಮಿಡಲ್ ಸ್ಕೂಲಿನಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿದ್ದ ೮೫ ಜನ ವಿದ್ಯಾರ್ಥಿಗಳ ಪೈಕಿ ಪ್ರಥಮ ವರ್ಗದಲ್ಲಿ ಒಂದ ಮೂವರು ಸೇರಿ ೬೩ ಜನ ಉತ್ತೀರ್ಣರಾಗಿದ್ದಾರೆ. ಗರ್ಲ್ಸ್ ಮಿಡಲ್ ಸ್ಕೂಲಿನಿಂದ ಕುಳಿತಿದ್ದ ... ವಿದ್ಯಾರ್ಥಿನಿಯರ ಪೈಕಿ ... ಜನರು ತೇರ್ಗಡೆಯಾಗಿದ್ದಾರೆ ಇವರ ಪೈಕಿ ಎಲ್ಲರು ಮೊದಲನೇ ದರ್ಜೆಯಲ್ಲಿ ಪಾಸಾಗಿದ್ದಾರೆ.

ರಾಷ್ಟ್ರನಾಯಕರಿಗೆ ಅಭಿನಂದನೆ

ಪ್ರ॥ ಪ್ರ॥ ಸಭೆಯಲ್ಲಿ ವಿಶೇಷ ನಿರ್ಣಯ

ಸ್ವಂ.ಸು.ಪ್ರೋ॥] ಬೆಂಗಳೂರು ೬

ಬ್ರಿಟಿಷ್ ಸರ್ಕಾರದವರ ಹೊಸ ಯೋಜನೆಯನ್ನು ಅಂಗೀಕರಿಸಿ ಭಾರತದಲ್ಲಿ ಶಾಂತಿ, ಸ್ವಾತಂತ್ರ್ಯಗಳು ದೊರಕುವಂತೆ ಮಾಡಿರುವುದಕ್ಕಾಗಿ ರಾಷ್ಟ್ರ ನಾಯಕರಾದ ಪಂಡಿತ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲ್, ಬಲದೇವಸಿಂಗ್, ಮಿ॥ ಜಿನ್ನಾರವರುಗಳನ್ನು ಅಭಿನಂದಿಸುವ ಮತ್ತು ಅವರ ಮೂಲಕ ಸ್ವತಂತ್ರವೂ, ಐಕ್ಯವೂ ಆದ ಸಂಯುಕ್ತ ಭಾರತವು ಸ್ಥಾಪಿತವಾಗಲೆಂದು ಹಾರೈಸುವ ವಿಶೇಷ ನಿರ್ಣಯವನ್ನು ನಿನ್ನೆ ಪ್ರ॥ ಪ್ರ॥ ಸಭೆಯಲ್ಲಿ ಅಧ್ಯಕ್ಷರು ಮಂಡಿಸಿದರು. ಶ್ರೀಗಳಾದ ಎಂ ಎಸ್ ಜೋಯಿಸ್, ಎಸ್. ವಿ. ಕೃಷ್ಣಮೂರ್ತಿರಾವ್, ಮಿರ್ಜಾ ನೂರ್ ಹುಸೇನ್ ಮತ್ತು ಭುಜಂಗ ಚಂದ್ರಶೇಖರಯ್ಯನವರುಗಳು ಅದನ್ನು ಅನುಮೋದಿಸಿದರು. ಆ ದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ನಿರಾಶ್ರಿತರ ನಿರಾಕರಣೆ

ಮೈಸೂರು ಪೌರಸಭೆಯ ಸದಸ್ಯರು ಸರಿಯಾದ ಸಹಕಾರವನ್ನು ಕೊಡದೆ ಕೆಲಸ ಕಾರ್ಯಗಳಿಗೆ ಅಡಚಣೆಯುಂಟುಮಾಡುತ್ತಿರುವರೆಂಬ ಬಗ್ಗೆಯೂ ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟುಗಳಿಲ್ಲದ ವಿಷಯದಲ್ಲಿಯೂ ಬಂದಿದ್ದ ನಿಲುವಳಿ ನಿರ್ಣಯಗಳನ್ನು ಅಧ್ಯಕ್ಷರು ತಳ್ಳಿ ಹಾಕಿದರು.

ಮತ್ತೆ ಕಾಂಗ್ರೆಸ್ ಪಕ್ಷದ ಸಭಾ ಪರಿತ್ಯಾಗ

ಬಜೆಟ್ ಮೇಲಿನ ಭಾಷಣಗಳು ಮುಂದುವರೆದಾಗ ಕಾಂಗ್ರೆಸ್ ಪಕ್ಷದ ಶ್ರೀ ಎಂ. ಎಸ್ ಜೋಯಿಸರು ಮಾತನಾಡಿ ಸರ್ಕಾರಿಗೂ ಭಾಷಣ ಮಾಡಲು ಸಮಾನಾಧಿಕಾರವಿರುವುದಾಗಿ ಅಧ್ಯಕ್ಷರು ಹೇಳಿದರೂ ಕಾಂಗ್ರೆಸ್ ಪಕ್ಷದವರಿಗೆ ಸರಿಯಾದ ಅವಕಾಶ ಕೊಡದಿರುವುದರಿಂದ ಅವರ ವರ್ತನೆಯನ್ನು ಖಂಡಿಸುವುದಕ್ಕಾಗಿ ತನ್ನ ಪಕ್ಷದವರು ಸಭಾ ಪರಿತ್ಯಾಗ ಮಾಡುವುದಾಗಿ ಹೇಳಿ ಪಕ್ಷದ ಸದಸ್ಯರೊಡನೆ ಹೊರಕ್ಕೆ ಹೊರಟು ಹೋದರು.

ಮುಸ್ಲಿಂ ಪಕ್ಷದ ಸದಸ್ಯರಾದ ಮಿ॥ ಸಾಬ್ಜಾನ್ ಸಾಬ್ ರವರು ಮಾತನಾಡಿ ಮೈಸೂರು ರಾಜಾಸ್ಥಾನಕ್ಕೆ ಸೇರಬೇಕೇ ವಿನಃ ಹಿಂದೂಸ್ಥಾನಕ್ಕಾಗಲೀ, ಪಾಕಿಸ್ತಾನಕ್ಕಾಗಲೀ ಸೇರಕೂಡದು—ಎಂದು ಹೇಳಿದರು ಮತ್ತೆ...

ಸ್ಥಳೀಯ ಸಂಸ್ಥೆಗಳಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಚುನಾವಣಾ ಪದ್ಧತಿ ಇರಬೇಕೆಂದು ಸೂಚಿಸಿದರು. ಶ್ರೀ ಮನ್ಮಹಾರಾಜರವರು ಮೈಸೂರನ್ನು ಸಂಪೂರ್ಣ ಸ್ವತಂತ್ರ ರಾಜ್ಯವೆಂದು ಘೋಷಿಸಬೇಕೆಂದೂ, ಇಲ್ಲಿರುವ ೬ ಲಕ್ಷ ಮುಸಲ್ಮಾನರಿಗೆ ಜವಾಬ್ದಾರಿ ಸರ್ಕಾರವು ಬೇಕಾಗಿಲ್ಲವೆಂಬ ಅಂಶವನ್ನು ತವರಿಗೆ ಅರಿಕೆ ಮಾಡಬೇಕೆಂದೂ ಅವರು ಹೇಳಿದರು.

ಹಿಂದೂ ಮಹಾಸಭೆಯ ಶ್ರೀ ಎಸ್. ಎಂ. ಲಿಂಗೇಗೌಡರು ಅನಂತರ ಮಾತನಾಡಿ ಸರ್ಕಾರದವರು ಮುಸಲ್ಮಾನರ ಪಕ್ಷವನ್ನು ವಹಿಸುವ ನೀತಿಯನ್ನು ಅನುಸರಿಸುತ್ತಿರುವುದು ಶೋಚನೀಯವಾಗಿದೆಯೆಂದು ಹೇಳಿದರು. ಮೈಸೂರಿನ ಮುಸ್ಲಿಮರು ಪಾರ್ಲಿಮೆಂಟ್‌ಗೆ ಸಹ ಒಂದು ಮನವಿಯನ್ನು ಸಲ್ಲಿಸಿದ್ದಾರೆಂದು ಸೂಚಿಸಿದರು-ಮಿ॥ ಖಲೀಲರು ಇದನ್ನು ಪ್ರತಿಭಟಿಸಿದರು.

ಶ್ರೀ ವೆಂಕಟಕೃಷ್ಣಯ್ಯನವರು ಸರ್ಕಾರದ ವಿದ್ಯಾಭ್ಯಾಸ ನೀತಿಗಾಗಿ ಅಭಿನಂದಿಸಿ ಪ್ರೈಮರಿ ವಿದ್ಯಾಭ್ಯಾಸವನ್ನು ಉತ್ತಮ ಪಡಿಸಬೇಕೆಂದು ಹೇಳಿದರು.

ಶ್ರೀ ಎ. ಎಸ್. ರಾಮರಾಯರು ಪ್ರತಿ ಪಾಠಶಾಲೆಯಲ್ಲಿಯೂ ಮಕ್ಕಳಿಗೆ ಉಪಾಹಾರವನ್ನು ಕೊಡಬೇಕೆಂದು ಹೇಳಿ ಸಿವಿಲ್ ಸಪ್ಲೈ ಕ್ರಮಗಳನ್ನು ಟೀಕಿಸಿದರು.

ಕಾಂಗ್ರೆಸ್ ಪಕ್ಷದವರು ಸಭಾ ಪರಿತ್ಯಾಗ ಮಾಡುತ್ತಿರುವುದರಿಂದ ಯಾವ ಕೆಲಸವೂ ಆಗುತ್ತಿಲ್ಲವೆಂದು ಶ್ರೀ ಗುರುಲಿಂಗಯ್ಯನವರು ಹೇಳಿದರು.

ಸರ್ಕಾರದ ಪರವಾಗಿ ಹಣಕಾಸಿನ ಕಾರ್ಯದರ್ಶಿ ಶ್ರೀ ಶಾಮಣ್ಣನವರು ಉತ್ತರವಿತ್ತರು. ಸದಸ್ಯರ ಸಲಹೆಗಳಿಗೆ ಸೂಕ್ತವಾದ ಗಮನ ಕೊಡಲಾಗುವುದೆಂದು ಹೇಳಿದರು. ಕೈಗಾರಿಕೆ ಮತ್ತು ಗ್ರಾಮಾಭಿವೃದ್ಧಿಗಳಿಗೆ ಅವಶ್ಯವಾದಷ್ಟು ಹೆಚ್ಚು ಹಣ ಒದಗಿಸಲಾಗುವುದೆಂದು ತಿಳಿಸಿದರು. ಮಲೆನಾಡಿನ ಅಭಿವೃದ್ಧಿಗಾಗಿ ಪ್ರತ್ಯೇಕ ಬಜೆಟ್ಟೊಂದನ್ನು ಸಿದ್ಧಗೊಳಿಸಲಾಗುವುದೆಂದು ಹೇಳಿದರು.

ಚೆನ್ನರಾಯಪಟ್ಟಣದ ಹೈಸ್ಕೂಲು

ಮೊಟ್ಟಮೊದಲ ಹೈಸ್ಕೂಲಿನಿಂದ ಸ್ಕೂಲ್ ಫೈನಲ್ ಪರೀಕ್ಷೆಗೆ ಕುಳಿತಿದ್ದ ೩೦ ಜನರ ಪೈಕಿ ೨೫ ಮಂದಿ ತೇರ್ಗಡೆಯಾಗಿದ್ದಾರೆ. ಈ ಊರಿನ ಎಲ್ಲ ವಿದ್ಯಾರ್ಥಿಗಳಿಗೆ ಇದರ ... ಇಂದಿನ ಸಂಗಡದವರಿಗೆ ಇನ್ನೂ ಸೌಕರ್ಯವೂ ದೊರೆಯುತ್ತವೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹೈಸ್ಕೂಲ್ ಸಮಿತಿಯವರು ಕೋರಿದ್ದಾರೆ.

ಐರೋಪ್ಯ ಅಧಿಕಾರಿಗಳಿಗೆ ಸಿಂಧಿನಲ್ಲಿ ಹುದ್ದೆ

ಅಧಿಕಾರ ವರ್ಗಾವಣೆಯ ನಂತರ ತಮ್ಮ ಪ್ರಾಂತ್ಯದಲ್ಲಿರುವ ಐರೋಪ್ಯ ನೌಕರರು ಇಲ್ಲಿ ಕೆಲಸ ಮಾಡಲು ಅಪೇಕ್ಷಿಸಿದರೆ ಅವರಿಗೆ ಈಗಿರುವಂತೆ ವೇತನ, ಸೌಕರ್ಯ ಹಕ್ಕು ಇತರ ಸವಲತ್ತುಗಳನ್ನು ಕೊಡುವುದಾಗಿ ಸಿಂಧ್ ಪ್ರಾಂತ್ಯದ ಸರ್ಕಾರವು ತಿಳಿಸಿದೆ.

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀ ... ಪ್ರವರ್ತಕರು ... ಸಭೆಯಲ್ಲಿ ... ರಾಜಧಾನಿಗೆ ಬಂದು ಸಂಘ ... ವಿದ್ಯಾರ್ಥಿ ... ಸಂಘದಲ್ಲಿ ವಿದ್ಯಾರ್ಥಿ ... ಕಾರ್ಯಕರ್ತರ ಸಭೆಯನ್ನು ... ಮಾತನಾಡಿದರು.

ಸಾಧ್ವಿ

ತಾ|| ೭-೬-೪೭ ಶನಿವಾರ

ಜಿಲ್ಲಾಬೋರ್ಡು ಚುನಾವಣೆಗಳಲ್ಲಿ ಅಧಿಕಾರಿಗಳ ಓಟು

ಮೈಸೂರು ಕಾಂಗ್ರೆಸ್ ಅಧ್ಯಕ್ಷರು ದಿವಾನರೊಡನೆ ಮಾತುಕತೆ ನಡೆಸಿದಾಗ ಜಿಲ್ಲಾ ಬೋರ್ಡಿನ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಗಳಲ್ಲಿ ಅಧಿಕಾರಿಗಳು ಓಟು ಕೊಡದಂತೆ ಏರ್ಪಡಿಸಬೇಕೆಂಬುದಾಗಿ ಸೂಚಿಸಿದ್ದರು. ಕಾವ್ಯ ದಿಸಲಿಗೆ ತೆರಳುವುದಕ್ಕೆ ಮುಂಚೆಯೇ ಈ ವಿಚಾರದಲ್ಲಿ ಸರ್ಕಾರದ ತೀರ್ಮಾನವನ್ನು ತಿಳಿಸುವುದಾಗಿ ದಿವಾನರು ಹೇಳಿದ್ದರು. ಆದರೆ ಅವರು ಹೊರಟು ಅನೇಕ ದಿವಸಗಳಾದರೂ ಇದುವರೆಗೆ ಯಾವ ಪ್ರಕಟಣೆಯೂ ಹೊರಬಿದ್ದಿರುವುದಿಲ್ಲ.

ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಚುನಾವಣೆಗಾಗಿ ಈಗಾಗಲೇ ಕಾರ್ಯಕ್ರಮ ಪಟ್ಟಿಗಳು ಸಿದ್ಧವಾಗಿರುತ್ತವೆ. ಚುನಾವಣೆಗಳೂ ಸಮೀಪಿಸುತ್ತಿವೆ. ಸರ್ಕಾರದವರು ಇದುವರೆಗೆ ತಮ್ಮ ಅಭಿಪ್ರಾಯವನ್ನು ತಿಳಿಸದೆ ಇರುವುದರಿಂದ ಜಿಲ್ಲಾ ಬೋರ್ಡು ಸದಸ್ಯರುಗಳು ಯಾವ ರೀತಿ ತಮ್ಮ ಕಾರ್ಯಕ್ರಮವನ್ನು ನಿರ್ಧರಿಸಿಕೊಳ್ಳಬೇಕೆಂಬುದರಲ್ಲಿ ತೊಂದರೆಯುಂಟಾಗಿರುತ್ತದೆ. ಇದರಿಂದ ಕಾಂಗ್ರೆಸ್ ಪಕ್ಷದವರಿಗೆ ಮಾತ್ರವೇ ಅಲ್ಲದೆ ಇತರರಿಗೂ ಸಹ ಅಡಚಣೆ ಉಂಟಾಗಿರುತ್ತದೆ.

ಹಲವು ವರ್ಷಗಳಿಂದ ಅಧಿಕಾರಿಗಳಿಗೆ ಈ ಚುನಾವಣೆಗಳಲ್ಲಿ ಓಟು ಕೊಡಲು ಅಧಿಕಾರವಿರಲಿಲ್ಲ. ಈಚೆಗೆ ಸರ್ಕಾರದವರು ಆ ಪದ್ಧತಿಯನ್ನು ಬದಲಾಯಿಸಿ ಅವರಿಗೂ ಓಟು ಕೊಡುವ ಅವಕಾಶವನ್ನು ಕಲ್ಪಿಸಿದರು. ಇದೊಂದು ಪ್ರಗತಿ ವಿರೋಧವಾದ ಪ್ರಸಂಗ. ಇತ್ತೀಚೆಗೆ ಜಿಲ್ಲಾಬೋರ್ಡು ಸದಸ್ಯರ ಚುನಾವಣೆಗಳಲ್ಲಿ ಸಂಯುಕ್ತ ಮತದಾನ ಪದ್ಧತಿಯನ್ನು ಜಾರಿಗೆ ತಂದು ಸರಕಾರದವರು ಇನ್ನೂ ಪ್ರತಿಗಾಮಿಯಾದ ಮಾರ್ಗವನ್ನೇ ಅವಲಂಬಿಸಿದರು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆಯಲ್ಲಿಯಾದರೂ ಅಧಿಕಾರಿಗಳು ಮೊದಲಿನಂತೆ ಓಟು ಕೊಡದಿರುವ ಹಾಗೆ ಏರ್ಪಡಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರು

ವುಡ್‌ಲ್ಯಾಂಡ್ಸ್

8-6-47 ರಿಂದ

ಕಿಕ್ಕಿರಿದ ೬ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

—: ಪಾತ್ರ :—

ಟಿ. ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ ಆರ್. ರಾಮಚಂದ್ರ ಮುಂತಾದವರು

ಅಪೆರಾ ಟಾಕೀಸ್, ಮೈಸೂರು

೭-೬-೪೭ ರಿಂದ ೮ ನೇ ವಾರ

ರಾಜಕುಮಾರಿ

Morning shows from 6-6-47

China's Little Devils

ಬಣ್ಣದ ಜನರಿಗೆ ಬ್ರಿಟಿಷ್ ಸೇನೆಯಲ್ಲಿ ಸ್ಥಾನ

ಬ್ರಿಟಿಷ್ ನೌಕಾ ಮತ್ತು ಸೇನಾ ಪಡೆಗಳಲ್ಲಿ ಬಣ್ಣದ ಜನರಿಗೆ ಅಧಿಕಾರ ಕೊಡಲಾಗದೆಂದು ಇದುವರೆಗೆ ಇದ್ದ ಶಾಸನವನ್ನು ಬ್ರಿ|| ಸರ್ಕಾರವು ರದ್ದುಗೊಳಿಸಿ ಅವರನ್ನು ಆ ಕೆಲಸಗಳಿಗೆ ಸೇರಿಸಿಕೊಳ್ಳಬಹುದೆಂದು ಆಜ್ಞೆ ಮಾಡಿದೆ.

೨೪೦ ಮೈಲಿ ಎತ್ತರ ಹಾರುವ ರಾಕೆಟ್ ವಿಮಾನ

ಗ್ಲೋಬ್] ಲಂಡನ್ ೩

೨೪೦ ಮೈಲಿ ಎತ್ತರದಲ್ಲಿ ಹಾರಬಲ್ಲ ರಾಕೆಟ್ ವಿಮಾನವು ಸಂಯುಕ್ತ ಸಂಸ್ಥಾನದಲ್ಲಿ ತಯಾರಾಗುತ್ತಿದೆ. ಬರುವ ಬೇಸಿಗೆಯ ವೇಳೆಗೆ ಈ ಪ್ರಯೋಗಕ್ಕಾಗಿ ೧೦ ವಿಮಾನಗಳು ಸಿದ್ಧವಾಗುವುವು. ಈಗ ಅಮೆರಿಕದಲ್ಲಿ ತಯಾರಾಗಿರುವ ರಾಕೆಟ್ಟುಗಳ ಎತ್ತರದ ದಾಖಲೆಯ ಪರಿಮಿತಿ ೧೧೬ ಮೈಲಿ.

...ಕ್ತಾಯಪಡಿಸಿರುವುದು ಅತ್ಯಂತ ಸಹಜವೂ ಸಮಯೋಚಿತವೂ ಆಗಿರುತ್ತದೆ. ಇದೊಂದು ದೊಡ್ಡ ರಾಜಕೀಯ ಸುಧಾರಣೆಯೇನೂ ಅಲ್ಲ. ಅದು ಒಂದು ಸಣ್ಣ ಬದಲಾವಣೆ ಮಾತ್ರ. ಸರ್ಕಾರದವರಿಗೆ ನಿಜವಾಗಿಯೂ ಪ್ರಗತಿ ಪರ ಮನೋಭಾವ ಉಂಟಾಗಿದೆಯೇ?, ಎಂಬುದನ್ನು ಪರೀಕ್ಷಿಸಲು ಇದೊಂದು ಅವಕಾಶ.

ಇಂತಹ ಸಣ್ಣ ವಿಚಾರದಲ್ಲಿಯಾದರೂ ಸರ್ಕಾರದವರು ವಿಶಾಲ ಭಾವನೆಯನ್ನು ತೋರಿ, ಹಿಂದೆ ಜಾರಿಯಲ್ಲಿದ್ದಂತೆ ಅಧಿಕಾರಿ ಸದಸ್ಯರುಗಳು ಓಟು ಕೊಡದ ಹಾಗೆ ಈ ಕೂಡಲೇ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Edited printed and published by A. R. Nagarajan at the Sadhvi Press, Subbaiah Road, Mysore

ಭಟ್ಕಲ್ ಬಂದರಿಗೆ ಮದರಾಸಿನ ವಿರೋಧ

ಭಟ್ಕಲ್ ಪ್ರದೇಶವನ್ನು ಒಂದು ಪ್ರಮುಖ ಬಂದರನ್ನಾಗಿ ಮಾಡಲು ಮೈಸೂರು ಬೊಂಬಾಯಿ ಸರ್ಕಾರಗಳು ಒಪ್ಪಿವೆ. ಮಂಗಳೂರು ಅಥವಾ ಮಲಪೆಯನ್ನು ಬಂದರಾಗಿ ಮಾಡಬೇಕೆಂಬ ಕಾರಣದ ಮೇಲೆ ಮದರಾಸ್ ಸರ್ಕಾರವು ಭಟ್ಕಲ್ ಯೋಜನೆಯನ್ನು ವಿರೋಧಿಸುವುದೆಂದು ತಿಳಿದು ಬಂದಿದೆ.

ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮ ಕೂಳೆ ಮತ್ತು (Tonsils) ಗಳಾಯುಕ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪಂಡಿತರು, ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

ರಾಜಕಮಲ್,

ತಾ|| ೭-೬-೪೭ ರಿಂದ

ಏಳನೇ ವಾರ

ಪ್ರತಿ ದಿನ ೩ ಆಟಗಳು

ಗೊಲ್ಲಭಾಮ

(ತೆಲುಗು)

6-6-47 ರಿಂದ

ಪ್ರತಿ ದಿನ ಬೆಳಗ್ಗೆ 10.30 ಕ್ಕೆ

ಔರತ್ ಅಥವಾ ಸ್ತ್ರೀ

—: ಭೂಮಿಕೆ :—

ಸುರೇಂದ್ರ, ಸರ್ದಾರ್ ಅಖ್ತರ್.

ಹರಾಜು ನೋಟೀಸು

ರನ್ನಿಂಗ್ ಶೆಡಿನಲ್ಲಿರುವ ಹಲವು ಮೋಟಾರುಕಾರುಗಳು, ಬಸ್ಸುಗಳು ಮತ್ತು ಲಾರಿಗಳು 1947 ನೇ ಜೂನ್ 21 ಮತ್ತು 23 ನೇ ತಾರೀಖುಗಳಲ್ಲಿ ಬೆಳಗ್ಗೆ 9 ಘಂಟೆಯಿಂದ 1 ಘಂಟೆವರೆಗೆ ಮೈಸೂರು ಪ್ಯಾಲೇಸ್ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

ವಿವರಗಳಿಗಾಗಿ, 1947 ನೇ ಜೂನ್ 7 ಮತ್ತು 14 ನೇ ತಾರೀಖುಗಳ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರಕಟಣೆಯನ್ನು ದಯವಿಟ್ಟು ನೋಡಿ.

ಸೂಪರಿಂಟೆಂಡೆಂಟ್,

ಪ್ಯಾಲೇಸ್ ಗ್ಯಾರೇಜ್.

ಶಾಸ್ತ್ರಿಗಳು ಕ್ಷಮಾಪಣೆ ಕೇಳಬೇಕು

ಮಧ್ಯಮ ವರ್ಗದವರಿಗಾಗಿ ಹುಬ್ಬಳ್ಳಿನ ಪುರಸಭೆಯವರು ಕಾದಿಟ್ಟಿದ್ದ ...ನ್ನು ತಮ್ಮ ಜನಾಂಗದ ದೇವಾ... ಮತ್ತು ಶಾಲೆಗೋಸ್ಕರ ಕೊಡಬೇಕೆ... ಅಲ್ಲಿನ ರೋಮನ್ ಕ್ಯಾಥೊಲಿಕ್ ... ಶಾಸ್ತ್ರಿಗಳಾದ ರೆವರೆಂಡ್ ಫಾದರ್ ... ಎಂಬುವರು ಪುರಸಭೆಗೆ ಪತ್ರ ಬರೆದು ... ಲ್ಲಿ ಪುರಸಭೆಯ ಘನತೆ, ಗೌರವ... ಕುಂದುಂಟಾಗುವಂತಹ ಪದಗಳನ್ನು ... ದಿರುವುದರಿಂದ ಅವರು ಕ್ಷಮಾಪಣೆ ... ಬೇಕೆಂದೂ ಇಲ್ಲವಾದರೆ ಅವರ ... ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂ... ಪುರಸಭೆಯಲ್ಲಿ ಸರ್ವಾನುಮತದಿಂದ ... ಯವಾಗಿರುವುದಾಗಿ ವರದಿಯಾಗಿದೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸು

ನೋಟಿಫಿಕೇಷನ್ ನಂ ೩-೪೭೧-೪೭-...

ತಾ|| 2-6-1947

ಟೆಂಡರ್ ನೋಟೀಸು

ಈ ಮೂಲಕ ಸಮಸ್ತ ಜನರಿಗೂ ... ಯಪಡಿಸುವುದೇನೆಂದರೆ:—

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನಲ್ಲಿರುವ ಹೋಟೆಲ್ ಕಟ್ಟಡವನ್ನು ೧೯೪೭ ನೇ ಜುಲೈ ಮಾಹೆ ಒಂದರಿಂದ ೧೯೪೮ ನೇ ಜೂನ್ ಮಾಹೆ ... ವರೆಗೆ ಒಂದು ವರ್ಷ ಕಾಲ ಹೋಟೆಲು ಇಟ್ಟುಕೊಂಡು ವ್ಯಾಪಾರ ಮಾಡುವ ಬಗ್ಗೆ ಬಾಡಿಗೆಗೆ ಪಡೆಯುವ ಹಕ್ಕನ್ನು ಪಡೆಯಲು ಇಷ್ಟವುಳ್ಳವರು ... ಮಾಹೆ ತಾರೀಖು ೧೬ ನೇ ಸೋಮವಾರ ಮಧ್ಯಾಹ್ನ ೪ ಗಂಟೆ ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಟೆಂಡರುಗಳನ್ನು ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಲ್ಲಿ ಹಾಜರ್ಪಡಿಸಬಹುದಾಗಿರುತ್ತದೆ. ಹೆಚ್ಚಿಗೆ ವಿಷಯಗಳನ್ನು ಈ ಆಫೀಸಿನಲ್ಲಿ ಆಫೀಸ್ ನಡೆಯುವ ಕಾಲದಲ್ಲಿ ತಿಳಿಯಬಹುದು.

ಮುರುಘೇಂದ್ರಸ್ವಾಮಿ,

ಪ್ರೆಸಿಡೆಂಟರಿಗಾಗಿ

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ

ಪಂಡಿತ್ ಕೆ. ವಿ. ವೆಂಕಟರಾಮಯ್ಯ,

ಡಿ|| ಬೋರ್ಡ್ ವೈದ್ಯ, ಅರಕಲವಾಡಿ.

ಚಾಮರಾಜನಗರ ತಾ||

ಸಾಧ್ವಿ

(ತಿಂಗಳಿಗೆ ಚಂದಾ ೨-೦-೦ ಮಾತ್ರ)

ಇನ್ನಾದರೂ ಮೈಸೂರು ರಾಜ್ಯಾಂಗ ಸಭೆಗೆ ಸೇರಲಿ

ಕಾಳೇಶ್ವರ ರಾಯರ ಸೂಚನೆ

ಮೈಸೂರು ೮

ಆಂಧ್ರ ದೇಶದ ಕಾಂಗ್ರೆಸ್ ನಾಯಕರೂ ಮಂಡಳಿಯ ಮಾಜಿ ಪಾರ್ಲಿಮೆಂಟರಿ ಕಾರ್ಯದರ್ಶಿಗಳೂ ಆದ ಶ್ರೀ॥ ಎ. ಕಾಳೇಶ್ವರರಾಯರು ನೆನ್ನೆ ಕಾಂಗ್ರೆಸ್ ಕಛೇರಿಗೆ ಭೇಟಿಯಿತ್ತು ಕೆಲಸಗಾರರೊಡನೆ ಪ್ರಚಲಿತ ವಿಷಯಗಳ ಮೇಲೆ ಮಾತುಕತೆ ನಡೆಸಿದರು. ಬ್ರಿಟಿಷ್ ಸರ್ಕಾರದವರ ಹೊಸ ಯೋಜನೆಯನ್ನು ಕುರಿತು ಮಾತನಾಡುತ್ತ ಅದು ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯವಾದ ನಿರ್ಧಾರವೆಂದು ಹೇಳಿ ಅದರಿಂದ ಉತ್ತರೋತ್ತರ ಸಂಯುಕ್ತ ಭಾರತದ ಸ್ಥಾಪನೆಯನ್ನು ಮಾಡಲು ಪ್ರಯತ್ನಿಸಬಹುದೆಂದು ತಿಳಿಸಿದರು. ಮಹಾತ್ಮ ಗಾಂಧಿಯವರು ೧೯೪೨ರಲ್ಲಿ ಹೂಡಿದ ಚಳವಳಿಯು ಭಾರತವನ್ನು ಸ್ವಾತಂತ್ರ್ಯದ ಹೆಬ್ಬಾಗಿಲಿಗೆ ತಂದಿರುತ್ತದೆಯೆಂದು ಹೇಳಿದರು. ಇನ್ನು ಮುಂದೆ ಸಂಸ್ಥಾನಗಳು ಸ್ವಲ್ಪವೂ ತಡಮಾಡದೆ ಭಾರತ ರಾಜ್ಯಾಂಗ ಸಭೆಯಲ್ಲಿ ಸೇರಿ ಅದರೊಡನೆ ಸಹಕರಿಸಬೇಕೆಂದು ಕೋರಿದರು. ಇದುವರೆಗೆ ಅದರಲ್ಲಿ ಸೇರದೇ ಮೈಸೂರಿಗೆ ಏನು ಕಾರಣವಿರಲಿ, ಇನ್ನು ಮುಂದೆ ಅದು ಅನವಶ್ಯಕವಾಗಿರುವುದು ಉಚಿತವಲ್ಲವೆಂದು ಅಭಿಪ್ರಾಯಪಟ್ಟರು. ಮೈಸೂರಿನ ಪ್ರಜೆಗಳು ತಮ್ಮ ರಾಜರೇಯ ಹಕ್ಕು ಬಾಧ್ಯತೆಗಳಿಗಾಗಿ ಹೂಡುವ ಪ್ರಯತ್ನದಲ್ಲಿ ಭಾರತದವರ ಸಂಪೂರ್ಣ ಸಹಕಾರವು ದೊರೆಯುವುದೆಂದು ಭರವಸೆಯಿತ್ತರು. ಮುಸ್ಲಿಂ ಲೀಗಿನವರು ಭಾಷಾನೀತಿ ಮೇಲೆ ದೇಶ ವಿಭಾಗವಾಗುವುದರಿಂದ ಭಾಷಾವಾರು ಪ್ರಾಂತ ರಚನೆಗೆ ಅಡಚಣೆಯುಂಟಾಗುವುದೆಂದೂ, ಇನ್ನು ಮುಂದೆ ಭಾಷೆಗಳಿಗನುಗುಣವಾಗಿ ಪ್ರಾಂತ್ಯವನ್ನು ರಚಿಸುವುದು ಸುಲಭವಾಗುವುದೆಂದೂ ಸಹ ತಿಳಿಸಿದರು.

ಹರಿಕಥೆ

ದೊಡ್ಡಪೇಟೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ವಿ॥ ಹೆಚ್. ಟಿ. ರಾಮಣ್ಣನವರಿಂದ ನಾಳೆಯಿಂದ ಪ್ರತಿ ದಿನ ೬॥ ಗಂಟೆಯಿಂದ ೮ ಗಂಟೆವರೆಗೆ ಭಾರತ ಕಥಾವಚನವು ನಡೆಯುವುದು

ಉಪನ್ಯಾಸ

ಶ್ರೀ ವೈ. ಚಂದ್ರಶೇಖರ ಶಾಸ್ತ್ರಿಗಳು ನಾಳೆ ಸಂಜೆ ೬ ಗಂಟೆಗೆ ರಾಜಧಾನಿಯ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಸಮಿತಿಯ ಆಶ್ರಯದಲ್ಲಿ ಬ್ಯಾಂಕಿನಲ್ಲಿ ಸಹಕಾರ ತತ್ವದ ರೀತಿಯಲ್ಲಿ ಸಮಾಜದ ರಚನೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಮತ್ತೆ ವೈಸರಾಯರೊಡನೆ ನಾಯಕರ ಭೇಟಿ

ಪಂಡಿತ ನೆಹರೂ, ಸರ್ದಾರ್ ಪಟೇಲ್, ಆಚಾರ್ಯ ಕೃಪಲಾನಿ, ಮಿ॥ ಜಿನ್ನಾ, ಲಿಯಾಕತ್ ಆಲಿಖಾನ್ ಸರ್ದಾರ್ ಅಬ್ದುಲ್ ರಬ್ ನಿಷ್ತಾರ್ ಮತ್ತು ಸರ್ದಾರ್ ಬಲದೇವಸಿಂಗರುಗಳು ಪುನಃ ನೆನ್ನೆ ವೈಸರಾಯ್‌ರವರನ್ನು ಅವರ ಭವನದಲ್ಲಿ ಭೇಟಿಮಾಡಿ ತಮ್ಮ ಪಕ್ಷಗಳ ನಿರ್ಧಾರಗಳನ್ನು ಮಂಡಿಸಿದರು. ಹೊಸಯೋಜನೆಯನ್ನು ಕಾರ್ಯಗತ ಮಾಡುವ ವಿಧಾನಗಳನ್ನು ಅವರು ಪರಿಶೀಲಿಸಿದರು

ಫೋನ್ ನಂ. ೨೪೩ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಭಾನುವಾರ ೮—೬—೪೭ [ಸಂಚಿಕೆ ೨೫೮

ಕರಾಚಿಯು ಮುಸ್ಲಿಂ ನಗರವಾಗುತ್ತಿದೆ

ಭಾರತದ ಯೋಜನೆಯ ಬಗ್ಗೆ ಅವರಿಂದ ಘೋಷರ ಅಭಿಪ್ರಾಯ

ಭಾರತದ ಬಗ್ಗೆ ಹೊರಟಿರುವ ಬ್ರಿಟಿಷರ ಹೊಸ ಯೋಜನೆಯನ್ನು ಕುರಿತು ಪ್ರಜಾ ಟೇರಿಯಾಟ್ ಲೋಕಗಾರ ಅಧ್ಯಕ್ಷರಾಗಿರುವ ಶ್ರೀ॥ ಅರವಿಂದ ಘೋಷರವರು ಈ ರೀತಿ ಹೇಳಿಕೆಯೊಂದನ್ನಿತ್ತಿದ್ದಾರೆ:—

ಭಾರತ ಸ್ವಾತಂತ್ರ್ಯದ ವ್ಯವಸ್ಥೆಯ ಬಗ್ಗೆ ನಡೆಯುವ ಚಳವಳಿಗಳನ್ನು ನಿವಾರಿಸಲು ಹೊಸದೊಂದು ಮಾರ್ಗ ದೊರೆತಂತಾಗಿದೆ. ಈ ಯೋಜನೆಯ ಸ್ವೀಕಾರದಿಂದ ನಮಗೆ ಅನ್ನವಸ್ತ್ರಕ್ಕೆ ಬರುವಂಥ ಅಶಕ್ತಿ ಇಲ್ಲವಾಗಿದೆ. ಇಡೀ ಭಾರತದ ನಾಯಕರು ಇದನ್ನು ಒಪ್ಪಿದ್ದಾರೆ. ಈ ಯೋಜನೆಯ ಮೂಲದ ಪರಿಣಾಮವಲ್ಲದೆ ಬೇರೆ ಸ್ವತಂತ್ರವಾದ ನಮ್ಮ ಸ್ವಾತಂತ್ರ್ಯದ ಬಗ್ಗೆ ನಮ್ಮ ಅಭಿಪ್ರಾಯವನ್ನು ಮಾಡಲು ಈ ಹೊಸ ದಾರಿ ನಮಗೆ ಸಿಕ್ಕಿದೆ. ರಾಷ್ಟ್ರವು ಹೋರಾಡಿದ ನಮ್ಮ ಹೇತು ಮತ್ತು ಇಷ್ಟಾರ್ಥಗಳನ್ನು ಈಡೇರಿಸುವ ಭಾರತದ ಹಿರಿಮೆಯನ್ನು ಎತ್ತಿ ಹಿಡಿಯಲು ಈ ವ್ಯವಸ್ಥೆಯೇ ಒಂದು ದಾರಿಯಾಗುವುದು. ದೇಶದ ಹೋರಾಟಗಳಿಂದ, ಬಿಕ್ಕಟ್ಟಿನ ಎಲ್ಲ ಅಭಿಪ್ರಾಯಭೇದಗಳಿಂದ ನಮ್ಮ ದೇಶದ ಐಕ್ಯತೆಯನ್ನು ಸಾಧಿಸಲು ಸಾಧ್ಯವಿಲ್ಲ. ಅವಿಭಾಜಿತ ಭಾರತವನ್ನು ಸಾಧಿಸಲು ಇನ್ನು ಸಾವಕಾಶವಾಗಬಹುದಾದರೂ ಸಮಗ್ರ ಭಾರತದ ಐಕ್ಯವು ಮುಂದೆ ಆಗಿಯೇ ಆಗುವುದು. ಭಾರತದ ಅಂತರಂಗವು ಸ್ವತಂತ್ರವಾಗಿ ಪ್ರಕಾಶಿಸಬೇಕು. ಅದೇ ನಮ್ಮೆಲ್ಲರ ಧ್ಯೇಯವಾಗಬೇಕು!

ಮಹಾತ್ಮರು ಉಪವಾಸವನ್ನು ಸ್ವೀಕಾರ ಮಾಡುವುದಿಲ್ಲ?

ರಾಷ್ಟ್ರವಿಭಜನೆಗೆ ಕಾಂಗ್ರೆಸ್ಸು ಸಮ್ಮತಿಸಿರುವುದರಿಂದ ಮಹಾತ್ಮರು ಆಮರಣಾಂತ ಉಪವಾಸವನ್ನು ಕೈಗೊಳ್ಳಬಹುದೆಂದು ಕೆಲವರು ಅಂದುಕೊಂಡಿದ್ದರು. ಆದರೆ ಮಹಾತ್ಮರ ಪ್ರಾರ್ಥನಾ ಸಭೆಯಲ್ಲಿ ಆಡಿದ ಮಾತುಗಳಿಂದ ಅದು ಸ್ಪಷ್ಟವಾಗಿಲ್ಲ. ಕಾಂಗ್ರೆಸ್ಸು ಏನೇ ನಿರ್ಧರಿಸಲಿ, ಪ್ರಜೆಗಳ ಮನಸ್ಸು ಸಿದ್ಧವಾಗದೆ ಪ್ರಜೆಗಳ ಮೇಲೆ ಹೇರಿದರೆ ಅದು ಕಾಂಗ್ರೆಸ್ಸಿನ ವಿರುದ್ಧ ಹೋಗಿ ನಿಲ್ಲುವುದು ಎಂದೂ ಅವರು ಸ್ವತಂತ್ರ ವಿಭಜನೆಗೆ

ಪ್ರಾಂತ ವಿಭಜನೆಗೆ ಅಡಚಣೆಯೇ?

ಬಂಗಾಳ ಮತ್ತು ಪಂಜಾಬ್ ವಿಭಜನೆಯ ಕೆಲಸಗಳು ಆರಂಭವಾಗಿವೆ. ವಿಭಜನೆಯ ಬಗ್ಗೆ ಅಭಿಪ್ರಾಯ ಸೂಚಿಸಲು ಶಾಸನ ಸಭೆಗಳು ಅಣಿಯಾಗುವಾಗ ಪಂಜಾಬಿನಲ್ಲಿ ಪಾಕಿಸ್ತಾನದ ಬೆಂಬಲಿಗರಾದ ಮಮ್‌ದೋಟ್ ಖಾನರ ವಿರೋಧಿಗಳಾದ ಖಿಜರ್ ಹಯಾತ್ ಖಾನರೂ ಪಾಕಿಸ್ತಾನ ಸಭೆಯಲ್ಲಿ ಸೇರಬೇಕಾಗಿರುವುದು. ಅಲ್ಲಿ ಮುಸಲ್ಮಾನರ ಬಹುಮತವಿರುವುದರಿಂದ ವಿಭಜನೆಗೆ ವಿರೋಧವಾಗಿ ಒಟ್ಟು ದೊರೆಯಲಾರದು; ಬಂಗಾಳದಲ್ಲಿ ಪ್ರಧಾನಿ ಸುಹ್ರವರ್ದಿ ಮತ್ತು ಶರತ್‌ಚಂದ್ರ ಬೋಸರೂ ಅವರ ಸಹಾಯಕರೂ ವಿಭಜನೆಯನ್ನು ವಿರೋಧಿಸುವರು. ಹಿಂದೂಸ್ಥಾನ ಸಭೆಯಲ್ಲಿ ಕೇವಲ ೬೦ ಮಂದಿ ಮುಸ್ಲಿಮರಿರುವುದರಿಂದ ಅದರಲ್ಲಿ ವಿಭಜನೆಯು ಅಂಗೀಕಾರವಾಗುವುದು ಎಂಬುದಾಗಿ ಭಾವಿಸಲಾಗಿದೆ.

ತಿರುವಾಂಕೂರು ರಾಜರಿಗೂ ದಿವಾನರಿಗೂ ಭಿನ್ನಾಭಿಪ್ರಾಯವೇ?

ತಿರುವಾಂಕೂರು ಮಹಾರಾಜರೂ ತಮ್ಮ ಪ್ರಜೆಗಳೂ ಭಾರತ ರಾಜ್ಯಾಂಗ ಸಭೆಯಲ್ಲಿ ಸೇರುವ ಅಭಿಪ್ರಾಯ ಹೊಂದಿರುವರೆಂದೂ ಆದರೆ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಮತ್ತು ಮಹಾರಾಣಿ ಸೇತು ಪಾರ್ವತೀ ಬಾಯಿಯವರೂ ಅದನ್ನು ವಿರೋಧಿಸುತ್ತಿರುವರೆಂದೂ ವರದಿಯಾಗಿದೆ. ತಿರುವಾಂಕೂರು ಸಂಸ್ಥಾನವು ಸ್ವಯಂಪರಿಪೂರ್ಣವಾದ ಸ್ವತಂತ್ರ ರಾಜ್ಯವಾಗಿರಲು ಸಾಧ್ಯವೆಂದೂ, ಅದು ಹಾಗೆಯೇ ಉಳಿಯುವುದೆಂದೂ ಸರ್ ಸಿ. ಪಿ. ಯವರು ಒತ್ತಿ ಹೇಳುತ್ತಿದ್ದಾರೆ. ———

ವೈದ್ಯಾಧಿಕಾರಿಗಳ ವರ್ಗ

ಕೋಲಾರ ಜಿಲ್ಲಾ ವೈದ್ಯಾಧಿಕಾರಿಗಳಾದ ಶ್ರೀ ಎ. ಟಿ. ವೇಣುರವರನ್ನು ಮಂಡ್ಯ ಜಿಲ್ಲೆಗೂ, ವಿಕ್ಟೋರಿಯಾ ಆಸ್ಪತ್ರೆಯ ಶ್ರೀ॥ ಜಿ. ನಾರಾಯಣರಾಯರನ್ನು ಕೋಲಾರ ಜಿಲ್ಲೆಗೂ ವರ್ಗಾಯಿಸಲಾಗಿದೆ.

ವಿರುದ್ಧವಾಗಿ ಉಪವಾಸ ಮಾಡಲು ಹೇಳಿದಾಗ ಅದ ಮಾತ್ರ ತಾವು ಉಪವಾಸ ಮಾಡುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಕರಾಚಿಯು ಮುಸ್ಲಿಂ ನಗರವಾಗುತ್ತಿದೆ

ಸಿಂಧು ಪ್ರಾಂತವು ಪಾಕಿಸ್ತಾನಕ್ಕೆ ಸೇರಲಿರುವುದರಿಂದ ಕೋಮುವಾರು ಪ್ರಮಾಣದ ಮೇಲೆ ಪ್ರಜಾಸೌಕರ್ಯಗಳನ್ನು ಹಂಚುವ ಪದ್ಧತಿಯು ಅಲ್ಲಿ ಸಮಾಜದ ಸಕಲ ಭಾಗಗಳನ್ನೂ ಆಕ್ರಮಿಸುತ್ತಿದೆ. ಕರಾಚಿ ನಗರದ ಮನೆಗಳ ಪ್ರತಿ ಹತ್ತಕ್ಕೆ ಎಳರಂತೆ ಮನೆಗಳನ್ನು ಮುಸಲ್ಮಾನರಿಗೆ ಹಂಚುವಂತೆ ಆಜ್ಞೆಯು ಹೊರಟಿರುವುದಾಗಿ ವರದಿಯಾಗಿದೆ. ಕರಾಚಿಯಲ್ಲಿ ಹಿಂದೂಗಳೇ ಬಹುಸಂಖ್ಯಾತರಾಗಿದ್ದರೂ, ಆದರೂ ಅನೇಕ ಜನ ಹಿಂದೂ ಕುಟುಂಬಗಳು ಗೃಹವಸತಿಯಿಲ್ಲದೆ ಅಲ್ಲಿ ಪರದಾಡುವ ಸ್ಥಿತಿ ಬಂದಿದೆ. ಅಲ್ಲದೆ ಹೊರಗಿನಿಂದ ವಲಸೆ ಬರುವ ಮುಸಲ್ಮಾನರುಗಳಿಗೂ ಅಲ್ಲಿನ ಸರ್ಕಾರದವರು ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿರುವರು. ಸಿಂಧೂ ಪ್ರಾಂತ್ಯದ ಧಾನ್ಯ ವ್ಯಾಪಾರದಲ್ಲಿ ಶೇ. ೯೦ ಭಾಗ ಹಿಂದೂಗಳ ಕೈಯಲ್ಲಿಯೇ ಇತ್ತು. ಅದರಲ್ಲಿಯೂ ಮುಸಲ್ಮಾನರ ಸಂಖ್ಯೆಯನ್ನು ಹೆಚ್ಚಿಸಲು ಅವರುಗಳಿಗೇ ಧಾನ್ಯ ವ್ಯಾಪಾರದ ಲೈಸೆನ್ಸುಗಳನ್ನು ಕೊಡುವಂತೆ ಆಜ್ಞೆಯಾಗಿದೆ

ಗಾಂಧೀಜಿಯವರ ನಾಯಕತ್ವದಲ್ಲಿ ಸಮತಾವಾದ ಪ್ರಭುತ್ವ

ಸಮತಾವಾದಿ ಪಕ್ಷವು ದೇಶದ ವಿಭಜನೆಗೆ ವಿರೋಧವಾಗಿದೆ; ಮಹಾತ್ಮ ಗಾಂಧಿಯವರೂ ಸಹ ರಾಷ್ಟ್ರ ವಿಭಜನೆಯನ್ನು ತೀವ್ರವಾಗಿ ಪ್ರತಿಭಟಿಸಿದ್ದಾರೆ. ಕಾಂಗ್ರೆಸ್ಸಿನ ಕೆಲವು ಪ್ರಮುಖರು ಮಹಾತ್ಮರ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಭಿಪ್ರಾಯ ಪಡೆಯದೆ ವಿಭಜನೆಗೆ ಸಮ್ಮತಿಯಿತ್ತಿದ್ದಾರೆ. ದೇಶದ ಏಕತೆಯನ್ನು ಒಡೆಯುವ ಯಾವ ಒಪ್ಪಂದವನ್ನೂ ಸಮತಾವಾದಿ ಪಕ್ಷದವರು ಅಂಗೀಕರಿಸುವುದಿಲ್ಲ, ಎಂಬುದಾಗಿ ಸಮತಾವಾದಿ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರವರು ಹೇಳಿರುವರು. ಸಮತಾವಾದಿ ಪಕ್ಷದ ಆಧಾರದ ಮೇಲೆ ಪ್ರಜಾಪ್ರಭುತ್ವ ರಾಜ್ಯಸ್ಥಾಪನೆಯನ್ನು ಸ್ಥಾಪಿಸುವ ಕಾರ್ಯದಲ್ಲಿ ಮಹಾತ್ಮ ಗಾಂಧಿಯವರು ನಾಯಕತ್ವ ವಹಿಸುವರೆಂದೂ ಅವರು ತಿಳಿಸಿರುವರು.

● ಶ್ರೀ ಪ್ರ॥ ಸಭೆಯಲ್ಲಿ ಸದಸ್ಯರುಗಳ ಮೈದಾನದಲ್ಲಿ ಸಬ್ ಇನ್ಸ್‌ಪೆಕ್ಟರ್ ಅಧಿಕಾರಿಗಳೊಬ್ಬರು ಕುಳಿತಿದ್ದುದನ್ನು ಶ್ರೀ॥ ಎನ್. ಶ್ರೀನಿವಾಸಮೂರ್ತಿಯವರು ಅಧ್ಯಕ್ಷರಿಗೆ ತಿಳಿಸಿದರು. ಸಭೆಯನ್ನು ಬಿಟ್ಟು ಹೊರಟು ಹೋಗುವಂತೆ ಅಧ್ಯಕ್ಷರು ಅವರಿಗೆ ಆಜ್ಞಾಪಿಸಿದರು

೨ ನಾಡ ಮಹೋತ್ಸವಗಳು

ಮೈಸೂರು ೮

ರಾಜಧಾನಿಯ ವರ್ತಕರಾದ ನಂಜನಗೂಡು ಶ್ರೀ ಅಣ್ಣಯ್ಯನವರು ತಮ್ಮ ಕುಮಾರಿ ಸೌ॥ ಪುಟ್ಟನಂಜಮ್ಮನವರನ್ನು ಚಾಮರಾಜನಗರ ಬಜಾರದಲ್ಲಿರುವ ಹೌಸ್ ಕಂಟ್ರಾಕ್ಟರ್ ಶ್ರೀ ನಂಜುಂಡಪ್ಪನವರ ಕುಮಾರ ಚಿ॥ ಪುಟ್ಟಸ್ವಾಮಯ್ಯನವರಿಗೆ ಕೊಟ್ಟು ನೆನ್ನೆಯೂ

ತಮ್ಮ ಜಿಲ್ಲಾ ಬೋ॥ ಮಾಜಿ ಸದಸ್ಯರಾದ ಕುಮಾರ ಶ್ರೀ ಬಸವೇಗೌಡರವರು ಆಟಿಕೊಪ್ಪಲಿನ ಶ್ರೀ ಚೆನ್ನಯ್ಯನವರ ಕುಮಾರಿ ಚಿ॥ ಪುಟ್ಟಮ್ಮನವರನ್ನು ತಂದುಕೊಂಡು ಇಂದು ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ಸಾಧ್ವಿ

ತಾ॥ ೮-೬-೪೭ ಭಾನುವಾರ

ಇನ್ನಾದರೂ ಮೈಸೂರು ನಿರ್ಧರಿಸಲಿ

ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರಲು ಇದುವರೆಗೆ ಯಾವುದೇ ಅಭ್ಯಂತರಗಳಿದ್ದರೆ ಇನ್ನು ಮುಂದೆ ಅಂತಹ ನೆಪಗಳಿಗೆ ಅವಕಾಶವಿಲ್ಲವೆಂದೂ, ಮೈಸೂರು ಸಂಸ್ಥಾನವು ಈ ಕೂಡಲೇ ಭಾರತ ರಾಜ್ಯಾಂಗ ಸಭೆಯಲ್ಲಿ ಸೇರಿ ಭಾರತದ ಮತ್ತು ತನ್ನ ಅಭ್ಯುದಯ ಸಾಧನೆಯಲ್ಲಿ ತೊಡಗಬೇಕೆಂದೂ ಸೂಚಿಸಿ ಆಂಧ್ರ ದೇಶದ ಕಾಂಗ್ರೆಸ್ ನಾಯಕರಾದ ಶ್ರೀ॥ ರಾಳ್ಳಪಲ್ಲಿ... ಕೊಟ್ಟಿರುವ ಹೇಳಿಕೆಯನ್ನು ಬೇರೆ ಕಡೆ ಪ್ರಕಟಿಸಿದ್ದೇವೆ. ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ. ಚೆಂಗಲರಾಯ ರೆಡ್ಡಿಯವರೂ ಸಹ ಇದೇ ಅರ್ಥದ ... ಮೊನ್ನೆ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಒತ್ತಿ ಹೇಳಿದ್ದಾರೆ. ಸಂಸ್ಥಾನದ ಪ್ರಜೆಗಳೂ ಸಹ ಈ ಬಗ್ಗೆ ಸರ್ಕಾರದ ಮನ್ನಡೆಯನ್ನು ಕುತೂಹಲದಿಂದ ಇದಿರು ನೋಡುತ್ತಿರುವರು.

ಬ್ರಿಟಿಷ್ ಸರಕಾರದವರ ಯೋಜನೆಯಂತೆ ರಾಜ್ಯಾಂಗ ಸಭೆಯಲ್ಲಿ ಸೇರಲು ಮೈಸೂರು ಈ ಮೊದಲೇ ನಿರ್ಧರಿಸಿತ್ತು ದೂ, ಆದರೆ ನೂತನ ವಿದ್ಯಮಾನಗಳಲ್ಲಿ ಉಂಟಾದ ಬದಲಾವಣೆಗಳಿಂದ ಈ ವಿಷಯದಲ್ಲಿ ... ಮಾಡುತ್ತೇವೆ, ಜೂನ್ ಎರಡನೇ ತಾರೀಖಿನ ವೈಸರಾಯರ ಘೋಷಣೆಗೆ ಕಾದು ನೋಡಬೇಕಾಗಿದೆಯೆಂದೂ ದಿವಾನರು ಪ್ರಜಾಪ್ರತಿನಿಧಿ ಸಭೆಯಲ್ಲಿ ಹೇಳಿದ್ದರು. ಆದರೆ ವೈಸರಾಯರ ಹೇಳಿಕೆಯಲ್ಲಿ ಸೂಚಿಸಿರುವ ಎಲ್ಲ ವಿಚಾರಗಳೂ ಕೇವಲ ಬ್ರಿಟಿಷ್ ಇಂಡಿಯಕ್ಕೆ ಮಾತ್ರ ಅನ್ವಯಿಸುವುದೆಂದೂ, ಸಂಸ್ಥಾನಗಳ ಪರಿಸ್ಥಿತಿಯು ಮಾತ್ರ ಬ್ರಿಟಿಷ್ ಸರ್ಕಾರದ ಮೊದಲಿನ ಘೋಷಣೆಗೆ ಅನುಸಾರವಾಗಿಯೇ ಇರುವುದೆಂದೂ ಸ್ಪಷ್ಟವಾಗಿ ಹೇಳಿರುವರು. ಇಂದ ಮೇಲೆ ಮೈಸೂರೂ ಸಹ ಸದರಿ ಘೋಷಣೆಗೆ ಅನುಸಾರವಾಗಿ ತಾನು ಮಾಡಿದ್ದ ನಿರ್ಧಾರವನ್ನೇ ಮುಂದುವರಿಸುವುದು ಸಮಂಜಸವಾದ ನೀತಿಯಾಗಿರುತ್ತದೆ.

ಮೈಸೂರಿನಂತಹ ಪ್ರಥಮ ಶ್ರೇಣಿಯ ಸಂಸ್ಥಾನವು ಒಂದು ಭಾರಿ ರಾಜ್ಯಾಂಗ ಸಭೆಯಲ್ಲಿ ಸೇರುವುದಾಗಿ ಹೇಳಿ ಅನಂತರ ... ಮುಂದು ನೋಡುವಂತಾದ ... ಭಾರತದ ಮಹಾ ನಾಯಕರುಗಳ ದೃಷ್ಟಿಯಲ್ಲಿ ಇನ್ನೂ ಸಣ್ಣ ರೀತಿಯ ... ಕಂಡುಬರುವುದರಲ್ಲಿ ಆಶ್ಚರ್ಯವಿಲ್ಲ ... ಬಾರಿ ನಿರ್ಧಾರಕ್ಕೆ ಬಂದ ಮೇಲೆ ... ವರೆಗೂ ರಾಜನೀತಿ ... ಇದ ... ರಾಜ್ಯಾಂಗ ಸಭೆ ... ಸೇರದೆ ... ಸಂಸ್ಥಾನ ... ಮಾಡಿದ ... ಬೇಕು.

ಈ ತಿಂಗಳು ಇಪ್ಪತ್ತನೇ ತಾರೀಖಿನೊಳಗೆ ಸಂಸ್ಥಾನಗಳು ಈ ವಿಚಾರದಲ್ಲಿ ತಮ್ಮ ... ಪ್ರತಿನಿಧಿಗಳನ್ನು ಕಳುಹಿಸಬೇಕೆಂ...

ಭೂಪಾಲ್ ನವಾಬರಿಂದ ಹೊಸ ಸಂಸ್ಥೆಯ ಸ್ಥಾಪನೆ

ಭಾರತ ರಾಜ್ಯಾಂಗ ಸಭೆಗೆ ಸೇರದಿರುವ ಸಂಸ್ಥಾನಗಳ ಒಂದು ಸಂಯುಕ್ತ ಸಂಸ್ಥೆಯನ್ನೇರ್ಪಡಿಸಲು ಭೂಪಾಲಿನ ನವಾಬರು ಪ್ರಯತ್ನ ನಡೆಸುತ್ತಿರುವುದಾಗಿ ವರದಿಯಾಗಿದೆ. ತಮ್ಮ ಸಂಸ್ಥಾನದಲ್ಲಿ ಹೊಸ ಸೆಕ್ರೆಟೇರಿಯೆಟ್ಟನ್ನು ನಿರ್ಮಿಸಿ ಅಲ್ಲಿ ಈ ಸಂಸ್ಥಾನಗಳ ನ್ಯಾಯಾಂಗ ಮೊದಲಾದ ವಿಷಯಗಳಲ್ಲಿ ಸಲಹೆಯನ್ನೀಯಲು ಅವರು ನಿರ್ಧರಿಸುವರೆಂದೂ, ಸರ್ ಜಫರುಲ್ಲಾ ಖಾನರನ್ನು ಈಗಾಗಲೇ ರಾಜ್ಯಾಂಗ ಸಲಹೆಗಾರರಾಗಿ ನೇಮಕ ಮಾಡಿರುವರೆಂದೂ ಹೇಳಲಾಗಿದೆ. ನರೇಂದ್ರ ಮಂಡಳದ ರಾಗದ ಪತ್ರಗಳು ಭೂಪಾಲಿಗೆ ರವಾನಿಸಲ್ಪಡುತ್ತಿರುವುದಾಗಿ ಗೊತ್ತಾಗಿದೆ.

ಜನಸಂದಣಿಗಾಗಿ ರೈಲಿನ ಸರಪಣಿ ಎಳೆಯುವುದು ತಪ್ಪಲ್ಲ

ಗ್ಲೋಬ್] ನಾಗಪುರ ೬

ಜನಸಂದಣಿಯಿಂದ ಕೂಡಿದ ರೈಲಿನಲ್ಲಿ ಅಲಾರಂ ಸರಪಣಿಯನ್ನು ಎಳೆಯುವುದು ತಪ್ಪಲ್ಲವೆಂಬುದಾಗಿ ಹಿಂದುಸ್ಥಾನದ ರೈಲ್ವೆ ನ್ಯಾಯಾಧೀಶರಾದ ಶ್ರೀ ಕೆ. ಎಲ್. ಪಾಂಡೆಯವರು ತೀರ್ಪಿತ್ತಿದ್ದಾರೆ. ನಾಗಪುರ ಕಾಂಗ್ರೆಸ್ ರೈಲ್ವೆ ಉಪಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಎಸ್. ಸಯೋಜಿಯವರು ಟಿಕೆಟ್ಟಿದ್ದ ರೈಲಿನ ಸರಪಣಿಯನ್ನು ಎಳೆದು ರೈಲ್ವೆ ಸಂಚಾರಕ್ಕೆ ... ವರೆಂದು ಪೋಲೀಸರು ಹೂಡಿದ್ದ ... ಯಲ್ಲಿ ಈ ರೀತಿ ತೀರ್ಪನ್ನೀಯಲಾಗಿ... ರೈಲಿನಲ್ಲಿ ಜನಗಳು ನೂಕುನುಗ್ಗಲು ವಿಪರೀತವಾಗಿದ್ದುದರಿಂದ ಸರಪಣಿಯನ್ನೆಳೆದುದು ಅಪರಾಧವಲ್ಲವೆಂದು ತಿಳಿಸಲಾಗಿದೆ.

ಸತ್ಯಮಂಗಲ-ಚಾಮರಾಜನಗರ ರೈಲ್ವೆ

ಚಾಮರಾಜನಗರ ಮತ್ತು ಸತ್ಯಮಂಗಲ ಮೇಟುಪಾಳ್ಯಗಳಿಗೆ ರೈಲ್ವೆ ಲೈನನ್ನು ಹಾಕಬೇಕೆಂಬ ಮೈಸೂರು ಸರ್ಕಾರದವರ ಕೋರಿಕೆಯನ್ನು ಮದರಾಸ್ ಸರ್ಕಾರದವರು ಪರಿಶೀಲಿಸುತ್ತಿರುವರು. ಈ ಬಗ್ಗೆ ಟ್ರಾಫಿಕ್ ಮತ್ತು ಎಂಜನಿಯರಿಂಗ್ ಸರ್ವೆಗಾಗಿ ಅಂದಾಜುಗಳನ್ನು ಅಹ್ವಾನಿಸಲಾಗಿರುವುದಾಗಿ ವರದಿಯಾಗಿದೆ.

ಪೌರಸಭಾಧ್ಯಕ್ಷರು

ಸ್ವಂ ಸು] ಚಿಕ್ಕಮಗಳೂರು ೫

ಇಲ್ಲಿನ ಪುರಸಭಾಧ್ಯಕ್ಷರ ಚುನಾವಣೆಯು ಇಂದು ಮಧ್ಯಾಹ್ನ ನಡೆದು ಶ್ರೀ ಎಸ್. ಅಣ್ಣಪ್ಪಶೆಟ್ಟರು ೧೧ ಓಟುಗಳನ್ನು ಪಡೆದು ಜಯಶಾಲಿಗಳಾಗಿರುವರು. ಇವರ ಪ್ರತಿಸ್ಪರ್ಧಿಗಳಾಗಿದ್ದ ಡಾ॥ ಭಗವಂತರವರಿಗೆ ೮ ಓಟುಗಳು ಬಂದುವು.

ದ. ಭಾರತ ರಾಜ್ಯಾಂಗ ಸಭೆಯ ಕಾರ್ಯದರ್ಶಿಗಳು ಕೋರಿರುತ್ತಾರೆ: ಇನ್ನು ಮುಂದೆ ಸಾವಕಾಶಮಾಡಲಾಗದು, ತಾಟಸ್ಥ್ಯಕ್ಕೆ ಕಾರಣವಿಲ್ಲ. ಕೂಡಲೇ ಉಭಯ ಶಾಸನಸಭೆಗಳ ... ಅಧಿವೇಶನವನ್ನು ಕರೆದು, ಮೈಸೂರಿನ ... ಪ್ರತಿನಿಧಿಗಳನ್ನು ಚುನಾಯಿಸಿ, ಮೈಸೂರು ... ರಾಜ್ಯಾಂಗಸಭೆಯಲ್ಲಿ ಭಾಗವಹಿಸಿ ತನ್ನ ಕರ್ತವ್ಯವನ್ನು ಸಲ್ಲಿಸುವ ಕೆಲಸ ಒಪ್ಪಿಡುವುದೇ ನಮ್ಮ ಸಂಸ್ಥಾನಕ್ಕೆ ಗೌರವಯುತವಾದ ಮಾರ್ಗವಾಗಿದೆ.

ರಾಜ್ಯಾಂಗ ಸಭೆಗೆ ಇನ್ನೂ ಸೇರದಿರುವ ಸಂಸ್ಥಾನಗಳು

ಇದುವರೆಗೆ ರಾಜ್ಯಾಂಗ ಸಭೆಗೆ ಸೇರದಿರುವ ಸಂಸ್ಥಾನಗಳು ತಾವು ಸೇರುವ ಅಥವಾ ಸೇರದಿರುವ ಬಗ್ಗೆ ಈ ತಿಂಗಳು ೨೦ ನೇ ತಾ॥ ನೊಳಗೆ ತೀರ್ಮಾನಮಾಡಬೇಕೆಂದು ಭಾರತ ರಾಜ್ಯಾಂಗ ಸಭೆಯು ಕಾರ್ಯದರ್ಶಿಗಳು ಸಂಸ್ಥಾನಾಧೀಶರುಗಳಿಗೆ ಪತ್ರ ಬರೆದಿರುವರು. ಸಭೆಗೆ ಸೇರಲಿಚ್ಛಿಸುವ ಸಂಸ್ಥಾನಗಳು ಈ ತಿಂಗಳ ಅಂತ್ಯದೊಳಗೇ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕೆಂದು ಸೂಚಿಸಿರುವರು.

ಭಾರತಕ್ಕೆ ಭಾರಿ ರೈಲ್ವೆ ಎಂಜಿನ್ನುಗಳು

ಗ್ಲೋಬ್] ಲಂಡನ್ ೫

೯೦ ಲಕ್ಷ ರೂ ಬೆಲೆಬಾಳುವ ೩೦೦ ಭಾರಿ ರೈಲ್ವೆ ಎಂಜಿನ್ನುಗಳನ್ನು ಭಾರತವು ಕೊಳ್ಳಲಿದೆ. ಬ್ರಿಟನ್ನಿನ ೩ ದೊಡ್ಡ ಕಂಪೆನಿಗಳು ೧೯೪೯ ರಿಂದ ಇವುಗಳ ತಯಾರಿಯನ್ನು ಆರಂಭಿಸುವುವು.

ಹಿದಯತುಲ್ಲಾರವರು ಸಿಂಧು ಗೌರ್ನರಾಗುವರೇ ?

ವೈಸರಾಯರ ಯೋಜನೆಯ ಪ್ರಕಾರ ಸಿಂಧು ಪ್ರಾಂತ್ಯದ ಪ್ರಧಾನಿ ಮಿ॥ ಗುಲಾಂ ಹುಸೇನ್ ಹಿದಾಯತ್ ಉಲ್ಲಾರವರನ್ನು ಅಲ್ಲಿನ ಗೌರ್ನರ್ ಅಥವಾ ಅಧ್ಯಕ್ಷನನ್ನಾಗಿಯೂ, ಮಂತ್ರಿಮಂಡಲದ ಸಚಿವರಾದ ಮಿ॥ ಮಹಮ್ಮದ್ ಖುಹ್ರೋರವರನ್ನು ಪ್ರಧಾನಿಗಳನ್ನಾಗಿಯೂ ನೇಮಕ ಮಾಡಲಾಗುವದೆಂದು ವರದಿಯಾಗಿದೆ.

Office of the President,
City Municipal Council,
Mysore, Dated 3-6-47

NOTIFICATION.

Applications are invited for the post of a Clock-Winder for the maintenance of the Tower and Office Clocks of the City Municipality, Mysore. Only those who are specialists in this field need apply with copies of Testimonials etc., on or before 15th June 1947, stating the minimum remuneration expected.

K. G. KATWEY,
For President.

ಶ್ರೀ ವೃಷಲ್ಯಾಂಡ್ಸ್

8-6-47 ರಿಂದ

ಕಿಕ್ಕಿರಿದ ೩ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

ಬಿ(ತಮಿಳು)

-: ಪಾತ್ರ :-

ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ...

ಹೈದರಾಬಾದಿನ ಸ್ವಾತಂತ್ರ್ಯ ಸಾಧನಾ ಪ್ರಯತ್ನ

ಹೈದರಾಬಾದಿನ ನಿಜಾಮರ ರಾಜ್ಯಾಂಗ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್ಟನ್ನರು ನಿಜಾಮರಿಗೆ ಈ ರೀತಿ ಸಲಹೆಯಿತ್ತಿರುವರು :- ಹೈದರಾಬಾದು ಸ್ವತಂತ್ರವೆಂದು ಘೋಷಿಸುವುದು; ಸಂಸ್ಥಾನದ ಸೈನ್ಯಕ್ಕೆ ಐರೋಪ್ಯರನ್ನು ಸೇರಿಸಿಕೊಳ್ಳುವುದು; ಗೋವಾವನ್ನು ಸಂಸ್ಥಾನದ ಬಂದರನ್ನಾಗಿ ಕೊಡಲು ಕೋರಿ ಹೈದರಾಬಾದಿಗೂ, ಗೋವೆಗೂ ಮಧ್ಯ ಮಾರ್ಗ ಕೇಳುವುದು; ಬೇರಾರನ್ನು ಹೈದರಾಬಾದಿಗೆ ಸೇರಿಸಬೇಕೆಂದು ಒತ್ತಾಯ ಪಡಿಸುವುದು; ರೈಲ್ವೆ ಸಂಚಾರ ಸೌಲಭ್ಯಗಳನ್ನು ಸಂಸ್ಥಾನವೇ ವಹಿಸಿಕೊಳ್ಳುವುದು ಮತ್ತು ವಿಶ್ವರಾಷ್ಟ್ರ ಸಂಸ್ಥೆಯಲ್ಲಿ ಸದಸ್ಯ ಸ್ಥಾನವನ್ನು ಪಡೆಯುವುದು.

ವಿಶ್ವಕರ್ನಾಟಕ

ಹಿಂದೆ ದೇಶಬಂಧು ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಎ. ಎಸ್. ವೆಂಕೋಬರಾಯರು ವಿಶ್ವಕರ್ನಾಟಕದ ದಿನಪತ್ರಿಕೆಯ ಸಂಪಾದಕರು, ಮುದ್ರಕರು ಮತ್ತು ಪ್ರಕಾಶಕರಾಗಿ ಬೆಂಗಳೂರು ಜಿಲ್ಲಾ ನ್ಯಾಯಾಧೀಶರ ಮುಂದೆ ಮೊನ್ನೆ ಡಿಕ್ಲರೇಷನ್ ಮಾಡಿಕೊಂಡರು.

ರಾಜಕಮಲ್,

ತಾ॥ ೬-೬-೪೭ ರಿಂದ

ಎಳನೇ ವಾರ

ಪ್ರತಿ ದಿನ ೩ ಆಟಗಳು

ಗೊಲ್ಲಭಾಮ

(ತೆಲುಗು)

8-6-47 ರಿಂದ

ಪ್ರತಿ ದಿನ ಬೆಳಗ್ಗೆ 10.30 ಕ್ಕೆ

ಔರತ್ ಅಥವಾ ಸ್ತ್ರೀ

—: ಭೂಮಿಕೆ :—

ಸುರೇಂದ್ರ, ಸರ್ದಾರ್ ಅಖ್ತರ್.

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರದಲ್ಲಿ ಈ ವರ್ಷ ಮಾಧ್ಯಮಿಕ ಶಾಲಾ ಪ್ರಥಮ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಏರ್ಪಡಿಸಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯು ಮಿತಪಡಿಸಲ್ಪಟ್ಟಿರುವುದರಿಂದ, ಅಪೇಕ್ಷಿಸುವವರು ತಮ್ಮ ಮಕ್ಕಳನ್ನು ಇದೇ ತಿಂಗಳು ೧೫ ನೇ ತಾರೀಖಿನೊಳಗೆ ಸೇರಿಸಬೇಕಾಗಿ ಕೋರಲಾಗಿದೆ.

ಅಪೆರಾ ಟಾಕೀಸ್, ಮೈಸೂರು

೬-೬-೪೭ ರಿಂದ ೮ ನೇ ವಾರ

ರಾಜಕುಮಾರಿ

Morning shows from 6-6-47

China's Little Devils

Edited, printed and published by A. R. Nagarajan at the Sadhvi Press

ಫೋ॥ ನಂ. ೩೪ WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೯—೬—೪೭ [ಸಂಚಿಕೆ ೪೨

ಬರುವ ವಾರ ಕೇಂದ್ರ ಸರ್ಕಾರದ ರಾಜೀನಾಮೆ

ಪಾಕಿಸ್ತಾನದ ಮೂಲಕ ಮೊಗಲ್ ಸಾಮ್ರಾಜ್ಯ ಸ್ಥಾಪನೆ

ಸಿಂಧ್ ಮಂತ್ರಿಯ ಹೇಳಿಕೆ

ಮುಸ್ಲಿಂ ಲೀಗಿನವರು ಕೇಳಿರುವಂತೆ ಪೂರ್ಣ ಪಾಕಿಸ್ತಾನವನ್ನು ಕೊಡಲು ಹೊಸ ಬ್ರಿ॥ ಯೋಜನೆಯಲ್ಲಿ ಅವಕಾಶ ಇಲ್ಲದಿದ್ದರೆ ಮುಸ್ಲಿಮರು ಸಂಪೂರ್ಣ ಪಾಕಿಸ್ತಾನವನ್ನೇ ಪಡೆಯಲು ಹೋರಾಡುವರೆಂಬ ಅಂಶವನ್ನು ಸಿಂಧೂ ಪ್ರಾಂತದ ಸಚಿವರಾದ ಮಿ॥ ಅಬ್ದುಲ್ ಸತ್ತಾರ್ ಪೀರ್‌ಜಾದ ಬಹಿರಂಗ ಸಭೆಯೊಂದರಲ್ಲಿ ತಿಳಿಸಿರುವರು.

ಹೊಸ ಯೋಜನೆಯಂತೆ ಮುಸ್ಲಿಮರು ಏನು ದೊರೆಯುವುದೋ ಅದನ್ನು ಅಂಗೀಕರಿಸಿ ಅಖಂಡ ಪಾಕಿಸ್ತಾನಕ್ಕಾಗಿ ಆ ಹೋರಾಟವನ್ನು ಮುಂದುವರಿಸುವರು.

ಮೊಗಲ್ ಸಾಮ್ರಾಜ್ಯಕ್ಕೆ ಸೇರಿದ್ದ ನಗರಗಳನ್ನೆಲ್ಲಾ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂದೂ ಸಹ ಅವರು ಕೇಳಬಹುದು. ಹಿಂದುಗಳು ಮುಸ್ಲಿಮರ ಮೇಲೆ ಅತ್ಯಾಚಾರ ನಡೆಸುತ್ತಿರುವುದನ್ನು ಅವರು ಟೀಕಿಸಿ, ಪ್ರದೇಶವು ಮುಸ್ಲಿಂ ಬಹುಸಂಖ್ಯಾತರ ಪ್ರಾಂತವೆಂದೂ, ಲೀಗ್ ಸರ್ಕಾರದ ಕಾನೂನು ಮತ್ತು ರಾಜ್ಯಾಂಗಗಳಿಗೆ ಹೊಂದಿಕೊಂಡು ಇರುವುದು ಜಗಳಕ್ಕೆ ಬೇಕಾದರೆ ಹಿಂದುಗಳು ಆ ಬಾಳಬಹುದೆಂದೂ, ಬಹುಸಂಖ್ಯಾತರಾದ ಮುಸ್ಲಿಮರು ಅಲ್ಪಸಂಖ್ಯಾತರ ಮೇಲೆ ಅಧಿಕಾರ ಚಲಾಯಿಸುವುದು ಅವರ ಹಕ್ಕೆಂದೂ ಹೇಳಿದರು. ಹಿಂದುಗಳು ಆ ರೀತಿ ಇರಲು ಅಪೇಕ್ಷಿಸದಿದ್ದರೆ ಅವರು ಬೇರೆ ಕಡೆಗೆ ಹೊರಟು ಹೋಗಬೇಕೆಂದೂ, ಬೇರೆ ಪ್ರಾಂತಗಳಲ್ಲಿರುವ ಮುಸ್ಲಿಮರು ಸಿಂಧೂ ಪ್ರಾಂತದಲ್ಲಿ ನೆಲೆಸಲು ಸಿದ್ಧರಾಗಿರುವರೆಂದೂ ಅವರು ತಿಳಿಸಿರುವರು.

ವಿವಾಹ ಮಹೋತ್ಸವಗಳು

ಮೈಸೂರು ೯

ನಗರದ ಸಾಹುಕಾರ್ ಮುದ್ದಪ್ಪನವರ ಜ್ಯೇಷ್ಠಪುತ್ರರು ಚಿ॥ ಸಿ. ನಾಗರಾಜಪ್ಪನವರಿಗೆ ಮೈಸೂರು ಶ್ರೀ ಎಂ. ಎಸ್. ಸಿದ್ದಪ್ಪನವರ ಕುಮಾರಿ ಸೌ॥ ಅನ್ನಪೂರ್ಣಮ್ಮನನ್ನು ಕೊಟ್ಟು ಈ ದಿನ ವಿವಾಹ ಮಹೋತ್ಸವವು ವೈಭವದಿಂದ ಜರುಗಿತು.

ಅರಮನೆ ಇಂಜನಿಯರ್ ಆಫೀಸ್ ಅಸಿಸ್ಟೆಂಟ್ಸ್ ಗುಮಾಸ್ತೆ ಶ್ರೀ ಎಂ. ಕೆ. ವೆಂಕಟಸುಬ್ಬಯ್ಯನವರು ತಮ್ಮ ಕುಮಾರಿ ಸೌ॥ ವಿಜಯಲಕ್ಷ್ಮಿಯನ್ನು ಚಿಕ್ಕನಾಯಕನಹಳ್ಳಿ ಅಸಿಸ್ಟೆಂಟ್ ಮಾಸ್ಟರ್ ಶ್ರೀ ಸಿ. ವೈಕ್ಕರಯ್ಯನವರ ಕುಮಾರ ಶ್ರೀ ಸಿ. ಕೆ. ನಾರಾಯಣರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಲೇಟ್ ಬಿ. ಕೆಂಚಪ್ಪನವರ ಕುಮಾರ ಚಿ॥ ಬಿ. ಕೆ. ರಾಮಯ್ಯನವರಿಗೂ ಬೆಂಗಳೂರು ಜವಳಿ ವರ್ತಕರಾದ ಮೈಸೂರಿನ ಶ್ರೀ ಹನುಮಂತಯ್ಯನವರ ಕುಮಾರಿ ಸೌ॥ ... ಮ್ಮನಿಗೂ ನಡೆದ ವಿವಾಹದ ಸಂದರ್ಭದಲ್ಲಿ ಜವಳಿ ವರ್ತಕರಾದ ಶ್ರೀ ತಿಮ್ಮಯ್ಯನವರು ನೆನ್ನೆ ಅರತಕ್ಷತೆ ಮಹೋತ್ಸವವನ್ನು ನೆರವೇರಿಸಿದರು.

ಹರಿಕಥೆ

ಸಂತೇಪೇಟೆಯ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ದೇವಾಲಯದಲ್ಲಿ ಈ ದಿನ ರಾತ್ರಿ ೯॥ ಗಂಟೆಗೆ ಲಕ್ಷ್ಮೀಪತಿ ದಾಸರೊಂದರರಿಂದ ನಳ-ದಮಯಂತಿ ಎಂಬ ಹರಿಕಥೆಯು ನಡೆಯುತ್ತದೆ. ಜನರೆಲ್ಲಾ ಯಶಸ್ವಿಮಾಡಿಸಬೇಕೆಂದು ವರ್ತಕ ಮಂಡಳಿಯವರು ಕೋರಿರುತ್ತಾರೆ.

ಪೋಲೀಸರ ಲಂಚ ರುಷುವತ್ತಿನ ನಿರೋಧ

ಪ್ರ॥ ಪ್ರ॥ ಸಭೆಯಲ್ಲಿ ಬಜೆಟ್ ನಿರ್ಣಯ

ಸ್ವಂ. ಸು.] ಬೆಂಗಳೂರು ೯

ಪೋಲೀಸ್ ಇಲಾಖೆಯಲ್ಲಿ ಅವಶ್ಯಕವಾದ ಸುಧಾರಣೆಗಳನ್ನು ಮಾಡಿ ಲಂಚ ರುಷುವತ್ತುಗಳನ್ನು ನಿರ್ಮೂಲಮಾಡಲು ಇಲಾಖೆಯ ಕಾರ್ಯಕಲಾಪವನ್ನು ಪರಿಶೀಲಿಸಬೇಕೆಂಬುದಾಗಿ ಶ್ರೀ॥ ಬಿ. ಟಿ. ಗುಪ್ತರವರು ಪ್ರ॥ ಪ್ರ॥ ಸಭೆಯಲ್ಲಿ ಮಂಡಿಸಿದ ಬಜೆಟ್ ನಿರ್ಣಯವು ನೆನ್ನೆ ಬಹುಮತದಿಂದ ಅಂಗೀಕಾರವಾಯಿತು.

ನಾಗಮಂಗಲ ತಾಲ್ಲೂಕು ಬರಗಾಲ ಪ್ರದೇಶವಾದುದರಿಂದ ಅಲ್ಲಿ ಲೋಕಪಾವನಿ ಗಂಗವಾಡಿ ಮತ್ತು ಬೊಮ್ಮನಹಳ್ಳಿ ಕೆರೆಗಳಿಗೆ ಅಣೆಕಟ್ಟನ್ನು ಕಟ್ಟುವ ವಿಚಾರವಾಗಿ ಶ್ರೀ ಶಂಕರಲಿಂಗೇ ಗೌಡರು ಮಂಡಿಸಿದ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ತುಮಕೂರಿನಲ್ಲಿ ಕ್ಷಯರೋಗದ ಆಸ್ಪತ್ರೆಯನ್ನು ಕಟ್ಟಲು ಸರ್ಕಾರದವರು ೫೦ ಸಾವಿರ ರೂ. ಒದಗಿಸಿಕೊಡಬೇಕೆಂದು ಡಾ॥ ಅಬ್ದುಲ್ ರಷೀದ್‌ರವರು ಮಂಡಿಸಿದ್ದ ನಿರ್ಣಯಕ್ಕೆ ಉತ್ತರವಾಗಿ ಸೀನಿಯರ್ ಕೌನ್ಸಲರ್ ಮಿ॥ ಮಾಂಟಿರೋರವರು ತುಮಕೂರಿನಲ್ಲಿ ಆಸ್ಪತ್ರೆ ಮಂಜೂರಾಗಿದೆಯೆಂದೂ, ಯುದ್ಧದ ದೆಸೆಯಿಂದ ಇದುವರೆಗೆ ಅದರ ಕೆಲಸವನ್ನು ತೆಗೆದುಕೊಂಡಿರಲಿಲ್ಲವೆಂದೂ, ಅದಕ್ಕೆ ಬೇಕಾದ ಅಂದಾಜು ಈಗ ಸಿದ್ಧವಾಗಿದೆಯೆಂದೂ ಹೇಳಿದರು. ಇದರ ಮೇಲೆ ಸೂಚಕರು ನಿರ್ಣಯವನ್ನು ವಾಪಸು ತೆಗೆದುಕೊಂಡರು.

ಮಹಾತ್ಮರಿಗೆ ಕೈಯಿಂದ ತಯಾರಾದ ಗಡಿಯಾರ

ಉಡುಪಿಯ ಶ್ರೀ ಎಂ. ಎ. ಕಸ್ತೂರಿಯವರು ತಾವು ಕೈಯಿಂದಲೇ ತಯಾರಿಸಿದ ಗಡಿಯಾರವೊಂದನ್ನು ಮಹಾತ್ಮರಿಗೆ ಸದ್ಯದಲ್ಲೇ ಅರ್ಪಿಸಲಿರುವರು. ಅವರು ಇದನ್ನು ದಿಲ್ಲಿಯಲ್ಲಿ ಮಹಾತ್ಮರು ಇಂದೂರಿಗೆ ಭೇಟಿಯಿತ್ತಿದ್ದಾಗ ಅವರಿಗೆ ತೋರಿಸಿದ್ದರು. ಮಹಾತ್ಮರು ಗಡಿಯಾರವು ಕಳವು ಹೋಗಿರುವುದರಿಂದ ಈ ಗಡಿಯಾರವನ್ನು ಬಹುಮಾನವಾಗಿ ಕೊಡಲು ನಿರ್ಧರಿಸಿರುವರು. ಇದರ ಮುಖ್ಯ ಲಕ್ಷಣವು ಬೆಳ್ಳಿಯದಾಗಿದೆ. ಡೈಯಲ್ಲಿನ ಮೇಲೆ, ಹಿಂದೀ ಲಿಪಿಯಲ್ಲಿ ಗಂಟೆಗಳನ್ನು ಗುರ್ತಿಸಲಾಗಿದೆ.

ಪಾಕಿಸ್ತಾನದ ಮೂಲಕ ಇಡೀ ಹಿಂದೂಸ್ಥಾನದ ಆಕ್ರಮಣ

ನಾವು ಈಗ ಪಾಕಿಸ್ತಾನವನ್ನು ಸಾಧಿಸಿದ್ದೇವೆ. ಇನ್ನು ಸಮಗ್ರ ಭಾರತವನ್ನೂ ನಮ್ಮ ಹಸ್ತಗತ ಮಾಡಿಕೊಂಡು ಅದರ ಮೇಲೆ ಆಡಳಿತ ನಡೆಸುವ ಧ್ಯೇಯದಿಂದ ನಾವು ಮುಂದುವರೆಯುತ್ತೇವೆ ಎಂಬ ದಾಗಿ ಸಿಂಧೂ ಶಾಸನ ಸಭಾ ಲೀಗ್ ಸದಸ್ಯರಾದ ಮಿ॥ ನಿಜಾಂಜಾಫರ್ ಜಮಾಲಿಯವರು ಹೇಳಿರುವರು.

ಅಸ್ಸಾಮಿಗೆ ಆಚಾರ್ಯ ಕೃಪಲಾನಿಯವರು

ಸದ್ಯದಲ್ಲೇ ಸೇರಲಿರುವ ಅ॥ ಭಾ॥ ಕಾಂ॥ ಸಮಿತಿಯ ಅನಂತರ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಅಸ್ಸಾಂ ಪ್ರಾಂತಕ್ಕೆ ಭೇಟಿ ಕೊಡುವರೆಂದು ವರದಿಯಾಗಿದೆ. ಇತರ ಕಾಂಗ್ರೆಸ್ ನಾಯಕರೂ ಸಹ ಸದ್ಯದಲ್ಲೇ ಅಲ್ಲಿಗೆ ತೆರಳಲಿರುವರು.

ಗಡಿನಾಡಿನ ಭವಿಷ್ಯದ ವಿಚಾರವಾಗಿ ರೆಫರೆಂಡಂ ನಡೆಯುವುದರಿಂದ ಅಲ್ಲಿನ ಲೀಗ್ ಸದಸ್ಯರೊಡನೆ ಸಮಾಲೋಚನೆ ನಡೆಸಲು ಮಿ॥ ಜಿನ್ನಾರವರು ಸದ್ಯದಲ್ಲೇ ಗಡಿನಾಡಿಗೆ ಹೋಗುವರೆಂದು ವರದಿಯಾಗಿದೆ.

ಇನ್ನೊಂದು ವಾರದಲ್ಲಿ ಕೇಂದ್ರ ಸರ್ಕಾರದ ರಾಜೀನಾಮೆ

ಭಾರತ ಕೇಂದ್ರ ಸರ್ಕಾರದ ಸಚಿವರುಗಳು ಬರುವ ವಾರದಲ್ಲಿ ವೈಸರಾಯರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸುವರೆಂದು ದೆಹಲಿಯ ಅಧಿಕಾರ ವಲಯಗಳಿಂದ ವರದಿಯಾಗಿದೆ. ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳಿಗೆ ಪ್ರತ್ಯೇಕವಾದ ಎರಡು ತಾತ್ಕಾಲಿಕ ಮಂತ್ರಿಮಂಡಲಗಳನ್ನು ರಚಿಸಬೇಕಾಗಿರುವುದರಿಂದ ವೈಸರಾಯರು ಅವರಿಗೆ ರಾಜೀನಾಮೆ ಕೊಡುವಂತೆ ತಿಳಿಸಿರುವರು. ಆದ್ದರಿಂದ ಈಗಿನ ಮಂತ್ರಿಮಂಡಲವು ಕಾರ್ಯ ನಿರ್ವಾಹಕ ಸರ್ಕಾರವಾಗುವುದು. ಪ್ರಾಂತವಿಭಜನೆಯ ಬಗ್ಗೆ ಪಂಜಾಬ್ ಮತ್ತು ಬಂಗಾಳ ಶಾಸನ ಸಭೆಗಳಿಂದ ಮತ ದೊರೆತ ಕೂಡಲೇ ಹೊಸ ಮಂತ್ರಿಮಂಡಲಗಳ ರಚನೆಯಾಗುವುದು.

ಹೆಂಗಸು ಗಂಡಸಾಗುತ್ತಿದ್ದಾಳೆ

ವಾರ್ಧಾ ಬಳಿಯ ಭುಗಾಸವಾಳ ನಗರದ ೪೦ ವರ್ಷ ವಯಸ್ಸಿನ ಒಬ್ಬಾಕೆಯು ಈಗ ಗಂಡಾಗುತ್ತಿರುವುದಾಗಿ ವರದಿಯಾಗಿದೆ. ಅನೇಕ ಮಕ್ಕಳ ತಾಯಿಯಾದ ಈಕೆಯು ೨೦ ವರ್ಷಗಳಿಂದಲೇ ತನ್ನ ಲಿಂಗವನ್ನು ಬದಲಾಯಿಸುತ್ತಿರುವಳು.

ಇನ್ನೂ ಮೈಸೂರಿನ ನಿರ್ಧಾರವಿಲ್ಲ

ರಾಜ್ಯಾಂಗ ಸಭೆಯ ಬಗ್ಗೆ ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೆ

ಸ್ವಂ. ಸು. ಫೋ॥] ಬೆಂಗಳೂರು ೮

ಜೂನ್ ೨ ನೇ ತಾ॥ ನ ನಂತರ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವ ವಿಷಯವನ್ನು ನಿರ್ಧರಿಸುವುದಾಗಿ ದಿವಾನರು ಹೇಳಿದ್ದರಷ್ಟೆ. ಪ್ರ॥ ಪ್ರ॥ ಸಭೆಯ ಅಧಿವೇಶನವು ಮುಗಿಯುತ್ತ ಬಂದಿರುವುದರಿಂದ ಈ ವಿಷಯದಲ್ಲಿ ಸರ್ಕಾರದ ನಿರ್ಧಾರವನ್ನು ತಿಳಿಸಬೇಕೆಂದು ಶ್ರೀ ಬಿ. ಎನ್. ಗುಪ್ತರು ಈ ದಿನ ಪ್ರ॥ ಪ್ರ॥ ಸಭೆಯಲ್ಲಿ ಕೇಳಿದರು. ಇದು ಪ್ರಾಮುಖ್ಯ ವಿಷಯವಾದ್ದರಿಂದ ದಿವಾನರು ಬಂದ ಮೇಲೆ ತೀರ್ಮಾನವನ್ನು ಹೇಳುವುದಾಗಿಯೂ ಅಧ್ಯಕ್ಷರಾದ ಡಾ॥ ರಾಯರವರು ಹೇಳಿದರು.

ಮೊನ್ನೆ ಹಲವು ಉನ್ನತಾಧಿಕಾರಿಗಳು ಈ ಸಭೆಗೆ ಬರದೆ ಕುದುರೆ ಜೂಜಿನಲ್ಲಿ ಭಾಗಿಗಳಾಗಿದ್ದರೆಂಬ ಅಂಶವನ್ನು ಶ್ರೀ ಎಂ. ವಿ. ಕೃಷ್ಣಪ್ಪನವರು ಎತ್ತಿದರು. ಅದಕ್ಕೆ ಯಾವ ಉತ್ತರವೂ ಬರಲಿಲ್ಲ.

ಧರ್ಮರಕ್ಷಾಕರ ಗೋಪಾಲರಾಯರಲ್ಲಿ ಮೈಸೂರು ವಿಮಾ ಹಣವೂ ಸೇರಿತ್ತೆಂಬುದಾಗಿ ವದಂತಿಗಳಿರುವ ಬಗ್ಗೆ ಶ್ರೀ ಎಂ. ಎನ್. ಜೋಯಿಸರ ಪ್ರಶ್ನೆಗೆ ಹಣಕಾಸಿನ ಕಾರ್ಯದರ್ಶಿಗಳು ಈ ಪ್ರಶ್ನೆಯು ಏಳುವುದಿಲ್ಲವೆಂದು ತಿಳಿಸಿದರು.

ಶಿರಾಳಕೊಪ್ಪದ ಪೌರಸಭಾ ಚುನಾವಣೆಯಲ್ಲಿ ಅಧಿಕಾರಿಗಳ ಕೈವಾಡದಿಂದ ಉಂಟಾದ ಕೋಲಾಹಲದ ಬಗ್ಗೆ ಶ್ರೀ ಬಂಗಾರಪ್ಪನವರು ತಂದಿದ್ದ ನಿಲುವಳಿ ನಿರ್ಣಯವು ಸ್ಥಳೀಯ ವಿಷಯವಾದುದರಿಂದ ಅದಕ್ಕೆ ಅವಕಾಶವೀಯುವುದಿಲ್ಲವೆಂದು ಅಧ್ಯಕ್ಷರು ತಿಳಿಸಿದರು.

ಕೇಂದ್ರ ಹಣಹಂಚಿಕೆ ಕ್ರಮದಲ್ಲಿ ಸರ್ಕಾರಕ್ಕೆ ಉಂಟಾಗುವ ನಷ್ಟವನ್ನು ಚರ್ಚಿಸಲು ಶ್ರೀ ರಾಮಸ್ವಾಮಪ್ಪನವರು ತಂದಿರುವ ನಿಲುವಳಿ ನಿರ್ಣಯವು ಈ ಸಂಜೆ ಚರ್ಚೆಗೆ ಬರಲಿದೆ.

ಅಂತರ್ಜಾತೀಯ ವಿವಾಹವನ್ನು ಕಾನೂನುಬದ್ಧವಾಗಿ ಮಾಡಲು ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ಎಂ. ಎ. ಗೋಪಾಲಸ್ವಾಮಿ ಐಯ್ಯಂಗಾರ್ಯರು ಸೂಚಿಸಿದ ಮಸೂದೆಯು ನ್ಯಾಯಾಂಗ ಕಾರ್ಯದರ್ಶಿ ಶ್ರೀ ಕನಕರತ್ನ ರಾಜುರವರಿಂದ ಮಂಡಿಸಲ್ಪಟ್ಟಿತು. ಶ್ರೀ ಕಾಮರಾಜಯ್ಯಂಗಾರ್ಯರು ಇದನ್ನು ಅನುಮೋದಿಸಿ ಈ ಮಸೂದೆಯಿಂದ ಜಾತಿ ಭೇದವು ಹೋಗಲು ಅವಕಾಶವಾಗುವುದೆಂದು ಹೇಳಿದರು. ಚರ್ಚೆ ನಡೆಯುತ್ತಿದೆ.

ಶಾಸನ ಸಭೆ

ಈ ತಿಂಗಳು ೧೯ ನೇ ತಾ॥ ನಿಂದ ೨೮ ರವರೆಗೆ ಶಾಸನ ಸಭೆಯ ಅಧಿವೇಶನವು ಬೆಂಗಳೂರಿನಲ್ಲಿ ನಡೆಯುವುದು. ೧೧ ಮಸೂದೆಗಳೂ, ೪೦ ನಿರ್ಣಯಗಳೂ, ೧೪೦ ಪ್ರಶ್ನೆಗಳೂ ಬಂದಿರುವುವು.

ವಿಜಯನಗರ ... ಸಂಪೂರ್ಣವಾಗಿ ಅಳಿಯ ಗಂಡಸಾಗಿದೆಯೆಂದು ಗೊತ್ತಾಗಿದೆ. ಪ್ರಸಂಗದ ನಾನಾ ಜಾಗಗಳಲ್ಲಿ ಇಂತಹ ಪ್ರಸಂಗಗಳು ನಡೆದಿರುವುದಾಗಿ ವೈದ್ಯರುಗಳು ವರದಿಮಾಡಿರುವರು.

ಸಾಧ್ವಿ

ತಾ॥ ೯-೬-೪೭ ಸೋಮವಾರ

ಪಾರ್ಲಿಮೆಂಟ್ ಸಭೆಯ ಮೇಲೆ ಮಹಿಳೆಯರ ಧಾಳಿ

ಬ್ರಿಟನ್ನಿನ ನೂರಾರು ಜನ ಗೃಹಿಣಿಯರು ಒಟ್ಟಿಗೆ ಸೇರಿ ಪಾರ್ಲಿಮೆಂಟ್ ಸಭೆಯ ಮೇಲೆ ಧಾಳಿ ನಡೆಸಿದ ವರದಿಯೊಂದು ಬಂದಿರುತ್ತದೆ. ಆಹಾರ, ಕೌದಿ, ವಿದ್ಯುಚ್ಛಕ್ತಿ ಮುಂತಾದವುಗಳ ಸರಬರಾಜನ್ನು ಅಲ್ಲಿ ಕಡಿಮೆ ಮಾಡಲಾಗುವುದೆಂಬುದೇ ಇದಕ್ಕೆ ಕಾರಣ. ಈಗಾಗಲೇ ಇವುಗಳ ಪ್ರಮಾಣವು ಬಹಳ ಕಡಿಮೆಯಾಗಿ ಅಲ್ಲಿನ ಪ್ರಜೆಗಳೆಲ್ಲರೂ ಕಷ್ಟಪಡುತ್ತಿರುವುದರಿಂದ ನೇರವಾಗಿ ಪಾರ್ಲಿಮೆಂಟ್ ಸಭೆಯಲ್ಲಿಯೇ ತಮ್ಮ ಬೇಡಿಕೆಗಳನ್ನು ಒತ್ತಾಯಪಡಿಸಲು ಅವರು ಈ ರೀತಿ ಪ್ರದರ್ಶನವನ್ನು ನಡೆಸಿದರು.

ಆಹಾರ ಮತ್ತು ಕೌದಿ ಸರಬರಾಜಿಗಾಗಿ ವಿಶೇಷ ಮಂತ್ರಿಯೊಬ್ಬರನ್ನು ನೇಮಿಸಬೇಕೆಂದು ಧಾಳಿಕಾರರು ಒತ್ತಾಯಪಡಿಸಿದರು. ಅವರ ಬೇಡಿಕೆಯನ್ನು ಈಡೇರಿಸಿಕೊಡುವುದಾಗಿ ಮಂತ್ರಿಗಳು ಭರವಸೆ ಇತ್ತರು. ಪ್ರಜೆಗಳ ಪ್ರಾಣ ಮಾನಗಳ ರಕ್ಷಣೆಯು ಮಾತ್ರವಲ್ಲದೆ ಅವರುಗಳಿಗೆ ಅವಶ್ಯಕವಾದ ಅನ್ನ ವಸ್ತ್ರಗಳನ್ನು ಒದಗಿಸುವುದೂ ಪ್ರತಿಯೊಂದು ಪ್ರಭುತ್ವದ ಆದ್ಯ ಕರ್ತವ್ಯವೆಂಬುದೇ ಬ್ರಿಟಿಷ್ ರಾಜನೀತಿಯ ತಳಹದಿ. ನಿರುದ್ಯೋಗಿಗಳಾಗಿದ್ದವರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಾದರೂ, ಅಥವಾ ಜೀವನ ಭತ್ಯವನ್ನು ಕಲ್ಪಿಸಿಯಾದರೂ ಅವರ ಪೋಷಣೆಯನ್ನು ಮಾಡಬೇಕೆಂಬುದು ಅಲ್ಲಿ ಅಂಗೀಕೃತವಾಗಿರುವ ಪದ್ಧತಿ.

ನಮ್ಮ ದೇಶದಲ್ಲಿ ಈ ಬಗೆಯ ಯಾವ ಸೌಲಭ್ಯಗಳೂ ಪ್ರಜೆಗಳಿಗೆ ದೊರೆಕುತ್ತಿಲ್ಲ. ಅಂಗಹೀನರೂ, ಅಶಕ್ತರೂ ಅವರಿಗೂ ಸಹ ಪ್ರಭುತ್ವಗಳಿಂದ ಸರಿಯಾದ ಸಹಾಯವು ಸಿಕ್ಕುತ್ತಿಲ್ಲ. ಜನರೂ ಸಹ ಇವುಗಳಿಗಾಗಿ ಸರ್ಕಾರದ ಮೇಲೆ ಒತ್ತಾಯವನ್ನು ಹಾಕುವ ಪದ್ಧತಿಯು ಜಾರಿಗೆ ಬಂದಿರುವುದಿಲ್ಲ. ಇನ್ನೂ ಅಂಕೆ, ಬೇಡಿಕೆ ಮತ್ತು ಪ್ರಾರ್ಥನೆಗಳಲ್ಲಿಯೇ ಕಾಲವು ಕಳೆಯುತ್ತಿದೆ. ನಮ್ಮ ದೇಶವು ಅನೇಕ ಶತಮಾನಗಳಿಂದ ಪರದಾಸ್ಯದಲ್ಲಿ ತೊಳಲುತ್ತಿರುವುದೇ ಇದಕ್ಕೆ ಕಾರಣ.

ಪ್ರಜಾಪ್ರತಿನಿಧಿ ಸಭೆಯಲ್ಲಿ ತೊಗರಿಬೇಳೆ, ಕೌದಿ, ಇದ್ದಿಲು, ತೆಂಗಿನೆಣ್ಣೆ ಮುಂತಾದ ಸಾಮಗ್ರಿಗಳ ಕೊರತೆಯ ವಿಷಯವಾಗಿ ವಿಶೇಷ ಚರ್ಚೆಗಳು ನಡೆದುವು. ಸರ್ಕಾರದವರೂ ಸಹ ಇವುಗಳ ಬಗ್ಗೆ ಅಸಹಾಯಕರಾಗಿರುವರೆಂಬುದನ್ನು ತೋರ್ಪಡಿಸಿಕೊಂಡರು. ಜನರ ನಿತ್ಯ ಜೀವನಕ್ಕೆ ಬೇಕಾದ ಇಂತಹ ವಿಷಯಗಳಲ್ಲಿ ಪ್ರಭುತ್ವದವರು ಯುಕ್ತವಾದ ಪರಿಹಾರವನ್ನೊದಗಿಸಲು ಅಸಮರ್ಥರಾಗಿರುವುದು ವಿಷಾದಕರವೇ ಸರಿ. ನಮ್ಮ ದೇಶದ ಮಹಿಳೆಯರು ಬ್ರಿಟಿಷ ಮಹಿಳೆಯರಂತೆ ಇನ್ನೂ ಶಾಸನ ಸಭೆಗಳ ಮೇಲೆ ಧಾಳಿ ಮಾಡುವಷ್ಟು ಮುಂದೆ ಬಂದಿಲ್ಲದಿರುವುದು ಒಂದು ಸುಯೋಗ. ತಮ್ಮ ಕರ್ತವ್ಯ ಪಾಲನಾ ದೃಷ್ಟಿಯಿಂದಲಾದರೂ ಸರ್ಕಾರಗಳು ಶೀಘ್ರವಾಗಿ ಜನರ ದಿನಚರಿಯ ಅವಶ್ಯಕತೆಗಳನ್ನು ಪೂರೈಸಲು ಯೋಗ್ಯ ವ್ಯವಸ್ಥೆಗಳನ್ನು ಮಾಡಿ ತಮ್ಮ ಸ್ಥಾನ ಮಾನಗಳನ್ನು ಸಾರ್ಥಕಪಡಿಸಿಕೊಳ್ಳಬೇಕಾದುದು ಯುಕ್ತವಾದೆ.

ವಾರ ಭವಿಷ್ಯ

ತಾ॥ ೯-೬-೪೭ ರಿಂದ ೧೬-೬-೪೭ ರ ವರೆಗೆ
(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ಉದ್ಯೋಗ, ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ಅಧಿಕಾರ ವರ್ಗದವರಿಂದ ತಿರಸ್ಕಾರ, ತಾ॥ ೧೧, ೧೫ ಲಾಭ, ಪ್ರವಾಸ,

ವೃಷಭ- ಆರೋಗ್ಯ ಸಾಧಾರಣ ಧನಲಾಭ ಕಡಿಮೆ, ಮಾನಸಿಕ ಚಿಂತೆ ಹೆಚ್ಚು, ಕೌಟುಂಬದಲ್ಲಿ ಕಿರುಕುಳ, ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ, ಮಿತ್ರರಿಂದ ಅವಮಾನ, ಬಂಧುವರ್ಗದವರಿಂದ ತಿರಸ್ಕಾರ, ತಾ॥ ೧೩, ೧೪, ಪ್ರವಾಸ, ಖರ್ಚು

ಮಿಥುನ- ಆರ್ಥಿಕ ಸ್ಥಿತಿ ಸಾಧಾರಣ, ಧನಲಾಭ ಚೆನ್ನಾಗಿರುತ್ತದೆ, ಖರ್ಚು ಕಡಿಮೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರ ವರ್ಗದವರಿಂದ ಸನ್ಮಾನ ತಾ॥ ೧೪, ೧೫ ಲಾಭ, ಪ್ರವಾಸ, ಮಿತ್ರ ದರ್ಶನ.

ಕಟಕ- ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ಖರ್ಚು ಅಧಿಕ, ಮಂಗಳ ಕಾರ್ಯಗಳಿಗಾಗಿ ಪ್ರವಾಸ ಮತ್ತು ಧನವ್ಯಯ, ಅಧಿಕಾರಿ ವರ್ಗದವರಿಂದ ಸಹಾಯ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ತಾ॥ ೧೩, ೧೫ ಲಾಭ, ಪ್ರವಾಸ

ಸಿಂಹ- ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಬಂಧು ಮಿತ್ರರಿಂದ ಸನ್ಮಾನ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ॥ ೧೩, ೧೫ ಚಿಂತೆ, ಅಪಘಾತ.

ಕನ್ಯಾ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಕಡಿಮೆ, ಖರ್ಚು ಅಧಿಕ, ಧಾರ್ಮಿಕ ಮತ್ತು ಮಂಗಳ ಕಾರ್ಯಗಳಿಗಾಗಿ ವಿಶೇಷ ಧನವ್ಯಯ, ಪ್ರವಾಸ, ತಾ॥ ೧೨, ೧೪ ಚಿಂತೆ, ನಷ್ಟ.

ತುಲಾ- ಆರೋಗ್ಯ ಕೆಡುತ್ತದೆ, ಧನಲಾಭ ಕಡಿಮೆ, ಖರ್ಚು ಅಧಿಕ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ನಷ್ಟ, ಅಧಿಕಾರ ವರ್ಗದವರಿಂದ ಅವಮಾನ, ಶತ್ರುಗಳಿಂದ ಕಿರುಕುಳ ಹೆಚ್ಚು, ತಾ॥ ೧೧, ೧೪ ಲಾಭ, ಶಾಂತಿ.

ವೃಶ್ಚಿಕ- ದೇಹಸ್ಥಿತಿ ಉತ್ತಮ, ಧನಲಾಭ, ಉತ್ತಮ, ಖರ್ಚು ಕಡಿಮೆ, ಪ್ರವಾಸದಿಂದ ಸನ್ಮಾನ ಮತ್ತು ಲಾಭ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಬಂಧುಗಳ ಆಗಮನದಿಂದ ಸಂತೋಷ, ತಾ॥ ೧೨, ೧೪, ೧೫ ಲಾಭ, ಶಾಂತಿ, ಮಿತ್ರದರ್ಶನ

ಧನಸ್ಸು- ಆರ್ಥಿಕ ಸ್ಥಿತಿ ಉತ್ತಮ, ಅಧಿಕ ಸ್ಥಿರ ಆದಾಯಗಳು, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ, ಖರ್ಚು, ಅಧಿಕಾರಿ ವರ್ಗದವರಿಂದ ಉದ್ಯೋಗದಲ್ಲಿ ಪ್ರಗತಿ, ವ್ಯಾಪಾರ ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ತಾ॥ ೧೩, ೧೫ ಲಾಭ, ಪ್ರವಾಸ

ಮಕರ- ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಡಿಮೆ, ಖರ್ಚು ಎಲ್ಲೆ ಮೀರುವುದು, ಕೌಟುಂಬಿಕ ಆರೋಗ್ಯಸ್ಥಿತಿ ಕೆಟ್ಟು ಅಶಾಂತಿ ಹೆಚ್ಚುವುದು, ತಾ॥ ೧೨, ೧೫ ಸಾಧಾರಣ ಶಾಂತಿ, ಲಾಭ.

ಕುಂಭ ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ಮಿತ್ರರಿಂದ ಸಹಾಯ, ಬಂಧು ದರ್ಶನ ತಾ॥ ೧೧, ೧೩ ಲಾಭ, ಪ್ರವಾಸ.

ಮೀನ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಕಡಿಮೆ, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಮ(ಂಗಳ)
ಗಳ ಕಾರ್ಯಗಳಿಗಾಗಿ ಖರ್ಚು, ಪ್ರವಾ
ಬಂದ ಅಪಘಾತ, ತಾ॥ ೧೦, ೧೨ ಲಾ
ಮಿತ್ರಭೇಟಿ.

ಸೆಂಟ್ ಫಿಲೋಮಿ ಕಾಲೇಜು

ಮೈಸೂರು ಸೆಂಟ್ ಫಿಲೋಮಿ
ಲೇಜಿನಲ್ಲಿ ವ್ಯಾಸಂಗ ಮಾಡುತ್ತಿ
ಸುಮಾರು ೭೦-೮೦ ಮಂದಿ ವಿದ್ಯಾರ್ಥಿ
ಕ್ಲಾಸ್ ಪ್ರಮೋಷನ್ ದೊರೆಯದೆ
ದಾಗಿ ತಿಳಿದುಬಂದಿದೆ. ಇದು
ಗಳ ಪೈಕಿ, ಮೂರರಲ್ಲಿ ಉತ್ತೀ
ದ್ದು ಒಟ್ಟಿನಲ್ಲಿ ಶೇಕಡ ೩೫ ನಂ
ನ್ನು ಪಡೆದಿರುವರು ಎಲ್ಲಾ ಕಾಲೇ
ಕ್ಲಾಸ್ ಪ್ರಮೋಷನಿಗೆ ಅರ್ಹರೆಂ
ದು ಬಂದಿದೆ. ಅಲ್ಲದೆ ಮೂರು ಪ
ಗಳಲ್ಲಿ ತೇರ್ಗಡೆಯಾಗದಿದ್ದರೂ,
ಭಾಗಗಳಲ್ಲಿ ಶೇಕಡ ೪೦ ನಂಬರು
ಪಡೆದವರೂ ಪ್ರಮೋಷನಿಗೆ ಅರ್ಹ
ರೆಂದೂ ತಿಳಿದು ಬಂದಿದೆ ಹಾಗೆ
ಲೇಟ್ ಕೌನ್ಸಿಲ್‌ನವರು ವಿದ್ಯಾ
ಸಹಾಯಕ್ಕಾಗಿ ಇನ್ನೂ ಉದಾರ
ಯಿಂದ ಕ್ಲಾಸ್ ಪ್ರಮೋಷನ್ ವಿಚಾ
ರ್ಧರಿಸಲು ಸರ್ವತಂತ್ರ ಸ್ವತಂತ್ರ
ಸಹಾ ಗೊತ್ತಾಗಿದೆ ಹೀಗಿದ್ದೂ
ತರಗತಿಗಳಲ್ಲಿ ವಿದ್ಯಾರ್ಥಿಗಳ ಪ್ರಮೋ
ವಿಷಯದಲ್ಲಿ ಮೇಲ್ಕಂಡ ಕಾಲೇಜಿ
ಔದಾರ್ಯರಹಿತರಾಗಿರುವುದು ವಿದ
ಗಳ ಮತ್ತು ಅವರ ಪೋಷಕರ ದು
ಗ್ಯವೆನ್ನಬೇಕು. ಬಾಲ್ಯಾವಸ್ಥೆಯಲ್ಲಿ
ಈ ಕಾಲೇಜಿನ ಭವಿಷ್ಯದ ಏಳಿಗೆಗೂ
ನೀತಿಯು ಸಹಾಯಕವಾಗಲಾರದು

ಸರ್ಕಾರದವರೂ ಸಹಾ ಮುಂದೆ
ನಾಂಗದ ವಿದ್ಯಾಭಿವೃದ್ಧಿಗಾಗಿ ಪರಿ
ಫಲಿತಾಂಶಗಳಲ್ಲಿ ಉದಾರ ನೀತಿಯ
ಅವಲಂಬಿಸಿರುವುದು ಸರ್ವವಿದಿತವಾ
ಷಯವೇ ಆಗಿದೆ ಹೀಗಿರುವಲ್ಲಿ ಈ
ಲೇಜಿನವರೂ ಸಹ ವಿದ್ಯಾರ್ಥಿಗಳಿಗೆ
ಮೋಷನ್ ದೊರಕಿಸಿಕೊಟ್ಟು, ನಿರಾಶ
ರುವ, ಅವರ ಪೋಷಕರಿಗೂ ತೃಪ್ತಿ
ಹ ಕೊಡುವುದು ಸರ್ವ ಸಮ್ಮತವಾ
ತ್ತಿಗೆ. ಅಲ್ಲದೆ ವಿದ್ಯಾರ್ಥಿಗಳ ಹಾಜ
ಯ ಎಣಿಕೆಯಲ್ಲೂ ಇನ್ನೂ ಹೆಚ್ಚಿನ
ದಾರ್ಯವನ್ನು ತೋರಿಸಬೇಕಾಗಿ ಕೇ
ಲಾಗಿದೆ. ಈ ಕಾಲೇಜಿನಲ್ಲಿ ಈ ಮ
೧೬ ನೇ ತಾರೀಖು ಸೀನಿಯರ್ ತರ
ಗಳು ಪ್ರಾರಂಭವಾಗುವ ಮುನ್ನ ಈ
ಷಯವನ್ನು ಪರಿಶೀಲಿಸಿ ಉಪಕಾರ ಮ
ಡುವರೆಂದು ನಂಬಲಾಗಿದೆ.

ನೊಂದ ತಂ

ರಾಜಕಮಲ್,
ತಾ॥ ೬-೬-೪೭ ರಿಂದ
ಏಳನೇ ವಾರ
ಪ್ರತಿ ದಿನ ೨ ಆಟಗಳು
ಗೊಲ್ಲಭಾಮ
(ತೆಲುಗು)

ಸ್ಪೆಷಲ್ ಪ್ರೋಗ್ರಾಂ
6-6-47 ರಿಂದ ಏಳು ದಿನಗಳು
ಪ್ರತಿ ದಿನ ಬೆಳಗ್ಗೆ 10-30 ಕ್ಕೆ
ಔರತ್ ಅಥವಾ
— ಸ್ತ್ರೀ —
—: ಭೂಮಿಕೆ :—
ಸುರೇಂದ್ರ, ಸರ್ದಾರ್ ಅಕ್ತರ್.

ವುಡ್‌ಲ್ಯಾಂಡ್ಸ್
8-6-47 ರಿಂದ
ಚಿಕ್ಕರಿದ ೬ ನೇ ವಾರ
ಪ್ರತಿ ದಿನ ೩ ಆಟಗಳು
ನಾವು ಇಬರು
(ತಮಿಳು)
-: ಪಾತ್ರ :-
ಟಿ ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್
ಅಶೋಕಾ ರಸ್ತೆ, ಮೈಸೂರು : : ಫೋನ್ ೪೧೧
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಗಳಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ ಎಲ್ಲಾ ತರಹೆಯ ಬೆಳ್ಳಿಯ ಪಟಗಳೂ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ
ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಅಪೇರಾಟಾಕೀಸ್, ಮೈಸೂರ
೭-೬-೪೭ ರಿಂದ ೮ ನೇ ವಾರ
ರಾಜಕುಮಾರಿ
Morning shows from 6-6-4
China's Little Devils

ಸಾಧ್ವಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

Edited, printed and published by A. R. Nagarajan at the Sadhvi Press D Subbaiah Road Mysore

ಫೋನ್ ನಂ. ೫೯೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಮಂಗಳವಾರ ೧೦—೬—೪೭ [ಸಂಚಿಕೆ ೨೫೯

ಬ್ರಿಟಿಷ್ ಚಕ್ರವರ್ತಿಗಳಿಗೆ ಲೆಟರ್ ಬಾಂಬುಗಳು

ಅಂತರ್ಜಾತೀಯ ವಿವಾಹ ಮಸೂದೆ

ಪ್ರ॥ ಪ್ರ॥ ಸಭೆಯಲ್ಲಿ ಚರ್ಚೆ

ಸ್ವಂ ಸು ಫೋ॥] ಬೆಂಗಳೂರು ೧೦

ನಿನ್ನೆ ದಿನ ಮುಂದುವರಿದ ಪ್ರ॥ಪ್ರ॥ ಸಭೆಯಲ್ಲಿ ಶ್ರೀ॥ ಗೋಪಾಲಸ್ವಾಮಿ ಐಯ್ಯಂಗಾರರಿಂದ ಸೂಚಿಸಲ್ಪಟ್ಟಿದ್ದ ಅಂತರ್ಜಾತೀಯ ವಿವಾಹ ಮಸೂದೆಯ ಮೇಲೆ ದೀರ್ಘವಾಗಿ ಚರ್ಚೆ ನಡೆದ ನಂತರ ಮಸೂದೆಯು ಬಹುಮತದಿಂದ ಸಭೆಯಲ್ಲಿ ಅಂಗೀಕೃತವಾಯಿತು. ಮಸೂದೆಯನ್ನು ಕೆಲವರು ವಿರೋಧಿಸಿದರು. ಶ್ರೀ॥ ಶಂಕರಲಿಂಗೇಗೌಡರು ನಿರ್ಣಯದ ಪರವಾಗಿ ಮಾತನಾಡಿ ಮನುಧರ್ಮಶಾಸ್ತ್ರದಲ್ಲಿಯೂ ಸಹ ಅಂತರ್ಜಾತೀಯ ವಿವಾಹಕ್ಕೆ ಅವಕಾಶವಿದೆಯೆಂದು ಹೇಳಿದರು. ಈ ಮಸೂದೆಯನ್ನು ಜಾರಿಗೆ ತರುವುದರಿಂದ ಭಿನ್ನತೆಗಳು ದೂರವಾಗುವುವೆಂದೂ, ಈಗಿನ ಪರಿಸ್ಥಿತಿಯಲ್ಲಿ ಇದು ಅತ್ಯಗತ್ಯವೆಂದೂ ಮಸೂದೆಯನ್ನು ಸಮರ್ಥಿಸಿ ಶ್ರೀ॥ ಶ್ಯಾಮಯ್ಯಂಗಾರ್ಯರು ನುಡಿದರು. ಬೇಕಾದವರು ಅಂತಹ ವಿವಾಹಗಳನ್ನು ಮಾಡಿಕೊಳ್ಳಲು ಅಡ್ಡಿಯಿಲ್ಲವೆಂದೂ, ಆದರೆ ಇದನ್ನು ಶಾಸನವನ್ನಾಗಿ ಮಾಡಲಾಗದೆಂದೂ ಹೇಳಿ ಶ್ರೀ॥ ಎಫ್. ಓ. ದೇವರಾಜೇ ಅರಸರು ನಿರ್ಣಯವನ್ನು ವಿರೋಧಿಸಿದರು. ಈಗ ಹಿಂದೂ ಜನಾಂಗಕ್ಕೆ ಸೇರಿದ ವಿವಿಧ ಜಾತಿಗಳಲ್ಲಿಯೂ ದ್ವೇಷ, ವೈಷಮ್ಯಗಳಿವೆಯೆಂದೂ, ಹಿಂದೆ ಹೀಗಿದ್ದಾಗ ಬಸವಣ್ಣನವರೇ ಮೊದಲಾದವರು ಅವುಗಳನ್ನು ನಿವಾರಿಸಲು ಅಂತರ್ಜಾತೀಯ ವಿವಾಹಕ್ಕೆ ಬೆಂಬಲ ನೀಡಿದರೆಂದೂ, ಅದು ಶಾಸ್ತ್ರ ಸಮ್ಮತವೆಂದೂ ಹೇಳಿ ಶ್ರೀ॥ ಡಿ. ಹೆಚ್. ಚಂದ್ರಶೇಖರಯ್ಯನವರು ನಿರ್ಣಯಕ್ಕೆ ಬೆಂಬಲವಿತ್ತರು. ಈ ವಿಚಾರವನ್ನು ಕಾಲಸ್ಥಿತಿಗನುಸಾರವಾಗಿ ಅನ್ವಯಿಸಿಕೊಳ್ಳಬೇಕೆಂದೂ ಹಿಂದೂ ಸಂಘಟನೆಗೆ ಅದು ಅಗತ್ಯವೆಂದೂ ಹೇಳಿ ಶ್ರೀ॥ ಭೂಪಾಲಂ ಚಂದ್ರಶೇಖರಯ್ಯನವರು ನಿರ್ಣಯದ ಪರವಾಗಿ ಮಾತನಾಡಿದರು.

ಮುಸ್ಲಿಂ ಲೀಗಿನ ಮಿ॥ ಖಲೀಲರು ಇದರಿಂದ ಹಿಂದೂಗಳಿಗೆ ಯಾವ ಪ್ರಯೋಜನವೂ ಆಗ ವುದಿಲ್ಲವೆಂದೂ ಇದು ಕ್ರೋಧಯುಂಟಾದ ಅನೇಕರನ್ನು ಸೆಳೆಯುವುದಕ್ಕಾಗಿ ಹೂಡಿರುವ ತಂತ್ರವೆಂದೂ ಹೇಳಿ ನಿರ್ಣಯವನ್ನು ವಿರೋಧಿಸಿದರು. ಶ್ರೀಮತಿ ಸುನಂದಮ್ಮನವರು ನಿರ್ಣಯದ ಪರವಾಗಿ ಮಾತನಾಡಿ ಬರಿಯ ಹಿಂದೂಗಳಿಗೆ ಮಾತ್ರ ಅನ್ವಯಿಸುವ ಇದು ಹಿಂದೂಗಳಿಗೂ-ಹರಿಜನರಿಗೂ ಉತ್ತೇಜನಕರವಾದುದು. ಈ ವಿಷಯದಲ್ಲಿ ಲೀಗ್ ನಾಯಕರು ಪ್ರವೇಶಿಸಿರುವುದು ತಮಗೆ ಆಶ್ಚರ್ಯವನ್ನುಂಟುಮಾಡಿದೆಯೆಂದು ಹೇಳಿ ಮಿ॥ ಖಲೀಲರ ವಿರೋಧವನ್ನು ಟೀಕಿಸಿದರು.

ಲೀಗ್ ಸದಸ್ಯರೂ ಸಹ ಮಸೂದೆಯ ಪರವಾಗಿ ಓಟು ಮಾಡಿದರು

ಇಂಡಿಯಾ ಎಂಬ ಹೆಸರು ಉಳಿಯುವುದು

ಪ್ಲೀಜ್] ಲಂಡನ್ ೬

ವಿಶ್ವ ಸಂಸ್ಥೆಯಲ್ಲಿ ಹಿಂದೂಸ್ಥಾನದವರಾಗಲೀ ಪಾಕಿಸ್ಥಾನದವರಾಗಲೀ ಸದಸ್ಯತ್ವನ ತರದೆ ಇಂಡಿಯಾ ದೇಶವೇ ಆ ಸ್ಥಾನ್ ಅಲ್ಲಿ ಸ್ಥಾನಪಡೆದಿರುವುದರಿಂದ ಭಾರತವು ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳಾದರೂ ಇಂಡಿಯಾ ದೇಶವೆಂಬ ಹೆಸರು ಉಳಿಯುವುದು ಎಂಬುದಾಗಿ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ದಿಲ್ಲಿ ಬಾತ್ಮೀದಾರರು ತಿಳಿಸುತ್ತಾರೆ

ವಂದೇಮಾತರಂ ಗೀತೆ

ಪ್ರ॥ ಪ್ರ॥ ಸಭೆಯಲ್ಲಿ ಚರ್ಚೆ

ಸ್ವಂ ಸು ಫೋ॥] ಬೆಂಗಳೂರು ೧೦

ಹಿಂದೂ ಮತ್ತು ಮುಸ್ಲಿಂ ಬಾಲಕರಿರುವ ಸರ್ಕಾರಿ ಶಾಲೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿಸುತ್ತಿರುವುದನ್ನು ನಿಲ್ಲಿಸಬೇಕೆಂಬುದಾಗಿ ಮುಸ್ಲಿಂ ಲೀಗ್ ನಾಯಕರಾದ ಮಿ॥ ಎ. ಜಿ. ಖಲೀಲರು ಮಂಡಿಸಿದ್ದ ನಿರ್ಣಯವು ನಿನ್ನೆ ಬಹುಮತದಿಂದ ಬಿದ್ದುಹೋಯಿತು. ಬಹಳ ಹಿಂದಿನಿಂದಲೂ ಸಂಸ್ಥಾನದಲ್ಲಿ ಕೋಮುವಾರು ಸೌಹಾರ್ದವು ನೆಲಸಿದ್ದಿತೆಂದೂ ಆದರೆ ಕಳೆದ ವರುಷಗಳಿಂದ ಮಾತ್ರ, ಅದು ಕೆಟ್ಟಿತೆಂದೂ ಹೇಳಿ ಸಂಸ್ಥಾನದಲ್ಲಿ ಕೋಮುವಾರು ಶಾಂತಿ ಸೌಹಾರ್ದಗಳು ನೆಲಗೊಳ್ಳುವಂತೆ ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆಂದು ಹೇಳಿದರು. ಶಾಲೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡುವುದರಿಂದ ಶಾಂತಿ ಕಲಕುತ್ತಿದೆ. ಹಿಂದೂಗಳು ಇದಕ್ಕೆ ರಾಜಕೀಯ ಬಣ್ಣ ಕೊಟ್ಟು ಅದನ್ನು ಹಾಡಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಅದರಿಂದ ಏನೂ ಅರಿಯದ ಬಾಲಕರ ಮೇಲೆ ಕೋಮುವಾರು ಭಿನ್ನತೆಯು ಬೆಳೆಯುತ್ತಿದೆ. ಈ ಗೀತೆಯು ಬಂಗಾಳಿಗಳಿಂದ ರಚಿತವಾಗಿರುವ ಪದ್ಯದ ಒಂದು ಭಾಗ. ಹಿಂದೆ ಮುಸ್ಲಿಮರು ಬಂಗಾಳವನ್ನು ಆಕ್ರಮಿಸಿದಾಗ ಅಲ್ಲಿನ ಹಿಂದೂಗಳನ್ನು ಅವರ ಮೇಲೆ ಎತ್ತಿಕಟ್ಟುವುದಕ್ಕಾಗಿ ಈ ಪದ್ಯವನ್ನು ರಚಿಸಲಾಯಿತು. ಸಂಸ್ಥಾನದ ಹಿಂದೂ, ಮುಸ್ಲಿಂ ಸೌಹಾರ್ದಗಳನ್ನು ಸ್ಥಾಪಿಸಲು ಈ ಗೀತೆಯ ಹಾಡುವಿಕೆಯನ್ನು ನಿಲ್ಲಿಸಿ ರಾಷ್ಟ್ರ ಗೀತೆಯನ್ನು ಮಾತ್ರ ಹಾಡುವಂತೆ ವಿಧಿಸಬೇಕು—ಎಂಬುದಾಗಿ ಮಿ॥ ಖಲೀಲರು ನಿರ್ಣಯದ ಮೇಲೆ ಭಾಷಣ ಮಾಡಿದರು. ಮಿ॥ ಗೌಸ್ ಮೊಹಿಯುದ್ದೀನರವರು ನಿರ್ಣಯವನ್ನು ಸಮರ್ಥಿಸಿದರು.

ಕಾಂಗ್ರೆಸ್ ನಾಯಕರಾದ ಶ್ರೀ ಟಿ ಸಿ ಗುಪ್ತರು ನಿರ್ಣಯವನ್ನು ವಿರೋಧಿಸಿ ಸಾವಿರಾರು ವರ್ಷಗಳಿಂದ ಹಿಂದೂ ಮುಸ್ಲಿಮರು ಒಟ್ಟಾಗಿದ್ದು ಈಗ ತಾವೇ ಬೇರೆ ಜನಾಂಗವೆಂದು ಹೇಳಿಕೊಳ್ಳುತ್ತಿರುವುದನ್ನು ಖಂಡಿಸಿದರು. ಅವರ ನಿಲುವಿನ ಮುಸ್ಲಿಮರಿಗೆ ಇಲ್ಲಿ ಪೌರಸ್ವಾತಂತ್ರ್ಯವೇ ಇಲ್ಲವೆಂದು ಹೇಳಬೇಕಾಗಿ ಬಂದಿದೆಯೆಂದು ನುಡಿದರು. ವಂದೇ ಮಾತರಂ ಸ್ವಾತಂತ್ರ್ಯ ಗೀತೆ ಅದನ್ನು ಎಲ್ಲರೂ ಹಾಡಲೇಬೇಕೆಂಬ ಒತ್ತಾಯವನ್ನು ಯಾರೂ ಮಾಡಿಲ್ಲ. ವೈಸರಾಯಿನ ರಾಷ್ಟ್ರಗೀತೆಯನ್ನು ಹಾಡೋಣ ಆದರೆ ವಂದೇ ಮಾತರಂ ಗೀತೆಯನ್ನು ಹಾಡಕೂಡದೆಂದು ನಿರ್ಧರಿಸಿದರೆ ಆಗ ದೇಶದಲ್ಲಿ ಅಶಾಂತಿಯುಂಟಾಗುವುದು ಎಂದು ಹೇಳಿದರು

ಬೆಂಗಳೂರಿನ ಪೌರಸಭೆಯಲ್ಲಿ ಮಿ॥ ಖಲೀಲರು ವಂದೇ ಮಾತರಂ ಗೀತೆಗೆ ಬೆಂಬಲವಿತ್ತು ಈಗ ಅದನ್ನು ವಿರೋಧಿಸುತ್ತಿರುವುದು ತಮಗೆ ಆಶ್ಚರ್ಯವನ್ನುಂಟುಮಾಡುತ್ತಿದೆಯೆಂದು ಹೇಳಿ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ನಿರ್ಣಯವನ್ನು ವಿರೋಧಿಸಿ ಭಾಷಣ ಮಾಡಿ ಅನಂತರ ವಂದೇಮಾತರಂ ಗೀತೆಯನ್ನು ಹಾಡಿದರು ಚರ್ಚೆ ೩ ಗಂಟೆ ಕಾಲ ನಡೆಯಿತು

ಸಭೆ ಮುಕ್ತಾಯವಾದಾಗ ಲೀಗಿನವರ ಹೊರತು ಉಳಿದ ಬಹು ಮಂದಿ ಸದಸ್ಯರು ಸಭೆಯಲ್ಲಿ ವಂದೇಮಾತರಂ ಗೀತೆಯನ್ನು ಹಾಡಿದರು.

ನಿರ್ಣಯವನ್ನು ವಿರೋಧಿಸಿ ಸಂಸ್ಥಾನದ ಮುಸ್ಲಿಮರು ಬ್ರಿ॥ ಭಾರತದ ಮುಸ್ಲಿಮರ ಅನುಕರಣೆ ಮಾಡುತ್ತಿರುವುದನ್ನು ಟೀಕಿಸಿ ಶ್ರೀಗಳಾದ ಎ. ಜಿ. ರಾಮರಾವ್ ಮತ್ತು ಎ. ಸುಬ್ಬಯ್ಯನವರುಗಳು ಮಾತನಾಡಿದರು

ಕೆಲವು ಅಧಿಕಾರಿಗಳು ಸಾಗಿಗೆ ಬರದೆ ಕಳೆದ ಚಳವಳಿಯಲ್ಲಿ ಭಾಗಿಗಳಾಗಿದ್ದರೆಂಬ ಶ್ರೀ ಎಂ. ವಿ. ಕೃಷ್ಣಪ್ಪನವರ ಸೂಚನೆಗೆ ಉತ್ತರವಾಗಿ ಅಧ್ಯಕ್ಷರು ಯಾರೂ ಹೋಗಿರಲಿಲ್ಲವೆಂದು ತಿಳಿಸಿದರು. ಶ್ರೀ ಕೃಷ್ಣಪ್ಪನವರು ತಾವು ಅವರುಗಳು ಅಲ್ಲಿಗೆ ಹೋಗಿದ್ದಾಗ ಅವರ ಫೋಟೋಗಳನ್ನು ತೆಗೆದಿರುವುದಾಗಿ ಹೇಳಿದುದರ ಮೇಲೆ ಅಧ್ಯಕ್ಷರು ಅವುಗಳನ್ನು ಪ್ರದರ್ಶಿಸಿದರೆ ಆ ಅಧಿಕಾರಿಗಳ ಮೇಲೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ನುಡಿದರು

ದಿವಾನರ ಆಗಮನ

ದೆಹಲಿಗೆ ತೆರಳಿರುವ ದಿವಾನರಾದ ಸರ್ ಆರ್ಕಾಟ್‌ರವರು ನಾಳಿದ್ದು ಇಲ್ಲಿಗೆ ಆಗಮಿಸುವರು

ಜೋಧ್‌ಪುರದ ಮಹಾರಾಜರ ನಿಧನ

ನಿನ್ನೆ ಮಧ್ಯಾಹ್ನ ಜೋಧ್‌ಪುರ ಸಂಸ್ಥಾನದ ಮಹಾರಾಜರವರು ನಿಧನರಾದರೆಂಬ ದುಃಖದ ವಾರ್ತೆ ಬಂದಿದೆ

ಹಿಂದೂಸ್ತಾನ್-ಪಾಕಿಸ್ತಾನ್ ಘೋಷಣೆ

ಪ್ರ॥ ಪ್ರ॥ ಸಭೆಯಲ್ಲಿ ಕೋಲಾಹಲ

ಸ್ವಂ ಸು.ಫೋ॥] ಬೆಂಗಳೂರು ೧೦

ಪ್ರ॥ ಪ್ರ॥ ಸಭೆಯ ಕಾರ್ಯಕಲಾಪಗಳು ಡಾ॥ ರಾಯರವರ ಅಧ್ಯಕ್ಷತೆಯಲ್ಲಿ ಈ ದಿನ ಮಧ್ಯಾಹ್ನ ೧೨ ಘಂಟೆಗೆ ಆರಂಭವಾದುವು. ಸಭೆ ಆರಂಭವಾಗುವ ಮುನ್ನ ಮುಸ್ಲಿಮೇತರರು ವಂದೇ ಮಾತರಂ ಗೀತೆಯನ್ನು ಹಾಡಿದರು. ಮುಸ್ಲಿಮರಿಂದ ನಾರ್-ಎ-ತಕಬೀರ್; ಅಲ್ಲಾ ಹೋ ಅಕ್ಬರ್ ಪಾಕಿಸ್ತಾನ್ ಜಿಂದಾಬಾದ್ ಘೋಷಣೆಯಾಯಿತು. ಹಿಂದುಗಳು ಹಿಂದೂಸ್ತಾನ್ ಜಿಂದಾಬಾದ್; ಬೋಲೋ ಜಯಚಾಮರಾಜ ಒಡೆಯರ್ ಬಹದ್ದೂರ್ ಕೀ ಜೈ ಘೋಷಣೆ ಮಾಡಿದರು. ಅನಂತರ ಸಭೆಯ ಕೆಲಸಕಾರ್ಯಗಳು ಆರಂಭವಾದುವು. ಭೂಪಾಳಂರವರು ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಮಾಡಿದುದನ್ನು ಆಕ್ಷೇಪಿಸಿದರು. ಅದು ಸಭೆ ಆರಂಭವಾಗುವ ಮೊದಲು ಮಾಡಲ್ಪಟ್ಟಿರುವುದರಿಂದ ಸಭೆಯ ಕಾರ್ಯಕಲಾಪಗಳಲ್ಲಿ ಸೇರುವುದಿಲ್ಲವೆಂದು ಅಧ್ಯಕ್ಷರು ತಿಳಿಸಿದರು. ಶ್ರೀಮನ್ಮಹಾರಾಜರ ಬಗ್ಗೆ ಮಾಡಿದ ಘೋಷಣೆಯನ್ನು ಕೇಳಿದಾಗ ಅದನ್ನು ತೂಗಬಹುದೆಂದು ತಿಳಿಸಿದರು

ಮುದ್ರಣಾಲಯಗಳನ್ನೂ ಮತ್ತು ವರ್ತಮಾನ ಪತ್ರಿಕೆಗಳನ್ನೂ ಕ್ರಮಗೊಳಿಸುವ ಮತ್ತು ರಿಜಿಸ್ಟರ್ ಮಾಡಿಸುವ ಬಗ್ಗೆ ಸರ್ಕಾರದವರಿಂದ ಮಂಡಿಸಲ್ಪಟ್ಟಿರುವ ಮಸೂದೆಯ ಮೇಲೆ ಚರ್ಚೆ ನಡೆಯುತ್ತಿದೆ ಕಾಂಗ್ರೆಸ್ ಮತ್ತು ಲೀಗ್ ಪಕ್ಷದವರು ಮಸೂದೆಯನ್ನು ವಿರೋಧಿಸುವರು

ಜಾರ್ಜ್ ದೊರೆಗಳಿಗೆ ಕಾಗದದ ಬಾಂಬು

ಕಾಗದದಲ್ಲಿ ಪ್ರಾಣಹಾನಿಕರವಾದ ಬಾಂಬಿನ ಪ್ರತಿಯನ್ನು ತುಂಬಿ ಬ್ರಿ॥ ದೊರೆಗಳಾದ ಜಾರ್ಜರಿಗೆ ತಾನು ಕಳುಹಿಸಿದುದಾಗಿ ಸ್ಟರ್ನ್ ಗ್ಯಾಂಗ್ ಎಂಬ ಸಂಸ್ಥೆಗೆ ಸೇರಿದ ಅಬು ಶಾಮ್ ಎಂಬುವನು ತಿಳಿಸಿರುವನು. ಅವನು ಇದೇ ಬಗೆಯ ೨೧ ಲೆಟರ್ ಬಾಂಬುಗಳನ್ನು ಬ್ರಿಟನ್ನಿನ ನಾಯಕರಾದ ಚರ್ಚಿಲ್, ಅಟ್ಲೀ ಮೊದಲಾದವರಿಗೆ ಕಳುಹಿಸಿದ್ದುದಾಗಿಯೂ ಆದರೆ ತಮ ಸರ್ವ ವಿಫಲವಾಗಿರುವುದರಿಂದ ಇನ್ನು ಮುಂದೆ ಅವರ ಪ್ರಾಣ ಹರಣಕ್ಕೆ ಬೇರೆ ಹೊಸ ಮಾರ್ಗವನ್ನನುಸರಿಸುವುದಾಗಿಯೂ ಅವನು ಹೇಳಿರುವನು.

LATEST NEWS

ಸರ್ಕಾರಕ್ಕೆ ಭಾರಿ ಸೋಲು

ಸ್ವಂ ಸು ಫೋ॥] ಬೆಂಗಳೂರು ೧೦

ಪತ್ರಿಕೆ ಮತ್ತು ಮುದ್ರಣಾಲಯಗಳಿಗೆ ಸಂಬಂಧಿಸಿದಂತೆ ಸರ್ಕಾರದವರಿಂದ ಮಂಡಿಸಲ್ಪಟ್ಟಿದ್ದ ಮಸೂದೆ ಕಾನೂನು ೧೮ ೨೦ ಓಟುಗಳಿಂದ ಈ ದಿನದ ಪ್ರ॥ ಪ್ರ॥ ಸಭೆಯಲ್ಲಿ ಬಿದ್ದುಹೋಯಿತು ಲೀಗಿನವರ, ಬಹುಮಂದಿ ಸ್ವತಂತ್ರರೂ ಮಸೂದೆಯ ಪರವಾಗಿಯೂ, ಕಾಂಗ್ರೆಸ್ಸಿನವರೂ ಉಳಿದ ಸ್ವತಂತ್ರರೂ ಮಸೂದೆಯ ವಿರೋಧವಾಗಿಯೂ ಓಟು ಮಾಡಿದರು

ಸಾಧ್ವಿ

ತಾ|| ೧೦-೬-೪೭ ಮಂಗಳವಾರ

ದಿವಾನರು ಬರುವವರೆಗೆ ಕಾಯುವುದೇಕೆ?

ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವ ವಿಷಯವಾಗಿ ನೆನ್ನೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ನಾಯಕರು ಮತ್ತೆ ಪ್ರಶ್ನೆಯನ್ನೆತ್ತಿದರು. ಮೈಸೂರು ಮಹಾರಾಜರ ಘೋಷಣೆಯ ನಂತರ ಈ ವಿಷಯವನ್ನು ತೀರ್ಮಾನಿಸುವುದಾಗಿ ದಿವಾನರು ಹೇಳಿ ದಿನಗಳಾದುವು. ಇನ್ನೂ ಯಾವ ನಿರ್ಧಾರವೂ ಹೊರಬಿದ್ದಿಲ್ಲ ಎಂಬುದಾಗಿ ತಿಳಿಸಲಾಯಿತು. ಇದು ಪ್ರಾಮುಖ್ಯ ವಿಚಾರವೆಂದೂ, ದಿವಾನರು ವಾಪಸ್ ಬಂದ ನಂತರವೇ ಇದನ್ನು ನಿರ್ಧರಿಸಬೇಕಾಗಿದೆಯೆಂದೂ ಅಧ್ಯಕ್ಷರಾದ ಡಾ|| ರಾಯರವರು ನುಡಿದರು.

ರಾಜ್ಯಾಂಗ ಸಭೆಯಲ್ಲಿ ಇನ್ನೂ ಸೇರದಿರುವ ಸಂಸ್ಥಾನಗಳು ಈ ಕೂಡಲೇ ಸೇರಲು ತ್ವರಿತವಾದ ಕಾರ್ಯಕ್ರಮಗಳು ಈಗ ನಡೆಯುತ್ತಿವೆ. ರಾಷ್ಟ್ರವಿಭಜನೆಯ ನಂತರ ಸಂಸ್ಥಾನಗಳು ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದು ಮೈಸೂರಿನವರು ಹೇಳುತ್ತಾರೆ. ಜಯಪುರ ಮತ್ತು ಬಿಕನೀರ್ ಸಂಸ್ಥಾನಗಳ ಪ್ರಧಾನಿಗಳೂ ಸಹ ಒಂದು ವಿಶೇಷ ಮನವಿಯನ್ನು ಹೊರಡಿಸಿ, ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಸೇರಬೇಕೆಂದು ಒತ್ತಾಯಪಡಿಸಿದ್ದಾರೆ. ಮೈಸೂರು ಸಂಸ್ಥಾನವು ತನ್ನ ಹಿಂದಿನ ನಿರ್ಧಾರಕ್ಕೆ ಅನುಗುಣವಾಗಿ ಈಗ ತಡವಿಲ್ಲದೆ ರಾಜ್ಯಾಂಗ ಸಭೆಯಲ್ಲಿ ಸೇರುವುದು ಉಚಿತವಾಗಿರುತ್ತದೆ.

ಇದುವರೆಗೆ ದಿವಾನರು ಹೇಳಿದ ಅವಧಿಗಳೆಲ್ಲವೂ ಮುಗಿದು ಹೋದುವು. ಮಹಾರಾಜರ ಘೋಷಣೆಯು ಬಹಳ ಹಿಂದೆಯೇ ಎಲ್ಲರಿಗೂ ವಿದಿತವಾಗಿರುತ್ತದೆ. ಮುಂದೆ ಏನು ಮಾಡಬೇಕೆಂಬುದು ಸಕಲರಿಗೂ ಸ್ಪಷ್ಟವೇ ಆಗಿದೆ. ದಿವಾನರು ಇನ್ನು ತಮ್ಮ ಅಭಿಪ್ರಾಯವನ್ನು ರೂಪಿಸಬೇಕಾದುದು ಇಲ್ಲದೆ ನಮ್ಮ ಪ್ರಭುಗಳೂ ಮತ್ತು ಪ್ರಭುತ್ವದವರೂ ಸಹ ಸಮಸ್ತ ವಿಷಯಗಳನ್ನೂ ಪರ್ಯಾಲೋಚಿಸಿರಲೇಬೇಕು. ಆದ್ದರಿಂದ ಒಂದು ನಿರ್ಧಾರಕ್ಕೆ ಬರಲು ಇನ್ನು ತಡಮಾಡಲು ಕಾರಣವಿಲ್ಲ.

ದಿವಾನರು ಅಮೆರಿಕದಲ್ಲಿದ್ದಾಗಲೂ ಮೈಸೂರಿನ ರಾಜ್ಯಾಂಗ ಸುಧಾರಣೆಗಳ ವಿಷಯಗಳನ್ನು ಪರಿಷ್ಕರಿಸುವುದಾಗಿ ತಿಳಿಸಿದ್ದರು. ಈಗ ದೆಹಲಿಯಲ್ಲಿಯೂ ಸರ್ಕಾರದವರು ರಾಜ್ಯಾಂಗ ರಚನಾ ಸಭೆಗೆ ಸೇರುವ ವಿಚಾರವನ್ನು ಪರಿಶೀಲಿಸುವರೆಂದು [illegible] ಇದು ಅಂಚೆ, [illegible], ಮೋಟಾರು, ವಿಮಾನ ಮತ್ತು ರೇಡಿಯೋಗಳ ಯುಗ. ಪ್ರತಿ ಕ್ಷಣದಲ್ಲಿಯೂ ವಿಷಯಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾವಿರಾರು ಮೈಲಿ ದೂರ [illegible] ದಿವಾನರು ಹೋಗಿರುವಲ್ಲಿ ಮೈಸೂರಿನ ವಿಚಾರವನ್ನು ನಿರ್ಧರಿಸಲು ಸಾವಕಾಶ ಮಾಡಬೇಕಾಗಿಲ್ಲ.

ಮುಖ್ಯವಾಗಿ ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳು ಸೇರುವುದೂ ಮತ್ತು ಒಪ್ಪುವುದೂ ಪ್ರಜೆಗಳ ಅಭೀಷ್ಟದಂತೆ ನಡೆಯಬೇಕು. ಮೈಸೂರಿನ ಒಮ್ಮತ [illegible]

ಶ್ರವಣಬೆಳಗೊಳದ ಗೋಮಟೇಶ್ವರ ದೇವಾಲಯ

ಪ್ರ|| ಪ್ರ|| ಸಭೆಯಲ್ಲಿ ಪ್ರಶ್ನೆ

ಸ್ವಂ ವ] ಬೆಂಗಳೂರು ೧೦

ಶ್ರವಣಬೆಳಗೊಳದಲ್ಲಿರುವ ಶ್ರೀ|| ಗೋಮಟೇಶ್ವರ ಸ್ವಾಮಿಯವರ ದೇವಾಲಯದ ಆಡಳಿತ, ವಿಗ್ರಹಗಳ ರಕ್ಷಣೆ, ಪೂಜಾದಿಗಳು, ಸಮಿತಿಯನ್ನು ನಿರ್ಮಿಸಿಲ್ಲದಿರುವುದು ಮುಂತಾದ ವಿಷಯಗಳ ವಿಚಾರವಾಗಿ ಶ್ರೀ ಕೆ ಪಿ ವಜ್ರನಾಥಯ್ಯನವರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಆ ದೇವಾಲಯವು ಮುಜರಾಯಿ ಸ್ವಾಧೀನದಲ್ಲಿರುವುದರಿಂದ ಸಮಿತಿಯನ್ನು ರಚಿಸಿಲ್ಲವೆಂದೂ, ವಿಗ್ರಹದ ರಕ್ಷಣೆಗಾಗಿ ಮುಜರಾಯಿ ಕಮಿಷನರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಕೆಲವು ಪರೀಕ್ಷೆಗಳನ್ನು ನಡೆಸಲಾಗುತ್ತಿದೆಯೆಂದೂ, ಬಹು ಸಮರ್ಪಕವಾದ ಕೂಡಲೇ, ವಿಗ್ರಹದ ರಕ್ಷಣೆಯ ಕೆಲಸ ಕಾರ್ಯಗಳನ್ನು ಆರಂಭಿಸಲಾಗುವುದೆಂದೂ ನ್ಯಾಯಾಂಗ ಕಾರ್ಯದರ್ಶಿಗಳಾದ ಶ್ರೀ|| ಎಸ್. ಶರ್ಕ ರತ್ನರಾಜುರವರು ಹೇಳಿದರು.

ಇಬ್ಬರು ಪ್ರಧಾನಿಗಳ ಮನವಿ

ಇನ್ನೂ ರಾಜ್ಯಾಂಗ ಸಭೆಯಲ್ಲಿ ಸೇರದಿರುವ ಸಂಸ್ಥಾನಗಳು ಈ ಕೂಡಲೇ ಸೇರುವಂತೆ ಒತ್ತಾಯಪಡಿಸಿ ಜಯಪುರ ಸಂಸ್ಥಾನದ ಪ್ರಧಾನಿ ಶ್ರೀ ವಿ. ಟಿ. ಕೃಷ್ಣಮಾಚಾರಿಯರೂ, ಬಿಕನೀರ್ ಸಂಸ್ಥಾನದ ಪ್ರಧಾನಿ ಫಣಿಕ್ಕರ್‌ರವರೂ ಮನವಿಯೊಂದನ್ನು ಹೊರಡಿಸಿರುವರು.

ಇನ್ನು ಮುಂದೆ ಚುನಾಯಿತ ಗೌರ್ನರುಗಳು

ಮುಂದಿನ ಭಾರತ ರಾಜ್ಯಾಂಗದಲ್ಲಿ ಗೌರ್ನರುಗಳನ್ನು ಪ್ರಜೆಗಳೇ ಚುನಾಯಿಸುವಂತೆ ಏರ್ಪಾಡು ಮಾಡತಕ್ಕದ್ದೆಂದು ರಾಜ್ಯಾಂಗ ಸಭೆಯ ಪ್ರಾಂತೀಯ ಉಪಸಮಿತಿಯು ಸೂಚಿಸಿರುತ್ತದೆ. ಪ್ರಾಂತ್ಯಗಳಲ್ಲಿರುವ [illegible] ಗೌರ್ನರರ ಚುನಾವಣೆಯಲ್ಲಿ ಓಟು ಕೊಡಲು ಅರ್ಹರಾಗಿರುವರು.

ಜನರು ರಾಜ್ಯಾಂಗ ಸಭೆಯಲ್ಲಿ ನಮ್ಮ ಸಂಸ್ಥಾನವು ಸೇರಬೇಕೆಂದು ಈಗಾಗಲೇ ಒತ್ತಾಯಪಡಿಸಿದ್ದಾರೆ. ನಮ್ಮ ಪ್ರಭುತ್ವದವರ ಅಭಿಪ್ರಾಯವೂ ಸಹ ಇದೇ ರೀತಿಯಲ್ಲಿಯೇ ಇದೆಯೆಂದು ಬಹಳ ಹಿಂದೆಯೇ ತಿಳಿಸಲಾಗಿತ್ತು. ಆದರೆ ಈ ಪದ್ಧತಿ [illegible] ದ ನೀತಿಯನ್ನು ವಹಿಸಿ [illegible] ಸಂಸ್ಥಾನದ ರಾಜಕೀಯ ಕ್ಷೇತ್ರವೆಲ್ಲವೂ ಈ ಒಗಟು [illegible] ದಿಂದ ಆವರಿಸಲ್ಪಟ್ಟಿರುವುದು ಯಾರಿಗೂ ಸಮಾಧಾನಕರವಲ್ಲ.

ಇನ್ನು ಹೆಚ್ಚು ಕಾಲವಿಳಂಬ [illegible] ಮೈಸೂರಿಗಾಗಲಿ ಇಡೀ ಭಾರತಕ್ಕಾಗಲಿ ಹಿತಕರವಾಗುವುದಿಲ್ಲ. ಆದುದರಿಂದ [illegible] ಕ್ರಮವನ್ನು [illegible] ಇನ್ನಾದರೂ ನಮ್ಮ [illegible] ರಾಷ್ಟ್ರನಾಯಕರ ಮಾತುಗಳಿಗೆ [illegible] ರಾಜ್ಯಾಂಗ ಸಭೆಯಲ್ಲಿ ಸೇರಿ [illegible] ರೆಂದು ನಂಬೋಣವೇ?

Edited printed and published by [illegible] R Nagarsan at the Sadhvi Press D[illegible] Mysore

ಕಾಂ||-ಲೀಗ್‌ನ ತೋರಿಕೆಯಂತೆಯೇ ಹೊಸ ಯೋಜನೆ

ರಾಷ್ಟ್ರವಿಭಜನೆಯು ಮೈಸೂರಿನ [illegible] ಬ್ರಿಟಿಷ್ ಸರ್ಕಾರದವರ ಒತ್ತಾಯದಂತೆ ಆಗಿಲ್ಲ. ಕಾಂಗ್ರೆಸ್ ಮತ್ತು ಲೀಗುಗಳ ಅಭಿಮತದ ಮೇಲೆಯೇ ಮೈಸೂರಿನವರು ರಾಷ್ಟ್ರವಿಭಜನೆಯನ್ನು ಅಂಗೀಕರಿಸಿದರು ಎಂಬುದಾಗಿ ವಲ್ಲಭಭಾಯಿ ಪಟೇಲರು ತಿಳಿಸಿರುವರು. ಮೈಸೂರಿನ [illegible] ಸಂಪೂರ್ಣ ನಂಬಿಕೆಯುಳ್ಳವರಾಗಿಯೂ, ಆಗಸ್ಟ್ ೧೫ ರ ವೇಳೆಗೆ ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಲು ಬ್ರಿಟಿಷರು ಸಿದ್ಧತೆಗಳನ್ನು ನಡೆಸುತ್ತಿರುವರೆಂದೂ, ಸರಿಯಾದ ರೀತಿಯಲ್ಲಿ ಬ್ರಿಟಿಷರು ಕೂಡಲೇ ಹಿಂತಿರುಗಿ ಹೋಗಲು ಮೈಸೂರಿನವರು [illegible] ಗಿದ್ದಾರೆಂದೂ ಅವರು ಹೇಳಿರುವರು. [illegible] ಕಾರ್ಯನೀತಿಯನ್ನು [illegible] ಮಾಡುವುದು ಜಿನ್ನಾರವರ ಕರ್ತವ್ಯವೆಂದೂ, ಪರಿಣಾಮ [illegible] ಮಾರ್ಗದಿಂದ ಆರಿಸುವುದು ಹಿತಕಾರಿಯಾದ್ದೆಂದೂ, ಶಕ್ತಿ ಮತ್ತು ಪ್ರೇಮಗಳಿಂದ ಅವರನ್ನು ಗೆಲ್ಲಬೇಕೆಂದೂ ಮಹಾತ್ಮರು ಸೂಚಿಸಿದರು.

ಕೇಂದ್ರ ಸರ್ಕಾರದಲ್ಲಿ ಮುಸ್ಲಿಮರಿಗೆ ನೌಕರಿ

ಸದ್ಯಕ್ಕೆ ತಮ್ಮ ಸ್ಥಾನವನ್ನು ಬಿಟ್ಟು ಕೊಡಬೇಕಾಗ ಬಂದಿರುವ ಯೋಜನೆಯಿಂದ ಕೇಂದ್ರ ಸರ್ಕಾರದಲ್ಲಿರುವ ಮುಸ್ಲಿಂ ಲೀಗ್ ಮಂತ್ರಿಗಳು ಇತ್ತೀಚೆಗೆ ಐದು ಸಾವಿರ ಜನ ಮುಸಲ್ಮಾನರನ್ನು ನೌಕರಿಗೆ ಭರ್ತಿ ಮಾಡುತ್ತಿರುವರೆಂದೂ ಇದನ್ನು ಕಂಡು ಮೈಸೂರಿನವರು ಹೊಸದಾಗಿ ನೌಕರಿಗೆ ಸೇರಿಸಲ್ಪಟ್ಟವರ ಪಟ್ಟಿಯನ್ನು ಕೊಡುವಂತೆ ಕೇಳಿರುವರೆಂದೂ, ಇವರೆಲ್ಲ ಲೀಗಿನವರು ಪ್ರತಿಭಟಿಸುತ್ತಾರೆಂದೂ ಒಂದು ವರದಿಯು ತಿಳಿಸುತ್ತದೆ.

ಯುದ್ಧದ ಸೇವೆಗಾಗಿ ನೌಕರರಿಗೆ ರಿಯಾಯಿತಿ ಇಲ್ಲ

ಸೈನ್ಯದಲ್ಲಿ ಕೆಲಸಮಾಡಿ ಹಿಂದಿರುಗಿದವರಿಗೆ ಇದುವರೆಗೆ ಸರ್ಕಾರದಿಂದ ಕೊಡುತ್ತಿದ್ದ ರಿಯಾಯಿತಿಗಳನ್ನು ಇನ್ನು ಮುಂದೆ ಕೊಡಲಾಗದೆಂದು ಮದರಾಸ್ ಸರ್ಕಾರವು ನಿರ್ಧರಿಸಿರುವುದಾಗಿ ವರದಿಯಾಗಿದೆ. ನೌಕರಿಗೆ ಹೆಚ್ಚು ಕಾಲ ಸೇವೆ ಸಲ್ಲಿಸಿದವರಿಗಿಂತ [illegible] ಅವರಿಗೆ ಪ್ರಮೋಷನ್ ಕೊಡಲಾಗುವುದನ್ನು ನಿಲ್ಲಿಸಿ [illegible] ನೌಕರರಿಗೆ ನ್ಯಾಯವಾಗಿ ಸಲ್ಲಬೇಕಾದ ಸೌಲಭ್ಯಗಳನ್ನು ತಪ್ಪಿಸಿ ಅನಂತರ ಇವರಿಗೆ ಕೊಡಬೇಕೆಂದು ಅವರು ಆಜ್ಞೆ ಮಾಡಿರುವರು.

ವುಡ್‌ಲ್ಯಾಂಡ್ಸ್

8-6-47 ರಿಂದ

ತಿಕ್ಕಿರಿದ ೩ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

ಬಿ(ತಮಿಳು)

-: ಪಾತ್ರ -

ಟಿ ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ ಆರ್.

ರಾಮಚಂದ್ರನ್ ಮುಂತಾದವರು

ಕೆಲಸಗಾರರ ಮುಷ್ಕರ

ಮೈಸೂರು ೧೨

ಮೈಸೂರಿನಲ್ಲಿರುವ ಕೋರ್ಗ್ ಟಿಂಬರ್ ಮತ್ತು ಪ್ಲೈವುಡ್ ಕಾರ್ಖಾನೆಯವರು ಕಾರಣವಿಲ್ಲದೆ ೧೪ ಜನರನ್ನು ಕೆಲಸದಿಂದ ತೆಗೆದುಹಾಕಿ ಸಂಘದ ಅಧ್ಯಕ್ಷರು ಹೋಗಿ ಮ್ಯಾನೇಜಿಂಗ್ ಡೈರೆಕ್ಟರನ್ನು ನೋಡಿದಾಗ ಇಷ್ಟ ಬಂದವರು ಕೆಲಸ ಮಾಡಬಹುದು ಇಲ್ಲದವರು ಹೋಗಬಹುದು-ಎಂದು ಹೇಳಿರುವ ನೀತಿಯನ್ನು ಪ್ರತಿಭಟಿಸಲು ಕಾರ್ಖಾನೆಯ ಎಲ್ಲಾ ಕೆಲಸಗಾರರು ಕಳೆದ ಶನಿವಾರದಿಂದ ಮುಷ್ಕರ ಹೂಡಿದ್ದಾರೆ. ಅದೇ ದಿನ ಕೆಲಸಗಾರರ ಸಂಘದ ಸಭೆಯು ಕಾಂಗ್ರೆಸ್ ಕಾರ್ಯಾಲಯದಲ್ಲಿ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಆಡಳಿತ ಮಂಡಳಿಯ ನೀತಿಯನ್ನು ಖಂಡಿಸುವ ನಿರ್ಣಯವನ್ನು ಮಾಡಿರುತ್ತದೆ. ಅಲ್ಲದೆ ಕೆಲಸಗಾರರು ಶಿಸ್ತಿನಿಂದಲೂ ಒಗ್ಗಟ್ಟಿನಿಂದಲೂ ನಡೆಯಬೇಕೆಂದು ಕೋರಿರುತ್ತದೆ.

ಸಂತೋಷ ಕೂಟ

ಚಾಮರಾಜನಗರದ ತಾ|| ದೊಡ್ಡರಾಯಪೇಟೆಯ ಶ್ರೀ ಡಿ ಜೆ ಶಂಕರಪ್ಪನವರ ಕುಮಾರರಿಗೂ, ಅದೇ ಗ್ರಾಮದ ಶ್ರೀ ಚಿಕ್ಕಲಿಂಗಪ್ಪನವರ ಸಹೋದರಿ ಸೌ|| ಶಿವಮ್ಮನಿಗೂ ನಡೆದ ವಿವಾಹದ ಸಂಬಂಧವಾಗಿ ನೆನ್ನೆ ದೊಡ್ಡರಾಯಪೇಟೆಯಲ್ಲಿ ಸಂತೋಷ ಕೂಟವನ್ನೇರ್ಪಡಿಸಿ ಅನೇಕ ಬಂಧುಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು.

ಜಯಪುರದಲ್ಲಿ ಪಾನ ನಿರೋಧ

ಗ್ಲೋಬ್] ಜಯಪುರ ೫

ಕಾಲ ಕ್ರಮದಲ್ಲಿ ಜಯಪುರ ಸಂಸ್ಥಾನದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಲಾಗುವುದೆಂದು ಅಲ್ಲಿನ ಪ್ರಧಾನ ಮಂತ್ರಿ ಮತ್ತು ಸಚಿವರು ಪತ್ರಿಕಾ ಸಮ್ಮೇಳನವೊಂದರಲ್ಲಿ ತಿಳಿಸಿರುವರು. ಪ್ರಯೋಗಾರ್ಥವಾಗಿ ೨೧ ವರ್ಷಕ್ಕೆ ಕಡಮೆಯಾದವರು ದ್ರಾಕ್ಷಾರಸವನ್ನು ಕುಡಿಯಬೇಕೆಂಬ ನಿರ್ಬಂಧವನ್ನು ಹಾಕಲಾಗುವುದೆಂದೂ, ಬರುವ ಶಾಸನ ಸಭೆಯಲ್ಲಿ ಈ ಬಗ್ಗೆ ಕಾನೂನನ್ನು ಮಾಡಲಾಗುವುದೆಂದೂ ಅವರು ಹೇಳಿರುವರು.

ರಾಜಕಮಲ್,

ತಾ|| ೬-೬-೪೭ ರಿಂದ

ಎರಡನೇ ವಾರ

ಪ್ರತಿ ದಿನ ೨ ಆಟಗಳು

ಗೊಲ್ಲಭಾಮ

(ತೆಲುಗು)

ಸ್ಪೆಷಲ್ ಪ್ರೋಗ್ರಾಂ

(6 17 ರಿಂದ ಏಳು ದಿನಗಳು

ಪ್ರತಿ ದಿನ ಬೆಳಿಗ್ಗೆ 10 30 ಕ್ಕೆ

ಔರತ್ ಅಥವಾ

— ಸ್ತ್ರೀ —

—: ಭೂಮಿಕೆ :—

ಸುರೇಂದ್ರ, ಸರ್ದಾರ್ ಅಖ್ತರ್.

ಫೋ. ನಂ. ೩೮೨ ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಬುಧವಾರ ೧೧—೬—೪೭ [ಸಂಚಿಕೆ ೨೬೦

ಮೈಸೂರಿಗೆ ದಂಡು ಸೇರುವುದಿಲ್ಲ?

...ಂಡ ಮತ್ತು ಸಾರಾಯಿಗಳ ಮಾರಾಟ

ಪ್ರ॥ ಪ್ರ॥ ಸಭೆಯಲ್ಲಿ ನಿಲುವಳಿ ನಿರ್ಣಯ

...ಂ ಸು ಫೋ॥] ಬೆಂಗಳೂರು ೧೧

ಈ ವರ್ಷ ಹೆಂಡ ಮತ್ತು ಸಾರಾಯಿಗ ಮಾರಾಟದ ಬಗ್ಗೆ ಸರ್ಕಾರದವರು ಹ...ಟು ನಡೆಸಿ ಗುತ್ತಿಗೆಗೆ ಕೊಡದೆ ಅದರ ...ರಾಟವನ್ನು ಹಿಂದಿನ ಗುತ್ತಿಗೆದಾರರಿಂ... ವಹಿಸಿರುವುದರಿಂದ ಸರ್ಕಾರದವರಿಗೆ ...ಷ್ಟವೂ, ಗುತ್ತಿಗೆದಾರರಿಗೆ ಆದಾಯವೂ ...ರುವುದೆಂಬುದಾಗಿ ಕೋಲಾರದ ಶ್ರೀ॥ ...ರಾಮಪ್ಪನವರು ನೆನ್ನೆ ಸಂಜೆ ಪ್ರ॥ ...ಸಭೆಯಲ್ಲಿ ನಿಲುವಳಿ ನಿರ್ಣಯವನ್ನು ...ಂಡಿಸಿದರು ಅನೇಕ ಮಂದಿ ಸದಸ್ಯ... ನಿರ್ಣಯವನ್ನು ಸಮರ್ಥಿಸಿ(?) ಯಾಕೆಲವರು ...ರ್ಣಯವನ್ನು ವಿರೋಧಿಸಿಯೂ ಭಾಷಣ ...ಮಾಡಿದರು ಸಭೆಯಲ್ಲಿ ಕೋರಂ ಇಲ್ಲ...ದರಿಂದ ನಿರ್ಣಯವು ಅಲ್ಲಿಗೇ ಮುಕ್ತಾ...ಯಗೊಂಡಿತು

ಪ್ರ॥ ಪ್ರ॥ ಸಭೆಯ ಅಧಿವೇಶನವು ನೆನ್ನೆ ...ಂಜೆ ೫-೩೦ ಘಂಟೆಗೆ ಮುಕ್ತಾಯಗೊಂ...ಡಿತು.

ದೆಹಲಿಯಲ್ಲಿ ಗುಂಡಿನೇಟು

ದೆಹಲಿಯ ಇಂಪೀರಿಯಲ್ ಹೋಟೆಲಿ...ನ ಮಹಡಿಯ ಮೇಲೆ ಮೊನ್ನೆ ಲೀಗ್ ...ನ್ಸಿಲಿನ ಸಭೆ ನಡೆಯುತ್ತಿದ್ದಾಗ ವಿ...ರೋಧ ಪ್ರದರ್ಶನ ನಡೆಸುತ್ತಿದ್ದ ಖಾಕ್ಸಾರ...ರ ಮೇಲೆ ಪೊಲೀಸರು ಗುಂಡು ಹಾರಿಸಿದು...ದಾಗಿ ವರದಿಯಾಗಿದೆ ಪ್ರದರ್ಶನಕಾರರು ಹೋಟೇಲಿನ ಕಿಟಕಿ ಮತ್ತು ಕುರ್ಚಿಗಳ...ನ್ನು ಒಡೆದರು. ಒಳಕ್ಕೆ ನುಗ್ಗಲು ಯತ್ನಿಸು...ತ್ತಿದ್ದರಿಂದಲೂ, ಹಲವರು ಸಭಾಂಗಣವನ್ನು ಪ್ರವೇಶಿಸಿದರೆಂದೂ ಇದರಿಂದ ಪೊಲೀಸರು ಗುಂಡು ಹಾರಿಸಬೇಕಾಯಿತೆಂದೂ ಹೇಳ...ಲಾಗಿದೆ ೧೨ ಮಂದಿ ಖಾಕ್ಸಾರರು ದಸ್ತಗಿರಿ...ಯಾಗಿದ್ದಾರೆ

ಬ್ರಿ॥ ಯೋಜನೆಗೆ ಲೀಗ್ ಕೌನ್ಸಿಲಿನ ಅಂಗೀಕಾರ

ಮೊನ್ನೆ ದೆಹಲಿಯಲ್ಲಿ ಸೇರಿದ್ದ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯಲ್ಲಿ ಬ್ರಿ॥ ಹೊಸ ಯೋಜನೆಯು ಅಂಗೀಕಾರವಾಗಿರುವುದಾಗಿ ವರದಿಯಾಗಿದೆ ನಿರ್ಣಯದ ಪರವಾಗಿ ೪೦೦ ಓಟುಗಳೂ, ವಿರೋಧವಾಗಿ ೮ ಓಟುಗಳೂ ಬಂದಿವೆ ಪ್ರಾಂತ ವಿಭಜನೆಯನ್ನು ಲೀಗ್ ವಿರೋಧಿಸಿದರೂ ಶಾಂತಿ ರಕ್ಷಣೆಯ ಉದ್ದೇಶದಿಂದ ವಿಭಜನೆಗೆ ಸಮ್ಮತಿಯು ಅಂಗೀಕಾರವಿತ್ತಿದೆಯೆಂದು ಗೊತ್ತಾ...ದೆ. ಸೈನ್ಯ ಮತ್ತು ವಿಭಜನೆಯಿಂದುಂ...ಟಾಗುವ ಪರಿಣಾಮಗಳನ್ನು ನಿರ್ಧರಿಸಲು ...ಕ್ಕೆ ಮಿ॥ ಜಿನ್ನಾರವರಿಗೆ ಪೂರ್ಣಾಧಿ...ಕಾರವನ್ನು ಕೊಟ್ಟಿರುತ್ತದೆ

...ರಕುಂದ್ ಸತ್ಯಾಗ್ರಹಿಗಳಿಗೆ ಸಂಸ್ಥಾನಗಳ ಬೆಂಬಲ

...ಪ್ರೆಸ್] ಕಟಕ್ ೬

ಹೈದರಾಬಾದಿನ ಗುಪ್ತ ಏಜೆಂಟರು...ಗ...ಳಾ ಇತರ ಸಂಸ್ಥಾನಾಧೀಶರುಗಳೂ ಒರಿ...ಸ್ಸಾ ಪ್ರಾಂತದ ಸಂಬಲಪುರ ಹಿರಾಕುಂದ್ ...ಯೋಜನೆಯ ವಿರುದ್ಧವಾಗಿ ಸತ್ಯಾಗ್ರಹ ಹೂಡಿರುವ ಮಧ್ಯಮ ಕಾರರಿಗೆ ಧನ ಸಹಾ...ಯ ಮಾಡುತ್ತಿರುವರೆಂದು ಒರಿಸ್ಸಾ ಶಾಸ...ನ ಸಭೆಯ ಕಾಂಗ್ರೆಸ್ ಸದಸ್ಯರು ಹೇಳಿ...ರುವರು.

ಮೈಸೂರಿನಲ್ಲಿ ಎ. ಐ. ಸಿ. ಸಿ. ಸಭೆ

ಸ್ವಂ ಸು] ಬೆಂಗಳೂರು ೧೦

ಅಖಿಲ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಈ ತಿಂಗಳು ಮೂರನೇ ವಾರದಲ್ಲಿ ಮೈಸೂರಿನಲ್ಲಿಯೂ, ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನವು ಡಿಸೆಂಬರ್ ಅಂತ್ಯದಲ್ಲಿ ಹಾಸನದಲ್ಲಿಯೂ ನಡೆಯುವುದೆಂದು ತಿಳಿದುಬಂದಿದೆ

ಪಂಡಿತ ನೆಹರೂರವರು ಭಾರತದ ಅಧ್ಯಕ್ಷರು

ಬ್ರಿ॥ ಸರ್ಕಾರದವರ ಹೊಸ ಯೋಜನೆಯು ಕಾರ್ಯಗತವಾದರೆ ಆಗಸ್ಟ್ ೧೫ ನೇ ತಾ॥ ಪ್ರಾರಂಭವಾಗುವ ಹಿಂದೂಸ್ಥಾನ ಸರ್ಕಾರಕ್ಕೆ ಪಂಡಿತ ನೆಹರೂರವರು ಮೊದಲನೆಯ ಅಧ್ಯಕ್ಷರಾಗಿ ಆರಿಸಲ್ಪಡುವರೆಂದು ವರದಿಯಾಗಿದೆ. ಹಿಂದೂಸ್ಥಾನದ ಎಲ್ಲ ಪ್ರಾಂತಗಳ ಗೌರ್ನರುಗಳ ಚುನಾವಣೆಯ ಜವಾಬ್ದಾರಿಯೂ ಅವರಿಗೇ ಸೇರಿರುವುದು ಇವರುಗಳೆಲ್ಲರೂ ಭಾರತೀಯರೇ ಆಗಿರುವರು. ಈಗಿರುವ ಪ್ರಾಂತೀಯ ಗೌರ್ನರುಗಳು ತಮ್ಮ ಹುದ್ದೆಗಳಿಗೆ ಕೇಳಿದಾಗ ರಾಜೀನಾಮೆ ಕೊಡಬೇಕೆಂದು ಪ್ರಾಂತೀಯ ಗೌರ್ನರುಗಳ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ

ದೆಹಲಿಯು ಪಾಕಿಸ್ಥಾನಕ್ಕೆ

ಬ್ರಿ॥ ಆಳ್ವಿಕೆಗೆ ಮುಂಚೆ ಕಳೆದ ಅನೇಕ ಶತಮಾನಗಳ ಕಾಲ ದೆಹಲಿಯು ಮೊಗಲ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು ...ದರಿಂದ ಈಗಲೂ ಅದು ಪಾಕಿಸ್ಥಾನಕ್ಕೇ ಸೇರಿಸಲ್ಪಡಬೇಕು—ಎಂಬುದಾಗಿ ಲೀಗ್ ಸದಸ್ಯರು ಒತ್ತಾಯಪಡಿಸುತ್ತಿರುವುದಾಗಿ ವರದಿಯಾಗಿದೆ ಹಾಗೆ ಪೂರ್ಣವಾಗ ಅದು ಸೇರಿಸಲ್ಪಡದಿದ್ದರೆ ಅದನ್ನು ವಿಭಾಗಿಸಿ ಅರ್ಧವನ್ನು ಪಾಕಿಸ್ಥಾನಕ್ಕೂ ಉಳಿದರ್ಧವನ್ನು ಹಿಂದೂಸ್ಥಾನಕ್ಕೂ ಸೇರಿಸಬೇಕೆಂದೂ ಸಹ ಅವರು ಹೇಳುತ್ತಿರುವರು

ಪ್ರಾಂತೀಯ ಗೌರ್ನರುಗಳು

ಈಗಿರುವ ಎಲ್ಲ ಪ್ರಾಂತೀಯ ಗೌರ್ನರುಗಳೂ ಆಗಸ್ಟ್ ೧೫ ನೇ ತಾ॥ ನ ವೇಳೆಗೆ ರಾಜೀನಾಮೆ ಕೊಡಬೇಕೆಂದು ಅವರುಗಳಿಗೆ ವೈಸರಾಯರು ತಿಳಿಸಿರುವರೆಂದು ವರದಿಯಾಗಿದೆ ಬೊಂಬಾಯಿ ಪ್ರಾಂತಕ್ಕೆ ಮಹಾರಾಜ ದೇಸಾಯಿ-ರೂಪಮದರಾಸಿಗೆ ರಾಜಾಜಿಯವರೂ, ಉಳಿದ ಪ್ರಾಂತ್ಯಗಳಿಗೆ ಅಲ್ಲಿಯ ಪ್ರಧಾನಿಗಳೂ ಗೌರ್ನರುಗಳಾಗಿ ಆರಿಸಲ್ಪಡಬಹುದು ಎಂಬುದಾಗಿಯೂ ತಿಳಿದುಬಂದಿದೆ.

ಮೋಟಾರು ಅನಾಹುತ ಇಬ್ಬರ ಮರಣ

ಸ್ವಂ ಸು ಫೋ॥] ಬೆಂಗಳೂರು ೧೧

ಇಲ್ಲಿನ ಅಡ್ವೋಕೇಟರಾದ ಶ್ರೀ॥ ವಾಮನರಾಯರು ತಮ್ಮ ಇಬ್ಬರು ಮಕ್ಕಳೊಡನೆ ಮೋಟಾರಿನಲ್ಲಿ ಹೋಗುತ್ತಿದ್ದಾಗ ಬೆಂಗಳೂರು-ತುಮಕೂರು ರಸ್ತೆಯಲ್ಲಿ ಡಾಬಸ್‌ಪೇಟೆಯ ಗುಡಿಸುವವರ ಕಾಲನಿಯ ಬಳಿ ಗುಡಿಸುವವರ ಹುಡುಗಿಯೊಬ್ಬಳು ಅಡ್ಡ ಬಂದಳು. ಆದರಿಂದ ಅಪಘಾತವಾಗುವುದನ್ನು ತಪ್ಪಿಸಲು ಡ್ರೈವ್ ಮಾಡುತ್ತಿದ್ದ ವಾಮನರಾಯರ ಮಕ್ಕಳು ಮೋಟಾರನ್ನು ತಡೆಯಲು ಪ್ರಯತ್ನಿಸಿದುದರ ಪರಿಣಾಮವಾಗಿ ಅದು ಮರಕ್ಕೆ ಡಿಕ್ಕಿ ಹೊಡೆದು ಶ್ರೀ॥ ವಾಮನರಾಯರು ಸ್ಥಳದಲ್ಲೇ ಮರಣ ಹೊಂದಿದರೆಂದು ವರದಿಯಾಗಿದೆ ಅವರ ೧೯ ವರ್ಷದ ಮಗನಿಗೂ ವಿಶೇಷ ಪೆಟ್ಟಾಗಿ ಆಸ್ಪತ್ರೆಯಲ್ಲಿ ಅವರು ನಿಧನರಾದರು ಹುಡುಗಿಯು ಆಸ್ಪತ್ರೆಯಲ್ಲಿದ್ದಾಳೆ. ಸ್ಥಿತಿಯು ಚಿಂತಾಜನಕವಾಗಿದೆ ಪೋಲೀಸರು ತನಿಖೆ ನಡೆಸುತ್ತಿದ್ದಾರೆ. ಎಂದು ತಿಳಿದು ಬಂದಿದೆ

ಅ॥ ಕಮಿಷನರುಗಳ ವರ್ಗಾವರ್ಗಿ

ಚೆನ್ನಗಿರಿ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ॥ ಬಸವರಾಜೇ ಅರಸಿನವರನ್ನು ...ತುಮಕೂರು ಜಿಲ್ಲಾ ಡೆವಲಪ್‌ಮೆಂಟ್ ಅಧಿಕಾರಿಗಳನ್ನಾಗಿಯೂ, ಬೆಂಗಳೂರಿನ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರರಾದ ಶ್ರೀ॥ ಎಸ್ ಎ ಎಸ್ ರಾಜರವರನ್ನು ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳನ್ನಾಗಿಯೂ ಹಾಸನದ ಸಬ್ ಡಿವಿಜನ್ ಆಫೀಸರರಾದ ಶ್ರೀ॥ ಹೆಚ್ ಎನ್ ಮಲ್ಲರಾಜೇ ಅರಸಿನವರನ್ನು ಮೈಸೂರು ಜಿಲ್ಲಾಧಿಕಾರಿಗಳ ಅಸಿಸ್ಟೆಂಟರನ್ನಾಗಿಯೂ ವರ್ಗ ಮಾಡಲಾಗಿದೆ

ಮಧ್ಯ ಪ್ರಾಂತದಲ್ಲಿ ಪ್ರಜಾ ಪ್ರಮಾಣದ ಮೇರೆ ನೌಕರಿ

...ಪ್ರೆಸ್] ನಾಗಪುರ ೬

ಸಿಂಧು ಮತ್ತು ಸಂಯುಕ್ತ ಪ್ರಾಂತಗಳಂತೆ ಮಧ್ಯ ಪ್ರಾಂತದಲ್ಲಿಯೂ ಇನ್ನು ಮುಂದೆ ಪ್ರಜಾ ಸಂಖ್ಯೆಗನುಸಾರವಾಗಿ ಮುಸ್ಲಿಮರಿಗೆ ನೌಕರಿಯನ್ನೊದಗಿಸಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ ಪ್ರಾಂತೀಯ ಸರ್ಕಾರದಲ್ಲಿರುವ ಮುಸ್ಲಿಂ ನೌಕರರ ಪ್ರಮಾಣವನ್ನು ಅವರ ಪ್ರಜಾ ಸಂಖ್ಯೆಯ ಆಧಾರದ ಮೇಲೆ ಶೇ॥ ೪ ಅಥವಾ ೫ ಕ್ಕೆ ಇಳಿಸಬಹುದು

ಹೈದರಾಬಾದು ಸ್ವತಂತ್ರವಾಗುವುದು

ಬ್ರಿಟಿಷರು ಭಾರತವನ್ನು ತ್ಯಜಿಸಿ ಹೊರಟು ಹೋದನಂತರ ಹೈದರಾಬಾದು ಯಾವ ಯೂನಿಯನ್ನಿಗೂ ಸೇರದೆ ಸ್ವತಂತ್ರ ರಾಷ್ಟ್ರವಾಗಿರಬೇಕೆಂದೂ, ಇತರ ಪ್ರದೇಶಗಳೊಡನೆ ಸಂಸ್ಥಾನದ ಭವಿಷ್ಯ ಸಂಬಂಧದ ಬಗ್ಗೆ ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದೂ ಮೊನ್ನೆ ಅಲ್ಲಿನ ಪ್ರಧಾನಿ ಛತ್ತಾರಿ ನವಾಬರ ಅಧ್ಯಕ್ಷತೆಯಲ್ಲಿ ನಡೆದ ಮಂತ್ರಿಗಳ ಸಭೆಯಲ್ಲಿ ನಿರ್ಧಾರವಾಗಿರುವುದಾಗಿ ವರದಿಯಾಗಿದೆ

ವಿಭಜನೆಗಾಗಿ ಉಪಸಮಿತಿಗಳು

ಪಂ॥ ನೆಹರೂ, ಆಚಾರ್ಯ ಕೃಪಲಾನಿ, ಸರ್ದಾರ್ ಪಟೇಲ್, ಸರ್ದಾರ್ ಬಲದೇವ ಸಿಂಗ್, ಮಿ॥ ಜಿನ್ನಾ, ಲಿಯಾಖತ್ ಅಲಿಖಾನ್ ಮತ್ತು ಸರ್ದಾರ್ ಅಬ್ದುಲ್ ರಬ್ ನಿಷ್ತಾರ್‌ರವರುಗಳು ನಿನ್ನೆ ವೈಸರಾಯರನ್ನು ಮತ್ತೆ ಭೇಟಿ ಮಾಡಿ ವಿಭಜನೆಯ ವಿಷಯವಾಗಿ ಮಾತುಕತೆ ನಡೆಸಿದರೆಂದು ವರದಿಯಾಗಿದೆ ವಿಭಜನೆಯನ್ನು ಕುರಿತು ಪೂರ್ವಭಾವಿ ಕಾರ್ಯಕ್ರಮ ಕೈಗೊಳ್ಳಲು ವೈಸರಾಯರ ಅಧ್ಯಕ್ಷತೆಯಲ್ಲಿ ತಾತ್ಕಾಲಿಕ ಮಂತ್ರಿಮಂಡಲದ ಐದು ಮಂದಿ ಸಚಿವರಿಂದ ಕೂಡಿದ ಸಮಿತಿಯೊಂದನ್ನು ನಿರ್ಮಿಸಲು ತೀರ್ಮಾನವಾಗಿರುವುದಾಗಿ ಗೊತ್ತಾಗಿದೆ

ಜೈ ಪ್ರಕಾಶ ಸ್ವಾಗತ ಸಮಿತಿ ಸಭೆ

ಮೈಸೂರು ೧೧

ಈ ದಿನ ಸಂಜೆ ೬ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಕಛೇರಿಯಲ್ಲಿ ಜಯಪ್ರಕಾಶ ಸ್ವಾಗತ ಸಮಿತಿಯ ಸಭೆಯು ನಡೆಯುವುದು. ಸದಸ್ಯರೆಲ್ಲರೂ ಬರಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಶವನಪ್ಪ ಭೂಪಾಲರು ಕೋರಿರುತ್ತಾರೆ

ಬೆಂಗಳೂರು ದಂಡು ಮೈಸೂರಿಗೆ ಇಲ್ಲವೇ?

ಬೆಂಗಳೂರು ದಂಡನ್ನು ಮೈಸೂರು ಸರ್ಕಾರಕ್ಕೆ ವಹಿಸಿ ಕೊಡುವಂತೆ ಕೇಳಿ ಮೈಸೂರು ಸರ್ಕಾರದವರು ಬ್ರಿ॥ ಸರ್ಕಾರದೊಡನೆ ಹಲವು ದಿನಗಳಿಂದಲೂ ವ್ಯವಹಾರ ನಡೆಸುತ್ತಿದ್ದರಷ್ಟೆ ಬರುವ ಜುಲೈ ಅಥವಾ ಆಗಸ್ಟ್ ತಿಂಗಳೊಳಗೆ ರೆಸಿಡೆನ್ಸಿಗಳು ರದ್ದಾಗಲಿರುವುದರಿಂದ ಮೈಸೂರು ಸರ್ಕಾರದವರು ಭಾರತ ಸರ್ಕಾರದೊಡನೆ ದಂಡನ್ನು ಮೈಸೂರಿಗೆ ಸೇರಿಸಿ ಕೊಡುವ ಬಗ್ಗೆ ನೇರವಾಗಿ ವ್ಯವಹಾರ ನಡೆಸುತ್ತಿರುವರು

ಆದರೆ ಹಿಂದೂಸ್ಥಾನ ವಿಮಾನ ಕಾರ್ಖಾನೆಯು ಬೆಂಗಳೂರಿನಲ್ಲಿರುವುದರಿಂದಲೂ ಇನ್ನೂ ಹಲವು ಕಾರಣಗಳಿಂದ, ಭಾರತ ಸರ್ಕಾರದವರು ದಕ್ಷಿಣ ಭಾರತ ಸೇನಾ ಕೇಂದ್ರವನ್ನು ಪೂನಾದಿಂದ ಬೆಂಗಳೂರಿಗೆ ವರ್ಗಾಯಿಸಬೇಕೆಂದಿರುವುದರಿಂದಲೂ ಬೆಂಗಳೂರು ದಂಡನ್ನು ಭಾರತ ಸರ್ಕಾರದವರು ತಾವೇ ಇಟ್ಟುಕೊಳ್ಳುವ ಬಗ್ಗೆ ಮೈಸೂರು ಸರ್ಕಾರದೊಡನೆ ವ್ಯವಹರಿಸುತ್ತಿರುವರೆಂದು ಅಧಿಕಾರಯುತವಾಗಿ ತಿಳಿದುಬಂದಿದೆ

● ಫ್ರೆಂಚ್ ಭಾರತದ ಭವಿಷ್ಯದ ಬಗ್ಗೆ ಮಾತನಾಡುತ್ತಾ ಮುಂದೆ ಫ್ರೆಂಚ್ ಭಾರತದ ಸಾರ್ವಭೌಮಾಧಿಕಾರವು ಅಲ್ಲಿನ ಪ್ರಜೆಗಳಿಗೇ ಸೇರುವುದು -ಎಂಬುದಾಗಿ ಅಲ್ಲಿನ ಗವರ್ನರರಾದ ಮಿ॥ ಎಂ ಸಿ ಎಫ್ ಬ್ಯಾರನ್ನರು ಹೇಳಿರುವರು.

ಸಾಧ್ವಿ

ತಾ|| ೧೧-೬-೪೭ ಬುಧವಾರ

ಪ್ರಜಾಪ್ರತಿನಿಧಿ ಸಭೆಯ ಮುಕ್ತಾಯ

ಹನ್ನೆರಡು ದಿವಸಗಳ ಕಾರ್ಯಕಲಾಪಗಳ ನಂತರ ಪ್ರಜಾಪ್ರತಿನಿಧಿ ಸಭೆಯು ಅಯವ್ಯಯ ಅಧಿವೇಶನವು ನಿನ್ನೆ ಮುಕ್ತಾಯಗೊಂಡಿತು. ಈ ಸಾರಿ ಅಧಿವೇಶನದಲ್ಲಿ ಅಷ್ಟು ಪ್ರಭಾವ ಶಾಲಿಯಾದ ಕೆಲಸವೇನೂ ನಡೆದಿರುವುದಿಲ್ಲ. ಕೇವಲ ಸಾರ್ವಜನಿಕ ವಿಚಾರಗಳ ಮೇಲೆ ವಿಶೇಷ ಜಿಜ್ಞಾಸೆ ಜರುಗಿರುತ್ತದೆ.

ಜವಾಬ್ದಾರಿಯ ಸೂಚನೆಗಳು ಈ ಅಧಿವೇಶನದಲ್ಲಿ ಬಂದಷ್ಟು ಇದುವರೆಗೆ ಯಾವಾಗಲೂ ಬಂದಿರಲಿಲ್ಲ. ಕ್ರಿಯಾಲೋಚನೆಗಳೂ ಸಹ ಅಸಂಖ್ಯವಾಗಿ ಬಂದಿದ್ದುವು. ಸಣ್ಣಪುಟ್ಟ ವಿಷಯಗಳ ಮೇಲೆಲ್ಲಾ ಹಲವಾರು ಪ್ರಶ್ನೆಗಳೂ, ಕ್ರಿಯಾಲೋಚನೆಗಳೂ ಸೂಚಿಸಲ್ಪಟ್ಟುವು. ಅವುಗಳಲ್ಲಿ ಮುಖ್ಯ ವಿಷಯಗಳೂ ಇದ್ದುವು; ಅಲ್ಪ ವಿಚಾರಗಳೂ ಇರುತ್ತಿದ್ದುವು. ಒಬ್ಬರ ಕ್ರಿಯಾಲೋಚನೆಯ ಮೇಲೆ ಮತ್ತೊಬ್ಬರ ಕ್ರಿಯಾಲೋಚನೆಗಳೂ ಬರುತ್ತಿದ್ದುವು. ಒಂದು ಪಕ್ಷದ ಪಕ್ಷದಿಂದ ಮತ್ತೊಂದು ಜವಾಬ್ದಾರಿಯ ಸೂಚನೆಯು ಉದ್ಭವಿಸುತ್ತಿತ್ತು.

ಈ ಅಧಿವೇಶನವು ಒಟ್ಟಿನಲ್ಲಿ ಜವಾಬ್ದಾರಿ ಮತ್ತು ಕ್ರಿಯಾಲೋಚನೆಗಳ ಅಧ್ಯಾಯವಾಗಿತ್ತೆಂದು ಹೇಳಬಹುದು. ಸದಸ್ಯರುಗಳು ತಮ್ಮ ಜವಾಬ್ದಾರಿಗಾಗಿ ನಿರ್ದಾಕ್ಷಿಣ್ಯದಿಂದ ಹೋರಾಡುವುದು ಅಗತ್ಯವಾದರೂ ಅಲ್ಪ ವಿಚಾರಗಳಿಗೆ ವಿಶೇಷ ಮಹತ್ವವನ್ನು ಕೊಟ್ಟು ಬಹಳ ಕಾಲಹರಣಕ್ಕೆ ಅವಕಾಶವನ್ನುಂಟುಮಾಡುವುದು ಸರಿಯಲ್ಲ. ಸಭೆಯ ಒಟ್ಟು ಅವಧಿಯಲ್ಲಿ ಬಹು ಭಾಗದ ಕಾಲವು ಈ ವ್ಯವಹಾರಗಳಲ್ಲಿಯೇ ವ್ಯಯವಾಗುವುದು ಸರಿಯಲ್ಲ.

ಕಾಂಗ್ರೆಸ್ ಪಕ್ಷದವರು ಹಿಂದಿನ ಅಧಿವೇಶನಗಳಲ್ಲಿ ಇತರ ತಂಗಡಗಳ ಸಹಕಾರದಿಂದ ಸರ್ಕಾರದ ಮಸೂದೆಗಳನ್ನು ಸೋಲಿಸಿ ಹಿಂದಿನ ಮಂತ್ರಿಮಂಡಲದಲ್ಲಿ ಸಭೆಗೆ ವಿಶ್ವಾಸವಿಲ್ಲವೆಂಬುದನ್ನು ಅನೇಕ ಬಾರಿ ತೋರಿಸಿಕೊಟ್ಟರು. ಆದರೆ ಈ ಸಾರಿ ತಮ್ಮ ವರ್ತನೆಯನ್ನು ಮಾರ್ಪಡಿಸಿ ಸರ್ಕಾರದ ಮಸೂದೆಗಳ ಕಾಲದಲ್ಲಿ ತಮ್ಮ ಅಸಹಕಾರವನ್ನು ಸೂಚಿಸಲು ಆ ಸಮಯದಲ್ಲಿ ಭಾಷಣಗಳನ್ನು ಮಾಡುತ್ತಿದ್ದರು. ಇದರಿಂದ ಸರ್ಕಾರದವರು ತಂದಿದ್ದ ಎಲ್ಲಾ ಮಸೂದೆಗಳು ನಿರಾಯಾಸವಾಗಿ ಅಂಗೀಕರಿಸಲ್ಪಟ್ಟುವು. ಅವುಗಳಲ್ಲಿ ಕಾಂಗ್ರೆಸ್ ಪಕ್ಷದವರು ಎಂದಿನಂತೆಯೂ ಭಾಗವಹಿಸುತ್ತಿಲ್ಲ. ಇತರರು ಮಾತ್ರ ಈ ಹಿಂದಿನ ಕಾಲದ ಮಾರ್ಗವನ್ನು ಇನ್ನೂ ಬಿಡದೆ ಈ ಸಭೆಯು ಅರ್ಜಿದಾರರ ಕೂಟವೆಂದು ಕರೆಯಲ್ಪಡುತ್ತಿದ್ದುದು ಅನ್ವರ್ಥವಾಗುವಂತೆ ಮಾಡುತ್ತಿದ್ದಾರೆ.

ಸಭೆಯಲ್ಲಿರಬೇಕಾದ ಕನಿಷ್ಠಸಂಖ್ಯೆಯ ಸದಸ್ಯರು ಹಾಜರಿಲ್ಲದೆ ಕೋರಂನ ಅಭಾವದಿಂದ ಸಭೆಯನ್ನು ಅನೇಕ ಬಾರಿ ಸ್ವಲ್ಪ ಕಾಲ ಮುಂದೂಡಬೇಕಾಗಿ ಬಂದುದೂ ಈ ಸಾರಿಯ ಒಂದು ವಿಶೇಷ. ಅಧಿವೇಶನದ ಅಂತ್ಯದಲ್ಲಿ ಅವಸರದ ನಿರ್ಣಯವೊಂದು ಚರ್ಚೆಯಾಗುತ್ತಿದ್ದಾಗಲೂ ಕೋರಂ ಇಲ್ಲದೆ ಸಭೆಯನ್ನು ಇದ್ದಕ್ಕಿದ್ದಂತೆಯೇ ಹಠಾತ್ತಾಗಿ ಮುಕ್ತಾಯ ಮಾಡಬೇಕಾಗಿ ಬಂದುದು ಈ ಸಭೆಯ ಇತಿಹಾಸದಲ್ಲಿಯೇ ಹೊಸದು. ಇಷ್ಟು ಬಾರಿ ಕೋರಂ ಇಲ್ಲದುದರಿಂದ ಸಭೆಯ ಕಾರ್ಯಕಲಾಪಗಳಲ್ಲಿ ಸದಸ್ಯರಿಗೆ ಎಷ್ಟು ಮಟ್ಟಿನ ನಿರುತ್ಸಾಹ ಉಂಟಾಗಿರುವುದೆಂಬುದು ವೇದ್ಯವಾಗುತ್ತದೆ. ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳು ಪ್ರಭುತ್ವದ ಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡದೆ ಅವು ಕೇವಲ ಅರಣ್ಯರೋದನವಾಗಿ ಬಿಡುತ್ತಿರುವುದೂ ಇದಕ್ಕೆ ಒಂದು ಮುಖ್ಯ ಕಾರಣ.

ಈ ಸಭೆಯು ಈಗ ರಚಿತವಾಗಿರುವ ರೀತಿಯಲ್ಲಿ ನಡೆದಿರುವ ಅಧಿವೇಶನಗಳಲ್ಲಿ ಇದೇ ಕಡೆಯದಾಗಬಹುದೆಂದೂ ಭಾವಿಸಲಾಗಿದೆ. ಮುಂದಿನ ಘಟ್ಟದಲ್ಲಿ ಹೊಸ ರಾಜ್ಯಾಂಗವು ಜಾರಿಗೆ ಬರಲಿದೆ. ಅಲ್ಲಿನ ಶಾಸನ ಸಭೆಗಳು ಹೊಸ ರೂಪವನ್ನು ತಾಳುವುವು. ನಮ್ಮ ಸಭೆಗಳೂ ಸಹ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಲೇ ಬೇಕು. ಬರುವ ಅಧಿವೇಶನದ ಹೊತ್ತಿಗಾದರೂ ಈ ಅರ್ಜಿದಾರರ ಕೂಟಗಳು ನಿಜವಾದ ಪ್ರಜಾಪ್ರಭುತ್ವಾಧಿಕಾರವುಳ್ಳ ಶಾಸನ ಸಭೆಗಳಾಗಿ ಮಾರ್ಪಟ್ಟು ಸಂಸ್ಥಾನದ ರಾಜ್ಯ ಸೂತ್ರಗಳನ್ನು ತಮಗೆ ಉತ್ತರವಾದಿಗಳಾದ ಮಂತ್ರಿಗಳ ಮೂಲಕ ನಡೆಸುವಂತಾಗಲೆಂದು ಹಾರೈಸೋಣ.

ಸಂ. ಪ್ರಾಂತ್ಯದಲ್ಲಿ ೨೩,೦೦೦ ಪ್ರಾಥಮಿಕ ಶಾಲೆಗಳು

೬ ರಿಂದ ೧೧ ವರ್ಷದೊಳಗಿನ ಮಕ್ಕಳಿಗೆ ವಿದ್ಯಾಭ್ಯಾಸವನ್ನೊದಗಿಸಲು ಈ ವರ್ಷದಲ್ಲಿ ೨೩,೦೦೦ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸಂಯುಕ್ತ ಪ್ರಾಂತ್ಯದ ಸರ್ಕಾರದವರು ನಿಶ್ಚಯಿಸಿರುವರು.

Office of the President,
City Municipal Council,
Mysore, Dated 3—6—47.

NOTIFICATION.

Applications are invited for the post of a Clock-Winder for the maintenance of the Tower and Office Clocks of the City Municipality, Mysore. Only those who are specialists in this field need apply with copies of Testimonials etc., on or before 15th June 1947, stating the minimum remuneration expected.

K. G. KATWEY,
For President.

ವಿವಾಹ ಮಹೋತ್ಸವಗಳು

ಮೈಸೂರು ೧೦

ರಾಜಧಾನಿಯ ಆಯುರ್ವೇದ ವೈದ್ಯರಾದ ಪಂಡಿತ ಭಿಷಗ್ರತ್ನ ವೆಂಕಟಾಚಲಸಂತರು ತಮ್ಮ ಮಕ್ಕಳು ಶ್ರೀ|| ಟಿ ವಿ ರಾಮಸ್ವಾಮಿ ಪಂಡಿತರ ಕುಮಾರಿ ಸೌ|| ಲೀಲಮ್ಮನವರನ್ನು ಬೆಂಗಳೂರು ಶಂಕರಪುರದಲ್ಲಿರುವ ಟೀಕಪಳ್ಳಿ ಸುಬ್ಬಯ್ಯನವರ ಮಗ ಶ್ರೀ|| ಟಿ ಎಸ್ ರಾಮಸ್ವಾಮಯ್ಯನವರ ಸಹೋದರರಾದ ಚಿ|| ಟಿ ಎಸ್ ಕೃಷ್ಣಮೂರ್ತಿಯವರಿಗೆ ಕೊಟ್ಟು ಲಗ್ನ ನೆರವೇರಿಸಿದ್ದು,

ಶ್ರೀಗ ಸಿ ಎ ರಾಮರಾವ್‌ರವರು ರಿಟೈರ್ಡ್ ಬಿ ಎಸ್ ಎ ಐಯ್ಯಂಗಾರ್‌ರ ಕುಮಾರ ಚಿ|| ಬಿ ಎ ಗೋಪಾಲ್‌ರವರಿಗೆ ಬಿ ಎಸ್ ಕೃಷ್ಣಸ್ವಾಮಿ ಐಯ್ಯಂಗಾರ್‌ರ ಕುಮಾರಿ ಸೌ|| ಸೀತಾಲಕ್ಷ್ಮಿಯನ್ನು ತಂದುಕೊಂಡು ಮೈಸೂರಿನಲ್ಲಿ ನಿನ್ನೆ ವೈಭವದಿಂದ ವಿವಾಹ ಮಹೋತ್ಸವವನ್ನು ನೆರವೇರಿಸಿ ಅನೇಕ ಜನ ಬಂಧು ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು.

ಕಾಲೇಜು ದಿನಾಚರಣೆ

ಪ್ರ|| ಪ್ರ|| ಸಭಾ ಸದಸ್ಯರಾದ ಶ್ರೀ|| ಡಿ ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೫|| ಗಂಟೆಗೆ ಗಾ|| ಆಯುರ್ವೇದ ಮತ್ತು ಯುನಾನಿ ಕಾಲೇಜ್ ದಿನಾಚರಣೆಯು ಕಾಲೇಜ್ ಅಂಗಳದಲ್ಲಿ ನಡೆಯುವುದು. ಸರ್ವರಿಗೂ ಸ್ವಾಗತವಿದೆ.

೨೧ ವರ್ಷಕ್ಕೆ ಮೀರಿದವರಿಗೆ ಓಟಿನ ಹಕ್ಕು

ಗ್ವಾಲಿಯರ್] ಅಕ್ಟೋಬರ್ ೫

೨೧ ವರ್ಷ ವಯಸ್ಸಿಗೆ ಮೀರಿದ ಹೆಂಗಸರೂ, ಗಂಡಸರೂ ಸಹ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಓಟು ಮಾಡಬಹುದೆಂದು ಅಕ್ಟೋಬರ್-ಮಾರ್ಚ್ ಅಧ್ಯಕ್ಷರ ಸಮಿತಿಯು ನಿರ್ಧರಿಸಿದೆ

ವುಡ್‌ಲ್ಯಾಂಡ್ಸ್

8-6-47 ರಿಂದ
ಕಿಕ್ಕಿರಿದ ೬ ನೇ ವಾರ
ಪ್ರತಿ ದಿನ ೩ ಆಟಗಳು

ನಾವು ಇಬ್ಬರು
(ತಮಿಳು)

-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರನ್ ಮುಂತಾದವರು

Edited, printed and published by A. R. Nagarajan at the Sadhvi Press D. Subbaiah Road Mysore

ಭಾರತಕ್ಕೆ ಚುನಾಯಿತ ಅಧ್ಯಕ್ಷರು

ಪ್ರಾಂತ ಗೌರ್ನರುಗಳು ಚುನಾವಣಾ ಕ್ಷೇತ್ರಗಳಿಂದ ಆರಿಸಲ್ಪಡುವ ರೀತಿಯೇ ಸಂಯುಕ್ತ ಭಾರತದ ಅಧ್ಯಕ್ಷರು ಚುನಾಯಿಸಲ್ಪಟ್ಟವರೇ ಆಗಿರಬೇಕೆಂದೂ, ಅವರ ಅಧಿಕಾರಾವಧಿಯು ೫ ವರ್ಷಗಳಿರಬೇಕೆಂದೂ ಯೂನಿಯನ್ ಉಪಸಮಿತಿಯು ತೀರ್ಮಾನಿಸಿರುವುದಾಗಿ ತಿಳಿದು ಬಂದಿದೆ.

ಬೂಂದಿ ಸಂಸ್ಥಾನವು ರಾಜ್ಯಾಂಗ ಸಭೆಗೆ

ತಮ್ಮ ಸಂಸ್ಥಾನವು ಈ ಕೂಡಲೇ ಭಾರತ ರಾಜ್ಯಾಂಗ ಸಭೆಗೆ ಸೇರುವುದೆಂಬುದಾಗಿ ಬೂಂದಿ ಸಂಸ್ಥಾನದ ರಾಜರು ಸರ್ದಾರ್ ಪಟೇಲರಿಗೆ ತಿಳಿಸಿರುವರು.

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶು ವಿಹಾರದಲ್ಲಿ ೯ ವರ್ಷ ವಯಸ್ಸಿನ ಶಾಲಾ ಪ್ರಥಮ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಏರ್ಪಡಿಸಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯು ಮಿತಗೊಳಿಸಲ್ಪಟ್ಟಿರುವುದರಿಂದ, ಅಪೇಕ್ಷಿಸುವವರು ತಮ್ಮ ಮಕ್ಕಳನ್ನು ಇದೇ ತಿಂಗಳು ೧೫ ನೇ ತಾರೀಖಿನೊಳಗೆ ಸೇರಿಸಬೇಕಾಗಿ ಕೋರಲಾಗಿದೆ

ರಾಜಕಮಲ್,
ತಾ|| ೬-೬-೪೭ ರಿಂದ
ಏಳನೇ ವಾರ
ಪ್ರತಿ ದಿನ ೨ ಆಟಗಳು

ಗೊಲ್ಲಭಾಮ
(ತೆಲುಗು)

ಸ್ಪೆಷಲ್ ಪ್ರೋಗ್ರಾಂ
6-6-47 ರಿಂದ ಏಳು ದಿನಗಳು
ಪ್ರತಿ ದಿನ ಬೆಳಗ್ಗೆ 10-30 ಕ್ಕೆ

ಔರತ್ ಅಥವಾ
— ಸ್ತ್ರೀ —

—: ಭೂಮಿಕೆ :—
ಸುರೇಂದ್ರ, ಸರ್ದಾರ್ ಅಖ್ತರ್.

ಡಿಪೋ ಬದಲಾವಣೆ

ರೇಷನ್ ಡಿಪೋ ನಂ. ೬
ಮೊಹಿಯುದ್ದೀನ್ ಸಾಹೇಬರ
ಕಾರ್ಖಾನೆ ಬೀದಿ,
ದೇವರಾಜ ಮೊಹಲ್ಲ.

ಈ ಡಿಪೋವನ್ನು ತಾ|| ೧೪-೬-೪೭ ನೇ ಶನಿವಾರದ ಬೆಳಗ್ಗೆ ಜಗನ್ಮೋಹನ ಬಂಗಲೆ ಹತ್ತಿರ ಲಕ್ಷ್ಮೀ ವಿಲಾಸ ಅಗ್ರಹಾರದಲ್ಲಿರುವ ೨೭೧ ನೇ ನಂಬರ್ ಮನೆಗೆ ವರ್ಗಾಯಿಸಲಾಗುತ್ತದೆ. ಎಂದಿನಂತೆ ಮಹಾಜನರು ಪ್ರೋತ್ಸಾಹಿಸಬೇಕೆಂದು ವಿನಂತಿ

ಸಿ. ದೊಡ್ಡಜವರಪ್ಪ.

Hurry Up !! Hurry Up !!
Best Opportunity For IVth Form Students
BIOLOGY CLASS RECORD BOOK I.
For High School First Year Class (Both Media)
with 36 Diagrams, Model Question and
79 Blank Pages for Class Notes
By **A. L. Keshava Moorthy**, B. Sc.,
PRICE Re. 1
—: Stockists in Mysore :—
PADAKI'S JAYA STORES,
Jaganmohan Palace Road, MYSORE.

ಸಾಧ್ವಿ

ತಾ॥ ೧೧-೬-೪೭ ಬುಧವಾರ

ಪ್ರಜಾಪ್ರತಿನಿಧಿ ಸಭೆಯ ಮುಕ್ತಾಯ

ಹನ್ನೆರಡು ದಿವಸಗಳ ಕಾರ್ಯಕಲಾಪಗಳ ನಂತರ ಪ್ರಜಾಪ್ರತಿನಿಧಿ ಸಭೆಯ [illegible] ಅಧಿವೇಶನವು ನಿನ್ನೆ ಮುಕ್ತಾಯಗೊಂಡಿತು. ಈ ಸಾರಿ ಅಧಿವೇಶನದಲ್ಲಿ ಅಷ್ಟು ಪ್ರಭಾವಶಾಲಿಯಾದ ಕೆಲಸವೇನೂ ನಡೆದಿರುವುದಿಲ್ಲ. ಕೇವಲ ಸಾಂಘಿಕ ವಿಚಾರಗಳ ಮೇಲೆ ವಿಶೇಷ ಚರ್ಚೆ ಜರುಗಿರುತ್ತದೆ.

ಹಕ್ಕು ಬಾಧ್ಯತೆಯ ಸೂಚನೆಗಳು ಈ ಅಧಿವೇಶನದಲ್ಲಿ ಬಂದಷ್ಟು ಇದುವರೆಗೆ ಯಾವಾಗಲೂ ಬಂದಿರಲಿಲ್ಲ. ಕ್ರಿಯಾಲೋಪಗಳೂ ಸಹ ಅಸಂಖ್ಯಾತವಾಗಿ ಬಂದಿದ್ದುವು. ಸಣ್ಣಪುಟ್ಟ ವಿಷಯಗಳ ಮೇಲೆಲ್ಲಾ ಹಕ್ಕಿನ ಪ್ರಶ್ನೆಗಳೂ, ಕ್ರಿಯಾಲೋಪಗಳೂ ಸೂಚಿಸಲ್ಪಟ್ಟುವು. ಇವುಗಳಲ್ಲಿ ಮುಖ್ಯ ವಿಷಯಗಳೂ ಇದ್ದುವು; ಅಲ್ಪ ವಿಚಾರಗಳೂ ಇರುತ್ತಿದ್ದುವು. ಒಬ್ಬರ ಕ್ರಿಯಾಲೋಪದ ಮೇಲೆ ಮತ್ತೊಬ್ಬರ ಕ್ರಿಯಾಲೋಪಗಳೂ ಬರುತ್ತಿದ್ದುವು. ಒಂದು ಹಕ್ಕಿನ ಪ್ರಶ್ನೆಯಿಂದ ಮತ್ತೊಂದು ಹಕ್ಕುಬಾಧ್ಯತೆಯ ಸೂಚನೆಯು ಉದ್ಭವಿಸುತ್ತಿತ್ತು.

ಈ ಅಧಿವೇಶನವು ಒಟ್ಟಿನಲ್ಲಿ ಹಕ್ಕುಬಾಧ್ಯತೆ ಮತ್ತು ಕ್ರಿಯಾಲೋಪಗಳ ಅಧ್ಯಾಯವಾಗಿತ್ತೆಂದು ಹೇಳಬಹುದು. ಸದಸ್ಯರುಗಳು ತಮ್ಮ ಹಕ್ಕುಬಾಧ್ಯತೆಗಾಗಿ ನಿರ್ದಾಕ್ಷಿಣ್ಯದಿಂದ ಹೋರಾಡುವುದು ಅಗತ್ಯವಾದರೂ ಅಲ್ಪ ವಿಚಾರಗಳಿಗೆ ವಿಶೇಷ ಮಹತ್ವವನ್ನು ಕೊಟ್ಟು ಬಹಳ ಕಾಲಹರಣಕ್ಕೆ ಅವಕಾಶವನ್ನುಂಟುಮಾಡುವುದು ಸರಿಯಲ್ಲ. ಸಭೆಯ ಒಟ್ಟು ಅವಧಿಯಲ್ಲಿ ಬಹು ಭಾಗದ ಕಾಲವು ಈ ವ್ಯವಹಾರಗಳಲ್ಲಿಯೇ ವ್ಯಯವಾಗುವುದು ಸರಿಯಲ್ಲ.

ಕಾಂಗ್ರೆಸ್ ಪಕ್ಷದವರು ಹಿಂದಿನ ಅಧಿವೇಶನಗಳಲ್ಲಿ ಇತರ ಪಂಗಡಗಳ ಸಹಕಾರದಿಂದ ಸರ್ಕಾರದ ಮಸೂದೆಗಳನ್ನು ಸೋಲಿಸಿ ಹಾಲಿನ ಮಂತ್ರಿಮಂಡಲದಲ್ಲಿ ಸಭೆಗೆ ವಿಶ್ವಾಸವಿಲ್ಲವೆಂಬುದನ್ನು ಅನೇಕ ಬಾರಿ ತೋರಿಸಿಕೊಟ್ಟರು. ಆದರೆ ಈ ಸಾರಿ ತಮ್ಮ ವರ್ತನೆಯನ್ನು ಮಾರ್ಪಡಿಸಿ ಸರ್ಕಾರದ ಮಸೂದೆಗಳ ಕಾಲದಲ್ಲಿ ತಮ್ಮ ಅಸಹಕಾರವನ್ನು ಸೂಚಿಸಲು ಆ ಸಮಯದಲ್ಲಿ ಬಹಿಷ್ಕಾರವನ್ನು ಮಾಡುತ್ತಿದ್ದರು. ಇದರಿಂದ ಸರ್ಕಾರದವರು ತಂದಿದ್ದ ಎಲ್ಲಾ ಮಸೂದೆಗಳು ನಿರಾಯಾಸವಾಗಿ ಅಂಗೀಕರಿಸಲ್ಪಟ್ಟುವು. ಅಂಕೆಗಳಲ್ಲಿ ಕಾಂಗ್ರೆಸ್ ಪಕ್ಷದವರು ಎಂದಿನಿಂದಲೂ ಭಾಗವಹಿಸುತ್ತಿಲ್ಲ. ಇತರರು ಮಾತ್ರ ಈ ವಿಳಂಬದಾಯಕ ಕಾಲದ ಮಾರ್ಗವನ್ನು ಇನ್ನೂ ಬಿಡದೆ ಈ ಸಭೆಯು ಅರ್ಜಿದಾರರ ಕೂಟವೆಂದು ಕರೆಯಲ್ಪಡುತ್ತಿದ್ದುದು ಅನ್ವರ್ಥವಾಗುವಂತೆ ಮಾಡುತ್ತಿದ್ದಾರೆ.

ಸಭೆಯಲ್ಲಿರಬೇಕಾದ ಕನಿಷ್ಟಾಂಕದ ಸದಸ್ಯರು ಹಾಜರಿಲ್ಲದೆ ಕೋರಮ್ಮಿನ ಅಭಾವದಿಂದ ಸಭೆಯನ್ನು ಅನೇಕ ಬಾರಿ ಸ್ವಲ್ಪ ಕಾಲ ಮುಂದು ಹಾಕಬೇಕಾಗಿ ಬಂದುದೂ ಈ ಸಾರಿಯ ಒಂದು ವಿಶೇಷ. ಅಧಿವೇಶನದ ಅಂತ್ಯದಲ್ಲಿ ಅವಸರದ ನಿರ್ಣಯವೊಂದು ಚರ್ಚೆಯಾಗುತ್ತಿದ್ದಾಗಲೂ ಕೋರಂ ಇಲ್ಲದೆ ಸಭೆಯನ್ನು ಇದ್ದಕ್ಕಿದ್ದಂತೆಯೇ ಹಠಾತ್ತಾಗಿ ಮುಕ್ತಾಯ ಮಾಡಬೇಕಾಗಿ ಬಂದುದು ಈ ಸಭೆಯ ಇತಿಹಾಸದಲ್ಲಿಯೇ ಹೊಸದು. ಇಷ್ಟು ಬಾರಿ ಕೋರಂ ಇಲ್ಲದುದರಿಂದ ಸಭೆಯ ಕಾರ್ಯಕಲಾಪಗಳಲ್ಲಿ ಸದಸ್ಯರಿಗೆ ಎಷ್ಟು ಮಟ್ಟಿನ ನಿರುತ್ಸಾಹ ಉಂಟಾಗಿರುವುದೆಂಬುದು ವೇದ್ಯವಾಗುತ್ತದೆ. ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳು ಪ್ರಭುತ್ವದ ಮೇಲೆ ತಕ್ಕ ಪರಿಣಾಮವನ್ನುಂಟುಮಾಡದೆ ಅವು ಕೇವಲ ಅರಣ್ಯರೋದನವಾಗಿರುವುದೂ ಇದಕ್ಕೆ ಒಂದು ಮುಖ್ಯ ಕಾರಣ.

ಈ ಸಭೆಯು ಈಗ ರಚಿತವಾಗಿರುವ ರೀತಿಯಲ್ಲಿ ನಡೆದಿರುವ ಅಧಿವೇಶನಗಳಲ್ಲಿ ಇದೇ ಕಡೆಯದಾಗಬಹುದೆಂದೂ ಭಾವಿಸಲಾಗಿದೆ. ಮುಂದೆ ಭರತಖಂಡದಲ್ಲಿ ಹೊಸ ರಾಜ್ಯಾಂಗವು ಜಾರಿಗೆ ಬರಲಿದೆ. ಅಲ್ಲಿನ ಶಾಸನ ಸಭೆಗಳು ಹೊಸ ರೂಪವನ್ನು ತಾಳುವುವು. ನಮ್ಮ ಸಭೆಗಳೂ ಸಹ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಲೇ ಬೇಕು. ಬರುವ ಅಧಿವೇಶನದ ಹೊತ್ತಿಗಾದರೂ ಈ ಅರ್ಜಿದಾರರ ಕೂಟಗಳು ನಿಜವಾದ ಪ್ರಜಾಪ್ರಭುತ್ವಾಧಿಕಾರವುಳ್ಳ ಶಾಸನ ಸಭೆಗಳಾಗಿ ಮಾರ್ಪಟ್ಟು ಸಂಸ್ಥಾನದ ರಾಜ್ಯ ಸೂತ್ರಗಳನ್ನು ತಮಗೆ ಉತ್ತರವಾದಿಗಳಾದ ಮಂತ್ರಿಗಳ ಮೂಲಕ ನಡೆಸುವಂತಾಗಲೆಂದು ಹಾರೈಸೋಣ.

ಸಂ. ಪ್ರಾಂತ್ಯದಲ್ಲಿ ೨೨,೦೦೦ ಪ್ರಾಥಮಿಕ ಶಾಲೆಗಳು

೬ ರಿಂದ ೧೧ ವರ್ಷದೊಳಗಿನ ಮಕ್ಕಳಿಗೆ ವಿದ್ಯಾಭ್ಯಾಸವನ್ನೊದಗಿಸಲು ಈ ವರ್ಷದಲ್ಲಿ ೨೨,೦೦೦ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸಂಯುಕ್ತ ಪ್ರಾಂತ್ಯದ ಸರ್ಕಾರದವರು ನಿರ್ಧರಿಸಿರುವರು.

Office of the President,
City Municipal Council,
Mysore, Dated 3—6—47.

NOTIFICATION.

Applications are invited for the post of a Clock-Winder for the maintenance of the Tower and Office Clocks of the City Municipality, Mysore. Only those who are specialists in this field need apply with copies of Testimonials etc., on or before 15th June 1947, stating the minimum remuneration expected.

K. G. KATWEY,
For President,

ವಿವಾಹ ಮಹೋತ್ಸವಗಳು

ಮೈಸೂರು ೧೦

ರಾಜಧಾನಿಯ ಆಯುರ್ವೇದ ವೈದ್ಯರಾದ [illegible] ಭಿಷಗ್ರತ್ನ ವೆಂಕಟಾಚಲಪಂಡಿತರು ತಮ್ಮ ಮಕ್ಕಳು ಶ್ರೀ॥ ಟಿ ವಿ ರಾಮಸ್ವಾಮಿ ಪಂಡಿತರ ಕುಮಾರಿ ಸೌ॥ ಲೀಲಮ್ಮನನ್ನು ಬೆಂಗಳೂರು ಶಂಕರಪುರದಲ್ಲಿರುವ ಟೀಕಪ್ಪ ಸುಬ್ಬಯ್ಯನವರ ಮಗ ಶ್ರೀ॥ ಟಿ ಎಸ್ ರಾಮಸ್ವಾಮಯ್ಯನವರ ಸಹೋದರರಾದ ಚಿ॥ ಟಿ ಎಸ್ ಕೃಷ್ಣಮೂರ್ತಿಯವರಿಗೆ ಕೊಟ್ಟು ಬೆಂಗಳೂರಿನಲ್ಲಿಯೂ,

ಶ್ರೀ॥ ಸಿ ಎ ರಾಮರಾಯರವರು ಲೇಟ್ ಬಿ ಎಸ್ ವಿ ಐಯ್ಯಂಗಾರ್ಯರ ಕುಮಾರ ಚಿ॥ ಬಿ ವಿ ಗೋಪಾಲ್‌ರವರಿಗೆ ಬಿ ಎಸ್ ಕೃಷ್ಣಸ್ವಾಮಿ ಐಯ್ಯಂಗಾರ್ಯರ ಕುಮಾರಿ ಸೌ॥ ಸೀತಾಲಕ್ಷ್ಮಿಯನ್ನು ತಂದುಕೊಂಡು ಮೈಸೂರಿನಲ್ಲಿ ನಿನ್ನೆ ವೈಭವದಿಂದ ವಿವಾಹ ಮಹೋತ್ಸವವನ್ನು ನೆರವೇರಿಸಿ ಅನೇಕ ಜನ ಬಂಧು ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಕಾಲೇಜು ದಿನಾಚರಣೆ

ಪ್ರ॥ ಪ್ರ॥ ಸಭಾ ಸದಸ್ಯರಾದ ಶ್ರೀ॥ ಡಿ ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೫॥ ಗಂಟೆಗೆ ಗ॥ ಆಯುರ್ವೇದ ಮತ್ತು ಯುನಾನಿ ಕಾಲೇಜ್ ದಿನಾಚರಣೆಯು ಕಾಲೇಜ್ ಅಂಗಳದಲ್ಲಿ ನಡೆಯುವುದು ಸರ್ವರಿಗೂ ಸ್ವಾಗತವಿದೆ.

೨೧ ವರ್ಷಕ್ಕೆ ಮೀರಿದವರಿಗೆ ಓಟಿನ ಹಕ್ಕು

ಗ್ಲೋಬ್] ಅಜ್ಮೀರ್ ೫

೨೧ ವರ್ಷ ವಯಸ್ಸಿಗೆ ಮೀರಿದ ಹೆಂಗಸರೂ, ಗಂಡಸರೂ ಸಹ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಓಟು ಮಾಡಬಹುದೆಂದು ಅಜ್ಮೀರ್-ಮಾರ್ವಾರ್ ಅಡ್ವೈಸರಿ ಸಮಿತಿಯು ನಿರ್ಧರಿಸಿದೆ

ವುಡ್‌ಲ್ಯಾಂಡ್ಸ್

8-6-47 ರಿಂದ
ಕಿಕ್ಕಿರಿದ ೬ ನೇ ವಾರ
ಪ್ರತಿ ದಿನ ೩ ಆಟಗಳು
ನಾವು ಇಬ್ಬರು
(ತಮಿಳು)
-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು

Edited, printed and published by A. R. Nagarajan at the Sadhvi Press D Subbaiah Road Mysore

Hurry Up!! Hurry Up!!
Best Opportunity For IVth Form Students
BIOLOGY CLASS RECORD BOOK I.
For High School First Year Class (Both Media)
with 36 Diagrams, Model Question and
70 Blank Pages for Class Notes
By A. L. Keshava Moorthy, B. Sc.,
PRICE Re:- 1
—: Stockists in Mysore :—
PADAKI'S JAYA STORES,
Jaganmohan Palace Road, MYSORE.

ಭಾರತಕ್ಕೆ ಚುನಾಯಿತ ಅಧ್ಯಕ್ಷರು

ಪ್ರಾಂತ ಗೌರ್ನರುಗಳು ಚುನಾವಣಾ ಕ್ಷೇತ್ರಗಳಿಂದ ಆರಿಸಲ್ಪಡುವಂತೆಯೇ ಸಂಯುಕ್ತ ಭಾರತದ ಅಧ್ಯಕ್ಷರು ಚುನಾಯಿಸಲ್ಪಟ್ಟವರೇ ಆಗಿರಬೇಕೆಂದೂ, ಅವರ ಅಧಿಕಾರಾವಧಿಯು ೫ ವರ್ಷಗಳಿರಬೇಕೆಂದೂ ಯೂನಿಯನ್ ಉಪಸಮಿತಿಯು ತೀರ್ಮಾನಿಸಿರುವುದಾಗಿ ತಿಳಿದು ಬಂದಿದೆ.

ಬೂಂದಿ ಸಂಸ್ಥಾನವು ರಾಜ್ಯಾಂಗ ಸಭೆಗೆ

ತಮ್ಮ ಸಂಸ್ಥಾನವು ಈ ಕೂಡಲೇ ಭಾರತ ರಾಜ್ಯಾಂಗ ಸಭೆಗೆ ಸೇರುವುದೆಂಬುದಾಗಿ ಬೂಂದಿ ಸಂಸ್ಥಾನದ ರಾಜರು ಸರ್ದಾರ್ ಪಟೇಲರಿಗೆ ತಿಳಿಸಿರುವರು.

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶು ವಿಹಾರದಲ್ಲಿ ಈ ವರ್ಷ ಮಾಧ್ಯಮಿಕ ಶಾಲಾ ಪ್ರಥಮ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಏರ್ಪಡಿಸಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯು ಮಿತಿಪಡಿಸಲ್ಪಟ್ಟಿರುವುದರಿಂದ, ಅಪೇಕ್ಷಿಸುವವರು ತಮ್ಮ ಮಕ್ಕಳನ್ನು ಇದೇ ತಿಂಗಳು ೧೫ ನೇ ತಾರೀಖಿನೊಳಗೆ ಸೇರಿಸಬೇಕಾಗಿ ಕೋರಲಾಗಿದೆ

ರಾಜಕಮಲ್,
ತಾ॥ ೬-೬-೪೭ ರಿಂದ
ಏಳನೇ ವಾರ
ಪ್ರತಿ ದಿನ ೨ ಆಟಗಳು
ಗೊಲ್ಲಭಾಮ
(ತೆಲುಗು)
ಸ್ಪೆಷಲ್ ಪ್ರೋಗ್ರಾಂ
6-6-47 ರಿಂದ ಏಳು ದಿನಗಳು
ಪ್ರತಿ ದಿನ ಬೆಳಗ್ಗೆ 10-30 ಕ್ಕೆ
ಔರತ್ ಅಥವಾ
— ಸ್ತ್ರೀ —
—: ಭೂಮಿಕೆ :—
ಸುರೇಂದ್ರ, ಸರ್ದಾರ್ ಅಖ್ತರ್.

ಡಿಪ್ಪೋ ಬದಲಾವಣೆ

ರೇಷನ್ ಡಿಪ್ಪೋ ನಂ. ೬
ಮೊಹಿಯುದ್ದೀನ್ ಸಾಹೇಬರ
ಕಾರ್ಖಾನೆ ಬೀದಿ,
ದೇವರಾಜ ಮೊಹಲ್ಲ.

ಈ ಡಿಪ್ಪೋವನ್ನು ತಾ॥ ೧೪-೬-೪೭ ನೇ ಶನಿವಾರದ ಲಾಗಾಯ್ತು ಜಗನ್ಮೋಹನ ಬಂಗಲೆ ಹತ್ತಿರ ಲಕ್ಷ್ಮೀ ವಿಲಾಸ ಅಗ್ರಹಾರದಲ್ಲಿರುವ ೨೬೧ ನೇ ನಂಬರಿಗೆ ವರ್ಗಾಯಿಸಿರುತ್ತದೆ. ಎಂದಿನಂತೆ ಮಹಾಜನರು ಪ್ರೋತ್ಸಾಹಿಸಬೇಕೆಂದು ವಿನಂತಿ

ಸಿ ದೊಡ್ಡಜವರಪ್ಪ.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೨—೬—೪೭ [ಸಂಚಿಕೆ ೨೬೧

ಚೀಣಾ ದೇಶದ ಮೇಲೆ ಮಂಗೋಲಿಯಾ ಧಾಳಿ

ರಾಜ್ಯಾಂಗ ಸಭೆಯೂ, ಮೈಸೂರು ಸಂಸ್ಥಾನವೂ

ಪ್ರಭುತ್ವದವರು ಸೇರದಿದ್ದರೆ ಪ್ರಜೆಗಳೇ ಸೇರಬೇಕು

[ಸ್ವಂ.ವ.] ಬೆಂಗಳೂರು ೧೧

ಇನ್ನು ಒಂದು ತಿಂಗಳ ಕಾಲದಲ್ಲಿ ಮೈಸೂರಿನ ಭವಿಷ್ಯದ ಬಗ್ಗೆ ಎಲ್ಲವೂ ಇತ್ಯರ್ಥವಾಗುವುದು. ಜವಾಬ್ದಾರಿ ಸರ್ಕಾರದ ನಮ್ಮ ಬೇಡಿಕೆಯು ಪೂರೈಸಲ್ಪಡದಿದ್ದರೆ ಸತ್ಯಾಗ್ರಹ ಚಳುವಳಿಗಾಗಿ ನಮ್ಮ ಜನರು ಸಿದ್ಧರಾಗಿರಬೇಕು - ಎಂಬುದಾಗಿ ಕಾಂ॥ ಅಧ್ಯಕ್ಷರಾದ ಶ್ರೀ॥ ಕೆ. ಚೆಂಗಲರಾಯ ರೆಡ್ಡಿಯವರು ಕಾಂಗ್ರೆಸ್ ಅಸೆಂಬ್ಲಿ ಪಾರ್ಟಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತ ತಿಳಿಸಿರುವರು. ಮೈಸೂರು ರಾಜ್ಯಾಂಗ ಸಭೆಗೆ ಸೇರುವುದಿಲ್ಲವೆಂದು ದಿವಾನರು ಪ್ರಕಟಿಸಿದರೆ ಆಗ ಸಂಸ್ಥಾನದ ಪ್ರಜಾ ಪ್ರತಿನಿಧಿಗಳೆಲ್ಲರೂ ಸೇರಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಅವರನ್ನು ಮೈಸೂರು ಪ್ರಜೆಗಳ ಪರವಾಗಿ ನೇರವಾಗಿ ರಾಜ್ಯಾಂಗ ಸಭೆಗೆ ಸೇರಿಸಿಕೊಳ್ಳುವಂತೆ ಭಾರತ ರಾಜ್ಯಾಂಗ ಸಭೆಯನ್ನು ಒತ್ತಾಯಪಡಿಸಬೇಕಾಗಿ ಬರಬಹುದೆಂದು ಶ್ರೀ॥ ರೆಡ್ಡಿಯವರು ನುಡಿದರು. ಪ್ರ॥ ಪ್ರ॥ ಸಭೆಯ ದಸರಾ ಅಧಿವೇಶನದೊಳಗಾಗಿ ಈಗಿನ ಮಂತ್ರಿ ಮಂಡಲವು ರದ್ದಾಗಿ ಜನತೆಯ ಆಕಾಂಕ್ಷೆಯಂತೆ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಲೆಂದು ಆಶಿಸಿದರು.

ಶ್ರೀಗಳಾದ ಕೆ. ಚಿಕ್ಕಲಿಂಗಯ್ಯ, ಭೂಪಾಳಂ ಚಂದ್ರಶೇಖರಯ್ಯನವರುಗಳು ಮಾತನಾಡಿ ಜವಾಬ್ದಾರೀ ಸರ್ಕಾರ ಸ್ಥಾಪನೆಗೆ ಸಹಾನುಭೂತಿ ತೋರಿ ತಾವೂ ಅದರಲ್ಲಿ ಸಹಕರಿಸುವುದಾಗಿ ಹೇಳಿದರು.

ಪೋರ್ಚುಗಲ್ಲು ಅಧಿಕಾರ ಬಿಡುವುದಿಲ್ಲ

ಬ್ರಿಟಿಷ್ ಭಾರತದ ಭವಿಷ್ಯ ರಾಜ್ಯಾಂಗವು ಏನೇ ಇರಲಿ, ಪೋರ್ಚುಗೀಸರಿಗೆ ಸೇರಿದ ಭಾಗದಲ್ಲಿ ಸಾರ್ವಭೌಮಾಧಿಕಾರವು ಅವರಿಗೇ ಇರುವುದು. ಭಾರತದಲ್ಲಿ ಪೋರ್ಚುಗಲ್ ಧ್ವಜ ಕೆಳಗಿಳಿಯುವ ಸಂದರ್ಭವೊದಗುವ ಸಂಭವವಿದ್ದರೆ ಅದನ್ನೆದುರಿಸಲು ಸಹಸ್ರಾರು ಜನ ಪೋರ್ಚುಗೀಸರ ಮಕ್ಕಳು ಬಿಳಿಯರ ರಕ್ತ ಹರಿಸಿಯಾದರೂ ರಕ್ಷಿಸಿಕೊಳ್ಳಬೇಕಾಗುತ್ತದೆ. ಪೋರ್ಚುಗಲ್ಲು ಭಾರತದ ಮೇಲೆ ತನಗಿರುವ ಹಕ್ಕುಬಾಧ್ಯತೆಗಳನ್ನು ಬಿಟ್ಟು ಕೊಡುವುದಿಲ್ಲ. ತನ್ನ ಪರಮಾಧಿಕಾರವನ್ನುಳಿಸಿಕೊಳ್ಳಲು ಅದು ಹಿಂಸಾ ಪ್ರಯೋಗಕ್ಕೂ ಸಹ ಸಿದ್ಧವಾಗಿಯೇ ಇರುವುದು-ಎಂಬುದಾಗಿ ಪೋರ್ಚುಗೀಸಿನ ವಿದೇಶಾಂಗ ಸಚಿವರು ಭಾಷಣವೊಂದರಲ್ಲಿ ತಿಳಿಸಿರುವುದಾಗಿ ವರದಿಯಾಗಿದೆ.

ಪಾಕಿಸ್ಥಾನಕ್ಕೆ ಕಾಲುಭಾಗ ಸ್ಟರ್ಲಿಂಗ್ ನಿಧಿ

ಇಂಡಿಯಾ ಸರ್ಕಾರದ ಒಟ್ಟು ಸಾಲ ಎರಡು ಸಾವಿರ ಕೋಟಿ ರೂ. ಇದನ್ನು ಪ್ರಾಂತಗಳ ಜನಸಂಖ್ಯೆಯ ಪ್ರಮಾಣದ ಮೇಲೆ ಹಂಚಲಾಗುವುದು. ಸ್ಟರ್ಲಿಂಗ್ ಸಾಲದ ಬಗ್ಗೆಯೂ ಇದೇ ರೀತಿಯಾದ ಏರ್ಪಾಡು ಮಾಡಲಾಗುವುದು. ಒಟ್ಟು ಸ್ಟರ್ಲಿಂಗ್ ನಿಧಿಯ ಕಾಲು ಭಾಗವು ಪಾಕಿಸ್ಥಾನಕ್ಕೆ ಸೇರುವುದೆಂದು ಹೇಳಲಾಗಿದೆ.

ಪಾಕಿಸ್ಥಾನ ಚಕ್ರವರ್ತಿ ಎಂಬ ಘೋಷಣೆಗೆ ಜಿನ್ನಾರವರ ವಿರೋಧ

ಅ॥ ಭಾ॥ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಿ॥ ಜಿನ್ನಾರವರು ಬರುತ್ತಿದ್ದಾಗ ಲೀಗ್ ಅನುಯಾಯಿಗಳು ಅವರನ್ನು 'ಷಹೆನ್‌ಷಾ ಪಾಕಿಸ್ತಾನ್'- ಎಂದು ಘೋಷಿಸಿ ಸ್ವಾಗತಿಸಿದುದನ್ನು ವಿರೋಧಿಸಿ ಮಿ॥ ಜಿನ್ನಾರವರು ತಾವು ಪಾಕಿಸ್ಥಾನದ ಸಾರ್ವಭೌಮರಲ್ಲವೆಂದೂ, ಮುಂದೆ ಆ ರೀತಿ ಘೋಷಣೆ ಮಾಡಲಾಗದೆಂದು ಹೇಳಿರುವರೆಂದೂ ತಿಳಿದು ಬಂದಿದೆ.

ಹೈದರಾಬಾದು ಹಿಂದೂಸ್ಥಾನವನ್ನು ಸೇರಬೇಕು

ಹೈದರಾಬಾದ್ ಸಂಸ್ಥಾನವು ಹಿಂದೂಸ್ತಾನ ರಾಜ್ಯಾಂಗ ಸಭೆಗೆ ಸೇರಿ ಸಂಯುಕ್ತ ಹಿಂದೂಸ್ತಾನದ ಅಂಗವಾಗಬೇಕು. ನಿಜಾಮರ ಛತ್ರಛಾಯೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು ಎಂಬ ನಿರ್ಣಯವನ್ನು ಅಲ್ಲಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಬರುವ ೧೬ ನೇ ತಾ॥ ನಿಂದ ೧೮ ನೇ ತಾ॥ ವರೆಗೆ ನಡೆಯುವ ಹೈದರಾಬಾದು ಸಂಸ್ಥಾನದ ಕಾಂಗ್ರೆಸ್ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸುವರೆಂದು ಹೇಳಲಾಗಿದೆ. ಆದರೆ ಹೈದರಾಬಾದ್ ಸ್ವತಂತ್ರ ರಾಜ್ಯವಾಗಿಯೇ ಉಳಿಯುವುದೆಂದು ನಿಜಾಮರು ನಿರ್ಧರಿಸಿರುವುದಾಗಿ ವರದಿಯಾಗಿದೆ.

ಸಿಲೋನಿನಲ್ಲಿ ನಾವಿಕರ ದಂಗೆ

ಸಿಂಹಳದ ನೌಕಾ ಪಡೆಯ ಬ್ರಿ॥ ಅಧಿಕಾರಿಗಳು ಅಲ್ಲಿಯ ಮುಷ್ಕರವನ್ನಡಗಿಸಲು ತಮ್ಮ ಕೈ ಕೆಳಗಿನ ನಾವಿಕರ ಸೇವನ್ನು ಪಡೆಯುವ ಪ್ರಯತ್ನದಲ್ಲಿ ಅವರನ್ನು ಕೆಟ್ಟ ರೀತಿಯಿಂದ ಉಪಯೋಗಿಸಿಕೊಂಡರೆಂಬ ಕಾರಣದಿಂದ ೫೦೦ ಮಂದಿ ನಾವಿಕರು ಅಧಿಕಾರಿಗಳ ವಿರುದ್ಧವಾಗಿ ಮೊನ್ನೆ ದಂಗೆಯೆದ್ದಿದ್ದರೆಂದು, ಮರಿ ಯಾಗಿದೆ. ದಂಗೆಯನ್ನಡಗಿಸಲು ಬಾಂಬುಗಳ ಪ್ರಯೋಗ ನಡೆಸಲಾಯಿತೆಂದೂ, ದಂಗೆಕೋರರಿಗೆ ಸಹಾನುಭೂತಿ ತೋರಲು ೩೫೦ ನಾವಿಕ ಮಂದಿ ಕೆಲಸಗಾರರು ಮುಷ್ಕರ ಹೂಡಿದ್ದಾರೆಂದೂ ತಿಳಿದು ಬಂದಿದೆ. ಪರಿಸ್ಥಿತಿ ಬಿಕ್ಕಟ್ಟಿನಲ್ಲಿದೆ.

ಸಿಲ್ಹೆಟ್ ಅಸ್ಸಾಮಿನಲ್ಲೇ ಉಳಿಯುವುದು

ಸಿಲ್ಹೆಟ್ ಜಿಲ್ಲೆಯ ಭವಿಷ್ಯದ ಬಗ್ಗೆ ಜನಾಭಿಪ್ರಾಯ ಪಡೆದರೆ ಅವರು ಈಗಿರುವಂತೆ ಮುಂದೆಯೂ ಅಸ್ಸಾಂ ಪ್ರಾಂತ್ಯದಲ್ಲೇ ಇರುವ ಅಭಿಪ್ರಾಯವನ್ನು ಕೊಡುವರು-ಎಂಬುದಾಗಿ ಅಸ್ಸಾಂ ಪ್ರಾಂತದ ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ॥ ಅಬ್ದುಲ್ಲಾ ಸಲೀಂ ಹಕ್ಕರು ಹೇಳಿರುವರು.

ಸ್ಪೇನಿನ ರಾಜತ್ವದ ಬಗ್ಗೆ ಜನಾಭಿಪ್ರಾಯ

ಸ್ಪೇನನ್ನು ರಾಜರಹಿತ ರಾಜ್ಯವನ್ನಾಗಿ ಮಾಡಿ ಜನರಲ್ ಫ್ರಾಂಕೋರವರಿಗೆ ಪೂರ್ಣಾಧಿಕಾರವನ್ನು ಕೊಡುವ ಶಾಸನದ ಬಗ್ಗೆ ಜುಲೈ ೬ ನೇ ತಾ॥ ರೆಫರೆಂಡಂ ತೆಗೆದುಕೊಳ್ಳಲಾಗುವುದೆಂದು ವರದಿಯಾಗಿದೆ. ಫ್ರಾಂಕೋರವರು ಜನಗಳ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಇದೇ ಮೊದಲು.

ರಾಯಪುರ್ ಸಂಸ್ಥಾನದಲ್ಲಿ ಸುಧಾರಣೆ

ರಾಯಪುರ್ ಸಂಸ್ಥಾನಾಧೀಶರಾದ ಶ್ರೀ ರಾಜಾ ಚಕ್ರಧರ ಸಿಂಗ್‌ರವರು ತಮ್ಮ ಸಂಸ್ಥಾನದಲ್ಲಿ ಕೆಲವು ಸುಧಾರಣೆಗಳನ್ನು ಘೋಷಿಸಿರುವರು. ಈಗಿರುವ ಸ್ಟೇಟ್ ಸಭೆಯನ್ನು ರದ್ದುಗೊಳಿಸಿ ಅದರ ಸ್ಥಾನದಲ್ಲಿ ಇನ್ನೂ ಹೆಚ್ಚಿನ ಅಧಿಕಾರ ಪಡೆದ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಲಾಗಿದೆ. ಅದಕ್ಕೆ ರಾಜರು ಅಧ್ಯಕ್ಷರು, ದಿವಾನರು ಉಪಾಧ್ಯಕ್ಷರು. ಮಹಾರಾಜರಿಗೆ ಕಾಣಿಕೆ ಕೊಡುತ್ತಿದ್ದುದನ್ನು ರದ್ದುಗೊಳಿಸಲಾಗಿದೆ. ಸಂಸ್ಥಾನದ ರೆವಿನ್ಯೂ ಆದಾಯದ ಶೇ॥ ೧೫ ರಷ್ಟನ್ನು ಮಹಾರಾಜರು ತಮ್ಮ ಸ್ವಂತ ವೆಚ್ಚಕ್ಕಾಗಿ ಇಟ್ಟುಕೊಳ್ಳುವರು. ಸಂಸ್ಥಾನಕ್ಕೆ ಅಧಿಕಾರಿಗಳನ್ನು ಆರಿಸಿಕೊಳ್ಳುವಾಗ ಅಲ್ಲಿನ ಪ್ರಜೆಗಳಿಗೇ ಹೆಚ್ಚಿನ ಅವಕಾಶವನ್ನು ಕೊಡಲಾಗುವುದು.

ಸಂಡೂರು ಭಾರತ ರಾಜ್ಯಾಂಗ ಸಭೆಗೆ

ಸಂಡೂರ್ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರಬೇಕೆಂದು ಶಾಸನ ಸಭೆಯು ಮಾಡಿದ್ದ ಸಲಹೆಯನ್ನು ಅಲ್ಲಿನ ರಾಜರು ಅಂಗೀಕರಿಸಿರುವರೆಂದು ಸರ್ಕಾರಿ ಪ್ರಕಟನೆ ಹೊರಟಿದೆ. ಪ್ರತಿನಿಧಿಗಳ ಆಯ್ಕೆ ಮೊದಲಾದ ವಿಚಾರಗಳಲ್ಲಿ ರಾಜ್ಯಾಂಗ ಸಭಾಧ್ಯಕ್ಷರೊಡನೆ ಸಂಧಾನ ನಡೆಯುತ್ತಿರುವುದಾಗಿ ವರದಿಯಾಗಿದೆ.

ಜಿನ್ನಾ ಕೊಲೆ ಪ್ರಯತ್ನದ ವರದಿ

ಮಿ॥ ಜಿನ್ನಾ ರವರನ್ನು ಕೊಲೆ ಮಾಡಲು ನಡೆಯಿತೆಂದು ಹೇಳಲಾದ ಒಂದು ಪ್ರಯತ್ನದ ವರದಿಯನ್ನು ಇಂಗ್ಲೆಂಡಿನ ಪತ್ರಿಕೆಗಳು ಪ್ರಾಮುಖ್ಯವಾಗಿ ಪ್ರಥಮ ಪುಟದಲ್ಲಿ ಪ್ರಕಟಪಡಿಸಿರುತ್ತವೆ. ಈ ಕೃತ್ಯವು ನಡೆಯಿತೆಂದು ಹೇಳಲಾದ ಕೂಡಲೇ ಲಂಡನ್ ಪತ್ರಿಕೆಯ ಸುದ್ದಿಗಾರರೊಬ್ಬರು ಜಿನ್ನಾರವರನ್ನು ಕಂಡರೆಂದೂ ಈ ಪ್ರಕರಣದಿಂದ ತಮ್ಮ ಧ್ಯೇಯದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲವೆಂದು ಜಿನ್ನಾರವರು ಹೇಳಿದರೆಂದೂ ಸಹ ವರದಿಯಾಗಿರುತ್ತದೆ.

ಚೀಣಾದಲ್ಲಿ ಹೊರ ಮಂಗೋಲಿಯಾ ಧಾಳಿ

ಕಳೆದ ಗುರುವಾರ ಹೊರ ಮಂಗೋಲಿಯಾ ರಿಪಬ್ಲಿಕ್ಕಿನ ಅಶ್ವ ಸೈನ್ಯಗಳು ಚೀಣಾ ದೇಶದೊಳಗೆ ೨೦೦ ಮೈಲಿ ದೂರ ನುಗ್ಗಿ ಸಿಂಕಿಯಾಂಗ್ ನಗರದ ಮೇಲೆ ಧಾಳಿ ನಡೆಸಿರುವೆಂದು ವರದಿಯಾಗಿದೆ. ಸರ್ಕಾರ ಸೈನ್ಯಗಳು ಅವುಗಳನ್ನು ಎದುರಿಸುತ್ತಿವೆ. ರಷ್ಯದ ಚಿಹ್ನೆಯನ್ನು ಹೊಂದಿದ್ದ ೪ ವಿಮಾನಗಳು ಮಂಗೋಲಿಯಾ ಸೇನೆಗಳಿಗೆ ಅಂತರಿಕ್ಷದಲ್ಲಿ ರಕ್ಷಣೆಯನ್ನು ಒದಗಿಸಿ ಕೊಡುತ್ತಿದ್ದುವು. ಅಲ್ಲದೆ ಮದ್ದು ಗುಂಡುಗಳಿಂದ ಭರ್ತಿಯಾದ ಲಾರಿಗಳೂ ಸಹಾಯ ಮಾಡುತ್ತಿದ್ದುವು. ಹೊರ ಮಂಗೋಲಿಯಾ ರಿಪಬ್ಲಿಕ್ಕು ರಷ್ಯದೊಡನೆ ನಿಕಟ ಸಂಪರ್ಕವನ್ನು ಹೊಂದಿರುತ್ತದೆ.

ರಾಜ್ಯಾಂಗ ಸಭೆಗೆ ಪಾಟಿಯಾಲಾ ಪ್ರತಿನಿಧಿಗಳು

ಪಾಟಿಯಾಲಾ ಸಂಸ್ಥಾನದಿಂದ ಭಾರತ ರಾಜ್ಯಾಂಗ ಸಭೆಗೆ ಇರುವ ಎರಡು ಸ್ಥಾನಗಳಿಗೂ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸುವುದಾಗಿ ಅಲ್ಲಿನ ಮಹಾರಾಜರು ತಿಳಿಸಿರುವುದಾಗಿ ವರದಿಯಾಗಿದೆ. ಚುನಾವಣೆ ನಡೆಸಲು ೬೧ ಮಂದಿ ಸದಸ್ಯರಿಂದೊಡಗೂಡಿದ ಸಭೆಯೊಂದು ಏರ್ಪಟ್ಟಿದೆ. ಅದರಲ್ಲಿ ೨೭ ಸಿಕ್ಕರೂ, ೧೪ ಹಿಂದುಗಳೂ ೧೨ ಮುಸ್ಲಿಮರೂ, ೮ ಜನ ಇತರರೂ ಇರುವರು.

ಪಾಕಿಸ್ತಾನಕ್ಕೆ ಹಿಂದೂ ಅಧಿಕಾರಿಗಳು

ಹಿಂದೂ ಅಧಿಕಾರಿಗಳು ಆರ್ಥಿಕ ವ್ಯವಹಾರ ಮತ್ತು ಆಡಳಿತಗಳಲ್ಲಿ ನಿಪುಣರಿರುವರು. ಮುಸ್ಲಿಮರಲ್ಲಿ ಹಣಕಾಸಿನ ಆಡಳಿತವನ್ನು ಅರಿತಿರುವವರು ಸಾಕಾದಷ್ಟು ಇರುವುದಿಲ್ಲ. ಪಾಕಿಸ್ತಾನ ಸರ್ಕಾರವು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಅನೇಕ ಮಂದಿ ಹಿಂದೂ ಅಧಿಕಾರಿಗಳು ಅಲ್ಲಿ ಅಗತ್ಯವಾಗಿ ಬೇಕು-ಎಂದು ದೆಹಲಿಯ ಲೀಗ್ ನಾಯಕರೊಬ್ಬರು ಹೇಳಿರುವರು.

ದೇವಸ್ಥಾನದ ನೌಕರರ ಮುಷ್ಕರ

[ಸ್ವಂ. ವ.] ಶ್ರೀರಂಗಪಟ್ಟಣ ೧೧

ಸರ್ಕಾರದ ಇತರ ನೌಕರರಿಗೆ ಕೊಡುತ್ತಿರುವಂತೆಯೇ ತಮಗೂ ತುಟ್ಟಿ ಭತ್ಯವನ್ನು ಕೊಡಬೇಕೆಂಬುದಾಗಿ ಅಲ್ಲಿನ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನದ ನೌಕರರು ಈಗ ಸುಮಾರು ಆರು ತಿಂಗಳಿಂದಲೂ ಪ್ರಾರ್ಥಿಸಿಕೊಂಡಿದ್ದರೂ ಸಹ ಯಾವ ಪರಿಹಾರವೂ ದೊರೆಯದಿರುವುದರಿಂದ ಅವರು ಇದೇ ೧೬ ನೇ ತಾ॥ ನಿಂದ ಮುಷ್ಕರ ಹೂಡುವರೆಂದು ತಿಳಿದು ಬಂದಿದೆ.

ಸಾಧ್ವಿ

ತಾ॥ ೧೨-೬-೪೭ ಗುರುವಾರ

ಪ್ರಜಾಪ್ರತಿನಿಧಿ ಸಭೆಯಲ್ಲಿ ವಂದೇ ಮಾತರಂ

ಶಾಲಾ ಕಾಲೇಜುಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡುವ ವಿಷಯವಾಗಿ ಆಗಾಗ್ಗೆ ತಲೆದೋರುತ್ತಿರುವ ಚಟುವಟಿಕೆಗಳು ಈ ಸಾರಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಂದು ನಿರ್ಧಾರದ ರೂಪವನ್ನು ತಾಳಿದುವು. ಮುಸ್ಲಿಂ ಲೀಗ್ ನಾಯಕರಾದ ಮಿ॥ ಎ ಬೆ ಖಲೀಲರು ತಂದಿದ್ದ ನಿರ್ಣಯವು ಇದಕ್ಕೆ ಕಾರಣವಾಯಿತು. ಹಿಂದೂ ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಓದುತ್ತಿರುವ ಮತ್ತು ಸರ್ಕಾರದಿಂದ ಸಹಾಯ ಪಡೆಯುತ್ತಿರುವ ಶಾಲೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಲು ಅವಕಾಶ ಕೊಡಕೂಡದೆಂಬುದೇ ನಿರ್ಣಯದ ಉದ್ದೇಶ.

ಸಭೆಯ ಮುಸ್ಲಿಂ ಲೀಗ್ ಸದಸ್ಯರ ವಿನಾ ಉಳಿದವರೆಲ್ಲರೂ ಈ ನಿರ್ಣಯವನ್ನು ಪ್ರತಿಭಟಿಸಿ ದೇಶಾಭಿಮಾನ ಸೂಚಕವಾದ ಈ ಗೀತೆಯನ್ನು ಹಾಡಲು ಸರ್ವರಿಗೂ ಇರುವ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು ಇತರ ಹಲವು ರಾಜಕೀಯ ವಿಷಯಗಳಲ್ಲಿ ಅಲ್ಪ ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದರೂ, ಈ ವಿಚಾರದಲ್ಲಿ ಎಲ್ಲಾ ಪಕ್ಷಗಳೂ ಒಂದುಗೂಡಿ ತಮ್ಮ ದೇಶಾಭಿಮಾನವನ್ನು ವ್ಯಕ್ತಪಡಿಸಿದ್ದು ಅಭಿನಂದನೀಯವಾದ ಸಂಗತಿ.

ಈ ನಿರ್ಣಯವನ್ನು ಮಂಡಿಸಿ ಮಿ॥ ಖಲೀಲರು ಹೇಳಿದ ಕಾರಣಗಳು ಕೇವಲ ನಿರಾಧಾರವಾದುವುಗಳಾಗಿದ್ದುವು. ಮುಸ್ಲಿಮರ ಮೇಲೆ ಹಿಂದೂಗಳನ್ನು ಎತ್ತಿ ಕಟ್ಟಲು ಈ ಗೀತೆಯು ರಚಿಸಲ್ಪಟ್ಟಿತೆಂಬುದು ಶುದ್ಧ ಸುಳ್ಳು. ಮಾತೃಭೂಮಿಯ ನಮಸ್ಕಾರವನ್ನು ಸೂಚಿಸುವುದೇ ವಂದೇ ಮಾತರಂ ಗೀತೆಯ ಮುಖ್ಯ ಉದ್ದೇಶ. ತಾಯಿಯೂ, ತಾಯಿನಾಡೂ ಸ್ವರ್ಗಕ್ಕಿಂತ ಮಿಗಿಲೆಂದು ಹಿಂದೂಶಾಸ್ತ್ರ ಪುರಾಣಗಳು ಸಾರುತ್ತಿವೆ. ತಾಯಿಯ ಪಾದದಲ್ಲಿ ಸ್ವರ್ಗವು ಇರುವುದೆಂದು ಕುರಾನ್ ಮತವೂ ಹೇಳುತ್ತಿದೆ. ಹೀಗಿರುವಲ್ಲಿ ತಾಯಿಗೆ ಸಮಾನವಾದ ನಾಡಿನ ಪ್ರಶಂಸೆಗೆ ಮುಸ್ಲಿಮರು ವಿರೋಧವನ್ನು ಸೂಚಿಸುವುದು ಸರಿಯಲ್ಲ.

ಶಾಲೆಗಳಲ್ಲಿ ಪಾಠಗಳು ನಡೆಯುವ ಮೊದಲು ಪ್ರಾರ್ಥನೆಯನ್ನು ಮಾಡುವುದು ಪಾಶ್ಚಾತ್ಯ ಪದ್ಧತಿಯೆಂದೂ, ಅದನ್ನು ಕೇವಲ ಮಿಷನರಿ ಶಾಲೆಗಳಲ್ಲಿ ಮಾತ್ರ ಅನುಸರಿಸುತ್ತಿರುವರೆಂದೂ ಪಾಶ್ಚಿಮಾತ್ಯರ ಪದ್ಧತಿಯನ್ನು ಮಾಡಿ ಪ್ರಾರ್ಥನೆಯ ನಾವು ನಡೆಸುವ ಅಗತ್ಯವಿಲ್ಲವೆಂದೂ ಖಲೀಲರು ಹೇಳಿರುವರು. ಪ್ರಾರ್ಥನೆಯು ಪಾಶ್ಚಿಮಾತ್ಯರಿಗೆ ಮೀಸಲಾದ ಪದ್ಧತಿಯಲ್ಲ. ಇಡೀ ಹಿಂದೂಸ್ಥಾನದಲ್ಲಿ ನಡೆಯುವ ಸಕಲ ಸಮಾರಂಭಗಳಲ್ಲಿಯೂ ಮೊದಲು ಪ್ರಾರ್ಥನೆಯನ್ನು ನಡೆಸುವುದು ಇದುವರೆಗೆ ಅನೇಕ ಶಾಲೆಗಳಲ್ಲಿ ಇದ ರೂಢಿಯಲ್ಲಿತ್ತು. ಇದಕ್ಕೆ ಯಾರೂ ಆಕ್ಷೇಪಣೆ ಎತ್ತುತ್ತಿರಲಿಲ್ಲ. ವಂದೇ ಮಾತರಂ ಗೀತೆಯನ್ನು ಹಾಡ ಆರಂಭಿಸಿದ ಮೇಲೆ ಈ ಮುಸ್ಲಿಮರ ವಿರೋಧವು ಆರಂಭವಾಗಿರುತ್ತದೆ. ಪ್ರಾರ್ಥನೆ ಮಾಡುವುದೇ ಸರಿಯಲ್ಲವೆಂದು ಹೇಳುವುದಾದರೆ ಶುಕ್ರವಾರದ ದಿನ ಮುಸ್ಲಿಮರ ಪ್ರಾರ್ಥನೆಗಾಗಿ ಇಡೀ ಪ್ರಜಾಪ್ರತಿನಿಧಿ ಸಭೆಯನ್ನೇ ಒಂದು ಗಂಟೆಯ ಕಾಲ ಮುಂದುವರೆಸುವ ಪದ್ಧತಿಯನ್ನು ಟೀಕಿಸಬೇಕಾಗುವದಲ್ಲವೇ? ಆದರೆ ಹಾಗೆ ಮಾಡುವುದು ಸರಿಯಲ್ಲ. ಪರಮಾತ್ಮನ ಅಥವಾ ದೇಶಮಾತೆಯ ಪ್ರಾರ್ಥನೆಗೆ ಸಕಲರೂ ಮನ್ನಣೆ ಕೊಡುವುದು ಪರಮ ಪವಿತ್ರವಾದ ಕರ್ತವ್ಯ.

ಪ್ರಾರ್ಥನೆಯಲ್ಲಿ ಭಾಗವಹಿಸಲು ಯಾರಿಗೂ ನಿರ್ಬಂಧವಿರುವುದಿಲ್ಲ ಎಂದ ಮೇಲೆ ಅದಕ್ಕೆ ಯಾರ ಆಕ್ಷೇಪಣೆಯೂ ಇರಲು ಕಾರಣವಿಲ್ಲ. ಶಾಂತಿ ನೆಲೆಗಳಿಗಾಗಿ ಪವಿತ್ರವಾದ ಪ್ರಾರ್ಥನೆಯನ್ನೇ ನಿಲ್ಲಿಸುವುದಾದರೆ ಮುಂದೆ ಒಂದು ಜಾತಿ, ಮತ ಅಥವಾ ಕೋಮಿನ ಸಂಬಂಧವಾದ ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳನ್ನು ಪ್ರತಿಬಂಧಿಸುವ ಕಾಲವೂ ಬಂದೀತು.

ನೆರೆಯ ಪ್ರಾಂತವಾದ ಮದರಾಸಿನಲ್ಲಿ ಸರ್ಕಾರದವರು ಈ ಬಗ್ಗೆ ಖಚಿತವಾದ ನಿರ್ಧಾರಕ್ಕೆ ಬಂದಿದ್ದಾರೆ. ಅಲ್ಲಿ ಯಾವ ತೊಂದರೆಯೂ ಇಲ್ಲದೆ ಈ ಗೀತೆಯು ಹಾಡಲ್ಪಡುತ್ತಿದೆ. ನಮ್ಮ ಸಂಸ್ಥಾನದಲ್ಲಿ ವಿದ್ಯಾರ್ಥಿಗಳೂ ವಿಶ್ವವಿದ್ಯಾಲಯದವರೂ ಇದ ಕೈಬಿಡಬೇಕೆಂದು ಒತ್ತಾಯ ಮಾಡುತ್ತಿರುವುದು ತೀರ ಅನುಚಿತ. ಸಂಸ್ಥಾನದ ಪ್ರಜೆಗಳ ಅಭಿಪ್ರಾಯವನ್ನು ಬಹಳ ಮಟ್ಟಿಗೆ ಪ್ರತಿಬಿಂಬಿಸುವ ಪ್ರಜಾಪ್ರತಿನಿಧಿ ಸಭೆಯು ಈ ವಿಷಯದಲ್ಲಿ ಖಚಿತವಾದ ನಿರ್ಧಾರಕ್ಕೆ ಬಂದ ಮೇಲಾದರೂ ಪ್ರಭುತ್ವದವರು ಕೂಡಲೇ ಈ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡು ಇನ್ನು ಮುಂದೆ ಈ ಗೀತೆಯ ಹರಣಕ್ಕೆ ಯಾವ ಅಡಚಣೆಯೂ ಇಲ್ಲದಂತೆ ಏರ್ಪಡಿಸುವುದು ವಿಹಿತವಾಗಿರುತ್ತದೆ.

* ಭಾರತದ ಕಾರ್ಯದರ್ಶಿ ಲಾರ್ಡ್ ಲಿಸ್ಟೋವೆಲ್ಲರು ಆಗಸ್ಟ್ ೧೫ ರಲ್ಲಿ ಭಾರತಕ್ಕೆ ಅಧಿಕಾರ ವಹಿಸಿಕೊಡುವ ಸಲುವಾಗಿ ದೆಹಲಿಗೆ ಭೇಟಿ ಕೊಡಬಹುದೆಂದು ವರದಿಯಾಗಿದೆ.

Please Visit

Rao & Co.,

1273, Yelwal Road, Mysore.

for your requirements of Paper, Stationery, Exercise Books etc

ವುಡ್‌ಲ್ಯಾಂಡ್ಸ್

8-6-47 ರಿಂದ

ಶಿಕ್ಕಿರಿದ ೩ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ಬಿ. ಕನ್ನಡ)

—: ಪಾತ್ರ :—

ಟಿ ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರ ಮುಂತಾದವರು.

ದೆಹಲಿಯು ಪಾಕಿಸ್ಥಾನಕ್ಕೂ ರಾಜಧಾನಿ

ಪಾಕಿಸ್ಥಾನ ರಾಜ್ಯಾಂಗ ಸಭೆಯು ದೆಹಲಿಯಲ್ಲಿಯೇ ಸೇರುವುದೆಂಬುದಾಗಿ ಗೊತ್ತಾಗಿದೆ. ಪಾಕಿಸ್ಥಾನ ಡೊಮಿನಿಯನ್ ಸರ್ಕಾರದ ಕಛೇರಿಗಳಿಗೆ ಇಂಡಿಯಾ ಸರ್ಕಾರದ ಸೆಕ್ರೆಟೇರಿಯಟ್ಟಿನ ಒಂದು ಭಾಗದ ಕಟ್ಟಡಗಳನ್ನು ಸಿದ್ಧಗೊಳಿಸಲಾಗುತ್ತಿದೆ. ಪಾಕಿಸ್ಥಾನದ ಹೊಸ ರಾಜಧಾನಿಯು ಸಿದ್ಧವಾಗಲು ೩-೩ ವರ್ಷಗಳು ಬೇಕಾಗುವುದರಿಂದ ಅಲ್ಲಿಯ ವರೆಗೆ ದೆಹಲಿಯೇ ಪಾಕಿಸ್ಥಾನದ ರಾಜಧಾನಿಯಾಗಿರುವುದೆಂದು ಹೇಳಲಾಗಿದೆ

ಕಾಶ್ಮೀರಕ್ಕೆ ವೈಸರಾಯರು

ಕಾಶ್ಮೀರ ಸಂಸ್ಥಾನಾಧೀಶರ ಆಹ್ವಾನದಂತೆ ವೈಸರಾಯ್ ದಂಪತಿಗಳು ೧೮ ನೇ ತಾ॥ ಕಾಶ್ಮೀರಕ್ಕೆ ಭೇಟಿಯಿತ್ತು ೨೩ ನೇ ತಾ॥ ದೆಹಲಿಗೆ ಹಿಂದಿರುಗುವರೆಂದು ವರದಿಯಾಗಿದೆ

ಡಿಪೋ ಬದಲಾವಣೆ

ರೇಷನ್ ಡಿಪೋ ನಂ. ೭

ಮೊಹಿಯುದ್ದೀನ್ ಸಾಹೇಬರ ಕಾಯಿರ್ಪಣೆ ಚೀಟಿ, ದೇವರಾಜ ಮೊಹಲ್ಲ.

ಈ ಡಿಪೋವನ್ನು ತಾ॥ ೧೪-೬-೪೭ ನೇ ಶನಿವಾರದ ಲಾಗಾಯ್ತು ಜಗನ್ಮೋಹನ ಬಂಗಲೆ ಹತ್ತಿರ ಲಕ್ಷ್ಮೀ ವಿಲಾಸ ಆಗ್ರಹಾರದಲ್ಲಿರುವ ೨೭೧ ನೇ ನಂ ಮಳಿಗೆಗೆ ವರ್ಗಾಯಿಸಿರುತ್ತದೆ ಎಂದಿನಂತೆ ಮಹಾಜನರು ಪ್ರೋತ್ಸಾಹಿಸಬೇಕೆಂದು ವಿನಂತಿ

ಸಿ ದೊಡ್ಡಜವರಪ್ಪ.

ಹರಾಜು ನೋಟೀಸು

ರನ್ನಿಂಗ್ ಕಂಡಿಷನ್ನಿನಲ್ಲಿರುವ ಹಲವು ಮೋಟಾರುಕಾರುಗಳು, ಬಸ್ಸುಗಳು ಮತ್ತು ಲಾರಿಗಳು 1947 ನೇ ಜೂನ್ 21 ಮತ್ತು 22 ನೇ ತಾರೀಖುಗಳಲ್ಲಿ ಬೆಳಗ್ಗೆ 9 ಘಂಟೆಯಿಂದ 1 ಘಂಟೆವರೆಗೆ ಮೈಸೂರು ಪ್ಯಾಲೇಸ್ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ

ವಿವರಗಳಿಗಾಗಿ, 1947 ನೇ ಜೂನ್ 7 ಮತ್ತು 14 ನೇ ತಾರೀಖುಗಳ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗಲಿರುವ ಪ್ರಕಟನೆಯನ್ನು ದಯವಿಟ್ಟು ನೋಡಿ

ಸೂಪರಿಂಟೆಂಡೆಂಟ್, ಪ್ಯಾಲೇಸ್ ಗ್ಯಾರೇಜ್

Edited printed and published by A. R. Nagarajan at the Sadhvi Press D Subbaiah Road Mysore

ಭಾರತ-ಬಟೇವಿಯಾ ಸಂಬಂಧ

ಬಟೇವಿಯಾದಲ್ಲಿ ಭಾರತದ ಕಾನ್ಸಲ್ ಜನರಲ್‌ರೊಬ್ಬರನ್ನು ನೇಮಿಸುವ ಭಾರತ ಸರ್ಕಾರದವರು ಡಚ್ ಸರ್ಕಾರದೊಂದಿಗೆ ಮಾತುಕತೆ ನಡೆಸುತ್ತಿರುವರೆಂದು ವರದಿಯಾಗಿದೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ರಾಜಕಮಲ್,

ತಾ॥ ೧೩-೬-೪೭ ರಿಂದ

8 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ (ತೆಲುಗು)

ಸ್ಪೆಷಲ್ ಪ್ರೋಗ್ರಾಂ

೧೩—೬—೪೭ ರಿಂದ

7 ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ

ಸಿಸ್ಟರ್ ಸಹೋದರಿ (ಹಿಂದಿ)

—: ಪಾತ್ರ :—

ನಳಿನಿಜಯವಂತ್, ಶೇಕ್‌ಮುಖ್ತಾರ್ ಹರೀಶ್.

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೩ : : ಫೋನ್ ೫೧೧

ಫೋ. ನಂ. ೩೯೭ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಶುಕ್ರವಾರ ೧೩—೭—೪೭ [ಸಂಚಿಕೆ ೨೬೩

— ತಿರುವಾಂಕೂರು — ಯುದ್ಧಮಾಡಲೂ ಸಿದ್ಧ!

ಕೋರ್ಟಿನೊಳಕ್ಕೆ ಉರಿಯುವ ಚೆಂಡನ್ನು ಎಸೆದರು

ಹೌರಾದ ಸಬ್ ಡಿವಿಜನಲ್ ಆಫೀಸರ ಮಿ॥ ಎಸ್ ಸಿ ಘೋಷರವರ ಕೋರ್ಟಿನೊಳಕ್ಕೆ ಯಾರೋ ದುಷ್ಕರ್ಮಿಗಳು ಸಣ್ಣಲ್ಲಿ ಸುತ್ತಿದ್ದ ಉರಿಯುವ ಚೆಂಡನ್ನು ಎಸೆದರೆಂದು ವರದಿಯಾಗಿದೆ. ಕೋರ್ಟಿನಲ್ಲಿದ್ದವರೆಲ್ಲರೂ ಗಾಬರಿಯಿಂದ ಒಬ್ಬೊಬ್ಬರಾಗಿ ಹೊರ ಹೊರಟರು. ಆ ಚೆಂಡನ್ನು ಪೋಲೀಸರು ವಶಪಡಿಸಿಕೊಂಡರೆಂದೂ ಅದು ಆಸ್ಫೋಟನೆಯಾಗಿಲ್ಲವೆಂದೂ ಹೇಳಲಾಗಿದೆ.

ಹೆಂಗಸಿಗಾಗಿ ಜಗಳ

ಒಬ್ಬ ಹೆಂಗಸಿಗಾಗಿ ನ್ಯೂಯಾರ್ಕ್ ಸೈನ್ಯ ಶಿಬಿರದ ನಿವಾಸಿಗಳಾದ ೬೯ ವರ್ಷದ ಏಲೊ ಕಸೆಟೊ ಮತ್ತು ೭೭ ವಯಸ್ಸಿನ ಜೆ. ಎಲ್ ಕಾರ್ ಎಂಬುವರು ಚಿತ್ರದಿಂದ ಹೊಡೆದಾಡಿ ಬಹಳವಾಗಿ ಘಾಯಗೊಂಡಿರುವರೆಂದು ವರದಿಯಾಗಿದೆ.

೧೯೪೭ ರ ಅಂತ್ಯದೊಳಗೆ ಬರ್ಮದಲ್ಲಿ ಹೊಸ ರಾಜ್ಯಾಂಗ

ಬರ್ಮದ ರಾಜ್ಯಾಂಗ ಸಭೆಯು ೨೫೫ ಮಂದಿ ಸದಸ್ಯರ ಸಭೆಯು ಮೊನ್ನೆ ಥಕಿನ್ ನು ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಬರ್ಮವು ಸ್ವತಂತ್ರ ಪ್ರಜಾ ಪ್ರಭುತ್ವ ರಾಷ್ಟ್ರವೆಂದು ಈ ವರ್ಷಾಂತ್ಯದಲ್ಲಿ ಘೋಷಿಸಲೂ ಮತ್ತು ರಾಜ್ಯಾಂಗವನ್ನು ರೂಪಿಸಲೂ ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು

ಕೇಂದ್ರ ಸರ್ಕಾರದ ನೌಕರರು

ಈಗಿನ ಕೇಂದ್ರ ಸರ್ಕಾರದಲ್ಲಿರುವ ನೌಕರರು ಪಾಕಿಸ್ತಾನದಲ್ಲಿರುವರೋ ಅಥವಾ ಹಿಂದೂಸ್ತಾನದಲ್ಲಿರುವರೋ ಎಂಬುದನ್ನು ತಿಳಿಸಬೇಕೆಂದು ಅವರಿಗೆ ಸೂಚಿಸಲಾಗಿದೆಯೆಂದು ತಿಳಿದು ಬಂದಿದೆ

ರಾಜ್ಯಾಂಗ ಸಭೆಗೆ ರಾಜೀನಾಮೆ

ಪಾಕಿಸ್ತಾನ ಪ್ರದೇಶಗಳಲ್ಲಿರುವ ಆಂಗ್ಲೋ ಇಂಡಿಯನ್ನರ ಭವಿಷ್ಯ ನಿರ್ಧಾರಕ್ಕೆ ಪಾಕಿಸ್ತಾನ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಬೇಕೆಂದು ಹೇಳಿ ಭಾರತ ರಾಜ್ಯಾಂಗ ಸಭೆಯ ಆಂಗ್ಲೋ ಇಂಡಿಯನ್ ಸದಸ್ಯರಾದ ಮಿ॥ ಗಿಬ್ಬನ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ

ಡಿಪೋ ಬದಲಾವಣೆ

ರೇಷನ್ ಡಿಪೋ ನಂ. ೭ ಮೊಹಿಯುದ್ದೀನ್ ಸಾಹೇಬರ ಕಾರ್ಖಾನೆ ಬೀದಿ, ದೇವರಾಜ ಮೊಹಲ್ಲಾ.

ಈ ಡಿಪೋವನ್ನು ತಾ॥ ೧೪-೭-೪೭ ನೇ ಶನಿವಾರದ ಲಾಗಾಯ್ತು ಜಗನ್ಮೋಹನ ಬಂಗಲೆ ಹತ್ತಿರ ಲಕ್ಷ್ಮೀ ವಿಲಾಸ ಅಗ್ರಹಾರದಲ್ಲಿರುವ ೨೬೧ ನೇ ನಂ ಮಳಿಗೆಗೆ ವರ್ಗಾಯಿಸಿರುತ್ತದೆ ಎಂದು ನಂಬಿ ಮಹಾಜನರು ಪ್ರೋತ್ಸಾಹಿಸಬೇಕೆಂದು ವಿನಂತಿ

ಸಿ ದೊಡ್ಡಜವರಪ್ಪ.

ಬಂಗಾಳಕ್ಕೆ ಆಚಾರ್ಯ ಕೃಪಲಾನಿ

ಬಂಗಾಳ ಪ್ರಾಂತ ವಿಭಜನೆಯ ಬಗ್ಗೆ ನಿರ್ಧರಿಸುವ ಸಲುವಾಗಿ ಇದೇ ೨೦ ನೇ ತಾರೀಖಿನ ದಿನ ಐರೋಪ್ಯ ಸದಸ್ಯರ ವಿನಾ ಉಳಿದ ಶಾಸನ ಸಭಾ ಸದಸ್ಯರ ಸಭೆಯನ್ನು ಅಲ್ಲಿನ ಗವರ್ನರರು ಕರೆದಿರುವರು. ರಾಷ್ಟ್ರಪತಿ ಆಚಾರ್ಯ ಕೃಪಲಾನಿ ಯವರು ಈ ಸಮ್ಮೇಳನ ಸೇರುವ ಮೊದಲು ಬಂಗಾಳಕ್ಕೆ ಭೇಟಿ ಇತ್ತು ಅದು ಮುಗಿಯುವವರೆಗೆ ಅಲ್ಲೇ ಇರುವರೆಂದು ತಿಳಿದು ಬಂದಿದೆ. ಬಂಗಾಳದ ಪ್ರಧಾನಿ ಮಿ॥ ಎಚ್ ಎಸ್ ಸುಹ್ರವರ್ದಿಯವರು ಹಿಂದೂ ಬಹು ಸಂಖ್ಯಾತ ಪ್ರದೇಶದ ಸದಸ್ಯರು, ಕಾಂಗ್ರೆಸ್ ಪಕ್ಷದ ಶಾಸನ ಸಭಾ ನಾಯಕರಾದ ಶ್ರೀ॥ ಕಿರಣ ಶಂಕರರಾಯ ರು ಮುಸ್ಲಿಂ ಬಹು ಸಂಖ್ಯಾತ ಪ್ರದೇಶದ ಸದಸ್ಯರು

೩೧ ಅಂಗುಲದ ಮನುಷ್ಯನ ಮರಣ

ಜಗತ್ತಿನಲ್ಲೇ ಅತ್ಯಂತ ಸಣ್ಣ ಮನುಷ್ಯನೆಂದು ಕರೆಯಲ್ಪಟ್ಟಿದ್ದ ೩೧ ವರ್ಷ ವಯಸ್ಸಿನ ವಾಸ್ಲಿ ಸ್ಮಿತ್ಸ್ ಎಂಬಾತನು ಹೃದಯ ಸ್ತಂಭನದಿಂದ ಮರಣ ಹೊಂದಿರುವನು ಇವನ ಎತ್ತರ ೩೧ ಅಂಗುಲ. ತೂಕ ೨೫ ಪೌಂಡುಗಳು.

ಹೆಚ್ಚು ಬಾಳಿಕೆ ಬರುವ ಉಷ್ಣೆ

ಗ್ಲೋಬ್] ನ್ಯೂಯಾರ್ಕ್ ೭

ಅಸ್ಟ್ರೇಲಿಯಾದ ಉಲ್ಲನ್ ಬೋರ್ಡಿನವರು ಉಷ್ಣೆ ದಾರವು ಹೆಚ್ಚು ದಿನ ಬಾಳಿಕೆ ಬರುವಂತೆ ಮಾಡುವ ಮಾರ್ಗವೊಂದನ್ನು ಕಂಡು ಹಿಡಿದಿದ್ದಾರೆ ಉಷ್ಣೆ ದಾರದ ಜೊತೆಗೆ ಜೊಂಡನ್ನು ಸೇರಿಸಿ ನೆಯ್ದು ಅನಂತರ ಒಂದು ಬಗೆಯ ದ್ರಾವಕದಲ್ಲಿ ಅದ್ದಿ ತೆಗೆಯುವುದರಿಂದ ಅದಕ್ಕೆ ಈ ಗುಣವುಂಟಾಗುವುದೆಂದು ಹೇಳಲಾಗಿದೆ.

ಗಟ್ಟಿಮಾಡಿದ ಹಾಲಿನ ಪ್ರತಿಬಂಧಕ

ಬೇಬಿ ಬ್ರಾಂಡ್ ಹಾಲು ಉಪಯೋಗಕ್ಕೆ ಅನರ್ಹವಾಗಿರುವುದರಿಂದ ಯಾರೂ ಅದನ್ನು ಉಪಯೋಗಿಸಬಾರದೆಂದು ಬಿಹಾರದ ಜನರನ್ನು ಅಲ್ಲಿನ ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ. ಇಂತಹ ಹಾಲಿನ ದಾಸ್ತಾನಿಟ್ಟವರು ಅದನ್ನು ಅದರ ಸೋಲ್ ಏಜೆಂಟರಿಗೆ ಕೊಡಲೇ ವಾಪಸು ಮಾಡಬೇಕೆಂದು ಬಂಗಾಳ, ಬಿಹಾರ್, ಒರಿಸ್ಸಾ ಅಸ್ಸಾಂ, ಪೂರ್ವ ಸಂಸ್ಥಾನಗಳ ವರ್ತಕರುಗಳಿಗೆ ಸೂಚನೆಯಾಗಲಾಗಿದೆ.

ಮಂಗಳವಾರ ರೆಡ್ಡಿ-ದಿವಾನ್ ಭೇಟಿ

ಸ್ವಂ ಸು. ಫೋ] ಬೆಂಗಳೂರು ೧೩

ಬರುವ ೧೭ ನೇ ತಾ॥ ಮಂಗಳವಾರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ದಿವಾನರನ್ನು ಭೇಟಿ ಮಾಡಲು ಆಹ್ವಾನ ಬಂದಿರುತ್ತದೆ ಅನಂತರ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವ ವಿಚಾರವಾಗಿ ಪ್ರಕಟಣೆ ಹೊರಬೀಳುವ ನಿರೀಕ್ಷೆ ಇದೆ

ದಿವಾನರು ನಾಳೆ ರಾಜಧಾನಿಗೆ ಹಿಂದಿರುಗುವರು

ಪೌರಸಭೆಯಿಂದಲೇ ನಗರದ ಬಸ್ ಸರ್ವಿಸ್

ಮೈಸೂರು ೧೩

ಕಳೆದ ಮಂಗಳವಾರ ಪೌರಸಭೆಯು ಬಡ್ಜೆಟ್ ಅಧಿವೇಶನವು ಶ್ರೀ ರಾಮಚಂದ್ರ ರಾವ್ ಜೋಂಭೋರೆಯವರ ಅಧ್ಯಕ್ಷತೆಯಲ್ಲಿ ಜರುಗಿತು ೧೯೪೭-೪೮ ರ ಆದಾಯ ೩೦೪೧೯೭೭ ರೂ. ಗಳೆಂದೂ, ವೆಚ್ಚ ೨೯೭೦೯೧೦ ರೂ. ಗಳೆಂದೂ ಅಂದಾಜು ಮಾಡಲಾಗಿದೆ ನಗರದಲ್ಲಿ ಮುನಿಸಿಪಲ್ ಬ್ಯಾಂಕ್ ಮತ್ತು ಹಾಲ್ ಡಿಪೋಗಳನ್ನು ತೆರೆಯಲೂ ಮತ್ತು ನಗರದ ಬಸ್ ಸರ್ವೀಸನ್ನು ಪೌರಸಭೆಯವರೇ ನಡೆಸಲೂ ಸರ್ಕಾರದವರನ್ನು ೧೫ ಲಕ್ಷ ರೂ ಸಾಲ ಕೇಳಬೇಕೆಂಬ ನಿರ್ಣಯವನ್ನು ಸಭೆಯು ಅಂಗೀಕರಿಸಿರುತ್ತದೆ

ತಿರುವಾಂಕೂರಿನ ರಣಭೇರಿ

ಆಗಸ್ಟ್ ೧೫ ನೇ ತಾರೀಖಿನ ದಿನ ತಿರುವಾಂಕೂರು ಸ್ವತಂತ್ರವಾಗುವುದನ್ನು ಪ್ರಪಂಚದ ಯಾವ ಶಕ್ತಿಯೂ ತಡೆಯಲಾರದು ಇದಕ್ಕಾಗಿ ಘೋರ ಯುದ್ಧವನ್ನೇ ಮಾಡಬೇಕಾದರೂ ಅದು ಸಿದ್ಧವಾಗಿದೆ—' ಎಂಬುದಾಗಿ ಸರ್ ಸಿ. ಪಿ ರಾಮಸ್ವಾಮಿ ಐಯ್ಯರ್‌ರವರು ಹೇಳಿರುವರು. ಈಗಿನ ರಾಜ್ಯಾಂಗ ಸಭೆಯಲ್ಲಿ ಸೇರುತ್ತಿಲ್ಲವೆಂದೂ ಆಗಸ್ಟ್ ೧೫ ರಿಂದ ಸ್ವತಂತ್ರವಾಗಿರಲು ಅಲ್ಲಿನ ರಾಜರು ನಿರ್ಧರಿಸಿರುವರೆಂದೂ ಇದಕ್ಕಾಗಿ ಯಾವ ಅಪಾಯವನ್ನಾದರೂ ಎದುರಿಸಲು ಅವರು ಸಿದ್ಧರಾಗಿರುವುದಾಗಿಯೂ ಸರ್. ಸಿ ಪಿ ಯವರು ಹೇಳಿರುವರು

ಮಹಾರಾಜರ ಈ ನಿರ್ಧಾರಕ್ಕೆ ಸಕಲರೂ ಬೆಂಬಲ ನೀಡಬೇಕೆಂದೂ, ಸರ್ಕಾರಿ ಅಧಿಕಾರಿಗಳು ಗ್ರಾಮಾಂತರಗಳಿಗೆ ಹೋಗಿ ಪ್ರಚಾರ ನಡೆಸಬೇಕೆಂದೂ, ಭಿನ್ನಾಭಿಪ್ರಾಯವುಳ್ಳ ನೌಕರರು ರಾಜೀನಾಮೆ ಕೊಡಬೇಕೆಂದೂ ಸಹ ದಿವಾನರು ಸೂಚಿಸಿರುವರು.

ಹಿಂದೂಸ್ತಾನ್ ಮುಸ್ಲಿಮರು ರಾಜ್ಯಾಂಗ ಸಭೆಗೆ

ಮುಸ್ಲಿಮೇತರ ಪ್ರದೇಶದಲ್ಲಿರುವ ಸಂಯುಕ್ತ ಪ್ರಾಂತದ ಮುಸ್ಲಿಂ ಪಕ್ಷದ ಸದಸ್ಯರಾದ ಚೌಧುರಿ ಖಲಿಕ್ ಉಜ್ ಜಮಾನ್, ನವಾಬ್ ಇಸ್ಮೇಲ್ ಖಾನ್, ಹುಸೇನ್ ಇಮಾಂ ರವರುಗಳು ರಾಜ್ಯಾಂಗ ಸಭೆಗೆ ಸೇರುವ ಬಗ್ಗೆ ಭಾರತದ ರಾಜ್ಯಾಂಗ ಸಭಾಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರೊಡನೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ. ಕೆಲವು ಮುಸ್ಲಿಂ ಸದಸ್ಯರು ಅಖಿಲ ಭಾರತ ಕಾಂ॥ ಸಮಿತಿಯ ಅಂತಿಮ ನಿರ್ಧಾರದ ನಂತರ ತಾವು ಸಭೆಗೆ ಸೇರುವುದಾಗಿ ತೀರ್ಮಾನಿಸಿರುವರು

ಲಂಡನ್ನಿನಲ್ಲಿ ಫೌಂಟನ್ ಪೆನ್ನುಗಳ ಕಳುವು

ಗ್ಲೋಬ್] ಲಂಡನ್

ಫೌಂಟನ್ ಪೆನ್ನುಗಳ ಕಳುವು ಲಂಡನ್ನಿನಲ್ಲಿ ಈಚೆಗೆ ವಿಪರೀತವಾಗಿದೆ. ಯಾರಾದರೂ ತಮ್ಮ ಕೋಟಿನ ಮೇಲುಗಡೆಯ ಜೇಬಿನಲ್ಲಿ ಅವುಗಳನ್ನಿಟ್ಟು ಹೊರಟ ಕೆಲವು ನಿಮಿಷಗಳಲ್ಲೇ ಅವು ಮಾಯವಾಗುವುವು. ಹೊಸ ಪೆನ್ನುಗಳ ಸರಬರಾಜಿಲ್ಲದೆ ಹಿಂದೆ ಒಂದು ಅಥವಾ ಒಂದೂವರೆ ಪೌಂಡುಗಳಿದ್ದ ಪೆನ್ನುಗಳಿಗೆ ಈಗ ೮-೧೦ ಪೌಂಡು ಸಿಗುತ್ತಿದೆ ಅದರ ಸಂತೆಯ ವರ್ತಕರ ಉತ್ತೇಜನವೂ ಕಳುವಿಗೆ ಕಾರಣವಾಗಿದೆ.

ವಿವಾಹ ಮಹೋತ್ಸವಗಳು

ಮೈಸೂರು ೧೩

ರಾಜಧಾನಿಯ ವರ್ತಕರಾದ ಶ್ರೀ॥ ಎಂ. ಪುಟ್ಟಪ್ಪನವರು ತಮ್ಮ ಕುಮಾರ ಚಿ॥ ವೆಂಕಟರಮಣಸ್ವಾಮಿಗೆ ಅರಳ ಛತ್ರದ ಶ್ರೀ ಪುಟ್ಟಪ್ಪನವರ ಕುಮಾರಿ ಸೌ॥ ಪುಟ್ಟಲಕ್ಷ್ಮಮ್ಮನನ್ನು ತಂದುಕೊಂಡು ಮೈಸೂರಿನಲ್ಲಿಯೂ ಶ್ರೀ॥ ಲಕ್ಷ್ಮೀನರಸಿಂಹ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯ ಮಾಲೀಕರಾದ ಶ್ರೀ ಎ ನರಸಿಂಹಯ್ಯನವರು ತಮ್ಮ ತಂಗಿ ಸೌ॥ ನರಸಮ್ಮನವರನ್ನು ಪಡುವಾರಹಳ್ಳಿ ಹೈಸ್ಕೂಲ್ ಅಧ್ಯಾಪಕರಾದ ಶ್ರೀ॥ ಟಿ. ಎಸ್. ಶಿಂಗೇಗೌಡರ ತಮ್ಮ ಚಿ॥ ಟಿ. ಎಸ್. ನರಸಿಂಹಯ್ಯನಿಗೆ ಕೊಟ್ಟು ಪಕ್ಷಿಪಾಲ್ಪಾಪಟಿಯಲ್ಲಿಯೂ

ಈ ದಿನ ವಿವಾಹಗಳನ್ನು ನೆರವೇರಿಸಿದರು

ಲೋಕ ಕಲ್ಯಾಣ ಸೇವೆ

ರಾಜಧಾನಿಯ ಪಿಳ್ಳೆ ಮೊಹಲಾ ವೀಣೆ ಶೇಷಣ್ಣನವರ ಬೀದಿಯಲ್ಲಿರುವ ಶ್ರೀ ಹಿಮವತ್ ರಾಘವೇಂದ್ರ ಸೇವಾ ಮಂದಿರದ ಆಚಾರ್ಯರಾದ ಶ್ರೀ॥ ಟಿ ಕೆ ಸುಬ್ಬಾಚಾರ್ಯರ ಹೆಂಡತಿ ಬಾ ನಾ॥ ಪದ್ಮಾವತೀ ಬಾಯಿಯವರು ದೇವರ ಪ್ರೇರಣೆಯಿಂದ ಲೋಕಕಲ್ಯಾಣಕ್ಕಾಗಿ ತಿರುಮಕೂಡ್ಲಿನ ಬ್ರಹ್ಮ ಸನ್ನಿಧಿಯಲ್ಲಿ ಮೈಸೂರು ಬಳಿಯ ಕಪಿಲಾ ಸೋಮವಾರದಿಂದ ೩ ವರ್ಷ ಕಾಲ ಮುಖ್ಯ ದಿನಗಳಲ್ಲಿ ಉಪವಾಸದಿಂದ ಸೇವೆ ಆಚರಿಸುವರು ಭಗವದ್ಭಕ್ತರು ಈ ಕಾರ್ಯಕ್ಕಾಗಿ ಯಥಾಶಕ್ತಿ ಧನಸಹಾಯ ಮಾಡಬೇಕೆಂದು ಕೋರಲಾಗಿದೆ.

ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷದ ಸಭೆ

೧೫ ನೇ ತಾ॥ ಭಾನುವಾರ ಮಧ್ಯಾಹ್ನ ೩ ಗಂಟೆಗೆ ಮೈಸೂರು ಮುನಿಸಿಪಲ್ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷದ ಸಭೆಯನ್ನು ಕರೆಯಲಾಗಿದೆ ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿ ಶ್ರೀ ಬಿ. ಎಸ್. ಮಾದಪ್ಪನವರು ಪ್ರಾರ್ಥಿಸಿರುತ್ತಾರೆ.

ಸಾಧ್ವಿ

ತಾ|| ೧೩-೬-೪೭ ಶುಕ್ರವಾರ

ರಾಜರಿಗೂ ಪ್ರಜೆಗಳಿಗೂ ಘರ್ಷಣೆಯೇ ?

ಬ್ರಿಟಿಷರು ಬರುವ ವರ್ಷ ಹಿಂದೂಸ್ಥಾನವನ್ನು ಬಿಟ್ಟು ಹೋಗುವುದಾಗಿ ಹೇಳಿದ ಮೇಲೆ ದೇಶದಲ್ಲಿ ಅಪಾರವಾದ ಕೋಮುವಾರು ಗಲಭೆಗಳು ಪ್ರತ್ಯಕ್ಷವಾಗಿ ರಾಷ್ಟ್ರವಿಭಜನೆಯಲ್ಲಿ ಪರ್ಯವಸಾನಗೊಂಡಿರುತ್ತವೆ. ಬ್ರಿಟಿಷರು ಪರಮಾಧಿಕಾರವನ್ನು ತ್ಯಜಿಸುವುದಾಗಿಯೂ ಹೇಳಿರುವುದರಿಂದ ಸಂಸ್ಥಾನಗಳಲ್ಲಿ ಪ್ರಜೆಗಳಿಗೂ ಪ್ರಭುತ್ವದವರಿಗೂ ಘರ್ಷಣೆಯು ಸಂಪ್ರಾಪ್ತವಾಗುವ ಸನ್ನಿವೇಶಗಳು ತಲೆದೋರಿರುತ್ತವೆ. ದೂರದೃಷ್ಟಿಯುಳ್ಳ ಅನೇಕ ರಾಜರುಗಳು ಈಗಾಗಲೇ ಪ್ರಜೆಗಳ ಅಭಿಪ್ರಾಯದಂತೆ ರಾಜ್ಯಾಂಗ ಸಭೆಯಲ್ಲಿ ಸೇರಲು ನಿರ್ಧರಿಸಿರುತ್ತಾರೆ. ಕೆಲವರು ಸ್ವತಂತ್ರರಾಗಿಯೇ ಉಳಿಯುವುದಾಗಿ ಹೇಳುತ್ತಿದ್ದಾರೆ. ಮೈಸೂರಿನಂತಹ ಮುಂದುವರಿದ ಸಂಸ್ಥಾನವು ಇನ್ನೂ ಮೌನ ಮುದ್ರೆಯನ್ನೇ ವಹಿಸಿರುತ್ತದೆ.

ಆಗಸ್ಟ್ ೧೫ನೆಯ ತಾ|| ನೊಳಗೆ ಅಧಿಕಾರವನ್ನು ವರ್ಗಾಯಿಸಲು ಬ್ರಿಟಿಷರು ತ್ವರಿತವಾದ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೆ. ಎರಡು ಡೊಮಿನಿಯನ್ನುಗಳ ಸ್ಥಾಪನೆಗೆ ಅನುಗುಣವಾಗಿ ರಾಜ್ಯಾಂಗ ಸಭೆಯೂ ಸಹ ತನ್ನ ಕೆಲಸಕಾರ್ಯಗಳನ್ನು ತೀವ್ರವಾಗಿ ನಡೆಸುತ್ತಿದೆ. ಇನ್ನೂ ಇದರಲ್ಲಿ ಸೇರದಿರುವ ಸಂಸ್ಥಾನಗಳು ಕೂಡಲೇ ಸೇರಬೇಕೆಂದು ಕೋರುತ್ತಿದೆ. ಆದರೆ ತಿರುವಾಂಕೂರು, ಹೈದರಾಬಾದು, ಭೂಪಾಲ್ ಮುಂತಾದ ಸಂಸ್ಥಾನಗಳು ಸ್ವತಂತ್ರವಾಗಿಯೇ ಉಳಿಯುವುದಾಗಿ ಹೇಳುವುದರಿಂದ ಅತ್ಯಂತ ಉತ್ಕಟವಾದ ಪರಿಸ್ಥಿತಿಯು ಉದ್ಭವಿಸುವುದರಲ್ಲಿ ಸಂಶಯವಿಲ್ಲ.

ಬ್ರಿಟಿಷ್ ಸರ್ಕಾರದವರ ಯೋಜನೆಯಂತೆ ಪ್ರಾಂತಗಳಿಗೆ ಸ್ವಯಂಪೂರ್ಣ ಸ್ವಾಧಿಕಾರವು ಬಂದಿರುತ್ತದೆ. ಯಾವ ವಿಭಾಗವನ್ನು ಸೇರಬೇಕೆಂಬ ತೀರ್ಮಾನವು ಅಲ್ಲಿನ ಪ್ರಜೆಗಳ ಪ್ರತಿನಿಧಿಗಳಿಂದಲೇ ಮಾಡಲ್ಪಡುತ್ತದೆ. ಅದರಂತೆಯೇ ಸಂಸ್ಥಾನಗಳಲ್ಲಿಯೂ ಆಗಬೇಕಾದುದು ವಿಹಿತವಾಗಿರುತ್ತದೆ. ಪ್ರಜೆಗಳ ಅಭಿಪ್ರಾಯವನ್ನು ನಿರ್ಲಕ್ಷಿಸಿ ತನಗೆ ತೋಚಿದಂತೆ ವರ್ತಿಸುವುದಾಗಿ ಯಾವ ರಾಜರು ಹೇಳುವುದೂ ಯಾರಿಗೂ ಶ್ರೇಯಸ್ಕರವಲ್ಲ. ತಿರುವಾಂಕೂರು ಸ್ವತಂತ್ರವಾಗಿಯೇ ಉಳಿಯಲು ನಿರ್ಧರಿಸಿರುವುದಾಗಿಯೂ, ಅದರಿಂದ ಬರುವ ಎಲ್ಲಾ ಕಷ್ಟನಷ್ಟಗಳನ್ನೂ ಅನುಭವಿಸಲು ಸಿದ್ಧವಾಗಿರುವುದಾಗಿಯೂ ಅಲ್ಲಿನ ದಿವಾನರು ಹೊರಡಿಸಿರುವ ಪ್ರಕಟಣೆಯು ಅವರ ಮೂರ್ಖತನದ ಪರಮಾವಧಿಯನ್ನು ಸೂಚಿಸುತ್ತದೆ. ಈಗಾಗಲೇ ಅಲ್ಲಿ ಪ್ರಜಾಭಿಪ್ರಾಯವನ್ನು ತುಳಿಯಲು ದಬ್ಬಾಳಿಕೆಯ ಪ್ರಯೋಗವು ಆರಂಭವಾಗಿರುತ್ತದೆ. ಇನ್ನೂ ಯಾವ ಯಾವ ದುರಂತಗಳು ಅಲ್ಲಿ ನಡೆಯಲಿವೆಯೋ ನೋಡಬೇಕು.

ಹೈದರಾಬಾದೂ ಸಹ ಅದೇ ರೀತಿಯಲ್ಲಿ ನಿರ್ಧರಿಸಿರುತ್ತದೆ. ಶೇ|| ೮೫ ರಷ್ಟು ಇರುವ ಹಿಂದೂ ಪ್ರಜೆಗಳು ಭಾರತದ ಯೂನಿಯನ್ನಿನಲ್ಲಿ ಆ ಸಂಸ್ಥಾನವು ಸೇರಬೇಕೆಂದು ಹೇಳುತ್ತಿದ್ದಾರೆ. ಆದರೂ ಅವರ ಮಾತಿಗೆ ಬೆಲೆ ತೋರಿಸುವುದಿಲ್ಲ. ಭೂಪಾಲ್ ಸಂಸ್ಥಾನದಲ್ಲಿಯೂ ಇದೇ ಪರಿಸ್ಥಿತಿಯು ಇರುತ್ತದೆ. ಹೀಗಿರುವುದರಿಂದ ಈ ಸಂಸ್ಥಾನಗಳಲ್ಲಿ ಪ್ರಜೆಗಳಿಗೂ ಪ್ರಭುತ್ವದವರಿಗೂ ಶೀಘ್ರದಲ್ಲಿಯೇ ಘರ್ಷಣೆಯುಂಟಾಗುವ ಸಂಭವವಿರುತ್ತದೆ.

ಈ ಬಿಕ್ಕಟ್ಟನ್ನು ನಿವಾರಿಸಲು ಸಂಸ್ಥಾನ ಪ್ರಜಾ ಸಮ್ಮೇಳನದ ಸ್ಥಾಯಿ ಸಮಿತಿಯವರು ಹೊಸ ಸಲಹೆಯೊಂದನ್ನು ಮಾಡಿರುತ್ತಾರೆ. ರಾಜರುಗಳು ಭಾರತದ ಯೂನಿಯನ್ನಿನಲ್ಲಿ ಸೇರದಿದ್ದರೆ ಅವರ ಪ್ರಜೆಗಳೊಡನೆಯೇ ರಾಜ್ಯಾಂಗ ಸಭೆಯು ನೇರವಾದ ಸಂಧಾನವನ್ನು ನಡೆಸಿ ಪ್ರಜಾಭಿಪ್ರಾಯವನ್ನು ತಿಳಿದುಕೊಂಡು ಅದರಂತೆ ಪ್ರಜೆಗಳ ಪ್ರತಿನಿಧಿಗಳನ್ನು ಆ ಸಭೆಗೆ ಆರಿಸಿಕೊಳ್ಳುವ ಸೂಚನೆಯನ್ನು ಕೊಟ್ಟಿರುತ್ತದೆ. ಇದನ್ನು ಜಾರಿಗೆ ತರುವುದರಲ್ಲಿ ಹಲವು ತೊಡಕುಗಳು ಬರಬಹುದು. ಆದರೂ ತಮ್ಮನ್ನು ನಿರ್ಲಕ್ಷಿಸಿ, ತಮ್ಮ ಪ್ರಜೆಗಳೇ ನೇರವಾಗಿ ರಾಜ್ಯಾಂಗ ಸಭೆಗೆ ಹೋಗುವಂತಾಗುವುದು ಯಾವ ರಾಜರುಗಳಿಗೂ ಭೂಷಣವಲ್ಲ. ಪ್ರಜಾಭಿಪ್ರಾಯದಂತೆ ವರ್ತಿಸುವುದೇ ರಾಜನೀತಿ ನೈಪುಣ್ಯದ ಹೆಗ್ಗುರುತು.

ಮೈಸೂರು ಸಂಸ್ಥಾನವು ಇನ್ನೂ ಅನಿಶ್ಚಿತದಲ್ಲಿಯೇ ಇರುವುದು ಸ್ವಲ್ಪವೂ ಸಮರ್ಪಕವಲ್ಲ. ಇಲ್ಲಿ ಈ ವಿಚಾರವಾಗಿ ಯಾವ ಭಿನ್ನತೆಗೂ ಅವಕಾಶವಾಗದೆ ಕೂಡಲೇ ಮೈಸೂರು ಸಂಸ್ಥಾನವು ಭಾರತದ ಯೂನಿಯನ್ನಿನಲ್ಲಿ ಸೇರುವಂತೆ ಘೋಷಣೆಯನ್ನು ಹೊರಡಿಸಿ ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದೇ ಪ್ರಭುತ್ವದವರ ಆದ್ಯ ಕರ್ತವ್ಯವಾಗಿರುತ್ತದೆ.

ಶ್ರೀ
ಗಣೇಶಾ ಟಾಕೀಸ್
೧೪-೬-೪೭ ರಿಂದ
ಪ್ರತಿ ದಿನ ೩ ಆಟಗಳು
ಭಕ್ತಿರಸ ಮತ್ತು ಇಂಪಾದ ಗಾನದಿಂದ ತನಿಗೂಡಿದ
ಮೀರಾ
(ತಮಿಳು)
-: ಮುಖ್ಯ ಭೂಮಿಕೆ :-
ಕೋಗಿಲೆಗಾನ ಎಂ ಎಸ್ ಸುಬ್ಬುಲಕ್ಷ್ಮಿ,
ವಿ. ನಾಗಯ್ಯ

Morning Shows on
13, 14, 15 and 16 th
at 10 30 a. m.
His Butler's
SISTER
—: Starring :—
DEANNA DURBIN
FRANCHOT TONE
Showing for the first time
in the city.

ವುಡ್‌ಲ್ಯಾಂಡ್ಸ್
8-6-47 ರಿಂದ
ಕಿಕ್ಕಿರಿದ ೬ ನೇ ವಾರ
ಪ್ರತಿ ದಿನ ೩ ಆಟಗಳು
ನಾವು ಇಬ್ಬರು
(ತಮಿಳು)
-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ ಆರ್.
ರಾಮಚಂದ್ರನ್ ಮುಂತಾದವರು

ರಾಜಕಮಲ್,
ತಾ|| ೧೪-೬-೪೭ ರಿಂದ
8 ನೇ ವಾರ
ಪ್ರತಿ ದಿನ ೨ ಆಟಗಳು
ಗೊಲಭಾಮ
೧ (ತೆಲುಗು)

ಸ್ಪೆಷಲ್ ಪ್ರೋಗ್ರಾಂ
೧೩-೬-೪೭ ರಿಂದ
7 ದಿನಗಳು
ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ
ಸಿಸ್ಟರ್ ಅಥವಾ
ಸಹೋದರಿ
(ಹಿಂದಿ)
: ಪಾತ್ರ :—
ನಳಿನಿಜಯವಂತ್, ಶೇಕ್ ಮುಖ್ತಾರ್
ಪರೀರ್.

Edited printed and published by A. R. Nagarajan at the Sadhvi Press D Subbaiah Road Mysore

BANGALORE RACES 1947
ಬೆಂಗಳೂರು ರೇಸಸ್ 1947
ಜೂನ್ 14, 18, 21, ಮತ್ತು 25 ರಲ್ಲಿ
ಬುಕ್ ಮೇಕರ್ಸ್ ಮತ್ತು ಟೋಟಲೈಸೇಟರ್ಸ್
ರೂ. 2 ಸ್ಟೇಕ್ ಮತ್ತು ರೂ 5 ಟ್ರಬಲ್ ಈವೆಂಟ್
1st ಟೋಟ್ ರೂ 10 IInd ಟೋಟ್ ರೂ 5
ಜೂನ್ 18 ಮಹಾರಾಜಾ ಗೋಲ್ಡ್ ಕಪ್ ಡೇ
—: ಪ್ರವೇಶ :—
ಮೊದಲನೇ ತರಗತಿ ... ಪುರುಷರು ರೂ 6 ಒಂದು ದಿನಕ್ಕೆ
" " ... ಸ್ತ್ರೀಯರು ರೂ. 4 "
ಎರಡನೇ ತರಗತಿ ಪುರುಷರು ಅಥವಾ ಸ್ತ್ರೀಯರು ರೂ. 2 "

Office of the President,
City Municipal Council,
Mysore, 9th June 1947

NOTIFICATION.

JUST RELEASED FROM THE PRESS

MUNICIPAL HAND-BOOK AND DIARY

A publication which should be in the hands of all the Citizens of Mysore.

A publication which gives full particulars pertaining to the Municipality and also contains diary for 12 months

PRICE Annas TWELVE only. (As 12.)

For copies, please apply to:—

The President.

ಸಾಧ್ವಿ
(ತಿಂಗಳಿಗೆ ಚಂದಾ ಎರಡಾಣೆ ಮಾತ್ರ)

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನರ್ಘ್ಯವಾಗಿ, ಅವಿಚ್ಛಿನ್ನವಾಗಿ ಸೇವೆ ಸಲ್ಲಿಸುತ್ತಾ, ದಿನ ದಿನಾಭಿವೃದ್ಧಿ ಹೊಂದುತ್ತಿರುವುದಕ್ಕಾಗಿ ಎಲ್ಲೋ ಗರ್ವಿಸುತ್ತಿದೆ.

EASTERN

ಫೋ. ನಂ. 592 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೪—೬—೪೭ [ಸಂಚಿಕೆ ೨೬೩

ಸ್ಕಾಟ್ಲೆಂಡು ಬ್ರಿಟನ್ನನ್ನು ತ್ಯಜಿಸುವುದಾಗಿ ಸೂಚನೆ

ರಾಜ್ಯಾಂಗ ಸಭೆಗೆ ಸೇರದ ರಾಜರು ಪ್ರಜೆಗಳ ಶತ್ರುಗಳು

ಸಂಸ್ಥಾನಾಧೀಶರುಗಳು ಭಾರತ ರಾಜ್ಯಾಂಗ ಸಭೆಗೆ ಸೇರದೆ ಸ್ವತಂತ್ರರಾಗಿರುವುದಾಗಿ ಘೋಷಿಸಿದರೆ ಅವರನ್ನು ಸಂಸ್ಥಾನ ಪ್ರಜೆಗಳ ಮತ್ತು ಭಾರತ ಯೂನಿಯನ್ನಿನ ಶತ್ರುಗಳೆಂದು ಭಾವಿಸಿ ಅಲ್ಲಿನ ಪ್ರಜೆಗಳು ಅದನ್ನು ಎದುರಿಸಲು ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕು - ಎಂದು ಅಖಿಲ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಸ್ಥಾಯೀ ಸಮಿತಿಯು ಬ್ರಿಟಿಷ್ ಹೊಸ ಯೋಜನೆಯ ಬಗ್ಗೆ ನಿರ್ಣಯಮಾಡುತ್ತದೆ ಪರಮಾಧಿಕಾರವು ಅಂತ್ಯವಾಗುವುದರಿಂದ ಸಂಸ್ಥಾನಗಳ ಸಾರ್ವಭೌಮಾಧಿಕಾರವು ಅಲ್ಲಿನ ಪ್ರಜೆಗಳಿಗೇ ಸೇರುತ್ತದೆ; ಅನಂತರ ಸಂಸ್ಥಾನಾಧೀಶರು ಸಾರ್ವಭೌಮಾಧಿಕಾರವು ಪ್ರಜೆಗಳದೇ-ಎಂಬ ಆಧಾರದ ಮೇಲೆ ಶಾಸನ ಬದ್ಧರಾದ ರಾಜರಾಗಿರಬಹುದು; ಇದುವರೆಗೆ ರಾಜ್ಯಾಂಗ ಸಭೆಗೆ ಸೇರದೆ ಹೋಗಿರುವ ಎಲ್ಲ ಸಂಸ್ಥಾನಗಳೂ ಕೂಡಲೇ ಅದಕ್ಕೆ ಸೇರಬೇಕೆಂದು ಸಮಿತಿಯು ಆಶಿಸುತ್ತದೆ; ಹಾಗೇನಾದರೂ ಅವು ಸೇರದಿದ್ದರೆ ಅಂತಹ ಸಂಸ್ಥಾನಗಳ ಪ್ರಜೆಗಳು ಆರಿಸಿ ಕಳುಹಿಸುವ ಪ್ರತಿನಿಧಿಗಳನ್ನೇ ಆ ಸಂಸ್ಥಾನಗಳ ಪರವಾಗಿ ಸಭೆಯಲ್ಲಿ ಸೇರಿಸಿಕೊಂಡು ಪ್ರಾತಿನಿಧ್ಯವನ್ನು ಮನ್ನಣೆ ಕೊಡಬೇಕೆಂದು ಭಾರತ ರಾಜ್ಯಾಂಗ ಸಭೆಯನ್ನು ಪ್ರಾರ್ಥಿಸಿಕೊಳ್ಳುತ್ತದೆ - ಎಂಬುದಾಗಿಯೂ ನಿರ್ಣಯದಲ್ಲಿ ನಮೂದಿಸಲಾಗಿದೆ.

ಇಂಡೊನೇಷ್ಯಾದಲ್ಲಿ ಸೈನ್ಯಕ್ಕಾಗಿ ಜಮಾವಣೆ

ಇಂಡೊನೇಷ್ಯಾ ಪಡೆಗಳು ಪರಿಸ್ಥಿತಿಯನ್ನೆದುರಿಸಲು ಸದಾ ಕಾಲದಲ್ಲಿಯೂ ಸಿದ್ಧವಾಗಿರಬೇಕೆಂಬುದಾಗಿಯೂ ಅಲ್ಲಿನ ಸರ್ಕಾರವು ತನ್ನ ಸೈನ್ಯ ಪಡೆಗಳಿಗೆ ಮುನ್ನೆಚ್ಚರಿಕೆಯನ್ನಿತ್ತಿದೆ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಕಳೆದ ೨೨ ವರ್ಷಗಳಿಂದ ನಡೆದ ಹೋರಾಟದ ಅಂತಿಮ ಘಟ್ಟವು ಈಗ ಸನ್ನಿಹಿತವಾಗಿದೆಯೆಂದು ಹೇಳಲಾಗಿದೆ. ಕಳೆದ ಮಹಾ ಯುದ್ಧದಲ್ಲಿ ಜಪಾನೀಯರಿಂದ ಯುದ್ಧಕ್ಕಾಗಿ ಸೇರಿಸಲ್ಪಟ್ಟಿದ್ದ ಎಲ್ಲ ಸೈನಿಕರೂ ತಮ್ಮ ತಮ್ಮ ಸೇನಾ ಠಾಣೆಗಳಲ್ಲಿ ಹಾಜರಾಗಬೇಕೆಂದೂ ಸೂಚಿಸಲ್ಪಟ್ಟಿದೆ. ಇಂಡೊನೇಷ್ಯವು ಸ್ವತಂತ್ರವೆಂದು ಘೋಷಿಸಬೇಕೆಂದು ಅಲ್ಲಿನ ರಿಪಬ್ಲಿಕ್ ಸರ್ಕಾರವು ಡಚ್ ಸರ್ಕಾರಕ್ಕೆ ಕೊಟ್ಟಿರುವ ಮನವಿಗೆ ಉತ್ತರವಿಲ್ಲದಿರುವುದೇ ಈ ಮುಂಜಾಗ್ರತೆಗೆ ಕಾರಣವೆಂದು ಹೇಳಲಾಗಿದೆ

ಆಗ್ರಾ ಪಾಕಿಸ್ಥಾನಕ್ಕೆ?

ಗ್ಲೋಬ್] ಆಗ್ರಾ ೧೨

ಟಾಜ್ ಮಹಲ್ ಮೊದಲಾದ ಮೊಗಲ್ ಶಿಲ್ಪ ಶಾಸ್ತ್ರಕ್ಕೆ ಸೇರಿದ ಅನೇಕ ಚಾರಿತ್ರಿಕ ಕಟ್ಟಡಗಳು ಆಗ್ರಾ ಪಟ್ಟಣದಲ್ಲಿವೆ, ಇದು ಪೂರ್ವದಲ್ಲಿ ಭಾರತ ರಾಜಧಾನಿಯಾಗಿತ್ತು. ಮುಸ್ಲಿಂ ಸಂಸ್ಕೃತಿಯುಳ್ಳ ಈ ನಗರವು ಪಾಕಿಸ್ಥಾನಕ್ಕೇ ಸೇರಬೇಕು-ಎಂದು ಆಗ್ರಾ ಮುಸ್ಲಿಂ ಲೀಗ್ ಸಭೆ ನಿರ್ಣಯಿಸಿದ್ದುದೆ ಆಗ್ರಾ ಪ್ರಜಾ ಸಂಖ್ಯೆಯಲ್ಲಿ ಶೇ॥ ಮುಸ್ಲಿಂ, ೫೫ ನಿಮ್ನ ವರ್ಗ, ೨೨ ಹಿಂದೂ ಮತ್ತು ೫ ಇತರರು ಇರುವರು.

ಭಾರತ ರಾಜ್ಯಾಂಗದ ಸ್ವರೂಪ

ಬರುವ ಜುಲೈ ೧೪ ನೇ ತಾ॥ ಭಾರತ ರಾಜ್ಯಾಂಗ ಸಭೆಯ ಮುಂದಿನ ಅಧಿವೇಶನವು ಸೇರುವುದು. ಅದರಲ್ಲಿ ಯೂನಿಯನ್ ಮತ್ತು ಕೇಂದ್ರ ರಾಜ್ಯಾಂಗ ರಚನಾ ಸಮಿತಿಗಳ ವರದಿಗಳ ಪರಿಶೀಲನೆಯು ನಡೆಯುವುದು. ಬ್ರಿಟಿಷರ ಹೊಸ ಯೋಜನೆಯಿಂದ ರಾಜ್ಯಾಂಗ ಸಭೆಯ ಉದ್ದೇಶದಲ್ಲಿ ಬದಲಾವಣೆಯಾಗಬಹುದು; ಬಲಯುತವಾದ ಕೇಂದ್ರ ಸರ್ಕಾರವಿದ್ದು ಫೆಡರಲ್ ರಾಜ್ಯಾಂಗ ವ್ಯವಸ್ಥೆಯನ್ನೇರ್ಪಡಿಸುವುದು; ಫೆಡರಲ್ ಸರ್ಕಾರಕ್ಕೆ ಪ್ರಾಂತಗಳಿಂದ ಯಾವ ಯಾವ ಅಧಿಕಾರಗಳು ಲಭಿಸುವುವೋ ಅವು ಸಂಸ್ಥಾನಗಳಿಂದಲೂ ಕೊಡಲ್ಪಡಬೇಕು; ಬ್ರಿಟಿಷ್ ಮತ್ತು ಅಮೇರಿಕ ರಾಜ್ಯಾಂಗಗಳ ಮಾದರಿಯಲ್ಲಿ ಭಾರತದ ರಾಜ್ಯಾಂಗ ವ್ಯವಸ್ಥೆಯೂ ಆಗಬೇಕು-ಭಾರತ ರಾಷ್ಟ್ರಕ್ಕೆ ಅಧ್ಯಕ್ಷರು ಮುಖ್ಯಾಧಿಕಾರಿಗಳು; ಅವರ ಚುನಾವಣೆಯು ೫ ವರ್ಷಗಳಿಗೊಮ್ಮೆ ನಡೆಯಬೇಕು; ಅವರ ಗೈರು ಹಾಜರಿಯಲ್ಲಿ ಕಾರ್ಯಗಳನ್ನು ನಿರ್ವಹಿಸಲು ಉಪಾಧ್ಯಕ್ಷರೊಬ್ಬರು ಇರಬೇಕು; ಯೂನಿಯನ್ ಕೇಂದ್ರದಲ್ಲಿ ೨ ಶಾಸನ ಸಭೆಗಳಿರಬೇಕು; ಶಾಸನ ಸಭೆಯ ಬಹುಮತ ಸದಸ್ಯರ ವಿಶ್ವಾಸಕ್ಕೆ ಪಾತ್ರರಾದವರನ್ನು ಅಧ್ಯಕ್ಷರು ಸಲಹೆಗಾರರನ್ನಾಗಿ ನೇಮಿಸಬೇಕು; ಅವರೇ ಸಚಿವರ ಪಟ್ಟಿಯನ್ನು ತಯಾರಿಸಿ ಅಧ್ಯಕ್ಷರಿಗೆ ಒಪ್ಪಿಸಿದ ಮೇಲೆ ಅಧ್ಯಕ್ಷರು ಮಂತ್ರಿಗಳ ನೇಮಕ ಮಾಡಬೇಕು; ಕೇಂದ್ರದಲ್ಲಿ ಅಧ್ಯಕ್ಷ ಚುನಾವಣೆ ನಡೆದರೆ ಪ್ರಾಂತ್ಯದಲ್ಲಿ ವಯಸ್ಕರ ಮತದಾನದ ಆಧಾರದ ಮೇಲೆ ಗವರ್ನರುಗಳ ಚುನಾವಣೆ ನಡೆಯಬೇಕು-ಎಂಬುದಾಗಿ ಭಾರತ ರಾಜ್ಯಾಂಗದ ಮೂಲ ತತ್ವ ನಿರ್ಣಯ ಮಾಡಲು ನೇಮಕವಾಗಿದ್ದ ಸಮಿತಿಯು ರಾಜ್ಯಾಂಗ ಸಭೆಗೆ ವರದಿ ಮಾಡುತ್ತದೆ

ಬೀರಾರಿಗೆ ನೈಜಾಂ ಸೈನ್ಯ

ಬೀರಾರನ್ನು ತಮ್ಮ ಸಂಸ್ಥಾನಕ್ಕೆ ಸೇರಿಸಿಕೊಳ್ಳಲು ಹೈದರಾಬಾದಿನ ನಿಜಾಮರು ಎಲ್ಲ ಬಗೆಯ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಈ ಬಗ್ಗೆ ವೈಸರಾಯರೊಡನೆ ಮಾತುಕತೆ ನಡೆಸಲು ಅಲ್ಲಿನ ಪ್ರಧಾನಿಗಳೂ, ನಿಜಾಮರ ರಾಜ್ಯಾಂಗ ಸಲಹೆಗಾರರೂ ದಿಹಲಿಗೆ ತೆರಳಿರುವರು. ಬೀರಾರಿನ ಕಡೆಗೆ ನಿಜಾಮರ ಸೈನ್ಯಗಳು ಹೋಗುತ್ತಿವೆಯೆಂದು ಹೇಳಲಾಗಿದೆ. ಬೀರಾರು ನಿಜಾ[illegible]

ಮೊಹಲ್ಲಾ ಪರಿಶೀಲನೆ

ಮೈಸೂರು ೧೪

ಪೌರಸಭಾ ಕಾಂಗ್ರೆಸ್ ಪಕ್ಷದ ಸದಸ್ಯರು ನಾಳೆ ಬೆಳಿಗ್ಗೆ ೮-೩೦ ಘಂಟೆಯಿಂದ ೧೧-೩೦ ಘಂಟೆವರೆಗೆ ಮೈಸೂರು ಸಿಟಿ ಬಸ್ ಸ್ಟಾಂಡಿನಿಂದ ಈದಿಗದ ಪ್ರಾಂತ್ಯ ಪರಿಶೀಲನೆ ನಡೆಸುವರು. ಆ ಪ್ರದೇಶದ ನಿವಾಸಿಗಳು ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ

ಬ್ರಾಹ್ಮಣ ವಿದ್ಯಾರ್ಥಿ ನಿಲಯ

ಮೇಲ್ಕಂಡ ವಿದ್ಯಾರ್ಥಿ ನಿಲಯವು ಈ ತಿಂಗಳು ಕೊನೆಯ ವಾರದಲ್ಲಿ ತೆರೆಯಲ್ಪಡುತ್ತದೆ ನಿಲಯಕ್ಕೆ ಸೇರಲಪೇಕ್ಷಿಸುವ ವಿದ್ಯಾರ್ಥಿಗಳು ಇದೇ ೧೯ ನೇ ತಾ॥ ಒಳಗೆ ಅರ್ಜಿ ಹಾಕಿಕೊಳ್ಳಬೇಕೆಂದೂ ಬ್ರಾಹ್ಮಣರೆಲ್ಲರೂ ಸಭೆಗೆ ಸದಸ್ಯರಾಗಿ ಸೇರ್ಪಡೆಯಾಗಬೇಕೆಂದೂ ಕಾರ್ಯದರ್ಶಿ ಶ್ರೀ॥ ವಿ ಲಿಂಗಪ್ಪಯ್ಯನವರು ಕೋರಿರುತ್ತಾರೆ

ಹರಿಕಥೆ

ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದ ಕೀರ್ತನಕಾರ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ॥ ಗುಂಡೂರಾಯರಿಂದ 'ಚಂದ್ರಹಾಸ ಚರಿತ್ರೆ' ಎಂಬ ಹರಿಕಥೆಯು ನಡೆಯುವುದು ಎಲ್ಲರೂ ದಯಮಾಡಿಸಿ ಮಂಡಲಿಯ ಅಭಿವೃದ್ಧಿಗಾಗಿ ಧನ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಚಿಟ್ಟಿಪವುರದ ಸಂಕೇತಿ ಸಂಘ

ಮೇಲ್ಕಂಡ ಸಂಘದ ದ್ವಿತೀಯ ವಾರ್ಷಿಕ ಸಭೆಯು ನಾಳೆ ಮಧ್ಯಾಹ್ನ ೪ ಘಂಟೆಗೆ ಮೈಸೂರು ಸಿಟಿ ಚಾಮರಾಜಪುರಂನಲ್ಲಿರುವ ರಿ॥ ಸಾ॥ ಇಂಜನಿಯರ್ ಎಸ್ ರಾಮಸ್ವಾಮಯ್ಯನವರ ಮನೆಯಲ್ಲಿ ನಡೆಯುತ್ತದೆ. ಸದಸ್ಯರೆಲ್ಲರೂ ದಯಮಾಡಿಸಿ ಸಭಾ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಸದಸ್ಯರಾಗದೇ ಇರತಕ್ಕವರು ಸದಸ್ಯರಾಗಿ ಸಭೆಗೆ ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಮರಿಗೆ ಸೇರಬಾರದೆಂದು ಜನ ನಾಯಕರು ಈಗಾಗಲೇ ತಿಳಿಸಿದ್ದಾರೆ ಪ್ರದಲ್ಲೇ ಈ ಬಗ್ಗೆ ಭಾರತ ಸರ್ಕಾರದ ಹೇಳಿಕೆಯು ಹೊರಬೀಳಬಹುದು ಯೂನಿಯನ್ನಿಗೂ ಸಂಸ್ಥಾನಗಳಿಗೂ ಭಿನ್ನಾಭಿಪ್ರಾಯವನ್ನುಂಟು ಮಾಡಲು ಬ್ರಿಟಿಷ್ ಸರ್ಕಾರವು ಪ್ರಯತ್ನಿಸುತ್ತಿದೆಯೆಂದೂ, ನಿಜಾಮರಿಗೆ ಅವರ ಬೆಂಬಲವು ಇರುವುದೆಂದೂ ವರದಿಯಾಗಿದೆ

ಸ್ಕಾಟ್ಲೆಂಡು ಇಂಗ್ಲೆಂಡಿನಿಂದ ಪ್ರತ್ಯೇಕವಾಗುವುದೇ?

ಬ್ರಿಟಿಷ್ ಸರ್ಕಾರದವರು ಒಳನಾಡಿನ ಸಂಚಾರ ಮಾರ್ಗಗಳ ರಾಷ್ಟ್ರೀಕರಣಕ್ಕಾಗಿ ಪಾರ್ಲಿಮೆಂಟ್ ಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿದಾಗ ಅನೇಕ ಜನ ಸ್ಕಾಟ್ಲೆಂಡಿನ ಪ್ರಮುಖ ಸದಸ್ಯರು ಅದನ್ನು ಪ್ರತಿಭಟಿಸಿ ತಮ್ಮ ದೇಶವು ಇಂಗ್ಲೆಂಡಿನಿಂದ ಪ್ರತ್ಯೇಕವಾಗಬೇಕೆಂಬ ಬಹು ಭಾಗದ ಜನರ ಅಭಿಪ್ರಾಯ ಪಡುತ್ತಿರುವುದಾಗಿ ಎಚ್ಚರಿಕೆಯಿತ್ತರು ತಮ್ಮ ದೇಶದ ವ್ಯವಹಾರಗಳಲ್ಲಿ ಸ್ಕಾಟ್ಲೆಂಡಿನ ಪ್ರಜೆಗಳಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡದಿದ್ದರೆ ಎರಡು ರಾಷ್ಟ್ರಗಳೂ ವಿಭಾಗವಾಗಲು ಚಳುವಳಿಯು ಬಲ ಪಡುವುದರಲ್ಲಿ ಸಂದೇಹವಿಲ್ಲವೆಂದೂ ಸಹ ಅವರು ತಿಳಿಸಿದರು.

ಬ್ರಿಟನ್-ಭಾರತದ ಸಂಬಂಧ ಇನ್ನೂ ಇದ್ದೇ ಇರುತ್ತದೆ

ರಾಜಕೀಯ ಸಂಬಂಧವು ಹೋದ ಮಾತ್ರಕ್ಕೆ ಎಲ್ಲವೂ ಹೋಗುವುದಿಲ್ಲ ಬ್ರಿಟನ್ನು ಹಿಂದೂಸ್ಥಾನಕ್ಕೆ ಸಾಮಾಜಿಕ, ಆರ್ಥಿಕ ಮುಂತಾದ ವಿಚಾರಗಳಲ್ಲಿ ಬೇಕಾದ ಸಹಾಯವನ್ನು ಮಾಡಲು ಸಿದ್ಧವಾಗಿದೆ ಆ ಸಹಾಯದ ಅವಶ್ಯಕತೆಯೂ ಇದ್ದೇ ಇದೆ ಆದರೆ ಒಂದು ರಾಷ್ಟ್ರವು ಮತ್ತೊಂದಕ್ಕೆ ಮಾಡಬೇಕಾದ ಸಹಾಯಕ್ಕೆ ಪರಿಮಿತಿಯು ಇದ್ದೇ ಇರುತ್ತದೆ—ಎಂಬುದಾಗಿ ಬ್ರಿ॥ ಪ್ರಧಾನಿ ಮಿ॥ ಅಟ್ಲೀಯವರು ಹೇಳಿರುವರು.

ವಿಜಯಲಕ್ಷ್ಮಿ ಪಂಡಿತರು ರಷ್ಯದಲ್ಲಿ ರಾಯಭಾರಿ

ಗ್ಲೋಬ್] ದೆಹಲಿ ೧೧

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ರಷ್ಯಕ್ಕೆ ಭಾರತದ ರಾಯಭಾರಿಗಳಾಗಿ ನೇಮಿಸಲು ಸಾರ್ವಭೌಮರು ಅನುಮತಿ ಇತ್ತಿರುವರೆಂದೂ ಅವರು ಆಗಸ್ಟ್ ತಿಂಗಳ ವೇಳೆಗೆ ಮಾಸ್ಕೋವಿಗೆ ತೆರಳಿರುವರೆಂದೂ ವರದಿಯಾಗಿದೆ

ಅಮೇರಿಕದಿಂದ ಚಾರ್ಲಿ ಚಾಪ್ಲಿನ್ನನ ಗಡೀಪಾರು

ಪ್ರಪಂಚದಲ್ಲೇ ಪ್ರಖ್ಯಾತನಾದ ನಟನೆಂದು ಹೆಸರು ಪಡೆದಿರುವ ಚಾರ್ಲಿ ಚಾಪ್ಲಿನ್ನನನ್ನು ಅಮೇರಿಕ ಸಂಯುಕ್ತ ಸಂಸ್ಥಾನದಿಂದ ಬ್ರಿಟನ್ನಿಗೆ ಗಡೀಪಾರು ಮಾಡಬೇಕೆಂದು ಅಲ್ಲಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ತಿಳಿಸಿರುವರು. ಚಾರ್ಲಿಯು ಅಮೇರಿಕದ ನಾಗರಿಕನಾಗಲು ನಿರಾಕರಿಸುವುದೂ, ಚಾಪ್ಲಿನ್ನನ ಅವನ ಜೀವನವು ಅಮೇರಿಕದ ಪದ್ಧತಿಗೆ ವಿರೋಧವಾಗಿರುವುದೂ ಈ ಒತ್ತಾಯಕ್ಕೆ ಕಾರಣವೆಂದು ಹೇಳಲಾಗಿದೆ

ಸಂಸ್ಥಾನಗಳಲ್ಲಿ ಶಸ್ತ್ರ ಸಂಗ್ರಹ

ಹಲವು ಸಂಸ್ಥಾನಗಳು ಸ್ವತಂತ್ರವಾಗಿರುವ ಉದ್ದೇಶದಿಂದ ಪ್ರಜೆಗಳನ್ನು ಎದುರಿಸಲು ಶಸ್ತ್ರಾಸ್ತ್ರಗಳನ್ನು ಬ್ರಿ॥ ಇಂಡಿಯದಿಂದ ರಹಸ್ಯವಾಗಿ ಆಮದು ಮಾಡಿಕೊಳ್ಳುತ್ತಿವೆಯೆಂದೂ, ಈ ಅಕ್ರಮ ವರ್ತನೆಯನ್ನು ಭಾರತ ಸರ್ಕಾರದವರು ತಡೆಗಟ್ಟಬೇಕೆಂದೂ, ಈ ಸಂಸ್ಥಾನಗಳ ಪ್ರಜೆಗಳು ಎಲ್ಲ ಪರಿಸ್ಥಿತಿಗೂ ಸಿದ್ಧರಿರಬೇಕೆಂದೂ ಸೂಚಿಸುವ ನಿರ್ಣಯವನ್ನು ಸಂಸ್ಥಾನ ಪ್ರಜಾ ಪರಿಷತ್ತಿನ ಸ್ಥಾಯೀ ಸಮಿತಿಯು ಅಂಗೀಕರಿಸಿರುತ್ತದೆ.

ಸಾಧ್ವಿ

ತಾ॥ ೧೪-೬-೪೭ ಶನಿವಾರ

ಯಾರ ಮೇಲೆ ಯುದ್ಧ ?

ಆಗಸ್ಟ್ ೧೫ ನೇ ತಾರೀಖಿನಿಂದ ತಿರುವಾಂಕೂರು ಸಂಸ್ಥಾನವು ಸರ್ವತಂತ್ರ ಸ್ವತಂತ್ರ ಸಾಮ್ರಾಜ್ಯವೆಂದು ಸಾರುವುದನ್ನು ಹಂ, ಹನ, ಪ್ರಮಾಣಾದಿಗಳಿಂ ತಪ್ಪಿಸಲಾರರೆಂದು ಅಲ್ಲಿನ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ಹೇಳಿರುತ್ತಾರೆ. ಇದಕ್ಕಾಗಿ ಘೋರವಾದ ಯುದ್ಧವನ್ನೂ ಸಹ ನಡೆಸಲು ಅಲ್ಲಿನ ರಾಜರು ಸಿದ್ಧರಾಗಿರುವರಾಗಿಯೂ ಅವರು ಹೇಳಿರುವರು ಇಡೀ ಪ್ರಪಂಚವೂ ಅಸಹನೀಯವಾದ ಎರಡನೆಯ ವಿಶ್ವ ಸಂಗ್ರಾಮದ ಅಗ್ನಿಜ್ವಾಲೆಯ ಬಳಲಿ, ಬೇಸತ್ತು ವಿಶ್ರಮಿಸಿಕೊಳ್ಳುತ್ತಿರುವಾಗ ಹಿಂದೂಸ್ಥಾನದ ಒಂದು ಮೂಲೆಯಲ್ಲಿರುವ ಸಣ್ಣ ರಾಜ್ಯವೊಂದರ ಸಚಿವ ಶಿಖಾಮಣಿಗಳು ಹಾಡುವ ಈ ರಣಗೀತೆಯು ಕೇವಲ ಪರಿಹಾಸ್ಯಸಲ್ಲದೆ ಮತ್ತೇನೂ ಆಗಲಾರದು

ಬ್ರಿಟಿಷರು ಭಾರತವನ್ನು ಬಿಡುವ ವರ್ಷ ಬಿಟ್ಟು ಹೋಗುವುದಾಗಿ ಹೇಳಿ, ಅಷ್ಟೂ ಅಗೆ ರಾಷ್ಟ್ರ ವಿಭಜನೆಗೆ ರಂಗವನ್ನು ಹೂಡಿರುವುದರಿಂದಲೇ ಸಣ್ಣ ಪುಟ್ಟ ಸಂಸ್ಥಾನಗಳಲ್ಲಿಯೂ ರಣಕಹಳೆಗಳ ಶಬ್ದಗಳು ಕೇಳಿ ಸಲು ಅವಕಾಶವಾಗುತ್ತದೆ ಎಲ್ಲ ಸಂಸ್ಥಾನಗಳೂ ಇಂತಹ ಸಾಹಸದಲ್ಲಿ ತೊಡಗಿರುವುದಿಲ್ಲ ಎಲ್ಲರಿಗೂ ಒಂದು ದಾರಿಯಾದರೆ ತಿರುವಾಂಕೂರಿಗೇ ಯಾವಾಗಲೂ ಮತ್ತೊಂದು ದಾರಿ. ಹೇಗಾದರೂ ತಾವು ಎಲ್ಲರ ... ಸ್ಥತಿಯಲ್ಲಿಯೂ ಇರಬೇಕೆಂಬುದು ಸರ್ ಸಿ. ಪಿ ರಾಮಸ್ವಾಮಿ ಐಯ್ಯರ್‌ರವರ ಆಕಾಂಕ್ಷೆ. ಇದಕ್ಕಾಗಿ ಅವರು ಏನು ಮಾಡುವುದಕ್ಕೂ ಹಿಂಜರಿಯುವುದಿಲ್ಲ

ಎರಡು ಶತಮಾನಗಳಿಂದ ಬ್ರಿಟಿಷರ ಆಶ್ರಯದಲ್ಲಿದ್ದ ಅರಸರುಗಳಲ್ಲಿ ಹಲವರು ಇನ್ನು ಮುಂದೆಯೂ ಸ್ವತಂತ್ರ್ಯದ ಸವಿಯನ್ನು ಭೋಗಿಸಲು ಬಯಸುವುದು ಸಹಜವೇ ಆಗಿರುತ್ತದೆ. ಆದರೆ ಈ ಸ್ವಾತಂತ್ರ್ಯದ ಪರಿಣಾಮವೇನೆಂಬುದು ಭಾರತ ಇತಿಹಾಸದಿಂದ ಗೋಚರವಾಗುತ್ತದೆ. ನಾಯಕರುಗಳು ಸಣ್ಣ ಪುಟ್ಟ ರಾಜ್ಯಗಳನ್ನು ಕಟ್ಟಿಕೊಂಡು ಒಬ್ಬರ ಮೇಲೊಬ್ಬರು ಬಿದ್ದು ತಾವಾಗಿ ರಾಜ್ಯಗಳನ್ನು ವಿಸ್ತರಿಸಿಕೊಳ್ಳುವ ಕಾಲವು ಕಳೆದು ಹೋಯಿತು. ಬ್ರಿಟಿಷರ ಆಗಮನದ ನಂತರ ಅನೇಕ ರಾಜರುಗಳು ತಮ್ಮ ತಮ್ಮೊಳಗೆ ಹೋರಾಡಿ ಇಡೀ ದೇಶವನ್ನೇ ಪರಕೀಯರ ಪಾಲು ಮಾಡಿದರೆಂಬ ಅಪಖ್ಯಾತಿಯು ಇನ್ನೂ ಇದ್ದೇ ಇದೆ. ಈ ಕಳಂಕವನ್ನು ಕಳೆದುಕೊಳ್ಳುವುದಕ್ಕಾಗಿಯೇ ದೇಶಾಭಿಮಾನಪೂರಿತರಾಗ ಅನೇಕ ರಾಜರುಗಳು ಈಗಾಗಲೇ ತಮ್ಮ ಸ್ಥಾನ, ಮಾನ, ಗೌರವಗಳನ್ನು ಉಳಿಸಿಕೊಳ್ಳುವುದಲ್ಲದೆ ಎಲ್ಲಿ? ಜನ್ಮ ಭೂಮಿಯಾದ ಭಾರತ ಮಾತೆಯ ಸೇವೆಯನ್ನು ಮಾಡಲೂ ಮುಂದೆ ಬಂದಿರುತ್ತಾರೆ ಇವರುಗಳ ರಾಜತ್ವಕ್ಕೆ ಇದರಿಂದ ಎಳ್ಳಷ್ಟೂ ಚ್ಯುತಿ ಬರುವುದಿಲ್ಲವೆಂಬ ಭರವಸೆಯು ಬಂದಿರುತ್ತದೆ ಬ್ರಿಟಿಷ್ ಸರ್ಕಾರದವರಿಗೆ ಇವರುಗಳು ಎಷ್ಟು ಅಧೀನರಾಗಿದ್ದರೋ ಅದಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿ ಇನ್ನು ಮುಂದೆ ಇರುವರೆಂಬುದರಲ್ಲಿ ಸಂದೇಹವೇ ಇಲ್ಲ

ಹೀಗಿದ್ದರೂ ಹಲವು ರಾಜರುಗಳು ಪ್ರತ್ಯೇಕವಾದ ಸ್ವಾತಂತ್ರ್ಯವನ್ನು ಬಯಸುತ್ತಿರುವುದು ದೇಶದ ದೌರ್ಭಾಗ್ಯವೇ ಸರಿ. ರಾಷ್ಟ್ರದಲ್ಲಿ ಇದರಿಂದ ಉಂಟಾಗಬಹುದಾದ ಭಿನ್ನತೆಗಳಿಗೂ, ಅನರ್ಥಗಳಿಗೂ, ಪರಕೀಯರ ಪ್ರಾಬಲ್ಯಗಳಿಗೂ ಇವರೇ ಕಾರಣ ಭೂತರಾಗುವರೆಂಬ ಅರಿವೇ ಇಲ್ಲ. ಇವರಿಗೆ ತಪ್ಪಿದ್ದಲ್ಲ ಇಡೀ ರಾಷ್ಟ್ರದ ಹಿತಕ್ಕಿಂತಲೂ ತಮ್ಮ ಪ್ರತಿಷ್ಠೆಯೇ ಹೆಚ್ಚೆಂದು ಇವರು ಭಾವಿಸಿರುವುದು ಸ್ವಲ್ಪವೂ ಸರಿಯಲ್ಲ

ಯುದ್ಧವನ್ನು ಘೋಷಣೆ ಮಾಡುವುದಾಗಿ ತಿರುವಾಂಕೂರಿನವರು ಹೇಳಿರುವುದು ಅತ್ಯಂತ ವಿನೋದಕರವಾದ ವಿಷಯವಾಗಿದೆ ತಿರುವಾಂಕೂರು ಭಾರತದ ಯೂನಿಯನ್ನಿಗೆ ಸೇರಬೇಕೆಂದು ಯಾರೂ ಒತ್ತಾಯಪಡಿಸುವುದಿಲ್ಲ ಸೇರದಿದ್ದರೆ ಅದರ ಮೇಲೆ ದಂಡು, ಫಿರಂಗಿಗಳನ್ನು ತೆಗೆದುಕೊಂಡು ಹೋಗುವುದಿಲ್ಲ ಅಲ್ಲಿನ ಪ್ರಜೆಗಳು ಮಾತ್ರ ಇದಕ್ಕಾಗಿ ಒತ್ತಾಯ ಪಡಿಸುತ್ತಾರೆ. ಅವರನ್ನು ತುಳಿಯಲು ಈಗಾಗಲೇ ಸರ್ ಸಿ. ಪಿ ಯವರು ಉಪಕ್ರಮ ಮಾಡಿದ್ದಾರೆ ಹಿಂದೆ ಅಲ್ಲಿ ನಡೆದ ಕಮ್ಯೂನಿಸ್ಟ ಗಲಭೆಯನ್ನಡಗಿಸಲು ತಾವೇ ಸರ್ವ ಸೇನಾಪತಿಗಳಾಗಿ ಅವರು ಮಾರ್ಷಲ್ ಲಾ ಶಾಸನವನ್ನು ಸಹ ಜಾರಿ ಮಾಡಿದರು. ಈಗ ಆ ಹಿಂಸಾತ್ಮಕ ರೀತಿಯಲ್ಲಿ ಸರ್ಕಾರದ ವರ್ತನೆಯನ್ನು ಖಂಡಿಸುವವರ ಮೇಲೆ ಅವರು ಯಾವ ಬಗೆಯ ಯುದ್ಧವನ್ನು ನಡೆಸಲಿರುವರೋ ನೋಡಬೇಕು

ಎಲ್ಲರ ದೃಷ್ಟಿಯೂ ತಿರುವಾಂಕೂರಿನ ಕಡೆ ತಿರುಗುತ್ತಿದೆ. ಎಲ್ಲರ ಸಹಾನುಭೂತಿಯೂ ಅಲ್ಲಿನ ಜನರಿಗೆ ಇರುತ್ತದೆ. ಪ್ರಜೆಗಳ ಸಹಕಾರವಿಲ್ಲದೆ ಯಾವ ಸಂಗ್ರಾಮವೂ ಫಲಕಾರಿಯಾಗುವುದಿಲ್ಲವೆಂಬುದನ್ನೂ ಪ್ರಜೆಗಳ ಮೇಲೆ ಪ್ರಭುತ್ವದವರು ಹೂಡುವ ಯುದ್ಧವು ಪ್ರಭುತ್ವದವರ ಪರಾಜಯದಲ್ಲಿಯೇ ಪರ್ಯವಸಾನಗೊಳ್ಳುವುದೆಂಬುದನ್ನೂ ಅವರು ಎಷ್ಟು ಬೇಗ ಅರಿತರೆ ಅಷ್ಟು ಲೇಸು

Edited, printed and published by A. R. Nagarajan at the Sadhvi Press D. Subbaiah Road Mysore

ಸದ್ಯದಲ್ಲಿ ಪೆಟ್ರೋಲ್ ರೇಷನ್ ರದ್ದಾಗುವುದಿಲ್ಲ

ಸದ್ಯದಲ್ಲೇ ಪೆಟ್ರೋಲಿನ ರೇಷನ್ ಪದ್ಧತಿಯನ್ನು ರದ್ದು ಮಾಡಲಾಗುವುದಿಲ್ಲವೆಂದು ಕೇಂದ್ರ ಸರ್ಕಾರದ ಸಂಚಾರ ಮಂತ್ರಿ ಡಾ॥ ಜಾನ್ ಮಥಾಯಿಯವರು ತಿಳಿಸಿರುವರು. ಆದರೆ ಈಗ ಕೊಡುತ್ತಿರುವ ರೇಷನ್ ಪ್ರಮಾಣವನ್ನು ಹೆಚ್ಚಿಸಲಾಗುವುದೆಂದೂ ಅವರು ಹೇಳಿರುವರು.

ನಾಳೆ ತಿರುಪತಿ ದೇವಾಲಯ ಪ್ರವೇಶ

ತಿರುಪತಿಯ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದೊಳಕ್ಕೆ ನಾಳೆ ಹರಿಜನರನ್ನು ಬಿಡಲಾಗುವುದೆಂದು ದೇವಸ್ಥಾನದ ಅಧಿಕಾರಿಗಳು ತಿಳಿಸಿರುವರು. ಈ ಸಮಾರಂಭದಲ್ಲಿ ಮದರಾಸ್ ಪ್ರಧಾನಿ ಶ್ರೀ ಓ ಪಿ. ರಾಮಸ್ವಾಮಿ ರೆಡ್ಡಿಯವರೂ, ಹರಿಜನ ಮಂತ್ರಿ ಶ್ರೀ ವಿ ಕೂರ್ಮಯ್ಯನವರೂ ಭಾಗವಹಿಸುವರು.

Sarada Vilas High School

Tutorial classes for the benfit of failed, and E P S. students of S S L C Class will be opened from 16-6-47 between 7 and 10-30 a. m. Please apply to The Head-master.

ಹೋಟೆಲ್ ಕೆಲಸಗಾರರು ಬೇಕಾಗಿದೆ

ಚಾಮರಾಜನಗರದಲ್ಲಿ ನೂತನವಾಗಿ ತೆರೆಯಲಾಗಿರುವ ಹೋಟಲಿಗೆ ತಿಂಡಿ ಮಾಡುವವರೂ, ಸರ್ವರುಗಳೂ ಮತ್ತು ಕ್ಲೀನರುಗಳೂ ಬೇಕಾಗಿದ್ದಾರೆ. ಅಪೇಕ್ಷಿಸುವವರು

X C/o ಸಾಧ್ವಿ

ಈ ವಿಳಾಸದಲ್ಲಿ ಪತ್ರ ಮುಖೇನ ಅಥವಾ ನೇರವಾಗಿ ಬಂದು ವಿಚಾರಿಸಬಹುದು.

ಕರಾಚಿಯು ಪಾಕಿಸ್ಥಾನದ ರಾಜಧಾನಿ

ಪಾಕಿಸ್ಥಾನದ ರಾಜಧಾನಿಯು ಎಲ್ಲಿ ಬೇಕೆಂಬುದು ಖಚಿತವಾಗಿ ನಿರ್ಧಾರವಾಗುವ ವರೆಗೂ ಕರಾಚಿಯು ರಾಜಧಾನಿಯಾಗಿರುವುದೆಂದೂ, ಅಲ್ಲಿರುವ ಪ್ರಾಂತೀಯ ಸರ್ಕಾರದ ಕಛೇರಿಗಳು ಸಿಂಧ್-ಹೈದರಾಬಾದಿಗೆ ವರ್ಗಾಯಿಸಲ್ಪಡುವುವೆಂದೂ ಹೇಳಲಾಗಿದೆ.

ಪ್ರದೋಷ ಸಂಗೀತ

ರಾಜಧಾನಿಯ ಬಜಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀಮತಿ ಟಿ ಎಸ್. ಲಕ್ಷ್ಮಮ್ಮನವರ ಗಾಯನವು ನಡೆಯುವುದು.

ರಾಜಕಮಲ್

ತಾ॥ ೧೩-೬-೪೭ ರಿಂದ

8 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ

(ತೆಲುಗು)

ಸ್ಪೆಷಲ್ ಪ್ರೋಗ್ರಾಂ

೧೩—೬—೪೭ ರಿಂದ

7 ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ

ಸಿಸ್ಟರ್

ಸಹೋದರಿ

(ಹಿಂದಿ)

—: ಪಾತ್ರ :—

ನಳಿನಿಜಯವಂತ್, ಜೇರ್‌ಮುಕ್ತಾರ್ ಹರೀರ್.

ಶ್ರೀ ಗಣೇಶಾ ಟಾಕೀಸ್

೧೪-೬-೪೭ ರಿಂದ

ಪ್ರತಿ ದಿನ ೩ ಆಟಗಳು

ಭಕ್ತಿರಸ ಮತ್ತು ಇಂಪಾದ ಗಾನದೊಡನೆ ಕೂಡಿದ

ಮೀರಾ

(ತಮಿಳು)

—: ಮುಖ್ಯ ಭೂಮಿಕೆ :—

ಕೋಕಿಲಗಾನ ಎಂ ಎಸ್. ಸುಬ್ಬಲಕ್ಷ್ಮಿ. ವಿ. ನಾಗಯ್ಯ.

Morning Shows on 13, 14, 15, and 16th at 10-30 a. m.

His Butler's SISTER

—: Starring :—

DEANNA DURBIN
FRANCHOT TONE

Showing for the first time in the city.

ವುಡ್‌ಲ್ಯಾಂಡ್ಸ್

15-6-47 ರಿಂದ

ಕೀರ್ತಿಯ ೭ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

—: ಪಾತ್ರ :—

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರನ್ ಮುಂತಾದವರು

ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ, ಮೈಸೂರು 5th June 1947.

ನೋಟೀಸ್

ಮೈಸೂರು ಶ್ರೀಗಂಧದ ಎಣ್ಣೆ ಕಾರ್ಖಾನೆಯ ಬಾಯಿಲರುಗಳಲ್ಲಿ ಬೀಳುವ ಇದ್ದಿಲು ಚೂರುಗಳನ್ನೂ, ಬೂದಿಯನ್ನೂ ತೆಗೆದುಕೊಳ್ಳುವ ಹಕ್ಕನ್ನು 1947 ನೇ ಇಸವಿ ಜುಲೈ 1 ನೇ ತಾರೀಖಿನಿಂದ ಒಂದು ವರ್ಷಕ್ಕೆ ಕೊಡಲಾಗುವುದು. ಇಷ್ಟವುಳ್ಳವರು ಅದಕ್ಕೆ ಒಪ್ಪಿಕೊಡುವ ಮೊಬಲಗನ್ನು ನಮೂದಿಸಿ ಸೀಲಾದ ಕವರಿನಲ್ಲಿಟ್ಟು ಜೂನ್ ಮಾಹೆ 20 ನೇ ತಾರೀಖಿನ ಮಧ್ಯಾಹ್ನ 4 ಘಂಟೆ ಒಳಗಾಗಿ 60 ರೂಪಾಯಿ ಠೇವಣಿಯೊಡನೆ ದರಖಾಸ್ತು ಮಾಡಬಹುದು

ಮಂಜೂರಾದ ದರಖಾಸ್ತುದಾರರು, ಕಾರ್ಖಾನೆಯವರು ನಮೂದಿಸುವ ಷರತ್ತುಗಳಿಗೆ ಒಳಪಟ್ಟು ಒಂದು ಕರಾರನ್ನು ಬರೆದುಕೊಡತಕ್ಕದ್ದು ಮತ್ತು ಮೊಬಲಗನ್ನು ಒಂದೇ ಮೊತ್ತದಲ್ಲಿ ಪಾವತಿ ಮಾಡಲು ಬದ್ಧರಾಗಿರತಕ್ಕದ್ದು.

ಮಂಜೂರಾಗದ ದರಖಾಸ್ತಿನ ಠೇವಣಿ ಮೊಬಲಗನ್ನು ವಾಪಸ್ ಕೊಡಲಾಗುವುದು.

ಕೆ. ವೆಂಕಟೇಶಯ್ಯ,
ಜನರಲ್ ಮ್ಯಾನೇಜರ್, ಇ/ಛಾರ್ಜ್.

ಪೋ. ನಂ. ೩೨೨ || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಭಾನುವಾರ ೧೫—೬—೪೭ [ಸಂಚಿಕೆ ೨೬೪

ರಾಜ್ಯಾಂಗ ಸಭೆಗೆ ಸೇರಲು ಮೈಸೂರಿನ ನಿರ್ಧಾರ

ಜಿನಿನ್ನರ ಕೊಲೆ ಯತ್ನ ?

ಮಾಸ್ಕೋದಲ್ಲಿ ನಡೆದ ವಿದೇಶಾಂಗ ಮಂತ್ರಿಗಳ ಸಮ್ಮೇಳನವನ್ನು ಮುಗಿಸಿಕೊಂಡು ವಾಪಸು ಲಂಡನ್ನಿಗೆ ಬರುವಾಗ ಬೆಲ್ಜಿಯಂ ಪ್ರದೇಶದಲ್ಲಿ ಬ್ರಿಟಿಷ್ ವಿದೇಶಾಂಗ ಸಚಿವ ಬೆವಿನ್ನರನ್ನು ಕೊಲೆ ಮಾಡುವ ಪ್ರಯತ್ನವು ಯೆಹೂದ್ಯ ದಂಗೆಕೋರರಿಂದ ನಡೆದಿದ್ದಿತೆಂದು ತಿಳಿದು ಬಂದಿದೆ. ಆದರೆ ಬೆವಿನ್ನರು ಜರ್ಮನಿಯಿಂದ ನೇರವಾಗಿ ಲಂಡನ್ನಿಗೆ ವಿಮಾನದಲ್ಲಿ ಬಂದುದರಿಂದ ಈ ಯತ್ನವು ವಿಫಲವಾಗಿ ಅನಾಹುತವು ತಪ್ಪಿತೆಂದು ಹೇಳಲಾಗಿದೆ.

ಗಡಿನಾಡು ಗಾಂಧಿ-ಜಿನ್ನಾ ಭೇಟಿ

ಗಡಿನಾಡಿನ ಕಾಂಗ್ರೆಸ್ ಸಮಿತಿಯವರೂ ಕೆಂಪು ಅಂಗಿ ದಳದವರೂ ಬ್ರಿಟಿಷರ ಯೋಜನೆಯನ್ನು ಪರಿಶೀಲಿಸಿ ತಮ್ಮ ಪ್ರಾಂತದ ಭವಿಷ್ಯದ ಬಗ್ಗೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಲು ಗಡಿನಾಡಿನ ಗಾಂಧಿ ಖಾನ್ ಅಬ್ದುಲ್‌ಗಫಾರ್ ಖಾನರಿಗೆ ಪೂರ್ಣಾಧಿಕಾರವನ್ನು ಕೊಟ್ಟಿರುವುದಾಗಿ ವರದಿಯಾಗಿದೆ ಮುಸ್ಲಿಂ ಲೀಗಿನೊಡನೆ ರಾಜಿಗೆ ಬರಲು ಪ್ರಯತ್ನಗಳಾಗುತ್ತಿವೆಯೆಂದೂ, ಈ ಬಗ್ಗೆ ಗಡಿನಾಡು ಗಾಂಧಿಯವರು ಜಿನ್ನಾ ರವರನ್ನು ಭೇಟಿ ಮಾಡುವರೆಂದೂ ಹೇಳಲಾಗಿದೆ.

ಕ್ಷೌರಿಕನೊಡನೆ ಜಗಳ ಮರಣದಲ್ಲಿ ಪರ್ಯವಸಾನ

ಕೊಟ್ಟಾಯಮ್ಮಿನ ವರ್ತಕನೊಬ್ಬನು ಕ್ಷೌರ ಮಾಡಿಸಿಕೊಳ್ಳುತ್ತಿದ್ದಾಗ ಕ್ಷೌರಿಕನಿಗೂ, ಆತನಿಗೂ ಜಗಳವು ಪ್ರಾರಂಭವಾಗಿ ಕ್ಷೌರಿಕನು ವರ್ತಕನಿಗೆ ಕತ್ತಿನ ಮೇಲೆ ಕತ್ತಿಯಿಂದ ಗಾಯಪಡಿಸಿದುದರ ಪರಿಣಾಮವಾಗಿ ಆತನು ಮೃತಪಟ್ಟನೆಂದು ವರದಿಯಾಗಿದೆ.

ಹಿಂದೂಸ್ಥಾನ ಎಂಬ ಹೆಸರು ಬೇಡ

ಭಾರತದ ಮುಸ್ಲಿಮರು ತಾವು ಪ್ರತ್ಯೇಕ ಜನಾಂಗವೆಂದು ಹೇಳಿಕೊಳ್ಳುವರು ಆದರೆ ಮುಸ್ಲಿಮೇತರರು ಆ ರೀತಿ ಹೇಳಿಕೊಳ್ಳದಿದ್ದರೆ ಮುಸ್ಲಿಮರು ಪ್ರತ್ಯೇಕ ಜನಾಂಗವಾಗಿರಲು ಸಾಧ್ಯವಿಲ್ಲ ಬಹು ಸಂಖ್ಯಾತ ಮುಸ್ಲಿಮರ ಪ್ರದೇಶವನ್ನು ಪಾಕಿಸ್ತಾನವೆಂದು ಬೇಕಾದರೆ ಕರೆದುಕೊಳ್ಳಲಿ ಆದರೆ ಭಾರತದ ಉಳಿದ ಪ್ರದೇಶವನ್ನು ಹಿಂದೂಸ್ಥಾನವೆಂದು ಕರೆಯುವುದು ಬೇಡ ಎಂಬುದಾಗಿ ಗಾಂಧೀಜಿಯವರು ಮೊನ್ನೆ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿರುವರು

ಭಾರತ - ನೇಪಾಳ ಸಂಬಂಧ

ತಮ್ಮ ತಮಗಿರುವ ಸ್ನೇಹ ಸೌಹಾರ್ದಗಳನ್ನು ಇನ್ನೂ ಬಲಪಡಿಸಿಕೊಳ್ಳುವ ಉದ್ದೇಶದಿಂದ ಭಾರತ ಮತ್ತು ನೇಪಾಳ ಸರಕಾರಗಳು ರಾಯಭಾರಿ ವಿನಿಮಯ ಮಾಡಿಕೊಳ್ಳಲು ನಿರ್ಧರಿಸಿವೆ.

ಜಪಾನಿನಿಂದ ಸಹಸ್ರಾರು ಗಡಿಯಾರಗಳ ರಫ್ತು

ಸಮುದ್ರ ಸಂಚಾರವು ಆರಂಭವಾದೊಡನೆಯೇ ಜಪಾನು ಸಹಸ್ರಾರು ಗಡಿಯಾರಗಳನ್ನು ಹೊರ ದೇಶಗಳಿಗೆ ರಫ್ತು ಮಾಡಲು ಸಿದ್ಧವಾಗಿದೆಯೆಂದು ವರದಿಯಾಗಿದೆ

ವಿಶ್ವಸಂಸ್ಥೆಗೆ ಚೀಣಾದ ಪ್ರ ತಿ ಭ ಟ ನೆ

ಹೊರಮಂಗೋಲಿಯಾ ಪಡೆಗಳು ಚೈನಾ ಪ್ರದೇಶದ ಸಿಂಕಿಯಾಂಗ್ ನಗರದ ಮೇಲೆ ನಡೆಸಿದ ಧಾಳಿಯ ಸಂಬಂಧವಾಗಿ ಹೊರ ಮಂಗೋಲಿಯಾ ಮತ್ತು ಸೋವಿಯೆಟ್ ಸರ್ಕಾರಗಳಿಂದ ತಮಗೆ ಸರಿಯಾದ ಪರಿಹಾರ ದೊರೆಯದಿದ್ದರೆ ಸಿಂಕಿಯಾಂಗ್ ಪ್ರಶ್ನೆಯನ್ನು ವಿಶ್ವರಾಷ್ಟ್ರ ಸಂಸ್ಥೆಯ ಪರಿಶೀಲನೆಗಾಗಿ ಕಳುಹಿಸಲಾಗುವುದೆಂದು ಚೀಣಾ ವಿದೇಶಾಂಗ ಮಂತ್ರಿಗಳು ಅಲ್ಲಿನ ಶಾಸನ ಸಭೆಯಲ್ಲಿ ತಿಳಿಸಿರುವರು.

ಕರಾಚಿಯು ಜಿನ್ನಾಬಾದ್ ಆಗುವುದು

ಗ್ಲೋಬ್] ಕರಾಚಿ ೧೫

ಪಾಕಿಸ್ಥಾನಕ್ಕೆ ಕರಾಚಿ ರಾಜಧಾನಿಯಾಗುವುದು ಹಾಗಾದರೆ ಅಗ ಅದರ ಹೆಸರನ್ನು ಜಿನ್ನಾಬಾದ್ ಎಂಬುದಾಗಿ ಬದಲಾಯಿಸಬೇಕು—ಎಂದು ಅಲ್ಲಿಯ ಮುಸ್ಲಿಂ ನಾಯಕರೊಬ್ಬರು ಹೇಳಿರುವರು ಅದು ಜಿನ್ನಾರವರ ಜನ್ಮಸ್ಥಳ ಸ್ವತಂತ್ರ ಮುಸ್ಲಿಂ ರಾಷ್ಟ್ರವನ್ನು ಸ್ಥಾಪಿಸಿ ಪಾಕಿಸ್ತಾನಕ್ಕೆ ರಾಜಧಾನಿಯಾಗಲಿರುವ ಈ ನಗರವನ್ನು ಜಿನ್ನಾಬಾದ್ ಎಂದು ಕರೆಯುವುದು ಸೂಕ್ತವಾಗಿದೆ—ಎಂದೂ ಅವರು ಹೇಳಿರುವರು

ಪೌರಸಭಾಧ್ಯಕ್ಷ ಚುನಾವಣೆ

ಕಾಂಗ್ರೆಸ್ ಉಮೇದುವಾರರ ವಿಜಯ

ನಂಜನಗೂಡು ೧೫

ಇಲ್ಲಿನ ಟೌನ್ ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷರ ಚುನಾವಣೆಯು ನಿನ್ನೆ ನಡೆದು ಕಾಂಗ್ರೆಸ್ ಉಮೇದುವಾರರಾದ ಶ್ರೀ|| ಬಿ. ಎ. ಎಸ್. ಅರಸ್ಯರು ಬಹುಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಇವರಿಗೆ ೧೦ ಓಟುಗಳೂ, ಇದುವರೆಗೆ ಅಧ್ಯಕ್ಷರಾಗಿದ್ದ ಶ್ರೀ|| ಎ. ವಿ. ಕೃಷ್ಣಯ್ಯನವರಿಗೆ ೯ ಓಟುಗಳೂ ಬಂದುವು. ಇನ್ನೂ ಇಬ್ಬರು ಉಮೇದುವಾರರಾದ ಶ್ರೀಗಳು ಮರಿಕೆಂಪಯ್ಯ ಮತ್ತು ಟಿ ವಿ. ಸುಬ್ಬಯ್ಯನವರುಗಳು ಮೊದಲನೇ ಎರಡು ರೌಂಡುಗಳಲ್ಲಿಯೇ ಸೋತುಹೋದರು

ಸಕ್ಕರೆ ಲೈಸೆನ್ಸ್ ರದ್ದು

ಮದರಾಸ್ ಪ್ರಾಂತ್ಯದಲ್ಲಿ ಬರುವ ಸೆಪ್ಟೆಂಬರಿನಿಂದ ಸಕ್ಕರೆಯ ಲೈಸೆನ್ಸ್ ಮತ್ತು ಕಂಟ್ರೋಲುಗಳು ರದ್ದಾಗುವುವೆಂದು ಹೇಳಲಾಗಿದೆ.

ತಿರುವಾಂಕೂರಿನಲ್ಲಿ ಪ್ರಜಾಭಿಪ್ರಾಯ ಪಡೆಯಬೇಕು

ತಿರುವಾಂಕೂರಿನ ದಿವಾನರಿಗೆ ಪ್ರಜಾಭಿಪ್ರಾಯದ ವಿಚಾರದಲ್ಲಿ ಸಂಶಯವೇನಾದರೂ ಇದ್ದರೆ ಆ ಸಂಸ್ಥಾನವು ರಾಜ್ಯಾಂಗ ಸಭೆ ಮತ್ತು ಇಂಡಿಯನ್ ಯೂನಿಯನ್ನಿನಲ್ಲಿ ಸೇರುವ ಬಗ್ಗೆ ಪ್ರಜಾಭಿಪ್ರಾಯ ಪಡೆಯಬೇಕೆಂದು ದೆಹಲಿಯಲ್ಲಿ ಸೇರಿದ್ದ ಅಖಿಲ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಸ್ಥಾಯಿ ಸಮಿತಿಯು ನಿರ್ಣಯಿಸಿರುತ್ತದೆ. ತಿರುವಾಂಕೂರು ತನ್ನ ಈಗಿನ ಪ್ರತಿಗಾಮಿ ಮಾರ್ಗದಲ್ಲಿಯೇ ಮುಂದುವರಿಯಬಾರದೆಂದು ಸಮಿತಿಯು ಆಶಿಸುತ್ತದೆ; ಅವರು ಹಾಗೆ ಮಾಡುವುದರಿಂದ ಅಲ್ಲಿನ ಪ್ರಜೆಗಳು ಭಾರತ ರಾಜ್ಯಾಂಗ ಸಭೆಗೂ ಇಂಡಿಯನ್ ಯೂನಿಯನ್ನಿಗೂ ಸೇರಲು ಅಹಿಂಸಾಯುತವಾದ ಮಾರ್ಗದಿಂದ, ಪ್ರತಿಭಟಿಸಿ ತಮಗಿರುವ ಹಕ್ಕನ್ನು ಸ್ಥಾಪಿಸಲು ಹೋರಾಡಬೇಕಾಗಬಹುದೆಂದೂ ನಿರ್ಣಯದಲ್ಲಿ ನಮೂದಿಸಲಾಗಿದೆ.

ಬರಾರವು ನಿಜಾಮರಿಗೆ ಸೇರುವುದೇ ?

ಹಿಂದೆ ಬರಾರವು ಹೈದರಾಬಾದ್ ನಿಜಾಮರಿಗೇ ಸೇರಿದ್ದುದರಿಂದ ಬ್ರಿಟಿಷರು ಭಾರತದಿಂದ ಹೊರಡುವ ಮೊದಲು ಅದನ್ನು ಹೈದರಾಬಾದಿಗೇ ವಹಿಸಿಕೊಡಬಹುದೆಂದು ಹೇಳಲಾಗಿದೆ ನಿಜಾಮರು ಬರಾರದ ಗಡಿ ಪ್ರದೇಶದಲ್ಲಿ ತಮ್ಮ ಸೈನ್ಯ ಸಂಗ್ರಹ ಮಾಡುತ್ತಿರುವರೆಂದೂ, ಬ್ರಿಟಿಷರು ಹೊರಟೊಡನೆ ಅದನ್ನು ಸ್ವಾಧೀನಪಡಿಸಿಕೊಳ್ಳುವರೆಂದೂ ತಿಳಿದು ಬಂದಿದೆ.

ರಾಜ್ಯಾಂಗ ಸಭೆಗೆ ಸೇರಲು ಮೈಸೂರಿನ ನಿರ್ಧಾರವೇ?

ಹೈದರಾಬಾದು, ತಿರುವಾಂಕೂರುಗಳ ನೀತಿಯನ್ನವಲಂಬಿಸದೆ ಅನೇಕ ಕಾರಣಗಳಿಗಾಗಿ ಮೈಸೂರು ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿದೆಯೆಂಬುದಾಗಿ ನಂಬಲರ್ಹವಾದ ಕಡೆಗಳಿಂದ ತಿಳಿದು ಬಂದಿದೆ ಸದ್ಯದಲ್ಲೇ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಬೀಳಲಿದೆಯೆಂದು ಹೇಳಲಾಗಿದೆ. ಸಂಸ್ಥಾನದ ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರರು ದೆಹಲಿಯಿಂದ ಹಿಂದಿರುಗಿದೊಡನೆಯೇ ರಿಸಿಡೆಂಟರೊಡನೆ ಭೇಟಿ ನಡೆಸಿ ಶ್ರೀಮನ್ಮಹಾರಾಜರವರನ್ನು ಸಂದರ್ಶಿಸಲು ಮೈಸೂರಿಗೆ ತೆರಳುವರು - ಎಂಬುದಾಗಿ ಮದ್ರಾಸ್ ಪತ್ರಿಕೆಯೊಂದಕ್ಕೆ ದೆಹಲಿಯಿಂದ ವಾರ್ತಾದಾತರು ಬರೆದಿರುವರು

ಸಂಸ್ಥಾನಗಳಿಗೆ ಸ್ವತಂತ್ರಾಧಿಕಾರವಿಲ್ಲ

ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ನಿರ್ಣಯ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ನಿನ್ನೆ ದೆಹಲಿಯ ರಾಜ್ಯಾಂಗ ಸಭಾ ಭವನದಲ್ಲಿ ಆರಂಭವಾಯಿತು. ಬ್ರಿಟಿಷ್ ಸರ್ಕಾರದ ಹೊಸ ಯೋಜನೆಯನ್ನು ಅಂಗೀಕರಿಸಲು ಕಾರ್ಯಕಾರಿ ಮಂಡಲಿಯು ಮಾಡಿದ್ದ ನಿರ್ಣಯವನ್ನು ಪರಿಶೀಲಿಸಿತು. ಈ ದಿನವೂ ಸಭೆಯು ನಡೆಯುತ್ತಿದೆ ಬ್ರಿಟಿಷರ ಪರಮಾಧಿಕಾರವು ಹೋದ ಮೇಲೆ ಸಂಸ್ಥಾನಗಳು ಸ್ವಾತಂತ್ರ್ಯವನ್ನು ಘೋಷಿಸಲು ಅವುಗಳಿಗೆ ಅಧಿಕಾರವಿಲ್ಲವೆಂದೂ, ಅವುಗಳು ಪ್ರಜಾಪ್ರಭುತ್ವ ರಾಜ್ಯಗಳಾಗಿ ಭಾರತದ ಯೂನಿಯನ್ನಿನಲ್ಲಿಯೇ ಸೇರಬೇಕೆಂದೂ ಸೂಚಿಸುವ ಕಾರ್ಯಕಾರಿ ಮಂಡಲಿಯ ನಿರ್ಣಯವೂ ಸಹ ಈ ಸಭೆಯಲ್ಲಿ ಪರಿಶೀಲನೆಗೆ ಬರಲಿದೆ.

ಬಟ್ಟೆ ವರ್ತಕರಿಗೆ ನೋಟೀಸು

ಮೈಸೂರು ೧೫

ಕೈ ಮಗ್ಗದ ಬಟ್ಟೆ ವ್ಯಾಪಾರ ಮಾಡುವಾಗ ಕಂಟ್ರೋಲ್ ನಂಬರನ್ನು ನಮೂದಿಸದಿದ್ದುದರಿಂದ ಏತಕ್ಕೆ ಕ್ರಮ ಕೈಗೊಳ್ಳಬಾರದು—ಎಂದು ತಿಳಿಸಿ ಈ ನಗರದ ಸುಮಾರು ೭೦ ಜನ ಕೈ ಮಗ್ಗದ ಬಟ್ಟೆ ವರ್ತಕರುಗಳಿಗೆ ಜಿಲ್ಲಾಧಿಕಾರಿಗಳು ನೋಟೀಸ್ ಕೊಟ್ಟಿದ್ದರು. ಆವರುಗಳು ಬಟ್ಟೆ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷರಾದ ಶ್ರೀ|| ಜಿ ವಿ ಸೂರ್ಯನಾರಾಯಣ ಶೆಟ್ಟರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಈ ದಿನ ಮತ್ತು ನಿನ್ನೆ ಭೇಟಿ ಮಾಡಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಂಡರು. ಇನ್ನು ಮುಂದೆ ಆ ರೀತಿ ಮಾಡಬಾರದೆಂದೂ ಅವರಿಗೆ ಅವಶ್ಯಕವಾದ ಸೌಲಭ್ಯಗಳನ್ನು ಕಲ್ಪಿಸುವುದಾಗಿಯೂ ಜಿಲ್ಲಾಧಿಕಾರಿಗಳು ತಿಳಿಸಿದರೆಂದು ಗೊತ್ತಾಗಿದೆ

ಹ ರಿ ಕ ಥೆ

ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀನಿವಾಸಸ್ವಾಮಿಯವರ ದೇವಸ್ಥಾನದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ಸಂಗೀತ ವಿದ್ವಾನ್ ಎಸ್ ಕೃಷ್ಣಯ್ಯಂಗಾರ್ಯರಿಂದ ಭದ್ರಾಚಲ ರಾಮದಾಸ್-ಎಂಬ ಹರಿಕಥೆಯು ನಡೆಯುತ್ತದೆ.

ಯ ಕ್ಷ ಗಾ ನ

ಈ ದಿನ ರಾತ್ರಿ ೯ ಘಂಟೆಗೆ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀರಾಮ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ಏರ್ಪಡಿಸಿ ಪ್ರಯುಕ್ತ ಶ್ರೀ ಹನುಮಂತ್ಸ್ವಾಮಿ ಶಿಷ್ಯರ ಶ್ರೀ ಹನುಮಂತೇಶ್ವರೀ ಯಕ್ಷಗಾನ ಕಲಾ ಮಂಡಲಿಯವರಿಂದ "ಕಾರ್ತವೀರ್ಯಾರ್ಜುನ" ಎಂಬ ಯಕ್ಷಗಾನ ಪ್ರಸಂಗವು ನಡೆಸಲು ಏರ್ಪಾಡಾಗಿದೆ

ಧನ ಸಹಾಯ

ಶ್ರೀ|| ಚೌಡ್ರಿ ಕೃಷ್ಣಯ್ಯ ಶೆಟ್ಟರ ಮಕ್ಕಳು ಶ್ರೀ|| ಸಿ. ಕೆ. ಸುಬ್ಬರಾಯ ಶೆಟ್ಟರಿಗೆ ನಡೆದ ವಿವಾಹ ಮಹೋತ್ಸವದ ಸಂಬಂಧವಾಗಿ ನೆಲಮಾಯಿ ಸ್ಕೂಲಿಗೆ ೧೦ ರೂಪಾಯಿಗಳ ಧನ ಸಹಾಯ ಮಾಡಲಾಗಿದೆ.

“ ವಮನೆ ಹೆಂಪುಸ್ಸಾಲ್ ಶ್ರೀ|| ಸಿ ಟಿ ಬುಡ್ಡಾಚಾರ್ಯರು ಕಳೆದ ೯ ನೇ ತಾ|| ನಡೆದ ತಮ್ಮ ಮಗನ ವಿವಾಹದ ಸಂದರ್ಭದಲ್ಲಿ ರಾಜಧಾನಿಯ ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ೫೦ ರೂಗಳನ್ನು ದಾನ ನೀಡಿರುವರು.

ಸಾಧ್ವಿ

ತಾ|| ೧೫-೬-೪೭ ಭಾನುವಾರ

ಮೈಸೂರು ಸೇರುವುದಿಲ್ಲವೇ ?

—

ಮುಂದೆ ಸ್ಥಾಪಿತವಾಗಲಿರುವ ಎರಡು ರಾಜ್ಯಾಂಗ ಸಭೆಗಳಲ್ಲಿಯೂ ಸೇರದೆ ಇರುವ ಹೈದರಾಬಾದ್, ಮೈಸೂರು, ತಿರುವಾಂಕೂರು, ಭೂಪಾಲ್, ಇಂದೂರ್, ಜುನಾಘರ್ ಮತ್ತು ಬೈಂಪೂರ್ ಸಂಸ್ಥಾನಗಳಿಗಾಗಿ ಒಂದು ಸ್ವತಂತ್ರವಾದ ಏಜೆನ್ಸಿಯನ್ನು ಜುಲೈ ತಿಂಗಳಿಂದ ನವದೆಹಲಿಯಲ್ಲಿ ಸ್ಥಾಪಿಸಲಾಗುವುದೆಂದು ಒಂದು ವರದಿಯು ತಿಳಿಸುತ್ತದೆ. ಇದಕ್ಕೆ ನರೇಂದ್ರ ಮಂಡಲದ ಮಾಜಿ ಅಧ್ಯಕ್ಷರಾದ ಭೂಪಾಲ್ ನವಾಬರೇ ಮುಖ್ಯ ಕಾರಣರೆಂದು ಹೇಳಲಾಗಿದೆ. ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥಾನಗಳಿಗೆ ಆಗಬೇಕಾದ ಹೊಸ ಕೌಲು ಕರಾರುಗಳನ್ನು ರಚಿಸಲು ಈ ಸಂಸ್ಥೆಯು ಸಂಧಾನಗಳನ್ನು ನಡೆಸುವುದೆಂದು ಹೇಳಲಾಗಿದೆ.

ಈ ಸುದ್ದಿಗೆ ಆಧಾರವೇನೆಂಬುದು ಗೊತ್ತಾಗಿರುವುದಿಲ್ಲ. ಇಂತಹ ಪ್ರತ್ಯೇಕ ಸಂಸ್ಥೆಯೊಂದರ ಅಗತ್ಯವೇನೆಂಬುದೂ ಸಹ ತಿಳಿದು ಬಂದಿರುವುದಿಲ್ಲ. ಆದರೆ ಹಲವು ಸಂಸ್ಥಾನಗಳೊಡನೆ ಮೈಸೂರನ್ನೂ ಸಹ ಸೇರಿಸಿ ಈ ಸಂಸ್ಥಾನವೂ ರಾಜ್ಯಾಂಗ ಸಭೆಯಲ್ಲಿ ಸೇರುವುದಿಲ್ಲವೆಂದು ತಿಳಿಸಿರುವ ವರದಿಯು ಇದೇ ಮೊದಲನೆಯದು. ಇದು ಎಷ್ಟರಮಟ್ಟಿಗೆ ವಾಸ್ತವವೆಂಬುದು ಇನ್ನೂ ಗೊತ್ತಾಗಿರುವುದಿಲ್ಲ.

ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವ ವಿಷಯವನ್ನು ನಿರ್ಧರಿಸುವವರು ಶ್ರೀಮನ್ಮಹಾರಾಜರವರೇ ಎಂದು ದಿವಾನರು ಮೊನ್ನೆ ತಾನೆ ಹೇಳಿರುತ್ತಾರೆ. ಈ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲವೆಂಬುದೇ ನಮ್ಮ ಭಾವನೆ. ಆಗಿದ್ದರೆ ಇದುವರೆಗೆ ಅದನ್ನು ಪ್ರಕಟಪಡಿಸಲು ಯಾವ ಕಾರಣವೂ ಇರಲಿಲ್ಲ. ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವ ಸಂಸ್ಥಾನಗಳು ಈ ತಿಂಗಳು ಇಪ್ಪತ್ತನೇ ತಾರೀಖಿನೊಳಗೆ ತಿಳಿಸಬೇಕೆಂದು ಸಭೆಯ ಕಾರ್ಯದರ್ಶಿಗಳು ಕೋರಿರುತ್ತಾರೆ. ಇದಕ್ಕೆ ಇನ್ನು ಕೇವಲ ಐದು ದಿನಗಳು ಮಾತ್ರ ಉಳಿದಿವೆ. ಇದುವರೆಗೆ ಸಂಸ್ಥಾನದ ನೀತಿಯನ್ನು ಪ್ರಕಟಿಸದೆ ಇರುವುದರಿಂದಲೇ ಮೇಲ್ಕಂಡ ಬಗೆಯ ವದಂತಿಗಳಿಗೆ ಅವಕಾಶವಾಗುತ್ತದೆ. ಮೈಸೂರಿನಂತಹ ಪ್ರಮುಖ ಸಂಸ್ಥಾನಕ್ಕೆ ಇಂತಹ ಸಂದಿಗ್ಧ ಪರಿಸ್ಥಿತಿಯು ಸ್ವಲ್ಪವೂ ತರವಲ್ಲ.

ಮೈಸೂರು ರಾಜ್ಯಾಂಗ ಸಭೆಯಲ್ಲಿ ಸೇರುವ ವಿಷಯವನ್ನು ಕಡ್ಡಾಯವಾಗಿ ನಿರ್ಧರಿಸಬೇಕಾದವರು ಶ್ರೀಮನ್ಮಹಾರಾಜರವರೇ ಎಂಬುದನ್ನು ಒಪ್ಪಬಹುದು. ಆದರೆ ಅವರು ಪ್ರಜೆಗಳ ಅಭಿಮತದಂತೆಯೇ ತಮ್ಮ ನಿರ್ಧಾರವನ್ನು ಮಾಡಬೇಕೆಂದು ನಿರೀಕ್ಷಿಸುವುದು ಸಹಜವಾಗಿಯೇ ಇರುತ್ತದೆ. ಪ್ರಜಾ ಯೋಜನೆಯೇ ರಾಜರುಗಳ ಸರ್ವೋತ್ತಮವಾದ ಪ್ರಶಸ್ತಿ. ಪ್ರಜೆಗಳ ಅಭಿಪ್ರಾಯವು ಈಗಾಗಲೇ ನಾನಾ ರೀತಿಗಳಲ್ಲಿ ಪ್ರಕಟವಾಗಿರುತ್ತದೆ. ಶಾಸನ ಸಭೆಗಳಲ್ಲಿಯೂ, ಅನೇಕ ಸಮಾರಂಭಗಳಲ್ಲಿಯೂ, ಪತ್ರಿಕೆಗಳಲ್ಲಿಯೂ, ವೇದಿಕೆಗಳಲ್ಲಿಯೂ ಇದು ವೇದ್ಯವಾಗಿರುತ್ತದೆ. ರಾಜ್ಯಾಂಗ ಸಭೆಯಲ್ಲಿ ಮೈಸೂರು ಭಾಗವಹಿಸುವುದಾಗಿ ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ದಿವಾನರು ಘೋಷಿಸಿ ಎಂಟು ತಿಂಗಳುಗಳಾದುವು. ಯಾವ ಬ್ರಿಟಿಷ್ ನಿಯೋಗದ ಯೋಜನೆಯ ಪ್ರಕಾರ ಈ ನಿರ್ಧಾರವನ್ನು ಮಾಡಲಾಯಿತೋ ಅದು ಈಗಲೂ ಸಂಸ್ಥಾನಗಳಿಗೆ ಅನ್ವಯವಾಗುವುದೆಂದು ಬ್ರಿಟಿಷ್ ಸರಕಾರದವರೇ ಹೇಳಿರುತ್ತಾರೆ. ಹೀಗಿರುವಲ್ಲಿ ಮೈಸೂರು ತನ್ನ ಅಂದಿನ ನಿರ್ಧಾರವನ್ನು ರದ್ದು ಮಾಡಲು ಇನ್ನೂ ಹಿಂದುಮುಂದೆ ನೋಡುವುದು ಸ್ವಲ್ಪವೂ ಸರಿಯಲ್ಲ.

ಹಿಂದೂಸ್ಥಾನದ ಮುಂದುವರಿದ ರಾಜರುಗಳೂ, ದಿವಾನರುಗಳೂ, ಇತರ ನಾಯಕರುಗಳೂ ಈಗಾಗಲೇ ಈ ಬಗ್ಗೆ ಮನವಿ ಮಾಡಿಕೊಂಡು ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳು ಭಾಗವಹಿಸಬೇಕೆಂದು ಕೋರಿದ್ದಾರೆ. ಮೈಸೂರು ಇದಕ್ಕೆ ವಿರೋಧವಾಗಿ ಹೋಗುವುದು ಯುಕ್ತವಲ್ಲ. ಮೇಲ್ಕಂಡ ಸುದ್ದಿಯು ನಿರಾಧಾರವಾಗಿರಲೆಂಬುದೇ ಮೈಸೂರಿನ ಪ್ರಜೆಗಳೆಲ್ಲರ ಪ್ರಾರ್ಥನೆಯಾಗಿದೆ

ವುಡ್‌ಲ್ಯಾಂಡ್ಸ್

15-6-47 ರಿಂದ

ಶುಕ್ರವಾರ ೭ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

—: ಪಾತ್ರ :—

ಟಿ. ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ ಆರ್.

ರಾಮಚಂದ್ರ ಮುಂತಾದವರು.

ರಾಜಕಮಲ್,

ತಾ|| ೧೩-೬-೪೭ ರಿಂದ

8 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲ್ಲಭಾಮ

(ತೆಲುಗು)

ಸ್ಪೆಷಲ್ ಪ್ರೋಗ್ರಾಂ

೧೩—೬—೪೭ ರಿಂದ

7 ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ

ಸಿಸ್ಟರ್ ಅಥವಾ ಸಹೋದರಿ

(ಹಿಂದಿ)

—: ಪಾತ್ರ :—

ನಳಿನಿ ಜಯವಂತ್, ಶೇಖ್ ಮುಖ್ತಾರ್ ಮುಂತಾದವರು.

Edited printed and published by A. R. Nagarajan at the Sadhvi Press D Subbaiah Road Mysore

ಕೊಡಲಿನಿಂದ ಮೋಟಾರು ಎಳೆಯಲು ಪ್ರಯತ್ನ

ಲಂಡನ್ನಿನ ಅಲೆಗ್ಸಾಂಡರನ ಮಾರ್ಗರೆಟರವರು ಈಗ ಕೆಲವು ದಿನಗಳ ಹಿಂದೆ ತಮ್ಮ ಹಲ್ಲಿನಿಂದ ೬ ಟೈಟ್ ಗೂಡ್ಸ್ ಗಾಡಿಗಳನ್ನೆಳೆದಿದ್ದರು. ಅವರು ಈಗ ತಮ್ಮ ತಲೆಯ ಕೂದಲಿನಿಂದ ಮೋಟಾರು ಗಾಡಿಯನ್ನು ಎಳೆಯಲು ಸಂಕಲ್ಪ ಮಾಡಿರುವರೆಂದು ವರದಿಯಾಗಿದೆ

ಶ್ರೀ ಕನ್ನಿಕಾಪರಮೇಶ್ವರೀ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಮೈಸೂರು.

ಅನುಭವಸ್ಥರಾದ ಒಬ್ಬರು ಅಟೆಂಡರ್ ಬೇಕಾಗಿದ್ದಾರೆ. ಮಾಹೆಯಾನಾ ಸಂಬಳ ೧೦ ರೂ. ಮತ್ತು ಬತ್ತ ಭತ್ಯ ರೂ ೮. ಅರ್ಜಿದಾರರುಗಳು ಯೋಗ್ಯತಾ ಪತ್ರಗಳೊಡನೆ ೨೦-೬-೪೭ ರ ಒಳಗಾಗಿ ಕಳುಹಬೇಕು.

ಕೆ. ಎನ್. ನಾಗರಾಜಶೆಟ್ಟಿ.

ಸೆಕ್ರೆಟರಿ.

ಶ್ರೀ ಸರಸ್ವತೀ ಸಂಗೀತ ಸಮಾಜ, ಮೈಸೂರು.

ತಾ|| ೨೨—೬—೪೭ನೇ ಭಾನುವಾರ

ಸಂಜೆ ೬ ಘಂಟೆಗೆ

ಚೆಂಬಗಟ್ಟೇರಿ ಛತ್ರದ ಕಲಾ ಮಂಡಲಿಯು

ವಿವಿಧ ನೃತ್ಯಗಳು

ಶ್ರೀಮಾನ್ ರಾಮಕೃಷ್ಣ ಪಡಿಕ್ಕರ್, ತಗಿ ಸಿಂಗನ್ನ, ಬಾಸಿ, ಕೆಟ್ಟರ್,

ಶ್ರೀಮತಿ ಶ್ಯಾಮಲಾ, ಸುಗುಣಬಾಯಿ,

ಇಂದುಮತಿ, ಮೋಹನ್ ಕುಮಾರಿ

ಅನ್ನಪೂರ್ಣ ದೇವಿ, ಪ್ರಸನ್ನ ಕುಮಾರಿ ಭಾರತಿ

ಕೃಷ್ಣ ಶೆಟ್ಟಿ

ಸುಶ್ರಾವ್ಯವಾದ ಹಿನ್ನೆಲೆ ಸಂಗೀತದೊಡನೆ

ಟಿಕೆಟ್ ದರಗಳು:- ರೂ ೫, ೩, ೨, ೧

ಪ್ರಾಂತಗಳ ಆಧಾರದ ಮೇಲೆ ಸೈನ್ಯ ವಿಭಜನೆ

ಸೈನ್ಯ ವಿಭಜನೆಯ ಪ್ರಶ್ನೆಯು ವಿಭಜನಾ ಸಮಿತಿಯ ಮುಂದೆ ಚರ್ಚೆಗೆ ಬಂದಿದೆ. ಸೈನ್ಯ ವಿಭಜನೆಯು ಪ್ರಾಂತಗಳ ಆಧಾರದ ಮೇಲೆಯೇ ನಡೆಸಲ್ಪಡಬೇಕೆಂದು ಆಧಾರದ ಮೇಲೆ ಆಗಕೂಡದೆಂದು ಹಲವು ಪ್ರಮುಖರು ಅಭಿಪ್ರಾಯಪಡುವುದಾಗಿ ವರದಿಯಾಗಿದೆ.

Good News! Oh! Good News.

—

Join the famous Sarada Institute (appd.), Tyagaraja Road, Opposite to Gopala Krishna Swamy Temple, Mysore and ensure success in all commercial subjects. New Type-writers installed Staff: qualified Veterans and Graduates. Fees: standard. Min qualification 3rd form. Admission on any day for both the sexes.

Type-writers and Accessories for sale. Repairs and Job-works undertaken

Please Visit

Rao & Co.,

1273, Yelwal Road, Mysore.

for your requirements of Paper, Stationery, Exercise Books etc

Office of the President,
City Municipal Council,
Mysore, 9th June 1947.

NOTIFICATION.

JUST RELEASED FROM THE PRESS

MUNICIPAL HAND-BOOK AND DIARY

A publication which should be in the hands of all the Citizens of Mysore.

A publication which gives full particulars pertaining to the Municipality and also contains diary for 12 months.

PRICE Annas TWELVE only. (As. 12.)

For copies, please apply to:—

The President.

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೨. : : ಫೋನ್ ೨೧೦

ಪೋ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೬—೬—೪೭ [ಸಂಚಿಕೆ ೪೨

ಜುಲೈ ೧ ನೇ ತಾ|| ನಿಂದ ೨ ತಾತ್ಕಾಲಿಕ ಸರ್ಕಾರ

ಹೌಸಿಂಗ್ ಸೊಸೈಟಿ

ಮೈಸೂರು ೧೬.

ಈ ತಿಂಗಳು ೩೧ ನೇ ತಾ|| ಭಾನುವಾರ ನಡೆಯಲಿರುವ ಈ ಸೊಸೈಟಿಯ ಚುನಾವಣೆಗೆ ಈ ಕೆಳಗೆ ಕಂಡವರು ಉಮೇದುವಾರರಾಗಿ ನಿಂತಿರುವರೆಂದು ತಿಳಿದುಬಂದಿದೆ. ...ಗಳಾದ ಎ ವಿ ಶ್ರೀನಿವಾಸಮೂರ್ತಿ, ಎ ರಂಗರಾವ್, ಬಿ ವಿ ನಂಜುಂಡಯ್ಯ, ಡಿ ಕೃಷ್ಣಪ್ಪ, ಟಿ ಸಿ ಗೌಡ, ಜಿ ಆರ್ ರಂಗಸ್ವಾಮಯ್ಯ, ಬಿ ಆರ್, ನಾಯ್ಡು, ಎಸ್ ...ಸಿಂಗ್, ಬಿ ಎಂ ಚಂದ್ರಶೇಖರಯ್ಯ, ಬಿ ಕೃಷ್ಣಮೂರ್ತಿ, ಎಸ್ ಶೇಷಗಿರಿರಾವ್, ಗೋಪಾಲಕೃಷ್ಣಶೆಟ್ಟಿ, ಬಿ ವಾಸುದೇವರಾವ್, ಹೆಚ್ ರಾಮಣ್ಣ, ಮತ್ತು ಹೆಚ್ ಕೃಷ್ಣಮೂರ್ತಿ.

ಆಯುರ್ವೇದ ಕಾಲೇಜು ದಿನಾಚರಣೆ

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ದಿನಾಚರಣೆಯು ಶ್ರೀ|| ಡಿ ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಗುರುವಾರ ನಡೆಯಿತು. ವೈದ್ಯವೃತ್ತಿಗೆ ಸೂಕ್ತ ಪ್ರೋತ್ಸಾಹವನ್ನೀಯಲು ಕೇಂದ್ರ ಮತ್ತು ಮೈಸೂರು ಸರ್ಕಾರಗಳು ನಿರಾಕರಿಸಿದೆಯೆಂದೂ, ಆಯುರ್ವೇದ ಮತ್ತು ಯುನಾನಿ ಶಿಕ್ಷಣಗಳ ಪುನರ್ವ್ಯವಸ್ಥೆ ...ಗಾಗಿ ..., ಶ್ರೀ|| ಚಂದ್ರಶೇಖರಯ್ಯನವರು ಹೇಳಿ ಕೇಂದ್ರ ಸಂಶೋಧನಾ ಮಂಡಲಿಯೊಂದನ್ನು ಸ್ಥಾಪಿಸಲಾಗುವುದೆಂದು ...ಸಿದರು.

ವಿದ್ಯುಚ್ಛಕ್ತಿ ಕೆಲಸಗಾರರ ಸಂಘ

...ರಾಜಧಾನಿಯ ವಿದ್ಯುಚ್ಛಕ್ತಿ ಕೆಲಸಗಾರರ ಸಂಘದವರು ಮೊನ್ನೆ ದಿವಾನರನ್ನು ಕಂಡು ... ಕೂಲಿ, ... ಭತ್ಯ, ಪ್ರಯಾಣದ ಭತ್ಯ ಮತ್ತು ಎರಡು ತಿಂಗಳ ಬೋನಸ್ಸನ್ನು ...ಕೊಡಬೇಕೆಂದು ಮನವಿ ಮಾಡಿಕೊಂಡು ದಿವಾನರು ಎಲ್ಲವನ್ನೂ ಪರಿಶೀಲಿಸುವುದಾಗಿ ಭರವಸೆ ಇತ್ತರು.

ಹೋಟೆಲು ಕೆಲಸಗಾರರ ಸಂಘ

ಮೈಸೂರು ನಗರದ ಹೋಟೆಲು ಕೆಲಸಗಾರರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಯವರು ಮತ್ತು ಸುಮಾರು ೧೫ ಸದಸ್ಯರು ದಿವಾನರನ್ನು ಭೇಟಿಮಾಡಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಂಡರು. ... ನವಂಬರ್ ... ಕಾನೂನನ್ನು ಜಾರಿಗೆ ತಂದು ಅದಕ್ಕೆ ... ಕಾರ್ಯಗತಪಡಿಸುವುದಾಗಿ ದಿವಾನರು ಸೂಚಿಸಿದರು.

ಟಿಬೆಟ್ಟಿನಲ್ಲಿ ದಂಗೆ

ಟಿಬೆಟ್ಟಿನ ಬೌದ್ಧ ಮಠದ ಭಿಕ್ಷುಗಳಿಗೂ, ಇತರರಿಗೂ ಘರ್ಷಣೆಗಳಾಗಿ ಗಲಭೆ ಆಯಿತೆಂದು ವರದಿಯಾಗಿದೆ. ಚೀಣೀಯರು ಬೌದ್ಧ ಗುರುಗಳ ನಾಯಕನನ್ನು ...ಗಿರಿ ಮಾಡಿ ... ಘರ್ಷಣೆ ಪ್ರಾರಂಭ ಮೂರು ಮರದಿಂದ ...ಗಳಿಂದ ಕೂಡಿ ದಂಗೆ ಎದ್ದಿದ್ದರೆಂದು ಕಲಾಗಿದೆ.

...rada Vilas High School

Tutorial classes for the ...nefit of failed, and E P S. ...dents of S S L C Class ...ll be opened from 16-6-47 ...tween 7 and 10-30 a. m. ...ease apply to—

The Head-master.

ಬ್ರಿ|| ಯೋಜನೆಗೆ ಕಾಂಗ್ರೆಸ್ಸಿನ ಅಂಗೀಕಾರ

ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸಲು ಬ್ರಿಟಿಷ್ ಸರ್ಕಾರದವರು ಮುಂದಿಟ್ಟಿರುವ ಹೊಸ ಯೋಜನೆಯನ್ನು ಅಂಗೀಕರಿಸುವಂತೆ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಶಿಫಾರಸು ಮಾಡಿದ್ದ ನಿರ್ಣಯವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ೧೫೭-೨೯ ವೋಟುಗಳಿಂದ ಒಪ್ಪಲ್ಪಟ್ಟಿತು. ಭಾರತದ ವಿಭಜನೆಯು ಯಾರಿಗೂ ಸಮ್ಮತವಲ್ಲದಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಅನರ್ಥಗಳನ್ನು ತಪ್ಪಿಸಲು ಈ ಯೋಜನೆಯನ್ನು ಅಂಗೀಕರಿಸಬೇಕೆಂದು ನಿರ್ಣಯದಲ್ಲಿ ಸೂಚಿಸಲಾಗಿದೆ.

ಸಂಸ್ಥಾನಗಳಿಗೆ ಸ್ವಾತಂತ್ರ್ಯವನ್ನು ಘೋಷಿಸುವ ಅಧಿಕಾರವಿಲ್ಲವೆಂದೂ, ಹಾಗೆ ಅವು ಸ್ವಾತಂತ್ರ್ಯವನ್ನು ಘೋಷಿಸಿದರೆ ಅದನ್ನು ಕಾಂಗ್ರೆಸ್ಸು ಅಂಗೀಕರಿಸುವುದಿಲ್ಲವೆಂದೂ ಸೂಚಿಸುವ ಮತ್ತೊಂದು ನಿರ್ಣಯವೂ ಸಹ ಮಂಜೂರಾಯಿತು. ——

ಅಣು ಬಾಂಬಿನಿಂದಲೂ ಭಯಂಕರವಾದ ಯುದ್ಧಕ್ರಮಗಳ ಬಗ್ಗೆ ಬ್ರಿಟನ್ನಿನಲ್ಲಿ ಸಂಶೋಧನೆ ನಡೆಯುತ್ತಿದೆ. ರೇಡಿಯೋ ಅಕ್ಷಿನ್, ಜೋಡಣೆಗಳು ಮತ್ತು ಆಕ್ಸಿಜನ್ ಯೋಜನೆಗಳು ಬಾಂಬು ಇವೇ ಈ ಎರಡು ಹೊಸ ಯುದ್ಧಕ್ರಮಗಳು.

ಸಿಂಕಿಯಾಂಗಿನಲ್ಲಿ ಕದನ

ವಾಯುವ್ಯ ಚೀಣದ ಸಿಂಕಿಯಾಂಗ್ ಪ್ರಾಂತ್ಯದಲ್ಲಿ ಕದನವು ಮುಂದುವರಿದಿದೆ. ರಷ್ಯ ದೇಶದ ಗುರ್ತಿನ ವಿಮಾನಗಳು ಬಾಂಬು ಹಾಕುತ್ತಿರುವುದಾಗಿ ವರದಿಯಾಗಿದೆ. ಚೀಣಾ ಗಡಿಯನ್ನು ಪೂರ್ಣವಾಗಿ ರಕ್ಷಿಸಬೇಕೆಂದು ಚಿಯಾಂಗ್ ಕೈಷೇಕರು ಆಜ್ಞೆ ಮಾಡಿರುತ್ತಾರೆ. ಚೀಣದ ದೂರಿಗೆ ರಷ್ಯ ಇನ್ನೂ ಉತ್ತರ ಕೊಟ್ಟಿಲ್ಲವೆಂದು ಹೇಳಲಾಗಿದೆ.

ಬೆಂಗಳೂರು ಜಿಲ್ಲಾ ಬೋರ್ಡು ಅಧ್ಯಕ್ಷರು

[ಸ್ವಂ. ಟೆ. ಫೋ.] ಬೆಂಗಳೂರು ೧೬.

ಬೆಂಗಳೂರು ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ಈ ದಿನ ನಡೆದು ಸ್ವತಂತ್ರ ಉಮೇದುವಾರರಾದ ಶ್ರೀ ಬಿ ಹೆಚ್. ಆರ್. ಗುರುವಾರೆಡ್ಡಿಯವರು ೨೭ ವೋಟುಗಳನ್ನು ಪಡೆದು ಜಯಶೀಲರಾಗಿರುವರು. ಇವರ ಪ್ರತಿ ಸ್ಪರ್ಧಿಗಳಾಗಿದ್ದ ಶ್ರೀ ಮಾದಯ್ಯಗೌಡರಿಗೆ ಕೇವಲ ೯ ವೋಟುಗಳು ಮಾತ್ರ ಬಂದುವು.

ಜಿಲ್ಲಾ ಬೋರ್ಡಿನ ಅಧ್ಯಕ್ಷ ಚುನಾವಣೆ

ಕಾಂಗ್ರೆಸ್ಸಿಗೆ ವಿಜಯ

ಮೈಸೂರು ೧೬.

ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷ ಚುನಾವಣೆಯು ಈ ದಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದು ಕಾಂಗ್ರೆಸ್ ಉಮೇದುವಾರರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ೨೦ ವೋಟುಗಳನ್ನು ಪಡೆದು ಜಯಶೀಲರಾದರು. ಇವರ ಪ್ರತಿಸ್ಪರ್ಧಿಗಳಾದ ಶ್ರೀ ಎಂ. ಎನ್. ಸುಬ್ರಹ್ಮಣ್ಯವವರಿಗೆ ೧೪ ವೋಟುಗಳು ಬಂದುವು. ಈ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ ಉಮೇದುವಾರರು ಅಧ್ಯಕ್ಷರಾಗಿ ಚುನಾಯಿತರಾಗಿರುವುದು ಇದೇ ಮೊದಲು.

ಪಾಕಿಸ್ತಾನ ರಾಜ್ಯಾಂಗ ಸಭೆಗೆ ಜಿನ್ನಾ ಅಧ್ಯಕ್ಷರು

ಪಾಕಿಸ್ತಾನ ಸರ್ಕಾರವು ಒಂದಕ್ಕೆ ದಲ್ಲಿ ಪೂರ್ಣಾಧಿಕಾರವುಳ್ಳ ಸ್ವತಂತ್ರ ರಾಜ್ಯದ ಭೆನ್ಸರ್ ... ರೂಪಿಸುವುದು. ಪಾಕಿಸ್ತಾನ ರಾಜ್ಯಾಂಗ ಸಭೆಗೆ ಜಿನ್ನಾರವರೇ ಅಧ್ಯಕ್ಷರಾಗಿ ಚುನಾಯಿಸಲ್ಪಡಲಿರುವರು. ಅಖಿಲ ಭಾರತ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯು ಸಲಹಾ ಸಮಿತಿಯಾಗಿ ಕೆಲಸ ಮಾಡುವುದೆಂದು ಹೇಳಲಾಗಿದೆ.

ಮೈಸೂರಿನ ೬೦ ದಿನಗಳ ಕ್ಯಾಲೆಂಡರ್

ಭಾರತದಲ್ಲಿ ಬ್ರಿಟಿಷರ ಅಧಿಕಾರವು ಅಂತ್ಯವಾಗಲು ಇನ್ನು ೬೦ ದಿನಗಳು ಮಾತ್ರ ಉಳಿದಿವೆ. ಇದನ್ನು ಸೂಚಿಸಲು ಮೈಸೂರಿನ ೬೦ ಹಾಳೆಗಳ ಕ್ಯಾಲೆಂಡರೊಂದನ್ನು ಪ್ರಚಾರಮಾಡಿಸಿದ್ದಾರೆ. ಪ್ರತಿದಿನವೂ ಒಂದೊಂದು ಹಾಳೆಯನ್ನು ಹರಿದುಹಾಕಲಾಗುವುದು ಮತ್ತು ಅದರಲ್ಲಿ ಸರ್ಕಾರಿ ನೌಕರರು ಆಯಾ ದಿನದ ತಮ್ಮ ಕರ್ತವ್ಯಗಳನ್ನು ಬರೆದಿಡುವರು.

ಭಾರತೀಯರ ... ರಸಾಯನಿಕ ಗೊಬ್ಬರ

ಎಂಟುಕೋಟಿ ರೂಪಾಯಿ ವೆಚ್ಚದಿಂದ ರಸಾಯನಿಕ ಗೊಬ್ಬರದ ಕಾರ್ಖಾನೆಯೊಂದನ್ನು ... ಸ್ಥಾಪಿಸಲಾಗುವುದು ... ಸಹಾಯ ... ಅಧ್ಯಕ್ಷತೆ ... ನಿಗದಿಯಾಗಿದೆ.

ಬರುವ ತಿಂಗಳಿಂದ ಎರಡು ತಾತ್ಕಾಲಿಕ ಸರ್ಕಾರಗಳು

ದೆಹಲಿಯ ಇಂಪೀರಿಯಲ್ ಸೆಕ್ರೆಟೇರಿಯಟ್ಟಿನಲ್ಲಿ ಪ್ರಚಲಿತವಾಗಿರುವ ವಾರ್ತೆಯಂತೆ ಬರುವ ಜುಲೈ ೧ ನೇ ತಾ|| ನಿಂದ ಎರಡು ತಾತ್ಕಾಲಿಕ ಸರ್ಕಾರಗಳ ರಚನೆಯಾಗುವುದೆಂದು ತಿಳಿದು ಬಂದಿದೆ. ಈಗ ಕೇಂದ್ರ ಸರ್ಕಾರದಲ್ಲಿರುವ ಎಲ್ಲ ನೌಕರರೂ ಇನ್ನು ಮೂರು ದಿನಗಳಲ್ಲಿ ತಾವು ಹಿಂದೂಸ್ಥಾನ ಸರ್ಕಾರದಲ್ಲಿ ಕೆಲಸ ಮಾಡುವರೋ ಅಥವಾ ಪಾಕಿಸ್ತಾನ ಸರ್ಕಾರದಲ್ಲಿರುವರೋ ಎಂಬ ಬಗ್ಗೆ ತಿಳಿಸಬೇಕೆಂದು ಅವರಿಗೆ ಸೂಚಿಸಲಾಗುವುದು. ಹೊಸ ಮುಸ್ಲಿಂ ರಾಜ್ಯದಲ್ಲಿ ಕೆಲಸ ಮಾಡಲು ಸಾಕಾದಷ್ಟು ನೌಕರರು ಒಪ್ಪದಿದ್ದರೆ ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳಿಗೆ ಸೇರಿದ ನೌಕರರನ್ನು ಪಾಕಿಸ್ತಾನ ಸರ್ಕಾರಕ್ಕೆ ಒತ್ತಾಯದಿಂದ ಸೇರಿಸಲಾಗುವುದು.

ದ|| ಆಫ್ರಿಕದಲ್ಲಿ ನಾಜಿ ಚಟುವಟಿಕೆ

ನಾಜಿಗಳಿಂದ ನಡೆಯುತ್ತಿದ್ದ ಫ್ಯಾಸಿಸ್ಟ್ ಸಂಸ್ಥೆಯೊಂದು ದಕ್ಷಿಣ ಆಫ್ರಿಕದಲ್ಲಿ ಬಹಳ ಚಟುವಟಿಕೆಯಿಂದ ಕಾರ್ಯಾಚರಣೆ ನಡೆಸುತ್ತಿದೆಯೆಂದು ವರದಿಯಾಗಿದೆ. ನಾಜಿ ಚಳುವಳಿಯು ದಕ್ಷಿಣ ಆಫ್ರಿಕ, ಅರ್ಜೆಂಟೈನಾ ಮತ್ತು ಇನ್ನೂ ಅನೇಕ ಐರೋಪ್ಯ ರಾಷ್ಟ್ರಗಳಲ್ಲಿ ಜರುಗುತ್ತಿದೆಯೆಂದು ಹೇಳಲಾಗಿದೆ. ನಾಜಿ ಮುಖಂಡರ ಮೇಲ್ವಿಚಾರಣೆಯಲ್ಲಿ ಅನೇಕರನ್ನು ... ಕಾರ್ಯಾಚರಣೆಗಳನ್ನು ನಡೆಸುತ್ತಿರುವ ಸಹಕಾರು ಸರ್ಕಾರದಿಂದ ಸಿಗಿದ ಸಂಖ್ಯೆ ಪ್ರಮುಖ ಫ್ಯಾಸಿಸ್ಟ್ ಸಂಸ್ಥೆಗಳು ಈಗ ದಕ್ಷಿಣ ಆಫ್ರಿಕದಲ್ಲಿವೆಯೆಂದು ಗೊತ್ತಾಗಿದೆ.

ಸಂಸ್ಥಾನಗಳ ಕಾಗದ ಪತ್ರ ಅಗ್ನಿ ಜ್ವಾಲೆಗೆ

ಸಂಸ್ಥಾನಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಬೆಂಕಿಗೆ ಹಾಕಿ ಸುಡಲಾಗಿದೆ ... ಈ ಬಗ್ಗೆ ಸಾರ್ವಜನಿಕ ... ಪ್ರತಿಭಟನೆಯನ್ನು ಸೂಚಿಸಬೇಕೆಂದು ದೆಹಲಿಯ ವರದಿಯೊಂದು ತಿಳಿಸುತ್ತದೆ.

ಫ್ರೆಂಚ್ ಇಂಡಿಯಾಕ್ಕೆ ರಾಜ್ಯಾಂಗ ಸಭೆ

ಫ್ರೆಂಚ್ ಇಂಡಿಯದ ಭವಿಷ್ಯದ ಬಗ್ಗೆ ಪ್ರಜೆಗಳ ಅಭಿಪ್ರಾಯವನ್ನು ಪಡೆಯಲು ಅಲ್ಲಿ ರಾಜ್ಯಾಂಗ ಸಭೆಯನ್ನು ಏರ್ಪಡಿಸುವ ಸಂಭವವಿದೆ ಎಂದೂ, ಶೀಘ್ರದಲ್ಲಿಯೇ ಅಲ್ಲಿ ರಾಜಕೀಯ ಚುನಾವಣೆಗಳಾಗುವುವೆಂದೂ ಅಲ್ಲಿನ ಗೌರ್ನರರು ಪತ್ರಿಕಾ ಸಮ್ಮೇಳನವೊಂದರಲ್ಲಿ ತಿಳಿಸಿರುವರು.

೦... ವೈಜ್ಞಾನಿಕ ಸಮ್ಮೇಳನದ ಅಧ್ಯಕ್ಷರಾಗಿ ಸರ್ ಸಿ. ವಿ. ರಾಮನ್‌ರವರನ್ನು ... ಆಫ್ ಸೈನ್ಸಿನ ... ಚುನಾಯಿಸಿ ಗೌರವಿಸಿದ್ದಾರೆ.

ನಾಳೆ ದಿವಾನರ ಪತ್ರಿಕಾ ಸಮ್ಮೇಳನ

[ಸ್ವಂ. ಟೆ. ಫೋ.] ಬೆಂಗಳೂರು ೧೬.

... ದಿವಾನರು ನಾಳೆ ಬೆಳಿಗ್ಗೆ ೧೧-೩೦ ಗಂಟೆಗೆ ಪತ್ರಿಕಾ ಸಮ್ಮೇಳನವನ್ನು ಕರೆದಿದ್ದಾರೆ. ... ಭವಿಷ್ಯ ರಾಜ್ಯಾಂಗದ ... ವಿವರಿಸುವರೆಂದು ... ಈ ದಿನ ಅವರು ರಾಜಧಾನಿಗೆ ... ಹಿಂತಿರುಗಿದರು.

ಸಾಧ್ವಿ

ತಾ|| ೧೬-೬-೪೭ ಸೋಮವಾರ

ನಿಜವಾದರೆ ಸಂತೋಷ

ಮೈಸೂರು ಸಂಸ್ಥಾನವು ಪ್ರದೇಶಬಾಹುಳ್ಯ ರಾಜಕೀಯಗಳಂತಲ್ಲದೆ ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ನಿರ್ಧರಿಸಿರುವುದಾಗಿ ಪ್ರಕಟವಾಗಿರುವುದಲ್ಲದೆ ಇದಕ್ಕಾಗಿ ಮೈಸೂರಿನ ಪ್ರತಿನಿಧಿಗಳನ್ನು ಚುನಾಯಿಸಲು ಬರುವ ವಾರ ಶಾಸನ ಸಭೆಗಳ ಜಂಟಿ ಅಧಿವೇಶನವು ಜರುಗುವುದಾಗಿಯೂ ಸಹ ಅದೇ ವರದಿಯು ತಿಳಿಸುತ್ತದೆ. ಅಧಿಕಾರಯುತವಾಗಿ ಇನ್ನೂ ಯಾವ ಪ್ರಕಟಣೆಯೂ ಹೊರಬಿದ್ದಿಲ್ಲ. ಆದರೂ ಮೇಲ್ಕಂಡ ಸುದ್ದಿಯು ನಿಜವಾಗಲೆಂಬುದೇ ಮೈಸೂರಿನ ಹಿತೈಷಿಗಳೆಲ್ಲರ ಹಾರೈಕೆಯಾಗಿದೆ.

ಕಳೆದ ನವರಾತ್ರಿ ಸಮಯದಲ್ಲಿಯೇ ಮೈಸೂರು ಈ ವಿಚಾರದಲ್ಲಿ ನಿರ್ಧಾರವನ್ನು ಮಾಡಿ ಇದ ವರೆಗೆ ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳದಿದ್ದುದು ಒಂದು ಕೊರತೆಯೇ ಸರಿ. ಇತ್ತೀಚೆಗೆ ಮೈಸೂರಿನ ಘೋಷಣೆಯು ಆದಮೇಲಂತೂ ಇನ್ನೂ ಮೌನವಾಗಿ ಉಳಿಯುವುದು ಉಚಿತವಾದ ವರ್ತನೆಯಲ್ಲ. ಪ್ರಗತಿ ಪರವಾದ ಈ ಸಂಸ್ಥಾನದ ಪ್ರವರ್ತನೆಯ ಕಡೆಗೆ ಎಲ್ಲರ ದೃಷ್ಟಿಯೂ ಇರುತ್ತದೆ. ದಿವಾನರು ದೆಹಲಿಯಿಂದ ಬಂದ ಮೇಲೆ ಪ್ರಭುಗಳೊಡನೆ ಸಮಾಲೋಚನೆ ನಡೆಸಿ ಮೇಲ್ಕಂಡ ನಿರ್ಧಾರಕ್ಕೆ ಬಂದದ್ದರೆ ಅದು ಸಂತೋಷದ ಸಂಗತಿಯೇ ಸರಿ.

ತಿರುವಾಂಕೂರು ಮತ್ತು ಹೈದರಾಬಾದುಗಳು ಸ್ವತಂತ್ರವಾಗಿ ಉಳಿಯುವ ಘೋಷಣೆಯನ್ನು ಮಾಡಿ ಈಗಾಗಲೇ ವಿದೇಶ ಕೋಲಾಹಲಕ್ಕೆ ಅವಕಾಶ ಉಂಟುಮಾಡುತ್ತವೆ. ಸ್ವಾತಂತ್ರ್ಯವನ್ನು ಸಾರಿ ಹಿಂದಿನ ಸನದುಗಳನ್ನು ಹರಿದು ತಿರುವಾಂಕೂರಿನ ದಿವಾನರು ಪ್ರಜೆಗಳ ಮೇಲೆಯೇ ಲಕ್ಷ್ಯ ಕೊಡದೆ ನಿಲ್ಲಲು ಸಿದ್ಧರಾಗಿದ್ದಾರೆ. ಈಗಾಗಲೇ ಅಲ್ಲಿ ಪ್ರಜಾ ಮುಖಂಡರ ಬಂಧನ, ಸಾರ್ವಜನಿಕ ಸಭೆಗಳ ನಿಷೇಧ, ನಿರಪರಾಧಿಗಳ ಮೇಲೆ ಲಾಠಿ ಪ್ರಯೋಗ ಮುಂತಾದ ಅತ್ಯಾಚಾರಗಳು ಉದ್ರೇಕವಾಗಿವೆ. ಇನ್ನೂ ಯಾವ ಮೂರ್ತ ಅನರ್ಥ ಪರಂಪರೆಗಳು ಕಾದಿವೆಯೋ ತಿಳಿಯದು.

ಹೈದರಾಬಾದು ಸಂಸ್ಥಾನವು ಸ್ವತಂತ್ರ ಘೋಷಣೆಯನ್ನು ಮಾಡಿರುವುದೇ ಅಲ್ಲದೆ ನೆರೆಯ ಪ್ರದೇಶಗಳಾದ ಬೀರಾರ್, ಮದ್ರಾಸ್-ಮುಂಬಾಯಿ ಸ್ಥಳಗಳನ್ನು ಆಕ್ರಮಿಸಿಕೊಳ್ಳಲು ಸೈನ್ಯ ಸಿದ್ಧತೆಗಳನ್ನು ಸಹ ಮಾಡುತ್ತಿರುವುದಾಗಿ ವರದಿಗಳು ಬರುತ್ತಿವೆ. ಈ ಹಲವು ಸಂಸ್ಥಾನಗಳು ಸೈನ್ಯ ... ವನ್ನು ಗುಪ್ತವಾಗಿ ಮಾಡುತ್ತಿರುವಂತೆ ಕಂಡಿದೆ. ಈ ನಡವಳಿಕೆಗಳನ್ನು ಅಖಿಲ ಭಾರತ ಸಂಸ್ಥಾನ ಪ್ರಜಾ ಪರಿಷತ್ತಿನ ಸಮಿತಿಯು ತೀವ್ರವಾಗಿ ಖಂಡಿಸಿದೆ. ಸ್ವಾತಂತ್ರ್ಯವನ್ನು ಸಾರಲು ಸಂಸ್ಥಾನಗಳಿಗೆ ಅಧಿಕಾರವೇ ಇಲ್ಲವೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಹೇಳಿರುತ್ತದೆ. ಸ್ವಾತಂತ್ರ್ಯವನ್ನು ಘೋಷಿಸುವ ಸಂಸ್ಥಾನಗಳನ್ನು ವಿರೋಧಿಸಬೇಕೆಂದು ಕೇಂದ್ರ ಸರಕಾರಕ್ಕೆ ... ಬಂದಿವೆ

ವಾರ ಭವಿಷ್ಯ

ತಾ|| ೧೬-೬-೪೭ ರಿಂದ ೨೨-೬-೪೭ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ- ಆರೋಗ್ಯ ಸಾಧಾರಣ. ಧನಲಾಭ ಉತ್ತಮ, ಖರ್ಚು ಕಡಿಮೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರ ವರ್ಗದವರಿಂದ ಸನ್ಮಾನ, ವ್ಯಾಪಾರದಲ್ಲಿ ಅಧಿಕ ಲಾಭ, ತಾ|| ೧೭, ೧೮ ಚಿಂತೆ, ಪ್ರವಾಸ.

ವೃಷಭ- ಶಾರೀರಿಕ ಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಸಾಧಾರಣ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ, ಮಿತ್ರರಿಂದ ಸಹಾಯ, ಅಧಿಕಾರಿವರ್ಗದವರಿಂದ ಮನ್ನಣೆ, ಖರ್ಚು ಹೆಚ್ಚು ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೧೮, ೨೦ ಪ್ರವಾಸ, ಲಾಭ.

ಮಿಥುನ- ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಮಂಗಳ ಕಾರ್ಯಗಳಿಗಾಗಿ ಪ್ರವಾಸ ಮತ್ತು ಧನವ್ಯಯ, ಮಿತ್ರರಿಂದ ತಿರಸ್ಕಾರ, ಶತ್ರುಗಳಿಂದ ತೊಂದರೆ, ಬಂಧುಗಳ ಆಗಮನದಿಂದ ಹೆಚ್ಚು ಖರ್ಚು, ತಾ|| ೧೯, ೨೧ ಲಾಭ, ಪ್ರವಾಸ.

ಕಟಕ- ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಕಡಿಮೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಖರ್ಚು, ತಾ|| ೧೮, ೨೨ ನಷ್ಟ, ಅಪಘಾತ.

ಸಿಂಹ- ಆರೋಗ್ಯ ಸಾಧಾರಣ; ಮಾನಸಿಕ ಚಿಂತೆ ಕಡಿಮೆ, ಧನಲಾಭ ಸಾಧಾರಣ ಖರ್ಚು ಹೆಚ್ಚು, ಮಂಗಳಕಾರ್ಯಗಳಿಗಾಗಿಯೂ, ಧಾರ್ಮಿಕ ಕಾರ್ಯಗಳಿಗಾಗಿಯೂ ಖರ್ಚು ಹೆಚ್ಚು, ಪ್ರವಾಸದಿಂದ ನಷ್ಟ, ಅಧಿಕಾರಿವರ್ಗದವರಿಂದ ಸನ್ಮಾನ, ತಾ|| ೨೦, ೨೧ ಲಾಭ, ಮಿತ್ರ ದರ್ಶನ

ಕನ್ಯಾ- ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಖರ್ಚು ಅಧಿಕ, ಧನಲಾಭ ಕಡಿಮೆ, ಉದ್ಯೋಗ ವ್ಯವಹಾರಗಳಲ್ಲಿ ನಷ್ಟ, ಅಧಿಕಾರ ವರ್ಗದವರಿಂದ ತಿರಸ್ಕಾರ, ಮಂಗಳ ಕಾರ್ಯಗಳಿಗಾಗಿ ವಿಶೇಷ ಖರ್ಚು, ಶತ್ರುಗಳಿಂದ ತೊಂದರೆ, ತಾ|| ೧೯, ೨೦, ೨೨ ವಿಶೇಷ ಖರ್ಚು.

ತುಲಾ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಪ್ರವಾಸದಿಂದ ಲಾಭ, ಮಿತ್ರ ಸನ್ಮಾನ, ಬಂಧುಗಳ ಆಗಮನದಿಂದ ಸಂತೋಷ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ವ್ಯಾಪಾರದಲ್ಲಿ ಮಿತ್ರರಿಂದ ಸಹಾಯ, ತಾ|| ೨೦, ೨೨ ಚಿಂತೆ, ನಷ್ಟ

ವೃಶ್ಚಿಕ- ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ, ಉದ್ಯೋಗದಲ್ಲಿ ಮೇಲ್ಪಟ್ಟವರಿಂದ ಮನ್ನಣೆ, ತಾ|| ೧೯, ೨೧ ಲಾಭ, ಶಾಂತಿ.

ಧನಸ್ಸು- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ವರಮಾನಕ್ಕಿಂತ ಖರ್ಚು ಅಧಿಕ, ಕುಟುಂಬದಲ್ಲಿ ಅನಾರೋಗ್ಯ, ಅಧಿಕಾರಿ ವರ್ಗದವರಿಂದ ತಿರಸ್ಕಾರ, ಮಿತ್ರರಿಂದ ಅಪಮಾನ, ತಾ|| ೧೮, ೨೨ ಲಾಭ, ಶಾಂತಿ.

ಮಕರ- ಆರೋಗ್ಯ ಚನ್ನಾಗಿರುತ್ತದೆ, ವರಮಾನವು ಉತ್ತಮ, ಖರ್ಚು ಕಡಿಮೆ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಮತ್ತು ಖರ್ಚು. ಮಂಗಳ ಕಾರ್ಯಗಳಿಗಾಗಿ ವಿಶೇಷ ಧನವ್ಯಯ, ಪ್ರವಾಸದಿಂದ ಲಾಭ, ಮಿತ್ರರಿಂದ ಸನ್ಮಾನ ತಾ|| ೧೮, ೨೧ ಚಿಂತೆ ನಷ್ಟ.

ಕುಂಭ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಕಡಿಮೆ, ವ್ಯವಹಾರಗಳಲ್ಲಿ ಪ್ರಗತಿ, ಮಂಗಳಕಾರ್ಯಗಳಿಗಾಗಿ ಖರ್ಚು, ಮಿತ್ರ ಭೇಟಿಗಾಗಿ ಪ್ರವಾಸ, ಶತ್ರುಗಳಿಂದ ಅಪಮಾನ, ತಾ|| ೧೯, ೨೧, ಸಾಧಾರಣ

ಮೀನ—ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ, ಅಧಿಕಾರ ವರ್ಗದವರಿಂದ ತಿರಸ್ಕಾರ, ಮಿತ್ರರಿಂದ ಅಪಮಾನ, ತಾ|| ೨೦, ೨೧ ಲಾಭ, ಶಾಂತಿ

ಭಾರತದ ಸಮಸ್ಯೆಯು ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳೆಂಬ ಎರಡು ವಿಭಾಗಗಳಲ್ಲಿಯೇ ಪರ್ಯವಸಾನಗೊಳ್ಳದೆ ಸ್ವತಂತ್ರ ಸಂಸ್ಥಾನ ಮತ್ತು ಸಂಯುಕ್ತ ಭಾರತದೊಡನೆ ಸಮ್ಮಿಳಿತವಾದ ಸಂಸ್ಥಾನಗಳೆಂಬ ಭೇದಗಳಿಗೂ ಎಡೆ ಕೊಟ್ಟಿರುವುದು ಅತ್ಯಂತ ವಿಷಾದಕರ. ಇದು ಮುಂದೆ ವಿಶೇಷವಾದ ತೊಡಕುಗಳಿಗೆ ಕಾರಣವಾಗುವುದೆಂದು ಊಹಿಸಬಹುದು.

ಮೈಸೂರು ಸಂಸ್ಥಾನವು ಇಂತಹ ಗೊಂದಲದಲ್ಲಿ ಸಿಲುಕಿ ಬೇರೆ ಪ್ರಗತಿ ಪರವಾದ ಇತರ ಸಂಸ್ಥಾನಗಳು ಪ್ರಜಾಪ್ರಭುತ್ವ ಮಾರ್ಗದಲ್ಲಿ ಹಿಡಿದಿರುವ ಹಾದಿಯನ್ನೇ ಅನುಸರಿಸಿ ಸಕಲ ಭಾರತೀಯರ ಮೆಚ್ಚುಗೆಗೂ ಪಾತ್ರವಾಗಲೆಂದು ಹಾರೈಸೋಣ

ವುಡ್‌ಲ್ಯಾಂಡ್ಸ್

15-6-47 ರಿಂದ

ಚಿಕ್ಕರಿದ ೭ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

-: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವರು

ಹರಾಜು ನೋಟೀಸು

ರನ್ನಿಂಗ್ ಕಂಡಿಷನ್ನಿನಲ್ಲಿರುವ ಹಳೆಯ ಮೋಟಾರುಕಾರುಗಳು, ಬಸ್ಸುಗಳು ಮತ್ತು ಲಾರಿಗಳು 1947 ನೇ ಜೂನ್ 21 ಮತ್ತು 23 ನೇ ತಾರೀಖುಗಳಲ್ಲಿ ಬೆಳಗ್ಗೆ 9 ಘಂಟೆಯಿಂದ 1 ಘಂಟೆ ವರೆಗೆ ಮೈಸೂರು ಪ್ಯಾಲೇಸ್ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ

ವಿವರಗಳಿಗಾಗಿ, 1947 ನೇ ಜೂನ್ 7 ಮತ್ತು 14 ನೇ ತಾರೀಖುಗಳ ಕಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರಕಟಣೆಯನ್ನು ದಯವಿಟ್ಟು ನೋಡಿ

ಸೂಪರಿಂಟೆಂಡೆಂಟ್,
ಪ್ಯಾಲೇಸ್ ಗ್ಯಾರೇಜ್

ಅಪೇರಾಟಾಕೀಸ್, ಮೈಸೂರು

೧೪-೬-೪೭ ರಿಂದ ೯ ನೇ ವಾರ

ರಾಜಕುಮಾರಿ

Edited printed and published by A. R. Nagarajan at the Sadhvi Press D Subbaiah Road Mysore

BANGALORE RACES 1947

ಬೆಂಗಳೂರು ರೇಸಸ್ 1947

ಜೂನ್ 14, 18, 21, ಮತ್ತು 25 ರಲ್ಲಿ

ಟಾಟ್ ಮೇಕರ್ಸ್ ಮತ್ತು ಟೋಟಲೈಸೇಟರ್ಸ್

ರೂ. 2 ಸ್ಟೇಟ್ ಮತ್ತು ರೂ 5 ಟ್ರಿಬಲ್ ಕೂಪನ್

1st ಟೋಟ್ ರೂ 10. IInd ಟೋಟ್ ರೂ. 5

ಜೂನ್ 18 ಮಹಾರಾಜ ಗೋಲ್ಡ್ ಕಪ್ ಡೇ

—: ಪ್ರವೇಶ :—

ಮೊದಲನೇ ತರಗತಿ .. ಪುರುಷರು ರೂ 6 ಒಂದು ದಿನಕ್ಕೆ

„ „ . ಸ್ತ್ರೀಯರು ರೂ. 1 „

೨ ನೇ ತರಗತಿ ಪುರುಷರು ಅಥವಾ ಸ್ತ್ರೀಯರು ರೂ. 2 „

ರಾಜಕಮಲ್,

ತಾ|| ೧೩-೬-೪೭ ರಿಂದ

8 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ

(ತೆಲುಗು)

ಸ್ಪೆಷಲ್ ಪ್ರೋಗ್ರಾಂ

೧೩—೬—೪೭ ರಿಂದ

7 ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ

ಸಿಸ್ಟರ್ ಅಥವಾ ಸಹೋದರಿ

(ಹಿಂದಿ)

—: ಪಾತ್ರ :—

ನಳಿನಿ ಜಯವಂತ್, ಶೇಕ್‌ಮುಖ್ತಾರ್ ಹರೀಶ್.

ಹೋಟೆಲ್ ಕೆಲಸಗಾರರು ಬೇಕಾಗಿದೆ

ಚಾಮರಾಜನಗರದಲ್ಲಿ ನೂತನವಾಗಿ ತೆರೆಯಲಾಗಿರುವ ಹೋಟೆಲಿಗೆ ತಿಂಡಿ ಮಾಡುವವರೂ, ಸರ್ವರುಗಳೂ ಮತ್ತು ಕ್ಲೀನರುಗಳೂ ಬೇಕಾಗಿದ್ದಾರೆ. ಅಪೇಕ್ಷಿಸುವವರು

X C/o ಸಾಧ್ವಿ

ಈ ವಿಳಾಸದಲ್ಲಿ ಪತ್ರ ಮುಖೇನ ಅಥವಾ ನೇರವಾಗಿ ಬಂದು ವಿಚಾರಿಸಬಹುದು

ಸಾಧ್ವಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಫೋ. ನಂ. ೨೨೨ || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಮಂಗಳವಾರ ೧೨—೮—೪೭ [ಸಂಚಿಕೆ ೨೬೫

ರಾಜ್ಯಾಂಗ ಸಭೆಗೆ ಸೇರಲು ಮೈಸೂರು ತೀರ್ಮಾನಿಸಿದೆ

ಸ್ವಂ ಸು. ಪ್ರೋ] ಬೆಂಗಳೂರು ೧೧

ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಯಲ್ಲಿ ಸೇರಲು ನಿರ್ಧರಿಸಿರುವುದೆಂದು ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರವರು ಈ ದಿನ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ದಿವಾನರ ಪತ್ರಿಕಾ ಸಮ್ಮೇಳನವು ಸುಮಾರು ಮುಕ್ಕಾಲು ಗಂಟೆ ಕಾಲ ನಡೆಯಿತು. ದೇಶದ ರಾಜಕೀಯ ಪರಿಸ್ಥಿತಿ, ಸಂಧಾನ ಮತ್ತು ತೀರ್ಮಾನದ ಸಾಧಕಬಾಧಕಗಳೇ ಮುಂತಾದ ವಿಷಯಗಳನ್ನು ದಿವಾನರು ವಿವರಿಸಿದರು. ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಸ್ವಂತ ಇಚ್ಛೆಯಿಂದ ಸೇರುವುವೆಂದೂ, ಯಾವ ಬಲಾತ್ಕಾರವೂ ಇರುವುದಿಲ್ಲವೆಂದೂ ಅವರು ಹೇಳಿದರು. ಕೇಂದ್ರ ಯೂನಿಯನ್ನಿಗೆ ವಹಿಸುವ ಅಂಶಗಳ ವಿಷಯದಲ್ಲಿಯೂ ಸಹ ಸಂಸ್ಥಾನಗಳಿಗೆ ಬಹಳ ಮಟ್ಟಿನ ಸ್ವಾತಂತ್ರ್ಯವಿರುವುದೆಂದು ಹೇಳಿದರು. ಎಲ್ಲ ಅಂಶಗಳನ್ನೂ ಪರಿಶೀಲಿಸಿ ಮೈಸೂರು ಸಂಸ್ಥಾನದಿಂದ ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ಒಂದು ಮಂಡಲವನ್ನು ಕಳುಹಿಸುವಂತೆ ಶ್ರೀಮನ್ಮಹಾರಾಜರವರು ತೀರ್ಮಾನಿಸಿರುತ್ತಾರೆಂದೂ ಸಹ ದಿವಾನರು ತಿಳಿಸಿದರು.

ಮೈಸೂರಿನಿಂದ ನಿಯೋಗದಲ್ಲಿ ಒಟ್ಟು ಏಳು ಪ್ರತಿನಿಧಿಗಳು ದಿವಾನರ ನೇತೃತ್ವದಲ್ಲಿ ಹೋಗುವರು. ಜುಲೈ ೧೪ ನೇ ತಾ|| ಸೇರಲಿರುವ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗುವುದು. ವಿವಿಧ ಪಕ್ಷಗಳ ನಾಯಕರ ಸಲಹೆ ತೆಗೆದುಕೊಂಡು ಪ್ರತಿನಿಧಿಗಳನ್ನು ಆರಿಸಲಾಗುವುದು. ಮೂರು ಜನರನ್ನು ನಾಮಕರಣ ಮಾಡಿ ಮಿಕ್ಕ ನಾಲ್ಕು ಜನರನ್ನು ಚುನಾಯಿಸುವುದು ತಮ್ಮ ಸ್ವಂತ ಅಭಿಪ್ರಾಯವೆಂದು ದಿವಾನರು ತಿಳಿಸಿದರು. ಈ ಬಗ್ಗೆ ಬೇಗನೆ ನಿರ್ಧಾರಕ್ಕೆ ಬರಲಾಗುವುದು. ಮೈಸೂರಿನ ಪ್ರತಿನಿಧಿಗಳೆಲ್ಲರೂ ಏಕಕಂಠದಿಂದ ತಮ್ಮ ಅಭಿಪ್ರಾಯವನ್ನು ಸೂಚಿಸುವಂತಾಗಲೆಂದು ದಿವಾನರು ಅಭಿಪ್ರಾಯಪಟ್ಟರು.

ಮೈಸೂರಿನ ಪ್ರಜೆಗಳ ಆಶೋತ್ತರವನ್ನು ಮನ್ನಿಸಿ ಪ್ರಭುಗಳು ಮೆಚ್ಚುವಂತೆ ನಿರ್ಧಾರ ಮಾಡಿರುವುದಕ್ಕಾಗಿ ನಾವು ಅವರಿಗೆ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

— ಸಂಪಾದಕ

ಆಗಸ್ಟ್ ೧೫ ರಿಂದ ಪಾಕಿಸ್ತಾನ್ ಸರ್ಕಾರ

ಪಾಕಿಸ್ತಾನ್ ಸರ್ಕಾರವು ಬರುವ ಆಗಸ್ಟ್ ೧೫ ನೇ ತಾ|| ನಿಂದ ಕೆಲಸಮಾಡುವುದೆಂದು ತಿಳಿದು ಬಂದಿದೆ. ಆ ವೇಳೆಗೆ ಪಾಕಿಸ್ತಾನ್ ಸೆಕ್ರೆಟೇರಿಯಟ್ಟು ಸ್ಥಾಪಿತವಾಗುವುದು. ಪಾಕಿಸ್ತಾನ್ ರಾಜ್ಯಾಂಗ ಸಭೆಯು ಮೊಟ್ಟ ಮೊದಲಲ್ಲಿ ಮೊದಲನೇ ಬಾರಿ ಕರಾಚಿಯಲ್ಲೇ ಸೇರುವುದಾಗಿ ಹೇಳಲಾಗಿದೆ.

ಢಾಕ್ಕಾ ಪೂರ್ವ ಬಂಗಾಳದ ರಾಜಧಾನಿ

ಬಂಗಾಳದ ವಿಭಜನೆಯಾದ ಮೇಲೆ ಮುಸ್ಲಿಂ ಬಹು ಸಂಖ್ಯಾಕ ಪ್ರದೇಶವಾದ ಪೂರ್ವ ಬಂಗಾಳಕ್ಕೆ ಢಾಕ್ಕಾ ನಗರವು ರಾಜಧಾನಿಯಾಗುವುದೆಂದು ಹೇಳಲಾಗಿದೆ. ಇದು ಕಲ್ಕತ್ತಾ ನಗರಕ್ಕೆ ೩೦೦ ಮೈಲಿ ದೂರದಲ್ಲಿದೆ. ೧೯೦೫ ರಿಂದ ೧೯೧೧ ರ ವರೆಗೂ ಇದು ಆ ಪ್ರಾಂತದ ರಾಜಧಾನಿಯಾಗಿದ್ದಿತು. ಢಾಕ್ಕಾ ನಗರ ಮತ್ತು ಅದರ ಸುತ್ತಮುತ್ತಲಿನ ೨೦ ಮೈಲಿ ಪ್ರದೇಶವನ್ನು ವಶಪಡಿಸಿಕೊಂಡು ಅಲ್ಲಿ ನೂತನ ರಾಜಧಾನಿಯನ್ನು ನಿರ್ಮಿಸಲು ಏರ್ಪಾಡುಗಳು ನಡೆಯುತ್ತಿವೆ.

ಕಾಶ್ಮೀರದಲ್ಲಿ ಸ್ತ್ರೀ ಪೊಲೀಸರು

ಕಾಶ್ಮೀರ ಸರ್ಕಾರವು ಸದ್ಯದಲ್ಲಿಯೇ ಸ್ತ್ರೀ ಪೊಲೀಸರ ದಳವನ್ನು ನಿರ್ಮಿಸುವುದೆಂದೂ, ಅದಕ್ಕೆ ಪದವೀಧರೆಯರನ್ನು ಮಾತ್ರ ಸೇರಿಸಿಕೊಳ್ಳಲಾಗುವುದೆಂದೂ ವರದಿಯಾಗಿದೆ. ಶ್ರೀನಗರದ ಮೊಹಲ್ಲೆಗಳಲ್ಲಿಯೂ ಗುಪ್ತ ಪೊಲೀಸ್ ದಳಗಳಿರುವುವೆಂದೂ ಅವು ಆಯಾ ಮೊಹಲ್ಲೆಯ ನಿವಾಸಿಗಳ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸುವುವೆಂದೂ ತಿಳಿದು ಬಂದಿದೆ.

ಮದರಾಸ್ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ

ಪ್ರತಿಯೊಂದು ಹಳ್ಳಿಯಲ್ಲಿಯೂ, ಎಲ್ಲ ವಯಸ್ಕರಿಂದ ಚುನಾಯಿಸಲ್ಪಟ್ಟ ಗ್ರಾಮ ಪಂಚಾಯತಿ ಬೋರ್ಡುಗಳನ್ನು ಸ್ಥಾಪಿಸಲು ಮದ್ರಾಸ್ ಸರ್ಕಾರದವರು ಆಲೋಚಿಸುವರು. ಈ ಪಂಚಾಯಿತಿಗಳಿಗೆ ಸಹಾಯ ಮಾಡಲು ಈಗಿರುವ ಜಿಲ್ಲಾ ಬೋರ್ಡುಗಳನ್ನು ವಜಾಮಾಡಿ ಅವುಗಳ ಜಾಗದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಸಲಹಾ ಸಮಿತಿಗಳನ್ನು ರಚಿಸಲಾಗುವುದು. ಸರ್ಕಾರದ ಪರವಾಗಿ ಭೂ ಕಂದಾಯವನ್ನು ವಸೂಲು ಮಾಡುವ ಅಧಿಕಾರವನ್ನು ಪಂಚಾಯಿತಿ ಬೋರ್ಡಿಗೆ ಕೊಡಲಾಗುವುದು. ಆಯಾ ಗ್ರಾಮಗಳ ಭೂ ಕಂದಾಯದಲ್ಲಿ ನಾಲ್ಕು ಭಾಗವನ್ನು ಪಂಚಾಯಿತಿಗಳಿಗೆ ಕೊಡಲಾಗುವುದು.

ಕೊಡಗಿನಲ್ಲಿ ಕಾಗದದ ಮತ್ತು ಗಂಧದೆಣ್ಣೆ ಕಾರ್ಖಾನೆ

೨|| ಕೋಟಿ ರೂ. ಬಂಡವಾಳದಿಂದ ಕೊಡಗಿನ ಫ್ರೇಜರ್ ಪೇಟೆಯಲ್ಲಿ ಒಂದು ಜಾಯಿಂಟ್ ಸ್ಟಾಕ್ ಕಂಪನಿಯನ್ನು ತೆರೆದು ಅಲ್ಲಿ ಕಾಗದ ಮತ್ತು ಗಂಧದೆಣ್ಣೆ ಕಾರ್ಖಾನೆಯನ್ನು ಸ್ಥಾಪಿಸಲು ಬೆಂಗಳೂರಿನ ಜಯಮಹಲ್ ಮತ್ತು ಕಂಪೆನಿಯವರಿಗೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿರುತ್ತದೆ. ಗಂಧದೆಣ್ಣೆಯ ಕಾರ್ಖಾನೆಯನ್ನು ಸದ್ಯದಲ್ಲೇ ತೆರೆಯಲು ಸಿದ್ಧತೆಗಳಾಗುತ್ತಿವೆ.

ಲಾಹೋರ್ ಪಶ್ಚಿಮ ಪಂಜಾಬಿನ ರಾಜಧಾನಿ

ಪಂಜಾಬ್ ಪ್ರಾಂತ ವಿಭಜನೆಯಾದ ನಂತರ ಲಾಹೋರ್ ಪಶ್ಚಿಮ ಪಂಜಾಬಿನ ರಾಜಧಾನಿಯಾಗುವುದು. ಹಿಂದೂ ಪ್ರದೇಶವಾದ ಪೂರ್ವ ಪಂಜಾಬಿಗೆ ಅಂಬಾಲವು ರಾಜಧಾನಿಯಾಗುವುದು. ಅಲ್ಲಿ ಸರಿಯಾದ ಏರ್ಪಾಡುಗಳಾಗುವವರೆಗೆ ಸಿಮ್ಲಾವೇ ರಾಜಧಾನಿಯಾಗಿರುವುದು.

ಛತ್ರಿ ರೇಷನ್!

ಮಳೆ ಗಾಲವು ಪ್ರಾರಂಭವಾಗುವುದರಿಂದ ಎಲ್ಲರಿಗೂ ಸಮವಾಗಿ ಸಿಗುವಂತೆ ಛತ್ರಿಗಳನ್ನು ರೇಷನ್ ಮೂಲಕ ಹಂಚಿಕೆ ಮಾಡಬೇಕೆಂದು ಬೆಳಗಾವಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆಯೊಂದನ್ನು ಹೊರಡಿಸಿರುವರು. ಇದರಂತೆ ನಗರವಾಸಿಗಳಿಗೆ ರೇಷನ್ ಕಾರ್ಡು ಒಂದಕ್ಕೆ ಎರಡರಂತೆಯೂ, ಗ್ರಾಮ ಪ್ರದೇಶದ ಜನರಿಗೆ ರೇಷನ್ ಕಾರ್ಡು ಒಂದಕ್ಕೆ ಒಂದರಂತೆಯೂ ಛತ್ರಿಗಳು ಸಿಗುವುವೆಂದು ಸೂಚಿಸಲಾಗಿದೆ.

ಬ್ರಿಟಿಷರು ಕಾಶ್ಮೀರದಲ್ಲಿ ನೆಲೆಸುವರೇ?

ಚೀಣದ ಸಿಂಕಿಯಾಂಗ್ ಪ್ರದೇಶದಲ್ಲಿ ರಷ್ಯದವರ ಸಹಾಯದಿಂದ ಹೊರ ಮಂಗೋಲಿಯದವರು ನಡೆಸುತ್ತಿರುವ ಧಾಳಿಯ ನೆಪದ ಮೇಲೆ ಬ್ರಿಟಿಷರು ಕಾಶ್ಮೀರದಲ್ಲಿ ನೆಲಸುವ ಆಲೋಚನೆ ಮಾಡಬಹುದೆಂದು ಲಂಡನ್ನಿನ ಚೀಣ ಆವರಣಗಳಲ್ಲಿ ಹೇಳಲಾಗುತ್ತಿದೆ. ಇದಕ್ಕಾಗಿಯೇ ವೈಸರಾಯರು ಕಾಶ್ಮೀರಕ್ಕೆ ಭೇಟಿ ಕೊಡಲಿರುವರೆಂದೂ ಹೇಳಲಾಗಿದೆ.

ಸಂಸ್ಥಾನಗಳ ಸ್ವಾತಂತ್ರ್ಯವನ್ನಂಗೀಕರಿಸುವುದು ವೈರಸ್ಯ

ಭಾರತದ ಯಾವ ಸಂಸ್ಥಾನವೇ ಆಗಲಿ ಸ್ವತಂತ್ರವೆಂದು ಘೋಷಿಸುವುದನ್ನು ನಾವು ಅಂಗೀಕರಿಸುವುದಿಲ್ಲವೆಂದೂ, ಹೊರಗಿನ ಯಾವ ರಾಷ್ಟ್ರವಾದರೂ ಈ ಸಂಸ್ಥಾನಗಳ ಸ್ವಾತಂತ್ರ್ಯವನ್ನು ಅಂಗೀಕರಿಸಿದರೆ ಅಂತಹ ರಾಷ್ಟ್ರಗಳ ನಡವಳಿಕೆಯು ಶತ್ರು ಪರವಾಗಿಯೇ ಆಗುವುದೆಂದೂ ಪಂಡಿತ ನೆಹರೂರವರು ಹೇಳಿರುವರು.

ಜಿಲ್ಲಾ ಬೋರ್ಡು ಅಧ್ಯಕ್ಷರು

ಮಂಡ್ಯದ ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ನಿನ್ನೆ ನಡೆದು ಸ್ವತಂತ್ರ ಸದಸ್ಯರಾದ ಶ್ರೀ ಎಸ್ ಸಿ ಮಲ್ಲಯ್ಯನವರು ೧೫ ಓಟುಗಳನ್ನು ಪಡೆದು ಜಯಶಾಲಿಗಳಾಗಿರುವರು. ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ವೀರಣ್ಣಗೌಡರಿಗೆ ೧೦ ಓಟುಗಳು ಮಾತ್ರ ಬಂದುವು.

ಚಿತ್ರದುರ್ಗದಲ್ಲಿ ಕಾಂಗ್ರೆಸ್ ಉಮೇದುವಾರರಾದ ಶ್ರೀ ಕೆ ಕೆಂಚಪ್ಪನವರು ಜಯಶಾಲಿಗಳಾಗಿರುವರು. ತುಮಕೂರು, ಕೋಲಾರ ಮತ್ತು ಶಿವಮೊಗ್ಗಗಳಲ್ಲಿ ಕಾಂಗ್ರೆಸ್ ಉಮೇದುವಾರರು ಜಯ ಹೊಂದಿರುವುದಾಗಿ ತಿಳಿದು ಬಂದಿದೆ. ಹಾಸನದ ಜಿಲ್ಲಾ ಬೋರ್ಡು ಚುನಾವಣೆ ಬಗ್ಗೆ ತಕರಾರು ಇರುವುದರಿಂದ ಅಲ್ಲಿ ಅಧ್ಯಕ್ಷರ ಚುನಾವಣೆಯು ನಡೆಯದಂತೆ ತಡೆಯಲಾಗಿದೆ.

ವಿಶ್ವಕರ್ಣಾಟಕ

ಕೆಲವು ದಿನಗಳಿಂದ ನಿಂತುಹೋಗಿದ್ದ ವಿಶ್ವಕರ್ಣಾಟಕ ದಿನಪತ್ರಿಕೆಯು ಶ್ರೀ ಎಸ್. ಎಸ್. ವೆಂಕಟಾಚಾರ್ಯರ ಸಂಪಾದಕತ್ವದಲ್ಲಿ ಮತ್ತೆ ಬೆಳಗಿನ ಪತ್ರಿಕೆಯಾಗಿ ನಿನ್ನೆಯಿಂದ ಪ್ರಕಟವಾಗುತ್ತಿದೆ. ಶ್ರೀ ವೆಂಕಟಾಚಾರ್ಯರು ಮೊದಲು ವಿಶ್ವಕರ್ಣಾಟಕದಲ್ಲಿಯೇ ಸೇವೆಮಾಡುತ್ತಿದ್ದರು. ಅವರು ಇತ್ತೀಚೆಗೆ ದೇಶಬಂಧು ಪತ್ರಿಕೆಯ ಸಂಪಾದಕರಾಗಿದ್ದರು. ವಿಶ್ವಕರ್ಣಾಟಕವು ಕನ್ನಡ ನಾಡು ನುಡಿಯ ಸೇವೆಯನ್ನು ಹಿಂದಿನ ಉನ್ನತ ಮಟ್ಟದಲ್ಲಿಯೇ ಮುಂದುವರಿಸಲೆಂದು ಹಾರೈಸುತ್ತೇವೆ.

ಮೈಸೂರು ಪೋಲೀಸಿನವನಿಗೆ ಡರ್ಬಿ ಲಾಟರಿಯಲ್ಲಿ ಲಕ್ಷರೂ

ಮೈಸೂರು ಪೋಲೀಸ್ ಖಾತೆಯಲ್ಲಿ ಹೆಡ್ ಕಾನ್ಸ್ಟೇಬಲ್ಲಾಗಿ ಕೆಲಸಮಾಡುತ್ತಿರುವ ೪೫ ವರ್ಷ ವಯಸ್ಸಿನ ಸರ್ ಎಲ್ ಟಾನರ್ ಎಂಬುವರಿಗೆ ಡರ್ಬಿ ಲಾಟರಿಯಲ್ಲಿ ೧ ಲಕ್ಷ ೧೪ ಸಾವಿರ ರೂ ಬಂದಿದೆ. ಟಿಕೆಟ್ಟನ್ನು ತಮ್ಮ ಹೆಂಡತಿಯ ಹೆಸರಿನಲ್ಲಿ ಪಡೆದಿದ್ದು ಆಕೆಯು ಮೃತಳಾಗಿರುವುದು ಅವರಿಗೆ ಬಹಳ ಪರಿತಾಪವನ್ನುಂಟುಮಾಡಿದೆ.

ಇದು ಪಾಕಿಸ್ಥಾನಕ್ಕೆ ದಾರಿಯೇ?

ಕೋಮುವಾರು ಗಲಭೆಗಳಲ್ಲಿ ತಮ್ಮ ಮಾನ ಸಂರಕ್ಷಣೆಗಾಗಿ ಸ್ತ್ರೀಯರು ತಮ್ಮ ಮಕ್ಕಳೊಡನೆ ಬಾವಿಯಲ್ಲಿ ಬಿದ್ದು (೧೦೭ ಜನ) ಮರಣ ಹೊಂದಿರುವುದನ್ನು ತಾವು ಸ್ವತಃ ಪರಿಶೀಲಿಸಿದುದಾಗಿ ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಯವರು ಎ. ಐ. ಸಿ. ಸಿ. ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಒಂದು ದೇವಾಲಯದ ಬಳಿ ಇದೇ ಕಾರಣದ ಮೇಲೆ ೫೦ ಜನ ಹೆಂಗಸರನ್ನು ಅವರ ಗಂಡಂದಿರೇ ಕತ್ತರಿಸಿ ಹಾಕಿದ್ದರು. ಪುಂಡುಗಾರರ ಗುಂಪು ೩೦೭ ಜನ ಹೆಂಗಸರು ಮಕ್ಕಳನ್ನು ಅಟ್ಟಿಸಿಕೊಂಡು ಹೋಗಿ ಒಂದು ಮನೆಯಲ್ಲಿ ತುಂಬಿ ಅವರನ್ನು ಜೀವಸಹಿತ ಸುಟ್ಟರೆಂದೂ ಆ ಮೂಳೆಗಳನ್ನು ತಾವು ನೋಡಿದರೆಂದೂ ಆಚಾರ್ಯರು ತಿಳಿಸಿದರು.

ಒಬ್ಬ ತನ್ನ ಗಂಡನು ಮತಾಂತರ ಹೊಂದಿ ಮರುಮದುವೆಯಾಗಿ ಜಾವಳ್ಳಿದ ಕೊಲೆ ಮಾಡಿ ಅನಂತರ ತನ್ನನ್ನು ಪರಿಹರಿಸಿದನೆಂದೂ, ಅದರಿಂದ ತನ್ನನ್ನು ಕೊಲೆ ಮಾಡಬಹುದೆಂದು ಪೋಲೀಸರ ಸಹಾಯ ಪಡೆದು ತನ್ನ ಸ್ವಗ್ರಾಮಕ್ಕೆ ಲಾಹೋರಿನಿಂದ ಪಲಾಯನ ಮಾಡಿ ರಕ್ಷಣೆಯನ್ನು ಪ್ರಾರ್ಥಿಸಿರುವಳು.

ಸಾಧ್ವಿ

ತಾ॥ ೧೭-೬-೪೭ ಮಂಗಳವಾರ

ರಾಜರುಗಳನ್ನು ಬಿಟ್ಟು ಪ್ರಜೆಗಳೊಡನೆ ಸಂಬಂಧ

ಹಲವು ಸಂಸ್ಥಾನಗಳು ಭಾರತದ ಯೂನಿಯನ್ನಿನಲ್ಲಿ ಸೇರುವುದಿಲ್ಲವೆಂದೂ, ಸ್ವತಂತ್ರವಾಗಿರುವುದಾಗಿಯೂ ಘೋಷಿಸಿರುವುದರಿಂದ ಅನೇಕ ತೊಡಕುಗಳು ಉದ್ಭವಿಸಿರುತ್ತವೆ. ಇಂತಹ ರಾಜರುಗಳ ತೀರ್ಮಾನವು ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾಗಿದೆಯೆಂದೂ, ಅದನ್ನು ಅಂಗೀಕರಿಸಬೇಕಾಗವುದಿಲ್ಲವೆಂದೂ ಹೇಳಲಾಗುತ್ತಿದೆ. ರಾಜ್ಯಾಂಗ ಸಭೆಯಲ್ಲಿ ರಾಜರುಗಳು ಸೇರಲು ಒಪ್ಪದಿದ್ದರೆ ಅವರ ಪ್ರಜೆಗಳೊಡನೆಯೇ ನೇರವಾದ ಸಂಬಂಧವನ್ನು ಬೆಳೆಸಿ, ಅವರ ಪ್ರತಿನಿಧಿಗಳನ್ನೇ ರಾಜ್ಯಾಂಗ ಸಭೆಗೆ ತೆಗೆದುಕೊಳ್ಳಬೇಕೆಂಬ ಸೂಚನೆಗಳೂ ಬರುತ್ತಿವೆ.

ಇಂತಹ ಪರಿಸ್ಥಿತಿಯು ರಾಜರುಗಳಿಗೆ ಸ್ವಲ್ಪವೂ ಹಿತಕರವಲ್ಲ. ದುರ್ಭಿಪ್ರಾಯಕ್ಕೆ ವಿರುದ್ಧವಾಗಿ ರಾಜರುಗಳು ಪ್ರವರ್ತಿಸುವುದೇ ಒಂದು ದೌರ್ಭಾಗ್ಯ. ಅವರು ಹೀಗೆ ಹಟ ಹಿಡಿಯುವುದರಿಂದ ಅವರನ್ನು ನಿರ್ಲಕ್ಷಿಸಿ ನೇರವಾಗಿ ಪ್ರಜೆಗಳೇ ರಾಜ್ಯಾಂಗ ಸಭೆಗೆ ಸೇರುವಂತಾದರೆ ಅದು ರಾಜರುಗಳಿಗೆ ಮತ್ತಷ್ಟು ಹೆಚ್ಚಿನ ದೌರ್ಭಾಗ್ಯವೆಂದೇ ಹೇಳಬೇಕು. ಪ್ರಜಾಬೆಂಬಲ, ಪ್ರಜಾ ಪ್ರೇಮ ಮತ್ತು ಪ್ರಜಾ ವಿಶ್ವಾಸದಿಂದ ರಾಜ್ಯವನ್ನು ಪರಿಪಾಲಿಸುವುದೇ ಸರಿಯಾದ ರೀತಿ. ಅದು ಬಿಟ್ಟು ತಮಗೆ ಸೇರಿದವರ ಸಲಹೆಯನ್ನು ಕೇಳಿ ಪ್ರಜಾ ಪ್ರತಿನಿಧಿ ಸರ್ಕಾರವನ್ನು ಬಿಟ್ಟುಕೊಡದ ನಿರಂಕುಶ ಪ್ರವರ್ತನೆ. ಇನ್ನು ಇಲ್ಲವೆ ತನ್ನ ಅಭಿಪ್ರಾಯಕ್ಕೆ ವಿರುದ್ಧವಾಗಿ ರುವವರು ಸರ್ಕಾರದ ಚೌಕಟ್ಟಿನಿಂದ ಬಿಟ್ಟು ಹೊರಡುವರೇ ಹೊರಕ್ಕೆ ಹೋಗಬೇಕೆಂದು ಹೇಳುವಂತಹ ತಿರುವಾಂಕೂರು ದಿವಾನರ ಸ್ವಭಾವ ಪ್ರಜಾಪ್ರಭುತ್ವದ ಪರಮಾವಧಿಯೇ ಸರಿ.

ಬ್ರಿಟಿಷರು ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸಿದ ಮೇಲೆ ಈ ದೇಶದಲ್ಲಿ ಎರಡಕ್ಕಿಂತಲೂ ಹೆಚ್ಚು ಸ್ವತಂತ್ರ ರಾಜ್ಯಗಳು ಇರಲು ಅವಕಾಶವಿಲ್ಲವೆಂದು ಅವರೇ ಹೇಳಿರುತ್ತಾರೆ. ಸಂಸ್ಥಾನಗಳು ಒಂದಲ್ಲ ಒಂದು ರಾಜ್ಯವನ್ನು ಸೇರಬೇಕೆಂದೂ ಸಹ ಅವರು ತಿಳಿಸಿರುತ್ತಾರೆ. ಸಂಸ್ಥಾನಗಳ ಪ್ರತ್ಯೇಕವಾದ ಡೊಮಿನಿಯನ್ ಸ್ಥಾನಕ್ಕೆ ಮನ್ನಣೆ ಕೊಡುವುದಿಲ್ಲವೆಂದು ವೈಸರಾಯರು ಹೇಳಿದ್ದಾರೆ. ಇನ್ನು ಮುಂದೆ ಬ್ರಿಟಿಷರ ಬೆಂಬಲವನ್ನು ರಾಜರುಗಳು ನಂಬಿಕೊಂಡಿರಲಾಗದೆಂದು ಮುಖಂಡರು ಅವರಿಗೆ ಸೂಚಿಸಿದ್ದಾರೆ. ಸಂಸ್ಥಾನಗಳು ಸ್ವಾತಂತ್ರ್ಯವನ್ನು ಘೋಷಿಸುವುದರಿಂದ ಇಡೀ ಭಾರತದ ಪ್ರಜಾ ಕೋಟಿಯನ್ನೇ ಯುದ್ಧಕ್ಕೆ ಕರೆದಂತಾಗುವುದೆಂದೂ ಸಹ ಮುಖಂಡರು ಹೇಳಿದ್ದಾರೆ.

ತಿರುವಾಂಕೂರು ಈಗಾಗಲೇ ತನ್ನ ರಕ್ತೋತ್ಸಾಹವನ್ನು ಪ್ರಕಾಶಪಡಿಸಿರುತ್ತದೆ. ಇನ್ನೂ ಯಾವ ಯಾವ ಸಂಸ್ಥಾನಗಳು ಇದೇ ಮಾರ್ಗದಲ್ಲಿ ಪ್ರವರ್ತಿಸುವವೋ ಹೇಳಲು ಬರದು. ನಮ್ಮ ಮೈಸೂರಿಗಾದರೂ ಸಹ ನಮ್ಮ ಕೋಟಿ ಭಾರತೀಯ ಬಂಧುಗಳನ್ನು ಎದುರಿಸುವ ದೌರ್ಭಾಗ್ಯವು ಪ್ರಾಪ್ತವಾಗದಿರಲೆಂದು ಹಾರೈಸಬಹುದಲ್ಲವೇ?

ಅಪೇರಾ ಟಾಕೀಸ್, ಮೈಸೂರು
೧೬-೬-೪೭ ರಿಂದ ೯ ನೇ ವಾರ
ರಾಜಕುಮಾರಿ
ಪಾತ್ರ:-ಮಾಲತಿ, ಬಾಲಯ್ಯ.

ಕೃಷ್ಣನ ಸಮಾಧಿ ಪ್ರತಿನಗರದಲ್ಲಿ

ಲಂಡನ್ನಿನ ಪತ್ರಿಕೆಯ ಒಂದು ವರದಿಯ ಪ್ರಕಾರ ಡಾ ಬಾಬ್ಯಾಂಡರು ಯೇಸುಕ್ರಿಸ್ತನ ಮರಣ ಮತ್ತು ಜೀವನದ ಬಗ್ಗೆ ಬ್ರಿಟನ್ನಿನ ರೇಡಿಯೋದಿಂದ ಕೊಡಲಿರುವ ಭಾಷಣಗಳನ್ನು ಶಿಕ್ಷೆಗೆ ಕರೆದಿದ್ದಾರೆ. ಯೇಸುಕ್ರಿಸ್ತನು ಸಾಮಾನ್ಯ ಮನುಷ್ಯನಂತೆಯೇ ಮರಣ ಹೊಂದಿದನೆಂತಲೂ, ಕಾಶ್ಮೀರದ ಶ್ರೀನಗರದಲ್ಲಿ ಅವನ ದೇಹವನ್ನು ಸಮಾಧಿ ಮಾಡಲಾಯಿತೆಂದೂ ಇವರು ತಿಳಿಸಿರುವುದಾಗಿ ವರದಿಯಾಗಿದೆ.

ಮಠದ ಪ್ರಶಸ್ತಿ

ಸ್ವಂ. ವ.] ಶಿವಮೊಗ್ಗ, ೧೩ ಶಿವಮೊಗ್ಗೆಯಲ್ಲಿ ನಡೆದ ಪಂಡಿತ ಸಮ್ಮೇಳನದಲ್ಲಿ ಶೃಂಗೇರಿ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಶಂಕರಾಚಾರ್ಯರು ಇಲ್ಲಿನ ಶ್ರೀ॥ ಸುಬ್ಬರಾಯರಿಗೆ ಸನಾತನ ಧರ್ಮ ಸೇವಾ ಧುರೀಣ ಎಂಬ ಪ್ರಶಸ್ತಿಯನ್ನು ಕೊಟ್ಟಿರುವರು.

ವುಡ್‌ಲ್ಯಾಂಡ್ಸ್
15-6-47 ರಿಂದ
ಆರಂಭ ೭ ನೇ ವಾರ
ಪ್ರತಿ ದಿನ ೩ ಆಟಗಳು
ನಾಗ್ ಪಿಪಾಸು
(ಹಿಂದಿ)
:: ಪಾತ್ರ ::
ಟಿ. ಆರ್. ರಾಜಕುಮಾರಿ,
ಜಯಲಕ್ಷ್ಮಿ, ಪಿ. ಆರ್.
ರಾಮಚಂದರ್ ಮುಂತಾದವರು

ಶ್ರೀ ಕಸ್ತೂರಬಾ ಪರಮೇಶ್ವರೀ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಮೈಸೂರು.
ಅನುಭವಸ್ಥರಾದ ಒಬ್ಬರು ಅಟೆಂಡರ್ ಬೇಕಾಗಿದ್ದಾರೆ. ಮಾಹೆಯಾನಾ ಸಂಬಳ ೧೦ ರೂ. ಮತ್ತು ತುಟ್ಟಿ ಭತ್ಯ ೧೫ ರೂ. ದರ್ಖಾಸ್ತುಗಳು ಯೋಗ್ಯತಾ ಪತ್ರಗಳೊಡನೆ ೩೦-೬-೪೭ ರ ವೇಳೆಗೆ ತಲಪಬೇಕು.
ಕೆ. ಎಸ್. ನಾಗರಾಜಶೆಟ್ಟಿ
ಸಕ್ರೆಟರಿ

Edited printed and published by A. R. Nagarajan at the Sadhvi Press D Subbaiah Road Mysore

ರಾಜಕಮಲ್,
ತಾ॥ ೧೩-೬-೪೭ ರಿಂದ
೩ ನೇ ವಾರ
ಪ್ರತಿ ದಿನ ೨ ಆಟಗಳು
ಗೊಲಭಾಮ
(ತೆಲುಗು)
ಸ್ಪೆಷಲ್ ಪ್ರೋಗ್ರಾಂ
೧೩—೬—೪೭ ರಿಂದ
7 ದಿನಗಳು
ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ
ಸಿಸ್ಟರ್
ಸಹೋದರಿ
(ಹಿಂದಿ)
—: ಪಾತ್ರ :—
ನಳಿನಿ ಜಯವಂತ್, ಶೇಕ್‌ಮುಕ್ತಾರ್ ಹರೀಶ್.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲಿಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಮೈಸೂರು ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸಿನಿಂದ—

ಹರಾಜು

ತಾರೀಖು ೫ ನೆಯ ಜುಲೈ ೧೯೪೭

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕಸಬಾ ಮೈಸೂರು ಗ್ರಾಮಕ್ಕೆ ಸೇರಿದ ಕುಕ್ಕರಹಳ್ಳಿಕೆರೆ ಅಂಗಳದ ಪಶ್ಚಿಮ ಭಾಗ ವಿನಹ ಮಿಕ್ಕ ಪ್ರದೇಶದಲ್ಲಿ ಬೆಳೆ ಯಾಕಲ್ಪ ವ ಕ್ಲಿನ್ನ ೧೯೪೭-೪೮ ನೆಯ ಸಾಲಿಗೆ ರೂಢಿಸಿಕೊಳ್ಳುವ ಹಕ್ಕನ್ನು ೧೯೪೭ ನೆಯ ಇಸವಿ ಜುಲೈ ೫ ನೇ ತಾರೀಖು, ಶನಿವಾರ ಬೆಳಗ್ಗೆ ೯ ಗಂಟೆಗೆ ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸಿನವರು ಕೆರೆ ಅಂಗಳದ ಬಳಿ ಹರಾಜು ಮಾಡಿಕೊಡುತ್ತಾರೆ. ಇಷ್ಟಪಟ್ಟವರು ಆ ಕಾಲಕ್ಕೆ ಹಾಜರಾಗಿ ಭಾಗವಹಿಸಬಹುದು.

ಹರಾಜು ಷರತ್ತುಗಳು:— ಹರಾಜಿನಲ್ಲಿ ಕೊನೆಯ ಬಿಡ್ಡು ದಾರನು ಬಿಡ್ಡು ಮೊಬಲಗು ಪೈಕಿ ನಾಲ್ಕನೇ ಒಂದು ಭಾಗವನ್ನು ಮುಂಗಡವಾಗಿ ಪೂರ್ತಿ ಬಿಡ್ಡು ಮೊಬಲಗಿನ ಮೇಲೆ ಆಗುವ ಬೋನಸ್ ಫೀಜು ಮತ್ತು ಇತರ ವೆಚ್ಚಗಳನ್ನು ಪೂರ್ತಿಯಾಗಿಯೇ ಹಾಜರ್ಪಡಿಸಬೇಕು. ಬಾಕಿಯನ್ನು ಹರಾಜು ತಾರೀಖು ಆದಾಗಿನಿಂದ ಹದಿನೈದು ದಿವಸಗಳ ಒಳಗಾಗಿ ಜಮಾ ಮಾಡತಕ್ಕದ್ದು.

ಹರಾಜು ನಿರ್ಣಯವಾದ ಮೇಲೆ ಬಾಕಿ ಮೊಬಲಗನ್ನು ಹರಾಜು ತಾರೀಖು ಆದಾಗಿನಿಂದ ಹದಿನೈದು ದಿವಸಗಳ ಒಳಗಾಗಿ ಜಮಾ ಮಾಡದೆ ಇದ್ದರೆ ಆಗಲಿ, ಮುಂದಿನ ಹರಾಜು ಮಾಡಿಸಿ ಬರುವ ನಷ್ಟವನ್ನು ಮೊದಲು ಬಿಡ್ಡುದಾರನಿಂದ ವಸೂಲು ಮಾಡಲಾಗುವುದು. ಹಾಗೂ ಮುಂಗಡ ಹಣವನ್ನು ವಾಪಸು ಕೊಡುವುದಿಲ್ಲ.

ಹರಾಜು ನಡೆಸುವ ಅಧಿಕಾರಿಗೆ ಯಾವ ಕಾರಣವನ್ನೂ ತಿಳಿಸದೆ ಹರಾಜನ್ನು ನಿಲ್ಲಿಸುವ ಅಧಿಕಾರವಿರುತ್ತದೆ. ಇತರ ಷರತ್ತುಗಳನ್ನು ಹರಾಜು ಕಾಲದಲ್ಲಿ ತಿಳಿಸಲಾಗುವುದು.

ಕೆ. ನಂಜುಂಡೇಗೌಡ,
ಜನರಲ್ ಮ್ಯಾನೇಜರ್ ಇನ್-ಛಾರ್ಜ್

Office of the President,
City Municipal Council,
Mysore, 9th June 1947.

NOTIFICATION

JUST RELEASED FROM THE PRESS
MUNICIPAL HAND-BOOK AND DIARY

A publication which should be in the hands of all the Citizens of Mysore.

A publication which gives full particulars pertaining to the Municipality and also contains diary for 12 months

PRICE Annas TWELVE only. (As 12.)

For copies, please apply to:—

The President

ಫೋನ್ ನಂ. ೩೪೩ || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಬುಧವಾರ ೧೮—೬—೪೭ [ಸಂಚಿಕೆ ೨೬೬

— ಗಡಿನಾಡಿನಲ್ಲಿ — ಪಠಾಣಿಸ್ತಾನ್ ಸ್ಥಾಪನೆ ?

ಹೈದರಾಬಾದಿಗೆ ಈಗಿನ ನಿಜಾಮರೇ ಕಡೆಯ ಅರಸರು !

ಈಗ ಹೈದರಾಬಾದಿನಲ್ಲಿ ಆಳುತ್ತಿರುವ ನಿಜಾಮರೇ ಅಲ್ಲಿನ ಕಡೆಯ ಅರಸರೆಂದು ಜ್ಯೋತಿಷ್ಯರೊಬ್ಬರು ಹೇಳಿರುವುದಾಗಿ ವರದಿಯಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಫಕೀರನೊಬ್ಬನು ನುಡಿದ ಭವಿಷ್ಯವಾಣಿಯನ್ನು ಸೂಚಿಸಲಾಗಿದೆ. ನಿಜಾಮರ ವಂಶವನ್ನು ಸ್ಥಾಪಿಸಿದ ರಾಜರು ದಿಲ್ಲಿಯಿಂದ ದಕ್ಷಿಣದ ಕಡೆಗೆ ಬರುತ್ತಿದ್ದಾಗ ಫಕೀರನೊಬ್ಬನು ಅವರನ್ನು ಸಂಧಿಸಿ ಕೆಲವು ರೊಟ್ಟಿಗಳನ್ನು ಕೊಟ್ಟು ಸಾಧ್ಯವಾದಷ್ಟನ್ನು ತಿನ್ನುವಂತೆ ಹೇಳಲು ರಾಜರು ೧೧ ರೊಟ್ಟಿಗಳನ್ನು ತಿಂದಿದ್ದರಿಂದ ಅವರ ವಂಶವು ೧೧ ತಲೆಮಾರಿನವರೆಗೆ ರಾಜ್ಯವಾಳುವುದೆಂದು ಫಕೀರನು ಭವಿಷ್ಯ ನುಡಿದನೆಂದೂ ಹೇಳಲಾಗಿದೆ. ಈಗಿನ ನಿಜಾಮರು ಆವರ ವಂಶದಲ್ಲಿ ಹನ್ನೊಂದನೆಯವರೆಂದೂ, ಫಕೀರ ಹೇಳಿದ ಕಾಲವು ಸನ್ನಿಹಿತವಾಗುತ್ತಿದೆಯೆಂದೂ ಅದರಲ್ಲಿ ತಿಳಿಸಲಾಗಿದೆ.

ವೈಸರಾಯ್-ಗಾಂಧಿ-ಜಿನ್ನಾ ಭೇಟಿ

ನೆನ್ನೆ ಬೆಳಗ್ಗೆ ಮಹಾತ್ಮ ಗಾಂಧಿಯವರು, ಮಿ॥ ಜಿನ್ನಾರವರೂ ವೈಸರಾಯರೊಡನೆ ಭೇಟಿ ನಡೆಸಿದರು. ಗಡಿನಾಡಿನ ಭವಿಷ್ಯದ ಸಂಬಂಧವಾಗಿ ರೆಫರೆಂಡಂ ಪದ್ಧತಿಯ ವಿಚಾರವಾಗಿ ಸಮಾಲೋಚನೆ ನಡೆಯಿತೆಂದು ವರದಿಯಾಗಿದೆ.

ರಷ್ಯದ ಮೇಲೆ ಅಮೆರಿಕದ ಯುದ್ಧ ಹೂಡುವುದೇ ?

ರಷ್ಯವು ಯುದ್ಧ ಹೂಡುವ ಆತುರದಲ್ಲಿ ಇಲ್ಲದಿದ್ದರೂ ಪ್ರಸಂಗ ಒದಗಿದರೆ ಆಗ ಅದು ಅಮೆರಿಕದ ಮೇಲೆ ಯುದ್ಧ ಸಾರಬಹುದು—ಎಂದು ಅಮೆರಿಕದ ಸೆನೆಟ್ ಸದಸ್ಯರಾದ ಮಿ॥ ಜೆಪ್ಪರ್ಸನ್ ಹೇಳಿದರು. ಮಧ್ಯ ಮತ್ತು ಪೂರ್ವ ಯೂರೋಪ್ ಮತ್ತು ಬಾಲ್ಕನ್ ಪ್ರದೇಶದಲ್ಲಿ ಈಗ ನಡೆಯುತ್ತಿರುವ ರಾಜಕೀಯದಿಂದಲಷ್ಟೇ ರಷ್ಯವೇ ಬಾಹ್ಯ ರಷ್ಯ ತನ್ನ ಪ್ರಭಾವವನ್ನು ವಿಸ್ತರಿಸಲು ತೊಡಗಿರುವುದು ನಿದರ್ಶನ; ಅದು ಅತಿ ದೊಡ್ಡ ಪ್ರದೇಶವಾಗಿರುವುದರಿಂದ ರಷ್ಯ ಅದರ ಮೇಲೆ ಧಾಳಿ ನಡೆಸಿದರೆ ಅದರ ರಕ್ಷಣೆಗಾಗಿ ಅಮೆರಿಕವು ರಷ್ಯದ ವಿರುದ್ಧ ಯುದ್ಧ ಹೂಡುವುದು—ಎಂದು ಅವರು ತಿಳಿಸಿರುವರು.

ತ್ರಿಶೂಲ ಸಾಧುಗಳ ದಸ್ತಗಿರಿ

ಲಾಹೋರ್] ಜೂನ್ ೧೭

ಸ್ವತಂತ್ರ ಭಾರತದಲ್ಲಿ ಹಿಂದೂಗಳ ಪವಿತ್ರ ಬಾಧ್ಯತೆಗಳ ರಕ್ಷಣೆ ಮತ್ತು ಗೋವಧೆಯನ್ನು ನಿಲ್ಲಿಸುವ ಬಗೆ ಪ್ರದರ್ಶಿಸಿದ ಸೆಕ್ರೆಟರಿಯೆಟ್ ಕೌನ್ಸಿಲ್ ಭವನದ ಮುಂದೆ ಪ್ರದರ್ಶನ ನಡೆಸಿದ ೫ ಮಂದಿ ೬೦ ಸಾಧುಗಳನ್ನು ದಸ್ತಗಿರಿ ಮಾಡಲಾಯಿತು. ಇವರ ನಾಯಕರು ಪ್ರಖ್ಯಾತ ಧುರೀಣರಾಗಿರುವರು. ಈ ರೀತಿ ಬಂದು ಪ್ರದರ್ಶನದಲ್ಲಿ ಬಿಡಲೆ ಸಾಧುಗಳು ಗವರ್ನರ್ ಅವರ ಭೇಟಿಗೆ...

ಅಲ್ಲಾ ಪೋಲೀಸರ ಅಧ್ಯಕ್ಷರು

ಮೈಸೂರು] ಜೂನ್ ೧೭

ಈ ದಿನ ನಡೆದ ಜಿಲ್ಲಾ ಬೋರ್ಡ್ ಸಭೆಯಲ್ಲಿ ಚುನಾವಣೆಯಲ್ಲಿ ಶ್ರೀ ಸ್ವತಂತ್ರ ಪಕ್ಷದ ಶ್ರೀ ಗೋಪಿ ದೇವಗೌಡರು ಅಧ್ಯಕ್ಷರಾಗಿ ಚುನಾಯಿತರಾಗಿರುವರು.

ಹೈದರಾಬಾದಿನಲ್ಲಿ ಸತ್ಯಾಗ್ರಹವೇ ?

ಹೈದರಾಬಾದ್ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನವು ಶ್ರೀ ರಮಾನಂದ ತೀರ್ಥರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಶ್ರೀ ತೀರ್ಥರು ಅಧ್ಯಕ್ಷ ಭಾಷಣ ಮಾಡುತ್ತಾ ಹೈದರಾಬಾದು ಸರ್ಕಾರವು ಕೂಡಲೇ ರಾಜ್ಯಾಂಗ ರಚನಾ ಸಭೆಗೆ ಸೇರಬೇಕೆಂದು ಕೇಳಿ ಈ ಬಗ್ಗೆ ನಿಜಾಮರು ಹೊರಡಿಸಿರುವ ಫರ್ಮಾನನ್ನು ಹಿಂತೆಗೆದುಕೊಳ್ಳಬೇಕೆಂದು ಮತ್ತು ಹೊಸ ರಾಜ್ಯಾಂಗವು ರಚನೆಯಾಗುವುದರೊಳಗೆ ತಾತ್ಕಾಲಿಕವಾಗಿ ಸರ್ಕಾರವನ್ನು ರಚಿಸಿ ಪಕ್ಷಗಳ ಚುನಾಯಿತ ಪ್ರತಿನಿಧಿಗಳು ಆ ಸರ್ಕಾರದಲ್ಲಿರಬೇಕೆಂದು ಹೇಳಿದರು. ನಿಜಾಮ್ ಪ್ರಜೆಗಳ ಹಕ್ಕನ್ನು ಉಪೇಕ್ಷಿಸಿ ರಾಜ್ಯವನ್ನಾಳುವ ಇದನ್ನು ಸಹಿಸಲು ಸಾಧ್ಯವಿಲ್ಲವೆಂದೂ ಇದನ್ನು ಎದುರಿಸಲು ಕಾಂಗ್ರೆಸ್ಸಿನವರೆಲ್ಲರೂ ಸತ್ಯಾಗ್ರಹ ಹೂಡಲು ಸಿದ್ಧರಿರಬೇಕೆಂದೂ ನುಡಿದರು.

ಮಾವಲಂಕರರು ರಾಜ್ಯಾಂಗ ಸಭಾಧ್ಯಕ್ಷರು

ಬರುವ ಜುಲೈ ೧೪ ನೇ ತಾರೀಖಿನಿಂದ ಸೇರಲಿರುವ ರಾಜ್ಯಾಂಗ ಸಭೆಗೆ ಹೊಸ ಅಧ್ಯಕ್ಷರ ಚುನಾವಣೆ ನಡೆಯುವುದೆಂದು ಹೇಳಲಾಗಿದೆ. ಡಾ॥ ರಾಜೇಂದ್ರ ಪ್ರಸಾದರು ತಮ್ಮ ಅಧ್ಯಕ್ಷತೆಗೆ ಈಗಾಗಲೇ ರಾಜೀನಾಮೆಯಿತ್ತಿರುವರೆಂದು ತಿಳಿದುಬಂದಿದೆ. ಕೇಂದ್ರ ಶಾಸನ ಸಭೆಯು ರದ್ದಾಗುವುದರಿಂದ ಅದರ ಅಧ್ಯಕ್ಷರಾದ ಶ್ರೀ ಜಿ ವಿ ಮಾವಲಂಕರರನ್ನು ರಾಜ್ಯಾಂಗ ಸಭಾಧ್ಯಕ್ಷರನ್ನಾಗಿ ಆರಿಸಲ್ಪಡಬಹುದೆಂದೂ ಸಹ ವರದಿಯಾಗಿದೆ.

ಭಾರತದ ರಾಯಭಾರಿಗಳು

ಲಂಡನ್, ಕೆನಡಾ ಮತ್ತು ವಾಷಿಂಗ್ಟನ್ ನಗರಗಳಿಗೆ ಭಾರತದ ಪರವಾಗಿ ರಾಯಭಾರಿಗಳನ್ನು ಕಳುಹಿಸಲು ನಿರ್ಧರಿಸಲಾಗಿದೆ. ವಾಷಿಂಗ್ಟನಿನ ಮಿ ಜಿ ವಿ ಪಿಳ್ಳೆ ಪೆಟರ್, ಎಸ್ ಪಿ ಶ್ರೀವಾಸ್ತವರನ್ನು ಕೆನಡಾಕ್ಕೆ, ಕೆ ಎಂ. ಮುನ್ಷಿಯವರನ್ನು ಲಂಡನ್ನಿಗೂ ಕಳುಹಿಸಲಾಗುವುದು ... ವ್ಯವಹಾರವನ್ನು ... ಕೇಂದ್ರ ಸರ್ಕಾರ ... ಲಂಡನ್ನಿನಲ್ಲಿ ... ತಿಳಿದುಬಂದಿದೆ.

ಜೂಜಿನ ಕಟ್ಟೆ ಪತ್ತೆ

ಮೈಸೂರು ೧೮

ದೇವರಾಜ ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ರವರು ನಿನ್ನೆಯ ದಿನ ಬೆಳಿಗ್ಗೆ ಕಟ್ಟೆ ಗಣಿಕೆರೆಯಲ್ಲಿ ಗೋವಿಂದಯ್ಯ ಎಂಬುವರ ಮನೆಯಲ್ಲಿ ನಡೆಯುತ್ತಿದ್ದ ಜೂಜನ್ನು ಪತ್ತೆ ಹಚ್ಚಿ ಎರಡನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಗೋವಿಂದಯ್ಯ ಮತ್ತು ೧೦ ಜನರ ಮೇಲೆ ಕೇಸ್ ಹೂಡಿದರು. ಮ್ಯಾಜಿಸ್ಟ್ರೇಟರು ಈ ದಿನ ಮನೆಯ ಮಾಲೀಕರಿಗೆ ೩೦ ರೂ ಗಳನ್ನು ಮತ್ತು ಉಳಿದವರಿಗೆ ತಲಾ ೫೦ ರೂ ಗಳ ದಂಡವನ್ನು ವಿಧಿಸಿದರು.

ಗ್ರಾಮಸೇವಾ ಶಿಕ್ಷಣ ಶಿಬಿರ

ಮಿಲಿಟರಿ ಸೆಕ್ರೆಟರಿಯವರು ನಡೆಸುತ್ತಿರುವ ಗ್ರಾಮ ಸೇವಾ ಶಿಕ್ಷಣ ಶಿಬಿರಕ್ಕೆ ನಾಲ್ಕನೇ ಐ ಪೈಂಟರು ಬೆಳವಾಡಿಯ ಕಸ್ತೂರಿ ಬಾ ಶಿಕ್ಷಣ ಶಿಬಿರಕ್ಕೆ ಭೇಟಿಕೊಟ್ಟು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು. ಅಲ್ಲಿನ ವಿದ್ಯಾರ್ಥಿಗಳಿಗೆ ಸಿಂಹಳ ದ್ವೀಪದಲ್ಲಿ ನಡೆಸುತ್ತಿರುವ ಗ್ರಾಮ ಸೇವಾ ಕಾರ್ಯಗಳನ್ನು ವಿವರಿಸಿದರು. ಭಾರತದ ಗ್ರಾಮೋದ್ಧಾರ ಕ್ಷೇತ್ರಗಳ ಕಾರ್ಯಗಳನ್ನು ತಿಳಿದುಬರಲು ಸಿಂಹಳದ ಸರ್ಕಾರದವರು ಇವರನ್ನು ನಿಯೋಜಿಸಿದ್ದಾರೆ.

ನರೇಂದ್ರ ಮಂಡಲದಲ್ಲಿ ಹಣದ ಅಭಾವ

ನರೇಂದ್ರ ಮಂಡಲದ ಮೊಹರು ಬಿದ್ದಿತು. ಅಲ್ಲಿಯ ನೌಕರರು ಮತ್ತು ಅಧಿಕಾರಿಗಳಿಗೆಲ್ಲರಿಗೂ ಎರಡು ತಿಂಗಳ ಬೋನಸ್ಸನ್ನು ಕೊಟ್ಟು ಸ್ವಲ್ಪವೂ ಹಣವುಳಿಯದೆ ಹೋಗಿರುವರೆಂದು ವರದಿಯೊಂದು ತಿಳಿಸುತ್ತದೆ. ಅಲ್ಲಿನ ನೌಕರರಿಗೆ ಒಂದು ತಿಂಗಳ ಸಂಬಳ ಕೊಡಲೂ ಕೂಡ ಹಣವಿಲ್ಲದಿರುವುದಾಗಿ ಹೇಳಲಾಗಿದೆ.

ಸಂಸ್ಥಾನಗಳ ಸ್ವಾತಂತ್ರ್ಯಕ್ಕೆ ಜಿನ್ನಾ ಬೆಂಬಲ

ಹಿಂದೂಸ್ಥಾನ ಅಥವಾ ಪಾಕಿಸ್ಥಾನ ರಾಜ್ಯಾಂಗ ಸಭೆಗೆ ಸೇರುವ ಇಲ್ಲವೇ ಬಿಡುವ ಹಕ್ಕು ಸಂಸ್ಥಾನಗಳಿಗೇ ಸೇರಿದ್ದು ಬ್ರಿ॥ ಸರ್ಕಾರದವರ ಯೋಜನೆಯಲ್ಲಿ ಸಹ ಈ ಬಗ್ಗೆ ... ಸಂಸ್ಥಾನಗಳು ಸ್ವತಂತ್ರವಾಗಿರಲು ... ಜಿನ್ನಾ ... ಸ್ವಾತಂತ್ರ್ಯ ... ಅಭಿಪ್ರಾಯಪಟ್ಟಿರುವರು.

ಪಠಾಣರಿಗೆ ಬೇರೆ ರಾಜ್ಯ

ಗಡಿನಾಡಿನಲ್ಲಿ ರೆಫರೆಂಡಂ ನಡೆಯುವ ಬಗ್ಗೆ ಪಠಾಣ್ಯರಿಗೆ ಮತದಾನದ ಹಕ್ಕಿರುವುದಿಲ್ಲ; ಶಾಸನ ಸಭೆಗೆ ಓಟು ಮಾಡಲು ಯೋಗ್ಯತೆಯುಳ್ಳವರು ಮಾತ್ರ ಮತವಾದ ಮಾಡಬಹುದಾಗಿದೆ; ಈ ಕಾರಣಗಳಿಂದ ಗಡಿನಾಡಿನ ಕಾಂಗ್ರೆಸ್ಸಿನವರೂ, ಕೆಂಪಂಗಿಯವರೂ ಗಡಿನಾಡಿನ ಭವಿಷ್ಯದ ವಿಚಾರವಾಗಿ ನಡೆಯುವ ರೆಫರೆಂಡಮ್ಮನ್ನು ಬಹಿಷ್ಕರಿಸಿ ತಮ್ಮದೇ ಆದ ಪ್ರತ್ಯೇಕ ಪಠಾಣೀ ರಾಜ್ಯಸ್ಥಾಪನೆಗಾಗಿ ಹೋರಾಡುವರೆಂದೂ ವರದಿಯಾಗಿದೆ.

ಪ್ರಾಂತೀಯ ಗೌರ್ನರುಗಳು

ಆಗಸ್ಟ್ ೧೫ ರಿಂದ ಜಾರಿಗೆ ಬರಲಿರುವ ಭಾರತ ಡೊಮಿನಿಯನ್ ಸರ್ಕಾರದಲ್ಲಿ ಪ್ರಾಂತೀಯ ಗೌರ್ನರುಗಳನ್ನು ನೇಮಿಸುವ ಬಗ್ಗೆ ರಾಜಾಜಿ, ಬಾಘ, ಸರ್ ಬಿ. ಎನ್. ರಾವ್, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಜಸ್ಟಿಸ್ ರಾಮಲಾಲ್‌ರವರುಗಳು ಹೆಸರನ್ನು ಕಾಂಗ್ರೆಸ್ಸಿನ ಪರವಾಗಿ ಸೂಚಿಸಲಾಗಿದೆ.

ಭಾರತದ ವಿಭಜನೆಗೆ ವಿಶೇಷ ಸಮಿತಿ

ಭಾರತವನ್ನು ವಿಭಜನೆ ಮಾಡುವುದರಿಂದ ಉಂಟಾಗುವ ಸರ್ಕಾರಗಳ ಆಡಳಿತವನ್ನು ಪರಿಶೀಲಿಸಿ ವ್ಯವಹರಿಸಲು ಅನುಕೂಲವಾಗುವಂತೆ ಮಂತ್ರಿಮಂಡಲದಿಂದ ಒಂದು ಉಪಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಪಟೇಲ್, ರಾಜೇಂದ್ರ ಪ್ರಸಾದ್, ಅಬ್ದುರ್ ರಬ್ ನಿಷ್ತರ್, ಲಿಯಾಖತ್ ಆಲಿಖಾನ್ ರವರುಗಳಿರುವರು. ವೈಸರಾಯರು ಈ ಸಮಿತಿಯ ಅಧ್ಯಕ್ಷರಾಗಿರುವರು. ಈ ಮಂತ್ರಿಮಂಡಲದ ಸಮಿತಿಯು ವಿಭಜನಾ ಸಮಿತಿಯನ್ನು ಏರ್ಪಡಿಸುವುದು. ಆ ಸಮಿತಿಯು ಸೈನ್ಯ, ಹಣಕಾಸು, ಆಸ್ತಿಗಳ ಭದ್ರತೆ, ಕಂದಾಯ ಮತ್ತು ಆಡಳಿತ ಸಂಬಂಧವುಗಳನ್ನು ಚರ್ಚಿಸುವುದೆಂದೂ, ಆ ಸಮಿತಿಯ ವರದಿಯು ಜುಲೈ ಮೂರನೇ ವಾರದಲ್ಲಿ ಹೊರಬೀಳುವುದೆಂದೂ ವರದಿಯಾಗಿದೆ.

ರೆಡ್ಡಿ-ದಿವಾನ್ ಭೇಟಿ ನಡೆಯಲಿಲ್ಲ

ಸ್ವಸಂಪ್ರೋ॥] ಬೆಂಗಳೂರು ೧೮

ನಿನ್ನೆಯ ದಿನ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯ ರೆಡ್ಡಿಯವರಿಗೂ ದಿವಾನರಿಗೂ ನಡೆಯಬೇಕಾಗಿದ್ದ ಭೇಟಿಯು ನಡೆಯಲಿಲ್ಲವೆಂದು ಗೊತ್ತಾಗಿದೆ.

ಕಾಂ॥ ವರ್ಕಿಂಗ್ ಕಮಿಟಿ ಸಭೆ

ನಿನ್ನೆಯಿಂದ ಆರಂಭವಾದ ಕಾಂ॥ ವರ್ಕಿಂಗ್ ಕಮಿಟಿ ಸಭೆಯು ಈ ದಿನ ಬೆಳಿಗ್ಗೆಯೂ ನಡೆಯಿತು. ಪುನಃ ಮಧ್ಯಾಹ್ನ ಸೇರುವುದು.

ಮಂತ್ರಿ ಮಂಡಲದ ಸಭೆ

ಈ ದಿನ ಮಂತ್ರಿ ಮಂಡಲದ ಸಭೆಯು ದಿವಾನರ ಅಧ್ಯಕ್ಷತೆಯಲ್ಲಿ ನಡೆಯಿತು.

ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕು

ಶ್ರೀ ಖಾನ ಕೆ ಟಿ ಭಾಷ್ಯಂ ಮತ್ತು ಡಿ ಸುಬ್ರಹ್ಮಣ್ಯಂ ರವರುಗಳು ಮೈಸೂರು ರಾಜ್ಯವು ... ಸೇರಲು ನಿರ್ಧರಿಸಿರುವುದಕ್ಕೆ ... ಸಂತೋಷವನ್ನು ವ್ಯಕ್ತಪಡಿಸಿ ರಾಜ್ಯಾಂಗ ರಚನಾ ಸಭೆಗೆ ಹೋಗುವ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬೇಕೆಂದು ಹೇಳಿಕೆಯನ್ನಿತ್ತಿರುವರು.

ಸಾಧ್ವಿ

ತಾ|| ೧೮-೬-೪೭ ಬುಧವಾರ

ಮೈಸೂರಿನ ಭಾಗ್ಯೋದಯಕ್ಕೆ ಪೀಠಿಕೆಯಾಗಲಿ !

ರಾಜ್ಯಾಂಗ ಸಭೆಯಲ್ಲಿ ಮೈಸೂರು ಸಂಸ್ಥಾನವು ಭಾಗ ವಹಿಸುವಂತೆ ಶ್ರೀಮನ್ಮಹಾರಾಜರವರು ಮಾಡಿರುವ ನಿರ್ಧಾರವು ಸಕಲ ಪ್ರಜೆಗಳಿಂದಲೂ ಸ್ವಾಗತಿಸಲ್ಪಡುವುದು. ಈ ನಿರ್ಧಾರವನ್ನು ಮಾಡುವುದರಲ್ಲಿ ಸ್ವಲ್ಪ ಸಾವಕಾಶವಾದರೂ ಪ್ರಜೆಗಳ ಅಭಿಮತಕ್ಕೆ ಅನುಗುಣವಾದ ವ್ಯವಸ್ಥೆಯು ಆಗಿರುವುದಕ್ಕಾಗಿ ದೇಶಾಭಿಮಾನಿಗಳೆಲ್ಲರೂ ಮೈಸೂರನ್ನು ಕೊಂಡಾಡುವುದರಲ್ಲಿ ಸಂದೇಹವಿಲ್ಲ. ಇನ್ನೂ ರಾಷ್ಟ್ರೀಯ ಉನ್ನತಿಗೆ ಸಹಕರಿಸದೆ ಹಿಂದು ಮುಂದು ನೋಡುತ್ತಿರುವ ಸಂಸ್ಥಾನಗಳಿಗೆ ಮೈಸೂರು ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿರುತ್ತದೆ. ನಮ್ಮ ಶ್ರೀಮನ್ಮಹಾರಾಜರವರ ಈ ತೀರ್ಮಾನವು ಸಂಸ್ಥಾನದ ಭಾಗ್ಯೋದಯದ ಪೀಠಿಕೆಯಾಗಲೆಂಬುದೇ ಎಲ್ಲರ ಹಾರೈಕೆಯಾಗಿರುತ್ತದೆ

ರಾಜ್ಯಾಂಗ ಸಭೆಯನ್ನು ಪ್ರವೇಶಿಸುವುದರಿಂದ ಮೈಸೂರಿನ ಸ್ಥಾನ ಮಾನಗಳು ಇನ್ನೂ ಹೆಚ್ಚಾಗಿ ಪ್ರಕಾಶವಾಗುವುವು. ಮೈಸೂರಿನ ಪ್ರಜೆಗಳ ಅಂತಸ್ತು ಹೆಚ್ಚುವುದು. ಶ್ರೀಮನ್ಮಹಾರಾಜರವರ ಪ್ರತಿಷ್ಠೆಯೂ ಸಹ ವೃದ್ಧಿ ಹೊಂದುವುದು. ಇನ್ನು ಮುಂದೆ ಭರತ ಖಂಡದಿಂದ ಮೈಸೂರು ಸಂಸ್ಥಾನಕ್ಕೆ ಆಗದೇಹೋದ ಸೌಲಭ್ಯಗಳು ಹೆಚ್ಚಿನ ವೇಗದಿಂದ ಆಗುವುದರಲ್ಲಿ ಸಂಶಯವಿಲ್ಲ

ರಾಜ್ಯಾಂಗ ಸಭೆಗೆ ಹೋದನಂತರ ಅಲ್ಲಿನ ಕಾರ್ಯ ಕಲಾಪಗಳ ಪ್ರಭಾವವು ಸಂಸ್ಥಾನದ ಆಡಳಿತದ ಮೇಲೆಯೂ ಬೀಳಲ್ಪಡುವುದು. ಇಲ್ಲಿನ ಆಡಳಿತ ಪದ್ಧತಿಯ ಮೇಲೆ ಅದು ಉತ್ತಮ ಪರಿಣಾಮವನ್ನುಂಟುಮಾಡುವುದು. ರಾಜ್ಯಾಂಗ ಸಭೆಯಲ್ಲಿ ಸೇರಿದ ಸಂಸ್ಥಾನಗಳೆಲ್ಲವೂ ಇತರ ಪ್ರಾಂತಗಳ ಮಟ್ಟದಲ್ಲಿಯೇ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಬೇಕೆಂಬ ನಿಯಮವೂ ಇರುತ್ತದೆ. ಆದರಿಂದ ನಮ್ಮ ಸಂಸ್ಥಾನದಲ್ಲಿಯೂ ಕೂಡಲೇ ರಾಜ್ಯಾಂಗ ಸುಧಾರಣೆಗಳು ಜಾರಿಗೆ ಬರುವುವೆಂದು ನಾವು ನಂಬಬಹುದು.

ಪ್ರಕೃತದಲ್ಲಿ ಎಲ್ಲರ ಮನಸ್ಸನ್ನೂ ಆಕರ್ಷಿಸಿದ್ದ ಈ ವಿಚಾರದಲ್ಲಿ ನಮ್ಮ ಪ್ರಭುಗಳು ಮುನ್ನಡಿಯಿಟ್ಟು ಎಲ್ಲರನ್ನೂ ಸಂತೋಷಪಡಿಸಿರುತ್ತಾರೆ. ಅದರಂತೆಯೇ ಸಂಸ್ಥಾನದೊಳಗಿನ ಆಡಳಿತ ಪದ್ಧತಿಯನ್ನೂ ಕೂಡಲೇ ಪರಿಷ್ಕರಿಸಿ ಇಲ್ಲಿ ಬೇಗನೆ ಜವಾಬ್ದಾರೀ ಸರ್ಕಾರ ಪದ್ಧತಿಯು ಜಾರಿಗೆ ಬಂದು ಪ್ರಭುಗಳು ಪಟ್ಟಕ್ಕೆ ಬಂದಾಗ ಅಪ್ಪಣೆ ಕೊಡಿಸಿದ್ದ ಅಭಯ ವಚನವು ಕೈಗೂಡುವಂತೆ ಮಾಡಬೇಕೆಂದೂ ಸಹ ಈ ಸಮಯದಲ್ಲಿ ನಾವು ವಿಶ್ವಾಸಪೂರ್ವಕವಾಗಿ ಬೇಡುತ್ತೇವೆ

ವುಡ್‌ಲ್ಯಾಂಡ್ಸ್

15-6-47 ರಿಂದ

ಕಿಕ್ಕಿರಿದ ೭ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

-: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರ ಮುಂತಾದವರು

ರಾಜಕಮಲ್,

ತಾ|| ೧೪-೬-೪೭ ರಿಂದ

8 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲ್ಲಭಾಮ

(ತೆಲುಗು)

ಸ್ಪೆಷಲ್ ಪ್ರೋಗ್ರಾಂ

೧೪—೬—೪೭ ರಿಂದ

7 ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ಕ್ಕೆ

ಸಿಸ್ಟರ್ ಅಥವಾ ಸಹೋದರಿ

(ಹಿಂದಿ)

—: ಪಾತ್ರ :—

ನಳಿನಿ ಜಯವಂತ್, ಶೇಖ್ ಮುಕ್ತಾರ್ ಹರೀಶ್.

ಇಡೀ ಹಿಂದೂಸ್ಥಾನದ ಆಕ್ರಮಣಕ್ಕೆ ಲೀಗ್ ಪ್ರಯತ್ನ

ಲೀಗ್ ಕೌನ್ಸಿಲ್ಲಿನವರು ನಡೆಸಿದ ಗುಪ್ತ ಸಭೆಯಲ್ಲಿ ಆಗಸ್ಟ್ ೧೫ ರ ಅನಂತರ ಇಡೀ ಹಿಂದೂಸ್ಥಾನವನ್ನೇ ವಶಪಡಿಸಿಕೊಳ್ಳುವ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದುದರಿಂದ ಅದಕ್ಕೆ ಅವಕಾಶ ಕೊಡದೆ ಹಿಂದೂಸ್ಥಾನವನ್ನು ಬಲಪಡಿಸಲು ಉತ್ತಮವಾದ ಸೈನ್ಯ ನಿರ್ಮಾಣ ಮತ್ತು ಆರ್ಥಿಕ ಪರಿಸ್ಥಿತಿಯ ಭದ್ರತೆಗಾಗಿ ಒಟ್ಟಾಗಿ ಕೆಲಸ ಮಾಡುವುದು ಎಲ್ಲ ಕಾಂಗ್ರೆಸ್ಸಿಗರ ಕರ್ತವ್ಯವಾಗಿದೆ—ಎಂಬುದಾಗಿ ಸರ್ದಾರ್ ಪಟೇಲರು ಹೇಳಿರುವರು.

ಫರೀದ್‌ಕೋಟೆ ಸ್ವಾತಂತ್ರವಾಗುವುದು ಸುಳ್ಳು

ಫರೀದ್‌ಕೋಟೆ ಸಂಸ್ಥಾನವು ಸ್ವತಂತ್ರವಾಗುವುದೆಂದು ಪ್ರಕಟವಾಗಿರುವ ವರದಿಯು ನಿರಾಧಾರವಾದುದೆಂದೂ, ಆ ಸಂಸ್ಥಾನವು ಸ್ವಾತಂತ್ರ್ಯ ಘೋಷಣೆ ಮಾಡುವುದಿಲ್ಲವೆಂದೂ ಅಲ್ಲಿನ ಸರ್ಕಾರ ಪ್ರಕಟಣೆಯು ತಿಳಿಸಿರುತ್ತದೆ

ಹೋಟೆಲ್ ಕೆಲಸಗಾರರು ಬೇಕಾಗಿದೆ

ಚಾಮರಾಜನಗರದಲ್ಲಿ ನೂತನವಾಗಿ ತೆರೆಯಲಾಗಿರುವ ಹೋಟೆಲಿಗೆ ತಿಂಡಿ ಮಾಡುವವರೂ, ಸರ್ವರುಗಳೂ ಮತ್ತು ಕ್ಲೀನರುಗಳೂ ಬೇಕಾಗಿದ್ದಾರೆ. ಅಪೇಕ್ಷಿಸುವವರು

X C/o ಸಾಧ್ವಿ

ಈ ವಿಳಾಸದಲ್ಲಿ ಪತ್ರ ಮುಖೇನ ಅಥವಾ ಖುದ್ದು ಬಂದು ವಿಚಾರಿಸಬಹುದು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಬೇಕಾಗಿದ್ದಾರೆ

ಅಪೇಕ್ಷಕರಿಗೆ ಸಹಾಯಕರಾಗಿ ಕೆಲಸ ಮಾಡಲು ಸ್ಮಾರ್ತ, ಮಾಧ್ವ, ಶ್ರೀ ವೈಷ್ಣವರಲ್ಲಿ ಯಾರಾದರೂ ಸರಿಯೇ, ಸಮರ್ಥರಾದವರು ಬರೆದುಕೊಳ್ಳಬಹುದು. ತಿಂಗಳಿಗೆ ರೂ ೩೦ ಸಂಬಳ ಪ್ರಾವಿಡೆಂಟ್ ಫಂಡಿನ ಸ್ಕೀಮನ್ನು ಏರ್ಪಡಿಸಿದೆ

ನಂ|| ಶ್ರೀಕಂಠ ಶಾಸ್ತ್ರಿ,

ಅ|| ಸೆಕ್ರೆಟರಿ, ಬ್ರಾಹ್ಮಣ ಧರ್ಮ ಸಹಾಯ ಸಭಾ, ವಾಣೀವಿಲಾಸ ರೋಡು,

ಮೈಸೂರು

Edited printed and published by A. K. Nagarajan at the Sadhvi Press D Subbaiah Road Mysore

Om!

Good News! Good News!

Join the famous Sarada Institute (appd), Tyagaraja Road, Opposite to Gopala Krishna Swamy Temple, Mysore and ensure success in all commercial subjects. New Type-writers installed. Staff: qualified Veterans and Graduates. Fees:- standard. Min. qualification 3rd form. Admission on any day for both the sexes

AUM

A Message to Motor Vehicles Owners

RS. 10,000 Accident Insurance Policy

Total No. of Vehicles insured last year exceeds 12,000	WILL BE GIVEN FREE TO	Annual Premium Income Exceeds Rs: 8,00,000

Every Motor Car Insurance Policy Holder in addition to Lowest Rate of Premium, Payment of Annual Premium by Two Half Yearly Instalments, Rebate of Premium up to 20% if two or more Cars are owned and No Claim Bonus upto 33 per cent. For further particulars and District Organiser-ship, Local Agency Terms, Please apply to

Messrs. M. N. SOMASHEKHAR & Co,

CHIEF AGENTS,

The Premier Life and General Insurance Co., Ltd., (MADRAS),

370/1, New Sayaji Rao Road, MYSORE.

The National Institute of Engineering, Mysore.

(Registered under the Mysore Societies Registration act III of 1904)

The Diploma Classes in Civil Engineering will open on Wednesday the 2nd July 1947. The minimum qualification for admission will be S.S.L.C (E.P.S. or E.C. and F.S.) with Physics, Chemistry and Mathematics as optionals or any other equivalent examination

The Institute will train students for its own Diploma Examinations.

Applications should reach the Principal before the 25th June 1947 and be accompanied by a Registration fee of Re. 1 which will not be refunded in any case.

Names of applicants selected for admission will be notified on the Notice Board of the Office in "Margosa Lodge," Krishnaraja Road, Chamarajapuram, Mysore on 28th June 1947 and intimation sent only to moffusil students by post the same day.

For printed application forms please apply to the Principal, enclosing four annas postage stamps.

Chamarajapuram)
Mysore, 16-6-1947.)

S. RAMASWAMY,
Principal.

ಫೋ. ನಂ. ೫೧೪ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೯—೬—೪೭ [ಸಂಚಿಕೆ ೨೬೭

ಜಿನ್ನಾರಿಗೆ ಗುಡ್ಡಗಾಡು ಜನರ ಎಚ್ಚರಿಕೆ

ಸಂಸ್ಥಾನಗಳ ಬಗ್ಗೆ ಶ್ರೀ ಅಂಬೇಡ್ಕರ್

ಸಂಸ್ಥಾನಗಳು ಸ್ವತಂತ್ರವಾಗಿ ಪಕ್ಕ ಗಿಂ ಸ್ಥೆಯಲ್ಲಿ ಸ್ಥಾನವನ್ನು [illegible] ಪಡೆಯು ರುವುದು ಮೂರ್ಖತನ. ಸಂಸ್ಥಾನಗಳ ಘೋಷಣೆಯು ಏನೇ "ರಲಿ ಪ್ರಭುಗಳ ಸ [illegible] ಮಾತ್ರ ನಿರ್ಧಾರವಾಗಿಯೇ ಇದೆ. ಸಂಸ್ಥಾನಗಳಿಗೆ ಸಾರ್ವಭೌಮಾಧಿಕಾರವ ನ್ನು ವಹಿಸಿಕೊಡಲು ಬ್ರಿಟನ್ನಿಗೆ ಅಧಿಕಾರ ವಿಲ್ಲವೆಂದೂ, ಡಾ॥ ಅಂಬೇಡ್ಕರರು ಹೇಳು ವರು. ಸಂಸ್ಥಾನಗಳು ಬ್ರಿಟಿಷರ ಅಧಿ ಕಾರದಿಂದ ಸ್ವತಂತ್ರವಾಗಿರಲು ಇರುವ ಮಾ ರ್ಗವೆಂದರೆ ಅವು ಭಾರತ ಯೂನಿಯನ್ನಿಗೆ ಸೇರುವುದೇ ಆಗಿದೆ; ಹಾಗಿಲ್ಲದೆ ತಾವು ಸ್ವ ತಂತ್ರರೆಂದು ಹೇಳಿಕೊಳ್ಳುವುದರಿಂದ ಅವ ರು ಅನರ್ಥಕ್ಕೆ ಮಾರ್ಗವನ್ನು ತಾವಾಗಿಯೇ ಮಾಡಿಕೊಂಡಂತಾಗುವುದು-ಎಂದೂ ಅವ ರು ತಿಳಿಸಿರುವರು.

ಅಧಿಕಾರಿಗಳಿಗೆ ರಜಾ

ಬೆಂಗಳೂರು ೧೮

ಚೀಫ್ ಇಂಜನೀಯರಾದ ಶ್ರೀ॥ ಕೆ. ಬಿ. ಅಯ್ಯಂಗಾರ್‌ರವರಿಗೆ ಅವರು ನಿವೃತ್ತರಾ ಗಲು ಪೂರ್ವಭಾವಿಯಾಗಿ ೩ ತಿಂಗಳು ೨೭ ದಿನ ರಜಾವನ್ನು, ಎಸ್. ಆರ್. ಶೇಷಾದ್ರಿ ಅಯ್ಯಂಗಾರ್ [illegible] ನಿವೃತ್ತರಾಗಲು ಪೂ ರ್ವಭಾವಿಯಾಗಿ [illegible] ದಿನ ರ ಜಾವನ್ನು, ಮೈಸೂರ್ [illegible] ಎಂ. ಎಸ್. [illegible] ನಿವೃತ್ತರಾಗ ಲು ಪೂರ್ವಭಾವಿಯಾಗಿ [illegible] ತಿಂಗಳ ರ ಜಾವನ್ನು ಕೊಡಲಾಗಿದೆ.

ಮುಷ್ಕರ ನಿಂತಿತು

ಸ್ವಂ. ವ.] ಶ್ರೀರಂಗಪಟ್ಟಣ ೧೮

ಹೆಚ್ಚಿನ ಸಂಬಳ, ತುಟ್ಟಿ ಭತ್ಯಗಳ ಬೇಡಿ ಕೆಯ ಮೇಲೆ ಮುಷ್ಕರ ಹೂಡಿದ್ದ ಇಲ್ಲಿನ ದೇವಸ್ಥಾನದ ನೌಕರರು ಮೊ ನ್ನೆಯಿಂದ ಮುಷ್ಕರ ಹೂಡಬೇಕಾಗಿತ್ತು. ಆದರೆ ಅಧಿಕಾರಿಗಳು ಮುಂದಿನ ತಿಂಗಳು ಅವರ ಸಂಬಳದ ಬಟವಾಡೆ ಮಾಡುವಾಗ ತುಟ್ಟಿ ಭತ್ಯವನ್ನು ಸೇರಿಸಿಕೊಡುವುದಾಗಿ ಯೂ, ಬೋನಸ್ ಕೊಡುವ ಬಗ್ಗೆ ಸರ್ಕಾರ [illegible] ಭರವಸೆ ಇತ್ತುದ ರಿಂದ ಮುಷ್ಕರವು ನಡೆಯಲಿಲ್ಲವೆಂದು ವರ ದಿಯಾಗಿದೆ.

ಮಿ॥ ಜಿನ್ನಾರವರಿಗೆ ಎಚ್ಚರಿಕೆ

ಗಡಿನಾಡಿನ ಸ್ವತಂತ್ರ ಗುಡ್ಡಗಾಡು ಪ್ರ ದೇಶದ ಎಂಟು ಮಂದಿ ಮಲ್ಲಿಕ್ಕರು ಮಿ॥ ಜಿನ್ನಾರವರ ಗಡಿನಾಡು ಪ್ರವಾಸದ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟು ತಮ್ಮ ಪ್ರದೇಶಕ್ಕೆ ಅವರು ಪ್ರವೇಶಿಸಕೂಡ ದೆಂದು ಎಚ್ಚರಿಸಿದ್ದಾರೆ. ಮುಂದುವರಿದು ಅವರು ತಮ್ಮ ಹೇಳಿಕೆಯಲ್ಲಿ [illegible] ಇಸ್ಲಾಂ [illegible] ವಿರುದ್ಧ [illegible] ಜಿನ್ನಾರವರು ಗಡಿನಾಡಿನ [illegible] ಬಹುದು. ಆದರೆ ಸ್ವತಂತ್ರ ಗುಡ್ಡಗಾಡು ಪ್ರದೇಶಕ್ಕೆ [illegible] ಆದರೆ ಅದು [illegible] ಹುದು. ಇದನ್ನು [illegible] ದುಷ್ಪರಿಣಾಮಗಳಿಗೆ [illegible] ಸರ್ಕಾರವನ್ನು [illegible] ಎಚ್ಚರಿಸಬೇಕಾಗಿದೆ ಎಂದು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಒತ್ತಾಯದ ನೌಕರಿ

ಮುಸ್ಲಿಂ ಬಹು ಸಂಖ್ಯಾತ ಪ್ರದೇಶಗಳ ಲ್ಲಿರುವ ಮುಸ್ಲಿಂ ನೌಕರರೂ ಸಹ ಸದ್ಯದ ಲ್ಲಿ ಸ್ಥಾಪಿತವಾಗಲಿರುವ ಪಾಕಿಸ್ತಾನ ಸರ ಕಾರದಲ್ಲಿ ತಾವಾಗಿಯೇ ಕೆಲಸಮಾಡಲು ಇಷ್ಟಪಡದಿದ್ದರೆ ಅವರಿಂದ ಒತ್ತಾಯ ಪೂ ರ್ವಕವಾಗಿ ಕೆಲಸ ತೆಗೆದುಕೊಳ್ಳಬೇಕೆಂದು ಲೀಗ್ ಸದಸ್ಯರು ಹೇಳುತ್ತಿರುವುದಾಗಿ ವ ರದಿಯಾಗಿದೆ.

ಸ್ವಾತಂತ್ರ್ಯ ಸಾಧನೆಗಾಗಿ ಕ್ರಾಂತಿ

ಬರ್ಮಕ್ಕೆ ಅಧಿಕಾರವನ್ನು ವರ್ಗಾಯಿ ಸುವ ವಿಚಾರದಲ್ಲಿ ಬ್ರಿಟನ್ನು ಇನ್ನೂ ಅದ ಕ್ಕೆ ಮಾರ್ಗವನ್ನೇನಾದರೂ ಒಡ್ಡಿ ತ ಡೆಯೊಡ್ಡಿದ್ದರೆ ನಮ್ಮ ಅಧಿಕಾರ ವ ರ್ಗಾವಣೆಯು ಸೌಹಾರ್ದಯುತವಾಗಿದಿ ದ್ದರೆ ಆಗ ಆ ವಿಚಾರವನ್ನು ರಾಷ್ಟ್ರೀಯ ಸ ಭೆಯು ಮುಂದೆ ತಂದು ನಮ್ಮ ಸ್ವಾತಂತ್ರ್ಯ ಸಾಧನೆಗಾಗಿ ಹಿಂಸಾತ್ಮಕವಾದ ಕ್ರಾಂ ತಿಯನ್ನೇ ಆರಂಭಿಸಬೇಕಾಗುವುದು—ಎಂ ಬದಾಗಿ ಜನರಲ್ ಆಂಗ್‌ಸಾನರು ಹೇಳುವರು.

ಮದರಾಸಿನಲ್ಲಿ ಸಕ್ಕರೆ ಮತ್ತು ಸಿಮೆಂಟ್ ತಯಾರಿ

ಮದರಾಸ್ ಪ್ರಾಂತದ ಕೆಲವು ಪ್ರದೇಶ ಗಳಲ್ಲಿ ಸಕ್ಕರೆ ಮತ್ತು ಸಿಮೆಂಟ್ ಕೈಗಾರಿಕೆ ಗಳನ್ನು ಪ್ರಾರಂಭಿಸಲು ಅಲ್ಲಿನ ಸರ್ಕಾರವು ನಿರ್ಧರಿಸಿರುವುದಾಗಿ ವರದಿ ಯಾಗಿದೆ. ಮದರಾಸ್ ಪ್ರಾಂತದ ಮುಖ್ಯ ಸಚಿ ವರಾದ ಶ್ರೀ॥ ಪ್ರಕಾಶಂರವರು ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವರಾದ ಶ್ರೀ॥ [illegible] ರವರೊಡನೆ ಈ ಬಗ್ಗೆ ಸಮಾಲೋಚನೆ ನಡೆಸಿದರೆಂದೂ ಸಹ ತಿಳಿದು ಬಂದಿದೆ.

ಭುವನೇಶ್ವರಿಯು ಒರಿಸ್ಸದ ರಾಜಧಾನಿಯಾಗುವುದು

ಭುವನೇಶ್ವರಿಯನ್ನು ಒರಿಸ್ಸ ಪ್ರಾಂತದ ರಾಜಧಾನಿಯನ್ನಾಗಿ ಮಾಡುವ [illegible] ಕ್ರಮವನ್ನು ಈ ವರ್ಷದಲ್ಲಿ [illegible] ಯೇ ಆರಂಭಿಸಲಾಗುವುದೆಂದೂ, ಇದ ಕ್ಕಾಗಿ ಸುಮಾರು ೨ ಕೋಟಿ ರೂ [illegible] ವಾಗಬಹುದೆಂದೂ, ಈ ನಗರದ ನಿರ್ಮಾ ಣವು ಸುಮಾರು ಐದು ವರ್ಷಗಳಲ್ಲಿ ಮುಗಿಯುವುದೆಂದೂ ಒರಿಸ್ಸ ಪ್ರಧಾನಿ ಶ್ರೀ॥ ಹರೇಕೃಷ್ಣ ಮೆಹ್ತಾಬರು ತಿಳಿಸುವರು.

ಶ್ರೀ ರಾಮೇಶ್ವರ ದೇವಾಲಯಕ್ಕೆ ಹರಿಜನರ ಪ್ರವೇಶ

ದಕ್ಷಿಣ ಭಾರತದ ಯಾತ್ರಾ ಸ್ಥಳ ವಾದ ರಾಮೇಶ್ವರದ ದೇವಸ್ಥಾನಕ್ಕೆ ಈ ತಿಂ ಗಳು ೨೯ ನೇ ತಾ॥ ಹರಿಜನರು ಪ್ರವೇಶಿ ಸುವರೆಂದು ಗೊತ್ತಾಗಿದೆ.

ಮಕ್ಕಳ ಜನನಕ್ಕಾಗಿ ವಿಶೇಷ ಬೋನಸ್

ಅಮೇರಿಕದಲ್ಲಿ ಇನ್ನು ಮುಂದೆ ನಾಲ್ಕು ಅಥವಾ ೫ ಮಕ್ಕಳು ಜನನವಾದರೆ ಅಂತ ಹ ಮಕ್ಕಳ ತಾಯಿಯರಿಗೆ ವಿಶೇಷ ಬೋ ನಸ್ಸು ಕೊಡಲಾಗುವುದು. ಈ ಬಗ್ಗೆ ಸೆನೆ ಟ್ಟಿನಲ್ಲಿ ಶಾಸನವನ್ನು ಮಾಡಲು ಮಸೂದೆ [illegible] ಮಂಡಿಸಲಾಗಿದೆ. ಬೋನಸ್ಸಿನ [illegible] ಪ್ರತಿ ಮಗುವಿಗೆ ೫ ಪೌಂಡಿನ [illegible] ಎಂದು ಹೇಳಲಾಗಿದೆ.

ಪರೋಪಜೀವಿ ನಿವಾರಿಸಲು ಕನ್ನಡಿ

[illegible] ನ್ಯೂಯಾರ್ಕ್ ೧೬

ಪ್ರತಿಬಿಂಬವನ್ನು ತೋರಿಸುವ ಎರಡು ಕನ್ನಡಿಗಳನ್ನು ಮನೆಯ ಮುಂಭಾಗ ಮ ತ್ತು ಒಳಭಾಗಗಳಲ್ಲಿ ಇರುತ್ತಾರೆಂದ ದ ರೋಡೆಕೋರರು ಬಾಗಿಲ ಬಳಿ ಬಂದೊಡ ನೆಯೇ ಅವರ ಪ್ರತಿಬಿಂಬವು ಒಳಭಾಗದಲ್ಲಿ [illegible] ನವರಿಗೆ ಕಾಣಬರುತ್ತದೆ. ಆದರಿಂದ ದರೋಡೆಯನ್ನು ನಿವಾರಿಸಲು ಅವಕಾಶ ವಾಗುವುದು. ಇದುವರೆಗೆ ಈ ಬಗ್ಗೆ ಪ್ರ ಯೋಗ ನಡೆಸಿ ೨೦ ದರೋಡೆಗಳನ್ನು ತಡೆ ಯಲಾಗಿದೆ.

ಮದರಾಸಿನಲ್ಲಿ ಮೋಟಾರುಗಳ ರಾಷ್ಟ್ರೀಕರಣ

ಮದರಾಸ್ ಸರ್ಕಾರದವರು ೬೭ ಲಕ್ಷ ರೂ ವೆಚ್ಚದಿಂದ ಅಲ್ಲಿರುವ ಎಲ್ಲ ಮೋಟಾ ರು ವಾಹನಗಳನ್ನೂ ರಾಷ್ಟ್ರೀಕರಿಸಲು ನಿರ್ಧರಿಸಿರುವರು. ಈ ರಾಷ್ಟ್ರೀಕರಣವು ಬರುವ ಅಕ್ಟೋಬರ್ ೧ ರಿಂದ ಜಾರಿಗೆ ಬ ರುವುದು.

ಶಾಲಾ ಪ್ರವೇಶಕ್ಕೆ ತೊಂದರೆ

ಸ್ವಂ. ವ.] ಶ್ರೀರಂಗಪಟ್ಟಣ ೧೮

ಇಲ್ಲಿನ ಮಾಧ್ಯಮಿಕ ಶಾಲೆಯಲ್ಲಿ ನಾ ಲ್ಕು ತರಗತಿಗಳನ್ನಾಗಿ ಒಂದೊಂದೇ ಸೆಕ್ಷನ್ ಇದ್ದುದರಿಂದ ವಿದ್ಯಾರ್ಥಿಗಳಿಗೆ ಪ್ರವೇಶ ಸಿ ಗದೆ ತೊಂದರೆಯಾಗಿದೆ. [illegible] ವಿದ್ಯಾರ್ಥಿ [illegible] ಇದೇ ಕಟ್ಟಡದಲ್ಲಿ [illegible] ಸಂಬಂಧಪಟ್ಟ ಅಧಿಕಾರಿಗಳು [illegible] ಕ್ರಮ ಕೈಗೊಳ್ಳಬೇಕೆಂ ದು ಪ್ರಾರ್ಥಿಸಲಾಗಿದೆ.

ಭಾರತದ ನಾಯಕರುಗಳಿಗೆ ಅಭಿನಂದನೆ

ಶಾಸನ ಸಭೆಯ ಆರಂಭ

ಸ್ವಂ. ವ. ವರದಿ] ಬೆಂಗಳೂರು ೧

ಈ ದಿನ ಶಾಸನ ಸಭೆಯ ಅಧಿವೇಶನ ಶ್ರೀ ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷ ತೆಯಲ್ಲಿ ಆರಂಭವಾಯಿತು. ನೂತನ ಸದ ಸ್ಯರುಗಳಾದ ಜಾನ್‌ಡೇನ್ಸ್, ಆರ್. ಮಾರಿಸನ್ ಮತ್ತು ಮಹಮ್ಮದ್ ಹನೀಫ ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸಿ ದರು. ಕಾರ್ಯದರ್ಶಿಗಳು ಶಾಸನ ಸಭಾ ವರ ದಿಯನ್ನು ಓದಿದ ನಂತರ ಪ್ರಶ್ನೋತ್ತರ ಆರಂಭವಾಯಿತು. ಶ್ರೀ ಎಂ. ಎ. ಗೋ ಪಾಲಸ್ವಾಮಿ ಅಯ್ಯಂಗಾರ್‌ರವರು ಮೈಸೂ ರು ಸರ್ಕಾರವು ಕೇ॥ ೩ ರಂತೆ ತೆಗೆದ ಸಾಲ ವಿಷಯವಾಗಿ ಕೇಳಿದ ಪ್ರಶ್ನೆಗೆ ಶ್ರೀ ಶಾ ಣ್ಣನವರು ೫೦೮,೦೦೬ ಕೋಟಿ ರೂ. ಗ ಳ ಸಾಲವಾದುದೆಂದೂ ೧,೩೫,೦೦ ರೂ. ಗ ನ್ನು ಕಮೀಷನ್, ಪ್ರಕಟಣೆ ಮುಂತಾದು ಗಳಿಗೆ ಕೊಡಲಾಯಿತೆಂದೂ, ಒಂದೂವರೆ ಕೋಟಿ ರೂ ಗಳನ್ನು ಮೈಸೂರು ಬ್ಯಾಂ ಕಿನಲ್ಲಿ ಇಡಲಾಗಿದೆಯೆಂದೂ ತಿಳಿಸಿದರು.

೧ ರಾಜಧಾನಿಯ ಕ್ರಾಫರ್ಡ್ ಹಾಲ್ ವಿ ಷಯವಾಗಿ ಶ್ರೀ ಹೆಚ್. ಎಸ್. ರುದ್ರಪ್ಪನವರು ಕೇಳಿದ ಪ್ರಶ್ನೆಗೆ ಮಾರಾಮತ್ ಸಚಿವರಾ ದ ಶ್ರೀ ಎಚ್. ಸಿದ್ದಪ್ಪನವರು ಉತ್ತರವೀಯು ತ್ತಾ ಕಟ್ಟಡದ ನಿರ್ಮಾಣಕ್ಕೆ ೧೧,೫೫,೦೦ ರೂ ಗಳನ್ನು ಅಂದಾಜು ಮಾಡಲಾಗಿ ದೆಯೆಂದೂ ಈ ಬಗ್ಗೆ ಮಿ॥ ಕ್ರಾಫರ್ಡ್‌ರವ ರು ೧,೫೦,೦೦೦ ರೂ ಗಳನ್ನು ದಾನ ಮಾ ಡಿರುವರೆಂದೂ, ಇನ್ನು ಮುಂದೆ ಆ ಕಟ್ಟಡ ದಲ್ಲಿ ಸೆನೆಟ್ ಸಭೆ ಪ್ರ॥ ಪ್ರ॥ ಸಭೆ ನ್ಯಾಯ ವಿಧಾಯಕ ಸಭೆ ಮುಂತಾದುವುಗಳನ್ನು ಜರುಗಿಸಲಾಗುವುದೆಂದೂ ತಿಳಿಸಿದರು. ಆ ಕಟ್ಟಡದ ನಿರ್ಮಾಣಕ್ಕೆ ತಗಲುವ ಸೀಮೆಂಟನ್ನು ಉಪಯೋಗಿಸಲಾಗುತ್ತಿದೆಯೋ ಎಂದು ಶ್ರೀ ಟಿ. ಮರಿಯಪ್ಪನವರು ಕೇಳಿದ ಪ್ರಶ್ನೆ ಗೆ ಸಚಿವರು ಪರಿಶೀಲಿಸಲಾಗುವುದೆಂದು ತಿಳಿಸಿದರು.

೧೯೪೬ ನೇ ಸಾಲಿನಲ್ಲಿ ಚಿನ್ನದ ಗಣಿಗೆ ಪರಿಹಾರವಾಗಿ ೭೫ ಲಕ್ಷ ರೂ ಕೊಡಲಾ ಗಿದೆಯೆಂದೂ, ಇನ್ನೂ ಎಷ್ಟು ಕೊಡಬೇಕಾಗು ವುದು ಎಂಬುದನ್ನು ಲೆಕ್ಕಾಚಾರ ಮಾಡಿಲ್ಲವೆಂದೂ ಹೆಚ್. ಎಸ್. ರುದ್ರಪ್ಪನ ವರ ಪ್ರಶ್ನೆಗೆ ಉತ್ತರವಾಗಿ ಶ್ರೀ ಶಾಮಣ್ಣ ನವರು ತಿಳಿಸಿದರು.

ಭಾರತ ನಾಯಕರುಗಳಿಗೆ ಅಭಿನಂದನೆ

ಭಾರತದ ಪ್ರಮುಖ ನಾಯಕರುಗಳು ಮೌಂಟ್‌ಬ್ಯಾಟನ್ನರ ಸಲಹೆಯನ್ನು ಅಂ ಗೀಕರಿಸಿ ಭಾರತದ ಸ್ವಾತಂತ್ರ್ಯ ಸಾಧನೆ ಮಾ ಡಿದ್ದಕ್ಕೆ ನಾನಾ ನಾಯಕರುಗಳನ್ನು ಅಭಿ ನಂದಿಸುವ ನಿರ್ಣಯವನ್ನು ಮಿ॥ ಸೈಯದ್ ಅಬ್ದುಲ್ ರಹಮಾನರು ಮಂಡಿಸಿದರು. ಶ್ರೀ ಟಿ ಸುಬ್ರಹ್ಮಣ್ಯನವರು ನಿರ್ಣಯವ ನ್ನು ಸಮರ್ಥಿಸುತ್ತಾ ನಾಯಕರನ್ನು ಅಭಿ ನಂದಿಸಿ ಭಾರತವು ಇಬ್ಭಾಗವಾಗುವುದನ್ನು ತಾವು ಒಪ್ಪುವುದಿಲ್ಲವೆಂದು ತಿಳಿಸಿದರು. ಶ್ರೀ [illegible] ಶ್ರೀನಿವಾಸ ಅಯ್ಯಂಗಾ ರ್, ದೇವರಾಜ್ ಶಿವರಾಂರವರುಗಳು ನಿ ರ್ಣಯವನ್ನು ಬಲಪಡಿಸಿ ಭಾಷಣಮಾಡಿ ದರು.

ರಾಜಭಕ್ತಿ ನಿರ್ಣಯ

ಮೈಸೂರು ಸಂಸ್ಥಾನವು ರಾಷ್ಟ್ರೀಯ ಸ ಭೆಗೆ ಸೇರಬೇಕೆಂದು ನಿರ್ಧರಿಸಿರುವುದಕ್ಕಾಗಿ ಮಹಾರಾಜರಿಗೆ ರಾಜಭಕ್ತಿಯನ್ನು ಸಲ್ಲಿಸುವ ನಿರ್ಣಯವು ಶಾಸನ ಸಭೆಯಲ್ಲಿ ಸರ್ವಾನು ಮತದಿಂದ ಅಂಗೀಕೃತವಾಯಿತು.

ಸಾಧ್ವಿ

ತಾ॥ ೧೯-೬-೪೭ ಗುರುವಾರ

ನಗರದ ಬಸ್ಸು ವ್ಯವಸ್ಥೆ

ಮೈಸೂರು ನಗರದಲ್ಲಿ ಸಿಟಿ ಬಸ್ ಸರ್ವೀಸಿನ ವ್ಯವಸ್ಥೆಯಾಗಿ ಸುಮಾರು ೮-೧೦ ವರ್ಷಗಳಾಗುತ್ತಾ ಬಂದರೂ ಸಂಚಾರ ಸೌಕರ್ಯಗಳ ಇನ್ನೂ ಒಂದು ವ್ಯವಸ್ಥಿತ ಮಾರ್ಗಕ್ಕೆ ಬಂದಿರುವುದಿಲ್ಲ. ದೇವರಾಜ ಮಾರ್ಕೆಟ್ಟಿನಿಂದ ಚಾಮುಂಡಿ ಎಕ್ಸ್‌ಟೆನ್‌ಷನ್, ಗೈಲ್ಸ್ ಮಾರ್ಕೆಟ್, ಮತ್ತು ಒಂಟಿಕೊಪ್ಪಲ್ ಬಡಾವಣೆ ಈ ಕೆಲವು ರಸ್ತೆಗಳು ವಿನಃ ನರಸಿಂಹರಾಜ ಮೊಹಲ್ಲಾ, ಕೃಷ್ಣರಾಜೇಂದ್ರ ಮಿಲ್, ಫಿಲೋಮಿನಾ ಕಾಲೇಜು ಇವೇ ಮೊದಲಾದ ದೂರ ಪ್ರದೇಶಗಳಿಗೆ ಸ್ವಲ್ಪವಾದರೂ ಸಂಚಾರ ಸೌಲಭ್ಯವೇ ಇದ್ದಂತಿಲ್ಲ. ಹಾಲಿ ನಡೆಯುತ್ತಿರುವ ಬಸ್ಸು ಸಂಚಾರದಲ್ಲೂ ಕೂಡ ಬಸ್ಸುಗಳು ಹೊರಡುವ ಕಾಲ ಪಟ್ಟಿ ಇತ್ಯಾದಿ ಅಥವಾ ಆ ಬಗ್ಗೆ ... ಜನರಿಗೆಲ್ಲಾ ಸ್ಪಷ್ಟವಾಗಿ ಗೊತ್ತಾಗುವ ಹಾಗೆ ... ಪ್ರಕಟಿಸಲೇಬೇಕು. ... ಇತರ ಕಡೆಗಳಲ್ಲಿ ಇರುವ ಹಾಗೆ ... ನಿಸ್ಸಂದೇಹವಾಗಿ ಸಿಟಿ ಬಸ್ಸುಗಳು ... ಜನರಿಗೆ ಸಂಚಾರ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು. ... ಹೆಚ್ಚು ಹಣವನ್ನು ... ಮುಂದೆ ಬರುವ ಹಲವಾರು ಜನರಿಗೆ ... ಸವಲತ್ತುಗಳೂ ... ಇಂತಹ ... ಸಾರ್ವಜನಿಕ ಹಿತದೃಷ್ಟಿಯಿಂದ ... ಮಾಡಬೇಕಾದುದು ಅಗತ್ಯ. ... ಕಂಟ್ರೋಲರ್ ... ಪ್ರಯಾಣಿಕರ ... ಸಿಟಿ ಬಸ್ಸು ... ಒಂದರಿಂದ ಒಂದಕ್ಕೆ ... ಬಸ್ಸುಗಳು ಹೊರಡತಕ್ಕ ಕಾಲ ವ್ಯವಸ್ಥೆ ಇಲ್ಲದಿರುವುದು ... ಮಾಡುವುದು ಸೂಕ್ತವಾಗಿದೆ.

ಜನಾನುಕೂಲವನ್ನು ಹೆಚ್ಚು ಮಾಡಬೇಕೆಂಬ ಧ್ಯೇಯದಿಂದ ... ಸಿಟಿ ಬಸ್ ಸರ್ವೀಸನ್ನು ವ್ಯವಸ್ಥೆಗೊಳಿಸಿ ನಡೆಸಲು ... ಸರ್ಕಾರದಿಂದ ಎರಡು ಲಕ್ಷದ ... ಸಾಲವನ್ನು ... ಅದನ್ನು ... ಬಸ್ ಸರ್ವೀಸ್ ವ್ಯವಸ್ಥೆಯನ್ನು ... ಸೌಲಭ್ಯಗಳು ... ಸಾರ್ವಜನಿಕ ... ಮೈಸೂರಿನ ... ಸ್ಥೆಗಳನ್ನು ... ಕ್ಷಿಸಿ

ಸಾಧು

(ಬೆಂಗಳೂರಿಗೆ ... ಮತ್ತು

ಪೌರಸಭಾ ಚುನಾವಣೆ

ಸ್ವಾಸ] ಗುಂಡ್ಲುಪೇಟೆ ೧೬

ಕಳೆದ ೧೧ ನೇ ತಾ॥ ನಡೆದ ಇಲ್ಲಿನ ಪುರಸಭಾ ಚುನಾವಣೆಯಲ್ಲಿ ಎ ಡಿವಿಜನ್ನಿನಿಂದ ಶ್ರೀಗಳಾದ ಜಿ. ಎ. ... ಗಫಾರ್ ಸಾಬ್, ಆರ್. ನಂಜುಂಡಪ್ಪ, ಜಿ. ಎಸ್. ಕೃಷ್ಣಪ್ಪ, ಪಿ. ರಾಜಪ್ಪ, ಜಿ. ಬಿ. ಪಿ. ಪೀರ್ ಸಾಬ್, ಜಿ. ಬಿ. ನಾಗಪ್ಪ, ಜಿ. ಎಸ್. ಮಹಮ್ಮದ್ ಸೈಕೊದ್ದೀನರವರೂ ಬಿ ಡಿವಿಜನ್ನಿನಿಂದ ಶ್ರೀಗಳಾದ ಜಿ. ಮಹಬೂಬ್ ಖಾನ್ ಸಾಬ್, ಸಿ. ಬಸಪ್ಪ, ಜಿ. ಬಿ. ಚಿಕ್ಕಣ್ಣ, ಎಂ. ಕೆಂಪಣ್ಣ, ಜಿ. ಸಿ. ವೀರಪ್ಪ, ಜಿ. ವಿ. ನಾಗಣ್ಣಾಚಾರ್ಯ, ಎಚ್. ವಿ. ವೆಂಕಟಶೆಟ್ಟಿ ಮತ್ತು ಎಂ. ಮಾದನಾಯ್ಕನವರೂ ಜಯಶಾಲಿಗಳಾಗಿರುತ್ತಾರೆ.

ಇಂಡಿಯನ್ ರಿಪಬ್ಲಿಕ್ಕಿಗೆ ಹರಿಜನ ಅಧ್ಯಕ್ಷಿಣಿ

ಸ್ವತಂತ್ರ ಭಾರತದಲ್ಲಿ ಇಂಗ್ಲಿಷ್ ಭಾಷೆಯು ಅವಶ್ಯಕತೆಯಿರುವುದಿಲ್ಲ. ... ವಿದ್ಯಾವಂತರಾಗಬೇಕಾದ ಅವಶ್ಯಕತೆ ಇಲ್ಲ; ... ಕುರಿತು ... ಕ್ರಿಪ್ಸ್ ... ಸ್ವತಂತ್ರ ಭಾರತ ... ಪ್ರಥಮ ಅಧ್ಯಕ್ಷಿಣಿಯಾಗಬೇಕೆಂದು ... ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ... ಸಿದ್ದಾರೆ.

ರಸ್ತೆ ದುರಸ್ತಿ

... ಮಾಂಬಳ್ಳಿ ರಸ್ತೆಯು ... ಬಹಳ ದಿನಗಳಾಗಿರುವುದರಿಂದ ಪ್ರಯಾಣಿಕ್ಕೆ ಬಹಳ ಅನಾನುಕೂಲವಾಗಿದೆಯಲ್ಲದೆ, ಮೋಟಾರು ಮತ್ತು ಬಸ್ಸುಗಳಲ್ಲಿ ಸಂಚರಿಸುವವರಿಗೆ ಇದರಿಂದ ... ಅಪಘಾತಗಳು ಉಂಟಾಗುವ ಸಂಭವವಿರುವುದರಿಂದ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ರಿಪೇರಿ ಮಾಡಿಸಿಕೊಡಬೇಕೆಂದು ಕೋರಿ ಓರ್ವ ಪ್ರಯಾಣಿಕರು ಪತ್ರ ಬರೆದಿರುವರು.

ಪ್ಯಾರಿಸ್ಸಿಗೆ ರಾಜೇಂದ್ರ ಪ್ರಸಾದ್

ಜುಲೈ ತಿಂಗಳಲ್ಲಿ ಪ್ಯಾರಿಸ್ಸಿನಲ್ಲಿ ಸೇರಲಿರುವ ಪ್ರಪಂಚ ಆಹಾರ ಸಂಸ್ಥೆಯಲ್ಲಿ ಭಾರತಕ್ಕೆ ಹೆಚ್ಚು ಪ್ರಮಾಣದಲ್ಲಿ ಆಹಾರ ಧಾನ್ಯಗಳ ಅಮದನ್ನು ಏರ್ಪಡಿಸಲು ಕೇಂದ್ರ ಸರ್ಕಾರದ ಆಹಾರ ಸಚಿವರಾದ ಡಾ॥ ರಾಜೇಂದ್ರ ಪ್ರಸಾದರು ಬರುವ ತಿಂಗಳ ಮೊದಲನೇ ವಾರದಲ್ಲಿ ಅಲ್ಲಿಗೆ ತೆರಳಿ ... ಸಂಭವವಿದೆ.

ಗುಪ್ತಗಾಮಿನಲ್ಲಿ ಬಾಂಬುಗಳ ತಯಾರಿ

ಗಡಿನಾಡಿನ ಗುಪ್ತಗಾಮಿ ಮುಂದಾಳು ... ಫಕೀರನು ಅಲ್ಲಿನ ಗುಹೆಗಳಲ್ಲಿ ... ಗುಂಡಿನ ಕಾರ್ಖಾನೆಯನ್ನು ... ಪ್ರಮಾಣದಲ್ಲಿ ಬಾಂಬುಗಳ ತಯಾರಿಕೆ ಬಹಳ ಭರದಿಂದ ನಡೆಸುತ್ತಿರುವನೆಂದು ವರದಿಯಾಗಿದೆ.

ಶ್ರೀ ಕೃಷ್ಣ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ ೪೧೧

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಗಳಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ. ಎಲ್ಲಾ ತರಹದ ಬೆಳ್ಳಿಯ ಪದಗಳೂ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ.

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

The National Institute of Engineering, Mysore.

(Registered under the Mysore Societies Registration act III of 1904)

The Diploma Classes in Civil Engineering will open on Wednesday the 2nd July 1947. The minimum qualification for admission will be S.S.L.C (E.P.S. or E.C. and P.S.) with Physics, Chemistry and Mathematics as optionals or any other equivalent examination.

The Institute will train students for its own Diploma Examinations.

Applications should reach the Principal before the [illegible]th June 1947 and be accompanied by a Registration fee of Re. 1 which will not be refunded in any case.

Names of applicants selected for admission will be notified on the Notice Board of the Office in "Margosa Lodge" [illegible] Road, Chamarajapuram, Mysore [illegible] June [illegible] only to mofussil [illegible] by post [illegible].

For printed Application forms please apply to the Principal enclosing [illegible] postage stamps.

Chamarajapuram)
Mysore, [illegible] 1947)

S. RAMASWAMY,
Principal.

ನೂತನ ದಂಪತಿಗಳ ವಿಹಾರದ ದುರಂತ

ಗಿಲ್ಗಿಟ್] ಶ್ರೀನಗರ ೧೫

... ಎಂಬ ಹಳ್ಳಿಯಲ್ಲಿ ಮದುವೆಯಾದ ಮೇಲೆ ಮೊದಲು ಬಾರಿ ದಂಪತಿಗಳು ವಿಹರಿಸುತ್ತಿದ್ದಾಗ ಪತ್ನಿಯು ಸಾವಿಗೆ ತುತ್ತಾದಳು. ಆಕೆಯು ಮಂಚವೊಂದರ ಮೇಲೆ ಕುಳಿತು ಕಾಲನ್ನು ಕೆಳಗೆ ಬಿಟ್ಟಿದ್ದಾಗ ನಾಗರ ಹಾವೊಂದು ಕಾಲನ್ನು ಕಚ್ಚಿ ಆವಳ ಸಾವಿಗೆ ಕಾರಣವಾಯಿತು. ಆಕೆಯ ದೇಹವನ್ನು ಸ್ಮಶಾನಕ್ಕೆ ಕೊಂಡೊಯ್ದಾಗ ಆಕೆಯ ಪತಿಯು ... ದಿಂದ ರೋಧಿಸುತ್ತಾ ಮನೆಯಿಂದ ಹೋದನು.

ರಾಜಕಮಲ್,

ತಾ॥ ೨೦-೬-೪೭ ರಿಂದ

9 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ

೧೧ (ತೆಲುಗು)

ತಾ॥ ೨೦-೬-೪೭ ರಿಂದ

7 ದಿನಗಳು

ಪ್ರತಿದಿನ ಪ್ರಾತಃಕಾಲ ೧೧-೩೦ ಕ.

'ಅಂಬ್ ಕಿ ಶರಂ'

(ಹಿಂದಿ)

—: ತಾರಾಗಣ :—

ಕೌಶಲ್ಯ, ಪೃಥ್ವಿರಾಜ್, ತ್ರಿಲೋಕ್ ಕಪೂರ್, ಗುಲಾಬ್ ಮತ್ತು

ನಾಯಂಪಲ್ಲಿ

ಅನೋಘ ಕುಸ್ತಿಗಳು

ನಂಜನಗೂಡಿನಲ್ಲಿ ಕಳೆದ ಏಪ್ರಿಲ್ ೨೮ ರಲ್ಲಿ ನಡೆಯಬೇಕಾಗಿದ್ದ ಈ ಕುಸ್ತಿಯು ನಿಂತು ಹೋಗಿತ್ತು. ಈಗ ನ್ಯಾಯಸ್ಥರ ತೀರ್ಮಾನದ ಮೇರೆ ಇದೇ ಮಾಹೆ ೨೨ ನೇ ತಾ॥ ಭಾನುವಾರ ಮೈಸೂರು ಟೈಗರ್ ನಾರಾಯಣನವರ ಪಾಗಿದಾರ್ ನ್ಯೆ ... ದ ... ದ್ಯ ... ರ

ಪೈ॥ ರಾಮುವಿಗೂ

ದೇವರಸನಹಳ್ಳಿ ಪಟ್ಲೇಗೌಡರ ಪಾಗಿದಾರ್ ಚಿಕ್ಕೆಂದ್ರು

ಪೈ॥ ಚಿಕ್ಕಯ್ಯನಿಗೂ

ಮಾಡಿಕವಾಗಿ ಜನ್ನಿನಿಂದ ಕುಸ್ತಿ ನಡೆಯುತ್ತೆ.

ಕೆಂ॥ ಸಾ॥ ಅಂ॥ ಮಾಯಪ್ಪ,

ನಂಜನಗೂಡು.

Edited printed and published by A. R. Nagarajan at the Sadhvi Press D. Subbaiah Road Mysore

...ಚಾರಣಾ ಸಮಿತಿ ನೇಮಕ ವಾಗಲಿ

...ಸನ ಸಭೆಯಲ್ಲಿ ನಿಲುವಳಿ ನಿರ್ಣಯ

...ಸು.ಪ್ರೋ] ಬೆಂಗಳೂರು ೨೦

ಜಿಲ್ಲಾ ಬೋರ್ಡುಗಳ ಅಧ್ಯಕ್ಷ ಚುನಾ... ಣೆಯಲ್ಲಿ ಅಧಿಕಾರಿಗಳ ಕೈವಾಡ ನಡೆಯಿ... ಎಂದೂ ಈ ಬಗ್ಗೆ ವಿಚಾರಣೆ ನಡೆಯಬೇ... ಎಂದೂ ಕಾಂಗ್ರೆಸ್ ಪಕ್ಷದ ಸದಸ್ಯರಾದ ... ಮರಿಯಪ್ಪನವರು ನಿನ್ನೆ ದಿನ ಶಾಸನ ... ಭೆಯಲ್ಲಿ ನಿ ಲು ವ ಳಿ ನಿರ್ಣಯವನ್ನು ... ಮಂಡಿಸಿದರು. ಶ್ರೀಗಳಾದ ಚೆನ್ನಗಿರಿ ... ಯ್ಯ, ಚಿನ್ನಬಸಪ್ಪ ಮತ್ತು ಕೋಲಾರ ... ಶ್ರೀ|| ನಾಗಯ್ಯ ರೆಡ್ಡಿಯವರು ನಿರ್ಣ ... ಕ್ಕೆ ಬೆಂಬಲವಿತ್ತು ಭಾಷಣ ಮಾಡಿದ ... ನಿರ್ಣಯದ ಮೇಲೆ ಮಾತನಾಡು ... ತ್ತ ಕಾಂಗ್ರೆಸ್ಸಿನ ಉನ್ನತಿಯನ್ನು ತಡೆಗ ... ಟ್ಟುವ ನೀತಿಯನ್ನೇ ಸರ್ಕಾರದವರು ಅನು ... ಸರಿಸುತ್ತಿರುವರೆಂದೂ, ರೆವಿನ್ಯೂ ಸಚಿವರೇ ... ಮೊದಲಾದವರು ಮತ್ತು ಇತರ ಅನೇಕ ... ನ್ನ ಅಧಿಕಾರಿಗಳೂ ಸಹ ಅಂತಹ ನೀತಿ ... ಯನ್ನನುಸರಿಸಿದುದು ಖಂಡನಾರ್ಹವೆಂ ... ದೂ ಹೇಳಿ ಶ್ರೀ|| ಟಿ ಮರಿಯಪ್ಪನವರು ... ಈ ಬಗ್ಗೆ ವಿಚಾರಣಾ ಸಮಿತಿಯೊಂದನ್ನು ... ನೇಮಿಸಬೇಕೆಂದು ಸೂಚಿಸಿದರು. ಕೋ ... ಲಾರ ಜಿಲ್ಲೆಯಲ್ಲಿ ಜಿಲ್ಲಾ ಬೋರ್ಡ್ ಅಧ್ಯ ... ಕ್ಷರ ಚುನಾವಣೆಗಳಲ್ಲಿ ಅಧಿಕಾರಿಗಳ ಕೈವಾ ... ಡ ಬಹಳವಾಗಿತ್ತು. ಸರ್ಕಾರದವರು ಚು ... ನಾವಣೆಗಳಲ್ಲಿ ಕೈಗೊಂಡ ಮಾರ್ಗ ಖಂಡ ... ನಾರ್ಹವಾದುದು. ರೆವಿನ್ಯೂ ಸಚಿವರೂ, ... ಅಧಿಕಾರಿಗಳೂ ಸಹ ಕಾಂಗ್ರೆಸ್ ಸದಸ್ಯರು ... ಜಯಶಾಲಿಗಳಾಗದಂತೆ ನೋಡಲು ಅನೇಕ ... ಬಗೆಯಾಗಿ ಗುಪ್ತ ಸಂಚು ನಡೆಸಿದ್ದಾರೆ. ... ಇದರ ಪರಿಶೀಲನೆಗೆ ಒಂದು ವಿಚಾರಣಾ ... ಸಮಿತಿಯ ರಚನೆ ಅತ್ಯಗತ್ಯ—ಎಂಬುದಾ ... ಗಿ ಕೋಲಾರದ ಶ್ರೀ|| ನಾಗಯ್ಯ ರೆಡ್ಡಿಯ ... ವರು ನಿರ್ಣಯಕ್ಕೆ ಬೆಂಬಲವಿತ್ತು ಮಾತ ... ನಾಡಿದರು. ಅಧಿಕಾರಿಗಳ ಮೇಲಿನ ಟೀ ... ಕೆಯಿಂದ ಆರೋಪಣೆಗಳಿಗೆ ತಾವು ಜವಾ ... ಬು ಒದಗಿಸುವುದಾಗಿಯೂ, ಮೇಲ್ಕಂಡ ... ತಮ್ಮ ಹೇಳಿಕೆಯು ಸತ್ಯವಾದುದಾಗಿದ್ದರೆ ... ಕೂಡಲೇ ರೆವಿನ್ಯೂ ಸಚಿವರೇ ಮೊದಲಾದ ... ವರನ್ನು ಕೆಲಸದಿಂದ ವಜಾ ಮಾಡಬೇಕೆಂ ... ದೂ ಹಾಗಿಲ್ಲವೆ ತಮ್ಮ ಹೇಳಿಕೆಯು ವಿಚಾ ... ರಣಾ ಸಮಿತಿಯವರಿಗೆ ಅಸಾಧ್ಯವಾದುದೆಂ ... ದು ಕಂಡು ಬಂದಲ್ಲಿ ತಮ್ಮನ್ನು ದಸ್ತಗಿರಿ ... ಮಾಡಿ ಕ್ರಮ ಜರಗಿಸಬಹುದೆಂದೂ ಸಹ ... ಶ್ರೀ|| ರೆಡ್ಡಿಯವರು ಮುಂದುವರೆದು ನು ... ಡಿದರು. ಶ್ರೀಗಳಾದ ದಿವಾನ್ ಬಹದ್ದೂ ... ರ್ ವಾಸುದೇವಯ್ಯ, ನೇರಳೆ ಮಾದಯ್ಯ

ಹರಾಜು ನೋಟೀಸು

ರನ್ನಿಂಗ್ ಕಂಡಿಷನ್ನಿನಲ್ಲಿರುವ ಕೆಲವು ಮೋಟಾರು ಕಾರುಗಳು, ಬಸ್ಸುಗಳು ಮತ್ತು ಲಾರಿಗಳು 1947 ನೇ ಜೂನ್ 21 ಮತ್ತು 22 ನೇ ತಾರೀಖುಗಳಲ್ಲಿ ಬೆಳಗ್ಗೆ 9 ಘಂಟೆಯಿಂದ 1 ಘಂಟೆವರೆಗೆ ಮೈಸೂರು ಪ್ಯಾಲೇಸ್ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

ವಿವರಗಳಿಗಾಗಿ, 1947 ನೇ ಜೂನ್ 7 ಮತ್ತು 14 ನೇ ತಾರೀಖುಗಳ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರಕಟಣೆಯನ್ನು ದಯವಿಟ್ಟು ನೋಡಿ.

ಸೂಪರಿಂಟೆಂಡೆಂಟ್,

ಪ್ಯಾಲೇಸ್ ಗ್ಯಾರೇಜ್

ರೋ. ನಂ. 391 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೦—೬—೪೭ [ಸಂಚಿಕೆ ೨೬೮

ಸಿಲೋನಿನಲ್ಲಿ ಶೀಘ್ರದಲ್ಲೇ ಡೊಮಿನಿಯನ್ ಸರ್ಕಾರ

ಚುನಾಯಿತ ಪ್ರತಿನಿಧಿಗಳೇ ಹೋಗಬೇಕು

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ನಿರ್ಣಯ

ಸ್ವಂ ಸು ಪ್ರೋ] ಬೆಂಗಳೂರು ೨೦

ಮೈಸೂರು ಭಾರತ ರಾಜ್ಯಾಂಗ ರಚನಾ ಸಭೆಗೆ ಸೇರಲು ನಿರ್ಧರಿಸಿರುವುದರಿಂದ ಅದಕ್ಕೆ ಸಂಸ್ಥಾನದ ಪರವಾಗಿ ಹೋಗುವ ಎಲ್ಲ ಸದಸ್ಯರೂ ಚುನಾಯಿತರಾದವರೇ ಆಗಿರಬೇಕು. ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರದ ಸ್ಥಾಪನೆಯ ಅಂಗವಾಗಿ ತಾತ್ಕಾಲಿಕ ಸರ್ಕಾರದ ರಚನೆಯಾಗಬೇಕೆಂಬ ಕಾಂಗ್ರೆಸ್ಸಿನ ಬೇಡಿಕೆಗೆ ದಿವಾನರ ಹೇಳಿಕೆಯಲ್ಲಿ ಯಾವ ಬಗೆಯ ಉತ್ತರವೂ ಇಲ್ಲದಿರುವುದರಿಂದ ಈ ಬಗ್ಗೆ ದಿವಾನರಿಗೆ ಪತ್ರ ಬರೆಯಬೇಕು; ಜಿಲ್ಲಾ ಬೋರ್ಡುಗಳ ಅಧ್ಯಕ್ಷ ಚುನಾವಣೆಯಲ್ಲಿ ಸರ್ಕಾರದವರು ಅನುಸರಿಸಿದ ನೀತಿಯ ವಿವರಗಳಿಗಾಗಿ ಕೂಡಲೇ ವಿಚಾರಣಾ ಸಮಿತಿಯೊಂದರ ರಚನೆಯಾಗಬೇಕು-ಎಂಬ ನಿರ್ಣಯಗಳು ನಿನ್ನೆಗೆ ಮುಕ್ತಾಯಗೊಂಡ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಅಂಗೀಕೃತವಾದವು.

ಗಡಿನಾಡಿಗೆ ಹೊಸ ಗವರ್ನರ್

ಗಡಿನಾಡಿನ ಭವಿಷ್ಯದ ಬಗ್ಗೆ ನಡೆಯಬೇಕಾಗಿರುವ ರೆಫರೆಂಡಂ ಅತಿ ಮುಖ್ಯವಾದುದಾಗಿರುವುದಾಗಿಯೂ, ತನ್ನನ್ನು ಪಕ್ಷಪಾತ ಮನೋಭಾವವುಳ್ಳರೆಂದು ಪಠಾಣರು ಹೇಳುತ್ತಿರುವುದರಿಂದ ರೆಫರೆಂಡಂ ಅವಧಿಯಲ್ಲಿ ತಮಗೆ ರಜಾ ಕೊಡಬೇಕೆಂದು ಗಡಿನಾಡಿನ ಗವರ್ನರಾದ ಸರ್ ಓಲಾಫ್ ಕ್ಯಾರೋರವರು ವೈಸರಾಯರಿಗೆ ಪತ್ರ ಬರೆದಿದ್ದರೆಂದು ವರದಿಯಾಗಿದೆ. ಅವರ ಪ್ರಾರ್ಥನೆಯಂತೆ ವೈಸರಾಯರು ಅವರಿಗೆ ರಜಾ ಕೊಟ್ಟು ಸರ್ ರಾಬ್ ಲಾಕ್‌ಹಾರ್ಟರನ್ನು ಅಲ್ಲಿನ ಹಂಗಾಮಿ ಗವರ್ನರಾಗಿ ನೇಮಿಸಿರುವರೆಂದು ಗೊತ್ತಾಗಿದೆ.

ಮತ್ತು ಎಂ ಸಿ ಲಿಂಗೇಗೌಡರು ನಿರ್ಣಯವನ್ನು ವಿರೋಧಿಸಿ ಮಾತನಾಡಿದರು.

ರೆವಿನ್ಯೂ ಸಚಿವರಾದ ಶ್ರೀ|| ಜೆ ಅಪ್ಪಾಜಿಗೌಡರು ಮೇಲ್ಕಂಡ ನಿರ್ಣಯಕ್ಕೆ ಉತ್ತರವಿತ್ತರು. ಸಂಜೆ ೬ ಘಂಟೆಯವರೆಗೂ ನಿರ್ಣಯದ ಮೇಲೆ ಚರ್ಚೆಯು ಸಾಗುತ್ತಿದ್ದುದರಿಂದ ಅದು ಚರ್ಚೆಯಲ್ಲೇ ಮುಕ್ತಾಯಗೊಂಡಿತು.

ನಿಲುವಳಿ ನಿರ್ಣಯಗಳನ್ನು ತಳ್ಳಿಹಾಕಲಾಯಿತು

ಸ್ವಂ ಸು ಪ್ರೋ] ಬೆಂಗಳೂರು ೨೦

ಶಾಸನ ಸಭೆಯ ಎರಡನೇ ದಿನದ ಕಾರ್ಯಕಲಾಪಗಳು ೧೨ ಗಂಟೆಗೆ ಸರಿಯಾಗಿ ಶ್ರೀ|| ಹೆಚ್ ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಸದಸ್ಯರು ಕಳುಹಿಸಿದ್ದ ನಿಲುವಳಿ ನಿರ್ಣಯಗಳನ್ನೆಲ್ಲಾ ಅಧ್ಯಕ್ಷರು ತಳ್ಳಿಹಾಕಿರುವರು.

ಅವುಗಳಲ್ಲಿ ಶ್ರೀ|| ಟಿ ಮರಿಯಪ್ಪನವರು ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ನಡೆದ ಗಲಭೆ ಸಂಬಂಧವಾಗಿ ನಾಲ್ಕು ವಿದ್ಯಾರ್ಥಿಗಳಿಗೆ ವಿಧಿಸಿದ ಶಿಕ್ಷೆಯ ವಿಷಯ ಮತ್ತು ಬೆಂಗಳೂರಿನಲ್ಲಿ ರೇಸ್ ನಡೆಯುವುದರಿಂದ ರೇಸ್ ಕೊಡುವುದರ ಸಂಬಂಧವಾಗಿದ್ದುದು.

ಕೋಲಾರದಲ್ಲಿ ಇಂಟರ್ ಕಾಲೇಜ್ ಆರಂಭಿಸುವ ಬಗ್ಗೆ ಶ್ರೀ|| ಕೆ ಎಸ್ ಶ್ರೀನಿವಾಸನ್‌ರವರು ಕಳುಹಿಸಿದ್ದ ನಿಲುವಳಿ ನಿರ್ಣಯಕ್ಕೆ ಮಂತ್ರಿಗಳಾದ ಡಾ|| ರಾಯ್‌ರವರು ಉತ್ತರವೀಯುತ್ತಾ, ಹೊಸದಾಗಿ ಸ್ಥಾಪಿತವಾಗಿರುವ ಹಾಸನ, ದಾವಣಗೆರೆ, ಶಿವಮೊಗ್ಗ ಕಾಲೇಜುಗಳಲ್ಲಿ ಹೆಚ್ಚಿನ ಸೌಕರ್ಯ ಒಟ್ಟುಗೂಡದ ಮತ್ತು ಲೆಕ್ಚರರುಗಳ ಅಭಾವವಿರುವುದರಿಂದ ಹೊಸದಾಗಿ ಆರಂಭಿಸಲು ಈಗ ಸಾಧ್ಯವಿಲ್ಲವೆಂದೂ ವೈಸ್ ಛಾನ್ಸಲರನ್ನು ಒಳಗೊಂಡ ಕಟ್ಟುವ ಹಾಗೆ ಪರಿಶೀಲಿಸಲು ನೇಮಿಸಲಾಗಿದೆಯೆಂದೂ ತಿಳಿಸಿ ೧೯೪೮-೪೯ಕ್ಕೆ ಕಾಲೇಜು ನಡೆಸಲು ಅವಕಾಶ ಕೊಡಲಾಗುವುದೆಂದು ತಿಳಿಸಿದರು.

ಪ್ರಶ್ನೋತ್ತರ ಕಾಲದಲ್ಲಿ ಶ್ರೀ|| ಕೆ. ಲಕ್ಷ್ಮಣಪ್ಪನವರು ಭದ್ರಾವತಿಯಲ್ಲಿ ಕಬ್ಬಿಣದ ಸಲಾಕೆಯನ್ನು ಕಾಳ ಸಂತೆಯಲ್ಲಿ ಮಾರಲಾಗುತ್ತಿದೆಯೇ ಎಂದು ಕೇಳಿದ್ದಕ್ಕೆ ಮಿ|| ನರೋನರವರು ಜವಾಬು ಕೊಡುತ್ತಾ ಇಲ್ಲವೆಂದು ತಿಳಿಸಿದರು.

ಸರ್ಕಾರೀ ಕಬ್ಬಿಣದ ಕಾರ್ಖಾನೆಯಿಂದ ಪ್ರಯೋಜನ ಹೊಂದಲು ಅವಕಾಶ ಕಲ್ಪಿಸಲಾಗುವುದೇ ಎಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ ಮಂತ್ರಿಗಳಾದ ಶ್ರೀ ಸಿದ್ದಪ್ಪನವರು ಅದಕ್ಕಾಗಿ ಒಬ್ಬ ಕಬ್ಬಿಣ ಮತ್ತು ಉಕ್ಕಿನ ಕಂಟ್ರೋಲರನ್ನು ನೇಮಿಸಲಾಗಿದೆಯೆಂದು ತಿಳಿಸಿದರು.

ಶ್ರೀ ಕೃಷ್ಣಪ್ಪಗೌಡರು ಪರಸ್ಪರ ಸಹಾಯ ಸಂಘಗಳ ಬಗ್ಗೆ ಉತ್ತರ ಪಡೆದ ನಂತರ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರು ರಿಜರ್ವ್ ಬ್ಯಾಂಕಿನವರು ಸಲಹೆ ಮಾ

ಸಿಲೋನಿಗೆ ಡೊಮೀನಿಯನ್ ಸ್ಥಾನಮಾನ

ಸಿಲೋನಿಗೂ ಬ್ರಿಟಿಷ್ ಸರ್ಕಾರಕ್ಕೂ ಕೆಲವು ಒಪ್ಪಂದಗಳಾದ ನಂತರ ಬ್ರಿಟಿಷ್ ಸಾಮ್ರಾಜ್ಯದ ಮಿಕ್ಕ ದೇಶಗಳಂತೆಯೇ ಸಿಲೋನು ಸಹ ಡೊಮಿನಿಯನ್ ಸರ್ಕಾರದ ಅಂತಸ್ತನ್ನು ಹೊಂದುವುದು ಮತ್ತು ಬ್ರಿಟಿಷ್ ಸರ್ಕಾರವೂ ಸಹ ಸಮ್ಮತಿ ಇತ್ತಿದೆಯೆಂದು ಅಲ್ಲಿನ ಗೌರ್ನರು ಮೊನ್ನೆಯ ದಿನ ಸೇರಿದ್ದ ಸ್ಟೇಟ್ ಕೌನ್ಸಿಲ್ ಸಭೆಯಲ್ಲಿ ತಿಳಿಸಿರುವರು.

ಗಡಿನಾಡು ಗಾಂಧಿ-ಜಿನ್ನಾ ಭೇಟಿ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ಮಿ|| ಜಿನ್ನಾರವರನ್ನು ಭೇಟಿ ಮಾಡಿದ್ದರು. ಈ ಭೇಟಿಯಲ್ಲಿ ಗಡಿನಾಡಿನಲ್ಲಿ ರೆಫರೆಂಡಂ ನಡೆಯುವ ಬಗ್ಗೆ ಸಮಾಲೋಚನೆ ನಡೆಯಿತೆಂದು ವರದಿಯಾಗಿದೆ.

ರಾಜ್ಯಾಂಗ ಸಭೆಗೆ ಕೊಲ್ಹಾಪುರ ಸಂಸ್ಥಾನ

ಕೊಲ್ಹಾಪುರ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರುವುದೆಂದು ಅಲ್ಲಿನ ರಾಜ್ಯಾಂಗ ಸಲಹೆಗಾರರಾದ ಶ್ರೀ|| ಎ ಬಿ ಲಠ್ಠೆಯವರು ಸರ್ದಾರ್ ಪಟೇಲರಿಗೆ ತಿಳಿಸಿರುವರೆಂದು ವರದಿಯಾಗಿದೆ.

ಹೊಸ ನರೇಂದ್ರ ಮಂಡಲ

ಹೈದರಾಬಾದು, ಕಾಶ್ಮೀರ, ತಿರುವಾಂಕೂರು, ಭೋಪಾಲ್ ಇಂದೂರು, ಭಾವಲ್‌ಪೂರ್ ಮತ್ತು ಇತರ ಹದಿನೆಂಟು ಸಂಸ್ಥಾನಗಳಿಂದ ಕೂಡಿದ ಹೊಸ ನರೇಂದ್ರ ಮಂಡಳವು ಶೀಘ್ರದಲ್ಲಿಯೇ ಸ್ಥಾಪಿಸಲ್ಪಡುವುದೆಂದು ವರದಿಯಾಗಿದೆ.

ಕೇಂದ್ರ ಸರ್ಕಾರಕ್ಕೆ ಪಂಡಿತ ಗೋವಿಂದವಲ್ಲಭ ಪಂತ್

ಗ್ಲೋಬ್] -ಆಗ್ರ ೧೯

ರಾಜ್ಯಾಂಗ ಸಭಾಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರಿಗೆ ಆಹಾರ ಸಚಿವರಾಗಿಯೂ ಕೆಲಸಮಾಡಲು ಕಷ್ಟವಾಗಿರುವುದರಿಂದ ಪ್ರಾಂತದ ಪ್ರಧಾನಿ ಸಂಯುಕ್ತ ಗೋವಿಂದವಲ್ಲಭ ಪಂತರು ಕೇಂದ್ರ ಸರ್ಕಾರದ ಆಹಾರ ಸಚಿವರಾಗಿ ನೇಮಕವಾಗಬಹುದೆಂದು ಹೇಳಲಾಗಿದೆ. ಮಿ|| ರಫಿ ಅಹಮದ್ ಕಿದ್ವಾಯಿ, ಶ್ರೀ|| ಪುರುಷೋತ್ತಮದಾಸ್ ಟಂಡನ್ ಇವರುಗಳ ಹೆಸರನ್ನು ಸಂಯುಕ್ತ ಪ್ರಾಂತದ ಪ್ರಧಾನಿ ಸ್ಥಾನಕ್ಕೆ ಸೂಚಿಸಲಾಗಿದೆ.

ಕೇಂದ್ರ ಸರ್ಕಾರದವರು ಕೊಬ್ಬರಿ, ಕೊಬ್ಬರಿ ಎಣ್ಣೆಗಳ ರವಾನೆಯ ಮೇಲೆ ಇರುವ ರೀತಿ ಇದ್ದ ಹತೋಟಿಯನ್ನು ಸದ್ಯದಲ್ಲೇ ರದ್ದು ಮಾಡಲು ನಿರ್ಧರಿಸಿರುವರೆಂದು ವರದಿಯಾಗಿದೆ.

ಇದರಂತೆ ಸಂಸ್ಥಾನದಲ್ಲಿ ಕೈಗೊಂಡ ಕಾರ್ಯಕ್ರಮದ ಬಗ್ಗೆ ಹಾಕಿದ ಪ್ರಶ್ನೆಗೆ ಮಂತ್ರಿಗಳಾದ ಸಿದ್ದಪ್ಪನವರು ಸರ್ಕಾರವು ಈ ಬಗ್ಗೆ ಒಂದು ಯೋಜನೆ ತಯಾರಿಸುತ್ತಿದೆ ಎಂದು ತಿಳಿಸಿದರು.

೧೯೪೪, ೪೫, ೪೬ ನೇ ಸಾಲಿನಲ್ಲಿ ಕೃಷ್ಣರಾಜಸಾಗರದಲ್ಲಿ ಡ್ಯಾಮೇಜ್ ಕಡಿಮೆ ಬಂದ ಪದಾರ್ಥಗಳ ಬಗ್ಗೆ ಎಷ್ಟು ಕೇಸುಗಳು ಬಂದಿದವು ಎಂದು ಶ್ರೀ ಟಿ ಮರಿಯಪ್ಪನವರು ಕೇಳಿದ ಪ್ರಶ್ನೆಗೆ ೧೯೪೪ ರಲ್ಲಿ ೭೩೪೦, ೪೫ ರಲ್ಲಿ ೪೫೯೬, ೪೬ ರಲ್ಲಿ ೧೧,೩೨೬ ಎಂದು ಮಂತ್ರಿಗಳಾದ ಶ್ರೀ ಅಪ್ಪಾಜಿಗೌಡರು ತಿಳಿಸಿದರು.

ಸಾಧ್ವಿ

ತಾ|| ೨೦-೬-೪೭ ಶುಕ್ರವಾರ

ಗಡಿನಾಡಿನ ಸಮಸ್ಯೆ

ಭಾರತದ ಸಮಸ್ಯೆಯನ್ನು ಬಗೆ ಹರಿಸಲು ಬ್ರಿಟನ್ನಿನವರು ಮಾಡಿದ ಹೊಚನೆ ಎಲ್ಲದರ ಫಲವಾಗಿ ಗಡಿನಾಡಿನ ಸಮಸ್ಯೆಯು ಇತರ ಪ್ರಾಂತಗಳಂತಲ್ಲದೆ ಸ್ವಲ್ಪ ತೊಡಕಾಗಿ ನಿಲ್ಲುತ್ತದೆ. ಗಡಿನಾಡು ಚಾರಿತ್ರಿಕ ದೃಷ್ಟಿಯಿಂದ ಬಹು ಮುಖ್ಯವಾದ ಪ್ರಾಂತ್ಯ. ಇಂಡಿಯಾ ದೇಶವನ್ನು ಭೂಮುಖವಾಗಿ ಬಂದು ಜಯಿಸಿದವರೆಲ್ಲಾ ಈ ಪ್ರಾಂತ್ಯದ ಮುಖಾಂತರ ಬಂದವರು. ಅಲೆಕ್ಸಾಂಡರ್, ಚಂಗೀಸ್‌ಖಾನ್, ತೈಮೂರ್, ಬಾಬರ್, ನಾದಿರ್‌ಷಾ, ಅಹಮದ್ ಷಾ ಅಬ್ದಾಲಿ ಮುಂತಾದವರೆಲ್ಲಾ ಈ ವಾಯುವ್ಯ ಗಡಿನಾಡಿನ ಮುಖಾಂತರವೇ ಬಂದವರು. ಬ್ರಿಟನ್ನಿನವರು ಬಲವಂತದಿಂದ ಕಿತ್ತುಕೊಳ್ಳುವ ವರೆಗೂ ಗಡಿನಾಡು ಅಫ್ಘಾನಿಸ್ಥಾನದ ಒಂದು ಭಾಗವಾಗಿತ್ತು.

ಗಡಿನಾಡು ಮುಸ್ಲಿಂ ಬಹುಮತ ಪ್ರಾಂತ. ಮಿಕ್ಕ ಮುಸ್ಲಿಂ ಬಹು ಸಂಖ್ಯಾತ ಪ್ರಾಂತ್ಯಗಳಂತೆ ಇಲ್ಲಿ ಮುಸ್ಲಿಂ ಲೀಗು ಪ್ರಾಂತೀಯ ಚುನಾವಣೆಗಳಲ್ಲಿ ಯಶಸ್ವಿಯಾಗಲಿಲ್ಲ. ಇದಕ್ಕೆ ಕಾರಣವಿಷ್ಟೆ: ಗಡಿನಾಡಿನ ಬಹು ಸಂಖ್ಯಾತರ ಮುಖ್ಯ ಜನಗಳು ಅಫ್ರಿದಿ, ಮೊಹಮಂಡ್, ವಜೀರಿ ಮುಂತಾದ ನಾನಾ ಪಂಗಡದವರು ಇಲ್ಲಿ ಹೇರಳವಾಗಿದ್ದಾರೆ. ಇವರುಗಳು ಬಹು ಕಾಲದಿಂದಲೂ ಸ್ವತಂತ್ರವಾಗಿ ಬಾಳುತ್ತಿದ್ದರು. ಇವರ ಜೀವನ, ಕದನ ಮಾರ್ಗದಲ್ಲಿ ಹೋಗುವ ಪ್ರಯಾಣಿಕರ ಸುಲಿಗೆಯಿಂದ ಅರ್ನ್ಯಾಕ್ ಮುಳಿಯಾದಲ್ಲಿ ಇವರು ಸ್ವಲ್ಪ ಬೆಳೆಯನ್ನೂ ಬೆಳೆಯುತ್ತಾರೆ. ಇತರ ಕಾಲವನ್ನೆಲ್ಲಾ ಸ್ವಯೂಥ ಕಲಹದಲ್ಲಿ ಕಳೆಯುತ್ತಾರೆ. ಇಂತಹ ಜನಗಳನ್ನು ಈಗ ಆಳುತ್ತಿರುವ ಬ್ರಿಟಿಷರಾಗಲೀ, ಇವರ ಹಿಂದೆ ಆಳುತ್ತಿದ್ದ, ಅಫ್ಘನ್ ಮೊಗಲ್ ಮುಂತಾದ ರಾಜ್ಯಗಳವರಾಗಲೀ ಬಗ್ಗಿಸಲಾಗಲಿಲ್ಲ. ಇಂತಹ ಸ್ವಾತಂತ್ರ್ಯ ಪ್ರೇಮಿಗಳ ಪ್ರಪಂಚದಲ್ಲಿ ಅದೇಯುವೆನಿಸಿಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯವನ್ನು ಎದುರಿಸಿ ನಿಂತು ಹೋರಾಡಿದ ಖಾನ್ ಅಬ್ದುಲ್ ಗಫಾರ್ ಖಾನ್, ಮತ್ತು ಡಾ|| ಖಾನ್ ಸಾಹೇಬ್ ಇವರುಗಳನ್ನು ಮುಖಂಡರಾಗಿ ಚುನಾಯಿಸಿಕೊಂಡು ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ವಿಜಯಯುಕ್ತನನ್ನಾಗಿ ಮಾಡಿದ್ದು ಆಶ್ಚರ್ಯವೇನಲ್ಲ.

ಮುಸ್ಲಿಂ ಲೀಗಿನವರು ಇಂಡಿಯಾದಲ್ಲೆಲ್ಲಾ ಮುಸ್ಲಿಂ ಬಹುಮತಗಳಿರುವೆಡೆಯಲ್ಲೆಲ್ಲಾ ಲೀಗ್ ಸರ್ಕಾರಗಳೇರ್ಪಡಬೇಕೆಂಬ ಆಕಾಂಕ್ಷೆಯಿಂದ ಹೂಡಿದ ಚಳುವಳಿಯು ಇಲ್ಲಿಗೂ ತಗಲಿತು. ಅದರ ಪರಿಣಾಮವಾಗಿ "ನಾಗರಿಕ ಹಕ್ಕು ಬಾಧ್ಯತೆ"ಗಳಿಗಾಗಿ ಹೋರಾಟ ನಡೆದು, ಅಸಂಖ್ಯಾತವಾಗಿ ಅಲ್ಪ ಸಂಖ್ಯಾತರ ವಧೆ, ಅತ್ಯಾಚಾರಗಳು ನಡೆದವು. ಡೇರಾ ಇಸ್ಮೇಲ್‌ಖಾನ್ ನಗರವು ಭಸ್ಮವಾಯಿತು. ಪ್ರಾಂತದ ಗವರ್ನರರು ತಮ್ಮ ಕರ್ತವ್ಯ ನಿರ್ವಹಣವನ್ನು ಮರೆತು, ಲೀಗಿನವರ ಬೆನ್ನು ತಟ್ಟಿದರು. ಇಂತಹ ಈ ಚಳುವಳಿಯ ಪರಿಣಾಮ "ರೆಫರೆಂಡಂ" ಅಂದರೆ ಜನಾಭಿಪ್ರಾಯವನ್ನು ಅರಿಯುವುದು.

ಈಗ ಗಡಿನಾಡಿನ ಜನರಿಗೆ ಅವರ ಅಭಿಪ್ರಾಯವನ್ನು ತಿಳಿಸಲು ಇರುವುದು ಎರಡೇ ದಾರಿ. ಪಾಕಿಸ್ಥಾನ ಅಥವಾ ಹಿಂದೂಸ್ಥಾನ. ಅವರಿಗೆ ಸ್ವತಂತ್ರವಾಗುವ ಇಚ್ಛೆಯಿದ್ದಲ್ಲಿ ಅವಕಾಶವೇ ಇಲ್ಲ.

ಫಲಿತಾಂಶವೇನೇ ಆಗಲೀ ಮುಂದೆ ಗಡಿನಾಡಿನವರಿಗೆ ಕೆಲವು ತೊಂದರೆಗಳಂತೂ ಕಾದೇ ಇವೆ. ಇದುವರೆಗೂ ಈ ಬೆಟ್ಟಗಾಡಿನ ಜನರು ಯಾವ ತೊಂದರೆಯನ್ನೂ ಕೊಡದೆ ಸುಮ್ಮನಿರಲೆಂದೂ ಬ್ರಿಟಿಷ್ ಸರ್ಕಾರದವರು ಇವರುಗಳೆಲ್ಲರಿಗೆ "ಪೋಷಣ" ಕೊಡುತ್ತಿದ್ದರು. ಈ ಸಂದರ್ಭದಲ್ಲಿ ಕಳೆದ ಏಪ್ರಿಲ್‌ನಲ್ಲಿ ವೈಸರಾಯರು ಗಡಿನಾಡಿಗೆ ಭೇಟಿ ಇತ್ತಿದ್ದಾಗ ಕೋಲಾಲ್‌ನಲ್ಲಿ ಬಂದಿದ್ದ ಒಂದು "ಜಿರ್ಗಾ" ಬವರು ತಮಗೆ ಅನೂಚಾನವಾಗಿ ಬಂದಿರುವ ಪೋಷಣ ಮುಂತಾದ ಸೌಲಭ್ಯಗಳನ್ನು ಮುಂದೆ ಬರುವ ಯಾವ ಸರ್ಕಾರವೇ ಆಗಲೀ ನಿಲ್ಲಿಸದಂತೆ ಏರ್ಪಾಡು ಮಾಡಬೇಕೆಂದು ಕೇಳಿದರು. ಇದರ ಜೊತೆಗೆ ಗಡಿನಾಡಿನ ಆರ್ಥಿಕ ಪರಿಸ್ಥಿತಿಯು ಯಾವತ್ತೂ ತೃಪ್ತಿಕರವಾಗಿಲ್ಲ. ಕೇಂದ್ರ ಸರ್ಕಾರದಿಂದ ಸಹಾಯ ದ್ರವ್ಯವು ದೊರೆತ ಹೊರತೂ ಆಡಳಿತವೇ ನಡೆಯುವಂತಿಲ್ಲ. ಇದಲ್ಲದೆ ಭಾರತ ಸೈನ್ಯದಲ್ಲಿರುವ ಮುಸ್ಲಿಮರಲ್ಲಿ ಅರ್ಧಕ್ಕರ್ಧ ಗಡಿನಾಡಿನವರು. ಹೀಗಿರುವಾಗ ಹೊಸ ಏರ್ಪಾಡಿನ ಪ್ರಕಾರ ಸೌಲಭ್ಯಗಳೆಲ್ಲಾ ತಪ್ಪಿಹೋಗಬಹುದು.

ಗಡಿನಾಡು ಪಾಕಿಸ್ಥಾನಕ್ಕೆ ಸೇರಿದಲ್ಲಿ ಅಲ್ಲಿನ ಜನಗಳು ತಮ್ಮ ಮತ ಬಾಂಧವರ ಜೊತೆಗೆ ಸೇರಿದ್ದೇವೆಂದು ಸಂತೋಷಪಡಬಹುದೇ ವಿನಃ ಇನ್ನೇನೂ ಪ್ರಯೋಜನವಾಗುವಂತಿಲ್ಲ. ಏಕೆಂದರೆ, ಪಾಕಿಸ್ಥಾನಕ್ಕೆ ಈ ಆಸಾಧ್ಯ ಹೊರೆಯನ್ನು ಹೊರುವಷ್ಟು ಆರ್ಥಿಕ ಶಕ್ತಿ ಇರುವುದಿಲ್ಲ. ಹಿಂದೂಸ್ಥಾನಕ್ಕೇ ಸೇರಿದರೆ, ಹಿಂದೂಸ್ಥಾನವು ಈ ಖರ್ಚನ್ನು ನಿರ್ವಹಿಸಲು ಶಕ್ತಿ ಇದ್ದರೂ, ಪಶ್ಚಿಮ ಪಂಜಾಬಿನ ಪಾಕಿಸ್ಥಾನವು ಇವೆರಡಕ್ಕೂ ಮಧ್ಯೆ ನಿಂತಿರುವುದರಿಂದ ಒಂದಕ್ಕೊಂದು ಸಂಬಂಧವೇ ಇಲ್ಲದಂತಾಗುತ್ತದೆ. ಸ್ವತಂತ್ರವಾದಲ್ಲಿ ಖೈಬರ್, ಬೋಲಾನ್ ಮುಂತಾದ ಕಣಿವೆಗಳ ಮೂಲಕ ಏಷ್ಯಾ ಖಂಡದ ಇತರ ಭಾಗಗಳಿಗೆ ನಡೆಯುವ ವ್ಯಾಪಾರದ ಮೇಲಿನ ಸುಂಕ ಮತ್ತು ಹಿಂದೂಸ್ಥಾನ ಅಥವಾ ಪಾಕಿಸ್ಥಾನ ಯಾವುದರ ಭಾಗವಾದರೂ ಸೈನ್ಯ ಅಥವಾ ಕೈಗಾರಿಕೆ ಇವುಗಳಲ್ಲಿಯ ಉದ್ಯೋಗ ಈ ದಾರಿಗಳಿಂದ ಗಡಿನಾಡಿನ ಜನರ ಸ್ಥಿತಿಯು ಉತ್ತಮಗೊಳ್ಳಬಹುದು. ಈ ಕ್ಲಿಷ್ಟ ಸಮಸ್ಯೆಯನ್ನು ಬಗೆಹರಿಸಲು ವೈಸರಾಯರೂ, ಗಾಂಧಿಯವರೂ, ಗಫಾರ್ ಖಾನರವರೂ ಮತ್ತು ಜಿನ್ನಾರವರೂ ಕಲೆತು ಮಾತುಕತೆ ನಡೆಸುತ್ತಿದ್ದಾರೆ. ಅದು ಯಶಸ್ವಿಯಾಗಲೆಂದೇ ನಮ್ಮ ಹಾರೈಕೆ.

ಅಪೋಷಪು ಕುಸ್ತಿಗಳು

ನಂಜನಗೂಡಿನಲ್ಲಿ ಕಳೆದ ಏಪ್ರಿಲ್ ೨೮ರಲ್ಲಿ ನಡೆಯಬೇಕಾಗಿದ್ದ ಈ ಕುಸ್ತಿಯು ನಿಂತು ಹೋಗಿತ್ತು. ಈಗ ನ್ಯಾಯಸ್ಥಾನದ ತೀರ್ಮಾನದ ಮೇಲೆ ಇದೇ ಮಾಹೆ ೨೨ನೇ ತಾ|| ಭಾನುವಾರ ಮೈಸೂರು ಟೈಗರ್ ಪಾಚಯ್ಯನವರ ಷಾಗಿರ್ದು ಮೈಸೂರು ಸ್ಟಾರ್ ರಣಧೀರ್

ಪೈ|| ರಾಮುವಿಗೂ

ಪೇವರಸನಹಳ್ಳಿ ಸಿದ್ದೇಗೌಡರ ಷಾಗಿರ್ದು ಜಕೇಂದ್ರ

ಪೈ|| ಚಿಕ್ಕಯ್ಯನಿಗೂ

ಖಂಡಿತವಾಗಿ ಜಿದ್ದಿನಿಂದ ಕುಸ್ತಿ ನಡೆಸುತ್ತೆ.

ಕೆಂ|| ಸಾ|| ಅಂ|| ಮಾಯಪ್ಪ,
ನಂಜನಗೂಡು

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಅಶೋಕ

ಗರ್ಭಾಶಯರೋಗ ನಿವಾರಿಣಿ

ಆರುಶು ಮುತು ರೋಗಗಳನ್ನು ನಿರ್ಮೂಲಿಸಿ ಪರಿಪೂರ್ಣ ಸ್ತ್ರೀತ್ವವನ್ನು ಪ್ರಸಾದಿಸುವಷ್ಟಯಿಂಸಂಪೂರ್ಣವಾದ ಔಷಧ ಇದನ್ನು ಬಿಡದೆ ಸೇವಿಸುವಿರಾದರೆ, ನಿಮ್ಮ ಜೀವನ ಪರಮಾನಂದಿಯಾದ ಆನಂದಾನಂದವನ್ನು ಕಪ್ಪದೆ ಒದಗಿಸಬಲ್ಲುದು.

ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್, ... ಮದರಾಸು.

ರಾಜಕಮಲ್

ತಾ|| ೨೦-೬-೪೭ ರಿಂದ

9 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ

(ತೆಲುಗು)

ತಾ|| ೨೦-೬-೪೭ ರಿಂದ

7 ದಿನಗಳು

ಪ್ರತಿದಿನ ಪ್ರಾತಃಕಾಲ ೧೦-೩೦ಕ್ಕೆ

'ಆಂಖ್ ಕಿ ಶರಂ'

(ಹಿಂದಿ)

—: ತಾರಾಗಣ :—

ಕೌಶಲ್ಯ, ಪೃಥ್ವಿರಾಜ, ತ್ರಿಲೋಕ ಕಪೂರ್, ಗುಲಾಬ್ ಮತ್ತು ನಾಯಂಪಲ್ಲಿ

ಬಿಕರಿಗೆ ಸಿದ್ಧವಾಗಿವೆ

ಕಬ್ಬಿಣದ ಸಲಾಕೆಗಳು ಮತ್ತು ಗಾಡಿ ಪಟ್ಟಿಗಳು ಭದ್ರಾವತಿಯಲ್ಲಿರುವ ಐರನ್ ಮತ್ತು ಸ್ಟೀಲ್ ಕಂಟ್ರೋಲರವರ ಅನುಮತಿ ಪಡೆದವರಿಗೆ ಮಾರಲಾಗುತ್ತೆ.

ಕೆ. ಎಸ್. ನಾಗರಾಜಶೆಟ್ಟಿ,
ಕಾರ್ಯದರ್ಶಿ,
ಶ್ರೀ ಚಾಮರಾಜೇಶ್ವರೀ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಮೈಸೂರು

Edited, printed and published by A. R. Nagarajan at the Sadhvi Press D. Subbaiah Road Mysore

|| ಓಂ ||

ಮೋಟಾರು ಬಂಡಿಗಳ ಮಾಲೀಕರಿಗೆ ಒಂದು ಸಂದೇಶ

10,000 ರೂ. ಗಳ " ಅಪಾಯ ವಿಮೆ " ಪತ್ರವು

ಕಳೆದ ವರ್ಷ ಇನ್ಷೂರ್ ಮಾಡಲ್ಪಟ್ಟ ಮೋಟಾರ್ ಬಂಡಿಗಳ ಸಂಖ್ಯೆ 12,000 ಕ್ಕೆ ಮೀರಿದೆ	ಉಚಿತವಾಗಿ ಪ್ರತಿಯೊಬ್ಬ ಮೋಟಾರ್ ಕಾರ್ ಮಾಲೀಕರಿಗೂ	ಕಂಪೆನಿಯ ವಾರ್ಷಿಕ ಪ್ರೀಮಿಯಂ ವರಮಾನ 8,00,000 ರೂ.ಗಳಿಗೆ ಮೀರಿದೆ

ಕೊಡಲ್ಪಡುತ್ತದೆ. ಇದಲ್ಲದೆ ಬಹಳ ಕಡಿಮೆಯಾದ ಪ್ರೀಮಿಯಂ ದರ, ವರ್ಷದ ಪ್ರೀಮಿಯಮ್ಮನ್ನೂ ಆರು ತಿಂಗಳಿಗೊಂದಾವರ್ತಿ ಎರಡು ಕಂತುಗಳಾಗಿ ಕೊಡುವ ಸೌಲಭ್ಯ ಎರಡು ಅಥವಾ ಹೆಚ್ಚು ಮೋಟಾರು ಕಾರುಗಳನ್ನೂ ಹೊಂದುವವರಿಗೆ ಶೇ|| 20 ರ ವರೆಗೆ ಪ್ರೀಮಿಯಮ್ಮಿನಲ್ಲಿ ವಿನಾಯಿತಿ ಮತ್ತು ಹಿಂದಿನ ವರ್ಷ ಯಾವ ವರ್ಷಗಳಲ್ಲಿ ಕಂಪನಿಯಿಂದ ಯಾವ ಕ್ಲೇಮು ಹಣವನ್ನೂ ಪಡೆಯದಿದ್ದವರಿಗೆ ಶೇ|| 33 ರ ವರೆಗೆ ಬೋನಸ್ಸು, ಇವೇ ಮೊದಲಾದ ವಿಶೇಷ ಸೌಕರ್ಯಗಳೂ ಇರುತ್ತವೆ. ಹೆಚ್ಚಿನ ವಿವರಗಳಿಗೂ, ಡಿಸ್ಟ್ರಿಕ್ಟ್ ಆರ್ಗನೈಸರ್ ಮತ್ತು ಸ್ಥಳೀಯ ಏಜೆಂಟರ ನಿಬಂಧನೆಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆಸ್ಸರ್ಸ್: ಎಂ. ಎಸ್. ಸೋಮಶೇಖರ್ ಅಂಡ್ ಕಂಪೆನಿ,

-: ಚೀಫ್ ಏಜೆಂಟರು :-

ದಿ ಪ್ರೀಮಿಯರ್ ಲೈಫ್ ಅಂಡ್ ಜನರಲ್ ಇನ್ಷೂರೆನ್ಸ್
ಕಂಪೆನಿ, ಲಿಮಿಟೆಡ್, (ಮದರಾಸು)
375/1, ನ್ಯೂ ಸಯ್ಯಾಜಿರಾವ್ ರೋಡು, ಮೈಸೂರು

ಪೋ. ಸ. ನಂ. ೮೪೨   ॥ ವಂದೇ ಮಾತರಂ ॥   ಇಂದಿನ ಪತ್ರಿಕೆ 3 ಕಾಸು

ಸಂಪುಟ ೫]   ಶನಿವಾರ ೨೧—೬—೪೭   [ಸಂಚಿಕೆ ೨೬೯

ಗಡಿನಾಡಿನಲ್ಲಿ ಕಾಂ॥ ಸರ್ಕಾರದ ರಾಜೀನಾಮೆ?

ಶಾಸನ ಸಭೆಯಲ್ಲಿ ಪ್ರಶ್ನೆ: ಮಂತ್ರಿಗಳೆಂದು ಹೇಳಿಕೊಳ್ಳುವುದು ನ್ಯಾಯವೇ?

ಶಾಸನ ಸಭೆಯಲ್ಲಿ ಪ್ರಶ್ನೆ

(ಸ್ವಂ ಸು ಫೋ॥) ಬೆಂಗಳೂರು ೨೧

ನಿನ್ನೆ ದಿನ ಮುಂದುವರಿದ ಶಾಸನ ಸಭೆಯಲ್ಲಿ ಬಜೆಟ್ಟಿನ ಮೇಲೆ ಶ್ರೀಗಳಾದ ಟಿ ಮರಿಯಪ್ಪ, ಹೆಚ್. ಎಸ್. ರುದ್ರಪ್ಪ, ಕಡಿದಾಳು ಮಂಜಪ್ಪ, ಆರ್. ಚೆನ್ನಿಗರಾಮಯ್ಯ, ಕೃಷ್ಣಪ್ಪಗೌಡ ಮೊದಲಾದವರು ಭಾಷಣಮಾಡಿದರು.

ಬಜೆಟ್ಟಿನ ತಯಾರಿನಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿ ಹಿಂದಿನಂತೆಯೇ ಇದ್ದು [illegible] ಅತೃಪ್ತಿಯನ್ನುಂಟುಮಾಡುವುದಾಗಿದೆ; ಇದರಿಂದ ಸಾಧಾರಣ ಮನುಷ್ಯನಿಗೆ ಸ್ವಲ್ಪವೂ ಅನುಕೂಲವಿಲ್ಲ—ಎಂಬುದಾಗಿ ಶ್ರೀ ಟಿ ಮರಿಯಪ್ಪನವರು ಬಜೆಟ್ಟನ್ನು ಟೀಕಿಸುತ್ತಾ ನುಡಿದರು. [illegible] ತಯಾರಾಗುತ್ತಿರುವ [illegible] ಬಹಳ ಅತೃಪ್ತಿಕರವಾಗಿದೆಯೆಂದು ದಿವಾನರೇ ತಮ್ಮ ಭಾಷಣದಲ್ಲಿ ನುಡಿದಿದ್ದಾರೆ ಇದು ಬಹಳ ನಾಚಿಕೆಗೇಡಿನ ವಿಷಯ [illegible] ಅಧಿಕಾರಿಗಳನ್ನು ನೇಮಿಸಲಾಗಿದೆ, ಆದರೆ ಇನ್ನೂ ಅದರ ಮಟ್ಟಿಗೆ [illegible] ಸಂಬಂಧವೇ ಇಲ್ಲದಂತಾಗಿರುವುದು ಶೋಚನೀಯ. [illegible] ಯಾವ ಪ್ರಯತ್ನವೂ ಇಲ್ಲ. [illegible] ಇನ್ನೂ [illegible] ತಲೆದೋರುತ್ತಲೇ ಇವೆ [illegible] ಸರ್ಕಾರದ [illegible] ಈಗಿನ ಮಂತ್ರಿಮಂಡಲವೇ [illegible] ಜವಾಬ್ದಾರೀ ಸರ್ಕಾರದ ಸ್ಥಾಪನೆಯೇ ಸರಿಯಾದ ಮಾರ್ಗ—ಎಂದೂ ಶ್ರೀ ಟಿ ಮರಿಯಪ್ಪನವರು ತಮ್ಮ ಭಾಷಣದಲ್ಲಿ ಹೇಳಿದರು.

ಕಡಿದಾಳು ಶ್ರೀ ಮಂಜಪ್ಪನವರು [illegible] ಕಾರ್ಯಕ್ರಮಗಳು, [illegible] ಕ್ರಮಗಳನ್ನು ತೀವ್ರವಾಗಿ ಟೀಕಿಸಿ ಮಾತನಾಡಿದರು.

ತುಮಕೂರಿನ ಶ್ರೀ ಚೆನ್ನಪ್ಪನವರು ಮಾತನಾಡುತ್ತಾ [illegible] ಸಮಿತಿಯೊಂದನ್ನು ನೇಮಿಸಲಾಗಿದೆ ಆದರೆ ಅವರ ಕಾರ್ಯಚಟುವಟಿಕೆಗಳು ಸ್ವಲ್ಪವೂ ತೃಪ್ತಿಕರವಾಗಿಲ್ಲವೆಂದು ಹೇಳಿ ಬಜೆಟ್ಟನ್ನು ಟೀಕಿಸಿದರು [illegible] ಅಧಿಕಾರಿಗಳ [illegible] ಸ್ವಲ್ಪವೂ ಗಮನ ಕೊಟ್ಟಿಲ್ಲ. [illegible] ದಿವಾನರಿಗೆ [illegible] ದಿವಾನರು [illegible] ಮಂತ್ರಿಗಳು [illegible] ಪ್ರಸ್ತಾಪದಲ್ಲೇ [illegible] ಇಲ್ಲದ [illegible] ಶಾಸಕರ ಮಂತ್ರಿಗಳು [illegible] ದ್ದಾರೆ. [illegible] ಮಂತ್ರಿ

ಆರಂಭೋತ್ಸವ

— —

ಮೈಸೂರು ೨೧

ಆಯ್ಯಂಗಾರ್ [illegible] ಮತ್ತು [illegible] ಶ್ರೀ [illegible] ಎಂಬ ನೂತನ ಕನ್ನಡ ಚಿತ್ರ ತಯಾರಿಕೆಯ ಆರಂಭೋತ್ಸವವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಅನೇಕ ಪ್ರಮುಖರು ಆಹ್ವಾನಿತರಾಗಿ ಸನ್ಮಾನಿಸಲ್ಪಟ್ಟರು.

ಉಪನ್ಯಾಸ

[illegible] ಶ್ರೀ [illegible] ಭಗವದ್ಗೀತೆಯ [illegible] ಉಪನ್ಯಾಸ ಮಾಡುವರು.

ಗಳೆಂದು ಹೇಳಿಕೊಳ್ಳುವುದು ನ್ಯಾಯವೇ? ಎಂದು ಪ್ರಶ್ನಿಸಿದರು [illegible] ಬಜೆಟ್ಟಿನಲ್ಲಿ [illegible] ಕಡಿಮೆ [illegible] ಹೆಚ್ಚಿಸಬೇಕು—ಎಂದು ಹೇಳಿದರು

ಕಾಂಗ್ರೆಸ್ ಸದಸ್ಯರಾದ ಶ್ರೀ॥ ಹೆಚ್. ಎಸ್. ರುದ್ರಪ್ಪನವರು ಮಾತನಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಭ್ಯಾಸ, ಗ್ರಾಮೋದ್ಧಾರಗಳಿಗೆ ಸರ್ಕಾರದವರು ಬಜೆಟ್ಟಿನಲ್ಲಿ ಹಣವನ್ನು [illegible] ಒದಗಿಸಿಲ್ಲವೆಂದೂ, ಪ್ರಜಾಭಿಪ್ರಾಯಕ್ಕೆ ಮನ್ನಣೆಯೇ ಇಲ್ಲವೆಂದೂ ಹೇಳಿ ಆಯವ್ಯಯ ಪಟ್ಟಿಯನ್ನು ಟೀಕಿಸಿದರು

[illegible] ವರ್ಗದವರ [illegible] ಶ್ರೀ॥ ಆರ್. ಚೆನ್ನಿಗರಾಮಯ್ಯನವರು ಬಜೆಟ್ಟನ್ನು ಟೀಕಿಸಿದರು. [illegible] ಸಮಿತಿಯ [illegible] ನಾಯಕರ [illegible] ಸ್ವಲ್ಪವೂ [illegible] ಬಗ್ಗೆ [illegible] ವಿಷಾದಕರ—ಎಂದು [illegible] ಅಭಿಪ್ರಾಯಪಟ್ಟರು [illegible] ಸಂಸ್ಥಾನದಲ್ಲಿ [illegible]

ಜುಲೈನಲ್ಲಿ ಶಾಸನ ಸಭೆಗಳ ಜಂಟಿ ಅಧಿವೇಶನ

ರಾಜ್ಯಾಂಗ ಸಭೆಗೆ ಪ್ರತಿನಿಧಿಗಳು

(ಸ್ವ ಸು ಫೋ॥) ಬೆಂಗಳೂರು ೨೧

ಭಾರತ ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳನ್ನು ಆರಿಸಲು ಬರುವ ಜುಲೈ ೫ ನೇ ತಾ॥ ಇಲ್ಲಿ ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕರೆಯಲಾಗಿದೆ

ತಿರುವಾಂಕೂರಿನ ಘೋಷಣೆ ಬಗ್ಗೆ ಸಾವರ್ಕರರ ಪ್ರಶಂಸೆ

(ಸ್ವ ಫೋ॥) ಬೊಂಬಾಯಿ ೧೮

ಅಖಿಲ ಭಾರತ ಹಿಂದೂ ಮಹಾಸಭಾ ಅಧ್ಯಕ್ಷರಾದ ಶ್ರೀ॥ ವಿ. ಡಿ. ಸಾವರ್ಕರ್ [illegible] ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರಿಗೆ [illegible] ಸ್ವಾತಂತ್ರ್ಯ ಘೋಷಣೆ ಮಾಡಿದ್ದಕ್ಕಾಗಿ ಅಭಿನಂದಿಸಿದ್ದಾರೆ

ತಮ್ಮ ತಂತಿಯಲ್ಲಿ ಅವರು ಈ ರೀತಿ ತಿಳಿಸಿದ್ದಾರೆ—ಅಖಂಡ ಹಿಂದೂಸ್ಥಾನದ [illegible] ಹಿಂದೂಸ್ಥಾನವಾದ [illegible] ಬ್ರಿಟನ್ [illegible] ತಳೆದ ನಂತರ ಸ್ವತಂತ್ರವಾಗುವುದೆಂದು ಘೋಷಿಸಿರುವ ಅಲ್ಲಿನ ಸಂಸ್ಥಾನ [illegible] ಪ್ರಧಾನಿಗಳ ಹೇಳಿಕೆಯನ್ನು ನಾನು ಪ್ರಶಂಸಿಸುತ್ತೇನೆ. ಹೈದರಾಬಾದಿನ ನಿಜಾಮರು ತಮ್ಮ ಸಂಸ್ಥಾನವು ಸ್ವತಂತ್ರವೆಂದು ಆಗಲೇ ಘೋಷಿಸಿರುವರಲ್ಲದೆ ಇತರ ಮುಸ್ಲಿಂ ಸಂಸ್ಥಾನಗಳೂ ಸ್ಪರ್ಧೆಯಲ್ಲಿ ಸ್ವಾತಂತ್ರ್ಯ ಘೋಷಣೆ ಮಾಡುವುದರಲ್ಲಿವೆ. ಆದರಿಂದ ಎಲ್ಲಾ ಹಿಂದೂ ಸಂಸ್ಥಾನಗಳೂ ಅಖಂಡ ಹಿಂದೂಸ್ಥಾನದ ದೃಷ್ಟಿಯಿಂದ ತಮ್ಮ ಸಂಸ್ಥಾನಗಳ ಸೈನ್ಯ ಬಲಗಳನ್ನು [illegible] ಸಂಸ್ಥಾನಗಳ [illegible] ಹಿಂದೂ [illegible] ಸಂಸ್ಥಾನಗಳ ಸ್ವಾತಂತ್ರ್ಯ [illegible] ರಾಜ್ಯಾಂಗ ಸಭೆಯು [illegible] ಹಿಂದೂ [illegible] ಸಂಸ್ಥಾನಗಳು [illegible]

ಕಾಂಗ್ರೆಸ್ ಮಂತ್ರಿಮಂಡಳ ರಾಜೀನಾಮೆ ಕೊಡುವುದೇ?

—

ಗಡಿನಾಡಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು [illegible] ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷಪಾತವುಳ್ಳ ಕೆಂಪಂಗಿ [illegible] ಬಹಿಷ್ಕರಿಸುವರೆಂದು ವರದಿಯಾಗಿದೆ. ಮಹಾತ್ಮ ಗಾಂಧಿ, ಮಿ॥ ಜಿನ್ನಾ ಮತ್ತು ಖಾನ್ ಅಬ್ದುಲ್ ಗಫಾರ್ ಖಾನರ ನಡುವೆ ನಡೆದ ಸಮಾಲೋಚನೆಗಳು ಫಲಕಾರಿಯಾಗಲಿಲ್ಲವೆಂದು ತಿಳಿದುಬಂದಿದೆ. ಗಡಿನಾಡಿನಲ್ಲಿ ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ ಮಂತ್ರಿಮಂಡಲವು ರಾಜೀನಾಮೆ ಕೊಡುವುದೆಂದು ಭಾವಿಸಲಾಗಿದೆ.

ಬಜೆಟ್ ಮೇಲೆ ಚರ್ಚೆ ಆರಂಭ

ಶಾಸನ ಸಭಾ ಕಾರ್ಯ ಕಲಾಪ

—

(ಸ್ವ ಸು ಫೋ॥) ಬೆಂಗಳೂರು ೨೧

ಈ ದಿನ ಶಾಸನ ಸಭೆಯು ಮೂರನೆಯ ದಿನದ ಕಾರ್ಯಕಲಾಪಗಳು ಶ್ರೀ ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಶ್ರೀ ಕಡಿದಾಳ್ ಮಂಜಪ್ಪನವರು ರಾಜ್ಯಾಂಗ ರಚನಾ ಸಭೆಗೆ ಮೈಸೂರು ಪ್ರತಿನಿಧಿಗಳನ್ನು ಕಳುಹಿಸುವ ಬಗ್ಗೆ ಕೇಳಿದ್ದ ಪ್ರಶ್ನೆಗೆ ಉಪ ಪ್ರಶ್ನೆಗಳ ಸುರಿಮಳೆಯಾಯಿತು. ಶ್ರೀಗಳಾದ ಎಲ್. ಎಸ್. ವೆಂಕಾಜಿರಾವ್, ಎ. ಎ ಗೋಪಾಲಸ್ವಾಮಿಅಯ್ಯಂಗಾರ್, ಟಿ ಮರಿಯಪ್ಪ, ಹೆಚ್. ಎಸ್. ರುದ್ರಪ್ಪ, ಶ್ರೀಮತಿ ಎಂ ಆರ್ ಲಕ್ಷ್ಮಮ್ಮ ಮುಂತಾದವರು ಪ್ರಶ್ನೆಗಳನ್ನು ಕೇಳಿದರು. ಐದನೇ ತಾ॥ ನಡೆಯಲಿರುವ ಜಂಟಿ ಅಧಿವೇಶನದಲ್ಲಿ ದಿವಾನರು ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ವಿವರಣೆ ಕೊಡುವರೆಂದೂ, ಪ್ರತಿನಿಧಿಗಳ ಪೈಕಿ ಚುನಾಯಿಸಲ್ಪಡುವವರು ಎಷ್ಟು ಮಂದಿ, ಸರ್ಕಾರಿ ಅಧಿಕಾರಿಗಳು ಎಷ್ಟು ಮಂದಿ ಎಂಬುದನ್ನು ಆ ದಿನ ಹೇಳಲಾಗುವುದೆಂದೂ, ಚುನಾವಣೆಯು ಆ ದಿನ ನಡೆಯುವುದಿಲ್ಲವೆಂದೂ ಸಹ ಮಂತ್ರಿಗಳಾದ ಶ್ರೀ ಅಪ್ಪಾಜಿಗೌಡರು ತಿಳಿಸಿದರು. ಮೈಸೂರಿನಿಂದ [illegible] ಪ್ರಾತಿನಿಧ್ಯವನ್ನು ಕೊಡಲಾಗುವುದೇ ಎಂಬ ಪ್ರಶ್ನೆಗೆ ಅಂತಹ ಆವಶ್ಯಕವನ್ನು [illegible] ಗಲಾಗುವುದಿಲ್ಲವೆಂದು ತಿಳಿಸಿದರು.

[illegible] ರಿಂದ [illegible] ರವರೆಗೆ [illegible] ಕೇಸುಗಳು ಕೈಬಿಡಲ್ಪಟ್ಟು ದಾಖಲಾಗಿವೆಯೆಂದೂ [illegible] ರೂಗಳನ್ನು ಪರಿಹಾರವಾಗಿ ಕೊಟ್ಟಿರುವೆವೆಂದೂ ಶ್ರೀ॥ ಬಿ. ಎಸ್. ಮಲ್ಲಪ್ಪನವರ ಪ್ರಶ್ನೆಗೆ ಉತ್ತರವಾಗಿ ಹೇಳಲಾಯಿತು.

ಬಜೆಟ್ ಚರ್ಚೆ ಆರಂಭ

ಪ್ರಶ್ನೋತ್ತರಗಳಾದ ನಂತರ ಬಜೆಟ್ ಮೇಲೆ ಚರ್ಚೆಯನ್ನು ಮಿ॥ ಖಾನ್ ಬಹದ್ದೂರ್ ಅಬ್ಬಾಸ್ ಖಾನರು ಆರಂಭಿಸಿದರು. ಸರ್ಕಾರವು ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿದ್ದಕ್ಕೆ ಅಭಿನಂದಿಸಿದರು. ಕಾಂಗ್ರೆಸ್ ಸದಸ್ಯರು ಮೊನ್ನೆ ದಿನ ಜಬ್ಬಲ್ಪುರದಲ್ಲಿ [illegible] ಸಂಬಂಧವಾಗಿ [illegible] ಬಹಳ ವಿಷಾದಪಟ್ಟಿದ್ದಾರೆ. ಪ್ರಜೆಗಳ [illegible] ಟೀಕಿಸುವುದು [illegible] ಚರ್ಚೆ ಮುಂದುವರಿದು [illegible]

೨೧ ವರ್ಷದ ಯುವಕನಿಗೆ ೧೪ ವರ್ಷದ ಹುಡುಗಿ

ನ್ಯೂಯಾರ್ಕ್ ನಗರದ ೨೧ ವರ್ಷ ವಯಸ್ಸಿನ ಆರ್. ಎಸ್. ಹಾಲ್ಸ್ ಎಂಬ ಮುದುಕನೊಬ್ಬನು ಬಲಾತ್ಕಾರದಿಂದ ೧೪ ವರ್ಷದ ಹುಡುಗಿಯೊಬ್ಬಳನ್ನು ಮದುವೆಯಾದನೆಂದು ದಸ್ತಗಿರಿ ಮಾಡಲ್ಪಟ್ಟಿರುವನು. ಆ ಹುಡುಗಿಯನ್ನು ತಾನು ಮದುವೆಯಾಗಬೇಕೆಂದು ದೈವ ನಿಯಾಮಕನಾಗಿನಿಂದಲೂ, ಆನಂತರ ದೇವರ ಸೂಚನೆಗನುಸಾರವಾಗಿ ನಡೆಯುವ ಆ ಹುಡುಗಿಯನ್ನು ವರಿಸಿದುದಾಗಿಯೂ ಆತನು ಹೇಳುವನು. ಅವಳು ಅವನ ದೈವದತ್ತವಾದ ಪತ್ನಿಯೆಂದು ಅವನು ಹೇಳಿ ಒತ್ತಾಯಿಸಿದುದರಿಂದ ತಾನು ಅವನನ್ನು ವರಿಸಿದುದಾಗಿ ಆ ಹುಡುಗಿಯು ತಿಳಿಸಿರುವಳು. ಈ ಮದುವೆಗೆ ಮೊದಲು ಅನನು ತನ್ನ ಪ್ರಥಮ ಭಾರ್ಯೆಯೊಡನೆ ವಿಚ್ಛೇದನ ಹೊಂದಿದನೆಂದೂ ಅವಳು ಅವನ ದೈವದತ್ತವಾದ ಪತ್ನಿಯಾಗಿರದಿದ್ದುದೇ ಈ ವಿಚ್ಛೇದನೆಗೆ ಕಾರಣವೆಂದೂ ಹೇಳಿರುವನು.

ಮಾಪಿಳ್ಳೆಗಳಿಗೆ ಪ್ರತ್ಯೇಕ ಪ್ರಾಂತ

ಗ್ಲೋಬ್] ದೆಹಲಿ ೧೬

ಮಲಬಾರಿನಲ್ಲಿರುವ ಮಾಪಿಳ್ಳೆಗಳು ತಮ್ಮದೇ ಆದ ಪ್ರತ್ಯೇಕ ಮಾಪಿಳ್ಳೆ ಸ್ಥಾನವನ್ನು ಕೇಳುತ್ತಿರುವುದಕ್ಕೆ ಮಿ|| ಜಿನ್ನಾರವರ ಬೆಂಬಲವಿರುವುದಾಗಿ ಗೊತ್ತಾಗಿದೆ. ಸದ್ಯದಲ್ಲೇ ಮಾಪಿಳ್ಳೆಗಳ ಸಮ್ಮೇಳನವೊಂದು ಜರುಗಲಿದೆ

ಗೋಧಿಯಲ್ಲಿ ಧತ್ತೂರಿ ಬೀಜ

ಗ್ಲೋಬ್] ನಾಗಪುರ ೧೫

ದಕ್ಷಿಣ ಆಫ್ರಿಕದಿಂದ ಬಂದಿರುವ ಗೋಧಿಯಲ್ಲಿ ಧತ್ತೂರಿ ಬೀಜವು ಮಿಶ್ರವಾಗಿರುವುದರಿಂದ ಅದನ್ನು ಉಪಯೋಗಿಸುವಾಗ ಎಚ್ಚರಿಕೆಯಿಂದಿರಬೇಕೆಂದು ಮಧ್ಯಪ್ರಾಂತ ಸರ್ಕಾರವು ಜನರಿಗೆ ಎಚ್ಚರಿಸಿರುತ್ತಾರೆ. ಗೋಧಿಯ ಜೊತೆಯಲ್ಲಿ ಧತ್ತೂರಿ ಗಿಡವು ಬೆಳೆದು ಈ ರೀತಿ ಮಿಶ್ರವಾಗಿರುವುದರಿಂದು ಕೇಂದ್ರ ಸರ್ಕಾರದವರು ಪ್ರಾಂತ ಸರ್ಕಾರಗಳಿಗೆ ಎಚ್ಚರಿಕೆ ಇತ್ತು ಆ ಗೋಧಿಯನ್ನು ಜಾಲಾಡಿಸಿ ಶೋಧಿಸಬೇಕೆಂದು ಆಜ್ಞೆ ಮಾಡಿರುವರು. ಶುದ್ಧ ಮಾಡಿದ ಮೇಲೆ ಗೋಧಿಯನ್ನು ಕೊಡಲಾಗುವುದು. ಆದರೆ ಜನರು ಅದನ್ನು ಪರೀಕ್ಷಿಸಿ ಉಪಯೋಗಿಸಬೇಕೆಂದು ತಿಳಿಸಲಾಗಿದೆ

ಕಂಟ್ರೋಲ್ ರೇಷನ್ನಿಗಾಗಿ ಮಹಿಳೆಯರಿಂದ ವಿರೋಧ ಪ್ರದರ್ಶನ

ತಮಗೆ ಒದಗಿಸುತ್ತಿರುವ ಅಕ್ಕಿಯಲ್ಲಿ ಹುಳು ಮತ್ತು ಕಲ್ಲುಗಳು ತುಂಬಾ ಇದ್ದು ಅದು ಉಪಯೋಗಿಸಲು ಅಯೋಗ್ಯವಾಗಿದೆಯೆಂದೂ ಮತ್ತು ಅದನ್ನು ಮಣವೊಂದಕ್ಕೆ ೧೮ ರೂ. ನಂತೆ ಮಾರುತ್ತಿರುವುದನ್ನೂ ಪ್ರತಿಭಟಿಸಲು ಶ್ರೀನಗರದ ಸುಮಾರು ೬೦ ದುಃಖಿತರ ಮಂದಿ ಸ್ತ್ರೀಯರು ಅಲ್ಲಿನ ಸಿವಿಲ್ ಸೆಕ್ರಟೇರಿಯಟ್ಟಿನ ಮುಂಭಾಗದಲ್ಲಿ ವಿರೋಧ ಪ್ರದರ್ಶನ ನಡೆಸಿದರೆಂದು ತಿಳಿದುಬಂದಿದೆ.

ಪ್ರಶ್ನಪತ್ರಿಕೆಯ ಕಠಿಣತೆಗಾಗಿ ಉಪವಾಸ ಮುಷ್ಕರ

ಭೌತಿಕ ಶಾಸ್ತ್ರದ ಪ್ರಥಮ ಪ್ರಶ್ನ ಪತ್ರಿಕೆಯು ಅತ್ಯಂತ ಕಠಿಣವಾಗಿತ್ತೆಂಬ ಕಾರಣದ ಮೇಲೆ ಢಕ್ಕಾ ವಿಶ್ವ ವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆಗೆ ಕುಳಿತಿದ್ದ ೨೫ ಮಂದಿ ವಿದ್ಯಾರ್ಥಿಗಳು ಪರೀಕ್ಷಾ ಭವನದಿಂದ ಹೊರಕ್ಕೆ ಬಂದು ಉಪವಾಸ ಮುಷ್ಕರವನ್ನಾರಂಭಿಸಿದರೆಂದು ತಿಳಿದುಬಂದಿದೆ. ಅವರು ಅದರ ಅನಂತರದ ಪರೀಕ್ಷೆಗಳಲ್ಲೂ ಭಾಗವಹಿಸದಿದ್ದುದರಿಂದ ಪರೀಕ್ಷೆಯನ್ನು ಮುಂದಕ್ಕೆ ಹಾಕಲಾಯಿತೆಂದೂ ಹೇಳಲಾಗಿದೆ

ಅಪೋಪು ಕುಸ್ತಿಗಳು

ನಂಜನಗೂಡಿನಲ್ಲಿ ಕಳೆದ ಏಪ್ರಿಲ್ ೨೮ ರಲ್ಲಿ ನಡೆಯಬೇಕಾಗಿದ್ದ ಈ ಕುಸ್ತಿಯು ನಿಂತು ಹೋಗಿತ್ತು. ಈಗ ನ್ಯಾಯಸ್ಥಾನದ ತೀರ್ಮಾನದ ಮೇಲೆ ಇದೇ ಮಾಹೆ ೨೨ ನೇ ತಾ|| ಭಾನುವಾರ ಮೈಸೂರು ಟೈಗರ್ ಪಾಠಶಾಲೆಯವರ ಹಾಗೂ ಮೈಸೂರು ಸ್ವಾಮಿ ರ ಅವರ [illegible]

ಪೈ|| ರಾಮುವಿಗೂ

ದೇವರಾಜಪಟ್ಟಣ ಸ್ಟೈಗರ್ ಹಾಗೂ [illegible] ಜಕೀರ್ ರವರಿಗೂ

ಪೈ|| ಚಿಕ್ಕಯ್ಯನಿಗೂ

ಮಂಡಿತವಾಗಿ ಜಟ್ಟಿನಿಂದ ಕುಸ್ತಿ ನಡೆಯುತ್ತದೆ. ೪ಂ|| ತಾ|| ಅಂ|| ಮಾಯಪ್ಪ, ನಂಜನಗೂಡು

ಹಿಟ್ಲರನ ಕಾರು ಮಾರಾಟಕ್ಕೆ ಬಂದಿದೆ

ಫಿನ್ಲೆಂಡಿನ ಮಾಜಿ ಅಧ್ಯಕ್ಷರಾದ ಮಾರ್ಷಲ್ ಮ್ಯಾನರ್‌ಹೀಂಗೆ ೧೯೪೨ ರಲ್ಲಿ ಅವರ ೭೫ ನೆಯ ವರ್ಧಂತಿಯಲ್ಲಿ ಹಿಟ್ಲರರು ಬಹುಮಾನವಾಗಿ ಕೊಟ್ಟಿದ್ದ ಮೋಟಾರ್ ಕಾರ್ ಹೆಲ್ಸಿಂಕಿನಲ್ಲಿ ಬಿಕರಿಗೆ ಸಿದ್ಧವಾಗಿರುವುದಾಗಿ ವರದಿಯಾಗಿದೆ. ಅದರ ಬೆಲೆ ಸುಮಾರು ೪೫ ಸಹಸ್ರ ರೂ. ಇದು ೨೮೦ ಅಶ್ವ ಶಕ್ತಿಯನ್ನು ಹೊಂದಿದೆ. ವೇಗ ಗಂಟೆಗೆ ೧೩೦ ಮೈಲಿ

ರಾಜಕಮಲ್,

ತಾ|| ೨೦-೬-೪೭ ರಿಂದ

9 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ

೧ (ತೆಲುಗು)

ತಾ|| ೨೦-೬-೪೭ ರಿಂದ

7 ದಿನಗಳು

ಪ್ರತಿದಿನ ಪ್ರಾತಃಕಾಲ ೧೧-೩೦ ಕ್ಕೆ

'ಲಿಂಬ್ ಕಿ ಶರಂ'

(ಹಿಂದಿ)

—: ತಾ ರಾ ಗ ಣ :—

ಶೌಕಲ್ಯ, ಪೃಥ್ವಿರಾಜ್, ತ್ರಿಲೋಕ್ ಕಪೂರ್, ಗುಲಾಬ್ ಮತ್ತು ನಾ ಯ ಂ ಪ ಲ್ಲಿ

ಪ್ರಾಂತ ವಿಭಜನೆಗನುಗುಣವಾಗಿ ರೈಲ್ವೆ ವಿಭಜನೆ

ಭಾರತ ವಿಭಜನೆಗೆ ಅನುಸಾರವಾಗಿ ಹಿಂದೂಸ್ಥಾನ ಮತ್ತು ಪಾಕಿಸ್ಥಾನ ರೈಲ್ವೆ ಹಂಚಿಕೆಯಾಗಬೇಕು. [illegible] ತು ರೈಲ್ವೆ ಮತ್ತು ಬಂಗಾಳ ಅಸ್ಸಾಂ [illegible] ರ್ಗಗಳ ವಿಭಜನೆಯು ನಡೆಯುವ [illegible] ಹಿಂದೂಸ್ಥಾನ ಮತ್ತು ಅಸ್ಸಾಂಗಳಿಗೆ [illegible] ವಾದ ಮಾರ್ಗ ತಪ್ಪಿ ಪಾಕಿಸ್ಥಾನಕ್ಕೆ [illegible] ಡೆ ಪ್ರತ್ಯೇಕವಾಗಿರುವ ನ್ಯಾಷನಲ್ [illegible] ರಿಯಿಂದ ಇವುಗಳಿಗೆ ಸಂಬಂಧಕಲ್ಪಿಸ[illegible] ಗುವುದು. ಗಡಿನಾಡಿನ ಹೆಚ್ಚು [illegible] ರೈಲ್ವೆಯು ಪಾಕಿಸ್ಥಾನಕ್ಕೆ ಸೇರುವು[illegible] ಎಂದು ವರದಿಯಾಗಿದೆ

ವಿಷ ಮಿಶ್ರಿತ ಆಹಾರದಿಂದ ಮರಣ

ಗ್ಲೋಬ್] ಲಂಡನ್ [illegible]

ಲಂಡನ್ನಿನ ಫಲಾಹಾರ ಮಂದಿರವೊಂದರಲ್ಲಿ ಆಹಾರವನ್ನು ತೆಗೆದುಕೊಂಡ ನಂತರ ಭಾರತದ ಪೈ ಲಟ್ ಶಿಕ್ಷಕರ ತುಕಡಿಯ ಸುಮಾರು ಎನಾಲ್ಕು ಜನ ಮೇಲಧಿಕಾರಿಗಳು ತೊಂದರೆಗೊಳಗಾದರು. ಆಹಾರವು ವಿಷ ಮಿಶ್ರಿತವಾದುದೇ ಇದಕ್ಕೆ ಕಾರಣ. [illegible] ಲ್ಲದೆ ಜನರಲ್ ಇಲಾಖೆಯ ಅಧಿಕಾರಿಗಳಾದ ಶ್ರೀ|| ಎಸ್. ಕೆ. ಮೆನನ್‌ರವರು ಆಹಾರ ಸೇವನೆಯಿಂದ ಮರಣ ಹೊಂದಿರುವರೆಂದು ಹೇಳಲಾಗಿದೆ. ಉಳಿದವರು ಗುಣಮುಖರಾಗುತ್ತಿರುವರೆಂದೂ ತಿಳಿದುಬಂದಿದೆ

೨೦೦೦ ವರ್ಷಗಳ ದೇವಾಲಯ

ಗ್ಲೋಬ್] ಬೆರಹಂಪುರ [illegible]

ವಾಸೆಂದಿಯ ಬೆಟ್ಟ ಪ್ರದೇಶದಲ್ಲಿ ಭೂಮಿಯಲ್ಲಿ ಹುದುಗಿಹೋಗಿದ್ದ ಎರಡು ಸಾವಿರ ವರ್ಷಗಳ ಹಿಂದಿನ ದೇವಾಲಯವೊಂದನ್ನು ಕಂಡುಹಿಡಿಯಲಾಗಿದೆ. ಇದರಲ್ಲಿ ಪುರಾತನ ಕಾಲದ ಕಲಾ ಕೌಶಲ್ಯದಿಂದ ಕೂಡಿದ ಮಣ್ಣಿನ ಪಾತ್ರೆಗಳೂ, ಸುಸ್ಥಿತಿಯಲ್ಲಿರುವ ಕೆಲವು ಶಕ್ತಿಗಳ ವಿಗ್ರಹಗಳೂ ಸಿಕ್ಕಿವೆ.

ಶ್ರೀ ಸರಸ್ವತೀ ಸಂಗೀತ ಸಮಾಜ

ಮೈಸೂರು

22-6-47 ನೇ ಭಾನುವಾರ ಸಂಜೆ 6 ಗಂಟೆಗೆ

ಟೌನ್‌ಹಾಲಿನಲ್ಲಿ

ತಿರುವಾಂಕೂರಿನ ಕಲಾ ಮಂಡಲಿಯ ಅತ್ಯಮೋಘವಾದ

ವಿವಿಧ ನೃತ್ಯಗಳು

(ಸುಶ್ರಾವ್ಯವಾದ ಹಿನ್ನೆಲೆ ಸಂಗೀತದೊಡನೆ)

ರಾಮಕೃಷ್ಣನ್, ಜಾಸಿ, ಸುಮತಿ, ಶ್ಯಾಮಲಾ, ಮೋಹನ ಕುಮಾರಿ, ಇಂದುಮತಿ,

ಇವರೇ ಮೊದಲಾದ ಕಲಾವಿದರು.

ಟಿಕೆಟ್ ದರ: ರೂ 5, 3, 2, 1

ಟಿಕೆಟ್ಟುಗಳು ಟೌನ್‌ಹಾಲ್ ಬಳಿ ಭಾನುವಾರ ಬೆಳಗ್ಗೆ 9 ರಿಂದ ಮಾರಲಾಗುತ್ತೆ. 1-2 ನೇ ತರಗತಿಗಳಲ್ಲಿ ಮಾತ್ರ ಭಾನುವಾರ ಮಧ್ಯಾಹ್ನ 3 ಗಂಟೆ ವರಿಗೆ ಟಿಕೇಟ್ ಒಂದಕ್ಕೆ 0-8-0 ಹೆಚ್ಚಿಗೆ ಕೊಟ್ಟಲ್ಲಿ ರಿಜರ್ವ್ ಮಾಡಲಾಗುತ್ತೆ.

AUM

A Message to Motor Vehicles Owners

RS. 10,000 Accident Insurance Policy

Total No of Vehicles insured last year exceeds 12,000	WILL BE GIVEN FREE TO	Annual Premium Income Exceeds Rs: 8,00,000

Every Motor Car Insurance Policy Holder in addition to Lowest Rate of Premium, Payment of Annual Premium by Two Half Yearly Instalments, Rebate of Premium up to 20% if two or more Cars are owned and No Claim Bonus upto 33 per cent. For further particulars and District Organiser-ship, Local Agency Terms. Please apply to–

Messrs. M. N. SOMASHEKHAR & Co.
CHIEF AGENTS,
The Premier Life and General Insurance Co., Ltd.,
(MADRAS),
370 1, New Sayaji Rao Road, MYSORE

ವುಡ್‌ಲ್ಯಾಂಡ್ಸ್

21-7-47 ರಿಂದ

ಕಳೆದಿರುವ ೮ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

: ಪಾತ್ರ :

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರ ಮುಂತಾದವರು

Edited, printed and published by A. R. Narayana at the Sadhvi P. S. D. Subbarao Road, Mysore

ಫೋನ್ ನಂ. 582 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೨—೬—೪೭ [ಸಂಚಿಕೆ ೨೬೦

ಇಂಡಿಯನ್ ರಿಪಬ್ಲಿಕ್ಕಿಗೆ ಆಜಾದರು ಅಧ್ಯಕ್ಷರೇ ?

ರಷ್ಯಾದಲ್ಲಿ ಅಗಾಧವಾಗಿ ಸೈನ್ಯ ಜಮಾವಣೆ

ರಿಸರ್ವ್ ಆಫೀಸರುಗಳ ಸಭೆಯಲ್ಲಿ ಜನರಲ್ ಲಿನ್ಸರವರು ಮಾತನಾಡುತ್ತಾ ರಷ್ಯಾ ಅಮೇರಿಕದ ೨೦ ಭಾಗಕ್ಕಿಂತ ಹೆಚ್ಚಿನ ಸೈನ್ಯವನ್ನು ಜಮಾಯಿಸಿದೆಯೆಂದು ತಿಳಿಸಿದರು. ರಷ್ಯ ೧೦,೦೦೦ ವಿಮಾನಗಳನ್ನು ಇಟ್ಟಿದೆಯೆಂದೂ ಅಮೇರಿಕದಲ್ಲಿ ಕೇವಲ ೪,೦೦೦ ಮಾತ್ರವೇ ಇರುವುದೆಂದೂ, ಯೂರೋಪಿನಲ್ಲಿ ತೊಂದರೆ ಇದರೆ ಅಮೇರಿಕದ ಸೈನ್ಯಗಳನ್ನು ಬಹಳ ಸುಲಭವಾಗಿ ಓಡಿಸಲಾಗುವುದೆಂದೂ ಸಹ ಅವರು ಹೇಳಿದರು.

ಬಂಗಾಳಾ ವಿಭಜನೆ

ಅವಿಭಕ್ತ ಬಂಗಾಳ ಈಗಿರುವ ರಾಜ್ಯಾಂಗ ಸಭೆಯಲ್ಲಿ ಕೆಲಸ ಮಾಡಬೇಕೇ-ಎಂಬುದಕ್ಕೆ ಮತ ತೆಗೆದುಕೊಂಡಾಗ ಹೊಸ ರಾಜ್ಯಾಂಗ ಸಭೆಯಲ್ಲಿ ಸೇರಲು ಬಹುಮತದವರು ಮತವಿತ್ತರು. ವಿಭಜನೆಯಾಗಬೇಕು. ಸಿಲ್ಹಟ್ ಜಿಲ್ಲೆಯು ಪೂರ್ವ ಬಂಗಾಳಕ್ಕೆ ಸೇರಬೇಕು—ಎಂಬ ವಿಷಯವೂ ನಿರ್ಧರಿಸಲ್ಪಟ್ಟಿವೆ. ಬಂಗಾಳದಲ್ಲಿ ಈಗಿರುವ ಸರ್ಕಾರವನ್ನು ರದ್ದು ಮಾಡಬೇಕು; ಎರಡು ಭಾಗಗಳಲ್ಲೂ ಪ್ರಾದೇಶಿಕ ಮಂತ್ರಿ ಮಂಡಲಗಳ ರಚನೆಯಾಗಬೇಕು. ಇಲ್ಲಿಯವರೆಗೆ ೧೫. ನೇ ಕಲಮನ್ನು ಜಾರಿ ಕರಬೇಕು—ಎಂಬುದಾಗಿ ಹಲವು ಮುಖಂಡರು ಸೂಚನೆಯಿತ್ತರೆಂದು ವರದಿಯಾಗಿದೆ.

ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಮಧ್ಯದಲ್ಲೇ ಪಶ್ಚಿಮ ಮತ್ತು ಪೂರ್ವ ಬಂಗಾಳಗಳಿಂದ ಪ್ರತಿನಿಧಿಗಳ ಚುನಾವಣೆಯು ನಡೆಯುವುದು. ಪಶ್ಚಿಮ ಬಂಗಾಳವು ಈಗಿನ ರಾಜ್ಯಾಂಗ ಸಭೆಗೆ ಸೇರುವುದು; ಅದಕ್ಕೆ ೨೫ ಜನ ಪ್ರತಿನಿಧಿಗಳು ಹೋಗಲಿರುವರು. ಇವರಲ್ಲಿ ೧೫ ಜನ ಮುಸ್ಲಿಮೇತರರೂ, ೪ ಜನ ಮುಸ್ಲಿಮರೂ ಆರಿಸಲ್ಪಡುವರು. ಹೊಸದಾಗಿ ರಚಿತವಾಗಲಿರುವ ಪಾಕಿಸ್ತಾನ ರಾಜ್ಯಾಂಗ ಸಭೆಗೆ ಪೂರ್ವ ಬಂಗಾಳವು ಸೇರುವುದು. ಅದರಲ್ಲಿ ೪೧ ಜನ ಪ್ರತಿನಿಧಿಗಳು ಭಾಗವಹಿಸಲಿರುವರು. ಇವರಲ್ಲಿ ೨೯ ಮಂದಿ ಮುಸ್ಲಿಮರೂ ೧೨ ಮಂದಿ ಮುಸ್ಲಿಮೇತರರೂ ಆರಿಸಲ್ಪಡುವರು-ಎಂಬುದಾಗಿಯೂ ತಿಳಿದು ಬಂದಿದೆ.

ಅಂಬೇಡ್ಕರರಿಗೆ ಗೌರ್ನರ್ ಪದವಿ ?

ಹಿಂದೂಸ್ತಾನ್ ಡೊಮಿನಿಯನ್ನಿನ ವಿವಿಧ ಪ್ರಾಂತಗಳಿಗೆ ಗೌರ್ನರುಗಳನ್ನು ನೇಮಿಸುವ ವಿಷಯ ಭಾರತ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಸರ್ ಮಿರ್ಜಾ, ಡಾ॥ ಅಂಬೇಡ್ಕರ್, ರಾಜಕುಮಾರಿ ಅಮೃತ ಕೌರ್, ಸಿ. ರಾಜಗೋಪಾಲಾಚಾರಿ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಇವರುಗಳ ಹೆಸರು ಕಾಂಗ್ರೆಸ್ ಅವರಣದಿಂದ ಸೂಚಿಸಲ್ಪಟ್ಟಿರುವುದಾಗಿ ವರದಿಯಾಗಿದೆ.

ಆಸ್ಟ್ರೇಲಿಯಕ್ಕೆ ಬ್ರಿಟನಿನ ಮಕ್ಕಳು

ಬ್ರಿಟಿಷ್ ಸಂಸ್ಥೆಗಳಲ್ಲಿ ಅಕ್ಷ್ಯದ ಸಿಗದ ಮತ್ತು ಬ್ರಿಟನ್ನಿಗೆ ಬೇಡವಾದ ಸಾವಿರಾರು ಬ್ರಿಟಿಷ್ ಮಕ್ಕಳಿಗೆ ಆಸ್ಟ್ರೇಲಿಯಾ ಸರ್ಕಾರವು ತಕ್ಕ ಶಿಕ್ಷಣ ಕೊಟ್ಟು ಕೆಲಸಗಳಿಗಾಗಿ ಹಡಗುಗಳಲ್ಲಿ ಜಾಗವನ್ನು ಏರ್ಪಡಿಸುತ್ತಿದೆಯೆಂದು ವರದಿಯಾಗಿದೆ.

ಸ್ವತಂತ್ರ ತಿರುವಾಂಕೂರಿನಿಂದ ರಾಯಭಾರಿಗಳು

ಮಿ॥ ಜಿನ್ನಾರವರಿಗೂ ಸರ್ ಸಿ. ಪಿ ಯವರಿಗೂ ನಡೆದ ಮಾತುಕತೆಗಳನ್ನು ತಿರುವಾಂಕೂರು ಅಂಗೀಕರಿಸಿದೆ; ತಿರುವಾಂಕೂರು ಸ್ವಾತಂತ್ರ್ಯ ಘೋಷಣೆ ಮಾಡಿದೊಡನೆಯೇ ರಾಜಕೀಯ ಸಂಬಂಧಗಳ ಬೆಳವಣಿಗೆಗಾಗಿ ಅಲ್ಲಿನ ನಿವೃತ್ತ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲಾದ ಖಾನ್ ಬಹದ್ದೂರ್ ಅಬ್ದುಲ್ ಕರೀಂ ಸಾಹೇಬರು ಪಾಕಿಸ್ತಾನದಲ್ಲೂ ಪರಮೇಶ್ವರ ಪಿಳ್ಳೆಯವರು ಹಿಂದೂಸ್ತಾನದಲ್ಲೂ ತಿರುವಾಂಕೂರಿನ ರಾಯಭಾರಿಗಳಾಗಿ ನೇಮಕವಾಗಲಿರುವರು— ಎಂಬುದಾಗಿ ಅಲ್ಲಿನ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ;

ಸಂಸ್ಥಾನದಲ್ಲಿ ರೇಷನ್ ಬೋನಸ್

ಸ್ವಂ.ಸು.ಪ್ರೋ॥] ಬೆಂಗಳೂರು ೨೨

ಇದುವರೆಗೆ ಕೊಡುತ್ತಿದ್ದ ರೇಷನ್ ಪ್ರಮಾಣವು ಇನ್ನೇ ೨೫ರಿಂದ ಕಡಿಮೆಯಾಗುವುದೆಂದೂ, ಪ್ರತಿಯೊಬ್ಬರಿಗೂ ಒಟ್ಟು ೧೦ ಔನ್ಸ್ ಮಾತ್ರ ದೊರೆಯುವುದೆಂದೂ ಮೈಸೂರು ಸರ್ಕಾರವು ಪ್ರಕಟಿಸಿದೆ. ಎ. ತರಗತಿಯವರಿಗೆ ೭೬ ಔನ್ಸ್ ಅಕ್ಕಿ. ೧೨ ಕಾಳು; ೧೨ ಗೋಧಿ. ಬಿ. ತರಗತಿಯವರಿಗೆ ೨ ಔನ್ಸ್ ಅಕ್ಕಿ; ೮ ಕಾಳು ಶ್ರಮಜೀವಿಗಳಿಗೆ ೨ ಔನ್ಸ್ ಅಕ್ಕಿ ೧೨ ಕಾಳು ಪ್ಲಾಂಟೇಷನ್ ಕೂಲಿಗಾರರಿಗೆ ೭.೬ ಅಕ್ಕಿ ಕಾಳು ೨೪

ವಿವಾಹೋಪನಯನಗಳು

ಮೈಸೂರು ೨೨

ನಗರೂರಿನ ಶ್ರೀ॥ ಎಸ್. ತಿರುನಾರಣಯ್ಯಂಗಾರ್ಯರು ತಮ್ಮ ಮೊಮ್ಮಗ ಚಿ॥ ಶ್ರೀನಿವಾಸನಿಗೂ, ಅವರ ತಮ್ಮನ ಕುಮಾರ ಚಿ॥ ನರಸಿಂಹಯ್ಯಂಗಾರ್ಯನಿಗೂ ಉಪನಯನವನ್ನೂ ಮತ್ತು ಮೊಮ್ಮಗಳು ಸೌ॥ ಸೌಂದರ್ಯವಲ್ಲಿಯನ್ನು ಶ್ರೀ॥ ಶ್ರೀನಿವಾಸ ವರದಾಚಾರ್ಯರ ಕುಮಾರ ಚಿ॥ ವರಾಹಸ್ವಾಮಿಯ್ಯಂಗಾರ್ಯನಿಗೆ ಕೊಟ್ಟು ವಿವಾಹ ಮಹೋತ್ಸವವನ್ನೂ ಮೊನ್ನೆ ದಿನ ದೇವೀರಮ್ಮಣ್ಣೀ ಅಗ್ರಹಾರದಲ್ಲಿರುವ ತಮ್ಮ ಗೃಹದಲ್ಲಿ ವೈಭವದಿಂದ ನೆರವೇರಿಸಿದರು. ಅನೇಕ ಬಂಧು ಮಿತ್ರರು ಆಹ್ವಾನಿಸಿ ಸತ್ಕರಿಸಲ್ಪಟ್ಟರು.

ಖಾಸಗೀ ಸಚಿವರ ಸೇವೆ ಸ್ತುತ್ಯಾರ್ಹವಾದುದು

ಶಾಸನ ಸಭೆಯಲ್ಲಿ ಬಡ್ಜೆಟ್ ಭಾಷಣ

ಸ್ವಂ.ಸು.ಪ್ರೋ॥] ಬೆಂಗಳೂರು ೨೨

ನಿನ್ನೆ ದಿನ ಮುಂದುವರಿದ ಶಾಸನ ಸಭೆಯಲ್ಲಿ ಬಡ್ಜೆಟ್ಟಿನ ಮೇಲೆ ಶ್ರೀಗಳಾದ ಎಲ್. ಎಸ್. ವೆಂಕೋಜೀರಾವ್, ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್, ಅಬ್ಬಾಸ್ ಖಾನ್, ಮಹಮ್ಮದ್ ಇಮಾಂ, ಸೈಯ್ಯದ್ ಅಬ್ದುರ್ ರಹಿಮಾನ್, ದಿವಾನ್ ಬಹದ್ದೂರ್ ಪಿ. ಮಹದೇವಯ್ಯ ಬೇಲೂರ್ ಶ್ರೀನಿವಾಸಯ್ಯಂಗಾರ್ ಮುಂತಾದವರು ಭಾಷಣ ಮಾಡಿದರು.

ಖಾಸಗೀ ಸಚಿವರುಗಳು ಸಂಸ್ಥಾನದ ಉನ್ನತಿಗಾಗಿ ಮಾಡುತ್ತಿರುವ ಸೇವೆ ಪ್ರಶಂಸನೀಯವಾದುದು. ಅವರು ಸಂಸ್ಥಾನದ ಏಳಿಗೆಗಾಗಿ ಎಸಗುತ್ತಿರುವ ಸೇವೆ ಮೈಸೂರಿನ ಇತಿಹಾಸದಲ್ಲೇ ಪ್ರಸಿದ್ಧವಾದುದಾಗಿದೆ. ಇಂತಹವರ ಸೇವೆಯನ್ನು ಕಾಂಗ್ರೆಸ್ಸು ಟೀಕಿಸುವುದು ನಿರಾಧಾರವಾದುದೂ, ಬೇಜವಾಬ್ದಾರಿಯುಳ್ಳದೂ ಆಗಿದೆ—ಎಂಬುದಾಗಿ ಅಬ್ಬಾಸ್ ಖಾನರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸನ್ನು ಟೀಕಿಸಿ ಮಾತಾಡಿದರು.

ವರು ಮರಾಮತ್ತು ನಾಡಿನ ಕೆಲಸ ಕಾರ್ಯಗಳು ಮೊದಲಾದವುಗಳಿಗಾಗಿ ಬಡ್ಜೆಟ್ಟಿನಲ್ಲಿ ಸಾಕಾದಷ್ಟು ಮೊಬಲಗನ್ನು ಸೂಚಿಸಲಾಗಿದೆ. ಆಯವ್ಯಯದ ಪಟ್ಟಿಯು ಬಹಳ ಬುದ್ಧಿವಂತಿಕೆಯಿಂದಲೂ ದೂರಾಲೋಚನೆಯಿಂದಲೂ ಕೂಡಿದೆ— ಎಂದೂ ಅವರು ಹೇಳಿದರು.

ಆಯವ್ಯಯ ಪಟ್ಟಿಯ ರಚನೆ ಸಮರ್ಪಕವಾಗಿಲ್ಲ, ಇದು ಬಹಳ ನಿರಾಶಾದಾಯಕ; ಪೋಲೀಸ್ ಮೊದಲಾದವುಗಳ ಬಗ್ಗೆ ಯಾವ ಹೊಸ ಬದಲಾವಣೆಗಳೂ ಆಗಿಲ್ಲ- ಎಂಬುದಾಗಿ ಆಯವ್ಯಯ ಪಟ್ಟಿಯನ್ನು ಟೀಕಿಸಿ ಶ್ರೀ॥ ಬೇಲೂರು ಶ್ರೀನಿವಾಸಯ್ಯಂಗಾರ್ಯರು ಮಾತನಾಡಿದರು.

ಕಾಂಗ್ರೆಸ್ ಪಕ್ಷದವರು ಖಾಸಗೀ ಸಚಿವರನ್ನು ಟೀಕಿಸಿರುವುದನ್ನು ಖಂಡಿಸಿ ಸಚಿವರು ಸ್ತುತ್ಯಾರ್ಹವಾದ ಸೇವೆಗೈದಿರುವರೆಂದು ನುಡಿದು ಮಿ॥ ಮಹಮ್ಮದ್ ಇಮಾಮರು ಬಡ್ಜೆಟ್ಟಿಗೆ ಬೆಂಬಲವಿತ್ತು ಹೇಳಿದರು

ಸಂಸ್ಥಾನಗಳ ಪೈನಾನ್ಸಿಗಳನ್ನೆ ಕೋರಿಗೆ ನ ಬಂಡವಾಳವನ್ನು ಉಪಯೋಗಿಸಿಕೊಳ್ಳಬೇಕು. ಭೋಗ ಸಾಮಗ್ರಿಗಳ ಮೇಲೆ ಅಧಿಕ ತೆರಿಗೆಯನ್ನು ವಿಧಿಸಿ ಸಂಸ್ಥಾನದ ಆದಾಯವನ್ನು ವೃದ್ಧಿಪಡಿಸಬೇಕು—ಎಂಬುದಾಗಿ ಶ್ರೀ॥ ಎಲ್. ಎಸ್. ವೆಂಕೋಜೀರಾಯರು ತಮ್ಮ ಭಾಷಣದಲ್ಲಿ ನುಡಿದರು.

ಆಯವ್ಯಯದ ಪಟ್ಟಿ ಸಮರ್ಪಕವಾಗಿಯೂ, ಸಮಂಜಸವಾಗಿಯೂ ಇದೆ; ನಿಷ್ಪಕ್ಷಪಾತವಾಗಿ ಖಾಸಗೀ ಸಚಿವರನ್ನು ಟೀಕಿಸುವುದು ಸರಿಯಲ್ಲ; ಸಂಸ್ಥಾನದ [illegible] ಮುಂತಾದವರು—ಎಂದು ದಿವಾನ್ ಬಹದ್ದೂರ್ ಪಿ. ಮಹದೇವಯ್ಯನವರು ಬಡ್ಜೆಟ್ಟಿಗೆ ಬೆಂಬಲವಿತ್ತು ಭಾಷಣ ಮಾಡಿದರು.

ಆಜಾದರು ಇಂಡಿಯಾ ರಿಪಬ್ಲಿಕ್ಕಿನ ಪ್ರಥಮಾಧ್ಯಕ್ಷರೆ ?

ಭಾರತ ರಿಪಬ್ಲಿಕ್ಕಿನ ಮೊದಲನೆಯ ಅಧ್ಯಕ್ಷ ಗದ್ದುಗೆಯನ್ನು ಮೌಲಾನಾ ಅಬ್ದುಲ್ ಕಲಾಂ ಆಜಾದರು ಏರುವರೆಂದು ಆಸ್ಟ್ರೇಲಿಯ ಬಜಾರ್ ಪತ್ರಿಕೆಯು ವರದಿಯೊಂದು ತಿಳಿಸುತ್ತದೆ. ಕಾಂಗ್ರೆಸ್ ಹೈಕಮಾಂಡಿಗೆ ಅದನ್ನು ಮಹಾತ್ಮರು ಸೂಚಿಸಿದರೆಂದೂ, ಪಂಡಿತ ನೆಹರೂರವರು ಅದಕ್ಕೆ ಬೆಂಬಲ ನೀಡಿದರೆಂದೂ ಸಹ ಅದೇ ವರದಿಯು ತಿಳಿಸುತ್ತದೆ.

ಪಾಕಿಸ್ತಾನವು ಅರಬ್ ಲೀಗಿನ ಭಾಗವಾಗಲಾರದು

ಪಾಕಿಸ್ತಾನವನ್ನು ಅರಬ್ ಲೀಗಿನ ಒಂದು ಅಂಗವಾಗಿ ಪರಿಗಣಿಸಬೇಕೆಂದು ಲೀಗಿನವರು ಅರಬ್ ಲೀಗಿನವರನ್ನು ಕೋರಿದ್ದುದನ್ನು ಅವರು ತಿರಸ್ಕರಿಸಿದ್ದಾರೆ. ಅರಬ್ ಲೀಗು ಅರಬ್ಬಿ ಸಂಸ್ಕೃತಿ, ಜ್ಞಾನ ಮತ್ತು ಸಂಸ್ಕೃತಿಗಳ ಬೆಳವಣಿಗೆಗಾಗಿ ಸ್ಥಾಪಿತವಾಗಿದೆ; ಪಾಕಿಸ್ತಾನ ಅರಬ್ ಲೀಗಿನ ಮಾರ್ಗವಲಂಬಿಯಲ್ಲ ಅಥವಾ ಅದರ ಭಾಗವಲ್ಲ ಆದುದರಿಂದ ಅದು ಅರಬ್ ಲೀಗಿನ ಭಾಗವಾಗಲಾರದು—ಎಂಬುದಾಗಿ ಅರಬ್ ಲೀಗ್ ಕಾರ್ಯದರ್ಶಿ ಮಿ॥ ಅಜಾಂ ಪಾಷಾರವರು ತಿಳಿಸಿದ್ದಾರೆ.

ಜಫರುಲ್ಲಾಖಾನರು ಲೀಗ್ ರಾಜ್ಯಾಂಗ ಸಭಾಧ್ಯಕ್ಷರು

ಜುಲೈ ೧೫ ರ ವೇಳೆಗೆ ಸೇರಲಿರುವ ಪಾಕಿಸ್ತಾನ ರಾಜ್ಯಾಂಗ ಸಭೆಗೆ ಫೆಡರಲ್ ಕೋರ್ಟಿನ ಮಾಜಿ ನ್ಯಾಯಾಧೀಶರಾದ ಸರ್ ಮಹಮ್ಮದ್ ಜಫರುಲ್ಲಾ ಖಾನರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗುವುದೆಂದು ವರದಿಯಾಗಿದೆ. ಅಧ್ಯಕ್ಷಪದದ ಸಂಬಂಧವಾಗಿ ಅವರು ಈಗಾಗಲೇ ಲಂಡನ್ನಿಗೆ ತೆರಳಲಿರುವುದು ತಿಳಿದು ಬಂದಿದೆ.

ಪಾಕಿಸ್ತಾನವು ಮಧ್ಯಪ್ರಾಚ್ಯಕ್ಕೆ ಸೇರುವುದೇ ?

ಭಾರತದ ಸಿವಿಲ್ ಸರ್ವಿಸ್ಸಿನಿಂದ ನಿವೃತ್ತಿ ಹೊಂದಿ ಇರೇನಿನಲ್ಲಿ ಅನೇಕ ವರ್ಷಗಳಿಂದ ವಾಸಿಸುತ್ತಿದ್ದ ಜಾನ್ ಫಿಲಿಬಿ ಎಂಬುವರು ಈಗ ದೆಹಲಿಗೆ ಬಂದಿರುವರು. ಇವರು ಮಧ್ಯಪ್ರಾಚ್ಯ ಅದರಲ್ಲೂ ಅರೇಬಿಯದ ಭವಿಷ್ಯದ ಬಗ್ಗೆ ಬಹಳ ಉತ್ಸಾಹ ಹೊಂದಿರುವರು. ಇವರು ಮುಸ್ಲಿಂ ಲೀಗಿನ ಮುಖಂಡರುಗಳೊಂದಿಗೆ ಮತ್ತು ಜಿನ್ನಾರವರೊಂದಿಗೆ ಮಾತುಕತೆ ನಡೆಸಿದರು. ದೆಹಲಿಯ ರಾಜಕೀಯ ವಲಯಗಳಲ್ಲಿ ಮಧ್ಯಪ್ರಾಚ್ಯದ ಮುಸ್ಲಿಂ ದೇಶಗಳೊಡನೆ ಬಹುಶಃ ಪಾಕಿಸ್ತಾನವು ಸಹ ಸೇರಬಹುದೆಂಬ ಶಂಕೆಯು ಮೂಡಿದೆ—ಎಂಬುದಾಗಿ ವರದಿಯಾಗಿದೆ.

ಪುನರ್ರಚಿತವಾದ ಫಿಲಿಪ್ಸ್ ಬೋರ್ಡ್

ಸ್ವಂ ಸು.] ಬೆಂಗಳೂರು ೨೧

ಸಂಸ್ಥಾನದ ಫಿಲಿಪ್ಸ್ ಬೋರ್ಡನ್ನು ಸರ್ಕಾರದವರು ಪುನರ್ರಚಿಸಿರುವರು. ಪ್ರೊಫೆಸರ್ ಎ ಜಿ ಪಿ ೦ ವರು ಇದರ ಅಧ್ಯಕ್ಷರು. ಈ ಸಮಿತಿಯಲ್ಲಿ ಆರು ಜನ ಅಧಿಕಾರಿಗಳು, ಒಬ್ಬ ಸ್ತ್ರೀ ಮತ್ತು ಇತರರು ಸದಸ್ಯರಾಗಿರುವರು.

ತಿರುವಾಂಕೂರು ಪಾಕಿಸ್ತಾನ ಸರ್ಕಾರವನ್ನು ಒಪ್ಪಿತು

ತಿರುವಾಂಕೂರು ಪಾಕಿಸ್ತಾನ ಸರ್ಕಾರವನ್ನು ಒಪ್ಪಿದೆಯೆಂದೂ ಅಲ್ಲಿಗೆ ತಿರುವಾಂಕೂರಿನಿಂದ ಒಬ್ಬ ಪ್ರತಿನಿಧಿಯನ್ನು ಕಳುಹಿಸಲಾಗುವುದೆಂದೂ ದಿವಾನರಾದ ಸರ್ ಸಿ. ಪಿ. ಯವರು ತಿಳಿಸಿರುವರು.

ಬಂಗಾಳವನ್ನು ಭಾಗ ಮಾಡಲಾಗುವುದು

ಬಂಗಾಳವನ್ನು ಇಬ್ಭಾಗ ಮಾಡಬೇಕೆಂದು ಅಲ್ಲಿಯ ಶಾಸನಸಭೆಯ ಸದಸ್ಯರು ತೀರ್ಮಾನಿಸಿರುವರು. ಈ ಬಗ್ಗೆ ೫೮ ಓಟುಗಳು ಪರವಾಗಿಯೂ ೨೧ ಓಟುಗಳು ವಿರುದ್ಧವಾಗಿಯೂ ಬಂದುವು. ಒಂದು ಸಂಯುಕ್ತ ಬಂಗಾಳದ ಪ್ರದೇಶದ ರಾಜ್ಯ ರಚನಾ ಸಮಿತಿ ಸದಸ್ಯರು ಈಗ ನಡೆಯುತ್ತಿರುವ ಹಿಂದೂಸ್ಥಾನ ಸಭೆಗೆ ಹೋಗಬೇಕೆಂದೂ ತೀರ್ಮಾನಿಸಲಾಯಿತು.

ಪಿಪ್ಟರ್ ಕೋ-ಆಪರೇಟಿವ್ ಸೊಸೈಟಿ [illegible], ಮೈಸೂರು

ಪ್ರಕಟಣೆ

ಈ ಸಂಘದಲ್ಲಿ ಹಿಂದೆ ಮೆಂಬರುಗಳಾದವರು ಮತ್ತು ಈಗ ಮೆಂಬರುಗಳಾಗಿರುವ ಅನೇಕ ಸದಸ್ಯರುಗಳ ಷೇರು [illegible] ಹಣ ಲೆಕ್ಕದಲ್ಲಿ ಜಮಾ [illegible] ಮೊಬಲಗು ಉಳಿದಿದ್ದು, ಇವರು ಪಡೆಯದಿರುವುದರಿಂದ ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿದೆ. ದಯಮಾಡಿ ಬೇಕಾದವರು ಬಂದು ಉಳಿದಿರುವ ಮೊಬಲಗನ್ನು ಪಡೆಯಬೇಕೆಂದು [illegible] ಕೋರಲಾಗಿದೆ.

ಪಿ. ಗೋಪಾಲಕೃಷ್ಣಶೆಟ್ಟಿ, ಗೌರವ ಕಾರ್ಯದರ್ಶಿ

ದೇಶರಕ್ಷಣೆಗಾಗಿ ಎಲ್ಲರೂ ಶಸ್ತ್ರ ಗ್ರಹಣ ಮಾಡಬೇಕು

ಕಾಗಿನ [illegible] ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಜೊತೆಯಲ್ಲಿ ಶಸ್ತ್ರ ಪ್ರಯೋಗದಲ್ಲಿ ಶಿಕ್ಷಣ ಪಡೆಯಬೇಕಾಗಿದೆ ಎಂದು ಸಂಯುಕ್ತ ಪ್ರಾಂತ ಶಾಸನ ಸಭಾಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ ಟಂಡನ್ನರು ಹೇಳಿರುವರು. ಎಲ್ಲಾ ಕಡೆಗಳಿಂದಲೂ ನಮ್ಮ ಮೇಲೆ ದಬ್ಬಾಳಿಕೆ ನಡೆಯುತ್ತಿದೆ; ಅವಕಾಶ ಸಿಕ್ಕಿದರೆ ಮೇಲೆ ಬೀಳಲು ಅನೇಕರು ಕಾದು ನಿಂತಿದ್ದಾರೆ, ಇಂತಹ ಪರಿಸ್ಥಿತಿಯಲ್ಲಿ ದೇಶದ ರಕ್ಷಣೆಗಾಗಿ ಶಸ್ತ್ರಗ್ರಹಣ ಮಾಡುವುದು ಅವಶ್ಯಕವೆಂದೂ ಅವರು ನುಡಿದಿರುವರು. ಭಾರತದ ವಿಭಜನೆಯ ವಿಷಯದಲ್ಲಿ ಜನಾಭಿಪ್ರಾಯವನ್ನು ಕೇಳಿದ್ದರೆ ಅನೇಕರು ಅದಕ್ಕೆ ವಿರುದ್ಧವಾಗಿ ಮತ ಕೊಡುತ್ತಿದ್ದರೆಂದೂ ತಾವು ಸದ್ಯದಲ್ಲಿಯೇ ರಾಷ್ಟ್ರೀಯ ಸೈನ್ಯವೊಂದನ್ನು ರಚಿಸಲಿರುವುದರಿಂದ ಅದರಲ್ಲಿ ಯುವಕರೆಲ್ಲರೂ ಸೇರಬೇಕೆಂದೂ ಸಹ ಶ್ರೀ|| ಟಾಂಡನ್ನರವರು ತಿಳಿಸಿರುವರು.

ದೆಹಲಿಗೆ ಪಂಜಾಬ್ ನ್ಯಾಷನಲ್ ಬ್ಯಾಂಕ್

ಲಾಹೋರಿನಲ್ಲಿರುವ ಉತ್ತರ ಭಾರತದ ಸುಪ್ರಸಿದ್ಧ ಬ್ಯಾಂಕಾದ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಮುಖ್ಯ ಆಫೀಸನ್ನು ಅಲ್ಲಿಂದ ದೆಹಲಿಗೆ ವರ್ಗಾಯಿಸಲು [illegible] ಜನರಲ್ ಮೀಟಿಂಗಿನಲ್ಲಿ ಇತ್ಯರ್ಥಿಸಿದೆಯೆಂದು ವರದಿಯಾಗಿದೆ.

ಮೈಸೂರಿಗೆ ತೊಗರಿಬೇಳೆ

ಸಂಸ್ಥಾನದಲ್ಲಿ ತಲೆದೋರಿರುವ ತೊಗರಿಬೇಳೆ ಅಭಾವವನ್ನು ನಿವಾರಿಸಲು ಭಾರತ ಸರ್ಕಾರವು ಸಂಯುಕ್ತ ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೆ ೨೦೦೦ ಟನ್ ತೊಗರಿಬೇಳೆಯನ್ನು ಕಳುಹಿಸಲು ನಿರ್ಧರಿಸಿದೆಯೆಂದೂ ಇದು ಶೀಘ್ರದಲ್ಲೇ ಇಲ್ಲಿಗೆ ಬರಲು ಏರ್ಪಾಡಾಗುತ್ತಿದೆಯೆಂದೂ ವರದಿಯಾಗಿದೆ.

ಆರೋಗ್ಯ ಮತ್ತು ಕಲಾ ಪ್ರದರ್ಶನ

ನವರಾತ್ರಿ ವಸ್ತು ಪ್ರದರ್ಶನಾಲಯದಲ್ಲಿ ಮುಂದಿನ ತಿಂಗಳು ೮ ನೇ ತಾ|| ನಿಂದ ೧೩ ನೇ ತಾ|| ವರೆಗೆ ಆರೋಗ್ಯ ಮತ್ತು ಕುಶಲ ಕಲೆಗಳ ಪ್ರದರ್ಶನವನ್ನು ನಡೆಸಲು ಮೈಸೂರು ಪುರಸಭೆಯವರು ಏರ್ಪಾಡು ಮಾಡುತ್ತಿರುವರು. ಮಳಿಗೆಗಳು ಬಾಡಿಗೆಗೆ ಸಿಗುವುವು. ಬೇಕಾದವರು ಪೌರಸಭಾಧ್ಯಕ್ಷರಿಗೆ ಬರೆದುಕೊಂಡು ವಿವರಗಳನ್ನು ಪಡೆಯಬಹುದು.

ಉಪನ್ಯಾಸ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರಿ ಶಿಕ್ಷಣ ಸಮಿತಿ ಆಶ್ರಯದಲ್ಲಿ ನಾಳೆ ಸಂಜೆ ಐದುಘಂಟೆಗೆ ಎ ಬನುಮಯ್ಯನವರ ಹೈಸ್ಕೂಲಿನಲ್ಲಿ ಮಹಾರಾಜಾ ಕಾಲೇಜ್ ನಿವೃತ್ತ ಸಂಸ್ಕೃತ ಪ್ರೊಫೆಸರ್ ಶ್ರೀ ಸಿ. ಆರ್ ನರಸಿಂಹಶಾಸ್ತ್ರಿಗಳವರು "ಸಹಕಾರದ ತತ್ವ ಮತ್ತು ಸಹಕಾರ ..." ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವುಂಟು.

ಹಿಂದೂ [illegible] ಧರ್ಮ ನೀತಿ [illegible] ಮಾಡಲಾಗುವ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

[illegible]

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜೂಯೆಲರಿ ಮಾರ್ಟ್

ಅಶೋಕ ರಸ್ತೆ, ಮೈಸೂರು.

ಸ್ಥಾಪಿತ ೧೯೩೦. :: ಫೋನ್ ೪೧೧

|| ಓಂ ||

ಮೋಟಾರು ಬಂಡಿಗಳ ಮಾಲೀಕರಿಗೆ ಒಂದು ಸಂದೇಶ

10,000 ರೂ. ಗಳ "ಅಪಾಯ ವಿಮೆ" ಪತ್ರ

ಕಳೆದ ವರ್ಷ ಇನ್ಸೂರ್ ಮಾಡಲ್ಪಟ್ಟ ಮೋಟಾರ್ ಬಂಡಿಗಳ ಸಂಖ್ಯೆ 11,000 ಕ್ಕೂ ಮೀರಿದೆ	ಖಾಸಗಿ ವೃತ್ತಿ ಯೊಬ್ಬ ಮೋಟಾರ್ ಕಾರ್ ಮಾಲೀಕನಿಗೂ	ಕೊಟ್ಟಿರುವ ವಾರ್ಷಿಕ ಪ್ರೀಮಿಯಂ ವರಮಾನ 8,00,000 ರೂ.ಗಳಿಗೆ ಮೀರಿದೆ

ಕೊಡಲ್ಪಡುತ್ತದೆ ಇದಲ್ಲದೆ ಒಳ್ಳೆ ಕಡಿಮೆಯಾದ ಪ್ರೀಮಿಯಂ ದರ, ವರ್ಷದ ಪ್ರೀ[illegible] ಮುನ್ನೆಚ್ಚರಿಕೆ [illegible] ಕಾಗಿ ಕೊಡುವ ಸೌಲಭ್ಯ ಎಂದು ಅಥವಾ ಹೆಚ್ಚು ಮೋಟಾರು ಬಂಡಿಗಳನ್ನು ಹೊಂದುವವರಿಗೆ ಶೇ|| 20 ರ ವರೆಗೆ ಪ್ರೀಮಿಯಮ್ಮಿನಲ್ಲಿ ರಿಯಾಯಿತಿ ಮತ್ತು ಹಿಂದಿನ ವರ್ಷ ಯಾವ ವರ್ಷಗಳಲ್ಲಿ ಕಂಪನಿಯಿಂದ ಯಾವ ಕ್ಲೈಮ್ ಪಡೆಯದಿದ್ದವರಿಗೆ ಶೇ|| 33 ರ ವರೆಗೆ ಬೋನಸ್ಸು ಇವೇ ಮೊದಲಾದ ವಿಶೇಷ ಸೌಕರ್ಯಗಳೂ ಕೊಡುತ್ತೇವೆ. ಹೆಚ್ಚಿಗೆ ವಿವರಗಳಿಗೂ, ಇನ್ಸೂರೆನ್ಸಿನ ಪಾಲಿಸಿ ಸ್ಕೀಮಿನ ವಿಷಯ ಸಂಬಂಧಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪ್ರೆಸಿಡೆಂಟ್: ಎಂ. ಎ. ಸೋಮಸುಂದರಂ & ಸನ್ಸ್ ಕಂಪೆನಿ,

[illegible] ಪಿ. [illegible]

[illegible] ಜನರಲ್ ಇನ್ಷೂರೆನ್ಸ್ [illegible]

[illegible]

[illegible] ಮೈಸೂರು

ಅಪೇರಾ ಟಾಕೀಸ್, ಮೈಸೂರು

ಜೂನ್ ೨೧ [illegible] ನೇ ವಾರ

ರಾಜಕುಮಾರಿ

[illegible], ಬಾಲಯ್ಯ

Morning Shows

from 22-6-47

Rhythm Parade

[illegible]

(ಹಿಂದಿ [illegible])

[illegible]

Edited, [illegible]

A. [illegible]

D. Subbaiah [illegible]

ವುಡ್‌ಲ್ಯಾಂಡ್ಸ್

21-7-47 ರಿಂದ

ಶುಕ್ರವಾರ ೮ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

:: ಪಾತ್ರ ::

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರ ಮುಂತಾದವರು.

ರಾಜಕಮಲ್,

ತಾ|| ೨೦-೬-೪೭ ರಿಂದ

9 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲ್ಲಭಾಮ

(ತೆಲುಗು)

ತಾ|| ೨೦-೬-೪೭ ರಿಂದ

7 ದಿನಗಳು

ಪ್ರತಿದಿನ ಪ್ರಾತಃಕಾಲ ೧೧-೩೦ ಕ್ಕೆ

'ಅಂಖ್ ಕಿ ಶರಂ'

(ಹಿಂದಿ)

—: ತಾರಾಗಣ :—

ಕೌಸಲ್ಯ, ಪೃಥ್ವಿರಾಜ್, ತ್ರಿಲೋಕ್ ಕಪೂರ್, ಗುಲಾಬ್ ಮತ್ತು ನಾಯಂಪಲ್ಲಿ

ಮೈಸೂರು ಸಿಟಿ ಮುನಿಸಿಪಲ್ ಆಫೀಸ್, ಮೈಸೂರು.

ತಾ|| 20-6-47

ನೋಟಿಫಿಕೇಷನ್

ಇದರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ. ಮೈಸೂರು ಸಿಟಿ ಮುನಿಸಿಪಲ್ ಶರಹದ್ದಿನಲ್ಲಿರುವ ಎಲ್ಲಾ ವಾಹನಗಳನ್ನೂ ೧೯೪೭-೪೮ ನೇ ಸಾಲಿಗೆ ಜಾಸ್ತಿ ಮಾಹೆ ೧೫ ರ ಅಂದಾಯಿತ್ತು ರಿಜಿಸ್ಟರ್ ಮಾಡಿ ನಂಬರ್ ಹಾಕಿಸಲಾಗುತ್ತೆ. ವಾಹನಗಳ ಮಾಲೀಕರು ಆ ದಿವಸದ ಅಂದಾಯಿತ್ತು ತಮ್ಮ ತಮ್ಮ ವಾಹನಗಳನ್ನು ಆವತ್ತಿನ ಬೆಳಗ್ಗೆ ೮ ಗಂಟೆಯಿಂದ ೧೧ ಗಂಟೆಗವರೆಗೆ ಸೈಕಲ್ಲುಗಳನ್ನೂ ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆ ವರೆಗೆ ಇತರ ವಾಹನಗಳನ್ನೂ ಮುನಿಸಿಪಲ್ ಆಫೀಸಿಗೆ ತೆಗೆದುಕೊಂಡು ಬಂದು ರಿಜಿಸ್ಟರ್ ಮಾಡಿಸತಕ್ಕದ್ದು.

ಟಿ. ನರಸಿಂಹಯ್ಯಂಗಾರ್, ವೈಸ್ ಪ್ರೆಸಿಡೆಂಟ್

ಫೋ. ನಂ. 592 WEEKLY EDITION ಇಂದಿನ ಪತ್ರಿಕೆ ೮ ಕಾಸು

ಸಂಪುಟ ೧೧] ಸೋಮವಾರ ೨೩—೬—೪೭ [ಸಂಚಿಕೆ ೬೨

ಪ್ರಾಂತ ಸರ್ಕಾರಗಳಿಗೆ ಸಂಸ್ಥಾನಗಳು ಅಧೀನ

ಮತ್ತೆ ಜಯಪುರಕ್ಕೆ ಸರ್. ಮಿರ್ಜಾ

ಗ್ಲೋಬ್] ಜಯಪುರ ೧೮

ಜಯಪುರದ ಮಾಜಿ ಪ್ರಧಾನಿಗಳಾಗಿದ್ದು ಹೈದರಾಬಾದಿನ ಪ್ರಧಾನ ಪದವಿಗೆ ರಾಜೀನಾಮೆಯಿತ್ತ ಸರ್ ಮಿರ್ಜಾ ಇಸ್ಮೇಲರು ಮತ್ತೆ ಜಯಪುರದ ಪ್ರಧಾನಿಗಳಾಗಿ ನೇಮಕವಾಗುವರೆಂದು ಗೊತ್ತಾಗಿದೆ. ಈಗ ಅಲ್ಲಿನ ಪ್ರಧಾನಿಗಳಾಗಿರುವ ಸರ್ ವಿ ಟಿ ಕೃಷ್ಣಮಾಚಾರಿಯವರು ಒಂದು ಪ್ರಾಮುಖ್ಯವಾದ ನಿಯೋಗದ ಮೇಲೆ ಜಯಪುರದಿಂದ ತೆರಳುವರೆಂದು ವರದಿಯಾಗಿದೆ.

ಸುಹ್ರವರ್ದಿಯವರು ಅಮೆರಿಕದಲ್ಲಿ ಪಾಕಿಸ್ತಾನದ ರಾಯಭಾರಿ

ಪಾಕಿಸ್ತಾನ ಡೊಮಿನಿಯನ್ ಸ್ಥಾಪನೆಯಾದೊಡನೆಯೇ ಬಂಗಾಳದ ಪ್ರಧಾನಿ ಮಿ|| ಸುಹ್ರವರ್ದಿಯವರು ಪಾಕಿಸ್ತಾನದ ಪರವಾಗಿ ಅಮೆರಿಕದ ರಾಯಭಾರಿಗಳಾಗಿ ನೇಮಕವಾಗುವರೆಂದು ತಿಳಿದುಬಂದಿದೆ. ಮಧ್ಯಪ್ರಾಚ್ಯ ಮೊದಲಾದ ರಾಷ್ಟ್ರಗಳೊಡನೆ ರಾಜಕೀಯ ಸಂಬಂಧ ಬೆಳೆಸಲು ಪಾಕಿಸ್ತಾನ ಸರ್ಕಾರವು ಆ ರಾಷ್ಟ್ರಗಳಿಗೆ ರಾಯಭಾರಿಗಳನ್ನು ಕಳುಹಿಸಲು ಪರ್ಯಾಲೋಚಿಸುತ್ತಿರುವುದಾಗಿ ವರದಿಯಾಗಿದೆ

ಭಾರತದಾದ್ಯಂತವೂ ರೇಷನ್ ಖೋತಾ

ಆಹಾರ ಪರಿಸ್ಥಿತಿಯು ಕ್ಷೀಣದಿಂದಿರುವುದರಿಂದ ಭಾರತದಾದ್ಯಂತವೂ ಈಗ ಒಂದು ದಿನಕ್ಕೆ ಒಬ್ಬ ಮನುಷ್ಯನಿಗೆ ಕೊಡುತ್ತಿರುವ ೧೨ ಔನ್ಸು ಆಹಾರವನ್ನು ೧೦ ಔನ್ಸಿಗೆ ಇಳಿಸಲಾಗುವುದೆಂದು ವರದಿಯಾಗಿದೆ. ಇದರಿ ಹೆಚ್ಚು ಬೆಳೆ ಬೆಳೆಯುವ ಕೆಲವು ಪ್ರದೇಶಗಳಲ್ಲಿ ಹೆಚ್ಚಿಗೆ ರೇಷನ್ ಕೊಡಬಹುದು.

ಹಿಂದೂಸ್ತಾನದಲ್ಲಿ ಕೆಲಸ ಮಾಡಲು ಮುಸ್ಲಿಮರು ಸಿದ್ಧ

ಅನೇಕ ಮಂದಿ ಮುಸ್ಲಿಂ ನೌಕರರು ಈವತ್ತು ಹಿಂದೂಸ್ತಾನ ಡೊಮಿನಿಯನ್ನಿನಲ್ಲಿಯೇ ಕೆಲಸ ಮಾಡಲು ಸಿದ್ಧರಾಗಿರುವರೆಂದು ತಿಳಿಸಿರುವುದಾಗಿ ವರದಿಯಾಗಿದೆ

ರಾಜ್ಯಾಂಗ ಸಭೆಗೆ ಷಾಹಪುರ ಸಂಸ್ಥಾನ

ಗ್ಲೋಬ್] ಅಜ್ಮೀರ್ ೧೯

ಷಾಹಪುರ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿದೆಯೆಂದು ಅಲ್ಲಿನ ದಿವಾನರು ರಾಜಪುಟಾಣದ ೧೩ ಸಣ್ಣ ಸಂಸ್ಥಾನಗಳ ಸಂಚಾಲಕರಾದ ಬುಂದಿ ಮಹಾರಾಜರಿಗೆ ತಂತಿ ಕಳುಹಿಸಿದ್ದಾರೆ. ಆ ೧೩ ಸಂಸ್ಥಾನಗಳೂ ಸಹ ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಬೇಕೆಂದೂ, ಹಾಗಿಲ್ಲವಿದ್ದರೆ ತಾವು ಸೇರುವಾಗ; ತಮ್ಮ ತೀರ್ಮಾನವನ್ನು ರಾಜ್ಯಾಂಗ ಸಭಾಧ್ಯಕ್ಷರಾದ ಡಾ|| ಪ್ರಸಾದರಿಗೆ ತಿಳಿಸುವುದಾಗಿಯೂ ಅವರು ಸೂಚಿಸಿರುವರು.

ಪಾಕಿಸ್ತಾನದಲ್ಲಿ ಪ್ರತ್ಯೇಕ ಚುನಾವಣಾ ಪದ್ಧತಿ

ಗ್ಲೋಬ್] ಪಾಟ್ನಾ ೧೯

ಪಾಕಿಸ್ತಾನದಲ್ಲಿ ಪ್ರತ್ಯೇಕ ಚುನಾವಣಾ ಪದ್ಧತಿಯು ಜಾರಿಯಲ್ಲಿರುವುದೆಂದು ಬಿಹಾರದ ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ|| ಜಾಫರ್ ಇಮಾಂರವರು ತಿಳಿಸಿರುವರು. ನಿಮ್ನ ವರ್ಗದವರಿಗೂ ಅವರು ಇಷ್ಟಪಟ್ಟಲ್ಲಿ ಪ್ರತ್ಯೇಕ ಚುನಾವಣೆಯನ್ನು ನಡೆಸಲಾಗುವುದೆಂದು ಸೂಚಿಸಿರುವರು.

ಹಣದ ದುರುಪಯೋಗದ ಮೊಕದ್ದಮೆ

೧೨,೦೦೦ ರೂ. ಗಳ ಅಂದಾಜು

ಮೈಸೂರು ೨೧

ಮೈಸೂರು ಜಿಲ್ಲೆಯಲ್ಲಿ ಅಕ್ಷರ ಪ್ರಚಾರ ಸಮಿತಿಯ ವ್ಯವಸ್ಥಾಪಕರಾಗಿದ್ದ ಶ್ರೀ ಹೆಚ್. ವಿ. ರಂಗಸ್ವಾಮಿಯೆಂಬುವರು ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಟಿ. ನರಸೀಪುರ, ಹೆಗ್ಗಡದೇವನಕೋಟೆ, ಹುಣಸೂರು ಮುಂತಾದ ಕಡೆಗಳಿಂದ ಸುಮಾರು ೧೨,೦೦೦ ರೂ. ಗಳನ್ನು ದುರುಪಯೋಗಪಡಿಸಿಕೊಂಡರೆಂದು ಮೊದಲನೆ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು. ಹುಣಸೂರು, ನರಸೀಪುರ ಮತ್ತು ಹೆಗ್ಗಡದೇವನಕೋಟೆಗಳಲ್ಲಿ ಆಪಾದಿತರು ಹಣದ ದುರುಪಯೋಗಪಡಿಸಿಕೊಂಡುದ್ದು ರುಜುವಾತಾದ್ದರಿಂದ ನ್ಯಾಯಾಧೀಶರು ಈ ದಿನ ತೀರ್ಪಿತ್ತು ಹುಣಸೂರಿನ ಮೊಕದ್ದಮೆಗಾಗಿ ೫೦೦ ರೂ ಜುಲ್ಮಾನೆ ಒಂದು ವರ್ಷ ಕಠಿಣ ಸಜ, ತಪ್ಪಿದರೆ ೬ ತಿಂಗಳು ಸಜ, ಹೆಗ್ಗಡದೇವನಕೋಟೆಗಾಗಿ ೩ ತಿಂಗಳು ಕಠಿಣ ಸಜ, ೨೦೦ ರೂ. ಜುಲ್ಮಾನೆ ತಪ್ಪಿದರೆ ಒಂದು ತಿಂಗಳು ಸಜ ಮತ್ತು ಟಿ ನರಸೀಪುರದ್ದಕ್ಕಾಗಿ ೩ ತಿಂಗಳು ಕಠಿಣ ಸಜ, ೧೦೦ ರೂ. ಜುಲ್ಮಾನೆ ತಪ್ಪಿದರೆ ೧ ತಿಂಗಳು ಸಜ ವಿಧಿಸಿರುವರು ಉಳಿದ ತಾಲ್ಲೂಕುಗಳ ಮೊಕದ್ದಮೆ ಮುಂದುವರಿಯುತ್ತಿದೆ.

ನಿಧನ

ಮೈಸೂರು ಎಂಪೈರ್ ಮೋಟಾರ್ ಸರ್ವಿಸ್ ಮಾಲೀಕರಾಗಿದ್ದ ಮಿ|| ರಾ|| ಎಂ. ಪಿ ಶಂಕರಪ್ಪನವರು ತಾ|| ೧೩-೬-೪೭ ನೇ ಶುಕ್ರವಾರ ಶಿವೈಕ್ಯರಾದರು. ತತ್ಸಂಬಂಧವಾದ ಗಣಾರಾಧನೆಯು ನಾಳೆ ನಡೆಯುವುದು. ಅವರು ಒಬ್ಬ ಗಣ್ಯಪುರುಷರಾಗಿಯೂ ಇದ್ದು ಅನೇಕ ಜನೋಪಕಾರ್ಯಗಳನ್ನು ಮಾಡಿದ್ದರು ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ

ಮುಷ್ಕರದ ಮುಕ್ತಾಯ

ಕೂರ್ಗ್ ಟಿಂಬರ್ ಮತ್ತು ಪ್ಲೈವುಡ ಕಾರ್ಖಾನೆಯ ಆಡಳಿತದವರು ೧೪ ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದರೆಂಬ ಕಾರಣದಿಂದ ಆ ಕಾರ್ಖಾನೆಯ ಕೆಲಸಗಾರರು ಕಳೆದ ೭ ನೇ ತಾ|| ನಿಂದ ಹೂಡಿದ್ದ ಮುಷ್ಕರವು ಲೇಬರ್ ಅಸಿಸ್ಟೆಂಟ್ ಕಮಿಷನರು ಬಂದಾಗ ಸಂಧಾನ ನಡೆಸಿ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿ ಹೇ

ಶಾಸನ ಬದಲಾವಣೆ ಬಗ್ಗೆ ರಾಜ್ಯಾಂಗಗಳಿಗೇ ಅಧಿಕಾರ

ಪಾಕಿಸ್ತಾನ ಮತ್ತು ಹಿಂದೂಸ್ತಾನಗಳಿಗೆ ಡೊಮಿನಿಯನ್ ಸ್ಥಾನಮಾನಗಳು ಲಭಿಸಿದೊಡನೆಯೇ ಬ್ರಿಟಿಷ್ ಸೇನೆಗಳಿಗೆ ಭಾರತದ ಒಳ ರಕ್ಷಣೆಯ ಜವಾಬ್ದಾರಿಯು ಮುಕ್ತಾಯವಾಗುವುದೆಂದು ಖಚಿತವಾಗಿ ತಿಳಿದು ಬಂದಿದೆ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬರಲಿರುವ ಅಧಿಕಾರ ವರ್ಗಾವಣೆಯ ಮಸೂದೆಯು ಅತ್ಯಂತ ಮುಖ್ಯವಾಗಿರುವುದೆಂದು ಹೇಳಲಾಗಿದೆ ಮೌಂಟ್‌ಬ್ಯಾಟನ್ ಶಾಸನವನ್ನು ತಮಗೆ ತೋರಿದಂತೆ ಬದಲಾಯಿಸುವ ಅಥವಾ ಅದನ್ನು ತೆಗೆದು ತಮಗೆ ಬೇಕಾದಂತೆ ಪ್ರತ್ಯೇಕ ಶಾಸನಗಳನ್ನು ನಿರ್ಮಿಸುವ ಅಧಿಕಾರವು ಹಿಂದೂಸ್ತಾನ ಮತ್ತು ಪಾಕಿಸ್ತಾನ ರಾಜ್ಯಾಂಗ ಸಭೆಗಳಿಗಿರುವುದೆಂದೂ ವರದಿಯಾಗಿದೆ.

ಭಾರತದಲ್ಲಿ ಇಬ್ಬರು ಗವರ್ನರ್ ಜನರಲ್ಲುಗಳೇ ?

ಹಿಂದೂಸ್ತಾನ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳಿಗೆ ಒಬ್ಬರೇ ಗವರ್ನರ್ ಜನರಲ್ಲರಿರುವರೆಂಬ ವಾರ್ತೆಯು ಲೀಗು ಕರಾಚಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿರುವುದರಿಂದ ಈಗ ಅದು ನಿರಾಧಾರವಾಗಿದೆ ಈಗ ಹಿಂದೂಸ್ತಾನ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳಿಗೆ ಪ್ರತ್ಯೇಕವಾಗಿ ಗವರ್ನರ್ ಜನರಲ್ಲುಗಳ ನೇಮಕವಾಗಬಹುದೆಂದು ಭಾವಿಸಲಾಗಿದೆ;

ಅಲಹಾಬಾದು ಸ್ವತಂತ್ರ ಭಾರತದ ರಾಜಧಾನಿ

ದೆಹಲಿಯು ಅನೇಕ ಸಾಮ್ರಾಜ್ಯಗಳ ಪತನಕ್ಕೆ ಕಾರಣವಾಗಿದೆ ಅದು ಇದುವರೆಗೆ ಬ್ರಿಟಿಷರ ಪೊಲೀಸಿನ ಆಳ್ವಿಕೆಯ ರಾಜಧಾನಿಯಾಗಿದೆ ಅದು ಸ್ವತಂತ್ರ ಭಾರತದ ಕೇಂದ್ರವಾಗುವುದಿಲ್ಲ ಭಾರತದ ರಾಜಧಾನಿಯು ಕೇಂದ್ರ ಪ್ರದೇಶದಲ್ಲಿದ್ದು ಉತ್ತಮ ವಾತಾವರಣದಲ್ಲಿರಬೇಕು ಆದುದರಿಂದ ಅಲಹಾಬಾದನ್ನು ಕೇಂದ್ರ ಸ್ವತಂತ್ರ ಭಾರತದ ರಾಜಧಾನಿಯನ್ನಾಗಿ ಮಾಡಬೇಕು- ಎಂಬುದಾಗಿ ಹಿ|| ಭಾ|| ಕಾಂಗ್ರೆಸ್ಸಿ ಕಾರ್ಯದರ್ಶಿಗಳಾದ ಆಚಾರ್ಯ ಜುಗುಲ್ ಕಿಶೋರರು ಹೇಳಿರುವರು.

ಲೇಬರ್ ಕಮಿಷನರ್ ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟರು ಭರವಸೆಯಿತ್ತುದರಿಂದ ಮುಕ್ತಾಯಗೊಂಡಿತು ಈ ದಿನ ಕಾರ್ಮಿಕರೆಲ್ಲರೂ ಕೆಲಸಕ್ಕೆ ಹೋಗಿದ್ದರು.

ಸಂಸ್ಥಾನದಲ್ಲಿ ಹೊಸ ಕೈಗಾರಿಕೆಯ ಪ್ರಯತ್ನ

ಶಾಸನ ಸಭೆಯ ಕಾರ್ಯಕಲಾಪ

ಸ್ವಂ. ಸು ಫೋ] ಬೆಂಗಳೂರು ೨೩

ಈ ದಿನ ಹನ್ನೆರಡು ಗಂಟೆಗೆ ಸರಿಯಾಗಿ ಶ್ರೀ|| ಹೆಚ್. ಬಿ ಗುಂಡಪ್ಪ ಗೌಡರ ಅಧ್ಯಕ್ಷತೆಯಲ್ಲಿ ಶಾಸನ ಸಭೆಯ ಕಾರ್ಯಕಲಾಪಗಳು ಆರಂಭವಾದುವು.

ಶ್ರೀಗಳಾದ ಕೃಷ್ಣಪ್ಪ ಗೌಡರು, ಎಂ. ಎ ಗೋಪಾಲಸ್ವಾಮಯ್ಯಂಗಾರರು ಮತ್ತು ಹೆಂಜಾರಪ್ಪನವರುಗಳು ಸಂಸ್ಥಾನವು ರಾಜ್ಯಾಂಗ ರಚನಾ ಸಭೆಗೆ ಪ್ರವೇಶಿಸುವ ಪ್ರಶ್ನೆಗಳನ್ನು ಹಾಕಿದರು.

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು ಉತ್ತರ ಕೊಡುತ್ತಾ ದಿವಾನರು ಶ್ರೀಮನ್ಮಹಾರಾಜರವರ ಸಲಹೆ ಪಡೆದು ಚುನಾಯಿತರಾದ ಮತ್ತು ನಾಮಕರಣದ ಸದಸ್ಯರುಗಳನ್ನು ಕಳುಹಿಸುವ ವಿಷಯವಾಗಿ ೫ ನೇ ತಾ|| ನಡೆಯುವ ಜಂಟಿ ಅಧಿವೇಶನದಲ್ಲಿ ತಿಳಿಸುವರೆಂದೂ, ಆ ಬಗ್ಗೆ ಚುನಾವಣೆಯು ಬಹುಶಃ ೭ ನೇ ತಾ|| ಸೋಮವಾರ ನಡೆಯಬಹುದೆಂದೂ ತಿಳಿಸಿದರು

ನಂತರ ಬಡ್ಜೆಟ್ ಮೇಲೆ ಶ್ರೀಗಳಾದ ಡಿ. ಎಸ್. ಮಲ್ಲಪ್ಪ ಮತ್ತು ನೇರಳೆ ಪಾದಯ್ಯನವರುಗಳು ಭಾಷಣ ಮಾಡಿದರು.

ಶ್ರೀಮತಿ ಎಂ ಆರ್. ಲಕ್ಷ್ಮಮ್ಮನವರು ಸರ್ಕಾರವು ಕದಾಗಿಸುವ ಪದಾರ್ಥಗಳನ್ನು ಎಡೆಸ್ತಿ ಕೊಡುವ ಬಗ್ಗೆ ಅನುಸರಿಸುವ ನೀತಿಯ ಬಗ್ಗೆ ಪ್ರಶ್ನಿಸಿದಾಗ ಕಂಪನಿಗಳು ಎಷ್ಟು ದಿನದಿಂದ ಇವೆ, ನಾಲ್ಕು ಹಣವಿದೆಯೇ ? ಏಜೆನ್ಸಿಗಳನ್ನು ನಾಳನ್ನು ಇಟ್ಟುಕೊಳ್ಳಲು ಅವಕಾಶವಿದೆಯೇ ಎಂಬುದನ್ನು ಪರಿಶೀಲಿಸಲಾಗುವುದು—ಎಂದು ತಿಳಿಸಲಾಯಿತು.

ಶಿವಮೊಗ್ಗ ಮತ್ತು ಕೋಲಾರಗಳಲ್ಲಿ ಸಕ್ಕರೆ ಕಂಪನಿಗಳನ್ನು ಸ್ಥಾಪಿಸಲಾಗುವದೇ ಮತ್ತು ಸಂಸ್ಥಾನದಲ್ಲಿ ಹೊಸದಾಗಿ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು ಎಂದು ಶ್ರೀ|| ರುದ್ರಪ್ಪನವರು ಕೇಳಿದ ಪ್ರಶ್ನೆಗೆ ನರೋನ್ಹಾರವರು ಉತ್ತರ ಕೊಡುತ್ತಾ ಕೆಮಿಕಲ್ ಫರ್ಟಿಲೈಸರ್ಸ್, ರೆಯಾನ್ಸ್, ಸ್ಟಾರ್ಚ್ ಕಟ್ಟಿಗೆ ಕಾರ್ಖಾನೆಯ ಅಭಿವೃದ್ಧಿ, ಮತ್ತು ಪ್ಲಾಸ್ಟಿಕ್ಸುಗಳಿಗೆ ಪ್ರೋತ್ಸಾಹ ಕೊಡಲಾಗುವುದೆಂದು ತಿಳಿಸಿದರು.

ಸಂಸ್ಥಾನಗಳ ಮೇಲ್ವಿಚಾರಣೆ ಪ್ರಾಂತೀಯ ಸರ್ಕಾರಗಳಿಗೆ

ರೆಸಿಡೆನ್ಸಿಗಳ ಮತ್ತು ರಾಜಕೀಯ ಶಾಖೆಗಳ ರದ್ದಾದ ನಂತರ ಸಂಸ್ಥಾನಗಳ ಮೇಲ್ವಿಚಾರಣೆಯು ಪ್ರಾಂತೀಯ ಸರ್ಕಾರಗಳಿಗೆ ಸೇರುವುದೆಂದೂ, ಪ್ರಾಂತಗಳೇ ನೇರವಾಗಿ ಸಂಸ್ಥಾನಗಳೊಡನೆ ವ್ಯವಹರಿಸುವುವೆಂದೂ ಭಾರತ ಸರ್ಕಾರ ತಿಳಿಸಿದೆಯೆಂದು ವರದಿಯಾಗಿದೆ.

ವಿಜಯಲಕ್ಷ್ಮಿ ಪಂಡಿತರಿಂದ ಕಾನ್ವೊಕೇಷನ್ ಭಾಷಣ

ಗ್ಲೋಬ್] ಬೊಂಬಾಯಿ ೨೦

ಬರುವ ಜುಲೈ ೧೨ ನೇ ತಾ|| ಬೊಂಬಾಯಿಯ ನಾಥಿಬಾಯಿ ದಾಮೋದರ ಠಾಕರ್ಸಿ ಭಾರತ ಮಹಿಳಾ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಮಹಿಳಾ ಪದವೀಧರರಿಗೆ ಉಪದೇಶ ಭಾಷಣವನ್ನು ಮಾಡಲು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಒಪ್ಪಿರುವುದಾಗಿ ತಿಳಿದುಬಂದಿದೆ.

ವಾರ ಭವಿಷ್ಯ

ತಾ॥ ೨೩-೬-೧೯೪೭ ರಿಂದ ೨೯-೬-೧೯೪೭ ರವರೆಗೆ

(ಶ್ರೀ ವಿಶ್ವನಾಥ ಶಾಸ್ತ್ರಿ ಗಳಿಂದ)

ಮೇಷ- ಆರೋಗ್ಯ ಸಾಧಾರಣ, ಧನಾದಾಯ ಕಡಿಮೆ, ಖರ್ಚು ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಲಾಭ, [illegible] ವ್ರವಾಸದಿಂದ ಆಪಘಾತ, ತಾ॥ ೨೫, ೨೭ ಚಿಂತೆ ನಷ್ಟ.

ವೃಷಭ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಕಡಿಮೆ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿ [illegible] ನಷ್ಟ, [illegible] ಲಾಭ, ಶಾಂತಿ

ಮಿಥುನ- ಆರೋಗ್ಯ ಚೆನ್ನಾಗಿರುವುದಿಲ್ಲ, ಮಾನಸಿಕ ಚಿಂತೆ ಹೆಚ್ಚು, [illegible]

[illegible]

ಅವೇರಾ ಟಾಕೀಸ್, ಮೈಸೂರು

[illegible] ರಿಂದ ೧೦ ನೇ ವಾರ

ರಾಜಕುಮಾರಿ

[illegible]

ರಾಜಕಮಲ್,

ತಾ॥ ೨೦-೬-೪೭ ರಿಂದ

9 ನೇ ವಾರ

ಪ್ರತಿ ದಿನ ೨ ಆಟಗಳು

ಗೊಲಭಾಮ

(ತೆಲುಗು)

ತಾ॥ ೨೦-೬-೪೭ ರಿಂದ

7 ದಿನಗಳು

ಪ್ರತಿ ದಿನ ಬೆಳಿಗ್ಗೆ [illegible]

'ಆಂಖ್ ಕಿ ಶರಂ'

(ಹಿಂದಿ)

[illegible]

[illegible] ದಿಂದ ಆಪಘಾತ, ಧನಲಾಭ, [illegible]

ಕನ್ಯಾ- ಆರೋಗ್ಯ ಸಾಧಾರಣ, [illegible]

ತುಲಾ- [illegible]

ವೃಶ್ಚಿಕ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಕಡಿಮೆ, ಧನಲಾಭ ಸಾಧಾರಣ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, [illegible]

ಧನು- ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಡಿಮೆ, ಪ್ರವಾಸದಿಂದ ಉಲ್ಲಾಸ ಮತ್ತು ಮಿತ್ರ ದರ್ಶನ, [illegible] ಲಾಭ, ಸುವಾರ್ತೆ

ಮಕರ- ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ, ಮಿತ್ರರಿಂದ ತಿರಸ್ಕಾರ, ಬಂಧುಗಳಿಂದ ಅಪಮಾನ, ಪ್ರವಾಸದಿಂದ ಆಪಘಾತ, ತಾ॥ ೨೪, ೨೬, ಸಾಧಾರಣ ಲಾಭ, ಶಾಂತಿ

ಕುಂಭ- ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಸಾಧಾರಣ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರೊಡನೆಯೂ, ಅಧಿಕಾರಿಗಳೊಡನೆಯೂ ಮನಸ್ತಾಪ, ಯುಕ್ತಿ ಸಿದ ಕಾರ್ಯಗಳಲ್ಲಿ ಸೋಲು ಮಾನಸಿಕ ಚಿಂತೆ ಅಧಿಕವಾಗುವುದು ತಾ॥ ೨೫, ೨೮, ಲಾಭ, ಶಾಂತಿ

ಮೀನ- ಪ್ರಾಕೃತಿಕ ಸ್ಥಿತಿ ಉತ್ತಮ, ಧನಲಾಭ ಹೆಚ್ಚು, ಖರ್ಚು ವಿಪರೀತವಾಗುವುದು, ಶುಭ ಕಾರ್ಯಗಳಿಗಾಗಿ ಪ್ರವಾಸ ಮತ್ತು ಖರ್ಚು, ಕುಟುಂಬದವರ ಆರೋಗ್ಯ ಕೆಟ್ಟು ಔಷಧೋಪಚಾರಗಳಿಗಾಗಿ ವಿಶೇಷ ಧನವ್ಯಯವಾಗುವುದು ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರ ವರ್ಗದವರಿಂದ ತಿರಸ್ಕಾರವುಂಟಾಗುವುದು ತಾ॥ ೨೬, ೨೮ ಲಾಭ, ಶಾಂತಿ.

ಹರಾಜು

[illegible] ತಾ॥ ೨೦-೬-೪೭ ನೇ [illegible] ಗಂಟೆಗೆ [illegible]

ಆರ್. ರಾಮಚಂದ್ರರಾವ್ ಬಾಂಬೋರೆ,

ಪ್ರೆಸಿಡೆಂಟ್,

ಸಿಟಿ ಮುನ್ಸಿಪಲ್ ಕೌನ್ಸಿಲ್, ಮೈಸೂರು.

ಗೋಶಾಲಾ ಸಿಸ್ಟಂ

ಡಂಬ್ ಅನಿಮಲ್ ಚಾರಿಟಿ



ಕೈಸ್ತಸಿಂಗ್ ೧೧—೬—೪೭, [illegible] ೨೦-೬-೪೭ ಪ್ರಸ್ತುತ [illegible] ಈ ಸಂಘದ [illegible] ಕೇವಲ ಬಡವರು, [illegible] ಪ್ರಾರ್ಥನೆ

[illegible]

ಡಂಬ್ ಅನಿಮಲ್ ಚಾರಿಟಿ ಆಫೀಸು,

[illegible] ಮೈಸೂರು.

[illegible]

ಸುಸಮಯ ! ಸದವಕಾಶ !!

ಕಳೆದುಕೊಳ್ಳಬೇಡಿ

ಚಾಮ ರಾಜನಗರದ ಶ್ರೀ ಭುಜಂಗೇಶ್ವರ ಬಡಾವಣೆ (ಸಿನಿಮಾ ಎದುರು) ಯಲ್ಲಿ ಕೃಷ್ಣ ರಸ್ತೆಯ ಬಾಜುವಿನಲ್ಲಿ ಅಂಗಡಿ ಮಳಿಗೆ ಮತ್ತು ವಾಸದ ಮನೆ ಕಟ್ಟಲು ಅನುಕೂಲವಾಗಿರುವ ಭಾರಿ ಖಾಲಿ ನಿವೇಶನವು ಬಿಕರಿಗಿದೆ. ಕೂಡಲೇ ಈ ವಿಳಾಸದೊಡನೆ ವ್ಯವಹಾರ ನಡೆಸಿ.

[illegible] c/o 'ಸಾಧ್ವಿ' ಮೈಸೂರು.

ವುಡ್‌ಲ್ಯಾಂಡ್ಸ್

21-7-47 ರಿಂದ

ಕಿಕ್ಕಿರಿದ ೮ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

(ತಮಿಳು)

ಪಾತ್ರ :-

ಟಿ. ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ ಆರ್.

ರಾಮಚಂದ್ರ ಮುಂತಾದವರು.

ರೇಷನಿಂಗ್ ಆಫೀಸ್, ಮೈಸೂರು.

ನಂ. R. 110/46

ಪ್ರಸಿದ್ಧ ಪತ್ರಿಕೆ

ಈವರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಇದೇ ೧೯೪೭ ನೇ ಜೂನ್ ಮಾಹೆ ೨೫ ನೇ ತಾರೀಖು ಆಗಾಯ್ತು ಹೊಸ ರೇಷನ್ ಕಾರ್ಡುಗಳನ್ನು ಅವರವರ ಡಿಪೋಗಳಲ್ಲಿ ಹಳೇ ಕಾರ್ಡುಗಳನ್ನು ವಾಪ್ಸು ಮಾಡಿ ಪಡೆದುಕೊಳ್ಳತಕ್ಕದ್ದು: ಈ ಹೊಸ ಕಾರ್ಡುಗಳು ೧೯೪೭ ನೇ ಜುಲೈ ಮಾಹೆ ೧ ನೇ ತಾರೀಖಿನಿಂದ ಜಾರಿಗೆ ಬರುವುದು.

ಅಬ್ದುಲ್ ರಜಾಕ್,

ರೇಷನಿಂಗ್ ಆಫೀಸರ್,

ಮೈಸೂರು ಸಿಟಿ.

Edited printed and published by A. V. Nagaraj at the Sadhvi Press D. Subbaiah Road Mysore

ಫೋ. ನಂ. ೨೪೬ || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು



ಸಂಪುಟ ೫] ಮಂಗಳವಾರ ೨೪—೬—೪೭ [ಸಂಚಿಕೆ ೨೭೧

ಇಂಡೋನೇಷ್ಯದ ಮೇಲೆ ಷೆಲ್ಲುಗಳ ಸುರಿಮಳೆ

ಬೆಳ್ಳಾರ ಚಿನ್ನದ ಗಣಿಯಿಂದ ೧ ಲಕ್ಷ ರೂ ವರಮಾನ

ಶಾಸನ ಸಭೆಯಲ್ಲಿ ಉತ್ತರ

ಸ್ವಂ ಸು ಪ್ರೋ॥] ಬೆಂಗಳೂರು ೨೩

ನಿನ್ನೆ ದಿನ ಮುಂದುವರಿದ ಶಾಸನ ಸಭೆಯಲ್ಲಿ ಶ್ರೀಗಳಾದ ಡಿ ಎಸ್ ಮಲ್ಲಪ್ಪ, ಮಹಮ್ಮದ್ ಷರೀಫ್, ಎಲ್ ಮಾದಯ್ಯ, ಧರ್ಮಪ್ರಕಾಶ ದೇವರಾವ್ ಶಿವರಾಂ, ಬಾಲಕೃಷ್ಣಯ್ಯ, ವೀರಬಸಪ್ಪ, ಡಾ॥ ರತ್ನಮ್ಮ ಮದಾರ್ ಮತ್ತು ಶ್ರೀಮತಿ ಎಂ ಆರ್ ಲಕ್ಷಮ್ಮ ಮೊದಲಾದವರು ಬಜೆಟ್ಟಿನ ಮೇಲೆ ಭಾಷಣಮಾಡಿದರು

ಸರ್ಕಾರದ ಹಣಕಾಸಿನ ಸ್ಥಿತಿ ಉತ್ತಮವಾಗಿದೆ ಆಯವ್ಯಯ ಪಟ್ಟಿ ದೂರದರ್ಶಿತ್ವದಿಂದ ಕೂಡಿದೆ, ಸಚಿವರ ಸೇವೆ ವಂದನಾರ್ಹವಾಗಿದೆ- ಎಂಬುದಾಗಿ ಶ್ರೀಗಳಾದ ಡಿ ಎಸ್ ಮಲ್ಲಪ್ಪ, ಮಹಮದ್ ಷರೀಫ್, ದೇವರಾವ್ ಶಿವರಾಂರವರುಗಳು ಸರ್ಕಾರದವರು ತಯಾರಿಸಿರುವ ಬಜೆಟ್ಟನ್ನು ಪ್ರಶಂಸಿಸಿ ಭಾಷಣಮಾಡಿದರು.

ಶ್ರೀ ಎ ಬಾಲಕೃಷ್ಣಯ್ಯನವರು ಮಾಸ್ತಿ ಸರ್ಕಾರದ ಆಡಳಿತವು ಸಮರ್ಪಕವಾಗಿಲ್ಲವೆಂದು ಟೀಕಿಸಿದರು

ಶ್ರೀಮತಿ ಎಂ ಆರ್ ಲಕ್ಷಮ್ಮನವರು ಮಾತನಾಡಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸಹಾಯವನ್ನು ಪ್ರೋತ್ಸಾಹ ಕೊಡಬೇಕು ಸ್ತ್ರೀಯರ ರಕ್ಷಣೆಕ್ಕೆ ಹೆಚ್ಚಿನ ಗಮನ ಕೊಡಬೇಕು, ಕನ್ನಡ ಭಾಷಾಭಿವೃದ್ಧಿಗಾಗಿ ಸಹಾಯವನ್ನು ಉತ್ತೇಜನ ಕೊಡಬೇಕು-ಎಂದು ಹೇಳಿದರು.

ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಆರಿಸುವಾಗ ೬ ಸ್ಥಾನಗಳನ್ನು ಮಾತ್ರ ಬಾಕಿಯಿಟ್ಟು ೧ ಸ್ಥಾನವನ್ನು ಸ್ತ್ರೀಯರಿಗೂ, ಎರಡು ಸ್ಥಾನಗಳನ್ನು ಹಿಂದುಳಿದ ಸಂಗಡಗಳಿಗೂ ಕೊಡಬೇಕು-ಎಂಬುದಾಗಿ ಡಾ॥ರತ್ನಮ್ಮ ಮದಾರರು ಸೂಚಿಸಿದರು. ೫ ವರ್ಷಗಳಲ್ಲಿ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರುವುದಾಗಿ ಸರ್ಕಾರ ನಿರ್ಧರಿಸಿರುವುದನ್ನು ಅವರು ಅಭಿನಂದಿಸಿದರು ಉಪಾಧ್ಯಾಯರುಗಳ ಮತ್ತು ನರ್ಸುಗಳ ಸಂಬಳವನ್ನು ಹೆಚ್ಚಿಸಬೇಕು ಎಂದು ಡಾ॥ಬರಾಕರು ಸೂಚಿಸಿದರು

ಶಾಸನ ಸಭೆಯ ವಿವಿಧ ಸದಸ್ಯರುಗಳ ಪ್ರಶ್ನೆಗಳಿಗೆ ಸರ್ಕಾರದ ಪರವಾಗಿ ಡಾ॥ ರಾಯ್ ಮೊದಲಾದವರು ಉತ್ತರವಿತ್ತರು.

ಬೆಳ್ಳಾರದ ಚಿನ್ನದ ಗಣಿಯ ವಿಚಾರವಾಗಿ ಬಂದಿದ್ದ ಪ್ರಶ್ನೆಗೆ ಉತ್ತರವಾಗಿ ಇದುವರೆಗೆ ಅದರಿಂದ ೮೦೦ ತೊಲ ಚಿನ್ನ ಸಿಕ್ಕಿದ್ದು ೧ ಲಕ್ಷ ರೂ ಬಂದಿದೆಯೆಂದೂ, ಇನ್ನೂ ೮೦೦ ತೊಲ ದೊರೆಯುವ ಅಂದಾಜಿದೆಯೆಂದೂ ತಿಳಿಸಲಾಯಿತು

ಕೋಲಾರದ ಗಲಭೆಗಳ ವಿಚಾರವಾಗಿ ಶ್ರೀ ಎಂ ಶೇಷಾದ್ರಿಯವರು ಉತ್ತರಿಸುತ್ತ, ಪೋಲೀಸರು ಬಹಳ ದಕ್ಷತೆಯಿಂದ ಗಲಭೆಗಳನ್ನು ಶೀಘ್ರತೆಯಿಂದ ಅಡಗಿಸಿದರೆಂದು ತಿಳಿಸಿದರು

ಶಾಸನ ಸಭೆಯ ಕೆಲವು ಸದಸ್ಯರು ವೈಯಕ್ತಿಕ ದ್ವೇಷವನ್ನೇ ಗುರಿಯಾಗಿಟ್ಟು ಸರ್ಕಾರದವರನ್ನು ಟೀಕಿಸುತ್ತಿರುವುದಕ್ಕಾಗಿ ತಮ್ಮ ವಿಷಾದವನ್ನು ಸೂಚಿಸಿ ತಾವು ಸ್ತ್ರೀ(?) ಸ್ವಭಾವದವರಿಂದ ಸೇವೆಯವಾಪಸಿಗೆ(?) ಡು ಹೇಳಿ ಡಾ॥ ರಾಯರವರು ಸದಸ್ಯರ ಮೇಲೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅಧ್ಯಕ್ಷರನ್ನು ಪ್ರಾರ್ಥಿಸಿದರು

ರಾಜ್ಯಾಂಗ ಸಭೆಗೆ ಇನ್ನೆರಡು ಸಂಸ್ಥಾನಗಳು

ಮೊನ್ನೆ ಸ್ಟೇಟ್ ಕೌನ್ಸಿಲಿನ ಸಮಾರಂಭದಲ್ಲಿ ಜೋಧಪುರದ ಮಹಾರಾಜರು ತಮ್ಮ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರುವುದೆಂದು ತಿಳಿಸಿರುವರೆಂದು ವರದಿಯಾಗಿದೆ. ರತ್ಲಾಂ ಸಂಸ್ಥಾನವೂ ಸಹ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದೆಂದು ಅಲ್ಲಿನ ಪ್ರಧಾನಿಗಳು ಹೇಳಿರುವುದಾಗಿ ತಿಳಿದು ಬಂದಿದೆ

ಪುದುಕೋಟೆಯಲ್ಲಿ ಸತ್ಯಾಗ್ರಹ

ಜುಲೈ ೧ ನೇ ತಾ॥ ನ ವೇಳೆಗೆ ತಮ್ಮ ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆಗಳನ್ನು ಘೋಷಿಸದಿದ್ದರೆ ತಮ್ಮ ಗುರಿಯು ಸಾಧನೆಗಾಗಿ ಸತ್ಯಾಗ್ರಹ ಹೂಡಬೇಕಾಗುವುದೆಂಬ ನಿರ್ಣಯವನ್ನು ಪುದುಕೋಟೆಯ ಕಾಂಗ್ರೆಸ್ ಸಮಿತಿಯು ಅಂಗೀಕರಿಸಿ ಅದನ್ನು ಅಲ್ಲಿನ ಪ್ರಭುತ್ವಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ಪ್ರಕಾಶಂ ಅವರು ಯೂನಿಯನ್ ರಾಜ್ಯಾಂಗ ಸಮಿತಿಗೆ

ಯೂನಿಯನ್ ರಾಜ್ಯಾಂಗ ಸಮಿತಿಗೆ ಮೈಸೂರು ಸಂಸ್ಥಾನದ ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ಭಾರತ ರಾಜ್ಯಾಂಗ ಸಭಾಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ನೇಮಿಸಿರುವರು.

ಆಹಾರ ಮತ್ತು ಕಾರ್ಮಿಕ ಸಚಿವರಾದ ಡಾ॥ ಷರೀಫರು ಮಾತನಾಡಿ ಸರ್ಕಾರದವರು ಕಾರ್ಮಿಕರ ನೆಮ್ಮದಿಗಾಗಿಯೂ ಮತ್ತು ಆಹಾರದ ಸರಬರಾಜಿನ ಬಗ್ಗೆಯೂ ತಮ್ಮ ಕೈಲಾದಷ್ಟೆಲ್ಲ ಮಾಡಿರುವರೆಂದು ಹೇಳಿ ಸಂಸ್ಥಾನದ ಆಹಾರ ಪಂಕ್ತಿಯನ್ನು ಡಾ॥ ರಾಜೇಂದ್ರ ಪ್ರಸಾದರೂ ಸಹ ಹೊಗಳಿರುವರೆಂದು ತಿಳಿಸಿದರು.

ಗ್ರಾಮೋದ್ಧಾರದ ವಿಚಾರವಾಗಿ ಬಂದಿದ್ದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಈಗ ಗ್ರಾಮ ಪುನರುದ್ಧಾರದ ಕಾರ್ಯಗಳನ್ನು ಇದುವರೆಗೆ ಅಮುಲ್ದಾರರುಗಳೇ ನೋಡಿಕೊಳ್ಳುತ್ತಿದ್ದರೆಂದೂ, ಇನ್ನು ಮುಂದೆ ಅದಕ್ಕಾಗಿಯೇ ಪ್ರತ್ಯೇಕವಾದ ಅಧಿಕಾರಿಗಳನ್ನು ನೇಮಿಸಲಾಗುತ್ತದೆಂದೂ ಮುಖ್ಯಮಂತ್ರಿ ಸಚಿವರಾದ ಶ್ರೀ ಎಲ್ ಸಿದ್ದಪ್ಪನವರು ತಿಳಿಸಿದರು

ಝಾಡಮಾಲಿಗಳ ಮುಷ್ಕರ

ಮುನಿಸಿಪಲ್ ಕೆಲಸಗಾರರ ಮುಖಂಡರಿಗೆ ಶಿಕ್ಷೆ

ಮೈಸೂರು ೨೩

ನಗರದ ೨ ನೇ ನ್ಯಾಯಾಧೀಶರು ಬಿ. ಎಲ್ ರಾಮನಾಥ ಮತ್ತು ಶಂಕರನಾರಾಯಣ ಎಂಬ ಮುನಿಸಿಪಲ್ ಕೆಲಸಗಾರರ ಮುಖಂಡರ ಮೇಲೆ ಪೋಲೀಸಿನವರು ಹಾಕಿದ್ದ ಮೊಕದ್ದಮೆಯಲ್ಲಿ ತೀರ್ಪಿತ್ತು ಇಬ್ಬರಿಗೂ ೫೦ ರೂ ಜುಲ್ಮಾನೆ ತಪ್ಪಿದರೆ ೧೫ ದಿನ ಸಾದಾ ಸಜಾ ವಿಧಿಸಿದರು. ಇಬ್ಬರೂ ಜುಲ್ಮಾನೆ ಕೊಡದೆ ಜೈಲಿಗೆ ಹೋದರು.

ಸುಮಾರು ೫೦೦ ಝಾಡಮಾಲಿಗಳು ಈ ದಿನ ಸಹ ಗುಡಿಸದೆ ಸಹಾನುಭೂತಿ ಮುಷ್ಕರ ಆಚರಿಸಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೋಗಿದ್ದರು.

ಹೋಟೆಲು ಕೆಲಸಗಾರರ ಸಂಘ

ನಾಳೆ ರಾತ್ರಿ ೮॥ ಘಂಟೆಗೆ ಮೇಲ್ಕಂಡ ಸಂಘದ ಸಭೆಯು ನಗರ ಕಾಂಗ್ರೆಸ್ ಕಛೇರಿಯಲ್ಲಿ ಸೇರುವುದು. ಸದಸ್ಯರೆಲ್ಲರೂ ಬರಬೇಕೆಂದು ಕೋರಲಾಗಿದೆ

ಡಚ್ಚರಿಂದ ಇಂಡೋನೇಷ್ಯದ ಮೇಲೆ ಧಾಳಿ

ಇಂಡೋನೇಷ್ಯಾ ಸಮುದ್ರ ತೀರದ ಪ್ರದೇಶಗಳ ಮೇಲೆ ಡಚ್ಚರ ಯುದ್ಧ ಹಡಗುಗಳು ಷೆಲ್ಲುಗಳನ್ನು ಹಾರಿಸುತ್ತಿದ್ದವೆಂದು ವರದಿಯಾಗಿದೆ. ಬ್ಯಾಟೇವಿಯಾ ಬಳಿಯ ಎರಡು ನಗರಗಳನ್ನು ಡಚ್ ಸೈನ್ಯಗಳು ಸ್ವಾಧೀನಪಡಿಸಿಕೊಂಡಿವೆ. ಡಚ್ಚರ ವಿಮಾನಗಳು ದಕ್ಷಿಣ ಜಾವಾದ ಮೇಲೆ ಬಾಂಬನ್ನು ಹಾಕಿ ಅನಾಹುತವನ್ನುಂಟುಮಾಡಿವೆಯೆಂದು ತಿಳಿದುಬಂದಿದೆ ಇಂಡೊನೇಷ್ಯಾ ರಿಪಬ್ಲಿಕ್ಕಿನವರು ಡಚ್ಚರೊಡನೆ ಶಾಂತಿ ಮಾಡಿಕೊಳ್ಳಲು ಕಳುಹಿಸಿದ್ದ ಸಲಹೆಗಳು ಅಂಗೀಕಾರವಾಗದಿದ್ದುದೇ ಇದಕ್ಕೆ ಕಾರಣ

ಪಂಜಾಬ್ ವಿಭಜನೆಯ ನಿರ್ಧಾರ

ನೆನ್ನೆ ಸೇರಿದ್ದ ಪಂಜಾಬ್ ಪ್ರಾಂತ ಪ್ರತಿನಿಧಿಗಳ ಸಭೆಯಲ್ಲಿ ಪಂಜಾಬ್ ಪ್ರಾಂತವು ವಿಭಜನೆಯಾಗಬೇಕೆಂದು ನಿರ್ಧರಿಸಲಾಗಿದೆ. ಪ್ರತಿನಿಧಿಗಳ ಜಂಟಿ ಸಭೆಯಲ್ಲಿ ವಿಭಜನೆಯ ಪರವಾಗಿ ೯೧ ಓಟುಗಳೂ ವಿರುದ್ಧವಾಗಿ ೭೭ ಓಟುಗಳೂ ಬಂದುವು. ಮುಸ್ಲಿಮೇತರ ೬೩೦ ಸಂಖ್ಯಾತ ಪ್ರದೇಶವಾದ ಪೂರ್ವ ಪಂಜಾಬ್ ಈಗಿನ ಭಾರತ ರಾಜ್ಯಾಂಗ ಸಭೆಗೆ ಸೇರುವುದೆನು ಪಶ್ಚಿಮ ಪಂಜಾಬ್ ನೂತನವಾಗಿ ರಚಿತವಾಗಲಿರುವ ಪಾಕಿಸ್ಥಾನ ರಾಜ್ಯಾಂಗ ಸಭೆಗೆ ಸೇರುವುದು— ಎಂಬುದಾಗಿ ವರದಿಯಾಗಿದೆ.

ಮೂರನೇ ತರಗತಿ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯ

ಶಾಸನ ಸಭೆಯ ಕಾರ್ಯಕಲಾಪ

ಸ್ವ ಸು ಪ್ರೋ॥] ಬೆಂಗಳೂರು ೨೪

ಶಾಸನ ಸಭೆಯ ಕಾರ್ಯ ಕಲಾಪಗಳು ೧೨ ಗಂಟೆಗೆ ಸರಿಯಾಗಿ ಶ್ರೀ॥ ಹೆಚ್ ಬಿ. ಗುಂಡಪ್ಪ ಗೌಡರ ಅಧ್ಯಕ್ಷತೆಯಲ್ಲಿ ಆರಂಭವಾದುವು.

ಆದಾಯ ತೆರಿಗೆ ಬಾಬ್ತಿಗೆ ಹಿಂದುಳಿದ ಸಂಗಡದಿಂದ ಆರು ಆನೆಯನ್ನು ಪ್ರದೇಶದವರನ್ನಾಗಿ ತೆಗೆದುಕೊಳ್ಳಲು ಯೋಚಿಸುತ್ತಿರುವುದಾಗಿ ಮಂತ್ರಿಗಳಾದ ಶೇಷಾದ್ರಿಯವರು ಶ್ರೀ ಮಾದಯ್ಯನವರ ಪ್ರಶ್ನೆಗೆ ಜವಾಬಿತ್ತರು

ಮೂರನೇ ತರಗತಿಯಲ್ಲಿ ಪ್ರಯಾಣ ಮಾಡುವವರಿಗೆ ಹೆಚ್ಚು ಸೌಲಭ್ಯವನ್ನು ಒದಗಿಸಲು ಯೋಚಿಸಿದೆ ಮತ್ತು ಮಹಿಳೆಯರಿಗೆ ಸಾಕಷ್ಟು ಬಂದೋಬಸ್ತನ್ನು ಕೊಡಲು ನಿರ್ಧರಿಸಿದೆ—ಎಂದು ಅಣ್ಣಾಜಿ ಗೌಡರು ಶ್ರೀಮತಿ ಕಮಲಾ ದೇವಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಅಡಿಷನಲ್ ಗ್ರಾಂಟ್‌ಗಳ ಬಗ್ಗೆ ಬಂದಿದ್ದ ಬಿಲ್ಲುಗಳ ಚರ್ಚೆ ನಡೆಯುತ್ತಿದೆ

ವಿದ್ಯಾರ್ಥಿಗಳ ಪ್ರಚಂಡ ಸಭೆ

ಈ ದಿನ ಸೆಂಟ್ರಲ್ ಕಾಲೇಜಿನ ಮುಂಭಾಗದಲ್ಲಿ ವಿದ್ಯಾರ್ಥಿಗಳ ಸಭೆಯೊಂದು ನಡೆಯಿತು. ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳೂ ಸಭೆಯಲ್ಲಿ ಭಾಗವಹಿಸಿದ್ದರು. ವಿಶ್ವವಿದ್ಯಾನಿಲಯದ ಅಧಿಕಾರಿಗಳು ಐದು ಜನ ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡಿರುವುದನ್ನು ಖಂಡಿಸಿ ಶ್ರೀಗಳಾದ ಜಿ ಪಿ ಕೃಷ್ಣರಾವ್, ಎಸ್ ಡಿ. ಕೃಷ್ಣಮೂರ್ತಿ, ಸೂರ್ಯನಾರಾಯಣ ರಾವ್ ಮುಂತಾದವರು ಭಾಷಣ ಮಾಡಿದರು ವೈಸ್ ಛಾನ್ಸಲರನ್ನು ಕಾಣುವ ಬಗ್ಗೆ ಐದು ಜನ ವಿದ್ಯಾರ್ಥಿಗಳನ್ನೊಳಗೊಂಡ ಕೌನ್ಸಿಲ್ ಆಫ್ ಆಕ್ಷನ್ ಸಮಿತಿಯೊಂದನ್ನು ನೇಮಿಸಲಾಗಿದೆ.

೩ ದಿನ ಜಂಟಿ ಅಧಿವೇಶನ

ರಾಜ್ಯಾಂಗ ರಚನಾ ಸಭೆಗೆ ಮೈಸೂರಿನ ಪ್ರತಿನಿಧಿಗಳು ಹೋಗುವ ಬಗ್ಗೆ ಕರೆದಿರುವ ಶಾಸನ ಸಭೆಗಳ ಅಧಿವೇಶನವು ೩ ದಿನ ನಡೆಯುವುದು. ೫ ನೇ ತಾ॥ ಚುನಾವಣೆಯಲ್ಲಿ ಸ್ಪರ್ಧಿಸುವವರ ನಾಮಿನೇಷನ್ ಪತ್ರ ಸ್ವೀಕಾರ, ೭ ನೇ ತಾ॥ ಚುನಾವಣೆ ನಡೆಯುವುದು.

• ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಬಿ ಸಂಜೀವರಾಯರು ಆರು ತಿಂಗಳು ರಜಾ ತೆಗೆದುಕೊಳ್ಳುವರು. ಶ್ರೀ ಎಲ್. ರಾಮರಾಯರು ಇನ್‌ಛಾರ್ಜ್ ಪ್ರಿನ್ಸಿಪಾಲರಾಗಿರುವರು.

• ನಾಳೆ ದಿವಾನರು ಅನೇಕಲ್ಲಿಗೆ ಹೋಗಿ ಬರುವರು. ನಂತರ ೧೦-೩೦ ಗಂಟೆಗೆ ಮಂತ್ರಿಮಂಡಲದ ಸಭೆ ಸೇರುವುದು.

• ಶ್ರೀ ಕೆ ರಾಮಸ್ವಾಮಿಯವರನ್ನು ಮಹಾರಾಜರ ವರ್ಧಂತಿ ಸಂದರ್ಭದಲ್ಲಿ ಗೆಸ್ಟ್ ಸ್ಟೇಟ್‌ನ ವಿಶೇಷ ಅಧಿಕಾರಿಗಳಾಗಿ ನೇಮಿಸಲಾಗಿದೆ.

ಪಾಕಿಸ್ತಾನ [illegible]ಗಾಗಿ ಸಿದ್ಧತೆ

ಗತ ಜನ [illegible] ಪಾಕಿಸ್ತಾನ [illegible] ಗೆ [illegible] ಎಂದು [illegible] ಲಾಗಿದೆ. [illegible] ಪಾಕಿಸ್ತಾನದ [illegible] ಕಚೇರಿಗಳು [illegible] ಮಾಡಲು [illegible] ಗಳನ್ನು ಒದಗಿಸಲು [illegible] ಲಾಗಿದೆ. [illegible] ಕಟ್ಟಡಗಳ [illegible] ವಾಡಿದೆ. ಸಿಂಧು [illegible] ಸರ್ಕಾರವು ಹೈದರಾಬಾದಿಗೆ [illegible] ಅನೇಕ [illegible] ಅಧಿಕಾರಿಗಳ ಕಛೇರಿಗಳನ್ನು ಸಿಂಧಿನಿಂದ ಬೇರೆ ಎಡೆಗಳಿಗೆ [illegible] ಲಾಗುತ್ತಿದೆ [illegible] ಅಲ್ಲಿನ ಗವರ್ನರು [illegible] ಸಿ [illegible] ನಿರ್ಮಾಣಗಳಿಗೆ ಬೇಕಾದ [illegible] ಒತ್ತಾಯ [illegible] ವರವಡಿಸಿಕೊಳ್ಳಲು [illegible] ಕರಾಚಿಯಲ್ಲಿ ಪಾಕಿಸ್ತಾನ [illegible] ಕಛೇರಿಯ ನಿರ್ಮಾಣ ಕಾರ್ಯ [illegible] ದಿಂದ ಸಾಗುತ್ತಿದೆ. ಅಲ್ಲಿನ [illegible] ಗೃಹ ನಿರ್ಮಾಣಕ್ಕೆ [illegible] ಅಂಗಡಿಗಳನ್ನು [illegible]

[illegible] ವಾಹನಗಳ [illegible]

[illegible] ೨೩-೬-೪೭ ರ [illegible] ಮೈಸೂರು ಸಿಟಿ [illegible] ವಾಹನಗಳನ್ನು ಚಾಲ್ತಿ [illegible] ಲೈಸೆನ್ಸ್ [illegible] [illegible]

ನೀರಿನ ಕೊರತೆಗಾಗಿ ಟಾಂಗಾಗಳಲ್ಲಿ ಪ್ರದರ್ಶನ

ಗ್ಲೋಬ್] ಅಜ್ಮೀರ್ ೧೯

ನೀರು ಸರಬರಾಜು [illegible] ಯಾಗಿ ಬಹಳ ತೊಂದರೆಯಾಗಿದೆಯೆಂಬ [illegible] ಮೇಲೆ ಅಜ್ಮೀರಿನ ಜನರು ಸುಮಾರು ೨೦೩ ಟಾಂಗಾಗಳಲ್ಲಿ ಖಾಲಿ [illegible] ಗಳನ್ನಿಟ್ಟುಕೊಂಡು ಊರು ಸುತ್ತ ಪ್ರದರ್ಶನ ನಡೆಸಿದರು. ಟಾಂಗಾದವರೂ ೬ ಗಂಟೆಗಳ ಕಾಲ ಹರ [illegible] ಗಳನ್ನು ಆರಿಸಿದರು. ವ್ಯವಹಾರಗೆಯಲ್ಲಿ ಈ ರೀತಿ ಟಾಂಗಾಗಳನ್ನು ಪ್ರತಿಭಟನೆಯಲ್ಲಿ ಉಪಯೋಗಿಸಿದುದು ಇದೇ ಮೊದಲು.

ರಜಪುಟಾಣ ಸಂಸ್ಥಾನಗಳ ಯೂನಿಯನ್ ನಿರ್ಮಾಣ

ರಾಜಪುಟಾಣದ ಸಂಸ್ಥಾನಗಳ ಯೂನಿಯನ್ನನ್ನು ಸ್ಥಾಪಿಸುವ ಬಗ್ಗೆ ಸಮಾಲೋಚನೆ ನಡೆಸಲು ಉದಯಪುರದ ಮಹಾರಾಣರು ಇತರ ಸಂಸ್ಥಾನಾಧೀಶರಿಗೆ ಆಹ್ವಾನ ಕಳುಹಿಸಿರುವರೆಂದು ವರದಿಯಾಗಿದೆ. ಈಗಾಗಲೇ ೨೧ ಸಂಸ್ಥಾನಗಳು ಆಹ್ವಾನವನ್ನಂಗೀಕರಿಸಿವೆಯೆಂದೂ, ಸಭೆ ಸದ್ಯದಲ್ಲೇ ಉದಯಪುರದಲ್ಲಿ ಸೇರಲಿರುವುದೆಂದೂ ತಿಳಿದು ಬಂದಿದೆ.

Edited, printed and published by A. K. Nagarajan at the Sadhvi Press D. Subbaiah Road Mysore

ಪುರಸಭಾ ಸದಸ್ಯರಿಂದ ರಸ್ತೆಗಳ ನಿರ್ಮಲೀಕರಣ

ಗ್ಲೋಬ್] [illegible] ೨೦

ಇಲ್ಲಿನ ಜಾಡಮಾಲಿಗಳು ಮುಷ್ಕರ ಹೂಡಿದ ಕೆಲಸಕ್ಕೆ ಬರದೆ ನಿಂತುದರಿಂದ ಪೌರಸಭಾಧ್ಯಕ್ಷರೂ, ಕಾಂಗ್ರೆಸ್ ಮುಖಂಡರೂ ಪುರಸಭಾಧಿಕಾರಿಗಳೂ ಸೇರಿ ಇಡೀ ನಗರದ ರಸ್ತೆಗಳನ್ನು ಗುಡಿಸಿದರು

ಡೈರೆಕ್ಟರುಗಳ ಚುನಾವಣೆ

ಮೈಸೂರು ೨೪

ರಾಜಧಾನಿಯ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಯು ಮೊನ್ನೆ ನಡೆದು ಈ ಕೆಳಗಿನವರು ೪೭-೪೮ ನೇ ಸಾಲಿಗೆ ಡೈರೆಕ್ಟರುಗಳಾಗಿ ಚುನಾಯಿತರಾಗಿದ್ದಾರೆ. ಶ್ರೀಗಳಾದ ಬಿ ಪಿ ನಂಜುಂಡಯ್ಯ; ರಾವ್ ಬಹದ್ದೂರ್ ಎಂ ರಾಮಸ್ವಾಮಿ, ಟಿ ಎಸ್ ರಾಜಗೋಪಾಲಅಯ್ಯಂಗಾರ್. ಬಿ ಎ ಕೃಷ್ಣಮೂರ್ತಿ, ಡಾ॥ ಎ ಪಿ ರಂಗರಾವ್, ಎ ಪಿ ಶ್ರೀನಿವಾಸಮೂರ್ತಿ, ಬಿ ಆರ್ ನಾಯ್ಡು, ಎ ಕೃಷ್ಣಮೂರ್ತಿರಾವ್, ಎಂ ಆರ್ ಸಿ [illegible] ಸಪ್ಪ, ಹೆಚ್ ರಾಮಣ್ಣ, ಜಿ ಪಿ ದೇಶಿಕಾಚಾರ್, ಡಿ ಬಿ ಕೃಷ್ಣಪ್ಪ ಮತ್ತು ಎಸ್ ಟಿ ಕೃಷ್ಣಸ್ವಾಮಿಶೆಟ್ಟಿ, ನೀಲಸಿಂಗ್, ಎಸ್. ರಾಜಗೋಪಾಲ ಅಯ್ಯಂಗಾರ್.

ಕೇಂದ್ರ ಸರ್ಕಾರಕ್ಕೂ ತಿರುವಾಂಕೂರಿಗೂ ಬಿಕ್ಕಟ್ಟು

ತಿರುವಾಂಕೂರಿನ ನಿವೃತ್ತ ಪೊಲೀಸ್ ಅಧಿಕಾರಿಗಳಾದ ಮಿ॥ ಅಬ್ದುಲ್ ಕರೀಮರನ್ನು ಪಾಕಿಸ್ತಾನದ ರಾಯಭಾರಿಯಾಗಿ ತಿರುವಾಂಕೂರು ನೇಮಿಸಿರುವುದರಿಂದ ಕೇಂದ್ರ ಸರ್ಕಾರಕ್ಕೂ ತಿರುವಾಂಕೂರಿಗೂ ಬಿಕ್ಕಟ್ಟು ತಲೆದೋರಬಹುದೆಂದು ಭಾವಿಸಲಾಗಿದೆ. ಕೇಂದ್ರ ಸರ್ಕಾರದಲ್ಲಿ ಕೆಲಸದಲ್ಲಿರುವ ತಿರುವಾಂಕೂರಿನವರ ಪಟ್ಟಿಯನ್ನು ಭಾರತ ಸರ್ಕಾರ ತಯಾರಿಸುತ್ತಿರುವುದಾಗಿಯೂ ತಿರುವಾಂಕೂರಿನ ಪ್ರಜೆಗಳ ಬಗ್ಗೆ ಭಾರತದ ನೀತಿಯನ್ನು ನಿರ್ಧರಿಸಲಾಗುವುದೆಂದು ವರದಿಯಾಗಿದೆ

ಪಠಾಣೀಸ್ತಾನ ರಚನೆಗಾಗಿ ಲೀಗ್ ನಾಯಕರಿಗೆ ಕರೆ

ಗಡಿನಾಡಿನಲ್ಲಿ ಇಸ್ಲಾಂ ಧರ್ಮದ ಧ್ಯೇಯಗಳಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳ ಆಧಾರದ ಮೇಲೆ ಸ್ವತಂತ್ರ ಪಠಾಣೀಸ್ತಾನದ ರಚನೆಯಾಗಬೇಕೆಂದು ಗಡಿನಾಡಿನ ಕಾಂಗ್ರೆಸ್ ಮತ್ತು ಕೆಂಪು ಅಂಗಿ ದಳಗಳು ನಿರ್ಣಯಿಸಿರುತ್ತವೆಯೆಂದು ವರದಿಯಾಗಿದೆ. ಇಚ್ಛೆಯಿಲ್ಲದ ಪಠಾಣರ ಮೇಲೆ ಬಲವಂತವಾಗಿ ಪಾಕಿಸ್ತಾನವನ್ನು ಒತ್ತಾಯಪಡಿಸುತ್ತಿದ್ದಾರೆ ಖುದಾಯಿ ಖಿದ್ಮತ್‌ಗಾರ್ ಸಂಸ್ಥೆಯವರು ಇದಕ್ಕೆ ಪ್ರಜಾಪ್ರತಿನಿಧಿಯುವುದಿಲ್ಲ ಎಂದು ಗಡಿನಾಡಿನ ಗಾಂಧಿಯವರು ಹೇಳಿರುವರು. ಸ್ವತಂತ್ರ ಪಠಾಣೀಸ್ತಾನದ ನಿರ್ಮಾಣದ ಬಗ್ಗೆ ಸಮಾಲೋಚನೆ ನಡೆಸಲು ಮತ್ತೆ ಲೀಗ್ ನಾಯಕರಿಗೆ ಖಾನ್ ಅಬ್ದುಲ್ ಗಫಾರ್‌ಖಾನರು ಆಹ್ವಾನವಿತ್ತಿರುವರೆಂದು ತಿಳಿದುಬಂದಿದೆ.

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ ೪೧೧

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಗಳಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ. ಎಲ್ಲಾ ತರಹೆಯ ಬೆಳ್ಳಿಯ [illegible] ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

[illegible]

Office of the President,
City Municipal Council, Mysore.
Dated 18th June 1947.

No. [illegible] 196 46-7.

APPEAL

The Mysore City Municipal Council have decided to organise a Health and Fine Arts Exhibition during the ensuing Birth day Festivities from 8th to 12th July 1947 both days inclusive. The object of the Exhibition is to educate the public in matters of public health, prevention of diseases and civic propaganda. To make the exhibition interesting, a fine arts section has also been added. The programme includes music, drama, fancy dress competition and other entertainments.

With a view to encourage the local artists, it is [illegible] to award prizes. This appeal is issued with [illegible] that the philanthropic gentlemen and citizens of [illegible] City will appreciate the efforts of the [illegible] Council and come forward with liberal do[illegible] prizes being given to deserving com[illegible] encouragement.

RAMACHANDRA RAO BOMBHORE,
PRESIDENT,
City Municipal Council, Mysore

[illegible]

ರಾಜಕಮಲ್,

ತಾ॥ ೨೦-೬-೪೭ ರಿಂದ
9 ನೇ ವಾರ
ಪ್ರತಿ ದಿನ ೨ ಆಟಗಳು

ಗೊಲಭಾಮ

೧ (ತೆಲುಗು)
ತಾ॥ ೨೦-೬-೪೭ ರಿಂದ
7 ದಿನಗಳು
ಪ್ರತಿ ದಿನ ಪ್ರಾತಃಕಾಲ ೧೦-೩೦ ಕ್ಕೆ

'ಆಂಖ್ ಕಿ ಶರಂ'

(ಹಿಂದಿ)

—: ತಾ ರಾ ಗ ಣ :—
ಕೌಶಲ್ಯ, ಪೃಥ್ವಿರಾಜ್, ತ್ರಿಲೋಕ್ ಕಪೂರ್, ಗುಲಾಬ್ ಮತ್ತು ನಾಯಂಪಲ್ಲಿ

ರೇಷನಿಂಗ್ ಆಫೀಸ್, ಮೈಸೂರು.
ನಂ. R. 110/46

ಪ್ರಸಿದ್ಧ ಪತ್ರಿಕೆ

ಇದರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಇದೇ ೧೯೪೭ ನೇ ಜೂನ್ ಮಾಹೆ ೨೫ ನೇ ತಾರೀಖು ಆಗಿಯುತ್ತ ಹೊಸ ರೇಷನ್ ಕಾರ್ಡುಗಳನ್ನು ಆವರವರ ಡಿಪೋಗಳಲ್ಲಿ ಹಳೇ ಕಾರ್ಡುಗಳನ್ನು ವಾಪ್ಸು ಮಾಡಿ ಪಡೆಯತಕ್ಕದ್ದು; ಈ ಹೊಸ ಕಾರ್ಡುಗಳು ೧೯೪೭ ನೇ ಜುಲೈ ಮಾಹೆ ೧ ನೇ ತಾರೀಖಿನಿಂದ ಚಾಲ್ತಿಗೆ ಬರುವುದು

ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

ಸುಸಮಯ ! ಸದವಕಾಶ !!

ಕಳೆದುಕೊಳ್ಳಬೇಡಿ

ಚಾಮರಾಜನಗರದ ಶ್ರೀ ಭುಜಂಗೇಶ್ವರ ಬಡಾವಣೆ (ಸಿನಿಮಾ ಎದುರು) ಯಲ್ಲಿ ಹೈಸ್ಕೂಲ್ ರಸ್ತೆಯ ಜಾಜುವಿನಲ್ಲಿ ಅಂಗಡಿ ಮಳಿಗೆ ಮತ್ತು ವಾಸದ ಮನೆ ಕಟ್ಟಲು ಅನುಕೂಲವಾಗುವ ಭಾರಿ ಖಾಲಿ ನಿವೇಶನವು ಬಿಕರಿಗಿದೆ. ಕೂಡಲೇ ಈ ವಿಳಾಸದೊಡನೆ ವ್ಯವಹಾರ ನಡೆಸಿ.

ಜೈ ಹಿಂದ್ c/o 'ಸಾಧ್ವಿ' ಮೈಸೂರು.

ಪ್ರೋ. ನಂ. ೩೯೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು



ಸಂಪುಟ ೫] ಬುಧವಾರ ೨೫—೬—೪೭ [ಸಂಚಿಕೆ ೨೭೨

ಜುಲೈ ತಿಂಗಳಿಂದ ಕೋರ್ಟೇಕರ್ ಸರ್ಕಾರ

ಮೈಸೂರು ಪಾಕಿಸ್ತಾನ್ ರಾಜ್ಯಾಂಗಕ್ಕೆ ಸೇರಲಿ

ಹಿಂದೂಸ್ಥಾನ ರಾಜ್ಯಾಂಗಕ್ಕೆ ಸೇರಬೇಕೆಂಬ ನಿರ್ಬಂಧವಿಲ್ಲದೆ ಮೈಸೂರು ಯೂನಿಯನ್ ರಾಜ್ಯಾಂಗ ಸಭೆಗೆ ಸೇರುವುದರಲ್ಲಿ ಅರ್ಥವಿಲ್ಲ ಹಾಗೆಯೇ ಅದು ಪಾಕಿಸ್ತಾನ ರಾಜ್ಯಾಂಗಕ್ಕೂ ಸೇರಿ ಹೆಚ್ಚಿನ ಮುಸ್ಲಿಂ ಪ್ರತಿನಿಧಿಗಳನ್ನು ಕಳುಹಿಸಬೇಕು ಅದರಿಂದ ಮೈಸೂರಿಗೆ ಹೆಚ್ಚಿನ ಲಾಭವಿದೆ ಎಂಬುದಾಗಿ ಪ್ರಸಿದ್ಧ ಪತ್ರಕರ್ತರಾದ ಮಿ॥ ಮಜಾ ಅಬ್ದುಲ್ ಸತ್ತಾರರು ಒಂದು ಹೇಳಿಕೆಯಲ್ಲಿ ತಿಳಿಸಿರುವರೆಂದು ಗೊತ್ತಾಗಿದೆ

ಸಿಕ್ಕರಿಗೇ ಪ್ರತ್ಯೇಕ ಸ್ಥಾನ ಬೇಕು

ಬ್ರಿಟಿಷರ ಯೋಜನೆಯ ಪ್ರಕಾರ ಪಂಜಾಬ್ ಪ್ರಾಂತಗಳ ವಿಭಜನೆಯಾಗುತ್ತಿದ್ದು ಈಗ ಸಿಕ್ಕರಿಗೇ ಪ್ರತ್ಯೇಕ ಪ್ರದೇಶವೊಂದರ ರಚನೆಯಾಗಬೇಕು ಅವರು ಭಾರತ ಯೂನಿಯನ್ನಿಗೆ ಪ್ರತ್ಯೇಕವಾದ ಭಾಗವಾಗಿ ಸೇರುವಂತಾಗಬೇಕು. ಸಿಕ್ಕರ ಭವಿಷ್ಯವು ಭಾರತ ಯೂನಿಯನ್ನನ್ನು ಅವಲಂಬಿಸಿದೆ ಎಂಬುದಾಗಿ ಫರೀದ್‌ಕೋಟೆಯ ರಾಜರು ಹೇಳಿರುವುದಾಗಿ ವರದಿಯಾಗಿದೆ

ಗಡಿನಾಡಿನಲ್ಲಿ ಪ್ರಜಾಭಿಪ್ರಾಯ

ಗಡಿನಾಡಿನ ಗವರ್ನರಿಗೆ ರಜಾ ಕೊಡುವ ಬಗ್ಗೆ ಎಲ್ಲ ಅಧಿಕಾರವನ್ನೂ ವಹಿಸಲಾಗಿದೆ; ಶಾಸನ ಸಭೆಗೆ ಚುನಾವಣೆ [illegible] ಗಡಿನಾಡಿನ ಭವಿಷ್ಯದ ಬಗ್ಗೆ ಜನಮತ [illegible] ; ರೆಫರೆಂಡಂ ಮುಗಿದ [illegible] ಆದರ ವಿವರಗಳನ್ನು [illegible] ಗವರ್ನರಿಗೆ [illegible] ಎಂಬುದಾಗಿ ಇಂಡಿಯಾ ಸರ್ಕಾರದ ಪ್ರಕಟನೆ ತಿಳಿಸುತ್ತದೆ

ಕಾರ್ಮಿಕ ಶಾಸನ ಪ್ರತಿಭಟನೆಗಾಗಿ ಮುಷ್ಕರ

ಅಮೇರಿಕದಲ್ಲಿ ಜಾರಿಗೆ ತರಲಾಗುವ ಹೊಸ ಶಾಸನವನ್ನು ಪ್ರತಿಭಟಿಸಲು ಅಲ್ಲಿನ ೪ ಸಹಸ್ರ ಮಂದಿ ಗಣಿಗಳ ಕೆಲಸಗಾರರು ಮುಷ್ಕರ ಹೂಡಿದ್ದಾರೆ ದೇಶಾದ್ಯಂತವೂ ಇಂಥ ಮುಷ್ಕರಗಳಾಗುವ ಸೂಚನೆಗಳು ಕಂಡು ಬರುತ್ತಿವೆ. ಈ ಶಾಸನ ಜಾರಿಗೆ ಬರದಂತೆ ಅಧ್ಯಕ್ಷರು ತಮ್ಮ ವಿಟೋ ಅಧಿಕಾರವನ್ನು ಚಲಾಯಿಸಿದ ಮೇಲೆಯೂ ಅದನ್ನು ಜಾರಿಗೆ ತರುವುದೇ ಈ ಪ್ರತಿಭಟನೆಗೆ ಕಾರಣವೆಂದು ವರದಿಯಾಗಿದೆ. ಈ ಶಾಸನವನ್ನು ಪ್ರಯೋಗ ಮಾಡುವುದರಿಂದ ಕಾರ್ಮಿಕ ಸಂಘಗಳಿಗೆ [illegible] ಹೆಚ್ಚು ತೊಂದರೆಯಾಗುವುದೆಂದು ಕಾರ್ಮಿಕರು ಹೇಳುತ್ತಾರೆ [illegible] ಕಾರ್ಮಿಕರು ತಮ್ಮ ಕೆಲಸಕ್ಕೆ ಹಾಜರಾಗುತ್ತಿಲ್ಲವೆಂದು ತಿಳಿದುಬಂದಿದೆ

ವ್ಯವಸಾಯ ಸಹಾಯಕರ ಕೊರತೆ

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು [illegible] ಗ್ರಾಮದ ಹತ್ತಿರ [illegible] ವ್ಯವಸಾಯ ಸಹಾಯಕರು ಇಲ್ಲದೆ ಅಲ್ಲಿನ ಜನರಿಗೆ ತೊಂದರೆಯಾಗಿರುವ ಬಗ್ಗೆ ತುಂಬಾ ತೊಂದರೆಯಾಗಿದೆ [illegible] ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಬೇಗ ಗಮನ ಕೊಟ್ಟು ಅಲ್ಲಿನ ಜನರಿಗೆ ಅನುಕೂಲ ಮಾಡಬೇಕಾಗಿ ಶ್ರೀ ಎ. ಎಂ. [illegible] ಕೋರುತ್ತಾರೆ.

೪೭-೪೮ ರ ಬಜೆಟ್ ಅಂಗೀಕಾರ

ಶಾಸನ ಸಭೆಯಲ್ಲಿ ಕತ್ತರಿ ನಿರ್ಣಯ

[ಸ್ವಂ. ವಾ. ವರದಿ] ಬೆಂಗಳೂರು ೨೪

ನಿನ್ನೆ ದಿನ ನಡೆದ ಶಾಸನ ಸಭೆಯಲ್ಲಿ ೧೯೪೭-೪೮ನೇ ಸಾಲಿನ ಆಯವ್ಯಯದ ಚರ್ಚೆಯು ಮುಗಿದು ಅಂಗೀಕಾರವಾಯಿತು.

ಕೋಲಾರದ ಶ್ರೀ ಕೆ ಆರ್ ಶ್ರೀನಿವಾಸನ್ ರವರು ದಿವಾನರ ವೇತನವು ಹೆಚ್ಚಾಗಿದೆಯೆಂದು ಹೇಳಿ ಅದರಲ್ಲಿ ಕತ್ತರಿ ನಿರ್ಣಯವೊಂದನ್ನು ತಂದರು

ಅವರು ಮುಖ್ಯವಾಗಿ ತೋರಿಸಿದ [illegible] ದಿವಾನರ ವೇತನ [illegible] ಅವರ ಪ್ರಯೋಜನ [illegible] ಶ್ರೀ ಗಳಾದ ಟಿ ಮರಿಯಪ್ಪ, ಟಿ ಚನ್ನಯ್ಯ ಗೌಡರು [illegible] ಭಾಗವಹಿಸಿದರು

ಪ್ರಜೆಗಳ ಚಳುವಳಿಗಳನ್ನು [illegible] ಉದ್ದೇಶದಿಂದ ಹಿಂದೆ ದಿವಾನರಾಗಿದ್ದ ಸರ್ ಎಂ ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದವರು ಪ್ರಯಾಣ [illegible] ಗ್ರಾಮಾಂತರ ಪ್ರದೇಶಗಳಿಗೆ ಭೇಟಿಯಿತ್ತು ಸಾರ್ವಜನಿಕರ ಮತ್ತು [illegible] ಗಮನಕೊಡುತ್ತಿದ್ದರು ಅದರಿಂದ ಅವರುಗಳ ಪ್ರಯಾಣ [illegible] ಉಪಯೋಗವಾಗುವ ಸಂಭವವಿತ್ತು. ಈಗಲಾದರೋ ಎಲ್ಲರೂ ತಮ್ಮ ಪ್ರವಾಸದಲ್ಲಿ ಸಾರ್ವಜನಿಕರ ಬಿನ್ನವತ್ತಳೆಗಳನ್ನು ಪಡೆಯುವುದಕ್ಕಾಗಿ ಮಾತ್ರ [illegible] ಹೋಗುತ್ತಾರೆ ಆದರೂ ತಮ್ಮ [illegible] ಬಂದಾಗ [illegible] ಸ್ಥಳಗಳಿಗೆ ಭೇಟಿ ಕೊಡುವರೇ ವಿನಃ [illegible] ಗ್ರಾಮಾಂತರ ಪ್ರದೇಶಗಳಿಗೆ [illegible] ಇವರ ಪ್ರವಾಸ [illegible] ಉಪಯೋಗ [illegible] ಶ್ರೀ ಟಿ ಮರಿಯಪ್ಪ [illegible] ಗೌಡರು ನಿರ್ಣಯವನ್ನು ಸಮರ್ಥಿಸಿ ಮಾತನಾಡಿದರು.

[illegible] ನಿರ್ಣಯದ [illegible] ಎಂದು ಸೂಚಿಸಿದರು. [illegible] ಶ್ರೀ [illegible] ಕಿಷ್ಣಪ್ಪನವರು ನಿರ್ಣಯಕ್ಕೆ ಬೆಂಬಲವಿತ್ತು ತಿಳಿಸಿದರು

ಗಡಿನಾಡಿನಲ್ಲಿ ವಿಮಾನ ನಿಲ್ದಾಣ ರಚನೆ

ಗಡಿನಾಡಿನಲ್ಲಿ ನಡೆಯಲಿರುವ ರೆಫರೆಂಡಮ್ಮಿನಲ್ಲಿ ಅಲ್ಲಿನ ಕಾಂಗ್ರೆಸ್ಸು ಭಾಗವಹಿಸುವುದಿಲ್ಲವೆಂದು ಖಾನ್ ಅಬ್ದುಲ ಗಫಾರ್ ಖಾನರು ಒಂದು ಹೇಳಿಕೆಯನ್ನಿತ್ತಿರುವರು. ಆದರೆ ಸ್ವತಂತ್ರ ಪಠಾಣಿಸ್ಥಾನದ ರಚನೆಗಾಗಿ ಲೀಗ್ ಸಮಾಲೋಚನೆ ನಡೆಸಿದರೆ ಆಗ ಕಾಂಗ್ರೆಸ್ಸು ಅದರಲ್ಲಿ ಭಾಗ ವಹಿಸುವುದು. ಈಗ ನಡೆಯಲಿರುವ ರೆಫರೆಂಡಮ್ಮಿನಲ್ಲಿ ಅನೇಕ ಘಟನೆಗಳಿರುವುದರಿಂದ ಕಾಂಗ್ರೆಸ್ಸು ಅದರಲ್ಲಿ ಭಾಗ ವಹಿಸುವುದಿಲ್ಲ ಎಂಬುದಾಗಿ ಅವರು ಸೂಚಿಸಿರುವರು ತಮ್ಮ ಈ ನಿರ್ಧಾರವನ್ನು ಖಾನ್ ಅಬ್ದುಲ್ ಗಫಾರ್ ಖಾನರು ಮಿ॥ ಜಿನ್ನಾರಿಗೂ, ಕಾಂಗ್ರೆಸ್ ಹೈ ಕಮಾಂಡಿಗೂ ತಿಳಿಸಿರುವರು ಗಡಿನಾಡು ಪ್ರಾಂತದಲ್ಲಿ ರಷ್ಯದ ವಿರುದ್ಧವಾಗಿ ವಿಮಾನ, ನಿಲ್ದಾಣ ಮತ್ತು ಸೈನ್ಯಗಳನ್ನು ಕೇಂದ್ರೀಕರಿಸುವ ಉದ್ದೇಶದಿಂದ ಬ್ರಿಟಿಷರು ಪಠಾಣ ನೇತೃತ್ವದ ಪಾಕಿಸ್ತಾನವನ್ನು ಒತ್ತಾಯಪಡಿಸುತ್ತಿದ್ದಾರೆ. ಆದರೆ ಖುದಾಯಿ ಖಿದ್ಮತ್‌ಗಾರ್ ಸಂಸ್ಥೆಯು ಇರುವ ವರೆಗೆ ಅವರ ಸಂಚುಗಳು ಕಾರ್ಯಗತವಾಗಲಾರವು ಪಠಾಣರಲ್ಲಿ ಈಗ ತಲೆದೋರಿರುವ ಒಡಕಿಗೆ ಬ್ರಿಟಿಷರೇ ಮೂಲ ಕಾರಣ ಆದರೆ ಪಠಾಣರು ಅವರ ಕೈಗೊಂಬೆಗಳಾಗಲಾರರು ಎಲ್ಲರೂ ಸ್ವತಂತ್ರ ಪಠಾಣಿಸ್ಥಾನದ ರಚನೆಗಾಗಿ ಒತ್ತಾಯಪಡಿಸಬೇಕು, ರೆಫರೆಂಡಂ ನಡೆಯುವಾಗ ಪಠಾಣರಿಗೆ ಪಾಕಿಸ್ತಾನ ಬೇಕೋ ಅಥವಾ ಪಠಾಣಿಸ್ಥಾನ ಬೇಕೋ ಎಂಬ ಬಗ್ಗೆ ನಡೆಯಬೇಕು. ಆಗ ಕಾಂಗ್ರೆಸ್ಸೂ ಕೆಂಪು ಅಂಗಿ ದಳವೂ ಅದರಲ್ಲಿ ಭಾಗ ವಹಿಸುವುವು ಎಂದು ಅವರು ಹೇಳಿರುವರು

ದಿವಾನ್ ಬಹದ್ದೂರ್ ಮಹದೇವಯ್ಯ, ಮೂಡಲಗಿರಿಯಪ್ಪ, ನೇರಳೆ ಎಂ ಮಾದಯ್ಯ, ಪುಟ್ಟಸ್ವಾಮಿ ನಾಯ್ಡು ರವರುಗಳು ಕತ್ತರಿ ನಿರ್ಣಯವನ್ನು ವಿರೋಧಿಸಿದರು.

ವಿದ್ಯಾಮಂತ್ರಿಗಳಾದ ಡಾ॥ ರಾಯ್ ರವರು ಉತ್ತರವಿತ್ತು ಪ್ರವಾಸದ ವಿಚಾರವೇ ಕಾಂಗ್ರೆಸ್ಸಿನವರಿಗೆ ಗೊತ್ತಿಲ್ಲ ದಿವಾನರಿಗಾಗಲೀ ಮಂತ್ರಿಗಳಿಗಾಗಲೀ ಪ್ರಜೆಗಳನ್ನು ಬಿನ್ನವತ್ತಳೆಗಾಗಿ ಸ್ಪರ್ಧಿಸಿಲ್ಲ. ಸಾರ್ವಜನಿಕರೇ ಸ್ವಯಂಪ್ರೇರಿತರಾಗಿ ಬಿನ್ನವತ್ತಳೆಗಳನ್ನು ಕೊಡುತ್ತಾರೆ ಎಂದು ತಿಳಿಸಿದರು.

ನಿರ್ಣಯಕ್ಕೆ ಸಮರ್ಥನೆ ದೊರೆಯದೆ ಬಿದ್ದು ಹೋಯಿತು.

ತಾತ್ಕಾಲಿಕ ಸರ್ಕಾರಕ್ಕೆ ಒತ್ತಾಯ

ಶಾಸನ ಸಭೆಯ ಕಾರ್ಯಕಲಾಪ

[ಸ್ವಂ. ವಾ. ವರದಿ] ಬೆಂಗಳೂರು ೨೪

ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳಿಗೆ ಕೊಡಬೇಕೆಂದಿರುವ ರಾಜಕೀಯ ಸುಧಾರಣೆಗಳ ಬಗ್ಗೆ ಸಂಸ್ಥಾನದ ನಾಲ್ಕು ಪ್ರಮುಖ ರಾಜಕೀಯ ಸಂಸ್ಥೆಗಳು, ೨೨ ಸಂಘಗಳು, ತಮ್ಮ ಅಭಿಪ್ರಾಯವನ್ನು ಕೊಟ್ಟಿವೆಯೆಂದೂ, ಏಳು ಜಾಯಿಂಟ್ ಮೆಮೊರ್ಯಾಂಡಂಗಳು ಬಂದಿವೆಯೆಂದೂ ಸಹ ಶ್ರೇಷ್ಠ ಕಾರ್ಯದರ್ಶಿಗಳು ಮಿ॥ ಸಯ್ಯದ್ ಅಬ್ದುಲ್ ರಹಮಾನರ ಪ್ರಶ್ನೆಗೆ ಉತ್ತರವಾಗಿ ಕೊಟ್ಟರು

ಶ್ರೀ॥ ಟಿ ಮರಿಯಪ್ಪನವರು ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸುವ ಬಗ್ಗೆ ಒತ್ತಾಯ ಬಂದಿದೆಯೇ ಎಂದು ಪ್ರಶ್ನೆ ಕೇಳಿ ಪ್ರಶ್ನೆ ಒತ್ತಾಯ ಬಂದಿದೆಯೆಂದು ಶ್ರೇಷ್ಠ ಕಾರ್ಯದರ್ಶಿಗಳು ಉತ್ತರವಿತ್ತರು. ಶ್ರೀಗಳಾದ ಹೆಚ್ ಆರ್ ಗುರುವಾ ರೆಡ್ಡಿ ಮತ್ತಿತರರು ಉಪ ಪ್ರಶ್ನೆ ಹಾಕಿದರು

ಮಲೆನಾಡನ್ನು ಅಭಿವೃದ್ಧಿ ಪಡಿಸುವ ಯೋಜನೆ ಬಗ್ಗೆ ಶ್ರೀ॥ ಕಡಿದಾಳು ಮಂಜಪ್ಪನವರು ಪ್ರಶ್ನೆ ಹಾಕಿ ಉತ್ತರ ಪಡೆದರು.

ಚಾಮರಾಜನಗರ, ಹುಣಸೂರು ತಾಲ್ಲೂಕುಗಳು ಸಹ ಮಲೆನಾಡಾಗಿದ್ದರೂ ಅವುಗಳ ಅಭಿವೃದ್ಧಿಗೆ ಬೇರೆ ಯೋಜನೆ ಸರ್ಕಾರದ ಗಮನದಲ್ಲಿದೆ ಎಂದು ಶ್ರೇಷ್ಠ ಕಾರ್ಯದರ್ಶಿಗಳು ತಿಳಿಸಿದರು

೪೭-೪೮ ನೇ ಸಾಲಿಗೆ ಅ ಡಿ ಷ ನ ಲ್ ಗ್ರಾಂಟ್ ಬಗ್ಗೆ ಚರ್ಚೆ ನಡೆಯುತ್ತಿದೆ

ಶ್ರೀ॥ ಎನ್ ಬಾಲಕೃಷ್ಣಯ್ಯನವರು ಹೆಚ್ಚು ಆಹಾರ ಬೆಳೆಯುವ ಜಮೀನಿನ ಕಂದಾಯದ ಬಗ್ಗೆ ಒಂದು ಕತ್ತರಿ ನಿರ್ಣಯ ತಂದರು. ಶ್ರೀ॥ ಹೆಚ್ ಎಸ್ ರುದ್ರಪ್ಪನವರು ಇದನ್ನು ಸಮರ್ಥಿಸಿ ಭಾಷಣ ಮಾಡಿದರು ಮಂತ್ರಿಗಳಾದ ಶ್ರೀ॥ ತಿಪ್ಪೆ ಗೌಡರು ಉತ್ತರ ಕೊಡುತ್ತಾ ಸರ್ಕಾರವು ಈ ಬಗ್ಗೆ ಪರಿಶೀಲಿಸುವುದೆಂದು ತಿಳಿಸಿದರು ನಂತರ ನಿರ್ಣಯವು ಬಿದ್ದು ಹೋಯಿತು

[illegible] ಮಾಲೂರು ಸೆಕ್ರೆಟರಿ ಶ್ರೀ॥ ಟಿ ರಾಮಸ್ವಾಮಿಯವರಿಗೆ ಎರಡು ತಿಂಗಳು ರಜಾ ಮುಂದುವರಿಸಲಾಗಿದೆ

ಈ ಮಂತ್ರಿ ಮಂಡಲದ ಸಭೆಯು ಬೆಳಗ್ಗೆ ೧೦ ಗಂಟೆಯಿಂದ ೧೧॥ ವರೆಗೆ ನಡೆಯಿತು

ಈ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಮಧ್ಯಾಹ್ನ ೩ ಗಂಟೆಯಿಂದ ಆರಂಭವಾಯಿತು

ನ್ನೆ ಇಂದಿನಿಂದ ಮರುಳಪ್ಪನವರ ಜೀರ್ಣೋದ್ಧಾರದಲ್ಲಿ ಬಿ ಟಿ ಕಾಲೇಜಿನ ಆರಂಭವಾಯಿತು

ಜುಲೈ ಮೂರರಿಂದ ಹೊಸ ಗಾರ ಸರ್ಕಾರ

ತಾತ್ಕಾಲಿಕ ಸರ್ಕಾರದಲ್ಲಿರುವ ಮಂತ್ರಿಗಳ ರಾಜೀನಾಮೆ ಇತ್ತು, ಮುಂದಿನ ಮಾಹೆ ೩ ನೇ ತಾ॥ ನಿಂದ ಆಗಸ್ಟ್ ೧೫ ರವರೆಗೆ ಹೊಸ ಕೇರ್‌ಟೇಕರ್ ಸರ್ಕಾರದ ಮಂತ್ರಿಗಳಾಗುವರು. ಈ ಬದಲಾವಣೆಯು, ಭಾರತದಲ್ಲಿ ಪ್ರತ್ಯೇಕವಾದ ಎರಡು ಡೊಮಿನಿಯನ್ ಸರ್ಕಾರವಾಗುವ ವರೆವಿಗೆ ಮಾತ್ರ ಇರುವುದು.

ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯ

[illegible] ಸಂಸ್ಥಾನಗಳು [illegible], ಹಿಂದೂಸ್ಥಾನ [illegible] ಭಾರತೀಯ ರಾಜ್ಯಾಂಗ [illegible], ಇವ [illegible] ಅವುಗಳ [illegible] ಮುಸ್ಲಿಮರಿಗೆ ಪ್ರತ್ಯೇಕವಾದ ಚುನಾವಣೆ ನಡೆಯಬೇಕೆಂಬುದಾಗಿ [illegible] ಅಧ್ಯಕ್ಷರು [illegible].

ನಮ್ಮ ಸರಹದ್ದನ್ನು ಉಲ್ಲಂಘಿಸಿದೆ

[illegible] ಚೀಣದ ಕಮ್ಯೂನಿಸ್ಟರಿಗೆ [illegible] ಬೆಂಬಲ ನೀಡುತ್ತಿದೆ, ಈಚೆಗೆ ಚೀಣದಲ್ಲಿ [illegible] ಪ್ರಭಾವ [illegible], [illegible] ಚೀಣಾ ದೇಶಕ್ಕೆ ಕೊಡಲು [illegible] ಸರಹದ್ದನ್ನು [illegible] ಉಲ್ಲಂಘಿಸಿದಂತಾಗಿದೆ [illegible] ಕಮ್ಯೂನಿಸ್ಟರ [illegible] ಸರ್ಕಾರ [illegible] ಚೀಣಾ [illegible] [illegible]

[illegible] ಹಾವಿನಿಂದ ಅಪ್ರಾಪ್ತ ಸುಳಿಗೆ

[illegible] ಪ್ರಕಾಶನ [illegible] ಸುಳಿಗೆ ಮಾಡಲು [illegible]

SAR DA VILAS COLLEGE,
MYSORE

Tuition Section for September Intermediate Examination Classes in full swing in mornings. Moderate fees. Admissions close shortly.

Camp [illegible] L. K. Sharma
Secretary.

[illegible] ಕಮಲ್,
[illegible]

ಗೋಪಭಾಮ
(ತೆಲುಗು)

[illegible]

'[illegible]'
(ಹಿಂದಿ)

[illegible]

ರೀವಾ ಸಂಸ್ಥಾನದಲ್ಲಿ ವಿದ್ಯಾರ್ಥಿ ಶುಲ್ಕ ರದ್ದು

ರೀವಾ ಸಂಸ್ಥಾನದಲ್ಲಿ ಬರುವ ಜುಲೈನಿಂದ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲ್‌ಗಳಲ್ಲಿ ವಿದ್ಯಾರ್ಥಿ ಶುಲ್ಕವನ್ನು ರದ್ದುಗೊಳಿಸಲು ಅಲ್ಲಿನ ಮಹಾರಾಜರವರು ನಿರ್ಧರಿಸಿರುವುದಾಗಿ ವರದಿಯಾಗಿದೆ. ಈಚೆಗೆ ಅನೇಕ ಸುಧಾರಣೆಗಳಾಗುತ್ತಿರುವುದು. ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ ೧೦ ಲಕ್ಷ ರೂ. ವೆಚ್ಚ ಮಾಡುತ್ತಿರುವುದಾಗಿ ಹೇಳಲಾಗಿದೆ.

ಕಾಳ ಸಂತೆ ಪತ್ತೆ

ಸ್ವಂ ವ.] ಶ್ರೀರಂಗಪಟ್ಟಣ ೨೨

ಇಲ್ಲಿನ ವರ್ತಕರೊಬ್ಬರು ಕಾಳ ಸಂತೆಯಲ್ಲಿ ಸೀಮೆಎಣ್ಣೆ ಮಾರುತ್ತಿದ್ದುದನ್ನು ಪೋಲೀಸರು ಪತ್ತೆ ಹಚ್ಚಿ ಮುಂದಿನ ಕ್ರಮ ಜರುಗಿಸುತ್ತಿರುವುದಾಗಿ ತಿಳಿದು ಬಂದಿದೆ.

ವರದಿ ತಯಾರಿಸಲು ಹತ್ತಿ ಟನ್ ಕಾಗದದ ವೆಚ್ಚ

ಗ್ಲೋಬ್] ಲಂಡನ್ ೨೦

ಪ್ರಪಂಚ ಸಂಸ್ಥೆಯ ಬಾಲ್ಕನ್ ಕಮಿಷನ್ನಿನವರು ಗ್ರೀಕ್ ಗಡಿಯ ಸಮಸ್ಯೆಗಳ ಬಗ್ಗೆ ಇನ್ನು ಕೆಲವು ದಿನಗಳಲ್ಲಿ ಪ್ರಕಟಿಸಲಿರುವ ವರದಿಯನ್ನು ತಯಾರಿಸಲು ಹತ್ತು ಟನ್ ಕಾಗದವನ್ನು ಉಪಯೋಗಿಸಿರುವರು.

ರಾಜಕಮಲ್
ತಾ॥ ೨೭-೬-೪೭ ರಿಂದ
ಪ್ರತಿ ದಿನ ೩ ಆಟಗಳು
'ಬೆರಾಂಬಾರ್'
—: ಭೂಮಿಕೆ :—
ಮಿದಬಾಲ್, ಜಾಗೀರ್ದಾರ್.

Morning Shows
From 27-6-47 for
4 days
daily at 10-30 A.M.

"Lady Let's Dance"

—: STARRING :—
Belita, James Ellison, with Gorgeous Dancing Girl and Escone Ballet Girls

ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರಲ್ಲು—ಉಬ್ಬಸಕ್ಕೆ
(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮಕಾಂತ ಮತ್ತು (Tonsils) ಗಳಿಗಾಯಕ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಬಂದು ನೋಡಿ

ಗುಂಡ್ಲುಪೇಟೆ ಆರ್. ಎಸ್. ಪಂಡಿತರು, ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು.

ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕ್ರಮ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀಮಾನ್ [illegible] ರವರು ಈ ಹೇಳಿಕೆಯನ್ನು ಕೊಡಿಸಿದ್ದಾರೆ:—

ಯೂನಿವರ್ಸಿಟಿ ಕೌನ್ಸಿಲ್‌ರವರು ಕೆಲವು ತಿಂಗಳ ಹಿಂದೆ ನಡೆದ ಬೆಂಗಳೂರು ವಿಶ್ವವಿದ್ಯಾಲಯ ಸಂಘದ ವಿದ್ಯಮಾನಗಳಲ್ಲಿ ಶಿಸ್ತಿಗೆ ವಿರೋಧವಾಗಿ ವರ್ತಿಸಿದರೆಂಬ ಕಾರಣದ ಮೇಲೆ ಐದು ಜನ ವಿದ್ಯಾರ್ಥಿಗಳನ್ನು ಈಗ ಶಿಕ್ಷೆಗೆ ಗುರಿಮಾಡಿರುವುದು ಅತ್ಯಂತ ಖಂಡನೀಯವಾದುದು; ಇಂತಹ ನಡವಳಿಕೆಗಳನ್ನು ವಿದ್ಯಾರ್ಥಿಗಳು ಎಂದೂ ಸಹಿಸಲಾರರು ಈ ಕೂಡಲೇ ಆಜ್ಞೆಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸುತ್ತೇನೆ.

ವಿಶ್ವವಿದ್ಯಾಲಯದವರ ಈ ವರ್ತನೆಯನ್ನು ಖಂಡಿಸಿ ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಬಿ. ಶ್ರೀಕಂಠಯ್ಯ, ದಾಸಪ್ಪ ಮತ್ತು ಕೆ. ಎನ್. ಸುಬ್ರಹ್ಮಣ್ಯಂ ಮೊದಲಾದವರುಗಳು ಒಂದು ಹೇಳಿಕೆ ಹೊರಡಿಸಿರುವರು.

ವಿದ್ಯಾರ್ಥಿಗಳ ಸಹಾಯಕ್ಕಾಗಿ ಮನವಿ

ಮೈಸೂರು ಪೌರಸಭೆಯು [illegible] ವರ್ಷಗಳಿಂದಲೂ ನಡೆಸುತ್ತಿರುವ ಬಡ ವಿದ್ಯಾರ್ಥಿಗಳ ಊಟದ ವ್ಯವಸ್ಥೆಗೆ ಈ ಸಾರಿಯೂ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಪೌರಸಭಾ ಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಪ್ರಾರ್ಥಿಸಿರುತ್ತಾರೆ.

ಗರ್ಭರಕ್ಷಿಣಿ

ಅನೇಕರ ಅನುಭವ, ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ
ಪಂಡಿತ್ ಕೆ. ವಿ. ವೆಂಕಟರಾಮಯ್ಯ,
ಡಿ॥ ಬೋರ್ಡ್ ವೈದ್ಯ, ಅರಕಲವಾಡಿ.
ಚಾಮರಾಜನಗರ ತಾ॥

TYPEWRITING
CLASSES

A few seats are available in the Commercial Institute attached to Sarada Vilas High School, Mysore, for students appearing for the Mysore Govt Jr and Sr Typewriting Examinations. Shorthand classes will also be conducted if adequate number of students Join.

Enquiries: 8 to 9-30 a.m. daily.

ಹೈಸ್ಕೂಲಿಗಾಗಿ ಧನ ಸಹಾಯ

ಸ್ವಂ ವ.] ಬೇಲೂರು ೨೦

ಇಲ್ಲಿ ಸ್ಥಾಪಿತವಾಗಿರುವ ಹೈಸ್ಕೂಲಿನ ನಿಧಿಗಾಗಿ ನಾಗಮಂಗಲದ ಕಲ್ಲಹಳ್ಳಿ ಕಂಟ್ರಾಕ್ಟರ್ ಶ್ರೀಮಾನ್ [illegible] ರಂಗಯ್ಯನವರು ಎರಡು ಸಾವಿರದ ಒಂದು ರೂ. ಗಳನ್ನೂ ಬೇಲೂರಿನ ಸಾಹುಕಾರ್ ಎಸ್. ಟಿ. ಕೃಷ್ಣಯ್ಯನವರು ಒಂದು ಸಾವಿರದ ಒಂದು ರೂ. ಗಳನ್ನೂ ಉದಾರವಾಗಿ ಕೊಟ್ಟಿರುತ್ತಾರೆ.

ಅಮೃತಸರದಲ್ಲಿ ಬಾಂಬು ತಯಾರಿ

ಅಮೃತಸರದ ಬಳಿಯಿರುವ ಕಾಟರ್ ಕಾಸಿಯಾನ್ನಿನಲ್ಲಿನ ಮನೆಯೊಂದರಲ್ಲಿ ಒಂದು ಸಣ್ಣ ಬಾಂಬಿನ ಕಾರ್ಖಾನೆಯು ಪತ್ತೆಯಾಗಿದೆ. ಅಲ್ಲಿ ಹಲವು ಬಗೆಯ ಇತರ ಆಯುಧಗಳೂ ದೊರೆತಿವೆ ಎಂಬುದಾಗಿ ತಿಳಿದುಬಂದಿದೆ.

ಪೋಸ್ಟ್ ಕಾರ್ಡು ತಲಪಲು ೧೨ ವರ್ಷ ತಡ

ಫೋರ್ಟ್ ಪುರದಲ್ಲಿ ಹಾಕಿದ ಅಂಚೆ ಕಾರ್ಡೊಂದು ವಿಳಾಸದಾರರಿಗೆ ತಲಪಲು ೧೨ ವರ್ಷ ಕಾಲ ತೆಗೆದುಕೊಂಡಿರುವುದಾಗಿ ವರದಿಯಾಗಿದೆ. ೧೯೩೫ ರಲ್ಲಿ ಫೋರ್ಟ್ ಪುರದಲ್ಲಿ ಹಾಕಿದ ಈ ಕಾರ್ಡು ಕಾಶಿಯನ್ನು ಮಾರ್ನೇ ವರ್ಷ ತಲಪಿತು. ಅನಂತರ ೧೧ ವರ್ಷದ ಮೇಲೆ ಅದರ ವಿಳಾಸಕ್ಕೆ ತಲಪಿತು. ಆ ವೇಳೆಗೆ ಕಾರ್ಡು ಬರೆದವರೂ, ವಿಳಾಸದಾರರೂ ಮೃತರಾಗಿದ್ದರೆಂದು ಹೇಳಲಾಗಿದೆ.

ಆಸ್ಟ್ರೇಲಿಯದಲ್ಲಿ ವಿಚಿತ್ರ ಘಟನೆಗಳು

ಗ್ಲೋಬ್] ಅಡಿಲೈಡ್ ೨೦

ದಕ್ಷಿಣ ಆಫ್ರಿಕದ ಕಾಂಗ್ರೆಸ್ ಪ್ರದೇಶದಲ್ಲಿ ವರ್ಣನಾತೀತವಾದ ವಿಚಿತ್ರ ಘಟನೆಗಳು ಇನ್ನೂ ನಡೆಯುತ್ತಾ ಜನರಲ್ಲಿ ಭಯೋತ್ಪಾದನೆಯುಂಟಾಗುತ್ತಿರುವುದಾಗಿ ವರದಿಯಾಗಿದೆ. ಒಂದು ಕಟ್ಟಡದ ಛಾವಣಿಯು ಗಾಳಿಯಲ್ಲಿ ಹಾರಿ ಹೋಯಿತು. ಕಳೆದ ಏಪ್ರಿಲಿನಲ್ಲಿ ಚರ್ಚೊಂದು ಮಾಯವಾಯಿತು. ಕೆಲವು ದಿನಗಳ ಹಿಂದೆ ಹೋಟೆಲೊಂದರ ಮೇಲು ಭಾಗವು ಆಕಾಶಕ್ಕೆ ಹಾರಿ ಸ್ವಲ್ಪ ದೂರ ಹೋಗಿ ಅದೃಶ್ಯವಾಯಿತೆಂದು ತಿಳಿದು ಬಂದಿದೆ.

ಮನೆ ಕ್ರಯಕ್ಕಿದೆ

ಮೈಸೂರು ನರಸಿಂಹರಾಜ ಮೊಹಲ್ಲಾ 4374 ನೇ ನಂಬರ್ ಮನೆ. ವಿ. ಕೆ. ಮಾಧವರಾವ್. ಎಕ್ಸೈಸ್ ನಂಜನಗೂಡು. ಡೋರ್ ನಂಬರ್ 1405 ರಲ್ಲಿ ವಿಚಾರಿಸಿ —

ಸಾಧ್ವಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

Edited, printed and published by A. R. Nagarajan at the Sadhvi Press. D. Subbaiah Road Mysore.

ಫೋನ್. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ ೯ ಕಾಸು

ಸಂಪುಟ ೫] ಗುರುವಾರ ೨೬—೬—೪೭ [ಸಂಚಿಕೆ ೨೭೩

ತಿರುವಾಂಕೂರಿನಲ್ಲಿ ಕಾಂಗ್ರೆಸ್ಸಿನ ಪ್ರತೀಕಾರ

ಶಾಸನ ಸಭೆಯಲ್ಲಿ ಖೋತಾ ನಿರ್ಣಯ ಬಿದ್ದುಹೋಯಿತು

ಸ್ವಂ ಸು ಫೋ] ಬೆಂಗಳೂರು ೨೬

ಹಿನ್ನೆ ದಿನ ಮುಂದುವರಿದ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳಾದ ನಂತರ ರೆವಿನ್ಯೂ ಸಚಿವರು ೧೯೪೭ ೪೮ ನೇ ಸಾಲಿಗೆ ರೆವಿನ್ಯೂ ಖಾತೆಗೆ ಬೇಕಾದ ಖರ್ಚುಗಳಿಗೆ ಬೇಡಿಕೆಯನ್ನು ಸಭೆಯ ಮುಂದೆ ಒಪ್ಪಿಗೆಗಾಗಿ ಇಟ್ಟರು.

ಶ್ರೀಮತಿ ಕಮಲಾದೇವಿಯವರು ಕಂದಾಯದ ಪುನರ್ವಿಮರ್ಶೆಯ ಬಗ್ಗೆ ಸರ್ಕಾರದ ನೀತಿಯನ್ನು ಚರ್ಚಿಸಲು ಕತ್ತರಿ ನಿರ್ಣಯವನ್ನು ತಂದರು

ನಿರ್ಣಯದ ಮೇಲೆ ಶ್ರೀಮತಿ ಕಮಲಾದೇವಿಯವರು ಮಾತನಾಡಿ ಕಂದಾಯದ ಪುನರ್ವಿಮರ್ಶೆಯಾಗಬೇಕು ಈಗಿರುವ ಪದ್ಧತಿಯಿಂದ ರೈತರಿಗೆ ಅನುಕೂಲವಿಲ್ಲ ಪ್ರತಿವರ್ಷವೂ ಬೇಡಿಕೆಯು ಮಾತ್ರ ಹೆಚ್ಚುತ್ತಲೇ ಇದೆ ಎಂದು ಬಜೆಟ್ಟನ್ನು ಟೀಕಿಸಿದರು

೫ ಎಕರೆ ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣದ ಹಿಡುವಳಿದಾರರಿಗೆ ಕಂದಾಯವನ್ನು ಹೇರಲಾಗದೆಂದು ಧರ್ಮಪ್ರಕಾಶ ಶ್ರೀ ಎಲ್ ಎಲ್ ವೆಂಕಟೇಶಯ್ಯನವರು ಸೂಚಿಸಿದರು.

ಕಂದಾಯದ ವಿಚಾರವನ್ನು ಪುನರ್ವಿಮರ್ಶಿಸಲು ಶ್ರೀ ಪುಲ್ಲಾರೆಡ್ಡಿಯವರಿದ್ದಾಗ ಸಮಿತಿಯೊಂದರ ರಚನೆ ಬಗ್ಗೆ ಏರ್ಪಾಡಾಗಿತ್ತು. ಆದರೆ ಅವರು ಹೊರಟು ಹೋದ ಮೇಲೆ ಆ ವಿಚಾರವೂ ಅಲ್ಲಿಗೇ ನಿಂತುಹೋಗಿರುತ್ತದೆ ಈಗಲೂ ಸಮಿತಿಯೊಂದನ್ನು ರಚಿಸಿ ಕಂದಾಯದ ವಿಚಾರದ ಪುನರ್ವಿಮರ್ಶೆ ಮಾಡುವುದು ಅಗತ್ಯ ಎಂಬುದಾಗಿ ಶ್ರೀ ಎಸ್ ಕೃಷ್ಣಸ್ವಾಮಿರಾಯರು ನಿರ್ಣಯಕ್ಕೆ ಬೆಂಬಲವಿತ್ತು ಹೇಳಿದರು

ರೆವಿನ್ಯೂ ಸಚಿವರಾದ ಶ್ರೀ ಜಿ ಹುಚ್ಚೇಗೌಡರು ನಿರ್ಣಯಕ್ಕೆ ಉತ್ತರವಿತ್ತು ಕೆಂಗಲ್ ಪ್ರತಿ ಒಂದು ಕೊಡಬೇಕಾದ ವಿಚಾರ ಬೇರೆಯನ್ನು ಒಂದೇ ರೀತಿಯಲ್ಲಿ ಒದಗಿಸುವುದು ಸಾಧ್ಯವಿಲ್ಲ ಈಗ ಇಂಜಿನಿಯರು ಅತ್ಯಂತ ಕಠಿಣವಾಗಿದೆ ಪರಿಸ್ಥಿತಿ ಹತೋಟಿಗೆ ಬಂದಂತೆಲ್ಲಾ ಈ ವಿಚಾರಗಳಿಗೆ ಸರ್ಕಾರದವರು ಸೂಕ್ತ ಗಮನ ಕೊಡುವರು ಎಂದು ತಿಳಿಸಿದರು

ನಿರ್ಣಯವು ೨೭-೩೩ ಓಟುಗಳಿಂದ ಬಿದ್ದುಹೋಯಿತು

ಹಿಂದುಳಿದ ಪಂಗಡದವರಿಗೆ ಪ್ರತ್ಯೇಕವಾಗಿ ವಸತಿಯನ್ನು ನಿರ್ಮಿಸಿಕೊಳ್ಳಲು ಉತ್ತಮವಾದ ನಿವೇಶನಗಳನ್ನೊದಗಿಸಿಕೊಡಬೇಕೆಂಬುದಾಗಿ ಎಲ್ ಮಾದಯ್ಯನವರು ಸೂಚಿಸಿದರು.

ಕಾಲನಿಗಳ ಅಭಿವೃದ್ಧಿಯ ವಿಚಾರ ಸರ್ಕಾರದ ಗಮನದಲ್ಲಿದೆ ಈ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಾರೆ ಎಂಬುದಾಗಿ ಶ್ರೀ ಎಸ್ ನಾರಾಯಣರಾಯರು ಸರ್ಕಾರದ ಪರವಾಗಿ ಉತ್ತರವಿತ್ತ ಮೇಲೆ ನಿರ್ಣಯವು ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿತು.

ಆಯವ್ಯಯದ ಪಟ್ಟಿಗಳ ಮೇಲೆ ಚರ್ಚೆ ನಡೆದನಂತರ ಆಮೇಲೆ ಸಭೆಯು ಇಂದು ಮುಂದಕ್ಕೆ ಹೋಯಿತು

ಪಕ್ಷ ಬಾಧ್ಯತಾ ಸಮಿತಿ

ಶ್ರೀಗಳಾದ ಮಹಮ್ಮದ್ ಷರೀಫ್, ಎಂ ಎ ಗೋಪಾಲಸ್ವಾಮಿ ಐಯ್ಯಂಗಾರ್, ಟಿ ಮರಿಯಪ್ಪ, ಟಿ ಎಸ್ ಮಲ್ಲಪ್ಪನವರುಗಳು ಪಕ್ಷಬಾಧ್ಯತಾ ಸಮಿತಿಯ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿ ಅಡ್ವೊಕೇಟ್ ಜನರಲ್ಲೂ ಮತ್ತು ಶ್ರೀ ಸಿ ಸುಬ್ರಹ್ಮಣ್ಯ ಅಯ್ಯಂಗಾರರವರೂ ಅಧ್ಯಕ್ಷರಿಂದ ನಾಮಕರಣ ಮಾಡಲ್ಪಟ್ಟಿರುವರು ಶಾಸನ ಸಭಾಧ್ಯಕ್ಷರೇ ಪಕ್ಷಬಾಧ್ಯತಾ ಸಮಿತಿಯ ಅಧ್ಯಕ್ಷರಾಗಿರುವರು.

ಸದ್ಯದಲ್ಲೇ ಬಂಗಾಳದಲ್ಲಿ ಗವರ್ನರರ ಆಡಳಿತ

ಬಂಗಾಳದಲ್ಲಿ ಈಗಿರುವ ಮಂತ್ರಿ ಮಂಡಲವನ್ನು ರದ್ದು ಮಾಡಿ ಈ ಶನಿವಾರದ ವೇಳೆಗೆ ಅಲ್ಲಿ ೯೩ನೇ ಸೆಕ್ಷನ್ ಜಾರಿ ಮಾಡಿ ಗವರ್ನರರೇ ಅಧಿಕಾರವಹಿಸಿಕೊಳ್ಳಬಹುದೆಂದು ಕಾಂಗ್ರೆಸ್ ಮತ್ತು ಲೀಗ್ ಆವರಣಗಳಲ್ಲಿ ಹೇಳಲಾಗಿದೆಯೆಂದು ವರದಿಯಾಗಿದೆ ವಿಭಜನೆಯು ನಿರ್ಧರವಾಗಿರುವುದರಿಂದ ಎರಡು ಭಾಗಗಳಿಗೂ ಪ್ರತ್ಯೇಕವಾದ ಪ್ರಾದೇಶಿಕ ಮಂತ್ರಿ ಮಂಡಲಗಳ ರಚನೆಯಾಗಬಹುದೆಂದೂ ಸಹ ಭಾವಿಸಲಾಗಿದೆ.

ಕಪ್ಪು ಮಾರ್ಕೆಟ್ಟಿಗಾಗಿ ಸಂಸ್ಥಾನಗಳಿಗೆ ಜುಲ್ಮಾನೆ

ಗ್ಲೋಬ್] ಸೂರತ್ ೨೩

ತನ್ನ ಸಂಸ್ಥಾನಕ್ಕೆ ನಿಗದಿ ಮಾಡಲ್ಪಟ್ಟಿರುವ ರೇಷನ್ನಿನಲ್ಲಿ ಸಕ್ಕರೆ ಮತ್ತು ಬಟ್ಟೆಯನ್ನು ಅಧಿಕ ಬೆಲೆಗೆ (ಬ್ಲಾಕ್ ಮಾರ್ಕೆಟ್) ಮಾರಿದುದೆಂಬ ಕಾರಣದ ಮೇಲೆ ಪಶ್ಚಿಮ ಹಿಂದೂಸ್ಥಾನದ ಝಾಲ್ಯಾಂ ಮತ್ತು ಇತರ ಎರಡು ಸಂಸ್ಥಾನಗಳಿಗೆ ಭಾರತ ಸರಕಾರವು ಶಿಕ್ಷೆಯ ಕಡೆಯಿಂದ ೩ ಲಕ್ಷ ಮತ್ತು ೧ ಲಕ್ಷ ರೂ ಜುಲ್ಮಾನೆ ವಿಧಿಸುತ್ತಿದೆ

ಸುರಗುಂಜಾ ಸಂಸ್ಥಾನದಲ್ಲಿ ಸುಧಾರಣೆ

ತಮ್ಮ ಸಂಸ್ಥಾನದಲ್ಲಿ ಅತ್ಯುನ್ನತ ಮಟ್ಟದ ಸುಧಾರಣೆಗಳನ್ನು ಜಾರಿಗೆ ತರಲು ನಿರ್ಧರಿಸಿರುವುದಾಗಿ ಸುರಗುಂಜಾ ಸಂಸ್ಥಾನದ ರಾಜರು ಘೋಷಿಸಿರುವುದಾಗಿ ವರದಿಯಾಗಿದೆ ೧೭ ಜನ ಚುನಾಯಿತ ಮತ್ತು ೫ ಜನ ನಾಮಕರಣದ ಸದಸ್ಯರಿಂದ ಕೂಡಿದ ಶಾಸನ ಸಭೆಯ ರಚನೆ, ಸ್ಟೇಟ್ ಕೌನ್ಸಿಲಿಗೆ ಉತ್ತರವಾದಿಗಳಾದ ೩ ಜನ ಪ್ರಜಾ ಚುನಾಯಿತ ಸಚಿವರ ನೇಮಕಗಳು. ಜಾರಿಗೆ ಬರುವುವು ವಯಸ್ಕರ ಮತದಾನದ ಮೇಲೆ ಸಂಸ್ಥಾನದಲ್ಲೆಲ್ಲಾ ಶಾಸನ ಸಭೆಗೆ ಚುನಾವಣೆ ನಡೆಯಲಿದೆ ಎಂದು ತಿಳಿದುಬಂದಿದೆ.

ನೂತನ ಪಬ್ಲಿಕ್ ಸರ್ವಿಸ್ ಕಮೀಷನ್

ಕತ್ತರಿ ನಿರ್ಣಯ ವಾಪಸ್ಸು

ಸ್ವಂ ಸು ಫೋ] ಬೆಂಗಳೂರು ೨೬

ಈ ದಿನ ನ್ಯಾಯವಿಧಾಯಕ ಸಭೆಯು ಶ್ರೀ ಹೆಚ್ ಬಿ. ಗುಂಡಪ್ಪ ಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಪ್ರಶ್ನೋತ್ತರಗಳು ಆರಂಭವಾಗಿ ಅರ್ಧ ಘಂಟೆ ಕಾಲ ನಡೆಯಿತು ೧೯೪೭-೪೮ ನೇ ಸಾಲಿಗೆ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿಗೆ ೧೭, ೨೯, ೭೦೦ ರೂ ಮ ಬಿಲ್ಲನ್ನು ಸಭೆಯ ಮುಂದೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ತಂದಾಗ ಮಿ|| ಸೈಯ್ಯದ್ ಅಬ್ದುಲ್ ರಹಿಮಾನ್ ರವರು ಕತ್ತರಿ ನಿರ್ಣಯವನ್ನು ತಂದರು. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಒಬ್ಬ ಮುಸ್ಲಿಂ ಸದಸ್ಯರಿಗೆ ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು ಈ ಬಗ್ಗೆ ಅನೇಕ ವರ್ಷಗಳಿಂದಲೂ ಸರ್ಕಾರಕ್ಕೆ ಬೇಡಿಕೆಗಳು ಬಂದಿವೆಯೆಂದೂ, ಮುಸ್ಲಿಮರೊಬ್ಬರಿಗೆ ಒಂದು ಸ್ಥಾನವನ್ನು ಕೊಟ್ಟರೆ ಹಿಂದುಳಿದ ಪಂಗಡದವರೆಲ್ಲರಿಗೂ ಪ್ರಾತಿನಿಧ್ಯ ಕೊಟ್ಟಂತಾಗುತ್ತದೆ ಎಂದು ಹೇಳಿದರು. ಮಿ|| ಮಹಮ್ಮದ್ ಷರೀಫರು ನಿರ್ಣಯಕ್ಕೆ ಬೆಂಬಲವಿತ್ತರು

ಶ್ರೀ ಬಾಲಕೃಷ್ಣಯ್ಯನವರು ಕತ್ತರಿ ನಿರ್ಣಯದ ಮೇಲೆ ಮಾತನಾಡುತ್ತಾ ನಿರ್ಣಯದ ನೀತಿಯನ್ನು ನಾನು ಒಪ್ಪುತ್ತೇನೆ. ಆದರೆ ಮುಸ್ಲಿಂ ಸದಸ್ಯರಿಗೆ ಮಾತ್ರ ಪ್ರಾತಿನಿಧ್ಯ ಕೊಡುವುದನ್ನು ನಾನು ಒಪ್ಪಲಾರೆ ಎಂದು ತಿಳಿಸಿದರು. ಶ್ರೀ ನೇರಳೆ ಮಾದಯ್ಯನವರು ಹಿಂದುಳಿದ ಪಂಗಡದವರೊಬ್ಬರನ್ನು ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ನೇಮಿಸಬೇಕೆಂದು ತಿಳಿಸಿದರು. ಮಿ|| ಮಹಮದ್ ಇಮಾಮರವರು ಮಾತನಾಡುತ್ತಾ ಸುಧಾರಣಾ ಸಮಿತಿಯೂ ಈ ತತ್ವವನ್ನು ಒಪ್ಪಿ ಸರ್ಕಾರಕ್ಕೆ ಸಲಹೆ ಮಾಡಿದ್ದರೂ ಇನ್ನೂ ಜಾರಿಗೆ ತರದಿರುವುದು ಶೋಚನೀಯ. ನಿಷ್ಪಕ್ಷಪಾತವಾದ ಒಂದು ಸಮಿತಿಯು ಅಗತ್ಯವಿದೆ. ಅದರಲ್ಲಿ ಎಲ್ಲ ಪಂಗಡದ ಪ್ರತಿನಿಧಿಗಳೂ ಇರುವುದು ಸಾಧು ಎಂದು ತಿಳಿಸಿದರು ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರು ನಿರ್ಣಯವನ್ನು ಒಪ್ಪಿ ಮಾತನಾಡಿದರು ಕೇವಲ ಮುಸ್ಲಿಮರು ಮಾತ್ರ ಇರಬೇಕೆಂಬುದನ್ನು ವಿರೋಧಿಸಿದರು ಮಂತ್ರಿಗಳಿಂದ ಶ್ರೀ ಕೆ ಚಂಗಲರಾಯರೆಡ್ಡಿಯವರು ಕತ್ತರಿ ನಿರ್ಣಯಕ್ಕೆ ಉತ್ತರ ಕೊಡುತ್ತಾ ಸ್ವಾತಂತ್ರ್ಯ ಬಂದ ಸರಕಾರದ ಸಹಾಯದೊಂದಿಗೆ ಬರುವ ಪಬ್ಲಿಕ್ ಸರ್ವಿಸ್ ಕಮೀಷನ್ ಬಗ್ಗೆ ಸರಕಾರದವರು ತೀರ್ಮಾನಿಸುವರೆಂದೂ, ನೂತನ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಸದಸ್ಯರ ನೇಮಕ ಮಾಡುವಾಗ ಸಭೆಯ ಸದಸ್ಯರ ಸಲಹೆಗಳನ್ನು ಪ್ರಾತಿನಿಧ್ಯಗಳನ್ನು ಗಮನಿಸಲಾಗುವುದೆಂದೂ ತಿಳಿಸಿದರು. ಸಾಧ್ಯವಾದಲ್ಲಿ ಆದಷ್ಟು ಬೇಗ ನೂತನ ಪಬ್ಲಿಕ್ ಸರ್ವಿಸ್ ಕಮೀಷನ್ ನೇಮಿಸುತ್ತೇವೆ ಎಂದು ತಿಳಿಸಿದರು. ನಂತರ ಮುಸ್ಲಿಂಗಳ ಪ್ರತಿನಿಧಿಗಳು ತಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಂಡರು.

ತಿರುವಾಂಕೂರಿನಲ್ಲಿ ಕಾಂಗ್ರೆಸ್ಸಿನ ಉಗ್ರ ಕಾರ್ಯಕ್ರಮವೇ?

ತಿರುವಾಂಕೂರು ಕಾಂಗ್ರೆಸ್ಸು ಎರಡು ವಾರದಲ್ಲಿ ಉಗ್ರ ಕಾರ್ಯಕ್ರಮವನ್ನು ಆರಂಭಿಸುವುದೆಂದು ಅಖಿಲ ಭಾರತ ಪ್ರಮುಖ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ತಿಳಿಸಿದರು ಅನೇಕ ವೇಳೆ ಕಾಂಗ್ರೆಸ್ಸಿನ ಸತ್ಯಾಗ್ರಹವನ್ನು ತಡೆದಿದ್ದೇವೆ. ಇದೇ ಆರಂಭವಾಗುವುದನ್ನೂ ಸಹ ತಡೆಗಟ್ಟುತ್ತೇವೆ ಎಂದು ಸರ್ಕಾರವು ನಂಬಿದ್ದರೆ ಅದು ಮಿಥ್ಯವಾಗಿಯೇ ಉಳಿಯುವುದು. ಈಗ ಕಾಂಗ್ರೆಸ್ಸು ಆರಂಭ ಮಾಡಲಿರುವ ಚಳುವಳಿಗೆ ತಿರುವಾಂಕೂರಿನವರಲ್ಲದೆ ಹೊರಗಿನ ಪ್ರಾಂತ್ಯಗಳವರೂ ಸಹ ಸಹಾಯ ಮಾಡಲಿವೆ ಎಂದು ಅವರ ಹೇಳಿಕೆಯು

ಪರಿಸ್ಥಿತಿಯಲ್ಲಿ ದೇಶದ ಜನರು ಮಾತುಕತೆಗೆ ಮಧ್ಯಸ್ಥಿಕೆ ವಹಿಸುವುದಿಲ್ಲವೆಂದೂ ಇವರು ಮುಂದೆ ತಿರುವಾಂಕೂರಿನಲ್ಲಿ ಸ್ಥಾಪನೆಯಾಗಲಿರುವ "ಪ್ರಜಾ ಸರ್ಕಾರ"ದೊಡನೆ ಮಾತ್ರ ವ್ಯವಹರಿಸುವರೆಂದೂ ಸಹ ತಿಳಿಸಿದರು

ಜುಲೈ ೧ ರಿಂದ ಬಟ್ಟೆ ಕೂಪನ್ ಇಲ್ಲ

ಮೈಸೂರು ೨೬

ಮೈಸೂರು ಪೀಸ್‌ಗುಡ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ನಿನವರು ಇದುವರೆಗೆ ಕೊಡುತ್ತಿರುವ ಬಟ್ಟೆ ಕೂಪನ್ನುಗಳನ್ನು ಜುಲೈ ೧ ರಿಂದ ಕೊಡಲಾಗುವುದಿಲ್ಲ. ಆದುದರಿಂದ ಕೂಪನ್ ಪಡೆಯದವರು ಕೂಡಲೇ ಅಲ್ಲಿಗೆ ಹೋಗಿ ಕೂಪನ್ ಪಡೆಯಬಹುದೆಂದು ಜಿಲ್ಲಾಧಿಕಾರಿಗಳು ತಿಳಿಸಿರುವರು.

ಶ್ರೀಮತ್ಕೃಷ್ಣರಾಜ ಪರಮೇಶ್ವರೀ ದೇವಸ್ಥಾನ

ಶಿವರಾಂಪೇಟೆಯಲ್ಲಿರುವ ಮೇಲ್ಕಂಡ ದೇವಸ್ಥಾನದ ಶ್ರೀ ಪ್ರಸನ್ನ ಗಣಪತಿ ಪ್ರತಿಷ್ಠಾಪನೆಗೆ ಪೂರ್ವಭಾವಿ ಪಲ್ಲಕ್ಕಿ ಉತ್ಸವವು ಈ ರಾತ್ರಿ ೮ ಗಂಟೆಗೆ ನಡೆಯುತ್ತದೆ.

ಕಾರ್ಪೊರೇಷನ್ ನಗರ ಸಮಿತಿ ಸಭೆ

ಮೈಸೂರು ನಗರದ ಕಾಂಗ್ರೆಸ್ ಸಮಿತಿ ಸಭೆಯು ಕಾಂಗ್ರೆಸ್ ಕಚೇರಿಯಲ್ಲಿ ನಾಳೆ ಸಂಜೆ ೭ ೩೦ ಗಂಟೆಗೆ ಸೇರುವುದು. ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ

ಕಾಂಗ್ರೆಸ್ಸಿಗೆ ಕಾಣಿಕೆ

ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ವಿ. ಕೆ ವೆಂಕಟರಮಣನವರು ತಮ್ಮ ಪುತ್ರನ ನಾಮಕರಣದ ಸಂದರ್ಭದಲ್ಲಿ ೧೦ ರೂಗಳನ್ನು ಕಾಂಗ್ರೆಸ್ಸಿಗೆ ಕಾಣಿಕೆಯಾಗಿ ಕೊಟ್ಟಿರುವರು.

ಪಾಕಿಸ್ಥಾನದ ಚಳುವಳಿ ಕಮ್ಯಾಂಡೆಂಟ್ ರಾದ ಮಿ|| ಮಹಮ್ಮದ್ ಅಕ್ಬರ್ ಖಾನರವರನ್ನು ಪಾಕಿಸ್ಥಾನದ ಸೇನಾಧಿಪತಿಗಳನ್ನಾಗಿ ನೇಮಿಸುವರೆಂದು ವದಂತಿಯಾಗಿದೆ

ಹೈದರಾಬಾದ್ ಸಂಸ್ಥಾನದ ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮೀಷನ್ ಇರಬೇಕೆಂಬುದನ್ನು ಸೂಚಿಸುವರೆಂದೂ, ನೂತನ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಸದಸ್ಯರ ನೇಮಕ ಮಾಡುವಾಗ ಸಭೆಗೆ ಸದಸ್ಯರ ಸಲಹೆಗಳನ್ನು ಪ್ರಾತಿನಿಧ್ಯ ಕೊಡಬೇಕೆಂಬುದನ್ನು ಗಮನಿಸಲು ಈ ಸಮಯದಲ್ಲಿ ಅವರು ಕೊಟ್ಟ ಸಲಹೆ. ನೂತನ ಪಬ್ಲಿಕ್ ಸರ್ವಿಸ್ ಕಮೀಷನ್ ನೇಮಿಸುತ್ತೇವೆ ಎಂದು ತಿಳಿಸಿದರು. ನಂತರ ಮುಸ್ಲಿಂಗಳ ಪ್ರತಿನಿಧಿ ಸೈಯ್ಯದರು ನಿರ್ಣಯವನ್ನು ವಾಪಸ್ ತೆಗೆದುಕೊಂಡರು.

ಪಂಜಾಬ್-ಸಂಯುಕ್ತ ಪ್ರಾಂತಗಳಿಂದ ಹೊಸ ಪ್ರಾಂತ

ಮೀರತ್ ಡಿವಿಜನ್ನಿಗೆ ಸೇರಿದ ಶಾಸನ ಸಭಾ ಸದಸ್ಯರು, ಆಗ್ರಾ ಡಿವಿಜನ್ನಿನ ಆಗ್ರ, ಮಥುರ ಮತ್ತು ಎಟ್ಟಾ ಜಿಲ್ಲೆಗಳ ಸದಸ್ಯರೂ ರೋಹಿಲ್‌ಖಂಡದ ಮುರಾದಾಬಾದ್ ಬಿಜನೋರ ಮತ್ತು ಬದವನ್ ಜಿಲ್ಲೆಯವರೂ, ಪಂಜಾಬ್ ಜಿಲ್ಲೆಯ ಶಾಸನ ಸಭಾ ಸದಸ್ಯರೂ [illegible] ಸಭೆ ಸೇರಿ ರೋಹಿಲ್‌ಖಂಡ ಜಿಲ್ಲೆಗಳ ಗಡಿಪ್ರಾಂತ್ಯವನ್ನು ರಚಿಸಿ ಭಾರತ ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿರುವರೆಂದು ವರದಿಯಾಗಿದೆ.

೭,೩೦,೦೦೦ ರೂ. ಬೆಲೆಯ ಸೀರೆ

ಭಾರತದಲ್ಲಿ ಸಂಚಾರ ಮಾಡುತ್ತಿದ್ದ ಒಂದು ಸ್ಪೈನ ಡಾ|| ರೂತ್ ಫ್ರೇಜರ್ ಎಂಬ ಮಹಿಳೆಯೊಬ್ಬಳು ಅಸ್ಪೃಶ್ಯರಿಗಾಗಿ ಕಟ್ಟಲಾಗುವ ಆಸ್ಪತ್ರೆಯ ನಿಧಿಗಾಗಿ ತನ್ನಲ್ಲಿರುವ [illegible] ಉಡುಪಿನ ಸೀರೆಯೊಂದನ್ನು ಕೊಟ್ಟಿರುವಳು. ಇದು ಮಾರಾಟಕ್ಕಾಗಿ ಭಾರತಕ್ಕೆ ಕಳುಹಿಸಲ್ಪಟ್ಟಿದೆ. ಇದರ ಬೆಲೆ ೭॥ ಲಕ್ಷ ರೂಗಳೆಂದು ಅಂದಾಜು ಮಾಡಲ್ಪಟ್ಟಿದೆ. ಈ ಸೀರೆಯು ೧೯೧೩ ರಲ್ಲಿ ಆಕೆಗೆ ಆಕೆಯ ಸ್ನೇಹಿತರಿಂದ ಬಹುಮಾನವಾಗಿ ಕೊಡಲ್ಪಟ್ಟಿತೆಂದು ಹೇಳಲಾಗಿದೆ.

ಜನಸಂಖ್ಯೆಯ ಮೇಲೆ ಆಸ್ತಿ ಪಾಸ್ತಿಗಳ ವಿಭಾಗ

ಇಂಡಿಯಾ ಸರ್ಕಾರದ ಆಸ್ತಿಪಾಸ್ತಿಗಳನ್ನು ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳಿಗೆ ಹಂಚಿಕೊಡುವ ಸಂಬಂಧವಾಗಿ ಸಲಹೆಕೊಡಲು ಪ್ರವೀಣರ ೧೦ ಸಮಿತಿಗಳ ರಚನೆಯಾಗಿದೆ. ಆಸ್ತಿಪಾಸ್ತಿಗಳ ಹಂಚಿಕೆಯು ಈ ಎರಡು ರಾಜ್ಯಾಂಗಗಳ ಜನಸಂಖ್ಯೆಯ ಪ್ರಮಾಣದ ಮೇಲೆ ನಡೆಯುವಂತೆ ಈ ಸಮಿತಿಗಳು ಸಲಹೆ ನೀಡುವುವೆಂದು ಗೊತ್ತಾಗಿದೆ

ಉಚಿತ ವಾಚನಾಲಯ

ವಾಣಿವಿಲಾಸ ಮೊಹಲ್ಲೆಯ ತಿಲಕ್ ಸಂಘದಲ್ಲಿರುವ ವಾಚನಾಲಯವನ್ನು ಇನ್ನು ಮುಂದೆ ಸಾರ್ವಜನಿಕರಿಗೆ ಉಚಿತವಾಗಿ ಪ್ರತಿ ದಿನ ಸಂಜೆ ೫ ರಿಂದ ೭ ಗಂಟೆ ವರೆಗೆ ತೆರೆದಿರುತ್ತದೆ ಎಂದು ಸಂಘದ ಸಂಚಾಲಕರು ತಿಳಿಸಿರುವರು

ಮನೆ ಕ್ರಯಕ್ಕಿದೆ

ಮೈಸೂರು ನರಸಿಂಹರಾಜ ಮೊಹಲ್ಲಾ 4374 ನೇ ನಂಬರ್ ಮನೆ.- ಎ. ಕೆ. ಮೂರ್ತಿರಾವ್, ಎಕ್ಸ್‌ಪ್ರೆಸ್ ನಂಜನಗೂಡು. ಡೋರ್ ನಂಬರ್ 1405 ರಲ್ಲಿ ವಿಚಾರಿಸಿರಿ —

Edited, printed and published by A. R. Nagarajan at the Sadhvi Press D Subbaiah Road Mysore

ಬರ್ಮಾಕ್ಕೆ ಡೊಮಿನಿಯನ್ ಸ್ಥಾನ

ಈಗಿರುವ ಬರ್ಮಾದ ಮಂತ್ರಿ ಮಂಡಲವನ್ನು ತಾತ್ಕಾಲಿಕ ಡೊಮಿನಿಯನ್ ಸರ್ಕಾರವನ್ನಾಗಿ ಪರಿವರ್ತಿಸುವ ಬಗ್ಗೆ ಬರ್ಮಾದ ರಾಜಕೀಯ ಮುಖಂಡರು ಪ್ರಯತ್ನ ನಡೆಸುತ್ತಿರುವುದಾಗಿ ವರದಿಯಾಗಿದೆ. ವರ್ಗಾವಣೆಯ ಅನಂತರ ಬರ್ಮಾದಲ್ಲಿ ಅಧಿಕಾರದ ವರ್ಗಾವಣೆಯಾಗಬಾರದೆಂಬುದು ಅಲ್ಲಿನ ಪ್ರಜೆಗಳ ಇಚ್ಛೆಯೆಂದು ಹೇಳಲಾಗಿದೆ. ವಿದೇಶೀಯರ ಹಸ್ತಕ್ಷೇಪದಿಂದ ಬರ್ಮಾ ಪೂರ್ಣವಾಗಿ ಬಿಡುಗಡೆ ಹೊಂದಿ ಡೊಮಿನಿಯನ್ ಸ್ಥಾನ ಮಾನ ಪಡೆಯಬೇಕು, ಆಗ ಬರ್ಮಾ-ಬ್ರಿಟನ್ನುಗಳ ಮೈತ್ರಿ ಗಾಢವಾಗುವುದು-ಎಂಬುದಾಗಿ ಲಂಡನ್ನಿಗೆ ತೆರಳಿರುವ ನಿಯೋಗದ ಸದಸ್ಯರು ತಿಳಿಸಿರುವರು.

SARADA VILAS COLLEGE,
MYSORE.
Tutorial Section for September Intermediate Examn. Classes in full swing in mornings. Moderate fees. Admissions close shortly.
Contact- L. K. Sharma
Secretary.

ಸರ್ ಸಿ. ಪಿ ಯವರಿಗೆ ಮಹಾತ್ಮರ ಉತ್ತರ

ಗಡಿನಾಡು ಸ್ವತಂತ್ರವಾಗುವುದಕ್ಕೆ ಬೆಂಬಲವಿತ್ತು, ತಿರುವಾಂಕೂರಿನ ಸ್ವಾತಂತ್ರ್ಯವನ್ನು ಮಹಾತ್ಮರು ಟೀಕಿಸುವುದನ್ನು ಕುರಿತು ತಿರುವಾಂಕೂರಿನ ಪ್ರಧಾನಿ ಸರ್ ಸಿ. ಪಿ. ರಾಮಸ್ವಾಮಿ ಐಯ್ಯರ್‌ರವರು ಕೇಳಿದ ಪ್ರಶ್ನೆಗಳಿಗೆ ಮಹಾತ್ಮರು ಈ ರೀತಿ ಉತ್ತರವಿತ್ತಿರುವರು:—

ಗಡಿನಾಡಿನ ಪಠಾಣರು ಒಂದು ಪ್ರತ್ಯೇಕವಾದ ಜನಾಂಗ. ಅವರ ರೀತಿ ನೀತಿಗಳೆಲ್ಲವೂ ಭಾರತೀಯರಿಂದ ಭಿನ್ನವಾಗಿವೆ; ಅವರಿಗೆ ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳ ಆಡಳಿತ ಸ್ವರೂಪ ಕೂಲಂಕಷವಾಗಿ ತಿಳಿಯಬೇಕು; ಅವರು ತಾತ್ಕಾಲಿಕವಾಗಿ ಸ್ವತಂತ್ರವಾದ ರಾಜ್ಯ ನಿರ್ಮಾಣ ಮಾಡಿಕೊಂಡರೂ ಸಹ ಈ ಎರಡು ರಾಷ್ಟ್ರಗಳ ರಾಜ್ಯಾಂಗ ವಿವರಗಳು ತಿಳಿದೊಡನೆಯೇ ಅವರು ಹಿಂದೂಸ್ಥಾನ ಅಥವಾ ಪಾಕಿಸ್ತಾನ ರಾಜ್ಯಾಂಗಕ್ಕೆ ಸೇರುವರು. ಆದರೆ ತಿರುವಾಂಕೂರು ಭಾರತದ ಒಂದು ಭಾಗ. ಅದು ಭಾರತದಿಂದ ಪೂರ್ಣವಾಗಿ ಬೇರೆಯಾಗಿರಲು ಸಾಧ್ಯವಿಲ್ಲ. ಅದು ಇನ್ನೂ ಅದೇ ರೀತಿ ಮುಂದುವರಿದರೆ ಇಲ್ಲದ ಸಲ್ಲದ ಅನೇಕ ಬಿಕ್ಕಟ್ಟುಗಳು ತಲೆದೋರಬಹುದು; ಆದುದರಿಂದ ತಿರುವಾಂಕೂರಿನ ಪ್ರಭುತ್ವ ತನ್ನ ನೀತಿಯನ್ನು ಬದಲಾಯಿಸಿ ಕೂಡಲೇ ರಾಜ್ಯಾಂಗ ಸಭೆಗೆ ಸೇರಬೇಕು

ಶೀಘ್ರದಲ್ಲಿಯೇ ಶ್ರೀ ಗಣೇಶ ಟಾಕೀಸಿನಲ್ಲಿ
ಪ್ರದರ್ಶಿಸಲ್ಪಡುವುದು.

ಹಿರಣ್ಣಯ್ಯ,
ಸಂಗೀತ ರತ್ನ ಚೌಡಯ್ಯ,
ಲಲಿತ,
ಚಂದ್ರಮ್ಮ,
ಮತ್ತು
ರತ್ನಮಾಲಾ
ಮೊದಲಾದವರ
ಭೂಮಿಕೆ
★
Brand New Print
ಹೊಸ ಕಾಪಿ

★ ಸಂಗೀತಮಯ ಸಾಮಾಜಿಕ ಕನ್ನಡ ಚಿತ್ರ ★
Contact :—Shree Bhramaramba Picture Circuit, Mysore.

TYPEWRITING
CLASSES
A few seats are available in the Commercial Institute attached to Sarada Vilas High School, Mysore, for students appearing for the Mysore Govt Jr and Sr Typewriting Examinations. Shorthand classes will also be conducted if adequate number of students join.
Enquiries : 8 to 9-30 a.m. daily.

ರಾಜಕಮಲ್
ತಾ|| ೨೭-೬-೪೭ ರಿಂದ
ಪ್ರತಿ ದಿನ ೩ ಆಟಗಳು
'ಬೈರಾಂಖಾನ್'
—: ಭೂಮಿಕೆ :—
ಮೆಹತಾಬ್, ಜಾಗೀರ್ದಾರ್.

Morning Shows
From 27-6-47 for
4 days
daily at 10-30 A.M.
" Lady Let's Dance "
—: STARRING :—
Belita, James Ellison, with Gorgeous Dancing Girl and Exotic Ballet Girls.

ಫೋ. ನಂ. 592 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಶುಕ್ರವಾರ ೨೭—೩—೪೭ [ಸಂಚಿಕೆ ೨೭೪

ಜರ್ಮನಿಯು ಮತ್ತೆ ತಲೆಯೆತ್ತುವುದೇ?

ವಿಚಾರಣಾ ಸಮಿತಿ ನೇಮಕ ಜಾರಿಗೆಬೇಕು

ವಿದ್ಯಾರ್ಥಿಗಳ ಮೇಲಿನ ಶಿಸ್ತಿನ ಬಗ್ಗೆ ಕಾಂ॥ ಕಾ॥ ಸಮಿತಿ ನಿರ್ಣಯ

ಸ್ವಂ ಸು ಫೋ] ಬೆಂಗಳೂರು ೨೭

ನಿನ್ನೆ ಮತ್ತು ಮೊನ್ನೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಶ್ರೀ॥ ಕೆ ಚೆಂಗಲರಾಯ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು ವಿಶ್ವ ವಿದ್ಯಾಲಯದವರು ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕಾರ್ಯಕ್ರಮ ಕೈಗೊಂಡಿರುವ ಅಧಿಕಾರಿಗಳ ವರ್ತನೆಯನ್ನು ಖಂಡಿಸುವುದು; ಶಿಸ್ತಿನ ಕಾರ್ಯಕ್ರಮಕ್ಕೆ ಒಳಗಾಗಿರುವ ವಿದ್ಯಾರ್ಥಿಗಳಿಗೆ ತೊಂದರೆಯನ್ನುಂಟುಮಾಡದೆ ಅವರನ್ನು ಅವರವರ ತರಗತಿಗಳಿಗೆ ಸೇರಿಸಿಕೊಳ್ಳಬೇಕೆಂದು ವಿದ್ಯಾಲಯದ ಆಡಳಿತ ವರ್ಗದವರನ್ನು ಒತ್ತಾಯ ಪಡಿಸುವುದು, ಬೆಂಗಳೂರು ವಿಶ್ವ ವಿದ್ಯಾಲಯ ಸಂಭವಿಸ ದಿನಾಚರಣೆಯ ದಿನದ ಘಟನೆಗಳನ್ನು ಪರಿಶೀಲಿಸಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ನಿಷ್ಪಕ್ಷಪಾತವಾದ ವಿಚಾರಣಾ ಸಮಿತಿಯೊಂದನ್ನು ರಚಿಸಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುವುದು ತಿರುವಾಂಕೂರು, ಹೈದರಾಬಾದುಗಳು ಸ್ವಾತಂತ್ರ್ಯ ಘೋಷಿಸಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ೮ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಚಳುವಳಿಗೆ ನೈತಿಕ ಬೆಂಬಲ ನೀಡುವುದು

ಪಾಕಿಸ್ತಾನ್ ಸಿವಿಲ್ ಸರ್ವಿಸ್ ಸಾಲದಾರಿಕೆ

ಪಾಕಿಸ್ತಾನ್ ಸರ್ಕಾರದ ಕಟ್ಟಡಗಳ ನಿರ್ಮಾಣಕ್ಕಾಗಿ ೬ ಲಕ್ಷ ರೂ ವೆಚ್ಚವಾಗುವುದೆಂದು ಅಂದಾಜಾಗಿದೆ ಕಟ್ಟಡಗಳ ನಿರ್ಮಾಣ ಕಾರ್ಯ ಆರಂಭವಾಗಿದೆ, ನೌಕರರ ನಿವಾಸ ಮೊದಲಾದ ವುಗಳಿಗಾಗಿ ೧೦ ಲಕ್ಷ ರೂ ವೆಚ್ಚವಾಗಬಹುದಾಗಿದೆ; ಪಾಕಿಸ್ತಾನ್ ಸರ್ಕಾರಕ್ಕೆ ೪ ಸಾವಿರ ಮಂದಿ ಗುಮಾಸ್ತರೂ, ಒಂದು ಸಾವಿರ ಮಂದಿ ಜವಾನರೂ, ೩೦೦ ಅಧಿಕಾರಿಗಳೂ ನೇಮಕವಾಗುವರೆಂದೂ ತಿಳಿದು ಬಂದಿದೆ

ತಿರುವಾಂಕೂರಿನಿಂದ ಅಧಿಕಾರಿಗಳ ವಾಪಸು

ತಿರುವಾಂಕೂರು ಸಂಸ್ಥಾನವು ಸ್ವಾತಂತ್ರ್ಯವನ್ನು ಘೋಷಿಸಿರುವ ಕಾರಣದ ಮೇಲೆ ಅಲ್ಲಿಗೆ ಎರವಲಾಗಿ ಕಳುಹಿಸಲ್ಪಟ್ಟಿರುವ ಕೇಂದ್ರ ಮತ್ತು ಪ್ರಾಂತಗಳ ಅಧಿಕಾರಿಗಳು ಮತ್ತು ನೌಕರರುಗಳನ್ನು ವಾಪಸು ಕರೆಸಬೇಕೆಂದು ಮದ್ರಾಸ್ ಸರ್ಕಾರದವರಿಗೆ ಸೂಚನೆ ಕೊಡಲಾಗಿದೆಯೆಂದು ಗೊತ್ತಾಗಿದೆ ಮದ್ರಾಸ್ ಸರ್ಕಾರದವರು ತಮ್ಮ ಪ್ರಾಂತದಲ್ಲಿರುವ ತಿರುವಾಂಕೂರಿನವರ ಮತ್ತು ತಿರುವಾಂಕೂರಿನಲ್ಲಿರುವ ಮದ್ರಾಸಿನವರ ಪಟ್ಟಿಯನ್ನು ತೆಗೆದುಕೊಳ್ಳುವ ಕಾರ್ಯದಲ್ಲಿ ತೊಡಗಿದ್ದಾರೆ

ಧಾನ್ಯದ ಅಭಾವ

ಸ್ವಂಸು] ಶ್ರೀರಂಗಪಟ್ಟಣ ೨೭

ಇಲ್ಲಿ ಈಗ ಕೆಲವು ದಿನಗಳಿಂದ ಸ್ಟಾಂಪು ಮತ್ತು ಧಾನ್ಯಗಳು ದೊರೆಯದೆ ತುಂಬಾ ತೊಂದರೆಯಾಗಿದೆ ಸಂಬಂಧಪಟ್ಟವರು ಕೂಡಲೇ ಇದಕ್ಕೆ ಗಮನ ಕೊಡಬೇಕಾಗಿದೆ

ಮಹಾಪ್ರಭುಗಳಿಗೆ ಮನವಿ

ವಿದ್ಯಾರ್ಥಿ ಕ್ರಿಯಾ ಸಮಿತಿಯ ನಿರ್ಣಯ

ಸ್ವಂ ಸು ಫೋ] ಬೆಂಗಳೂರು ೨೭

ವಿಶ್ವವಿದ್ಯಾಲಯದ ವೈಸ್ ಛಾನ್ಸಲರು ತಮಗೆ ಭೇಟಿಕೊಡಬೇಕೆಂದು ಪ್ರಾರ್ಥಿಸಿ ಮತ್ತೊಮ್ಮೆ ಅವರಿಗೆ ಪತ್ರ ಬರೆಯಬೇಕೆಂದೂ, ವೈಸ್ ಛಾನ್ಸಲರು ಅದನ್ನು ನಿರಾಕರಿಸಿದಲ್ಲಿ ಛಾನ್ಸಲರಾದ ಶ್ರೀಮನ್ಮಹಾರಾಜರವರಿಗೆ ಮನವಿಯೊಂದನ್ನು ಅರ್ಪಿಸಿ ಅವರಿಗೆ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಬೇಕೆಂದೂ ನಿನ್ನೆ ದಿನ ಸೇರಿದ್ದ ವಿದ್ಯಾರ್ಥಿಗಳ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿರುತ್ತದೆ.

ರಾಜ್ಯಾಂಗ ಸಭೆಯಲ್ಲಿ ದೇಶೀಯ ಸಂಸ್ಥಾನಗಳು

ಇನ್ನೂ ಹಲವು ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರಿಲ್ಲವಿದ್ದು ಇದ ವರೆಗೆ ೪೦ ದೊಡ್ಡ ಸಂಸ್ಥಾನಗಳೂ ೪೦೦ ಸಣ್ಣ ಸಂಸ್ಥಾನಗಳೂ ಈಗಾಗಲೇ ರಾಜ್ಯಾಂಗ ಸಭೆಗೆ ಸೇರಿವೆ ೧೮ ಸಂಸ್ಥಾನಗಳು ಜುಲೈ ೧೪ ನೇ ತಾ॥ ಸೇರುವ ರಾಜ್ಯಾಂಗ ಸಭೆಗೆ ಸದಸ್ಯರನ್ನು ಕಳುಹಿಸುವ ವಿಚಾರದಲ್ಲಿ ಮುಗ್ಗವಾಗಿವೆ ಈಗ ಎಲ್ಲ ಸಂಸ್ಥಾನಗಳ ೯೩೦ ಲಕ್ಷ ಪ್ರಜೆಗಳ ಪೈಕಿ ೫೪೦ ಲಕ್ಷ ಪ್ರಜೆಗಳು ರಾಜ್ಯಾಂಗ ಸಭೆಗೆ ಸೇರಿದಂತಾಗುವುದು

ತಿರುವಾಂಕೂರಿಗೆ ರಾಜಕೀಯ ಮತ್ತು ಆರ್ಥಿಕ ಬಹಿಷ್ಕಾರ?

ಭಾರತ ಯೂನಿಯನ್ನಿನ ಬಗ್ಗೆ ತಿರುವಾಂಕೂರಿನ ಘೋಷಣೆಯೇನೆಂಬುದು ಈಗ ಖಚಿತವಾಗಿ ಗೊತ್ತಾಗಿರುವುದರಿಂದ ಭಾರತ ಸರ್ಕಾರವು ಅದರೊಡನೆ ಇರುವ ಆರ್ಥಿಕ ಮತ್ತು ರಾಜಕೀಯ ಬಾಂಧವ್ಯವನ್ನು ತ್ಯಜಿಸಿ ತಿರುವಾಂಕೂರನ್ನು ಬಹಿಷ್ಕರಿಸುವುದೆಂದು ಕಾಂಗ್ರೆಸ್ ಆವರಣದಲ್ಲಿ ಹೇಳಿಕೊಳ್ಳಲಾಗುತ್ತಿದೆ

ರಾಜಸ್ಥಾನ್ ಯೂನಿಯನ್ ಸ್ಥಾಪನೆ

ರಜಪುಟಾಣದ ಬೂಂದಿ, ರತ್ಲಾಂ ಶಾಹಪುರ, ಉದಯಪುರ ಮೊದಲಾದ ಸಂಸ್ಥಾನಗಳ ಅರಸರು ಉದಯಪುರದಲ್ಲಿ ಸಭೆ ಸೇರಿ ಸಮ್ಮೇಳನದ ರಾಜಸ್ಥಾನ ಯೂನಿಯನ್ನೊಂದನ್ನು ರಚಿಸಿಕೊಂಡಿರುವರೆಂದು ವರದಿಯಾಗಿದೆ. ಇದು ಪ್ರತ್ಯೇಕವಾಗಿದ್ದರೂ ಭಾರತದ ರಾಜ್ಯಾಂಗದ ಒಂದು ಅಂಗವಾಗಿರುವುದೆಂದು ಹೇಳಲಾಗಿದೆ.

ಬೆರಕೆ ಬೆಣ್ಣೆ ಮಾರಿದ್ದಕ್ಕೆ ಜುಲ್ಮಾನೆ

ಮೈಸೂರು ೨೭

ಶಿವರಾಂಪೇಟೆಯಲ್ಲಿರುವ ಶ್ರೀ॥ ಡಿ ೮ ಮಾರ್ಕೆಟ್ ಎಂಬ ಬೆಣ್ಣೆ ವ್ಯಾಪಾರಿಯು ಬೆರಕೆಬೆಣ್ಣೆ ಮಾರುತ್ತಿದ್ದರೆಂದು ದೇವರಾಜ ಮೊಹಲ್ಲಾ ಸ್ಯಾನಿಟರಿ ಇನ್ಸ್‌ಪೆಕ್ಟರವರಾದ ಶ್ರೀ ಟಿ ಚಿಕ್ಕಣ್ಣನವರು ತಂದಿರುವರ ಮೇಲೆ ನಗರದ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು ಅದರಂತೆ ರುಜುವಾತಾಗಿ ಅಪರಾಧಿಗೆ ೨೦ ರೂ ಜುಲ್ಮಾನೆ ವಿಧಿಸಲಾಯಿತು

ಸಾಪ್ತಾಹಿಕ ಧಾರ್ಮಿಕ ಕಾಲಕ್ಷೇಪ

ದೇವರಾಜ ಮೊಹಲ್ಲಾ ಮಹಿಳಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀಮತಿ ನಾರಣಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸಾಪ್ತಾಹಿಕ ಧಾರ್ಮಿಕ ಕಾಲಕ್ಷೇಪದ ಆರಂಭೋತ್ಸವವು ನಡೆಯುವುದು. ಮಹಿಳೆಯರಿಗೆ ಸ್ವಾಗತವಿದೆ.

ಲಾಹೋರಿನಲ್ಲಿ ಮಾರ್ಷಲ್ ಲಾ

ಮುಸ್ಲಿಂ ಲೀಗಿನ ಕೈ ಸಮಾಂತರವರು ಲಾಹೋರಿನಲ್ಲಿ ಮಾರ್ಷಲ್ ಲಾ ವನ್ನು ಜಾರಿಗೆ ತರಬೇಕೆಂದು ವೈಸರಾಯರನ್ನು ಪ್ರಾರ್ಥಿಸುವರೆಂದು ವರದಿಯಾಗಿದೆ ಅಲ್ಲಿ ಕೋಮುವಾರು ಗಲಭೆಯಿಂದ ಲೂಟಿ, ದರೋಡೆ, ಕಿಡಿತಗಳು ಮತ್ತು ಬೆಂಕಿ ಪ್ರಕರಣಗಳು ನಡೆಯುತ್ತಲೇ ಇವೆ. ಕಾಂಗ್ರೆಸ್ಸಿನವರು ಹಿಂದೆಯೇ ಈ ರೀತಿ ಪ್ರಾರ್ಥಿಸಿದ್ದರು ಸದ್ಯದಲ್ಲೇ ಅಲ್ಲಿ ಮಾರ್ಷಲ್ ಲಾ ಜಾರಿಗೆ ಬರಬಹುದೆಂದು ಹೇಳಲಾಗಿದೆ

ಜರ್ಮನಿಯು ಪುನಃ ಪ್ರಬಲವಾಗುವುದು

ಜರ್ಮನಿಯು ಮತ್ತೆ ಹಿಂದಿನಂತೆಯೇ ತಲೆಯೆತ್ತಿ ಪ್ರಬಲವಾಗುವುದು; ಜರ್ಮನರು ನಿರಾಶರಾಗಬಾರದು, ಈಗ ಒದಗುತ್ತಿರುವ ಅಡಚಣೆಗಳನ್ನು ಧೈರ್ಯವಾಗಿ ಎದುರಿಸಬೇಕು—ಎಂಬ ದಾಗಿ ಗುಪ್ತ ಪ್ರಸಾರ ಕೇಂದ್ರದಿಂದ ರೇಡಿಯೋ ಮೂಲಕ ಜರ್ಮನರಿಗೆ ಸಂದೇಶ ಕಳುಹಿಸಲಾಗುತ್ತಿದೆ. ಇದು ರಷ್ಯಾ ಆಕ್ರಮಿತ ಜರ್ಮನಿಯ ಬರ್ಲಿನ್ ಪ್ರದೇಶಗಳಲ್ಲಿ ಕುತೂಹಲವನ್ನುಂಟುಮಾಡಿದೆ. ಇದು ಬೇಹುಗಾರನಾಗಿದ್ದು ತಪ್ಪಿಸಿಕೊಂಡಿರುವ ಹಿಟ್ಲರನ ಸೇನಾನಿ ಬರ್ಮಾನ್ ನ್ಯಾಲಿಂಗನ ವಾಣಿಯೆಂದು ಶಂಕಿಸಲಾಗಿದೆ.

ಹೊರಗಿನವರಿಗೆ ಕೈಗಾರಿಕೆಗಳಿಗಾಗಿ ಪ್ರೋತ್ಸಾಹವೇ?

ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ ಸು.ಫೋ] ಬೆಂಗಳೂರು ೨೭

ಈ ದಿನ ೧೨ ಗಂಟೆಗೆ ಶಾಸನ ಸಭೆಯ ಕಾರ್ಯಕಲಾಪಗಳು ಶ್ರೀ ಹೆಚ್ ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾದವು

ಹೊರಗಿನ ಕೈಗಾರಿಕೋದ್ಯಮಿಗಳು ಶಿರಿಯೂಪಟ್ಟಣ ತಾಲ್ಲೂಕಿನ ಕೊಪ್ಪದಲ್ಲಿ ದೊಡ್ಡ ಕೈಗಾರಿಕೆಯನ್ನು ಆರಂಭಿಸುವ ಬಗ್ಗೆ ಸರ್ಕಾರದವರೊಡನೆ ಸಮಾಲೋಚನೆ ನಡೆಸುತ್ತಿರುವರೇ ಎಂಬುದಾಗಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಪ್ರಶ್ನಿಸಿದರು. ಬಿರ್ಲಾ ಬ್ರದರ್ಸ್ ಮತ್ತು ಕೆಂಗೇರಿಯಲ್ಲಿ ಟೆಕ್ಸ್‌ಟೈಲ್ ಕಾರ್ಖಾನೆಗಳನ್ನು ತೆರೆಯಲು ಬಿರ್ಲಾ ಸಹೋದರರು ಸರ್ಕಾರದೊಡನೆ ವ್ಯವಹರಿಸುತ್ತಿರುವುದು ನಿಜವೇ ಎಂಬುದಾಗಿ ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರ್ಯರು ಪ್ರಶ್ನಿಸಿದರು ಸರ್ಕಾರದ ಪರವಾಗಿ ಡೆವಲಪ್‌ಮೆಂಟ್ ಕಾರ್ಯದರ್ಶಿಗಳಾದ ಶ್ರೀ ನರಸಿಂಹಾಚಾರವರು ಉತ್ತರವಿತ್ತು ಇಲ್ಲವೆಂದು ತಿಳಿಸಿದರು

ಗೃಹ ಕೈಗಾರಿಕೆಗಳ ವಿಚಾರವಾಗಿ ಬಂದ ಶ್ರೀ॥ ಟಿ ಮರಿಯಪ್ಪಗೌಡರ ಪ್ರಶ್ನೆಗೆ ೪೭-೪೮ ನೇ ಸಾಲಿಗೆ ೪ ಲಕ್ಷ ರೂ ಆಂದಾಜಾಗಿದೆ, ಈಗ ಒಟ್ಟು ೧೮ ಕೇಂದ್ರಗಳಿವೆ ಕ್ಲೋಸ್‌ಪೇಟೆಯೊಂದರಲ್ಲೇ ೧೩ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಸರ್ಕಾರ ಯೋಚಿಸುತ್ತಿದೆ—ಎಂಬುದಾಗಿ ಉತ್ತರ ಬಂತು

ನಿನ್ನೆ ದಿನ ಪ್ರಶ್ನೋತ್ತರದ ನಂತರ ನಿಮ್ನ ವರ್ಗದವರ ಅಶೋತ್ತರಗಳು ಈಡೇರುವಂತಾಗಬೇಕು ಹರಿಜನರ ಪ್ರಜಾ ಪ್ರತಿನಿಧಿಗಳು ನ್ಯಾಯವಾಗಿ ಪ್ರ॥ ಪ್ರ॥ ಸಭೆಯಲ್ಲಿ ಅವರಿಗೆ ೬೦ ಮತ್ತು ಶಾಸನ ಸಭೆಯಲ್ಲಿ ೧೪ ಸ್ಥಾನಗಳಾದರೂ ದೊರೆಯಬೇಕು ಗೆಜೆಟೆಡ್ ಹುದ್ದೆ ಅವರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯಬೇಕು—ಎಂಬುದಾಗಿ ಶ್ರೀ॥ ಜೆ॥ ಎಂ. ಗಂಗಾಧರಯ್ಯನವರು ಒತ್ತಾಯಿಸಿದರು

ಮೈಸೂರಿನಲ್ಲಿ ಉನ್ನತ ಅಧಿಕಾರ ವಿದೇಶೀಯರ ಹಸ್ತಗತವಾಗುತ್ತಿದೆ ಎಂದು ಶ್ರೀ॥ ಎ ಬಾಲಕೃಷ್ಣಯ್ಯನವರು ಆಕ್ಷೇಪಿಸಿದರು

ಶ್ರೀಗಳಾದ ಎ ಚನ್ನಪ್ಪ, ಸೈಯ್ಯದ್ ಅಬ್ದುಲ್ ರಹಮಾನ್, ಚೆನ್ನಿಗರಾಮಯ್ಯ ಶ್ರೀನಾಥ ಎಂ ಆರ್ ಲಕ್ಷ್ಮಮ್ಮನವರುಗಳು ಸಾರ್ವಜನಿಕ ಅಕೌಂಟ್ಸ್ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿರುವರು. ಸಚಿವರೊಬ್ಬರು ಅದರ ಅಧ್ಯಕ್ಷರಾಗಿರುವರು

ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮಾಜಿ ಸದಸ್ಯರಾದ ಸರ್ ಅರ್‌ದೇಶೀರ್ ದಲಾಲರು ಬೊಂಬಾಯಿಯಿಂದ ಈ ದಿನ ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು ಅವರು ಸರ್ಕಾರದ ಅತಿಥಿಗಳಾಗಿರುವರು.

ಖುಲಾಸೆ

ಸ್ವಂ ಸು.] ಹಿರೀಸಾವೆ ೨೭

ಈ ಗ್ರಾಮದಲ್ಲಿ ಪಟೇಲ್ ಬೋರೇಗೌಡನನ್ನು ಬಾಗಿ ತಮ್ಮ ಮನೆಯ ಬಳಿ ಕರೇಗೌಡ ಮತ್ತು ಅವನ ಮಗ ಕರಿಯಣ್ಣ ಎಂಬುವರು ಹೊಡೆದಿದ್ದರೆಂದು ದಾವೆ ಹೂಡಿದರು ಕಾರಣ ಪ್ರಕರಣ ಮೇಲೆ ವಿಚಾರಣೆಯು ನಡೆದು ಮುನ್ಸೀಫ್ ಕೋರ್ಟಿನಲ್ಲಿ ವಿಚಾರಣೆ ನಡೆದಾಗಿ ಪೂರ್ಣಾಧಾರವಿಲ್ಲದುದರಿಂದ ಆ ಆಪಾದಿತರು ಖುಲಾಸೆಯಾಗುವುದಾಗಿ ತೀರ್ಪು ಬಂದಿದೆ.

೭೨ ಮಂದಿ ವಿದ್ಯಾರ್ಥಿಗಳಿಂದ ಆಮರಣಾಂತ ಉಪವಾಸ

ಅಹಮ್ಮದಾಬಾದಿನ ವಿಶ್ವವಿದ್ಯಾಲಯದ ೭೨ ಮಂದಿ ವಿದ್ಯಾರ್ಥಿಗಳು ಆಮರಣಾಂತ ಉಪವಾಸವನ್ನು ಆರಂಭಿಸಿರುವರೆಂದು ವರದಿಯಾಗಿದೆ. ಹರಿಜನ ವಿದ್ಯಾರ್ಥಿಗಳು ಊಟಮಾಡುತ್ತಿರುವ ವಿದ್ಯಾರ್ಥಿ ನಿಲಯದಲ್ಲಿ ಇವರು ಊಟ ಮಾಡಲು ನಿರಾಕರಿಸಿದುದರಿಂದ ಕಾಲೇಜಿನಲ್ಲಿ ಸೇರಲು ಅವಕಾಶವೀಯದಿದ್ದುದೇ ಅವರ ಈ ಉಪವಾಸಕ್ಕೆ ಕಾರಣವೆಂದು ಹೇಳಲಾಗಿದೆ.

ಸುಸಮಯ! ಸದವಕಾಶ!!

ಕಳೆದು ಕೊಳ್ಳಬೇಡಿ

ಚಾಮರಾಜನಗರದ ಶ್ರೀ ಭುಜಂಗೇಶ್ವರ ಬಡಾವಣೆ (ಸಿನಿಮಾ ಎದುರು) ಯಲ್ಲಿ ಕೈಕೆ ರಸ್ತೆಯ ಬಾಜುವಿನಲ್ಲಿ ಅಂಗಡಿ ಮಳಿಗೆ ಮತ್ತು ವಾಸದ ಮನೆ ಕಟ್ಟಲು ಅನುಕೂಲವಾಗಿರುವ ಭಾರಿ ಖಾಲಿ ನಿವೇಶನವು ಬಿಕರಿಗಿದೆ. ಕೂಡಲೇ ಈ ವಿಳಾಸದೊಡನೆ ವ್ಯವಹಾರ ನಡೆಸಿ.-

ಜೈಹಿಂದ್ c/o 'ಸಾಧ್ವಿ' ಮೈಸೂರು

ವುಡ್‌ಲ್ಯಾಂಡ್ಸ್

28-7-47 ರಿಂದ

ತಿಕ್ಕಿರಿದ ೯ ನೇ ವಾರ

ಪ್ರತಿ ದಿನ ೩ ಆಟಗಳು

ನಾವು ಇಬ್ಬರು

ಚಿ (ತಮಿಳು)

:: ಪಾತ್ರ ::

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದರ್ ಮುಂತಾದವರು.

ಮನೆ ಕ್ರಯಕ್ಕಿದೆ

ಮೈಸೂರು ನರಸಿಂಹರಾಜ ಮೊಹಲ್ಲಾ 4874 ನೇ ನಂಬರ್ ಮನೆ.- ವಿ. ಕೆ. ಮೂರ್ತಿರಾವ್, ಎಕ್ಸೈಸ್ ನಂಜನಗೂಡು, ಡೋರ್ ನಂಬರ್ 1405 ರಲ್ಲಿ ವಿಚಾರಿಸಿ —

ಮೈಸೂರು ಸಿಟಿ ರೇಷನಿಂಗ್

ನಂ. R 6 81/46-47.

೧೯೪೭ ನೇ ಇಸವಿ ಜೂನ್ ಮಾಹೆ ೩೦ ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲ ಸಬ್ ಸ್ಟೋರ್ಸ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸುಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

ಅಬ್ದುಲ್ ರಜಾಕ್,

ಮೈಸೂರು, ರೇಷನಿಂಗ್ ಆಫೀಸರ್,

೨೦-೬-೧೯೪೭. ಮೈಸೂರು ಸಿಟಿ.

ವಿಜಯಲಕ್ಷ್ಮಿ ಪಂಡಿತರು ರಷ್ಯದಲ್ಲಿ ರಾಯಭಾರಿ

ಸಂಯುಕ್ತ ಪ್ರಾಂತದ ಆರೋಗ್ಯ ಸಚಿವರಾಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ರಷ್ಯಕ್ಕೆ ರಾಯಭಾರಿಗಳಾಗಿ ಕಳುಹಿಸಬೇಕೆಂದು ಭಾರತ ಸರ್ಕಾರವು ಮಾಡಿದ್ದ ಸಲಹೆಯನ್ನು ಬ್ರಿಟಿಷ್ ಸಾರ್ವಭೌಮರು ಅಂಗೀಕರಿಸಿರುವರೆಂದೂ ಅವರನ್ನು ರಷ್ಯದ ರಾಯಭಾರಿಗಳಾಗಿ ನೇಮಿಸಲಾಗಿದೆಯೆಂದೂ ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

TYPEWRITING

CLASSES

A few seats are available in the Commercial Institute attached to Sarada Vilas High School, Mysore, for students appearing for the Mysore Govt. Jr. and Sr. Typewriting Examinations. Shorthand classes will also be conducted if adequate number of students join.

Enquiries: 8 to 9-30 a.m. daily.

---

೯೮ ನೆಯ ವಯಸ್ಸಿನಲ್ಲಿ ವಿವಾಹ

ನ್ಯೂಯಾರ್ಕಿನ ೭೫ ಸಿಗರ್‌ದ ವಿಲಿ ಕೇನ್ ಎಂಬುವವನು ೪೬ ವರ್ಷದ ಫಾನ್ನಿ ಎಂಬಾಕೆಯನ್ನು ತನ್ನ ೯೮ ನೆಯ ವಯಸ್ಸಿನಲ್ಲಿ ಈಗ ಮದುವೆಯಾಗಿದ್ದಾರೆ.

ರಾ ಜ ಕ ಮ ಲ್

ತಾ|| ೨೭-೬-೪೭ ರಿಂದ

ಪ್ರತಿ ದಿನ ೩ ಆಟಗಳು

' ಬೆರಾಂಬಾರ್ '

(ತ)

—: ಭೂ ಮಿ ಕೆ :—

ಮೆಹತಾಬ್, ಜಾಗೀರ್ದಾರ್.

Morning Shows

From 27-6-47 for

4 days

daily at 10-30 A.M.

"Lady Let's Dance"

-: STARRING :-

Belita, James Ellison, with Gorgeous Dancing Girl and Escotic Ballet Girls

---

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ:-

ನೋಟಿಫಿಕೇಷನ್

No. R S P R. 136 46-47, ತಾ|| 25-6-47

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಸಿಟಿಯಲ್ಲಿರುವ ದೇವರಾಜ ಮಾರ್ಕೆಟ್ ಮುಂಭಾಗದಲ್ಲೂ ಮತ್ತು ಮುನಿಸಿಪಲ್ ಆಫೀಸ್ ಕಾಂಪೌಂಡಿನಲ್ಲೂ ಚಾಲ್ತಿ ಸಾಲು ಜುಲೈ ಮಾಹೆ ಲಾಗಾಯ್ತು ಸೈಕಲ್ಲು ಸ್ಟ್ಯಾಂಡುಗಳನ್ನು ತೆರೆಯಲಾಗುತ್ತೆ. ಮಾರ್ಕೆಟ್ಟಿಗೆ ಮತ್ತು ಮುನಿಸಿಪಲ್ ಆಫೀಸಿಗೆ ಸೈಕಲ್ ಮೇಲೆ ಬರತಕ್ಕವರು ತಮ್ಮ ಸೈಕಲ್ಲನ್ನು ನಿಗದಿಯಾಗಿರುವ ಸ್ಥಳದಲ್ಲಿ ಬಿಟ್ಟಿದ್ದು ಕೆಲಸ ಮುಗಿಸಿದ ನಂತರ ಸೈಕಲ್ಲನ್ನು ವಾಪಸ್ ತೆಗೆದುಕೊಂಡು ಹೋಗತಕ್ಕದ್ದು. ಸೈಕಲ್ ಸ್ಟ್ಯಾಂಡಿನಲ್ಲಿ ಬಿಟ್ಟಿರತಕ್ಕ ಸೈಕಲ್‌ಗಳನ್ನು ಉಸ್ತುವಾರಿ ನೋಡಲು ಮತ್ತು ಅವರವರ ಸೈಕಲ್‌ಗಳನ್ನು ಸರಿಯಾಗಿ ಅವರವರುಗಳಿಗೆ ವಾಪಸು ಕೊಡತಕ್ಕ ಬಗ್ಗೆ ಮತ್ತು ಈ ಕೆಲಸಗಳನ್ನು ನಿರ್ವಹಿಸುವ ಬಗ್ಗೆ ವಿಧಾಯಕವಾದ ಅಂದರೆ ಪ್ರತಿ ಸೈಕಲ್ಲಿಗೂ ಮೂರು ಕಾಸಿನಂತೆ ಫೀ ವಸೂಲ್ಮಾಡತಕ್ಕ ಬಗ್ಗೆ ಏಕ ಕಲಾಪದ ಏರ್ಪಾಡು ಮಾಡಿರುತ್ತೆ. ಮೇಲ್ಕಂಡ ಸ್ಥಳಗಳಿಗೆ ಬರುವ ಸೈಕಲ್‌ಗಳ ಮೇಲೆ ಫೀ ವಸೂಲು ಮಾಡುವ ಹಕ್ಕನ್ನು ಚಾಲ್ತಿ ಮಾಹೆ ತಾ|| ೩೦ ನೇ ಸೋಮವಾರ ದಿವ ೧೧ ಗಂಟೆಗೆ ದೇವರಾಜ ಮಾರ್ಕೆಟ್ ಆಫೀಸು ರೂಮಿನಲ್ಲಿ ಹರಾಜು ಮಾಡಲಾಗುತ್ತೆ. ಮೇಲ್ಕಂಡ ಹಕ್ಕನ್ನು ಪಡೆಯಲು ಇಷ್ಟಪಡುವವರು ಹರಾಜು ಕಾಲಕ್ಕೆ ಸರಿಯಾಗಿ ಹಾಜರಾಗಿ ಸವಾಲ್ ಮಾಡಬಹುದು. ಹೆಚ್ಚಿನ ಸಂಗತಿಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

ಆರ್. ರಾಮಚಂದ್ರರಾವ್ ಬೊಂಬೋರೆ.

ಪ್ರೆಸಿಡೆಂಟ್,

ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು.

ನಿಮಗೆ ಬೇಕಾಗಬಹುದಾದ ಅಥವಾ ಶೀಘ್ರ ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೩ : : ಫೋನ್ ೪೦೦

ವಿವಾಹ ಮಹೋತ್ಸವ

ಬೆಂಗಳೂರು ಬಸವನಗುಡಿ ಕೃಷ್ಣಾರೋಡಿನಲ್ಲಿರುವ ಶ್ರೀ ಟಿ. ಎಸ್. ರಾಮಸ್ವಾಮಿ ಅಯ್ಯಂಗಾರವರ ತಮ್ಮ ಪುತ್ರ ಶ್ರೀ ಟಿ. ಆರ್. ನಟರಾಜನ್‌ರವರಿಗೆ ಮೈಸೂರಿನ ಡೆಪ್ಯೂಟಿ ಕಲೆಕ್ಟರ್ ಶ್ರೀ ಎಸ್. ಗುಂಡೂರಾಯರ ಮಗಳು ಸೌ|| ವಿಜಯಲಕ್ಷ್ಮಿಯನ್ನು ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಬಿತ್ತನೆ ಭತ್ತಕ್ಕೆ ತೊಂದರೆ

ನಂಜನಗೂಡು ೨೫

ಇಲ್ಲಿನ ರೈತರಿಗೆ ಬಿತ್ತನೆ ಭತ್ತವು ದೊರೆಯದೆ ಬಹಳ ತೊಂದರೆಯಾಗಿರುತ್ತೆ. ಹೆಚ್ಚು ಬೆಳೆ ಬೆಳೆಯುವ ಪ್ರಚಾರ ನಡೆಸುತ್ತಿರುವ ಸರ್ಕಾರದವರ ಉದ್ದೇಶವು ನೆರವೇರದೇ ಇರುವುದರಿಂದ ಈ ಅಭಾವವನ್ನು ಕೂಡಲೇ ತಪ್ಪಿಸಿ ಬಿತ್ತನೆ ಭತ್ತವನ್ನು ಒದಗಿಸಲು ತಕ್ಕ ಏರ್ಪಾಡು ಮಾಡುವುದು ಅಗತ್ಯವಾಗಿದೆ.

Sri

Ganesh Talkies,

Morning Shows at 10-45 a. m. on 28, 29 and 30

Universal's

Crazy House

Starring :-Olsen and Johnson

Showing for the 1st time in the City

ಈ ಔಷಧವು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನಗತ್ಯವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವುದು ತಪ್ಪಿಲ್ಲ ಎಂದು ಗಳಿಸುತ್ತಿದೆ.

Edited, printed and published by A. R. Nagarajan at the Sadhvi Press D. Subbaiah Road Mysore

EASTERN ART.

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ರವಿವಾರ ೨೮—೬—೫೭ [ಸಂಚಿಕೆ ೨೭೫

ಶಾಸನ ಸಭೆಯಲ್ಲಿ ಸರ್ಕಾರಕ್ಕೆ ಭಾರಿ ಸೋಲು

ಸಾರ್ವತ್ರಿಕ ಚುನಾವಣೆ ನಡೆಯಬೇಕು

ಮೈಸೂರಿನ ಪ್ರತಿನಿಧಿ ಚುನಾವಣೆ ಬಗ್ಗೆ ಕೆ. ಟಿ. ಭಾಷ್ಯಂ

ಸ್ವಂ ಸು ಫೋ] ಬೆಂಗಳೂರು ೨೮

ರಾಜ್ಯಾಂಗ ರಚನಾ ಸಭೆಗೆ ಮೈಸೂರಿನ ಪ್ರತಿನಿಧಿಗಳ ಚುನಾವಣೆ ಬಗ್ಗೆ ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕರೆದಿರುವ ವಿಷಯವಾಗಿ ಶ್ರೀ ಕೆ ಟಿ ಭಾಷ್ಯಂರವರು ಒಂದು ಹೇಳಿಕೆ ಇತ್ತಿರುವರು

ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ದಕ್ಷರೂ, ನಿಪುಣರೂ ರಾಜಕೀಯದಲ್ಲಿ ಅರಿತು ನುರಿತವರೂ ಆದ ಪ್ರತಿನಿಧಿಗಳೇ ಹೋಗಬೇಕು ಉಭಯಸಭೆಗಳ ಸದಸ್ಯರಿಗೆ ಮಾತ್ರ ಪ್ರತಿನಿಧಿಗಳನ್ನು ಆರಿಸಲು ಅವಕಾಶ ದೊರೆತಿದೆ. ಆದರೆ ಇಂತಹ ಮಹತ್ತರವಾದ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯಗಳಿಗೆ ಅವಕಾಶವಿರಬೇಕು. ರಾಜ್ಯಾಂಗ ಸಭೆಯಲ್ಲಿ ಮೈಸೂರನ್ನು ಪ್ರತಿನಿಧಿಸುವವರು ಅದರ ಘನತೆಯನ್ನು ಸ್ಥಿರವಾಗಿ ಎತ್ತಿ ಹಿಡಿಯಲು ಶಕ್ತರಾದವರಾಗಿರಬೇಕು. ಸಂಸ್ಥಾನವನ್ನು ಪ್ರತಿನಿಧಿಸಲು ಸರ್ ಮಿರ್ಜಾ ಇಸ್ಮೇಲ್, ಟಿ ಸಿದ್ದಲಿಂಗಯ್ಯ, ಚೆಂಗಲರಾಯ ರೆಡ್ಡಿ ಮತ್ತು ಡಿ ವಿ ಗುಂಡಪ್ಪ ಮೊದಲಾದ ರಾಜಕಂತ್ರ ನಿಪುಣರೇ ಆರಿಸಲ್ಪಡಬೇಕು ಆದಕ್ಕಾಗಿ ಸಾರ್ವತ್ರಿಕ ಚುನಾವಣೆಯು ನಡೆಯಬೇಕು-ಎಂದು ಅವರು ಸೂಚಿಸಿರುವರು

ಸರ್ ಎಂ ವಿಶ್ವೇಶ್ವರಯ್ಯ

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಕೋರ್ಟ್ ವಿಭಾಗಕ್ಕೆ ಇದುವರೆಗೆ ಅಧ್ಯಕ್ಷರಾಗಿದ್ದ ಸರ್ ಎಂ ವಿಶ್ವೇಶ್ವರಯ್ಯನವರು ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಇತ್ತಿರುವರು

ಮೆರವಣಿಗೆಗೆ ಅಡ್ಡಿ

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನವರ ನಿರ್ಣಯದಂತೆ ನಿನ್ನೆ ಬೆಳಿಗ್ಗೆ ಇಲ್ಲಿನ ಸುಮಾರು ೬೦೦ ಮಂದಿ ರೈಲ್ವೆ ನೌಕರರು "ಹಸಿದ ರೈಲ್ವೆ ಕಾರ್ಮಿಕ" ಎಂಬ ಪಟ್ಟಿಯನ್ನು ಧರಿಸಿ ದಿವಾನರನ್ನು ಭೇಟಿಮಾಡಲು ಅರಮನೆ ಕಛೇರಿಯ ಕಡೆ ಮೆರವಣಿಗೆ ಹೊರಟರು ಪೋಲೀಸರು ಅವರನ್ನು ದಿವಾನರ ಬಳಿಗೆ ಹೋಗಲು ಅವಕಾಶಕೊಡದೆ ಚದುರಿಸಿದರು

ಶ್ರೀ
ಬಾಲಸಿದ್ಧೇಶ್ವರ ಸಂಗೀತ
ನಾಟಕ ಮಂಡಳಿ, ಹುಲಗೇರಿ

ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ 29 6 47 ನೇ ಭಾನುವಾರ ಸಂಜೆ 6 ಘಂಟೆಗೂ (ಮ್ಯಾಟನಿ) ಪ್ರಥಮ ಏಕಾದಶಿ ಪ್ರಯುಕ್ತ ರಾತ್ರಿ 10-30 ಘಂಟೆಗೂ ಮತ್ತು ತಾ॥ ೩೦-೬-47 ನೇ ಸೋಮವಾರ ರಾತ್ರಿ 10ಕ್ಕೆ

ಹೇಮರೆಡ್ಡಿ ಮಲ್ಲಮ್ಮ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿಕೆಟ್ ರೇಟ್ಸ್, ಪ್ರೊಪ್ರೈಟರ್

ಸೂಚನೆ

ಪ್ರಥಮ ಏಕಾದಶೀ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ೨೮

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸಾಮಾನ್ಯ ಸಭೆಯು ನಾಳೆ ಬೆಳಿಗ್ಗೆ ೯ ಗಂಟೆಗೆ ನಡೆಯುವುದು ಸದಸ್ಯರೆಲ್ಲರೂ ಬರಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರಿರುವರು

ಸಂಗೀತ ಕಛೇರಿ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರೀ ದೇವಾಲಯದಲ್ಲಿ ಶ್ರೀರಾಮಚಂದ್ರಸ್ವಾಮಿಯವರ ವೈಮಾಳಿಗೋತ್ಸವದ ಪ್ರಯುಕ್ತ ಈ ದಿನ ರಾತ್ರಿ ೯ ಗಂಟೆಗೆ ನೆಲ್ಲೂರಿನ ಶ್ರೀ ಕೆ. ಜಿ ಶಾಮಣ್ಣ ಗುಪ್ತರವರಿಂದ ಸಂಗೀತ ಕಛೇರಿಯನ್ನು ಏರ್ಪಡಿಸಿರುತ್ತದೆ.

ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೬॥ ಗಂಟೆಗೆ ಮದರಾಸಿನ ವಿ॥ ಕೋಡಿ ಕನ್ನನ್ ರವರ ಸಂಗೀತವನ್ನು ಏರ್ಪಡಿಸಿರುತ್ತದೆ

ಹರಿಕಥೆ

ದೇವರಾಜಮೊಹಲ್ಲಾ ಅಗ್ರಹಾರದಲ್ಲಿರುವ ಶ್ರೀರಾಮ ಸೇವಾ ಸಂಘದ ಆಶ್ರಯದಲ್ಲಿ ಪ್ರಥಮ ಏಕಾದಶೀ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆಗೆ ವಿ॥ ಗರುತಿ ರಾಮಕೃಷ್ಣಶಾಸ್ತ್ರಿಗಳಿಂದ ತುಳಸೀ ಕಲ್ಯಾಣ ಎಂಬ ಹರಿಕಥೆಯು ನಡೆಯುತ್ತದೆ

೨ ನಾಳೆ ಸಾಯಂಕಾಲ ೬ ಗಂಟೆಗೆ ಮಾಜೆವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಸ್ವಾಮಿ ಸೋಮನಾಥನಂದರು ಭಗವದ್ಗೀತೆಯ ಮೇಲೆ ಮಾತನಾಡುವರು

ಚಿತ್ರದ ಆರಂಭೋತ್ಸವ

ನಿನ್ನೆ ಬೆಳಿಗ್ಗೆ ರಾಜಧಾನಿಯ ನವಜ್ಯೋತಿ ಸ್ಟುಡಿಯೋವಿನಲ್ಲಿ ಕನ್ನಡ ಭಕ್ತ ರಾಮದಾಸ ಚಿತ್ರದ ಆರಂಭೋತ್ಸವವು ವೈಭವದಿಂದ ಜರುಗಿತು ನಗರದ ಅನೇಕ ಜನ ಮಾನ್ಯಮಹನೀಯರು ಆಹ್ವಾನಿತರಾಗಿ ಸನ್ಮಾನಿಸಲ್ಪಟ್ಟರು

ಇಂಡೋನೇಷ್ಯಾ ಪ್ರಧಾನಿಯ ರಾಜೀನಾಮೆ

ಇಂಡೋನೇಷ್ಯಾ ರಿಪಬ್ಲಿಕ್ಕಿನ ಪ್ರಧಾನಿ ಡಾ॥ ಶೆರಿಯಾರ್ ರವರು ತಮ್ಮ ಪದವಿಗೆ ರಾಜೀನಾಮೆಯಿತ್ತಿರುವರೆಂದೂ, ರಿಪಬ್ಲಿಕ್ಕಿನ ಅಧ್ಯಕ್ಷರು ಅದನ್ನು ಅಂಗೀಕರಿಸಿರುವರೆಂದೂ ವರದಿಯಾಗಿದೆ ತಮ್ಮ ನೀತಿಯನ್ನು ಸೋಷಿಯಲಿಸ್ಟ್ ಮತ್ತು ಇತರ ಉಗ್ರವಾದಿಗಳು ಅನುಮೋದಿಸದ ಪ್ರಯುಕ್ತ ಡಾಕ್ಟರರು ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ

ಮರಣದಂಡನೆ ರದ್ದಾಗಬೇಕು

ಶಾಸನ ಸಭೆಯಲ್ಲಿ ಸೂಚನೆ

ಸ್ವಂ ಸು ಫೋ] ಬೆಂಗಳೂರು ೨೮

ನಿನ್ನೆ ದಿನ ಮುಂದುವರಿದ ಶಾಸನ ಸಭೆಯಲ್ಲಿ ನ್ಯಾಯಾಂಗ ಶಾಖೆಗಳ ನ್ಯಾಯಾಂಗಕ್ಕೆ ಸಂಬಂಧಿಸಿದ ಆಯವ್ಯಯವನ್ನು ಮಂಡಿಸಿದರು

ಕ್ರಿಮಿನಲ್ ಅಪರಾಧಗಳಿಗೆ ಮರಣದಂಡನೆ ವಿಧಿಸುತ್ತಿರುವುದನ್ನು ಇನ್ನು ಮುಂದೆ ನಿಲ್ಲಿಸಬೇಕೆಂದು ಆಯವ್ಯಯವನ್ನು ಟೀಕಿಸಿ ಶ್ರೀ ಓ ಮರಿಯಪ್ಪನವರು ಕತ್ತರಿ ನಿರ್ಣಯವನ್ನು ಮಂಡಿಸಿದರು ಎಚ್ ಚನ್ನಪ್ಪ, ಎಂ ಎಸ್ ವೆಂಕಟರಾಮಯ್ಯ ಮೊದಲಾದವರು ನಿರ್ಣಯಕ್ಕೆ ಬೆಂಬಲವಿತ್ತರು

ನ್ಯಾಯಾಂಗ ಸಚಿವರು ಉತ್ತರವಿತ್ತು ಈಗ ಉಂಟಾಗಿರುವ ಪರಿಸ್ಥಿತಿಯಲ್ಲಿ ಮರಣದಂಡನೆಯನ್ನು ರದ್ದುಗೊಳಿಸುವುದು ಸೂಕ್ತವಲ್ಲವೆಂದೂ, ಮುಂದೆ ಸರ್ಕಾರದವರು ಅದನ್ನು ಪರಿಶೀಲಿಸುವರೆಂದೂ ತಿಳಿಸಿದರು

ಈ ಮಧ್ಯೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟುಗಳನ್ನು ಏರ್ಪಡಿಸುವ ಬಗ್ಗೆ ಹೈಕೋರ್ಟಿನವರ ಅಭಿಪ್ರಾಯವನ್ನು ಕೇಳಿದೆಯೆಂದೂ ಅವರಿಂದ ಉತ್ತರ ಬಂದ ನಂತರ ಅದಕ್ಕೆ ಗಮನ ಕೊಡಲಾಗುವುದೆಂದೂ ಶ್ರೀ ಎಚ್ ಚನ್ನಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ಗತ ಮೊಗಲ್ ಸಾಮ್ರಾಜ್ಯ ಮತ್ತೆ ತಲೆಯೆತ್ತುವುದು

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಪಸ್ಮಾತಿ ಜೊತೆಪಟ್ಟ ಮೊಗಲ್ ಸಾಮ್ರಾಜ್ಯ ಅಂತ್ಯವಾಯಿತು, ಆದರೆ ಈಗ ಮುಸ್ಲಿಮರ ಪಾಕಿಸ್ತಾನ ರಚನೆಯು ಪ್ರಶ್ನೆ ಬಗೆ ಹರಿಯುವುದರಿಂದ ಗತಮೊಗಲ್ ಸಾಮ್ರಾಜ್ಯದ ನಿರ್ಮಾಣಕ್ಕಾಗಿ ಇನ್ನು ಬಹಳ ಕಾಲ ಕಾಯಬೇಕಾಗಿಲ್ಲ-ಎಂಬುದಾಗಿ ಸಿಂಧು ಪ್ರಾಂತ್ಯದ ಪ್ರಧಾನಿ ಗುಲಾಂ ಹುಸೇನ್ ಹಿದಾಯತುಲ್ಲಾರವರು ಹೇಳಿರುವರು

ಚೀಣಾದಲ್ಲಿ ಪ್ರವಾಹದಿಂದ ೫ ಲಕ್ಷ ಮಂದಿ ನಿರಾಶ್ರಿತರು

ದಕ್ಷಿಣ ಚೀಣಾದ ಕ್ವಾಂಗ್ ಟಂಗ್ ಪ್ರಾಂತ ಪ್ರವಾಹದ ಹಾವಳಿಗೊಳಗಾಗಿ ಬಹಳ ನಷ್ಟಕ್ಕೀಡಾಗಿದೆಯೆಂದು ವರದಿಯಾಗಿದೆ. ಕಳೆದ ಕೆಲವು ದಿವಸಗಳಿಂದ ಎಡಬಿಡದೆ ಸುರಿಯುತ್ತಿರುವ ಮಳೆಯ ದೆಸೆಯಿಂದ ಪ್ರವಾಹವು ಗ್ರಾಮಗಳ ಮೇಲೆ ನುಗ್ಗಿ ಮನೆಮಠಗಳನ್ನೆಲ್ಲಾ ಕೊಚ್ಚಿಸಿದೆಯೆಂದು.

ಸರ್ಕಾರಕ್ಕೆ ಭಾರಿ ಪರಾಜಯ

ಶಾಸನ ಸಭೆಯಲ್ಲಿ ಕತ್ತರಿ ನಿರ್ಣಯ

ಸ್ವ ಸು ಫೋ] ಬೆಂಗಳೂರು ೨೮

ಈ ದಿನ ೧೨ ಗಂಟೆಗೆ ಶಾಸನ ಸಭೆಯು ಕಾರ್ಯ ಕಲಾಪಗಳು ಶ್ರೀ॥ ಹೆಚ್ ಬಿ ಗುಂಡಪ್ಪ ಗೌಡರ ಅಧ್ಯಕ್ಷತೆಯಲ್ಲಿ ಆರಂಭವಾದುವು ಪ್ರಶ್ನೋತ್ತರದ ನಂತರ ವಿವಿಧ ಶಾಖೆಗಳ ಗ್ರಾಂಟನ್ನು ಸಭೆಯ ಮುಂದೆ ಇಡಲಾಯಿತು

ಆರ್ಥಿಕ ಸಹಾಯಕ್ಕೆ ಸಂಬಂಧಿಸಿದಂತೆ ೬೪ ಸಹಸ್ರ ರೂಗಳಿಗೆ ಒಂದಿದ್ದ ಪಟ್ಟಿಯ ಮೇಲೆ ಶ್ರೀ॥ ಕೆ ಹನುಮಂತಪ್ಪನವರು ಕತ್ತರಿ ನಿರ್ಣಯವನ್ನು ಮಂಡಿಸಿದರು

ಶ್ರೀಗಳಾದ ಕಡಿದಾಳು ಮಂಜಪ್ಪ, ಟಿ ಮಾದಯ್ಯಗೌಡರು ಬುನಾದಿಯ ಪ್ರಾಥಮಿಕ ಶಿಕ್ಷಣ, ಅವಿದ್ಯಾ ನಿವಾರಣೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದರು

ಯಾವುದೇ ನಂತರ ಪ್ರಸಕ್ತ ಯೋಜನಾ ಕಾರ್ಯ ತೃಪ್ತಿಕರವಾಗಿಲ್ಲ, ಬುನಾದಿಯ ಪ್ರಾಥಮಿಕ ಶಿಕ್ಷಣ ಉಪಾಧ್ಯಾಯರುಗಳಿಗೆ ಸಾಕಾದಷ್ಟು ಪ್ರೋತ್ಸಾಹವಿಲ್ಲ ಎಂಬುದಾಗಿ ಶ್ರೀ॥ ಹನುಮಂತಪ್ಪನವರು ನಿರ್ಣಯದ ಮೇಲೆ ಮಾತನಾಡಿದರು ಶ್ರೀಗಳಾದ ಹೆಚ್ ಆರ್ ಗುರುವಾ ರೆಡ್ಡಿ, ಹೆಚ್ ಎಂ ಚನ್ನಬಸಪ್ಪ ಮೊದಲಾದವರು ನಿರ್ಣಯಕ್ಕೆ ಬೆಂಬಲವಿತ್ತರು

ಡಾ॥ ರಾಘವೇಂದ್ರರಾವ್ ರವರು ಸರ್ಕಾರದ ಪರವಾಗಿ ಉತ್ತರವಿತ್ತು ಬುನಾದಿಯ ಪ್ರಾಥಮಿಕ ಶಿಕ್ಷಣಕ್ಕೆ ಸಾಕಾದಷ್ಟು ಪ್ರೋತ್ಸಾಹ ಕೊಡಲಾಗುತ್ತಿದೆ ಮುಂದೆ ಇನ್ನೂ ಹೆಚ್ಚಿನ ಗಮನ ಕೊಡಲಾಗುತ್ತದೆ—ಎಂದು ತಿಳಿಸಿದರು

ನಿರ್ಣಯವನ್ನು ಓಟಿಗೆ ಹಾಕಿದಾಗ ಅದು ೩೦-೨೬ ಓಟುಗಳಿಂದ ಅಂಗೀಕೃತವಾಗಿ ಸರ್ಕಾರಕ್ಕೆ ಪ್ರಥಮ ಸೋಲು ಉಂಟಾಯಿತು

ಲಗ್ನಪತ್ರಿಕೆ ಹಂಚಲು ಹೋದ ವರನ ವಿಷಾದ ಮರಣ

ಸ್ವಂ ಸು ಫೋ] ಬೆಂಗಳೂರು ೨೮

ತನ್ನ ಮದುವೆ ಸಂದರ್ಭದಲ್ಲಿ ಲಗ್ನಪತ್ರಿಕೆಗಳನ್ನು ಹಂಚಲು ಮೋಟಾರು ಬೈಸಿಕಲ್ಲಿನ ಮೇಲೆ ಮೈಸೂರಿಗೆ ಹೊರಟಿದ್ದ ಶ್ರೀ ರಾಮಚಂದ್ರ ಎಂಬಾತನು ಬಿಡದಿ ಬಳಿ ಬಂದು ಸೇರುವಾಗ ಬೈಸಿಕಲ್ ಡಿಕ್ಕಿ ಹೊಡೆದು ಮೃತಪಟ್ಟನು

ರೈಲ್ವೆ ಕೆಲಸಗಾರರ ದಿನಾಚರಣೆಯಲ್ಲಿ ರೈಲುಗಳ ಮೇಲೆ ಧಾಳಿ

ಸಂಬಳ ಸವಲತ್ತುಗಳ ಸಲುವಾಗಿ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುವುದರಿಂದ ಅಖಿಲ ಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ನಿನವರು ನಿನ್ನೆ ರೈಲ್ವೆ ಕೆಲಸಗಾರರ ದಿನವನ್ನು ಆಚರಿಸಬೇಕೆಂದು ಸೂಚಿಸಿದ್ದರು.

ಆದರೆ ಬೊಂಬಾಯಿ ಪ್ರಾಂತದ ರೈಲ್ವೆ ಕಾರ್ಮಿಕರು ಕೆಲಸಕ್ಕೇ ಹೋಗದೆ ಮುಷ್ಕರವನ್ನು ಹೂಡಿ ಸ್ಥಳೀಯ ರೈಲುಗಳ ಮೇಲೆ ಕಲ್ಲುಗಳನ್ನೆಸೆಯುವುದು ಮೊದಲಾದ ಕೃತ್ಯಗಳನ್ನೆಸಗಿದರೆಂದೂ ಪೋಲೀಸರು ಅವರ ಮೇಲೆ ಗುಂಡು ಹಾರಿಸಿದರೆಂದೂ ವರದಿಯಾಗಿದೆ

ಗೋರಖ್ಪುರದ ... ಎಕರೆ ಪ್ರದೇಶವು ಪ್ರವಾಹಕ್ಕೀಡಾಗಿ, ... ಸುಮಾರು ೨॥ ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ... ಅನಾಹುತದ ... ಸುಮಾರು ... ನಷ್ಟವುಂಟಾಗಿರುವರೆಂದೂ ... ಲಕ್ಷ ಜನ ವಸತಿ ಮತ್ತು ಆಹಾರವಿಲ್ಲದೆ ನಿರಾಶ್ರಿತರಾಗಿರುವರೆಂದೂ ತಿಳಿದು ಬಂದಿದೆ

ಢಾಕಾ ಪೂರ್ವ ಬಂಗಾಳದ ರಾಜಧಾನಿ

ಢಾಕ್ಕಾ ನಗರವು ಪೂರ್ವ ಬಂಗಾಳದ ರಾಜಧಾನಿಯಾಗಬೇಕೆಂದು ಬಂಗಾಳ ಪ್ರಾಂತ ಮುಸ್ಲಿಂ ಲೀಗ್ ನಿರ್ಧರಿಸಿದೆಯೆಂದು ವರದಿಯಾಗಿದೆ

ಆಯುರ್ವೇದ ಯುನಾನಿ ವಿದ್ಯಾರ್ಥಿಗಳಿಗೆ ಸೌಕರ್ಯ

ಮೈಸೂರು ೨೮

ಗೌರ್ನಮೆಂಟ್ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ಕೆಲವು ದಿನಗಳ ಹಿಂದೆ ಕಾಲೇಜಿನ ಅಭಿವೃದ್ಧಿ ಮತ್ತು ತಮ್ಮ ಸೌಕರ್ಯಗಳ ಬಗ್ಗೆ ಮುಖ್ಯ ಮಂತ್ರಿಗಳನ್ನು ಕಂಡು ಅರೋಗ್ಯ ಸಚಿವರಾದ ಡಾ॥ ರಾಯ್‌ರವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ಯಿತ್ತಿದ್ದರಷ್ಟೆ. ಆದರೆ ಇದುವರೆಗೂ ಆ ಭರವಸೆಯು ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇದೇ ಜುಲೈನಿಂದ ಕಾಲೇಜಿನ ತರಗತಿಗಳಲ್ಲಿ ಶಿಕ್ಷಣವು ಪ್ರಾರಂಭವಾಗುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕಾಲೇಜಿನ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಕರ್ಯಗಳ ಬಗ್ಗೆ ಸೂಕ್ತವಾದ ಏರ್ಪಾಡುಗಳನ್ನು ಮಾಡಬೇಕೆಂದು ಗೌರ್ನಮೆಂಟ್ ಆಯುರ್ವೇದ ಮತ್ತು ಯುನಾನಿ ಪದವೀಧರರ ಸಂಘದ ಕಾರ್ಯದರ್ಶಿ ಶ್ರೀ ಟಿ. ವಿ. ಶಾಸ್ತ್ರಿ ರಂಗಾಚಾರ್‌ರವರು ಪ್ರಾರ್ಥಿಸಿರುವರು

ಶ್ರೀ ಸತ್ಯನಾರಾಯಣ ವ್ರತ

ಚಾಮುಂಡಿ ದೇವಸ್ಥಾನದ ಕಿಲ್ಲೇಮೊಹಲ್ಲಾ ನಂ ೧೦೭೩ನೇ ಮನೆಯಲ್ಲಿರುವ ಶ್ರೀ ರಾಜೇಶ್ವರೀ ಸನ್ನಿಧಿಯಲ್ಲಿ ನಾಳೆ ಭಕ್ತರು ವೀಣೆ ಶ್ರೀ ಪ್ರಭು ಶಾಸ್ತ್ರಿ ಸತ್ಯನಾರಾಯಣ ವ್ರತ, ಮಹಾರುದ್ರಾಭಿಷೇಕ ಮಂಗಳಾರತಿಗಳು ನಡೆಯುತ್ತವೆ

ರಾಜಕಮಲ್

ತಾ॥ ೨೭-೬-೪೭ ರಿಂದ

ಪ್ರತಿ ದಿನ ೩ ಆಟಗಳು

ಬೆರಾಂಬಾಕ್

—: ಭೂಮಿಕೆ :—

ಮೆಹತಾಬ್, ಜಹಗೀರ್ದಾರ್.

Morning Shows

From 27-6-47 for 4 days

daily at 10-30 A. M.

" Lady Let's Dance "

—: STARRING :—

Belita, James Ellison, with Gorgeous Dancing Girl and Exotic Ballet Girls.

ಅಪೇರಾ ಟಾಕೀಸ್, ಮೈಸೂರು

೨೮-೬-೪೭ ರಿಂದ ೧ನೇ ವಾರ

ರಾಜಕುಮಾರಿ

Morning Shows from 27-6-47

The Lady and The Monster

ಸಂಸ್ಥಾನಗಳೆಲ್ಲಾ ಐಕ್ಯವಾಗಬೇಕು

ಭಾರತ ರಾಜ್ಯಾಂಗಕ್ಕೆ ಸೇರದೆ ಸ್ವತಂತ್ರ ಸಂಸ್ಥಾನಗಳೆಂದು ಘೋಷಿಸಿಕೊಳ್ಳುತ್ತಿರುವ ಹೈದರಾಬಾದ್, ತಿರುವಾಂಕೂರು ಮೊದಲಾದ ಸಂಸ್ಥಾನಗಳ ಪ್ರತಿಗಾಮಿ ವರ್ತನೆಯನ್ನು ತಡೆಯಲು ಸಂಸ್ಥಾನಗಳ ಹೆಸರೇ ಇಲ್ಲದಂತೆ ಮಾಡುವುದೊಂದೇ ಸರಿಯಾದ ಮಾರ್ಗ—ಎಂಬುದಾಗಿ ರಾಜ್ಯಾಂಗ ಸಭಾ ಸದಸ್ಯರಾದ ಶ್ರೀ॥ ಎಂ. ಅನಂತಶಯನಂ ಅಯ್ಯಂಗಾರ್ಯರು ಹೇಳಿರುವರು. ಬ್ರಿಟಿಷರ ಸಾರ್ವಭೌಮಾಧಿಕಾರಕ್ಕೆ ತಲೆಬಾಗಿ ರಾಜರು ತಮ್ಮ ಸ್ವಾತಂತ್ರ್ಯವನ್ನು ನಷ್ಟಪಡಿಸಿಕೊಂಡರಲ್ಲದೆ ಪ್ರಜೆಗಳ ಸ್ವಾತಂತ್ರ್ಯದ ಹೋರಾಟವನ್ನೂ ತುಳಿಯಲು ತೊಡಗಿರುವರು. ಪ್ರಜೆಗಳ ಅವಿಶ್ರಾಂತ ಹೋರಾಟದಿಂದ ಸ್ವಾತಂತ್ರ್ಯ ಹಸ್ತಗತವಾಗಿರುವಾಗ ಸಂಸ್ಥಾನಾಧೀಶರು ಅದನ್ನು ಬದಿಗೊತ್ತಿ ತಮ್ಮ ಅಧಿಕಾರವನ್ನು ಹೆಚ್ಚಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಸಂಸ್ಥಾನಗಳು ತಮ್ಮ ಪ್ರತಿಗಾಮಿ ಧೋರಣೆಯನ್ನು ಬಿಟ್ಟು ಭಾರತ ರಾಜ್ಯಾಂಗವನ್ನು ಸೇರಬೇಕು; ಇಲ್ಲವಾದರೆ ಪ್ರಜೆಗಳು ಕ್ರಾಂತಿಯೆಬ್ಬಿಸಿ ಸಂಸ್ಥಾನಗಳೆಂಬ ಹೆಸರೇ ಇಲ್ಲದಂತೆ ಮಾಡಬೇಕಾಗುವುದು — ಎಂದು ಶ್ರೀ॥ ಅಯ್ಯಂಗಾರ್ಯರು ತಿಳಿಸಿರುವರು

ಮನೆ ಬೇಕಾಗಿದೆ

ಮೈಸೂರು ನರಸಿಂಹರಾಜ ಮೊಹಲ್ಲಾ 4374 ನೇ ನಂಬರ್ ಮನೆ. ಎ. ಕೆ. ಮೂರ್ತಿರಾವ್. ಎಕ್ಸ್‌ಪರ್ಟ ನಂಜನಗೂಡು. ಡೋರ್ ನಂಬರ್ 1405 ರಲ್ಲಿ ವಿಚಾರಿಸಿರಿ.—

TYPEWRITING CLASSES

A few seats are available in the Commercial Institute attached to Sarada Vilas High School, Mysore, for students appearing for the Mysore Govt Jr and Sr Typewriting Examinations. Shorthand classes will also be conducted if adequate number of students join.

Enquiries: 8 to 9-30 a.m. daily.

ಫ್ರೆಂಚ್ ಮಂತ್ರಿ ಮಂಡಲಕ್ಕೆ ಬಿಕ್ಕಟ್ಟು

ಪ್ಯಾರಿಸ್ ನಗರ ... ದಿಂದ ಫ್ರಾನ್ಸಿನ ಕೆಲವು ಭಾಗಗಳಲ್ಲಿ ಮುಷ್ಕರ ... ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಯುದ್ಧ ಕೈದಿಗಳೂ ಸಹ ಮುಷ್ಕರದಲ್ಲಿ ಸೇರಿರುವರು, ಬಟ್ಟೆ ಕೆಲಸಗಾರರು ತಮ್ಮ ಕೂಲಿ ದರಗಳ ಪುನರ್ವಿಮರ್ಶೆಯು ಕೂಡಲೇ ಆಗದಿದ್ದಲ್ಲಿ ಸಾರ್ವತ್ರಿಕ ಮುಷ್ಕರ ಹೂಡಲಿದ್ದಾರೆ, ಸಂಚಾರ ಶಾಖೆಯ ಕಾರ್ಮಿಕರೂ ಸಹ ಮುಷ್ಕರ ನಡೆಸಲು ಪರ್ಯಾಲೋಚಿಸುತ್ತಿದ್ದಾರೆ, ಇದರಿಂದ ಫ್ರೆಂಚ್ ಮಂತ್ರಿ ಮಂಡಲವು ಕೂಡಲೇ ಉರುಳಿ ಬೀಳಬಹುದೆಂದು ವರದಿಯಾಗಿದೆ.

ಲಾಹೋರಿನಲ್ಲಿ ಶಿಸ್ತಿನ ಪಾಲನೆಗಾಗಿ ಸಮಿತಿ

ಲಾಹೋರಿನ ಪರಿಸ್ಥಿತಿಯನ್ನು ತಡೆಗಟ್ಟಿ ಶಿಸ್ತನ್ನು ರಕ್ಷಿಸಲು ಕೂಡಲೇ ಅಲ್ಲಿ ಮಾರ್ಷಲ್ ಲಾ ಜಾರಿಗೆ ತರಬೇಕೆಂದು ಪಂಡಿತ ನೆಹರೂ ಮತ್ತು ಸರ್ದಾರ್ ಪಟೇಲರು ವೈಸರಾಯರನ್ನು ಒತ್ತಾಯಪಡಿಸಿದಾಗ್ಯೂ ಆದರೆ ಅದಕ್ಕೆ ಮನ್ನಣೆ ದೊರೆಯಲಿಲ್ಲವೆಂದು ವರದಿಯಾಗಿದೆ. ಲಾಹೋರಿನಲ್ಲಿ ಶಿಸ್ತನ್ನು ಕಾಪಾಡುವ ಬಗ್ಗೆ ಗವರ್ನರರಿಗೆ ಸಹಾಯ ನೀಡಲು ಲಾಲಾ ಭೀಮಸೇನ ಸಾಚಾರ್, ಮುಮ್ತಾಜ್ ದೌಲತಾನ ಮತ್ತು ಸರ್ದಾರ್ ಸ್ವರ್ಣಸಿಂಗರ ನ್ನೊಳಗೊಂಡ ಸಮಿತಿ ಒಂದನ್ನು ರಚಿಸಿರುವರು

Edited, printed and published by A. R. Nagaraj at the Sadhvi Press D. Subbaiah Road Mysore

ವುಡ್‌ಲ್ಯಾಂಡ್ಸ್

28-6-47 ರಿಂದ

ಚಿತ್ರರಿಡ ೯ ನೇ ವಾರ

ಪ್ರತಿ ದಿನ ೨ ಆಟಗಳು

ಶನಿವಾರ ಮತ್ತು ಭಾನುವಾರ ಮ್ಯಾಟಿನಿ

ನಾವು ಇಬ್ಬರು

ಬ (ತಮಿಳು)

: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರನ್ ಮುಂತಾದವರು.

ಹರಾಜು

ಡಿಸೆಲ್ ಇಂಜನ್, ಫ್ಲೋರ್ ಮಿಲ್ ... ಮೆಷಿನ್ ಜಾರಿಯನ್ನು ಮುನಿಸಿಪಲ್ ಆಫೀಸ್ ಕಾಂಪೌಂಡಿನಲ್ಲಿ ತಾ॥ ..—6—47 ನೇ ಸಾಯಂಕಾಲ 4 ಘಂಟೆಗೆ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಬಂದು ನೋಡಿ ಖುದ್ದಾಗಿ ... ಮೂಲಕ ತೆಗೆದುಕೊಳ್ಳಬಹುದು ... ವಿಚಾರಕ್ಕೆ ಒಳ್ಳೆ ತಿಳಿದುಕೊಳ್ಳಬಹುದು ಅಥವಾ ... ಬಹುದು

ಆರ್. ರಾಮಚಂದ್ರರಾವ್ ...

ಪ್ರೆಸಿಡೆಂಟ್,

... ಮೈಸೂರು.

ಪಾಕಿಸ್ತಾನ್ ಸರ್ಕಾರದಲ್ಲಿ ಹಿರೋಸ್ಕ್ಯ ನೌಕರರು

ಭಾರತ ಸರ್ಕಾರದ ಸೆಕ್ರೆಟೇರಿಯಟ್ಟಿನಲ್ಲಿರುವ ಮುಸ್ಲಿಮರಲ್ಲಿ ಬಹುಸಂಖ್ಯೆ ಹಿಂದೂಸ್ಥಾನ್ ಯೂನಿಯನ್ನಿನಲ್ಲಿಯೇ ಕೆಲಸ ಮಾಡಲು ತೀರ್ಮಾನಿಸಿರುವರು. ಆದರೆ ಹಿರೋಸ್ಕ್ಯರಲ್ಲಿ ಶೇ ೯೦ ಮಂದಿ ಪಾಕಿಸ್ತಾನ್ ಸರ್ಕಾರದಲ್ಲಿ ಕೆಲಸ ಮಾಡಲು ಒಪ್ಪಿರುವರು—ಎಂದು ಗೊತ್ತಾಗಿದೆ.

ಪಾಕಿಸ್ಥಾನಕ್ಕೆ ಅಮೆರಿಕದ ಸಹಾಯ

ಪಾಕಿಸ್ತಾನದಲ್ಲಿ ಕೈಗಾರಿಕೆ ಅಭಿವೃದ್ಧಿಯಾಗಬೇಕಾದರೆ ಹೊರಗಿನ ಧನಸಹಾಯ ಅಗತ್ಯವೆಂದು ಲೀಗ್ ಆವರಣಗಳಲ್ಲಿ ಹೇಳಲಾಗುತ್ತಿದೆ; ಬ್ರಿಟನ್ನಿನಿಂದ ಯಂತ್ರ ಮತ್ತು ನಿಪುಣರ ಸಹಾಯ ಅಗತ್ಯವೆಂದು ತಿಳಿದು ಬಂದಿದೆ. ಪಾಕಿಸ್ತಾನ ಅತ್ಯಾವಶ್ಯಕವಾಗಿಯಾಗುವ ಸಲುವಾಗಿ ಅಮೆರಿಕವು ಅದಕ್ಕೆ ಧನ ಸಹಾಯ ಮಾಡುವುದೆಂದು ಹೇಳಲಾಗಿದೆ

ಪಾಕಿಸ್ಥಾನಕ್ಕೆ ಬರಲು ಪ್ರವೀಣರಿಗೆ ಪ್ರಾರ್ಥನೆ

ಪಾಕಿಸ್ತಾನ್ ಸರ್ಕಾರಕ್ಕೆ ರಚನಾತ್ಮಕ ನಿಪುಣರೂ, ಬುದ್ಧಿವಂತರಾದವರೂ ಬೇಕು—ಎಂಬುದಾಗಿ ಮಿ॥ ಲಿಯಾಕತ್ ಅಲಿಖಾನ್ ಪ್ರಕಟಿಸಿದ್ದಾರೆ. ವೈಜ್ಞಾನಿಕರು ಮತ್ತು ಕೈಗಾರಿಕಾ ನಿಪುಣರ ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಇವರುಗಳ ಬಳಿ ಹೋಗಿ ಅವರನ್ನು ಪಾಕಿಸ್ತಾನಕ್ಕೆ ಬರಲು ಆಹ್ವಾನಿಸಲಾಗುವುದು—ಎಂದು ವರದಿಯಾಗಿದೆ

ಸುಸಮಯ! ಸದವಕಾಶ !!

ಕಳೆದುಕೊಳ್ಳಬೇಡಿ

ಚಾಮರಾಜನಗರದ ಶ್ರೀ ಭುಜಂಗೇಶ್ವರ ಬಡಾವಣೆ (ಸಿನಿಮಾ ಎದುರು) ಯಲ್ಲಿ ರೈಲ್ವೆ ರಸ್ತೆಯ ಬಾಜುವಿನಲ್ಲಿ ಅಂಗಡಿ ಮಳಿಗೆ ಮತ್ತು ವಾಸದ ಮನೆ ಕಟ್ಟಲು ಅನುಕೂಲವಾಗಿರುವ ಭಾರಿ ಖಾಲಿ ನಿವೇಶನವು ಬಿಕರಿಗಿದೆ. ಕೂಡಲೇ ಈ ವಿಳಾಸದೊಡನೆ ವ್ಯವಹಾರ ನಡೆಸಿ .

ಜೈ ಹಿಂದ್ c/o 'ಸಾಧ್ವಿ' ಮೈಸೂರು

ಮೈಸೂರು ಸಿಟಿ ಮುನಿಸಿಪಾಲಿಟಿ ಹೆಲ್ತಾಫೀಸರರ ಕಛೇರಿಯಿಂದಾ:—

ಪ್ರಕಟಣೆ

ಮೈಸೂರು ನಗರ ಪೌರಸಭೆಯು ಕಲಾ ಮತ್ತು ವಸ್ತು ಪ್ರದರ್ಶನ ಎಗ್ಸಿಬಿಷನ್ ಬಿಲ್ಡಿಂಗಿನಲ್ಲಿ 6-7-47 ರಿಂದ 12-7-47

ಈ ಪ್ರದರ್ಶನದಲ್ಲಿ ವಸ್ತುಗಳನ್ನು ಪ್ರದರ್ಶಿಸಲು ಅಪೇಕ್ಷಿಸುವ ಅಂಗಡಿಯ ಮಾಲೀಕರು ಮಳಿಗೆಗಳನ್ನು ಪಡೆಯಲು ಮಳಿಗೆಗೆ ರೂ. 20 ರಂತೆ ಮುಂಗಡವಾಗಿ 1-7-47ರ ಒಳಗಾಗಿ ತಮ್ಮ ಅರ್ಜಿಗಳನ್ನು ಮುನಿಸಿಪಲ್ ಪ್ರೆಸಿಡೆಂಟರವರಿಗೆ ಸಲ್ಲಿಸಬೇಕಾಗಿ ಕೋರಲಾಗಿದೆ. 2-7-47 ರ ಸಾಯಂಕಾಲ 4 ಗಂಟೆಗೆ ಮಳಿಗೆ ಕೊಟ್ಟಿರುವವರ ಹೆಸರುಗಳನ್ನು ಪ್ರಕಟಿಸಲಾಗುವುದು

ಆರ್ ರಾಮಚಂದ್ರರಾವ್ ಬಾಂಬೋರೆ

ಪ್ರೆಸಿಡೆಂಟ್, ಮುನಿಸಿಪಲ್ ಕೌನ್ಸಿಲ್

ಮೈಸೂರು.

ಫೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೩೦—೬—೪೭ [ಸಂಚಿಕೆ ೪೩

—ಇಂಡೋನೇಷ್ಯದಲ್ಲಿ— ಮತ್ತೆ ಭಾರಿ ಬಿಕ್ಕಟ್ಟು

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

|| ೩೦-೬-೪೭ ರಿಂದ ೬-೭-೪೭ ರ ವರೆಗೆ

ಮೇಷ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಅಧಿಕಾರಿಗಳಿಂದ ಮತ್ತು ಮಿತ್ರರಿಂದ ನೆರವು, ತಾ|| ೨, ೩ ಖರ್ಚು, ಚಿಂತೆ.

ವೃಷಭ—ಆರೋಗ್ಯ ಸಾಧಾರಣ, ಆರ್ಥಿಕ ಸ್ಥಿತಿ ಚಿಂತಾದಾಯಕ, ಖರ್ಚು ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿ ತೊಂದರೆ, ಪ್ರವಾಸದಿಂದ ನಷ್ಟ, ಶತ್ರುಗಳಿಂದ ತೊಂದರೆ, ಬಂಧುಗಳಿಂದ ತಿರಸ್ಕಾರ, ತಾ|| ೬ ಲಾಭ, ಮಿತ್ರ ದರ್ಶನ

ಮಿಥುನ—ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಾಭಾವ ಜಾಸ್ತಿ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ಬಂಧುಗಳಿಂದ ತಿರಸ್ಕಾರ, ತಾ|| ೩, ೫, ೬ ಲಾಭ, ಶಾಂತಿ

ಕರ್ಕ—ಆರೋಗ್ಯ ಕೆಡುತ್ತದೆ, ಧನಲಾಭ ಚೆನ್ನಾಗಿರುತ್ತದೆ, ಖರ್ಚು ಅಧಿಕ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ವ್ಯಾಪಾರದಿಂದ ಲಾಭ, ತಾ|| ೨, ೫ ನಷ್ಟ, ಚಿಂತೆ.

ಸಿಂಹ—ಪ್ರಾಕೃತಿಕ ಸ್ಥಿತಿ ಸಾಧಾರಣ, ಆರ್ಥಿಕ ಸ್ಥಿತಿ ಉತ್ತಮ, ಖರ್ಚು ಕಡಿಮೆ, ಮಂಗಳಕಾರ್ಯಗಳಿಗಾಗಿ ಪ್ರವಾಸ, ಉದ್ಯೋಗ, ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ, ತಾ|| ೪, ೬ ಲಾಭ, ಶಾಂತಿ.

ಕನ್ಯಾ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ಮಿತ್ರರಿಂದ ಸಹಾಯ, ತಾ|| ೩, ೫, ೬ ಚಿಂತೆ; ನಷ್ಟ

ತುಲಾ—ಆರೋಗ್ಯ ಕೆಡುತ್ತದೆ, ಧನಲಾಭ ಕಡಿಮೆ, ಖರ್ಚು ಹೆಚ್ಚು, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ|| ೧, ೩ ಲಾಭ, ಮಿತ್ರ ದರ್ಶನ,

ವೃಶ್ಚಿಕ—ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ, ನೌಕರಿಯಲ್ಲಿ ಅಧಿಕಾರಿಗಳಿಂದ ತೊಂದರೆ, ಪ್ರವಾಸದಿಂದ ಆಶಾಭಂಗ, ತಾ|| ೩, ೫ ಲಾಭ, ಪ್ರವಾಸ

ಧನಸ್ಸು—ಪ್ರಾಕೃತಿಕ ಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಆಶಾದಾಯಕ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಬಂಧುಗಳಿಂದ ಸನ್ಮಾನ, ಪ್ರವಾಸದಿಂದ ಅಧಿಕಾರಿ ವರ್ಗದವರೊಡನೆ ಸ್ನೇಹ, ತಾ|| ೩, ೬ ಲಾಭ, ಶಾಂತಿ.

ಮಕರ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ, ಕೌಟುಂಬಿಕ ಅನಾರೋಗ್ಯದಿಂದ ವೈದ್ಯಕೀಯ ವೆಚ್ಚ ಹೆಚ್ಚುವುದು, ಮಂಗಳಕಾರ್ಯಗಳಿಗಾಗಿ ಪ್ರವಾಸ, ೩, ೫, ೬ ಚಿಂತೆ, ನಷ್ಟ.

ಕುಂಭ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ, ಮಾನಸಿಕ ಆಹ್ಲಾದಕ್ಕಾಗಿ ವಿದೇಶ ಯಾತ್ರೆ, ತಾ|| ೨, ೪, ೫ ಲಾಭ, ಸಂತೋಷ

ಮೀನ—ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಸಾಧಾರಣ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ವಾಣಿಜ್ಯದಲ್ಲಿ ಆರೋಗ್ಯ ಕೆಡುವುದು, ತಾ|| ೨, ೫ ಲಾಭ, ಪ್ರವಾಸ

ರಾಜ್ಯಾಂಗ ಸಭೆಗೆ ಮುಸ್ಲಿಂ ಸಂಸ್ಥಾನ

ಮುಸ್ಲಿಂ ಸಂಸ್ಥಾನವಾದ ಬಂಗನಪಲ್ಲಿಯೂ ಭಾರತ ರಾಜ್ಯಾಂಗ ಸಭೆಗೆ ಸೇರುವುದೆಂದು ಅಲ್ಲಿನ ನವಾಬರು ತಿಳಿಸಿರುವುದಾಗಿ ವರದಿಯಾಗಿದೆ. ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಆರಿಸುವ ಮೊದಲು ಚುನಾಯಿತ ಸದಸ್ಯರೇ ಕೂಡಿದ ಸ್ಟೇಟ್ ಕೌನ್ಸಿಲ್ ಸಭೆಯೊಂದನ್ನು ನಿರ್ಮಿಸಿ ಅದರಿಂದ ಪ್ರತಿನಿಧಿಗಳನ್ನು ಆರಿಸಲಾಗುವುದು ಈ ಬಗ್ಗೆ ನಾಳೆ ನವಾಬರು ದರ್ಬಾರಿನಲ್ಲಿ ಘೋಷಣೆ ಹೊರಡಿಸುವರೆಂದು ತಿಳಿದುಬಂದಿದೆ

ಪಾಕಿಸ್ತಾನದಿಂದ ಹಿಂದೂಸ್ಥಾನಕ್ಕೆ ೨೦ ಕೋಟಿ ರೂ

ಚಿನ್ನ, ಬೆಳ್ಳಿ ಮೊದಲಾದವುಗಳ ರೂಪದಲ್ಲಿಯೂ ಮತ್ತು ನಗದಾಗಿಯೂ ಸುಮಾರು ೨೦ ಕೋಟಿ ರೂ ಬೆಲೆ ಬಾಳುವ ಅಮೂಲ್ಯ ವಸ್ತುಗಳು ಸಿಂಧು ಪ್ರಾಂತದಿಂದ ಬೊಂಬಾಯಿ ಮೊದಲಾದ ಕಡೆಗಳಿಗೆ ವರ್ಗಾಯಿಸಲ್ಪಟ್ಟಿವೆ ಇವುಗಳನ್ನು ವಿಮಾನ ರೈಲು ಮತ್ತು ಟೆಲಿಗ್ರಾಫಿಕ್ ಮನಿ ಆರ್ಡರುಗಳ ಮೂಲಕ ರವಾನಿಸಲಾಗಿದೆಯೆಂದು ವರದಿಯಾಗಿದೆ ಅಲ್ಪ ಸಂಖ್ಯಾತರಿಗೆ ಸೇರಿದ ವಿದ್ಯುಚ್ಛಕ್ತಿ ಯಂತ್ರ ಮಾನಗಳು, ಮನೆಗಳು, ರೇಡಿಯೋ ಮೊದಲಾದುವುಗಳನ್ನು ಸರ್ಕಾರವು ಒತ್ತಾಯದಿಂದ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಶಾಸನ ಮಾಡುವುದರ ಪರಿಣಾಮವೇ ಇದೆಂದೂ ಹೇಳಲಾಗಿದೆ

ಅಧಿಕಾರ ವರ್ಗಾವಣೆಗೆ ಮುಂಚೆಯೇ ಪಾಕಿಸ್ತಾನ್ ಸರ್ಕಾರ

ಬಂಗಾಳ ಪ್ರಾಂತದಲ್ಲಿ ಈಗಿರುವ ಮಂತ್ರಿಮಂಡಲವನ್ನು ರದ್ದುಗೊಳಿಸಿ ಅಲ್ಲಿ ಸಚಿವ ಶಾಸನವನ್ನು ಜಾರಿಗೆ ತರಲು ಬ್ರಿ|| ಸರ್ಕಾರವು ಅಂಗೀಕಾರವನ್ನಿತ್ತಿದೆ ಅಲ್ಲಿ ಈಗಿರುವ ತಾತ್ಕಾಲಿಕ ಸರ್ಕಾರದ ಸಚಿವರಿಗೆ ಆಗಸ್ಟ್ ೧೫ ರ ಮೊದಲೇ ಬಂಗಾಳದಲ್ಲಿ ಪಾಕಿಸ್ತಾನ್ ಸರ್ಕಾರವನ್ನು ರಚಿಸಲು ಹೇಳಲಾಗಬಹುದೆಂದು ಗೊತ್ತಾಗಿದೆ

ಹುಜೂರು ಸೆಕ್ರೆಟರಿ

ಮೈಸೂರು ೩೦

ಹಾಸನದ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎಚ್ ನಿರಂಜನಂಶೆಟ್ಟಿ ಅಂಬಿನವರು ಈ ದಿನ ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಗಳಾಗಿ ಛಾರ್ಜು ವಹಿಸಿಕೊಂಡರು.

ಮುಷ್ಕರದ ಸೂಚನೆ

ಬೆಳಗೊಳದಲ್ಲಿರುವ ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಯ ಆಡಳಿತಗಾರರಿಗೆ ತಾ|| ೧೩-೧-೪೭ ರಲ್ಲಿ ಒಂದು ನೋಟೀಸು ಕೊಟ್ಟು ತಮಗೆ ಬೋನಸ್, ಅಲೋಯನ್ಸ್ ಮುಂತಾದ ಸೌಲಭ್ಯಗಳನ್ನು ಒದಗಿಸ ಕೊಡಬೇಕೆಂದು ಅಲ್ಲಿನ ಕೆಲಸಗಾರರು ಕೇಳಿದ್ದರು ಈ ಬಗ್ಗೆ ಆಡಳಿತಗಾರರಿಂದ ಸಮರ್ಪಕವಾದ ಉತ್ತರ ಬಾರದಿದ್ದುದರಿಂದ ಮುಷ್ಕರದ ನೋಟೀಸು ಕೊಡಲು ೧೮-೬-೪೭ ರಲ್ಲಿ ನಡೆದ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತು

ಅಪಾಯಕರ ಅವರೇ ಕಾಳು

ಬರ್ಮದಿಂದ ಬಂದಿರುವ ಅವರೇಕಾಳು ವಿಷ ಮಿಶ್ರಿತವಾಗಿದ್ದು ಉಪಯೋಗಕ್ಕೆ ಅನರ್ಹವಾಗಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿರುವುದು ಈ ಕಾಳು ಸಂಸ್ಥಾನಕ್ಕೂ ಬಂದಿರುವುದನ್ನು ತಿಳಿದು ಅಂತಹ ಕಾಳುಗಳನ್ನು ಜನರು ಉಪಯೋಗಿಸಬಾರದೆಂದು ಮೈಸೂರು ಸರ್ಕಾರದವರು ತಿಳಿಸಿರುವರು ಆ ಕಾಳನ್ನು ಪರೀಕ್ಷಿಸಲಾಗುತ್ತಿದೆ ಸದ್ಯಕ್ಕೆ ಆ ಕಾಳನ್ನು ಮಾರಲೂ ಕೂಡದೆಂದು ವರ್ತಕರುಗಳಿಗೆ ಸೂಚಿಸಲಾಗಿದೆ

ಲಾಹೋರಿನ ಗಲಭೆಗಳಲ್ಲಿ ಪೋಲೀಸರ ಕೈವಾಡ

ಲಾಹೋರಿನ ಗಲಭೆ ಪ್ರಕರಣವು ಬಹಳ ಕುತೂಹಲವನ್ನುಂಟುಮಾಡುವುದಾಗಿದ್ದು ಸದ್ಯದಲ್ಲೇ ಸೇರಲಿರುವ ಕೇಂದ್ರ ಸರ್ಕಾರದ ಮಂತ್ರಿ ಮಂಡಳದ ಮುಂದೆ ಪರಿಶೀಲನೆಗೆ ಬರಲಿದೆಯೆಂದು ವರದಿಯಾಗಿದೆ. ಇತ್ತೀಚಿನ ದರೋಡೆ, ಸುಲಿಗೆ ಮತ್ತು ಅಪಹರಣ ಮೊದಲಾದುವುಗಳಿಂದ ಸುಮಾರು ಒಂದು ಲಕ್ಷ ಮಂದಿ ಲಾಹೋರನ್ನು ತ್ಯಜಿಸಿರುವರೆಂದು ಹೇಳಲಾಗಿದೆ ಪೋಲೀಸರು ಗಲಭೆಕೋರರಿಗೆ ಒಳಗಿಂದೊಳಗೇ ನೆರವು ನೀಡುತ್ತಿರುವರೆಂದೂ ಸಹ ಗೊತ್ತಾಗಿದೆ ಸದ್ಯದಲ್ಲೇ ರಕ್ಷಣಾ ಸಚಿವರಾದ ಸರ್ದಾರ್ ಬಲದೇವಸಿಂಗರು ಲಾಹೋರಿಗೆ ಭೇಟಿಯಿತ್ತು ಪರಿಸ್ಥಿತಿಯನ್ನು ಪರಿಶೀಲಿಸುವರೆಂದು ತಿಳಿದು ಬಂದಿದೆ

ಇಂಡೋನೇಷ್ಯದಲ್ಲಿ ಮತ್ತೆ ಕದನವೇ ?

ಈ ದಿನ ಬೆಳಗಿನ ಜಾವದಿಂದ ಇಂಡೋನೇಷ್ಯದಲ್ಲಿ ಯುದ್ಧವನ್ನು ಮುಂದುವರಿಸಲು ಡಚ್ ಸರ್ಕಾರದವರು ತಮ್ಮ ಸೈನ್ಯಗಳಿಗೆ ಕೊಟ್ಟಿದ್ದ ಆಜ್ಞೆಯ ಪತ್ರವನ್ನು ಇಂಡೋನೇಷ್ಯದ ರಿಪಬ್ಲಿಕನ್ ಸೈನ್ಯಗಳು ವಶಪಡಿಸಿಕೊಂಡಿದ್ದುವೆಂದು ವರದಿಯಾಗಿದೆ ಡಾ|| ಸೋಕರ್ನೋರವರು ಇತ್ತೀಚೆಗೆ ಡಚ್ ಸರ್ಕಾರಕ್ಕೆ ಕಳುಹಿಸಿದ್ದ ಮಂತ್ರಗಳನ್ನು ಅಂಗೀಕರಿಸಲು ಒಪ್ಪದೆ ಈರೀತಿ ಕಾರ್ಯಕ್ರಮವನ್ನು ಡಚ್ಚರು ಆರಂಭಿಸಲಿದ್ದರೆಂದು ಹೇಳಲಾಗಿದೆ ಎಲ್ಲಾ ಪರಿಸ್ಥಿತಿಗಳನ್ನೂ ಎದುರಿಸಿ ದೇಶವನ್ನು ರಕ್ಷಿಸಲು ಸಿದ್ಧರಾಗಿರುವಂತೆ ಇಂಡೋನೇಷ್ಯದ ಸೇನಾಪತಿಗಳು ಅಲ್ಲಿನ ಪ್ರಜೆಗಳನ್ನು ಪ್ರಾರ್ಥಿಸಿರುವರು

ಹೈಸ್ಕೂಲ್ ಉಪಾಧ್ಯಾಯರ ವಜಾ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಫೋನ್] ಬೆಂಗಳೂರು ೩೦

ಕೋಲಾರದ ಹೈಸ್ಕೂಲಿನ ವಿದ್ಯಾರ್ಥಿಗಳು ಕಳೆದ ನವಂಬರಿನಲ್ಲಿ ಮುಷ್ಕರ ಹೂಡಿದ್ದಾಗ ಶ್ರೀ ಕೃಷ್ಣಸ್ವಾಮಿ ಎಂಬ ಉಪಾಧ್ಯಾಯರನ್ನು ವಜಾ ಮಾಡುವುದಿಲ್ಲವೆಂದು ಇಲಾಖೆಯವರು ಭರವಸೆಯಿತ್ತಿದ್ದರೂ ಅವರು ಕೆಲಸದಲ್ಲಿದ್ದಾಗಲೇ ಬೇರೆ ಇಬ್ಬರನ್ನು ನೇಮಿಸಿಕೊಂಡ ವಿಚಾರವಾಗಿ ಈ ದಿನ ಶಾಸನ ಸಭೆಯಲ್ಲಿ ಶ್ರೀ ನಾಗಯ್ಯ ರೆಡ್ಡಿಯವರು ಪ್ರಶ್ನೆಗಳನ್ನು ಹಾಕಿದರು. ಮುಷ್ಕರದ ತರುವಾಯ ಸದರಿ ಉಪಾಧ್ಯಾಯರ ಕೆಲಸವು ತೃಪ್ತಿಕರವಾಗಿಲ್ಲವೆಂದು ಇಲಾಖಾಧಿಕಾರಿಗಳಿಗೆ ತಿಳಿದುಬಂದುದೇ ಇದಕ್ಕೆ ಕಾರಣವೆಂದು ವಿದ್ಯಾಧಿಕಾರಿಗಳು ಹೇಳಿದರು.

ದಾಮೋದರದಾಸ್ ವಿದ್ಯಾರ್ಥಿ ವೇತನಗಳನ್ನು ಇದುವರೆಗೆ ಕೊಟ್ಟಿರುವ ಕೋರಮ ವಾರು ಪಟ್ಟಿಯ ವಿಚಾರದಲ್ಲಿ ಶ್ರೀ ಡಿ ಎಸ್ ಮಲ್ಲಪ್ಪನವರು ಕೇಳಿದ ಪ್ರಶ್ನೆಗೆ ಎಲ್ಲಾ ಹಿತಗಳನ್ನೂ ಪರಿಶೀಲಿಸಲಾಗುವುದೆಂಬ ಉತ್ತರವು ಬಂದಿತು.

ಪಬ್ಲಿಕ್ ಅಕೌಂಟ್ಸ್ ಸಮಿತಿಯ ವರದಿಯ ಮೇಲೆ ಚರ್ಚೆಯನ್ನು ಶ್ರೀ|| ಬೇಲೂರು ಶ್ರೀನಿವಾಸಯ್ಯಂಗಾರ್ಯರಿಂದ ಆರಂಭವಾಯಿತು ವಿವಿಧ ಇಲಾಖೆಗಳ ಕಡತಗಳು ಸಮರ್ಪಕವಾಗಿಲ್ಲವೆಂದು ಅವರು ಹೇಳಿದರು

ಸಾರ್ವಜನಿಕ ಆರೋಗ್ಯ ಸಮಿತಿಗೆ ಶ್ರೀ ಮತಿ ರತ್ನಮ್ಮ ಐಜಾಕ್ ಮತ್ತು ಶ್ರೀ|| ಹೆಚ್ ಎಸ್ ರುದ್ರಪ್ಪನವರು ಸದಸ್ಯರಾಗಿ ಚುನಾಯಿಸಲ್ಪಟ್ಟಿರುವರು

ಈ ದಿನ ಬೆಳಿಗ್ಗೆ ದಿವಾನರು ಕಾಕಾಸಪಲ್ಯಯಲ್ಲಿ ಪೌರಸಭೆಯ ಹೈಸ್ಕೂಲ್ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು

ಬೆಂಗಳೂರು ೩ ನೇ ಮುನಿಸೀಫರಾದ ಶ್ರೀ|| ವಿ ಚೆನ್ನಪ್ಪನವರನ್ನು ಅಲ್ಲಿನ ಫಸ್ಟ್ ಕ್ಲಾಸ್ ಸಿಟಿ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಲಾಗಿದೆ

● ಕೇಂದ್ರ ಸರ್ಕಾರದ ಆಹಾರ ಶಾಖೆಯ ಕಾರ್ಯದರ್ಶಿ ಶ್ರೀ ಕೆ. ಎಲ್ ಪಂಜಾಬಿಯವರನ್ನು ಇಂಡೋನೇಷ್ಯಾದಲ್ಲಿ ಭಾರತದ ಪ್ರತಿನಿಧಿಯನ್ನಾಗಿ ನೇಮಿಸಲಾಗಿದೆಯೆಂದು ವರದಿಯಾಗಿದೆ ಇಂಡೋನೇಷ್ಯದಲ್ಲಿ ಆಗಸ್ಟಿನಿಂದ ಭಾರತ ಪ್ರತಿನಿಧಿಯ ಕಛೇರಿ ಆರಂಭವಾಗುವುದೆಂದು ಗೊತ್ತಾಗಿದೆ.

ಸಾಧ್ವಿ

೩೦-೬-೪೭ ಸೋಮವಾರ

ರಾಜ್ಯಾಂಗ ಸಭೆಗೆ ಚುನಾವಣೆ ಹೇಗೆ?

ಮೈಸೂರು ಸಂಸ್ಥಾನವು ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ನಿರ್ಧರಿಸಿರುವುದಷ್ಟೆ. ಆದರೆ ಇಲ್ಲಿನ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಕ್ರಮವನ್ನು ಇನ್ನೂ ಸರ್ಕಾರದವರು ಸರಿಯಾಗಿ ತಿಳಿಯಪಡಿಸಿರುವುದಿಲ್ಲ. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಈ ಬಗ್ಗೆ ಸರ್ಕಾರದ ಘೋಷಣೆಯು ಹೊರಬಿದ್ದೊಡನೆಯೇ ಚುನಾವಣೆಯ ವಿಧಾನವೇ ಮುಂತಾದ ವಿವರಗಳೂ ಸಹ ಪ್ರಕಟಿಸಲ್ಪಟ್ಟವು. ನಮ್ಮಲ್ಲಿ ಪ್ರತಿಯೊಂದು ಕೆಲಸವೂ ನಿಧಾನವಾಗಿ ಸಾಗುತ್ತಿದೆ.

ಈ ಬಗ್ಗೆ ಚರ್ಚೆ ನಡೆಸಲು ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕರೆದಿರುವುದೇನೋ ನಿಜ; ಆದರೆ ರಾಜ್ಯಾಂಗ ಸಭೆಗೆ ಸದಸ್ಯರನ್ನು ಆರಿಸಲು ಕಾಲವು ಕಡಿಮೆಯಾಗಿರುವುದರಿಂದ ಜಂಟಿ ಅಧಿವೇಶನದ ಕಾರ್ಯಕಲಾಪಗಳಿಗಾಗಿ ಕಾಯುವುದು ಸಾಧ್ಯವಿಲ್ಲವಾಗಿದೆ. ಈ ಮಧ್ಯೆ ಅಸ್ಪಷ್ಟವಾದ ಕೆಲವು ಅಂಶಗಳಿಗೆ ಸರ್ಕಾರದವರು ಕೂಡಲೇ ಗಮನ ಕೊಡಬೇಕಾಗಿದೆ. ಈಗಾಗಲೇ ಪತ್ರಿಕೆಗಳಲ್ಲಿ ಈ ವಿಚಾರವಾಗಿ ವಿಮರ್ಶೆಗಳು ನಡೆದಿವೆ. ಸರ್ಕಾರದವರು ಅವುಗಳ ಬಗ್ಗೆ ಲಕ್ಷ್ಯ ವ್ಯವಸ್ಥೆ ಮಾಡುವುದು ಯುಕ್ತವಾಗಿದೆ.

ರಾಜ್ಯಾಂಗ ನಿರ್ಮಾಣ ಕಾರ್ಯವು ದೇಶದ ಯಾವ ಪಕ್ಷದ ದೃಷ್ಟಿಯಿಂದ ಕಲ್ಪಿಸಲ್ಪಟ್ಟದ್ದಲ್ಲ; ದೇಶದ ಅಭ್ಯುದಯದ ಮೂಲಭೂತ ತತ್ವಗಳಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುತ್ತದೆ. ಆದುದರಿಂದ ದೇಶದ ಸಮಸ್ತ ಅಂಶಗಳು ಪ್ರತಿನಿಧಿಗಳ ಮೂಲಕ ಅದರಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು ಅಗತ್ಯ. ಬ್ರಿಟಿಷ್ ಭಾರತದಲ್ಲಿ ಇದೇ ತತ್ವವನ್ನೇ ಅವಲಂಬಿಸಲಾಗಿತ್ತು. ಇದನ್ನು ಕೇವಲ ಒಂದು ಪಕ್ಷದ ಪ್ರಶ್ನೆಯಾಗಿ ಭಾವಿಸದೆ ಮೇಧಾವಿಗಳು, ದೇಶಸೇವಕರು ಅದರ ಪ್ರತಿನಿಧಿಗಳು ಮಹನೀಯರುಗಳನ್ನೂ ಆರಿಸಲಾಗದ ಕೇವಲ ಶಾಸನ ಸಭೆಗಳ ಸದಸ್ಯರುಗಳನ್ನೇ ರಾಜ್ಯಾಂಗ ಸಭೆಗೆ ಆರಿಸುವಂತೆ ಮಾಡುವುದು ಸಂಕುಚಿತ ವರ್ತನೆಯಾಗುತ್ತದೆ. ಸೀಟನ್ನು ಕೊಡುವವರು ಶಾಸನ ಸಭಾ ಸದಸ್ಯರೇ ಆದರೂ ಉಮೇದುವಾರಿಕೆಗೆ ಹೊರಗಿನವರಿಗೂ ಅವಕಾಶವಿರಬೇಕು.

ಈಗಾಗಲೇ ಸರ್ ಎಂ ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮೈಲ್, ಡಿ ವಿ ಗುಂಡಪ್ಪ, ಕೆ. ಚಂಗಲರಾಯ ರೆಡ್ಡಿ, ಕೆ ಟಿ ಭಾಷ್ಯಂ, ಹೆಚ್ ಸಿ ದಾಸಪ್ಪ—ಮುಂತಾದವರುಗಳ ಹೆಸರುಗಳು ಸೂಚಿಸಲ್ಪಟ್ಟಿವೆ. ಇಂತಹ ಮಹನೀಯರುಗಳ ಸೇವೆಯು ಮೈಸೂರಿನ ಉನ್ನತಿಗಾಗಿ ದೊರೆಯುವಂತೆ ಮಾಡುವುದು ಸಕಲ ದೇಶಾಭಿಮಾನಿಗಳ ಕರ್ತವ್ಯ.

ಚುನಾವಣಾ ಪದ್ಧತಿಯು ಯಾವ ರೀತಿ ಇರಬೇಕೆಂಬುದನ್ನು ಪ್ರಜಾ ಪ್ರಭುತ್ವ ತತ್ವಕ್ಕೆ ಅನುಗುಣವಾಗಿ ನಿರ್ಧರಿಸಬೇಕು. ನಾಮಕರಣದ ಸದಸ್ಯರುಗಳಿಗೂ ಸರ್ಕಾರಿ ಅಧಿಕಾರಿಗಳಿಗೂ ಈ ಚುನಾವಣೆಯಲ್ಲಿ ಸ್ಥಾನವಿರಕೂಡದು. ಚುನಾವಣೆಯು ನೇರವಾದ ಮತ್ತು ಸ್ವತಂತ್ರವಾದ ರೀತಿಯಲ್ಲಿ ನಡೆಯಬೇಕು. ಮುಂದೆ ನಡೆಯಲಿರುವ ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ಈ ವಿಷಯಗಳು ಸೂಕ್ತವಾದ ರೀತಿಯಲ್ಲಿ ಇತ್ಯರ್ಥವಾಗಿ ಮೈಸೂರಿನ ನಿಜವಾದ ಪ್ರತಿನಿಧಿಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವಂತಾಗಲೆಂದು ನಾವು ಹಾರೈಸುತ್ತೇವೆ.

ಶ್ರೀ
ಹಾಲಸಿದ್ಧೇಶ್ವರ ಸಂಗೀತ
ನಾಟಕ ಮಂಡಳಿ, ಹಲಗೇರಿ.
ಯಶಸ್ವಿಯಾದ ಕಾಲ್ಪನೇ ಪ್ರಯೋಗ
ಇವರು ಮೈಸೂರು ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ 2-7-47
ನೇ ಬುಧವಾರ ರಾತ್ರಿ ೧೦ ಘಂಟೆಗೆ

ಹೇಮರೆಡ್ಡಿ-ಮಲ್ಲಮ್ಮ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿಕ್ಕಚೆಟ್ಟಪ್ಪ, ಪ್ರೊಪ್ರೈಟರ್

ಮೈಸೂರು ಸಿಟಿ ಮುನಿಸಿಪಾಲಿಟಿ
14-6-47
H 3 P.R 19/46-7

೧೯೪೭-೪೮ ನೇ ಸಾಲಿಗೆ ಲೈಸೆನ್ಸ್ ಗಳನ್ನು ಮಾಡಲು ಅಪೇಕ್ಷೆಯುಳ್ಳವರೆಲ್ಲರೂ ಮುನಿಸಿಪಲ್ ಹೆಲ್ತ್ ಆಫೀಸರವರಿಗೆ ಲೈಸೆನ್ಸಿನ ಬಗ್ಗೆ ಅರ್ಜಿಗಳನ್ನು ೧೯೪೭ ನೇ ಜುಲೈ ಮಾಹೆ ಹದಿನೈದನೆಯ ತಾರೀಖಿನೊಳಗೆ ಸಲ್ಲಿಸಬೇಕು. ಈ ರೀತಿಯಲ್ಲಿ ಅರ್ಜಿ ಕೊಟ್ಟ ಮಾತ್ರಕ್ಕೆ ಲೈಸೆನ್ಸು ಬಂದಂತೆ ಯಾರೂ ಭಾವಿಸಬಾರದು. ಕ್ರಮವಾಗಿ ಆರ್ಡರ್ ಆದನಂತರ ಲೈಸೆನ್ಸು ಪಡೆದು ಕಸಬುಗಳನ್ನು ನಡೆಸಬೇಕು. ಹಾಗಿಲ್ಲವಾದಲ್ಲಿ ಅಂತಹವರ ಮೇಲೆ ಕಾನೂನು ರೀತ್ಯಾ ಮುಂದಿನ ಕ್ರಮ ಜರುಗಿಸಬೇಕಾಗುತ್ತದೆಂದು ಈ ಮೂಲಕ ಎಚ್ಚರಿಸಿದೆ. ಮೇಲೆ ಹೇಳಿದ ತಾರೀಖಿನ ನಂತರ ಇದರ ಬಗ್ಗೆ ಬರತಕ್ಕ ಅರ್ಜಿಗಳ ಮೇಲೆ ಸಿಗಾ ತೆಗೆದುಕೊಳ್ಳಲಾಗುವುದಿಲ್ಲವೆಂದೂ ಸಹಾ ಈ ಮೂಲಕ ತಿಳಿಯಪಡಿಸಿದೆ.

ಆರ್. ರಾಮಚಂದ್ರರಾವ್ ಬಾಂಬೋರೆ
ಪ್ರೆಸಿಡೆಂಟ್,
ಮೈಸೂರು ಸಿಟಿ ಮುನ್ಸಿಪಾಲಿಟಿ ಮೈಸೂರು

ವುಡ್‌ಲ್ಯಾಂಡ್ಸ್ ಟಾಕೀಸ್
28-6-47 ರಿಂದ
ಶನಿವಾರ ೯ ನೇ ವಾರ
ಪ್ರತಿ ದಿನ ೩ ಆಟಗಳು
ಶನಿವಾರ ಮತ್ತು ಭಾನುವಾರ
ಮ್ಯಾಟಿನಿ

ನಾಮ್ ಇರುವರು
(ತಮಿಳು)

ಪಾತ್ರ :-
ಟಿ ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ ಆರ್.
ರಾಮಚಂದ್ರ ಮುಂತಾದವರು.

ಹರಿಜನರೊಡನೆ ಊಟ ಮಾಡಲು ಒತ್ತಾಯವೇ?

ಹರಿಜನರೊಡನೆ ಊಟ ಮಾಡದಿದ್ದರೆ ಕಾಲೇಜುಗಳಿಗೆ ಸೇರಿಸಲಾಗುವುದಿಲ್ಲವೆಂದು ವಿಶ್ವವಿದ್ಯಾಲಯದವರು ತಿಳಿಸಿರುವುದನ್ನು ಪ್ರತಿಭಟಿಸಲು ಅಹಮ್ಮದಾಬಾದ್ ವಿದ್ಯಾಲಯದ ೭೩ ಮಂದಿ ವಿದ್ಯಾರ್ಥಿಗಳು ಕಳೆದ ೪ ದಿನಗಳಿಂದ ಉಪವಾಸ ಮುಷ್ಕರ ಆಚರಿಸುತ್ತಿದ್ದಾರೆ. ಈ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿ ಬೊಂಬಾಯಿ ಪ್ರಾಂತದ ೫೦ ಮಂದಿ ವಕೀಲರು ಪ್ರಧಾನಿ ಖೇರರಿಗೆ ತಂತಿ ಕಳುಹಿಸಿದ್ದಾರೆ.

Edited printed and published by A. R. Nagarajan at the Sadhvi Press D. Subbaiah Road Mysore

---

ಪೌರಸಭಾ ಉಪಾಧ್ಯಕ್ಷರು

[ಸ್ವಂ ಸು] ನಂಜನಗೂಡು ೨೮

ಇಲ್ಲಿನ ಪೌರಸಭಾ ಉಪಾಧ್ಯಕ್ಷ ಚುನಾವಣೆಯು ನಿನ್ನೆ ನಡೆದು ಶ್ರೀಮಾನ್ ಕೆ. ಎಸ್ ಲಕ್ಷ್ಮಣ ಶೆಟ್ಟರು ಉಪಾಧ್ಯಕ್ಷರಾಗಿ ಚುನಾಯಿತರಾಗಿರುವರು.

ರಾಜಕಮಲ್
ತಾ|| ೨೭-೬-೪೭ ರಿಂದ
ಪ್ರತಿ ದಿನ ೩ ಆಟಗಳು

'ಬೈರಾಂಖಾನ್'

—: ಭೂಮಿಕೆ :—
ಮೆಹತಾಬ್, ಜಾಗೀರ್ದಾರ್.

ಮೈಸೂರು ಸ್ಟೇಟ್ ರೈಲ್ವೆ

ಆಹಾರ ಸರಬರಾಜು ಇಲಾಖೆ

ನೋಟಿಫಿಕೇಷನ್ : ತಾ|| ೨೪ ೬—೪೭

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,—

ಈ ಇಲಾಖೆಯಲ್ಲಿ ಎಲ್ಲ ಬಗೆಯ ಉಪಯೋಗಿಸಲ್ಪಟ್ಟ ೭೦೦೦ ಗೋಣೀಚೀಲಗಳು ಮಾರಾಟಕ್ಕೆ ಸಿದ್ಧವಾಗಿವೆ. ಕೊಂಡುಕೊಳ್ಳಲಪೇಕ್ಷಿಸುವವರು ತಮ್ಮ ಟೆಂಡರುಗಳ ಎರಡು ಪ್ರತಿಗಳನ್ನು ಮೊಹರಾದ ಕವರುಗಳಲ್ಲಿಟ್ಟು ೧೯೪೭ ನೇ ಜುಲೈ ೧೦ ನೇ ತಾರೀಖಿನೊಳಗಾಗಿ ಈ ಕೆಳಗೆ ರುಜು ಮಾಡಿರುವವರಿಗೆ ಕಳುಹಿಸಿಕೊಡಬಹುದು. ಮೊಹರಾದ ಕವರುಗಳ ಮೇಲ್ಭಾಗದಲ್ಲಿ " ಗೋಣೀಚೀಲಗಳಿಗಾಗಿ ಟೆಂಡರು " ಎಂಬುದಾಗಿ ಬರೆಯಬೇಕು. ಮೇಲ್ಕಂಡ ಅವಧಿಯನಂತರ ಬರತಕ್ಕ ಟೆಂಡರುಗಳಿಗೆ ಗಮನ ಕೊಡಲಾಗುವುದಿಲ್ಲ. ಮೇಲ್ಕಂಡ ಪದಾರ್ಥಗಳಿಗೆ ಒಳಪಟ್ಟ ಟೆಂಡರುಗಳು ಮಾತ್ರ ತಾ|| ೧೧-೭-೪೭ ರ ದಿನ ಮಧ್ಯಾಹ್ನ ೩ ಗಂಟೆಗೆ ಈ ಕೆಳಗೆ ರುಜು ಮಾಡಿರುವವರಿಂದ ತೆರೆಯಲ್ಪಡುತ್ತವೆ. ಟೆಂಡರುಗಳನ್ನು ಕಳುಹಿಸಿರುವವರು ಆ ಕಾಲದಲ್ಲಿ ಹಾಜರಿರಬಹುದು.

ಈ ಟೆಂಡರಿಗೆ ಮುಂದೆ ಕಂಡ ಷರತ್ತುಗಳು ಅನ್ವಯಿಸುವುವು :—

೧. ಪ್ರತಿ ಟೆಂಡರುದಾರನೂ ಮೈಸೂರು ಸ್ಟೇಟ್ ರೈಲ್ವೆಯ ಚೀಫ್ ಆಡಿಟರಲ್ಲಿ ೫೦೦ ರೂಪಾಯಿಗಳನ್ನು ಡಿಪಾಜಿಟ್ಟಾಗಿಟ್ಟು ಅವರಿಗೆ ಕೊಟ್ಟ ಅದರ ರಶೀತಿಯನ್ನು ಟೆಂಡರ್ ಅರ್ಜಿಗೆ ಲಗತ್ತಿಸಿ ಕಳುಹಿಸಿಕೊಡಬೇಕು. ಚೆಕ್ಕು ಮೊದಲಾದುವನ್ನು ಇದಕ್ಕಾಗಿ ಕಳುಹಿಸಿಕೊಟ್ಟರೆ ಅವುಗಳನ್ನು ಅಂಗೀಕರಿಸಲಾಗುವುದಿಲ್ಲ.

೨. ಟೆಂಡರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ, ಅಂತ್ಯ ತೀರ್ಮಾನಕೊಡುವ ಅಧಿಕಾರವನ್ನು ಪಡೆದಿರುವ ಮೈಸೂರು ಸ್ಟೇಟ್ ರೈಲ್ವೆ ಜನರಲ್ ಮ್ಯಾನೇಜರಿಗೆ ಯಾವ ಕಾರಣವನ್ನೂ ಕೊಡದೆ ಟೆಂಡರನ್ನು ಅಂಗೀಕರಿಸಲು ಅಥವಾ ತಿರಸ್ಕರಿಸಲು ಪೂರ್ಣಾಧಿಕಾರವಿರುತ್ತದೆ. ಅತ್ಯಂತ ಹೆಚ್ಚು ಮೊಬಲಗಿನ ಟೆಂಡರನ್ನೇ ಅಂಗೀಕರಿಸಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ.

೩. ಜನರಲ್ ಮ್ಯಾನೇಜರರ ಅಂತ್ಯ ನಿರ್ಧಾರದ ನಂತರ ಜಯಶೀಲನಾದ ಟೆಂಡರುದಾರನು ಟೆಂಡರು ಅಂಗೀಕಾರವಾದ ಮೇಲೆ ಅವನಿಗೆ ತಿಳಿಯಪಡಿಸಿದ ದಿನದಿಂದ ಮೂರು ದಿನಗಳೊಳಗಾಗಿ ಠೇವಣಿ ಮೊಬಲಗಿನ ವಿನಾ ಪೂರ್ತಿ ಮೊಬಲಗನ್ನೂ ಪಾವತಿಮಾಡಿ ಎಂಟು ದಿನಗಳೊಳಗಾಗಿ ಎಲ್ಲ ಗೋಣೀಚೀಲಗಳನ್ನು ತನ್ನ ಸುಪರ್ದಿಗೆ ಪಡೆಯಬೇಕು. ಆ ರೀತಿ ಮಾಡಲು ತಪ್ಪಿದಲ್ಲಿ ಅವನು ಠೇವಣಿಯಾಗಿ ಕೊಟ್ಟಿರುವ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೪. ಟೆಂಡರುದಾರರು ತಮ್ಮ ಕೊಟೇಷನ್ನುಗಳನ್ನು ಸಾರಾಸಗಟಿಗೆ ನಮೂದಿಸಬೇಕು. ಬಿಂಗಡಿಸಿ ಕೊಟೇಷನ್ನುಗಳನ್ನು ನಮೂದಿಸಿರುವ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ.

೫. ಜಯಶಾಲಿಯಾದ ಟೆಂಡರುದಾರನಿಗೆ ಅವನ ಟೆಂಡರು ಅಂಗೀಕಾರವಾಗಿದೆಯೆಂದು ತಿಳಿಸಿದ ಮೇಲೆ ಅವನು ಷರತ್ತುಗಳಿಗೆ ಬದ್ಧನಾಗಲು ಹಿಂಜರಿದರೆ ಅವನ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೬. ಅಂಗೀಕೃತವಾಗದ ಟೆಂಡರುದಾರರು ಅವರಿಗೆ ಆ ವಿಷಯವನ್ನು ತಿಳಿಸಿದ ನಂತರ ತಮ್ಮಲ್ಲಿರುವ ರಶೀತಿಯನ್ನು ಮೈಸೂರು ಸ್ಟೇಟ್ ರೈಲ್ವೆಯ ಚೀಫ್ ಆಡಿಟರವರಿಗೆ ತೋರಿಸಿ ತಾವು ಠೇವಣಿಯಾಗಿಟ್ಟಿರುವ ಮೊಬಲಗನ್ನು ವಾಪಸು ಪಡೆಯಬಹುದು.

೭. ಚೀಲಗಳನ್ನು ಕೊಂಡುಕೊಳ್ಳಲಪೇಕ್ಷಿಸುವವರು ಆಫೀಸು ಕೆಲಸವಾಗುವ ದಿನಗಳಲ್ಲಿ ಪ್ರತಿ ದಿನ ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ ಗೂಡ್ಸ್ ಷೆಡ್ಡಿನ ಬಳಿಯಿರುವ ರೈಲ್ವೆ ಸೆಂಟ್ರಲ್ ಡಿಪೋವಿನಲ್ಲಿ ಚೀಲಗಳನ್ನು ಬಂದು ನೋಡಬಹುದು.

ಮೈಸೂರು,
ತಾ|| ೨೪-೬-೪೭.

ವಿ. ಆರ್ ಬಾಬು ಮೊದಲಿಯಾರ್,
ಫುಡ್ ಕಂಟ್ರೋಲರ್, ಮೈಸೂರು ಸ್ಟೇಟ್ ರೈಲ್ವೆ.

ಫೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೨ ಕಾಣಿ

ಸಂಪುಟ ೫] ಮಂಗಳವಾರ ೧—೭—೪೭ [ಸಂಚಿಕೆ ೨೭೬

ಇನ್ನು ೮ ವರ್ಷಗಳಲ್ಲಿ ಅಣು ಬಾಂಬಿನ ಯುದ್ಧ

ಉಪಾಕರ್ಮ ವಿಚಾರ

ಮೈಸೂರು ೧

ವರ್ಷ ಶ್ರಾವಣ ಭಾದ್ರಪದ ಎರಡು ಗಳೂ ಮಲಮಾಸದಿಂದ ದುಷ್ಟವಾಗಿ ೩ ಶ್ರಾವಣ ದುಷ್ಟವಾಗಿದ್ದರೆ ಆಷಾ ಮಾಡಬೇಕೆಂದು ಬೋಧಾಯನರು ಸುತ್ತಾರೆ. ಒಂದು ಶಾಖೆಯವರು ಸುವ ಕಾಲವು ದುಷ್ಟವಾಗಿದ್ದರೆ ಮ ದು ಶಾಖೆಯವರು ಹೇಳಿರುವ ನಿರ್ಧಿ ಲವನ್ನು ಎಲ್ಲರೂ ಅನುಸರಿಸಬೇಕೆಂ ಧರ್ಮ ಶಾಸ್ತ್ರಕಾರರ ಅಭಿಪ್ರಾಯ. ಎಕೆ ನೋಡಿದರೆ ಆಷಾಢ ಮಾಸವೊಂ ಸರ್ವರಿಗೂ ನಿರ್ದುಷ್ಟವಾದದ್ದೆಂದು ಬರುತ್ತದೆ.

ಶಾಖೆಯವರು ಗಾರ್ಗರೂ ಸೂರ್ಯನು ಟಕದಲ್ಲಿರುವಾಗ ಆಷಾಢದಲ್ಲಿ ಉ ಕರ್ಮವನ್ನು ಮಾಡಬೇಕು ಎಂದು ಳಿರುತ್ತಾರೆ. ಇದಕ್ಕೆ ಅರ್ಥವೆಂದು ಧ ಶಾಸ್ತ್ರಕಾರರು ಉತ್ತರಾಯಣದಲ್ಲಿ ಡದು ಎಂದು ಬರೆದಿರುತ್ತಾರೆ. ಹೀಗೆ ಯಲು ಆಧಾರ ವಚನವನ್ನು ಕೊಟ್ಟಿಲ್ಲ ಣಯಸಿಂಧುಕಾರರೂ ಪುರು ಷಾ ಪ್ರಮಾಣಿಕಾರರೂ ಸೌರಮಾಸವನ್ನು ಮು ವೇದಿಗಳ ಸೂತ್ರಕಾರರು ಎತ್ತಿ ಹೇ ಇವುದರಿಂದಲೂ ಅಶ್ವಲಾಯನ ಬೋ ಯನ ಆಪಸ್ತಂಬರು ಚಾಂದ್ರ ಮಾಸ ಎತ್ತಿ ಹೇಳಿರುವುದರಿಂದಲೂ ಸಾಮ ಮಾತ್ರವೇ ಸೌರಮಾಸವನ್ನು ಎಣಿ ಬೇಕು ಅಶ್ವಲಾಯನಾದಿಗಳಲ್ಲ ಎಂದು ಸಾಯಿಸಿರುತ್ತಾರೆ.

ಇವನ್ನೆಲ್ಲ ನೋಡಿದರೆ ಕರ್ಕಾಟಕಕ್ಕೆ ಸೂ ರ್ಯನು ಬಂದಿರುವಾಗ ಎಂಬುದು ಸಾಮ ವೇದಿಗಳಿಗೆ ಮಾತ್ರ ಅನ್ವಯಿಸುವುದರಿಂದ ಬೋಧಾಯನರು ಹೇಳಿರುವ ಆಷಾಢ ಮಾಸವು ಈ ವರ್ಷ ಯಾವ ಬಗೆಯಿಂದ ಲೂ ದುಷ್ಟವಾಗಿರುವುದಿಲ್ಲ. ಶಾಖಾಸ್ತ್ರ ದವರು ಕಾಲವನ್ನು ಅನುಸರಿಸುವ ಸಂದ ರ್ಭವೆಂದರೆ ಇಂತಹುದೇ ಆಗಬೇಕಾಗಿ ಕಾ ಣಿಸುತ್ತದೆ.

ಆದ್ದರಿಂದ ಆಶ್ವಲಾಯನರೇ ಮೊದಲಾದ ವರಿಗೂ ಉತ್ತರಾಯಣ ನಿಷೇಧವು ಅನ್ವ ಯಿಸಿರುತ್ತದೆ. ಎಂಬ ಪ್ರಮಾಣ ವಚನ ವನ್ನು ಕಂಡುಕೊಂಡ ಹೊರತು ಆಷಾಢ ಪೂರ್ಣಿಮೆಯ ಕಾಲವನ್ನು ಬಿಡುವುದಕ್ಕೆ ಯಾರಿಂದಲೂ ಆಗುವ ಹಾಗಿಲ್ಲ. ಆದ್ದ ರಿಂದ ಈಗ ದೊರೆತಿರುವಷ್ಟು ಪ್ರಮಾಣ ಬಲದಿಂದ ಸಾಮವೇದಿಗಳನ್ನು ಬಿಟ್ಟು ಎಲ್ಲರೂ ಉಪಾಕರ್ಮಗಳನ್ನೂ ಆಷಾಢ ಪೂ ರ್ಣಿಮೆಯಲ್ಲಿಯೇ ಆಚರಿಸಬೇಕೆಂದು ಆ ಸ್ತಿಕ ಮಹಾಶಯರಲ್ಲಿ ವಿಜ್ಞಾಪನೆ.

ಎಸ್. ವಿಠ್ಠಲ ಶಾಸ್ತ್ರಿ, ಆಸ್ಥಾನ ವಿದ್ವಾನ್

ತಿರುವಾಂಕೂರು ಪ್ರಜೆಗಳಿಗೆ ಭಾರತ ಸೈನ್ಯದ ಸಹಾಯ

ಅವಶ್ಯಕತೆಯಿದ್ದರೆ ಭಾರತೀಯ ಸೈನ್ಯ ಗಳು ತಿರುವಾಂಕೂರಿಗೆ ನುಗ್ಗಿ ಅಲ್ಲಿನ ೬೦ ಲಕ್ಷ ಪ್ರಜೆಗಳನ್ನು ದಬ್ಬಾಳಿಕೆಯಿಂದ ಬಿಡು ಗಡೆ ಮಾಡುವುವು ಎಂಬುದಾಗಿ ಡಾ॥ ಲೋ ಹಿಯಾರವರು ಕಲ್ಕತ್ತಾ ನಗರದ ವಿದ್ಯಾ ರ್ಥಿಗಳು ನಡೆಸಿದ ಸಭೆಯೊಂದರಲ್ಲಿ ಭಾ ಷಣ ಮಾಡುತ್ತಾ ತಿಳಿಸಿರುವರು. ತಿರು ವಾಂಕೂರು ಸ್ವತಂತ್ರವಾಗುವುದೆಂದು ಮಾ ಡಿರುವ ಘೋಷಣೆಯನ್ನು ಸಹ ಸಭೆಯಲ್ಲಿ ಖಂಡಿಸಲಾಗಿದೆ.

ಬೊಂಬೋರೆಯವರು ಲೇಬರ್ ಕಮೀಷನರ್

ಸ್ವಂ ಸು ಫೋ] ಬೆಂಗಳೂರು ೧

ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ॥ ಆರ್. ರಾಮಚಂದ್ರರಾವ್ ಬೊಂಬೋರೆ ಯವರನ್ನು ಸಂಸ್ಥಾನದ ಲೇಬರ್ ಕಮೀ ಷನರನ್ನಾಗಿಯೂ ಶ್ರೀಮನ್ಮಹಾರಾಜರವರ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಶ್ರೀ॥ ಆರ್. ಜೆ. ರೇಗೋರವರನ್ನು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯವರನ್ನಾಗಿಯೂ ನೇಮಿಸಲಾಗುವುದೆಂದು ಅಧಿಕಾರ ವರ್ತ ಲಗಳಿಂದ ತಿಳಿದು ಬಂದಿದೆ.

ಬೆಂಗಳೂರು ಅಡಿಷನಲ್ ೨ ನೇ ಜಡ್ಜ ರ ಕೋರ್ಟನ್ನು ಇಂದಿನಿಂದ ೬ ತಿಂಗಳ ಕಾಲ ಮುಂದುವರಿಸಲಾಗಿದೆ.

ಡಾ॥ ಬಿ ಎ ಲಕ್ಷ್ಮಣರಾಯರನ್ನು ಮೈ ಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವ ರ್ಗಾಯಿಸಲಾಗಿದೆ.

ಅಪ್ಪಾಜಿಗೌಡರಿಗೆ ಜೀವದಾನ

ಇಂದಿನಿಂದ ನಿವೃತ್ತರಾಗಬೇಕಾಗಿದ್ದ ರೆ ವಿನ್ಯೂ ಸಚಿವರಾದ ಶ್ರೀ॥ ಜಿ. ಅಪ್ಪಾಜಿ ಗೌಡರು ಮತ್ತೊಂದು ಆಜ್ಞೆಯಾಗುವವ ರೆಗೂ ಅಧಿಕಾರದಲ್ಲಿರುವರೆಂದು ತಿಳಿದು ಬಂದಿದೆ.

ಹಾಲಸಿದ್ಧೇಶ್ವರ ನಾಟಕ ಮಂಡಳಿ

ಮೈಸೂರು ೧

ಮೇಲ್ಕಂಡ ಸಂಘದವರು ಮೊನ್ನೆ ರ ತ್ನಾವಳೀ ಥಿಯೇಟರಿನಲ್ಲಿ ತಮ್ಮ ಸಂಸ್ಥೆ ಯ ಪ್ರಥಮ ನಾಟಕವಾದ ಹೇಮರೆಡ್ಡಿ ಮಲ್ಲಮ್ಮ ಎಂಬ ಪೌರಾಣಿಕ ನಾಟಕವನ್ನು ಜಿಲ್ಲಾಧಿಕಾರಿಗಳಾದ ಶ್ರೀ॥ ಜಿ. ಎ. ನಾಗ ರಾಜರಾಯರ ಅಧ್ಯಕ್ಷತೆಯಲ್ಲಿ ಅಭಿನಯಿಸಿ ದರು. ನಟವರ್ಗದವರ ಭಾಷಾ ಶೈಲಿ ಯೂ ಅಭಿನಯವೂ ಪ್ರಶಂಸನೀಯವಾಗಿ ದ್ದುವು. ಈ ಸಂಸ್ಥೆಯವರು ಕನ್ನಡ ನಾಟ ಕ ಕಲಾ ಸೇವೆಯನ್ನು ಉತ್ತಮ ರೀತಿಯಲ್ಲಿ ಮಾಡುತ್ತಿದ್ದಾರೆ. ಮೈಸೂರಿನ ನಾಗರಿಕ ರು ಇವರಿಗೆ ಬೆಂಬಲ ನೀಡುವರೆಂದು ಆಶಿ ಸಲಾಗಿದೆ.

ಬೇಸರಿಕೆ ನಿವಾರಣೆಗಾಗಿ ಮಾತ್ರೆ

ಮನಸ್ಸಿಗೆ ಬೇಸರವುಂಟಾಗಿ ಚಿಂತಿಸ ದುತ್ತಿರುವವರಿಗಾಗಿ ಬ್ರಿಟಿಷ್ ವಿಜ್ಞಾನಿಗ ಳು ಸಿನೆಕ್ರಿನ್ ಎಂಬ ಮಾತ್ರೆಯನ್ನು ಕಂ ಡು ಹಿಡಿದಿದ್ದಾರೆ. ಇದರ ಸೇವನೆಯಿಂದ ಮನಸ್ಸಿಗೆ ಆಹ್ಲಾದವುಂಟಾಗುವುದು.

ಶಾಸನ ಸಭೆಯಲ್ಲಿ ಸಭಾ ಪರಿತ್ಯಾಗ

ಸ್ವಂ ಸು ಫೋ] ಬೆಂಗಳೂರು ೧

ಇಂದಿನ ಮಂತ್ರಿಮಂಡಲದಲ್ಲಿ ತಮಗೆ ವಿಶ್ವಾಸವಿಲ್ಲವೆಂಬುದನ್ನು ತೋರಿಸುವ ಕ್ಕೂ, ಸಂಸ್ಥಾನದಲ್ಲಿ ಕೂಡಲೇ ಪ್ರಜಾಸ ರ್ಕಾರವನ್ನು, ತಾತ್ಕಾಲಿಕ ಮಂತ್ರಿಮಂಡಳವ ನ್ನು ರಚಿಸಬೇಕೆಂಬ ಬೇಡಿಕೆಗೆ ಸರ್ಕಾರದ ವರಿಂದ ಉತ್ತರವೇ ಇಲ್ಲದಿರುವುದನ್ನು ಪ್ರ ತಿಭಟಿಸುವುದಕ್ಕಾಗಿಯೂ ಈ ದಿನ ಶಾಸನ ಸಭೆಯಲ್ಲಿ ಪ್ರಜಾ ಸರ್ಕಾರ ಮಸೂದೆಗಳ ಚರ್ಚೆಯಲ್ಲಿ ಕಾಂಗ್ರೆಸ್ ಪಕ್ಷದವರು ಭಾಗ ವಹಿಸುತ್ತಿಲ್ಲವೆಂದು ಶ್ರೀ ಚೆಂಗಲರಾಯರೆಡ್ಡಿಯವ ರು ಹೇಳಿ, ಅವರ ಪಕ್ಷದೊಡನೆ ಸಭಾ ಪರಿತ್ಯಾಗವನ್ನು ಮಾಡಿದರು. ಅನಂತರ ನ್ಯಾಯಾಂಗ ಮಂತ್ರಿಗಳಿಂದ ಮಂಡಿಸಲ್ಪಟ್ಟ ವಿಮೆ ಮತ್ತು ಕಾರ್ಖಾನೆಗಳಿಗೆ ಸಂಬಂ ಧಪಟ್ಟ ೨ ತಿದ್ದುಪಡಿ ಮಸೂದೆಗಳು ವಿಶೇ ಷ ಚರ್ಚೆಯಿಲ್ಲದೆ ಅಂಗೀಕಾರವಾದುವು.

ಕೇಂದಿ, ಗಾಂಜಾ ಮತ್ತು ಅಫೀಮು ಮುಂತಾದವನ್ನು ಹರಾಜು ಹಾಕದೆ ಹಳೇ ಗುತ್ತಿಗೆದಾರರುಗಳಿಗೇ ಕೊಟ್ಟು ದರ್ಖಾಸ್ತ ಹಿಸಿರುವುದರಿಂದ ಉಂಟಾಗುವ ನಷ್ಟದ ವಿ ಚಾರವನ್ನು ಪರಿಶೀಲಿಸಲು ಕಾಂಗ್ರೆಸ್ಸಿನವ ರು ನಿಲುವಳಿ ನಿರ್ಣಯವೊಂದನ್ನು ಮಂ ಡಿಸಿದ್ದಾರೆ. ಅದು ಈ ಸಂಜೆಗೆ ಚರ್ಚೆಗೆ ಬರುವುದು.

ರಾಜ್ಯಾಂಗ ಸಭೆಗೆ ರಾಜ ಪಿಪ್ಲಾ ಸಂಸ್ಥಾನ

ರಾಜಪಿಪ್ಲಾ ಸಂಸ್ಥಾನವು ಭಾರತ ರಾ ಜ್ಯಾಂಗ ಸಭೆಗೆ ಸೇರಲು ತೀರ್ಮಾನಿಸಿದೆ ಯೆಂದೂ, ಸದ್ಯದಲ್ಲಿಯೇ ಅದರಲ್ಲಿ ಭಾಗ ವಹಿಸಲು ಒಬ್ಬ ಪ್ರತಿನಿಧಿಯನ್ನು ಚುನಾ ಯಿಸಲಾಗುವುದೆಂದೂ ವರದಿಯಾಗಿದೆ.

ಕೇಂದ್ರ ಸರ್ಕಾರದ ರಾಜೀನಾಮೆ

ಈಗಿರುವ ತಾತ್ಕಾಲಿಕ ಸರ್ಕಾರವು ಇ ನ್ನು ಒಂದು ವಾರದೊಳಗೆ ರಾಜೀನಾಮೆ ಕೊಡುವುದೆಂದು ಹೇಳಲಾಗಿದೆ. ಅನಂತರ ಈಗಿರುವ ಮುಸ್ಲಿಂ ಲೀಗಿನ ಮಂತ್ರಿಗಳನ್ನು ಪಾಕಿಸ್ತಾನ್ ಮತ್ತು ಕಾಂಗ್ರೆಸ್ಸಿನವರನ್ನು ಇತರ ಪ್ರದೇಶಗಳಿಗೆ ಸಂಬಂಧ ಪಟ್ಟಂತೆ ನೇಮಿಸಿ ಕೇಂದ್ರ ಆಡಳಿತದ ವ್ಯವಸ್ಥೆ ಮಾ ಡಲಾಗುವುದು ; ಭಾರತದ ಆಸ್ತಿಪಾಸ್ತಿಗಳ ಮತ್ತು ಹಣ ಕಾಸಿನ ವಿಭಜನೆಯಾಗುವ ವರೆಗೆ ಈ ವ್ಯವಸ್ಥೆ ಬದಲಾಯಿಸಲಾಗುವುದಿ ಲ್ಲವೆಂದು ಗೊತ್ತಾಗಿದೆ.

ಸಭೆ, ಮೆರವಣಿಗೆಗಳಿಗೆ ಅಡ್ಡಿ

ಮೈಸೂರು ೧

ಇಂದಿನಿಂದ ಒಂದು ತಿಂಗಳ ವರೆಗೆ ಕ ಚೇರಿಯಿಂದ ಲೈಸೆನ್ಸು ಪಡೆಯದೆ ಮೈಸೂರು ನಗರದಲ್ಲಿ ಯಾರೂ ಸಾರ್ವಜನಿಕ ಸಭೆ, ಮೆರವಣಿಗೆ ಮುಂತಾದುವುಗಳನ್ನು ನಡೆಸ ಕೂಡದೆಂದು ಜಿಲ್ಲಾಧಿಕಾರಿಗಳಾದ ಶ್ರೀ॥ ಜಿ. ಎ. ನಾಗರಾಜರಾಯರು ಪೊಲೀಸ್ ಶಾಸನದ ೪೫ ನೇ ಕಲಮಿನ ಪ್ರಕಾರ ಪ್ರತಿ ಬಂಧಕಾಜ್ಞೆಯನ್ನು ಜಾರಿ ಮಾಡಿರುತ್ತಾರೆ.

ಮತ್ತೊಂದು ಅಣು ಬಾಂಬಿನ ಯುದ್ಧ

ಇನ್ನು ೮ ವರ್ಷಗಳಲ್ಲಿ ಘೋರ ಅಣು ಬಾಂಬಿನ ಯುದ್ಧವು ಸಂಭವಿಸಬಹುದೆಂಬ ಎಚ್ಚರಿಕೆಯನ್ನು ಪ್ರೊ॥ ಆಲ್ಬರ್ಟ್ ಐನ್ ಸ್ಟೀನ್‌ರವರ ಅಧ್ಯಕ್ಷತೆಯಲ್ಲಿ ನೇಮಕವಾ ಗಿರುವ ಅಣು ಶಕ್ತಿಯ ಸಂಶೋಧಕರ ಸ ಮಿತಿಯು ಕೊಟ್ಟಿರುತ್ತದೆ. ಅಣು ಶಕ್ತಿಯ ಹತೋಟಿಗೆ ಸಂಯುಕ್ತ ರಾಷ್ಟ್ರಾಂಗ ಸಭೆ ಯ ಯೋಜನೆಯನ್ನು ಗೊತ್ತು ಮಾಡ ಲು ಅಸಮರ್ಥವಾಗಿರುವುದೂ ಸಹ ಸ ಮಿತಿಯವರು ಹೇಳಿರುವರು. ಬರುವ ಯುದ್ಧದಲ್ಲಿ ಹೆಚ್ಚಿನ ಶಕ್ತಿಯನ್ನು ಸಂಗ್ರ ಹಣ ಮಾಡಿಕೊಳ್ಳಲು ಪ್ರತಿ ರಾಷ್ಟ್ರವೂ ಪೈಪೋಟಿ ನಡೆಸುತ್ತಿರುವುದೇ ಇದಕ್ಕೆ ಕಾ ರಣವೆಂದು ಹೇಳಲಾಗಿದೆ. ಶಾಂತಿ ರಕ್ಷ ಣೆಗೆ ನಿಜವಾದ ಅಧಿಕಾರ ಹೊಂದಿರುವ ವಿಶ್ವ ಸರ್ಕಾರದ ಸ್ಥಾಪನೆಯೇ ಮತ್ತೊಂ ದು ಘೋರ ಸಂಗ್ರಾಮವನ್ನು ತಪ್ಪಿಸುವ ಮಾರ್ಗವೆಂದೂ ಸದರಿ ಸಮಿತಿಯವರು ಅಭಿಪ್ರಾಯಪಟ್ಟಿರುವರು.

ಸನ್ಮಾನ ಕೂಟ

ನಂಜನಗೂಡು ೩೦

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷ ರಾಗಿ ಚುನಾಯಿತರಾಗಿರುವ ಶ್ರೀ॥ ಹೆಚ್. ಎಂ. ಚನ್ನಬಸಪ್ಪ ಮತ್ತು ನಂಜನಗೂಡು ಪೌರಸಭಾಧ್ಯಕ್ಷರಾಗಿ ಚುನಾಯಿತರಾಗಿರು ವ ಶ್ರೀ॥ ಬಿ. ಎನ್. ಆರಾಧ್ಯ ಇವರು ಗಳ ಗೌರವಾರ್ಥವಾಗಿ ಅವರ ಹಿತೈಷಿ ಗಳು ನೆನ್ನೆ ಇಲ್ಲಿನ ಲಿಂಗಣ್ಣನವರ ಛತ್ರದಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಮಾನ್ಯ ಅತಿಥಿಗಳಿಗೂ ಮತ್ತು ಆಹ್ವಾನಿತ ರೆಲ್ಲರಿಗೂ ಮಧ್ಯಾಹ್ನ ಭೋಜನವಾ ದ ನಂತರ ಸಂಜೆ ಒಂದು ಸಭೆ ಸೇರಿದ್ದಿತು. ಸಭಾಧ್ಯಕ್ಷರಾಗಿದ್ದ ಶ್ರೀ॥ ದಾಸಪ್ಪನವರು ಭಾಷಣ ಮಾಡಿ ಶ್ರೀ॥ ಹೆಚ್. ಎಂ. ಚನ್ನಬ ಸಪ್ಪನವರೂ, ಶ್ರೀ॥ ಆರಾಧ್ಯರೂ ಅಧ್ಯಕ್ಷ ರುಗಳಾಗಿ ಚುನಾಯಿತರಾಗಿರುವ ಬಗ್ಗೆ ತ ಮ್ಮ ಸಂತೋಷವನ್ನು ವ್ಯಕ್ತಪಡಿಸಿ ಅವರು ಗಳು ದಕ್ಷತೆಯಿಂದಲೂ, ಸಾಮರ್ಥ್ಯದಿಂ ದಲೂ ತಮ್ಮ ಕೆಲಸಗಳನ್ನು ನಿರ್ವಹಿಸುವ ರೆಂಬ ನಂಬಿಕೆಯನ್ನು ಸೂಚಿಸಿದರು.

ಅನಂತರ ಶ್ರೀ॥ ಎಚ್. ಎಂ. ಚನ್ನಬ ಸಪ್ಪನವರೂ ಮತ್ತು ಆರಾಧ್ಯರೂ ಭಾಷಣ ಮಾಡಿ ಸಾರ್ವಜನಿಕರು ತಮಗೆ ಬೆಂಬಲ ವಿತ್ತು ಅಧ್ಯಕ್ಷತೆಗೆ ಚುನಾಯಿಸಿರುವು ದಕ್ಕಾಗಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿ ದರು.

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ರಂಗನ ಮಠದ ಶ್ರೀ ಶ್ರೀ ದಕ್ಷಿಣಾಮೂರ್ತಿ ಸ್ವಾಮಿ ಗಳು "ಸಾಧು ಮತ್ತು ಸಾಧನ" ಎಂಬ ವಿಷಯವಾಗಿ ಉಪನ್ಯಾಸ ಮಾ ಡುವರು. ಸರ್ವರಿಗೂ ಆಹ್ವಾನವುಂಟು.

ಸಾಧ್ವಿ

೧-೭-೪೭ ಮಂಗಳವಾರ

ಮತ್ತೆ ವಂದೇ ಮಾತರಂ ಪ್ರಕರಣ

ಬೆಂಗಳೂರು ಸೆಂಟ್ರಲ್ ಹೈ ಸ್ಕೂಲಿನಲ್ಲಿ ವಿದ್ಯಾರ್ಥಿಗಳು ವಂದೇ ಮಾತರಂ ಗೀತೆಯನ್ನು ಹಾಡಿದಾಗ ಉಪಾಧ್ಯಾಯರೊಬ್ಬರು ಒಬ್ಬ ವಿದ್ಯಾರ್ಥಿಯನ್ನು ಹೊಡೆದರೆಂದೂ, ಅದರಿಂದ ಬಿಕ್ಕಟ್ಟು ತಲೆದೋರಿದೆಯೆಂದೂ ವರದಿಯಾಗಿದೆ. ಈ ಶಾಲೆಯು ಆರಂಭವಾದಂದಿನಿಂದ ವಿದ್ಯಾರ್ಥಿಗಳು ಅದನ್ನು ಹಾಡುತ್ತಿರುವರೆಂದು ತಿಳಿದುಬಂದಿದೆ. ಆಗಾಗ್ಗೆ ಹಲವು ಮುಸ್ಲಿಂ ವಿದ್ಯಾರ್ಥಿಗಳು ಇದಕ್ಕೆ ಪ್ರತಿಭಟನೆಯನ್ನು ಸೂಚಿಸುತ್ತಿದ್ದರೂ ಸಹ ಇತರ ವಿದ್ಯಾರ್ಥಿಗಳು ಅದನ್ನು ಹಾಡುತ್ತಲೇ ಬಂದಿದ್ದಾರೆ. ಹೀಗಿದ್ದರೂ ಈಗ ಉಪಾಧ್ಯಾಯರು ವಿದ್ಯಾರ್ಥಿಯನ್ನು ಹೊಡೆದರೆಂಬುದು ಎಲ್ಲೆ ಮೀರಿದ ವರ್ತನೆಯೇ ಸರಿ.

ಕಳೆದ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಈ ಪ್ರಶ್ನೆಯು ಬಂದು ಬಹುಮತದಿಂದ ತೀರ್ಮಾನವಾಗಿರುತ್ತದೆ. ಈ ಗೀತೆಯನ್ನು ಹಾಡಲು ಯಾವ ಅಡ್ಡಿಯೂ ಇರಕೂಡದೆಂದು ಸಭೆಯು ಅಭಿಪ್ರಾಯ ಪಟ್ಟಿರುತ್ತದೆ. ಅದನ್ನು ಹಾಡಲು ಇಷ್ಟವಿಲ್ಲದವರಿಗೆ ಯಾವ ಬಲಾತ್ಕಾರವೂ ಇರುವುದಿಲ್ಲ. ಅವರಿಗೆ ಬೇಡವಾದರೆ ಅವರು ಹೊರಗೆ ಹೋಗಬಹುದು. ಹೀಗಿದ್ದರೂ ಇದಕ್ಕೆ ಯಾರಾದರೂ ಅಡ್ಡಿ ಪಡಿಸಿದರೆ ಅದು ಒಂದು ಶಿಕ್ಷಾರ್ಹವಾದ ಅಪರಾಧವಾಗುವುದು.

ಪ್ರಜಾ ಪ್ರತಿನಿಧಿ ಸಭೆಯಲ್ಲಿ ಈ ರೀತಿ ಖಚಿತವಾದ ಅಭಿಪ್ರಾಯವು ಸೂಚಿಸಲ್ಪಟ್ಟ ಮೇಲೂ ಇಂತಹ ವರ್ತನೆಗಳು ನಡೆಯುವುದು ತೀರಾ ಶೋಚನೀಯ. ಇಂತಹ ಸಣ್ಣ ವಿಚಾರಗಳಲ್ಲಿಯಾದರೂ ಸರ್ಕಾರವು ಪ್ರಜಾಭಿಪ್ರಾಯದಂತೆ ವರ್ತಿಸುವುದು ಅಗತ್ಯವಾಗಿದೆ. ನೆರೆಯ ಪ್ರಾಂತವಾದ ಮದರಾಸಿನಲ್ಲಿ ಈ ಬಗ್ಗೆ ಸ್ಪಷ್ಟವಾದ ಆಜ್ಞೆಯನ್ನೇ ಹೊರಡಿಸಲಾಗಿದೆ. ನಮ್ಮಲ್ಲಿಯೂ ಹಾಗೆ ಮಾಡಲು ಯಾವ ಅಡ್ಡಿಯೂ ಇರಲಾರದು.

ಇನ್ನು ಮುಂದಾದರೂ ಇದಕ್ಕೆ ಅಡ್ಡಿ ಬಾರದಂತೆ ಸರ್ಕಾರದವರು ಆಜ್ಞೆ ಹೊರಡಿಸುವುದು ಅವಶ್ಯಕ. ಅದನ್ನು ಪ್ರತಿಭಟಿಸುವವರಿಗೆ ತಕ್ಕ ಶಿಕ್ಷೆಯನ್ನೂ ಸಹ ಮಾಡಬೇಕು. ಪ್ರಕೃತದಲ್ಲಿ ಮೇಲ್ಕಂಡ ಉಪಾಧ್ಯಾಯರ ವರ್ತನೆಯನ್ನು ಪರಿಶೀಲಿಸಿ ತಕ್ಕ ಬಂದೋಬಸ್ತನ್ನು ಮಾಡಿ ವಿದ್ಯಾರ್ಥಿಗಳನ್ನು ಸಮಾಧಾನಪಡಿಸುವುದು ಯುಕ್ತವಾಗಿರುತ್ತದೆ.

ರಾಜಕಮಲ್

ತಾ|| ೨೭-೬-೪೭ ರಿಂದ

ಪ್ರತಿ ದಿನ ೩ ಆಟಗಳು

'ಬೈರಾಂಖಾನ್'

—. ಭೂಮಿಕೆ : -

ಮೆಹತಾಬ್, ಜಾಗೀರ್ದಾರ್

ತಿರುವಾಂಕೂರಿನಲ್ಲಿ ಪ್ರತಿಬಂಧಕಾಜ್ಞೆಗಳ ರದ್ದು

ಸಭೆ ಮೆರವಣಿಗೆಗಳ ಮೇಲೆ ತಿರುವಾಂಕೂರಿನಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಕಾಜ್ಞೆಗಳನ್ನು ರದ್ದು ಮಾಡಲಾಗಿದೆಯೆಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ. ಮೆರವಣಿಗೆಗಳಿಗೆ ಪರವಾನಿಯನ್ನು ಮಾತ್ರ ಪಡೆಯಬೇಕಾಗಿದೆ. ತಿರುವಾಂಕೂರಿನ ಭವಿಷ್ಯದ ಬಗ್ಗೆ ಅಭಿಪ್ರಾಯ ಸೂಚಿಸಲು ಅಧಿಕಾರಿಗಳಿಗೂ ಖಾಸಗಿಯವರಿಗೂ ಸಮಾನವಾದ ಹಕ್ಕಿದೆಯೆಂದು ಸರ್ ಸಿಪಿ ಯವರು ತಿಳಿಸಿದ್ದಾರೆ.

ರಾಜ್ಯಾಂಗ ಸಭಾ ಕಾಗದ ಪತ್ರಗಳ ಕಳುವು

ರಾಜ್ಯಾಂಗ ಸಭಾ ಕಛೇರಿಯ ಮುಖ್ಯ ಕಾಗದ ಪತ್ರಗಳು ಕಳುವಾಗಿವೆಯೆಂದು ವರದಿಯಾಗಿದೆ. ಸಭಾ ಕಛೇರಿಯಲ್ಲಿರುವ ಲೀಗ್ ಅನುಯಾಯಿಗಳಾದ ಗುಮಾಸ್ತರಿಂದ ಈ ಕೆಲಸ ನಡೆದಿರಬಹುದೆಂದು ಭಾವಿಸಲಾಗಿದೆ

೧೧ ಅಡಿ ಉದ್ದದ ಮಣ್ಣು ಹುಳು!

ಅತಿ ಉದ್ದವಾದ ಮಣ್ಣು ಹುಳುಗಳು ವಿಕ್ಟೋರಿಯಾ ಜಿಪ್ಸ್‌ಲ್ಯಾಂಡಿನಲ್ಲಿ ವಾಸಿಸುತ್ತಿವೆಯೆಂದು ವರದಿಯಾಗಿದೆ. ಇವು ೬ ರಿಂದ ೧೧ ಅಡಿ ಉದ್ದವಿರುವುವು. ಇವುಗಳ ಹೊಟ್ಟೆ ೩ ಅಂಗುಲ ಉದ್ದವಿರುವುದು

ಪೊಲೀಸರ ಅಕ್ರಮ ವರ್ತನೆಯೇ?

ಗುಂಡ್ಲುಪೇಟೆ ೩೦

ಮೈಸೂರಿನ ಕಮ್ಯೂನಿಸ್ಟ್ ಪಕ್ಷದ ಶ್ರೀ ಎಂ ಎಸ್ ಉಗ್ರಪ್ಪನವರು ಐ ಜಿ ಪಿ ಯವರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ. ಗುಂಡ್ಲುಪೇಟೆಯ ಬೀಡಿ ಕೆಲಸಗಾರರ ಮುಷ್ಕರದ ಸಂಬಂಧವಾಗಿ ಅಲ್ಲಿನ ಪೊಲೀಸ್ ಅಧಿಕಾರಿಗಳು ತಮ್ಮನ್ನು ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಕ್ರಮ ರೀತಿಯಲ್ಲಿ ವರ್ತಿಸಿದರೆಂದೂ, ಅನಂತರ ಬೀಡಿ ಕಾರ್ಖಾನೆಯ ಮಾಲಿಕರುಗಳು ಬಂದು ಮನಸ್ಸು ಪ್ರಕ್ಷಿಸಿದರೆಂದೂ, ಪುಕಾರು ಮಾಡಿ ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅವರು ಕೋರಿರುವರು

ಪಾಕಿಸ್ತಾನಕ್ಕೆ ಬೆಲೂಚೀಸ್ಥಾನ

ಬೆಲೂಚೀಸ್ಥಾನವು ಹೊಸದಾಗಿ ರಚಿತವಾಗಲಿರುವ ಪಾಕಿಸ್ತಾನ ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿದೆಯೆಂದು ವರದಿಯಾಗಿದೆ. ಇದಕ್ಕಾಗಿ ನಡೆದ ಮತ ಗಣನೆಯಲ್ಲಿ ಕಾಲಟ್ ಸಂಸ್ಥಾನದ ಪ್ರತಿನಿಧಿಗಳೂ ಮುಸ್ಲಿಮೇತರರೂ ಭಾಗ ವಹಿಸಿರಲಿಲ್ಲವೆಂದು ಹೇಳಲಾಗಿದೆ.

Edited, printed and published by A. R. Nagarajan at the Sadhvi Press D. Subbaiah Road Mysore

ಕರಾಚಿಯಲ್ಲಿ ೪೦,೦೦೦ ಕಾರ್ಮಿಕರ ಮುಷ್ಕರ

ಮುಷ್ಕರವನ್ನಾರಂಭಿಸುವ ಮುನ್ನ ೧೫ ದಿನಗಳ ಮೊದಲೇ ತಿಳುವಳಿಕೆ ಕೊಡಬೇಕೆಂದು ಸಿಂಧು ಶಾಸನ ಸಭೆಯಲ್ಲಿ ಅಂಗೀಕಾರವಾಗಿರುವ ನಿರ್ಣಯವನ್ನು ಪ್ರತಿಭಟಿಸಲು ಕರಾಚಿನಗರದ ಸುಮಾರು ೪೦ ಸಹಸ್ರ ಮಂದಿ ಕೆಲಸಗಾರರು ಮುಷ್ಕರವನ್ನಾರಂಭಿಸಿರುವರೆಂದು ವರದಿಯಾಗಿದೆ. ಕರಾಚಿ ನಗರದ ಎಲ್ಲ ಕಾರ್ಮಿಕ ಸಂಘಗಳ ಸದಸ್ಯರೂ ಇದರಲ್ಲಿ ಭಾಗವಹಿಸಿರುವರೆಂದು ಹೇಳಲಾಗಿದೆ

ಸಾಮ್ರಾಜ್ಯ ಸ್ಮಾರಕಗಳನ್ನು ನಾಶ ಮಾಡಬೇಕು

ಜೈ ಪ್ರಕಾಶ್ ನಾರಾಯಣರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ಸೇರಲಿರುವ ಪ್ರಾಂತೀಯ ರಾಜಕೀಯ ಸಮ್ಮೇಳನದಲ್ಲಿ ಭಾರತೀಯರಿಗೆ ಅಪಮಾನವನ್ನುಂಟುಮಾಡಬಹುದಾದ ಸಾಮ್ರಾಜ್ಯ ಸ್ಮಾರಕಗಳನ್ನೆಲ್ಲಾ ತೆಗೆದು ಹಾಕಬೇಕೆಂಬ ನಿರ್ಣಯವು ಬರಲಿದೆಯೆಂದು ಗೊತ್ತಾಗಿದೆ. ಇವುಗಳಲ್ಲಿ ಮಾಜಿ ವೈಸರಾಯರ ಪುತ್ಥಳಿ ಪಂಚಮ ಜಾರ್ಜರ ಸ್ಮಾರಕಗಳೂ ಸೇರಿವೆ

ಮೈಸೂರು ಸಿಟಿ ಮುನಿಸಿಪಾಲಿಟಿ

14 6 47

H 3 P R 19/46-7

೧೯೪೭-೪೮ ನೇ ಸಾಲಿಗೆ ಲೈಸೆನ್ಸ್ ರಿನ್ಯೂ ಮಾಡಲು ಅಪೇಕ್ಷೆಯುಳ್ಳವರೆಲ್ಲರೂ ಮುನಿಸಿಪಲ್ ಹೆಲ್ತ್ ಆಫೀಸರವರಿಗೆ ಲೈಸೆನ್ಸ್ ರಿನ್ಯೂ ಬಗ್ಗೆ ಅರ್ಜಿಗಳನ್ನು ೧೯೪೭ ನೇ ಜುಲೈ ಮಾಹೆ ಪದಿನೈದನೆಯ ತಾರೀಖಿನೊಳಗೆ ಸಲ್ಲಿಸಬೇಕು. ಈ ರೀತಿಯಲ್ಲಿ ಅರ್ಜಿ ಕೊಟ್ಟ ಮಾತ್ರಕ್ಕೆ ಲೈಸೆನ್ಸು ಬಂದಂತೆ ಯೆಂದು ಭಾವಿಸಬಾರದು. ಕ್ರಮವಾಗಿ ಆರ್ಡರ್ ಆದನಂತರ ಲೈಸೆನ್ಸು ಪಡೆದು ಕಸಬುಗಳನ್ನು ನಡೆಸಬೇಕು. ಹಾಗಿಲ್ಲವಾದಲ್ಲಿ ಅಂತಹವರ ಮೇಲೆ ಕಾನೂನು ರೀತ್ಯಾ ಮುಂದಿನ ಕ್ರಮ ಜರುಗಿಸಬೇಕಾಗುತ್ತದೆಂದು ಈ ಮೂಲಕ ಎಚ್ಚರಿಸಿದೆ. ವಾಯಿದೆ ತಾರೀಖಿನ ನಂತರ ರಿನ್ಯೂ ಬಗ್ಗೆ ಬರತಕ್ಕ ಅರ್ಜಿಗಳ ಮೇಲೆ ಸಿಗಾ ತೆಗೆದುಕೊಳ್ಳಲಾಗುವುದಿಲ್ಲವೆಂದೂ ಸಹಾ ಈ ಮೂಲಕ ತಿಳಿಯಪಡಿಸಿದೆ.

ಆರ್. ರಾಮಚಂದ್ರರಾವ್ ಪಾಂಭೋರೆ
ಪ್ರೆಸಿಡೆಂಟ್,
ಮೈಸೂರು ಸಿಟಿ ಮುನಿಸಿಪಾಲಿಟಿ ಮೈಸೂರು

DO VISIT

The Health and Fine Arts

EXHIBITION

From 8th to 12th July 1947

AT THE

EXHIBITION BUILDINGS, MYSORE.

OPENED From 8 to 12 Noon, 3 to 8 p m

Daily Admission Fee 0—1—0 only

Various Amusements And Entertainments Provided.

A BEST OPPORTUNITY

ಶ್ರೀ ಗಣೇಶ್ ಟಾಕೀಸಿನಲ್ಲಿ

ನಾಳೆಯಿಂದ

-: ದಿನವಹಿ ೩ ಆಟಗಳು :-

ಕಲ್ಚರ್ಡ್ ಕಮೆಡಿಯನ್ ಹಿರಣ್ಣಯ್ಯ,
ಸಂಗೀತರತ್ನ ಚೌಡಯ್ಯ,
B N ಸುಬ್ಬಯ್ಯ, ಬಳ್ಳಾರಿ ಲಲಿತ,
ರತ್ನಮಾಲಾ, ಚಂದ್ರಮ್ಮ
— ಮುಂತಾದವರು ನಟಿಸಿರುವ —

"ವಾಣಿ"

(Brand New Print.)

ಹೊಸ ಕಾಪಿ

ಸಂಗೀತಮಯ ಸಾಮಾಜಿಕ ಕನ್ನಡ

● ಚಿತ್ರ ●

(ಶಂಕರ ಪಾರ್ವತಿ ನರ್ತನವನ್ನು ನೋಡಿ ಆನಂದಪಡಿರಿ.)

Sree Bhramaramba Picture Circuit Release, Mysore

[illegible]

ಶ್ರೀ

ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಜಲಗೇರಿ.

ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ 2-7-47 ನೇ ಬುಧವಾರ ರಾತ್ರಿ ೧೦ ಘಂಟೆಗೆ

ಪಠಾಣೀ ಪಾಶ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಚಿಕ್ಕವೀರಪ್ಪ ಪ್ರೊಪ್ರೈಟರ್

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨—೭—೪೭ [ಸಂಚಿಕೆ ೨೭೭

ಆಚಾರ್ಯ ಕೃಪಲಾನಿ ಪ್ರಥಮ ಪ್ರಧಾನಿಯೇ?

ರಾಜಧಾನಿಯಲ್ಲಿ ಕರ್ಣಾಟಕ ಕಾಂಗ್ರೆಸ್ ಸಮಿತಿಯ ಸಭೆ

ನಗರ ಕಾಂ॥ ಸಮಿತಿಯ ವ್ಯವಸ್ಥೆ

ಮೈಸೂರು ೨

ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯು ರಾಜಧಾನಿಯಲ್ಲಿ ಸೇರಲು ನಿರ್ಧರಿಸಿರುವುದನ್ನು ಸ್ವಾಗತಿಸಿ ಸಭೆಯು ಯಶಸ್ವಿಯಾಗಿ ನಡೆಯಲು ಸೂಕ್ತ ಕಾರ್ಯಕ್ರಮಕೈಗೊಳ್ಳುವ ಸಲುವಾಗಿ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು ಶ್ರೀ॥ ಎಸ್ ರಾಮಪ್ಪನವರು ಮತ್ತು ಕಾರ್ಯದರ್ಶಿಗಳನ್ನೊಳಗೊಂಡ ಉಪಸಮಿತಿಯನ್ನು ರಚಿಸುವುದು, ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಮೈಸೂರಿನಲ್ಲಿ ಸೇರುವುದನ್ನು ಸ್ವಾಗತಿಸಿ ಅದಕ್ಕಾಗಿ ಸೂಕ್ತ ಕಾರ್ಯಕ್ರಮಕೈಗೊಳ್ಳುವ ಅಧಿಕಾರವನ್ನು ನಗರ ಸಮಿತಿಯ ಅಧ್ಯಕ್ಷರಿಗೆ ವಹಿಸುವುದು, ಭಾರತ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನು ಆರಿಸುವ ಈ ಸಮಯದಲ್ಲಿ ಬಂಧನದಲ್ಲಿರುವ ಶ್ರೀ॥ ಕೆ. ಹನುಮಂತಯ್ಯನವರ ಬಿಡುಗಡೆಗಾಗಿ ಸರ್ಕಾರದವರನ್ನು ಒತ್ತಾಯಪಡಿಸುವುದು; ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲಿರುವ ಎಲ್ಲಾ ಪ್ರತಿನಿಧಿಗಳನ್ನೂ ಜಂಟಿ ಅಧಿವೇಶನದಲ್ಲಿಯೇ ಚುನಾಯಿಸುವುದಲ್ಲದೆ ಶಾಸನಸಭಾ ಸದಸ್ಯರಲ್ಲದವರಿಗೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವೀಯಬೇಕೆಂದು ಶ್ರೀಮನ್ಮಹಾರಾಜರವರನ್ನು ಪ್ರಾರ್ಥಿಸುವುದು; ರಾಜ್ಯಾಂಗ ಸಭೆಗೆ ಸೇರದೆ ಸ್ವತಂತ್ರವಾಗಿರುವುದಾಗಿ ಘೋಷಿಸಿರುವ ಹೈದರಾಬಾದ್ ತಿರುವಾಂಕೂರು ಸಂಸ್ಥಾನಗಳ ನೀತಿಯನ್ನು ಖಂಡಿಸಿ ಅಲ್ಲಿನ ಪ್ರಜೆಗಳು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಕೈಗೊಳ್ಳುವ ಎಲ್ಲಾ ಬಗೆಯ ಕಾರ್ಯಕ್ರಮಗಳಿಗೂ ಬೆಂಬಲ ನೀಡುವುದು, ವಿಶ್ವವಿದ್ಯಾಲಯದವರು ವಿದ್ಯಾರ್ಥಿಗಳ ಮೇಲೆ ಕೈಗೊಂಡಿರುವ ಕ್ರಮವು ಅಕ್ರಮವಾಗಿರುವುದರಿಂದ ಆಜ್ಞೆಯನ್ನು ವಾಪಸು ತೆಗೆದುಕೊಳ್ಳುವಂತೆ ವಿಶ್ವವಿದ್ಯಾಲಯದವರನ್ನು ಒತ್ತಾಯಪಡಿಸುವುದು; ಸಂಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ಅದು ಹದಗೆಡುವ ಮುನ್ನ ಪ್ರಜಾ ಬೆಂಬಲ ಪಡೆದಿರುವ ತಾತ್ಕಾಲಿಕ ಸರ್ಕಾರವನ್ನು ರಚಿಸಿ ಭಾವಿ ರಾಜ್ಯಾಂಗ ರಚನೆಗೆ ಅವಶ್ಯವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಶ್ರೀಮನ್ಮಹಾರಾಜರವರನ್ನು ಪ್ರಾರ್ಥಿಸುವುದು ಇವೇ ಮೊದಲಾದ ನಿರ್ಣಯಗಳು ಕಳೆದ ರವಿವಾರ ನಡೆದ ನಗರ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಅಂಗೀಕಾರವಾಗಿರುತ್ತವೆ.

ಗ್ರಾಮ ಸೇವಕಿಯರ ಶಿಕ್ಷಣ

ಕಸ್ತೂರಿ ಬಾಯಿ ಗಾಂಧಿ ಟ್ರಸ್ಟಿನ ಆಶ್ರಯದಲ್ಲಿ ಹಾಸನ ಜಿಲ್ಲೆಯ ಶಾಂತರಾಜಪುರ, ಶಿವಮೊಗ್ಗ ಜಿಲ್ಲೆಯ ಬನವಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ಕಾಮನೂರು ಗ್ರಾಮಗಳಲ್ಲಿ ಮಹಿಳೆಯರಿಗೆ ಅಲ್ಪಾವಧಿಯ ಶಿಕ್ಷಣ ಶಿಬಿರಗಳನ್ನು ಬರುವ ಆಗಸ್ಟ್ ತಿಂಗಳಿನಿಂದ ತೆರೆಯಲಾಗುವುದು. ಶಿಕ್ಷಣ ಪಡೆಯಬಯಸುವ ಮಹಿಳೆಯರು ಇದೇ ೩೦ ನೇ ತಾ॥ ನೊಳಗಾಗಿ ಮೈಸೂರು ವಾಣಿವಿಲಾಸ ಮೊಹಲ್ಲೆಯಲ್ಲಿರುವ ಕಸ್ತೂರಿ ಬಾಯಿ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ ಪ್ರತಿನಿಧಿಗಳಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ

ವಿದ್ಯಾರ್ಥಿ ಕ್ರಿಯಾ ಸಮಿತಿ

ಸ್ವಂ. ಸು.] ಬೆಂಗಳೂರು ೨

ವಿಶ್ವವಿದ್ಯಾಲಯದವರು ವಿದ್ಯಾರ್ಥಿಗಳ ಮೇಲೆ ಕೈಗೊಂಡಿರುವ ಶಿಸ್ತಿನ ಕಾರ್ಯಕ್ರಮದ ಬಗ್ಗೆ ಮುಂದಿನ ಹೋರಾಟ ನಡೆಸಲು ವಿದ್ಯಾರ್ಥಿಗಳಿಗೆ ಸಲಹೆ ನೀಡುವ ಸಲುವಾಗಿ ಶ್ರೀ॥ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಕೆ ಎಸ್ ಕುಮಾರ್, ಕೆ. ಶ್ಯಾಮರಾಜಯ್ಯಂಗಾರ್, ಪಿ. ಎಸ್. ಕೃಷ್ಣಯ್ಯರ್, ಕೆ. ಕರ್ಣ, ಮಲ್ಲಾ ಗೋವಿಂದರೆಡ್ಡಿ ಮತ್ತು ಶ್ರೀಮತಿ ಕೆ ಕಮಲಾದೇವಿಯವರನ್ನೊಳಗೊಂಡ ಸಲಹಾ ಸಮಿತಿಯೊಂದನ್ನು ನೇಮಿಸಲಾಗಿದೆಯೆಂದು ವಿದ್ಯಾರ್ಥಿ ಕ್ರಿಯಾ ಸಮಿತಿಯ ಸದಸ್ಯರಾದ ಶ್ರೀ ಕೃಷ್ಣಮೂರ್ತಿಯವರು ತಿಳಿಸಿರುವರು

ಬ್ರಿ॥ ಯೋಜನೆಗೆ ಹಿಂದುಗಳ ಪ್ರತಿಭಟನೆ

ಬ್ರಿಟಿಷರ ಜೂನ್ ೩ ರ ಯೋಜನೆಯು ಅಖಂಡ ಭಾರತದ ತತ್ವಕ್ಕೆ ವಿರೋಧವಾಗಿರುವುದರಿಂದ ಅದನ್ನು ಎಲ್ಲಾ ಹಿಂದೂ ಸಭಾ ಸಮಿತಿಯವರೂ ಪ್ರತಿಭಟಿಸಬೇಕೆಂದು ಅ॥ ಭಾ॥ ಹಿಂದೂ ಮಹಾ ಸಭೆಯವರು ತೀರ್ಮಾನಿಸಿರುವರು. ಅದರಂತೆ ಸಂಸ್ಥಾನದ ಎಲ್ಲಾ ಸಮಿತಿಗಳೂ ಪ್ರತಿಭಟನಾ ದಿನವನ್ನು ಆಚರಿಸುವ, ವಿಭಜನೆಯನ್ನು ಖಂಡಿಸುವ ನಿರ್ಣಯವನ್ನು ಮಾಡಿ ಅದನ್ನು ವೈಸರಾಯರಿಗೂ, ಹಿಂದೂ ಮಹಾ ಸಭಾ ಕಛೇರಿಗೂ ಕಳುಹಿಸಿಕೊಡಬೇಕೆಂದು ಮೈಸೂರು ಸಂಸ್ಥಾನದ ಹಿಂದೂ ಮಹಾ ಸಭಾ ಕಾರ್ಯದರ್ಶಿಗಳು ಕೋರಿರುವರು.

ಗ್ವಾಲಿಯರಿನಲ್ಲಿ ಸುಧಾರಣೆ

ಗ್ವಾಲಿಯರಿನ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಘೋಷಿಸಿರುವರು ಅದರಂತೆ ಸಂಸ್ಥಾನದ ಆಡಳಿತವು ೧೧ ಜನ ಸಚಿವರ ಮೇಲ್ವಿಚಾರಣೆಗೆ ಒಳಪಡುವುದು. ಸಚಿವರಲ್ಲಿ ೫ ಮಂದಿಯನ್ನು ಮಹಾರಾಜರೇ ನಾಮಕರಣ ಮಾಡುವರು. ಕಾಂಗ್ರೆಸ್ ಪಕ್ಷದಿಂದ ನಾಲ್ವರೂ, ಮುಸ್ಲಿಂ ಲೀಗಿನಿಂದ ಒಬ್ಬರೂ, ಹಿಂದೂ ಮಹಾಸಭೆಯಿಂದ ಒಬ್ಬರೂ ಚುನಾಯಿಸಲ್ಪಡುವರು. ಆದರೆ ರಾಜಕೀಯ, ಆರ್ಥಿಕ, ಕಂದಾಯ, ಆಬ್ಕಾರಿ ಮೊದಲಾದ ಶಾಖೆಗಳ ಆಡಳಿತವೂ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನಗಳೂ ನಾಮಕರಣದ ಸದಸ್ಯರಿಗೇ ಕೊಡಲ್ಪಡುವುವು

ರಾಜ್ಯಾಂಗ ಸಭಾ ಸದಸ್ಯರ ಚುನಾವಣೆ

ವಿಶೇಷ ಗೆಜೆಟ್ ಪ್ರಕಟಣೆ

ಸ್ವಂ ಸು ಫೋ] ಬೆಂಗಳೂರು ೨

ಪ್ರಜಾಪ್ರತಿನಿಧಿ ಸಭೆಯ ಚುನಾಯಿತ ಸದಸ್ಯರು ತಮ್ಮ ಪೈಕಿ ಇಬ್ಬರನ್ನೂ, ಶಾಸನ ಸಭೆಯ ಚುನಾಯಿತ ಸದಸ್ಯರು ತಮ್ಮ ಪೈಕಿ ಇಬ್ಬರನ್ನೂ ಭಾರತ ರಾಜ್ಯಾಂಗ ಸಭೆಗೆ ಚುನಾಯಿಸುವಂತೆ ಶ್ರೀಮನ್ಮಹಾರಾಜರವರು ಅಪ್ಪಣೆ ಮಾಡಿರುವುದಾಗಿ ಈ ದಿನ ಹೊರಟ ವಿಶೇಷ ಗೆಜೆಟ್ ಪ್ರಕಟಣೆಯು ತಿಳಿಸುತ್ತದೆ. ಸಿಂಗಲ್ ಟ್ರಾನ್ಸ್‌ಫರಬಲ್ ವೋಟ್ ಪದ್ಧತಿಯ ಮೇರೆ ಚುನಾವಣೆ ನಡೆಯುತ್ತದೆಂದು ಹೇಳಲಾಗಿದೆ.

ಕೃಪಲಾನಿಯವರು ಪ್ರಥಮ ಪ್ರಧಾನಿ

ಭಾರತ ಯೂನಿಯನ್ನಿಗೆ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಪ್ರಥಮ ಪ್ರಧಾನಿಯಾಗಬಹುದೆಂದು ವರದಿಯಾಗಿದೆ. ಬ್ರಿಟಿಷ್ ರಾಜ್ಯಾಂಗದ ಮಾದರಿಯಲ್ಲಿಯೇ ಯೂನಿಯನ್ನೂ ಸಹ ರಚಿಸಲ್ಪಡುವುದು. ಬ್ರಿಟಿಷ್ ಪದ್ಧತಿಗನುಗುಣವಾಗಿ ರಾಜ್ಯಾಂಗ ಸಭೆಯ ಬಹು ಸಂಖ್ಯಾ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರೇ ಪ್ರಧಾನಿಗಳಾಗಿ ಆರಿಸಲ್ಪಡುವರೆಂದು ಹೇಳಲಾಗಿದೆ

ವಿಜ್ಞಾನ ಸಂಶೋಧನೆಗೆ ಮೈಸೂರು ಸರ್ಕಾರದ ಸಹಾಯ

ಸರ್ ಸಿ ವಿ ರಾಮನ್‌ರವರಿಂದ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾಲಯಕ್ಕೆ ೫೦ ಸಹಸ್ರ ರೂ ಗಳ ಮೂಲ ಧನವನ್ನೂ ೬ ಸಾವಿರ ವಾರ್ಷಿಕ ಗ್ರಾಂಟನ್ನೂ ಮೈಸೂರು ಸರ್ಕಾರ ಮಂಜೂರು ಮಾಡಿದೆಯೆಂದು ವರದಿಯಾಗಿದೆ

ಖಂಡನಾ ಸಭೆ

ಮೈಸೂರು ೨

ಶಿವರಾಂಪೇಟೆಯಲ್ಲಿರುವ ಮೈಸೂರು ಹಿಂದೂ ಮಹಾಸಭಾ ಕಛೇರಿಯಲ್ಲಿ ನಾಳೆ ಸಂಜೆ ೬ ಗಂಟೆಗೆ ಭಾರತ ವಿಭಜನೆಯ ಖಂಡನಾ ಸಭೆಯು ಅ॥ ಕ॥ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಎ. ಸಿ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಪೌರ್ಣಮಿ ಮಂಡಲ ಆರಾಧನೆ

ರಾಜಧಾನಿಯ ವಿಶ್ವೆ ಮೊಹಲ್ಲಾ ವೀಣೆ ಶಾಮಣ್ಣನವರ ಬೀದಿಯಲ್ಲಿರುವ ಶ್ರೀನಿವಾಸ ರಾಘವೇಂದ್ರ ಶ್ರೀರಾಮ ಮಂದಿರದಲ್ಲಿ

ಲಾ ಕಾಲೇಜಿನ ಸ್ಥಾಪನೆ ಸದ್ಯಕ್ಕೆ ಇಲ್ಲ

ಶಾಸನ ಸಭೆಯಲ್ಲಿ ಉತ್ತರ

ಸ್ವಂ. ಸು ಫೋ] ಬೆಂಗಳೂರು ೨

ಸರ್ಕಾರಿ ಉದ್ಯೋಗದಲ್ಲಿರುವ ನೌಕರರಿಗೆ ಇರುವ ಗೃಹ ವಸತಿಯ ಅಭಾವದ ವಿಷಯವಾಗಿ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರು ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಗಳನ್ನು ಹಾಕಿದರು. ಈ ವಿಷಯದಲ್ಲಿ ಸ್ವಲ್ಪ ಸ್ವಲ್ಪವಾಗಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆಯೆಂದೂ, ಒಂದೊಂದು ಜಿಲ್ಲೆಯಲ್ಲಿಯೂ ಸಾವಿರ ಮನೆಗಳನ್ನು ಕಟ್ಟಿಸುವ ೫ ವರ್ಷದ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೆಂದೂ ಡಾ॥ ರಾಯರವರು ಉತ್ತರವಿತ್ತರು

ಸಂಸ್ಥಾನದಲ್ಲಿ ಲಾ ಕಾಲೇಜನ್ನು ಸ್ಥಾಪಿಸುವ ಉದ್ದೇಶವು ಸದ್ಯದಲ್ಲಿ ಇಲ್ಲವೆಂದೂ ಅದನ್ನು ಸ್ಥಾಪಿಸುವುದಾಗಿ ಖಾಸಗೀ ಜನರಿಂದ ಪತ್ರವು ಬಂದಿಲ್ಲವೆಂದೂ ಶ್ರೀ॥ ಎಂ ಸಿ ಲಿಂಗೇಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು. ವಿಶ್ವವಿದ್ಯಾಲಯದವರು ನೇಮಿಸಿರುವ ಸಮಿತಿಯ ವರದಿಯು ಬಂದ ಮೇಲೆ ಈ ವಿಷಯವನ್ನು ಪರ್ಯಾಲೋಚಿಸುವುದಾಗಿಯೂ ಸೂಚಿಸಲಾಯಿತು

ಅನಂತರ ಖಾಸಗೀ ಮಸೂದೆಗಳು ತೆಗೆದುಕೊಳ್ಳಲ್ಪಟ್ಟುವು. ಹರಿಜನರಿಗೆ ಸಾರ್ವಜನಿಕ ಹಕ್ಕುಗಳನ್ನು ಒದಗಿಸಲು ಶ್ರೀ ಎಸ್ ಮಾದಯ್ಯನವರು ಮಸೂದೆಯನ್ನು ಮಂಡಿಸಿದರು. ಶ್ರೀ ಡಿ ಎಸ್ ಮಲ್ಲಪ್ಪನವರು ಅದನ್ನು ಅನುಮೋದಿಸಿ ವಿವರಗಳನ್ನು ಪರಿಶೀಲಿಸಲು ಅದನ್ನು ಚುನಾಯಿತ ಸಮಿತಿಗಳಿಗೆ ಒಪ್ಪಿಸಬೇಕೆಂದು ಸೂಚಿಸಿದರು

ಸರಾಯಿ ಹಾಕದೆ ಹಳೇ ಕಂಟ್ರಾಕ್ಟರುಗಳಿಗೇ ಶೇಂದಿ, ಸರಾಯಿ ಅಂಗಡಿಗಳನ್ನು ವಹಿಸಿದ ವಿಷಯವಾಗಿ ನಿನ್ನೆ ಬಂದಿದ್ದ ಅಮರದ ನಿರ್ಣಯದ ಮೇಲೆ ಸದಸ್ಯರು ಮಾತನಾಡಿದ ಬಳಿಕ ಮಂತ್ರಿಗಳಾದ ಶ್ರೀ ಶೇಷಾದ್ರಿಯವರು ಉತ್ತರ ಕೊಡುತ್ತಿದ್ದಾಗ ಕಾಲಾತೀತವಾದುದರಿಂದ ಅದು ಮಾತಿನಲ್ಲೇ ಮುಕ್ತಾಯವಾಯಿತು

ಮದರಾಸಿನ ಶ್ರೀ ಶಿವರಾಮ್ ಎಂಬುವರನ್ನು ವ್ಯವಸಾಯದ ಕಮಿಷನರನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಜಯಕರರ ಸಲಹೆಗಾಗಿ ಇಂದೂರರಸರ ಲಂಡನ್ ಯಾತ್ರೆ

ಇಂದೂರು ಸಂಸ್ಥಾನದಲ್ಲಿ ಅಲ್ಪಕಾಲದ ಮತ್ತು ದೀರ್ಘಕಾಲದ ಸುಧಾರಣೆಗಳನ್ನು ಜಾರಿಗೆ ತರುವ ವಿಷಯ ಲಂಡನ್ನಿನಲ್ಲಿರುವ ಡಾ॥ ಎಂ ಆರ್ ಜಯಕರರ ಸಲಹೆ ಪಡೆಯುವ ಸಲುವಾಗಿ ಇಂದೂರಿನ ಅರಸರಾದ ಹೋಳ್ಕರರು ತಮ್ಮ ಪ್ರಧಾನಿಗಳೊಡನೆ ನಿನ್ನೆ ಇಂಗ್ಲೆಂಡಿಗೆ ತೆರಳಿದರೆಂದೂ, ಇನ್ನೆರಡು ವಾರಗಳಲ್ಲಿ ಅವರು ಅಲ್ಲಿಂದ ಹಿಂದಿರುಗುವರೆಂದೂ ವರದಿಯಾಗಿದೆ

ನಾಳೆಯ ದಿನ ೧೫ ನೇ ಪೌರ್ಣಮಿ ಮಂಡಲದ ಆರಾಧನೆಯನ್ನು ನಡೆಸಲಾಗುವುದು. ಭಕ್ತರು ದಯಮಾಡಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕಾರ್ಯದರ್ಶಿಗಳು ಕೋರಿರುವರು

ಚಾತುರ್ಮಾಸ್ಯ ಸಂಕಲ್ಪ

ರಾಜಗುರುಗಳಾದ ಶ್ರೀ॥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಶ್ರೀ ಮಠದ ಶ್ರೀ ಸ್ವಾಮಿಗಳವರು ನಾಳೆಯ ದಿನ ಚಾತುರ್ಮಾಸ್ಯ ಸಂಕಲ್ಪವನ್ನು ಬೆಳೆಸುವರು.

ಸಾಧ್ವಿ

೨-೭-೪೭ ಬುಧವಾರ

ಈಸೂರು ಬಂದಿಗಳ ಪ್ರಶ್ನೆ

ಮದರಾಸಿನ ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಅಪಾದಿತರಾಗಿ ಇನ್ನೂ ಕಾರಾಗೃಹದಲ್ಲಿರುವವರನ್ನು ಅಲ್ಲಿನ ಸರ್ಕಾರವು ಬಿಡುಗಡೆ ಮಾಡಲು ನಿರ್ಧರಿಸಿರುವುದಾಗಿ ತಿಳಿದುಬಂದಿದೆ. ಅವರಿಗೆ ವಿಧಿಸಿರುವ ಶಿಕ್ಷೆಯಲ್ಲಿ ಕಳೆದು ಉಳಿದಿರುವ ಭಾಗವನ್ನು ರದ್ದು ಮಾಡುವುದಾಗಿ ಹೇಳಲಾಗಿದೆ. ಇದಕ್ಕಾಗಿ ಅಲ್ಲಿನ ಹಲವು ಪ್ರಮುಖರು ಸರ್ಕಾರದವರಲ್ಲಿ ಮನವಿಯನ್ನು ಮಾಡಿಕೊಂಡಿದ್ದರು. ಅದಕ್ಕೆ ಮದರಾಸ್ ಸರ್ಕಾರದವರು ಮನ್ನಣೆಯನ್ನು ಕೊಟ್ಟಿರುವರು.

ನಮ್ಮ ಸಂಸ್ಥಾನದಲ್ಲಿ ಈಸೂರಿನ ಘಟನೆಗಳಿಗೆ ಸಂಬಂಧಪಟ್ಟ ಖೈದಿಗಳು ಇನ್ನೂ ಕಾರಾಗೃಹಗಳಲ್ಲಿ ಕೊಳೆಯುತ್ತಿದ್ದಾರೆ. ಇವರ ಬಿಡುಗಡೆಗಾಗಿಯೂ ಅನೇಕ ಬಗೆಗಳಿಂದ ಒತ್ತಾಯವನ್ನು ಮಾಡಲಾಗಿದೆ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರೆಲ್ಲರೂ ಇದಕ್ಕಾಗಿ ವಿಶೇಷ ಪ್ರಾರ್ಥನೆಯನ್ನು ಮಾಡಿದವರು. ನ್ಯಾಯವಿಧಾಯಕ ಸಭೆಯಲ್ಲಿಯೂ ಸಹ ಈ ವಿಷಯವು ಬಂದಿತ್ತು. ಇದನ್ನು ಪರ್ಯಾಲೋಚಿಸಿ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಮಂತ್ರಿಗಳು ಹೇಳಿದರು.

ಈಸೂರಿನ ಖೈದಿಗಳು ರಾಜಕೀಯ ಆಂದೋಲನದ ಸಂಬಂಧದಲ್ಲಿ ಶಿಕ್ಷೆಗೆ ಗುರಿಯಾದವರು. ರಾಜಕೀಯ ಪರಿಸ್ಥಿತಿಯು ಬದಲಾವಣೆಯಾದಮೇಲೆಲ್ಲಾ ರಾಜಕೀಯ ಬಂದಿಗಳ ಶಿಕ್ಷೆಯೂ ಸಹ ಮಾಫಿಯನ್ನು [illegible] ಮಾಡಿಕೆ. ಇದೇ ರೀತಿ ಭಾರತದ ಎಲ್ಲ ಪ್ರಾಂತಗಳಲ್ಲಿಯೂ ನಡೆದಿತ್ತು. [illegible] ಚಕ್ರವರ್ತಿ ಸಾರ್ವಭೌಮರ ಮೇಲೆ ಯುದ್ಧವನ್ನು ಹೂಡಿದ ಅಪಾದನೆಗೆ ಗುರಿಯಾಗಿದ್ದವರೂ ಸಹ ಬಂಧವಿಮುಕ್ತರಾಗುತ್ತಿದ್ದಾರೆ. ಅಷ್ಟೇ ಅಲ್ಲ, ಚೀಮೂರು ಮುಂತಾದ ಕಡೆಗಳಲ್ಲಿ ಮರಣದಂಡನೆಗೆ ಗುರಿಯಾಗಿದ್ದವರ ಶಿಕ್ಷೆಯೂ ಸಹ ರದ್ದಾಗಿರುತ್ತದೆ. ನಮ್ಮ ಸಂಸ್ಥಾನದಲ್ಲಿಯೂ [illegible] ಈಸೂರಿನ ಅನೇಕ ಜನರನ್ನು ಗಲ್ಲಿಗೆ ಏರಿಸಲಾಯಿತು. ಈ ಪ್ರಕರಣದ ನ್ಯಾಯಾಂಗ ವಿಚಾರಣೆಗಳ ಕೋರ್ಟುಗಳಲ್ಲಿ ಭಿನ್ನಾಭಿಪ್ರಾಯವು ವ್ಯಕ್ತಪಡಿಸಲ್ಪಟ್ಟಿರುವುದೂ ಸಹ ಬಹಳ ಗಮನೀಯವಾದ ವಿಚಾರ.

ಮುಖ್ಯವಾಗಿ ರಾಜಕೀಯವಲ್ಲದ ಮೊಕದ್ದಮೆಗಳಲ್ಲಿಯೂ ಖೈದಿಗಳನ್ನು ಬಿಡುಗಡೆ ಮಾಡ[illegible] ಈ [illegible] ಕೇವಲ ರಾಜಕೀಯ ಆಂದೋಲನದ ಪ್ರಭಾವಕ್ಕೆ ಗುರಿಯಾಗಿ ಅಪರಾಧ ಮಾಡಿರಬಹುದಾದವರ ಶಿಕ್ಷೆಯನ್ನು ರದ್ದು [illegible] [illegible] ಸರ್ಕಾರ [illegible] ವರ್ಷಗಳ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಇನ್ನು ಸರ್ಕಾರ [illegible] ಪರ್ಯಾಲೋಚನೆ [illegible] ವಿಳಂಬ ಮಾಡದೆ ಈ ಖೈದಿಗಳ [illegible] ಅವಧಿಯ [illegible] ಮಾಫಿ ಮಾಡುವುದು ಅತ್ಯವಶ್ಯವಾಗಿರುತ್ತದೆ.

Edited, printed and published by A. K. Nagarajan at the Sadhvi Press, Dewan's Road, Mysore

ಅಣು ಮಂತ್ರಾಲಯದ ಅನ್ನ ಸತ್ರ

ಮಂತ್ರಾಲಯಕ್ಕೆ ಹೋಗಿ ಬರುವ ಯಾತ್ರಿಕರಿಗಾಗಿ ತುಂಗಭದ್ರಾ ಅಣು ಮಂತ್ರಾಲಯದಲ್ಲಿ ಇಟ್ಟಿರುವ ಅನ್ನ ಛತ್ರವು ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ. ಈ ಛತ್ರವು ನಿಂತು ಹೋಗದೆ ತನ್ನ ಕಾರ್ಯವನ್ನು ನಡೆಸಿಕೊಂಡು ಹೋಗಲು ಮಹಾಜನರು ಉದಾರವಾಗಿ ಸಹಾಯವನ್ನು ಮಾಡಬೇಕೆಂದು ಛತ್ರವನ್ನು ನಡೆಸುತ್ತಿರುವ ಶ್ರೀ ದಾಸ್ ಸ್ವಾಮಾಚಾರ್ಯರು ಪ್ರಾರ್ಥಿಸಿರುವರು. ಸಹಾಯದ ಹಣಗಳನ್ನು ಮೇಲೆ ಹೇಳಿದ ಶ್ರೀ ದಾಸ್ ಸ್ವಾಮಾಚಾರ್ಯರ ವಿಳಾಸಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ.

ಕಾಳ ಸಂತೆಯಲ್ಲಿ ಕಪ್ಪು ಕನ್ನೆಯರು

ಗ್ಲೋಬ್] ಲಂಡನ್ ೨೭

ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಅಧಿಕವಾಗಿರುವ ಬೆಲೆಯನ್ನು ಅನುಸರಿಸಿ ಆಫ್ರಿಕದ ಕಪ್ಪು ಜನರು ಕನ್ಯೆಯರನ್ನು ಕಾಳ ಸಂತೆಯಲ್ಲಿ ಮಾರಲು ಆರಂಭಿಸಿದ್ದಾರೆ. ಕನ್ಯೆಯೊಬ್ಬಳಿಗೆ ೫೫ ಪೌಂಡು ಅಥವಾ ೧೧ ಹಸುಗಳ ಬೆಲೆಯೆಂದು ನಿಗದಿಮಾಡಲ್ಪಟ್ಟಿದೆ. ಆದುದರಿಂದ ಕನ್ಯಾ ಪಿತೃಗಳು ಹೆಚ್ಚು ವರಮಾನಗಳನ್ನು ಪಡೆಯಲು ಕಾಳ ಸಂತೆಯ ಹೊಸ ಮಾರ್ಗವನ್ನು ಹಿಡಿದಿದ್ದಾರೆ.

ಗೋವಿಂದ ಮಾಳವೀಯರು ನೇಪಾಳದಲ್ಲಿ ರಾಯಭಾರಿ

ಪಂಡಿತ ಮದನ ಮೋಹನ ಮಾಳವೀಯರ ಕುಮಾರರಾದ ಶ್ರೀ ಗೋವಿಂದ ಮಾಳವೀಯರನ್ನು ನೇಪಾಳದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ.

ವಿದ್ಯಾಪೀಠ

ನಂಜನಗೂಡು ೧

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಇಲ್ಲಿನ ವಿದ್ಯಾಪೀಠದಲ್ಲಿ ಶಿಕ್ಷಣವು ಆಗಸ್ಟ್ ಜುಲೈ ಮಾಹೆಯ ಕೊನೆಯಲ್ಲಿ ಪ್ರಾರಂಭವಾಗುವುದು. ಶಿಕ್ಷಣ ಪಡೆಯಬಯಸುವವರು ಇದೇ ೧೦ ನೇ ತಾರೀಖಿನೊಳಗೆ ಮೈಸೂರು ಸರಸ್ವತೀಪುರದಲ್ಲಿರುವ ಸಮಿತಿಯ ಕಛೇರಿಗೆ ಅರ್ಜಿ ಕಳುಹಿಸಬೇಕು. ಅರ್ಜಿ ನಮೂನೆಗಳನ್ನೂ ವಿದ್ಯಾಪೀಠದ ಯೋಜನೆಗಳನ್ನೂ ಅಪೇಕ್ಷಿಸಿದವರಿಗೆ ಕಳುಹಿಸಿ ಕೊಡಲಾಗುವುದು ಎಂದು ಸಮಿತಿಯ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ದಕ್ಷಿಣ ಮಂಚೂರಿಯಾ ರಸ್ತೆಗಳಲ್ಲಿ ಕದನ

ಚೀನಾ ಸರ್ಕಾರದ ಪಡೆಗಳು ದಕ್ಷಿಣ ಮಂಚೂರಿಯಾದ ರೈಲ್ವೆ ನಗರವನ್ನು ವಶಪಡಿಸಿಕೊಂಡಿವೆಯೆಂದು ವರದಿಯಾಗಿದೆ. ಅಲ್ಲಿನ ರಸ್ತೆಗಳಲ್ಲೆಲ್ಲಾ ಭಾರಿ ಕದನ ನಡೆಯುತ್ತಿದೆಯೆಂದು ಗೊತ್ತಾಗಿದೆ.

ಆರ್ಕಾಟಿನ ಯೂನಿಯನ್ ಪವರ್ ಸಮಿತಿ ಸದಸ್ಯರು

ಮೈಸೂರಿನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರು ಮತ್ತು ಕರ್ನಲ್ ಮಹಾರಾಜಾ ಹಿಮ್ಮತ್‌ಸಿಂಗ್‌ಜಿಯವರುಗಳನ್ನು ಯೂನಿಯನ್ ಪವರ್ ಸಮಿತಿಯ ಸದಸ್ಯರನ್ನಾಗಿ ರಾಜ್ಯಾಂಗ ಸಭಾಧ್ಯಕ್ಷರು ನೇಮಿಸಿರುವರು.

ಬೊಂಬಾಯಿ ರೈಲ್ವೆ ವರ್ಕ್ ಷಾಪುಗಳಲ್ಲಿ ಲಾಕ್ ಔಟ್

ಜಿ ಐ ಪಿ ಮತ್ತು ಬಿ ಬಿ ಸಿ ಐ ಗಳಿಗೆ ಸೇರಿದ ಮಾಟುಂಗಾ, ಪರೇಲ್, ಮಹಾಲಕ್ಷ್ಮೀ ಮತ್ತು ಲೋಯರ್ ಪರೇಲ್ ರೈಲ್ವೆ ವರ್ಕ್ ಷಾಪುಗಳ ಕೆಲಸಗಾರರು ಕಳೆದ ಸೋಮವಾರ ಮಾಮೂಲಿನಂತೆ ಕೆಲಸಕ್ಕೆ ಹೋಗಿ ಬಳಿಕ ಕೆಲಸ ನಿಲ್ಲಿಸಿ ಮುಷ್ಕರವನ್ನಾರಂಭಿಸಿದರು. ಹಲವು ಮಂದಿ ಕೆಲಸಗಾರರು ಯಂತ್ರಗಳಿಗೆ ಬೆಂಕಿಯಿಡುವುದೇ ಮೊದಲಾದ ದುಷ್ಕೃತ್ಯಗಳಲ್ಲಿ ತೊಡಗಿದರು. ಆದರಿಂದ ರೈಲ್ವೆ ಅಧಿಕಾರಿಗಳು ನಷ್ಟವಾಗುವುದನ್ನು ತಪ್ಪಿಸಲು ಲಾಕ್ ಔಟ್ ಘೋಷಿಸಿರುವರು—ಎಂಬುದಾಗಿ ಬೊಂಬಾಯಿಯ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಭಾರತದ ಮೊದಲ ವಿಮಾನ ೧೯೪೮ ನೇ ಜನವರಿಯಲ್ಲಿ

ಬೆಂಗಳೂರಿನಲ್ಲಿರುವ ಹಿಂದೂಸ್ತಾನ ವಿಮಾನ ಕಾರ್ಖಾನೆಯು ೧೯೪೮ ನೇ ಜನವರಿಯಲ್ಲಿ ಭಾರತದ ಮೊದಲನೇ ವಿಮಾನವನ್ನು ತಯಾರಿಸುವುದೆಂದು ವರದಿಯಾಗಿದೆ. ಅದು ಆಧುನಿಕ ರೀತಿಯಲ್ಲಿ ಸಿದ್ಧವಾಗುವುದು. ಅದನ್ನು ಆರ್ ಎ ಎಫ್ ನವರಿಗೆ ಅಭ್ಯಾಸದ ಉಪಯೋಗಕ್ಕಾಗಿ ಕೊಡಲಾಗುವುದು. ಮೊದಲನೆಯ ೨೦ ವರ್ಷ ಕಾಲ ವಿಮಾನದ ಹಲವು ಭಾಗವು ಇಂಗ್ಲೆಂಡಿನಿಂದ ಇಲ್ಲಿಗೆ ಬರುವುವೆಂದೂ, ತಿಂಗಳೊಂದಕ್ಕೆ ೫ ವಿಮಾನಗಳನ್ನು ಜೋಡಿಸಲಾಗುವುದೆಂದೂ ಹೇಳಲಾಗಿದೆ.

ಲಕ್ಷ್ಮೀಕಾಂತಂ ಕೊಲೆಯ ಆಪಾದಿತರ ಖುಲಾಸೆ

ಲಕ್ಷ್ಮೀಕಾಂತಂ ಕೊಲೆಯಲ್ಲಿ ಶಿಕ್ಷೆಗೆ ಗುರಿಯಾಗಿರುವ ವಡಿವೇಲು, ನಾಗಲಿಂಗಂ, ಆರ್ಯವೀರಸೇನ್, ರಾಜಬಾಬು ಮೊದಲಾದವರನ್ನು ಮದರಾಸ್ ಸರ್ಕಾರದವರು ಕೂಡಲೇ ಬಿಡುಗಡೆ ಮಾಡಲಿರುವರೆಂದು ವರದಿಯಾಗಿದೆ. ತ್ಯಾಗರಾಜ ಭಾಗವತರ್ ಮತ್ತು ಕೃಷ್ಣನ್ ರವರುಗಳ ಬಿಡುಗಡೆಯ ನಂತರ ಇವರುಗಳು ಬೇಡಿದ ದಯಾ ಭಿಕ್ಷೆಯೇ ಇದಕ್ಕೆ ಕಾರಣವೆಂದು ಗೊತ್ತಾಗಿದೆ.

ನಿರಾಶ್ರಿತರಿಗೆ ಉದಯಪುರದ ಸಹಾಯ

ಗಲಭೆಗಳಿಂದಾಗಿ ಉದಯಪುರ ಸಂಸ್ಥಾನಕ್ಕೆ ಬರುವ ನಿರಾಶ್ರಿತರಿಗೆ ನೆರವು ನೀಡಲು ಆ ಸಂಸ್ಥಾನವು ೫ ಲಕ್ಷ ರೂ ಮಂಜೂರು ಮಾಡಿರುವುದಾಗಿ ವರದಿಯಾಗಿದೆ. ಅವರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದೆಂದೂ, ಅವರಿಗೆ ವಸತಿಯನ್ನೇರ್ಪಡಿಸಲು ಅಲ್ಲಿ ಒಂದು ಭಾರಿ ಪ್ರದೇಶವನ್ನು ಬಿಟ್ಟುಕೊಡಲಾಗಿದೆಯೆಂದೂ ಗೊತ್ತಾಗಿದೆ.

ಶರಾವತಿಯಿಂದ ಭದ್ರಾವತಿಗೆ ವಿದ್ಯುಚ್ಛಕ್ತಿಯ ಕಂಬಗಳು(?)

ಇನ್ನು ದಿವಸಗಳಲ್ಲಿ ೧೨ ಸಹಸ್ರ ಕಿಲೋವಾಟ್ ಶಕ್ತಿಯುಳ್ಳ ವಿದ್ಯುಚ್ಛಕ್ತಿಯ [illegible] ಶರಾವತಿಯಿಂದ ಭದ್ರಾವತಿಗೆ ಬರುವುವು. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಈಗ ಪ್ರತಿ ದಿನವೂ ೫೦ ಟನ್ ಕಬ್ಬಿಣವನ್ನು ತಯಾರಿಸಲಾಗುತ್ತಿದೆ. ಇದರಿಂದ ಅದನ್ನು ೨೦೦ ಟನ್ನುಗಳಿಗೆ ಹೆಚ್ಚಿಸಲು ಅನುಕೂಲವಾಗುವುದು.

ಶ್ರೀ

ಪಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಲಿ, ಹಲಗೇರಿ

ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ 2-7-47 ನೇ ಬುಧವಾರ ರಾತ್ರಿ ೧೦ ಘಂಟೆಗೆ

ಯಶಸ್ವಿ 3 ನೇ ನಾಟಕ

3-7-47 ನೇ ಗುರುವಾರ ಮ್ಯಾಟನಿ ಸಂಜೆ 6-30 ಕ್ಕೆ

ಪಠಾಣೀ ಪಾಶ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಚಿಕ್ಕಚಟ್ಟಪ್ಪ, ಪ್ರೊಪ್ರೈಟರ್

ರಾಜಕಮಲ್

ತಾ॥ ೨೭-೬-೪೭ ರಿಂದ ಪ್ರತಿ ದಿನ ೩ ಆಟಗಳು

'ಬೆರಾಂಬಾರ್'

ಚಿತ್ರ

—: ಭೂಮಿಕೆ :—

ಮುಬಾರಕ್, ಜಾಗೀರ್ದಾರ್

ಮೈಸೂರು ನಗರ ಪೌರಸಭಾ

ಕಲಾ ಮತ್ತು ಆರೋಗ್ಯ ಪ್ರದರ್ಶನ 1947

8-7-47 ರಿಂದ **12-7-47** ಪೂರ್ತಾ

ಸ್ಟಾಲುಗಳನ್ನು ಪಡೆಯಲು ಕಡೇ ತಾರೀಕು **3-7-47**

ಅಪ್ಲಿಕೇಷನ್ ಫಾರಂಗಳು ಹೆಲ್ತ್ ಆಫೀಸಿನಲ್ಲಿ ದೊರೆಯುತ್ತವೆ.

ಸ್ಟಾಲಿನ ಬಾಡಿಗೆ **10** ರೂ. ಮಾತ್ರ.

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೩—೭—೪೭ [ಸಂಚಿಕೆ ೨೭೮

ಆಫ್ಘಾನಿಸ್ಥಾನಕ್ಕೆ ಗಡಿನಾಡು ಬೇಕಂತೆ!

ತ್ರಿಳಿಗೇಡಿತನದ ತೀರ್ಮಾನ

...ವಿ. ಗುಂಡಪ್ಪನವರ ಅಭಿಪ್ರಾಯ

...ಸು ಫೋ] ಬೆಂಗಳೂರು ೩

...ರಾಜ್ಯಾಂಗ ಸಂಘಕ್ಕೆ ಮೈಸೂರಿನ ಪ್ರತಿ...ಧಿಗಳನ್ನು ...ಲು ಏರ್ಪಟ್ಟಿರುವ ವಿಧಾ...ವು ಪುಳಿಗೇಡಿತನದಿಂದ ಕೂಡಿದೆಯೆಂದು ...ಡಿ ವಿ ಗುಂಡಪ್ಪನವರು ಹೇಳಿರುತ್ತಾ... ಈ ಚುನಾವಣೆಗಾಗಿ ಶಾಸನ ಸಭೆ ಮ...ತು ಪ್ರಜಾಪ್ರತಿನಿಧಿ ಸಭೆಗಳನ್ನು ಬೇರೆ ...ಬೇರೆ ಗುಂಪುಗಳಾಗಿ ವಿಂಗಡಿಸಿರುವುದು ಸ...ರಿಯಲ್ಲವೆಂದೂ ಸಹ ಅವರು ತಿಳಿಸಿರುತ್ತಾ... ಈ ಉಭಯ ಸಭೆಗಳೂ ಒಟ್ಟಾಗಿ ಸೇ...ರಿ ತಮಗೆ ಬೇಕಾದವರನ್ನು ಚುನಾಯಿಸ...ಲು ಅವಕಾಶ ಕೊಟ್ಟಿದ್ದರೆ ಆಗ ಸತ್ಯಮಟ್ಟಿ...ನ ಸಾರ್ವಜನಿಕ ಅಭಿಪ್ರಾಯವು ಪ್ರತಿಬಿಂಬಿ...ಸಲ್ಪಡುತ್ತಿತ್ತು. ಹಾಗೆ ಮಾಡದೇ ಇರು...ವುದರಿಂದ ಸದಸ್ಯರ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಂತಾಗಿದೆ. ಸಭೆಯ ಸದಸ್ಯರಲ್ಲದವರನ್ನು ಚುನಾಯಿಸಲು ಅವಕಾಶ ಕಲ್ಪಿಸದಿರುವುದರಿಂದ ಅನವಶ್ಯಕವಾಗಿ ಸಭಾ ಸದಸ್ಯರ ಹಕ್ಕನ್ನು ಕಸಿದುಕೊಂಡಂತಾಗಿದೆ. ಒಂದು ಸಂಗಡದವರಿಗೆ ವಿಜಯವು ದೊರೆಯುವುದನ್ನು ತಪ್ಪಿಸಿ ಅವರ ವಿರೋಧಿಗಳಿಗೆ ಸಹಾಯ ಮಾಡುವುದಕ್ಕಾಗಿಯೇ ಹೀಗೆ ಮಾಡಿರುವರೆಂಬ ಸಂಶಯಕ್ಕೂ ಆಸ್ಪದವಾಗಿದೆ. ಮೈಸೂರಿನಲ್ಲಿ ಇತ್ತೀಚೆಗೆ ಅನೇಕ ಅವಿವೇಕದ ಕೆಲಸಗಳು ನಡೆಯುತ್ತಿವೆ. ಆದುದರಿಂದ ಈ ಅವಿವೇಕದ ಪ್ರಸಂಗದಿಂದ ಯಾರೂ ದಿಗ್ಭ್ರಾಂತರಾಗಲಾರರು—ಎಂಬುದಾಗಿ ಶ್ರೀ॥ ಗುಂಡಪ್ಪನವರು ಹೇಳಿರುವರು

ಕಾಶ್ಮೀರ ಸ್ವತಂತ್ರವಾಗುವುದು

ಬರುವ ಆಗಸ್ಟ್ ೧೫ ಕ್ಕೆ ಬ್ರಿಟಿಷರ ಪರಮಾಧಿಕಾರದ ಅಂತ್ಯವಾದೊಡನೆಯೇ ಕಾಶ್ಮೀರವು ಸ್ವತಂತ್ರವಾಗಬೇಕೆಂದು ಅಲ್ಲಿನ ಸರ್ಕಾರವು ನಿರ್ಧರಿಸಿರುವುದಾಗಿ ವರದಿಯಾಗಿದೆ. ಆದರೆ ಇನ್ನೂ ೧೫ ದಿವಸಗಳ ಕಾಲ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಬೀಳುವುದಿಲ್ಲವೆಂದು ಹೇಳಲಾಗಿದೆ.

ಬಿಕನೀರ್ ಪ್ರಧಾನಿಗಳ ರಾಜೀನಾಮೆ

ಬಿಕನೀರ್ ಸಂಸ್ಥಾನದ ಪ್ರಧಾನಿಗಳಾದ ಶ್ರೀ॥ ಕೆ. ಎಂ. ಫಣಿಕ್ಕರ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತು, ತಮ್ಮನ್ನು ಬೇಗನೆ ವಿಮುಕ್ತಿಗೊಳಿಸಬೇಕೆಂದು ಅಲ್ಲಿನ ಅರಸರನ್ನು ಪ್ರಾರ್ಥಿಸಿರುವರೆಂದು ವರದಿಯಾಗಿದೆ. ಅವರು ಶೀಘ್ರ ಮಾಸ್ಕೋಗೆ ಹೋಗಬಹುದೆಂದು ಹೇಳಲಾಗಿದೆ

ಲಕ್ಷ್ಮೀಕಾಂತಂ ಮೊಕದ್ದಮೆ ಖೈದಿಗಳ ಬಿಡುಗಡೆ

ಆರ್ಯವೀರಸೇನ್, ವಡಿವೇಲು, ನಾಗಲಿಂಗಂ ಮತ್ತು ರಾಜ ಬಹದ್ದೂರ್ ಎಂಬವರು ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದುದನ್ನು ಮದರಾಸ್ ಸರ್ಕಾರದವರು ರದ್ದು ಮಾಡಿ ಅವರನ್ನು ಬಿಡುಗಡೆ ಮಾಡಿರುವರು.

ವಿದ್ಯುಚ್ಛಕ್ತಿಯ ಫುಟ್ ರಗ್

ಗ್ಲೋಬ್] ನ್ಯೂಯಾರ್ಕ್ ೩೦

ವಿದ್ಯುಚ್ಛಕ್ತಿ ಪ್ರವಹಿಸುವ ಫುಟ್ ರಗ್ಗುಗಳನ್ನು ಸಂಯುಕ್ತ ಸಂಸ್ಥಾನಗಳ ವೈಜ್ಞಾನಿಕರಾದ ಫ್ರಾಂಕ್ ಗ್ರಾಹಮರು ಕಂಡುಹಿಡಿದಿದ್ದಾರೆ ಅದರ ಮೇಲೆ ಕಾಲಿಟ್ಟಾಗ

ಪಡಿತರದಲ್ಲಿ ಜೋಳ

ನಿಲುವಳಿ ನಿರ್ಣಯ ಮಾತಿನಲ್ಲೇ ಮುಕ್ತಾಯ

ಸ್ವಂ.ಸು ಫೋ] ಬೆಂಗಳೂರು ೩

ಸಂಸ್ಥಾನದಲ್ಲಿ ಆಹಾರ ಪಡಿತರವನ್ನು ಕಡಿಮೆ ಮಾಡಿರುವುದರಿಂದ ಜನರಿಗೆ ಉಂಟಾಗಿರುವ ತೊಂದರೆಯನ್ನು ತಿಳಿಸುವುದಕ್ಕೆ ಹೆಚ್ಚು ಅಕ್ಕಿಯನ್ನು ಸರಬರಾಜು ಮಾಡುವಂತೆ ಭಾರತ ಸರ್ಕಾರದ ಮೇಲೆ ಒತ್ತಾಯ ತರುವುದಕ್ಕಾಗಿ ಶ್ರೀ ಟಿ ಮರಿಯಪ್ಪನವರು ಮಂಡಿಸಿದ್ದ ನಿಲುವಳಿ ನಿರ್ಣಯವು ಶಾಸನ ಸಭೆಯ ಮುಂದೆ ಚರ್ಚೆಗೆ ಬಂದಿತು. ಮುಂಚಿತವಾಗಿಯೇ ತಕ್ಕ ಏರ್ಪಾಡುಗಳನ್ನು ಮಾಡಿ ಭಾರತ ಸರ್ಕಾರದಿಂದ ಹೆಚ್ಚು ಧಾನ್ಯ ಸಂಗ್ರಹವನ್ನು ಸರ್ಕಾರದವರು ಪಡೆಯಲು ಏರ್ಪಾಡು ಮಾಡದಿದ್ದುದಕ್ಕಾಗಿ ಅನೇಕ ಸದಸ್ಯರು ಟೀಕಿಸಿದರು. ಆಹಾರ ಇಲಾಖೆಯ ಕಾರ್ಯದರ್ಶಿ ಶ್ರೀ॥ ಕೆ. ಶ್ರೀನಿವಾಸನ್‌ರವರು ಉತ್ತರವಿತ್ತು ಇಡೀ ಹಿಂದೂಸ್ಥಾನದಲ್ಲಿಯೇ ಅಕ್ಕಿಯ ಅಭಾವವು ತಲೆದೋರಿರುವುದರಿಂದ ಇತರ ಪ್ರಾಂತಗಳಂತೆ ಇಲ್ಲಿಯೂ ಪಡಿತರವನ್ನು ಕಡಿಮೆ ಮಾಡಲಾಯಿತೆಂದು ತಿಳಿಸಿದರು. ಅವರು ಮಾತನಾಡುತ್ತಿದ್ದಂತೆಯೇ ಕಾಲಾತೀತವಾದುದರಿಂದ ವಿಷಯವು ಮಾತಿನಲ್ಲೇ ಮುಕ್ತಾಯವಾಯಿತು

ಆ ಕರ್ನಾಟಕ ಏಕೀಕರಣವನ್ನು ಶೀಘ್ರದಲ್ಲಿ ಜಾರಿಗೊಳಿಸುವಂತೆ ಮಾಡಲು ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರವರ ಹರಿಜನರ ನಾಗರಿಕ ಹಕ್ಕುಗಳ ಬಗ್ಗೆ ಶ್ರೀ ಎಚ್ ಮಾದಯ್ಯನವರೂ ತಂದಿದ್ದ ಮಸೂದೆಗಳು ಚುನಾಯಿತ ಸಮಿತಿಯ ಪರಿಶೀಲನೆಗೆ ಒಪ್ಪಿಸಲ್ಪಟ್ಟವು.

ಗಡಿನಾಡಿನ ಮೇಲೆ ಅಫ್ಘಾನಿಸ್ಥಾನದ ಕಣ್ಣು

ಸಿಂಧೂ ನದಿಯಿಂದ ಈಗಿನ ಅಫ್ಘಾನಿಸ್ಥಾನದ ಎಲ್ಲೆಯವರೆಗಿರುವ ಪ್ರದೇಶವು ತಮಗೆ ಸೇರಬೇಕೆಂದು ಅಫ್ಘಾನಿಸ್ಥಾನದ ಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ತಿಳಿದು ಬಂದಿದೆ. ಭಾರತ ಸರ್ಕಾರದೊಡನೆ ಸಮಾಲೋಚನೆ ನಡೆಸಿ ಇದಕ್ಕೆ ಉತ್ತರವನ್ನು ಕಳುಹಿಸಲಾಗುವುದೆಂದು ಗೊತ್ತಾಗಿದೆ

ಅದು ತಾನಾಗಿಯೇ ಬೂಟ್ಸುಗಳನ್ನು ಒರೆಸಿ, ದೀಪವನ್ನು ಹಚ್ಚಿ, ಬಾಗಿಲ ಗಂಟೆಯನ್ನು ಬಾರಿಸುವುದು.

ಬೊಂಭೋರೆಯವರು ಲೇಬರ್ ಕಮಿಷನರಾದರು

ಸ್ವಂ.ಸು ಫೋ] ಬೆಂಗಳೂರು ೩

ಮೊದಲೇ ವರದಿಮಾಡಿದ್ದಂತೆ ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರನ್ನು ಲೇಬರ್ ಮತ್ತು ಗ್ರಾಮ ಕೈಗಾರಿಕಾಭಿವೃದ್ಧಿಯ ಕಮಿಷನರನ್ನಾಗಿಯೂ, ಶ್ರೀ ಮುತ್ತಯ್ಯನವರ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮಿ॥ ಅಪ್ಪಾಜಿ ರಂಗೋರಾವ್‌ರವರನ್ನು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯವರನ್ನಾಗಿಯೂ ನೇಮಿಸಿ ಸರ್ಕಾರದ ಪ್ರಕಟಣೆ ಹೊರಟಿರುತ್ತದೆ.

ಟ್ರೈನಿಂಗ್ ಕಾಲೇಜು

ಮೈಸೂರು ೩

ಸರ್ಕಾರದವರು ರಾಜಧಾನಿಯಲ್ಲಿ ಟ್ರೈನಿಂಗ್ ಕಾಲೇಜೊಂದನ್ನು ಸ್ಥಾಪಿಸಲು ೨ ಲಕ್ಷ ರೂ ಗಳ ಬಂಡವಾಳವನ್ನೂ ೩೦ ಸಾವಿರ ರೂ. ಗಳ ಆವೃತ್ತ ವೆಚ್ಚವನ್ನೂ ಮಂಜೂರು ಮಾಡಿರುವರು. ಈ ಸಾಲಿನಲ್ಲಿ ೨೫ ಸಾವಿರ ರೂ ಆವೃತ್ತ ಮತ್ತು ೨೫ ಸಾವಿರ ರೂ. ಅನಾವೃತ್ತ ವೆಚ್ಚವೂ ಸಹ ವಿಶ್ವವಿದ್ಯಾಲಯದ ಆಯವ್ಯಯ ಪಟ್ಟಿಯಲ್ಲಿ ಇದಕ್ಕಾಗಿ ಮಂಜೂರಾಗಿದೆ.

ಹೌಸಿಂಗ್ ಸೊಸೈಟಿ

ಶ್ರೀ. ಬಿ. ವಿ ನಂಜುಂಡಯ್ಯನವರು ಮೈಸೂರ ಹೌಸಿಂಗ್ ಸೊಸೈಟಿಗೆ ಅಧ್ಯಕ್ಷರಾಗಿಯೂ ಶ್ರೀ॥ ವೇಲೂ ಸಿಂಗ್‌ರವರು ಉಪಾಧ್ಯಕ್ಷರಾಗಿಯೂ ಶ್ರೀ॥ ಎ ವಿ ಶ್ರೀನಿವಾಸ ಮೂರ್ತಿಯವರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ

ಉಪನ್ಯಾಸ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಸಾಹಿತ್ಯರತ್ನ ಮಹಾ ವಿದ್ವಾನ್ ಕೆ. ಗೋಪಾಲಕೃಷ್ಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವಿದ್ವಾಂಸರುಗಳಾದ ಪಿ ನಂಜುಂಡಶಾಸ್ತ್ರಿ ಹೆಚ್ ವಿ ಯಜ್ಞೇಶ್ವರ ಶಾಸ್ತ್ರಿ, ಟಿ. ಸೀತಾರಾಮ ಶಾಸ್ತ್ರಿ. ಓ ನರಸಿಂಹಮೂರ್ತಿಶಾಸ್ತ್ರಿಯವರುಗಳಿಂದ ಗೀತೆಯ ೧೮ ನೆಯ ಅಧ್ಯಾಯದ ಮೇಲೆ ಭಾಷಣವು ನಡೆಯುವುದು. ಸರ್ವರಿಗೂ ಆಹ್ವಾನ ಉಂಟು

ಕುಂಚಿಟಿಗರ ವಿದ್ಯಾರ್ಥಿ ನಿಲಯ

ಮೊನ್ನೆ ಕುಂಚಿಟಿಗರ ವಿದ್ಯಾರ್ಥಿನಿಲಯವು ತೆರೆಯಲ್ಪಟ್ಟಿತು ಈ ಸಂದರ್ಭದಲ್ಲಿ ಸಂಘದ ಸದಸ್ಯರಾದ ದಿವಂಗತ ಸಾಹುಕಾ

ಹನುಮಂತಯ್ಯನವರ ಬಿಡುಗಡೆ ಇಲ್ಲ

ಶಾಸನ ಸಭೆಯಲ್ಲಿ ಉತ್ತರ

ಸ್ವಂ.ಸು.ಫೋ] ಬೆಂಗಳೂರು ೩

ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ॥ ಹನುಮಂತಯ್ಯನವರನ್ನು ಬಿಡುಗಡೆ ಮಾಡುವ ವಿಷಯವಾಗಿ ಶ್ರೀ॥ ಬೇಲೂರು ಶ್ರೀನಿವಾಸಯ್ಯಂಗಾರ್ಯರು ಈ ದಿನ ಶಾಸನ ಸಭೆಯಲ್ಲಿ ಅಲ್ಪಾವಧಿ ಪ್ರಶ್ನೆಯನ್ನು ಹಾಕಿದರು ಈ ಬಗ್ಗೆ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಸರ್ಕಾರದವರು ಉತ್ತರವಿತ್ತರು.

ಆಡಿಟ್ ಮತ್ತು ಅಕೌಂಟ್ಸ್ ಇಲಾಖೆಯಲ್ಲಿರುವ ಖಾಲಿ ಸ್ಥಾನಗಳನ್ನು ಭರ್ತಿ ಮಾಡದಿರುವ ವಿಷಯವಾಗಿ ಶ್ರೀ ಟಿ ಮರಿಯಪ್ಪನವರು ಮತ್ತೊಂದು ಅಲ್ಪಾವಧಿ ಪ್ರಶ್ನೆಯನ್ನು ಹಾಕಿದರು ಈ ಸ್ಥಾನಗಳಿಗೆ ಸಾಕಾದಷ್ಟು ಜನ ಅರ್ಹರಾದವರು ಬರುತ್ತಿಲ್ಲವಾದುದರಿಂದ ಕೆಲಸಕ್ಕೆ ತೊಂದರೆಯಾಗಿದೆಯೆಂದು ಅರ್ಥಿಕ ಕಾರ್ಯದರ್ಶಿಗಳು ತಿಳಿಸಿದರು.

ಪಬ್ಲಿಸಿಟಿ ಆಫೀಸರ್

ಸರ್ಕಾರದ ಪ್ರಕಟಣಾಧಿಕಾರಿಗಳಾಗಿರುವ ಶ್ರೀ ರಾಜರತ್ನಂರವರನ್ನು ೬೦೦-೨೫-೮೫೦ ರೂ ಸಂಬಳದ ಮೇಲೆ ಪ್ರಕಟಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ತುಮಕೂರಿನ ಅ॥ ಕಮೀಷನರಾದ ಶ್ರೀ॥ ಬಿ ರಾಚಪ್ಪನವರನ್ನು ನಿಮ್ನ ವರ್ಗದ ಅಭಿವೃದ್ಧಿಯ ಅ॥ ಕಮೀಷನರನ್ನಾಗಿ ನೇಮಿಸಲಾಗಿದೆ.

ಶ್ರೀ॥ ಕೆ. ಟಿ. ಭಾಷ್ಯಂರವರು ಒಂದು ಹೇಳಿಕೆಯನ್ನಿತ್ತು ಇಂದಿನ ದಿವಾನರ ನೀತಿಯಿಂದ ರಾಜರಿಗೂ, ಪ್ರಜೆಗಳಿಗೂ ಭಿನ್ನತೆಯು ಹೆಚ್ಚುವಂತಾಗಿದೆಯೆಂದು ಹೇಳಿ ಆತ್ಮ ಗೌರವವುಳ್ಳ ಯಾವ ಪ್ರಜೆಯೂ ಇಂದಿನ ಸರ್ಕಾರದ ನೀತಿಗೆ ತಲೆ ಬಾಗಲಾರರೆಂದು ತಿಳಿಸಿರುತ್ತಾರೆ.

ನದಿಯಿಂದ ೧೦ ಸಾವಿರ ಡಾಲರ್ ನಷ್ಟ

ಕಳೆದ ೧೦೩ ವರ್ಷಗಳಿಂದಲೂ ಬರದಿದ್ದಷ್ಟು ಮಹಾ ಪ್ರವಾಹವು ಮಿಸಿಸಿಪಿ ನದಿಯಲ್ಲಿ ಬಂದು ಮಿಸ್ಸೂರಿ, ಇಲಿನಾಯ್ಸ್, ನೆಬ್ರಾಸ್ಕ ಮತ್ತು ಅಯೋವ ಸಂಸ್ಥಾನಗಳ ಮೇಲೆ ನುಗ್ಗಿ ಸುಮಾರು ೧೦ ಸಾವಿರ ಕೋಟಿ ಡಾಲರ್‌ಗಳಷ್ಟು ನಷ್ಟವನ್ನುಂಟು ಮಾಡಿದೆಯೆಂದು ವರದಿಯಾಗಿದೆ.

ನಿಧನ

ಸ್ವಂ. ಸು] ಹಿರೇಸಾವೆ ೨

ಸನಾತನ ಧರ್ಮಕ್ಕಾಗಿ ಕಡೆಯವರೆಗೂ ದುಡಿದು, ಶ್ರೀ ಜಗದ್ಗುರು ದ್ವಾರಕಾ ಪೀಠಾಧ್ಯಕ್ಷರಾದ ಅಭಿನವ ಸಚ್ಚಿದಾನಂದ ಸ್ವಾಮಿಗಳವರಿಂದ ಶಿವಮೊಗ್ಗೆಯಲ್ಲಿ ನಡೆದ ಅಖಿಲ ಕರ್ನಾಟಕ ಸಮ್ಮೇಳನದಲ್ಲಿ "ಸನಾತನ ಧರ್ಮಸೇವಾಧುರೀಣ" ಎಂಬ ಬಿರುದನ್ನು ಪಡೆದಿದ್ದ ಶ್ರೀ॥ ಸುಬ್ಬರಾಯರು ಕಳೆದ ಸೋಮವಾರ ದಿವಂಗತರಾದ ರೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ.

...ರ್ ಕುರಿಯಪ್ಪನವರ ಕುಟುಂಬ ಶ್ರೀಮತಿ ಚಿಕ್ಕಮ್ಮನವರು ಸುಮಾರು ನೂರು ಮಂದಿ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿಶೇಷ ಭೋಜನವನ್ನೇರ್ಪಡಿಸಿದ್ದರು.

ಸಾಧ್ವಿ

೩-೭-೪೭ ಗುರುವಾರ

ಚುನಾವಣೆ ವಿಧಾನ ಸಮರ್ಪಕವಾಗಿಲ್ಲ

ರಾಜ್ಯಾಂಗ ಸಭೆಗೆ ಮೈಸೂರಿನ ಪ್ರತಿನಿಧಿಗಳನ್ನು ಆರಿಸುವ ವಿಷಯದಲ್ಲಿ ಇನ್ನೆ ಹೊರಟಿರುವ ಪ್ರಕಟಣೆಯು ಪ್ರಜೆಗಳಿಗೆ ಸಮಾಧಾನಕರವಾಗಿರುವುದಿಲ್ಲ. ಪ್ರತಿನಿಧಿಗಳ ಸಂಖ್ಯೆಯ ವಿಚಾರವಾಗಿ ನಾವು ಈಗ ಚರ್ಚಿಸಲು ಬಯಸುವುದಿಲ್ಲ. ಆದರೆ ಯಾರನ್ನು ಚುನಾಯಿಸಬೇಕೆಂಬ ವಿಷಯವನ್ನು ಮಾತ್ರ ಪ್ರಸ್ತಾಪಿಸಬೇಕಾಗಿದೆ.

ಶಾಸನ ಸಭೆಗಳ ಜೊತೆಗೆ ಅನೇಕ ಜನಗಣ್ಯ ಮಹನೀಯರೂ, ಮೇಧಾವಿಗಳೂ ಇರುವರು. ಅವರುಗಳ ಹೆಸರುಗಳು ಈಗಾಗಲೇ ಪ್ರಕಟವಾಗಿವೆ. ಅವರುಗಳಿಗೆ ಇಲ್ಲಿ ಅವಕಾಶ ಕೊಡದೆ ಕೇವಲ ಶಾಸನ ಸಭೆಗಳ ಸದಸ್ಯರುಗಳು ತಮ್ಮ ತಮ್ಮಲ್ಲೇ ಪ್ರತಿನಿಧಿಗಳನ್ನು ಚುನಾಯಿಸುವಂತೆ ಏರ್ಪಡಿಸಿರುವುದು ಒಂದು ದೊಡ್ಡ ಲೋಪವೇ ಸರಿ. ಶಾಸನ ಸಭೆಗಳಲ್ಲಿರುವುದಕ್ಕಿಂತಲೂ ಹೆಚ್ಚಿನ ಅರ್ಹತೆಯುಳ್ಳವರು ಅವುಗಳ ಹೊರಗೂ ಇರುವರೆಂಬುದನ್ನು ಮನಗಾಣದಿದ್ದುದು ವಿಷಾದಕರ.

ರಾಜ್ಯಾಂಗ ರಚನಾ ಕಾರ್ಯವು ಕೇವಲ ದಿನಚರಿಯ ಶಾಸನ ನಿರ್ಮಾಣದ ಕ್ರಮದಂತೆ ಅಲ್ಲದೆ ರಾಜ್ಯದ ಮೂಲಭೂತ ಸೂತ್ರಗಳನ್ನು ನಿರ್ಧರಿಸತಕ್ಕದಾಗಿರುತ್ತದೆ. ಇಂತಹ ಘನವಾದ ಕಾರ್ಯವನ್ನು ಕೇವಲ ಶಾಸನ ಸಭೆಗಳ ಸದಸ್ಯರುಗಳಿಗೇ ಮೀಸಲಾಗಿರಿಸುವುದು ಸರಿಯಲ್ಲ. ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮೇಲ್, ಡಿ. ವಿ. ಗುಂಡಪ್ಪ ಮುಂತಾದ ಮಹನೀಯರ ಹೆಸರುಗಳು ಈಗಾಗಲೇ ಸೂಚಿಸಲ್ಪಟ್ಟಿದ್ದವು. ಕಾಂಗ್ರೆಸ್ಸಿನ ಆಧಾರ ಸ್ತಂಭದಂತಿರುವ ಶ್ರೀಗಳಾದ ಕೆ. ಟಿ. ಭಾಷ್ಯಂ, ಹೆಚ್. ಸಿ. ದಾಸಪ್ಪ ಮುಂತಾದವರೂ ಸಹ ಇಂದಿನ ಶಾಸನ ಸಭೆಗಳಲ್ಲಿ ಕಾರಣಾಂತರದಿಂದ ಇರುವುದಿಲ್ಲ. ಇಂತಹವರುಗಳು ರಾಜ್ಯಾಂಗ ಸಭೆಯಲ್ಲಿ ಮೈಸೂರಿನ ಪ್ರತಿನಿಧಿಗಳಾಗಿ ಹೋಗುವಂತಾಗಿದ್ದರೆ ಮೈಸೂರಿನ ಘನತೆ ಗೌರವಗಳು ಇನ್ಮಡಿಯಾಗಿ ಹೆಚ್ಚುತ್ತಿದ್ದುವೆಂಬುದರಲ್ಲಿ ಸಂಶಯವಿಲ್ಲ. ಈಗ ಸದಸ್ಯರಾಗಬಹುದಾದವರಿಗಿಂತಲೂ ಅವರ ಸೇವೆಯು ಯಾವ ವಿಧದಲ್ಲಿಯೂ ಕಡಿಮೆಯಾಗುತ್ತಿರಲಿಲ್ಲ. ಈಗ ಹೊರಟಿರುವ ಆಜ್ಞೆಯ ಪ್ರಕಾರ ಅವರು ಉಮೇದುವಾರರಾಗಲು ಅವಕಾಶವಿರುವುದಿಲ್ಲ. ಸಂಸ್ಥಾನಕ್ಕೆ ಇದೊಂದು ದೊಡ್ಡ ನಷ್ಟವೇ ಸರಿ. ಈಗಲೂ ಸಹ ಶ್ರೀಮನ್ಮಹಾರಾಜರವರು ಮೇಲ್ಕಂಡ ಅಂಶಗಳನ್ನು ತಮ್ಮ ಚಿತ್ತಕ್ಕೆ ತಂದುಕೊಂಡು ಮೈಸೂರಿನ ಯಾವ ಪ್ರಜೆಯಾದರೂ ರಾಜ್ಯಾಂಗ ಸಭೆಯ ಸದಸ್ಯತನಕ್ಕೆ ಉಮೇದುವಾರರಾಗಲು ಅವಕಾಶವನ್ನು ಕಲ್ಪಿಸುವಂತೆ ಹೊಸ ಆಜ್ಞೆಯನ್ನು ದಯಪಾಲಿಸಬೇಕೆಂದು ನಾವು ಬೇಡುತ್ತೇವೆ.

ರಾಜಧಾನಿಯ ಉತ್ತರ ಕೋಟೆ ಶ್ರೀ ಆಂಜನೇಯಸ್ವಾಮಿಯವರ ದೇವಸ್ಥಾನದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ಹರಿಕಥಾ ವಿದ್ವಾನ್ ಶ್ರೀ|| ಟಿ. ಕೆ. ವೇಣುಗೋಪಾಲದಾಸರಿಂದ "ಚಂದ್ರಹಾಸ" ಎಂಬ ಹರಿಕಥೆಯು ನಡೆಯುತ್ತದೆ.

ಮೈಸೂರು ಸ್ಟೇಟ್ ರೈಲ್ವೆ

ಆಹಾರ ಸರಬರಾಜು ಇಲಾಖೆ

ನೋಟಿಫಿಕೇಷನ್: ತಾ|| ೨೪-೬-೪೭

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :—

ಈ ಇಲಾಖೆಯಲ್ಲಿ ಎಲ್ಲ ಬಗೆಯ ಉಪಯೋಗಿಸಲ್ಪಟ್ಟ ೨೦೦೦ ಗೋಣೀಚೀಲಗಳು ಮಾರಾಟಕ್ಕೆ ಸಿದ್ಧವಾಗಿವೆ. ಕೊಂಡುಕೊಳ್ಳಲಪೇಕ್ಷಿಸುವವರು ತಮ್ಮ ಟೆಂಡರುಗಳ ಎರಡು ಪ್ರತಿಗಳನ್ನು ಮೊಹರಾದ ಕವರುಗಳಲ್ಲಿಟ್ಟು ೧೯೪೭ ನೇ ಜುಲೈ ೧೦ ನೇ ತಾರೀಖಿನೊಳಗಾಗಿ ಈ ಕೆಳಗೆ ರುಜುಮಾಡಿರುವವರಿಗೆ ಕಳುಹಿಸಿಕೊಡಬಹುದು. ಮೊಹರಾದ ಕವರುಗಳ ಮೇಲ್ಭಾಗದಲ್ಲಿ "ಗೋಣೀಚೀಲಗಳಿಗಾಗಿ ಟೆಂಡರು" ಎಂಬುದಾಗಿ ಬರೆಯಬೇಕು. ಮೇಲ್ಕಂಡ ಅವಧಿಯನಂತರ ಬರತಕ್ಕ ಟೆಂಡರುಗಳಿಗೆ ಗಮನ ಕೊಡಲಾಗುವುದಿಲ್ಲ. ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟ ಟೆಂಡರುಗಳು ಮಾತ್ರ ತಾ|| ೧೧-೭-೪೭ ರ ದಿನ ಮಧ್ಯಾಹ್ನ ೩ ಗಂಟೆಗೆ ಈ ಕೆಳಗೆ ರುಜು ಮಾಡಿರುವವರಿಂದ ತೆರೆಯಲ್ಪಡುತ್ತವೆ. ಟೆಂಡರುಗಳನ್ನು ಕಳುಹಿಸಿರುವವರು ಆಗ ಅಲ್ಲಿ ಹಾಜರಾಗಬಹುದು.

ಈ ಟೆಂಡರಿಗೆ ಮುಂದೆ ಕಂಡ ಷರತ್ತುಗಳು ಅನ್ವಯಿಸುವುವು :—

೧. ಪ್ರತಿ ಟೆಂಡರುದಾರನೂ ಮೈಸೂರು ಸ್ಟೇಟ್ ರೈಲ್ವೆಯ ಚೀಫ್ ಆಡಿಟರಲ್ಲಿ ೫೦೦ ರೂಪಾಯಿಗಳನ್ನು ಡಿಪಾಜಿಟ್ಟು ಇಟ್ಟು ಅವರಿಗೆ ಕೊಟ್ಟ ಅದರ ರಶೀತಿಯನ್ನು ಟೆಂಡರ್ ಅರ್ಜಿಗೆ ಲಗತ್ತಿಸಿ ಕಳುಹಿಸಿಕೊಡಬೇಕು. ಚೆಕ್ಕು ಮೊದಲಾದುವನ್ನು ಇದಕ್ಕಾಗಿ ಕಳುಹಿಸಿಕೊಟ್ಟರೆ ಅವುಗಳನ್ನು ಅಂಗೀಕರಿಸಲಾಗುವುದಿಲ್ಲ.

೨. ಟೆಂಡರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ, ಅಂತ್ಯ ತೀರ್ಮಾನಕೊಡುವ ಅಧಿಕಾರವನ್ನು ಪಡೆದಿರುವ ಮೈಸೂರು ಸ್ಟೇಟ್ ರೈಲ್ವೆ ಜನರಲ್ ಮ್ಯಾನೇಜರಿಗೆ ಯಾವ ಕಾರಣವನ್ನೂ ಕೊಡದೆ ಟೆಂಡರನ್ನು ಅಂಗೀಕರಿಸಲು ಅಥವಾ ತಿರಸ್ಕರಿಸಲು ಪೂರ್ಣಾಧಿಕಾರವಿರುತ್ತದೆ. ಅತ್ಯಂತ ಹೆಚ್ಚು ಮೊಬಲಗಿನ ಟೆಂಡರನ್ನೇ ಅಂಗೀಕರಿಸಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ.

೩. ಜನರಲ್ ಮ್ಯಾನೇಜರರ ಅಂತ್ಯ ನಿರ್ಧಾರದ ನಂತರ ಜಯಶೀಲನಾದ ಟೆಂಡರುದಾರನು ಟೆಂಡರು ಅಂಗೀಕಾರವಾದ ಮೇಲೆ ಅವನಿಗೆ ತಿಳಿಯಪಡಿಸಿದ ದಿನದಿಂದ ಮೂರು ದಿನಗಳೊಳಗಾಗಿ ಬಾಕಿ ಮೊಬಲಗಿನ ಪೂರ್ತಿ ಮೊಬಲಗನ್ನೂ ಪಾವತಿಮಾಡಿ ಎಂಟು ದಿನಗಳೊಳಗಾಗಿ ಎಲ್ಲ ಗೋಣೀಚೀಲಗಳನ್ನೂ ತನ್ನ ಸುಪರ್ದಿಗೆ ಪಡೆಯಬೇಕು. ಆ ರೀತಿ ಮಾಡಲು ತಪ್ಪಿದಲ್ಲಿ ಅವನು ಠೇವಣಿಯಾಗಿ ಕೊಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೪. ಟೆಂಡರುದಾರರು ತಮ್ಮ ಕೊಟೇಷನ್ನುಗಳನ್ನು ಅಂಕಿಗಳಲ್ಲಿ ನಮೂದಿಸಬೇಕು. ಅಂಗಡಿ ಕೊಟೇಷನ್ನುಗಳನ್ನು ನಮೂದಿಸಿರುವ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ.

೫. ಜಯಶೀಲನಾದ ಟೆಂಡರುದಾರನಿಗೆ ಅವನ ಟೆಂಡರು ಅಂಗೀಕಾರವಾಗಿರುವುದಾಗಿ ತಿಳಿಸಿದ ಮೇಲೆ ಅವನು ಷರತ್ತುಗಳಿಗೆ ಬದ್ಧನಾಗಲು ಹಿಂಜರಿದರೆ ಅವನ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೬. ಅಂಗೀಕೃತವಾಗದ ಟೆಂಡರುದಾರರು ಅವರಿಗೆ ಆ ವಿಷಯವನ್ನು ತಿಳಿಸಿದ ನಂತರ ತಮ್ಮಲ್ಲಿರುವ ರಶೀತಿಯನ್ನು ಮೈಸೂರು ಸ್ಟೇಟ್ ರೈಲ್ವೆಯ ಚೀಫ್ ಆಡಿಟರವರಿಗೆ ತೋರಿಸಿ ತಾವು ಠೇವಣಿಯಾಗಿಟ್ಟಿರುವ ಮೊಬಲಗನ್ನು ವಾಪಸು ಪಡೆಯಬಹುದು.

೭. ಚೀಲಗಳನ್ನು ಕೊಂಡುಕೊಳ್ಳಲಪೇಕ್ಷಿಸುವವರು ಆಫೀಸು ಕೆಲಸವಾಗುವ ದಿನಗಳಲ್ಲಿ ಪ್ರತಿ ದಿನ ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ ಗೂಡ್ಸ್ ಷೆಡ್ಡಿನ ಬಳಿಯಿರುವ ರೈಲ್ವೆ ಸೆಂಟ್ರಲ್ ಡಿಪೋವಿನಲ್ಲಿ ಚೀಲಗಳನ್ನು ಬಂದು ನೋಡಬಹುದು.

ಮೈಸೂರು, ಪಿ. ಆರ್. ಬಾಬು ಮೊದಲಿಯಾರ್,

ತಾ|| ೨೪-೬-೪೭ ಫುಡ್ ಕಂಟ್ರೋಲರ್, ಮೈಸೂರು ಸ್ಟೇಟ್ ರೈಲ್ವೆ.

ಸ್ವಾಧೀನ ನೋಟೀಸು

ನಂಜನಗೂಡು ತಾಲ್ಲೂಕು ಹದಿನಾರು ಗ್ರಾಮದಲ್ಲಿರುವ ಸಿದ್ದಮಲ್ಲಪ್ಪನ ಹೆಂಡತಿ ಮಲ್ಲಮ್ಮನು ತಿಳಿಯಪಡಿಸುವುದೇನೆಂದರೆ:

ನನ್ನ ಬಾಬ್ತು ಹದಿನಾರು ಗ್ರಾಮದಲ್ಲಿರುವುದು ಸರ್ವೆ ನಂ. ೧೩೫ ನೇ ೩ ನೇ ಪೋಡು ೧ ಎಕರೆ ೩೦ ಗುಂಟೆ ಆಕಾರ ೧-೧೨-೦, ಸರ್ವೆ ೧೩೫ ನೇ ೫ ನೇ ಪೋಡು ೨೨ ಗುಂಟೆ ಆಕಾರ ೦-೮-೦

ಸರ್ವೆ ೯೫೮ ರಲ್ಲಿ ೧ ಎಕರೆ ೧೮ ಗುಂಟೆ ಆಕಾರ ೯-೮-೦, ೯೯೫-೨ ಎಕರೆ ೧೭ ಗುಂಟೆ ಆಕಾರ ೬-೮-೦ ರೂ. ಈ ಜಮೀನುಗಳನ್ನು ಯಾರಿಗೂ ಕ್ರಯ, ಭೋಗ್ಯ, ಆಧಾರ, ದಾನ ಇತ್ಯಾದಿಗಳೇನೂ ಮಾಡಿಲ್ಲ. ಈ ಜಮೀನುಗಳ ಮೇಲೆ ಯಾರಿಗೂ ಯಾವ ಹಕ್ಕೂ ಇರುವುದಿಲ್ಲ.

ಮಲ್ಲಮ್ಮ.

Edited printed and published by A. R. Nagarajan at the Sadhvi Press D Subbaiah Road Mysore

DO VISIT

The Health and Fine Arts

EXHIBITION

From 3th to 12th July 1947

AT THE

EXHIBITION BUILDINGS, MYSORE

OPENED From 8 to 12 Noon, 3 to 8 p m

Daily Admission Fee 0—1—0 only

Various Amusements And Entertainments Provided

A BEST OPPORTUNITY

ರಾಜಕಮಲ್

ತಾ|| ೪-೭-೪೭ ರಿಂದ

೨ ನೇ ವಾರ

ಪ್ರತಿ ದಿನ ೩ ಆಟಗಳು

ಬೈರಾಮ್‌ಖಾನ್

—: ಭೂಮಿಕೆ :—

ಗಜಾನನ್ ಜಾಗೀರ್ದಾರ್,

ದೇವಿಕ, ಗುಲಾಂ ಮಹಮ್ಮದ್,

ಮೆಹತಾಬ್, ಜೇಬುನ್ನೀಸ

Morning Shows from 4-7-47 for 4 days daily at 10-30 a m

★ Meet the Navy ★

(FIRST RUN for Mysore)

A musical smash punctuated with COMEDY, SPECTACLE plus TECHNI-COLOUR SEQUENCES

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೪—೭—೪೭ [ಸಂಚಿಕೆ ೨೭೯

ಪಾಕಿಸ್ತಾನ್ ಕಛೇರಿಗಾಗಿ ವಿಶ್ವವಿದ್ಯಾಲಯ ಬಂದ್

ಜಂಟಿ ಅಧಿವೇಶನ

ಚುನಾವಣೆಯ ಕಾರ್ಯಕ್ರಮ

ಸ್ವಂ ಸು ಪ್ರೋ] ಬೆಂಗಳೂರು ೪

ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನವು ನಾಳೆ ಬೆಳಿಗ್ಗೆ ೧೧ ಗಂಟೆಗೆ ಪಬ್ಲಿಕ್ ಆಫೀಸಿನ ಪುರಭವನದಲ್ಲಿ ಸೇರುವುದು. ದಿವಾನರು ಸದಸ್ಯರನ್ನು ಕುರಿತು ಭಾಷಣ ಮಾಡುವರು. ೧ ಗಂಟೆಗೆ ಸಭಾ ಕಾರ್ಯಕ್ರಮವು ಮುಗಿಯುವುದು. ನಾಳೆ ಸಂಜೆ ೫ ಗಂಟೆವರೆಗೆ ರಾಜ್ಯಾಂಗ ಸಭೆಗೆ ಉಮೇದುವಾರಿಕೆಗಳನ್ನು ಸ್ವೀಕರಿಸಲಾಗುವುದು. ಸೋಮವಾರ ಬೆಳಿಗ್ಗೆ ೧೦ ರಿಂದ ೧೨ ಗಂಟೆವರೆಗೆ ಶಾಸನ ಸಭೆ ಮತ್ತು ಮಧ್ಯಾಹ್ನ ೩ ರಿಂದ ೫ ರ ವರೆಗೆ ಪ್ರ॥ ಪ್ರ॥ ಸಭೆಯಿಂದ ಚುನಾವಣೆಗಳು ನಡೆಯುವುವು. ನ್ಯಾಯಾಂಗ ಕಾರ್ಯದರ್ಶಿಗಳಾದ ಶ್ರೀ ವಾಸುದೇವ ರಾವ್‌ರವರನ್ನು ಚುನಾವಣಾಧಿಕಾರಿಯಾಗಿ ನೇಮಿಸಲಾಗಿದೆ. ಫಲಿತಾಂಶವು ಮಂಗಳವಾರ ಪ್ರಕಟಿಸಲ್ಪಡುವುದು.

ಮೈಸೂರಿನ ಪ್ರತಿನಿಧಿಗಳೆಲ್ಲರೂ ೧೩ನೇ ತಾರೀಖು ವಿಮಾನದಲ್ಲಿ ದೆಹಲಿಗೆ ತೆರಳಲು ಏರ್ಪಾಡಾಗಿರುವುದಾಗಿ ತಿಳಿದುಬಂದಿದೆ. ಆ ನಿಯೋಗದವರಿಗೆ ರಾಜಕೀಯ ವಿಚಾರದಲ್ಲಿ ಸಲಹೆ ಕೊಡಲು ಒಬ್ಬ ಖಾಸಗೀ ಸದಸ್ಯನನ್ನೂ ಕರೆದುಕೊಂಡುಹೋಗುವ ಯೋಚನೆಯು ಇರುವುದಾಗಿಯೂ ತಿಳಿದುಬಂದಿದೆ.

ರೇಷನ್ ಮೋಸ ಮಾಡಿದುದಕ್ಕೆ

ಕಾರ್ಮಿಕರ ಮುಷ್ಕರ

ಕಳೆದ ವಾರದಿಂದ ರೇಷನ್ ಪ್ರಮಾಣವನ್ನು ಕಡಿಮೆ ಮಾಡಿರುವುದನ್ನು ಪ್ರತಿಭಟಿಸುವ ಸಲುವಾಗಿ ಕೋಲಾರದ ಚಿನ್ನದ ಗಣಿಯ ಸುಮಾರು ೨೫ ಸಾವಿರ ಮಂದಿ ಕೆಲಸಗಾರರು ಕಡಿಮೆ ಮಾಡಲ್ಪಟ್ಟ ಪಡಿತರದ ಪದಾರ್ಥಗಳನ್ನು ತೆಗೆದುಕೊಳ್ಳದೆ ಮುಷ್ಕರವನ್ನು ಹೂಡಿದರೆಂದು ಗೊತ್ತಾಗಿದೆ. ಮೈಸೂರು ಮಿಲ್ಸ್ ಕೆಲಸಗಾರರೂ, ಭಾಂಪಿಯರ್ ರೇಖ್ಸ್ ಕೆಲಸಗಾರರೂ ಸಹ ತಮ್ಮ ಪ್ರತಿಭಟನೆಯನ್ನು ಸೂಚಿಸಲು ಕೆಲಸವನ್ನು ತ್ಯಜಿಸಿ ಹೊರಗೆ ಬಂದರೆಂದು ತಿಳಿದುಬಂದಿದೆ. ಕಾರ್ಮಿಕ ಸಂಘಗಳ ಜಂಟಿ ಸಭೆಯಲ್ಲಿ ಈ ವಿಶೇಷ ಪರಿಸ್ಥಿತಿಯ ಪರಿಶೀಲನೆ ನಡೆದು ಸರ್ಕಾರದ ಉನ್ನತಾಧಿಕಾರಿಗಳ ಬಳಿ ನಿಯೋಗ ಹೋಗಬೇಕೆಂದು ತೀರ್ಮಾನಿಸಲಾಗಿದೆ.

ಸೈನ್ಯ ವಿಭಜನೆ

ಭಾರತ ಸೈನ್ಯದ ವಿಭಜನೆಯನ್ನು ಎರಡು ರೀತಿಯಾಗಿ ಮಾಡಲಾಗುವುದೆಂದು ವರದಿಯಾಗಿದೆ. ಇದರಂತೆ ಮೊದಲು ಸೈನ್ಯವನ್ನು ಕೋಮುವಾರು ಆಧಾರದ ಮೇಲೆ ವಿಂಗಡಿಸಿ ಅನಂತರ ಡೊಮಿನಿಯನ್ನುಗಳ ಸೈನ್ಯವನ್ನು ಪ್ರಾದೇಶಿಕ ಪ್ರಮಾಣದ ಮೇಲೆ ಪುನರ್ರಚಿಸಲಾಗುವುದು. ಕಮ್ಯಾಂಡರ್-ಇನ್-ಚೀಫ್‌ರು ತಾತ್ಕಾಲಿಕವಾಗಿ ಸುಪ್ರೀಂ ಕಮ್ಯಾಂಡರರ ಅಧಿಕಾರವನ್ನು ವಹಿಸುವರು. ಆಡಳಿತಕ್ಕೆ ಸಂಯುಕ್ತ ರಕ್ಷಣಾ ಸಮಿತಿಯೊಂದರ ಏರ್ಪಾಡಾಗುವುದು. ವಿಭಜನಾ ಸಮಿತಿಯಿಂದ ಈ ಯೋಜನೆಯು ಅಂಗೀಕೃತವಾಗಿದೆ. ಎರಡು ಡೊಮಿನಿಯನ್ನುಗಳೂ ತಮ್ಮ ತಮ್ಮ ಸೈನಿಕರ ಸಂಬಳ ಸಾರಿಗೆ ಮತ್ತು ಆಡಳಿತಗಳ ವ್ಯವಸ್ಥೆಗಳನ್ನು ನೋಡಿಕೊಳ್ಳಲು ಶಕ್ತವಾಗುವವರೆಗೆ ಸೈನ್ಯಗಳ ಮೇಲ್ವಿಚಾರಣೆಯು ಸಂಯುಕ್ತ ಸಮಿತಿಯಿಂದಲೇ ನಡೆಸಲ್ಪಡುವುದು.

ರೆಫರೆಂಡಂ ಬಹಿಷ್ಕಾರಕ್ಕೆ

ಈಪಿ ಫಕೀರರ ಬೆಂಬಲ

ಗಡಿನಾಡಿನಲ್ಲಿ ನಡೆಯಲಿರುವ ಜನಾಭಿಪ್ರಾಯ ಪಡೆಯುವ ಕ್ರಮವನ್ನು ಅಲ್ಲಿನ ಕಾಂಗ್ರೆಸ್ಸು ಬಹಿಷ್ಕರಿಸುವುದಕ್ಕೆ ಈಪಿ ಫಕೀರರು ಬೆಂಬಲ ನೀಡುವರೆಂದು ತಿಳಿದುಬಂದಿದೆ.

ಭಾರತ ವಿಭಜನೆಯ ಖಂಡನೆ

ಮೈಸೂರು ೪

ಭರತಖಂಡವನ್ನು ಹಿಂದೂಸ್ತಾನ ಮತ್ತು ಪಾಕಿಸ್ತಾನಗಳೆಂದು ವಿಂಗಡಿಸಲು ಕಾಂಗ್ರೆಸ್ಸು ಒಪ್ಪಿರುವುದನ್ನು ಖಂಡಿಸುವುದಲ್ಲದೆ ಈ ವಿಭಜನೆಯನ್ನು ಮಾರ್ಪಡಿಸಲು ಶಾಂತಿಯುತವಾದ ಮತ್ತು ನ್ಯಾಯಸಮ್ಮತವಾದ ಎಲ್ಲಾ ಪ್ರಯತ್ನಗಳನ್ನೂ ನಡೆಸಬೇಕೆಂಬ ನಿರ್ಣಯವು ಶ್ರೀ ಮಾ. ಎಂ. ಸಿ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ರಾಜಧಾನಿಯ ಹಿಂದೂ ಮಹಾಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ರಾಜ್ಯಾಂಗ ಸಭೆಗೆ ಮೈಸೂರಿನ ಪ್ರತಿನಿಧಿಗಳನ್ನು ಕಳುಹಿಸಲು ಈಗ ಗೊತ್ತುಮಾಡಿರುವ ವಿಧಾನವನ್ನು ಖಂಡಿಸಿ ಅದನ್ನು ಮಾರ್ಪಡಿಸಿ ಮೈಸೂರಿನ ಎಲ್ಲಾ ಪ್ರಜೆಗಳಿಗೂ ಉಮೇದುವಾರರಾಗಲು ಅವಕಾಶ ಕಲ್ಪಿಸಬೇಕೆಂದು ಸೂಚಿಸುವ ಮತ್ತೊಂದು ನಿರ್ಣಯವೂ ಅಂಗೀಕರಿಸಲ್ಪಟ್ಟಿತು.

ಮುಮ್ಮಡಿಯವರ ಜಯಂತಿ

ನಾಳೆ ಸಂಜೆ ೬-೩೦ ಗಂಟೆಗೆ ರಾಜಧಾನಿಯ ಪುರಭವನದಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಜಯಂತ್ಯುತ್ಸವ ನಡೆಯುವುದು. ಪೌರಾಧ್ಯಕ್ಷರಾದ ಶ್ರೀ ಆರ್. ರಾಮಚಂದ್ರರಾವ್ ಬೊಂಬೋರೆಯವರು ಅಧ್ಯಕ್ಷತೆ ವಹಿಸುವರು.

ವಿದ್ಯಾರ್ಥಿಗಳಿಗೆ ಭೋಜನ ಸೌಕರ್ಯ

ಪೌರಸಭೆಯಿಂದ ನೇಮಕವಾಗಿರುವ ಸಮಿತಿಯವರು ಕಳೆದ ವರ್ಷದಂತೆ ಈ ವರ್ಷವೂ ಬಡ ಬಡ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡುವರು. ಈ ಸಮಿತಿಯಿಂದ ಎಲ್ಲ ಕೋಮುಗಳ ೬೫ ಮಂದಿ ವಿದ್ಯಾರ್ಥಿಗಳಿಗೆ ಭೋಜನದ ಏರ್ಪಾಡು ಮಾಡಲಾಗುವುದು. ಸಹಾಯವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳು ಈ ತಿಂಗಳು ೧೫ನೇ ತಾರೀಖಿನೊಳಗಾಗಿ ತಮ್ಮ ಶಾಲಾ ಮುಖ್ಯೋಪಾಧ್ಯಾಯರಿಂದ ಶಿಫಾರಸ್ಸು ಪಡೆದು ಅರ್ಜಿ ಹಾಕಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಬೀರಾರಿನಲ್ಲಿ ನಿಜಾಮರ ವಿರುದ್ಧ ಚಳುವಳಿ

ಹೈದರಾಬಾದಿನ ನಿಜಾಮರ ವಿರುದ್ಧವಾಗಿ ಸಾಮೂಹಿಕ ಚಳುವಳಿಯನ್ನು ಬೀರಾರಿನಲ್ಲಿ ಆರಂಭಿಸಲಾಗುವುದೆಂದೂ ಅಲ್ಲಿನ ಕಾಂಗ್ರೆಸ್ ಕಮಿಟಿಗಳ ಮೇಲಿರುವ ನಿಷೇಧಾಜ್ಞೆ ಆದೇಶ ಚಟುವಟಿಕೆಯನ್ನು ನಡೆಸುವ ಧ್ವಜ ಮೆರವಣಿಗೆಗಳನ್ನೆಲ್ಲಾ ಕೈಕೊಳ್ಳಲಾಗುವುದೆಂದೂ ಅಖಿಲ ಭಾರತ ಹಿಂದೂ ಮಹಾಸಭಾದವರು.

ತೊಗರೀ ಬೇಳೆ ಅಭಾವ

ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ. ಸು. ಪ್ರೋ] ಬೆಂಗಳೂರು ೪

ಶಾಸನ ಸಭೆಯ ಕಡೆಯ ದಿನದ ಕಾರ್ಯಕಲಾಪಗಳು ಇಂದು ೧೨ ಗಂಟೆಗೆ ಆರಂಭವಾದುವು.

ಕ್ಯುಮ್ಯುಲೆಟಿವ್ ಓಟಿನ ಪದ್ಧತಿ, ಆಹಾರ ಇಲಾಖೆಯ ಲೆಖ್ಖಗಳ ತನಿಖೆ, ತೊಗರೀ ಬೇಳೆಯ ಅಭಾವ—ಮುಂತಾದ ವಿಷಯಗಳಲ್ಲಿ ಸದಸ್ಯರು ಪ್ರಶ್ನೆಯನ್ನು ಕೇಳಿದರು. ಕ್ಯುಮ್ಯುಲೆಟಿವ್ ಓಟಿನ ವಿಚಾರವು ಒಪ್ಪಿಕೊಳ್ಳುವ ಅಭಿಪ್ರಾಯಕ್ಕೆ ಸಂಬಂಧಪಟ್ಟ ವಿಚಾರವೆಂದು ಸರ್ಕಾರದವರು ತಿಳಿಸಿದರು. ಆಹಾರ ಇಲಾಖೆಯ ಲೆಖ್ಖಗಳ ಪರಿಶೀಲನೆಯನ್ನು ಕೇಂದ್ರ ತನಿಖೆಯ ಸಮಿತಿಗೆ ಒಪ್ಪಿಸುವ ಅವಶ್ಯಕತೆಯಿಲ್ಲವೆಂದು ಹೇಳಿದರು. ಸಾಕಾದಷ್ಟು ತೊಗರೀ ಬೇಳೆಯು ಒದಗದೆ ತೊಂದರೆಯಾಗಿದೆಯೆಂದು ಸೂಚಿಸಿದರು.

ಮೈಸೂರು ಪೌರಸಭಾಧ್ಯಕ್ಷತೆ

ರಾಜಧಾನಿಯ ಪೌರಸಭೆಗೆ ಚುನಾಯಿತ ಅಧ್ಯಕ್ಷರನ್ನು ಹೊಂದಲು ಅವಕಾಶ ಕಲ್ಪಿಸುವ ವಿಷಯವಾಗಿ ನಿನ್ನೆ ಶ್ರೀ ಹುಚ್ಚೇಗೌಡರು ತಂದಿದ್ದ ನಿರ್ಣಯದ ಮೇಲೆ ವಿಶೇಷ ಚರ್ಚೆ ನಡೆದು ೫೦-೨೨ ಓಟುಗಳಿಂದ ಅದು ಅಂಗೀಕರಿಸಲ್ಪಟ್ಟಿತು. ಬೆಂಗಳೂರು ನಗರಕ್ಕೆ ಚುನಾಯಿತ ಅಧ್ಯಕ್ಷರನ್ನು ಕೊಟ್ಟು ರಾಜಧಾನಿಯವರು ಅನೇಕ ವರ್ಷಗಳಿಂದ ಮಂಡಿಸುತ್ತಿರುವ ಈ ಬೇಡಿಕೆಯನ್ನು ಉಪೇಕ್ಷಿಸುತ್ತಿರುವುದಕ್ಕಾಗಿ ಸರ್ಕಾರದವರನ್ನು ಸದಸ್ಯರು ಟೀಕಿಸಿದರು. ಸದಸ್ಯರ ಅಭಿಪ್ರಾಯವನ್ನು ಸರ್ಕಾರದವರು ಗಮನಿಸಿ ಸೂಕ್ತವಾದ ಸಮಯದಲ್ಲಿ ಯೋಜನೆಯೊಂದನ್ನು ನೆರವೇರಿಸುವುದಾಗಿ ಮಂತ್ರಿಗಳಾದ ಡಾ॥ ರಾಮಯ್ಯನವರು ಹೇಳಿದರು.

ಢಾಕಾ ವಿಶ್ವ ವಿದ್ಯಾಲಯದಲ್ಲಿ ಪಾಕಿಸ್ತಾನ್ ಕಛೇರಿ

ಢಾಕಾ ವಿಶ್ವ ವಿದ್ಯಾಲಯದ ಕಟ್ಟಡಗಳಲ್ಲಿ ಪೂರ್ವ ಪಾಕಿಸ್ತಾನದ ಸೆಕ್ರೆಟೇರಿಯಟ್ ಕಛೇರಿಗಳನ್ನು ಸ್ಥಾಪಿಸಲು ವಿಶ್ವವಿದ್ಯಾಲಯಕ್ಕೆ ೩ ತಿಂಗಳ ಕಾಲ ರಜಾ ಕೊಡಬೇಕೆಂದು ಬಂಗಾಳಾ ಸರ್ಕಾರದವರು ಆಲೋಚಿಸುತ್ತಿರುವುದಾಗಿ ವರದಿಯಾಗಿದೆ.

ಪಬ್ಲಿಕ್ ಪ್ರಾಸಿಕ್ಯೂಟರುಗಳು

ಸ್ವಂ. ಸು. ಪ್ರೋ] ಬೆಂಗಳೂರು ೪

ಮೈಸೂರಿಗೆ ಶ್ರೀ ಜಿ. ಶಂಕರ ಶೆಟ್ಟರನ್ನು, ಮಂಡ್ಯಕ್ಕೆ ಶ್ರೀ ಬಿ. ಕೆಂಪೇಗೌಡರನ್ನು ೩ ವರ್ಷ ಕಾಲ ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ನೇಮಿಸಲಾಗಿದೆ. ಶ್ರೀ ಸಿ. ಕೃಷ್ಣಪ್ಪನವರು ಮೈಸೂರಿಗೂ, ಇಕ್ಬಾಲ್ ಹುಸೇನರು ಬೆಂಗಳೂರಿಗೂ ಸರ್ಕಾರಿ ಪ್ಲೀಡರುಗಳಾಗಿ ನೇಮಿಸಲ್ಪಟ್ಟಿರುವರು.

ಶಾಸಕರಿಯ ಅಧ್ಯಕ್ಷರಿಗೆ ಶ್ರೀ ವಿ. ಜಿ. ದೇಶಪಾಂಡೆಯವರು ಮೋಹರಿಸುವ ಚಳುವಳಿಯ ಆಗಸ್ಟ್ ೧೫ರ ವೇಳೆಗೆ ಆರಂಭವಾಗುವುದೆಂದೂ, ಬೀರಾರಿನ ಜನತೆ ಕರ್ತವ್ಯ ಯುಗ್ರವೇಣಿಯೆಂದೂ ಸಂಭವಿಸುವ ಹಿಂಸೆಗಳು ಸತ್ಯಾಗ್ರಹಿಗಳು ಎಚ್ಚರದಿಂದಿರಬೇಕು ಸಿದ್ಧವಾಗಿರುವುದಾಗಿಯೂ ಅವರು ತಿಳಿಸಿರುವರು.

ಮೈಸೂರು ನಗರ ಪೌರಸಭಾ

ಕಲಾ ಮತ್ತು ಆರೋಗ್ಯ ಪ್ರದರ್ಶನ 1947

8-7-47 ರಿಂದ 12-7-47 ಪೂರ್ತಾ

ದಸರಾ ವಸ್ತು ಪ್ರದರ್ಶನಾಲಯದಲ್ಲಿ

ಮೇಲ್ಕಂಡ ಪ್ರದರ್ಶನದ ಸಂಬಂಧವಾಗಿ ಇದೇ ಮಾಹೆ ೧೦ ಮತ್ತು ೧೧ ನೇ ತಾರೀಖುಗಳಲ್ಲಿ ಹೈಸ್ಕೂಲ್ ಮತ್ತು ಕಾಲೇಜು ವಿದ್ಯಾರ್ಥಿಗಳ

ಕ್ರೀಡಾ ವಿನೋದವಸ್ತು (FIELD SPORTS)

ನಡೆಸಲು ಏರ್ಪಡಿಸಿರುತ್ತದೆ

ಇದರಲ್ಲಿ ಭಾಗವಹಿಸಲು ಅಪೇಕ್ಷಿಸುವ ವಿದ್ಯಾರ್ಥಿಗಳು ತಮ್ಮ ಮುಖ್ಯಾಧಿಕಾರಿಗಳ ಮೂಲಕ ಈ ತಿಂಗಳು ೭ ನೇ ತಾರೀಕು ೬ ಗಂಟೆಯೊಳಗೆ ಪೌರಸಭಾ ಕಛೇರಿಗೆ ತಮ್ಮ ಹೆಸರು, ವಿಳಾಸಗಳನ್ನು ಕಳುಹಿಸಿಕೊಡಬೇಕು.

ಇದಕ್ಕಾಗಿ ಪ್ರತ್ಯೇಕವಾದ ಯಾವ ಶುಲ್ಕವನ್ನೂ ಕೊಡಬೇಕಾಗಿಲ್ಲ.

ಸ್ಪರ್ಧೆಗಳಲ್ಲಿ ಜಯಶೀಲರಿಗೆ ಬಹುಮಾನವನ್ನು ಕೊಡಲಾಗುವುದು.

ಪ್ರದರ್ಶನದ ಕಛೇರಿಯನ್ನು ನಾಳೆಯಿಂದ ಮೇಲ್ಕಂಡ ಸ್ಥಳದಲ್ಲಿಯೇ ಆರಂಭಿಸಲಾಗುವುದು.

ಟಿ. ನರಸಿಂಹಯ್ಯಂಗಾರ್, ಇ. ಅನಂತರಾವ್

ಕಾರ್ಯದರ್ಶಿಗಳು

ಸಾಧ್ವಿ

೪-೭-೪೭ ಶುಕ್ರವಾರ

ಮೈಸೂರು ಪೌರಸಭಾಧ್ಯಕ್ಷತೆ

ರಾಜಧಾನಿಯ ಪೌರಸಭೆಗೆ ಅಧ್ಯಕ್ಷರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂಬ ನಿರ್ಣಯವು ಶಾಸನ ಸಭೆಯಲ್ಲಿಯೂ ಸಹ ಮಂಜೂರಾಗಿರುತ್ತದೆ ಇದುವರೆಗೆ ಈ ವಿಷಯವು ಪ್ರಜಾ ಪ್ರತಿನಿಧಿ ಸಭೆಯಲ್ಲಿಯೂ, ನ್ಯಾಯವಿಧಾಯಕ ಸಭೆಯಲ್ಲಿಯೂ ಅನೇಕ ಬಾರಿ ಪರಿಶೀಲನೆಗೆ ಬಂದಿದೆ ಇನ್ನೂ ಇತರ ಅನೇಕ ರೀತಿಗಳಲ್ಲಿಯೂ ಅದು ಒತ್ತಾಯ ಪಡಿಸಲ್ಪಡುತ್ತಲೇ ಬಂದಿದೆ ಸರ್ಕಾರದವರು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡದೆ ಕಾಲವನ್ನು ತಳ್ಳುತ್ತಲೇ ಬಂದಿದ್ದಾರೆ

ಶಾಸನ ಸಭೆಯ ಈಗ ರಚಿತವಾಗಿರುವ ರೀತಿಯಲ್ಲಿ ಇಂತಹ ನಿರ್ಣಯ ಗಳು ಅಂಗೀಕೃತವಾಗುವುದು ಸುಲಭವಲ್ಲ ಆದರೂ ಸಹ ಇದ ... ಒಂದು ಮತದ ... ದಿಂದ ಒಪ್ಪಲ್ಪಟ್ಟಿರುತ್ತದೆ ಈ ಸಭೆಯು ನಿರ್ಣಯದ ... ವಿಷಯ ... ಒಪ್ಪ ... ಇದರಿಂದ ... ಈ ವಿಚಾರ ... ವೆಂಬುದ ... ಈಗಲಾದರೂ ಸರ್ಕಾರದವರು ... ಮಾಡಿ ಕೊಡ ... ಉದ್ದೇಶ ... ಮಾಡ ...

... ಈ ವಿಷಯ ದಲ್ಲಿ ಕೊಟ್ಟ ಅಭಿಪ್ರಾಯ ... ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರವನ್ನು ಪೌರಸಭೆಗೆ ಕೊಡುವ ಸಂದರ್ಭವು ಒದಗಿದೆಯೆಂದು ತೀರ್ಮಾನಿಸಿ ಸರ್ಕಾರದವರು ಅದನ್ನು ಅಂಗೀಕರಿಸಲು ಸಿದ್ಧರಾಗಿರುವುದಾಗಿ ಅವರು ಹೇಳಿದರು. ಆ ... ಎಂದಿಗೆ ... ಕಳೆದ ಹತ್ತು ವರ್ಷಗಳಿಂದ ... ಇಂದಿಗೂ ಬಂದಿರುವಂತೆ ... ಯಾವ ...

... ಸ್ಥಾನದಲ್ಲಿ ... ಹೊಸ ಸುಧಾರಣೆ ... ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ... ಪ್ರಾಪ್ತವಾಗಲಿದೆ ... ಮೈಸೂರು ನಗರಸಭೆಗೆ ಚುನಾಯಿತ ಅಧ್ಯಕ್ಷ ... ಇಂದಿನ ... ಶ್ರೀ ... ಚುನಾಯಿಸುವ ... ಶಾಸನ ಸಭೆ ... ಆದರೂ ... ಅಧ್ಯಕ್ಷರ ... ಸರ್ಕಾರದವರು ವಹಿಸಬಾರದೇ?

Edited printed and published by A. R. Narasimhan at the Sadhvi Press D. Subbaiah Road Mysore

ಸ್ವತಂತ್ರ ಸಂಸ್ಥಾನಗಳಿಗೆ ನೆಹರೂರವರ ಎಚ್ಚರಿಕೆ

ಸಂಸ್ಥಾನಗಳು ಸ್ವತಂತ್ರವೆಂದು ಹೇಳಿಕೊಳ್ಳುವುದನ್ನು ಭಾರತ ಕೇಂದ್ರ ಸರ್ಕಾರವು ಸಹಿಸಲಾರದು, ಭಾರತದಿಂದ ವಿದೇಶೀಯರನ್ನು ಹೊರದೂಡುತ್ತಿರುವ ಈ ಸಮಯದಲ್ಲಿ ಸಂಸ್ಥಾನಗಳ ಸ್ವಾತಂತ್ರ್ಯ ಘೋಷಣೆಯು, ವಿದೇಶೀ ಅಧಿಕಾರವು ಇಲ್ಲಿ ಕಾಲಿಡಲು ಅವಕಾಶವಾಗುವುದ - ಎಂದು ಪಂಡಿತ ನೆಹರೂರವರು ಹೇಳಿರುವರು ಸಮಾನತೆಯ ತತ್ವದ ಮೇಲೆ ಸಂಸ್ಥಾನಗಳು ಭಾರತ ಯೂನಿಯನ್ನಿಗೆ ಸೇರಬಹುದು ಹಾಗಿಲ್ಲದಿದ್ದರೆ ಅವುಗಳನ್ನು ಒತ್ತಾಯದಿಂದ ಸೇರಿಸಲಾಗುವುದು ... ಸಂಸ್ಥಾನಗಳ ಸ್ವಾತಂತ್ರ್ಯ ಘೋಷಣೆಯ. ... ಪರಿಸ್ಥಿತಿ ಉಂಟಾಗುವುದು, ಅದನ್ನು ನಿವಾರಿಸಲು ... ಸಂಸ್ಥಾನಗಳ ... ಯೂನಿಯನ್ ಸರ್ಕಾರವು ... ಕ್ರಮ ಕೈಗೊಳ್ಳಬೇಕಾಗ ... ಎಂದೂ ಅವರು ಸೂಚಿಸಿ ...

"..."

ಶ್ರೀ

ಪಾಂಡಿಚ್ಚೇಶ್ವರ ಸಂಗೀತ

ನಾಟಕ ಮಂಡಳಿ, ...

ಇವರು ಮೈಸೂರು ... ರತ್ನಾವಳಿ ಥಿಯೇಟರಿನಲ್ಲಿ 5-7-47 ಶನಿವಾರ ರಾತ್ರಿ ೧೦ ಘಂಟೆಗೆ ಯಶಸ್ವಿ ... ನೇ ಪ್ರಯೋಗ

ಪಠಾಣೀ ಪಾಶ

ಎಂಬ ... ನಾಟಕವನ್ನು ಅಭಿನಯಿಸುವರು ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಚಿಕ್ಕಚಿಟ್ಟಪ್ಪ, ಪ್ರೊಪ್ರೈಟರ್

ವರ್ಧಂತಿ ಕಾರ್ಯಕ್ರಮ

ಮೈಸೂರು ೪

ಶ್ರೀ ... ಮಹಾರಾಜರವರ ವರ್ಧಂತಿಯ ಪ್ರಯುಕ್ತ ಈ ತಿಂಗಳು ೯ ನೇ ತಾರೀಖು ಬುಧವಾರ ಬೆಳಿಗ್ಗೆ ೧೦॥ ಗಂಟೆಗೆ ಅರಮನೆ ಸಜ್ಜೆಯಲ್ಲಿ ದರ್ಬಾರು ಸಂಜೆ ೫ ಗಂಟೆಗೆ ಗೌರ್ನಮೆಂಟ್ ಹೌಸಿಗೆ ಮೆರವಣಿಗೆ ೧೦ ನೇ ತಾರೀಖು ಗುರುವಾರ ಸಂಜೆ ೭ ಘಂಟೆಗೆ ಕಲ್ಯಾಣಮಂಟಪದಲ್ಲಿ ದರ್ಬಾರು ೧೧ ನೇ ತಾ॥ ಸಂಜೆ ೭ ಗಂಟೆಗೆ ಕಲ್ಯಾಣ ಮಂಟಪದಲ್ಲಿ ದರ್ಬಾರುಗಳು ನಡೆಯುವುವು

ವಿಮಾನದ ದಸ್ತಗಿರಿ

ಗ್ಲೋಬ್] ನ್ಯೂಯಾರ್ಕ್ ೩೦

ಆಕಾಶದಲ್ಲಿ ಹಾರಾಡುತ್ತಿದ್ದ ವಿಮಾನವೊಂದನ್ನು ಮತ್ತೊಂದು ವಿಮಾನದ ಸಹಾಯದಿಂದ ಕೆಳಗಿಳಿಸಿ ಪೋಲೀಸರು ದಸ್ತಗಿರಿ ಮಾಡಿರುವರು ಆ ವಿಮಾನದ ಪ್ರಯಾಣಿಕರನ್ನಿಟ್ಟುಕೊಂಡು ... ಕೆಲವು ... ಪ್ರಕಟಿಸ ... ತೊಂದರೆಯುಂಟುಮಾಡುತ್ತಿದ್ದ ... ದೂರು ಬಂದಿದ್ದುದೇ ಇದಕ್ಕೆ ಕಾರಣ

ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಚಿತವಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1 8-0

ಗೂರ್ಲು—ಉಬ್ಬಸಕ್ಕೆ

(Asthma)

... ಔಷಧಿ ದೊರೆಯುತ್ತೆ ... ಮನುಷ್ಯರು ... ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ

(Appendecitis) ... (Tonsils) ಗಳಾಯಿತ ... ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ

ಗುಂಡ್ಲುಪೇಟೆ ಆರ್ ಎಸ್ ಪಂಡಿತರು, ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು.

ಗ್ರಾಂಡ್ ಪ್ಯಾಲೇಸ್

ತಾ॥ ... ರಿಂದ

... ನೇ ವಾರ

...

Morning Shows from 1 7 47 for 4 days daily at 10 30 a m

☆ Meet the Navy ☆

(First Run for Mysore)

A musical smash punched with COMEDY, SPECTACLE plus TECHNI COLOUR SEQUENCES

...



ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ಪಿ ವೆಂಕಟರಾಮಯ್ಯ ಡಿ॥ ವೋರ್ಡ್ ವೈದ್ಯ, ಒಕ್ಕಲವಾಡಿ ... ಶಾ॥

ಇದೇ 5 7-47 ರಿಂದ

...

ಪ್ಯಾಲೇಸ್ ಸಿನೇಮಾ

ಒಲಂಪಿಯಾ, ಮೈಸೂರು.

ಸಾಧ್ವಿ

(ತಿಂಗಳಿಗೆ ಚಂದಾ ... ಮಾತ್ರ

ಫೋನ್ ನಂ. 392 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಶನಿವಾರ ೫—೭—೪೭ [ಸಂಚಿಕೆ ೨೪೦

ಪ್ರಾ॥ ಪ್ರಾ॥ ಮತ್ತು ಶಾಸನ ಸಭಾ ಜಂಟಿ ಅಧಿವೇಶನ

ನೇತಾಜಿ ಉಳಿದಿದ್ದಾರೆ

...ಬು ಸುಭಾಷ್ ಚಂದ್ರ ಬೋಸರ ಜಾ...ನ್ನು ಸೂಕ್ಷ್ಮವಾಗಿ ವೀಕ್ಷಿಸಿದರೆ ಅಪ...ಘಾತದಲ್ಲಿ ಮರಣಹೊಂದಿದರೆಂಬು... ಯಾವ ಆಧಾರವೂ ದೊರೆಯುವುದಿಲ್ಲ ...ಸು ಈಗ ಉಗ್ರ ತಪಸ್ಸನ್ನಾಚರಿಸುತ್ತಿ...ದೆ ಅದು ಮುಗಿದೊಡನೆಯೇ ಭಾರ... ರಾಜಕೀಯದಲ್ಲಿ ಧುಮುಕುವರು-ಎಂ...ದಾಗಿ ಹೊಸರಿತ್ತಿಯ ಪ್ರಖ್ಯಾತ ಜ್ಯೋತಿ...ಯಾದ ಶ್ರೀ ಶಂಕರ ಶಾಸ್ತ್ರಿಗಳು ಭವಿಷ್ಯ...ವದಿರುವರು.

ಬರುವ ಡಿಸೆಂಬರ್ ತಿಂಗಳಿಂದ ಮಹಾ... ಗಾಂಧಿಯವರ ಆರೋಗ್ಯ ಕೆಡವುದರಿಂ... ಅವರ ಸ್ಥಿತಿಯು ಕಡೆಗೆ ತೀವ್ರಗ...ಮನ...ವಬೇಕಾಗುವುದೆಂದೂ ಅವರು ಸೂಚಿ...ಸುವರು

ಯೂರೋಪು ಮತ್ತೊಂದು ಯುದ್ಧದ ಹೊಸಲಲ್ಲಿದೆ

ಈಗ ಕೆಲವು ತಿಂಗಳಿನಿಂದ ಸದ್ಯದಲ್ಲಿ ...ಯುರೋಪ್ ಖಂಡವು ಮತ್ತೊಂ...ದು ಯುದ್ಧವನ್ನು ಎದುರಿಸುವ ಪರಿಸ್ಥಿತಿ...ಯಲ್ಲಿದೆ—ಎಂಬುದಾಗಿ ಸೇಂಟ್ ಜಾರ್ಜ್...ಸಂಘದ ಅಧ್ಯಕ್ಷರಾದ ಲಾರ್ಡ್ ಕ್ರೀವ್ ಬ...ರ್ನರವರು ತಿಳಿಸಿರುವರು. ರಷ್ಯನರ ...ನ ನೀತಿಯು ಹಿಟ್ಲರರ ಆಕ್ರಮಣ ನೀತಿ...ಯಂತೆಯೇ ಇದೆ; ಒಂದಲ್ಲ ಒಂದು ಬಗೆ...ಯಿಂದ ರಾಷ್ಟ್ರಗಳನ್ನು ಒಂದೊಂದಾಗಿ ...ಮು ತನ್ನ ಹಿಡಿತಕ್ಕೆ ಒಳಪಡಿಸಿಕೊಳ್ಳುತ್ತಿದೆ ಯುದ್ಧದಿಂದ ಛಿದ್ರವಾಗಿರುವ ಪ್ರದೇಶಗಳ...ಲ್ಲಿ ಕಮ್ಯೂನಿಸಂ ಮತ್ತು ಅದರ ವಿರುದ್ಧ ಘರ್ಷಣೆಯು ಅನಿವಾರ್ಯ ಎಂದು ಅವರು ಹೇಳಿರುವರು

ಅರೆಬೆತ್ತಲೆಯಲ್ಲೇ ಕಾಲೇಜಿಗೆ

ಮದರಾಸ್ ಕಾಲೇಜೊಂದರ ಕೆಲವು ವಿದ್ಯಾರ್ಥಿಗಳು ಅರೆಬೆತ್ತಲೆಯಾಗಿಯೇ ಶಾಲೆಗೆ ಹೋಗುತ್ತಿರುವರೆಂದು ವರದಿಯಾಗಿದೆ. ಅವರು ಷರಟಿಗೆ ಬದಲು ಹರಿದು ಹೋದ ಟವಲ್ಲೊಂದನ್ನು ಮಾತ್ರ ಮೇಲೆ ಮೇಲೆ ಹಾಕಿಕೊಳ್ಳುತ್ತಿರುವರು. ಅಂಗಡಿಗಳಲ್ಲೆಲ್ಲಾ ಬಟ್ಟೆಯಿದ್ದರೂ ಕೂಡ ಇಲ್ಲವೆಂದು ಹೇಳುವುದರಿಂದ ತಮಗೆ ಅದು ದೊರೆಯಲಿಲ್ಲವೆಂದೂ, ಕೆಲವು ದಿನಗಳಿಂದ ತಾವು ಹೀಗೆಯೇ ರೀತಿಯಲ್ಲಿ ಹೋಗುತ್ತಿರುವುದಾಗಿ ಅವರು ಹೇಳುವರು

ಗ್ವಾಲಿಯರಿನಲ್ಲಿ ಸುಧಾರಣೆ

ಜವಾಬ್ದಾರಿ ಸರ್ಕಾರದ ಸ್ಥಾಪನೆಯೇ ತಮ್ಮ ಗುರಿಯೆಂದು ರಾಜರು ನೀಡಿರುವ ಘೋಷಣೆಯನ್ನು ಕಾರ್ಯಗತ ಮಾಡಲು ಗ್ವಾಲಿಯರ್ ಸರ್ಕಾರದವರು ಒಂದು ಸುಧಾರಣಾ ಸಮಿತಿಯನ್ನು ನೇಮಿಸಲಿಂ...ದೆ. ಇದಕ್ಕೆ ಪೂರ್ವಭಾವಿಯಾಗಿ ಇಂದಿನ ಮಂತ್ರಿಮಂಡಲವನ್ನು ವಿಸ್ತರಿಸಿ ಕಾಂಗ್ರೆಸ್ ಮೊದಲಾದ ಸಂಸ್ಥೆಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಾಗುವುದು ಈ ಸಲಹೆಗಳಿಗೆ ಅಲ್ಲಿನ ಕಾಂಗ್ರೆಸ್ಸಿನ ಸ್ವಾಗತವಿರುವುದಾಗಿಯೂ ತಿಳಿದುಬಂದಿದೆ

ಶಾಲಾ ಆರಂಭೋತ್ಸವ

ಸ್ವಂ.ಸ.] ಯಳಂದೂರು ೧

ಇಲ್ಲಿನ ಎಲೆ ಕೇರಿಯ ಪ್ರಾಥಮಿಕ ಶಾಲೆಯ ಆರಂಭೋತ್ಸವವನ್ನು ರೇಂಜ್ ಸ್ಕೂಲ್ ಇನ್ಸ್‌ಪೆಕ್ಟರ್ ಶ್ರೀ॥ ಎಂ. ಸಿ. ಸುಬ್ಬಪ್ಪನವರು ತಾಲ್ಲೂಕು ಅಮಲ್ದಾರ್ ಶ್ರೀ ಜಿ. ಎಸ್. ವೆಂಕಟರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಜಿ. ಸುಂದರರಾಯರಿಗೆ ಬಲಾತ್ಕಾರದ ನಿವೃತ್ತಿ

ಸರ್ಕಾರದ ಪ್ರಕಟಣೆ

ಸ್ವಂ.ಸು. ಫೋ॥] ಬೆಂಗಳೂರು ೫

ಪೊಲೀಸ್ ಮುಖ್ಯಾಧಿಕಾರಿಗಳಾಗಿದ್ದು ಇತ್ತೀಚೆಗೆ ಸ್ಪ್ಯಾಂಡರ್ಡ್ಸ್ ಅಧಿಕಾರಿಗಳಾಗಿರುವ ಶ್ರೀ ಜಿ. ಸುಂದರರಾಯರನ್ನು ಬಲಾತ್ಕಾರವಾಗಿ ಕೆಲಸದಿಂದ ನಿವೃತ್ತಿ ಮಾಡಿರುವುದಾಗಿ ನಿನ್ನೆ ದಿನ ಸರ್ಕಾರದ ಪ್ರಕಟಣೆಯೊಂದು ಹೊರಟಿರುತ್ತದೆ. ಅದರಲ್ಲಿರುವ ವಿವರಗಳು ಹೀಗೆ ಇವೆ —

ಶ್ರೀಮನ್ಮಹಾರಾಜರವರಿಗೂ, ಸೆಕ್ರೆಟರಿಯೇಟಿಂಗ್‌ರವರಿಗೂ ಬಂದಿದ್ದ ಬೇನಾಮಿ ಪತ್ರವೊಂದರ ಪ್ರತಿಯನ್ನು ಶ್ರೀ ಜಿ. ಸುಂದರರಾಯರಿಗೆ ಕಳುಹಲಾಗಿತ್ತು ಇದಕ್ಕಾಗಿ ಅವರು ತಮಗೆ ಬೇಕಾದಂತೆ ಬೆಂಗಳೂರು ದಂಡಿನ ಪೊಲೀಸರ ಸಹಾಯವನ್ನು ತೆಗೆದುಕೊಂಡಿದ್ದರು. ಸರ್ಕಾರದ ಮಂತ್ರಿಗಳಾದ ಶ್ರೀ ಹೆಚ್. ಪುಲ್ಲರೆಡ್ಡಿ ಮತ್ತು ನ್ಯಾಯಾಧೀಶರಾದ ಶ್ರೀ ಮೇದಪ್ಪನವರ ಬಂಗಲೆಗಳ ಬಳಿ ಕಾವಲುಗಳನ್ನು ಇಟ್ಟಿದ್ದರು ಇದಕ್ಕಾಗಿ ಮೇಲಿನ ಅಧಿಕಾರಿಗಳಿಂದ ಅನುಮತಿಯನ್ನು ತೆಗೆದುಕೊಂಡಿರಲಿಲ್ಲ. ಈ ವಿಷಯದ ಸಂಬಂಧವಾದ ವಿವರಗಳನ್ನೆಲ್ಲಾ ಅವರು ತಮ್ಮ ಕಾರ್ಯದಿಂದಾದ ಸರ್ಪೋರ್ಟ್ ತನಿಖೆಯ ರಿಪೋರ್ಟಿನಲ್ಲಿ ಬಯಲು ಮಾಡಿದರು ಇದರಿಂದ ಸರ್ಕಾರಿ ಅಧಿಕಾರಿಗಳಿಗೆ ರಕ್ಷಣೆಯಿಲ್ಲವೆಂಬ ಗಾಬರಿಗೆ ಕಾರಣವಾಯಿತು

ಇತ್ತೀಚೆಗೆ ಶ್ರೀ ಸುಂದರರಾಯರನ್ನು ಬೇರೆ ಕಡೆಗೆ ವರ್ಗ ಮಾಡಿದ ಮೇಲೂ ಬಹಳ ದಿನಗಳವರೆಗೆ ಅವರು ಮೇಲೆ ಹೇಳಿದ ಗುಪ್ತ ಪತ್ರಗಳನ್ನು ತಮ್ಮ ನಂತರ ಬಂದ ಅಧಿಕಾರಿಗಳ ವಶಕ್ಕೆ ಒಪ್ಪಿಸಿರಲಿಲ್ಲ.

ಈ ವಿಷಯಗಳಲ್ಲಿ ಶ್ರೀ ಸುಂದರರಾಯರನ್ನು ಸಮಾಧಾನ ಹೇಳಲಾಗಿತ್ತು. ಮಾಮೂಲು ಪದ್ಧತಿ ಪ್ರಕಾರದಲ್ಲಿ ಅವರು ಮೇಲ್ಕಂಡ ವ್ಯವಸ್ಥೆಗಳನ್ನು ಮಾಡಿದುದಾಗಿ ಹೇಳಿರುವರು. ಸಂಸ್ಥಾನದಲ್ಲಿ ದಕ್ಷರೂ ನಂಬಿಕಸ್ಥರೂ ಆದವರು ಇಲ್ಲದಿದ್ದುದರಿಂದ ಹೊರಗಿನವರ ಸಹಾಯವನ್ನು ತೆಗೆದುಕೊಂಡದುದಾಗಿ ಹೇಳುವರು ತಮಗೆ ಹಠಾತ್ತಾಗಿ ವರ್ಗವಾದುದರಿಂದ ತಮಗೆ ಕಳವಳವುಂಟಾಗಿ ಮೇಲ್ಕಂಡ ಕಾಗದ ಪತ್ರಗಳನ್ನು ಒಪ್ಪಿಸಲಿಲ್ಲವೆಂದು ತಿಳಿಸಿರುವರು

ಅವರು ಹೇಳಿರುವ ಸಮಾಧಾನಗಳು ಸ್ವಲ್ಪವೂ ಸಮರ್ಪಕವಾಗಿಲ್ಲ ಅವರು ತ

ಕಾಂಗ್ರೆಸ್ ಪಕ್ಷದವರ ಸಭಾತ್ಯಾಗ

ಜಂಟಿ ಅಧಿವೇಶನದಲ್ಲಿ ದಿವಾನರ ಭಾಷಣ

ಸ್ವಂ ಸು ಫೋ॥] ಬೆಂಗಳೂರು ೫

ಭಾರತ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ಸಮಾವೇಶಗೊಂಡ ಶಾಸನ ಸಭೆಗಳ ಜಂಟಿ ಅಧಿವೇಶನವು ಈ ದಿನ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ರಾಜ್ಯಾಂಗ ಸಭೆಯು ಮತ್ತು ಸಂಸ್ಥಾನಗಳ ಸಂಧಾನ ಸಮಿತಿಯವರೊಡನೆ ನಡೆದ ಸಮಾಲೋಚನೆಗಳ ತಂತ್ರ ಕೇಳಿ ನಮ್ಮವರಿಂದ ಪ್ರತಿನಿಧಿಗಳು ಪ್ರಜೆಗಳಿಂದ ಚುನಾಯಿತರಾದವರೇ ಆಗಿರಬೇಕೆಂದು ಒಪ್ಪಂದವಾಗಿ ಅದರಂತೆ ೭ ಮಂದಿ ಚುನಾಯಿತ ಪ್ರತಿನಿಧಿಗಳಿರಬೇಕೆಂದು ಮಾಡಿದ್ದ ನಿರ್ಧಾರವನ್ನು ತಾವು ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ೪ ಮಂದಿ ಚುನಾಯಿತ ಪ್ರತಿನಿಧಿಗಳಿರುವಂತೆಯೂ, ಅವರನ್ನು ಉಭಯ ಶಾಸನ ಸಭೆಗಳಿಂದಲೂ ಇಬ್ಬರಂತೆ ಆರಿಸುವುದಾಗಿಯೂ, ನಾಮಕರಣದ ಸದಸ್ಯರಿಗೆ ಅದರಲ್ಲಿ ಭಾಗವಹಿಸಲು ಅವಕಾಶವಿಲ್ಲದಂತೆಯೂ ನಿರ್ಧರಿಸಿರುವುದಾಗಿ ದಿವಾನರು ತಮ್ಮ ಭಾಷಣದಲ್ಲಿ ತಿಳಿಸಿರುವರು

ಬ್ರಿ॥ ಅಧಿಕಾರ ವರ್ಗಾವಣೆಯ ನಂತರದ ಸಾರ್ವಭೌಮಾಧಿಕಾರದ ವಿಚಾರವಾಗಿ ಮಹಾರಾಜರ ಪರಮಾಧಿಕಾರದಿಂದ ಸಂಸ್ಥಾನಕ್ಕೆ ಅನುಕೂಲವಾಗಿದೆಯೋ ಹೊರತು ತೊಂದರೆಯೇನೂ ಆಗಿಲ್ಲವೆಂತಲೂ, ಮುಂದೆ ಮೈಸೂರು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದರಿಂದ ಪರಮಾಧಿಕಾರದ ಪ್ರಶ್ನೆಯೇ ಏಳುವುದಿಲ್ಲವೆಂದು ತಿಳಿಸಿರುವರು

ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳು ಇಂಗ್ಲಿಷಿನಿಂದ ಕಲೆತು ವರ್ತಿಸಬೇಕೆಂದು ಕೋರಿದರು.

ಸಭೆಗೆ ಉಭಯ ಶಾಸನ ಸಭಾ ಸದಸ್ಯರೂ ಬಂದಿದ್ದರು ಕಾಂ॥ ಅಧ್ಯಕ್ಷರಾದ ಶ್ರೀ॥

ವ್ಯ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ. ಶಿಸ್ತು ಮತ್ತು ವ್ಯವಸ್ಥೆಗಳನ್ನು ನಿರ್ಲಕ್ಷಿಸಿರುತ್ತಾರೆ. ಆದ್ದರಿಂದ ಅವರನ್ನು ಇನ್ನು ಮುಂದೆ ಸರ್ಕಾರಿ ನೌಕರಿಯಲ್ಲಿಡುವುದು ಯುಕ್ತವಲ್ಲವೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ ಆವರನ್ನು ಬಲಾತ್ಕಾರವಾಗಿ ಕೆಲಸದಿಂದ ನಿವೃತ್ತಿ ಮಾಡುವಂತೆ ಆಜ್ಞೆಯಾಗಿದೆ.

ಪ್ರಭುಗಳವರಿಗೆ ರೆಡ್ಡಿಯವರಿಂದ ತಂತಿ

ಸ್ವಂ ಸು.ಫೋ॥] ಬೆಂಗಳೂರು ೫

ಕಾಂ॥ಅಧ್ಯಕ್ಷ ಶ್ರೀ॥ಕೆ ಚೆಂಗಲರಾಯ ರೆಡ್ಡಿಯವರು ಪ್ರಭುಗಳವರಿಗೆ ತಂತಿಯನ್ನು ಕಳುಹಿಸಿ, ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಬಗ್ಗೆ ಪ್ರಜಾ ಮುಖಂಡರ ಅಭಿಪ್ರಾಯವನ್ನೇ ಕೇಳಲಿಲ್ಲವೆಂದೂ, ಈಗಿನ ಚುನಾವಣೆಯು ಪ್ರಜಾಭಿಪ್ರಾಯಕ್ಕನುಸಾರವಾಗಿಲ್ಲವೆಂದೂ ತಿಳಿಸಿರುವರು.

ಯೂನಿಯನ್ ಅಧ್ಯಕ್ಷರಿಗೆ ರಾಷ್ಟ್ರಪತಿ ಎಂಬ ಬಿರುದು

ಭಾರತ ಯೂನಿಯನ್ನನ್ನು ಇಂಡಿಯಾ ಎಂದು ಕರೆಯಬೇಕು. ಫೆಡರೇಷನ್ನಿನ ಶಾಸನ ಸಭೆಯಲ್ಲಿ ಒಬ್ಬರು ಅಧ್ಯಕ್ಷರು ಇರಬೇಕು ಅದರಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ಸ್ಟೇಟ್ ಕೌನ್ಸಿಲ್ ಎಂಬ ಎರಡು ರಾಷ್ಟ್ರೀಯ ಸಭೆಗಳಿರತಕ್ಕದ್ದು; ಫೆಡರೇಷನ್ನಿನ ನಾಯಕರೇ ಪಾರ್ಲಿಮೆಂಟಿನ ಅಧ್ಯಕ್ಷರಾಗಬೇಕು; ಅವರನ್ನು ರಾಷ್ಟ್ರಪತಿ ಎಂದು ಕರೆಯಲಾಗುವುದು; ಶಾಸನ ಸಭೆಗಳ ಸದಸ್ಯರಿಂದ ಅಧ್ಯಕ್ಷರ ಚುನಾವಣೆ ನಡೆಯತಕ್ಕದ್ದು-ಎಂಬುದಾಗಿ ರಾಜ್ಯಾಂಗ ಸಭೆಯಿಂದ ನೇಮಕವಾಗಿರುವ ಯೂನಿಯನ್ ಸಮಿತಿಯು ಸಲಹೆ ಇತ್ತಿದೆ

ಜವಳಿ ವರ್ತಕರ ಸಂಘ

ಮೈಸೂರು ೫

ಕೈಮಗ್ಗದ ಬಟ್ಟೆ ವಿಚಾರ, ವರ್ತಕರ ಈಗಿನ ಪರಿಸ್ಥಿತಿ ಮೊದಲಾದ ವಿಚಾರಗಳನ್ನು ಚರ್ಚಿಸಲು ನಾಳೆ ಬೆಳಗ್ಗೆ ರಾಜಧಾನಿಯ ಪೀಸ್‌ಗುಡ್ಸ್ ವರ್ತಕರ ಸಂಘದವರು ಶ್ರೀ ಜಿ ವಿ ಸೂರ್ಯನಾರಾಯಣ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಸಭೆಯನ್ನು ಕರೆದಿರುವರು ಎಲ್ಲ ಜವಳಿ ವರ್ತಕರೂ ಸಹಕರಿಸಬೇಕೆಂದು ಕೋರಲಾಗಿದೆ

ಕೆ. ಚೆಂಗಲರಾಯ ರೆಡ್ಡಿಯವರು ಸಭೆಗೆ ಆಗಮಿಸಿರಲಿಲ್ಲ ದಿವಾನರ ಭಾಷಣವಾಗುವ ಮುನ್ನ ಕಾಂ॥ ಪಕ್ಷದ ಶ್ರೀ ಟಿ ಮರಿಯಪ್ಪನವರು ತಾವು ಒಂದು ಹೇಳಿಕೆ ಕೊಡಬೇಕೆಂದು ಕೇಳಿದುದಕ್ಕೆ ಅಧ್ಯಕ್ಷರು ಅನುಮತಿ ಕೊಡಲಿಲ್ಲ ಅದನ್ನು ಪ್ರತಿಭಟಿಸುವ ಸಲುವಾಗಿ ಶಾಸನ ಸಭಾ ಮತ್ತು ಪ್ರತಿನಿಧಿ ಸಭಾ ಕಾಂಗ್ರೆಸ್ ಪಕ್ಷದ ಸದಸ್ಯರು ದಿವಾನರ ಭಾಷಣಕ್ಕೆ ಮೊದಲು ಸಭಾ ಪರಿತ್ಯಾಗ ಮಾಡಿದರು

ಜಂಟಿ ಅಧಿವೇಶನದ ಈ ಸಮಯದಲ್ಲಿ ಪ್ರ॥ ಪ್ರ॥ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರನ್ನು ಬಿಡುಗಡೆ ಮಾಡದಿರುವುದನ್ನು ಖಂಡಿಸಿ ಶ್ರೀ ಟಿ ಮರಿಯಪ್ಪನವರು ಒಂದು ಹೇಳಿಕೆ ಹೊರಡಿಸಿರುವರು.

ರಾಜ್ಯಾಂಗ ಸಭೆಗೆ ಕಾಂಗ್ರೆಸ್ ಪಕ್ಷದವರು ಶಾಸನ ಸಭೆಯಿಂದ ಶ್ರೀಗಳಾದ ಚೆಂಗಲರಾಯ ರೆಡ್ಡಿ ಮತ್ತು ಆರ್. ಚೆನ್ನಿಗರಾಮಯ್ಯನವರನ್ನೂ, ಪ್ರತಿನಿಧಿ ಸಭೆಯಿಂದ ಶ್ರೀಗಳಾದ ಕೆ. ಹನುಮಂತಯ್ಯ, ವಿ. ವೆಂಕಟಪ್ಪ ಮತ್ತು ಎಸ್ ವಿ ಕೃಷ್ಣಮೂರ್ತಿ ರಾಯರನ್ನೂ ಉಮೇದುವಾರರಾಗಿ ನಿಲ್ಲಿಸಲು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ

ಸಾಧ್ವಿ

೫-೭-೪೭ ಶನಿವಾರ

ಜಂಟಿ ಅಧಿವೇಶನ

ಮೈಸೂರು ಶಾಸನ ಸಭೆಗಳ ಇತಿಹಾಸದಲ್ಲಿ ಇಂದು ಒಂದು ಪ್ರಾಮುಖ್ಯ ದಿನ. ಈ ಎರಡು ಸಭೆಗಳೂ ಇಂದು ಒಟ್ಟಿಗೆ ಕಲೆತು ಸಮಾಲೋಚನೆ ನಡೆಸುತ್ತವೆ. ಹಿಂದೆ ಹೊಸ ಸುಧಾರಣೆಗಳ ಜಾರಿಗೆ ಬಂದಾಗ ಶ್ರೀಮನ್ಮಹಾರಾಜರವರು ಈ ಎರಡು ಸಭೆಗಳ ಜಂಟಿ ಅಧಿವೇಶನದಲ್ಲಿ ಭಾಷಣ ಮಾಡಿದ್ದರು. ಈಗ ಇನ್ನೊಂದು ಹೊಸ ಪ್ರಕರಣದ ಪ್ರಾರಂಭದಲ್ಲಿ ದಿವಾನರು ಎರಡು ಸಭೆಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಲಿರುವರು.

ಈಗ ಜಾರಿಯಲ್ಲಿರುವ ಸುಧಾರಣೆಗಳಂತೆ ಶಾಸನ ಸಭೆಗಳು ಮೊಟ್ಟಮೊದಲನೆಯದಾಗಿ ... ಶ್ರೀಮನ್ಮಹಾರಾಜರವರು ಈ ಸಭೆಗಳ ... [illegible] ... ಶ್ರೀ|| ನ್ಯಾಯ ಮಾಧವರಾಯರ ... ಮಾತುಗಳಲ್ಲಿ ಹೊಸ ಸುಧಾರಣೆಗಳನ್ನು ಈ ಸ್ವತಂತ್ರ ಭಾರತದ ... [illegible] ... ಮೈಸೂರಿನ ... ದಿವಾನರು ... [illegible] ... ಈ ವರ್ಷ ಭಾರತ ರಾಜ್ಯಾಂಗ ಸಭೆಯ ...

... ಪ್ರಜೆಗಳ ... ಸಂಸ್ಥಾನದ ... [illegible] ... ಸ್ವತಂತ್ರ ಮತ್ತು ವಿಶಾಲ ಭಾರತವರ್ಷ ...

ಸಂಸ್ಥಾನದ ರಾಜಕೀಯ ... [illegible] ... ಸಂಸ್ಥಾನದ ಪ್ರತಿನಿಧಿಗಳು ... ಭಾರತ ... ಸ್ವತಂತ್ರ ಮತ್ತು ವಿಶಾಲ ಭಾರತವರ್ಷ ...

... ಮೈಸೂರಿನವರ ಪಾಲೆಲ್ಲಾ ಒಳ್ಳೆಯ ಪರಿಣಾಮವನ್ನು ಉಂಟುಮಾಡುವುದೆಂದು ನಂಬಬಹುದು. ಇದರಿಂದಲಾದರೂ ಸಂಸ್ಥಾನದೊಳಗಿನ ರಾಜಕೀಯ ವಾತಾವರಣವು ... ಪ್ರಜೆಗಳಲ್ಲಿ ಬಾಂಧವ್ಯವು ... ಪ್ರಭುಗಳ ಅಧಿಕಾರವು ... ಎಂದು ಹಾರೈಸೋಣ.

ನ್ಯೂ ಲ್ಯಾಂಡ್ಸ್

5-7-47 ರಿಂದ
ಚಿತ್ರಶಿಲ್ಪ ೧೦ ನೇ ವಾರ
ಪ್ರತಿ ದಿನ ೨ ಆಟಗಳು
ಶನಿವಾರ ಮತ್ತು ಭಾನುವಾರ
ಮ್ಯಾಟಿನಿ

ನಾವು ಇಬ್ಬರು

ಬಿ (ತಮಿಳು)
ಪಾತ್ರ: ಟಿ. ಆರ್. ಮಹಾಲಿಂಗಂ, ... ಮುಂತಾದವರು.

Edited, printed and published by A. R. Nagaraja at the Sadhvi Press D. Subbaiah Road Mysore.

ಅಪೇರಾ ಹಾಲ್‌ಟಾಕೀಸ್, ಮೈಸೂರು

೫-೭-೪೭ ರಿಂದ ... ನೇ ವಾರ

ರಾಜಕುಮಾರಿ

ಶ್ರೀ ಪಾಲುಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಹುಬ್ಬಳ್ಳಿ
ಇವರು ಮೈಸೂರು ಶಿವರಾಂಪೇಟೆ ... ಥಿಯೇಟರಿನಲ್ಲಿ 6-7-47 ನೇ ಭಾನುವಾರ ... ಘಂಟೆಗೆ ಯಶಸ್ವಿ ... ನೇ ಪ್ರಯೋಗ

ಪತನೋ ಪಾಶ

... ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ
ಸಿಟಿ ಮಾರ್ಕೆಟ್
... ಚಿಕ್ಕಚೆಟ್ಟಿಪ್ಪ, ಪ್ರೊಪ್ರೈಟರ್

ಪ್ರತಿ ದಿನ 3 ಆಟಗಳು
ಇದೇ 6-7-47 ರಿಂದ
ಸ್ಟಾರಿಂಗ್, ಶಾಸ್ತ್ರಿ, ಸುಲೋಚನಾ ಚಟರ್ಜಿ
ಪಾತ್ರ ವಹಿಸಿರುವ
ಹಾಮರ್ ಸವೇರಾ
ಒಲಿಂಪಿಯಾ, ಮೈಸೂರು.

ಸಾಧ್ವಿ
ಓದಿ
(ವಾರಕ್ಕೆ ಮೂರು ಸಲ ...)

Municipal High School, CHAMARAJANAGAR.

WANTED

1. One Graduate with ENGLISH as one of his optional subjects.
2. One Graduate with HISTORY as one of his optional subjects.
3. One Graduate with GEOGRAPHY as one of his optional subjects.

The Salary is Rs 40/- in grade Rs 40-4-60 Plus the Dearness Allowance at Government Rates.

Applications should reach the undersigned on or before, 10-7-47.

H HALAPPA,
Secretary.

The Health & Fine Arts EXHIBITION 1947

Family Passes and Season Tickets Are Available For Sale At The HEALTH OFFICE, CITY MUNICIPALITY DURING WORKING HOURS FROM MONDAY THE 7th JULY 1947

Family Passes Rs 1 - for the Season,
SEASON PASSES Rs 0 4-0 Do
BOOK EARLY

ರಾಜಕಮಲ್
ತಾ|| ೪-೭-೪೭ ರಿಂದ
೨ ನೇ ವಾರ

ಬೈರಾಂ ಖಾನ್

—: ಭೂಮಿಕೆ :—
ಗಜಾನನ್ ಜಾಗೀರ್ದಾರ್.
ಡೇವಿಡ್, ಗುಲಾಂಮಹ್ಮದ್
ಮೆಹತಾಬ್, ಜೇಬುನ್ನೀಸ

Morning shows from 4-7-47 for 4 days daily at 10-30 a. m.

★ Meet the Navy ★
(FIRST RUN for Mysore)
A musical smash punctuated with COMEDY, SPECTACLE plus TECHNI-COLOUR SEQUENCES

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೧ ಕಾಸು

ಸಂಪುಟ ೫] ಭಾನುವಾರ ೬—೭—೪೭ [ಸಂಚಿಕೆ ೨೮೧

ಇಂದಿರಾ ನೆಹರೂ ಮಂತ್ರಿಯಾಗುವರೇ?

ಸಕ್ಕರೆ ಬೇಳೆಯ ಅಭಾವ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

[ಸ್ವಂ. ವ.] ಬೆಂಗಳೂರು ೫

ಸಂಸ್ಥಾನಕ್ಕೆ ಬೇಕಾದ ಸಕ್ಕರೆ ಬೇಳೆ ದೊರೆಯುವಂತೆ ಮಾಡಲು ಸರ್ಕಾರದವರು ಕೈಗೊಂಡಿರುವ ಏರ್ಪಾಡುಗಳ ಬಗ್ಗೆ ನಿನ್ನೆ ಶಾಸನ ಸಭೆಯಲ್ಲಿ ಶ್ರೀ॥ ಕೆ ಆರ್ ಶ್ರೀನಿವಾಸರವರು ಪ್ರಶ್ನೆಗಳನ್ನು ಹಾಕಿದರು

ಸಂಸ್ಥಾನಕ್ಕೆ ಪ್ರತಿ ವರ್ಷವೂ ಸರಾಸರಿ ೫೫ ಸಾವಿರ ಟನ್ ಬೇಳೆಯು ಬೇಕಾಗುತ್ತದೆ; ಸರಾಸರಿ ೧೩ ಸಾವಿರ ಟನ್ ಹೊರತು ಸಂಸ್ಥಾನದಲ್ಲಿ ಉತ್ಪತ್ತಿಯಾಗುತ್ತದೆ ಎಂದು ವ್ಯಾಪಾರವು ೧೯೪೫ ರ ವರೆಗೆ ಎಷ್ಟು ಬೇಳೆ ಹೊರಗಡೆಯಿಂದ ಬಂದಿದೆ ಎಂಬುದು ಗೊತ್ತಿಲ್ಲ; ೧೯೪೫-೪೬ ರಲ್ಲಿ ಹೈದರಾಬಾದಿನಿಂದ ೪೬೩೬ ಟನ್‌ಗಳಲ್ಲದೆ ಪಚ್ಚಿನ ೫೦೦೦ ಟನ್ ಬಂದಿದೆ; ೪೬-೪೭ ರಲ್ಲಿ ಸ್ವಲ್ಪವೂ ಆಮದಾಗಿಲ್ಲ; ೪೬-೪೭ ಹೈದರಾಬಾದಿನಿಂದ ೧೫ ಸಾವಿರ ಟನ್ ಮತ್ತು ಸಂಯುಕ್ತ ಪ್ರಾಂತಗಳಿಂದ ೩೦೦೫ ಟನ್ ಸಂಸ್ಥಾನಕ್ಕೆ ಹಂಚಲ್ಪಟ್ಟಿತ್ತು; ಆ ಸ್ಥಿತಿ ಇಲ್ಲಿಗೆ ಎಷ್ಟು ಆಮದಾಗಿದೆಯೆಂಬುದು ಗೊತ್ತಿಲ್ಲ; ೧೯೪೫-೪೬ ರಲ್ಲಿ ೩೦೬೪ ಟನ್ ಬೇಳೆ ಬಂದಿದೆ; ೪೬-೪೭ ಕ್ಕೆ ಬೇರಾರ್ ಮತ್ತು ಸಂಯುಕ್ತ ಪ್ರಾಂತಗಳಿಂದ ೪೦೦೦ ಟನ್ ನಿಗದಿ ಮಾಡಲ್ಪಟ್ಟಿತ್ತು ಆದರೆ ಅದರಲ್ಲಿ ಸ್ವಲ್ಪವೂ ಆಮದಾಗಿರುವುದಿಲ್ಲ; ಈ ವರ್ಷ ಸಂಸ್ಥಾನದ ಉತ್ಪನ್ನ ೧೦ ಸಾವಿರ ಟನ್ ಆಗುವುದೆಂದು ಅಂದಾಜು ಮಾಡಲ್ಪಟ್ಟಿದೆ; ೨೬ ನೇ ಜೂನ್ ತಾರೀಖಿನ ದಿನ ಸಂಸ್ಥಾನದಲ್ಲಿ ೪೩೬ ಮೂಟೆ ತೊಗರಿ ಮತ್ತು ೪೬೦೭ ಮೂಟೆ ಬೇಳೆ ಇತ್ತು; ಆದರೆ ಬೇಳೆಯ ಪ್ರಮಾಣಕ್ಕಿಂತ ೫೧೦೦೦ ಟನ್ ಕಡಿಮೆ ಇದೆ; ೧೬೦೦೦ ಟನ್ ಬೇಳೆಯನ್ನು ಒದಗಿಸಿಕೊಡಬೇಕೆಂದು ಭಾರತ ಸರ್ಕಾರವನ್ನು ಕೇಳಲಾಗಿತ್ತು ಆದರೆ ಅವರು ೪೨೦೦ ಟನ್ ಮಾತ್ರ ಹಂಚಿದ್ದಾರೆ. ಬೇಳೆ ಇರುವ ಕಡೆಯಿಂದ ಅದನ್ನು ಒದಗಿಸಿಕೊಡಬೇಕೆಂದು ಪದೇ ಪದೇ ಭಾರತ ಸರ್ಕಾರದ ಮೇಲೆ ಒತ್ತಾಯ ಪಡಿಸಲಾಗುತ್ತಿದೆ. ಸಂಸ್ಥಾನದಲ್ಲಿ ಬೆಳೆದ ಬೇಳೆ ಮೇಲೆ ಬೆಲೆ ಹತೋಟಿ ಇರುವುದಿಲ್ಲ. ಹೊರಗಿನಿಂದ ಬರುವ ಪ್ರಮಾಣಕ್ಕೆ ಬೆಲೆಯನ್ನು ಸರ್ಕಾರದಿಂದ ನಿಗದಿಮಾಡಲಾಗಿದೆ-ಎಂದು ದಿವಾನ್ ಸಚಿವರು ಉತ್ತರವಿತ್ತರು.

ವುಡ್‌ಲ್ಯಾಂಡ್ಸ್

5-7-47 ರಿಂದ

ಚಿಕ್ಕರಿದ ೧೦ ನೇ ವಾರ

ಪ್ರತಿ ದಿನ ೨ ಆಟಗಳು

ಶನಿವಾರ ಮತ್ತು ಭಾನುವಾರ

ಮ್ಯಾಟಿನಿ

ನಾವು ಇಬ್ಬರು (ತಮಿಳು)

:: ಪಾತ್ರ ::

ಟಿ. ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ ಆರ್.

ರಾಮಚಂದ್ರ ಮುಂತಾದವರು.

ಚಾತುರ್ಮಾಸ್ಯ ಸಂಕಲ್ಪ

ಮೈಸೂರು ೬

ರಾಜಧಾನಿಯ ಶ್ರೀ॥ ಅಭಿನವ ಶಂಕರಾಲಯದಲ್ಲಿ ಸ್ವಾಮಿ ಶ್ರೀ ವಾಸುದೇವಾನಂದ ತೀರ್ಥರು ಈ ದಿನ ಚಾತುರ್ಮಾಸ ಸಂಕಲ್ಪದ ಪ್ರಯುಕ್ತ ವ್ಯಾಸಪೂಜೆ ನಡೆಸಿದರು

ಬೈಸಿಕಲ್ ಕಳುವಿಗೆ ಶಿಕ್ಷೆ

ಕಮಾಗಾಬಿ ಎಂಬಾತನು ೨೬-೪-೪೭ ರಲ್ಲಿ ಮೈಸೂರಿನಿಂದ ಬೈಸಿಕಲ್ಲನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿ ಬೆಂಗಳೂರಿನಲ್ಲಿ ಮಾರಿದನೆಂಬುದಾಗಿ ದೇವರಾಜ ಪೋಲೀಸಿನವರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅಪರಾಧಿಗೆ ೧ ವರ್ಷ ಕಠಿಣ ಸಜಾ ವಿಧಿಸಿರುವರು

ಡ್ರೈವರಿಗೆ ಜುಲ್ಮಾನೆ

ಕಳೆದ ೧೨೬ ನೇ ನಂಬರ್ ಮೋಟಾರಿನ ಡ್ರೈವರ್ ನಾರಾಯಣ ಎಂಬಾತ ೩೦-೬-೪೭ ರಲ್ಲಿ ಲೈಸೆನ್ಸು ಇಲ್ಲದೆ ಮೋಟಾರು ನಡೆಸಿದನೆಂಬುದಾಗಿ ದೇವರಾಜ ಪೋಲೀಸಿನವರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ನ್ಯಾಯಾಧೀಶರು ಆತನಿಗೆ ೫೦ ರೂ ಜುಲ್ಮಾನೆ, ತಪ್ಪಿದರೆ ೧೫ ದಿನ ಸಜಾ ವಿಧಿಸಿರುವರು

ಉಚಿತ ಪುಸ್ತಕಗಳ ಹಂಚಿಕೆ

ರಾಜಧಾನಿಯ ಪೌರಸಭಾ ಮತ್ತು ಟ್ರಸ್ಟ್ ಬೋರ್ಡ್ ಕಂಟ್ರಾಕ್ಟರರಾದ ಶ್ರೀ ಕೆ ಎನ್ ಶಿವಯ್ಯನವರು ಮಂಡಿಮೊಹಲ್ಲೆಯ ಕನ್ನಡ ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಬೇಕಾದ ಪುಸ್ತಕಗಳನ್ನು ಉಚಿತವಾಗಿ ಕಳೆದ ಗುರುವಾರ ಹಂಚಿದರು ಪೌರಸಭಾ ಸದಸ್ಯರಾದ ಶ್ರೀ ಜಿ ಆರ್ ರಂಗಸ್ವಾಮಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಹಿತವಚನಗಳನ್ನಿತ್ತರು

ವಿಜಯಲಕ್ಷ್ಮಿಪಂಡಿತರ ಸ್ಥಾನದಲ್ಲಿ ಇಂದಿರಾ ನೆಹರೂ

ಸಂಯುಕ್ತ ಪ್ರಾಂತ್ಯದ ಸ್ಥಳೀಯ ಸಂಸ್ಥೆಗಳ ಸಚಿವರಾಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ರಷ್ಯದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಿರುವುದರಿಂದ ಅವರ ಸ್ಥಾನವು ಖಾಲಿಬಿದ್ದಿದೆಯಷ್ಟೆ. ಇದುವರೆಗೆ ಆ ಸ್ಥಾನಕ್ಕೆ ಯಾವ ಹೆಸರುಗಳೂ ಸೂಚಿತವಾಗಿಲ್ಲವೆಂದು ಗೊತ್ತಾಗಿದೆ. ಪಂಡಿತ ನೆಹರೂರವರ ಕುಮಾರಿಯವರಾದ ಶ್ರೀಮತಿ ಇಂದಿರಾ ನೆಹರೂರವರನ್ನು ಆ ಸ್ಥಾನದಲ್ಲಿ ನೇಮಿಸಲಾಗುವುದೆಂದು ವರದಿಯಾಗಿದೆ.

ಪಂಜಾಬ್ ಅಸೆಂಬ್ಲಿ ಲೀಗ್ ಪಂಗಡದಲ್ಲಿ ಭಿನ್ನಾಭಿಪ್ರಾಯ

ಪಶ್ಚಿಮ ಪಂಜಾಬ್ ಪ್ರಾಂತದ ಶಾಸನ ಸಭೆಯ ಬರುವ ಸದಸ್ಯರ ಅಭಿಪ್ರಾಯದಂತೆ ಮಿ॥ ಫಿರೋಜ್ ಖಾನ್‌ನೂನ್ ಲೀಗ್ ಪಕ್ಷದ ನಾಯಕರಾಗಿರಲು ಸಮ್ಮತಿಸಿರುವರೆಂದೂ, ಇದಕ್ಕೆ ಮಿ॥ ಜಿನ್ನಾರವರು ಅನುಮತಿ ಕೊಡಬೇಕಾಗಿದೆಯೆಂದೂ ವರದಿಯಾಗಿದೆ. ಮಿ॥ ನೂನರು ಲೀಗ್ ಪಕ್ಷದ ಸದಸ್ಯರ ಸಭೆಯಲ್ಲಿ ವಿಭಜನಾತ್ಪೂರ್ವ ಇದ್ದ ಪಕ್ಷವನ್ನು ವಿಸರ್ಜಿಸಲಾಗಿದೆಯೆಂದು ಹೇಳಿದ್ದಾರೆ. ಪಂಜಾಬ್ ಪ್ರಾಂತ ಲೀಗ್ ಅಧ್ಯಕ್ಷರೂ, ಅಸೆಂಬ್ಲಿ ಲೀಗ್ ಪಕ್ಷದ ನಾಯಕರೂ ಆದ ನವಾಬ್ ಮಮ್‌ದೊಟ್‌ರವರು ಪಂಜಾಬ್ ಲೀಗ್ ಪಕ್ಷ ವಿಸರ್ಜನೆಯಾಗಿಲ್ಲವೆಂದೂ, ಮಿ॥ ನೂನರ ಹೇಳಿಕೆ ಮತ್ತು ಸಭೆಗಳು ಅಕ್ರಮವಾದುವೆಂದೂ ತಿಳಿಸಿರುವರು

ಪೂರ್ವ ಪಂಜಾಬಿಗೆ ಹೊಸ ಮಂತ್ರಿಮಂಡಲ

ಡಾ॥ ಗೋಪೀಚಂದ್ರ ಭಾರ್ಗವಾ ಮತ್ತು ಸರ್ದಾರ್ ಕಪೂರ್‌ಸಿಂಗ್‌ರನ್ನೊಳಗೊಂಡ ಮಂತ್ರಿಮಂಡಲವನ್ನು ಪೂರ್ವ ಪಂಜಾಬ್ ಪ್ರಾಂತದಲ್ಲಿ ನೇಮಿಸಲಾಗುವುದೆಂದು ರಾಜಕೀಯ ವಲಯಗಳಲ್ಲಿ ಹೇಳಲಾಗಿದೆ

ಸೈನ್ಯದಿಂದ ೧೬೦೭೦೦೦ ಜನರ ವಜಾ

ಈ ವರ್ಷದ ಆದಿಯಿಂದ ಮೇ ತಿಂಗಳ ವರೆಗೆ ಸುಮಾರು ೧೬೦೭೦೦೦ ಮಂದಿಯನ್ನು ಭಾರತ ಸೈನ್ಯದಿಂದ ವಜಾಮಾಡಲಾಗಿದೆಯೆಂದು ವರದಿಯಾಗಿದೆ

ಆರುಮಕ್ಕಳನ್ನು ಪಡೆದನಂತರ ಮಹಿಳೆಗೆ ಬಿ.ಎ. ಡಿಗ್ರಿ

[ಗ್ಲೋಬ್] ನಾಗಪುರ ೩

ತಾನು ಆರು ಮಕ್ಕಳನ್ನು ಪಡೆದ ನಂತರ ೪೦ ವಯಸ್ಸಿನ ಮಹಿಳೆಯೊಬ್ಬಳು ನಾಗಪುರ ವಿಶ್ವವಿದ್ಯಾಲಯದಿಂದ ಬಿ ಎ ಡಿಗ್ರಿ ಪಡೆದಿರುವಳು. ಆಕೆ ನಾಲ್ಕು ಮಕ್ಕಳಾದ ಮೇಲೆ ಸ್ವಂತ ವ್ಯಾಸಂಗದಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಈಗ ಬಿ ಎ ಪದವಿ ಹೊಂದಿರುವಳು. ಆಕೆಯ ಮಗಳೊಬ್ಬಳು ಆಗ ಎರಡು ವರ್ಷಗಳ ಹಿಂದೆಯೇ ಡಿಗ್ರಿ ಪಡೆದಿರುವಳು

ಸಿಲ್ಹೆಟ್ ಮತ್ತು ಗಡಿನಾಡು ಗಳಲ್ಲಿ ರೆಫರಂಡಂ

ಗಡಿನಾಡು ಪ್ರಾಂತವು ಪಾಕಿಸ್ತಾನದಲ್ಲಿ ಸೇರಬೇಕೇ ಹಿಂದೂಸ್ಥಾನದಲ್ಲಿ ಸೇರಬೇಕೇ ಎಂಬ ಬಗ್ಗೆಯೂ, ಸಿಲ್ಹೆಟ್ ಪೂರ್ವ ಬಂಗಾಳಕ್ಕೆ ಸೇರಬೇಕೇ ಅಥವಾ ಅಸ್ಸಾಂ ನಲ್ಲಿ ಇರಬೇಕೇ ಎಂಬ ವಿಷಯವಾಗಿಯೂ ರೆಫರೆಂಡಂ ಈ ದಿನದಿಂದ ಆರಂಭವಾಗುವುದೆಂದು ವರದಿಯಾಗಿದೆ. ಮೊದಲು ಗಡಿನಾಡಿನ ಡೇರಾಇಸ್ಮೈಲ್‌ಖಾನ್ ಮತ್ತು ಹಜಾರ್ ಜಿಲ್ಲೆಗಳಲ್ಲಿ ರೆಫರೆಂಡಂ ನಡೆಯಲಾಗುವುದು ಗಡಿನಾಡು ಪ್ರಾಂತವನ್ನೆಲ್ಲಾ ಗಲಭೆಯ ಪ್ರದೇಶಗಳೆಂದು ನಿರ್ಧರಿಸಿ ಗವರ್ನರರು ಯಾರೂ ಆಯುಧಧಾರಿಗಳಾಗಿ ಸಂಚರಿಸಕೂಡದೆಂದು ಪ್ರತಿಬಂಧಕಾಜ್ಞೆ ಜಾರಿಮಾಡಿರುವರು.

ಆಂಧ್ರದೇಶವು ನಿಜಾಮರನ್ನೆ ದುರಿಸಬೇಕು

ರಾಯಲಸೀಮೆಯನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಲು ಹೈದರಾಬಾದಿನ ನಿಜಾಮರು ಬಹಳ ಉತ್ಸುಕರಾಗಿ ಸೈನ್ಯ ವಿಸ್ತರಣಾ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಇದರಿಂದ ಆಂಧ್ರದೇಶ ಅವರ ಧಾಳಿಯನ್ನೆದುರಿಸಲು ಸಿದ್ಧವಾಗಿರಬೇಕಾಗಿದೆ-ಎಂದು ಪ್ರೊ॥ ರಂಗಾರವರು ತಿಳಿಸಿದ್ದಾರೆ:

○ ವಿಚಾರಣೆಯನ್ನು ಸ್ವತಃ ನಡೆಸಿ ಪ್ರಜೆಗಳಿಗೆ ನ್ಯಾಯ ದೊರಕಿಸಿಕೊಡಲು ಜೋಧಪುರದ ಅರಸರು ನಿರ್ಧರಿಸಿರುವರು. ಅದಕ್ಕಾಗಿ ಹಿಂದೆ ಪಠಾಣರು, ಅಕ್ಬರ್ ಮೊದಲಾದವರು ಏರ್ಪಡಿಸಿದ್ದಂತೆ ಅರಮನೆಯ ಮುಂದೆ ಒಂದು ಗಂಟೆಯನ್ನು ಕಟ್ಟಲಾಗುವುದು. ನಿಜವಾಗಿಯೂ ತೊಂದರೆಗೊಳಗಾಗಿರುವವರು ಈ ಗಂಟೆಯನ್ನು ಬಾರಿಸಿದರೆ ಅರಸರು ತಾವೇ ಬಂದು ವಿಚಾರಣೆ ನಡೆಸುವರು.

LATEST NEWS

ರಾಜ್ಯಾಂಗ ಸಭೆಗೆ ಚುನಾವಣೆ

ಉಮೇದುವಾರಿಕೆ ಅಪ್ಪೈರು ಪಟ್ಟಿ

[ಸ್ವಂ. ವ. ಫೋನ್] ಬೆಂಗಳೂರು ೬

ನಾಳೆ ನಡೆಯಲಿರುವ ಪ್ರತಿನಿಧಿಗಳ ಚುನಾವಣೆಗೆ ಈ ಕೆಳಗೆ ಕಂಡವರು ಉಮೇದುವಾರಾಗಿ ನಿಂತಿದ್ದಾರೆ. ಶಾಸನ ಸಭೆಯಿಂದ ಶ್ರೀಗಳಾದ ಕೆ ಚೆಂಗಲರಾಯ ರೆಡ್ಡಿ, ಆರ್ ಚೆನ್ನಿಗರಾಮಯ್ಯ (ಕಾಂ), ಕೆ. ಆರ್ ಗುರುವಾರೆಡ್ಡಿ, ಎ ಚೆನ್ನಪ ಪ್ರತಿನಿಧಿ ಸಭೆಯಿಂದ ಶ್ರೀಗಳಾದ ಎಸ್ ನಿಜಲಿಂಗಪ್ಪ ಮುದಲಿಯಾರ್, (ಕಾಂ), ಜಿ ಟಿ ಗೋಪಾಲಕೃಷ್ಣ, ಭೂಪಾಳಂ ಚಂದ್ರಶೇಖರಯ್ಯ, ಎಂ ಶಂಕರಲಿಂಗೇಗೌಡ, ಮುಲ್ಕಾ ಗೋವಿಂದರೆಡ್ಡಿ, ಡಿ ಹೆಚ್ ಚಂದ್ರಶೇಖರಯ್ಯ. ಚುನಾವಣಾ ಫಲಿತಾಂಶ ನಾಳೆ ಸಂಜೆ ಹೊರಬೀಳುವುದು

ಶ್ರೀ॥ ಕೆ ಹನುಮಂತಯ್ಯನವರ ಉಮೇದುವಾರಿಕೆ ಅರ್ಜಿಗೆ ಅವರ ರುಜುವಿಲ್ಲವೆಂಬ ಕಾರಣದ ಮೇಲೆ ರಿಟರ್ನಿಂಗ್ ಅಧಿಕಾರಿಗಳು ಅದನ್ನು ತಿರಸ್ಕರಿಸಿರುವರು

ಪ್ರತಿ ದಿನ ೩ ಆಟಗಳು

ಇದೇ 6-7-47 ರಿಂದ

ಸ್ವರ್ಣಲತಾ, ನಾಸ್ತಿ,

ಸುಲೋಚನಾ ಚಟರ್ಜಿ

ಪಾತ್ರ ವಹಿಸಿರುವ

ನಾಮ್ ಸನೇರಾ

ಬಿಂಬ್ ಪ್ಲಿಂಬ್, ಮೈಸೂರು.

ಸಾಧ್ವಿ

೬-೭-೪೭ ಶನಿವಾರ

ಮೈಸೂರು ಸಂಸ್ಥಾನ ಮತ್ತು ರಾಜ್ಯಾಂಗ ಸಭೆ

ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸಂಸ್ಥಾನವು ಭಾಗವಹಿಸಲು ನಿರ್ಧರಿಸಿದ ಪರಿಣಾಮವಾಗಿ ನಿನ್ನೆ ದಿನ ಉಭಯ ಶಾಸನ ಸಭೆಗಳ ಜಂಟೀ ಅಧಿವೇಶನವು ಜರುಗಿತು. ದಿವಾನರು ಸದಸ್ಯರುಗಳನ್ನು ಕುರಿತು ಅರ್ಧ ಗಂಟೆಯ ಕಾಲ ಭಾಷಣ ಮಾಡಿದರು. ಸಂಸ್ಥಾನವು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವಂತೆ ನಿರ್ಧರಿಸಲು ಉಂಟಾದ ಸನ್ನಿವೇಶಗಳನ್ನು ವಿವರಿಸಿದರು. ಮತ್ತು ಮೈಸೂರು ಪ್ರತಿನಿಧಿಗಳು ಮುಂದೆ ವಹಿಸಬೇಕಾದ ಪಾತ್ರವನ್ನೂ ಸೂಚಿಸಿದರು.

ಮೈಸೂರಿನ ಈ ನಿರ್ಧಾರವು ಸಮಸ್ತರಿಗೂ ಸಂತೋಷವನ್ನು ಉಂಟುಮಾಡುವುದಾದರೂ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಕ್ರಮವು ಯಾರಿಗೂ ತೃಪ್ತಿಯನ್ನುಂಟುಮಾಡುವುದಿಲ್ಲ. ಸಂಧಾನ ಸಮಿತಿಯಲ್ಲಿ ಆದ ಒಪ್ಪಂದಗಳನ್ನು ದಿವಾನರು ಸೂಚಿಸಿದ್ದಾರೆ. ಶಾಸನ ಸಭೆಗಳ ಚುನಾಯಿತ ಸದಸ್ಯರೇ ಪ್ರತಿನಿಧಿಗಳನ್ನು ಆರಿಸಬೇಕೆಂದು ಸದರಿ ಸಮಿತಿಯಲ್ಲಿ ಒಪ್ಪಂದವಾಗಿತ್ತೆಂದು ಅವರು ಹೇಳಿರುವರು. ಆದರೆ ಆ ಸಭೆಗಳ ಸದಸ್ಯರೇ ಉಮೇದುವಾರರಾಗಬೇಕೆಂದೂ ಇತರರು ಆಗಬಾರದೆಂದೂ ಎಲ್ಲಿಯೂ ಹೇಳಿರುವುದಿಲ್ಲ. ಬ್ರಿಟಿಷ್ ಇಂಡಿಯದಲ್ಲಿ ಈಗ ಅನುಸರಿಸಿರುವ ಪದ್ಧತಿಯೂ ಸಹ ಆ ರೀತಿ ಇರುವುದಿಲ್ಲ.

ಸಭೆಗಳ ಸದಸ್ಯರಲ್ಲದವರೂ, ನಾಮಕರಣಾದ ಸದಸ್ಯರೂ ಈ ಚುನಾವಣೆಯಲ್ಲಿ ಭಾಗವಹಿಸಲಾಗದಿದ್ದುದಕ್ಕೆ ದಿವಾನರು ವಿಷಾದವನ್ನು ವ್ಯಕ್ತಪಡಿಸಿ ಕ್ಷಮಾಪಣೆಯನ್ನೂ ಕೇಳುತ್ತಿದ್ದಾರೆ. ಮೇಲೆ ಹೇಳಿದ ಒಪ್ಪಂದದ ಪ್ರಕಾರ ನಾಮಕರಣದ ಸದಸ್ಯರಿಗಾಗಿ ಯಾವ ವಿಷಾದವಾಗಲೀ, ಕ್ಷಮಾಪಣೆಯಾಗಲೀ ಅಗತ್ಯವಿಲ್ಲ. ಇತರ ಅನೇಕ ಅರ್ಹರಾದ ಮಹನೀಯರ ವಿಷಯದಲ್ಲಿ ಕೇವಲ ಕ್ಷಮಾಪಣೆಯನ್ನು ಕೇಳಿದ ಬದಲು ಅವರ ಚುನಾವಣೆಗೆ ಅವಕಾಶ ಕಲ್ಪಿಸಿದ್ದರೆ ದಿವಾನರು ಎಲ್ಲರ ಮೆಚ್ಚಿಗೆಗೂ ಪಾತ್ರರಾಗುತ್ತಿದ್ದರು. ಈ ಭಾಗದಲ್ಲಿ ಅವರ ನೀತಿಯು ಖಂಡಿತವಾಗಿಯೂ ಸಮರ್ಪಕವಾಗಿರುವುದಿಲ್ಲ. ಎಲ್ಲ ರಂಗಗಳಲ್ಲಿಯೂ ಒಪ್ಪಂದವಾಗಿದ್ದರೆ ಚುನಾವಣೆಯ ತಂಟೆಯೇ ತಪ್ಪುತ್ತಿತ್ತೆಂದು ದಿವಾನರು ಹೇಳಿರುವರು. ಆದರೆ ಆ ಕಾರಣದಿಂದ ನೇರವಾದ ಮಾರ್ಗವನ್ನು ಮೂಲೆಗೊತ್ತರಿಸಿರುವುದು ಸರಿಯಲ್ಲ.

ಮೈಸೂರಿನ ನಿಯೋಗದ ಸದಸ್ಯರೆಲ್ಲರೂ ತಮ್ಮ ಸ್ವಂತ ಅಭಿಪ್ರಾಯಗಳನ್ನು ಸೂಚಿಸಲು ಯಾವ ಅಡ್ಡಿಯೂ ಇಲ್ಲವೆಂದು ದಿವಾನರು ಹೇಳಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೂ ಕೇಂದ್ರ ಸರ್ಕಾರಕ್ಕೆ ವಹಿಸುವ ಸಾರ್ವತ್ರಿಕ ವಿಷಯಗಳಲ್ಲಿ ಯಾರಿಗೂ ಭಿನ್ನಾಭಿಪ್ರಾಯಗಳು ಬರಲು ಕಾರಣವೇ ಇರುವುದಿಲ್ಲ. ಬ್ರಿಟಿಷ್ ಇಂಡಿಯ ಮತ್ತು ಸಂಸ್ಥಾನಗಳ ಪರಿಸ್ಥಿತಿಗಳಿಗೆ ಭೇದವನ್ನು ಕಲ್ಪಿಸುವುದು ದಿವಾನರ ವಾಡಿಕೆಯಾಗಿದೆ. ಸಂಸ್ಥಾನಗಳು ಭಾರತ ರಾಜ್ಯಾಂಗ ನಿರ್ಮಾಣದಲ್ಲಿ ಭಾಗವಹಿಸುವಕಾರಣದ ಮೇಲಾದರೂ ಇಂತಹ ಭೇದದ ಮಾತುಗಳು ನಿಲ್ಲುವುದು ಒಳ್ಳೆಯದು. ಇನ್ನು ಮುಂದೆ ಇಂತಹ ಭೇದಗಳು ಹೋಗಬೇಕೆಂಬುದೇ ಎಲ್ಲರ ಉದ್ದೇಶ.

ಬ್ರಿಟಿಷರು ಹೋದಮೇಲೆ ಸಾರ್ವಭೌಮಾಧಿಕಾರವು ಸಂಸ್ಥಾನಕ್ಕೆ ಬರಬೇಕೆಂದು ದಿವಾನರು ಹೇಳಿದ್ದಾರೆ. ಸಂಸ್ಥಾನವೆಂದರೆ ಸಂಸ್ಥಾನದ ಪ್ರಜೆಗಳೆಂಬುದನ್ನು ಸ್ಪಷ್ಟವಾಗಿ ಸಾರುವುದು ಅಗತ್ಯವಾಗಿದೆ. ಪ್ರಜೆಗಳ ಪರವಾಗಿ ಪ್ರಭುಗಳು ಸಾರ್ವಭೌಮಾಧಿಕಾರವನ್ನೂ ಚಲಾಯಿಸಬೇಕು.

ಮೈಸೂರಿನ ಮೇಲ್ಕಂಡ ನಿರ್ಧಾರದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಲು ನಮ್ಮ ಪ್ರಭುತ್ವದವರು ಏರ್ಪಡಿಸದಿರುವುದು ಒಂದು ಕೊರತೆಯೇ ಸರಿ. ಆದರೆ ಮೈಸೂರಿನ ಪರವಾಗಿ ಈಗ ಹೋಗಲಿರುವವರಾದರೂ ತಮ್ಮ ಕರ್ತವ್ಯವನ್ನು ನೆರವೇರಿಸಿ ಭಾರತದ ಇತರ ಸೋದರರಂತೆ ನಾವೂ ಸ್ವತಂತ್ರ ಪ್ರಜೆಗಳಾಗಿ ಬಾಳುವ ಹಾಗೆ ಮಾಡಿದರೆ ಈ ವ್ಯವಸ್ಥೆಯು ಸಾರ್ಥಕವಾದೀತು.

ಕನ್ನಡಕಗಳಿಗೆ
ಡಾ|| ಮುರುಗೇಶ್ ಡಿ. ಆಪ್ಟ
ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್
— ಮಹಡಿ —
ಸಯ್ಯಾಜಿರಾವ್ ರಸ್ತೆ, ಮೈಸೂರು

ಅಪೇರಾ ಟಾಕೀಸ್, ಮೈಸೂರು
೫-೭-೪೭ ರಿಂದ ೧೩ ನೇ ವಾರ
ರಾಜಕುಮಾರಿ

Edited printed and published by A. R. Nagarajan at the Sadhvi Press D. Subbaiah Road Mysore

ಆರೋಗ್ಯ ಮತ್ತು ಕಲಾ ಪ್ರದರ್ಶನ
(ಮೈಸೂರು ನಗರ ಪೌರಸಭೆ)
ಮೈಸೂರಿನ ದಸರಾ ವಸ್ತುಪ್ರದರ್ಶನ ಶಾಲೆಯಲ್ಲಿ
ಇದೇ ೮ ನೇ ತಾರೀಖು ಮಂಗಳವಾರದಿಂದ
.. ೧೩ ನೇ ಶನಿವಾರ ಪರ್ಯಂತ ...
ಬೆಳಿಗ್ಗೆ ಘಂಟೆ ೮ ರಿಂದ ೧೨ ರ ವರೆಗೆ
ಮಧ್ಯಾಹ್ನ ,, ೩ ರಿಂದ ೯ ರ ವರೆಗೆ
ವಿನೋದಗಳು
೧. ಸುಪ್ರಸಿದ್ಧ ಕಲಾ ಕೋವಿದರಾದ ಶ್ರೀಮತಿ ನೀಲಮ್ಮ ಕಡಾಂಬಿ, ಗಾನಕೋಕಿಲ ಶ್ರೀ ರತ್ನಮ್ಮ, ವೈಣಿಕ ಪ್ರವೀಣ ಸಂಗೀತವಿಶಾರದ ವಿ ವೆಂಕಟಗಿರಿಯಪ್ಪ, ಗಾನವಿಶಾರದ ಬಿ ದೇವೇಂದ್ರಪ್ಪ, ಮುಂತಾದ ವಿದ್ವಾಂಸ, ವಿದುಷಿಯರುಗಳ ಸಂಗೀತ ಮತ್ತು ನೃತ್ಯ
೨. ಶ್ರೀ ವಾಮನರಾವ್, ಬಿ. ಎ., ಮತ್ತು ಪಾರ್ಟಿಯವರ ನಾಟಕ
○ ೩. ಶಿಶುವಿಹಾರದ ಮಕ್ಕಳ ವಿವಿಧ ವಿನೋದಾವಳಿ ○
○ ೪ ಕುಸ್ತಿ ಮತ್ತು ವ್ಯಾಯಾಮ ಪ್ರದರ್ಶನ ○
● ೫. ಆರೋಗ್ಯ ಚಲನ ಚಿತ್ರಗಳು ●
ಪ್ರತಿ ದಿನ ಸಾಯಂಕಾಲ ಏರ್ಪಡಿಸಿರುತ್ತೆ
ತಾ|| ೧೦, ೧೧ ರಲ್ಲಿ ಹೈ ಸ್ಕೂಲ್ ಮತ್ತು ಕಾಲೇಜ್ ವಿದ್ಯಾರ್ಥಿಗಳ
● ಕ್ರೀಡಾ ಸ್ಪರ್ಧೆ ●
—: ಪ್ರವೇಶಧನ :—
ಫ್ಯಾಮಿಲಿ ಪಾಸ್ ಎಲ್ಲಾ ದಿನಗಳಿಗೂ ೧—೦—೦
ಪ್ರತಿ ದಿನ ವಸ್ತುಪ್ರದರ್ಶನಕ್ಕೆ ಒಬ್ಬರಿಗೆ ೦-೧—೦
ಎಲ್ಲಾ ದಿನಗಳಿಗೂ ... ೦—೪—೦
ಸಂಗೀತ ಮತ್ತು ನಾಟ್ಯ ಪ್ರದರ್ಶನಕ್ಕೆ ೦ ೮—೦ ಮತ್ತು ೦ ೪—೦
ಸೀಜನ್ ಮತ್ತು ಫ್ಯಾಮಿಲಿ ಪಾಸುಗಳು ವಸ್ತುಪ್ರದರ್ಶನ ಶಾಲೆಗಳಲ್ಲಿ ತಾ|| ೭-೭-೪೭ ಲಾಗಾಯ್ತು ಮಾರಲ್ಪಡುತ್ತೆ
ಟಿ. ನರಸಿಂಹಯ್ಯಂಗಾರ್,
ಡಾ|| ಇ. ಅನಂತರಾವ್,
ಕಾರ್ಯದರ್ಶಿಗಳು.

ಶ್ರೀ ಗಣೇಶಾ ಟಾಕೀಸಿನಲ್ಲಿ

ತಾ|| ೬-೭-೪೭ ರಿಂದ
ಪ್ರತಿ ದಿನ ೩ ಆಟಗಳು
ಇದುವರೆಗೂ ನೋಡದಿದ್ದರೆ
ಇಂದೇ ನೋಡಿ
ಬಾಲಿ
[illegible]
● (ಶಂಕರ್ ಪಾರ್ವತಿ ನರ್ತನವನ್ನು ನೋಡಿ ಆನಂದಿಸಿರಿ) ●

Sree Bhramaramba Picture Circuit Release, Mysore

ರಾಜಕಮಲ್
ತಾ|| ೪-೭-೪೭ ರಿಂದ
೨ ನೇ ವಾರ
ಬೈರಾಂ ಖಾನ್
—: ಭೂಮಿಕೆ :—
ಗಜಾನನ್ ಜಾಗೀರ್ದಾರ್, ಡೇವಿಡ್, ಗುಲಾಂ ಮಹಮ್ಮದ್, ಮೆಹತಾಬ್, ಜೇಬುನ್ನೀಸ
Morning Shows from 1-7-47 for 4 days daily at 10-30 a. m.
✻ Meet the Navy ✻
(First Run for Mysore)
A musical smash punctuated with COMEDY, SPECTACLE plus TECHNI-COLOUR SEQUENCES

ರೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೭—೭—೪೭ [ಸಂಚಿಕೆ ೪೪

ಕೇಂದ್ರ ಸರ್ಕಾರದ ಕಾಂ|| ಸಚಿವರ ರಾಜೀನಾಮೆ

ವಾರ ಭವಿಷ್ಯ

(ಶ್ರೀ ನಿತ್ಯಾನಂದಸ್ವಾಮಿಗಳಿಂದ)

ತಾ|| ೭-೭-೪೭ ರಿಂದ ೧೪-೭-೪೭ರ ವರೆಗೆ

ಮೇಷ—ಆರೋಗ್ಯ ಉತ್ತಮ, ಧನ ಲಾಭ ಸಾಧಾರಣ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ನೌಕರಿಯಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ, ವ್ಯಾಪಾರದಲ್ಲಿ ಶತ್ರುಗಳ ಕಿರುಕುಳ, ತಾ|| ೯, ೧೩ ಲಾಭ, ಪ್ರವಾಸ.

ವೃಷಭ—ಆರೋಗ್ಯ ಸಾಧಾರಣ, ಧನ ಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರ ವ್ಯವಹಾರಗಳಿಂದ ನಷ್ಟ, ಶತ್ರುಗಳಿಂದ ಕಿರುಕುಳ, ಮಿತ್ರರಿಂದ ತಿರಸ್ಕಾರ, ಮಂಗಳ ಕಾರ್ಯಗಳಿಗಾಗಿ ಪ್ರವಾಸ ಮತ್ತು ಧನವ್ಯಯ, ತಾ|| ೧೦, ೧೪ ಚಿಂತೆ, ನಷ್ಟ.

ಮಿಥುನ—ಆರೋಗ್ಯ ಕೆಡುತ್ತದೆ, ಧನ ಲಾಭ ಉತ್ತಮ, ಖರ್ಚು ಅಧಿಕ, ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ, ಶತ್ರುಗಳ ಕಿರುಕುಳದಿಂದ ಕೆಲಸಕಾರ್ಯಗಳಿಗೆ ಅಡಚಣೆ, ಔಷಧೋಪಚಾರಗಳಿಗಾಗಿ ವಿಶೇಷ ಖರ್ಚು, ತಾ|| ೧೧, ೧೩ ಲಾಭ, ಶಾಂತಿ.

ಕಟಕ—ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಸಾಧಾರಣ, ಖರ್ಚು ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರಿವರ್ಗದವರಿಂದ ಸನ್ಮಾನ, ತಾ|| ೯, ೧೧ ಚಿಂತೆ, ನಷ್ಟ.

ಸಿಂಹ—ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ ಪ್ರವಾಸದಿಂದ ಅನಾರೋಗ್ಯ, ತಾ|| ೧೦ ೧೪ ಲಾಭ, ಬಂಧು ದರ್ಶನ.

ಕನ್ಯಾ—ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಡಿಮೆ ಖರ್ಚು ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಮೇಲ್ಪಟ್ಟವರಿಂದ ತಿರಸ್ಕಾರ, ಬಂಧುಗಳಿಂದ ಅಪಮಾನ, ತಾ|| ೧೦, ೧೩ ಲಾಭ, ಶಾಂತಿ.

ತುಲಾ—ಆರೋಗ್ಯ ಸಾಧಾರಣ, ಧನ ಲಾಭ ಉತ್ತಮ, ಖರ್ಚು ಕಡಿಮೆ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿವರ್ಗದವರಿಂದ ಸನ್ಮಾನ, ತಾ|| ೯, ೧೧ ಪ್ರವಾಸ ಧನ ವ್ಯಯ.

ವೃಶ್ಚಿಕ—ದೇಹಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಆಶಾದಾಯಕ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಅಧಿಕಾರವರ್ಗದವರಿಂದ ಸನ್ಮಾನ, ಮಂಗಳ ಕಾರ್ಯಗಳಿಗಾಗಿ ಖರ್ಚು ಮತ್ತು ಪ್ರವಾಸ, ತಾ|| ೧೦, ೧೩ ಲಾಭ, ಬಂಧು ದರ್ಶನ

ಧನುಸ್ಸು—ಆರೋಗ್ಯ ಸಾಧಾರಣ, ಧನ ಲಾಭ ಕಡಿಮೆ, ಖರ್ಚು ಅಧಿಕ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ಕೌಟುಂಬಿಕ ಆರೋಗ್ಯ ಕೆಟ್ಟು ಅಧಿಕ ಧನ ವ್ಯಯ, ತಾ|| ೧೧, ೧೨ ಲಾಭ, ಶಾಂತಿ

ಮಕರ—ಶಾರೀರಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಕಡಿಮೆ, ಧನಲಾಭ ಸಾಧಾರಣ, ಖರ್ಚು ಕಡಿಮೆ, ಮಂಗಳಕಾರ್ಯಗಳಿಗಾಗಿ ಪ್ರವಾಸ, ಅಧಿಕಾರಿ ವರ್ಗದವರಿಂದ ಸನ್ಮಾನ, ತಾ|| ೯, ೧೩ ಅನಾರೋಗ್ಯ, ಅಪಕಾರ

ಕುಂಭ—ದೇಹಸ್ಥಿತಿ ಚಿಂತಾಜನಕ, ಮಾನಸಿಕ ಚಿಂತೆ ಕಡಿಮೆ, ಧನ ಲಾಭ ಉತ್ತಮ, ಖರ್ಚು ಅಧಿಕ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ, ತಾ|| ೯, ೧೦, ೧೪ ಚಿಂತೆ, ಮಿತ್ರರಿಂದ ತಿರಸ್ಕಾರ

ಮೀನ—ಆರೋಗ್ಯ ಸಾಧಾರಣ ಧನ ಲಾಭ, ಉತ್ತಮ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಅಧಿಕಾರಿ ವರ್ಗದವರಿಂದ ಸನ್ಮಾನ, ತಾ|| ೧೦, ೧೩, ಲಾಭ, ಪ್ರವಾಸ

ಸಂಬಳ ಸಮಿತಿಯ ಸಲಹೆ

ಸ್ವಂ.ಸು.ಪ್ರೋ||] ಬೆಂಗಳೂರು ೭

ಸಂಬಳ ಸಮಿತಿಯ ಕೊನೆಯ ಸಭೆಯು ಮೊನ್ನೆ ಸಂಜೆ ಸೇರಿದ್ದಿತು. ಯಾವ ಇಲಾಖೆಯಲ್ಲೇ ಕೆಲಸಮಾಡುತ್ತಿರುವವನಾದರೂ ಮೆಟ್ರಿಕ್ಯುಲೇಟುಗಳಿಗೆ ೩೧ ರೂ ಕನಿಷ್ಠ ಸಂಬಳ, ೮೦ ಗ್ರೇಡು; ಪದವೀಧರರಿಗೆ ೫೦ ರೂ ಕನಿಷ್ಠ ಸಂಬಳ, ೧೩೦ ರೂ ಗ್ರೇಡು ಕೊಡಬೇಕು, ಪಟ್ಟಣ ವಾಸಗಳಲ್ಲಿರುವ ನಾನ್ ಗೆಜೆಟೆಡ್ ಸರ್ಕಾರಿ ನೌಕರರಿಗೆ ೩ ರಿಂದ ೮ ರೂ ಮನೆ ಅಲೋಯನ್ಸ್ ಕೊಡಬೇಕು ಎಲ್ಲಾ ಇಲಾಖೆಯಲ್ಲಿರುವ ಸೂಪರಿಂಟೆಂಡೆಂಟುಗಳಿಗೂ ಈಗಿರುವ ೨೫೦ ರೂ. ಸಂಬಳವನ್ನು ೩೦೦ ಕ್ಕೆ ಹೆಚ್ಚಿಸಬೇಕು, ಆಫೀಸುಗಳ ಮ್ಯಾನೇಜರುಗಳಿಗೆ ಈಗಿರುವ ೧೫೦ ರೂ ಸಂಬಳವನ್ನು ೨೦೦ ಕ್ಕೆ ಹೆಚ್ಚಿಸಬೇಕು, ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಮಾಡುತ್ತಿರುವ ನೌಕರರಿಗೆ ವಿಶೇಷ ಅಲೋಯನ್ಸ್ ಕೊಡಬೇಕು, ತುಟ್ಟೀ ಭತ್ಯವು ಈಗಿರುವಂತೆಯೇ ಮುಂದುವರಿಯಬೇಕು, ಸರ್ಕಾರಿ ನೌಕರರಿಗೆ ಇನ್ನೂ ಒಂದೊಂದು ತಿಂಗಳ ಸಂಬಳವನ್ನು ತಾತ್ಕಾಲಿಕ ಬಹುಮಾನವಾಗಿ ಕೊಡಬೇಕು, ಈ ಸಲಹೆಗಳು ಇದೇ ಜನವರಿಯಿಂದಲೇ ಜಾರಿಗೆ ಬರುವಂತೆ ಆಗಬೇಕು—ಮುಂತಾಗಿ ಸರ್ಕಾರಕ್ಕೆ ಸಲಹೆ ನೀಡಿರುವರೆಂದು ತಿಳಿದುಬಂದಿದೆ. ದಿವಾನರು ಸಭೆಯಲ್ಲಿ ಹಾಜರಿದ್ದು ಸಮಿತಿಯವರ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಬರುವ ಆಗಸ್ಟಿನ ವೇಳೆಗೆ ವರದಿಯನ್ನು ಪರಿಶೀಲಿಸಿ ಸೂಕ್ತ ಆಜ್ಞೆಮಾಡುವುದಾಗಿ ಭರವಸೆಯಿತ್ತರೆಂದು ಗೊತ್ತಾಗಿದೆ

ವಿವಾಹ ಮಹೋತ್ಸವಗಳು

ಮೈಸೂರು ೭

ಧರ್ಮರತ್ನಾಕರ ಶ್ರೀ ಸಿ ಪೆರುಮಾಳ್ ಚೆಟ್ಟಿಯವರು ತಮ್ಮ ದ್ವಿತೀಯ ಕುಮಾರಿ ಸೌ|| ಸೀತಮ್ಮನವರನ್ನು ಚಿಕ್ಕಬಳ್ಳಾಪುರದ ಶ್ರೀ ಕಂದಸ್ವಾಮಿ ಚೆಟ್ಟಿಯವರ ಕುಮಾರ ಶ್ರೀ ಷಣ್ಮುಗಂ ಚೆಟ್ಟಿಯವರಿಗೆ ಕೊಟ್ಟು ಕಳೆದ ಸೋಮವಾರವೂ, ತಮ್ಮ ತೃತೀಯ ಕುಮಾರಿ ಸೌ|| ಪ್ರಭಾವತಿಯನ್ನು ಲೇಟ್ ಶ್ರೀ ಮಾಣಿಕ್ಯ ಚೆಟ್ಟಿಯವರ ಕುಮಾರ ಶ್ರೀ ದೇವರಾಜ ಚೆಟ್ಟಿಯವರಿಗೆ ಕೊಟ್ಟು ನಿನ್ನೆ ದಿವಸವೂ ವಿವಾಹವನ್ನು ನೆರವೇರಿಸಿದರು ಈ ಸಂದರ್ಭದಲ್ಲಿ ನಿನ್ನೆ ಏರ್ಪಡಿಸಿದ್ದ ಆರತಕ್ಷತಾ ಸಮಾರಂಭದಲ್ಲಿ ಶ್ರೀಮತಿ ಎಂ ಎಲ್ ವಸಂತ ಕುಮಾರಿ ಮತ್ತು ಪಾರ್ಟಿಯವರಿಂದ ಸಂಗೀತವನ್ನು ಏರ್ಪಡಿಸಿದ್ದಲ್ಲದೆ ಅನೇಕ ಮಾನ್ಯ ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸಿದರು.

ಆಸ್ಥಾನ ವಿದ್ವಾನ್ ವೇದರತ್ನಂ ಶ್ರೀ ಗುಂಡಾವಧಾನಿಗಳು ತಮ್ಮ ಕುಮಾರಿ ಸೌ|| ವೈದೇಹಿಯನ್ನು ಬೆಂಗಳೂರು ರಿ|| ಪೋಸ್ಟ್ ಮಾಸ್ಟರ್ ಶ್ರೀ ಸೀತಾರಾಮಶಾಸ್ತ್ರಿಗಳ ಕುಮಾರ ಚಿ|| ಶ್ರೀನಿವಾಸನಿಗೂ ಮತ್ತು ಮೊಮ್ಮಗಳು ಸೌ|| ಉಮಾದೇವಿಯನ್ನು ಪೆನುಕೊಂಡ ಜಮೀನ್ದಾರ್ ಶ್ರೀ ವೆಂಕಟಸುಬ್ಬಯ್ಯನವರ ಕುಮಾರ ಚಿ|| ಸತ್ಯಮೂರ್ತಿಗೂ ಕೊಟ್ಟು ನಿನ್ನೆ ವಿವಾಹವನ್ನು ನೆರವೇರಿಸಿದರು.

ತಾತ್ಕಾಲಿಕ ಸರ್ಕಾರದ ಕಾಂ|| ಸಚಿವರ ರಾಜೀನಾಮೆ

ಭಾರತ ಕೇಂದ್ರ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷರಾದ ಪಂಡಿತ ನೆಹರೂರವರು ವೈಸರಾಯರಿಗೆ ತಮ್ಮ ಸಹೋದ್ಯೋಗಿಗಳೊಡನೆ ರಾಜೀನಾಮೆ ಸಲ್ಲಿಸಿರುವರೆಂದು ವರದಿಯಾಗಿದೆ. ಭಾರತದ ಹೊಸ ರಾಜ್ಯಾಂಗ ರಚನೆಗೆ ಇದು ಅಗತ್ಯವೆಂದು ಹೇಳಲಾಗಿದೆ ಭಾರತದ ಹೊಸ ಶಾಸನದಂತೆ ಆಗಸ್ಟ್ ೧೫ ರ ನಂತರ ಈ ಸರ್ಕಾರ ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದುದೇ ಈ ರಾಜೀನಾಮೆಗೆ ಕಾರಣವೆಂದು ಗೊತ್ತಾಗಿದೆ.

ರಾಜ್ಯಾಂಗ ಸಭಾಧ್ಯಕ್ಷರಿಗೆ ದೂರು

ಕಾಂ|| ವರ್ಕಿಂಗ್ ಕಮಿಟಿಯ ಸಲಹೆ

ಸ್ವಂ.ಸು.ಪ್ರೋ||] ಬೆಂಗಳೂರು ೭

ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಉಮೇದವಾರರಾಗಿದ್ದ ಶ್ರೀ ಕೆ ಹನುಮಂತಯ್ಯನವರ ಉಮೇದುವಾರಿಕೆ ಅರ್ಜಿಯನ್ನು ತಿರಸ್ಕರಿಸಿರುವ ಬಗ್ಗೆ ಪ್ರಾ|| ಪ್ರಾ|| ಸಭಾ ಕಾಂಗ್ರೆಸ್ ಸದಸ್ಯರು ರಾಜ್ಯಾಂಗ ಸಭಾಧ್ಯಕ್ಷರಿಗೆ ದೂರು ಕೊಡಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಸಲಹೆ ಇತ್ತಿದೆ.

LATEST NEWS

ಸ್ವಂ.ಸು.ಪ್ರೋ||] ಬೆಂಗಳೂರು ೭

ಶಾಸನ ಸಭೆಯಿಂದ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಹೆಚ್ ಆರ್. ಗುರುವಾರೆಡ್ಡಿಯವರಿಗೆ ೧೭ ಓಟುಗಳೂ, ಕೆ. ಚೆಂಗಲರಾಯರೆಡ್ಡಿಯವರಿಗೆ ೧೫ ಓಟುಗಳೂ ಬಂದು ಅವರಿಬ್ಬರೂ ರಾಜ್ಯಾಂಗ ಸಭೆಗೆ ಚುನಾಯಿತರಾಗಿರುವರು ಶ್ರೀಗಳಾದ ಆರ್. ಚೆನ್ನಿಗರಾಮಯ್ಯನವರಿಗೆ ೫ ಓಟುಗಳೂ, ಎ. ಚಿನ್ನಪ್ಪನವರಿಗೆ ೪ ಓಟುಗಳೂ ಬಂದುವು ಪ್ರಾ|| ಪ್ರಾ|| ಸಭೆಯ ಓಟಿನ ಎಣಿಕೆ ನಡೆಯುತ್ತಿದೆ ಶ್ರೀಗಳಾದ ಎಸ್ ವಿ ಕೃಷ್ಣಮೂರ್ತಿ ಮತ್ತು ವಿ. ಹೆಚ್ ಚಂದ್ರಶೇಖರಯ್ಯನವರುಗಳಿಗೆ ಇದುವರೆಗೆ ಹೆಚ್ಚಿನ ಓಟುಗಳು ಬಂದಿವೆ.

City Municipal Office,
Mysore, Dated 7-7-1947

NOTICE

A few tickets are for sale for admission to the special enclosures reserved to view the Birthday Session. They will be sold in the Munici-pal Offices during the Office hours on 7th and 8th instants and between 9 a m. and 3 p.m on the 9th at the Town Hall and Municipal Office premises Besides these a few 0-1-0 annas tickets will be sold at the spot to the ladies for admission to the Gallery to the east of Rangacharlu Memorial Hall to view the return Procession

R. Ramachandra Rao Bhomlore,
President,
City Municipal Council,
Mysore.

ಸುಸಮಯ! ಸುಸಮಯ!

ಪುಕ್ಕಟೆ ಬಹುಮಾನ

ಅನೇಕ ಡಾಕ್ಟರುಗಳಿಂದ ಮೆಚ್ಚಿ ಪ್ರಶಸ್ತಿಯನ್ನು ಹೊಂದಿರುವ ಕಾಡ್ ಲಿವರ್ ಆಯಿಲ್ ಬಿಸ್ಕತ್ತುಗಳನ್ನು ನಿಮ್ಮ ಮಕ್ಕಳ ಆರೋಗ್ಯಕ್ಕೆ ಉಪಯೋಗಿಸಿರಿ. ಉತ್ಸವ ಸ್ಥಳ:-ಆರೋಗ್ಯ ಮತ್ತು ಕಲಾ ಪ್ರದರ್ಶನ C ಬ್ಲಾಕ್ ಸ್ಟಾಲ್ ನಂ 13. ಅನೇಕ ದೊಡ್ಡ ದೊಡ್ಡ ಪ್ರೈಜುಗಳನ್ನು ಬಹುಮಾನಗಳೊಂದಿಗೆ ಪಡೆಯಬಹುದು.

ಮಹಾಲಕ್ಷ್ಮಿ ಕಾಫಿ ಮತ್ತು ಬಿಸ್ಕತ್ ಫ್ಯಾಕ್ಟರಿ, ಹಳೇ ಅಗ್ರಹಾರ

ಪ್ರೊ|| ಎ. ಎಸ್. ಕೃಷ್ಣಮೂರ್ತಿ.

ಇದೇ ವಸ್ತು ಪ್ರದರ್ಶನಾಲಯದಲ್ಲಿ ತೆರೆದಿರುವ ಟೆಲ್ಡಿ ಟ್ರಿಕ್ಸ್ ಇವರಿಂದ ಬರುವ ಆದಾಯವನ್ನು ಮೈಸೂರು ಪೌರಸಭೆಯ ಬಡವರ ನಿಧಿಗಾಗಿ ಉಪಯೋಗಿಸಲಾಗುತ್ತದೆ ಮಹಾಜನಗಳು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಪ್ರಭಾತ್ ಟಾಕೀಸ್

ತಾ|| 9-7-47 ರಿಂದ

ಬೆಳಗಿನ ಆಟ ೧೦-೩೦ ಗಂಟೆಗೆ

೭ ದಿನಗಳು

— ರೇಖಾ —

: ಪಾತ್ರ :

ಲೀಲಾಚಿಟ್ಣೀಸ್, ಹರೀಶ್.

ಸಾಧ್ವಿ

೭-೭-೪೭ ಸೋಮವಾರ

ಹನುಮಂತಯ್ಯನವರಿಗೆ ಅವಕಾಶ ಕೊಡಬೇಕಾಗಿತ್ತು

ರಾಜ್ಯಾಂಗ ಸಭೆಗೆ ಮೈಸೂರಿನ ಪ್ರತಿನಿಧಿಗಳನ್ನು ಆರಿಸಲು ಈಗ ಏರ್ಪಟ್ಟಿರುವ ಕ್ರಮದ ವಿಚಾರದಲ್ಲಿ ವಿಶೇಷ ಆಕ್ಷೇಪಣೆಗಳು ಬಂದಿವೆಯಷ್ಟೆ. ಕಾಂಗ್ರೆಸ್ಸಿನವರು ಶ್ರೀ ಹನುಮಂತಯ್ಯನವರ ಹೆಸರನ್ನು ಸೂಚಿಸಲು ಪ್ರಯತ್ನಿಸಿದಾಗ ಸರ್ಕಾರದವರು ಅದಕ್ಕೆ ಸರಿಯಾದ ಅವಕಾಶವನ್ನು ಕಲ್ಪಿಸದೆ ಇನ್ನೂ ಹೆಚ್ಚಿನ ಆಕ್ಷೇಪಣೆಗಳಿಗೆ ಗುರಿಯಾಗಿದ್ದಾರೆ. ಇದಕ್ಕಾಗಿ ಕಾಂಗ್ರೆಸ್ ಸಾ[illegible]ರು ಬಹಳವಾಗಿ ಪ್ರಯತ್ನ ಪಟ್ಟರೆ. ಶ್ರೀ ಹನುಮಂತಯ್ಯನವರು ಕಾರಾಗೃಹದಲ್ಲಿರುವುದರಿಂದ ಅವರ ಉಮೇದ[illegible] ಅರ್ಜಿಗೆ ಅವರ ಸಹ್ಯ[illegible] ಜಾವನ್ನು [illegible] ಸರ್ಕಾರದವರ [illegible] ಲ್ಲ.

ರಾಜ್ಯಾಂಗ ಸಭೆಗೆ ಉಮೇ[illegible] ಕಾರಾಗೃಹದಲ್ಲಿ [illegible] [illegible] [illegible] ಶ್ರೀ ಹನು[illegible] [illegible] ಉಮೇದುವಾ[illegible] ದೂ, ಉಮೇ[illegible]

ರುಜುವನ್ನು ಹಾಕಬೇಕೆಂದೂ ವಿಧಾಯಕವಾಗಿದೆ. ಅದರಂತೆ ಇಬ್ಬರು ಸದಸ್ಯರು ಅವರ ಹೆಸರನ್ನು ಸೂಚಿಸಿದ್ದರು. ಆದರೆ ಶ್ರೀ ಹನುಮಂತಯ್ಯನವರ ರುಜುವನ್ನು ತೆಗೆದುಕೊಳ್ಳಲು ಸರ್ಕಾರದವರು ಅವಕಾಶ ಕೊಡಲಿಲ್ಲ. ಹೀಗೆ ಕಾನೂನು ಪ್ರಕಾರ ಉಮೇದುವಾರರಾಗಲು ಅರ್ಹತೆಯನ್ನು ಪಡೆದಿದ್ದವರಿಗೆ ಬೇಕಾದ ಸೌಲಭ್ಯವನ್ನು ಕಲ್ಪಿಸದೆ ಅವರ ಭೇಟಿಗೂ ಮೊದಲಿನಿಂದ ಲೇ ಅಡ್ಡಿಯನ್ನು ಹಾಕಿ ಸರ್ಕಾರದವರು ಬಹಳ ಸಂಕುಚಿತ ರೀತಿಯಲ್ಲಿ ವರ್ತಿಸಿರುವುದು ವಿಷಾದಕರ.

ಹಿಂದೆ ೧೯೪೨ ರ ಗಲಭೆಗಳ ಕಾಲದಲ್ಲಿ ಅನೇಕ ಜನರು ಕಾರಾಗೃಹದಲ್ಲಿದ್ದಾಗಲೂ ಕಂಸ್ಟಿಟ್ಯೂಯೆನ್ಸಿ ಮುಂತಾದ ಚುನಾವಣೆಗಳಲ್ಲಿ ಉಮೇದುವಾರರಾಗಲು ಅವರಿಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ಹೀಗಿರುವಲ್ಲಿ ಈಗ ಅದನ್ನು ಅಲ್ಲಗಳೆದಿರುವುದು ಸ್ವಲ್ಪವೂ ಸರಿಯಲ್ಲ. ಶ್ರೀ ಹನುಮಂತಯ್ಯನವರು ಉಮೇದುವಾರರಾಗಲು ಅವಕಾಶ ಕೊಟ್ಟರೆ ಅವರನ್ನು ಬಿಡುಗಡೆ ಮಾಡಬೇಕಾದೀತೆಂಬ ಶಂಕೆಯು ಸರ್ಕಾರದವರಿಗೆ ಇದ್ದಿರಬಹುದು. ಆದರೆ ಅದಕ್ಕೆ ಆಧಾರವಿಲ್ಲ. ಉಮೇದುವಾರಿಕೆಗೂ, ಬಿಡುಗಡೆಗೂ, ಸಂಬಂಧವಿಲ್ಲ. ಬಿಡುಗಡೆ ಮಾಡಬೇಕಾದೀತೆಂಬ ಚಿಂತೆಯಿಂದ ಉಮೇದುವಾರಿಕೆಯನ್ನೇ ನಿರಾಕರಿಸಿರುವುದು ಸರಿಯಲ್ಲ.

ಶ್ರೀ ಬಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಕಲಗೇರಿ

ಇವರು ಮೈಸೂರು ಶಿವರಾಂಪೇಟೆ ಗೋಪಾಲಕೃಷ್ಣ ಥಿಯೇಟರಿನಲ್ಲಿ 7-7-47 ನೇ ಸೋಮವಾರ ರಾತ್ರಿ ೧೦ ಘಂಟೆಗೆ ಯಶಸ್ವಿ 5ನೇ ಪ್ರಯೋಗ

ಪಠಾಣೀ ಪಾಶ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

' ಬ್ಲಾಕ್ ಮಾರ್ಕೆಟ್ '

ಎಂಬ ನಾಟಕವನ್ನು ಅಭಿನಯಿಸುವ ತಾರೀಕನ್ನು ಗಮನಿಸಿ

ಚಿಕ್ಕಚೆನ್ನಪ್ಪ, ಪ್ರೊಪ್ರೈಟರ್

Edited printed and published by A. R. Nagarajan at the Sadhvi Press D. Subbaiah Road Mysore

ಇದೇ ಸುಸಂದರ್ಭವನ್ನು ಉಪಯೋಗಿಸಿಕೊಂಡು ಸರ್ಕಾರದವರು ಶ್ರೀ ಹನುಮಂತಯ್ಯನವರನ್ನು ಖುಲಾಸೆ ಮಾಡಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಅದು ಔದಾರ್ಯದ ಕುರುಹೆಂದು ಭಾವಿಸಲ್ಪಟ್ಟು ಪರಸ್ಪರ ಸ್ನೇಹ ಸೌಹಾರ್ದಗಳಿಗೆ ದಾರಿಯನ್ನು ಮಾಡಿಕೊಡುತ್ತಿತ್ತು. ಈ ಅವಕಾಶವನ್ನು ಸರ್ಕಾರದವರು ಉಪಯೋಗಿಸಿಕೊಳ್ಳದಿದ್ದುದು ಒಂದು ಕೊರತೆಯೇ ಸರಿ.

ವುಡ್‌ಲ್ಯಾಂಡ್ಸ್

5-7-47 ರಿಂದ

ಶಿಕ್ಕಿರಿದ ೧೦ ನೇ ವಾರ

ಪ್ರತಿ ದಿನ ೩ ಆಟಗಳು

9ನೇ ತಾ॥ ಮ್ಯಾಟಿನಿ ೨-೩೦ ಕ್ಕೆ

10 ಮತ್ತು 11ನೇ ತಾ॥ ಮ್ಯಾಟಿನಿ ೩-೩೦ಕ್ಕೆ

ನಾವು ಇಬ್ಬರು

(ತಮಿಳು)

-: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರನ್ ಮುಂತಾದವರು.

ಎಚ್. ಎಸ್. ಹಿರಣ್ಣಯ್ಯನವರು ಪೌರಸಭಾಧ್ಯಕ್ಷರು

ಸ್ವಂತ ವರದಿ] ಬೆಂಗಳೂರು ೭

ಶಿವಮೊಗ್ಗಾ ಜಿಲ್ಲಾಧಿಕಾರಿಗಳಾದ ಶ್ರೀ ಎಚ್. ಎಸ್. ಹಿರಣ್ಣಯ್ಯನವರನ್ನು ಮೈಸೂರು ನಗರದ ಪೌರಸಭಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

* ರಸ್ತೆ ಮತ್ತು ಕಟ್ಟಡಗಳ ಇಲಾಖೆಯ ಚೀಫ್ ಇಂಜನೀಯರಾದ ರಾಜಸೇವಾ ಪ್ರಸಕ್ತ ಶ್ರೀ ಬಾಪಟ್‌ರವರ ಅಧಿಕಾರಾವಧಿಯನ್ನು ಇದೇ ಜುಲೈ ತಿಂಗಳಿನಿಂದ ಒಂದು ವರ್ಷವೂ ಮತ್ತು ಮರಾಮತ್ತು ಶಾಖಾ ಕಾರ್ಯದರ್ಶಿ ಶ್ರೀ ಬಿ. ಎಸ್. ನರಸಿಂಗರಾಯರ ಅಧಿಕಾರಾವಧಿಯನ್ನು ಬರುವ ಸೆಪ್ಟೆಂಬರ್ ತಿಂಗಳಿನಿಂದ ಒಂದು ವರ್ಷವೂ ಹೆಚ್ಚಿಸಲಾಗಿದೆ.

ಇದುವರೆಗೆ ಈ ಚುನಾವಣೆಯ ವಿಷಯದಲ್ಲಿ ಉಂಟಾಗಿರುವ ಆಕ್ಷೇಪಣೆಗಳನ್ನು ಸ್ವಲ್ಪ ಮಟ್ಟಿಗಾದರೂ ಪರಿಹರಿಸಲು ಇದೊಂದು ಅವಕಾಶವಿತ್ತು. ಅದನ್ನೂ ಸಹ ಸರ್ಕಾರದವರು ಕಳೆದುಕೊಂಡರು. ಇದಕ್ಕಾಗಿ ಸಂಸ್ಥಾನದ ಹಿತೈಷಿಗಳೆಲ್ಲರೂ ವಿಷಾದಪಡುವರು. ರಾಜ್ಯಾಂಗ ಸಭಾ ಪ್ರವೇಶದ ಮೇಲಾದರೂ ಮೈಸೂರಿನಲ್ಲಿ ಹೊಸ ವಾತಾವರಣವು ಕಲ್ಪಿತವಾಗುವುದೋ ನೋಡೋಣ.

ಆರೋಗ್ಯ ಮತ್ತು ಕಲಾ ಪ್ರದರ್ಶನ

(ಮೈಸೂರು ನಗರ ಪೌರಸಭೆ)

ದಸರಾ ವಸ್ತುಪ್ರದರ್ಶನ ಚಪ್ಪರದಲ್ಲಿ

6-7-47 ನೇ ಸೋಮವಾರದ ಕಾರ್ಯಕ್ರಮ.

ಪ್ರಾತಃಕಾಲ 9 ಘಂಟೆಗೆ ಪ್ರಾರಂಭೋತ್ಸವ

9 ರಿಂದ 12 ಘಂಟೆಯವರೆಗೆ ವಸ್ತುಪ್ರದರ್ಶನ

ಸಾಯಂಕಾಲ 3 ಘಂಟೆಯಿಂದ 10 ಘಂಟೆಯವರೆಗೆ

ಸಾಯಂಕಾಲ 4 ಘಂಟೆಯಿಂದ 6 ಘಂಟೆಯವರೆಗೆ ಕುಸ್ತಿಗಳು

ಮೈಸೂರು ದೇವರಾಜ ಮೊಹಲ್ಲಾ ವ್ಯಾಯಾಮಶಾಲೆಯವರ ಗರಡಿ ಪೈಲ್ವಾನ್ ಧರ್ಮಸಿಂಗ್ ನಾಗಿದಾರ್ ಕಣ್ಣುಬೋರಯ್ಯ ಮಂಗಳೂರು ನಾಗಿದಾರ್ ಮರಿವೆಂಕಟಪ್ಪ ಮತ್ತು ಇತರ ನಾಲ್ಕು ಜೊತೆ ಕುಸ್ತಿಗಳು

4 ರಿಂದ 6 ರವರೆಗೆ ಶ್ರೀಮತಿ ವಿಶಾಲಾಕ್ಷಮ್ಮ ಮತ್ತು ಗುಡ್‌ಶಫರ್ಡ್ ಕಾನ್ವೆಂಟ್ ಪಾಕಶಾಸ್ತ್ರ ಪ್ರದರ್ಶನ

5 ಘಂಟೆಯಿಂದ 7 ಘಂಟೆಯವರೆಗೆ ಗುಡ್‌ಶಫರ್ಡ್ ಕಾನ್ವೆಂಟ್, ಪಳ್ಳದಕೇರಿ ಜೆ. ಸಿ. ಪಿ. ಶಿಶುವಿಹಾರ ಮತ್ತು ಮ್ಯಾಕ್ಸಮಂಡಲಿಯವರಿಂದ ವಿವಿಧ ವಿನೋದಾವಳಿ.

6 ಘಂಟೆಯಿಂದ 7 ಘಂಟೆಯವರೆಗೆ ಶ್ರೀಮತಿ ಸೀತಮ್ಮ ತಂಡದವರಿಂದ ಸಂಗೀತ

7 ಘಂಟೆಯಿಂದ 8 ಘಂಟೆಯವರೆಗೆ ಸಿವಿಲ್ ಮ್ಯಾರೇಜ್ (ನಾಟಕ)

ಟಿ. ನರಸಿಂಹಯ್ಯಂಗಾರ್,
ಡಾ॥ ಇ. ಅನಂತರಾವ್,
ಕಾರ್ಯದರ್ಶಿಗಳು.

ANNOUNCEMENT

Products of
MYSORE SILK CENTRE
Kankanhalli,
Are available at the
Health & Fine Arts
Exhibition, Mysore.

ಕನ್ನಡಕಗಳಿಗೆ

ಡಾ॥ ಮುರುಗೇಶ್ ಡಿ. ಅಪ್ಪ
ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,
— ಸಹಜ —
ಸಯ್ಯಾಜಿರಾವ್ ರಸ್ತೆ, ಮೈಸೂರು

ರಾಜಕಮಲ್

ತಾ॥ ೪-೭-೪೭ ರಿಂದ

೨ ನೇ ವಾರ

ಬೈರಾಂ ಖಾನ್

-: ಪಾತ್ರ :-

ಗಜಾನನ್ ಜಾಗೀರ್ದಾರ್ ದೇವಿಕ್, ಗುಲಾಂಮಹ್ಮದ್ ಮಹತಾಬ್, ಜೇಬುನ್ನೀಸ

City Improvement Trust Board, Mysore.

MYSORE,
Dated 4th July 47

NOTIFICATION

Sealed Tenders will be received by the Trust Board Engineer on Friday the 19th July 1947 at 3 p m for conveying materials from Railway Station to the Trust Board Stores Town Hall and Municipal Office in accordance with the terms, contained in this office Notification dated 28th June 47, which can be seen in the Office of the Chairman, City Improvement Trust Board, Mysore.

CHAIRMAN.

ಫೋನ್ ನಂ. 392 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೨ ಕಾಸು

ಸಂಪುಟ ೫] ಗುರುವಾರ ೧೦—೭—೪೭ [ಸಂಚಿಕೆ ೨೮೩

ಛತ್ತಾರಿ ನವಾಬರ ರಾಜೀನಾಮೆಯೋ ?

ಕಸ್ತೂರಿ ಬಾಯಿ ಶಿಬಿರದ ಮುಕ್ತಾಯ ಸಮಾರಂಭ

ಬೆಳವಾಡಿ ೯

ರಾಜಧಾನಿಯ ಬಳಿ ಬೆಳವಾಡಿ ಗ್ರಾಮದಲ್ಲಿ ನಡೆಸುತ್ತಿದ್ದ ಕಸ್ತೂರಿ ಬಾಯಿ ಶಿಕ್ಷಣ ಕೇಂದ್ರದ ಶಿಬಿರದ ಮುಕ್ತಾಯ ಸಮಾರಂಭವು ನಿನ್ನೆ ಜರುಗಿತು. ರಾಜ್ಯಾಂಗ ಸಭೆಯ ಸದಸ್ಯರೂ, ಕರ್ನಾಟಕದ ನಾಯಕರೂ ಆದ ರಂಗನಾಥ ರಾಮಚಂದ್ರ ದಿವಾಕರರವರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭಕ್ಕೆ ಮೈಸೂರಿನಿಂದಲೂ, ಸುತ್ತಮುತ್ತಲ ಗ್ರಾಮದಿಂದಲೂ ನೂರಾರು ಜನ ಮಹಿಳೆಯರೂ, ಮಹನೀಯರೂ ಬಂದಿದ್ದರು. ಬೆಳಗ್ಗೆ ಪ್ರಭಾತಫೇರಿ, ಧ್ವಜವಂದನೆ ಮತ್ತು ಸೂತ್ರಯಜ್ಞಗಳು ನಡೆದುವು. ಮಧ್ಯಾಹ್ನ ಖಾದಿ ಕೈಗಾರಿಕೆಯ ಕ್ರಮಗಳ ಪ್ರದರ್ಶನವು ನಡೆಯಿತು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಪ್ರಾರ್ಥನೆ, ರಾಷ್ಟ್ರಗೀತೆ ಮತ್ತು ಸ್ವಾಗತ ಭಾಷಣಗಳಾದ ನಂತರ ಕರ್ನಾಟಕದ ಏಜೆಂಟರಾದ ಶ್ರೀಮತಿ ಉಮಾಬಾಯಿ ಕುಂದಾಪುರರವರು ಎಲ್ಲರಿಗೂ ಸ್ವಾಗತವನ್ನು ನೀಡಿದರು. ಮೈಸೂರು ಶಾಖೆಯ ಏಜೆಂಟರಾದ ಶ್ರೀಮತಿ ಯಶೋಧರಾ ದಾಸಪ್ಪನವರು ಶಿಬಿರದ ವರದಿಯನ್ನು ಒಪ್ಪಿಸಿ ಮಹಾಜನರ ಸಹಾಯಕ್ಕಾಗಿ ವಂದಿಸಿದರು.

ಶ್ರೀ ದಿವಾಕರರು ಭಾಷಣ ಮಾಡಿ ಮಹಾತ್ಮ ಗಾಂಧಿಯವರು ಮಾಡಿರುವ ಕೆಲಸಗಳಲ್ಲೆಲ್ಲಾ ರಚನಾತ್ಮಕ ಕಾರ್ಯಕ್ರಮವು ಎಷ್ಟು ಶ್ರೇಷ್ಠವಾದುದೆಂಬುದನ್ನೂ, ಇಂತಹ ಶಿಬಿರಗಳಲ್ಲಿ ಈ ಕಾರ್ಯವು ಎಷ್ಟು ಯುಕ್ತವಾಗಿ ನಡೆಯುವುದೆಂಬುದನ್ನೂ ವಿವರಿಸಿದರು. ಆಧುನಿಕ ವಿದ್ಯೆ ಮತ್ತು ನಾಗರಿಕತೆಗಳ ಪ್ರಭಾವದಿಂದ ಪಟ್ಟಣಿಗರು ಗ್ರಾಮಸ್ಥರ ರಕ್ತವನ್ನು ಹೀರುತ್ತಿರುವರೆಂದೂ, ಹೀಗೆ ಹಿಂದೂಸ್ಥಾನವು ಉದ್ಧಾರವಾಗಬೇಕಾದರೆ ಹಳ್ಳಿಗಳ ಶೋಷಣೆಯು ತಪ್ಪಬೇಕೆಂದು ಸೂಚಿಸಿದರು. ಸ್ವತಂತ್ರ ಭಾರತ ಮತ್ತು ಏಕತಂತ್ರ ಕರ್ನಾಟಕ ಎಂದು ಧ್ಯೇಯದಿಂದ ಅನೇಕರು ಕೆಲಸಮಾಡುತ್ತಿರುವ ಅಂಶವನ್ನು ವಿವರಿಸಿ ಕರ್ನಾಟಕದ ಏಕೀಕರಣಕ್ಕೆ ಮೈಸೂರಿನಲ್ಲಿ ಜವಾಬ್ದಾರೀ ಸರ್ಕಾರ ಅತ್ಯಗತ್ಯವೆಂದು ಹೇಳಿದರು. ಭಾರತಮಾತೆಯ ಪ್ರದರ್ಶನದ ನಂತರ ವಂದೇ ಮಾತರಂ ಗೀತೆಯು ಹಾಡಲ್ಪಟ್ಟು ಜಯಘೋಷದೊಡನೆ ಸಮಾರಂಭವು ಮುಕ್ತಾಯವಾಯಿತು.

Visit
ಷಾ ಸ್ಪೆಕಲ್ ಮಾರ್ಟ್
ಸಯ್ಯಾಜಿರಾವ್ ರಸ್ತೆ
(ಉಪಾಧ್ಯಾಯ ಬಿಲ್ಡಿಂಗ್,) ಮೈಸೂರು
ಸ್ಪೆಕ್ಟಕಲ್ಸುಗಳು ಅದರ ಭಾಗಗಳು ಮತ್ತು ಫೈನರ್ ಮೊದಲಾದುವುಗಳಿಗೆ - ಸರಿಯಾದ ಬೆಲೆಗೆ ದೊರೆಯುತ್ತವೆ
ಸ್ಪೆಷಲ್ ದರ
ಪೋಕ್-ಎ-ಲೈಟ್
ಫೈನರ್ ಸೆಟ್ಟಿಗೆ ರೂ. 15.
ಒಂದು ಬಾರಿ ಬಂದು ಪರೀಕ್ಷಿಸಿರಿ

for Spectacles
DR K MURUGESH
Old Mysore Bank Buildings, Mysore.

ಜವಾಬ್ದಾರೀ ಸರ್ಕಾರಕ್ಕಾಗಿ ಹೋರಾಟ

ಸ್ವಂ ಸು ಫೋ] ಬೆಂಗಳೂರು ೧೦

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸಿ ದೀರ್ಘವಾದ ನಿರ್ಣಯವೊಂದನ್ನು ಮಾಡಿ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಒಂದು ಹೋರಾಟವು ಅನಿವಾರ್ಯವೆಂದೂ, ಅದಕ್ಕೆ ಎಲ್ಲರೂ ಸಿದ್ಧರಾಗಬೇಕೆಂದೂ ತಿಳಿಸುತ್ತದೆ. ರಾಜ್ಯಾಂಗ ಸಭೆಗೆ ನಡೆದ ಚುನಾವಣೆಯಲ್ಲಿ ಸರ್ಕಾರದವರು ಅನುಸರಿಸಿದ ನೀತಿಯು ಆಕ್ಷೇಪಣೀಯವೂ ಆಕ್ಷೇಪಣೀಯವೂ ಆಗಿತ್ತೆಂದು ಹೇಳುತ್ತದೆ. ತಾತ್ಕಾಲಿಕ ಸರ್ಕಾರ ಮತ್ತು ಜವಾಬ್ದಾರೀ ಸರ್ಕಾರದ ಸ್ಥಾಪನೆಯ ಬಗ್ಗೆ ದಿವಾನರ ಉದಾಸೀನ ಮತ್ತು ಪ್ರತಿಗಾಮಿ ವರ್ತನೆಯನ್ನು ಟೀಕಿಸಿರುತ್ತದೆ. ವಿವಿಧ ರಂಗಗಳ ನಾಯಕರುಗಳೊಡನೆ ರಾಜ್ಯಾಂಗ ಸಭೆಯ ಸದಸ್ಯರ ಚುನಾವಣೆಯ ವಿಷಯವಾಗಿ ಸಮಾಲೋಚನೆ ನಡೆಸುವುದಾಗಿ ದಿವಾನರು ಹೇಳಿದ್ದ ಭರವಸೆಯನ್ನು ಈಡೇರಿಸಿರುವುದಿಲ್ಲ. ಇದು ಅವರ ನಿರಂಕುಶ ಮತ್ತು ಸ್ವಪ್ರತಿಷ್ಠೆಯ ನೀತಿಯನ್ನು ಸೂಚಿಸುತ್ತದೆ. ಇದೇ ಮುಂತಾದ ಅಭಿಪ್ರಾಯಗಳನ್ನು ಸಮಿತಿಯು ವ್ಯಕ್ತಪಡಿಸುತ್ತದೆ. ಶ್ರೀ ಹನುಮಂತಯ್ಯನವರ ಉಮೇದುವಾರಿಕೆಗೆ ಅವಕಾಶವೀಯದಿರುವುದನ್ನೂ, ತಿಪ್ಪರು ವಿರೋಧ ಸದಸ್ಯರು ಓಟುಮಾಡಲು ಅವಕಾಶವಿತ್ತಿರುವುದನ್ನೂ ಖಂಡಿಸುತ್ತದೆ.

ದೆಹಲಿಗೆ ಪ್ರಯಾಣ

ರಾಜ್ಯಾಂಗ ಸಭೆಯ ಸದಸ್ಯರುಗಳಾದ ಶ್ರೀ ಗ ಳು ಡಿ ಹೆಚ್ ಚಂದ್ರಶೇಖರಯ್ಯ, ಹೆಚ್ ಆರ್ ಗುರುವಾರೆಡ್ಡಿ, ಟಿ ಚೆನ್ನಯ್ಯ, ಮಹಮದ್ ಷರೀಫ್ ಇವರುಗಳು ಸದರಿ ನಿಯೋಗದ ಕಾರ್ಯದರ್ಶಿಗಳಾದ ಶ್ರೀ ಬಿ ಸುಬ್ರಹ್ಮಣ್ಯ ಅಯ್ಯರ್ ಮತ್ತು ಶ್ರೀ ಬಿ ಎಸ್ ಪುಟ್ಟಸ್ವಾಮಿ ಇವರುಗಳೊಡನೆ ನಿನ್ನೆ ರಾತ್ರಿ ರೈಲಿನಲ್ಲಿ ದೆಹಲಿಗೆ ಪ್ರಯಾಣ ಮಾಡಿದರು.

ಪಾಕಿಸ್ತಾನದಲ್ಲಿ ತುರ್ಕಿಯ ರಾಯಭಾರಿ

ಗ್ಲೋಬ್] ಕಲ್ಕತ್ತ ೭

ಪಾಕಿಸ್ತಾನ ಸರ್ಕಾರದ ಸ್ಥಾಪನೆಯೊಡನೆಯೇ ಅಲ್ಲಿ ತುರ್ಕಿಯ ರಾಯಭಾರ ಕಛೇರಿಯನ್ನು ತೆರೆಯಲಾಗುವುದೆಂದು ಕಲ್ಕತ್ತೆಯಲ್ಲಿರುವ ತುರ್ಕಿ ನಿಯೋಗದ ಸದಸ್ಯರು ಹೇಳುವರು. ಹಿಂದೂಸ್ಥಾನ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳು ಕೆಲಸ ಮಾಡಲು ಆರಂಭಿಸಿದೊಡನೆಯೇ ಈ ಎರಡು ರಾಜ್ಯಗಳ ತುರ್ಕಿಯ ರಾಯಭಾರ ಕಛೇರಿಯ ಜೊತೆಗೆ ಕರಾಚಿಯಲ್ಲಿ ಪ. ಕ್ವೆಂಟನ್ನು ತೆರೆಯಲಾಗುವುದು; ಎಂಬುದಾಗಿಯೂ ಅವರು ತಿಳಿಸಿರುವರು

ವರ್ಧಂತಿ ಮಹೋತ್ಸವ

ಮೈಸೂರು ೧೦

ಶ್ರೀಮನ್ಮಹಾರಾಜರವರ ೬೪ ನೇ ವರ್ಷದ ವರ್ಧಂತಿ ಮಹೋತ್ಸವದ ಪ್ರಯುಕ್ತ ನಿನ್ನೆ ಬೆಳಗ್ಗೆ ೧೧-೩೦ ಗಂಟೆಗೆ ಅರಮನೆಯಲ್ಲಿ ದರ್ಬಾರು ನಡೆಯಿತು. ದಿವಾನರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ, ಪ್ರಮುಖರೂ ರಾಜಭಕ್ತಿಯನ್ನು ಸಮರ್ಪಿಸಿದರು. ದೇವಸ್ಥಾನ ಮತ್ತು ಮಠಗಳಿಂದ ಬಂದಿದ್ದ ಮರ್ಯಾದೆಗಳನ್ನು ಸ್ವೀಕರಿಸಲಾಯಿತು. ಸಂಜೆ ೫ ಗಂಟೆಗೆ ಪದಾತಿಗಳ ಸಮ್ಮುಖದಲ್ಲಿ ರಸ್ತೆಯ ಪಾರ್ಶ್ವವಾಗಿ ಗೌರ್ನಮೆಂಟ್ ಹೌಸಿಗೆ ಚಿನ್ನದ ರಥದ ಮೇಲೆ ಮೆರವಣಿಗೆ ಹೊರಟು ರಾತ್ರಿ ೧೦ ಘಂಟೆಗೆ ದೊಡ್ಡಪೇಟೆಯ ಮಾರ್ಗವಾಗಿ ಬೆಳ್ಳಿಯ ರಥದಲ್ಲಿ ಅರಮನೆಗೆ ಹಿಂತಿರುಗಿದರು.

ರಾಜ್ಯಾಂಗ ಸಭೆಗೆ ನಾಮಕರಣ

ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ॥ ಮಹಮದ್ ಷರೀಫರೂ ಪ್ರಿ॥ ಪ್ರಿ॥ ಸಭೆಯ ಸದಸ್ಯವರ್ಗದ ಪಕ್ಷದ ನಾಯಕರಾದ ಶ್ರೀ ಟಿ ಚೆನ್ನಯ್ಯನವರೂ ರಾಜ್ಯಾಂಗ ಸಭೆಗೆ ನಾಮಕರಣ ಮಾಡಲ್ಪಟ್ಟಿರುವರು.

ಹೈದರಾಬಾದ್ ಪ್ರಧಾನಿಯ ರಾಜೀನಾಮೆಯೋ?

ಹೈದರಾಬಾದಿನ ಪ್ರಧಾನಿಗಳಾದ ಛತ್ತಾರಿ ನವಾಬರು ನೈಜಾಮರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿರುವರೆಂದು ವರದಿಯಾಗಿದೆ. ವೈಸರಾಯ್, ಗಾಂಧಿ, ಜಿನ್ನಾ ಮೊದಲಾದವರೊಡನೆ ಸಮಾಲೋಚನೆ ನಡೆಸಿ ಹಿಂತಿರುಗಿದ ಮೇಲೆ ಛತ್ತಾರಿ ನವಾಬರು ಕೈ ಬಿಟ್ಟಿರುವ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನವನ್ನು ಬಿಟ್ಟು ಭಾರತ ಯೂನಿಯನ್ನಿಗೆ ಸೇರಬೇಕೆಂದು ನಿಜಾಮರಿಗೆ ಸಲಹೆ ಇತ್ತರೆಂದೂ, ಅದನ್ನು ನಿಜಾಮರು ಅನುಸರಿಸದಿದ್ದುದೇ ರಾಜೀನಾಮೆಗೆ ಕಾರಣವೆಂದೂ ಹೇಳಲಾಗಿದೆ.

ಡಚ್ ಸಲಹೆಗೆ ಇಂಡೊನೇಷ್ಯದ ಅಂಗೀಕಾರ

ಡಚ್ ಸರ್ಕಾರ ಮಾಡಿದ್ದ ಜಂಟಿ ಪೊಲೀಸ್ ಸ್ಥಾಪನೆಯ ಸಲಹೆಯ ಹೊರತು ಉಳಿದ ಎಲ್ಲಾ ಸಲಹೆಗಳಿಗೂ ಇಂಡೊನೇಷ್ಯಾ ರಿಪಬ್ಲಿಕ್ ಸರ್ಕಾರವು ಸಮ್ಮತಿಸಿರುವುದೆಂದು ವರದಿಯಾಗಿದೆ. ಇದರಿಂದ ಇದುವರೆಗೆ ಎರಡು ರಾಷ್ಟ್ರಗಳಲ್ಲಿ ತಲೆದೋರಿದ್ದ ಬಿಕ್ಕಟ್ಟಿನ ನಿವಾರಣೆಯಾಗಿ ನೆದರ್ಲೆಂಡ್ಸ್, ಪೂರ್ವ ಇಂಡೊನೇಷ್ಯ, ಇಂಡೊನೇಷ್ಯಾ ರಿಪಬ್ಲಿಕ್ಕುಗಳ ಪ್ರತಿನಿಧಿಗಳನ್ನೊಳಗೊಂಡ ಫೆಡರಲ್ ಕೌನ್ಸಿಲ್ ಒಂದನ್ನು ಕೂಡಲೇ ರಚಿಸಲಾಗುವುದೆಂದು ಹೇಳಲಾಗಿದೆ.

ವರ್ಧಂತಿ ಉತ್ಸವ

ನಂಜನಗೂಡು ೯

ಈ ದಿನ ದಳವಾಯಿ ಕಟ್ಟಡದಿಂದ ಊರಿನ ಸುತ್ತಲೂ ಆನೆಯ ಮೇಲೆ ಶ್ರೀಮನ್ಮಹಾರಾಜರವರ ಭಾವ ಚಿತ್ರದ ಮೆರವಣಿಗೆಯು ಬಹಳ ವೈಭವದಿಂದ ಜರುಗಿತು. ಪುರಸಭಾಧ್ಯಕ್ಷರಾದ ಶ್ರೀ ಬಿ ಎ ಎಸ್ ಅರಸ್ಸರೂ, ಉಪಾಧ್ಯಕ್ಷರಾದ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರೂ, ಸ್ಥಳೀಯ ಅಧಿಕಾರಿಗಳೂ, ಪುರ ಮಹನೀಯರೂ ಭಾಗವಹಿಸಿದ್ದರು. ದಳವಾಯಿ ಕಟ್ಟಡದಲ್ಲಿ ಸಬ್ ಡಿವಿಷನ್ ಅಧಿಕಾರಿಗಳಾದ ಶ್ರೀ ಜಿ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಶ್ರೀಯುತರಾದ ಎ ಸುಬ್ರಹ್ಮಣ್ಯಯ್ಯನವರೂ, ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ವಾಸುದೇವ ಮೂರ್ತಿಗಳವರೂ ಶ್ರೀಮನ್ಮಹಾರಾಜರವರ ಗುಣಕಥನ ಮಾಡಿ ಭಾಷಣ ಮಾಡಿದರು.

ಮೈಸೂರು ನಗರ ಪೌರಸಭೆ
ಆರೋಗ್ಯ ಮತ್ತು ಕಲಾ ಪ್ರದರ್ಶನ
1947
ತಾ. ೧೦-೭-೪೭ ರ ಕಾರ್ಯಕ್ರಮ
ಪ್ರದರ್ಶನ:—ಬೆಳಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 3 ರಿಂದ 10 ರ ವರೆಗೆ
ಕುಸ್ತಿ:—ಸಂಜೆ 4 ರಿಂದ 6 ರ ವರೆಗೆ-ದೇವರಾಜ ಮೊಹಲ್ಲಾ ಮಾಯಣ್ಣನವರ ಗರಡಿ ಸಂಜಪ್ಪನವರ ಪಾಗಿರ್ದಾ ಪೈಲ್ವಾನರಿಗೂ, ಕನ್ನೇಗೌಡನ ಕೊಪ್ಪಲಿನ ಸಿದ್ದಯ್ಯನ ತಮ್ಮ ಚಿಕ್ಕಸ್ವಾಮಿಗೂ, ಇತರರಿಗೂ
ವನಿತಾ ವಿಭಾಗ:—ಸಂಜೆ 4 ರಿಂದ 6 ರ ವರೆಗೆ ಸೇಂಟ್ ಮೇರಿ ಶಾಲೆಯ ಶ್ರೀಮತಿ ಕೆ. ಕೆ ದಾಸ್ ಮತ್ತು ಗೈಡ್‌ಗಳಿಂದ ಪಾಕಶಾಸ್ತ್ರ ಪ್ರದರ್ಶನ
ಮಕ್ಕಳ ಕಾರ್ಯಕ್ರಮ
ಸಂಜೆ 5 ರಿಂದ 8 ರ ವರೆಗೆ:—1) ಸೇಂಟ್ ಮೇರಿ ಸ್ಕೂಲ್, (2 ಮಹಿಳಾ ಸಮಾಜ, 3) ಭಗಿನಿ ಸೇವಾ ಸಮಾಜ, 4) ವನಿತಾಸದನ ಮತ್ತು 5) ಜಗದಾಂಬಾ ಶಿಶುವಿಹಾರ.
ವ್ಯಾಯಾಮ ಪ್ರದರ್ಶನ
ಸಂಗೀತ:—ಸಂಜೆ 6 ರಿಂದ 8 ರ ವರೆಗೆ ಸಂಗೀತ ವಿದ್ವಾನ್ ಬಿ. ದೇವೇಂದ್ರಪ್ಪ ಮತ್ತು ಪಾರ್ಟಿಯವರಿಂದ.

City Municipal Office,
Mysore, Dated 3rd July 47
No. M 5 p-187-46-7

NOTIFICATION

Notice is hereby given to the inhabitants of Mysore City Municipality that the Municipal Council have resolved to amend the bye-law relating to the levy of octroi on dutiable articles so as to exempt the bonafide khaddar and hand-loom products manufactured within the state and Charakas and their spare parts of the description detailed below and to insert the following under exceptions to the schedule of taxes—octroi.

No 5 Bonafide khaddar certified to be so either by All India Spinning Association or by the Government of Mysore or the Chairman of the Village Panchayet or by the Amildar of a Taluk or by the President of a District Board or Municipality

No. 6. Hand-looms products manufactured within the state bearing the seal of the department of Industries and commerce other than handloom silk goods

No 33. Charkas and their spare parts

Any person having objections to the above amendment, may prefer the same in writing to the undersigned within one month from the date of this notification in the Official Gazette after which no objection will be taken into consideration

R. Ramachandra Rao
Bhombore,
PRESIDENT

ವುಡ್ ಲ್ಯಾಂಡ್ಸ್
ತಾ॥ 9-7-47 ರಿಂದ
ಬೆಳಗಿನ ಆಟ ೧೦ ೩೦ ಗಂಟೆಗೆ
೭ ದಿನಗಳು

— ರೇಖಾ —

—: ಪಾತ್ರ :—
ರೋಸಾಬೆಟ್ಟಿ ನ್, ಪರೀಕ್ಷ್.

ರಾಜಕಮಲ್
ತಾ॥ ೧೧-೭-೪೭ ರಿಂದ
೩ ನೇ ವಾರ

ಭೈರಾಂಖಾನ್

—: ಭೂಮಿಕೆ :—
ಮೆಹತಾಬ್, ಜಾಗೀರ್ದಾರ್.

From 9th July 1947 for 6 days daily at 10-30 a.m

'Strike Me Pink'

With Eddie Cantor

Office of the Presidet,
City Municipal Council,
Mysore, Dated 7th July 1917.
M 5 p-188-46-7

NOTIFICATION

Notice is hearby given to the public and the inhabitants of the Mysore City Municipality, that the Municipal Council have resolved to levy a tax of one anna per ticket on all passengers who arrive in Mysore on Railways except those who come from within a radius of ten miles from Mysore City Railway Station under section 64 sub-section 14 of the Mysore City Municipalities Act.

Any person having objection to the above may prefer the same in writing to the undersigned within one month from the date of publication of this notification in the Official Gazette after which no objection will be taken into consideration

R Ramachandra Rao
Bhombore,
PSESIDENT

ಶ್ರೀ
ಹಾಲಸಿದ್ಧೇಶ್ವರ ಸಂಗೀತ
ನಾಟಕ ಮಂಡಳಿ, ಹಲಗೇರಿ
ಇವರು ಮೈಸೂರು ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ
ಈ ದಿನ ರಾತ್ರಿ ೧೦ ಘಂಟೆಗೆ
ಹೊಸ ನಾಟಕ

ಬ್ಲಾಕ್ ಮಾರ್ಕೆಟ್

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ
ಟಿಕ್ಕಿಚೆಟ್ಟಪ್ಪ, ಪ್ರೊಪ್ರೈಟರ್

ಘನವಾದ ಸಂಗೀತ ಕಛೇರಿ
ಬಿಡಾರಂ ಕೃಷ್ಣಪ್ಪನವರ ರಾಮ
ಮಂದಿರಂ, ಮೈಸೂರು
12-7-47 ನೇ ಶನಿವಾರ ಸಾಯಂಕಾಲ
6 ಗಂಟೆಗೆ
ಗಾಯಕ ಶಿಖಾಮಣಿ ಅರಿಯಾಕುಡಿ
ರಾಮಾನುಜಯ್ಯಂಗಾರ್ಯರ
ಹಾಡುಗಾರಿಕೆಯು ಸಂಗೀತ ರತ್ನ
ಟಿ. ಚೌಡಯ್ಯನವರ
ಪಿಟೀಲು ಮತ್ತು ವಿದ್ವಾನ್
ವಿ ವಿ ರಂಗನಾಥರ್ಗರವರ
ಮೃದಂಗದೊಡನೆ ನಡೆಯುವುದು
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ
ಪ್ರವೇಶ
ಗಂಡಸರಿಗೆ 2-0-0 ಹೆಂಗಸರಿಗೆ 1-8-0
ಹುಡುಗರಿಗೆ 1-0-0
ಪಿಳ್ಳೆ, ಕೃಷ್ಣರಾಜ, ಚಾಮರಾಜ ಮೊಹಲ್ಲಾ ಮೆಂಬರುಗಳು ಮುಂದಾಗಿ ಟಿಕೆಟ್ ಪಡೆಯಬಹುದೆಂದು ಕೋರಿಕೊಳ್ಳುತ್ತದೆ

ವುಡ್‌ಲ್ಯಾಂಡ್ಸ್
ಶ್ರೀ
5-7-47 ರಿಂದ
ಕಿಕ್ಕಿರಿದ ೧೦ ನೇ ವಾರ
ಪ್ರತಿ ದಿನ ೩ ಆಟಗಳು
10 ಮತ್ತು 11ನೇ ತಾ॥ ಮ್ಯಾಟನಿ
೩-೩೦ಕ್ಕೆ

ನಾವು ಇಬ್ಬರು

(ತಮಿಳು)
—: ಪಾತ್ರ :—
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ ಆರ್.
ರಾಮಚಂದ್ರ ಮೊದಲಾದವರು.

ಗೃಹಕೃತ್ಯದ ನೋಟೀಸು

ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—ನನ್ನ ಚಿಕ್ಕಪ್ಪ ದೊಡ್ಡ ಮೊಳೆ ಗ್ರಾಮದ ಗೊಡ್ಡಿ ಹುಚ್ಚಶೆಟ್ಟಿಯು ಮಗ ದೊಡ್ಡ ವೆಂಕಟಶೆಟ್ಟಿ ಎಂಬುವನು ಪೌತಿಯಾಗಿದ್ದಾನೆ ಇವನು ಬದುಕಿರುವಾಗಲೇ ನನ್ನ ಮಗ ಹನುಮಶೆಟ್ಟಿ ಎಂಬುವನನ್ನು ದತ್ತು ತೆಗೆದುಕೊಂಡಿರುತ್ತಾನೆ ಪೌತಿದಾರನ ಹೆಂಡತಿ ಸುಬ್ಬಮ್ಮ ಎಂಬುವಳು ಷೆಡ್ಯೂಲ್ ಸ್ವತ್ತನ್ನು ಪರಭಾರೆ ಮಾಡಲು ಯುಕ್ತಿ ಸಲ್ಲಿದ್ದಾಳೆಂದು ತಿಳಿದು ಬಂದಿದೆ. ಹನುಮಶೆಟ್ಟಿಯು ಮೈನರ್ ಆಗಿದ್ದಾನೆ. ಈತನ ಹಕ್ಕಿಗೆ ಸೇರಿದ ಷೆಡ್ಯೂಲ್ ಸ್ವತ್ತುಗಳನ್ನು ಹಕ್ಕಿಲ್ಲದ ಆಕೆಯಿಂದ ಕ್ರಯ ವಗೈರೆ ಮಾಡಿಕೊಂಡಲ್ಲಿ ಊರ್ಜಿತವಾಗತಕ್ಕದ್ದಲ್ಲ ಅಲ್ಲದೆ ಕಷ್ಟನಷ್ಟಗಳಿಗೂ ಗುರಿಯಾಗಬೇಕಾಗುತ್ತದೆ.

ಷೆಡ್ಯೂಲು—

ಚಾಮರಾಜನಗರದ ತಾಲ್ಲೋಕು ದೊಡ್ಡ ಮೋಳೆಗೆ ಸೇರಿದ್ದು

1) ಸ. ನಂ 8-1 ಶರಿ 2 ಎಕರೆ 3 ಗುಂಟೆ ಆಕಾರ 3-8-0 2) ಸ ನಂ 15-3 ಖುಷ್ಕಿ 1 ಎಕರೆ 8 ಗುಂಟೆ ಆಕಾರ 2-6-0. 3) ಸ ನಂ 26-5 ಖುಷ್ಕಿ 0 ಎಕರೆ 18 ಗುಂಟೆ ಆಕಾರ 0 12-0

ಹರದನಹಳ್ಳಿ ಗ್ರಾಮಕ್ಕೆ ಸೇರಿದ್ದು

4) ಸ ನಂ 112-1 ಖುಷ್ಕಿ 0 ಎಕರೆ 20 ಗುಂಟೆ ಆಕಾರ 0-12-0 5) ಸ. ನಂ. 98-3 ಖುಷ್ಕಿ 0 ಎಕರೆ 38 ಗುಂಟೆ ಆಕಾರ 1-8-0

ಹರದನಹಳ್ಳಿ ಮೋಬಳ ಬೇಡ ಮೂಡ್ಲಿಗೆ ಸೇರಿದ್ದು

6) ಸ. ನಂ 9 ತರಿ 1 ಎಕರೆ 13 ಗುಂಟೆ ಆಕಾರ 7-8-0

ದೊಡ್ಡ ಮೋಳೆ ರಂಗಶೆಟ್ಟಿ ರುಜು
ತಾ॥ 8-7-47 ಮೈನರ್ ಗಾರ್ಡಿಯನ್,

ಚಲನ ಚಿತ್ರ ನಿರ್ಮಾಪಕರಿಗೆ ಸೂಚನೆ

ನಮ್ಮ ರಾಜಧಾನಿಯಲ್ಲಿ ಚಲನ ಚಿತ್ರವನ್ನು ರಚಿಸುತ್ತಿರುವ ಮತ್ತು ರಚಿಸಬೇಕೆಂದಿರುವ ಪ್ರಧಾನರಿಗೆ ನಮ್ಮ ಅಪೂರ್ವ ಕಾಣಿಕೆ. ಅಲ್ಪ ಖರ್ಚಿನಲ್ಲಿ ಕೂಡಿದ್ದಾಗಿಯೂ, ಪಾತ್ರರು ಲಕ್ಷ ವರಮಾನದೊಡನೆ ಕೀರ್ತಿಯೂ ಲಭಿಸುವಂತಹ ಪಕ್ಷಪ್ರಾಯವಾದ ಕಥೆಗೆ ಇಂದೇ ಗಮನಿಸಿ ತಿಂಗಳೊಳಗಾಗಿ ಸಿದ್ಧತೆ ಮಾಡಿಕೊಳ್ಳಿ ವಿಳಂಬ ಮಾಡಿದಲ್ಲಿ ಬಹಳ ದಿನ ನಿರೀಕ್ಷಣೆ ಮಾಡಬೇಕಾಗುತ್ತದೆ. ಅನೇಕ ವರ್ಷಗಳಿಂದ ಅಗೋಚರವಾಗಿರುವ ರಸವತ್ತಾದ ಒಂದು ಕಥೆಯನ್ನು ಬಹು ದಿನಗಳಿಂದ ಪ್ರಯಾಸಪಟ್ಟು ಏರಚಿಸಿದೆ. ಈ ಕಥೆಯನ್ನು ಚಲನಚಿತ್ರ ರೂಪದಲ್ಲಿ ಚಿತ್ರಿಸಿದರೆ ಇಡೀ ಜಗತ್ತೇ ನೋಡಿ ಆನಂದ ಪಡುವುದು. ಅಪೇಕ್ಷಿಸುವವರು ಒಂದಾವರ್ತಿ ಪರೀಕ್ಷಿಸಿ

ವಿವರಗಳಿಗೆ:- ಹೆಚ್. ಕೆ. ಮೂರ್ತಿ,
ಎಸ್. ಎಸ್. ಕೆ. ಕಳಾನಿಧಿ,
ಕೋ-ಆಪರೇಟಿವ್ ಸೊಸೈಟಿ ಹಿಂಭಾಗ,
ಮೈಸೂರು

City Improvement Trust Board, Mysore.

MYSORE,
Dated: 4th July 47

NOTIFICATION

Sealed Tenders will be received by the Trust Board Engineer on Friday the 18th July 1917 at 4 p.m. for conveying materials from Railway Station to the Trust Board Stores Town Hall and Municipal Office in accordance with the terms, contained in this office Notification dated 28th June 47, which can be seen in the Office of the Chairman, City Improvement Trust Board, Mysore

CHAIRMAN.

Edited printed and published by A. R. Nagarajan at the Sadhvi Press D. Subbaiah Road Mysore

ಫೋನ್ ನಂ. 392 ॥ವಂದೇ ಮಾತರಂ॥ ಈದಿನ ಪತ್ರಿಕೆ ೩ ಕಾಸು

ಸಂಪುಟ ೫] ಶನಿವಾರ ೧೨—೭—೪೭ [ಸಂಚಿಕೆ ೨೮೫

ಆಜ್ಞೋಲ್ಲಂಘನೆ ಬಗ್ಗೆ ಮೈ॥ ಕಾಂಗ್ರೆಸ್ ನಿರ್ಣಯ

ಮೈಸೂರಿನ ಪ್ರತಿನಿಧಿಗಳಿಗೆ ದಿನಕ್ಕೆ ೩೫ ರೂ.

ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸುವ ಮೈಸೂರಿನ ಪ್ರತಿನಿಧಿಗಳಿಗೆ ದಿನಕ್ಕೆ ೩೫ ರೂ ಭತ್ಯ, ಡಬ್ಬಲ್ ಫಸ್ಟ್ ಕ್ಲಾಸ್ ರೈಲ್ವೆ ದರ, ಮತ್ತು ಎಂಟಾನೆ ಪ್ಲೇನ್ ಖರ್ಚನ್ನು ಸರ್ಕಾರದವರು ಮಂಜೂರು ಮಾಡಿರುವರು. ಭತ್ಯವನ್ನು ಅಧಿವೇಶನಕ್ಕೆ ೩ ದಿನ ಮೊದಲಿನಿಂದ ಮುಗಿದ ೩ ದಿನಗಳವರೆಗೆ ಕೊಡಲಾಗುವುದು.

ಮಮ್ದಾತ್ ಖಾನರು ಸಿಂಧು ಪ್ರಾಂತ್ಯದ ಗವರ್ನರರೇ?

ಸಿಂಧು ಪ್ರಾಂತದ ಗವರ್ನರರಾದ ಸರ್ ಫ್ರಾನ್ಸಿಸ್ ಮೂಡಿಯವರು ರಾಜೀನಾಮೆ ಇತ್ತಿರುವರೆಂದೂ, ಅವರ ಸ್ಥಾನಕ್ಕೆ ಮಮ್ದಾತ್ ಖಾನರನ್ನು ಲೀಗ್ ನಾಯಕರು ಆರಿಸುವುದಾಗಿಯೂ ವರದಿಯಾಗಿದೆ.

ವರ್ಧಂತಿ ಕಾರ್ಯಕ್ರಮಗಳು

ಕಳೆದ ಬುಧವಾರ ರಾಜಧಾನಿಯ ಜೋಡಿ ಬಾಳೆ ರಂಗಯ್ಯನವರ ಕುಂಬಳಿಗರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವದ ಪ್ರಯುಕ್ತ, ಸಭೆ ಸೇರಿ ಪ್ರಭುಗಳಿಗೆ ತಮ್ಮ ರಾಜಭಕ್ತಿಯನ್ನರ್ಪಿಸಿದರು ಶ್ರೀ ಜೋಡಿ ಬಾಳೆ ರಂಗಯ್ಯನವರು ವಿದ್ಯಾರ್ಥಿಗಳಿಗೆ ವಿಶೇಷ ಭೋಜನವನ್ನೇರ್ಪಡಿಸಿ ಮಕ್ಕಳಿಗೆ ಸಕ್ಕರೆ ಹಂಚಿದರು.

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಎಲ್ಲಾ ದೇವಾಲಯಗಳಲ್ಲಿಯೂ ಮಹಾ ಪ್ರಭುಗಳಿಗೆ ಶುಭವನ್ನು ಕೋರಿ ಪೂಜಾದಿಗಳು ನಡೆದುವು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಹೆಚ್. ವಿ. ವೀರಭದ್ರಯ್ಯನವರು ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಶ್ರೀಮನ್ಮಹಾರಾಜರವರ ಗುಣಕಥನ ಮಾಡಿ ಭಾಷಣ ಮಾಡಿದರು.

ಜೂಜಿಗಾಗಿ ಶಿಕ್ಷೆ

ರಾಜಧಾನಿಯ ದೇವಪೇಟೆಗೆ ಬೀದಿಯಲ್ಲಿರುವ ೨೧೦ನೇ ನಂ ಮನೆಯಲ್ಲಿ ಆದರ ಮಾಲೀಕನಾದ ಸಿದ್ದಯ್ಯನ ಮಗ ಮಾದಯ್ಯ ಎಂಬಾತನು ಇತರ ಏಳು ಮಂದಿಯೊಡನೆ ಜೂಜಾಡುತ್ತಿದ್ದುದಕ್ಕಾಗಿ ನಗರದ ೩ನೇ ನ್ಯಾಯಾಧೀಶರು ಸದರಿ ಮಾದಯ್ಯನಿಗೆ ೨೦ ರೂ ಜುಲ್ಮಾನೆ, ತಪ್ಪಿದರೆ ೨೦ ದಿನಗಳ ಸಜಾ, ಉಳಿದ ೭ ಮಂದಿಗೂ ತಲಾ ೧೦ ರೂ. ಜುಲ್ಮಾನೆ ತಪ್ಪಿದರೆ ೭ ದಿನ ಸಜಾ ವಿಧಿಸಿರುವರು.

ಅಮೇರಿಕಕ್ಕೆ ದೆಹಲಿಯ ಕೋತಿಗಳು

ಅಮೇರಿಕದಲ್ಲಿ ವೈದ್ಯಕೀಯ ಸಂಶೋಧನೆಗಳಿಗಾಗಿ ಕೋತಿಗಳ ಗ್ರಂಥಿಗಳು ಬೇಕಾಗಿವೆಯೆಂದು ಹೇಳಲಾಗಿದೆ ದೆಹಲಿಯಲ್ಲಿ ಕೋತಿಗಳ ಕಾಟವು ವಿಪರೀತವಾಗಿರುವುದರಿಂದ ಅಲ್ಲಿನ ಪಾಲಕಟಿಯವರು ಕೋತಿಗಳನ್ನು ಅಮೇರಿಕಕ್ಕೆ ರವಾನಿಸಲು ತಯಾರಾಗುತ್ತಿರುವುದಾಗಿ ತಿಳಿದುಬಂದಿದೆ

ಭಾರತದಿಂದ ಫ್ರೆಂಚರನ್ನು ಹೊರಡಿಸಲು ಪ್ರಯತ್ನ

ಫ್ರೆಂಚರನ್ನು ಭಾರತದಿಂದ ಓಡಿಸಲು ಚಂದ್ರನಗರದ ಒಳ ಮತ್ತು ಹೊರಭಾಗಗಳಲ್ಲಿ ಒಂದು ಭಾರಿ ಚಳುವಳಿ ಆರಂಭವಾಗುವುದೆಂದು ಹೇಳಲಾಗಿದೆ ಚಂದ್ರನಗರದ ನಂತರ ಫ್ರೆಂಚ್ ಅಧಿಕಾರಿಗಳನ್ನು ಬಹಿಷ್ಕರಿಸಬೇಕೆಂದು ಅಲ್ಲಿನ ವಿಮೋಚನಾ ಸಮಿತಿಯು ನಿರ್ಧರಿಸಿ ಸಮ್ಮಿಲನ ಒಂದು ಪ್ರತಿಕ್ರಿಯೆಯನ್ನು ರಚಿಸಲಿದೆಯೆಂದು ತಿಳಿದುಬಂದಿದೆ. ಚಂದ್ರನಗರದ ಸ್ವತಂತ್ರ ಪ್ರದೇಶಗಳ ಈ ಆಂದೋಳನಕ್ಕೆ ಬೆಂಬಲ ನೀಡದ ಭಾರತೀಯ ಅಧಿಕಾರಿಗಳಿಗೂ ನಹ ಬಹಿಷ್ಕಾರ ಹಾಕಲಾಗುವುದು ಫ್ರೆಂಚ್ ಇಂಡಿಯಾದ ಗವರ್ನರರು ಚಳುವಳಿಯನ್ನು ತಮ್ಮ ಸರ್ಕಾರಕ್ಕೆ ವರದಿಮಾಡಲು ಪ್ಯಾರಿಸ್ಸಿಗೆ ತೆರಳಿರುವರು

ಅಯೋಧ್ಯೆಯು ನವಾಬರಿಗೇ ಸೇರಬೇಕಂತೆ

ಈಗಿನ ಸಂಯುಕ್ತ ಪ್ರಾಂತ್ಯಕ್ಕೆ ಸೇರಿರುವ ಅಯೋಧ್ಯೆ ಸಂಸ್ಥಾನದ ೧೨ ಜಿಲ್ಲೆಗಳನ್ನು ಬ್ರಿಟಿಷರ ಅಧಿಕಾರ ವರ್ಗಾವಣೆಯ ನಂತರ ಅಲ್ಲಿನ ನವಾಬರ ವಂಶದವರಿಗೇ ಕೊಡಬೇಕೆಂದು ಸಂಯುಕ್ತ ಪ್ರಾಂತದ ನವಾಬರುಗಳು ಕೇಳುತ್ತಿರುವರೆಂದು ವರದಿಯಾಗಿದೆ ನವಾಬರ ಸ್ವಪಕ್ಷದಿಂದ ಅಯೋಧ್ಯೆಯು ಸ್ವತಂತ್ರವಾಗಿ ಆ ಸಂಸ್ಥಾನವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತ್ತೆಂದೂ, ಈಗ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುತ್ತಿರುವುದರಿಂದ ಅದನ್ನು ಹಿಂದಿನ ವ್ಯಕ್ತಿಗಳಿಗೆ ಸೇರಿಸಬೇಕೆಂದು ತಮಗೇ ಕೊಡಬೇಕೆಂದೂ ಅಲ್ಲಿನ ನವಾಬರಾಗಿದ್ದ ವಾಜಿದ್ ಅಲಿಯವರ ಮೊಮ್ಮಕ್ಕಳಾದ ನವಾಬ್ ಫಕೀರ್ ಉದ್ದೀನ್ ರವರು ಕೇಳಿರುವರು

ವುಡ್‌ಲ್ಯಾಂಡ್ಸ್

12-7-47 ರಿಂದ

ಪ್ರತಿದಿನ ೧೧ ನೇ ವಾರ

ಪ್ರತಿ ದಿನ ೩ ಆಟಗಳು

ನಾಮ ಇಟೆಲ

: ಪಾತ್ರ :

ಟಿ. ಆರ್. ಮಹಲಿಂಗಂ,

ಜಯಲಕ್ಷ್ಮಿ ಟಿ. ಆರ್.

ರಾಮಚಂದ್ರ ಮುಂತಾದವರು.

ಪಾಕಿಸ್ತಾನ್ ಡೊಮಿನಿಯನ್ನಿಗೆ ಜಿನ್ನಾ ಗವರ್ನರ್ ಜನರಲ್

ಹಿಂದೂಸ್ಥಾನ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳಿಗೆ ಒಬ್ಬರೇ ಗವರ್ನರ್ ಜನರಲ್ ಇರುವ ಬಗ್ಗೆ ಲೀಗು ತನ್ನ ವಿರೋಧವನ್ನು ವ್ಯಕ್ತಪಡಿಸಿದೆ; ಆದುದರಿಂದ ಭಾರತ ಡೊಮಿನಿಯನ್ನಿಗೆ ವೈಸರಾಯರು ಪಾಕಿಸ್ತಾನಕ್ಕೆ ಮಿ॥ ಜಿನ್ನಾರವರೂ ಗವರ್ನರ್ ಜನರಲ್ಲರಾಗುವರೆಂಬುದಾಗಿ ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲೀಯವರು ಕಾಮನ್ಸ್ ಸಭೆಯಲ್ಲಿ ಹೇಳಿರುವರು ಸೈನ್ಯ ವಿಭಜನೆಯು ಪೂರ್ಣವಾಗಿ ಆಗುವವರೆಗೆ ಸಂಯುಕ್ತ ರಕ್ಷಣಾ ಸಮಿತಿಗೆ ಮೌಂಟ್ ಬ್ಯಾಟನ್ನರೇ ಅಧ್ಯಕ್ಷರಾಗುವರೆಂದೂ ಅವರು ತಿಳಿಸಿರುವರು

ದೆಹಲಿಗೆ ಪ್ರಯಾಣ

ಸ್ವಂ ಸು ಪ್ರೆ॥] ಬೆಂಗಳೂರು ೧೨

ಶ್ರೀಗಳಾದ ಚೆಂಗಲರಾಯರೆಡ್ಡಿ ಮತ್ತು ಸಿದ್ದಲಿಂಗಯ್ಯನವರು ಈ ದಿನ ಬೆಳಿಗ್ಗೆ ೮-೩೦ ಗಂಟೆಗೆ ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ವಿಮಾನದಲ್ಲಿ ದೆಹಲಿಗೆ ತೆರಳಿದರು. ಅನಂತರ ಮೈಸೂರಿನ ದಿವಾನರೂ ವಿಮಾನದಲ್ಲಿ ದಿವಾನರೂ ಸಹ ಹೊರಟರು.

ಹನುಮಂತಯ್ಯನವರ ಅಪೀಲು

ಶ್ರೀ ಕೆ. ಹನುಮಂತಯ್ಯನವರು ರಾಜ್ಯಾಂಗ ಸಭೆಯ ಚುನಾವಣೆಗೆ ಉಮೇದುವಾರರಾಗಿದ್ದುದನ್ನು ನಿರಾಕರಿಸಿರುವ ಬಗ್ಗೆ ರಾಜ್ಯಾಂಗ ಸಭೆಯ ಅಧ್ಯಕ್ಷರಲ್ಲಿ ಅಪೀಲು ಹೂಡಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ ಶ್ರೀ ಹನುಮಂತಯ್ಯನವರೂ, ಅವರ ಹೆಸರನ್ನು ಸೂಚಿಸಿದ ಶ್ರೀ ಶ್ರೀ ಸಭೆಯ ಸದಸ್ಯರೂ ಅಪೀಲು ಮಾಡುವಂತೆ ಏರ್ಪಾಡು ಮಾಡಲಾಗಿದೆ.

* ಸಾರ್ವಜನಿಕ ಕಾರ್ಯಾಲಯದ ಕೆಲಸಗಳನ್ನು ಬಹಿಷ್ಕರಿಸಲು ಅಮೇರಿಕದ ನಿಪ್ಪಾಣದ ಆಟಾ ಫೋರ್ಟಿಲಾನ್ ಎಂಬುವರನ್ನು ಮುಖಂಡರಾಗಿ ನೇಮಿಸಲಾಗಿದೆ

* ಕೋಲಾರದ ೩ ನೇ ಮ್ಯಾಜಿಸ್ಟ್ರೇಟ್ ಶ್ರೀ ಕೆ. ಶ್ರೀ ನಿವಾಸಾಚಾರ್ಯರನ್ನು ಬೆಂಗಳೂರು ಸ್ಮಾಲ್ ಕಾಜ್ ಕೋರ್ಟ್ ಜಡ್ಜಿ ಸ್ಥಾನಕ್ಕೆ, ಚಿಕ್ಕಬಳ್ಳಾಪುರದ ಮುನ್ಸೀಫ್ ಶ್ರೀ ಎಸ್ ಲಿಂಗಣ್ಣನವರನ್ನು ಅವರ ಸ್ಥಾನಕ್ಕೂ, ಬೆಂಗಳೂರು ಪಶ್ಚಿಮದ ಶ್ರೀ ಜಿ. ಗೋವಿಂದರಾಜನವರನ್ನು ಚಿಕ್ಕಬಳ್ಳಾಪುರದ ಮುನ್ಸೀಫರನ್ನಾಗಿಯೂ ನೇಮಿಸಲಾಗಿದೆ

ಪ್ರತಿಬಂಧಕಾಜ್ಞೆಗಳ ಉಲ್ಲಂಘನೆ

ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ನಿರ್ಣಯ

ಸ್ವಂ-ಸು ಪ್ರೆ॥] ಬೆಂಗಳೂರು ೧೨

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ನಿನ್ನೆ ಸಭೆ ಸೇರಿ ರಾಜಕೀಯ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ದೀರ್ಘವಾದ ಹೇಳಿಕೆಯೊಂದನ್ನು ಹೊರಡಿಸಿರುತ್ತದೆ ಶ್ರೀಮನ್ಮಹಾರಾಜರವರು ಸಂದೇಶವನ್ನು ಇತ್ತಮೇಲೆ ಇದುವರೆಗೆ ನಡೆದಿರುವ ವಿದ್ಯಮಾನಗಳನ್ನೆಲ್ಲಾ ಪ್ರಸ್ತಾಪಿಸಿ ದಿವಾನರಿಂದ ಕಾಂಗ್ರೆಸ್ಸು ಕೇಳಿದ್ದ ಯಾವ ಭರವಸೆಯೂ ಬಂದಿರುವುದಿಲ್ಲವೆಂದೂ, ದಿವಾನರು ಪ್ರತಿಗಾಮಿ ಕೋಮುವಾರು ನೀತಿಯನ್ನೇ ಅನುಸರಿಸುತ್ತಿರುವರೆಂದೂ, ಅದರಲ್ಲಿ ಹೇಳಲಾಗಿದೆ ಶ್ರೀ ಹನುಮಂತಯ್ಯನವರ ಬಿಡುಗಡೆ ಮತ್ತು ರಾಜ್ಯಾಂಗ ಸಭೆಗೆ ಚುನಾವಣೆ ಮುಂತಾದ ವಿಷಯಗಳಲ್ಲಿ ದಿವಾನರು ಕೊಟ್ಟ ಭರವಸೆಯನ್ನು ಈಡೇರಿಸಿಲ್ಲವೆಂದು ಆಪಾದನೆ ಮಾಡಲಾಗಿದೆ. ಅಲ್ಲದೆ ದಿವಾನರಿಂದ ಕಾಂಗ್ರೆಸ್ಸಿನಿಂದ ಬರೆಯಲ್ಪಟ್ಟ ಪತ್ರಗಳಿಗೆ ಉತ್ತರಗಳೇ ಬಂದಿರುವುದಿಲ್ಲವೆಂದಾಗಿಯೂ ಹೇಳಲಾಗಿದೆ. ದಿವಾನರೊಡನೆ ಕಾಂಗ್ರೆಸ್ಸಿನವರು ನಡೆಸುತ್ತಿದ್ದ ಮಾತುಕತೆಗಳು ಮುಕ್ತಾಯವಾದಂತೆ ಭಾವಿಸಬೇಕೆಂದೂ ಸಹ ಸೂಚಿಸಲಾಗಿದೆ. ಆದ್ದರಿಂದ ತನ್ನ ಗುರಿಯಾದ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಆವಶ್ಯಕವಾದ ಆಂದೋಳನವನ್ನು ನಡೆಸಿ ಪ್ರಜಾಬೆಂಬಲವನ್ನು ಪಡೆಯಲು ಕಾಂಗ್ರೆಸ್ಸು ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಲು ನಿರ್ಧರಿಸುತ್ತದೆ ಈ ಕಾರ್ಯದಲ್ಲಿ ಸಂಸ್ಥಾನದ ಸಮಸ್ತ ಪ್ರಜೆಗಳ ಬೆಂಬಲವನ್ನೂ ಕೋರುತ್ತದೆ. ಈ ಪ್ರಯುಕ್ತ ಅಸ್ತಿತ್ವದಲ್ಲಿರುವಂತೆ ಹಾಕಲಾದ ಎಲ್ಲ ಸಭೆ ಮತ್ತು ನಿರಂಕುಶವಾದ ಪ್ರತಿಬಂಧಕಾಜ್ಞೆಗಳ ಉಲ್ಲಂಘಿಸಲ್ಪಡಬೇಕೆಂದೂ ಸಹ ಸಮಿತಿಯು ಸೂಚಿಸಿರುತ್ತದೆ

ಅರಮನೆ ಸುದ್ದಿ

ಮೈಸೂರು ೧೨

ಶ್ರೀಗಳಾದ ರಾಜಕಾರ್ಯಪ್ರವೀಣ ಡಿ ಆರ್ ಪ್ರಾಣೇಶ, ಅಮೀರ್-ಉಲ್-ಮುಲ್ಕ್, ಮಿ॥ ಎಂ ಮಿರ್ಜಾ ಮೊಹಿಯುದ್ದೀನ್, ರಾಜಕಾರ್ಯಪ್ರಸಕ್ತ ಎಲ್ ನಾರಾಯಣರಾವ್, ರಾಜಕಾರ್ಯಪ್ರಸಕ್ತ ಎಂ ವೆಂಕಟೇಶನಾಯ್ಡು, ದಾವಣಗೆರೆಯ ಧರ್ಮಪ್ರಕಾಶ ರಾಜನಹಳ್ಳಿ ರಾಮಶೆಟ್ಟಿ ಮತ್ತು ರಾಜಸೇವಾಪ್ರಸಕ್ತ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರುಗಳಿಗೆ ಶ್ರೀಮನ್ಮಹಾರಾಜರವರು ಈ ದಿನ ಭೇಟಿಯನ್ನು ದಯಪಾಲಿಸಿದರು.

○ ಈಗಿರುವ ತ್ರಿವರ್ಣ ರಾಷ್ಟ್ರೀಯ ಧ್ವಜದಲ್ಲಿರುವ ಚರಕದ ಗುರುತಿನ ಬದಲು ಚಕ್ರವನ್ನು ಅದರ ಸ್ಥಾನದಲ್ಲಿ ಹಾಕಿ ಅದನ್ನು ಸ್ವತಂತ್ರ ಭಾರತದ ರಾಷ್ಟ್ರಧ್ವಜವನ್ನಾಗಿ ಅಂಗೀಕರಿಸಬೇಕೆಂದು ರಾಷ್ಟ್ರಧ್ವಜ ಸಮಿತಿಯು ತೀರ್ಮಾನಿಸಿರುವುದಾಗಿ ವರದಿಯಾಗಿದೆ.

ಆರೋಗ್ಯ ಮತ್ತು ಕಲಾ ಪ್ರದರ್ಶನ

ವಸ್ತು ಪ್ರದರ್ಶನಾಲಯ

ಸ್ಟಾಲ್ ನಂ. 17

ಫ್ಯಾನ್ಸಿ ಸಾಮಾನುಗಳು ಮತ್ತು ಟೀಟೈಮ್ ಟಿಫನ್ ಬಗೆಗಳಿಗೆ ಪ್ರಭಾತ್ ಬ್ಯಾಂಗಲ್ಸ್ ಸ್ಟೋರಿಗೆ ಭೇಟಿ ಕೊಡಿ.

ವುಡ್‌ಲ್ಯಾಂಡ್ಸ್

ತಾ॥ 9-7-47 ರಿಂದ

ಬೆಳಗಿನ ೮-೩೦-೧೦ ಗಂಟೆಗೆ

೫ ದಿನಗಳು

— ಲೀಲಾ —

- ಪಾತ್ರ -

ಲೀಲಾ ಚಿಟ್ನಿಸ್, ಪರೀಕ್.

ಸಾಧ್ವಿ

೧೨-೭-೪೭ ಶನಿವಾರ

ಆರೋಗ್ಯ ಪ್ರದರ್ಶನ

ರಾಜಧಾನಿಯ ಪೌರಸಭೆಯವರು ಇದೇ ಮೊದಲನೆಯ ಬಾರಿ ನಡೆಸುತ್ತಿರುವ ಆರೋಗ್ಯ ಮತ್ತು ಕಲಾಪ್ರದರ್ಶನವು ಸರ್ವ ವಿಧದಿಂದಲೂ ಸಾರ್ವಜನಿಕರ ಮೆಚ್ಚುಗೆಯನ್ನು ಪಡೆದಿರುತ್ತದೆ. ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಜನರು ಪ್ರದರ್ಶನವನ್ನು ನೋಡಿ ಮೆಚ್ಚಿಗೆಯನ್ನು ಸೂಚಿಸುತ್ತಿರುವರು. ಆಹಾರದ ಅಭಾವ, ಪುಷ್ಟಿಕರವಾದ ವಸ್ತುಗಳ ಕೊರತೆ ಇವುಂಟಾದುವುಗಳು ವಿಶೇಷವಾಗಿರುವ ಈ ಕಾಲದಲ್ಲಿ ಇಂತಹ ಪ್ರದರ್ಶನಗಳಿಂದ ಬಹಳ ಪ್ರಯೋಜನ ಉಂಟಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ಜನತೆಯ ವರ್ಗಗಳ ಸ್ವರೂಪ ಮತ್ತು ಸಾಂದರ್ಯಗಳನ್ನು ತಿಳಿಸಲು ಈ ಪ್ರದರ್ಶನವು ವಿಶೇಷ ಸಹಕಾರಿಯಾಗಿರುತ್ತದೆ.

ಪೌರಸಭೆಯವರು ಇತ್ತೀಚೆಗೆ ಹಲವು ದಿನಗಳಿಂದ ನಿಂತು ಹೋಗಿದ್ದ ಮಾರ್ಕೆಟ್ ಪ್ರದರ್ಶನವನ್ನು ಪುನರುಜ್ಜೀವನಗೊಳಿಸಿರುವರು. ಟಾಂಗಾ ಗಾಡಿಯ ಪ್ರದರ್ಶನವನ್ನು ಏರ್ಪಡಿಸಿರುವರು. ಈಗ ಆರೋಗ್ಯ ಮತ್ತು ಕಲಾಪ್ರದರ್ಶನವನ್ನು ಆರಂಭಿಸಿರುವರು. ಇವುಗಳಿಂದ ಪುರನಿವಾಸಿಗಳಿಗೆ ವಿಶೇಷ ಸಹಾಯವುಂಟಾಗಿ ಅವುಗಳಲ್ಲಿ ಭಾಗವಹಿಸುವವರಲ್ಲಿ ಉತ್ತಮ ರೀತಿಯ ಸ್ಪರ್ಧೆಯು ಬೆಳೆದು ಮಹಾಜನರಿಗೆ ಹೆಚ್ಚು ಹೆಚ್ಚಾದ ಸೌಲಭ್ಯಗಳು ದೊರೆಯಲು ಅವಕಾಶವಾಗುತ್ತದೆ.

ಈ ಪ್ರದರ್ಶನಕ್ಕೆ ಈಗ ದೊರೆತಿರುವ ಪ್ರೋತ್ಸಾಹವು ಇನ್ನೂ ಹೆಚ್ಚಾಗಿ ಬೆಳೆದು ಪ್ರತಿ ವರ್ಷವೂ ಇದು ನಡೆಯುವಂತೆ ಏರ್ಪಾಡಾಗಲೆಂದು ನಾವು ಹಾರೈಸುತ್ತೇವೆ.

Office of the President, City Municipal Council,
Mysore: Dated 3rd July 1947.

NOTIFICATION

No. M 5 P. 186 A-46.47

Notice is hereby given to the inhabitants of the Mysore City Municipality that the Municipal Council have resolved to amend the bye-law relating to the levy of Octroi on dutiable articles so as to levy storage fees on the following fourteen articles at the rates noted against them and to add them under Octroi Bye-law No 17- Storage fees and to number them 43 to 54 thereunder.

Sl. No	Name of articles	Rate	Period
43	Fibre sheets-Machine or hand-pressed	For each package As. 4 case bag or bale of 400 lbs or over in Weight	per Week or portion there of
44	Boiler Composition	do	do
45	Chemicals excluding explosives	do	do
46	Napthelene solid or liquid	do	do
47	Photographic paper and mounts	do	do
48	Roofing felts and their parts in any shape or form	do	do
49	Chrochet thread and woollen yarn	do	do
50	Hand-loom silk goods	do	do
51	All kinds of medicines other than Ayurvedic and Unani	do	do
52	Rayon materials in any shape or form	do	do
53	All articles manufactured out of plastics	do	do
54	Pyro techniques	do	do
55	Card Board, Wrapper paper and paper for printing and writing other than those manufactured in Mysore State	do	do
56	Rattan articles in any shape or form	do	do

Any person having objection to the above amendment may prefer the same in writing to the undersigned within one month from the date of its publication in the Office Gazette, after which no objection will be heard.

(Sd.) R. Ramachandra Rao Bhombore,
PRESIDENT.

ರಾಜಕಮಲ್

ತಾ|| ೧೧-೭-೪೭ ರಿಂದ
೩ ನೇ ವಾರ

ಭೈರಾಂಖಾನ್

—: ಭೂಮಿಕೆ :—
ಮೆಹತಾಬ್, ಜಾಗೀರ್ದಾರ್

From 9th July 1947 for
6 days daily at 10-30 a.m.
'Strike Me Pink'
With Eddie Cantor

ಶ್ರೀ
ಹಾಲಸಿದ್ಧೇಶ್ವರ ಸಂಗೀತ
ನಾಟಕ ಮಂಡಳಿ, ಕಲಗೇರಿ
ಇವರು ಮೈಸೂರು ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ
ಈ ದಿನ ರಾತ್ರಿ ೧೦ ಘಂಟೆಗೆ
ಯಶಸ್ವಿ ೩ ನೇ ಪ್ರಯೋಗ

ಬ್ಲಾಕ್ ಮಾರ್ಕೆಟ್

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ
ಚಿಕ್ಕಚಿಟ್ಟಪ್ಪ, ಪ್ರೊಪ್ರೈಟರ್

ಅಪೇರಾ ಟಾಕೀಸ್, ಮೈಸೂರು
೧೨-೭-೪೭ ರಿಂದ ೧೩ ನೇ ವಾರ

ರಾಜಕುಮಾರಿ

Edited, printed and published by A. R. Nagarajan at the Sadhvi Press D Subbai Mysore ah Road

ಗೃಹಕೃತ್ಯದ ನೋಟೀಸು

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಕಲ್ಲೂರು ನಾಗನಹಳ್ಳಿ ಗ್ರಾಮದಲ್ಲಿರುವ ರಂಗೇಗೌಡನ ಕುಟುಂಬ ಗೌರಮ್ಮನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ದಿವಂಗತ ಕಲ್ಲೂರು ನಾಗನಹಳ್ಳಿ ಗ್ರಾಮದ ಬೋರೇಗೌಡರ ಮಕ್ಕಳು ರಂಗೇಗೌಡ ಎಂಬುವರು ನನ್ನ ಯಜಮಾನರು. ನನಗೆ 9 ವರ್ಷದ ಅಮ್ಮಣ್ಣಿ 6 ವರ್ಷದ ಕಮಲಿ ಎಂಬ ಇಬ್ಬರು ಮೈನರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಯಜಮಾನರಿಗೆ ಪಿತ್ರಾರ್ಜಿತವಾಗಿ ಬಾಲು ಬರುತ್ತ ಮೂಲ್ಯ ಬಂದಿರುವ ಷೆಡ್ಯೂಲ್ ನಂಬರು ಸ್ವತ್ತುಗಳು ಇರುತ್ತವೆ. ಇವುಗಳನ್ನು ಮೇಲ್ಕಂಡ ನನ್ನ ಯಜಮಾನರು ಕೆಲವು ಮಂದಿ ಜೂಜುಗಾರರ ಸಹವಾಸದಿಂದ ಜೂಜನ್ನು ಕಲಿತು ಇರತಕ್ಕ ಚರ, ಸ್ಥಿರ ಆಸ್ತಿಗಳನ್ನು ಕ್ರಯ, ಭೋಗ್ಯ, ಆಧಾರದ ಮೂಲಕ ಪರಭಾರೆಮಾಡಿ ನನ್ನ ಮತ್ತು ಮೈನರು ಮಕ್ಕಳುಗಳ ಜೀವನೋಪಾಯಕ್ಕೆ ಇಲ್ಲದಂತೆ ಮಾಡುವ ಸಂಭವ ಕಂಡು ಬರುತ್ತಿರುತ್ತೆ. ಇವರು ಕುಟುಂಬದ ಖರ್ಚುಗಳಿಗಾಗಿ ಮಾಡುವ ಸಾಲದ ಜವಾಬ್ದಾರಿ ಯಾವುದೂ ಇರುವುದಿಲ್ಲ. ಆದ್ದರಿಂದ ಷೆಡ್ಯೂಲಿನಲ್ಲಿ ನಮೂದಿರುವ ಸ್ವತ್ತುಗಳನ್ನು ಯಾರೇ ಆಗಲಿ ಯಾವ ಕಾರಣದಿಂದಾಗಲಿ ಆಧಾರ, ಭೋಗ್ಯ, ಕ್ರಯ ವಗೈರೆ ಯಾವುದೂ ಮಾಡಿಸಿಕೊಳ್ಳಕೂಡದು. ಹಾಗೆ ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗಲಾರದು ಮತ್ತು ನನಗೆ ಸಂಭವಿಸುವ ನಷ್ಟಕ್ಕೆ ಅವರುಗಳೇ ಜವಾಬ್ದಾರರಾಗತಕ್ಕದ್ದೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಕಲ್ಲೂರು ನಾಗನಹಳ್ಳಿ ಗ್ರಾಮ ಸರ್ವೆ ನಂಬರು 18-1 ಖುಷ್ಕಿ ವಿಸ್ತೀರ್ಣ 1-38 ಆಕಾರ 3-0-0. ಸರ್ವೆ ನಂಬರು 18 ಖುಷ್ಕಿ ವಿಸ್ತೀರ್ಣ 0-28 ಆಕಾರ 1-15-0 ಸರ್ವೆ ನಂಬರು 88-2-3 ಖುಷ್ಕಿ 0-33 ಆಕಾರ 1-6-0. ಸರ್ವೆ ನಂಬರು 293-1 ತರೀ ವಿಸ್ತೀರ್ಣ 0-12 ಆಕಾರ 1-8-0 ಸರ್ವೆ ನಂಬರು 327-1-2 ಖುಷ್ಕಿ ವಿಸ್ತೀರ್ಣ 1-20 ಆಕಾರ 1-11-0. ಸರ್ವೆ ನಂಬರು 445 ಖುಷ್ಕಿ ವಿಸ್ತೀರ್ಣ 0-34 ಆಕಾರ 0-12-0 ವಾಸದ ಮನೆ ಮತ್ತು ದನದ ಕೊಟ್ಟಿಗೆ ಒಟ್ಟು 6 ಅಂಕಣದ್ದು.

ಕೃಷ್ಣರಾಜನಗರದ ತಾಲ್ಲೂಕು ಸಿದ್ದಾಪುರದ ಗ್ರಾಮದ ಸರ್ವೆ ನಂಬರ್ 60 ತರೀ ವಿಸ್ತೀರ್ಣ 0-6¾ ಆಕಾರ 0-7-0.

ಗೌರಮ್ಮನ ರುಜು.

Distributors:-



ಇಂಡಿಯಾ ಸೂಪರ್
ಟಾಂಗಾ ಟೈರು

ಬಹಳ ಕಾಲ ಬಾಳಿಕೆ ಬರುವವು ಮತ್ತು ಸ್ವಾಭಾವಿಕವಾದ ರಬ್ಬರಿನಿಂದ ತಯಾರಾದ ಪ್ರಾಮಾಣಿಕ ಮಾದರಿಯಂತೆ ತಯಾರಿಸಲ್ಪಟ್ಟಿರುವುವು ಲಾಭಕರ. ಒಂದು ಸಾರಿ ಉಪಯೋಗಿಸಿ ನೋಡಿ

—: ಸಿಕ್ಕುವ ಸ್ಥಳ :—
ಸಿ ಬಿ ಎಂ ಚಂದ್ರಯ್ಯ,
ಅಶೋಕಾ ರಸ್ತೆ, :: ಮೈಸೂರು.

ಫೋನ್ ನಂ. 392

ಸಂಪುಟ ೫] ಭಾನುವಾರ ೧೩—೭—೪೭ [ಸಂಚಿಕೆ ೨೮೬

ತಿರುವಾಂಕೂರಿನಲ್ಲಿ ಘೋರ ದಬ್ಬಾಳಿಕೆ

ವರ್ಧಂತಿ ಉತ್ಸವ

ನಂಜನಗೂಡಿನ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೂ, ಅಧ್ಯಾಪಕರೂ ಪಾಠ ಶಾಲಾಧ್ಯಕ್ಷರಾದ ಶ್ರೀ ಬಿ ಎನ್ ಎಸ್ ಅವರ ಅಧ್ಯಕ್ಷತೆಯಲ್ಲಿ ಕಳೆದ ಬುಧವಾರ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವನ್ನು ಆಚರಿಸಿದರು.

ತಿರಕಣಾಂಬಿಯ ಮಾಧ್ಯಮಿಕ ಶಾಲೆಯಲ್ಲಿ ಕಳೆದ ೯ ನೇ ತಾ॥ ವರ್ಧಂತಿ ಉತ್ಸವದಲ್ಲಿ ವಿದ್ಯಾರ್ಥಿಗಳ ಆಟ ಸ್ಪರ್ಧೆಗಳನ್ನು ಏರ್ಪಡಿಸಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು.

ಚಿಕ್ಕಮಗಳೂರು ಪುರಸಭೆಯವರು ವರ್ಧಂತಿ ಉತ್ಸವವನ್ನು ವಿಜೃಂಭಣೆಯಿಂದ ನಡೆಸಿದರು.

ಸೈನ್ಯ ವಿಭಜನೆ

ಭಾರತ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳ ಸೈನ್ಯ ವಿಭಜನೆಯ ಅಂಶ ನಿರ್ಧಾರವಾಗಿದೆಯೆಂದು ವರದಿಯಾಗಿದೆ. ಮೊದಲು ಕೋಮುವಾರು ಆಧಾರದ ಮೇಲೆ ವಿಭಜನೆ ನಡೆಯುವುದು. ಈಗಿರುವ ಲ್ಯಾಂಡಿಂಗ್ ವಿಮಾನಗಳು ಮತ್ತು ೩೩ ನೌಕೆಗಳು ಭಾರತ ಡೊಮಿನಿಯನ್ನಿಗೂ, ೧೬ ನೌಕೆಗಳು ಪಾಕಿಸ್ತಾನಕ್ಕೂ ಸೇರಿರುವುವು. ಪಾಕಿಸ್ತಾನಕ್ಕೆ ವಿಮಾನ ಪಡೆ ಇನ್ನೂ ನಿರ್ಧಾರವಾಗಿರುವುದಿಲ್ಲ ಇಂಡಿಯಾ ಡೊಮಿನಿಯನ್ನಿಗಿಂತ ಪಾಕಿಸ್ತಾನಕ್ಕೆ ಕಡಿಮೆ ಸೈನ್ಯವಿರುವುದು.

ಸಾಯಿ ಸದನ

ಮೈಸೂರು, ೧೩.

ಕಳೆದ ೩, ೪ ಮತ್ತು ೫ ನೇ ತಾರೀಖುಗಳಲ್ಲಿ ಶ್ರೀ ಗುರು ಪೂರ್ಣಿಮಾ ಪ್ರಯುಕ್ತ ಕೃಷ್ಣರಾಜ ಆಸ್ಪತ್ರೆ ರಸ್ತೆಯಲ್ಲಿರುವ ಮುನಿಸಿಪಲ್ ಕೌನ್ಸಿಲರ್ ಶ್ರೀ॥ ಟಿ ಚಂದ್ರಶೇಖರ ಗೌಡರ ಮನೆಯಲ್ಲಿ ಸಾಯಿಬಾಬಾರವರ ಉತ್ಸವವು ಜರುಗಿತು. ಪೂಜೆ, ಉಪನ್ಯಾಸ ಸಂಗೀತ, ಅನ್ನದಾನಾದಿಗಳು ನಡೆದುವು. ಶ್ರೀ॥ ಟಿ ಚಂದ್ರಶೇಖರ ಗೌಡರನ್ನು ಪ್ರಧಾನಿಯಾಗಿ ನೇಮಿಸಲಾಯಿತು. ಇದುವರೆಗೆ ಮಂದಿರದ ಕಟ್ಟಡಕ್ಕಾಗಿ ಒಂದು ಸಹಸ್ರ ರೂ. ವಸೂಲಾಗಿದೆ. ಡಾ॥ ಎಲ್. ಎಲ್. ಮರಿಸ್ವಾಮಿಯವರು ಒಂದು ಬೆಳ್ಳಿಯ ಪ್ರಭಾವಳಿಯನ್ನು ಕೊಡಲು ಒಪ್ಪಿರುತ್ತಾರೆ.

ಹಾಸ್ಟೆಲ್ ವಿದ್ಯಾರ್ಥಿಗಳ ತೊಂದರೆ

ರಾಜಧಾನಿಯಲ್ಲಿರುವ ಬೆಟ್ಟದಪುರದ ಶ್ರೀ ಚಿಕ್ಕ ವೀರ ದೇಶಿಕೇಂದ್ರ ಸ್ವಾಮಿಗಳವರ ವಿದ್ಯಾರ್ಥಿ ನಿಲಯದಲ್ಲಿ ಕಳೆದ ವರ್ಷ ವ್ಯಾಸಂಗ ಮಾಡುತ್ತಿದ್ದು ಉತ್ತೀರ್ಣರಾಗಿರುವ ೮ ಮಂದಿ ವಿದ್ಯಾರ್ಥಿಗಳಿಗೆ ಈ ವರ್ಷ ಮೇಲ್ವಿಚಾರಕರು ನಿಲಯದಲ್ಲಿ ಜಾಗ ಕೊಡದೆ ಅವರ ವ್ಯಾಸಂಗಕ್ಕೆ ಅಡಚಣೆಯನ್ನುಂಟುಮಾಡಿ... ತೊಂದರೆಗೆ ಒಳಗಾದ ವಿದ್ಯಾರ್ಥಿಯೊಬ್ಬರು ಮೇಲ್ಕಂಡ ಸ್ವಾಮಿಗಳವರು ಹೀಗೆ ಮಧ್ಯ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಒದಗಿರುವ ತೊಂದರೆಯನ್ನು ಪರಿಗಣಿಸಿ ಸಂಬಂಧಪಟ್ಟವರು ಈ ಕೈ ಸುಪ್ತ ... ಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.

ವರಲಕ್ಷ್ಮಿ ಸಂಗೀತ ಮಂಡಲಿ

ಈ ವರ್ಷ ನಡೆದ ಸಂಗೀತ ಪರೀಕ್ಷೆಯಲ್ಲಿ ರಾಜಧಾನಿಯ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಕೆಲವು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ತಿರುವಾಂಕೂರಿನಲ್ಲಿ ಪೊಲೀಸ್ ರಾಜ್ಯ

ತಿರುವಾಂಕೂರು ಸ್ವತಂತ್ರವೆಂದು ಘೋಷಿಸಿರುವುದನ್ನು ಅಲ್ಲಿನ ಕಾಂಗ್ರೆಸ್ಸು ಪ್ರತಿಭಟಿಸಿ ಅದು ಭಾರತ ಯೂನಿಯನ್ನಿನಲ್ಲೇ ಸೇರಬೇಕೆಂದು ಸಾರುತ್ತಿರುವುದರಿಂದ ಅಲ್ಲಿನ ದಿವಾನರಾದ ಸರ್ ಸಿ. ಪಿ. ಯವರು ಕಾಂಗ್ರೆಸ್ಸಿನವರ ಮೇಲೆ ಘೋರ ದಬ್ಬಾಳಿಕೆಯನ್ನು ನಡೆಸುತ್ತಿರುವರೆಂದು ತಿರುವಾಂಕೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಪಟ್ಟಂ ತಾನು ಪಿಳ್ಳೆಯವರು ಹೇಳಿರುವರು. ಸಭೆಗಳನ್ನು ಪ್ರತಿಬಂಧಿಸಲಾಗಿದೆ; ಪೊಲೀಸರ ನೇತೃತ್ವದಲ್ಲಿ ಗೂಂಡಾ ತಂಡವೊಂದನ್ನು ಸಿದ್ಧಗೊಳಿಸಿ ಬಹಿರಂಗ ಸಭೆಗಳ ಮೇಲೆ ಅವರಿಂದ ಧಾಳಿ ನಡೆಸಲಾಗುತ್ತಿದೆ. ಅವರು ಎಷ್ಟೇ ಹುಚ್ಚೆದ್ದಾರೂ ಸರ್ಕಾರದ ನೆಟ್ಟಿಂದ ರಕ್ಷಣ ಸೌಕರ್ಯವನ್ನು ಪಡೆಯಲಾಗದು. ಪುಂಡರು ನಗರಗಳಲ್ಲಿ ಸ್ಟೇಟ್ ಕಾಂಗ್ರೆಸ್ಸಿನವರ ಮೇಲೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿದೆ. ದೊಡ್ಡ ದೊಡ್ಡ ಚಾಕುಗಳು, ಭರ್ಜಿಗಳು ಮುಂತಾದ ಕರ್ರ್ತವಾದ ಆಯುಧಗಳನ್ನು ಬಳಸಲಾಗಿದೆ. ಈ ಪುಂಡರು ಕಾಂಗ್ರೆಸ್ಸಿನವರ ಪ್ರಾಣ ಹರಣ ಮಾಡಲೂ ಸಿದ್ಧರಾಗಿರುವರು. ತಿರುವಾಂಕೂರು ಕಾಲೇಜ್ ಅಧ್ಯಕ್ಷರಾಗಿದ್ದ ಮಿ॥ ಕೆ ಎ ವ್ಯವಸ್ಥಾಪಕರು ಪುಂಡರಿಂದ ಇರಿಯಲ್ಪಟ್ಟಿರುವರು. ಎಂದೂ ಸಹ ಶ್ರೀ॥ ಪಿಳ್ಳೆಯವರು ನುಡಿದಿರುವರು.

ಮತ್ತೆ ಯುದ್ಧವೇ?

ಈಗಿರುವ ಪ್ರಪಂಚದ ಮತ್ತು ಕೈಗಾರಿಕೆಗಳ ಬಿಕ್ಕಟ್ಟು ನಿವಾರಣೆಯಾಗದೆ ಹೋದರೆ ಮತ್ತೆ ಎರಡು ಮಹಾಯುದ್ಧಗಳು ಅನಿವಾರ್ಯ, ಎಂದು ಅಮೇರಿಕಾ ಯುನೈಟೆಡ್ ಸ್ಟೇಟ್ಸಿನ ಆಹಾರ ಮತ್ತು ಕೈಗಾರಿಕೆಗಳ ಡೈರೆಕ್ಟರ್ ಜನರಲ್ಲಾದ ಪ್ಲರ್ ಜೇಮ್ಸ್ ಅವರು ತಿಳಿಸಿರುವರು.

ನೌಖಾಲಿಗೆ ಮತ್ತೆ ಗಾಂಧೀಜಿ

ಕೋಮುವಾರು ದುರಂತಕ್ಕೀಡಾಗಿ ಇನ್ನೂ ತೊಂದರೆಯಿಂದ ಪರಿತಪಿಸುತ್ತಿರುವವರ ನೆರವಿಗಾಗಿ ಈ ತಿಂಗಳ ಮಧ್ಯದಲ್ಲೇ ಮತ್ತೆ ನೌಖಾಲಿಗೆ ತೆರಳಬೇಕೆಂದಿರುವುದಾಗಿ ಮಹಾತ್ಮ ಗಾಂಧಿಯವರು ತಿಳಿಸಿರುವರು.

ಭೇಟಿ

ಚಾಮರಾಜನಗರದ ತಾ॥ ಮಲೆಯೂರು ಗುರುಸ್ವಾಮಿ ಶ್ರೀ ಬಸವಾರಾಧ್ಯ ಸ್ವಾಮಿಗಳಿಗೆ ಶ್ರೀಮನ್ಮಹಾರಾಜರವರು ಈ ದಿನ ಭೇಟಿಯನ್ನು ದಯಪಾಲಿಸಿದರೆಂದು ತಿಳಿದುಬಂದಿದೆ.

ಯೂನಿಯನ್ ಸಚಿವರು ಮತ್ತು ಗೌರ್ನರ್‌ಗಳು

ಶ್ರೀ॥ ಜೈ ಪ್ರಕಾಶ್ ನಾರಾಯಣ್, ಡಾಕ್ಟರ್ ರಾಮ ಮನೋಹರ ಲೋಹಿಯಾ, ಶ್ರೀ॥ ಮುನಿಸ್ವಾಮಿ ಪಿಳ್ಳೆ, ರಾಜಕುಮಾರಿ ಅಮೃತ ಕೌರ್ ರವರುಗಳನ್ನ ಭಾರತ ಯೂನಿಯನ್ ಮಂತ್ರಿಮಂಡಳದ ಸದಸ್ಯರುಗಳನ್ನಾಗಿ ಸೇರಿಸಿಕೊಳ್ಳಲಾಗುವುದೆಂದು ವರದಿಯಾಗಿದೆ.

ಆಗಸ್ಟ್ ೧೫ ರ ನಂತರ ಸರ್ ಗೋಪಾಲಸ್ವಾಮಿ ಅಯ್ಯಂಗಾರ್, ಡಾ॥ ಅಂಬೇಡ್ಕರ್, ಸರ್ ಬಿ ಎಲ್. ರಾವ್ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಇವರುಗಳನ್ನು ಪ್ರಾಂತಗಳ ಗವರ್ನರುಗಳಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ.

ರೈಲು ನದಿಗೆ ಬಿತ್ತು

ಚೀನಾ ದೇಶದ ಯಾಂಗ್ಚೆ ಬಳಿಯ ಪೂರ್ವ ನದಿಯ ಸೇತುವೆಯನ್ನು ದಾಟುತ್ತಿದ್ದ ರೈಲು ಕಳೆದ ಗುರುವಾರ ಕಂಬಿ ತಪ್ಪಿ ನದಿಗೆ ಬಿದ್ದುದರಿಂದ ಅದರಲ್ಲಿದ್ದ ನಾನೂರು ಜನ ಪ್ರಯಾಣಿಕರ ಪೈಕಿ ೨೦೦ ಜನರು ನೀರಿನಲ್ಲಿ ಮುಳುಗಿ ಮಡಿದರೆಂದೂ ಉಳಿದವರನ್ನು ಗ್ರಾಮಸ್ಥರು ರಕ್ಷಿಸಿದರೆಂದೂ ವರದಿಯಾಗಿದೆ.

ಆಂಗ್ಲ ಭಾಷಾ ಮಾಧ್ಯಮಕ್ಕೆ ಒತ್ತಾಯವೇ?

ಸ್ವಂ ವ] ಶ್ರೀರಂಗಪಟ್ಟಣ ೯

ಇಲ್ಲಿನ ಪ್ರೌಢ ವಿದ್ಯಾಶಾಲೆಯ ಪ್ರಥಮ ವರ್ಗದಲ್ಲಿ ಸುಮಾರು ೬೫-೭೦ ಮಂದಿ ವಿದ್ಯಾರ್ಥಿಗಳಿದ್ದಾರೆ. ಅವರ ಪೈಕಿ ಹಲವರು ತಮಗೆ ಕನ್ನಡ ಮಾಧ್ಯಮದಲ್ಲಿಯೇ ಪಾಠಗಳನ್ನು ಹೇಳಿಕೊಡಬೇಕೆಂದು ಕೋರಿದ್ದಾರೆಂದೂ, ಆದರೆ ಮುಖ್ಯೋಪಾಧ್ಯಾಯರು ಆ ರೀತಿ ಇಂಗ್ಲಿಷ್ ಮತ್ತು ಕನ್ನಡವೆಂದು ವಿಂಗಡಿಸಲು ಅವಕಾಶವಿಲ್ಲವೆಂದೂ, ಎಲ್ಲ ವಿದ್ಯಾರ್ಥಿಗಳೂ ಇಂಗ್ಲಿಷ್ ಮಾಧ್ಯಮದಲ್ಲೇ ಅಭ್ಯಾಸ ಮಾಡಬೇಕೆಂದು ಒತ್ತಾಯಪಡಿಸುತ್ತಿರುವರೆಂದೂ, ತಿಳಿದುಬಂದಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ಕೂಡಲೇ ಗಮನ ಕೊಟ್ಟು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕಾಗಿದೆ.

ಪತ್ರಿಕಾ ಸಮ್ಮೇಳನ

ಸ್ವಂ. ವ] ಚಿಕ್ಕಮಗಳೂರು ೧೧

ಇಲ್ಲಿನ ಪುರ ಸಭಾಧ್ಯಕ್ಷರಾದ ಶ್ರೀ॥ ಅಣ್ಣಾಸ್ವಾಮಿ ಶೆಟ್ಟರು ಜಿಲ್ಲಾ ಪತ್ರಿಕೋದ್ಯೋಗಿಗಳ ಸಮ್ಮೇಳನವನ್ನು ಕರೆದು ನಗರದ ಏಳಿಗೆಗೆ ಬೇಕಾದ ಸಲಹೆಗಳನ್ನು ಕುರಿತು ಸಮಾಲೋಚನೆ ನಡೆಸಿದರು.

ಮೈಸೂರು ೧೩.

ಶ್ರೀ॥ ಎ ಆ ಶ್ರೀನಿವಾಸ ಮೊದಲಿಯಾರರು ತಮ್ಮ ಸಹೋದರರೂ, ರಾಜಧಾನಿಯ ಆಕಾಶವಾಣಿಯ ಅಸಿಸ್ಟೆಂಟ್ ಡೈರೆಕ್ಟರರೂ ಆದ ಶ್ರೀ ಎಂ ಎ ಸತೀಶ್ ರವರಿಗೆ ಸಿವಿಲ್ ಇಂಜನಿಯರ್ ಶ್ರೀ ಸುಂದರರಾಜ ಮೊದಲಿಯಾರರ ಕುಮಾರಿ ಸೌ॥ ಪದ್ಮಾವತಿ ಅಮ್ಮಾಳ್ ರವರನ್ನು ತಂದುಕೊಂಡು ಕಳೆದ ಗುರುವಾರ ೧೦ ಜೇವರ ವಿವಾಹ ನಲ್ಲಿಯೂ,

ಚಿಕ್ಕನಾಯ್ಕನಹಳ್ಳಿಯ ಡಾ॥ ಭರತ್ ಓ ಎನ್ ರಂಗಯ್ಯಂಗಾರ್‌ರವರು ತಮ್ಮ ಸಹೋದರರಾದ ಚಿ॥ ಬಿ ಎನ್ ಸಾಧರಾಂಗಧಯವರಿಗೆ ರಾಮಾಪುರದ ಲೇಟ್ ಡಾ॥ ಶ್ರೀನಿವಾಸಯ್ಯಂಗಾರ್ಯರ ಕುಮಾರಿ ಸೌ॥ ಸುಭದ್ರಮ್ಮಾಳ್ ರವರನ್ನು ತಂದು ಕೊಂಡು ಕಳೆದ ಗುರುವಾರ ಮೈಸೂರಿನಲ್ಲಿಯೂ

ಆಭಿಲಯಂ ಲೇಟಾ ಗೌಡ ಪುತ್ರರಾದ ಶ್ರೀ ಶ್ರೀನಿವಾಸ ದೇಶಿಕಾಚಾರ್ಯರು ತಮ್ಮ ಸ್ತ್ರೀಯ ಕುಮಾರಿ ಸೌ॥ ಸರೋಜಮ್ಮನವನ್ನು ಮೈಸೂರಿನ ನಾವೆಲ್ಪಾಕಂ ಶ್ರೀ ಶ್ರೀನಿವಾಸಾಚಾರ್ಯರ ಸಹೋದರರಾದ ಶ್ರೀ ಶೇಷಾದ್ರಿಯಯ್ಯಂಗಾರ್ಯರಿಗೆ ಕೊಟ್ಟು ಕಳೆದ ಗುರುವಾರ ಮತ್ತು ತಮ್ಮ ಚತುರ್ಥ ಕುಮಾರಿ ಸೌ॥ ವಿಜಯಲಕ್ಷ್ಮಮ್ಮನವನ್ನು ಶಿಲಹಾರು ವೀರರಾಘವಾಚಾರ್ಯರ ಕುಮಾರ ಚಿ॥ ಶಠಕೋಪ ರಂಗಾಚಾರ್ಯರಿಗೆ ಕೊಟ್ಟು ಮೊನ್ನೆ ಮೈಸೂರಿನಲ್ಲಿಯೂ, ವಿವಾಹಗಳನ್ನು ನೆರವೇರಿಸಿದರು.

ಯಕ್ಷಗಾನ

ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ನಾಳೆ ರಾತ್ರಿ ೯ ಘಂಟೆಗೆ ಶ್ರೀ ಪರಮ ಹಂಸರಿಂದ ಶ್ರೀ ರಾಮ ಪಟ್ಟಾಭಿಷೇಕ ಯಕ್ಷಗಾನ ಕಲಾ ಮಂಡಲಿಯವರಿಂದ ರಾಜಸೂಯ ಎಂಬ ಕಥೆಯು ಪ್ರಸಂಗ ರೂಪದಲ್ಲಿ ನಡೆಯುತ್ತದೆ.

ಪ್ರೆಸ್ ಕೆಲಸಗಾರರ ಸಂಘ

ಮೈಸೂರು ಗವರ್ನಮೆಂಟ್ ಬ್ರಾಂಚ್ ಪ್ರೆಸ್ ಕೆಲಸಗಾರರ ಸಂಘದ ಆರಂಭೋತ್ಸವವನ್ನು ಗೃಹ ಶಾಖಾ ಮಂತ್ರಿಗಳಾದ ರಾಜಸೇವಾ ಪ್ರಸಕ್ತ ಎಂ ಶೇಷಾದ್ರಿಯವರು ನೆರವೇರಿಸಿದರು. ಆಹ್ವಾನಾನಂತರ ಪ್ರಾರ್ಥನೆಯೊಡನೆ ಸಭೆಯು ಆರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ॥ ಲೋಕನಾಥರವರು ವರದಿಯನ್ನು ಓದಿ ಒಪ್ಪಿಸಿದರು. ಅಧ್ಯಕ್ಷರು ಕೆಲಸಗಾರರಿಗೆ ಒತ್ತೋಪದೇಶ ಮಾಡಿ ಅವರು ಶಿಸ್ತಿನಿಂದಲೂ, ಶ್ರದ್ಧೆಯಿಂದಲೂ ಕೆಲಸ ಮಾಡಬೇಕೆಂದೂ, ಅವರ ಹಿತ ಚಿಂತನೆಗೆ ಸರ್ಕಾರದವರು ಸರಿಯಾದ ಗಮನವನ್ನು ಕೊಡುವರೆಂದೂ ತಿಳಿಸಿದರು.

ಹೈದರಾಬಾದಿಗೆ ೬೦೦೦ ಬಂದೂಕಗಳು

ಸಂಸ್ಥಾನದ ಪೊಲೀಸರ ಉಪಯೋಗಕ್ಕೆಂದು ಬೇಕೆಂಬ ಕಾರಣದ ಮೇಲೆ ಹೈದರಾಬಾದ್ ಸಂಸ್ಥಾನವು ಭಾರತ ರಕ್ಷಣಾ ಶಾಖೆಯಿಂದ ೬ ಸಹಸ್ರ ಬಂದೂಕಗಳನ್ನು ಕೊಂಡುಕೊಳ್ಳಲು ಮಾತುಕತೆ ನಡೆಸುತ್ತಿದೆ. ನಿಜಾಮರು ಭಾರತ ಯೂನಿಯನ್ನಿಗೆ ಸೇರಿಕೊಳ್ಳಲು ... ರಾಜ್ಯದ ಪ್ರಜೆಗಳನ್ನು ... ಸ್ಥಿತಿಯಲ್ಲಿ ... ಸಂಗ್ರಹಿಸುವುದು ... ರಾಜ್ಯದ ಪ್ರಜಾ ಚಳವಳಿಗಳಲ್ಲಿ ಸಾಕಷ್ಟು ಶಂಕೆಯನ್ನುಂಟುಮಾಡಿದೆ.

ರಥೋತ್ಸವ

ಸ್ವಂ. ವ.] ಚಾಮರಾಜನಗರ ೭

ಇಲ್ಲಿನ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವವು ೪ ನೇ ತಾ॥ ನಡೆಯಿತು. ನಾಡೂ ದೇಶದವರು ಬಂದು ಸೇರಿಕೆಯುವ ಪದ್ಧತಿಯಂತೆ ಈ ಸಾರಿ ನಡೆಯದೆ ಬೇ ಸಾಮಾನ್ಯವಾಗಿ ಅಲಂಕೃತ ರಥವು ಅರ್ಧ ದಾರಿಯಲ್ಲಿ ನಿಲ್ಲಿಸಲ್ಪಟ್ಟಿತು ಸುಮಾರು ಒಂದು ಘಂಟೆಯಾದ ನಂತರ ಸಮಾಧಾನಕ್ಕೆ ಬಂದು ರಥವನ್ನು ಮುಂದುವರಿಸಲಾಯಿತು

ಹೈ ಸ್ಕೂಲ್ ಬೇಕು

ಸ್ವಂ. ವ.] ಯಳಂದೂರು ೧೦

ಇಲ್ಲಿಂದ ಮೈಸೂರಿಗೆ ವ್ಯಾಸಂಗಕ್ಕಾಗಿ ಹೋಗಿರುವ ವಿದ್ಯಾರ್ಥಿಗಳಿಗೆ ಅಲ್ಲಿನ ಪ್ರೌಢಶಾಲೆಯಲ್ಲಿ ಜಾಗ ಸಿಕ್ಕದೆಯೂ, ವಸತಿಗೆ ಅನುಕೂಲವಾದ ಮನೆಗಳು ದೊರೆಯದೆಯೂ ಅನೇಕರು ವ್ಯಾಸಂಗವನ್ನು ನಿಲ್ಲಿಸಿ ಗ್ರಾಮಕ್ಕೆ ಹಿಂದಿರುಗಿರುತ್ತಾರೆ ಸರ್ಕಾರದವರು ಇಲ್ಲಿ ಹೈಸ್ಕೂಲೊಂದನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕಾಗಿದೆ

ನೋಟೀಸ್

ಮೈಸೂರ ಸಿಟಿ ಕಲ್ಲೇ ಮೊಹಲ್ಲಾ ಸಿಲ್ಕ್ ಫ್ಯಾಕ್ಟರಿ ಬಾಜುವಿನಲ್ಲಿ ಡಿ. ನಂ ೧೬೨೦ ರಲ್ಲಿ ವಾಸವಾಗಿರುವ ಚಿಟ್ಟಿಬಾಬು ಇವರ ಮಕ್ಕಳು (೧) ಪುಟ್ಟಬಾಬು (೨) ಚಿಟ್ಟಿಬಾಬು ಇವರುಗಳು ತಿಳಿಸುವುದೇನೆಂದರೆ:—

ಮೇಲ್ಕಂಡ ಪುಟ್ಟಬಾಬುರವರಿಗೆ ಮೇಲ್ಕಂಡ ಚಿನ್ನಪುಟ್ಟಬಾಬು ಮತ್ತು ಪುಟ್ಟಬಾಬು ಇವರಲ್ಲದೆ ಇವರುಗಳ ಅಣ್ಣ ಶಾಮರಾವ್ ಉರುಫ್ ಪುಟ್ಟಸ್ವಾಮಿ ಬಾಬು ದೊಡ್ಡವರಾಗಿದ್ದದ್ದರಿಂದ ಇವರೇ ಗೃಹಕೃತ್ಯದ ಎಲ್ಲಾ ವಿಶಿಷ್ಟ ಆಡಳಿತಗಳನ್ನು ನಡೆಸುತ್ತಿದ್ದಾಗ್ಯೆ ಗೃಹಕೃತ್ಯದ ಎಲ್ಲಾ ವಹಿವಾಟುಗಳನ್ನೂ ತಮ್ಮ ವಶಕ್ಕೇ ಮಾಡಿಕೊಂಡು ತನ್ನ ತಂದೆಗೂ ಮತ್ತು ಮೇಲ್ಕಂಡ ಸಹೋದರರುಗಳಿಗೂ ಮೋಸಮಾಡಲು ಉದ್ದೇಶಮಾಡಿ ತಾವು ಬೇರೆ ಹೋಗುವ ನೆಪಮಾಡಿಕೊಂಡು ಪಾಲು ಸಹ ಕೊಡದೆ ಹೋದರೆ ಪ ಇದುತ್ತ ಮುಂದೆ ಮೇಲ್ಕಂಡ ಮನೆಯನ್ನೂ ಇತರೆ ಆಸ್ತಿಯನ್ನೂ ಪರಭಾರೆ ಮಾಡಲು ಪ್ರಯತ್ನ ಮಾಡಿರುತ್ತಾರೆ ಆದ್ದರಿಂದ ಒಟ್ಟು ಕುಟುಂಬ ಜಮೀನಿನಲ್ಲಿರುವ ಸೊತ್ತುಗಳನ್ನು ಮೇಲ್ಕಂಡವರ ಅನುಮತಿಯಿಲ್ಲದೆ ಇತರರು ... ಅದು ... ಎಲ್ಲಾ ... ಗುರಿಯಾಗಬೇಕಾಗುತ್ತದೆಂತಲೂ ಈ ಮೂಲಕ ತಿಳಿಸಿದೆ

ಚಿನ್ನಪುಟ್ಟಬಾಬು,
ಪುಟ್ಟಬಾಬು,
ಚಿಟ್ಟಿಬಾಬು

Edited, printed and published by A. ... Nagarajan at the Sadhvi Press D. Subbaiah Road, Mysore

೫೭೫ ಉಪಾಧ್ಯಾಯರ ವಜಾ

ಹೆಚ್ಚಿನ ಸಂಬಳ ಮತ್ತು ತುಟ್ಟಿ ಭತ್ಯಗಳನ್ನು ಕೊಡಬೇಕೆಂಬ ಕಾರಣದ ಮೇಲೆ ಕಳೆದ ೧೫ ದಿವಗಳಿಂದ ಕೆಲಸಕ್ಕೆ ಹೋಗದೆ ಮಧುರೆ ಪೌರ ಸಭೆಯ ೫೭೫ ಜನ ಉಪಾಧ್ಯಾಯರುಗಳು ಮುಷ್ಕರ ಹೂಡಿದ್ದುದಕ್ಕಾಗಿ ಅವರುಗಳನ್ನು ವಜಾ ಮಾಡಲಾಗಿದೆಯೆಂದು ಗೊತ್ತಾಗಿದೆ ಅವರಲ್ಲಿ ೨೦೦ ಮಂದಿ ಮಹಿಳೆಯರೂ ಇರುವರು

ಪ್ರಯಾಣಿಕರಿಗೆ ತೊಂದರೆ

ನಾಗಮಂಗಲ ೧೦

ಇಲ್ಲಿಂದ ಸಾಲಿಗ್ರಾಮಕ್ಕೆ ಹೋಗತಕ್ಕ ಬಸ್ಸಿನ ಮಾರ್ಗದಲ್ಲಿ ಮರಗಳು ಬೆಳೆದು ಬಸ್ಸಿನ ಮೇಲ್ಭಾಗದಲ್ಲಿರುವ ಸಾಮಾನುಗಳು ಕೆಳಗಡೆಗೆ ತಳ್ಳಲ್ಪಟ್ಟು ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿವೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದಕ್ಕೆ ಗಮನಕೊಡಬೇಕಾಗಿದೆ

For Spectacles
Dr. K. Murugesh
D (pt
(K M Mudaliar)
Dentist and Optician,
Old Mysore Bank Buildings
(Upstairs)
Sayaji Rao Road, Mysore

ರಾಜಕಮಲ್
ತಾ॥ ೧೧-೭-೪೭ ರಿಂದ
೩ ನೇ ವಾರ
ಭೈರಾಂಖಾನ್
—: ಭೂಮಿಕೆ :—
ಮಹಜಾಬ್, ಜಾಗೀರ್ದಾರ್

From 9th July 1947 for
6 days daily at 10-30 a.m
'Strike Me Pink'
With Eddie Cantor

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆ ನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧವೆಂದು ಎಂಭತ್ತೈದು ವರ್ಷಗಳಿಂದ ಪ್ರಖ್ಯಾತವಾದ ಈ ಭಸ್ಮದ ಮಹತ್ವವೇನು? ಎಲ್ಲೆಲ್ಲಿ ಪ್ರಚಾರಕ್ಕೆ ಬಂದಿದೆ? ಎಂಥೆಂಥಾ ವೈದ್ಯರ ಪ್ರಶಂಸೆ ಪಡೆದಿದೆ? ಇತ್ಯಾದಿ ವಿಷಯಗಳ ಗಿರತಕ್ಕ ಹನ್ನೆರಡು ಪುಟಗಳ ಕ್ಯಾಟ್ಲಾಗ್ ತಾವು ನೋಡಲೇ ಬೇಕಾದ್ದು ಒಂದಾಣೆ ಸ್ಟಾಂಪ್ ರವಾನೆ

ಎ ರಾಮಸ್ವಾಮಿ ಅಯ್ಯಂಗ್,
ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಬಳೆ, ಯಳಂದೂರ್ ಪೋಸ್ಟ್

ವುಡ್‌ಲ್ಯಾಂಡ್ಸ್
೧೨-7-47 ರಿಂದ
ಕೀರ್ತಿರದ ೧೧ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಇರುವುದು)
ನಾವು ಇಬ್ಬರು
ಏ (ತಮಿಳು)
—: ಪಾತ್ರ :—
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮೀ, ಟಿ ಆರ್.
ರಾಮಚಂದ್ರ ಮುಂತಾದವರು.

ಅಪೇರಾ ಟಾಕೀಸ್, ಮೈಸೂರು
೧೨-೭-೪೭ ರಿಂದ ೧೬ ನೇ ವಾರ
ರಾಜಕುಮಾರಿ

ಸಾಧ್ವಿ
ಯು
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

Distributors:-



ಇಂಡಿಯಾ ಸೂಪರ್
ಟಾಂಗಾ ಟೈರು
ಬಹಳ ಕಾಲ ಬಾಳಿಕೆ ಬರುವುದು ಮತ್ತು ಸ್ವಾಭಾವಿಕವಾದ ರಬ್ಬರಿನಿಂದ ತಯಾರಿಸಲ್ಪಟ್ಟಿದೆ ... ಒಂದು ಸಾರಿ ಉಪಯೋಗಿಸಿ ನೋಡಿ
—: ಸಿಕ್ಕುವ ಸ್ಥಳ :—
ಸಿ ಬಿ. ಎಂ ಚಂದ್ರಯ್ಯ,
ಅಶೋಕಾ ರಸ್ತೆ, : : ಮೈಸೂರು

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು ... ಕೊಟ್ಟಿದೆ ನಿಮಗೂ ... ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಪ್ರೋ ನಂ. 392 WEEKLY EDITION ಅಂಚೆಯ ಪತ್ರಿಕೆ 6 ಕಾಸು

ಸಂಪುಟ ೨೮] ಬೆಂಗಳೂರು ೧೪—೨—೪೭ [ಸಂಚಿಕೆ ೨೮

ರಾಜ್ಯಾಂಗ ಸಭೆಗೆ ಹೈದರಾಬಾದು ಸೇರಬಹುದು

ವಾರ ಭವಿಷ್ಯ

(ಶ್ರೀ ಚಿತ್ಸ್ವರೂಪಾನಂದ ಸ್ವಾಮಿಗಳಿಂದ)

ತಾರೀಗಳು ೧-೨-೪೭ರಿಂದ ೨೧-೨-೪೭ರ ವರೆಗೆ

ಮೇಷ—ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಮನ್ನಣೆ, ತಾರೀಗಳು, ೧೮, ಮಿತ್ರ ದರ್ಶನ, ಸನ್ಮಾನ, ಪ್ರವಾಸ

ವೃಷಭ—ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ, ಮಿತ್ರರಿಂದ ಸಹಾಯ, ತಾರೀಗಳು, ೧೯, ೨೦ ಲಾಭ, ಸಂತೋಷ

ಮಿಥುನ—ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಆರ್ಥಿಕ ವೆಚ್ಚ ಅಧಿಕ, ವ್ಯಾಪಾರದಲ್ಲಿ ನಷ್ಟ, ವಾಹನದಿಂದ ಅಪಘಾತ, ಉದ್ಯೋಗ, ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ತಾರೀ ೧೯, ೨೦ ಲಾಭ, ಶಾಂತಿ

ಕಟಕ—ಆರೋಗ್ಯ ಸಾಧಾರಣ, ಧನಲಾಭ, ಉತ್ತಮ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ಮಂಗಳ ಕಾರ್ಯಗಳಿಗಾಗಿ ಬಂಧುಗಳ ಆಗಮನ, ತಾರೀ ೧೮, ೨೦ ಲಾಭ, ಪ್ರವಾಸ, ಶಾಂತಿ.

ಸಿಂಹ—ವ್ಯಕ್ತಿಗತ ಸ್ಥಿತಿ ಉತ್ತಮ, ಆರ್ಥಿಕ ಪರಿಸ್ಥಿತಿ ಸಾಧಾರಣ, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಪ್ರಗತಿ, ತಾರೀ ೧೯, ೨೭ ಪ್ರವಾಸ, ಬಂಧು ದರ್ಶನ

ಕನ್ಯಾ—ಆರೋಗ್ಯ ಚೆನ್ನಾಗಿರುತ್ತದೆ, ವ್ಯಾಪಾರ, ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ಉದ್ಯೋಗದಲ್ಲಿ ಅಧಿಕಾರಿಗಳಿಂದ ಸನ್ಮಾನ, ಮಂಗಳಕಾರ್ಯಗಳಿಗಾಗಿ ಬಂಧುಗಳ ಆಗಮನ, ತಾರೀ ೧೯, ೧೭, ೧೯ ಪ್ರಗತಿ, ಮಿತ್ರ ಭೇಟಿ

ತುಲಾ—ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ವ್ಯಾಪಾರಾದಿಗಳಲ್ಲಿ ಶತ್ರುಗಳ ಕಿರುಕುಳ ವಿಪರೀತವಾಗುವುದು, ಪ್ರವಾಸದಿಂದ ಅಪಘಾತವಾಗುವುದು, ಆರ್ಥಿಕ ಸ್ಥಿತಿ ಬಹಳ ಕಿರುಕುಳದಾಯಕವಾಗಿರುವುದು, ತಾರೀ ೧೯, ೨೦ ಶಾಂತಿ, ಲಾಭ.

ವೃಶ್ಚಿಕ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರದಲ್ಲಿ ಮನ್ನಣೆ, ಮಿತ್ರರಿಂದ ಸಹಾಯ, ಅಧಿಕಾರಿ ವರ್ಗದವರಿಂದ ಸತ್ಕಾರ, ತಾರೀ ೧೯, ೧೮ ಲಾಭ, ಬಂಧು ದರ್ಶನ.

ಧನುಸ್ಸು—ಆರೋಗ್ಯ ಚೆನ್ನಾಗಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಉತ್ತಮ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿಗಳಿಂದ ಮಿತ್ರರಿಂದಲೂ ಸನ್ಮಾನ, ತಾರೀ ೧೯, ೨೦ ಲಾಭ, ಪ್ರವಾಸ.

ಮಕರ—ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಕಡಿಮೆ, ಕೌಟುಂಬಿಕ ಆರೋಗ್ಯ ಕೆಡುತ್ತದೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಶತ್ರುಗಳಿಂದ ತೊಂದರೆ ಕಿರುಕುಳ, ತಾರೀ ೧೯, ೨೦ ಸನ್ಮಾನ, ನಷ್ಟ

ಕುಂಭ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ಉದ್ಯೋಗ, ವ್ಯವಹಾರ ಮತ್ತು ವ್ಯಾಪಾರಗಳಲ್ಲಿ ನಷ್ಟ, ಮಿತ್ರರಿಂದ ಸಹಾಯ, ಬಂಧುಗಳಿಂದ ಕಿರುಕುಳ, ತಾರೀ ೧೯, ೧೯ ಲಾಭ, ಶಾಂತಿ

ಮೀನ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾರೀ ೧೯, ೧೮, ೨೦ ಲಾಭ, ಶಾಂತಿ.

ವಿಮಾನ ರೂಪಲಿಗತಿಯನ್ನು ಎದುರಿಸಲಾಗದು

ಮಹಿಳಾ ಸಂಘದ ಸಭಾಧ್ಯಕ್ಷರ ಸೂಚನೆ

ಮೈಸೂರು ೧೪

ವಾಯುಪಡೆಯವರು ನಡೆಸಿದ ಆರೋಗ್ಯ ಮತ್ತು ಕಲ್ಯಾಣ ದರ್ಶನದಲ್ಲಿ ವಿಮಾನದಿಂದ ವಿಷವಾಯು ಹಾಕಿ ನಿಲ್ಲಿಸುವುದನ್ನು ತೋರಿಸಲಾಯಿತು. ಅಧ್ಯಕ್ಷರಾದ ಶ್ರೀ ... ಅವರು ವಿಮಾನಗಳ ಮತ್ತು ಅವುಗಳ ಪ್ರಯೋಜನಗಳನ್ನು ಹಿಂದಿನ ಕಾಲದ ಸ್ಥಿತಿಯನ್ನು ಪ್ರಶಂಸಿಸಿದರು. ಇತ್ತೀಚೆಗೆ ಅವರ ವಿರೋಧಿಗಳು ... [illegible] ... ಸಂಘದ ವತಿಯಿಂದ ... ಆವಿಷ್ಕಾರದ ಸ್ಥಿತಿಯನ್ನು ವಿವರಿಸಿದರು. ... ಸಂಘವು ನಡೆಯಿತು.

ಶ್ರೀ ಜಗದಂಬಾ ... ಸ್ವಾಮಿಯವರ ... ಸಂದರ್ಭದಲ್ಲಿ ಮೈಸೂರಿನ ... ಭಜನೆ, ಕೀರ್ತನೆ ... ಶ್ರೀಯವರ ... ಜನರು ಕಿಕ್ಕಿರಿದು ಸೇರಿದ್ದರು.

ಪ್ರದೋಷ ಸಂಗೀತ

ನಾಳೆ ಸಂಜೆ ೭ ಗಂಟೆಗೆ ಪ್ರದೋಷದ ... ಶ್ರೀ ... ಅವರಿಂದ ಸಂಗೀತ ... ಶ್ರೀ ... ಅವರ ... ಮಂದಿರದಲ್ಲಿ ಶ್ರೀ ... ಅವರು ... ಸಾರ್ವಜನಿಕರು ಆಗಮಿಸಬೇಕೆಂದು ಗೋಷ್ಠಿಯವರು ವಿನಂತಿಸಿಕೊಂಡಿದ್ದಾರೆ.

ಅಂತರ ರಾಷ್ಟ್ರೀಯದಲ್ಲಿ ಸಂಸ್ಥಾನಗಳಿಗೆ ಸ್ಥಾನವಿಲ್ಲ

ಬ್ರಿಟಿಷರ ಪರಮಾಧಿಕಾರ ರದ್ದಾದ ನಂತರ ಭಾರತದ ಸಂಸ್ಥಾನಗಳು ಸ್ವತಂತ್ರವಾಗುವುದಿಲ್ಲ. ಅವು ಭಾರತದ ಇತರ ಭಾಗಗಳಿಂದ ಪ್ರತ್ಯೇಕವಾದರೆ ಬದುಕಲಾರವು. ... ಸಂಸ್ಥಾನಗಳು ಸ್ವತಂತ್ರವೆಂದು ಹೇಳಿಕೊಂಡರೂ ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಅವುಗಳಿಗೆ ಸ್ಥಾನವಿಲ್ಲ. ... ಬ್ರಿಟಿಷ್ ಸರ್ಕಾರವು ... ಸಂಸ್ಥಾನಗಳಿಗೆ ಅಂತರ ರಾಷ್ಟ್ರೀಯ ಮನ್ನಣೆ ದೊರೆಯುವುದಿಲ್ಲ. ಆದುದರಿಂದ ಸಂಸ್ಥಾನಗಳು ತಾವು ಸ್ವತಂತ್ರವೆಂಬ ಹಟವನ್ನು ಬಿಟ್ಟು ಭಾರತದ ಒಕ್ಕೂಟದಲ್ಲಿ ಸೇರುವುದು ಒಳ್ಳೆಯದು ಎಂದು ಅವರು ಹೇಳಿದರು.

ರಾಜ್ಯಾಂಗ ಸಭೆಗೆ ಹೈದರಾಬಾದು

ಹೈದರಾಬಾದು ಸಂಸ್ಥಾನವು ರಾಜ್ಯಾಂಗ ಸಭೆಗೆ ಸೇರುವ ಸೂಚನೆಗಳು ಕಂಡುಬರುತ್ತಿವೆ. ... ಸಂಸ್ಥಾನವು ... ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸುವ ವಿಷಯದಲ್ಲಿ ... ಸಂಸ್ಥಾನಗಳ ... ಸೇರಲು ನಿರ್ಧರಿಸಬಹುದೆಂದು ತಿಳಿದುಬಂದಿದೆ.

ಚಿತ್ರಪ್ರದರ್ಶನ ರಮಣಾಧಿಗೆ ಗಾಂಧೀಜಿ ಅಭಿಪ್ರಾಯ

... ಬ್ರಿಟಿಷ್ ... ಚಿತ್ರಪ್ರದರ್ಶನ ... ಗಾಂಧೀಜಿಯವರ ... ಅಭಿಪ್ರಾಯವನ್ನು ... ಪಡೆಯಲಾಗಿದೆ.

ಇಂಡೋನೇಷ್ಯದಲ್ಲಿ ಶಾಂತಿ

ಡಚ್ಚರು ಇಂಡೋನೇಷ್ಯದ ಜನರೊಡನೆ ಇಂಡೋನೇಷ್ಯದ ವಿಷಯದಲ್ಲಿ ... ಶಾಂತಿ ಸ್ಥಾಪನೆಗಾಗಿ ... ವಿಶ್ವಸಂಸ್ಥೆಯ ... ಪ್ರಯತ್ನ ... [illegible]

ಯುವಕರ ಸಂಘ

ರಾಜಧಾನಿಯ ... ಯುವಕರ ಸಂಘದ ... ವಾರ್ಷಿಕೋತ್ಸವವು ... ಶ್ರೀ ... ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಘದ ಕಾರ್ಯದರ್ಶಿ ... ವರದಿಯನ್ನು ಓದಿದರು. ... ಭಾಷಣ ಮಾಡಿದರು. ... ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಹರಿಕಥೆ

... ಶ್ರೀ ... ಅವರಿಂದ ... ದೇವಾಲಯದಲ್ಲಿ ... ಗಂಟೆಗೆ ಶ್ರೀ ... ಹರಿಕಥೆ ನಡೆಯುತ್ತದೆ.

ಸಿ. ಬಿ. ರಾಮರಾಯರ ನಿಧನ

ಬೆಂಗಳೂರು ೧೪

ಶ್ರೀ ಸಿ. ಬಿ. ರಾಮರಾಯರು ... ನಿಧನರಾದರು. ... ಅವರು ... ವೈದ್ಯರಾಗಿ ... ಸಾರ್ವಜನಿಕ ಸೇವೆ ... ಮೈಸೂರು ... ಕಾಂಗ್ರೆಸ್ ... ಅಧಿವೇಶನ ... ಸೇರಿ ... ನೆರವಾಗಿದ್ದರು.

ಸಾರ್ವಜನಿಕರ ತಿಳುವಳಿಕೆಗಾಗಿ

ಮೈಸೂರು, ... (ಕೃಷ್ಣ ಬಜಾರ್) ... ಎಸ್. ... ಅಂಡ್ ಸನ್ಸ್ ರವರ

ಮೈಸೂರು ಆಯುರ್ವೇದಿಕ್ ಫಾರ್ಮಸಿ ... ಔಷಧಗಳು ... ದೊರೆಯುತ್ತವೆ ... [illegible]

ಎಸ್. ... ಮೈಸೂರು.

... [illegible]

ಸಾಧ್ವಿ

೧೪-೭-೪೭ ಸೋಮವಾರ

ಘರ್ಷಣೆಗೆ ಆರಂಭವೇ?

ದಿವಾನರಿಗೂ, ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೂ ನಡೆದ ಶ್ರದ್ಧ ಮಾತುಕತೆಗಳು ಮುಕ್ತಾಯವಾದಂತೆ ಭಾವಿಸಬೇಕೆಂದೂ, ಪ್ರಜೆಗಳ ಗುರಿಯನ್ನು ಸಾಧಿಸಲು ಬೇರೆ ಮಾರ್ಗಗಳನ್ನು ಅನುಸರಿಸಬೇಕೆಂದೂ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ನಿರ್ಧರಿಸಿರುವುದಷ್ಟೆ. ಮೈಸೂರು ಸಂಸ್ಥಾನವು ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಾಗಿ ನಿಶ್ಚಯಿಸಿದ ಮೇಲೆ ಇಲ್ಲಿನ ರಾಜಕೀಯ ಪಕ್ಷಮಾನಗಳು ಯಾವ ಪರಿಷ್ಕರಣವನ್ನು ಹೊಂದುವುವೆಂದು ಭಾವಿಸಲಾಗಿದ್ದಿತೋ ಅದು ಸರಿಯಲ್ಲವೆಂಬುದು ಇದರಿಂದ ವೇದ್ಯವಾಗುತ್ತದೆ.

ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಡೆಸಬೇಕೆಂದು ಸುಭಾಷ್ ನಗರದಲ್ಲಿ ಮೈಸೂರು ಕಾಂಗ್ರೆಸ್ಸು ತೀರ್ಮಾನಿಸಿ ಅದರ ಸಿದ್ಧತೆಗಾಗಿ ಕಾಂಗ್ರೆಸ್ ಅಧ್ಯಕ್ಷರು ಸಂಸ್ಥಾನದಲ್ಲೆಲ್ಲಾ ಪರ್ಯಟನ ಮಾಡಿ ಮಹಾಜನರ ಬೆಂಬಲವನ್ನು ಗಳಿಸಿ ಬಂದ ಮೇಲೆ ಶ್ರೀಮನ್ಮಹಾರಾಜರವರಿಂದ ಬಂದ ಸಂದೇಶದ ಪರಿಣಾಮವಾಗಿ ಅಗ್ಗಿ ಯಾವ ಚಳುವಳಿಯನ್ನೂ ಕೈಗೊಳ್ಳದೆ ಸಂಧಾನದಲ್ಲಿ ಸಹಕರಿಸುವದಾಗಿ ಕಾಂಗ್ರೆಸ್ಸು ನಿಶ್ಚಯಿಸಿತು. ಆನಂತರ ದಿವಾನರು ನಡೆಸಿದ ಮಾತುಕತೆಗಳಿಂದ ಒಂದು ಒಗಟು ಆಶಾಭಾವ ... ಎಲ್ಲರಲ್ಲಿಯೂ ಮೂಡಿ... ದಿವಾನರು ... ಮುಂದುವರೆಯುತ್ತಿದ್ದರೂ, ಅವರು ... ತೃಪ್ತ ಸಮಸ್ಯೆಗಳಿಂದ ಪರಿಣಾಮದಲ್ಲಿ ಉತ್ತಮ ... ಸಾಧನೆಯೇ ಆದೀತೆಂಬ ಅಭಿಪ್ರಾಯವೂ ಮೂಡಿತ್ತು.

ಆದರೆ ಇತ್ತೀಚಿನ ವಿದ್ಯಮಾನಗಳು ಕಾಂಗ್ರೆಸ್ಸಿಗೆ ಅತ್ಯಂತ ಅತೃಪ್ತಿಯನ್ನುಂಟುಮಾಡಿ ಈಗ ಅದು ಮೇಲ್ಕಂಡ ನಿರಾಶಾಭಾವನೆಯನ್ನು ವ್ಯಕ್ತಗೊಳಿಸುವಂತಾಗಿದೆ. ಅಲ್ಲದೆ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ ತನ್ನ ಕಾರ್ಯಸಾಧನೆಯನ್ನು ಮುಂದುವರಿಸಬೇಕೆಂದು ಕಾಂಗ್ರೆಸ್ಸು ಸಂಕಲ್ಪ ಮಾಡುವ ಪರಿಸ್ಥಿತಿಯೂ ಬಂದಿರುತ್ತದೆ. ಇದರಿಂದ ಸಂಸ್ಥಾನದಲ್ಲಿ ಮತ್ತೆ ಘರ್ಷಣೆಗೆ ಆಂಕುರಾರ್ಪಣವಾಗುವ ಸೂಚನೆಗಳು ಕಂಡು ಬರುತ್ತಿವೆ. ಈ ಸಂಘಟನೆಯು ಯಾವ ದೇಶಾಭಿಮಾನಿಗಳಿಗೂ ಸಮಾಧಾನಕರವಾದುದಲ್ಲ.

ಈ ಪ್ರಕರಣದ ಹಿನ್ನೆಲೆಯನ್ನು ಸಾರ್ವಜನಿಕರು ವಿಮರ್ಶಿಸುವುದು ಅಗತ್ಯ. ಮೈಸೂರು ಕಾಂಗ್ರೆಸ್ಸಿನವರು ಹೋರಾಟದ ಅಸ್ತ್ರವನ್ನು ಪ್ರಯೋಗಿಸಲು ಉದ್ಯುಕ್ತರಾದಂತೆಲ್ಲಾ ನಮ್ಮ ಪ್ರಭುತ್ವದವರೂ ಮುಂದೆ ಬಂದು ಘೋಷಣೆಗಳನ್ನೂ, ಪ್ರಕಟನೆಗಳನ್ನೂ ಹೊರಡಿಸಿ ಸ್ವಲ್ಪ ಮಟ್ಟಿನ ಉಪಶಮನವನ್ನು ಮಾಡುತ್ತಾ ಬಂದಿದ್ದಾರೆ. ಆದರೆ ಈಗ ಪರಿಸ್ಥಿತಿಯು ಉಲ್ಬಣಿಸಿರುವಂತಿದೆ. ಇದುವರೆಗೆ ನಡೆದ ಸಂಧಾನಗಳು ಕೇವಲ ಕಾಲಹರಣದ ಪ್ರಸಂಗಗಳೆಂಬ ಕಲ್ಪನೆಯು ಕಾಂಗ್ರೆಸ್ಸಿಗೆ ಬಂದಿರುತ್ತದೆ. ಈ ರೀತಿಯಲ್ಲಿ ಈ ಪ್ರಯತ್ನವು ಪರ್ಯವಸಾನಗೊಂಡಿರುವುದು ಪಶ್ಚಾತ್ತಾಪಕರವಾದ ವಿಷಯ. ಮೇ ೩೦. ಪ್ರಭುಗಳ ಘೋಷಣೆಯಿಂದ ಸಂಸ್ಥಾನದ ರಾಜಕೀಯ ರಂಗದ ಮೇಲೆ ಯಾವ ಪ್ರಭಾವವು ಬೀರಲ್ಪಡುವುದೆಂಬ ಆಶೋತ್ತರವು ಮೂಡಿದ್ದಿತೋ, ಮುಖ್ಯ ರಾಜ್ಯಾಂಗ ಸಭೆಯಲ್ಲಿ ಮೈಸೂರು ಭಾಗವಹಿಸುವುದಾಗಿ ನಿರ್ಧರಿಸಿದುದರಿಂದ ಯಾವ ಸತ್ಪರಿಣಾಮವುಂಟಾಗುವುದೆಂದು ಭಾವಿಸಲಾಗಿದ್ದಿತೋ ಅದು ಈಡೇರದಿರುವುದಕ್ಕಾಗಿ ಸಕಲರೂ ಪಶ್ಚಾತ್ತಾಪ ಪಡಬೇಕಾಗಿದೆ.

ಈಗಲೂ ಕಾಲವು ಮಿಂಚಿಹೋಗಿಲ್ಲ. ಇಡೀ ದೇಶದಲ್ಲೆಲ್ಲಾ ಸ್ವಾತಂತ್ರ್ಯದ ವಾತಾವರಣವು ಕಲ್ಪಿತವಾಗುತ್ತಿರುವಾಗ ನಮ್ಮ ಸಂಸ್ಥಾನದಲ್ಲಿ ಮಾತ್ರ ಅಶಾಂತಿ ಮುತ್ತಿ ಅಸಮಾಧಾನಗಳಿಗೆ ಎಡೆಗೊಡುವುದು ಸರಿಯಲ್ಲ. ಈಗಲೂ ನಮ್ಮ ಪ್ರಭುತ್ವದವರು ಉದಾರ ದರ್ಶನೆಯನ್ನು ಅನುಸರಿಸಿ ಪ್ರಗತಿಪರವಾದ ಸಂಸ್ಥಾನಗಳ ಮಾರ್ಗವನ್ನು ಅವಲಂಬಿಸುವುದು ಲೇಸು.

ಕರಾಚಿಯಲ್ಲಿ ಹಡಗುಗಳ ತಯಾರಿ

ಕರಾಚಿಯಲ್ಲಿ ೫ ಕೋಟಿ ರೂ. ವೆಚ್ಚದಿಂದ ಹಡಗುಗಳ ತಯಾರಿಯ ಏರ್ಪಾಡುಗಳಾಗುತ್ತಿವೆಯೆಂದೂ, ಯೋಜನೆಯು ಕಾರ್ಯಗತವಾಗಲು ೩ ವರ್ಷಗಳು ಬೇಕಾಗುವುದೆಂದೂ ತಿಳಿದುಬಂದಿದೆ. ಅಲ್ಲಿ ೧೫ ಸಾವಿರ ಟನ್ ತೂಕದವರೆಗಿನ ಹಡಗುಗಳನ್ನು ನಿರ್ಮಿಸಲಾಗುವುದು. ಅದಕ್ಕಾಗಿ ಬ್ರಿಟನ್ ನಿಪುಣರ ನೆರವನ್ನೂ ಸಹ ಪಡೆಯಲಾಗಿದೆ.

ಸಂಗೀತ ಸಮ್ಮೇಳನ

ಇದೇ ೨೦ ನೇ ತಾರೀಖಿನಿಂದ ೨೪ ರ ವರೆಗೆ ದಾವಣಗೆರೆಯಲ್ಲಿ ಅಖಿಲ ಮೈಸೂರು ಸಂಸ್ಥಾನದ ಸಂಗೀತ ಉಪಾಧ್ಯಾಯರ ಸಂಘದ ಮಹಾ ಸಮ್ಮೇಳನವು ಆರಂಭವಾಗುವುದು. ವಿದ್ಯಾ ಸಚಿವರಾದ ಡಾ|| ರಾಯರವರು ೨೦ನೇ ತಾ|| ಬೆಳಿಗ್ಗೆ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು. ಮಧ್ಯಾಹ್ನ ಪ್ಯಾಲೆಸ್ಸಿನ ಆಸ್ಥಾನ ವಿದ್ವಾನ್ ವಿ. ವೆಂಕಟಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಜರುಗುವುದು.

ಲಿಯಾಖತ್ ಲೀಗ್ ಅಧ್ಯಕ್ಷರಾಗುವರೇ?

ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ|| ಜಿನ್ನಾರವರು ಪಾಕಿಸ್ಥಾನದ ಗವರ್ನರ್ ಜನರಲ್ಲಾಗುವುದರಿಂದ ಲೀಗ್ ಅಧ್ಯಕ್ಷ ಸ್ಥಾನಕ್ಕೆ ಕಾರ್ಯದರ್ಶಿಗಳಾದ ಮಿ|| ಲಿಯಾಖತ್ ಅಲಿಖಾನರವರು ಆರಿಸಲ್ಪಡುವರೆಂದು ಹೇಳಲಾಗಿದೆ.

೨೨ ಕೋಟಿ ರೂ. ಆದಾಯ ತೆರಿಗೆ

ಜಪಾನ ಚಕ್ರವರ್ತಿ ಹಿರೋಹಿಟೋರವರು ಈ ವರ್ಷ ೨೨ ಕೋಟಿ ರೂ ವರಮಾನ ತೆರಿಗೆಯನ್ನು ಕೊಟ್ಟು ತೆರಿಗೆದಾರರಲ್ಲಿ ಪ್ರಪಂಚದಲ್ಲೇ ಪ್ರಥಮಸ್ಥಾನ ಪಡೆದಿರುವರು.

ಅಪೇರಾ ಟಾಕೀಸ್, ಮೈಸೂರು

೧೨-೭-೪೭ ರಿಂದ ೧೩ ನೇ ವಾರ

ರಾಜಕುಮಾರಿ

ವಾರ್ಧಾ ಸ್ಟೋರ್ಸ್

... ಮಾಧವರಾವ್ ಸರ್ಕಲ್

ಮೈಸೂರು

ನಮ್ಮಲ್ಲಿ ಎಲ್ಲಾ ಸ್ಕೂಲ್ ನ ಪುಸ್ತಕಗಳು ... ಸಿಗುತ್ತವೆ ... ಪುಸ್ತಕಗಳಿಗೆ ... ಕೊಡಲಾಗುತ್ತದೆ

MINOR POEMS

Nett 1-12-0

ರಾಜಕಮಲ್

ತಾ|| ೧೧-೭-೪೭ ರಿಂದ

೩ ನೇ ವಾರ

ಭೈರಾಂಖಾನ್

—: ಭೂಮಿಕೆ :—

ಮೆಹತಾಬ್, ಜಾಗೀರ್ದಾರ್

ವುಡ್‌ಲ್ಯಾಂಡ್ಸ್

12-7-47 ರಿಂದ

ಕಿಕ್ಕಿರಿದ ೧೧ ನೇ ವಾರ

ಪ್ರತಿ ದಿನ ೩ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು (ಕನ್ನಡ)

:: ಪಾತ್ರ ::

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವರು.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ. ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮಯ್ಯ, ಡಿ|| ಬೋರ್ಡ್ ವೈದ್ಯ, ಅರಕಲವಾಡಿ. ಚಾಮರಾಜನಗರ ತಾ||

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆ ನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧಿ. ... ವರ್ಷಗಳಿಂದ ... ಅಭ್ಯುದಯ ಮಹತ್ವವೇನು? ಎಷ್ಟೆಷ್ಟು ... ಒದಗಿದೆ? ಎಂಥೆಂಥ ವೈದ್ಯರ ಪ್ರಶಂಸೆ ಪಡೆದಿದೆ? ಇತ್ಯಾದಿ ವಿಷಯಗಳಿಗೆ ಇದರ ಜತೆಯಲ್ಲಿರುವ ... ಪ್ಯಾಕೆಟ್ಟಿನ್ ... ನೋಡಲೇ ಬೇಕಾದ್ದು. ಒರೆವತಿ? ಬಟ್ಟೆ ರವಾನೆ

ಎ. ರಾಮಸ್ವಾಮಿ ಅಯ್ಯಂಗ್,

ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಬಳೆ, ಯಳಂದೂರ್ ಪೋಸ್ಟ್

ಶ್ರೀ ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಹಲಗೇರಿ ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦ ಘಂಟೆಗೆ

ಸ್ಟೇಷನ್ ಮಾಸ್ಟರ್

ಎಂಬ ಹೊಸ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಚನ್ನಬಸಪ್ಪ, ಪ್ರೊಪ್ರೈಟರ್

ಸಾಧ್ವಿ

ರಾಜಕೀಯ ... ದಿನ ಪತ್ರಿಕೆ

(ಕೇವಲ ... ಕಾಣೆ ಮಾತ್ರ)

Edited, printed and published by A. R. Nagarajan at the Sadhvi Press, D. Subbaiah Road, Mysore

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಮಂಗಳವಾರ ೧೨—೮—೪೭ [ಸಂಚಿಕೆ ೨೮೭

ಆಲ್ಬೇನಿಯಾ-ಗ್ರೀಸ್ ಗಡಿಯಲ್ಲಿ ಕದನ

ತಿರುವಾಂಕೂರಿನಲ್ಲಿ ಪೋಲೀಸರ ಅತ್ಯಾಚಾರ

ತಿರುವನಂತಪುರದ ಮೈದಾನವೊಂದರ ಕಾಂಗ್ರೆಸ್ ಸಂಸ್ಥೆಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ನಡೆಯುತ್ತಿದ್ದಾಗ ಪೋಲೀಸರು ಸಭೆಗೆ ನುಗ್ಗಿ ದಾಂಧಲೆ ನಡೆಸಿದರು, ಲಾಠೀ ಪ್ರಯೋಗ ಮಾಡಿ ಗುಂಡುಗಳನ್ನು ಹಾರಿಸಿ ಸಭೆಯನ್ನು ಚದುರಿಸಿದರೆಂದೂ, ಒಬ್ಬನು ಮರಣ ಹೊಂದಿ ಮೂವರಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ

ಪಾಕಿಸ್ಥಾನಕ್ಕೆ ಸಿಲ್ಹೆಟ್ ಜಿಲ್ಲೆ

ಸಿಲ್ಹೆಟ್ ಜಿಲ್ಲೆಯು ಪೂರ್ವ ಬಂಗಾಳಕ್ಕೆ ಸೇರಬೇಕೇ ಅಥವಾ ಅಸ್ಸಾಂ ಪ್ರಾಂತದಲ್ಲೇ ಇರಬೇಕೇ ಎಂಬ ಬಗ್ಗೆ ನಡೆದ ರೆಫರೆಂಡಮ್ಮಿನಲ್ಲಿ ಬಹುಮತ ಮತದಾರರು ಅದು ಪೂರ್ವ ಬಂಗಾಳಕ್ಕೆ ಸೇರಲು ಓಟುಕೊಟ್ಟಿರುವರೆಂದೂ, ಆದುದರಿಂದ ಅದು ಪಾಕಿಸ್ಥಾನಕ್ಕೆ ಸೇರುವುದಾಗಿಯೂ ವರದಿಯಾಗಿದೆ

ಗಾಂಧೀಜಿಯವರಿಗೆ ಮೇಕೆಗಳು

ಗ್ಲೋಬ್] ಶ್ರೀನಗರ ೧೧

ಮಹಾತ್ಮಾ ಗಾಂಧಿಯವರು ಕಾಶ್ಮೀರಕ್ಕೆ ಭೇಟಿಯಿತ್ತಾಗ ಅವರಿಗೆ ಕಾಣಿಕೆಯಾಗಿ ಕೊಡಲು ನಾಲ್ಕು ಮೇಕೆಗಳನ್ನು ಕೊಡಲು ಅಲ್ಲಿನ ಸ್ವಾಗತ ಸಮಿತಿಯು ನಿರ್ಧರಿಸಿದೆ. ಮಹಾತ್ಮರು ಹಿಂದಿರುಗುವಾಗ ಅವನ್ನು ಅವರಿಗೇ ಕೊಡಲಾಗುವುದು.

ಭಾರತ ಸರಕಾರವು ಬೀರಾರ್ ರಕ್ಷಣೆ ವಹಿಸುವುದು

ಗ್ಲೋಬ್] ದೆಹಲಿ ೧೧

ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ವಿ. ಜಿ. ದೇಶಪಾಂಡೆ ಯವರು ಭಾರತದ ರಕ್ಷಣಾ ಸಚಿವರಾದ ಸರ್ದಾರ್ ಬಲದೇವಸಿಂಗರೊಡನೆ ಬೀರಾರಿನ ರಕ್ಷಣೆಯ ಬಗ್ಗೆ ಪ್ರಶ್ನಿಸಿದುದಕ್ಕೆ ಭಾರತ ಸರಕಾರವು ಬೀರಾರ್ ಪ್ರಾಂತದ ರಕ್ಷಣೆಗೆ ಬೇಕಾದ ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳುವುದೆಂದು ಅವರು ತಿಳಿಸಿರುವರು.

ನಗರ ಪೌರಸಭೆ

ಸ್ವಂ. ವ.] ಚಾಮರಾಜನಗರ ೯

ನಿನ್ನೆ ಇಲ್ಲಿನ ಪುರಸಭೆಯು ನೂತನ ಸದಸ್ಯರ ಸಭೆಯು ...ರವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಕಳೆದ ವರ್ಷ ಸಭೆಯಲ್ಲಿ ಕೆಲಸಮಾಡಿದ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದ ನಂತರ ಸ್ಟ್ಯಾಂಡಿಂಗ್, ಆರೋಗ್ಯ, ಬಜೆಟ್, ವಾಚನಾಲಯ ಮೊದಲಾದ ವಿವಿಧ ಸಮಿತಿಗಳಿಗೆ ಸದಸ್ಯರುಗಳನ್ನು ಆರಿಸಲಾಯಿತು

೧೮೦೦ ರೂ. ಅಪಹರಣ

ಇಲ್ಲಿನ ಸೆಂಟ್ರಲ್ ಬ್ಯಾಂಕಿನ ಡಿಪೋಸಿಟರ್ ಒಬ್ಬರು ಸುಮಾರು ೧೮೦೦ ರೂಗಳನ್ನು ರೋಡಿನ ಬಳಿ ತೆಗೆದು ಅಪಹರಿಸಿಕೊಂಡು ಹೋಗಿರುವರು

ಉಪಾಧ್ಯಕ್ಷರ ಸ್ಥಾನ

ಸ್ವಂ. ವ.] ಶ್ರೀರಂಗಪಟ್ಟಣ ೮

ಇಲ್ಲಿನ ಪುರಸಭೆ ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆ... ತಿಂಗಳುಗಳಿಂದ ಬಂದಿದ್ದರೂ ಇನ್ನೂ ನಿರ್ಧಾರವಾದಂತೆ ಆಗಿಲ್ಲ. ಸಂಬಂಧಪಟ್ಟವರು ಕೂಡಲೇ ಇದಕ್ಕೆ ಗಮನ ಕೊಡಬೇಕಾಗಿದೆ.

ಮತ್ತೆ ಭಾರತ ಒಂದಾಗಲಿ

ಭಾರತದ ವಿಭಜನೆಯನ್ನು ತಪ್ಪಿಸಿ ಅದು ಅಖಂಡವಾಗಿಯೇ ಉಳಿಯುವಂತೆ ಮಾಡಬೇಕೆಂಬುದೇ ಎಲ್ಲ ಬ್ರಿಟಿಷರ ಮತ್ತು ಭಾರತದ ನಾಯಕರ ಅಭಿಪ್ರಾಯವಾಗಿತ್ತು. ಆದರೆ ಕೋಮುವಾರು ಮನಸ್ಥಿತಿಯಿಂದ ವಿಭಜನೆ ಅನಿವಾರ್ಯವಾಯಿತು. ಇದು ಬಹಳ ಕಾಲ ಹೀಗೆಯೇ ಉಳಿಯಲಾರದು. ಈ ವಿಭಜನೆಯು ಶೀಘ್ರದಲ್ಲಿಯೇ ಮತ್ತೆ ಕೊನೆಗೊಂಡು ಭಾರತದ ಎರಡು ಡೊಮಿನಿಯನ್ನುಗಳೂ ಒಟ್ಟುಗೂಡಿ ಒಂದು ಮಹಾರಾಷ್ಟ್ರವಾಗುವುದೆಂಬ ದೃಢ ವಿಶ್ವಾಸ ನನಗಿದೆ ಎಂದು ಬ್ರಿಟಿಷ್ ಪ್ರಧಾನಿ ಮಿ|| ಅಟ್ಲೀಯವರು ಘೋಷಿಸಿರುವರು

ಜೂನ್ ಮಾರ್ಚಿಯಲ್ಲಿ ಸಂಪೂರ್ಣ ಪ್ರಜಾಪ್ರಭುತ್ವ

ಮಿ|| ಜಿನ್ನಾ ರವರನ್ನು ಪಾಕಿಸ್ಥಾನದ ಮತ್ತು ಲಾರ್ಡ್ ಮೌಂಟ್ ಬ್ಯಾಟನ್ನರವರನ್ನು ಹಿಂದೂಸ್ಥಾನದ ಗವರ್ನರ್ ಜನರಲ್ಲರನ್ನಾಗಿ ನೇಮಿಸಿರುವುದು ಕೇವಲ ತಾತ್ಕಾಲಿಕವೆಂದೂ, ಪಾರ್ಲಿಮೆಂಟಿನಲ್ಲಿ ಮಂಜೂರಾದ ಭಾರತ ಸ್ವಾತಂತ್ರ್ಯ ಮಸೂದೆ ಪ್ರಕಾರ ಈ ವ್ಯವಸ್ಥೆಗಳು ಮಾರ್ಚಿಯವರೆಗೆ ಮಾತ್ರ ಊರ್ಜಿತವಾಗಿರುವುದೆಂದು ತಿಳಿದುಬಂದಿದೆ. ೧೯೪೮ ನೇ ಮಾರ್ಚಿಗೆ ಭಾರತವೆರಡೂ ಸಂಪೂರ್ಣ ಸ್ವಾತಂತ್ರ್ಯವುಳ್ಳ ಪ್ರಜಾರಾಜ್ಯವಾಗುವಂತೆ ಅವನ್ನು ಸ್ಪಷ್ಟಮಾಡಲಾಗಿದೆಯೆಂದೂ ವರದಿಯಾಗಿದೆ

ಮಧ್ಯ ಪ್ರಾಂತದಲ್ಲಿ ಇಂಗ್ಲಿಷ್ ಮಾಧ್ಯಮದ ರದ್ದು

ತಮ್ಮ ಪ್ರಾಂತದ ಪ್ರೌಢ ಶಾಲೆಗಳಲ್ಲಿ ಈಗ ಆಂಗ್ಲ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಉಪಯೋಗಿಸುತ್ತಿರುವುದನ್ನು ಕೂಡಲೇ ರದ್ದು ಮಾಡಬೇಕೆಂದು ಮಧ್ಯಪ್ರಾಂತ ಸರಕಾರದವರು ನಿರ್ಧರಿಸಿರುತ್ತಾರೆ

ಆಂಡಾಳ್ ಮಂದಿರ

ಮೈಸೂರು ೧೫

ಮಾಣಿಕ್ಯಲಾಲ ಮೊಹಲ್ಲೆಯಲ್ಲಿರುವ ಶ್ರೀ ಆಂಡಾಳ್ ಮಂದಿರದಲ್ಲಿ ಆರಾಧನೆಯಾದ ಪ್ರಯುಕ್ತ ಆ ವ ಗುರು ... ದಿಂದ ೧೫-೮-೪೭ ರವರೆಗೆ ಪ್ರತಿ ರೋಜ ಪಾರಾಯಣ, ದೇವಿಗೆ ಪೂಜೆ, ಮಂಗಳಾರತಿಗಳೂ ಸಂಜೆ ೭ ರಿಂದ ೯ ರವರೆಗೆ ಸಂಗೀತ ಮತ್ತು ಹರಿಕಥೆಗಳೂ ನಡೆಯುವುವು. ಭಕ್ತರೆಲ್ಲ ಬಂದು ಸೇವೆ ಮಾಡಬೇಕೆಂದು ಮಂದಿರದ ಕಾರ್ಯದರ್ಶಿಯವರು ಕೋರಿರುವರು.

ಸರಕಾರಿ ದಾಖಲೆಗಳಲ್ಲಿ ಜಾತಿಯ ಸೂಚನೆಯ ರದ್ದು

ಸಂಯುಕ್ತ ಪ್ರಾಂತದಲ್ಲಿ ಅರ್ಜಿ ಮತ್ತು ಇತರ ಫಾರಮ್ಮುಗಳಲ್ಲಿ ಅರ್ಜಿದಾರರ ಜಾತಿಯನ್ನು ಸೂಚಿಸುವ ಅಗತ್ಯವಿಲ್ಲವೆಂದು ಅಲ್ಲಿನ ಸರಕಾರದವರು ಆಜ್ಞೆ ಹೊರಡಿಸಿರುವರು. ನಿಮ್ನ ವರ್ಗದವರಿಗೆ ಮಾತ್ರ ಇದು ಅನ್ವಯಿಸುವುದಿಲ್ಲ

ಪಾಕಿಸ್ಥಾನ್ ಡೊಮಿನಿಯನ್ನಿಗೆ ಮುಸ್ಲಿಂ ಗವರ್ನರರು

ಆಗಸ್ಟ್ ೧೫ ರ ನಂತರವೂ ೧೯೪೮ ನೇ ಏಪ್ರಿಲ್ ತಿಂಗಳವರೆಗೆ ಭಾರತ ಡೊಮಿನಿಯನ್ ಪ್ರಾಂತಗಳಲ್ಲಿ ಈಗಿರುವ ಗವರ್ನರುಗಳೇ ಇರುವರೆಂದೂ, ಆದರೆ ಪಾಕಿಸ್ಥಾನಕ್ಕೆ ಮುಸ್ಲಿಮರು ಗವರ್ನರುಗಳಾಗಿ ಆರಿಸಲ್ಪಡುವರೆಂದೂ ವರದಿಯಾಗಿದೆ.

ಪಟೇಲರು ಪ್ರಥಮ ಪ್ರಧಾನಿ?

ಹಿಂದೂಸ್ಥಾನ್ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ಪದ್ಧತಿ ಪ್ರಕಾರ ಭಾರತ ಯೂನಿಯನ್ನಿಗೆ ಪ್ರಧಾನಿಯಾಗಬೇಕಾಗಿದ್ದರೂ ಸರದಾರ್ ವಲ್ಲಭಭಾಯಿ ಪಟೇಲರು ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ವಹಿಸಿ ಯೂನಿಯನ್ನಿನ ಪ್ರಥಮ ಪ್ರಧಾನಿಯಾಗುವರೆಂದು ವರದಿಯಾಗಿದೆ

ಹಂಸಗಳ ದಾಂಪತ್ಯ ವಿಚ್ಛೇದನ

ಗ್ಲೋಬ್] ಲಂಡನ್ ೧೦

ಮಾನವರಲ್ಲಿರುವಂತೆಯೇ ಈಗ ಮೃಗಪಕ್ಷಿಗಳೂ ಸಹ ದಾಂಪತ್ಯವಿಚ್ಛೇದನವನ್ನು ಮಾಡುತ್ತಿರುವ ವಿಷಯವು ವರದಿಯಾಗಿದೆ. ಇತ್ತೀಚೆಗೆ ಹಂಸಗಳಿಗೇ ಹೆಚ್ಚಿನ ಗಮನ ಕೊಡುತ್ತಿದ್ದಿತೆಂದು ಮಿಡಲ್‌ಸೆಕ್ಸ್ ಎಂಬಲ್ಲಿನ ಸರೋವರದಲ್ಲಿನ ಒಂದು ಗಂಡುಹಂಸವು ತನ್ನ ಮರಿಗಳನ್ನು ತನ್ನ ಮಡದಿಯೊಡನೆ ಬಿಟ್ಟುಕೊಂಡು ಹೆಣ್ಣುಹಂಸವನ್ನು ಸರೋವರದಿಂದಲೇ ಓಡಿಸಿರುವುದೆಂದು ತಿಳಿದುಬಂದಿದೆ.

ಕೋತಿ ಹಿಡಿಯುವ ಶಿಕ್ಷಣ

ದೆಹಲಿಯಲ್ಲಿ ಕೋತಿಗಳ ಹಾವಳಿ ವಿಪರೀತವಾಗಿರುವುದರಿಂದ ಅವುಗಳನ್ನು ಹಿಡಿದು ದೂರ ಸಾಗಿಸುವ ಶಿಕ್ಷಣ ಪಡೆಯುವ ಸಲುವಾಗಿ ದೆಹಲಿಯ ಕೌನ್ಸಿಲ್ಲಿನವರು ೩ ಜನ ಪೋಲೀಸಿನವರುಗಳನ್ನು ನೇಮಿಸಿದೆ. ಕೇರಳ ದೇಶದ ಜನನೊಬ್ಬನು ಅವರಿಗೆ ಶಿಕ್ಷಣ ಕೊಡುವನು. ಶಿಕ್ಷಣ ಕಾಲದಲ್ಲಿ ಅವರಿಗೆ ಸಹ ಒಂದು ... ಹಿಡಿಯಲು ... ರೂ. ಕೊಡಲಾಗುವುದು.

ಗ್ರೀಸ್-ಆಲ್ಬೇನಿಯಗಳಲ್ಲಿ ಯುದ್ಧ ಪ್ರಾರಂಭ

ಗ್ರೀಸ್ ಗೆರಿಲ್ಲಗಳೂ, ಆಲ್ಬೇನಿಯನ್ನರೂ ಸೇರಿ ಒಟ್ಟಿಗೆ ಆಲ್ಬೇನಿಯಾದ ಕಡೆಯಿಂದ ಗ್ರೀಸ್ ಗಡಿಯನ್ನು ಸಮೀಪಿಸಿ ಕೊನಿಟ್ಸಾ ಪ್ರದೇಶದ ಕಡೆಗೆ ನುಗ್ಗಿದರೆಂದು ಗ್ರೀಸ್ ಪ್ರಕಟಣೆ ತಿಳಿಸುತ್ತದೆ. ಸುಮಾರು ಸಾವಿರ ಮಂದಿ ಗೆರಿಲ್ಲರು ಗಡಿಯ ಪ್ರದೇಶದ ಸೇತುವೆಯೊಂದನ್ನು ಸ್ವಾಧೀನಪಡಿಸಿಕೊಂಡು ಕೊನಿಟ್ಸಾ ಪ್ರದೇಶವನ್ನು ಮುತ್ತಿರುವುದಾಗಿಯೂ, ಕೊನಿಟ್ಸಾದಲ್ಲಿರುವ ಗ್ರೀಕ್ ಪಡೆಗಳು ಧೈರ್ಯದಿಂದ ಮುತ್ತಿಗೆಗಾರರನ್ನು ಪ್ರತಿಭಟಿಸುತ್ತಿವೆಯೆಂದೂ ಹೇಳಲಾಗಿದೆ. ಆಲ್ಬೇನಿಯಾ ಪಡೆಗಳು ಗ್ರೀಕ್ ಗೆರಿಲ್ಲಾಗಳಿಗೆ ನೆರವು ನೀಡುತ್ತಿವೆ. ಅಂತರ ರಾಷ್ಟ್ರೀಯ ಸೇನಾಪಡೆಗಳೂ, ಆಲ್ಬೇನಿಯಾ ಸೈನಿಕರೂ ಆಲ್ಬೇನಿಯಾ ಗಡಿಯಲ್ಲಿ ಸೇರಿರುವರು. ವಿಮಾನದ ಮೂಲಕ ಕೊನಿಟ್ಸಾಗೆ ಸೈನ್ಯಪಡೆಗಳು ಬರುತ್ತಿವೆ ಎಂದೂ ಆ ಪ್ರಕಟಣೆ ತಿಳಿಸುತ್ತದೆ.

ಚಂದ್ರನಗರಕ್ಕೆ ಸ್ವಾತಂತ್ರ್ಯ

ಬಂಗಾಳದ ಬಳಿಯಲ್ಲಿರುವ ಫ್ರೆಂಚರಿಗೆ ಸೇರಿದ ಚಂದ್ರನಗರಕ್ಕೆ ಪೂರ್ಣ ಅಧಿಕಾರ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಕೊಡಲು ಫ್ರೆಂಚ್ ಸರಕಾರವು ನಿರ್ಧರಿಸಿದೆಯೆಂದೂ, ಭಾರತದ ಫ್ರೆಂಚ್ ಆಕ್ರಮಿತ ಪ್ರದೇಶಗಳಲ್ಲಿರುವ ರಾಜಕೀಯ ಪಕ್ಷಗಳನ್ನು ಒಂದುಗೂಡಿಸಿ ಸಮಾಲೋಚನೆ ನಡೆಸಿ ಆ ಪ್ರದೇಶಗಳ ಭವಿಷ್ಯವನ್ನು ನಿರ್ಧರಿಸಲು ಫ್ರೆಂಚ್ ಭಾರತದ ಗವರ್ನರರಾದ ಮಿ|| ಬ್ಯಾರನ್ನರಿಗೆ ಆಜ್ಞೆ ಇತ್ತಿದೆಯೆಂದೂ ಫ್ರೆಂಚ್ ರಿಪಬ್ಲಿಕ್ಕಿನ ಭಾರತದ ಸದಸ್ಯರಾದ ಶ್ರೀ ವಿ. ಸುಬ್ಬಯ್ಯನವರು ತಿಳಿಸಿರುವರು.

ಆಗಸ್ಟ್ ೧೫ ಕ್ಕೆ ಬಂದಿಗಳ ಬಿಡುಗಡೆ

ಆಗಸ್ಟ್ ೧೫ ರ ದಿನ ಅಧಿಕಾರ ವರ್ಗಾವಣೆ ಆಗುವುದರಿಂದ ಭಾರತವು ಸ್ವತಂತ್ರವೆಂಬುದನ್ನು ಸೂಚಿಸಲು ಮಧ್ಯಪ್ರಾಂತ ಸರಕಾರವು ಎಲ್ಲ ಖೈದಿಗಳನ್ನೂ ಆ ದಿನ ಬಿಡುಗಡೆ ಮಾಡಲು ನಿರ್ಧರಿಸಿದೆ. ಇತರ ಪ್ರಾಂತಗಳೂ ಇದೇ ರೀತಿ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಸಲಹೆ ಕೊಟ್ಟಿದೆ

ಹೈದರಾಬಾದಿನಲ್ಲಿ ಪರಿಮಿತ ಅಸಹಕಾರ

ಭಾರತ ಯೂನಿಯನ್ನಿಗೆ ಸೇರಬೇಕೆಂದು ನಿಜಾಮರಿಗೆ ಒತ್ತಾಯ ಮಾಡಲು ಸ್ಥಳೀಯ ಸಂಸ್ಥೆಗಳೇ ಮೊದಲಾದ ಕಡೆಗಳಲ್ಲಿ ಪರಿಮಿತವಾದ ಅಸಹಕಾರವನ್ನು ಮಾಡಲಾಗುವುದೆಂದು ಅಲ್ಲಿನ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಾಮಾನಂದ ತೀರ್ಥರು ತಿಳಿಸಿರುವರು

ರಾಜರಿಂದ ಬಿರುದು ತ್ಯಾಗ

ವಿಜಯನಗರದ ಅರಸರಾದ ಮಹಾರಾಜ ಸರ್ ವಿಜಯ ಆನಂದರವರು ತಮ್ಮ ನೈಟ್ ಹುಡ್ ಪ್ರಶಸ್ತಿಯನ್ನು ತ್ಯಜಿಸಿರುವರು

ಪಂಡಿತ್ ಬೋಸರ ನಾಯಕತ್ವದಲ್ಲಿ ಹೊಸ ರಾಜಕೀಯ ಪಕ್ಷ

ಡಾ. ಶರತ್ಚಂದ್ರರವರ ಹೇಳಿಕೆಯ ಪ್ರಕಾರ ಮುಂದೆ ಅವರ ನೇತೃತ್ವದಲ್ಲಿ ಫಾರ್ವರ್ಡ್ ಬ್ಲಾಕ್ ಮತ್ತು ಇತರ ಪಕ್ಷಗಳು ಸೇರಿ ಶರತ್ಚಂದ್ರ ಬೋಸ್ ರವರ ನೇತೃತ್ವದಲ್ಲಿ ಹೊಸ ಸೋಷಲಿಸ್ಟ್ ರಿಪಬ್ಲಿಕನ್ ರಾಜಕೀಯ ಪಕ್ಷವನ್ನು ರಚಿಸುವರು.

Office of the President,
City Municipal Council,
Mysore,
Dated 7th July 1947.

NOTIFICATION

No M 5 P-180/46-47

Notice is hereby given to the inhabitants of the Mysore City Municipality that the Municipal Council have resolved to amend the bye-law relating to the levy of Octroi on dutiable articles in Mysore City so as to enhance the levy of octroi on the following items to 2 per cent from the present rate of Rs 1-9-0 percent advalorem.

Sl. No in the schedule of taxes	Name of the item

13 Manufactured wooden materials.

17 Imported manufactured articles such as rain or water proof coats, hold-alls, umbrellas, hats, rain-caps, fur-caps, gowns, over-coats and mosquito curtains and so others

18 Musical goods: this shall include gramophone and its accessories and gramophone records, radio and its parts, harmonium and its parts

19 Toys of all kinds and varieties and their accessories except those made of silver and gold

20 Soaps of all variety and kinds and shall include soap flakes, shaving sticks, shaving cream, liquid soaps and the like.

21 Confectionery: shall include all kinds of manufactured sweets, peppermints, and chacolates

22 Glass-ware: shall include glass sheets, plates, cups, tumblers, jars, mirrors, globes, chimneys, bulbs, bottles, glass carboys, glass panes, glass tiles, lens tubes test tubes and other glass goods and either partly or wholly made of glass. Foreign glass bangles (manufactured outside Mysore state)

23 Oilmanstores: shall include manufactured goods kept in tins or packets and shall also include the following:-

a) Tinned or canned or bottled fruits, fruit juice, essence of all kinds,
b) Manufactured syrups and squashes,
c) Glaxo, Horlicks Malted milk or powdered foods, cocoa, ovaltine, bournvita ovaltine rusk and all proprotised goods and the like.
d) Toilet snows, creams, hair oils, vaselines, Brilliantine and all kinds of pomades and perfumes and the like.
e) Condensed milk of all kinds of liquid or powder form and shall include cheese or cream and tinned butter.
f) Biscuits of all varieties and kinds
g) Sausage, canned beef, assorted soup and the like.
h) Tinned meat: broth, salmon, saradine and all varieties of tinned fish.
i) Pepper and ginger species.
j) Tinned and bottled pickles, and chutnies.
k) Baked beans in tins
l) Corn flour, flour cakes
m) Bottled or tinned shredded wheat.
n) Barley and Barley flour
o) Tinned or bottled lactogen
p) Vimto and vinegar
q) Force food.
r) Fruit salads
s) Salads of all varieties and kinds
t) Quaker oats, oat-meals
u) Vermiocelli of non Mysore origin
v) Tooth powder, tooth paste of all varieties, face powder of all varieties of non-Mysore origin
w) Cuticura powder, curry powder of non-Mysore origin
x) Baking powder and table salt of all varieties

24 All electrical goods and their parts

25 Colour and metal polish and all other kinds and varieties of paints and varnishes

27 Cement and all varieties of cement such as magnesium cement and other coloured varieties

28 Coffee: shall include seeds, powder and tablets

29 Tea: shall include the leaves and dust

31 Cudappah slabs and marble slabs, cart polished or otherwise

32 Hosiery: all include all knitted goods

33 All kinds of motors except motor vehicle taxable under Mysore Road Traffic Rules & all accessories of motor and motor vehicles

35 Asbestos sheets (flat in or corrugated) and asbestos pipes

36 Porcelain articles, sanitary fittings, porcelain basins, pipes, jars, cups and saucers

37 Earthenware or Enamel wares of all kinds and Chinaware

38 Canvas or rubber belting for machinery and all rubber goods and articles in any shape or form

40 Leather goods in any shape or form

41 Battery and its accessories and dry cells

43 Bakelite goods in any shape or form

44 Photo frames or picture frames of all varieties whether manufactured out of wood or metal

45 Optical goods and their accessories

47 Celluloid goods in any shape or form

48 American flour

50 Brushes of all varieties.

Any person having any objection in respect of the proposed amendment may prefer the same in writing to the undersigned within a month from the date of publication of this notification in the official Gazette after which no objection will be received.

(Sd) R. Ramachandra Rao,
Bhombore, President

ವುಡ್‌ಲ್ಯಾಂಡ್ಸ್
12-7-47 ರಿಂದ
ಶಿಕ್ಕರಿದ ೧೧ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)
ನಾವು ಇಬ್ಬರು
ಅಮಾವಾಸ್ಯೆ ಪ್ರಯುಕ್ತ 18-7-47 ನೆ
ಶುಕ್ರವಾರ 3-30 ಕ್ಕೆ ಮ್ಯಾಟಿನಿ
: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ವುಡ್‌ಲ್ಯಾಂಡ್ಸ್
ಬೆಳಗಿನ ಪ್ರದರ್ಶನ
18-7-47 ರಿಂದ
4 ದಿನಗಳು ಮಾತ್ರ
ಬೆಳಗ್ಗೆ 10-30 ಕ್ಕೆ
ಕುನಾರಾ ಬಾಪ್
(ಹಿಂದಿ)
: ಪಾತ್ರ :-
[illegible]
ರಾಜಮಹಲ್
ತಾ|| ೧೧-೭-೪೭ ರಿಂದ
೩ ನೇ ವಾರ
ಬೈರಾಂಖಾನ್
—: ಭೂಮಿಕೆ :—
ಮೆಹತಾಬ್, ಜಾಗೀರ್ದಾರ್,
ಅಪೇರಾ ಟಾಕೀಸ್, ಮೈಸೂರು
೧೨-೭-೪೭ ರಿಂದ ೧೨ ನೇ ವಾರ
ರಾಜಕುಮಾರಿ
ಚಿತ್ರದ ದೃಶ್ಯಗಳನ್ನು ಹೊಸದಾಗಿ
ಸೇರಿಸಲಾಗಿದೆ
ಶ್ರೀ
ಚಾಮುಂಡೇಶ್ವರ ಸಂಗೀತ
ನಾಟಕ ಮಂಡಳಿ, [illegible]
ಮೈಸೂರು [illegible]
[illegible] ಥಿಯೇಟರಿನಲ್ಲಿ
[illegible] ರಾತ್ರಿ ೧೦ ಘಂಟೆಗೆ

ಬ್ಲಾಕ್ ಮಾರ್ಕೆಟ್
[illegible]

Edited printed and published by A. R. Nagaraj[illegible] at the Sadhvi Press, D Subbarah Road Mysore

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಬುಧವಾರ ೧೬—೨—೪೨ [ಸಂಚಿಕೆ ೩೮೮

ರಷ್ಯದ ಮೇಲೆ ಧಾಳಿಗಾಗಿ ಜಪಾನೀಯರ ಸಿದ್ಧತೆ?

ಗೋಪಾಲರಾಯರ ಮೇಲೆ ೧೫ ಛಾರ್ಜ್ ಷೀಟುಗಳು

ಸ್ವಂ ವ] ಬೆಂಗಳೂರು ೧೬

ಮೋಸದ ಆಪಾದನೆಗಾಗಿ ಧರ್ಮರಾಜಸ್ಥಳದ ಶ್ರೀ ವಿ ಎಸ್ ಗೋಪಾಲರಾಯರ ಮೇಲೆ ಮಲ್ಲೇಶ್ವರದ ಪೋಲೀಸರು ಹೂಡಿರುವ ಮೊಕದ್ದಮೆಗಳು ಇಲ್ಲಿನ ಸ್ಪೆಶಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಾಳಿದ್ದಿನಿಂದ ಆರಂಭವಾಗುವುವು. ಈ ಸಂಬಂಧವಾಗಿ ಅವರ ಮೇಲೆ ೧೫ ಛಾರ್ಜ್ ಷೀಟುಗಳನ್ನು ಹಾಕಲಾಗಿದೆ. ಡಾ॥ ನರೋನ, ಶ್ರೀಮತಿ ಇ ಡಿಸೋಜಾ, ಹಿಂದೂಸ್ತಾನ್ ಕೋ-ಆಪರೇಟಿವ್ ವಿಮಾ ಸಂಸ್ಥೆಯ ಶ್ರೀ ಕೆ ಎಸ್ ರಾಮಸ್ವಾಮಿ ಇವರುಗಳನ್ನು ಪ್ರಾಸಿಕ್ಯೂಷನ್ ಸಾಕ್ಷಿಗಳಾಗಿ ಸೇರಿಸಲಾಗಿದೆ

ಜನಾಭಿಪ್ರಾಯದ ಮೇಲೆ ಗವರ್ನರುಗಳ ಆಯ್ಕೆ

ಮೊನ್ನೆ ಸಂಜೆ ರಾಜ್ಯಾಂಗ ಸಭೆಯು ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ಸೇರಿ ಮುಂದೆ ಪ್ರಾಂತೀಯ ಗವರ್ನರುಗಳನ್ನು ಆರಿಸುವಾಗ ವಯಸ್ಕರ ಓಟಿನ ಆಧಾರದ ಮೇಲೆಯೇ ಚುನಾವಣೆಯು ನಡೆಯಬೇಕೆಂದು ನಿರ್ಧರಿಸಿರುವುದೆ. ಪ್ರಾಂತೀಯ ರಾಜ್ಯಾಂಗ ಸಮಿತಿಯೂ ಸಹ ಇದೇ ರೀತಿ ರಾಜ್ಯಾಂಗ ಸಭೆಗೆ ಶಿಫಾರಸು ಮಾಡಿರುತ್ತದೆ

ಮಳೆ ಬರಲು ಮೋಡಗಳಿಗೆ ಇಂಜೆಕ್ಷನ್

ಗ್ಲೋಬ್] ಮೆಲ್ಬೋರ್ನ್ ೧೪

ಒಂದು ಬಗೆಯ ರಾಸಾಯನಿಕವನ್ನು ಮೋಡಗಳ ಮೇಲೆ ಸಿಂಪಡಿಸುವದರಿಂದ ಮಳೆ ತರೆಯುವ ಉಪಾಯವನ್ನು ಆಸ್ಟ್ರೇಲಿಯಾದಲ್ಲಿ ಕಂಡುಹಿಡಿಯಲಾಗಿದೆ. ೨೦೦ ಗ್ಯಾಲನ್ ದ್ರವವನ್ನು ಟ್ಯಾಂಕುಗಳಲ್ಲಿ ಹಾಕಿ ವಿಮಾನದಲ್ಲಿ ಅವನ್ನು ಒಯ್ಯುತ್ತಿರುವ ಪ್ರಯೋಗಗಳೂ ನಡೆಯುತ್ತಿವೆ

ಭಾರತ ಯೂನಿಯನ್ನಿಗೆ ಅಂಡಮಾನ್, ನಿಕೋಬಾರ್

ಅಂಡಮಾನ್, ನಿಕೋಬಾರ್ ಮತ್ತು ಲಕ್ಷದ್ವೀಪಗಳು ಭಾರತ ಯೂನಿಯನ್ನಿಗೇ ಸೇರುವುವೆಂದೂ, ಅವುಗಳಿಗೆ ಸ್ವಾತಂತ್ರ್ಯ ಕೊಡುವಾಗ ಕಾಮನ್‌ವೆಲ್ತ್ ಸರ್ಕಾರಗಳ ಸಲಹೆ ಪಡೆಯಬೇಕೆಂದೂ ಬ್ರಿಟಿಷ್ ಅಂಡರ್ ಸೆಕ್ರೆಟರಿ ಆಫ್ ಸ್ಟೇಟ್ ಹೆಂಡರ್ಸನ್ನರು ತಿಳಿಸಿರುವರು

—

ವರ್ಧಂತ್ಯುತ್ಸವ

ಮೈಸೂರು ಶ್ರೀ ಚಾಮುಂಡೇಶ್ವರಿ ವಿದ್ಯಾಗಿ... ಇದರ ತಿಂಗಳ ೨೦ ಪೌಂಡು ಪಿಕೋಟಿಕದ ಪಾರ್ಕ್‌ನಲ್ಲಿ ... ಗಂಟೆಗೆ ... ಕಳೆದ ... ವರ್ಧಂತ್ಯುತ್ಸವವನ್ನು ... ಸಂಸ್ಥೆ ... ಹೇಳಲಾಗಿದೆ.

ರಂಗ ಕಟ್ಟಡ ... ನಡೆಸಿದ ...

ಎಂ ಪಿ ಎಸ್ ... ಸ್ಟೇಟ್‌ನ ... ಸ್ಟ್ರೀಟ್‌ನ ... ನ ... ಸ್ಟೇಷನ್ ... ನೀಡಿದ ... ಧರಿಸಿದ್ದರು

೩೫ ವರ್ಷದ ವಯಸ್ಕನಿಗೆ ಗವರ್ನರಾಗಲು ಹಕ್ಕು

ಪ್ರಾಂತಗಳ ಚುನಾಯಿತ ಗವರ್ನರು ಇರಬೇಕು. ಅವರ ಅಧಿಕಾರದ ಅವಧಿ ೪ ವರ್ಷ; ಪ್ರಾಂತೀಯ ಶಾಸನ ಸಭೆಗಳ ೩ ನೇ ಎರಡು ಪಾಲು ಬಹುಮತದಿಂದ ಅವರ ನಡತೆ ಕೆಟ್ಟದೆಂದು ತೀರ್ಮಾನವಾದರೆ ಅವರನ್ನು ಹುದ್ದೆಯಿಂದ ತೆಗೆದುಹಾಕಬಹುದು; ೪ ತಿಂಗಳ ... ಕೆಲಸಕ್ಕೆ ಗೈರುಹಾಜರಾದರೆ ಅವನು ಅಧಿಕಾರವನ್ನು ತ್ಯಜಿಸಿದಂತೆ ಭಾವಿಸಬೇಕು; ೩೫ ವರ್ಷ ವಯಸ್ಸಿನ ಹರೆಯೊಬ್ಬ ಪ್ರಜೆಯೂ ಗವರ್ನರಾಗಲು ಅರ್ಹನಾಗಿರುವನು; ಆ ಶಾಸನ ಸಭೆಯ ಸದಸ್ಯನಾಗಿಯಾಗಲೀ ... ಸರ್ಕಾರಿ ನೌಕರನಾಗಲೀ ಆಗಿರತಕ್ಕದ್ದಲ್ಲ. ರಾಜ್ಯಾಂಗ ಸಮಿತಿಯು ಇವುಗಳನ್ನು ನಿನ್ನೆ ಸರ್ದಾರ್ ಪಟೇಲರು ರಾಜ್ಯಾಂಗ ಸಭೆಯ ಮುಂದೆ ಇಟ್ಟಿದ್ದಾರೆ

ಮುಭಾರಿಗಳಿಗೂ ಹಿಂದೀ ಭಾಷೆ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ರಷ್ಯದಲ್ಲಿ ಭಾರತದ ರಾಯಭಾರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅವರು ಅಲ್ಲಿ ಮಾಡುವ ಎಲ್ಲ ಭಾಷಣಗಳೂ ಹಿಂದೂಸ್ತಾನಿಯಲ್ಲೇ ಇರಬೇಕೆಂದು ಭಾರತ ಸರ್ಕಾರ ಅವರಿಗೆ ಆಜ್ಞೆ ಇತ್ತಿದೆ.

೬೫೦ ರೂ.ಗೆ ಮೋಟಾರು

ಜಪಾನಿನ ಒಸಾಕಾ ನಗರದಲ್ಲಿ ಪ್ರಪಂಚದಲ್ಲೇ ಅತ್ಯಂತ ಸಣ್ಣದಾದ ಮೋಟಾರೊಂದನ್ನು ತಯಾರಿಸಲಾಗುತ್ತಿದೆಯೆಂದು ವರದಿಯಾಗಿದೆ ... ಸುಮಾರು ... ೫೦ ಪೌಂಡು

—

ಶವ ಸಂಸ್ಕಾರದ ಬಟ್ಟೆ

ರಾಷ್ಟ್ರಪತಿಯವರ ... ನವ ಶವ ... ಬಟ್ಟೆ ... ಯ್ಯಾರ್ ... ಜಂಡಾ ... ಸ್ಟೈಲ್ ... ದ್ ... ಸಭೆ ... ಗಾಂಧಿ ... ಪಿ ಎಸ್ ... ಪಂ ... ಪಿ ವೆಂಕಟರಾವ್, ವಿಶ್ವನಾಥ ... ಪಂ ... ಪಿ ... ಯ ... ನ ... ಸ್ ... ಗಳನ್ನು ... ವಿಶ್ವಾಸ ... ಗಳನ್ನು ... ದನ್ನು ... ಗಳು ತಿಳಿಸಿರುವರು.

ಪುದುಕೋಟೆಗೆ ಚುನಾಯಿತ ಸಚಿವರು

ತಮ್ಮ ಸಂಸ್ಥಾನದಲ್ಲಿ ಈಗಿರುವ ಮಂತ್ರಿಮಂಡಲಕ್ಕೆ ಬದಲು ಚುನಾಯಿತ ಸಚಿವರನ್ನು ಆರಿಸಲು ತಾವು ನಿರ್ಧರಿಸಿರುವುದಾಗಿ ಪುದುಕೋಟೆಯ ಸಂಸ್ಥಾನಾಧಿಪರು ತಮ್ಮ ೨೫ ನೇ ವರ್ಷದ ವರ್ಧಂತಿಯ ಸಮಯದಲ್ಲಿ ತಿಳಿಸಿರುವರು. ಸಚಿವರ ಚುನಾವಣೆಗಾಗಿ ಸದ್ಯದಲ್ಲೇ ಶಾಸನ ಸಭೆಯ ಅಧಿವೇಶನವನ್ನು ಕರೆಯಲಾಗುವುದು. ಸಚಿವರು ಆಗಸ್ಟ್ ೧೫ ರ ವೇಳೆಗೆ ತಮ್ಮ ಅಧಿಕಾರವನ್ನು ವಹಿಸುವರು. ವಯಸ್ಕರ ಓಟಿನ ಪ್ರಕಾರ ... ಕಾರ್ಯರೂಪಕ್ಕೆ ತರಲು ಕೂಡಲೇ ... ದ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರಲಾಗುವುದು ಎಂದು ವರದಿಯಾಗಿದೆ

ಡಾಕ್ಕಾ ಪೂರ್ವ ಪಾಕಿಸ್ತಾನದ ರಾಜಧಾನಿ

ಪೂರ್ವ ಪಾಕಿಸ್ತಾನದ ಕಛೇರಿಗಳನ್ನು ಡಾಕ್ಕಾನಗರದಲ್ಲಿ ಸ್ಥಾಪಿಸುವ ಕಾರ್ಯ ಬಹಳ ಭರದಿಂದ ಸಾಗುತ್ತಿದೆ. ಆಗಸ್ಟ್ ೧೫ ರ ವೇಳೆಗೆ ಇದು ಪೂರ್ಣವಾಗ ಬಹುದು. ಇನ್ನು ಮೇಲೆ ಪೂರ್ವ ಪಾಕಿಸ್ತಾನಕ್ಕೆ ಡಾಕ್ಕಾ ರಾಜಧಾನಿಯಾಗಿರುವುದು

ಸಂಸ್ಥಾನದ ಮೇಲಿನ ಹಕ್ಕನ್ನು ಬಿಡಲು ಹೈದರಾಬಾದಿನ ಸಮ್ಮತಿ

ರಾಜ್ಯಾಂಗ ಸಭೆಗೆ ಸೇರದ ಸ್ವತಂತ್ರವಾಗುವ ಸಂಸ್ಥಾನಗಳಿಗೆ ಬ್ರಿಟಿಷ್ ಸರ್ಕಾರ ಮನ್ನಣೆ ಕೊಡುವುದಿಲ್ಲವೆಂದು ಹೈದರಾಬಾದಿನ ಪ್ರತಿನಿಧಿಗಳಿಗೆ ಮೈಸೂರಿನ ... ತಿಳಿಸಿರುವರೆಂದೂ, ಅಲ್ಲಿನ ಪ್ರತಿನಿಧಿ ... ಮೇಲಿನ ಹಕ್ಕನ್ನು ತ್ಯಜಿಸಲು ಒಪ್ಪಿರುವರೆಂದೂ ವರದಿಯಾಗಿದೆ.

ಲಕ್ನೋ ಬೀದಿಗಳಿಗೆ ಭಾರತೀಯ ನಾಮಕರಣ

ಲಕ್ನೋ ನಗರದ ಬೀದಿಗಳಿಗೆ ಈಗ ಇರುವ ಬ್ರಿಟಿಷ್ ವ್ಯಕ್ತಿಗಳ ಹೆಸರನ್ನು ತೆಗೆದು ಹಾಕಿ ಅವುಗಳಿಗೆ ಭಾರತದ ನಾಯಕರ ಹೆಸರನ್ನಿಡಲು ಲಕ್ನೋ ಪೌರಸಭೆಯು ನಿರ್ಧರಿಸಿದೆ ... ಪ್ರಕಟಿಸಲಾಗುವುದೆಂದು ... ತಿಳಿಸಲಾಗಿದೆ

... ಪೌರಸಭೆಯ ... ನಿರ್ಧರಿಸುವುದೆಂದು ವರದಿಯಾಗಿದೆ.

ರಷ್ಯದ ಮೇಲೆ ನುಗ್ಗಲು ೪೦ ಸಹಸ್ರ ಜಪಾನೀಯರ ಸಂಚು

ಮಂಚೂರಿಯಾ ಮತ್ತು ಕೊರಿಯಾಗಳ ಚಾಂಗ್ ಪೈ ಬೆಟ್ಟಗಳಲ್ಲಿ ೪೦ ಸಹಸ್ರ ಜಪಾನಿ ಸೈನಿಕರೂ ೨೦ ಸಹಸ್ರ ನಾಗರೀಕರೂ ಅಡಗಿಕೊಂಡಿರುವರೆಂದು ವರದಿಯಾಗಿದೆ. ಸೈನಿಕರು ರಷ್ಯನರ ಮೇಲೆ ಪ್ರತೀಕಾರ ನಡೆಸಲು ಸಿದ್ಧರಾಗಿರುವರೆಂದೂ, ಅವರು ರಷ್ಯನರಿಗೆ ಶರಣಾಗತರಾಗಲು ಸಿದ್ಧರಾಗಿಲ್ಲವೆಂದೂ, ರಷ್ಯನ್ ಪಡೆಗಳು ಅವರ ಮೇಲೆ ಮುತ್ತಿದಾಗ ಅವರು ಬೆಟ್ಟಗಳಿಗೆ ಹೋಗಿ ನೆಲೆಸಿರುವುದಾಗಿಯೂ ದಕ್ಷಿಣ ಮಂಚೂರಿಯಾ ಜಪಾನೀ ಸಂಘದ ಅಧ್ಯಕ್ಷರಾದ ಫರೀಜ ... ಹೇಳುವರು. ಈ ಸೈನ್ಯದಲ್ಲಿ ೩ ವರ್ಷಗಳಿಗೆ ಬೇಕಾಗುವಷ್ಟು ಆಹಾರ ಪದಾರ್ಥಗಳ ದಾಸ್ತಾನು ಸಿದ್ಧವಾಗಿದೆಯೆಂದೂ, ಸೈನಿಕರೆಲ್ಲರೂ ಶಿಸ್ತಿನಿಂದಿರುವುದಾಗಿಯೂ ಸಹ ಅವರು ತಿಳಿಸಿರುವರು.

ವರ್ಗಾವರ್ಗಿ

ಸ್ವಂ ವ ಫೋನ್] ಬೆಂಗಳೂರು ೧೬

ಶಿವಮೊಗ್ಗ ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ಎಸ್. ಹಿರಣ್ಣಯ್ಯನವರನ್ನು ಮೈಸೂರು ಪಿ. ಡಬ್ಲ್ಯು. ಡಿ. ಅಧ್ಯಕ್ಷರಾಗಿ ನೇಮಿಸಿರುವುದರಿಂದ ಸಿವಿಲ್ ಸಪ್ಲೈಸ್ ಕಂಟ್ರೋಲರಾದ ಪಿ ಎ ಜೆ ಮಲ್ಲಿಗರನ್ನು ಫುಡ್ ಮತ್ತು ಸಿವಿಲ್ ಸಪ್ಲೈ ಕಾರ್ಯದರ್ಶಿಗಳಾಗಿಯೂ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾಗಿ ಕೆಲಸಮಾಡುತ್ತಿರುವ ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಶ್ರೀ ಎಸ್ ರಮಣಯ್ಯನವರನ್ನು ಭದ್ರಾವತಿ ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿಯೂ, ಅಸಿಸ್ಟೆಂಟ್ ಕಮೀಷನರಾದ ಶ್ರೀ ಎಂ ಕೆ ಅಪ್ಪಾಜಪ್ಪನವರನ್ನು ಜಿಲ್ಲಾಧಿಕಾರಿಗಳಾಗಿ ಭಡ್ತಿಮಾಡಿ ಸಿವಿಲ್ ಸಪ್ಲೈ ಕಂಟ್ರೋಲರಾಗಿಯೂ ಒದಲಾವಣೆ ಮಾಡಲಾಗಿದೆಯೆಂದು ತಿಳಿದುಬಂದಿದೆ.

ಜಯಚಾಮರಾಜೇಂದ್ರ ಸೊಸೈಟಿ

ಮೈಸೂರು ೧೬

ಕಳೆದ ಶನಿವಾರ ನೆಲ್ಲಿಂದ ಸರ್ಕಾರದ ... ಸಿನಿ ... ಸಭೆಯು ಸೇರಿ ಶ್ರೀಮನ್ಮಹಾರಾಜರವರ ೨೯ ನೇ ವರ್ಧಂತ್ಯುತ್ಸವದ ಸಮಾರಂಭದಲ್ಲಿ ಅವರಿಗೆ ಅರ್ಪಿಸಲು ... ಸಂಘದ ಅಧ್ಯಕ್ಷರಾದ ಶ್ರೀ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರಿಗೆ ... ಮಹಾರಾಜರ ... ಅವರನ್ನು ಅಭಿನಂದಿಸುವ ನಿರ್ಣಯಗಳು ಅಂಗೀಕೃತವಾದುವು.

ಮೋಟಾರು ಅಪಘಾತ

ಮೊನ್ನೆ ರಾತ್ರಿ ... ಒಂದು ಮೋಟಾರಿನ ಮಧ್ಯೆ ಎರಡು ಕಡೆಗೆ ... ಸಿಕ್ಕಿಕೊಂಡು ... ದಾರಿಯಲ್ಲಿ ಹೋಯಿತೆಂದೂ, ಅದನ್ನು ನೋಡಿ ಶ್ರೀ ... ರನ್ನು ಮತ್ತು ... ರನ್ನು ... ಕಡೆಗೆ ... ಕಡೆ ಬಂದಿದೆ ... ಮತ್ತು ... ಆಗಿ ... ತೋರಿದವರಿಗೆ ... ತಿಳಿದಿದೆ.

ಉಚಿತ ಪ್ರವೇಶ ...

... ಅಲ್ಲಿನ ... ಎಂದಿನ ೭ ಗಂಟೆಯ ... ವರ್ಗದ ... ನಡೆಸಲಾಗುವುದೆಂದು ತಿಳಿಸಲ್ಪಟ್ಟಿದೆ.

ಸಾಧ್ವಿ

ತಾ|| ೧೬-೭-೪೭ ಬುಧವಾರ

ಪೌರಸಭಾ ಭವನದಲ್ಲಿ ಸೈಕಲ್ ತೆರಿಗೆ ಏಕೆ?

ರಾಜಧಾನಿಯ ಪೌರಸಭೆಯು ಅಂಗಳಕ್ಕೆ ಬರುವ ಬೈಸಿಕಲ್ಲುಗಳ ಮೇಲೆಲ್ಲಾ ಇತ್ತೀಚೆಗೆ ಮೂರು ಕಾಸಿನಂತೆ ತೆರಿಗೆಯನ್ನು ವಸೂಲು ಮಾಡಲಾಗುತ್ತಿದೆ. ಹಿಂದೆ ಯಾವಾಗಲೂ ಮತ್ತು ಇತರ ಯಾವ ಕಛೇರಿಗಳಲ್ಲಿಯೂ ಜಾರಿಯಲ್ಲಿಲ್ಲದ ಈ ವಿಚಾರವು ಪುರನಿವಾಸಿಗಳಿಗೆ ಅತ್ಯಂತ ಅಸಮಾಧಾನವನ್ನುಂಟುಮಾಡಿರುತ್ತದೆ.

ಮಾರ್ಕೆಟ್ಟು, ಸಿನಿಮಾ, ವಸ್ತು ಪ್ರದರ್ಶನ ಮುಂತಾದ ಜನಸಂದಣಿಯ ಸ್ಥಳಗಳಲ್ಲಿ ಈ ಬಗೆಯ ತೆರಿಗೆಯನ್ನು ಹಾಕುವ ವಾಡಿಕೆ ಇರುತ್ತದೆ. ಬೈಸಿಕಲ್ಲುಗಳ ಮೇಲಿನ ರಕ್ಷಣೆಗೆ ಮಾತ್ರವೇ ಅಲ್ಲದೆ ಮೇಲ್ಕಂಡ ಸ್ಥಳಗಳ ಒಳಭಾಗದಲ್ಲಿ ಸಂಚಾರದ ಅಡಚಣೆಯನ್ನು ತಪ್ಪಿಸುವುದಕ್ಕಾಗಿಯೂ ಈ ಏರ್ಪಾಡನ್ನು ಮಾಡಲಾಗುತ್ತಿದೆ. ಇಂತಹ ಕಡೆಗಳಿಗೆ ಹೋಗುವವರೂ ಸಹ ವ್ಯಾಪಾರದ ಉದ್ದೇಶದಿಂದಲೇ ಹೋಗುತ್ತಾರೆ. ಹಣವನ್ನು ವೆಚ್ಚ ಮಾಡಲು ಸಿದ್ಧರಾಗಿರುತ್ತಾರೆ. ಅಲ್ಲಿ ತೆರಿಗೆಯನ್ನು ವಸೂಲು ಮಾಡಿದರೆ ಯಾರಿಗೂ ವಿಶೇಷ ಅಸಮಾಧಾನವಾಗುವುದಿಲ್ಲ.

ಪೌರಸಭೆಯು ಒಂದು ಸಾರ್ವಜನಿಕ ವ್ಯವಹಾರದ ಕೇಂದ್ರ ಸ್ಥಾನ. ಅಲ್ಲಿ ಯಾರೂ ಯಾವ ವ್ಯಾಪಾರಕ್ಕಾಗಿಯೂ ಹೋಗುವುದಿಲ್ಲ. ಯಾವ ಸಾಮಾನನ್ನೂ ಅಲ್ಲಿ ಕೊಳ್ಳಬೇಕಾಗಿರುವುದಿಲ್ಲ; ಯಾವುದನ್ನೂ ನೋಡಬೇಕಾಗಿಯೂ ಇಲ್ಲ. ಕೋರ್ಟು, ಕಛೇರಿ ಮುಂತಾದ ಸಾರ್ವಜನಿಕ ಸಂಸ್ಥೆಗಳಂತೆ ಇದೂ ಒಂದು ಆಡಳಿತ ವ್ಯವಹಾರದ ಸ್ಥಾನ. ಸ್ವಂತ ಕೆಲಸಗಳಿಗಾಗಿಯೇ ಅಲ್ಲದೆ ಸಾರ್ವಜನಿಕ ಕರ್ತವ್ಯಗಳಿಗಾಗಿಯೂ ಅಲ್ಲಿಗೆ ಜನರು ಹೋಗಿ ಬರಬೇಕಾಗುವುದು. ಒಬ್ಬರೇ ದಿನಕ್ಕೆ ನಾಲ್ಕಾರು ಬಾರಿ ಹೋಗಿ ಬರಬೇಕಾಗುವ ಸಂದರ್ಭಗಳೂ ಇರುತ್ತವೆ. ಪೌರಸಭೆ ಮತ್ತು ಟ್ರಸ್ಟ್‌ಬೋರ್ಡ್ ಈ ಎರಡು ಸಂಸ್ಥೆಗಳೂ ಒಂದೇ ಭವನದಲ್ಲಿ ಇರುವುದರಿಂದ ಎರಡು ಕಡೆಗೆ ಸಂಬಂಧಪಟ್ಟ ಜನರೂ ಅಲ್ಲಿಗೇ ಹೋಗಬೇಕಾಗುತ್ತದೆ. ವಿವಿಧ ಇಲಾಖೆಗಳ ಕಂಟ್ರಾಕ್ಟುಗಳನ್ನು ತೆಗೆದುಕೊಂಡಿರುವವರೂ, ಅವರ ಕಡೆಯವರೂ ಹತ್ತಾರು ಬಾರಿ ಅಲ್ಲಿಗೆ ಹೋಗಿ ಬರುವರು. ಇವರುಗಳೆಲ್ಲರೂ ಎಷ್ಟು ಸಾರಿ ಬಂದರೆ ಅಷ್ಟು ಸಾರಿಯೂ ಬೈಸಿಕಲ್ಲುಗಳಿಗೆ ತೆರಿಗೆಯನ್ನು ಕೊಡಬೇಕೆಂದು ಹೇಳುವುದು ಯುಕ್ತ ಅಲ್ಲ.

ವಿವಿಧ ಭಾಗಗಳ [illegible] ಪ್ರತಿನಿತ್ಯ [illegible] ಅಲ್ಲಿಗೆ ಪ್ರತಿನಿತ್ಯವೂ ಹೋಗಬೇಕಾಗಿದೆ. ಒಂದು ತೆರಿಗೆಯನ್ನು [illegible] ಈ ಬಗೆಯ [illegible] ತೆರಿಗೆಯ [illegible] ಬೈಸಿಕಲ್ಲುಗಳ ಮೇಲೆ [illegible] ತೆರಿಗೆಯನ್ನು [illegible] ಬೈಸಿಕಲ್ಲುಗಳು [illegible] ಹೋಗಿರುವಲ್ಲಿ ಕೆಲವು ನಿಮಿಷಗಳ ಕಾಲ ಪೌರಸಭೆಯ ಆವರಣದೊಳಕ್ಕೆ ಪ್ರವೇಶಿಸುವುದರಿಂದ ಬೈಸಿಕಲ್ಲುಗಳಿಗೆ ಸುಂಕವನ್ನು ಕೊಡಬೇಕಾಗಿರುವುದು ಸರಿಯಲ್ಲ. ಈ ತೆರಿಗೆಯನ್ನು ವಸೂಲು ಮಾಡಿದಾಗಲೂ ಯಾವ ಬಿಲ್ಲೆ ಅಥವಾ ಟಿಕೆಟುಗಳನ್ನೂ ಸಹ ಕೊಡುತ್ತಿಲ್ಲವೆಂದು ತಿಳಿದುಬಂದಿದೆ. ಇದರಿಂದ ಬೈಸಿಕಲ್ಲುಗಳ ರಕ್ಷಣೆಯ ಜವಾಬ್ದಾರಿಗೆ ಯಾವ ಆಧಾರವೂ ಸಹ ಇಲ್ಲದಂತಾಗಿರುತ್ತದೆ. ಮೇಲಾಗಿ ಬೈಸಿಕಲ್ಲುಗಳ ಮೇಲಿನ ರಕ್ಷಣೆಯ ಭಾರವನ್ನು ಹೊರುವ ಕಾರಣದಿಂದ ಮೂರು ಕಾಸಿಗಾಗಿ ಇಷ್ಟೊಂದು ದೊಡ್ಡ ಜವಾಬ್ದಾರಿಯನ್ನು ವಹಿಸುವ ವ್ಯವಸ್ಥೆಯೂ ಸಹ ಅಗತ್ಯವಿಲ್ಲ. ಆದರಿಂದ ಪೌರಸಭೆಗೆ ಬರತಕ್ಕಂಥ ವರಮಾನವು ಅತ್ಯಲ್ಪ. ಸಾರ್ವಜನಿಕರಿಗೆ ಆಗುವ ಅಸಮಾಧಾನವು ಅಪಾರ. ಬೇರೆ ಯಾವ ಸಾರ್ವಜನಿಕ ಕ್ಷೇತ್ರದಲ್ಲಿಯೂ ಇಲ್ಲದ ಇಂತಹ ಹೊರೆಯನ್ನು ಪೌರಸಭೆಯವರು ಕೂಡಲೇ ರದ್ದು ಮಾಡಿ ಮಹಾಜನರಿಗೆ ಉಂಟಾಗುವ ಅಸಮಾಧಾನವನ್ನು ನಿವಾರಿಸಬೇಕೆಂದು ನಾವು ಕೋರುತ್ತೇವೆ.

ನವಾಬನನ್ನು ಓಡಿಸಲು ಟ್ಯೂನೀಷಿಯದಲ್ಲಿ ಚಳುವಳಿ

ಉತ್ತರ ಆಫ್ರಿಕದ ಟ್ಯೂನೀಷಿಯದಲ್ಲಿ ಅರಬ್ ಮತ್ತು ಫ್ರೆಂಚರ ರಾಷ್ಟ್ರೀಯ ಚಳುವಳಿ ಬಲವಾಗಿ ನಡೆಯುವಂತಿದೆ. ಅಲ್ಲಿಯ ನವಾಬನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುವ ಸಂಚೂ ಸಹ ನಡೆಯುತ್ತಿದೆಯೆಂದೂ ವರದಿಯಾಗಿದೆ.

ಭತ್ಯದಲ್ಲಿ ಸಾರ್ವಭೌಮರಿಗೆ ಏನೂ ಉಳಿಯುವುದಿಲ್ಲ

ಗ್ಲೋಬ್] ಲಂಡನ್ ೧೩

ಬ್ರಿಟಿಷ್ ದೊರೆಗಳಿಗೆ ಪಾರ್ಲಿಮೆಂಟಿನವರ ರಾಜಾದಾಯದಲ್ಲಿ [illegible]೦ ಪೌಂಡುಗಳ ಭತ್ಯವನ್ನು ಕೊಡಲಾಗುತ್ತಿದೆ. ಈಗ ಪೌಂಡುಗಳ ಬೆಲೆ ಇಳಿದಿರುವುದರಿಂದ ಕೆಲಸಗಾರರ ಕೂಲಿ, ವಿಶ್ರಾಂತಿವೇತನ, ಮತ್ತು ಇತರ ವೆಚ್ಚಗಳನ್ನು ಕೊಟ್ಟರೆ ಅವರ ಸ್ವಂತಕ್ಕೆ ಏನೂ ಉಳಿಯುವುದಿಲ್ಲವೆಂದು ಹೇಳಲಾಗಿದೆ.

ಯೆಹೂದಿಗಳ ಮೇಲೆ ಮಾರ್ಷಲ್ ಲಾ

ಅಪಹರಿಸಲ್ಪಟ್ಟಿರುವ ಬ್ರಿಟಿಷ್ ಸಾರ್ಜೆಂಟರು ಟೆಲ್‌ಅವೀವ್ ನಗರದ ಪಟ್ಟಣದಲ್ಲಿರುವರೆಂಬ ಸಂದೇಹದ ಮೇರೆ ಅದರಲ್ಲಿ ೧೪ ಸಹಸ್ರ ಯೆಹೂದ್ಯರು ವಾಸ ಮಾಡುತ್ತಿರುವ ಅರ್ಧ ಮೈಲಿ ಉದ್ದ ಮತ್ತು ಕಾಲು ಮೈಲಿ ಅಗಲದ ಭೂಪ್ರದೇಶದಲ್ಲಿ ಮಾರ್ಷಲ್ ಲಾ ಜಾರಿಯಾಗಿದೆ.

೪ ದಿನಗಳಲ್ಲಿ ೭೮ ಭೂಕಂಪಗಳು

ಕಳೆದ ನಾಲ್ಕು ದಿನಗಳಲ್ಲಿ ಕಚ್ಛದ ಭುವನ್ ಎಂಬಲ್ಲಿ ಸುಮಾರು ೭೮ ಬಾರಿ ಭೂಕಂಪವಾಗಿದೆ.

ಕ್ರಯಕ್ಕಿದೆ
(ಕೂಡಲೆ ಸ್ವಾಧೀನಕ್ಕೆ ಕೊಡಲಾಗುತ್ತೆ)

ಭಾರಿ ಬಂಗ್ಲೆ, ಫೋರ್ಟ್‌ಕೊಪ್ಪಲಿನಲ್ಲಿ, ವಿಶಾಲವಾದ ಕಾಂಪೌಂಡಿನಲ್ಲಿರುವ ತಾರಸಿ ಬಂಗ್ಲೆ, ಔಟ್‌ಹೌಸ್, ಗ್ಯಾರೇಜ್ ಸಹ.
ವಿವರಗಳಿಗೆ:-
ಆರ್. ಗುಂಡೂರಾವ್,
ಮನೆ, ಜಮೀನು, ಸಾಲ ಕೊಡಿಸುವ ಏಜಂಟ್, ಮೈಸೂರು.

ಶ್ರೀ
ಹಾಲಸಿದ್ಧೇಶ್ವರ ಸಂಗೀತ
ನಾಟಕ ಮಂಡಳಿ, ಹಲಗೇರಿ
ಇವರು ಮೈಸೂರು ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ
ಪ್ರತಿ ದಿನ ರಾತ್ರಿ ೧೦ ಘಂಟೆಗೆ
ಬ್ಲ್ಯಾಕ್ ಮಾರ್ಕೆಟ್
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.
ಟಿಕ್ಕಜೆಟ್ಟೆಪ್ಪ, ಪ್ರೊಪ್ರೈಟರ್

ಶ್ರೀ ಗಣೇಶ ಟಾಕೀಸಿನಲ್ಲಿ ತಾ|| ೧೬-೭-೪೭ ರಿಂದ
○ ದಿನವಹಿ ಮೂರು ಆಟಗಳು ○
● ಸಂಗೀತ ಕಲಾ ಕೌಶಲ್ಯದಿಂದ ಕೂಡಿದ ಸಾಮಾಜಿಕ ಹಿಂದಿ ಚಿತ್ರ ●
ಸುನೊ ಸುನಾತಾ ಹೂ
ತಾರಾಗಣ:— ○ ಕೆ. ಸಿ. ಡೇ, ○ ಮನಮಾಲ, ○ ಉಲ್ಹಾಸ್.

Distributors:-



ಇಂಡಿಯಾ ಸೂಪರ್
ಟಾಂಗಾ ಟೈರು
ಬಹಳ ಕಾಲ ಬಾಳಿಕೆ ಬರುವುದು [illegible] ಸ್ವಾಭಾವಿಕವಾದ ರಬ್ಬರಿನಿಂದ [illegible] ಪ್ರಮಾಣ ಮಾಡುವಂತೆ [illegible] ಒಂದು ಸಾರಿ ಉಪಯೋಗಿಸಿ ನೋಡಿ
—: ಸಿಕ್ಕುವ ಸ್ಥಳ :—
ಸಿ. ಪು. ಎಂ. ಚೆನ್ನಯ್ಯ,
ಅಶೋಕಾ ರಸ್ತೆ, :: ಮೈಸೂರು.

ವುಡ್‌ಲ್ಯಾಂಡ್ಸ್
12-7-47 ರಿಂದ
ಕಿಕ್ಕಿರಿದ ೧೧ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)
ನಾವು ಇಬ್ಬರು (ತಮಿಳು)
ಅಮಾವಾಸ್ಯೆ ಪ್ರಯುಕ್ತ 18-7-47 ನೇ ಶುಕ್ರವಾರ 3-30 ಕ್ಕೆ ಮ್ಯಾಟಿನಿ
-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ವುಡ್‌ಲ್ಯಾಂಡ್ಸ್
ಬೆಳಗಿನ ಪ್ರದರ್ಶನ
18-7-47 ರಿಂದ
4 ದಿನಗಳು ಮಾತ್ರ
ಬೆಳಗ್ಗೆ 10-30 ಕ್ಕೆ
ಕುಂವಾರಾ ಬಾಪ್
(ಹಿಂದಿ)
: ಪಾತ್ರ :
ಕಿಶೋರ್ ಸಾಹು- ಪ್ರತಿಮಾದಾಸಗುಪ್ತ

ರಾಜಕಮಲ್
ತಾ|| ೧೧-೭-೪೭ ರಿಂದ
೩ ನೇ ವಾರ
ಬೈರಾಂಖಾನ್
—: ಭೂಮಿಕೆ :—
ಮೆಹತಾಬ್, ಜಾಗೀರ್ದಾರ್.

ಪ್ರತಿ ದಿನ ನಾಟಕ ಉಂಟು
ಶ್ರೀ
ಮಾರುತೀ ವಿಲಾಸ
ನಾಟಕ ಸಭಾ
ಮೈಸೂರು ಟೌನ್‌ಹಾಲಿನಲ್ಲಿ
ಶನಿವಾರ, ಬುಧವಾರ, ಸೋಮವಾರ
ರಾತ್ರಿ 10 ಕ್ಕೆ
ಭಾನುವಾರ, ಗುರುವಾರ, ಶುಕ್ರವಾರ
ಸಂಜೆ 7 ಕ್ಕೆ ಮ್ಯಾಟಿನಿ
ಮಹಾತ್ಮಾ ಕಬೀರ್
ಲಕ್ಷ್ಮಮ್ಮ, ಕಮಲಮ್ಮ, ಶಾರದ, ಲಲಿತ, ಮುಂತಾದವರ ಅಭಿನಯ

ಒಲಿಂಪಿಯಾ ಥಿಯೇಟರ್, ಮೈಸೂರು
೧೮-೭-೪೭ ರಿಂದ [illegible] ನೇ ವಾರ
ರಾಜಕುಮಾರಿ
[illegible]

Edited printed and published by A. K. Natarajan at the Sadhvi Press, D. Subbaiah Road, Mysore

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೭—೭—೪೭ [ಸಂಚಿಕೆ ೨೮೯

ಆಗಸ್ಟ್ ೧೫ ನೇ ತಾ|| ಸ್ವಾತಂತ್ರ್ಯ ದಿನಾಚರಣೆ

ಯೂನಿಯನ್ನು ಮತ್ತು ಸಂಸ್ಥಾನಗಳು

ಪಾಟಿಯಾಲಾ ಅರಸರ ಅಧ್ಯಕ್ಷತೆಯುಕ್ತ ಸರ್ದಾರ್ ಪಟೇಲರ ಬಳಿಗೆ ಹೋದ ಸಂಸ್ಥಾನದ ಪ್ರತಿನಿಧಿಗಳಿಗೂ ಪಟೇಲರಿಗೂ ನಡೆದ ಸಮಾಲೋಚನೆಗಳ ಫಲವಾಗಿ ಈ ಕೆಳಗೆ ಕಂಡ ಅಂಶಗಳು ನಿರ್ಧರಿಸಲ್ಪಟ್ಟಿರುತ್ತವೆ — ಸಂಸ್ಥಾನಗಳು ನೇರವಾಗಿ ಭಾರತ ಸರ್ಕಾರದೊಡನೆ ವ್ಯವಹರಿಸುವುವು, ಅವುಗಳಿಗೆಲ್ಲಾ ಸಮಾನವಾಗಿ ಅನ್ವಯಿಸುವ ವಿಚಾರಗಳಲ್ಲಿ ಮಾತ್ರ ಭಾರತ ಸರ್ಕಾರದ ಸಂಸ್ಥಾನ ವ್ಯವಹಾರ ಶಾಖೆಯು ಪ್ರವೇಶಿಸುವುದು, ಯಾವುದಾದರೊಂದು ಇಲಾಖೆಯಿಂದ ಸಂಸ್ಥಾನಕ್ಕೆ ನ್ಯಾಯ ದೊರೆಯದಿದ್ದರೆ ಆಗ ರಾಜಕೀಯ ಶಾಖೆಯು ಮಧ್ಯದಲ್ಲಿ ಕೈಹಾಕುವುದು ಸಂಸ್ಥಾನಗಳೂ ಭಾರತ ಸರ್ಕಾರವೂ ನೇರವಾಗಿ ವ್ಯವಹರಿಸುವ ಅಂಶಗಳನ್ನು ತೀರ್ಮಾನಿಸುವ ಹಕ್ಕು ಸಂಸ್ಥಾನ ಶಾಖೆಗೇ ಸೇರಿರುತ್ತದೆ

ಚೀಣದಲ್ಲಿ ಕಮ್ಯೂನಿಸ್ಟರ ಸೋಲು

ಕಮ್ಯೂನಿಸ್ಟರ ಸ್ವಾಧೀನದಲ್ಲಿದ್ದ ಟ್ಸೀನ್ಸೀ ಎಂಬ ಪಟ್ಟಣವನ್ನು ಚೀಣೀ ಸರ್ಕಾರೀ ಸೈನ್ಯಗಳು ಹಿಡಿದಿವೆ. ಬಹಳ ಆಯಕಟ್ಟಿನ ರೈಲ್ವೆಯಾದ ಪೀಕಿಂಗ್-ಟಿಯಾಂಟ್ಸಿನ್ ರೈಲ್ವೆಯನ್ನು ಸರ್ಕಾರಿ ಸೈನ್ಯಗಳು ಸ್ವಾಧೀನಪಡಿಸಿಕೊಂಡಿರುವುದರಿಂದ ಕಮ್ಯೂನಿಸ್ಟರಿಗೆ ಅಡಚಣೆಯುಂಟಾಗಿದೆಯೆಂದು ವರದಿಯಾಗಿದೆ

ರಾಜ್ಯಾಂಗ ಸಭೆಯ ಉಪಾಧ್ಯಕ್ಷರು

ಶ್ರೀ ಹೆಚ್. ಸಿ. ಮುಖರ್ಜಿ ಮತ್ತು ಸರ್ ವಿ. ಟಿ. ಕೃಷ್ಣಮಾಚಾರ್ಯರವರುಗಳು ರಾಜ್ಯಾಂಗ ಸಭೆಗೆ ಅವಿರೋಧವಾಗಿ ಉಪಾಧ್ಯಕ್ಷರುಗಳಾಗಿ ಆರಿಸಲ್ಪಟ್ಟರುವರೆಂದು ಗೊತ್ತಾಗಿದೆ. ಸರ್ ವಿ. ಟಿ. ಯವರು ಸಂಸ್ಥಾನ ಪ್ರತಿನಿಧಿಗಳು.

ಉಚಿತ ವಾಚನಾಲಯ

ಮೈಸೂರು ವಾಣಿವಿಲಾಸ ಮೊಹಲ್ಲೆಯ ಜಯಮ್ಮಶಾಸ ಮಂದಿರದಲ್ಲಿರುವ ತಿಲಕ ಸಂಘದಲ್ಲಿ ಪ್ರತಿ ದಿನ ಸಂಜೆ ೫ ರಿಂದ ೭ ಗಂಟೆಯ ವರೆಗೆ ಸಂಘದ ವಾಚನಾಲಯವು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲ್ಪಟ್ಟಿರುತ್ತದೆ. ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ.

ಪಾಕಿಸ್ತಾನ ರಾಜ್ಯಾಂಗ ಸಭೆಗೆ ನಾಜಿಮುದ್ದೀನರು ಅಧ್ಯಕ್ಷರು

ಬಂಗಾಳದ ಮುಸ್ಲಿಂ ಲೀಗ್ ನಾಯಕ ಖ್ವಾಜಾ ನಾಜಿಮುದ್ದೀನರು ಪಾಕಿಸ್ತಾನ ರಾಜ್ಯಾಂಗ ಸಭೆಗೆ ಪ್ರಧಾನ ಅಧ್ಯಕ್ಷರಾಗಿ ಆರಿಸಲ್ಪಡುವ ಸಂಭವ ಹೆಚ್ಚಾಗಿದೆ.

ತಿರುವಾಂಕೂರಿನಲ್ಲಿ ಕಾಲೇಜು ಬಂದು

ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರಿಂದ, ಅವರು ಕಾಲೇಜಿಗೆ ಪ್ರವೇಶಿಸಬಾರದೆಂದು ತಿರುವಾಂಕೂರಿನ ಕಾಲೇಜುಗಳನ್ನು ಮುಚ್ಚಲಾಗಿದೆ

ರೈಲುಗಳ ವಿಭಜನೆ

ಪಂಜಾಬ್ ಮತ್ತು ಬಂಗಾಳಗಳ ವಿಭಜನೆಯ ಪರಿಣಾಮವಾಗಿ ಆ ಪ್ರಾಂತಗಳಲ್ಲಿ ಓಡುವ ರೈಲುಗಳನ್ನೂ ಸಹ ವಿಭಜಿಸಿ ಹಂಚುಗಳಿಂದ ವಿಭಾಗಿಸಲಾಗಿದೆ

ಸ್ವಾತಂತ್ರ್ಯ ದಿನಾಚರಣೆ

ವಿದೇಶೀಯರ ಆಳ್ವಿಕೆಯಿಂದ ಹಿಂದೂಸ್ಥಾನವು ಆಗಸ್ಟ್ ೧೫ಕ್ಕೆ ಬಿಡುಗಡೆ ಹೊಂದುವುದರಿಂದ ಆ ದಿನವನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸುವಂತೆ ಇಂಡಿಯಾ ಸರ್ಕಾರದವರು ಸೂಚನೆ ಕೊಡುವರೆಂದು ನಿರೀಕ್ಷಿಸಲಾಗಿದೆ. ಆ ದಿನವನ್ನು ಸಾರ್ವಜನಿಕ ರಜಾ ದಿನವನ್ನಾಗಿ ಪರಿಗಣಿಸಬೇಕೆಂಬ ಸಲಹೆಯೂ ಸಹ ಕೊಡಲ್ಪಟ್ಟಿದೆ. ಎಲ್ಲ ಸಾರ್ವಜನಿಕ ಕಟ್ಟಡಗಳ ಮೇಲೆಯೂ ಆ ದಿನ ಭಾರತ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕೆಂಬ ವಿಷಯವೂ ಸಹ ಪರ್ಯಾಲೋಚನೆಯಲ್ಲಿದೆ

ಪೌರಸಭಾಧ್ಯಕ್ಷ ಚುನಾವಣೆ

ಸ್ವಂ ಸು] ಚಾಮರಾಜನಗರ ೧೭

ಇಲ್ಲಿನ ಪೌರಸಭಾಧ್ಯಕ್ಷರ ಚುನಾವಣೆಯು ಈ ತಿಂಗಳು ೨೬ ನೇ ತಾ|| ನಡೆಯುವುದು. ಶ್ರೀ ಬಿ. ನಾರಾಯಣ್ ಮತ್ತು ಎಸ್. ವೆಂಕಟಸುಬ್ಬಯ್ಯರು ಸ್ಪರ್ಧಿಸುವರು.

ಸ್ಟುಡಿಯೋ ಆರಂಭ

ಸ್ವಂ ಸು] ನಂಜನಗೂಡು ೧೬

ಕಳೆದ ೭ ನೇ ತಾ|| ಸೋಮವಾರ ಇಲ್ಲಿನ ಹಿಂದೂ ಟಾಕೀಸಿನ ಮಾಲಿಕರಾದ ಶ್ರೀಮತಿ ಶಾರದಮ್ಮನವರು ಪೌರಸಭಾಧ್ಯಕ್ಷರಾದ ಶ್ರೀ ಎ. ಎನ್. ಎಸ್. ಆರಾಧ್ಯರ ಅಧ್ಯಕ್ಷತೆಯಲ್ಲಿ ಶಾರದಾ ಫಿಲಂ ಸ್ಟುಡಿಯೋ ಎಂಬ ಚಿತ್ರ ತಯಾರಿಕೆಯ ಸಂಸ್ಥೆಯನ್ನು ಪ್ರಾರಂಭಿಸಿದರು

ದೋಣಿ ಮುಳುಗಿತು

ಈ ಪಟ್ಟಣದ ... ದೋಣಿ ... ನದಿಯನ್ನು ದಾಟುತ್ತಿದ್ದ ಸಮಯದಲ್ಲಿ ನದಿಯ ನೀರಿನಲ್ಲಿ ಮುಳುಗಿತು. ... ಬದುಕಿದರು

— —

ಮೊಹಲ್ಲಾ ಪರಿಶೀಲನೆ

ಮೈಸೂರು ನಗರದ ಪೌರಸಭೆಯ ಕಮಿಷನರ್ ಅವರು ಈ ತಿಂಗಳ ೧೦ ನೇ ತಾ|| ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ ... ಮೊಹಲ್ಲಾ ... ನಗರದ ... ಭೇಟಿ ಕೊಟ್ಟರು. ಆ ಮೊಹಲ್ಲಾ ಸ್ಥಳದ ನಿವಾಸಿಗಳು ... ಬೇಕೆಂದು ... ಮಾಡಿದರು.

ಅಧಿಕಾರಿಗಳ ವರ್ಗಾವರ್ಗಿ

ಸ್ವಂ ಸು ವರದಿ] ಬೆಂಗಳೂರು ೧೬

ಶಿವಮೊಗ್ಗ ಜಿಲ್ಲಾಧಿಕಾರಿಗಳಾದ ಶ್ರೀ ಎನ್. ಎಸ್. ಹಿರಣ್ಣಯ್ಯನವರನ್ನು ಮೈಸೂರು ಪೌರಸಭಾಧ್ಯಕ್ಷರನ್ನಾಗಿ ಮಾಡಿರುವುದರಿಂದ ಸರ್ಕಾರದವರು ಈ ಕೆಳಗೆ ಕಂಡ ಬದಲಾವಣೆಗಳನ್ನು ಮಾಡಿರುವರು:—

ಶ್ರೀ ಎಸ್. ಮುನಿನಂಜಪ್ಪನವರು ಶಿವಮೊಗ್ಗೆಯ ಜಿಲ್ಲಾಧಿಕಾರಿಗಳು, ಎ. ಎ. ಆರ್. ... ಆಹಾರ ಶಾಖೆಯ ... ಎಂ. ಕೆ. ... ಸಿವಿಲ್ ಸಪ್ಲೈ ಕಂಟ್ರೋಲರ್, ಎಚ್. ಕಾಂತರಾಜೇ ಅರಸರವರು ಆಹಾರ ... ಡೆಪ್ಯುಟಿ ಕಮಿಷನರ್, ಸೈಯದ್ ಅಬ್ದುಲ್ ರಹಮಾನ್ ಬ್ಯಾರಿಸ್ಟರ್ ... ಮಾರ್ಕೆಟ್ ...

ಅ|| ಕಮಿಷನರುಗಳ ವರ್ಗಾವರ್ಗಿ

ಶ್ರೀಗಳಾದ ಕೆ. ಎಲ್. ನರಸಿಂಹಯ್ಯನವರು ಕೆ. ಜಿ. ಎಫ್. ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರು, ಕೆ. ಶ್ರೀರಂಗರಾಜುರವರು ಬೆಂಗಳೂರು ನಗರ ನ್ಯಾಯಾಧೀಶರ, ಎಂ. ಎಸ್. ರಾಮನಾಥರವರು ಚಿಕ್ಕಬಳ್ಳಾಪುರದ ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್, ಟಿ. ಒ. ವಿ. ರಾವ್ ರವರು ಹಾಸನದ ... ಅಧಿಕಾರಿಗಳು, ಎಂ. ಅಬ್ದುಲ್ ಕರೀಂರವರು ಆಹಾರ ಶಾಖೆಯ ಡೈರೆಕ್ಟರರ ಅಸಿಸ್ಟೆಂಟರು ಎಂ. ಎಸ್. ... ಆಹಾರ ಶಾಖೆಯ ಅಡಿಷನಲ್ ಡೈರೆಕ್ಟರರ ಅಸಿಸ್ಟೆಂಟ್, ಎ. ಶ್ರೀನಿವಾಸಲು ನಾಯ್ಡುರವರು ಮೈಸೂರು ... ಅಧಿಕಾರಿಗಳು, ... ಸಕಲೇಶಪುರದ ಸಬ್ ಡಿವಿಷನ್ ಆಫೀಸರು, ... ಹಾಸನದ ಸಬ್ ಡಿವಿಷನ್ ಆಫೀಸರು, ಎಸ್. ಎನ್. ... ಮಧ್ಯ ಜಿಲ್ಲೆ ... ಆಫೀಸರು, ... ಅಡಿಷನಲ್ ... ರಿಗಳು, ಎಂ. ಚನ್ನರೆಡ್ಡಿಯವರು ... ಮತ್ತು ಡಿ. ಎಸ್. ನಂಜುಂಡೇಗೌಡರು ... ಡಿವಿಷನ್ ಅಧಿಕಾರಿಗಳು, ಎಸ್. ಆರ್. ... ಎಸ್. ಎಂ. ... ಅಸಿಸ್ಟೆಂಟ್ ... ಮತ್ತು ... ಜಿಲ್ಲೆ ... ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ

ಅಸಿಸ್ಟೆಂಟ್ ಕಮಿಷನರುಗಳಾಗಿ ಭಡ್ತಿ

ಶ್ರೀಗಳಾದ ಟಿ. ಎಲ್. ಶ್ರೀನಿವಾಸ

ಸೇತುವೆ ಕುಸಿದು ರೈಲು ಮೊಗುಚಿಕೊಂಡಿತು

ಮೊನ್ನೆ ರಾತ್ರಿ ಪೂನಾ-ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಗಾಡಿಯು ಚಿಂಚೋಲಿ ಮತ್ತು ರಾಯ್ ಬಾಗುಗಳ ಮಧ್ಯೆ ಸೇತುವೆಯೊಂದನ್ನು ದಾಟುತ್ತಿದ್ದಾಗ ಅನಾಹುತ ಸಂಭವಿಸಿತು. ರೈಲ್ವೆ ಸೇತುವೆಯು ಮುರಿದಿದ್ದುದೂ ಮತ್ತು ರೈಲ್ವೆ ಕಂಬಿಗಳನ್ನು ಕೂಡಿಸುವ ಪಟ್ಟಿಗಳನ್ನು ಕಿತ್ತುಹಾಕಿದ್ದುದೂ ಈ ದುರ್ಘಟನೆಗೆ ಕಾರಣವೆಂದು ಹೇಳಲಾಗಿದೆ. ಎಂಜಿನ್ನೂ ಮತ್ತು ಏಳು ಗಾಡಿಗಳೂ ಕಂಬಿ ತಪ್ಪಿ ಬಿದ್ದುಹೋಗಿವೆ ೪೦ ಮಂದಿಗೆ ಗಾಯಗಳಾಗಿವೆ. ೧೨ ಜನ ಸ್ಥಿತಿ ಚಿಂತಾಜನಕವಾಗಿದೆ.

ತಾತ್ಕಾಲಿಕ ಸರ್ಕಾರದ ಪುನರ್ರಚನೆ

ಈ ವಾರಾಂತ್ಯದಲ್ಲಿ ವೈಸ್‌ರಾಯರು ಈಗಿರುವ ತಾತ್ಕಾಲಿಕ ಸರ್ಕಾರವನ್ನು ಪುನರ್ರಚಿಸಬಹುದೆಂದು ಹೇಳಲಾಗಿದೆ. ಎಲ್ಲ ಶಾಖೆ ಕೆಲಸಕಾರ್ಯಗಳಲ್ಲಿಯೂ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದು ಲೀಗ್ ಸಚಿವರಿಗೆ ಹೇಳಲಾಗುವುದು ಪುನರ್ರಚಿತ ತಾತ್ಕಾಲಿಕ ಸರ್ಕಾರದಲ್ಲಿ ಲೀಗ್ ಸದಸ್ಯರಿಗೆ ಯಾವ ಶಾಖೆಯ ಅಧಿಕಾರವೂ ವಹಿಸಲ್ಪಡುವುದಿಲ್ಲ

ಪಾಕಿಸ್ತಾನಕ್ಕೆ ವಿದೇಶೀ ಗವರ್ನರುಗಳು

ಮಿ|| ಜಿನ್ನಾರವರು ಪಾಕಿಸ್ತಾನದ ಗವರ್ನರ್ ಜನರಲ್ಲಾಗುವುದು ನಿಶ್ಚಯವಾದ ಮೇಲೆ ... ಅವನ್ನು ತಪ್ಪಿಸಲು ಮಿ|| ಜಿನ್ನಾರವರು ಪಾಕಿಸ್ತಾನದ ವಿವಿಧ ಪ್ರಾಂತಗಳಿಗೆ ಆಂಗ್ಲರನ್ನೇ ಗವರ್ನರುಗಳಾಗಿ ನೇಮಿಸಬೇಕೆಂದು ಲೀಗ್ ವಲಯಗಳಲ್ಲಿ ಹೇಳಲಾಗಿದೆ

ಪಾಕಿಸ್ತಾನದ ನೌಕರಿಗೆ ರಷ್ಯದ ಉಮೇದುವಾರರು

ಮುಸ್ಲಿಮೇತರ ಸರ್ಕಾರೀ ನೌಕರರೂ, ಕಾಲೇಜು ವಿದ್ಯಾರ್ಥಿಗಳೂ ಪಾಕಿಸ್ತಾನದಲ್ಲಿ ಕೆಲಸ ಮಾಡಲು ತಾವು ಸಿದ್ಧರಾಗಿರುವುದಾಗಿ ತಿಳಿಸಿ ಅರ್ಜಿ ಸಲ್ಲಿಸಿರುವರೆಂದು ವರದಿಯಾಗಿದೆ. ರಷ್ಯಾ ಮತ್ತು ಫ್ರಾನ್ಸುಗಳ ಮಹಮ್ಮದೀಯರಿಂದ ... ಅರ್ಜಿಗಳು ಬರಲಿರುವುವೆಂದು ತಿಳಿದುಬಂದಿದೆ.

ಒನ್ಯಾಷನಲ್ ಪಿಕಾಡಿಯ ಅವಾಡನ್ನು ... ತಾ ವರೆಗೆ ಗ್ರೀಸಿನಲ್ಲಿ ೬,೦೦೦ ವರ್ಷ ವ್ಯಕ್ತಿಗಳನ್ನಾಗಿ ಮಾಡಲಾಗಿದೆ

---

೧೨ ... ಜಿಲ್ಲೆ ... ಮತ್ತು ... ಸಬ್ ಡಿವಿಷನ್ ... ಹೋದ ... ಸರ್ಕಾರ ... ಎಸ್. ರಂಗಚಂದ್ರ ಗುಪ್ತರನ್ನು ... ಸಬ್ ಡಿವಿಷನ್ ಅಧಿಕಾರಿಯನ್ನಾಗಿ, ಟಿ. ... ಶಿವಮೊಗ್ಗ ಜಿಲ್ಲೆಗೆ ... ಅಧಿಕಾರಿಗಳನ್ನಾಗಿಯೂ ವರ್ಗಾಯಿಸಲಾಗಿದೆ

ಸೂಚನೆ

ಜೀವನ ಪತ್ರಿಕೆಯ ಚಂದಾ ... ಪ್ರಸ್ತುತ ... ಬರೆದು ... ತಿಳಿಸಬೇಕು —ವ್ಯವಸ್ಥಾಪಕ

ಸಾಧ್ವಿ

ತಾ|| ೧೭-೭-೪೭ ಗುರುವಾರ

ಸಂಸ್ಥಾನಗಳೊಡನೆ ಮತ್ತೆ ಸಂಧಾನ

ಬರುವ ತಿಂಗಳ ಮಧ್ಯ ಭಾಗದಿಂದ ಭರತ ಖಂಡದಲ್ಲಿ ಎರಡು ಡೊಮಿನಿಯನ್ನುಗಳು ಸ್ಥಾಪಿಸಲ್ಪಡುವುವಷ್ಟೆ. ಅವುಗಳಲ್ಲಿ ಯಾವುದಾದರೊಂದಕ್ಕೆ ಸಂಸ್ಥಾನಗಳೆಲ್ಲವೂ ಸೇರಬೇಕಾಗುವುದೆಂದೂ, ಅವು ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲವೆಂದೂ ಹೇಳಲಾಗುತ್ತಿದೆ. ಪಾರ್ಲಿಮೆಂಟ್ ಸಭೆಯಲ್ಲಿ ಇಂಡಿಯಾ ಸ್ವಾತಂತ್ರ್ಯ ಮಸೂದೆಯನ್ನು ಮಂಡಿಸುವಾಗಲೂ ಸಹ ಬ್ರಿಟಿಷ್ ಪ್ರಧಾನಿಗಳು ಇದನ್ನು ಒತ್ತಿ ಹೇಳುತ್ತಿದೆ. ಇನ್ನೂ ಯಾವ ನಿರ್ಧಾರವನ್ನೂ ಮಾಡದೆ ತಟಸ್ಥವಾಗಿರುವ ಸಂಸ್ಥಾನಗಳು ಒಂದು ತೀರ್ಮಾನಕ್ಕೆ ಬರುವಂತೆ ಮಾಡಲು ಮತ್ತೆ ವೈಸರಾಯರಿಂದ ಸಧ್ಯದಲ್ಲಿಯೇ ಸಂಧಾನವು ಆರಂಭವಾಗುವುದೆಂದು ಹೇಳಲಾಗಿದೆ.

ಹಿಂದೂಸ್ಥಾನದ ವಿಚಾರವಾಗಿ ಹಿಂದೆ ಬ್ರಿಟಿಷ್ ಘೋಷಣೆಯು ಹೊರಟಾಗಲೇ ಸಂಸ್ಥಾನಗಳ ವಿಚಾರವನ್ನೂ ಸ್ಪಷ್ಟವಾಗಿ ನಿರ್ಧರಿಸಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಅದನ್ನು ಅಷ್ಟು ಗೋಜಲು ದೀರ್ಘಂತೆಯೇ ಬಿಡಲಾಯಿತು. ಸಂಸ್ಥಾನಗಳು ಒಂದಲ್ಲ ಮತ್ತೊಂದು ರಾಜ್ಯಾಂಗದಲ್ಲಿ ಸೇರುವುದು ಒಳ್ಳೆಯದೆಂದೂ, ಅವು ಪ್ರತ್ಯೇಕವಾಗುಳಿಯಲು ಬ್ರಿಟಿಷ್ ಸರ್ಕಾರದ ಒಪ್ಪಿಗೆ ಇರುವುದಿಲ್ಲವೆಂದೂ ಸಾರಲಾಗಿತ್ತು. ಆದರೆ ಅವುಗಳ ಮೇಲೆ ಯಾವ ವಿಧವಾದ ಒತ್ತಾಯವೂ ಇರಲಿಲ್ಲ. ಆದುದರಿಂದಲೇ ತಿರುವಾಂಕೂರು, ಹೈದರಾಬಾದು - ಮುಂತಾದುವುಗಳು ಸ್ವತಂತ್ರವಾಗಿರುವುದಾಗಿ ಹೇಳಲು ತೊಡಗಿದುವು. ಇತರ ಕೆಲವು ಸಂಸ್ಥಾನಗಳು ಯಾವ ನಿರ್ಧಾರಕ್ಕೂ ಬಾರದೆ ಇನ್ನೂ ತಟಸ್ಥವಾಗಿಯೇ ಇರುವುವು.

ಇತ್ತೀಚೆಗೆ ಸಹ ಬ್ರಿಟಿಷ್ ಆಳರಸರು ಸಂಸ್ಥಾನಗಳಿಗೆ ಕೇವಲ ಉಪದೇಶ ರೂಪವಾದ ಸಲಹೆಗಳನ್ನು ಕೊಟ್ಟಿರುತ್ತಾರೆಯೇ ವಿನಾ ಯಾವ ಒತ್ತಾಯವನ್ನೂ ಮಾಡುವುದಿಲ್ಲ. ಇಷ್ಟರಿಂದಲೇ ಮೇಲ್ಕಂಡ ಸಂಸ್ಥಾನಗಳು ದಾರಿಗೆ ಬರುವ ಭರವಸೆಯು ಇರುವುದಿಲ್ಲ.

ಆದರೆ ಸಂಸ್ಥಾನಗಳು ಪ್ರತ್ಯೇಕವಾಗಿರುವ ವಿಚಾರದಲ್ಲಿ ಈಗಾಗಲೇ ಹುಟ್ಟಿರುವ ಪ್ರತಿಭಟನೆಯು ಹಲವು ಸಂಸ್ಥಾನಿಕರಿಗೆ ಭೀತಿಯನ್ನುಂಟುಮಾಡಿರುವಂತಿದೆ. ಹೀಗೆ ಅವುಗಳನ್ನು ಪ್ರತ್ಯೇಕವಾಗಿ ಬಿಡುವುದು ಸರಿಯಲ್ಲವೆಂಬ ಭಾವನೆಯು ಬ್ರಿಟಿಷರಿಗೂ ಬಂದಿರುವಂತಿದೆ. ಆದುದರಿಂದ ಎಲ್ಲ ಸಂಸ್ಥಾನಗಳೂ ಯಾವುದಾದರೊಂದು ಡೊಮಿನಿಯನ್ನಿಗೆ ಸೇರುವಂತೆ ಮಾಡಲು ಬರುವ ವಾರ ದೆಹಲಿಯಲ್ಲಿ ಸಂಧಾನವು ನಡೆಯುತ್ತದೆ. ವೈಸರಾಯರೇ ಅದರ ಸೂತ್ರಧಾರಿಗಳಾಗಿರುತ್ತಾರೆ. ತಿರುವಾಂಕೂರಿನ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರೇ ಮುಂತಾದವರಿಗೆ ತ್ವರಿತವಾದ ಕರೆಯೂ ಹೋಗಿರುತ್ತದೆ. ಅಲ್ಲದೆ ಬೀರಾರ್ ಮುಂತಾದ ಪ್ರದೇಶಗಳ ಮೇಲೆ ಹೈದರಾಬಾದಿನ ನೈಜಾಮರಿಗಿರುವ ಅಧಿಕಾರದ ವಿಚಾರವೂ ವಿಮರ್ಶೆಯಾಗುತ್ತಿದೆ. ಈ ಸಂಧಾನಗಳಿಂದ ಎಲ್ಲ ಸಂಸ್ಥಾನಗಳೂ ಡೊಮಿನಿಯನ್ನುಗಳೊಡನೆ ಸೇರುವಂತೆ ನಿರ್ಧಾರವಾಗುವ ಸೂಚನೆಗಳಿರುತ್ತವೆ. ಈ ಮಧ್ಯೆ ಕಳೆದುಳಿದಿದ್ದ ಅನೇಕ ಸಣ್ಣ ಪುಟ್ಟ ಸಂಸ್ಥಾನಗಳು ಒಂದು ಗುಂಪು ಇಂಡಿಯಾ ರಾಜ್ಯಾಂಗ ಸಭೆಯಲ್ಲಿಯೇ ಸೇರಲು ಮುಂದೆ ಬಂದಿರುತ್ತವೆ. ಇನ್ನು ಕೆಲವರು ತಿರುವಾಂಕೂರು, ಹೈದರಾಬಾದು ಮತ್ತು ಇತರ ಹಲ ಕೆಲವು ಸಂಸ್ಥಾನಗಳೂ ಸಹ ತಮ್ಮ ಪ್ರತ್ಯೇಕತೆಯ ಮನೋಭಾವನೆಯನ್ನು ತ್ಯಜಿಸಿ ಹೊಸ ಡೊಮಿನಿಯನ್ನುಗಳೊಡನೆ ಸೇರಿ ಸಹಕರಿಸಿ ಕೆಲಸ ಮಾಡುವಂತಾಗುವ ಸುಸಮಯವನ್ನು ಸಧ್ಯದಲ್ಲಿಯೇ ಇದಿರು ನೋಡಬಹುದಾಗಿದೆ.

೧೫ ಸಾವಿರ ಗಿರಣಿ ಕಾರ್ಮಿಕರ ಮುಷ್ಕರ

ದಕ್ಷಿಣ ಕಾಸನದ ಪ್ರಕಾರ ಕಾರ್ಮಿಕರನ್ನೊಬ್ಬನನ್ನು ಸ್ಥಾಪಿತ ಸರ್ಕಾರದವರು ದಸ್ತಗಿರಿ ಮಾಡಿ ಗಡೀಪಾರು ಮಾಡಿರುವುದನ್ನು ಪ್ರತಿಭಟಿಸಲು ಬೊಂಬಾಯಿಯ ವಿವಿಧ ಗಿರಣಿಗಳ ೧೫ ಸಹಸ್ರ ಮಂದಿ ಕೆಲಸಗಾರರು ಮೊನ್ನೆಯಿಂದ ಮುಷ್ಕರ ಹೂಡಿರುವರು.

ಕಲ್ಕತ್ತೆಯ ಬಳಿ ಗಲಭೆ

ಕಲ್ಕತ್ತೆಯ ಬಳಿ ಅಕೋಲಾ ಎಂಬ ಗ್ರಾಮದಲ್ಲಿ ಕೋಮುವಾರು ಗಲಭೆ ಪ್ರಾರಂಭವಾಗಿ ೪೮ ಮನೆಗಳಿಗೆ ಬೆಂಕಿ ಇಡಲಾಗಿದೆ; ೪೫ ಮನೆಗಳು ಲೂಟಿಯಾಗಿವೆ; ಒಂದು ಲಕ್ಷ ರೂ. ಬೆಲೆ ಬಾಳುವ ಒಣಗಿದ ಪದಾರ್ಥಗಳು ಹಾಳಾಗಿವೆ; ೧೫೦೦ ಗುಡಿಸಲು ಭಸ್ಮವಾಗಿವೆ.

Municipal High School, CHAMARAJANAGAR.

WANTED

One Graduate teacher with English as one of his optionals.

Two Graduate Teachers with History as one of their optionals.

One Graduate Teacher with Geography as one of his optionals.

Two Science Graduates (one P.C. M. & one C.B.Z.)

One Graduate who has passed Senior Accountancy and allied subjects, or a B.Com or a person with Diploma in Commerce.

Pay according to Qualifications and Merit in grade Rs 40-4-60 with D. A. at Government Rates.

One Urdu Munshi, who has passed Moulvi Examination. Salary in grade Rs. 30-3-45 with D. A at Government Rates.

One Drill Instructor who has passed S S L. C and posses a Senior Certificate of Y.M C A Bangalore.

Applications should reach the undersigned on or before 30-7-1947.

Sd/-H Halappa,
SECRETARY.

ಕ್ರಯಕ್ಕಿದೆ
(ಕೂಡಲೆ ಸ್ವಾಧೀನಕ್ಕೆ ಕೊಡಲಾಗುತ್ತೆ)

ಭಾರಿ ಬಂಗ್ಲೆ, ಫ್ರೊಂಟಿಕೊಪ್ಪಲಿನಲ್ಲಿ, ವಿಶಾಲವಾದ ಕಾಂಪೌಂಡಿನಲ್ಲಿರುವ ಕಾರುಗಿ ಬಂಗ್ಲೆ, ಔಟ್‌ಹೌಸ್, ಗ್ಯಾರೇಜ್ ಸಹ.

ವಿವರಗಳಿಗೆ:-
ಆರ್. ಗುಂಡೂರಾವ್,
ಮನೆ, ಜವಿ. [illegible], ಸಾಲ ಕೊಡುವ
ಏಜೆಂಟ್, ಮೈಸೂರು.

ಶ್ರೀ ಕನ್ಯಕಾ ಪರಮೇಶ್ವರೀದೇವಸ್ಥಾನ
[illegible] ([illegible])
ಮೈಸೂರು.

ಬೇಕಾಗಿದ್ದಾರೆ

ಮೇಲ್ಕಂಡ ದೇವಸ್ಥಾನದ ವ್ಯವಸ್ಥಾಪಕರ ಕೆಲಸಕ್ಕೆ ಕನಿಷ್ಠ ಹೈಸ್ಕೂಲು ವ್ಯಾಸಂಗ ಮುಗಿಸಿರುವ ಯೋಗ್ಯರಾದವರು ಬೇಕಾಗಿದ್ದಾರೆ. ಯೋಗ್ಯತಾನುಸಾರ ಸಂಬಳ ಕೊಡಲಾಗುವುದು. ಇಷ್ಟವುಳ್ಳವರು ಯೋಗ್ಯತಾ ಪತ್ರಗಳೊಡನೆ ಅರ್ಜಿಗಳನ್ನು ೩೧-೭-೪೭ ರೊಳಗಾಗಿ ಕಳುಹಿಸಬೇಕು.

ಪಿ. ಗೋಪಾಲಕೃಷ್ಣಶೆಟ್ಟಿ
ಬಿ. ಎ. ಬಿ. ಎಲ್
ಧರ್ಮದರ್ಶಿ ೧೬-೭-೪೭

ಶ್ರೀ ಹಾಲಸಿದ್ಧೇಶ್ವರ ಸಂಗೀತ

ನಾಟಕ ಮಂಡಳಿ, ಹುಲಗೇರಿ ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦ ಘಂಟೆಗೆ

★ ಬ್ಲಾಕ್ ಮಾರ್ಕೆಟ್ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್.

ಫ್ರೆಡ್‌ಲ್ಯಾಂಡ್ಸ್

೧೮-7-47 ರಿಂದ
ಚಿತ್ರರಿದ ೧೧ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬಿ (ತಮಿಳು)

ಅಮಾವಾಸ್ಯೆ ಪ್ರಯುಕ್ತ 18-7-47 ನೇ ಶುಕ್ರವಾರ 3-30 ಕ್ಕೆ ಮ್ಯಾಟಿನಿ
: ಪಾತ್ರ :-
ಟಿ ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ ಆರ್.
ರಾಮಚಂದ್ರ ಮುಂತಾದವರು.

ರಾಜಕಮಲ್

ತಾ|| 18-7-47 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್ ★

—: ಭೂಮಿಕೆ :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಚಂದ್ರಪ್ರಭಾ [illegible] ಮತ್ತು ಷಾ ನವಾಜ್

From 18-7-47 for 4 days daily at 10-30 A M

Unknown Guest

with Victor Gory, Pamela Blake, Veda Ann Borg

ಫ್ರೆಡ್‌ಲ್ಯಾಂಡ್ಸ್

ಬೆಳಗಿನ ಪ್ರದರ್ಶನ
18-7-47 ರಿಂದ
4 ದಿನಗಳು ಮಾತ್ರ
ಬೆಳಗ್ಗೆ 10-30 ಕ್ಕೆ

ಕುನಾರಾಬಾಪ್

(ಹಿಂದಿ)
: ಪಾತ್ರ :
ಅಶೋಕ್‌ಕುಮಾರ್ [illegible]

Edited, printed and published by A. R. Nagaraja at the Sadhvi Press, D. Subbiah Road, Mysore

ಫೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೫] ಶನಿವಾರ ೧೯—೭—೪೭ [ಸಂಚಿಕೆ ೨೯೦

ಕೇಂದ್ರ ಸರ್ಕಾರದಲ್ಲಿ ಸಂಸ್ಥಾನಿಕ ಸಚಿವರೇ ?

ಹಂಗಾಮಿ ಕೇಂದ್ರ ಸರ್ಕಾರಗಳು

ನಾಡಿದ್ದಿನಿಂದ ಈಗಿರುವ ಕೇಂದ್ರ ತಾತ್ಕಾಲಿಕ ಸರ್ಕಾರದ ಬದಲು ಭಾರತ ಮತ್ತು ಪಾಕಿಸ್ಥಾನಗಳ ಎರಡು ಹಂಗಾಮಿ ಸರ್ಕಾರಗಳು ಸ್ಥಾಪಿತವಾಗುವುವೆಂದೂ, ಸಚಿವರಲ್ಲಿ ಬದಲಾವಣೆಗಳೇನೂ ಅಗತ್ಯವಿಲ್ಲವೆಂದೂ ವರದಿಯಾಗಿದೆ. ಈ ವಿಷಯ ಅಧಿಕೃತ ಪ್ರಕಟಣೆ ಹೊರಬೀಳುವುದೆಂದು ನಿರೀಕ್ಷಿಸಲಾಗಿದೆ

ಹಡಗು ಮುಳುಗಿ ೩೩೦ ಜನರ ಮರಣ

ರಾಮದಾಸ್ ಎಂಬ ಹಡಗು ಬೊಂಬಾಯಿ ಒಂದರಿಗೆ ೧೩ ಮೈಲಿ ದೂರದಲ್ಲಿ ನಿನ್ನೆ ಬಿರುಗಾಳಿಗೆ ಸಿಕ್ಕಿ ಮುಳುಗಿಹೋಯಿತೆಂದು ವರದಿಯಾಗಿದೆ. ಇದರಲ್ಲಿದ್ದ ೭೦೦ ಜನ ಪ್ರಯಾಣಿಕರ ಪೈಕಿ ಕೇವಲ ೨೦ ಮಂದಿ ಬದುಕಿರುವರು. ತೀರದಲ್ಲಿ ಎರಡು ಮೃತ ದೇಹಗಳು ಕಂಡುಬಂದವು. ಮುಳುಗಿದ ಹಡಗಿನ ... ಜನ ಪ್ರಯಾಣಿಕರನ್ನು ದೋಣಿಯಲ್ಲಿ ... ಬದುಕಿಸಿರುವರು ... ೫೦ ಮಂದಿ ... ಕಳೆದ ೨೦ ವರ್ಷಗಳಲ್ಲಿ ಇಂತಹ ಭಾರಿ ಅನಾಹುತವಾಗಿರಲಿಲ್ಲ ಹೇಳಲಾಗಿದೆ

ಭಾರತ ಯೂನಿಯನ್ನಿನ ಸಂಸ್ಥಾನದ ಸಚಿವರು

ಆಗಸ್ಟ್ ೧೫ ನೇ ತಾರೀಖಿನ ಹೊತ್ತಿಗೆ ಅನೇಕ ಸಂಸ್ಥಾನಗಳು ಭಾರತ ಯೂನಿಯನ್ನಿನಲ್ಲಿ ಸೇರುವುವೆಂದೂ, ಇದರ ಡೊಮಿನಿಯನ್ ಸರ್ಕಾರದಲ್ಲಿ ಸಂಸ್ಥಾನ ಪ್ರತಿನಿಧಿ ಒಬ್ಬರು ಸಚಿವರಾಗ ಸಂಭವವಿದೆಯೆಂದೂ ಹೇಳಲಾಗಿದೆ

WANTED

A Manager for Stores Section. Applications will be received up to 26-7-47. Applicants should have passed S S L C. Cash security of Rs. 250/- and agreement to serve for TWO YEARS essential. Pay Rs. ... in the grade 30-2-40 plus D. A. Rs. 15 per month.

K. N. NAGARAJA SETTY.
Hon Secretary,
Sri Kanyaka Parameshwari Co-operative Society, Ltd.
MYSORE

ವುಡ್ ಲ್ಯಾಂಡ್ಸ್
ಜಗನ ಪ್ರದರ್ಶನ
18-7-47 ರಿಂದ
4 ದಿನಗಳು ಮಾತ್ರ
...
ಕುನಾಲ ... ಬಾಲ
...
... ಶಾಮ-ಪ್ರಹ್ಲಾದ ...

॥ವಂದೇ ಮಾತರಂ॥

ಸಾಧ್ವಿ
ಐದನೆಯ ವಾರ್ಷಿಕೋತ್ಸವ

ತಾ॥ ೨೦-೭-೪೭ ನೇ ಭಾನುವಾರ ಸಂಜೆ ೬ ಘಂಟೆಗೆ

ಮೈಸೂರು ಡಿ. ಸುಬ್ಬಯ್ಯನವರ ರಸ್ತೆಯಲ್ಲಿರುವ ಶ್ರೀರಾಮ ಪ್ರೆಸ್ಸಿನಲ್ಲಿ "ಸಾಧ್ವಿ" ಪತ್ರಿಕೆಯ ಐದನೆಯ ವಾರ್ಷಿಕೋತ್ಸವವು ನಡೆಯುತ್ತದೆ. ಮೈಸೂರು ಕಾಂ॥ ಸಮಾಜ ಅಧ್ಯಕ್ಷರಾದ

ಶ್ರೀಮಾನ್ ಕೆ. ಟಿ. ಭಾಷ್ಯಂ

ರವರು ಅಗ್ರಾಸನವನ್ನು ವಹಿಸುವರು.

ನಿಮ್ಮ ಬರುವಿಕೆಯನ್ನು ... ಆಗರಂ ರಂಗಯ್ಯ, ಸಂಚಾಲಕ.

ಕಾರ್ಯಕ್ರಮ

೧ ಮಂಗಳ-ಚರಣೆ:- ... ಕುಮಾರಿ ... ಎಸ್ ...
೨ ಗೋಷ್ಠಿ. ವಾದ್ಯ:- "ದಿಗ್ವಿಜಯ" ... ವಿದ್ವಾನ್ ಎಸ್. ...
೩ ಅಧ್ಯಕ್ಷರ ಭಾಷಣ
೪ ಗಾನ:- ಸಂಗೀತ ವಿದುಷಿ ಶ್ರೀಮತಿ ನಂಜನಗೂಡು ನಾಗರತ್ನಮ್ಮ, ಪಿಟೀಲು- ಆಸ್ಥಾನ ವಿದ್ವಾನ್ ಹೆಚ್. ವಿ. ಕೃಷ್ಣಯ್ಯ, ಮೃದಂಗ- ವಿದ್ವಾನ್ ಹೆಚ್. ಟಿ. ನಾಗಣ್ಣ.
೫ ಪುಷ್ಪ, ತಾಂಬೂಲ ವಿನಿಯೋಗ

ಕಾಮಿನ್ ಕ ಮಂತ್ರಿಗಳಿಗೆ ಅಪಘಾತ

ಅಂತರ ರಾಷ್ಟ್ರೀಯ ... ಸಮ್ಮೇಳನದಲ್ಲಿ ಭಾಗವಹಿಸಿದ್ದ ಭಾರತ ಸರ್ಕಾರದ ಕಾರ್ಮಿಕ ಸಚಿವರಾದ ಶ್ರೀ ಜಗಜೀವನ ರಾಂರವರು ಹಿಂದಿರುಗುತ್ತಿದ್ದಾಗ ಬುಸ್ರಾ ಬಳಿ ವಿಮಾನ ಅಪಘಾತವಾಗಿ ಅವರ ತಲೆಗೆ ಪೆಟ್ಟು ಬಿದ್ದಿದೆ. ... ಅವರು ಬುಸ್ರಾ ... ಚಿಕಿತ್ಸೆಯನ್ನು ಪಡೆಯುತ್ತಿದ್ದು ... ವಿಮಾನದ ಕೆಲಸಗಾರರಲ್ಲೊಬ್ಬರು ... ಹೊಂದಿರುವರು.

ಅಭಿನಂದನಾ ಸಭೆ

ಮೈಸೂರು ೧೯

ರಾಜಧಾನಿಯ ಸುಪ್ರಸಿದ್ಧ ಕೀರ್ತನಕಾರರಾದ ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಗಳು ದ್ವಾರಕಾ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಶಂಕರಾಚಾರ್ಯರವರಿಂದ ಕೀರ್ತನ ಕಲಾಸಿದ್ಧಿ ಎಂಬ ಪ್ರಶಸ್ತಿಯನ್ನು ಪಡೆದಿರುವುದಕ್ಕಾಗಿ ಅವರನ್ನು ಅಭಿನಂದಿಸಲು ರಾಜಧಾನಿಯ ಹರಿಕಥಾ ಸಂಘದವರು ನಾಳೆ ಸಂಜೆ ೪ ಗಂಟೆಗೆ ಶ್ರೀ ವೇಣುಗೋಪಾಲ ಸ್ವಾಮಿಯವರ ದೇವಾಲಯದಲ್ಲಿ ಅಭಿನಂದನಾ ಸಭೆಯನ್ನು ಏರ್ಪಡಿಸಿರುವರು. ನಗರದ ... ನೇ ನ್ಯಾಯಾಧೀಶರಾದ ಶ್ರೀ ಕೆ. ಗೋಪಾಲಾಚಾರ್ ಅರಸಿನವರ ಅಧ್ಯಕ್ಷತೆ ವಹಿಸುವರು.

ಭಾಷಣ

ಬೊಮ್ಮಗೊಂಡೀಯಾದ ... ನಾಳೆ ಬೆಳಿಗ್ಗೆ ... ಗಂಟೆಗೆ ಪಂಡಿತ ಮಾದಮನಾಥ ... ವೇದಗಳ ವಿಚಾರವಾಗಿ ಭಾಷಣ ಮಾಡುವರು.

ಕ್ರಯಕ್ಕಿದೆ
(ಕೂಡಲೆ ಸ್ವಾಧೀನಕ್ಕೆ ಕೊಡಲಾಗುತ್ತೆ)

ಭಾರಿ ಬಂಗ್ಲೆ, ... ಪಿಕೊಪ್ಪಲಿನಲ್ಲಿ, ... ಕಾಂಪೌಂಡಿನಲ್ಲಿರುವ ಕಾರು, ಬಂಗ್ಲೆ, ಔಟ್ ಹೌಸ್, ಗ್ಯಾರೇಜ್ ಸಹ.

ವಿವರಗಳಿಗೆ:-
ಆರ್. ಗುಂಡೂರಾವ್,
ಮನೆ, ಜಮೀನು, ಸಾಲ ಕೊಡಿಸುವ ಏಜೆಂಟ್, ಮೈಸೂರು.

ವುಡ್ ಲ್ಯಾಂಡ್ಸ್
19-7-47 ರಿಂದ
ಕಿಕ್ಕಿರಿದ ೧೩ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು.)

ನಾವಿಬ್ಬರು
(ತಮಿಳು)

ಪಾತ್ರ:
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವರು.

ವಿದ್ಯಾಧಿಕಾರಿಗಳ ಮೇಲೆ ಶಿಸ್ತಿನ ಕಾರ್ಯಕ್ರಮ

ಸ್ವಂ. ಸು. ಪ್ರೆ॥] ಬೆಂಗಳೂರು ೧೯

ಕೆಲವು ತಿಂಗಳ ಹಿಂದೆ ವಿದ್ಯಾ ಇಲಾಖೆಯ ಉನ್ನತಾಧಿಕಾರಿಗಳೊಬ್ಬರು ಹಲವು ಕಡೆಗಳಲ್ಲಿ ಭಾಷಣ ಮಾಡುವಾಗ ಒಂದು ಕೋಮಿನ ಮೇಲೆ ಅನುಚಿತವಾದ ಟೀಕೆಗಳನ್ನು ಮಾಡಿ ಅನೇಕರ ಅಸಮಾಧಾನಕ್ಕೆ ಕಾರಣವನ್ನುಂಟುಮಾಡಿದ್ದ ಬಗ್ಗೆ ಸರ್ಕಾರದವರು ಇಲಾಖೆಯ ಮೂಲಕ ವಿಚಾರಣೆಯನ್ನು ನಡೆಸಿ ಅವರ ಹೇಳಿಕೆಯನ್ನು ತೆಗೆದುಕೊಂಡರೆಂದೂ, ಅದರ ಮೇಲೆ ಸದರಿ ಅಧಿಕಾರಿಗಳ ವರ್ತನೆಯು ಆಕ್ಷೇಪಣೀಯವಾಗಿದ್ದುದರಿಂದ ಅವರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆಯೆಂದೂ ತಿಳಿದು ಬಂದಿದೆ. ಅವರ ಈಗಿನ ಗ್ರೇಡಿನಲ್ಲಿ ಇನ್ನೆರಡು ವರ್ಷಗಳ ಬಡ್ತಿಯನ್ನು ಕೊಡಲಾಗದೆ ದೂ ಮತ್ತು ಮುಂದಿನ ಗ್ರೇಡನ್ನೂ ಸಹ ಕೊಡಕೂಡದೆಂದೂ ಆಜ್ಞೆಯಾಗಿರುವುದಾಗಿ ವರದಿಯಾಗಿದೆ. ಇನ್ನು ಮುಂದೆ ಇಂತಹ ರೀತಿಯಲ್ಲಿ ವರ್ತಿಸಲಾಗದೆಂದು ಎಚ್ಚರಿಕೆಯನ್ನೂ ಸಹ ಕೊಡಲಾಗಿದೆಯೆಂದು ಹೇಳಲಾಗಿದೆ.

ನ್ಯೂಸ್ ಪ್ರಿಂಟ್ ಕಳ್ಳಪೇಟೆ ತಿದ್ದು ಪಡಿ

ಈಗಿರುವ ನ್ಯೂಸ್ ಪ್ರಿಂಟ್ ಕಳ್ಳಪೇಟೆ ಯನ್ನು ... ಸರ್ಕಾರದವರು ಹಲವು ಬಗೆಯ ಕ್ರಮಗಳನ್ನು ಮಾಡಿರುವರು. ಇನ್ನು ಮುಂದೆ ಯಾವ ಪತ್ರಿಕೆಯನ್ನು ಹೊರಡಿಸಬೇಕಾದರೂ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗುವುದಿಲ್ಲ. ಪತ್ರಿಕಾ ಕಾಗದದ ಮಾರಾಟದ ನಿಯಮಗಳು ಮಾತ್ರ ಜಾರಿಯಲ್ಲಿರುತ್ತವೆ. ಮುದ್ರಣ ಕಾಗದದ ಸರಬರಾಜಿನ ಕೋಟಾ ಪದ್ಧತಿಯನ್ನು ರದ್ದುಮಾಡಲಾಗುವುದು. ಈ ಕಾಗದದ ಬೆಲೆಯನ್ನು ಸರ್ಕಾರದವರು ಆಗಿಂದಾಗ್ಗೆ ನಿಗದಿಮಾಡುವರು.

§ ಸಂಸ್ಥಾನದಿಂದ ಹೊರಕ್ಕೆ ಇಲ್ಲಿಗೆ ... ರಫ್ತುಮಾಡಲು ಸರ್ಕಾರದವರ ... ನಿರ್ಬಂಧವನ್ನು ವಿಧಿಸಿರುವರು

ಶ್ರೀ ಕನ್ಯಕಾ ಪರಮೇಶ್ವರೀದೇವಸ್ಥಾನ
ದೊಡ್ಡಪೇಟೆ (ಅಶೋಕಾ ರಸ್ತೆ)
ಮೈಸೂರು.

ಬೇಕಾಗಿದ್ದಾರೆ

ಮೇಲ್ಕಂಡ ದೇವಸ್ಥಾನದ ಮ್ಯಾನೇಜರ ಕೆಲಸಕ್ಕೆ ಕೊನೆಯ ಪಕ್ಷ ಹೈಸ್ಕೂಲು ವ್ಯಾಸಂಗ ಮುಗಿಸಿರುವ ಯೋಗ್ಯರಾದವರು ಬೇಕಾಗಿದ್ದಾರೆ. ಯೋಗ್ಯತಾನುಸಾರ ಸಂಬಳ ಕೊಡಲಾಗುವುದು. ಇಚ್ಛೆಯುಳ್ಳವರು ಯೋಗ್ಯತಾ ಪತ್ರಗಳೊಡನೆ ಅರ್ಜಿಗಳನ್ನು ೨೫ 7 47 ರ ಒಳಗಾಗಿ ಕಳುಹಿಸಬೇಕು.

ಪಿ. ಗೋಪಾಲಕೃಷ್ಣ ಶೆಟ್ಟಿ
ಬಿ. ಎ. ಬಿ. ಎಲ್.
6-7-47 ಅಧ್ಯಕ್ಷರು

... ಕ್ರಯಕ್ಕಿದೆ.

೧) ... ಬಳಿ ... ಕಟ್ಟಿರುವುದು.
೨) ... ಜಮೀನು
... ಕೃಷ್ಣ ... ಮತ್ತು ... ಉಂಟು.
...
ಆರ್. ಗುಂಡೂರಾವ್,
ಮೈಸೂರ ಬ್ಯಾಂಕ್ ಬಿಲ್ಡಿಂಗ್, ಮೈಸೂರು.

ಸಾಧ್ವಿ

ತಾ|| ೧೯-೭-೪೭ ಶನಿವಾರ

ಸ್ವಾತಂತ್ರ್ಯ ದಿನಾಚರಣೆ ಮತ್ತು ಮೈಸೂರು

ಬರುವ ತಿಂಗಳ ಮಧ್ಯಭಾಗದಿಂದ ಭರತ ಖಂಡವು ಸ್ವಾತಂತ್ರ್ಯ ಪದವಿಯನ್ನು ಪಡೆಯುತ್ತದೆ. ಅಂದಿನಿಂದ ಬ್ರಿಟಿಷರು ತಮ್ಮ ಅಧಿಕಾರವನ್ನು ತ್ಯಜಿಸಿ ಸ್ವದೇಶಕ್ಕೆ ಹಿಂದಿರುಗುತ್ತಾರೆ. ಎರಡು ಶತಮಾನಗಳಿಂದ ಹಿಂದೂಸ್ಥಾನದ ಮೇಲಿದ್ದ ಬ್ರಿಟಿಷರ ಸಾಮ್ರಾಜ್ಯಶಾಹಿಯು ಅಂದಿಗೆ ಮಾಯವಾಗುತ್ತದೆ. ಯಾವ ಸ್ವಾತಂತ್ರ್ಯ ಸಿದ್ಧಿಗಾಗಿ ಅಸಂಖ್ಯಾತರಾದ ದೇಶಭಕ್ತರು ಅನಿರ್ವಚನೀಯವಾದ ಕಷ್ಟ ಪರಂಪರೆಗಳನ್ನು ಅನುಭವಿಸಿದರೋ ಆ ಧ್ಯೇಯ ಸಾಧನೆಯು ಕರಗತವಾಗಲು ಅಂದು ಅಂಕುರಾರ್ಪಣವು ನಡೆಯುತ್ತದೆ.

ಭಾರತದ ಇತಿಹಾಸದಲ್ಲಿ ಸ್ಮರಣೀಯವಾದ ಅಂತಹ ಘಟನೆಯನ್ನು ಯುಕ್ತವಾದ ರೀತಿಯಲ್ಲಿ ಆಚರಿಸಲು ಭಾರತ ಸರ್ಕಾರದವರೇ ಹಲವು ವ್ಯವಸ್ಥೆಗಳನ್ನು ಮಾಡಲಿರುವರು. ಪರದಾಸ್ಯ ವಿಮೋಚನೆಯಿಂದುಂಟಾದ ಸಂತೋಷದ ಸಂಭ್ರಮದಲ್ಲಿ ಸಕಲರೂ ಭಾಗಿಗಳಾಗಬೇಕೆಂದು ಬಯಸಿ ಆ ದಿವಸ ಇಡೀ ದೇಶದಲ್ಲೆಲ್ಲಾ ಸಾರ್ವಜನಿಕ ಸಂಸ್ಥೆಗಳಿಗೆ ರಜಾ ಕೊಟ್ಟು ಅದನ್ನು ನಾಡ ಹಬ್ಬದಂತೆ ಸಂಗಡಿಸಬೇಕೆಂದು ಭಾವಿಸಲಾಗಿದೆ. ಅಲ್ಲದೆ ಎಲ್ಲ ಕಚೇರಿಗಳ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸಿ, ಪ್ರಜೆಗಳ ಸ್ವಾತಂತ್ರ್ಯ ಪ್ರೇಮವನ್ನು ಪ್ರಕಾಶ ಪಡಿಸಬೇಕೆಂದು ಕೋರಲಾಗಿದೆ. ಭಾರತ ಕೇಂದ್ರ ಸರ್ಕಾರದವರೇ ಅವಕ್ಕಾಗಿ ತಕ್ಕ ವ್ಯವಸ್ಥೆಗಳನ್ನು ಮಾಡಲಿರುವರೆಂದು ಹೇಳಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರಜೆಗಳಿಗೂ, ಪ್ರಭುತ್ವದವರಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. [illegible] ವಿಮೋಚನೆ ದೊರೆತ ರಾಷ್ಟ್ರೀಯ ಹಬ್ಬದ ದಿನವದು.

ಸಕಲ ಬಾಂಧವರೂ ಆ ದಿನವನ್ನು ಅತ್ಯಂತ ವೈಭವದಿಂದ ಆಚರಿಸುವರು. ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಈ ಉತ್ಸವವನ್ನು ಸಂಭ್ರಮದಿಂದ ನೆರವೇರಿಸಲು ನಮ್ಮ ಸರ್ಕಾರದವರೇ ಏರ್ಪಡಿಸಬೇಕು. ಇಲ್ಲಿಯೂ ಸಹ ಆ ದಿವಸ ಸಾರ್ವಜನಿಕ ರಜಾ ದಿನವಾಗಿ ಪ್ರಕಟಿಸಬೇಕು. ಎಲ್ಲಾ ದೇವಾಲಯಗಳಲ್ಲಿಯೂ ವಿಶೇಷ ಪೂಜಾದಿಗಳಿಗೆ ಏರ್ಪಾಡು ಮಾಡಬೇಕು; ಎಲ್ಲೆಲ್ಲೂ ವಿದ್ಯುದ್ದೀಪ ಮಾಲೆಗಳನ್ನು ಹಾಕಿಸಬೇಕು; ಸಾಧ್ಯವಾದ ಕಡೆಗಳಲ್ಲೆಲ್ಲಾ ಬಡಬಗ್ಗರಿಗೆ ಅನ್ನದಾನದ ವ್ಯವಸ್ಥೆಯನ್ನು ಕೈಕೊಳ್ಳಬೇಕು; ಸಾರ್ವಜನಿಕ ಸ್ಥಳಗಳಲ್ಲಿ ಧ್ವಜಾರೋಹಣವನ್ನು ಮಾಡಿ, ಸಭೆಗಳನ್ನು ನಡೆಸಿ ಸ್ವಾತಂತ್ರ್ಯದ ಘೋಷಣೆಯನ್ನು ಮಾಡಬೇಕು. ಇವುಗಳಲ್ಲಿ ಅಧಿಕಾರಿಗಳು, ಮತ್ತು ಖಾಸಗಿಯವರೆಂಬ ಭೇದಗಳಿಲ್ಲದೆ ಸಕಲರೂ ಭಾಗವಹಿಸಬೇಕು. ಸಭೆ, ಮೆರವಣಿಗೆ ಮತ್ತು ಇತರ ಪ್ರದರ್ಶನಗಳಿಗೆ ಇರಬಹುದಾದ ಎಲ್ಲ ಅಡ್ಡಿಗಳನ್ನೂ ತೆಗೆದುಹಾಕಬೇಕು. ಅವುಗಳಲ್ಲಿ ಪ್ರಜೆಗಳು ಯಾವ ಅನುಮಾನವೂ ಇಲ್ಲದೆ [illegible] ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸುವರೋ ಅದರಂತೆಯೇ ಇಲ್ಲಿಯೂ ಮಾಡಲು ಸೌಲಭ್ಯಗಳನ್ನು ಕಲ್ಪಿಸಬೇಕು.

ಮೈಸೂರು ಸಂಸ್ಥಾನವು [illegible] ಈಗ ಇಡೀ ಭಾರತದ [illegible] ನವರಿಗಳಲ್ಲಿಯೂ, [illegible] ಲ್ಲಿಯೂ ಸಮಭಾಗಿಯಾಗುತ್ತದೆ. [illegible] ಬ್ರಿಟಿಷ್ ಹಿಂದೂಸ್ಥಾನದ [illegible] ನಗರಗಳೊಡನೆ ಸಹ [illegible] ಸಂಪೂರ್ಣವಾಗಿದೆ. [illegible] ರಾಜರುಗಳು [illegible] ಹೊಣೆಯು ತಪ್ಪುತ್ತದೆ. [illegible] ರಾಜರುಗಳೂ [illegible] ಆದು [illegible] ನಮ್ಮ ಸಂಸ್ಥಾನವೂ ಸಹ [illegible] ಸಂಪೂರ್ಣ [illegible] ವನ್ನು ವಹಿಸುವುದು [illegible] ಆದನ್ನು [illegible] ಸ್ವಾತಂತ್ರ್ಯ ದಿನಾಚರಣೆಯನ್ನು ಉಚಿತ ರೀತಿಯಲ್ಲಿ ನೆರವೇರಿಸಲು ನಮ್ಮ ಸರ್ಕಾರದವರೂ ಸಹ ಯೋಗ್ಯವಾದ ವ್ಯವಸ್ಥೆಗಳನ್ನು ಕೈಗೊಳ್ಳಬೇಕೆಂದು ನಾವು ಕೋರುತ್ತೇವೆ.

Edited, printed and published by A. R. Nagarajan at the Sadhvi Press D. Subbaiah Road Mysore

ಶ್ರೀ ಭಾನುವಾರ ಮ್ಯಾಟಿನಿ ಉಂಟು. ಶ್ರೀ [illegible] ನೇ ಪ್ರಯೋಗ

ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ. ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦-೩೦ಕ್ಕೆ

ಪ ರಾ ಣಿ ಮಾ ತ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು

ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಬಿಕ್ಕವಿಟ್ಟಪ್ಪ, ಪ್ರೊಪ್ರೈಟರ್.

ರಾಜಕಮಲ್

ತಾ|| 18-7-47 ರಿಂದ

ಅಪೋಲೋ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಕಿಸ್ಮತ್

—: ಭೂಮಿಕೆ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

From 18-7-47 for 4 days daily at 10-30 A M

Unknown Guest

with Victor Jory, Pamela Blake, Veda Ann Borg



[illegible]

ಅಪೆರಾ ಟಾಕೀಸ್, ಮೈಸೂರು

೧೮-೭-೪೭ ರಿಂದ ೧೪ ನೇ ವಾರ

ರಾಜಕುಮಾರಿ

[illegible] ಗಳನ್ನು ತೊಡದಾಗಿ ಸೇರಿಸಲಾಗಿದೆ

Office of the Municipal Engineer,
City Municipal Council,
Mysore, dd, 27-6-47

NOTIFICATION

Sealed tenders will be received up to [illegible] P.M. on 22-7-47 by the Municipal Engineer for the supply of road materials and consolidation [illegible] in the Municipality for the year 1947-48. Tender other than that of a registered contractor [illegible] Municipality must be accompanied with [illegible] remitted a deposit of Rs. 200/- in the [illegible] Treasury as earnest money. For full particulars please see the detailed notification on the notice board of the office of the Undersigned.

[illegible]
Municipal Engineer.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಭಾನುವಾರ ೧೦—೮—೪೭ [ಸಂಚಿಕೆ ೧

ಆಂಗ್ ಸಾನ್ ಮತ್ತು ಇತರ ಸಚಿವರ ಕೊಲೆ

ಶ್ರೀ ಸಾಧ್ವೀ ಪತ್ರಿಕಾ ಸಂಚಮ ವರ್ಷೋತ್ಸವ

ಶುಭಾಶಂಸನ ಪದ್ಯಮಾಲಿಕಾ

ಶ್ರೀಮಾನ್ ಶ್ರೀ ರಘುವೀರ ತೀರ್ಥವಿಲ ಸತ್ಪೋಷಮುತ್ಸವ [illegible] ।
[illegible] ಜ್ಯೋತಿಷ್ಪಾಪ[illegible] ॥
[illegible] ಶಕ್ತಿಮಾನ್ ಪ್ರಕಾಶವಾಲ್ಗ[illegible] ಸಂಘೇ ಶತ್ರೋಧ್ವಂಸಕಃ ।
[illegible] ಧಾಮಾತ್ಸವ ಕೃತ್ಯೇ[illegible] ॥ ೧ ॥
[illegible] ಕಾಲ ಭೃಷ[illegible] ।
[illegible] ಆರಂಭಯ[illegible] ।
[illegible] ಸುಪತ್ರಿಕಾ[illegible] ।
[illegible] ಸರ್ವಜನತಾ ಸಾಮ್ರಾಜ್ಯ[illegible] ಭೂತಲೇ ॥ ೨ ॥
[illegible] ಜನಸ್ತೋಮ [illegible] ।
ಸಾಧ್ವೀಂ ಪುರಾ ವೇಂಕಟಕೃಷ್ಣ[illegible] ।
[illegible] ॥ ೩ ॥
[illegible] ಕವಿ[illegible] ।
[illegible] ಸೇವಾ [illegible] ।
[illegible] ಪ್ರಸ್ತುತ [illegible] ದರ್ಶನೈ[illegible] ॥ ೪ ॥
[illegible] ಸಂಚಮವರ್ಷೋತ್ಸವ ಸಮಾರಂಭ[illegible] ।
[illegible] ಕಾಂಗ್ರೆಸ್ [illegible] ।
[illegible] ।
[illegible] ಭಾಗ್ಯಂ [illegible] ॥ ೫ ॥
ಸಾಧ್ವೀ ಸದ್ಯತ್ರೈಯಂ ಜನಜೀವನ ಸಾಧು [illegible] ಸದಾ ಜಯ[illegible] ।
[illegible] ಸ್ವಧರ್ಮ[illegible] ॥ ೬ ॥
[illegible] ।
[illegible] ಸದಾ ಬುಧ [illegible] ಸಕಲ ಜನ[illegible] ।
[illegible] ॥ ೭ ॥
[illegible] ।
[illegible] ।
[illegible] ಲೇಸ [illegible] ॥ ೮ ॥

ಪಾಕಿಸ್ತಾನದಲ್ಲಿ ಇಬ್ಬರು ಹಿಂದೂ ಸಚಿವರು

ಪಾಕಿಸ್ತಾನ ಡೊಮಿನಿಯನ್ ಸರ್ಕಾರದ ೭ ಮಂದಿ ಸಚಿವರ [illegible] ೨ ಮಂದಿ [illegible] ಇಬ್ಬರ[illegible] ಹಿಂದೂ[illegible] ತಿಳಿದಿದೆ.

ಹೊಸ ಸೈನ್ಯಾಧಿಕಾರಿಗಳು

[illegible] ಜನರಲ್ [illegible] ಸೈನ್ಯಾಧಿಕಾರಿಗಳಾಗಿ [illegible] ನೇಮಕ [illegible] ತಿಳಿಯಲಾಗಿದೆ

ಹೊಗದಿ ರದ್ದಾಗುವುದು

ಸ್ವಂ. ವ] ಬೆಂಗಳೂರು ೧೦

ಆಗಸ್ಟ್ ೧೫ ರಿಂದ ಮೈಸೂರು ಸಂಸ್ಥಾನವು ಬ್ರಿಟಿಷ್ ಸರ್ಕಾರಕ್ಕೆ ಕೊಡುತ್ತಿರುವ ೨೪ ಲಕ್ಷ ಮತ್ತು [illegible] ಹೊಗದಿಯು ರದ್ದಾಗುವುದೆಂದು ಹೇಳಲಾಗಿದೆ. [illegible] ಮೊದಲಾದ ವಿಷಯಗಳಲ್ಲಿ ಸಂಸ್ಥಾನವು ಸ್ವತಂತ್ರವಾಗಿದ್ದು ಭಾರತ ಡೊಮಿನಿಯನ್ನಿನೊಡನೆ ಸಹಕರಿಸಿಕೊಳ್ಳುವುದೆಂದೂ, ಭಾರತ ರಕ್ಷಣೆಗೆ ಸಂಸ್ಥಾನವು [illegible] ನೀಡುವುದಾಗಿಯೂ, ಈ ವಿಷಯಗಳನ್ನು ಸಂಧಾನದ ಮೂಲಕ ತೀರ್ಮಾನಿಸಲಾಗುವುದೆಂದೂ ತಿಳಿದು ಬಂದಿದೆ.

ದಂಡಿನ ಪ್ರದೇಶ ಮೈಸೂರಿಗೆ

ಆಗಸ್ಟ್ ೧೫ ರಿಂದ ದಂಡು ಮೈಸೂರಿಗೆ [illegible] ಬರುವುದು. [illegible] ರದ್ದಾಗುವುದರಿಂದ ಅವರ [illegible] ಪ್ರದೇಶಗಳು ಸಂಸ್ಥಾನಕ್ಕೆ ಸೇರುವುವು. ಭಾರತ ಡೊಮಿನಿಯನ್ ಸರ್ಕಾರವು ಬೇರೆ ಏರ್ಪಾಡು ಮಾಡುವವರೆಗೆ [illegible] ಮಿಲಿಟರಿ ಪ್ರದೇಶದಲ್ಲಿರುವ ಭಾರತೀಯ ಸೈನ್ಯಗಳು ಅಲ್ಲಿಯೇ ಇರುವುವು.

ಪಾಕಿಸ್ತಾನ್ ಕರೆನ್ಸಿಗಳು

ನಾಸಿಕದಲ್ಲಿರುವ ಸೆಕ್ಯೂರಿಟಿ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಈಗಾಗಲೇ ಪಾಕಿಸ್ತಾನದ ಕರೆನ್ಸಿಗಳು ಮುದ್ರಿತವಾಗುತ್ತಿವೆಯೆಂದು ವರದಿಯಾಗಿದೆ. ಆದರೆ ಈಗಿರುವ ನೋಟುಗಳಂತೆಯೇ ಇರುವುವೆಂದೂ ಆದರೆ ಭಾರತ ಸರ್ಕಾರ ಎಂದಿರುವುದನ್ನು ಪಾಕಿಸ್ತಾನ್ ಡೊಮಿನಿಯನ್ ಎಂದು ಬದಲಾಯಿಸಲಾಗಿದೆಯೆಂದೂ ಗೊತ್ತಾಗಿದೆ.

ರಾಜೇಂದ್ರ ಪ್ರಸಾದರು ಬೀಹಾರಾ ಗವರ್ನರರೇ ?

ಬೀಹಾರ್ ಪ್ರಾಂತ್ಯದ ಗವರ್ನರರಾದ ಸರ್ ಹ್ಯೂ ಡೌ ರವರು ಈಗಾಗಲೇ ತಮ್ಮ ಅಧಿಕಾರಕ್ಕೆ ರಾಜೀನಾಮೆ ಇತ್ತಿರುವರೆಂದೂ, ಕೇಂದ್ರ ಸರ್ಕಾರದ ಆಹಾರ ಸಚಿವರಾದ ಡಾ॥ ರಾಜೇಂದ್ರ ಪ್ರಸಾದರನ್ನು ಅವರ ಸ್ಥಾನದಲ್ಲಿ ಬಿಹಾರ ಗವರ್ನರರಾಗಿ ನೇಮಿಸಬಹುದೆಂದೂ ವದಂತಿಯಾಗಿದೆ.

ಕೇಂದ್ರ ಸರ್ಕಾರಕ್ಕೆ ಅಂಬೇಡ್ಕರರೇ ?

ಕೇಂದ್ರ ಸರ್ಕಾರದಲ್ಲಿ ಜಗಜೀವನರಾಮರ ಜೊತೆಗೆ ನಿಮ್ನ ವರ್ಗದ [illegible] ಪ್ರತಿನಿಧಿಯಾಗಿ ಡಾ॥ ಅಂಬೇಡ್ಕರ್‌ರವರು ಸಚಿವರಾಗಿ ನೇಮಕವಾಗುವರೆಂದು ಊಹಿಸಲಾಗಿದೆ.

ವಿದ್ಯಾರ್ಥಿ ಚಳುವಳಿಯೇ ?

ಮೈಸೂರು ೭೦

ಬೆಂಗಳೂರಿನ ಎಂಟು ಮಂದಿ ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯದವರ ಶಿಸ್ತಿನ ಕಾರ್ಯಕ್ರಮವನ್ನು ಕೈಗೊಂಡಿರುವುದನ್ನು ಖಂಡಿಸಿ ಸರ್ಕಾರದವರು ಆ ಬಗ್ಗೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳದಿರುವುದನ್ನು [illegible] ಸಂಸ್ಥಾನಾದ್ಯಂತವೂ ಚಳವಳಿ ಹೂಡುವರು [illegible] ಮುಂದಿನ [illegible] ಸಂಸ್ಥಾನದ ಎಲ್ಲಾ ಪ್ರೌಢಶಾಲೆ ವಿದ್ಯಾರ್ಥಿ [illegible] ಪ್ರತಿನಿಧಿಗಳ [illegible] ರಾಜಧಾನಿಯಲ್ಲಿ ಸಭೆ ಸೇರಬೇಕೆಂದೂ ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಶ್ರೀಕಂಠಯ್ಯನವರು ತಿಳಿಸಿರುವರು.

ಲೈಸೆನ್ಸ್ ಇಲ್ಲದೆ ಲಾರಿ ಇಟ್ಟದ್ದಕ್ಕಾಗಿ ಶಿಕ್ಷೆ

ರಾಜಧಾನಿಯ ಲಾರಿ ಕಂಟ್ರಾಕ್ಟರಾದ ಶ್ರೀ॥ ಗಜೇಂದ್ರ ರಾವ್ ಎಂಬುವರು ಲೈಸನ್ಸ್ ಇಲ್ಲದೆ ಲಾರಿ ಇಟ್ಟದ್ದರೆಂಬ ಕಾರಣದ ಮೇಲೆ ನಗರದ ೩ ನೇ ನ್ಯಾಯಾಧೀಶರು ಅವರಿಗೆ ಮೊನ್ನೆ ೫೦ ರೂಪಾಯಿ ದಂಡವನ್ನೂ ತಪ್ಪಿದರೆ ೧೫ ದಿವಸ ಸಜಾ ವಿಧಿಸಿದ್ದಾರೆ.

ಕುರುಬರ ವಿದ್ಯಾರ್ಥಿ ನಿಲಯ

ಮೇ[illegible] ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ನೀಲಗಿರಿ ಸಂಜೀವಯ್ಯನವರನ್ನು [illegible] ಕಳೆದ ಮಂಗಳವಾರ [illegible] ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀಯುತರು [illegible] ಸಂಘಕ್ಕಾಗಿ ನಾಗಮಂಗಲ [illegible] ಗಳನ್ನು ದಾನವಾಗಿ ಕೊಡುವುದಾಗಿ ಭರವಸೆ ಇತ್ತಿರುವರು.

ಜಯಪ್ರಕಾಶ ನಿಧಿ

ಕರ್ನಾಟಕ ಪ್ರಾಂತದಲ್ಲಿ ಪ್ರವಾಸ ಮಾಡಿದ ಶ್ರೀ ಜಯಪ್ರಕಾಶ ನಾರಾಯಣರವರ ನಿಧಿಗಾಗಿ ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸಿನವರು [illegible] ಸಂಗ್ರಹಿಸಿ [illegible] ನಿಧಿ ಸಂಗ್ರಹ ಮತ್ತು ಪ್ರಚಾರ [illegible] ಶ್ರೀ ಕರವನ್ನು [illegible] ತಿಳಿಸಿರುವರು.

ಮಂಗಳಾಶಾಸನ

ಪಂಚರತ್ನ ಮಾಲಿಕಾ

(ಕನ್ನಡಕವಿ ಶ್ರೀ ಕಂಠರಾವ್, ಕಿರಗೂರ, ಮೈಸೂರು ರವರಿಂದ ವಿರಚಿತವಾದುದು)

ಶ್ರೀರಮಣಿಯರುದಿಸಿಹನೃಪರ ।
ಧಾರಿಣಿಯ [illegible] ।
ನಾರಿ ಕರಯುಗದಿಂದಲೊಸ್ತುಕೆ ನೇಯಿಸುತ್ತಿರಲು ।
ನಾರಿಜಾಕ್ಷನ ಮುಖ್ಯ ಸುಮನರ ।
ನಾರ ಪೊಗಳುತ್ತಿರಲು ಭುಜಗರ ।
[illegible] ಕಳಿಪುದು ॥ ೧ ॥
[illegible] ಶಾಸನೆಂಬಲಿ ।
[illegible] ।
ಪ್ರೀತಿಯಿಂದ [illegible] ವಿದ್ಯಾಬುದ್ಧಿಗಳ ಕಲಿತು ॥
[illegible] ದೇಶಕೆ ।
ಶಾಸನಾತನೆ ಸಾಧ್ವಿಯಂ ಪಡೆ ।
[illegible] ವೆಂಕಟಕೃಷ್ಣ ಶಾಸಂ ಮಾಳ್ಳೆ ಮಂಗಳ ॥ ೨ ॥
[illegible] ಹೊರಟು ಧರೆಯಂ ।
[illegible] ।
[illegible] ಗಂಗೆಯಂದದಿ ॥
ದಿಟ್ಟ ಸಾಧ್ವೀ ನಾಡ ಜನ್ಮಸಿ ।
[illegible] ಪತ್ರಿಕೆಯಾಗಿ ಜನಿಸಿಹ ।
[illegible] ದಿನದಿ ॥ ೩ ॥
[illegible] ಲೋಕವಿ ।
[illegible] ।
[illegible] ಜನರುಗಳ ಸಂಚಾರಿ ॥
ನೀರೆ [illegible] ಸಾಧ್ವಿ ।
ನಾರಿ [illegible] ವತ್ಸರ ।
[illegible] ದಿವಸವಾಗಿ ಸೂಡು ॥ ೪ ॥
ಮಂಗಳಂ ಭಾರತದ ಭೂಮಿಗೆ ।
ಮಂಗಳಂ ಕರ್ನಾಟ ದೇಶಕೆ ।
ಮಂಗಳಂ [illegible] ವರೆಗೆ ॥
ಮಂಗಳಂ [illegible] ಜನರಿಗೆ ।
[illegible] ।
ಮಂಗಳಾತ್ಮಕನಾದ ಸಾಧ್ವೀ ಪತ್ರಿಕನಡರಕ ॥ ೫ ॥

ಬರ್ಮಾ ಯುದ್ಧ ಆಂಗ್‌ಸಾನರ ಕೊಲೆ !

[illegible] ಆಂಗ್ ಸಾನರು ಇತರ ಸಚಿವರೊಡನೆ ಬಿನ್ನೆ ಮಂತ್ರಾಲೋಚನೆ ನಡೆಸುತ್ತಿದ್ದ [illegible] ಸಭಾ ಭವನವನ್ನು [illegible] ಆಂಗ್ ಸಾನರನ್ನು [illegible] ಗುಂಡಿನಿಂದ [illegible] ದು. ಇದರಿಂದಾಗಿ [illegible] ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯ [illegible] ಕಾಂಗ್ರೆಸ್ಸಿನ [illegible] ಬಿಡಲಾಯಿತು.

ಸಾಧ್ವಿ

ತಾ|| ೨೦-೭-೪೭ ಭಾನುವಾರ

ಕೃತಜ್ಞತೆ

ಸಾಧ್ವಿಯು ದಿನ ಪತ್ರಿಕೆಯಾಗಿ ಐದು ವರ್ಷಗಳು ತುಂಬಿ ಆರನೇ ವರ್ಷವು ಇಂದಿನಿಂದ ಆರಂಭವಾಗುವುದು. ಮೈಸೂರು ಜನ ಜೀವನಕ್ಕೆ ಜನ್ಮದಾತರಾದ ತಾತಯ್ಯನವರು ಅರ್ಧ ಶತಮಾನದ ಹಿಂದೆಯೇ ಈ ಪತ್ರಿಕೆಯನ್ನು ಸ್ಥಾಪಿಸಿದರು. ಅವರ ನಂತರ ಆ ಮಹನೀಯರ ಪುಣ್ಯಸ್ಮರಣಾರ್ಥವಾಗಿ ಕಳೆದ ಹನ್ನೆರಡು ವರುಷದ ಹಿಂದೆ ಇದನ್ನು ಪುನರುಜ್ಜೀವನಗೊಳಿಸಲಾಯಿತು.

ಮೊದಲು ಸಾಧ್ವಿಯು ವಾರ ಪತ್ರಿಕೆಯಾಗಿ ಹೊರಟು ಅನಂತರ ದಿನ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ. ಇದು ಮುದ್ರಣದ ಕಾಗದವೇ ಮುಂತಾದ ಅನೇಕ ತೊಂದರೆಗಳಿಂದ ಕೇವಲ ಸಣ್ಣ ಆಕಾರದಲ್ಲಿ ಹೊರಡುತ್ತಿದೆ. ಆದರೂ ಸಹ ಜನ್ಮ ಕೊಟ್ಟ ವೃದ್ಧ ಪಿತಾಮಹರ ಮೇಲ್ಪಂಕ್ತಿಯಂತೆ ಸೇವೆಯನ್ನು ಸಲ್ಲಿಸುತ್ತಿದೆ. ಮಹಾಜನರು ನೀಡುತ್ತಿರುವ ಉದಾರ ಸಹಕಾರವೇ ಇದರ ಯಶಸ್ಸಿಗೆ ಮುಖ್ಯಕಾರಣವಾಗಿರುತ್ತದೆ. ನಮ್ಮ ಉದ್ಯಮದಲ್ಲಿ ನೆರವು ನೀಡುತ್ತಿರುವ ಸಕಲ ದೇಶ ಬಾಂಧವರಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸಿ ಮುಂದೆಯೂ ಸಹ ಅವರ ಕೃಪೆಯನ್ನು ಬೇಡುತ್ತೇವೆ.

ಪತ್ರಿಕಾ ವೃತ್ತಿಯು ರಾಜ್ಯದ ಆಧಾರ ಸ್ತಂಭಗಳಲ್ಲಿ ಅತ್ಯಂತ ಪ್ರಾಮುಖ್ಯವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟಿರುತ್ತದೆ. ಜನ ಜೀವನವನ್ನು ರೂಪುಗೊಳಿಸಲು ಪತ್ರಿಕೆಗಳು ವಹಿಸುತ್ತಿರುವ ಪಾತ್ರವು ಅತ್ಯಂತ ಶ್ರೇಷ್ಠವಾದುದು. ಅನೇಕ ಬಗೆಯ ಅನರ್ಥ ಪರಂಪರೆಗಳಿಂದ ಬೆಂದು ಬಳಲುತ್ತಿರುವ ಜಗತ್ತಿಗೆ ಶಾಂತಿಯನ್ನು ಬೀರಲು ವರ್ತಮಾನ ಪತ್ರಿಕೆಗಳ ಸಹಕಾರವು ಅತ್ಯಗತ್ಯವಾಗಿದೆಯೆಂಬುದನ್ನು ಎಲ್ಲರೂ ಮನಗಂಡಿರುವರು. ಅದರಿಂದಲೇ ಅವುಗಳ ಸ್ಥಾನ, ಮಾನ ಮತ್ತು ಹಕ್ಕುಬಾಧ್ಯತೆಗಳ ರಕ್ಷಣೆಯಲ್ಲಿಯೂ ಸಹ ಎಲ್ಲರೂ ಬದ್ಧರಾಗಿರುವರು.

ನಮ್ಮ ನಾಡು ಸ್ವಾತಂತ್ರ್ಯದ ಹೆಬ್ಬಾಗಿಲನ್ನು ಮುಟ್ಟುತ್ತಿದೆ. ಇದಕ್ಕಾಗಿ ನಮ್ಮ ಬಂಧುಭಗಿನಿಯರು ಅಪಾರವಾದ ಕಷ್ಟ ನಷ್ಟಗಳನ್ನು ಅನುಭವಿಸುವರು. ಈ ಮಹತ್ಕಾರ್ಯಸಾಧನೆಯಲ್ಲಿ ನಮ್ಮ ದೇಶದ ಪತ್ರಿಕೆಗಳು ವಹಿಸಿರುವ ಪಾತ್ರವು ಅತ್ಯಂತ ಅಮೂಲ್ಯವಾದುದು. ದೇಶದ ಸ್ವಾತಂತ್ರ್ಯ ಸಾಧನೆಯು ಇಂದು ಪೂರ್ಣವಾಗುತ್ತಿದೆ. ಅದರಂತೆ ರಾಷ್ಟ್ರ ಪುನಾರಚನೆಯ ಮಹತ್ಕಾರ್ಯ ಸಾಧನೆಯಲ್ಲಿ ಪತ್ರಿಕೆಗಳು ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಬೇಕಾಗಿದೆ. ಅದರಲ್ಲಿ ನಾವೂ ಸಹ ನಮ್ಮ ಅಲ್ಪ ಕಾಣಿಕೆಯನ್ನು ಅರ್ಪಿಸಲು ಸಿದ್ಧರಾಗಿರುತ್ತೇವೆ.

ನಾಡಿನ ಸ್ವಾತಂತ್ರ್ಯದ ಅರುಣೋದಯದ ಸಮಯದಲ್ಲಿಯೇ ಪತ್ರಿಕಾವೃತ್ತಿಯು ಶೃಂಖಲೆಗಳಿಂದ ತೊಲಗಿ ಅವುಗಳು ನಿರಾತಂಕವಾಗಿ ಕರ್ತವ್ಯವನ್ನು ನೆರವೇರಿಸುವ ಸುದಿನವನ್ನು ನಾವು ಇದಿರು ನೋಡುತ್ತಿದ್ದೇವೆ. ನಮ್ಮ ಕರ್ತವ್ಯದಲ್ಲಿ ಬೆಂಬಲ ನೀಡುತ್ತಿರುವ ಸಕಲರಿಗೂ ಮತ್ತೊಮ್ಮೆ ನಮ್ಮ ಧನ್ಯವಾದವನ್ನು ಸಲ್ಲಿಸಿ ಭಗವಂತನು ಎಲ್ಲರಿಗೂ ಸನ್ಮಂಗಳವನ್ನುಂಟುಮಾಡಲೆಂದು ಬೇಡುತ್ತೇವೆ.

City Municipal Office,
Mysore City.

NOTIFICATION

Notice is hereby given to the inhabitants of the Mysore City Municipality that the Municipal Council have resolved to amend the Byelaws relating to the levy of taxes on Vehicles and animals so as to restrict exemptions from the levy of cycle and Vehicle taxes only to those officials belonging to the Municipality, Trust Board, Palace, Water Works and Mysore City Traffic Police and to withdraw exemptions now allowed to other Departments.

Any person having objection to the above amendment may prefer the same in writing to the undersigned within one month from the date of this notification in the official Gazette, after which no objection will be heard.

(Sd) R. Ramachandra Rao
Bhombore,
President

ಕೂಡ್ಲೆ ಕ್ರಯಕ್ಕಿದೆ.

1) ನಂ. ೨೭೬ ದೀವಟಿಗೆ ಬೀದಿ ಅಂಗಡಿ ಕಟ್ಟಡವು
2) ಯಾದವಗಿರಿಯಲ್ಲಿ ಖಾಲಿ ಜಮೀನು
3) ಕೃಷ್ಣಮೂರ್ತಿಪುರದಲ್ಲಿ ಮತ್ತು ಒಂಟಿಕೊಪ್ಪಲಿನಲ್ಲಿ ಬಂಗ್ಲೆಗಳು

—: ವಿವರಗಳಿಗೆ:—
ಆರ್. ಗುಂಡೂರಾವ್,
ಮೈಸೂರು ಬ್ಯಾಂಕ್ ಬಿಲ್ಡಿಂಗ್, ಮೈಸೂರು

ವುಡ್‌ಲ್ಯಾಂಡ್ಸ್
19-7-47 ರಿಂದ
ಚಿಕ್ಕರಿದ ೧೨ ನೇ ವಾರ
ಪ್ರತಿ ದಿನ ೩ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)
ನಾವು ಇಬ್ಬರು
ಬಿ (ತಮಿಳ್)
—: ಪಾತ್ರ :—
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ಅಪೇರಾ ಟಾಕೀಸ್, ಮೈಸೂರು
೧೯-೭-೪೭ ರಿಂದ ೧೪ ನೇ ವಾರ
ರಾಜಕುಮಾರಿ
ಬಣ್ಣದ ರೀಲುಗಳನ್ನು ಹೊಸದಾಗಿ ಸೇರಿಸಲಾಗಿದೆ

ಬಿಕರಿಗೆ ಸಿದ್ಧವಾಗಿವೆ

1 ಅಸ್ಟಿನ್ 11 P ಮೋಟಾರ್ (ಬ್ರಿಟಿಷ್ ಮೇಕ್)
1 ಚಿಕ್ಕದು ಲೇತ್
1 ಟರ್ನಿಂಗ್ ಸಾಬೆಡ್
ಒಳ್ಳೆಯ ಸ್ಥಿತಿಯಲ್ಲಿವೆ

ವಿಚಾರಿಸಿ:—
ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,
ಸಯ್ಯಾಜೀರಾವ್ ರೋಡ್, ಚಾಮುಂಡೇಶ್ವರಿ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ರಾಜಕಮಲ್
ತಾ|| 18-7-47 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
★ ಕಿಸ್ಮತ್ ★
—: ಭೂಮಿಕೆ :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

From 18-7-47 for 4 days
daily at 10-30 A. M.
Unknown Guest
with Victor Jory, Pemela Blake, Veda Ann Borg

ವುಡ್ ಲ್ಯಾಂಡ್ಸ್
ಬೆಳಗಿನ ಪ್ರದರ್ಶನ
18-7-47 ರಿಂದ
4 ದಿನಗಳು ಮಾತ್ರ
ಬೆಳಗ್ಗೆ 10-30 ಕ್ಕೆ
ಕುನಾರಾಲಬಿಲಾಪ್ (ಹಿಂದಿ)
: ಪಾತ್ರ :—
ಚಿರೋಲ್ ನಾಯು-ಪ್ರೇಮಾ ದಾಸಗುಪ್ತ

ಷಾಫತ್ ಅಹಮ್ಮದರ ನಿಧನ

ಕೇಂದ್ರ ತಾತ್ಕಾಲಿಕ ಸರ್ಕಾರದ ಸಚಿವರಾಗಿದ್ದ ಡಾ|| ಷಾಫತ್ ಅಹಮ್ಮದ್ ಖಾನರು ಮೊನ್ನೆ ಸಿಮ್ಲಾದಲ್ಲಿ ಮರಣ ಹೊಂದಿದರೆಂದು ತಿಳಿದು ಬಂದಿದೆ

ಕೃತಜ್ಞತೆ

ನಾನು ಈಗ ಸುಮಾರು 20 ವರುಷಗಳಿಂದಲೂ ಲೇಟ್ ಎಸ್. ಎ. ಸುಂದರರವರ ದಿ ಮೈಸೂರು ಆಯುರ್ವೇದಿಕ್ ಫಾರ್ಮಸಿಯಲ್ಲಿ ಸಲ್ಲಿಸಿರುವ ಸೇವೆಯ ವಿಚಾರವಾಗಿ ಅವರ ಮಕ್ಕಳೂ ಮತ್ತು ಸದರಿ ಫಾರ್ಮಸಿಯ ಪ್ರೊಪ್ರೈಟರೂ ಆಗಿರುವ ಮ|| ರಾ|| ಎಸ್. ನರಸಿಂಹಯ್ಯನವರ ಪ್ರಕಟನೆಗಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿರುತ್ತೇನೆ ಮತ್ತು ನನ್ನ ಮೇಲ್ಕಂಡ ಸೇವೆಗೆ ಕಾರಣಭೂತರಾದ ಸಾರ್ವಜನಿಕ ಮಹನೀಯರಿಗೂ ಕೃತಜ್ಞನಾಗಿರುತ್ತೇನೆ.

ಬಿ. ಎಸ್. ರಾಮಯ್ಯ,
ನಂ. 36 (ಶ್ರೀ ಮಹಾಗಣಪತಿ ದೇವಸ್ಥಾನದ ಪಕ್ಕ)
ದೇವಿರಮ್ಮಣ್ಣಿ ಅಗ್ರಹಾರ, ಮೈಸೂರು.

City Municipal Office,
Mysore
Dated 11th July 1947

NOTIFICATION

1 Sealed quotations are invited from printers for printing and supplying 500 copies of the Mysore City Municipal Rules and Bye-laws.

2. The quotations should reach the office on 22-7-47 before 4 P. M. after which date no application will be received.

3. The quotation should be accompanied with an earnest money of Rs. 50/- as security for due fulfilment of the contract.

4. The work should be completed within a month from the date of order.

5. Rate should be quoted per page of printed matter including running matter and statement. Charges for binding should be quoted separately.

6. The sample copy of the Bye-laws may be seen in the Municipal office during the working hours.

R. Ramachandra Rao
Bombhore
President.

Edited, printed and published by A. N. Nagaraja... at the Sadhvi Press, D. Subbaiah Road, Mysore

ಫೋನ್ ನಂ. 392 WEEKLY EDITION ಬಿಡಿ ಪತ್ರಿಕೆ ೮ ಕಾಸು

ಸಾಧ್ವಿ

ಸಂಪುಟ ೧೨] ಸೋಮವಾರ ೨೧—೭—೪೭ [ಸಂಚಿಕೆ ೧

ಬರ್ಮಾ ಮಾಜಿ ಪ್ರಧಾನಿ ಯು ಸಾ ರವರ ದಸ್ತಗಿರಿ

ಸಾಧ್ವೀ ಪತ್ರಿಕೆಯ ೫ ನೇ ವಾರ್ಷಿಕೋತ್ಸವ

ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷ ಭಾಷಣ

ಮೈಸೂರು ೨೧

ನಿನ್ನೆ ಸಂಜೆ ಸಾಧ್ವಿ ಪತ್ರಿಕೆಯ ೫ ನೆಯ ವಾರ್ಷಿಕೋತ್ಸವವು ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಕೆ ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು ಈ ಸಮಾರಂಭಕ್ಕೆ ನೂರಾರು ಜನ ಮಹಿಳೆಯರೂ, ಮಹಾಶಯರು ಆಗಮಿಸಿದ್ದರು. ಸಾಹಿತ್ಯ ವಿದ್ವಾನ್ ಹೆಚ್. ರಾಮಾನುಜಾಚಾರ್ಯರ ಮತ್ತು ಗಮಕ ವಿದ್ವಾನ್ ನಾಗೇಶರಾಯರ ಮಂಗಳಾಚರಣೆಯೊಡನೆ ಸಮಾರಂಭವು ಪ್ರಾರಂಭವಾಯಿತು ಅನಂತರ ದಿಗ್ಗಜ ನಾದವಾಣಿ ಆಸ್ಥಾನ ವಿದ್ವಾನ್ ಎಸ್. ರಾಮಯ್ಯ ಅಯ್ಯಂಗಾರ್ಯರಿಂದ ಗೋಟುವಾದ್ಯವು ಜರುಗಿತು. ಆಸ್ಥಾನ ವಿದ್ವಾನ್ ಹೆಚ್. ವಿ. ಕೃಷ್ಣರಾಯರು ಪಿಟೀಲು, ವಿದ್ವಾನ್ ಹೆಚ್ ಟಿ. ನಾಗಣ್ಣನವರು ಮೃದಂಗವನ್ನೂ ಸುಮನೋಹರವಾಗಿ ನುಡಿಸಿದರು

ಶ್ರೀ ಆಗರಂ ರಂಗಯ್ಯನವರು ಸಮಾರಂಭದ ಉದ್ದೇಶವನ್ನು ವಿವರಿಸಿ ಮೈಸೂರು ಆಧುನಿಕ ಜನಜೀವನಕ್ಕೆ ಜನ್ಮದಾತೆ, ಸಾಧ್ವೀ ಪತ್ರಿಕೆಯು ಸಂಸ್ಥಾಪಕರೂ ವೃದ್ಧ ಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ನಾವು ಈ ಪತ್ರಿಕೆಯನ್ನು ನಡೆಸುತ್ತಿರುವ ಅಂಶವನ್ನು ತಿಳಿಸಿ ಸ್ವಾಗತ ಮಾಡಿದರು

ಅಧ್ಯಕ್ಷರಾದ ಶ್ರೀ ಭಾಷ್ಯಂರವರು ಸ್ವಾರಸ್ಯವಾದ ಭಾಷಣವನ್ನು ಮಾಡಿ ದೇಶದ ಏಳಿಗೆಗೆ ಪತ್ರಿಕೆಗಳ ಸಹಕಾರವು ಹೇಗೆ ಅವಶ್ಯಕವೆಂಬುದನ್ನು ವಿವರಿಸಿದರು ಮತ್ತು ಪತ್ರಿಕೆಗಳಿಗೆ ಕೆಲವು ಅಭಿಪ್ರಾಯಗಳನ್ನು ಅವರು ತಿಳಿಸಿದರು

ಭರತಖಂಡವು ಇಂದು ಸ್ವಾತಂತ್ರ್ಯದ ಹೊಸ್ತಿಲಿನಲ್ಲಿರುತ್ತದೆ. ಇಡೀ ಹಿಂದೂಸ್ಥಾನದ ಸಂಪೂರ್ಣವಾದ ಅಖಂಡ ಪ್ರಜಾಸ್ವಾತಂತ್ರ್ಯವನ್ನು ಪಡೆಯುವ ಧ್ಯೇಯವು ಈಡೇರುವುದಿಲ್ಲ ಆದರೂ ಪರಕೀಯರಾದ ಬ್ರಿಟಿಷರ ಆಧಿಪತ್ಯವು ಇನ್ನು ಮುಂದೆ ತೊಲಗಿ ಹೋಗುತ್ತದೆ. ಪರದಾಸ್ಯ ಶೃಂಖಲೆಯು ನಮ್ಮ ದೇಶಕ್ಕೆ ತಪ್ಪುತ್ತದೆ. ನಮ್ಮ ದೇಶವು ಆಗಸ್ಟ್ ೧೫ ರಿಂದ ಸ್ವಾತಂತ್ರ್ಯ ಪದವಿಯನ್ನು ಘೋಷಿಸುತ್ತದೆ ಸ್ವಾತಂತ್ರ್ಯ ಸಾಧನೆಯ ಜೊತೆಯಲ್ಲಿ ಅನೇಕ ಹೊಸ ಹೊಸ ಸಮಸ್ಯೆಗಳು ತಲೆದೋರುತ್ತವೆ ಪರಕೀಯರ ಆಕ್ರಮಣವನ್ನು ಎದುರಿಸಲು ಮಹಾತ್ಮ ಗಾಂಧೀಯವರ ನಾಯಕತ್ವದಲ್ಲಿ ದೇಶವು ಯಾವ ಅಹಿಂಸಾ ತತ್ವವನ್ನು ಅವಲಂಬಿಸಿ ಸತ್ಯಾಗ್ರಹದಿಂದ ವಿಜಯಿ ಯಾಗಿ ಬಂದಿತೋ ಅದನ್ನು ಇನ್ನು ಮುಂದೆ ಆತ್ಮರಕ್ಷಣೆ ಮತ್ತು ಶಾಂತಿಪಾಲನೆಗೆ ಸ್ವಲ್ಪಮಟ್ಟಿಗೆ ಬದಲಾಯಿಸುವ ಅಗತ್ಯವು ಬಂದಿರುತ್ತದೆ. ಈಗ ಗಳಿಸಿದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಹೊಸ ಅಸ್ತ್ರ, ಶಸ್ತ್ರ, ಸೈನ್ಯ ಮತ್ತು ಮದ್ದುಗುಂಡುಗಳನ್ನು ಸಿದ್ಧಗೊಳಿಸುವ ಅವಶ್ಯಕತೆಯು ಬಂದಿರುತ್ತದೆ

ಹೀಗಿರುವಾಗ ಹಲಕೆಲವು ರಾಜರು ಆಗಸ್ಟ್ ೧೫ ರಿಂದ ತಾವೇ ಸ್ವತಂತ್ರರಾಗುವುದಾಗಿ ಮಾಡುತ್ತಿರುವ ಘೋಷಣೆ ವಿಶೇಷ ತೊಡಕನ್ನು ಉಂಟುಮಾಡಿರುತ್ತದೆ ಇಡೀ ದೇಶದ ಸ್ವಾತಂತ್ರ್ಯವನ್ನು ಗಳಿಸಬೇಕಾದ ಸಮಯದಲ್ಲಿ ಒಂದೊಂದು ಸಣ್ಣ ಪ್ರದೇಶದವರೂ ಪ್ರತ್ಯೇಕ ಸ್ವಾತಂತ್ರ್ಯವನ್ನು ಪಡೆಯಲು ಬಯಸುವುದಾದರೆ ನಮ್ಮ ನಾಡು ಮತ್ತೆ ಛಿನ್ನಭಿನ್ನವಾಗಿ ಹರಿದು ಬೇಗನೆ ಅನ್ಯರ ಆಕ್ರಮಣಕ್ಕೆ ಈಡಾಗಬೇಕಾಗುತ್ತದೆ; ಸಂಸ್ಥಾನಗಳು ಉಳಿಯಬೇಕೇ ಅಥವಾ ಅಳಿಯಬೇಕೇ-ಎಂಬ ಪ್ರಶ್ನೆಯು ತೀವ್ರವಾಗಿ ಸರ್ವಾಲೋಚಿಸುತ್ತಿರುವಲ್ಲಿ ರಾಜರುಗಳು ಸಂಕುಚಿತ ದೃಷ್ಟಿಯಿಂದ ತಮ್ಮ ತಮ್ಮ ಸ್ವಾತಂತ್ರ್ಯಗಳನ್ನು ಘೋಷಿಸಿಕೊಳ್ಳಲು ಹೊರಡುವುದು ಯುಕ್ತವಲ್ಲ. ಅಂತಹ ಸ್ವಾತಂತ್ರ್ಯಕ್ಕೆ ಪ್ರಜೆಗಳು ಎಂದಿಗೂ ಬೆಂಬಲ ನೀಡುವುದಿಲ್ಲ ಇನ್ನು ಮುಂದೆ ಪ್ರಜೆಗಳ ಇಷ್ಟದಂತೆಯೇ ಪ್ರಭುತ್ವಗಳು ನಡೆಯಬೇಕು ಇಲ್ಲದಿದ್ದರೆ ಅಂತಹ ಪ್ರಭುತ್ವಗಳಿಗೆ ಅವಕಾಶವಿರುವುದಿಲ್ಲ

ವನರಾಜನಾದ ಸಿಂಹವು ಬೇಟೆಯಾಡಿ ಮೃಗಗಳನ್ನು ಕೊಂದು ತಿಂದು ಬಿಸಾಡಿರುವ ಎಲುಬುಗಳನ್ನು ನರಿಗಳು ಕಚ್ಚಿಕೊಂಡು ಹೋಗಿ ತಾವೇ ಅವುಗಳನ್ನು ಗಳಿಸಿ ತಂದುದಾಗಿ ವಿಜೃಂಭಿಸುತ್ತವೆ ಅಸಂಖ್ಯಾತರಾದ ದೇಶಭಕ್ತರು ಅನೇಕ ವರ್ಷಗಳಿಂದ ಅನಿರ್ವಚನೀಯವಾದ ಕಷ್ಟಗಳನ್ನು ಸಹಿಸಿ ಬ್ರಿಟಿಷರನ್ನು ಭಾರತದಿಂದ ಹೊರಕ್ಕೆ ಕೊಡಿಸುತ್ತಿರುವಾಗ ನಾವು ಸ್ವತಂತ್ರರೆಂದು ರಾಜರು ಹೇಳುವುದು ಮೇಲ್ಕಂಡ ನರಿಗಳಂತೆ ಇರುತ್ತದೆ ಸ್ವಾತಂತ್ರ್ಯವನ್ನು ಗಳಿಸಿದವರು ದೇಶದ ಪ್ರಜೆಗಳು ಅದನ್ನು ಉಪಭೋಗಿಸುವವರೂ ಪ್ರಜೆಗಳೇ ರಾಜರುಗಳು ಇದಕ್ಕೆ ಅಡ್ಡಿ ಬರುವುದು ಸರಿಯಲ್ಲ

೧೯೪೨ ರಲ್ಲಿ ಬ್ರಿಟಿಷರನ್ನು ಭಾರತದಿಂದ ಹೊರಕ್ಕೆ ಕಳುಹಿಸಲು ಚಳುವಳಿ ನಡೆದಾಗ ರಾಜರುಗಳಿಗೆ ಪ್ರಜೆಗಳು ಮನವಿ ಮಾಡಿಕೊಂಡು ಅವರು ಬ್ರಿಟಿಷರ ದಾಸರಾಗಿರುವುದಕ್ಕಿಂತಲೂ ಪ್ರಜೆಗಳೊಡನೆ ಕಲೆತು ಸಂಪೂರ್ಣ ಸ್ವಾತಂತ್ರ್ಯವನ್ನು ಘೋಷಿಸುವಂತೆ ಕೇಳಿಕೊಂಡರು ಆದರೆ ರಾಜರುಗಳು ಅದಕ್ಕೆ ಕಿವಿಗೊಡಲಿಲ್ಲ, ಈಗ ಏಟ್ಟಿಲ್ಲರು ಸ್ವತಂತ್ರರಾಗುವುದಾಗಿ ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ. ಪ್ರಜೆಗಳ ಬೆಂಬಲವಿಲ್ಲದ ಅಂತಾ ಸ್ವಾತಂತ್ರ್ಯವು ಮೊದಲ ದಿನವನ್ನು ಕಳೆಯುವ ಹಾಗೂ ಸಹ ಇರಲಾರದು

ಮೈಸೂರು ಸಂಸ್ಥಾನದಲ್ಲಿಯೂ ಇಂದು ರಾಜಕೀಯ ಪರಿಸ್ಥಿತಿಯು ಬಿಕ್ಕಟ್ಟಿಗೆ ಬಂದಿರುತ್ತದೆ. ಸುಧಾರಣೆಗಳನ್ನು ಕೊಡುವುದಾಗಿ ದಿವಾನರು ಕಾಲಹರಣ ಮಾಡುತ್ತಿದ್ದಾರೆ. ಇಲ್ಲಿ ನಡೆಯುತ್ತಿರುವ ವಿದ್ಯಮಾನಗಳೂ ಸಹ ಕೇವಲ ಪ್ರತಿಗಾಮಿ ನೀತಿಯನ್ನೇ ಅವಲಂಬಿಸಿರುತ್ತವೆ ಇವುಗಳಿಂದ ಮಹಾಜನರಿಗೆ ಅತ್ಯಂತ ಅಸಮಾಧಾನವುಂಟಾಗಿರುತ್ತದೆ. ಪ್ರಜೆಗಳ ಇಷ್ಟಾರ್ಥವನ್ನು ಈಡೇರಿಸಿಕೊಳ್ಳಲು ಮೈಸೂರು ಕಾಂಗ್ರೆಸ್ಸು ಸತ್ಯಾಗ್ರಹವನ್ನು ಹೂಡಲು ನಿರ್ಧರಿಸಿರುತ್ತದೆ ಕಾಂಗ್ರೆಸ್ಸಿನವರು ಜವಾಬ್ದಾರಿ ಸರ್ಕಾರ ಅಥವಾ ಸಂಗಡಗಳ ಭೇದವೂ ಇಲ್ಲದೆ ಇಡೀ ಸಂಸ್ಥಾನದ ಅಭ್ಯುದಯಕ್ಕಾಗಿ ಹೋರಾಡುವರು ಅವರಿಗೆ ಸುತ್ತಕ್ಕೆ ಪತ್ರಿಕೆಗಳ ಸಂಪೂರ್ಣ ಸಹಕಾರ ಮತ್ತು ಬೆಂಬಲಗಳು ಅಗತ್ಯ

ಸರ್ಕಾರಕ್ಕೆ ತಮ್ಮಂತಹ ಪ್ರಭುತ್ವವನ್ನು ಒಂದು ಜನಾಂಗದವರು ಪಡೆಯುವರೆಂಬ ತತ್ವವನ್ನು ದಿವಂಗತ ತಿಲಕರು ಹಿಂದೆ ಆಗಾಗ್ಗೆ ಹೇಳುತ್ತಿದ್ದರು ಸಮಾಜದ ಮಟ್ಟಕ್ಕೆ ಅನುಗುಣವಾಗಿ ಪ್ರಭುತ್ವವು ಇರುತ್ತದೆ ಒಂದು ದೇಶದ ಪತ್ರಿಕೆಗಳು ಅಲ್ಲಿಯ ಜನಜೀವನದ ಕೈಗನ್ನಡಿಯಂತಿರುತ್ತದೆ ಸಮಾಜವು ಎಷ್ಟು ಮುಂದುವರಿದಿರುವುದೋ ಪತ್ರಿಕೆಗಳೂ ಅಷ್ಟು ಮುಂದುವರಿಯುತ್ತವೆ ಅಲ್ಲದೆ ಉತ್ತಮ ದರ್ಜೆಯ ಪತ್ರಿಕೆಗಳು ಸಮಾಜದ ಉನ್ನತ ಆದರ್ಶವನ್ನು ಪ್ರತಿಪಾದಿಸುತ್ತವೆ

ಮುಂದೆ ಪಡೆಯಲಿರುವ ರಾಷ್ಟ್ರ ಪುನರುಜ್ಜೀವನ ಕಾರ್ಯದಲ್ಲಿ ಪತ್ರಿಕೆಗಳು ವಹಿಸಬೇಕಾದ ಪಾತ್ರವು ವಿಶೇಷವಾಗಿರುತ್ತದೆ. ದೇಶದ ಸ್ವಾತಂತ್ರ್ಯ ಸಾಧನೆಗೂ ಅದರ ಸಂರಕ್ಷಣೆಗೂ ಪತ್ರಿಕೆಗಳ ನೆರವು ವಿಶೇಷವಾಗಿ ಬೇಕು. ಸಾಧ್ವಿ ಪತ್ರಿಕೆಯು ವೃದ್ಧ ಪಿತಾಮಹರ ಕಾಲದಿಂದಲೂ ದೇಶದ ಉನ್ನತಿಗಾಗಿ ವಿಶೇಷವಾದ ಸೇವೆಯನ್ನು ಸಲ್ಲಿಸಿರುತ್ತದೆ ಅದು ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಲು ಮಹಾಜನರು ಉದಾರವಾಗಿ ಪ್ರೋತ್ಸಾಹ ನೀಡಬೇಕು-ಎಂದು ಶ್ರೀ ಭಾಷ್ಯಂರವರು ನುಡಿದರು

ತರುವಾಯ ಗಾನವಿದುಷಿ ನಂಜನಗೂಡು ನಾಗರತ್ನಮ್ಮನವರ ಮನೋಹರವಾದ ಸಂಗೀತವು ನಡೆಯಿತು. ಆಸ್ಥಾನ ವಿದ್ವಾನ್ ಹೆಚ್ ವಿ ಕೃಷ್ಣರಾಯರ ಪಿಟೀಲು ಮತ್ತು ವಿದ್ವಾನ್ ಹೆಚ್ ಟಿ. ನಾಗಣ್ಣನವರ ಮೃದಂಗಗಳು ಗಾಯನಕ್ಕೆ ವಿಶೇಷ ಮಾಧುರ್ಯವನ್ನು ಉಂಟು ಮಾಡಿದ್ದವು

ಧನ್ಯವಾದಗಳ-ತರ ಪುಷ್ಪ ತಾಂಬೂಲ ವಿನಿಯೋಗಗಳಾಗಿ ಸಮಾರಂಭವು ಮುಕ್ತಾಯಗೊಂಡಿತು

ರಾಷ್ಟ್ರಧಾನಿಯ ... ರೀದಿ

ಯು ಸಾರವರ ಬಂಧನ

ಬರ್ಮಾ ತಾತ್ಕಾಲಿಕ ಸರ್ಕಾರದ ಮುಖ್ಯ ಸಚಿವರಾದ ... ರಂಗೂನಿನಲ್ಲಿ ಕೊಲೆಯಾದುದರಿಂದ ನಿನ್ನೆ ಅಲ್ಲಿ ೬ ಜನ ಸಚಿವರಿಂದ ಕೂಡಿದ ಹೊಸ ಮಂತ್ರಿ ಮಂಡಲವನ್ನು ರಚಿಸಲಾಯಿತು. ಯು ಆಂಗ್ ಸಾನರ ಕೊಲೆಯ ಸಂಬಂಧವಾಗಿ ಬರ್ಮಾ ಮಾಜಿ ಪ್ರಧಾನಿ ಯು ಸಾ ರವರನ್ನು ಪೋಲೀಸರು ಕಸ್ಟಡಿ ಅನುಸಾರ ದಸ್ತಗಿರಿ ಮಾಡಲಾಗಿದೆ. ... ಯು ಸಾ ರವರ ... ಮನೆಯಲ್ಲಿ ... ನಿನ್ನೆ ಯು ಸಾ ರವರ ಮನೆಯನ್ನು ಶೋಧಿಸಿದಾಗ ... ಶಸ್ತ್ರಗಳು ದೊರೆತುವು.

ವಿದ್ಯಾರ್ಥಿಗಳ ಮುಷ್ಕರ

ಸ್ವಂ.ವರದಿಗಾರ] ಬೆಂಗಳೂರು ೨೧

ವಿಶ್ವವಿದ್ಯಾಲಯದವರು ಹಲವು ವಿದ್ಯಾರ್ಥಿಗಳ ಮೇಲೆ ಕೈಗೊಂಡಿರುವ ಶಿಸ್ತಿನ ಕ್ರಮವನ್ನು ಪ್ರತಿಭಟಿಸಲು ಇಲ್ಲಿನ ಅನೇಕ ಶಾಲಾ, ಕಾಲೇಜು ವಿದ್ಯಾರ್ಥಿಗಳು ಈ ದಿನ ಮುಷ್ಕರವನ್ನು ಆಚರಿಸಿದರು ಸಭೆಯನ್ನು ನಡೆಸಿ ಅಧಿಕಾರಿಗಳ ವರ್ತನೆಯನ್ನು ಖಂಡಿಸಿದರು ಬರ್ಮಾ ಪ್ರಧಾನಿ ಮತ್ತು ಇತರ ಸಚಿವರ ಕೊಲೆಗಾಗಿ ಸಂತಾಪವನ್ನು ವ್ಯಕ್ತಪಡಿಸಿದರು.

ಚೆನ್ನಪಟ್ಟಣದ ಕೊಲೆ ಮೊಕದ್ದಮೆ

ಚೆನ್ನಪಟ್ಟಣದ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಎಂ.ಟಿ. ಶ್ರೀನಿವಾಸಾಚಾರ್ಯರವರನ್ನು ಕೊಲೆ ಮಾಡಿದ ಅಪಾದನೆಗೆ ಗುರಿಯಾಗಿರುವ ಮೊಕದ್ದಮೆಯಲ್ಲಿ ೬ ಜನರನ್ನು ಅಡಿಷನಲ್ ಜಿಲ್ಲಾಧಿಕಾರಿ ಶ್ರೀ ಕೆ. ಟಿ ರಾಮಸ್ವಾಮಯ್ಯನವರು ಸೆಷನ್ಸಿಗೆ ಕಮಿಟ್ ಮಾಡಿರುವರು.

ರೈಲ್ವೆ ಸಮಿತಿ

ಶ್ರೀ ಕೆ ಸಿ ನಿಯೋಗಿಯವರ ಅಧ್ಯಕ್ಷತೆಯಲ್ಲಿ ಭಾರತ ರೈಲ್ವೆ ವಿಚಾರಣೆ ಸಮಿತಿಯವರು ನಿನ್ನೆ ಬೆಂಗಳೂರಿಗೆ ಬಂದರು ಇವರು ಇಲ್ಲಿನ ರೈಲ್ವೆಯ ಆಡಳಿತವನ್ನು ಪರೀಕ್ಷಿಸಿ ತಮ್ಮ ಸಲಹೆಗಳನ್ನು ನೀಡುವರು. ಈ ದಿನ ಸ್ಪೆಷಲ್ ರೈಲಿನಲ್ಲಿ ಅವರು ಮೈಸೂರಿಗೆ ತೆರಳಿದರು.

ಗಡಿನಾಡು ಪಾಕಿಸ್ತಾನಕ್ಕೆ

ಗಡಿನಾಡಿನಲ್ಲಿ ನಡೆದ ರೆಫರೆಂಡಮ್ಮಿನಲ್ಲಿ ವಿಶೇಷ ಬಹುಮತದಿಂದ ಆ ಪ್ರಾಂತವು ಪಾಕಿಸ್ತಾನದಲ್ಲಿ ಸೇರುವುದು ತೀರ್ಮಾನವಾಗಿರುತ್ತದೆ

ಆಗಸ್ಟ್ ೧೫ ನೇ ತಾರೀಖು ರಾಷ್ಟ್ರ ಧ್ವಜಾರೋಹಣ

ಬೆಂಗಳೂರು ಆಗಸ್ಟ್ ೧೫ ರ ದಿನ ಸ್ವಾತಂತ್ರ್ಯಾಗಮನದ ಆ ದಿನ ಜರುಗಿಸುವ ಸಂಭ್ರಮದ ಅಂಗವಾಗಿ ಎಲ್ಲ ಸಾರ್ವಜನಿಕ ಸ್ಥಳ ಮತ್ತು ಭವನಗಳ ಮೇಲೆ ರಾಷ್ಟ್ರಧ್ವಜವ ... ಹಾರಿಸಲಾಗುವುದೆಂದು ತಿಳಿದುಬಂದಿದೆ

ಯೇ ... ಸಂಘದವರು ... ಪ್ರೇತದ ... ತನ್ನ ... ಮಾಡಿದ್ದಾರೆ

... ಸಮಾರಂಭಕ್ಕೆ ... ಕೋರಿ ... ಪ್ರಕಾಶ ... ದ ... ಶ್ರೀ ಹೆಚ್ ... ಶ್ರೀ ... ಸ್ವಾಗತ ... ಸಮಾರಂಭಗಳನ್ನು ... ಏರ್ಪಡಿಸಿದ್ದಾರೆ.

ವಾರ ಭವಿಷ್ಯ

(ಶ್ರೀ ವಿದ್ಯಾನಂದ ಸ್ವಾಮಿಗಳಿಂದ)

ತಾ|| ೨೧-೭-೪೭ರಿಂದ ೨೮-೭-೪೭ರ ವರೆಗೆ

ಮೇಷ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಸಾರ್ವಜನಿಕ ಕೆಲಸಗಳಿಗೆ ಬೆಂಬಲ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೨೨, ೨೪ ಲಾಭ, ಶಾಂತಿ.

ವೃಷಭ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರ ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ, ತಾ|| ೨೩, ೨೭ ಪ್ರವಾಸ, ಚಿಂತೆ.

ಮಿಥುನ—ಆರೋಗ್ಯ ಚೆನ್ನಾಗಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಕಿರುಕುಳ, ಅಧಿಕಾರಿ ವರ್ಗದವರಿಂದ ತಿರಸ್ಕಾರ, ತಾ|| ೨೨, ೨೪ ಲಾಭ, ಮಿತ್ರ ದರ್ಶನ

ಕಟಕ—ಪ್ರಾಕೃತಿಕ ಸ್ಥಿತಿ ಸಾಧಾರಣ ಮಾನಸಿಕ ಚಿಂತೆ ಕಡಿಮೆ, ಆರ್ಥಿಕ ಅಭಾವ ಹೆಚ್ಚು, ಆದಾಯ ಕಡಿಮೆ, ಉದ್ಯೋಗ, ವ್ಯವಹಾರಗಳಿಂದ ಶತ್ರುಗಳ ಕಿರುಕುಳ, ಮಿತ್ರರಿಂದ ತಿರಸ್ಕಾರ, ತಾ|| ೨೩, ೨೫ ಲಾಭ, ಶಾಂತಿ

ಸಿಂಹ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ. ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ಬಂಧುವರ್ಗದವರ ಸತ್ಕಾರ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೨೪, ೨೭ ಲಾಭ, ಪ್ರವಾಸ.

ಕನ್ಯಾ - ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಅಧಿಕಾರಿ ವರ್ಗದವರಿಂದಲೂ, ಮಿತ್ರರಿಂದ ವ್ಯವಹಾರಗಳಲ್ಲಿ ಸಹಾಯ, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ಪ್ರವಾಸದಿಂದ ಅಪಘಾತ, ತಾ|| ೨೫, ೨೭ ಲಾಭ, ಶಾಂತಿ.

ತುಲಾ—ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರ ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ ಜಾಸ್ತಿ, ವ್ಯವಹಾರಗಳಲ್ಲಿ ಸೋಲು, ಪ್ರವಾಸದಿಂದ ಅಪಘಾತ, ತಾ|| ೨೪, ೨೭ ಲಾಭ, ಶಾಂತಿ

ವೃಶ್ಚಿಕ—ಆರೋಗ್ಯ ಚೆನ್ನಾಗಿರುತ್ತದೆ. ಧನಲಾಭ ಸಾಧಾರಣ, ಖರ್ಚು ಅಧಿಕ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಪ್ರವಾಸ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಪ್ರವಾಸದಿಂದ ಧನಲಾಭ ತಾ|| ೨೩, ೨೫, ೨೭ ಚಿಂತೆ, ಕಲಹ, ಅವಮಾನ.

ಧನು—ಪ್ರಾಕೃತಿಕ ಸ್ಥಿತಿ ಉತ್ತಮವಾಗಿರುತ್ತದೆ, ಧನಲಾಭ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರಾದಿಗಳಲ್ಲಿ ಪ್ರಗತಿ, ನೌಕರಿಯಲ್ಲಿ ಅಧಿಕಾರಿಗಳಿಂದ ಸಹಾಯ, ಪ್ರವಾಸದಿಂದ ಧನಲಾಭ, ಮಂಗಳಕಾರ್ಯಗಳಿಗಾಗಿ ಧನವ್ಯಯ, ತಾ|| ೨೩ ೨೫ ಚಿಂತೆ, ನಷ್ಟ.

ಮಕರ — ಆರೋಗ್ಯ ಉತ್ತಮ. ಧನಾದಾಯ ಕಡಿಮೆ ಖರ್ಚು ಅಧಿಕ ಮಂಗಳಕಾರ್ಯಗಳಿಗಾಗಿ ಪ್ರವಾಸ, ಬಂಧುಗಳಿಂದ ತಿರಸ್ಕಾರ, ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ ಮಿತ್ರರಿಂದ ಅಪಮಾನ ತಾ|| ೨೪, ೨೫, ೨೭ ಲಾಭ ಶಾಂತಿ.

ಕುಂಭ — ದೇಹ ಸ್ಥಿತಿ ಚೆನ್ನಾಗಿರುತ್ತದೆ. ಧನಲಾಭ ಉತ್ತಮ. ಖರ್ಚು ಕಡಿಮೆ ವ್ಯಾಪಾರಾದಿಗಳಲ್ಲಿ ಪ್ರಗತಿ. ಮಿತ್ರರಿಂದ ಸಹಾಯ ಬಂಧುಗಳಿಂದ ಸನ್ಮಾನ ಪ್ರವಾಸದಿಂದ ಮಹದ್ವ್ಯಕ್ತಿಗಳ ಸಂಪರ್ಕ ಧಾರ್ಮಿಕ ಕಾರ್ಯಗಳಿಗಾಗಿ ಅಧಿಕ ಧನವ್ಯಯ. ತಾ ೨೩ ೨೫ ಲಾಭ ಶಾಂತಿ,

ಮೀನ — ಪ್ರಾಕೃತಿಕ ಸ್ಥಿತಿ ಉತ್ತಮ ಮಾನಸಿಕ ಚಿಂತೆ ಹೆಚ್ಚು ಧನಲಾಭ ಉತ್ತಮ ಖರ್ಚು ಕಡಿಮೆ ಅಧಿಕಾರಿ ವರ್ಗದವರಿಂದ ಮನ್ನಣೆ ಮಿತ್ರರಿಂದ ಸನ್ಮಾನ ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಅಧಿಕವಾಗುವುದು ತಾ ೨೩, ೨೫ ಲಾಭ, ಶಾಂತಿ

ಪ್ರಸಿದ್ಧ ಪತ್ರಿಕೆ

ಮೈಸೂರು ಇಟ್ಟಿಗೆಗೂಡಿನಲ್ಲಿರುವ ಯಾದವರ ಲೇಟ್ ಮೇಸ್ತ್ರಿ ಕರಿಯಪ್ಪನವರ ಮಗ ಕೆ. ಎನ್. ನರಸಿಂಹಯ್ಯ, ಉರ್ಫ್ ಕೆ. ಎನ್. ಯಾದವ್ ಸರ್ವರಿಗೂ ತಿಳಿಸುವುದೇನೆಂದರೆ —

MYZ 1745 ನೇ ನಂಬರು ಬಾಡಿಗೆಗೆ ಓಡಿಸಲ್ಪಡುತ್ತಿರುವ ಸ್ಟುಡಿಬೇಕರ್ ಸೇಡಾನ್ ಮೋಟಾರಿನಲ್ಲಿ ನನಗೂ ಮತ್ತು ಚಾಮರಾಜ ಮೊಹಲ್ಲಾ ದಿವಾನ್ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಸಿ ವೆಂಕೋಬರಾವ್‌ರವರಿಗೂ ಸಮಾರ್ಧ ಹಕ್ಕಿರುತ್ತೆ ಆದರೂ ಅದಕ್ಕೆ ಸಂಬಂಧಪಟ್ಟ ನನ್ನ ಮತ್ತು ಅವರ ಕಾಂಟ್ರಾಕ್ಟ್ ಒಪ್ಪಂದವನ್ನು ಏನೂ ನನಗೆ ನಷ್ಟ ಪಡಿಸುತ್ತಿರುವುದಲ್ಲದೆ ಮೋಟಾರನ್ನು ಮಾರಿಬಿಡುವ ಪ್ರಯತ್ನದಲ್ಲಿರುವರೆಂದು ತಿಳಿದು ಬರುತ್ತೆ ಅವರಿಂದ ಯಾರಾದರೂ ಕೊಂಡುಕೊಂಡಲ್ಲಿ ಕ್ರಯವು ಊರ್ಜಿತವಲ್ಲ ಹಾಗೆ ಕೊಂಡವರು ನನ್ನ ಲುಕ್ಸಾನಿಗೆ ಗುರಿಯಾಗುತ್ತಾರೆ

ಕೆ. ಎನ್. ನರಸಿಂಹಯ್ಯ ಉರ್ಫ್
ಕೆ. ಎನ್. ಯಾದವ್.

ವಿಕರಿಗೆ ಸಿದ್ಧವಾಗಿವೆ

1 ಕ್ವಾರ್ಟರ್ H. P. ಮೋಟಾರ್ (ಬ್ರಿಟಿಷ್ ಮೇಡ್)
1 ಚಿಕ್ಕದು ಲೇತ್
1 ಟರ್ನಿಂಗ್ ಸಾಮಾನ್
ಒಳ್ಳೆಯ ಸ್ಥಿತಿಯಲ್ಲಿವೆ

ವಿಚಾರಿಸಿ :—

ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,

ಸಯ್ಯಾಜೀರಾವ್ ರಸ್ತೆ, ಚಾಮುಂಡೇಶ್ವರಿ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

Edited printed and published by A. R. Nagarajan at the Sadhvi Press D Subbaiah Road Mysore

ರಾಜಕಮಲ್

ತಾ|| 18-7-47 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್ ★

—: ಭೂಮಿಕೆ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

ಪ್ರತಿ ಭಾನುವಾರ ಮ್ಯಾಟಿನಿ ಉಂಟು. ಶ್ರೀ ಯಶಸ್ವೀ 10 ನೇ ಪ್ರಯೋಗ

ಹಾಲಸಿದ್ದೇಶ್ವರ ಸಂಗೀತ ನಾಟಕ ಮಂಡಲಿ

ಹಲಗೇರಿ. ಇವರು ಮೈಸೂರು ಶಿವರಾಂ ಪೇಟೆ

ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦-೩೦ ಕ್ಕೆ

★ ಪರಾಣಿ ಪಾಶ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್.

Office of the Municipal Engineer,
City Municipal Council,
Mysore, dated, 27-6-47

NOTIFICATION

Sealed tenders will be received up to 4 P M on 22-7-47 by the Municipal Engineer for the supply of road materials and consolidation works in the Municipality for the year 1947-48 Each tender other than that of a registered contractor in the Municipality must be accompanied with a challan for having remitted a deposit of Rs 200/- in the Municipal Treasury as earnest money. For full particulars please see the detailed notification on the notice Board of the office of the Undersigned.

S Narayanaswamy,
Municipal Engineer.

ಮೈಸೂರಿಗೆ ಜಿಲ್ಲಾ ಬೋರ್ಡ್ ಸಹಾಯ

ಟಿ ನರಸೀಪುರದ ರೂರಲ್ ಹೈಸ್ಕೂಲಿಗೆ ಜಿಲ್ಲಾ ಬೋರ್ಡಿನಿಂದ ೮ ಸಹಸ್ರ ರೂ. ಗಳನ್ನು ಕೊಡಲು ತೀರ್ಮಾನಿಸಲಾಗಿದೆಯೆಂದೂ ಹಾಗೆಯೇ ಟಿ ನರಸೀಪುರದ ಪ್ರೌಢಶಾಲೆಗಳವರೂ ಸಹ ಆ ಸಂಸ್ಥೆಗೆ ಸಹಾಯನೀಡಬೇಕೆಂದೂ ಅದರ ಕಾರ್ಯದರ್ಶಿಗಳಾದ ಶ್ರೀ|| ಶಿವಾನಂದಶರ್ಮರು ಪ್ರಾರ್ಥಿಸಿರುವರು

ಹಿಂದಿಯು ರಾಷ್ಟ್ರಭಾಷೆಯಾಗಬೇಕು

ದೇವನಾಗರೀ ಲಿಪಿಯಿಂದ ಕೂಡಿದ ಹಿಂದಿಯು ಭಾರತದ ರಾಷ್ಟ್ರ ಭಾಷೆಯಾಗಬೇಕೆಂದು ರಾಜ್ಯಾಂಗ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ನಿರ್ಧರಿಸಿರುವರು ಇದೇ ವಿಷಯವನ್ನು ಪ್ರಾಂತೀಯ ಮತ್ತು ಯೂನಿಯನ್ ರಾಜ್ಯಾಂಗಗಳಲ್ಲಿಯೂ ನಿರ್ಣಯದ ಮೂಲಕ ಒತ್ತಾಯಪಡಿಸಲಾಗುವುದು

ಒಣಗಿದ್ದ ಆಲದ ಮರ ಚಿಗುರಿದೆ

ಕಟಕ್ ಜಿಲ್ಲೆಯ ಮಾದಾ ಗ್ರಾಮದ ಬಳಿ ಮೂರು ವರ್ಷಗಳ ಹಿಂದೆ ರೆಂಬೆಗಳೆಲ್ಲಾ ಕತ್ತರಿಸಿ ಹಾಕಿ ಕೆಡವಲಾಗಿದ್ದ ಆಲದ ಮರವೊಂದು ಒಂದೇ ರಾತ್ರಿಯೊಳಗಾಗಿ ಚಿಗುರಿ ಹೊಸ ದೊಡ್ಡ ಮರವಾಗಿದೆಯೆಂದು ವರದಿಯಾಗಿದೆ

ವುಡ್‌ಲ್ಯಾಂಡ್ಸ್

19-7-47 ರಿಂದ
ಕಿಕ್ಕಿರಿದ ೧೨ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬಿ(ತಮಿಳು)

-: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮೀ, ಟಿ. ಆರ್. ರಾಮಚಂದ್ರ ಮುಂತಾದವರು.

WANTED

A Manager for Stores Section. Applications will be received up to 26-7-47 Applicants should have passed S S L C. Cash security of Rs. 250/- and agreement to serve for TWO Years essential Pay Rs 30 in the grade 30-2-40 and D A Rs. 15 per month.

K. N. Nagaraja Setty,
Hon Secretary,
Sri Kanyaka Parameshwari Co-operative Society, Ltd
Mysore.

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೨೨—೭—೪೭ [ಸಂಚಿಕೆ ೨

ಬರ್ಮಾದಲ್ಲಿ ಮತ್ತೊಬ್ಬ ನಾಯಕನ ದಸ್ತಗಿರಿ

ಬರ್ಮಾದಲ್ಲಿ ನೂರಾರು ದಸ್ತಗಿರಿಗಳು

ಬರ್ಮಾ ತಾತ್ಕಾಲಿಕ ಸರ್ಕಾರದ ಸಚಿವರ ಕೊಲೆಯ ಕಾರಣದಿಂದ ನೂರಾರು ಜನರನ್ನು ದಸ್ತಗಿರಿ ಮಾಡಲಾಗಿದೆ. ಜನರಲ್ ಆಂಗ್‌ಸಾನ್ ನಿಯೋಗದ ಸದಸ್ಯರಾಗಿ ಅವರೊಡನೆ ಬ್ರಿಟನ್ನಿಗೆ ಹೋಗಿದ್ದ ಡೊಬಾಮಾ ಪಕ್ಷದ ನಾಯಕರಾದ ಥಾಕಿನ್ ಬಾಸೀನರನ್ನೂ ಸಹ ಬಂಧಿಸಲಾಗಿದೆಯೆಂದು ವರದಿಯಾಗಿದೆ. ದುಷ್ಕರ್ಮಿಗಳ ಶೋಧನ ಕಾರ್ಯ ಬಹಳ ತೀವ್ರವಾಗಿ ಸಾಗಿದೆ. ರಂಗೂನಿನ ಬೀದಿಗಳಲ್ಲಿ ಜನಸಂಚಾರ ನಿಂತಿದೆ. ಅಂಗಡಿಗಳನ್ನೆಲ್ಲಾ ಮುಚ್ಚಲಾಗಿದೆ. ಲಾರಿಗಳಲ್ಲಿ ಸೈನಿಕರು ಮಿಷನ್ ಗನ್ನುಗಳನ್ನು ತುಂಬಿಕೊಂಡು ಬೀದಿಬೀದಿಗಳಲ್ಲೂ ಕಾವಲು ನಡೆಸುತ್ತಿದ್ದಾರೆ.

ರೈತರ ತೊಂದರೆ

ಶ್ರೀರಂಗಪಟ್ಟಣ ತಾಲ್ಲೂಕಿನ ಬಳಗೊಳದ ವೈಟ್ ಬ್ಯಾಂಕ್ ನಾಲೆಯಲ್ಲಿರತಕ್ಕ ಜಮೀನುಗಳಿಗೆ ನಾಲೆಗಳಲ್ಲಿ ಸರಿಯಾಗಿ ನೀರನ್ನು ಬಿಡದೆ ಪೈರು ಒಣಗುತ್ತಿದೆ. ಈ ಪ್ರದೇಶದಲ್ಲಿರತಕ್ಕ ಸುಮಾರು ೨೦೦ ಎಕ್ರೆ ಜಮೀನುಗಳಲ್ಲಿ ಅರ್ಧ ಫಸಲೂ ಸಹ ಬರುವ ನಿರೀಕ್ಷೆ ಇರುವುದಿಲ್ಲ. ಸಂಬಂಧಪಟ್ಟವರು ಈ ಬಗ್ಗೆ ಕೂಡಲೇ ಗಮನಕೊಡಬೇಕೆಂದು ಒಬ್ಬ ಬಾಧ್ಯಸ್ಥರು ಪ್ರಾರ್ಥಿಸುವರು.

ಖೂನಿ

ಸ್ವಂ. ಸು.] ಚಾಮರಾಜನಗರ ೧೮
ಇದೇ ತಾಲ್ಲೂಕಿನ ಅಮಚವಾಡಿ ಗ್ರಾಮದ ಕುನ್ನಮಾದ ಮತ್ತು ಇನ್ನಿಬ್ಬರು ಈ ದಿನ ೧೮ ನೇ ತಾ|| ಪರಿವಾರದ ಜಾತಿಯ ಆಯಿ ಎಂಬುವನನ್ನು ಕೊಲೆ ಮಾಡಿದರೆಂದೂ ಚಾಮರಾಜನಗರದ ಪೋಲೀಸರು ಅಪರಾಧಿಗಳನ್ನು ದಸ್ತಗಿರಿ ಮಾಡಿ ಮುಂದಿನ ತನಿಖೆ ನಡೆಸುತ್ತಿರುವುದಾಗಿಯೂ ತಿಳಿದುಬಂದಿದೆ.

ಎ. ಐ. ಸಿ. ಸಿ. ಸಿದ್ಧತೆ

ರಾಜಧಾನಿಯಲ್ಲಿ ಬರುವ ತಿಂಗಳು ನಡೆಯಲಿರುವ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದ ವ್ಯವಸ್ಥೆಗಳನ್ನು ಮಾಡಲು ನಾಳೆ ಸಂಜೆ ಆರು ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಸಭೆ ನಡೆಸುವ... ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರು ಪ್ರಕಟಿಸಿರುವರು.

ರಾಜಕಮಲ್
ತಾ|| 18-7-47 ರಿಂದ
ಅಪೋಲೋ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಕಿಸ್ಮತ್ ‌ಸ
—: ಭೂಮಿಕೆ :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಶೀಬಿ ಕಮಲ ಮತ್ತು ...

ಇಂಡೋನೇಷ್ಯದಲ್ಲಿ ಕದನ

ರಿಪಬ್ಲಿಕ್ ಕಟ್ಟಡಗಳನ್ನು ಆಕ್ರಮಿಸಿ ಇಂಡೋನೇಷ್ಯದ ಉಪಪ್ರಧಾನಿ ಡಾ|| ಘನಿಯವರನ್ನು ಡಚ್ಚರು ದಸ್ತಗಿರಿ ಮಾಡಿರುವರೆಂದು ವರದಿಯಾಗಿದೆ. ಬಟೇವಿಯದಲ್ಲಿ ಇಂಡೋನೇಷ್ಯರಿಂದ ಪ್ರತಿಭಟನೆಗಳೇನೂ ಇಲ್ಲ. ಪ್ರತಿಭಟನೆಯನ್ನು ತೋರಕೂಡದೆಂದು ಇಂಡೋನೇಷ್ಯನರು ತಮ್ಮ ನಾಗರಿಕರಿಗೆ ಎಚ್ಚರಿಸಿರುವರು. ಕದನ ಪ್ರಬಲವಾದರೆ ಡಚ್ ಸೈನ್ಯಗಳು ರಿಪಬ್ಲಿಕ್ ರಾಜಧಾನಿಯಾದ ಜೋಗ್‌ಜಕರ್ತಾ ನಗರವನ್ನು ಆಕ್ರಮಿಸಲು ಯತ್ನಿಸಬಹುದು. ಆದರೆ ಇದುವರೆಗೆ ಶಸ್ತ್ರ ಪ್ರಯೋಗವೇನೂ ನಡೆದಿಲ್ಲ. ಈಗ ಮತ್ತೆ ಸಂಧಾನವು ಆರಂಭವಾಗಿದೆಯೆಂದೂ, ಅದು ವಿಫಲವಾದರೆ ರಿಪಬ್ಲಿಕ್ ಸರ್ಕಾರ ತನ್ನ ಪಕ್ಷವನ್ನು ಭಾರತ ಮತ್ತು ಅರಬ್ ಲೀಗುಗಳ ಮೂಲಕ ಸಂಯುಕ್ತ ರಾಷ್ಟ್ರ ಪರಿಶೀಲನೆಗೆ ಇಡುವುದೆಂದೂ ವರದಿಯಾಗಿದೆ.

ರಾಜಾಜಿ ಬೊಂಬಾಯಿಯ ಗವರ್ನರರೇ?

ಆಗಸ್ಟ್ ೧೫ ರ ನಂತರ ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಬೊಂಬಾಯಿ ಪ್ರಾಂತದ ಪ್ರಧಾನಿಗಳನ್ನಾಗಿ ನೇಮಿಸಬೇಕೆಂದು, ಕಾಂಗ್ರೆಸ್ ಪ್ರಮುಖರು ನಿಶ್ಚಯಿಸಿರುವುದಾಗಿ ವರದಿಯಾಗಿದೆ. ... ಸರ್ದಾರ್ ಪಟೇಲರನ್ನು ಕಾಂಗ್ರೆಸ್ ನಾಯಕರನ್ನಾಗಿ ಆರಿಸಿ ಅವರನ್ನು ಡೊಮಿನಿಯನ್ನಿನ ಪ್ರಥಮ ಪ್ರಧಾನಿಯಾಗಿ ನೇಮಿಸಬೇಕೆಂದು ... ಸಭೆಯು ನಿರ್ಧರಿಸಿರುವುದಾಗಿಯೂ ಹೇಳಲಾಗಿದೆ.

ವುಡ್‌ಲ್ಯಾಂಡ್ಸ್
19-7-47 ರಿಂದ
ಶಕ್ತಿರಿಪ ೧೨ ನೇ ವಾರ
ಪ್ರತಿ ದಿನ ೩ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ೨ ಗಂಟೆ)
ನಾಮ್ ಇರುವು
(ಬಿ.ಕಮಲ)
-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ಪೌರಸಭೆಯ ಸಂತಾಪ

ಸ್ವಂ ಸು. ಫೋ.] ಬೆಂಗಳೂರು ೨೨
ನಿನ್ನೆ ದಿನ ಆಯವ್ಯಯದ ಪಟ್ಟಿಯನ್ನು ಪರಿಶೀಲಿಸಲು ಸೇರಿದ್ದ ಪೌರಸಭೆಯ ಕಾರ್ಯಕಲಾಪಗಳು ಆರಂಭವಾಗುವ ಮೊದಲು ಬರ್ಮಾದ ಪ್ರಧಾನಿ ಮತ್ತು ಇತರ ಮಂತ್ರಿಗಳ ಕೊಲೆ ಬಗ್ಗೆ ಮತ್ತು ಅವರ ಬಂಧುಗಳಿಗೆ ಸಂತಾಪವನ್ನು ಸೂಚಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ವಕೀಲರ ನಿಧನಕ್ಕಾಗಿ ಸಂತಾಪ

ಬೆಂಗಳೂರಿನ ಹಿರಿಯ ವಕೀಲರೂ ... ಶ್ರೀ ... ತಮ್ಮ ... ರಾಜೀನಾಮೆ ... ವಕೀಲರಾಗಿದ್ದು ... ಬೆಂಗಳೂರು ಕೋರ್ಟಿಗೆ ... ಬಂದ. ... ಶ್ರೀ ಬಿ. ಸೀತಾರಾಮರಾಯರ ನಿಧನಕ್ಕಾಗಿಯೂ ನಿನ್ನೆ ಹೈಕೋರ್ಟಿನಲ್ಲಿ ಸರ್ಕಾರದ ವಕೀಲರಾದ ಶ್ರೀ ಜಿ. ಆರ್. ... ನಾಯ್ಡುರವರು ಸಂತಾಪವನ್ನು ಸೂಚಿಸಿ ಭಾಷಣಮಾಡಿದರು. ಶ್ರೀ ನ್ಯಾಯಾಧೀಶರಾದ ಶ್ರೀ ವೆಂಕಟೇಶ ... ನಾಯ್ಡುರವರೂ ಸಹ ತಮ್ಮ ... ವ್ಯಕ್ತಪಡಿಸಿದರು.

ಬೀರಾರ್ ದಿನಾಚರಣೆ

ರಾಜಧಾನಿಯ ಹಿಂದೂ ... ಸಭೆ ... ನಿನ್ನೆ ಸಂಜೆ ಶ್ರೀ|| ಎಂ. ... ನವರ ಅಧ್ಯಕ್ಷತೆಯಲ್ಲಿ ಬೀರಾರ್ ದಿನಾಚರಣೆಯನ್ನು ನೆರವೇರಿಸಿದರು. ಬೀರಾರು ಹೈದರಾಬಾದಿಗೆ ಸೇರಕೂಡದೆಂದು ಒತ್ತಾಯಕ್ಕಾಗಿ ಶ್ರೀಗಳಾದ ಬ್ರಿಜಲಾಲ್ ಬಿಯಾನಿ, ... ದೇಶಪಾಂಡೆ ಮತ್ತು ಎಂ. ಎಸ್. ಅಣೆಯವರನ್ನು ಅಭಿನಂದಿಸುವ ... ಬೀರಾರಿನ ಪ್ರಜೆಗಳಿಗೆ ತಮ್ಮ ರಾಜಕೀಯ ಭವಿಷ್ಯವನ್ನು ತೀರ್ಮಾನಿಸಿಕೊಳ್ಳಲು ಪೂರ್ಣ ಅಧಿಕಾರವಿರುವುದೆಂದು ... ಬೀರಾರು ... ಅಂಗ್ಲೇಯರಿಂದ ... ಹಿಂದೆಯೂ ಅವರ ... ಭೂಮಿ ... ಅವರ ... ರಿಗೆ ... ನೋಡಲಾದ ... ಕೊಡಬೇಕೆಂದು ... ನಿರ್ಣಯ ... ಸಭೆ ... ಮಾಡಿತು ... ನಿನ್ನ ಕೊಟ್ಟ ... ಸಿದ್ಧವಾದರೆ ... ಪಾಸಾಯಿತು.

'ಸಾಧ್ವಿ' ಸಂತೋಷ ಕೂಟ

ಮೈಸೂರು ೨.
ಸಾಧ್ವಿ ಪತ್ರಿಕೆಯ ವಾರ್ಷಿಕೋತ್ಸವದ ಅಂಗವಾಗಿ ನಿನ್ನೆ ಸಂಜೆ ಒಂದು ಸತ್ಕಾರ ಕೂಟವು ಸಾಧ್ವಿ ಕಾರ್ಯಾಲಯದಲ್ಲಿ ನಡೆಯಿತು. ... ನಗರದ ಪ್ರಮುಖರು, ಪತ್ರಕರ್ತರು, ... ಕರು ಮುಂತಾದವರು ಅನೇಕ ಜನ ಮಹನೀಯರುಗಳು ದಯಮಾಡಿಸಿದ್ದರು. ಉಪಾಹಾರಾನಂತರ ಶ್ರೀ ಅಗರಂ ರಂಗಯ್ಯನವರು ಭಾಷಣ ಮಾಡಿ ಪತ್ರಿಕೆಯನ್ನು ನಡೆಸಲು ನೆರವಾಗುತ್ತಿರುವವರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು. ಮತ್ತು ಪತ್ರಿಕಾ ವೃತ್ತಿಯ ಉದಾತ್ತ ಧ್ಯೇಯಗಳಿಗೆ ಅನುಗುಣವಾಗಿ ತನ್ನ ಕರ್ತವ್ಯವನ್ನು ನೆರವೇರಿಸಲು ತಕ್ಕ ಸಲಹೆಗಳನ್ನೂ, ಸಹಕಾರವನ್ನೂ ನೀಡಬೇಕೆಂದು ಪ್ರಾರ್ಥಿಸಿದರು.

ಪೌರಸಭಾ ಸದಸ್ಯರಾದ ಶ್ರೀ ಎಚ್. ಸಿ. ದಾಸಪ್ಪರವರ ... ಶ್ರೀ ... ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಸೆಟ್ ಸಿ. ದಾಸಪ್ಪನವರು ಅತಿಥಿಗಳ ಪರವಾಗಿ ಭಾಷಣ ಮಾಡುವಂತೆ ಪ್ರಾರ್ಥಿಸಿದರು.

ಅನಂತರ ಶ್ರೀ ದಾಸಪ್ಪನವರು ... ನಾಡಿ ದಿವಂಗತ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ಮೈಸೂರ ಸಂಸ್ಥಾನಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿದ್ದುದನ್ನು ಪ್ರಶಂಸಿಸಿದರು. ಮ. ಶ. ... ಜನರ ... ಅವರು ಸಾಧ್ವಿ ಪತ್ರಿಕೆಯನ್ನು ಸ್ಥಾಪಿಸಿದ ವಿಷಯವನ್ನು ತಿಳಿಸಿದರು. ... ತೋರಿದ ... ಮಾರ್ಗದಲ್ಲಿಯೇ ಇನ್ನು ಮುಂದೆಯೂ ಸಾಧ್ವಿ ಪತ್ರಿಕೆಯು ದೀರ್ಘಕಾಲ ಸಾರ್ವಜನಿಕ ಸೇವೆಯನ್ನು ಸಲ್ಲಿಸಲೆಂದು ಹಾರೈಸಿದರು.

ಅನೇಕ ವರ್ಷಗಳ ತ್ಯಾಗ ಮತ್ತು ಹೋರಾಟಗಳ ಫಲವಾಗಿ ಇಂದು ನಮ್ಮ ದೇಶವು ಸ್ವಾತಂತ್ರ್ಯದ ಹೊಸ್ತಿಲನ್ನು ಮುಟ್ಟಿರುವ ಸಮಯದಲ್ಲಿ ... ನಗಳು ... ವರ್ತನೆಯನ್ನು ... ದಕ್ಕಾಗಿ ... ವಿಷಾದವನ್ನು ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನವು ... ದಿಂದ ಮುಂದುವರಿದು ... ಸ್ವಾತಂತ್ರ್ಯವನ್ನು ... ಬದಲು ... ನೋಡುತ್ತ ... ರಾಜ್ಯಾಂಗ ಸಭೆಯಲ್ಲಿ ಸೇರ ... ಹುದೆಂದೂ, ಈ ಕೂಡಲೇ ... ಯೂನಿಯನ್ನಿನಲ್ಲಿಯೂ ಸೇರುವುದಾಗಿ ಅದು ತೀರ್ಮಾನ ಮಾಡಬೇಕೆಂದು ಅವರು ಹೇಳಿದರು.

ಮೈಸೂರು ಸರ್ಕಾರದವರು ಸಂಪೂರ್ಣ ... ಪ್ರಗತಿ ಮಾರ್ಗದಲ್ಲಿ ಪ್ರ... ನಿರ್ಧರಿಸಿದರೆ ಇಲ್ಲಿ ಯಾವ ... ಅಗತ್ಯವಿರುವುದಿಲ್ಲವೆಂದು, ಶ್ರೀ ದಾಸಪ್ಪನವರು ... ಶ್ರೀ ... ಸರ್ಕಾರದ ... ಅವರು ... ಮಾಡಿ ನಮ್ಮ ... ನ್ನು ನೀಡಲು ... ಹಾರೈಸಿದರು.

ದಸ್ತೂರ ನಗರ ... ಸಮಾರಂಭವು ಮುಕ್ತಾಯಗೊಂಡಿತು.

ಸಾಧ್ವಿಗೆ ಶುಭಾಶಯ

ವಾರ್ಷಿಕೋತ್ಸವದಲ್ಲಿ ಸಂದೇಶಗಳು

ಸಾಧ್ವಿ ಪತ್ರಿಕೆಯ ೫ ನೆಯ ವಾರ್ಷಿಕೋತ್ಸವದ ಸಮಯದಲ್ಲಿ ಮಹನೀಯರು ಗಳಿಂದ ಬಂದ ಸಂದೇಶಗಳನ್ನು ಈ ಕೆಳಗೆ ಕೊಡಲಾಗಿದೆ:—

ರಾಜಸೇವಾಪ್ರಸಕ್ತ

ಅಂಬಳೆ ಸುಬ್ರಹ್ಮಣ್ಯಯ್ಯ ಅಯ್ಯರ್

ಈ ದಿನ ಸಾಯಂಕಾಲ ನಡೆಯಲಿರುವ 'ಸಾಧ್ವಿ' ದಿನ ಪತ್ರಿಕೆಯ ೫ ನೇ ವಾರ್ಷಿಕೋತ್ಸವಕ್ಕೆ ಶ್ರೀಯುತ ಅಗರಂ ರಂಗಯ್ಯನವರು ವಿಶ್ವಾಸಪೂರ್ವಕವಾಗಿ ಕಳುಹಿಸಿದ ಆಹ್ವಾನ ಪತ್ರಿಕೆಯು ಶ್ರೀಯುತ ಅಂಬಳೆ ಸುಬ್ರಹ್ಮಣ್ಯಯ್ಯನವರಿಗೆ ತಲುಪಿ ಬಹಳ ಸಂತೋಷವಾಯಿತು.

ಉತ್ಸವ ಕಾಲದಲ್ಲಿ ಪ್ರತ್ಯಕ್ಷವಾಗಿ ಇರಲು ಇತರ ಕೆಲಸವಿರುವುದರಿಂದ ಅನುಕೂಲವಿಲ್ಲವಾಗಿ ಅವರು ತಮ್ಮ ಶುಭಾಶಯಗಳನ್ನು ಈ ಮೂಲಕ ತಿಳಿಸುತ್ತಿದ್ದಾರೆ.

ಶ್ರೀ॥ ಹೆಚ್. ಸಿ. ದಾಸಪ್ಪನವರು,
ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರು

ಇಂದು ನಡೆಯಲಿರುವ ಸಾಧ್ವಿ ವಾರ್ಷಿಕೋತ್ಸವಕ್ಕಾಗಿ ತಾವು ಕಳುಹಿಸಿದ ಕರೆಯೋಲೆ ತಲುಪಿತು. ಇಂದೇ ನಾನ ಮೈಸೂರು ಕಾರ್ಯಕ್ಕಾಗಿ ಕೃಷ್ಣರಾಜನಗರಕ್ಕೆ ಹೋಗಬೇಕಾಗಿರುವುದರಿಂದ ಬರಲಿಕ್ಕೆ ಸಾಧ್ಯವಿಲ್ಲ [illegible]. ಈ ನಿಮ್ಮ ವಾರ್ಷಿಕೋತ್ಸವಗಳು ಸಾಧಾರಣ [illegible] ನಡೆಯುವ ಉತ್ಸವಗಳಂತಲ್ಲ. ತಮ್ಮ ಪತ್ರಿಕೆಯು [illegible] ಇವರನ್ನು [illegible] ಪತ್ರಿಕೆಯ ಸೇವೆ [illegible] ರಾಜಕೀಯ [illegible] ಜನಗಳ ಆರೋಗ್ಯದ [illegible] ಪ್ರಚಾರಕ್ಕೆ ತರಲು ಇರುವ ಉತ್ತಮ ಸಾಧನವೂ ಆಗಿರುತ್ತದೆ. ಈ ಸಭೆಗೆ ನನ್ನ ಪರಮ ಮಿತ್ರರೂ, ಸುಪ್ರಸಿದ್ಧ ರಾಜಕೀಯ ನಿಪುಣರೂ, ಒಳ್ಳೇ ವಾಗ್ಮಿಗಳೂ ಆದ ಶ್ರೀ ಕೆ ಟಿ ಭಾಷ್ಯಂರವರನ್ನು ಅಧ್ಯಕ್ಷರನ್ನಾಗಿ ಆರಿಸಿರುವುದು ನನಗೆ ಬಹಳ ಸಂತೋಷ.

ನಮ್ಮ ಈ [illegible] ದೇಶದ [illegible] ಒಂದು [illegible] ನನ್ನ [illegible] ಇವರನ್ನು [illegible] [illegible] ಭಾಗದ [illegible] ಮೈಸೂರು [illegible] ಎಂದು [illegible] ನಿಮ್ಮ [illegible] [illegible]

[illegible]

ಶ್ರೀ ಪಿ. ವೆಂಕಟಸುಬ್ಬಯ್ಯನವರು
ಮೈಸೂರು ಜಿಲ್ಲಾಬೋರ್ಡು ಸದಸ್ಯರು

ಸಾಧ್ವಿ ಪತ್ರಿಕೆಯ ೫ ನೆಯ ವಾರ್ಷಿಕೋತ್ಸವವು ಅತ್ಯಂತ ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರಿತೆಂಬ ವಿಷಯವು ಈ ದಿವಸದ ಪತ್ರಿಕೆಯಿಂದ ತಿಳಿದು ಬಹಳ ಸಂತೋಷವಾಯಿತು. ನಾನು ಆ ಕಾಲದಲ್ಲಿದ್ದು ಸಮಾರಂಭದಲ್ಲಿ ಭಾಗವಹಿಸಿ ಸಂತೋಷ ಪಡಲು ಅವಕಾಶ ದೊರಕದೇ ಹೋದುದಕ್ಕಾಗಿ ಬಹಳ ಸಂಕೋಚ ಪಡುತ್ತೇನೆ.

ತಮ್ಮ ಪತ್ರಿಕೆಯು ಪ್ರಜೆಗಳ ಕ್ಷೇಮವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ನಡೆಯುತ್ತಿರುವುದು ತಮ್ಮ ಘನತೆಗೆ ತಕ್ಕದ್ದಾಗಿರುತ್ತದೆ. ತಮ್ಮ ಪತ್ರಿಕೆಯು ಚಿರಕಾಲ ಬಾಳಲೆಂದೂ, ಹೆಚ್ಚು ಪುಟಗಳಿಂದ ಕೂಡಿ ಹೆಚ್ಚು ವಿಷಯಗಳನ್ನು ಪ್ರಕಟಿಸುವುದರ ಮೂಲಕ ಇನ್ನೂ ಹೆಚ್ಚಾಗಿ ದೇಶೋಪಕಾರ ಮಾಡುವಂತಾಗಲೆಂದೂ ತಮಗೂ ಮತ್ತು ತಮ್ಮ ಕುಟುಂಬದವರಿಗೂ ದೇವರು ಹೆಚ್ಚು ಆರೋಗ್ಯ ಸಂಪತ್ತು ಮೊದಲಾದ ಸಕಲ ಅನುಕೂಲಗಳನ್ನೂ ಕೊಡಬೇಕೆಂದೂ ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್. ಕೃಷ್ಣಮೂರ್ತಿಯವರು,
ಅರಮನೆ ಇಲಾಖೆ

ನಿಮ್ಮ ಪತ್ರಿಕೆಯ ೫ ನೇ ವಾರ್ಷಿಕೋತ್ಸವಕ್ಕೆ ಕಳುಹಿಸಿದ ಆಹ್ವಾನಕ್ಕಾಗಿ ವಂದಿಸುತ್ತೇನೆ. [illegible] ಕಾರಣದಿಂದ ಬರಲು [illegible] ಭಗವಂತನು [illegible] ದಯಪಾಲಿಸಲೆಂದು ನಾನು ಪ್ರಾರ್ಥಿಸಿ [illegible] ಶುಭಾಶಯವನ್ನು ಸಲ್ಲಿಸುತ್ತೇನೆ.

Mr J. N. IYER
Indian Plastics Limited,
Bombay.

Dear Mr. Agaram Rangiah,

I am very glad to learn that the 5th anniversary of "SADVI" will be celebrated on sunday under the presidency of Sri: K. T. Bhashyam. I am pleased to know that the 'Sadvi' has been able to render great service to Mysore and Mysoreans under your able guidance. I wish the function every success and pray for its long life and prosperity.

R. Ramachandra Rao
Bhombore,
President, City Municipal Council, Mysore.

My dear
Mr. Agaram Rangiah,

I thank you heartily for the kind invitation to the fifth anniversary of your paper "Sadhvi". As I have accepted some other engagements about the same time on the 21st inst. It is not convenient to me to be present although I very much wish to do so. I convey my very best wishes for your paper and trust that it will continue to render valuable service in the cause of truth and justice.

Please convey my best regards to Mr. K. T. Bashyam.

Yours sincerely,
R. Ramachandra Rao
Bhombore.

Rajasevaprasaktha
Y. K. Ramachandra Rao,

My Dear Rangaiya,

I thank you very much for your kind invitation to be present at the fifth anniversary of 'Sadhvi'. Having another engagement at the same time, and returned home, just now (9 p. m.), I was not able to go to your place. All the same my thoughts were with you, and I wish a long and useful career to your informing (though small in size) daily Sadhvi.

Thanking you again,
Yours Sincerely,
Y. K. Ramachandra Rao.

Dewan Bahadur
Rajakarya Prasakta
K. Ramaswmy,

My Dear Agaram Rangiah,

I profusely thank you for your kind invitation in connection with the 5th Anniversary of the Sadhvi paper under the Distinguished Presidentship of our esteemed friend mr K. T. Bashyam today at 6 P. M. How I wish I would have been able to attend this grand function and have a chat with you all, had it not been for my physical inability. As you know I am suffering from leg trouble and generally avoid all public engagements and functions.

I hope you will not misunderstand me and kindly appreciate my difficulty in not attending the function.

I send my very best wishes for the grand success of the function under the most able Presidentship of Mr K. T. Bashyam.

I remain,
Yours ever sincerely,
K. Ramaswamy

ಸಾಧ್ವಿ
(ಸಂಜೆಯ ದಿನ ಪತ್ರಿಕೆ)
Edited, printed and published by A. R. Nagarajan at the Sadhvi Press D. Subbaiah Road Mysore

ಪ್ರಸಿದ್ಧ ಪತ್ರಿಕೆ

ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ಮೂಡಹಳ್ಳಿ ಗ್ರಾಮದಲ್ಲಿರುವ ಅಧಿಕಾರಿಗಳಿಗೆ [illegible] ಕೊಂಡ ಪ್ರಕಟನೆಯು ಈ ಮೂಲಕ ಸಕಲ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಡಿಟೋ ಮೂಡಹಳ್ಳಿ ಗ್ರಾಮದ ಸ. ನಂ. [illegible] ಖಾತೆ [illegible] ಜಮೀನು ನನ್ನ ಹೆಸರಿಗೆ [illegible] ನನ್ನ ಗಂಡನ [illegible] [illegible] ನನ್ನ [illegible] ನನ್ನ ಹೆಸರಿಗೆ [illegible] ಜಮೀನನ್ನು [illegible] [illegible]

ಶ್ರೀ
ದಾಸಪ್ಪೇಶ್ವರ ಸಂಗೀತ ನಾಟಕ ಮಂಡಳಿ
[illegible]
[illegible] ರತ್ನಾವಳಿ ಥಿಯೇಟರಿನಲ್ಲಿ [illegible]
ಸಾಧ್ವಿ [illegible]
[illegible]
[illegible]

ಫೋನ್ ನಂ. 392 || ವಂದೇ ಮಾತರಂ || ಬಿಡಿಪ್ರತಿ ಪತ್ರಿಕೆ ೩ ಕಾಸು

ಸಂಪುಟ ೬] ಬುಧವಾರ ೨೩—೭—೪೭ [ಸಂಚಿಕೆ ೩

ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ನೆಹರೂ

...ನಸಭೆಯಿಂದ ಸ್ವಾತಂತ್ರ್ಯ ದಿನಾಚರಣೆ

...] ಬೆಂಗಳೂರು ೨೩
...ವ ಆಗಸ್ಟ್ ೧೫ ರ ನಂತರ ಸಂಸ್ಥಾನ ಬ್ರಿಟಿಷ್ ಸಾರ್ವಭೌಮಾಧಿಕಾರವು ...ವಾಗುವುದರಿಂದ ಶ್ರೀಮನ್ಮಹಾರಾಜ ...ಅಳ್ವಿಕೆಯು ಗೌರವ ಮತ್ತು ...ಂತ ...ಮ ಮೆಚ್ಚುವ ಬಗ್ಗೆ ತಮ್ಮ ಸಂತೋಷ ವ್ಯಕ್ತಪಡಿಸಿ ಆ ದಿನ ನಗರದಲ್ಲೆಲ್ಲಾ ...ರು ರಾಷ್ಟ್ರ ಧ್ವಜಗಳನ್ನೂ ಶಾಲಾ ...ಗೆ ತಿಂಡಿಗಳನ್ನೂ ಹಂಚಲು ...ದೀ ಗಳನ್ನು ಮುಂದೂರು ಮಾಡಿ ...ನಡೆದ ಪುರಸಭೆಯು ಬಜೆಟ್ ಅಧಿ...ವು ನಿರ್ಣಯವನ್ನು ಮಾಡಿರುತ್ತದೆ ...ಪೌರಸಭಾ ಭವನದ ಮುಂದೆ ... ಮೈಸೂರು ಧ್ವಜಾರೋಹಣವನ್ನು ...ಲೂ ಸಹ ತೀರ್ಮಾನಿಸಿರುತ್ತದೆ

...ತ್ರೋಜಿರಾವ್ ಸಿಂಧ್ಯರವರಿಗೆ ಮತ್ತೆ ಹುದ್ದೆ

...ದ ಮೈಸೂರಿನ ಡಿ ಎಸ್ ಪಿ ಯಾಗಿ ...ಜನ್ನಾಮೆ ಇತ್ತಿದ್ದ ಶ್ರೀ ಮುತ್ತೋಜಿ ಸಿಂಧ್ಯರವರ ಅರ್ಜಿಯನ್ನು ಸರ್ಕಾರ ...ಮನ್ನಿಸಿ ಅವರನ್ನು ಮತ್ತೆ ಪೊ...ಲೀಸಿಯಲ್ಲಿ ಸೇರಿಸಿಕೊಂಡಿರುವರೀ ಅವರನ್ನು ಹೊಸದಾಗಿ ನಿರ್ಮಿಸಿರು...ಲ್ಲೈ ಸಿ ಐ ಡಿ ಮತ್ತು ಪ್ರೂಲೀಸ್ ಶಿಕ್ಷಣಶಾಲೆಯ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ಲಾಗಿ ನೇಮಿಸಲಾಗಿದೆಯೆಂದೂ ಗೊತ್ತಾಗಿದೆ

...ಗ ಸಾರನಳಿಗಾಗಿ ಸಂತಾಪ

...ದೇ ೨೬ ನೇ ತಾರೀಖು ನಿಧನರಾದ ...ದ ಅಧ್ಯಕ್ಷರು ...ಗ ಸಾಸನರ ಮರ...ಗಿ ಶೋಕ ದಿನವನ್ನು ಆಚರಿಸಲಾ...ದು ತಮ್ಮ ನಾಯಕರ ಮರಣದಿಂ...ದಿಗ್ಭ್ರಮೆ ಬಲ್ಗೇರಿಯ ರು ಸ್ವಾತಂತ್ರ್ಯ ...ದ ...ದಿಂದ ಹಿ ...ಯುಬೇಕಾದೆ ...ಬು ...ಜು ...ದೋಸರು ... ಪ್ರಾರ್ಥಿಸಿರುವರು

ದೊನೇಷ್ಯದಲ್ಲಿ ಅಪಾಯ ...ಾಪದ ಬಾಂಬಿನ ಸುರಿಮಳೆ

...ಚ್ಚರು ಇಂಡೊನೇಷ್ಯಾ ನಗರಗಳ ಮ...ಲಿಟರಿ ಕೇಂದ್ರಗಳ ಮೇಲೆ ಸರ್ವ...ನಾಶವಾದ ಯುದ್ಧವನ್ನು ಘೋಷಿ...ರಿ ಭೂ, ಜಲ ಮತ್ತು ವಿಮಾನ ...ಮೂಲಕ ಧಾಳಿಯನ್ನು ನಡೆಸುತ್ತಿ...ದೆ ಇಂಡೊನೇಷ್ಯನರು ತೀವ್ರವಾಗಿ ...ಟಿಸ ...ದ್ದಾರೆ ಮಳೆಯಿಂದ ಡಚ್ಚ ...ಗಳಿಗೆ ...ಆಚಣೆಯುಂಟಾಗಿ ...ಸ್ಥಾನದಿಂದ ವಿನೇಚನೆಯಿಲ್ಲದ ... ...ಬಾಂಬು ...ಉತ್ತಿರುವುದಾಗಿ ತಿಳಿದಿದೆ

ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ ...ಸ್ತಿಗಳು

...] ಬೆಂಗಳೂರು ೨೩
...ಸಿ ...ಳಗಾಸರ ...ಕ್ಷತ್ವದಲ್ಲಿ ...ಳೂರಿನಲ್ಲಿ ಅಂತರ ರಾಷ್ಟ್ರೀಯ ...ನ್ನ ...ವಕಲು ಏರ್ಪಾಡಾಗಿರುತ್ತದೆ ...ಶ ...ರಾಷ್ಟ್ರ ...ಗಳ ... ಪ್ರಸಿದ್ಧ ಪಟ್ಟೇಗಳಾದ ಕಿಂಗ್‌ಕಾಂಗ್, ...ಪುಟ್ಟಾ ಪರಾಜ್ಯಾನರ್, ...ಕ್ಷಪ್ಪಿಸಿಂಗ್, ...ಗ, ...ವೆ ಮೊದಲಾದ ...ರನ್ನಲ್ಲಿ ಭಾಗ ವಹಿಸುವರೆಂದು ಹೇಳಿಗಿದೆ

ರಾಜಧಾನಿಯಲ್ಲಿ ಮತ್ತೊಂದು ಕೋರ್ಟು

ಮೈಸೂರು ೨೩
ಬರುವ ೧೫ ನೇ ತಾರೀಖಿನಿಂದ ರಾಜಧಾನಿಯಲ್ಲಿ ವಕೀಲರು ಎಕ್ಸಾಂಡಿನೇಟ್ ಜಡ್ಜರ ಕೋರ್ಟಿನ್ನು ಆರಂಭಿಸುವ ಸೂಚನೆಗಳು ಕಂಡು ಬರುತ್ತಿವೆಯೆಂದು ಗೊತ್ತಾಗಿದೆ

ಅಖಿಲ ಮೈಸೂರು ಬ್ರಾಹ್ಮಣ ವಿದ್ಯಾರ್ಥಿ ನಿಲಯ

ಈ ವರ್ಷ ನೇಲ್ಲಿಂದ ಸಂಘದಲ್ಲಿ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಊಟ ವಸತಿಗಳಿಗೆ ಏರ್ಪಡಿಸಿದೆ ಬ್ರಾಹ್ಮಣ ಮಹಾಶಯರುಗಳೆಲ್ಲರೂ ಉದಾರವಾಗಿ ಸಹಾಯ ನೀಡಬೇಕೆಂದು ಕಾರ್ಯದರ್ಶಿಗಳಾದ ಶ್ರೀ ವಿ ಲಿಂಗಪ್ಪನವರು ಕೋರುವರು

ರಾಜಧಾನಿಯ ವಕೀಲರಾದ ಶ್ರೀ ಎಂ ಎಸ್ ರಂಗನಾಥರವರು ತಮ್ಮ ಮಗನ ವಿವಾಹದ ಸಂದರ್ಭದಲ್ಲಿ ಅಖಿಲ ಮೈಸೂರು ಬ್ರಾಹ್ಮಣ ವಿದ್ಯಾರ್ಥಿನಿಲಯಕ್ಕೆ ೫ ರೂ. ಕಾಣಿಕೆ ಇತ್ತಿರುವರು

ನಿಮ್ನ ವರ್ಗದ ವಿದ್ಯಾರ್ಥಿ ಸಂಘ

ನೇಲ್ಲಿಂದ ಸಂಘದ ಜನಾನರ್ ಸಭೆ ಬರುವ ಭಾನು ವಾರ ಮ ಧ್ಯಾಹ್ನ ೪ ಗಂಟೆಗೆ ರಾಜಧಾನಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ಆದಿಕರ್ನಾಟಕ ವಿದ್ಯಾರ್ಥಿ ನಿಲಯದಲ್ಲಿ ನಡೆಯುವುದು ನಿಮ್ನ ವರ್ಗದ ವಿದ್ಯಾರ್ಥಿಗಳೆಲ್ಲರೂ ಆ ದಿನ ಬರಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರಿರುವರು

ಸ್ವಾತಂತ್ರ್ಯ ದಿನಾಚರಣೆಗಾಗಿ ವಿದ್ಯಾರ್ಥಿಗಳ ಸಿದ್ಧತೆ

ಆಗಸ್ಟ್ ೧೫ ನೇ ತಾ॥ ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ವೈಭವದಿಂದ ನೆರವೇರಿಸಲು ಅವಶ್ಯವಾದ ಸಿದ್ಧತೆ ಮಾಡುವುದಕ್ಕಾಗಿ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯು ... ಸಂಜೆ ೫ ೩೦ ಗಂಟೆಗೆ ದೇವರಾಜ ಮಾರ್ಕೆಟ್ ಮಾರುಡ ...ವೇಲೆ ಇರುವ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿ ಆಫೀಸಿನಲ್ಲಿ ನೇರುವುದು ಸದಸ್ಯರುಗಳೆಲ್ಲರೂ ಭಾಗ ವಹಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಶಾಂತರಾಜ್‌ರವರು ಪ್ರಾರ್ಥಿಸುತ್ತಾರೆ

ಹೋಟೆಲ್ ಕೆಲಸಗಾರರ ಸಂಘ

ಹೆಬ್ಬಿಂದ ಸಂಘದವರುಗಳು, ವಾಹನ ...ರ್ಗ ಕಛೇರಿಯವರಿಗೆ ಕೆಲಸಗಾರರಾದ ಶ್ರೀ ... ಅವರನ್ನು ವಜಾ ಮಾಡಿದ ಬಗ್ಗೆ

ಬರ್ಮಾದ ಮಾಜಿ ಪ್ರಧಾನಿ ಪತ್ತೆಯಿಲ್ಲ

ಆಹಾನೀಯರು ಬರ್ಮಾವನ್ನು ಆಕ್ರಮಿಸಿದಾಗ ಅಲ್ಲಿನ ಪ್ರಧಾನಿಯಾಗಿದ್ದ ಡಾ॥ ಬಾಮಾರವರು ಪತ್ತೆಯಿರುವುದಿಲ್ಲ ಅವರನ್ನು ದಸ್ತಗಿರಿ ಮಾಡಲಾಗಿದೆಯೆಂದು ಭಾವಿಸಲಾಗಿದೆ ಅದರೆ ಅವರ ಪಕ್ಷದವರು ಅದನ್ನು ನಿರಾಕರಿಸುತ್ತಾರೆ ಅದರೆ ಅವರ ಛೇರುವರೆಂಬ ಮ ತಿಳಿದಿಲ್ಲ ಆಂಗ್ ಸಾನರ ಒಡನಾಡಿ ಯಾಗಿದ್ದ ಬಾಮೊರವರ ಅಳಿಯನಾದ ಬೋಯಾ ನೆಂಗ್ ರವರನ್ನೂ ದಸ್ತಗಿರಿ ಮಾಡಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್ ೧೫ ನೇ ತಾರೀಖಿನ ದಿನ ಭಾರತವು ಸ್ವತಂತ್ರವಾಗುವುದರಿಂದ ಆ ದಿನವನ್ನು ಸಾರ್ವಜನಿಕ ರಜಾ ದಿನವನ್ನಾಗಿ ಘೋಷಿಸಬೇಕು, ಎಲ್ಲ ಸಾರ್ವಜನಿಕ ಮತ್ತು ಖಾಸಗೀ ಕಟ್ಟಡಗಳ ಮೇಲೆಯೂ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕು ಆ ದಿನ ಮಹೋತ್ಸವ ಸಭೆಗಳನ್ನು ನೇರಿಸಿ ಸಮಾರಂಭದ ಉದ್ದೇಶವನ್ನು ವಿವರಿಸಬೇಕು ಮತ್ತು ಆ ದಿನದ ವೇಳೆಗೆ ಕಾಂಗ್ರೆಸ್ ಕೊಡಲಾಗುವ ಹೇಳಿಕೆಯನ್ನು ಸಭೆಯಲ್ಲಿ ಓದಬೇಕು, ಹಿಂದ ಛದರ ಏಳಿಗೆ, ಯುಕ್ತಿ ನಡೆಸ ಅಂದಿನಿಂದ ಭಾರತದ ಇತಿಹಾಸದಲ್ಲಿ ಒಂದು ಘಟ್ಟವು ಕಳೆದು ಮತ್ತೊಂದು ಹೊಸ ಅಧ್ಯಾಯವು ಆರಂಭವಾಗುತ್ತದೆ ಕೋಮುವಾರು ವೈಷಮ್ಯಗಳನ್ನು ತೊರೆದು ಪ್ರತಿಯೊಬ್ಬ ಮಾನವನ ಸ್ವಾತಂತ್ರ್ಯ ರಕ್ಷಣೆಗಾಗಿ ಎಲ್ಲರೂ ಸಹಕರಿಸಬೇಕೆಂಬುದಾಗಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಸೂಚಿಸಿರುತ್ತದೆ

ಭಾರತಕ್ಕೆ ಡಾ॥ ಷರಿಯಾರ್

ಇಂಡೋನೇಷ್ಯದ ಪರಿಸ್ಥಿತಿಯ ಬಗ್ಗೆ ಸಮಾಲೋಚನೆ ನಡೆಸಲು ಅಲ್ಲಿನ ಮಾಜಿ ಪ್ರಧಾನಿ ಡಾ॥ ಷರಿಯಾರ್ ರವರು ಭಾರತಕ್ಕೆ ಹೊರಟಿರುವುದಾಗಿ ವರದಿಯಾಗಿದೆ ಅವರು ಭಾರತದಿಂದ ಬ್ರಿಟನ್, ಅಸ್ಟ್ರೇಲಿಯಾ ಮತ್ತು ಅಮೇರಿಕೆಗಳಿಗೂ ಹೋಗುವರು

ನಗರದ ಸಂಘಗಳವರು ಯಾವುದೇ ... ಮುಂದೆಯೂ ಇದೇ ... ಗಳವರು ಕೆಲಸಗಾರರೆಲ್ಲರೂ ಒಗ್ಗಟ್ಟಿನಿಂದ ಇರಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರಿರುವರು.

ಸ್ವಾತಂತ್ರ್ಯ ದಿನಾಚರಣೆಯ ನಿರ್ಧಾರ

ಸ್ವಂ. ಸು. ಪ್ರೋ॥] ಬೆಂಗಳೂರು ೨೩
ನಗರ ಕಾಂಗ್ರೆಸ್ ಸಮಿತಿಯವರು ನಿನ್ನೆ ಶ್ರೀ ಕೆ ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆಗಸ್ಟ್ ೧೫ ನೇ ತಾರೀಖು ಪ್ರಭಾತ ಫೇರಿ, ಮೆರವಣಿಗೆ, ಸಾರ್ವಜನಿಕ ಸಭೆ, ಧ್ವಜಾರೋಹಣ ಮುಂತಾದುವುಗಳ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕೆಂದು ತೀರ್ಮಾನಿಸಿರುತ್ತಾರೆ

* ಹುಜೂರು ಸೆಕ್ರೆಟರಿಗಳಾದ ಶ್ರೀ ಟಿ. ರಾಮಯ್ಯನವರಿಗೆ ಈ ತಿಂಗಳು ೨೮ ನೇ ತಾರೀಖಿನಿಂದ ಮತ್ತೆ ೩ ತಿಂಗಳು ರಜಾ ಕೊಡಲಾಗಿದೆ.

* ಅಂತರ ರಾಷ್ಟ್ರೀಯ ಸ್ಕೌಟ್ ಜಾಂಬೂರಿಗೆ ನಿನ್ನೆ ತೆರಳಿದ ಶ್ರೀ ಪಿ. ಶಿವಶಂಕರ್ ಮತ್ತು ಶ್ರೀ ಎಂ ವಿ ವೀರಪ್ಪನವರನ್ನು ನಿನ್ನೆ ದಿನ ಪೌರಸಭೆಯವರು ಸತ್ಕರಿಸಿ ಬೀಳ್ಕೊಟ್ಟರು

* ಪಡಗಳನ್ನು ಸಂಸ್ಥಾನದಿಂದ ಹೊರಕ್ಕೆ ಸಾಗಿಸಲಾಗದೆಂಬ ಆಜ್ಞೆಯು ಆಡು ಮತ್ತು ಕುರಿಗಳಿಗೆ ಅನ್ವಯಿಸುವುದಿಲ್ಲವೆಂದು ವಿವರಣೆಯನ್ನು ಕಳುಹಿಸಲಾಗಿದೆ.

ನಿಜಾಮರ ಸುವರ್ಣ ತುಲಾಭಾರ

ಆಗಸ್ಟ್ ೧೫ ರಿಂದ ಹೈದರಾಬಾದು ಸ್ವತಂತ್ರವೆಂಬುದನ್ನು ಸಾರುವ ಸ್ಮಾರಕಾರ್ಥವಾಗಿ ನಿಜಾಮರನ್ನು ಚಿನ್ನದಲ್ಲಿ ತೂಗಬೇಕೆಂದು ಅಲ್ಲಿನ ಜಹಗೀರುದಾರರುಗಳು ನಿರ್ಣಯಿಸಿರುವರೆಂದು ವರದಿಯಾಗಿದೆ ಇದಕ್ಕೆ ನಿಜಾಮರ ಅನುಮತಿಯನ್ನು ಕೇಳಲಾಗಿದೆ

ಪಾಕಿಸ್ತಾನ್ ಕರೆನ್ಸಿಗಳು

ಈಗಿರುವ ನೋಟುಗಳಲ್ಲಿರುವ ಇಂಡಿಯಾ ಸರ್ಕಾರ ಎಂಬುದನ್ನು ತೆಗೆದು ಅವುಗಳ ಸ್ಥಾನದಲ್ಲಿ ಪಾಕಿಸ್ತಾನ್ ಗೊಟರ್ನಮೆಂಟ್ ಎಂದು ಅಚ್ಚು ಹಾಕಿ ಪಾಕಿಸ್ತಾನದ ಕರೆನ್ಸಿಗಳನ್ನು ಚಲಾಯಿಸಲಾಗುವುದು ಅದರ ಅತ ಇಸ್ಲಾಮಿಕ್ ... ಈ ನೋಟುಗಳು ಪಾಕಿಸ್ತಾನ ಪ್ರದೇಶಗಳಲ್ಲಿ ಮಾತ್ರ ಚಲಾವಣೆಯಲ್ಲಿರುವುವು ನೋಟಿನ ಮೇಲೆ ಉರ್ದು ಅಕ್ಷರ ಚಂದ್ರನ ಚಿತ್ರವನ್ನು ...ಕಲಾಗುವುದು

ಬೆಂಗಳೂರಿನಲ್ಲಿ ಸಂಸ್ಥಾನಗಳ ರಾಜಕೀಯ ಶಾಖೆ

[...] ಬೆಂಗಳೂರು ೨೩
ಇ ಡಿಯಾ ಸರ್ಕಾರದ ಸಂಸ್ಥಾನ ಶಾಖೆ ... ಕಾರ್ಯಾಲಯದ ಶಾಖೆಯೊಂದನ್ನು ... ಬೆಂಗಳೂರಿನಲ್ಲಿ ತೆರೆಯುವ ಅವಶ್ಯಕತೆ ... ಬಗ್ಗೆ ಮೈಸೂರು ದಿವಾನರನ್ನು, ಮತ್ತು ಹಾಸ್ಟಾಲಿಕ್ ... ದ ... ಪವರಿಗೂ ನಿಶ್ಯದಲ್ಲೇ ಮಾತುಕತೆ ನಡೆಯುವುದೆಂದು ...ವರದಿಯಾಗಿದೆ

ನೆಹರೂರವರು ಪ್ರಥಮ ಪ್ರಧಾನಿ

ಪಂಡಿತ ಜವಹರಲಾಲ್ ನೆಹರೂರವರು ... ಭಾರತ ಡೊಮಿನಿಯನ್ ಸರ್ಕಾರದ ... ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿಸಲ್ಪಟ್ಟಿರುವರೆಂದು ವರದಿಯಾಗಿದೆ ... ಸಭೆಯ ... ಪಕ್ಷದ ನಾಯಕರೇ ಪ್ರಧಾನಿಯಾಗಬೇಕಾಗಿರುವುದರಿಂದ ಪಂಡಿತರವರೇ ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಗಳಾಗುವರೆಂದು ಹೇಳಲಾಗಿದೆ

ಸಾಧ್ವಿ

ತಾ|| ೨೩-೭-೪೭ ಬುಧವಾರ

ರಾಷ್ಟ್ರ ಧ್ವಜವು ಮೆರೆಯಲಿ!

ಬ್ರಿಟಿಷರು ಬರುವ ತಿಂಗಳು ಹದಿನೈದನೇ ತಾರೀಖಿನಿಂದ ಹೊರಟು ಹೋಗಲಿರುವರಷ್ಟೆ. ಅಂದಿನಿಂದ ನಮ್ಮ ದೇಶದಲ್ಲಿ ಹಾರಿಸಲ್ಪಡುವ ರಾಷ್ಟ್ರಧ್ವಜದ ಸ್ವರೂಪವನ್ನು ಈಗ ಗೊತ್ತು ಮಾಡಲಾಗಿದೆ. ಭಾರತ ರಾಜ್ಯಾಂಗ ಸಭೆಯು ಈ ಬಗ್ಗೆ ಏಕವಾಕ್ಯತೆಯಿಂದ ನಿರ್ಣಯವನ್ನು ಅಂಗೀಕರಿಸಿರುತ್ತದೆ. ಇದುವರೆಗೆ ನಮ್ಮ ದೇಶದಲ್ಲಿ ಹಾರಿಸುತ್ತಿದ್ದ ಧ್ವಜದಲ್ಲಿ ಸ್ವಲ್ಪ ಮಾತ್ರ ಬದಲಾವಣೆಯನ್ನು ಮಾಡಲಾಗಿರುತ್ತದೆ. ಈ ಬಾವುಟದಲ್ಲಿ ರಾಟೆಯ ಚಿತ್ರದ ಬದಲು ಚಕ್ರವನ್ನು ಹಾಕಲಾಗಿದೆ.

ನೂತನ ಧ್ವಜದ ನಿರ್ಣಯವನ್ನು ಪಂಡಿತ ನೆಹರೂರವರು ನಿನ್ನೆ ರಾಜ್ಯಾಂಗ ಸಭೆಯಲ್ಲಿ ಮಂಡಿಸಿ ಅದನ್ನು ಪ್ರದರ್ಶಿಸಿದಾಗ ಸಭೆಯವರೆಲ್ಲರೂ ಅದಕ್ಕೆ ಭಕ್ತಿ, ಗೌರವಗಳನ್ನು ಸಲ್ಲಿಸಲು ಎದ್ದು ನಿಂತು ಹರ್ಷಧ್ವನಿಗೈದರು. ಮಹಾತ್ಮಾ ಗಾಂಧೀಜಿ ಕೀ ಜೈ ಎಂಬ ಧ್ವನಿಯು ಸಭೆಯ ಸಕಲ ಭಾಗಗಳಿಂದಲೂ ಮೊಳಗಿತು. ಇನ್ನು ಮುಂದೆ ಈ ಧ್ವಜವು ಭಾರತ ಯೂನಿಯನ್ನಿನ ಅಭ್ಯುದಯದ ಸ್ಮಾರಕಚಿಹ್ನೆಯೆಂದು ಎಲ್ಲರಿಂದಲೂ ಒಪ್ಪಲ್ಪಟ್ಟಿತು.

ಮ. ಲೀಗಿನ ಸದಸ್ಯರೂ, ಸಂಸ್ಥಾನಗಳ ಪ್ರತಿನಿಧಿಗಳೂ ಸಹ ಈ ಧ್ವಜಕ್ಕೆ ಮನ್ನಣೆಯನ್ನು ಕೊಟ್ಟು ಅದಕ್ಕೆ ಸಲಾಮು ಮಾಡಿದರು. ಇದು ಅಭಿನಂದನೀಯವಾದ ವಿಷಯ. ರಾಷ್ಟ್ರ ಧ್ವಜವು ಯಾವ ಒಂದು ಪ್ರತ್ಯೇಕ ವರ್ಗದ, ಕೋಮಿನ ಅಥವಾ ಗುಂಪಿನ ಚಿಹ್ನೆಯಾಗಿರದೆ ಇಡೀ ನಾಡಿನ ದ್ಯೋತಕವಾಗಿರುತ್ತದೆ. ಸ್ವಾತಂತ್ರ್ಯದ ರೂಪವೇ ರಾಷ್ಟ್ರೀಯ ಧ್ವಜ. ಇದನ್ನು ಗೌರವಿಸಿ ಸರ್ವರೂ ಅದಕ್ಕೆ ಮನ್ನಣೆ ನೀಡುವುದು ಸಹಜವೇ ಆಗಿರುತ್ತದೆ.

ಒಂದು ದೇಶದ ಜನಾಂಗ, ಸಂಸ್ಕೃತಿ ಮತ್ತು ಉನ್ನತ ಆದರ್ಶಗಳ ಪ್ರತಿನಿಧಿಯಾಗಿರುವ ರಾಷ್ಟ್ರಧ್ವಜಕ್ಕೆ ಸಂಬಂಧಿಸಿದ ಸಕಲ ರಾಷ್ಟ್ರಗಳೂ, ರಾಜ, ಮಹಾರಾಜರುಗಳೂ, ಜನನಾಯಕರುಗಳೂ ಸದಾ [illegible] ಮಾನ, ಸನ್ಮಾನಗಳನ್ನು ಸಲ್ಲಿಸುತ್ತಲೇ ಬಂದಿರುವರು. ನಮ್ಮ ದೇಶದ ವಿಶೇಷ ಭಾಗಗಳ ಪ್ರತಿನಿಧಿಗಳಿಂದೊಡಗೂಡಿದ ರಾಜ್ಯಾಂಗ ಸಭೆಯಿಂದ ಅಂಗೀಕರಿಸಲ್ಪಟ್ಟಿರುವ ಈ ನೂತನ ಧ್ವಜಕ್ಕೆ [illegible] ಕೋಟಿ ಭಾರತೀಯರು [illegible] ಇಲ್ಲದ ಜಗತ್ತಿನ [illegible] ಪ್ರಿಯರಾದ ಒಬ್ಬರೂ ಮನ್ನಣೆ ಕೊಡುವುದರಲ್ಲಿ ಸಂಶಯವಿಲ್ಲ.

ರಾಷ್ಟ್ರ ಧ್ವಜದ ಪ್ರತಿಷ್ಠೆಯನ್ನು ಆಗಸ್ಟ್ ೧೫ನೇ ತಾರೀಖಿನ ದಿನ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವಲ್ಲೆಲ್ಲಾ ನಡೆಸಬೇಕು [illegible] ಬಹುಕಾಲದಿಂದ ಹೋರಾಡುತ್ತಿದ್ದ ಸ್ವಾತಂತ್ರ್ಯವು ಈಗ [illegible] ಅಧಿಕಾರದಿಂದ [illegible] ಜನರೆಲ್ಲರೂ ಸಂತೋಷದಿಂದ ಈ ಉತ್ಸವದಲ್ಲಿ ಇದನ್ನು ಹಾರಿಸಿ

ಸುಮರು ರಾಷ್ಟ್ರ ಧ್ವಜವು ಅಂದು ಎಲ್ಲೆಲ್ಲಿಯೂ ವೈಭವದಿಂದ ಮೆರೆಯುವುದು. ಈ ಮಹೋತ್ಸವದಲ್ಲಿ ಸ್ವತಂತ್ರರಾದ ನಾವೆಲ್ಲರೂ ಸಂಪೂರ್ಣ ಶ್ರದ್ಧಾಭಕ್ತಿಯಿಂದ ಭಾಗವಹಿಸೋಣ. ನಮ್ಮೆಲ್ಲರ ಮಾತೃಭೂಮಿಯಾದ ಭಾರತ ಮಾತೆಯ ಭವಿಷ್ಯದ ಸಾಧನೆಯ ಗುರುತಾಗಿರುವ ರಾಷ್ಟ್ರ ಧ್ವಜವನ್ನು ಮೆರೆಸೋಣ!

ಪಠಾಣಿ ಸ್ಥಾನ ಸ್ಥಾಪನೆಗೆ ಪ್ರಯತ್ನ

ಗಡಿನಾಡಿನಲ್ಲಿ ನಡೆದ ರೆಫರೆಂಡಮ್ಮಿನಲ್ಲಿ ಅದು ಪಾಕಿಸ್ತಾನಕ್ಕೆ ಸೇರಬೇಕೆಂದು ತೀರ್ಮಾನವಾಗಿದೆ. ಲೀಗ್ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ ಪ್ರಬಲ ಘರ್ಷಣೆ ನಡೆಯುವ ಸಂಭವವಿದೆ. ಪಠಾಣರು ಪಠಾಣೀಸ್ಥಾನಕ್ಕಾಗಿ ಪ್ರಬಲವಾದ ಚಳುವಳಿ ಆರಂಭಿಸುವರೆಂದು ಹೇಳಲಾಗಿದೆ. ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಇತ್ತು ಪಠಾಣೀಸ್ಥಾನದ ಸ್ಥಾಪನೆಗಾಗಿ ದುಡಿಯುವರೆಂದು ಭಾವಿಸಲಾಗಿದೆ. ಪ್ರಾಂತ ಮಂತ್ರಿಮಂಡಲದ ರಚನೆಗಾಗಿ ಶಾಸನ ಸಭೆಗೆ ಉಪ ಚುನಾವಣೆ ನಡೆಯಬೇಕೆಂದು ಕೆಂಪಂಗಿ ದಳದವರು ಒತ್ತಾಯ ಮಾಡುವರೆಂದು ತಿಳಿದು ಬಂದಿದೆ.

ಮರಣ ದಂಡನೆ ಜಾರಿ ಮಾಡಕೂಡದು

ಮದರಾಸ್ ಪ್ರಾಂತ್ಯದಲ್ಲಿ ಮರಣದಂಡನೆಗೆ ಗುರಿಯಾಗಿರುವ ಖೈದಿಗಳ ಮೇಲೆ ಅದನ್ನು ಜಾರಿ ಮಾಡಲಾಗದೆಂದು ಅಲ್ಲಿನ ಸರ್ಕಾರವು ಆಜ್ಞೆ ಮಾಡಿದೆ. ಆಗಸ್ಟ್ ೧೫ರ ದಿವಸ ಭಾರತವು ಸ್ವತಂತ್ರವಾಗುವುದರಿಂದ ಅಂದಿನ ಸಂತೋಷದ ಜ್ಞಾಪಕಾರ್ಥವಾಗಿ ಖೈದಿಗಳಿಗೆ ದಯೆ ತೋರಿಸುವ ಸಲುವಾಗಿ ಈ ರೀತಿ ಆಜ್ಞೆಯಾಗಿದೆಯೆಂದು ಭಾವಿಸಲಾಗಿದೆ.

೧೦ ಗಂಟೆಗಳಲ್ಲಿ ೧೬! ಅಂಗುಲ ಮಳೆ

ಲಖ್ನೋ ನಗರದಲ್ಲಿ ಕಳೆದ ಬುಧವಾರ ೧೦ ಗಂಟೆಗಳೊಳಗೆ ೧೬! ಅಂಗುಲ ಮಳೆ ಬಿದ್ದು ಅನೇಕ ಮನೆಗಳು ನಾಶವಾಗಿವೆ. ಮೊಂಡು, ಎಂಟು ಮಂದಿ ಮರಣ ಹೊಂದಿರುವರೆಂದೂ ವರದಿಯಾಗಿದೆ. ಕಳೆದ ೧೪೦ ವರ್ಷಗಳಿಂದ ಇಂತಹ ಭಾರಿ ಮಳೆ ಬಿದ್ದಿರಲಿಲ್ಲವೆಂದು ಹೇಳಲಾಗಿದೆ.

ನರ್ತಕಿಯ ನಾಸಿಕಾ ಛೇದನ

ಕಾಶಿಯ ಪ್ರಸಿದ್ಧ ನರ್ತಕಿಯೊಬ್ಬಳು ಬಿರಾ ಬಲ್ಲಿಯ ಒಂದು ಗ್ರಾಮದಲ್ಲಿ ದೊಡ್ಡ ಮದುವೆಯ ಸಮಾರಂಭದಲ್ಲಿ ನರ್ತನ ಮಾಡಿ ಮಲಗಿ ನಿದ್ರಿಸುತ್ತಿದ್ದಳೆಂದೂ, ಅವಳು ಮತ್ತೆ ಏಳುವುದರಲ್ಲಿ ಅವಳ ಮೂಗನ್ನು ಯಾರೋ ಕತ್ತರಿಸಿ ಹಾಕಿರುವರೆಂದೂ ವರದಿಯಾಗಿದೆ.

ಸೀಮೆಎಣ್ಣೆ ಕೊರತೆ

ಸ್ವಂ ವ.] ನಂಜನಗೂಡು ೨೦

ಇಲ್ಲಿನ ಪ್ರೌಢಶಾಲೆಯು ತೆರೆದ ಎರಡು ತಿಂಗಳ ಮೇಲಾದರೂ ಸಹ ಇನ್ನೂ ಸಹ ಶಾಲೆಯಲ್ಲಿ ಸೀಮೆಎಣ್ಣೆ ಕೊಟ್ಟಿಲ್ಲದಿರುವುದರಿಂದ ಹುಡುಗರಿಗೆ ತೊಂದರೆಗೆ ಕಾರಣವಾಗಿದೆ. ಪುರಸಭೆಯವರು ಕೂಡಲೇ ಈ ಬಗ್ಗೆ ಗೊತ್ತು ಕ್ರಮವು ಕೈಗೊಳ್ಳಬೇಕಾಗಿದೆ.

ಕಾಳ ಸಂತೆಯಲ್ಲಿ ಸವರನ್ನುಗಳು

ಸರ್ಕಾರದವರಿಂದ ಸವರನ್ನಿನ ಬೆಲೆ ೪೨ ಶಿಲಿಂಗ್ ೩ ಪೆನ್ನಿಗಳೆಂದು ನಿಗದಿಮಾಡಲ್ಪಟ್ಟಿದ್ದರೂ ಅವು ಕಾಳಸಂತೆಯಲ್ಲಿ ೭ ಅಥವಾ ೮ ಪೌಂಡುಗಳಂತೆ ಮಾರಾಟವಾಗುತ್ತಿದ್ದವು. ಲಂಡನ್ನಿನಲ್ಲಿ ಪೋಲೀಸರು ಪತ್ತೆ ಹಚ್ಚಿ ಉಗ್ರ ಕಾರ್ಯಕ್ರಮ ಕೈಗೊಳ್ಳುತ್ತಿರುವುದರಿಂದ ಅವುಗಳ ಬೆಲೆ ಈಗ ೩ ಅಥವಾ ೪ ಪೌಂಡುಗಳಿಗೆ ಇಳಿದಿದೆಯೆಂದು ವರದಿಯಾಗಿದೆ.

ಡಚ್-ಇಂಡೋನೇಷ್ಯಾ ಬಿಕ್ಕಟ್ಟಿನ ಪರಿಹಾರಕ್ಕೆ ಬ್ರಿಟನ್

ಇಂಡೋನೇಷ್ಯನರಿಗೂ, ಡಚ್ಚರಿಗೂ ನಡೆಯುತ್ತಿರುವ ಕಲಹವನ್ನು ತಡೆಗಟ್ಟಿ ಉಭಯರಿಗೂ ಸ್ನೇಹವನ್ನುಂಟು ಮಾಡಲು ಬ್ರಿಟನ್ನು ನಿರ್ಧರಿಸಿ ಅದನ್ನು ನೆದರಲೆಂಡ್ಸ್ ಸರ್ಕಾರಕ್ಕೆ ತಿಳಿಸಿದೆಯೆಂದು ವರದಿಯಾಗಿದೆ.

ಸಾಲಗಾರರನ್ನು ದಿವಾಳಿ ಮಾಡಲಾಗುವುದು

ಗ್ಲೋಬ್] ಲಂಡನ್ ೨೦

ಬ್ರಿಟನ್ನಿನಲ್ಲಿ ಸಾಲಪಡೆದವರನ್ನು ಸೆರೆಮನೆಗೆ ಕಳುಹಿಸುತ್ತಿದ್ದುದನ್ನು ಇನ್ನು ಮುಂದೆ ರದ್ದು ಮಾಡಲಾಗುವುದು. ಅವರು ಸಾಲ ತೀರಿಸದಿದ್ದರೆ ಮುಂದೆ ಅವರನ್ನು ದಿವಾಳಿಯೆಂದು ತೀರ್ಮಾನಿಸಲಾಗುವುದು.

ಗೋರಕ್ಷಣೆಗಾಗಿ ಆಮರಣಾಂತ ಉಪವಾಸ

ಭಾರತವು ಸ್ವತಂತ್ರವಾಗಿ ಆದರೆ ೧೫ ಜನ್ಯಾರಿಯಾದ ಒಂದು ವರ್ಷದೊಳಗಾಗಿ ಗೋವಧೆಯನ್ನು ಶಾಸನ ಬದ್ಧವಾಗಿ ನಿಲ್ಲಿಸದಿದ್ದರೆ ತಾವು ಆಮರಣಾಂತ ಉಪವಾಸ ಮಾಡುವುದಾಗಿ ಸುಪ್ರಸಿದ್ಧ ಕೈಗಾರಿಕೋದ್ಯೋಗಿಗಳಾದ ಸೇಟ್ ರಾಮಕೃಷ್ಣ ಡಾಲ್ಮಿಯಾರವರು ತಿಳಿಸಿರುವರು.

೧೪೩ ದಿನಗಳ ದೀರ್ಘ ನಿದ್ರೆ

ಆಸ್ಟ್ರೇಲಿಯದ ೫೫ ವರ್ಷ ವಯಸ್ಸಿನ ಯುವತಿಯೊಬ್ಬಳು ೬ ತಿಂಗಳ ಹಿಂದೆ ಮಲಗಿ ಈಗ ತಾನೇ ಎದ್ದಿರುವಳು. ನಿದ್ರಿಸುತ್ತಿದ್ದಾಗ ಅನೇಕ ಕನಸುಗಳಾದುವೆಂದು ಆವಳು ತಿಳಿಸಿರುವಳು. ಆಕೆಯು ತನ್ನ ೧೮ನೇ ವಯಸ್ಸಿನಿಂದ ಆಗಾಗ್ಗೆ ದಿನ ಮತ್ತು ವಾರಗಟ್ಟಲೆ ನಿದ್ರಿಸುತ್ತಿದ್ದಳು.

ರಾಜಕಮಲ್

ತಾ|| 18-7-47 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್ ★

—: ಭೂಮಿಕೆ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

Edited, printed and published by A. R. Nagarajan at the Sadhvi Press D. Subbaiah Road Mysore

ಇಂಡೋನೇಷ್ಯದಲ್ಲಿ ವಿಮಾನ ಧಾಳಿ

ಡಚ್ಚರ ಧಾಳಿಗೆ ಪ್ರತಿಭಟನೆಯನ್ನು ತೋರ ಕೂಡದೆಂದು ಇಂಡೋನೇಷ್ಯಾ ರಿಪಬ್ಲಿಕ್ ಸರ್ಕಾರವು ತನ್ನ ನೌಕರರಿಗೆ ಮೊದಲು ಎಚ್ಚರಿಸಿದ್ದಿತು. ಆದರೆ ಡಚ್ ಸೈನ್ಯಗಳು ಇಂಡೋನೇಷ್ಯದ ಅನೇಕ ಪ್ರದೇಶಗಳ ಮೇಲೆ ವಿಮಾನದ ಮೂಲಕ ಬಾಂಬುಗಳನ್ನು ಸುರಿಸಿದುದರಿಂದ ರಿಪಬ್ಲಿಕನ್ನರು ಅದರ ವಿರುದ್ಧವಾಗಿ ಮುನ್ನುಗ್ಗಲು ಆಜ್ಞೆ ಮಾಡಲಾಗಿದೆ. ರಿಪಬ್ಲಿಕ್ ರಾಜಧಾನಿಯಾದ ಜೋಗ್‌ಜಕರ್ತಾ ನಗರದ ಮೇಲೆ ಪ್ರಬಲವಾದ ವಿಮಾನ ದಾಳಿ ನಡೆದಿದೆ. ಜಾವಾದಲ್ಲಿಯೂ ವಿಮಾನ ಧಾಳಿ ಮುಂದುವರಿಯುತ್ತಿದೆ.

ಬ್ರಿ|| ರಾಜಬಂಧುವಿಗೆ ಅಮೆರಿಕದಲ್ಲಿ ಸ್ಥಾನವಿಲ್ಲ

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಪ್ರವಾಸ ಹೂಡಲು ಅನುಮತಿ ಪಡೆದು ಅಲ್ಲಿ ನೌಕಾಂಗ ಸೇರಬೇಕೆಂಬ ಆಶಾದನಂತರ ಮೇಲೆ ಬ್ರಿಟಿಷ್ ದೊರೆಗಳ ಮತ್ತು ಭಾರತದ ವೈಸರಾಯರ ಸಂಬಂಧಿಯಾದ ಲೇ. ಫಿಲಿಪ್ ಮೌಂಟ್ ಬ್ಯಾಟನ್ನರು ಯೂರೋಪ್ ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಬಿಟ್ಟು ಹೋಗಬೇಕೆಂದು ಅಲ್ಲಿನ ಸರ್ಕಾರವು ಆಜ್ಞೆ ಮಾಡಿದ್ದಾಗಿ ವರದಿಯಾಗಿದೆ. ಇಂಗ್ಲೆಂಡಿನಲ್ಲಿ ತಮ್ಮ ಹೆಸರಿನಲ್ಲಿ ದ್ವಿತೀಯ ದರ್ಜೆ ನೌಕಾಪಡೆಗೆ ಅರ್ಜಿ ಕೊಟ್ಟಿರುವುದಾಗಿಯೂ ಸಹ ವಾದಿಸಲಾಗಿದೆ.

ಪೌರಸಭೆಯ ಅಭಿನಂದನೆ

ಸ್ವಂ ವ.] ಶ್ರೀರಂಗಪಟ್ಟಣ

ಇಲ್ಲಿನ ಪುರಸಭೆಯು ವಿಶೇಷ ಅಧಿವೇಶನವು ನಿನ್ನೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೇರಿ ರೆವಿನ್ಯೂ ಸಚಿವರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿ ಮತ್ತು ಪುಟ್ಟಸ್ವಾಮಿಗೌಡರಿಗೆ ಬಿರುದು ಬಂದುದಕ್ಕೂ, ಮತ್ತು ಇಲ್ಲಿನ ಶ್ರೀ ಎಂ. ಸುಬ್ಬಯ್ಯನವರ ಸಾರ್ವಜನಿಕ ಸೇವಾ ಸವಿನೆನಪು ಬಂದುದಕ್ಕಾಗಿಯೂ ಸಂತೋಷವನ್ನು ಸೂಚಿಸಿ ನಿರ್ಣಯವು ಮಾಡಿತು. ಉಪಾಧ್ಯಕ್ಷರಾದ [illegible] ಸಿ. ಬಂದೀಗೌಡರೂ ಬಹುಮಂದಿ ಚುನಾಯಿತ ಸದಸ್ಯರೂ ಸಭೆಯಲ್ಲಿ ಭಾಗವಹಿಸಲಿಲ್ಲ.

ದಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಮೈಸೂರು

ಪ್ರಕಟಣೆ

ನಮ್ಮ ಇನ್ಸ್ಟಿಟ್ಯೂಟಿನಲ್ಲಿ ಈ ವರ್ಷ ವ್ಯಾಸಂಗಕ್ಕಾಗಿ ಸೇರಿರುವ ವಿದ್ಯಾರ್ಥಿಗಳಿಗೆಲ್ಲಾ ಕೂಡಲೇ ಇನ್ಸ್ಟಿಟ್ಯೂಟಿನ ವತಿಯಿಂದ ಡಿಪ್ಲೋಮಾ ಕ್ಲಾಸ್ ನಡೆಯುವುದು. ಇವರಿಗೂ ಮತ್ತು ಅವರ ಪೋಷಕರಿಗೂ ತಿಳಿಸಿ [illegible] ಪುಸ್ತಕಗಳನ್ನು ಪಡೆದಿರುತ್ತಿದ್ದು ಇದರಲ್ಲಿ ೧೧೦ ಜನ ವಿದ್ಯಾರ್ಥಿಗಳು ಸೇರಿರುತ್ತಾರೆ. ಇವರ ಪ್ರವಚನಗಳು ಕ್ರಮವಾಗಿ ನಡೆಯುತ್ತಲಿವೆ.

ಕಾರ್ಯದರ್ಶಿಯವರ ಪರವಾಗಿ

ಪಿ. ಎ. ನರಸಿಂಹರಾವ್

ಮೈಸೂರು 23-7-47 ಆನರರಿ ಸೆಕ್ರೆಟರಿ

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಗುರುವಾರ ೨೪—೭—೪೭ [ಸಂಚಿಕೆ ೪

ಕಲ್ಕತ್ತೆಯು ಪಾಕಿಸ್ತಾನಕ್ಕೆ ಸೇರಲು ಒತ್ತಾಯ

ಜೀವನಾಧಾರಕ್ಕಾಗಿ ಗೋಪಾಲ ರಾಯರ ಪತ್ನಿಯ ಅರ್ಜಿ

(ನ. ಸು.) ಬೆಂಗಳೂರು ೨೩

ಶ್ರೀ ಬಿ. ಎಸ್. ಗೋಪಾಲರಾಯರನ್ನು ಗಲ್ಲಿಯಿಂದ ತೀರ್ಮಾನ ಮಾಡಿರುವು ದನ ಅವರಿಗೆ ಸೇರಿದ್ದ ಆಸ್ತಿಪಾಸ್ತಿಗಳ ಲ್ಲಿ ತಮ್ಮ ಕುಟುಂಬದ ರಕ್ಷಣೆಗಾಗಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೂ ಗಳಿಗೆ ೫೦೦ ರೂ ಮಾಸಾಶನವನ್ನು ಸಿಕೊಡಬೇಕೆಂಬುದಾಗಿ ಧರ್ಮಾರ ಕರ ಗೋಪಾಲರಾಯರ ಪತ್ನಿ ಶ್ರೀಮತಿ ದೇವಿಯವರು ಪ್ರಿನ್ಸಿಪಲ್ ಜಿಲ್ಲಾ ದ ಮುಂದೆ ಅರ್ಜಿ ಸಲ್ಲಿಸಿದ್ದಾರೆ. ಇದು ಪರಿಶೀಲನೆಗೆ ಬರಲಿದೆ. ಗೋಪಾಲ ರಾಯರ ಆಸ್ತಿಪಾಸ್ತಿಗಳ ಹಂಚಿಕೆಯಲ್ಲಿ ಕೊಂ ಕೊಂಡ ಒಂದು ವಜ್ರದ ಉಂಗುರವೂ, ಯ ಕೆಲವು ತಾವು ಇಟ್ಟಿರುವ ಮೊ ನಷ್ಟು ಬೆಲೆ ಬಾಳದೆಯೂ, ಕೆಲವು ಯದಾಗಿರದೆ ಬೆಳ್ಳಿಯ ಸಾಮಾನು ದಿರುವುದಾಗಿಯೂ ಇರುವುದರಿಂದ ಅ ಗಳನ್ನು ವಾಪಸು ಪಡೆಯಬೇಕೆಂದು ಕೆ. ಗಂಗಸೆಟ್ಟಿಯೆಂಬುವರು ಒಂದು ಸಲ್ಲಿಸಿದ್ದಾರೆ. ಇದೂ ನಾಳೆ ಪರಿಶೀಲನೆಗೆ ಬರಲಿದೆ.

ಇಂಡೋನೇಷ್ಯಾ ಕದನ ನಿಲ್ಲಿಸಲು ಅಪಪ್ರಚಾರ

ಸಂಯುಕ್ತ ರಾಷ್ಟ್ರ ಸಂಘದ ನಡೆ ಮಧ್ಯೆ ಪ್ರವೇಶಿಸಿದೆ. ದಕ್ಷಿಣದಿಂದಲೂ ನ ಪ್ರದೇಶಗಳನ್ನೆಲ್ಲಾ ಬಿಡುಗಡೆ ಮಾ ಎಲ್ಲ ಡಚ್ ಪಡೆಗಳೂ ಕದನವನ್ನು ನಿ ಬೇಕೆಂದು ಡಚ್ ಈಸ್ಟ್ ಇಂಡೀಸ್ ಗವರ್ನರ್ ಜನರಲ್ ವಾನ್ ಮು ಆಜ್ಞೆ ಇತ್ತಿದ್ದಾರೆ ಎಂಬುದಾಗಿ ಒಂ ಗುಪ್ತ ರೇಡಿಯೋ ಪ್ರಸಾರ ಕೇಂದ್ರ ದ ಬ್ರಾಡ್‌ಕ್ಯಾಸ್ಟ್ ಮಾಡಲ್ಪಟ್ಟು ಡ ಸೇನೆಗಳಲ್ಲಿ ಗಡಿಬಿಡಿ ನಡೆಯುತ್ತಿ ಮಾಡುವುದಾಗಿ ವರದಿಯಾಗಿದೆ.

ಪೌರವಾಣಿ ದಿನ ಪತ್ರಿಕೆ

ಶ್ರೀ ಜೆ. ಎಸ್. ದೊರೆಸ್ವಾಮಿಯವ ರ ಸಂಪಾದಕತ್ವದಲ್ಲಿ ಇದುವರೆಗೆ ವಾರ ಪತ್ರಿಕೆಯಾಗಿ ಹೊರಡುತ್ತಿದ್ದ ಪೌರವಾಣಿ ಯು ನಿನ್ನೆಯಿಂದ ದಿನ ಪತ್ರಿಕೆಯಾಗಿ ಹೊ ರಟಿದೆ. ಇದು ಎರಡು ಪುಟಗಳಿಂದ ಡಿ ಪ್ರತಿದಿನ ಬೆಳಗ್ಗೆ ಪ್ರಕಟವಾಗುವು ದು. ಬೆಲೆ ಕೇವಲ ಕಾಲಾಣೆ ಮಾತ್ರ. ದೇಶ ವಿದೇಶಗಳ ಸುದ್ದಿಯನ್ನು ಸಂಗ್ರಹವಾ ಗಿ ಕೊಟ್ಟು ಸರ್ವರಿಗೂ ಆಕರ್ಷಣೀಯ ವಾಗಿರುತ್ತದೆ. ಈ ಪತ್ರಿಕೆಯು ಜನರಿಂದ ಪ್ರೋತ್ಸಾಹ ಪಡೆಯಲೆಂದು ಬಯಸಿ ಅದನ್ನು ಸ್ವಾಗತಿಸುತ್ತೇವೆ.

ರೈಲ್ವೆ ಬುಕಿಂಗ್ ಆಫೀಸಿನ ಅವ್ಯವಸ್ಥೆ

ರೈಲು ಹೊರಡುವುದಕ್ಕೆ ೨ ಗಂಟೆ ಮೊ ದಲಿನಿಂದಲೂ ಟಿಕೆಟ್ಟುಗಳನ್ನು ಕೊಡಲು ಪ್ರಾರಂಭ ಬೆಂಗಳೂರಿನ ಮಾರ್ಕೆಟ್ ನ ಇರುವ ರೈಲ್ವೆ ಬುಕ್ಕಿಂಗ್ ಆಫೀಸಿನ ಹೊರಡಲು ನೇರ ಪಾಡಿಕೊಳ್ಳಬೇಕು ಅ ಕಾಯಬೇಕಾಗಿ ಬಂದು ಮಾಡುತ್ತಿಲ್ಲ ಜ ನ ಗಲಭೆಯೂ ಪ್ರಯಾಣಿಕರಿಗಾಗುತ್ತ ಆ ಕ್ಕಳನ್ನು ಮೊದಲಾದವು ಹೇಳತೀರ ದಷ್ಟಾಗುತ್ತಿವೆ. ಪೊಲೀಸ್ ಬಂದೋಬಸ್ತ ಯಾವ ಸಹಾಯವೂ ಇಲ್ಲ. ಸಂಬಂಧಪಟ್ಟ ವರು ಈ ಬಗ್ಗೆ ಗಮನ ಕೊಟ್ಟು ವ್ಯವಸ್ಥೆ ಮಾಡಬೇಕು ಎಂದು ನಗರದ ಪ್ರಯಾಣಿಕರು ಕೋರಿದ್ದಾರೆ.

ಇಂಡೋನೇಷ್ಯದಲ್ಲಿ ಡಚ್ಚರ ಮುನ್ನೋಟ

ಜಾವಾ ದ್ವೀಪದ ಪೂರ್ವ ಮತ್ತು ಉ ತ್ತರ ತೀರಗಳಲ್ಲಿ ಡಚ್ ಸೈನ್ಯ ದಂಡವಾ ಗಿ ಪ್ರತಿಭಟನೆಯೇನೂ ಇರಲಿಲ್ಲವೆಂದು ವ ರದಿಯಾಗಿದೆ. ಸುಮಾತ್ರಾ ತೀರದಲ್ಲೂ, ಮಧ್ಯ, ಪೂರ್ವ ಮತ್ತು ಪಶ್ಚಿಮ ಜಾವಾ ದಲ್ಲೂ ಬಲವಾದ ಹೋರಾಟ ನಡೆಯುತ್ತಿ ದೆ. ಭೂ ಮತ್ತು ಜಲಮಾರ್ಗಗಳಿಂದ ಬಂದಿರುವ ಡಚ್ಚರು ಜಾವಾ ದ್ವೀಪವನ್ನು ಸ್ವಾಧೀನ ಪಡಿಸಿಕೊಳ್ಳುವ ತಮ್ಮ ಗುರಿ ಯಲ್ಲಿ ವಿಶೇಷ ಮುಂದುವರಿದಿರುವುದಾಗಿ ಡಚ್ ಪ್ರಕಟಣೆ ತಿಳಿಸುತ್ತದೆ. ಡಚ್ಚರ ಎರಡು ಟ್ಯಾಂಕುಗಳೂ ಎರಡು ಬಾಂಬರುಗಳೂ ಸೇರಿಕೊಂಡು ಸುಮಾತ್ರಾದ ಪೈಲಿ ಮಾ ರ್ಗದಲ್ಲಿ ಮುಂದುವರಿದು ಮತ್ತು ಪಶ್ಚಿ ಮ ಜಾವಾದಲ್ಲಿ ಬಿರುಸಿನ ಕದನ ನಡೆ ಯಿತು. ಕ್ರಮೇಣ ಬೈಟೆನ್‌ಜಾರ್ಗ್ ಮೊದಲಾದವುಗ ಳನ್ನು ಡಚ್ಚರು ಆಕ್ರಮಿಸಿಕೊಂಡಿದ್ದಾರೆ. ಪೂರ್ವ ಜಾವಾದ ದೊಡ್ಡ ಬಂದರಾದ ಪ್ರೊಬೋಲಿಂ ಗೋ ವನ್ನು ಡಚ್ ನೌಕೆಗಳು ಮು ತ್ತಿವೆ. ಅಲ್ಲಿಯೂ ತೀವ್ರವಾದ ಕದನ ನ ಡೆಯುತ್ತಿದೆ. ಪೂರ್ವ ಜಾವಾದ ವಿಮಾ ನ ನಿಲ್ದಾಣವನ್ನು ವಶಪಡಿಸಿಕೊಂಡು ದಾಳಿ ಮಾಡಿದ್ದಾರೆ. ಬೆಂಬಾಗ ಪ್ರದೇಶದ ಮೇ ಲೆ ಡಚ್ಚರ ವಿಮಾನ ದಾಳಿ ಅನ್ಯಾಯವಾ ಗಿ ನಡೆದಿದೆ.

ಬರ್ಮಾ ದುಷ್ಕರ್ಮಿಗಳನ್ನು ಪತ್ತೆ ಹಚ್ಚಲಾಗುವುದು

ಆಂಗ್ ಸಾನರ ಕೊಲೆಗೆ ಸಂಬಂಧಪಟ್ಟ ದ ತನಿಖೆ ಭರದಿಂದ ಸಾಗಿದೆ. ಜನಗಳು ಕಳವಳ ಪಡಬೇಕಾಗಿಲ್ಲವೆಂದೂ, ದುಷ್ಕ ರ್ಮಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿ ಸುವುದಾಗಿಯೂ ಒಬ್ಬ ಉನ್ನತ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಪೊಲೀಸರಿಗೆ ವಂದೇ ಮಾತರಂ

ಬೀಹಾರಿನ ಪೊಲೀಸ್ ದಳದ ಗುಮಾಸ್ತ ಪಕ್ಷದವರಿಗೆ ವಂದೇ ಮಾತರಂ ಗೀತೆಯನ್ನು ಬ್ಯಾಂಡಿನ ಮೂಲಕ ಹಾಡಲು ತರಬೇತು ಕೊಡಲಾಗುತ್ತಿದೆ. ಸ್ವಾತಂತ್ರ್ಯ ದಿನಾಚರಣೆ ಯ ದಿನ ಎಲ್ಲ ಪೊಲೀಸ್ ನೌಕರರ ಪೆರೇ ಡಿನಲ್ಲಿ ವಂದೇ ಮಾತರಂ ಗೀತೆಯೊಡನೆ ಪಾಟ್ನಾ ನಗರದಲ್ಲಿ ಭಾರತದ ರಾಷ್ಟ್ರಧ್ವಜ ವನ್ನು ಹಾರಿಸಲಾಗುವುದು.

ಪೆಟ್ರೋಲ್ ತೆರಿಗೆಯನ್ನು ಪೌರಸಭೆಗೆ ಕೊಡಬೇಕು

(ನ. ಸು. ಫೋ.) ಬೆಂಗಳೂರು ೨೩

ಬೆಂಗಳೂರು ಪೌರಸಭೆಯ ಬಡ್ಜೆಟ್ ಅಧಿವೇಶನವು ನಿನ್ನೆ ಮುಕ್ತಾಯಗೊಂಡಿ ತು. ನಗರದಲ್ಲಿ ವಸೂಲಾಗುವ ಪೆಟ್ರೋ ಲ್ ತೆರಿಗೆಯನ್ನು ಸರ್ಕಾರದವರು ಪೌರ ಸಭೆಗೇ ಕೊಡಬೇಕೆಂಬ ನಿರ್ಣಯವು ಸ್ವೀಕ ರಿಸಲಾಯಿತು. ಪೌರಸಭೆಯ ಆದಾಯ ವು ೩೯,೩೩,೬೪೮ ರೂ ಗಳೆಂದೂ, ವೆಚ್ಚ ವು ೩೯,೬೯,೦೧೦ ರೂ ಗಳೆಂದೂ ಅಂದಾ ಜಾಗಿದೆ. ಅಂದಾಜಿನ ಸಿಲ್ಕು ೧೩,೯೩,೫೭೧ ರೂ. ಅಖೈರು ಸಿಲ್ಕು ೬೦,೮೮,೬೪೯ ರೂ. ಬೇಸಿಗೆ ನೀರು ಸರಬರಾಜು, ಸ್ಕೂಲುಗಳು, ಚರಂಡಿಗಳು, ಆಸ್ಪತ್ರೆಗಳು, ರಸ್ತೆಗಳು, ಹಾಲಿನ ಕೇಂದ್ರಗಳು, ಮಾರ್ಕೆಟ್ ಅಭಿವೃದ್ಧಿ, ನಗರದ ಸರ್ವೆ ಮುಂತಾದವು ಗಳಿಗೆ ಹಣವನ್ನು ಒದಗಿಸಲಾಗಿದೆ.

ಮೈಸೂರು ಹೈಕೋರ್ಟು

ರಾಜಧಾನಿಯ ಹೈ ಜಡ್ಜರ ಕೋರ್ಟಿ ಗೆ ಬದಲು ಬೆಂಗಳೂರಿನ ಇಬ್ಬರು ಜಡ್ಜಿಗಳ ರ ನೇಮಕ ಏರ್ಪಾಡಾಗಿದೆ. ಶ್ರೀ ಕೆ. ಎಸ್. ಪದ್ಮನಾಭಯ್ಯನವರು ಪ್ರಿನ್ಸಿಪಲ್ ಸಬ್ ಜಡ್ಜರಾಗಿಯೂ, ಶ್ರೀ ಬಿ. ಕೆ. ರಂಗಯ್ಯ ಯ್ಯನವರು ಹಂಗಾಮಿ ಅಡಿಷನಲ್ ಸಬ್ ಜಡ್ಜರಾಗಿಯೂ ಇದ್ದು ಇವರ ಸ ಸ್ಥಾನಕ್ಕೆ ಮೈಸೂರು ಮೊದಲನೇ ಮುನ್ ಸೀಫರಾದ ಶ್ರೀ ಎಂ. ಸದಾಶಿವಯ್ಯನವ ರು ಅಡಿಷನಲ್ ಸಬ್ ಜಡ್ಜರಾಗಿ ಕೆಲಸ ನೋಡುವರು. ಮೈಸೂರು ಜಿಲ್ಲಾಕೋರ್ಟಿ ನ ಶ್ರೀ ಎಂ. ರಾಜಶೇಖರಸ್ವಾಮಿಯವ ರು ನಗರದ ಮುನ್‌ಸೀಫರಾಗಿಯೂ, ಚ ನ್ನಪಟ್ಟಣದ ಮುನ್‌ಸೀಫರಾದ ಶ್ರೀ ಬಿ. ಗು ರುಲಿಂಗಯ್ಯನವರು ಮೈಸೂರಿನ ಮೊದಲ ನೆ ಮುನ್‌ಸೀಫರಾಗಿಯೂ ನಾಗರದ ಮುನ್ ಸೀಫರಾದ ಶ್ರೀ ಎಸ್. ಎಲ್. ಪಾಪಣ್ಣ ನವರು ನಂಜನಗೂಡಿಗೂ ವರ್ಗಾಯಿಸಲ್ಪ ಟ್ಟಿರುವರು.

§ ಸಂಯುಕ್ತ ಪ್ರಾಂತದಿಂದ ಮೈಸೂರಿ ಗೆ ಮಂಜೂರಾಗಿದ್ದ ೩೦೦೦ ಟನ್ ಸಕ್ಕರೆ ಯಲ್ಲದೆ ಜೊತೆಗೆ ಮತ್ತೆ ೩೦೦೦ ಟನ್ ಮಂಜೂರಾಗಿದೆ.

* ಕಲ್ಲಿಕೋಟೆಯ ಪ್ರಾಂತೀಯ ಸ ಮಿತಿಯಿಂದ ಪ್ರಕಟವಾಗಿರುವ ಪತ್ರ, ಗೀತಾ ಎಂಬ ಮಲೆಯಾಳ ಪುಸ್ತಕಕ್ಕೆ ಸ ರ್ಕಾರದವರು ಮುಟ್ಟುಗೋಲು ಹಾಕಿರು ವರು.

ಕಲ್ಕತ್ತೆಯ ಮೇಲೆ ಲೀಗಿನ ಕಣ್ಣು

ಪೂರ್ವ ಪಾಕಿಸ್ತಾನದಲ್ಲಿ ಕಲ್ಕತ್ತೆಯನ್ನು ಸೇರಿಸಿಕೊಳ್ಳಲು ಮುಸ್ಲಿಂ ಲೀಗಿನವರು ಹವಣಿಸುತ್ತಿದ್ದಾರೆ. ಮುಸ್ಲಿಮರು ಬಹು ಸಂಖ್ಯೆಯಲ್ಲಿರುವ ಪ್ರದೇಶದಲ್ಲಿ ಕಲ್ಕತ್ತೆಯು ಇರುವುದರಿಂದ, ಪೂರ್ವ ಬಂಗಾಳದ ಬಂದ ರುಗಳ ಅಭಿವೃದ್ಧಿಯಿಂದಲೇ ಆ ನಗರವು ನಿರ್ಮಿತ ವಾಗಿರುವುದೆಂದೂ ಲೀಗಿನವರು ಈ ಬಗ್ಗೆ ಬಂಗಾಳಾ ಗಡಿ ಸಮಿತಿಯ ಮುಂದೆ ಒಂ ದು ಮನವಿಯನ್ನು ಸಲ್ಲಿಸಲಾಗುತ್ತದೆ.

ವಿಯೆಟ್ನಾಮಿನಲ್ಲಿ ಫ್ರಾನ್ಸಿನ ಭೇದೋಪಾಯ

ವಿಯಟ್ನಾಮಿನಲ್ಲಿ ಅನ್ನಾಮಿನ ಮಾಜಿ ಚಕ್ರವರ್ತಿಯ ನಾಯಕತ್ವದಲ್ಲಿ ಹೊಸ ರಾ ಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿ ಈಗಿರುವ ಸರ್ಕಾರವನ್ನು ಮೂಲೋತ್ಪಾಟನೆ ಮಾಡಲು ಫ್ರಾನ್ಸ್ ಪ್ರಯತ್ನಿಸುತ್ತಿದೆಯೆಂದೂ, ವಿಯಟ್ನಾಮಿ ನ್ನು ಇಬ್ಭಾಗ ಮಾಡಿ ಅಲ್ಲಿನ ಏಕತೆಯನ್ನು ನಾಶಪಡಿಸಲು ಮಾಡುವ ಪ್ರಯತ್ನ ದಿಂದ ವಿಯೆಟ್ನಾಂ ರಿಪಬ್ಲಿಕ್ ಅಧ್ಯಕ್ಷರಾದ ಡಾ|| ಹೋಚಿ ಮಿನ್ನರೊಡನೆ ಸಂಧಾನ ನ ಡೆಸಲು ಫ್ರಾನ್ಸು ತಿರಸ್ಕರಿಸುವುದೆಂದೂ ವ ರದಿಯಾಗಿದೆ.

ಬರ್ಮಾ ಮಂತ್ರಿಯ ಪತ್ನಿಯ ಮೂರ್ಛೆ ಮತ್ತು ಮರಣ

ಬರ್ಮಾ ಕಾರ್ಮಿಕ ಸಚಿವರಾದ ಥ ಖಿನ್ ಬಾ ರವರ ಮರಣ ವಾರ್ತೆಯನ್ನು ಕೇಳಿ ಮೂರ್ಛೆಗೊಂಡ ಅವರ ಪತ್ನಿಯು ಮತ್ತೆ ಎಚ್ಚರಗೊಳ್ಳದೆ ಹಾಗೆಯೇ ಮರಣ ಹೊಂದಿದರು. ಆಂಗ್ ಸಾನರ ಪತ್ನಿ ತ ಮ್ಮ ಪತಿಯ ಮರಣದಿಂದ ತನಗೆ ಜಗ ತ್ತೇ ಶೂನ್ಯವಾಗಿದೆಯೆಂದೂ, ಇನ್ನು ಮುಂ ದೆ ತನ್ನ ಜೀವಮಾನವನ್ನು ಆಂಗ್ ಸಾನ ರಿಗೆ ಪುನರ್ಜನ್ಮವಿಲ್ಲದೆ ಶಾಶ್ವತವಾದ ನಿ ರ್ವಾಣವು ದೊರೆಯಲೆಂದು ಪ್ರಾರ್ಥಿಸುತ್ತ ದೇಶಸೇವೆಯ ಮತ್ತು ರಕ್ಷಣೆಗಾಗಿಯೂ ಕ ಳೆಯುವುದಾಗಿಯೂ ಹೇಳಿರುವರು.

ಸಂಸ್ಥಾನಗಳಿಗೂ ರಾಷ್ಟ್ರಧ್ವಜ

ತ್ರಿವರ್ಣಾಂಗ ಸಭೆಗೆ ಸೇರುವ ಅನೇಕ ಸಂಸ್ಥಾನಗಳು ಭಾರತದ ಹೊಸ ರಾಷ್ಟ್ರಧ್ವ ಜವನ್ನೇ ತಮ್ಮ ಧ್ವಜವನ್ನಾಗಿ ಸ್ವೀಕರಿಸ ಬಹುದೆಂದೂ, ಆಗಸ್ಟ್ ೧೫ನೇ ತಾ|| ಸ್ವಾತಂ ತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಹಾರಿ ಸಲು ಒಪ್ಪಿರುತ್ತವೆ.

ನೆಹರೂರವರಿಗೆ ಪ್ರಾರ್ಥನೆ

ಮೈಸೂರು ೨೩

ಸಂಸ್ಥಾನ ಪ್ರಜಾ ಸಮ್ಮೇಳನದ ಸ್ಥಾ ಯೀ ಸಮಿತಿಯು ರಾಷ್ಟ್ರಪತಿಗೆ ಕೊಟ್ಟಿರುವ ರಾಜೀನಾಮೆಯನ್ನು ವಾಪಸು ತೆಗೆದುಕೊ ಳ್ಳುವಂತೆ ಪಂಡಿತ ನೆಹರೂರವರನ್ನು ಪ್ರಾ ರ್ಥಿಸುವ ನಿರ್ಣಯವು ನಿನ್ನೆ ಕಾಂಗ್ರೆಸ್ ಕಛೇರಿಯಲ್ಲಿ ಸೇರಿದ್ದ ಕೆಲಸಗಾರರ ಸಭೆ ಯಲ್ಲಿ ಅಂಗೀಕರಿಸಲ್ಪಟ್ಟಿತು. ಅ ಖಿಲ ಭಾರತ ಸಮಿತಿಯ ಅಧಿವೇಶನಕ್ಕೂ ಸ್ವಾತಂತ್ರ್ಯ ದಿನಾಚರಣೆಯನ್ನು ಯಶಸ್ವಿ ಯಾಗಿ ನಡೆಸುವುದಕ್ಕೂ ನಗರ ಹಾಗು ಗ್ರಾ ಮಗಳಲ್ಲಿ ಪ್ರಚಾರ ಮಾಡುವುದಾಗಿಯೂ ನಿರ್ಣಯಿಸಲಾಯಿತು.

ಶಾಲಾ ಸಂಸ್ಥಾಪಕರ ದಿನಾಚರಣೆ

ನಾಳೆ ಸಂಜೆ ೬-೩೦ ಗಂಟೆಗೆ ಒ ನ್ನು ಹೈಸ್ಕೂಲ್ ಶಾಲಾ ಭವನದಲ್ಲಿ ಸಂಸ್ಥಾಪಕ ದಿನವನ್ನು ಆಚರಿಸಲಾಗುವುದು. ರಾಜ ಸೇವಾ ಧುರೀಣ ಶ್ರೀ ಕೆ. ವಿ. ಅನಂತರಾಮನ್ನವರ ಅಧ್ಯಕ್ಷತೆಯನ್ನು ವಹಿಸುವರು.

ಸಾಧ್ವಿ

ತಾ॥ ೨೪-೭-೪೭ ಗುರುವಾರ

ಮೈಸೂರು ಖೈದಿಗಳನ್ನೂ ಬಿಡಬೇಕು

ಬರುವ ತಿಂಗಳು ಹದಿನೈದನೇ ತಾರೀಖು ನಡೆಯಬೇಕಾಗಿರುವ ಸ್ವಾತಂತ್ರ್ಯದಿನಾಚರಣೆಗಾಗಿ ಇಡೀ ಭರತ ಖಂಡದಲ್ಲೆಲ್ಲಾ ವೈಭವಯುತವಾದ ಸಿದ್ಧತೆಗಳು ನಡೆಯುತ್ತಿವೆ. ಬಂಧನದಲ್ಲಿರುವ ಖೈದಿಗಳಿಗೆಲ್ಲಾ ದಯಾ ಭಿಕ್ಷೆಯನ್ನು ತೋರುವುದೇ ಅವುಗಳಲ್ಲಿ ಅತ್ಯಂತ ಪ್ರಾಮುಖ್ಯವಾದ ವಿಚಾರವಾಗಿರುತ್ತದೆ. ಸಕಲ ಪ್ರಾಂತಗಳಲ್ಲಿಯೂ ಇರುವ ಎಲ್ಲ ಬಗೆಯ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲು ಏರ್ಪಾಡುಗಳಾಗುತ್ತಿವೆ. ಭಾರತ ಸರ್ಕಾರದವರೇ ಈ ಬಗ್ಗೆ ಎಲ್ಲ ಪ್ರಾಂತೀಯ ಸರ್ಕಾರಗಳಿಗೂ ಸಲಹೆಯನ್ನು ಕೊಡುವ ರೀತಿ ಹೇಳಲಾಗಿದೆ. ಇತರ ಸಾಮಾನ್ಯ ಖೈದಿಗಳಿಗೂ ಸಹ ಆ ದಿನ ದಯೆಯನ್ನು ತೋರಿ ಅನೇಕರನ್ನು ಬಿಡುಗಡೆ ಮಾಡಲಾಗುವುದು.

ಮದರಾಸ ಪ್ರಾಂತವು ಇನ್ನೂ ಒಂದು ಹೆಜ್ಜೆ [illegible] ಹೋಗಿರುತ್ತದೆ. [illegible] ಮರಣ ದಂಡನೆಗೆ ಗುರಿಯಾಗಿ ಇನ್ನೂ ಆ ಶಿಕ್ಷೆಯು ಜಾರಿ ಮಾಡಲ್ಪಡದೆ ಇರುವವರೆಲ್ಲರನ್ನು ಆಗಸ್ಟ್ ಹದಿನೈದನೇ ತಾರೀಖಿನವರೆಗೆ ಜೀವಂತವಾಗಿಯೇ ಉಳಿಸಬೇಕೆಂದೂ, ಆ ಮರಣದಂಡನೆಗಳನ್ನು ಜಾರಿಮಾಡಲಾಗದೆಂದೂ ಸಹ ಅಲ್ಲಿನ ಸರ್ಕಾರವು ಆಜ್ಞೆ ಮಾಡಿರುತ್ತದೆ. ಆ ಖೈದಿಗಳಿಗೆ ಆ ದಿನ ದಯಾ ಭಿಕ್ಷೆಯನ್ನು ನೀಡಿ ಭಾರತದ ಸ್ವಾತಂತ್ರ್ಯ ಸಾಧನೆಯ ಸಂತೋಷದ ಸೂಚಕಾರ್ಥವಾಗಿ ಅವರುಗಳ ಪ್ರಾಣಗಳನ್ನು ಉಳಿಸುವಂತೆ ಆ ಸರ್ಕಾರವು ನಿರ್ಧರಿಸಿರುತ್ತದೆ. ಅಲ್ಲದೆ ಸ್ವತಂತ್ರ ಭಾರದಲ್ಲಿ ಮರಣದಂಡನೆಯೂ ಸಹ ಇರಬಾರದೆಂಬ ಆದರ್ಶದಿಂದ ಇನ್ನು ಮುಂದೆ ಆ ಪ್ರಾಂತದಲ್ಲಿ ಆ ಶಿಕ್ಷೆಯನ್ನೇ ರದ್ದು ಮಾಡಲೂ ಸಹ ನಿರ್ಧರಿಸಿರುತ್ತದೆ. ಈ ಮೇಲ್ಪಂಕ್ತಿಯು ಭರತ ಖಂಡದ ಎಲ್ಲ ಪ್ರಾಂತಗಳಿಗೂ ಅನುಕರಣೀಯವಾಗಿರುತ್ತದೆ.

ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಸಹ ಈಸೂರು, ಶ್ರವಣಬೆಳಗೊಳಗಳ ಖೈದಿಗಳು ಇನ್ನೂ ಕಾರಾಗೃಹದಲ್ಲಿ ಕೊಳೆಯುತ್ತಲೇ ಇರುತ್ತಾರೆ. ಅಲ್ಲದೆ ಇತ್ತೀಚೆಗೆ ಶ್ರೀ ಹನುಮಂತಯ್ಯನವರು ಬಂಧನಕ್ಕೆ ಒಳಗಾಗಿರುತ್ತಾರೆ. ಇವರುಗಳನ್ನು ಬಿಟ್ಟುಬಿಡುವಂತೆ ಸಾರ್ವಜನಿಕರು ಮಾಡಿಕೊಂಡ ಮನವಿಗಳಿಗೆ ಮನ್ನಣೆಯು ದೊರೆತಿರುವುದಿಲ್ಲ. ಈಗಿನ ಸಂದರ್ಭವನ್ನಾದರೂ ನಮ್ಮ ಸರ್ಕಾರದವರು ಉಪಯೋಗಿಸಿಕೊಂಡು ಇವರುಗಳೆಲ್ಲರನ್ನೂ ಬಿಟ್ಟುಬಿಡುವುದು ಅತ್ಯಂತ ಸಾಧುವಾಗಿರುತ್ತದೆ. ಅಲ್ಲದೆ ಬಂಧನದಲ್ಲಿರುವ ಇತರ ಖೈದಿಗಳ ವಿಚಾರದಲ್ಲಿಯೂ ಸಹ ಉದಾರವಾದ ವರ್ತನೆಯನ್ನು ಅನುಸರಿಸಬೇಕಾಗಿದೆ. ಈ ಬಗ್ಗೆ ನಮ್ಮ ಸರ್ಕಾರದವರು ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಲೆಂದು ನಾವು ಹಾರೈಸುತ್ತೇವೆ.

ಪಶ್ಚಿಮ ಬಂಗಾಳಕ್ಕೆ ಚಂದ್ರನಗರವೇ ?

ಫ್ರೆಂಚ್ ಆಡಳಿತಕ್ಕೆ ಸೇರಿದ ಚಂದ್ರನಗರದ ಪ್ರತಿನಿಧಿಗಳು ತಮ್ಮ ನಗರವು ಪಶ್ಚಿಮ ಬಂಗಾಳಕ್ಕೆ ಸೇರಲು ಅವಕಾಶವೀಯಬೇಕೆಂದು ಕಾಂಗ್ರೆಸ್ ನಾಯಕರಾದ ಡಾ॥ ಪಿ. ಸಿ. ಘೋಷರನ್ನು ಪ್ರಾರ್ಥಿಸಿರುವರೆಂದು ವರದಿಯಾಗಿದೆ.

ಪ್ರಕಟಣೆ

[illegible] ನಗರದ [illegible] ರವರ ಬೀದಿ [illegible] ನಂಬರ್ ಮನೆಯ ನಾಗರೀಕನಾದ ಶ್ರೀನಿವಾಸ [illegible] ರಾಮಾನುಜಾಚಾರ್ಯನು ತಿಳಿಯಪಡಿಸುವುದೇನೆಂದರೆ :—

ಮೇಲ್ಕಂಡ [illegible] ನಿವೇಶನ ([illegible]) ವನ್ನು ಮುನಿಸಿಪಾಲಿಟಿಯಿಂದ ನನ್ನ ತಂದೆಯು ಕ್ರಯಕ್ಕೆ ಪಡೆದಿದ್ದರು. ನಾವುಗಳು ಇಬ್ಬರೂ ಸೇರಿ ಸದರೀ ನಿವೇಶನದಲ್ಲಿ ಮನೆಯನ್ನು ನಮ್ಮ ಸ್ವಂತ ಹಣದಿಂದ ಕಟ್ಟಿಸಿರುತ್ತೇವೆ. ಇದು ಸುಮಾರು ಅರವತ್ತು ಸಂವತ್ಸರಗಳಾಗಿರಬಹುದು. ಸದರಿ ಮನೆಯು ನಮ್ಮಗಳ ಸ್ವಾಧೀನಾನುಭವದಲ್ಲಿರುತ್ತೆ. ನನ್ನ [illegible] ನನ್ನ ಮಗನಿಗೂ ನನ್ನ [illegible] ಸೇರತಕ್ಕದ್ದಾಗಿರುತ್ತೆ. ಮತ್ಯಾರಿಗೂ ಇದರಲ್ಲಿ ಯಾವ ಬಾಧ್ಯತೆ ಇರುವುದಿಲ್ಲ. [illegible] ಯಲ್ಲಿ [illegible] ಧಾರದ [illegible] ನನ್ನೂ ಸಹ ಕೇಳಿಸಿರುತ್ತೇನೆ. ಇದರ ಮೇಲೆ ಮತ್ತಾವ [illegible] ಇರುವುದಿಲ್ಲ. [illegible] ಯಲ್ಲಿ [illegible] ದ ನನ್ನ [illegible], ನನ್ನ [illegible] ಗಳನ್ನು [illegible] ನಮ್ಮ ಮನೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ [illegible] ಕೆಲವರು [illegible] ನನ್ನ [illegible] ದಲ್ಲೇ ಅವರು ತಮ್ಮ [illegible] ಬಾಧ್ಯತೆ ಇದ್ದರೆ, [illegible] ಬರುದೆಂದು ತಿಳಿಸುತ್ತೇನೆ.

ಸಿ. ರಾಮಾನುಜಾಚಾರ್,

೨೨—೭—೪೭

ಸಂಗೀತ ವಿದುಷಿ ನಂಜನಗೂಡು ನಾಗರತ್ನಮ್ಮ

★

೨೦-೭-೪೭ ನೇ ತಾರೀಖು ನಡೆದ ಸಾಧ್ವೀ ಪತ್ರಿಕೆಯ ವಾರ್ಷಿಕೋತ್ಸವದಲ್ಲಿ ಇವರು ಮನೋಹರವಾಗಿ ಗಾಯನವನ್ನು ಮಾಡಿದರು.

★

ನೋಟೀಸು

ಚಾಮರಾಜನಗರದ ಟಿಪ್ಪು ಗಂಗಡಿಕಾರ ಬೀದಿಯಲ್ಲಿ 1417 ನಂಬರ್ ಮನೆಯಲ್ಲಿ ಖಾಲಿ ವಾಸವಾಗಿರುವ ರಂಗಯ್ಯನವರ ಮಗ ರಾಮಯ್ಯನು ಈ ಮೂಲಕ ತಿಳಿಸುವುದೇನೆಂದರೆ :—

ಮೇಲ್ಕಂಡ ನಂಬರ್ ಮನೆಯನ್ನು ನಮ್ಮ ತಂದೆ ಕರಾರು ಮಾಡುವುದಾಗಿ ತಿಳಿದುಬರುತ್ತದೆ. ಯಾರೇ ಆಗಲಿ ಈ ಸ್ವತ್ತನ್ನು ಕ್ರಯ, ವಗೈರೆ ಮಾಡಿಕೊಂಡಲ್ಲಿ ಊರ್ಜಿತವಾಗತಕ್ಕದ್ದಲ್ಲ ಮತ್ತು ನಷ್ಟ ವಿಶಿಷ್ಟ ಕಷ್ಟ ನಷ್ಟಕ್ಕೊ ಗುರಿಯಾಗಬೇಕಾಗುತ್ತದೆ.

ಚಾಮರಾಜನಗರ, ತಾ॥ ೨೩-೭-೪೭ } ● ರಾಮಯ್ಯ.

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಬಂಡೀಕೇರಿಯಲ್ಲಿರುವ ಟ್ಯಾಕ್ಸಿ ಓನರ್ ಸಿ. ವೆಂಕೋಬರಾಯನಾದ ನಾನು ಸರ್ವರಿಗೂ ತಿಳಿಸುವುದೇನೆಂದರೆ :—

ಮೇಸ್ತ್ರಿ [illegible] ಪ್ಪನವರ ಮಗ [illegible] ನರಸಿಂಹಯ್ಯ [illegible] ಎಂಬುವರು ಸಾಧ್ವಿ ಪತ್ರಿಕೆಯಲ್ಲಿ [illegible] ನೇ ತಾರೀಖಿನಲ್ಲಿ [illegible] ಯಲ್ಲಿ [illegible] ಯನ್ನು [illegible] ಗಳೆಲ್ಲವೂ ತಮ್ಮದೆಂದು [illegible] ಸಿದ್ದರು. ನನಗೂ ಮೇಲ್ಕಂಡ ಕೆ. ಎ. ನರಸಿಂಹಯ್ಯ [illegible] ಎಂಬುವರಿಗೂ ಯಾವ ಪಾಲುಗಾರಿಕೆಯ ಒಪ್ಪಂದವೂ ಆಗಿರುವುದಿಲ್ಲ. MYZ ನೇ ನಂಬರು ಸ್ಟೂಡಿಬೇಕರ್ ಕಾರು ನನಗೆ ಸೇರಿದ್ದು. ಅದರ ಮೇಲೆ ನನ್ನಲ್ಲದೆ ಮತ್ಯಾರಿಗೂ ಯಾವ ವಿಧವಾದ ಹಕ್ಕೂ ಇರುವುದಿಲ್ಲ. ಸದರಿ ಕಾರನ್ನು ನಾನು ನನ್ನ ಸ್ವಂತ ಸಂಪಾದನೆಯಿಂದ [illegible] ಪ್ರಕಾರ [illegible] ಟೆಸ್ಟ್ ಯಾರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ ಮತ್ತು ಸ್ವಂತವಾಗಿ ಸದರಿ ಕಾರನ್ನು ಟ್ಯಾಕ್ಸಿಯಾಗಿ ನಡೆಸುತ್ತಾ ಇರುತ್ತೇನೆ. ನನಗೆ ಅನ್ಯಾಯ ಮಾಡಿ ನನ್ನಿಂದ ಅನ್ಯಾಯವಾದ ಫಾಯಿದೆ ಹೊಂದಬೇಕೆಂಬ ದುರುದ್ದೇಶದಿಂದ ಮೇಲ್ಕಂಡ ಕೆ. ಎ. ನರಸಿಂಹಯ್ಯ ಉರುಫ್ ಕೆ. ಎ. ಯಾದವ್ ಎಂಬುವರು ಸದರಿ ಪ್ರಕಟಣೆ ಮಾಡಿರುತ್ತಾರೆ.

ಸಿ. ವೆಂಕೋಬರಾವ್

ರಾಜಕಮಲ್

ತಾ॥ 25-7-47 ರಿಂದ

ಅಪೋಕ್ಸೆ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್ ★

—: ಭೂಮಿಕೆ :

ಮನ್ಮಾಹಿ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

Morning Shows from 25-7-47 for 4 days, daily at 10-30 a. m.

'MEXICANA'

With Tito Guizar, Constance Moore, Leo Carrillo

(First time to be shown in Mysore)

ವುಡ್‌ಲ್ಯಾಂಡ್ಸ್

19-7-47 ರಿಂದ

ಕಿಕ್ಕಿರಿದ ೧೨ ನೇ ವಾರ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬ(ಕವಾಯಿ)

—: ಪಾತ್ರ :—

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವರು.

CROYDON'S Glucose Available at PRABATH BANGLE STORES, Mysore

Wood Lands

Morning shows for 4 days from 25-7-47

RED... OF THE ROYAL MOUNTED & Killers of the Sea

Starring :—James Newill, Carol Hughes

Edited printed and published by A. R. Nagarajan at the Sadhvi Press D. Subbaiah Road Mysore

ನೋಂ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೨೫—೭—೪೭ [ಸಂಚಿಕೆ ೫

ಮಡಗಾಸ್ಕರಿನಲ್ಲಿ ಯುದ್ಧವು ಸನ್ನಿಹಿತ

ರೈಲ್ವೆ ಕೆಲಸಗಾರರ ಸ್ಥಿತಿ

ಹುಮಾಯೂನ್ ಕಬೀರರ ಭಾಷಣ

ಮೈಸೂರು ೨೫

ರಾಜಧಾನಿಗೆ ಆಗಮಿಸಿರುವ ಭಾರತ ರೈಲ್ವೆ ವಿಚಾರಣಾ ಸಮಿತಿಯ ಸದಸ್ಯರಾದ ಪ್ರೊ॥ ಹುಮಾಯೂನ್ ಕಬೀರರು ರೈಲ್ವೆ ನೌಕರರ ಸಂಘದ ಕೋರಿಕೆಯಂತೆ ನಿನ್ನೆ ಕೆಲಸಗಾರರ ಸಭೆಯಲ್ಲಿ ... ಉಪನ್ಯಾಸಗಳನ್ನು ಇತ್ತರು. ರೈಲ್ವೆ ಕೆಲಸಗಾರರ ಮತ್ತು ಸಂಸ್ಥೆಗಳ ಕುಂದು ಕೊರತೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆಯನ್ನು ಕೊಡಲು ಕೇಂದ್ರ ಶಾಸನ ಸಭೆಯು ಕಳೆದ ವರ್ಷ ಶ್ರೀ ಜೆ. ಸಿ. ನಿಯೋಗಿಯವರ ನಾಯಕತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತಲ್ಲದೆ, ಈಗಿರುವ ರೈಲ್ವೆ ನೌಕರರೆಲ್ಲರನ್ನೂ ಉಳಿಸಿಕೊಂಡು ರೈಲ್ವೆಯ ವರಮಾನವನ್ನು ಹೆಚ್ಚಿಸುವ ಬಗ್ಗೆ ಆ ಸಮಿತಿಯು ಸಲಹೆ ಕೊಡಬೇಕೆಂದೂ, ಅದು ಸದ್ಯದಲ್ಲೇ ತನ್ನ ವರದಿಯನ್ನು ಒಪ್ಪಿಸುವದೆಂದೂ ಶ್ರೀ ಕಬೀರರು ತಿಳಿಸಿದರು. ಮೈಸೂರು ಸರ್ಕಾರದ ಆಹ್ವಾನವನ್ನಂಗೀಕರಿಸಿ ಇಲ್ಲಿನ ಕೆಲಸಗಾರರ ಹಾಗೂ ರೈಲ್ವೆಯ ಕುಂದು ಕೊರತೆಗಳನ್ನು ಪರಿಶೀಲಿಸಿ ಸಲಹೆ ಕೊಡುವ ಸಲುವಾಗಿ ತಾವು ಇಲ್ಲಿಗೆ ಬಂದಿರುವುದಾಗಿಯೂ, ಶ್ರೀ ಕಬೀರರು ತಿಳಿಸಿದರು.

ಕಳೆದ ಯುದ್ಧದಲ್ಲಿ ಅನೇಕ ರೈಲ್ವೆ ಕಂಪೆನಿಗಳ ವರಮಾನವು ಹೆಚ್ಚಿರುವುದಕ್ಕೆ ಕಾರಣ ಪ್ರತ್ಯಕ್ಷವಾದ ದುಡಿಮೆಯೇ ಆದರೂ; ಕೆಲಸಗಾರರು ವಿಶ್ವಾಸದಿಂದ ಕೆಲಸ ಮಾಡದೆ ಅಪವ್ಯಯ ಹೆಚ್ಚುವುದು, ಇದರಿಂದ ಕೆಲಸಗಾರರ ವರಮಾನವು ಹೆಚ್ಚಲು ಅವಕಾಶವಾಗುವುದು. ಭವಿಷ್ಯ ಭಾರತದಲ್ಲಿ ... ಸಾಧನಗಳ ... ಆತಿ ಪ್ರಾಮುಖ್ಯವಾದುದು; ಎಲ್ಲ ಕೆಲಸಗಾರರೂ ಸಂಘಟಿತರಾಗಿ ತಮ್ಮ ಶಕ್ತಿಯನ್ನು ಹೆಚ್ಚಿಸಿ ತಮ್ಮ ... ಕ್ಷೇತ್ರಗಳನ್ನು ಉಪಯೋಗಿಸಿಕೊಳ್ಳಬೇಕು. ... ವಾಗಿ ... ಕೆಲಸ ಮಾಡುವುದರಿಂದ ಕಾರ್ಮಿಕರು ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಬಹುದು ಎಂಬುದಾಗಿ ಶ್ರೀ ಕಬೀರರು ತಮ್ಮ ಭಾಷಣದ ಅಂತ್ಯದಲ್ಲಿ ಸೂಚಿಸಿದರು.

ತಿಲಕ್ ಸಂಘಕ್ಕೆ ಭೇಟಿ

ವಾಣಿವಿಲಾಸ ಮೊಹಲ್ಲೆಯ ತಿಲಕ ಸಂಘಕ್ಕೆ ನಿನ್ನೆ ರೈಲ್ವೆ ವಿಚಾರಣಾ ಸಮಿತಿಯ ಸದಸ್ಯರಾದ ಶ್ರೀ ಹುಮಾಯೂನ್ ಕಬೀರರು ಭೇಟಿ ಇತ್ತು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು. ಇದುವರೆಗೆ ಭಾರತವು ಗುಲಾಮಗಿರಿಯಲ್ಲಿತ್ತು, ಇಂದು ಭಾರತವು ಸ್ವತಂತ್ರವಾಗಿದೆ. ನೂತನ ಭಾರತವನ್ನು ನಿರ್ಮಾಣ ಮಾಡುವ ... ವ್ಯ ... ಬಿದ್ದಿದೆ ಅವಶ್ಯಕ ...

ಇಂಡೋನೇಷ್ಯಾ ಕದನದಲ್ಲಿ ಜಪಾನೀ ಸೈನಿಕರು

ಜಪಾನ್ ಸೈನಿಕರನ್ನೂ ವಿಮಾನಿಕರನ್ನೂ ಡಚ್ ಪಡೆಗಳು ಕದನದಲ್ಲಿ ಉಪಯೋಗಿಸಿಕೊಳ್ಳುತ್ತಿವೆಯೆಂದು ವರದಿಯಾಗಿದೆ. ಡಚ್ ವಿಮಾನವೊಂದನ್ನು ಮೊನ್ನೆ ಕೆಳಕ್ಕೆ ಕೆಡವಿದಾಗ ಅದರಲ್ಲಿ ಜಪಾನ್ ಸೈನಿಕರಿದ್ದುದು ಪತ್ತೆಯಾಯಿತು. ದಕ್ಷಿಣ ಜಾವಾ ಪ್ರದೇಶದಲ್ಲಿ ಜಪಾನೀಯರ ನೆರವನ್ನು ಪಡೆಯಲಾಗಿದೆ. ಪೂರ್ವ ಜಾವಾದಲ್ಲಿ ಪ್ರೊಬೊಲಿಂಗೋ ಮತ್ತು ಜೆಂಗೋವಾ ಬಂದರುಗಳೂ ಡಚ್ಚರ ಹಸ್ತಗತವಾಗಿವೆ.

ಖರಗ್‌ಪುರದಲ್ಲಿ ಗಲಭೆ

ಬಂಗಾಳ ಪ್ರಾಂತದ ಬಂಗಾಳ - ನಾಗಪುರ ರೈಲ್ವೆ ವರ್ಕ್‌ಶಾಪಿನಲ್ಲಿ ಮೊನ್ನೆ ಕೋಮುವಾರು ಗಲಭೆ ನಡೆದು ೮ ಮಂದಿ ಮರಣ ಹೊಂದಿದರು. ... ಮಂದಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ. ಗಲಭೆ ನಡೆದ ... ಪ್ರದೇಶದಲ್ಲಿ ... ಒಂದು ವಾರದ ... ಜನರು ಹೊರಗೆ ಬರುವ ಹಾಗಿಲ್ಲ. ಬೀದಿಯಲ್ಲಿ ... ಗನನ್ನು ಕಟ್ಟಿದ್ದೇ ಗಲಭೆಗೆ ಮುಖ್ಯ ಕಾರಣವೆಂದು ಹೇಳಲಾಗಿದೆ. ರೈಲ್ವೆ ನೌಕರರು ... ಕೆಲಸಕ್ಕೆ ಹೋಗುತ್ತಿಲ್ಲ.

ಇಂಡೋನೇಷ್ಯಾ ಕದನದಲ್ಲಿ ಡಚ್ ಕಾರ್ಮಿಕರ ಅಸಹಕಾರ

ಪ್ರತ್ಯಕ್ಷವಾಗಿಯೇ ಆಗಲೀ, ಪರೋಕ್ಷವಾಗಿಯಾಗಲೀ ಹಾಲೆಂಡಿನ ಕಾರ್ಮಿಕರಾಗಲಿ ಇತರ ಕೆಲಸಗಾರರೂ ಇಂಡೋನೇಷ್ಯಾದ ವಿರುದ್ಧವಾಗಿ ಡಚ್ಚರ ಕಾರ್ಯಕ್ರಮದಲ್ಲಿ ಭಾಗವಹಿಸಕೂಡದೆಂದು ಹಾಲೆಂಡಿನ ಟ್ರೇಡ್ ಯೂನಿಯನ್ ಸಂಸ್ಥೆಯು ಕಾರ್ಮಿಕರಿಗೆ ಸೂಚಿಸುತ್ತದೆ.

ಪ್ರೊ. ಸಬೇಗ್, ಪ. ಡಿ ... ಎಂಬುವರು ... ಅವರು ವಿದ್ಯಾರ್ಥಿಗಳಿಗೆ ... ಉಪದೇಶ ಮಾಡಿದರು.

ರೈಲ್ವೆ ಕೆಲಸಗಾರರ ನಿಯೋಗ

ಮೈಸೂರು ೨೫

ಮೈಸೂರು ರೈಲ್ವೆ ಕೆಲಸಗಾರರ ಸಂಘದ ೧೩ ಮಂದಿ ಸದಸ್ಯರು ನಿನ್ನೆ ಶ್ರೀ ಎಸ್. ವಿ. ಕಟೀರಾರವರ ನಾಯಕತ್ವದಲ್ಲಿ ರಾಜಧಾನಿಗೆ ಆಗಮಿಸಿರುವ ಕೇಂದ್ರ ರೈಲ್ವೆ ವಿಚಾರಣಾ ಸಮಿತಿಯವರ ಬಳಿಗೆ ನಿಯೋಗ ಹೋಗಿ ಅವರಿಗೆ ಮನವಿಯೊಂದನ್ನು ಸಲ್ಲಿಸಿದರು. ಪ್ರತಿಯೊಬ್ಬ ಕಾರ್ಮಿಕನಿಗೂ ಪ್ರಾರಂಭದಲ್ಲಿ ಜೀವನಕ್ಕೆ ಅಗತ್ಯವಾದ ದರದಲ್ಲಿ ಕೂಲಿ ಕೊಡಬೇಕು, ಮತ್ತು ಕೆಲವು ವರ್ಷಗಳ ಅನಂತರ ಉಳಿತಾಯಕ್ಕೆ ಸಹಾಯವಾಗುವಂತೆ ಕೊಡಬೇಕು. ನೌಕರರ ಸಂಖ್ಯೆಯನ್ನು ... ಕಡಿಮೆ ... ಅವಲಂಬಿಸಿರುವುದರಿಂದ ಈಗ ಪಡೆಯುತ್ತಿರುವ ಸಂಬಳ ಮತ್ತು ತುಟ್ಟಿಭತ್ಯಗಳನ್ನು ಹೆಚ್ಚಿಸುವುದು ಅಗತ್ಯ. ಮೈಸೂರು ಸಂಸ್ಥಾನದಲ್ಲಿರುವ ಜೀವನದ ಮಟ್ಟವು ಹಿಂದುಸ್ಥಾನದ ಇತರ ಕಡೆಗಳಂತೆಯೇ ಇದ್ದರೂ ಮೈಸೂರು ರೈಲ್ವೆಯ ಕೆಲಸವೂ ಇತರ ಮೊದಲನೇ ತರಗತಿಯ ರೈಲ್ವೆ ಕೆಲಸಗಳಂತೆಯೇ ಇರುವುದಲ್ಲದೆ ಅದು ಒಂದನೇ ದರ್ಜೆಯದಾಗಿರುವುದರಿಂದ ಇತರ ಅದೇ ದರ್ಜೆಯ ರೈಲ್ವೆ ಕೆಲಸಗಾರರಿಗೆ ಯಾವ ಬಗೆಯ ಅನುಕೂಲಗಳನ್ನು ಕಲ್ಪಿಸಲಾಗಿದೆಯೋ ಅದೇ ಇಲ್ಲಿನ ಕೆಲಸಗಾರರಿಗೂ ದೊರೆಯಬೇಕು - ಎಂಬುದಾಗಿ ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

ವಿಚಾರಣಾ ಸಮಿತಿಯವರು ಮನವಿಯನ್ನು ಸಾವಧಾನವಾಗಿ ಕೇಳಿ ತಮ್ಮ ಕೈಲಾದುದನ್ನೆಲ್ಲಾ ಮಾಡುವುದಾಗಿ ಭರವಸೆ ಇತ್ತರು.

ಹೊಸ ರಾಷ್ಟ್ರ ಧ್ವಜಗಳು

ಭಾರತ ರಾಜ್ಯಾಂಗ ಸಭೆಯಿಂದ ಅಂಗೀಕೃತವಾಗಿರುವ ಹೊಸ ರಾಷ್ಟ್ರೀಯ ಧ್ವಜಗಳನ್ನು ತಯಾರಿಸಿ ಬ್ಯಾಂಗಳೂರ್ ಬಜಾರಿನಲ್ಲಿರುವ ಖಾದ್ದರ್ ಭಂಡಾರ ಸಂಘದಲ್ಲಿ ಮಾರಾಟಕ್ಕೆ ಇಡಲಾಗುವುದು. ಆಗಸ್ಟ್ ೧೫ ನೆಯ ತಾರೀಖು ಸ್ವಾತಂತ್ರ್ಯ ದಿನವನ್ನು ವೈಭವದಿಂದ ಆಚರಿಸುವವರೆಲ್ಲರೂ ಇವುಗಳನ್ನು ಕೊಂಡುಕೊಳ್ಳಬಹುದೆಂದು ಸೂಚಿಸಲಾಗಿದೆ.

ಉದಾರ ದಾನ

ರಾಜಧಾನಿಯ ಶಾರದಾವಿಲಾಸ ಶಾಲೆಗೆ ಜಗೆ ಯಾರ್ ... ... ಗುಂಟಿಲ್ಲ ... ಶ್ರೀ ಟಿ. ವಿ. ವೆಂಕಟರಾಮಯ್ಯನವರು ಒಂದು ಸಾವಿರ ರೂ. ದಾನ ಮಾಡಿರುವುದಲ್ಲದೆ ತಮ್ಮ ಕೈಲಾದ ಸಹಾಯ ... ವನ್ನು ನೀಡುವುದಾಗಿಯೂ ವಾಗ್ದಾನ ಮಾಡಿರುವರು.

'ಹಿಟ್ಲರನು ಮತ್ತೆ ಬರುತ್ತಾನೆ'

ಗ್ಲೋಬ್] ಬರ್ಲಿನ್ ೧೯

ನ್ಯೂರೆಂಬರ್ಗ್ ವಿಚಾರಣೆಯಲ್ಲಿ ಶಿಕ್ಷೆಗೆ ಗುರಿಯಾಗಿ ಸ್ಪಾಂಡೋ ಎಂಬಲ್ಲಿನ ಕಾರಾಗೃಹದಿಂದ ಬೇರೆ ಕಡೆಗೆ ರುಡಾಲ್ಫ್ ಹೆಸ್ ಮತ್ತು ಇತರ ಆರು ಜನ ನಾಜಿ ನಾಯಕರನ್ನು ವರ್ಗಾಯಿಸಿದ ಮೇಲೆ ಬರ್ಲಿನ್ನಿನ ಸುರಂಗದ ರೈಲ್ವೆಗಳಲ್ಲಿ ದೊಡ್ಡ ಪೋಸ್ಟರುಗಳನ್ನು ಹಾಕಿದ್ದುದು ಕಂಡು ಬಂದಿತು. 'ಹಿಟ್ಲರನು ಮತ್ತೆ ಬರುವ ದಿನವನ್ನು ಇದಿರು ನೋಡಿರಿ' - ಎಂಬುದಾಗಿ ಅದರಲ್ಲಿ ಘೋಷಿಸಲಾಗಿತ್ತು.

ಪ್ರಪಂಚದಲ್ಲೇ ಅತ್ಯಂತ ಅಮೂಲ್ಯವಾದ ಮೂಗು

ಗ್ಲೋಬ್] ಲಂಡನ್ ೨೦

ದಕ್ಷಿಣ ಅಮೆರಿಕದ ಸುಗಂಧದ್ರವ್ಯ ವ್ಯಾಪಾರಿಗಳಿಗೆ ಕಳೆದ ೪೦ ವರ್ಷಗಳಿಂದ ಹತ್ತು ಲಕ್ಷ ಪೌಂಡಿಗೆ ಮೀರಿದ ಆದಾಯದನ್ನುಂಟುಮಾಡಿಕೊಟ್ಟಿರುವ ಅರ್ಜೆಂಟೈನದ ಮೈಗೆಲ್ ಕಿಮರ್ನಿಡೋಸ್ ಎಂಬಾತನು ಈಗ ಲಂಡನ್ನಿಗೆ ಬಂದಿದ್ದಾನೆ. ಸುಗಂಧ ದ್ರವ್ಯಗಳ ವಾಸನೆಯನ್ನು ನೋಡಿ ಅವುಗಳನ್ನು ಉತ್ತಮಪಡಿಸಲು ಸಲಹೆಗಳನ್ನು ಕೊಡುವುದೇ ಆತನ ಕೆಲಸ. ಪರಿಮಳಗಳ ... ಅಳಿಯದ ಸುಗಂಧವನ್ನು ಉಂಟುಮಾಡಿಕೊಡಲು ಆತನು ಸಂಶೋಧನೆಗಳನ್ನು ನಡೆಸುತ್ತಿದ್ದನು. ಬ್ರಿಟನ್ನಿನ ಬೇಸಿಗೆ ಗಾಳಿಯಿಂದ ಪ್ರಪಂಚದ ಅತ್ಯುತ್ತಮ ಪರಿಮಳವನ್ನು ಪಡೆಯಬಹುದೆಂದು ಆತನ ಹೇಳಿಕೆಯಾಗಿದೆ.

ಪಶ್ಚಿಮ ಬಂಗಾಳಕ್ಕೆ ಕೃಪಲಾನಿ ಗವರ್ನರರೇ?

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರನ್ನು ಪಶ್ಚಿಮ ಬಂಗಾಳದ ಗವರ್ನರರನ್ನಾಗಿ ಸೂಚಿಸಿದೆಯೆಂದು ಒಂದು ವರದಿಯು ತಿಳಿಸುತ್ತದೆ.

ಪೌರಸಭಾಧ್ಯಕ್ಷರ ಚುನಾವಣೆ

ಸ್ವಂ. ವ] ಚಾಮರಾಜನಗರ ೨೩

ಇಲ್ಲಿನ ಪುರಸಭೆಯ ಅಧ್ಯಕ್ಷರ ಚುನಾವಣೆಯು ಈ ದಿನ ಬೆಳಿಗ್ಗೆ ನಡೆದು ಸ್ಪರ್ಧಿಸಿದ್ದ ಇಬ್ಬರು ಸದಸ್ಯರ ಪೈಕಿ ಶ್ರೀ ಎಸ್. ವೆಂಕಟಸುಬ್ಬಶೆಟ್ಟರು ತಮ್ಮ ಅರ್ಜಿಯನ್ನು ವಾಪಸ್ ಪಡೆದ ಮೇಲೆ ಶ್ರೀ ಬಿ. ನಾರಾಯಣರವರು ನಿರ್ವಿರೋಧವಾಗಿ ಆರಿಸಲ್ಪಟ್ಟರು. ಚುನಾವಣೆಯು ಅಕ್ರಮವಾಗಿದೆಯೆಂದು ಬಂದಿದ್ದ ಶ್ರೀ ಸಿ. ಡಿ. ನಾರಾಯಣರಾವ್ ಮತ್ತು ಇತರ ಆರು ಜನ ಸದಸ್ಯರು ಆಕ್ಷೇಪಣೆಗಳನ್ನು ತಳ್ಳಿ ಹಾಕಲಾಯಿತು.

ಮಡಗಾಸ್ಕರಿನಲ್ಲಿ ಯುದ್ಧವೇ?

ಗಾವಾದಂತಹ ಪಶ್ಚಿಂದು ರಣರಂಗವು ಮಡಗಾಸ್ಕರಿನಲ್ಲಿ ಹೂಡಲ್ಪಡುವ ಸಂಭವವು ಸಂಪ್ರಾಪ್ತವಾಗಿರುತ್ತದೆ. ಆ ದ್ವೀಪದ ರಾಜಧಾನಿಯಾದ ಅಂಟನಾನಾರೀವೋ ನಗರವನ್ನು ಫ್ರೆಂಚರು ... ಅಲ್ಲಿನ ದಂಗೆಕೋರರು ವಶಪಡಿಸಿಕೊಳ್ಳುವ ... ಕಡೆಗೆಟ್ಟುತ್ತಿದ್ದಾರೆ. ಫ್ರೆಂಚರು ೫ ಡಿವಿಷನ್ ಸೇನೆಗಳನ್ನೂ, ಹಾಗೂ ... ಗಳನ್ನೂ ಕಳುಹಿಸುತ್ತಿದ್ದಾರೆ. ಮುಖ್ಯವಾದ ಕೇಂದ್ರಗಳೆಲ್ಲಾ ವಿಮಾನಗಳೂ, ಇತರ ಯುದ್ಧೋಪಕರಣಗಳೂ ತಲುಪಿವೆ. ಸಧ್ಯದಲ್ಲೇ ಯುದ್ಧದ ಆಜ್ಞೆಯು ಹೊರಡಬಹುದೆಂದು ವರದಿಯಾಗಿದೆ.

ಶ್ರೀ

ಬಾಲಸರಸ್ವತಿ ಸಂಗೀತ ನಾಟಕ ಮಂಡಳಿ

ಹಾಗೂ ... ಮೈಸೂರು ... ಕಂಪೆನಿ

ರತ್ನಾವಳಿ ಥಿಯೇಟರಿನಲ್ಲಿ ನಾಳೆ ರಾತ್ರಿ ೧೦-೩೦ ಗಂಟೆಗೆ

★ ಕಾಲೇಜ್ ಗರ್ಲ್ ★

ಎಂಬ ... ನಾಟಕವನ್ನು ಅಭಿನಯಿಸುವರು ಮಹಾಜನರು ...

... ಪ್ರೊಪ್ರೈಟರ್

ಜಿಲ್ಲಾ ಬೋರ್ಡಿಗೆ ಉಪಾಧ್ಯಕ್ಷರು

ಮೈಸೂರು ೨೫

ಬರುವ ಎಂಟನೇ ತಾರೀಕು ಜಿಲ್ಲಾ ಬೋರ್ಡಿನ ಕಛೇರಿಯ ಕಟ್ಟಡದಲ್ಲಿ ಬೋರ್ಡಿನ ಸಭೆಯು ನಡೆಯುವುದು. ಉಪಾಧ್ಯಕ್ಷರನ್ನು ಚುನಾಯಿಸುವುದು; ವಿವಿಧ ಸಮಿತಿಗಳಿಗೆ ಸದಸ್ಯರನ್ನು ಆರಿಸುವುದೇ ಮುಂತಾದ ಕಾರ್ಯಕ್ರಮಗಳು ಜರುಗುವುವು.

ವಿದ್ಯಾರ್ಥಿಗಳ ಸಂತಾಪ

ನಿನ್ನೆ ವಿದ್ಯಾರ್ಥಿಗಳು ಇಂಟರ್‌ಮೀಡಿಯೆಟ್ ಕಾಲೇಜಿನ ಮುಂಭಾಗದಲ್ಲಿ ಶ್ರೀ ತವನಪ್ಪ ಭೂಪಾಲರ ಅಧ್ಯಕ್ಷತೆಯಲ್ಲಿ ಸೇರಿದ್ದು ಬರ್ಮಾ ಕಾರ್ಯಾಲೋಚನ ಸಭೆಯ ಸಚಿವರುಗಳು ದಾರುಣ ಕೊಲೆಗೆ ಈಡಾದುದಕ್ಕಾಗಿ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು.

ಪರೀಕ್ಷೆ

ರಾಜಧಾನಿಯ ಪಶುವೈದ್ಯ ಹೊಸ ಒಡೆಯರ ಡಾಕ್ಟರರಾದ ಶ್ರೀ ಅನಂತಸ್ವಾಮಿ ಅವರ ಆಸ್ಪತ್ರೆಯಲ್ಲಿ ನಾಡಿದ್ದಿನಿಂದ ೩ ತಿಂಗಳವರೆಗೆ ಪ್ರತಿ ಭಾನುವಾರ ಸಂಜೆ ೫ ಗಂಟೆಯಿಂದ ೬ ರವರೆಗೆ ಶ್ರೀ ಪುರಂದರ ಭಾರತಿ ಸ್ವಾಮಿಯವರಿಂದ ಪರೀಕ್ಷೆಯು ನಡೆಸಲ್ಪಡುತ್ತದೆ.

ಹೋಟೆಲ್ ಕೆಲಸಗಾರರ ಸಂಘ

ಮೇಲ್ಕಂಡ ಸಂಘದ ಸಾಮಾನ್ಯ ಸದಸ್ಯರ ಸಭೆಯು ಈ ದಿನ ರಾತ್ರಿ ೮-೩೦ಕ್ಕೆ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಕಛೇರಿಯಲ್ಲಿ ಸೇರುವುದು. ಮೈಸೂರು ಸೋಷಲಿಸ್ಟ್ ಕೆಲಸಗಾರರಾದ ಶ್ರೀ ತವನಪ್ಪ ಭೂಪಾಲ್‌ರವರು ಅಧ್ಯಕ್ಷತೆ ವಹಿಸುವರು.

ಬರ್ಮಾ ಕೊಲೆ ಪಾತಕರ ದಸ್ತಗಿರಿ

ಯು ಆಂಗ್ ಸಾನ್ ಮೊದಲಾದ ಬರ್ಮಾ ಸಚಿವರನ್ನು ಕೊಂದು ಪರಾರಿಯಾಗಿದ್ದ ಕೊಲೆಗಡುಕರನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡಲಾಗಿದೆ. ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದ ಒಬ್ಬನನ್ನು ಗುಂಡಿನಿಂದ ಹೊಡೆದು ಕೊಲ್ಲಲಾಗಿದೆ. ಬರ್ಮಾದ ಕಾರ್ಮಿಕ ಪಕ್ಷದ ೧೭ ಜನ ಪ್ರಮುಖರು ತಮ್ಮ ನಾಯಕರ ಕೊಲೆ ಪಾತಕರನ್ನು ಅವರ ಬೆಂಬಲಿಗರನ್ನೂ ಪತ್ತೆ ಹಚ್ಚಿ ದಂಡಿಸಲು ತಮ್ಮ ಪ್ರಾಣವನ್ನೇ ಪಣವಾಗಿ ಒಡ್ಡುವುದಾಗಿ ರಕ್ತ ಪತ್ರವನ್ನು ಬರೆದಿದ್ದಾರೆ.

ಇಂಡೋನೇಷ್ಯದಲ್ಲಿ ರಾಕೆಟ್ ಕದನ

ಡಚ್ಚರ ೨ ಸೈನ್ಯ ಪಡೆಗಳು ಪೂರ್ವ ಜಾವದಲ್ಲಿ ಸಹಜವಾಗಿ ರಿಪಬ್ಲಿಕ್ ರಾಜಧಾನಿಯಾದ ಜೋಗಜಕರ್ತಾ ನಗರದ ಕಡೆಗೆ ಮುನ್ನಡೆಯುತ್ತಿವೆ. ವಿಮಾನ ಕಾರ್ಯಾಚರಣೆ ತೀವ್ರವಾಗಿದೆ. ಡಚ್ ಪಡೆಗಳು ಜೋಗ್ ಜಕರ್ತಾ ನಗರಕ್ಕೆ ಅರ್ಧ ದಾರಿ ಮುಂದೆ ಹೋಗಿವೆ. ಮಧ್ಯ ಜಾವದಲ್ಲಿ ಇಂಡೋನೇಷ್ಯ ಪಡೆಗಳು ಡಚ್ಚರನ್ನು ಪ್ರತಿಭಟಿಸುತ್ತಿವೆ. ಡಚ್ಚರು ವಿಮಾನಗಳ ಮೂಲಕ ರಾಕೆಟ್ ಬಾಂಬುಗಳನ್ನು ಸುರಿಸುತ್ತಿದ್ದಾರೆ. ಪೂರ್ವ ಜಾವದ ಪ್ರಸಿದ್ಧ ಕೋಟೆಯಾದ ಮಲಾಂಗ್ ಎಂಬುದು ಡಚ್ಚರ ಹಸ್ತಗತವಾಗುವ ಸಂಭವವಿದೆ. ಇದಕ್ಕೆ ಇಂಡೋನೇಷ್ಯ ಜಳಿಯದ ಉಳಿಯಬೇಕಾದರೆ ಸಂಯುಕ್ತ ರಾಷ್ಟ್ರ ಸಂಸ್ಥೆಯು ಕೂಡಲೇ ಮಧ್ಯೆ ಪ್ರವೇಶಿಸಬೇಕೆಂದು ಕೇಳಲಾಗಿದೆ.

Wood Lands

Morning shows for 4 days
from 25-7-47
RENFREW OF THE ROYAL MOUNTED
&
Killers of the Sea
Starring :—James Newill, Caral Hughs

ವುಡ್‌ಲ್ಯಾಂಡ್ಸ್

26-7-47 ರಿಂದ
ಕಿಕ್ಕಿರಿದ ೧೩ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

(ತಮಿಳು)
: ಪಾತ್ರ :
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ್ ಮುಂತಾದವರು.

CROYDON'S
Glucose
Available at
PRABATH BANGLE STORES,
Mysore

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್, ಮೈಸೂರು.

ಟೆಂಡರ್ ನೋಟೀಸು

ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಆವರಣದಲ್ಲಿರುವ ನೂಲುವ ವಿಭಾಗದ ಪೂರ್ವ ಮತ್ತು ಉತ್ತರ ಭಾಗಗಳ ಬದುವಣೆಗಳಲ್ಲಿ ಮೇಲಿನ ಕಟ್ಟಡ ಕಟ್ಟಲು ಮೊಹರಾದ ಟೆಂಡರುಗಳು ಗಿರಣಿಯ ಜನರಲ್ ಮ್ಯಾನೇಜರವರಿಂದ ೧೯೪೭ ನೇ ಆಗಸ್ಟ್ ೧೫ ನೇ ತಾರೀಖು ಮಧ್ಯಾಹ್ನ ೪ ಗಂಟೆಯವರೆಗೆ ಅಂಗೀಕರಿಸಲ್ಪಡುವುವು.

ಪೂರ್ವ ಬದುವಣೆಯ ಟೆಂಡರುಗಳೊಡನೆ ೬೦೦ ರೂ ಗಳನ್ನೂ ಮತ್ತು ಉತ್ತರದ ಬದುವಣೆಯ ಟೆಂಡರುಗಳೊಡನೆ ೩೦೦ ರೂ ಗಳನ್ನು ಠೇವಣಿಯಾಗಿ ಕೊಡಬೇಕು.

ಅಪೇಕ್ಷಿಸುವ ಟೆಂಡರುದಾರರು ಬೇಕಾಗಬಹುದಾದ ಸಾಮಾನುಗಳ ಪ್ರಮಾಣ ಮತ್ತು ಆಕಾರದ ವಿವರಗಳನ್ನು ಟೆಂಡರು ಫಾರಮ್ಮುಗಳನ್ನೂ ಗಿರಣಿಯ ಕಛೇರಿಯಿಂದ ಪಡೆಯಬಹುದು. ಮತ್ತು ನಕ್ಷೆಗಳನ್ನು ಗಿರಣಿಯ ಕೆಲಸ ನಡೆಯುವ ದಿನಗಳಲ್ಲಿ ಗಿರಣಿಯ ಆಫೀಸಿನಲ್ಲಿ ನೋಡಬಹುದು.

ಪ್ರತಿಯೊಂದು ಕೆಲಸವೂ ಟೆಂಡರು ಅಂಗೀಕಾರವಾದಂದಿನಿಂದ ೪ ತಿಂಗಳುಗಳೊಳಗಾಗಿ ಪೂರೈಸಲ್ಪಡಬೇಕು.

ಎಂ. ಆರ್. ಶ್ರೀನಿವಾಸ ಅಯ್ಯಂಗಾರ್,
ಜನರಲ್ ಮ್ಯಾನೇಜರ್.

Office of the President,
District Board, Mysore.
Dated 22-7-1947.

ನೋಟಿಫಿಕೇಷನ್

೧೯೪೭ ನೇ ಆಗಸ್ಟ್ ೭ ನೇ ತಾರೀಖು ಗುರುವಾರ ಮಧ್ಯಾಹ್ನ ೪ ಗಂಟೆ ವರೆಗೆ ಈ ಮುಂದೆ ನಮೂದು ಮಾಡಿರತಕ್ಕ ಕೆಲಸಗಳಿಗಾಗಿ ಸೀಲು ಮಾಡಿರತಕ್ಕ ಟೆಂಡರುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತದೆ.

೧ ಪಿರಿಯಾಪಟ್ಟಣದ ತಾಲ್ಲೂಕು ಕೊಲಗನಹಳ್ಳಿ ಸಂತೆ ಮೈದಾನದಲ್ಲಿ ಒಂದು ಛಾವಣಿಯನ್ನು ಕಟ್ಟುವುದು

೨ ಕಟ್ಟೆಮಳಲವಾಡಿ, ರಾಮಂದೂರು, ಅತ್ತಿಗೋಡು ರಸ್ತೆಯಲ್ಲಿ ೨ ಕಣ್ಣಿನ ಒಂದು ಮೋರಿಯನ್ನು ಕಟ್ಟುವುದು

೩ ಪಿರಿಯಾಪಟ್ಟಣದ ತಾಲ್ಲೂಕು ಬಸಲಾಪುರದಿಂದ ಅರೇನಹಳ್ಳಿಗೆ ಹೋಗತಕ್ಕ ರಸ್ತೆಯನ್ನು ರಿಪೇರಿ ಮಾಡುವುದು.

ಟೆಂಡರನ್ನು ಸೀಲು ಮಾಡಿರತಕ್ಕ ಕವರಿನಲ್ಲಿಟ್ಟು ಮೇಲುಗಡೆ ಮೇಲೆ ನಮೂದು ಮಾಡಿರತಕ್ಕ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಎಂದು ಅಡ್ರೆಸ್ಸು ಬರೆದು ಕಳುಹಿಸತಕ್ಕದ್ದು.

ಠೇವಣಿಗಾಗಿ ಮೇಲ್ಕಂಡ ಕೆಲಸಗಳಿಗಾಗಿ ಪ್ರತಿಯೊಂದು ಕೆಲಸಕ್ಕೂ ೫೦ ರೂಪಾಯಿಗಳನ್ನು ಖಜಾನೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಚಲಾನ್ ರಸೀತಿಯನ್ನು ಟೆಂಡರು ಜೊತೆಯಲ್ಲಿ ಕಳುಹಿಸಬೇಕು, ಮತ್ತು ಪ್ರತಿಯೊಂದು ಕೆಲಸಕ್ಕೂ ಬೇರೆ ಬೇರೆ ಟೆಂಡರು ಕೊಡಬೇಕು.

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಆಫೀಸು ವೇಳೆಗಳಲ್ಲಿ ಮಧ್ಯಾಹ್ನ ೧೨ ರಿಂದ ಸಾಯಂಕಾಲ ೫ ಗಂಟೆಯವರೆಗೆ ಇಚ್ಛೆಯುಳ್ಳ ಕಂಟ್ರಾಕ್ಟರುಗಳು ತಿಳಿಯಬಹುದು.

ಯಾವ ಟೆಂಡರನ್ನೂ ಅವಶ್ಯವಾಗಿ ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಅಧಿಕಾರಕ್ಕೆ ಒಳಪಟ್ಟಿರುತ್ತೆ. ಮತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರುಗಳಿಗೆ ಕಾರಣವನ್ನೂ ಸಹ ಸೂಚಿಸಲಾಗುವುದಿಲ್ಲ.

ಹೆಚ್. ಎಂ. ಚೆನ್ನಬಸಪ್ಪ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್



ರಾಜಕಮಲ್

ತಾ|| 25-7-47 ರಿ
ಅಮೋಘ ೨ ನೇ ವಾ
ಪ್ರತಿ ದಿನ ಮೂರು ಆಟ

★ ರಿಸ್ಟ್ರಾರ್

ಮಮ್ತಾಜ್ ಶಾಂತಿ, ಅಶೋಕ್‌ಕುಮಾರ್, ಬೇಬಿ ಕಮಲ ...

Morning Shows fr
25-7-47 for 4 days, a
at 10-30 a. m.

MEXICAN

With Tito Guiza
Constance Moore, L
Carillo
(First time to be sh
in Mysore)

Edited, printed and publ... A. R. Narasi... at the Sadh... D. Subbaiah Road, Mysore

ಫೋನ್ ನಂ. 392 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೨೬—೭—೪೭ [ಸಂಚಿಕೆ ೬

ಬೆಂಗಳೂರು ದಂಡು ಮೈಸೂರಿಗೆ ಸೇರಿತು

ಆಂಗ್ ಸಾನರ ಬಗ್ಗೆ ಅನುತಾಪ

ನಗರ ಕಾಂಗ್ರೆಸ್ ಸಮಿತಿಯ ನಿರ್ಣಯ

ಮೈಸೂರು ೨೬

ನಿನ್ನೆ ನಗರ ಕಾಂ॥ ಸಮಿತಿಯ ಸಭೆ ನಡೆದು ಸ್ವಾತಂತ್ರ್ಯ ದಿನಾಚರಣೆ ಮತ್ತು ಅಖಿಲ ಮೈಸೂರು ಕಾಂ॥ ಸಮಿತಿಯ ಅಧಿವೇಶನದ ಸಿದ್ಧತೆಗಳ ವಿಷಯಗಳು ಚರ್ಚಿಸಲ್ಪಟ್ಟವು. ಸದರೀ ಅಧಿವೇಶನಕ್ಕಾಗಿ ನಗರದ ಪದಾಧಿಕಾರಿಗಳೇ ಸ್ವಾಗತ ಸಮಿತಿಯಾಗಿ ಕೆಲಸ ಮಾಡಬೇಕೆಂದೂ ರೂಪಾಯಿ ಕೊಡುವವರನ್ನು ಸ್ವಾಗತ ಸಮಿತಿಯ ಸದಸ್ಯರಾಗಿ ತೆಗೆದು ಕೊಳ್ಳತಕ್ಕದ್ದೆಂದೂ ತೀರ್ಮಾನವಾಯಿತು. ಆಗಸ್ಟ್ 15 ನೇ ತಾರೀಖು ಪ್ರಭಾತಫೇರಿ, ಧ್ವಜಾರೋಹಣ, ಮೆರವಣಿಗೆ ಮತ್ತು ಬಹಿರಂಗ ಸಭೆಗಳ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಬೇಕೆಂದೂ ತೀರ್ಮಾನವಾಯಿತು. ಆ ದಿನ ಸಾರ್ವಜನಿಕ ರಜಾ ಕೊಡುವಂತೆಯೂ, ರಾಜಕೀಯ ಖೈದಿಗಳೆಲ್ಲಾ ಬಿಡುಗಡೆ ಮಾಡುವಂತೆಯೂ ಸರ್ಕಾರದವರನ್ನು ಒತ್ತಾಯಪಡಿಸುವ ನಿರ್ಣಯವೂ ಆಯಿತು. ಬರ್ಮಾದಲ್ಲಿ ಕೊಲೆಮಾಡಲ್ಪಟ್ಟ ಆಂಗ್ ಸಾನ್ ಮತ್ತು ಇತರ ಮಂತ್ರಿಗಳ ಬಗ್ಗೆ ಸಂತಾಪವನ್ನೂ ಸೂಚಿಸಲಾಯಿತು.

ಕೀರ್ತನೆ

ರಾಜಧಾನಿಯ ಕರ್ಜನ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯ ಆಶ್ರಯದಲ್ಲಿ ನಿನ್ನೆ ಸಂಜೆ ೫ ಗಂಟೆಗೆ ಶ್ರೀ ಪಾಂಡುರಂಗ ದೇವಾಲಯದಲ್ಲಿ ಹರಿಕಥಾವಿದ್ವಾನ್ ಕೇಶವಾಚಾರ್ಯರಿಂದ ಶ್ರೀ ಪಾಂಡುರಂಗ ಚರಿತ್ರೆಯನ್ನು ಕೀರ್ತನೆಯ ರೂಪದಲ್ಲಿ ನಡೆಸಿದರು.

ಅಮಲ್ದಾರರ ವರ್ಗ

ಮೈಸೂರು ಜಿಲ್ಲೆಯ ಅಮಲ್ದಾರರಾದ ಗುರುಮೂರ್ತಿ ಶಾಸ್ತ್ರಿಯವರನ್ನು ಕೃಷ್ಣರಾಜ ಆಸ್ಪತ್ರೆಗಳ ಮೇಲ್ವಿಚಾರಣಾ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ತಿರುವಾಂಕೂರು ವಕೀಲರಿಗೆ ಸಮಾನುಭೂತಿ

ತಿರುವಾಂಕೂರಿನ ಸೈಕ್ ಜ್ಞಾನವರು ... ವಕೀಲರ ಸಂಘದಲ್ಲಿ ಯಾವ ರಾಜಕೀಯ ಸಭೆಯನ್ನೂ ನಡೆಸಲಾಗದೆಂದು ದಿವಾನರು ಹೊರಡಿಸಿರುವ ಆಜ್ಞೆಯನ್ನೂ, ವಕೀಲರು ಪ್ರತಿಭಟಿಸಿರುವುದನ್ನೂ, ಸಾರ್ವಜನಿಕ ಹಕ್ಕುಬಾಧ್ಯತೆಗಳ ಎತ್ತಿಹಿಡಿಯುವುದನ್ನೂ ಪ್ರಶಂಸಿಸಿ ಅಭಿನಂದನೆಗಳನ್ನು ಕೋರುವ ನಿರ್ಣಯವು ರಾಜಧಾನಿಯ ವಕೀಲರ ಸಂಘದ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಇಂಡೋನೇಷ್ಯನರ ಮುನ್ನೋಟ

ಸರ್ವ ಜಾವಾದಲ್ಲಿ ಡಚ್ಚರು ಅನೇಕ ಪ್ರದೇಶಗಳನ್ನು ರಿಪಬ್ಲಿಕ್ ದಳಗಳಿಂದ ಸ್ವಾಧೀನ ಪಡಿಸಿಕೊಂಡಿವೆ. ನಗರ ಪಟ್ಟಣವು ಡಚ್ಚರ ವಶವಾಗಿದ್ದು ಆ ಪಟ್ಟಣದ ಸುತ್ತಮುತ್ತಲೂ ಭಯಂಕರವಾದ ಕದನ ನಡೆಯುತ್ತಿದೆ. ಇದರ ಗೋಲಿ ರಚ್ಚರು ಅನೇಕ ... ಕಾದಿದ್ದಾರೆ. ... ಟ್ಯಾಂಕ್‌ಗಳನ್ನು ಉಪಯೋಗಿಸಿದ್ದಾರೆ. ಇಂಡೋನೇಷ್ಯನ್ ಪಡೆಗಳು ಡಚ್ಚರಿಂದ ಆಕ್ರಮಿಸಲ್ಪಡುವ ಸ್ಥಳ ಬಿಟ್ಟು ದೂರ ಬೇರೆ ಕಡೆಗೆ ಬಲವಂತವಾಗಿ ಹೋಗುತ್ತಿವೆ.

ದಂಡು ಮೈಸೂರಿಗೆ ಸೇರಿತು

ಸ್ವಾ.ಸು ಫೋನ್] ಬೆಂಗಳೂರು ೨೬

ಬೆಂಗಳೂರು ದಂಡಿನ ಸಿವಿಲ್ ಪ್ರದೇಶಗಳು, ವೈಟ್‌ಫೀಲ್ಡ್ ಎಲ್ಲೆಗಳ ಸಹಿತ ಇಂದಿನಿಂದ ಮೈಸೂರು ದೇಶಕ್ಕೆ ಸೇರಿರುವುದಾಗಿ ಇಂಡಿಯಾ ಸರ್ಕಾರದ ಪ್ರಕಟಣೆ ಹೊರಟಿರುವುದೆಂದು ಇಲ್ಲಿಗೆ ಸುದ್ದಿ ಬಂದಿರುತ್ತದೆ.

ದಂಡಿನಲ್ಲಿ ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್ ೧೫ ನೇ ತಾ॥ ಬೆಂಗಳೂರು ದಂಡಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಅಲ್ಲಿನ ಪೌರಸಭೆಗೆ ರಜಾ ಕೊಡಬೇಕೆಂದೂ ಪೌರಸಭಾ ಭವನದ ಮೇಲೆ ರಾಷ್ಟ್ರೀಯ ಧ್ವಜವನ್ನೂ, ಅಗತ್ಯವಿದ್ದರೆ ಮೈಸೂರು ಧ್ವಜವನ್ನೂ ಹಾರಿಸಬೇಕೆಂದೂ ಅಲ್ಲಿನ ಪೌರಸಭೆಯವರು ನಿರ್ಧರಿಸಿ ವೆಚ್ಚಕ್ಕಾಗಿ ೨೦೦೦ ರೂ ಮಂಜೂರು ಮಾಡಿರುವರು.

ಐರೋಪ್ಯರ ಆಕ್ರಮಣಕ್ಕೆ ನೆಹರೂ ಪ್ರತಿಭಟನೆ

ಯಾವ ಐರೋಪ್ಯ ರಾಷ್ಟ್ರವೇ ಆಗಲಿ ಏಷ್ಯಾಖಂಡದ ರಾಷ್ಟ್ರಗಳ ಮೇಲೆ ತನ್ನ ಶಕ್ತಿಯನ್ನು ಉಪಯೋಗಿಸುವುದನ್ನು ಭಾರತವು ಸಹಿಸಲಾರದು. ಇಂಡೋನೇಷ್ಯನರಿಗೆ ಭಾರತವು ತನ್ನ ಎಲ್ಲ ನೆರವನ್ನೂ ನೀಡುವುದು. ಎಂಬುದಾಗಿ ಪಂ॥ ನೆಹರೂರವರು ತಿಳಿಸಿದ್ದಾರೆ. ಇಂಡೋನೇಷ್ಯದ ಮೇಲೆ ಡಚ್ಚರು ಕೈಗೊಂಡಿರುವ ಆಕ್ರಮಣವನ್ನು ಇತರ ರಾಷ್ಟ್ರಗಳು ಪ್ರತಿಭಟಿಸದಿದ್ದರೆ ಸಂಯುಕ್ತ ರಾಷ್ಟ್ರ ಸಂಸ್ಥೆಯು ಇದ್ದೂ ಇಲ್ಲದಂತಾಗುವುದು ಎಂದೂ ಅವರು ಹೇಳಿರುವರು.

ಯೂನಿಯನ್ ಅಧ್ಯಕ್ಷರ ಅರ್ಹತೆ

ಶಾಸನ ಸಭೆಗಳ ಚುನಾಯಿತ ಸದಸ್ಯರಿಗೆ ಮಾತ್ರ ಯೂನಿಯನ್ ಅಧ್ಯಕ್ಷರನ್ನು ಆರಿಸುವ ಹಕ್ಕಿರಬೇಕು; ಅಧ್ಯಕ್ಷತೆಗೆ ಉಮೇದುವಾರರಾಗುವವರಿಗೆ ೩೫ ವರ್ಷ ವಯಸ್ಸಾಗಿರಬೇಕು; ಅವರ ಅಧಿಕಾರಾವಧಿ ೫ ವರ್ಷ ... ಬಾರಿಗಿಂತ ಹೆಚ್ಚು ಕಾಲ ಅಧ್ಯಕ್ಷರಾಗಿರಲು ಅವಕಾಶವಿರಕೂಡದು; ಅಧ್ಯಕ್ಷರಿಗೆ ಯೂನಿಯನ್ನಿನ ಹೊರಗೂ ಬೇರಾವ ವರಮಾನ ಬರುವ ಸ್ಥಾನವೂ ಇರಕೂಡದು—ಎಂಬುದಾಗಿ ರಾಜ್ಯಾಂಗ ಸಭೆಯು ನಿರ್ಧರಿಸಿದೆ.

ರೈಲ್ವೆ ಸಮಿತಿಯವರ ಸಮಾಲೋಚನೆ

ಸ್ವಾ.ಸು.ಫೋನ್] [ಬೆಂಗಳೂರು ೨೬

ಭಾರತ ರೈಲ್ವೆ ವಿಚಾರಣಾ ಸಮಿತಿಯ ಸದಸ್ಯರು ನಿನ್ನೆ ಹಂಗಾಮಿ ದಿವಾನರಾದ ಡಾ॥ ರಾಯರ್ ಮತ್ತು ಇತರ ಮಂತ್ರಿಗಳೊಡನೆಯೂ, ರೈಲ್ವೆ ಅಧಿಕಾರಿಗಳೊಡನೆಯೂ ಕಲೆತು ಸಮಾಲೋಚನೆ ನಡೆಸಿದರು. ಮೈಸೂರು ರೈಲ್ವೆಗಳ ಸ್ಥಿತಿಯು ಸಾಮಾನ್ಯವಾಗಿ ಚೆನ್ನಾಗಿರುವುದೆಂದೂ, ಅವುಗಳನ್ನು ಉತ್ತಮಪಡಿಸುವ ಬಗ್ಗೆ ವಿವರವಾದ ಸಲಹೆಗಳನ್ನು ಕೊಡುವುದಾಗಿ ಅವರು ತಿಳಿಸಿದರೆಂದೂ ಗೊತ್ತಾಗಿದೆ. ರೈಲ್ವೆ ಕೆಲಸಗಾರರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದು ಅವರು ಒತ್ತಿ ಹೇಳಿದುದಾಗಿಯೂ ತಿಳಿದು ಬಂದಿದೆ.

ಮೈಸೂರು ರೈಲ್ವೆ ಕೆಲಸಗಾರರನ್ನುದ್ದೇಶಿಸಿ ನಿಯೋಗದ ಸದಸ್ಯರಾದ ಮಿ॥ ಯಮುನಾದಾಸ್ ಮೆಹ್ತಾರವರು ನಿನ್ನೆ ಮಾತನಾಡಿ ಕೆಲಸಗಾರರ ಹಿತಸಾಧನೆಗಾಗಿ ತಾವು ಕೆಲವು ಸಲಹೆಗಳನ್ನು ಮಾಡುವುದಾಗಿ ತಿಳಿಸಿದರು. ಜೀವನಾಧಾರಕ್ಕೆ ಅಗತ್ಯವಾದ ವೇತನಕ್ಕಾಗಿ ಒತ್ತಾಯಪಡಿಸುವುದು ಕೆಲಸಗಾರರ ಹಕ್ಕೆಂದೂ, ಅದರಂತೆಯೇ ಅವರು ಸಾರ್ವಜನಿಕರ ಸೌಕರ್ಯಕ್ಕಾಗಿ ಶಾಂತಿಯಿಂದಲೂ, ಜವಾಬ್ದಾರಿಯಿಂದಲೂ ಕೆಲಸ ಮಾಡಬೇಕೆಂದೂ ಹೇಳಿದರು. ನಿನ್ನೆ ರಾತ್ರಿ ೭-೪೫ ಗಂಟೆಗೆ ನಿಯೋಗದವರು ಸ್ಪೆಷಲ್ ರೈಲಿನಲ್ಲಿ ವಿಶಾಖಪಟ್ಟಣಕ್ಕೆ ತೆರಳಿದರು.

ರಾಜ್ಯಾಂಗ ಸಭೆಗೆ ಕೊಲ್ಲಾಪುರ

ಕೊಲ್ಲಾಪುರ ಸಂಸ್ಥಾನವು ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿರುವುದೆಂದು ವರದಿಯಾಗಿದೆ. ಅಲ್ಲಿನ ದರ್ಬಾರ್ ಪ್ರತಿನಿಧಿಗಳು ಸರ್ದಾರ್ ಪಟೇಲರೊಡನೆ ನಡೆಸಿದ ಮಾತುಕತೆಗಳ ಪರಿಣಾಮವಾಗಿ ಈ ನಿರ್ಧಾರವಾಗಿದೆಯೆಂದು ಹೇಳಲಾಗಿದೆ.

ರಾಜರುಗಳಿಗೆ ವೈಸರಾಯರ ಸೂಚನೆ

ಸಂಸ್ಥಾನಗಳು ಡೊಮಿನಿಯನ್ ಸರ್ಕಾರದಿಂದ ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದೂ ಡೊಮಿನಿಯನ್ ರಾಜ್ಯಾಂಗಗಳಲ್ಲಿ ಸೇರಬೇಕೆಂದೂ, ಇತರ ಸಂಸ್ಥಾನಗಳೊಡನೆ ಕೇಂದ್ರಕ್ಕೆ ಐಕಮತ್ಯವಿಲ್ಲದಿದ್ದರೆ ಅದರಿಂದ ಸಂಸ್ಥಾನಗಳಿಗೆ ಅಪಾಯವುಂಟೆಂದೂ ನಿನ್ನೆ ವೈಸರಾಯರು ನರೇಂದ್ರ ಸಭೆಯಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಸರ್ ಸಿ. ಪಿ. ಯವರ ಮೇಲೆ ಖಡ್ಗ ಪ್ರಯೋಗ

ನಿನ್ನೆ ಸಂಜೆ ತಿರುವಾಂಕೂರಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಮೇಲೆ ಕೊಲೆ ಪ್ರಯತ್ನ ನಡೆಯಿತೆಂದು ವರದಿಯಾಗಿದೆ. ದಾರಿಯಲ್ಲಿ ನಿಲ್ಲಿಸಲ್ಪಟ್ಟಿದ್ದ ತಮ್ಮ ಕಾರನ್ನು ಅವರು ಹತ್ತುವಾಗ ಜನಸಂದಣಿಯಿಂದ ಒಬ್ಬನು ಕತ್ತಿಯಿಂದ ಹೊಡೆದನೆಂದೂ ಮೊದಲನೆಯ ಬಾರಿ ದಿವಾನರ ಅಂಗರಕ್ಷಕ ಏಟನ್ನು ತಡೆದುದಾಗಿಯೂ ಆದರೆ ಕೊಲೆಪಾತಕನು ಅವರನ್ನು ತಳ್ಳಿ ಒಂದಾದ ಮೇಲೊಂದರಂತೆ ನಾಲ್ಕು ಬಾರಿ ಸರ್ ಸಿ ಪಿ ಯವರನ್ನು ಹೊಡೆದು ಪರಾರಿಯಾದನೆಂದು ಹೇಳಲಾಗಿದೆ. ಕೂಡಲೇ ದಿವಾನರನ್ನು ಆಸ್ಪತ್ರೆಗೆ ಸಾಗಿಸಲಾಯಿತು ಅವರು ಗುಣಮುಖರಾಗುತ್ತಿದ್ದಾರೆ.

೧೨ ಕುದುರೆಗಳ ರಥದಲ್ಲಿ ಜಿನ್ನಾ ಮೆರವಣಿಗೆ

ಪಾಕಿಸ್ತಾನದ ಗವರ್ನರ್ ಜನರಲ್ಲಾದ ಮಿ॥ ಜಿನ್ನಾರವರನ್ನು ೧೨ ಕುದುರೆಗಳ ರಥದಲ್ಲಿ ಆಗಸ್ಟ್ ೧೫ ರಲ್ಲಿ ಮೆರವಣಿಗೆ ಮಾಡಲು ಸಿಂಧು ಪ್ರಾಂತ ಮುಸ್ಲಿಂ ಲೀಗಿನವರು ನಿರ್ಧರಿಸಿರುವರೆಂದು ವರದಿಯಾಗಿದೆ. ನೂತನವಾಗಿ ರಚಿತವಾಗಿರುವ ಪಾಕಿಸ್ತಾನ ಪಡೆಗಳು ತಾವು ಅವರಿಗೆ ಗೌರವ ವಂದನೆಯನ್ನು ಸಲ್ಲಿಸುತ್ತವೆ.

ಪೌರಸಭೆಯಿಂದ ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೨೬

ರಾಜಧಾನಿಯ ಪೌರಸಭೆಯಿಂದ ಉಚಿತ ರೀತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಲು ಏರ್ಪಾಡು ಮಾಡುವುದಕ್ಕಾಗಿ ಪೌರಸಭೆಯ ವಿಶೇಷ ಅಧಿವೇಶನವೊಂದನ್ನು ಕರೆಯುವ ಕೆಲವು ಜನ ಸದಸ್ಯರು ಅಧ್ಯಕ್ಷರಿಗೆ ಪತ್ರವನ್ನು ಬರೆದಿರುವರು.

ಕತ್ತಿ ಕಡಿತ ಕೊಲೆ

... ಜಿಲ್ಲೆಯ ಗುಂಗುರವ ... ೨೦ ವರ್ಷ ವಯಸ್ಸಿನ ... ಎಂಬುವನು ೬೦ ವರ್ಷ ವಯಸ್ಸಿನ ತನ್ನ ಚಿಕ್ಕಮ್ಮನಾದ ... ಎಂಬಾಕೆಯೊಡನೆ ಅಕ್ರಮ ಸಂಗ ಮಾಡಿದುದರಿಂದ ಆಕೆ ಗರ್ಭಿಣಿಯಾಗಿ ಊರಿನಲ್ಲಿರಲಾಗುವ ... ದ ಮನೆ ಬಿಟ್ಟು ... ಹೋಟು ... ಚೆನ್ನರಾಯಪಟ್ಟಣದ ತಾಲ್ಲೂಕು ... ಹಾಗೂ ... ಜಗಳವಾಡಿದುದರಿಂದ ... ಅವಳ ಕತ್ತನ್ನು ಕಡಿದು ಕೊಲೆ ಮಾಡಿದನೆಂದು ಪೊಲೀಸರಿಂದ ... ಸೆಷನ್ಸ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು. ... ಮೊಕದ್ದಮೆಯು ... ಡೆ ... ಸೆಷನ್ಸ್ ನ್ಯಾಯಾಧೀಶರಾದ ಶ್ರೀ ... ರವರು ಅಪರಾಧಿಗೆ ೭ ವರ್ಷ ಕಠಿಣ ಸಜಾ ವಿಧಿಸಿರುವರು.

ಪ್ರತಿಬಂಧಕಾಜ್ಞೆ ರದ್ದಾಗಬೇಕು

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂ ... ರವರು ... ಹೇಳಿಕೆಯಲ್ಲಿ ಆಗಸ್ಟ್ ೧೫ ... ದಿನವೆಂದೂ, ಅಂದು ಸ್ವಾತಂತ್ರ್ಯ ದಿನವನ್ನು ಎಲ್ಲರೂ ನಾಡಹಬ್ಬವಾಗಿ ಆಚರಿಸಬೇಕೆಂದೂ, ಸಂಸ್ಥಾನದ ... ಭಾಗಗಳಲ್ಲಿರುವ ಪ್ರತಿಬಂಧಕಾಜ್ಞೆಗಳನ್ನು ಸರ್ಕಾರದವರು ರದ್ದುಮಾಡಿ ... ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದೂ ಕೇಳಿರುವರು.

ಸಾಧ್ವಿ

ತಾ|| ೨೬-೭-೪೭ ಶನಿವಾರ

ನಾಮಕರಣ ಸದಸ್ಯರಿಗೆ ಚುನಾವಣಾಧಿಕಾರವಿಲ್ಲ

ಸಂಯುಕ್ತ ಭಾರತದ ಅಧ್ಯಕ್ಷರನ್ನು ಆರಿಸುವಾಗ ಶಾಸನ ಸಭೆಗಳ ಚುನಾಯಿತ ಸದಸ್ಯರುಗಳಿಗೆ ಮಾತ್ರ ಅವಕಾಶವಿರಬೇಕೇ ವಿನಾ ನಾಮಕರಣದವರಿಗೆ ಇರಬಾರದೆಂಬ ಸಲಹೆಯನ್ನು ರಾಜ್ಯಾಂಗ ಸಭೆಯು ಅಂಗೀಕರಿಸಿರುತ್ತದೆ. ಈ ಬಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ತಂದಿದ್ದ ತಿದ್ದುಪಡಿಗೆ ಅಂಗೀಕಾರವು ದೊರೆತಿರುತ್ತದೆ. ರಾಜ್ಯಾಂಗ ಸಭೆಯಲ್ಲಿ ಮೈಸೂರಿನವರೂ ತಮ್ಮ ಪ್ರಭಾವವನ್ನು ಬೀರುತ್ತಿರುವುದು ಇದರಿಂದ ವೇದ್ಯವಾಗುತ್ತದೆ.

ಶ್ರೀ ರೆಡ್ಡಿಯವರು ಇದರಿಂದ ಇಡೀ ಸಂಸ್ಥಾನಗಳಿಗೆಲ್ಲಾ ಮಹತ್ತರವಾದ ಉಪಕಾರವನ್ನು ಮಾಡಿದಂತಾಗಿದೆ. ಬ್ರಿಟಿಷ್ ಹಿಂದೂಸ್ಥಾನದ ಪ್ರಾಂತಗಳಿಂದ ರಾಜ್ಯಾಂಗ ಸಭೆಗೆ ಬಂದಿರುವವರೆಲ್ಲರೂ ಚುನಾವಣೆಯ ಮೂಲಕವೇ ಬಂದಿರುತ್ತಾರೆ. ಅಲ್ಲಿ ನಾಮಕರಣದ ಸದಸ್ಯರ ಪ್ರಶ್ನೆಯೇ ಇರುವುದಿಲ್ಲ. ಆದುದರಿಂದ ಅಲ್ಲಿನ ಸದಸ್ಯರ ಗಮನಕ್ಕೆ ಈ ವಿಚಾರವು ಬರಲು ಕಾರಣವಿರುವುದಿಲ್ಲ. ಆದರೆ ಸಂಸ್ಥಾನದ ಪ್ರತಿನಿಧಿಗಳೆಲ್ಲರೂ ಚುನಾವಣೆಯಿಂದ ಬಂದವರಲ್ಲ. ಅನೇಕರು ನಾಮಕರಣದ ಮೂಲಕ ಹೋಗಿರುವರು. ನಮ್ಮ ಸಂಸ್ಥಾನದಿಂದ ದಿವಾನರೇ ಆದಿಯಾಗಿ ಮೂರು ಜನರು ನಾಮಕರಣದಿಂದ ಹೋಗಿರುವರು. ಇವರುಗಳು ಪ್ರಜೆಗಳ ಪ್ರತಿನಿಧಿಗಳೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಅಧ್ಯಕ್ಷರ ಚುನಾವಣೆಯಲ್ಲಿ ಅಂತಹವರುಗಳಿಗೆ ಅವಕಾಶವೀಯುವುದೂ ಉಚಿತವಲ್ಲ. ಇದಕ್ಕಾಗಿ ಅವರುಗಳು ಅಸಮಾಧಾನಪಡಬೇಕಾದ ಕಾರಣವೂ ಇರುವುದಿಲ್ಲ.

ನಮ್ಮ ಮೈಸೂರು ಸರಕಾರದವರೂ ಸಹ ಇದೇ ರೀತಿಯನ್ನೇ ಇಲ್ಲಿಯೂ ಅನುಸರಿಸಿರುತ್ತಾರೆ. ಇಲ್ಲಿನ ಶಾಸನ ಸಭೆಗಳಿಂದ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಆರಿಸುವಾಗಲೂ ನಾಮಕರಣದ ಸದಸ್ಯರುಗಳು ಓಟು ಕೊಡಲು ಅವಕಾಶ ಕಲ್ಪಿಸಿರಲಿಲ್ಲ. ಈ ವಿಷಯದಲ್ಲಿ ದಿವಾನರು ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿ ನಾಮಕರಣದ ಸದಸ್ಯರುಗಳಿಗೆ ಸಮಾಧಾನವನ್ನು ಸಲ್ಲಿಸಿರುವರಾದರೂ ಈ ಮೊದಲೇ ಅಂಗೀಕರಿಸಲ್ಪಟ್ಟಿರುವ ತತ್ವಕ್ಕೆ ಕಟ್ಟುಬಿದ್ದಿರುವುದಾಗಿ ಹೇಳಿರುತ್ತಾರೆ. ಇದೇ ತತ್ವವನ್ನೇ ಇಂದು ಶ್ರೀ ಚೆಂಗಲರಾಯ ರೆಡ್ಡಿಯವರು ಮುಂದುವರಿಸಿರುತ್ತಾರೆ.

ಸಾಮಾನ್ಯವಾಗಿ ನಾಮಕರಣದ ಪದ್ಧತಿಗಳೆಲ್ಲವೂ ಈಗ ನಾಮಾವಶೇಷವಾಗುತ್ತಿವೆ. ಆದರೆ ಸಂಸ್ಥಾನಗಳಲ್ಲಿ ಮಾತ್ರ ಇವುಗಳ ಸೋಂಕು ಇನ್ನೂ ಅಂಟಿಕೊಂಡಿರುತ್ತದೆ. ಆದುದರಿಂದಲೇ ಮೇಲ್ಕಂಡ ಬಗೆಯ ಪ್ರತಿಬಂಧಕಗಳನ್ನು ಹಾಕುವುದು ಅಗತ್ಯವಾಗಿರುತ್ತದೆ. ಸಾರ್ವಜನಿಕ ಸಂಸ್ಥೆಗಳ ಅಧ್ಯಕ್ಷಸ್ಥಾನಕ್ಕೆ ನಡೆಯುವ ಚುನಾವಣೆಗಳಲ್ಲಿ ನಾಮಕರಣದ ಸದಸ್ಯರುಗಳು ಭಾಗವಹಿಸದಂತೆ ಮಾಡುವುದು ಪ್ರಜಾಪ್ರಭುತ್ವ ಪದ್ಧತಿಯ ಮುಖ್ಯ ಲಕ್ಷಣ

೭೦ ಮೂಟೆ ಜೋಳದ ಪತ್ತೆ

ಸ್ವಂ ಸು } ಚಾಮರಾಜನಗರ ೨೩

ರಹದಾರಿಯಿಲ್ಲದೆ ಬರುತ್ತಿದ್ದ ೧೩ ಗಾಡಿಗಳನ್ನು ಶೋಧಿಸಿ ಅವುಗಳಲ್ಲಿದ್ದ ೭೦ ಮೂಟೆ ಜೋಳವನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ. ಮುಂದಿನ ಕ್ರಮ ನಡೆಯುತ್ತಿದೆ.

ಭಾಷಾ ಕಾಗದ ಇಲ್ಲ

ಇಲ್ಲಿ ಸುಮಾರು ೧೫ ಜನ ವೆಂಡರುಗಳಿದ್ದರೂ ಸಹ ಭಾಷಾ ಕಾಗದ ಈಗ್ಗೆ ಕೆಲವು ದಿನಗಳಿಂದ ದೊರೆಯದೆ ತುಂಬಾ ತೊಂದರೆಯಾಗಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನಕೊಡಬೇಕಾಗಿದೆ.

ಅಗಸರ ಮುಷ್ಕರ

ಸಿಕಂದರಾಬಾದಿನ ಅಗಸರು ಸದ್ಯದಲ್ಲೇ ಮುಷ್ಕರ ಹೂಡುವುದಾಗಿ ನಿರ್ಧರಿಸಿರುವರು. ಸರ್ಕಾರದಿಂದ ನಿಗದಿಯಾದ ದರದಲ್ಲಿ ಸೋಡಾ ಪುಡಿ ದೊರೆಯದಿರುವುದೇ ಇದಕ್ಕೆ ಕಾರಣ.

ಸಂಸ್ಥಾನಾಧೀಶರ ಬೇಡಿಕೆ ತೀರ್ಮಾನಿಸಲು ಸಮಿತಿ

ಹಲವು ಸಂಸ್ಥಾನಾಧೀಶರುಗಳು ಬ್ರಿಟಿಶರಿಗೆ ವಿಶೇಷ ಕಾರಣಗಳಿಗಾಗಿ ಕೊಟ್ಟಿದ್ದ ಪ್ರದೇಶಗಳು ಅವರ ಅಧಿಕಾರದ ಅಂತ್ಯವಾದ ನಂತರ ತಮಗೇ ವಾಪಸು ಬರಬೇಕೆಂದು ಹೇಳುತ್ತಿದ್ದಾರೆ. ಇದನ್ನು ಪರಿಶೀಲಿಸಲು ಬ್ರಿ|| ಸರ್ಕಾರವು ಒಂದು ವಿಶೇಷ ಸಮಿತಿಯನ್ನು ಏರ್ಪಡಿಸುವುದೆಂದು ಗೊತ್ತಾಗಿದೆ.

Wood Lands

Morning shows for 4 days from 25.7-47

RENFREW OF THE ROYAL MOUNTED & Killers of the Sea

Starring :—James Newill, Caral Hughs

ಸತ್ಕಾರ ಸಮಾರಂಭ

ಚಾಮರಾಜನಗರದ ತಾಲ್ಲೂಕು ಮ… ಯೂರು ಗ್ರಾಮದ ಗದ್ದುಗೆ ಶ್ರೀ ನ… ಕೇಶ್ವರ ಮಠದ ಶ್ರೀ ಬಸವಾರಾಧ್ಯ ಸ್ವಾಮಿಗಳಿಗೆ ಶ್ರೀಮನ್ಮಹಾರಾಜರವರು ಭೇಟಿ… ಯಪಾಲಿಸಿದುದಕ್ಕಾಗಿ ತಮ್ಮ ಸಂತೋ… ವನ್ನು ವ್ಯಕ್ತಪಡಿಸಲು ಸುತ್ತಮುತ್ತಿನ ಗ್ರಾಮಸ್ಥರು ಕಳೆದ ಶನಿವಾರ ಒಂದು ಸ… ರ ಕೂಟವನ್ನೇರ್ಪಡಿಸಿ ಶ್ರೀ ಸ್ವಾಮಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು

FOR SALE

No 2925, V Main Road, Vontikoppal. Vacant. possession given

Enquire:—R Gundu Rao, Bank Buildings, Mysore.

ಅಪೇರಾ ಟಾಕೀಸ್, ಮೈಸೂರು

ನಾಳೆ ೧೦೦ನೇ ದಿನ

ರಾಜಕುಮಾರಿ

ಶ್ರೀ

ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ. ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦-೩೦ ಗಂಟೆಗೆ

ನಾಳೆ ಸಂಜೆ ೬-೩೦ ಕ್ಕೆ ಮ್ಯಾಟಿನಿ

★ ಕಾಲೇಜ್ ಗರ್ಲ್ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್

Office of the President,
District Board, Mysore
Dated 22-7-1947

ನೋಟಿಫಿಕೇಷನ್

೧೯೪೭ ನೇ ಆಗಸ್ಟ್ ೭ ನೇ ತಾರೀಖು ಗುರುವಾರ ಮಧ್ಯಾಹ್ನ ೪ ಗಂಟೆ ವರೆವಿಗೆ ಈ ಮುಂದೆ ನಮೂದು ಮಾಡಿರತಕ್ಕ ಕೆಲಸಗಳಿಗಾಗಿ ಸೀಲು ಮಾಡಿರತಕ್ಕ ಟೆಂಡರುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತದೆ.

೧. ಪಿರಿಯಾಪಟ್ಟಣದ ತಾಲ್ಲೂಕು ಹಲಗನಹಳ್ಳಿ, ಸಂತೆ ಮೈದಾನದಲ್ಲಿ ಒಂದು ಬಾವಿಯನ್ನು ತೋಡುವುದು

೨. ಕಟ್ಟೆಮಳಲವಾಡಿ, ರಾಮಂದೂರು, ಅತ್ತಿಗೋಡು ರಸ್ತೆಯಲ್ಲಿ ೨ ಕಣ್ಣಿನ ಒಂದು ಮೋರಿಯನ್ನು ಕಟ್ಟಿಸುವುದು.

೩. ಪಿರಿಯಾಪಟ್ಟಣದ ತಾಲ್ಲೂಕು ಬಸಲಾಪುರದಿಂದ ಬನೀನಹಳ್ಳಿಗೆ ಹೋಗತಕ್ಕ ರಸ್ತೆಯನ್ನು ರಿಪೇರಿ ಮಾಡುವುದು

ಟೆಂಡರನ್ನು ಸೀಲು ಮಾಡಿರತಕ್ಕ ಲಕೋಟೆಯ ಮೇಲುಗಡೆಯಲ್ಲಿ ಮೇಲೆ ನಮೂದು ಮಾಡಿರತಕ್ಕ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಎಂದು ಅಡ್ರೆಸ್ಸು ಬರೆದು ಕಳುಹಿಸತಕ್ಕದ್ದು.

ಲೇವಡಿಗಾಗಿ ಮೇಲ್ಕಂಡ ಕೆಲಸಗಳಿಗಾಗಿ ಪ್ರತಿಯೊಂದು ಕೆಲಸಕ್ಕೂ ೫೦ ರೂಪಾಯಿಗಳನ್ನು ಖಜಾನೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಡೂಪ್ಲಿಕೇಟು ಚಲನ್ನನ್ನು ಟೆಂಡರು ಜೊತೆಯಲ್ಲಿ ಹಾಜರ್ಪಡಿಸಬೇಕು, ಮತ್ತು ಪ್ರತಿಯೊಂದು ಕೆಲಸಕ್ಕೂ ಬೇರೆ ಬೇರೆ ಟೆಂಡರು ಕೊಡಬೇಕು

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಆಫೀಸು ದಿನಗಳಲ್ಲಿ ಮಧ್ಯಾಹ್ನ ೧೨ ರಿಂದ ಸಾಯಂಕಾಲ ೫ ಗಂಟೆಯವರೆಗೆ ಇಷ್ಟಪಟ್ಟ ಕಂಟ್ರಾಕ್ಟರುಗಳು ತಿಳಿಯಬಹುದು.

ಯಾವ ಟೆಂಡರನ್ನೂ [illegible] ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಅಧಿಕಾರಕ್ಕೆ ಒಳಪಟ್ಟಿರುತ್ತೆ. ಮತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರುಗಳಿಗೆ ಕಾರಣವನ್ನೂ ಸಹ ಸೂಚಿಸಲಾಗುವುದಿಲ್ಲ

ಹೆಚ್. ಎಂ. ಚೆನ್ನಬಸಪ್ಪ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್

ವುಡ್‌ಲ್ಯಾಂಡ್ಸ್

26-7-47 ರಿಂದ

ಕಿಕ್ಕಿರಿದ ೧೩ ನೇ ವಾರ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

(ತಮಿ

-: ಪಾತ್ರ :-

ಟಿ ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರನ್ ಮುಂತಾದವರು.

ರಾಜಕಮಲ್

ತಾ|| 25-7-47 ರಿಂದ

ಅಮೋಘ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್

—: ಭೂಮಿಕೆ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

Morning Shows from 26-7-47 for 4 days, daily at 10-30 a m.

'MEXICANA

With Tito Guizar, Constance Moore, Leo Carillo

(First time to be shown in Mysore)

Edited, printed and published A. R. Nagarajan at the Sadhvi Pr D. Subbaiah Road Mysore

ಫೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ವಿಶ್ವ

ಸಂಪುಟ ೧೨] ಭಾನುವಾರ ೨೭—೭—೪೭ [ಸಂಚಿಕೆ ೨

ಪಾಕಿಸ್ಥಾನಕ್ಕೆ ಪ್ರತ್ಯೇಕ ರಾಜ್ಯಾಂಗ ರಚನಾ ಸಭೆ

ತಿರುವಾಂಕೂರಿನಲ್ಲಿ ಕಾಲೇಜುಗಳ ಬಂದು

...ಲೈ ೧೧ನೇ ತಾ|| ಸೋಮವಾರ ...ಜಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದ ಪರಿಣಾಮವಾಗಿ ಅನಿರ್ದಿಷ್ಟ ಕಾಲದವರೆಗೆ ತಿರುವಾಂಕೂರಿನ ಎಲ್ಲ ಕಾಲೇಜುಗಳನ್ನೂ ಮುಚ್ಚಿರುವುದಾಗಿ ಕಾಲೇಜು ಅಧಿಕಾರದಿಂದ ಆಜ್ಞೆಯಾಗಿದೆ. ವಿದ್ಯಾರ್ಥಿಗಳು ಗಲಭೆಗಳಲ್ಲಿಯೂ ಭಾಗವಹಿಸುತ್ತಿರುವ ಹೆದರಿಕೆಯಿರುವುದರಿಂದಲೂ, ಪ್ರದರ್ಶನಕಾರರನ್ನು ಪೋಲೀಸರು ಚದರಿಸುವಾಗ ಅನೇಕ ವೇಳೆ ವಿದ್ಯಾರ್ಥಿಗಳಿಗೆ ಗಾಯಗಳಾಗುವುದನ್ನು ನಿವಾರಿಸುವ ಸಲುವಾಗಿಯೂ ಈ ರೀತಿ ಮಾಡಲಾಗಿದೆಯೆಂದು ಹೇಳಲಾಗಿದೆ. ಕಾನೂನು ಭಂಗ ಮಾಡುವ ವಿದ್ಯಾರ್ಥಿಗಳಿಗೆ ರಕ್ಷಣೆ ದೊರೆಯಲಾರದೆಂದೂ ಸೂಚಿಸಲಾಗಿದೆ.

ಜಿಲ್ಲಾ ಬೋರ್ಡಿನ ಉಪಾಧ್ಯಕ್ಷತೆ

ಟಿ. ನರಸೀಪುರದ ತಾಲ್ಲೂಕಿನಿಂದ ಜಿಲ್ಲಾ ಬೋರ್ಡಿಗೆ ಸದಸ್ಯರಾಗಿರುವ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಟಿ. ಪಿ. ಬೋರಯ್ಯನವರನ್ನು ಉಪಾಧ್ಯಕ್ಷರನ್ನಾಗಿ ಆರಿಸಬೇಕೆಂದು ಸೂಚಿಸಿ ಕ.ದೇರಿನ ಶ್ರೀ ಕೆ. ಎಂ. ಕುಮಾರಸ್ವಾಮಿಯವರು ಒಂದು ...ವನ್ನು ಬರೆದಿರುವರು.

ಹೈದರಾಬಾದಿನಲ್ಲಿ ಹಳ್ಳಿಗಳಿಗೂ ರೇಡಿಯೋ

ಸಾವಿರ ಮತ್ತು ಅಧಿಕ ಪ್ರಜಾ ಸಂಖ್ಯೆಯಿರುವ ತನ್ನ ಸಂಸ್ಥಾನದ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ರೇಡಿಯೋ ಕೇಂದ್ರವನ್ನು ಸ್ಥಾಪಿಸಲು ಹೈದರಾಬಾದ್ ಸರ್ಕಾರವು ನಿರ್ಧರಿಸಿದೆ. ಮೊದಲು ೫ ವರ್ಷಗಳಲ್ಲಿ ೩೦|| ಲಕ್ಷ ರೂ. ವೆಚ್ಚದಲ್ಲಿ ಇಂತಹ ೨,೦೦೦ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮೊನ್ನೆ ಸಭೆ ಸೇರಿ ಆಗಸ್ಟ್ ೧೫ಕ್ಕೆ ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕೆಂದು ತೀರ್ಮಾನಿಸಿ ಮತ್ತು ಶ್ರೀಗಳಾದ ಕೆ. ಎಸ್. ಪುಟ್ಟಣ್ಣ ಮತ್ತು ಜಿ. ಬಸಪ್ಪ ಇವರುಗಳು ಚಾಲಕರುಗಳಾಗಿ ನೇಮಿಸಲ್ಪಟ್ಟಿರುವ ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳು ಸಹಕರಿಸಬೇಕೆಂದು ಕೋರಲಾಗಿದೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯ

...ನೇಲ್ಲಿಂದ ವಿದ್ಯಾರ್ಥಿ ನಿಲಯಕ್ಕೆ ಹೆಗ್ಗಡದೇವನಕೋಟೆ, ನಂಜನಗೂಡು, ಕೃಷ್ಣರಾಜನಗರ ತಾಲ್ಲೂಕುಗಳಿಂದ ಭಿಕ್ಷ, ...ರಾಗಿಗಳನ್ನು ತರುವ ಸಲುವಾಗಿ ಜುಲೈ ...ನೇ ತಾ|| ಜಿಲ್ಲಾಧಿಕಾರಿಗಳು ಕೊಟ್ಟಿದ್ದ ಪರ್ಮಿಟ್ಟು ಕಳೆದುಹೋಗಿದೆಯೆ. ದೂ. ಅದು ಯಾರಿಗಾದರೂ ದೊರಕಿದರೆ ಸಾರ್ವಜನಿಕ ವಿದ್ಯಾರ್ಥಿ ನಿಲಯ ಕಛೇರಿಗೆ ತಲುಪಿಸಬೇಕೆಂದೂ ಶ್ರೀ ... ಎಸ್. ಸುಬ್ಬಣ್ಣನವರು ಕೋರಿರುವರು.

ಪ್ರಭಾತ ಟಾಕೀಸ್, ಮೈಸೂರು

ಇಂದಿನ ೧೧೦ನೇ ದಿನ

ರಾಜಕುಮಾರಿ

ಮಿರ್ಜಾರವರಿಂದ ನೆಹರೂ ಬಗ್ಗೆ ಲೇಖನ

ಪಂಡಿತ ನೆಹರೂರವರ ೬೦ ನೆಯ ಜನ್ಮ ದಿನೋತ್ಸವದ ವೇಳೆಗೆ ವಿಶ್ವದ ಮಹಾ ಲೇಖಕರಿಂದ ನೆಹರೂರವರ ಬಗ್ಗೆ ರಚಿತವಾಗಿರುವ ಲೇಖನಗಳ ಸಂಗ್ರಹವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ಕಲ್ಕತ್ತೆಯ ಪ್ರಕಾಶಕರು ಸಿದ್ಧಗೊಳಿಸಿರುವರೆಂದೂ, ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲರೂ ಸಹ ಇಂತಹ ಪ್ರಮುಖ ಲೇಖಕರಲ್ಲಿ ಒಬ್ಬರಾಗಿರುವರೆಂದೂ ವರದಿಯಾಗಿದೆ.

ಬಟ್ಟೆ ಹತೋಟಿ ರದ್ದಾಗುವುದಿಲ್ಲ

ಇನ್ನೂ ಅನಿರ್ದಿಷ್ಟ ಕಾಲದವರೆಗೆ ಬಟ್ಟೆ ಹತೋಟಿಯನ್ನು ರದ್ದು ಮಾಡಲಾಗುವುದಿಲ್ಲವೆಂದೂ ಈಗಿರುವ ಹತೋಟಿಯ ವ್ಯವಸ್ಥೆಯನ್ನು ಮಾತ್ರ ಸುಧಾರಿಸಲಾಗುವುದೆಂದೂ ಭಾರತ ಸರ್ಕಾರವು ಪ್ರಕಟಿಸಿರುವುದಾಗಿ ವರದಿಯಾಗಿದೆ.

ತಿರುವಾಂಕೂರಿನ ನೀತಿಯಲ್ಲಿ ಬದಲಾವಣೆ ಇಲ್ಲ

ತಿರುವಾಂಕೂರು ಸಂಸ್ಥಾನವು ಸ್ವತಂತ್ರವಾಗುವ ತನ್ನ ಘೋಷಣೆಯನ್ನು ಬದಲಾಯಿಸಿ ಅದು ಭಾರತ ಯೂನಿಯನ್ನಿನೊಡನೆ ಸೇರಬೇಕೆಂಬುದಾಗಿ ಅಲ್ಲಿನ ದಿವಾನರಿಗೆ ವೈಸರಾಯರು ಸೂಚಿಸಿದರೆಂದೂ ತಿರುವಾಂಕೂರು ಸ್ವತಂತ್ರವಾಗುವುದೆಂದು ಒಂದಾಗ ಘೋಷಿಸಿರುವುದನ್ನು ಮತ್ತೆ ಬದಲಾಯಿಸಲಾಗುವುದಿಲ್ಲವೆಂದು ಅವರು ಹೇಳಿದರೆಂದಾಗಿಯೂ ವರದಿಯಾಗಿದೆ.

ಬರ್ಮಾ ದುರಂತದಲ್ಲಿ ಯೂ ಸಾರವರ ಪಾತ್ರವೇ?

ಬರ್ಮಾ ತಾತ್ಕಾಲಿಕ ಸರ್ಕಾರದ ಸಚಿವರ ಕೊಲೆಯಲ್ಲಿಯೂ ಸಾರವರು ನೇರವಾಗಿ ಭಾಗವಹಿಸಿದ್ದರೆಂದು ವರದಿಯಾಗಿದೆ. ಶಾಸನಸಭೆಯ ಕೋರ್ಟಿನಲ್ಲಿ ಘಟನೆಯ ನಂತರ ಅಲ್ಲಿನ ವಿದ್ಯಮಾನಗಳನ್ನು ವರದಿಮಾಡಬೇಕೆಂದು ಅವರು ತಮ್ಮ ಬಂಧುವೊಬ್ಬರಿಗೆ ಹೇಳಿದ್ದರೆಂದೂ, ಗುಂಡು ಹಾರಿಸಿದ ನಂತರ ದೌರ್ಜನ್ಯಕಾರರು ಬಂದು ವರದಿ ಒಪ್ಪಿಸಿದರೆಂದೂ, ಯೂ ಸಾರವರು ಅವರು ಉಳಿಯೋಗಿಸಿದ ಬಂದೂಕುಗಳನ್ನು ಕೂಡ ಬಚ್ಚಿಟ್ಟ ದಾಗಿಯೂ ಗಳಗಿಂದರಾಗಿನ ಅವರ ಬಂಧುವೊಬ್ಬರು ...ಸಿರುವರು.

ಇಂಡೋನೇಷ್ಯದ ಎಲ್ಲ ಪ್ರಜೆಗಳಿಗೂ ಶಸ್ತ್ರಾಸ್ತ್ರಗಳು

ಇಂಡೋನೇಷ್ಯಾ ರಿಪಬ್ಲಿಕ್ಕಿನ ಪ್ರತಿಯೊಬ್ಬ ಪ್ರಜೆಗೂ ಶಸ್ತ್ರಾಸ್ತ್ರಗಳನ್ನು ಹಂಚಬೇಕಾಗಿದೆಯೆಂದೂ, ರಿಪಬ್ಲಿಕ್ಕು ಉಳಿಯಬೇಕಾದರೆ ಶಸ್ತ್ರ ಪ್ರಯೋಗವನ್ನು ಕಲಿತು ಸಮಸ್ತ ಪ್ರಜೆಗಳೂ ಒಮ್ಮೆಯೇ ಡಚ್ಚರ ಮೇಲೆ ಆಕ್ರಮಣ ಮಾಡಬೇಕೆಂದೂ ಇಂಡೋನೇಷ್ಯಾ ಮಂತ್ರಿ ಮಂಡಲವು ನಿರ್ಧರಿಸಿರುತ್ತದೆ.

ಒಬ್ಬ ರಿಪಬ್ಲಿಕನನಿಂದ ೧೦ ಡಚ್ಚರ ಸಾವು

ಇಂಡೋನೇಷ್ಯಾ ರಿಪಬ್ಲಿಕನ್ನರು ಅತ್ಯುತ್ತಮ ಹಂದ ರೋಂದನ್ನು ನಿರ್ಮಿಸಿಕೊಂಡಿರುವರೆಂದು ವರದಿಯಾಗಿದೆ. ಈ ದಳದ ಪ್ರತಿ ಸದಸ್ಯನೂ ತಾನು ಸಾಯುವ ಮೊದಲು ಹತ್ತು ಮಂದಿ ಡಚ್ಚರನ್ನು ಕೊಂದಿರುವುದಾಗಿ ಪಣ ಕೊಟ್ಟಿರುವನೆಂದು ಹೇಳಲಾಗಿದೆ.

ಜಾವಾದಲ್ಲಿ ಭಯಂಕರ ಕದನ

ಇಂಡೋನೇಷ್ಯದಲ್ಲಿ ನಡೆಯುತ್ತಿರುವ ಕದನದಲ್ಲಿ ರಿಪಬ್ಲಿಕ್ ಪಡೆಗಳು ಮುಂದುವರಿದಿವೆಯೆಂದೂ, ಮಡುರಾಗೆ ದಕ್ಷಿಣ ಭಾಗದಲ್ಲಿರುವ ಡಚ್ಚರ ಹಸ್ತಗತವಾಗಿದ್ದ ಹಲವು ಪ್ರದೇಶಗಳನ್ನು ಮತ್ತೆ ಪಡೆದಿವೆಯೆಂದೂ ವರದಿಯಾಗಿದೆ. ಪೂರ್ವ, ಮಧ್ಯ ಮತ್ತು ಪಶ್ಚಿಮ ಜಾವಾದಲ್ಲಿ ಭಯಂಕರ ಕದನ ಸಾಗುತ್ತಿದೆ.

ಗೋವಿಂದವಲ್ಲಭ ಪಂತರಿಗೆ ಗವರ್ನರ್ ಹುದ್ದೆ!

ಸಂಯುಕ್ತ ಪ್ರಾಂತದ ಪ್ರಧಾನಿ ಪಂಡಿತ ಗೋವಿಂದವಲ್ಲಭಪಂತರು ಅಲ್ಲಿನ ಗವರ್ನರಾಗಿ ನೇಮಕವಾಗುವರೆಂದು ಹೇಳಲಾಗಿದೆ.

ಸೋಯಾ ಬೀನಿನಿಂದ ಹಾಲು

ಗ್ಲೋಬ್] ಬೆಂಗಳೂರು ೨೫

ಬೆಂಗಳೂರಿನ ಕಾಶಿ ವಿಜ್ಞಾನ ಸಂಸ್ಥೆಯು ಸೋಯಾಬೀನಿನಿಂದ ದಿನವೊಂದಕ್ಕೆ ೨೦೦೦ ಪೌಂಡು ಹಾಲನ್ನು ತಯಾರಿಸುವ ಯೋಜನೆಯನ್ನು ಸಿದ್ಧಪಡಿಸಿದೆಯೆಂದು ವರದಿಯಾಗಿದೆ. ಇದಕ್ಕಾಗಿ ಬೇಕಾಗುವ ಯಂತ್ರೋಪಕರಣಗಳಿಗೆ ಸುಮಾರು ೨೦ ಸಹಸ್ರ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ.

ಪಾಕಿಸ್ತಾನ್ ರಾಜ್ಯಾಂಗ ಸಭೆ

ಹಿಂದೂಸ್ಥಾನದಿಂದ ಪ್ರತ್ಯೇಕವಾಗಿರುವ ಪೂರ್ವ ಬಂಗಾಳ, ಪಶ್ಚಿಮ ಪಂಜಾಬು, ಸಿಂಧು, ಗಡಿನಾಡು ಬೆಲೂಚಿಸ್ಥಾನ, ಮುಂತಾದ ಪ್ರದೇಶಗಳಿಗೆ ಪ್ರತ್ಯೇಕ ರಾಜ್ಯಾಂಗ ಸಭೆಯೊಂದನ್ನು ಸ್ಥಾಪಿಸುವಂತೆ ಬ್ರಿಟಿಷ್ ಸರ್ಕಾರದ ಪ್ರಕಟಣೆಯು ಹೊರಟಿರುತ್ತದೆ. ಇದರಲ್ಲಿ ಒಟ್ಟು ೬೬ ಜನ ಪ್ರತಿನಿಧಿಗಳಿರುವರೆಂದು ಹೇಳಲಾಗಿದೆ.

ಹೈದರಾಬಾದಿನಲ್ಲಿ ಅಸಹಕಾರ

ಶಾಸನ ಸಭೆಗಳಿಗೆ ಮತ್ತು ಬ್ಯಾಂಕುಗಳಿಗೆ ಬಹಿಷ್ಕಾರ ಹಾಕುವುದರ ಮೂಲಕ ಹೈದರಾಬಾದ್ ಕಾಂಗ್ರೆಸ್ಸು ಅಲ್ಲಿನ ಸರ್ಕಾರದ ವಿರುದ್ಧವಾಗಿ ಅಸಹಕಾರ ಚಳುವಳಿಯ ಮೊದಲನೆಯ ಘಟ್ಟವನ್ನು ಆರಂಭಿಸಿದೆಯೆಂದು ವರದಿಯಾಗಿದೆ. ಪ್ರತಿಯೊಬ್ಬನೂ ನಿಜಾಮರ ಸರ್ಕಾರದೊಡನೆಯೂ ಅದರ ಕೆಲಸಗಳಲ್ಲಿಯೂ ಅಸಹಕಾರವನ್ನು ತೋರಿಸುವುದು, ಸರ್ಕಾರದ ನೀತಿಯನ್ನು ಪ್ರತಿಭಟಿಸಲು ಮೊದಲನೆಯದಾಗಿ ಸಂಸ್ಥಾನದ ಎಲ್ಲ ಪಂಚಾಯಿತಿ, ಪೌರಸಭೆ, ತಾಲ್ಲೂಕು, ಜಿಲ್ಲಾಬೋರ್ಡ್ ಮತ್ತು ಶಾಸನ ಸಭೆಗಳ ಸದಸ್ಯರೂ ರಾಜೀನಾಮೆ ಕೊಡುವುದು, ಪ್ರಜೆಗಳೆಲ್ಲರೂ ನಿಜಾಂ ಸರ್ಕಾರದ ಅಂಚೆ ಕಛೇರಿಗಳಲ್ಲಿರುವ ಮತ್ತು ಬ್ಯಾಂಕುಗಳಲ್ಲಿರುವ ತಮ್ಮ ಹಣವನ್ನು ವಾಪಸ್ ತೆಗೆದುಕೊಳ್ಳುವುದು, ಸಂಸ್ಥಾನದ ಆಡಳಿತ ಪದ್ಧತಿಯ ನೀತಿಯು ಅತೃಪ್ತಿಕರವಾಗಿರುವುದರಿಂದ ಪ್ರಜಾ ಸಮಿತಿಯಲ್ಲಿರುವ ಸದಸ್ಯರು ರಾಜೀನಾಮೆ ಕೊಡುವುದು, ಪ್ರಜೆಗಳು ಮತ್ತು ಎಲ್ಲ ಅಧಿಕಾರಿಗಳು ಸರ್ಕಾರದ ಕಛೇರಿಗಳನ್ನೂ ಸಭೆಗಳನ್ನೂ ಬಹಿಷ್ಕರಿಸುವುದು ಮತ್ತು ಗ್ರಾಮಾಧಿಕಾರಿಗಳು ರಾಜೀನಾಮೆ ಕೊಡುವುದು— ಇವುಗಳನ್ನು ಅಸಹಕಾರದ ಕಾರ್ಯಕ್ರಮಗಳನ್ನಾಗಿ ಸೂಚಿಸಲಾಗಿದೆ. ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೆ ೫೦ ಜನ ಗ್ರಾಮಾಧಿಕಾರಿಗಳನ್ನು ಹೈದರಾಬಾದ್ ಸರ್ಕಾರವು ವಜಾ ಮಾಡಿದೆ.

ಕಲ್ಕತ್ತೆಯು ಪಶ್ಚಿಮ ಬಂಗಾಳಕ್ಕೆ

ಪಶ್ಚಿಮ ಬಂಗಾಳದ ಪ್ರಧಾನ ಆಡಳಿತವನ್ನು ಮಂತ್ರಿ ಮಂಡಲಕ್ಕೆ ಕೊಟ್ಟಿರುವುದಾಗಿ ಭಾರತ ಸರ್ಕಾರದ ಪ್ರಕಟಣೆ ತಿಳಿಸುತ್ತದೆ. ಕಲ್ಕತ್ತೆಯ ಆಡಳಿತವೂ ಸಹ ಈ ಮಂತ್ರಿಮಂಡಲಕ್ಕೆ ವಹಿಸಲ್ಪಟ್ಟಿರುತ್ತದೆ.

ಭಾರತ ಡೊಮಿನಿಯನ್ನಿಗೆ ನವನಗರ

ನವನಗರದ ಮತ್ತು ಅದರ ಸುತ್ತಿನಲ್ಲಿರುವ ಸಂಸ್ಥಾನಗಳ ಭಾರತ ಡೊಮಿನಿಯನ್ನಿನಲ್ಲಿ ಸೇರಲು ನಿರ್ಧರಿಸಿದೆಯೆಂದು ವರದಿಯಾಗಿದೆ.

ವಿ ಜ್ಞ ಪ್ತಿ

ಇಂದಿನಿಂದ ವಿಶ್ವ ಪತ್ರಿಕೆಯು ವಾರದ ಸಂಚಿಕೆಯನ್ನು ಸೋಮವಾರದ ಬದಲು ಭಾನುವಾರ ಪ್ರಕಟಿಸಲು ಆರಂಭಿಸುತ್ತೇವೆ. ಭಾನುವಾರದ ಸಂಚಿಕೆಯು ಬೆಲೆ ... ಧಾರಣೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ವ್ಯವಸ್ಥಾಪಕ

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೨೭-೭-೪೭ ರಿಂದ ೩-೮-೪೭ರ ವರೆಗೆ

ಮೇಷ — ಆರೋಗ್ಯ ಉತ್ತಮ ಧನ ಲಾಭ ಸಾಧಾರಣ ಖರ್ಚು ಅಧಿಕ. ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದ ಸನ್ಮಾನ. ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ಮಂಗಳ ಕಾರ್ಯಗಳಿಗಾಗಿ ಪ್ರವಾಸ. ತಾ|| ೨೯, ೧, ೨, ಲಾಭ ಶಾಂತಿ

ವೃಷಭ -- ಆರೋಗ್ಯ ಸಾಧಾರಣ ಧನಲಾಭ ಕಡಿಮೆ. ಖರ್ಚು ಹೆಚ್ಚು ಉದ್ಯೋಗ, ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ. ಅಧಿಕಾರಿ ವರ್ಗದವರಿಂದ ತಿರಸ್ಕಾರ. ಶತ್ರುಗಳ ಕಿರುಕುಳ. ಮಿತ್ರರಿಂದ ಅಪಮಾನ ತಾ|| ೨೮, ೩೦ ಲಾಭ, ಶಾಂತಿ.

ಮಿಥುನ - ಆರೋಗ್ಯ ಸಾಧಾರಣ. ಮಾನಸಿಕ ಚಿಂತೆ ಹೆಚ್ಚು ಧನಾದಾಯ ಕಡಿಮೆ. ವ್ಯಾಪಾರಾದಿಗಳಲ್ಲಿ ನಷ್ಟ ಉಪಭೋಗ ವಸ್ತುಗಳಿಗಾಗಿ ಧನವ್ಯಯ ಮಿತ್ರವರ್ಗದವರಿಂದ ಮತ್ತು ಬಂಧುಗಳಿಂದ ತಿರಸ್ಕಾರ ತಾ|| ೨೯, ೩೦ ಲಾಭ, ಪ್ರವಾಸ.

ಕಟಕ - ಆರೋಗ್ಯ ಕೆಡುತ್ತದೆ ಧನ ಲಾಭ ಸಾಧಾರಣ ಖರ್ಚು ಕಡಿಮೆ. ಮಾನಸಿಕ ಚಿಂತೆ ಹೆಚ್ಚು ವ್ಯವಹಾರದಲ್ಲಿ ನಷ್ಟ. ಮಂಗಳಕಾರ್ಯಗಳಿಗಾಗಿ ಪ್ರವಾಸ ವ್ಯಾಪಾರದಲ್ಲಿ ಪ್ರಗತಿ ತಾ|| ೨೮, ೩೦, ೧ ಲಾಭ, ಶಾಂತಿ.

ಸಿಂಹ— ಆರೋಗ್ಯ ಉತ್ತಮ ಧನಾದಾಯ ಸಾಧಾರಣ ಖರ್ಚು ಕಡಿಮೆ ವ್ಯಾಪಾರಾದಿಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ಅಧಿಕಾರಿ ವರ್ಗದವರ ಮನ್ನಣೆ ಮಿತ್ರರಿಂದ ಸನ್ಮಾನ ಪ್ರವಾಸದಿಂದ ಧನಲಾಭ. ತಾ|| ೩೧, ೨ ಚಿಂತೆ ನಷ್ಟ.

ಕನ್ಯಾ — ಪ್ರಾಕೃತಿಕ ಸ್ಥಿತಿ ಉತ್ತಮ ಮಾನಸಿಕ ಚಿಂತೆ ಹೆಚ್ಚು ಆರ್ಥಿಕ ಪರಿಸ್ಥಿತಿ ಸಾಧಾರಣ. ಧಾರ್ಮಿಕ ಕಾರ್ಯಗಳಿಂದ ಮಹಾಜನರ ಮನ್ನಣೆ. ವ್ಯಾಪಾರಾದಿಗಳಲ್ಲಿ ಶತ್ರುಗಳಿಂದ ಅಡಚಣೆ ತಾ|| ೩೦, ೧, ೨, ಲಾಭ, ಶಾಂತಿ.

ತುಲಾ — ದೇಹಸ್ಥಿತಿ ಸಾಧಾರಣ. ಮಾನಸಿಕ ಚಿಂತೆ ಕಡಿಮೆ ಧನಾದಾಯ ಉತ್ತಮ ಖರ್ಚು ಕಡಿಮೆ. ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ ಅಧಿಕಾರಿ ವರ್ಗದವರಿಂದ ಸನ್ಮಾನ ಮಂಗಳ ಕಾರ್ಯಗಳಿಗಾಗಿ ಖರ್ಚು ಪ್ರವಾಸದಿಂದ ಅಪಘಾತ ತಾ|| ೨೮, ೩೦ ಚಿಂತೆ, ಅಪಮಾನ

ವೃಶ್ಚಿಕ—ಪ್ರಾಕೃತಿಕ ಸ್ಥಿತಿ ಉತ್ತಮ. ಆರ್ಥಿಕಸ್ಥಿತಿ ಸಾಧಾರಣ, ಮಾನಸಿಕ ಚಿಂತೆ ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಮಂಗಳಕಾರ್ಯಗಳಿಗಾಗಿ ಬಂಧುಗಳ ಆಗಮನ, ತಾ|| ೨೭, ೩೦, ೧ ಲಾಭ ಶಾಂತಿ.

ಧನುಸ್ಸು— ಆರೋಗ್ಯ ಉತ್ತಮ, ಧನ ಲಾಭ ಸಾಧಾರಣ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಿತ್ರರಿಂದ ಕೆಲಸ ಕಾರ್ಯಗಳಲ್ಲಿ ಸಹಾಯ, ಅಧಿಕಾರಿವರ್ಗದವರಿಂದ ಮನ್ನಣೆ, ಪ್ರವಾಸದಿಂದ ಧನ ಲಾಭ, ತಾ|| ೩೦, ೧ ಚಿಂತೆ, ನಷ್ಟ

ಮಕರ—ಆರೋಗ್ಯ ಕೆಡುತ್ತದೆ, ವ್ಯಾಪಾರ, ವ್ಯವಹಾರಗಳಲ್ಲಿ ಸೋಲು, ಶತ್ರುಗಳ ಕಿರುಕುಳ ಹೆಚ್ಚು, ಧನಾದಾಯ ಕಡಿಮೆ, ಖರ್ಚು ಹೆಚ್ಚು, ಪ್ರವಾಸದಿಂದ ಅಪಘಾತ, ಅಧಿಕಾರಿ ವರ್ಗದವರಿಂದ ಅಪಮಾನ, ತಾ|| ೨೮, ೩೧ ಲಾಭ, ಶಾಂತಿ.

ಕುಂಭ—ಆರೋಗ್ಯ ಉತ್ತಮ, ಧನ ಲಾಭ ಚೆನ್ನಾಗಿರುತ್ತದೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಕೌಟುಂಬಿಕ ಆರೋಗ್ಯ ಕೆಟ್ಟು, ಪಥೋಪಚಾರಗಳಿಗಾಗಿ ವಿಶೇಷ ಧನವ್ಯಯ, ತಾ|| ೨೯, ೩೧, ೨ ಲಾಭ, ಶಾಂತಿ.

ಮೀನ—ಆರೋಗ್ಯ ಉತ್ತಮ, ಧನ ಲಾಭ ಸಾಧಾರಣ ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ತಾ|| ೩೧ ಲಾಭ, ಶಾಂತಿ.

ಸಾರ್ವಜನಿಕರ ತಿಳುವಳಿಕೆ

ಅಭಯ ಆಯುರ್ವೇದಿಕ್ ರಿಸರ್ಚ್ (1946) ಸಂಸ್ಥೆಯು ಕೃಷ್ಣರಾಜನಗರ ಬ್ರಾಂಚ್ ವೈದ್ಯಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಎ. ಆರ್ ರಘುನಾಥ್ ಎಂಬುವವರನ್ನು ಕೆಲಸದಿಂದ ವಜಾ ಮಾಡಿ ಇದೆ. ಅಭಯ ಸಂಸ್ಥೆಯ ಪರವಾಗಿ ಯಾವ ವ್ಯವಹಾರವನ್ನೂ ನಡೆಸಲು ಅವರಿಗೆ ಅಧಿಕಾರವಿರುವುದಿಲ್ಲ ನಮ್ಮ ವೈದ್ಯಶಾಲೆಗೆ ಆಯುರ್ವೇದ ಭಿಷಕ್, ಮತ್ತು ಆಯುರ್ವೇದ ಶಿರೋಮಣಿ ಶ್ರೀ ಮಹಾಬಲ ಭಟ್ಟರವರನ್ನು ವೈದ್ಯರನ್ನಾಗಿ ನೇಮಿಸಲಾಗಿದೆ ಮಹಾಜನಗಳು ಸಹಕರಿಸಬೇಕಾಗಿ ಕೋರಿಕೆ

ಸ್ಟ್ರೀ. ಪಾರ್ಥಸಾರಥಿ ಸುಯಜ್ಞ ಪಂಡಿತ್
ಮ್ಯಾನೇಜಿಂಗ್ ಏಜೆಂಟ್ಸ್

[illegible]

ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು
ಸ್ಯಾಂಡಲ್
ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗೂ
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

Wood Lands

Morning shows for 4 days
from 25-7-47

RENFREW OF THE
ROYAL MOUNTED
&

Killers of the Sea

Starring:—James Newill,
Caral Hughs

Office of the President,
City Municipality,
Mysore, Dated 23nd July 47

NOTIFICATION.

No M 5 P 202 46-7

Notice is hereby given to the inhabitants of the Mysore City Municipality that the Municipal Council have resolved to amend the Slaughter House Bye-law No 25 contained in chapter XV of the Municipal Rules and Bye-laws as follows:-

"A fee of 0—1—0 per carcase shall be levied and the mutton stall holders insisted upon to get the meat in the meat van only to their respective stalls."

Any person having objection to the above may prefer the same in writing to the undersigned within one month from the date of the publication of of the above notification in the Official Gazette after which no objection will be heard

R. Ramachandra Rao
Bhombore,
President

FOR SALE

No 2925, V Main Road, Vontikoppal. Vacant. Possession given

Enquire:—R Gundu Rao, Bank Buildings, Mysore.

Office of the President,
City Municipality,
Mysore, Dated 21st July 47,

NOTIFICATION

No. M 5 P 1117-46-7

Notice is hereby given to the inhabitants of the Mysore City Municipality that the Municipal Council have resolved to frame Bye-law under section 51 (i) (b) ii and iv of the Mysore City Municipalities Act for the regulation and control of Hotels, Restaurants, eating houses, cafes, refreshment rooms, Coffee and Tea Houses & any premises or place to which the public are admitted for the consumption of any food or drink

Any person having objection to the proposed bye-laws may prefer the same in writing to the undersigned within one month from the date of publication of the notification in the official Gazette after which no objection will be heard

Copies of the draft Bye-laws are available in the office of the President or the Health Officer for inspection and perusal by the public during office hours on all working days.

R, Ramachandra Rao
Bhombore.
President.

Edited, printed and published by A. R. Nagarajan at the Sadhvi Press D Subbaiah Road Mysore

---

ರಾಜಕಮಲ್

ತಾ|| 25-7-47 ರಿಂದ
ಅಪೋಲೋ ೨ ನೇ ವಾರ
ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್

—: ಭೂಮಿಕೆ :—
ಮುಮ್ತಾಜ್ ಶಾಂತಿ, ಅಶೋಕ
ಕುಮಾರ್, ಚಂದ್ರಕಮಲ ಮುಂತಾದ
ಹಾ ನಟರು

Morning Shows from 25-7-47 for 4 days, daily at 10·30 a. m.

MEXICANA

With Tito Guizar, Constance Moore, Leo Carillo

(First time to be shown in Mysore)

ವುಡ್‌ಲ್ಯಾಂಡ್ಸ್

26-7-47 ರಿಂದ
ಚಿತ್ರಿಸಿದ ೧೩ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ[illegible] ೬ ಟಿ.)

ನಾವು ಇಬ್ಬರು

- ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವ

ಫೋನ್ ನಂ. 392 ‖ವಂದೇ ಮಾತರಂ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೨೮—೭—೪೭ [ಸಂಚಿಕೆ ೭

ಡೊಮಿನಿಯನ್ ಸೇರಲು ಸಂಸ್ಥಾನಗಳ ಸಮ್ಮತಿ

ಪುರಸಭಾಧ್ಯಕ್ಷರಿಗೆ ಸತ್ಕಾರ

ಮೈಸೂರು ೨೮

ರಾಜಧಾನಿಯ ಬ್ರಾಹ್ಮಣರ ಸ್ತ್ರೀಯರ ಮಂಡಲಿಯವರು ಪುರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಜೋಂಭೋರೆಯವರಿಗೆ ಪುರಭವನದಲ್ಲಿ ನಿನ್ನೆ ಸಂಜೆ ಒಂದು ಸತ್ಕಾರ ಸಮಾರಂಭವನ್ನೇರ್ಪಡಿಸಿದ್ದರು. ರಾಜಸೇವಾ ಪ್ರಸಕ್ತ ಅಂಬಳೆ ಸುಬ್ರಹ್ಮಣ್ಯ ಅಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಮತ್ತು ಸಂಗೀತಗಳಾದ ನಂತರ ಮಂಡಲಿಯವರು ಶ್ರೀ ಜೋಂಭೋರೆಯವರಿಗೆ ರಜತಕರಂಡದಲ್ಲಿ ಬಿನ್ನವತ್ತಳೆಯನ್ನು ಓದಿ ಅರ್ಪಿಸಿದರು. ಶ್ರೀಗಳಾದ ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ರಾಮಸ್ವಾಮಿ, ವೈಣಿಕ ಪ್ರವೀಣ ವಿ. ವೆಂಕಟಗಿರಿಯಪ್ಪ, ಸ್ವಾಮಿದಾಸ್, ಲಿಂಗಣ್ಣ ಮುಂತಾದವರು ಶ್ರೀ ಜೋಂಭೋರೆಯವರ ಸೇವೆಯನ್ನು ಶ್ಲಾಘಿಸಿ ಭಾಷಣ ಮಾಡಿದರು. ಶ್ರೀ ಜೋಂಭೋರೆಯವರು ಮಾನಾಡಿ ತಮ್ಮನ್ನು ಸತ್ಕರಿಸಿದುದಕ್ಕಾಗಿ ಮಂಡಲಿಯವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯ ಅಯ್ಯಂಗಾರರವರು ಶ್ರೀ ಜೋಂಭೋರೆಯವರು ಪೌರಸಭಾಧ್ಯಕ್ಷರಾಗಿ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿದರು. ವಂದನೆ, ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯಗೊಂಡಿತು.

ಪ್ರದೋಷ ಸಂಗೀತ

ಪ್ರದೋಷದ ಪ್ರಯುಕ್ತ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ಕುಮಾರಿ ಜಿ. ಎ. ರಂಗನಾಯಕಮ್ಮನವರ ಸಂಗೀತವನ್ನು ವಿ॥ ರಾಜಯ್ಯಂಗಾರ್ಯರ ಪಿಟೀಲು ಮತ್ತು ವಿ॥ ನಾಗಣ್ಣನವರ ಮೃದಂಗಗಳೊಡನೆ ಏರ್ಪಡಿಸಲಾಗಿದೆ. ಸರ್ವರಿಗೂ ಸ್ವಾಗತವಿದೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನವರು ಆಗಸ್ಟ್ ೧೫ ರ ದಿನ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ನಡೆಸಲು ನಿರ್ಧರಿಸಿರುವರು. ಪ್ರಭಾತ ಫೇರಿ, ಧ್ವಜ ವಂದನೆ, ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲು ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ರಾಜಧಾನಿಯ ಎಲ್ಲ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೂ, ಸಾರ್ವಜನಿಕ ಸಂಸ್ಥೆಗಳೂ ನಗರದ ಪ್ರಮುಖರೂ ಇದರಲ್ಲಿ ಸಹಕಾರ ನೀಡಬೇಕೆಂದು ಸಂಘಟಕರು ಕೋರಿರುವರು.

ಸ್ವಾತಂತ್ರ್ಯ ದಿನಾಚರಣೆಗೆ ಸ್ವಯಂ ಸೇವಕರು

ಆಗಸ್ಟ್ ೧೫ ರ ದಿನ ನಡೆಯುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜವಂದನೆ, ಪ್ರಭಾತ ಫೇರಿ ಮೊದಲಾದ ಕಾರ್ಯಕ್ರಮವನ್ನು ನಡೆಸಲು ಸುಮಾರು ೨೦೦ ಜನ ಸ್ವಯಂಸೇವಕರು ಬೇಕಾಗುವರು. ಆಸಕ್ತರು ಬರುವ ೧ ನೇ ತಾರೀಖಿನಿಂದ ಏನ [illegible] ಕಚೇರಿಯ ಮೈದಾನದಲ್ಲಿ ಪ್ರತಿದಿನ ಸಂಜೆ ೫-೩೦ ರಿಂದ ೬-೩೦ ರವರೆಗೆ ನಡೆಯುವುದು. ಸ್ವಯಂಸೇವಕದ ವ್ಯವಸ್ಥೆ ಮತ್ತು ಶಿಕ್ಷಣದ ಅಧಿಕಾರದ ಶ್ರೀ [illegible] ಪ್ರಮುಖನಾಯಕರು ವಹಿಸಲಿದ್ದಾರೆ. [illegible] ಕೋರಲಾಗಿದೆ [illegible] ಸ್ವಯಂಸೇವಕರಾಗಲಿಚ್ಛಿಸುವವರು [illegible] ವೇಳೆಯಲ್ಲಿ ಭೇಟಿ ಮಾಡಬಹುದೆಂದು ವಿದ್ಯಾರ್ಥಿ ಕಾಂಗ್ರೆಸ್ ಸ್ವಾತಂತ್ರ್ಯ ದಿನಾಚರಣೆ ಸಮಿತಿಯವರು ತಿಳಿಸಿರುವರು.

ತಿರುವಾಂಕೂರು ಕಾಂಗ್ರೆಸ್ ಅಧ್ಯಕ್ಷರ ದಸ್ತಗಿರಿ

ಸತ್ಯಾಗ್ರಹ ಚಳುವಳಿಯ ಸಂಬಂಧವಾಗಿ ತಿರುವಾಂಕೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಪಟ್ಟಂ ತಾನುಪಿಳ್ಳೆಯವರನ್ನೂ ಪಿ.॥ ಕೆ. ಎ. ಮ್ಯಾಥ್ಯೂ ಮತ್ತು ನಟೇಶ ಜಡೇಶ್ವರರನ್ನೂ ಪೋಲೀಸರು ನಿನ್ನೆ ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ. ತಿರುವಾಂಕೂರಿನ ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಕೊಲೆಯ ಪ್ರಯತ್ನದ ಸಂಬಂಧವಾಗಿಯೂ ೫ ಅನೇಕ ಜನರ ದಸ್ತಗಿರಿಯಾಗಿದೆ.

ಪಾಕಿಸ್ತಾನಕ್ಕೆ ಹಿಂದೂ ಸಿವಿಲ್ ಅಧಿಕಾರಿಗಳು ಇಲ್ಲ

ಆಗಸ್ಟ್ ೧೫ ರ ನಂತರ ೪೦ ಜನ ಯುರೋಪ್ಯರಿಂದ ಕೂಡಿದ ೫೫ ಮಂದಿ ಮುಸ್ಲಿಮೇತರ ಮತ್ತು ೧೫೦ ಮಂದಿ ಮುಸ್ಲಿಂ ಸಿವಿಲ್ ಅಧಿಕಾರಿಗಳು ಭಾರತ ಡೊಮಿನಿಯನ್ನಿನಲ್ಲಿ ಕೆಲಸ ಮಾಡಲು ನಿರ್ಧರಿಸಿರುವರೆಂದು ವರದಿಯಾಗಿದೆ. ೭೮ ಮಂದಿ ಮುಸ್ಲಿಮರು, ೩೦ ಯುರೋಪ್ಯರೂ ಪಾಕಿಸ್ತಾನದಲ್ಲಿ ಕೆಲಸ ಮಾಡುವರು. ಉಳಿದಿರುವ ಸಿವಿಲ್ ಅಧಿಕಾರಿಗಳ ಪೈಕಿ ಪಾಕಿಸ್ತಾನದಲ್ಲಿ ಒಬ್ಬ ಹಿಂದುವೂ ಕೆಲಸ ಮಾಡಲು ಸಮ್ಮತಿಸಿರುವುದಿಲ್ಲ.

ಸಿಕ್ಕರಿಂದ ಕಾನೂನು ಭಂಗ ಚಳುವಳಿ

ಅಖಿಲ ಪಂಜಾಬ್ ಸಿಖ್ ಸರ್ವ ಪಕ್ಷಗಳವರ ಸಮ್ಮೇಳನವು ಪಂಜಾಬ್ ಸರ್ಕಾರವು ಜಾರಿಗೆ ತಂದಿರುವ ಕಾನೂನನ್ನು ಪ್ರತಿಭಟಿಸಲು ಸಿಕ್ಕರು ಮೊಸ್ತೆಯಿಂದ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸುವರೆಂದು ವರದಿಯಾಗಿದೆ. ಸಮ್ಮೇಳನದಲ್ಲಿ ಭಾಗ ವಹಿಸಿದ್ದ ಕೇಂದ್ರ ಶಿರೋಮಣಿ ಅಕಾಲಿ ದಳದ ನಾಯಕರಿಂದ ಪ್ರಾಂತಿ ಸರ್ಕಾರ್ ಸಿಂಗರನ್ನು ದಸ್ತಗಿರಿ ಮಾಡಲಾಗಿದೆ. ಸಮ್ಮೇಳನದ ಮೇಲೆ ಹಾಕಿರುವ ಪ್ರತಿಬಂಧವನ್ನು ರದ್ದು ಮಾಡುವವರೆಗೆ ಅಕ್ಕರು ತಮ್ಮ ಚಳುವಳಿಯನ್ನು ಮುಂದುವರಿಸುವರೆಂದು ಹೇಳಲಾಗಿದೆ.

ಹರಿಕಥೆ

ದೇವರಾಜ ಮೊಹಲ್ಲಾದ ಅಗ್ರಹಾರದಲ್ಲಿರುವ ಶ್ರೀರಾಮ ಸೇವಾ ಸಭೆಯ ಆಶ್ರಯದಲ್ಲಿ ಏಕಾದಶಿ ಪ್ರಯುಕ್ತ ಈ ದಿನ ರಾತ್ರಿ ೯ ಗಂಟೆಗೆ ಶ್ರೀ ನಂಜೇಗೌಡರ ಶ್ರೀನಿವಾಸರಾವ್ ಅವರಿಂದ [illegible] ಪ್ರಾಣಸ್ತ್ರವ ಎಂಬ ಹರಿಕಥೆ ನಡೆಯುವುದು.

ಸಂಸ್ಥಾನಗಳು ಡೊಮಿನಿಯನ್ನಿಗೆ ಸೇರುವುವು

ಭಾರತ ಸರ್ಕಾರದ ಸಂಸ್ಥಾನ ಇಲಾಖೆಯವರು ತಯಾರಿಸಿರುವ ಪತ್ರಗಳನ್ನು ಪರಿಶೀಲಿಸಿ ಸಂಸ್ಥಾನಗಳು ಭಾರತ ಡೊಮಿನಿಯನ್ನಿನಲ್ಲಿ ಸೇರುವ ವಿಚಾರವನ್ನು ಇತ್ಯರ್ಥಪಡಿಸುವುದಕ್ಕಾಗಿ ವೈಸರಾಯರು ನವನಗರದ ಜಾಮ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ಸಮಿತಿಯು ಆ ಪತ್ರಗಳನ್ನು ಏಕವಾಕ್ಯತೆಯಿಂದ ಅಂಗೀಕರಿಸಿರುವುದಾಗಿ ತಿಳಿದುಬಂದಿದೆ. ಆಗಸ್ಟ್ ೫ ನೇ ತಾರೀಖಿನೊಳಗೆ ಸಂಸ್ಥಾನಗಳು ಈ ಬಗ್ಗೆ ಒಪ್ಪಂದವನ್ನು ಮಾಡಿಕೊಳ್ಳುವ ಬರೆ ಹೇಳಲಾಗಿದೆ.

ಇಂಡೊನೇಸ್ಯಕ್ಕೆ ಜಿನ್ನಾ ಮತ್ತು ಕೃಪಲಾನಿ ಭರವಸೆ

ಇಂಡೋನೇಸ್ಯದ ಸ್ವಾತಂತ್ರ್ಯ ಸಮರದಲ್ಲಿ ಭಾರತವು ತನ್ನ ಪೂರ್ಣ ಸಹಾಯವನ್ನು ನೀಡುವುದೆಂದು ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ತಿಳಿಸಿದ್ದಾರೆ. ಪಾಕಿಸ್ತಾನವೂ, ಮುಸ್ಲಿಂ ಭಾರತವೂ ಇಂಡೋನೇಸ್ಯದ ಸ್ವಾತಂತ್ರ್ಯ ಸಮರದಲ್ಲಿ ಡಚ್ಚರ ಆಕ್ರಮಣದ ವಿರುದ್ಧವಾಗಿ ಸಹಾಯ ನೀಡುವುದೆಂದು ಮಿ॥ ಜಿನ್ನಾರವರು ಘೋಷಿಸಿದ್ದಾರೆ.

ಕೊಲೆಪಾತಕನ ಬಗ್ಗೆ ಸುದ್ದಿ ಕೊಟ್ಟವರಿಗೆ ೨೦ ಸಹಸ್ರ ರೂ

ತಿರುವಾಂಕೂರಿನ ದಿವಾನ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಕೊಲೆ ಮಾಡಲು ಯತ್ನಿಸಿದವನ ಪತ್ತೆಯ ಬಗ್ಗೆ ಸುದ್ದಿ ಕೊಟ್ಟವರಿಗೆ ೧೦ ಸಹಸ್ರ ರೂ. ಬಹುಮಾನ ಕೊಡಲಾಗುವುದೆಂದೂ, ಅದರ ಜೊತೆಗೆ ತಪ್ಪಿತಸ್ಥನು ಶಿಕ್ಷೆಗೊಳಗಾದಲ್ಲಿ ಇನ್ನೂ ೧೦ ಸಹಸ್ರ ರೂ. ಕೊಡಲಾಗುವುದೆಂದೂ ಅಲ್ಲಿನ ಸರ್ಕಾರವು ಪ್ರಕಟಿಸಿದೆ.

ಸಂಯುಕ್ತ ಪ್ರಾಂತದಲ್ಲಿ ೩ ದಿನ ರಜಾ

ತನ್ನ ಪ್ರಾಂತದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ವೈಭವದಿಂದ ನಡೆಸಲಾಗುವುದೆಂದೂ, ನೌಕರರೂ ಇದನ್ನು ಸೂಕ್ತ ರೀತಿಯಲ್ಲಿ ಆಚರಿಸಲು ಎಲ್ಲ ಸರ್ಕಾರಿ ಕಚೇರಿಗಳನ್ನು ಆಗಸ್ಟ್ ೧೪ ರಿಂದ ೩ ದಿನ ಮುಚ್ಚಲಾಗುವುದೆಂದೂ, ೧೬ ರ ದಿನ ಚಂದ್ರದರ್ಶನವಾದರೆ ರಂಜಾನ್ ಪ್ರಯುಕ್ತ ಇಂದು ರಜಾ ಕೊಡಲಾಗುವುದೆಂದೂ ಸಂಯುಕ್ತ ಪ್ರಾಂತದ ಪ್ರಧಾನಿ ಶ್ರೀ ಗೋವಿಂದವಲ್ಲಭ ಪಂತರು ತಿಳಿಸಿರುವರು.

ಪಾಕಿಸ್ತಾನ್ ರಾಜ್ಯಾಂಗ ಸಭೆಗೆ ಸದಸ್ಯರು

ಪೂರ್ವ ಬಂಗಾಳದಿಂದ ೪೪ ಮಂದಿ, ಪಶ್ಚಿಮ ಪಂಜಾಬಿನಿಂದ ೧೭, ಸಿಂಧು ಪ್ರಾಂತದಿಂದ ೪, ಗಡಿನಾಡಿನಿಂದ ೩, ಬಲೂಚಿಸ್ಥಾನದಿಂದ ಒಬ್ಬರು ಹೀಗೆ ೬೯ ಮಂದಿ ಪ್ರತಿನಿಧಿಗಳು ಪಾಕಿಸ್ತಾನ್ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವರು. ಪೂರ್ವ ಬಂಗಾಳದ ೩ ಮುಸ್ಲಿಮೇತರ ಸ್ಥಾನಗಳಿಗೆ ಜೋಗೇಂದ್ರನಾಥ ಮಂಡಲ್, ಕಿರಣ ಶಂಕರರಾಯ್, ಬಿ. ಕೆ. ದತ್ತ ರವರುಗಳೂ, ಪಶ್ಚಿಮ ಪಂಜಾಬಿನ ೩ ಸ್ಥಾನಗಳಿಗೆ ಭೀಮಸೇನ ಸಾಚಾರ್, ಗಂಗಾಶರಣ್ ಮತ್ತು ಸರ್ದಾರ್ ಉಜ್ವಲಸಿಂಗರೂ ಆರಿಸಲ್ಪಟ್ಟಿರುವರೆಂದು ವರದಿಯಾಗಿದೆ.

ಸೆಮರಾಂಗಿನ ಬೀದಿಗಳಲ್ಲಿ ಕದನ

ಟೆಂಬಾಸಿಗೆ ೧೫೦ ಮೈಲಿ ದೂರದಲ್ಲಿರುವ ಜಾವದ ರೇವುಪಟ್ಟಣವಾದ ಟೆಗಲ್ ಬಂದರನ್ನು ತಾವು ಸ್ವಾಧೀನಪಡಿಸಿಕೊಂಡಿರುವುದಾಗಿ ಡಚ್ಚರು ಪ್ರಕಟಿಸಿದ್ದಾರೆ. ಪಶ್ಚಿಮ ರಾಜಧಾನಿಯಾದ ಜೋಗ್‌ಜಕರ್ತ ನಗರದ ಕಡೆಗೆ ಮುನ್ನಡೆಯುತ್ತಿರುವ ಡಚ್ ಸೈನ್ಯಗಳನ್ನು ಇಂಡೋನೇಸ್ಯ ಪಡೆಗಳು ತೀವ್ರವಾಗಿ ಪ್ರತಿಭಟಿಸುತ್ತಿವೆ. ಸೆಮರಾಂಗಿನ ಬೀದಿಬೀದಿಗಳಲ್ಲಿಯೂ ಭಯಂಕರ ಕದನವು ನಡೆಯುತ್ತಿದೆ. ನೆದರ್‌ಲೆಂಡ್ ಪಡೆಗಳು ಮಲಂಗ್ ನಗರವನ್ನು ಸ್ವಾಧೀನಪಡಿಸಿಕೊಂಡಿವೆ. ಬಂಡಾಂಗ್, ಸೌರಬಾಯ, ಸೆಮರಾಂಗ್ ಮೊದಲಾದ ನಗರಗಳೂ ಡಚ್ಚರ ಹಸ್ತಗತವಾಗಿವೆ.

ರಷ್ಯ-ಅಮೆರಿಕಗಳಿಗೆ ೩ನೆಯ ಮಹಾ ಯುದ್ಧ

ಸದ್ಯದಲ್ಲೇ ರಷ್ಯಾ ಮತ್ತು ಅಮೆರಿಕಗಳಿಗೆ ಘೋರ ಯುದ್ಧವಾಗುವುದು ಅನಿವಾರ್ಯವೆಂದೂ, ಪರದೇಶ ರಾಷ್ಟ್ರಗಳ ಆರ್ಥಿಕ ನೆರವಿಗಾಗಿ ಮಿ॥ ಮಾರ್ಷಲ್‌ರವರು ಸೂಚಿಸಿರುವ ಯೋಜನೆಯು ಸ್ವಲ್ಪವೂ ಉಪಯೋಗವಿಲ್ಲವೆಂದೂ, ಇಟಲಿಯ ಮಾಜಿ ಪ್ರಧಾನಿಯಾದ ಫ್ರಾನ್ಸಿಸ್ಕೋ ನಿಟ್ಟಿಯವರು ಹೇಳಿರುವರು.

ಆಗಸ್ಟ್ ೧೫ ರ ನಂತರ ಗಡಿನಾಡಿನಲ್ಲಿ ೯೩ ನೇ ಕಲಂ

ಆಗಸ್ಟ್ ೧೫ ರ ವರೆಗೆ ಗಡಿನಾಡಿನಲ್ಲಿ ಈಗಿರುವ ಮಂತ್ರಿಮಂಡಲವೇ ಜಾರಿಯಲ್ಲಿರುವುದೆಂದೂ, ಅನಂತರ ಪಾಕಿಸ್ತಾನದ ಗವರ್ನರ್ ಜನರಲ್ಲರಾದ ಮಿ॥ ಜಿನ್ನಾರವರು ೯೩ ನೇ ಕಲಂ ಪ್ರಕಾರ ಗವರ್ನರರ ಆಡಳಿತವನ್ನು ಜಾರಿ ಮಾಡುವರೆಂದೂ ವರದಿಯಾಗಿದೆ.

ತಾತ್ಕಾಲಿಕ ಯೋಜನೆಗೆ ಹೈದರಾಬಾದಿನ ಒಪ್ಪಿಗೆ

ಹೈದರಾಬಾದು ಭಾರತ ಯೂನಿಯನ್ನಿನೊಡನೆ ಸೇರುವ ಬಗ್ಗೆ ಸದ್ಯ ತೀರ್ಮಾನವನ್ನು ಮಾಡದೆ ನಿರ್ಧರಿಸುವ ವರೆಗೂ ಡೊಮಿನಿಯನ್ನಿನೊಡನೆ ತಾತ್ಕಾಲಿಕ ಒಪ್ಪಂದ ಮಾಡಿಕೊಳ್ಳಲು ಸಿದ್ಧವಾಗಿರುವುದಾಗಿ ಅಲ್ಲಿನ ಪ್ರಧಾನಿಗಳ ಮೂಲಕ ನಿಜಾಮರವರು ತಿಳಿಸಿರುವರೆಂದು ವರದಿಯಾಗಿದೆ.

ಸಾಧ್ವಿ

ತಾ|| ೨೮-೭-೪೭ ಸೋಮವಾರ

ವೈಸರಾಯರ ಹಿತೋಪದೇಶ

ಸಂಸ್ಥಾನಗಳ ರಾಜರುಗಳನ್ನೂ, ಅವರ ಪ್ರತಿನಿಧಿಗಳನ್ನೂ ಕರೆದು ವೈಸರಾಯರು ಮೊನ್ನೆ ಮಾಡಿದ ಭಾಷಣವು ವಿಶೇಷ ಹಿತಕಾರಿಯಾಗಿರುತ್ತದೆ. ಸಂಸ್ಥಾನಗಳು ಪ್ರತ್ಯೇಕವಾಗಿರುವ ಆಲೋಚನೆಯನ್ನು ಬಿಟ್ಟು ಯಾವುದಾದರೊಂದು ಡೊಮಿನಿಯನ್ನಿನಲ್ಲಿ ಕೂಡಲೇ ಸೇರಬೇಕೆಂದು ಅವರು ಸೂಚಿಸಿರುವರು. ಪ್ರತ್ಯೇಕವಾಗಿರುವುದರಿಂದ ಸಂಸ್ಥಾನಗಳಿಗೆ ಬರುವ ಹಾನಿಯನ್ನು ಚೆನ್ನಾಗಿ ತಿಳಿಸಿರುವರು.

ಆಗಸ್ಟ್ ೧೫ ನೇ ತಾ|| ಯೊಳಗೆ ಸಂಸ್ಥಾನಗಳೆಲ್ಲವೂ ಈ ಬಗ್ಗೆ ನಿರ್ಧಾರವನ್ನು ಮಾಡಿ ಯಾವುದಾದರೊಂದು ಡೊಮಿನಿಯನ್ನಿಗೆ ಸೇರಬೇಕಾಗಿರುತ್ತದೆ. ತಮ್ಮ ಪ್ರದೇಶಗಳನ್ನು ಬಿಟ್ಟು ಹೇಗೆ ರಾಜರುಗಳು ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೋ ಹಾಗೆಯೇ ಡೊಮಿನಿಯನ್ನುಗಳನ್ನು ಬಿಟ್ಟು ದೂರವಾಗಿರಲೂ ಸಾಧ್ಯವಿರುವುದಿಲ್ಲ. ಸಂಸ್ಥಾನಗಳ ಜೀವನವು ಸರ್ವ ವಿಧದಲ್ಲಿಯೂ ಭಾರತದ ಜೀವನದೊಡನೆ ಸಮ್ಮಿಳಿತವಾಗಿರುತ್ತದೆ. ಆದುದರಿಂದ ಕೂಡಲೇ ರಾಜರುಗಳು ಮುಂದೆ ಬಂದು ಭಾರತ ಯೂನಿಯನ್ನಿನಲ್ಲಿ ಸೇರುವುದು ಅಗತ್ಯವಾಗಿದೆ.

ರಕ್ಷಣೆ, ಸಾರಿಗೆ ಸಂಪರ್ಕ ಮತ್ತು ವಿದೇಶಾಂಗ ವಿಚಾರಗಳ ವಿನಃ ಇತರ ಸಕಲ ವಿಷಯಗಳಲ್ಲಿಯೂ ಯೂನಿಯನ್ನಿನಲ್ಲಿ ಸೇರುವ ಸಂಸ್ಥಾನಗಳು ಸ್ವತಂತ್ರವಾಗಿರುವುವೆಂದು ತಿಳಿಸಲಾಗಿದೆ. ಒಳಾಡಳಿತ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ಪ್ರವೇಶಿಸುವುದಿಲ್ಲವೆಂಬ ಭರವಸೆಯನ್ನೂ ಸಹ ನೀಡಲಾಗಿದೆ. ಎಂದ ಮೇಲೆ ರಾಜರುಗಳಿಗೆ ಯಾವ ವಿಧವಾದ ಸಂದೇಹಕ್ಕೂ ಕಾರಣವಿಲ್ಲ. ಇದುವರೆಗೆ ಬ್ರಿಟಿಷ ಚಕ್ರಾಧಿಪತ್ಯದಲ್ಲಿ ಅವರು ಹೊಂದಿದ್ದ ನಾಮಮಾತ್ರದ ಸಾರ್ವಭೌಮತ್ವಕ್ಕಿಂತಲೂ ಇನ್ನು ಮುಂದೆ ಕಡಿಮೆಯಾದ ಸ್ಥಾನ, ಮಾನಗಳು ಅವರಿಗೆ ದೊರೆಯುವುದಿಲ್ಲ.

ಯೂನಿಯನ್ನಿನಲ್ಲಿ ಸೇರುವುದರಿಂದ ಸಂಸ್ಥಾನಗಳಿಗೆ ಅಪಾರವಾದ ಸೌಲಭ್ಯಗಳು ದೊರೆಯುವುವು. ಅಖಿಲ ಭಾರತದ ಉನ್ನತಿಗಾಗಿ ಕೈಗೊಳ್ಳಲಾಗುವ ಸಕಲ ಕಾರ್ಯಗಳಲ್ಲಿಯೂ ಅವರಿಗೆ ಭಾಗವು ದೊರೆಯುವುದು. ವಿಶೇಷವಾಗಿ ನಮ್ಮ ಈ ರಾಷ್ಟ್ರದ ಐಕಮತ್ಯವನ್ನು ರಕ್ಷಿಸಿಕೊಂಡು ಬರಲು ಇದರಿಂದ ವಿಶೇಷ ಸಹಾಯವಾಗುವುದು.

ಈಗಾಗಲೇ ಹೆಚ್ಚಿನ ಪಾಲು ಸಂಸ್ಥಾನಗಳು ಭಾರತದ ಯೂನಿಯನ್ನಿನಲ್ಲಿ ಸೇರಲು ನಿರ್ಧರಿಸಿರುತ್ತವೆ. ಅವುಗಳು ರಾಜ್ಯಾಂಗ ಸಭೆಯಲ್ಲಿಯೂ ಸಹ ಭಾಗವಹಿಸುತ್ತಿವೆ. ಇವುಗಳಲ್ಲದೆ ಇನ್ನೂ ಕೆಲವು ಸಂಸ್ಥಾನಗಳು ಯೂನಿಯನ್ನಿಗೆ ಸೇರಲು ನಿರ್ಧರಿಸಿರುವುದಿಲ್ಲ. ಅವುಗಳ ಪೈಕಿ ನಮ್ಮ ಮೈಸೂರು ಸಂಸ್ಥಾನವೂ ಒಂದು. ರಾಜ್ಯಾಂಗ ಸಭೆಯಲ್ಲಿ ಸೇರಲು ನಮ್ಮ ಸಂಸ್ಥಾನವು ಹಿಂದೆ ಬಹಳ ಕಾಲದ ಮೇಲೆ ನಿರ್ಧರಿಸಿತು. ಸ್ವಾತಂತ್ರ್ಯವನ್ನು ಸಮರ್ಪಕವಾದ ರೀತಿಯಲ್ಲಿ ಬಂದುದ [illegible] ... ವರು ಹಾಗೆಯೇ ಭಾರತ ಯೂನಿಯನ್ನಿನಲ್ಲಿಯೂ ನಮ್ಮ ಸಂಸ್ಥಾನವು ಸೇರಲು ತೀರ್ಮಾನಿಸುವುದು ಅಗತ್ಯವಾಗಿದೆ. ರಾಜ್ಯಾಂಗ ಸಭೆಯಲ್ಲಿ ಸೇರಿ ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಅದರ ತೀರ್ಮಾನಗಳಿಗೆ ಕಾರಣ ಕರ್ತರಾದವರೆಲ್ಲರೂ ಆ ಸಭೆಯಿಂದ ರಚಿತವಾಗುವ ಯೂನಿಯನ್ನಿಗೂ ಸೇರುವುದು ಸಹಜವಾದ ಕ್ರಮವಾಗಿರುತ್ತದೆ. ಇನ್ನೂ ಹೆಚ್ಚು ಕಾಲ ವಿಳಂಬಕ್ಕೆ ಅವಕಾಶವಿಲ್ಲ. ಆದುದರಿಂದ ಭಾರತದ ಯೂನಿಯನ್ನಿನಲ್ಲಿಯೂ ಸೇರುವಂತೆ ಮೈಸೂರು ಕೂಡಲೇ ನಿರ್ಧಾರ ಮಾಡುವುದು ಸೂಕ್ತವಾಗಿರುತ್ತದೆ. ವೈಸರಾಯರವರ ಹಿತೋಕ್ತಿಯು ಎಲ್ಲ ಸಂಸ್ಥಾನಗಳ ಮೇಲೂ ಮತ್ತು ನಮ್ಮ ಮೈಸೂರಿನ ಮೇಲೂ ಒಳ್ಳೆಯ ಪರಿಣಾಮವನ್ನು ಉಂಟು ಮಾಡಲೆಂದು ಹಾರೈಸೋಣ.

ಜಾವಾ, ಸುಮಾತ್ರಾಗಳಲ್ಲಿ ಘೋರ ಯುದ್ಧ

ಪೂರ್ವ ಜಾವಾದಲ್ಲಿರುವ ಲವಾಂಗ ನಗರವನ್ನು ಡಚ್ಚರು ಸ್ವಾಧೀನಪಡಿಸಿಕೊಂಡಿದ್ದಾರೆ. ಡಚ್ಚರ ವಿಮಾನ ಧಾಳಿ ಅತ್ಯುತ್ಕಟವಾಗಿ ನಡೆದಿದೆ. ಜಾವಾ ಮತ್ತು ಸುಮಾತ್ರಾಗಳ ಪ್ರದೇಶಗಳಲ್ಲಿ ಘೋರ ಕದನ ಸಾಗುತ್ತಿದೆ. ಮಲಾಂಗ್ ನಗರ ಡಚ್ಚರ ಸ್ವಾಧೀನವಾಗಿಲ್ಲ. ಆದರೆ ಆದರ ಪ್ರಥಮ ವನ ಡಚ್ಚರ ವಿಮಾನ ಧಾಳಿಗೆ ತುತ್ತಾಗಿ ಸಂಪೂರ್ಣವಾಗಿ ಧ್ವಂಸವಾಗಿದೆ.

೪೦ ಲಕ್ಷ ಚೀಣೀಯರ ಪ್ರಾಣಕ್ಕೆ ಅಪಾಯ

ಚೀಣಾ ದೇಶದ ಹಳದೀ ನದಿಯ ಆಣೆಕಟ್ಟುಗಳನ್ನು ಪ್ರವಾಹವು ಬರುವ ಮೊದಲು ಸರಿಪಡಿಸದಿದ್ದರೆ ಆ ಪ್ರದೇಶಗಳಲ್ಲಿರುವ ಸುಮಾರು ೪೦ ಲಕ್ಷ ಮಂದಿ ಚೀಣೀಯರ ಪ್ರಾಣಕ್ಕೆ ಅಪಾಯವಿರುವುದೆಂದು ವರದಿಯಾಗಿದೆ. ಶೇ|| ೪೦ ಭಾಗ ರಿಪೇರಿ ಕೆಲಸಗಳು ಮುಕ್ತಾಯಗೊಂಡಿವೆ. ಉಳಿದುದನ್ನು ಮುಗಿಸಲು ಕಮ್ಯೂನಿಸ್ಟ್ ಸೈನ್ಯಗಳ ಕಾರ್ಯಾಚರಣೆ ಅಡ್ಡಿಯಾಗಿದೆ.

ಪ್ರಾಂತ್ಯ ಕಾಂಗ್ರೆಸ್ ಸಮಿತಿಗೆ ಶರತ್‌ಬೋಸರ ರಾಜೀನಾಮೆ

ಬಂಗಾಳಾ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮತ್ತು ಕಾರ್ಯನಿರ್ವಾಹಕ ಸಮಿತಿಯ ಸದಸ್ಯ ಸ್ಥಾನಗಳಿಗೆ ಶ್ರೀ ಶರತ್ ಬೋಸರು ರಾಜೀನಾಮೆ ಇತ್ತಿರುವರೆಂದು ವರದಿಯಾಗಿದೆ.

ಮದರಾಸಿನಲ್ಲಿ ೨೫೦೦ ಬಂದಿಗಳ ಬಿಡುಗಡೆ

ಮದರಾಸಿನ ವಿವಿಧ ಪ್ರಾಂತ್ಯಗಳಲ್ಲಿ ಸುಮಾರು ೧೬೦೦೦ ಮಂದಿ ಕಾರಾಗೃಹ ವಾಸವನ್ನನುಭವಿಸುತ್ತಿದ್ದಾರೆ. ಭಾರತ ಸ್ವಾತಂತ್ರ್ಯ ದಿನದ ಸವಿ ನೆನಪಿಗಾಗಿ ಅವರಲ್ಲಿ ೨೫೦೦ ಮಂದಿಯನ್ನು ಬಿಡುಗಡೆ ಮಾಡಲು ಅಲ್ಲಿನ ಸರ್ಕಾರವು ನಿರ್ಧರಿಸಿದೆಯೆಂದು ವರದಿಯಾಗಿದೆ. ಇವರುಗಳಲ್ಲಿ ರಾಜಕೀಯ ಬಂದಿಗಳು ಸೇರಿರುವುದಿಲ್ಲ.

ಹಿಂದೂಸ್ಥಾನ-ಪಾಕಿಸ್ಥಾನಗಳಲ್ಲಿ ಮಿಶ್ರ ಮಂತ್ರಿಮಂಡಲ

ಹಿಂದೂಸ್ಥಾನ ಮತ್ತು ಪಾಕಿಸ್ಥಾನ ಸರ್ಕಾರಗಳಲ್ಲಿ ಸಮ್ಮಿಶ್ರ ಮಂತ್ರಿಮಂಡಲಗಳನ್ನು ರಚಿಸುವ ಬಗ್ಗೆ ದೆಹಲಿಯ ರಾಜಕೀಯ ವಲಯಗಳಲ್ಲಿ ಮಾತುಕತೆ ನಡೆಯುತ್ತಿದೆಯೆಂದು ಒಂದು ವರದಿಯು ತಿಳಿಸುತ್ತದೆ. ಕಾಂಗ್ರೆಸ್ ನಾಯಕರುಗಳಿಗೂ ಪ್ರಾಂತೀಯ ಮಂತ್ರಿಮಂಡಲಗಳಿಗೂ ಈ ಬಗ್ಗೆ ಮಾತುಕತೆ ನಡೆಯುತ್ತಿದೆಯೆಂದೂ, ಪ್ರಾಂತ್ಯಗಳ ಆಡಳಿತದಲ್ಲಿ ಕಾಂಗ್ರೆಸ್ಸಿನೊಡನೆ ಒಪ್ಪಂದ ಮಾಡಿಕೊಳ್ಳುವ ವಿಷಯವಾಗಿ ಲೀಗ್ ಹೈ ಕಮ್ಯಾಂಡಿನೊಡನೆ ಮಿ|| ಜಿನ್ನಾರವರು ಸಮಾಲೋಚನೆ ನಡೆಸಿದುದಾಗಿಯೂ ಸಹ ಅದು ತಿಳಿಸುತ್ತದೆ.

ಸಹಾಯಾರ್ಥ ಪ್ರದರ್ಶನ

[ಸ್ವಂ ಸು.] ನಂಜನಗೂಡು ೨೩

ನಿನ್ನೆ ಸಂಜೆ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳ ಉಪಾಹಾರ ನಿಧಿಗಾಗಿ ಪ್ರೊ|| ಕೆ. ಕೆ. ಶ್ರೀಧರರವರ ಸ್ಟೆಲ್ಲರ್ ಸರ್ಕಸ್ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಬಂದಿದ್ದ ಖರ್ಚು ಕಳೆದು ೨೦೦ ರೂ. ಗಳನ್ನು ಉಪಾಹಾರದ ನಿಧಿಗಾಗಿ ಜಮಾ ಮಾಡಲಾಗುವುದೆಂದು ತಿಳಿದು ಬಂದಿದೆ.

ರಾಜಕಮಲ್

ತಾ|| 25-7-47 ರಿಂದ

ಅಮೋಘ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್ ★

—: ಭೂಮಿಕೆ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

ಪ್ರಕಟಣೆ

ಚಾಮರಾಜನಗರದ ಎಲೆಕ್ಟ್ರಿಕ್ ಕಾಲೊನಿಯ ಪಕ್ಕದಲ್ಲಿ ರಾಮಸಮುದ್ರ ರಸ್ತೆಗೆ ಸೇರಿದಂತಿರುವ ೪೫ × ೬೦ ಅಳತೆಯ ನಾಲ್ಕು ಸೈಟುಗಳು ಖರೀದಿಗಿವೆ. ಉತ್ತಮವಾದ ಸ್ಥಳ. ಬಂಗಲೆಗಳನ್ನು ಕಟ್ಟಲು ಅನುಕೂಲವಾಗಿದೆ. ಶಾಲೆಗಳು ಮತ್ತು ಹೈಸ್ಕೂಲುಗಳಿಗೆ ಸಮೀಪವಾಗಿರುತ್ತವೆ. ಬೇಕಾದವರು ಕೆಳಗಿನ ವಿಳಾಸದಲ್ಲಿ ವಿಚಾರಿಸಬಹುದು.

ಎಂ. ಅಶ್ವತ್ಥನಾರಾಯಣ,
ಶ್ರೀ ನರಸಿಂಹ ಮೆಡಿಕಲ್ ಸ್ಟೋರ್ಸ್,
ಚಾಮರಾಜನಗರ

ಗ್ರೀಸಿನಲ್ಲಿ ಘೋರ ಕದನ

ಅಲ್ಬೇನಿಯಾ ಗಡಿಗೆ ೩೫ ಮೈಲಿ ದೂರದಲ್ಲಿರುವ ನಗರವೊಂದನ್ನು ೧೫೦೦ ಮಂದಿ ಗ್ರೀಕ್ ಗೆರಿಲ್ಲಾಗಳು ಮುತ್ತಿದ್ದಾರೆಂದು ವರದಿಯಾಗಿದೆ. ಗೆರಿಲ್ಲಾ ಪಡೆಯವರು ಭಾರಿ ಶಸ್ತ್ರಾಸ್ತ್ರಗಳಿಂದೊಡಗೂಡಿ ಮುತ್ತಿಗೆ ನಡೆದಾಗ ೨೦೦ ಮಂದಿ ದಂಗೆಕೋರರು ಮೃತರಾಗಿರುವರೆಂದೂ ಗೊತ್ತಾಗಿದೆ. ... ಜನರ ಗೆರಿಲ್ಲಾ ತಂಡವೊಂದು ಅಥೆನ್ಸ್ ನಗರಕ್ಕೆ ೧೦೦ ಮೈಲಿ ದೂರವಿರುವ ಮತ್ತೊಂದು ನಗರವನ್ನು ಮುತ್ತಿ ಕದನ ನಡೆಸಿದೆ. ಅಲ್ಲಿ ಭಾರೀ ನಷ್ಟನೋವುಗಳಾಗಿವೆ.

ಪ್ರೆಸ್ ಕೆಲಸಗಾರರ ಸಂಘ

ಮೊನ್ನೆ ಸಂಜೆ ಬೆಂಗಳೂರು ಗೌರ್ನಮೆಂಟ್ ಪ್ರೆಸ್ಸಿನ ಕೆಲಸಗಾರರ ಸಂಘದ ... ಘೋಷವನ್ನು ಗೃಹ ಸಚಿವರಾದ ... ಶ್ರೀ|| ಎಂ. ಸೀತಾರಾಮಯ್ಯನವರು ನೆರವೇರಿಸಿದರು.

ಹೋಟೆಲ್ ಕೆಲಸಗಾರರ ಸಭೆ

ಮೈಸೂರು

ಜವಾಬ್ದಾರಿ ಮಂತ್ರಿಮಂಡಲದ ಉಪ... ರದ ಶ್ರೀ ಜಂಗ್ ... ಮತ್ತು ... ಸಹೋದ್ಯೋಗಿಗಳಿಗೆ ಒದಗಿದ ... ಜನಗಳಿಗಾಗಿ ಸಂತೋಷವನ್ನು ವ್ಯಕ್ತಪಡಿಸುವುದು, ಆಗಸ್ಟ್ ೧೫ ರ ದಿನ ಸ್ವಾತಂತ್ರ್ಯ ದಿನವನ್ನಾಚರಿಸಲು ಕೆಲಸಗಾರರಿಗೆ ... ರಜಾ ಕೊಡಬೇಕೆಂದು ಹೋಟೆಲ್ ಮಾಲಿಕರುಗಳನ್ನು ಪ್ರಾರ್ಥಿಸುವುದು, ಸಂ... ಕಾರ್ಯಕರ್ತರೂ ಮಾರ್ಗನ್ ... ಗಾರರೂ ಆಗಿದ್ದ ಶ್ರೀ ವೆಂಕಟರಾಯ... ನಿಧನಕ್ಕಾಗಿ ಸಂತಾಪವನ್ನು ವ್ಯಕ್ತಪಡಿಸುವುದು - ಮೊದಲಾದ ನಿರ್ಣಯಗಳು ... ಮುಕ್ತಾಯ ... ಸೇರಿದ್ದ ಹೋಟೆಲ್ ಕೆಲಸಗಾರರ ಸಂಘದ ಸಭೆಯಲ್ಲಿ ಅಂಗೀಕೃತವಾದುವು.

ಮೈಸೂರು ಸಿಟಿ ರೇಷನಿಂಗ್

ನಂ. R 681

೧೯೪೭ ನೇ ಇಸವಿ ಜುಲೈ ಮಾಹೆ ... ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಡಿಪೋ, ... ಎಲ್ಲಾ ಸಬ್ ಗೋಡೌನ್ ವರ್ತಕರ ... ತೆ, ಸಮರ್ಪಕ ಸಂಗ್ರಹವಿರುವ ದಿನ ... ಎಣಿಕೆ ಮಾಡಬೇಕಾಗಿರುವುದರಿಂದ ... ವರ ಡಿಪೋಗಳು ಮುಚ್ಚಲ್ಪಡುತ್ತವೆ.

ಎಂ. ಶ್ರೀನಿವಾಸಲು ನಾಯುಡು
ರೇಷನಿಂಗ್ ಆಫೀಸರ್
ಮೈಸೂರು ಸಿಟಿ.

ವುಡ್‌ಲ್ಯಾಂಡ್ಸ್

25-7-47 ರಿಂದ

ಚಿತ್ರವಿಷಯ ೧೪ ನೇ ವಾ...

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮೂರು ಆಟ.)

ನಾವು ಇಬ್ಬರು

—: ಪಾತ್ರ :—

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ, ಸಾರಂಗಪಾಣಿ

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply IND, Basavangudi, Banglore.

Edited, printed and published by A. R. Nagarajan at the Sadhvi Press, D. Subbaiah Road, Mysore

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೨೯—೭—೪೭ [ಸಂಚಿಕೆ ೮

ಭಾರತ ಯೂನಿಯನ್ ಗೌರ್ನರುಗಳ ನೇಮಕ

ಹಳೆಯ ಧ್ವಜವನ್ನೂ ಉಪಯೋಗಿಸಬಹುದು

ಹೊಸ ರಾಷ್ಟ್ರೀಯ ಧ್ವಜದ ನಿರ್ದಿಷ್ಟವಾದ ಸ್ವರೂಪವು ಭಾರತದ ಹಳ್ಳಿ ಹಳ್ಳಿಗಳಿಗೂ ಸರಿಯಾಗಿ ತಿಳಿಯಲು ಸಾವಕಾಶವಾಗಬಹುದು. ಅಲ್ಲದೆ ಧ್ವಜಗಳಿಗೆ ಬೇಕಾಗುವಷ್ಟು ಖಾದಿ ಬಟ್ಟೆಯು ದೊರೆಯಲೂ ಕಷ್ಟವಾಗಬಹುದು. ಆದುದರಿಂದ ಸಾಧ್ಯವಾದ ಕಡೆಗಳಲ್ಲೆಲ್ಲಾ ಹೊಸ ಧ್ವಜವನ್ನು ಹಾರಿಸಬಹುದು ಹಾಗೆ ಆಗದಿದ್ದ ಕಡೆಗಳಲ್ಲಿ ಹಳೆಯ ಧ್ವಜವನ್ನೇ ಹಾರಿಸಬಹುದು ಎಂಬುದಾಗಿ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ತಿಳಿಸಿದ್ದಾರೆ.

ಅಖಿಲ ಭಾರತ ನೂಲುವವರ ಸಂಘದವರು ಇದುವರೆಗೆ ತಯಾರಿಸಿ ಇಟ್ಟುಕೊಂಡಿರುವ ಸುಮಾರು ೩ ಲಕ್ಷ ರೂ ಬಾಳುವ ಹಳೆಯ ಧ್ವಜಗಳು ಇನ್ನೂ ಹಾಗೆಯೇ ಉಳಿದಿರುತ್ತವೆ ಅವುಗಳು ಮಾರಾಟವಾಗದಿದ್ದರೆ ಬಡವರ ಜೀವನಾಧಾರಕ್ಕಾಗಿ ನಿರ್ಮಿತವಾಗಿರುವ ಆ ಸಂಸ್ಥೆಗೆ ಬಹಳ ನಷ್ಟವಾಗುತ್ತದೆ ಆದುದರಿಂದ ಆ ಧ್ವಜಗಳನ್ನೂ ಸಹ ಉಪಯೋಗಿಸಬೇಕು ಹೊಸ ಧ್ವಜವು ಬಂದರೂ ಸಹ ಹಳೆಯದನ್ನು ಬಹಿಷ್ಕರಿಸಬೇಕಾಗಿಲ್ಲ ಎಂದು ವಿ. ಶಾಸ್ತ್ರಿಯವರು ಸೂಚಿಸಿರುವರು

ಡಚ್ ಆಕ್ರಮಣಕ್ಕೆ ಆಸ್ಟ್ರೇಲಿಯ ಕಾರ್ಮಿಕರ ವಿರೋಧ

ಡಚ್ ಸರ್ಕಾರವು ಇಂಡೋನೇಷ್ಯದ ವಿರುದ್ಧವಾಗಿ ಹೂಡಿರುವ ಯುದ್ಧವನ್ನು ಪ್ರತಿಭಟಿಸಿ ಅದು ತನ್ನ ಆಕ್ರಮಣ ನೀತಿಯನ್ನು ಕೂಡಲೇ ಬದಲಾಯಿಸಬೇಕೆಂದೂ ಭಾರತ ಮತ್ತು ಬ್ರಿಟಿಷ್ ಸರ್ಕಾರಗಳು ಇಂಡೋನೇಷ್ಯಕ್ಕೆ ನೆರವು ನೀಡಬೇಕೆಂದೂ ಡಚ್ ಕಾರ್ಮಿಕ ಪಕ್ಷವು ಕೋರಿರುತ್ತದೆ.

ಸಬರಮತಿಗೆ ಬರಲು ಗಾಂಧೀಜಿಯವರಿಗೆ ಕರೆ

ಭಾರತವು ಸ್ವತಂತ್ರವಾಗುವವರೆಗೆ ಆ ಸಬರಮತಿ ಆಶ್ರಮದೊಳಕ್ಕೆ ಕಾಲಿಡುವುದಿಲ್ಲವೆಂಬುದಾಗಿ ಮಹಾತ್ಮ ಗಾಂಧಿಯವರು ೧೫ ವರ್ಷಗಳ ಹಿಂದೆ ನಿರ್ಧರಿಸಿದ್ದರು ಈಗ ಭಾರತವು ಸ್ವಾತಂತ್ರ್ಯವನ್ನು ಗಳಿಸಿದೆಯೆಂದೂ, ಆದುದರಿಂದ ಅವರು ಸಬರಮತಿ ಆಶ್ರಮಕ್ಕೆ ಬರಬೇಕೆಂದೂ ಅಲ್ಲಿನ ನಿವಾಸಿಗಳು ಮಹಾತ್ಮರನ್ನು ಪ್ರಾರ್ಥಿಸಿರುವರು. ಭಾರತವು ಇನ್ನೂ ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸಿಲ್ಲವೆಂದೂ ಅದು ಇನ್ನೂ ಬಹಳ ದೂರವಾಗಿದೆಯೆಂದೂ, ತಮಗೆ ನೌಕಾಲಿಯು ಆಶ್ರಮವೆಂದೂ ಮಹಾತ್ಮರು ತಿಳಿಸಿರುವರು

ಮದರಾಸ್ ಶಾಲೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ

ಎಲ್ಲಾ ಶಾಲೆಗಳಲ್ಲೂ ಆಗಸ್ಟ್ ೧೫ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಬೇಕೆಂದೂ, ರಾಷ್ಟ್ರಧ್ವಜವನ್ನು ಹಾರಿಸಬೇಕೆಂದೂ, ಮಕ್ಕಳಿಗೆ ಸಿಹಿಯನ್ನು ಹಂಚಬೇಕೆಂದೂ ಮದರಾಸ್ ಸರ್ಕಾರವು ಆಜ್ಞೆ ಮಾಡಿರುತ್ತದೆ ಸ್ಕೂಲುಗಳು ಆ ದಿನ ಸರ್ಕಾರಿ ರಜಾ ದಿನ ಸೂಕ್ತವಾದ ಏರ್ಪಾಡುಗಳನ್ನು ಮಾಡಲು ಬೇಕಾದ ವೆಚ್ಚಗಳನ್ನು ವಹಿಸಬಹುದೆಂದೂ ಸರ್ಕಾರ ತಿಳಿಸಿದೆ

ಲೀಗ್ ಧ್ವಜದಲ್ಲೂ ಬದಲಾವಣೆ

ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾತರಿಗೂ ಅಂಗೀಕಾರವಾಗುವಂತಹ ರೀತಿಯಲ್ಲಿ ಮುಸ್ಲಿಂ ಲೀಗ್ ಧ್ವಜವನ್ನು ಬದಲಾಯಿಸುವ ಬಗ್ಗೆ ಲೀಗ್ ನಾಯಕರು ಪರ್ಯಾಲೋಚಿಸುತ್ತಿರುವರೆಂದು ವರದಿಯಾಗಿದೆ. ಈಗಿರುವ ಲೀಗ್ ಧ್ವಜವು ಕೇವಲ ಮತದ ಚಿಹ್ನೆಯಾಗಿರುವುದರಿಂದ ಅದನ್ನು ಬದಲಾಯಿಸುವ ಪ್ರಯತ್ನಗಳು ನಡೆಯುತ್ತಿವೆ

ಚೀಣಾದ ಮಧ್ಯಸ್ತಿಕೆಗೆ ಡಚ್ಚರ ನಿರಾಕರಣೆ

ಡಚ್ಚರಿಗೂ, ಇಂಡೋನೇಷ್ಯರಿಗೂ ನಡೆಯುತ್ತಿರುವ ಕದನದಲ್ಲಿ ತಾವು ಮಧ್ಯಸ್ತಿಕೆ ವಹಿಸಿ ಇಬ್ಬರಿಗೂ ಒಪ್ಪಂದವುಂಟುಮಾಡುವುದಾಗಿ ಚೀಣಾ ಸರ್ಕಾರವು ಹೇಳಿದುದನ್ನು ಡಚ್ಚರು ಅಂಗೀಕರಿಸಲಿಲ್ಲವೆಂದೂ, ತಮ್ಮ ಒಳಗಿನ ವಿಷಯಗಳಲ್ಲಿ ಪರರು ಪ್ರವೇಶಿಸಬೇಕಾಗಿಲ್ಲವೆಂದು ಡಚ್ ಸರ್ಕಾರವು ತಿಳಿಸಿರುವುದಾಗಿಯೂ ವರದಿಯಾಗಿದೆ.

ವಿಶ್ವವಿದ್ಯಾಲಯದ ಮೇಲೆ ದಾವಾ

ವಿಶ್ವವಿದ್ಯಾಲಯದವರು ೮ ಜನ ವಿದ್ಯಾರ್ಥಿಗಳ ಮೇಲೆ ಹಾಕಿರುವ ನಿರ್ಬಂಧವು ಅಕ್ರಮವಾಗಿದೆಯೆಂದೂ, ಅದನ್ನು ರದ್ದು ಮಾಡಬೇಕೆಂದೂ ಕೋರಿ ಆ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಮೇಲೆ ನ್ಯಾಯಸ್ಥಾನದಲ್ಲಿ ಕಟ್ಟಲೆಯನ್ನು ಹೂಡಲಿರುವರೆಂದು ತಿಳಿದುಬಂದಿದೆ.

ಡಚ್ ವಿಮಾನಗಳಿಗೆ ಭಾರತದ ಅನುಮತಿ ಇಲ್ಲ

ಭಾರತದ ಮೂಲಕ ಡಚ್ ವಿಮಾನಗಳು ಹಾದು ಹೋಗುವುದನ್ನು ನಿಲ್ಲಿಸಬೇಕೆಂದು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ವರದಿಯಾಗಿದೆ. ಕಲ್ಕತ್ತಾ ಬಂದರಿನಲ್ಲಿ ಡಚ್ ಹಡಗುಗಳಿಗೆ ಸಾಮಾನುಗಳನ್ನು ತುಂಬುವುದಕ್ಕೂ, ಅವುಗಳಿಂದ ಇಳಿಸುವುದಕ್ಕೂ ಕೆಲಸಗಾರರು ನಿರಾಕರಿಸಿರುವರು

ಇಂಗ್ಲೆಂಡಿನ "ಕ್ಯಾಥೊಲಿಕ್" ಪತ್ರಿಕೆ ಯಾತ್ರಿಕರನ್ನು ಕರೆದುಕೊಂಡು ಹೋಗುತ್ತಿದ್ದ ಒಂದು ವಿಮಾನವು ಪ್ರಯಾಣಿಕರೊಡನೆ ಬಿದ್ದು ಹೋಯಿತು ಸುಮಾರು ೨೦ ಮಂದಿ ಮರಣಹೊಂದಿರುವರು ೨೦ ಜನರಿಗೆ ಪೆಟ್ಟು ತಗುಲಿ ಗಾಯಗೊಂಡಿರುವರು

ಅರಮನೆಯ ಮುಂದೆ ವಿದ್ಯಾರ್ಥಿಗಳ ಸತ್ಯಾಗ್ರಹವೇ?

ಮೈಸೂರು ೨೮

೮ ಮಂದಿ ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯದವರು ಕೈಗೊಂಡಿರುವ ಶಿಸ್ತಿನ ಕಾರ್ಯಕ್ರಮವು ರದ್ದಾಗದಿರುವುದರಿಂದ ಅದಕ್ಕೆ ತಕ್ಕ ಪರಿಹಾರವನ್ನು ಪಡೆಯಲು ಭಾಸ್ಕರರಾದ ಶ್ರೀ ಮನ್ಮಹಾರಾಜರವರಿಗೆ ಮನವಿಯನ್ನು ಸಲ್ಲಿಸಬೇಕೆಂದೂ, ಅದಕ್ಕೆ ಸಮಾಧಾನ ಉತ್ತರವು ದೊರೆಯದಿದ್ದರೆ ಕರ್ನಾಟಕದ ವಿವಿಧ ಭಾಗಗಳಿಂದಲೂ ವಿದ್ಯಾರ್ಥಿಗಳ ತಂಡವನ್ನು ಬರಮಾಡಿಕೊಂಡು ಅರಮನೆಯ ಮುಂದೆ ಉಪವಾಸ ಸತ್ಯಾಗ್ರಹವನ್ನು ಆರಂಭಿಸಬೇಕೆಂದೂ ನೆನ್ನೆ ನಡೆದ ಶ್ರೀ ಕೆ. ಎಸ್. ಸ್ವಾಮಿ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಧರಿಸಲಾಯಿತೆಂದು ವರದಿಯಾಗಿದೆ

ಭಾರತ ಡೊಮಿನಿಯನ್ ಗೌರ್ನರುಗಳು

ಭಾರತದ ವಿವಿಧ ಪ್ರಾಂತ್ಯಗಳಿಗೆ ಈ ಕೆಳಗೆ ಕಂಡವರನ್ನು ಗವರ್ನರುಗಳಾಗಿ ನೇಮಿಸಲಾಗಿದೆ ಬಿಹಾರ್ ಪ್ರಾಂತ್ಯಕ್ಕೆ ಶ್ರೀ ಜೈರಾಂದಾಸ್ ದೌಲತ್‌ರಾಂ, ಮಧ್ಯ ಪ್ರಾಂತಕ್ಕೆ ಶ್ರೀ ಕೆ. ಎಂ. ಮುನ್ಷಿ, ಒರಿಸ್ಸಾ ಪ್ರಾಂತ್ಯಕ್ಕೆ ಡಾ॥ ಬಿಧನ ಚಂದ್ರ ರಾಯ್, ಪೂರ್ವ ಪಂಜಾಬಿಗೆ ಸರ್ ಚಂದೂಲಾಲ್ ತ್ರಿವೇದಿ ಮತ್ತು ಪಶ್ಚಿಮ ಬಂಗಾಳಕ್ಕೆ ಆಚಾರ್ಯ ಕೃಪಲಾನಿ

ಶ್ರೀ ಸಿ. ಪಿ. ತಿ ಹ ಮ್ಮದ್ ಕಿದ್ವಾಯ್ ರಾಜಕುಮಾರಿ ಅಮೃತ ಕೌರ್, ವಿಜಯ ನಿಸ್ಸಾಮಿ ಪಿಳ್ಳೆ, ಎನ್ ವಿ ಗಾಡ್ಗಿಲ್ ಮತ್ತು ಡಾ॥ ಶ್ಯಾಮ ಪ್ರಸಾದ ಮುಖರ್ಜಿ ಇವರುಗಳು ಭಾರತ ಕೇಂದ್ರ ಸರ್ಕಾರದ ಹೆಚ್ಚಿನ ಸಚಿವರುಗಳಾಗಿ ಆರಿಸಲ್ಪಟ್ಟಿರುವರು

ಪಾಕಿಸ್ಥಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಇಲ್ಲ

ಭಾರತವು ಇಬ್ಭಾಗವಾಗಿರುವುದರಿಂದ ಪಾಕಿಸ್ಥಾನದಲ್ಲಿ ಉಳಿಯಬೇಕಾಗಿರುವ ಅನೇಕ ಜನರಿಗೆ ಆಗಸ್ಟ್ ೧೫ ನೇ ತಾರೀಖಿನ ಸ್ವಾತಂತ್ರ್ಯ ದಿನಾಚರಣೆಯು ಸಂತೋಷವನ್ನುಂಟು ಮಾಡುವುದಿಲ್ಲವೆಂದೂ, ಜನರ ಹೃದಯದಲ್ಲಿ ದುಃಖವು ತುಂಬಿರುವುದೆಂದೂ, ಆದುದರಿಂದ ಪಾಕಿಸ್ಥಾನ ಪ್ರದೇಶದಲ್ಲಿರುವ ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕಾಗಿಲ್ಲವೆಂದೂ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ತಿಳಿಸಿರುವರು.

ರೆಸಿಡೆಂಟರ ನಿರ್ಗಮನ

ಸ್ವಂ ಸು ಪ್ರೆ] ಬೆಂಗಳೂರು ೨೮

ದಂಡಿನ ಪ್ರದೇಶವು ಮೈಸೂರಿಗೆ ಸೇರುವುದರಿಂದ ಅಲ್ಲಿನ ರೆಸಿಡೆಂಟರಾಗಿರುವ ಸರ್ ವಾಲ್ಟರ್ ಕ್ಯಾಂಬೆಲ್‌ರವರು ಆಗಸ್ಟ್ ೧೫ ನೇ ತಾರೀಖು ಸಂಜೆ ಸ್ವದೇಶಕ್ಕೆ ಹಿಂದಿರುಗುವರೆಂದು ಹೇಳಲಾಗಿದೆ ಅದೇ ದಿನ ಬೆಳಿಗ್ಗೆ ಅವರ ಕಾರ್ಯದರ್ಶಿಗಳಾದ ಮಿ॥ ಟ್ರಾವರ್ಸ ಸಹ ತೆರಳುವರು ಇತರ ಅಧಿಕಾರಿವರ್ಗದವರಲ್ಲಿ ಸದ್ಯಕ್ಕೆ ಯಾವ ಬದಲಾವಣೆಯೂ ಆಗುವುದಿಲ್ಲವೆಂದೂ ಇನ್ನೂ ಒಂದು ವರ್ಷದ ಅವಧಿಗಳನ್ನು ಈಗಿರುವ ಸಂಬಳದ ಮೇಲೆಯೇ ಮುಂದುವರಿಸಲಾಗುವುದೆಂದೂ ಹೇಳಲಾಗಿದೆ ದಂಡಿನ ಪ್ರದೇಶವನ್ನು ವಹಿಸಿಕೊಡುವ ಕಾರ್ಯವು ಆರಂಭವಾಗಿದೆ.

ವಿಮಾನ ಕಾರ್ಖಾನೆ

ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ನಮ್ಮ ಸರ್ಕಾರದವರು ಇದುವರೆಗೆ ಹಾಕಿರುವ ೬೫ ಲಕ್ಷ ರೂಪಾಯಿನ ಬಂಡವಾಳದ ಜೊತೆಗೆ ಇನ್ನೂ ಒಂದು ಕೋಟಿ ರೂಪಾಯಿಗಳನ್ನು ಹಾಕಲಿರುವರೆಂದು ಹೇಳಲಾಗಿದೆ ಅಲ್ಲಿ ಹೊಸ ಮಾದರಿಯ ಟ್ರೈನ್ ಗಾಡಿಗಳನ್ನು ತಯಾರಿಸಲಾಗುವುದು.

ಗ್ರಾಮ ಕೈಗಾರಿಕೆ

೫೦ ಲಕ್ಷ ರೂಪಾಯಿನ ವೆಚ್ಚದಲ್ಲಿ ಗ್ರಾಮ ಕೈಗಾರಿಕೆಗಳನ್ನು ವಿಸ್ತರಿಸುವ ಮೂರು ವರ್ಷಗಳ ಯೋಜನೆಯೊಂದನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕೇಂದ್ರವನ್ನು ಸ್ಥಾಪಿಸಲಾಗುವುದು

ಪ್ರಾಥಮಿಕ ವಿದ್ಯಾಭ್ಯಾಸ

ಇನ್ನೂ ಕೆಲವು ಹೋಬಳಿಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಶಾಸನವನ್ನು ಅನ್ವಯಿಸಿ ಸರ್ಕಾರದವರು ಆಜ್ಞೆಯನ್ನು ಹೊರಡಿಸಿರುತ್ತಾರೆ

ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಭಾರತದ ದೂರು

ಇಂಡೋನೇಷ್ಯದಲ್ಲಿ ಡಚ್ಚರು ನಡೆಸುತ್ತಿರುವ ಆಕ್ರಮಣವಾದ ಧಾಳಿಯನ್ನು ಕೂಡಲೇ ನಿಲ್ಲಿಸ ಮಾಡಲು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಈ ದಿನ ಭಾರತವು ಕ್ರಮ ಪ್ರಕಾರವಾಗಿ ಸೂಚನೆಯನ್ನು ಕಳುಹಿಸಲಿರುವುದೆಂದು ಭಾರತದ ವಿದೇಶಾಂಗ ಮಂತ್ರಿ ಪಂಡಿತ ನೆಹರೂರವರು ತಿಳಿಸಿರುವರು.

LATEST NEWS

ಸ್ವಂ ಸು ಪ್ರೆ] ಬೆಂಗಳೂರು ೨೮

ನಮ್ಮ ಸರ್ಕಾರದವರು ಈ ದಿನ ವಿಶೇಷ ಗೆಜೆಟ್ ಪ್ರಕಟಿಸಿದ್ದು ದಂಡು ಮೈಸೂರಿಗೆ ಸೇರಿ ಆಜ್ಞೆಯಾಗುವವರೆಗೆ ಬೆಂಗಳೂರು ದಂಡಿನ ಎಲ್ಲ ಸಿವಿಲ್ ಅಧಿಕಾರಿಗಳೂ ತಮ್ಮ ಕೆಲಸಕಾರ್ಯಗಳನ್ನು ಆಯಾ ಸ್ಥಳದಲ್ಲಿ ಮುಂದುವರಿಸಿಕೊಂಡು ಹೋಗತಕ್ಕದ್ದೆಂದು ಆಜ್ಞೆ ಮಾಡಿರುತ್ತಾರೆ.

ಶ್ರೀ ಆರ್. ಮುತ್ತೋಜೀರಾವ್ ಸಿಂಧ್ಯರವರನ್ನು ಪೊಲೀಸ್ ಡೆಪ್ಯುಟಿ ಡೈರೆಕ್ಟರ್ ಜನರಲ್ಲಾಗಿ ನೇಮಿಸಿ ಆಜ್ಞೆ ಹೊರಟಿರುತ್ತದೆ

ನಿತ್ಯೋಪಾಕರ್ಮಾಚರಣೆ

ಆಸ್ಥಾನ ಮಹಾ ವಿದ್ವಾನ್ ಸುಬ್ರಹ್ಮಣ್ಯ ಜೋಯಿಸರವರು ಈ ರೀತಿ ಬರೆದಿರುತ್ತಾರೆ:—

ನಿತ್ಯೋಪಾಕರ್ಮ ನಿರ್ಣಯದ ವಿಚಾರವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅಂಶವನ್ನು ನೋಡಿ ಕೆಲವರಿಗೆ ಉಪಾಕರ್ಮಾಚರಣೆಯಲ್ಲಿ ಸಂದೇಹವುಂಟಾಗಿ ನಮಗೆ ಕಾಗದಗಳನ್ನು ಬರೆದಿರುತ್ತಾರೆ ಅದರ ವಿಚಾರವನ್ನು ಈ ಕೆಳಗೆ ವಿವರಿಸಿದೆ

ಉಪಾಕರ್ಮವನ್ನು ಶ್ರಾವಣ ಮಾಸದಲ್ಲೇ ಮಾಡಬೇಕೆಂಬ ವಿಧಿ ಇದೆ ಶ್ರಾವಣವು ಅಧಿಕವಾಗಿದ್ದಾಗ, ಅಧಿಕ ಶ್ರಾವಣದಲ್ಲೇ ಮಾಡಬೇಕೆಂದು ಎಲ್ಲೂ ಹೇಳಿಲ್ಲ. ಶ್ರಾವಣದಲ್ಲಿ ಅನಾನುಕೂಲವೊದಗಿದವರು ಭಾದ್ರಪದ ಮಾಸವು ಅಧಿಕವಾಗಿದ್ದರೂ ಅದರಲ್ಲೇ ಮಾಡಬಹುದೆಂಬ ಶಾಸ್ತ್ರಕಾರರ ಅಭಿಪ್ರಾಯವು ಸ್ಮೃತಿ ರತ್ನಮಾಲೆಯಿಂದ ತಿಳಿಯುತ್ತದೆ.

"ಮಲೇ ಪ್ರೋಷ್ಠಪದೇ ಮಾಸಿ
ಓಷಧಿಪ್ರಾದುರ್ಭಾವೇ।
ಅಥ ಚ ಶುದ್ಧಪ್ರೋಷ್ಠಪದ್ಯಾಂ ಅರ್ಧ
ರಾತ್ರಾದರ್ವಾ[illegible] ಪರಾದಿಸತ್ವಂ,
ತದಾ ಮಲಮಾಸೇಪಿ ದ್ವಿತೀಯಾ
[illegible]"

ವೈದಿಕಸಾರ್ವಭೌಮ ಕೃತ ಪರಶಿರ್ಣಯ ಗ್ರಂಥದಲ್ಲಿ ಶ್ರಾವಣ ಮಾಸದಲ್ಲೇ ನಿತ್ಯೋಪಾಕರ್ಮವನ್ನು ಮಾಡಬೇಕೆಂದು ತಿಳಿಸುವ ಪ್ರಕರಣದಲ್ಲಿ ಉದಹರಿಸಿರುವ ಅತ್ರೇಯ, ಸ್ಮೃತಿಚಂದ್ರಿಕಾ ವಚನಗಳು ನಿತ್ಯೋಪಾಕರ್ಮವನ್ನು ಶ್ರಾವಣದಲ್ಲೇ ಮಾಡಬೇಕೆನ್ನುವ ಅಂಶಕ್ಕೆ ಸಹಾಯ[illegible] ವೇ ವಿನಹ ಶ್ರಾವಣವು ಅಧಿಕ ಬಂದಾಗ ಅದರಲ್ಲೇ ಮಾಡಬೇಕೆಂದು ತಿಳಿಸುವುದಿಲ್ಲ.

ಅತ್ರೇಯಃ

"ಗುರುಭಾರ್ಗವಯೋರ್ಮೌಢ್ಯೇ...
ಶ್ರಾವಣಸ್ಯ ತು ನಿತ್ಯತ್ವಾತ್
ಕರ್ತವ್ಯಂ ನಿತ್ಯಕರ್ಮವತ್" ॥

ಸ್ಮೃತಿಚಂದ್ರಿಕಾಯಾಂ—

"ಉಪಾಕರ್ಮಣಿಚೋತ್ಸರ್ಗೇ.... ।
ಬಾಲ್ಯೇವಾ ವಾರ್ಧಕೇವಾಪಿ
ಮೌಢ್ಯೇವಾ ಗುರುಶುಕ್ರಯೋಃ ।
ಸಂಕ್ರಮಾದಿಷು ಚೈತಾನಿ ದೋಷಾನ್ಯಪಿ
ನ ಪಶ್ಯತಿ ॥

ಸ್ಮೃತಿಚಂದ್ರಿಕೆಯಲ್ಲಿ ಸಂಕ್ರಮಾದಿಮಾಸಗಳಲ್ಲಿ ಉಪಾಕರ್ಮ ಮಾಡಬಹುದೆಂಬ ಅಂಶವು ಭಾದ್ರಪದವು ಅಧಿಕ ಬಂದಾಗ ಮಾತ್ರ ಮಾಡಬೇಕೆಂದು, ಆರಂಭದಲ್ಲಿ ತಿಳಿಸಿರುವಂತೆ ಸಂಸ್ಕಾರ ರತ್ನಮಾಲೆಯಿಂದ ತಿಳಿದು ಬರುವುದು. ಹೀಗೆ ಅರ್ಥ ಸಂಕೋಚ ಮಾಡದೆ ಅಧಿಮಾಸ ಸಾಮಾನ್ಯದಲ್ಲೂ ಮಾಡಬಹುದೆಂದರೆ ಅಧಿಮಾಸದಲ್ಲಿ ಉಪಾಕರ್ಮವನ್ನು ಮಾಡಕೂಡದೆಂದು ನಿಷೇಧಿಸಿ ನಿಜದಲ್ಲೇ ಮಾಡಬೇಕೆಂದು ತಿಳಿಸುವ ವಚನಗಳಿಗೆ ಅನರ್ಥ ವುಂಟಾಗುವುದು.

ನಿಜಮಾಸದಲ್ಲೇ ಮಾಡಬೇಕೆಂಬುದಕ್ಕೆ ಪ್ರಮಾಣ ವಚನಗಳು

ಕಾಠಕ ಗೃಹ್ಯಪರಿಶಿಷ್ಟೇ—

ಸೋಮಯಾಗಂ ದಿ ಕರ್ಮಾಣಿ ನಿತ್ಯಾ
ನ್ಯಪಿ ಮಲಿಮ್ಲುಚೇ ....
ಮಾಸಿ [illegible]
[illegible] ಕರ್ಮಯತ್
[illegible]
ವರ್ಜಯೇನ್ಮಲೇ,"

ಸ್ಮೃತಿಮುಕ್ತಾಫಲೇ ಕಾಲಾದರ್ಶ ವಚನಂ—

"ಉಪಾಕರ್ಮೋತ್ಸರ್ಜನೇಚ
ಪವಿತ್ರದಮನಾರ್ಪಣಂ...
ಪ್ರಾವರ್ತ್ಯ ಪ್ರತಿಪಿದ್ಧಾನಿ ಪರಿತ್ಯಾಜ್ಯಾನಿ
ದೈವಿಕಂ"

ಉಪಾಕರ್ಮೇತ್ಯಾರಭ್ಯ ಪರಿತ್ಯಾಜ್ಯಾನಿ
ದೈವಿಕಂ ಇತ್ಯಂತ್ತೇನ ಮಲಮಾಸೇ
ವರ್ಜನೀಯಾನಾಂ ಸತಾಂ ಶುದ್ಧಮಾಸೇ
ಅವಶ್ಯಂಕರ್ತವ್ಯತ್ವೇನ ಸಂಗ್ರಹಾತ್ಯಕ್ತಂ
ಪ್ರಣಾಹಿ: ॥

"ಉಪಾಕರ್ಮ ಚ ಹವ್ಯಂ ಚ ... ।
ಉತ್ತರೇ ನಿಯತಂ ಕುರ್ಯಾತ್ಪೂರ್ವೇ
ತನ್ನಿಷ್ಫಲಂ ಭವೇತ್" ॥

ಹಾರೀತಃ ॥

"ಉಪಾಕರ್ಮ ತಥೋತ್ಸರ್ಗಂ.. ....
ಮಾಸ ವೃದ್ಧೌ ಪರಃ ಕಾರ್ಯಃ "।

ಈ ವಚನಗಳಿಂದ ನಿಜಮಾಸದಲ್ಲೇ ಉಪಾಕರ್ಮವನ್ನು ಆಚರಿಸಬೇಕೆಂದು ತಿಳಿದು ಬರುವುದು. ವೈದಿಕಸಾರ್ವಭೌಮರೂ "ಅಧಿಮಾಸ ವಿಷಯೇ ಕಾಲನಿರ್ಣಯೇ" ಎಂದು ಆರಂಭಿಸಿರುವ ಅಧಿಮಾಸೋಪಾಕರ್ಮ ಪ್ರಕರಣದಲ್ಲಿ ಅಧಿಕಶ್ರಾವಣದಲ್ಲೇ ಉಪಾಕರ್ಮವನ್ನು ಚರಿಸಬೇಕೆಂದು ಸ್ವಾಭಿಪ್ರಾಯವನ್ನು ಹೇಳಿಲ್ಲ ಅಧಿಮಾಸ ವಿಷಯದಲ್ಲಿ ಕಾಠಕಗೃಹ್ಯಸೂತ್ರ, ವೈದ್ಯನಾಥ, ಕಾಲಮಾಧವ, ಹಾರೀತ, ಪರಾಶರ, ವೈದಿಕಸಾರ್ವಭೌಮಾದಿಗಳ ಅಭಿಪ್ರಾಯವು ಒಂದೇ ವಿಧವಾಗಿ ತಿಳಿದುಬರುವುದೇ ವಿನಹ ಭಿನ್ನಾಭಿಪ್ರಾಯವು ಕಂಡುಬರುವುದಿಲ್ಲ ಇವರಲ್ಲಿ ಯಾರೂ ತಮ್ಮ ಗ್ರಂಥದಲ್ಲಿ ಅಧಿಕ ಶ್ರಾವಣದಲ್ಲೇ ಉಪಾಕರ್ಮವನ್ನು ಮಾಡಬೇಕೆಂದು ಹೇಳಿಲ್ಲ ಆದುದರಿಂದ ನಿಜಶ್ರಾವಣದಲ್ಲೇ ನಿತ್ಯೋಪಾಕರ್ಮವನ್ನು ಮಾಡುವುದು ಯುಕ್ತವಾಗಿ ಕಂಡುಬರುವುದು

ರಾಜಕಮಲ್

ತಾ॥ 25-7-47 ರಿಂದ

ಅಮೋಘ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

★ ಕಿಸ್ಮತ್ ★

—: ಭೂಮಿಕೆ : —

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

Edited printed and published by A. R. Nagarajan at the Sadhvi Press D. Subbaiah Road Mysore

ಜಿನ್ನಾರವರ ಕೋರಿಕೆಗೆ ನೇಪಾಳದ ಮನ್ನಣೆ ಇಲ್ಲ

ಪಾಕಿಸ್ತಾನ ಸರ್ಕಾರಕ್ಕೆ ಗೂರ್ಖ ಸಿಪಾಯಿಗಳನ್ನು ಸೇರಿಸಿಕೊಳ್ಳುವ ಬಗ್ಗೆ ನೇಪಾಳ ಸರ್ಕಾರವನ್ನು ಮಿ॥ ಜಿನ್ನಾರವರು ಕೇಳಿದುದಕ್ಕೆ ಅಲ್ಲಿನ ಸರ್ಕಾರವು ತಮಗೂ ಪಾಕಿಸ್ತಾನಕ್ಕೂ ಯಾವ ಬಗೆಯ ಸಂಬಂಧವೂ ಇಲ್ಲವೆಂದೂ, ಗೂರ್ಖ ಸಿಪಾಯಿಗಳನ್ನು ಪಾಕಿಸ್ತಾನಕ್ಕೆ ಕೊಡಲಾಗುವುದಿಲ್ಲವೆಂದೂ ಹೇಳಿ ಮಿ॥ ಜಿನ್ನಾರವರ ಬೇಡಿಕೆಯನ್ನು ತಳ್ಳಿಹಾಕಿರುವುದೆಂದು ವರದಿಯಾಗಿದೆ

ಸತ್ತವಳು ಬದುಕಿದಳು !

ಚಂದ್‌ನಾಥ ಎಂಬಲ್ಲಿ ಮರಣ ಹೊಂದಿದ ಬಿಕ್ಷುಕಿಯೊಬ್ಬಳನ್ನು ಜನರು ಹೊತ್ತು ತಂದಾಗ ಳು ವಾರಸುದಾರರಿಲ್ಲದೆ ಇಲ್ಲ ಗುಂಡಿ ತೋಡಿ ರಾತ್ರಿಯವರೆಗೂ ಮಣ್ಣು ಮುಚ್ಚದಿಂದೂ ಆದರೆ ಅಷ್ಟರಲ್ಲೇ ಅವಳು ಥಟ್ಟನೆ ಎದ್ದು ಕೂಗಲು ಆರಂಭಿಸಿದಳೆಂದೂ ಅನಂತರ ಅವಳನ್ನು ಆಸ್ಪತ್ರೆಗೆ ಸಾಗಿಸಲಾಗಿ ಈಗ ಗುಣವಾಗುತ್ತಿರುವಳೆಂದೂ ವರದಿಯಾಗಿದೆ

ಅಧ್ಯಕ್ಷ ಚುನಾವಣೆ ಬಗ್ಗೆ ಅಪ್ಪೀಲು

ಚಾಮರಾಜನಗರ ೨೯

ಇಲ್ಲಿನ ಪೌರಸಭೆಯ ಅಧ್ಯಕ್ಷ ಚುನಾವಣೆಯು ಕಾನೂನು ಪ್ರಕಾರ ನಡೆದಿಲ್ಲವೆಂದೂ ಅದನ್ನು ರದ್ದು ಪಡಿಸುವಂತೆ ಸರ್ಕಾರದವರಿಗೆ ಶಿಫಾರಸು ಮಾಡಬೇಕೆಂಬುದಾಗಿಯೂ ಕೋರಿ ಅಪೀಲೊಂದನ್ನು ಪೌರಸಭೆಯ ಸದಸ್ಯರುಗಳಾದ ಶ್ರೀಗಳು ಕೆ. ಡಿ ನಾರಾಯಣರಾವ್, ಟಿ ಆರ್ ಜಗನ್ನಾಥರಾವ್, ಕೆ. ವಿ ರಾಮಸ್ವಾಮಿ ಚೌಡಶೆಟ್ಟಿ, ಸಿ ಎಸ್ ಅಬ್ದುಲ್ ಜಬ್ಬಾರ್ ಮತ್ತು ಸಂಪತ್ ಪಠಾಣ್ ಇವರುಗಳು ಜಿಲ್ಲಾಧಿಕಾರಿಗಳ ಮುಂದೆ ದಾಖಲು ಮಾಡಿರುತ್ತಾರೆ.

ವುಡ್‌ಲ್ಯಾಂಡ್ಸ್

25-7-47 ರಿಂದ

ಕಿಕ್ಕಿರಿದ ೧೪ ನೇ ವಾರ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

(ತಮಿಳು)

—: ಪಾತ್ರ :—

ಟಿ ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರನ್ ಮುಂತಾದವರು.

ರಬ್ಬರ್ ತೋಟಗಳನ್ನು ನಾ[illegible] ಮಾಡಲಾಗುವುದು

ಡಚ್ಚರು ನಡೆಸುತ್ತಿರುವ [illegible] ಮಣವನ್ನು ನಿಲ್ಲಿಸದಿದ್ದರೆ ಪ[illegible] ಧಾನದಲ್ಲಿರುವ ರಬ್ಬರ್ ತೋಟಗ[illegible] ಲ್ಲಾ ಸುಟ್ಟು ಹಾಕುವುದಾಗಿ ರಿಪಬ್ಲಿ[illegible] ಸರ್ಕಾರವು ನಿರ್ಧರಿಸಿದೆಯೆಂದು ವ[illegible] ಯಾಗಿದೆ. ಮತ್ತೆ ಅಲ್ಲಿ ರಬ್ಬರ್ ಬೆಳೆ[illegible] ಬೇಕಾದರೆ ಇನ್ನು ಹತ್ತು ವರ್ಷಗಳಾದ[illegible] ಬೇಕಾಗುವುದು. ಪ್ರಪಂಚಕ್ಕೆ ಇದು[illegible] ರಿನ ಸಮಸ್ಯೆಯನ್ನು ತಂದೊಡ್ಡುವ[illegible] ನಿಮಯಾಂಗಿನಲ್ಲಿ ರಿಪಬ್ಲಿಕನ್ನರನ್ನು [illegible] ರು ತೀವ್ರವಾಗಿ ಪ್ರತಿಭಟಿಸುತ್ತಿ[illegible] ಟ್ಯಾಂಕುಗಳು, ವಿಮಾನಗಳು ಮತ್ತು[illegible] ದ್ಧ ಹಡಗುಗಳ ಪೂರ್ಣ ಉಪಯೋ[illegible] ನ್ನು ಪ್ರತಿಭಟನೆಗೆ ಉಪಯೋಗಿಸಲ[illegible] ತ್ತಿದೆ ಪಡಂಗ್ ಜಕಾರ್ತಾ ನಗರದ[illegible] ಯಿಂದ ನಡೆಯುತ್ತಿರುವ ಡಚ್ಚರ [illegible] ಯನ್ನು ರಿಪಬ್ಲಿಕನ್ನರು ತಡೆಯುತ್ತಿದ[illegible]

ಭಾರತ ಡೊಮಿನಿಯನ್ನಿನ ಸಂಸತ್ತಿನ ಮಂತ್ರಿಗಳು

ಮುಂದೆ ರಚನೆಯಾಗಲಿರುವ [illegible] ಡೊಮಿನಿಯನ್ ಸಾರ್ವಭೌಮ [illegible] ಲದ ಆರಿಸಲ್ಪಟ್ಟ ಇಬ್ಬರು ಮಂತ್ರಿ[illegible] ಬೇಕೆಂದು. ತೀರ್ಮಾನವಾಗಿರುವುದಾ[illegible] ರದಿಯಾಗಿದೆ

ಮುಂಬಯಿನಲ್ಲಿ ಧಡಿ ತಿ[illegible] ನಚಾರ

ಕಾರ್ಖಾನೆಗಳಲ್ಲಿ ಪಿಟ್ಟಿಗೆ ವಿರೋಧ[illegible] ನಡೆಯುವವರ ಮೇಲೆ ವಿಧಿಸಲಾಗು[illegible] ವ ಭಾರಿ ಶಿಕ್ಷೆಯನ್ನು ಇನ [illegible] ಮಾಡಲು ಮುಂಬಯಿ ಸರ್ಕಾರವು [illegible] ಲ್ಲಿಯೇ ಶಾಸನವನ್ನು ಮಾಡಲಿದೆ [illegible] ದು ತಿಳಿದು ಬಂದಿದೆ

ಪ್ರಕಟಣೆ

ಚಾಮರಾಜನಗರದ ಎಲೆಕ್ಟ್ರಿಕ್ [illegible] ನಿಯು ಕಸ್ಬದಲ್ಲಿ ರಾಮಸಮುದ್ರದ[illegible] ಗೆ ಸೇರಿದಂತಿರುವ 40×30 ಅಳತೆ [illegible] ಸೈಟುಗಳು, ಬೆಳಗಿನ ಉತ್ತಮವಾ[illegible] ಳ. ಬಂಗಲೆಗಳನ್ನು ಕಟ್ಟಲು ಅನು[illegible] ವಾಗಿದೆ ಹಾಸ್ಟೆಲು ಮತ್ತು ಸ್ಕೂ[illegible] ಳಿಗೆ ಸಮೀಪವಾಗಿರುತ್ತವೆ ಬೇಕಾ[illegible] ದು ಕೆಳಗಿನ ವಿಳಾಸದಲ್ಲಿ ವಿಚಾ[illegible] ಸುದು

ಎಸ್ ಅಶ್ವತ್ಥನಾರಾಯಣ
ಶ್ರೀ ನರಸಿಂಹ ಸ್ಟೋರ್ಸ್
ಚಾಮರಾಜ[illegible]

ಸಿದ್ಧವಾಗಿದೆ

ಸಿಂಗರ್ ಹೊಲಿಯುವ ಕಂಪನಿಯ ಶಾಖೆಯು ನಂಜನಗೂಡಿನಲ್ಲಿ ತೆರೆದಿದೆ. ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, [illegible] ತಾಲ್ಲೂಕುಗಳ ಜ[illegible] ಪ್ರಿಯರು ಕೇಂದ್ರದಲ್ಲಿ ಯಂತ್ರಗಳನ್ನು ರಿಪೇರ್ ಮಾಡಿ ಕೊಡಲಾಗುವುದು. ಹಳೇ ಮೆಷಿನ್ನುಗಳನ್ನು ರಿಪೇರಿ ಮಾಡಲಾಗುತ್ತದೆ

ಸಿಂಗರ್ ಸೂಯಿಂಗ್ ಮೆಷಿನ್ ಕಂಪೆನಿ, ನಂಜನಗೂಡು

ಶ್ರೀ

ಹಾಲಸಿದ್ದೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ. ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ನಾಳೆ ರಾತ್ರಿ ೧೦-೩೦ ಗಂಟೆಗೆ

★ ಹೇಮರೆಡ್ಡಿ - ಮಲ್ಲಮ್ಮ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಭಾನುವಾರ ಮ್ಯಾಟಿನಿ ಉಂಟು

ಬಿಕ್ಕಜೆಟ್ಟಪ್ಪ, ಪ್ರೊಪ್ರೈಟರ್

ಫೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೬ ಕಾಸು

ಸಂಪುಟ ೬] ಬುಧವಾರ ೨೦—೭—೪೭ [ಸಂಚಿಕೆ ೯

ವೈಸರಾಯರ ಸಲಹೆಗೆ ನಿಜಾಮರ ಅಲಕ್ಷ್ಯವೇ?

ಬರ್ನಾರ್ಡ್ ಕೊಲೆಗಾರರ ಪತ್ತೆಯೋ?

ಬರ್ಮಾ ಸರ್ಕಾರದ ಸಚಿವರನ್ನು ಕೊಲೆ [illegible]ಡಿದ ಐವರನ್ನು ಕರೆದುಕೊಂಡು ಹೋದ ಜೀಪ್ ಡ್ರೈವರನ್ನು ಪೋಲೀಸರು [illegible] ಮಾಡಿರುವರೆಂದು ವರದಿಯಾಗಿ[illegible] ಕೊಲೆಪಾತಕರು [illegible] ವರೆಂದು ಅವನು ತಿಳಿಸಿರುವನು [illegible] ವ ಂಬಿಯ ಹೆಸರನ್ನೂ ಸಹ [illegible] ಸೂಚಿಸಿರುವನೆಂದು ಗೊತ್ತಾಗಿದೆ.

ಡಚ್ ಪ್ಯಾರಾಚೂಟುಗಳ ನಾಶ

[illegible]ಟೀವಿಯಾದ ಬಳಿ ಬಂದಿಳಿದ ಡಚ್ [illegible]ರಾಚೂಟ್ ಸೈನಿಕರನ್ನು ರಿಪಬ್ಲಿಕನ್ನ [illegible] ಅಲ್ಲಿನ ಪ್ರಜೆಗಳೂ ಎದುರಿಸಿ ಅವರಲ್ಲಿ[illegible]ದು ಭಾಗವನ್ನು ಪೂರ್ಣವಾಗಿ ನಾಶಗೊ[illegible]ಸಿದುವರೆಂದು ವರದಿಯಾಗಿದೆ

ಕಾಂಗ್ರೆಸ್ ವಿಭಜನೆಗೆ ಮಹಾತ್ಮರ ವಿರೋಧ

ದೇಶದ ವಿಭಜನೆಯಾಗಿರುವುದರಿಂದ [illegible]ಂಗವು ಎರಡು ಭಾಗವಾಗುವುದಿಲ್ಲ [illegible] ಕೇಳುವುದಾದರೆ ಅಧಾರವೇ [illegible]ಚಿತವಾಗಿಲ್ಲ ಅದು ಕೋಮುವಾರು [illegible]ಧವನ್ನು ಹೊಂದಲೂಬಾರದು. [illegible] [illegible]ಕಾರಣದಿಂದ ಕಾಂಗ್ರೆಸ್ ಸಂಸ್ಥೆ[illegible]ನ್ನು ಎರಡು ಭಾಗಮಾಡಬಾರದು [illegible]ವಾಗಿ ಮಹಾತ್ಮ ಗಾಂಧಿಯವರು ತಿಳಿಸಿ[illegible]ವರು.

ಕರಾಚಿಯಲ್ಲಿ ಮಿತಿಮೀರಿದ ಬೆಲೆ

ಕರಾಚಿಯಲ್ಲಿ ಪದಾರ್ಥಗಳ ಬೆಲೆ [illegible] ಏರಿದೆಯೆಂದು ವರದಿಯಾಗಿದೆ. [illegible] ಒಂದಕ್ಕೆ [illegible] ರೂ [illegible] ೩೦ ರೂ [illegible] ತರಕಾರಿ, ಮಾಂಸಗಳ ಬೆಲೆ [illegible] ಏರಿದ್ದಿದೆ ಪಾಕಿಸ್ತಾನದ [illegible] [illegible]ವನ್ನು ವಹಿಸಿಕೊಳ್ಳುವುದಕ್ಕಾಗಿ [illegible] ಹೆಚ್ಚಿಗೆ ಸಹಸ್ರಾರು ಜನರು [illegible] [illegible]ವುದೇ ಇದಕ್ಕೆ ಕಾರಣ

ಇನ್ನೊಂದು ವಾರದಲ್ಲಿ ಡಚ್ ಯುದ್ಧದ ಮುಕ್ತಾಯವೇ?

ಭಾರತಕ್ಕೆ ಬಂದಿರುವ ಇಂಡೊನೇಸ್ಯದ [illegible] ಪ್ರಧಾನಿ ಡಾ॥ [illegible] [illegible] ಡಚ್ [illegible] [illegible] ನಡೆಸುವರೆಂದೂ, ಇನ್ನೊಂದು ವಾರ[illegible]ದಲ್ಲಿ ಇಂಡೊನೇಸ್ಯದಲ್ಲಿ ಡಚ್ [illegible] [illegible]ಗಳು ಮುಕ್ತಾಯಗೊಳ್ಳುವು[illegible] ವರದಿಯಾಗಿದೆ

ಬತ್ತ ಮತ್ತು ಅಕ್ಕಿ ಪತ್ತೆ

[illegible] [illegible] ಹಳ್ಳಿಯಿಂದ [illegible] ಇಲ್ಲದೆ [illegible] [illegible] ಬತ್ತ [illegible] ಪೋಲೀಸರು ಪತ್ತೆ ಹಚ್ಚಿ [illegible] ಈ ಸಂದರ್ಭ[illegible] [illegible] [illegible] ಬತ್ತವನ್ನು [illegible] ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆಯೆಂದೂ [illegible] [illegible] ನಡೆದ [illegible] [illegible] [illegible] [illegible] ಪಟಾಕಾಣೆ [illegible]

ತಿರುವಾಂಕೂರು ಭಾರತ ಯೂನಿಯನ್ ಸೇರುವುದು

ವೈಸರಾಯರೊಡನೆ ನಡೆಸಿದ ಮಾತುಕ[illegible]ತೆಗಳ ಪರಿಣಾಮವಾಗಿ ಕೆಲವು ಷರತ್ತುಗ[illegible]ಳೊಡನೆ ಭಾರತ ಯೂನಿಯನ್ನಿಗೆ ತಿರು[illegible]ವಾಂಕೂರು ಸಂಸ್ಥಾನವು ಸೇರಲು ನಿರ್ಧರಿ[illegible]ಸಿರುವುದೆಂದು ಅಲ್ಲಿನ ಮಹಾರಾಜರು ತಿಳಿ[illegible]ಸಿರುವುದಾಗಿ ವರದಿಯಾಗಿದೆ

ಬೊಂಬಾಯಿ ಪ್ರಾಂತಕ್ಕೆ ೨೫೦೦೦ ರಾಷ್ಟ್ರ ಧ್ವಜಗಳು

ಬೊಂಬಾಯಿ ಸರ್ಕಾರವು ೨೫೦೦೦ ಹೊಸ ರಾಷ್ಟ್ರ ಧ್ವಜಗಳನ್ನು ತಯಾರಿಸಲು ಆಜ್ಞೆ ಇತ್ತಿದೆಯೆಂದು ಗೊತ್ತಾಗಿದೆ ಧ್ವಜ[illegible]ಗಳು ಆಗಸ್ಟ್ ೧೫ರ ದಿನ ವೇಳೆಗೆ ಸಿದ್ಧವಾ[illegible]ಗಿ ಆಗಸ್ಟ್ ೧೫ ರ ಪ್ರಾಂತ್ಯದ ಎಲ್ಲ ನಗರ [illegible] ಗ್ರಾಮಗಳ ಸರ್ಕಾರೀ ಭವನಗಳ [illegible] ಯೂನಿಯನ್ ಜಾಕ್ ಧ್ವಜದ [illegible]ದಲ್ಲಿ ಹಾರಾಡುವುವು

ಪಚ್ಚರಿಂದ ಭಾರತ ವಿಮಾನದ ನಾಶ

ಇಂಡೊನೇಸ್ಯರಿಗೆ ವೈದ್ಯಕೀಯ ಸಹಾ[illegible]ಯವನ್ನೊದಗಿಸಲು ಹೊರಟಿದ್ದ ಭಾರತದ [illegible] ವಿಮಾನವೊಂದನ್ನು ಜೋಗ್[illegible] ಬಳಿ ಡಚ್ಚರು ಹೊಡೆದು ಅದನ್ನು ಸುಟ್ಟು ಹಾಕಿರುವರೆಂದು ವರದಿಯಾಗಿದೆ

ಪಾಕಿಸ್ತಾನಕ್ಕೆ ನಿಜಾಮರ ಬಂದರು

ಪಾಕಿಸ್ತಾನಕ್ಕೆ ಹೊರಗಿನ ಬಂದರು [illegible] ಅತ್ಯವಶ್ಯವಾಗಿದೆಯೆಂದೂ, ನಿಜಾಮರು [illegible] [illegible] ಒಂದು ಭಾಗವನ್ನು ಪಾಕಿಸ್ತಾನಕ್ಕೆ ಕೊಟ್ಟು [illegible] [illegible] ಸೇರುವ [illegible] [illegible] ಸಚಿವರಾದ [illegible] ಡಚ್ಚರು ಹೈದರಾಬಾದಿನ ನಿಜಾಮರನ್ನು ಪ್ರಾರ್ಥಿಸಿರುವರು

ಬೋಸರ ಪೋಲೀಸ ಮೊಕದ್ದಮೆಗಳ ವಾಪಸು

[illegible] ಚಂದ್ರಬೋಸರು ಮರಣ [illegible] ಎಂದೂ, ಅದ[illegible]ರಿಂದ ಅವರ ಮೇಲಿರುವ ಮೊಕದ್ದಮೆಗಳ[illegible]ನ್ನು ಮುಂದುವರಿಸಲು ಯಾವ ಕಾರಣವೂ ಇಲ್ಲವೆಂದೂ ಹೇಳಿ ಅವರ ಮೇಲಿದ್ದ ಎಲ್ಲ ಮೊಕದ್ದಮೆಗಳನ್ನೂ [illegible] ಸರ್ಕಾರ[illegible] ವಾಪಸು ಪಡೆಯಿತೆಯೆಂದೂ ವರದಿಯಾ[illegible]

ಗೋಪಾಲಸ್ವಾಮಿಯವರು ಸಂ॥ ಪ್ರಾಂತ್ಯದ ಗವರ್ನರರು

ಸರ್ ಎನ್ ಗೋಪಾಲಸ್ವಾಮಿ ಅಯ್ಯಂ[illegible]ಗಾರ್ಯರನ್ನು ಸಂಯುಕ್ತ ಪ್ರಾಂತ್ಯದ ಗ[illegible]ವರ್ನರರನ್ನಾಗಿ [illegible] ವೈಸರಾಯರಿಗೆ ಸೂಚಿ[illegible]ಸಲಾಗಿದೆಯೆಂದು ವರದಿಯಾಗಿದೆ ಶ್ರೀ ಅಯ್ಯಂಗಾರ್ಯರು [illegible] [illegible] ದರಿಂದ [illegible] ಕೇಂ[illegible]ದ್ರ ಸರ್ಕಾರದ [illegible] [illegible] [illegible] [illegible] ಸೂಚಿ[illegible]ಸುವುದಾಗಿಯೂ ಹೇಳಲಾಗಿದೆ

ಪಾರ್ಲಿಮೆಂಟಿಗೆ ಬರಲು ಷರಿಯಾರರಿಗೆ ಆಹ್ವಾನ

ಡಚ್ [illegible] ಪಕ್ಷವು [illegible] ಸರ್ಕಾ[illegible] [illegible] ಆಕ್ರಮಣ ನೀತಿಯನ್ನು ಖಂಡಿಸಿ [illegible] ಇಂಡೋನೇಸ್ಯದ ಮಾಜಿ ಪ್ರಧಾನಿ ಡಾ॥ [illegible] ಹಾಲೆಂಡಿನಲ್ಲಿ ಸೇರಲಿರುವ ಕಾರ್ಮಿಕ ಪಕ್ಷದ ಸಮ್ಮೇಳನಕ್ಕೆ ಬರಬೇಕೆಂದು ಆಹ್ವಾನವಿತ್ತಿದೆ

ಭಾರತ ಯೂನಿಯನ್ನಿಗೆ ಮಾಸಿ ಸಂಸ್ಥಾನಗಳು

[illegible] ಮತ್ತು [illegible] ಗುಡ್ಡಗಾಡಿನ [illegible]ರುವ ಅನೇಕ ಸಂಸ್ಥಾನಗಳು ಭಾರತದ ಯೂನಿಯನ್ನಿಗೆ ಸೇರಲು ನಿರ್ಧರಿಸಿವೆ

ಅಂಗಾ [illegible] ಬಗ್ಗೆ ಅನುತಾಪ

[illegible]] ಶ್ರೀರಂಗಪಟ್ಟಣ ೨೭

ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿ[illegible] [illegible] ಸಭೆ ಸೇರಿ ಆಗಸ್ಟ್ ೧೫ ನೇ [illegible] ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಸಮಾಲೋಚನೆ ನಡೆಸಿತು ಆಗಸ್ಟ್ ೧೫ ನೇ ತಾ॥ನ್ನು ಸಾರ್ವಜನಿಕ [illegible] ದಿನವ[illegible]ನ್ನಾಗಿ [illegible], ಬಂಧನದಲ್ಲಿರುವ ಎಲ್ಲ ರಾಜಕೀಯ [illegible] ಬಿಡುಗ[illegible]ಡೆ ಮಾಡಬೇಕೆಂದೂ ಸರ್ಕಾರದವರನ್ನು ಒತ್ತಾಯಪಡಿಸುವ ನಿರ್ಣಯಗಳು [illegible] [illegible]. [illegible] ಸರ್ಕಾರ [illegible] [illegible] ಮೈಸೂರು ಕಾಂಗ್ರೆಸ್ಸು ಹೂಡಲಿ[illegible]ರುವ ಸತ್ಯಾಗ್ರಹಕ್ಕೆ ಈ ಸಮಿತಿಯು ತನ್ನ ಪೂರ್ಣ ಬೆಂಬಲವನ್ನು ಕೊಡುತ್ತದೆಂದು ಕಾಂಗ್ರೆಸ್ ಅಧ್ಯಕ್ಷರಿಗೆ ಭರವಸೆ ನೀಡಬೇ[illegible]ಕೆಂದೂ ತೀರ್ಮಾನಿಸಿತು [illegible] ದೇಶದ [illegible] [illegible] [illegible] ದುಃಖಕ್ಕಾಗಿ [illegible] ತನ್ನ ಸಂತಾಪವ[illegible]ನ್ನು ವ್ಯಕ್ತಪಡಿಸಿತು..

ದಂಡಿನ ಆಡಳಿತ

ಸ್ವಂ ಸು ವ್ರೋ] [ಬೆಂಗಳೂರು ೩೦

ದಿವಾನರು ಆಗಸ್ಟ್ ೨ ನೇ ತಾ॥ ದಿಹ[illegible]ಲಿಯಿಂದ ಹಿಂದಿರುಗಿ ದಂಡಿನ ಪ್ರದೇಶಗಳ ಆಡಳಿತ ವ್ಯವಸ್ಥೆಯನ್ನು ಗೊತ್ತುಮಾಡು[illegible]ವರೆಂದು ಸರ್ಕಾರಿ ಪ್ರಕಟಣೆಯು ತಿಳಿಸು[illegible]ತ್ತದೆ

ನಗರದ ಪೂರ್ವ ಹೌ॥ ಶ್ರೀ [illegible] ರೆಡ್ಡಿ[illegible]ಯವರನ್ನು ದಂಡಿನ [illegible] [illegible]ರನ್ನಾ[illegible]ಗಿ ನೇಮಿಸಲಾಗಿದೆ,

ಜಿಲ್ಲಾಧಿಕಾರಿಗಳ ಆಫೀಸಿನ ಅಸಿಸ್ಟೆಂಟ[illegible] ರಾದ ಶ್ರೀ ಸಿ ಜೆ ಪದ್ಮನಾಭರವರನ್ನು ದಂಡಿನ ಕಲೆಕ್ಟರಾದ ಶ್ರೀ ಪುಟ್ಟರಂಗಸ್ವಾ[illegible]ಮಿಯವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಿಸಲಾಗಿದೆ

ನಿಷೇಧಿತ ಪ್ರದೇಶದ [illegible] [illegible] [illegible]ಗಳನ್ನು ಮಾರಾಟ ಮಾಡಲಾಗದೆಂದು ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ ತಪ್ಪಿದವರಿಗೆ ೩ ವರ್ಷ ಸಜಾ ಮತ್ತು [illegible] [illegible]ನೆಗಳು ವಿಧಿಸಲ್ಪಡುವುವು.

ಸಂಸ್ಥಾನ ಪ್ರಜೆಗಳ ನೆರವಿಗೆ ಸಮಾಲೋಚನಾ ಸಮಿತಿ

ತಿರುವಾಂಕೂರು, ಹೈದರಾಬಾದು ಮ[illegible] [illegible] ಗೋವಾ ಸಂಸ್ಥಾನಗಳ ಪ್ರಜೆಗಳು [illegible] [illegible] ಚಳುವಳಿಯಲ್ಲಿ [illegible] ನೀಡಲು, ಸೋಷಲಿಸ್ಟ್ ಪಕ್ಷ[illegible]ದ [illegible] ರಾಮಮ ನೋಹರ [illegible] ಅಧ್ಯಕ್ಷತೆಯಲ್ಲಿ [illegible] [illegible] ಶ್ರೀ [illegible] [illegible] ಅಶೋಕ ಮೆಹ್ತಾ, ಎ ಜಿ [illegible], [illegible] [illegible] ಶ್ರೀ [illegible], ಡಾ॥ [illegible] [illegible], [illegible] [illegible], ಜೈಪ್ರಕಾಶ್ ನಾರಾಯಣ್ ಮತ್ತು ಶ್ರೀಮತಿ [illegible] [illegible] ದೇವಿಯವರು ಸಮಿತಿಯ ಸದಸ್ಯರು.

ವೈಸರಾಯರ ಸಲಹೆಗೆ ನಿಜಾಮರ ಮನ್ನಣೆ ಇಲ್ಲ

[illegible]ಯೂನಿಯನ್ನಿಗೆ [illegible] [illegible] ವೈಸರಾಯರು [illegible] [illegible] ಸಮ್ಮೇಳನದಲ್ಲಿ ಮಾಡಿದ [illegible] [illegible] ಹೈದರಾಬಾದು [illegible] [illegible] [illegible] [illegible] [illegible] [illegible] [illegible] [illegible] [illegible] ನಿಜಾಮರು [illegible] [illegible] [illegible] [illegible] [illegible] [illegible] [illegible] [illegible] ಈ ನಿರ್ಧಾರವನ್ನು ಮಾಡಲಾಯಿತೆಂ[illegible]ದು ತಿಳಿದುಬಂದಿದೆ.

[illegible] ರೈಲು ದೂರದ ಈಜು

[illegible] [illegible] ವರ್ಷ ವಯಸ್ಸಿನ [illegible] [illegible] ಎಂಬ ಯುವಕನು [illegible] ರೈಲು ದೂರ ಈಜಿ[illegible]ರುವನು

ಪ್ರಭುಗಳ ಭೇಟಿ

ಮೈಸೂರು ೩೦

[illegible] ಶ್ರೀ [illegible] [illegible] ಮೈಸೂರು [illegible] ಶ್ರೀ ವೈ ಆರ್. [illegible] [illegible] [illegible] ಬೆಂಗಳೂರಿನ [illegible] [illegible] [illegible] ಮೊದಲಿಯಾರರಿಗೆ ಶ್ರೀಮನ್ಮಹಾರಾಜರವರು ಈ ದಿನ ಭೇಟಿ ದಯಪಾಲಿಸಿದರು.

ಸಾಧ್ವಿ

ತಾ|| ೩೦-೭-೪೭ ಬುಧವಾರ

ದಂಡು ಮೈಸೂರಿಗೆ

ಬೆಂಗಳೂರು ದಂಡಿನ ಪ್ರದೇಶವು ಮೈಸೂರು ಸಂಸ್ಥಾನಕ್ಕೆ ಸೇರುತ್ತದೆ. ಇದಕ್ಕಾಗಿ ನಮ್ಮ ಸಂಸ್ಥಾನದ ಸರ್ಕಾರದವರು ಅರ್ಧ ಶತಮಾನದಿಂದ ಪ್ರಯತ್ನಗಳನ್ನು ಮಾಡುತ್ತಿದ್ದರು. ಸರ್ ಶೇಷಾದ್ರಿ ಅಯ್ಯರ್‌ರವರ ಕಾಲದಿಂದಲೂ ಇದಕ್ಕಾಗಿ ವಿಶೇಷ ಪ್ರಯತ್ನಗಳನ್ನು ಮಾಡಲಾಗಿದ್ದಿತು. ಸರ್ ಮಿರ್ಜಾರವರು ತಮ್ಮ ದಿವಾನಗಿರಿಯಲ್ಲಿ ಈ ಕಾರ್ಯಸಾಧನೆಯನ್ನು ಮಾಡಬೇಕೆಂದು ಭಗೀರಥ ಪ್ರಯತ್ನಗಳನ್ನು ನಡೆಸಿದರು. ಆದರೆ ಇವುಗಳೊಂದೂ ಫಲಕಾರಿಯಾಗಲಿಲ್ಲ.

ಈಗ ಪ್ರಸಂಗದಲ್ಲಿ ಈ ಕೆಲಸವು ಸರಗವಾಗಿರುತ್ತದೆ. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಲು ನಿರ್ಧರಿಸಿದ ಮೇಲೆ ಸಂಸ್ಥಾನಗಳ ಶೃಂಖಲೆಗಳೂ ಒಂದೊಂದಾಗಿ ಕಡಿದು ಹೋಗುತ್ತವೆ. ಆವಾಗ ನೇಮಿಸಿದ್ದ ಬ್ರಿಟಿಷರ ಪರಮಾಧಿಕಾರವು ಸಂಸ್ಥಾನಗಳಿಗೇ ವಾಪಸು ಬರುತ್ತದೆ. ರಾಜರುಗಳು ಬ್ರಿಟಿಷರಿಗೆ ಕೊಡುತ್ತಿದ್ದ ಕಪ್ಪಕಾಣಿಕೆಗಳು ತಪ್ಪುತ್ತವೆ. ಭರತಖಂಡದ ಪರದಾಸ್ಯವು ತೊಲಗುತ್ತಿರುವಂತೆಯೇ ಸಂಸ್ಥಾನಗಳ ಮೇಲಿದ್ದ ಪರಾವಲಂಬನವೂ ಮಾಯವಾಗುತ್ತದೆ.

ಇವುಗಳಿಗೆಲ್ಲಾ ಮೂಲ ಕಾರಣವೇನೆಂಬುದನ್ನು ಎಲ್ಲರೂ ಅರಿಯುವುದು ಒಳ್ಳೆಯದು. ಬ್ರಿಟಿಷರು ತಮ್ಮಷ್ಟಕ್ಕೆ ತಾವೇ ಉದಾರ ಬುದ್ಧಿಯಿಂದ ತಮ್ಮ ಅಧಿಕಾರವನ್ನು ತ್ಯಜಿಸಿ ಹೊರಟು ಹೋಗುತ್ತಿಲ್ಲ. ಭಾರತೀಯರು ತಮ್ಮ ಸ್ವಾತಂತ್ರ್ಯ ಸಾಧನೆಗಾಗಿ ಮಾಡಿದ ಅಪಾರವಾದ ತ್ಯಾಗದ ಪರಿಣಾಮವಾಗಿ ಅವರು ಹೋಗುತ್ತಿದ್ದಾರೆ. ಅದರ ಫಲವೇ ಸಂಸ್ಥಾನಗಳಿಗೂ ಸಹ ಸಂಪ್ರಾಪ್ತವಾಗಿರುತ್ತದೆ.

ದೇಶೀಯ ರಾಜರುಗಳು ತಮ್ಮ [illegible]ಗಳಿಗಾಗಿ ಬ್ರಿಟಿಷರಲ್ಲಿ ಇದುವರೆಗೆ ಅನೇಕಾವರ್ತಿ ಅಹವಾಲುಗಳನ್ನು ಮಾಡಿಕೊಂಡಿದ್ದರು. ತಮ್ಮ ಕೈ ಬಿಟ್ಟು ಹೋಗಿರುವ ಪ್ರದೇಶಗಳಿಗಾಗಿ ಮೊರೆಯಿಟ್ಟಿದ್ದರು. ಹೊಸ ಹೊಸ ರಿಯಾಯಿತಿಗಳಿಗಾಗಿ ಬೇಡಿಕೆಗಳನ್ನು ಸಲ್ಲಿಸುತ್ತಿದ್ದರು. ಅವುಗಳನ್ನು ಬ್ರಿಟಿಷ್ ಸರ್ಕಾರದವರು ಸ್ವಲ್ಪ ಸ್ವಲ್ಪವಾಗಿ ಈಡೇರಿಸುತ್ತಾ ರಾಜರುಗಳನ್ನು ತಮ್ಮ ಇಚ್ಛಾನುವರ್ತಿಗಳಾಗಿರುವಂತೆ ಮಾಡುತ್ತಿದ್ದರು. ಇದಕ್ಕಾಗಿ ರಾಜರುಗಳೂ ಸಹ ಅವರಿಗೆ ಅಪಾರವಾದ ಸಹಕಾರವನ್ನು ನೀಡುತ್ತಿದ್ದರು. ಸಂಸ್ಥಾನಗಳಲ್ಲಿ ಬ್ರಿಟಿಷರಿಗೂ ಅವರ ಪ್ರತಿನಿಧಿಗಳಿಗೂ ವಿಶೇಷವಾದ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದರು. ಕಳೆದ ಯುದ್ಧದ ಸಮಯದಲ್ಲಿ ರಾಜರುಗಳು ಬ್ರಿಟಿಷರಿಗೆ ಮಾಡಿದ ಸಹಾಯಕ್ಕೆ ಮಿತಿಯೇ ಇರಲಿಲ್ಲ. ಇಷ್ಟಾದರೂ ಸಹ ರಾಜರುಗಳಿಗೆ ಬ್ರಿಟಿಷರ [illegible] ಮಾತ್ರ ಸಿಕ್ಕಲಿಲ್ಲ. ಈಗ ಅದೆಲ್ಲವೂ ಒಂದೇ ಏಟಿನಿಂದ ಮಾಯವಾಗುತ್ತಿದೆ.

ಅದರಂತೆಯೇ ಮೈಸೂರಿಗೆ ದಂಡಿನ ಪ್ರದೇಶವು ಬಂದಿರುತ್ತದೆ. [illegible] ವಶವಾಗಲಿರುತ್ತದೆ. ಇನ್ನೂ ಇತರ ಅನೇಕ ಸೌಲಭ್ಯಗಳು ದೊರೆಯಲಿವೆ. ಇವುಗಳಿಗೆಲ್ಲಾ ಭಾರತದ ವೀರ ದೇಶಾಭಿಮಾನಿಗಳ [illegible] ತ್ಯಾಗವೇ ಕಾರಣ. ಅದನ್ನು ಸ್ಮರಿಸಿಕೊಂಡು ನಮ್ಮ ಪ್ರಭುತ್ವದವರು ಭಾರತದ ರಾಷ್ಟ್ರ ನಾಯಕರ ಮಾರ್ಗವನ್ನು ಅನುಸರಿಸಿ ಅವರು ಹೋಗುವ ದಾರಿಯಲ್ಲಿಯೇ ನಡೆದರೆ ನಮ್ಮ ಸಂಸ್ಥಾನಕ್ಕೆ ಇನ್ನೂ ಹೆಚ್ಚಿನ ಸೌಲಭ್ಯಗಳು ದೊರೆಯುವುದರಲ್ಲಿ ಸಂದೇಹವಿಲ್ಲ.

ಪಶ್ಚಿಮ ಜಾವಾದಲ್ಲಿ ಡಚ್ಚರ ಸೋಲು

ಬಟೇವಿಯಾಕ್ಕೆ ೬೦ ಮೈಲಿ ದೂರದಲ್ಲಿರುವ ಬಾಂಡುಂಗ್ ನಗರದ ಬೀದಿ ಬೀದಿಗಳಲ್ಲೂ ಯುದ್ಧ ನಡೆಯುತ್ತಿದೆ. ಪಶ್ಚಿಮ ಜಾವಾದಲ್ಲಿದ್ದ ೭೬೩ ಮಂದಿ ಡಚ್ ಯೋಧರು ರಿಪಬ್ಲಿಕನ್ನರಿಗೆ ಶರಣಾಗತರಾಗಿದ್ದಾರೆ. ಡಚ್ಚರು ಎಲ್ಲವನ್ನೂ ನಾಶ ಮಾಡುವ ರಿಪಬ್ಲಿಕನ್ನರ ನೀತಿಯಿಂದ ಡಚ್ ತೋಟದ ಸಂಸ್ಥೆಯೊಂದಕ್ಕೆ ೬೦ ಲಕ್ಷ ಪೌಂಡು ನಷ್ಟ ಸಂಭವಿಸಿದೆ. ಜಾವಾದ ಅನೇಕ ನಗರಗಳು ಡಚ್ಚರ ಅಧೀನವಾಗಿವೆ. ಸುಮಾತ್ರದಲ್ಲಿರುವ ಎಣ್ಣೆ ಮತ್ತು ಕಲ್ಲಿದ್ದಲು ಗಣಿಗಳು ಡಚ್ಚರ ವಶವಾಗಿವೆ. ಸುಮಾತ್ರದ ಅನೇಕ ಭಾಗಗಳಿಗೆ ರಿಪಬ್ಲಿಕನ್ನರು ಬೆಂಕಿ ಹಚ್ಚಿರುವರೆಂದೂ, ನಗರದ ಅನೇಕ ಭಾಗವು ಉರಿಯುತ್ತಿದೆಯೆಂದೂ ವರದಿಯಾಗಿದೆ. [illegible] ಮುತ್ತಿಗೆಯಲ್ಲಿ ೪೦೦ ಮಂದಿ ಡಚ್ಚರು ಮರಣ ಹೊಂದಿದ್ದಾರೆ.

ವೈಸರಾಯರೊಡನೆ ನೆಹರೂ, ಗಾಂಧಿ, ಪಟೇಲರ ಭೇಟಿ

ಭಾರತ ಡೊಮಿನಿಯನ್ನಿನ ಮಂತ್ರಿಮಂಡಲದ ರಚನೆ ಮತ್ತು ಗೌರ್ನರುಗಳ ನೇಮಕದ ವಿಷಯವಾಗಿ ನಿನ್ನೆ ಪಂಡಿತ ನೆಹರೂ, ಮಹಾತ್ಮಗಾಂಧಿ, ಸರ್ದಾರ್ ಪಟೇಲರುಗಳು ವೈಸರಾಯರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದು ವರದಿಯಾಗಿದೆ.

ಚಾಮುಂಡೇಶ್ವರಿ ಟಾಕೀಸ್
ತಾ|| 1-8 47 ರಿಂದ ದಿನವೂ 3 ಆಟಗಳು
ಹಿಂದ್ ಪಿಕ್ಚರ್ಸ್ ರವರ
ಮಾಬಾಪ್ ಕಿ ಲಾಜ್
(ಹಿಂದಿ)
—: ಪಾತ್ರ :—
ಸ್ವರ್ಣಲತಾ-ನಜೀರ್-ಜಯಂತ್

Edited printed and published by A. R. Nagarajan at the Sadhvi Press D. Subbaiah Road Mysore

ಗೌರ್ನರುಗಳ ರಾಜೀನಾಮೆ

ಭಾರತದ ಎಲ್ಲ ಪ್ರಾಂತಗಳ ಗೌರ್ನರುಗಳೂ ವೈಸರಾಯರಿಗೆ ತಮ್ಮ ರಾಜೀನಾಮೆ ಸಲ್ಲಿಸಿರುವರೆಂದೂ ಆದರೆ ಸರ್ ಚಂದೂಲಾಲ್ ತ್ರಿವೇದಿ, ಸರ್ ಅಕ್ಬರ್ ಹೈದರಿ, ಸರ್ ಆರ್ಚಿಬಾಲ್ಡ್ ನೈ ರವರುಗಳ ರಾಜೀನಾಮೆಯನ್ನು ಸದ್ಯಕ್ಕೆ ಅಂಗೀಕರಿಸಲಾಗುವುದಿಲ್ಲವೆಂದೂ ವರದಿಯಾಗಿದೆ.

ಕಾಶ್ಮೀರಕ್ಕೆ ಗಾಂಧೀಜಿ

ಮಹಾತ್ಮ ಗಾಂಧಿಯವರು ಈ ದಿನ ರಾತ್ರಿ ಕಾಶ್ಮೀರಕ್ಕೆ ತೆರಳಿ ಅಲ್ಲಿ ೩ ದಿನಗಳಿದ್ದು ಅಲ್ಲಿಂದ ನೌಖಾಲಿಗೆ ಪ್ರಯಾಣ ಮಾಡುವರೆಂದೂ, ಆಗಸ್ಟ್ ೧೫ ರ ವೇಳೆಗೆ ದೆಹಲಿಗೆ ಹಿಂದಿರುಗುವರೆಂದೂ ವರದಿಯಾಗಿದೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ನಂಜನಗೂಡು
ಸಿಂಗರ್ ಹೊಲಿಯುವ ಮಿಷನ್ ಕಂಪೆನಿ
ಸಿಂಗರ್ ಹೊಲಿಯುವ ಕಂಪೆನಿಯು [illegible] ಪುನಃ ನಂಜನಗೂಡಿನಲ್ಲಿ ತೆರೆಯಲ್ಪಟ್ಟಿದೆ. ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಟಿ. ನರಸೀಪುರ, ಕೊಳ್ಳೇಗಾಲ-ಈ ತಾಲ್ಲೂಕುಗಳ ಜನಗಳು ಮಿಷನ್ ಬೇಕಾದಲ್ಲಿ ಇಲ್ಲಿಗೆ ಬಂದು ಹೆಸರುಗಳನ್ನು ರಿಜಿಸ್ಟರ್ ಮಾಡಿ ಪಡೆಯಬಹುದು. ಹಳೇ ಮೆಷಿನ್ನುಗಳನ್ನು ರಿಪೇರಿ ಸಹಾ ಮಾಡಲಾಗುತ್ತದೆ

Greetings to Sadhvi

From
Dharmapravartha
A. S. Rangaswamiengar, B.A.

Dear Mr. Rangiah,

It is my sacred and sincere duty and proud previlege to send you my hearty congratulations on the Fifth Anniversary of SADHVI useful, serviceable and above all popular Daily under your able management and guidance. I am ever an admirer of your Daily (silent admirer.) It is a living memorial to our late patriot who had sacrificed all for the good of the country,—I mean my revered Guru the late Mr Venkatakrishnaiah.

Once again I wish the paper every success and utility to the public.

With kind regards,
Ever yours sincerely,
A. S. Rangaswamiengar

ತೆಪ್ಪೋತ್ಸವ

ಸ್ವಂ. ವ.] ಚಾಮರಾಜನಗರ ೩. ನಾಳೆ ಇಲ್ಲಿ ನಡೆಯಲಿರುವ ಶ್ರೀ ನಾರಾಯಣಸ್ವಾಮಿಯವರ ತೆಪ್ಪೋತ್ಸವದಲ್ಲಿ ಊರಿನ ವಿದ್ವಾನ್ ಕೆ. ಸಿ. [illegible] ರವರ ನಾಗಸ್ವರವು ಶ್ರೀ ಕೆ. ಸಿ. ರಾಜಗೋಪಾಲ್‌ರವರ ಡೋಲಿನೊಡನೆ ನಡೆಯುವುದು.

ವುಡ್‌ಲ್ಯಾಂಡ್ಸ್
25-7-47 ರಿಂದ
ಕಿಕ್ಕಿರಿದ ೧೪ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)
ನಾವು ಇಬ್ಬರು
(ತಮಿಳು)
—: ಪಾತ್ರ :—
ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರನ್ ಮುಂತಾದವರು.

ರಾಜಕಮಲ್
ತಾ|| 25-7-47 ರಿಂದ
ಅಪೇಕ್ಷೆಯ ೨ ನೇ ವಾರ
ಪ್ರತಿ ದಿನ ಮೂರು ಆಟಗಳು.
★ ಕಿಸ್ಮತ್ ★
—: ಭೂಮಿಕೆ :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಬೇಬಿ ಕಮಲ ಮತ್ತು ಷಾ ನವಾಜ್

ಶ್ರೀ
ಪಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ
ಹಲಗೇರಿ, ಇವರು ಮೈಸೂರು, ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦-೩೦ ಗಂಟೆಗೆ
★ ಹೇಮರೆಡ್ಡಿ - ಮಲ್ಲಮ್ಮ ★
ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ
ಭಾನುವಾರ ಮ್ಯಾಟಿನಿ ಉಂಟು
ಚಿಕ್ಕಚೆಟ್ಟೆಪ್ಪ, ಪ್ರೊಪ್ರೈಟರ್

ಫೋನ್ ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಗುರುವಾರ ೩೧—೭—೪೭ [ಸಂಚಿಕೆ ೧೦

ಇಂಡೋನೇಷ್ಯಾ ಪ್ರಶ್ನೆಗೆ ಪಾಕಿಸ್ಥಾನದ ಬೆಂಬಲ

ಆಂಗ್ ಸಾನರ ಬಗ್ಗೆ ಅನುತಾಪ

ಪೌರಸಭೆಯ ನಿರ್ಣಯ

ಮೈಸೂರು ೩೦

ಪೌರಸಭಾಧ್ಯಕ್ಷರು ರಜದ ಮೇಲೆ ಹೋಗಿ ಹೊಸ ಅಧ್ಯಕ್ಷರು ಇನ್ನೂ ಅಧಿಕಾರವನ್ನು ವಹಿಸಿ ಕೊಂಡಿಲ್ಲದಿರುವುದರಿಂದ ಇಂದಿನ ಪೌರಸಭೆಯ ಅಧಿವೇಶನವು ಉಪಾಧ್ಯಕ್ಷರಾದ ಶ್ರೀ ಟಿ. ರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯ ಲ್ಲಿ ಆರಂಭವಾಯಿತು. ಸಭೆಯ ಕಾರ್ಯಕಲಾಪಗಳು ಆರಂಭವಾಗುವ ಮುನ್ನ ಬರ್ಮಾ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷರಾದ ಯು ಆಂಗ್ ಸಾನ್ ಮತ್ತು ಅವರ ಸಹೋದ್ಯೋಗಿಗಳು ಅಕಾಲ ಮರಣಕ್ಕೀಡಾದುದಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಪೌರಸಭಾ ಸದಸ್ಯರಾದ ಶ್ರೀ ಎ ಎನ್. ಸೂರ್ಯನಾರಾಯಣರಾಯರ ಪತ್ನಿ ಶ್ರೀಮತಿ ಪಾರ್ವತಮ್ಮನವರ ಮರಣದ ಬಗ್ಗೆಯೂ ಸಂತಾಪವನ್ನು ವ್ಯಕ್ತಪಡಿಸಲಾಯಿತು.

ಕದನ ನಿಲ್ಲಿಸಬೇಕೆಂದು ವರ್ಲ್ಡ್ ಟ್ರೇಡ್ ಯೂನಿಯನ್

ಇಂಡೋನೇಷ್ಯದ ಮೇಲೆ ನಡೆಯುತ್ತಿರುವ ಕದನವನ್ನು ನಿಲ್ಲಿಸಬೇಕೆಂದೂ, ರಿಪಬ್ಲಿಕ್ ನೊಡನೆ ಶಾಂತಿಯುತವಾಗಿ ಸಂಧಾನ ನಡೆಸಬೇಕೆಂದೂ, ತಪ್ಪಿದ್ದಲ್ಲಿ ಪ್ರಶ್ನೆಗೆ ಹಿಂದಿರುಗಿದ್ದರೆ ಮಧ್ಯಸ್ಥಿಕೆಯಿಂದ ಒಪ್ಪಂದ ಮಾಡಿಕೊಳ್ಳಬೇಕೆಂದೂ ವರ್ಲ್ಡ್ ಟ್ರೇಡ್ ಯೂನಿಯನ್ ಸಂಸ್ಥೆಯು ತನ್ನ ಸರ್ಕಾರಕ್ಕೆ ಸಲಹೆ ಇತ್ತಿದೆ.

ವಿಶ್ವ ರಾಷ್ಟ್ರ ಸಂಸ್ಥೆಯಲ್ಲಿ ಇಂಡೋನೇಷ್ಯಾ ಪ್ರಶ್ನೆ

ಇಂಡೋನೇಷ್ಯಾ ವಿವಾದದ ಪ್ರಶ್ನೆಯು [illegible] ದಿನ ವಿಶ್ವ ರಾಷ್ಟ್ರ ಸಂಸ್ಥೆಯಲ್ಲಿ ಚರ್ಚೆ ಬರಲಿದೆಯೆಂದು ಗೊತ್ತಾಗಿದೆ. ಭಾರತ ವು, ಇತರ ರಾಷ್ಟ್ರಗಳೂ ಈ ಪ್ರಶ್ನೆಯಲ್ಲಿ ಪ್ರವೇಶಿಸುವುದು ಅಕ್ರಮವೆಂದು ಹೇಳುವುದಕ್ಕಿದ್ದಲ್ಲಿ ಡಚ್ ರಾಯಭಾರಿಗಳು ಇದನ್ನು ಪ್ರತಿಭಟಿಸುವರೆಂದು ಹೇಳಲಾಗಿದೆ.

ಲಂಡನ್ನಿನಲ್ಲಿ ಸಿಖ್ ಪ್ರತಿನಿಧಿಗಳಿಗೆ ಭೇಟಿಯಿಲ್ಲ

ಸಿಕ್ಕರ ಬೇಡಿಕೆಗಳನ್ನು ಬ್ರಿಟಿಷ್ ಮಂತ್ರಿಮಂಡಲದ ಮುಂದೆ ಇಡಲು ಲಂಡನ್ನಿಗೆ ಹೋಗಿರುವ ಸರ್ದಾರ್ ಮೊಹರ್ ಸಿಂಗ್ ಥೋಪಿಯಾ ಮತ್ತು ಸರ್ದಾರ್ ಗಂಗಾಸಿಂಗ್ ರವರುಗಳಿಗೆ ಲಾರ್ಡ್ ಲಿಸ್ಟೋವೆಲ್, ಮಿ. ಮೊನಲಾದವರ ಭೇಟಿಗೆ ಅವಕಾಶ ದೊರೆಯಲಿಲ್ಲವಿಲ್ಲ. ಇವರು ಯಾವ ಪ್ರತಿನಿಧಿಗಳೆಂಬುದೇ ಲಂಡನ್ನಿನಲ್ಲಿರುವ ಭಾರತ ಕಛೇರಿಗೆ ಗೊತ್ತಿಲ್ಲವೆಂದು ಹೇಳಲಾಗಿದೆ.

ಹೈದರಾಬಾದೂ ಸಹ ಯೂನಿಯನ್ ಸೇರುವುದು

ಹೈದರಾಬಾದು ಭಾರತ ಯೂನಿಯನ್ನಿಗೆ ಸೇರಲು ಸಿದ್ಧವಿದ್ದರೂ ನಿರ್ಧರಿಸುವುದೆಂದು ನಿಜಾಮರ ರಾಜಕೀಯ ವ್ಯಕ್ತಿಗಳಲ್ಲಿ ಹೇಳಲಾಗುತ್ತಿದೆ. ಕೆಲವು ಷರತ್ತುಗಳ ಮೇಲೆ ಪ್ರಶ್ನೆ ಸ್ಪಷ್ಟವಲ್ಲೇ ನಿಜಾಮರು ಭಾರತ ಯೂನಿಯನ್ ಸೇರಿಸುವರೆಂದೂ ಪತ್ರಿಕೆಗಳ ಅಭಿಪ್ರಾಯವಾಗಿದೆ.

ಯೂನಿಯನ್ ಸೇರಲು ಕಾಶ್ಮೀರದಲ್ಲಿ ಪ್ರಜಾಭಿಪ್ರಾಯವೇ ?

ಕಾಶ್ಮೀರಕ್ಕೆ ತೆರಳುವ ಮುನ್ನ ವೈಸ್ ರಾಯ್, ಪಂಡಿತ ನೆಹರೂ ಮತ್ತು ಸರ್ದಾರ್ ಪಟೇಲರ ಜತೆಗೊಡನೆ ಪ ಹಾರಾಜರು [illegible] ಥಿಯವರು ಮಾತುಕತೆ ನಡೆಸಿದರೆಂದು ವರದಿಯಾಗಿದೆ. ಸಮಾಲೋಚನೆಯಲ್ಲಿ ಮುಖ್ಯವಾಗಿ ದೇಶೀಯ ಸಂಸ್ಥಾನಗಳ ವಿಷಯವು ಚರ್ಚಿಸಲ್ಪಟ್ಟಿತೆಂದು ತಿಳಿದು ಬಂದಿದೆ. ವೈಸರಾಯರ ಮತ್ತು ನೆಹರೂರವರ ಅಪೇಕ್ಷೆಯಂತೆ ಮಹಾರಾಜರು ಕಾಶ್ಮೀರಕ್ಕೆ ತೆರಳುವರೆಂದು ಹೇಳಲಾಗಿದೆ. ಕಾಶ್ಮೀರ ಸಂಸ್ಥಾನವು ಯಾವುದಾದರೊಂದು ಡೊಮಿನಿಯನ್ನನ್ನು ಸೇರುವ ಬಗ್ಗೆ ಪ್ರಜಾಭಿಪ್ರಾಯವನ್ನು ಪಡೆಯಬೇಕೆಂಬುದೇ ಅವರ ಈ ಪ್ರವಾಸಕ್ಕೆ ಮುಖ್ಯ ಕಾರಣವೆಂದು ಸೂಚಿಸಲಾಗಿದೆ.

ರಾಜ್ಯಾಂಗ ಸಭೆಯ ಚುನಾವಣೆಗೆ ಶ್ರೀಮತಿ ಆಂಗ್ ಸಾನ್

ಅಕಾಲ ಮರಣಕ್ಕೀಡಾದ ಬರ್ಮಾ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷರಾದ ಆಂಗ್ ಸಾನರ ಪತ್ನಿ ಶ್ರೀಮತಿ ಆಂಗ್ ಸಾನರು ರಾಜ್ಯಾಂಗ ಸಭೆಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವರೆಂದು ವರದಿಯಾಗಿದೆ.

ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ಕಾರ್ಖಾನೆ

೨೫ ಲಕ್ಷ ರೂ ಬಂಡವಾಳದಿಂದ ಬೆಂಗಳೂರಿನಲ್ಲಿ ಒಂದು ಪ್ಲಾಸ್ಟಿಕ್ ಕಾರ್ಖಾನೆಯನ್ನು ಸ್ಥಾಪಿಸಲು ಮೈಸೂರು ಸರ್ಕಾರವು ನಿರ್ಧರಿಸಿದೆ. ಈ ಕಾರ್ಖಾನೆಯಲ್ಲಿ ಎಲ್ಲ ಬಗೆಯ ಪ್ಲಾಸ್ಟಿಕ್ ಸಾಮಾನುಗಳೂ ತಯಾರಾಗುವುವು. ಸದ್ಯದಲ್ಲಿಯೇ ಇದರ ಯಂತ್ರೋಪಕರಣಗಳೂ ಬರಲಿವೆ.

ತಿರುವಾಂಕೂರಿನಲ್ಲಿ ಕಾಂ॥ ನಾಯಕರ ಬಿಡುಗಡೆ

ಶಾಸನ ಭಂಗ ಚಳುವಳಿಯ ಸಂಬಂಧವಾಗಿ ದಸ್ತಗಿರಿಯಾಗಿದ್ದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪಟ್ಟಂ ತಾನುಪಿಳ್ಳೆ ಮತ್ತು ಇತರ ಕಾಂಗ್ರೆಸ್ ನಾಯಕರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ತಿರುವಾಂಕೂರು ಸರ್ಕಾರವು ಆಜ್ಞೆ ಇತ್ತಿರುವುದಾಗಿ ವರದಿಯಾಗಿದೆ. ಬ್ರಿಟಿಷ್, ಅಮೆರಿಕಗಳಲ್ಲಿ ತಮ್ಮ ಸಂಸ್ಥಾನದ ಟ್ರೇಡ್ ಕಮಿಷನರ್ ಗಳನ್ನು ನೇಮಿಸುವಂತೆ ಈವ [illegible] ಕೂರು ಸರ್ಕಾರವು ನಿರ್ಧರಿಸಿದೆಯೆಂದೂ ಸಹ ಗೊತ್ತಾಗಿದೆ.

ಎ. ಎನ್. ಸೂರ್ಯನಾರಾಯಣ ರಾಯರಿಗೆ ಪತ್ನೀ ವಿಯೋಗ

ಮೈಸೂರು ೩೦

ಪೌರಸಭಾ ಸದಸ್ಯರಾದ ಶ್ರೀ ಎ ಎನ್. ಸೂರ್ಯನಾರಾಯಣರಾಯರ ಪತ್ನಿ ಶ್ರೀಮತಿ ಪಾರ್ವತಮ್ಮನವರು ನಿನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರು ಕಳೆದ ವಾರ ಜೆನ್ನಾ ಮಗುವನ್ನು ಪ್ರಸವಿಸಿದ್ದರು. ಮಗುವು ಮಾರನೆಯ ದಿನವೇ ಮೃತಪಟ್ಟಿತು. ಶ್ರೀಮತಿಯವರು ರಾಷ್ಟ್ರಸೇವಾ ಕಾರ್ಯಗಳಲ್ಲಿ ಬಹಳ ಆಸಕ್ತಿ ವಹಿಸುತ್ತಿದ್ದರು. ಸ್ವಾಮಿ ಅರ್ಬಿ ಕಟ್ಟಡದ ಆಸ್ಪತ್ರೆ ಮತ್ತು ಧ್ವಜ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದರು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಬೇಡಿ ಶ್ರೀ ರಾಯರಿಗೂ, ಬಂಧುಮಿತ್ರರಿಗೂ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸಲ್ಲಿಸುತ್ತೇವೆ.

ಭಾಷಣ

ರಾಜಧಾನಿಯ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದಲ್ಲಿ ನಾಳೆ ಸಂಜೆ ೫ ಗಂಟೆಗೆ ಪ್ರೊ॥ ಕ ಜಿ. ಕುಂದಣಗಾರ ಮತ್ತು ಶ್ರೀ ಟಿ ಎನ್ ಶ್ರೀಕಂಠಯ್ಯನವರುಗಳು ಭಾಷಣ ಮಾಡುವರು.

ಹಿಂದಿಯು ಆಳ್ವಾರಿನ ಅಧಿಕೃತ ಭಾಷೆ

ಮಹಾರಾಜರು ಸುಂದರವಾದ ಮತ್ತು ಎಲ್ಲ ಸರ್ಕಾರಿ ಕಾರ್ಯಗಳ ವ್ಯವಹಾರವೂ ಆಳ್ವಾರ್ ಸಂಸ್ಥಾನದಲ್ಲಿ ಹಿಂದಿಯಲ್ಲಿಯೇ ನಡೆಯುತ್ತಿದೆ. ಕೋರ್ಟುಗಳಲ್ಲೂ ಸಹ ಹಿಂದೀ ಭಾಷೆಯನ್ನೇ ಉಪಯೋಗಿಸಬೇಕೆಂದು ಆಳ್ವಾರಿನ ಮಹಾರಾಜರು ಘೋಷಿಸಿರುವರು.

ಇಂಡೋನೇಷ್ಯದಲ್ಲಿ ಡಚ್ಚರ ಮುನ್ನಡೆ

ಸೆಮರಾಂಗಿನ ಪಶ್ಚಿಮ ಪ್ರದೇಶದ ನಗರವಾದ ಟೇಗಲ್ ನಗರವನ್ನು ಡಚ್ಚರು ವಶಪಡಿಸಿಕೊಂಡಿದ್ದಾರೆ. ಮಲಾಂಗ್ ನಗರವನ್ನು ಮುತ್ತಿಗೆಹಾಕಿದ್ದಾರೆ ಮುಖ್ಯ ಸ್ಥಾನದ ಕಡೆ ಅವರು ಮುನ್ನಡೆಯುತ್ತಿದ್ದಾರೆ. ಸೆಮರಾಂಗ್, ಸಲಾಟಿಗ ಮೊದಲಾದ ಪ್ರದೇಶಗಳಲ್ಲಿ ಇಂಡೋನೇಷ್ಯನರು ವಿರುದ್ಧ ವಿಮಾನ ಕಾರ್ಯಾಚರಣೆಯನ್ನು ಕೈಕೊಂಡಿದ್ದಾರೆ. ದಕ್ಷಿಣ ಸುಮಾತ್ರದಲ್ಲಿನ ೪ ಎಣ್ಣೆಯ ಬಾವಿಗಳು ಉರಿಯುತ್ತಿವೆ.

ಇಂಡೋನೇಷ್ಯದ ಬಗ್ಗೆ ಪಾಕಿಸ್ಥಾನದ ಬೆಂಬಲ

ಇಂಡೋನೇಷ್ಯಾ ರಿಪಬ್ಲಿಕಿನ ವಿರುದ್ಧವಾಗಿ ಡಚ್ಚರು ಕೈಗೊಂಡಿರುವ ಕಾರ್ಯಕ್ರಮಗಳ ವಿಷಯವಾಗಿ ಭಾರತ ಸರ್ಕಾರವು ಅನುಸರಿಸುವ ನೀತಿಗೆ ಪಾಕಿಸ್ಥಾನ ಸರ್ಕಾರವು ತನ್ನ ಪೂರ್ಣ ಬೆಂಬಲವನ್ನು ನೀಡುವುದೆಂದು ಅದರ ವಿದೇಶಾಂಗ ಮಂತ್ರಿ ಲಿಯಾಖತ್ ಆಲಿಖಾನರು ಭಾರತ ಸರ್ಕಾರಕ್ಕೆ ತಿಳಿಸಿರುವರೆಂದು ವರದಿಯಾಗಿದೆ. ಇಂಡೋನೇಷ್ಯನರ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುವ ಸಲುವಾಗಿ ಪಾಕಿಸ್ಥಾನ ಪ್ರದೇಶಗಳ ವಿಮಾನ ನಿಲ್ದಾಣಗಳಲ್ಲಿ ಡಚ್ ವಿಮಾನಗಳು ಇಳಿಯಲು ಮಾಡಿಕೊಂಡಿದ್ದ ಒಪ್ಪಂದಗಳನ್ನು ರದ್ದು ಮಾಡಲಾಗುವುದೆಂದೂ ಅವರು ತಿಳಿಸಿರುವರು.

ಗೌರ್ನರ್ ಪದವಿಯ ನಿರಾಕರಣೆ

ಆಚಾರ್ಯ ಕೃಪಲಾನಿ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ಕೆ ಎಂ ಮುನ್ಷಿಯವರು ಗೌರ್ನರ್ ಪದವಿಗಳನ್ನು ನಿರಾಕರಿಸಿರುವುದರಿಂದ ಡಾ॥ ಬಿ ಸಿ ರಾಯ್, ಡಾ॥ ಕೆ ಎನ್ ಕಟ್ಜು, ಶ್ರೀ ಸಿ ರಾಜಗೋಪಾಲಾಚಾರಿ, ಜೈರಾಮದಾಸ್ ದೌಲತ್ ರಾಂ, ಮುಂಗಲದಾಸ್ ಪಕ್ವಾಸಾ ಮತ್ತು ಸರ್ ಚಂದೂಲಾಲ್ ತ್ರಿವೇದಿಯವರುಗಳ ಹೆಸರನ್ನು ವೈಸರಾಯರಿಗೆ ಸೂಚಿಸಲಾಗಿದೆಯೆಂದು ವರದಿಯಾಗಿದೆ. ಶ್ರೀ ರಾಜಗೋಪಾಲಾಚಾರಿಯವರು ಗೌರ್ನರಾಗ ಬಯಸುವುದರಿಂದ ಕೇಂದ್ರ ಸರ್ಕಾರದ ಅವರ ಸ್ಥಾನಕ್ಕೆ ಸರ್ [illegible] ಕೆ ಷಣ್ಮುಗಂ ಚೆಟ್ಟಿಯಾರ್ ರವರು ನೇಮಿಸಲ್ಪಡುವರೆಂದೂ ಊಹಿಸಲಾಗಿದೆ.

ಸತ್ತ ಮನುಷ್ಯನಿಗೆ ಪಂಚಾಯಿತಿಗಾಗಿ ಕರೆ

ಜಬ್ಬಲ್ ಪುರದ ಮೊಹಲ್ಲದ ವೆಯೊಂದರ ಪಂಚಾಯಿತಿಯಲ್ಲಿ ಸಾಕ್ಷ್ಯ ಕೊಡಲು ವಾರೋ ಕೋರ್ಟಿನವರು ಮೂರು ವರ್ಷಗಳ ಹಿಂದೆ ಮೃತಪಟ್ಟ ಒಬ್ಬಾತನಿಗೆ ಸಮನ್ಸ್ ಕಳುಹಿಸಿರುವರೆಂದು ವರದಿಯಾಗಿದೆ.

ಹೈದರಾಬಾದಿನ ಮಂತ್ರಿಗಳ ರಾಜೀನಾಮೆಯೇ ?

ಹೈದರಾಬಾದು ಸಂಸ್ಥಾನವು ಭಾರತ ಯೂನಿಯನ್ನಿಗೆ ಸೇರುವ ಬಗ್ಗೆ ಅಲ್ಲಿನ ಪ್ರಧಾನಿಯವರ ಚತ್ಕಾರಿ ನವಾಬರು, ಗುಪ್ತವಾಗಿ ನಾಯಕರುಗಳೊಡನೆ ಮಾತುಕತೆ ನಡೆಸಿದರೆಂದೂ, ನಿಜಾಮರೊಡನೆ ಹೋಗಿದ್ದ ಕಿನಾಯತ ಸಚಿವರಾದ ಶ್ರೀ ಪಿಂಗಳೆ ವೆಂಕಟರಾಮರೆಡ್ಡಿ ಮತ್ತು ಎಂ ಎ. ರಹೀಂ ಮೊದಲಾದವರನ್ನು ನಿರ್ಲಕ್ಷಿಸಿ ಅವರೊಡನೆ ಸಮಾಲೋಚನೆ ನಡೆಸದೆ ಮಾತುಕತೆ ನಡೆಸುತ್ತಿರುವುದರಿಂದ ಅವರುಗಳು ರಾಜೀನಾಮೆ ಕೊಡಬಹುದೆಂದೂ ವರದಿಯಾಗಿದೆ.

ಪೌರಸಭೆಯ ವಿಶೇಷಾಧಿವೇಶನ

ಮೈಸೂರು ೩೦

ಭಾರತ ಯೂನಿಯನ್ನಿನ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸುವ ಕಾರ್ಯಕ್ರಮವನ್ನು ನಿರ್ಧರಿಸಲು ಪೌರಸಭೆಯ ವಿಶೇಷ ಅಧಿವೇಶನವು ನಾಳೆ ದಿ ೪ ಕ್ಕೆ ಗಂಟೆಗೆ ಸೇರುವುದು.

ಸಾಧ್ವಿ

ತಾ|| ೩೧-೭-೪೭ ಗುರುವಾರ

ತಿರುವಾಂಕೂರಿಗೆ ಜ್ಞಾನೋದಯ

ಭಾರತವು ಎರಡು ಭಾಗವಾಗಿ ವಿಂಗಡವಾಗಲು ನಿರ್ಧಾರವಾದಂದಿನಿಂದ ತಿರುವಾಂಕೂರು ಸಂಸ್ಥಾನವು ತನ್ನ ಸ್ವಾತಂತ್ರ್ಯವನ್ನು ಘೋಷಿಸುವುದಾಗಿ ಅಲ್ಲಿನ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರು ಸಾರುತ್ತಲೇ ಬಂದಿದ್ದಾರೆ. ಸಂಸ್ಥಾನಗಳು ಯಾವುದಾದರೊಂದು ಡೊಮಿನಿಯನ್ನಿಗೆ ಸೇರುವಂತೆ ಬ್ರಿಟಿಷ್ ಸರ್ಕಾರದವರು ಮೊದಲಿನಿಂದಲೂ ಮಾಡಿದ ಸೂಚನೆಗಳು ಅವರ ಮೇಲೆ ಇದುವರೆಗೆ ಯಾವ ಪರಿಣಾಮವನ್ನೂ ಉಂಟುಮಾಡಿರಲಿಲ್ಲ. ಆಕಾಶವು ತಲೆಯ ಮೇಲೆ ಬಿದ್ದರೂ ತಿರುವಾಂಕೂರು ತನ್ನ ಸ್ವಾತಂತ್ರ್ಯವನ್ನು ಬಿಡುವುದಿಲ್ಲವೆಂದು ಅವರು ಸಾರುತ್ತಿದ್ದರು. ಅಲ್ಲದೆ ಪಾಕಿಸ್ಥಾನದ ಜೊತೆಯಲ್ಲಿ ಸಂಪರ್ಕವನ್ನಿಟ್ಟುಕೊಂಡು ತಮ್ಮ ಸಂಸ್ಥಾನಕ್ಕೆ ಬೇಕಾದ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಳ್ಳುವುದಾಗಿಯೂ ಹೇಳುತ್ತಿದ್ದರು.

ಈ ಸಂದರ್ಭದಲ್ಲಿ ಸರ್. ಸಿ. ಪಿ. ಯವರ ಅನುಸರಿಸಿದ ವರ್ತನೆಯು ಸರ್ವರ ಖಂಡನೆಗೂ ಪಾತ್ರವಾಗಿತ್ತು. ಸರ್ಕಾರದ ಈ ನಿರ್ಧಾರಕ್ಕೆ ವಿರುದ್ಧವಾಗಿರುವ ನೌಕರರೆಲ್ಲರೂ ರಾಜೀನಾಮೆ ಇತ್ತು ಸಂಸ್ಥಾನವನ್ನೇ ಬಿಟ್ಟು ಹೋಗಬೇಕೆಂದು ಅವರು ಹೇಳಿದ್ದುದು ಮೂರ್ಖತನದ ಪರಮಾವಧಿಯಾಗಿತ್ತು. ಸರ್ಕಾರೀ ಅಧಿಕಾರಿಗಳು ತಮ್ಮ ಕೆಲಸಕಾರ್ಯಗಳನ್ನಾದರೂ ಒದಿಗೊತ್ತಿ ಎಲ್ಲೆಲ್ಲಿಗೂ ಹೋಗಿ ತಿರುವಾಂಕೂರಿನ ಸ್ವಾತಂತ್ರ್ಯದ ವಿಚಾರವನ್ನು ಪ್ರಚಾರ ಮಾಡಬೇಕೆಂದು ಅವರು ಹೇಳುತ್ತಿದ್ದುದು ಅವರಿಗೆ ಚಿತ್ತ ಭ್ರಾಂತಿಯುಂಟಾಗಿರುವುದೋ? ಎಂಬ ಶಂಕೆಗೂ ಆಸ್ಪದವೀಯುತ್ತಿತ್ತು. ಇದರಿಂದ ಇಡೀ ರಾಜ್ಯದ ಸ್ಥಿತಿಯೇ ಅಧಿಕಾರೀ ವರ್ಗದವರೂ ಸಾರ್ವಜನಿಕರೂ ಒಬ್ಬರ ಮೇಲೊಬ್ಬರು ಕಾಲು ಕೆರೆದು ಕದನಕ್ಕೆ ನಿಲ್ಲುವ ಪರಿಸ್ಥಿತಿಯೂ ಉಂಟಾಗಿತ್ತು.

ಮೇಲ್ಕಂಡ ಈ ನಿರ್ಧಾರಕ್ಕೆ ಪ್ರಜೆಗಳ ಒಮ್ಮತಾಭಿಪ್ರಾಯವಿರುವುದೆಂಬ ಒಂದು ಕೃತಕ ವಾದವನ್ನೂ ಸಹ ಸರ್ ಸಿ ಪಿ ಯವರು ಹೂಡಲಾರಂಭಿಸಿದರು. ಇದಕ್ಕೆ ಅಲ್ಲಿನ ಕಾಂಗ್ರೆಸ್ ನಾಯಕರು ಸವಾಲು ಹಾಕಿ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದೂ ಸಹ ಸರ್ಕಾರದವರನ್ನು ಆಹ್ವಾನಿಸಿದರು. ಇದು ನಡೆಯದಿದ್ದುದರಿಂದ ತಮ್ಮ ಹಕ್ಕು, ಬಾಧ್ಯತೆಗಳ ಸ್ಥಾಪನೆಗಾಗಿ ತಿರುವಾಂಕೂರಿನ ಪ್ರಜೆಗಳು ಸತ್ಯಾಗ್ರಹ ಚಳುವಳಿಯನ್ನು ಆರಂಭಿಸಿದರು. ಈ ಚಳುವಳಿಯು ಅಹಿಂಸಾತ್ಮಕ ರೀತಿಯಲ್ಲಿಯೇ ನಡೆಯುತ್ತಿದ್ದರೂ [illegible] ಪ್ರಾಣವನ್ನು [illegible], ಹಿಂಸಾ ಕೃತ್ಯಗಳಲ್ಲಿ ಜನರು ತೊಡಗುತ್ತಿರುವರೆಂದೂ ದಿವಾನರು [illegible]. ಈ [illegible] ದಿವಾನರ [illegible] ಘಟನೆ ಅವಘಾತವೂ ಸಹ [illegible]. ಇದನ್ನು ಕಾಂಗ್ರೆಸ್ [illegible], ಇತರರೂ ಸ್ಪಷ್ಟವಾಗಿ ಖಂಡಿಸಿದರು.

ಇತ್ತೀಚೆಗೆ ವೈಸರಾಯರು ನಡೆಸಿದ ಸಂಧಾನದ ಪ್ರಯತ್ನದ ಫಲವಾಗಿ ತಿರುವಾಂಕೂರು ಭಾರತದ ಯೂನಿಯನ್ನಿಗೇ ಸೇರಲು ನಿರ್ಧರಿಸಿರುವುದೆಂಬ ವಾರ್ತೆಯು ಬಂದಿರುತ್ತದೆ. ಈಗಲಾದರೂ ಅದಕ್ಕೆ ಜ್ಞಾನೋದಯವಾಗಿರುವುದಕ್ಕಾಗಿ ಸಂತೋಷಪಡಬೇಕಾಗಿದೆ. ಕೆಟ್ಟ ಮೇಲೆ ಬುದ್ಧಿ ಬರುವ ಪ್ರಸಂಗಗಳಲ್ಲಿ ಇದೂ ಒಂದೆಂದು ಭಾವಿಸಲು ಅವಕಾಶವಿರುತ್ತದೆ. ತಿರುವಾಂಕೂರು ತನ್ನ ಹಟ ಮೂರ್ಖತನವನ್ನೇ ಮುಂದುವರಿಸಿದ್ದರೆ ಆ ಸಂಸ್ಥಾನವು ಯಾವ ಅಧೋಗತಿಗೆ ಬರುತ್ತಿತ್ತೋ ಹೇಳಲು ಸಾಧ್ಯವಿಲ್ಲ. ಪ್ರಜೆಗಳಿಗೂ ರಾಷ್ಟ್ರ ನಾಯಕರುಗಳಿಗೂ ವಿರೋಧವಾಗಿ ಯಾವ ರಾಜನೂ ತನ್ನ ಆಳ್ವಿಕೆಯನ್ನು ನಡೆಸಲು ಸಾಧ್ಯವಿಲ್ಲ. ದುರ್ಮಂತ್ರಿಗಳ ದುರ್ಬೋಧನೆಗಳಿಗೆ ಒಳಗಾಗುವ ರಾಜರುಗಳು ಪ್ರಜಾ ಬೆಂಬಲವನ್ನೂ ಪ್ರಪಂಚದ ಮನ್ನಣೆಯನ್ನೂ ಕಳೆದುಕೊಂಡು ತ್ರಿಶಂಕು ಸ್ವರ್ಗದಲ್ಲಿ ನೇತಾಡಬೇಕಾಗುವುದು. ಇದನ್ನರಿತು ತಿರುವಾಂಕೂರಿನ ರಾಜರು ತಮ್ಮ ಸಂಸ್ಥಾನದ ಇದುವರೆಗಿನ ನೀತಿಯನ್ನು ಮಾರ್ಪಡಿಸಿ ಹೊಸ ಅಧ್ಯಾಯವನ್ನು ಆರಂಭಿಸಿರುವುದು ಅಭಿನಂದನೀಯವಾಗಿದೆ. ತಿರುವಾಂಕೂರಿನಂತಹ ಪ್ರಬಲ ಸಂಸ್ಥಾನದ ಈ ವರ್ತನೆಯು ಇತರ ಸಂಸ್ಥಾನಗಳ ಮೇಲೆಯೂ ಸತ್ಪರಿಣಾಮವನ್ನುಂಟುಮಾಡಲೆಂಬುದೇ ಎಲ್ಲರ ಹಾರೈಕೆಯಾಗಿದೆ.

ರಾಜಕಮಲ್

ತಾ|| 1-8-47 ರಿಂದ

ಅಮೋಘ ೪ ನೇ ವಾರ

★ ಕಿಸ್ಮತ್ ★

—: ಪಾತ್ರಗಳು :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಶಾನವಾಜ್ ಮುಂತಾದವರು

From 1-8-47 for 4 days
at 10-30 a m

Murder in Reverse

Starring :-Billy Hartnell,
Jimmy Hanley,
Chili Bouchier,
John Slater.

ಸೈನ್ಯವನ್ನು ವರ್ಗಾಯಿಸಲು ೧೫೦ ರೈಲುಗಳು

ಭಾರತದ ಸೇನೆಯನ್ನು ವಿಭಾಗ ಮಾಡಿ ವರ್ಗಾಯಿಸಲು ೧೫೦ ರೈಲುಗಳು ಬೇಕಾಗುವವೆಂದು ಸರ್ಕಾರವು ಪ್ರಕಟಿಸಿರುತ್ತದೆ. ಶಸ್ತ್ರ, ಕಾಲಾಳು ಮತ್ತು ಮದ್ದುಗುಂಡುಗಳ ಪಡೆ, ಇಂಜನಿಯರಿಂಗ್ ವಿಭಾಗಗಳ ವರ್ಗಾವಣೆಗಳು ಈಗಾಗಲೇ ನಡೆಯುತ್ತಿವೆಯೆಂದೂ ಸಹ ತಿಳಿಸಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ

[ಸ್ವಂ ವ] ನಂಜನಗೂಡು ೨೯

ಆಗಸ್ಟ್ ೧೫ ನೇ ತಾ|| ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ನಡೆಸಬೇಕೆಂದು ಇಲ್ಲಿನ ಸೇವಾದಳದ ಸಮಿತಿಯು ನಿರ್ಧರಿಸಿದೆ. ಅಂದು ಧ್ವಜಾರೋಹಣ, ಧ್ವಜವಂದನೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಇದಕ್ಕಾಗಿ ಬರುವ ೫ ನೇ ತಾ|| ನಿಂದ ಪ್ರತಿದಿನ ಸಂಜೆ ೫-೩೦ ರಿಂದ ೬-೩೦ ಗಂಟೆಯ ವರೆಗೆ ರೈಲ್ವೆ ಸ್ಟೇಷನ್ನಿನ ಮುಂಭಾಗದ ಮೈದಾನದಲ್ಲಿ ಶಿಕ್ಷಣವನ್ನು ಕೊಡಲಾಗುವುದೆಂದು ಸೇವಾದಳದ ನಾಯಕರಾದ ಶ್ರೀ ಎಂ ಕೃಷ್ಣಯ್ಯನವರು ತಿಳಿಸಿರುವರು.

ಉಪನ್ಯಾಸ

ಇಲ್ಲಿನ ಶ್ರೀ ಶಂಕರ ಮಠದಲ್ಲಿ ನಾಳೆ ೫ ಗಂಟೆಗೆ ಮಿ|| ಎ. ಎಸ್. ದೊರೆಸ್ವಾಮಿಯವರು ಶ್ರೀ ಶ್ರೀಕಂಠೇಶ್ವರ [illegible] ಸಭೆಯ ಆಶ್ರಯದಲ್ಲಿ ಬ್ರಹ್ಮ ಸೂತ್ರಗಳ ಆವಶ್ಯಕತೆ-ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಬೆಂಗಾಲ್ ಸಿಲ್ಕ್ ಸೀರೆಗಳು
ಉತ್ತಮೋತ್ತಮವಾದ ಬಣ್ಣಗಳಲ್ಲಿ
೬-೭ ೮-೯ ಗಜಗಳಲ್ಲಿ
ಬಂದಿವೆ.
ಬಾಂಬೆಸ್ಟೋರ್ ಕಂಪೆನಿ, ಮೈಸೂರು

WOOD LANDS

Morning Shows From
1-8-47 for 4 days
daily at 10-30 A. M.
Warner Brothers'

The Dark Tower

with
Ben Lyon, Anne Crawford
&
David Farrar

Edited printed and published by A. R. Nagarajan at the Sadhvi Press D. Subbaiah Road Mysore

ಹರಿಜನರಿಗೆ ಕ್ಷೌರ ಮಾಡದಿರಲು ಅಂಗಡಿಗಳ ಬಂದು

ಹರಿಜನರಿಗೆ ಕ್ಷೌರ ಮಾಡುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಫಂಡರಾಪುರದ ಎಲ್ಲ ಕ್ಷೌರಿಕರೂ ತಮ್ಮ ಅಂಗಡಿಗಳನ್ನು ಮುಚ್ಚಿಬಿಟ್ಟಿರುವರು. ಈಗ ಜನರ ಮನೆಗೇ ಹೋಗಿ ಕ್ಷೌರಮಾಡುತ್ತಿರುವರು.

ತಿಲಕ್ ದಿನಾಚರಣೆ

ಮೈಸೂರು ೩೧

ನಾಳೆ ಸಂಜೆ ೭ ಗಂಟೆಗೆ ಶಿವರಾಂಪೇಟೆಯಲ್ಲಿರುವ ಹಿಂದೂಮಹಾಸಭೆಯ ಕಛೇರಿಯಲ್ಲಿ ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕರವರ ದಿನಾಚರಣೆಯು ನಡೆಯುವುದು. ಶ್ರೀ ಕೆ ಶೇಷಾದ್ರಿಯವರು ಅಧ್ಯಕ್ಷತೆ ವಹಿಸುವರು. ಆರ್ಯಸಮಾಜದ ಪ್ರಚಾರಕರಾದ ಪಂ|| ಮಂಜುನಾಥ ಸಿದ್ಧಾಂತ ಭೂಷಣರವರು ತಿಲಕರವರ ಜೀವನ ಚರಿತ್ರೆಯ ವಿಷಯವಾಗಿ ಭಾಷಣ ಮಾಡುವರು.

ವಿದ್ಯಾರ್ಥಿನಿಲಯಕ್ಕೆ ಸಹಾಯ

ರಾಜಧಾನಿಯ ಇಲವಾಲ ರಸ್ತೆಯಲ್ಲಿರುವ ಕುಂಚಿಟಿಗರ ವಿದ್ಯಾರ್ಥಿನಿಲಯದಲ್ಲಿ ೩೦ ಮಂದಿ ವಿದ್ಯಾರ್ಥಿಗಳಿಗೆ ಉಚಿತ ಭೋಜನವನ್ನು ಏರ್ಪಡಿಸಲಾಗಿದೆ. ನಗರದ ಅನೇಕ ಗಣ್ಯಮಹನೀಯರು ಪ್ರತಿ ಮಾಹೆಯೂ ಇದಕ್ಕಾಗಿ ಸುಮಾರು ೧೫೦ ರೂ. ಸಹಾಯ ಮಾಡುತ್ತಿದ್ದಾರೆ.

ಚಾಮುಂಡೇಶ್ವರಿ ಟಾಕೀಸ್
ತಾ|| 1-8-47 ರಿಂದ ದಿನವಹಿ 3 ಆಟಗಳು
ಹಿಂದ್ ಪಿಕ್ಚರ್ಸ್ ರವರ

ಮಾಬಾಪ್ ಕಿ ಲಾಜ್

(ಹಿಂದಿ)
—: ಪಾತ್ರ :—
ಸ್ವರ್ಣಲತಾ-ನಜೀರ್-ಜಯಂತ್

ನಂಜನಗೂಡು
ಸಿಂಗರ್ ಸೂಯಿಂಗ್ ಮಿಷಿನ್ ಕಂಪೆನಿ

ಸಿಂಗರ್ ಹೊಲಿಯುವ ಕಂಪೆನಿಯ ಶಾಖೆ ಪುನಃ ನಂಜನಗೂಡಿನಲ್ಲಿ ತೆರೆಯಲ್ಪಟ್ಟಿದೆ. ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಟಿ. ನರಸೀಪುರ, ಕೊಳ್ಳೇಗಾಲ-ಈ ತಾಲ್ಲೂಕುಗಳ ಜನಗಳು ಮಿಷಿನ್ ಬೇಕಾದಲ್ಲಿ ಇಲ್ಲಿಗೆ ಬಂದು ಹೆಸರುಗಳನ್ನು ರಿಜಿಸ್ಟರ್ ಮಾಡಿ ಪಡೆಯಬಹುದು. ಹಳೇ ಮೆಷಿನ್ನುಗಳನ್ನು ರಿಪೇರಿ ಸಹ ಮಾಡಲಾಗುತ್ತದೆ.

ವುಡ್‌ಲ್ಯಾಂಡ್ಸ್
1-8-47 ರಿಂದ
ಕಿಕ್ಕಿರಿದ ೧೪ ನೇ ವಾರ
ಪ್ರತಿ ದಿನ ೩ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟನಿ ಉಂಟು)

ನಾಮ್ ಇರುವರ್ (ತಮಿಳು)

: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ಶ್ರೀ
ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ
ಹಲಗೇರಿ, ಇವರು ಮೈಸೂರು ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦-೩೦ ಗಂಟೆಗೆ

★ **ಹೇಮರೆಡ್ಡಿ - ಮಲ್ಲಮ್ಮ** ★

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ
ಭಾನುವಾರ ಮ್ಯಾಟಿನಿ ಉಂಟು
ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್.

ಫೋನ್ ನಂ. ೨೨2 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೬] ಶುಕ್ರವಾರ ೧—೮—೪೭ [ಸಂಚಿಕೆ ೧೧

ಮಲಾಂಗ್ ನಗರವು ಡಚ್ಚರ ವಶವಾಯಿತು

ಪೌರಸಭಾಧ್ಯಕ್ಷತೆ
ಸರ್ಕಾರದ ವರ್ತನೆಯ ಖಂಡನೆ

ಮೈಸೂರು ೧

ರಾಜಧಾನಿಯ ಪೌರಸಭೆಯ ಅಧಿವೇಶನವು ನಿನ್ನೆ ಉಪಾಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ವರ್ಗವಾಗಿರುವ ಶ್ರೀ ರಾಮಚಂದ್ರರಾವ್ ಬೊಂಬೋರೆಯವರ ಸ್ಥಾನದಲ್ಲಿ ಶ್ರೀ ಎಸ್ ಎಸ್ ಲಿಂಗಣ್ಣಯ್ಯನವರನ್ನು ಪೌರಸಭಾಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆ ಸರ್ಕಾರದಿಂದ ಬಂದಿರುವ ಪತ್ರವನ್ನು ರಿಕಾರ್ಡ್ ಮಾಡುವಾಗ ಈ ಕೆಳಗೆ ಕಂಡ ನಿರ್ಣಯವು ಅಂಗೀಕರಿಸಲ್ಪಟ್ಟಿತು; ಈ ಸಭೆಯು ಕಳೆದ ಹತ್ತು ವರ್ಷಗಳಿಂದಲೂ ಚುನಾಯಿತ ಅಧ್ಯಕ್ಷರನ್ನು ಹೊಂದುವ ಅವಕಾಶವನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳುತ್ತಿದ್ದರೂ, ಶ್ರೀಮನ್ಮಹಾರಾಜರವರಿಗೆ ಮನವಿಯನ್ನು ಸಲ್ಲಿಸಿದ್ದರೂ, ಶಾಸನ ಸಭೆಯಲ್ಲಿ ಈ ಬಗ್ಗೆ ನಿರ್ಣಯವೂ ಸಹ ಆಗಿದ್ದರೂ, ಪೌರಸಭೆಯ ಕೋರಿಕೆಯನ್ನು ಈಡೇರಿಸದೆ ಈ ಸುಸಮಯವನ್ನೂ ಸಹ ಸರ್ಕಾರದವರು ಕಳೆದುಕೊಂಡಿರುವುದಕ್ಕಾಗಿ ಸಭೆಯು ವಿಷಾದಿಸುತ್ತದೆ.

ಹಿಂದಿನ ಪೌರಸಭಾಧ್ಯಕ್ಷರ ಮೇಲೆ ಅವಿಶ್ವಾಸವನ್ನು ಸೂಚಿಸಲು ಉಪಾಧ್ಯಕ್ಷರು ನಡೆಸಿದ ಸಭೆಯು ಅಕ್ರಮ ವಾಗಿತ್ತೆಂದು ಸರ್ಕಾರದಿಂದ ಬಂದಿರುವ ಪತ್ರದ ವಿಚಾರದಲ್ಲಿ ಈ ಬಗ್ಗೆ ಅಧ್ಯಕ್ಷರು ಸರ್ಕಾರದವರ ಅಭಿಪ್ರಾಯವನ್ನು ಕೇಳಿದರೂ, ಸರ್ಕಾರದವರು ಪೌರಸಭೆಯ ಅಭಿಪ್ರಾಯವನ್ನು ಕೇಳದ[illegible] ಏಕಪಕ್ಷವಾಗಿ ತೀರ್ಮಾನವನ್ನು ಕೊಟ್ಟಿರುವುದೂ, ಉಚಿತವಲ್ಲವೆಂದು ತೀರ್ಮಾನಿಸಲಾಯಿತು. ಸರ್ಕಾರದ ಪತ್ರವನ್ನು ಫೈಲ್ ಮಾಡತಕ್ಕದ್ದೆಂದೂ ತೀರ್ಮಾನಿಸಲಾಯಿತು.

ಪೌರಸಭೆಯ [illegible] ವ್ಯವಸ್ಥೆಯ [illegible] ಪುನಃಪ್ರಕಟನೆ ಮಾಡಲಾಯಿತು.

[illegible] ಪೌರಸಭೆಯನ್ನು [illegible] ಒಂದು [illegible] ತಪ್ಪು [illegible] ತೀರ್ಮಾನವಾಯಿತು.

ಮುಂದೆ ಹೊಸಪಟ್ಟಣ[illegible] ಕೊಡಬೇಕೆಂದು ಸಭೆ ತೀರ್ಮಾನವಾಯಿತು.

ವೂರ್ಕೆಟ್ ಅಂಗಡಿ [illegible] ಬಾಡಿಗೆಗಳ [illegible] ಕಲಮುಗಳನ್ನು [illegible] ಗೋಪಾಲಕೃಷ್ಣ[illegible] ದೇವರಾಜ ಮಾರ್ಕೆಟ್ಟಿನ ಪೂರ್ವಭಾಗದ ಬಾಗಿಲ [illegible] ಅನುಮತಿಯಿಲ್ಲದೆ ಅಂಗಡಿಯೊಂದ[illegible] ಏರ್ಪಡಿಸಿರುವುದು ಸೂಕ್ತವಾಗಿಲ್ಲವೆಂದು, ಅದನ್ನು ಕೂಡಲೇ ತೆಗೆದು ಹಾಕಬೇಕೆಂದೂ ಸಹ ತೀರ್ಮಾನಿಸಲಾಯಿತು.

ಅಶೋಕ [illegible] ರಸ್ತೆಯಲ್ಲಿ [illegible] ಶ್ರೀ ಎಸ್ [illegible] ಜಾಗದಲ್ಲಿ [illegible] ಅದನ್ನು [illegible] ತೀರ್ಮಾನಿಸಲಾಯಿತು.

ಯೂನಿಯನ್ನಿಗೆ ಹೈದರಾಬಾದು ಸೇರುವುದಿಲ್ಲ

ಹೈದರಾಬಾದ್ ಸಂಸ್ಥಾನವು ಭಾರತ ಯೂನಿಯನ್ನಿಗೆ ಸೇರುವುದೆಂದು ಹೇಳುತ್ತಿರುವುದು ನಿರಾಧಾರವಾದುದೆಂದೂ, ಹಿಂದೂಸ್ಥಾನ ಅಥವಾ ಪಾಕಿಸ್ತಾನ ಡೊಮಿನಿಯನ್ನುಗಳ ಬಗ್ಗೆ ಹೈದರಾಬಾದು ಹಿಂದೆ ನಿರ್ಧರಿಸಿದ್ದ ನೀತಿಯಲ್ಲಿ ಈಗ ಯಾವ ಬದಲಾವಣೆಯೂ ಇಲ್ಲವೆಂದೂ ಹೈದರಾಬಾದಿನ ರಾಜ್ಯಾಂಗ ಸಚಿವರೂ, ದೆಹಲಿ ನಿಯೋಗದ ಸದಸ್ಯರೂ ಆದ ನವಾಬ್ ಅಲಿಯಾರ್ ಜಂಗ್ ಬಹದ್ದೂರರು ಹೇಳಿರುವರೆಂದು ವರದಿಯಾಗಿದೆ.

ನವೆಂಬರ್ ೨೦ ಕ್ಕೆ ಎಲಿಜಬೆತ್ತರ ವಿವಾಹ

ಬ್ರಿಟಿಷ್ ರಾಜಕುಮಾರಿಯವರ ವಿವಾಹವು ಗ್ರೀಸಿನ ರಾಜಕುಮಾರನಾದ ಫಿಲಿಪ್ ಮೌಂಟ್ ಬ್ಯಾಟನ್ನರೊಡನೆ ಬರುವ ನವೆಂಬರ್ ೨೦ ನೇ ತಾ॥ ನಡೆಯಬೇಕೆಂದು ತೀರ್ಮಾನವಾಗಿರುವುದಾಗಿ ವರ್ತಮಾನವಿದೆ.

ಸಭಾ ಪರಿತ್ಯಾಗ

ಸ್ವಂ ನ] ಶ್ರೀರಂಗಪಟ್ಟಣ [illegible]

ಇಲ್ಲಿನ ಪೌರಸಭೆಯ ಉಪಾಧ್ಯಕ್ಷರನ್ನು ಚುನಾಯಿಸಿ [illegible] ಕೊಡದೆ [illegible] ವಿಷಯದಲ್ಲಿ [illegible] ಈ ದಿನ ನಡೆದ ಪೌರಸಭೆಯ ಅಧಿವೇಶನದಲ್ಲಿ ಶ್ರೀ [illegible] ಅಯ್ಯನವರು [illegible] ತಂದರು. ಅಮಲ್ದಾರ್ ಅಧ್ಯಕ್ಷರು ಅವಕಾಶ ಕೊಡದೆ [illegible]

ಅವರ ವರ್ತನೆಯನ್ನು ಪ್ರತಿಭಟಿಸಿ [illegible] ಸಭಾ ಪರಿತ್ಯಾಗ ಮಾಡಿದರು. ಕೋರಂ ಇಲ್ಲದ್ದರಿಂದ ಸಭೆಯು ಅಲ್ಲಿಗೇ ಮುಕ್ತಾಯವಾಯಿತು.

ಟೌನ್ ಹಾಲ್ ಆವರಣದಲ್ಲಿ ೩೮೦೦೦ ರೂ ವೆಚ್ಚದಿಂದ ೨೪ ಅಂಗಡಿಗಳನ್ನು ಕಟ್ಟಲು ತಂದಾಜನ್ನು ಮಂಜೂರು ಮಾಡಿ ಸರ್ಕಾರದಿಂದ ಬಂದಿದ್ದ ಪತ್ರವನ್ನು ರಿಕಾರ್ಡ್ ಮಾಡಲಾಯಿತು.

[illegible] ಕಛೇರಿಯ ಉತ್ತರಭಾಗದಲ್ಲಿರುವ ಮೈದಾನವನ್ನು ಟೂರ್ನಮೆಂಟುಗಳಿಗಾಗಿ [illegible] ಫುಟ್‌ಬಾಲ್ [illegible] ಒಂದು ವರ್ಷ[illegible] ಕೊಡಬೇಕೆಂದು [illegible] ಪತ್ರವೂ ಸಹ ರಿಕಾರ್ಡ್ ಮಾಡಲ್ಪಟ್ಟಿತು.

ಶ್ರೀಮನ್ಮಹಾರಾಜರವರಿಗೆ ವಿದ್ಯಾರ್ಥಿ ಕಾಂಗ್ರೆಸ್ ಮನವಿ

ಮೈಸೂರು ೧

ವಿಶ್ವವಿದ್ಯಾಲಯದ ಅಧಿಕಾರಿಗಳು [illegible] ವಂದಿ ವಿದ್ಯಾರ್ಥಿಗಳ ಮೇಲೆ ಕೈಗೊಂಡಿರುವ ಶಿಸ್ತಿನ ಕಾರ್ಯಕ್ರಮವನ್ನು ವಿವರಿಸಿ ವಿದ್ಯಾಲಯದ ಛಾನ್ಸಲರಾದ ಶ್ರೀಮನ್ಮಹಾರಾಜರವರಿಗೆ ವಿದ್ಯಾರ್ಥಿ [illegible] ಪತ್ರವೊಂದನ್ನು ನಿನ್ನೆ ಬರೆದು ಶಿಸ್ತಿನ ಕಾರ್ಯಕ್ರಮವನ್ನು ರದ್ದುಗೊಳಿಸಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಕ್ರಿಯಾಸಮಿತಿಯವರು [illegible]

ಕೇಂದ್ರ ಸರ್ಕಾರಕ್ಕೆ ರಾಧಾಕೃಷ್ಣನ್

[illegible] ವಿಶ್ವವಿದ್ಯಾಲಯದ [illegible] ಸರ್ ಎಸ್ ರಾಧಾಕೃಷ್ಣನ್‌ರವರನ್ನು ಭಾರತ ಕೇಂದ್ರ ಸರ್ಕಾರದ ಸಚಿವರನ್ನಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ. [illegible] ಸರ್ದಾರ್ ಕೆ. ಎಂ. ಪಣಿಕ್ಕರ್ ಮತ್ತು ಡಾ॥ ಪಟ್ಟಾಭಿ ಸೀತಾರಾಮಯ್ಯನವರ ಹೆಸರುಗಳು [illegible] ಕೇಳಲಾಗಿದೆ.

ಆಗ್ನೇಯ ಜಾವಾದಲ್ಲಿ ಡಚ್ಚರ ವಿಮಾನ ಧಾಳಿ

ಜಾವಾದ ಆಗ್ನೇಯ ಭಾಗದ ಬಂದರುಗಳ ಮೇಲೆ [illegible] ಯುದ್ಧ ನೌಕೆಗಳೂ, ವಿಮಾನಗಳೂ ಒಂದಾದ ಮೇಲೊಂದರಂತೆ ಧಾಳಿ ನಡೆಸುತ್ತಿವೆ. [illegible] ವಿಮಾನಗಳಿಂದ ಬಾಂಬುಗಳ ಮಳೆಯನ್ನು ಕರೆಯಲಾಗುತ್ತಿರುವುದಾಗಿಯೂ ವರದಿಯಾಗಿದೆ. ಇವರು ಉತ್ತರ ಮತ್ತು ದಕ್ಷಿಣ ಭಾಗಗಳಿಂದ ಒಮ್ಮೆಲೆ [illegible] ಸೇನೆಯೊಡನೆ ಸೇರಿ ಜಾವಾ ದ್ವೀಪವನ್ನು [illegible] ಮಾಡುವ ಸಂಭವವಿದೆ.

ಇಂಡಿಯನ್ ಮೆಡಿಕಲ್ ಸರ್ವಿಸ್ ಅಧಿಕಾರಿಗಳ ವಜಾ

ಆಗಸ್ಟ್ ೧೫ ರಿಂದ ಪ್ರಾಂತ್ಯದಲ್ಲಿರುವ ಎಲ್ಲ ಇಂಡಿಯನ್ ಮೆಡಿಕಲ್ ಸರ್ವಿಸ್ ಅಧಿಕಾರಿಗಳನ್ನೂ ವಜಾ ಮಾಡಲು ಮದರಾಸ್ ಸರ್ಕಾರವು ನಿರ್ಧರಿಸಿದೆಯೆಂದು ವರದಿಯಾಗಿದೆ. ಅಲ್ಲಿರುವ [illegible] ಅಧಿಕಾರಿಗಳ ಪೈಕಿ ಗೌರ್ನರರ ಸೈನ್ಯರಾದ ಮೇಜರ್ [illegible] ಮತ್ತು ಇತರ ಒಂಭತ್ತು ಮಂದಿ [illegible] ತಿಂಗಳು [illegible] ಕೆಲಸ ಮಾಡಲು ಸಮ್ಮತಿಸಿರುವರು.

ದಿವಾನರು ನಾಳೆ ವಾಪಸು

ಸ್ವಂ. ಸು. ಪ್ರೋ] ಬೆಂಗಳೂರು ೧

ನಾಳೆ ಬೆಳಗ್ಗೆ ದಿವಾನರು ದೆಹಲಿಯಿಂದ ಹೊರಟು ಮಧ್ಯಾಹ್ನ ೩ ಗಂಟೆಗೆ ಬೆಂಗಳೂರಿಗೆ ಬರುವರು.

ಮಿಲಿಟರಿ ಮತ್ತು ಹಲವು ರೈಲ್ವೆ ಸ್ಟೇಷನುಗಳನ್ನು ಬಿಟ್ಟು ಉಳಿದ ದಂಡಿನ ಪ್ರದೇಶಗಳನ್ನು ಮೈಸೂರಿಗೆ ವಹಿಸುವುದಾಗಿ ದೆಹಲಿಯಿಂದ ಒಂದು ಪ್ರಕಟನೆಯು ಹೊರಟಿರುತ್ತದೆ.

ಯುದ್ಧಾನಂತರದ ಕೈಗಾರಿಕೆಗಳನ್ನು ಜಾಗರೂಕತೆಯಾಗಿ ನಡೆಸಲು ಶ್ರೀ ಅಪ್ಪಾದೊರೆ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗುವುದೆಂದು ಗೊತ್ತಾಗಿದೆ. ಸಮಿತಿಯಲ್ಲಿ ವಿವಿಧ [illegible] ಗಳ ಅಧಿಕಾರಿಗಳೂ ಇರುವರು. ಅವರು ನೇರವಾಗಿ ಸರ್ಕಾರದೊಡನೆ ವ್ಯವಹಾರ ನಡೆಸುವರು.

ಕೋಲಾರದ ಪ್ರೊ॥ ಸಾ॥ ಶ್ರೀ ಕೆ. ಚಾಂಡಿಯವರನ್ನು ಬೆಂಗಳೂರಿಗೂ ಶ್ರೀ॥ [illegible] ಸಿಂಗ್‌ರವರನ್ನು ಮಂಡ್ಯದಿಂದ ಕೋಲಾರಕ್ಕೂ, ಶ್ರೀ ಪಟ್ಟಾಭಿರಾಮ[illegible]ರವರನ್ನು [illegible] ಮಂಡ್ಯಕ್ಕೂ ವರ್ಗಾಯಿಸಲಾಗಿದೆ.

ಡಚ್ಚರು ಮುಂದುವರೆಯುತ್ತಿದ್ದಾರೆ

ಪೂರ್ವ ಜಾವಾದಲ್ಲಿ ಇದನ ಬಹಳ ಬಿರುಸಿನಿಂದ ಸಾಗಿದೆ. ನಿನ್ನೆ ಮಲಾಂಗ್ ನಗರದ ಮೇಲೆ ಬಾಂಬು ಷೆಲ್ಲುಗಳಿಂದ ಧಾಳಿ ನಡೆಸಿ ಡಚ್ಚರು ಅದನ್ನು ವಶಪಡಿಸಿಕೊಂಡಿದ್ದಾರೆ. ವಿಶ್ವಸಂಸ್ಥೆಯ ಮುಂದೆ ಇಂಡೊನೇಷ್ಯಾ ಪ್ರಶ್ನೆ [illegible] ಸಮಯಕ್ಕೆ ಸರಿಯಾಗಿ ಮಲಾಂಗ್ ನಗರ ಡಚ್ಚರ ವಶವಾಯಿತೆಂದು ವರದಿಯಾಗಿದೆ.

೧೪ ಕ್ಕೆ ರಾಜ್ಯಾಂಗ ಸಭೆಯ ಮಧ್ಯರಾತ್ರಿ ಅಧಿವೇಶನ

ಭಾರತವು ಡೊಮಿನಿಯನ್ನಾಗಿ ಸಂಪೂರ್ಣ [illegible] ವನ್ನು ವಹಿಸಿಕೊಳ್ಳುತ್ತ[illegible] ಆಗಸ್ಟ್ ೧೪ ರ ಮಧ್ಯರಾತ್ರಿಗೆ ರಾಜ್ಯಾಂಗ ಸಭೆಯ ವಿಶೇಷ ಅಧಿವೇಶನವು ಸೇರುವುದೆಂದು ವರದಿಯಾಗಿದೆ. [illegible] ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಭಾರತದ ಗೌರ್ನರ್ ಜನರಲ್ಲಾಗಿರಲು [illegible] ಸಭೆಯ [illegible] ಮಾಡುವರು. [illegible] ಸಭೆಯಲ್ಲಿ ಮೌಂಟ್ ಬ್ಯಾಟನ್ [illegible] ಸಭೆಯನ್ನು [illegible] ಭಾಷಣ ಮಾಡುವರು.

ಅಡಿಷನಲ್ ಸಬ್ ಕೋರ್ಟು

ಮೈಸೂರು ೧

ಈ ದಿನ ರಾಜಧಾನಿಯಲ್ಲಿ ಒಂದು ಅಡಿಷನಲ್ ಸಬಾರ್ಡಿನೇಟ್ ಜಡ್ಜರ ಕೋರ್ಟನ್ನು ಸ್ಥಾಪಿಸಲಾಗಿದೆ. ಇದಕ್ಕೆ ಶ್ರೀ ಬಿ ಕೆ [illegible]ಯ್ಯನವರನ್ನು ಜಡ್ಜರನ್ನಾಗಿ ನೇಮಿಸಲಾಗಿದೆ. ರಾಜಧಾನಿಯ [illegible] ಶ್ರೀ ಎಸ್ ಶ್ರೀನಿವಾಸಯ್ಯನವರ [illegible] ಅಡಿಷನಲ್ ಜಡ್ಜರಾಗಿಯೂ, [illegible] ಶ್ರೀ [illegible]ಯ್ಯನವರು ಮೈಸೂರಿನ [illegible] ಈ ದಿನ ಅಧಿಕಾರವನ್ನು ಸ್ವೀಕರಿಸಿರುವರು

ಕ್ಷಯರೋಗದಿಂದ ಭಾರತದಲ್ಲಿ ವರ್ಷಕ್ಕೆ ೫ ಲಕ್ಷ ಮರಣ

ಬ್ರಿಟನ್ನಿನಲ್ಲಿ ವಾರವೊಂದಕ್ಕೆ ೫೦೦ ಮಂದಿ ಕ್ಷಯರೋಗದಿಂದ ಮರಣಹೊಂದುತ್ತಿರುವರೆಂದೂ, ಭಾರತದಲ್ಲಿ ಅದೇ ಕಾಲದಲ್ಲಿ ೧೦,೦೦೦ ಜನರು ಅದಕ್ಕೆ ತುತ್ತಾಗುತ್ತಿರುವುದಾಗಿಯೂ ವಿಶ್ವ ಕ್ಷಯರೋಗ ನಿವಾರಣಾ ಸಮಿತಿಯ ಕಾರ್ಯದರ್ಶಿಗಳಾದ ಡಾ|| ದಾರ್ಲೆ ವಿಲಿಯಮ್ಸರು ತಿಳಿಸಿರುವರು

ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳಲ್ಲಿ ಜನರು ಸಂಚಾರ ಮಾಡಲು ಪರವಾನಿ ಪಡೆಯಬೇಕಾದ ಆವಶ್ಯಕತೆ ಇರುವುದಿಲ್ಲವೆಂದು ವರದಿಯಾಗಿದೆ

ಉಪಾಧ್ಯಾಯರ ಸಂಘ

ಸ್ವಂ. ವ.] ನಂಜನಗೂಡು ೩೧

ಈ ತಾಲ್ಲೂಕಿನ ಎಲ್ಲಾ ದರ್ಜೆಯ ಉಪಾಧ್ಯಾಯರೂ ಕಳೆದ ಶನಿವಾರ ಸಭೆ ಸೇರಿ ಸಂಘದ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿದರು. ಈ ಶಿಫಾರಸುಗಳು ಉಪಾಧ್ಯಾಯ ವರ್ಗದವರಿಗೆ ತೃಪ್ತಿಕರವಾಗಿಲ್ಲ. ಕನಿಷ್ಠ ಸಂಬಳ ೩೦ ರೂ. ಇರಬೇಕು ಮತ್ತು ೩೦-೨-೫೦-೨-೬೦ ಗ್ರೇಡ್ ಇರಬೇಕು. ಮಾಧ್ಯಮಿಕ ಶಾಲಾ ಉಪಾಧ್ಯಾಯರಿಗೆ ೮೦-೬-೧೫೦ ಇರಬೇಕು. ಶಿಕ್ಷಣದ ಟ್ರೈನಿಂಗ್ ಆಗದ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ೩೦ ರೂ. ಮತ್ತು ಮಾಧ್ಯಮಿಕ ಶಾಲೆಗಳ ಅಧ್ಯಾಪಕರಿಗೆ ೫೦ ರೂ. ನಿಂದ ಪ್ರಾರಂಭಿಸಬೇಕು. ಹೈಸ್ಕೂಲು ಉಪಾಧ್ಯಾಯರಿಗೆ ಹಿಂದಿನ ಮಾದರಿ ೧೫೦-೧೦-೨೦೦ ಹೆಚ್ಚು ಮಂದಿಗೆ ದೊರೆಯುವಂತಾಗಬೇಕು. ವಿದ್ಯಾ ಇಲಾಖೆಯಲ್ಲಿ ೧೦ ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿರುವವರಿಗೆ ಆ ವರ್ಗಗಳಿಗೊಪ್ಪ ಅಡ್ವಾನ್ಸ್ ಇಂಕ್ರಿಮೆಂಟ್ ಕೊಡಬೇಕು—ಎಂಬುದಾಗಿ ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯಗಳು ಅಂಗೀಕೃತವಾದುವು

ವಿದ್ಯಾರ್ಥಿಗಳಿಗೆ ತೊಂದರೆ

ಕಾಲೇಜಿನ ವಿದ್ಯಾರ್ಥಿಗಳಿಗೆ ಹೋಗಲು ಅನುಕೂಲವಾಗುವಂತೆ ರೈಲ್ವೆ ಅಧಿಕಾರಿ ವರ್ಗ ಕಳೆದ ವರ್ಷದಿಂದ ಒಂದು ಗಾಡಿಯನ್ನು ಪ್ರತ್ಯೇಕವಾಗಿ ಏರ್ಪಡಿಸಿದ್ದರು. ಆದರೂ ರೈಲು ಈಗ ತಡವಾಗಿ ವಿದ್ಯಾರ್ಥಿಗಳು ಸಕಾಲದಲ್ಲಿ ಶಾಲೆಗಳಿಗೆ ಹೋಗಲು ಅನುಕೂಲವಾಗುತ್ತಿಲ್ಲ. ಇಲ್ಲಿ ೮ ಬೆಳಿಗ್ಗೆ ೭ ಗಂಟೆಗೆ ಬಿ. ದ. ಗಾಡಿಯು ಹೊರಡುವ ಹಾಗೆ ಅಧಿಕಾರಿ ವರ್ಗದವರು ಏರ್ಪಡಿಸುವುದು ಅಗತ್ಯವಾಗಿದೆ

ಶಾತ್ತಾದ ಶ್ರೀ ವೈಷ್ಣವ ಸಂಘ

ಸಂಸ್ಥಾನದ ಶಾತ್ತಾದ ಶ್ರೀ ವೈಷ್ಣವ ಸಂಘದ ಕಾರ್ಯಕಾರಿ ಸಮಿತಿಯು ಇದೇ ೨೦ ರಲ್ಲಿ ಸಭೆ ಸೇರಿ ಸಂಘದ ಏಳನೇ ವಾರ್ಷಿಕೋತ್ಸವ ಮತ್ತು ಜನರಲ್ ಬಾಡಿ ಮೀಟಿಂಗುಗಳನ್ನು ಬೆಂಗಳೂರು ನಗರದ ಸ್ಕೌಟ್ ಹೆಡ್ ಕ್ವಾರ್ಟರ್ಸ್ ಕಟ್ಟಡದಲ್ಲಿ ಈ ತಿಂಗಳು ೨೪ ನೇ ಭಾನುವಾರ ಮಧ್ಯಾಹ್ನ ನೆರವೇರಿಸಲು ತೀರ್ಮಾನಿಸಿರುತ್ತದೆ. ಮತಬಾಂಧವರೆಲ್ಲರೂ ಸಕಾಲಕ್ಕೆ ದಯಮಾಡಿಸಿ ಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಿಸಬೇಕೆಂದು ಕೋರಲಾಗಿದೆ.

ಸಾಕ್ಷಿ ಹೇಳುವ ಸ್ಥಳ ಅಪವಿತ್ರವಾಯಿತು

ಒಬ್ಬ ಹಿಂದೂ ಮಹನೀಯನನ್ನು ಮೊಂಬಾಸದ ಕ್ರಿಮಿನಲ್ ಕೋರ್ಟಿನೊಂದರಲ್ಲಿ ಸಾಕ್ಷಿಯನ್ನಾಗಿ ಕರೆದುಕೊಳ್ಳಲಾಗಿತ್ತು. ಹಿಂದಿನ ಸಾಕ್ಷಿಯು ಬಿಳಿಯ ಸುಳ್ಳನ್ನೇ ಹೇಳಿ ಸಾಕ್ಷ್ಯನುಡಿಯುವ ಸ್ಥಳವನ್ನು ಅಪವಿತ್ರಗೊಳಿಸಿರುವನೆಂದೂ, ಆದುದರಿಂದ ತಾನು ಅಲ್ಲಿ ಸಾಕ್ಷ್ಯ ನುಡಿಯಲಾಗುವುದಿಲ್ಲವೆಂದೂ ಆತನು ಹೇಳಿದುದರಿಂದ ಕೂರ್ಟಿನಿಂದರೇ ಅವನ ಹೇಳಿಕೆಯನ್ನು ಪಡೆಯಲಾಯಿತೆಂದು ವರದಿಯಾಗಿದೆ.

Bengal Silk

Sarees in most attractive colours and in 6, 7, 8 and 9 yards

Bahusar Company, Mysore.

WOOD LANDS

Morning Shows From 1-8-47 for 4 days daily at 10-30 A M

Warner Brothers'

The Dark Tower

with

Ben Lyon, Anne Crawford & David Farrar

ಮದರಾಸಿನಲ್ಲಿ ಆಗಸ್ಟ್ ೧೫ ಸಾರ್ವಜನಿಕ ರಜಾದಿನ

ಆಗಸ್ಟ್ ೧೫ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಬೇಕಾಗಿರುವುದರಿಂದ ಆಂದು ಪ್ರಾಂತ್ಯದ ಎಲ್ಲ ಸರ್ಕಾರೀ ಕಛೇರಿಗಳೂ ಸಾರ್ವಜನಿಕ ರಜಾ ದಿನವೆಂದು ಮದರಾಸ್ ಸರ್ಕಾರವು ಆಜ್ಞೆ ಇತ್ತಿದೆ. ಇದರಂತೆಯೇ ಇತರ ಪ್ರಾಂತ್ಯಗಳೂ ಸಹ ಪ್ರಕಟಣೆ ಹೊರಡಿಸುತ್ತವೆ

ಅಹಮ್ಮದಾಬಾದು ಬರೋಡೆಗೆ ಸೇರಬೇಕಂತೆ !

ಅಹಮ್ಮದಾಬಾದನ್ನು ಬ್ರಿಟಿಷರು ಆಡಳಿತದ ವ್ಯವಸ್ಥೆಗಾಗಿ ತಮ್ಮಿಂದ ಪಡೆದಿದ್ದರೆಂದೂ, ಈಗ ಅವರು ಭಾರತವನ್ನು ಬಿಟ್ಟು ಹೊರಡುತ್ತಿರುವುದರಿಂದ ಅದನ್ನು ತಮಗೇ ವಾಪಸು ಕೊಡಬೇಕೆಂದೂ ಬರೋಡದ ಮಹಾರಾಜರವರು ಕೇಳಿರುವರು. ಇದಕ್ಕಾಗಿ ಅವರು ತಮ್ಮಲ್ಲಿದ್ದ ಒಪ್ಪಂದದ ಕಾಗದ ಪತ್ರಗಳನ್ನು ತಮ್ಮ ಕಾರ್ಯದರ್ಶಿಯ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಿರುವರೆಂಬುದಾಗಿ ವರದಿಯಾಗಿದೆ.

ರಾಜಕಮಲ್

ತಾ|| 1-8-47 ರಿಂದ

ಅಮೋಘ ೪ ನೇ ವಾರ

★ ಕಿಸ್ಮತ್ ★

—: ತಾರಾಗಣ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಷಾನವಾಜ್ ಮುಂತಾದವರು

From 1-8-47 for 4 days at 10 30 a m

Murder in Reverse

Starring :-Billy Hartnell, Jimmy Hanley, Chili Bouchier, John Slater

ಚಾಮುಂಡೇಶ್ವರಿ ಟಾಕೀಸ್

ತಾ|| 1-8-47 ರಿಂದ ದಿನವೂ ೨ ಆಟಗಳು

ಹಿಂದ್ ಪಿಕ್ಚರ್ಸ್ ರವರ

ಮಹಾರಾಣಾ ಕಿಲಾ...

(ಹಿಂದಿ)

—: ಪಾತ್ರ :—

ಸ್ವರ್ಣಲತಾ-ನಜೀರ್-ಜಯಂತ

ವುಡ್‌ಲ್ಯಾಂಡ್ಸ್

1-8-47 ರಿಂದ

ಕಿಕ್ಕಿರಿದ ೧೫ ನೇ ವಾರ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ೩ ಆಟಗಳುಂಟು)

ನಾವು ಇಬ್ಬರು

ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವರು

ಜೀವಿತದಲ್ಲಿ ನವಚೇತನ

ಪಂಡಿತ ಡಿ. ಗೋಪಾಲಾಚಾರ್ಯರವರ

ಆರ್ಯ...

ಗರ್ಭಾಶಯ ರೋಗ ನಿವಾ...

ಸಹಾವಾಸಿನ ಸ್ತ್ರೀ ... ಲ್ಯಾಣವಾಗಿ ... ಸುಪ್ರಸಿದ್ಧ ... ಯು ಮಾನವರ್ ... ಸ್ತಾಪಿತ ... ನಂತೆ ... ರೋಗಗಳಲ್ಲಿ ... ಟ್ಟಿ ...

ಲಕ್ಷ್ಮಿ ಟಾಕೀಸ್, ಮೈಸೂರು — 1-8-47 ರಿಂದ

ಸುಲೋಚನ

(ತಮಿಳು)

ಪಾತ್ರ :— ಕೆ ಎಲ್ ವಿ ವಸಂತ, ಟಿ ಆರ್ ಸುಂದರಂ ಮುಂತಾದವರು

ಪ್ರತಿ ದಿನ ೩ ಆಟಗಳು

ಶ್ರೀ

ಗಣೇಶಾ ಟಾಕೀಸ್

ತಾ|| ೨೫-7-47 ರಿಂದ

ಪ್ರತಿ ದಿನ 3 ಆಟಗಳು

— ಗಢ್ಲರ್ —

(ಹಿಂದಿ)

— : ಪಾತ್ರ : —

ಲೀಲಾ ಚಿಟ್ನಿಸ್, ಶಾಸ್ತ್ರಿ, ರಾಧಾರಾಣಿ

ಶ್ರೀ

ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ, ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ನಾಳೆ ರಾತ್ರಿ ೧೦-೩೦ ಗಂಟೆಗೆ

★ ಪಟ್ಟರಾಣಿ ಪಾಶ ★

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಭಾನುವಾರ ಮ್ಯಾಟಿನಿ ಉಂಟು

ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್

Edited, printed and published by A. S. Narasimha at the Sadhvi Press D. Subbaiah Road Mysore

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೨—೮—೪೭ [ಸಂಚಿಕೆ ೧೨

ಚರ್ಚುಗಳಿಗೆ ಕೊಡುವ ಗ್ರಾಂಟುಗಳ ರದ್ದು

...ಪ್ರಾಂತದಲ್ಲಿ ಹಿಂದೂ ...ನಾಯಕರ ದಸ್ತಗಿರಿ

...ಂತ ಮಂತ್ರಿ ಮಂಡಲದಲ್ಲಿ ಗೃಹ ...ಸಚಿವರು ಹಿಂದೂವೇ ಇರಬೇಕು. ...ಂ ನೌಕರರು ರಾಷ್ಟ್ರೀಯ ಸೇವಾ ...ಗಳಿಗೆ ಸೇರಲು ಇರುವ ಮುಂತಾದ ...ಧಗಳನ್ನು ತೆಗೆದುಹಾಕಬೇಕು ಎಂ ...ಂದೂ ಮಹಾಸಭೆಯ ವ ... ಕೆಗಳ ಬಗ್ಗೆ ಅಲ್ಲಿನ ಪ್ರಧಾನಿ ಪಂಡಿತ ...ಂದ ವಲ್ಲಭ ಪಂತರಿಗೂ ಹಿಂದೂ ...ಸಭೆಯ ಪ್ರಾಂತ ಹೋರಾಟದ ಸ...ಸರಿಂ ಮಹಾಂತ ದಿಗ್ವಿಜಯನಾಥರಿ ...ಡೆಯುತ್ತಿದ್ದ ಸಂಧಾನವು ಮುರಿದು ...ಯಿತೆಂದು ವರದಿಯಾಗಿದೆ. ನಿನ್ನೆ ...ತ ಆರಂಭವಾಗಬೇಕಾಗಿದ್ದ ಚಳುವ... ಸಂಬಂಧದಲ್ಲಿ ಹಿಂದೂ ಮಹಾಸಭೆ ...ನಾಯಕರಾದ ಮಹಾಂತ ದಿಗ್ವಿಜಯ... ಮೊದಲಾದ ೨೨ ಮಂದಿಯನ್ನು ಸ...ಕ್ತ ಪ್ರಾಂತದಲ್ಲಿ ದಸ್ತಗಿರಿ ಮಾಡಲಾ...ಯಿತೆಂದು ಗೊತ್ತಾಗಿದೆ.

ತಿರುವಾಂಕೂರಿನಲ್ಲಿ ಪ್ರತಿಬಂಧಕಾಜ್ಞೆ ರದ್ದು

...ವಾಂಕೂರು ಸಂಸ್ಥಾನವು ಭಾರತ ...ಯೂನಿಯನ್ನಿನಲ್ಲಿ ಸೇರಲು ನಿರ್ಧರಿಸಿದ ...ದ ಅಲ್ಲಿ ಸಭೆ, ಮೆರವಣಿಗೆಗಳ ಮೇ...ಲೆ ಇರುವ ಎಲ್ಲ ಪ್ರತಿಬಂಧಕಾಜ್ಞೆಗಳ ...ರದ್ದುಗೊಳಿಸಲಾಗಿದೆಯೆಂದು ವರದಿ...ಯಾಗಿದೆ. ಆದರೂ ಸಹ ತಮ್ಮ ಗುರಿ ...ಸ್ಟ ಮುಟ್ಟುವವರೆಗೂ ಹೋರಾಟವ...ನ್ನು ಮುಂದುವರಿಸಲಾಗುವುದೆಂದು ...ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪಟ್ಟಂ ತಾನು ...ಪಿಳ್ಳೆಯವರು ಹೇಳಿರುವರು.

ಕೃಷ್ಣಮೇನನ್ನರು ಹೈ ಕಮಿಷನರು

...ಕೇಂದ್ರ ಸರ್ಕಾರದ ವಿದೇಶಾಂಗ ಮಂ...ಡಿತ ನೆಹರೂ ರವರ ಪ್ರತಿನಿಧಿಯಾ...ರೋಪ್ಯ ರಾಷ್ಟ್ರಗಳಲ್ಲಿ ಪ್ರವಾಸ ಮಾ... ಶ್ರೀ ವಿ ಕೆ ಕೃಷ್ಣಮೇನನ್ನರು ಲಂಡ...ನ್ನಿನ ಭಾರತದ ಹೈ ಕಮಿಷನರಾಗಿ ಈ ಅಧಿಕಾರವನ್ನು ಸ್ವೀಕರಿಸುವರೆಂದು ...ಯಾಗಿದೆ.

ಬರ್ಮಾ ಸರ್ಕಾರಕ್ಕೆ ಬೆದರಿಕೆಯ ಪತ್ರ

...ಗೂನಿನಲ್ಲಿರುವ ಬರ್ಮಾ ಸರ್ಕಾರದ ದೊಡ್ಡ ದೊಡ್ಡ ನೌಕರರ ಪ್ರಾಣವ...ನ್ನು ಅಪಹರಿಸುವುದಾಗಿ ಅನಾಮಧೇಯ ...ಬೆದರಿಕೆಯ ಪತ್ರಗಳು ಬರುತ್ತಿರುವ...ವು ವರದಿಯಾಗಿದೆ. ಇಂತಹ ಪತ್ರಗ...ಳನ್ನು ಪಡೆದಿರುವವರಲ್ಲಿ ರಂಗೂನ್ ಪೌರ ...ಸಭೆಯ ಅಧ್ಯಕ್ಷರಾದ ಯು ಸೊ ನಿಯರ್ಮಾ... ...ಲ್ಲಿಬ್ಬರು.

...ಸಂವಿಧಾನ ನಿರ್ಮಾಣ ಸಭೆಯ ನ್ಯಾಯಾಂಗಕ್ಕೆ ಅಂಬೇಡ್ಕರ್ ಸಚಿವರೇ?

ಭಾರತ ಯೂನಿಯನ್ನಿನ ಸಚಿವರ ಆ...ಸ್ಥ ಪಟ್ಟಿಯಲ್ಲಿ ನ್ಯಾಯಾಂಗ ಶಾಖೆಗೆ ...ಅಂಬೇಡ್ಕರರನ್ನು ಸೇರಿಸಲಾಗಿದೆಯೆಂ...ದು ವರದಿಯಾಗಿದೆ. ಗೌರ್ನರುಗಳಾಗಿ ...ಸ.ಸಂ.ಪ್ರಾಂತ ಶ್ರೀ ಸಿ. ರಾಜಗೋಪಾ... ...ರವರು ಒಪ್ಪಿ... ...ಆಗುವ ಕೇಂದ್ರ ಸರ್ಕಾರದ ಸ... ...ಲ್ಲಿ ... ಮಾಡಲಾಗುವುದಿಲ್ಲ ...ವೆಂದು ಹೇಳಲಾಗಿದೆ.

ಆಗಸ್ಟ್ ೧೫,೧೬ ಸಾರ್ವಜನಿಕ ರಜಾ ದಿನ

ಆಗಸ್ಟ್ ೧೫ ನೇ ತಾರೀಖು ಭಾರತವು ಅಧಿಕಾರವನ್ನು ಸ್ವೀಕರಿಸಿ ಅಂದು ತನ್ನ ಸ್ವಾತಂತ್ರ್ಯವನ್ನು ಘೋಷಿಸಲಿರುವುದರಿಂದ ೧೫ ಮತ್ತು ೧೬ನೇ ತಾರೀಖುಗಳು ಸಾರ್ವಜನಿಕ ರಜಾ ದಿನವೆಂದು ಭಾರತ ಸರ್ಕಾರವು ಪ್ರಕಟಿಸಿರುತ್ತದೆ.

ಬಿರುದಿಗೆ ತಿಲಾಂಜಲಿ

ಸ್ವತಂತ್ರ ಭಾರತದಲ್ಲಿ ಯಾರಿಗೂ ಬಿರುದುಗಳಿರಬಾರದೆಂಬ ರಾಜ್ಯಾಂಗ ಸಭೆಯ ನಿರ್ಧಾರದಂತೆ ಅದರ ಸದಸ್ಯರಾದ ಸರ್ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ ಮತ್ತು ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರುಗಳು ಸದ್ಯದಲ್ಲಿಯೇ ತಮ್ಮ 'ಸರ್' ಎಂಬ ಬಿರುದನ್ನು ತ್ಯಜಿಸಲಿರುವರೆಂದೂ, ಈ ಬಗ್ಗೆ ಅವರು ವೈಸರಾಯರಿಗೆ ಪತ್ರ ಬರೆಯಬಹುದೆಂದೂ ಹೇಳಲಾಗಿದೆ.

ವಿಯಟ್ನಾಂ ಸರ್ಕಾರದ ಪುನರ್ರಚನೆ

ವಿಯಟ್ನಾಂ ರಿಪಬ್ಲಿಕ್ಕಿನ ಪ್ರಧಾನಿ ಡಾ|| ಹೊ ಚಿ ಮಿನ್ನರ ವಿರುದ್ಧವಾಗಿರುವ ಇತರ ಪಕ್ಷಗಳ ಸಹಕಾರದಿಂದ ಅನ್ನಾಮಿನ ಮಾಜಿ ಚಕ್ರವರ್ತಿ ಬಾವೊ ದಾಯಿಯವರನ್ನು ಪ್ರಧಾನಿಯನ್ನಾಗಿ ನೇಮಿಸಿ ಫ್ರೆಂಚ್ ಸರ್ಕಾರವು ವಿಯಟ್ನಾಮಿನಲ್ಲಿ ಹೊಸ ರಿಪಬ್ಲಿಕ್ ಸರ್ಕಾರವನ್ನು ಸ್ಥಾಪಿಸುವುದೆಂದು ವರದಿಯಾಗಿದೆ. ವಿಯಟ್ನಾಮಿನ ಪ್ರಧಾನಿಯವರೂ ಸಹ ಈ ಹೊಸ ಸರ್ಕಾರಕ್ಕೆ ಬೆಂಬಲ ನೀಡುವರೆಂದು ಗೊತ್ತಾಗಿದೆ.

ಆಗಸ್ಟ್ ೧೪ ರ ಮಧ್ಯರಾತ್ರಿಯಲ್ಲಿ ಅಧಿಕಾರ ಸ್ವೀಕಾರ

ಹಿಂದೂ ಸಿ ... ಪ್ರಕಾರ ... ಫಲ ... ವು ... ಜ್ಯೋತಿಷ್ಯರು ಆಗಸ್ಟ್ ೧೫ ನೇ ಸೂರ್ಯೋದಯದ ನಂತರ ಅಧಿಕಾರ ಸ್ವೀಕಾರಕ್ಕೆ ಪ್ರಶಸ್ತವಾಗಿಲ್ಲವೆಂದು ತಿಳಿಸಿರುವರೆಂದು ವರದಿಯಾಗಿದೆ. ಬ್ರಿಟಿಷರು ಆಗಸ್ಟ್ ೧೫ರ ದಿನ ಅಧಿಕಾರ ವರ್ಗಾವಣೆಯಾಗಬೇಕೆಂದು ನಿರ್ಧರಿಸಿರುವರು. ಜ್ಯೋತಿಷ್ಯರ ವಾಕ್ಯಕ್ಕೆ ಮನ್ನಣೆ ಕೊಡಲೂ ಮತ್ತು ಆಗಸ್ಟ್ ೧೫ ರ ದಿನ ವರ್ಗಾವಣೆಯಾಗಬೇಕೆಂಬ ಬ್ರಿಟಿಷರ ಉದ್ದೇಶವೂ ಈಡೇರುವಂತಾಗಲು ಆಗಸ್ಟ್ ೧೪ ರ ಮಧ್ಯರಾತ್ರಿ ಕಳೆದ ಮರು ನಿಮಿಷವೇ ಬ್ರಿಟಿಷರಿಂದ ಅಧಿಕಾರವನ್ನು ಸ್ವೀಕರಿಸಲು ರಾಜ್ಯಾಂಗ ಸಭೆಯು ನಿರ್ಧರಿಸಿದೆಯೆಂದು ಹೇಳಲಾಗಿದೆ.

ಅರಮನೆ ಇಲಾಖೆಯಲ್ಲಿ ಬದ್ಲಿ

ಮೈಸೂರು ೨

ಆಫೀಸರ್ ಇನ್ ಛಾರ್ಜ್ ಆಗಿರತಕ್ಕ ಶ್ರೀ ಎ ಲಿಂಗರಾಜ ಅರಸಿನವರನ್ನು ಪ್ರಾಸ್ ಸಮ್ಮುಖದ ಭಕ್ಷಿಯವರನ್ನಾಗಿಯೂ, ಹಾಲಿ ಪರಿಶೋಧಕ ... ರಾಗಿರುವ ಮಿ|| ಎ ಚನ್ನರಾಜೇ ಅರಸಿನವರನ್ನು ಅದೇ ಹಜೂರ್ ... ಭಕ್ಷಿಯವರನ್ನಾಗಿಯೂ ಮತ್ತು ... ರಾಗಿರುವ ಶ್ರೀ ಎ ಎಸ್ ಚನ್ನರಾಜ ಅರಸಿನವರನ್ನು ... ದಳದ ... ನಿಯಮಿಸಿ ... ಮಾಡಲಾಗಿದೆ. ಶ್ರೀ ಎ . ಜ ಗೋಪಾಲಕೃಷ್ಣೇ ಅರಸಿನವರನ್ನು ಪಾಲಿಟಿಂ ಭಕ್ಷಿಯವರ ಇನ್ ಛಾರ್ಜ್ ಆಫೀಸರನ್ನಾಗಿ ಮಾಡಿರುವರೆಂದು ಗೊತ್ತಾಗಿದೆ.

ಭಾಷಣ

ರಾಜಧಾನಿಯ ಹೊಡ್ಡ ಗಡಿಯಾರದ ಬಳಿ ಇರುವ ಆರ್ಯ ಸಮಾಜದಲ್ಲಿ ನಾಳೆ ರಾತ್ರಿ ೮ ಗಂಟೆಗೆ ಸ್ವಾಮಿ ಸದಾನಂದ ಸರಸ್ವತಿಯವರು ವೈದಿಕ ಧರ್ಮದ ವಿಚಾರವಾಗಿ ಭಾಷಣ ಮಾಡುವರು. ರಾತ್ರಿ ೧೦ ಗಂಟೆಗೆ ಸಮಾಜದ ವಾರ್ಷಿಕ ಸಾಧಾರಣ ಸಭೆಯು ಜರುಗುವುದು.

ಭಾರತ ಮತ್ತು ಪಾಕಿಸ್ತಾನ್ ಸೇನಾಧಿಕಾರಿಗಳು

ಲೆ|| ಜ|| ಸರ್ ರಾಬ್ ಲಾಕ್‌ಹಾರ್ಟ್‌ರನ್ನು ಭಾರತದ್ದೂ, ಲೆ|| ಜ|| ಮೆಸ್ಸರ್ವಿಯವರನ್ನು ಪಾಕಿಸ್ತಾನದ್ದು ಭೂ ದಳದ ಕಮ್ಯಾಂಡರುಗಳಾಗಿ ನೇಮಿಸಲಾಗಿದೆ.

ಸತ್ಕಾರಕೂಟ

ನಂಜನಗೂಡು ೨

ಶ್ರೀಗಳಾದ ಸೆಟ್ ಎಂ. ನಾಗಣ್ಣ, ಎಂ. ಎಸ್. ನಾರಾಯಣಶೆಟ್ರು, ಎಸ್ ಲಿಂಗಪ್ಪ, ಜಿ ಶಂಕರಶೆಟ್ಟಿ, ಪಿ ಕೃಷ್ಣಪ್ಪ ಮತ್ತು ಬಿ ಎಸ್ ಎಸ್ ಆರಾಧ್ಯರವರುಗಳನ್ನು ಅಭಿನಂದಿಸುವ ಸಲುವಾಗಿ ನಾಳೆ ಮಧ್ಯಾಹ್ನ ೧ ಗಂಟೆಗೆ ಇಲ್ಲಿನ ರೆಸಿಡೆನ್ಸಿ ಬಂಗಲೆಯಲ್ಲಿ ಶ್ರೀಗಳಾದ ದಿವಾನ್ ... ಆರ್ ಪ್ರಭುಸ್ವಾಮಿ ಮತ್ತು ವೈಸ್‌ಪ್ರೆಸಿಡೆಂಟರಾದ ಜಿ ಕೆ ... ರವರುಗಳು ಒಂದು ಸತ್ಕಾರಕೂಟವನ್ನು ಏರ್ಪಡಿಸಿರುವರು. ಇದೇ ಸಂದರ್ಭದಲ್ಲಿ ಸಂಗೀತ ವಿದ್ವಾನ್ ಶ್ರೀಮತಿ ನಂಜನಗೂಡು ನಾಗರತ್ನಮ್ಮನವರ ಸಂಗೀತವನ್ನೂ ಸಹ ಏರ್ಪಡಿಸಲಾಗಿದೆ.

ದಿವಾನರು ಬಂದರು

ಸ್ವಂ ಸು ಫೋ] ಬೆಂಗಳೂರು ೨

ಈ ಮಧ್ಯಾಹ್ನ ೨-೧೫ ಗಂಟೆಗೆ ದಿವಾನರು ದೆಹಲಿಯಿಂದ ವಿಮಾನದಲ್ಲಿ ಹಿಂದಿರುಗಿದರು. ಅವರು ಈ ದಿನ ಅಥವಾ ನಾಳೆ ಮೈಸೂರಿಗೆ ತೆರಳುವರು. ವಾಪಸು ಬಂದ ಮೇಲೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸುವರು.

ಅಪ್ಪಾಜಿಗೌಡರಿಗೆ ಹೊಸ ಹುದ್ದೆ ?

ಭಾರತ ಸರ್ಕಾರದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಸಂಸ್ಥಾನಗಳ ಶಾಖೆಯೊಡನೆ ಸಂಪರ್ಕವನ್ನಿಟ್ಟುಕೊಂಡು ಲಯಸನ್ ಅಧಿಕಾರಿಗಳಾಗಿರಲು ಮಂತ್ರಿಗಳ ದರ್ಜೆಯುಳ್ಳ ಶ್ರೀ ಜೆ ಅಪ್ಪಾಜಿ ಗೌಡರನ್ನು ನೇಮಿಸಲಾಗುವುದೆಂದು ಹೇಳಲಾಗುತ್ತಿದೆ. ಅವರ ಕೇಂದ್ರ ಕಛೇರಿಯು ದೆಹಲಿಯಲ್ಲಿ ಇರುವುದು. ಬೆಂಗಳೂರಿನಲ್ಲಿರುವಾಗ ರೆಸಿಡೆಂಟರ ಕಛೇರಿಯ ಭವನವನ್ನೂ ... ಸಿಬ್ಬಂದಿಯನ್ನೂ ಅವರು ಉಪಯೋಗಿಸಿಕೊಳ್ಳುವರೆಂದು ಹೇಳಲಾಗಿದೆ.

ಚರ್ಚುಗಳಿಗೆ ಕೊಡುವ ಧನ ಸಹಾಯ ವಜಾ

ಕ್ರೈಸ್ತ ಚರ್ಚುಗಳಿಗೆ ಪೋಷಣೆಗಾಗಿ ಇದುವರೆಗೆ ಭಾರತ ಸರ್ಕಾರದಿಂದ ಕೊಡುತ್ತಿದ್ದ ಸಹಾಯ ದ್ರವ್ಯವನ್ನು ಬರುವ ಮಾರ್ಚಿ ತಿಂಗಳಿನಿಂದ ರದ್ದು ಮಾಡಲಾಗುವುದೆಂದು ವರದಿಯಾಗಿದೆ. ಭಾರತದ ವಿವಿಧ ಚರ್ಚುಗಳಲ್ಲಿರುವ ೧೧೦ ಮಂದಿ ಸರ್ಕಾರಿ ... ಸೇವಕರಾಗಿರುವ ಪಾದ್ರಿಗಳಲ್ಲಿ ೬೫ ಮಂದಿ ಆಗಸ್ಟ್ ೧೫ ರ ದಿನ ನಿವೃತ್ತರಾಗುವರೆಂದೂ, ಉಳಿದವರು ಡಿಸೆಂಬರ್ ಅಂತ್ಯದೊಳಗಾಗಿ ನಿವೃತ್ತಿ ಹೊಂದುವರೆಂದೂ ತಿಳಿದುಬಂದಿದೆ.

ಮಧ್ಯ ಪ್ರಾಂತಕ್ಕೆ ಸರೋಜಿನಿ ದೇವಿ ತಾತ್ಕಾಲಿಕ ಗೌರ್ನರು

ಈಗ ಅನಾರೋಗ್ಯದಲ್ಲಿರುವ ಡಾ|| ಬಿದನ ಚಂದ್ರ ರಾಯರನ್ನು ಮಧ್ಯ ಪ್ರಾಂತದ ಗೌರ್ನರರಾಗಿ ನೇಮಿಸಲಾಗಿದೆ. ಅವರು ಭಾರತಕ್ಕೆ ಸೆಪ್ಟೆಂಬರ್ ಮಧ್ಯ ಭಾಗದ ವೇಳೆಗೆ ಹಿಂದಿರುಗಬಹುದು. ಅವರು ಹಿಂದಿರುಗುವವರೆಗೆ ಶ್ರೀಮತಿ ಸರೋಜಿನಿ ದೇವಿಯವರು ತಾತ್ಕಾಲಿಕವಾಗಿ ಗೌರ್ನರಾಗಿರಲು ಸಮ್ಮತಿಸಿದ್ದಾರೆಂದು ಹೇಳಲಾಗಿದೆ. ನಿನ್ನೆ ಶ್ರೀಮತಿ ನಾಯುಡುರವರನ್ನು ಯುವರ್ ಎಕ್ಸಲೆನ್ಸಿ ಎಂದು ಸರ್ದಾರ್ ಪಟೇಲರು ಸಂಬೋಧಿಸಿದ ... ಶ್ರೀಮತಿಯವರು ... ಎಂದು ... ಅನಂತರ ಅವರ ... ಡಾ|| ಬಿ. ಸಿ ರಾಯರನ್ನೇ ಗೌರ್ನರನ್ನಾಗಿ ನೇಮಿಸಲಾಗಿದೆಯೆಂದು ಸರ್ಕಾರದ ... ವರದಿಯಾಗಿದೆ.

ಆಗಸ್ಟ್ ೧೫ಕ್ಕೆ ಸ್ವಾತಂತ್ರ್ಯ ದಿನ

ಆಗಸ್ಟ್ ೧೫ ನೇ ತಾರೀಖು ಭಾರತವು ಸ್ವತಂತ್ರವಾಗುವುದರಿಂದ ಇದುವರೆಗೆ ಜನವರಿ ೨೬ ರಲ್ಲಿ ನಡೆಸುತ್ತಿದ್ದ ಸ್ವಾತಂತ್ರ್ಯ ದಿನಾಚರಣೆಯನ್ನು ಇನ್ನು ಮುಂದೆ ಆಗಸ್ಟ್ ೧೫ ರ ದಿನ ಆಚರಿಸಬೇಕೆಂದು ಕಾಂಗ್ರೆಸ್ ವಲಯಗಳಲ್ಲಿ ಹೇಳಲಾಗುತ್ತಿದೆ. ಅಂದು ... ಭಾರತದ ರಾಷ್ಟ್ರೀಯ ಧ್ವಜವು ... ಎಲ್ಲ ರಾಜ್ಯದ ... ಕಛೇರಿಗಳಲ್ಲಿಯೂ ಹಾರಾಡುವುದು.

ಕೇಶವದಾಸರಿಗೆ ಸಾತ್ರ ವಿಯೋಗ

ಮೈಸೂರು ೨

ಸುಪ್ರಸಿದ್ಧ ಹರಿಕಥಾ ವಿದ್ವಾಂಸರೂ, ಕರ್ನಾಟಕ ಭಕ್ತವಿಜಯದ ಲೇಖಕರೂ, ಒಂಟಿಕೊಪ್ಪಲಿನ ಪರಿಮಂಗಿರದ ಸಂಸ್ಥಾಪಕರೂ ಆದ ಶ್ರೀ ಬೇಲೂರು ಕೇಶವದಾಸರ ತಾಯಿ ಶ್ರೀಮತಿ ಭೀಮಾಬಾಯಿಯವರು ಕಳೆದ ಮಂಗಳವಾರ ತಮ್ಮ ತೊಂಭತ್ತೊಂಭತ್ತನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಉಪನ್ಯಾಸ

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಅ॥ ವಿ॥ ಕಾಶೀ ಪುರೋಹಿತ ಸಂಜೀವ ಶಾಸ್ತ್ರಿಗಳು ಆನಂದಮಯ ಸ್ವರೂಪ ನಿರ್ಣಯ ಎಂಬ ವಿಷಯವಾಗಿ ಭಾಷಣ ಮಾಡುವರು

ಉಪಾಹಾರ ನಿಧಿಗೆ ಸಹಾಯ

ಸ್ವಂ ವ] ನಂಜನಗೂಡು ೩೧

ಇಲ್ಲಿನ ಮಾಧ್ಯಮಿಕ ಶಾಲೆಯ ನಿಧಿಗಾಗಿ ನಡೆದ ಸರ್ಕಸ್ ಪ್ರದರ್ಶನದಿಂದ ೭೭೫ ರೂ ಬಂದಿರುತ್ತದೆ. ಶ್ರೀ ಕೆ. ವೆಂಕಟಸುಬ್ಬಯ್ಯನವರು ನಿಧಿಗಾಗಿ ೧೦೧ ರೂ ಗಳನ್ನು ಇತ್ತಿರುವರು. ಶ್ರೀಗಳಾದ ಪಿ. ವಿ. ಪಂಡಿತರು, ಎ. ವೆಂಕಟರಾಮಪ್ಪ ಮತ್ತು ಕ್ರೌಸ್ ಹಿಲ್ಲಿನ ಸುಬ್ಬಣ್ಣನವರುಗಳು ಪ್ರತಿ ವರ್ಷವೂ ಉಪಾಹಾರ ನಿಧಿಗಾಗಿ ೧೦೦ರೂ ನೀಡುತ್ತಿರುವರೆಂದು ತಿಳಿದು ಬಂದಿದೆ

ಪೆಟ್ರೋಲ್ ಪತ್ತೆ

ಶ್ರೀರಂಗಪುರದ ಕೊರಡಿಯೊಂದರಲ್ಲಿದ್ದ ಸುಮಾರು ೨೨೦ ಗ್ಯಾಲನ್ ಪೆಟ್ರೋಲನ್ನು ಇಲ್ಲಿನ ಪೋಲೀಸರು ಪತ್ತೆ ಹಚ್ಚಿರುವರೆಂದು ತಿಳಿದುಬಂದಿದೆ. ಮುಂದಿನ ತನಿಖೆ ನಡೆಯುತ್ತಿದೆ

ದೋಣಿ ಮುಳುಗಿ ೫೪ ಮಂದಿ ಪತ್ತೆಯಿಲ್ಲ

ಸಿರಾಜ್‌ಗಂಜಿನಿಂದ ನಳನಿಬದಾರಿಗೆ ಪ್ರಸ್ಮಪುತ್ರ ನದಿಯಲ್ಲಿ ಮೊನ್ನೆ ಹೋಗುತ್ತಿದ್ದ ದೋಣಿಯೊಂದು ಚಂಡಮಾರುತಕ್ಕೆ ಸಿಕ್ಕಿ ಮುಳುಗಿತೆಂದೂ ಅದರಲ್ಲಿದ್ದ ೫೪ ಮಂದಿ ಪ್ರಯಾಣಿಕರು ಪತ್ತೆಯಿಲ್ಲವೆಂದೂ ವರದಿಯಾಗಿದೆ.

ಭಾರತದಲ್ಲಿ ಹೊಸ ಸೇನಾ ವ್ಯವಸ್ಥೆ

ಭಾರತ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳ ರಚನೆ ಮತ್ತು ಸೈನ್ಯ ವಿಭಜನೆಗಳು ಆಗುವುದರಿಂದ ಭಾರತದಲ್ಲಿರುವ ಬ್ರಿಟಿಷ್ ಸೇನೆಯಲ್ಲಿ ೩೦ ಸಹಸ್ರ ಮಂದಿ ಬ್ರಿಟಿಷ್ ಯೋಧರಿಗೆ ಕೆಲಸವಿಲ್ಲದಂತಾಗುವುದೆಂದೂ, ಭಾರತದಲ್ಲಿ ಹೊಸ ಸೈನ್ಯದ ವ್ಯವಸ್ಥೆಯು ನಡೆಯುತ್ತಿರುವುದಾಗಿಯೂ ಬ್ರಿ॥ ಯುದ್ಧ ಶಾಖೆಯ ಕಾರ್ಯದರ್ಶಿಯವರು ತಿಳಿಸಿರುವರು.

ಕಲ್ಕತ್ತೆಯಲ್ಲೂ ಡಚ್ ನೌಕೆಗಳಿಗೆ ಅಸಹಕಾರ

ಇಂಡೊನೇಷ್ಯನರವಿರುದ್ಧವಾಗಿ ಡಚ್ಚರು ಯುದ್ಧವನ್ನು ಹೂಡಿರುವುದನ್ನು ಪ್ರತಿಭಟಿಸಲು ಕಲ್ಕತ್ತ ಬಂದರಿನ ಕೆಲಸಗಾರರು ಡಚ್ ನೌಕೆಗಳಿಗೆ ಸಾಮಾನುಗಳನ್ನು ತುಂಬುವುದನ್ನೂ, ಅವುಗಳಿಂದ ಸಾಮಾನುಗಳನ್ನು ತೆಗೆಯುವುದನ್ನೂ ನಿಲ್ಲಿಸಿರುವರೆಂದು ವರದಿಯಾಗಿದೆ

ಹೈದರಾಬಾದಿಗೆ ರೈಲ್ವೆಗಳು

ಹೈದರಾಬಾದಿಗೆ ಸೇರದ ಆದರೆ ಗಡಿಯಲ್ಲಿರುವ ಇತರ ರೈಲ್ವೆ ಸಂಸ್ಥೆಗಳ ರೈಲುಗಳೂ ಸಹ ಇಂದಿನಿಂದ ಹೈದರಾಬಾದಿನ ಆಡಳಿತಕ್ಕೇ ಸೇರಿಸಲ್ಪಡುವುವೆಂದು ವರದಿಯಾಗಿದೆ.

ಅಖಂಡ ಭಾರತ ಸ್ಥಾಪನೆಗೆ ವಿದ್ಯಾರ್ಥಿಗಳ ಪ್ರತಿಜ್ಞೆ

ಮೈಸೂರು ೨

ಎಲ್ಲ ವಿದ್ಯಾರ್ಥಿ ಸಂಸ್ಥೆಗಳೂ ಆಗಸ್ಟ್ ೧೫ ರಂದು ವೈಭವದಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕೆಂದೂ, ದೇಶವು ವಿಭಾಗವಾಗಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ಕಾಂಗ್ರೆಸ್ಸಿನ ಸದಸ್ಯನೂ ಅಖಂಡಭಾರತದ ಮತ್ತು ಸ್ವತಂತ್ರ ಸಮಾಜವಾದಿ ಕರ್ನಾಟಕದ ಸ್ಥಾಪನೆಗಾಗಿ ಅಂದು ಪಣತೊಟ್ಟು ಅದಕ್ಕಾಗಿ ದುಡಿಯುವುದಾಗಿ ಪ್ರತಿಜ್ಞೆ ಮಾಡಬೇಕೆಂದೂ ಅಖಿಲ ಕರ್ನಾಟಕ ವಿ॥ ಕಾಂ॥ ಕಾರ್ಯದರ್ಶಿ ಶ್ರೀ॥ ಬಿ ಶ್ರೀಕಂಠಪ್ಪನವರು ಒಂದು ಹೇಳಿಕೆಯಲ್ಲಿ ತಿಳಿಸಿರುವರು

ಜಯಪ್ರಕಾಶ ನಿಧಿ

ರಾಜಧಾನಿಗೆ ಆಗಮಿಸಿದ್ದ ಸಮಾಜವಾದಿ ನಾಯಕರಾದ ಜೈ ಪ್ರಕಾಶ ನಾರಾಯಣರವರಿಗೆ ವಿದ್ಯಾರ್ಥಿ ಕಾಂಗ್ರೆಸ್ಸು ಕಾಣಿಕೆ ಈಯಬೇಕೆಂದು ನಿರ್ಧರಿಸಿದ್ದ ೫೦೦೦ ರೂ ಇನ್ನೂ ಸೇರಿಲ್ಲವೆಂದೂ ಸಂಸ್ಥೆಯ ಈ ಉದ್ದೇಶ ಸಾಧನೆಗೆ ಎಲ್ಲರೂ ನೆರವು ನೀಡಬೇಕೆಂದು ಕಾರ್ಯದರ್ಶಿಗಳಾದ ಶ್ರೀ ತಮ್ಮಣ್ಣ ಭೂಪಾಲರು ಕೋರಿರುವರು

ಬಾ ಮಾರವರ ದಸ್ತಗಿರಿ

ಜನರಲ್ ಉ ಆಂಗ್ ಸಾನ್ ಮತ್ತು ಅವರ ಆರು ಮಂದಿ ಸಹೋದ್ಯೋಗಿಗಳ ಕೊಲೆಯ ಸಂಬಂಧವಾಗಿ ಇದುವರೆಗೆ ಅದೃಶ್ಯರಾಗಿದ್ದ ಬರ್ಮಾದ ಮಾಜಿ ಪ್ರಧಾನಿ ಡಾ॥ ಬಾ ಮಾರವರನ್ನು ನಿನ್ನೆ ದಿನ ಪೋಲೀಸರು ದಸ್ತಗಿರಿ ಮಾಡಿರುವರೆಂದು ವರದಿಯಾಗಿದೆ

Edited, printed and published by A. K. Nagarajan at the Sadhvi Press D Subbaiah Road Mysore

ಡಚ್ಚರಿಗೆ ಬ್ರಿಟಿಷ್ ಮಿಲಿಟರಿ ಸಹಾಯ ಬಂದು

ಇನ್ನು ಮುಂದೆ ಮಿಲಿಟರಿ ಕಾರ್ಯಾಚರಣೆಗೆ ಸಂಬಂಧಪಟ್ಟ ಯಾವ ಸಹಾಯವನ್ನೂ ತಾವು ಡಚ್ಚರಿಗೆ ಮಾಡುವುದಿಲ್ಲವೆಂದು ಬ್ರಿ॥ ಸರ್ಕಾರವು ತಿಳಿಸಿರುವುದೆಂದು ವರದಿಯಾಗಿದೆ.

ಐರೋಪ್ಯ ನೌಕರರು ನಿವೃತ್ತರಾಗುವರು

ಬೊಂಬಾಯಿ ಪ್ರಾಂತ್ಯದ ಪೋಲೀಸು ಶಾಖೆಯಲ್ಲಿರುವ ೨೨ ಜನ ಐರೋಪ್ಯ ಅಧಿಕಾರಿಗಳು ತಮ್ಮನ್ನು ಆಗಸ್ಟ್ ೧೫ ರಿಂದ ನಿವೃತ್ತಿಗೊಳಿಸಬೇಕೆಂದು ಪ್ರಾಂತ ಸರ್ಕಾರವನ್ನು ಕೋರಿರುವರೆಂದು ವರದಿಯಾಗಿದೆ

ಶ್ರೀ

ಗಣೇಶಾ ಟಾಕೀಸ್

ತಾ॥ 2-8-47 ರಿಂದ
ಪ್ರತಿ ದಿನ 3 ಆಟಗಳು

– ಗಜ಼ಲ್ –

(ಹಿಂದಿ)
—: ಪಾತ್ರ :—
ಲೀಲಾ ಚಿಟ್ನಿಸ್, ಚಾರ್ಲಿ, ರಾಧಾರಾಣಿ

ವುಡ್‌ಲ್ಯಾಂಡ್ಸ್

1-8-47 ರಿಂದ
ಶುಕ್ರವಾರ ೧೪ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬ(ತಮಿ...)
-: ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರನ್ ಮುಂತಾದವರು.

ರಾಜಕಮಲ್

ತಾ॥ 1-8-47 ರಿಂದ
ಅಪೋಲೋ ೩ ನೇ ವಾರ

★ ಕಿಸ್ಮತ್

—: ತಾರಾಗಣ :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಶಾನವಾಜ್ ಮುಂತಾದವರು

From 1-8-47 for 4 days
at 10-30 a m

Murder in Reverse

Starring :-Billy Hartnel
Jimmy Hanle
Chili Bouchie
John Slater

ಚಾಮುಂಡೇಶ್ವರಿ ಟಾಕೀಸ್

ತಾ॥ 1-8-47 ರಿಂದ ದಿನವೂ 3 ಆಟಗಳು
ಹಿಂದ್ ಪಿಕ್ಚರ್ಸ್ ರವರ

ನಾಟಕ್ ಕಿ ಲಾಜ್

(ಹಿಂದಿ)
—: ಪಾತ್ರ :—
ಸ್ವರ್ಣಲತಾ-ನಜೀರ್-ಜಯಂತ್

WOOD LANDS

Morning Shows From
1-8-47 for 4 days
daily at 10-30 A. M.
Warner Brothers'

The Dark Tower

With
Ben Lyon, Anne Crawford
&
David Farrar

ಜೈ ಹಿಂದ್

ನಮಸ್ತೆ !

ಆಗಸ್ಟ್ ೯ ಹಿಂದೂಸ್ಥಾನದ ಇತಿಹಾಸದಲ್ಲೇ ಬಹಳ ಪ್ರಾಮುಖ್ಯವಾದ ದಿನ. ಅದೇ ರೀತಿ ಆಗಸ್ಟ್ ೧೫ ಸಹ ಒಂದು ಚರಿತ್ರಾರ್ಹವಾದ ದಿವಸ. ಅಂದು ನಮ್ಮ ಭಾರತವು ಪರಲೋಕದ ಕಪಿಮುಷ್ಟಿಗಳಿಂದ ಬಿಡುಗಡೆ ಹೊಂದಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುತ್ತದೆ. ಯಾವ ಭುಜಗಳು ಗುಂಡಿನೇಟುಗಳನ್ನು ಎದುರಿಸಿದ್ದುವೋ, ಕತ್ತಿಯ ಏಟುಗಳನ್ನು ಸಹಿಸಿದ್ದುವೋ ಅವೇ ಭುಜಗಳು ಆಗಸ್ಟ್ ೧೫ ರಂದು ತ್ರಿವರ್ಣ ರಂಜಿತ ಬಾವುಟಗಳಿಂದ ಅಲಂಕರಿಸಲ್ಪಡುತ್ತವೆ. ಯಾವ ಕೈಗಳು ಏಸ್ಸಿಹಾಯಕರ ಮೇಲೆ ಗುಂಡುಗಳನ್ನು ಸುರಿಸಿದ್ದುವೋ, ಅವೇ ಕೈಗಳು ಆಗಸ್ಟ್ ೧೫ ರ ದಿನ ಹೆಮ್ಮೆಯಿಂದ ರಾಷ್ಟ್ರಧ್ವಜಗಳನ್ನು ಎತ್ತಿ ಹಿಡಿಯುತ್ತವೆ.

ನೀವೂ ಸಹ ನಿಮ್ಮ ಮನೆಗಳನ್ನು ರಾಷ್ಟ್ರಧ್ವಜದಿಂದ ಅಲಂಕರಿಸಿ !
ನಿಮ್ಮ ಸೈಕಲ್ಲುಗಳು ರಾಷ್ಟ್ರಧ್ವಜಗಳಿಂದ ಶೋಭಿಸಲಿ !!
ನಿಮ್ಮ ಭುಜಗಳು ರಾಷ್ಟ್ರಧ್ವಜಗಳಿಂದ ಮೆರೆಯಲಿ !!!

ಎಲ್ಲಾ ತರಹೆಯ, ಎಲ್ಲಾ ಅಳತೆಯ ರಾಷ್ಟ್ರಧ್ವಜಗಳಿಗೆ

ತಯಾರಕರು :—
ಬಿ. ಕೃಷ್ಣಪ್ಪ,
ಆರ್ಟ್ ಡ್ರೆಸ್ ಫ್ಯಾಕ್ಟ್ರಿ,
ಮೈಸೂರು

ಏಜೆನ್ಸೀಸ್ ಜಯಾ ಸ್ಟೋರ್ಸ್,
ಮೈಸೂರಿನ ಸ್ಟಾಕಿಸ್ಟರು, ಜಗನ್ಮೋಹನ
ಬಂಗ್ಲೆ ರಸ್ತೆ, ಮೈಸೂರು

ಅಪೇರಾ ಟಾಕೀಸ್, ಮೈಸೂರು — 1-8-47 ರಿಂದ

ಸುಲೋಚನ

(ತಮಿಳು)
ಪಾತ್ರ :— ಕೆ. ಎಲ್ ವಿ ವಸಂತ, ಟಿ ಆರ್ ಸುಂದರಂ ಮುಂತಾದವರು
ಪ್ರತಿ ದಿನ ೩ ಆಟಗಳು

ಫೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಪುಟ

ಸಂಪುಟ ೧೨] ಭಾನುವಾರ ೩—೮—೪೭ [ಸಂಚಿಕೆ ೪

ಆಗಸ್ಟ್ ೧೪ ರ ರಾತ್ರಿ ಯೂನಿಯನ್ ಸ್ಥಾಪನೆ

ಪುರಸಭೆಯಿಂದ ಸ್ವಾತಂತ್ರ್ಯ ದಿನಾಚರಣೆ

೨೦೦೦ ರೂ. ಮಂಜೂರು

ಮೈಸೂರು ೩

ಆಗಸ್ಟ್ ೧೫ ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸುವ ಬಗ್ಗೆ ಸಮಾಲೋಚನೆ ನಡೆಸಲು ಪುರಸಭೆಯ ವಿಶೇಷ ಅಧಿವೇಶನವು ನೂತನ ಅಧ್ಯಕ್ಷರಾದ ಎಸ್. ಎಸ್. ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಜರುಗಿತು.

ಆಗಸ್ಟ್ ೧೫ ನೇ ತಾರೀಖು ರಾಜಧಾನಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ನೆರವೇರಿಸಬೇಕೆಂದು ಕಾಂಗ್ರೆಸ್ ಪಕ್ಷದವರು ಕಳುಹಿಸಿದ್ದ ನಿರ್ಣಯವನ್ನು ಶ್ರೀ॥ ಪಿ. ಗೋಪಾಲಕೃಷ್ಣಶೆಟ್ಟರು ಸಭೆಯಲ್ಲಿ ಮಂಡಿಸಿದರು. ಅದನ್ನು ಶ್ರೀ ಟಿ. ಮರಿಯಪ್ಪನವರು ಸಮರ್ಥಿಸಿದರು. ೬೦ ವರ್ಷಗಳಿಂದ ಸ್ವಾತಂತ್ರ್ಯ ಸಾಧನೆಗಾಗಿ ಭಾರತವು ನಡೆಸಿದ ಹೋರಾಟದ ಸೂಕ್ಷ್ಮ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಅಖಿಲ ಭಾರತ ಕಾಂಗ್ರೆಸ್ಸು ಕಳೆದ ಅನೇಕ ವರ್ಷಗಳಿಂದ ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ನಡೆಸಿದ ಅಹಿಂಸಾತ್ಮಕ ಹೋರಾಟದ ಪರಿಣಾಮವಾಗಿ ಭಾರತವು ದಾಸ್ಯವಿಮೋಚನೆಗೊಂಡು ತನ್ನ ಸ್ವಾತಂತ್ರ್ಯವನ್ನು ಸಾಧಿಸುತ್ತಿದೆ; ಈ ಸಮಯದಲ್ಲಿ ದೇಶೀಯ ಸಂಸ್ಥಾನವಾದ ನಮ್ಮ ಮೈಸೂರಿನಲ್ಲಿಯೂ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಬೇಕಾಗಿದ್ದು ಅವಶ್ಯಕ. ಇವರ ಇಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗದಿರುವುದ ರಿಂದ ಅತ್ಯಂತ ವಿಷಾದಿಸಬೇಕಾಗಿದೆ—ಎಂದು ಹೀಗಿಯೂ ಸಹ ಶ್ರೀ. ಟಿ. ಮರಿಯಪ್ಪನವರು ಹೇಳಿದರು. ಎ. ವೆಂಕಟೇಶಯ್ಯ ಮತ್ತು ವಿ॥ ಡಬ್ಲ್ಯೂ. ಹೆಚ್. ಥಿಯೋಬಾಲ್ಡ್ ರವರುಗಳು ನಿರ್ಣಯಕ್ಕೆ ಬೆಂಬಲ ಇತ್ತರು.

ಆಗಸ್ಟ್ ೧೫ ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ನಡೆಸಬೇಕೆಂಬ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಇದರ ಸಲುವಾಗಿ ಸೂಕ್ತ ಕಾರ್ಯಕ್ರಮಗಳನ್ನು ನಿರ್ಧರಿಸಲು, ಅಧ್ಯಕ್ಷರು, ಉಪಾಧ್ಯಕ್ಷರು, ಶ್ರೀಗಳಾದ ಬಿ. ನಾರಾಯಣಸ್ವಾಮಿ, ಪಾಲಹಳ್ಳಿ ಸೀತಾರಾಮಯ್ಯ, ಟಿ. ಮರಿಯಪ್ಪ, ಪಿ. ಗೋಪಾಲಕೃಷ್ಣಶೆಟ್ಟಿ ಮತ್ತು ವಿ॥ ಡಬ್ಲ್ಯೂ. ಹೆಚ್. ಥಿಯೋಬಾಲ್ಡ್ ರವರುಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು.

ಪುರಸಭಾ ಕಛೇರಿಗೆ ಆಗಸ್ಟ್ ೧೫ ಮತ್ತು ೧೬ ನೇ ತಾ॥ ರಜಾ ಕೊಡಬೇಕೆಂದೂ, ಅವು ಸಾರ್ವಜನಿಕ ರಜಾ ದಿನವೆಂದು ಘೋಷಿಸಬೇಕೆಂದು ಸರ್ಕಾರ

ಕೂಡಲೇ ಕದನ ನಿಲ್ಲಿಸಲು ವಿಶ್ವ ಸಂಸ್ಥೆಯ ಸೂಚನೆ

ಇಂಡೊನೇಷ್ಯದಲ್ಲಿ ನಡೆಯುತ್ತಿರುವ ಕದನವನ್ನು ತಕ್ಷಣವೇ ನಿಲ್ಲಿಸಬೇಕೆಂದು ವಿಶ್ವ ರಾಷ್ಟ್ರ ಸಂಸ್ಥೆಯು ಡಚ್ ಮತ್ತು ಇಂಡೊನೇಷ್ಯಾ ಸರ್ಕಾರಗಳಿಗೆ ತಿಳಿಸಿದೆಯೆಂದು ವರದಿಯಾಗಿದೆ. ತಮ್ಮ ಭಿನ್ನಾಭಿಪ್ರಾಯಗಳನ್ನು ಪಂಚಾಯಿತಿಯ ಮೂಲಕವಾಗಿಯಾಗಲೀ ಅಥವಾ ಬೇರೆ ಯಾವುದಾದರೂ ಶಾಂತಿ ಯುತವಾದ ಮಾರ್ಗದಿಂದ ತೀರ್ಮಾನಿಸಿಕೊಳ್ಳಬೇಕೆಂದೂ, ಸಂಧಾನದ ವಿವರಗಳನ್ನು ಭದ್ರತಾ ಸಮಿತಿಗೆ ತಿಳಿಸುತ್ತಿರಬೇಕೆಂದೂ ಅದು ಸೂಚಿಸಿರುತ್ತದೆ. ಇಂಡೊನೇಷ್ಯಾ ಸಮಸ್ಯೆಯನ್ನು ಬಗೆಹರಿಸಲು ಅಮೆರಿಕದ ಮಧ್ಯಸ್ಥಿಕೆಯನ್ನು ಡಚ್ಚ ಸರ್ಕಾರವು ಅನುಮೋದಿಸಿದೆ.

ಎಂ. ಸಿ. ಎಫ್. ಕೆಲಸಗಾರರ ಮುಷ್ಕರ

ಬೆಳಗೊಳ ೩

ಬೆಳಗೊಳದ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಾರ್ಖಾನೆಯ ಕೆಲಸಗಾರರ ಸಂಘದವರು ತಮ್ಮ ಕೋರಿಕೆಗಳನ್ನು ಆಡಳಿತ ವರ್ಗದವರು ಈಡೇರಿಸದಿರುವುದರಿಂದ ಮುಷ್ಕರವನ್ನು ಆರಂಭಿಸಬೇಕೆಂದು ನಿರ್ಧರಿಸಿದ್ದ ಬಗ್ಗೆ ಮೈಸೂರು ಡಿವಿಜನ್ನಿನ ಲೇಬರ್ ಅಸಿಸ್ಟೆಂಟ್ ಕಮೀಷನರು ನಿನ್ನೆ ಸಂಘದ ಮುಷ್ಕರದ ಸೀಕ್ರೆಟ್ ಬ್ಯಾಲಟ್ ನಡೆಸಿದರು. ಶೇ॥ ೯೯ ಮಂದಿ ಮುಷ್ಕರದ ಪರವಾಗಿ ಓಟು ಮಾಡಿರುವುದರಿಂದ ಮುಷ್ಕರವು ನ್ಯಾಯಸಮ್ಮತವಾದುದೆಂದು ಅವರು ಅಭಿಪ್ರಾಯಪಟ್ಟಿರುವರು. ನಿನ್ನೆ ನಡೆದ ಕೆಲಸಗಾರರ ಸಭೆಯಲ್ಲಿ ಈ ದಿನದಿಂದ ಶಾಂತಿಯುತವಾದ ಮುಷ್ಕರವನ್ನು ಆರಂಭಿಸಬೇಕೆಂದು ಆದ ತೀರ್ಮಾನದಂತೆ ಕೆಲಸಗಾರರು ಇಂದು ಬೆಳಗ್ಗೆ ೭-೩೦ ರಿಂದ ಕೆಲಸಕ್ಕೆ ಹೋಗದೆ ಮುಷ್ಕರವನ್ನಾರಂಭಿಸಿರುವರು.

● ಅಮೆರಿಕ ಅಕ್ರಮಿತ ಬರ್ಲಿನ್ನಿನ ಕಾರ್ಖಾನೆಗಳಲ್ಲಿ ಹೊರ ರಾಷ್ಟ್ರಗಳಿಗಾಗಿ ಅನೇಕ ಬಗೆಯ ಅಸ್ತ್ರಶಸ್ತ್ರಗಳನ್ನು ತಯಾರಿಸುತ್ತಿದ್ದುದು ಪತ್ತೆಯಾಗಿದೆ.

ಸಂಗೀತ ಕಛೇರಿ

ಮೈಸೂರು ೩

ಡಿ. ಸುಬ್ಬಯ್ಯನವರ ರಸ್ತೆಯಲ್ಲಿರುವ ಸಾಧ್ವಿ ಕಛೇರಿಯ ಮಹಡಿಯ ಮೇಲೆ ಈ ದಿನ ರಾತ್ರಿ ೯ ಗಂಟೆಗೆ ಸಂಗೀತ ವಿದ್ವಾನ್ ಶ್ರೀ ಎಸ್. ಸುಬ್ರಹ್ಮಣ್ಯಯ್ಯ ಎಂ. ಎ. ರವರ ಗಾಯನವನ್ನು, ವಿ॥ ಎ. ವಿ. ಕೃಷ್ಣಮಾಚಾರ್ಯ ಪಿಟೀಲು ಮತ್ತು ವಿ॥ ಚೆಟ್ಟಿ ನಾಗಣ್ಣನವರ ಮೃದಂಗಗಳೊಡನೆ ಏರ್ಪಡಿಸಿರುತ್ತದೆ. ಸರ್ವರಿಗೂ ಸ್ವಾಗತವಿದೆ.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆ

ಆಗಸ್ಟ್ ೧೫ ನೇ ತಾ॥ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಸಮಾಲೋಚಿಸಲು ನಾಳೆ ಸಂಜೆ ೫ ಗಂಟೆಗೆ ದೇವರಾಜ ಮಾರ್ಕೆಟ್ ಮಹಡಿಯ ಮೇಲಿರುವ ಪ್ರಜಾಪಕ್ಷ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಜರುಗುವುದು. ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಶಾಲಾ ಮಕ್ಕಳಿಗೆ ಸ್ವಾತಂತ್ರ್ಯದ ಪದಕಗಳು

ದೆಹಲಿ ನಗರದ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೂ ಆಗಸ್ಟ್ ೧೫ ನೇ ತಾರೀಖು ಸ್ವಾತಂತ್ರ್ಯ ಪದಕಗಳನ್ನು ಕೊಡುವಂತೆ ಏರ್ಪಾಡಾಗಿರುತ್ತದೆ. ಅದರಲ್ಲಿ ಒಂದು ಕಡೆ ಜೈ ಹಿಂದ್ ಮತ್ತು ಸ್ವಾತಂತ್ರ್ಯ ದಿನದ ತಾರೀಕನ್ನೂ ಮತ್ತೊಂದು ಕಡೆ ರಾಷ್ಟ್ರೀಯ ಧ್ವಜವನ್ನೂ ಹಾಕಲಾಗುವುದು.

ದವರನ್ನು ಪ್ರಾರ್ಥಿಸಬೇಕೆಂದೂ ಸಹ ತೀರ್ಮಾನಿಸಲಾಯಿತು.

ಆಗಸ್ಟ್ ೧೫ ರ ದಿನ ಬಡವರಿಗೆ ವಸ್ತ್ರದಾನ, ಮಕ್ಕಳಿಗೆ ಸಿಹಿ ತಿಂಡಿಗಳನ್ನು ಹಂಚಲೂ ಮತ್ತು ಇತರ ಖರ್ಚುಗಳಿಗಾಗಿಯೂ, ೨೦೦೦ ರೂ ಮಂಜೂರ್ಮಾಡಿ ನಿರ್ಣಯವನ್ನು ಮಾಡಲಾಗಿದೆ.

ಆಗಸ್ಟ್ ೧೫ ನೇ ತಾ॥ ಸಂಸ್ಥಾನಗಳ ಮೇಲೆ ಬ್ರಿಟಿಷರ ಸಾರ್ವಭೌಮಾಧಿಕಾರವು ರದ್ದಾಗಿ ಅಂದಿನಿಂದ ಶ್ರೀಮನ್ಮಹಾರಾಜರವರು ಸ್ವತಂತ್ರರಾಗುವುದರಿಂದ ಅದಕ್ಕಾಗಿ ಅವರನ್ನೂ, ಪ್ರಜೆಗಳನ್ನೂ ಅಭಿನಂದಿಸಬೇಕೆಂದು ವಿ॥ ಡಬ್ಲ್ಯೂ. ಹೆಚ್. ಥಿಯೋಬಾಲ್ಡ್ ರವರು ಒಂದು ಸೂಚನೆಯನ್ನು ತಂದರು. ಈ ವಿಷಯವು ಚರ್ಚಾರ್ಹವಾದುದೆಂದೂ, ಇದನ್ನು ಪ್ರತ್ಯೇಕವಾಗಿ ನಿರ್ಣಯರೂಪದಲ್ಲಿ ತರಬೇಕೆಂದೂ, ಈ ಸಭೆಯು ವಿಶೇಷ ಸಭೆಯಾಗಿದ್ದು ಹೊಸ ವಿಷಯವನ್ನು ಚರ್ಚೆಗೆ ತರಲು ಅವಕಾಶವಿಲ್ಲವೆಂದೂ, ಹಲವು ಸದಸ್ಯರು ಅಭಿಪ್ರಾಯಪಟ್ಟರು. ವಿಷಯವು ಅಷ್ಟರಲ್ಲೇ ಮುಕ್ತಾಯಗೊಂಡಿತು.

ರಾಷ್ಟ್ರ ನಾಯಕರಿಗೆ ವಿದ್ಯಾರ್ಥಿಗಳ ಮನವಿ

ಮೈಸೂರು ೩

ಮೈಸೂರಿನ ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯದ ಅಧಿಕಾರಿಗಳು ಕೈಗೊಂಡಿರುವ ಶಿಸ್ತಿನ ಕಾರ್ಯಕ್ರಮವನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಹೂಡಲಿರುವ ಸತ್ಯಾಗ್ರಹದ ವಿಷಯವನ್ನು ರಾಷ್ಟ್ರ ನಾಯಕರಾದ ಪಂ॥ ನೆಹರೂ, ಶ್ರೀಮತಿ ಕಮಲಾದೇವಿ, ಜೈ ಪ್ರಕಾಶ್ ನಾರಾಯಣ್ ಮೊದಲಾದವರಿಗೆ ತಿಳಿಸಿ ಅವರು ಸಹಕಾರವನ್ನೂ, ಸ್ಫೂರ್ತಿ ಪೂರಿತ ಸಂದೇಶಗಳನ್ನೂ ನೀಡಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯು ಕೋರಿರುವುದೆಂದು ಕಾರ್ಯದರ್ಶಿಗಳು ತಿಳಿಸಿರುವರು.

ಭಾರತ ಯೂನಿಯನ್ ಸ್ಥಾಪನೆಯ ಕಾರ್ಯಕ್ರಮ

ಆಗಸ್ಟ್ ೧೪ ನೇ ತಾರೀಖು ರಾತ್ರಿ ೧೧-೩೦ ಗಂಟೆಗೆ ಭಾರತದ ಯೂನಿಯನ್ನನ್ನು ಸ್ಥಾಪಿಸಿ ಬ್ರಿಟಿಷರಿಂದ ಅಧಿಕಾರವನ್ನು ವಹಿಸಿ ಕೊಳ್ಳಲಾಗುವುದು. ಅದಕ್ಕಾಗಿ ರಾಜ್ಯಾಂಗ ಸಭೆಯ ವಿಶೇಷ ಅಧಿವೇಶನವು ಸೇರುವುದು. ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಗೌರ್ನರ್ ಜನರಲ್ಲನ್ನಾಗಿ ಸಭೆಯು ನೇಮಿಸುವುದು. ಮಾರನೆ ದಿನ ಬೆಳಗ್ಗೆ ಗೌರ್ನರ್ ಜನರಲ್ಲರು ಪ್ರಮಾಣ ವಚನವನ್ನು ಸ್ವೀಕರಿಸುವರು. ಬೆಳಗ್ಗೆ ೧೦-೩೦ ಗಂಟೆಗೆ ಎಲ್ಲಾ ಕಟ್ಟಡಗಳ ಮೇಲೆಯೂ ರಾಷ್ಟ್ರ ಧ್ವಜವನ್ನು ಹಾರಿಸಲಾಗುವುದು.

ಅಕೌಂಟ್ಸ್ ಹೈಯ್ಯರ್ ಪರೀಕ್ಷಾ ಫಲಿತಾಂಶ

ಮೈಸೂರು ೩

ಕಳೆದ ಮೇ ತಿಂಗಳಲ್ಲಿ ನಡೆದ ಮೇಲ್ಕಂಡ ಪರೀಕ್ಷೆಗೆ ಮೈಸೂರು ಕೇಂದ್ರದಿಂದ ಕುಳಿತಿದ್ದವರ ಪೈಕಿ ಕೆಳಕಂಡ ನಂಬರಿನ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ:-

* ಮೊದಲನೇ ದರ್ಜೆ

೧೦೧೮	೧೦೭೯	*೧೦೨೩	೧೦೨೪
೧೦೨೫*	೧೦೪೭	೧೦೫೨	೧೦೫೭
೧೦೫೯	೧೦೭೪*	೧೦೯೧	೧೦೯೫*
೧೦೯೯	೧೧೦೩*	೧೧೦೪	೧೧೦೭
೧೦೬೪	೧೧೩೭	೧೧೩೯	೧೧೪೦
೧೦೪೩	೧೧೪೩	೧೧೫೫	೧೧೬೭
೧೦೯೯	೧೧೯೭	೧೧೧೧	[illegible]

ಹೊಸ ನಾಟಕ ಶ್ರೀ ಹೊಸ ನಾಟಕ

ಹಾಲಸಿದ್ದೇಶ್ವರ ಸಂಗೀತ ನಾಟಕ ಮಂಡಳಿ

ಜಲಗೇರಿ, ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ನಾಳೆ ರಾತ್ರಿ ೧೦-೩೦ ಗಂಟೆಗೆ

★ ಬಡತನದ ಭೂತ ★

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಭಾನುವಾರ ಮ್ಯಾಟಿನಿ ಇದೆ

ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೩-೮-೪೭ ರಿಂದ ೧೦-೮-೪೭ರ ವರೆಗೆ

ಮೇಷ — ಆರೋಗ್ಯ ಉತ್ತಮ ಧನ ಲಾಭ ಸಾಧಾರಣ ಖರ್ಚು ಕಡಿಮೆ. ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ ಅಧಿಕಾರಿ ವರ್ಗದವರಿಂದ ಸನ್ಮಾನ. ಪ್ರವಾಸದಿಂದ ಧನಲಾಭ ಮಿತ್ರರಿಂದ ಸಹಾಯ ಧಾರ್ಮಿಕ ಕಾರ್ಯಗಳಿಗಾಗಿ ಧನವ್ಯಯ. ತಾ|| ೪, ೬, ೯, ಲಾಭ, ಬಂಧು ದರ್ಶನ.

ವೃಷಭ — ಪ್ರಾಕೃತಿಕ ಸ್ಥಿತಿ ಸಾಧಾರಣ. ಆರ್ಥಿಕ ಸ್ಥಿತಿ ಚಿಂತಾದಾಯಕ ಕೌಟುಂಬಿಕ ವೆಚ್ಚ ಮಿತಿಮೀರಿ ಹೆಚ್ಚುವುದು ಉದ್ಯೋಗ, ವ್ಯವಹಾರಗಳಲ್ಲಿ ಶತ್ರುಗಳಿಂದ ವಿಶೇಷ ಕಿರುಕುಳ ಅಧಿಕಾರಿ ವರ್ಗದವರಿಂದ ಅವಮಾನ. ವ್ಯಾಪಾರಿಗಳಲ್ಲಿ ನಷ್ಟ ತಾ|| ೪, ೮, ೯, ಶಾಂತಿ ಲಾಭ.

ಮಿಥುನ — ಪ್ರಾಕೃತಿಕ ಸ್ಥಿತಿ ಸಾಧಾರಣ. ಮಾನಸಿಕ ಚಿಂತೆ ಹೆಚ್ಚು. ಆರೋಗ್ಯ ಪದೇ ಪದೇ ಕೆಡುವುದು ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು ಲಾಟರಿ, ಸ್ಪರ್ಧೆಗಳಿಂದ ನಷ್ಟ ವ್ಯಾಪಾರ, ವ್ಯವಹಾರಗಳಲ್ಲಿ ಮಿತ್ರರಿಂದ ತಿರಸ್ಕಾರ. ಉದ್ಯೋಗದಲ್ಲಿ ಅಧಿಕಾರಿಗಳ ಅಸಮಾಧಾನ ಹೆಚ್ಚುವುದು ತಾ|| ೫, ೬ ಲಾಭ ಪ್ರವಾಸ.

ಕಟಕ — ಆರೋಗ್ಯ ಉತ್ತಮ ಧನ ಲಾಭ ಸಾಧಾರಣ ಖರ್ಚು ಅಧಿಕ ವ್ಯಾಪಾರಿಗಳಲ್ಲಿ ಪ್ರಗತಿ ಮಂಗಳ ಕಾರ್ಯಗಳಿಗಾಗಿ ಪ್ರವಾಸ ಬಂಧುಗಳ ಆಗಮನದಿಂದ ವಿಶೇಷ ಸಂಭ್ರಮ ಮಿತ್ರರಿಂದ ಮನ್ನಣೆ ತಾ|| ೪, ೬, ಚಿಂತೆ, ನಷ್ಟ

ಸಿಂಹ — ದೇಹ ಸ್ಥಿತಿ ಚೆನ್ನಾಗಿರುತ್ತದೆ. ಧನಲಾಭ ಉತ್ತಮ ಖರ್ಚು ಕಡಿಮೆ ವ್ಯಾಪಾರಿಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಒತ್ತಿ ಅಧಿಕಾರಿಗಳಿಂದ ಸನ್ಮಾನ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ತಾ|| ೮, ೯, ಚಿಂತೆ, ಅಪಘಾತ

ಕನ್ಯಾ — ಆರೋಗ್ಯ ಉತ್ತಮ ಮಾನಸಿಕ ಚಿಂತೆ ಸಾಧಾರಣ. ಧನ ಲಾಭ ಕಡಿಮೆ ಖರ್ಚು ಹೆಚ್ಚು ಆಲಸಿಕೆಯಿಂದ ನಷ್ಟ. ಅಧಿಕಾರಿಗಳ ತಿರಸ್ಕಾರ. ಪ್ರವಾಸದಿಂದ ಅಪಘಾತ ತಾ|| ೫, ೬, ಲಾಭ ಮಿತ್ರದರ್ಶನ.

ತುಲಾ — ಆರೋಗ್ಯ ಉತ್ತಮವಾಗಿರುತ್ತದೆ ಮಾನಸಿಕ ಚಿಂತೆ ಹೆಚ್ಚು ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಮಿತ್ರರಿಂದ ಸನ್ಮಾನ ತಾ|| ೬, ೮, ಚಿಂತೆ, ನಷ್ಟ

ವೃಶ್ಚಿಕ — ಆರೋಗ್ಯ ಕೆಡುತ್ತದೆ ಪ್ರವಾಸದಿಂದ ಅಪಘಾತ ಅಧಿಕಾರಿ ವರ್ಗದವರಿಂದ ತಿರಸ್ಕಾರ. ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ನಷ್ಟ ವ್ಯಾಪಾರದಲ್ಲಿ ಶತ್ರುಗಳ ಕಿರುಕುಳ ಹೆಚ್ಚುವುದು ಮಂಗಳ ಕಾರ್ಯಗಳಿಗಾಗಿ ಹಣದ ಅಗತ್ಯ ತಾ|| ೬, ೯ ಲಾಭ ಪ್ರವಾಸ

ಧನುಸ್ಸು — ಆರೋಗ್ಯ ಸಾಧಾರಣ. ಧನಲಾಭ ಉತ್ತಮ. ಖರ್ಚು ಕಡಿಮೆ ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದಲೂ, ಮಿತ್ರರಿಂದಲೂ ವಿಶೇಷ ಮನ್ನಣೆ. ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ತಾ|| ೪, ೬, ೭, ಚಿಂತೆ ಅಪಘಾತ

ಮಕರ — ಆರೋಗ್ಯ ಚೆನ್ನಾಗಿರುತ್ತದೆ. ಆರ್ಥಿಕ ಸ್ಥಿತಿ ಪ್ರಗತಿದಾಯಕ. ವ್ಯಾಪಾರ, ವ್ಯವಹಾರಗಳಲ್ಲಿ ವಿಶೇಷ ಲಾಭ. ನೌಕರಿಯಲ್ಲಿ ಪ್ರಗತಿ. ಮಿತ್ರರಿಂದ ಸನ್ಮಾನ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಪ್ರವಾಸದಿಂದ ಮಹದ್ವ್ಯಕ್ತಿಗಳ ಸ್ನೇಹ ತಾ|| ೫, ೮ ಚಿಂತೆ ಕಲಹ.

ಕುಂಭ — ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಸ್ಥಿತಿ ಸುಧಾರಿಸುವುದು. ಖರ್ಚು ಕಡಿಮೆ ವ್ಯಾಪಾರಾದಿಗಳಲ್ಲಿ ಪ್ರಗತಿ ಪ್ರವಾಸದಿಂದ ಅಪಘಾತ. ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು ಮಾನಸಿಕ ಚಿಂತೆ ಅಧಿಕವಾಗುವುದು. ಮಾನಸಿಕ ಚಿಂತೆ ಅಧಿಕವಾಗುವುದು ತಾ|| ೪, ೬, ೮, ಲಾಭ, ಶಾಂತಿ

ಮೀನ — ಪ್ರಾಕೃತಿಕ ಸ್ಥಿತಿ ಸಾಧಾರಣ. ಮಾನಸಿಕ ಚಿಂತೆ ಕಡಿಮೆ ಧನಲಾಭ ಉತ್ತಮ ಖರ್ಚು ಕಡಿಮೆ. ವ್ಯಾಪಾರಾದಿಗಳಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದ ಸನ್ಮಾನ ಪ್ರವಾಸದಿಂದ ಮಿತ್ರದರ್ಶನ ತಾ|| ೫, ೭, ಲಾಭ, ಬಂಧು ದರ್ಶನ

ರಾಜಕಮಲ್

ತಾ|| 1-8-47 ರಿಂದ

ಅಮೋಘ ೩ ನೇ ವಾರ

★ ಕಿಸ್ಮತ್ ★

—: ತಾ ರಾ ಗ ಣ :—

ಮನ್ಮೋಹನ್ ಶಾಂತಿ, ಅಶೋಕ್ ಕುಮಾರ್, ಷಾನವಾಜ್ ಮುಂತಾದವರು

From 1-8-47 for 4 days at 10-30 a. m

Murder in Reverse

Starring :-Billy Hartnc.
Jimmy Hanley,
Chili Bouchier,
John Slater

FOR SALE

Model House No 40 Krishnarajivana with Out-House, Garage. Enquire:- R GUNDU RAO, Mysore Bank Buildings, MYSORE.

ಕಷ್ಟೈಯು ಮಳೆ

ಗ್ಲೋಬ್ } ಲಂಡನ್ ೩೦

ಕಳೆದವಾರ ಟೊಯರ್ ನಗರದಲ್ಲಿ ಮಳೆಯೊಡನೆ ಕಪ್ಪೆಯು ಮರಿಗಳು ಉದುರಿದ್ದರಿಂದ ಮತ್ತೆ ಮನೆಗಳನ್ನೆಲ್ಲಾ ಮುಚ್ಚಿದ್ದವು. ನಿವಾಸಿಗಳು ಅವುಗಳನ್ನೆಲ್ಲಾ ಗುಡಿಸಿ ಹೊರಗೆ ತಳ್ಳಿದ್ದಾರೆ ಆಗ ಅವುಗಳ ಸಂಖ್ಯೆ ಬಹಳ ಕಡಿಮೆಯಾಗಿದೆ ಕೆಲವು ಕಾಲ ನಗರದ ಅನೇಕ ಭಾಗ ಕತ್ತಲೆಯಿಂದ ಮುಚ್ಚಲ್ಪಟ್ಟಿದ್ದು ಅನಂತರ ಕಪ್ಪೆಯ ಮರಿಗಳು ಸಹಸ್ರಾರು ಸಂಖ್ಯೆಯಲ್ಲಿ ಆಗಸದಿಂದ ಉದುರಲಾರಂಭಿಸಿದುವೆಂದು ಹೇಳಲಾಗಿದೆ

ಚರ್ಚುಗಳಲ್ಲಿ ಪ್ರಾರ್ಥನೆ

ದೇಶಕ್ಕೆ ಲಭಿಸಿರುವ ಸ್ವಾತಂತ್ರ್ಯಕ್ಕಾಗಿ ಪರಮಾತ್ಮನಿಗೆ ಧನ್ಯವಾದಗಳನ್ನು ಅರ್ಪಿಸಲು ಎಲ್ಲಾ ಚರ್ಚುಗಳಲ್ಲಿಯೂ ಆಗಸ್ಟ್ ೧೫ ನೇ ತಾ|| ಕ್ರೈಸ್ತರ ಸಭೆಗಳನ್ನು ನಡೆಸಬೇಕೆಂದು ಬೆಂಗಳೂರಿನ ಬಿಷಪ್ಪರು ಸೂಚಿಸಿದ್ದಾರೆ

ಮದರಾಸಿನಲ್ಲಿ ಸ್ವಾತಂತ್ರ್ಯ ದಿನಾಚರಣೆಗೆ ೭ ಲಕ್ಷ ರೂ.

ಪ್ರಾಂತದ ಎಲ್ಲಾ ಶಾಲೆಗಳಲ್ಲಿಯೂ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚುವುದಕ್ಕಾಗಿಯೂ ಮತ್ತು ಇತರ ವಿನೋದಗಳನ್ನು ಮಾಡುವುದಕ್ಕಾಗಿಯೂ ಮದರಾಸ್ ಸರ್ಕಾರದವರು ೭ ಲಕ್ಷ ರೂ.ಗಳನ್ನು ಮಂಜೂರು ಮಾಡುತ್ತಾರೆ.

ಕೀರ್ತನೆ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಳಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಕಡಪದ ಪಂಡಿತ ಅಪ್ಪಯ್ಯದಾಸರು ನಂದ ಕುಮಾರ ಚರಿತ್ರೆಯನ್ನು ಕೀರ್ತನೆಯ ರೂಪದಲ್ಲಿ ವಿವರಿಸುವರು

ವುಡ್‌ಲ್ಯಾಂಡ್ಸ್

1-8-47 ರಿಂದ

ಕಿಕ್ಕಿರಿದ ೧೪ ನೇ ವಾರ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು (ತಮಿಳು)

ಪಾತ್ರ :- ಟಿ ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರನ್ ಮುಂತಾದವರು.

Edited printed and published by A. R. Nagaraian at the Sadhvi Press D. Subbaiah Road Mysore

ಪೂರ್ವ ಜಾವಾದಲ್ಲಿ ಇಂಡೋನೇಷ್ಯನರ ಪ್ರತಿಭಟನೆ

ಪೂರ್ವ ಜಾವಾ ಮತ್ತು ಸುಮಾತ್ರದ ಕೆಲವು ಪ್ರದೇಶಗಳಲ್ಲಿ ರಿಪಬ್ಲಿಕನ್ನರು ಧಾಳಿ ನಡೆಸುತ್ತಿರುವರೆಂದೂ ನೆದರ್‌ಲ್ಯಾಂಡಿಗೆ ಇಂಡೋನೇಷ್ಯನರು ತಾವು ಹಿಮ್ಮೆಟ್ಟುವಾಗ ಆಗ್ನೇಯ ಜಾವಾದಲ್ಲಿದ್ದ ವಸ್ತುಗಳನ್ನೂ ನಾಶಪಡಿಸಿದ್ದಾರೆ ಎಣ್ಣೆಯ ಟ್ಯಾಂಕು, ಕಾರ್ಖಾನೆ, ರಬ್ಬರ್ ತೋಟ ಮೊದಲಾದುವು ಬೆಂಕಿಯಿಂದ ಉರಿಯುತ್ತಿವೆ ಡಚ್ಚರ ವಶವಾಗಿರುವ ಮಲಾಂಗ್ ನಗರದ ಸುತ್ತಮುತ್ತಲೂ ಭಾರಿ ಕದನ ನಡೆಯುತ್ತಿದೆ.

ಪಾರ್ಲಿಮೆಂಟ್ ಭವನಕ್ಕೆ ಬಾಂಬಿನ ಭೀತಿ

ಬ್ರಿಟನ್ನಿನ ಕಾಮನ್ಸ್ ಸಭಾ ಭವನದ ಮೇಲೆ ಬಾಂಬು ಹಾಕುವುದಾಗಿ ಯಾರೋ ಟೆಲಿಫೋನ್ ಮೂಲಕ ಬೆದರಿಸಿದ್ದರೆಂದು ವರದಿಯಾಗಿದೆ ಆದರಿಂದ ಕಾವಲುಗಾರರೂ ಗುಪ್ತಚಾರರೂ ಮೊನ್ನೆ ರಾತ್ರಿಯೆಲ್ಲಾ ನಿದ್ರೆಮಾಡದೆ ಸಭಾ ಭವನವನ್ನು ಕಾದಿದ್ದರು ಲಂಡನ್‌ನಗರದ ಹಲವು ಹೋಟೆಲುಗಳು ಮತ್ತು ಸಿನಿಮಾಗಳಿಗೂ ಸಹ ಹೀಗೆಯೇ ಬೆದರಿಕೆ ಹಾಕಲಾಗಿತ್ತು

ಮೋಟಾರು ಕೆಲಸಗಾರರ ಸಂಘ

ಮೈಸೂರು ಜಿಲ್ಲೆಯ ಮೋಟಾರು ಕೆಲಸಗಾರರ ಸಭೆಯು ಬರುವ ಬುಧವಾರ ಸಂಜೆ ೮ ಗಂಟೆಗೆ ಸಯ್ಯಾಜೀರಾವ್ ರಸ್ತೆಯಲ್ಲಿರುವ ವಿಜಯಾ ಏಜೆನ್ಸೀಸ್ ಕಟ್ಟಡದಲ್ಲಿ ನಡೆಯುವುದೆಂದು ಕಾರ್ಯದರ್ಶಿಗಳಾದ ಶ್ರೀ ಟಿ ಎಸ್. ಸುಬ್ಬಣ್ಣನವರು ತಿಳಿಸುವರು

WOOD LANDS

Morning Shows From 1-8-47 for 4 days daily at 10-30 A. M.

Warner Brothers'

The Dark Towe[r]

with

Ben Lyon, Anne Crawfor[d] & David Sarrar

ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ಮೈಸೂರು.

೧೦-೮-೪೭ ನೇ ಭಾನುವಾರ ಸಾಯಂಕಾಲ ೫-೩೦ ಗಂಟೆಗೆ

ಮಾಸ್ಟರ್ ಮಹಾಲಿಂಗಂರವರ ಕೊಳಲು

ಸಂಗೀತರತ್ನ ಅಸ್ಥಾನ ವಿದ್ವಾನ್ ಟಿ. ಚೌಡಯ್ಯನವರ ಪಿಟೀಲು

ವಿದ್ವಾನ್ ಪಾಲಘಾಟ್ ಸುಬ್ಬಯ್ಯಂಗಾರವರ ಮೃದಂಗ

ಪ್ರವೇಶ

ಗಂಡಸರಿಗೆ ೨-೨-೦ ; ಹೆಂಗಸರಿಗೆ 1 ...
ಹುಡುಗರಿಗೆ 1-0-0

ಅಪೇರಾ ಟಾಕೀಸ್, ಮೈಸೂರು — 1-8-47 ರಿಂದ

ಸುಲೋಚನ

(ತಮಿಳು)

ಪಾತ್ರ — ಕೆ ಎಲ್ ವಿ ವಸಂತ, ಟಿ ಆರ್ ಸುಂದರಂ ಮುಂತಾದವರು

ಪ್ರತಿ ದಿನ ೩ ಆಟಗಳು

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಸೋಮವಾರ ೪—೮—೪೭ [ಸಂಚಿಕೆ ೧೩

ಮೈಸೂರೂ ಸೇರಿದ ಬಗ್ಗೆ ದಿವಾನರ ಹೇಳಿಕೆ

ನವದೆಹಲಿಯಲ್ಲಿ ಆಗಸ್ಟ್ ೧೫ರ ಕಾರ್ಯಕ್ರಮ

ಆಗಸ್ಟ್ ೧೪ ರ ಮಧ್ಯರಾತ್ರಿಗೆ ದೆಹಲಿಯಲ್ಲಿ ಸೇರುವ ರಾಜ್ಯಾಂಗ ಸಭೆಯಲ್ಲಿ ಸಭಾನಾಯಕರ ಚುನಾವಣೆ ನಡೆಯುವುದು. ನಂತರ ಸಭಾ ನಾಯಕರು ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಗೌರ್ನರ್ ಜನರಲ್ಲರನ್ನಾಗಿ ನೇಮಿಸಲಾಗಿದೆಯೆಂದು ಸಭೆಗೆ ತಿಳಿಸಿ ಮಂತ್ರಿ ಮಂಡಲದ ಸದಸ್ಯರ ಹೆಸರನ್ನು ಅವರಿಗೆ ತಿಳಿಸುವರು. ೧೫ ರ ಬೆಳಗ್ಗೆ ೮-೩೦ ಗಂಟೆಗೆ ಗೌರ್ನರ್ ಜನರಲ್ಲರು ಭಾರತದ ಶ್ರೇಷ್ಠ ನ್ಯಾಯಾಧಿಪತಿಗಳ ಮುಂದೆ ಪ್ರಮಾಣ ವಚನವನ್ನು ಸ್ವೀಕರಿಸಿ ಅನಂತರ ಸ್ವತಂತ್ರ ಭಾರತದ ಪ್ರಧಾನಿ ಮತ್ತು ಅವರ ಸಚಿವ ಮಂಡಲಿಯವರ ಪ್ರಮಾಣ ವಚನ ಸ್ವೀಕಾರವನ್ನು ನೆರವೇರಿಸುವರು. ಬೆಳಗ್ಗೆ ೯-೪೦ ಕ್ಕೆ [illegible] ಭವನದಿಂದ ರಾಜ್ಯಾಂಗ ಸಭಾ ಮಂದಿರಕ್ಕೆ ಮೆರವಣಿಗೆ ಹೊರಡುವುದು. [illegible] ಕ್ಕೆ ಗೌರ್ನರ್ ಜನರಲ್ ದಂಪತಿಗಳು ಸರ್ಕಾರಿ ಭವನದಿಂದ ರಾಜ ರಥದಲ್ಲಿ [illegible] ರಾಜ್ಯಾಂಗ ಸಭಾಧ್ಯಕ್ಷರು ರಾಜಮರ್ಯಾದೆ ಮತ್ತು ಗೌರವಗಳನ್ನು ಸ್ವೀಕರಿಸಿ ಅವರನ್ನು ಕರೆದುಕೊಂಡು ಹೋಗುವರು. ಗೌರ್ನರ್ ಜನರಲ್ಲರ ಮತ್ತು ರಾಜ್ಯಾಂಗ ಸಭಾಧ್ಯಕ್ಷರ ಭಾಷಣ ಮತ್ತು ಉತ್ತರಗಳ ನಂತರ ೩೧ ತೋಪುಗಳು ಹಾರುವುವು.

ಸಭಾ ಭವನದ ಮೇಲೆ ರಾಷ್ಟ್ರಧ್ವಜಾರೋಹಣವಾದ ನಂತರ ಗೌರ್ನರ್ ಜನರಲ್ ದಂಪತಿಗಳು ಸರ್ಕಾರಿ ಭವನಕ್ಕೆ ವಾಪಸ್ ತೆರಳುವರು. ಸಂಜೆ ೬ ಗಂಟೆಗೆ ಮೆಮೋರಿಯಲ್ ಆರ್ಚಿನ ಬಳಿ ರಾಷ್ಟ್ರಧ್ವಜ ಘೋಷಣ, ಗೌರ್ನರ್ ಜನರಲ್ಲರಿಗೆ ಸೈನಿಕರ ವಂದನೆಗಳು ಜರುಗುವುವು. ಮೆಮೋರಿಯಲ್ ಆರ್ಚ್, ಕಾರಂಜಿಗಳು ಮತ್ತು ಕುತುಬ್ ಮೊದಲಾದೆಡೆಗಳಲ್ಲಿ [illegible] ನಡೆಯುವುದು.

ರಾತ್ರಿ ೧೦-೩೦ ಗಂಟೆಗೆ ಸರ್ಕಾರೀ ಭವನದಲ್ಲಿ ಅಧಿಕಾರಿಗಳಿಗೆ ಸ್ವಾಗತ ಮತ್ತು ರಾತ್ರಿ ಭೋಜನಗಳು ನಡೆದು ಸಮಾರಂಭವು ಸಮಾಪ್ತಿಗೊಳ್ಳುವುದು.

ಇಂಡೋನೇಷ್ಯದಲ್ಲಿ ಯುದ್ಧದ ಮುಕ್ತಾಯ

ವಿಶ್ವರಾಷ್ಟ್ರ ಸಂಸ್ಥೆಯು ಕೂಡಲೇ ಕದನವನ್ನು ನಿಲ್ಲಿಸಬೇಕೆಂದು ಮಾಡಿರುವ ಸೂಚನೆಯನ್ನು ಮನ್ನಿಸಿ ಈ ದಿನದ ಮಧ್ಯರಾತ್ರಿಯಿಂದ ಇಂಡೋನೇಷ್ಯದ ವಿರುದ್ಧ ತಾವು ಹೂಡಿರುವ ಯುದ್ಧವನ್ನು ನಿಲ್ಲಿಸುವುದಾಗಿ ಡಚ್ ಸರ್ಕಾರವು ಪ್ರಕಟಿಸಿರುವುದೆಂದು ವರದಿಯಾಗಿದೆ.

ಸ್ವತಂತ್ರ ಸಂಸ್ಥಾನಗಳಿಗೆ ಬ್ರಿಟನ್ನಿನ ಸಹಾಯವಿಲ್ಲ

[illegible]] [ಲಂಡನ್ ೧

[illegible]ದಿಂದ ಪ್ರತ್ಯೇಕವಾಗಿದ್ದು ತಾವು ಸ್ವತಂತ್ರವೆಂದು ಹೇಳಿಕೊಳ್ಳುವ ಸಂಸ್ಥಾನಗಳಿಗೆ ಬ್ರಿಟಿಷ್ ಸರ್ಕಾರವು ಯಾವ ಸಹಾಯವನ್ನೂ ಮಾಡುವುದಿಲ್ಲವೆಂದೂ, ಅವುಗಳೊಡನೆ ನೇರವಾದ ಯಾವ ಸಂಬಂಧವನ್ನೂ ಇಟ್ಟುಕೊಳ್ಳುವುದಿಲ್ಲವೆಂದೂ [illegible] ಅಧಿಕಾರಿಗಳ [illegible] ತಿರುವಾಂಕೂರಿನ ಪ್ರತಿನಿಧಿಗಳಿಗೆ ಲಾರ್ಡ್ ಮೌಂಟ್ ಬ್ಯಾಟನ್ನರು ತಿಳಿಸಿರುವರೆಂದು ವರದಿಯಾಗಿದೆ.

ತಿರುವಾಂಕೂರು ದಿನಾಚರಣೆ

ತಿರುವಾಂಕೂರು ಸಂಸ್ಥಾನದ ಎಲ್ಲ ಭಾಗಗಳಲ್ಲಿಯೂ ಕಳೆದ ೧ ನೇ ತಾ|| ಪ್ರಜಾದಿನವನ್ನು ಆಚರಿಸಲಾಯಿತು. ಕೂಡಲೇ ಪ್ರಜಾಪ್ರತಿನಿಧಿಗಳಿಂದ ಕೂಡಿದ ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸಬೇಕೆಂದೂ, ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರನ್ನು ದಿವಾನ್ ಪದವಿಯಿಂದ ವಜಾ ಮಾಡಬೇಕೆಂದೂ ಅಲ್ಲಿನ ಸರ್ಕಾರದವರನ್ನು ಒತ್ತಾಯ ಪಡಿಸುವ ನಿರ್ಣಯಗಳು ಅಂಗೀಕೃತವಾದುವು.

ಚಂದ್ರನಗರಕ್ಕೆ ಒಳಾಡಳಿತ ಸ್ವಾತಂತ್ರ್ಯ

ಗ್ಲೋಬ್] [ಚಂದ್ರನಗರ ೧

ಫ್ರೆಂಚ್ ಆಕ್ರಮಿತ ಪ್ರದೇಶವಾದ ಚಂದ್ರನಗರಕ್ಕೆ ಪೂರ್ಣ ಒಳಾಡಳಿತ ಸ್ವಾತಂತ್ರ್ಯವನ್ನು ಕೊಟ್ಟಿರುವುದಾಗಿ ಫ್ರಾನ್ಸಿನ ವಸಾಹತುಗಳ ಸಚಿವರಾದ ಮಾರಿಟ್ಸ್ ರವರು ತಿಳಿಸಿರುವರು. ಚಂದ್ರನಗರವು ಫ್ರೆಂಚರ ಆಳ್ವಿಕೆಯಿಂದ ಬೇರ್ಪಡೆ ಹೊಂದಿ ಭಾರತ ಸಂಘದೊಡನೆ ಸೇರ್ಪಡಬೇಕೆಂದು ಬಂದಿದ್ದ ವಿಷಯವನ್ನು ಸ್ವೀಕರಿಸಲಾಗಿದೆಯೆಂದೂ, ಫ್ರಾನ್ಸಿನ ಮಂತ್ರಿಮಂಡಲವು ಭಾರತದಲ್ಲಿರುವ ಎಲ್ಲ ಫ್ರೆಂಚ್ ವಸತಿಗಳ ಬಗ್ಗೆಯೂ ಸಮಾಲೋಚನೆ ನಡೆಸುತ್ತಿರುವುದಾಗಿಯೂ, ಆಗಸ್ಟ್ ೧೫ ರ ವೇಳೆಗೆ ಸರಿಯಾದ ಪ್ರಕಟಣೆಯೊಂದು ಹೊರಡುವಂತೆ ಪ್ರಜಾಪ್ರತಿನಿಧಿಸಭೆಯ ಸದಸ್ಯರು ಫ್ರಾನ್ಸ್ ಸರ್ಕಾರದೊಡನೆ ಸಂಧಾನ ನಡೆಸುತ್ತಿರುವುದಾಗಿಯೂ ಫ್ರೆಂಚ್ ಭಾರತದ ಗೌರ್ನರರಾದ ಎ|| ಎಂ. ಬ್ಯಾರನ್ನರು ತಿಳಿಸಿರುವರು.

ಷಣ್ಮುಗಂ ಚೆಟ್ಟಿಯವರು ಆರ್ಥಿಕ ಸಚಿವರು

ಸರ್. ಕೆ. ಪಿ. ಷಣ್ಮುಗಂ ಚೆಟ್ಟಿಯವರು ಸ್ವತಂತ್ರ ಭಾರತದ ಆರ್ಥಿಕ ಖಾತೆಯ ಸಚಿವರಾಗಿರಲು ಒಪ್ಪಿಕೊಂಡಿರುವರೆಂದು ವರದಿಯಾಗಿದೆ. ಶ್ರೀ. ಚೆಟ್ಟಿಯವರು ಭಾರತ ಸ್ವಾತಂತ್ರ್ಯೋತ್ಸವದ ವೇಳೆಗೆ ತಮ್ಮ ಸರ್ ಬಿರುದನ್ನು ತ್ಯಜಿಸಿ, ಆ ಸಮಾರಂಭದಲ್ಲಿ ಭಾಗವಹಿಸಲು ದೆಹಲಿಗೆ ತೆರಳುವರೆಂದು ಹೇಳಲಾಗಿದೆ.

ಆಗಸ್ಟ್ ೧೪ಕ್ಕೆ ಗೌರ್ನರುಗಳ ಅಧಿಕಾರ ಸ್ವೀಕಾರ

ಭಾರತ ಯೂನಿಯನ್ನಿನ ವಿವಿಧ ಪ್ರಾಂತಗಳಿಗೆ ಹೊಸದಾಗಿ ನೇಮಿಸಲಾಗುವ ಗೌರ್ನರುಗಳು ಆಗಸ್ಟ್ ೧೪ರ ದಿನ ತಮ್ಮ ಅಧಿಕಾರಗಳನ್ನು ಸ್ವೀಕರಿಸುವರೆಂದು ವರದಿಯಾಗಿದೆ.

ಹಿಂದೂಸ್ಥಾನ-ಪಾಕಿಸ್ಥಾನಗಳ ಗೌರ್ನರುಗಳು

ಹಿಂದೂಸ್ಥಾನಕ್ಕೆ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ನರನ್ನೂ, ಪಾಕಿಸ್ಥಾನಕ್ಕೆ ಮಿ|| ಎಂ. ಎ. ಜಿನ್ನಾರವರನ್ನೂ ಗೌರ್ನರ್ ಜನರಲ್ಲರನ್ನಾಗಿ ಬ್ರಿ|| ದೊರೆಗಳು ನೇಮಿಸಿರುವರೆಂದು ವರದಿಯಾಗಿದೆ. ಶ್ರೀ. ಸಿ. ರಾಜಗೋಪಾಲಾಚಾರಿಯವರು ಪಶ್ಚಿಮ ಬಂಗಾಳ, ಸರ್ ಚಂದೂಲಾಲ್ ತ್ರಿವೇದಿ ಪೂರ್ವ ಪಂಜಾಬ್, ಶ್ರೀ ಮಂಗಲದಾಸ ಪಕ್ವಾಸಾ ಮಧ್ಯಪ್ರಾಂತ, [illegible] ಸಂಯುಕ್ತಪ್ರಾಂತ, ಶ್ರೀ ಜೈರಾಂದಾಸ್ ದೌಲತ್‌ರಾಂ ಬಿಹಾರ್, ಶ್ರೀ ಕೈಲಾಸನಾಥ ಕಟ್ಜು ಒರಿಸ್ಸಾ, ಸರ್ ಫ್ರಾನ್ಸಿಸ್ ಮೂಡಿ ಪಶ್ಚಿಮ ಪಂಜಾಬ್, ಮಿ|| ಗುಲಾಂ ಹುಸೇನ್ ಹಿದಾಯತುಲ್ಲಾ ಸಿಂಧು, ಸರ್ ಜಾನ್ ಕನ್ನಿಂಗ್‌ಹಾಂ ವಾಯುವ್ಯಪ್ರಾಂತ ಈ ರೀತಿ ಗೌರ್ನರುಗಳಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದುಬಂದಿದೆ. ಸರ್ ಆರ್ಕಿಬಾಲ್ಡ್ ನೈ ರವರು ಮದರಾಸಿನಲ್ಲಿಯೂ, ಸರ್ ಜಾನ್ ಕಾಲ್‌ವಿಲ್ ಬೊಂಬಾಯಿಯಲ್ಲಿಯೂ, ಸರ್ ಅಕ್ಬರ್ ಹೈದರಿ ಅಸ್ಸಾಮಿನಲ್ಲಿಯೂ ಗೌರ್ನರುಗಳಾಗಿ ಮುಂದುವರಿಯುವರು.

ಆಗಸ್ಟ್ ೧೭ರಿಂದ ಬ್ರಿಟಿಷ್ ಸೇನೆಗಳ ನಿರ್ಗಮನ

ಬ್ರಿಟಿಷ್ ಸೇನೆಯ ಮೊದಲನೆಯ ತಂಡವು ಆಗಸ್ಟ್ ೧೭ರ ದಿನ ಬೊಂಬಾಯಿಯಿಂದ ಸ್ವದೇಶಕ್ಕೆ ಹಿಂದಿರುಗುವುದೆಂದು ವರದಿಯಾಗಿದೆ. ಭಾರತ ಮತ್ತು ಪಾಕಿಸ್ಥಾನ್ ಡೊಮಿನಿಯನ್ನುಗಳಲ್ಲಿರುವ ಪಡೆಗಳು ನಿರ್ಗಮಿಸುವ ವರೆಗೆ ಮೇ|| ಜನರಲ್ ಎಲ್. ಜಿ. [illegible]ರ ಅಧೀನದಲ್ಲಿರುವುವೆಂದು ಹೇಳಲಾಗಿದೆ.

ಭಾರತಕ್ಕೆ ಗಡಿನಾಡಿನ ಬ್ಯಾಂಕುಗಳು

ಗ್ಲೋಬ್] [ಪೇಷಾವರ್ ೧

ಸುಮಾರು ಒಂದೂವರೆ ಕೋಟಿ ರೂ. ಬಂಡವಾಳವಿರುವ ಗಡಿನಾಡಿನ ಎರಡು ದೊಡ್ಡ ಬ್ಯಾಂಕುಗಳು ತಮ್ಮ ಕಛೇರಿಯನ್ನು ಪಾಕಿಸ್ಥಾನ ಗಡಿಯಿಂದ ಭಾರತದ ಗಡಿಗೆ ವರ್ಗಾಯಿಸಲು ನಿರ್ಧರಿಸಿರುತ್ತವೆ. ಅವುಗಳಲ್ಲಿ ಒಂದು ದೆಹಲಿಯನ್ನೂ ಮತ್ತೊಂದು ಡೆಹರಾಡೂನನ್ನೂ ತಮ್ಮ ಕೇಂದ್ರ ಕಛೇರಿಯಾಗಿ ಮಾಡಿಕೊಳ್ಳುತ್ತವೆ.

ಭಾರತ ಡೊಮಿನಿಯನ್ನಿಗೆ ಮೈಸೂರು ಸೇರಿತು

ದಿವಾನರ ಹೇಳಿಕೆ

ಸ್ವಂ.ವ.ಫೋ] [ಬೆಂಗಳೂರು ೪

ದೆಹಲಿಯಿಂದ ಹಿಂದಿರುಗಿದ ಮೇಲೆ ದಿವಾನರು ಈ ಕೆಳಗೆ ಕಂಡಂತೆ ತಿಳಿಸಿರುವರೆಂದು ವರದಿಯಾಗಿದೆ :—

ಭಾರತ ಡೊಮಿನಿಯನ್ನನ್ನು ಸೇರಲು ತಯಾರಿಸಲಾಗಿದ್ದ ಪತ್ರಗಳನ್ನು ಅಂಗೀಕರಿಸಿ ಮೈಸೂರು ಅದರಲ್ಲಿ ಸೇರಲು ಸಮ್ಮತಿಸಿರುತ್ತದೆ. ಸಂಸ್ಥಾನದಲ್ಲಿ ರಕ್ಷಣೆ, ಮಾರ್ಗಾನುಕೂಲ ಮತ್ತು ವಿದೇಶಾಂಗ ವ್ಯವಹಾರಗಳ ಮೇಲ್ವಿಚಾರಣೆಯನ್ನು ಡೊಮಿನಿಯನ್ನಿಗೆ ಒಪ್ಪಿಸಲಾಗುವುದು. ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನವು ಈಗ ಭಾಗವಹಿಸುತ್ತಿರುವುದೇನೋ ನಿಜ, ಆದರೆ ಭಾರತ ಯೂನಿಯನ್ನಿನ ರಾಜ್ಯಾಂಗವನ್ನು ಸಭೆಯು ಇನ್ನೂ ರಚಿಸಬೇಕಾಗಿರುವುದರಿಂದ ಯೂನಿಯನ್ನಿನಲ್ಲಿಯೂ ಮೈಸೂರು ಸೇರುವ ವಿಚಾರವೇ ಬೇರೆಯಾಗಿರುತ್ತದೆ. ಭಾರತ ಡೊಮಿನಿಯನ್ನಿನಲ್ಲಿ ಸೇರಿದ ಮಾತ್ರಕ್ಕೆ ಕಟ್ಟಕಡೆಯ ಯೂನಿಯನ್ನಿನಲ್ಲಿಯೂ ಸಂಸ್ಥಾನವು ಸೇರಬೇಕೆಂಬ ಅರ್ಥವಲ್ಲ.

ರಾಜ್ಯಾಂಗ ಸುಧಾರಣೆಯ ವಿಷಯದಲ್ಲಿ [illegible] ದೊರೆಗಳಿಗೆ ನನ್ನ ಅಭಿಪ್ರಾಯವನ್ನು ಒಪ್ಪಿಸುತ್ತೇನೆ. ಹೆಚ್ಚು [illegible]ವಾದ ಅಖಿಲ ಭಾರತದ ಪ್ರಶ್ನೆಯು ಇಲ್ಲದಿದ್ದರೆ ಈಗಾಗಲೇ ಅದನ್ನು ಒಪ್ಪಿಸುತ್ತಿದ್ದೆ. ಅತಿ ಶೀಘ್ರದಲ್ಲಿಯೇ ಮೈಸೂರಿನಲ್ಲಿ ಹೊಸ ರಾಜ್ಯಾಂಗವು ಜಾರಿಗೆ ಬರುವುದೆಂದು ನಿರೀಕ್ಷಿಸುತ್ತೇನೆ. ಆದರೆ ನಿರ್ದಿಷ್ಟವಾದ ದಿನವನ್ನು ಹೇಳಲು ಸಾಧ್ಯವಿಲ್ಲ.

ದಿವಾನರು ಮೈಸೂರಿಗೆ

ಈ ಬೆಳಗ್ಗೆ ದಿವಾನರು ಮೈಸೂರಿಗೆ ಹೊರಟರು. ನಾಳೆ ವಾಪಸು ಬರುವರು.

ಎಂ. ಎಸ್. ಎಂ. ರೈಲ್ವೆಗೆ ಸೇರಿದ ಪ್ರದೇಶಗಳನ್ನೂ ಜಾಲಹಳ್ಳಿ ಆಸ್ಪತ್ರೆಯ ನಗರದ ಪ್ರದೇಶವನ್ನೂ ಸಂಸ್ಥಾನಕ್ಕೆ ಒಪ್ಪಿಸಿರುವುದಾಗಿ ವಿಶೇಷ ಗೆಜೆಟ್ ಪ್ರಕಟಣೆ ಹೊರಟಿದೆ.

● [illegible]ಪೇಟೆ ತಾಲ್ಲೂಕಿನಲ್ಲಿ ಶಿರಸ್ತೇದಾರರೂ, ರೆವಿನ್ಯೂ ಮತ್ತು ಆಹಾರದ ಅಧಿಕಾರಿಗಳೂ ಗ್ರಾಮಸ್ಥರುಗಳಿಗೆ ಬಹಳ ತೊಂದರೆ ಕೊಡುವುದಲ್ಲದೆ ಲಂಚ [illegible] ತೆಗೆದುಕೊಳ್ಳುತ್ತಿರುವುದಾಗಿ ದೂರುಗಳು ಬಂದ ಮೇಲೆ ರೆವಿನ್ಯೂ ಮಂತ್ರಿಗಳು [illegible] ಪರಿಶೀಲನೆ ನಡೆಸಿ ಆಪಾದನೆಗಳು ಬಹುಮಟ್ಟಿಗೆ ನಿಜವೆಂದು ಕಂಡು ಹಿಡಿದಿರುವರು. ಬೆಂಗಳೂರು-ಮದ್ರಾಸ್ ರೈಲಿನಲ್ಲಿ ಟಿಕೆಟ್ಟಿಲ್ಲದ ಅನೇಕ ಪ್ರಯಾಣಿಕರಿಗೆ ಒಂದು ಸ್ಟೇಷನ್ನಿನಿಂದ ಮಾತ್ರ ಟಿಕೆಟ್ಟನ್ನು ಕೊಟ್ಟು [illegible] ಹೋಗ [illegible]ವನ್ನು [illegible] ಮಾಡಿರುವರು.

ಈ ಪಿ ಫಕೀರರು ವಜೀರಿಸ್ಥಾನದ ದೊರೆ?

ಇಪಿ ಫಕೀರರು ಗಡಿನಾಡ ಪ್ರಾಂತದ ಒಳಭಾಗದ ವಜೀರಿಸ್ಥಾನಕ್ಕೆ ತಾವು ಅಧಿಕಾರಿಗಳೆಂದು ಘೋಷಿಸುವ ಸನ್ನಾಹದಲ್ಲಿರುವರೆಂದು ಒಂದು ವರದಿಯು ತಿಳಿಸುತ್ತದೆ. ಅವರ ಬಳಿ ೬೦ ಸಹಸ್ರ ಶಸ್ತ್ರಸಜ್ಜಿತ ಸೇನಾಬಲವಿದೆ. ಈ ಸೇನಾಸಹಾಯದಿಂದ ಗಡಿನಾಡಿನ ಮೇಲೆ ಪಾಕಿಸ್ಥಾನವು ಜಾರಿಮಾಡುವ ನಿರ್ಬಂಧಗಳನ್ನು ತಡೆಯಲಾಗುವುದು.

ಸಾಧ್ವಿ

ತಾ|| ೪-೮-೪೭ ಸೋಮವಾರ

ಇಂಡೋನೇಷ್ಯದ ನೈತಿಕ ವಿಜಯ

ಭಾರತವು ಇಂಡೋನೇಷ್ಯಕ್ಕೆ ನೈತಿಕ ಬೆಂಬಲವನ್ನು ಮಾತ್ರ ಕೊಡಬಲ್ಲುದೆಂದು ಮಹಾತ್ಮಾ ಗಾಂಧಿಯವರು ಅಲ್ಲಿನ ಮಾಜಿ ಪ್ರಧಾನಿ ಡಾ|| ಸುಲ್ತಾನ್ ಷಾರಿಯಾರ್‌ರವರಿಗೆ ತಿಳಿಸಿದ್ದರು. ಆ ನೈತಿಕ ಬಲದ ಪ್ರಭಾವವು ಎಷ್ಟು ಮಟ್ಟಿಗಿದೆಯೆಂಬುದು ಇಂದು ಸಕಲರಿಗೂ ವೇದ್ಯವಾಗಿರುತ್ತದೆ. ಡಚ್ಚರು ಆ ದೇಶದಲ್ಲಿ ನಡೆಸುತ್ತಿದ್ದ ದುರಾಕ್ರಮಣ ನೀತಿಯು ತಾತ್ಕಾಲಿಕವಾಗಿಯಾದರೂ ನಿಲ್ಲುವಂತಾಗಿದೆ. ಇತರ ರಾಷ್ಟ್ರಗಳ ಸಂಧಾನದ ಮೂಲಕ ಉಭಯ ರಾಷ್ಟ್ರಗಳೂ ತಮ್ಮ ಹಕ್ಕು, ಬಾಧ್ಯತೆಗಳನ್ನು ಊರ್ಜಿತಗೊಳಿಸಿಕೊಳ್ಳಬೇಕೆಂದು ಇತ್ಯರ್ಥವಾಗಿರುತ್ತವೆ.

ಈ ನಿರ್ಧಾರದಲ್ಲಿ ಭರತಖಂಡವು ವಹಿಸಿರುವ ಪಾತ್ರವು ಅತ್ಯಂತ ಪ್ರಾಮುಖ್ಯವಾದುದು. ಯಾವ ತಿಳುವಳಿಕೆಯನ್ನೂ ಕೊಡದೆ, ಒಪ್ಪಂದಗಳನ್ನೆಲ್ಲಾ ಮುರಿದು, ನಿಶ್ಶಸ್ತ್ರರೂ ಮತ್ತು ಯುದ್ಧ ಸಿದ್ಧರಲ್ಲದವರೂ ಆದ ತಮ್ಮ ಮೇಲೆ ಡಚ್ಚರು ವಂಚನೆಯಿಂದ ಆಕ್ರಮಣವನ್ನು ಆರಂಭಿಸಿದ ನಂತರ ಇಂಡೋನೇಷ್ಯದ ನಾಯಕರು ಮೊದಲು ಭಾರತದ ನೆರವನ್ನೇ ಕೋರಿದರು. ಈ ಸನ್ನಿವೇಶದಲ್ಲಿ ಇಡೀ ಏಷ್ಯಾಖಂಡದ ಗೌರವವು ಅಂತರ್ಗತವಾಗಿರುವುದರಿಂದ ತಾವು ಇಂಡೋನೇಷ್ಯದ ವಾದವನ್ನು ಎತ್ತಿ ಹಿಡಿಯುವುದಾಗಿ ಪಂಡಿತ ನೆಹರೂರವರು ಆಶ್ವಾಸನವಿತ್ತರು. ಮೊನ್ನೆ ತಾನೆ ದೆಹಲಿಯಲ್ಲಿ ನಡೆದ ಏಷ್ಯಾ ಜನಾಂಗಗಳ ಸಮ್ಮೇಳನದ ನಂತರ ಅದರ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ನೆಹರೂರವರೇ ಈ ಕಾರ್ಯದ ಸೂತ್ರಧಾರಿಗಳಾಗುವುದು ಅತ್ಯಂತ ಉಚಿತವೂ ಆಗಿದ್ದಿತು.

ಭಾರತದ ಶ್ರೀಘ್ರವಾದ ಪ್ರಯತ್ನದಿಂದ ಈ ಪ್ರಶ್ನೆಯು ವಿಶ್ವಜನಾಂಗ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಬಂದು ಇಂಡೋನೇಷ್ಯದ ಪರವಾಗಿ ತೀರ್ಮಾನವಾಗಿರುವುದು ಅಭಿನಂದನೀಯವಾದ ವಿಷಯವೇ. ಇದು ಪಾಶವೀ ಬಲದ ಮೇಲೆ ನೈತಿಕ ಬಲವು ವಿಜಯವನ್ನು ಹೊಂದಿ ವಿಶ್ವಸಂಸ್ಥೆಯ ಅಸ್ತಿತ್ವಕ್ಕೆ ಸಾರ್ಥಕ್ಯವನ್ನುಂಟುಮಾಡುತ್ತದೆ. ಇದರಿಂದ ಕದನವು ನಿಲ್ಲಿಸಲ್ಪಡುತ್ತದೆ. ಹೀಗೆ ಆಸವು ಸಂಗ್ರಾಮವೊಂದು ಕೇವಲ ನ್ಯಾಯ ವಿಚಾರಣೆಯ ಮೂಲಕ ಹತೋಟಿಗೆ ತರಲ್ಪಟ್ಟಿರುವುದು ಇತಿಹಾಸದಲ್ಲಿಯೇ ಅಪೂರ್ವವಾದ ಪ್ರಕರಣ.

ದಕ್ಷಿಣ ಆಫ್ರಿಕದಲ್ಲಿಯೂ ಭಾರತೀಯರ ಮೇಲೆ ನಡೆಯುತ್ತಿರುವ ವರ್ಣದ್ವೇಷದ ಅಸಹನೀಯ ಪರಿಣಾಮವಾಗಿಯೂ ವಿಶ್ವಸಂಸ್ಥೆಯು ಹಿಂದೊಮ್ಮೆ ತೀರ್ಮಾನ ಕೊಟ್ಟಿರುತ್ತದೆ. ಆದರೆ ಅದನ್ನು ಕಾರ್ಯರೂಪಕ್ಕೆ ತಾರದೆ ಆ ನಾಡಿನ ಸಂಸ್ಥೆಯು ವಿಶ್ವಸಂಸ್ಥೆಯ ಘನತೆಗೆ ಕಳಂಕವನ್ನುಂಟುಮಾಡಿರುತ್ತದೆ. ಅದು ಎಷ್ಟೆಷ್ಟೋ ನಿರಪರಾಧಿ ಜನರ ಮೇಲೆ ದೌರ್ಜನ್ಯ ಮಾಡಲು ಬಿಟ್ಟಿರಲು, ಇತರ ಶಕ್ತಿ ಮಾತ್ರ ಬಲಗಳು ನಡೆಸುವ ಅನ್ಯಾಯಗಳಿಗೆ ಅಂತ್ಯ

ಹಿಂದುಗಳಿಗೇ ಪ್ರತ್ಯೇಕ ವಿಶ್ವವಿದ್ಯಾಲಯ

ಸಿಂಧು ಪ್ರಾಂತ್ಯದ ಹಿಂದುಗಳು ತಮ್ಮದೇ ಆದ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಳ್ಳಬೇಕೆಂದೂ ಅವರು ಒಗ್ಗಟ್ಟಿನಿಂದಿದ್ದು ತಮ್ಮ ಹಕ್ಕು, ಬಾಧ್ಯತೆಗಳನ್ನು ಶಾಂತ ರೀತಿಯಿಂದ ರಕ್ಷಿಸಿಕೊಳ್ಳಬೇಕೆಂದೂ, ಅಲ್ಲಿನ ಬಹು ಸಂಖ್ಯಾತರು ಅಲ್ಪ ಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸಿದರೆ ಅದನ್ನು ತಾವು ಪ್ರತಿಭಟಿಸಬೇಕಾಗುವುದೆಂದೂ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಕರಾಚಿಯ ಸಭೆಯೊಂದರಲ್ಲಿ ತಿಳಿಸಿರುವರು.

ನ್ಯೂಯಾರ್ಕಿಗೆ ಡಾ|| ಷರಿಯಾರ್

ಭಾರತಕ್ಕೆ ಆಗಮಿಸಿದ್ದ ಇಂಡೋನೇಷ್ಯ ರಿಪಬ್ಲಿಕ್ಕಿನ ಮಾಜಿ ಪ್ರಧಾನಿ ಡಾ|| ಷರಿಯಾರರು ವಿಶ್ವರಾಷ್ಟ್ರ ಸಂಸ್ಥೆಯಲ್ಲಿ ಭಾಗವಹಿಸಲು ನಿನ್ನೆ ದಿನ ಬೊಂಬಾಯಿ ಮಾರ್ಗವಾಗಿ ವಿಮಾನದಲ್ಲಿ ನ್ಯೂಯಾರ್ಕಿಗೆ ತೆರಳಿದರೆಂದು ವರದಿಯಾಗಿದೆ

ಅವಳಿ ಮಕ್ಕಳ ಬೇರ್ಪಡೆ

ಹುಟ್ಟುವಾಗಲೇ ಎದೆಯ ಬಳಿ ಅಂಟಿಕೊಂಡು ಜನಿಸಿದ ನಯಾವಿಯಾರ ಎರಡು ಮಕ್ಕಳನ್ನು ಲಂಡನ್ನಿನ ಆಸ್ಪತ್ರೆಯೊಂದರಲ್ಲಿ ಎಕ್ಸ್‌ರೇ ಮೂಲಕ ಪರೀಕ್ಷಿಸಿ ಆಪರೇಷನ್ ಮಾಡಿ ಅವುಗಳನ್ನು ಬೇರ್ಪಡಿಸಿರುವರು

ಕಾಲವು ಪ್ರಾಪ್ತವಾಗಿರುತ್ತದೆ. ಇಡೀ ವಿಶ್ವದ ನೈತಿಕ ಬಲವು ಜಾಗೃತಗೊಂಡು ಇಂತಹ ಅಕೃತ್ಯಗಳನ್ನು ಸದೆ ಬಡಿಯಲು ಟೊಂಕ ಕಟ್ಟಿನಿಂತಿರುತ್ತದೆ. ಇಂಡೋನೇಷ್ಯದಲ್ಲಿ ಡಚ್ಚರ ಪುಂಡಾಟಿಕೆಗೆ ಭದ್ರತಾ ಸಂಸ್ಥೆಯು ಈಗ ಕೊಟ್ಟಿರುವ ಉತ್ತರವೇ ಇದಕ್ಕೆ ಪೂರ್ವ ಪೀಠಿಕೆಯಾಗಿರುತ್ತದೆ. ಇದರಿಂದ ಇಂಡೋನೇಷ್ಯದ ಸಂಗ್ರಾಮವು ಸಂಪೂರ್ಣವಾಗಿ ನಿಂತು ಅಲ್ಲಿ ಕದನವಾಡುತ್ತಿರುವ ಜನಾಂಗಗಳು ಮುಂಚೆ ಇದ್ದ ತಮ್ಮ ತಮ್ಮ ಎಲ್ಲ ಕಟ್ಟಿನೊಳಗೆ ಹೋಗಿ ಮತ್ತೊಮ್ಮೆ ಘರ್ಷಣೆಗೆ ಅವಕಾಶವಾಗದಂತೆ ಸರಿಯಾದ ವ್ಯವಸ್ಥೆಯು ಆಗಲೆಂದು ಹಾರೈಸೋಣ.

ಹೊಸ ಪಾಕಿಸ್ತಾನ ಧ್ವಜ

ಈಗಿರುವ ಮುಸ್ಲಿಂ ಲೀಗ್ ಧ್ವಜದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಲೀಗ್ ನಾಯಕರು ತೀರ್ಮಾನಿಸಿರುವರೆಂದು ವರದಿಯಾಗಿದೆ. ಅಲ್ಪ ಸಂಖ್ಯಾತರನ್ನು ಸೂಚಿಸುವ ಸಲುವಾಗಿ ಈಗಿರುವ ಧ್ವಜದ ಕೆಳಭಾಗದಲ್ಲೇ ಬಿಳಿಯ ಬಣ್ಣದ ಚುಕ್ಕಿಗಳನ್ನು ಹಾಕಲಾಗುವುದು.

ವಿಮಾನ ದಳದ ವಿಭಜನೆ

ಈಗಿರುವ ಭಾರತದ ವಿಮಾನ ಪಡೆಯಲ್ಲಿ ೮ ದಳಗಳನ್ನು ಭಾರತಕ್ಕೂ, ೨ ದಳಗಳನ್ನು ಪಾಕಿಸ್ತಾನಕ್ಕೂ ಹಂಚಲಾಗಿದೆ ಎಂದು ವರದಿಯಾಗಿದೆ. ಪಾಕಿಸ್ತಾನದಲ್ಲಿ ಒಂದು ಹೊಸ ವಿಮಾನ ದಳದ ರಚನೆಯಾಗುವುದೆಂದೂ ಹೇಳಲಾಗಿದೆ

ಹೈದರಾಬಾದಿನಲ್ಲಿ ಹೆಚ್ಚಿನ ವಿಮಾನ ನಿಲ್ದಾಣಗಳು

ಗ್ಲೋಬ್] [ಹೈದರಾಬಾದು ೧

ಬಿದರೆ, ವಾರಂಗಲ್, ರಾಯಚೂರ್, ಆದಿಲಾಬಾದ್-ಮೊದಲಾದ ಪ್ರದೇಶಗಳಲ್ಲಿದ್ದ ವಿಮಾನ ನಿಲ್ದಾಣಗಳನ್ನು ಹೈದರಾಬಾದ್ ಸರ್ಕಾರವು ರಾಯಲ್ ವಿಮಾನ ದಳದವರಿಂದ ೯೦ ಲಕ್ಷ ರೂ. ಗಳಿಗೆ ಕೊಂಡುಕೊಂಡಿದೆ. ಪರಿಹಾರ ಕೊಡುವ ವಿಷಯವು ಭಾರತ ಸರ್ಕಾರ ಮತ್ತು ಹೈದರಾಬಾದ್ ಸರ್ಕಾರಗಳಲ್ಲಿ ಸಂಧಾನದ ಮೂಲಕ ನಿರ್ಧಾರವಾಗಬೇಕಾಗಿದೆ. ಹೈದರಾಬಾದಿನ ವಾಯುಸಂಚಾರದ ಬಡಾವಣೆಯ ಯೋಜನೆಗೆ ಬಿದರೆ ನಿಲ್ದಾಣದ ಹೊರತು ಉಳಿದುವು ಹೆಚ್ಚು ಸಹಕಾರಿಯಾಗುವುದಿಲ್ಲವಾದುದರಿಂದ ಹೈದರಾಬಾದು ೧೫ ಲಕ್ಷ ರೂ ಗಳಿಗಿಂತ ಹೆಚ್ಚು ಪ್ರತಿಫಲ ಕೊಡಲಾರದೆಂದು ಭಾವಿಸಲಾಗಿದೆ

ಪಾಕಿಸ್ತಾನ ರಾಜಧಾನಿಗೆ ವಿಮಾನದ ಸಂಬಂಧ

ಪಾಕಿಸ್ತಾನ ಡೊಮಿನಿಯನ್ನಿನ ರಾಜಧಾನಿಯಾದ ಕರಾಚಿಗೂ, ಕ್ವೆಟ್ಟಾ, ಲಾಹೋರ್, ಪೆಷಾವರ್, ಢಾಕಾ-ಮೊದಲಾದ ಕಡೆಗಳಿಗೂ ವಾಯು ಮಾರ್ಗದಿಂದ ಸಂಬಂಧವನ್ನು ಕಲ್ಪಿಸುವ ಏರ್ಪಾಡುಗಳು ಶೀಘ್ರದಿಂದ ಸಾಗುತ್ತಿವೆ

ಆಗಸ್ಟ್ ೧೫ ಫ್ರೆಂಚ್ ಭಾ... ಕ್ಕೂ ಸಾರ್ವಜನಿಕ ರಜಾ

ಆಗಸ್ಟ್ ೧೫ ನೇ ತಾರೀಖು ಭಾ... ಸ್ವತಂತ್ರವಾಗುವುದರಿಂದ ಅಂದು ಫ್ರೆ... ಆಕ್ರಮಿತ ಭಾರತದ ಪ್ರದೇಶಗಳಿಗೆ ... ರ್ವಜನಿಕ ರಜಾ ದಿನವೆಂದು ಫ್ರೆಂ... ರ್ಕಾರವು ಪ್ರಕಟಿಸಿರುವುದೆಂದು ವರ... ಗಿದೆ

ನಿಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೆ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ರಾಜಕಮಲ್

ತಾ|| 1-8-47 ರಿಂದ

ಅಮೋಘ ೩ ನೇ ವಾರ

★ ಕಿಸ್ಮತ್ ★

—: ತಾರಾಗಣ :—

ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಷಾನವಾಜ್ ಮುಂತಾದವರು

8-8-47 ರಿಂದ

ಮಹಾನಂದ

(ಕನ್ನಡದಲ್ಲಿ)

ಅಪೇರಾ ಟಾಕೀಸ್, ಮೈಸೂರು

1-8-47 ರಿಂದ

ಸುಲೋಚನ

(ತಮಿಳು)

ವುಡ್‌ಲ್ಯಾಂಡ್ಸ್

1-8-47 ರಿಂದ

ತಿಕ್ಕರಿದ ೧೪ ನೇ ವಾ...

ಪ್ರತಿ ದಿನ ೨ ಆಟಗ...

(ಶನಿವಾರ ಮತ್ತು ಭಾನುವಾರ ಮ... ಉಂಟು)

ನಾವು ಇಬ್ಬರ...

ಬ...

: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವ...

ಹೊಸ ನಾಟಕ ಶ್ರೀ ಹೊಸ ನಾಟಕ

ಬಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ, ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ — ಈ ದಿನ ರಾತ್ರಿ ೧೦-೩೦ ಗಂಟೆಗೆ

ಸ್ವತಂತ್ರ ಭಾರತದ ಮಂಗಲ ದೃಶ್ಯಗಳಿಂದ ಕೂಡಿದ ಸಾಮಾಜಿಕ ನಾಟಕ

★ ಬಡತನದ ಭೂತ ★

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಭಾನುವಾರ ಮ್ಯಾಟಿನಿ ಉಂಟು : ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್

FOR SALE

Model House No. 1 Krishnarajavana with O... House, Garage. Enqui...

R GUNDU RAO,
Mysore Bank Building,
MYSORE.

Edited printed and published by A. R. Nagarajan at the Sadhvi Press D Subbaiah Road Mysore

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೫—೮—೪೭ [ಸಂಚಿಕೆ ೧೪೮

— ಗುಜರಾತಿನಲ್ಲಿ — ಅನ್ನಕ್ಷಾಮದ ಪ್ರದರ್ಶನ

ಎಂ. ಪಿ. ಸಿ. ಕಾರ್ಯಕ್ರಮ

ಮೈಸೂರು ೫

ಜಿಲ್ಲಾ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನವು ಇದೇ ೯ ನೇ ತಾ|| ರಾ ಣಿಯಲ್ಲಿ ಸೇರುವುದು. ಅಂದು ಬೆಳಿಗ್ಗೆ ೧೦ ಗಂಟೆಗೆ ಧ್ವಜ ವಂದನೆಯೂ ಮಧ್ಯಾಹ್ನ ೩ ಗಂಟೆಗೆ ಸಭೆಯೂ ನಡೆಯುವು. ಅಧಿವೇಶನಕ್ಕೆ ಬರುವ ಪ್ರತಿನಿಧಿಗಳಿಗೆ ಟೌನ್‌ಹಾಲಿನ ಎದುರಿಗಿರುವ ಶ್ರೀ ...೦ ಪಟ್ಟಣಂ ಸುಬ್ಬರಾಯಶೆಟ್ಟರ ಛತ್ರದಲ್ಲಿ ವಸತಿ ಸೌಕರ್ಯಗಳನ್ನು ಏರ್ಪಡಿಸಲಾಗಿದೆ. ಸಮ್ಮೇಳನಕ್ಕೆ ಬರುವ ಸದಸ್ಯರಿಗೆ ಉಚಿತ ಸ್ವಾಗತ ವ್ಯವಸ್ಥೆಗಳನ್ನು ಮಾಡಲಾಗುವುದರಿಂದ ಮಹಾಜನರು ೧೦ ಸಹಾಯ ಮಾಡುವುದರ ಮೂಲಕ ... ಸಮಿತಿಯು ಸದಸ್ಯರಾಗುವುದಲ್ಲದೆ ... ವಿಧಗಳಲ್ಲಿಯೂ ನೆರವು ನೀಡಬೇಕೆಂದು ಅಧ್ಯಕ್ಷರಾದ ಶ್ರೀ ಎಸ್. ಚೆನ್ನಪ್ಪನವರು ಪ್ರಾರ್ಥಿಸಿರುವರು.

ಕೀರ್ತನೆ

ಕೃಷ್ಣರಾಜ ಮೊಹಲ್ಲೆಯ ಸೀತಾರಾಮ ... ರಸ್ತೆಯಲ್ಲಿರುವ ಕೆಂಪಣ್ಣನವರ ಅಂಗಡಿಯ ಮುಂಭಾಗದಲ್ಲಿ ಈ ರಾತ್ರಿ ೦ ಗಂಟೆಗೆ ಶ್ರೀ ಹೆಚ್ ಎಚ್ ಶಿವಲಿಂಗಸ್ವಾಮಿ ಹಿರೇಮಠರವರಿಂದ ಸ್ವರಾಜ್ಯ ಸಾಧನೆ-ವಿಜಯ ಕಥೆಯು ನಡೆಯುವುದು.

ಲಂಡನ್ನಿನಲ್ಲಿ ಮೈಸೂರು ಪೊಲೀಸ್ ಅಧಿಕಾರಿಯ ಚಾತುರ್ಯ

ವಾಹನ ಸಂಚಾರವನ್ನು ಪರಿಶೋಧಿಸುವ ಸಂಬಂಧವಾಗಿ ಶಿಕ್ಷಣ ಪಡೆಯಲು ಲಂಡನ್ನಿಗೆ ತೆರಳಿರುವ ಮೈಸೂರಿನ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಬಿ. ಭೋಗಪ್ಪನವರು ಕಳೆದ ಶನಿವಾರ ವಾಹನ ಸಂಚಾರದ ಸಂದಣಿ ಹೆಚ್ಚಾಗಿದ್ದ ಲಂಡನ್ನಿನ ಲಡ್ಗೇಟ್ ಸರ್ಕಸ್ ಎಂಬ ಸ್ಥಳದಲ್ಲಿ ನಿಂತು ದಕ್ಷತೆಯಿಂದ ವಾಹನ ಸಂಚಾರದ ಹತೋಟಿ ನಡೆಸಿದರೆಂದು ವರದಿಯಾಗಿದೆ.

ಆಂಗ್ಲೋ-ಈಜಿಪ್ಟ್ ಸಂಧಾನ ಮುರಿದು ಬಿತ್ತು

ಸೂಡಾನಿನ ಸ್ವಾತಂತ್ರ್ಯ ಸಮಸ್ಯೆಯ ... ಬ್ರಿಟನ್ ಮತ್ತು ಈಜಿಪ್ಟುಗಳಲ್ಲಿ ಭಿನ್ನಾಭಿಪ್ರಾಯವುಂಟಾದ ದರ ಪರಿಣಾಮವಾಗಿ ಆಂಗ್ಲೋ-ಈಜಿಪ್ಟ್ ಒಪ್ಪಂದದ ಪ್ರಶ್ನೆಯ ವಿಷಯವಾಗಿ ನಡೆಯುತ್ತಿದ್ದ ಸಂಧಾನಗಳು ವಿಫಲವಾದುವೆಂದು ಪ್ರೆಸ್ ಏಜೆನ್ಸಿಯು ತಿಳಿಸಿರುತ್ತದೆ.

ಗಾಂಧೀಜಿ ಕನ್ನಡಿ ನೋಡಿಕೊಳ್ಳುವುದಿಲ್ಲ

ಫ್ರಾನ್ಸಿನ ವ್ಯಂಗ್ಯ ಚಿತ್ರಗಾರರಾದ ಕೆ ... ಎಂಬುವರು. ದೆಹಲಿಯಲ್ಲಿ ಮಹಾತ್ಮರನ್ನು ಭೇಟಿ ಮಾಡಿ ಅವರ ಚಿತ್ರವೊಂದನ್ನು ಬರೆದು ಅದನ್ನು ಗಾಂಧೀಜಿಯವರಿಗೆ ತೋರಿಸಿದಾಗ ಚಿತ್ರವು ಉತ್ತಮವಾಗಿದೆ ... ಆದರೆ ಕಿವಿಗಳನ್ನು ... ಮಾಡಲಾಗಿದೆಯೆಂದೂ ... ಅವರ ಕಿವಿಗಳಿರುವುದೇ ... ದು ಚಿತ್ರಗಾರನು ಹೇಳಿದುದಕ್ಕೆ ತಾವು ... ನೋಡಿಕೊಳ್ಳದಿರುವುದರಿಂದ ... ಕಿವಿಗಳು ಉದ್ದವಾಗಿರುವುದೇ ತಮಗೆ ತಿಳಿಯದೆಂದು ಗಾಂಧೀಜಿಯವರು ಹೇಳಿದರು.

ಮಾಸ್ಕೋವಿಗೆ ವಿಜಯಲಕ್ಷ್ಮೀ ಪಂಡಿತರು

ರಷ್ಯದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲ್ಪಟ್ಟಿರುವ ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತರು ಮೊನ್ನೆ ಕರಾಚಿಯ ಮೂಲಕ ರಷ್ಯಾಕ್ಕೆ ಪ್ರಯಾಣ ಮಾಡಿದರೆಂದು ವರದಿಯಾಗಿದೆ. ಅವರು ಇಂದಿನ ಟೆಹರಾನನ್ನು ತಲುಪುವರೆಂದೂ, ನಾಳೆ ರಷ್ಯದ ವಿದೇಶಾಂಗ ಮಂತ್ರಿ ಎಂ. ಮಾಲೊಟೋಫರನ್ನು ಭೇಟಿ ಮಾಡುವರೆಂದೂ ಗೊತ್ತಾಗಿದೆ.

೩೬,೦೦೦ ಅಡಿ ಎತ್ತರದಿಂದ ಭೂಮಿಗೆ ಪ್ಯಾರಚ್ಯೂಟಿನಲ್ಲಿ

ಗ್ಲೋಬ್] [ಮಾಸ್ಕೊ ೩

ಸೋವಿಯೆಟ್ಟಿನ ಯುದ್ಧ ಶಾಖೆಯ ೭ ಮಂದಿ ಪ್ಯಾರಾಚೂಟ್ ದಳದವರು ೭ ಮೈಲಿ ಎತ್ತರದಿಂದ ಧುಮಿಕಿ ಪ್ಯಾರಾಚೂಟ್ ಹಾರುವಿಕೆಯಲ್ಲಿ ಪ್ರಪಂಚದಲ್ಲೇ ಪ್ರಥಮ ಸ್ಥಾನ ಪಡೆದಿರುವರು. ೩೬,೦೦೦ ಅಡಿ ಎತ್ತರದಲ್ಲಿ ವಾಯುಮಂಡಲದಲ್ಲಿ ಸಂಚರಿಸುತ್ತಿದ್ದ ವಿಮಾನದಿಂದ ಪ್ಯಾರಾಚೂಟುಗಳ ಮೂಲಕ ಧುಮಿಕಿ ೨೦ ನಿಮಿಷಗಳ ನಂತರ ಅವರು ಭೂ ಪ್ರದೇಶವನ್ನು ತಲುಪಿರುವರು.

ಈಜಿಪ್ಟಿನಲ್ಲಿ ಕೊರಡಾ ಶಿಕ್ಷೆ ಇಲ್ಲ

ಗ್ಲೋಬ್] [ಕೈರೊ ೩

ಕೊರಡಾದಿಂದ ಹೊಡೆಯುವುದು ಮಾನವೀಯತೆಗೆ ವಿರೋಧವಾದುದೆಂದು ಹೇಳಿ ಫರೂಕ್ ದೊರೆಗಳು ಈಜಿಪ್ಟಿನಲ್ಲಿ ಯಾರನ್ನೂ ಅದರಿಂದ ಹೊಡೆಯಕೂಡದೆಂದು ಆಜ್ಞೆ ಮಾಡಿರುವರು.

ಬೇಗಂ ಷಾ ನವಾಜರು ರಷ್ಯದಲ್ಲಿ ರಾಯಭಾರಿ

ಪಂಜಾಬ್ ಶಾಸನ ಸಭೆಯ ಸದಸ್ಯೆಯಾದ ಬೇಗಂ ಷಾ ನವಾಜರನ್ನು ರಷ್ಯದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿ ನೇಮಿಸಲಾಗಿದೆಯೆಂದು ವರದಿಯಾಗಿದೆ.

ಭಾರತಕ್ಕೆ ಆಸಫ್ ಅಲಿ

ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಅಸಫ್ ಅಲಿಯವರು ಪ್ರಾಮುಖ್ಯ ವಿಚಾರವಾಗಿ ಭಾರತ ಸರ್ಕಾರದೊಡನೆ ಸಮಾಲೋಚನೆ ನಡೆಸುವ ಸಲುವಾಗಿ ಶೀಘ್ರದಲ್ಲಿಯೇ ದೆಹಲಿಗೆ ಬರಲಿರುವರೆಂದು ವರದಿಯಾಗಿದೆ.

ಕರಾಚಿಯಲ್ಲಿ ಆಗಸ್ಟ್ ೧೫ರ ಕಾರ್ಯಕ್ರಮ

ನೂತನವಾಗಿ ರಚಿತವಾಗುವ ಪಾಕಿಸ್ತಾನ್ ಡೊಮಿನಿಯನ್ನಿನ ರಾಜಧಾನಿಯಾದ ಕರಾಚಿಯಲ್ಲಿ ಆಗಸ್ಟ್ ೧೫ರ ಬೆಳಿಗ್ಗೆ ೯ ಗಂಟೆಗೆ ಮಿ|| ಮಹಮ್ಮದ್ ಅಲಿ ಜಿನ್ನಾರವರು ಅದರ ಗವರ್ನರ್ ಜನರಲ್ಲಾಗಿ ಪ್ರಮಾಣ ವಚನವನ್ನು ಸ್ವೀಕರಿಸುವರು. ಮಧ್ಯಾಹ್ನ ಡೊಮಿನಿಯನ್ನಿನ ಮಂತ್ರಿಗಳ ಮತ್ತು ಗವರ್ನರುಗಳ ಪ್ರಮಾಣ ವಚನಸ್ವೀಕಾರವು ನೆರವೇರುವುದು. ... ಔತಣ ಮತ್ತು ಪಾಕಿಸ್ತಾನ ಪಡೆಗಳ ... ಜನರಲ್ಲಿಗೆ ಸೈನಿಕ ವಂದನೆಗಳು ನಡೆಯುವುವು. ... ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು. ಈ ಸಂಬಂಧವಾಗಿ ಮಿ|| ಜಿನ್ನಾರವರು ದೆಹಲಿಯಿಂದ ನಾಳಿದ್ದು ಕರಾಚಿಗೆ ತೆರಳುವರೆಂದು ವರದಿಯಾಗಿದೆ.

ಇಂಡೊನೇಷ್ಯದಲ್ಲಿ ಕದನದ ಮುಕ್ತಾಯ

ವಿಶ್ವರಾಷ್ಟ್ರ ಸಂಸ್ಥೆಯ ಸೂಚನೆಯಂತೆ ನಿನ್ನೆ ರಾತ್ರಿಯಿಂದ ಡಚ್ಚರು ಇಂಡೊನೇಷ್ಯನರೊಡನೆ ನಡೆಸುತ್ತಿರುವ ಕದನವನ್ನು ನಿಲ್ಲಿಸುವಂತೆ ನೆದರ್ಲೆಂಡ್ಸ್ ಸರ್ಕಾರವು ತನ್ನ ಸೇನೆಗಳಿಗೆ ಆಜ್ಞೆ ಇತ್ತಿದೆಯೆಂದು ವರದಿಯಾಗಿದೆ. ಡಚ್ಚರು ಕೈ ಸೆರೆ ಹಿಡಿದಿದ್ದ ರಿಪಬ್ಲಿಕ್ ಸಚಿವರನ್ನು ಇತರ ನಾಯಕರನ್ನೂ ಬಿಡುಗಡೆ ಮಾಡಿದ್ದಾರೆ.

ಕಾಥೇವಾಡದಲ್ಲಿ ಭೀಕರ ಕ್ಷಾಮ

ಹಸಿವಿನ ಕೂಗಿನ ಪ್ರದರ್ಶನ ಮತ್ತು ದಾಸ್ತಾನುಗಳಿರುವ ಕಡೆ ಧಾಳಿಗಳು ಗುಜರಾತ ಮತ್ತು ಕಾಥೇವಾಡದ ಅನೇಕ ಕಡೆಗಳಲ್ಲಿ ನಡೆಯುತ್ತಿರುವುದಾಗಿ ವರದಿಯಾಗಿದೆ. ಹಸಿದ ಜನರ ಗುಂಪು ಆಹಾರ ಧಾನ್ಯಗಳು ಬೇಕೆಂದು ಕೂಗಿನೊಡನೆ ಕಾಥೇವಾಡದ ಗ್ರಾಮಗಳಲ್ಲಿ ಶಸ್ತ್ರ ಸಜ್ಜಿತನಾಗಿ ಅಲೆಯುತ್ತಿವೆ. ಪೋಲೀಸ್ ದಳಗಳಲ್ಲಿ ಸಿದ್ಧವಾಗಿ ನಿಂತಲು ಕಾಯುತ್ತಿವೆ. ಆಹಾರ ಸಾಮಗ್ರಿಗಳನ್ನು ಇಟ್ಟುಕೊಂಡು ಕೊಡಲು ನಿರಾಕರಿಸಿದ ವರ್ತಕನೊಬ್ಬನನ್ನು ಕೊಂದು ... ಪೆಟ್ಲಾಡ ನಗರದಲ್ಲಿ ಹಸಿದ ಜನರ ಗುಂಪಿನ ಮೆರವಣಿಗೆಯೊಂದು ಹೋಟಲು ... ಬಲಾತ್ಕಾರವಾಗಿ ಧಾನ್ಯವನ್ನು ... ಹೋಗಿತೆಂದು ತಿಳಿದುಬಂದಿದೆ.

ದಿವಾನರು ಹಿಂದಿರುಗಿದರು

ಸ್ವಂ.ಸು ಫೋನ್] [ಬೆಂಗಳೂರು ೫

ಈ ದಿನ ಬೆಳಿಗ್ಗೆ ರಾಜಧಾನಿಯಿಂದ ದಿವಾನರು ಬೆಂಗಳೂರಿಗೆ ಹಿಂದಿರುಗಿದರು.

ಚಿನ್ನದ ಗಣಿಗಳ ಪರಿಹಾರ ಸಮಿತಿಯು ನಿನ್ನೆ ಸೇರಿ ಕಳೆದ ೫ ತಿಂಗಳಿಗೆ ೨೦ ಲಕ್ಷ ರೂ. ಪರಿಹಾರ ಕೊಡಬಹುದೆಂದು ಶಿಫಾರಸ್ಸು ಮಾಡಿರುತ್ತದೆ. ಮತ್ತು ಗಣಿಗಳಲ್ಲಿ ಕೆಲಸಮಾಡುವವರೆಲ್ಲರೂ ಅವಶ್ಯವಾಗಿ ಧಾರಾಳವಾಗಿ ಆಗಿರುವಂತೆ ಮಾಡಬೇಕೆಂದೂ ಸಹ ಸೂಚಿಸಿರುತ್ತದೆ.

ದಂತಿನ ಜಿಲ್ಲಾ ಜಡ್ಜರಾದ ಶ್ರೀ ಆರ್. ಪುಟ್ಟೇಗೌಡರೇ ಅರಸಿನವರಿಗೆ ನಿವೃತ್ತಿಗೆ ಪೂರ್ವಭಾವಿಯಾಗಿ ೩ ವಾರ ರಜಾ ಕೊಡಲಾಗಿದೆ. ಅವರ ಸ್ಥಾನದಲ್ಲಿ ಶ್ರೀ ಬಿ ಟಿ ರಾಮಕೃಷ್ಣಯ್ಯಂಗಾರ್ರವರನ್ನು ನೇಮಿಸಲಾಗಿದೆ. ಅವರೇ ಇವರು ಅಡಿಷನಲ್ ಜಿಲ್ಲಾ ಜಡ್ಜರನ್ನಾಗಿ ನೇಮಿಸುವ ಸಂಭವವಿದೆ.

ಮೈಸೂರು ರೈಲ್ವೆ ಕೆಲಸಗಾರರ ಸಂಘದವರು ನಿನ್ನೆ ರೆವಿನ್ಯೂ ಮಂತ್ರಿಗಳಲ್ಲಿ ನಿಯೋಗ ಹೋಗಿದ್ದರು. ಬ್ರಿ|| ಹಿಂದೂಸ್ಥಾನದಂತೆ ಇಲ್ಲಿಯೂ ವೇತನಗಳನ್ನು ಕೊಡಬೇಕೆಂದು ಬೇಡಿದರು. ಅದು ಸಾಧ್ಯವಿಲ್ಲವೆಂಬ ಉತ್ತರವು ಬಂದಿತೆಂದು ವರದಿಯಾಗಿದೆ.

ಬೆಂಗಳೂರಿನಲ್ಲಿರುವ ಕಛೇರಿಗಳೆಲ್ಲವೂ ರಾಷ್ಟ್ರ ಹಳೆಯ ಬಾವುಟಗಳನ್ನು ಆಗಸ್ಟ್ ೧೪ ನೇ ತಾರೀಖಿನ ಮಧ್ಯರಾತ್ರಿಗೆ ಮುಕ್ತಾಯ ಮಾಡಿ ಅನಂತರ ಭಾರತ ಡೊಮಿನಿಯನ್ನಿನ ಹೆಸರಿನಲ್ಲಿ ಪದರಿ ಬಾವುಟಗಳನ್ನು ಹೊಸದಾಗಿ ಪ್ರಾರಂಭಿಸುವಂತೆ ಆಜ್ಞೆಯಾಗಿದೆ.

ಹಿಂದಿಯನ್ನು ಸರ್ಕಾರಿ ಭಾಷೆ ಮಾಡಲು ಪ್ರಯತ್ನ

ಗ್ಲೋಬ್] [ಆಗ್ರ ೩

ಆಂಗ್ಲ ಭಾಷೆಯ ಬದಲು ಹಿಂದಿಯನ್ನು ಮಾಧ್ಯಮವನ್ನಾಗಿ ಮಾಡಿ ಸರ್ಕಾರಿ ವ್ಯವಹಾರಗಳಲ್ಲೂ ಅದನ್ನೇ ಉಪಯೋಗಿಸುವಂತೆ ಮಾಡುವ ಪ್ರಯತ್ನವು ಈ ಯು... ಪ್ರಾಂತದಲ್ಲಿ ಭರದಿಂದ ಸಾಗಿದೆ. ಅಲ್ಲಿನ ಆಗ್ರಾ ಕಡಿತದರ ಸಂಸ್ಥೆಯವರು ತಮ್ಮ ವ್ಯವಹಾರಿಕ ಪತ್ರಗಳನ್ನು ಹಿಂದಿಯಲ್ಲಿಯೇ ಬರೆಯಲು ... ಕೊಡಬೇಕೆಂದು ಪ್ರಾರ್ಥಿಸಿದುದಕ್ಕೆ ಸರ್ಕಾರವು ಸಮ್ಮತಿಸಿರುತ್ತದೆ. ಕೋರ್ಟಿಗೆ ದೂರುಗಳನ್ನು ಕೊಡುವಾಗ ಉರ್ದು ಅಥವಾ ಇತರ ಭಾಷೆಗಳ ... ಸೌಕರ್ಯವಾಗಿರುವ ಸಂದರ್ಭಗಳಲ್ಲಿ ವಿನಃ ಉಳಿದ ಎಲ್ಲ ಸನ್ನಿವೇಶಗಳಲ್ಲಿ ಜನರು ಹಿಂದಿಯನ್ನೇ ಉಪಯೋಗಿಸಬೇಕೆಂದು ಅಲ್ಲಿನ ಸೆಷನ್ಸ್ ನ್ಯಾಯಾಧೀಶರು ತಿಳಿಸಿರುವರು.

ಸ್ವಾತಂತ್ರ್ಯ ದಿನಾಚರಣೆಗಾಗಿ ಕುದುರೆ ಜೂಜು

ಬೊಂಬಾಯಿನ ರಾಯಲ್ ಟರ್ಫ್ ಕ್ಲಬ್ಬಿನವರು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಈ ತಿಂಗಳು ೧೬ ನೇ ತಾ|| ಎರಡು ಕುದುರೆ ಜೂಜುಗಳನ್ನು ನಡೆಸಲು ... ಮೊದಲನೆಯ ರೇಸಿನಲ್ಲಿ ಭಾರತೀಯ ಕುದುರೆಗಳನ್ನೇ ಓಡಿಸಿ ಗೆದ್ದ ಕುದುರೆಗೆ ಸ್ವಾತಂತ್ರ್ಯದ ಬಟ್ಟಲನ್ನು ... ಎಲ್ಲಾ ಕುದುರೆಗಳನ್ನೂ ... ಕಾಮನ್ ವೆಲ್ತ್ ಬಟ್ಟಲನ್ನು ಕೊಡಲಾಗುವುದು.

ಸಾಧ್ವಿ

ತಾ|| ೫-೮-೪೭ ಮಂಗಳವಾರ

ದಕ್ಷಿಣ ಆಫ್ರಿಕದ ತಕರಾರು

ಏಷ್ಯಾಖಂಡದ ಜನರ ಮೇಲೆ ದಕ್ಷಿಣ ಆಫ್ರಿಕವು ಹೂಡಿರುವ ವರ್ಣ ದ್ವೇಷ ಶಾಸನದ ಪ್ರಕರಣವು ಆಧುನಿಕ ಇತಿಹಾಸದಲ್ಲಿ ಸುಪ್ರಸಿದ್ಧವಾದ ಪ್ರಸಂಗವಾಗಿರುತ್ತದೆ. ವಿಶ್ವ ಜನಾಂಗಸಂಸ್ಥೆಯಲ್ಲಿ ಈ ವಿಷಯವು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಂದ ಮಂಡಿಸಲ್ಪಟ್ಟು ಯಶಸ್ವಿಯಾಗಿ ಪರಿಸಮಾಪ್ತಿಗೊಂಡಿತು. ಆದರೆ ಈ ನಿರ್ಧಾರವು ಕೇವಲ ಸರಸ್ವತೀ ಪ್ರಸನ್ನವಾಗಿಯೇ ಉಳಿದು ಕಾರ್ಯ ರೂಪಕ್ಕೆ ಬಾರದಿರುವ ಸೂಚನೆಗಳು ಕಾಣಬರುತ್ತಿವೆ.

ತನ್ನ ಮೂರ್ಖತನದ ಹಾದಿಯನ್ನು ಬಿಟ್ಟು ಸಕಲ ಪ್ರಜೆಗಳಿಗೂ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಬೇಕೆಂದು ವಿಶ್ವಸಂಸ್ಥೆಯು ದಕ್ಷಿಣ ಆಫ್ರಿಕಕ್ಕೆ ಸೂಚನೆಯಿತ್ತಿತ್ತು. ಈ ಬಗ್ಗೆ ಭಾರತ ಮತ್ತು ದಕ್ಷಿಣ ಆಫ್ರಿಕಗಳು ಕೈಕೊಳ್ಳುವ ಕಾರ್ಯಕ್ರಮವನ್ನು ಸಂಸ್ಥೆಯ ಮುಂದಿನ ಅಧಿವೇಶನಕ್ಕೆ ವರದಿ ಮಾಡಬೇಕೆಂದೂ ಸಹ ತಿಳಿಸಲಾಗಿತ್ತು. ಅದರಂತೆ ಪಂಡಿತ ನೆಹರೂರವರು ದಕ್ಷಿಣ ಆಫ್ರಿಕದ ಪ್ರಧಾನಿ ಜನರಲ್ ಸ್ಮಟ್ಸರೊಡನೆ ಪತ್ರ ವ್ಯವಹಾರವನ್ನೂ ನಡೆಸಿದರು. ಆದರೆ ಈ ವಿಷಯದಲ್ಲಿ ಭಾರತ ಸರ್ಕಾರದೊಡನೆ ಯಾವ ಮಾತುಕತೆಗೂ ತಾವು ಸಿದ್ಧರಾಗಿಲ್ಲವೆಂದು ಸ್ಮಟ್ಸರು ಈಗ ತಿಳಿಸಿರುವರು.

ವಿಶ್ವ ಸಂಸ್ಥೆಯ ಸತ್ವ ಪರೀಕ್ಷೆಯ ಕಾಲವು ಈಗ ಬಂದಿರುತ್ತದೆ. ಪ್ರಪಂಚದ ದೊಡ್ಡ ದೊಡ್ಡ ರಾಷ್ಟ್ರಗಳೆಲ್ಲವೂ ಸೇರಿ ಸರ್ವರ ಹಿತಸಾಧನೆಗೂ ಬೇಕಾದ ಮಾರ್ಗಗಳನ್ನು ಗೊತ್ತುಮಾಡಲು ಈ ಸಂಘವನ್ನು ಸ್ಥಾಪಿಸಿರುತ್ತವೆ. ಎಲ್ಲ ಜನಾಂಗಗಳಿಗೂ ಸಮಾನವಾದ ಹಕ್ಕು ಬಾಧ್ಯತೆಗಳ ಸಂರಕ್ಷಣೆಗಾಗಿ ಮೂಲ ಸೂತ್ರಗಳನ್ನು ಗೊತ್ತುಮಾಡಲಾಗಿದೆ. ಅವುಗಳಿಗೆ ಅನುಸಾರವಾಗಿಯೇ ಅಲ್ಲಿ ಚರ್ಚೆಗಳು ನಡೆದು ತೀರ್ಮಾನಗಳೂ ಆಗುವುವು. ಆದುದರಿಂದ ಅಂತಹ ತೀರ್ಮಾನಗಳಿಗೆ ಎಲ್ಲ ರಾಷ್ಟ್ರಗಳೂ ತಲೆಬಾಗಬೇಕು. ಯಾವುದಾದರೊಂದು ದೇಶವು ಅದನ್ನು ಅಲಕ್ಷ್ಯ ಮಾಡುವುದಾದರೆ ಸಂಸ್ಥೆಯ ಅಸ್ತಿತ್ವಕ್ಕೇ ಧಕ್ಕೆಯುಂಟಾಗುವುದು. ಆಗ ಇಂತಹ ಸಂಸ್ಥೆಗಳು ಇದ್ದೂ ಪ್ರಯೋಜನವಿಲ್ಲದಂತಾಗುವುದು. ಆದುದರಿಂದ ಹೀಗೆ ಪ್ರತಿಬಾಧಿಸುವ ರಾಷ್ಟ್ರಗಳ ಸ್ವೇಚ್ಛಾ ಪ್ರವರ್ತನೆಗೆ ಆಸ್ಪದವಿಲ್ಲದಂತೆ ಮಾಡುವುದು ಇತರ ಎಲ್ಲ ರಾಷ್ಟ್ರಗಳ ಕರ್ತವ್ಯವಾಗಿರುತ್ತದೆ.

ದಕ್ಷಿಣ ಆಫ್ರಿಕವು ಈಗ ಅನುಸರಿಸುತ್ತಿರುವ ನೀತಿಯು ಭಾರತೀಯರಿಗೆ ಮಾತ್ರವೇ ಅಲ್ಲದೆ ಇಡೀ ಜಗತ್ತಿಗೇ ದ್ರೋಹವನ್ನು ಮಾಡಿದಂತಾಗುತ್ತದೆ. ಇಂತಹ ದ್ವೇಷದ ಪರಿಸ್ಥಿತಿಯಲ್ಲಿ ಭಾರತದ ಸೂಚನೆಯನ್ನು ವಿಶ್ವಸಂಘದ ಮುಂದಿಟ್ಟು ತಾತ್ಕಾಲಿಕವಾಗಿಯಾದರೂ ನಿಶ್ಚಯಿಸಿದಂತೆ ವಿಶ್ವ ಸಂಸ್ಥೆಯು ಧೈರ್ಯದಿಂದ ನಿರ್ಧರಿಸಿ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿರುವುದು. ಈಗ ಭಾರತಖಂಡಕ್ಕೇ ಅನ್ಯಾಯವಾದ ಈ ಪ್ರ-

ಯನ್ನೂ ಸಹ ಯಶಸ್ವಿಯಾಗಿ ಬಗೆಹರಿಸಿ ಅದು ತನ್ನ ಇರುವಿಕೆಯನ್ನು ಸಾರ್ಥಕ ಪಡಿಸಿಕೊಳ್ಳಬೇಕಾದ ಸಮಯವು ಸಂಪ್ರಾಪ್ತವಾಗಿರುತ್ತದೆ.

ಹೆಂಡದ ಜಾತ್ರೆ

ಪ್ರಜಾಪ್ರತಿನಿಧಿಸಭೆಯ ಸದಸ್ಯರಾದ ಶ್ರೀ ಬಿ ಎಸ್ ದೇವದಾಸರು ಈ ರೀತಿ ಬರೆಯುತ್ತಾರೆ:-

ಯಳಂದೂರು ತಾಲ್ಲೂಕಿಗೆ ಸೇರಿದ ಅಗರ ಮಾಂಬಳ್ಳಿಯಲ್ಲಿ ಹೆಂಡದ ಅಂಗಡಿ ವಜಾ ಮಾಡಿರುವುದು ಸರಿಯಷ್ಟೆ. ಆದರೆ ಅಗರಕ್ಕೆ ಒಂದು ಫರ್ಲಾಂಗ್ ಸಮೀಪದಲ್ಲಿರುವ ಒಂದು ತೆಂಗಿನ ತೋಟದ ಸುಮಾರು ೪೦೦ ಚದರ ಅಡಿಯಷ್ಟು ಜಮೀನಿನಲ್ಲಿ ತಾ|| ೨೦-೭-೪೭ ರಲ್ಲಿ ಹೊಸದಾಗಿ ಒಂದು ಹೆಂಡದ ಅಂಗಡಿಯು ತೆರೆಯಲ್ಪಟ್ಟಿದೆ. ಸಾವಿರಾರು ಜನರು ಹೆಂಡದ ಅಂಗಡಿಯ ಸುತ್ತಮುತ್ತಲೂ ತಿರುಗಾಡಲು ಸಾಧ್ಯವಿಲ್ಲದ ರೀತಿಯಲ್ಲಿ ರಸ್ತೆಯಲ್ಲಿಯೂ ಕುಳಿತು ಹೆಂಡ ಕುಡಿಯುತ್ತಿರುವರು. ಕೊಳ್ಳೇಗಾಲದ ಕಡೆಯಿಂದಲೂ ಮತ್ತು ಯಳಂದೂರು ಕಡೆಯಿಂದಲೂ ಅಗರ ಮಾಂಬಳ್ಳಿಗೆ ಹೋಗುವ ಜನರು ರಸ್ತೆಯ ಮೂಲಕ ಊರಿಗೆ ಹೋಗಲು ಅನಾನುಕೂಲವಾಗಿ ಹೊಲ, ಗದ್ದೆಗಳ ಮೂಲಕ ಊರು ಸೇರುತ್ತಿರುವರು.

ಅಗರ ಮಾಂಬಳ್ಳಿಯ ಸುತ್ತಮುತ್ತಲೂ ಇರುವ ನೂರಾರು ಹಳ್ಳಿಗಳ ಜನರು ಕೊಯಮತ್ತೂರು ಜಿಲ್ಲೆಗೆ ಸೇರಿದ ಅನೇಕ ಗ್ರಾಮಗಳಿಂದಲೂ ಮೈಸೂರು ಸೀಮೆಗೆ ಸೇರಿದ ಹಳ್ಳಿಗಳಿಂದಲೂ ಸುಮಾರು ಮಧ್ಯಾಹ್ನ ೩ ಘಂಟೆಯಿಂದ ೭ ಘಂಟೆಯವರೆಗೆ ರಸ್ತೆಯಲ್ಲಿ ಒಂದು ದೊಡ್ಡ ಜಾತ್ರೆಗೆ ಹೋಗುವಂತೆ ಹೋಗುತ್ತಿರುವರು.

ಈ ಅಂಗಡಿಯನ್ನು ಸರ್ಕಾರದವರೇ ಹೊಸದಾಗಿ ತೆರೆಯಲು ಅಪ್ಪಣೆ ಮಾಡಿರುವುದು ಶೋಚನೀಯವಾಗಿದೆ. ಈ ಹೊಸ ಅಂಗಡಿಯಿಂದ ಜನರಿಗೆ ಹಿಂಸೆಯೂ ಮಾನಹಾನಿಯೂ, ಅನಾರೋಗ್ಯವೂ ಮತ್ತು ವ್ಯವಸಾಯ ಮೊದಲಾದ ಇತರ ಕೆಲಸ ಕಾರ್ಯಗಳಿಗೆ ತೊಂದರೆಯೂ ಪ್ರಾಪ್ತಿಯಾಗಿರುವುದು.

ಈ ಅಂಗಡಿಯು ಕಾನೂನಿಗೆ ವಿರೋಧವಾಗಿಯೂ, ಪ್ರಜೆಗಳಿಗೆ ಹಾನಿಕರವಾಗಿಯೂ ಇರುವುದರಿಂದ ಸರ್ಕಾರದವರು ತಕ್ಷಣವೇ ಕ್ರಮ ಜರುಗಿಸಿ ಅದನ್ನು ವಜಾ ಮಾಡಿಸಿ ಸರ್ವರ ಕ್ಷೇಮ ಮಾನಗಳನ್ನೂ ಮತ್ತು ದೇಶದ ಗೌರವವನ್ನೂ ಕಾಪಾಡುವುದು ಯುಕ್ತವೂ, ನ್ಯಾಯವೂ ಆಗಿರುತ್ತದೆ.

ಸ್ಕೌಟ್ ಸಮಾಚಾರ

ತುಮಕೂರು ಜಿಲ್ಲೆಯ ಸ್ಕೌಟ್ ಸಮಿತಿಯವರು ಪ್ರಕಟಿಸಿರುವ ತುಮಕೂರು ಸ್ಕೌಟ್ ಸಮಾಚಾರವೆಂಬ ತ್ರೈಮಾಸಿಕ ಪತ್ರಿಕೆಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ.

ವಿದ್ಯಾರ್ಥಿ ನಾಯಕರ ಪ್ರವಾಸ

ಬರಲಿರುವ ಸತ್ಯಾಗ್ರಹ ಚಳುವಳಿ ಸಂಬಂಧವಾಗಿ ವಿದ್ಯಾರ್ಥಿ ಪ್ರಮುಖ ಸಂಸ್ಥಾನಾದ್ಯಂತವೂ ಪ್ರವಾಸ ಮಾಡುವರು. ಸಂಸ್ಥಾನದ ಎಲ್ಲ ವಿದ್ಯಾ ಕಾಂಗ್ರೆಸ್ಸಿನ ಶಾಖೆಗಳೂ ಪ್ರಾಂತೀಯ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಯೊಡನೆ ಪತ್ರವ್ಯವಹಾರ ನಡೆಸಿ ತಮ್ಮ ಕಾರ್ಯಕ್ರಮಗಳನ್ನು ನಿರ್ಧರಿಸಿಕೊಳ್ಳಬಹುದು. ಸತ್ಯಾಗ್ರಹಕ್ಕೆ ಸಿದ್ಧವಾಗಿರುವವರನ್ನು ಸಂಗ್ರಹಿಸಲು ಎಲ್ಲ ಶಾಖೆಗಳಿಗೂ ಪ್ರತಿಜ್ಞಾ ಪತ್ರಗಳನ್ನು ಕಳುಹಿಸಲಾಗುವುದು. ಎಲ್ಲ ಶಾಖೆಗಳೂ ಸ್ವಯಂಸೇವಕರ ಸಂಖ್ಯೆ ಮತ್ತು ಸತ್ಯಾಗ್ರಹಕ್ಕೆ ಸಂಬಂಧಿಸಿದ ಪ... ಗಳನ್ನು ಕೂಡಲೇ ಕಳುಹಿಸಿಕೊಡಬೇಕೆಂಬುದಾಗಿಯೂ ಕೆ|| ಪ್ರಾಂತ ವಿ|| ಕಾರ್ಯದರ್ಶಿಗಳು ಕೋರಿರುವರು.

ವಿಕ್ಟೋರಿಯಾ ರಾಣಿಯ ಪ್ರತಿಮೆಗೆ ಊನ

ಗ್ಲೋಬ್] [ಅಲಹಾಬಾದ

ಕ್ರಿ. ಶ ೧೮೫೦ ರಲ್ಲಿ ಇಲ್ಲಿನ ಆಲ್‌ಫ್ರೆಡ್ ಪಾರ್ಕಿನಲ್ಲಿ ಸ್ಥಾಪಿಸಿದ್ದ ವಿಕ್ಟೋರಿಯಾ ರಾಣಿಯ ಶ್ವೇತ ಶಿಲೆಯ ಪ್ರತಿಮೆಯನ್ನು ಯಾರೋ ಅಂಗಹೀನಗೊಳಿಸಿರುವರು. ರಾಣಿಯ ಬಲಗೈಯ್ಯಲ್ಲಿದ್ದ ಮುಡಿಗೋಲನ್ನು ಒಡೆದು ಹಾಕಿರುವರು. ಪೋಲೀಸು ಪತ್ತೆ ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಸುರಿ ಸಂಬಂಧದ ರೋಗ ನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧವೆಂದು ಎಂಭತ್ತೈದು ವರ್ಷಗಳಿಂದ ಪ್ರಖ್ಯಾತವಾದ ಈ ಭಸ್ಮದ ಮಹತ್ವವೇನು? ಎಲ್ಲೆಲ್ಲಿ ಪ್ರಚಾರಕ್ಕೆ ಬಂದಿದೆ? ಎಂಥೆಂಥಾ ವೈದ್ಯರ ಪ್ರಶಂಸೆ ಪಡೆದಿದೆ? ಇತ್ಯಾದಿ ವಿಷಯಗಳ ತಿಳಿಸತಕ್ಕ ಹನ್ನೆರಡು ಪುಟಗಳ ಕ್ಯಾಟಲಾಗ್ ತಾವು ನೋಡಲೇ ಬೇಕಾದ್ದು. ಬರೆದರೆ ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯಂಗ್,
ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಬಳೆ, ಯಳಂದೂರ್ ಪೋಸ್ಟ್

ಪ್ರತಿ ದಿನ ೩ ಆಟಗಳು
6—8—47 ನೇ ಬುಧವಾರದಿಂದ

ಶರ್‌ಬತಿ — ಆಂಖೆ

ಪಾತ್ರ :- ವನಮಾಲ, ಈಶ್ವರಲಾಲ್, ಹರೀಷ್ ಮತ್ತು ಆಘಾ ಇತರರು
ಒಲಿಂಪಿಯಾ ಟಾಕೀಸ್,
ಮೈಸೂರು.

ಬೆಂಗಾಲ್ ಸಿಲ್ಕ್ಸ್

ಸೀರೆಗಳ ವೈಖರಿಯನ್ನು ನೋಡಬೇಕಾದರೆ ಬಾಪುಸಾಬ್ ಕಂಪೆನಿಗೆ ಹೋಗಿ
೭-೮-೪೭ ಮತ್ತು ೯ ಗಳಲ್ಲಿ ಅತ್ಯಂತ ಅಂದವಾದ ಸೀರೆಗಳು ಬಂದಿವೆ

FOR SALE

Model House No. 40 Krishnarajavana with Out House, Garage. Enquire:-
R GUNDU RAO,
Mysore Bank Buildings,
MYSORE.

ವುಡ್‌ಲ್ಯಾಂಡ್ಸ್

1-8-47 ರಿಂದ
ಚಕ್ಕರಿಸಿದ ೧೪ ನೇ ವಾರ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

:: ಪಾತ್ರ ::
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ರಾಜಕಮಲ್

ತಾ|| 1-8-47 ರಿಂದ
ಅಮೋಘ ೩ ನೇ ವಾರ

★ **ಕಿಸ್ಮತ್**

—: ತಾರಾಗಣ :—
ಮುಮ್ತಾಜ್ ಶಾಂತಿ, ಅಶೋಕ್ ಕುಮಾರ್, ಷಾನವಾಜ್ ಮುಂತಾದವರು

8-8-47 ರಿಂದ

ಮಹಾನಂದ

(ಕನ್ನಡದಲ್ಲಿ)

ಹೊಸ ನಾಟಕ ಶ್ರೀ ಹೊಸ ನಾಟಕ

ಹಾಲಸಿದ್ದೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ, ಇವರು ಮೈಸೂರು ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ — ನಾಳೆ ರಾತ್ರಿ ೧೦-೩೦ ಗಂಟೆಗೆ
ಸ್ವತಂತ್ರ ಭಾರತದ ಮಂಗಳ ದೃಶ್ಯಗಳಿಂದ ಕೂಡಿದ ಸಾಮಾಜಿಕ ನಾಟಕ

★ **ಬಡತನದ ಭೂತ** ★

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ
ಭಾನುವಾರ ಮ್ಯಾಟಿನಿ ಉಂಟು :: ಚಿಕ್ಕಚೆಟ್ಟಪ್ಪ, ಪ್ರೊಪ್ರೈಟರ್

Edited printed and published A. K. Nagarajan at the Sadhvi Pr D. Subbaiah Road Mysore

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೨ ಕಾಸು

ಸಂಪುಟ ೬] ಬುಧವಾರ ೬—೮—೪೭ [ಸಂಚಿಕೆ ೧೫

ಕದನ ನಿಂತಿಲ್ಲವೆಂದು ರಿಪಬ್ಲಿಕ್ ಪ್ರಕಟಣೆ

ಎಂ. ಸಿ. ಸಿ. ಸಭೆ

ಮೈಸೂರು ೬.

೯ ನೇ ತಾರೀಖು ರಾಜಧಾನಿಯಲ್ಲಿರುವ ಅಖಿಲ ಮೈಸೂರು ಕಾಂಗ್ರೆಸ್ಸಿನ ಸಭೆಯು ಕಾರ್ಯಕ್ರಮ ... ಹಾಲಿನಲ್ಲಿ ನಡೆಯುವಂತೆ ಏ... ಹೊರಗಿನಿಂದ ಬರುವ ಪ್ರ... ಪ್ರತಿಭಟನೆಯ ಎದುರಿಗಿರುವ ... ಪಟ್ಟಿಣ ಸುಬ್ರಾಯರೆಟ್ಟಿಯ ... ತಿಯನ್ನು ಏರ್ಪಡಿಸಲಾಗಿದೆ. ... ಯಶಸ್ವಿಯಾಗಿ ನೆರವೇರಲು ... ಕೆಗಳೂ ಭರದಿಂದ ಸಾಗುತ್ತಿವೆ.

ಸ್ವಾತಂತ್ರ್ಯ ದಿನಾಚರಣೆ

... ನೊಳಲ್ಲಿಯ ಕಾಂಗ್ರೆಸ್ ಸಮಿತಿ ... ಗಸ್ಟ್ ೧೫ ರ ದಿನ ಸ್ವಾತಂತ್ರ್ಯ ... ಯನ್ನು ವೈಭವದಿಂದ ನೆರವೇ... ರಿಸಲಿರುವರೆಂದೂ, ಈ ಬಗ್ಗೆ ... ರ್ಯಕ್ರಮಗಳನ್ನು ಕೈಗೊಳ್ಳಲು ... ಎದನ್ನು ರಚಿಸಲಾಗುವುದೆಂ... ಕಾರ್ಯದರ್ಶಿಗಳು ತಿಳಿಸಿರುವರು.

...ಸ ಪತ್ರಿಕೆಗಳು

... ಪತ್ರಿಕೆಯ ವ್ಯವಸ್ಥಾಪಕರೂ ... ಸಂಪಾದಕರೂ ಆಗಿದ್ದ ಶ್ರೀ ಕೆ. ... ಯ್ಯನವರು ಮೊನ್ನೆ ಕಳುಹಿ... ದ ವಾರ ಪತ್ರಿಕೆಯ ... ಜಿಲ್ಲಾಧಿಕಾರಿಗಳ ... ಕ್ಲೇರ್ ಮಾಡಿಕೊಂಡಿರುವರು. ... ಗಳು ... ನಿಂದ ಪ್ರಕ... ಶ್ರೀ ವೀರಕೇಸರಿ ಸೀತಾ... ಗಳು ಬೆಂಗಳೂರಿನಿಂದ ಪ್ರಕಟ... ಪ್ರಕಟವಾಗುವ ವೀರಕೇಸರಿ ... ಯ ಸಂಪಾದಕರಾಗಿಯೂ, ... ಮರಾಯರು ಆನಂದ ಜ್ಯೋತಿ ... ವಾರ ಪತ್ರಿಕೆಯ ಸಂಪಾದಕ... ಬೆಂಗಳೂರಿನ ಜಿಲ್ಲಾಧಿಕಾರಿಗಳ ... ಕ್ಲೇರ್ ಮಾಡಿಕೊಂಡಿರುವರು.

...ಗಳನ್ನು ಕೇಳಲಿಲ್ಲ

... ವಿಭಾಗಿಸಿ ಹಿಂದೂಸ್ಥಾನ್ ... ಸ್ತಾನ್ ಡೊಮಿನಿಯನ್ನುಗಳ ... ವ ಬಗ್ಗೆ ಸಂಸ್ಥಾನಾಧೀಶರು ... ನರೇಂದ್ರ ಮಂಡಲಿಯವರ ... ಪಡೆಯಲಿಲ್ಲವೆಂದು ಭಾರತ ... ಟಿಂಗ ಮಿ॥ ಅರ್ಥರ್ ಹೊಡ... ಮನ್ಸ್ ಸಭೆಯಲ್ಲಿ ತಿಳಿಸಿ... ವರದಿಯಾಗಿದೆ.

...ಯಲ್ಲಿ ಒತ್ತಾಯದ ಮಿಲಿಟರಿ ಶಿಕ್ಷಣ

[ಜಯಪುರ ೩.

... ೫ ರ ನಂತರ ತನ್ನ ಸಂಸ್ಥಾನ... ಶಾಲೆಗಳಲ್ಲೂ ವಿದ್ಯಾರ್ಥಿಗಳಿಗೆ ... ಮಿಲಿಟರಿ ಶಿಕ್ಷಣವನ್ನು ಕೊ... ಬಹುದಾದ ... ವರೆಂದು ತಿಳಿದು ಬಂದಿದೆ. ... ರ್ಣಯಿಸಲ್ಪಟ್ಟಿದ್ದ ಭೋ... ವಿದಂ ... ರಿಗಳೂ

...ನಿನಲ್ಲಿ ಇಂಡಿಯನ್ ಯೂನಿಯನ್ ದಿನಾಚರಣೆ

... ಕಾಂಗ್ರೆಸ್ಸಿನ ಅಧ್ಯಕ್ಷ ... ನಂದ ... ಸಂಸ್ಥಾನದಲ್ಲಿ ... ಭಾರತ ಯೂನಿಯನ್ ... ಯನ್ನು ನೆರವೇರಿಸಬೇಕೆಂದು

ಹೈದರಾಬಾದಿನಲ್ಲಿ ಭಾರಿ ಮಿಲಿಟರಿ ಕೇಂದ್ರ

ವಾರಂಗಲ್ಲಿನಲ್ಲಿ ೬೭ ಲಕ್ಷ ರೂ. ವೆಚ್ಚದಿಂದ ೧೦ ಸಹಸ್ರ ಸೈನಿಕರಿಗೆ ಅನುಕೂಲಿಸುವಂತೆ ಮಿಲಿಟರಿ ಕೇಂದ್ರವೊಂದನ್ನು ಹೈದರಾಬಾದಿನ ನಿಜಾಮರು ರಚಿಸಲು ಏರ್ಪಡಿಸಿರುವರೆಂದು ವರದಿಯಾಗಿದೆ. ಬೆಜವಾಡಕ್ಕೆ ೬೦ ಮೈಲಿ ದೂರದಲ್ಲಿರುವ ನಿಜಾಮರ ಎಲ್ಲೆ ಕಟ್ಟಿನ ನಗರವಾದ ಮಧಿರಾದ ಬಳಿ ಮಿಲಿಟರಿಯವರ ಅತ್ಯಾಚಾರವು ವಿಪರೀತವಾಗಿದೆಯೆಂದು ಹೇಳಲಾಗಿದೆ.

ಕಾಶಿಯಲ್ಲಿ ಆಂಗ್ಲ ಭಾಷೆ ಮಾಯವಾಗುತ್ತಿದೆ.

ಹಿಂದಿಯನ್ನು ಸಾರ್ವಜನಿಕ ಭಾಷೆಯನ್ನಾಗಿ ಮಾಡಬೇಕೆಂಬ ಸರ್ಕಾರದ ನಿರ್ಧಾರ ಮತ್ತು ಬೀಗ ಸಂಸ್ಥೆಗಳ ನಿರಂತರ ಚಳವಳಿಯ ಪರಿಣಾಮವಾಗಿ ಕಾಶಿಯಲ್ಲಿ ಆಂಗ್ಲ ಭಾಷೆ ಅದೃಶ್ಯವಾಗುತ್ತಿದೆಯೆಂದು ವರದಿಯಾಗಿದೆ. ವಾಹನಗಳ ಮೇಲೆ ಅಂಕಿಗಳನ್ನು ಹಿಂದೀ ಲಿಪಿಯಲ್ಲಿ ಬರೆಯಲಾಗುತ್ತಿದೆ. ಟೆಲಿಫೋನ್ ಕಂಪನಿಯಲ್ಲಿಯೂ ಹಲೋ, ನಂಬರ್ ಪ್ಲೀಸ್, ನೋ ರಿಪ್ಲೈ ಮೊದಲಾದ ಆಂಗ್ಲ ಪದಗಳ ಸ್ಥಾನದಲ್ಲಿ ಕ್ರಮವಾಗಿ ಜೈ, ನಂಬರ್, ಕೋಯಿ ಉತ್ತರ ನಹಿ - ಎಂದು ಹಿಂದೀ ಭಾಷೆಯನ್ನೇ ಉಪಯೋಗಿಸಲಾಗುತ್ತಿದೆ. ಸರ್ಕಾರಿ ವ್ಯವಹಾರಗಳಲ್ಲಿ ಪ್ರಥಮವಾಗಿ ಜಿಲ್ಲಾಧಿಕಾರಿಗಳು ಕಾಂಗ್ರೆಸ್ ಸಮಿತಿಗೆ ಹಿಂದಿಯಲ್ಲೇ ಪತ್ರ ಬರೆದಿರುವರು.

ಇಂಡೋನೇಷ್ಯದಲ್ಲಿ ಇನ್ನೂ ಡಚ್ಚರ ಧಾಳಿಯೇ?

ಭದ್ರತಾ ಸಮಿತಿಯು ಕೂಡಲೇ ಕದನವನ್ನು ನಿಲ್ಲಿಸುವಂತೆ ಸೂಚಿಸಿದ ಮೇಲೂ ಸಹ ಡಚ್ಚರು ಇಂಡೋನೇಷ್ಯದಲ್ಲಿ ಇನ್ನೂ ಯುದ್ಧವನ್ನು ಮುಕ್ತಾಯಗೊಳಿಸಿಲ್ಲವೆಂದು ರಿಪಬ್ಲಿಕನ್ ಪ್ರಕಟಣೆಯು ತಿಳಿಸಿರುತ್ತದೆ. ಮಧ್ಯಸ್ಥಿಕೆ ವಹಿಸುವ ನಿಯೋಗದವರು ಬರುವ ಮೊದಲು ಸಾಧ್ಯವಾದಷ್ಟು ಪ್ರದೇಶಗಳನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅವರು ರಿಪಬ್ಲಿಕ್ ರಾಜಧಾನಿಯಾದ ಜೋಗ್‌ಜಕರ್ತಾ ನಗರಕ್ಕೆ ೧೦೦ ಮೈಲಿ ದೂರದಲ್ಲಿರುವ ಪ್ರದೇಶದಲ್ಲಿ ಧಾಳಿ ನಡೆಸುತ್ತಿರುವರೆಂದೂ, ಇನ್ನೂ ಕೆಲವು ಪ್ರದೇಶಗಳಲ್ಲಿ ಕದನವನ್ನು ಮುಂದುವರಿಸುತ್ತಿರುವುದಾಗಿಯೂ ಆ ಪ್ರಕಟಣೆಯು ಹೇಳುತ್ತದೆ.

ಮಾರ್ಕೆಟ್ ಮಳಿಗೆಗಳ ಬಾಡಿಗೆ

ಪೌರಸಭೆಯಲ್ಲಿ ನಿರ್ಧಾರ

ಮೈಸೂರು ೬.

ರಾಜಧಾನಿಯ ಮಂಡಿ, ದೇವರಾಜ ಮತ್ತು ವಾಣಿವಿಲಾಸ ಮಾರ್ಕೆಟ್ಟುಗಳ ಅಂಗಡಿಗಳ ಬಾಡಿಗೆಗಳ ವಿಚಾರವು ನಿನ್ನೆ ದಿನ ಪೌರಸಭೆಯ ಮುಂದುವರಿದ ಅಧಿವೇಶನದಲ್ಲಿ ಪರಿಶೀಲಿಸಲ್ಪಟ್ಟಿತು. ಇವುಗಳ ವಿಚಾರದಲ್ಲಿ ವರ್ತಕರುಗಳಿಂದ ಬಂದಿದ್ದ ಅಹವಾಲುಗಳನ್ನೂ ಸಹ ಪರಿಶೀಲಿಸಲಾಯಿತು. ಬಾಡಿಗೆಗಳನ್ನು ಶೇ ... ಎನ್ನುವಾಗಿ ... ರಷ್ಟು ಹೆಚ್ಚಿಸಿ ಉಪಸಮಿತಿಯವರು ಮಾಡಿದ್ದ ಶಿಫಾರಸುಗಳನ್ನು ಸಭೆಯು ಅಂಗೀಕರಿಸಿ ನಿರ್ಣಯವನ್ನು ಮಾಡಿತು.

ರಜಪುತಾಣಾ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ

ಗೆಜೆಟ್] [ಜಯಪುರ ೩.

ರಜಪುತಾಣದ ಜಯಪುರ, ಜೋಧಪುರ, ಉದಯಪುರ, ಆಳ್ವಾರ್, ಕೋಟಾ ಮೊದಲಾದ ಸಂಸ್ಥಾನಗಳು ಆಗಸ್ಟ್ ೧೫ ರ ದಿನ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಲು ನಿರ್ಧರಿಸಿವೆ. ಅಂದು ಎಲ್ಲ ಸರ್ಕಾರೀ ಕಛೇರಿಗಳಿಗೂ ರಜಾ ಕೊಡಲಾಗುವುದು. ಸರ್ಕಾರಿ ಭವನಗಳ ಮೇಲೆ ಸಂಸ್ಥಾನದ ಧ್ವಜದ ಜೊತೆಗೆ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನೂ ಸಹ ಹಾರಿಸಲಾಗುವುದು.

ಸರ್ ಬಿರುದಿನ ತ್ಯಾಗ

ರಾಜ್ಯಾಂಗ ಸಭಾ ಸದಸ್ಯರು ಯಾವ ಬಿರುದುಗಳನ್ನೂ ಹೊಂದಿರಬಾರದೆಂದು ಸಭೆಯು ಮಾಡಿರುವ ನಿಯಮದ ಮೇರೆ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು ತಮ್ಮ ಸರ್, ಸಿ. ಎಸ್. ಐ., ಸಿ. ಐ. ಇ., ದಿವಾನ್ ಬಹದ್ದೂರ್, ರಾವ್ ಬಹದ್ದೂರ್ ಮೊದಲಾದ ಪ್ರಶಸ್ತಿಗಳನ್ನೆಲ್ಲಾ ತ್ಯಜಿಸಿರುವರೆಂದು ವರದಿಯಾಗಿದೆ.

ಗಾಂಧೀಜಿಯವರ ಶ್ವೇತಶಿಲಾ ಪ್ರತಿಮೆ

ಅಮೃತ ಶಿಲೆಯಿಂದಲಾಗಲೀ ಅಥವಾ ಲೋಹದಿಂದಲಾಗಲೀ ಮಹಾತ್ಮಾ ಗಾಂಧಿಯವರ ಪ್ರತಿಮೆಯನ್ನು ಕೆತ್ತಿಸಿ ಪಟ್ಟಣ ... ಪಾರ್ಕಿನಲ್ಲಿ ಸ್ಥಾಪಿಸಬೇಕೆಂದು ಇ... ಕಾಂಗ್ರೆಸ್ಸಿನ ಸಮಿತಿಯ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತೀರ್ಮಾನಿಸಲಾಗಿದೆಯೆಂದು ವರದಿಯಾಗಿದೆ.

ಪೆರುಗ್ವೆಯಲ್ಲಿ ಅಂತರ್ಯುದ್ಧ

ಪೆರುಗ್ವೆಯ ಉತ್ತರ ಭಾಗದಲ್ಲಿರುವ ... ಕೇಂದ್ರದಿಂದ ನದಿಯ ಮೂಲಕ ಮ... ಇಪ್ಪತ್ತು ಮೈಲಿ ದೂರ ದೋಣಿಗಳಲ್ಲಿ ಬಂದು ಪೆರುಗ್ವೆಯ ರಾಜಧಾನಿಯಾದ ಅಸನ್‌ಶಿಯಾನ್ ನಗರವನ್ನು ದಂಗೆಕೋರರು ಸುತ್ತುಗಟ್ಟಿರುವರೆಂದು ವರದಿಯಾಗಿದೆ. ದಂಗೆಕೋರರ ಕೇಂದ್ರವಾದ ಕಾನ್‌ಸೆಪ್ಸಿಯನ್ ನಗರವನ್ನೂ, ಅವರ ನಾಯಕರಾದ ಕರ್ನಲ್ ಫ್ರಾಂಕೋ ಎಂಬಾತನನ್ನೂ ತಾವು ವಶಪಡಿಸಿಕೊಂಡುದಾಗಿ ಪೆರುಗ್ವೆ ಸರ್ಕಾರವು ಪ್ರಕಟಿಸಿದ ಅನಂತರ ದಂಗೆಕೋರರು ಅದರ ರಾಜಧಾನಿಯನ್ನು ಮುತ್ತಿರುವರು. ಪೆರುಗ್ವೆ ಸರ್ಕಾರವನ್ನು ಉರುಳಿಸಲು ಇದು ಸರಿಯಾದ ಕಾಲವೆಂದೂ, ರಾಜಧಾನಿಯ ಪ್ರಜೆಗಳು ಈಗ ಸರ್ಕಾರದ ವಿರುದ್ಧವಾಗಿ ದಂಗೆ ಏಳಬೇಕೆಂದೂ ದಂಗೆಕೋರರು ರೇಡಿಯೋ ಮೂಲಕ ಪ್ರಚಾರ ನಡೆಸುತ್ತಿರುವರು.

ಸ್ವಾತಂತ್ರ್ಯ ದಿನಾಚರಣೆ ಸಂಬಂಧದಲ್ಲಿ ಭೂದಾನ

ತಮ್ಮ ಪ್ರಾಂತದಲ್ಲಿ ರಾಜಕೀಯ ಕಾರಣಗಳಿಂದ ತೊಂದರೆಗೀಡಾಗಿರುವವರೆಲ್ಲರಿಗೂ ಸರ್ಕಾರದ ಖಜಾನೆಯಿಂದ ತಲಾ ೫ ಎಕರೆ ಜಮೀನನ್ನು ಸ್ವಾತಂತ್ರ್ಯ ದಿನಾಚರಣೆಯ ನೆನಪಿಗಾಗಿ ಕೊಡಲು ಮದರಾಸ್ ಸರ್ಕಾರವು ನಿರ್ಧರಿಸಿರುವುದೆಂದು ವರದಿಯಾಗಿದೆ.

ಅಲ್ಲಾಡಿಯವರಿಂದಲೂ ಪ್ರಶಸ್ತಿಯ ತ್ಯಾಗ

ಭಾರತ ರಾಜ್ಯಾಂಗ ಸಭಾ ಸದಸ್ಯರಾದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರು ತಮ್ಮ ಸರ್ ಬಿರುದನ್ನು ತ್ಯಜಿಸಿ ಆ ಬಗ್ಗೆ ವೈಸರಾಯರಿಗೆ ಪತ್ರ ಬರೆದಿರುವರೆಂದು ವರದಿಯಾಗಿದೆ. ಶ್ರೀ ಸಿ. ಆರ್. ರೆಡ್ಡಿಯವರೂ ಸಹ ತಮ್ಮ ಪ್ರಶಸ್ತಿಯನ್ನು ತ್ಯಜಿಸಿದವರು.

ಕತ್ತರಿಸಿದ ಕೈ ಸಮೇತ ಪೋಲೀಸ್ ಠಾಣೆಗೆ

ಹೊರಪಿನ ಬಳಿಯ ... ನಾರಾಯಣ ... ಹಳ್ಳಿಯ ... ವೆಂಕಟಪ್ಪ ಎಂಬಾತನು ... ಹೋಗುತ್ತಿದ್ದ ... ವನ್ನು ... ಎಂಬಾತನ ... ವನ್ನು ಕಡಿದು ಹಾಕಿ ಆ ಕೈಯನ್ನೂ ತೆಗೆದುಕೊಂಡು ಹೋಗಿ ತಾನು ಅದನ್ನು ಕತ್ತರಿಸಿಹಾಕಿದುದಾಗಿ ಹೊರಪಿನ ನ್ಯಾಯಾಧಿಕಾರಿಗಳ ಬಳಿ ... ದನೆಂದು ವರದಿಯಾಗಿದೆ.

ದೇವಾಲಯದಲ್ಲಿ ಕರಡಿ

ಕೆಲವು ಘಳಿಗೆಗಳ ಕಾಲ ತನ್ನ ಯಜಮಾನನಿಂದ ಬಿಡುಗಡೆ ಹೊಂದಿದ ಕರಡಿಯೊಂದು ಲಕ್ನೋ ನಗರದ ದೇವಾಲಯವೊಂದರಲ್ಲಿ ನುಗ್ಗಿ ಅಲ್ಲಿದ್ದ ಭಕ್ತಾದಿಗಳನ್ನೆಲ್ಲಾ ಗಾಬರಿಗೊಳಿಸಿತೆಂದು ವರದಿಯಾಗಿದೆ. ಅದು ಅರ್ಚಕನ ಯಜಮಾನನನ್ನು ... ಕೋಣೆಯೊಂದರಲ್ಲಿ ಭದ್ರವಾಗಿ ... ಅನಂತರ ಪೋಲೀಸರು ಅದನ್ನು ಪುನಃ ಹಿಡಿದಿರುವರು.

ಒ... ಸ್ವಾತಂತ್ರ್ಯವು ಭಾರತ ಯೂ...

ಸಾಧ್ವಿ

ತಾ॥ ೬-೮-೪೭ ಬುಧವಾರ

ಹೆಂಪದ ಜಾತ್ರೆ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ದೇವದಾಸ್‌ರವರು ಬರೆದಿರುವ ಮೇಲ್ಕಂಡ ಶಿರೋನಾಮೆಯ ಪತ್ರವನ್ನು ನಿನ್ನೆ ಪ್ರಕಟಿಸಿರುತ್ತೇವೆ. ಪ್ರಜೆಗಳ ಶಾಂತಿ ಸಮಾಧಾನಗಳಿಗೆ ಭಂಗ ತರುತ್ತಿರುವ ಈ ವಿಷಯದಲ್ಲಿ ನಮ್ಮ ಸರ್ಕಾರದವರು ಇನ್ನೂ ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳದಿರುವುದು ಆಶ್ಚರ್ಯಕರವಾಗಿದೆ. ಆಗರ-ಮಾಂಬಳ್ಳಿಯ ನಿವಾಸಿಗಳು ಅನೇಕಾವರ್ತಿ ಸದರಿ ವಿಷಯವಾಗಿ ಮೇಲಧಿಕಾರಿಗಳಿಗೆ ಅರ್ಜಿಗಳನ್ನೂ ಸಹ ಬರೆದಿರುವುದಾಗಿ ಗೊತ್ತಾಗಿದೆ. ಆದರೂ ಯಾವ ಪರಿಹಾರವೂ ದೊರೆತಿರುವುದಿಲ್ಲ.

ನೆರೆಯ ಪ್ರಾಂತದಲ್ಲಿ ಜಾರಿಗೆ ಬಂದಿರುವ ಪಾನ ನಿರೋಧದ ಕಾರ್ಯಾಚರಣೆಯ ಪ್ರತಿಕ್ರಿಯೆಯು ನಮ್ಮ ಸಂಸ್ಥಾನದ ಪ್ರಜೆಗಳ ಮೇಲೆ ಇಂತಹ ಆಘಾತವನ್ನುಂಟು ಮಾಡುವಂತಾಗಿರುವುದು ಒಂದು ದೌರ್ಭಾಗ್ಯವೇ ಸರಿ. ಪಾನ ನಿರೋಧದಿಂದ ತಮ್ಮ ಪ್ರಾಂತದಲ್ಲಿ ಉಂಟಾಗಿರುವ ನಷ್ಟವನ್ನು ... ಸರ್ಕಾರದವರು ನೆರೆ ... ಯಿಂದ ... ದಿರುವ... ಆದರೆ ... ದುಷ್ಪರಿಣಾಮವು ನಮ್ಮ ದೇಶದ ಜನರ ಮೇಲೆ ಆಗುತ್ತಿರುವುದು ಯಾವ ದುಷ್ಕರ್ಮದ ಫಲವೋ ಗೊತ್ತಿಲ್ಲ. ನೆರೆಯ ಪ್ರಾಂತದಲ್ಲಿ ಮದ್ಯಪಾನ ನಿಷೇಧವಿರುವುದರಿಂದ ಅಲ್ಲಿನ ಜನರು ... ದಂಡವಾಗಿ ನಮ್ಮ ಎಲ್ಲೆಕಟ್ಟಿನೊಳಗೆ ಬಂದು ವಿಪರೀತವಾಗಿ ಮದ್ಯಪಾನ ಮಾಡಿ ಹೋಗುತ್ತಿರುವರು. ಇಂತಹವರ ಮೇಲೆಯೂ ಅಲ್ಲಿನ ಸರ್ಕಾರದವರು ... ಹಾಕಿರುವರು. ... ಕುಡಿದು ಬರುವವರನ್ನು ... ಮಾಡಿ ಕೂಡಲೇ ಶಿಕ್ಷೆಯನ್ನೂ ವಿಧಿಸುತ್ತಿರುವರು. ಹೊರಗಿನ ಪ್ರಾಂತದವರು ತಮ್ಮ ಪ್ರಜೆಗಳ ಮೇಲೆ ಇಷ್ಟು ... ರುವಾಗ ನಮ್ಮ ಸಂಸ್ಥಾನದ ... ಗಳಿಗೆ ಬಂತವರ ಮೇಲೆ ಯಾವ ... ವನ್ನೂ ನಮ್ಮ ಸರ್ಕಾರದವರು ಮಾಡದೆ ತಮ್ಮ ಪ್ರಜೆಗಳನ್ನೂ ... ಗಳ ಹಾವಳಿಗೆ ಈಡು ಮಾಡುವುದು ... ಸರಿಯಲ್ಲ.

ಈ ವಿಷಯದಲ್ಲಿ ಸ್ಥಳೀಯ ಅಧಿಕಾರಿಗಳು ಅತ್ಯಂತ ಉದಾಸೀನತೆಯಿಂದ ಇರುವುದಾಗಿ ಕಂಡುಬರುತ್ತದೆ. ಜಿಲ್ಲಾಧಿಕಾರಿಗಳಾದರೂ ಇದಕ್ಕೆ ಗಮನ ಕೊಟ್ಟಿದ್ದರೋ ಇಲ್ಲವೋ ತಿಳಿಯದು. ಈ ವಿಷ್ಣು ಹೆಂಡದ ವ್ಯಾಪಾರವು ಒಂದಕ್ಕೆ ನಾಲ್ಕರಷ್ಟು ನಡೆದು ... ಹೆಂಡದ ಗಡಿಗೆಗಳ ಪ್ರದರ್ಶನವೇ ಸಾಗುತ್ತಿದೆ. ... ಕಂಡ ಕಡೆಗಳಲ್ಲೆಲ್ಲಾ ಹೆಂಡ ಕುಡುಕರ ... ವಾಗಿವೆ ... ನಿವಾಸಿಗಳ ... ಗಳ ಚಲನವಲನಗಳಿಗೆ ಅಡೆತಡೆಯುಂಟಾಗಿದೆ. ಈ ಪರಿಸ್ಥಿತಿ ... ಮಾದರೀ ಸಂಸ್ಥಾನದ ಪ್ರಜೆಗಳಿಗೆ ... ಪರಿಣಾಮಕರವಾಗಿ ... ವ ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಯಲ್ಲಿ ... ವ ಪಾನ ನಿರೋಧ ಕಾರ್ಯವು ... ನಮ್ಮಲ್ಲಿ ... ಸಂಪೂರ್ಣವಾಗಿ ... ವುದಾಗಿ ನಮ್ಮ ... ಮಂತ್ರಿ...

ಹೊಸ ಪ್ರಮಾಣ ವಚನ

ಇನ್ನು ಮುಂದೆ ಬ್ರಿಟಿಷ್ ಸಾರ್ವಭೌಮರಿಗೆ ರಾಜಭಕ್ತಿಯನ್ನು ಸಲ್ಲಿಸಿ ಪ್ರಮಾಣ ವಚನವನ್ನು ಸ್ವೀಕರಿಸುವ ಪದ್ಧತಿಯು ರದ್ದಾಗುವುದೆಂದೂ ಆಗಸ್ಟ್ ೧೫ ರಿಂದ ಭಾರತಕ್ಕೆ ಅಧಿಕಾರವು ಬರುವುದರಿಂದ ಗೌರ್ನರರೂ, ಪ್ರಾಂತೀಯ ಸಚಿವರೂ, ಹೊಸದಾಗಿ ಭಾರತಕ್ಕೆ ವಿಧೇಯಯನ್ನು ಸೂಚಿಸುವ ಪ್ರಮಾಣ ವಚನವನ್ನು ಕೆಗೆದುಕೊಳ್ಳಬೇಕಾಗುವುದೆಂದೂ, ಮದರಾಸಿನ ಪ್ರಧಾನಿ ಶ್ರೀ॥ ಓಮಂದೂರು ರಾಮಸ್ವಾಮಿ ರೆಡ್ಡಿಯವರು ತಿಳಿಸಿರುವರು.

ಉಚಿತ ರಾಷ್ಟ್ರಧ್ವಜಗಳ ಹಂಚಿಕೆ

ಬೆಂಗಳೂರಿನ ಲಿಂಗಶೆಟ್ಟಿ ಪೇಟೆಯಲ್ಲಿರುವ ಈಶ್ವರ ಹಾಲ್ ಬಳಿ ಅಂಗಡಿಯ ಮಾಲೀಕರಾದ ಶ್ರೀ ಟಿ. ಗಂಗಾಧರಪ್ಪನವರು ಆಗಸ್ಟ್ ೧೫ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಬೆಂಗಳೂರು ನಗರದ ಮತ್ತು ದಂಡಿನ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೂ ಉಚಿತವಾಗಿ ಹೊಸ ರಾಷ್ಟ್ರಧ್ವಜವನ್ನು ಕೊಡಲು ನಿರ್ಧರಿಸಿರುವರೆಂದು ಗೊತ್ತಾಗಿದೆ.

ಒಬ್ಬ ಯೆಹೂದ್ಯನಿಗೆ ಒಬ್ಬ ಆಂಗ್ಲ ಯೋಧನ ಪ್ರಾಣ

ಬ್ರಿಟಿಷರು ಮರಣ ದಂಡನೆ ವಿಧಿಸುವ ಪ್ರತಿಯೊಬ್ಬ ಯೆಹೂದ್ಯನ ಪ್ರಾಣಕ್ಕೆ ಪ್ರತಿಯಾಗಿ ಒಬ್ಬ ಬ್ರಿಟಿಷ್ ಯೋಧನ ಪ್ರಾಣವನ್ನು ಅಪಹರಿಸುವುದಾಗಿ ಯಹೂದ್ಯರ ಸ್ವಾಂತ ಪಕ್ಷವು ರೇಡಿಯೋ ಮೂಲಕ ಪ್ರಚಾರ ಮಾಡಿದೆಯೆಂದು ವರದಿಯಾಗಿದೆ. ಈ ಬಗ್ಗೆ ಹಸ್ತ ಪತ್ರಿಕೆಗಳನ್ನೂ ಸಹ ಹಂಚಲಾಗುತ್ತಿದೆ.

ಈಗ ಹೇಳುತ್ತಲೇ ಇದ್ದಾರೆ. ಆದರೆ ಈಗ ಮೇಲ್ಕಂಡ ಸ್ಥಳದಲ್ಲಿ ನಡೆಯುತ್ತಿರುವ ಪ್ರಸಂಗವು ಅದಕ್ಕೆ ತೀರ ವ್ಯತಿರೇಕವಾಗಿರುತ್ತದೆ. ಇದರಿಂದ ಮದ್ರಾಸ್ ಪ್ರಾಂತದೊಡನೆ ಸಹಕರಿಸದೆ ಇರುವುದು ಮಾತ್ರವೇ ಅಲ್ಲದೆ ಅಲ್ಲಿನ ಅಪರಾಧಿಗಳಿಗೆ ಇಲ್ಲಿ ಉತ್ತೇಜನವನ್ನೂ ಸಹ ಇತ್ತಂತಾಗಿರುತ್ತದೆ.

ಸಂಸ್ಥಾನದ ಹಳ್ಳಿ ಹಳ್ಳಿಗಳಲ್ಲಿ ನಡೆಯುತ್ತಿರುವ ಅಕ್ರಮ ಪ್ರವರ್ತನೆಗಳನ್ನು ರೆವಿನ್ಯೂ ಮಂತ್ರಿಗಳು ತಮ್ಮ ಅನಿರೀಕ್ಷಿತ ಭೇಟಿಗಳಿಂದ ಪರೀಕ್ಷಿಸಿ ತಕ್ಕ ಬಂದೋಬಸ್ತು ಮಾಡಲು ತೊಡಗಿರುವರಷ್ಟೆ. ನಮ್ಮ ಆರೋಗ್ಯ ಮಂತ್ರಿಗಳಾದ ಡಾ॥ ರಾಜುರವರೂ ಸಹ ಈ ಪ್ರದೇಶಕ್ಕೆ ಮೇಲ್ಕಂಡ ರೀತಿಯಲ್ಲಿ ಅನಿರೀಕ್ಷಿತ ಭೇಟಿಯನ್ನು ಕೊಟ್ಟು ಈ ಹಾವಳಿಯನ್ನು ತಪ್ಪಿಸಿ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಬಾರದೆ?

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply I. N. D., Basavanagudi, Bangalore

ವಿದ್ಯಾರ್ಥಿಗಳ ಮನವಿ

ಮೈಸೂರು ೬

ಆಗಸ್ಟ್ ೧೫ರ ದಿನ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ನೆರವೇರಿಸಲು ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯು ನಿರ್ಧರಿಸುತ್ತದೆ. ಪ್ರಮುಖ ನಾಯಕರನ್ನು ಆಹ್ವಾನಿಸಿ ಭಾಷಣಗಳನ್ನೇರ್ಪಡಿಸಬೇಕೆಂದೂ, ರಾಷ್ಟ್ರ ಧ್ವಜವನ್ನು ಉಚಿತವಾಗಿ ಹಂಚಬೇಕೆಂದೂ, ಮೆರವಣಿಗೆಯನ್ನು ಏರ್ಪಡಿಸಬೇಕೆಂದೂ ತೀರ್ಮಾನಿಸಿರುತ್ತದೆ. ನಗರದ ಸಾರ್ವಜನಿಕರೂ, ವಿದ್ಯಾರ್ಥಿಗಳೂ ಈ ಕಾರ್ಯವು ಯಶಸ್ವಿಯಾಗಿ ನಡೆಯಲು ಧನ ಸಹಾಯ ಮಾಡಬೇಕೆಂದು ಸ್ವಾತಂತ್ರ್ಯ ದಿನಾಚರಣಾ ಸಮಿತಿಯ ಸಂಚಾಲಕರು ಪ್ರಾರ್ಥಿಸಿರುವರು.

ಪ್ರಬಂಧ ಸ್ಪರ್ಧೆ

ಮೈಸೂರಿನ ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯು ಸ್ವಾತಂತ್ರ್ಯ ದಿನಾಚರಣೆಯ ಮಹತ್ವ—ಎಂಬ ವಿಷಯವಾಗಿ ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿರುತ್ತದೆ. ಪ್ರಬಂಧವು ಫೂಲ್ಸ್‌ಕೇಪ್ ೧೦ ಪುಟಗಳಿಗೆ ಮೀರದಂತೆಯೂ ೫ ಪುಟಗಳಿಗೆ ಕಡಿಮೆ ಇಲ್ಲದಂತೆಯೂ ಇರಬೇಕು. ಎಲ್ಲ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೂ ಸ್ಪರ್ಧಿಸಬಹುದು. ಪ್ರಬಂಧಗಳನ್ನು ೧೨ ನೇ ತಾ॥ ಸಂಜೆಯೊಳಗಾಗಿ ಬಿ. ಎಂ. ಪಿ. ಬಸ್ಸಾಲ್ ೬, ಮಹಾರಾಜಾ ಕಾಲೇಜ್ ಹಾಸ್ಟಲ್, ಮೈಸೂರು, ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ. ಉತ್ತಮವಾದ ಪ್ರಬಂಧಕ್ಕೆ ಬಹುಮಾನವನ್ನು ಕೊಡಲಾಗುವುದು.

ಧರ್ಮಪ್ಪನವರು ಹಾಸನ ಜಿಲ್ಲಾ ಬೋರ್ಡಿನ ಅಧ್ಯಕ್ಷರು

ಹಾಸನ ಜಿಲ್ಲಾ ಬೋರ್ಡಿನ ಅಧ್ಯಕ್ಷತೆಗೆ ನಡೆದ ಚುನಾವಣೆಯಲ್ಲಿ ಶ್ರೀ ವೈ. ಧರ್ಮಪ್ಪನವರು ಜಯಶಾಲಿಗಳಾಗಿರುವರು.

ಪ್ರತಿ ದಿನ ೩ ಆಟಗಳು

6—8—47 ನೇ ಬುಧವಾರದಿಂದ

ಶರ್‌ಬತಿ — — ಅಂಖಿ

ಪಾತ್ರ :- ವನಮಾಲ, ಈಶ್ವರಲಾಲ್, ಪರೀಕ್‌ಷ ಮತ್ತು ಆಘಾ ಇತರರು

ಒಲಿಂಪಿಯಾ ಟಾಕೀಸ್, ಮೈ ಸೂ ರು.

Edited printed and published by A. K. Nagarajan at the Sadhvi Press D. Subbaiah Road Mysore

ಆಗಸ್ಟ್ ೯ ಕ್ಕೆ ನಿಜಾಮ ವಿರುದ್ಧ ದಿನಾಚರಣೆ

ಸ್ವತಂತ್ರ ಬೇರಾರ್ ಸಮಿತಿ ... ಗಸ್ಟ್ ೯ ನೇ ತಾ॥ ಹೈದರಾಬಾದ್ ... ಮರ ವಿರುದ್ಧ ದಿನಾಚರಣೆಯನ್ನು ... ಲು ನಿರ್ಧರಿಸಿರುವರು. ಅದರ ... ವಹಿಸಬೇಕೆಂದು ಕೋರಿ ಡಾ॥ ... ರ್, ಜೈ ಪ್ರಕಾಶ್ ನಾರಾಯಣ್ ... ಶ್ರೀ ಬ್ರಿಜಲಾಲ್ ಬಿಯಾಣಿಯವ... ತಿಯು ಪತ್ರ ಬರೆದಿದೆ.

ಚಿನ್ನದಗಣಿ ಕೆಲಸಗಾರರ ಮುಷ್ಕರವೇ?

ಕೂಲಿಗಾರರ ಬೇಡಿಕೆಗಳನ್ನು ... ರದ ಚಿನ್ನದ ಗಣಿಯ ಆಡಳಿತ ... ರು ಈಡೇರಿಸದಿರುವ ಬಗ್ಗೆ ನಡೆ... ಸಂಧಾನಗಳು ವಿಫಲವಾದುವೆಂದ... ಲ್ಲಿಯೇ ಅಲ್ಲಿನ ೨೫ ಸಹಸ್ರ ... ಗಾರರು ಮುಷ್ಕರವನ್ನು ಹೂಡ... ದೂ ತಿಳಿದು ಬಂದಿದೆ.

ವುಡ್‌ಲ್ಯಾಂಡ್ಸ್

1-8-47 ರಿಂದ ಕಿಕ್ಕಿರಿದ ೧೪ ನೇ ... ಪ್ರತಿ ದಿನ ೨ ಆಟ... (ಶನಿವಾರ ಮತ್ತು ಭಾನುವಾರ ... ಉಂಟು)

ನಾವು ಇಬ್ಬ...

:- ಪಾತ್ರ :- ಟಿ. ಆರ್. ಮಹಾಲಿಂಗಂ ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರನ್ ಮುಂತಾದ...

ರಾಜಕಮಲ್

ತಾ॥ 1-8-47 ರಿಂ... ಅಮೋಘ ೩ ನೇ ವಾ...

★ ಕಿಸ್ಮತ್

—: ಪಾತ್ರಗಳು :— ಮಮ್ತಾಜ್ ಶಾಂತಿ, ಅಶೋಕ್ ಕುಮಾರ್, ಷಾನವಾಜ ಮುಂತಾದವರು

8-8-47 ರಿಂದ

ಮಹಾನಂದ

(ಕನ್ನಡದಲ್ಲಿ)

ಹೊಸ ನಾಟಕ ಶ್ರೀ ಹೊಸ

ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ

ಹುಲಗೇರಿ, ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ — ಈ ದಿನ ರಾತ್ರಿ ೧೦-೩೦ ಗ...

ಸ್ವತಂತ್ರ ಭಾರತದ ಮಂಗಲ ದೃಶ್ಯಗಳಿಂದ ಕೂಡಿದ ಸಾಮಾಜಿಕ ನಾಟ...

★ ಬಡತನದ ಭೂತ ★

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

೩ ನೇ ವಾರ ಮ್ಯಾಟನಿ ಉಂಟು :: ಚನ್ನಶೆಟ್ಟಪ್ಪ, ಪ್ರೊಪ್ರೈಟ...

ಫೋನ್ ನಂ 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಗುರುವಾರ ೭—೮—೪೭ [ಸಂಚಿಕೆ ೧೭೭

ರಾಜ್ಯಾಂಗ ಸಭೆಗೆ ಸೇರಿದ್ದಕ್ಕೆ ರಾಂಪುರದಲ್ಲಿ ದೊಂಬಿ

...ಸೂರಿನ ರಾಜಕೀಯ ...ತಿಯ ಬಗ್ಗೆ ಅತೃಪ್ತಿ

...ಸಂ.ಯ ರೆಡ್ಡಿಯವರ ಪತ್ರಿಕಾ ಸಮ್ಮೇಳನ

ಫೋನ್] [ಬೆಂಗಳೂರು ೭

...ಯುಂದವೆಲ್ಲವೂ ಸ್ವಾತಂತ್ರ್ಯ ಸಾಧ ...ಕಡೆಗೆ ಮುಂದೆ ಸಾಗುತ್ತಿರುವಾಗ ...ವಾತ್ರ ಸ್ವಲ್ಪವೂ ಅಲುಗಾಡ ...ದಲ್ಲಿಯೇ ಇರುವುದು ಬಹಳ ಆಶ್ಚ ...ಗಿರುವುದೆಂದೂ, ಈ ಬಗ್ಗೆ ಪ್ರ ...ವರು ಕೂಡಲೇ ಸೂಕ್ತವಾದ ಕಾ ...ನುನನ್ನು ಕೈಗೊಂಡು ಕಾಲಕ್ಕೆ ತ ...ಲ್ಲಿಯೂ ಬದಲಾವಣೆಗಳನ್ನು ಮಾ ...ಪ್ರಜೆಗಳ ಹಕ್ಕು, ಬಾಧ್ಯತೆಗಳ ...ಗಾಗಿ ಆಂದೋಳನವನ್ನು ನಡೆಸ ...ವುದೆಂದೂ ಮೈ॥ ಕಾಂ॥ ಅಧ್ಯಕ್ಷ ...ಕೆ. ಚೆಂಗಲರಾಯರೆಡ್ಡಿಯವರು ...ದೆಸಿದ ಪತ್ರಿಕಾ ಸಮ್ಮೇಳನದಲ್ಲಿ ...ದರು. ದೆಹಲಿಯಲ್ಲಿ ಈಗ ಉಂಟಾ ...ಸ್ವತಂತ್ರ ವಾತಾವರಣವನ್ನು ಅವ ...ಯಂಗವಾಗಿ ವರ್ಣಿಸಿದರು. ಮುಂ ...ಸು ಅವರು ಹೀಗೆ ತಿಳಿಸಿದರು:— ...ನೇ ತಾರೀಖಿನಿಂದ ನಮ್ಮ ದೇಶ ...ತಂತ್ರವಾಗುವುದು. ಅನೇಕ ಸಂ ...ಳು ಈಗಾಗಲೇ ಭಾರತ ಯೂನಿ ...ನಲ್ಲಿ ಸೇರಿರುವುದು. ಮೈಸೂರೂ ...ಕಡಲೇ ಸೇರಲೆಂದು ನಾನು ಹಾರೈ ...ತೆ. ಇಲ್ಲದಿದ್ದರೆ ಮೈಸೂರಿಗೆ ಅ ...ತಿಯು ತಪ್ಪಿದ್ದಲ್ಲ. ಇದಕ್ಕೆ ಮೈ ...ಮು ಅವಕಾಶ ಕೊಡುವುದಿಲ್ಲ ಹಳೆ ...ಯೋಜನವನ್ನು ತೊರೆದು ಹೊಸ ...ನ್ನ ಜಾರಿಗೆ ತರಬೇಕು. ಪ್ರ ...ನ್ನ ಪತ್ರಕ್ಕೆ ಅನುಗುಣವಾಗಿ ಇಲ್ಲಿ ...ಜ್ಯಪದ್ಧತಿಯನ್ನು ಬದಲಾಯಿಸಿ ...ನ ಮಂತ್ರಿಮಂಡಲವನ್ನು ಕೂಡಲೇ ...ಮಾಡಬೇಕು. ಪ್ರಜಾಪ್ರತಿನಿಧಿಗಳ ...ಡೆದ ಮಂತ್ರಿಮಂಡಲವನ್ನು ಸ್ಥಾ ...ಕು. ಕಾಂಗ್ರೆಸಿನಲ್ಲಿರುವ ಶ್ರೀ ...ಂತಯ್ಯ ಮತ್ತು ಇತರ ರಾಜಕೀ ...ದಿಗಳನ್ನು ಬಿಡುಗಡೆ ಮಾಡಬೇಕು. ...ಸರ್ಕಾರದವರು ಬುದ್ಧಿವಂತಿಕೆಯಿಂದ ...ಮುಂದಾಲೋಚನೆಯಿಂದಲೂ ವ ...ಕು. ಕಾಲಪರಿಣಾಮ ಮತ್ತು ಅ ...ದಿಯ ನೀತಿಯನ್ನು ತ್ಯಜಿಸಬೇಕು. ...ಅವರನ್ನು ಎಚ್ಚರಿಸುತ್ತ ಪರಿಸ್ಥಿತಿಯು ...ಸಮಾಧಾನಗೊಳಿಸಲು ಕಾಲವು ...ವುದಿಲ್ಲ — ಎಂದು ಶ್ರೀ ರೆಡ್ಡಿ ...ಹೇಳಿದರು. ...ಲಿನ ಪೇಟೆಯಲ್ಲಿ ಸತ್ಯಾಗ್ರಹದ ...ರುವನ್ನು ಮಾಡಿ ಅದನ್ನು ಇನ್ನೂ ...ಲ್ಲಿಸಿರುವುದರಿಂದ ಕಾಂಗ್ರೆಸ್ಸಿನ ...ಹ ಕಾಲಹರಣದ ನೀತಿಯನ್ನೇ

ಪ್ರತಿ ದಿನ ೩ ಆಟಗಳು

...—47 ನೇ ಬುಧವಾರದಿಂದ

ರಾಬತ್ತಿ — — ಡೊಂಬಿ

...ವಸಂತಸೇನ, ಈಶ್ವರಲಾಲ್, ...ನ್ ಮತ್ತು ಆರು ಇತರರು

ಲಿಂಪಿಯಾ ಟಾಕೀಸ್, ಮೈಸೂರು.

ಸರ್ಕಾರೀ ಕಟ್ಟಡಗಳ ಮೇಲೆ ಮೈಸೂರು ಧ್ವಜ

ಸ್ವಂ.ಸು ಫೋನ್] [ಬೆಂಗಳೂರು ೭

ಸ್ವಾತಂತ್ರ್ಯ ದಿನಾಚರಣೆಯು ಪ್ರಯು ಕ್ತ ೧೫ ನೇ ತಾರೀಖು ಎಲ್ಲಾ ಸರ್ಕಾರೀ ಕಟ್ಟಡಗಳ ಮೇಲೆಯೂ ಮೈಸೂರು ಗಂಡ ಭೇರುಂಡ ಧ್ವಜವನ್ನು ಹಾರಿಸುವಂತೆ ಸರ್ಕಾರದವರು ಆಜ್ಞೆಮಾಡಿರುವರು.

೧೫-೧೬ ನೇ ತಾರೀಖು ರಜಾ

ಈ ತಿಂಗಳು ೧೫ ಮತ್ತು ೧೬ ನೇ ತಾರೀಖುಗಳು ಭಾರತ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಸಂಸ್ಥಾನದಲ್ಲಿ ಸಾರ್ವಜನಿಕ ರಜಾ ದಿನಗಳೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ಬ್ಯಾಂಕು ಮತ್ತು ಜಾಯಿಂಟ್ ಸ್ಟಾಕ್ ಸಂಸ್ಥೆಗಳಿಗೆ ೧೫ ನೇ ತಾ॥ ಮಾತ್ರ ರಜಾ ಕೊಡುವಂತೆ ಆಜ್ಞೆಯಾಗಿದೆ.

ಗ್ರಾಂಟ್ ಶಾಲಾ ಅಧ್ಯಾಪಕರಿಗೆ ಹೆಚ್ಚಿನ ತುಟ್ಟಿಭತ್ಯ

ಸಂಸ್ಥಾನದ ಎಲ್ಲಾ ಏಡೆಡ್ ಸ್ಕೂಲುಗಳ ಉಪಾಧ್ಯಾಯರಿಗೂ ಸರ್ಕಾರದವರು ಈಗ ಕೊಡುತ್ತಿರುವ ೫ ರೂ ತುಟ್ಟಿಭತ್ಯವನ್ನು ೭-೮-೦ ರೂ. ಗೆ ಹೆಚ್ಚಿಸಿರುವರು.

ದಿವಾನರಿಂದ ಧ್ವಜಾರೋಹಣ

ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ದಂಡಿನ ಪೆರೇಡಿನಲ್ಲಿ ಏರ್ಪಡಿಸಿದ್ದ ಉತ್ಸವದಲ್ಲಿ ದಿವಾನರಾದ ಸರ್ ಆ ಮ. ಸ್ವಾಮಿ ಮೊದಲಿಯಾರವರಿಂದ ೧೫ ನೇ ತಾರೀಖು ರಾಷ್ಟ್ರೀಯ ಧ್ವಜಾರೋಹಣವನ್ನು ನಡೆಸಬೇಕೆಂದೂ, ಅವರಿಗೆ ಮಾನವಂದನವನ್ನು ಅರ್ಪಿಸಬೇಕೆಂದೂ ನಿರ್ಧರಿಸಿರುವರು.

ಧಂಜರ್ ಹಬ್ಬಕ್ಕೆ ಬಹಿಷ್ಕಾರ

ಮೈಸೂರು ೭

ಮೈಸೂರು ನಗರದ ಶ್ರೀಗಳಾದ ಪರುರಾಮ್ ಹಾಲ್, ಸೋಷಲ್ ಇಂದಾಜ, ಕೇಸರಿ ಮಲ್‌ಪ್ರೇಮ್‌ಜ್ಯಸ್ಸೆಯ್ಯದ್ ಖ್ವಜಾ ಮಹಮ್ಮದ್ ಸಾಹೇಬ್, ಸಿ ಎಸ್. ವೆಂಕಟರಮಣ ಶೆಟ್ಟಿ, ಮಿಸ್ತ್ರಿ ಮಲ್ ಓಮ ತ್ ನುಲ್, ಇ ಪಿ ನಂಜಪ್ಪ, ಮಿರ್ ಸ ಫ್ದರ್ ಅಲಿಯವರಲ್ಲಿಯೂ ಮೈಸೂರು ಜಿಲ್ಲೆಗೆ ಗುಲಾಂ ದಸ್ತಗೀರ್‌ಖಾನ್, ಎಂ ಎಲ್ ಶ್ರೀನಿವಾಸರಾವ್, ಫ್ರಾನ್ಸಿಸ್ ಹೌಸ್, ಮು ರ್ತಜಾ ಖಾನ್ ಆಂಡ್ ಸನ್ಸ್ ರವರಲ್ಲಿಯ ... ರಂದಾಜ ಮತ್ತು ಜನಾಂಗಗಳಿಗೆ ಇಂದಿನಿಂದ ಒಬ್ಬೆಯನ್ನು ಮೂರು ಜಿಲ್ಲಾಧಿಕಾರಿಗಳು ನಿರ್ಬಂಧಿಸಿರುವರು.

ವಿಶ್ವಸಂಸ್ಥೆಗೆ ಇಂಡೊನೇಷ್ಯದ ದೂರು

ಇಂಡೊನೇಷ್ಯದ ವಿರುದ್ಧವಾಗಿ ಡಚ್ಚರು ನಡೆಸುತ್ತಿರುವ ಯುದ್ಧವನ್ನು ಕೂಡಲೇ ನಿಲ್ಲಿಸಬೇಕೆಂದು ಭದ್ರತಾ ಸಮಿತಿಯು ಇತ್ತ ಸೂಚನೆಯನ್ನು ಉಲ್ಲಂಘಿಸಿ ಡಚ್ ಸರ್ಕಾರವು ಇನ್ನೂ ಕದನವನ್ನು ಮುಂದುವರಿಸುತ್ತಿದೆಯೆಂದು ರಿಪಬ್ಲಿಕ್ ಸರ್ಕಾರವು ವಿಶ್ವರಾಷ್ಟ್ರ ಸಂಸ್ಥೆಗೆ ದೂರುಕೊಟ್ಟಿದೆಯೆಂದು ವರದಿಯಾಗಿದೆ.

LATEST NEWS

ಸ್ವಂ.ಸು ಫೋನ್] [ಬೆಂಗಳೂರ ೭

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ತಿಸ್ತಿನ ಕ್ರಮಕ್ಕೆ ಗುರಿಯಾಗಿರುವವರಲ್ಲಿ ೩ ಜನರ ಪರವಾಗಿ ಈ ದಿನ ಅಡ್ವೋಕೇಟ್ ಶ್ರೀ ಎಸ್ ಕೆ ವೆಂಕಟರಂಗೈಯ್ಯಂಗಾರ್‌ರು ಪರಿಹಾರಕ್ಕಾಗಿ ಸಬ್ ಜಡ್ಜರ ಕೋರ್ಟಿನಲ್ಲಿ ದಾವಾ ಹೂಡಿರುವರು.

ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಲು ಅಪೇಕ್ಷಿಸುವ ಮೈನರ್ ಪೌರಸಭೆಗಳು ೩೦೦ ರೂ ಮೇಜರ್ ಪೌರಸಭೆಗಳು ೫೦೦ ರೂ ಗಳಿಗೆ ಮೀರದಂತೆ ವೆಚ್ಚವನ್ನು ಮಾಡಬಹುದೆಂದು ಸರ್ಕಾರದವರು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ಇತ್ತಿದ್ದಾರೆ.

ಆದ ರಿಸಿಮರಿಸಿಗಿಲ್ಲವೇ? - ಎಂದು ಹಾಗಿ ಇಬ್ಬರ ಕೇಳಿದ ಪ್ರಶ್ನೆಗೆ ಶಾಸನ ಬದ್ಧವಾದ ಎಲ್ಲಾ ಮಾರ್ಗಗಳನ್ನೂ ನಾವು ಮುಗಿಸಿ ಬೇಕಾಗಿದೆ ಮತ್ತು ಎಲ್ಲಾ ವಿಷಯಗಳನ್ನೂ ಅಖಿಲ ಭಾರತ ರಾಷ್ಟ್ರ ನಾಯಕರವರಿಂದಿಟ್ಟು ಅವರ ಒಪ್ಪಿಗೆಯಂತೆಯೇ ನಡೆಯುತ್ತಿದ್ದೇವೆ ಎಂದು ಶ್ರೀ ರೆಡ್ಡಿಯವರು ತಿಳಿಸಿದರು.

ಭಾರತ ಡೊಮಿನಿಯನ್ ಮಂತ್ರಿ ಮಂಡಳ

ಆಗಸ್ಟ್ ೧೫ರಿಂದ ರಚಿತವಾಗಲಿರುವ ಭಾರತ ಡೊಮಿನಿಯನ್ನಿನ ಸಚಿವರ ಪಟ್ಟಿಯನ್ನು ಮೊನ್ನೆ ವೈಸರಾಯರಿಗೆ ಒಪ್ಪಿಸಲಾಯಿತೆಂದು ವರದಿಯಾಗಿದೆ. ಶ್ರೀ ಸಿ. ರಾಜಗೋಪಾಲಾಚಾರ್ಯರ ಹೊರತು ಈಗಿರುವ ಎಲ್ಲ ಸಚಿವರೂ ಮುಂದುವರಿಯುವರು. ಡಾ॥ ಅಂಬೇಡ್ಕರ್, ರಾಜಕುಮಾರಿ ಅಮೃತಕೌರ್, ಪಿ॥ ಸಿ ಆರ್ ಷ. ಮ್ ಚಟ್ಟಿ, ಶ್ರೀ ಎನ್ ವಿ ಗಾಡ್ಗೀಳ್ ಮತ್ತು ಡಾ॥ ಶ್ಯಾಮಪ್ರಸಾದ ಮುಖರ್ಜಿ ಇವರುಗಳ ಹೆಸರುಗಳು ಹೊಸದಾಗಿ ಸೂಚಿತವಾಗಿವೆ. ಪಂಡಿತ ನೆಹರೂರವರು ಈ ಮಂತ್ರಿಮಂಡಲದ ಪ್ರಧಾನಿಗಳಾಗುವರು ನೂತನ ಮಂತ್ರಿಮಂಡಲದಲ್ಲಿ ೧೪ ಮಂದಿ ಇರುವರು.

ಆಜಾದ್ ಸರ್ಕಾರದ ಮಂತ್ರಿ ಇಂಡೊನೇಷ್ಯದ ರಾಯಭಾರಿ

ನೇತಾಜಿ ಸುಭಾಷ್ ಚಂದ್ರ ಬೋಸರ ಆಜಾದ್ ಹಿಂದ್ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಶ್ರೀ ರಾಘವನ್‌ರವರನ್ನು ಕೆ.ಎಲ್. ಪಂಜಾಬಿಯವರ ಸ್ಥಾನದಲ್ಲಿ ಇಂಡೊನೇಷ್ಯದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗಿದೆ. ಕೆ ಎಲ್ ಪಂಜಾಬಿಯವರನ್ನು ಆಸ್ಟ್ರೇಲಿಯದಲ್ಲಿ ಭಾರತದ ಹೈಕಮೀಷನರನ್ನಾಗಿ ನೇಮಿಸಬಹುದೆಂದು ಹೇಳಲಾಗಿದೆ.

ರಾಜ್ಯಾಂಗ ಸಭೆಗೆ ಸೇರಿದ್ದಕ್ಕೆ ಮುಸ್ಲಿಮರ ದೊಂಬಿ

ಸಂಯುಕ್ತ ಪ್ರಾಂತದ ಬಳಿ ಇರುವ ರಾಮಪುರ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಯಲ್ಲಿ ಸೇರಿರುವುದನ್ನು ಪ್ರತಿಭಟಿಸುವ ಸಲುವಾಗಿ ಅಲ್ಲಿನ ಮುಸ್ಲಿಂ ಲೀಗು ಹೂಡಿದ ಚಳುವಳಿಯ ಫಲವಾಗಿ ಅಲ್ಲಿ ವಿಪರೀತ ಗಲಭೆಗಳು ನಡೆಯುತ್ತಿವೆಯೆಂದು ವರದಿಯಾಗಿದೆ. ಜನರ ಗುಂಪನ್ನು ಚದುರಿಸಲು ಪೋಲೀಸರು ಮೊನ್ನೆ ೩ ಬಾರಿ ಗುಂಡು ಹಾರಿಸಿದರು. ನವಾಬರ ಅರಮನೆ ಮತ್ತು ಎಲ್ಲ ಸರ್ಕಾರೀ ಭವನಗಳ ಸುತ್ತಲೂ ಸಶಸ್ತ್ರ ಪೋಲೀಸರ ಮತ್ತು ಮಿಲಿಟರಿಯವರ ಕಾವಲನ್ನಿಡಲಾಗಿದೆ. ಗುಂಡು ಹಾರಿಸಿದುದರ ಪರಿಣಾಮವಾಗಿ ೭ ಮಂದಿ ಮೃತರಾಗಿದ್ದಾರೆ. ಅನೇಕರಿಗೆ ಗಾಯಗಳಾಗಿವೆ. ಗಲಭೆಕೋರರು ಪೋಲೀಸ್ ಮತ್ತು ಮಿ.ಲಿಟರಿ ಕೇಂದ್ರಗಳಿಗೆ ಮುತ್ತಿ ಅವಕ್ಕೆಲ್ಲಾ ಬೆಂಕಿ ಹಚ್ಚಿರುವರು. ೭ ಮಿಲಿಟರಿ ವಾಹನಗಳನ್ನು ಸುಡಲಾಗಿದೆ. ಸರ್ಕಾರೀ ಭವನಗಳನ್ನೂ ಪೋಲೀಸ್ ಅಧಿಕಾರಿಗಳ ಮನೆಗಳನ್ನೂ ಗಲಭೆಕೋರರು ಅಗ್ನಿಗೆ ಆಹುತಿ ಮಾಡುತ್ತಿದ್ದಾರೆ. ಹೈಕೋರ್ಟಿನ ಎಲ್ಲ ಕಾಗದ ಪತ್ರಗಳನ್ನೂ ಸುಡಲಾಗಿದೆ. ಅಲ್ಲಿದ್ದ ಒಬ್ಬ ನೌಕರನೂ ಒಳಗೇ ಮೃತನಾಗಿದ್ದಾನೆ. ತಂತಿ ಮತ್ತು ಟೆಲಿಫೋನ್ ಸಂಬಂಧಗಳನ್ನೆಲ್ಲಾ ಕತ್ತರಿಸಿ ಹಾಕಿದ್ದಾರೆ. ಒಬ್ಬ ವಕೀಲನನ್ನು ಚೂರಿಯಿಂದ ಇರಿಯಲಾಗಿದೆ. ಹರಿತವಾದ ಆಯುಧಗಳು ಮತ್ತು ಬಂದೂಕಗಳ ಸಮೇತ ಗಲಭೆಕೋರರ ತಂಡವು ನಗರದ ಬೀದಿ ಬೀದಿಗಳಲ್ಲಿ ಅಲೆಯುತ್ತಿದೆ. ಅಲ್ಲಿನ ನವಾಬರು ಭಾರತ ಸರ್ಕಾರದ ಸಂಸ್ಥಾನಗಳ ಖಾತಾ ಮಂತ್ರಿಯಾದ ಸ॥ ಪಟೇಲರನ್ನು ಕಂಡು ಸೈನ್ಯ ಸಹಾಯ ಒದಗಿಸುವಂತೆ ಬೇಡಿದರೆಂದೂ, ಕೂಡಲೇ ಮಿಲಿಟರಿ ದಳಗಳನ್ನು ಅಲ್ಲಿಗೆ ರವಾನಿಸಲಾಗಿದೆಯೆಂದೂ ವರದಿಯಾಗಿದೆ. ಪರಿಸ್ಥಿತಿಯು ಈಗ ಹತೋಟಿಗೆ ಬರುತ್ತಿದೆ.

ವುಡ್‌ಲ್ಯಾಂಡ್ಸ್

8-8 47 ರಿಂದ

ಶುಕ್ರವಾರ ೧೫ ನೇ ವಾರ ಪ್ರತಿ ದಿನ ೩ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬಿ(ತಮಿಳು)

:: ಪಾತ್ರ ::

ಟಿ ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್. ರಾಮಚಂದ್ರ ಮೊದಲಾದವರು.

ಸಾಧ್ವಿ

ತಾ|| ೭-೮-೪೭ ಗುರುವಾರ

ಒಂದೇ ಧ್ವಜವು ಹಾರಾಡುವಂತಾಗಲಿ!

ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಎಲ್ಲೆಲ್ಲೂ ಧ್ವಜ ವಂದನೆಯ ಸಮಾರಂಭಗಳು ನಡೆಯುವುವಷ್ಟೆ. ಆಗ ಭರತ ಖಂಡದ ಹೊಸ ರಾಷ್ಟ್ರ ಧ್ವಜವನ್ನು ಹಾರಿಸಲು ಸಕಲ ಭಾರತೀಯರೂ ವೈಭವದ ಸಿದ್ಧತೆಗಳನ್ನು ಮಾಡುತ್ತಿರುವರು. ನಮ್ಮ ಸಂಸ್ಥಾನದಲ್ಲಿಯೂ ಸಹ ಈ ಬಗ್ಗೆ ಮಹಾಜನರು ತಕ್ಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವರು.

ಇದುವರೆಗೆ ಸಾರ್ವಜನಿಕ ಸಮಾರಂಭಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುತ್ತಿದ್ದಾಗ ಅದರೊಡನೆ ಮೈಸೂರಿನ ಗಂಡಭೇರುಂಡ ಧ್ವಜವನ್ನೂ ಸಹ ಹಾರಿಸಬೇಕೆಂತೆ ಏರ್ಪಡಿಸಲಾಗುತ್ತಿತ್ತು. ಮೈಸೂರು ಕಾಂಗ್ರೆಸ್ಸಿನ ಸ್ಥಾಪನೆಯಾದ ಮೇಲೆ ಆ ಸಂಸ್ಥೆಯು ಅಂಗೀಕರಿಸಿದ್ದ ರಾಷ್ಟ್ರಧ್ವಜದ ಆರೋಹಣೆಯ ವಿಷಯದಲ್ಲಿ ಅಧಿಕಾರಿಗಳಿಗೆ ಸಂಶಯವುಂಟಾಗಿ ಆ ಧ್ವಜದ ಮೇಲೆ ಅವರು ತೀವ್ರ ದೃಷ್ಟಿಯನ್ನು ಬೀರಿದರು. ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ಸಿನ ಮೊದಲನೆಯ ಅಧಿವೇಶನದಲ್ಲಿಯೇ ಧ್ವಜಾರೋಹಣಕ್ಕೆ ಅಡ್ಡಿಯನ್ನುಂಟುಮಾಡಿದರು. ಅನಂತರ ಇದಕ್ಕಾಗಿ ದೊಡ್ಡ ಆಂದೋಲನವು ನಡೆದು ಕಾಂಗ್ರೆಸ್ ನಾಯಕರು ಪ್ರತಿಬಂಧಕಾಜ್ಞೆಯನ್ನು ಮೀರಿ ರಾಷ್ಟ್ರಧ್ವಜವನ್ನು ಹಾರಿಸಿ ಅದರ ಕೀರ್ತಿ ಗೌರವಗಳನ್ನು ಸ್ಥಾಪಿಸಿದರು.

ತರುವಾಯ ವಿದುರಾಶ್ವತ್ಥದಲ್ಲಿ ನಡೆದ ಗುಂಡಿನೇಟಿನ ಪ್ರಕರಣದ ನಂತರ ಸರ್ದಾರ್ ವಲ್ಲಭ ಭಾಯಿ ಪಟೇಲರು ಅಂದಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲರ ಆಹ್ವಾನದ ಮೇರೆ ಸಂಸ್ಥಾನಕ್ಕೆ ಭೇಟಿಯಿತ್ತು ಕಾಂಗ್ರೆಸ್ಸಿಗೂ, ಪ್ರಭುತ್ವದವರಿಗೂ ಒಪ್ಪಂದವನ್ನು ಉಂಟುಮಾಡಿದರು. ಮೈಸೂರು ಸರ್ಕಾರದವರು ಇಲ್ಲಿನ ಕಾಂಗ್ರೆಸ್ ಸಂಸ್ಥೆಯನ್ನು ಕ್ರಮಪ್ರಕಾರವಾಗಿ ಅಂದು ಅಂಗೀಕಾರ ಮಾಡಿದರು. ಶ್ರೀಮನ್ಮಹಾರಾಜರವರಲ್ಲಿ ತಮಗಿರುವ ರಾಜಭಕ್ತಿಯನ್ನು ತೋರಿಸಲು ಕಾಂಗ್ರೆಸ್ಸಿನವರು ರಾಷ್ಟ್ರಧ್ವಜದೊಡನೆ ಮೈಸೂರಿನ ಧ್ವಜವನ್ನೂ ಸಹ ಹಾರಿಸಲು ಒಪ್ಪಿಕೊಂಡರು. ಅದರಂತೆ ಅವರು ಇಂದಿಗೂ ಆಚರಿಸುತ್ತಲೇ ಬಂದಿರುವರು.

ಈಗ ಪರಿಸ್ಥಿತಿಯೇ ಬೇರೆಯಾಗಿರುತ್ತದೆ. ನೂತನವಾಗಿ ಸ್ಥಾಪನೆಯಾಗಲಿರುವ ಭಾರತದ ಡೊಮಿನಿಯನ್ನಿನ ಸಂಕೇತರೂಪವಾಗಿ ಹೊಸ ರಾಷ್ಟ್ರಧ್ವಜವನ್ನು ಅಂಗೀಕರಿಸಲಾಗಿದೆ. ಈ ನಿರ್ಧಾರದಲ್ಲಿ ಭರತಖಂಡದ ಸಕಲ ಪ್ರಜೆಗಳೂ ಭಾಗಿಗಳಾಗಿರುವರು. ಮುಸ್ಲಿಂ ಲೀಗಿನವರೂ, ಇತರ ಜನಾಂಗಳವರೂ ಈ ಧ್ವಜವು ತಮ್ಮದೆಂದು ಹೆಮ್ಮೆಯಿಂದ ಸಾರುವರು. ರಾಜ್ಯಾಂಗ ಸಭೆಯಲ್ಲಿ ಭಾಗಿಗಳಾಗಿದ್ದ ಸಂಸ್ಥಾನದ ಪ್ರತಿನಿಧಿಗಳೂ ಸಹ ಈ ಧ್ವಜವನ್ನು ಅಂಗೀಕರಿಸಿ ಎಲ್ಲರೊಡನೆ ಎದ್ದು ನಿಂತು ತಾವೂ ಸಹ ಅದಕ್ಕೆ ಮನ್ನಣೆಯನ್ನು ಸಲ್ಲಿಸಿರುವರು.

ರಾಷ್ಟ್ರೀಯ ಧ್ವಜವು ಇಂದು ಸಂಪೂರ್ಣವಾದ ಪ್ರತಿಷ್ಠೆ ಮತ್ತು ಪ್ರಶಸ್ತಿಗಳಿಂದ ವಿರಾಜಿಸುತ್ತಿದೆ. ಅದು ಕೇವಲ ಒಂದು ರಾಜಕೀಯ ಸಂಸ್ಥೆಯ ಪಕ್ಷವಾದ ಕಾಂಗ್ರೆಸ್ಸಿನ ಗುರುತೆಂದು ಹೇಳಲ್ಪಡುತ್ತಿದ್ದ ಕಾಲವು ಕಳೆದು ಹೋಗಿದೆ. ಹಿಂದೂಸ್ಥಾನದಲ್ಲಿರುವ ಸಕಲ ಜನಾಂಗಗಳ ಮತ್ತು ಸಂಸ್ಕೃತಿಗಳ ಭವಿಷ್ಯದ ಅಭ್ಯುದಯದ ಚಿಹ್ನೆಯಾಗಿ ಅದು ಇಂದು ವಿಕಾಸಗೊಂಡಿರುತ್ತದೆ. ಸ್ವಾತಂತ್ರ್ಯವಾಗಿರುವ ಸಮೃದ್ಧಿ ಮಾತೃಭೂಮಿಯಾದ ಭಾರತ ಮಾತೆಯ ಜಂಗಮ ಸ್ವರೂಪವೇ ರಾಷ್ಟ್ರೀಯ ಧ್ವಜವಾಗಿರುತ್ತದೆ. ಈ ದೇಶದಲ್ಲಿ ಹುಟ್ಟಿ, ಬೆಳೆದು, ಜೀವಿಸುವ ಪ್ರತಿಯೊಬ್ಬ ಪ್ರಾಣಿಯೂ ಅದಕ್ಕೆ ತನ್ನ ಪ್ರಣಾಮವನ್ನು ಸಲ್ಲಿಸಬೇಕಾಗಿದೆ.

ರಾಷ್ಟ್ರೀಯ ಧ್ವಜಕ್ಕೆ ಗೌರವವನ್ನು ಸಲ್ಲಿಸಲು ಈಗ ಯಾವ ಅಡ್ಡಿಯೂ ಇರುವುದಿಲ್ಲ. ಪಂಡಿತ ನೆಹರೂರವರು ಹೇಳಿರುವಂತೆ ಈ ಧ್ವಜವು ಬೇರೆ ಯಾವ ಧ್ವಜಕ್ಕೂ ವಿರೋಧಿಯಲ್ಲ. ಮೈಸೂರು ಕಾಂಗ್ರೆಸ್ಸಿನವರು ಶ್ರೀಮನ್ಮಹಾರಾಜರವರಲ್ಲಿಯೂ, ಸಂಸ್ಥಾನದ ಧ್ವಜದಲ್ಲಿಯೂ ಸಂಪೂರ್ಣವಾದ ಭಕ್ತಿ, ಗೌರವಗಳನ್ನು ಇಟ್ಟಿರುತ್ತಾರೆ. ರಾಷ್ಟ್ರ ಧ್ವಜಕ್ಕೆ ಮನ್ನಣೆ ಮಾಡುವುದರಿಂದ ಮೈಸೂರು ಧ್ವಜಕ್ಕೆ ಎಂದಿಗೂ ಅಪಚಾರವಾಗಲಾರದು. ಆದುದರಿಂದ ಇನ್ನು ಮುಂದೆ ರಾಷ್ಟ್ರೀಯ ಸಮಾರಂಭಗಳಲ್ಲಿ ರಾಷ್ಟ್ರೀಯ ಧ್ವಜವೊಂದನ್ನೇ ಹಾರಿಸುವಂತೆ ನಮ್ಮ ನಾಯಕರುಗಳೂ ಪ್ರಭುತ್ವದವರೂ ಈಗಲೇ ಕಲೆತು ಮಾತುಕತೆ ನಡೆಸಿ ನಿರ್ಧಾರ ಮಾಡಲು ಸುಸಮಯವು ಒದಗಿರುತ್ತದೆ.

ಎರಡು ಧ್ವಜಗಳನ್ನು ಹಾರಿಸುವ ಪದ್ಧತಿಯು ಅಪಾರ್ಥಕ್ಕೆ ಎಡೆ ಕೊಡುವ ಸಂಭವವೂ ಇರುತ್ತದೆ. ರಾಜಭಕ್ತಿಯು ವಿಭಾಗವಾಗಿರುವ ಸೂಚನೆಯನ್ನು ಇದು ಕೊಡುವುದೆಂಬ ಅರ್ಥವನ್ನು ಕಲ್ಪಿಸುವವರೂ ಇರುತ್ತಾರೆ. ಮೈಸೂರು ಸಂಸ್ಥಾನವು ಇಂದು ಭಾರತ ಡೊಮಿನಿಯನ್ನಿನಲ್ಲಿ ಸೇರಿ ಅದರ ಸ್ವಾತಂತ್ರ್ಯ ಸಾಧನಾ ಸಮಾರಂಭವನ್ನು ನೆರವೇರಿಸುತ್ತಿರುವಾಗ ಅದರ ಪವಿತ್ರ ದ್ಯೋತಕವಾದ ಏಕೈಕ ರಾಷ್ಟ್ರಧ್ವಜದ ಆರೋಹಣಾ ಸಮಾರಂಭವು ಮೇಲೆ ಹೇಳಿದಂತೆ ಮಹಾ ವೈಭವದಿಂದ ಜರುಗಲು ಸಕಲ ಸೌಲಭ್ಯಗಳನ್ನೂ ಕಲ್ಪಿಸಬೇಕೆಂದು ನಾವು ಕೋರುತ್ತೇವೆ.

Edited printed and published by A. R. Nagarajan at the Sadhvi Press D. Subbaiah Road Mysore

ಹಲಗೇರಿ ಶ್ರೀಹಾಲಸಿದ್ಧೇಶ್ವರ ನಾಟಕ ಮಂಡಳಿ

ವಿಶೇಷ ಸೂಚನೆ

ರಾಜಧಾನಿಯ ನಾಟಕಾಭಿಮಾನಿಗಳ ಉದಾರಾಶ್ರಯವನ್ನು ಪಡೆದ ನಮ್ಮ ಸಂಘದವರು ಈಗ ಒಂದು ತಿಂಗಳಿಂದಲೂ ಸಾಮಾಜಿಕ, ಮತ್ತು ಪೌರಾಣಿಕ ನಾಟಕಗಳನ್ನು ಯಶಸ್ವಿಯಾಗಿ ಅಭಿನಯಿಸಿ ಪ್ರಜಾಪ್ರಮುಖರ ಮತ್ತು ಅಧಿಕಾರಿ ವರ್ಗದವರ ಪ್ರೋತ್ಸಾಹವನ್ನು ಪಡೆಯುತ್ತಿರುವುದು ಎಲ್ಲರಿಗೂ ತಿಳಿದ ಅಂಶವೇ ಆಗಿರುತ್ತದೆ. ಇದಕ್ಕಾಗಿ ನಾವು ಪುರನಿವಾಸಿಗಳಿಗೆ ಅತ್ಯಂತ ಕೃತಜ್ಞರಾಗಿರುತ್ತೇವೆ.

ಮಾಲೀಕರ ಹಸ್ತಾಕ್ಷರವನ್ನು ಹಾಕಿ ಬರಿಯದೆ ಹಾಗೆಯೇ ಇಟ್ಟಿದ್ದ ನಮ್ಮ ಸಂಸ್ಥೆಯ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳು ಎಷ್ಟೋ ಗೈರುವಿಲೆಯಾಗಿರುತ್ತವೆ. ಆದುದರಿಂದ ತಾ|| ೬-೮-೪೭ ರಿಂದ ಇದುವರೆಗೆ ಕೊಟ್ಟಿರುವ ಎಲ್ಲ ಪಾಸುಗಳನ್ನೂ ಮನ್ನಾ ಮಾಡಿ ಹೊಸ ಪಾಸುಗಳನ್ನು ಕೊಡುತ್ತೇವೆ. ಹಳೆಯ ಪಾಸುಗಳನ್ನು ತಾ|| ೭-೮-೪೭ ರಿಂದ ಮನ್ನಿಸಲಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ತಿಳಿಸುತ್ತೇವೆ.

WOODLANDS
Morning Shows
From 8-8-47 for 4 days
daily at 10-30 A. M
Horn Blows at Midnight
—:Starring:—
Jack Benny, Alexis Smith

ಅಪೇರಾ ಟಾಕೀಸ್, ಮೈಸೂರು
8-8-47 ರಿಂದ ೨ ನೇ ವಾರ
ಸುಲೋಚನ
(ತಮಿಳು)

ರಾಜಕಮಲ್ :: ತಾ|| 8-8-47 ರಿಂದ
ಅಪೂರ್ವ ಪ್ರಾರಂಭ ಪ್ರತಿ ದಿನ ೩ ಆಟಗಳು
ಮಹಾನಂದ
(ಕನ್ನಡದಲ್ಲಿ)
ಪಾತ್ರಗಳು:— ಶಾಂತಾದೇವಿ, ಕೆಂಪರಾಜ್, ಹರಿಯೋಟ್ ಅಶ್ವತ್ಥ, ಕಾಶೀನಾಥ್ ಮುಂತಾದವರು
ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ಆಚಾರ್ಯ ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್, ವೈ ಪ್ರಸಾದ್ ನಾರಾಯಣ್ ಇವರು ಮೈಸೂರಿಗೆ ಆಗಮಿಸಿದಾಗ ತೆಗೆದ ಒಂದು ಭಾಗವನ್ನು ಸಹ ಪ್ರದರ್ಶಿಸುತ್ತೇವೆ

ತಾ|| 17 ರಿಂದ :: 4 ದಿನಗಳು ಮಾತ್ರ
ಪ್ರತಿ ದಿನ ಪ್ರಾತಃಕಾಲ 10 ಗಂಟೆಗೆ
ರಾಣಿ
(ಹಿಂದಿ ಭಾಷೆಯಲ್ಲಿ)
ಅಭಿನಯ: ಜಮುನಾ, ಬರುವ

ಗೋವಾ ಸಿದ್ಧಂ! ಗೋವಾ ಸಿದ್ಧಂ!!

2 ನೇ ಡ್ರಾಯಿಂಗ್ ಡಂಬ್ ಅನಿಮಲ್ ಛಾರಿಟಿ

ಪೂರ್ತ ರಶೀತಿ ಫಲಿತಾಂಶ [illegible]

೧ ನೇ ಪ್ರೈಜು ನಂ-[illegible]—೧೦೦-೦-೦ ಚಾಮರಾಜನಗರ
೨ ನೇ ಪ್ರೈಜು ನಂ- [illegible]— ೫೦-೦-೦ ಮೈಸೂರು ಸಿಟಿ
೩ ನೇ ಪ್ರೈಜು ನಂ.- [illegible]— ೨೫-೦-೦ ಶೃಂಗೇರಿ
೪ ನೇ ಪ್ರೈಜು ನಂ - [illegible]— ೨೦-೦-೦ ಚಾಮರಾಜನಗರ

ಇತರ ಸ್ಮಾಲ್ ಪ್ರೈಜು ನಂಬರುಗಳು

[illegible]

[illegible] ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿ ಕೊಡಿ [illegible] ಮುಂದಿನ ಡ್ರಾಯಿಂಗ್ ರಶೀತಿ ಬಿಕರಿಗೆ ಸಿದ್ಧವಾಗಿದೆ [illegible] ಡ್ರಾಯಿಂಗ್ [illegible]

ಈ ಸಲದ ಹಣವನ್ನು [illegible] ಕೊಡುತ್ತೇವೆ. ಫಲಿತಾಂಶದ ಅಭಿಲಾಷೆಯುಳ್ಳವರು [illegible] ಸ್ಟಾಂಪು ಕಳುಹಿಸಿಕೊಟ್ಟು ತರಿಸಿಕೊಳ್ಳಿ.

ರಶೀತಿಗಳನ್ನು [illegible] ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ. ಪ್ರತಿಯೊಂದು [illegible] ರಶೀತಿಗಳನ್ನು ಮಾರಲು ಏಜೆಂಟರು ಬೇಕಾಗಿದ್ದಾರೆ. ಏಜೆಂಟರಾಗಲು ಅಪೇಕ್ಷೆಯುಳ್ಳವರು [illegible] ಬರೆಯಿರಿ

ಆನರರಿ ಸೆಕ್ರಟರಿ,
ಡಂಬ್ ಅನಿಮಲ್ಸ್ ಛಾರಿಟಿ ಫಂಡ್ ಆಫೀಸ್
ಹಳ್ಳದಕೇರಿ, ಮೈಸೂರು

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೧ ಕಾಸು

ಸಂಪುಟ ೬] ಶುಕ್ರವಾರ ೮—೮—೪೭ [ಸಂಚಿಕೆ ೧೭

ಸ್ವಾತಂತ್ರ್ಯೋತ್ಸವದಲ್ಲಿ ಕಂದಾಯದ ಸೋಡಿ

ಎ. ಎಂ. ಸಿ. ಸಿ. ಅಧಿವೇಶನ

ಪುರ ನಿವಾಸಿಗಳಲ್ಲಿ ವಿನಂತಿ

ಮೈಸೂರು ೮

ನಾಳೆ ರಾಜಧಾನಿಯಲ್ಲಿ ನಡೆಯುವ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಕಾರ್ಯಕ್ರಮಗಳು ಈ ರೀತಿ ಇವೆ :—

ಈ ದಿನ ರಾತ್ರಿ ೭-೩೦ ಗಂಟೆಗೆ ಬೆಂಗಳೂರಿನಿಂದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರ ಆಗಮನ (ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಮಹಾಜನರು ಸ್ವಾಗತ ನೀಡಬೇಕಾಗಿ ಕೋರಲಾಗಿದೆ)

ನಾಳೆ ಬೆಳಗ್ಗೆ ೯ ಗಂಟೆಗೆ ಕಾವೇರಿ ಪಟ್ಟಂ ಸುಬ್ಬರಾಯಚೆಟ್ಟರ ಛತ್ರದಲ್ಲಿ ಧ್ವಜಾರೋಹಣ.

ಮಧ್ಯಾಹ್ನ ೩ ಗಂಟೆಗೆ ಟೌನ್ ಹಾಲಿನಲ್ಲಿ ಬಹಿರಂಗ ಅಧಿವೇಶನ.

ಪ್ರೇಕ್ಷಕರಿಗೆ ಟಿಕೆಟ್ ಮೂಲಕ ಪ್ರವೇಶ. ಪ್ರವೇಶ ಧನ ೦-೨-೦

ಸ್ವಾಗತ ಸಮಿತಿಯ ಕಛೇರಿಯನ್ನು ನಾಳೆ ಬೆಳಗ್ಗೆ ೯ ಗಂಟೆಯಿಂದ ಕಾವೇರಿ ಪಟ್ಟಂ ಸುಬ್ಬರಾಯಚೆಟ್ಟರ ಛತ್ರದಲ್ಲಿ ತೆರೆಯಲಾಗುವುದು. ಮಹಾಜನರು ಸಂಪೂರ್ಣವಾಗಿ ನೆರವು ನೀಡಬೇಕೆಂದು ಸ್ವಾಗತ ಸಮಿತಿಯವರು ಪ್ರಾರ್ಥಿಸಿರುವರು.

ರಹದಾರಿಯಿಲ್ಲದೆ ಸಾಗಿಸುತ್ತಿದ್ದ ಭತ್ತ ಪತ್ತೆ

ಪರ್ಮಿಟ್ ಇಲ್ಲದೆ ನಾಗನ ಹಳ್ಳಿಯ ಮಾರ್ಗವಾಗಿ ೩೦೦ ಪಲ್ಲ ಭತ್ತವನ್ನು ಸಾಗಿಸುತ್ತಿದ್ದ ಶಿವಣ್ಣ ಎಂಬಾತನನ್ನು ನಿನ್ನೆ ರಾತ್ರಿ ಮೆಟ್ ಅಂಡ್ ವಾರ್ಡ್ ಪೋಲೀಸ್ ಸಬ್ ಇನ್ಸ್‌ಪೆಕ್ಟರಾದ ಶ್ರೀ ವಾಸುದೇವರಾಯರು ಧಫೇದಾರ್ ವೀರಭಾಜೇ ಅರಸ್ ಮತ್ತು ಕಾನ್ಸ್‌ಟೇಬಲ್ ಪಿ. ಸಿ. ಮಾದಯ್ಯ ನವರೊಡನೆ ಶ್ರೀರಂಗಪಟ್ಟಣದ ಟೋಲ್ ಗೇಟಿನ ಬಳಿ ಹಿಡಿದು, ಈ ಬಗ್ಗೆ ತನಿಖೆ ನಡೆಸುತ್ತಿರುವರು.

ಸ್ವಾತಂತ್ರ್ಯದಲ್ಲಿ ನಿಮ್ಮ ಆನಂದ ಕಾಣಿರಿ!

ಸ್ವಾತಂತ್ರ್ಯ ದಿನೋತ್ಸವದ

ಸಹಾಯಾರ್ಥವಾಗಿ

ಹಲಗೇರಿ

ಶ್ರೀ ಬಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿಯವರು

ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ

೧೦-೮-೪೭ ನೇ ಭಾನುವಾರ

ಸಾಯಂಕಾಲ ೬-೩೦ ಕ್ಕೆ

ಸುಪ್ರಸಿದ್ಧ

ಬ್ಲಾಕ್ ಮಾರ್ಕೆಟ್

ಈ ನಾಟಕವನ್ನು ಅಭಿನಯಿಸುವರು

ಟಿಕೆಟ್ ದರ ರೂ. 10-0-0, 5-0-0, 3-0-0, 2-0-0, 1-0-0

ಮಹಾಜನರು ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

ವಿಶೇಷ ನೃತ್ಯ ಪ್ರದರ್ಶನಗಳನ್ನು ಏರ್ಪಡಿಸಿದೆ

ಈ ಅವಕಾಶ ಕಳೆದುಕೊಳ್ಳಬೇಡಿ !! ತಪ್ಪದೆ ಬನ್ನಿ !!!

ಪೌರಸಭೆಯ ಮೇಲೆ ಉಭಯ ಧ್ವಜಗಳು

ಸ್ವಂ ಸು. ಪ್ರೋ] [ಬೆಂಗಳೂರು ೮

ಆಗಸ್ಟ್ ೧೫ ನೇ ತಾರೀಖು ಪೌರಸಭಾ ಭವನದ ಮೇಲೆ ಮೈಸೂರು ಧ್ವಜ ಮತ್ತು ರಾಷ್ಟ್ರ ಧ್ವಜ ಇವೆರಡನ್ನೂ ಹಾರಿಸತಕ್ಕದ್ದೆಂದು ನಿನ್ನೆ ನಡೆದ ಪೌರಸಭಾಧಿವೇಶನದಲ್ಲಿ ನಿರ್ಣಯ ಮಾಡಲ್ಪಟ್ಟಿತು.

* ಮೈಸೂರು ಜಿಲ್ಲಾ ವೈದ್ಯಾಧಿಕಾರಿಗಳಾದ ಡಾII ಪಾರ್ಥಸಾರಥಿಯವರು ಯುದ್ಧ ಕಾಲದಲ್ಲಿ ಸಲ್ಲಿಸಿದ ಸೇವೆಗಾಗಿ ಗೌರವ ಸರ್ಟಿಫಿಕೇಟ್ ಎಂಬ ಪ್ರಶಸ್ತಿಯನ್ನು ಇನ್ನು ಮುಂದೆಯೂ ಇಟ್ಟುಕೊಳ್ಳಬಹುದೆಂದು ಪ್ರಭುಗಳ ಅಪ್ಪಣೆಯಾಗಿರುತ್ತದೆ

§ ಮೇಜರ್ ಗೋಪಾಲಕೃಷ್ಣೇ ಅರಸರವರನ್ನು ೧-೮-೪೭ ರಿಂದ ಕರ್ನಲ್ ಪದವಿಗೇರಿಸಿ ಶ್ರೀಮನ್ಮಹಾರಾಜರವರ ಏ.ಡಿ.ಸಿ. ಛಕ್ಷಿಯಾಗಿಯೂ, ಮೇಜರ್ ಎ. ಸಿ. ಸುಬ್ಬರಾಜೇ ಅರಸಿನವರನ್ನ ಲೆಫ್ಟಿನೆಂಟ್ ಕರ್ನಲ್ಲರನ್ನಾಗಿಯೂ, ಶ್ರೀ ಹೆಚ್. ಎಲ್. ಲಿಂಗರಾಜೇ ಅರಸಿನವರನ್ನು ಶ್ರೀಮನ್ಮಹಾರಾಜರವರ ಸೆಕ್ರೆಟರಿ ಆಫ್ ಮೀಟಿಂಗ್ಸ್‌ರವರ ಅಸಿಸ್ಟೆಂಟರನ್ನಾಗಿಯೂ ನೇಮಿಸಲಾಗಿದೆ

* ಸಂಸ್ಥಾನದ ನಿವೃತ್ತ ವಿದ್ಯಾಧಿಕಾರಿಗಳಾದ ಡಾII ಕೆ. ಎಲ್. ಕಿನಿಯವರು ಎರಡು ವರ್ಷಗಳ ಜೇಲಿನಿಂದ ವಿದ್ಯಾ ಶಾಖೆಯ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿದ್ದ ಅವಧಿ ಮುಂದುವರಿಸಿದೆ

ದೇವಾಲಯದ ಮೇಲೆ ರಾಷ್ಟ್ರಧ್ವಜ

ಆಗಸ್ಟ್ ೧೫ ನೇ ತಾರೀಖು ಬೆಳಿಗ್ಗೆ ಸರಿಯಾಗಿ ಮುಜರಾಯಿ ಇಲಾಖೆಯ ದೇವಾಲಯದಲ್ಲಿರುವ ಘಂಟೆಗಳನ್ನು ಬಾರಿಸಲಾಗುವುದು. ಸುಮಾರು ೨೦೦ ಅಡಿ ಎತ್ತರವಿರುವ ದೇವಾಲಯದ ಎಲ್ಲ ಗೋಪುರಗಳ ಮೇಲೆಯೂ ತ್ರಿವರ್ಣ ರಂಜಿತ ರಾಷ್ಟ್ರಧ್ವಜಗಳು ಹಾರಿಸಲ್ಪಡುವುವು

LATEST NEWS

ಎಲ್ಲಾ ಪ್ರತಿಬಂಧಕಾಜ್ಞೆಗಳ ರದ್ದು

ಸ್ವಂ ಸು. ಪ್ರೋ] ಬೆಂಗಳೂರು ೮

ಸಂಸ್ಥಾನದ ನಾನಾ ಭಾಗಗಳಲ್ಲಿರುವ ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ರದ್ದು ಮಾಡಿ ಸರ್ಕಾರದವರು ಅಪ್ಪಣೆ ಹೊರಡಿಸಿರುವರು.

ಜಿII ಬೋರ್ಡು ಉಪಾಧ್ಯಕ್ಷತೆ

ಕಾಂಗ್ರೆಸ್ ಉಮೇದುವಾರರ ವಿಜಯ

ಮೈಸೂರು ೮

ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರ ಚುನಾವಣೆಯು ಈ ದಿನ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿದ್ದ ಶ್ರೀ ಟಿ. ಸಿ. ಬೋರೇಗೌಡರವರು ೧೭ ವೋಟುಗಳನ್ನು ಪಡೆದು ಉಪಾಧ್ಯಕ್ಷರಾಗಿ ಚುನಾಯಿತರಾಗಿರುವರು. ಇವರ ಪ್ರತಿಸ್ಪರ್ಧಿಗಳಾಗಿದ್ದ ಶ್ರೀ ಟಿ. ಸಿ. ಪೊನ್ನಪ್ಪನವರಿಗೆ ೧೬ ವೋಟುಗಳು ಬಂದವು. ಶ್ರೀ ಎಸ್. ಎಂ. ಸಿದ್ಧಯ್ಯನವರು ನೂತನ ಉಪಾಧ್ಯಕ್ಷರನ್ನು ಅಭಿನಂದಿಸಿದರು

ಹರಿ ಕಥೆ

ಕೃಷ್ಣರಾಜ ಮೊಹಲ್ಲೆಯ ಸೀತಾರಾಮ ರಾವ್ ರಸ್ತೆಯಲ್ಲಿರುವ ಸಂಪಣ್ಣನವರ ಅಂಗಡಿಯ ಮಹಡಿಯಲ್ಲಿ ಈ ದಿನ ರಾತ್ರಿ ೯-೩೦ ಗಂಟೆಗೆ ಶ್ರೀ ಹೆಚ್. ಎಸ್. ಶಿವಲಿಂಗಸ್ವಾಮಿ ಒಡೆಯರವರಿಂದ ಸ್ವರಾಜ್ಯ ಸಂಪಾದನೆ ಎಂಬ ಹರಿಕಥೆಯು ನಡೆಯುವುದು.

ಗಾಂಧೀಜಿಯವರು ಪಾಕಿಸ್ತಾನಕ್ಕೆ

ಕಾಶ್ಮೀರದಿಂದ ಹಿಂದಿರುಗುವ ಮಾರ್ಗದಲ್ಲಿ ಪಾಕಿಸ್ತಾನದ ಪ್ರಾಂತಗಳಲ್ಲೊಂದಾದ ಪಂಜಾಬಿಗೆ ಗಾಂಧಿಯವರು ಹೋಗುವರು.

ರೀವಾ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ

ಸಂಪೂರ್ಣ ಜವಾಬ್ದಾರೀ ಸರ್ಕಾರದ ಗುರಿಯಿಂದ ರೀವಾ ಸಂಸ್ಥಾನದ ಅರಸರು ತಮ್ಮ ಸಂಸ್ಥಾನದಲ್ಲಿ ಹಲವು ಸುಧಾರಣೆಗಳನ್ನು ಘೋಷಿಸಿರುವರು

WOODLANDS

Morning Shows

From 8-8-47 for 4 days

daily at 10-30 A. M

Horn Blows at Midnight

—Starring—

Jack Benny, Alexis Smith

ಬೊಂಬಾಯಿ ಪ್ರಾಂತದಲ್ಲಿ ಕಂದಾಯದ ರಿಯಾಯಿತಿ

ಆಗಸ್ಟ್ ೧೫ ನೇ ತಾರೀಖಿನ ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ಪ್ರಾಂತ್ಯದಲ್ಲಿ ವಸೂಲಾಗಬೇಕಾಗಿರುವ ಕಂದಾಯದಲ್ಲಿ ಶೇಕಡ ೧೦ರಷ್ಟನ್ನು ರಿಯಾಯಿತಿ ತೋರಿಸುವ ಬಗ್ಗೆ ಬೊಂಬಾಯಿ ಸರ್ಕಾರವು ಪರಿಶೀಲಿಸುತ್ತಿದೆಯೆಂದು ವರದಿಯಾಗಿದೆ. ಈ ರೀತಿ ಮಂಜೂರಾದ ರಿಯಾಯಿತಿ ಹಣವನ್ನು ಸಾಗುವಳಿ ಮಾಡುವ ರೈತರಿಗೆ ಕೊಡಲಾಗುವುದು

ಸಿನಿಮಾ ಮಂದಿರಗಳಲ್ಲಿ ಆಂಗ್ಲ ರಾಷ್ಟ್ರಗೀತೆ ವರ್ಜ

ಮದರಾಸಿನ ಸಿನಿಮಾ ಮಂದಿರಗಳಲ್ಲಿ ಆಂಗ್ಲ ಚಿತ್ರಗಳ ಅಂತ್ಯದಲ್ಲಿ ಇದುವರೆಗೆ ಹಾಡಲಾಗುತ್ತಿದ್ದ ಆಂಗ್ಲ ರಾಷ್ಟ್ರಗೀತೆಯು ಇದೇ ೧೫ ನೇ ತಾರೀಖಿನಿಂದ ರದ್ದಾಗುವುದೆಂದು ವರದಿಯಾಗಿದೆ. ವಂದೇ ಮಾತರಂ ಗೀತೆಯುಳ್ಳ ರಾಷ್ಟ್ರಗೀತೆಯನ್ನು ರಚಿಸಿಕೊಡಬೇಕೆಂದು ದಕ್ಷಿಣ ಭಾರತ ಚಿತ್ರ ತಯಾರಿಕಾ ಸಂಸ್ಥೆಯು ಕೇಳಿದೆ. ಇದನ್ನು ಪ್ರದರ್ಶಿಸಬೇಕೆಂದು ಸಿನಿಮಾ ಮಾಲಿಕರು ತೀರ್ಮಾನಿಸಿರುವರು

ಆಯುರ್ವೇದ ವೈದ್ಯ ಸಂಘ

ನೆಲ್ಲೂರಿನ ಸಂಘಕ್ಕೆ ಅಧ್ಯಕ್ಷರನ್ನು ಚುನಾಯಿಸಲು ಕಾಲಾವಕಾಶವನ್ನು ವಿಸ್ತರಿಸುವುದರಿಂದ ಸದಸ್ಯರು ತಮಗೆ ಬೇಕಾದವರ ಹೆಸರನ್ನು ಸೂಚಿಸಿ ನಾಲ್ವಡಿ ನೋಕಿಗಳ ಸಂಘಕ್ಕೆ ಕಳುಹಿಸಿಕೊಡಬೇಕೆಂದೂ ಇದೇ ೧೮ ನೇ ತಾರೀಖಿನ ಒಳಗೆ ಸದಸ್ಯತನದ ಚಂದಾ ಪಾವತಿ ಮಾಡಿರುವವರಿಗೆ ಮಾತ್ರ ಅಧ್ಯಕ್ಷರ ಹೆಸರನ್ನು ಸೂಚಿಸಲು ಅವಕಾಶವಿರುತ್ತದೆಯೆಂದೂ ಸಂಘದ ಗೌII ಕಾರ್ಯದರ್ಶಿಗಳಾದ ಶ್ರೀ ಗೋಪಾಲಕೃಷ್ಣವೈದ್ಯರವರು ತಿಳಿಸಿರುವರು

ಪ್ರತಿ ವರ್ಷವೂ ಆಗಸ್ಟ್ ೧೫ಕ್ಕೆ ರಜಾ

ಭಾರತವು ಪೂರ್ಣ ಸ್ವಾತಂತ್ರ್ಯವನ್ನು ಪಡೆಯುವುದರಿಂದ ಪ್ರತಿವರ್ಷವೂ ಆಗಸ್ಟ್ ೧೫ ನೇ ತಾರೀಖನ್ನು ಸಾರ್ವಜನಿಕ ರಜಾ ದಿನವೆಂದು ಘೋಷಿಸಬೇಕೆಂದು ಕಲ್ಕತ್ತೆಯ ಪ್ರಾಂತಸಭೆಯಲ್ಲಿ ನಿರ್ಧರಿಸಲಾಗಿದೆ. ಈ ನಿರ್ಧಾರದ ವಿವಿಧ ಪ್ರದೇಶಗಳಿಗೆ ಕೊಟ್ಟಿರುವ ಪ್ರತಿನಿಧಿಯ ಹಣವನ್ನು ಒದಗಿಸಲು ರಾಷ್ಟ್ರನಾಯಕರು ಹೆಚ್ಚಿಸಬೇಕೆಂದೂ ಸದಸ್ಯರು ತೀರ್ಮಾನಿಸಿರುವರು

ನೌಖಾಲಿಗೆ ಗಾಂಧೀಜಿ

ಮಹಾತ್ಮಾ ಗಾಂಧೀಜಿಯವರು ಕಾಶ್ಮೀರದ ತಮ್ಮ ಪ್ರವಾಸವನ್ನು ಮುಗಿಸಿ ನಿನ್ನೆ ಸಂಜೆ ಕಲ್ಕತ್ತೆಗೆ ತೆರಳಿದರು. ಅಲ್ಲಿಂದ ಅವರು ನೌಖಾಲಿಗೆ ಹೋಗುವರೆಂದು ಗೊತ್ತಾಗಿದೆ

ಅಂಗಡಿ ಬದಲಾವಣೆ

ಮೈಸೂರು ೮

ರಾಜಧಾನಿಯಲ್ಲಿ ಹಿಂದೆ ಜಟ್ಕಾ ಸ್ಟ್ಯಾಂಡಿನ ಬಳಿ ಇದ್ದ ಅಂಗಡಿಯನ್ನು ಶ್ರೀ ಸ್ವಾಮಿಯವರು ನಾಯ್ಡು ರವರ ಅಂಗಡಿಯ ಪಕ್ಕದ ಮಸೀದಿ ಚೌಕದ ಶ್ರೀ ನಾರಾಯಣಸ್ವಾಮಿ ಮಹಾತ್ಮ ಮತ್ತು ಬೇರೆ ಅಂಗಡಿಯನ್ನು ಮಹಾಜನರ ಉಪಯೋಗಕ್ಕಾಗಿ ಏರ್ಪಡಿಸಿದೆಯೆಂದು ಮಾಲೀಕರು ತಿಳಿಸಿರುವರು.

ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಕೆಲಸಗಾರರ ಬೇಡಿಕೆ

ಶ್ರೀ ಟಿ ಮರಿಯಪ್ಪನವರ ಹೇಳಿಕೆ

ಬೆಂಗಳೂರಿನ ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಕಾರ್ಖಾನೆಯ ಕೆಲಸಗಾರರು ಹೂಡಿರುವ ಮುಷ್ಕರವನ್ನು ಕುರಿತು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಉಪ ನಾಯಕರಾದ ಶ್ರೀ ಟಿ ಮರಿಯಪ್ಪನವರು ಈ ಕೆಳಕಂಡ ಹೇಳಿಕೆ ಇತ್ತಿರುವರು

ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಕಂಪೆನಿಯವರಿಗೂ ತಮ್ಮ ಕೆಲಸಗಾರರಿಗೂ ಇರುವ ಭಿನ್ನಾಭಿಪ್ರಾಯವು ಬೆಳೆದು ಮುಷ್ಕರದಲ್ಲಿ ಪರಿಣಾಮ ಹೊಂದುವಂತೆ ಮಾಡಿರುವುದು ವಿಷಾದಕರ. ಕೆಲಸಗಾರರ ಬೇಡಿಕೆಗಳು ಬಹಳ ಸಾಮಾನ್ಯವಾದುವು. ಯುದ್ಧ ಕಾಲದಲ್ಲಿ ವಿಶೇಷ ಶ್ರಮವನ್ನು ವಹಿಸಿದುದಕ್ಕಾಗಿ ಎರಡು ತಿಂಗಳ ಬೋನಸ್ಸು ಕೊಡಬೇಕೆಂದೂ ಇತರ ಸಂಸ್ಥೆಗಳಲ್ಲಿರುವಂತೆ ಕೂಲಿ ದರಗಳನ್ನು ಏರ್ಪಡಿಸಬೇಕೆಂದೂ, ರಿಯಾಯಿತಿ ಬೆಲೆಗೆ ವಸ್ತುಗಳನ್ನಾಗಲೀ ಅಥವಾ ಆಹಾರ ಭತ್ಯವನ್ನಾಗಲೀ ಕೊಡಬೇಕೆಂದೂ ಕೆಲಸಗಾರರು ಕೇಳಿದ್ದರು

ಕೆಲಸಗಾರರು ತಮ್ಮ ಕರ್ತವ್ಯವನ್ನು ತೃಪ್ತಿಯಿಂದ ನಿರ್ವಹಿಸಿರುತ್ತಾರೆ. ಕಾರ್ಖಾನೆಯ ಇಂದಿನ ಅಭಿವೃದ್ಧಿಗೆ ಅವರ ನಿರಂತರ ಪರಿಶ್ರಮವೇ ಮುಖ್ಯ ಕಾರಣ. ಅದು ಅವರ ನ್ಯಾಯವಾದ ಬೇಡಿಕೆಗಳನ್ನು ಸಲ್ಲಿಸಲು ಅಗತ್ಯ. ಆದರೆ ಅಧಿಕಾರಿಗಳು ಒಂದೇ ಸಮನಾಗಿ ಉದಾಸೀನತೆಯಿಂದ ಹೀನ ವೃತ್ತಿಯನ್ನು ಅವಲಂಬಿಸಿ ಅವರ ಸೌಹಾರ್ದವನ್ನು ಕಳೆದುಕೊಂಡಿರುತ್ತಾರೆ.

ಮುಷ್ಕರದ ಬಗ್ಗೆ ಕೆಲಸಗಾರರು ಶಾಂತಿ ಭಿಪ್ರಾಯವನ್ನು ಸೂಚಿಸಿ ತಮ್ಮ ಗುರಿಯಾ ಪ್ಪಿಸುವಲ್ಲಿ ಅವರಿಗಿರುವ ಶ್ರದ್ಧೆಯನ್ನೂ ಏಕವಾಕ್ಯತೆಯನ್ನೂ ಪ್ರಕಾಶ ಪಡಿಸಿರುತ್ತಾರೆ. ಕೇವಲ ವಿಷಾದದಿಂದಲೇ ಅವರು ಈ ನಿರ್ಧಾರಕ್ಕೆ ಬಂದಿರುವರು. ಮುಷ್ಕರವು ವಿಧಿಯಿಲ್ಲದೆ ಅವರ ಮೇಲೆ ಹೊರಿಸಲ್ಪಟ್ಟಿದೆ. ಇದರಿಂದ ದೇಶಕ್ಕೆ ಆಗುವ ನಷ್ಟವನ್ನು ಅವರು ಚೆನ್ನಾಗಿ ಬಲ್ಲರು. ಅವರಿಗೆ ಯಾವ ಬಗೆಯ ಪ್ರಕಸ್ತಿಯೂ ಬೇಕಾಗಿಲ್ಲ. ತಮ್ಮ ಬೇಡಿಕೆಯ ನ್ಯಾಯಪರತೆಯನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಲು ಎಷ್ಟು ಕಾಲ ಅಗತ್ಯವೋ ಅದಕ್ಕಿಂತ ಒಂದು ನಿಮಿಷವೂ ಮುಷ್ಕರವನ್ನು ಮುಂದುವರಿಸಲು ಅವರು ಬಯಸುವುದಿಲ್ಲ

ಅಧಿಕಾರಿಗಳಿಗೆ ದೂರಾಲೋಚನೆ ಇಲ್ಲದಿರುವುದು ಶೋಚನೀಯ. ಸರ್ಕಾರದವರು ಕೂಡಲೇ ಕೈ ಹಾಕಿ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಬೇಕು

ಕೆಲಸಗಾರರು ಧೈರ್ಯದಿಂದಲೂ, ಕ್ರಮಬದ್ಧವಾಗಿಯೂ ತಮ್ಮ ಉದ್ದೇಶವನ್ನು ಸಾಧಿಸಲು ತೊಡಗಿರುವುದಕ್ಕಾಗಿ ಅವರು ಅಭಿನಂದನಾರ್ಹರು. ನ್ಯಾಯವಾದ ಒಪ್ಪಂದಕ್ಕಾಗಲೀ ಅಥವಾ ಬೇರೆ ಯಾವ ಪರಿಣಾಮಗಳಿಗಾಗಲೀ ಅವರು ಸಿದ್ಧರಾಗಿರಬೇಕು. ತಮ್ಮಲ್ಲಿ ಯಾರೂ ದುರಾಚಾರಗಳಿಗೆ ಒಳಗಾಗದಂತೆ ಎಚ್ಚರಿಕೆಯಿಂದಿರಬೇಕು. ತಮ್ಮ ಚಳುವಳಿಯು ಎಂದಿನಂತೆ ಸಂಪೂರ್ಣವಾಗಿ ಅಹಿಂಸಾತ್ಮಕವಾಗಿರುವಂತೆ ನೋಡಿಕೊಳ್ಳಬೇಕು. ಹಾಗೆ ಮಾಡಿದರೆ ಅವರಿಗೆ ವಿಜಯವು ಖಂಡಿತ. ಅವರಿಗೆ ಸಂಪೂರ್ಣ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಅಪೇರಾ ಟಾಕೀಸ್, ಮೈಸೂರು

೮-೮-47 ರಿಂದ ३ ನೇ ವಾರ

ಸುಲೋಚನ

(ತಮಿಳು)

Edited printed and published by A. R. Nagarajan at the Sadhvi Press D. Subbaiah Road Mysore

ಪಾಕಿಸ್ಥಾನಕ್ಕೆ ೧೪ನೇ ತಾರೀಖು ಶುಭ ದಿನ

ಆಗಸ್ಟ್ ೧೫ ನೇ ತಾರೀಖು ಸೂರ್ಯೋದಯವಾದ ಮೇಲೆ ಭಾರತದ ಡೊಮಿನಿಯನ್ನಿನ ಅಧಿಕಾರವನ್ನು ವಹಿಸಿಕೊಳ್ಳಲು ಚೆನ್ನಾಗಿಲ್ಲವೆಂದು ಜ್ಯೋತಿಷ್ಯರು ಹೇಳಿರುವುದರಿಂದ ಹಿಂದಿನ ದಿವಸ ಮಧ್ಯ ರಾತ್ರಿಯಲ್ಲಿಯೇ ಸಮಾರಂಭವನ್ನು ಏರ್ಪಡಿಸಲಾಗಿದೆಯಷ್ಟೆ. ಆದರೆ ೧೪ ನೇ ತಾರೀಖಿನ ದಿನವೇ ಪಾಕಿಸ್ಥಾನದ ಸ್ಥಾಪನೆಗೆ ಶುಭ ದಿವಸವೆಂದು ವ ಎಲ್ಲಿ ನಾಯಕರಾದ ಮಿ॥ ಲಿಯಾಖತ್ ಅಲಿ ಖಾನರು ಹೇಳಿರುವರು. ಅಂದು ರಂಜಾನ್ ಹಬ್ಬದ ಕಡೆಯ ಶುಕ್ರವಾರವಾಗಿರುವುದೇ ಇದಕ್ಕೆ ಕಾರಣವೆಂದು ಅವರು ತಿಳಿಸಿರುವರು.

ಪುರಸಭಾ ಉಪ ಚುನಾವಣೆ

ನಂಜನಗೂಡು ೭

ಇಲ್ಲಿನ ಮೂರನೇ ಬ್ಲಾಕಿನಿಂದ ಪೌರ ಸಭೆಗೆ ಸದಸ್ಯರ ಉಪ ಚುನಾವಣೆಯು ೭ ರುವ ಬುಧವಾರದ ದಿನ ನಡೆಯುವುದು. ಬ್ಲಾಕಿನ ಎಲ್ಲ ಓಟರುಗಳೂ ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಬೇಕೆಂದು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಪ್ರಾರ್ಥಿಸಿರುವರು

ವುಡ್‌ಲ್ಯಾಂಡ್ಸ್

8-8-47 ರಿಂದ

ಚಿಕ್ಕರಿದ ೧೫ ನೇ ವಾರ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

(ತಮಿಳು)

: ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವರು.

ಬೆಂಗಾಳ್ ಸಿಲ್ಕ್ ಸೀರೆ ಬೇಕಾದರೆ ನೆಟ್ಟಗೆ ಬಾಬೂರಾವ್ ಕಂಪೆನಿಗೆ ಹೋಗಿ ಅವರಲ್ಲಿರುವ ನಮೂನೆಗಳನ್ನೂ, ಬೆಲೆಗಳನ್ನೂ ನೋಡಿದರೆ ನೀವು ಸಂತೋಷ ಪಡುವಿರಿ.

ಕೀರ್ತನೆ

ಮೈಸೂರು ೭

ಆಬೀರ್ ರಸ್ತೆಯಲ್ಲಿರುವ ಕೀರ್ತನಾ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಡಿ. ಅಣ್ಣಾಜೀ ರಾಯರಿಂದ ಶ್ರೀಕೃಷ್ಣ ಸಂಧಾನವು ಕೀರ್ತನಾ ರೂಪದಲ್ಲಿ ನಡೆಯುವುದು



ನರಳುತ್ತಿರುವ ಜನತೆಗೆ ಜನವೃಷಗಳ ಸೇವೆಯನ್ನು ಸಲ್ಲಿಸಿರುವ ಜೀವಾಮೃತವೇ ಸುಗಲೂ ಬಾದ್ಧಿ ಕಾರ್ಖಾನೆಯ ಕೆಲಸಗಾರರಿಗೆ, ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಹಾಗೂ ಇತರ ಎಲ್ಲಾ ಸಾಧಕ ಜನರಿಗೂ ಅತ್ಯಮೂಲ್ಯವಾದ ನಿರ್ಧಾರವೆಂದು ಮಂಗಳಪಡಿಸಲ್ಪಟ್ಟಿರುತ್ತದೆ.



ರಾಜಕಮಲ್ :: ತಾ॥ 8-8-47 ರಿಂ

ಅಪೋಲೋ ಪ್ರಾರಂಭ — ಪ್ರತಿ ದಿನ ೩ ಆಟಗಳು

ಮಹಾನಂದ

(ಕನ್ನಡದಲ್ಲಿ)

ತಾರಾಗಣ :— ಕಾಂತಾಮಣಿ, ಕೆಂಪರಾಜ್, ಸರೋಜಿನಿ ಅಶ್ವತ್ಥ, ಶಾಂತೀನಾಥ್ ಮುಂತಾದವರು

ಇದರೊಡನೆ ೧ ಭಾಗ ಶಾರ್ಟ್ ಫಿಲ್ಮ್ ಮತ್ತು ... ರಾಜೇಂದ್ರ ಪ್ರಸಾದ್, ಜೈ ಪ್ರಕಾಶ್ ನಾರಾಯಣ್ ಇವರು ಮೈಸೂರಿಗೆ ಆಗಮಿಸಿದಾಗ ತೆಗೆದ ಒಂದು ಭಾಗವನ್ನು ಪ್ರದರ್ಶಿಸಲಾಗುವುದು

ತಾ॥ ೬-೮-47 ರಿಂದ :: 4 ದಿನಗಳು ಮಾತ್ರ

ಪ್ರತಿ ದಿನ ಪ್ರಾತಃಕಾಲ 10-30 ಕ್ಕೆ

ರಾಧೆ

(ಹಿಂದಿ ಭಾಷೆಯಲ್ಲಿ)

ಶ್ರೀ

ಹಾನಗಲ್ ಕುಮಾರೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ, ಇವರು ಮೈಸೂರು ದಿವಾನ್‌ಪೇಟೆ

ರತ್ನಾವಳಿ ಥಿಯೇಟರಿನಲ್ಲಿ — ನಾಳೆ ರಾತ್ರಿ ೧೦-೩೦ ಗಂಟೆಗೆ

— ಮರಾಠೀ ಪಾಠ —

ಎಂಬ ನಾಟಕವನ್ನು ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಭಾನುವಾರ ಮ್ಯಾಟಿನಿ ಉಂಟು . ಚಿಕ್ಕಚೆಟ್ಟಿಪ್ಪ, ಪ್ರೊಪ್ರೈಟರ್

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 8 ಪುಟ

ಸಂಪುಟ ೬] ಶನಿವಾರ ೯—೮—೪೭ [ಸಂಚಿಕೆ ೧೮

ಯೂನಿಯನ್ ಸೇರಲು ಮೈಸೂರಿನ ನಿರ್ಧಾರ

ಪೌರ ಸಭಾಧ್ಯಕ್ಷರ ಪತ್ರಿಕಾ ಸಮ್ಮೇಳನ

ಮೈಸೂರು ೯

ರಾಜಧಾನಿಯ ಪೌರಸಭಾಧ್ಯಕ್ಷರಾದ ಶ್ರೀ ಎನ್ ಎಸ್ ಹಿರಣ್ಣಯ್ಯನವರು ನಿನ್ನೆ ಸಂಜೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿದರು.

ರಾಜಧಾನಿಯ ನಗರ ನೈರ್ಮಲ್ಯ, ಚರಂಡಿ ವ್ಯವಸ್ಥೆ ಮತ್ತು ಬಡವರಿಗೆ ಗೃಹವಸತಿ ಮುಂತಾದ ಮುಖ್ಯ ವಿಷಯಗಳಿಗೆ ಗಮನಕೊಟ್ಟು ಅವುಗಳನ್ನು ಉತ್ತಮಗೊಳಿಸಲು ತಮ್ಮ ಕೈಲಾದಮಟ್ಟಿಗೆ ಶ್ರಮಿಸುವುದಾಗಿ ಅಧ್ಯಕ್ಷರು ತಿಳಿಸಿದರು. ತಮ್ಮ ಈ ಉದ್ಯಮದಲ್ಲಿ ಪತ್ರಿಕೋದ್ಯೋಗಿಗಳ ಸಲಹೆ, ಸಹಾಯ, ಸಹಕಾರ್ಯಗಳನ್ನು ಕೋರಿದರು. ಇಲ್ಲಿ ತಾವು ಇನ್ನು ಮುಂದೆ ಪ್ರತಿ ತಿಂಗಳಲ್ಲೂ ಒಂದೊಂದು ಪತ್ರಿಕಾ ಸಮ್ಮೇಳನವನ್ನು ನಡೆಸಿ ವಿಚಾರ ವಿನಿಮಯ ಮಾಡಬೇಕೆಂದು ಉದ್ದೇಶಿಸಿರುವುದಾಗಿಯೂ ತಿಳಿಸಿದರು.

ಪತ್ರಿಕೋದ್ಯೋಗಿಗಳ ಪರವಾಗಿ ಶ್ರೀ ಎಂ. ಗೋಪಾಲಕೃಷ್ಣ ರಾಯರವರು ಅಧ್ಯಕ್ಷರನ್ನು ವಂದಿಸಿದರು.

ಮಹಾತ್ಮರ ದರ್ಶನಕ್ಕಾಗಿ ಸತ್ಯಾಗ್ರಹ

ಪ್ರೆಸ್] [ಶ್ರೀನಗರ ೬

ಮಹಾತ್ಮ ಗಾಂಧಿಯವರ ದರ್ಶನಕ್ಕಾಗಿ ಪ್ರಾರ್ಥಿಸಿ ಅದು ದೊರೆಯದಿದ್ದುದಕ್ಕಾಗಿ ಇಲ್ಲಿನ ೨೦ ವರ್ಷದ ಯುವಕನೊಬ್ಬನು ಜವಾಹರ ವಿಹಾರ ಮಾಡಿದ್ದ ಮನೆಯ ಮುಂದೆ ಸತ್ಯಾಗ್ರಹ ಹೂಡಿರುವನು. ಕಳೆದ ಭಾನುವಾರದಿಂದ ಆಹಾರವನ್ನು ತೆಗೆದುಕೊಳ್ಳದೆ ರಸ್ತೆಯಲ್ಲಿ ಮಲಗಿ ನಿದ್ರಿಸುತ್ತಿದ್ದಾನೆ. ಅವನ ಸತ್ಯಾಗ್ರಹವನ್ನು ನಿಲ್ಲಿಸಲು ಇದುವರೆಗೆ ನಡೆಸಿದ ಪ್ರಯತ್ನಗಳೆಲ್ಲವೂ ನಿಷ್ಫಲವಾಗಿವೆ.

ಡಚ್ಚರ ಧಾಳಿ ನಿಂತಿಲ್ಲ

ವಿಶ್ವಸಂಸ್ಥೆಯ ಸಲಹೆಯನ್ನು ಅಲಕ್ಷಿಸಿ ಡಚ್ಚರು ಇಂಡೊನೇಷಿಯದಲ್ಲಿ ಇನ್ನೂ ತಮ್ಮ ಧಾಳಿ ಕ್ರಮವನ್ನು ನಡೆಸುತ್ತಲೇ ಇರುವರೆಂದು ರಿಪಬ್ಲಿಕ್ ಸರ್ಕಾರದ ರೇಡಿಯೋ ತಿಳಿಸಿರುವುದಾಗಿ ಗೊತ್ತಾಗಿದೆ. ಇದರ ಜೊತೆ ರಿಪಬ್ಲಿಕನ್ನರು ತಮ್ಮ ವಿನಾಶ ನೀತಿಯ ಕ್ರಮವನ್ನೂ ಸಹ ಮುಂದುವರೆಸುತ್ತಿರುವರು.



೧೫-೮-೧೯೪೭

ಸ್ವಾತಂತ್ರ್ಯ ದಿನಾಚರಣೆ

ಮಾದರಿಯಲ್ಲೇ ತಯಾರಿಸಿದ ವಿನೂತನ ರಾಷ್ಟ್ರಧ್ವಜಗಳು ಎಲ್ಲಾ ಸೈಜುಗಳಲ್ಲೂ ಸುಲಭ ಬೆಲೆಗೆ ದೊರೆಯುವುವು.

ಸ್ಟೂಡೆಂಟ್ಸ್ ಧರ್ಮಾರ್ಥ ಸಹಾಯ ಸಂಘ, ಮೈಸೂರು

ಸಂಸ್ಥಾನಗಳು ಮತ್ತು ಸ್ವಾತಂತ್ರ್ಯ ದಿನಾಚರಣೆ

ಎಚ್. ಸಿ ದಾಸಪ್ಪನವರ ಸೂಚನೆ

ಮೈಸೂರು ೯

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್ ಸಿ ದಾಸಪ್ಪನವರು ಸಂಸ್ಥಾನಗಳು ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಬಗ್ಗೆ ಒಂದು ಹೇಳಿಕೆ ಇತ್ತು ಈ ರೀತಿ ತಿಳಿಸಿರುವರು:—

ಸಂಸ್ಥಾನಗಳಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಬೇಕು. ಕೆ ಹನುಮಂತಯ್ಯನವರನ್ನೂ ಇತರ ಎಲ್ಲ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಬೇಕು. ಸಂಸ್ಥಾನದ ಕಾರ್ಮಿಕ ಪ್ರತಿನಿಧಿಗಳ ಕೋರಿಕೆ ಮತ್ತು ಕೋಲಾರದ ಚಿನ್ನದ ಗಣಿಯ ಮತ್ತು ಭದ್ರಾವತಿಯ ಕೆಲಸಗಾರರ ಮೇಲೆ ಇರುವ ಪ್ರತಿಬಂಧಗಳನ್ನು ರದ್ದುಪಡಿಸಬೇಕು. ಹರಿಜನ ದೇವಾಲಯ ಪ್ರವೇಶ, ಪಾನನಿರೋಧ-ಇವುಗಳನ್ನು ಕೂಡಲೇ ಜಾರಿಗೆ ತರಬೇಕು, ಸರ್ಕಾರಿ ಭವನಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬೇಕು, ನೂರೈವತ್ತು ರೂಗಳಿಗೆ ಕಡಿಮೆ ಸಂಬಳ ಪಡೆಯುತ್ತಿರುವ ಎಲ್ಲ ನೌಕರರಿಗೂ, ಒಂದು ತಿಂಗಳ ಸಂಬಳವನ್ನು ಸ್ವಾತಂತ್ರ್ಯದ ಬೋನಸ್ಸಾಗಿ ಕೊಡಬೇಕು-ಎಂಬುದಾಗಿ ಅವರು ಸೂಚಿಸಿರುವರು.

ಸ್ಟೇಟ್ ಸೆಂಟಿನೆಲ್

ಪ್ರತಿ ಗುರುವಾರವೂ ಶ್ರೀ ಕೆ ಎಸ್ ರಾಯರ ಸಂಪಾದಕತ್ವದಲ್ಲಿ ಆಂಗ್ಲ ಭಾಷೆಯಲ್ಲಿ ಬೆಂಗಳೂರಿನಿಂದ ಪ್ರಕಟವಾಗುತ್ತಿರುವ 'ಸ್ಟೇಟ್ ಸೆಂಟಿನೆಲ್'- ಎಂಬ ವಾರ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಕೈ ಸೇರಿದೆ. ಅದರಲ್ಲಿ ಭಾರತದ ಪ್ರಚಲಿತ ರಾಜಕೀಯದ ಬಗ್ಗೆ ಉತ್ತಮವಾದ ಲೇಖನಗಳಿವೆ. ಇದು ಎಲ್ಲರೂ ಪ್ರೋತ್ಸಾಹಿಸಬೇಕಾದ ಪತ್ರಿಕೆಯಾಗಿರುತ್ತದೆ. ಕ್ರಯ ಕೇವಲ ಎರಡಾಣೆ.

ಗೆಳೆಯರ ಬಳಗ

ಕಳೆದ ೩ ನೇ ತಾರೀಖು ರಾತ್ರಿ ಬೆನ್ನೂರಿನ ಕರ್ನಾಟಕ ಗೆಳೆಯರ ಬಳಗದ ವಾರ್ಷಿಕೋತ್ಸವವು ಶ್ರೀ ಗ ಸ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಬೆಳಿಗ್ಗೆ ಕಲಾ ಪ್ರದರ್ಶನದ ಉದ್ಘಾಟನೆ, ಪ್ರಹಸನಗಳು, ಸಂಜೆ ನಾಟಕಗಳೂ ಬಾಲಿಕೆಯರಿಂದ ನೃತ್ಯಾಭಿನಯವೂ ಜರುಗಿದುವು. ಅಧ್ಯಕ್ಷರು ಇಂದಿನ ರಾಜ್ಯಾಂಗ ಸಮಸ್ಯೆ ಎಂಬ ವಿಷಯವಾಗಿ ಭಾಷಣವಿತ್ತರು.

ಸತ್ಯಾಗ್ರಹವೇ ಮುಂದಿನ ಮಾರ್ಗ

ಧ್ವಜಾರೋಹಣದಲ್ಲಿ ಕಾಂಗ್ರೆಸ್ ನಾಯಕರ ಭಾಷಣ

ಮೈಸೂರು ೯

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನದ ಅಂಗವಾಗಿ ಈ ಬೆಳಿಗ್ಗೆ ಈ ವೇದಿ ಪಕ್ಕದ ಕಟ್ಟಡದ ಛತ್ರದಲ್ಲಿ ಧ್ವಜ ವಂದನಾ ಸಮಾರಂಭವು ಜರುಗಿತು. ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯ ರೆಡ್ಡಿಯವರ ಅನುಪಸ್ಥಿತಿಯಲ್ಲಿ, ಮಾಜಿ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂರವರು ಮೈಸೂರ ಧ್ವಜವನ್ನು ಹಾರಿಸಿದರು. ಆಗಸ್ಟ್ ೯ ನೇ ತಾ|| ಹಿಂದೂಸ್ಥಾನದಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ಘೋರ ಆಂದೋಳನವನ್ನು ನಡೆಸಿದ ಪವಿತ್ರ ದಿನವೆಂದೂ, ಅದರ ಪರಿಣಾಮವಾಗಿ ಹಿಂದೂಸ್ಥಾನವು ಸ್ವಾತಂತ್ರ್ಯವನ್ನು ಗಳಿಸಿರುವುದೆಂದೂ ಶ್ರೀ ರೆಡ್ಡಿಯವರು ತಮ್ಮ ಭಾಷಣದಲ್ಲಿ ಹೇಳಿದರು. ಆದರೆ ಮೈಸೂರಿನಲ್ಲಿ ಪ್ರಭುತ್ವದವರು ಪ್ರಜೆಗಳ ಬೇಡಿಕೆಗಳನ್ನು ಈಡೇರಿಸದೆ ಇರುವುದರಿಂದ ಅದರ ಸಾಧನೆಗಾಗಿ ಇಲ್ಲಿ ಹೋರಾಟವನ್ನು ನಡೆಸಬೇಕಾಗಿದೆಯೆಂದೂ ಅವರು ತಿಳಿಸಿದರು.

ರಾಷ್ಟ್ರಧ್ವಜವು ಇಂದು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲದೆ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ವೈಭವದಿಂದ ಮೆರೆಯುತ್ತಿದೆಯೆಂದೂ ಅದಕ್ಕೆ ದೇಶಾಭಿಮಾನಿಗಳು ಮಾಡಿದ ತ್ಯಾಗವೇ ಕಾರಣವೆಂದೂ ಶ್ರೀ ಭಾಷ್ಯಂರವರು ನುಡಿದರು. ಯಾವ ಉದಾತ್ತ ಧ್ಯೇಯಗಳನ್ನು ಈ ಧ್ವಜವು ಸೂಚಿಸುವುದೋ ಅಂತಹ ಸತ್ಯ ಮತ್ತು ಧರ್ಮಗಳ ಪಾಲನೆಯಿಂದಲೇ ನಾವು ಮುಂದುವರಿದು ನಮ್ಮ ಕಾರ್ಯ ಸಾಧನೆಯನ್ನು ಮಾಡಬೇಕು-ಎಂದೂ ಅವರು ಹೇಳಿದರು. ಮೈಸೂರಿನ ಆಳರಸರು ಪ್ರಜೆಗಳ ಆಶೋತ್ತರಗಳನ್ನು ಈಡೇರಿಸದೆ ಕಾಲಹರಣ ಮಾಡುತ್ತಿರುವುದರಿಂದ ಇಲ್ಲಿ ಕೂಡಲೇ ಸತ್ಯಾಗ್ರಹವನ್ನು ಆರಂಭಿಸಬೇಕೆಂದೂ, ಅದಕ್ಕೆ ಸಕಲರೂ ಸಿದ್ಧರಾಗಬೇಕೆಂದೂ ಸಹ ಶ್ರೀ ಭಾಷ್ಯಂರವರು ತಿಳಿಸಿದರು. ಜಯ ಕಾರದೊಡನೆ ಸಮಾರಂಭವು ಮುಕ್ತಾಯವಾಯಿತು.

ಸಮಾರಂಭಕ್ಕೆ ಸಂಸ್ಥಾನದ ಅನೇಕ ಜಿಲ್ಲೆಗಳ ಪ್ರತಿನಿಧಿಗಳೂ, ಕಾಂಗ್ರೆಸ್ ಕಾರ್ಯಕರ್ತರೂ ಬಂದಿದ್ದರು.

ಬಹಿರಂಗ ಅಧಿವೇಶನವು ಈ ಮಧ್ಯಾ

ಮೈಸೂರು ಯೂನಿಯನ್ನಿಗೆ ಸೇರುವುದು

ಸ್ವಂ.ಸು.ಫೋ] [ಬೆಂಗಳೂರು ೯

ಭಾರತದ ಯೂನಿಯನ್ನಿಗೆ ಸೇರಲು ಮೈಸೂರು ಸಂಸ್ಥಾನವು ನಿರ್ಧರಿಸಿರುವುದೆಂದೂ ಈ ಬಗ್ಗೆ ಸದ್ಯದಲ್ಲಿಯೇ ಘೋಷಣೆಯು ಹೊರಬೀಳಲಿದೆಯೆಂದೂ ತಿಳಿದುಬಂದಿದೆ.

ಬಿಡುಗಡೆ ಇಲ್ಲವೇ ?

ಶ್ರೀ ಕೆ ಹನುಮಂತಯ್ಯ ಮತ್ತು ಇತರ ೩೦ ಜನ ರಾಜಕೀಯ ಬಂದಿಗಳಿಗೆ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಬಿಡುಗಡೆಯಾಗುವುದಿಲ್ಲವೆಂದು ಒಂದು ವರದಿಯು ತಿಳಿಸುತ್ತದೆ.

ಸಲಹಾ ಸಮಿತಿಗೆ ಕಾಂಗ್ರೆಸ್ಸಿನ ನಿರಾಕರಣೆ

ರಾಜ್ಯಾಂಗ ಸುಧಾರಣೆಗಳ ವಿವರಗಳನ್ನು ಪರಿಶೀಲಿಸಲು ೧೫ ಜನರ ಒಂದು ಸಮಿತಿಯನ್ನು ರಚಿಸುವುದಾಗಿಯೂ ಅದಕ್ಕೆ ಕಾಂಗ್ರೆಸ್ಸಿನಿಂದ ೪ ಜನ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದೂ ದಿವಾನರು ಮಾಡಿದ್ದ ಸಲಹೆಯನ್ನು ಮೈಸೂರು ಕಾಂಗ್ರೆಸ್ಸು ನಿರಾಕರಿಸುತ್ತದೆ. ಜವಾಬ್ದಾರಿ ಸರ್ಕಾರ, ತಾತ್ಕಾಲಿಕ ಮಂತ್ರಿಮಂಡಲ ಮತ್ತು ರಾಜಕೀಯ ಬಂದಿಗಳ ಬಿಡುಗಡೆಯ ಭರವಸೆಯು ಬಂದಿಲ್ಲದಿರುವುದೇ ಇದಕ್ಕೆ ಕಾರಣ.

ಹ್ನ ೩ ಗಂಟೆಗೆ ಟೌನ್‌ಹಾಲಿನಲ್ಲಿ ಆರಂಭವಾಯಿತು.

೧೫ ನೇ ತಾ. ಸ್ವಾತಂತ್ರ್ಯ ದಿನಾಚರಣೆಯ ನಂತರ ಸತ್ಯಾಗ್ರಹವನ್ನು ಆರಂಭಿಸಬೇಕೆಂದೂ, ಆ ಬಗ್ಗೆ ಸೂಕ್ತ ಕಾರ್ಯಕ್ರಮಕ್ಕಾಗಿ ಕೆಲಸ ಕಾರ್ಯಕಾರಿ ಸಮಿತಿಗೆ ಅಧಿಕಾರ ಕೊಡಬೇಕೆಂದೂ ಸೂಚಿಸುವ ನಿರ್ಣಯವು ಸಮಿತಿಯ ಮುಂದೆ ಮಂಡಿಸಲ್ಪಟ್ಟಿದೆ. ಚರ್ಚೆ ಮುಂದುವರೆಯುತ್ತಿದೆ.

ಆರಂಭೋತ್ಸವ

ರಾಜಧಾನಿಯ ಶ್ರೀ ಕೆ ಹೆಚ್ ರಾಮಯ್ಯನವರ ಅನಾಥಾಲಯದ ವಿದ್ಯಾರ್ಥಿ ಸಂಘದ ಆರಂಭೋತ್ಸವವು ನಾಳೆ ಸಂಜೆ ೫ ಗಂಟೆಗೆ ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಜರುಗುವುದು. ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಶ್ರೀ ಹೆಚ್ ಹೊಂಬೇಗೌಡರು ಆರಂಭ ಭಾಷಣ ಮಾಡುವರು.

ಜೈ ಹಿಂದ್

ಸ್ವಾತಂತ್ರ್ಯ ಮಾನವನ ಜನ್ಮ ಸಿದ್ಧ ಹಕ್ಕು. ಇಂದಿನ ಸತತ ಸ್ವಾತಂತ್ರ್ಯದ ಹೋರಾಟ ಇಂದು ಸಫಲವಾಗಿದೆ. ಈ ಸ್ವಾತಂತ್ರ್ಯೋತ್ಸವವನ್ನು ಅನುಭವಿಸಲು ಪ್ರತಿಯೊಬ್ಬ ಭಾರತೀಯನಿಗೂ ಹಕ್ಕಿದೆ.

ರಾಷ್ಟ್ರಕ್ಕೆ ಗೌರವಯುತವಾದ ಸ್ವತಂತ್ರ ರಾಷ್ಟ್ರಧ್ವಜವನ್ನು ಧರಿಸಿ, ಹಾರಿಸಿ, ಹಾರಾಡಿಸಿ, ವಂದಿಸಿ ವಂದೇ ಎನ್ನಿರಿ.

ನಮ್ಮಲ್ಲಿ ಸಿಕ್ಕುವ ಧ್ವಜಗಳು:-

ಕಾಲರ್ ಧ್ವಜಗಳು 0-1-0

ಕೈಯ ಧ್ವಜಗಳು 0-2-0

ಸ್ಟಿಕ್ ಧ್ವಜಗಳು 0-6-0

ಸದರ್ನ್ ಜನತಾ ಸ್ಟೋರ್ಸ್

ಜಗನ್ಮೋಹನ ಪ್ಯಾಲೆಸ್ ರಸ್ತೆ,

ಮೈಸೂರು.

ಸಾಧ್ವಿ

ತಾ|| ೯-೮-೪೭ ಶನಿವಾರ

ಎ. ಎಂ. ಸಿ. ಸಿ. ಅಧಿವೇಶನ

ಈ ದಿನ ರಾಜಧಾನಿಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನವು ನಡೆಯುತ್ತದೆ. ಈ ಅಧಿವೇಶನವು ಅತ್ಯಂತ ಮಹತ್ವಪೂರ್ಣವಾದ ಪರಿಸ್ಥಿತಿಯಲ್ಲಿ ಜರುಗುತ್ತಿದೆ. ಸಂಸ್ಥಾನದಲ್ಲಿ ಮುಂದೆ ಸಮರವೋ ಅಥವಾ ಸಮರಸವೋ ಎಂಬುದನ್ನು ಇದು ನಿರ್ಧರಿಸಲಿದೆ. ಆದುದರಿಂದ ನಮ್ಮ ಸಂಸ್ಥಾನದ ಸಕಲ ಜನರ ಗಮನವೂ ಅದರ ಕಡೆಗೆ ತಿರುಗಿರುವುದು ಸಹಜವಾಗಿಯೇ ಇರುತ್ತದೆ.

ಆಗಸ್ಟ್ ೯ ನೇ ತಾರೀಖು ಭರತಖಂಡದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿನ. ಅಸಂಖ್ಯಾತರಾದ ವೀರ ದೇಶಾಭಿಮಾನಿಗಳು ಐದು ವರ್ಷದ ಹಿಂದೆ ನಾಡಿನ ಸ್ವಾತಂತ್ರ್ಯಕ್ಕಾಗಿ ಆಂದೋಳನವನ್ನು ನಡೆಸಿ ಬ್ರಿಟಿಷರನ್ನು ಭಾರತದಿಂದ ಹೊರಕ್ಕೆ ಕಳುಹಿಸಲು ಬೀಜವನ್ನು ಬಿತ್ತಿದ ದಿನ. ಇಂದು ಆ ಚಳವಳಿಯ ಪರಿಣಾಮವಾಗಿ ದೇಶವು ಸ್ವಾತಂತ್ರ್ಯದ ಸವಿಯನ್ನು ಅನುಭವಿಸುತ್ತಿದೆ. ಆಗಸ್ಟ್ ೧೫ ನೇ ತಾರೀಖು ಭಾರತೀಯರಿಗೆಲ್ಲಾ ಸ್ವಾತಂತ್ರ್ಯ ವಿವಾಹದ ಮತ್ತು ಸ್ವಾತಂತ್ರ್ಯ ಸಾಧನೆಯ ದಿನವಾಗಿ ಪರಿಣಮಿಸಿರುತ್ತದೆ.

ಇಡೀ ಹಿಂದೂಸ್ಥಾನಕ್ಕೆ ಲಭಿಸುವ ಸ್ವಾತಂತ್ರ್ಯವು ಮೈಸೂರು ಸಂಸ್ಥಾನದ ಪ್ರಭುತ್ವದ ಮೇಲೆ ತಕ್ಕ ಪರಿಣಾಮವನ್ನು ಉಂಟುಮಾಡದಿರುವುದು ವಿಷಾದಕರವಾದ ಅಂಶ. ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವುದೇ ಒಂದು ಜಗಳದ ಪ್ರಶ್ನೆಯಾಯಿತು. ಹೈದರಾಬಾದ್ ಸಂಸ್ಥಾನವೂ ಸಹ ಇಷ್ಟೇ ದೊಡ್ಡ ಸಾಹಸವನ್ನು ಪ್ರತ್ಯೇಕವಾಗಿ ಇಟ್ಟಿರುವಾಗ ನಮ್ಮಲ್ಲಿ ಸೇರುವ ಅಂಶವು ಇನ್ನೂ ಅಂತರಾಳದಲ್ಲಿಯೇ ಇರುತ್ತದೆ. ಇದಲ್ಲದೆ ಇಡೀ ಹಿಂದೂಸ್ಥಾನದಂತೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ಮಾತ್ರ ನಮ್ಮ ಸರ್ಕಾರದವರು ಮುಂದೆ ಬಂದಿದ್ದಾರೆ. ಪ್ರತಿಬಂಧಕಾಜ್ಞೆಗಳನ್ನೇ ನೀವು ತೆಗೆಯಬೇಕಿದ್ದಾರೆ. ಇಷ್ಟು ಮಾತ್ರ ಮಾಡಿದರೆ ಸಾಲದು. ಪ್ರಜೆಗಳ ದೃಷ್ಟಿಯು ಈಗ ನಿಜವಾದ ಸ್ವಾತಂತ್ರ್ಯದ ಕಡೆಗೆ ತಿರುಗಿರುತ್ತದೆ.

ನೆರೆಯ ಪ್ರಾಂತಗಳಲ್ಲಿ ಪ್ರಜೆಗಳಿಗೆ ಲಭಿಸಿರುವ ಸ್ವಾತಂತ್ರ್ಯವು ಎಷ್ಟು ಮಟ್ಟಿಗೆ ಇಲ್ಲಿನವರಿಗೆ ದೊರೆಯುವುದೆಂಬುದೇ ಎಲ್ಲರ ಮುಂದಿರುವ ಪ್ರಶ್ನೆ. ಈ ಬಗ್ಗೆ ಪ್ರಭುತ್ವದವರು ಸಮರ್ಪಕವಾದ ಯಾವ ಕಾರ್ಯಕ್ರಮವನ್ನೂ ಕೈಗೊಂಡಿರುವುದಿಲ್ಲ. ಕೇವಲ ತೋರಿಕೆಯ ಸಮಾಲೋಚನೆ ಮತ್ತು ಸಂಭಾಷಣೆಗಳಲ್ಲಿಯೇ ಪರ್ಯವಸಾನವಾಗುತ್ತಿದೆ. ಇದರಿಂದ ಜನರಿಗೆ ನಿಜವಾಗಿಯೂ ಅಸಮಾಧಾನವುಂಟಾಗಿರುತ್ತದೆ. ಆದುದರಿಂದಲೇ ಕಾಂಗ್ರೆಸ್ ಸಂಸ್ಥೆಯವರು ಸತ್ಯಾಗ್ರಹದ ಅಸ್ತ್ರವನ್ನು ಪ್ರಯೋಗಿಸಲು ಜಾಗರೂಕರಾಗುತ್ತಿದ್ದಾರೆ.

ಇಡೀ ಹಿಂದೂಸ್ಥಾನವು ಸ್ವಾತಂತ್ರ್ಯ ಸಾಧನೆಯ ಸಮಾರಂಭದಲ್ಲಿ ನಲಿಯುತ್ತಿರುವಾಗ ಮೈಸೂರಿನಲ್ಲಿ ಮಾತ್ರ ಪ್ರಜೆಗಳಿಗೂ, ಪ್ರಭುತ್ವದವರಿಗೂ ಘರ್ಷಣೆಯು ಸಂಭವಿಸುವುದು ಸ್ವಲ್ಪವೂ ಸೂಕ್ತವಲ್ಲ. ಇದನ್ನು ತಪ್ಪಿಸಲು ಪ್ರಭುತ್ವದವರು ಕೂಡಲೇ ಮುಂದೆ ಬಂದು ಪ್ರಜೆಗಳ ಮುಖ್ಯ ಗುರಿಯಾದ ಜವಾಬ್ದಾರಿ ಸರ್ಕಾರದ ಘೋಷಣೆಯನ್ನು ಮಾಡಿ, ಪ್ರಧಾನರಿಗಲ್ಲದೆ ಪಾತ್ರವಾದ ಮಂತ್ರಿ ಮಂಡಲವನ್ನು ರಚಿಸಿ ಪ್ರಜೆಗಳ ಪ್ರತಿನಿಧಿಗಳಿಂದ ಸಂಸ್ಥಾನದ ನೂತನ ರಾಜ್ಯಾಂಗವು ನಿರ್ಮಾಣವಾಗಲು ವ್ಯವಸ್ಥೆ ಮಾಡಬೇಕು. ಇಡೀ ಭರತಖಂಡದ ವಿಮೋಚನೆಗೆ ಕಾರಣಭೂತವಾದ ಆಗಸ್ಟ್ ೯ ನೇ ತಾರೀಖು ಮೈಸೂರು ಸಂಸ್ಥಾನದಲ್ಲಿ ಘೋರ ವಿಪ್ಲವಕ್ಕೆ ಅಂಕುರಾರ್ಪಣವಾಗದಿರಲೆಂದೂ ಮತ್ತು ಇಂದಿನ ಸ್ಥಿತಿಗತಿಗಳಿಗೆ ತಕ್ಕ ರೀತಿಯಲ್ಲಿ ಕಾಂಗ್ರೆಸ್ ನಾಯಕರು ಪ್ರಜೆಗಳಿಗೆ ಸೂಕ್ತವಾದ ಮಾರ್ಗದರ್ಶನವನ್ನು ಮಾಡಲೆಂದೂ ಹಾರೈಸೋಣ.

ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ಮೈಸೂರು

೧೦-೮-೪೭ ನೇ ಭಾನುವಾರ

ಸಾಯಂಕಾಲ ೫-೩೦ ಗಂಟೆಗೆ

ಮಾಸ್ಟರ್ ಮಹಾಲಿಂಗಂರವರ ಕೊಳಲು

ಸಂಗೀತಶಾಸ್ತ್ರ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರ ಪಿಟೀಲು

ವಿದ್ವಾನ್ ಪಾಲಘಾಟ್ ಸುಬ್ಬಯ್ಯರ್‌ರವರ ಮೃದಂಗ

ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ

ಗಂಡಸರಿಗೆ 2-0-0, ಹೆಂಗಸರಿಗೆ 1-0-0

ಹುಡುಗರಿಗೆ 1-0-0

ಅಮೀನರುಗಳ ಸಂಬಳ

ಸಂಬಳ ಸಮಿತಿಯವರು ಸಂಸ್ಥಾನದ ಮುನ್ಸೀಫ್ ಕೋರ್ಟುಗಳಲ್ಲಿರುವ ಅಮೀನರುಗಳು ಮತ್ತು ಪ್ರೋಸೆಸ್ ಸರ್ವರುಗಳಿಗೆ ೩೦-೧-೩೫ ಮತ್ತು ೧೮-೧-೨೫ ರೂ ಕೊಡುವಂತೆ ಶಿಫಾರಸು ಮಾಡಿರುವರೆಂದು ಗೊತ್ತಾಗಿದೆ. ಅವರುಗಳಿಗೆ ಕಲಸ ಹೆಚ್ಚಾಗಿದ್ದು ಮಳೆ ಬಿಸಿಲೆನ್ನದೆ ಸಂಚರಿಸುತ್ತಿರುತ್ತಾರೆ. ಸರ್ಕಾರದವರು ಅವರ ಶ್ರಮವನ್ನು ಪರಿಶೀಲಿಸಿ ಹೊಸ ಗ್ರೇಡುಗಳನ್ನು ಮಂಜೂರು ಮಾಡಬೇಕೆಂದೂ ಕಡೆಯ ಪಕ್ಷ ೫೦ ರೂ ಗಳಿಗೆ ಗ್ರೇಡು ಕೊಡುವುದಲ್ಲದೆ ಪ್ರಯಾಣದ ಭತ್ಯವನ್ನೂ ಸಹ ಕೊಡಿಸಿ ಕೊಡಬೇಕೆಂದೂ ಅಮೀನರುಗಳ ಪಿಟೀಷನುಗಳನ್ನು ಕೊಟ್ಟಿರುವರು.

ಸ್ತ್ರೀ ಸಮಾಜ

ಸ್ವಂ.ವ.] [ಶ್ರೀರಂಗಪಟ್ಟಣ ೪

ಇಲ್ಲಿನ ಶ್ರೀ ರಂಗನಾಯಕೀ ಸ್ತ್ರೀ ಸಮಾಜದ ನಾಲ್ಕನೇ ವಾರ್ಷಿಕೋತ್ಸವವು ನಿನ್ನೆ ಶ್ರೀಮತಿ ಕೆ. ಸಿಂಗಮ್ಮನವರ ಅಧ್ಯಕ್ಷತೆಯಲ್ಲಿ ಜರುಗಿತು.

ಹಲಗೇರಿ ಶ್ರೀಹಾಲಸಿದ್ಧೇಶ್ವರ ನಾಟಕ ಮಂಡಳಿ

ವಿಶೇಷ ಸೂಚನೆ

ರಾಜಧಾನಿಯ ನಾಟಕಾಭಿಮಾನಿಗಳ ಉದಾರಾಶ್ರಯವನ್ನು ಪಡೆದು ನಮ್ಮ ಸಂಘದವರು ಈಗ ಒಂದು ತಿಂಗಳಿಂದಲೂ ಸಾಮಾಜಿಕ, ಮತ್ತು ಪೌರಾಣಿಕ ನಾಟಕಗಳನ್ನು ಯಶಸ್ವಿಯಾಗಿ ಅಭಿನಯಿಸಿ ಪ್ರಾಪ್ರಮುಖರ ಮತ್ತು ಅಧಿಕಾರಿ ವರ್ಗದವರ ಪ್ರೋತ್ಸಾಹವನ್ನು ಪಡೆಯುತ್ತಿರುವುದು ಎಲ್ಲರಿಗೂ ತಿಳಿದ ಅಂಶವೇ ಆಗಿರುತ್ತದೆ. ಇದಕ್ಕಾಗಿ ನಾವು ಪುರನಿವಾಸಿಗಳಿಗೆ ಅತ್ಯಂತ ಕೃತಜ್ಞರಾಗಿರುತ್ತೇವೆ.

ಮಾಲೀಕರ ಹಸ್ತಾಕ್ಷರವನ್ನು ಹಾಕಿ ಬರೆಯದೆ ಹಾಗೆಯೇ ಇಟ್ಟಿದ್ದ ನಮ್ಮ ಸಂಸ್ಥೆಯ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳು ಎಲ್ಲಿಯೋ ಗೈರುವಿಲೆಯಾಗಿರುತ್ತವೆ. ಆದುದರಿಂದ ತಾ|| ೨-೭-೪೭ ರಿಂದ ಇದುವರೆಗೆ ಕೊಟ್ಟಿರುವ ಎಲ್ಲಾ ಪಾಸುಗಳನ್ನೂ ಮನ್ನಾಮಾಡಿ ಹೊಸ ಪಾಸುಗಳನ್ನು ಕೊಡುತ್ತೇವೆ. ಹಳೆಯ ಪಾಸುಗಳನ್ನು ತಾ|| ೭-೮-೪೭ ರಿಂದ ಮನ್ನಿಸಲಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ತಿಳಿಸಿರುತ್ತೇವೆ.

ಉಪಾಧ್ಯಾಯರ ಸಂಘ

ಸ್ವಂ ವ.] [ಚಾಮರಾಜನಗ

ಮೇಲ್ಕಂಡ ಸಂಘದ ಸಭೆಯು ೩೧ ನೇ ತಾರೀಖು ನಡೆಯಿತು. ಸಂಬಳ ಸಮಿತಿಯವರು ಉಪಾಧ್ಯಾಯರುಗಳ ಪಾರವಾಗಿ ಮಾಡಿರುವ ಸಲಹೆಗಳು ಸ್ತ್ರೀಕರವಾಗಿವೆ. ಸಂಬಳವನ್ನು ೩೦ ರಿಂದ ೩೦-೨-೬೦ ೩-೭೫ ಕ್ಕೆ ಹೆಚ್ಚಿಸು. ಹಳಬರಿಗೆ ನಾಲ್ಕು ವರ್ಷಗಳ ಅಡ್ವಾನ್ಸ್ ಇಂಕ್ರಿಮೆಂಟ್ ಕೊಡು. ನಿವೃತ್ತರಾಗುವ ಉಪಾಧ್ಯಾಯ ೩೦ ರೂ. ವಿಶ್ರಾಂತಿ ವೇತನವಾದರೂ ದೊರೆಯುವಂತಾಗಬೇಕು - ಮುಂತಾಗಿ ದರವನ್ನು ಒತ್ತಾಯಪಡಿಸುವ ನಿರ್ಣಯಗಳು ಅಂಗೀಕೃತವಾದುವು.

* ನಿನ್ನೆಯ ದಿನದ ನಮ್ಮ ಪತ್ರಿಕೆ ಅಚಾತುರ್ಯದಿಂದ ನುಸುಳಿದ್ದ ಭತ್ತೆ ಎಂಬ ಶಿರೋನಾಮೆಯಲ್ಲಿ ಭತ್ತ ೭ ಸಲ್ಲ ೫೦ ಸೇರು ಎಂದು ಓದಿಕೊಳ್ಳಬೇಕಾಗಿ ವಿನಂತಿ.

ವುಡ್‌ಲ್ಯಾಂಡ್ಸ್

ತಾ|| 12-8-47 ಕ್ಕೆ ಅಮೋಘ 100 ನೇ ದಿನ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮೂರು ಆಟ)

ನಾವು ಇಬ್ಬರ

:- ಪಾತ್ರ :-

ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವ

WOODLANDS

Morning Shows From 8-8-47 for 4 days daily at 10-30 A. M.

Horn Blows at Midnight

—:Starring:—

Jack Benny, Alexis Smith

Edited printed and published by A. R. Nagarajan at the Sadhvi Press, D Subbaiah Road Mysore

ಸ್ವಾತಂತ್ರ್ಯದ ಕರೆ! ನಿಮ್ಮ ಆನಂದ ರಂಜನೆ !!

ಸ್ವಾತಂತ್ರ್ಯ ದಿನೋತ್ಸವದ ಸಹಾಯಾರ್ಥವಾಗಿ

ಶ್ರೀ ಹಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ

ಹಲಗೇರಿ, ಇವರ ಮೈಸೂರು, ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ೧೦-೮-೪೭ ನೇ ಭಾನುವಾರ

ಸಾಯಂಕಾಲ ೬-೩೦ ಕ್ಕೆ ಸುಪ್ರಸಿದ್ಧ

ಬ್ಲಾಕ್ ಮಾರ್ಕೆಟ್

ಎಂಬ ನಾಟಕವನ್ನು ಅಭಿನಯಿಸುವರು.

ಟಿಕೆಟಿನ ದರ ... 10-0-0, 5-0-0, 3-0-0, 2-0-0, 1-0-0

ಸಹೃದಯರು ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

ವಿಶೇಷ ನೃತ್ಯ ಪ್ರದರ್ಶನಗಳನ್ನು ಏರ್ಪಡಿಸಿದೆ

ನಿಮ್ಮ ಈ ಸಹಾಯ !! ತಪ್ಪದೆ ಬನ್ನಿರಿ !!!

ರಾಜಕಮಲ್ :: ತಾ|| 8-8-47 ರಿಂದ

ಅಮೋಘ ಪ್ರಾರಂಭ ಪ್ರತಿ ದಿನ ೩ ಆಟಗಳು

★ ಮಹಾನಂದ ★

(ಕನ್ನಡದಲ್ಲಿ)

ಪಾತ್ರಗಳು :— ಶಾಂತಾದೇವಿ, ಕೆಂಪರಾಜ್, ಸರೋಜಿನಿ ಅಶ್ವತ್ಥ, ಕಾಶೀನಾಥ್ ಮುಂತಾದವರು

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ಆಚಾರ್ಯ ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್, ಜಯಪ್ರಕಾಶ್ ನಾರಾಯಣ್ ಇವರು ಮೈಸೂರಿಗೆ ಆಗಮಿಸಿದಾಗ ತೆಗೆದ ಒಂದು ಭಾಗವನ್ನೂ ಸಹ ಪ್ರದರ್ಶಿಸುತ್ತೇವೆ

ತಾ|| 8-8-47 ರಿಂದ :: ೪ ದಿನಗಳು

ಪ್ರತಿ ದಿನ ಬೆಳಿಗ್ಗೆ 10-30 ಕ್ಕೆ

★ ರಾಣಿ ★

(ಹಿಂದಿ ಚಿತ್ರ)

ರಿಜಿ ನಂ. ೮೨೪ WEEKLY EDITION ಬಿಡಿ ಪ್ರತಿ ೧ ಆಣೆ

ಸಂಪುಟ ೧೨] ಭಾನುವಾರ ೧೦—೮—೪೭ [ಸಂಚಿಕೆ ೪

ಮೈಸೂರು ಕಾಂಗ್ರೆಸ್ಸಿನ ಸತ್ಯಾಗ್ರಹ ಘೋಷಣೆ

ಸತ್ಯಾಗ್ರಹದ ಘೋಷಣೆ

ಮೈಸೂರು ಕಾಂಗ್ರೆಸ್ಸಿನ ನಿರ್ಧಾರ

ಮೈಸೂರು ೧೦

"ಮೈಸೂರು ಕಾಂಗ್ರೆಸ್ಸಿನ ಬೇಡಿಕೆಯು ಈಡೇರಿಸಿಕೊಳ್ಳುವುದಕ್ಕಾಗಿ ೧೯೪೭ ಸೆಪ್ಟೆಂಬರ್ ೧ ನೇ ತಾರೀಖಿನ ದಿನ ಸತ್ಯಾಗ್ರಹ ಪ್ರಾರಂಭಿಸಬೇಕೆಂಬ ಕಾರ್ಯಕಾರಿ ಸಮಿತಿಯ ನಿರ್ಣಯವನ್ನು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಕಳೆದ ತನ್ನ ಮಹಾ ಅಧಿವೇಶನದಲ್ಲಿ ಒಪ್ಪಿದ ಮೇಲೆ ಈಚೆ ನಡೆದಿರುವ ರಾಜಕೀಯ ಚಲನವಲನಗಳನ್ನು ಪರಿಶೀಲಿಸಿದೆ. ರಾಜಕೀಯ ಸುಧಾರಣೆಗಳ ಬಗ್ಗೆ ಕಾಂಗ್ರೆಸ್ಸಿನೊಡನೆ ಸಮಾಲೋಚನೆ ನಡೆಸಲು ದಿವಾನರು ಅಪೇಕ್ಷಿಸಿದುದರಿಂದ ಗೊತ್ತಾಗಿದ್ದ ದಿನ ಸತ್ಯಾಗ್ರಹ ಮುಂದುವರಿಬೇಕಾಯಿತೆಂಬುದನ್ನು ಸಮಿತಿ ಗಮನಿಸಿದೆ. ಕಾಂಗ್ರೆಸ್ ಅಧ್ಯಕ್ಷರೂ ದಿವಾನರಿಗೂ ನಡೆದಿರುವ ಪತ್ರವ್ಯವಹಾರವನ್ನು ಈ ಸಮಿತಿ ಪರಿಶೀಲಿಸಿದೆಯಲ್ಲದೆ ದಿವಾನರೊಡನೆ ನಡೆಸಿದ ಸಮಾಲೋಚನೆಯ ಫಲಿತಾಂಶವೇನೆಂಬುದೂ ಈ ಸಮಿತಿಯ ಗಮನಕ್ಕೆ ಬಂದಿದೆ. ದಿವಾನರೊಡನೆ ಸಮಾಲೋಚನೆ ಮುಕ್ತಾಯಗೊಂಡ ಮೇಲೆ ಘೋಷಿಸಬೇಕೆಂದು ಕಾರ್ಯಕಾರಿ ಸಮಿತಿ ಮಾಡಿರುವ ನಿರ್ಧಾರವನ್ನೂ, ದಿವಾನರು ಪ್ರಕಟಿಸಿದ ಶಾಸನರಚನಾ ಸಭೆಯೂ ಮತ್ತು ಸುಧಾರಣೆ ವರ್ತನೆಯೂ ಸಮಾಲೋಚನೆ ವಿಫಲವಾದ ದಕ್ಕೆ ಕಾರಣವೆಂಬುದನ್ನೂ ಸಮಿತಿ ಒಪ್ಪುತ್ತದೆ. ಈಚೆಗೆ ರಾಜಕೀಯ ಸುಧಾರಣೆಗಳ ಬಗ್ಗೆ ಚರ್ಚಿಸಲು ಸಲಹಾ ಸಮಿತಿಯೊಂದನ್ನು ರಚಿಸುವ ವಿಚಾರದಲ್ಲಿ ಸರ್ಕಾರವು ಸೂಚಿಸಿದ ಸಲಹೆಯ ಈ ಬಗ್ಗೆ ಕಾರ್ಯಕಾರಿ ಸಮಿತಿಯು ಕೈಗೊಂಡಿರುವ ಕಾರ್ಯಕ್ರಮವನ್ನೂ ಅಂದರೆ:— ಜನಾಂಗದ ಸರ್ಕಾರ ಪದ್ಧತಿಯ ಮೂಲತತ್ವದ ಮೇಲೆ ಪ್ರಜಾಪ್ರಭುತ್ವಾನುಸಾರವಾಗಿ ರಾಜ್ಯಾಂಗ ರಚಿಸಬೇಕು ಆ ತತ್ವ ರಾಜ್ಯಾಂಗ ರಚನೆಯಾಗುವ ಸತ್ಪೂರ್ವ, ಶಾಸನ ಸಭೆಗಳ ವಿಶ್ವಾಸ ಹೊಂದಿರುವ ತಾತ್ಕಾಲಿಕ ಮಂತ್ರಿಮಂಡಲವನ್ನು ಕೂಡಲೇ ರಚಿಸಬೇಕು ಮತ್ತು ಇದಕ್ಕೆಲ್ಲ ಸಿದ್ಧತೆಯಾಗಿ ಶ್ರೀ ಕೆ. ಹನುಮಂತಯ್ಯನವರನ್ನೂ ಇತರ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಿ, ಮೂಲಭೂತ ಹಕ್ಕುಗಳಿಗೆ ಧಕ್ಕೆ ಒದಗುವುದನ್ನು ತಪ್ಪಿಸಿದ ಹೊರತು ಯಾವ ಸಲಹೆಯನ್ನೇ ಆಗಲಿ ಪರ್ಯಾಲೋಚಿಸುವುದಕ್ಕೂ ಅಂಗೀಕರಿಸುವುದಕ್ಕೂ ಸಾಧ್ಯವಿಲ್ಲ ಎಂದು ಕಾರ್ಯಕಾರಿ ಸಮಿತಿ ಮಾಡಿರುವ ನಿರ್ಧಾರವನ್ನೂ ಈ ಸಮಿತಿ ಅನುಮೋದಿಸುತ್ತದೆ. ಆದುದರಿಂದ ಮೈಸೂರು ಕಾಂಗ್ರೆಸ್ಸಿನ ಗುರಿಯನ್ನು ಸಾಧಿಸಲು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಈ ಸಭೆ ಈ ನ ಸತ್ಯಾಗ್ರಹವ ಘೋಷಣೆ ಮಾಡುತ್ತದೆ ಮತ್ತು ಈ ತಿಂಗಳು ೧೫ನೇ ತಾರೀಖು ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಮುಗಿದ ಒಡನೆ ಈ ಬಗ್ಗೆ ಅಗತ್ಯ ಕಾರ್ಯ ಕೈಗೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರ ಕೊಟ್ಟಿದೆ. ಸತ್ಯಾಗ್ರಹವು ಜಯಪ್ರದವಾಗುವಂತೆ ಮಹಾಜನರು ಎಲ್ಲ ವಿಧದಲ್ಲೂ ಕಾಂಗ್ರೆಸ್ಸಿಗೆ ನೆರವಾಗಬೇಕೆಂದು ಪ್ರಾರ್ಥಿಸುತ್ತದೆ."

ಎಂಬ ನಿರ್ಣಯವು ನಿನ್ನೆ ರಾಜಧಾನಿಯ ಪುರಭವನದಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ವಿಶೇಷ ಬಹುಮತದಿಂದ ಅಂಗೀಕರಿಸಲ್ಪಟ್ಟಿತು. ಕೇವಲ ೭ ಜನರು ಮಾತ್ರ ಇದನ್ನು ವಿರೋಧಿಸಿದರು. ಈ ನಿರ್ಣಯವು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಪರವಾಗಿ ಅಂಗೀಕರಿಸಲ್ಪಟ್ಟಿದ್ದು ಶ್ರೀ ಟಿ. ಸುಬ್ರಹ್ಮಣ್ಯಂರವರಿಂದ ಮಂಡಿಸಲ್ಪಟ್ಟಿತು. ಸಂಸ್ಥಾನದಲ್ಲಿ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಲು ಮೈಸೂರು ಕಾಂಗ್ರೆಸ್ಸು ಸುಭಾಷ್ ನಗರದ ಅಧಿವೇಶನದಿಂದ ಇದುವರೆಗೆ ಮಾಡಿರುವ ಕಾರ್ಯಕಲಾಪಗಳನ್ನು ಅವರು ವಿವರಿಸಿದರು ಮತ್ತು ಪ್ರಭುತ್ವದವರು ಪ್ರಜೆಗಳ ಕೋರಿಕೆಯನ್ನು ನಿರಾಕರಿಸುತ್ತಾ ಬಂದಿರುವುದರಿಂದ ಕೂಡಲೇ ಸತ್ಯಾಗ್ರಹವನ್ನು ಕೈಕೊಳ್ಳುವುದು ಅಗತ್ಯವೆಂದು ಹೇಳಿದರು. ಸುಧಾರಣೆಗಳ ಬಗ್ಗೆ ದಿವಾನರ ನೀತಿಯನ್ನು ಖಂಡಿಸಿ ಪ್ರಜೆಗಳ ಹಕ್ಕು ಬಾಧ್ಯತೆಗಳ ಸ್ಥಾಪನೆಗೆ ಸತ್ಯಾಗ್ರಹವೇ ಈಗ ಉಳಿದಿರುವ ಮಾರ್ಗವೆಂದು ಶ್ರೀ ಹೆಚ್. ಸಿದ್ದಯ್ಯನವರು ಹೇಳಿ ನಿರ್ಣಯವನ್ನು ಅನುಮೋದಿಸಿದರು.

ನಿರ್ಣಯಕ್ಕೆ ಸುಮಾರು ೨೭ ತಿದ್ದುಪಡಿಗಳು ಬಂದವು. ಸತ್ಯಾಗ್ರಹವನ್ನು ೧೬ ಅಥವಾ ೧೭ ನೇ ತಾರೀಖು ಆರಂಭಿಸಬೇಕೆಂಬುದೇ ಅನೇಕ ತಿದ್ದುಪಡಿಗಳ ಅಭಿಪ್ರಾಯವಾಗಿದ್ದಿತು. ಈ ಕೂಡಲೇ ಆದನ್ನು ಆರಂಭಿಸಬೇಕೆಂದು ಒಬ್ಬರು ಸೂಚಿಸಿದರು. ಅರಮನೆಯ ಮುಂದೆ ಸತ್ಯಾಗ್ರಹ ಹೂಡಬೇಕೆಂದು ಮತ್ತೊಬ್ಬರು ಅಭಿಪ್ರಾಯಪಟ್ಟರು. ಮೂಲ ನಿರ್ಣಯದ ಸೂಚಕರು ಯಾವ ತಿದ್ದುಪಡಿಗಳನ್ನೂ ಒಪ್ಪಿಕೊಳ್ಳಲಿಲ್ಲ. ತಮ್ಮಿಂದಲೇ ಚುನಾಯಿತರಾದ ಕಾರ್ಯಕಾರಿ ಸಮಿತಿಯವರಿಗೆ ಸತ್ಯಾಗ್ರಹದ ಕಾಲ ನಿರ್ಣಯದ ಬಗ್ಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಅವರು ಒತ್ತಾಯಪಡಿಸಿದರು. ಅಧ್ಯಕ್ಷರಾದ ಶ್ರೀ ರೆಡ್ಡಿಯವರೂ ಸಹ ಮಾತನಾಡಿ ಕಾಂಗ್ರೆಸ್ ನಾಯಕರು ಇದುವರೆಗೆ ನಡೆಸಿರುವ ಕಾರ್ಯ ಕ್ರಮಗಳೆಲ್ಲವೂ ಕಾಂಗ್ರೆಸ್ಸಿನ ಧ್ಯೇಯ ಸಾಧನೆಗೆ ಅನುಕೂಲವಾಗಿಯೇ ಇರುವುದೆಂದು ಹೇಳಿದರು. ಆ ಮಾರ್ಗವನ್ನು ಅವರು ಅನುಸರಿಸುವುದರಲ್ಲಿ ತಾವೆಲ್ಲರ ಬೆಂಬಲ ಅತ್ಯವಶ್ಯಕವೆಂದು ಒತ್ತಿ ಹೇಳಿದರು.

ತಿದ್ದುಪಡಿಗಳ ಮೇಲಿನ ಮತ ಮೂಲ ನಿರ್ಣಯದ ಮೇಲೆಯೂ ಸ್ವಾರಸ್ಯವಾದ ಚರ್ಚೆ ನಡೆಯಿತು. ಇದುವರೆಗೆ ಸತ್ಯಾಗ್ರಹವನ್ನು ಆರಂಭಿಸದಿದ್ದುದಕ್ಕಾಗಿ ಒಂದು ಬಣ, ಈ ನಿರ್ಣಯವೂ ಈಗಲೇ ಜಾರಿ ಆದನ್ನು ಖಂಡಿತವಾಗಿ ನಡೆಸಬೇಕೆಂಬ ಒತ್ತಾಯವೂ ಈ ಭಾಷಣಗಳಲ್ಲಿ ಎದ್ದು ಕಾಣುತ್ತಿತ್ತು. ತಿದ್ದುಪಡಿಗಳನ್ನು ಓಟಿಗೆ ಹಾಕಿದಾಗ ಬಹುಮತದಿಂದ ಎಲ್ಲವೂ ಬಿದ್ದುಹೋಗಿ ಮೂಲ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಸಭಾರಂಗದಲ್ಲಿ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ದೀರ್ಘವಾಗಿ ಭಾಷಣ ಮಾಡಿ ಇದುವರೆಗೆ ನಡೆದಿರುವ ರಾಜಕೀಯ ಚಲನ ವಲನಗಳ ಸಾರಾಂಶವನ್ನು ವಿವರಿಸಿದರು.

ರಾಜಧಾನಿಯ ಶ್ರೀ ವ್ಯಾಸ ಕಲಾಮಂದಿರದ ಶ್ರೀ ಎ. ಎಸ್. ಸುಬ್ರಮಣ್ಯಂರವರು ಸಭೆಯ ಆಚರಣೆ ನಡೆಯುತ್ತಿದ್ದಾಗ ಸಭಾಂಗಣಕ್ಕೆ ಸಂಕೀರ್ತನವನ್ನು ಸೂಚಿಸಿ ಸ್ವಲ್ಪ ಕಾಲ ಮನರಂಜನೆ ಮಾಡಿದರು. ನಿರ್ಣಯಗಳ ಚರ್ಚೆಗೆ ಕಾಲಾತೀತವಾಗಿದ್ದುದರಿಂದ ಅವುಗಳನ್ನು ಮುಂದೆ ಹಾಕಿ ರಾತ್ರಿ ೧೧ ಗಂಟೆಗೆ ಜಯಘೋಷದೊಡನೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಭೆಗೋಸ್ಕರ ಪುರಭವನವನ್ನು ನೇತ್ರಾನಂದಕರವಾಗಿ ಅಲಂಕರಿಸಲಾಗಿದ್ದಿತು. ಸ್ವಾಗತ ಸಮಿತಿಯವರು ಎಲ್ಲಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಿದ್ದರು.

ಸ್ವಾತಂತ್ರ್ಯ ದಿನಾಚರಣೆ

ವಾಣೀವಿಲಾಸ ಮೊಹಲ್ಲೆಯ ಮಾರ್ಕೆಟ್ ಸ್ಕ್ವೇರ್ ರಸ್ತೆಯಲ್ಲಿರುವ ಜೈ ಹಿಂದ್ ತರುಣ ವಿದ್ಯಾರ್ಥಿ ಸಂಘದವರು ೧೫ ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸುವರು. ಮಹಾಜನರು ನೆರವು ನೀಡಬೇಕೆಂದು ಸಂಚಾಲಕರು ಪ್ರಾರ್ಥಿಸುವರು.

೧೫—೮—೧೯೪೭ ಸ್ವಾತಂತ್ರ್ಯ ದಿನಾಚರಣೆ

ಬಾನಿನಲ್ಲೇ ಹಾರಾಡುತಿರುವ ನೂತನ ರಾಷ್ಟ್ರಧ್ವಜಗಳು ಎಲ್ಲಾ ಸ್ವದೇಶಿ ಅಂಗಡಿಗಳಲ್ಲೂ ಕಡಿಮೆ ಬೆಲೆಗೆ ದೊರೆಯುವುವು

ಖದ್ದರ್ ಸಹಕಾರ ಸಂಘ, ಮೈಸೂರು.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೦

ಮೈಸೂರು ಸೇಂಟ್ ಫಿಲೋಮಿನಾ ಚರ್ಚಿನ ಬಿಷಪ್ ರೆನಾ ಫ್ಯೂಗಾರವರು ಒಂದು ಮನವಿಯನ್ನು ಹೊರಡಿಸಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಮೈಸೂರು ಮತ್ತು ನೀಲಗಿರಿಯಲ್ಲಿರುವ ಎಲ್ಲ ಚರ್ಚುಗಳಲ್ಲಿಯೂ ವಿಶೇಷ ಪ್ರಾರ್ಥನೆಗಳನ್ನು ನಡೆಸಿ ಕ್ರೈಸ್ತರೆಲ್ಲರೂ ಈ ದಿನಾಚರಣೆಯಲ್ಲಿ ಭಾಗವಹಿಸಬೇಕೆಂದು ಕೋರಿರುವರು. ಮಕ್ಕಳಿಗೆ ಸಿಹಿ ತಿಂಡಿ ಹಂಚಲು ೫೦೦ ರೂ. ಮಂಜೂರಾಗಿರುತ್ತಾರೆ. ನಾಳೆ ನಡೆಯಲಿರುವ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿಯೂ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಲಾಗುವುದು. ನಾಳೆ ಸಂಜೆ ೭-೩೦ ಗಂಟೆಗೆ ಸೇಂಟ್ ಫಿಲೋಮಿನಾ ರಥೋತ್ಸವವು ಜರುಗುವುದು.

ರಾಜಧಾನಿಯ ಮಂಡಿ ಮೊಹಲ್ಲೆಯಲ್ಲಿ ಬರುವ ೧೫ ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಲು ಶ್ರೀಗಳಾದ ಎಂ. ಬಸವಣ್ಣ, ಬಿ. ತಿಮ್ಮಯ್ಯ, ಆರ್. ಚಿಕ್ಕರಂಗಣ್ಣ, ಚೆಲುವಯ್ಯಂಗಾರ್ ಇವರುಗಳಿಂದ ಕೂಡಿದ ಸಮಿತಿಯೊಂದು ರಚಿತವಾಗಿದೆ. ಮಹಾಜನರು ಉದಾರವಾಗಿ ಸಹಾಯ ನೀಡಬೇಕೆಂದು, ಕಾರ್ಯದರ್ಶಿಗಳಾದ ಶ್ರೀ ಗೋವಿಂದರಾವ್ ಮತ್ತು ರಾಮಯ್ಯನವರು ಕೋರಿರುವರು.

ಆಗಸ್ಟ್ ೧೫ರ ದಿನ ಭಕ್ತ ಮಂಡಳಿಯ ಆಶ್ರಯದಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಗಾಗಿ ರಾಜಧಾನಿಯ ಗೀತಾ ಪ್ರಚಾರ ಸಭೆಯಲ್ಲಿ ಶ್ರೀಭಗವದ್ಗೀತಾ ಪ್ರವಚನಗಳು ೧೪, ೧೫, ೧೬ರ ದಿನಗಳಲ್ಲಿ ಅಭಿಷೇಕ, ಅರ್ಚನೆ, ಮಂಗಳಾರತಿಗಳು, ನಡೆಯುವುವು. ಎಲ್ಲರೂ ಸಹಕರಿಸಬೇಕೆಂದು ಕೋರಲಾಗಿದೆ.

ದಫೇದಾರನ ಮೇಲೆ ಕೈ ಮಾಡಿದ್ದಕ್ಕೆ ಜುಲ್ಮಾನೆ

ಮೈಸೂರು ನಗರದ ಲಷ್ಕರ್ ಪೊಲೀಸ್ ಸ್ಟೇಷನ್ನಿನ ದಫೇದಾರ್ ದ್ಯಾವಲಿಂಗೇಗೌಡರ ಮೇಲೆ ಕುಂಬಾರಗೇರಿಯ ರಾಮು ಮತ್ತು ಬಸವರಾಜು ಎಂಬುವರು ೧೯-೧-೪೭ ರಲ್ಲಿ ಕೈ ಮಾಡಿದರೆಂಬ ಆಪಾದನೆಯ ಮೇಲೆ ೩ನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ನಡೆದು ಅಪರಾಧಿಗಳಿಗೆ ಆರು ತಿಂಗಳ ಕಾಲ ಒಳ್ಳೆ ನಡತೆಯಿಂದಿರುವುದಕ್ಕಾಗಿ ತಲಾ ೨೦೦ ರೂ. ನ ಜಾಮೀನು ಮುಚ್ಚಳಿಕೆ ಕೊಡ ಬೇಕೆಂದು ನ್ಯಾಯಾಧೀಶರು ನಿನ್ನೆ ವಿಧಿಸಿ ತೀರ್ಪು ಮಾಡಿರುವರು.

ಆಗಸ್ಟ್ ೯ರ ದಿನಾಚರಣೆ

ನಿನ್ನೆ ರಾತ್ರಿ ಮೈಸೂರು ನಗರದ ಲೇಬರ್ ಫೆಡರೇಷನ್ ಮತ್ತು ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಒಲಿಂಪಿಯಾ ಟಾಕೀಸ್ ಬಳಿ ಇರುವ ಬಯಲಿನಲ್ಲಿ ಮಹಡಿಯಲ್ಲಿ 'ಹುತಾತ್ಮರ ದಿನಾಚರಣೆ' ನಡೆಯಿತು. ಹುತಾತ್ಮರ ಪ್ರತೀಕವಾದ ಸ್ತಂಭವೊಂದಕ್ಕೆ ಹಾರವನ್ನು ಅರ್ಪಿಸಲಾಯಿತು. ಶ್ರೀ ಕೆ. ಪುಟ್ಟಸ್ವಾಮಿ ಮತ್ತು ಶ್ರೀ ಸೀತಾರಾಮಯ್ಯ, ಎಂ. ಪಿ. ಕೃಷ್ಣಮೂರ್ತಿಯವರು ಭಾಷಣ ಮಾಡಿ ಹಿಂದಿನ ಹುತಾತ್ಮರನ್ನು ಸ್ಮರಿಸಿ ಮುಂಬರುವ ಸತ್ಯಾಗ್ರಹ ಹೋರಾಟದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕೆಂದು ವಿವರಿಸಿ ಭಾಷಣ ಮಾಡಿದರು.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ॥ ೧೦-೮-೪೭ ರಿಂದ ೧೬-೮-೪೭ರ ವರೆಗೆ

ಮೇಷ— ಆರೋಗ್ಯ ಸಾಧಾರಣ, ಧನ ಲಾಭ ಉತ್ತಮ ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರಾದಿಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ನೌಕರಿಗಳಲ್ಲಿ ಬಡ್ತಿ ತಾ॥ ೧೩, ೧೪ ಲಾಭ, ಪ್ರವಾಸ.

ವೃಷಭ— ಪ್ರಾಕೃತಿಕ ಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಸಾಧಾರಣ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ನಷ್ಟ ಶತ್ರುಗಳಿಂದ ಕಿರುಕುಳ ಅಧಿಕಾರಿ ವರ್ಗದವರಿಂದ ತಿರಸ್ಕಾರ ಪ್ರವಾಸದಿಂದ ಅಪಘಾತ ತಾ॥ ೧೨, ೧೬ ಲಾಭ, ಬಂಧು ದರ್ಶನ

ಮಿಥುನ — ಆರೋಗ್ಯ ಕೆಡುತ್ತದೆ, ವ್ಯಾಪಾರಾದಿಗಳಲ್ಲಿ ನಷ್ಟ. ಮಾನಸಿಕ ಚಿಂತೆ ಹೆಚ್ಚು. ಧನಾದಾಯ ಕಡಿಮೆ ಖರ್ಚು ಮಿತಿಮೀರುವುದು. ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು ಮಿತ್ರರಿಂದ ತಿರಸ್ಕಾರ ತಾ॥ ೧೧, ೧೩, ೧೪ ಪ್ರವಾಸದಿಂದ ತೊಂದರೆ, ಅಶಾಂತಿ

ಕಟಕ— ದೇಹಸ್ಥಿತಿ ಸಾಧಾರಣ ಮಾನಸಿಕ ಚಿಂತೆ ಹೆಚ್ಚು. ಧನಲಾಭ ಉತ್ತಮ ಖರ್ಚು ಕಡಿಮೆ, ಅಧಿಕಾರಿ ವರ್ಗದವರಿಂದ ಕಿರುಕುಳ. ವ್ಯಾಪಾರಾದಿಗಳಲ್ಲಿ ಪ್ರಗತಿ. ನೌಕರಿಯಿಂದ ಕ್ಲೇಶ. ತಾ॥ ೧೩, ೧೪, ೧೬ ಲಾಭ, ಮಿತ್ರ ದರ್ಶನ

ಸಿಂಹ — ಆರೋಗ್ಯ ಉತ್ತಮ. ಧನ ಲಾಭ ಸಾಧಾರಣ ಖರ್ಚು ಕಡಿಮೆ ಅಧಿಕಾರಿ ವರ್ಗದವರಿಂದ ಸನ್ಮಾನ, ಮಂಗಳ ಕಾರ್ಯಗಳಿಗಾಗಿ ಪ್ರವಾಸ. ವ್ಯಾಪಾರಾದಿಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ಬಂಧುಗಳ ಆಗಮನ ತಾ॥ ೧೨, ೧೪ ಚಿಂತೆ, ನಷ್ಟ.

ಕನ್ಯಾ — ಪ್ರಾಕೃತಿಕಸ್ಥಿತಿ ಉತ್ತಮ ಧನಾದಾಯ ಚೆನ್ನಾಗಿರುತ್ತದೆ ಖರ್ಚು ಕಡಿಮೆ. ವ್ಯಾಪಾರದಲ್ಲಿ ಪ್ರಗತಿ ಮಂಗಳ ಕಾರ್ಯಗಳಿಗಾಗಿ ಪ್ರವಾಸ ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು. ಅಧಿಕಾರಿ ವರ್ಗದವರ ಮನ್ನಣೆ ತಾ॥ ೧೨, ೧೪, ಚಿಂತೆ, ನಷ್ಟ.

ತುಲಾ — ಆರೋಗ್ಯ ಸಾಧಾರಣ. ಧನಲಾಭ ಉತ್ತಮ. ಖರ್ಚು ಅಧಿಕ ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ ಅಧಿಕಾರಿ ವರ್ಗದವರಿಂದ ಸನ್ಮಾನ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ಮಂಗಳ ಕಾರ್ಯಗಳಿಗಾಗಿ ಬಂಧು ಮಿತ್ರರ ಆಗಮನ ರಾಜಕೀಯ ವ್ಯವಹಾರಗಳಿಂದ ಅಪಮಾನ ತಾ॥ ೧೨ ೧೬ ಲಾಭ, ಪ್ರವಾಸ

ವೃಶ್ಚಿಕ — ಪ್ರಾಕೃತಿಕ ಸ್ಥಿತಿ ಉತ್ತಮ ಮಾನಸಿಕ ಚಿಂತೆ ಕಡಿಮೆ ಧನಲಾಭ ಉತ್ತಮ ವ್ಯಾಪಾರಾದಿಗಳಲ್ಲಿ ಪ್ರಗತಿ. ಕೆಲಸ ಕಾರ್ಯಗಳಲ್ಲಿ ಅಡಚಣೆ ವಾಹನಾದಿಗಳಿಂದ ಅಪಘಾತ ವಿನೋದದಲ್ಲಿ ಆಸಕ್ತಿ ತಾ॥ ೧೩, ೧೬ ಮಿತ್ರ ಭೇಟಿ.

ಧನುಸ್ಸು — ದೇಹಾರೋಗ್ಯ ಸಾಧಾರಣ ಮಾನಸಿಕ ಚಿಂತೆ ಹೆಚ್ಚು ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ಮಿತ್ರರಿಂದ ಸನ್ಮಾನ ಸಾಮಾಜಿಕ ಕ್ಷೇತ್ರಗಳಲ್ಲಿ ಚಟುವಟಿಕೆ ಹೆಚ್ಚುವುದು ಅಧಿಕಾರಿ ವರ್ಗದವರ ಸ್ನೇಹದಿಂದ ಪ್ರವಾಸ ತಾ॥ ೧೨, ೧೪ ಲಾಭ, ಬಂಧು ದರ್ಶನ.

ಮಕರ — ಆರ್ಥಿಕ ಸ್ಥಿತಿ ಉತ್ತಮ ಆರೋಗ್ಯ ಸಾಧಾರಣ ವ್ಯಾಪಾರಾದಿಗಳಲ್ಲಿ ಪ್ರಗತಿ, ಮಿತ್ರರಿಂದ ವ್ಯವಹಾರಗಳಲ್ಲಿ ಸಹಾಯ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ಮೇಲ್ಪಟ್ಟದ ಜನರಿಂದ ಸನ್ಮಾನ ಆಪ್ತ ಜನರ ಆಗಮನ ತಾ॥ ೧೩, ೧೬ ಲಾಭ ಪ್ರವಾಸ.

ಕುಂಭ — ಆರೋಗ್ಯ ಕೆಡುತ್ತದೆ ಧನ ಲಾಭ ಸಾಧಾರಣ ಖರ್ಚು ಕಡಿಮೆ ವ್ಯಾಪಾರಾದಿಗಳಿಂದ ನಷ್ಟ, ಶತ್ರುಗಳ ಕಿರುಕುಳ ಹೆಚ್ಚುವುದು ಬಂಧುಗಳಿಂದ ಧನವ್ಯಯ ತಾ॥ ೧೨, ೧೪, ೧೬ ಲಾಭ, ಬಂಧು ದರ್ಶನ.

ಮೀನ — ಆರೋಗ್ಯ ಸಾಧಾರಣ ಧನ ಲಾಭ ಉತ್ತಮ ಖರ್ಚು ಅಧಿಕ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ವ್ಯಾಪಾರಾದಿಗಳಲ್ಲಿ ಅಧಿಕಾರಿ ವರ್ಗದವರ ಸಹಾಯ ಸಾಮಾಜಿಕ ಕ್ಷೇತ್ರಗಳಲ್ಲಿ ಮನ್ನಣೆ ತಾ॥ ೧೧, ೧೫ ಪ್ರವಾಸ ನಷ್ಟ.

ಶ್ರೀ ಕೃಷ್ಣರಾಜೇಂದ್ರ ಕೋ-ಆ. ಸೊಸೈಟಿ, ಲಿ. ಮೈಸೂರು.

ಈ ಸೊಸೈಟಿಯಲ್ಲಿ ಮೆಂಬರುಗಳಿಂದಲೂ, ಮೆಂಬರಲ್ಲದವರಿಂದಲೂ ಫಿಕ್ಸೆಡ್ ಡಿಪಾಸಿಟ್, ಥ್ರಿಫ್ಟ್ ಡಿಪಾಸಿಟ್ ಮತ್ತು ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್‌ಗಳನ್ನು ಈ ಕೆಳಗೆ ಕಂಡ ಬಡ್ಡಿ ದರದಲ್ಲಿ ತೆಗೆದುಕೊಳ್ಳಲಾಗುವುದು :—

ಫಿಕ್ಸೆಡ್ ಡಿಪಾಸಿಟ್ :—

೧ ವರ್ಷಕ್ಕೆ	ಶೇ॥	೨
೨ ವರ್ಷಗಳಿಗೆ	,,	೨॥
೩ ,,	,,	೨॥।
೪ ,,	,,	೩

ಥ್ರಿಫ್ಟ್ ಡಿಪಾಸಿಟ್ :—
ಸಾಲಿಯಾನಾ ಶೇಕಡಾ ೨

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ :—
ಸಾಲಿಯಾನ ಶೇಕಡಾ ೧॥

ಹೆಚ್ಚಿಗೆ ವಿವರಗಳಿಗೆ ಬರೆಯಿರಿ :-

ಆನರರಿ ಸೆಕ್ರೆಟರಿ,
ಶ್ರೀ ಕೃಷ್ಣರಾಜೇಂದ್ರ ಕೋ-ಆ. ಸೊಸೈಟಿ, ಲಿಮಿಟೆಡ್,
ವಾಣಿವಿಲಾಸ ಮಾರ್ಕೆಟ್, ಮೈಸೂರು

ತಪೋಭೂಮಿ ವಾರ್ಷಿಕ ಸಂಚಿಕೆ

ರಾಜಧಾನಿಯ ಪತ್ರಿಕೋದ್ಯೋಗಿಗಳೂ ನಾಟಕ ಕಲಾ ಪಂಡಿತರೂ ಆದ ಶ್ರೀ॥ ಎಂ. ಎಸ್. ಮಾಧವರಾಯರಿಂದ ಪ್ರಕಟವಾಗಿರುವ ಮೇಲ್ಕಂಡ ಪತ್ರಿಕೆಯ ೩ ನೆಯ ವಾರ್ಷಿಕ ವಿಶೇಷ ಸಂಚಿಕೆಯು ನಮ್ಮ ಕೈ ಸೇರಿದೆ. ಇದು ಸುಮಾರು ನೂರು ಪುಟಗಳಷ್ಟು ಉತ್ತಮವಾದ ಮುಖ ಪತ್ರದಿಂದ ಮುದ್ರಿತವಾಗಿದೆ ಸಂಚಿಕೆಯಲ್ಲಿ ಒಳ್ಳೆಯ ಕಥೆಗಳೂ, ಚಿತ್ರಕಲಾ ಸಂಬಂಧದ ಲೇಖನಗಳೂ, ಕಲಾ ಪ್ರೇಮಿಗಳ ಪ್ರತಿಕೃತಿ ಪರಿಚಯವೂ ಅಡಕವಾಗಿವೆ ಬೆಲೆ ಒಂದು ರೂಪಾಯಿ ಸಂಚಿಕೆ ಮುದ್ದಾಗಿ ಆಕರ್ಷಣೀಯವಾಗಿದೆ. ಕಲಾ ಪ್ರೇಮಿಗಳ ಆದರಕ್ಕೆ ಪಾತ್ರವಾಗಲು ಯೋಗ್ಯವಾದುದಾಗಿದೆ.

ಮೂರು ಮಕ್ಕಳ ಜನನ

ಗ್ಲೋಬ್] [ವೆಲ್ಲೋರ್ ೬

೩೧ ವರ್ಷ ವಯಸ್ಸಿನ ಮಾಜಿ ಎಂಬ ಬರ್ಮಾ ಮಹಿಳೆಯು ೩ ಮಕ್ಕಳನ್ನು ಹೆತ್ತಿರುವಳೆಂದು ವರದಿಯಾಗಿದೆ ಮಕ್ಕಳೂ, ತಾಯಿಯೂ ಸುಖವಾಗಿದ್ದಾರೆ.

ಗ್ರಾಮಾಭಿವೃದ್ಧಿ ಸಮಿತಿ

ಮಂಗಲ ೫

ಮೇಲ್ಕಂಡ ಸಮಿತಿಯ ಸಭೆಯು ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಜಿ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ೨೭ ನೇ ತಾ॥ ನಡೆಯಿತು ಮಕ್ಕಳ ಪ್ರದರ್ಶನವಾದ ನಂತರ ನಾಲ್ಕು ಮಕ್ಕಳಿಗೆ ಬೆಳ್ಳಿಯ ಬಟ್ಟಲುಗಳನ್ನು ಬಹುಮಾನವಾಗಿ ಕೊಡಲಾಯಿತು. ವಿದ್ಯಾಭ್ಯಾಸ, ಒಗ್ಗಟ್ಟು ಮತ್ತು ನಿಮ್ನ ವರ್ಗದವರ ಏಳಿಗೆಗಳನ್ನು ಕುರಿತು ಅಮಲ್ದಾರರು ಭಾಷಣ ಮಾಡಿದರು.

WOODLANDS

Morning Shows
From 8-8-47 for 4 days
daily at 10-30 A. M.

Horn Blows at Midnight

—:Starring:—
Jack Benny, Alexis Smith

Edited printed and published by A. R. Nagarajan at the Sadhvi Press D Subbaiah Road Mysore

೧ ಟನ್ ಯುರೇನಿಯಂ
ಲಕ್ಷ ಟನ್ ಕಲ್ಲಿದ್ದಲಿಗೆ ಸ

ಗ್ಲೋಬ್] [ಲಂಡ

೩೦ ಲಕ್ಷ ಟನ್ ಕಲ್ಲಿದ್ದಲಿನಿಂದ ಪ ಬಹುದಾದ ಕೆಲಸವನ್ನು ಒಂದು ಟನ್ ರೇನಿಯಂ ಸಹಾಯದಿಂದ ಮಾಡ ದೆಂದು ಹೇಳಲಾಗಿದೆ. ಇದ ಯೋಗ ರೀತಿ ಕಾರ್ಯರೂಪಕ್ಕೆ ಪ್ರಯತ್ನಗಳಾಗುತ್ತಿವೆ.

ಚೈತನ್ಯ-ಪಕ್ಷ ಪತ್ರಿಕೆ

ಒಂಟಿಕೊಪ್ಪಲಿನ ತಿಲಕ್ ಸಂಘದ ಚೈತನ್ಯ-ಎಂಬ ಪಕ್ಷ ಪತ್ರಿಕೆಯನ್ನು ರಡಿಸಲಿರುವರು ಅದರ ಮೊದಲನೆಯ ಚಿಕೆಯು ೧೫ ನೇ ತಾ॥ ಹೊರಬೀಳ ಶ್ರೀ ಜಿ. ಎಸ್. ಸುಬ್ರಹ್ಮಣ್ಯಂರವರು ರ ಮುದ್ರಕರು ಮತ್ತು ಪ್ರಕಾಶಕ ಡಿಕ್ಲರೇಷನ್ ಕೊಟ್ಟಿರುವರು.

ಪ್ರಸಾದರಿಗೆ ಅಜ್ಮೀರಿನಿಂ
೧೧ ಸಾವಿರ ರೂ. ನಿಧಿ

೧೫ ನೇ ತಾರೀಖು ಅಜ್ಮೀರಿಗೆ ಆ ಗಲಿರುವ ರಾಜ್ಯಾಂಗ ಸಭಾಧ್ಯಕ್ಷರಾದ ರಾಜೇಂದ್ರ ಪ್ರಸಾದರಿಗೆ ೧೧ ಸಹಸ್ರ ಗಳ ನಿಧಿಯನ್ನರ್ಪಿಸಲು ಕಾರ್ಯ ಕ್ರ ಗಳು ಬಹಳ ಚುರುಕಾಗಿ ನಡೆಯುತ್ತಿ ಈಗಾಗಲೇ ೮ ಸಹಸ್ರ ರೂ. ಸಂಗ್ರಹ ಲಾಗಿದೆ.

ಕಾಳಸಂತೆಯಲ್ಲಿ ರಾಷ್ಟ್ರಧ್ವ

ಗ್ಲೋಬ್] [ದೆಹ

ಸ್ವಾತಂತ್ರ್ಯ ದಿನಾಚರಣೆಯ ದಿನ ಸ ಹಿಸುವಂತೆಲ್ಲಾ ರಾಷ್ಟ್ರಧ್ವಜಗಳು ಕಾಳಸ ಯಲ್ಲಿ ಮಾರಾಟವಾಗುತ್ತಿವೆ ಒಂದೇ ಅಳತೆಯ ಧ್ವಜಗಳನ್ನು ವಿವಿಧ ಬೆಲೆಗ ಮಾರಲಾಗುತ್ತಿದೆ

ಶ್ರೀ ಗಣೇಶಾ ಟಾಕೀಸ್
8—8—47 ರಿಂದ
ಪ್ರತಿ ದಿನ ೬-೩೦ ಮತ್ತು ೯-೩೦ ಕ್ಕೆ
ಟೈಗರ್ ವುಮನ್
ಇಂಗ್ಲೀಷ್ ಸೀರಿಯಲ್
— ಹೊಸ ಪ್ರಿಂಟು —

Morning Shows on
10th, and 11th at 10-15 A.M.
Charles Laughton
IN
THE MAN FROM DOWN UNDER
It's an M. G. M. Picture showing for the first Time in the City.

ವುಡ್‌ಲ್ಯಾಂಡ್ಸ್
ತಾ॥ 12 8-47 ಕ್ಕೆ
ಅಮೋಘ 100 ನೇ ದಿನ
ಪ್ರತಿ ದಿನ ೩ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)
ನಾವು ಇಬ್ಬರು
: ಪಾತ್ರ :
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರನ್ ಮುಂತಾದವರು.

ರಾಜಕಮಲ್ : : ತಾ॥ 8-8-47 ರಿಂದ
ಅಮೋಘ ಪ್ರಾರಂಭ ಪ್ರತಿ ದಿನ ೩ ಆಟಗಳು
★ ಮಹಾನಂದ ★
(ಕನ್ನಡದಲ್ಲಿ)
ತಾರಾಗಣ :— ಶಾಂತಾದೇವಿ, ಕೆಂಪರಾಜ್, ಸರೋಜ್, ಅಶ್ವತ್ಥ್, ಕಾಶೀನಾಥ್ ಮುಂತಾದವರು
ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ಆಚಾರ್ಯ ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್, ಜೈ ಪ್ರಕಾಶ್ ನಾರಾಯಣ್ ಇವರು ಮೈಸೂರಿಗೆ ಆಗಮಿಸಿದಾಗ ತೆಗೆದ ಒಂದು ಭಾಗವನ್ನೂ ಸಹ ಪ್ರದರ್ಶಿಸುತ್ತೇವೆ

ತಾ॥ 8-8-47 ರಿಂದ : : 1 ದಿನಗಳು ಮಾತ್ರ
ಪ್ರತಿ ದಿನ ಪ್ರಾತಃಕಾಲ 10-30 ಕ್ಕೆ
★ ರಾಣಿ ★
(ಹಿಂದಿ ಭಾಷೆಯಲ್ಲಿ)
ತಾರಾಗಣ: ಜಮುನ, ...

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಸೋಮವಾರ ೧೧—೮—೪೭ [ಸಂಚಿಕೆ ೧೯

ಇಂದೂರ್ ಸಂಸ್ಥಾನಕ್ಕೆ ಬಿಳಿಯ ಉತ್ತರಾಧಿಕಾರಿ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ಕಾಂಗ್ರೆಸ್ಸಿನ ಸೂಚನೆ

ಎಲ್ಲಾ ಕಾಂಗ್ರೆಸ್ ಸಂಸ್ಥೆಗಳಿಗೂ ಮತ್ತು ಸಾರ್ವಜನಿಕರಿಗೂ ಮೈಸೂರ್ ಕಾಂಗ್ರೆಸ್ ಜಂಟಿ ಕಾರ್ಯದರ್ಶಿಗಳು ಮನವಿಯೊಂದನ್ನು ಮಾಡಿ ಈ ಕೆಳಗೆ ಕಂಡ ರೀತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕೆಂದು ಕೋರಿದ್ದಾರೆ :—

ಈ ೧೫-೮-೪೭ ನೇ ಶುಕ್ರವಾರವನ್ನು ಭಾರತದ ಸ್ವಾತಂತ್ರ್ಯದ ನಾಡು ಹಬ್ಬದ ದಿನವಾಗಿ ಮಹಾ ಉತ್ಸಾಹದಿಂದ ರಾಷ್ಟ್ರಭಕ್ತಿಯಿಂದಲೂ ಆಚರಿಸಬೇಕು. ಈ ಸಂದರ್ಭದಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಆಚರಿಸಬೇಕೆಂದೂ ಕಾರ್ಯಕಾರೀ ಸಮಿತಿಯು ಸೂಚಿಸುತ್ತದೆ.

೧. ಪೂಜಾ ಸ್ಥಾನಗಳಲ್ಲಿ ದೇವತಾರ್ಚನೆಗಳು,

೨. ಬಡವರಿಗೆ ಅನ್ನ, ವಸ್ತ್ರದಾನಗಳು,

೩. ಸಂಕುಚಿತ ಮತ್ತು ಉಚ್ಚನೀಚ ಭಾವನೆಗಳನ್ನು ತೊರೆದು ಅಸ್ಪೃಶ್ಯತೆಯ ನಿವಾರಣೆ ಮತ್ತು ಕೋಮುವಾರು ಸೌಹಾರ್ದತೆಯ ಪ್ರಚಾರಗಳು,

೪. ಪ್ರತಿ ಮನೆಗಳಲ್ಲೂ ಹಬ್ಬವನ್ನಾಚರಿಸಿ ಮನೆಗಳ ಮೇಲೆ ರಾಷ್ಟ್ರಧ್ವಜಾರೋಹಣ,

೫. ಬೆಳಗ್ಗೆ ೫ ಗಂಟೆಗೆ ಪ್ರಭಾತಭೇರಿ

೬. ೯ ಗಂಟೆಗೆ ಸಾರ್ವಜನಿಕ ಧ್ವಜಾರೋಹಣ,

೭. ಸಾಯಂಕಾಲ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ

ಮೇಲ್ಕಂಡ ಕಾರ್ಯಕ್ರಮಗಳನುಸಾರವಾಗಿ ಇತರ ಕಾರ್ಯಕ್ರಮಗಳನ್ನು ಸ್ಥಳೀಯ ವಿದ್ಯಮಾನಗಳಿಗನುಸಾರವಾಗಿ ನಿರ್ಧರಿಸಬಹುದು. ಭಾರತದ ಸ್ವಾತಂತ್ರ್ಯ ದಿನಾಚರಣೆಯಾದ್ದರಿಂದ ರಾಷ್ಟ್ರಧ್ವಜವನ್ನು ಹಾರಿಸಬೇಕು. ರಾಷ್ಟ್ರಧ್ವಜದ ಜೊತೆಯಲ್ಲಿ ಮೈಸೂರು ಧ್ವಜವನ್ನು ಹಾರಿಸುವ ಸಮಾರಂಭಗಳಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸುವುದರಲ್ಲಿ ಅಡ್ಡಿಯಿರುವುದಿಲ್ಲ

ಪುದುಚೇರಿಯಲ್ಲಿ ೫೦ ಮಂದಿ ಮಹಿಳೆಯರ ಬಂಧನ

ಫ್ರೆಂಚ್ ಆಕ್ರಮಿತ ಭಾರತದಲ್ಲಿ ಸ್ವಾತಂತ್ರ್ಯದ ಚಳುವಳಿ ಬಿರುಸಾಗಿರುವುದೆಂದು ವರದಿಯಾಗಿದೆ. ಪುದುಚೇರಿಯ ವಿಧವಿಧ ಸಂಸ್ಥೆಗಳು ಈ ಚಳುವಳಿಯಲ್ಲಿ ಭಾಗವಹಿಸುತ್ತಿವೆ ಭಾರತವನ್ನು ಬಿಟ್ಟು ತೊಲಗಿ ಎಂಬ ಘೋಷಣೆಯೊಡನೆ ನಡೆದ ಪ್ರದರ್ಶನದಲ್ಲಿ ಸುಮಾರು ೧೫೦ ಮಂದಿ ದಸ್ತಗಿರಿಯಾಗಿದ್ದಾರೆ ಅವರಲ್ಲಿ ೫೦ ಮಂದಿ ಮಹಿಳೆಯರಿದ್ದಾರೆ ಗಣಿಗಳ ಕೆಲಸಗಾರರೂ ಕಾಲೇಜು ವಿದ್ಯಾರ್ಥಿಗಳೂ ಸಹ ಮುಷ್ಕರ ಹೂಡಿದ್ದಾರೆ.

ಸರ್ಕಾರಿ ನೌಕರರು ಸ್ವಾತಂತ್ರ್ಯ ದಿನಾಚರಣೆ ನಡೆಸಬೇಕು

ಎ.ಪಿ.] [ಅಲಹಾಬಾದ್ ೮

ಇದೇ ೧೫ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯನ್ನು ಎಲ್ಲಾ ಸರ್ಕಾರೀ ನೌಕರರೂ ಆಚರಿಸಬೇಕು ಅದರಲ್ಲಿ ಎಲ್ಲ ಸಾರ್ವಜನಿಕರೊಡನೆ ಅವರು ಭಾಗವಹಿಸಿ [illegible] ಭಾರತದ ಕೇಂದ್ರ ಸರ್ಕಾರದ ನೌಕರರ ಸಂಘದ ಕಾರ್ಯದರ್ಶಿಗಳು [illegible] ಸಂಸ್ಥೆಗಳ ಕಾರ್ಯದರ್ಶಿಗಳಿಗೆ ತಿಳಿಸಿರುವರು.

ಇಂಡೋನೇಷ್ಯದ ಬಗ್ಗೆ ಮಧ್ಯಸ್ಥಿಕೆಗೆ ಡಚ್ಚರ ವಿರೋಧ

ಇಂಡೋನೇಷ್ಯದ ಬಗ್ಗೆ ಇಂಡಿಯಾ ಸರ್ಕಾರವು ಸೂಚಿಸಿರುವಂತೆ ಭದ್ರತಾ ಸಮಿತಿಯ ಮೂಲಕ ಅಥವಾ ಬೇರಾವ ಬಗೆಯಲ್ಲಿ ನಡೆಯುವ ಯಾವ ಮಧ್ಯಸ್ಥಿಕೆಯನ್ನೂ ಅಂಗೀಕರಿಸುವುದಿಲ್ಲವೆಂದು ಡಚ್ ಸರ್ಕಾರವು ತಿಳಿಸಿದೆಯೆಂದು ವರದಿಯಾಗಿದೆ.

ಮಂಡಲರು ಪಾಕೀಸ್ತಾನ್ ರಾಜ್ಯಾಂಗ ಸಭಾಧ್ಯಕ್ಷರು

ಪಾಕೀಸ್ತಾನ್ ಮಂತ್ರಿಮಂಡಲದಲ್ಲಿ ನಿಮ್ನ ವರ್ಗದ ಸಚಿವರಾಗಿರುವ ಮಿ॥ ಜೋಗೇಂದ್ರನಾಥ ಮಂಡಲರನ್ನು ಪಾಕೀಸ್ತಾನ್ ರಾಜ್ಯಾಂಗ ಸಭೆಯ ಪ್ರಥಮ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗುತ್ತದೆಂದು ವರದಿಯಾಗಿದೆ.

ಭಾರತವು ಮತ್ತೆ ಒಂದಾಗುವುದು

ಹಿಮಾಲಯದಿಂದ ಸಂದೇಶ ಮತ್ತು ಕಾಲದ ವೈಚಿತ್ರ್ಯ-ಎಂಬ ವಿಷಯವಾಗಿ ಭಾಷಣ ಮಾಡುತ್ತಾ ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳು ಸ್ವಲ್ಪದರಲ್ಲಿಯೇ ಮತ್ತೆ ಒಂದಾಗುವುವು ಎಂಬುದಾಗಿ ಬದರಿಕಾಶ್ರಮದಲ್ಲಿರುವ ಜಗದ್ಗುರು ಶಂಕರಾಚಾರ್ಯರ ಜ್ಯೋತಿರ್ಮಠದ ಕಾರ್ಯದರ್ಶಿಗಳಾದ ಸ್ವಾಮಿ ನಿತ್ಯಾನಂದ ತೀರ್ಥರು ಭವಿಷ್ಯ ನುಡಿದಿರುವರು.



೧೫-೮-೧೯೪೭

ಸ್ವಾತಂತ್ರ್ಯ ದಿನಾಚರಣೆ

ಖಾದಿಯಲ್ಲೇ ತಯಾರಿಸಿರುವ ನೂತನ ರಾಷ್ಟ್ರಧ್ವಜಗಳು ಎಲ್ಲಾ ಸೈಜ ಗಳಲ್ಲೂ ಕಡಿಮೆ ಬೆಲೆಗೆ ದೊರೆಯುವುವು

ಖಿದ್ಮತ್ ಸರ್ವೋದಯ ಸಹಕಾರ ಸಂಘ, ಮೈಸೂರು

ಸಲಹಾ ಸಮಿತಿಯ ಸಭೆ

ಸ್ವಂ. ವ. ಫೋ] [ಬೆಂಗಳೂರು ೧೧

ರಾಜಕೀಯ ಸುಧಾರಣೆಗಳ ಬಗ್ಗೆ ದಿವಾನರು ನೇಮಿಸಿದ್ದ ರಾಜಕೀಯ ಸಲಹಾ ಸಮಿತಿಯ ಸಭೆಯು ಈ ದಿನ ದಿವಾನರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀಗಳಾದ ರಾವ್ ಬಹದ್ದೂರ್ ಕೃಷ್ಣಸ್ವಾಮಿ ನಾಯ್ಡು, ಎಂ. ಎಲ್. ಶ್ರೀಕಂಠಯ್ಯ, ಹೆಚ್. ಎಂ. ಗಂಗಾಧರಯ್ಯ, ಎಂ. ಮಾದಯ್ಯ, ಭೂತಾಳಂ ಚಂದ್ರಶೇಖರಯ್ಯ, ಎ. ಜೆ. ಖಲೀಲ್, ವಜಾಗ್, ಎಸ್. ಸಿ. ನಂಜಯ್ಯ, ಜೆ. ಬಿ. ಗೋಪಾಲಕೃಷ್ಣನ್ ಮತ್ತು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ ಇವರುಗಳು ಹಾಜರಿದ್ದರು. ಸುಧಾರಣೆಗಳ ಮುಖ್ಯ ಸೂತ್ರಗಳ ವಿಚಾರವಾಗಿ ಸಾಮಾನ್ಯ ಚರ್ಚೆ ನಡೆಯಿತು. ಸದಸ್ಯರು ತಮ್ಮ ಸಂಗಡದವರೊಡನೆ ಸಮಾಲೋಚನೆ ಮಾಡಲು ಅನುಕೂಲಿಸುವಂತೆ ಸಭೆಯನ್ನು ಸೆಪ್ಟೆಂಬರ್ ೮ಕ್ಕೆ ಮುಂದುವರಿಸಲಾಯಿತು.

ಡೊಮಿನಿಯನ್ನಿಗೆ ಸೇರಿದುದಕ್ಕಾಗಿ ಶ್ರೀ ಮನ್ಮಹಾರಾಜರಿಗೆ ರಾಜಭಕ್ತಿ ಪೂರ್ವಕವಾದ ಅಭಿನಂದನೆಯನ್ನೂ, ಈ ಬಗ್ಗೆ ಸಲಹೆ ಕೊಟ್ಟುದಕ್ಕಾಗಿ ದಿವಾನರನ್ನೂ ಅಭಿನಂದಿಸುವ ನಿರ್ಣಯಗಳೂ ಆದುವು.

ಶ್ರೀರಂಗಪಟ್ಟಣದ ಮುನಸೀಫರಾದ ಶ್ರೀ ಎಸ್. ಬಿ. ರಂಗರಾವ್ ಅವರನ್ನು ಚಿತ್ರದುರ್ಗದ ಅಡಿಷನಲ್ ಸಬ್ ಜಡ್ಜರಾಗಿ ವರ್ಗ ಮಾಡಲಾಗಿದೆ

॥ ಜೈ ಹಿಂದ್ ॥

ಆಗಸ್ಟ್ ೧೫

ಹಬ್ಬಗಳಿಗಾಗಿ ಅಗ್ಗವಾಗಿಯೂ, ಅಂದವಾಗಿಯೂ ಇರುವ ಬಾವುಟಗಳು ಹೊಸದಾಗಿ ಬಂದಿವೆ, ಒಂದು ಕಡೆ ರಾಷ್ಟ್ರಧ್ವಜ, ಇನ್ನೊಂದು ಕಡೆ ಮೈಸೂರು ಧ್ವಜ. ಸ್ಕೂಲಿನವರು ಮಕ್ಕಳಿಗೆ ಬಿಟ್ಟಿ ಹಂಚಲು ಬಹಳ ಅನುಕೂಲವಾಗಿದೆ. ಜೊತೆಗೆ ಪಿನ್ನುಗಳೂ ಕೊಡುತ್ತೇವೆ. ಇನ್ನು ವರೂ ಬೆಲೆ ಆರೇ ಕಾಸು—

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ.

—ದೊರೆಯುವ ಸ್ಥಳ—

ಪವರ್ಸ್ ಜನತಾ ಸ್ಟೋರ್ಸ್,

ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

ಇಂದೂರರಸರ ಅಮೆರಿಕನ್ ಪುತ್ರನು ಉತ್ತರಾಧಿಕಾರಿ

ಇಂದೂರಿನ ಅರಸರು ಆಗಸ್ಟ್ ೧೫ ಕ್ಕೆ ಮೊದಲು ಭಾರತ ಡೊಮಿನಿಯನ್ನಿನಲ್ಲಿ ಸೇರುವುದಿಲ್ಲವೆಂದು ಭಾವಿಸಲಾಗಿದೆ. ಅವರು ತಮ್ಮ ಐದು ವರ್ಷದ ಅಮೆರಿಕನ್ ಪುತ್ರನಾದ ರಿಚರ್ಡ್‌ನನ್ನು ಆಗಸ್ಟ್ ೧೫ ರ ದಿನ ಸಿಂಹಾಸನದ ಉತ್ತರಾಧಿಕಾರಿಯೆಂದೂ, ತಮ್ಮ ಅಮೆರಿಕನ್ ಪತ್ನಿಯಾದ ಯೂಫೇಮಿಯಾ ಕ್ರೇನ್ ಎಂಬಾಕೆಯನ್ನು ತಮ್ಮ ರಾಣಿಯೆಂದೂ ಘೋಷಿಸಬಹುದು. ಅನಂತರ ರಾಜಕುಮಾರನನ್ನು ಸಿಂಹಾಸನದ ಮೇಲೆ ಕೂರಿಸಲು ಹೊಸ ಡೊಮಿನಿಯನ್ ಸರ್ಕಾರದಿಂದ ಯಾವ ಗೊಂದಲವೂ ಉಂಟಾಗುವುದಿಲ್ಲವಾದುದರಿಂದ ೧೫ ರ ನಂತರ ಡೊಮಿನಿಯನ್ನಿಗೆ ಸೇರಲು ನಿರ್ಧರಿಸಬಹುದು-ಎಂದೂ ಸಹ ಹೇಳಲಾಗಿದೆ

ಮೈಸೂರು ಸೇರಿತು

ಮೈಸೂರು ಸಂಸ್ಥಾನವು ಭಾರತ ಡೊಮಿನಿಯನ್ನಿಗೆ ಮೊದಲಿನಿಂದ ಸೇರಲು ಒಪ್ಪಿರುವುದಾಗಿ ಶ್ರೀಮನ್ಮಹಾರಾಜರವರು ಘೋಷಣೆ ಮಾಡಿರುತ್ತಾರೆ. ಸಂಸ್ಥಾನದ [illegible] ಡೊಮಿನಿಯನ್ನಿಗೆ ವಹಿಸಲ್ಪಡುವ ವಿಷಯಗಳ ಮೇಲೆ ಅಧಿಕಾರವನ್ನು [illegible] ತಿಳಿಸಲಾಗಿದೆ. ಕೊಲ್ಲಾಪುರ, ನವನಗರ ಮತ್ತು ಇನ್ನೂ ಅನೇಕ ಸಂಸ್ಥಾನಗಳೂ ಸಹ ಸೇರಲು ಒಪ್ಪಿರುವುದಾಗಿ ತಿಳಿದು ಬಂದಿದೆ

ಇಂದೂರ್ ಸಂಸ್ಥಾನವು ಸೇರಲು ಒಪ್ಪಿಲ್ಲವಾದ್ದರಿಂದ ಅದಕ್ಕೆ ಮುಂದೆ ವಿಶೇಷ ಬಿಕ್ಕಟ್ಟು ಉಂಟಾಗಬಹುದೆಂದು ಹೇಳಲಾಗಿದೆ

ಹಸುವಿನ ಹೊಟ್ಟೆಯಲ್ಲಿ ಹಂದಿ ಮರಿಗಳು

ಮದ್ರಾಸಿನಲ್ಲಿ [illegible] ಎಂಬಲ್ಲಿ ಒಂದು ಹಸುವು ೯ ಹಂದಿ ಮರಿಗಳನ್ನು ಹಾಕಿರುವುದಾಗಿ ವರದಿಯಾಗಿದೆ. ಅವುಗಳಲ್ಲಿ ಒಂದು ಆನೆಯ ಸೊಂಡಿಲನ್ನು ಹೋಲುತ್ತಿತ್ತು. ಅದರ ಕಾಲಿನಲ್ಲಿ ಮಾತ್ರ ಗೊರಸುಗಳಿದ್ದುವು ಅದು ಹುಟ್ಟಿದ ಕೂಡಲೇ ಸತ್ತುಹೋಯಿತು. ಉಳಿದ ಎಂಟು ಮರಿಗಳೂ ಬದುಕಿವೆ.

ಮೈಸೂರು ಆಸ್ಪತ್ರೆ

ಶ್ರೀ ಎಂ. ಆರ್. ನರಸಿಂಗರಾಯರು ಈ ದಿನ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ [illegible] ವಹಿಸಿಕೊಂಡರು

ಜೈ ಪ್ರಕಾಶ್ ಪಾರ

ಕರ್ನಾಟಕದಲ್ಲಿ ಪ್ರವಾಸ ಕೈಗೊಂಡಿದ್ದ ಸಮಾಜವಾದಿ ನಾಯಕರಾದ ಶ್ರೀ ಜೈಪ್ರಕಾಶ ನಾರಾಯಣರು ರಾಜಧಾನಿಗೆ ಆಗಮಿಸಿ [illegible] ನಿರ್ಧರಿಸಿದ್ದ [illegible] ಅವರಿಂದ [illegible] ಸಮಾಜವಾದಿ ಪಕ್ಷದ ಕಾರ್ಯಕರ್ತರು ಸಹಕರಿಸಬೇಕೆಂದು [illegible] ಶ್ರೀ ಎಸ್. ಚೆನ್ನಯ್ಯನವರು [illegible].

ಕೀರ್ತನೆ

[illegible] ಶ್ರೀ ಆರ್. ಎಸ್. [illegible] ಇಂದಿನಿಂದ ೧೫ ದಿನಗಳು ಪ್ರತಿ ದಿನ ಸಂಜೆ ೭ ಗಂಟೆಗೆ [illegible] ಚರಿತ್ರೆಯನ್ನು ಕೀರ್ತನೆಯ ರೂಪದಲ್ಲಿ ನಡೆಸುವರು.

ಸಾಧ್ವಿ

ತಾ|| ೧೧-೮-೪೭ ಸೋಮವಾರ

ಭಾರತಕ್ಕೆ ಸ್ವಾತಂತ್ರ್ಯ!

ಮೈಸೂರಿಗೆ ಇಲ್ಲವೇ ?

ಭಾರತದ ಡೊಮಿನಿಯನ್ನಿನಲ್ಲಿ ಮೈಸೂರು ಸೇರುವುದಾಗಿ ಶ್ರೀಮನ್ಮಹಾರಾಜರವರು ಮೊನ್ನೆ ಘೋಷಣೆಯೊಂದನ್ನು ಹೊರಡಿಸಿರುವರು. ಇದು ಸಂತೋಷದ ವಿಷಯ. ಮೈಸೂರು ಸಂಸ್ಥಾನವು ಹಿಂದೂಸ್ಥಾನದ ಇತರ ಪ್ರಾಂತಗಳೊಡನೆ ನೂತನ ಸ್ವಾತಂತ್ರ್ಯ ಸಾಧನೆಯ ಪಕ್ವಫಲವನ್ನು ಉಪಭೋಗಿಸಲು ಇದರಿಂದ ವಿಶೇಷ ಸಹಾಯವಾಗುವುದು. ರಾಜ್ಯಾಂಗ ಸಭೆಯಲ್ಲಿ ಸೇರಿದ ನಂತರ ಡೊಮಿನಿಯನ್ನಿನಲ್ಲಿಯೂ ಸೇರುವುದು ಸಹಜವಾಗಿಯೇ ಇದೆ. ಅದಕ್ಕೆ ಅನುಗುಣವಾಗಿ ಈಗ ಪ್ರಭುತ್ವದವರ ಪ್ರಕಟಣೆಯೂ ಹೊರಬಿದ್ದಿರುತ್ತದೆ. ಇದರಿಂದೀಚೆಗೆ ಮೈಸೂರು ಸಂಸ್ಥಾನವು ಭಾರತ ಒಂದರ ಇತರ ಸಕಲ ವ್ಯವಹಾರಗಳಲ್ಲಿಯೂ ಸಹಭಾಗಿಯಾಗಿ ವರ್ತಿಸಲೆಂಬುದೇ ಇಲ್ಲಿನ ಸಕಲ ಪ್ರಜೆಗಳ ಹಾರೈಕೆಯೂ ಆಗಿರುತ್ತದೆ

ಭಾರತ ಖಂಡಕ್ಕೆ ಸ್ವಾತಂತ್ರ್ಯ ಬರಲಿರುತ್ತದೆ ಮೈಸೂರೂ ಸಹ ಭಾರತ ಡೊಮಿನಿಯನ್ನಿನಲ್ಲಿ ಸೇರಿರುತ್ತದೆ ಆದರೆ ಇಂದಿನ ನೂತನ ಪರಿಸ್ಥಿತಿಗೆ ಅನುಗುಣವಾಗಿ ಸಂಸ್ಥಾನದೊಳಗಿನ ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸಿ ... ಸಂಸ್ಥಾನಗಳ ಒಳಗಿನ ವ್ಯವಹಾರಗಳಲ್ಲಿ ಕೇಂದ್ರ ಸರ್ಕಾರದವರು ಪ್ರವೇಶಿಸುವುದಿಲ್ಲವೆಂಬ ಭರವಸೆಯನ್ನು ಕೊಟ್ಟಿರುವುದೇನೋ ನಿಜ. ಅದರಂತೆ ಇದರಲ್ಲಿ ಕೈ ಹಾಕುವುದೂ ಇಲ್ಲ. ಆದರೆ ಸಂಸ್ಥಾನಗಳ ಪ್ರಭುತ್ವದವರೇ ಕಾಲಧರ್ಮಕ್ಕೆ ಅನುಗುಣವಾಗಿ ತಮ್ಮ ಆಡಳಿತ ವ್ಯವಸ್ಥೆಯನ್ನೂ ಮಾರ್ಪಡಿಸಿಕೊಳ್ಳುವುದು ಅಗತ್ಯ

ಒಂದೇ ಡೊಮಿನಿಯನ್ನಿಗೆ ಸೇರಿದ ವಿವಿಧ ಭಾಗಗಳಲ್ಲಿ ವಿಪರೀತ ಭಿನ್ನವಾದ ರೀತಿಯ ಆಡಳಿತ ಕ್ರಮಗಳು ಇರುವುದು ಸ್ವಸ್ಥವೂ ಸಮಂಜಸವಲ್ಲ. ನೆರೆಯ ಪ್ರಾಂತಗಳಲ್ಲಿ ಎಷ್ಟು ಮಟ್ಟಿನ ರಾಜಕೀಯ ಸುಧಾರಣೆಗಳು ಜಾರಿಗೆ ಬಂದಿವೆಯೋ ಅಷ್ಟರಮಟ್ಟಿಗೆ ಸಂಸ್ಥಾನಗಳಲ್ಲಿ ಇಲ್ಲದಿರುವುದು ಸೂಕ್ತ. ಬ್ರಿಟಿಷರ ಪರಮಾಧಿಕಾರವು ತೊಲಗಿ ಸಂಸ್ಥಾನಗಳು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದುವ ಸ್ಥಿತಿಯಲ್ಲಿರುವಾಗ ಅವುಗಳ ಆಡಳಿತದ ಮಟ್ಟವು ನೆರೆಯ ಪ್ರಾಂತಗಳ ಮಟ್ಟದಷ್ಟಾದರೂ ಇರುವಂತೆ ಮಾಡುವುದು ರಾಜರುಗಳ ಆದ್ಯಕರ್ತವ್ಯ

ಇಂದಿನ ಬ್ರಿಟಿಷ್ ಹಿಂದೂಸ್ಥಾನದ ಪ್ರಾಂತಗಳಿಗಿಂತಲೂ ರಾಜಕೀಯ ಸ್ವಾತಂತ್ರ್ಯದಲ್ಲಿ ಮೈಸೂರು ಬಹಳ ಹಿಂದೆ ಬಿದ್ದಿರುವುದನ್ನು ಎಲ್ಲರೂ ಒಪ್ಪಲೇಬೇಕು ... ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ... ಇಲ್ಲಿ ಇನ್ನೂ ... ರಾಜಕೀಯ ಸುಧಾರಣೆಗಳ

... ಗಾಗಿ ಪ್ರಭುಗಳು ನೀಡಿರುವ ಸಂದೇಶವು ಇನ್ನೂ ಸಲಹಾ ಸಮಿತಿಯ ಪರ್ಯಾಲೋಚನೆಯಲ್ಲಿಯೇ ಪರ್ಯವಸಾನವಾಗುತ್ತಿದೆ. ಇದು ಯಾರಿಗೂ ಸಮರ್ಪಕವಲ್ಲದ ಸನ್ನಿವೇಶ

ಆಗಸ್ಟ್ ೧೫ನೇ ತಾರೀಖು ನಮ್ಮ ದೇಶದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ದಿನ ... ಹಿಂದೆ ... ದಾಸ್ಯವಾಗಿದ್ದ ಭಾರತೀಯರು ಸ್ವಾತಂತ್ರ್ಯದ ಅರುಣೋದಯವನ್ನು ಕಾಣುತ್ತಿರುವರು. ಮೊನ್ನೆ ತಾನೆ ನಮ್ಮ ಸಂಸ್ಥಾನದ ಕಾಂಗ್ರೆಸ್ ಕೆಲಸಗಾರರು ಇಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಅದೇ ಆಗಸ್ಟ್ ೧೫ನೇ ತಾರೀಖು ಸತ್ಯಾಗ್ರಹದ ಸಂಕಲ್ಪವನ್ನು ಮಾಡಿರುವರು. ಅದೇ ಆಗಸ್ಟ್ ೧೫ನೇ ತಾರೀಖಿನ ದಿನ ನಮ್ಮ ಶ್ರೀಮನ್ಮಹಾರಾಜರವರೂ ಸಹ ಭಾರತದ ಡೊಮಿನಿಯನ್ನಿಗೆ ಸೇರುವುದಾಗಿ ಘೋಷಣೆಯನ್ನೂ ಹೊರಡಿಸಿರುತ್ತಾರೆ.

ಇಂತಹ ಸನ್ನಿವೇಶದಲ್ಲಿ ಮೈಸೂರಿನ ಪ್ರಭುತ್ವದವರಿಗೂ, ಪ್ರಜಾವರ್ಗದವರಿಗೂ ಘರ್ಷಣೆಯು ಉದ್ಭವಿಸದೇ ಇರುವ ಪರಿಸ್ಥಿತಿಯು ಅತ್ಯಂತ ಶೋಚನೀಯವಾದುದು. ಭಾರತದ ಡೊಮಿನಿಯನ್ನಿಗೆ ಮೈಸೂರು ಸೇರಿದ ಮೇಲೆ ಅಲ್ಲಿನಂತೆಯೇ ಇಲ್ಲಿಯೂ ರಾಜ್ಯಾಂಗ ಸುಧಾರಣೆಗಳು ಇರಬೇಕಾದುದು ಅವಶ್ಯಕ. ಈ ತತ್ವವನ್ನು ಕೂಡಲೇ ಅಂಗೀಕರಿಸಿ ಭಾರತದ ಸ್ವಾತಂತ್ರ್ಯ ದಿನಾಚರಣೆಯ ಸಮಯದಲ್ಲಿಯೇ ಮೈಸೂರಿನಲ್ಲಿಯೂ ನೂತನ ಪ್ರಜಾಪ್ರಭುತ್ವ ... ಮಂತ್ರಿವರ್ಗ ... ಪ್ರಜಾಭಿಪ್ರಾಯದಂತೆ ಹೊಸ ರಾಜ್ಯಾಂಗ ನಿರ್ಮಾಣಕ್ಕೆ ತಕ್ಕ ವ್ಯವಸ್ಥೆಯನ್ನು ಕೈಗೊಳ್ಳುವುದೇ ಇಂದಿನ ಬಿಕ್ಕಟ್ಟಿನ ಪರಿಹಾರಕ್ಕೆ ಅತ್ಯಂತ ಶ್ರೇಯಸ್ಕರವಾದ ಮಾರ್ಗವಾಗಿರುತ್ತದೆ.

ವುಡ್‌ಲ್ಯಾಂಡ್ಸ್

ತಾ|| 12-8-47 ಕ್ಕೆ
ಅಮೋಘ 100 ನೇ ದಿನ
ಪ್ರತಿ ದಿನ ೨ ಆಟಗಳು
(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬಿ(ತಮಿಳು)

:- ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ಹರಿಜನರಿಗೆ ವಸತಿ

ಶ್ರೀರಂಗಪಟ್ಟಣ ಆ ...]

ಇಲ್ಲಿನ ಪುರಸಭೆಯ ವಿಶೇಷ ಅಧಿವೇಶನವು ನಿನ್ನೆ ಅಮಲ್ದಾರರ ಅಧ್ಯಕ್ಷತೆಯಲ್ಲಿ ಜರುಗಿತು.

ಸ್ವಾತಂತ್ರ್ಯ ದಿನಾಚರಣೆಯ ಸವಿ ನೆನಪಿಗಾಗಿ ೨೦ ಮಂದಿ ಬಡ ಹರಿಜನರಿಗೆ ಮನೆ ಕಟ್ಟಲು ಉಚಿತ ನಿವೇಶನಗಳನ್ನೂ, ಮತ್ತೆ ... ಸಹಾಯ ಧನ ... ಮಂಜೂರು ಮಾಡಬೇಕೆಂಬ ನಿರ್ಣಯಗಳನ್ನು ತಾ|| ೩ ಬಂದಿಗಾರ ಮತ್ತು ಕೆ ಬಾಲಯ್ಯನವರು ಮಂಡಿಸಿದರು. ಸದರಿ ಹೊಲಗಳನ್ನು ಮಂಜೂರು ಮಾಡಲಾಯಿತು. ನಿವೇಶನಗಳನ್ನು ಕೊಡುವ ಬಗ್ಗೆ ಮುಕ್ತಾಂದ. ಸಭೆಯಲ್ಲಿ ಪರ್ಯಾಲೋಚಿಸಬೇಕೆಂದು ತೀರ್ಮಾನಿಸಲಾಯಿತು

ವಿಮಾನದಲ್ಲಿ

ಜೂಜಿನ ಕುದುರೆಗಳ ರವಾನೆ

[ಲಂಡನ್ ಆ ... ಗ್ಲೋಬ್]

ಫೋರ್ಸ್‌ಸ್ಟೇನಿನಲ್ಲಿ ನಡೆಯುವ ಕುದುರೆ ಜೂಜಿಗಾಗಿ ಯಾರ್ಕ್‌ಶೈರಿನಿಂದ ೬ ಜೂಜಿನ ಕುದುರೆಗಳನ್ನು ವಿಮಾನದ ಮೂಲಕ ಸಾಗಿಸಲಾಗುವುದು. ಜೂಜಿಗಾಗಿ ಕುದುರೆಗಳನ್ನು ವಿಮಾನದ ಮೂಲಕ ರವಾನಿಸುತ್ತಿರುವುದು ಬ್ರಿಟನ್ನಿನಲ್ಲಿ ಇದೇ ಮೊದಲು.

Office of the President,
City Municipal Council,
Mysore, Dated 9th Aug. 47

NOTIFICATION

M 3 P 9 47-8

Sealed tenders will be received in the Municipal Office upto 4 p m on 11-8-47 for printing and supply of Council proceedings forms and registers etc, required for the Municipal Office during 1947-48. Particulars of work may be had in the Municipal Offices on all working days during Office hours

T. Narasimha Iyengar,
For President

Edited printed and published by A R. Nagarajan at the Sadhvi Press D Subbaiah Road Mysore

ಬ್ರಿ|| ಪ್ರಧಾನಿಗೆ ಸ್ಥಾನಪಲ್ಲಟ

ಬ್ರಿಟನ್ನಿನ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಲು ಬಹಳ ಸಮರ್ಥರಾದವರು ಪ್ರಧಾನಿಯಾಗಬೇಕೆಂದು ಹೇಳಲಾಗಿದೆ. ಇದರಿಂದ ವಿದೇಶಾಂಗ ಮಂತ್ರಿ ಅರ್ನೆಸ್ಟ್ ಬೆವಿನ್ ಅಥವಾ ಸರ್ ಸ್ಟಾಫರ್ಡ್ ಕ್ರಿಪ್ಸರ ಮಿ|| ಅಟ್ಲಿಯವರ ಸ್ಥಾನವನ್ನು ವಹಿಸುವರೆಂದು ವರದಿಯಾಗಿದೆ

ನೆಹರೂರವರ ರಾಜೀನಾಮೆ

ವಾಪಸು

ಅಖಿಲ ಭಾರತ ಸಂಸ್ಥಾನ ಪ್ರಜಾ ಪರಿಷತ್ತಿನ ಸ್ಥಾಯೀ ಸಮಿತಿಯ ಸಲಹೆಗೆ ಒಪ್ಪಿ ತಾವು ಇತ್ತಿದ್ದ ರಾಜೀನಾಮೆಯನ್ನು ಪಂಡಿತ ನೆಹರೂರವರು ವಾಪಸು ಪಡೆದಿರುವರೆಂದು ವರದಿಯಾಗಿದೆ

ಗೃಹಕೃತ್ಯದ ನೋಟೀಸು.

ನಂಜನಗೂಡಿನಲ್ಲಿರುವ ಶಾ ರ ದಾ ಟಾಕೀಸ್ ಎಂಬ ಸಿನಿಮಾ ಕಟ್ಟಡವೂ ಮತ್ತು ಅದಕ್ಕೆ ಲಗತ್ತಾಗಿರುವ ಹೋಟೆಲ್ ಬೀಡಾ ಅಂಗಡಿ ಮತ್ತು ಸಿನಿಮಾ ನಡೆಸಲು ಉಪಯೋಗಿಸುತ್ತಿರುವ ಫರ್‌ನೀಚರ್ ವಿಷಯದ ... ಎಲ್ಲಾ ವಿಶಿಷ್ಟ ... ಕ್ರಯ ಮಾಡಿರುವ ನಾನು ಮಾಲೀಕನಾಗಿರುತ್ತೇನೆ.

ಈಗ ನನ್ನದು ಎಂದು ಹೇಳಿಕೊಂಡು ... ಮುನಿಸಿಪಲ್ ... ಕಟ್ಟಡವನ್ನು ... ನನ್ನ ಕ್ರಯ ... ಇದರ ... ನಿರ್ವಹಣೆ ... ಸದರಿ ಕಟ್ಟಡವನ್ನು ... ಸಿನಿಮಾ ನಡೆಸಲು ... ಯಂತ್ರ, ಫರ್‌ನೀಚರ್‌ಗಳು ಇವುಗಳಲ್ಲದೆ ... ಸಿನಿಮಾ ... ಬಾಡಿಗೆದಾರ್ ... ಬಾಡಿಗೆ ... ಸದರಿ ಕಟ್ಟಡವನ್ನೇ ಅಧಿಕ ... ಮಾಲೀಕರಾದ ... ರಾವ್ ... ಚಂದ್ರ ರಾಯ ... ಆದರಿಂದ ... ಕಟ್ಟಡದಲ್ಲಿ ಸಿನಿಮಾ ... ಪ್ರಾರಂಭವಾದ ನಂತರ ... ಯಾವ ವಿಧವ ... ನಡೆಸಿದರೂ ನಾನು ಅದಕ್ಕೆ ಜವಾಬ್ದಾರನಲ್ಲ.

ಈಗ ಈ ಮೇಲ್ಕಂಡ ಕಟ್ಟಡದ ವಿಚಾರವಾಗಿಯೂ ಮತ್ತು ಬಾಡಿಗೆ ವಸೂಲಿಗೆ ... ಕೋರ್ಟಿನಲ್ಲಿ ... ದಾವಾ ಮಾಡಲು ... ಮಾಡಲಾಗಿರುವುದರಿಂದ ಈ ಮೂಲಕ ಎಲ್ಲರಿಗೂ ತಿಳಿಸಿದೆ

ಪಿ ಕೆ ಸುಬ್ರಹ್ಮಣ್ಯಂ,
ಪ್ರೊಪ್ರೈಟರ್, ... ಸ್ಟುಡಿಯೋ
... ರೋಡ್ ...
ಶಿವರಾಂಪೇಟೆ, ಮೈಸೂರು

ರಾಜಕಮಲ್ : : ತಾ|| 8-8-47 ರಿಂದ
ಅಮೋಘ ಪ್ರಾರಂಭ ಪ್ರತಿ ದಿನ ೩ ಆಟಗಳು

ಮಹಾನಂದ

(ಕನ್ನಡದಲ್ಲಿ)

ತಾರಾಗಣ :- ... ಕೆಂಪರಾಜ್, ... ಅಶ್ವತ್ಥ ... ಮುಂತಾದವರು

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ... ರಾಜೇಂದ್ರ ಪ್ರಸಾದ್, ... ನಾರಾಯಣ್ ಇವರ ... ಆಗಿನ ... ಭಾಗವನ್ನೂ ಸಹ ಪ್ರದರ್ಶಿಸುತ್ತೇವೆ

ರೋ| ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೧೩—೮—೪೭ [ಸಂಚಿಕೆ ೨೧

ಜಗದ್ಗುರುಗಳಿಂದ ರಾಷ್ಟ್ರಧ್ವಜಕ್ಕೆ ಸ್ವಾಗತ

ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ

ಮೈಸೂರು ೧೩

ನಗರ ಕಾಂಗ್ರೆಸ್ ಸಮಿತಿಯವರು ನಾಳೆ ಈ ಕೆಳಗೆ ಕಂಡಂತೆ ಕಾರ್ಯಕ್ರಮವನ್ನು ರೂಪಿಸಿರುವರು — ಬೆಳಿಗ್ಗೆ ೬ ಗಂಟೆಗೆ ಮೊಹಲ್ಲೆಗಳಲ್ಲಿಯೂ ಪ್ರಭಾತ ಪೇರಿ ... ಗಂಟೆಗೆ ಸುಬ್ಬರಾಯನ ಕೆರೆಯಲ್ಲಿ ... ಯ ಧ್ವಜಾರೋಹಣ, ಎಲ್ಲಾ ದೇವಸ್ಥಾನ, ಮಸೀದಿ ಮತ್ತು ಚರ್ಚುಗಳಲ್ಲಿ ... ಪ್ರಾರ್ಥನೆ, ಸಂಜೆ ೫-೩೦ ಗಂಟೆಗೆ ... ಸ್ ಕಚೇರಿಯಿಂದ ಮೆರವಣಿಗೆ, ೭ ಗೆ ಟರ್ನಾಪಾರಿನಲ್ಲಿ ಬಹಿರಂಗ ಸಭೆ- ... ಜನರು ತಮ್ಮ ಮನೆ ಮತ್ತು ಅಂಗಡಿ ... ಮೇಲೆ ತಳಿರು ತೋರಣಗಳನ್ನು ... ರಾಷ್ಟ್ರಧ್ವಜವನ್ನು ಹಾರಿಸುವುದಲ್ಲದೆ ... ಂಡ ಕಾರ್ಯಕ್ರಮಗಳಲ್ಲಿ ಭಾಗಿಗಳಾಗ ... ಗಿ ಕೋರಲಾಗಿದೆ.

ಪೌರಸಭೆಯಲ್ಲಿ

... ಗ್ಗೆ ೧೦ ೧೫ ಗಂಟೆಗೆ ಪೌರಸಭಾ ... ದಿಂದ ಟರ್ನಾಪಾರಿಗೆ ಮೆರವಣಿಗೆ, ... ಹಾಲ್ ಮೈದಾನದಲ್ಲಿ ಧ್ವಜಾರೋಹ ... ಸಂಜೆ ೩-೩೦ ಗಂಟೆಗೆ ಪೌರಸಭೆ ... ವಿಶೇಷ ಅಧಿವೇಶನ-ಮಹಾತ್ಮಾ ಗಾಂಧಿ ... ನೆಹರೂರವರ ಭಾವಚಿತ್ರ ಅನಾವರ ... ಮಕ್ಕಳಿಗೆ ಸಿಹಿತಿಂಡಿ ಹಂಚುವುದು

ಜಿಲ್ಲಾ ಬೋರ್ಡಿನಲ್ಲಿ

... ಗ್ಗೆ ಜಿಲ್ಲಾ ಬೋರ್ಡ್ ಭವನದ ... ಧ್ವಜಾರೋಹಣ, ಮಹಾತ್ಮಾ ಗಾಂಧಿ ... ನೆಹರೂ, ಅಜಾದ್, ಸುಭಾಷ್ ಚಂದ್ರ ... ಪಟೇಲ್ ಮತ್ತು ದಾದಾಭಾಯಿ ... ನೌರೋಜಿಯವರ ಭಾವಚಿತ್ರ ಅನಾವರಣ, ... ಹಂಚುವುದು, ಬೋರ್ಡಿನ ಸೇ ... , ನಡೆಸುವವರ ವೈಕಿ ಮೈಸೂರು ... ವಾಸಿಸುವವರಿಗೆ ತಲಾ ೭ ೮-೦ ರೂ ... ವಾಸಿಸುವವರಿಗೆ ತಲಾ ೫ ರೂ ವಿಶೇಷ ... ವಾರ್ಡ-ಎಲ್ಲಾ ಮುಸಾಫಿರ್ ಖಾನೆ ... ಲರ್ಸ್ ಬಂಗಲೆ ಮತ್ತು ವೈದ್ಯಶಾಲೆಗಳ ... ಲ್ಲಿ ರಾಷ್ಟ್ರಧ್ವಜಾರೋಹಣ ಗ್ರಾ ... ಕರಗಳಲ್ಲಿ ೫೦೦ ರಾಷ್ಟ್ರಧ್ವಜಗಳ ಹಂಚಿಕೆ.

... ಜಭಾಪತಿಯ. ಪಿ. ತಿ. ಎಸ್. ಇನ್ಸ್ಟಿಟ್ಯೂಟಿನಲ್ಲಿ ನಾಳಿದ್ದು ಸ್ವಾತಂತ್ರ್ಯ ದಿನಾ ... ಯು ಜರುಗುವುದು.

ಮಿರ್ಜಾರವರಿಗೆ ನಾಂಕರೂರು ದಿವಾನಗಿರಿ?

... ನಾಂಕರೂರಿನ ದಿವಾನರಾದ ಸರ್ ... ರಾಮಸ್ವಾಮಿ ಐಯ್ಯರ್‌ರವರು ತ ... ದವಿಗೆ ರಾಜೀನಾಮೆ ಈಯುವರೆಂ ... ವರ ಸ್ಥಾನದಲ್ಲಿ ಮೈಸೂರಿನ ಮಾಜಿ ... ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರ ... ನೇಮಿಸಲಾಗುವುದೆಂದೂ ತಿಳಿದುಬಂ ...

LATEST NEWS

... ಫ್ರೀ] [ಬೆಂಗಳೂರು ೧೩

... ರವರು ಈ ದಿನ ಒಂದು ಪ್ರಕ ... ನ್ನು ಹೊರಡಿಸಿ ಸಂಘಟನ ಸಮಿತಿಯ ... ಕನ ಬಗ್ಗೆ ಈ ತಿಂಗಳ ೧೫ ರೊಳಗೆ ... ನಿರ್ಧರಿಸುವನ್ನು ತಿಳಿಸಬೇಕಾಗಿದ್ದು ... ಸಂಸ್ಥಾನಗಳ ಸಾಧ್ಯವಾಗಿಲ್ಲವೆಂದೂ, ... ೧೫ ರೊಳಗಾಗಿ ಆ ಬಗ್ಗೆ ತಿಳಿಸ್ಸ ... ಬೇಕಾಗುವುದು ... ನ್ನು ಕಳಿಸ ದಿನದ ... ಗಳಿಂದ ... ಪಡಿಸುವ ಆಲೋಚ ...

ಸ್ವಾತಂತ್ರ್ಯ ದಿನಾಚರಣೆ

ವಿದ್ಯಾರ್ಥಿ ಕಾಂ|| ಕಾರ್ಯಕ್ರಮ

ಮೈಸೂರು ೧೩

ಆಗಸ್ಟ್ ೧೫ರ ದಿನ ಸ್ವಾತಂತ್ರ್ಯದಿನಾಚರಣೆಯ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಈ ಕೆಳಗೆ ಕಂಡಂತೆ ರಚಿಸಲಾಗಿದೆ. ಪ್ರಾತಃಕಾಲ ೬ ಗಂಟೆಯಿಂದ ೭-೩೦ ರ ವರೆಗೆ ಸ್ಕೂಲುಗಳ ಮೇಲೆ ಪ್ರಭಾತಭೇರಿಯು ಮಹಾರಾಜಾ ಕಾಲೇಜು ಮುಂಭಾಗದಿಂದ ಪ್ರಾರಂಭವಾಗಿ ನಗರದ ಮುಖ್ಯ ಬೀದಿಗಳಲ್ಲಿ ಹಾದು ಪುನಃ ೭-೩೦ ರ ಹೊತ್ತಿಗೆ ಮಹಾರಾಜಾ ಕಾಲೇಜು ಮುಂಭಾಗದಲ್ಲಿ ಬಂದು ಸೇರುತ್ತದೆ. ೮ ಗಂಟೆಗೆ ಧ್ವಜಾರೋಹಣ, ೧೦-೩೦ ರಿಂದ ಮಹಾರಾಜಾ ಕಾಲೇಜು ಬಳಿ ಬಹಿರಂಗ ಸಭೆ. ಸಾಯಂಕಾಲ ೪ ಘಂಟೆಯಿಂದ ಮೆರವಣಿಗೆಯು ಮಹಾರಾಜಾ ಕಾಲೇಜು ಮುಂಭಾಗದಿಂದ ಪ್ರಾರಂಭವಾಗಿ ನಗರದ ಮುಖ್ಯ ಬೀದಿಗಳಲ್ಲಿ ಹಾದುಹೋಗುತ್ತದೆ. ಪ್ರಭಾತಭೇರಿಯಲ್ಲಿ ಭಾಗವಹಿಸುವ ಎಲ್ಲರೂ ಬೆಳಿಗ್ಗೆ ೬ ಗಂಟೆಗೆ ಬಂದು ಪ್ರಭಾತಭೇರಿಗೆ ಸಿದ್ಧವಾಗಿರುವ ಸ್ವಯಂ ಸೇವಕರೊಂದಿಗೆ ಕೂಡಿಕೊಳ್ಳಬೇಕು. ಪ್ರಭಾತಭೇರಿ ಹೊರಡುವ ಮುನ್ನ ಎಲ್ಲರಿಗೂ ತ್ರಿವರ್ಣ ಧ್ವಜವನ್ನು ಒದಗಿಸಲಾಗುವುದು. ಎಲ್ಲರೂ ಸಹಕರಿಸಬೇಕೆಂದು ಸಮಿತಿಯು ಸಂಚಾಲಕರು ಪ್ರಾರ್ಥಿಸಿರುವರು.

ಬಾಲಜನೋಪಯೋಗಿ ವಿವಿಧ ಮಹಿಳಾ ಸಂಸ್ಥೆಗಳವರು ನಾಳಿದ್ದು ಮಧ್ಯಾಹ್ನ ೩ ಗಂಟೆಗೆ ರಾಜಕಮಲ್ ಸಿನಿಮಾ ಮಂದಿರದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸುವರು. ಮಹಿಳೆಯರೆಲ್ಲರೂ ಇದರಲ್ಲಿ ಭಾಗವಹಿಸಬೇಕೆಂದು ಶ್ರೀಮತಿ ಬಿ. ಕಾಮಾಕ್ಷಮ್ಮನವರು ಪ್ರಾರ್ಥಿಸಿರುವರು.

ವುಡ್‌ಲ್ಯಾಂಡ್ಸ್

ತಾ|| 12-8-47 ಕ್ಕೆ

ಅನೋಧ 100 ನೇ ದಿನ

ಪ್ರತಿ ದಿನ ೨ ಆಟಗಳು

(ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಉಂಟು)

ನಾವು ಇಬ್ಬರು

ಬಿ (ತಮಿಳು)

ಪಾತ್ರ

ಟಿ. ಆರ್. ಮಹಾಲಿಂಗಂ,

ಜಯಲಕ್ಷ್ಮಿ, ಟಿ. ಆರ್.

ರಾಮಚಂದ್ರ ಮುಂತಾದವರು.

ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಮುಷ್ಕರದ ಮುಕ್ತಾಯ

ಮೈಸೂರು ೧೩

ಬೆಳಗೊಳದಲ್ಲಿರುವ ಮೇಲ್ಕಂಡ ಕಾರ್ಖಾನೆಯ ಆಡಳಿತ ವರ್ಗದವರಿಗೂ, ಕೆಲಸಗಾರರಿಗೂ ನಿನ್ನೆ ಒಪ್ಪಂದವಾದುದರ ಪರಿಣಾಮವಾಗಿ ಕೆಲಸಗಾರರು ಕಳೆದ ೩ ನೇ ತಾರೀಖಿನಿಂದ ನಡೆಸುತ್ತಿದ್ದ ಮುಷ್ಕರವನ್ನು ಇಂದು ಬೆಳಗ್ಗೆ ಮುಕ್ತಾಯಗೊಳಿಸಿ ಕೆಲಸಕ್ಕೆ ಹಿಂದಿರುಗಿರುವರೆಂದು ತಿಳಿದು ಬಂದಿದೆ. ... ಕೆಲಸಗಾರರೂ ಸಹ ಕೆಲಸದ ಮೇಲೆ ಬರಬೇಕೆಂದು ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ.

ಪ್ರದೋಷ ಸಂಗೀತ

ಪಿಡಿ...ರಂ ಕೃಷ್ಣಸ್ವಾಮಿಯವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಆ|| ವಿ|| ಲಕ್ಷ್ಮೀನರಸಿಂಹಯ್ಯನವರಿಂದ ಸ್ವಾಕ್ಸ್ ಆಫ್ ಫೋನ್ ಎಂಬ ಆಂಗ್ಲ ವಾದ್ಯ ವಾದನವನ್ನು ಏರ್ಪಡಿಸಿರುತ್ತದೆ.

ಬಿಕನೀರ್ ಮಹಾರಾಜರಿಂದ ರಾಷ್ಟ್ರಧ್ವಜಾರೋಹಣ

ನಾಳಿದ್ದು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಆಚರಿಸುವ ಉತ್ಸವದಲ್ಲಿ ತಮ್ಮ ಸಂಸ್ಥಾನದಲ್ಲಿ ರಾಷ್ಟ್ರಧ್ವಜವನ್ನು ಬಿಕನೀರಿನ ಅರಸರು ತಾವೇ ಹಾರಿಸಿ ಅಂದಿನ ಸಮಾರಂಭಗಳಲ್ಲಿ ಭಾಗವಹಿಸುವರು.

ಸ್ವಾತಂತ್ರ್ಯೋತ್ಸವ

ಸ್ವಂ ಬ] [ಶ್ರೀರಂಗಪಟ್ಟಣ ೧೩

... ರಲ್ಲಿ ಇಲ್ಲಿನ ಕೋಟೆ ಇಂಗ್ಲೀಷರ ಕೈವಶವಾಗಿ ಮೈಸೂರಿನ ಸ್ವಾತಂತ್ರ್ಯ ಹೋಯಿತು. ಅಂದು ಧ್ವಜಸ್ತಂಭದ ಮೇಲೆ ಏರಿಸಿದ ಬಾವುಟವನ್ನು ಇಂದಿನವರೆಗೂ ಇಳಿಸಿಲ್ಲ ಅದ್ದರಿಂದ ಇಲ್ಲಿ ಸ್ವಾತಂತ್ರ್ಯೋತ್ಸವಕ್ಕೆ ತುಂಬಾ ಮಹತ್ವವಿದೆ. ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ನಾಳೆ ರಾತ್ರಿ ೧೧ ಗಂಟೆಯವರೆಗೂ ಸಭೆ, ಹರಿಕಥೆ, ಕೀರ್ತನೆ, ಭಾಷಣಗಳನ್ನು ಏರ್ಪಡಿಸಿರುವರು. ನಾಳಿದ್ದು ಬೆಳಿಗ್ಗೆ ೯ ಗಂಟೆಗೆ ಮೆರವಣಿಗೆ, ಬಾವುಟದ ಬತ್ತೇರಿಯ ಮೇಲೆ ಧ್ವಜಾರೋಹಣ ಮತ್ತು ಸಂಜೆ ಸಭೆಗಳು ನಡೆಯುವುವು.

೧ ವೈದ್ಯರಾಬಾದ್ ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರನ್ನು ದಸ್ತಗಿರಿ ಮಾಡಲಾಗಿದೆಯೆಂದು ವರದಿಯಾಗಿದೆ.

ದಂಡಿನ ಮಿಲಿಟರಿ ಪ್ರದೇಶ ಮೈಸೂರಿಗೆ

ಸ್ವಂ ಸು. ಫ್ರ] [ಬೆಂಗಳೂರು ೧೩

ಬೆಂಗಳೂರು ದಂಡಿನ ಮಿಲಿಟರಿ ಪ್ರದೇಶವೂ ಸಹ ನಾಳೆಯಿಂದ ಮೈಸೂರು ಸಂಸ್ಥಾನದ ಆಡಳಿತಕ್ಕೇ ವಹಿಸಲ್ಪಡುವುದೆಂದು ಭಾರತ ಸರ್ಕಾರವು ಪ್ರಕಟಿಸಿರುವುದಾಗಿ ವರದಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆ

ಅಕ್ಟೋಬರ್ ೧ ನೇ ತಾ|| ನಿಂದ ಕಡೂರು ಜಿಲ್ಲೆಯನ್ನು ಚಿಕ್ಕಮಗಳೂರು ಜಿಲ್ಲೆ ಎಂಬುದಾಗಿ ಕರೆಯಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುವರು.

† ಮಂತ್ರಿಮಂಡಲದ ಸಭೆಯು ಈ ದಿನ ನಡೆದು ಸಂಬಳ ಸಮಿತಿಯ ವರದಿಯನ್ನು ಪರಿಶೀಲಿಸಿತೆಂದು ತಿಳಿದುಬಂದಿದೆ.

• ಶ್ರೀ ಎಸ್. ಚನ್ನಸ್ವಾಮಿ ಶೆಟ್ಟರನ್ನು ಮೂರು ವರ್ಷಕಾಲ ಮೈಸೂರು ಜಿಲ್ಲೆಯ ಸರ್ಕಾರಿ ರಿಸೀವರಾಗಿ ನೇಮಿಸಲಾಗಿದೆ.

ಶ್ರೈ ಅಕ್ಟೋಬರ್ ೨೦ ನೇ ತಾ|| ಪ್ರ|| ಪ್ರ|| ಸಭೆಯ ಅಧಿವೇಶನವು ಸೇರುವುದು.

• ಈ ದಿನ ಬೆಳಗ್ಗೆ ದಂಡಿನ ಸೈನ್ಯಗಳ ... ನಡೆದಾಗ ಸಿವಿಡೆಂಟರು ಸಲಾಮನ್ನು ... ನಾಳೆಯಿಂದ ... ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವುದಾಗಿ ತಿಳಿಸಿದರು.

... ಆಹಾರ ಪರಿಸ್ಥಿತಿಯು ಹದಗೆಟ್ಟು ಹೋಗಿಸಿ ... ಧಾನ್ಯದ ಬರುವ ಭರವಸೆ ಇಲ್ಲದುದರಿಂದ ... ಗಳು ತಮ್ಮಲ್ಲಿರುವ ಹೆಚ್ಚಿನ ಪಡಿತರದ ... ಧಾನ್ಯವಾದವನ್ನು ಸರ್ಕಾರಿ ಡಿಪೋಗಳಿಗೆ ಕೊಟ್ಟು ಇತರ ಜನರಿಗೆ ಸಹಾಯ ಮಾಡಬೇಕೆಂದು ಸೂಚಿಸುವ ಮನವಿಯೊಂದನ್ನು ಸರ್ಕಾರದವರು ಹೊರಡಿಸಿರುತ್ತಾರೆ.

ಭಾರತ ಡೊಮಿನಿಯನ್ನಿಗೆ ಕಾಮಕೋಟಿ ಪೀಠದ ಆಶೀರ್ವಾದ

ಕುಂಭಕೋಣದ ಕಾಮಕೋಟಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶಂಕರಾಚಾರ್ಯರು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಸಂದೇಶವೊಂದನ್ನು ಕಳಿಸಿದ್ದಾರೆ. ರಾಷ್ಟ್ರೀಯ ಸ್ವಾತಂತ್ರ್ಯದೊಡನೆಯೇ ಧಾರ್ಮಿಕ ಸ್ವಾತಂತ್ರ್ಯವೂ ಸ್ಥಾಪನೆಯಾಗಲೆಂದು ಹಾರೈಸಿದ್ದಾರೆ. ನೂತನ ರಾಷ್ಟ್ರಧ್ವಜವು ಧರ್ಮಚಕ್ರ ಲಾಂಛನ ಚಿಹ್ನೆಯಾಗಿರುವುದರ ... ಸ್ವಾಗತವನ್ನು ನೀಡಿ ಶ್ರೇಯಸ್ಸನ್ನು ಕೋರಿರುತ್ತಾರೆ.

ಗಿರಣಿ ಕೆಲಸಗಾರರಿಗೆ ಸ್ವಾತಂತ್ರ್ಯದ ಬೋನಸ್ಸು

ಮೈಸೂರು ೧೩

ಶ್ರೀ ಕೃಷ್ಣರಾಜೇಂದ್ರ ಮಿಲ್ಸಿನ ಆಡಳಿತ ವರ್ಗದವರು ೧೫ ಮತ್ತು ೧೬ ನೇ ತಾರೀಖುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಸಂಬಳಸಹಿತ ರಜೆಯನ್ನು ಕೊಡಲು ... ಮಾಡಿರುವರು. ಕೆಲಸಗಾರರು ೧೬ ನೇ ತಾರೀಖಿನ ಬದಲು ... ೧೭ ನೇ ತಾರೀಖಿನಂದು ಕೆಲಸ ಮಾಡುವುದಾಗಿ ... ಒಪ್ಪಿ ... ಸಂಬಳದ ... ರಷ್ಟನ್ನು ಸ್ವಾತಂತ್ರ್ಯದ ಬೋನಸ್ಸಾಗಿ ಕೊಡಲು ನಿರ್ಧರಿಸಿ ... ನಾಳೆಯ ದಿವಸವೇ ಕೆಲಸಗಾರರಿಗೆ ಕೊಡಲು ನಿರ್ಧರಿಸಿರುವರು.

ಸಾಧ್ವಿ

ತಾ|| ೧೩-೮-೪೭ ಬುಧವಾರ

ಮೈಸೂರಿನಲ್ಲಿ ಬಿಡುಗಡೆ ಇಲ್ಲವೇ ?

ಇಡೀ ಹಿಂದೂಸ್ಥಾನದಲ್ಲೆಲ್ಲಾ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ರಾಜಕೀಯ ಮತ್ತು ಇತರ ಖೈದಿಗಳನ್ನು ಸಾವಿರ ಸಂಖ್ಯೆಯಲ್ಲಿ ಬಿಡುಗಡೆ ಮಾಡಲಾಗುತ್ತಿದೆ ಯಷ್ಟೆ. ಆದರೆ ಮೈಸೂರಿನಲ್ಲಿ ಮಾತ್ರ ಈ ಬಗ್ಗೆ ಯಾವ ಸೂಚನೆಯೂ ಇದುವರೆಗೆ ಕಂಡು ಬಂದಿರುವುದಿಲ್ಲ. ಇಂತಹ ಸುಸಮಯವನ್ನು ಅವರು ಕಳೆದ. ಕೊಂಚವೇ ಅದಕ್ಷಿಂತಲೂ ವಿಷಾದಕರವಾದ ವಿಚಾರವು ಬೇರೊಂದಿರುವುದಿಲ್ಲ.

ಸ್ವಾತಂತ್ರ್ಯ ದಿನಾಚರಣೆಗೆ ಇನ್ನು ಕೇವಲ ಎರಡು ದಿನಗಳು ಮಾತ್ರ ಉಳಿದಿವೆ ನಮ್ಮ ಸರ್ಕಾರದವರು ಆ ದಿನ ಉತ್ಸವದ ಕ್ಕೆ ಭಾಗಿಗಳಾಗಲು ಏರ್ಪಾಡುಗಳನ್ನೇನೋ ಮಾಡಿರುತ್ತಾರೆ. ಸಾರ್ವಜನಿಕ ರಜವನ್ನೂ ಇದ ಕೊಟ್ಟಿರುತ್ತಾರೆ. ದಿವಾನರೇ ಸ್ವತಃ ಧ್ವಜಾರೋಹಣವನ್ನು ಮಾಡ ತ್ತಾರೆ. ಪೌರಸಭೆಗಳಲ್ಲಿ ಈ ಉತ್ಸವವನ್ನು ಆಚರಿಸಲು ಖರ್ಚು ವೆಚ್ಚಗಳನ್ನು ಮಂಜೂರು ಮಾಡಿರುತ್ತಾರೆ. ಅದರೂ ಇತರ ಪ್ರಾಂತಗಳಲ್ಲಿ ಮಾಡಿರುವಂತೆ ಖೈದಿಗಳ ಬಿಡುಗಡೆಗೆ ಆಜ್ಞೆ ಮಾಡದಿರ ಒಂದು ದೊಡ್ಡ ಕೊರತೆಯೇ ಸರಿ.

ಅನೇಕ ಸಂತೋಷದ ಸಮಯಗಳಲ್ಲಿ ನಡೆಯುವ ಕಾರ್ಯಕ್ರಮಗಳ ಪೈಕಿ ಖೈದಿಗಳ ಬಿಡುಗಡೆಯು ಮೊದಲನೆಯದು. ರಾಜಕೀಯ ಖೈದಿಗಳಿಗೆ ಮಾತ್ರವೇ ಅಲ್ಲದೆ ಇತರ ಎಲ್ಲ ಬಗೆಯ ಖೈದಿಗಳಿಗೂ ಆ ಸವಿ ಯುಗಳಲ್ಲಿ ಬಂಧ ವಿಮೋಚನೆಯು ಆಗುವುದು ವಾಡಿಕೆ. ಮರಣ ದಂಡನೆಗೆ ಗುರಿಯಾಗಿದ್ದವರೂ ಸಹ ಈಗ ಜೀವದಾನವನ್ನು ಪಡೆಯುತ್ತಿರುವರು. ಇಂತಹ ಸಂತೋಷ ಸಮಾರಂಭದ ಪ್ರಯೋಜನವು ನಮ್ಮ ಮೈಸೂರಿನ ಖೈದಿಗಳಿಗೆ ಏಕಾಕಲಿ ಲ್ಲದಿರುವುದೇ ?

ಈಗಲೂ ಕಾಲವು ಮಿಂಚಿರುವುದಿಲ್ಲ. ಮೈಸೂರು ಸಂಸ್ಥಾನವು ಭಾರತದ ಡೊಮಿನಿಯನ್ನಿಗೆ ಸೇರಿ ಭರತ ಖಂಡದ ಇತರ ಪ್ರಾಂತಗಳಿಗೆ ಸರಿಸಮಾನವಾಗಿ ನಿಂತಿರುವುದು ಅವುಗಳಂತೆಯೇ ಸ್ವಾತಂತ್ರ್ಯದ ಸವಿಯನ್ನು ಭೋಗಿಸುವ ಈ ಸಮಯದಲ್ಲಿ ಇತರ ಪ್ರಾಂತಗಳಂತೆಯೇ ಇಲ್ಲಿರುವ ಖೈದಿಗಳೂ ವಿಮೋಚನೆ ಹೊಂದಿ ಈ ಹೊಸ ಯುಗ

ಬನ್ನಾನ್ಸ್ ಅರಸರು ಸಿಂಹಾಸನ ತ್ಯಜಿಸಿದರು

ಬನ್ನಾನ್ಸ್ ಸಂಸ್ಥಾನದ ಅರಸರಾದ ಮಹಾರಾವಲ್‌ರವರು ಅನಾರೋಗ್ಯದ ನಿಮಿತ್ತವಾಗಿ ಸಿಂಹಾಸನವನ್ನು ತ್ಯಜಿಸಿದ್ದಾರೆ. ಈಗ ಆ ವರ ಪುತ್ರರು ಸಿಂಹಾಸನಾರೋಹಣ ಮಾಡುವರು.

ಈ ಸಂತೋಷದ ಸಂದರ್ಭದಲ್ಲಿ ಭಾಗಿಗಳಾಗುವಂತೆ ಮಾಡುವುದು ಇಲ್ಲಿನ ಸರ್ಕಾರದ ಆದ್ಯ ಕರ್ತವ್ಯವಲ್ಲವೇ ?

ಹೊಸ ಸಿಲ್ಕಿನ ಮತ್ತು ಖಾದಿಯು

ರಾಷ್ಟ್ರ ಧ್ವಜಗಳಿಗೆ

ನರ್ಸೈಟ ಸ್ಟೋರ್ಸ್,

ಶ್ರೀರಂಗಪಟ್ಟಣ

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

P 4 No 207/1946-47

ಮೈಸೂರು ಸಿಟಿಯಲ್ಲಿ ವಾಸವಾಗಿರುವ ಭತ್ತ, ರಾಗಿ, ವಗೈರೆ ದವಸಗಳನ್ನು ಸಾಗಿಸಿರುವ ಸಮಸ್ತರಿಗೂ, ತಿಳಿಯಪಡಿಸುವುದೇನೆಂದರೆ :-

ಮೈಸೂರು ಸಿಟಿಯಲ್ಲಿ ವಾಸವಾಗಿರುವ ಮೇಲ್ಕಂಡ ಜಮೀನ್ದಾರರುಗಳು ತಮ್ಮ ತಮ್ಮ ರೇಷನ್ ಕಾರ್ಡಿನಂತೆ ೧೨ ಔನ್ಸಿನಂತೆ ಭತ್ತ, ರಾಗಿ ವಗೈರೆ ದವಸಗಳನ್ನು ಸಾಗಿಸಲು ಹಿಂದೆ ಅನುಮತಿಕೊಟ್ಟಿದ್ದು ಸರಿಯಷ್ಟೆ. ಈಚೆಗೆ ಸರ್ಕಾರದವರು ಒಬ್ಬ ಮನುಷ್ಯನಿಗೆ ಒಂದು ದಿನಕ್ಕೆ ೧೨ ಔನ್ಸಿನಿಂದ ೧೦ ಔನ್ಸಿಗೆ ಇಳಿಸಿರುವ ಸೇ ಕಾಲದಿಂದ [illegible] ಜಾರಿಗೆ ಮಾಡಿರುವುದರಿಂದ ಎಲ್ಲಾ ಭತ್ತ ರಾಗಿ ವಗೈರೆ ಸಾಗಿಸಿರುವ ಜಮೀನ್ದಾರರೂ ಸಂಬಂಧಪಟ್ಟ ಮೊಹಲ್ಲಾ ಅಸಿಸ್ಟೆಂಟ್ ರೇಷನಿಂಗ್ ಆಫೀಸರುಗಳಿಗೆ ತಮ್ಮ ತಮ್ಮ ರೇಷನ್ ಕಾರ್ಡನ್ನು ಹಾಜರ್ಪಡಿಸಿ ೧೦ ಔನ್ಸಿನಂತೆ ತಮ್ಮ ಕಾರ್ಡಿನಲ್ಲಿ ತಿದ್ದುಪಡಿ ಮಾಡಿಸಿಕೊಳ್ಳತಕ್ಕದ್ದೆಂಬ ಅಂಶ ಈ ಮೂಲಕ ತಿಳಿಯಪಡಿಸಿದೆ.

ಎಂ. ಶ್ರೀನಿವಾಸಲು ನಾಯ್ಡು,

ರೇಷನಿಂಗ್ ಆಫೀಸರ್,

ಮೈಸೂರು ಸಿಟಿ.

ಮೈಸೂರು,

ತಾ|| [illegible]

ಅಧಿಕಾರ ವರ್ಗಾವಣೆಯ ಚಲನ ಚಿತ್ರ

ಆಗಸ್ಟ್ ೧೪-೧೫ ರ ಮಧ್ಯ ರಾತ್ರಿಯಲ್ಲಿ ನಡೆಯುವ ಅಧಿಕಾರ ವರ್ಗಾವಣೆಯ ಸಮಾರಂಭದ ಕಾರ್ಯಕ್ರಮಗಳನ್ನು ಪೂರ್ಣವಾಗಿ ಚಲನ ಚಿತ್ರ ರೂಪದಲ್ಲಿ ತೆಗೆಯಲು ಭಾರಿ ಪ್ರಯತ್ನಗಳು ಸಾಗುತ್ತಿವೆ. ಈ ಚಿತ್ರಗಳು ವಿಶ್ವದ ಎಲ್ಲ ಭಾಗಗಳಲ್ಲಿಯೂ ಪ್ರದರ್ಶಿಸಲ್ಪಡುವುವು.

೭ ದಿನದಲ್ಲಿ ೧೯,೦೦೦ ಮೈಲಿ ಪ್ರಯಾಣ

ಚಿಕಾಗೋವಿನ ಎಲಿಯಂ ಓಡಾಂರವರು ರೆನಾಲ್ಡ್ಸ್ ಬಾಂಬ್ ಶೆಲ್ ಎಂಬ ವಿಮಾನವನ್ನು ತಾವು ಒಬ್ಬರೇ ನಡೆಸಿ ಪ್ರಪಂಚವನ್ನೆಲ್ಲಾ ಬಳಸಿ ಬಂದಿರುವರೆಂದು ವರದಿಯಾಗಿದೆ. ಇವರು ಮೂರೇ ದಿನಗಳಲ್ಲಿ ೧೯ ಸಹಸ್ರ ಮೈಲಿ ದೂರ ಪ್ರಯಾಣ ಮಾಡಿರುವರು.

ಒಂಟಿಕೊಪ್ಪಲ್ ಕ್ಲಬ್,

ಮೈಸೂರು

ಕ್ಲಬ್ಬಿನ ಆವರಣದಲ್ಲಿ ಏರ್ಪಡಿಸಿರುವ

ಸ್ವಾತಂತ್ರ್ಯ ದಿನಾಚರಣೆಯ

ಕಾರ್ಯಕ್ರಮ

14-8-47 ಸಂಜೆ 7-20 ಕ್ಕೆ

ಆಲ್ ಇಂಡಿಯಾ ಪ್ರಸಿದ್ಧರಾದ ಪ್ರೊ|| ಎಸ್. ಜಿ. ಮೊಹಿಯುದ್ದೀನ್‌ರವರ

ಸಿತಾರ್

15-8-47 ಬೆಳಗ್ಗೆ 6 ಕ್ಕೆ

ಧ್ವಜಾರೋಹಣ ಮತ್ತು ಇತರ ಕಾರ್ಯಕ್ರಮಗಳು.

ಸಂಜೆ 6-30 ಕ್ಕೆ

ವಿವಿಧ ವಿನೋದಾವಳಿ,

ನೃತ್ಯ, ನಾಟಕ, ಆರ್ಕೆಸ್ಟ್ರಾ

16-8-47 ಸಂಜೆ 6-30 ಕ್ಕೆ

ಆರ್ಕೆಸ್ಟ್ರಾ

ಸುಪ್ರಸಿದ್ಧ

ಸೋರ್ಹೆಟಾಲ್

ಟ್ರೂಪಿನ

ನೃತ್ಯ ಪ್ರದರ್ಶನಗಳು

17-8-47 ಸಂಜೆ 7-30 ಕ್ಕೆ

ಆಲ್ ಇಂಡಿಯಾ ಪ್ರಸಿದ್ಧರಾದ

ಪ್ರೊಫೆಸರ್

ಹಾಮಿದ್ ಹುಸೇನ್ ಖಾನ್

ಇವರ

ಸಾರಂಗಿ

ಮತ್ತು ಸ್ಥಳೀಕರಾದ

ರಾಮೇಶ್ವರಿ

ಮತ್ತು

ಹಾಮಿದ್

ಇವರ ಗಾಯನಗಳು

(ವಿ. ಹಾಜಪರ ಕೋರಿಕೆಯಂತೆ)

ಟಿಕೆಟ್ ಮೂಲಕ ಪ್ರವೇಶ.

ಸಮಿತಿಯ ಪರವಾಗಿ,

ಎಂ. ಸಿ. ರಾಜಮನ್ನಾರ್,

ಗೌರವ ಕಾರ್ಯದರ್ಶಿ.

● ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ●

ಶ್ರೀ

ಗಣೇಶ ಟಾಕೀಸಿನಲ್ಲಿ

15-8-47 ರಿಂದ

— ಪ್ರತಿ ದಿನ ಮೂರು ಪ್ರದರ್ಶನಗಳು —

ಖಾಂದಾನಿ

ಹಿಂದೀ ಸಾಮಾಜಿಕ ಚಿತ್ರ

—: ಮುಖ್ಯ ಪಾತ್ರಗಳು :—

ವನಮಾಲ, ಕುಮಾರ್ ಮತ್ತು ನಾಂಪ್ರೇಕರ್

Morning Shows on 15, 16, 17 and 18th at 10 45 A.M.

Because of Him

—: Featuring :—

Deanna Durbin, Franchot Tone & Charles Laughton

ರಾಜಕಮಲ್ : : ತಾ|| 8-8-47 ರಿಂದ

ಅಮೋಘ ಪ್ರಾರಂಭ ಪ್ರತಿ ದಿನ ೩ ಆಟಗಳು

★ ಮಹಾನಂದ ★

(ಕನ್ನಡದಲ್ಲಿ)

ತಾರಾಗಣ :— ಕಾಂತಾದೇವಿ, ಕೆಂಪರಾಜ್, ಸರೋಜ್ ಅವ್ವಕ್ಕ, ಕಾಶೀನಾಥ್ ಮುಂತಾದವರು

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ಆಚಾರ್ಯ ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್, ಜೈ ಪ್ರಕಾಶ್ ನಾರಾಯಣ್ ಇವರು ಮೈಸೂರಿಗೆ ಆಗಮಿಸಿದಾಗ ತೆಗೆದ ಒಂದು ಭಾಗವನ್ನೂ ಸಹ ಪ್ರದರ್ಶಿಸುತ್ತೇವೆ

ಶ್ರೀ ಹಾಲಸಿದ್ಧೇಶ್ವರ ಸಂಗೀತ

ನಾಟಕ ಮಂಡಳಿ, ಕಲ್ಲಗೇರಿ, ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦ ೩೦ ಕ್ಕೆ

— ಬ್ಲಾಕ್ ಮಾರ್ಕೆಟ್ —

ಧಾನ್ಯವಾರ ಪ್ಲಾಟಿನ

[illegible] ನಾಟಕವನ್ನು ಅಭಿನಯಿಸುವರು ಮಹಾಜನರು

[illegible]

ವ ಹಾಸ್ಯ ಪ್ರಪಂಚ ದರ್ಶನ ಚಿತ್ರಾಂಗದ ನಾಟಕಗಳನ್ನಾಡುವ ರಾತ್ರಿಯನ್ನು ಗಮನಿಸಿ

ಚಿಕ್ಕ ಚನ್ನಪ್ಪ, ಪ್ರೊಪ್ರೈಟರ್.

Edited, printed and published by A. R. Nagaraja at the Sadhvi Press, D. Subbaiah Road, Mysore

ಭರತಖಂಡವು ಮತ್ತೆ ಒಂದಾಗುವುದು

ಅಧಿಕಾರ ವರ್ಗಾವಣೆಯ ಕಾಲದ ಭವಿಷ್ಯ

ಬರೆಯುವವರು:—ಜ್ಯೋತಿರ್ವಿದ್ಯಾಭೂಷಣ ಪಂಡಿತ ವೀರನಗೌಡ ಡಿ. ಎಸ್. ಪಾಟೀಲ ಮೆಣಸಗಿ, ಭಾಗ್ಯೋದಯ ಪಂಚಾಂಗ ಕರ್ತರು, ಗದಗ್

(೧) ಕಾಂಗ್ರೆಸ್ಸಿನ ಲಗ್ನಾಧಿಪತಿಯೂ ಹಿಂದೂಸ್ಥಾನದ ರಾಜ್ಯಾಧಿಪತಿಯೂ ಆದ ಕುಜ ಮಹಾರಾಜನು ದಶ ಪುನೇಂದ್ರದಲ್ಲಿ ಅಸ್ತನಾಗಿರುತ್ತಾನೆ. ಪ್ರಯುಕ್ತ ಕಾಂಗ್ರೆಸ್ ... ಸನ್ ೧೯೪೫ ನೇ ಮೇ ತಿಂಗಳಿನಿಂದ ೧೯೫೩ ನೇ ಜೂನ್ ತಿಂಗಳವರೆಗಾಗಲಾರದು. ಇದರ ಸ್ವರೂಪವೇ ಬದಲಾಗಿಯಾಗುವದು. ಇಲ್ಲವೇ ಯುದ್ಧಾಗಿ ಮುಕ್ತಾಯವಾಗುವುದು. ಆ ಯುದ್ಧವು ಬಹು ದಿನಗಳ ವರೆಗೂ ನಡೆಯಾಗುವುದು ಮತ್ತು ಮೇಲ್ಕಂಡ ಕಾಲದಲ್ಲಿ ಅಖಂಡ ಭಾರತವಾಗುವದೆಂದಿತ.

(೨) ದ್ವಿತೀಯ ಸಪ್ತಮಾಧಿಪತಿಯು ದಲ್ಲಿದ್ದು ವ್ಯಯಸ್ಥಾನ ನೋಡುವದರಿಂದ ಎಲ್ಲಾ ಸಂಸ್ಥಾನಗಳೂ, ಭಟನಾ ಸಮು ಒಕ್ಕೂಟದಲ್ಲಿ ಸೇರುವುವು. ಆ ಹಿಂದುಸ್ಥಾನದಲ್ಲಿ ಕೊಲೆ, ಸುಲಿಗೆ, ... ಮಾರಾಮಾರಿ, ದರೋಡೆ, ಚೋರ, ವೈಷಮ್ಯ, ಶಸ್ತ್ರ ಭಯ, ನೆರೆಗಳಿಂದ ಹಾನಿ, ಪ್ರಚಂಡ ಮಾರುತ ಮತ್ತು ಪಿಶಾಚಿ ಮೊದಲಾದ ಅನರ್ಥಗಳ ಭಯ, ಅಧಿಕಾರ ವರ್ಗಕ್ಕೂ, ಲೋಕಕ್ಕೂ ಗಂಡಾಂತರ ಪ್ರಾಪ್ತಿಯಾಗುವದು.

(೩) ರಿಪು ಮತ್ತು ಪರಾಕ್ರಮಾಧಿಪತಿಯಾದ ಬುಧನು ಅಸ್ತನಾಗಿ ದಶಮದಲ್ಲಿರುವದರಿಂದಲೂ ತಾ|| ೨೦-೯-೪೭ ಕ್ಕೆ ರವಿ ಮಂಗಳರ ಯುತಿ ಯಾಗುವುದರಿಂದ ... ನೇ ಸಪ್ಟೆಂಬರ್, ಅಕ್ಟೋಬರ್, ನವಂಬರ್, ಈ ಮೂರು ತಿಂಗಳುಗಳು ಅಶುಭ ದುರ್ಯೋಗವಿರುವದರಿಂದ ಬಹು ಎಚ್ಚರಿಕೆಯಿಂದಿರಬೇಕು. ಅನಪೇಕ್ಷಿತ ಆಕಸ್ಮಿಕ ಕಾರ್ಯಗಳಿಂದ ರಾಜಕೀಯ ವಲಯಗಳಲ್ಲಿ ನಾನಾ ಮೂಲಕವಾದ ಮತ ಭೇದಗಳುಂಟಾಗುವವು ಮತ್ತು ಇದೇ ಸಮಯದಲ್ಲೇ ಗಂಡಾಂತರದಲ್ಲಿ ಬೀಳುವದ ಅತ್ಯಧಿಕಗಳು ವಿಶೇಷವಾಗುವುವು ರಾಜಮಹಾರಾಜರೂ, ಹಿಂದುಸ್ಥಾನ, ಮತ್ತು ಪಾಕಿಸ್ತಾನಗಳ ಮುಖಂಡರೂ ಅಸ್ವಸ್ಥತೆಗಳಿಂದ ಬಹು ಕಷ್ಟ ನಷ್ಟಗಳನ್ನು ಭೋಗಿಸಬಹುದು.

(೪) ಲಗ್ನ ಅಷ್ಟಮಾಧಿಪತಿಯು ದಶಮ ಕೇಂದ್ರದಲ್ಲಿ ಅಸ್ತನಾಗಿರುವುದರಿಂದಲೂ ಮತ್ತು ತಾ|| ೪-೭-೪೭ ನೇ ದಿನ ಹಿಂದೂಸ್ಥಾನದ ಸ್ವಾತಂತ್ರ್ಯದ ಬಿಲ್ಲು ಪಾರ್ಲಿಮೆಂಟಿನಲ್ಲಿ ಪಾಸಾಗಿರುವದರಿಂದಲೂ ತಾ|| ೧೮-೭-೪೭ ನೇ ಶುಕ್ರವಾರ ಸಂಜೆಯ ೪ ಘಂಟೆ ೧೦ ನಿಮಿಷಕ್ಕೆ ರಾಜಾನುಗ್ರಹ ಹೊಂದಿದ ಭಾರತವು ಕೇಂದ್ರಾಡಳಿತ ವರ್ಗದ ವಿಭಜನೆಯಾಗಿರುವದರಿಂದಲೂ ದ್ವಿಮುಖ ಕೇಂದ್ರಗಳು ಬಹುದಿನಗಳವರೆಗೆ ಬಾಳಲಾರವು. ಆಗಸ್ಟ್ ೧೫ ಕ್ಕೆ ಹಿಂದೂಸ್ಥಾನ ಮತ್ತು ಪಾಕಿಸ್ತಾನ ಭಾಗಗಳ ತಾತ್ಕಾಲಿಕ ಕೇಂದ್ರಾಡಳಿತ ವರ್ಗಗಳೆಂಬ ಹೆಸರಿನಲ್ಲಿ ಎರಡು ತುಂಡಾದ ಸರಕಾರವು ಸನ್ ೧೯೪೭ ರಿಂದ ಸನ್ ೧೯೫೩ ರೊಳಗಾಗಿ ಗುರು ಮಹಾರಾಜನು ಮಕರದಲ್ಲೂ ಶನಿ ಮಹಾರಾಜನು ಕನ್ಯಾ ರಾಶಿಯಲ್ಲಿಯೂ, ಬಂದಾಗ ಅಖಂಡ ಹಿಂದೂಸ್ಥಾನವಾಗುವುದು.

(೫) ಭಾಗ್ಯ ವ್ಯಯಾಧಿಪತಿಯು ದಶಮ ಕೇಂದ್ರದಲ್ಲಿ ಅಸ್ತನಾಗಿರುವುದರಿಂದಲೂ ಅಧಿಕ ಶ್ರಾವಣ ಶು|| ೧೪ ಉಪರಿ ಅಮಾವಾಸ್ಯೆಯಾಗುವದರಿಂದಲೂ, ಲೋಕಪಕ್ಷದ ಚಂದ್ರನು ರವಿಯೊಡನೆ ಬಲಹೀನನಾಗಿರುವುದರಿಂದಲೂ ಹಿಂದೂಸ್ಥಾನದ ಅಧಿಕಾರಕ್ಕೆ ಹಾನಿಯಾಗುತ್ತಾನೆ. ಪಾಕಿಸ್ತಾನದ ಅಧಿಕಾರಕ್ಕೆ ಹಾನಿಯಾಗುತ್ತಾನೆ ಮತ್ತು ಕ್ರಾಂತಿದೇವತಾ ಜನ್ಮರಾಶಿಯ ರಾಶಿಯ ಅಧಿಪತಿಯೂ ಹಾನಿಯಾಗುತ್ತಾನೆ. ಇವೆಲ್ಲಾ ಕಾರಣಗಳಿಂದ ಹಿಂದೂಸ್ಥಾನದ ಎಲ್ಲಾ ಸಂಸ್ಥಾನಗಳೂ, ಮತ್ತು ಪಾಕಿಸ್ತಾನವೂ, ಹಿಂದೂಸ್ಥಾನದಲ್ಲಿಯೇ ಬೆರೆತು ಅಖಂಡ ಹಿಂದೂಸ್ಥಾನವಾಗುವುದು.

(೬) ದಶಮಾಧಿಪತಿಯು ಸ್ಥಿರನಾಗಿರುವುದರಿಂದ, ರೈಲ್ವೆ, ಮೋಟಾರ್, ವಿಮಾನ, ಅಂಚೆ ಮತ್ತು ತಂತಿ ಖಾತೆಗಳೂ, ಒಕ್ಕಲತನ, ವ್ಯಾಪಾರೀ ಸಂಸ್ಥೆಗಳೂ, ಸಂಘ ಸಂಸ್ಥೆಗಳೂ, ಸಂಬಳ ಕಾರ ಸ್ಥಾನಗಳೂ, ನಾನಾ ಮೂಲಕವಾದ ಕಷ್ಟ, ನಷ್ಟಗಳನ್ನು ಹೊಂದಬಹುದು. ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪರ ಮಂತ್ರಿಮಂಡಲಗಳು ಪುನರ್ಘಟನೆಯ ಯೋಜನೆಗಳನ್ನು ಜಾರಿಗೆ ತಂದು ಧನಕೀರ್ತಿ ಸಂಪಾದಿಸುವುವು.

(೭) ಲಾಭಾಧಿಪತಿಯೂ ಮತ್ತು ಹಿಂದೂಸ್ಥಾನದ ರಾಜ್ಯಾಧಿಪತಿಯೂ ಆದ ರವಿ ಮಹಾರಾಜನು ದಶಮದಲ್ಲಿ ರಾಜಯುಕ್ತರುವುದರಿಂದ ಭಾಷಾನುಸಾರ ಪ್ರಾಂತ ರಚನೆಯ ತತ್ವವನ್ನು ಪ್ರಜಾ ಸತ್ತಾತ್ಮಕ ಸಂಸ್ಥೆಯಾದ "ಕಾಂಗ್ರೆಸ್ಸು" ಪೂರ್ಣ ಮಾಡಬಲ್ಲುದು. ನರೇಂದ್ರರು ಕೂಡಾ ಕೇಂದ್ರ ಸರ್ಕಾರವನ್ನು ಕೂಡಿಕೊಳ್ಳುವರು.

(೮) ಸಾಯನ ಪ್ರಕಾರ ತಾ|| ೬-೮-೧೯೪೭ ನೇ ದಿನ ರವಿ, ಮತ್ತು ಶನಿ ಗ್ರಹಗಳ ಯುತಿಯಾಗುವುದರಿಂದ, ರಾಜಕೀಯ ಖೈದಿಗಳ ಬಂಧ ಮುಕ್ತತೆಯಾಗುವುದು. ಹಿಂದೂಸ್ಥಾನದ ಸಂರಕ್ಷಣ ಕಾಯಿದೆಯ ಮೂಲಕ ಹಾಕಲಾದ ಕಟ್ಟಳೆಗಳನ್ನು ಸರಕಾರವು ಹಿಂತೆಗೆದುಕೊಳ್ಳುವುದು ಮತ್ತು ದೀರ್ಘಕಾಲದ ಕಾರಾಗವಾಸಿಗಳನ್ನೂ ಸಹ ಮುಕ್ತವಾಡುವುದು. ಆದರೆ ಮಿಲ್ಲುಗಳಿಗೂ, ದೊಡ್ಡ ದೊಡ್ಡ ಕಾರ್ಖಾನೆಗಳಿಗೂ ನಷ್ಟ ವರ್ತಕರಿಗೂ, ಕಷಿಗ್ರಹದ ಪರಿಣಾಮದಿಂದ, "ಪೋರ್ತುಗೀಸರ..." ಎಂಬಂತೆ ಎಲ್ಲರಿಯೂ ಸಂಪುಗಳೇ ಕಲಹ ತೋರುವುದರಿಂದ, "ಟ್ರೇಡ್ ಯೂನಿಯನ್" ಎಂಬ ಸಂಸ್ಥೆಯ ನೂತನ ಪ್ರಸಕ್ತಿ ಜಾರಿಗೆ ಬಂದು ಸಂಪು ಎಂಬ ಶಬ್ದದ ಬೇರನ್ನೇ ಕಿತ್ತೊಗೆಯುವುದು. ಪೋರ್ಚುಗೀಸ್ ಹಿಂದೂಸ್ಥಾನದ ಬಂಧ ವಿಮೋಚನೆ, ಫ್ರೆಂಚರ ಸ್ವಾತಂತ್ರ್ಯಗಳನ್ನು ಗುರು ಮಹಾರಾಜನು ಧನು, ಮಕರ ರಾಶಿಗಳಲ್ಲಿ ಸಂಚಾರ ಮಾಡುವಾಗ ಆಗಬಹುದು.

ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್, ಮೈಸೂರು.

ಷೇರುದಾರರು ನೋಟೀಸು

...ಗಳೂರು ರಸ್ತೆಯಲ್ಲಿರುವ ಮೈಸೂರಿನ ಕೃಷ್ಣರಾಜೇಂದ್ರ ಮಿಲ್ಸಿನ ಆವರಣದ ಮೂಲಕ ವಿಭಾಗದ ಪೂರ್ವ ಮತ್ತು ... ಭಾಗಗಳ ಮೇಲ್ಭಾಗಗಳನ್ನು ... ಒಟ್ಟಿಗೆ ಟೆಂಡರುಗಳನ್ನು ತಾ|| ೧೯... ರ ಮಧ್ಯಾಹ್ನ ೪ ಗಂಟೆಯ ಒಳ... ಕೊಡಬೇಕೆಂದು ಹಿಂದೆ ಪ್ರಕಟಿಸಿದ್ದು ... ನೇ ಆಗಸ್ಟ್ ೨೦ ನೇ ಬುಧವಾರ ಮಧ್ಯಾಹ್ನ ೪ ಗಂಟೆಯವರೆಗೆ ವಿಸ್ತರಿಸಲಾಗಿದೆ ಎಂದು ಈ ಮೂಲಕ ತಿಳಿಸಿರುತ್ತದೆ.

ಆರ್. ಶ್ರೀನಿವಾಸಯ್ಯಂಗಾರ್,
17 ಜನರಲ್ ಮ್ಯಾನೇಜರ್.

ಸ್ವಾತಂತ್ರ್ಯ ದಿನಾಚರಣೆಯ ನೆನಪಿಗಾಗಿ
ಹಣ್ಣಿನ ಮತ್ತು ಹೂವಿನ ಗಿಡಗಳನ್ನು ನೋಡಿರಿ
ಭೂದೇವಿ ಫಾರಂ,
ರೈಲ್ವೆ ಸ್ಟೇಷನ್ ಸರ್ಕಲ್, ಮೈಸೂರು.

RAJKAMAL
From 15-8-47 for 7 days
daily at 10-30 a. m.
The Court Dancer
(in English)
with
Sadhana Bose, Prathimadas Gupta, Prithviraj, Nayampalli.

OPTICIAN
All hospitals prescriptions compounded to satisfaction
Dr. K. Murugesh D. Opt.,
(K. M. Mudaliar)
Optician & Dentist,
Old Mysore Bank upstairs
Sayyaji Rao Road, Mysore.

Bengal Silk
Sarees in most atractive colours and in 6, 7, 8 and 9 yards
BahusarCompany,Mysore

ಚಾತುರ್ಮಾಸ್ಯ ಸಂಕಲ್ಪದ ೨೦ನೇ ಸಂವತ್ಸರದ ಶ್ರೀ ಹಯಗ್ರೀವ ಜಯಂತಿಯು ಪೂರ್ವಾಂಗವಾದ ವೇದ ಶಾಸ್ತ್ರಗಳ ವಿದ್ವತ್ಸಭೆಯು ಇಂದಿನಿಂದ ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳ ಶ್ರೀ ಮಠದಲ್ಲಿ ೨೮ ನೇ ತಾ|| ವರೆಗೆ ಪ್ರತಿ ದಿನವೂ ಜರುಗುವುದು. ಸಭೆಗೆ ಆಗಮಿಸುವ ವಿದ್ವಾಂಸರು ಮೂರು ದಿನಗಳಿಗೆ ಕಡಿಮೆಯಿಲ್ಲದೆ ಸಭೆಗೆ ಹಾಜರಾಗಬೇಕು

ವುಡ್‌ಲ್ಯಾಂಡ್ಸ್
ಇದೇ ಕಡೇ ದಿನ
ಇಂದೇ ಬಂದು ನೋಡಿರಿ
ನಾವು ಇಬ್ಬರು (ತಮಿಳು)
:- ಪಾತ್ರ :-
ಟಿ. ಆರ್. ಮಹಾಲಿಂಗಂ,
ಜಯಲಕ್ಷ್ಮಿ, ಟಿ. ಆರ್.
ರಾಮಚಂದ್ರ ಮುಂತಾದವರು.

ಗೃಹಕೃತ್ಯದ ನೋಟೀಸು

ನಂಜನಗೂಡು ಕಸಬಾ ದೇಬೂರು ಗ್ರಾಮದ ವೀರಶೈವರ ಭವತಿ ಮುದ್ದಣ್ಣನ ಕಟ್ಟರ ಹಿರೀ ಮಗ ವೆಂಕಟಪ್ಪನ ಪೆಂಡತಿ ಶಿವಮ್ಮನವರ ಪರವಾಗಿ ಎಲ್ಲರಿಗೂ ತಿಳಿಯಪಡಿಸುವುದೇನೆಂದರೆ:—

ಇತ್ತೀ ವೆಂಕಟಪ್ಪನವರು ಅವರ ತಂದೆಯ ಕಾಲಾನಂತರ ಮನೆಗೆ ಸೇರದೆ ಕುಟುಂಬದ ಯೋಗಕ್ಷೇಮವನ್ನೂ ನೋಡದೆ ತನ್ನ ಹೆಂಡತಿ, ೫ ವರ್ಷದ ಮಗಳು, ೫ ತಿಂಗಳ ಗಂಡುಮಗು ಇವರುಗಳನ್ನು ಅಲಕ್ಷ್ಯ ಮಾಡಿ ಹಾರಿ ಮೈಸೂರಿನಲ್ಲಿ ಎಲ್ಲೋ ಹೋಗಿದ್ದು ಇಸ್ಪೀಟು, ಜೂಜಾಟಗಳಲ್ಲಿ ನಿರತನಾಗಿ ಎಲ್ಲೆಲ್ಲೂ ಸಾಲ ಮಾಡುತ್ತ, ಕುಟುಂಬದ ಆಸ್ತಿಗಳನ್ನು ಖರ್ಚು ಮಾಡಲು ಯತ್ನಿಸುವ ಭಯವಿರುತ್ತೆ. ಈತನು ಹಿಂದೆ ತನ್ನ ಹೆಂಡತಿಯ ಮೇಲಿದ್ದ (ಅಗ್ಗಿ ೧೫೦೦ ರೂ) ಬೆಲೆ ಬಾಳುವ ಒಡವೆಗಳನ್ನು ಕಳೆದಿರುತ್ತಾನೆ. ಈತನಿಗೆ ಸ್ವಪಾರ್ಜಿತ ಯಾವುದೂ ಇಲ್ಲ. ಈ ಸಂದರ್ಭದಲ್ಲಿ ಈತನಿಗೆ ಸಾಲ ಕೊಡತಕ್ಕವರಿಗೆ ಆಗಲಿ, ಈತನಿಂದ ಕ್ರಯ ಪಡೆದವರಿಗೇ ಆಗಲಿ ಭವತಿ ಮುದ್ದಣ್ಣನವರಿಗೆ ಸೇರಿದ್ದ ದೇಬೂರು ಗ್ರಾಮ, ಮೇಗಳ್ಳಿ ಗ್ರಾಮಗಳಲ್ಲಿರ ತಕ್ಕ ಈತನ ಹಿಸ್ಸೆಗೆ ಬಂದಿರುವ ಜಮಾನು ವಗೈರೆ ಸ್ವತ್ತುಗಳಲ್ಲಿ ಯಾವ ಹಕ್ಕೂ, ಅಧಿಕಾರವೂ ಬರುವುದಿಲ್ಲ ಮತ್ತು ಈ ಸ್ವತ್ತುಗಳಲ್ಲಿ ಈತನ ಹೆಂಡತಿ ಮಕ್ಕಳುಗಳಿಗೆ ಇರತಕ್ಕ ಹಕ್ಕುಬಾಧ್ಯತೆಗಳನ್ನು ಯಾವುದನ್ನೂ ಸಹ ಬದ್ಧಪಡಿಸುವುದಿಲ್ಲವೆಂದು ಉಚ್ಚರಿಸಿರುತ್ತದೆ.

ಬಿ. ಎಂ. ಶಿವರಾಮಯ್ಯ,
ತಾ|| ೬-೮-೪೭ ಪ್ಲೀಡರ್

೦ ಆಗಸ್ಟ್ ೧೫ ಸವಿನೆನಪಿಗಾಗಿ ೦
ನಮ್ಮಲ್ಲಿರುವ ಎಲ್ಲಾ ತರಹ ಸಿಲ್ಕ್ ಧ್ವಜಗಳೂ, ಕಾಗದದ ಧ್ವಜಗಳೂ,
ಸ್ವಾತಂತ್ರ್ಯ ಸಂದೇಶಗಳೂ ಮುಗಿಯುತ್ತಾ ಬಂದಿವೆ ಆದ್ದರಿಂದ
೦ ಯಾರು ಯಾರು ತೆಗೆದುಕೊಂಡಿಲ್ಲವೋ ಅವರೆಲ್ಲರೂ ೦
ಒಂದು ರೂಪಾಯಿ ತೆಗೆದುಕೊಂಡು ಓಡಿ ಬನ್ನಿ ! ಬೇಗ ಬನ್ನಿ !!
ಕಾಲ ಮಿಂಚಿಹೋದರೆ ಪ್ರಯೋಜನವಿಲ್ಲ ! ತ್ವರೆಮಾಡಿರಿ !!
—: ದೊರೆಯುವ ಸ್ಥಳ :—
ಪದ್ಮಿನೀಸ್ ಜಯಾ ಸ್ಟೋರ್ಸ್,
ಜಗನ್ಮೋಹನ ಬಂಗ್ಲೆ ಎದುರು, ಮೈಸೂರು.

ರಾಷ್ಟ್ರಮುದ್ರೆ

— —

ನಮ್ಮ ರಾಷ್ಟ್ರಧ್ವಜದಂತೆಯೇ ರಾಷ್ಟ್ರ ಮುದ್ರೆಯೂ ಕೂಡಾ ಸುಂದರವಾಗಿದೆ ಸಾಮ್ರಾಟ್ ಅಶೋಕನ ಆದೇ ಸಾಂಚಿ ಸ್ತೂಪದಿಂದಲೇ ಸ್ಫೂರ್ತಿ ಪಡೆದು ಸೃಷ್ಟಿತಾಳಿದೆ. ಏಳು ಅಡಿ ಎತ್ತರವಾಗಿದ್ದ ಈ ಸಾಂಚಿ ಸ್ತೂಪದ ತುದಿಯಲ್ಲಿ ಘಂಟಾಕಾರವಾದ ಕಮಲದ ಮೇಲಿನ ಪೀಠದ ಮೇಲೆ ನಾಲ್ಕು ಸಿಂಹಗಳು ಭುಜಕ್ಕೆ ಭುಜ ಆನಿಸಿ ನಿಂತಿವೆ. ಶಾಕ್ಯ ಕುಲದ ಶಾಕ್ಯಸಿಂಹನನ್ನೇ ಇವು ಸೂಚಿಸುತ್ತವೆಯೆಂದು ಊಹಿಸಲಾಗಿದೆ. ಆದರಿಂದ ಆಡಿದ್ದಾನೆ. ಈ ನಾಲ್ಕು ಸಿಂಹಗಳನ್ನು ಕೆತ್ತಿದ ಶಿಲ್ಪಿಯು ಅವುಗಳ ಸೌಂದರ್ಯವನ್ನೂ, ಸಾಮರ್ಥ್ಯವನ್ನೂ ಸಮವಾಗಿಯೇ ತಳೆಸಿದ್ದಾನೆ.

ಈ ಸಾಂಚಿ ಸ್ತೂಪದ ಘಂಟಾಕಾರವಾದ ಕಮಲ, ಸ್ತೂಪ ಮತ್ತು ಮೂರು ಸಿಂಹಗಳು ಮಾತ್ರ ಸೇರಿ ಭಾರತದ ರಾಷ್ಟ್ರಮುದ್ರೆಯಾಗಿರಬೇಕು-ಎಂದು ಆರ್ಟ್ ಹಾಲ್ ಸಮಿತಿಯು ಸೂಚಿಸಿದೆ.

ಅಶೋಕನು ತನ್ನ ವಿಜಯದ ಕುರುಹಾಗಿ ಈ ಸ್ತಂಭಗಳನ್ನು ಕಟ್ಟಿಸಿದನು. ಅಹಿಂಸಾ ವಾದಿಯಾದ ಅವನಿಗೆ ಶಾಶ್ವತವಾದ ದಿಗ್ವಿಜಯದ ಹಂಬಲವಿರಲಿಲ್ಲ. ಆದರೆ ಧರ್ಮದ ವಿಜಯ ದ ಮಹಾಕಾಂಕ್ಷೆಯಿತ್ತು. 'ಸಂಘದ ಒಗ್ಗಟ್ಟಿನಿಂದ ಚಿರಕಾಲ ಬಾಳಲಿ' ಎಂದು ಅವನು ಈ ಸ್ತಂಭಗಳ ಮೇಲೆ ಕೊರೆಯಿಸಿದ್ದಾನೆ. ಮೌರ್ಯರ ಕಾಲ ಅಸ್ಸಾಂ ಬಿಟ್ಟು ಇಡೀ ಭಾರತವನ್ನು ಅವನ ಏಕ ಚಕ್ರಾಧಿಪತ್ಯದಲ್ಲಿ ಸೇರಿಸಿದನು. ಅವನ ಸಾಮ್ರಾಜ್ಯವು ಪಶ್ಚಿಮಕ್ಕೆ ಇರಾಣದ ಗಡಿಯವರೆಗೆ ಹಬ್ಬಿತು. ಇಂಥ ಪ್ರಭಾವಿ ಸಾಮ್ರಾಟನು ತನ್ನ ಭಾರತವು ಈಗ ಸ್ವತಂತ್ರವಾದುದನ್ನು ಕಂಡು 'ಈ ರಾಷ್ಟ್ರವು ಒಗ್ಗಟ್ಟಿನಿಂದ ಚಿರಕಾಲ ಬಾಳಲಿ ಎಂಬುದೇ ನನ್ನ ಇಷ್ಟವಾಗಿದೆ' ಎಂದು ನಮಗೆ ಹೇಳುತ್ತಿರಬಹುದಲ್ಲವೆ?

ಕಮಲವೆಂದರೆ ಸೌಂದರ್ಯ, ಅಭಿವೃದ್ಧಿಗಳ ದ್ಯೋತಕವೆಂದು ಭಾರತೀಯರ ಭಾವನೆಯಾಗಿರುವುದರಿಂದ ರಾಷ್ಟ್ರಮುದ್ರೆಯಲ್ಲಿ ಅದಕ್ಕೆ ಸ್ಥಾನ ದೊರೆತಿರುವುದೇನೂ ವಿಚಿತ್ರವಲ್ಲ ರಾಷ್ಟ್ರದ ಪುನರುಜ್ಜೀವನಕ್ಕೆ ಸರ್ವ ಸಂಪತ್ತಿಯನ್ನು ಎಸಿಯಬೇಕಾಗಿದೆ. ಹೇಳಿ ಏನು? ಭಾರತವು ದಾರಿದ್ರ್ಯ ಪಂಕದಿಂದ ಕಷ್ಟದ ಸುಂದರ ರಾಷ್ಟ್ರವಾಗಬಾರದೆಂದು ಯಾರಾದರೂ ಹೇಳಬಲ್ಲರೇ? ಹಾಲು ಹರಿವ ಜೇನುಸುರಿವ ವಿಮಲ ಭೂಮಿಯಾಗಿತ್ತು ಇದು ಎಂದು ಪರಕೀಯರು ಭಾರತವನ್ನು ಬಣ್ಣಿಸುತ್ತಿದ್ದ ಕಾಲದಿಂದ ಕಂಡ ದಿನಗಳು ಇದ್ದವು. ಆ ದಿನಗಳು ಪುನಃ ಬರಬೇಕು ಎಂದು ಬಯಸದವರಾರು? ಭಾರತೀಯರಿಂದ ತಮ್ಮ ದೀರ್ಘ ನಿದ್ರೆಯನ್ನು ತೊರೆದು ದಾರಿದ್ರ್ಯ ನಿವಾರಣೆಗೆ, ಪ್ರಗತಿ ಅಭ್ಯುದಯಗಳಿಗಾಗಿ ಹೋರಾಡಲು ಈ ಕಮಲವು ಸ್ಫೂರ್ತಿಯನ್ನು ಕೊಡುತ್ತದೆ. ನಮ್ಮ ಜೀವನದ ಮಟ್ಟ ಎತ್ತರವಾಗಬೇಕು. ನಮಗೆ ಅಷ್ಟು ಶ್ರಮವಾದುದಲ್ಲ ಬೇಕು; ಸರ್ವರಿಗೂ ಆತ್ಮಶಕ್ತಿಯಾದುದು ದೊರೆಯಲಿ-ಕಮಲದ ಸಂದೇಶವಿದಲ್ಲದೆ ಇನ್ನೇನು?

ಧೈರ್ಯ ಶೌರ್ಯ ಗಾಂಭೀರ್ಯಗಳ ಮೂರ್ತಿಯೆಂದರೆ ಸಿಂಹ. ಭುಜಕ್ಕೆ ಭುಜ ಆನಿಸಿ ನಿಂತ ಈ ಮೂರು ಸಿಂಹಗಳು ಭಾರತದ ನಾಗರಿಕರೆಲ್ಲರೂ ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯದ ಸಿಂಹ ಹೃದಯಿಗಳಾಗಿರಿ ಎಂದು ಹೇಳುತ್ತವೆ. ಹೀನ ದುರ್ಬಲ ನಾಗರಿಕರು ಸ್ವತಂತ್ರವಾಗಿ ಬಾಳಲಾರರು. ಪರಕೀಯರಸುದೀರ್ಘ ಪ್ರಭುತ್ವದಿಂದ ನಾವು ಹತವೀರ್ಯರಾಗಿರಬಹುದು ಆದರೆ ಸ್ವಾತಂತ್ರ್ಯ ದಿನದ ಉದಯದೊಂದಿಗೆ ನಮ್ಮೆಲ್ಲರ ಹೃದಯದಲ್ಲಿ ಸ್ವತಂತ್ರ ಭಾರತದ ಸಂದೇಶ ಸ್ಪಂದಿಸಲಿ; ಸ್ವತಂತ್ರ ಭಾರತ ಸಿಂಹ ಹೃದಯಿಗಳ ಅಗತ್ಯವಿದೆಯೆಂಬುದನ್ನು ಅರಿಯೋಣ, ಅಶೋಕನ ಮತ್ತು ತದನಂತರದ ಗುಪ್ತರ ಸ್ವರ್ಣಯುಗವನ್ನು ಪುನಃ ಸ್ಥಾಪಿಸಲು ಹೆಣಗೋಣ.

ಇಂಥ ಅರ್ಥಗರ್ಭಿತ ರಾಷ್ಟ್ರಮುದ್ರೆಯ ಸದಾ ನಮಗೆ ವಿಜಯಕಾರಿಯಾಗಲಿ.

Edited, printed and published by A. R. Nagarajan at the Sadhvi Press D Subbaiah Road Mysore

ಆನಂದಮಠ

ಬ. ಬಂಕಿಮಚಂದ್ರರ ಸುಪ್ರಸಿದ್ಧ ಕಾದಂಬರಿ. ಹೊಸ ಮುದ್ರಣ 'ಭಾರತವನ್ನು ಬಿಟ್ಟು ತೊಲಗಿ' 'ವಂದೇ ಮಾತರಂ'-ಎಂಬೀ ಮಹಾ ಮಂತ್ರಗಳ ಬೀಜವನ್ನು ಚಿತ್ರಿತ ಮಾಡಿದವರ ನ್ನು ಈ ಆಗಸ್ಟ್ 15ರ ಸ್ವರಾಜ್ಯ ಪ್ರಾಪ್ತಿಯ ಕಾಲದಲ್ಲಿಯೂ ತದನಂತರವೂ ಸ್ಮರಿಸುವುದು ಎಲ್ಲ ದೇಶಭಕ್ತರ ಪವಿತ್ರ ಕರ್ತವ್ಯ. ಆ ವೀರರ ಕಥೆಯನ್ನು 'ಆನಂದಮಠ'ದಲ್ಲಿ ಓದಿ ಸ್ಫೂರ್ತಿ ಪಡೆಯಿರಿ.

ಬೆಲೆ ರೂ 2-0-0 ಅಂಚೆ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳಿಗೆ ಕಮಿಷನ್ ಕೊಡಲಾಗುವುದು

ಪ್ರತಿಗಳು ದೊರೆಯುವ ಸ್ಥಳ

1) ಬಿ. ಎಂ ಎಚ್ ಬಿನ್ನಿಕೇರಪ್ಪ ಕಾರ್ಸ್ಪೊರೇಷನ್, ಎಂ ಪಿ ಎಸ್, ... ರಸ್ತೆ ... ಸ್ಟೋರ್ ... ಬೆಂಗಳೂರು

2, ... ಮೈಸೂರು, ...

● ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ●

ಶ್ರೀ

ಗಣೇಶ ಟಾಕೀಸಿನಲ್ಲಿ

15-8-47 ರಿಂದ

—ಪ್ರತಿ ದಿನ ಮೂರು ಪ್ರದರ್ಶನಗಳು—

ಖಾನದಾನಿ

ಹಿಂದೀ ಸಾಮಾಜಿಕ ಚಿತ್ರ

—: ಮುಖ್ಯ ಪಾತ್ರಗಳು :—

ನೂರ್‌ಜಹಾನ್, ಕುಮಾರ್ ಮತ್ತು ನಾಂದ್ರೇಕರ್

Morning Shows on 15, 16, 17 and 18th at 10.45 A.M.

Because of Him

—: Featuring :—

Deanna Durbin, Franchot Tone & Charles Laughton

ವಿಭೂತಿ ಪುರುಷರ ಕಳೆದ ೭೦೦ ವರುಷಗಳ ತ್ಯಾಗದ ಫಲ ಇಂದಿನ ಸ್ವತಂತ್ರ ಭಾರತ

ಇದೇ ರೀತಿಯಲ್ಲಿ ತನ್ನ ಜೀವಮಾನವನ್ನೆಲ್ಲಾ ಮಾನವನನ್ನು ಉಚ್ಚ ನೀಚ ಭಾವನೆಗಳಿಂದ ಮುಕ್ತಮಾಡಲು ಅವಿಶ್ರಾಂತವಾಗಿ ದುಡಿದ

* ಶ್ರೀ ಬಸವೇಶ್ವರ *

(ಕನ್ನಡ)

ಪರಿಮಳಾ ಪಿಕ್ಚರ್ಸ್‌ರವರ

೭ ಅಮೋಘ ಐತಿಹಾಸಿಕ ಕಲಾಕೃತಿ ೭

ರಾಜಕಮಲ್ :: ತಾ॥ 15-8-47 ರಿಂದ

ಅಮೋಘ ೨ ನೇ ವಾರ

* ಮಹಾನಂದ *

(ಕನ್ನಡದಲ್ಲಿ)

ತಾರಾಗಣ: ... ದೇವಿ, ... ಅತ್ಯುತ್ತಮ ... ನಟಿಸಿದ್ದಾರೆ

... ಭಾಗ ... ಮತ್ತು ... ಸುಂದರವಾದ ಕನ್ನಡ ... ವರ್ಣಮಯ ... ಅಗತ್ಯ ನೋಡತಕ್ಕ ಒಂದು ... ದರ್ಶನ

ಹೊಸ ಶಿಲ್ಪಿನ ಮತ್ತು ಖಾದಿಯ ರಾಷ್ಟ್ರಧ್ವಜಗಳಿಗೆ

ವರ್ಸಿಟಿ ಸ್ಟೋರ್ಸ್,

ಶ್ರೀರಂಗಪಟ್ಟಣ

K. M. TOOTH ACHE DROPS

K. M. TOOTH POWDER,

K. M. MOUTH WASH-POWDER

--:Consult:—

Dr K. Murugesh D. Opt

(K. M. Mudaliar)

Surgeon Dentist & Optician

Old Mysore Bank upstairs

Sayyaji Rao Road, Mysore

ಜೀವಿತದಲ್ಲಿ ನವಚೇತನ

ಪಂಡಿತ ಡಿ. ಗೋಪಾಲಾಚಾರ್ಲುರವರ

ಅರುಣಾ

ಗರ್ಭಾಶಯ ರೋಗ ನಿವಾರಿಣಿ

... ಹಾಕುವಂತೆ ... ಮತ್ತಿದ್ದ ತನ್ನ ಗರ್ಭಾಶಯ ಯಾತನೆಗಳನ್ನು ... ನಂತರ ... ಭಾಗ್ಯ ... ತ್ತಿದ್ದಾಳೆ

ಸಾಧ್ವಿ ಸ್ವಾತಂತ್ರ್ಯ ದಿನದ ಸಂಚಿಕೆ

ಸಾಧ್ವಿ

SADHVI Independence Day Number

ಸಂ ೬] ಗುರುವಾರ ೧೪—೮—೪೭ [ಸಂಚಿಕೆ ೨೨

ಭಾರತದ ರಾಷ್ಟ್ರಧ್ವಜ

ಅಶೋಕ ಚಕ್ರದ ಅರ್ಥಗರ್ಭಿತ ಸಂದೇಶ

ರಾಷ್ಟ್ರಮುದ್ರೆ

...ದ ರಾಷ್ಟ್ರಧ್ವಜ ಮತ್ತು ರಾಷ್ಟ್ರ... ಸ್ವರೂಪವನ್ನು ನಿರ್ಧರಿಸುವಾಗ ... ಸಮಿತಿಯು ಸಾಮ್ರಾಟ್ ಅಶೋ... ಶಾಂತಿ ಸ್ತಂಭದಿಂದ ಸ್ಫೂರ್ತಿ ಪಡೆದಿದೆ. ರಾಷ್ಟ್ರಧ್ವಜದ ಕೇಸರಿ ... ಮತ್ತು ಹಸುರು ಬಣ್ಣದ ಪಟ್ಟಿಗಳು ... ಧ್ವಜದಲ್ಲಿ ಇದ್ದಂತೆಯೇ ... ಆದರೆ ಮೇಲೆ ರಾಟೆಯ ಬದಲು ... ಪಟ್ಟಿಯ ಮೇಲೆ ಅಂದವಾಗಿ ಚಕ್ರ... ಚಕ್ರವು ಪಟ್ಟಿ ನೀಲಿ ಬಣ್ಣದಲ್ಲಿ ... ರಾಟೆಯು ಧ್ವಜದ ... ಒಂದೇ ... ಈ ಬದಲಾವಣೆಯನ್ನು ಮಾ... ದೆ

...ದಲ್ಲಿ ಚಕ್ರವಿರುವುದರಿಂದ ... ಹೊಂದಿದ ... ಇದಕ್ಕೆ ... ಈ ಚಕ್ರವೆಂದರೆ ರಾಟೆಯ ಚಕ್ರ... ... ಚಕ್ರವಾಗಬಹುದು ... ಗತಿ-ಪ್ರಗತಿಗ... ಪೂರ್ವ... ಅಶೋಕನ... ಸಂಗ್ರಾಮದ ನಂತ...

ಸ್ವತಂತ್ರ ಭಾರತಕ್ಕೆ ಜಯವಾಗಲಿ!

ಜೈ ಹಿಂದ್!

ಸ್ವಾತಂತ್ರ್ಯ ದಿನದ ಶುಭಾಶಯಗಳು



ಸಮಗ್ರ ಭಾರತದ ನೇಲ್ವಂಡ ಧ್ವಜದ ಚಿತ್ರದಲ್ಲಿ ಪೂರ್ಣ ಸ್ವರಾಜ್ಯಸಿದ್ಧಿಯು ಸುಸಂಕೇತಗಳಿಂದ ನಲಿದಾಡಲೆಂದು. ಪ್ರಾರ್ಥಿಸಿ ಸಕಲರಿಗೂ ಶುಭಾಶಯವನ್ನು ಕೋರುತ್ತೇವೆ.

"ಸಾಧ್ವಿ"

...ರ ಅಹಿಂಸಾವಾದಿಯಾಗಿ ದೇವಾನಾಂಪ್ರಿಯನೆಂಬ ಹೆಸರಿನಲ್ಲಿ ಇಡೀ ಭಾರತದಲ್ಲಿ ಶಾಂತಿ ಸ್ಥಾಪನಾರ್ಥವಾಗಿ ಕಟ್ಟಿಸಿದ ಸ್ತಂಭಗಳ ಮೇಲೆ ಕೆತ್ತಲು ಸ್ಫೂರ್ತಿಯಿಂದ ಈ ಚಕ್ರವನ್ನು ... ಚಕ್ರವೆಂದರೆ ಧರ್ಮವೆಂದು ... ಧರ್ಮದ ಸಂಕೇತ. ರಾಷ್ಟ್ರಧ್ವಜದ ಮೇಲೆ ಈ ಧರ್ಮದ ಸಂಕೇತವಿರುವುದು ಭಾರತೀಯರ ಪ್ರಾಮಾಣಿಕತೆ ... ಸಂಸ್ಕೃತಿಯ ... ಪ್ರವಾಹದ ದ್ಯೋತಕವಾಗಿದೆ.

ಚಕ್ರವೆಂದರೆ ಯಾಂತ್ರಿಕ ಮತ್ತು ... ದ್ಯೋಗಿಕ ಅಭಿವೃದ್ಧಿ ಎಂದು ಆಧುನಿಕ ಸಂಕೇತ ಇದು ಮನುಷ್ಯನು ... ಮತ್ತು ... ಗಳನ್ನು ... ಎಂಜಿನ್, ಮೋಟಾರ್, ವಿಮಾನಗಳನ್ನು ... ದ ಸಾಹಸದ ದ್ಯೋತಕವಾಗಿದೆ. ಚಕ್ರದ ಈ ಸರ್ವ ಸಂಕೇತಗಳನ್ನು ಗಮನಿಸಿದರೆ ರಾಷ್ಟ್ರಧ್ವಜದಲ್ಲಿ ಚಕ್ರವಿರುವುದು ... ಬದ್ಧಿಕ ... ದಿಲ್ಲ.

ಈ ಚಕ್ರದ ಕಡ್ಡಿಗಳು ... ದಲ್ಲಿ ... ವನ್ನು ತೋರುತ್ತವೆ. ಈ ಸೂರ್ಯನನ್ನು ಆಯುರಾರೋಗ್ಯ, ಬೆಳೆ, ಬೆಳಕು ಮತ್ತು ಸರ್ವ ಸದ್ವಸ್ತುಗಳ ಪ್ರದಾತನೆಂದು ... ಮಾನವರೆಲ್ಲರೂ ಆರಾಧಿಸಲಾಗುತ್ತದೆ ... ಜೀವನ ... ಜೀವನಕ್ಕೆ ... ಅವಶ್ಯಕತೆಯನ್ನು ... ವಿಜ್ಞಾನವೂ ... ಹೇಳಿದೆ.

ಚಕ್ರ ... ಸೂರ್ಯನೆಂದರೆ ... ಯನ್ನೆಂದೇ ಹೇಳಬೇಕು.

ಇದಕ್ಕಿಂತ ಉತ್ತಮವಾದ ಚಿಹ್ನೆಯು ಯಾವ ರಾಷ್ಟ್ರ ಧ್ವಜದಲ್ಲಿಯೂ ಇಲ್ಲವೆಂದು ಹೇಳಬಹುದು. ಭಾರತೀಯರು ಈ ಧ್ವಜದ ಮಹತ್ವವನ್ನರಿತು ಅದರ ಗೌರವಕ್ಕೆ ತಕ್ಕಂತೆ ಬಾಳಬೇಕು. ಈ ರಾಷ್ಟ್ರಧ್ವಜದಲ್ಲಿಯ ಬಣ್ಣಗಳ, ಚಕ್ರದ, ಸೂರ್ಯನ ಸಂಕೇತಗಳನ್ನು ಮನಗಂಡು ಭಾರತೀಯರು ನಮ್ಮ ರಾಷ್ಟ್ರವು ಈ ಎಲ್ಲ ಸಂಕೇತಗಳಿಗೆ ಅನ್ವರ್ಥಕವಾಗಿ ಮೆರೆಯುವಂತೆ ಪ್ರಯತ್ನಿಸಬೇಕು. ... ನಮ್ಮ ರಾಷ್ಟ್ರಧ್ವಜವನ್ನು ಇಡೀ ಜಗತ್ತು ಗೌರವಿಸುವಂತೆ ಮಾಡಬೇಕು.

ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಿದ್ಯಾರ್ಥಿಗಳಿಗೆ ಕೇಗ್ಗಡೆ

ವಿದ್ಯಾರ್ಥಿಗಳೇ ಸಹ! ಭಾರತದ ಸ್ವಾತಂತ್ರ್ಯ ಸಮರದಲ್ಲಿ ತಮ್ಮ ತನು, ಮನ, ... ಆದುದರಿಂದ ... ಬಂದಿಗಳ ಬಿಡುಗಡೆ ಮಾಡು... ಸ್ವಾತಂತ್ರ್ಯದ ಸವಿ ನೆನಪಿಗಾಗಿ ... ಗಳಲ್ಲಿ ಉತ್ತೀರ್ಣರಾಗದಿರುವ ವಿದ್ಯಾರ್ಥಿಗಳನ್ನು ... ಎಂದು ತಮ್ಮ ... ವನ್ನು ... ಸಂಯುಕ್ತ ಪ್ರಾಂತದ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ಮಾಡಿದೆ.

ಇಂಡೋನೇಷ್ಯದಲ್ಲಿ ತಾತ್ಕಾಲಿಕ ಸರ್ಕಾರ

ಇಂಡೋನೇಷ್ಯದ ವಿವಿಧ ಪ್ರಾಂತಗಳ ಪ್ರತಿನಿಧಿಗಳಿಂದ ಕೂಡಿದ ತಾತ್ಕಾಲಿಕ ಸರಕಾರವನ್ನು ರಚಿಸಿ ... ಸರಕಾರವು ... ಇಂಡೋನೇಷ್ಯದಲ್ಲಿನ ಈಗಿನ ಘಟನೆಯ ... ಸಹ ಕರೆಯಲಾಗಿದೆ.

ಪಾಕಿಸ್ತಾನದ ಸಾಲ ...

... ಪಾಕಿಸ್ತಾನಕ್ಕೆ ೨೦೦ ಕೋಟಿ ... ಪಾಕಿಸ್ತಾನ ಪ್ರದೇಶದಲ್ಲಿ ... ಕೋಟಿ ... ಬೇಕಾಗಿದೆ.

ಭಾರತ ಮಾತಾ

ರಾಷ್ಟ್ರಮುದ್ರೆ

ಸಾಧ್ವಿ

ತಾ॥ ೧೪-೮-೪೭ ಗುರುವಾರ

ಸ್ವಾತಂತ್ರ್ಯೋದಯ

ಇಂದಿನ ಮಧ್ಯರಾತ್ರಿಯಿಂದ ನಮ್ಮ ನಾಡು ಸ್ವತಂತ್ರವಾಗುತ್ತದೆ. ಎರಡು ಶತಮಾನಗಳ ಪರದಾಸ್ಯ ಶೃಂಖಲೆಗಳು ಕಡಿದು ಹೋಗುತ್ತವೆ. ಬ್ರಿಟಿಷರು ತಮ್ಮ ಅಧಿಕಾರವನ್ನು ತ್ಯಜಿಸಿ ಹೊರಡುತ್ತಾರೆ. ಭಾರತದ ವೀರ ದೇಶಭಕ್ತರು ರಾಜಸೂತ್ರಗಳನ್ನು ವಹಿಸಿಕೊಳ್ಳುತ್ತಾರೆ.

ಅರ್ಧ ಶತಮಾನಕ್ಕೆ ಮೀರಿದ ರಾಷ್ಟ್ರವೀರರ ತ್ಯಾಗಗಳು ಇಂದು ಸಫಲವಾಗುತ್ತಿವೆ. ಭಾರತಮಾತೆಯು ಬಂಧವಿಮುಕ್ತಳಾಗಿ ಸಂಪೂರ್ಣ ಸ್ವಾತಂತ್ರ್ಯ ಪದವಿಯಲ್ಲಿ ವಿರಾಜಿಸುತ್ತಾಳೆ. ದೇಶದ ಸಾರ್ವಭೌಮತ್ವದ ದ್ಯೋತಕವಾದ ರಾಷ್ಟ್ರಧ್ವಜವು ಎಲ್ಲ ಕಡೆಯಲ್ಲಿಯೂ ವೈಭವದಿಂದ ಮೆರೆಯುತ್ತಿದೆ. ಭಾರತೀಯರೂ ಸ್ವತಂತ್ರ ಪ್ರಜೆಗಳಾಗಿ ಇನ್ನು ಮುಂದೆ ತಲೆಯೆತ್ತಿ ತಿರುಗುವಂತಾಗಿರುತ್ತದೆ.

ಇಂತಹ ಪವಿತ್ರವೂ,ಮಂಗಳಮಯವೂ ಆದ ಸಮಯದಲ್ಲಿ ಮಾತೃಭೂಮಿಯ ಬಂಧವಿಮೋಚನೆಗಾಗಿ ನಾವೆಲ್ಲರೂ ಪರಮಾತ್ಮನಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸೋಣ; ನಾಡಿನಸ್ವಾತಂತ್ರ್ಯದ ಮೂಲಕ ವಿಶ್ವ ಕಲ್ಯಾಣಕ್ಕಾಗಿ ದುಡಿಯೋಣ; ಮುಂದೆ ಎಂದೆಂದಿಗೂ ನಮ್ಮ ದೇಶಮಾತೆಯು ಪರಾವಲಂಬನೆಯ ಶೃಂಖಲೆಗೆ ಸಿಲುಕದಂತೆ ಸಂಕಲ್ಪಮಾಡೋಣ!

ಜೈ ಹಿಂದ್!

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೪

ನಾಳೆ ರಾತ್ರಿ ೧೦ ಗಂಟೆಗೆ ಚಾಮುಂಡಿ ರಸ್ತೆಯಲ್ಲಿರುವ ಮಂಜನಾಥ ಸ್ಟೀಲ್ ಸಾಪ್ ಮುಂಭಾಗದಲ್ಲಿ ಶ್ರೀ ವೇಣುಗೋಪಾಲದಾಸರಿಂದ ಶ್ರೀ ಕೃಷ್ಣರಾಯಭಾರ ಹರಿಕಥೆ.

ಈ ದಿನ ರಾತ್ರಿ ೯-೩೦ ಗಂಟೆಗೆ ಸಂತೆಪೇಟೆ ಶ್ರೀ ಬಸವ್ವ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಯಕ್ಷಗಾನ, ಶ್ರೀ ಕೃಷ್ಣ ರಾಯಭಾರ, ರಾತ್ರಿ ೧೨ ಗಂಟೆಗೆ ಮಂಗಳಾರತಿ.

ನಾಳೆ ಬೆಳಗ್ಗೆ ೭ ಗಂಟೆಗೆ ವಿದ್ಯಾರ್ಥಿ ಕಾಂಗ್ರೆಸ್ಸಿನವರ ಪ್ರಭಾತ ಫೇರಿ, ೮ ಗಂಟೆಗೆ ಕಾಲೇಜು ಮೈದಾನದಲ್ಲಿ ಶ್ರೀ ಡಾ॥ ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ ಮತ್ತು ಸಭೆ. ಸಂಜೆ ೪ ಗಂಟೆಗೆ ಸಭೆ.

ಮಾರ್ಕೆಟ್ ಸುಂಕದ ಮಾಫಿ

ಮೈಸೂರು ಮಾರ್ಕೆಟ್ಟಿನ ಕಂಟ್ರಾಕ್ಟರಾದ ಶ್ರೀ ಎಂ. ಪಿ. ಶಂಭು ಲಿಂಗಪ್ಪನವರು ಸ್ವಾತಂತ್ರ್ಯ ದಿನಾಚರಣೆಯ ಸಂತೋಷಾರ್ಥವಾಗಿ ವ್ಯಾಪಾರಸ್ಥರು ಕೊಡಬೇಕಾದ ನಾಳೆಯ ದಿನದ ಸುಂಕವನ್ನು ಮಾಫಿ ಮಾಡಿರುತ್ತಾರೆ.

ಸೂಚನೆ

ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಧ್ವಜಾರೋಹಣ ಕಾಲದಲ್ಲಿ ವಿಮಾನದಿಂದ ಪುಷ್ಪವೃಷ್ಟಿ

ಮೈಸೂರು ೧೪

ನಾಳೆ ಬೆಳಗ್ಗೆ ೧೦-೧೫ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ನಡೆಯುವ ಧ್ವಜಾರೋಹಣ ಕಾಲದಲ್ಲಿ ಸೆಂಟಿನೇರಿ-ಏರ್ ಟ ವಿಮಾನದಿಂದ ಪುಷ್ಪ ವೃಷ್ಟಿಯನ್ನು ಸಲ್ಲಿಸಲು ಏರ್ಪಾಡಾಗಿರುತ್ತದೆ

ಆಕಾಶವಾಣಿಯಿಂದ ವಿಶೇಷ ಪ್ರಸಾರ

ದೆಹಲಿಯ ಮತ್ತು ಅಖಿಲ ಭಾರತ ರೇಡಿಯೋ ಕೇಂದ್ರಗಳಿಂದ ಪ್ರಸಾರವಾಗುವ ರಾಜ್ಯಾಂಗ ಸಭೆಯ ಕಾರ್ಯಕ್ರಮಗಳನ್ನು ಈ ದಿನ ರಾತ್ರಿ ೧೧-೩೦ ರಿಂದ ೧ ಗಂಟೆಯವರೆಗೂ ಮತ್ತು ನಾಳೆ ದಿನ ಪೂರ್ತಿಯಾಗಿಯೂ ಮೈಸೂರು ಆಕಾಶವಾಣಿಯಿಂದ ಪುನಃ ಪ್ರಸಾರ ಮಾಡಲಾಗುವುದು

ಸ್ವಾತಂತ್ರ್ಯ ಯಜ್ಞ ದೀಕ್ಷಿತ

ಮಹಾತ್ಮ ಗಾಂಧೀ

ಪ್ರತಿ ದಿನ ೩ ಆಟಗಳು

ಇದೇ 15-8-47 ನೇ ಶುಕ್ರವಾರದಿಂದ

ಷೋರಿ ಪಿಕ್ಚರ್ಸ್‌ರವರ

ಶಾಲಿಮಾರ್

-: ಪಾತ್ರ :-

ಚಂದ್ರಮೋಹನ್, ಅಲ್ ನಸೀರ್, ಬೇಗಂ ಪ್ಯಾರಾ,ಮನೋರಮ ಇತರರು

ಒಲಿಂಪಿಯಾ, ಮೈಸೂರು.

-:ಆಗಸ್ಟ್ ೧೫:-

ಭಾರತ ಮಾತೆಯ

ಬಂಧವಿಮೋಚನೆ!

ಭಾರತಮಾತೆಯು ಪರ ದಾಸ್ಯದಿಂದ ಮುಕ್ತಿ ಹೊಂದಿ, ಸ್ವಾತಂತ್ರ್ಯದಿಂದ ನಲಿದಾಡುವ ಸುದಿನವು ಇಂದು ಉದಯಿಸಿದೆ.

ಇಂತಹ ಶುಭಸನ್ನಿವೇಶದಲ್ಲಿ ನಮ್ಮ ಹಿತೈಷಿಗಳೆಲ್ಲರಿಗೂ ನಮ್ಮ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸುತ್ತೇವೆ.

ಕೆ. ಎಸ್. ಶ್ರೀಕಂಠಶೆಟ್ಟಿ,

ಪ್ರೊಪ್ರೈಟರ್:-

ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,

ದೊಡ್ಡಪೇಟೆ : : ಮೈಸೂರು.

ಸ್ವಾತಂತ್ರ್ಯ ದಿನಾಚರಣೆ

ನಾಳೆಯ ಕಾರ್ಯಕ್ರಮ

ಮೈಸೂರು ೧೪

ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಸಾಧ್ವೀ ಆಫೀಸಿನಲ್ಲಿ ಬೆಳಗ್ಗೆ ೮ ಗಂಟೆಗೆ ಧ್ವಜಾರೋಹಣ ಕುಮಾರಿ ಚಂದ್ರಾರವರಿಂದ ರಾಷ್ಟ್ರಗೀತೆ.

ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದಲ್ಲಿ ಅಭಿಷೇಕ, ಪೂಜೆ ಶ್ರೀ ಡಿ. ಎಲ್ ರಾಮಚಂದ್ರರಾಯರಿಂದ ಧ್ವಜಾರೋಹಣ.

೧೧ ಗಂಟೆಗೆ ದೊಡ್ಡಪೇಟೆ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಮಂಗಳಾರತಿ. ರಾತ್ರಿ ೯ ಗಂಟೆಗೆ ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ ಹರಿಕಥೆ.

ಬೆಳಗ್ಗೆ ೭ ರಿಂದ ೧೦ ರ ವರೆಗೆ ದೇವಾಂಗ ಸಂಘದಲ್ಲಿ ಬೆಳಗ್ಗೆ ೭-೩೦ ಗಂಟೆಗೆ ಗತ್ರಕೋದ್ಯೋಗ ಸಂಘ ಮತ್ತು ದೇಶಪ್ರೇಮಿ ಸಂಘಗಳಲ್ಲಿ

ಬೆಳಗ್ಗೆ ೧೦ ಗಂಟೆಗೆ ಚಾಮುಂಡಿಪುರಂ ಮನುವನದಲ್ಲಿ ವಾ॥ ವೈ ಪಾರ್ಥಸಾರಥಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ

ಕುಂಬಾರಗೇರಿ ಶ್ರೀ ರಾಮಮಂದಿರದಲ್ಲಿ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೮ ಗಂಟೆಗೆ ಧ್ವಜಾರೋಹಣ ಪೂಜೆ ಸಂಜೆ ೫ ಗಂಟೆಗೆ ಶ್ರೀ ಲಕ್ಷ್ಮೀಪತಿ ಸಹೋದರರಿಂದ ಕೀರ್ತನೆ

ಬೆಳಗ್ಗೆ ೯ ಗಂಟೆಗೆ ಕೋರ್ಟ್ ಹಿಂಭಾಗದಲ್ಲಿರುವ ಮಹಾತ್ಮಾ ಫುಟ್‌ಬಾಲ್ ಮೈದಾನದಲ್ಲಿ ರಸೆ ಗೌಡನ ಕೊಪ್ಪಲು ಬಾಲಕರ ಸಂಘದವರಿಂದ ಧ್ವಜಾರೋಹಣ. ೧೧ ಗಂಟೆಗೆ ಫುಟ್‌ಬಾಲ್ ಪಂದ್ಯ.

ವುಡ್‌ಲ್ಯಾಂಡ್ಸ್

ತಾ॥ 15-8-47 ರಿಂದ

ಆಹೋಷಫ್ ಪ್ರಾರಂಭ

ಶೇರ್ ಕುನಾಲ್

(ಹಿಂದಿ)

—:ಪಾತ್ರ:—

ಕಿಶೋರ್ ಸಾಹು, ಶೋಭನಾ ಸಮರ್ಥ

ಮುಗಾಕಜೋತಿ

ಸ್ವಾತಂತ್ರ್ಯೋತ್ಸವದ ಶುಭಾಕಾಂಕ್ಷೆಗಳು

ಸ್ವಾತಂತ್ರ್ಯ ಧ್ವಜದ ಆಶ್ರಯ ದಕ್ಷಿಣದ ಮಾನವ ಕೋಟಿಗೆ ... ಕಥೀತರ್ ... ದೇಶಾಭಿಮಾನಿಗಳೆಲ್ಲರಿಗೂ ಸಂತೋಷ ... ಮೇಳದಲ್ಲಿ ... ಶ್ರೀ ಸರ್ವೇಶ್ವರನ ... ಎಸ್. ಎಸ್. ಹಂಪಾ ಅಂಡ್ ಸನ್ಸ್, ಮೈಸೂರು ... ಮೈಸೂರು.

ಕೆಳ ದರ್ಜೆ ನೌಕರರಿಗೆ ತಾತ್ಕಾಲಿಕ ಪರಿಹಾರ

ಸ್ವಂ ಮು ಫೋ॥] ಬೆಂಗಳೂರು ೧

ರೈಲ್ವೆ ನೌಕರರೂ ಸೇರಿ ಎಲ್ಲಾ ಕೆಳದರ್ಜೆ ನೌಕರರಿಗೂ ಕೊಡಬೇಕಾದ ತಾತ್ಕಾಲಿಕ ಪರಿಹಾರವನ್ನು ಕೊಡುವುದಕ್ಕಾಗಿ ಆಗಸ್ಟ್ ೧ ನೇ ತಾ॥ ನ ಆಧಾರದ ಮೇಲೆ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಡುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಈ ತಿಂಗಳಿನಲ್ಲಿ ನಿವೃತ್ತರಾಗಲಿರುವ ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಯಾದ ಅಮಾತ್ಯ ಶಿರೋಮಣಿ ಸರ್ ಟಿ. ತಂಬೂಚೆಟ್ಟಿರ ಆ ಅಧಿಕಾರಾವಧಿಯನ್ನು ಮತ್ತೆ ಒಂದು ವರ್ಷಕಾಲ ಹೆಚ್ಚಿಸಲಾಗಿದೆಯೆಂದು ತಿಳಿದುಬಂದಿದೆ.

ಈ ಬೆಳಗ್ಗೆ ಪೌರಸಭೆಯ ವಿಶೇಷ ಅಧಿವೇಶನವು ನಡೆದು ಸಂಸ್ಥಾನದಲ್ಲೆಲ್ಲಾ ಗೋವಧೆಯನ್ನು ನಿಲ್ಲಿಸಬೇಕೆಂದೂ ಮಾಂಸದಂಗಡಿಗಳನ್ನು ಮುಚ್ಚಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯಗಳು ಮಂಜೂರಾದುವು.

ಹಾಗೆಯೇ ಭಾರತ ಯೂನಿಯನ್ ಸರ್ಕಾರವು ಗೋವಧೆಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸುವ ನಿರ್ಣಯವೂ ಆಯಿತು.

ನಾಳೆ ದಿನ ನಗರದ ಕಟುಕರ ಗೃಹಗಳಲ್ಲಿ ಗೋ ವಧೆಯನ್ನು ತಪ್ಪಿಸಬೇಕೆಂದೂ ಸಹ ನಿರ್ಣಯವಾಯಿತು.

ಸಿಮೆಂಟಿನ ಅಭಾವದ ಪ್ರಯುಕ್ತ ನಾಗರೀಕ ಉಪಯೋಗಕ್ಕೆ ಇನ್ನು ಮುಂದೆ ಸಿಮೆಂಟ್ ಒದಗಿಸುವುದಿಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ.

[illegible]

ಮೈಸೂರು ಪೌರಸಭೆ

ಸ್ವಾತಂತ್ರ್ಯ ದಿನಾಚರಣೆ

15-8-47

ಕಾರ್ಯಕ್ರಮ

8 ಘಂಟೆ — ಎಲ್ಲಾ ಪ್ರಾಥಮಿಕ ಮತ್ತು ಶಿಶು ವಿಹಾರಗಳ ಮಕ್ಕಳುಗಳಿಗೆ ಆಯಾಯ ಶಾಲೆಗಳಲ್ಲಿ ಸಿಹಿ ತಿಂಡಿ ಹಂಚುವುದು.

ಆಯಾ ಶಾಲೆಗಳ ಮಕ್ಕಳುಗಳು ಆ ಶಾಲೆಕ್ಕೆ ಸರಿಯಾಗಿ ಅವರವರ ಶಾಲೆಗಳ ಗುರುತಿಯಾದ ಬಟ್ಟೆಗಳನ್ನು ಹಾಕಿಕೊಂಡು ಹಾಜರಾಗಿ ದೇವತಾ ಪ್ರಾರ್ಥನೆ ಕಾರ್ಯಕ್ರಮಗಳು ನಡೆದ ನಂತರ ಅವರವರ ಸ್ಕೂಲುಗಳಿಂದ ಮೆರವಣಿಗೆ ಹೊರಟು ಟೌನ್ ಹಾಲ್ ಮೈದಾನದ ಕವರಣದಲ್ಲಿ ಮಕ್ಕಳಿಗೆ ಗೊತ್ತಾಗಿರುವ ಸ್ಥಳಗಳಲ್ಲಿ ಕುಳಿತುಕೊಳ್ಳುವುದು.

9-45 — ಪುರಸಭೆಯ ಅಧ್ಯಕ್ಷರು ಮತ್ತು ಸದಸ್ಯರ ಮೆರವಣಿಗೆ ಮುನಿಸಿಪಲ್ ಆಫೀಸಿನಿಂದ ಹೊರಟು ಹೊಸ ಸ್ಟ್ಯಾಚ್ಯು ಸ್ಕ್ವೇರ್ [New Statue Square] ಮುಖ್ಯ ಮಾರ್ಗವಾಗಿ ಗಾಂಧಿ ಚೌಕವನ್ನು ಸೇರಿ ಕ್ಲಾಕ್ ಟವರ್ ಎದುರಿನ ಬಾಗಿಲಿನಿಂದ ಟೌನ್‌ಹಾಲ್ ಆವರಣಕ್ಕೆ ಪ್ರವೇಶ

10-15 — ಇಂಡಿಯನ್ ಯೂನಿಯನ್ ಮತ್ತು ಮೈಸೂರು ಧ್ವಜಾರೋಹಣ.

3-30 — ಪುರಸಭೆಯ ಅಧಿವೇಶನ ಮತ್ತು ಮಹಾತ್ಮಾ ಗಾಂಧಿ ಮತ್ತು ಪಂಡಿತ ನೆಹರೂರವರ ಭಾವಚಿತ್ರ ಅನಾವರಣ,

ಫೋ: ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೧೬-೮-೪೭ [ಸಂಚಿಕೆ ೨೩

ದೇಶದಾದ್ಯಂತವೂ ಸ್ವಾತಂತ್ರ್ಯದಿನಾಚರಣೆ

ರಾಜಧಾನಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ

ಎಲ್ಲೆಲ್ಲೂ ಅಪೂರ್ವವಾದ ಆನಂದೋತ್ಸಾಹ

ಮೈಸೂರು ೧೬

ಮೈಸೂರು ನಗರದಲ್ಲಿ ನಿನ್ನೆ ಸ್ವಾತಂತ್ರ್ಯ ದಿನಾಚರಣೆಯು ಸಕಲರಿಂದಲೂ ಅತ್ಯಂತವಾದ ಆನಂದೋತ್ಸಾಹಗಳಿಂದ ಆಚರಿಸಲ್ಪಟ್ಟಿತು. ನಗರವೆಲ್ಲವೂ ದೊಡ್ಡ ಹಬ್ಬದ ದಿನದಂತೆ ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟಿದ್ದಿತು. ಸಾವಿರಾರು ಮನೆಗಳ ಮೇಲೂ, ಅಂಗಡಿಗಳ ಮೇಲೂ ಸಾರ್ವಜನಿಕ ಕಟ್ಟಡಗಳ ಮೇಲೂ ರಾಷ್ಟ್ರ ಧ್ವಜವು ನೇತ್ರಾನಂದಕರವಾಗಿ ಹಂಗೊಳಿಸು[illegible]ತ್ತಿದ್ದಿತು. ಎಲ್ಲಾ ಮೋಟಾರುಗಳೂ, ಲಾರಿಗಳೂ, ಬಸ್ಸುಗಳೂ, ಸೈಕಲ್ಲುಗಳೂ ಇತರ ವಾಹನಗಳೂ, ಧ್ವಜದೊಡನೆ ಸಂಚರಿಸುತ್ತಿದ್ದುವು. ಟಾಂಗಾ ಗಾಡಿಗಳ ಕುದುರೆ ಮೇಲೆಯೂ ಸಹ ಈ ಧ್ವಜವು ಮೆರುಗುತ್ತಿದ್ದಿತು. ನಿನ್ನೆ ನಗರದಿಂದ ಹೊರಟ ರೈಲುಗಳ ಎಂಜನ್ನುಗಳಿಗೂ ಸಹ ರಾಷ್ಟ್ರಧ್ವಜವನ್ನು ಕಟ್ಟಿ ಶೃಂಗರಿಸಲಾಗಿತ್ತು. ದೇವಸ್ಥಾನ, ಮಸೀದಿ, ಚರ್ಚು, ಮಂದಿರ, ಮಠ ಮುಂತಾದ ಇತರ ಸಂಸ್ಥೆಗಳಲ್ಲಿ ವಿಶೇಷವಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದಿತು. ಅನೇಕ ಸಂಘಗಳವರು ಭಾರತ ಮಾತೆ ಮತ್ತು ಮಹಾತ್ಮ ಗಾಂಧಿಯವರ ಭಾವಚಿತ್ರಗಳನ್ನೂ, ವಿಗ್ರಹಗಳನ್ನೂ ದಿವ್ಯವಾಗಿ ಶೃಂಗರಿಸಿ ರಥಗಳಲ್ಲಿ ಮೆರವಣಿಗೆ ಮಾಡಿದರು. ಪೌರಸಭೆಯವರು ಪ್ರಾಥಮಿಕ ಶಾಲಾ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಿದರು. ನೂರಾರು ಕಡೆಗಳ[illegible] ಮಹಾಜನರಿಗೆ ಸಿಹಿತಿಂಡಿ, ಸಕ್ಕರೆ ಮತ್ತು ತಾಂಬೂಲಗಳನ್ನು ವಿನಿಯೋಗಿಸಲಾಯಿತು. ಹಲವು ಕಡೆಗಳಲ್ಲಿ ಅನ್ನದಾನ ಸಹ ಜರುಗಿತು. ನೂರಡಿ ರಸ್ತೆಯಲ್ಲಿರುವ [illegible] ಗಂಗಯ್ಯನವರ ವಿದ್ಯಾಲಯದಲ್ಲಿ ಧ್ವಜಾರೋಹಣವನ್ನು ನಡೆಸಿ ನೂರಾರು ಜನ ಬಡವರಿಗೆ ಅನ್ನದಾನ ಮಾಡಲ್ಪಟ್ಟಿತು. ಭಜನೆ, ಪ್ರಾರ್ಥನೆ, ಕಥೆ ಮತ್ತು ಪುರಾಣ ಶ್ರವಣಗಳು ಅ[illegible]ತವಾಗಿ ಜರುಗಿರುವುವು. ನಗರವೆಲ್ಲಾ ವಿದ್ಯುದ್ದೀಪದಿಂದ ಅಲಂಕೃತವಾಗಿ[illegible]ನ ಮನೋಹರ ವಾಗಿದ್ದಿತು. ಪ್ರತಿ[illegible] ತಮ್ಮ ಉಡುಪಿನ ಮೇಲೆ ರಾ[illegible]ಗಳನ್ನು ಧರಿಸಿ ಸಂಚರಿಸುತ್ತಿದ್ದರು.

[illegible] ಚೆನ್ನಯ್ಯನವರ ವಿದ್ಯಾಲಯದಲ್ಲಿ [illegible] ಸಂಗೀತ ರತ್ನ [illegible]ಯ್ಯನವರ ಸೋಲೋ ಪಿಟೀಲು [illegible] ಪೆಟ್ ಟಿ ನಾಗಣ್ಣನವರೊಡನೆ ಸುಶ್ರಾವ್ಯವಾಗಿ ಜರುಗಿ[illegible]

[illegible]ಟಲ್ ಮಾಲಿಕರು ತಮ್ಮ ಕೆಲಸ[illegible] ನಿನ್ನೆ ಮಧ್ಯಾಹ್ನ ರಜಾ ಕೊಟ್ಟಿದ್ದ[illegible]

[illegible]ಧಿಕಾರ ಸ್ವೀಕಾರ

[illegible] ಗೊತ್ತಾಗಿದ್ದ ಕಾರ್ಯಕ್ರಮ[illegible]ರತ ರಾಜ್ಯಾಂಗಸಭೆಯು ಮೊನ್ನೆ ರಾತ್ರಿಗೆ ದೆಹಲಿಯಲ್ಲಿ ಸೇರಿ ಭಾರತ[illegible]ದ ಸೂತ್ರವನ್ನು ವಹಿಸಿಕೊಂಡಿ[illegible] ನೆಹರೂರವರು ಭಾರತದ ಪ್ರ[illegible]ನಾಯಕನಾಗಿ ರಾಜ್ಯಸೂತ್ರಗಳನ್ನು [illegible]ದರು. ಲಾರ್ಡ್ ಮೌಂಟ್ ಬ್ಯಾಟನ್‌ರವರು ಗವರ್ನರ್ ಜನರಲ್ಲನ್ನಾಗಿ ನೇಮಿಸಲಾಯಿತು.

ಬೆಂಗಳೂರಿನಲ್ಲಿ ಸ್ವಾತಂತ್ರ್ಯೋತ್ಸವ

ಅಪೂರ್ವ ವೈಭವದ ಸಮಾರಂಭಗಳು

ಸ್ವಂ ಸ: ಫೋ:] ಬೆಂಗಳೂರು ೧೫

ಅಭೂತಪೂರ್ವವಾದ ಉತ್ಸಾಹ ಮತ್ತು ವೈಭವಗಳಿಂದ ನಿನ್ನೆ ಇಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನೆರವೇರಿಸಲ್ಪಟ್ಟಿತು. ಎಲ್ಲೆಲ್ಲೂ ರಾಷ್ಟ್ರ ಧ್ವಜಗಳು ಹಂಗೊಳಿಸುತ್ತಿದ್ದುವು. ವಕೀಲರ ಸಂಘದಲ್ಲಿ ಶ್ರೀ ಕೆ. ಟಿ ಭಾಷ್ಯಂರವರು ರಾಷ್ಟ್ರ ಧ್ವಜವನ್ನು ಹಾರಿಸಿದರು. ಪತ್ರಿಕೋದ್ಯೋಗಿಗಳ ಸಂಘದಲ್ಲಿ ಶ್ರೀ ರಾಮಕೋಟೀಶ್ವರ ರಾಯರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಎಲ್ಲಾ ಹೋಟಲಿನ ಮಾಲಿಕರು ಕೆಲಸಗಾರರಿಗೆ ರಜಾ ಕೊಟ್ಟಿದ್ದರು. ಪಟ್ಟಣದ ಅಂಗಡಿಗಳನ್ನೆಲ್ಲಾ ಮುಚ್ಚಲಾಗಿದ್ದಿತು. ೨೫,೦೦೦ ಶಾಲಾ ಮಕ್ಕಳಿಗೆ ಸಿಹಿ ತಿಂಡಿಯನ್ನು ಪೌರಸಭೆಯವರು ಹಂಚಿದರು. ಸರ್ಕಾರೀ ಕಟ್ಟಡಗಳ ಮೇಲೆ ಮೈಸೂರು ಧ್ವಜವನ್ನು ಹಾರಿಸಲಾಗಿದ್ದಿತು. ಕಾಂಗ್ರೆಸ್ಸಿನವರು ಏರ್ಪಡಿಸಿದ್ದ ಭಾರತ ಮಾತೆಯ ಮೆರವಣಿಗೆಯು ಮಹಾ ವೈಭವದಿಂದ ಜರುಗಿತು. ಎಲ್ಲೆಲ್ಲೂ ಜನರ ಸ್ತೋಮವು ಸಮುದ್ರದೋಪಾದಿಯಲ್ಲಿ ರಾಜಿಸುತ್ತಿತ್ತು. ಶ್ರೀ ಬಿ ಕೆ ಗರುಡಾಚಾರ್ಯರ ಅಧ್ಯಕ್ಷತೆಯಲ್ಲಿ ಸಂಜೆ ಭಾರಿ ಬಹಿರಂಗ ಸಭೆ ನಡೆದು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು. ನಾಗಪುರದಲ್ಲಿ ಹಿಂದೆ ನಡೆದ ಧ್ವಜ ಸತ್ಯಾಗ್ರಹಕ್ಕೆ ಮೈಸೂರಿನಿಂದ ಹೋಗಿ ಬಂದ ಶ್ರೀ ಕೆ ಜೀವಣ್ಣರಾವ್ ಮತ್ತು ಇತರ ೨೦ ಜನರಿಗೆ ರಾಷ್ಟ್ರ ಧ್ವಜಗಳನ್ನು ಬಹುಮಾನವಾಗಿ ಕೊಡಲಾಯಿತು.

ನಿನ್ನೆ ಬೆಳಗ್ಗೆ ಪೌರಸಭೆಯ ಮುಂದೆ ಭಾರಿ ಸಮಾರಂಭವು ನಡೆದು ಅಧ್ಯಕ್ಷರಾದ ಶ್ರೀ ಎ. ಜೆ ವಕೀಲರು ಮೈಸೂರು ಮತ್ತು ರಾಷ್ಟ್ರ ಧ್ವಜಗಳನ್ನು ಹಾರಿಸಿದರು. ದಿವಾನರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಎರಡು ಧ್ವಜಗಳ ಮೇಲೆಯೂ ಪುಷ್ಪಗಳನ್ನು ಹಾಕಿ ತಮ್ಮ ಮನ್ನಣೆಯನ್ನು ಸೂಚಿಸಿದರು. ದಿವಾನರು ಭಾಷಣ ಮಾಡಿ ದೇಶದ ಸ್ವಾತಂತ್ರ್ಯವನ್ನು ಗಳಿಸಿದವರೆಲ್ಲರಿಗೂ ಕೃತಜ್ಞತೆಯನ್ನು ಸೂಚಿಸಿದರು. ಸ್ವಾತಂತ್ರ್ಯವು ಲಭಿಸಿದುದರಿಂದ ಸಕಲ ರಾಷ್ಟ್ರಗಳೊಡನೆಯೂ ಸಮಾನವಾದ ಸ್ಥಾನ ಮಾನಗಳು ದೊರೆತಿರುವುದಲ್ಲದೆ ಭಾರತೀಯರು ಪ[illegible]ಮ್ಮೆ ಪಡಬಹುದೆಂಬುದಾಗಿ ಹೇಳಿದರು.

ಧ್ವಜಾರೋಹಣ ಸಮಾರಂಭ

ನಗರದಲ್ಲೆಲ್ಲಾ ಸಂಭ್ರಮಗಳು

ಮೈಸೂರು ೧೬

ನಿನ್ನೆ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಧ್ವಜಾರೋಹಣ ಸಮಾರಂಭವು ನೂರಾರು ಕಡೆ ಜರುಗಿತು. ಸುಬ್ಬರಾಯನ ಕೆರೆ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿದ್ದ ಸಮಾರಂಭದಲ್ಲಿ ಶ್ರೀ ಎಸ್ ಚೆನ್ನಯ್ಯನವರು ರಾಷ್ಟ್ರ ಧ್ವಜಾರೋಹಣವನ್ನು ಮಾಡಿದರು. ನೂತನ ರಾಷ್ಟ್ರ ಧ್ವಜದ ಅರ್ಥವನ್ನು ಅವರು ವಿವರಿಸಿ ಆ ವಿಷಯ ಎಲ್ಲರಿಂದಲೂ ನಾಡನ್ನು[illegible] ಆಚರಿಸ[illegible]ಕೆಂದು ತಿಳಿಸಿದರು.

ವಕೀಲರ ಸಂಘದಲ್ಲಿ ಶ್ರೀ ಎಂ ಲಕ್ಷ್ಮೀನಾರಾಯಣರಾಜರೂ, ಜಿಲ್ಲಾ ಬೋರ್ಡ್ ಭವನದಲ್ಲಿ ಅಧ್ಯಕ್ಷರಾದ ಶ್ರೀ ಹೆಚ್ ಎಂ. ಚೆನ್ನಬಸಪ್ಪನವರೂ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಿದರು. ವನಿತಾ ಸದನದಲ್ಲಿ ಶ್ರೀ ಅಗರಂ ರಂಗಯ್ಯನವರು ರಾಷ್ಟ್ರಧ್ವಜವನ್ನೂ, ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರು ಮೈಸೂರು ಧ್ವಜವನ್ನೂ ಹಾರಿಸಿದರು. ಥಿಯಸಾಫಿಕಲ್ ಸೊಸೈಟಿ ಮಂದಿರದಲ್ಲಿ ಶ್ರೀ ಯು. ಎಲ್ ರಾಮಚಂದ್ರ[illegible]

ಈ ಸಮಾರಂಭದ ಸಂತೋಷವು ಕೇವಲ ಒಂದು ದಿವಸ ಮಾತ್ರ ಇರುವುದಾದರೂ ಇದರ ಜವಾಬ್ದಾರಿಯು ಮಾತ್ರ ಮಹತ್ತರವಾಗಿರುವುದೆಂದು ಅವರು ನುಡಿದರು. ಭಾರತವು ಈಗ ಎರಡು ಭಾಗಗಳಾಗಿದ್ದರೂ ಸಹ ಮುಂದೆ ಅದು ಯಾವಾಗಲೂ ಒಂದೇ ಆಗಿರುವುದೆಂದು ತಿಳಿಸಿದರು. ಈ ಸ್ವಾತಂತ್ರ್ಯ ಸಾಧನೆಗೆ ಬ್ರಿಟಿಷರೂ ಸಹ ಸಹಕರಿಸಿರುವರೆಂದು ಹೇಳಿದರು. ಈಗ ದೊರೆತಿರುವ ಸ್ವಾತಂತ್ರ್ಯವು ಮುಂದೆ ಎಂದಿಗೂ ನಾಶವಾಗದಿರಲೆಂದು ಹಾರೈಸಿದರು.

ಬೆಂಗಳೂರು ದಂಡಿನ ಪುರಸಭಾ ಭವನದಲ್ಲಿ ಅಲ್ಲಿನ [illegible] ಅಧ್ಯಕ್ಷರಾದ ಶ್ರೀ ಹೆಚ್ ಎಸ್. ನರಸಯ್ಯನವರು ಎರಡು ಧ್ವಜಗಳನ್ನೂ ಹಾರಿಸಿದರು. ಇದೇ ಸಭೆಯಲ್ಲಿ ದಿವಾನರಿಗೆ ಬಿನ್ನವತ್ತಳೆಯೊಂದನ್ನು ಅರ್ಪಿಸಲಾಯಿತು. [illegible] ಸ್ಟಿಮಂದೂ ಸಹ ಸಮಾರಂಭವನ್ನು ವೈಭವದಿಂದ ನೆರವೇರಿಸಿದರು.

ದಿವಾನರು ಈ ದಿನ ದೆಹಲಿಗೆ

ಈ ದಿನ ಬೆಳಗ್ಗೆ ದಿವಾನರು ರಾಜಧಾನಿಗೆ ತೆರಳಿದರು. ಈ ದಿನ ಸಂಜೆ ಅವರು [illegible]ವರು ಅಲ್ಲಿಂದ ರಾತ್ರಿ ರೈಲಿನಲ್ಲಿ ದೆಹಲಿಗೆ [illegible] ಪ್ರಯಾಣ ಬೆಳೆಸುವರು.

ಜಗತ್ತಿನಲ್ಲೆಲ್ಲಾ ಸ್ವಾತಂತ್ರ್ಯ ದಿನಾಚರಣೆ

ಭಾರತದ ನಾನಾ ಭಾಗಗಳಲ್ಲಿಯೂ, ಮಿಕ ಇಂಗ್ಲೆಂಡ್ ಆಫ್ರಿಕ ಮೊದಲಾದ [illegible]ರತೀಯರು ವಾಸಿಸುತ್ತಿರುವ ಕಡೆಗಳಲ್ಲಿಯೂ ನಿನ್ನೆ ದಿನ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಗಳು ವಿಶೇಷ ವೈಭವದಿಂದ ನೆರವೇರಿ ಭಾರತ ರಾಷ್ಟ್ರಧ್ವಜ ಹಾರಿಸಲ್ಪಟ್ಟಿತೆಂದು ವರದಿಯಾಗಿದೆ.

[illegible] ದೇಶೀಯ ವಿದ್ಯಾಶಾಲೆಯಲ್ಲಿ ಶ್ರೀ ಎಂ ಎಲ್ [illegible]ರವರೂ ಈ ಸಮಾರಂಭವನ್ನು ನೆರವೇರಿಸಿದರು. ವಿದ್ಯಾರ್ಥಿ ಕಾಂಗ್ರೆಸ್, ಕನ್ನಡ ಸೇವಾ ಸಂಘ, ವಿಠಲಂ[illegible] ಕೇಸಣ್ಣ ವಿದ್ಯಾರ್ಥಿ ನಿಲಯ, ಕೃಷ್ಣ[illegible] ಜೇಂದ್ರ ಗ್ರಂಥ, ಕಟ್ಟೆಗೆಗೌಡರ ಯುವ[illegible] ಸಂಘ, ಮೈಸೂರು ಆಯುರ್ವೇದಿಕ್ ಫಾರ್ಮಸಿ, ಗೌರ್ನಮೆಂಟ್ ಮುದ್ರಣಾಲಯದ ಸಂಘದ ಮಿತ್ರಮಂಡಲಿ ಮತ್ತು [illegible] ಕೋ ಆಪರೇಟಿವ್ ಸೊಸೈಟಿ, [illegible] ಸಂಘ, ರಾಜ ಸೇವಾಸಕ್ತ ಸಂಘ, ಪತ್ರಿಕೋದ್ಯೋಗಿಗಳ ಸಂಘ ಮುಂತಾದ ಅನೇಕ ಕಡೆಗಳಲ್ಲಿ ಉತ್ಸವವನ್ನು ವೈಭವದಿಂದ ಆಚರಿಸಲಾಯಿತು.

[illegible] ಆಫೀಸಿನ ನೌಕರರು ತಮ್ಮ ಕಚೇರಿಯ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಿ [illegible] ಇತರ ವಿನೋದಾವಳಿಗಳ [illegible] ವೈಭವದಿಂದ ಸಮಾರಂಭವನ್ನು ನಡೆಸಿದರು. ತಮ್ಮ ಕಛೇರಿಯ [illegible] ಬೆಳ್ಳಿಯ [illegible] ಮಕ್ಕಳಿಗೆ [illegible] ಹಂಚಿದರು.

[illegible] ೬.೩೦ ಗಂಟೆಗೆ ಕಾಂಗ್ರೆಸ್ ಕಛೇರಿ[illegible] ಭಾರತ ಮಾತೆಯ ಮತ್ತು ರಾ[illegible] ಮೆರವಣಿಗೆಯು ದಿವ್ಯವಾಗಿ ಅಲಂಕರಿಸಿದ್ದ ರಥದಲ್ಲಿ ಹೊರಟು [illegible] ಇರ್ವಿನ್ ರಸ್ತೆ ಮುಂತಾದ ಪೇಟೆಗಳ ಮಾರ್ಗವಾಗಿ [illegible] ಸಾವಿರಾರು ಜನ [illegible] ಮಂಗಳ ವಾದ್ಯಗಳು [illegible] ಉದ್ಘೋಷ [illegible] ಆಕರ್ಷಣೀ[illegible]

[illegible] ಪ್ರಚಂಡ ಬಹಿರಂಗ ಸಭೆಯು ಜರುಗಿತು. ರಾಷ್ಟ್ರ [illegible] ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಪಠಿಸಿ [illegible] ಎಲ್ಲರೂ ಎದ್ದು ನಿಂತು ಅದನ್ನು [illegible]. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗಮಾಡಿದ ವೀರರನ್ನು [illegible] ಸಲ್ಲಿಸುವ ನಿರ್ಣಯವೂ [illegible]ಸಲ್ಪಟ್ಟಿತು.

ಶ್ರೀ ಪಿ [illegible]ನವರು ಮೊದಲು [illegible] ಭಾರತಕ್ಕೆ ಸ್ವಾತಂತ್ರ್ಯವು ಬಂ[illegible] ಎಂಬುದನ್ನು [illegible] ಶ್ರೀ [illegible], ಶ್ರೀಮತಿ [illegible] ಶ್ರೀ [illegible] ಎಸ್. [illegible] ಮಾತನಾಡಿದರು. [illegible] ಸಭೆಯನ್ನು [illegible]

ವೋಲಗಕೆ ಬಾ ತಾಯಿ !

(ಭೂಮಿ ಪಟ್ಟದ)

ಎಲೆ ಎಳಿಲೆ ತಾಯಿ ಭಾರತಿ ।
ಕಾಳರಾತ್ರಿಯ ಕಠಿಣ ದಾಸ್ಯದ ।
ನೀಳನಿದ್ರೆಯ ಕಳೆದು ಎಳಿಲೆ ದೇವಿ
ಜಾಮಾತ್ಯಳೇ ॥
ಅಂದವೆಸರ ಶತಕವೆಂದರ ।
ಖಳರ ಕಾಲದ ' ಶಾಹಿ ' ಕಳಕವು ।
ಕರಳಿ ಕುಸಿಯುತ ಕಳಚಿ ಬಿದ್ದಿತುದೇ
ಗುಣಾತ್ಮಾಲ್ಯೇ ॥೧॥
ಅಭಯ, ಭಾರತ ! ಭಲರೆ ! ಭಾಪುರೆ !! ।
ಅಚಲ ಮಾಸಿನ ಸಬಲ ಶಾಂತಿಯು ।
ಸುಬಲ ಮಾರ್ಗದೆ ಮಹಿತ ವೈರಿಯು
ಕದೆದು ಗಲಿದೆಯೂ ॥
ಸಬಲ ಸೆರೆಕ್ಕಿನ ' ಶಾಹಿ ' ದರ್ಪದಿ ।
ಕಬಳಮುಂಗುತಲುಪ್ಪಿ ಕೊಬ್ಬಿದ ।
ನಿಬಿಡ ದಬ್ಬಾಳಿಕೆಯ ಕೊತ್ತಳದ ಕಡೆ
ಮುರಿದೊತ್ತಿ ॥
ಕಳೆದು ಬಿಕುಡಿಲೆ ವೇದ ಮಾತೆಯೆ ।
ಖಳರ ವೈರಿಗೆಯರ್ಥನಷ್ಟದ ।
ಮಲಿನ ವಸನವ ನೀಗಿ ಶ್ವೇತಾಂಬರವ
ನೀ ಧರಿಸಿ ॥
ಚೆಲುವೆ ಭಾರತ ಪುಣ್ಯ ಭೂಮಿಯೆ ।
ಇಳೆಯ ಮಂಗಳ ಸಾ? ಲೋಕವೆ !
ಕಾಲರಾಯನೆ ಮಣಿವನೊಡ್ಡೋಲಗಕೆ
ಬಾ ತಾಯಿ ॥
ನೋಡು ಭಾರತ ತಾಯ ಒಡ್ಡಿದ
ನಾಡ ಕವೆಯುಂಟನಲಿ ಮಿಂಚುವ ।
ನಾಡ ಬಾಳಿನ ಸತ್ಯ ಧರ್ಮ ಸ್ವತಂತ್ರ
ಸೂರ್ಯನ ॥
ಬೆಳಗನಿಮ್ಮಡಿಗೊಳಿಸಿ ತೋರಿಸಿ ।
ಹಾಡಿ ಹರಸಲು ವಿಪ್ರ ಸುರನರ ।
ನಾದ ವೃಂದವು ವೇದ ಮಂತ್ರದ ದಿವ್ಯ
ಘೋಷದಲಿ ॥
ಮಿಂದು ಮಡಿಯಲಿ ನಿಖಿಲ ವೈಭವ ।
ದಿಂದಲೆಸೆಯುವ ಗಾಂಧಿ ಜನಪದ ॥
ದಿಂದು ನಿರ್ಮಲ ಮಾತೃ ಪ್ರೇಮದ
ಭ್ರಾತೃ ಧರ್ಮದಲಿ ॥
ಬಂದು ವೇದಿಕೆ ಸುತ್ತ ಮಾಡಿಯ ॥
ಮಂದಿಜಾನಂದದಲಿ ನೆರೆದಿಹ ।
ರಿಂದು ದೇವನ ದಿವ್ಯ ಸಂದರುಶನಕೆ ।
ಕಾಯುವ್ವೊಲು ॥
ಬೇಗ ಬಾರಲಿ ! ಶಾಂತಿ ಬಿಡಾರದೆ ।
ಬೆಳಗು ಹರಿದಿದೆ ನಾಡಕೀತ್ರಲು ।
ತೊಳಗಿ ನಲಿಯುವ ಧರ್ಮ ಚಕ್ರದ
ಲೋಕ ಬಾವುಟದ ॥
ಏಳು ಜಾರಿಸು ! ನೀಲ ಬಾನಲಿ ।
ಬಾಳ ಬೆಳಕಿನ ಭರತಖಂಡದ ।
ನೀಳಯ ನಿಧಿಯನೆ ಲಲಿತ ವೃನಮಾ
ಚಲದ ಶಿಖರದಲಿ ॥
ಜಯಿ ಎಣಿಸನವೇಕೆ ? ಜನ ಸಮು ।
ದಾಯ ಕಾದಿರೆ ಸಂದ ಸುದಿನದಿ ।
ಜಯತು ಜಯ ಚಾರಿತ್ರ ದೆಹಲಿಯ
ರಾಜಧಾನಿಯಲಿ ॥
ರಾಯ ಕಟಕಕೆ ಭೀಷ್ಮನಂತರೆ ।
ಮಾಯ ವಾದದ-ನಸದು ತೋರಿಸೆ ?
ಜಯ ಮಾಣಲೇ- ಹಿಂದ' ನಾಯಕ
ನಮರ ನೇತಾಜಿ ॥
ಜಲಜನಾಭನ ಕರುಣೆಯಿಂದಲಿ ।
ಮಾಲಿನ ನೋಡವು ತೀರಿ ತೊಲಗಿದೆ !
ನೀಲ ಗಗನದ ನಿಕ್ಕ ನೊಡಲಿನ ಬೆಳಕಿ
ನಂದದಲಿ ॥
ಲಲಿತ ಶುಭ್ರ ಜ್ಯೋತ್ಸ್ನ ವದನಳೆ ।
ಜೈಲ ಹಿಮಗಿರಿ ಸಿಂಧು ಪೀಠವೆ ।
ವಲಯ ವೀಕ್ಷಿಸೆ ರಾಜ ಗಾಂಭೀರ್ಯದ
ದಲಿ ನೀನೇರು ॥
ಏನನೆಂದೆನು ತಾಯೆ ಚೆಲುವನು ।
ನಿನ್ನ ಹಿಂದಿನ ಪುಣ್ಯ ದಿನಗಳ ।
ನೆನಪ ತಂದಿರೆ ಹೃದಯವಾನಂದದಲಿ ।
ಮುಳುಗಿಹುದ. ॥
ಏನು ನಮಗಿನ್ನೇನು ಭಯವೆಲೆ !
ಏನು ಮಣಿವನೆ ? ಮಿತ್ರ ಜಗದಲಿ ।
ಬಾನ ಬಾಳದು ಹರುಷದಿಂದಿರಿ ವೀರ
ರಾದೆವಾಗ ॥

ಯಳಂದೂರಿನಲ್ಲಿ ಗಲಭೆ

ಮೈಸೂರು ೧೬

ನಿನ್ನೆ ಸ್ವಾತಂತ್ರ್ಯ ದಿನಾಚರಣೆಯ ಮೆರವಣಿಗೆಯು ಹೋಗುತ್ತಿದ್ದಾಗ ಮಸೀದಿಯ ಬಳಿ ವಾದ್ಯವನ್ನು ಮಾಡದಂತೆ ತಕರಾರು ಎದ್ದುದರಿಂದ ಗಲಭೆಯುಂಟಾಗಿ ೬ ಜನರಿಗೆ ಗಾಯಗಳಾಗಿವೆಯೆಂದು ತಿಳಿದು ಬಂದಿದೆ. ಜಿಲ್ಲಾ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ತೆರಳಿರುತ್ತಾರೆ ।

ಮಂಗಳಂ ಜಯ ಭಾರತಾಂಬೆಗೆ ।
ಮಂಗಳಂ ವರ ಪುಣ್ಯ ಮೂರ್ತಿಗೆ ।
ಮಂಗಳಂ ಜಯ ನಾಡ ನಾಯಕ
ಸಚಿವ ಜನಪರಿಗೆ ॥
ಮಂಗಳಂ ವಿಗೆ ಧರ್ಮ ಚಕ್ರಕೆ ।
ಮಂಗಳಂ ' ಜಯ ಹಿಂದ ' ನಿಶಾನಿಕೆ ।
ಮಂಗಳಂ ಜಯ ದಲಿತ ಜನತೆಯ
ನವ್ಯ ನಾಯಕಿಗೆ ॥

ವೈ. ಎ. ವಿಶ್ವೇಶ್ವರಯ್ಯಂಗ್,
ಮೈಸೂರು

ಶೃಂಗಾರ ಟಾಕೀಸ್, ಮೈಸೂರು

ಶಾಲಿಮಾರ್

ಅಪೇರಾ ಟಾಕೀಸ್, ಮೈಸೂರು

15-8-47 ರಿಂದ 3 ನೇ ವಾರ

ಸುಲೋಚನ

(ತಮಿಳು)

ಪ್ರತಿ ದಿನ ೩ ಆಟಗಳು

ಇದೇ 15-8-47 ನೇ ಶುಕ್ರವಾರದಿಂದ

ಫೋಟೋ ಪಿಕ್ಚರ್ಸ್‌ರವರ

ಶಾಲಿಮಾರ್

-: ಪಾತ್ರ :

ಚಂದ್ರಮೋಹನ್, ಅಲ್ ನಸೀರ್,

ಬೇಗಂ ಪ್ಯಾರಾ, ಮನೋರಮ ಇತರರು

ಒಲಿಂಪಿಯಾ, ಮೈಸೂರು.

ವುಡ್‌ಲ್ಯಾಂಡ್ಸ್

ತಾ|| 15-8-47 ರಿಂದ

ಅಪೋಹಷ ಪ್ರಾರಂಭ

ವೀರ್ ಕುನಾಲ್

(ಹಿಂದಿ)

—: ಪಾತ್ರ :—

ಕಿರೋರ್ ಸಾಹು, ಶೋಭನಾ ಸಮರ್ಥ

ದುರ್ಗಾ ಖೋಟೆ

ರಾಜ್‌ಕಮಲ್, ಮೈಸೂರು.

ತಾ|| 15—8—47 ರಿಂದ

೨ ನೇ ವಾರ

" ಮಹಾನಂದ "

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು

೧ ಭಾಗ ಕಾಂಗ್ರೆಸ್ ಟಾಪಿಕಲ್

From 15-8-47 for 7 days daily at 10-30 a. m.

The Court Dancer

(in English)

with

Sadhana Bose, Prathimadas Gupta, Prithviraj, Nayampalli.

ಆನಂದಮಠ

ಬಿ. ವೆಂಕಟಾಚಾರ್ಯರ ಸುಪ್ರಸಿದ್ಧ ಕಾದಂಬರಿ ಹೊಸ ಮುದ್ರಣ ' ಭಾರತವನ್ನು ಬಿಟ್ಟು ಹೊರಡಿ ' ' ವಂದೇ ಮಾತರಂ '-ಎಂಬೀ ಮಹಾ ಮಂತ್ರಗಳ ಬೀಜವನ್ನು ಚಿತ್ರೀಕರಣ ಮಾಡಿದವೀರರನ್ನು ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ಕೃತಜ್ಞತೆಗಾಗಿ ನಿರಂತರವೂ ಸ್ಮರಿಸುವುದು ಎಲ್ಲ ದೇಶಭಕ್ತರ ಪವಿತ್ರ ಕರ್ತವ್ಯ. ಆ ವೀರರ ಕಥೆಯನ್ನು ' ಆನಂದಮಠ ' ದಲ್ಲಿ ಓದಿ ನೀವೂ ವೀರರಾಗಿ ಆನಂದಿಸಿರಿ.

ಬೆಲೆ ರೂ 2-0-0 ಅಂಚೆ ವೆಚ್ಚ ಬೇರೆ. ಪುಸ್ತಕ ವ್ಯಾಪಾರಿಗಳಿಗೆ ಬೆಲೆಯಲ್ಲಿ ಸೋಡಿಯುಂಟು

ಪ್ರತಿಗಳು ದೊರೆಯುವ ವಿಳಾಸ :—

೧) ಆ|| ಮಿ|| ಎಚ್. ಚೆನ್ನಕೇಶವ ಐಯ್ಯಂಗಾರ್, ಎಂ. ಬಿ ಎಲ್., ' ವೀರಕೇಸರಿ ' ಪೂರ್ವ ಸಂಪಾದಕ, ೧೪೬೨/೧ ಕೊತ್ವಾಲ ರಾಮಣ್ಣನ ಬೀದಿ, ಮೈಸೂರು.

ಅಥವಾ

೨) ಡಾ|| ಆಚಾರ್ಯ, ಬಿ., ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು.

Edited printed and published by A. R. Nagarajan at the Sadhvi Press D Subbaiah Road Mysore

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ. ನಿಮಗೂ

ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Office of the Municipal Engineer,
City Municipal Council,
MYSORE, Dated 31-7-47

NOTIFICATION

Sealed tenders will be received up to 4 p. m. on 15-8-47 by the Municipal Engineer for the construction of Seven Shops to the east of Mr. A. N. Raghavachar's House, Chamaraja Road, Chamaraja Mohalla.

Each tender must be accompanied with a challan for having remitted Rs. 500/- in the Municipal Treasury as earnest money. For full particulars please see the detailed notification on the Notice Board.

S. NARAYANA SWAMY,
Municipal Engineer.

ಶ್ರೀ ಶಾಲಿಸಿದ್ಧೇಶ್ವರ ಸಂಗೀತ

ನಾಟಕ ಮಂಡಲಿ, ಹುಲಗೂರು ಇವರು ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ ಈ ದಿನ ರಾತ್ರಿ ೧೦-೩೦ ಕ್ಕೆ

- ಕಾಲೇಜ್ ಗರ್ಲ್ -

ಜ್ಞಾನೋದಯ ಪ್ರಾಪ್ತಿಸಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು ಮಹಾಜನರು

ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮಹಾನಂದ, ಪ್ರಪಂಚ ಪರೀಕ್ಷೆ ಮುಂತಾದ ನಾಟಕಗಳನ್ನಾಡುವ

ತಾರೀಖನ್ನು ಗಮನಿಸಿ

ಬಿಷ್ಟ ಶೆಟ್ಟೆಪ್ಪ, ಪ್ರೊಪ್ರೈಟರ್

ಫೋನ್ ನಂ 392 WEEKLY EDITION ಬಿಡಿಪ ಪತ್ರಿಕೆ 6 ಕಾಸು

ಸಂಪುಟ ೧೨] ಭಾನುವಾರ ೧೭-೮-೪೭ [ಸಂಚಿಕೆ ೫

ತಿರುವಾಂಕೂರು ರಾಜರಿಂದ ಧ್ವಜಾರೋಹಣ

ವಿದ್ಯಾರ್ಥಿಗಳ ಸತ್ಯಾಗ್ರಹ

ಮೈಸೂರು ೧೭

ಶ್ರೀ ಕೆ. ವಿದ್ಯಾರ್ಥಿ ಕಾಂಗ್ರೆಸ್ಸಿನ ಸೆಪ್ಟಂ ೧ ಕ್ಕೆ ಅರಮನೆಯ ಮುಂದೆ ಹೂಡುವ ಸತ್ಯಾಗ್ರಹದ ಸಂಬಂಧದಲ್ಲಿ ದೇಶದಲ್ಲಿ ಪ್ರಚಾರ ಕಾರ್ಯವನ್ನು ಕೈಗೊಂಡು ದೇಶನಾಯಕರ ಮತ್ತು ಇತರ ವಿದ್ಯಾರ್ಥಿಗಳ ಗಮನವನ್ನು ಸೆಳೆದು ಅವರ ಬಲ, ಸಲಹೆ, ಸಹಕಾರಗಳನ್ನು ಪಡೆವ ಸಲುವಾಗಿ, ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ, ಶ್ರೀ ಎಂ ... ಲಿಂಗಪ್ಪ ಜವಳಿರವರು ಕಳೆದ ಗುರುವಾರ ದೆಹಲಿಗೆ ಪ್ರಯಾಣ ಬೆಳಸಿದರೆಂದು ತಿಳಿದು ಬಂದಿದೆ.

ಸ್ಪರ್ಧೆಯಲ್ಲಿ ಬಹುಮಾನ

ವಿದ್ಯಾರ್ಥಿ ಕಾಂಗ್ರೆಸ್ಸಿನವರು ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ "ಸ್ವಾತಂತ್ರ್ಯ ಆಚರಣೆಯ ಮಹತ್ವ" ಎಂಬ ವಿಷಯದ ಮೇಲೆ ಉತ್ತಮವಾದ ಲೇಖನವ ಬರೆದುದಕ್ಕಾಗಿ ವನಿತಾ ಸದನದ ವಿದ್ಯಾರ್ಥಿನಿ ಶ್ರೀಮತಿ ಎಂ ಲೀಲಾವತಿಯವರಿಗೆ ಪ್ರಥಮ ಬಹುಮಾನವು ಬಂದಿರುತ್ತದೆ.

ನೀರಿಗೆ ತೊಂದರೆ

... ಮೊಹಲ್ಲೆಯ ಜಲಪುರಿಯಲ್ಲಿರುವ ... ಹಲವು ನಲ್ಲಿಗಳಲ್ಲಿ ಕಳೆದ ದಿನಗಳಿಂದಲೂ ನೀರು ನಿಂತುಹೋಗಿ ... ಗಳಿಗೆ ಬಹಳ ತೊಂದರೆಯುಂಟಾಗುತ್ತಿದೆಯೆಂದೂ ಅಲ್ಲಿನ ಯಾರ ಮನೆಯಲ್ಲಿಯೂ ನಲ್ಲಿ ಇರುವುದಿಲ್ಲವೆಂದೂ ಆದುದರಿಂದ ಸಂಬಂಧಪಟ್ಟವರು ಈ ಬಗ್ಗೆ ಕೂಡಲೇ ಗಮನ ಕೊಡಬೇಕೆಂದೂ ಅಲ್ಲಿನ ಆದಿ ಕರ್ನಾಟಕ ಸಂಘದ ಕಾರ್ಯದರ್ಶಿಗಳು ತಿಳಿಸಿರುವರು.

ಹರಿಕಥೆ

... ಪೇಟೆಯಲ್ಲಿರುವ ಶ್ರೀ ಪ್ರಸನ್ನ ... ಡೇಶ್ವರಸ್ವಾಮಿಯವರ ದೇವಾಲಯದಲ್ಲಿ ಈ ದಿನ ರಾತ್ರಿ ೯-೩೦ ಗಂಟೆಗೆ ಹೆಚ್. ಎಂ ಶಿವಲಿಂಗಸ್ವಾಮಿ ಹಿರೇಮಠದವರಿಂದ ಸ್ವರಾಜ್ಯ ಸಂಪಾದನೆ ಎಂಬ ಹರಿಕಥೆಯು ನಡೆಯುವುದು.

ಮಂತ್ರಿಗಳಿಗೆ ಬಡ್ತಿ

... ತಿಂಗಳು ೨೪ನೇ ತಾರೀಖಿನಿಂದ ... ರಾಗಲಿರುವ ಗೃಹ ಸಚಿವರಾದ ಶ್ರೀ ... ಶೇಷಾದ್ರಿಯವರ ಅಧಿಕಾರಾವಧಿಯು ಶ್ರೀಮನ್ಮಹಾರಾಜರವರು ಸೂಕ್ತ ... ರುವವರೆಗೆ ಮುಂದುವರೆಸುವರೆಂದು ... ಯಾಗಿದೆ.

ಮಗ್ಗಾರ್ ಮರ್ಗ

ಸು.] ಬೆಂಗಳೂರು ೧೭

ಬೆಂಗಳೂರು ಅಡ್ವೋಕೇಟರಾದ ಶ್ರೀ ... ನಾಗರಾಜರಾಯರವರನ್ನು ... ಸಂಗಾಮಿ ಮೇಯರ್ ಆಗಿಯೂ, ... ಶ್ರೀ ಅಬ್ದುಲ್ ಹಮೀದ್‌ರವರನ್ನು ... ನ ಎರಡನೇ ಮೇಯರನ್ನಾ ... ಬೆಂಗಳೂರಿನ ಮೊದಲನೇ ಮೇಯರ್ ... ದ ಶ್ರೀ ಸಿ ಚನ್ನರಾಯ ರೆಡ್ಡಿಯವರು ... ಬೆಂಗಳೂರು ದಂಡಿನ ಆಡಳಿತದ ಮೊದಲನೇ ಮ್ಯಾಜಿಸ್ಟ್ರೇಟರನ್ನಾಗಿ ... ತಾವ. ಕೂರಿನ ಎರಡನೇ ಮೇಯರ್ ... ಶ್ರೀ ಬಿ ಸುಬ್ಬಯ್ಯನವರನ್ನು ... ಮೊದಲನೇ ಮೇಯರನ್ನಾಗಿ ... ಶಿವಾಜಿನಗರದ ಮೇಯರ್ ಆದ ಶ್ರೀ ... ಎಂ ಅನಂತರಾಮನ್‌ರವರನ್ನು ಬೆಂ ... ಆಡಳಿತದ ೨ನೇ ಮ್ಯಾಜಿಸ್ಟ್ರೇ ... ಗಿಯೂ ಸರ್ಕಾರವು ನೇಮಿಸಿದೆ.

ಸ್ವಾತಂತ್ರ್ಯ ದಿನಾಚರಣೆ

ರಾಜಧಾನಿಯ ಶ್ರೀ ವರಲಕ್ಷ್ಮೀ ವಿದ್ಯಾಮಂದಿರದಲ್ಲಿ ಮೊನ್ನೆ ದಿನ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ಆಚರಿಸಲಾಯಿತು ನಾಳೆ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಅಲ್ಲಿ ನೆರವೇರುವುದು

ಅನಾಥಾಲಯದ ಸಾಹಿತ್ಯ ಸಂಘದಲ್ಲಿ ಮೊನ್ನೆ ಧ್ವಜವಂದನೆ ಮತ್ತು ಭಾಷಣಗಳು ಜರುಗಿದುವು.

ಒಕ್ಕಲಿಗರ ಸಮಾಜದಲ್ಲಿ ನಿನ್ನೆ ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ಮೈಸೂರು ತಾಲ್ಲೂಕು ದೇವಲಾಪುರದ ಶಾಲಾ ವರ್ಗದವರು ರಾಷ್ಟ್ರ ನಾಯಕರ ಮೆರವಣಿಗೆಯೊಡನೆ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು.

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದವರು ಮೊನ್ನೆ ರಾಷ್ಟ್ರಧ್ವಜಾರೋಹಣ, ಭಾಷಣ ಮತ್ತು ನಾಟಕಾಭಿನಯನಗಳನ್ನು ನೆರವೇರಿಸಿದರು

ರಾಜಧಾನಿಯ ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರೀ ದೇವಾಲಯದಲ್ಲಿ ಮೊನ್ನೆ ಬೆಳಗ್ಗೆ ಶ್ರೀ ಟಿ ಗೋಪಾಲಕೃಷ್ಣ ಶೆಟ್ಟರಿಂದ ಧ್ವಜಾರೋಹಣ ಮತ್ತು ಉಪನ್ಯಾಸವೂ, ಮಧ್ಯಾಹ್ನ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದಲೂ, ರಾತ್ರಿ ಹರಿಕಥೆಯೂ ಜರುಗಿದುವು.

ಇಟ್ಟಿಗೆ ಗೂಡಿನಲ್ಲಿರುವ ಯುವಕರ ಸಂಘದಲ್ಲಿ ಮೊನ್ನೆ ಬೆಳಗ್ಗೆ ಪ್ರಭಾತ ಫೇರಿ ಧ್ವಜವಂದನೆ ಮತ್ತು ಸ್ಪರ್ಧೆಗಳೂ ಮಧ್ಯಾಹ್ನ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯೂ ಜರುಗಿದುವು ಮಧ್ಯಾಹ್ನ ಶ್ರೀ ಸುಂದರ್ ಮೂರ್ತಿ ಮತ್ತು ಪಾರ್ಟಿಯವರಿಂದ ಕೊಳಲು ವಾದನ, ಬಹುಮಾನ ವಿನಿಯೋಗಗಳಾದ ನಂತರ ಶ್ರೀ ಚೆನ್ನಯ್ಯ ಮತ್ತು ಶ್ರೀ ಬಿ ನಾರಾಯಣ ಸ್ವಾಮಿಯವರುಗಳು ಭಾಷಣ ಮಾಡಿದರು

ಕೆಂಪುಕೋಟೆಯ ಮೇಲೆ ರಾಷ್ಟ್ರ ಧ್ವಜ

ಮೊಘಲ್ ಚಕ್ರವರ್ತಿಯ ಕಾಲದಿಂದ ಹೆಸರುವಾಸಿಯಾಗಿ ಸುಭಾಷ್ ಬೋಸ್ ರವರ ಸೈನಿಕರ ವಿಚಾರಣೆ ನಡೆಸಿದ ದೆಹಲಿಯ ಕೆಂಪು ಕೋಟೆಯ ಮೇಲೆ ಪಂಡಿತ ನೆಹರೂರವರು ನಿನ್ನೆ ದಿನ ರಾಷ್ಟ್ರ ಧ್ವಜವನ್ನು ಹಾರಿಸಿದರು. ಸುಮಾರು ೭ ಲಕ್ಷ ಮಂದಿ ಇದನ್ನು ನೋಡಲು ನೆರೆದಿದ್ದರು

ರಾಜರುಗಳಿಂದ ರಾಷ್ಟ್ರ ಧ್ವಜಾರೋಹಣ

ಮೊನ್ನೆ ದಿನ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ತಿರುವಾಂಕೂರು, ಬರೋಡ ಮತ್ತು ರೇವಾ ಸಂಸ್ಥಾನದ ಅರಸರುಗಳು ತಾವೇ ಸ್ವತಃ ರಾಷ್ಟ್ರಧ್ವಜಗಳನ್ನು ಹಾರಿಸಿದರೆಂದು ವರದಿಯಾಗಿದೆ

ತಿರುವಾಂಕೂರು ರಾಜರು ತಮ್ಮ ಅರಮನೆಯ ದರ್ಬಾರ್ ಭವನದಲ್ಲಿ ಧ್ವಜವನ್ನು ಹಾರಿಸಿದರು ಆ ಸಮಯದಲ್ಲಿ ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು ಎಲ್ಲಾ ಸೇನಾ ದಳಗಳ ಕವಾಯತು ನಡೆಯಿತು ಮಹಾರಾಜರು ವಂದನೆಯನ್ನು ಸ್ವೀಕರಿಸಿದರು. ನಂತರ ಅರಮನೆಯಿಂದಲೇ ಮೆರವಣಿಗೆ ಹೊರಟು ನಗರದಲ್ಲೆಲ್ಲಾ ಪ್ರದಕ್ಷಿಣೆ ಮಾಡಿ ಬಂದಿತು ಎಲ್ಲ ಸರ್ಕಾರಿ ಮತ್ತು ಸಾರ್ವಜನಿಕ ಭವನಗಳಲ್ಲಿಯೂ ದೀಪಾಲಂಕಾರವು ಮಾಡಲ್ಪಟ್ಟಿತ್ತು.

ವಿಶ್ವ ಸಂಸ್ಥೆಯಲ್ಲಿ ಭಾರತದ ಧ್ವಜ

ಲೇಕ್ ಸಕ್ಸೆಸ್ ಎಂಬಲ್ಲಿರುವ ವಿಶ್ವ ಸಂಸ್ಥೆಯಲ್ಲಿ ಮೊನ್ನೆ ದಿನ ನಡೆದ ಭಾರತ ರಾಷ್ಟ್ರಧ್ವಜಾರೋಹಣ ಸಮಾರಂಭವು ಅತ್ಯಂತ ಅಪೂರ್ವವಾದ ರೀತಿಯಲ್ಲಿ ಇದ್ದಿತು ವಿಶ್ವಸಂಸ್ಥೆಗೆ ಸೇರಿದ ೫೫ ರಾಷ್ಟ್ರಗಳ ಪ್ರತಿನಿಧಿ ರೂಪದಲ್ಲಿ ೫೫ ಧ್ವಜಗಳನ್ನು ಅಲ್ಲಿ ಇಡಲಾಗಿದೆ ಅವುಗಳ ಪೈಕಿ ಇದುವರೆಗೆ ಭಾರತ ಖಂಡದ ಪರವಾಗಿ ಬ್ರಿಟನ್ನಿನ ಯೂನಿಯನ್ ಜಾಕ್ ಧ್ವಜವನ್ನೇ ಇಡಲಾಗಿತ್ತು ಮೊನ್ನೆ ಆ ಬಾವುಟವನ್ನು ಅಲ್ಲಿನ ಸೇವಕರ ಕೈಯಿಂದ ಕೆಳಗಿಳಿಸಿ ಭಾರತದ ಪ್ರತಿನಿಧಿಗಳಾದ ಡಾ॥ ಪಿ ಪಿ ಪಿಳ್ಳೆಯವರು ನವ ಭಾರತ ರಾಷ್ಟ್ರಧ್ವಜವನ್ನು ಏರಿಸಿದರು ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಈ ಸಮಾರಂಭದಲ್ಲಿ ಹಾಜರಿದ್ದು ಅದಕ್ಕೆ ಮನ್ನಣೆಯನ್ನು ಸಲ್ಲಿಸಿದರು

ಮೀನು ಬೆಸ್ತನ ಹೊಟ್ಟೆಗೆ

ಮೀನು ಹಿಡಿಯುತ್ತಿದ್ದ ಬೆಸ್ತನೊಬ್ಬನ ಬಾಯಿಯೊಳಕ್ಕೆ ಬಲೆಯಲ್ಲಿದ್ದ ಮೀನು ಹಾರಿದ ವಿಷಯವು ಪುಲಿಯೂರ್ ಪೋಲೀಸಿನಿಂದ ವರದಿಯಾಗಿದೆ. ಮೀನು ಗಂಟಲಿನೊಳಕ್ಕೆ ನುಗ್ಗಿ ಅಲ್ಲಿ ಬಲವಾಗಿ ಕಚ್ಚಿಕೊಂಡು ಕುಳಿತು ಅವನಿಗೆ ಉಸಿರಾಡಲೂ ಕಷ್ಟಸಾಧ್ಯವಾಗದೆ ನಂತರ ಶಸ್ತ್ರ ಚಿಕಿತ್ಸೆ ಮೂಲಕ ಅದನ್ನು ಹೊರಕ್ಕೆ ತೆಗೆಯಲಾಯಿತು

ಭಾರತ ಸರ್ಕಾರದ ಸಚಿವರು

ಪಂಡಿತ ನೆಹರೂ ಪ್ರಧಾನಿ, ವಿದೇಶಾಂಗ ಮತ್ತು ವೈಜ್ಞಾನಿಕ ಸಂಶೋಧನಾ ಖಾತೆ, ಸರ್ದಾರ್ ಪಟೇಲರು ಒಳಾಡಳಿತ ವಾರ್ತಾ ಪ್ರಚಾರ, ಬ್ರಾಡ್ ಕ್ಯಾಸ್ಟಿಂಗ್ ಮತ್ತು ಸಂಸ್ಥಾನಗಳ ಖಾತೆ, ಡಾ॥ ರಾಜೇಂದ್ರ ಪ್ರಸಾದ್ ಆಹಾರ ಮತ್ತು ವ್ಯವಸಾಯ ಮೌಲಾನಾ ಅಬುಲ್ ಕಲಾಂ ಆಜಾದ್ - ವಿದ್ಯಾಭ್ಯಾಸ, ಡಾ॥ ಜಾನ್ ಮಥಾಯ್-ರೈಲ್ವೆ ಮತ್ತು ಆಮದು ರಫ್ತು, ಸರ್ದಾರ್ ಬಲದೇವಸಿಂಗ್-ರಕ್ಷಣೆ, ಜಗಜೀವನರಾಂ ಕಾರ್ಮಿಕ ಖಾತೆ, ಸಿ. ಹೆಚ್. ಭಾಭಾ-ವಾಣಿಜ್ಯ, ರಫಿ ಅಹಮ್ಮದ್ ಕಿದ್ವಾಯಿ-ಸಂಪರ್ಕ ಸೌಕರ್ಯ, ಡಾ॥ ಬಿ ಆರ್ ಅಂಬೇಡ್ಕರ್-ನ್ಯಾಯಾಂಗ- ಆರ್. ಕೆ. ಷಣ್ಮುಗಂ ಚೆಟ್ಟಿ-ಹಣಕಾಸು, ಡಾ॥ ಶ್ಯಾಮ ಪ್ರಸಾದ ಮುಖರ್ಜಿ - ಕೈಗಾರಿಕೆ ಮತ್ತು ಸರಬರಾಜು, ಎನ್ ವಿ. ಗಾಡ್ಗಿಲ್ ಕಾರ್ಖಾನೆ, ಗಣಿ, ವಿದ್ಯುಚ್ಛಕ್ತಿ ಮತ್ತು ರಾಜಕುಮಾರಿ ಅಮೃತಕೌರ್ ಆರೋಗ್ಯ - ಈ ರೀತಿ ನಿನ್ನೆ ದಿನ ಪ್ರಮಾಣ ವಚನವನ್ನು ಸ್ವೀಕರಿಸಿರುವರು.

ಗಾಂಧೀಜಿಯವರ ಕಾರನ್ನು ಸುಹ್ರಾವರ್ದಿ ನಡೆಸಿದರು

ಮೊನ್ನೆ ದಿನ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಮಹಾತ್ಮ ಗಾಂಧಿಯವರು ೨೪ ಗಂಟೆಗಳ ಉಪವಾಸವನ್ನಾಚರಿಸಿದರು ಅವರೊಡನೆ ಬಂಗಾಳದ ಮಾಜಿ ಪ್ರಧಾನಿ ಮಿ॥ ಹೆಚ್ ಎಸ್ ಸುಹರ್ವರ್ದಿ, ಶಾಸನ ಸಭೆಯ ಮಾಜಿ ಮೇಯರಾದ ಮಿ॥ ಎಸ್. ಎಂ ಉಸ್ಮಾನ್ ಮತ್ತು ಕಲ್ಕತ್ತಾ ಜಿಲ್ಲೆಯ ಮುಸ್ಲಿಂ ಲೀಗ್ ಕಾರ್ಯದರ್ಶಿಗಳು ಸಹ ಉಪವಾಸವನ್ನಾಚರಿಸಿದರು. ಕಲ್ಕತ್ತ ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ಪರಿಶೀಲಿಸಲು ತೆರಳಿದ ಮಹಾತ್ಮರ ಕಾರನ್ನು ಮಿ॥ ಸುಹ್ರವರ್ದಿಯವರೇ ನಡೆಸಿದರು.

ಕೊಚ್ಚಿಯಲ್ಲಿ ಪೂರ್ಣ ಜವಾಬ್ದಾರೀ ಸರ್ಕಾರ

ಕಳೆದ ಗುರುವಾರ ಕೊಚ್ಚಿಯ ಮಹಾರಾಜರು ಅಲ್ಲಿನ ಶಾಸನ ಸಭೆಗೆ ಒಂದು ಸಂದೇಶವನ್ನು ಕಳುಹಿಸಿ ಇನ್ನು ಮುಂದೆ ತಮ್ಮ ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವು ಕಾರ್ಯತಃ ಜಾರಿಗೆ ಬರುವುದೆಂದು ತಿಳಿಸಿರುವರು ಹೊಸದಾಗಿ ರಚಿತವಾಗಿರುವ ಭಾರತ ಸರ್ಕಾರದ ಪ್ರಧಾನಿಗಳಾದ ಪಂಡಿತ ನೆಹರೂರವರ ನಾಯಕತ್ವವನ್ನು ಸಕಲರೂ ಅಂಗೀಕರಿಸಬೇಕೆಂದೂ ಸಹ ಅವರು ಕೋರಿರುವರು

ಮಗು ಸಿಕ್ಕಿದೆ

ರಾಜಧಾನಿಯ ಲಷ್ಕರ್ ಮೊಹಲ್ಲೆಯ ಪೋಲೀಸ್ ಠಾಣೆಯಲ್ಲಿ ಮೂರು ವರ್ಷ ವಯಸ್ಸಿನ ಹೆಣ್ಣು ಮಗುವೊಂದು, ನಿನ್ನೆ ರಾತ್ರಿಯಿಂದ ಇರುತ್ತದೆ ವಾರಸುದಾರರು ಬಂದು ಕರೆದುಕೊಂಡು ಹೋಗಬಹುದೆಂದು ಕೋರಲಾಗಿದೆ

ಯಳಂದೂರಿನಲ್ಲಿ ಪರಿಸ್ಥಿತಿ ಉತ್ತಮವಾಗಿದೆ

ಮೈಸೂರು ೧೭

ಯಳಂದೂರಿನ ಪರಿಸ್ಥಿತಿ ಈಗ ಶಾಂತ ಸ್ಥಿತಿಗೆ ಬಂದಿದೆಯೆಂದು ಗೊತ್ತಾಗಿದೆ. ಅಂಗಡಿಗಳಿಂದ ಲೂಟಿಯಾಗಿದ್ದ ಸುಮಾರು ೫೦೦೦ ರೂ ಬೆಲೆ ಬಾಳುವ ಸಾಮಾನುಗಳನ್ನು ಪುನಃ ಹಿಂತಕ್ಕೆ ಪಡೆಯಲಾಗುತ್ತಿದೆ

ವಾರ ಭವಿಷ್ಯ

(ಶ್ರೀ ಸಚ್ಚಿದಾನಂದ ಸ್ವಾಮಿಗಳಿಂದ)

ತಾ॥ ೧೭-೮-೪೭ ರಿಂದ ೨೪-೮-೪೭ ರವರೆಗೆ

ಮೇಷ — ಆರೋಗ್ಯ ಚೆನ್ನಾಗಿರುತ್ತೆ ಧನಲಾಭ ಉತ್ತಮ, ಖರ್ಚು ಕಡಿಮೆ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಮಿತ್ರರಿಂದ ಸಹಾಯ ಅಧಿಕಾರಿ ವರ್ಗದವರಿಂದ ಸನ್ಮಾನ. ತಾ॥ ೧೯, ೨೩ ಲಾಭ, ಚಿಂ..., ಅಪಮಾನ

ವೃಷಭ — ಪ್ರಾಕೃತಿಕ ಸ್ಥಿತಿ ಸಾಧಾರಣ. ಆರ್ಥಿಕ ಸ್ಥಿತಿ ಉತ್ತಮ ಖರ್ಚು ಹೆಚ್ಚು ವ್ಯಾಪಾರ, ವ್ಯವಹಾರಗಳಲ್ಲಿ ತೆರ... ಅಧಿಕಾರಿ ವರ್ಗದವರ ತಿರಸ್ಕಾರ ಬಂಧುಗಳ ಆಗಮನದಿಂದ ಅಧಿಕ ಧನವ್ಯಯ. ಮಂಗಳ ಕಾರ್ಯಗಳಿಗಾಗಿ ಪ್ರವಾಸ ತಾ॥ ೧೮, ೨೨, ೨೩, ಖರ್ಚು ಬಂಧು ದರ್ಶನ.

ಮಿಥುನ — ಆರೋಗ್ಯ ಸಾಧಾರಣ ಮಾನಸಿಕ ಚಿಂತೆ ಅಧಿಕ ಧನದಾಯ ಕಡಿಮೆ ಖರ್ಚು ಅಧಿಕ ವ್ಯಾಪಾರಾದಿಗಳಲ್ಲಿ ನಷ್ಟ ಶತ್ರುಗಳ ಪೀಡೆ ಮಿತ್ರರಿಂದ ತಿರಸ್ಕಾರ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ತಾ॥ ೨೦, ೨೨ ಲಾಭ, ಪ್ರವಾಸ

ಕರ್ಕ — ಪ್ರಾಕೃತಿಕ ಸ್ಥಿತಿ ಕೆಡುತ್ತದೆ ವ್ಯಾಪಾರಾದಿಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಅಧಿಕಾರಿ ವರ್ಗದವರಿಂದ ಸನ್ಮಾನ ಮಿತ್ರರಿಂದ ಸಹಾಯ ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯರಿಗೆ ಯ ವೆಚ್ಚ ಹೆಚ್ಚುವುದು ತಾ॥ ೧೯, ೨೧ ಲಾಭ, ಬಂಧುಗಳ ಆಗಮನ.

ಸಿಂಹ — ಆರೋಗ್ಯ ಸಾಧಾರಣ ಧನಲಾಭ ಉತ್ತಮ ಖರ್ಚು ಕಡಿಮೆ ವ್ಯಾಪಾರಾದಿಗಳಲ್ಲಿ ಪ್ರಗತಿ ಮಿತ್ರರಿಂದ ತಿರಸ್ಕಾರ ಬಂಧುಗಳೊಡನೆ ಕಲಹ ಪ್ರವಾಸದಿಂದ ಅಪಘಾತ ತಾ॥ ೧೯, ೨೧, ಲಾಭ ಚಿಂತೆ

ಕನ್ಯಾ — ಪ್ರಾಕೃತಿಕ ಸ್ಥಿತಿ ಕೆಡುತ್ತದೆ ಮಾನಸಿಕ ಚಿಂತೆ ಹೆಚ್ಚುತ್ತದೆ ವ್ಯಾಪಾರಾದಿಗಳಲ್ಲಿ ನಷ್ಟ, ಅಧಿಕಾರಿ ವರ್ಗದವರಿಂದ ತಿರಸ್ಕಾರ ತಾ॥ ೧೯, ೨೨ ಲಾಭ, ಚಿಂತೆ.

ತುಲಾ — ಆರೋಗ್ಯ ಉತ್ತಮ ಧನಲಾಭ ಸಾಧಾರಣ ಖರ್ಚು ಕಡಿಮೆ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ವ್ಯಾಪಾರ ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ ಮಿತ್ರರಿಂದ ಸಹಾಯ ಪ್ರವಾಸದಿಂದ ಅಪಘಾತ ತಾ॥ ೨೦, ೨೩ ನಷ್ಟ, ಚಿಂತೆ

ವೃಶ್ಚಿಕ — ಆರೋಗ್ಯ ಉತ್ತಮ ಧನಲಾಭ ಕಡಿಮೆ ಖರ್ಚು ಹೆಚ್ಚು ಉದ್ಯೋಗ, ನೌಕರಿಗಳಲ್ಲಿ ಅಧಿಕಾರಿ ವರ್ಗದವರ ಸಹಾಯ ವ್ಯಾಪಾರಾದಿಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಧನವ್ಯಯ ಪ್ರವಾಸದಿಂದ ಮನಸ್ಸಿಗೆ... ತಾ॥ ೨೧, ೨೩ ...

ಧನು — ಪ್ರಾಕೃತಿಕ ಸ್ಥಿತಿ ಕೆಡುತ್ತದೆ. ಮಾನಸಿಕ ಚಿಂತೆ ... ಆರ್ಥಿಕ ಸ್ಥಿತಿ ಸಾಧಾರಣ ವ್ಯಾಪಾರಾದಿಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ... ಸಾಮಾಜಿಕ ಕಾರ್ಯಗಳಲ್ಲಿ ... ತಾ॥ ೧೮, ೨೧ ಲಾಭ, ಮಿತ್ರ ದರ್ಶನ.

ಮಕರ — ಆರೋಗ್ಯ ಉತ್ತಮ ಮಾನಸಿಕ ಚಿಂತೆ ಹೆಚ್ಚು ಧನಾದಾಯ ಉತ್ತಮ ಖರ್ಚು ಕಡಿಮೆ ವ್ಯಾಪಾರಾದಿಗಳಲ್ಲಿ ಪ್ರಗತಿ ಮಂಗಳ ಕಾರ್ಯಗಳಿಗಾಗಿ ಪ್ರವಾಸ ಮಿತ್ರಾಗಮನ, ಔಷಧೋಪಚಾರಗಳಿಗಾಗಿ ಧನವ್ಯಯ ತಾ॥ ೧೮, ೨೨ ನಷ್ಟ, ಅಪಮಾನ.

ಕುಂಭ — ಪ್ರಾಕೃತಿಕ ಸ್ಥಿತಿ ಉತ್ತಮ ಮಾನಸಿಕ ಚಿಂತೆ ಕಡಿಮೆ ವ್ಯಾಪಾರಾದಿಗಳಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ, ಮಂಗಳ ಕಾರ್ಯಗಳಿಗಾಗಿ ಪ್ರವಾಸ. ತಾ॥ ೨೦, ೨೩ ಲಾಭ, ಬಂಧು ದರ್ಶನ.

ಮೀನ — ಆರೋಗ್ಯ ಉತ್ತಮ ಧನಲಾಭ ಸಾಧಾರಣ ಖರ್ಚು ಕಡಿಮೆ ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ ಅಧಿಕಾರಿ ವರ್ಗದವರಿಂದ ಸನ್ಮಾನ. ಮಂಗಳ ಕಾರ್ಯಗಳಿಗಾಗಿ ಬಂಧುಗಳ ಆಗಮನ ಮತ್ತು ಧನವ್ಯಯ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಮಿತ್ರರ ಆಗಮನದಿಂದ ಸಂತೋಷ ತಾ॥ ೨೦, ೨೩ ಲಾಭ, ಸನ್ಮಾನ.

ರಮಾನಂದ ತೀರ್ಥರ ಪುನರ್ದಸ್ತಗಿರಿ

ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರನ್ನು ಶಾಸನ ಭಂಗ ಮಾಡಿದುದಕ್ಕಾಗಿ ದಸ್ತಗಿರಿ ಮಾಡಿ ಬಿಡುಗಡೆ ಮಾಡಲಾಗಿತ್ತಷ್ಟೆ. ಆದರೆ ಮೊನ್ನೆ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಹೊರಟಾಗ ಮತ್ತೆ ಅವರನ್ನು ದಸ್ತಗಿರಿ ಮಾಡಲಾಗಿದೆ. ರಾಷ್ಟ್ರ ಧ್ವಜಾರೋಹಣ ನಡೆಸಲು ಯತ್ನಿಸಿದ ಇನ್ನೂ ಹಲವರು ಬಂಧಿತರಾಗಿದ್ದಾರೆ. ಅಲ್ಲಿ ಸಂಸ್ಥಾನದ ಧ್ವಜದ ಹೊರತು ಬೇರಾವ ಧ್ವಜವನ್ನೂ ಹಾರಿಸಬಾರದೆಂದು ಪ್ರತಿಬಂಧವನ್ನು ಹಾಕಲಾಗಿದೆ.

ಮಿಷತೆಗಳಿಂದ ಇಬ್ಬರ ಮರಣ

ಗ್ಲಾಸ್ಗೋ] [ಆಗಸ್ಟ್ ೧೩

ಫ್ರಾನ್ಸಿನ ಹಾವ್ರೆ ಗೆರೊಂಗ್ ಎಂಬಲ್ಲಿ ಹಲವು ಅಂಗುಲಗಳಷ್ಟು ದಪ್ಪನಾದ ಮಿಡತೆಗಳು ರಸ್ತೆಯನ್ನೆಲ್ಲಾ ಮುತ್ತಿ ಮೋಟಾರುಗಳ ಸಂಚಾರಕ್ಕೂ ಅಡಚಣೆಯುಂಟು ಮಾಡಿದವು. ಮೋಟಾರು ಉರುಳಿದುದರಿಂದ ಇಬ್ಬರು ಮಡಿದರೆಂದು ತಿಳಿದು ಬಂದಿದೆ

ರಾಷ್ಟ್ರನಾಯಕರಿಗೆ ಪೌರ ಸಭೆಯ ಅಭಿನಂದನೆ

ಮೈಸೂರು ೧೫

ಮೊನ್ನೆ ದಿನ ರಾಜಧಾನಿಯ ಪೌರಸಭೆಯವರು ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ನೆರವೇರಿಸಿದರು. ಪೌರಸಭೆಯ ಕಛೇರಿಯ ಮೇಲೆ ರಾಷ್ಟ್ರಧ್ವಜ ಮತ್ತು ಮೈಸೂರು ಧ್ವಜಗಳನ್ನು ಹಾರಿಸಿದ್ದರು. ಬೆಳಗ್ಗೆ ೯-೪೫ ಗಂಟೆಗೆ ಪೌರ ಸಭಾ ಭವನದಿಂದ ಟೌನ್‌ಹಾಲ್ ಮೈದಾನಕ್ಕೆ ಭಾರಿ ಮೆರವಣಿಗೆಯು ನಡೆಯಿತು. ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ ಸಮಾರಂಭವು ಅತ್ಯಂತ ವೈಭವದಿಂದ ಜರುಗಿತು. ರಾಷ್ಟ್ರ ಧ್ವಜವನ್ನು ಪೌರ ಸಭಾಧ್ಯಕ್ಷರಾದ ಶ್ರೀ ಹಿರಣ್ಣಯ್ಯನವರೂ, ಮೈಸೂರು ಧ್ವಜವನ್ನು ಉಪಾಧ್ಯಕ್ಷರಾದ ಶ್ರೀ ಟಿ. ನರಸಿಂಹೈಯ್ಯಂಗಾರ್ಯರವರೂ ಹಾರಿಸಿದರು. ಹಿಂದೆ ಎಂದೂ ಸೇರದಷ್ಟು ಜನಸಂದಣಿಯು ನೆರೆದಿದ್ದಿತು. ಟೌನ್‌ಹಾಲ್ ಕಟ್ಟಡದ ಮಹಡಿಯ ಮೇಲೆಲ್ಲಾ ಜನರು ಕಿಕ್ಕಿರಿದು ತುಂಬಿದ್ದರು. ಸುಮಾರು ೩೦ ಸಾವಿರ ಜನರು ನೆರೆದಿದ್ದರು

ಧ್ವಜಾರೋಹಣವಾದ ನಂತರ ಮೊದಲೇ ತಿಳಿಸಿದ್ದಂತೆ ವಿಮಾನವೊಂದು ಗಗನದಲ್ಲಿ ಹಾರಾಡುತ್ತಾ ಧ್ವಜಗಳ ಮೇಲೆ ಪುಷ್ಪ ವೃಷ್ಟಿಯನ್ನು ಕರೆಯಿತು. ಕ್ಯಾ॥ ಸುಂದರಂರವರು ವಿಮಾನವನ್ನು ನಡೆಸುತ್ತಿದ್ದರು, ಶ್ರೀ ಅಚ್ಯುತರಾಯರು ಪುಷ್ಪ ವೃಷ್ಟಿಯನ್ನು ಕರೆದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಪಾಹಿಯು ಈಗ ನಾಮಮಾತ್ರವಾಗಿರುವ ಅಂಶವನ್ನು ವಿವರಿಸಿ ಇನ್ನು ಮುಂದೆ ನಮ್ಮ ಭಾರತವೂ, ಮೈಸೂರು ಸಂಸ್ಥಾನವೂ ಸಕಲ ಸಂಪದಭಿವೃದ್ಧಿಗಳನ್ನೂ ಪಡೆಯಲೆಂದು ಹಾರೈಸಿದರು. ಉಪಾಧ್ಯಕ್ಷರು ಮೈಸೂರು ಧ್ವಜದ ಇತಿಹಾಸವನ್ನು ತಿಳಿಸಿ ಭರತಖಂಡದಂತೆಯೇ ನಮ್ಮ ಸಂಸ್ಥಾನದಲ್ಲಿಯೂ ಪ್ರಜಾಪ್ರಭುತ್ವವು ನೆಲೆಗೊಳ್ಳಲೆಂದು ಹಾರೈಸಿದರು. ಸ್ಕೌಟುಗಳು ಮತ್ತು ಪೊಲೀಸ್ ದಳದವರು ಶಿಸ್ತು ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿದ್ದರು. ಮೊನ್ನೆ ಮಧ್ಯಾಹ್ನ ಪೌರಸಭೆಯ ವಿಶೇಷ ಅಧಿವೇಶನವು ನಡೆದು ಮಹಾತ್ಮ ಗಾಂಧಿ, ಪಂ॥ ನೆಹರುರವರಿಗೂ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಡಿದ ಹುತಾತ್ಮರಿಗೂ ಮನ್ನಣೆಯನ್ನು ಸಲ್ಲಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ಶುಭ ಸಂಭ್ರಮದಲ್ಲಿ ಶ್ರೀಮನ್ಮಹಾರಾಜರವರಿಗೂ, ಪ್ರಜೆಗಗೂ ಕೃತಜ್ಞತಾಪೂರ್ವಕವಾದ ಶುಭಾಶಯವನ್ನು ಸಲ್ಲಿಸುವ ನಿರ್ಣಯವನ್ನೂ ಮಾಡಲಾಯಿತು. ನಂತರ ಅಧ್ಯಕ್ಷರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನೂ ಶ್ರೀ ಟಿ. ನ...ರಿಯಪ್ಪನವರು ಪಂ॥ ನೆಹರೂರವರ ಚಿತ್ರವನ್ನೂ ಅನಾವರಣ ಮಾಡಿದರು. ಜಯಕಾರದೊಡನೆ ಸಭೆ ಮುಕ್ತಾಯವಾಯಿತು

ಸ್ವಾತಂತ್ರ್ಯೋತ್ಸವ

ರಾಜಧಾನಿಯ ಕೋ ಆಪರೇಟಿವ್ ಫೆಡರಲ್ ಯೂನಿಯನ್ ಸಂಘದವರು ಶ್ರೀ ಆರ್ ನರಸಿಂಹಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ 'ಸ್ವಾತಂತ್ರ್ಯ ದಿನೋತ್ಸವವನ್ನು' ನೆರವೇರಿಸುವರು.

ಪ್ರತಿ ದಿನ ೨ ಆಟಗಳು

ಇದೇ 15-8-47 ನೇ ಶುಕ್ರವಾರದಿಂದ

ಸ್ಟೋರಿ ಪಿಕ್ಚರ್ಸ್‌ರವರ

ಶಾಲಿಮಾರ್

: ಪಾತ್ರ :

ಚಂದ್ರಮೋಹನ್, ಅಲ್ ನಸೀರ್, ಬೇಗಂ ಪ್ಯಾರಾ, ಮನೋರಮ ಇವರು

ಒಲಿಂಪಿಯಾ, ಮೈಸೂರು.

Edited printed and published by A. K. Nagarajan at the Sadhvi Press, D. Subbaiah Road Mysore

ರಾಜ್‌ಕಮಲ್, ಮೈಸೂರು.

ತಾ॥ 15—8—47 ರಿಂದ

೨ ನೇ ವಾರ

" ಮಹಾನಂದ "

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ೧ ಭಾಗ ಕಾಂಗ್ರೆಸ್ ಟಾಪಿಕಲ್

From 15-8-47 for 7 days daily at 10-30 a. m.

The Court Dancer

(in English)

with

Sadhana Bose, Prathimadas Gupta, Prithviraj, Nayampalli

ಅಪೇರಾ ಟಾಕೀಸ್, ಮೈಸೂರು

15-8-47 ರಿಂದ 3 ನೇ ವಾ.

ಸುಲೋಚನ

(ತಮಿಳು)

ವುಡ್‌ಲ್ಯಾಂಡ್ಸ್

ತಾ॥ 15-8-47 ರಿಂದ

ಆಪೋಷ ಪ್ರಾರಂಭ

ವೀರ್ ಕುನಾಲ್

(ಹಿಂದಿ)

—: ಪಾತ್ರ :—

ಕಿಶೋರ್ ಸಾಹು, ಶೋಭನಾ ಸಮರ್ಥ

ದುರ್ಗಾ ಖೋಟೆ

ಆನಂದಮಠ

ಬಿ. ವೆಂಕಟಾಚಾರ್ಯರ ಸುಪ್ರಸಿದ್ಧ ಕಾದಂಬರಿ ಹೊಸ ಮುದ್ರಣ 'ಭಾರತವನ್ನು ಬಿಟ್ಟು ಹೊರಡಿ' 'ವಂದೇ ಮಾತರಂ'-ಎಂಬೀ ಮಹಾ ಮಂತ್ರಗಳ ಬೀಜವನ್ನು ಬಿತ್ತಿ ಅತ್ಮಾರ್ಪಣ ಮಾಡಿದ ವೀರರು, ಭಾರತದ ಸ್ವರಾಜ್ಯ ಪ್ರಾಪ್ತಿಯ ಶ್ರೇಷ್ಠತೆಗಾಗಿ ನಿರಂತರವೂ ಸ್ಮರಿಸುವುದು ಎಲ್ಲ ದೇಶಭಕ್ತರ ಪವಿತ್ರ ಕರ್ತವ್ಯ. ಆ ವೀರರ ಕಥೆಯನ್ನು 'ಆನಂದಮಠ'ದಲ್ಲಿ ಓದಿ ನೀವೂ ವೀರರಾಗಿ ಆನಂದಿಸಿ"

ಬೆಲೆ ರೂ 2-0-0 ಅಂಚೆ ವೆಚ್ಚ ರೆ. ಪುಸ್ತಕ ವ್ಯಾಪಾರಿಗಳಿಗೆ ಬೆಲೆ ರಿಯಾಯಿತಿಯುಂಟು

ಪ್ರತಿಗಳು ದೊರೆಯುವ ವಿಳಾಸ :-

೧) ಆರ್ ವಿ॥ ಎಚ್. ಚೆನ್ನಕೇಶವಯ್ಯಂಗಾರ್, ಎಂ. ಎ ಎಲ್., 'ದರ್ಶನ' ಪೂರ್ವ ಸಂಪಾದಕ, ೧೪೬ ... ರಾಮಣ್ಣನ ಬೀದಿ, ಮೈಸೂರು ...

೨) ದತ್ತ ... ಬಜಾರ್, ಬಸವನಗುಡಿ, ಬೆಂಗಳೂರು

ಫೋ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೬] ಸೋಮವಾರ ೧೮-೮-೪೭ [ಸಂಚಿಕೆ ೩೪

ಬರೋಡಾ ಯುವರಾಜರಿಂದ ಧ್ವಜಾರೋಹಣ

ಹೋರಾಟ ಶತಸ್ಸಿದ್ಧ

ಹಾಲಿನಲ್ಲಿ ಬಹಿರಂಗ ಭಾಷಣಗಳು

ಮೈಸೂರು ೧೮

ಾತಂತ್ರ್ಯ ದಿನಾಚರಣೆಯ ಸಂಬಂಧ
ಕಳೆದ ಶುಕ್ರವಾರ ಸಂಜೆ ಸೇರಿದ್ದ
ರಂಗ ಸಭೆಯು ನೊನ್ನೆ ಸಂಜೆ ಟೌ
ನಲ್ಲಿ ಶ್ರೀ ಎಸ್. ಚೆನ್ನಯ್ಯನವರ ಅ
ತೆಯಲ್ಲಿ ಮುಂದುವರೆಯಿತು. ಶ್ರೀ
ನ ಎಂ ಎಸ್ ಜೋಯಿಸ್, ಹೆಚ್
ಿತಾರಸ್ವಾಮಿ, ಯು ಎಲ್ ರಾಮ
ರಾವ್, ಎಂ ಶಂಕರಯ್ಯ, ಬಿ ನಾರಾ
ಸ್ವಾಮಿ ರಾಜಂಶೆಟ್ಟಿ, ಟಿ ಮರಿಯ
ಾದಲಾದವರು ಭಾಷಣ ಮಾಡಿದರು.
ಾರು ಜನರು ನೆರೆದಿದ್ದರು.

ಸ್ವಕ್ತರು ಮೊದಲು ಮಾತನಾಡಿ ಇ
ಾರತ ವರ್ಷವೇ ಆನಂದೋತ್ಸಾಹದ
ಿದು ನರ್ತಿಸುತ್ತಿರುವಾಗ ನಮ್ಮ ಸಂ
ನಲ್ಲಿ ಅರಮನೆಯಲ್ಲಿ ದೀಪಗಳೂ ಸಹ
ುದೆ ಇದ್ದುದು ಶುಂಬಾಶೋಚನೀಯ
ಶ್ರೀಮನ್ಮಹಾರಾಜರವರ ಸಲಹೆಗಾ
ಂಚಿತ ಮನೋಭಾವ ಮತ್ತು ಆ
ಯ ಚಿತ್ತ ವೃತ್ತಿಗಳೇ ಕಾರಣ ಭಾ
ಲಭಿಸಿರುವ ಸ್ವಾತಂತ್ರ್ಯವು ನಮ್ಮ
ರು ಸಂಸ್ಥಾನಕ್ಕೆ ಇಲ್ಲದಿರುವುದಕ್ಕಾ
ೇಕ ವಿಷಾದಿಸಬೇಕಾಗಿದೆ. ನಮ್ಮ
ನದಲ್ಲಿಯೂ ಆ ಸ್ವಾತಂತ್ರ್ಯವನ್ನು
ಪಿಸುವ ಸಲುವಾಗಿ ಮೈಸೂರು ಕಾಂ
ಸತ್ಯಾಗ್ರಹವನ್ನು ಹೂಡಿಯೇ ತೀ
ಅದಕ್ಕೆ ಮಹಾಜನರು ಸಂಪೂ
ವ ಬೆಂಬಲವನ್ನು ನೀಡಬೇಕು -
ಪ್ರಾರ್ಥಿಸಿದರು.

ಸಿಸ್ಸಿನ ಬಲಯುತವಾದ ರಾಷ್ಟ್ರ
ಸ್ಥೆರವರ ಪ್ರಭಾವ ಚೆನ್ನಾಗಿ ಬೇ
ಅಲ್ಲಿನ ಅಧಿಕಾರಿಗಳಲ್ಲಿಯೂ
ಲ್ಲಿಯೂ ಒಗ್ಗಟ್ಟು ಮತ್ತು ಏಕ
ಇದೆ ಆದುದರಿಂದ ಅದು ಯ
ಿದ ಸಾಧ್ಯವಾಗುವುದರಲ್ಲಿ ಸಂದೇ
ಭಾರತವು ಅದಕ್ಕಿಂತಲೂ ಮುಂ
ಗಿ ಶಾಶ್ವತ ಕೀರ್ತಿ ಪಡೆಯುವಂ
ಕು ಅದಕ್ಕೆ ಸಂಪೂರ್ಣ ಸಹ
ಅಗತ್ಯ. ಯುವಕರೂ, ಮುಖಂ
ತಮ್ಮ ತಮ್ಮಲ್ಲಿರುವ ವೈಮನಸ್ಯ
ವ್ಯತ್ಯಾಸಗಳನ್ನು ಬದಿಗೊತ್ತಿ ಒಗ್ಗ
ಭಾರತದ ಉನ್ನತಿಗೆ ಬೆಂಬಲ ನೀ
-ಎಂಬುದಾಗಿ ಶ್ರೀ ಕುಮಾರಸ್ವಾ
ಮಾತನಾಡುತ್ತಾ ತಿಳಿಸಿದರು.

ತಂತ್ರ್ಯ ದಿನಾಚರಣೆಯ ಸಂಬಂಧ
ಷೇಧದ ನೋಟ ಹಳ್ಳಿಗಳಲ್ಲಿ
ಬಿ ತುಳುಕುತ್ತಿತ್ತು. ಅದರ ರಾ
ು ಕೋಟೆಯಲ್ಲಿ ಕತ್ತಲೆ ಕವಿದಂ
ಅತ್ಯಂತ ಶೋಚನೀಯ ಸ್ವಾತಂ
ಣೆಯಿಂದ ಜನಗಳು ಪಡುತ್ತಿರು
ಸವನ್ನು ಅರ್ಸರು ಅನುಭವ
ಸಂಸ್ಥಾನದಲ್ಲಿ ರಾಜಕೀಯ
ಸಾಧಿಸಲು ಕಾಂಗ್ರೆಸ್ಸಿನ ಹೋ
ುವುದು ಶತಸ್ಸಿದ್ಧ ಅದಕ್ಕೆ ಜ
ಎಲ್ಲ ಅತ್ಯಗತ್ಯ. ಸಂಸ್ಥಾನದ ಎ
ರೂ ಇದಕ್ಕೆ ತಮ್ಮ ಸಹಕಾರವ
ಬೇಕು-ಎಂಬುದಾಗಿ ಶ್ರೀ ಎಂ.
ಯಿಸರು ತಮ್ಮ ಭಾಷಣದಲ್ಲಿ

ನದಲ್ಲಿ ಜವಾಬ್ದಾರೀ ಸರ್ಕಾರದ
ಹೆ ಕೊಡಬೇಕೆಂದು ಶ್ರೀಮನ್ಮ
ವರು ದಿವಾನರಿಗೆ ಸೂಚಿಸಿ ಎಂ

ಸ್ವೀಕಾರ

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ ವಾಗಿ ರಾಜಧಾನಿ ಬೊಂಬಾಯಿ ಆನಂದ ಭವನದ ಶ್ರೀ ವಿಷ್ಣು ಗೋಪಾಲ್‌ರವರೂ ಮತ್ತು ರಘುಲಾಲ್ ಮತ್ತು ಕಂಪೆನಿಯವರೂ ಕಳುಹಿಸಿ ಕೊಟ್ಟಿರುವ ಶುಭಾಶಯಗಳನ್ನೂ ಬಟ್ಟೆ ವರ್ತಕರ ಸಂಘದವರು ಕಳುಹಿಸಿರುವ ರುಚಿ ಸಿಹಿ ಭಕ್ಷ್ಯಗಳನ್ನೂ ಸಹ ನಾವು ಆದರದಿಂದ ಸ್ವೀಕರಿಸಿರುತ್ತೇವೆ.

ಇನ್ನೂ ಗುಲಾಮರ ಮಾರಾಟ !

ಗ್ಲೋಬ್] [ಜೊಹಾನ್ಸ್‌ಬರ್ಗ್ ೧೩

ಕೆಂಪು ಸಮುದ್ರದ ಅರಬ್ಬರು ಪಶ್ಚಿಮ ಆಫ್ರಿಕದ ಸೂಡಾನ್ ದೇಶದ ಜನರನ್ನು ಗುಲಾಮರನ್ನಾಗಿ ಆಳುತ್ತಿರುವರೆಂದು ತಿಳಿದು ಬಂದಿದೆ ಒಬ್ಬ ಹೆಂಗಸಿಗೆ ೩೦೦ ೮೦, ಗಂಡಸಿಗೆ ೫೦೦ ೮೦ ಬೆಲೆ.

ವಿದ್ಯಾರ್ಥಿಗಳ ದಾವಾ ವಜಾ

ಸ್ವಂ ಸು ಫೋ] ಬೆಂಗಳೂರು ೧೮

ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಗೊಂಡಿರುವ ಬಗ್ಗೆ ವಿಶ್ವವಿದ್ಯಾನಿಲಯದ ಮೇಲೆ ಹಾಕಿದ್ದ ದಾವಾವನ್ನು ವಜಾ ಮಾಡಲಾಗಿದೆ

• ಅಲೂಗೆಡ್ಡೆ ರಫ್ತಿನ ಬಗ್ಗೆ ಹಾಕಿದ ಪ್ರತಿಬಂಧಕವನ್ನು ಸರ್ಕಾರದವರು ವಾಪಸು ತೆಗೆದುಕೊಂಡಿರುತ್ತಾರೆ

ಟು ತಿಂಗಳಾಗ ಶಕ್ತಿ ಬಂದಿದೆ ದಿವಾನರು ಇನ್ನು ಈಗ ಸಲಹಾ ಸಮಿತಿಯೊಂದನ್ನು ರಚಿಸಿದ್ದಾರೆ. ಅದರಲ್ಲಿರುವ ಸದಸ್ಯರಿಗೆ ಜವಾಬ್ದಾರೀ ಸರ್ಕಾರ, ಸ್ವಾತಂತ್ರ್ಯವೆಂದರೇನೆಂಬುದೇ ಗೊತ್ತಿಲ್ಲ ಇಂತಹ ಪ್ರತಿಗಾಮಿ ನೀತಿಯಿಂದ ದಿವಾನರು ಕಾಲಹರಣ ಮಾಡುತ್ತಿದ್ದಾರೆ. ನಾವೂ ಗಡು ಸಾಕಾದಷ್ಟು ಕಾದು ಕಾದು ನೋಡಿದ್ದಾಯಿತು ಇನ್ನು ಕಾಯಲು ಸಾಧ್ಯವಿಲ್ಲ ಇನ್ನು ಮುಂದೆ ಸರ್ ಆರ್ಕಾಟರು ನಮ್ಮ ಮಿತ್ರರಂತೆ ಬೇಕಾದಲ್ಲಿ ನಮ್ಮ ಸವಿನಾಪಕ್ಕೆ ಬರಬಹುದಲ್ಲದೆ ಅಧಿಕಾರ ದರ್ಪದಿಂದ ಬರುವುದನ್ನು ನಾವು ಸಹಿಸಲಾಗುವುದಿಲ್ಲ ಮೈಸೂರು ಕಾಂಗ್ರೆಸ್ಸು ತನ್ನ ಧ್ಯೇಯ ಸಾಧನೆಗಾಗಿ ಸತ್ಯಾಗ್ರಹ ಹೂಡಲು ನಿರ್ಧರಿಸಿದೆ. ಸತ್ಯಾಗ್ರಹವು ನಡೆಯುವುದೂ ಶತಸ್ಸಿದ್ಧ ಇದಕ್ಕೆ ಎಲ್ಲರೂ ಒಮ್ಮನಸ್ಸಿನಿಂದ ಬೆಂಬಲವಿತ್ತು ಪ್ರಜಾ ಸರ್ಕಾರ ಸ್ಥಾಪನೆಗೆ ಸಹಾಯಕರಾಗಬೇಕು-ಎಂಬುದಾಗಿ ಶ್ರೀ ಬಿ ನಾರಾಯಣಸ್ವಾಮಿಯವರು ನುಡಿದರು

ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು

ಕಂಚಿ ಜಗದ್ಗುರುಗಳಿಂದ ಶ್ರೀಯುತ ಪ್ರಾರ್ಥನೆ

ರಾಷ್ಟ್ರ ಧ್ವಜದ ಪವಿತ್ರ ಸಂದೇಶ

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಕಂಚಿ ಕಾಮಕೋಟಿ ಪೀಠಾಧ್ಯಕ್ಷರಾದ ಶ್ರೀ ಜಗದ್ಗುರು ಶಂಕರಾಚಾರ್ಯರು ಈ ಕೆಳಗೆ ಕಂಡಂತೆ ಸಂದೇಶವನ್ನು ಕಳುಹಿಸಿರುವರು : —

ಭರತಖಂಡದ ರಾಷ್ಟ್ರೀಯ ಸ್ವಾತಂತ್ರ್ಯದ ಈ ಸಮಯದಲ್ಲಿ ಪ್ರಾಚೀನವೂ, ವಿಶಾಲವೂ ಆದ ಈ ಪುಣ್ಯ ಭೂಮಿಯ ನಿವಾಸಿಗಳು ಭಗವಂತನಲ್ಲಿ ಮೊರೆಯಿಟ್ಟು ಇತರೋತ್ಕೃಷ್ಟವಾದ ನಾಗರಿಕ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನಮಗೆ ಕರುಣಿಸಿ ತನ್ಮೂಲಕ ನಮ್ಮ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳುವುದಲ್ಲದೆ ಪ್ರಪಂಚದ ಸಮಸ್ತ ಜೀವರಾಶಿಗಳೂ ಸ್ವತಂತ್ರ ಮತ್ತು ಸಂತೋಷಕರವಾದ ವಾತಾವರಣವನ್ನು ಹೊಂದುವ ಹಾಗೆ ಸಹಾಯ ಮಾಡಲು ಅನುಗ್ರಹಿಸಬೇಕೆಂದು ಪ್ರಾರ್ಥಿಸಬೇಕು.

ದೇಶದ ಸೌಭಾಗ್ಯದಿಂದ ಸ್ವಾತಂತ್ರ್ಯವಾಗಿರುವ ಚಕ್ರ ಸಹಿತವಾದ ನಮ್ಮ ಧ್ವಜವು ಭಗವಂತನಿಗೆ ನಾವು ಮಾಡುವ ಆತ್ಮಾರ್ಪಣೆಯನ್ನು ಸೂಚಿಸಿ ಧರ್ಮದ ಒಂದು ಮೂರ್ತ ಸ್ವರೂಪವಾಗಿರುತ್ತದೆ ಇತಿಹಾಸದಲ್ಲಿ " ದೇವಾನಾಂಪ್ರಿಯಃ " ಎಂಬ ಖ್ಯಾತಿಯನ್ನು ಗಳಿಸಿದ್ದ ಅಶೋಕ ಮಹಾರಾಜನ ಆದರ್ಶ ರಾಜ್ಯಭಾರದೊಡನೆ ಸಂಬಂಧವನ್ನು ಈ ಧ್ವಜವು ನಮಗೆ ಉಂಟು ಮಾಡಿಕೊಡುತ್ತದೆ ಅಲ್ಲದೆ ಭಗವಂತನ ಅಮರವಾದ ಗೀತೆಯ ಆಧ್ಯಾತ್ಮಿಕ ಮತ್ತು ಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ

ಧರ್ಮವು ಚಕ್ರದ ಸ್ವರೂಪದಲ್ಲಿರುವುದೆಂಬುದನ್ನು ಭಗವಂತನು ಗೀತೆಯಲ್ಲಿ ಸಾರಿರುತ್ತಾನೆ ನಮ್ಮ ದೇಶದಲ್ಲಿರುವ ಸಾಧುಗಳು, ಗೃಹಸ್ಥರು, ಪಂಡಿತರು, ಬಡವರು ಮತ್ತು ನಿವಾಸಿಗಳೇ ಮುಂತಾದವರನ್ನು ಮಾತ್ರವೇ ಅಲ್ಲದೆ ಪರರಾಷ್ಟ್ರಗಳಲ್ಲಿರುವ ಇಂತಹ ಜನರನ್ನೂ ಗೌರವದಿಂದ ಕಾಣಬೇಕೆಂದು ಅಶೋಕನು ಘೋಷಿಸಿರುತ್ತಾನೆ

ಭಗವಾನ್ ಶ್ರೀ ಕೃಷ್ಣನ ದಿವ್ಯ ಚಕ್ರದ ಗುರುತಿನಿಂದ ಆರಂಭವಾಗಿರುವ ನಮ್ಮ ಸ್ವಾತಂತ್ರ್ಯ ಈ ದೇಶಕ್ಕೆ ಮಾತ್ರವೇ ಅಲ್ಲದೆ ಇದಕ್ಕೆ ಸಂಬಂಧಪಟ್ಟ ರಾಷ್ಟ್ರಗಳಿಗೂ ಐಹಿಕ, ನೈತಿಕ ಮತ್ತು ಆಧ್ಯಾತ್ಮಿಕ ಫಲಗಳನ್ನು ಆ ಪರಮಾತ್ಮನ ಅನುಗ್ರಹದಿಂದ ತಂದುಕೊಡುವುದರಲ್ಲಿ ಲೇಶವೂ ಸಂದೇಹವಿಲ್ಲ.

ಬರೋಡಾ ಯುವರಾಜರು ರಾಷ್ಟ್ರಧ್ವಜವನ್ನು ಹಾರಿಸಿದರು

ಕಳೆದ ಶುಕ್ರವಾರ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಬರೋಡೆಯ ಸಂಬಂಧವಾಗಿ ಬರೋಡೆಯ ಕಾರೊನೇಷನ್ ಜಂಬೂಕ ಮೈದಾನದಲ್ಲಿ ಅಲ್ಲಿನ ರಾಜಕುಮಾರರೂ, ಸಿಂಹಾಸನದ ಉತ್ತರಾಧಿಕಾರಿಯೂ ಆದ ಶ್ರೀಮಂತ ಯುವರಾಜಾ ಸಾಹೆಬ್ ಫತೆಸಿಂಗ್ ಗಾಯಕವಾಡರು ರಾಷ್ಟ್ರ ಧ್ವಜವನ್ನು ಹಾರಿಸಿದರು ಆಗಸ್ಟ್ ೧೫ ನೇ ತಾರೀಖಿನಿಂದ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯವು ಆರಂಭವಾಗಿದೆಯೆಂದೂ ಅಂದು ಭಾರತವು ತನ್ನ ಗುಲಾಮಗಿರಿಯ ಶೃಂಖಲೆಗಳಿಂದ ಬಿಡುಗಡೆ ಹೊಂದಿ ಸ್ವತಂತ್ರವಾಗಿದೆಯೆಂದೂ ಯುವರಾಜರು ತಮ್ಮ ಭಾಷಣದಲ್ಲಿ ನುಡಿದಿರುವರು.

ಲಾಹೋರು ಜಿಲ್ಲೆ ವಿಭಾಗವಾಯಿತು

ಬಂಗಾಳ ಮತ್ತು ಪಂಜಾಬುಗಳ ಗಡಿ ನಿರ್ಧಾರಕ್ಕಾಗಿ ನೇಮಕವಾಗಿದ್ದ ಸಮಿತಿಯ ವರದಿಯು ಹೊರಬಿದ್ದಿದೆ. ಅದು ಈ ರೀತಿ ಇದೆ:—ಪಶ್ಚಿಮ ಪಂಜಾಬಿಗೆ ಮುಲ್ತಾನ್ ಮತ್ತು ರಾವಲ್ಪಿಂಡಿ ಡಿವಿಜನ್ನುಗಳು ಮತ್ತು ಲಾಹೋರ್ ಡಿವಿಜನ್ನಿನ ಗುಜರನ್ವಾಲಾ, ಷೇಖ್‌ಪುರ ಮತ್ತು ಸಯಾಲ್‌ಕೋಟೆ ಜಿಲ್ಲೆಗಳು ಪೂರ್ವ ಪಂಜಾಬಿಗೆ ಜಲಂಧರ್ ಮತ್ತು ಅಂಬಾಲಾ ಡಿವಿಜನ್ನುಗಳು, ಲಾಹೋರ್ ಡಿವಿಜನ್ನಿನ ಅಮೃತಸರ ಜಿಲ್ಲೆ ಲಾಹೋರ್ ಡಿವಿಜನ್ನಿನ ಲಾಹೋರ್ ಮತ್ತು ಗುರುದಾಸಪುರ ಜಿಲ್ಲೆಗಳನ್ನು ಎರಡು ಪ್ರಾಂತಗಳಿಗೂ ಹಂಚಲಾಗಿದೆ ಪೂರ್ವ ಬಂಗಾಳಕ್ಕೆ ಚಿತ್ತಗಾಂಗ್ ಮತ್ತು ಢಕ್ಕಾ ಡಿವಿಜನ್ನುಗಳು. ಪಶ್ಚಿಮ ಬಂಗಾಳಕ್ಕೆ ಬರ್ಡ್ವಾನ್ ಡಿವಿಜನ್ ಕಲ್ಕತ್ತ ಜಿಲ್ಲೆ, ೨೪ ಪರಗಣಗಳು, ಪ್ರೆಸಿಡೆನ್ಸಿ ಡಿವಿಜನ್ನಿನ ಮುರ್ಷಿದಾಬಾದ್, ರಾಜಶಾಹಿ ಡಿವಿಜನ್ನಿನ ಡಾರ್ಜಲಿಂಗ್ ಜಿಲ್ಲೆಗಳು.

ಗಾಂಧೀಜಿಯವರ ಭಾವಚಿತ್ರ ಅನಾವರಣ

ಮೈಸೂರು ೧೮

ಮಹಾರಾಜಾ ಕಾಲೇಜಿನ ರಾಜ್ಯಶಾಸ್ತ್ರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಪ್ರೊ॥ ಕೆ ವಿ ಪುಟ್ಟಪ್ಪನವರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಅನಾವರಣ ಮಾಡುವರು. ಶ್ರೀಗಳಾದ ಎ ಸೀತಾರಾಮಯ್ಯ ಮತ್ತು ಯಾಮುನಾಚಾರ್ಯರುಗಳು ಭಾಷಣ ಮಾಡುವರು.

ಉಚ್ಚ ಶಿಕ್ಷಣಕ್ಕಾಗಿ ಲಂಡನ್ನಿಗೆ ಪ್ರಯಾಣ

ನರಸಿಂಹರಾಜ ಮೊಹಲ್ಲಾದಲ್ಲಿರುವ ಡಾ॥ ಕೆ ರಾಮಣ್ಣನವರ ಪುತ್ರರೂ, ದಿವಾನ್ ಸೇವಾ ಪ್ರಸಕ್ತ ಹೆಚ್. ವೆಂಕಟರಾಮಯ್ಯನವರ ಅಳಿಯಂದಿರೂ, ಆದ ಶ್ರೀ ಕೆ ಎಸ್ ಕೃಷ್ಣಸ್ವಾಮಿ ಎಂ ಎ ಅವರು ಲಂಡನ್ನಿನಲ್ಲಿ ಅರ್ಥಶಾಸ್ತ್ರದಲ್ಲಿ ಉಚ್ಚ ಶಿಕ್ಷಣ ಪಡೆಯುವ ಸಲುವಾಗಿ ನಿನ್ನೆ ದಿನ ಬೊಂಬಾಯಿಗೆ ಹೊರಟರು. ಅವರು ೨೧ ನೇ ತಾರೀ ಸ್ಟ್ರಾತ್ ಮೋರ್ ಎಂಬ ಹಡಗಿನಲ್ಲಿ ಲಂಡನ್ನಿಗೆ ಪ್ರಯಾಣ ಬೆಳೆಸುವರು ಅವರಿಗೆ ಭಾರತ ಸರ್ಕಾರದಿಂದ ವಿದ್ಯಾರ್ಥಿ ವೇತನವು ದೊರೆತಿದೆ.

ಸಾಧ್ವಿ

ತಾ॥ ೧೮-೮-೪೭ ಸೋಮವಾರ

ಮೈಸೂರು ಮತ್ತು ಸ್ವಾತಂತ್ರ್ಯ ದಿನಾಚರಣೆ

ಕಳೆದ ಶುಕ್ರವಾರ ಜಗತ್ತಿನಲ್ಲೆಲ್ಲಾ ಭಾರತ ಸ್ವಾತಂತ್ರ್ಯ ದಿನಾಚರಣೆಯು ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತಷ್ಟೆ. ೧೪ನೆಯ ತಾರೀಖು ಮಧ್ಯರಾತ್ರಿಯಲ್ಲಿ ಭಾರತದ ರಾಷ್ಟ್ರ ನಾಯಕರು ದೆಹಲಿ ನಗರದಲ್ಲಿ ಸ್ವಾತಂತ್ರ್ಯ ಅಧಿಕಾರವನ್ನು ವಹಿಸಿಕೊಂಡ ವಿಧಾನವು ಸಕಲರಿಗೂ ರೋಮಾಂಚನವನ್ನುಂಟು ಮಾಡುತ್ತದೆ. ಬ್ರಿಟಿಷ್ ರಾಜ್ಯಭಾರವು ಈ ದೇಶದಲ್ಲಿ ಅಂದಿಗೆ ಮುಕ್ತಾಯವಾಯಿತೆಂದೂ, ಅಧಿಕಾರ ಸೂತ್ರಗಳನ್ನು ರಾಜ್ಯಾಂಗ ಸಭೆಯೇ ವಹಿಸಿಕೊಂಡಿರುವುದೆಂದೂ ಆ ಮಧ್ಯರಾತ್ರಿಯಲ್ಲಿ ಮಾಡಿದ ಘೋಷಣೆಯು ಸುವರ್ಣಾಕ್ಷರಗಳಲ್ಲಿ ಬರೆದಿಡಲ್ಪಡತಕ್ಕದ್ದಾಗಿದೆ. ಇದುವರೆಗೆ ಬ್ರಿಟಿಷ್ ಚಕ್ರವರ್ತಿಗಳಿಗೆ ರಾಜಭಕ್ತಿಯನ್ನು ಸಲ್ಲಿಸುತ್ತಿದ್ದುದು ಹೋಗಿ ದೇಶ ಮಾತೆಯ ಸೇವೆಗೆ ಸರ್ವಸ್ವವನ್ನೂ ಅರ್ಪಿಸುವುದಾಗಿ ಸರ್ವರೂ ಮಾಡಿದ ಪ್ರತಿಜ್ಞೆಯು ಭಾರತದ ಇತಿಹಾಸದಲ್ಲಿ ಹೊಸ ಪ್ರಕರಣವಾಗಿರುತ್ತದೆ.

ರಾಷ್ಟ್ರ ನಾಯಕರುಗಳೂ, ಪ್ರಾಂತಗಳ ಗೌರ್ನರುಗಳೂ, ರಾಜಾಧಿರಾಜರುಗಳೂ ಅಂದು ಅತ್ಯಂತ ಶ್ರದ್ಧಾಭಕ್ತಿಗಳಿಂದ ರಾಷ್ಟ್ರ ಧ್ವಜವನ್ನು ಹಾರಿಸಿ ಸ್ವತಂತ್ರ ಭಾರತಕ್ಕೆ ತಮ್ಮ ವಂದನೆಯನ್ನು ಸಲ್ಲಿಸಿದರು. ಲಂಡನ್, ನ್ಯೂಯಾರ್ಕ್, ಮಾಸ್ಕೋ-ಮುಂತಾದ ಕಡೆಗಳಲ್ಲಿ ಭಾರತ ರಾಯಭಾರಿಗಳು ಸ್ವತಂತ್ರ ಭಾರತದ ಧ್ವಜವನ್ನು ಹಾರಿಸಿದರು. ಹಿಂದೂಸ್ಥಾನದಲ್ಲಿರುವ ಬ್ರಿಟಿಷ್ ಗೌರ್ನರುಗಳೂ ಸಹ ಅಂದು ಭಾರತ ರಾಷ್ಟ್ರ ಧ್ವಜವನ್ನು ಹಾರಿಸಿ ತಮ್ಮ ಗೌರವವನ್ನು ಸಲ್ಲಿಸಿದರು. ಬ್ರಿಟಿಷ್ ಪ್ರಭುತ್ವದ ಆಯಕಟ್ಟಿನ ಪ್ರದೇಶಗಳಲ್ಲಿದ್ದ ಎಲ್ಲಾ ಕೋಟೆ ಕೊತ್ತಲುಗಳ ಮೇಲೆಯೂ ಈ ಧ್ವಜವನ್ನು ಹಾರಿಸಲಾಗಿದ್ದಿತು.

ಲೇಕ್‌ಸಕ್ಸೆಸ್ ಎಂಬಲ್ಲಿರುವ ವಿಶ್ವ ಜನಾಂಗ ಸಂಸ್ಥೆಯ ಭವನದಲ್ಲಿ ಇದುವರೆಗೆ ಹಿಂದೂಸ್ಥಾನದ ಪರವಾಗಿ ಹಾರಿಸಲಾಗುತ್ತಿದ್ದ ಬ್ರಿಟಿಷ್ ಯೂನಿಯನ್ ಜಾಕ್ ಬಾವುಟವನ್ನು ಅಂದು ಅಧಿಕಾರಿಯುತವಾಗಿ ಕೆಳಕ್ಕೆ ಇಳಿಸಿ ಅದರ ಸ್ಥಾನದಲ್ಲಿ ನೂತನ ಭಾರತ ರಾಷ್ಟ್ರ ಧ್ವಜವನ್ನು ಏರಿಸಿದ ಸಮಾರಂಭವು ಹಿಂದೂಸ್ಥಾನದ ಸ್ವತಂತ್ರ ಪದವಿಯ ಸಾಧನೆಯನ್ನು ಜಗತ್ತಿಗೇ ಸಾರುವಂತಿದ್ದಿತು.

ಜರ್ಮನ್ ದೇಶದಲ್ಲಿ ಆಕ್ಲಿನ ಬ್ರಿಟಿಷ್ ಗೌರ್ನರ್‌ರವರು ಭಾರತದ ರಾಷ್ಟ್ರ ಧ್ವಜವನ್ನು ಹಾರಿಸಿ ಅದಕ್ಕೆ ವಂದನೆಯನ್ನು ಸಲ್ಲಿಸಿದರು. ಶಿಮ್ಲಾದಲ್ಲಿ... ಮತ್ತು ಲೀಗ್ ಸಂಸ್ಥಾನಗಳಲ್ಲಿ ಅಲ್ಲಿನ ಮುಖಂಡರುಗಳೇ ರಾಷ್ಟ್ರ ಧ್ವಜವನ್ನು ಹಾರಿಸಿದರು. ... ಭಾರತ ... ಅಲ್ಲಿನ ರಾಜರು ... ಭಕ್ತಿ ... ಸ್ವಾತಂತ್ರ್ಯ ದಿನಾಚರಣೆಯಲ್ಲಿ ಅಲ್ಲಿನ ರಾಜರೇ ಸ್ವತಃ ಭಾಗ ವಹಿಸಿ ತಮ್ಮ ಅರಮನೆಯಲ್ಲಿಯೇ ರಾಷ್ಟ್ರ ಧ್ವಜವನ್ನು ಹಾರಿಸಿ ಅಲ್ಲಿಂದಲೇ ಮೆರವಣಿಗೆಯನ್ನು ಹೊರಡಿಸಿ ಎಲ್ಲೆಲ್ಲೂ ದೀಪೋತ್ಸವಗಳನ್ನು ನೆರವೇರಿಸಿದ ಅಂಶವು ಅತ್ಯಂತ ಹೆಮ್ಮೆ ಪಡತಕ್ಕದ್ದಾಗಿದೆ. ಹೀಗೆ ಭಾರತೀಯರಾದ ಸಕಲ ಆಬಾಲವೃದ್ಧರೂ ಅಂದು ವೈಭವದಿಂದ ಉತ್ಸವವನ್ನು ಆಚರಿಸಿರುವರು.

ನಮ್ಮ ಮೈಸೂರಿನ ಪ್ರಭುತ್ವದವರು ಅಂದು ಅನುಸರಿಸಿದ ನೀತಿಯು ಸ್ವಲ್ಪವೂ ತೃಪ್ತಿಕರವಾಗಿರಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಎರಡು ದಿನ ರಜಾ ಕೊಡುವುದರ ಹೊರತು ಬೇರೆ ಯಾವ ರೀತಿಯಲ್ಲಿಯೂ ಅವರು ಈ ಮಹೋತ್ಸವದಲ್ಲಿ ಭಾಗಿಗಳಾಗಿರುವುದಿಲ್ಲ. ಇಂತಹ ಅಪೂರ್ವ ಪರ್ವ ಕಾಲದಲ್ಲಿ ಯಾವ ನಾಗರಿಕ ಸರ್ಕಾರವೇ ಆಗಲಿ ಮೊದಲು ಮಾಡುವ ಕೆಲಸವೆಂದರೆ ಖೈದಿಗಳ ಬಿಡುಗಡೆ. ಸ್ವಾತಂತ್ರ್ಯ ದಿನಾಚರಣೆಯ ವೈಭವಯುತ ಕಾರ್ಯಕ್ರಮಗಳು ನಿರ್ಧಾರವಾಗುವುದಕ್ಕೆ ಬಹಳ ಕಾಲ ಮುಂಚೆಯೇ ಪ್ರಾಂತ ಸರ್ಕಾರಗಳು ಬಂದಿಗಳ ಬಿಡುಗಡೆಯ ವಿಚಾರವನ್ನು ತ್ವರಿತ ಪಡಿಸಿದುವು. ಮರಣ ದಂಡನೆಯನ್ನೇ ರದ್ದು ಮಾಡುವುದಾಗಿ ಸೂಚಿಸಿದುವು. ಇತ್ತೀಚೆಗೆ ಒಂದೊಂದು ಪ್ರಾಂತವೂ ಸಾವಿರಾರು ಜನ ಖೈದಿಗಳನ್ನು ಬಿಡುಗಡೆ ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಮಧ್ಯಪ್ರಾಂತದಲ್ಲಿ ಹದಿನೂರು ಸಾವಿರ ಬಂದಿಗಳಿಗೆ ವಿಮೋಚನೆಯಾಯಿತೆಂಬ ವಿಷಯವು ಅತ್ಯಂತ ಹರ್ಷದಾಯಕವಾಗಿರುತ್ತದೆ.

ನಮ್ಮ ಸಂಸ್ಥಾನದಲ್ಲಿ ಶ್ರೀ ಹನುಮಂತಯ್ಯನವರೂ ಸೇರಿ ಕೇವಲ ಹತ್ತಾರು ಜನ ರಾಜಕೀಯ ಖೈದಿಗಳು ಮಾತ್ರ ಇರುವರು. ವಿವಿಧ ಅಪರಾಧಗಳಲ್ಲಿ ಒಂದೆರಡು ಸಾವಿರ ಜನ ಇತರ ಖೈದಿಗಳಿರಬಹುದು. ಇವರ ಪೈಕಿ ಯಾರಿಗೂ ಈ ಸಂತೋಷ ಸಮಾರಂಭದಲ್ಲಿ ವಿಮೋಚನೆಯಾಗದಿದ್ದುದು ಅತ್ಯಂತ ಅಸಮರ್ಪಕವಾದ ವಿಷಯ. ಎರಡನೆಯದಾಗಿ ಸರ್ಕಾರದವರು ತಾವಾಗಿಯೇ ಈ ಮಹೋತ್ಸವವನ್ನು ನೆರವೇರಿಸಲು ತಮ್ಮ ಕೈ ಕೆಳಗಿನ ಯಾವ ಇಲಾಖೆಗಳಿಗೂ ಸೂಚನೆಯನ್ನು ಕೊಟ್ಟಿರುವುದಿಲ್ಲ. ದೇವಸ್ಥಾನ, ಮಸೀದಿ, ಚರ್ಚು ಮುಂತಾದ ಕಡೆ ವಿಶೇಷ ಪೂಜೆಗಳನ್ನು ನಡೆಸುವುದಕ್ಕಾಗಲೀ ವಿದ್ಯಾಶಾಲೆಗಳಲ್ಲಿ ಮಕ್ಕಳಿಗೆ ತಿಂಡಿಗಳನ್ನು ಹಂಚುವುದಕ್ಕಾಗಲೀ ಯಾವ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಈ ಮಹೋತ್ಸವಕ್ಕಾಗಿ ಅವರು ಮೂರು ಕಾಸನ್ನೂ ಮಂಜೂರು ಮಾಡಿರುವುದಿಲ್ಲ. ಪೌರಸಭೆಗಳೂ, ಜಿಲ್ಲಾಬೋರ್ಡುಗಳೂ ಮಾತ್ರ ಈ ಏರ್ಪಾಡುಗಳನ್ನು ಮಾಡಿದ್ದುವು.

ರಾಜ್ಯಾಂಗ ಸಭೆಯು ಹದಿನಾಲ್ಕನೇ ತಾರೀಖು ಮಧ್ಯರಾತ್ರಿಯಲ್ಲಿ ಅಧಿಕಾರವನ್ನು ವಹಿಸಿಕೊಂಡಾಗ ನಮ್ಮ ದಿವಾನರು ಅಲ್ಲಿ ಹಾಜರಾಗಿ ಇರಲಿಲ್ಲ. ಇದ್ದರೂ ಸಹ ಅತ್ಯಂತ ಅಸಮಾಧಾನಕರ... ಕೊಟ್ಟಿರುತ್ತದೆ. ರಾಜ್ಯಾಂಗ ಸಭೆಯ ಮೈಸೂರಿನ ಪ್ರತಿನಿಧಿಗಳಿಗೆ ತಾವೇ ತೆರಳಿರುವುದಾಗಿ ಹೇಳಿದವರು ಅಂತಹ ಅಮೂಲ್ಯ ಸಮಯದಲ್ಲಿ ಅಲ್ಲಿಗೆ ಹೋಗದೆ ಇಲ್ಲಿಯೇ ಇದ್ದುದು ಒಂದು ದೊಡ್ಡ ಹುಷಾರಿ. ನೆರೆಯ ಪ್ರಾಂತಗಳು ಸಂತೋಷ ಸಮಯದಲ್ಲಿ ತಮ್ಮ ನಾಗರಿಕರಿಗೆ ವಿಶೇಷ ಸಂಭ್ರಮವನ್ನು ಕೊಟ್ಟವು. ನಮ್ಮಲ್ಲಿಯಾದರೋ ಒಂದು ಸಂಬಳವನ್ನು ಸಾಲವಾಗಿ ಕೊಡದೆ ಯಾವ ವಿವಿಧದಲ್ಲಿ ನೋಡಿದರೂ ನಮ್ಮ ಸರ್ಕಾರದವರು ಈ ಮಹೋತ್ಸವದಲ್ಲಿ ಶ್ರದ್ಧೆಯಿಂದ ಭಾಗವಹಿಸಿದಂತೆ ತೋರುವುದಿಲ್ಲ. ಆ ದಿನ ಅವರು ಅರಮನೆಯ ದೀಪವನ್ನಾದರೂ ಹಚ್ಚುವಂತೆ ಮಾಡಿದ್ದರೆ ಸಕಲರಿಗೂ ಸಂತೋಷವನ್ನು ಮಾಡಿರುತ್ತದೆ. ಮೈಸೂರಿನ ಹೆಸರಿಗೆ ಮುಖ್ಯ ಕಾರಣವಾದ ಈ ದೀಪಾವಳಿ ಆ ದಿನವೇ ಇಲ್ಲದಿದ್ದರು ದೊಡ್ಡ ಕೊರತೆಯೇ ಸರಿ. ಬ್ರಿಟಿಷರು ಬಿಟ್ಟು ಹೋಗುವುದರಿಂದ ಸಂಸ್ಥಾನದ ಪ್ರಜೆಗಳೆಲ್ಲರೂ ಸಂಪೂರ್ಣ ಸ್ವಾತಂತ್ರ್ಯ ಪಡೆಯುವವರೆಂದು ಸಾರಲಾಗುತ್ತಿದೆ. ಈ ಸಮಾರಂಭದ ಸ್ವಾರಸ್ಯಕ್ಕಾದರೂ ನಮ್ಮ ಪ್ರಭುತ್ವದವರು ಇನ್ನೂ ಹೆಚ್ಚಿನ ಶ್ರದ್ಧಾ ಭಕ್ತಿಗಳನ್ನು ಈ ಸಮಯದಲ್ಲಿ ವಹಿಸಬೇಕಾಗಿದ್ದುದು ಅವರ ಕರ್ತವ್ಯ.

ಮುಂದೆ ವಿಷಕ್ರಿಮಿಗಳ ಯುದ್ಧ

ನೌಕಾ, ಭೂ ಅಥವಾ ವಾಯು ಬಲವಾಗಲೀ, ಅಣುಶಕ್ತಿಯಾಗಲೀ ಆ ಕಾಲದಲ್ಲಿ ಕ್ರಿಮಿಗಳ ಪ್ರಯೋಗದಷ್ಟು ಗಮನಾರ್ಹವಾಗಲಾರವು. ಮುಂದು ಯುದ್ಧವು ನಡೆದರೆ ಅದು ವಿಷಕ್ರಿಮಿಗಳ ಯುದ್ಧವಾಗುತ್ತದೆ – ಎಂಬುದಾಗಿ ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯದರ್ಶಿ ಡಾ॥ ಜಿ. ಬ್ರಾಕ್ ಚಿಸ್ ಹಾರ್ ರವರು ತಿಳಿಸಿರುವರು.

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply I. N. D. Basavanagudi, Bangalore.

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮಯ್ಯ, ಡಿ॥ ಬೋರ್ಡ್ ವೈದ್ಯ, ಅರಳಪೇಟೆ, ಚಾಮರಾಜನಗರ ತಾ॥

ರಾಜ್‌ಕಮಲ್, ಮೈಸೂರು.

ತಾ॥ 15—8—47 ರಿಂದ ೨ ನೇ ವಾರ

"ಮಹಾನಂದ"

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ೧ ಭಾಗ ಕಾಂಗ್ರೆಸ್ ಟಾಪಿಕಲ್

From 16-8-47 for 7 days daily at 10-30 a. m.

The Court Dancer

(in English) with Sadhana Bose, Prathimadas Gupta, Prithviraj, Nayampalli.

Edited printed and published by A. R. Nagarajau at the Sadhvi Press, D. Subbaiah Road Mysore

ಜೈ ಹಿಂದ್ !

ಭಾರತವು ಸ್ವತಂತ್ರವಾಗಿ ತಾನೇ ತಾನಾಗಿ ವಿರಾಜಿಸುತ್ತಿರುವ ಈ ಶುಭ ಸನ್ನಿವೇಶದಲ್ಲಿ ನನ್ನ ರಾಷ್ಟ್ರ ನಾಯಕರಿಗೂ, ಬಂಧು ಮಿತ್ರರಿಗೂ, ಸಹೋದ್ಯೋಗಿಗಳಿಗೂ, ಪೋಷಕರಿಗೂ ಸಕಲರಿಗೂ ಸರ್ವವಿಧವಾದ ಸಂಪತ್ತನ್ನೂ ಕೊಟ್ಟು ಕಾಪಾಡಲೆಂದು ಭಗವಂತನಲ್ಲಿ ಪ್ರಾರ್ಥನೆ.

ಎಂ. ಹೆಚ್. ತಿಮ್ಮಪ್ಪ,

ಪ್ರೊಪ್ರೈಟರ್,

ಶ್ರೀ ಕೃಷ್ಣ ಫ್ಲೋರ್ ಅಂಡ್ ಪ್ಲೇಟ್ ರೀ ಗ್ರೂವಿಂಗ್ ವರ್ಕ್ಸ್, ಡೋರ್ ನಂ. 1260 ಚಾಳಪ್ಪನ ಗುಡಿ ಬೀದಿ, ಮೈಸೂರು

ವುಡ್‌ಲ್ಯಾಂಡ್ಸ್

ತಾ॥ 15-8-47 ರಿಂದ ಅಮೋಘ ಪ್ರಾರಂಭ



ಪೀರ್ ಕುನಾಲ್

(ಹಿಂದಿ)

— ಪಾತ್ರ: —

ಕಿಶೋರ್ ಸಾಹು, ಶೋಭನಾ ಸಮರ್ಥ, ದುರ್ಗಾ ಖೋಟೆ

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೧೯-೮-೪೭ [ಸಂಚಿಕೆ ೨೫

ಇಂದೂರನ್ನು ಸೇರಿಸಲು ಪಟೇಲರ ನಿರಾಕರಣೆ

ಸ್ವಾತಂತ್ರ್ಯ ದಿನಾಚರಣೆ

೫ ನೇ ತಾ॥ ನ ಸಮಾರಂಭಗಳು

ಸರಕಾರ ನೌಕರರ ಸಂಘಗಳ ಫೆಡರಲ್ ಯೂನಿಯನ್‌ನವರು ಚಾಮರಾಜ ರಸ್ತೆಯಲ್ಲಿರುವ ಸರಕಾರ ಭವನದಲ್ಲಿ ನೆನ್ನೆ ಸ್ವಾತಂತ್ರ್ಯೋತ್ಸವವನ್ನು ನೆರವೇರಿಸಿದರು. ಶ್ರೀ ...ರ್ ನರಸಿಂಹಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ ಸುಬ್ಬರಾಯ ಶಾಸ್ತ್ರಿಗಳು ರಾಷ್ಟ್ರಧ್ವಜ ಮತ್ತು ಸಹಕಾರ ಧ್ವಜಗಳನ್ನು ಹಾರಿಸಿದರು. ಅನಂತರ ನಡೆದ ಸಭೆಯಲ್ಲಿ ...ದ ಅಧ್ಯಕ್ಷರಾದ ಶ್ರೀ ವೈ ಶ್ರೀನಿವಾಸನವರು ಸ್ವತಂತ್ರ ಭಾರತದಲ್ಲಿ ಸಹಕಾರದ ಸ್ಥಾನವನ್ನು ವಿವರಿಸಿದರು. ಶ್ರೀ ಗ... ಅಗರಂ ರಂಗಯ್ಯ, ಕಾಕಾಚಾರ್ ಮತ್ತು ...ರಾಮಣ್ಣನವರು ಸ್ವಾತಂತ್ರ್ಯ ಮತ್ತು ಸಹಕಾರದ ಅಗತ್ಯಗಳನ್ನು ಕುರಿತು ಭಾಷಣ ಮಾಡಿದರು.

...ರ್ಕಸಾವೆಯಲ್ಲಿ ಕಾಂ॥ ಮುಕುಂದ ...ರಾಜೇಗೌಡರಿಂದ ಧ್ವಜಾರೋಹಣ ...ಷ್ಟ ೬ ಜೊತೆ ಎತ್ತುಗಳನ್ನು ಕಟ್ಟಿ ...ರಥದಲ್ಲಿ ಭಾರತ ಮಾತೆ, ನೇತಾಜಿ ...ಸ್, ಪಂ॥ ನೆಹರೂ, ಗಾಂಧೀಜಿಯವರ ...ಳ ಮೆರವಣಿಗೆ ಮತ್ತು ಹಾಸನ ಜಿ... ಕಾಂ॥ ಅಧ್ಯಕ್ಷರಾದ ಶ್ರೀ ಗೋ॥ ರಾ...ಂದ್ರರಾವ್ ಶ್ರೀ ಒಕ್ಕಪ್ಪಗೌಡರಿಂದ ...ಣಗಳು ನಡೆದುವು.

...ಜಧಾನಿಯ ಕನ್ಯಕಾ ಪರಮೇಶ್ವರೀ ...ರ ಸಂಘದಲ್ಲಿ ದಿನಾಚರಣೆಯು ಅಂ... ಗಾಂಧೀಜಿಯವರ ಮತ್ತು ಪಂಡಿತ ...ರವರ ಭಾವಚಿತ್ರಗಳ ಅನಾವರಣ ...ನೆದ ಅಧ್ಯಕ್ಷರಾದ ಶ್ರೀ ಪಿ ಗೋ... ಕೃಷ್ಣಶೆಟ್ಟರಿಂದ ನೆರವೇರಿಸಲ್ಪಟ್ಟಿತು.

...ಜನಗೂಡು ತಾಲ್ಲೂಕು ಹೊಸೂರು ...ದಲ್ಲಿ ಧ್ವಜಾರೋಹಣ, ರಾಷ್ಟ್ರಗೀತೆ ...ಗಾನ ಮತ್ತು ತಿಂಡಿಗಳ ವಿನಿಯೋಗ ...ತ್ತು, ಭಾರತ ಮಾತೆ ಮತ್ತು ಗಾಂಧೀಜಿಯವರ ಭಾವಚಿತ್ರಗಳ ಮೆರವಣಿಗೆ ...ಗಳು ನಡೆದುವು.

...ಜಧಾನಿಯ ಮೈಸೂರು ಸ್ಪಿನ್ನಿಂಗ್ ಮಿಲ್ ...ಕೆಲಸಗಾರರ ಸಂಘದ ಅಧ್ಯಕ್ಷರಾದ ...ಬಿ ಎಸ್ ರಾಮಾರಾಯರಿಂದ ಧ್ವಜಾರೋಹಣ, ಸಹಸ್ರಾರು ಮಂದಿ ಕೆಲಸಗಾರರ ಮೆರವಣಿಗೆಗಳೂ ಭಾಷಣಗಳೂ ಆ...

...ರಾಯಪಟ್ಟಣದ ತಾಲ್ಲೂಕಿನ ...ರಾಜಪುರದಲ್ಲಿ ಶ್ರೀ ಸಿ. ಜಿ ದೇವರಾ... ಅಧ್ಯಕ್ಷತೆಯಲ್ಲಿ ದಿನಾಚರಣೆಯು ...೧೪ ನೇ ತಾ॥ ರಾತ್ರಿ ವಿಶೇಷ ...ಗಳು ನಡೆದುವು. ಮಾರನೆಯ ದಿ... ಪ್ರಭಾತಫೇರಿ, ಧ್ವಜವಂದನೆಗಳೂ, ಧ್ವ...ಲ್ಲಿ ಹರಿಜನರಿಂದ ಮದ್ಯಪಾನ ವಿ... ಪ್ರತಿಜ್ಞೆಗಳು ಜರುಗಿದುವು. ಮಧ್ಯಾಹ್ನ ...ಗಳು, ಸಂಜೆ ಗಾಂಧೀಜಿಯವರ ...ಪ್ರದರ್ಶನ ಮತ್ತು ಗ್ರಾಮದ ...ನಿಯವರ ದೇವಾಲಯದ ಗರ್ಭ ...ಗೃಹಕ್ಕೆ ಹರಿಜನರಿಗೆ ಪ್ರವೇಶ ಮತ್ತು ...ಪೂಜಾದಿಗಳಾದುವು.

ಬ್ರಿಟಿಷ್ ಪ್ರಥಮ ಸೇನೆ ಹಿಂದಿರುಗಿತು

...ರತದಿಂದ ವಾಪಸಾಗುತ್ತಿರುವ ಬ್ರಿಟಿ...ಷ್ ಸೈನ್ಯದ ಪ್ರಥಮ ತಂಡವು ಮೊನ್ನೆ ...ಬಾಂಬಾಯಿ ಮಾರ್ಗವಾಗಿ ಬ್ರಿಟನ್ನಿಗೆ ...ಹೊರಟಿತು.

ಆಗಸ್ಟ್ ತಿಂಗಳಿನ ಮಹತ್ವ

ಆಗಸ್ಟ್ ತಿಂಗಳು ಅತ್ಯಂತ ಮಹತ್ವಪೂರ್ಣವಾದ ಮಾಸವೆಂದು ಆಧುನಿಕ ಮತ್ತು ಪುರಾತನ ನಿದರ್ಶನಗಳಿಂದ ಕಂಡುಬಂದಿದೆ. ಈ ತಿಂಗಳಿನಲ್ಲಿ ಶಾಶ್ವತವಾದ ಸಂತೋಷಜನಕ ಮತ್ತು ದುಃಖದಾಯಕವಾದ ಘಟನೆಗಳು ಜರುಗಿವೆ. ಮೊದಲು ಈ ತಿಂಗಳನ್ನು ಸೆಕ್ಸ್‌ಟಿಲಿಯಸ್-ಎಂದು ಕರೆಯಲಾಗುತ್ತಿತ್ತು. ಕಿರೀಟಧಾರಿಯಾಗಿದ್ದ ಆಗಸ್ಟಸ್ ಚಕ್ರವರ್ತಿಗೆ ಈ ತಿಂಗಳಿನಲ್ಲಿ ಸುಖ, ಸಂತೋಷಗಳೂ ಯಶಸ್ಸೂ ದೊರೆತುದರಿಂದ ಅದನ್ನು ಅವನು ಆಗಸ್ಟ್ ಎಂದು ಕರೆದನು. ಭಾರತದ ಸಂಬಂಧವಾಗಿ ಸಂಧಾನ ಸಲಹೆಗಳೂ ಮಾಂಟೆಗೋ ಸುಧಾರಣೆಯ ಘೋಷಣೆಯೂ ಈ ತಿಂಗಳಿನಲ್ಲಿ ನಡೆದುವು. ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ಅಸಹಕಾರ ಚಳವಳಿ ಮತ್ತು ಬಂಗಾಳದ ಭೀಕರ ಕ್ಷಾಮಗಳು ಆಗಸ್ಟಿನಲ್ಲಿ ತಲೆದೋರಿದುವು. ವಿಶ್ವಕವಿ ರವೀಂದ್ರನಾಥ ಟಾಗೋರ್, ಯೋಗಿ ಅರವಿಂದಘೋಷ್ ಮತ್ತು ಫ್ರಾನ್ಸಿನ ಚಕ್ರವರ್ತಿ ವೀರ ನೆಪೋಲಿಯನ್ ಬೋನೊಪಾರ್ಟ್ ಇವರುಗಳು ಆಗಸ್ಟ್ ತಿಂಗಳಿನಲ್ಲಿ ಜನ್ಮ ತಾಳಿದರು. ಭಾರತದ ಅಪ್ರತಿಮ ನಾಯಕ ಮಹಾದೇವ ಗೋವಿಂದ ರಾನಡೆಯವರು ಆಗಸ್ಟ್ ೧೫ ನೇ ತಾರೀಖು ಕಣ್ಮರೆಯಾದರು. ಅದೇ ಆಗಸ್ಟ್ ೧೫ ನೇ ತಾರೀಖಿನ ದಿನ ಭಾರತವು ತನ್ನ ಅಹಿಂಸಾ ಮಾರ್ಗದ ಹೋರಾಟದಿಂದ ಬ್ರಿಟಿಷರ ದಾಸ್ಯ ಶೃಂಖಲೆಗಳಿಂದ ಬಿಡುಗಡೆ ಹೊಂದಿ ತನ್ನ ಸ್ವಾತಂತ್ರ್ಯ ಸಿದ್ಧಿಯನ್ನು ಪಡೆದಿರುತ್ತದೆ.

ಪಾಕಿಸ್ತಾನ್ ಸರ್ಕಾರಕ್ಕೆ ಈಜಿಪ್ಟಿನ ಅಂಗೀಕಾರ

ಪಾಕಿಸ್ತಾನದ ಹೊಸ ಸರ್ಕಾರವನ್ನು ಈಜಿಪ್ಟು ಅಂಗೀಕರಿಸಿ ರಾಯಭಾರಿ ವಿನಿಯಮ ಮಾಡಿಕೊಳ್ಳಲು ಸಮ್ಮತಿಸುತ್ತದೆ.

ವಿಶ್ವವಿದ್ಯಾಲಯದ ಮೇಲಿನ ದಾವಾ

ಬೆಂಗಳೂರಿನ ೬ ಜನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದವರ ಮೇಲೆ ಹೂಡಿದ್ದ ದಾವಾ ವಜಾ ಮಾಡಲಾಗಿದೆ ಎಂದು ನಿನ್ನೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ವಿದ್ಯಾರ್ಥಿಗಳು ಹಾಕಿದ್ದ ಟೆಂಪರರಿ ಇಂಜಂಕ್ಷನ್ ಅರ್ಜಿಯನ್ನು ಸಬಾರ್ಡಿನೇಟ್ ಜಡ್ಜರು ನಿರಾಕರಿಸಿದ್ದಾರೆ - ಎಂದು ತಿದ್ದಿಕೊಳ್ಳಬೇಕಾಗಿ ಕೋರುತ್ತೇವೆ. ದಾವಾ ...ನೇ ತಾರೀಖಿಗೆ ಮುಂದುವರೆಸಲ್ಪ...

ಭಾರತ ಯೂನಿಯನ್ನಿಗೆ ಇಂದೂರನ್ನು ಸೇರಿಸುವುದಿಲ್ಲ

ಪ್ರವೇಶ ಪತ್ರಕ್ಕೆ ರುಜು ಹಾಕಿ ತಾವು ಭಾರತ ಯೂನಿಯನ್ನಿಗೆ ಸೇರುವುದಾಗಿ ಇಂದೋರ್ ಅರಸರು ಬರೆದಿರುವುದನ್ನು ಸರ್ದಾರ್ ಪಟೇಲರು ನಿರಾಕರಿಸಿರುವರೆಂದು ವರದಿಯಾಗಿದೆ. ಅಲ್ಲಿನ ಮಹಾರಾಜರು ನಿನ್ನೆ ದೆಹಲಿಗೆ ತೆರಳಿದ್ದಾರೆ. ಅಲ್ಲಿನ ಪ್ರಜಾ ಮಂಡಲದ ಪ್ರತಿನಿಧಿಯೊಬ್ಬರೂ ಸಹ ದೆಹಲಿಗೆ ಹೋಗಿರುವರು.

ಬತೇರಿಯ ಮೇಲೆ ರಾಷ್ಟ್ರ ಧ್ವಜ

ಸ್ವಂ. ಸು] [ಶ್ರೀರಂಗಪಟ್ಟಣ ೧೯

ಕಳೆದ ಶುಕ್ರವಾರ ಸ್ವಾತಂತ್ರ್ಯ ದಿನಾಚರಣೆಯು ಇಲ್ಲಿ ವೈಭವದಿಂದ ಜರುಗಿತು. ನಗರದ ಎಲ್ಲ ಬೀದಿಗಳೂ ತಳಿರು ತೋರಣಗಳಿಂದಲೂ, ಚಪ್ಪರಗಳಿಂದಲೂ ಅಲಂಕೃತವಾಗಿದ್ದುವು. ಟಿಪ್ಪು ಸುಲ್ತಾನನ ಪತನವಾದ ದಿನದಿಂದ ಬತೇರಿಯ ಮೇಲೆ ಹಾರುತ್ತಿದ್ದ ಯೂನಿಯನ್ ಜಾಕ್ ಧ್ವಜವನ್ನು ಕೆಳಗಿಳಿಸಿ ರಾಷ್ಟ್ರ ಧ್ವಜವನ್ನು ಹಾರಿಸಲಾಯಿತು.

ನಗರದ ಎಲ್ಲ ಬೀದಿಗಳಲ್ಲೂ ರಾಷ್ಟ್ರ ಧ್ವಜದ ಮತ್ತು ರಾಷ್ಟ್ರ ನಾಯಕರ ಮೆರವಣಿಗೆ ನಡೆಯಿತು. ಪೌರಸಭೆಯವರಿಂದ ಎಲ್ಲರಿಗೂ ಸಿಹಿ ತಿಂಡಿಯ ವಿನಿಯೋಗವಾಯಿತು. ಶ್ರೀರಂಗಪಟ್ಟಣದಲ್ಲಿ ಕಂ॥ ಶ್ರೀನಿವಾಸಯ್ಯನವರೂ, ಗಂಜಾಮಿನಲ್ಲಿ ಶ್ರೀಗಳಾದ ಕೋದಂಡರಾಮಯ್ಯ ಮತ್ತು ಪುಟ್ಟಲಿಂಗಯ್ಯ ಮೊದಲಾದವರೂ ಬಡಬಗ್ಗರಿಗೆ ಅನ್ನದಾನವನ್ನೇರ್ಪಡಿಸಿದ್ದರು. ಮುಸ್ಲಿಮರೂ ಸಹ ಈ ಸಮಾರಂಭವನ್ನು ವೈಭವದಿಂದ ಆಚರಿಸಿದರು.

ಬಲಿಜಾ ವಿದ್ಯಾರ್ಥಿ ನಿಲಯ

ರಾಜಧಾನಿಯ ಬಲಿಜ ಸಂಘದವರು ತಮ್ಮ ಮತದ ವಿದ್ಯಾರ್ಥಿಗಳಿಗೋಸ್ಕರ ಸ್ವಾತಂತ್ರ್ಯ ದಿನೋತ್ಸವದ ನೆನಪಿಗಾಗಿ ಚಾಮರಾಜ ರಸ್ತೆಯಲ್ಲಿನ ನಂ. ೩೯೦ ನೇ ನಂ. ಮನೆಯಲ್ಲಿ ವಿದ್ಯಾರ್ಥಿ ನಿಲಯವನ್ನು ತೆರೆದಿರುವರು. ಅದಕ್ಕೆ ಸೇರಲಪೇಕ್ಷಿಸುವ ಕಾಲೇಜ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳು ಈ ತಿಂಗಳ ಅಂತ್ಯದೊಳಗಾಗಿ ಸೂಪರಿಂಟೆಂಡೆಂಟ್ ಬಲಿಜಾ ಹಾಸ್ಟಲ್ ಮಾರುತಿ ಮೆಡಿಕಲ್ ಹಾಲ್, ಬ್ಯಾಂಕ್ ರೋಡ್, ಮೈಸೂರು ಈ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳಬೇಕೆಂದು ಕೋರಲಾಗಿದೆ.

ರೆಸಿಡೆನ್ಸಿ ಕಛೇರಿಯಲ್ಲಿ ಹೈ ಕೋರ್ಟ್

ಸ್ವಂ. ಸು ಫೋನ್] [ಬೆಂಗಳೂರು ೧೯

ಬೆಂಗಳೂರು ಸೆಕ್ರೆಟೇರಿಯಟ್ ಭವನದಲ್ಲಿರುವ ಹೈಕೋರ್ಟನ್ನು ಇದುವರೆಗೆ ರೆಸಿಡೆನ್ಸಿ ಕಛೇರಿಯಿದ್ದ ಸ್ಥಳಕ್ಕೆ ವರ್ಗಾಯಿಸಲಾಗುವುದೆಂದು ತಿಳಿದು ಬಂದಿದೆ.

• ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಕಣ್ಣಿನ ವಿಭಾಗದ ಸರ್ಜನ್ನರಾದ ಶ್ರೀ ಎಸ್. ವಾಸುದೇವರಾಯರನ್ನು ಬೆಂಗಳೂರಿನ ಕಣ್ಣಾಸ್ಪತ್ರೆಯ ಸೂಪರಿಂಟೆಂಡೆಂಟರನ್ನಾಗಿಯೂ, ಕೃಷ್ಣರಾಜೇಂದ್ರ ಆಸ್ಪತ್ರೆಯ ಕಣ್ಣಿನ ಶಾಖೆಯ ಅಸಿಸ್ಟೆಂಟ್ ಸರ್ಜನ್ನರಾದ ಶ್ರೀ ಸುಂದರರಾಯರನ್ನು ಅದೇ ಶಾಖೆಯ ಸರ್ಜನ್ನರಾಗಿಯೂ ವರ್ಗ ಮಾಡಲಾಗಿದೆ.

ಪುದುಕೋಟೆ ಅರಸರು ರಾಷ್ಟ್ರ ಧ್ವಜ ಹಾರಿಸಿದರು

ಪುದುಕೋಟೆಯ ಮಹಾರಾಜರು ತಮ್ಮ ಹಳೆ ಅರಮನೆಯ ಮುಂಭಾಗದಲ್ಲಿ ದರ್ಬಾರಿಗಳ ಮತ್ತು ಮಹಾಜನರ ಮಧ್ಯದಲ್ಲಿ ಭಾರತ ರಾಷ್ಟ್ರ ಧ್ವಜವನ್ನು ಹಾರಿಸಿದರು. ಮಿಲಿಟರಿ ಪ್ರದರ್ಶನ ಮತ್ತು ಕವಾಯಿತುಗಳೂ ಸಹ ನಡೆದುವು.

ಇಂಡೋನೇಷ್ಯದಲ್ಲಿ ಯುದ್ಧ ನಡೆಯುತ್ತಲೇ ಇದೆ

ಇಂಡೋನೇಷ್ಯ ಮತ್ತು ಡಚ್ಚರ ವಿರುದ್ಧ ಸಮಸ್ಯೆಗಳು ಇನ್ನೂ ಬಗೆ ಹರಿದಿರುವುದಿಲ್ಲ. ಭದ್ರತಾ ಸಮಿತಿಯು ಯುದ್ಧ ನಿಲ್ಲಿಸಲು ಮಾಡಿದ್ದ ಸೂಚನೆಯನ್ನು ಡಚ್ಚರು ಉಲ್ಲಂಘಿಸಿದ್ದಾರೆ. ಆದುದರಿಂದ ಕದನ ಮುಂದುವರೆಯಬೇಕು-ಎಂಬುದಾಗಿ ರಿಪಬ್ಲಿಕ್ಕಿನ ಅಧ್ಯಕ್ಷರಾದ ಡಾ॥ ಸೋಕರ್ನೋರವರು ತಿಳಿಸಿರುವರು.

ಬರುವ ಏಪ್ರಿಲ್ಲಿಗೆ ಮೌಂಟ್ ಬ್ಯಾಟನ್ನರ ನಿವೃತ್ತಿ

ಭಾರತದ ಗೌರ್ನರ್ ಜನರಲ್ಲರಾದ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ನರು ತಮ್ಮ ಅಧಿಕಾರವಧಿಯು ೧೯೪೮ ನೇ ಮಾರ್ಚ ತಿಂಗಳಿಗೆ ಮುಕ್ತಾಯವಾಗುವುದೆಂದೂ, ಆದುದರಿಂದ ಏಪ್ರಿಲ್ ವೇಳೆಗೆ ತಮ್ಮನ್ನು ನಿವೃತ್ತಿಗೊಳಿಸಿ ಭಾರತೀಯರೇ ಗೌರ್ನರ ಜನರಲ್ಲರಾಗಲು ಅವಕಾಶ ಮಾಡಿಕೊಡಬೇಕೆಂದೂ ರಾಜ್ಯಾಂಗ ಸಭೆಯಲ್ಲಿ ನುಡಿದಿರುವರು.

ಕಾಲೇಜಿಗೆ ವಿದ್ಯಾರ್ಥಿಗಳೇ ಇಲ್ಲ

ದಕ್ಷಿಣ ಭಾರತದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸ್ಥಾನವನ್ನೊದಗಿಸುವುದೇ ಒಂದು ಸಮಸ್ಯೆಯಾಗಿದೆ. ಆದರೆ ಲಕ್ನೋ ಕಾಲೇಜಿನ ಸ್ಥಾನಗಳಿಗೆ ವಿದ್ಯಾರ್ಥಿಗಳೇ ಇಲ್ಲವೆಂದು ಕೇಳಲಾಗಿದೆ. ಇಂಟರ್‌ಮೀಡಿಯೆಟ್ ಶಾಖೆಯಲ್ಲಿ ೪೦೦ ಮತ್ತು ವಿಜ್ಞಾನ ಶಾಖೆಯಲ್ಲಿ ೧೦೪ ಸ್ಥಾನಗಳು ಖಾಲಿ ಬಿದ್ದಿವೆ.

ಹೈದರಾಬಾದಿನಲ್ಲಿ ಕರ್ಫ್ಯೂ

ಹೈದರಾಬಾದ್ ಸಂಸ್ಥಾನದಲ್ಲಿ ಧ್ವಜಾರೋಹಣ ಸಂಬಂಧವಾಗಿ ಉಂಟಾದ ಗಲಭೆಯ ... ಈಗ ಕೋಮುವಾರು ವೈಷಮ್ಯಕ್ಕೆ ತಿರುಗಿದೆಯೆಂದು ವರದಿಯಾಗಿದೆ. ಹೈದರಾಬಾದು, ಸಿಕಂದರಾಬಾದು ... ಕರ್ಫ್ಯೂ ಜಾರಿಮಾಡಲಾಗಿದೆ.

ಸಾಧ್ವಿ

ತಾ|| ೧೯-೮-೪೭ ಮಂಗಳವಾರ

ಸ್ವಾತಂತ್ರ್ಯದ ಸಂರಕ್ಷಣೆ

ಎರಡು ಶತಮಾನಗಳಿಂದ ಬ್ರಿಟಿಷರ ಪಾಶಕ್ಕೆ ಸಿಲುಕಿದ್ದ ಭಾರತಮಾತೆಯನ್ನು ರಾಷ್ಟ್ರವೀರರು ತಮ್ಮ ತ್ಯಾಗಬಲದಿಂದ ಇಂದು ವಿಮೋಚನೆಗೊಳಿಸಿದ್ದಾರೆ. ಈ ಸ್ವಾತಂತ್ರ್ಯದ ಸವಿಯನ್ನು ಇಂದು ಪ್ರತಿಯೊಬ್ಬ ಭಾರತೀಯನೂ ಅನುಭವಿಸುತ್ತಿದ್ದಾನೆ.

ಕಳೆದ ಶುಕ್ರವಾರ ಮಧ್ಯರಾತ್ರಿಯಲ್ಲಿ ಭಾರತದ ಸ್ವಾತಂತ್ರ್ಯ ಘೋಷಣೆಯಾಗಿ ಭಾರತ ಸರ್ಕಾರದ ಹೊಸ ಆಡಳಿತ ಸೂತ್ರಧಾರಿಗಳು ಪ್ರಮಾಣ ಪೂರ್ವಕವಾಗಿ ಅಧಿಕಾರ ಸ್ವೀಕಾರ ಮಾಡಿದರು. ಭಾರತವನ್ನು ತನ್ನ ದಾಸ್ಯದಲ್ಲಿಟ್ಟುಕೊಂಡು ಇಲ್ಲಿ ತಾನು ನಡೆಸಿದ ಕ್ರೂರ ಕೃತ್ಯಗಳ ಪಾಪದಿಂದ ವಿಮುಕ್ತವಾಗಲು ಬ್ರಿಟನ್ನು ಕಳೆದ ಶುಕ್ರವಾರ ತನ್ನ ಪ್ರತಿನಿಧಿಯಾದ ಲಾರ್ಡ್ ಲೂಯಿ ಮೌಂಟ್ ಬ್ಯಾಟನರಿಂದ ಈ ಧ್ವಜಕ್ಕೆ ತಲೆ ಬಾಗಿಸಿತು. ಪಟವು ದೇಶೀಯ. ರಾಜರೂ ಸಹ ಈ ಧ್ವಜವನ್ನು ಹಾರಿಸಿ ವಂದಿಸಿ ಗೌರವಿಸುತ್ತಾರೆ.

ಮೊನ್ನೆ ಯವರೆಗೂ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತದ ಪೋಲೀಸ್ ಮತ್ತು ಇತರ ಇಲಾಖೆಗಳ ಸರ್ಕಾರೀ ನೌಕರರು ಈ ಪ್ರಿಯ ಧ್ವಜಾರೋಹಣಕ್ಕೆ ಪ್ರತಿಬಂಧಕಗಳನ್ನು ಒಡ್ಡಿ, ಧ್ವಜವನ್ನು ಸುಡುವುದು, ತುಳಿಯುವುದೇ ಮುಂತಾದ ಅಕೃತ್ಯಗಳನ್ನು ನಡೆಸಿದ್ದರು. ನಮ್ಮ ಸಂಸ್ಥಾನದಲ್ಲೂ ಸಹ ಹಲವಾರು ಇಂತಹ ಘಟನೆಗಳು ಜರುಗಿ ಶಿವಪುರದ ಕಾಂಗ್ರೆಸ್ ಅಧಿವೇಶನದಲ್ಲಿ ದೊಡ್ಡ ಧ್ವಜ ಸತ್ಯಾಗ್ರಹವೇ ನಡೆದು ಧ್ವಜದ ಕೀರ್ತಿಯನ್ನು ಎತ್ತಿ ಹಿಡಿಯಲಾಯಿತು. ಸಾಮ್ರಾಜ್ಯಶಾಹಿಯ ಪ್ರಭಾವಕ್ಕೊಳಪಟ್ಟ ಅನೇಕ ಅಕ್ರಮ, ಅಪಮಾನಗಳನ್ನೆಲ್ಲ ಸಮುಸ್ತರನ್ನೂ ಕ್ಷಮಿಸಿ ಅವರುಗಳಿಗೆ ಆಶ್ರಯವನ್ನು ಕೊಟ್ಟು, ಅವರ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತು ಈ ಧ್ವಜವು ಇಂದು ಅಂತರಿಕ್ಷದಲ್ಲಿ ಮೆರೆಯುತ್ತಿದೆ.

ಇಷ್ಟೆಲ್ಲಾ ಕಷ್ಟನಷ್ಟಗಳನ್ನೂ, ಮಾನಾಪಮಾನಗಳನ್ನೂ ಸಹಿಸಿ ಭಾರತದ ಸ್ವಾತಂತ್ರ್ಯವನ್ನು ಗಳಿಸಲಾಗಿರುತ್ತದೆ. ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಜವಾಬ್ದಾರಿಯು ಪ್ರತಿಯೊಬ್ಬ ಭಾರತೀಯನ ಮೇಲೆಯೂ ಬಿದ್ದಿರುತ್ತದೆ. ಈ ಬಗ್ಗೆ ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರು ಭಾರತೀಯರೆಲ್ಲರ ಸಹಾಯ, ಸಹಕಾರವನ್ನೂ ಕೋರಿರುವರು. ಇದನ್ನು ಮನ್ನಿಸಿ ಭಾರತದ ಪ್ರಜೆಗಳೆಲ್ಲರೂ ಅವರೊಡನೆ ಸಹಕರಿಸಿ [illegible] ಸ್ವಾತಂತ್ರ್ಯವು ಭದ್ರವಾಗಿಯೂ, ಶಾಶ್ವತವಾಯೂ ನೆಲೆಗೊಳ್ಳುವಂತೆ ಮಾಡ ಬೇಕಾದುದು ಅವರ ಕರ್ತವ್ಯವಾಗಿರುತ್ತದೆ.

ಸ್ವರಾಜ್ಯವೆಂದರೆ ಬಡ ಜನ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಮತ್ತು ವಾಸಕ್ಕೆ ಮನೆ [illegible] ಸಾಧ್ಯ [illegible] ಸೃಷ್ಟಿ [illegible] ದೇ ಸ್ವಾತಂತ್ರ್ಯದ [illegible] ಧ್ವಜ [illegible]

ಸ್ವಾತಂತ್ರ್ಯ ದಿನಾಚರಣೆ

೧೫ ನೇ ತಾ|| ನ ಸಮಾರಂಭಗಳು

ಕಳೆದ ಶುಕ್ರವಾರ ಬೆಳಗ್ಗೆ ಶ್ರೀಮತಿ ರಾಮೇಶ್ವರಮ್ಮನವರು ಒಂಟಿಕೊಪ್ಪಲಿನ ಮಹಾಜನಾ ಹೈಸ್ಕೂಲಿನಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ಮಾಡಿದರು. ಶ್ರೀ ಎಂ. ಎಸ್ ಜೋಯಿಸರವರ ಅಧ್ಯಕ್ಷತೆಯಲ್ಲಿ ನೆರೆದ್ದ ಸಭೆಯಲ್ಲಿ ಶ್ರೀಮತಿ ರಾಮೇಶ್ವರಮ್ಮ, ಹೆಚ್. ಕೆ. ಕುಮಾರಸ್ವಾಮಿ, ರಾಮಚಂದ್ರ ಜೋಯಿಸ್-ಮುಂತಾದವರು ಭಾಷಣ ಮಾಡಿದರು. ಸಿಹಿತಿಂಡಿ ಮತ್ತು ಬಹುಮಾನಗಳ ವಿನಿಯೋಗಗಳು ನಡೆದುವು

ರಾಜಧಾನಿಯ ಆರಾಧ್ಯ ಯುವಕ ಸಂಘದವರು ಶ್ರೀ ಹೆಚ್. ಕೆ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳನ್ನೇರ್ಪಡಿಸಿ ಸಿಹಿ ತಿಂಡಿಯನ್ನು ಹಂಚಿದರು.

ದೇವಾಂಗ ಯುವಕ ಸಂಘದಲ್ಲಿ ಶ್ರೀ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀಗಳಾದ ಬಿ ನಾರಾಯಣಸ್ವಾಮಿ ಎಂ ಎಸ್ ಜೋಯಿಸ್, ಎಸ್. ಚೆನ್ನಯ್ಯ, ಎಂ ಶಂಕರಯ್ಯ, ಮೊದಲಾದವರು ಭಾಷಣ ಮಾಡಿದರು ಮುಂಗಳಾರತಿ ಮತ್ತು ಸಿಹಿ ತಿಂಡಿ ವಿನಿಯೋಗಗಳು ನಡೆದುವು.

ನಾಗಮಂಗಲದಲ್ಲಿ ಕಸ್ತೂರಿ ಕಸಿನೀಗೌಡರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು ಧ್ವಜಾರೋಹಣ ಮತ್ತು ಮೆರವಣಿಗೆಗಳ ನಂತರ ಶ್ರೀಗಳಾದ ಕೃಷ್ಣಪ್ಪಗೌಡ, ಎಂ. ಬಿ ಶಂಕರ್, ಎಂ ಎಸ್ ಜೋಯಿಸ್, ಎಂ ಆರ್ ಎಸ್ ಶಾಸ್ತ್ರಿ ಮೊದಲಾದವರು ಭಾಷಣ ಮಾಡಿದರು

ಚಿಣ್ಣದಲ್ಲಿ ಶ್ರೀ ಕಪನೀಗೌಡರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವವು ನಡೆಯಿತು. ಶ್ರೀ ಎಂ ಎಸ್ ಜೋಯಿಸರು ಮಾತನಾಡಿದರು. ದೇವಾಲಯಗಳಲ್ಲಿ ಉತ್ಸವ ಮತ್ತು ಬಡಬಗ್ಗರಿಗೆ ಅನ್ನದಾನಗಳು ಆದುವು.

ಟಿ. ನರಸೀಪುರದ ರೇಷ್ಮೆ ಕಾರ್ಖಾನೆಯ ಕೆಲಸಗಾರರು ಧ್ವಜಾರೋಹಣ ಮತ್ತು ತಿಂಡಿ ಹಂಚಿಕೆಯನ್ನು ನಡೆಸಿದರು. ಕಾರ್ಖಾನೆಯ ಆಡಳಿತದವರು ಕೆಲಸಗಾರರಿಗೆ ೧೫ ದಿನಗಳ ಸಂಬಳವನ್ನು ಬೋನಸ್ಸಾಗಿ ಕೊಟ್ಟಿರುವರು ಅಲ್ಲಿನ ಮಹಾಜನಗಳೂ ಮತ್ತು ವಿದ್ಯಾರ್ಥಿಗಳೂ ಸೇರಿ ಧ್ವಜಾರೋಹಣ ಮತ್ತು ವಂದನೆಗಳನ್ನು ಮಾಡಿದರು. ಶ್ರೀಗಳಾದ ಹೆಚ್ ಎಂ. ಚೆನ್ನಬಸಪ್ಪ ಮತ್ತು ಟಿ. ಪಿ. ದೊರೆಯ್ಯನವರುಗಳ ನೇತೃತ್ವದಲ್ಲಿ ಬಡಬಗ್ಗರಿಗೆ ಅನ್ನದಾನ ಮತ್ತು ಬಟ್ಟೆ ಹಂಚಿಕೆಗಳು ನಡೆದುವು.

ಚಿಕ್ಕಮಗಳೂರಿನಲ್ಲಿ ಧ್ವಜವಂದನೆ, ಕ್ರೀಡಾಸ್ಪರ್ಧೆ, ಮೆರವಣಿಗೆ ತಿಂಡಿಯ ಹಂಚಿಕೆ ಮತ್ತು ಬಡಜನರಿಗೆ ಊಟಗಳನ್ನು ಏರ್ಪಡಿಸಲಾಗಿತ್ತು. ಶ್ರೀ ಬಸಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಮತ್ತು ಆಟಗಳಲ್ಲಿ ಗೆದ್ದವರಿಗೆ ಬಹುಮಾನಗಳ ವಿನಿಯೋಗಗಳು ಜರುಗಿದುವು

ನಂಜನಗೂಡಿನ ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕಿನಲ್ಲಿ ಶ್ರೀ ಎಸ್ ಪಿ ಚೆನ್ನಸ್ವಾಮಯ್ಯರ ಅಧ್ಯಕ್ಷತೆಯಲ್ಲಿ ಭಾಷಣಗಳು, ರಾಷ್ಟ್ರ ನಾಯಕರ ಶ್ರೇಯಃ ಪ್ರಾರ್ಥನೆಯೂ ಆದುವು

ಬನ್ನೂರು ಹೋಬಳಿ ಅತ್ತಹಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ, ಪಂಡಿತ ನೆಹರೂ ಮತ್ತು ನೇತಾಜಿ ಬೋಸರ ಭಾವಚಿತ್ರಗಳ ಮೆರವಣಿಗೆ ಮತ್ತು ಧ್ವಜಾರೋಹಣಗಳು ನಡೆದುವು.

ನಂಜನಗೂಡು ತಾಲ್ಲೂಕು ಹೆಮ್ಮರಗಾಲದಲ್ಲಿ ಧ್ವಜವಂದನೆ, ದೇವಾಲಯಗಳ ಪೂಜೆಗಳು ಜರುಗಿದುವು

ಮೈಸೂರು ತಾಲ್ಲೂಕು ಉತ್ತನಹಳ್ಳಿಯ ಶ್ರೀ ಪ್ರಸನ್ನ ವೆಂಕಟೇಶ ಸ್ವಾಮಿಯವರ ದೇವಾಲಯದಲ್ಲಿ ಅಭಿಷೇಕ, ಪೂಜೆಗಳು ನಡೆದುವು

ರಾಜಧಾನಿಯ ಬಾಲಸೇವಾ ಸಮಾಜದಲ್ಲಿ ೧೫ ನೇ ತಾ|| ಧ್ವಜಾರೋಹಣ, [illegible] ನೇ ತಾ|| ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆಗಳಾದುವು ಶ್ರೀಮತಿ ಎಂ. ಆರ್ ಲಕ್ಷಮ್ಮ, ಶ್ರೀಗಳಾದ ಸೀತಾರಾಮಯ್ಯ, ಎಸ್ ಗಂಗಾಧರ ಶರ್ಮ ಮತ್ತು ಶ್ರೀಮತಿ ಶಾರದಮ್ಮನವರುಗಳು ಭಾಷಣ ಮಾಡಿದರು ಮೊನ್ನೆ ಸಮಾಜದ ಅಂಗವಾದ ನರಸಿಂಹರಾಜ ಮೊಹಲ್ಲಾದ ಭಾರತಿ ಶಿಶುವಿಹಾರದಲ್ಲಿ ಸಭೆ [illegible]ಯಿತು.

ರಾಜಧಾನಿಯ ಮಹಿಳಾ ಕೂಟದವರು ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನವನ್ನಾಚರಿಸಿದರು ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ರಾಜಧಾನಿಯ ಸೇಂಟ್ ಫಿಲೋಮಿನಾ ಚರ್ಚಿನಲ್ಲಿ ಬಿಷಪ್‌ರವರಿಂದ ರಾಷ್ಟ್ರ ಧ್ವಜಾರೋಹಣ ಮತ್ತು ವಿಶೇಷ ಪೂಜಾದಿಗಳು ಆದುವು

ಸಂಸ್ಕೃತಿಯೇ ರಾಜ್ಯ [illegible] ರಕ್ಷಾ ಕವಚ. ಈ ಸುಖ ಶಾಂತಿಗಳಿಗೆ ಆಗತ್ಯವಾದ ಸಂಪತ್ಸಮೃದ್ಧಿಗಳನ್ನು ಉಂಟು ಮಾಡಿಕೊಡಲು ಈಗ ಲಭಿಸಿರುವ ಸ್ವಾತಂತ್ರ್ಯವು ಸಹಕಾರಿಯಾಗಿ ನಮ್ಮ ಮಾತೃಭೂಮಿಯು ಮುಂದೆ ಎಂದೆಂದಿಗೂ ಪರದಾಸ್ಯ ಶೃಂಖಲೆಗೆ ಒಳಗಾಗದಂತೆ ತನ್ನ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಂಡು ಬರಲು ಅಗತ್ಯವಾದ ಕಾರ್ಯಕ್ರಮಗಳನ್ನು ನೂತನ ಸ್ವತಂತ್ರ ಸರ್ಕಾರವು ಕೈಗೊಳ್ಳಲೆಂದು ಹಾರೈಸೋಣ

ಬೆಂಗಾಲ್ ಸಿಲ್ಕ್

ಸೀರೆಗಳ ವೈಖರಿಯನ್ನು ನೋಡಬೇಕಾದರೆ ಬಾಹುಸಾರ್ ಕಂಪೆನಿಗೆ ಹೋಗಿ

6, 7, 8 ಮತ್ತು 9 ಗಜಗಳಲ್ಲಿ ಅತ್ಯಂತ ಅಂದವಾದ ಸೀರೆಗಳು ಬಂದಿವೆ

Edited printed and published by A. K. Nagarajan at the Sadhvi Press D, Subbaiah Road Mysore

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply I. N. D. Basavanagudi, Bangalore.

ಶ್ರೀ ಬಾಲಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಹಲಗೇರಿ, ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ ನಾಳೆ ರಾತ್ರಿ ೧೦-೩೦ ಕ್ಕೆ

- ಸಾಮ್ರಾಸಿತಿ-ಸಾಮ್ರಾಜ್ಞಿ -

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮಹಾನಂದ, ಸ್ವರ್ಣಹರಿಶ್ಚಂದ್ರ, ಚಿತ್ರಾಂಗದ ನಾಟಕಗಳನ್ನಾಡಲು ತಾರೀಖನ್ನು ಗಮನಿಸಿ

ಅನುಸಾರ ರಿಯಾಯಿತಿ ಉಂಟು

ಬಿಳ್ಳ ಬಿಟ್ಟಪ್ಪ, ಪ್ರೊಪ್ರೈಟರ್

ವುಡ್‌ಲ್ಯಾಂಡ್ಸ್

ತಾ|| 15-8-47 ರಿಂದ ಅಮೋಘ ಪ್ರಾರಂಭ

ನೀಲ್ ಕಮಲ್

(ಹಿಂದಿ)

—: ಪಾತ್ರ: —

ಕಿಶೋರ್ ಸಾಹು, ಶೋಭನಾ ಸಮರ್ಥ, ದುರ್ಗಾ ಖೋಟೆ

ರಾಜ್‌ಕಮಲ್, ಮೈಸೂರ

ತಾ|| **15—8—47** ರಿಂದ

೨ ನೇ ವಾರ

ಮಹಾನಂದ

ಇದರೊಡನೆ ೧ ಭಾಗ ಕಾರ್ಟೂನ್ ವ ೧ ಭಾಗ ಕಾಂಗ್ರೆಸ್ ಟಾಕಿ[illegible]

From 15-8-47 for 7 days daily at 10-30 a. m.

The Court Danc[illegible]

(in English)

with

Sadhana Bose, Prathima [illegible] Gupta, Prithviraj, Nayampalli.

ಫೋನ್ ನಂ. 392 ‖ ವಂದೇ ಮಾತರಂ ‖ ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೬] ಬುಧವಾರ ೨೦-೮-೪೭ [ಸಂಚಿಕೆ ೨೬

ಖೈರ್‌ಗಢ ಸಂಸ್ಥಾನದಲ್ಲಿ ಗೋವಧೆಯ ನಿರೋಧ

...ತಂತ್ರ್ಯ ದಿನಾಚರಣೆ

...ತಾ|| ನ ಸಮಾರಂಭಗಳು

...ಳ್ಳಿಯಲ್ಲಿ ಪ್ರಭಾತ ಫೇರಿ, ಧ್ವ...ಗಳು ಶ್ರೀ ಶಿವನಂಜೇಗೌಡರ ಅ...ಯಲ್ಲಿ ನಡೆದು ಶ್ರೀ ಹೆಚ್. ...ಪ್ಪನವರ ಭಾಷಣವೂ, ರಾಷ್ಟ್ರ ನಾ...ರವಣಿಗೆಯೂ ಜರುಗಿದುವು.

...ರಿನ ಎಲ್ಲ ದೇವಾಲಯ ಮತ್ತು ...ದಿಗಳಲ್ಲಿಯೂ ಪೂಜೆಗ...ವು. ಎಲ್ಲೆಲ್ಲೂ ರಾಷ್ಟ್ರ ಧ್ವಜ ...ರಿಸಲಾಗಿತ್ತು. ಸತ್ಯಾಗ್ರಹಾಶ್ರ...ಪ್ರಭಾತ ಫೇರಿ ಧ್ವಜಾರೋಹಣಗ...ಚೊತೆ ಎತ್ತುಗಳನ್ನು ಕಟ್ಟಿದ್ದ ರ...ರತ ಮಾತೆ, ಮಹಾತ್ಮ ಗಾಂಧಿ ...ಶ್ರೀಮನ್ಮಹಾರಾಜರವರ ಭಾವಚಿ...ರವಣಿಗೆಯೂ ಸಂಜೆ ಶ್ರೀ ಲ...ಪತಿ ಸ್ವಾಮಿಯವರ ದೇವಾಲ...ನಡೆದ ಸಭೆಯಲ್ಲಿ ಪ್ರಮಾಣ ವ...ಕಾರ ಮತ್ತು ಸಿಹಿ ತಿಂಡಿಯ ಹಂ...ಆಯಿತು.

...ಲ್ಲಿ ಪ್ರಭಾತ ಫೇರಿ, ಧ್ವಜಾ..., ರಾಷ್ಟ್ರ ನಾಯಕರ ಮೆರವಣಿಗೆ, ...ಸಭೆ ಮತ್ತು ವಿನಿಯೋಗಗಳು ...ವು.

...ಳೂರಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ...ಲ್ಲಿ ದಿನೋತ್ಸವವು ಜರುಗಿತು. ...ಕಮಲಾದೇವಿ ಚಟ್ಟೋಪಾಧ್ಯಾ...ಮಂಗೇಶರಾವ್ ಮೊದಲಾದವ...ಎ. ಎ. ಸೀತಾರಾಮಯ್ಯನವರ ...ಯಲ್ಲಿ ಮಾತನಾಡಿ ಐಕ್ಯ ಭಾರತ ...ಮಹಾವಾದಿ ಏಕೀಕೃತ ಕರ್ನಾ...ಚನೆಗಾಗಿ ಎಲ್ಲರೂ ದುಡಿಯಬೇ...ಹೇಳಿದರು.

...ಗೆರೆಯಲ್ಲಿ ನಡೆದ ದಿನೋತ್ಸವದಲ್ಲಿ ...ರಂ ಸೂರ್ಯನಾರಾಯಣ ಪಂಡಿ...ಧ್ಯಕ್ಷತೆ ವಹಿಸಿದ್ದರು. ಶಿವಾಜಿ ರ...ಆರಂಭೋತ್ಸವ, ರಾಷ್ಟ್ರನಾಯಕರ ...ತ್ರಗಳ ಮೆರವಣಿಗೆಗಳು ನಡೆದು ...ರೋಹಣವಾಯಿತು. ಸಂಜೆ ಶ್ರೀ ...ರಾಯರೇ ಮೊದಲಾದವರು ಭಾ...ಮಾಡಿದರು. ಶಾಲಾ ಮಕ್ಕಳಿಗೆ ...ಸ್ಪರ್ಧೆಗಳನ್ನೇರ್ಪಡಿಸಿ ಬಹುಮಾ...ಸಿಹಿ ತಿಂಡಿಯ ಹಂಚಿಕೆಗಳು ನಡೆ...

TEST NEWS

...ರಮನೆಯ ಮುಂದೆ ...ಕಾಂಗ್ರೆಸ್ಸಿನ ಸತ್ಯಾಗ್ರಹ

...ಫೋ] [ಬೆಂಗಳೂರು ೨೦

...ದೆಹಲಿಯಿಂದ ಹಿಂದಿರುಗಿದ ...ಬೆಂಗಳೂರಾಯ ರೆಡ್ಡಿಯವರ ಅಧ್ಯ...ಲ್ಲಿ ನೈಋತ್ ಕಾಂ|| ಕಾ|| ಸಮಿತಿಯು ...ಸೇರಿತ್ತು. ಸೆಪ್ಟೆಂಬರ್ ೧ ನೇ ...ರಿಂದ ಸತ್ಯಾಗ್ರಹವನ್ನು ಆರಂಭ...ನಿರ್ಧರಿಸಿರುವುದಾಗಿ ತಿಳಿದುಬಂದಿ...ರಮನೆಯ ಮುಂದೆ ಸತ್ಯಾಗ್ರಹ, ಎ...ಶಾಸನಗಳ ಭಂಗ, ಪ್ರತಿಬಂಧಕಾ...ಉಲ್ಲಂಘನೆ-ಮುಂತಾದ ಕ್ರಮಗಳು ...ಮಾಡಲ್ಪಡುತ್ತಿರುವುದಾಗಿಯೂ ಹೇಳ...

...ಲಿಯಲ್ಲಿ ಪ್ರಕಟವಾಗಿರುವ ರೇ...ರಾವಣ್ಣಿಂದ ಎಂಬ ಚಿತ್ರ ಪುಸ್ತ...ವಶಪಡಿಸಿಗೊಳ್ಳಲು ಹಾಕಲಾಗಿದೆ

ಸೂಚನೆ

ಗುರುತ ಪಂಚಮಿ ಪ್ರಯುಕ್ತ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಸಾಂಡೂರು ರಾಜರಿಂದ ಸ್ವಾತಂತ್ರ್ಯ ದಿನಾಚರಣೆ

ಸ್ವಾತಂತ್ರ್ಯ ದಿನೋತ್ಸವದ ಸಂಬಂಧವಾಗಿ ೧೪ ನೇ ತಾ|| ಮಧ್ಯರಾತ್ರಿಯಲ್ಲಿ ಸಾಂಡೂರ್ ಸಂಸ್ಥಾನದ ಶಾಸನ ಸಭೆಗಳು ಸೇರಿ ಬ್ರಿಟಿಷರ ಪರಮಾಧಿಕಾರವು ಅಂತ್ಯವಾಗಿರುವುದರಿಂದ ಬ್ರಿಟಿಷರು ಕೊಟ್ಟಿರುವ ಎಲ್ಲ ಬಿರುದು ಬಾವಲಿಗಳನ್ನೂ ತ್ಯಜಿಸಿ ಪುರಾತನ ಘೋರ್ಪಡೆ ವಂಶದ ಪ್ರಶಸ್ತಿಯನ್ನು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳಬೇಕೆಂದೂ ಅಲ್ಲಿನ ಅರಸರನ್ನು ಪ್ರಾರ್ಥಿಸಿಕೊಳ್ಳುವ ನಿರ್ಣಯವನ್ನು ಮಾಡಿದುವು. ಅರಮನೆಯಲ್ಲಿ ವಿಶೇಷ ಪೂಜಾದಿಗಳು ಜರುಗಿದುವು. ಭಾರತ ಡೊಮಿನಿಯನ್ನಿಗೆ ಸೇರುವುದಾಗಿ ಅರಸರು ಮಾಡಿದ್ದ ಘೋಷಣೆಯ ಪಠನ ಮತ್ತು ಧ್ವಜಾರೋಹಣಗಳು ನಡೆದುವು. ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಅರಸರು ಘೋರ್ಪಡೆ ವಂಶದ ಮನೆದೇವರಾದ ಶ್ರೀ ಕಾರ್ತಿಕೇಯಸ್ವಾಮಿ ದೇವಾಲಯಕ್ಕೆ ಹೋಗಿ ಅಲ್ಲಿ ಅಂದಿನ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲಿ ಕಳೆದಿರುವರು.

ಆನೆಯ ಮೇಲೆ ಮಹಾತ್ಮರ ಮೆರವಣಿಗೆ

ಸ್ವಂ ಸು] ಚಾಮರಾಜನಗರ ೧೭

ಇಲ್ಲಿನ ಕಾಂಗ್ರೆಸ್ ಸಮಿತಿಯವರು ಮೊನ್ನೆ ಸ್ವಾತಂತ್ರ್ಯೋತ್ಸವವನ್ನು ವೈಭವದಿಂದ ನೆರವೇರಿಸಿದರು. ಶ್ರೀ ಎಸ್. ಪುಟ್ಟನಂಜಪ್ಪನವರಿಂದ ಧ್ವಜಾರೋಹಣವಾಯಿತು. ನಿನ್ನೆ ಬೆಳಗ್ಗೆ ವಿದ್ಯಾರ್ಥಿಗಳಿಂದ ಧ್ವಜಾರೋಹಣವು ಜರುಗಿತು. ಮಧ್ಯಾಹ್ನ ಮೆರವಣಿಗೆ ಮತ್ತು ಭಾಷಣಗಳಾದುವು.

ಪೌರಸಭೆಯವರಿಂದ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಶ್ರೀ ಎಸ್. ವೆಂಕಟಸುಬ್ಬಶೆಟ್ಟರು ರಾಷ್ಟ್ರಧ್ವಜವನ್ನೂ ಅಮಲ್ದಾರರು ಮೈಸೂರು ಧ್ವಜವನ್ನೂ ಹಾರಿಸಿದರು. ಅನಂತರ ಆನೆಯ ಮೇಲೆ ಬೆಳ್ಳಿ ಪಲ್ಲಕ್ಕಿಯಲ್ಲಿ ಮಹಾತ್ಮ ಗಾಂಧಿ, ಪಂಡಿತ ನೆಹರೂರವರು ಮತ್ತು ಶ್ರೀಮನ್ಮಹಾರಾಜರವರ ಭಾವಚಿತ್ರಗಳ ಮೆರವಣಿಗೆ, ಬಹಿರಂಗ ಸಭೆ, ಬಹುಮಾನ ವಿನಿಯೋಗಗಳಾದುವು. ನಿನ್ನೆ ಬಡಬಗ್ಗರಿಗೆ ಅನ್ನದಾನಾದಿಗಳು ನಡೆದುವು.

ಬರ್ಮಾದ ನೂತನ ಮಂತ್ರಿಗಳ ಮೇಲೂ ಕೊಲೆ ಪ್ರಯತ್ನ

ಜನರಲ್ ಆಂಗ್ ಸಾನರ ಮತ್ತು ಅವರ ಸಹೋದ್ಯೋಗಿಗಳ ಕೊಲೆಯಾದ ದಿನದಿಂದ ಬರ್ಮಾದಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಗಲಭೆಗಳೂ ದಂಗೆಯೂ ನಡೆಯುತ್ತಿರುವುದಾಗಿ ವರದಿಯಾಗಿದೆ. ನ್ಯಾಯಾಂಗದವ ಸಚಿವರ ದೇಹಗಳನ್ನಿಟ್ಟಿರುವ ಸ್ಥಳದಲ್ಲಿ ಕಾವಲುಗಾರರಿಗೂ, ದಂಗೆ ಕೋರರಿಗೂ ಕದನ ನಡೆಯಿತೆಂದು ಹೇಳಲಾಗಿದೆ. ಮೊನ್ನೆ ದಿನ ನೂತನ ಪ್ರಧಾನಿಗಳ ಮನೆಯ ಒಳಗಲಭೆ ಮತ್ತು ಅನೇಕ ಭಾರಿ ಗುಂಡು ಹಾರಿಸುವ ಪ್ರಕರಣಗಳು ನಡೆದುವೆಂದು ಗೊತ್ತಾಗಿದೆ.

ರಾಷ್ಟ್ರಧ್ವಜಕ್ಕೆ ಅಪಮಾನ!

ನಾಭಾ ಸಂಸ್ಥಾನದ ಮಂಡಿ ಭುತಿ ಎಂಬಲ್ಲಿ ಹಾರಿಸಿದ್ದ ಭಾರತದ ರಾಷ್ಟ್ರ ಧ್ವಜವನ್ನು ಅಲ್ಲಿನ ಸರ್ಕಾರದವರು ಕಿತ್ತೊಗೆದು ಧ್ವಜ ಸ್ತಂಭವನ್ನು ಕೆಡವಿದರೆಂದು ಅಲ್ಲಿನ ಪ್ರಜಾ ಮಂಡಲದವರು ಸಂಸ್ಥಾನಗಳ ಪ್ರಜಾ ಪರಿಷತ್ತಿನ ಸ್ಥಾಯೀ ಸಮಿತಿಯ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರಲ್ಲಿ ದೂರಿಕೊಂಡರೆಂದೂ, ಡಾ|| ಪಟ್ಟಾಭಿಯವರು ಸರ್ದಾರ್ ಪಟೇಲರ ಬಳಿಗೆ ಹೋಗುವಂತೆ ಅವರಿಗೆ ಸೂಚಿಸಿದರೆಂದೂ ತಿಳಿದು ಬಂದಿದೆ.

ಡೊಮಿನಿಯನ್ ಸಮ್ಮೇಳನಕ್ಕೆ ಪಾಕಿಸ್ತಾನ

ಜಪಾನಿನ ಶಾಂತಿ ಕೌಲುಗಳ ಸಂಧಾನಗಳ ಬಗ್ಗೆ ಇದೇ ೨೬ ನೇ ತಾ|| ಕ್ಯಾನ್‌ಬೆರಾದಲ್ಲಿ ಸೇರಲಿರುವ ಡೊಮಿನಿಯನ್ನುಗಳ ಸಮ್ಮೇಳನದಲ್ಲಿ ಪಾಕಿಸ್ತಾನವೂ ಸಹ ಭಾಗವಹಿಸುವುದೆಂದು ಗೊತ್ತಾಗಿದೆ.

ತಿರುವಾಂಕೂರು ದಿವಾನರ ರಾಜೀನಾಮೆ

ಕೆಲವು ದಿನಗಳ ಹಿಂದೆ ತಿರುವಾಂಕೂರು ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಕೊಟ್ಟಿದ್ದ ರಾಜೀನಾಮೆಯನ್ನು ಅಲ್ಲಿನ ರಾಜರು ಅಂಗೀಕರಿಸಿರುವರು. ಅಯ್ಯರ್‌ರವರು ನೀಲಗಿರಿಗೆ ಪ್ರಯಾಣ ಮಾಡಿರುವರು. ಆಗಸ್ಟ್ ೧೫ ನೇ ತಾರೀಖು ಬ್ರಿಟಿಷರ ಪರಮಾಧಿಕಾರವು ಹೋಗಿ ತಿರುವಾಂಕೂರು ಸ್ವತಂತ್ರರಾಜ್ಯವಾದ ಮೇಲೆ ಅದು ಭಾರತ ಡೊಮಿನಿಯನ್ನಿಗೆ ಸೇರಿದುದರಿಂದ ಆ ಸಂಸ್ಥಾನದಲ್ಲಿ ತಮ್ಮ ಕಾರ್ಯವು ಮುಕ್ತಾಯವಾಯಿತೆಂದು ಸರ್ ಸಿ ಪಿ ಯವರು ಹೇಳಿರುವರು.

ಅಂಚೆ ಇಲಾಖೆಯ ನೌಕರರಿಂದ ಹೊಸ ಪ್ರಮಾಣ ವಚನ

ಮೈಸೂರು ೨೦

ರಾಜಧಾನಿಯ ಎಲ್ಲಾ ಅಂಚೆ ನೌಕರರೂ ನಿನ್ನೆ ಸೂಪರಿಂಟೆಂಡೆಂಟರಾದ ಶ್ರೀ ವೈ. ಆರ್. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹೊಸ ಭಾರತ ಸರ್ಕಾರಕ್ಕೆ ತಮ್ಮ ರಾಜಭಕ್ತಿಯನ್ನು ಸಲ್ಲಿಸುವ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಚಿತ್ರದ ಆರಂಭೋತ್ಸವ

ರಾಜಧಾನಿಯಲ್ಲಿ ಹೊಸದಾಗಿ ಆರಂಭವಾಗಿರುವ ಶ್ರೀ ಪಿ. ಪಿಕ್ಚರ್ಸ್ ಚಲನ ಚಿತ್ರ ಸಂಸ್ಥೆಯವರು ತಮ್ಮ ಶ್ರೀಕೃಷ್ಣದಾಸಿ ತವಿಳು ಚಿತ್ರದ ಆರಂಭೋತ್ಸವವನ್ನು ಈ ದಿನ ನವಜ್ಯೋತಿ ಸ್ಟುಡಿಯೋದಲ್ಲಿ ಶ್ರೀ ಟಿ. ಆರ್. ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಚಿತ್ರದ ನಿರ್ಮಾಪಕರಾದ ಶ್ರೀ ತಿ ವಿ ಚಾರಿಯವರು ಆಹ್ವಾನಿತರನ್ನು ಪುಷ್ಪ ತಾಂಬೂಲಗಳಿಂದ ಸತ್ಕರಿಸಿದರು.

ಪ್ಯೂರಿಂಗ್ ನಗರದ ಮೇಲೆ ಷೆಲ್ಲುಗಳ ಸುರಿಮಳೆ

ರಿಪಬ್ಲಿಕ್ ರಾಜಧಾನಿಯ ದಕ್ಷಿಣದಲ್ಲಿರುವ ಪ್ಯೂರಿಂಗ್ ನಗರದ ಮೇಲೆ ಡಚ್ಚರು ವಿಮಾನಗಳ ಮೂಲಕ ಷೆಲ್ಲುಗಳ ಮಳೆ ಕರೆಯುತ್ತಿದ್ದಾರೆಂದು ವರದಿಯಾಗಿದೆ. ಜೋಗ್ ಜಕರ್ತಾ ನಗರದ ಎಲ್ಲಾ ದಿಕ್ಕುಗಳಲ್ಲಿಯೂ ಡಚ್ ಸೇನೆಗಳು ಮುತ್ತಿಗೆ ಹಾಕಿವೆ. ಜಾವಾ ಮತ್ತು ಸುಮಾತ್ರ ನಗರಗಳಿಗೆ ಡಚ್ಚರ ಸೇನೆಗಳು ಹೆಚ್ಚಾಗಿ ನುಗ್ಗುತ್ತಿವೆ. ಭದ್ರತಾ ಸಮಿತಿಯು ಕದನವನ್ನು ನಿಲ್ಲಿಸಲು ಇತ್ತ ಸೂಚನೆಗೆ ಡಚ್ಚರಿಂದ ಮನ್ನಣೆ ದೊರೆಯದಿರುವುದನ್ನು ಭದ್ರತಾ ಸಮಿತಿಯು ಪರಿಶೀಲಿಸುತ್ತಿದೆ.

ಬಿರುದುಗಳಿಗೆ ಸರ್ಕಾರದ ಅಂಗೀಕಾರವಿಲ್ಲ

ಬ್ರಿಟಿಷ್ ಸರ್ಕಾರದಿಂದ ಕೊಡಲ್ಪಟ್ಟಿರುವ ಬಿರುದು, ಬಾವಲಿಗಳನ್ನು ಸರ್ಕಾರದ ಪತ್ರ ವ್ಯವಹಾರಗಳನ್ನು ನಮೂದಿಸಲಾಗದೆಂದು ಅನೇಕ ಪ್ರಾಂತ್ಯಗಳ ಸರ್ಕಾರಗಳು ಆಜ್ಞೆ ಮಾಡಿರುತ್ತವೆ.

ಇಂದೂರು ಸಂಸ್ಥಾನದಲ್ಲಿ ಚಳುವಳಿ

ಇಂದೂರಿನ ಮಹಾರಾಜರು ಸೂಚಿಸಿದ್ದ ರಾಜಕೀಯ ಸುಧಾರಣೆಗಳನ್ನು ಅಲ್ಲಿನ ಪ್ರಜಾ ಮಂಡಲದ ಕಾರ್ಯಕಾರಿ ಸಮಿತಿಯು ಅಂಗೀಕರಿಸಿಲ್ಲವೆಂದು ವರದಿಯಾಗಿದೆ. ಈ ತಿಂಗಳು ೨೫ ನೇ ತಾರೀಖಿನೊಳಗಾಗಿ ಸಂಸ್ಥಾನದಲ್ಲಿರುವ ಎಲ್ಲ ವಿರೋಧಿ ಮಂತ್ರಿಗಳನ್ನೂ ನಿವೃತ್ತಿಗೊಳಿಸಿ ಜವಾಬ್ದಾರಿ ಸರ್ಕಾರವನ್ನು ಘೋಷಿಸದಿದ್ದರೆ ಸತ್ಯಾಗ್ರಹ ಹೂಡಲೂ ಸಹ ಅದು ನಿರ್ಧರಿಸಿರುತ್ತದೆ. ಈ ಬಗ್ಗೆ ಸರ್ದಾರ್ ಪಟೇಲರೊಡನೆ ಮಾತುಕತೆ ನಡೆಸಲು ಅಲ್ಲಿನ ಮಹಾರಾಜರು ತಮ್ಮ ಮಂತ್ರಿಗಳೊಡನೆ ದೆಹಲಿಗೆ ತೆರಳಿರುವರು.

ಖೈರಗಢ ಸಂಸ್ಥಾನದಲ್ಲಿ ಗೋವಧೆ ರದ್ದು

ಗೋವಧಾ ನಿವಾರಣಾ ಸಂಘದ ಅಧ್ಯಕ್ಷರಾದ ಸೇಟ್ ರಾಮಕೃಷ್ಣ ದಾಲ್ಮಿಯಾರವರ ಪ್ರಾರ್ಥನೆಯನ್ನು ಮನ್ನಿಸಿ ಖೈರಗಢ ಸಂಸ್ಥಾನದ ಅರಸರು ಇನ್ನು ಮುಂದೆ ತಮ್ಮ ಸಂಸ್ಥಾನದಲ್ಲಿ ಗೋವಧೆಯು ನಡೆಯಕೂಡದೆಂದು ಆಜ್ಞೆ ಮಾಡಿರುವರು.

ಸಾಧ್ವಿ

ತಾ|| ೨೦-೮-೪೭ ಬುಧವಾರ

ಸಿ. ಪಿ. ರಾಮಸ್ವಾಮಿಅಯ್ಯರ್‌ರವರ ನಿರ್ಗಮನ

ಹೊಗಳುವವರಿಲ್ಲದೆ, ಹಾಡುವವರಿಲ್ಲದೆ, ಅಳುವವರಿಲ್ಲದೆ ತನ್ನ ಜೀವನವನ್ನು ಮುಕ್ತಾಯಗೊಳಿಸಬೇಕೆಂಬುದು ಆಂಗ್ಲ ಕವಿ ಸ್ಕಾಟರ ಬಯಕೆಯಾಗಿದ್ದಿತು. ತಿರುವಾಂಕೂರು ಪ್ರಧಾನಿ ಸರ್ ಸಿ. ಪಿ. ಯವರ ನಿವೃತ್ತಿಯೂ ಸಹ ಅದೇ ರೀತಿ ಇರುತ್ತದೆ. ಅವರ ಅಧಿಕಾರ ತ್ಯಾಗಕ್ಕಾಗಿ ಮರುಗುವವರು ಒಬ್ಬರೂ ಇರುವುದಿಲ್ಲ. ಅವರ ನಿರಂಕುಶಾಡಳಿತದಿಂದ ತಿರುವಾಂಕೂರು ಪಾರಾದುದಕ್ಕಾಗಿ ಎಲ್ಲರೂ ಸಂತೋಷಿಸುವರು.

ಸರ್ ಸಿ. ಪಿ. ಯವರ ಇತ್ತೀಚಿನ ವರ್ತನೆಗಳಿಂದ ತಿರುವಾಂಕೂರಿಗೆ ರಾಜರು ಇವರೋ ಅಥವಾ ಅವರೇ ರಾಜರೋ? ಎಂಬ ಸಂಶಯವು ಉದ್ಭವಿಸುತ್ತಿತ್ತು. ಹಿಟ್ಲರ್, ಮುಸ್ಸೋಲಿನಿಗಳಿಗಿಂತಲೂ ಹೆಚ್ಚಿನ ಸರ್ವಾಧಿಕಾರವನ್ನು ಅವರು ಚಲಾಯಿಸುತ್ತಿದ್ದರು. ಇನ್ನೂ ಎಳೆಯ ವಯಸ್ಸಿನವರಾದ ರಾಜರಿಗೆ ಇಲ್ಲದ ಸಲ್ಲದ ಬೋಧನೆಗಳನ್ನು ಮಾಡಿ ಅವರನ್ನು ತಮ್ಮ ಸೂತ್ರದ ಗೊಂಬೆಯಾಗಿ ಇಟ್ಟುಕೊಂಡಿದ್ದರು. ಇದರಿಂದ ತಿರುವಾಂಕೂರು ಅಧೋಗತಿಗೆ ಬರುವ ಪರಿಸ್ಥಿತಿಗೆ ಗುರಿಯಾಗಿತ್ತು. ಜನ್ಮದಲ್ಲಿ ಮೊದಲಿಂದ ಎಚ್ಚೆತ್ತ, ಸರ್ ಸಿ ಪಿ ಯವರನ್ನು ಪದಚ್ಯುತಿಗೆ ತರಲು ಕಾಲ, ದೇಶಗಳಿಗನುಗುಣವಾಗಿ ಪರಿವರ್ತಿಸಲು ಹೊಸ ಹಾದಿಯನ್ನು ಹಿಡಿದರು.

ಸ್ವತಂತ್ರ ಭಾರತದಲ್ಲಿ ತಾವೂ ಸ್ವತಂತ್ರರಾಗುವುದಾಗಿ ತಿರುವಾಂಕೂರಿನ ಅರಸರು ಕೆಲವು ದಿನಗಳ ಹಿಂದೆ ಹೇಳುತ್ತಿದ್ದರು. ಇದಕ್ಕೆ ಸರ್ ಸಿ. ಪಿ. ಯವರ ಒತ್ತಾಯವೇ ಕಾರಣ. ತಮ್ಮ ಉದ್ದೇಶವನ್ನು ಈಡೇರಿಸಲು ಸರ್ ಸಿ. ಪಿ. ಯವರು ನಡೆಸಿದ ಭಗೀರಥ ಯತ್ನಗಳು ಸರ್ವರಿಗೂ ವೇದ್ಯವಾಗಿವೆ. ಭೂಮಿ, ಆಕಾಶಗಳು ತಲೆ ಕೆಳಗಾದರೂ ಆಗಸ್ಟ್ ಹದಿನೈದರಲ್ಲಿ ತಿರುವಾಂಕೂರು ಸ್ವತಂತ್ರ ಸಾರ್ವಭೌಮ ರಾಜ್ಯವಾಗುವುದರಲ್ಲಿ ಸಂಶಯವಿಲ್ಲವೆಂದು ಅವರು ಸಾರಿದ್ದರು. ಆದರೆ ಹದಿನೈದರೊಳಗೇ ತಿರುವಾಂಕೂರು ಭಾರತ ಯೂನಿಯನ್ನಿಗೆ ಸೇರಿತು. ಸರ್ ಸಿ. ಪಿ. ಯವರ ಸಂಕಲ್ಪವು ಮುರಿಯಿತು. ಅಲ್ಲಿನ ರಾಜರು ಅವರನ್ನು ಮೂಲೆಗೆ ಒತ್ತರಿಸಿದರು. ಈಗ ಸರ್ ಸಿ. ಪಿ. ಯವರಿಗೇ ಸ್ಥಾನ ಭ್ರಷ್ಟತ್ವವುಂಟಾಗಿರುತ್ತದೆ.

ಸರ್ ರಾಮಸ್ವಾಮಿಯವರು ನಮ್ಮ ದೇಶದ ಅತ್ಯಂತ ಮೇಧಾವಿಗಳಲ್ಲಿ ಒಬ್ಬರೆಂಬುದು ನಿಜ. ಸಾಹಿತ್ಯ, ವೇದಾಂತ, ಕಲೆ, ರಾಜನೀತಿ ಮುಂತಾದ ವಿಷಯಗಳಲ್ಲಿ ಅವರಿಗೆ ಅದ್ಭುತವಾದ ಪಾಂಡಿತ್ಯವಿರುವುದೂ ನಿಜ. ಆದರೆ ಅವರಿಗೆ ಅಧಿಕಾರ ದರ್ಪ ಮತ್ತು ಆಳಿಕೆಯ ಸ್ವೇಚ್ಛೆಯೇ ಸ್ವಾಭಾವಿಕವಾದ ಗುಣಗಳು; ಪ್ರಜಾಪ್ರಭುತ್ವವಲ್ಲ. ತಿರುವಾಂಕೂರಿನಲ್ಲಿ ಅವರು [illegible] ವಿದ್ಯಾಭ್ಯಾಸ, [illegible] ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡ [illegible] ಅವರ ಪ್ರಜೆಗಳ ಅಭಿಪ್ರಾಯದಂತೆ ಆಡಳಿತವು ನಡೆಯಬೇಕೆಂಬುದಕ್ಕೆ ಮಾತ್ರ ಅವರು ಸ್ವಲ್ಪವೂ ಮನ್ನಣೆ ಕೊಡುತ್ತಿರಲಿಲ್ಲ. ತಮ್ಮ ಅಧಿಕಾರ ದರ್ಪಕ್ಕೆ ಪ್ರತಿಬಂಧವಾಗಿ ಎಂತಹ ದಬ್ಬಾಳಿಕೆಯನ್ನಾದರೂ ಕೈಗೊಳ್ಳಲು ಅವರು ಹಿಂಜರಿಯುತ್ತಿರಲಿಲ್ಲ. ರಾಜಕೀಯ ಚಳುವಳಿಯು ಒಮ್ಮೆ ಉಲ್ಬಣಿಸಿದಾಗ ತಾವೇ ಸೈನ್ಯಾಧಿಕಾರವನ್ನು ವಹಿಸಿ ಮಾರ್ಷಲ್ ಲಾ ಶಾಸನವನ್ನೂ ಜಾರಿ ಮಾಡಿ ಅಸಂಖ್ಯಾತರಾದ ಜನರನ್ನು ಮರಣಕ್ಕೆ ಈಡು ಮಾಡಿದರು. ಅಂದಿನಿಂದ ಪ್ರಜಾಭಿಪ್ರಾಯವು ಪ್ರಭುತ್ವಕ್ಕೆ ತೀರ ವಿರೋಧವಾಗಿ ಪರಿಣಮಿಸಿತು. ರಾಜರು ಸಕಾಲದಲ್ಲಿ ಎಚ್ಚೆತ್ತು ರಾಜ್ಯಾಂಗ ಸಭೆಯಲ್ಲಿ ಸೇರಿದುದರಿಂದ ಅಲ್ಲಿ ಈಗ ತಕ್ಕಮಟ್ಟಿನ ಶಾಂತಿಯುಂಟಾಗಿರುತ್ತದೆ.

ತಿರುವಾಂಕೂರಿನಲ್ಲಿ ಶಾಶ್ವತವಾದ ಶಾಂತಿಯು ನೆಲೆಸಬೇಕೆಂದರೆ ಸರ್ ಸಿ ಪಿ ಯವರು ಮೊದಲು ಹೋಗಬೇಕೆಂದು ಅಲ್ಲಿನ ನಾಯಕರುಗಳು ಹೇಳುತ್ತಿದ್ದರು. ಈಗ ಅವರು ಹೊರಟು ಹೋಗಿರುವುದರಿಂದ ಇನ್ನು ಮುಂದೆ ಅಲ್ಲಿಗೆ ಕ್ಷೇಮವುಂಟಾಗುವುದರಲ್ಲಿ ಸಂಶಯವಿಲ್ಲ. ಪ್ರಜಾಭಿಪ್ರಾಯವನ್ನೂ, ಕಾಲ ಧರ್ಮವನ್ನೂ ಧಿಕ್ಕರಿಸಿ ಅಧಿಕಾರ ದರ್ಪದಿಂದ ಸರ್ವರನ್ನೂ ಅಡಗಿಸಿ ಸ್ವೇಚ್ಛೆಯಿಂದ ಆಡಳಿತ ನಡೆಸುವುದಾಗಿ ವಿಜೃಂಭಿಸುವವರೆಲ್ಲರೂ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಈ ಬಗೆಯ ಸರ್ವ ನಿಂದಿತ ನಿವೃತ್ತಿಯಿಂದ ಪಾಠ ಕಲಿಯುವುದು ಒಳ್ಳೆಯದು.

ನಿಧನ

ಶ್ರೀ ಕೃಷ್ಣಪ್ಪನವರ ಮಗ ದೇವರಾಜ ಮಾರ್ಕೆಟ್ ಕಾಯಿ ಅಂಗಡಿ ಕೆ. ವೆಂಕಟರಮಣಯ್ಯನಾದ ನಾನು ಮೊನ್ನೆ ರಾತ್ರಿ ೧೧ ಗಂಟೆಗೆ ನನ್ನ ಅಣ್ಣಂದಿರೂ ಮಾರ್ಕೆಟ್ ಕಾಯಿ ಮಳಿಗೆ ಮಾಲೀಕರೂ ಆದ ಶ್ರೀ ಕೆ ರಾಮಯ್ಯನವರು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಮತ್ತು ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.

ಕೆ. ವೆಂಕಟರಮಣಯ್ಯ

ಶಾಲೆಯ ಮರಗಳನ್ನು ಕಡಿಯುವುದೇಕೆ?

ಮೈಸೂರು ಚಾಮರಾಜ ರಸ್ತೆಯಲ್ಲಿರುವ [illegible] ಪಂಡಿತರ ಬಾಲಕಿಯರ ಶಾಲೆಯಲ್ಲಿದ್ದ ದೊಡ್ಡ ದೊಡ್ಡ ಮರಗಳನ್ನು ಅಧಿಕಾರಿಗಳ ತಿಳುವಳಿಕೆಯೇ ಇಲ್ಲದೆ ಯಾರೋ ಹೊರಗಿನವರು ಕತ್ತರಿಸಿ ಸಾಗಿಸುವುದಾಗಿ ತಿಳಿದು ಬಂದಿದೆ. ಬಿಸಿಲು ಹೊತ್ತಿನಲ್ಲಿ ಶಾಲೆಯ ಮಕ್ಕಳು ವಿಶ್ರಮಿಸಿಕೊಳ್ಳಲು ಈ ಮರಗಳಿಂದ ವಿಶೇಷ ಸಹಾಯವಾಗುತ್ತಿತ್ತು. ಪಕ್ಕದಲ್ಲಿಯೇ ನಿರ್ಮಾಣವಾಗುತ್ತಿರುವ ಸಿನಿಮಾ ಭವನದ ಅಂದ ಚಂದಗಳಿಗೆ ಅನುಕೂಲವಾಗಲು ಈ ರೀತಿ ಮಾಡಲ್ಪಟ್ಟಿದೆಯೆಂದೂ ಸಹ ಕೇಳಲಾಗಿದೆ. ಆದರೂ ರಾಜಧಾನಿಯಾದ ಇಂತಹ ನಗರದ ಸರ್ಕಾರಿ ಕಟ್ಟಡವೊಂದರಲ್ಲಿ ಸಿಕ್ಕಿದವರು ಈ ರೀತಿ ಸ್ವೇಚ್ಛಾ ಪ್ರವರ್ತನೆಯಿಂದ ವರ್ತಿಸುವುದರಿಂದ ಮಕ್ಕಳಿಗೆ ತೊಂದರೆಯುಂಟಾಗಿರುವುದು ಮಾತ್ರವಲ್ಲದೆ ಸರ್ಕಾರದ ದರ್ಪಕ್ಕೂ ಚ್ಯುತಿಯು ಬಂದಿರುವುದಿಲ್ಲವೇ-ಎಂಬ ಅಂಶವನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಮುಂದಾದರೂ ಇಂತಹ ಕೃತ್ಯಗಳು ನಡೆಯದಂತೆ ಬಂದೋಬಸ್ತು ಮಾಡುವರೇ?

ಹಿತೈಷಿ

ರಾಜಕಮಲ್, ಮೈಸೂರು.

ತಾ|| 15-8-47 ರಿಂದ

೨ ನೇ ವಾರ

ಮಹಾನಂದ

ಇದರೊಡನೆ ೧ ಭಾಗ ಕಾರ್ಟೂನ್ ಮತ್ತು ೧ ಭಾಗ ಕಾಂಗ್ರೆಸ್ ಟಾಪಿಕಲ್

From 15-8-47 for 7 days daily at 10 30 a. m.

The Court Dancer

(in English)

with

Sadhana Bose, Prathimadas Gupta, Prithviraj, Nayampalli.

ಆರು ತಿಂಗಳ ನಿದ್ರೆ; ಎದ್ದ ಕೂಡಲೇ ಮರಣ

ಕಳೆದ ಆರು ತಿಂಗಳಿಂದ ಒಂದೇ ಸಮನಾಗಿ ನಿದ್ರಿಸುತ್ತಿದ್ದ ಆಸ್ಟ್ರೇಲಿಯದ ೨೫ ವರ್ಷ ವಯಸ್ಸಿನ ರೀಟಾ ಆರ್ಗಲ್ ಎಂಬಾಕೆಯು ಕಳೆದ ತಿಂಗಳಲ್ಲಿ ಎಚ್ಚೆತ್ತಳೆಂದೂ ಅನಂತರ ಕಳೆದ ಸೋಮವಾರ ಆಸ್ಪತ್ರೆಯಲ್ಲಿ ಮೃತಪಟ್ಟಳೆಂದೂ ವರದಿಯಾಗಿದೆ. ನಿದ್ರಿಸುವಾಗಲೂ ಅವಳು ಆಹಾರವನ್ನು ತೆಗೆದುಕೊಳ್ಳುತ್ತಿದ್ದಳೆಂಬ ಅಂಶವು ವೈದ್ಯರುಗಳಿಗೆ ಆಶ್ಚರ್ಯವನ್ನುಂಟುಮಾಡಿರುತ್ತದೆ.

ಆತ್ಮಹತ್ಯದ ಒಪ್ಪಂದ

ಯುದ್ಧಾನಂತರ ಸುಖ ಪ್ರಾಪ್ತಿಯಾಗದಿದ್ದರೆ ತಮ್ಮ ಪ್ರಾಣಗಳನ್ನು ತ್ಯಜಿಸಲು ಜಪಾನಿನ ಕಾರಾಗೃಹಗಳಲ್ಲಿದ್ದ ಹಲವು ಸೈನಿಕರು ಒಪ್ಪಂದ ಮಾಡಿಕೊಂಡಿದ್ದರು. ಅದರಂತೆ ಆರು ಜನರು ಈಗ ಮಾಡಿರುವುದಾಗಿ ತಿಳಿದು ಬಂದಿದೆ.

ವುಡ್‌ಲ್ಯಾಂಡ್ಸ್

ತಾ|| 15-8-47 ರಿಂದ

ಅಮೋಘ ಪ್ರಾರಂಭ

ವೀರ್ ಕುನಾಲ್

(ಹಿಂದಿ)

—: ಪಾತ್ರ: —

ಕಿಶೋರ್ ಸಾಹು, ಶೋಭನಾ ಸಮರ್ಥ್

ದುರ್ಗಾ ಖೋಟೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿ.

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Office of the President,
City Municipal Council,
Mysore. Dated 8th August 1947

NOTIFICATION

No M 5 P. 5/47-48

Notice is hereby given to the inhabitants of the Mysore City Municipality that the Municipal Council have resolved to introduce Bylaw framed under 51 (i) iv and section 172 of the Mysore City Municipality Act for the control and trade of ghee, butter, milk etc. Any person having objection to the above may prefer the same in writing to the undersigned within one month from the date of publication of this notification in the official gazette after which no objection will be taken into consideration. A copy of the draft Byelaw is open for perusal in the Municipal Offices and all the Section offices of the Municipality during the office hours on all working days.

(Sd) N.S Hiriyannayya,
President

[illegible]
Edited printed and published by N. S. Nagarajan at the Sadhvi Press D. Subbaiah Road Mysore

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೨೨-೮-೪೭ [ಸಂಚಿಕೆ ೨೭

ಸ್ವಾತಂತ್ರ್ಯದಿನೋತ್ಸವಕ್ಕೆ ರೀವಾ ರಾಜರ ಕಾಣಿಕೆ

ಸ್ವಾತಂತ್ರ್ಯ ದಿನಾಚರಣೆ

ತಾ॥ ೧೫ ರ ಕಾರ್ಯಕ್ರಮಗಳು

ರಾಜಧಾನಿಗೆ ಸಾರ್ವಜನಿಕ ವಿದ್ಯಾರ್ಥಿ ಲಯದ ವಿದ್ಯಾರ್ಥಿಗಳಿಂದ ಧ್ವಜಾರೋಹಣ, ಜಿಲ್ಲಾಬೋರ್ಡು ಕಛೇರಿಯಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆ ಮತ್ತು ಮೆರವಣಿಗೆಗಳು ನಡೆದುವು

ದೇವನೂರಿನಲ್ಲಿ ಪ್ರಭಾತ ಫೇರಿ, ಧ್ವಜ ವಂದನೆ, ಮಹಾತ್ಮ ಗಾಂಧಿ, ಪಂಡಿತ ನೆಹರೂ, ನೇತಾಜಿ ಬೋಸರ ಭಾವಚಿತ್ರಗಳ ಮೆರವಣಿಗೆಯೂ ಮತ್ತು ಸಿಹಿತಿಂಡಿ ಹಂಚಿಕೆಯೂ ಆದುವು. ವಿದ್ಯಾರ್ಥಿಗಳು ಯುವಕ ಸಂಘವೊಂದನ್ನು ಸ್ಥಾಪಿಸಿಕೊಂಡಿರುವರು

ನಂಜನಗೂಡಿನ ಹೈಸ್ಕೂಲ್ ಯೂನಿಯನ್ನಿನವರು ಕಳೆದ ಶುಕ್ರವಾರ ದಿನಾಚರಣೆಯ ಜ್ಞಾಪಕಾರ್ಥವಾಗಿ ಮಹಾತ್ಮ ಗಾಂಧಿ ಮತ್ತು ಪಂಡಿತ ನೆಹರೂರವರ ಭಾವಚಿತ್ರಗಳನ್ನು ಹೈಸ್ಕೂಲಿಗೆ ಕೊಟ್ಟಿರುವರು. ಪಿರಿಯಾಪಟ್ಟಣ ಹೋಬಳಿ ಉಳ್ಳುವಳ್ಳಿ ಗ್ರಾಮದಲ್ಲಿ ದಿನೋತ್ಸವದ ಪ್ರಯುಕ್ತ ದೇವಾಲಯದಲ್ಲಿ ಪೂಜಾದಿಗಳೂ, ಧ್ವಜಾರೋಹಣ, ಮಹಾತ್ಮ ಗಾಂಧಿ, ಪಂಡಿತ ನೆಹರೂ, ಸುಭಾಷ್ ಚಂದ್ರಬೋಸರ ಭಾವಚಿತ್ರಗಳ ಮೆರವಣಿಗೆಯೂ ಬಡಬಗ್ಗರಿಗೆ ಅನ್ನದಾನವೂ ನಡೆದುವು

ಸ್ವಾತಂತ್ರ್ಯೋತ್ಸವಕ್ಕಾಗಿ ರಾಜರಿಂದ ೨೦ ಸಹಸ್ರ ರೂ

ರೀವಾ ಸಂಸ್ಥಾನಾಧೀಶರು ಕಳೆದ ೧೫ ರಂದು ಒಂದು ಭಾರಿ ಸಭೆಯನ್ನು ನೆರೆಸಿ ... ಭಾರತ ಧ್ವಜವನ್ನು ಹಾರಿಸಿದರೆಂದು ವರದಿಯಾಗಿದೆ. ಅರಮನೆಯು ಕೋಟೆಯ ... ಮೈಲಿ ದೂರವಿರುವ ... ಅವರೆಗೂ ದೀಪಾಲಂಕಾರದಿಂದ ಸಿಂಗರಿಸಲಾಗಿತ್ತು. ... ಮಹಾರಾಜರು ತಮ್ಮ ಸೈನ್ಯದೊಂದಿಗೆ ಮೆರವಣಿಗೆ ಹೋಗಿ ಕೋಟೆಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿದರು. ಬೀದಿಗಳೂ, ಮನೆಗಳೂ, ಅಂಗಡಿಗಳೂ ತಳಿರು ತೋರಣಗಳಿಂದಲೂ, ಧ್ವಜಗಳಿಂದಲೂ ಅಲಂಕೃತವಾಗಿದ್ದುವು. ಮಹಾರಾಜರಿಂದ ಧ್ವಜಾರೋಹಣ ಮತ್ತು ... ಗಳಾದ ನಂತರ ಅರಮನೆಯಿಂದ ಸ್ವಾತಂತ್ರ್ಯೋತ್ಸವದ ವೆಚ್ಚಕ್ಕಾಗಿ ೨೦ ಸಹಸ್ರ ರೂ. ಕೊಟ್ಟಿರುವುದಾಗಿ ತಿಳಿಸಲಾಯಿತು. ಸೇನೆಯಿಂದ ಕವಾಯತು ಮತ್ತು ... ನಡೆದುವು. ೫೫ ಮಂದಿ ಖೈದಿಗಳನ್ನು ಬಿಡುಗಡೆ ಮಾಡಿ ಬಡಬಗ್ಗರಿಗೆ ಬಟ್ಟೆ ಧಾನ್ಯಗಳನ್ನು ಹಂಚಲಾಯಿತು.

ಚಾಮುಂಡಿ ... ಮೈಸೂರು.

... 22—8-47 ರಿಂದ

... ಪ್ರಾರಂಭ

... ಆಂಟಿ

... : ...

... ಪಿಕ್ಚರ್ಸ್, ಜಯರಾಜ್

... 22-8-47 for 4 days

... at 10-30 a. m.

2nd Double attraction

... STORY

&

... DAYS LEAVE

ಕೇಡಿಜ್ ನಲ್ಲಿ ಸ್ಫೋಟನೆಯಿಂದ ೧೦೦೦ ಮರಣ

ಸ್ಪೇನಿನ ಕೇಡಿಜ್ ಎಂಬಲ್ಲಿನ ನೌಕಾ ನಿಲ್ದಾಣದಲ್ಲಿ ಉಂಟಾದ ಸ್ಫೋಟನೆಯ ದೆಸೆಯಿಂದ ೧೦೦೦ ಮಂದಿ ಮರಣ ಹೊಂದಿರುವರೆಂದೂ ೫೦೦೦ ಮಂದಿ ಘಾಯಗೊಂಡಿರುವರೆಂದೂ ವರದಿಯಾಗಿದೆ. ಹಡಗಿನಲ್ಲಿ ಉಂಟಾದ ಸ್ಫೋಟನವು ಸಮೀಪದ ... ಮದ್ದುಗುಂಡುಗಳ ಕೋಠಿಗೂ ತಗುಲಿ ಅವು ಹತ್ತಿ ಉರಿಯಲು ಆರಂಭವಾದುದೇ ಈ ಬಗೆಯ ಭಾರಿ ಅನಾಹುತಕ್ಕೆ ಕಾರಣವೆಂದು ಹೇಳಲಾಗಿದೆ. ಸ್ಫೋಟನದ ಶಬ್ದವು ಕೇಡಿಜಿನ ೬೦ ಮೈಲಿ ದೂರದ ಪ್ರದೇಶಗಳವರೆಗೂ ಕೇಳಿತು. ೧೫ ಮೈಲಿ ಸುತ್ತಳತೆಯಲ್ಲಿರುವ ಮನೆಗಳೆಲ್ಲಾ ನಡುಗಿವೆ, ಕಿಟಕಿಗಳು ಮುರಿದಿವೆ

ಹೈದರಾಬಾದ್ ಸೈನಿಕರಿಂದ ಪಾಕಿಸ್ತಾನ್ ಘೋಷಣೆ

ಹೈದರಾಬಾದಿನ ಗಲಭೆಗಳನ್ನಡಗಿಸಲು ದಾರಿಗಳಲ್ಲಿ ಸಂಚರಿಸುತ್ತಿರುವ ಸೈನಿಕರು ಪಾಕಿಸ್ತಾನ್ ಪರವಾದ ಘೋಷಣೆಗಳನ್ನು ಕೂಗಿಕೊಂಡು ಅಲ್ಲಿನ ಮುಸ್ಲಿಮರಿಗೆ ಉತ್ತೇಜನ ಕೊಡುತ್ತಿರುವುದಾಗಿ ಅಲ್ಲಿನ ಕಾಂಗ್ರೆಸ್ಸಿನವರು ಸರ್ದಾರ್ ಪಟೇಲರಿಗೆ ದೂರು ಕೊಟ್ಟಿರುವರು

ಭಗತ್ ಸಂಸ್ಥಾನದಲ್ಲಿ ಸ್ವಾತಂತ್ರ್ಯೋತ್ಸವದ ಸ್ಮಾರಕ

ಸ್ವಾತಂತ್ರ್ಯ ಸಾಧನೆಯ ನೆನಪಿಗಾಗಿ ತಮ್ಮ ರಾಜಧಾನಿಯಾದ ಸೋಲನಿನಲ್ಲಿ ಮಹಾತ್ಮ ಗಾಂಧಿಯವರ ಹೆಸರಿನಿಂದ ಒಂದು ಸಾರ್ವಜನಿಕ ಉದ್ಯಾನವನವನ್ನೂ, ಭಾರತದ ಪ್ರಧಾನಿ ಪಂಡಿತ ನೆಹರೂರವರ ಹೆಸರಿನಲ್ಲಿ ಒಂದು ದೊಡ್ಡ ಗಡಿಯಾರದಿಂದ ಕೂಡಿದ ಗೋಪುರವನ್ನೂ ಏರ್ಪಡಿಸುವುದಾಗಿ ಭಗತ್ ಸಂಸ್ಥಾನಾಧೀಶರು ತಿಳಿಸಿರುವರು.

ವಿಚಾರ-ನಾದ ಪತ್ರಿಕೆ

ಶ್ರೀ ಕಟಗಿ ವೇದಮೂರ್ತಿಗಳ ಸಂಪಾದಕತ್ವದಲ್ಲಿ ದಾವಣಗೆರೆಯಲ್ಲಿ ಕಳೆದ ೧೫ ನೇ ತಾರೀಖಿನ ದಿನದಿಂದ ಆರಂಭವಾಗಿರುವ ವಿಚಾರ ನಾದ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ನಾವು ಆದರದಿಂದ ಸ್ವಾಗತಿಸುತ್ತೇವೆ. ವಿಚಾರ ಪೂರ್ಣ ಲೇಖನಗಳಿಂದ ಕೂಡಿ ಹೊರಬಿದ್ದಿರುವ ... ವಾರಪತ್ರಿಕೆಯು ... ಕನ್ನಡಿಗರೆಲ್ಲರ ಪ್ರೋತ್ಸಾಹಕ್ಕೆ ಪಾತ್ರವಾಗಬೇಕೆಂದು ನಮ್ಮ ... ಬೇಕ.

ಬೆವಿನ್ನರು ಬ್ರಿಟನ್ನಿನ ಪ್ರಧಾನಿಯಾಗುವರೇ ?

ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲಿಯವರು ದೇಹಾಲಸ್ಯದ ಕಾರಣ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಬಗ್ಗೆ ಆಲೋಚಿಸುತ್ತಿರುವರೆಂದೂ, ವಿದೇಶಾಂಗ ಮಂತ್ರಿ ಮಿ॥ ಅರ್ನೆಸ್ಟ್ ಬೆವಿನ್ನರು ಬ್ರಿಟನ್ನಿನ ಪ್ರಧಾನಿಯಾಗುವರೆಂದೂ ಒಂದು ವರದಿಯು ತಿಳಿಸುತ್ತದೆ

ನರಿಯಿಂದ ಮಗುವಿನ ಅಪಹರಣ

ಅಲ್ಲೀಕೋಟೆಯ ಬಳಿ ಮನೆಯೊಳಗೆ ತಂದೆಯ ಪಕ್ಕದಲ್ಲಿ ಮಲಗಿ ನಿದ್ರಿಸುತ್ತಿದ್ದ ೩ ತಿಂಗಳ ಮಗುವನ್ನು ನರಿಯೊಂದು ಕಚ್ಚಿಕೊಂಡು ಹೋಗಿ ತಿಂದು ಹಾಕಿರುವುದಾಗಿ ವರದಿಯಾಗಿದೆ. ಅದು ಮತ್ತೆ ಮನೆಯೊಳಕ್ಕೆ ನುಗ್ಗಿ ತೊಟ್ಟಿಲಿನ ಬಳಿ ಕಾದು ಜೊತೆಗೆ ಮಲಗಿದ್ದ ಇನ್ನೊಂದು ಮಗುವನ್ನೂ ಕೊಂಡೊಯ್ಯಲು ಯತ್ನಿಸಿದಾಗ ಮನೆಯವರಿಗೆ ಎಚ್ಚರವಾಗಿ ಈ ದುರಂತವು ಗೋಚರವಾಗಿದೆ

ಜನವರಿಯಿಂದ ಪಾಕಿಸ್ತಾನಕ್ಕೆ ಹೊಸ ಸ್ಟಾಂಪು

೧೯೪೮ ನೇ ಜನವರಿಯಿಂದ ಪಾಕಿಸ್ತಾನದಲ್ಲಿ ಹೊಸ ಅಂಚೆ ಸ್ಟಾಂಪುಗಳು ಹೊರಬೀಳುವುವೆಂದು ಹೇಳಲಾಗಿದೆ. ಅವುಗಳಲ್ಲಿ ಯಾವ ತಲೆಯನ್ನೂ ಅಚ್ಚು ಹಾಕುವುದಿಲ್ಲ. ಅವು ಆಕಾರದಲ್ಲಿ ಭಾರತದ ಸ್ಟಾಂಪುಗಳಂತೆ ಇರುವುವು. ಅವುಗಳ ಮೇಲ್ಭಾಗದಲ್ಲಿ ಅರ್ಧ ಚಂದ್ರ ಮತ್ತು ನಕ್ಷತ್ರಗಳನ್ನೂ ಕೆಳಗಡೆ ಪಾಕಿಸ್ತಾನ ಎಂಬುದನ್ನೂ ಮುದ್ರಿಸಲಾಗುವುದು

ವಿದ್ಯಾರ್ಥಿ ಕಾಂಗ್ರೆಸ್ಸಿನ ಚಳುವಳಿ

ಸೆಪ್ಟೆಂಬರ್ ೧ನೇ ತಾರೀಖಿನಿಂದ ಆರಂಭವಾಗುವ ವಿದ್ಯಾರ್ಥಿ ಕಾಂಗ್ರೆಸ್ಸಿನ ಚಳುವಳಿಯ ರೂಪರೇಖೆಗಳನ್ನು ನಿರ್ಧರಿಸಲು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕರ್ತರ, ನಗರದ ವಿವಿಧ ಸಂಸ್ಥೆಗಳ ಪ್ರತಿನಿಧಿಗಳ ಸಭೆಯು ನಾಳೆ ಸಂಜೆ ೬ ಗಂಟೆಗೆ ವಿ॥ ಕಾಂ॥ ಕಛೇರಿಯಲ್ಲಿ ಸೇರುತ್ತದೆ. ಎಲ್ಲ ವಿದ್ಯಾರ್ಥಿಗಳೂ ಭಾಗವಹಿಸಬೇಕು ಎಂಬುದಾಗಿ ಸಂಘದ ... ಶ್ರೀ ... ಅಪೇಕ್ಷಿಸಿರುವರು.

ಬೆಂಗಾಲ್ ಸಿಲ್ಕ್ ಸೀರೆಗಳು

ಉತ್ತಮೋತ್ತಮವಾದ ಬಣ್ಣಗಳಲ್ಲಿ

೬-೭ ೮-೯ ಗಜಗಳಲ್ಲಿ

ಬಂದಿವೆ

ಬಾಬುಸಾಬ್ ಕಂಪೆನಿ, ಮೈಸೂರು

ಬೆಂಗಳೂರಿನಿಂದ ಮೈಸೂರಿಗೆ ಕಾಲ್ನಡಗೆಯ ಸತ್ಯಾಗ್ರಹ

ಕೆ. ಸಿ. ರೆಡ್ಡಿಯವರು ಮೊದಲನೇ ಸರ್ವಾಧಿಕಾರಿ

ಕಾಂಗ್ರೆಸ್ಸಿನ ಎಲ್ಲ ಬೇಡಿಕೆಗಳೂ ಈಡೇರುವವರೆಗೆ ಸೆಪ್ಟೆಂಬರ್ ೧ ರಿಂದ ಆರಂಭವಾಗುವ ಸತ್ಯಾಗ್ರಹವು ಮುಂದುವರಿಯಬೇಕೆಂಬುದಾಗಿ ಅ॥ ಮೈ॥ ಕಾಂ॥ ಕಾರ್ಯಕಾರಿ ಸಮಿತಿಯು ನಿರ್ಣಯಿಸಿರುತ್ತದೆ. ಚಳುವಳಿಯನ್ನು ನಿಲ್ಲಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಯ ಮೂಲ ಸದಸ್ಯರಿಗೆ ಮಾತ್ರ ವಹಿಸಲಾಗಿದೆ. ಶಾಸನ ಸಭೆಗಳಲ್ಲಿರುವ ಕಾಂ॥ ಸದಸ್ಯರೂ ಸಹ ಚಳುವಳಿಯಲ್ಲಿ ಭಾಗವಹಿಸುವರೆಂದೂ, ಆದರೆ ಅವರು ಶಾಸನ ಸಭೆಗಳ ತಮ್ಮ ಸ್ಥಾನಗಳನ್ನು ತ್ಯಜಿಸುವುದಿಲ್ಲವೆಂದೂ ಹೇಳಲಾಗಿದೆ. ಕಾಂಗ್ರೆಸ್ಸಿನ ಅಂಗರಚನಾ ನಿಯಮಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ. ಶ್ರೀ ಕೆ. ಚೆಂಗಲರಾಯರೆಡ್ಡಿಯವರನ್ನು ಸತ್ಯಾಗ್ರಹದ ಪ್ರಥಮ ಸರ್ವಾಧಿಕಾರಿಯಾಗಿ ನೇಮಿಸಲಾಗಿದೆ. ಸತ್ಯಾಗ್ರಹದ ನಿರ್ಣಯ ಮತ್ತು ಈಗಿನ ಪರಿಸ್ಥಿತಿಗಳನ್ನು ಕುರಿತು ಶ್ರೀ ಮನ್ಮಹಾರಾಜರವರಿಗೆ ಪತ್ರ ಬರೆಯಲು ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ

ಸೆಪ್ಟೆಂಬರ್ ೧ ರ ದಿನ ಸಂಸ್ಥಾನಾದ್ಯಂತವೂ ಹರತಾಳ, ಪ್ರಭಾತ ಫೇರಿ, ಮೆರವಣಿಗೆ, ರಾಷ್ಟ್ರ ಧ್ವಜಾರೋಹಣ, ಸಾರ್ವಜನಿಕ ಸಭೆ ಸತ್ಯಾಗ್ರಹದ ಪ್ರತಿಜ್ಞೆ ಮೊದಲಾದವುಗಳನ್ನು ಎಲ್ಲರೂ ಕೈಗೊಳ್ಳಬೇಕೆಂದೂ ಕಾರ್ಯಕಾರಿ ಸಮಿತಿಯು ಪ್ರಾರ್ಥಿಸಿರುತ್ತದೆ. ... ಶಾಸನ, ಎಕ್ಸೈಜು ಕಾನೂನು, ಸ್ಥಳೀಯ ಧಾರಾಸಭೆಗಳು ಇವುಗಳ ಭಂಗ ಹೆಂಡ ಮತ್ತು ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು, ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ಮುಷ್ಕರಗಳನ್ನು ಏರ್ಪಡಿಸುವುದು, ಟಿಕೆಟ್ ಪಡೆಯದೆ ರೈಲುಗಳಲ್ಲಿ ಪ್ರಯಾಣ ಮಾಡುವುದು ಇವು ಸತ್ಯಾಗ್ರಹದ ಕಾರ್ಯಕ್ರಮಗಳಲ್ಲಿ ಅಡಕವಾಗಿದೆ

ಸೆಪ್ಟೆಂಬರ್ ೩ ನೇ ತಾರೀಖು ಕಾಂಗ್ರೆಸ್ ನಾಯಕರು ೩ ತಂಡಗಳಲ್ಲಿ ಕಾಲ್ನಡಗೆಯಲ್ಲಿ ಬೆಂಗಳೂರಿನಿಂದ ಹೊರಟು ರಾಜಧಾನಿಗೆ ೧೫ ನೇ ತಾರೀಖು ತಲುಪಿ ಆ ದಿನ ಅರಮನೆಯ ಮುಂದೆ ಸತ್ಯಾಗ್ರಹವನ್ನು ಆಚರಿಸುವರೆಂದು ವರದಿಯಾಗಿದೆ

ಸ್ವಾತಂತ್ರ್ಯ ದಿನಾಚರಣೆಯಲ್ಲಿ ತುರುಬನ್ನು ಕಟ್ಟಿದಳು

ರೇಪಲ್ಲಿಯ ಪಳ್ಳಿಪಾಟಿ ಸೀತಮ್ಮ ಎಂಬಾಕೆಯು ೧೯೩೯ ರಲ್ಲಿ ಭಾರತವು ಸ್ವತಂತ್ರವಾಗುವವರೆಗೆ ತಾನು ತನ್ನ ತುರುಬನ್ನು ಕಟ್ಟುವುದಿಲ್ಲವೆಂದು ಶಪಥ ಮಾಡಿದ್ದಳೆಂದೂ, ಮೊನ್ನೆ ಸ್ವಾತಂತ್ರ್ಯ ದಿನಾಚರಣೆಯ ದಿನ ಆಕೆಯು ತನ್ನ ತಲೆಯನ್ನು ಬಾಚಿ ತುರುಬನ್ನು ಕಟ್ಟಿಕೊಂಡಳೆಂದೂ ವರದಿಯಾಗಿದೆ

ಬಿಲಾಸಪುರ ರಾಜರಿಂದ ಬಿರುದಿನ ತ್ಯಾಗ

ಬ್ರಿಟಿಷ್ ಸಾರ್ವಭೌಮರಿಂದ ತಮಗೆ ಕೊಡಲ್ಪಟ್ಟಿದ್ದ ... ಬಿರುದನ್ನು ತಾವು ತ್ಯಜಿಸಿರುವುದಾಗಿ ಬಿಲಾಸಪುರದ ರಾಜರು ವೈಸರಾಯರಿಗೆ ತಿಳಿಸಿರುವರು.

ಸಾಧ್ವಿ
ತಾ|| ೨೨-೮-೪೭ ಶುಕ್ರವಾರ

ಪ್ರಭುಗಳೇ ಪ್ರವೇಶಿಸಬೇಕು

ಬರುವ ತಿಂಗಳು ಒಂದನೇ ತಾರೀಖಿನಿಂದ ಸಂಸ್ಥಾನದಲ್ಲೆಲ್ಲಾ ಸತ್ಯಾಗ್ರಹವನ್ನು ಹೂಡಲು ಮೈಸೂರು ಕಾಂಗ್ರೆಸ್ಸು ನಿರ್ಧರಿಸಿರುತ್ತದೆ. ಅದಕ್ಕಾಗಿ ಸರ್ವ ಸಿದ್ಧತೆಗಳನ್ನೂ ಮಾಡುತ್ತಿದೆ. ಕಾಂಗ್ರೆಸ್ಸಿನ ಸಾಮಾನ್ಯ ಅಂಗ ರಚನೆಯನ್ನೆಲ್ಲಾ ರದ್ದುಮಾಡಿ ಅಧ್ಯಕ್ಷರಿಗೆ ಸರ್ವಾಧಿಕಾರವನ್ನು ವಹಿಸಲಾಗಿದೆ. ಸರ್ವವ್ಯಾಪಿಯಾದ ಅಹಿಂಸಾತ್ಮಕ ಸತ್ಯಾಗ್ರಹ ಚಳುವಳಿಗೆ ರಂಗಸ್ಥಳವು ನಿರ್ಮಿಸಲ್ಪಟ್ಟಿರುತ್ತದೆ.

ಸುಭಾಷ್ ನಗರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಿಂದ ಮೊದಲುಗೊಂಡು ಇದುವರೆಗೆ ಕಾಂಗ್ರೆಸ್ಸಿನವರು ಸಂಸ್ಥಾನದಲ್ಲಿ ಸತ್ಯಾಗ್ರಹವನ್ನು ಹೂಡಲು ಎಷ್ಟು ಬಗೆಗಳಲ್ಲಿ ಒತ್ತಾಯಪಡಿಸುತ್ತಿದ್ದರೆಂಬುದು ಸರ್ವರಿಗೂ ವೇದ್ಯವೇ ಆಗಿರುತ್ತದೆ. ಮೊನ್ನೆ ರಾಜಧಾನಿಯಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಸತ್ಯಾಗ್ರಹದ ಆಕಾಂಕ್ಷೆಯು ಉಲ್ಬಣಾವಸ್ಥೆಯನ್ನು ಮುಟ್ಟಿತ್ತು. ಅದಷ್ಟು ಬೇಗನೆ ಅದನ್ನು ಆರಂಭಿಸಬೇಕೆಂಬುದೇ ಎಲ್ಲರ ಅಪೇಕ್ಷೆಯಾಗಿದ್ದಿತು. ಇದುವರೆಗೆ ಅದನ್ನು ಮುಂದುವರಿಸಿದುದಕ್ಕಾಗಿ ಅಸಮಾಧಾನವೂ ವ್ಯಕ್ತವಾಗುತ್ತಿತ್ತು.

ದೇಶದ ನಾಯಕರುಗಳು ಇದುವರೆಗೆ ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾಗಿ ಅವರ ಅಪೇಕ್ಷೆಗಳು ಈಡೇರುವ ಭರವಸೆಯು ಸ್ವಲ್ಪ ಮಟ್ಟಿಗೂ ಬಾರದೆ ಇದ್ದುದರ ಪರಿಣಾಮವೇ ಇಂದಿನ ಸತ್ಯಾಗ್ರಹದ ನಿರ್ಣಯವಾಗಿರುತ್ತದೆ. ಕಳೆದ ಆರು ತಿಂಗಳ ಹಿಂದೆಯೇ ಕಾಂಗ್ರೆಸ್ಸಿನವರು ಆಂದೋಲನವನ್ನು ನಡೆಸಲು ಸಿದ್ಧತೆಗಳನ್ನು ಮಾಡಿದ್ದರು. ಅಷ್ಟರಲ್ಲಿ ಶ್ರೀಮನ್ಮಹಾರಾಜರವರಿಂದ ಬಂದ ಸಂದೇಶವು ವಾತಾವರಣವನ್ನು ಬದಲಾಯಿಸಿ ಎಲ್ಲರಲ್ಲಿಯೂ ಆಶಾಕಿರಣವನ್ನು ಮೂಡಿಸಿತು. ಆದರೆ ಆ ಘೋಷಣೆಯ ನಂತರ ನಡೆದಿರುವ ವಿದ್ಯಮಾನಗಳು ಯಾರಿಗೂ ಸಮಾಧಾನವನ್ನುಂಟುಮಾಡುವುದಿಲ್ಲ. ಮಹಾಪ್ರಭುಗಳಿಂದ ಹೊರಟ ಒಂದು ವಿಶೇಷ ಆಜ್ಞೆಗೆ ಯಾವ ಗಮನವು ಕೊಡಲ್ಪಡಬೇಕೋ ಅದು ಕೊಡಲ್ಪಟ್ಟಿರುವುದಿಲ್ಲ. ಎಂಟು ತಿಂಗಳಾದರೂ ಅದು ಇನ್ನೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ.

ಇತ್ತೀಚೆಗೆ ಸಣ್ಣ ಪುಟ್ಟ ವಿಷಯಗಳಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿಯೂ ಸಹ ಉದಾರ ಭಾವನೆಯಿಂದ ಕೂಡಿರುವುದಿಲ್ಲ. ರಾಜ್ಯಾಂಗ ಸಭೆಗೆ ನಡೆದ ಚುನಾವಣೆಯ ವಿಧಾನ, ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕೈದಿಗಳನ್ನು ಬಿಡುಗಡೆ ಮಾಡದಿರುವುದು ಮುತ್ತು ಇಂತಹ ಹಲವು ವಿಚಾರಗಳು ಅತ್ಯಂತ ವಿಷಾದಕರವಾಗಿವೆ. ಭಾರತ ಡೊಮಿನಿಯನ್ನಿನಲ್ಲಿ ಸೇರದಿರುವ ಸಂಸ್ಥಾನಗಳ ಮಾತು ಬೇರೆ. ಆದರಲ್ಲಿ ಸೇರಿ ಪ್ರಗತಿ ಮಾರ್ಗವನ್ನು ಅವಲಂಬಿಸುವ ಸೂಚನೆಯನ್ನು ಕೊಟ್ಟ ಮೈಸೂರು ಸಂಸ್ಥಾನವು ಈ ರೀತಿ ವರ್ತಿಸಿರುವುದು ಸರಿಯಲ್ಲ.

ಸತ್ಯಾಗ್ರಹಕ್ಕೆ ಈಗ ರಂಗಸ್ಥಳವು ಸಿದ್ಧವಾಗಿರುತ್ತದೆ. ಇದುವರೆಗೆ ನಡೆದ ಚಳುವಳಿಗಳಂತಲ್ಲದೆ ಹೊಸ ವಿಧಾನಗಳನ್ನು ಹಾಕಲಾಗಿದೆ. ಪ್ರಭುಗಳಲ್ಲಿಯೇ ನೇರವಾಗಿ ಮೊರೆಯಿಡಲು ಅರಮನೆಗೇ ಸತ್ಯಾಗ್ರಹಿಗಳ ತಂಡವನ್ನು ಕಳುಹಿಸುವ ಏರ್ಪಾಡುಗಳಾಗುತ್ತಿವೆ. ಸಂಸ್ಥಾನದ ಇತರ ಭಾಗಗಳಲ್ಲಿಯೂ ಹಲವು ಬಗೆಯ ಕಾರ್ಯಕ್ರಮಗಳನ್ನು ಗೊತ್ತುಮಾಡಲಾಗಿದೆ.

ಸತ್ಯಾಗ್ರಹವು ಒಮ್ಮೆ ಆರಂಭವಾಯಿತೆಂದರೆ ಅದು ಯಾವ ಯಾವ ರೂಪವನ್ನು ತಾಳುವುದೆಂಬುದನ್ನು ಹೇಳಲು ಸಾಧ್ಯವಿಲ್ಲ. ಸತ್ಯಾಗ್ರಹಿಗಳು ಎಷ್ಟೇ ಅಹಿಂಸಾತ್ಮಕವಾಗಿ ನಡೆದುಕೊಂಡರೂ ಇತರ ಜನರಿಂದ ಹಿಂಸಾಕೃತ್ಯಗಳು ನಡೆಯಬಹುದು. ಅವುಗಳನ್ನು ತಡೆಯಲು ಅಧಿಕಾರಿಗಳು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾಗಬಹುದು. ಇವುಗಳನ್ನೆಲ್ಲಾ ಈಗ ಊಹಿಸಲು ಸಾಧ್ಯವಿಲ್ಲ.

ಮುಖ್ಯವಾಗಿ ಇಡೀ ಭರತಖಂಡಕ್ಕೇ ಸ್ವಾತಂತ್ರ್ಯವು ಲಭಿಸಿ ಮೈಸೂರು ಸಂಸ್ಥಾನವೂ ಅದರಲ್ಲಿ ಸೇರಿ ಭಾರತೀಯ [illegible] ಸ್ವಾತಂತ್ರ್ಯ ಸಾಧನೆಯ ಸಂತೋಷದಲ್ಲಿ ನಲಿಯುತ್ತಿರುವಾಗ ಮೈಸೂರಿನ ಪ್ರಜೆಗಳು ಮಾತ್ರ ತಮ್ಮ ರಾಜಕೀಯ ಹಕ್ಕುಬಾಧ್ಯತೆಗಳಿಗಾಗಿ ಅಗ್ನಿ ಜ್ವಾಲೆಯಲ್ಲಿ ಪ್ರವೇಶಿಸಬೇಕಾದ ಪರಿಸ್ಥಿತಿಯು ಯಾರಿಗೂ ಸಮಾಧಾನಕರವಲ್ಲ. ಸಂಸ್ಥಾನಗಳಲ್ಲಿ ಪ್ರಜೆಗಳಿಗೂ ಪ್ರಭುತ್ವಕ್ಕೂ ಯಾವ ಭಿನ್ನಭೇದವೂ ಇರಲು ಕಾರಣವಿಲ್ಲವೆಂದು ಹೇಳಲಾಗಿದೆ. ಅದನ್ನು ಪ್ರಕಟಪಡಿಸುವ ಕಾಲವು ಈಗ ಬಂದಿರುತ್ತದೆ.

ನಮ್ಮ ಸಂಸ್ಥಾನದಲ್ಲಿ ಪ್ರಜೆಗಳ ರಾಜಕೀಯ ಧ್ಯೇಯ ಸಾಧನೆಗಾಗಿ ಪ್ರಭುತ್ವದವರೊಡನೆ ಯಾವ ಘರ್ಷಣೆಯೂ ಆಗದಿರಲೆಂದು ಹಾರೈಸುವವರಲ್ಲಿ ನಾವೂ ಒಬ್ಬರು. ಸತ್ಯಾಗ್ರಹ ಮತ್ತು ಅದರಿಂದ ಉದ್ಭವಿಸುವ ಕಷ್ಟ ಪರಂಪರೆಗಳು ಯಾರಿಗೂ ಸಂತೋಷವನ್ನುಂಟುಮಾಡಲಾರವು. ತಮ್ಮ ಪ್ರಜೆಗಳು ಅವರ ಅಪೇಕ್ಷೆಗಳಿಗಾಗಿ ಕಷ್ಟ ಪರಂಪರೆಗಳಿಗೂ ದುಃಖಕ್ಕೂ ಈಡಾಗುವುದು ಪ್ರಭುಗಳಿಗೂ ಸಹ ಸಂತೋಷವನ್ನುಂಟುಮಾಡಲಾರದು.

ಇಂತಹ ಪರಿಸ್ಥಿತಿಯಲ್ಲಿ ನಮ್ಮ ಶ್ರೀಮನ್ಮಹಾರಾಜರವರೇ ಈ ವಿಷಯಕ್ಕೆ ತಮ್ಮ ಪರಿಪೂರ್ಣವಾದ ಗಮನವನ್ನು ಕೊಡಬೇಕಾಗಿದೆ. ಕಾಂಗ್ರೆಸ್ಸಿನವರು ಅವರಿಗೆ ಬರೆಯಲಿರುವ ಪತ್ರವನ್ನು ಅವರು ಸಮಾಧಾನವಾಗಿ ಪರಿಶೀಲಿಸಿ ಪ್ರಜೆಗಳ ಅಪೇಕ್ಷೆಯನ್ನು ಈಡೇರಿಸಲು ಸೂಕ್ತವಾದ ಘೋಷಣೆಯನ್ನು ಹೊರಡಿಸಿ ಶಾಶ್ವತವಾದ ಶಾಂತಿ ಸೌಹಾರ್ದಗಳನ್ನು ನೆಲೆಗೊಳಿಸುವಂತೆ ಮಾಡಲೆಂದು ನಾವು ಹೃತ್ಪೂರ್ವಕವಾಗಿ ಬೇಡುತ್ತೇವೆ.

Edited, printed and published by A. S. Iyengaran at the Sadhvi Press, D. Subbaiah Road, Mysore

Office of the President,
City Municipal Council,
Mysore, Dated 31st August 1947

NOTIFICATION

Sealed tenders will be received up to 4 p. m. on 25—8—1947 by the Municipal Engineer, for the construction of Twenty-Four Shops in the Town Hall Compound, Mysore.

Each tender must be accompanied with a challan for having remitted Rs. 1770/- in the Municipal Treasury as earnest money. For full particulars please see the detailed notification on the Notice Board.

S Narayana Swamy,
Municipal Engineer.

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್

ನಂ. 7 ಡೈರೆಕ್ಟರುಗಳ ಚುನಾವಣೆ ನಂ. 7

ತಾ|| 24-8-47 ನೇ ಭಾನುವಾರ

ಮಧ್ಯಾಹ್ನ 4 ಗಂಟೆಗೆ ಶ್ರೀ ಬನುಮಯ್ಯನವರ ಹೈಸ್ಕೂಲಿನಲ್ಲಿ

ಟಿ. ಚಂದ್ರಶೇಖರ ಗೌಡ L. E. E.

ಮುನಿಸಿಪಲ್ ಕೌನ್ಸಿಲರ್, [illegible]; [illegible]
[illegible] ಡೈರೆಕ್ಟರ್ ಕೋ-ಆಪರೇಟಿವ್ [illegible]
[illegible] ತಮ್ಮ [illegible]
ಡೈರೆಕ್ಟರಾಗಿ ಚುನಾಯಿಸಬೇಕಾಗಿ ವಿನಂತಿ

WOODLANDS
Morning shows for 4 days
from 23-8-47
[illegible] a. m.
O'Rourke

ವುಡ್‌ಲ್ಯಾಂಡ್ಸ್
ತಾ|| 22-8-47 ರಿಂದ
ಅಮೋಘ 2 ನೇ ವಾರ

ವೀರ್ ಕುನಾಲ್
(ಹಿಂದಿ)
—: ಪಾತ್ರ :—
ಕಿಶೋರ್ ಸಾಹು, ಶೋಭನಾ ಸಮರ್ಥ
ದುರ್ಗಾ ಖೋಟೆ

ಅಪೇರಾ ಟಾಕೀಸ್, ಮೈಸೂರು
22-8-47 ರಿಂದ　4 ನೇ ವಾರ
ಸುಲೋಚನ
(ತಮಿಳು)



ನರಳುತ್ತಿರುವ ಜನತೆಗೆ ಐವತ್ತು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಜೀವಾಮೃತವೇ ಈಗಲೂ ಬುದ್ಧಿ ಕೌಶಲ್ಯದ ಕೆಲಸಗಾರರಿಗೂ, ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಮತ್ತು ಇತರ ಎಲ್ಲಾ ನಿಶ್ಶಕ್ತ ಜನರಿಗೂ ಅತ್ಯುತ್ತಮ ಶಕ್ತಿವರ್ಧಕವೆಂದು ಪರಿಗಣಿಸಲ್ಪಟ್ಟಿರುತ್ತದೆ.



ಫೋನ್ ನಂ.: 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೨೩-೮-೪೭ [ಸಂಚಿಕೆ ೨೮

ಕೆಂಪು ಕೋಟೆಯಲ್ಲಿ – ಭಾರತ ಸೈನ್ಯ ಕೇಂದ್ರ –

ಸೆಪ್ಟೆಂಬರ್ ೧೫ ರಿಂದ ರೈಲ್ವೆ ಕೆಲಸಗಾರರ ಸತ್ಯಾಗ್ರಹವೇ ?

ಮೈಸೂರು ೨೩

ಮೈಸೂರು ರೈಲ್ವೆ ಕೆಲಸಗಾರರ ಸಂಘದ ..ಭೆಯು ಮೊನ್ನೆ ಶ್ರೀ ಕೆ. ಟಿ ರಾಮಸಾ.. ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸೇರಿ ..ಘದ ಪ್ರತಿನಿಧಿಗಳಿಗೂ ದಿವಾನರು ಮತ್ತು ..ಲ್ವೆ ಮಂತ್ರಿಗಳಿಗೂ ನಡೆದ ಮಾತುಕತೆಗ..ನ್ನು ಪರಿಶೀಲಿಸಿ ೨೮ ನೇ ತಾ॥ ಅರಸೀಕೆ..ಯಲ್ಲಿ ಸೇರಲಿರುವ ಕೇಂದ್ರ ಮೈಸೂರು ..ಟೇಟ್ ರೈಲ್ವೆ ಕೆಲಸಗಾರರ ಸಮ್ಮೇಳನಕ್ಕೆ ..ಕೆಳಗೆ ಕಂಡ ನಿರ್ಣಯಗಳನ್ನು ಕಳುಹಿ..ಸುತ್ತದೆ:-ಮೈಸೂರು ಸ್ಟೇಟ್ ರೈಲ್ವೆಯು ..ಮೊದಲನೇ ದರ್ಜೆಯದಾಗಿದ್ದು ಭಾರತದ ..ತರ ಒಂದನೇ ತರಗತಿಯ ರೈಲ್ವೆ ಕೆಲಸ..ಗಾರರು ಮಾಡುವ ಕೆಲಸಗಳನ್ನು ಇಲ್ಲಿ..ಯೂ ಮಾಡಲಾಗುತ್ತಿದೆ. ಇಲ್ಲಿನ ಜೀವನ ..ವೆಚ್ಚವೂ ಸಹ ಇತರ ಕಡೆಗಳಂತೆಯೇ ಇ..ರುವುದರಿಂದ ಭಾರತದ ಇತರ ಒಂದ.. ತರಗತಿಯ ರೈಲ್ವೆ ನೌಕರರಿಗೆ ಕೊಡು..ವ ಸಂಬಳ ಸಾರಿಗೆಗಳೂ, ಇತರ ..ಸೌಲಭ್ಯತೆಗಳೂ ಇಲ್ಲಿನ ನೌಕರರಿಗೂ ಸಿಗ..ಬೇಕು, ಅಪಾರ ಪಡಿತರವನ್ನು ಸರಿ..ಯಾಗಿ ಒದಗಿಸದಿರುವುದು ಮತ್ತು ಯುದ್ಧ ..ಕಾಲದಲ್ಲಿ ಇದ್ದ ಬೆಲೆಯಲ್ಲಿ ಜೀವನಕ್ಕೆ ..ಬೇಕಾದ ಸಾಮಗ್ರಿಗಳನ್ನು ಇತರ ಕಡೆಗಳ.. ಒದಗಿಸಿರುವಂತೆ ಇಲ್ಲಿ ಸರಬರಾಜು ಮಾ..ಡದಿರುವುದು-ಇವುಗಳ ಪರಿಹಾರಕ್ಕಾಗಿ ಪ್ರತಿ.. ..ಬ್ಬ ನೌಕರನಿಗೂ ಒಂದು ಸಾವಿರ ರೂ..ಪಾಯಿಗಳನ್ನು ಕೊಡಬೇಕೆಂಬ ಬೇಡಿಕೆ..ಯನ್ನು ಒಪ್ಪಿಕೊಳ್ಳಬೇಕು. ದಿವಾನ..ರು ಮತ್ತು ಸಂಘದ ನಾಯಕರಿಗೂ ನ..ಡೆದ ಮಾತುಕತೆಗಳಿಂದ ಉದ್ಭವಿಸಿರುವ ಸ..ಮಸ್ಯೆಗಳನ್ನು ಅಖಿಲ ಭಾರತ ರೈಲ್ವೆ ಫೆಡ..ರೇಷನ್ನಿನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗ..ಳೊಡನೆ ಸಮಾಲೋಚನೆ ನಡೆಸಿ ಈ ಸಂ..ಘವು ಅವರೊಡನೆ ಐಕ್ಯವಾಗುವುದನ್ನು ..ಪರಿಸಬೇಕು. ರೈಲ್ವೆ ನೌಕರರ ಸಂಬ..ಳ ತೆರಿಗೆಗಳ ವಿಚಾರದಲ್ಲಿ ಸೆಪ್ಟೆಂಬರ್ ೧೫ ..ತಾ॥ ಸರ್ಕಾರದವರು ಪ್ರಕಟಣೆಯನ್ನು ..ಹೊರಡಿಸುವುದಾಗಿ ಇತ್ತಿರುವ ಭರವಸೆಗಾ.. ..ಎದುರುನೋಡಬೇಕು ಮತ್ತು ಆದ..ರೆ ..ಗಾಗಿ ಕೆಲಸಗಾರರ ಬೇಡಿಕೆಗಳು ಪೂ..ರೈಸಲ್ಪಡದಿದ್ದರೆ ಕೂಡಲೇ ತಮ್ಮ ಧ್ಯೇಯ ..ಸಾಧನೆಗಾಗಿ ಸತ್ಯಾಗ್ರಹವನ್ನಾರಂಭಿಸಬೇ..ಕು ಮತ್ತು ಈಗಿನಿಂದಲೇ ಸತ್ಯಾಗ್ರಹದ ಸಿ..ದ್ಧತೆಗಾಗಿ ಸ್ವಯಂಸೇವಕರ ಆಯ್ಕೆ ಮೊದ..ಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಭಾಷಣ

..ಚೆವಿಲಾಸ ಮೊಹಲ್ಲೆಯ ಶ್ರೀ ರಾಮ.. ..ಕ್ರಮದಲ್ಲಿ ನಾಳೆ ಸಂಜೆ ೬ ಗಂಟೆಗೆ ..ಸೋಮನಾಥಾನಂದರು ಗೀತೆಯ ..ಭಾಷಣ ಮಾಡುವರು.

ಮೊಹಲ್ಲಾ ಪರಿಶೀಲನೆ

..ಳೆ ಬೆಳಗ್ಗೆ ೮ ೩೦ ಗಂಟೆಯಿಂದ ..೦ ಗಂಟೆಯವರೆಗೆ ಪೌರಸಭೆಯ ..ಸ್ ಪಕ್ಷದ ಸದಸ್ಯರು .. ..ಬ್ಬಯ್ಯ ..ಚಾಮರಾಜ ರಸ್ತೆ, ಲಕ್ಷ್ಮೀನಾರಾಯಣ ..ಗೋಪುರ ಮತ್ತು ಅಶೋಕನಗರಕ್ಕೆ ..ಗೆ ಭೇಟಿಕೊಡುವರು. ನಿವಾಸಿಗ.. ..ಬೇಕೆಂದು ಪಕ್ಷದ ಗೌರವ ..ಗಳಾದ ಶ್ರೀ ಪಿ ಗೋಪಾಲಯ್ಯ.. ..ವರು ಪ್ರಾರ್ಥಿಸಿರುವರು.

ಸ್ವಾತಂತ್ರ್ಯ ದಿನಾಚರಣೆ

ಸ್ವಂ.ವ.] [ಅಗರ ೨೧

ಕಳೆದ ೧೫ ನೇ ತಾ॥ ದಿನೋತ್ಸವವು ಇಲ್ಲಿ ಸಾಹುಕಾರ್ ಎಂ. ಎಸ್ ಬಸವಣ್ಣ ದೇವರ ಅಧ್ಯಕ್ಷತೆಯಲ್ಲಿ ಬಹಳ ವೈಭವದಿಂದ ಜರುಗಿತು. ಬೆಳಗ್ಗೆ ಮಾಂಬಳ್ಳಿಯ ಆಸ್ಪತ್ರೆಯ ಮುಂಭಾಗದಲ್ಲಿ ರಾಷ್ಟ್ರಧ್ವಜ ಮತ್ತು ಮೈಸೂರು ಧ್ವಜಗಳನ್ನು ಹಾರಿಸಲಾಯಿತು ೯ ಗಂಟೆಯಿಂದ ಮಧ್ಯಾಹ್ನ ೧-೩೦ ಗಂಟೆ ವರೆಗೆ ೭ ಜೋಡಿ ಎತ್ತುಗಳನ್ನು ಕಟ್ಟಿದ್ದ ಸುಂದರವಾದ ರಥದಲ್ಲಿ ಮಹಾತ್ಮ ಗಾಂಧಿ, ಪಂಡಿತ ನೆಹರೂ, ನೇತಾಜಿ ಬೋಸರ ಮತ್ತು ಶ್ರೀಮನ್ಮಹಾರಾಜರವರ ಭಾವಚಿತ್ರಗಳ ಮೆರವಣಿಗೆಯನ್ನು ಅಗರ ಮತ್ತು ಮಾಂಬಳ್ಳಿಯ ಎಲ್ಲ ಬೀದಿಗಳಲ್ಲಿಯೂ ಮಾಡಲಾಯಿತು. ಅನಂತರ ನಡೆದ ಬಹಿರಂಗ ಸಭೆಯಲ್ಲಿ ಶ್ರೀ ಎಂ ಕೆ ನಾರಾಯಣ ಜೋಯಿಸರು ಸ್ವಾತಂತ್ರ್ಯದ ವಿಷಯವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಶ್ರೀ ಎ ಆರ್. ನಾಗರಾಜರಾವ್‌ರವರು ಖಾದಿಯ ಪವಿತ್ರತೆಯನ್ನು ವಿವರಿಸಿ ಅಧ್ಯಕ್ಷರಿಗೆ ಖಾದಿ ಟೋಪಿಯೊಂದನ್ನು ಅರ್ಪಿಸಿ ಅದನ್ನು ಅವರು ಧರಿಸಬೇಕೆಂದು ಪ್ರಾರ್ಥಿಸಿದರು. ಅದರಂತೆ ಅಧ್ಯಕ್ಷರು ಖಾದಿ ಟೋಪಿಯನ್ನು ಧರಿಸಿದ ನಂತರ ಕಾರ್ಯಕ್ರಮಗಳು ಮುಂದುವರೆದುವು. ಎಲ್ಲಾ ಶಾಲಾ ಬಾಲಕ ಬಾಲಕಿಯರಿಗೂ, ಸ್ಲೇಟು, ಬಳಪ, ಸೀಸದಕಡ್ಡಿ ಮತ್ತು ನೋಟ್ ಬುಕ್ಕುಗಳ ಬಹುಮಾನ ಮತ್ತು ವಿನಿಯೋಗಗಳು ನಡೆದುವು. ಗ್ರಾಮದ ಎಲ್ಲ ಕೋಮುಗಳ ಜನರೂ ಈ ಸಮಾರಂಭದಲ್ಲಿ ಭಾಗಿಗಳಾಗಿದ್ದರು.

ಹಿಂದೂ ಮತ್ತು ಸಿಕ್ಕರು ಗಡಿನಾಡನ್ನು ತ್ಯಜಿಸಿದರು

ಕೋಮುವಾರು ಗಲಭೆಗಳಿಂದ ಗಡಿನಾಡಿನಲ್ಲಿರುವ ೩ ಲಕ್ಷ ಮಂದಿ ಮುಸ್ಲಿಮೇತರರ ಪೈಕಿ ಸುಮಾರು ೨ ಲಕ್ಷ ಹಿಂದುಗಳೂ ಸಿಕ್ಕರೂ ಗಡಿನಾಡು ಪ್ರಾಂತವನ್ನು ಬಿಟ್ಟು ಹೋಗಿರುವರೆಂದು ವರದಿಯಾಗಿದೆ

ಭಾರತ ಯೂನಿಯನ್ನಿಗೆ ಭೂಪಾಲ್

ಭಾರತ ಡೊಮಿನಿಯನ್ನಿನ ಪ್ರವೇಶ ಪತ್ರಕ್ಕೆ ರಾಜಾ ಹಾಕಿ ಭೂಪಾಲ್ ಸಂಸ್ಥಾನವು ಯೂನಿಯನ್ನಿಗೆ ಸೇರಿದೆ. ಮಧ್ಯಪ್ರಾಂತದಲ್ಲಿರುವ ನಂದಗಾಂ ಸಂಸ್ಥಾನವೂ ಸಹ ಡೊಮಿನಿಯನ್ನಿಗೆ ಸೇರಿದೆ

ಕೋಮುವಾರು ಪ್ರಮಾಣದ ಮೇಲೆ ನೌಕರಿಗಳಿಲ್ಲ

ಭಾರತ ಸರ್ಕಾರದಲ್ಲಿ ಅಧಿಕಾರಿಗಳನ್ನು ನೇಮಿಸುವಾಗ ಸಾಧ್ಯವಾದ ಮಟ್ಟಿಗೆ ಭಾರತೀಯರನ್ನೇ ಆರಿಸಲಾಗುವುದು; ಕೋಮುವಾರು ಪ್ರಾತಿನಿಧ್ಯ ತತ್ವವನ್ನು ರದ್ದುಗೊಳಿಸಿ ಅರ್ಹರೂ ಯೋಗ್ಯರೂ ಆದವರಿಗೆ ಮಾತ್ರ ಅಧಿಕಾರ ಕೊಡಲಾಗುವುದು ಆದರೆ ಪ್ರತಿ ನೂರು ಸ್ಥಾನಗಳಲ್ಲಿ ೧೨॥ ಭಾಗವನ್ನು ಹರಿಜನರಿಗೆ ಮೀಸಲಾಗಿಡಲಾಗುವುದು ಇದು ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಆಶ್ರಯದಲ್ಲಿ ನಡೆಯುವ ಪರೀಕ್ಷೆಗಳಿಗೆ ಅನ್ವಯಿಸುವುದು ನೇರವಾಗಿ ಆರಿಸುವಾಗ ನಿಮ್ನವರ್ಗದವರ ಹೊರತು ಉಳಿದ ಹಿಂದುಗಳಿಗೆ ಶೇ೬೦ ನಿಮ್ನ ವರ್ಗದವರಿಗೆ ಶೇ೧೬॥ ಮುಸ್ಲಿಮರಿಗೆ ಶೇ೧೩॥ ಇತರರಿಗೆ ಶೇ೧೦ ಈ ರೀತಿ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ಭಾರತ ಸರ್ಕಾರವು ಪ್ರಕಟಪಡಿಸಿರುತ್ತದೆ

ಗಡಿನಾಡು ಸರ್ಕಾರದ ರದ್ದು

ಇದುವರೆಗೆ ಗಡಿನಾಡಿನಲ್ಲಿದ್ದ ಡಾ॥ ಖಾನ್ ಸಾಹೇಬರ ಮಂತ್ರಿಮಂಡಲವನ್ನು ನಿನ್ನೆಯಿಂದ ರದ್ದುಗೊಳಿಸಿ ಮುಸ್ಲಿಂ ಲೀಗ್ ಪಕ್ಷದ ನಾಯಕರಾದ ಖಾನ್ ಅಬ್ದುಲ್ ಕಯ್ಯಾಂ ಖಾನರಿಗೆ ಹೊಸ ಸರ್ಕಾರವನ್ನು ರಚಿಸಲು ಗಡಿನಾಡಿನ ಗೌರ್ನರರು ಸೂಚಿಸಿರುವರೆಂದು ಸರ್ಕಾರಿ ಪ್ರಕಟಣೆಯು ತಿಳಿಸುತ್ತದೆ

ಹೈದರಾಬಾದಿನಲ್ಲಿ ಸುಧಾರಣೆ

ಖಾಸಗೀ ಸಚಿವರ ಸಂಖ್ಯೆಯನ್ನು ಹೆಚ್ಚಿಸುವುದು; ಶಾಸನ ಸಭೆಗಳಿಗೆ ಹೆಚ್ಚಿನ ಅಧಿಕಾರವನ್ನು ವಹಿಸುವುದು-ಇವೇ ಮೊದಲಾದ ಸುಧಾರಣೆಗಳನ್ನು ಅಕ್ಟೋಬರ್ ೧ ನೇ ತಾರೀಖಿನಿಂದ ತಮ್ಮ ಸಂಸ್ಥಾನದಲ್ಲಿ ಜಾರಿಗೆ ತರುವುದಾಗಿ ಹೈದರಾಬಾದಿನ ನಿಜಾಮರು ಘೋಷಿಸಿದ್ದಾರೆ. ಆಡಳಿತದಲ್ಲಿ ಸುಧಾರಣೆಗಳನ್ನು ಕೂಡಲೇ ಜಾರಿಗೆ ತರುವ ಬಗ್ಗೆ ಸೂಕ್ತವಾದ ಗಮನ ಕೊಡಬೇಕೆಂದು ಮಂತ್ರಿಮಂಡಲಕ್ಕೆ ಆಜ್ಞಾಪಿಸಿದ್ದಾರೆ

ಭರತಪುರಕ್ಕೆ ಪ್ರಯಾಣ

ಮೈಸೂರು ೨೩

ರಾಜಧಾನಿಗೆ ಆಗಮಿಸಿದ್ದ ಶ್ರೀಮನ್ಮಹಾರಾಜರವರ .. .. ಸೋದರಿಯವರೂ, ಭರತಪುರ ಸಂಸ್ಥಾನದ ಮಹಾರಾಣಿಯವರೂ ಆದ ಶ್ರೀಮತಿ ಜಯಚಾಮುಂಡಮ್ಮಣ್ಣಿಯವರು ಈ ದಿನ ಬೆಳಗ್ಗೆ ವಿಶೇಷ ವಿಮಾನದಲ್ಲಿ ಭರತಪುರಕ್ಕೆ ತೆರಳಿದರು.

ಕೆಂಪು ಕೋಟೆಯು ಭಾರತದ ಸೈನ್ಯ ಕೇಂದ್ರ

ದೆಹಲಿಯ ಕೆಂಪು ಕೋಟೆಯನ್ನು ಕಳೆದ ಸೋಮವಾರದಿಂದ ಭಾರತ ಸೇನೆಯ ಕೇಂದ್ರ ಕಛೇರಿಯನ್ನಾಗಿ ಮಾಡಲಾಗಿದೆಯೆಂದು ಭಾರತ ಸರ್ಕಾರದ ಪ್ರಕಟಣೆಯು ತಿಳಿಸುತ್ತದೆ ಹಿಂದೆ ಇದೇ ಕೋಟೆಯ ಮೇಲೆ ನೇತಾಜಿಯವರ ಐ ಎನ್ ಎ ದಳದ ಸೈನಿಕರ ವಿಚಾರಣೆಯು ನಡೆದಿತ್ತು. ಕಳೆದ ಅನೇಕ ವರ್ಷಗಳಿಂದ ಅದರ ಮೇಲೆ ಹಾರಾಡುತ್ತಿದ್ದ ಯೂನಿಯನ್ ಜಾಕ್ ಧ್ವಜವನ್ನು ಸ್ವಾತಂತ್ರ್ಯ ದಿನಾಚರಣೆಯ ದಿನ ಪಂಡಿತ ನೆಹರೂರವರು ಕೆಳಗಿಳಿಸಿ ಭಾರತದ ರಾಷ್ಟ್ರಧ್ವಜವನ್ನು ಹಾರಿಸಿದ್ದರು

ಮೈಸೂರು ಸತ್ಯಾಗ್ರಹಕ್ಕೆ ತಮಿಳು ನಾಡಿನ ಬೆಂಬಲ

ಮೈಸೂರು ಕಾಂಗ್ರೆಸ್ಸು ಹೂಡಲಿರುವ ಸತ್ಯಾಗ್ರಹಕ್ಕೆ ಸಂಸ್ಥಾನದಲ್ಲಿರುವ ಎಲ್ಲ ತಮಿಳರೂ ಬೆಂಬಲ ನೀಡಬೇಕು-ಎಂಬುದಾಗಿ ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಕಾಮರಾಜ ನಾದರರು ಹೇಳಿರುವರು. ಸ್ವಾತಂತ್ರ್ಯ ಪ್ರೇಮಿಗಳೆಲ್ಲರೂ ಅದಕ್ಕೆ ಬೆಂಬಲ ನೀಡಬೇಕು ತಮಿಳು ನಾಡೆಲ್ಲವೂ ಮೈಸೂರಿಗೆ ಸಹಾಯವನ್ನು ನೀಡುತ್ತದೆ ಮೈಸೂರು ಕಾಂಗ್ರೆಸ್ಸಿಗೆ ನನ್ನ ಪೂರ್ಣ ಬೆಂಬಲವನ್ನೂ ನೀಡುತ್ತೇನೆ ಎಂದೂ ಸಹ ಶ್ರೀ ನಾದರರು ತಿಳಿಸಿರುವರು.

ಹೈದರಾಬಾದ್ ಮಂತ್ರಿಗಳ ರಾಜೀನಾಮೆ

ಹೈದರಾಬಾದ್ ಸಂಸ್ಥಾನದ ಪ್ರಧಾನಿ ಚತ್ತಾರೀ ನವಾಬರೂ, ನಿಜಾಮರ ರಾಜಕೀಯ ಸಲಹೆಗಾರರಾದ ಮಾಂಕ್‌ಟನ್ನರೂ ಮತ್ತು ರಾಜ್ಯಾಂಗ ಸಚಿವರಾದ ನವಾಬ್ ಅಲಿಯಾವಾರ್ ಜಂಗ್ ಬಹದ್ದೂರರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಇತ್ತಿರುವರೆಂದು ವರದಿಯಾಗಿದೆ

ಪಂಜಾಬಿನಲ್ಲಿ ಇನ್ನೂ ಉಗ್ರ ಪರಿಸ್ಥಿತಿ

ಪಂಜಾಬಿನ ಅನೇಕ ಭಾಗಗಳಲ್ಲಿ ಪರಿಸ್ಥಿತಿ ಇನ್ನೂ ಕಠಿಣವಾಗಿದೆಯೆಂದು ವರದಿಯಾಗಿದೆ ಲಾಹೋರ್ ಮತ್ತು ಅಮೃತಸರಗಳಿಂದ ನಿರಾಶ್ರಿತರನ್ನು ಸಾಗಿಸಲು ಉಭಯ ಸರ್ಕಾರಗಳೂ ಸಹಾಯವನ್ನು ಏರ್ಪಡಿಸಿವೆ ಲಾಹೋರಿನಿಂದ ಮುಸ್ಲಿಮರು ಅಮೃತಸರಕ್ಕೆ ಹೋಗುತ್ತಿದ್ದಾರೆ. ಇದುವರೆಗೆ ಅಮೃತಸರದಲ್ಲಿರುವ ಹಿಂದುಗಳ ಪೈಕಿ ೭೦ ಸಹಸ್ರ ಮಂದಿ ಅದನ್ನು ತ್ಯಜಿಸಿದ್ದಾರೆ ಗಲಭೆ ಪ್ರದೇಶಗಳಲ್ಲೆಲ್ಲಾ ಹೆಚ್ಚಿನ ಮಿಲಿಟರಿ ಕಾವಲನ್ನಿರಿಸಲಾಗಿದೆ

ರಿಪಬ್ಲಿಕನ್ ರಾಜಧಾನಿಯನ್ನು ಮುತ್ತಲು ಡಚ್ಚರ ಪ್ರಯತ್ನ

ಮಧ್ಯ ಜಾವಾದಲ್ಲಿರುವ ಸೆಮಾರಾಂಗ್ ಮತ್ತು ಪೂರ್ವಕರ್ತ ವಿಮಾನ ನಿಲ್ದಾಣಗಳ ಮೂಲಕ ರಿಪಬ್ಲಿಕನ್ ರಾಜಧಾನಿಯಾದ ಜೋಗ್‌ಜಕರ್ತಾ ನಗರವನ್ನು ಮುತ್ತಲು ಡಚ್ಚರು ಹವಣಿಸುತ್ತಿರುವರೆಂದು ರಿಪಬ್ಲಿಕನ್ ಪ್ರಕಟಣೆಯು ತಿಳಿಸುತ್ತದೆ ಬಟೇವಿಯಾಕ್ಕೆ ದಕ್ಷಿಣದಲ್ಲಿರುವ ೫ ಗ್ರಾಮಗಳಿಗೆ ಇಂಡೋನೇಷ್ಯನರು ಬೆಂಕಿ ಹಚ್ಚಿದ್ದಾರೆ ಸಮೀಪದಲ್ಲಿರುವ ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಟೀ ಕಾರ್ಖಾನೆಯನ್ನೂ ಸಹ ಧ್ವಂಸಗೊಳಿಸಲಾಗಿದೆ.

ಸಾಧ್ವಿ

ತಾ॥ ೨೩-೮-೪೭ ಶನಿವಾರ

ಉನ್ನತ ಮಟ್ಟದ ಮಂತ್ರಾಲೋಚನೆ ಬೇಕು

ಮೈಸೂರು ಕಾಂಗ್ರೆಸ್ಸಿನವರ ಸತ್ಯಾಗ್ರಹದ ನಿರ್ಧಾರದಿಂದ ಸಂಸ್ಥಾನದ ರಾಜಕೀಯ ವಾತಾವರಣವು ವಿಷಮಾವಸ್ಥೆಗೆ ಬಂದಿರುವುದೇನೊ ನಿಜ; ಈ ಸಮಯದಲ್ಲಿ ಪ್ರಭುತ್ವದವರೂ, ಪ್ರಜಾ ವರ್ಗದವರೂ, ವಿವಿಧ ಸಂಘಗಳವರೂ ಯಾವ ರೀತಿ ವರ್ತಿಸಬೇಕೆಂದು ತಮ್ಮ ತಮ್ಮಲ್ಲೇ ಪರ್ಯಾಲೋಚನೆಗಳನ್ನು ನಡೆಸುವುದು ಸಹಜವಾಗಿಯೇ ಇರುತ್ತದೆ. ಈ ಸಮಾಲೋಚನೆಗಳು ಅತ್ಯುನ್ನತವಾದ ಮಟ್ಟದಲ್ಲಿ ಬೆಳೆಯಲೆಂಬುದೇ ನಮ್ಮ ಅಪೇಕ್ಷೆ. ಸಂಸ್ಥಾನದ ಸಕಲ ಅಭ್ಯುದಯಕ್ಕೂ ಸೂತ್ರಧಾರಿಗಳಾಗಿರುವ ಶ್ರೀಮನ್ಮಹಾರಾಜರವರಿಗೆ ದೇಶದ ನಿಜವಾದ ಹಿತೈಷಿಗಳು ನಿಷ್ಪಕ್ಷಪಾತವಾದ ಮತ್ತು ಸಂಸ್ಥಾನದ ಶಾಶ್ವತ ಕೀರ್ತಿ ಗೌರವಗಳಿಗೆ ಸಾಧಕವಾದ ಸಲಹೆಗಳನ್ನು ನೀಡಬೇಕೆಂದೂ ಸಹ ನಾವು ಕೋರುತ್ತೇವೆ

ಅನೇಕ ವರ್ಷಗಳಿಂದ ಯಾವ ರಾಜಕೀಯ ಗುರಿಯನ್ನು ಕಾಂಗ್ರೆಸ್ಸು ಮುಟ್ಟಲು ಶ್ರಮಿಸುತ್ತಿದೆಯೋ ಅದಕ್ಕೆ ಪ್ರಭುತ್ವದ ಅಂಗೀಕಾರವನ್ನೂ ಸಹ ಪಡೆದಿರುತ್ತದೆ ... ಸಾಧನೆಯಲ್ಲಿ ಸಾಧ್ಯವಾದ ಸಕಲ ಮಾರ್ಗಗಳನ್ನೂ ಅನುಸರಿಸಿ ವಿಫಲಗೊಂಡು ಇಂದು ಕಾಂಗ್ರೆಸ್ಸು ಕಡೆಯ ಅಸ್ತ್ರವಾದ ಸತ್ಯಾಗ್ರಹಕ್ಕೆ ಸನ್ನದ್ಧವಾಗಿರುತ್ತದೆ. ಕೇವಲ ಒಂದು ಕೋಮು, ಸಂಘ ಅಥವಾ ಗುಂಪಿನ ಪ್ರಾಬಲ್ಯಕ್ಕಾಗಿ ಕಾಂಗ್ರೆಸ್ಸು ಹೋರಾಡುತ್ತಿಲ್ಲ. ಇಡೀ ದೇಶದ ಜನರ ಹಕ್ಕು, ಬಾಧ್ಯತೆಗಾಗಿ ಹೆಣಗುತ್ತಿದೆ. ನೆರೆಯ ಪ್ರಾಂತಗಳ ಪ್ರಜೆಗಳು ಗಳಿಸಿರುವ ಸ್ವಾತಂತ್ರ್ಯವನ್ನು ನಮ್ಮವರೂ ಪಡೆಯಬೇಕೆಂದು ಕೇಳುತ್ತಿದೆ. ಕಾಂಗ್ರೆಸ್ಸಿನ ಗುರಿಯ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರುವುದಿಲ್ಲ. ಜವಾಬ್ದಾರೀ ಸರ್ಕಾರವು ಬೇಡವೆಂದು ಹೇಳುವವರು ಸಂಸ್ಥಾನದಲ್ಲಿ ಯಾರೂ ಇರುವುದಿಲ್ಲ ಆದರೆ ಅದಕ್ಕಾಗಿ ಸತ್ಯಾಗ್ರಹವನ್ನು ಹೂಡುವ ಬಗ್ಗೆ ಹಲವರಲ್ಲಿ ಭಿನ್ನಾಭಿಪ್ರಾಯವಿರಬಹುದು.

ಸತ್ಯಾಗ್ರಹವೆಂದರೆ ಯಾರಿಗೂ ಹಿಂಸೆಯನ್ನುಂಟುಮಾಡುವುದಲ್ಲ ತಾನಾಗಿಯೇ ಕಷ್ಟನಷ್ಟಗಳನ್ನೂ, ಉಪವಾಸ, ವನವಾಸಗಳನ್ನೂ ಈಡಾಗಿ ಇತರರ ಮನಸ್ಸನ್ನು ತಮ್ಮ ಕಡೆಗೆ ಒಲಿಸಿಕೊಂಡು ತಮ್ಮ ಗುರಿಯನ್ನು ಸಾಧಿಸುವುದೇ ಸತ್ಯಾಗ್ರಹಿಗಳ ಲಕ್ಷಣ. ಇದನ್ನು ಒಂದು ದೊಡ್ಡ ಬೆದರಿಕೆಯೆಂದೂ ಅಥವಾ ಪುಂಡಾಟವೆಂದೂ ನಂಬಿ ಇದರ ಮೇಲೆ ಬಲವು ಗಣ್ಯ ವ್ಯಕ್ತಿಗಳು ಅಪಪ್ರಚಾರ ಮಾಡುವುದು ಅತ್ಯಂತ ಅನುಚಿತವಾಗಿರುತ್ತದೆ

ರಾಷ್ಟ್ರದ್ರೋಹಿಯ ಸಾಧನೆಗಾಗಿ ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ಆಚರಿಸಲು ಕಟ್ಟುನಿಟ್ಟಿನ ನಿರ್ಧಾರವನ್ನು ಮಾಡಿರುವರು. ಅದಕ್ಕಾಗಿ ಅವರು ಸಕಲ ವಿಧವಾದ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವರು. ಇದರ ಬಗ್ಗೆ ಸರ್ಕಾರದವರು ಕೇವಲ ದರ್ಪ ಮತ್ತು ಪ್ರತಿಷ್ಠೆಗಳನ್ನು ಪ್ರಾಮುಖ್ಯವಾಗಿ ಇಟ್ಟುಕೊಳ್ಳದೆ ಇಂದಿನ ಪರಿಸ್ಥಿತಿಗನುಗುಣವಾದ ಉದಾತ್ತವಾದ ರಾಜನೀತಿ

ಸ್ವಾತಂತ್ರ್ಯ ದಿನಾಚರಣೆ

ಸ್ವಂ ಸು] ಗುಂಡ್ಲುಪೇಟೆ ೨೦

ಇಲ್ಲಿ ೧೫ ನೇ ತಾರೀ ಮಧ್ಯ ರಾತ್ರಿಯಲ್ಲಿ ಹಂಕಧ್ವನಿ, ಮಂಗಳಾರತಿಗಳೂ, ೧೫ ನೇ ತಾ॥ ಧ್ವಜಾರೋಹಣ, ೯ ಜೋಡಿ ಎತ್ತುಗಳಿಂದ ಅಲಂಕರಿಸಲ್ಪಟ್ಟ ರಥದಲ್ಲಿ ಮಹಾತ್ಮ ಗಾಂಧಿ, ಪಂಡಿತ ನೆಹರೂ, ಮೌಲಾನಾ ಆಜಾದ್, ನೇತಾಜಿ ಬೋಸರ ಭಾವಚಿತ್ರಗಳ ಮೆರವಣಿಗೆಯೂ, ಶ್ರೀ ಹೆಚ್ ಎಸ್. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ನಡೆದುವು.

ಚಿಕ್ಕಾಟಿ ಗ್ರಾಮದಲ್ಲಿ ೧೫ ನೇ ತಾ॥ ದೇವಾಲಯಗಳಲ್ಲಿ ಅಭಿಷೇಕ, ಪೂಜೆ, ಮಂಗಳಾರತಿಗಳೂ, ಧ್ವಜಾರೋಹಣವೂ ಜರುಗಿದುವು: ಮಹಾತ್ಮ ಗಾಂಧಿ; ಪಂಡಿತ ನೆಹರೂ, ಸುಭಾಷ್ ಚಂದ್ರಬೋಸರ ಮತ್ತು ರಾಷ್ಟ್ರ ಧ್ವಜಗಳ ಮೆರವಣಿಗೆಯನ್ನು ಗ್ರಾಮದಲ್ಲೆಲ್ಲಾ ನಡೆಸಲಾಯಿತು.

ಹೆರಿಗೆ ಯಂತ್ರ

ಪ್ರಸವ ವೇದನೆಯನ್ನು ಕಡಿಮೆ ಮಾಡುವ ಯಂತ್ರವೊಂದನ್ನು ಇಂಗ್ಲೆಂಡಿನಲ್ಲಿ ಕಂಡು ಹಿಡಿಯಲಾಗಿದೆ. ಲಿವರ್‌ಪೂಲಿನ ಡಾಕ್ಟರ್ ... ಎಂಬುವರು ಇದನ್ನು ಕಂಡು ಹಿಡಿದಿರುವರು. ಈ ಯಂತ್ರದ ಮೂಲಕ ಗಾಳಿಯನ್ನು ಪ್ರವಹಿಸಿ ಸುಖ ಪ್ರಸವವಾಗುವಂತೆ ಮಾಡಲಾಗುವುದು

ಸ್ವಪಕ್ಷದಿಂದ ವರ್ತಿಸಬೇಕಾಗಿದೆ ಸಾರ್ವಜನಿಕ ಮುಖಂಡರ ಸಹ ಪ್ರಭುತ್ವದವರಿಗೆ ಸರಿಯಾದ ಸಲಹೆಗಳನ್ನು ಕೊಟ್ಟು ಅವರು ಯುಕ್ತವಾದ ರೀತಿಯಲ್ಲಿ ವರ್ತಿಸುವಂತೆ ಪ್ರೇರೇಪಿಸಬೇಕು ವೃಥಾ ದೋಷಾರೋಪಣೆಗಳಿಗಾಗಲಿ, ಹೊಗಳುಭಟ್ಟತನಕ್ಕಾಗಲೀ ಅವಕಾಶ ಕೊಡಬಾರದು. ಒಟ್ಟಿನಲ್ಲಿ ಇಂದಿನ ಸಮಸ್ಯೆಯ ಬಗ್ಗೆ ಸಕಲರೂ ವಿಶಾಲ ಭಾವನೆಯಿಂದಲೂ, ದೂರದೃಷ್ಟಿಯಿಂದಲೂ ಸಮಾಲೋಚನೆಗಳನ್ನು ನಡೆಸಿ ಮೈಸೂರಿನ ಗೌರವವನ್ನು ಕಾಪಾಡಬೇಕೆಂದು ನಾವು ಕೋರುತ್ತೇವೆ.

WOODLANDS

Morning shows for 4 days from 22-8-47 daily at 10-30 a m

Princess O'Rourke

○ starring ○

Olivia Dehavilland, Robert Cumming.

ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಸತ್ಕಾರ

ರಾಮಂದೂರು ೨೧

ನೆನ್ನೆ ಇಲ್ಲಿನ ಪುರನಿವಾಸಿಗಳು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಜೆಚ್ ಎಂ. ಚೆನ್ನಬಸಪ್ಪನವರಿಗೆ ಶ್ರೀ ಶಿವಲಿಂಗ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಉಪಹಾರಾನಂತರ ಪ್ರಾರ್ಥನೆ, ಸ್ವಾಗತಗಳಾಗಿ ಅನಂತರ ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನರ್ಪಿಸಲಾಯಿತು. ಶ್ರೀಗಳಾದ ಡಿ. ಎಂ. ಸಿದ್ದಯ್ಯ, ಜಿ ಸ್ವಾಮಿದಾಸ್, ಪುಟ್ಟನಂಜಪ್ಪ, ಟಿ. ಎಸ್. ಸುಬ್ಬಣ್ಣ ಮುಂತಾದವರು ಭಾಷಣ ಮಾಡಿದರು. ಶ್ರೀ ಹೆಚ್. ಸಿ ದಾಸಪ್ಪನವರು ಮಾತನಾಡಿ ಮುಂದೆ ಬರಲಿರುವ ಸತ್ಯಾಗ್ರಹದಲ್ಲಿ ಎಲ್ಲರೂ ಸಹಕಾರವನ್ನು ನೀಡಬೇಕೆಂದು ಪ್ರಾರ್ಥಿಸಿದರು. ವಂದನೆ, ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯಗೊಂಡಿತು

ದಪಾಲಿ ಧಾರಣೆ ವಜಾ

ಭಾರತವು ದಾಸ್ಯ ವಿಮೋಚನೆಗೊಂಡಿರುವುದನ್ನು ಸೂಚಿಸಲು ಇನ್ನು ಮುಂದೆ ತಮ್ಮ ಪ್ರಾಂತದಲ್ಲಿ ಜವಾನರು ದವಾಲಿಯನ್ನು ಧರಿಸಿಕೊಳ್ಳಬೇಕಾಗಿಲ್ಲವೆಂದು ಮದರಾಸ್ ಸರ್ಕಾರವು ಆಜ್ಞೆ ಮಾಡಿರುತ್ತದೆ ಇತರ ನೌಕರರಂತೆ ಅವರೂ ಸಹ ಪಗಡಿಯು, ಕೋಟುಗಳನ್ನೂ, ಒಂದು ಕತ್ತಿಯನ್ನೂ ಧರಿಸಬಹುದೆಂದು ಸೂಚಿಸಲಾಗಿದೆ

ಸಿಟಿ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್, ಮೈಸೂರು

ಮೇಲ್ಕಂಡ ಬ್ಯಾಂಕಿನ ಜನರಲ್ ಬಾಡಿ ಮೀಟಿಂಗು

೨೪-೮-೪೭ ನೇ ಭಾನುವಾರ

ಮಧ್ಯಾಹ್ನ ೩-೩೦ ಗಂಟೆಗೆ

ಡಿ. ಬನುಮಯ್ಯನವರ ಶಾಲಾ ಭವನದಲ್ಲಿ ನಡೆಯುವುದು

ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಪ್ರಾರ್ಥಿಸಲಾಗಿದೆ.

ಬಿ ವಿ ನಂಜುಂಡಯ್ಯ, ಕಾರ್ಯದರ್ಶಿ.

Edited printed and published by A. R. Nagarajau at the Sadhvi Press D Subbaiah Road Mysore

ಆಗಸ್ಟ್ ೩೧ ಶೋಕ ದಿನ

ಪಶ್ಚಿಮ ಪಂಜಾಬಿನ ಹಿಂದುಗಳ ಮತ್ತು ಸಿಕ್ಕರ ಕಷ್ಟ ನಷ್ಟಗಳ ಬಗ್ಗೆ ಸಹಾನುಭೂತಿ ತೋರಿಸಲು ಹಿಂದೂಸ್ತಾನ ಮತ್ತು ಪಾಕಿಸ್ತಾನಗಳಲ್ಲಿರುವ ಎಲ್ಲ ಹಿಂದು ಮತ್ತು ಸಿಕ್ಕರೂ ಸಹ ಆಗಸ್ಟ್ ೩೧ರ ದಿನ ಶೋಕ ದಿನವನ್ನಾಚರಿಸಬೇಕೆಂದು ಅಖಿಲ ಭಾರತ ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ ಎಲ್. ಬಿ. ಭೋಪಟ್ಕರರು ಸೂಚಿಸಿರುವರು

ವರ್ಧಂತ್ಯುತ್ಸವ

ರಾಜಧಾನಿಯ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ವೈಣಿಕ ಪ್ರವೀಣ ವಿದ್ವಾನ್ ವೆಂಕಟಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವನ್ನೂ, ಸಂಘದ ಅಧ್ಯಕ್ಷರಾದ ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರಿಗೆ ರಾಜಸೇವಾಸಕ್ತ ಎಂಬ ಪ್ರಶಸ್ತಿ ಬಂದಿರುವುದಕ್ಕೂ ಅವರಿಗೆ ಸತ್ಕಾರ ಕೂಟವನ್ನೂ ಏರ್ಪಡಿಸಿದ್ದರು. ಪ್ರಾರ್ಥನೆ, ಭಾಷಣ ಮತ್ತು ನಿಯೋಗಗಳು ನಡೆದುವು.

ರಂಜಾನ್ ಹಬ್ಬ

ರಂಜಾನ್ ಹಬ್ಬಕ್ಕಾಗಿ ಮುಸ್ಲಿಮರಿಗೆ ಟೈ ಮತ್ತು ಆಹಾರ ಪದಾರ್ಥಗಳನ್ನು ಕೊಟ್ಟುದಕ್ಕಾಗಿ ಅಧಿಕಾರಿಗಳನ್ನು ಅಭಿನಂದಿಸಿ ಅದನು ಕಾರ್ಯದಾವರ ಮುಂದಿನ ತಿಂಗಳಿನ ಪಡಿತರದಲ್ಲಿ ವಜಾ ಮಾಡಕೂಡದೆಂದು ಅಖಿಲ ಮೈಸೂರು ಮುಸ್ಲಿಂ ಲೀಗ್ ಮೈಸೂರು ಶಾಖೆಯ ಕಾರ್ಯದರ್ಶಿ ಸಾಹೇಬರವರು ಪ್ರಾರ್ಥಿಸಿರುವರು

ಲಾಂಚ್‌ಕಮಲ್, ಮೈಸೂರು

ತಾ॥ 22-8 47 ರಿಂದ

ಅಪೋಕ್ಷ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಚಾರ್ ಆಂಖೆ

● : ಭೂಮಿಕೆ : ●

ಲೀಲಾ ಚಿಟ್ನಿಸ್, ಜಯರಾಜ್.

From 22-8-47 for 4 day daily at 10-30 a. m.

Grand Double Attractio

LISBON STORY & SEVEN DAYS LEA

ವುಡ್‌ಲ್ಯಾಂಡ್ಸ್

ತಾ॥ 22-8-47 ರಿಂದ

ಅಪೋಕ್ಷ ೨ ನೇ ವಾ

ಪೀರ್ ಕುನಾಲ್

(ಹಿಂದಿ)

—:ಪಾತ್ರ:—

ಶಿರೋಲ್ ಸಾಯು, ರೋಲ್ಡನಾಸಿನ ಮುಗಾರ್ ಮೋಟಿ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್

ನಂ. 7 ಡೈರೆಕ್ಟರುಗಳ ಚುನಾವಣೆ ನಂ. 7

ತಾ॥ 24-8-47 ನೇ ಭಾನುವಾರ

ಮಧ್ಯಾಹ್ನ ೩-೩೦ ಗಂಟೆಗೆ ಸಾ॥ ಥ॥ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ

ಟಿ. ಚಂದ್ರಶೇಖರ ಗೌಡ L. E. E.

ಮುನಿಸಿಪಲ್ ಕೌನ್ಸಿಲರ್, ಪ್ರೊಪ್ರೈಟರ್; ವಾಸವಾಂಬಾ ರೈಸ್ & ಫ್ಲೋರ್ ಮಿಲ್ಸ್ ಮತ್ತು ಡೈರೆಕ್ಟರ್, ಕೋ-ಆಪರೇಟಿವ್ ಬ್ಯಾಂಕ್, ಲಿ, ಎಂಎಸ್‌ಎಫ್ ಎ ಮೆಂಬರು, ಇವರಿಗೆ ತಮ್ಮ ಘನವಾದ ಓಟನ್ನು ಕೊಟ್ಟು ಡೈರೆಕ್ಟರಾಗಿ ಚುನಾಯಿಸಬೇಕಾಗಿ ವಿನಂತಿ.

ಪಾಲಹಳ್ಳಿ ಸೀತಾರಾಮಯ್ಯ.

ಫೋ॥ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೨] ಭಾನುವಾರ ೨೪-೮-೪೭ [ಸಂಚಿಕೆ

ಇಂದೂರ್‌ನಲ್ಲಿ ಜವಾಬ್ದಾರಿ ಸರ್ಕಾರ

ಜಿನ್ನಾರವರೊಡನೆ ನಿಜಾಮರ ಗುಪ್ತ ಸಂಧಾನವೇ ?

ಹೈದರಾಬಾದ್ ಸಂಸ್ಥಾನವು ಭಾರತ ಯೂನಿಯನ್ನಿಗೆ ಸೇರದಿರುವುದೂ, ಅಲ್ಲಿ ರಾಷ್ಟ್ರ ಧ್ವಜಕ್ಕೆ ಅಪಮಾನ ಮಾಡಿರುವುದು, ನಿಜಾಮರು ತಾವು ಸ್ವತಂತ್ರ ಸಾರ್ವಭೌಮರೆಂದು ಹೇಳಿಕೊಳ್ಳುತ್ತಿರುವುದೂ ನಿಜಾಮರು ಮಿ॥ ಜಿನ್ನಾರೊಡನೆ ಗುಪ್ತ ಸಂಧಾನ ನಡಸಿಕೊಂಡಿರುವರೆಂದು ಸಂದೇಹಪಡಲು ಅವಕಾಶ ಕೊಟ್ಟಿರುವುದೆಂದು ದಿಲ್ಲಿಯಲ್ಲಿ ಹೇಳಲಾಗುತ್ತಿದೆ. ಗೌರ್ನರ್ ಜನರಲ್ಲರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಅದು ಯೂನಿಯನ್ನಿಗೆ ಸೇರುವ ಬಗ್ಗೆ ಇನ್ನೂ ಸಂಧಾನ ನಡೆಸುವರೆಂದು ತಿಳಿದಿದೆ

ಪಟೇಲರು ಉಪ ಪ್ರಧಾನಿ

ಭಾರತ ಸರ್ಕಾರದ ಒಳಾಡಳಿತ ಮತ್ತು ಸಂಸ್ಥಾನ ಶಾಖಾ ಸಚಿವರಾದ ಸರ್ದಾರ್ ವಲ್ಲಭ ಭಾಯಿ ಪಟೇಲರನ್ನು ಯೂನಿಯನ್ ಸರ್ಕಾರದ ಉಪ ಪ್ರಧಾನಿಯನ್ನಾಗಿ ಆರಿಸಲಾಗಿದೆಯೆಂದು ವರದಿಯಾಗಿದೆ

ಬ್ರಿ॥ ಪ್ರಧಾನಿಗೆ ಹೈದರಾಬಾದ್ ಕಾಂಗ್ರೆಸ್ಸಿನ ತಂತಿ

ಭಾರತ ಯೂನಿಯನ್ನಿಗೆ ಸೇರದೆ ತಾವು ಸ್ವತಂತ್ರರಾಗಿರುವುದಾಗಿ ಹೈದರಾಬಾದಿನ ನಿಜಾಮರು ಘೋಷಿಸಿರುವುದನ್ನು ಅಲ್ಲಿನ ೮೦ ಲಕ್ಷ ಮಂದಿ ಪ್ರಜೆಗಳು ವಿರೋಧಿಸಿರುವುದೂ, ಅವರಲ್ಲಿ ಅನೇಕ ಜನ ಮುಸ್ಲಿಮರು ಸಹ ಇರುವುದಾಗಿಯೂ ಅಲ್ಲಿನ ಕಾಂಗ್ರೆಸ್ ನಾಯಕರಾದ ಶ್ರೀ ಬಿ. ರಾಮಕೃಷ್ಣರಾಯರು ಬ್ರಿ॥ ಪ್ರಧಾನಿ ಮಿ॥ ಅಟ್ಲೀಯವರಿಗೆ ತಂತಿ ಕಳುಹಿಸಿರುವರು.

ಮುದಲಿಯಾರರು ಬರೋಡೆಯ ದಿವಾನರಾಗುವರೇ ?

ಸೆಪ್ಟೆಂಬರ್ ತಿಂಗಳಿನಲ್ಲಿ ಬರೋಡಾ ಸಂಸ್ಥಾನದ ದಿವಾನರಾದ ಸರ್. ಬಿ. ಎಲ್. ಮಿತ್ತರವರ ರಾಜೀನಾಮೆಯು ಅಂಗೀಕೃತವಾದ ನಂತರ ಇಂದೂರ್ ಸಂಸ್ಥಾನದ ಮಂತ್ರಿಯಾಗಿ ಸಲಹೆಗಾರರಾದ ಡಾ॥ ಎಂ. ಮುದಲಿಯಾರರು ಅಲ್ಲಿನ ದಿವಾನರಾಗುವರೆಂದು ಭಾವಿಸಲಾಗಿದೆ

ಜೀವನ

ರಾಜಧಾನಿಯ ಸುಪ್ರಸಿದ್ಧ ವಕೀಲರೂ ಬೆಳೆಯುವ ವ್ಯವಸ್ಥಾಪಕರೂ ಆದ ಶ್ರೀಮಾನ್ ಸಿ. ನರಸಿಂಹಯ್ಯನವರು ಅವರ ಜೀವನ-ಎಂಬ ಕವಿತಾ ಪುಸ್ತಕವು ಅದರಿಂದ ಸ್ವೀಕರಿಸಿದ್ದೇವೆ ಜೀವನದಲ್ಲಿ ಎಲ್ಲಿ ನೋಡಿದರೂ ಎದುರಾಗುವ ಅತೃಪ್ತಿ ಅಶಾಂತಿ ಅಸಮಾಧಾನಾದಿಗಳ ನಿವಾರಣೆಗೆ ಏನು ಬೇಕೆಂಬುದನ್ನು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ರಚಿಸಿದ್ದಾರೆ. ಪ್ರತಿ ಬೆಲೆ ನಾಲ್ಕಾಣೆ.

ಆನಂದ ಜ್ಯೋತಿ

ಗೌರಿಬಿದನೂರಿನ ಶ್ರೀ ಎಂ. ರಾಮಯ್ಯನವರ ಸಂಪಾದಕತ್ವದಲ್ಲಿ ಸ್ವಾತಂತ್ರ್ಯೋತ್ಸವ ದಿನದಂದು ಪ್ರಕಟವಾಗಿರುವ ಆನಂದ ಜ್ಯೋತಿ ಎಂಬ ಹೊಸ ವಾರ ಪತ್ರಿಕೆಯನ್ನು ಸಂತೋಷದಿಂದ ಸ್ವಾಗತಿಸಿದ್ದೇವೆ ಈ ಪತ್ರಿಕೆಯು ಆರ್ಥಿಕ, ಆಹಾರ ... ಮೊದಲಾದ ಜೀವನದ ಸಮಸ್ಯೆಗಳನ್ನು ... ಪ್ರಯೋಜನಕಾರಿಯಾಗಿ ಅವರ ಉದ್ದೇಶವು ಸ್ತುತ್ಯವಾದುದಾಗಿದೆ. ... ವಾರ್ಷಿಕ ಚಂದಾ ರೂ ೩

ಡಚ್ ಮಂತ್ರಿಗಳ ರಾಜೀನಾಮೆ

ಇಂಡೋನೇಷ್ಯದಲ್ಲಿ ಕದನ ಮುಂದುವರೆಯುತ್ತಿದೆ ಪೊಲೀಸ್ ಕಾರ್ಯಾಚರಣೆಯನ್ನು ಮುಂದುವರಿಸಬೇಕು-ಮುಂತಾದ ವಿಚಾರಗಳಲ್ಲಿ ಉಂಟಾದ ಭಿನ್ನಾಭಿಪ್ರಾಯಗಳಿಂದ ನಾಲ್ಕು ಮಂದಿ ಡಚ್ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರೆಂದು ತಿಳಿದು ಬಂದಿದೆ

ಲಾಹೋರಿನಲ್ಲಿ ಪಾಕಿಸ್ಥಾನದ ಟಂಕಸಾಲೆ

ಪಾಕಿಸ್ಥಾನದ ನಾಣ್ಯಗಳನ್ನು ಲಾಹೋರಿನಲ್ಲಿ ಅಚ್ಚು ಹಾಕಲಾಗುವುದೆಂದೂ, ಅದಕ್ಕಾಗಿ ಅಲ್ಲಿ ಟಂಕಸಾಲೆಯೊಂದನ್ನು ಏರ್ಪಡಿಸಲಾಗುವುದೆಂದೂ, ಬರುವ ಏಪ್ರಿಲ್ ತಿಂಗಳಿನಿಂದ ಪಾಕಿಸ್ಥಾನದ ನಾಣ್ಯಗಳು ಚಲಾವಣೆಗೆ ಬರುವುವೆಂದೂ ವರದಿಯಾಗಿದೆ

ಮಂಡ್ಯ ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮಂಡ್ಯ ಜಿಲ್ಲೆಯ ಮೋಟಾರು ಕೆಲಸಗಾರರು ಕಳೆದ ಗುರುವಾರ ಅಲ್ಲಿನ ಪುರ ಭವನದಲ್ಲಿ ಶ್ರೀ॥ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ಸಂಘವನ್ನು ಸ್ಥಾಪಿಸಿಕೊಂಡಿರುವರು ಶ್ರೀ॥ ಗಳಾದ ಎಂ ಸಿ ಶೇಷಾದ್ರಿಯವರು ಸಂಘದ ಅಧ್ಯಕ್ಷರಾಗಿಯೂ, ಪಿ ಎಲ್ ಬಸವಪ್ಪನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು

ಪಾಕಿಸ್ಥಾನಕ್ಕೆ ಸಂಸ್ಥಾನಗಳು

ದಿರಸ್ವಾರ್, ಚಿತ್ರಾಲ್, ಜೂನಾಘಡ್ ಭಾವಲ್ಪುರ, ಖೈರಪುರ, ಕಾಲಟ್ ಇವೇ ಮೊದಲಾದ ದೇಶೀಯ ಸಂಸ್ಥಾನಗಳು ಪಾಕಿಸ್ಥಾನ ಡೊಮಿನಿಯನ್ನಿಗೆ ಸೇರಲು ನಿರ್ಧರಿಸಿವೆಯೆಂದು ವರದಿಯಾಗಿದೆ ಇವುಗಳಿಗೆ ಪ್ರತಿನಿಧಿಗಳನ್ನು ಹಾಕಲು ಪಾಕಿಸ್ಥಾನ ರಾಜ್ಯಾಂಗಸಭೆಯು ಸಮಿತಿಯೊಂದನ್ನು ನೇಮಿಸಲಿರುವುದು

— —

ಹೋಟೆಲ್ ಕೆಲಸಗಾರರ ಸಭೆ

ರಾಜಧಾನಿಯ ಹೋಟೆಲ್ ಕೆಲಸಗಾರರ ಸಭೆಯು ನಾಳೆ ರಾತ್ರಿ ೮-೩೦ ಗಂಟೆಗೆ ಒಲಿಂಪಿಯಾ ಸಿನಿಮಾ ಚೌಕದಲ್ಲಿ ಕಾ॥ ಪ್ರಾಂತೀಯ ಕಾಂ॥ ಕಾರ್ಯದರ್ಶಿ ಶ್ರೀ ಬಿ. ಶ್ರೀ ಕಂಠಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿರುವರು.

ಸಿಂಗಪುರದಲ್ಲಿ ೧೦ ಸಹಸ್ರ ನೌಕಾ ಕೆಲಸಗಾರರ ಮುಷ್ಕರ

ತಮ್ಮ ಸಂಘದ ಇಬ್ಬರು ನಾಯಕರನ್ನು ಪೋಲೀಸರು ಗುಂಡಿನಿಂದ ಹೊಡೆದುದನ್ನು ಪ್ರತಿಭಟಿಸಲು ಸಿಂಗಪುರದ ರೇವು ಪಟ್ಟಣದಲ್ಲಿ ಕೆಲಸಮಾಡುವ ೧೦ ಸಹಸ್ರ ಮಂದಿ ಕೆಲಸಗಾರರು ಮುಷ್ಕರವನ್ನು ಹೂಡಿರುವರೆಂದು ತಿಳಿದು ಬಂದಿದೆ

ಪಾಕಿಸ್ತಾನಕ್ಕೆ ಭಾವಲ್ಪುರ ಸಂಸ್ಥಾನ

ಪಂಜಾಬಿನ ಸಂಸ್ಥಾನಗಳಲ್ಲೊಂದಾದ ೧೫ ಸಾವಿರ ಚದುರ ಮೈಲಿ ವಿಸ್ತೀರ್ಣದ ಭಾವಲ್ಪುರ ಸಂಸ್ಥಾನವು ಪಾಕಿಸ್ಥಾನ ಡೊಮಿನಿಯನ್ನಿನಲ್ಲಿ ಸೇರಲು ನಿರ್ಧರಿಸಿದೆಯೆಂದು ವರದಿಯಾಗಿದೆ ಇದರ ವಾರ್ಷಿಕ ವರಮಾನ ೩ ಕೋಟಿ ೮೫ ಲಕ್ಷ ರೂ.

ಭಾರತದ ಆಹ್ವಾನಕ್ಕೆ ಮಿ ಜಿನ್ನಾರವರ ನಕಾರ

ಮುಂದಿನ ತಿಂಗಳಿನಲ್ಲಿ ಸೇರಲಿರುವ ವಿಶ್ವ ರಾಷ್ಟ್ರ ಸಂಸ್ಥೆಯ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಹೋಗಲು ಭಾರತ ಸರ್ಕಾರವು ಇತ್ತ ಆಹ್ವಾನವನ್ನು ಸರ್ ಮಿರ್ಜಾ ಇಸ್ಮಾಯಿಲರು ಅಂಗೀಕರಿಸಿಲ್ಲವೆಂದು ವರದಿಯಾಗಿದೆ

೩ ತಿಂಗಳ ಮಗುವಿಗೆ ಕೃತಕ ಹಲ್ಲುಗಳು

ನ್ಯೂಜೀಲೆಂಡಿನ ದಂತ ವೈದ್ಯರೊಬ್ಬರು ೩ ತಿಂಗಳ ಮಗುವೊಂದಕ್ಕೆ ಕೃತಕ ಹಲ್ಲುಗಳನ್ನು ಕಟ್ಟಿರುವರು. ತಾಯಿಯು ಅದಕ್ಕೆ ಆಹಾರವನ್ನು ಕೊಡುವುದು ಬಹಳ ಪ್ರಯಾಸವೆಂದು ಹೇಳಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ಆಹಾರವನ್ನು ಕೊಡುವ ಕಾಲದಲ್ಲಿ ಹಲ್ಲುಗಳನ್ನು ಮಗುವಿನ ಬಾಯಿಗೆ ಕಟ್ಟಲಾಗುವುದು

ಗಾಂಧೀಜಿಯವರ ಕಂಚಿನ ಪ್ರತಿಮೆ

ಭಾರತ ದೇಶಕ್ಕೂ, ಭಾರತೀಯರಿಗೂ ಮಹಾತ್ಮಾ ಗಾಂಧಿಯವರು ಸಲ್ಲಿಸಿರುವ ಸೇವೆಯ ನೆನಪಿಗಾಗಿ ಒರಿಸ್ಸಾ ಸಂಸ್ಥಾನದಲ್ಲಿ ಅವರಷ್ಟು ಎತ್ತರದ ಕಂಚಿನ ಪ್ರತಿಮೆಯೊಂದನ್ನು ಸ್ಥಾಪಿಸಬೇಕೆಂದು ಅಲ್ಲಿನ ಪ್ರಜಾ ಮಂಡಲಿಯವರು ನಿರ್ಧರಿಸಿರುವರೆಂದು ವರದಿಯಾಗಿದೆ ಇದಕ್ಕೆ ೫೦ ಸಹಸ್ರ ರೂ. ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ ಈ ವರ್ಷ ನಡೆಯುವ ಗಾಂಧೀಜಿಯವರ ವರ್ಧಂತಿಯ ವೇಳೆಗೆ ಅದನ್ನು ಸ್ಥಾಪಿಸಲಾಗುವುದು,

ಇಂದೂರು ಪ್ರಜಾ ಮಂಡಲಕ್ಕೆ ರಾಜರ ಭರವಸೆ

ಇಂದೂರ್ ಸಂಸ್ಥಾನದ ಎಲ್ಲ ಐರೋಪ್ಯ ಮಂತ್ರಿಗಳೂ ದಿವಾನರೂ ರಾಜೀನಾಮೆ ಇತ್ತಿದ್ದಾರೆ ಇಂದೂರಿನ ಮಹಾರಾಜರು ನ್ನೆ ಅಲ್ಲಿನ ಪ್ರಜಾ ಮಂಡಲದ ನಿಯೋಗದವರನ್ನು ಕರೆಸಿಕೊಂಡು ತಮ್ಮ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವುದಾಗಿ ಭರವಸೆ ಇತ್ತಿದ್ದಾರೆಂದು ವರದಿಯಾಗಿದೆ ಅಲ್ಲಿನ ದಿವಾನರು ಬೆಂದು ಹೇಳಿಕೆಯನ್ನು ಹೊರಡಿಸಿ ತಾವು ಹಿಂದೆಯೇ ರಾಜೀನಾಮೆ ಇತ್ತಿದ್ದರೆಂದೂ, ಆದರೆ ರಾಜಕೀಯ ಪರಿಸ್ಥಿತಿಗಳಿಂದ ಇದುವರೆಗೆ ಅಧಿಕಾರದಲ್ಲಿರಬೇಕೆಂದು ಮಹಾರಾಜರು ಕೋರಿದ್ದರಿಂದ ಇರಬೇಕಾಯಿತೆಂದೂ ತಿಳಿಸಿದ್ದಾರೆ ತಮ್ಮ ಸ್ಥಾನಕ್ಕೆ ಭಾರತೀಯರೊಬ್ಬರನ್ನು ಪ್ರಧಾನಿಯನ್ನಾಗಿ ನೇಮಿಸಲಾಗುವುದೆಂದೂ, ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರದ ಸ್ಥಾಪನೆಯಾಗುವರೆಗೆ ೩ ಮಂದಿ ಖಾಸಗೀ ಮಂತ್ರಿಗಳನ್ನು ನೇಮಿಸಿ ಅವರಿಗೆ ಆಹಾರ, ಸರಬರಾಜು, ಸ್ಥಳೀಯ ಶಾಖೆ, ಶಾಸನ, ವಿದ್ಯಾಭ್ಯಾಸ, ವಸ್ತ್ರ ವ್ಯವಸಾಯಗಳ ಖಾತೆಗಳನ್ನು ವಹಿಸಲಾಗುವುದೆಂದೂ ಸಹ ಅವರು ತಿಳಿಸಿರುವರು ಪ್ರಜಾ ಮಂಡಲದ ಬೇಡಿಕೆಗಳಲ್ಲೊಂದಾದ ಐರೋಪ್ಯ ಮಂತ್ರಿಗಳ ನಿವೃತ್ತಿಯಾಗಿರುವುದರಿಂದಲೂ ಜವಾಬ್ದಾರೀ ಸರ್ಕಾರದ ಸ್ಥಾಪನೆಯ ಬಗ್ಗೆ ಮಹಾರಾಜರು ಭರವಸೆ ನೀಡಿರುವುದರಿಂದಲೂ ನಾಳೆಯಿಂದ ಅಲ್ಲಿ ಆರಂಭವಾಗಬೇಕಾಗಿದ್ದ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದೆಯೆಂದು ತಿಳಿದು ಬಂದಿದೆ.

ಮದರಾಸಿಗೆ ಭಾರತದ ನಾಯಕರು

ಭಾರತದ ಪ್ರಧಾನಿ ಪಂ. ನೆಹರೂ, ಪಶ್ಚಿಮ ಬಂಗಾಳದ ಗೌರ್ನರರಾದ ಶ್ರೀ ರಾಜಗೋಪಾಲಾಚಾರಿ, ಶ್ರೀಮತಿ ಸರೋಜಿನಿದೇವಿ, ಭಾರತದ ಅರ್ಥಿಕ ಸಚಿವರಾದ ಆರ್ ಕೆ ಷಣ್ಮುಗಂಚೆಟ್ಟಿ ಶ್ರೀ ಶರತ್ ಚಂದ್ರಬೋಸ್-ಇವರುಗಳು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಒಬ್ಬೊಬ್ಬರಾಗಿ ಮದರಾಸ್ ಪ್ರಾಂತಕ್ಕೆ ಭೇಟಿ ಕೊಡುವರೆಂದು ವರದಿಯಾಗಿದೆ.

ಷಾಹಪುರ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ

ರಾಜಪುಟಾಣದಲ್ಲಿರುವ ಷಾಹಪುರ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವನ್ನು ಅಲ್ಲಿನ ಅರಸರು ಘೋಷಿಸಿರುವರು ಈ ಸಂಸ್ಥಾನವು ೪೦೫ ಚದುರ ಮೈಲಿ ವಿಸ್ತೀರ್ಣವಾಗಿದ್ದು ೭೦ ಸಹಸ್ರ ಪ್ರಜೆಗಳಿಂದ ಕೂಡಿದೆ ಭಾರತ ಸರ್ಕಾರದ ಸಂಸ್ಥಾನ ಶಾಖಾ ಸಚಿವರಾದ ಸರ್ದಾರ್ ಪಟೇಲರು ಇದಕ್ಕಾಗಿ ಅಲ್ಲಿನ ಅರಸರನ್ನು ಅಭಿನಂದಿಸಿದ್ದಾರೆ

ಭಾರತ- ಜೆಕೋಸ್ಲಾವಾಕಿಯಾ ರಾಯಭಾರಿ ಸಂಬಂಧ

ಭಾರತ ಮತ್ತು ಜೆಕೋಸ್ಲಾವಾಕಿಯಾ ಸರ್ಕಾರಗಳು ಪರಸ್ಪರ ರಾಯಭಾರಿ ಎನಿಸಿಯ ಮಾಡಿಕೊಳ್ಳಲು ನಿರ್ಧರಿಸಿವೆಯೆಂದು ವರದಿಯಾಗಿದೆ.

● ಕಲ್ಕತ್ತೆಯ ಕಛೇರಿಗಳಲ್ಲಿ ಕಾಗದ ಮತ್ತು ಮೇಜುಗಳಿಗೆ ಅಭಾವ ಉಂಟಾಗಿರುವುದರಿಂದ ಅಧಿಕಾರಿಗಳು ಜಮಖಾನಗಳ ಮೇಲೆ ಕುಳಿತು ಕೆಲಸ ಮಾಡುತ್ತಿರುವರೆಂದು ವರದಿಯಾಗಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೨೪-೮-೪೭ ರಿಂದ ೩೦-೮-೪೭ ರವರೆಗೆ

ಮೇಷ—ಸ್ವಾಸ್ಥ್ಯತೆಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರ, ವ್ಯವಹಾರಗಳಲ್ಲಿ ಜಯ, ಉದ್ಯೋಗದಲ್ಲಿ ಪ್ರಗತಿ, ಬಂಧು, ಮಿತ್ರರ ಆಗಮನ, ಧನಾದಾಯ ಸಾಧಾರಣ, ಖರ್ಚು ಕಡಿಮೆ, ತಾ|| ೨೬, ೨೮ ಲಾಭ, ಅಧಿಕಾರಿ ವರ್ಗದವರ ಭೇಟಿ.

ವೃಷಭ—ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಕಡಿಮೆ, ಖರ್ಚು ಹೆಚ್ಚು, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಶತ್ರುಗಳ ತೊಂದರೆ ಕಡಿಮೆ, ಮಿತ್ರರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ ಮತ್ತು ಧನವ್ಯಯ, ತಾ|| ೨೬, ೩೦ ಚಿಂತೆ, ಅಪಘಾತ

ಮಿಥುನ—ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಆರ್ಥಿಕ ಪರಿಸ್ಥಿತಿ ಚಿಂತಾದಾಯಕ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ನಷ್ಟ, ಶತ್ರುಗಳ ದ ಕಿರುಕುಳ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಪ್ರವಾಸದಿಂದ ಜಗಳ, ತಾ|| ೨೬, ೨೯ ಲಾಭ, ಶಾಂತಿ

ಕಟಕ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಬಂಧುಗಳ ಆಗಮನ, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ವ್ಯವಹಾರಗಳಿಗಾಗಿ ವಿಶೇಷ ಪ್ರವಾಸವುಂಟಾಗುವುದು, ತಾ|| ೨೯, ೩೦ ಚಿಂತೆ, ನಷ್ಟ

ಸಿಂಹ—ಆರೋಗ್ಯ ಉತ್ತಮ. ಧನಿಕ ಮಿತ್ರರ ಸಹಾಯದಿಂದ ಆರ್ಥಿಕ ಸ್ಥಿತಿ ಉತ್ತಮ, ಉದ್ಯೋಗದಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಬಂಧುಗಳ ಮತ್ತು ಮಿತ್ರರ ಆಗಮನದಿಂದ ಧನವ್ಯಯ, ಸಾಮಾಜಿಕ ಕಾರ್ಯಗಳಿಗಾಗಿ ಖರ್ಚು, ತಾ|| ೨೬, ೩೦ ಲಾಭ, ಪ್ರವಾಸ

ಕನ್ಯಾ—ಆರೋಗ್ಯ ಚೆನ್ನಾಗಿರುತ್ತದೆ, ಧನಾದಾಯ ಕಡಿಮೆ, ಖರ್ಚು ಹೆಚ್ಚು, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ಮೇಲ್ಪಟ್ಟವರಿಂದ ಕೆಲಸಕಾರ್ಯಗಳಲ್ಲಿ ಅಸಮಾಧಾನ, ಅನಪೇಕ್ಷಿತವಾದ ಪ್ರವಾಸ, ತಾ|| ೨೫, ೨೯, ಅಶಾಂತಿ, ಕಿರುಕುಳ

ತುಲಾ—ಸ್ವಾಸ್ಥ್ಯತೆಕ ಸ್ಥಿತಿ ಕೆಡುತ್ತದೆ, ಮಾನಸಿಕ ಚಿಂತೆ ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಧನಾದಾಯ ಉತ್ತಮ, ಖರ್ಚು ಅಧಿಕ, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಅಧಿಕವಾಗುವುದು, ವ್ಯವಹಾರಗಳಿಗಾಗಿ ಪ್ರವಾಸ, ತಾ|| ೨೮, ೩೦ ಸನ್ಮಾನ, ಬಂಧು ದರ್ಶನ.

ವೃಶ್ಚಿಕ—ಆರೋಗ್ಯ ಕೆಡುತ್ತದೆ, ಧನಾದಾಯ ಉತ್ತಮ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಅಧಿಕಾರಿಗಳ ಮತ್ತು ಮಿತ್ರರ ನೆರವು, ಕೋರ್ಟು ಕೆಲಸಗಳಿಗಾಗಿ ಪ್ರವಾಸ, ಶತ್ರುಗಳ ಕಿರುಕುಳ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಮಂಗಳ ಕಾರ್ಯಗಳಿಗಾಗಿ ಬಂಧುಗಳ ಆಗಮನ, ತಾ|| ೨೬, ೩೦ ಲಾಭ, ಶಾಂತಿ.

ಧನಸ್ಸು—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರಾದಿಗಳಲ್ಲಿ ನಷ್ಟ, ಮಿತ್ರರಿಂದ ತಿರಸ್ಕಾರ, ಬಂಧು ಜನಗಳಿಂದ ಅಪಮಾನ, ಯಶಸ್ಸಿಲ್ಲದ ಕಾರ್ಯಗಳಲ್ಲಿ ಅಡಚಣೆ, ತಾ|| ೨೬, ೨೯ ನಷ್ಟ, ಕಲಹ.

ಮಕರ—ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಉತ್ತಮ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ನೆರೆಹೊರೆಯವರಿಂದ ತಿರಸ್ಕಾರ, ಶತ್ರುಗಳಿಂದ ನಷ್ಟ, ಅಧಿಕಾರಿ ವರ್ಗದವರಿಂದ ಅಪಮಾನ, ಧಾರ್ಮಿಕ ಕಾರ್ಯಗಳಿಗಾಗಿ ಧನವ್ಯಯ, ತಾ|| ೨೬, ೩೦ ಖರ್ಚು, ವ್ಯಥೆ.

ಕುಂಭ—ಆರೋಗ್ಯ ಚೆನ್ನಾಗಿರುತ್ತದೆ ಮನಃಸ್ಥಿತಿ ಉತ್ತಮ, ಆರ್ಥಿಕ ಪರಿಸ್ಥಿತಿ ಪ್ರಗತಿದಾಯಕ, ವ್ಯಾಪಾರ, ವ್ಯವಹಾರಗಳಲ್ಲಿ ಲಾಭ, ಅಧಿಕಾರಿ ವರ್ಗದವರ ಮತ್ತು ಮಹದ್ವ್ಯಕ್ತಿಗಳ ಸ್ನೇಹ, ಪ್ರವಾಸದಿಂದ ಮನ್ನಣೆ, ಕೌಟುಂಬಿಕ ಪರಿಸ್ಥಿತಿಗಳಿಂದ ಖರ್ಚು, ವ್ಯಥೆ, ತಾ|| ೨೮, ೨೯ ಅನಿರೀಕ್ಷಿತ ಪ್ರವಾಸ, ಅಪಘಾತ

ಮೀನ—ಆರೋಗ್ಯ ಕೆಡುತ್ತದೆ, ಧನಾದಾಯ ಕಡಿಮೆ, ಖರ್ಚು ಹೆಚ್ಚು, ವ್ಯಾಪಾರಾದಿಗಳಲ್ಲಿ ನಷ್ಟ, ಶತ್ರುಗಳ ಕಿರುಕುಳ ಹೆಚ್ಚು, ಮಿತ್ರರಿಂದಲೂ ಅಧಿಕಾರಿ ವರ್ಗದವರಿಂದಲೂ ತಿರಸ್ಕಾರ, ಪ್ರವಾಸದಿಂದ ಅಪಘಾತ, ತಾ|| ೨೮, ೨೯ ಲಾಭ, ಮಿತ್ರರಿಂದ ಸಹಾಯ

ರಾಜ್ಯಾಂಗ ಸಭೆಯಲ್ಲಿ ಮಹಾತ್ಮರ ಭಾವಚಿತ್ರ

ಬರುವ ವಾರ ಭಾರತ ರಾಜ್ಯಾಂಗ ಸಭೆಯಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರದ ಅನಾವರಣವು ಜರುಗುತ್ತದೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು

ಸ್ಯಾಂಡಲ್

ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗೌರ್ನರುಗಳಿಗೆ ವರ್ಷಕ್ಕೆ ೬೬ ಸಹಸ್ರ ರೂ.

ಭಾರತ ಡೊಮಿನಿಯನ್ನಿನ ಪ್ರಾಂತೀಯ ಗೌರ್ನರುಗಳಿಗೆ ತಿಂಗಳಿಗೆ ೫೫೦೦ ರೂ. ಸಂಬಳ ಕೊಡಲಾಗುವುದೆಂದು ಕೇಂದ್ರ ಸರ್ಕಾರವು ತಿಳಿಸಿರುತ್ತದೆ. ಆದರೆ ಮದರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಈಗಿರುವ ಆಂಗ್ಲೇಯ ಗೌರ್ನರುಗಳಿಗೆ ಮಾತ್ರ ತಿಂಗಳೊಂದಕ್ಕೆ ೧೦ ಸಹಸ್ರ ರೂ ಕೊಡಲಾಗುವುದು.

೬೦ ವರ್ಷದ ವರನಿಗೆ ೧೯ ವರ್ಷದ ವಧು

ದಕ್ಷಿಣ ಆಫ್ರಿಕದ ನಿವಾಸಿಗಳಲ್ಲೆಲ್ಲಾ ಅತ್ಯಂತ ಐಶ್ವರ್ಯವಂತನಾದ ೯೦ ವರ್ಷ ವಯಸ್ಸಿನ ಟೋಬಾಟೋಬಾ ಎಂಬಾತನು ೧೯ ವರ್ಷ ವಯಸ್ಸಿನ ತರುಣಿಯೊಬ್ಬಳನ್ನು ಮದುವೆ ಮಾಡಿಕೊಂಡಿರುವನು. ಈತನು ಈಗ್ಗೆ ಕೆಲವು ವರ್ಷಗಳಿಂದ ತನ್ನ ಪ್ರತಿಯೊಂದು ಜನ್ಮೋತ್ಸವದ ದಿನವೂ ಹೊಸದಾಗಿ ಮದುವೆ ಮಾಡಿಕೊಳ್ಳುತ್ತಿರುವನು ಇವನಲ್ಲಿ ೩೦ ಸಹಸ್ರ ಚಿನ್ನದ ನಾಣ್ಯಗಳಿವೆ.

ಬ್ರಿಟನ್ನಿನಲ್ಲಿರುವ ಭಾರತೀಯರಿಗೆ ಹಿಂದಿರುಗಲು ಕರೆ.

ಬರ್ಮಿಂಗ್ ಹ್ಯಾಂ ಇಂಡಿಯಾ ಲೀಗಿನ ಅಧ್ಯಕ್ಷರಾದ ಡಾ|| ಡಿ. ಆರ್. ಪ್ರೇಂ ರವರು ಒಂದು ಮನವಿಯನ್ನು ಹೊರಡಿಸಿ ಬ್ರಿಟನ್ನಿನಲ್ಲಿರುವ ಭಾರತೀಯರಿಗೆ ಭಾರತದಲ್ಲೀ ಈಗ ಕೆಲಸಗಳವೆಯೆಂದೂ, ಆದುದರಿಂದ ಎಲ್ಲರೂ ಭಾರತಕ್ಕೆ ಹಿಂದಿರುಗಬೇಕೆಂದೂ ಪ್ರಾರ್ಥಿಸಿದ್ದಾರೆ

ಶ್ರೀ ಗಣೇಶಾ ಟಾಕೀಸ್

24—8—47 ರಿಂದ

ದಿನವಹಿ ಮೂರು ಆಟಗಳು

ಮಾಡರ್ನ ಥಿಯೇಟರ್ಸ್‌ರವರ

★ ರಾಜ ರಾಜೇಶ್ವರಿ ★ (ತಮಿಳು)

—: ಪಾತ್ರ :—

ಹೊನ್ನಪ್ಪ ಭಾಗವತರ್, ಎನ್. ಎಸ್. ಕೃಷ್ಣನ್, ಕಾಳಿ ಎನ್ ರತ್ನಂ, ಕೆ. ಎಲ್ ವಿ ವಸಂತ, ಯು. ಆರ್. ಜೀವರತ್ನಂ ಟಿ ಎ ಮಧುರಂ.

WOODLANDS

Morning shows for 4 days from 22-8-47 daily at 10-30 a m

Princess O'Rourke

○ starring ○

Olivia Dehavilland, Robert Cumming.

Edited printed and published by A. R. Nagarajan at the Sadhvi Press D. Subbaiah Road Mysore

ಪ್ರಜೆಗಳಿಗೆ ಅರಮನೆ ದಾನ ಸ್ವಾಮ್ಯ

ಸಂಸ್ಥಾನದಲ್ಲಿ ಉಂಟಾಗುವ ಆಹಾರದ ಬಿಕ್ಕಟ್ಟನ್ನು ನಿವಾರಿಸಲು ಅರಮನೆ ಖಜಾನೆಯಿಂದ ೧೮೦೦ ಪಲ್ಲ ಬತ್ತವನ್ನು ಸರ್ಕಾರದ ಡಿಪೋವಿಗೆ ಕೊಡಬೇಕೆಂದು ಶ್ರೀಮನ್ಮಹಾರಾಜರವರು ಆಜ್ಞೆ ಮಾಡಿರುವರೆಂದು ತಿಳಿದು ಬಂದಿದೆ ಇದನ್ನು ಅಭಾವ ಪೀಡಿತ ಪ್ರದೇಶಗಳಿಗೆ ಕೂಡಲೇ ಸಾಗಿಸಲಾಗುವುದೆಂದು ಗೊತ್ತಾಗಿದೆ

ನೂರಡಿ ಎತ್ತರದ ಗಾಂಧಿ ಪ್ರತಿಮೆ

ಬೊಂಬಾಯಿಯ ಇಂಡಿಯಾ ದ್ವೀಪದ ಹೆಬ್ಬಾಗಿಲಿನ ಬಳಿ ೧೦೦ ಅಡಿ ಎತ್ತರದ ಗಾಂಧೀಜಿಯವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲು ಅಲ್ಲಿನ ಕಾಂಗ್ರೆಸ್ಸು ನಿರ್ಧರಿಸಿದೆ. ಅದಕ್ಕಾಗಿ ೧೦ ಲಕ್ಷ ರೂ ವೆಚ್ಚವಾಗುತ್ತದೆಂದು ಅಂದಾಜು ಮಾಡಲಾಗಿದೆ

ಬರ್ಮಾ ರಾಜ್ಯಾಂಗಕ್ಕೆ ಭಾರತೀಯ ನಿಪುಣರ ಸಲಹೆ

ತಮ್ಮ ದೇಶದ ರಾಜ್ಯಾಂಗದ ಕರಡನ್ನು ರಚಿಸಿಕೊಡಲು ಬರ್ಮಾ ಸರ್ಕಾರವು ಭಾರತ ರಾಜ್ಯಾಂಗ ಸಲಹೆಗಾರರಾದ ಶ್ರೀ ಬಿ. ಎನ್. ರಾಯರನ್ನು ಆಹ್ವಾನಿಸಿದೆಯೆಂದು ವರದಿಯಾಗಿದೆ ಅವರು ಈ ವಾರದಲ್ಲಿ ಬರ್ಮಾ ದೇಶಕ್ಕೆ ತೆರಳುವರು.

ರಾಜ್ ಕಮಲ್, ಮೈಸೂರು

ತಾ|| 22—8—47 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಚಾರ್ ಆಂಖೆ

● : ಭೂಮಿಕೆ : ●

ಲೀಲಾ ಚಿಟ್ನಿಸ್, ಜಯರಾಜ್

From 22-8-47 for 4 da[ys]

daily at 10-30 a. m.

Grand Double Attracti[on]

LISBON STORY

&

SEVEN DAYS LEA[VE]

ವುಡ್‌ಲ್ಯಾಂಡ್ಸ್

ತಾ|| 22-8-47 ರಿಂ[ದ]

ಅಮೋಘ ೨ ನೇ ವಾ[ರ]

ಮೀರ್ ಕುಮಾ[ರಿ]

(ಹಿಂದಿ)

—: ಪಾತ್ರ :—

ಕಪೂರ್, ಸಾಧು, ರೋಹಿಣಿ

ಮುಗ್ಗಾಪೋಟಿ

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬ | ಸೋಮವಾರ ೨೫-೮-೪೭ | ಸಂಚಿಕೆ ೨೯

ಭಾರತ ಸರ್ಕಾರದಿಂದ ಜುನಗಢದಲ್ಲಿ ತನಿಖೆ

ಬಹಿರಂಗ ಸಭೆ

ಮೈಸೂರು ೨೫

ನಾಳಿದ್ದು (ಬುಧವಾರ) ಸಂಜೆ ೭ ಗಂಟೆ [illegible]ಬ್ಯಾಂಕ್ ಮೈದಾನದಲ್ಲಿ ಸತ್ಯಾಗ್ರಹ [illegible]ಹಾರದ ಸಂಬಂಧವಾಗಿ ಬಹಿರಂಗ ಸಭೆ [illegible]ನ್ನು ಏರ್ಪಡಿಸಲಾಗಿದೆ. ಮೈಸೂರು [illegible]ಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಟಿ. [illegible]ದ್ದಲಿಂಗಯ್ಯ, ಕಾರ್ಯಕಾರಿ ಮಂಡಲಿ [illegible] ಶ್ರೀ ಕೆ. ಎಸ್. ಕುಮಾರ್ ಮತ್ತು [illegible] ನಾಯಕರು ಮಾತನಾಡುವರು. [illegible]ರೂ ದಯಮಾಡಿಸಬೇಕೆಂದು ನಗರ [illegible]ಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ [illegible] ಚೆನ್ನಯ್ಯನವರು ಪ್ರಾರ್ಥಿಸಿರುವರು.

೧೯೬೩೫ ಧ್ವಜಗಳ ಮಾರಾಟ

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ [illegible] ರಾಜಧಾನಿಯ ಖದ್ದರ್ ಪರಸ್ಪರ ಸ[illegible]ಯ ಸಂಘದಲ್ಲಿ ೧೧೬೩ ರೇಷ್ಮೆ ಆಣಿ [illegible]ದಿ ಮತ್ತು ೧೦೦೦೦ ಕಾಗದದ ರಾಷ್ಟ್ರ[illegible]ಜಗಳ ಮಾರಾಟವಾಗಿದೆಯೆಂದು ತಿಳಿದು[illegible]ದಿದೆ.

ಭಾರತ ಸರ್ಕಾರದಿಂದ [illegible]ಂದೂರ್ ಪ್ರಧಾನಿ ನೇಮಕ

ಭಾರತ ಸರ್ಕಾರವೇ ಇಂದೂರ್ ಸಂ[illegible]ನದ ಪ್ರಧಾನಿಯನ್ನು ನೇಮಿಸುವುದೆಂ[illegible]ದು ವರದಿಯಾಗಿದೆ. ಭಾರತ ಸಿವಿಲ್ ಸ[illegible]ರ್ವಿಸಿನ ಶ್ರೀ ಎ. ಸಿ. ಮುಷ್ರಾನರವರು ಸದ್ಯ[illegible]ದಲ್ಲೇ ಅಲ್ಲಿನ ಪ್ರಧಾನಿಯಾಗುವರೆಂದು [illegible]ಸಲಾಗಿದೆ.

ಬಂಗಾಳಗಳಲ್ಲಿ ಮಿಶ್ರ ಮಂತ್ರಿಮಂಡಲ

[illegible]ರ್ವ ಬಂಗಾಳದ ಪ್ರಧಾನಿ ಖ್ವಾಜಾ [illegible]ಸುದ್ದೀನ್ ಮತ್ತು ಪಾಕಿಸ್ತಾನ ಶಾ[illegible]ನ ಸಭೆಯ ಕಾಂಗ್ರೆಸ್ ಪಕ್ಷದ ನಾಯ[illegible] ಕಿರಣ ಶಂಕರ ರಾಯ್‌ರವರುಗಳು [illegible]ಗೆ ಹಿಂತಿರುಗಿರುವರು. ಪೂರ್ವ [illegible] ಪಶ್ಚಿಮ ಬಂಗಾಳಗಳಲ್ಲಿ ಮಿಶ್ರ [illegible]ಮಂಡಲಗಳನ್ನು ರಚಿಸುವ ಬಗ್ಗೆ [illegible]ಲೋಚನೆ ನಡೆಯಬಹುದೆಂದು ಹೇ[illegible]ಗಿದೆ.

[illegible]ವಾ ಮತ್ತು ಸುಮಾತ್ರಾ[illegible]ಗಳಲ್ಲಿ ಉಗ್ರ ಕದನ

[illegible]ಂಡೋನೇಷ್ಯದ ಜಾವಾ ಮತ್ತು ಸು[illegible]ತ್ರಾಗಳಲ್ಲಿ ಭೀಕರ ಕದನ ನಡೆಯುತ್ತಿ[illegible]ದೆಂದು ಡಚ್ ಪ್ರಕಟಣೆಯು ತಿಳಿಸಿರು[illegible] ಹೊಡೆದಾಟ ಬಹಳ ಭರದಿಂದ ಸಾ[illegible]ದೆ. ಪರಿಸ್ಥಿತಿ ಬಿಗಡಾಯಿಸುತ್ತಿದೆ. [illegible] ಜಾವಾದಲ್ಲಿರುವ ಬಾಂಟಾಂ ಪ್ರದೇ[illegible] ಡಚ್ ಪಡೆಗಳನ್ನೊಳಗೊಂಡ ಅನೇ[illegible]ಗಗಳು ಆಕ್ರಮಣ ಮಾಡುತ್ತಿವೆ [illegible] ರಿಪಬ್ಲಿಕ್ ಪ್ರಕಟಣೆಯು ತಿಳಿಸಿದೆ.

ಸಾಹಿತ್ಯ ಸಂಘ

ಶ್ರೀರಂಗಪಟ್ಟಣ ೨೩

[illegible]ದಿನ ಜೀರ್ಣಗ್ಗೆ ಇಲ್ಲಿನ ಪ್ರೌಢ[illegible] ಮುಖ್ಯೋಪಾಧ್ಯಾಯರ ಅಧ್ಯಕ್ಷತೆ[illegible]ಸ್ಕೂಲಿನ ಸಾಹಿತ್ಯ ಸಂಘವನ್ನು [illegible]ಸಲಾಯಿತು. ಪೌರಸಭಾ ಉಪಾ[illegible]ದ ಶ್ರೀ ಸಿ. ಬಂಡೀಗೌಡರು ಸಂಘ[illegible]ರಂಭ ಭಾಷಣ ಮಾಡಿ ವಿದ್ಯಾರ್ಥಿಗ[illegible]ನಾರ್ಜನೆಯ ಕಡೆಗೆ ವಿಶೇಷ ಗ[illegible]ಕೊಡಬೇಕೆಂದು, ತಮ್ಮ ಕಾರ್ಯ[illegible]ಗುಣವನ್ನು ವೃದ್ಧಿಗೊಳಿಸಿಕೊಂಡು ನಾ[illegible]ಡಿಯ ಮತ್ತು ಜನತೆಯ ಸೇವೆ [illegible]ಬೇಕೆಂದೂ ನುಡಿದರು.

ಎಂ. ಎ., ಎಂ. ಎಸ್‌. ಸಿ. ಪರೀಕ್ಷೆಗಳು

ಈ ವರ್ಷ ಮೈಸೂರು ವಿಶ್ವವಿದ್ಯಾಲಯವು ನಡೆಸಿದ ಎಂ. ಎ, ಮತ್ತು ಎಂ. ಎಸ್. ಸಿ. ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳ ಪೈಕಿ ಮೂರನೇ ಒಂದು ಭಾಗ ವಿದ್ಯಾರ್ಥಿಗಳಿಗೆ ತೇರ್ಗಡೆಯಾಗಿಲ್ಲ. ಮತ್ತೊಂದು ಪರೀಕ್ಷೆಗೆ ಕುಳಿತುಕೊಳ್ಳಲು ೧೪ ತಿಂಗಳ ಕಾಲವನ್ನು ಅವರು ವ್ಯಯ ಮಾಡಬೇಕಾಗುವುದು. ಆದುದರಿಂದ ಬಿ. ಎ. ಮೊದಲಾದ ಪರೀಕ್ಷೆಗಳಿಗೆ ಕೊಟ್ಟಿರುವಂತೆ ಈ ಪರೀಕ್ಷೆಗಳಿಗೂ ಸಹ ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಪ್ರಿಲಿಮಿನರಿಯಾಗಿ ನಡೆಯುವಂತೆ ವಿಶ್ವವಿದ್ಯಾಲಯದವರು ಏರ್ಪಾಡು ಮಾಡಬೇಕೆಂದು ನೊಂದ ವಿದ್ಯಾರ್ಥಿಯೊಬ್ಬರು ಕೋರಿರುವರು.

ಗ್ವಾಲಿಯರಿನಲ್ಲಿ ಸುಧಾರಣೆ

ಸ್ವಾತಂತ್ರ್ಯ ದಿನಾಚರಣೆಯ ದಿವಸ ತಮ್ಮ ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆಗಳನ್ನು ಗ್ವಾಲಿಯರ್ ಮಹಾರಾಜರು ಘೋಷಿಸಿರುವರೆಂದು ವರದಿಯಾಗಿದೆ. ಅದರಂತೆ ಈಗಿರುವ ಮಂತ್ರಿಗಳ ಸಂಖ್ಯೆಯನ್ನು ೧೧ ಜನಕ್ಕೆ ಹೆಚ್ಚಿಸಿ ಅವುಗಳಲ್ಲಿ ೫ ಸ್ಥಾನಗಳಿಗೆ ಖಾಸಗೀ ಸದಸ್ಯರನ್ನು ನೇಮಿಸಲಾಗುವುದು. ಖಾಸಗೀ ಸಚಿವರಿಗೆ ಆಹಾರ, ವ್ಯವಸಾಯ, ಕಾರ್ಮಿಕ, ಸಹಕಾರ, ಗ್ರಾಮಾಭ್ಯುದಯ, ಒಳಾಡಳಿತ, ವಿದ್ಯಾಭ್ಯಾಸ ಮತ್ತು ಆರೋಗ್ಯ ಖಾತೆಗಳ ಆಡಳಿತವನ್ನು ವಹಿಸಲಾಗುವುದು. ಸಂಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಧ್ಯೇಯದಿಂದ ರಾಜ್ಯಾಂಗ ಸುಧಾರಣೆಗಳಲ್ಲಿ ಸಲಹೆ ನೀಡಲು ಸಮಿತಿಯೊಂದನ್ನು ರಚಿಸಿ ೮ ತಿಂಗಳೊಳಗೆ ಸಲಹೆಗಳನ್ನು ಕೊಡಬೇಕೆಂದು ಅದಕ್ಕೆ ಸೂಚಿಸಲಾಗಿದೆ.

ಕನ್ನಡ ವಾರ ಪತ್ರಿಕೆ

ಮೈಸೂರು ಪತ್ರಿಕೆಯ ಉಪ ಸಂಪಾದಕರಾಗಿದ್ದ ಶ್ರೀ ಕೆ. ವೆಂಕಟಸುಬ್ಬಯ್ಯನವರ ಸಂಪಾದಕತ್ವದಲ್ಲಿ ಕಳೆದ ಶುಕ್ರವಾರದಿಂದ ರಾಜಧಾನಿಯಲ್ಲಿ ಪ್ರಕಟವಾಗುತ್ತಿರುವ ಕಹಳೆ-ಎಂಬ ಕನ್ನಡ ವಾರಪತ್ರಿಕೆಯ ಪ್ರಥಮ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಮೇಲೆ ವಿಚಾರಪೂರಿತ ಲೇಖನಗಳಿವೆ. ಇದರ ಬೆಲೆ ಒಂದಾಣೆ. ಪ್ರೇಮಿಯಾದ ಈ ಉದ್ಯಮವು ಯಶಸ್ವಿಯಾಗಲೆಂದು ಹಾರೈಸಿ ಕಹಳೆಗೆ ಸ್ವಾಗತವನ್ನು ನೀಡುತ್ತೇವೆ.

ರಾಷ್ಟ್ರಧ್ವಜದ ಅಪಮಾನದ ಬಗ್ಗೆ ತನಿಖೆ

ಹೈದರಾಬಾದ್ ಸಂಸ್ಥಾನದಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಲಾಯಿತೆಂಬ ವರ್ತಮಾನದ ಬಗ್ಗೆ ವಿಚಾರಣೆ ನಡೆಸಲು ಭಾರತ ಸರ್ಕಾರವು ನಿರ್ಧರಿಸಿದೆಯೆಂದು ವರದಿಯಾಗಿದೆ. ಹೈದರಾಬಾದಿಗೆ ೨೦೦ ಮೈಲಿ ದೂರದಲ್ಲಿರುವ ಶಾರ್‌ಖಾನಿ ಎಂಬಲ್ಲಿಯ ಅಂಚೆ ಕಛೇರಿಯ ಮೇಲೆ ಹಾರಿಸಿದ್ದ ಧ್ವಜವನ್ನು ಕೆಳಗಿಳಿಸಲಾಯಿತೆಂಬ ಸುದ್ದಿಯ ಬಗ್ಗೆ ತನಿಖೆ ನಡೆಸಲು ಅಲ್ಲಿಗೆ ಭಾರತದ ಅಂಚೆ ಖಾತೆಯ ಅಧಿಕಾರಿಗಳನ್ನು ಕಳಿಸುವರು.

ಪಾಕಿಸ್ತಾನದಲ್ಲಿ ಶುಕ್ರವಾರ ಹೆಂಡದ ಮಾರಾಟವಿಲ್ಲ

ಮದ್ಯಪಾನವನ್ನು ನಿರೋಧಿಸುವ ತಮ್ಮ "[illegible]ರದ ನೀತಿಯಂತೆ ತಮ್ಮ ಪ್ರಾಂತದಲ್ಲಿ ಹೆಂಡದ ಮಾರಾಟಮಾಡಲು ಮುಸ್ಲಿಮರಿಗೆ ಕೊಟ್ಟಿರುವ ಲೈಸೆನ್ಸುಗಳನ್ನೆಲ್ಲಾ ರದ್ದುಮಾಡಲಾಗುವುದೆಂದು ಸಿಂಧುಪ್ರಾಂತದ ಅಬ್ಕಾರಿ ಸಚಿವರಾದ ರಾಜ ಘಜುಲು ಅಲಿಯವರು ತಿಳಿಸಿರುವರು. ಅದರ ಅಂಗವಾಗಿ ಶುಕ್ರವಾರದ ದಿನ ಮದ್ಯದ ಮಾರಾಟ ಮತ್ತು ಪಾನಗಳನ್ನು ನಿರೋಧಿಸಿ ಸದ್ಯದಲ್ಲೇ ಆಜ್ಞೆಮಾಡುವುದಾಗಿಯೂ, ೨೫ ವರ್ಷಕ್ಕೆ ಕಡಿಮೆ ಇರುವವರು ಮದ್ಯಪಾನ ಮಾಡಲಾಗದೆಂದು ಈಗ ಇರುವ ಕಾನೂನನ್ನು ಬಿಗಿಪಡಿಸುವುದಾಗಿಯೂ ಅವರು ತಿಳಿಸಿರುವರು.

ಪಾಕಿಸ್ತಾನದ ಅಪ್ಪೀಲುಗಳು ಬ್ರಿಟನ್ನಿನ ಪ್ರೀವಿ ಕೌನ್ಸಿಲ್ಲಿಗೆ

ಪಾಕಿಸ್ತಾನ ಡೊಮಿನಿಯನ್ನಿನಲ್ಲಿ ಪ್ರತ್ಯೇಕವಾದ ಫೆಡರಲ್ ಕೋರ್ಟೊಂದನ್ನು ಸ್ಥಾಪಿಸುವವರೆಗೆ ಅಲ್ಲಿನ ಹೈಕೋರ್ಟ್ ಆಜ್ಞೆಗಳ ಮೇಲೆ ಬರುವ ಅಪ್ಪೀಲುಗಳನ್ನು ಬ್ರಿಟನ್ನಿನ ಪ್ರೀವಿ ಕೌನ್ಸಿಲು ಪರಿಶೀಲಿಸುವುದೆಂದು ಹೇಳಲಾಗಿದೆ.

ಡಿಸೆಂಬರ್ ಅಂತ್ಯದೊಳಗೆ ಬರ್ಮಾಕ್ಕೆ ಅಧಿಕಾರ ವರ್ಗ

ಬ್ರಿಟನ್ನಿನೊಡನೆ ಮಾಡಿಕೊಳ್ಳಬೇಕಾಗಿರುವ ಒಪ್ಪಂದದ ಕರಡು ಪ್ರತಿಯನ್ನು ಬರ್ಮಾ ಸರ್ಕಾರವು ಪರ್ಯಾಲೋಚಿಸುತ್ತಿದೆ. ಬರುವ ಡಿಸೆಂಬರ್ ಅಂತ್ಯದೊಳಗಾಗಿ ಬ್ರಿಟಿಷರು ಅಧಿಕಾರವನ್ನು ವರ್ಗಾಯಿಸಿಕೊಡುವುದಾಗಿ ಭರವಸೆ ಇತ್ತಿರುವರೆಂದು ಬರ್ಮಾ ಪ್ರಧಾನಿ ಥಾಕಿನ್ ನೂರವರು ತಿಳಿಸಿರುವರು.

ಜುನಗಢ ಸಂಸ್ಥಾನದ ತನಿಖೆ, ಭಾರತ ಸರ್ಕಾರದ ಅಧಿಕಾ[illegible]

ಪಾಕಿಸ್ತಾನಕ್ಕೆ ಸೇರುವುದಾಗಿ ಜುನಗಢ ಸಂಸ್ಥಾನದ ನವಾಬರು ನಿರ್ಧರಿಸಿರುವುದರಿಂದ ಅಲ್ಲಿನ ಪ್ರಜೆಗಳು ಹೂಡಿರುವ ಚಳುವಳಿಯ ವಿಷಯವಾಗಿ ತನಿಖೆ ನಡೆಸಲು ಭಾರತ ಸರ್ಕಾರದ ಸಂಸ್ಥಾನಗಳ ಖಾತೆಯ ಉನ್ನತಾಧಿಕಾರಿಗಳೊಬ್ಬರು ಈ ದಿನ ಅಲ್ಲಿಗೆ ಹೋಗಿ ನವಾಬರೊಡನೆಯೂ, ಪ್ರಜಾಮುಖಂಡರುಗಳೊಡನೆಯೂ ಮಾತುಕತೆ ನಡೆಸುವರು. ನವಾಬರ ನಿರ್ಧಾರವನ್ನು ವಿರೋಧಿಸಿ ಸಂಸ್ಥಾನದಲ್ಲೆಲ್ಲಾ ಸಾರ್ವಜನಿಕ ಸಭೆಗಳು ನಡೆಯುತ್ತಿವೆ. ಬೊಂಬಾಯಿಯಲ್ಲಿರುವ ಜುನಗಢ ಸಂಸ್ಥಾನದ ಪ್ರಮುಖರು ಅಲ್ಲಿನ ಬಂದರಿಗೆ ಬಹಿಷ್ಕಾರ ಹಾಕುವುದಲ್ಲದೆ ಅಲ್ಲಿನ ಸರ್ಕಾರದೊಡನೆ ಅಸಹಕಾರವನ್ನು ಹೂಡಲೂ ಸಹ ನಿರ್ಧರಿಸಿರುವರು. ಬ್ರಿಟಿಷ್ ಪರಮಾಧಿಕಾರವು ಹೋಗಿರುವುದರಿಂದ ಈ ಸಂಸ್ಥಾನದಲ್ಲಿರುವ ಸುಮಾರು ೪೮೦ ಹಿಂದೂ ಜಹಗೀರುದಾರರುಗಳು ತಾವೂ ಸ್ವತಂತ್ರರಾಗಿರುವುದಾಗಿ ಹೇಳುತ್ತಿರುವರೆಂದು ತಿಳಿದುಬಂದಿದೆ.

ಜಮಖಂಡಿ ರಾಜರ ನಿಧನ

ದಕ್ಷಿಣ ಸಂಸ್ಥಾನಗಳಲ್ಲೊಂದಾದ ಜಮಖಂಡಿಯ ರಾಜರಾದ ಶ್ರೀಮಂತ ಸರ್ ಶಂಕರ ರಾವ್ ಅಪ್ಪಾ ಸಾಹೇಬ್ ರಾಜಾ ಸಾಹೇಬರು ಕಳೆದ ಶುಕ್ರವಾರ ತಮ್ಮ ೪೧ನೆ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ ಜೊ.ಜಾ.ಯಿ.ಯಲ್ಲಿ ನಿಧನರಾದರೆಂದು ವರದಿಯಾಗಿದೆ.

ರಾಜಧಾನಿಗಳ ಪಂಕ್ತಿಗೆ ಜಿನ್ನಾರವರ ಹೆಸರು

ಹಬ್ಬದ ಮತ್ತು ಜುಮ್ಮಾ ಪ್ರಾರ್ಥನೆಗಳ ಸಂದರ್ಭದಲ್ಲಿ ಮುಸ್ಲಿಂ ದೊರೆಗಳ ಮತ್ತು ಖಲೀಫರ ಹೆಸರನ್ನು ಉಚ್ಚರಿಸುವ ಪದ್ಧತಿಯಂತೆ ಇನ್ನು ಮುಂದೆ ಎಲ್ಲ ಮುಸ್ಲಿಮರೂ ಈಗ ಸ್ವತಂತ್ರ ಮುಸ್ಲಿಂ ರಾಷ್ಟ್ರದ ಅಧಿಪತಿಗಳಾದ ಮಿ॥ ಜಿನ್ನಾರವರ ಹೆಸರನ್ನೂ ಆ ಖಲೀಫರುಗಳ ಹೆಸರಿನ ಸಂಗಡ ಸೇರಿಸಬೇಕೆಂದು ಪ್ರಾರ್ಥನೆಗಳನ್ನು ನಡೆಸಬೇಕೆಂದು ಸಿಂಧು ಪ್ರಾಂತದ ವಿದ್ಯಾಭ್ಯಾಸ ಸಚಿವರಾದ ಪೀರ್ ಇಲಾಹಿ ಬಕ್ಷರು ತಿಳಿಸಿರುವರು.

ಬ್ಯಾಂಕಿನ ಡೈರೆಕ್ಟರುಗಳು

ಮೈಸೂರು ೨೫

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿಗೆ ನಿನ್ನೆ ನಡೆದ ಚುನಾವಣೆಯಲ್ಲಿ ಈ ಕೆಳಗೆ ಕಂಡವರು ಡೈರೆಕ್ಟರುಗಳಾಗಿ ಆರಿಸಲ್ಪಟ್ಟಿರುವರು. ಶ್ರೀಗಳಾದ ಬಿ. ವಿ. ನಂಜುಂಡಯ್ಯ, ಸಿ. ನರಸಿಂಹಯ್ಯ, ಕೆ. ನಂದಿಬಸಪ್ಪ, ಟಿ. ಗುಂಡಪ್ಪ, ಎ. ವಿ. ರಂಗರಾವ್, ಡಿ. ಬಿ. ಕೃಷ್ಣಪ್ಪ, ಜಿ. ಜನಾರ್ದನ ನಾಯ್ಡು, ಹೆಚ್. ಕೃಷ್ಣಮೂರ್ತಿ ರಾವ್, ಹೆಚ್. ರಾಮಣ್ಣ, ನಂಜನಗೂಡು ಶ್ರೀಕಂಠಶಾಸ್ತ್ರಿ, ಪಿಜಿ. ನಾರಾಯಣ ರಾವ್, ಬಿ. ಎಸ್. ಸೂರ್ಯನಾರಾಯಣ ರಾವ್, ಟಿ. ಚಿ. ಚೆನ್ನಕೇಶವಯ್ಯಂಗಾರ್, ಕೆ. ಪುಟ್ಟಣ್ಣರಾವ್ ಮತ್ತು ಶ್ರೀ ಇ. ಪಿ. ನಂಜಪ್ಪ.

ದಳವಾಯಿ ಹೈಸ್ಕೂಲು, ಶಾರದಾ ವಿಲಾಸ ಇಂಟರ್ ಮೀಡಿಯೆಟ್ ಕಾಲೇಜು, ಮಹಾಜನ ಹೈಸ್ಕೂಲು ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಂಸ್ಥೆಗಳಿಗೆ ತಲಾ ೪೦೦ ಗಳನ್ನು ಸಹಾಯಾರ್ಥವಾಗಿ ಕೊಡಲಾಗಿದೆ.

ಸಾಧ್ವಿ
ತಾ|| ೨೫-೮-೪೭ ಸೋಮವಾರ

ಇಂದೂರಿನಲ್ಲಿ ಆದುದು ಮೈಸೂರಿನಲ್ಲಿ ಆಗದೇ?

ಇಂದೂರು ಸಂಸ್ಥಾನದ ಮಹಾರಾಜರು [illegible] ಪ್ರಜಾ ಮಂಡಲದ ನಾಯಕರ [illegible] ಮಂತ್ರಿಮಂಡಲವನ್ನು [illegible] ಸಂಸ್ಥಾನದ [illegible] ಭರವಸೆ ಇತ್ತಿದ್ದಾರೆ.

[illegible]

[illegible]

[illegible]

ಮಾಡಲಿಕ್ಕೆ ಟೊಂಕಕಟ್ಟಿ ನಿಂತ ಮುಖಂಡರ ನಿಯೋಗವೊಂದಕ್ಕೆ ಭೇಟಿಯನ್ನಿತ್ತು ತೆರೆದ ಹೃದಯದಿಂದ ಮಾತುಕತೆ ನಡೆಸಿದರು. ಪ್ರಜೆಗಳ ಅಭೀಪ್ಸೆಯನ್ನೂ ಪ್ರಜಾನಾಯಕರ ಪ್ರೀತಿ ವಿಶ್ವಾಸಗಳನ್ನೂ, ಅವರ ದೇಶಾಭಿಮಾನವನ್ನೂ ಕಂಡು ಮೆಚ್ಚಿದವರಾಗಿ ಅವರ ಆಕಾಂಕ್ಷೆಯಾದ ಪೂರ್ಣ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವುದಾಗಿ ಭರವಸೆ ಇತ್ತರು. ಅಲ್ಲಿನ ನಾಯಕರೂ ಸಹ ಸಂತುಷ್ಟರಾಗಿ ಸತ್ಯಾಗ್ರಹದ ಅಸ್ತ್ರವನ್ನು ಕೆಳಗಿಳಿಸುವುದಾಗಿ ನಿರ್ಧರಿಸಿದರು. ಇಂದು ಇಂದೂರಿನಲ್ಲಿ ರಾಜ ಪ್ರಜೆಗಳಿಗೆ ಸಂಪೂರ್ಣ ಸ್ನೇಹ ಸೌಹಾರ್ದಗಳು ಉಂಟಾಗಿ ಹೊಸ ಯುಗವು ಆರಂಭವಾಗಿರುತ್ತದೆ.

ಇಂದೂರಿನ ಪರಿಸ್ಥಿತಿಯೇ ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಇಂದು ಪ್ರತ್ಯಕ್ಷವಾಗಿರುತ್ತದೆ. ಇಲ್ಲಿನ ಸಮಸ್ಯೆಯು ಅಲ್ಲಿಗಿಂತಲೂ ಅತಿ ಸುಲಭವಾಗಿರುತ್ತದೆ. ಮೈಸೂರು ಸಂಸ್ಥಾನವು ದೊಮಿನಿಯನ್ನಿಗೆ ಸೇರಿ ಬಹಳ ದಿನಗಳಾಗಿರುವುದರಿಂದ ಇಲ್ಲಿ ಆ ಪ್ರಶ್ನೆಯೇ ಇರುವುದಿಲ್ಲ. ಬಿಳಿಯ ಮಂತ್ರಿಗಳು ಇಲ್ಲಿ ಯಾರೂ ಇಲ್ಲವೇ ಇಲ್ಲ. ಪ್ರಜಾಸುರಾಗವನ್ನು ಪಡೆದ ಮಂತ್ರಿಮಂಡಲವು ವಿಸರ್ಜನೆಯಾಗಬೇಕು ಮತ್ತು ಪ್ರಜೆಗಳ ಪ್ರತಿನಿಧಿಗಳಿಗೆ ಉತ್ತರವಾದಿಯಾಗಿರುವ ಆಡಳಿತ ಪದ್ಧತಿಯು ಜಾರಿಗೆ ಬರಬೇಕು—ಇವೇ ನಮ್ಮ ಸಂಸ್ಥಾನದ ಇಂದಿನ ಪ್ರಶ್ನೆಗಳು. ಇಡೀ ಹಿಂದೂಸ್ಥಾನವು ಸ್ವಾತಂತ್ರ್ಯ ಪದವಿಯನ್ನು ಅನುಭವಿಸುತ್ತಿರುವ ಈ ಸಮಯದಲ್ಲಿ ಕಾಲ ಧರ್ಮಕ್ಕೆ ಅನುಗುಣವಾಗಿ ಮೈಸೂರಿನ ಪ್ರಜೆಗಳು ಮುಂದಿಡುತ್ತಿರುವ ಈ ಬೇಡಿಕೆಗಳು ಅತ್ಯಂತ ಸಾಮಾನ್ಯವಾದುವು. ಅವುಗಳನ್ನು ಈ ದೇಶದ ಪ್ರಜಾಪೀಠ ಮಾತ್ರವೂ ಕೈಬಿಡಲು [illegible] ಅಸಾಧ್ಯವಾಗಲಾರದು. ಪ್ರಭುಗಳಿಗೇ ನೇರವಾಗಿ ತಮ್ಮ ಬೇಡಿಕೆಗಳನ್ನು ಇಲ್ಲಿನ ಕಾಂಗ್ರೆಸ್ ನಾಯಕರು ಸಲ್ಲಿಸಿದ್ದಾರೆ. ನಮ್ಮ ಶ್ರೀಮನ್ಮಹಾರಾಜರವರು ಕಾಂಗ್ರೆಸ್ ಮುಖಂಡರ ನಿಯೋಗವೊಂದನ್ನು ಕರೆಸಿಕೊಂಡು ಅವರೊಡನೆ ಪ್ರೀತಿ ವಾತ್ಸಲ್ಯದಿಂದ ಮಾತುಕತೆಗಳನ್ನು ನಡೆಸಿದರೆ ಎಲ್ಲರಿಗೂ ಸಮಾಧಾನಕರವಾದ ಒಪ್ಪಂದವು ಆಗುವುದೆಂದು ನಾವು ದೃಢವಾಗಿ ನಂಬಿದ್ದೇವೆ. ಪ್ರಭುಗಳಲ್ಲಿ ಸಂಪೂರ್ಣ ರಾಜಭಕ್ತಿ ವಿಶ್ವಾಸವುಳ್ಳವರಾಗಿ ಅವರ ಛತ್ರಛಾಯೆಯಲ್ಲಿಯೇ ಜವಾಬ್ದಾರೀ ಸರ್ಕಾರವನ್ನು ಗಳಿಸಬೇಕೆಂದು ಬಯಸುತ್ತಿರುವ ಪ್ರಜೆಗಳ, ಇಂದೂರಿನ ಅರಸರಿಂದ ಅಲ್ಲಿನವರು ಪಡೆದಂತಹ ಪುರಸ್ಕಾರವನ್ನಾದರೂ ಅಪೇಕ್ಷಿಸಬಾರದೇ?

ಮೈಸೂರು ಸಂಸ್ಥಾನವು ಅನೇಕ ಪಕ್ಷ ಮಾನವರ-ಪಟ್ಟಿನ ಪಡೆದಿದ್ದ ರಾಜಪ್ರ [illegible]

[illegible] ಮೈಸೂರು.
ತಾ|| 22—8 47 ರಿಂದ
ಅಪೋಹ್ಯ ಪ್ರಾರಂಭ
ಪ್ರತಿದಿನ ಮೂರು ಆಟಗಳು
[illegible]
[illegible]
[illegible]

ಬ್ರಿಟನ್ನಿನ ಆಹ್ವಾನಕ್ಕೆ ಈಜಿಪ್ಟಿನ ತಿರಸ್ಕಾರ

ಬ್ರಿಟನ್ನಿಗೂ, ಈಜಿಪ್ಟಿಗೂ ನಡೆಯುತ್ತಿದ್ದು ಭಗ್ನವಾಗಿದ್ದ ಮಾತುಕತೆಗಳನ್ನು ಪುನಃ ನೇರವಾಗಿ ಮುಂದುವರಿಸಬೇಕೆಂದು ಈಜಿಪ್ಟಿಗೆ ಬ್ರಿಟನ್ನು ಇತ್ತ ಆಹ್ವಾನವನ್ನು ಈಜಿಪ್ಟಿನ ಪ್ರಧಾನಿ ನೊಕ್ರಾಷಿ ಪಾಷಾರವರು ತಿರಸ್ಕರಿಸಿರುವರೆಂದು ವರದಿಯಾಗಿದೆ.

ಇಂಡೋನೇಷ್ಯಕ್ಕೆ ಭಾರತೀಯ ವೈದ್ಯರು

ಇಂಡೋನೇಷ್ಯದಲ್ಲಿ ನಡೆಯುತ್ತಿರುವ ಕದನದಲ್ಲಿ ನೊಂದವರಿಗೆ ಸಹಾಯನೀಡಲು ಭಾರತದಿಂದ ವೈದ್ಯರು ಹೋಗಬೇಕೆಂದು ಮಾಡಿದ್ದ ಪ್ರಾರ್ಥನೆಯನ್ನು ಮನ್ನಿಸಿ ೭೫ ಮಂದಿ ವೈದ್ಯರೂ ೨೦೦ ಜನ ನರ್ಸುಗಳೂ ನಿನ್ನೆ ರೆಡ್ ಕ್ರಾಸ್ ವಿಮಾನದಲ್ಲಿ ಜಾವಾಕ್ಕೆ ತೆರಳಿರುವರೆಂದು ವರದಿಯಾಗಿದೆ.

ಈ ವಿಶ್ವಾಸದ ಹೆಗ್ಗಳಿಕೆಗೆ ಅನುಗುಣವಾಗಿ ಈಗಲೂ ನಮ್ಮ ಸಂಸ್ಥಾನದ ಸಮಸ್ಯೆಯು ವಿಶಾಲ ದೃಷ್ಟಿಯಿಂದಲೂ, ಉದಾತ್ತ ಭಾವನೆಯಿಂದಲೂ ವೀಕ್ಷಿಸಲ್ಪಟ್ಟು ಸಕಲರಿಗೂ ಸಮಾಧಾನವಾಗುವ ರೀತಿಯಲ್ಲಿ ಬಗೆಹರಿಯಲು ಭಗವಂತನು ಎಲ್ಲರನ್ನೂ ಪ್ರೇರೇಪಿಸಲೆಂಬುದೇ ನಮ್ಮ ಹಾರೈಕೆಯಾಗಿದೆ.

ವುಡ್‌ಲ್ಯಾಂಡ್ಸ್
ತಾ|| 22-8-47 ರಿಂದ
ಅಪೋಹ್ಯ ೨ ನೇ ವಾರ

ಪೀರ್ ಕುನಾಲ್
(ಹಿಂದಿ)
—:ಪಾತ್ರ:—
ಕಿಶೋರ್ ಸಾಹು, ಶೋಭನಾ ಸಮರ್ಥ್, ದುರ್ಗಾ ಖೋಟೆ

ಶ್ರೀ
ಗಣೇಶ ಟಾಕೀಸ್
24—8—47 ರಿಂದ
ದಿನವೂ ಮೂರು ಆಟಗಳು
ಮಾಡರ್ನ್ ಥಿಯೇಟರ್ಸ್‌ರವರ
* ರಾಜ ರಾಜೇಶ್ವರಿ * (ತಮಿಳು)
—: ಪಾತ್ರ :—
ಚೊಣ್ಣಪ್ಪ ಭಾಗವತರ್, ಎಸ್. ಎಸ್. ಕೃಷ್ಣನ್, ಕಾಳಿ ಎನ್ ರತ್ನಂ, ಟಿ. ಎಲ್. ವಿ. ವಸಂತ, ಯು. ಆರ್. ಜೀವರತ್ನಂ ಟಿ ಎ ಮಧುರಂ.

ಬಟ್ಟೆ ಹಂಚಿಕೆಯ ಅವ್ಯವಸ್ಥೆ

ಸ್ವಂ ಸು.] [ಆಗರ ೨

ಈ ಗ್ರಾಮಕ್ಕೆ ಬರುವ ಬಹಳ ಸಾಮಾನು ಜನಿಕರಿಗೆ ದೊರೆಯುವುದು ಬಹಳ ಕಷ್ಟ. ಬಟ್ಟೆ ಬಂದಾಗ ಅದಕ್ಕೆ ಪೌಂಡಭೆಯು [illegible] ಬೀಳುವುದೇ ನೊಡಲಾದುವುಗಳಿಗಾ ಸಾವಕಾಶವಾಗುತ್ತದೆ. ಅನಂತರ ಅಂಗಡಿಗಳನ್ನೇ ತೆಗೆದಿರುವುದಿಲ್ಲ. ಅಂಗಡಿಯಲ್ಲಿ ಕೇಳಿದರೆ ಬಟ್ಟೆ ಮುಗಿದು ಹೋಗಿದೆಯೆಂಬ ಜವಾಬು ದೊರೆಯುತ್ತದೆ. [illegible] ಟೌನಲ್ಲಿ ಬಟ್ಟೆ ಬಂದರೂ ಸಾರ್ವಜನಿಕರಿಗೆ ಅದರ ಉಪಯೋಗವಾಗುತ್ತಿಲ್ಲ. ಅಧಿಕಾರಿಗಳು ಈ ಬಗ್ಗೆ ಗಮನ ಕೊಡಬೇಕಾಗಿದೆ.

ರಸ್ತೆ ದುರಸ್ತು ಆಗಲಿ

ಯಳಂದೂರು, ಮಾಂಬಳ್ಳಿ ರಸ್ತೆಯಲ್ಲಿ ವಾಹನಗಳ ಸಂಚಾರ ಹೆಚ್ಚಾಗುತ್ತಾ ಬಂದರೂ ಅದರ ದುರಸ್ತಿನ ಕಡೆಗೆ ಸರ್ಕಾರದವರ ಗಮನವೇ ಇಲ್ಲದಂತಾಗಿದೆ. ಗಾಡಿಗಳಲ್ಲೂ, ಬಸ್ಸಿನಲ್ಲೂ ಸಂಚಾರ ಮಾಡುವುದು ಅತ್ಯಂತ ದುಸ್ತರವಾಗಿರುತ್ತದೆ. [illegible] ಗರದಿಂದ ಮಾಂಬಳ್ಳಿಗೆ ಇರುವ ರಸ್ತೆಯು ಕಾಲ್ನಡಿಗೆಗೂ ಸಹ ಕಠಿಣವಾಗಿದೆ. ಪೌರಸಭೆಯವರೂ, ಸರ್ಕಾರದವರೂ ಇದಕ್ಕೆ ಗಮನಕೊಟ್ಟು ಕೂಡಲೇ ಈ ರಸ್ತೆಗಳನ್ನು ಸರಿಪಡಿಸುವುದು ಅತ್ಯಗತ್ಯ.

ಘನವಾದ ಸಂಗೀತ ಕಚೇರಿ
ಶ್ರೀ ಸರಸ್ವತೀ ಸಂಗೀತ ಸಮಾಜ
ಮೈಸೂರು.
ತಾ|| ೬-೯-೧೯೪೭ ನೇ
ಶನಿವಾರ ಸಂಜೆ 6-30 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ತಿರುವಾಂಕೂರು ಆಸ್ಥಾನ ವಿದ್ವಾನ್
ಜಿ. ಎನ್ ಬಾಲ ಸುಬ್ರಹ್ಮಣ್ಯಂ
ರವರ ಹಾಡುಗಾರಿಕೆ
ತಿರುವಾಂಕೂರು ಆಸ್ಥಾನ ವಿದ್ವಾನ್
ಮಾಯಾವರಂ ಗೋವಿಂದರಾಜ ಪಿಳ್ಳೆ
ಯವರ ಪಿಟೀಲು
ಪಾಲಘಾಟ್ ಮಣಿ ಅಯ್ಯರ್‌ರವರ
ಮೃದಂಗ
ಮೆಂಬರಲ್ಲದವರಿಗೆ ಟಿಕೆಟ್ ಮೂಲಕ
ಪ್ರವೇಶ
ಟಿಕೆಟ್ ದರ ರೂ ೫, ೪, ೨, ೧
ಸೂಚನೆ :— ೧, ಮತ್ತು ೨, ನೇ ತರಗತಿಗಳಲ್ಲಿ ಸೀಟ್ ರಿಜರ್ವ್ ಮಾಡಿಸಲು ಇಷ್ಟವುಳ್ಳವರು ಸೀಟು ಒಂದಕ್ಕೆ 0-8-0 ಯಂತೆ ಕೊಟ್ಟು ೩ ನೇ ತಾರೀಖಿನಿಂದ ೫ ನೇ ತಾರೀಖು ಸಂಜೆ ಒಳಗೆ ರಿಜರ್ವ್ ಮಾಡಿಸಬಹುದು
ಎಸ್. ಕೆ ರಾಮಾಚಾರ್
ವಿ. ಎಲ್ ರಾಮಚಂದ್ರರಾವ್
ಆನರರಿ ಸೆಕ್ರೆಟರಿಗಳು

DIRECTORY
Build your business by advertising in INDIAN NATIONAL DIRECTORY, (The All-India Business Man's Telephone Directory) which guarantees All-India coverage. For particulars, apply I. N. D. Basavanagudi, Bangalore.

[illegible]

ಫೋನ್ ನಂ. 392 ॥ ವಂದೇ ಮಾತರಂ ॥ ಬಿಡಿಪ್ರತಿ 3 ಕಾಸು



ಸಂಪುಟ ೭] ಮಂಗಳವಾರ ೩-೩-೪೭ [ಸಂಚಿಕೆ ೩೦

ಇಂಡೋನೇಷ್ಯದಲ್ಲಿ ಇನ್ನೂ ಭೀಕರ ಕದನ

ಬಹಿರಂಗ ಸಭೆ

ಮೈಸೂರು ೩.

ನಾಳೆ (ಬುಧವಾರ) ಸಂಜೆ ೭ ಗಂಟೆಗೆ [illegible] ಸತ್ಯಾಗ್ರಹದ [illegible] ಬಹಿರಂಗ ಸಭೆಯು ಏರ್ಪಾಡಿಸಲಾಗಿದೆ. ಮೈಸೂರು [illegible]

ದಕ್ಷಿಣ ಆಫ್ರಿಕಾ ಸರಕಾರಕ್ಕೆ [illegible]

[illegible]

ಜಿಲ್ಲಾಧಿಕಾರಿಗಳಿಂದ ಸಭೆ

ಮೈಸೂರು ೩.

[illegible]

ಪುದುಕೋಟೆ ನಾಕರರಿಗೆ ಸ್ವಾತಂತ್ರ್ಯ ದ ಘೋಷಣೆ

[illegible]

ಗೌರ್ನರುಗಳು ನಾಲ್ಕು ವಿರೋಧಿಗಳಾಗಿರಬೇಕು

[illegible]

ಕಾಂಗ್ರೆಸ್ ನಾಯಕರ ಪ್ರವಾಸ.

ಮೈಸೂರು ೩.

[illegible]

ಬನಾರಸ್ ವಿದ್ಯಾರ್ಥಿಗಳ ಸಭೆಯ ಆಹ್ವಾನ

[illegible]

ಮುಷ್ಕರ ಪರಿಣಾಮ

[illegible]

ಜಿಲ್ಲಾ ಸಭೆಯ ಅಧ್ಯಕ್ಷರ ಆಯ್ಕೆ

[illegible]

ವಿದ್ಯಾರ್ಥಿಗಳ ಆಸ್ತಿ ಭಂಜನೆ

[illegible]

ನಿಧನ

[illegible]

ಮಧ್ಯ ಜಾವಾದಲ್ಲಿ

[illegible]

ರಾಜ್ಯಾಂಗ ಸಭೆ ಸಂಸ್ಥಾನಗಳ ಪ್ರತಿನಿಧಿಗಳು

[illegible]

ನಿಧನ

ಮೈಸೂರು ೩.

[illegible]

ರಾಜನೀತಿ ನೈಪುಣ್ಯದ ಸತ್ವ ಪರೀಕ್ಷೆ

ಲೇಖಕರು :— ಶ್ರೀ ಎಸ್ ನಾರಾಯಣರಾವ್, ಅಡ್ವೋಕೇಟ್, ನಂಜನಗೂಡು.

ಮೈಸೂರಿನಲ್ಲಿ ಸತ್ಯಾಗ್ರಹವನ್ನು ಹೂಡುವ ದಿನವು ಹತ್ತಿರ ಬಂದಂತೆಲ್ಲಾ ಘೋರ, ಕಠಿಣತರವೂ ಆದ ಪರಿಣಾಮದಿಂದ ವ್ಯಾಪಕವಾದ ಪರಿಸ್ಥಿತಿಯು ಉದ್ಭವಿಸುತ್ತ ಬರುತ್ತಿದೆ. ಈ ಸನ್ನಿವೇಶದ ತೀಕ್ಷ್ಣತೆಯನ್ನು ಅರಿತರೆ ಸಾರ್ವಜನಿಕ ಮುಖಂಡರುಗಳೆಲ್ಲರೂ ಸರ್ಕಾರದ ಸೂತ್ರಧಾರಿಗಳೂ ಕಾಲದಲ್ಲಿ ಎಚ್ಚರಿಕೆಯನ್ನಿಟ್ಟು ಅವರ ಬೆಂಕಿಯೊಡನೆ ಆಟವಾಡುತ್ತಿರುವರೆಂದು ತಿಳಿಸುವುದು ಅಗತ್ಯ.

ಸಂಸ್ಥಾನದಲ್ಲೆಲ್ಲಾ ವೈಭವಯುತವಾಗಿಯೂ ಅತ್ಯುತ್ಸಾಹದಿಂದಲೂ ಆಚರಿಸಲ್ಪಟ್ಟ ಸ್ವಾತಂತ್ರ್ಯೋತ್ಸವದ ಸಮಾರಂಭಗಳು ಇದುವರೆಗೆ ಇಲ್ಲಿ ಸುಪ್ತಾವಸ್ಥೆಯಲ್ಲಿದ್ದರೂ ರಾಷ್ಟ್ರೀಯ ಭಾವೋದ್ರೇಕದ ಪ್ರಮಾಣವನ್ನು ಪ್ರಕಾಶಪಡಿಸುತ್ತದೆ. ಭಾರತವು ಸ್ವಾತಂತ್ರ್ಯವನ್ನು ಗಳಿಸಿರುವುದರಿಂದ ನಮ್ಮಲ್ಲಿಯೂ ಪೂರ್ಣ ಜವಾಬ್ದಾರೀ ಸರ್ಕಾರ ಸ್ಥಾಪಿಸಲ್ಪಡಬೇಕೆಂಬ ತೀವ್ರಾಕಾಂಕ್ಷೆ ಪ್ರಜೆಗಳಲ್ಲಿ ಉದ್ಭವಿಸಿರುತ್ತದೆ. ಸ್ವಾತಂತ್ರ್ಯಸಾಧನೆಯ ತೀವ್ರತೆಯು ಸಾಮಾನ್ಯವಾಗಿ ಗಲಭೆ, ಚಳವಳಿಗಳನ್ನಾಗಲೀ, ಸಹಿಸದು.

ಭಾರತದ ಇತರ ಭಾಗಗಳು ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವಾಗ ನಾವು ಮಾತ್ರ ಆಡಳಿತದ ಜವಾಬ್ದಾರಿಯನ್ನು ಪ್ರಜೆಗಳಿಗೆ ವಹಿಸುವುದಿಲ್ಲವೆಂಬ ಅಪೇಕ್ಷೆಯನ್ನು ನಾವು ರಾಜರಾದರೂ ಹೊಂದಿರಬಹುದೇ? ಕತ್ತಲೆಯ ನಂತರ ಬೆಳಕು ಹೇಗೆ ಬಂದೇ ಬರುವಂತೆ ಸಂಸ್ಥಾನಗಳ ಮೇಲಿನ ವಿವಿಧ ರೀತಿಯ ನಿರಂಕುಶ ಆಡಳಿತಗಳು ನಿರ್ಮೂಲವಾಗಿ ಪ್ರಜೆಗಳಿಂದಲೇ ಆರಿಸಲ್ಪಟ್ಟ ಪ್ರಭುತ್ವಕ್ಕೆ ಸ್ಥಾನವನ್ನು ಬಿಟ್ಟುಕೊಡಲೇಬೇಕು. ಜವಾಬ್ದಾರೀ ಸರ್ಕಾರದ ಸ್ಥಾಪನೆಯೂ ಅನಿವಾರ್ಯವಾದುದೇ ಸರಿ.

ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳ ಆಕಾಂಕ್ಷೆಗಳ ಪ್ರತಿಬಿಂಬವಾಗಿರುವ ಕಾಂಗ್ರೆಸ್ಸು ಇನ್ನು ಕೆಲವು ದಿನಗಳಲ್ಲಿಯೇ ರಂಗಸ್ಥಳಕ್ಕೆ ಇಳಿಯುವುದಾಗಿರುತ್ತದೆ. ಇದರಲ್ಲಿ ಸಂಶಯಕ್ಕಾಗಲೀ ಹಿಮ್ಮೆಟ್ಟುವುದಕ್ಕಾಗಲೀ ಆಸ್ಪದವಿರುವುದಿಲ್ಲ. ಸರ್ಕಾರದವರು ಇನ್ನೂ ಉದಾಸೀನರಾದರೆ ಪ್ರಮಾಣವನ್ನು ಈ ಚಳುವಳಿಯು ತಾಳುವುದು. ಗುರಿಯನ್ನು ಸಾಧಿಸುವವರೆಗೆ ಅಹಿಂಸಾತ್ಮಕವಾಗಿ ಹೂಡುವ ಆಂದೋಳನಗಳು ಇದೇ ಕಟ್ಟಕಡೆಯದೆಂದು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುತ್ತದೆ.

ಸಂಸ್ಥಾನಗಳಿಗೆಲ್ಲಾ ಆದರ್ಶಪ್ರಾಯವಾದುದೆಂದು ಹೆಸರುವಾಸಿ ಹೊಂದಿದ್ದ ಮೈಸೂರು ಸಂಸ್ಥಾನವು ಹೋರಾಟದ ಮಾರ್ಗವನ್ನು ಅನಿರ್ದಿಷ್ಟವಾದ ರೀತಿಯಲ್ಲಿಯೇ ಹೊಂದಿರುವುದು ಆಶ್ಚರ್ಯವಾಗಿದೆ. ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದೇ ಸಹಜವಾದ ಮಾರ್ಗವಾಗಿರುವಲ್ಲಿ ಕಾಲಹರಣದ ನೀತಿಯು ಉಚಿತವೇ, ಯುಕ್ತವೇ, ಶೋಭೆಯೇ? ಬಹುಕಾಲ ತಡೆಹಿಡಿಯಲಾಗದುದನ್ನು ಸಂತೋಷವಾಗಿ ಅಂಗೀಕರಿಸುವುದು ಸಾಧುವಾದ ಮಾರ್ಗವಲ್ಲವೇ? ಈ ಬಗೆಯ ಸರ್ವತೋಮುಖವಾದ ಚಳುವಳಿಯಿಂದ ಆಡಳಿತ ಯಂತ್ರದ ಮೇಲೆ ವಿಶೇಷ ಹೊರೆಯು ಬೀಳುವುದಲ್ಲದೆ ಅದು ಅನೇಕ ಭಾಗಗಳಾಗಿ ಛಿನ್ನವಾಗಲೂ ಅವಕಾಶವಿರುತ್ತದೆ. ಮುಂದಾಲೋಚನೆಯಿಲ್ಲದೆ ತಂದುಕೊಳ್ಳುವ ಇಂತಹ ದುರಂತದ ಸಂದರ್ಭಕ್ಕಾಗಿ ಎಷ್ಟು ಕಣ್ಣೀರಿಟ್ಟರೂ ಸಾಲದಾಗಬಹುದು.

ಭಾಷಾನುಗುಣವಾಗಿ ಪ್ರಾಂತಗಳನ್ನು ಪುನರ್ರಚನೆ ಮಾಡಲು ಕಾಂಗ್ರೆಸ್ ಮಹಾಸಭೆಯು ಸಮ್ಮತಿಸಿರುತ್ತದೆ. ಈ ಪುನರ್ರಚನೆಯ ಸಮಯದಲ್ಲಿ ಮೈಸೂರಿನ ಶ್ರೀ ಮನ್ಮಹಾರಾಜರವರು ತಮ್ಮ ಸಂಸ್ಥಾನವನ್ನು ನೆರೆಯ ಪ್ರಾಂತಗಳ ರಾಜಕೀಯ ಮಟ್ಟಕ್ಕೆ ತರುವುದಾದರೆ ಮೈಸೂರಿನ ಹೊರಗಡೆ ಇರುವ ೮೦ ಲಕ್ಷ ಕನ್ನಡಿಗರೂ ಸಂತೋಷದಿಂದ ಶ್ರೀಮನ್ಮಹಾರಾಜರವರ ಪ್ರಜೆಗಳಾಗಿರಲು ಒಪ್ಪುವರು. ಒಂದೂವರೆ ಕೋಟಿ ಪ್ರಜಾ ಸಂಖ್ಯೆಯುಳ್ಳ ಅಖಂಡ ಕರ್ಣಾಟಕ ಪ್ರಾಂತಕ್ಕೆ ಮೈಸೂರು ಕೇಂದ್ರಸ್ಥಾನವಾಗುವುದು. ಇಂತಹ ಸುವರ್ಣ ಸಂಧಿಯು ಇಂದಿನ ಪ್ರಭುತ್ವದವರ ಸಂಕುಚಿತ ದೃಷ್ಟಿಯಿಂದ ಕೈ ಬಿಟ್ಟು ಹೋಗುತ್ತಿದೆ. ಈ ಸಮಯದಲ್ಲಿ ನಮ್ಮ ಪ್ರೀತಿ ಪಾತ್ರರಾದ ಪ್ರಭುವರ್ಯರು ಬೇಗನೆ ಪ್ರವೇಶಿಸಿ ಯುಕ್ತವಾದ ಕಾರ್ಯಕ್ರಮವನ್ನು ಕೈಗೊಂಡು ಸತ್ಯಾಗ್ರಹ ಚಳುವಳಿಯು ಆರಂಭವಾಗದಂತೆಯೂ ತಮ್ಮ ರಾಜಭಕ್ತಿ ಪೂರಿತರಾದ ಪ್ರಜೆಗಳು ತಮ್ಮ ತನು, ಮನ, ಧನಗಳನ್ನು ಪ್ರಭುಗಳ ಕೃಪಾಪೂರಿತ ಮತ್ತು ದಯಾಮಯವಾದ ಛತ್ರಚ್ಛಾಯೆಯಲ್ಲಿ ವಿಶಾಲ ಕರ್ಣಾಟಕದ ಸೇವೆಗೆ ವಿನಿಯೋಗಿಸುವಂತೆಯೂ ಮಾಡುವುದೊಂದೇ ಈಗ ಉಳಿದಿರುವ ಮಾರ್ಗ.

ವುಡ್‌ಲ್ಯಾಂಡ್ಸ್

ತಾ|| 22-8-47 ರಿಂದ

ಅಮೋಘ ೨ ನೇ ವಾರ

ಪೀರ್ ಕುನಾಲ್

(ಹಿಂದಿ)

— ಪಾತ್ರ. —

ಪಿರೋಜ್‌ಖಾನು, ಶೋಭನಾಸಮರ್ಥ್

ಮುಗಾಳ್ ಜೋಷಿ

Edited printed and published by A. R. Nagarajan at the Sadhvi Press D. Subbaiah Road Mysore

ಸ್ವಾತಂತ್ರ್ಯೋದಯ

ಬೆಂಗಳೂರಿನ ಮಾತೃಭೂಮಿ ಪತ್ರಿಕೆಯ ಉಪ ಸಂಪಾದಕರಾದ ಶ್ರೀ ಟಿ. ಶೇಷಪ್ಪನವರ ಸಂಪಾದಕತ್ವದಲ್ಲಿ ಕಳೆದ ಶುಕ್ರವಾರದಿಂದ ಪ್ರಕಟವಾಗುತ್ತಿರುವ ಸ್ವಾತಂತ್ರ್ಯೋದಯ ಎಂಬ ದ್ವೈವಾರಿಕ ಕನ್ನಡ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಇದು ಪ್ರತಿ ಬುಧವಾರ ಮತ್ತು ಭಾನುವಾರಗಳಲ್ಲಿ ಪ್ರಕಟವಾಗುವುದು. ಸಂಸ್ಥಾನದ ರಾಜಕೀಯ, ಸಾಮಾಜಿಕ ಮತ್ತು ಜನಜೀವನಗಳ ಪರಿಸ್ಥಿತಿಗಳ ವಿಮರ್ಶೆಗಾಗಿಯೇ ಈ ಪತ್ರಿಕೆಯು ಮೀಸಲಾಗಿದೆ. ಶ್ರೀಯುತರ ಭಾಷಾ ಶೈಲಿ ಅತ್ಯಂತ ಸರಳವಾಗಿದ್ದು ಓದುಗರ ಮನಸ್ಸನ್ನು ಸೆಳೆಯುವಂತಿದೆ. ಸ್ವಾತಂತ್ರ್ಯೋದಯದ ಉದಯವಾಗಿರುವುದರಿಂದ ಈ ಪತ್ರಿಕೆಯು ಎಲ್ಲರ ಮನ್ನಣೆಯನ್ನೂ ಪಡೆದು ನಾಡಿನ ದಿಗಂತದಲ್ಲಿ ವಿರಾಜಿಸಲೆಂದು ಹಾರೈಸುತ್ತೇವೆ.

ವಿದ್ಯಾಲಯದ ತೆರಿಗೆ

ತಮ್ಮ ದೇಶದ ವಿಶ್ವವಿದ್ಯಾಲಯದ ವೆಚ್ಚಗಳಿಗೆ ಬೇಕಾದ ಹಣವನ್ನೊದಗಿಸುವ ಸಲುವಾಗಿ ವಿಶ್ವವಿದ್ಯಾಲಯದ ಪದವೀಧರರನ್ನು ನೌಕರಿಗೆ ಸೇರಿಸಿಕೊಂಡಿರುವ ಎಲ್ಲ ಸಂಸ್ಥೆಗಳೂ ತಮ್ಮ ವರಮಾನದ ಮೇಲೆ ಶೇ. ೧೧ ಯನ್ನು ವಿಶೇಷ ತೆರಿಗೆಯಾಗಿ ಕೊಡಬೇಕೆಂದು ಅರ್ಜೆಂಟೈನಾ ಸರ್ಕಾರವು ಆಜ್ಞೆ ಮಾಡಿರುತ್ತದೆ. ಇದು ಪ್ರಾಂತೀಯ, ಸ್ಥಳೀಯ ಮತ್ತು ಸಾರ್ವಜನಿಕ ಶಾಖೆಗಳ ಆಡಳಿತಗಳಿಗೆ ಅನ್ವಯಿಸುವುದಿಲ್ಲ.

ಕಾಂಗ್ರೆಸ್ಸಿಗೆ ಕಾಣಿಕೆ

ಸ್ವಂ. ವ] [ಹಿರೀಸಾವೆ ೨೪

ಸೆಪ್ಟೆಂಬರ್ ೧ ರಿಂದ ಹೂಡಲಿರುವ ಸತ್ಯಾಗ್ರಹದ ಸಂಬಂಧವಾಗಿ ಪ್ರಚಾರ ಮಾಡಲು ಹೊರಟಿರುವ ಶ್ರೀಗಳಾದ ಕೆ. ಟಿ. ಭಾಷ್ಯಂ, ಎ. ಜಿ. ರಾಮಚಂದ್ರರಾವ್, ಎಂ. ಎಸ್. ದೊರೆಯಿಸ್ ಮತ್ತು ಶ್ರೀ ಜಿ. ತಮ್ಮಪ್ಪ ಗೌಡರುಗಳು ಮೊನ್ನೆ ಇಲ್ಲಿಗೆ ಆಗಮಿಸಿದರು. ಸಹಸ್ರಾರು ಮಂದಿ ಸೇರಿದ್ದ ಸಭೆಯಲ್ಲಿ ಜವಾಬ್ದಾರೀ ಸರ್ಕಾರದ ಸ್ಥಾಪನೆ, ಸತ್ಯಾಗ್ರಹದ ನಿಯಮಗಳನ್ನು ಕುರಿತು ಅವರುಗಳು ಹೃದಯಂಗಮವಾಗಿ ಭಾಷಣ ಮಾಡಿದರು. ಸಭೆಯಿಂದ ಕಾಂಗ್ರೆಸ್ ಸಮಿತಿಗೆ ೧೦೧ ರೂ ಗಳನ್ನು ಕಾಣಿಕೆಯಾಗಿ ಅರ್ಪಿಸಲಾಯಿತು.

ಸ್ವಾತಂತ್ರ್ಯ ದಿನಾಚರಣೆ

ಇದೇ ಹೋಬಳಿಯ ಕೋಟೆಗ್ರಾಮದಲ್ಲಿ ಕಳೆದ ೧೫ ನೇ ತಾ|| ವೈಭವದಿಂದ ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸಲಾಯಿತು. ಪ್ರಭಾತ ಫೇರಿ, ಧ್ವಜ ವಂದನೆಗಳೂ, ದೇವಾಲಯಗಳಲ್ಲಿ ಅಭಿಷೇಕವೂ, ರಾಷ್ಟ್ರನಾಯಕರ ಮೆರವಣಿಗೆ ಮತ್ತು ವಿನಿಯೋಗಗಳೂ ಆದುವು. ಆ ದಿನದ ಜ್ಞಾಪಕಾರ್ಥವಾಗಿ ೧೫೦ ಮರಗಳನ್ನು ನೆಟ್ಟು ಗುಂಡು ತೋಪೊಂದನ್ನು ನಿರ್ಮಿಸಲಾಯಿತು.

ರವೀಂದ್ರರ ದಿನಾಚರಣೆ

ಸ್ವಂ. ವ] ಶ್ರೀರಂಗಪಟ್ಟಣ ೨೫

ಇಲ್ಲಿನ ವಿದ್ಯಾರ್ಥಿ ಲೇಖಕರು ನಿನ್ನೆ ಇಲ್ಲಿನ ಜಯಲಕ್ಷ್ಮಿ ಥಿಯೇಟರಿನಲ್ಲಿ ಪ್ರೊ|| ಪಿ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ವಿಶ್ವಕವಿ ರವೀಂದ್ರನಾಥ ಟಾಗೋರರ ದಿನಾಚರಣೆಯನ್ನು ನಡೆಸಿದರು.

ದಂಡಿನ ಪ್ರಜೆಗಳ ಮೊರೆ

ಪ್ರಭು ಭೇಟಿ ಸಮಯದಲ್ಲಿ ಜವಾಬ್ದಾರೀ ಸರ್ಕಾರದ ಘೋಷಣೆಯಾಗ[ಲಿ]

ಬೆಂಗಳೂರು ೨[...]

ಬೆಂಗಳೂರು ದಂಡಿನ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ಎಸ್. ನರಸಯ್ಯನವರು ಒಂದು ಹೇಳಿಕೆಯನ್ನಿತ್ತು ಶ್ರೀಮನ್ಮಹಾರಾಜರವರ ಸಾನ್ನಿಧ್ಯದಲ್ಲಿ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸಲು ಮೈಸೂರು ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ಹೂಡಲು ಮಾಡಿರುವ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ದಂಡಿನ ಕಾಂಗ್ರೆಸ್ ಸಮಿತಿಯು ಮೈಸೂರು ಕಾಂಗ್ರೆಸ್ಸಿಗೆ ಇನ್ನೂ ಸೇರಿಸಲ್ಪಟ್ಟಿರುವುದಿಲ್ಲವಾದರೂ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮಹಾಸಭೆಯು ಸ್ವಾತಂತ್ರ್ಯ ಸಾಧನೆಗಾಗಿ ಅನೇಕ ಹೋರಾಟಗಳನ್ನು ಹೂಡಿದಾಗ ಅದರಲ್ಲಿ ಭಾಗವಹಿಸಿದ ದಂಡಿನ ಕಾಂಗ್ರೆಸ್ ಸೇವಕರು ಈಗ ಮೈಸೂರಿನ ಉದ್ದೇಶವಾದ ರಾಜಕೀಯ ಗುರಿಯನ್ನು ಸಾಧಿಸುವ ಪ್ರಯತ್ನದಲ್ಲಿ ಹಿಂದೆ ಬೀಳುವುದಿಲ್ಲ ಎಂಬುದಾಗಿ ಅವರು ಹೇಳಿರುವರು.

ಸದ್ಯದಲ್ಲಿಯೇ ಶ್ರೀಮನ್ಮಹಾರಾಜರು ತಮ್ಮ ಆಳ್ವಿಕೆಗೆ ಒಳಪಟ್ಟಿರುವ ದಂಡಿನ ಪ್ರದೇಶಕ್ಕೆ ಈಗ ಕೊಡಲಿರುವ ಐತಿಹಾಸಿಕವಾದ ಭೇಟಿಯ ಸಮಯದಲ್ಲಿ ಮೈಸೂರು ಕಾಂಗ್ರೆಸ್ಸು ತನ್ನ ಧ್ಯೇಯ ಸಾಧನೆಗಾಗಿ ವಿಧಿಯಿಲ್ಲದೆ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚಿತವಾಗಿಯೇ ಶ್ರೀಮನ್ಮಹಾರಾಜರವರ ಸಿಂಹಾಸನದಿಂದ ಆ ಘೋಷಣೆಯೊಂದು ಹೊರಟು ಜವಾಬ್ದಾರೀ ಸರ್ಕಾರ ಸ್ಥಾಪನೆಗೆ ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಪ್ರಕಟಿಸುವ ಮಾಡಿದರೆ ಅದು ಎಷ್ಟೋ ಆನಂದದಾಯಕವಾಗಿರುವುದೆಂದು ಶ್ರೀ ನರಸಯ್ಯನವರು ಸೂಚಿಸಿರುತ್ತಾರೆ.

ಸಂತೋಷ ಕೂಟಗಳಿಗೆ ಗೌರ್ನರರ ತಿರಸ್ಕಾರ

ತಮ್ಮ ಪ್ರಾಂತದಲ್ಲಿ ಒದಗಿರುವ ಆಹಾರದ ಅಭಾವದಿಂದ ತಾವು ಯಾವ ಸಂತೋಷ ಕೂಟಗಳಲ್ಲೂ ಭಾಗ ವಹಿಸುವುದು ನ್ಯಾಯವಲ್ಲವೆಂದೂ, ಆದುದರಿಂದ ತಮಗೆ ಬರುವ ಯಾವ ಬಗೆಯ ಆಹ್ವಾನಗಳನ್ನೂ ತಾವು ಅಂಗೀಕರಿಸಲಾಗುವುದಿಲ್ಲವೆಂದೂ ಬೀಹಾರ್ ಗೌರ್ನರರಾದ ಶ್ರೀ ಜೈರಾಂದಾಸ್ ದೌಲತ್‌ರಾಂರವರು ತಿಳಿಸಿರುವರು.

ಹರಿಕಥೆ

ಏಕಾದಶೀ ಪ್ರಯುಕ್ತ ದೇವಿರಮ್ಮಣ್ಣಿ ಅಗ್ರಹಾರದ ಶ್ರೀರಾಮ ಸೇವಾ ಸಂಘದ ಆಶ್ರಯದಲ್ಲಿ ನಾಳೆ ರಾತ್ರಿ ೯ ಗಂಟೆಗೆ ವಿದ್ವಾನ್ ವೆಂಕಟಸುಬ್ಬ ದರ್ಪಣದವರಿಂದ ಕೃಷ್ಣ ಮೂರ್ತಿ ಎಂಬ ಹರಿಕಥೆಯು ನಡೆಯುವುದು.

ಬಂಗಾಲ್ ಸಿಲ್ಕ್ ಸೀರೆಗಳು

ಅತ್ಯುತ್ತಮವಾದ ಡಿಜೈನುಗಳಲ್ಲಿ

[...]ಗಳಲ್ಲಿ

ದೊರೆವ.

ಬಾಂಬೆ [...] ಕಂಪೆನಿ, ಮೈಸೂರು

ಲಕ್ಷ್ಮೀ ಟಾಕೀಸ್, ಮೈಸೂರು

ತಾ|| 22—8—47 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಚಾರ್ ಆಂಖೆ

ಭೂಮಿಕೆ :

ಲೀಲಾ ಚಿಟ್ನಿಸ್, ಜಯರಾಜ್.

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೨೭-೮-೪೭ [ಸಂಚಿಕೆ ೪೧

ಬೆಂಗಳೂರು ಪೌರಸಭೆಯಲ್ಲಿ ಸತ್ಯಾಗ್ರಹದ ಪ್ರಶ್ನೆ

ಪ್ರಜಾ ಸತ್ತಾತ್ಮಕ ಸರ್ಕಾರ ಅನಿವಾರ್ಯ

ಬಿರುಗಾಳಿಯನ್ನು ಕಾಳೆ ಗರಿಯಿಂದ ತಡೆಯಲು ಸಾಧ್ಯವೇ ?

ಮೈಸೂರು ೨೭

ರಾಜಧಾನಿಯ ವಕೀಲರಾದ ಶ್ರೀ ಟಿ. ಸ್. ರಾಜಗೋಪಾಲಯ್ಯಂಗಾರ್ಯರು ಈ ಹೇಳಿಕೆಯನ್ನಿತ್ತಿದ್ದಾರೆ:—

ಪ್ರಜಾಸತ್ತಾತ್ಮಕ ಧ್ಯೇಯವು ಇಡೀ ಸ್ವ ...ಜನನ್ನೇ ಆವರಿಸಿರುವಾಗ ಹಾಗೂ ಭಾ... ವು ಸ್ವತಂತ್ರವಾಗಿ ಪ್ರಜಾ ಸರ್ಕಾರವನ್ನು ...ವು ಗೊಳಿಸುತ್ತಿರುವಾಗ ದೇಶೀಯ ಸಂ... ...ನಗಳಲ್ಲಿ ಅದನ್ನು ತಡೆಗಟ್ಟಲು ಸಾಧ್ಯ ? ಬಿರುಗಾಳಿಯನ್ನು ಕಾಳೆಗರಿಯಿಂದ ...ಯಲು ಸಾಧ್ಯವೇ ? ಬ್ರಿಟಿಷ್ ಬಾಧ ...ಯೇ ಸ್ವಾತಂತ್ರ್ಯರಾಗವನ್ನು ಎದು ...ರದೆ ಹಿನ್ನಟ್ಟಿತೆಂದ ಮೇಲೆ ದೇಶೀ ಸಂಸ್ಥಾನಗಳ ಪಾಡೇನು ? ಕ್ಷಾತ್ರಬಲ ...ನಕ್ತಿಗೂ ಆತ್ಮಬಲವನ್ನು ಎದುರಿಸಲಾ... ಇದನ್ನು ನಮ್ಮ ಸರ್ಕಾರವು ತಿಳಿದ ...ವೇ ?

೧. ಹಾಗೆ ತಿಳಿದಿದ್ದರೆ ಕಂಟಾಕ್ತ ಕುಂ... ...ತ್ತ ನಡೆಯುವ ಬದಲು ಶೀಘ್ರವೇ ಏಕೆ ... ಸತ್ತಾತ್ಮಕ ಸರ್ಕಾರ ಘೋಷಣೆಗೆ ನೆ... ...ಗ ಕೀರ್ತಿ ಪಡೆಯಬಾರದು ?

೨. ಪ್ರಜಾ ಸತ್ತಾತ್ಮಕ ಸರ್ಕಾರ ರೂಪ... ...ತಾಳಬೇಕೆಂಬುದನ್ನು ಪ್ರಜೆಗಳ ಪ್ರ... ...ಗಳು ಕುಳಿತು ನಿರ್ಧರಿಸಬೇಕು.

೩. ಈ ಮಧ್ಯೆ ಪ್ರಜಾಪ್ರತಿನಿಧಿಗಳಿಂದ ...ವ ತಾತ್ಕಾಲಿಕ ಸರ್ಕಾರ ಏರ್ಪಡಬೇಕು

... ಹಾಗೂ ರಾಜ ಬಂಧಿಗಳ ಬಿಡುಗಡೆ ...ಕರ, ಸರ್ಕಾರಿ ನೌಕರರ ಸಂಬಳ ಸಾ... ...ತೀಳ್ರೆ ಸುವ್ಯವಸ್ಥಿತ ತೀರ್ಮಾನ, ...ಗೊಳಗಾಗಿರುವ ವಿದ್ಯಾರ್ಥಿಗಳನ್ನು ...ಸುವುದು-ಇವು ಅತ್ಯಗತ್ಯವಾಗಿ ಕೂ... ಆಗಬೇಕಾದ ಕಾರ್ಯಗಳು.

...ಶದಲ್ಲೆದ್ದಿರುವ ಆಂದೋಲನಕ್ಕೆ ಕಾರ... ...ವು- ಇವುಗಳನ್ನು ಪರಿಹರಿಸದೆ ತ... ...ವ ಶಕ್ತಿ ಪ್ರಹಾರದಿಂದ ದೇಶದಲ್ಲಿ ...ವ ನವ ಚೈತನ್ಯವನ್ನೂ,ಹುರುಪನ್ನೂ ...ಸುವುದಾಗಿ ಸರ್ಕಾರವು ತಿಳಿದಿದ್ದರೂ ...ಂತ ತಪ್ಪು ಭಾವನೆ ಬೇರೆ ಇಲ್ಲ. ...ಮನೆಯ ಮುಂದೆ ಸತ್ಯಾಗ್ರಹ ಹೂ... ...ವು ವೈಯ್ಯಕ್ತಿಕ ಸ್ವರೂಪ ತಾಳುವ್ಹ ...? ಮತ್ತು ಅಹಿಂಸಾತ್ಮಕ ಜೋ... ...ವ ದೂರವಾಗುವುದಿಲ್ಲವೇ ? ಎಂ... ...ಸ್ಸು ಕಾಂಗ್ರೆಸ್ ಮಿತ್ರರೂ ಯೋಚಿ... ...ನನ್ನು ಸತ್ಯಾಗ್ರಹ ಕಾರ್ಯಕ್ರಮದಿಂದ ...ಮು ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಹಯಗ್ರೀವ ಜಯಂತಿ

...ನ್ನ ಹಾರಾಜರವರ ಸಂಸ್ಕೃತ ಪಾಠ... ...ಮ ಶ್ರಿ ಹಯವದನ ಸೇವಾ ಸಂಘ... ...ಳದ್ದು ಹತ್ತೊಂಬತ್ತನೆಯ ಶ್ರಿ ಹಯ... ...ಜಯಂತೀ ಮಹೋತ್ಸವವು ಜರು... ...ದೆ. ಅದರ ಸಂಬಂಧವಾಗಿ ನಾಳೆ ... ಗಂಟೆಗೆ ಪ್ರಾರ್ಥನೆ,ಕಾವ್ಯವಾಚನ, ...ಕಗಳೂ, ನಾಳಿದ್ದು ... ಗಂಟೆಗೆ ...ಸ್ಕೃ ಸಂಘದ ವರದಿ ಬಹುಮಾನ ...ಗ, ಸಂಗೀತ, ಮಂಗಳಾರತಿ ಮು... ...ಾದ ವಿವಿಯೋಗಗಳೂ ನಡೆವುವು

...ನ್ನನಿಗೂ ಸ್ವಾಗತವಿದೆ

...ಕದ ೧। ಕೋಟಿ ರೂ. ...ವೆನ್ಶಗಳು ಭಾರತಕ್ಕೆ

...ವರ್ಷ ...ರತಕ್ಕೆ ...ತಿ...ಕ...ಂ

ಪೌರಸಭೆಯಲ್ಲಿ ಸತ್ಯಾಗ್ರಹಕ್ಕೆ ಬೆಂಬಲದ ನಿರ್ಣಯ

ಸ್ವಂ.ಸು ಫೋ] [ಬೆಂಗಳೂರು ೨೭

ಮೈಸೂರು ಕಾಂಗ್ರೆಸ್ ಹೂಡಿರುವ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲವನ್ನು ಕೊಡುವುದಲ್ಲದೆ ಸಂಸ್ಥಾನದ ಪ್ರತಿಯೊಬ್ಬ ಪ್ರಜೆಯೂ ಇದಕ್ಕೆ ಬೆಂಬಲ ನೀಡಬೇಕೆಂದು ಪ್ರಾರ್ಥಿಸುವ ನಿರ್ಣಯವು ನಿನ್ನೆ ಬೆಂಗಳೂರು ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಚರ್ಚೆಗೆ ಬಂದಿತ್ತು. ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಜಿ. ವಿ. ರಾಮಾಚಾರ್ಯರು ತಿದ್ದುಪಡಿಯೊಂದನ್ನು ಸೂಚಿಸಿ ಅರಮನೆ ಮುಂದಿನ ಸತ್ಯಾಗ್ರಹ ವಿನಾ ಉಳಿದ ಕಾರ್ಯಕ್ರಮಗಳಿಗೆ ಬೆಂಬಲ ಕೊಡಬೇಕೆಂದು ಸೂಚಿಸಿದರು. ಈ ತಿದ್ದುಪಡಿಯು ಬಹುಮತದಿಂದ ಅಂಗೀಕರಿಸಲ್ಪಟ್ಟಿತು.

ಪ್ರಜಾಪ್ರಭುತ್ವ ಸರ್ಕಾರವನ್ನು ಕೂಡಲೇ ಸ್ಥಾಪಿಸುವಂತೆ ಸರ್ಕಾರವನ್ನು ಪ್ರಾರ್ಥಿಸಬೇಕೆಂದು ಶ್ರೀ ಹೆಚ್. ಎಸ್. ನಾರಾಯಣರಾಯರು ತಂದಿದ್ದ ಇನ್ನೊಂದು ತಿದ್ದುಪಡಿಯು ಬಿದ್ದುಹೋಯಿತು. ಅಂಗೀಕೃತವಾದ ತಿದ್ದುಪಡಿಯೊಡನೆ ಮೂಲ ನಿರ್ಣಯವನ್ನು ಓಟಿಗೆ ಹಾಕಿದಾಗ ೯-೯ ಓಟುಗಳು ಬಂದುವು. ಅಧ್ಯಕ್ಷರಾದ ಮಿ॥ ಖಲೀಲರು ಅದಕ್ಕೆ ವಿರೋಧವಾಗಿ ಓಟು ಕೊಟ್ಟುದರಿಂದ ನಿರ್ಣಯವು ಬಿದ್ದುಹೋಯಿತು.

ಗುಡಿಸುವವರ ಮುಷ್ಕರ

ಸರ್ಕಾರಿ ನೌಕರರಿಗೆ ಕೊಟ್ಟಿರುವ ೬೦ ಮ ತಿಂಗಳ ಅಡ್ವಾನ್ಸ್ ಸಂಬಳವನ್ನು ತಮಗೂ ಕೊಟ್ಟಿಲ್ಲದಿರುವುದರಿಂದ ಇಲ್ಲಿನ ಸುಮಾರು ೧೫೦೦ ಜನ ಗುಡಿಸುವವರು ಈ ದಿನ ಮುಷ್ಕರ ಹೂಡಿರುತ್ತಾರೆ.

ಮೇಲ್ ರೈಲು ಕಂಬಿ ತಪ್ಪಿತು

ಮೈಸೂರು ೨೭

ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಮೇಲ್ ಟ್ರೈನು ಹನಕೆರೆಯ ಬಳಿ ಈ ದಿನ ಬೆಳಗ್ಗೆ ೧೧ ಗಂಟೆ ಸಮಯದಲ್ಲಿ ಎಂಜಿನ್ನು ಕಂಬಿ ತಪ್ಪಿ ಹೊರಳಿತೆಂದು ತಿಳಿದುಬಂದಿದೆ ಅಪಾಯಗಳೇನೂ ಆಗಿಲ್ಲವೆಂದು ಹೇಳಲಾಗಿದೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಹೋಗಿರುವರು

...ದ ಸುಮಾರು ೧ ಕೋಟಿ ೨೭ ಲಕ್ಷ ರೂ ಬೆಲೆಬಾಳುವ ಫೌಂಟನ್ ಪೆನ್ನುಗಳನ್ನು ಆಮದು ಮಾಡಿಕೊಂಡಿದೆ ಸುಮಾರು ೧ ಕೋಟಿ ೬೦ ಲಕ್ಷ ರೂ ಬಾಳುವಷ್ಟು ಗೇರುಬೀಜವನ್ನು ಭಾರತವು ಅಮೇರಿಕಕ್ಕೆ ರಫ್ತು ಮಾಡಿದೆ.

ದಿವಂಗತ ತವನಪ್ಪ ಭೂಪಾಲರವರು

ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶಾಂತರಾಜ್‌ರವರು ದಿವಂಗತ ತವನಪ್ಪ ಭೂಪಾಲ್‌ರವರನ್ನು ಕುರಿತು ಈ ರೀತಿ ಗುಣಗಾನ ಮಾಡಿದ್ದಾರೆ :—

ಶ್ರೀಮಾನ್ ತವನಪ್ಪ ಭೂಪಾಲ್‌ರವರ ಅಕಾಲ ಮರಣವು ಇಡೀ ವಿದ್ಯಾರ್ಥಿ ವೃಂದಕ್ಕೇ ಅಪಾರವಾದ ನಷ್ಟವನ್ನುಂಟುಮಾಡಿದೆ. ಅವರು ಶ್ರೀಮಂತ ವಂಶದಲ್ಲಿ ಹುಟ್ಟಿದವರೂ ಕೂಡ ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿ ವಿದ್ಯಾರ್ಥಿ ವೃಂದದ ಏಳಿಗೆಗೆ ಹಗಲಿರುಳೂ ದುಡಿದಿದ್ದರು. ಅವರ ಅಪಾರವಾದ ದೇಶಪ್ರೇಮವು ವಿದ್ಯಾರ್ಥಿಗಳಿಗೆ ಆದರ್ಶಪ್ರಾಯವಾಗಿದೆ. ಅವರಲ್ಲಿದ್ದ ತಾಳ್ಮೆ, ಸಹನಾಶಕ್ತಿ ತೆರೆದ ಹೃದಯ ಇವೆಲ್ಲವೂ ಜೊತೆಗೆ ಹಸನ್ಮುಖವು ಎಲ್ಲರ ಪ್ರೀತಿವಿಶ್ವಾಸಗಳಿಗೂ ಅವರನ್ನು ಪಾತ್ರರನ್ನಾಗಿ ಮಾಡಿದ್ದುವು. ಯಾವ ಕೆಲಸವನ್ನಾಗಲಿ ಶ್ರದ್ಧೆಯಿಂದ ಮಾಡಿ ಜಯಗಳಿಸುವವರೆಗೂ ಅವರು ಹಿಂತೆಗೆಯುತ್ತಿರಲಿಲ್ಲ ಒಂಟಿಕೊಪ್ಪಲಿನಲ್ಲಿರುವ ತಿಲಕ ಸಂಘವನ್ನು ಸ್ಥಾಪಿಸಿ ಅದನ್ನು ಜಾಜ್ವಲ್ಯಮಾನವಾಗಿ ಬೆಳಗುವಂತೆ ಸದಾ ದುಡಿದರು. ಜೈಪ್ರಕಾಶ್ ನಾರಾಯಣ್ ನಿಧಿಯ ಕೋಶಾಧ್ಯಕ್ಷರಾಗಿ ಸಹಸ್ರಾರು ರೂಪಾಯಿಗಳನ್ನು ಚಂದಾ ಎತ್ತಿ ಮೈಸೂರಿನ ಕೀರ್ತಿಯನ್ನು ಎತ್ತಿ ಹಿಡಿದರು. ವಿದ್ಯಾರ್ಥಿ ಕಾಂಗ್ರೆಸ್ಸಿಗಂತೂ ತಮ್ಮ ಸರ್ವಸ್ವವನ್ನೂ ಅರ್ಪಿಸಿ ಅದಕ್ಕಾಗಿ ಬಿಡುವಿಲ್ಲದೆ ಹಗಲಿರುಳೂ ದುಡಿದು ಆ ಸಂಸ್ಥೆಯ ಕೀರ್ತಿಯ ಬೆಳಗಿಸಿದರು. ಇಂತಹ ತರುಣ ದೇಶಭಕ್ತರನ್ನು ಕಳೆದುಕೊಂಡುದುದರಿಂದ ಇಡೀ ವಿದ್ಯಾರ್ಥಿವೃಂದಕ್ಕೇ ಅಪಾರವಾದ ನಷ್ಟವುಂಟಾಗಿದೆ. ಆದರೆ ಅವರು ನಡೆದ ದಾರಿ, ಮಾಡಿದ ಮಹಾಕಾರ್ಯಗಳು ವಿದ್ಯಾರ್ಥಿಗಳೆಲ್ಲರಿಗೂ ಮಾರ್ಗದರ್ಶಕಗಳಾಗಿವೆ.

ನಾಗಪುರದಲ್ಲಿ ಕಳ್ಳತನ ಹೆಚ್ಚುತ್ತಿದೆ

ಗ್ಲೋಬ್] [ನಾಗಪುರ ೨೪

ಸ್ವಾತಂತ್ರ್ಯ ದಿನೋತ್ಸವದ ಸಂಬಂಧವಾಗಿ ನಾಗಪುರದಲ್ಲಿ ಬೀದಿಗಳನ್ನು ಸಿಂಗರಿಸಿ ಮಾಡಿದ ಮೇಲೆ ಅಲ್ಲಿ ಕಳ್ಳತನಗಳು ಬಹಳವಾಗಿ ನಡೆಯುತ್ತಿವೆ ಅಲ್ಲಿನ ದಂಡಿನ ಪ್ರದೇಶಗಳಲ್ಲಿ ಕಳ್ಳತನಗಳು ವಿಶೇಷವಾಗಿರುವುದರಿಂದ ಅಲ್ಲಿನ ನಿವಾಸಿಗಳು ಪೊಲೀಸರಿಗೆ ಉಗ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳುತ್ತಿದ್ದಾರೆ.

ಸಂತಾಪ ಸೂಚಕ ಸಭೆ

ಮೈಸೂರು ೨೭

ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ತವನಪ್ಪ ಭೂಪಾಲರು ನಿನ್ನೆ ಸ್ವರ್ಗಸ್ಥರಾದ ಬಗ್ಗೆ ಸಂತಾಪ ಸೂಚಿಸಲು ಈ ದಿನ ಬೆಳಗ್ಗೆ ಕಾಲೇಜ್ ಮೈದಾನದಲ್ಲಿ ವಿದ್ಯಾರ್ಥಿಗಳು ಸಭೆ ಸೇರಿದ್ದರು. ಶ್ರೀಗಳಾದ ಶಾಂತರಾಜ್, ಜೆ ಎಸ್ ಸುಬ್ರಹ್ಮಣ್ಯಂ, ಬಿ. ಶ್ರೀ ಕಂಠಪ್ಪ, ಪ್ರಾಣೇಶರಾವ್ ಮೊದಲಾದವರು ಮಾತನಾಡಿ ದಿವಂಗತರು ವಿದ್ಯಾರ್ಥಿ ವೃಂದಕ್ಕೂ, ನಾಡಿಗೂ ಸಲ್ಲಿಸುತ್ತಿದ್ದ ಸೇವೆಯನ್ನು ವಿವರಿಸಿ ಅವರ ಮರಣದಿಂದ ವಿದ್ಯಾರ್ಥಿ ವೃಂದಕ್ಕೆ ಉಂಟಾಗಿರುವ ಅಪಾರ ನಷ್ಟವನ್ನು ವ್ಯಕ್ತಗೊಳಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಶ್ರೀ ಭೂಪಾಲರ ಮರಣದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಲು ಈ ದಿನ ರಾಜಧಾನಿಯ ಇಂಟರ್ ಮೀಡಿಯಟ್ ಕಾಲೇಜಿಗೆ ರಜಾ ಕೊಡಲಾಗಿತ್ತು.

ನಜರ್‌ಬಾದ್ ಮೊಹಲ್ಲ ಕಾಂಗ್ರೆಸ್ ಸಮಿತಿಯ ಸಭೆಯು ನಿನ್ನೆ ರಾತ್ರಿ ೮ಟ್ಟಿಗೆ ಗರಡಿನ ಯುವಕ ಸಂಘದಲ್ಲಿ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ತವನಪ್ಪ ಭೂಪಾಲರು ಮರಣ ಹೊಂದಿದುದಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಿತು. ಮೈಸೂರು ಕಾಂಗ್ರೆಸ್ಸು ಸೆಪ್ಟೆಂಬರ್ ೧ ನೇ ತಾ॥ ಹೂಡಲಿರುವ ಸತ್ಯಾಗ್ರಹಕ್ಕೆ ಎಲ್ಲ ಬಗೆಯ ಬೆಂಬಲವನ್ನೂ ನೀಡಬೇಕೆಂದೂ, ಆ ದಿನ ವರ್ತಕರುಗಳು ಅಂಗಡಿಗಳನ್ನು ತೆರೆಯದೆ ಹರತಾಳವನ್ನಾಚರಿಸುವಂತೆ ಪ್ರಾರ್ಥಿಸಬೇಕೆಂದೂ, ವಿದ್ಯಾರ್ಥಿಗಳು ಹೂಡಲಿರುವ ಸತ್ಯಾಗ್ರಹಕ್ಕೆ ಎಲ್ಲ ಬಗೆಯ ಸಹಕಾರವನ್ನೂ ನೀಡಬೇಕೆಂದೂ ಸಹ ನಿರ್ಣಯಿಸಲಾಯಿತು ಸತ್ಯಾಗ್ರಹದಲ್ಲಿ ಭಾಗ ವಹಿಸಲಿಚ್ಛಿಸುವವರು ನಜರ್‌ಬಾದ್ ಮೊಹಲ್ಲಿಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಿಗೆ ೨೮ ನೇ ತಾ॥ ನೊಳಗಾಗಿ ಹೆಸರುಗಳನ್ನು ಕೊಡಬೇಕೆಂದು ಸಮಿತಿಯು ಪ್ರಾರ್ಥಿಸುತ್ತದೆ

ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ

ನಾಳೆ ಸಂಜೆ ೫-೩೦ ಗಂಟೆಗೆ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಲಾಗುವುದು. ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೆ. ಸಂಪದ್ಗಿರಿರಾವ್ ಮತ್ತು ಶ್ರೀ ಡಿ. ಎ. ಸಿದ್ದಯ್ಯನವರು ಸ್ವಾತಂತ್ರ್ಯೋತ್ಸವ ಎಂಬ ವಿಷಯವಾಗಿ ಭಾಷಣ ಮಾಡುವರು ಶ್ರೀ ಕೆ. ವಿ ಪುಟ್ಟಪ್ಪನವರು ಅಗ್ರಾಸನವನ್ನು ವಹಿಸುವರು.

— —

ಅಂತರ್ರಾಷ್ಟ್ರ ಸಮಿತಿಯ ನೇಮಕಕ್ಕೆ ಫ್ರಾನ್ಸಿನ ವಿರೋಧ

ಇಂಡೊನೇಷ್ಯದಲ್ಲಿ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವ ಒಪ್ಪಂದ ಪರಿಶೀಲನೆ ನಡೆಸಲು ಅಂತರ ರಾಷ್ಟ್ರ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಭದ್ರತಾ ಸಮಿತಿಯಲ್ಲಿ ರಷ್ಯ ಮಾಡಿದ್ದ ಸೂಚನೆಯು ಬಿದ್ದುಹೋಯಿತೆಂದು ವರದಿಯಾಗಿದೆ. ಫ್ರಾನ್ಸ್ ಮತ್ತು ಬೆಲ್ಜಿಯಂಗಳು ಅದನ್ನು ವಿರೋಧಿಸಿದವು. ಬ್ರಿಟನ್, ಚೀನಗಳು ತಟಸ್ಥವಾಗಿದ್ದುವು.

ಮೈಸೂರು ಕಾಂಗ್ರೆಸ್ಸಿಗೆ ವಿಜಯವು ಖಂಡಿತ

ದಿವಾನರ ಹೃದಯದಲ್ಲಿ ಪದವೀ ತ್ಯಾಗ ಮನೋಭಾವ ಮೂಡಬೇಕು

ಶ್ರೀಮಾನ್ ಡಿ. ವಿ. ಗುಂಡಪ್ಪನವರ ಅಭಿಪ್ರಾಯ

ಮೈಸೂರು ಸಂಸ್ಥಾನದ ರಾಜಕಾರಣ ಪಟುಗಳಲ್ಲಿ ಅಗ್ರಗಣ್ಯರಾಗಿರುವ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಪ್ರಕೃತ ರಾಜಕೀಯ ಪರಿಸ್ಥಿತಿಯ ವಿಚಾರವಾಗಿ ಕೊಟ್ಟಿರುವ ಹೇಳಿಕೆಯೊಂದರಲ್ಲಿ ಈ ರೀತಿ ತಿಳಿಸಿದ್ದಾರೆ.—

ಮೈಸೂರು ಸಂಸ್ಥಾನದ ರಾಜ್ಯ ವ್ಯವಸ್ಥೆಯನ್ನು ಪ್ರಸ್ತುತ ಸ್ಥಿತಿಗೆ ತಕ್ಕಂತೆ ಸುಧಾರಿಸತಕ್ಕದ್ದೆಂದು ರಾಜಾಜ್ಞೆ ಹೊರಟದ್ದು ಕಳೆದ ಜನವರಿ ೮ ನೆಯ ತಾರೀಖಿನ ದಿವಸ. ಅಲ್ಲಿಂದೀಚಿನ ಏಳೆಂಟು ತಿಂಗಳುಗಳಲ್ಲಿ ಇಂಡಿಯಾ ಎರಡು ಬೇರೆ ಬೇರೆ ಡೊಮಿನಿಯನ್ [ಅಧೀನ ಸ್ವ]ಗಳಾಗಿವೆ. ಎರಡು ದೊಡ್ಡ ದೊಡ್ಡ ಪ್ರಾಂತ್ಯಗಳು — ಬಂಗಾಳ ಮತ್ತು ಪಂಜಾಬ್‌—ಮತ್ತೆ ಎರಡೆರಡಾಗಿ ವಿಭಾಗವಾಗಿವೆ. ಎರಡು ಅಧಿಪತ್ಯಗಳ ಭೂ ಪ್ರದೇಶಗಳೂ, ಆಸ್ತಿ ಪಾಸ್ತಿಗಳೂ, ಸೈನ್ಯ ಸಾಮಗ್ರಿಗಳೂ ಹಂಚಿಕೆಯಾಗಿವೆ. ಹಾಗೆಯೇ ಪುನರ್ನಿರ್ಮಿತ ಪ್ರಾಂತಗಳ ವ್ಯವಹಾರಗಳೂ ಒಂದು ಕಟ್ಟುಪಾಡಿಗೆ ಬಂದಿವೆ. ಬ್ರಿಟಿಷ್ ಸಾಮ್ರಾಜ್ಯವು ತನಗಿದ್ದ ಸಂಬಂಧಗಳನ್ನೆಲ್ಲಾ ಬಿಡಿಸಿಕೊಂಡಿದೆ. ಪ್ರಜಾ ರಾಜ್ಯ ಇಂಡಿಯಾದಲ್ಲೂ, ಪಾಕಿಸ್ತಾನದಲ್ಲೂ ನೆಲೆಗೊಂಡಿದೆ. ಇಷ್ಟಕ್ಕೆಲ್ಲ ಸಾಕಾದ ಈ ಅವಕಾಶ ಮೈಸೂರಿನ ರಾಜಕೀಯ ಸುಧಾರಣೆಗೆ ಸಾಲದೆ ಹೋಗಿದೆ. ಇದರ ರಹಸ್ಯವೇನೆಂದು ವಿಚಾರಿಸುವವರಿಗೆ ಮೈಸೂರು ಕಾಂಗ್ರೆಸ್ಸಿನವರು ಈಗ ಮಾಡುತ್ತಿದ್ದಾರೆಂದು ಎಷ್ಟು ಮಾತ್ರವೂ ಅನ್ನಿಸಲಾರದು.

ಲಾರ್ಡ್ ಮೌಂಟ್ ಬ್ಯಾಟನ್ನರೂ, ಜಿನ್ನಾ ಸಾಹೇಬರೂ, ಪಂಡಿತ ನೆಹ್ರೂ ಅವರೂ ಬಿಡಿಸಿ ಸರಿಪಡಿಸಿರುವಂಥ ತೊಡಕುಗಳು ಮೈಸೂರಿನ ಪ್ರಶ್ನೆಯಲ್ಲಿ ಏನೂ ಇಲ್ಲ. ಅವರಲ್ಲಿ ಇದ್ದು ನಮ್ಮವರಲ್ಲಿ ಇಲ್ಲದೇ ಇರುವುದು ಒಂದು ಅಂಶ ಮಾತ್ರ—ಅದು ಸುಧಾರಣೆಯ ಮನೋಭಾವ. ಸುಧಾರಣೆ ಎಷ್ಟು ಅವಶ್ಯವೆಂಬುದನ್ನು ಸರ್ಕಾರಕ್ಕೆ ಮನಗಾಣಿಸಲು ಹದಿನೈದು ವರ್ಷಗಳಿಂದ ಪ್ರಜಾ ಪ್ರಯತ್ನಗಳು ನಡೆದಿವೆ. ಪ್ರಜಾಭಿಮುಖವೇನೆಂಬುದರ ವಿಷಯದಲ್ಲಿ ಯಾರಿಗೂ ಎಷ್ಟು ಮಾತ್ರವೂ ಸಂದೇಹಕ್ಕೆ ಕಾರಣವಿಲ್ಲ. ಸಂದೇಹವೆಲ್ಲಾದರೂ ಇದ್ದರೆ ಅದು ಶ್ರೀಮನ್ಮಹಾರಾಜರವರ ಮಂತ್ರಿಲೋಚಕರ ಮನಸ್ಸಿನಲ್ಲಿ ಮಾತ್ರ. ಆ ಸಂದೇಹವನ್ನು ಅವರು ಬಗೆಹರಿಸಿಕೊಳ್ಳಲು ಈ ಎಂಟು ತಿಂಗಳುಗಳು ಸಾಲದೇ ಹೋಗಿರುವ ಪಕ್ಷದಲ್ಲಿ ಇನ್ನು ಎಂಟು ವರ್ಷಗಳನ್ನು ಅವರಿಗೆ ಕೊಟ್ಟರೂ ಅದು ಅವರ ನಿರ್ಧಾರಕ್ಕೆ ಸಾಕಾದೀತೆಂಬ ಭರವಸೆ ಏನೂ ಇಲ್ಲ. ಇಂಥ ಸಂದರ್ಭದಲ್ಲಿ ಆ ಸಂದೇಹಗ್ರಸ್ತರಾದ ಮಂತ್ರಿಲೋಚಕರನ್ನು ನಮ್ಮ ಪ್ರಜಾ ಸೇವಕರು ಇನ್ನೂ ಮುಂದಕ್ಕೂ ನಂಬಿಕೊಂಡಿರದೆ, ಶ್ರೀಮನ್ಮಹಾರಾಜರ ಸಂಸ್ಥಾನದ ಜವಾಬ್ದಾರಿಯುತ ಸರ್ಕಾರ ಪ್ರಸ್ತುತ ಸಮಸ್ಯೆಗಳನ್ನು ಬಗೆಹರಿಸಲು ಏನು ಮಾಡಬೇಕೆಂಬುದನ್ನು ತಿಳಿಸುವಂತೆ ಮಾಡುವುದು ಇಲ್ಲವೇ ಮು

ಯಾವ ದೃಷ್ಟಿಯಿಂದ ದೇಶದ ಸ್ಥಿತಿಯನ್ನು ಪರೀಕ್ಷಿಸಿ ನೋಡಿದರೂ ಈಗ ನಮಗೆ ಮೊದಲು ಬೇಕಾಗಿರುವುದು ಜವಾಬ್ದಾರೀ ಸರ್ಕಾರ. ನಮಗೆ ಹಿಂದಿನಿಂದ ಬಂದಿರುವ ಅಧಿಕಾರ ಯಂತ್ರ ಈಗ ಅದು ತಪ್ಪಿದೆ. ಅದರ ಕೀಲುಗಳು ಸಡಿಲ ಬಿದ್ದು ಅದರ ಚಕ್ರಗಳು ತುಕ್ಕು ಹಿಡಿದಿವೆ. ಕಳೆದ ಏಳೆಂಟು ವರ್ಷಗಳ ಅನುಭವದಲ್ಲಿ ನಮ್ಮ ಮನಸ್ಸಿಗೆ ಬಂದಿರುವ ಕಷ್ಟಗಳು ಎಂದೂ ಏಳೆಂಟು ವರ್ಷಗಳಲ್ಲಿ ಆಗಿರುವಂತೆ ತೋರಿದ್ದಿಲ್ಲ. ಈಚೆಗೆ ಪ್ರಜಾ ಪ್ರತಿನಿಧಿ ಸಭೆಯ ಪ್ರಶ್ನೋತ್ತರಗಳ ಮೂಲಕವೂ, ಕೋರ್ಟು ಹೇಳಿಕೆಗಳ ಮೂಲಕವೂ ಹೊರಬಿದ್ದಿರುವ ಕೆಲವು ಸಂಗತಿಗಳ ಒಳ ಅರ್ಥವನ್ನು ತೋರಿಸಿದರೆ ನಮ್ಮ ಸರ್ಕಾರದಲ್ಲಿ ಬಹಿರಂಗ ಶೋಧನೆಗೆ ಬರಬೇಕಾದ ಭಾಗ ಬಹಳವಾಗಿದೆ-ಎಂದು ಎಂಥವರಿಗೂ ತೋರುತ್ತದೆ.

ನಮ್ಮ ಸರ್ಕಾರವು ಪ್ರಜೆಗೆ ತೃಪ್ತಿಕರವಾಗಬೇಕಾದರೆ, ಮೊದಲು ಅದರ ಸ್ವಭಾವ ಬದಲಾವಣೆ ಹೊಂದಬೇಕು. ಮೊದಲು ಅದರ ಅಂಗಾಂಗಗಳು ಪರಿಶುದ್ಧವಾಗಬೇಕು. ಮೊದಲು ಅದರ ಕ್ರಮ ಈ ಕಾಲಕ್ಕೆ ತಕ್ಕದ್ದಾಗಬೇಕು. ಮೊದಲು ಅದು ಸಾರ್ವಜನಿಕರ ಕಣ್ಣೆದುರಿಗೆ ನಿಂತು ಕೆಲಸ ಮಾಡುವಂಥಾದ್ದಾಗಬೇಕು. ನಮ್ಮ ಸಾರ್ವಜನಿಕ ಜೀವನದಲ್ಲಿ ಜಾತಿ ಕೋಮುಗಳ ವೈಷಮ್ಯ ನಿರ್ಮೂಲವಾಗಬೇಕಾದರೆ, ಮತ್ತು ನಮ್ಮ ಅಧಿಕಾರಿಗಳ ಆಡಳಿತದಲ್ಲಿ ಲಂಚ ರುಷುವತ್ತುಗಳೂ, ಪಕ್ಷಪಾತಗಳೂ ಅಳಿದು ಹೋಗಬೇಕಾದರೆ, ಮತ್ತು ನಮ್ಮ ಸರ್ಕಾರವು ದಕ್ಷತೆಯಿಂದ ಕೂಡಿ ಸಮಸ್ತ ಭಾರತದ ಪ್ರಗತಿ ಕಾರ್ಯಗಳಲ್ಲಿ ತಕ್ಕಂತೆ ಭಾಗವಹಿಸಲಿಕ್ಕಾಗಬೇಕಾದರೆ, ನಾವು ಈಗ ಮೊದಲು ಸಂಪಾದಿಸಬೇಕಾದದ್ದು ಜವಾಬ್ದಾರೀ ಸರ್ಕಾರವನ್ನು.

ಈ ಜವಾಬ್ದಾರೀ ಸರಕಾರವೆಂಬ ಪದಕ್ಕೆ ಅತಿಯಾಗಿ ಅರ್ಥ ಕಲ್ಪನೆ ಮಾಡಿ, ಅದು ಯಾವುದೋ ಮಹಾಭೂತವೆಂಬಂತೆ ಚಿತ್ರಿಸುತ್ತ ಜನಕ್ಕೆ ಭಯ ಹುಟ್ಟಿಸುವ ಪ್ರಯತ್ನ ಬಹುಕಾಲ ಸಾಗಲಾರದು. ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆ ತಪ್ಪದ ಕೆಲಸವೇನೂ ಅಲ್ಲ. ಗಟ್ಟಿಗ ನೆಯ ಇಸವಿಯಿಂದ, ಎಂದರೆ ಕಳೆದ ೬೬ ವರ್ಷಗಳಲ್ಲಿ ಅದಕ್ಕೆ ಬೇಕಾದ ಸಿದ್ಧತೆ ನಡೆದುಕೊಂಡು ಬಂದಿದೆ. ತಕ್ಕಷ್ಟು ಮಂದಿ ರಾಜ್ಯಕಾರ್ಯ ಸಮರ್ಥರು ಸಂಸ್ಥಾನದ ಪ್ರಜಾ ವರ್ಗದಲ್ಲಿ ಈಗ ಸಿದ್ಧರಾಗಿದ್ದಾರೆ.

ಶ್ರೀಮನ್ಮಹಾರಾಜರವರಿಗೆ ಈಗಿನ ದಿವಾನರು ಮಾಡಬೇಕಾಗಿರುವ ಸೇವೆ ಇಷ್ಟೇ; ಏನೆಂದರೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹುಸಂಖ್ಯೆಯ ರಾಜಕೀಯ ಪಕ್ಷ ಯಾವುದಿದೆಯೋ ಆ ಪಕ್ಷದ ನಾಯಕನ ಹೆಸರನ್ನು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರು ಶ್ರೀಮನ್ಮಹಾರಾಜರವರಲ್ಲಿ ಅರಿಕೆ ಮಾಡಿ, ಇನ್ನು ಮುಂದಿನ ಮಂತ್ರಿ ಸಂಪುಟವನ್ನು (ಕ್ಯಾಬಿನೆಟ್) ಆ ಪ್ರಜಾನಾಯಕನೇ ರಚಿಸಿಕೊಳ್ಳುವಂತೆ ಅಪ್ಪಣೆಯಾಗತಕ್ಕದ್ದೆಂದು ಬಿನ್ನಯಿಸಬೇಕು. ಶ್ರೀಮನ್ಮಹಾರಾಜರವರು ತಮ್ಮ ಮುಖ್ಯಮಂತ್ರಿಯನ್ನು ಎಲ್ಲಿಂದಲೋ, ಯಾರ ಸಲಹೆಯಿಂದಲೋ, ತಂದುಕೊಳ್ಳುವುದಕ್ಕೆ ಬದಲಾಗಿ, ತಮ್ಮ ಸ್ವಂತ ಪ್ರಜಾಪ್ರತಿನಿಧಿಗಳ ಅಧಿಕ ಸಂಖ್ಯಾ ಪಕ್ಷದ ಅಭಿಪ್ರಾಯದಂತೆಯೇ ನೇಮಿಸಿಕೊಳ್ಳಬೇಕಾದದ್ದು — ಇದಿಷ್ಟೇ ಜವಾಬ್ದಾರೀ ಸರ್ಕಾರದ ಮೂಲ ತತ್ವ.

ಜವಾಬ್ದಾರೀ ಸರ್ಕಾರದ ಪದ್ಧತಿಯಲ್ಲಿ ಶ್ರೀಮನ್ಮಹಾರಾಜರ ಅಧಿಕಾರಕ್ಕೆ ಭಂಗ ತರತಕ್ಕ ಸಂಗತಿಯಾಗಲೀ ಅಥವಾ ಸಂಸ್ಥಾನದ ಕ್ಷೇಮಕ್ಕೆ ಅಪಾಯವುಂಟುಮಾಡುವ ಸಂಗತಿಯಾಗಲೀ ಯಾವುದೂ ಎಳ್ಳಷ್ಟೂ ಇರುವುದಿಲ್ಲ. ಹಿಂದುಳಿದಿದ್ದ ಇಂದೂರು ಮೊದಲಾದ ಸಣ್ಣ ಸಣ್ಣ ಸಂಸ್ಥಾನಗಳು ಕೂಡ ಈಗ ಅದೇ ದಾರಿಯಲ್ಲಿ ನಡೆಯಲು ನಿಶ್ಚಯ ಮಾಡಿವೆ.

ನಮ್ಮ ಸಂಸ್ಥಾನದಲ್ಲಿ ನಿಶ್ಚಯ ಮಾಡಲಾಗದೇ ಇರುವವರು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರೊಬ್ಬರೇ ಎಂದು ತೋರುತ್ತದೆ. ಅವರ ಹೃದಯದಲ್ಲಿ ಪದವೀ ತ್ಯಾಗ ಭಾವ ಉತ್ಪನ್ನವಾದರೆ ಆಗ ಮೈಸೂರು ಕಾಂಗ್ರೆಸ್ಸೂ, ಪ್ರಗತಿ ಧ್ಯೇಯವುಳ್ಳ ಮಹಾಜನರೂ ಹೆಚ್ಚು ಶ್ರಮಪಡುವುದು ಅನಾವಶ್ಯಕವಾದೀತು. ಆದರೆ ದಿವಾನರಲ್ಲಿ ತ್ಯಾಗೋದಯವಾಗುವ ವೇಳೆಗಾಗಿ ಸಂಸ್ಥಾನವನ್ನು ಕಾದಿರಿಸಬಹುದೇ?

ದೇಶದ ಯೋಗಕ್ಷೇಮಕ್ಕೆ ತಮ್ಮ ... ನಲ್ಲಿ ಅಗ್ರಸ್ಥಾನವನ್ನು ಕೊಡುವ ... ಜನರು ಯಾರೊಬ್ಬರ ಪ್ರಸಾದಕ್ಕಾಗಿ ಕಾದುಕೊಂಡು ಕುಳಿತಿರುವುದು ಸಾಧ...

ಮೈಸೂರು ಕಾಂಗ್ರೆಸ್ಸು ಈಗೇನು ... ಡುತ್ತಿಲ್ಲ. ಎಷ್ಟು ಕಡಮಾಡ... ಯುತ್ತವೋ ಅದಕ್ಕಿಂತ ಹೆಚ್ಚು ತ... ಡಿಯೇ ಅದು ಈಗ ತನ್ನ ಹೆಜ್ಜೆ... ಮುಂದಿಡುತ್ತಿದೆಯೆಂದು ದೇಶದಲ್ಲಿ... ಮಂದಿ ತಿಳಿದುಕೊಂಡಿದ್ದಾರೆ. ಅದ... ಜಯವಾಗುವುದರಲ್ಲಿ ಸಂದೇಹವಿಲ್ಲ. ವಿಜಯವು ಯಾರಿಗೂ ಬಾಧೆ,ಆಸ... ಲ್ಲದಂತೆ ಬರುವ ಹಾಗೆ ಮಾಡುವುದ... ಮನ್ಮಹಾರಾಜರವರ ಮಂತ್ರಾಲೋ... ಗೆ ಸಾಧ್ಯವಿದೆ. ಆ ಕರ್ತವ್ಯವನ್ನು ಸಕಾಲದಲ್ಲಿ ಕಂಡುಕೊಂಡರೆ ಸಂಸ... ಶುಭವಾದೀತು; ಮತ್ತು ಶ್ರೀಮ... ರಾಜರವರಿಗೆ ಯಶಸ್ಕರವಾದೀತು.

ಸಾರ್ವಜನಿಕ ವಿದ್ಯಾರ್ಥಿ ನಿಲಯ

ಜಾತಿ, ಮತಗಳ ಪಕ್ಷಪಾತವಿಲ್ಲ... ಕೋಮಿನ ವಿದ್ಯಾರ್ಥಿಗಳಿಗೂ ಊಟ... ಸತಿಗಳನ್ನೊದಗಿಸುವ ಸಲುವಾಗಿ ... ನಿಯಲ್ಲಿ ಮೇಲ್ಕಂಡ ವಿದ್ಯಾರ್ಥಿ ನಿ... ನ್ನು ತೆರೆಯಲಾಗಿದೆ. ಅದರಲ್ಲಿ ಈ... ನಾ ಜಾತಿಗಳ ೩೦ ಮಂದಿ ವಿದ್ಯಾ... ದ್ದಾರೆ. ಸಾರ್ವಜನಿಕರು ಇದಕ್ಕೆ ... ವಾದ ಸಹಾಯ ನೀಡಬೇಕೆಂದು ವ್ಯ... ಪಕರಾದ ಶ್ರೀ ಟಿ. ಎಸ್. ಸುಬ್ಬಣ್ಣ... ಕೋರಿರುವರು.

Printed printed and published by A. R. Nagarajan at the Sadhvi Press, D Subbaiah Road Mysore

ಹೊಸ ಶೋಧನೆ! ಪ್ರಖ್ಯಾತ ಡಾಕ್ಟರರು ಶಿಫಾರಸು ಮಾಡಿದ
ತಂಪು, ಆರ್ನಿಕಾ ಒಲಿವ್ ಕೇಶ ವೃದ್ಧಿ

ಆರ್ನಿಕೊಲ್
ಕೂದಲಿಗೆ, ಮಿದುಳಿಗೆ ಟಾನಿಕ್.

ಉಷ್ಣತೆಯನ್ನು ಹೋಗಲಾಡಿಸಿ ಕೂದಲು ಉದುರುವದನ್ನೂ, ನರೆಯುವುದನ್ನು ಗುಣ ಪಡಿಸಿ ನೀವು ಸುಂದರವಾದ ಕೇಶ ರಾಶಿಯನ್ನು ಪಡೆಯಿರಿ. ಮಿದುಳಿಗೆ ನವಚೇತನ ಕೊಟ್ಟು ಬುದ್ಧಿ ಶಕ್ತಿಯನ್ನು ವೃದ್ಧಿ ಮಾಡುತ್ತದೆ. ನರಗಳ ದುರ್ಬಲತೆ, ನಿದ್ರೆಗೇಡು, ಕಣ್ಣು ಉರಿ, ತಲೆ ನವೆತ, ತಲೆ ತಿರುಗುವಿಕೆ ಎಲ್ಲಾ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ದೊರೆಯುತ್ತದೆ.

ಆರ್ನಿಕೊಲ್ ಸೇಲ್ಸ್ ಡಿಪ್ಪೊ, (S)
ಪೋಸ್ಟ್ ಬಾಕ್ಸ್ 96, : : ಬೆಂಗಳೂರು ಪ. ಕ.

ರಾಜ್‌ಕಮಲ್, ಮೈಸೂ...
ತಾ॥ 22—8—47 ರಿಂ...
ಅಪೋಕ್ಷ ಪ್ರಾರಂ...
ಪ್ರತಿ ದಿನ ಮೂರು ಆಟಗಳು
ಚಾರ್ ಅಂಖಿ...
: ಭೂಮಿಕೆ :
ಲೀಲಾ ಚಿಟ್ನಿಸ್, ಜಯರಾ...

ವುಡ್‌ಲ್ಯಾಂಡ್ಸ್
ತಾ॥ 22-8-47 ರಿಂ...
ಅಪೋಕ್ಷ ೨ ನೇ ವಾ...
ಹೀರ್ ಕುಮಾ...
(ಹಿಂದಿ)
—:ಪಾತ್ರ:—
ಕಿಶೋರ್ ಸಾಹು, ರೋಹಿಣಿ ...
ದುಗಾರ್ ಖೋಟೆ

ಮುಂದಿನ ಬದಲಾವ...
ಪಾಲಿಮಿಕ್ ...

—: ತಾರಾಗಣ :—
ಸ್ವರ್ಣಲತಾ ಮತ್ತು ನಾಜೀ...
Distributors Conta...
HANS PICTURES
Chickpet, Bangalore C...

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಗುರುವಾರ ೨೮-೮-೪೭ [ಸಂಚಿಕೆ ೩೨

ಸೆ|| ೬ ನೇ ತಾರೀಖಿನಿಂದ ಮೈ|| ರೈಲ್ವೆ ಮುಷ್ಕರ

ಸತ್ಯಾಗ್ರಹ ಪ್ರಚಾರ ಭಾಷಣಗಳು

(ಹಿಂದಿನ ಪುಟದಿಂದ ಮುಂದುವರಿದುದು)

ಇವರ ಅಧಿಕಾರ ಎಷ್ಟು ಬೇಗ ಮುಕ್ತಾಯಗೊಂಡರೆ ಅಷ್ಟೂ ಒಳ್ಳೆಯದು ಈಗ ನಮ್ಮ ಮಹಾರಾಜರು ಮೈಸೂರು ಸಂಸ್ಥಾನಕ್ಕೆ ಮಾತ್ರ ಅಧಿಪತಿಗಳಾಗಿದ್ದಾರೆ. ನಮಗೆ ಜವಾಬ್ದಾರೀ ಸರ್ಕಾರವನ್ನು ಕೊಡಿ. ಅಖಂಡ ಕರ್ನಾಟಕ ರಚನೆಯಾದ ಮೇಲೆ ಅದರ ಸಂಸ್ಥಾನಾಧೀಶ್ವರರನ್ನಾಗಿ ಮಾಡುತ್ತೇವೆ. ಎಂದು ಹೇಳುತ್ತಿದ್ದೇನೆ ನಮ್ಮಲ್ಲಿ ಶ್ರೀಮನ್ಮಹಾರಾಜರವರಿಗೆ ಸಂದೇಹವಿದ್ದರೆ ಅವರು ಮಹಾತ್ಮ ಗಾಂಧಿ; ಪಂಡಿತ ನೆಹರೂರವರು ಜೊತೆ ಸಮಾಲೋಚನೆ ನಡೆಸಲಿ ಅದರ ... ಅವರು ತಮ್ಮ ಅಮಾತ್ಯರುಗಳ ಸಲಹೆಗಳಿಗೆ ... ಕೊಡಬಾರದು. ೩ನೇ ತಾರೀಖಿನೊಳಗೆ ಜವಾಬ್ದಾರೀ ಸರ್ಕಾರವನ್ನು ಘೋಷಿಸಬೇಕು. ಇಲ್ಲದಿದ್ದರೆ ಮುಂದಕ್ಕೆ ಅನರ್ಥವುಂಟಾಗಬಹುದು ಅದಕ್ಕೆ ಅವಕಾಶ ಕೊಡಬಾರದೆಂದು ಶ್ರೀಮನ್ಮಹಾರಾಜರವರನ್ನು ಪ್ರಾರ್ಥಿಸುತ್ತೇನೆ-ಎಂದೂ ಸ... ಶ್ರೀ ಟಿ. ಸಿದ್ಧಲಿಂಗಯ್ಯನವರು ತಿಳಿಸಿದರು.

ಸಂಸ್ಥಾನದ ಆಡಳಿತ ಪ್ರಜಾಭಿಪ್ರಾಯಕ್ಕೆ ವಿರೋಧವಾಗಿದೆ ಮೈಸೂರು ಸಂಸ್ಥಾನ ರಾಮರಾಜ್ಯವೆಂದು ಹೇಳುತ್ತಿದ್ದರು. ... ತಿಳಿದಿರುವ ಮಟ್ಟಿಗೆ ಭಾರತದಲ್ಲಿ ಇದ್ದುದು ಮೂರು ರಾಮರಾಜ್ಯಗಳು. ಅ... ಶ್ರೀ ರಾಮಚಂದ್ರ... ಸಂಸ್ಥಾನ, ರಾಮಸ್ವಾಮಿ ಐಯ್ಯರವರ ... ದಲ್ಲಿದ್ದ ತಿರುವಾಂಕೂರು, ರಾಮಸ್ವಾಮಿ ಮೊದಲಿಯಾರರು ಆಳುತ್ತಿದ್ದ ... ಮೈಸೂರು ಸಂಸ್ಥಾನ ಕಾಶ್ಮೀರದ ರಾಮರಾಜ್ಯ ಕೊನೆಗಂಡಿತು. ಕಾಶ್ಮೀರದಲ್ಲಿ ಈಗ ಪರಿಸ್ಥಿತಿ ಸುಧಾರಿಸುತ್ತಿದೆ. ಐಯ್ಯರ್‌ರವರ ರಾಮರಾಜ್ಯ ಮುಗಿಯಿತು ಆ ಸಂಸ್ಥಾನ ಯೂನಿಯನ್ನಿಗೆ ಸೇರಿತು ... ಮೊದಲಿಯಾರರ ರಾಮರಾಜ್ಯ. ಸೆಪ್ಟೆಂಬರ್ ೧ ರಿಂದ ಅವರ ಭವಿಷ್ಯ ... ನಿರ್ಧಾರವಾಗುತ್ತದೆ ರಾಜತ್ವವೇ ... ಬೇಕೆಂಬುವುದು ನನ್ನ ಸ್ವಂತ ಮತ ... ಸ್ವತಂತ್ರ ಭಾರತದಲ್ಲಿ ಮೈಸೂರೂ ತನ್ನ ಪಾತ್ರವನ್ನು ಯೋಗ್ಯವಾಗಿ ನಿರ್ವಹಿಸಿ ... ದೇಶದ ರಕ್ಷಣೆಯಲ್ಲಿ ಸ್ಥಾನವಹಿಸಬೇಕಾದರೆ ಇದು ಅನಿವಾರ್ಯ. ನಮ್ಮ ಬೇಡಿಕೆಗೆ ಭಾರತದ ಪ್ರಧಾನಿ ಪಂಡಿತ ನೆಹರೂರವರೂ, ಸಂಸ್ಥಾನಗಳ ಖಾತಾ ಸಚಿವರಾದ ಸರ್ದಾರ್ ಪಟೇಲರೂ ಗಮನ ಕೊಡುವರು ಭರವಸೆ ನಮಗಿದೆ ಈಗಿನ ಹೋರಾಟವನ್ನು ತಡೆಗಟ್ಟಲು ಯಾರಿಗೂ ಸಾಧ್ಯವಿಲ್ಲ ಎಂಬುದಾಗಿ ಶ್ರೀ ಕೆ ಎಸ್ ... ರವರು ನುಡಿದರು.

ಪ್ರತಿನಿಧಿ ಅಧಿಕಾರದಲ್ಲಿದ್ದಾಗ ದಿವಾನ ... ಸೇವೆಯನ್ನು ಸಂಸ್ಥಾನಕ್ಕೆ ... ಮತ್ತು ... ಭಾರತ ಪ್ರಯತ್ನ ... ಅವು ಈಡೇರಲಿಲ್ಲ ... ಸರ್ಕಾರವು ಅಧಿಕಾರಕ್ಕೆ ಬಂದೊಡನೆ ... ಯಾವ ಪ್ರಾರ್ಥನೆಯೂ ಇಲ್ಲದೆ ... ನಕ್ಕೆ ಕೊಡಲ್ಪಟ್ಟಿತು ... ಪ್ರಜಾ ವಿರೋಧಿಗಳಾದ ... ಯವರಿಗೆ ಭಾರತದಲ್ಲೇ ... ಸ್ಥಳವಿಲ್ಲದಂತಾಗಿದೆ. ನಾ... ಮನ್ಮಹಾರಾಜರವರ ಕೃಪಾಪ್ರಿಯ ... ಜವಾಬ್ದಾರೀ ಸರ್ಕಾರ ಬೇಕೆಂದು ಕೇ...

ಬಹಿರಂಗ ಸಭೆ

ಮೈಸೂರು ೨೮

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಈ ದಿನ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಸತ್ಯಾಗ್ರಹದ ಪ್ರಚಾರಕ್ಕಾಗಿ ಬಹಿರಂಗ ಸಭೆ ನಡೆಯುವುದು.

ವಿದ್ಯಾರ್ಥಿ ಕೆಲಸಗಾರರ ಸಭೆ

ನಾಳೆ ಸಂಜೆ ೫-೩೦ ಗಂಟೆಗೆ ದೇವರಾಜ ಮಾರ್ಕೆಟ್ ಮೇಲ್ಭಾಗದಲ್ಲಿರುವ ಮುನಿಸಿಪಲ್ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ವಿದ್ಯಾರ್ಥಿ ಕೆಲಸಗಾರರ ಸಭೆ ಸೇರುವುದು ಸರ್ವರೂ ಭಾಗವಹಿಸಬೇಕೆಂದು ಕೋರಲಾಗಿದೆ.

ವಿಜಯನಗರ ಜಯಂತ್ಯುತ್ಸವ

ನಾಳೆ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ವಿಜಯನಗರ ... ರ ೨೭ ನೆಯ ಜಯಂತ್ಯುತ್ಸವವು ನಡೆಯುವುದು. ಅವರ ಅಂಗವಾಗಿ ಬೆಳಗ್ಗೆ ೬ ಗಂಟೆಯಿಂದ ಅರ್ಚನೆ, ಸ್ತೋತ್ರ, ಪಠನ, ವೇದ ಪಾರಾಯಣ ಮಂಗಳಾರತಿಗಳೂ, ಸಂಜೆ ೫-೩೦ ಗಂಟೆಯಿಂದ ಪ್ರಾರ್ಥನೆ, ಉಪನ್ಯಾಸ, ಆ|| ವಿ|| ಶಿವರುದ್ರಪ್ಪನವರ ಪಿಟೀಲು ಮತ್ತು ವಿ|| ಎಂ. ಎಸ್. ರಾಮಯ್ಯನವರ ಮೃದಂಗಗಳೊಡನೆ ಗಾನ ವಿಶಾರದ ಆ|| ವಿ|| ಚಿಟ್ಟಿ ಕೃಷ್ಣಯ್ಯಂಗಾರ್ಯರ ಸಂಗೀತ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳೂ ನಡೆಯುವುವು.

... ದಕ್ಕೆ ದಿವಾನರು ಒಂದು ಜವಾಬ್ದಾರೀ ಸರ್ಕಾರದ ಯೋಚನೆ ಮಾಡುತ್ತಿದ್ದೇನೆ-ಎಂದು ಹೇಳಿದರು. ಅವರ ಉಪಾಯಗಳಿಗೆ ನಮ್ಮಲ್ಲಿ ಮರುಳಾಗುವವರು ಯಾರೂ ಇಲ್ಲ-ಎಂಬುದಾಗಿ ಶ್ರೀ ಎ ಜಿ. ಬಂದೀಗೌಡರು ತಿಳಿಸಿದರು.

ಈಗಿನ ಸರ್ಕಾರದ ಆಡಳಿತದ ನೀತಿಯಿಂದ ಪೌರ ಹಕ್ಕಿಗೇ ಧಕ್ಕೆ ಬಂದಿದೆ. ನಮಗೆ ಶ್ರೀಮನ್ಮಹಾರಾಜರವರಲ್ಲಿ ಪೂರ್ಣ ಭಕ್ತಿ ವಿಶ್ವಾಸಗಳಿವೆ ಪ್ರಗತಿ ವಿರೋಧಿಗಳಾದ ಅವರ ಮಂತ್ರಿ ಮಂಡಲದ ಮೇಲೆ ... ಅಸಮಾಧಾನದಿಂದಾಗಿಯೇ ನಾವು ... ಅರಮನೆಯ ಮುಂದೆ ಸತ್ಯಾಗ್ರಹ ಹೂಡಲು ನಿರ್ಧರಿಸಿದ್ದೇವೆ - ಎಂದು ಶ್ರೀ ಎಂ. ಎಲ್. ... ಜರಾಜೇ ಅರಸಿನವರು ನುಡಿದರು.

ವಂದನಾರ್ಪಣೆ, ರಾಷ್ಟ್ರಗೀತೆಗಳೊಡನೆ ಸಭೆ ಮುಕ್ತಾಯವಾಯಿತು. ... ರಭವನದಲ್ಲೆಲ್ಲಾ ಕಿಕ್ಕಿರಿದು ತುಂಬಿದ್ದರು

ವಿದ್ಯಾರ್ಥಿಗಳಿಂದ ಅರಮನೆಯ ಮುಂದೆ ಸತ್ಯಾಗ್ರಹ

ಮೈಸೂರು ೨೮

ಸೆಪ್ಟೆಂಬರ್ ೧ ನೇ ತಾರೀಖಿನಿಂದ ಅರಮನೆಯ ಮುಂದೆ ವಿದ್ಯಾರ್ಥಿಗಳ ಸತ್ಯಾಗ್ರಹವು ಆರಂಭವಾಗುವುದು - ಮೈಸೂರಿಗೆ ಬರತಕ್ಕ ವಿದ್ಯಾರ್ಥಿ ದಳಗಳು ೩೧ ನೇ ತಾ|| ಸಂಜೆಯ ವೇಳೆಗೆ ರಾಜಧಾನಿಗೆ ಬರಬೇಕು ಹಾಗೆ ಆ ವೇಳೆಗೆ ಬರಲಾಗದಿದ್ದರೂ ೧ ನೇ ತಾ|| ನ ವೇಳೆಗೆ ಬಂದು ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಸೆಪ್ಟೆಂಬರ್ ೧ ನೇ ತಾರೀಖು ಹರತಾಳ, ಸಭೆ, ಮೆರವಣಿಗೆ, ಪ್ರತಿಜ್ಞಾ ಸ್ವೀಕಾರಗಳನ್ನು ನಡೆಸಬೇಕು. ಆ ದಿನ ೧೦ ಗಂಟೆಗೆ ರಾಜಧಾನಿಯ ಕಾಲೇಜಿನ ಮುಂಭಾಗದಲ್ಲಿ ಬಹಿರಂಗ ಸಭೆ ನಡೆಯುವುದು ಅನಂತರ ಕರ್ನಾಟಕ ಪ್ರಾಂತ ವಿ|| ಕಾಂ|| ಪ್ರಧಾನ ಕಾರ್ಯದರ್ಶಿಗಳ ನಾಯಕತ್ವದಲ್ಲಿ ಪ್ರಥಮ ತಂಡವು ಅರಮನೆಯ ಮುಂದಕ್ಕೆ ಮೆರವಣಿಗೆ ಹೋಗಿ ಅಲ್ಲಿ ಸತ್ಯಾಗ್ರಹವನ್ನು ಆರಂಭಿಸುವುದು. ೨ ನೇ ತಾರೀಖಿನಿಂದ ೧೦ ರವರೆಗೆ ಅರಮನೆಯ ಮುಂದೆ ತಂಡ ತಂಡವಾಗಿ ಸತ್ಯಾಗ್ರಹ ನಡೆಸಲಾಗುವುದು. ೧೦ ನೇ ತಾ|| ನಂತರ ಕಾಂಗ್ರೆಸ್ಸಿನವರೊಡನೆ ಸೇರಿ ಸತ್ಯಾಗ್ರಹದಲ್ಲಿ ಭಾಗವಹಿಸಬೇಕು-ಎಂಬ ದಾಗಿ ವಿ|| ಕಾಂ|| ಕಾರ್ಯದರ್ಶಿ ಶ್ರೀ ಪ್ರಾಣೇಶರಾಯರು ತಿಳಿಸಿರುವರು ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಗವೀಂದ್ರ ಪರ್ಮಾರವರು ಇದೇ ೩೧ ನೇ ತಾರೀಖು ರಾಜಧಾನಿಗೆ ಆಗಮಿಸಿ ೧ನೇ ತಾರೀಖು ನಡೆಯುವ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಹಿಸುವರೆಂದು ತಿಳಿದು ಬಂದಿದೆ

ಪ್ರದೋಷ ಸಂಗೀತ

ಬಿದಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀಮತಿ ಕೆ ಸುಬ್ಬಮ್ಮನವರ ಮತ್ತು ... ಅನಂತಲಕ್ಷ್ಮಿ ಯುವತಿಗಳ ಗಾಯನ ಮತ್ತು ವೀಣಾವಾದನವನ್ನೇರ್ಪಡಿಸಿದೆ.

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ದತ್ತರಾಮ ದೇವಾಲಯದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ಸಂಗೀತ ವಿದ್ವಾನ್ ಸುಬ್ಬ ಕೃಷ್ಣಯ್ಯನವರ ಗಾಯನವು ನಡೆಯುವುದು

೬ನೇ ತಾ|| ಮಧ್ಯರಾತ್ರಿಯಿ[ಂದ] ರೈಲ್ವೆ ಕೆಲಸಗಾರರ ಮು[ಷ್ಕರ]

ಮೊದಲನೇ ಸರ್ವಾಧಿಕಾರಿಯ ನೇಮಕ

ಮೈಸೂರು

ಮೈಸೂರು ರೈಲ್ವೆಗೆ ಸೇರಿದ ಒಟ್ಟು ... ಸಾವಿರ ಜನ ಕೆಲಸಗಾರರು ಬರುವ ೬ ತಾರೀಖು ಶನಿವಾರ ಮಧ್ಯ ರಾತ್ರಿಯ ... ಸಂಪೂರ್ಣವಾದ ಮುಷ್ಕರವನ್ನು ಆ... ಸುವುದಾಗಿ ನಿರ್ಧರಿಸಿ ಅದಕ್ಕಾಗಿ ಶ್ರೀ ... ಡಾ ಡಿ ರಾಘವರಾಜುರವರನ್ನು ಮೊದಲನೆಯ ಸರ್ವಾಧಿಕಾರಿಯಾಗಿ ನೇಮಿಸಿದ್ದಾರೆ. ಈ ವಿಷಯವು ನಿನ್ನೆ ದಿನ ರೈಲ್ವೆ ಕಾಲೋನಿಯಲ್ಲಿ ನಡೆದ ಕೆಲಸಗಾರರ ಬಹಿರಂಗ ಸಭೆಯಲ್ಲಿ ಪ್ರಕಟಿಸಲ್ಪಟ್ಟಿತು.

ತಮ್ಮ ಬೇಡಿಕೆಗಳಿಗೆ ಯಾವ ಪುರಸ್ಕಾರವೂ ದೊರೆಯದಿದ್ದುದರಿಂದ ಅವುಗಳನ್ನು ಈಡೇರಿಸಿಕೊಳ್ಳಲು ಸತ್ಯಾಗ್ರಹದ ಹೊರತು ಬೇರೆ ಮಾರ್ಗವೇ ಇಲ್ಲವೆಂದು ಶ್ರೀ ... ಳಾದ ರಾಜು ಮೊದಲಿಯಾರ್, ಚತುರ್ವೇದಿ, ಕೆ. ಟಿ ರಾಮಸ್ವಾಮಿ, ವೇಲು ಪಿಳ್ಳೆ ಮುಂತಾದವರು ಭಾಷಣ ಮಾಡಿದರು ಕೆಲಸಗಾರರೆಲ್ಲರೂ ಶಾಂತಿಯುತವಾಗಿ ಹೋರಾಟವನ್ನು ನಡೆಸಬೇಕೆಂದು ಕೋರಿದರು. ಮುಷ್ಕರ ಕಾಲದಲ್ಲಿ ಕೆಲಸಗಾರರು ತಮ್ಮ ತಮ್ಮ ಮನೆಗಳಲ್ಲಿಯೇ ಬಂಧಿತರಾಗಿರದೇ ಕೆಂದು ಕೋರಿ ಮುಂದಿನ ಕಾರ್ಯಕ್ರಮಗಳನ್ನು ನಡೆಸಲು ಸರ್ವಾಧಿಕಾರವನ್ನು ವಹಿಸುವಂತೆ ಶ್ರೀ ರಾಘವರಾಜುರವರನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಎಂ ಎಲ್ ನ ಸಪ್ಪನವರು ಬೇಡಿದರು.

ಮೈಸೂರು ರೈಲ್ವೆಯು ಕೆಲಸಗಾರರನ್ನು ಇತರ ಒಂದನೇ ತರಗತಿ ರೈಲ್ವೆಯವರಂತೆಯೇ ಪರಿಗಣಿಸಬೇಕು ಮತ್ತು ಪ್ರತಿಯೊಬ್ಬ ಕೆಲಸಗಾರನಿಗೂ ಒಂದು ಸಾವಿರ ರೂ. ಪರಿಹಾರವನ್ನು ಕೊಡಬೇಕು - ಎಂಬ ಎರಡು ಕನಿಷ್ಠ ಬೇಡಿಕೆಗಳು ಪೂರೈಸಲ್ಪಡದಿದ್ದರೆ ೬ ನೇ ತಾರೀಖು ಮಧ್ಯರಾತ್ರಿಯಿಂದ ಮುಷ್ಕರವನ್ನು ಆರಂಭಿಸುವಂತೆ ಎಲ್ಲ ಕೆಲಸಗಾರರಿಗೂ ಸೂಚನೆ ಇತ್ತಿರುವುದಾಗಿ ಶ್ರೀ ರಾಘವರಾಜುರವರು ತಿಳಿಸಿದರು.

ದಿವಾನರು ನಾಳೆ ವಾಪಸು

ಸ್ವಂ ಸು ಫೋನ್] [ಬೆಂಗಳೂರು ೨೮

ನಾಳೆ ಸಾಯಂಕಾಲ ದಿವಾನರು ದೆಹಲಿಯಿಂದ ಹಿಂದಿರುಗುವ ಸಂಭವವಿದೆ.

* ಕಾಂಗ್ರೆಸ್ಸಿನ ... ವಿರೋಧ ಸಭೆಯೊಂದನ್ನು ನಡೆಸುವ ಸಂಭವವಿದ್ದುದರಿಂದ ಈ ದಿನ ಸರ್ ಪುಟ್ಟಣ್ಣಚೆಟ್ಟರ ಭವನದಲ್ಲಿ ಶ್ರೀ ... ರವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದ ಕಾಂಗ್ರೆಸ್ಸೇತರ ಸಭೆಯನ್ನು ರದ್ದುಮಾಡಲಾಗಿದೆ

ನಿನ್ನೆ ರಾತ್ರಿ ೨೩ ವಾಣಿಜ್ಯ ಸಂಸ್ಥೆಗಳ ಪ್ರತಿನಿಧಿಗಳು ವೆಂಕಟಮುನಯ್ಯ ಶೆಟ್ಟರ ಛತ್ರದಲ್ಲಿ ಸಭೆ ನಡೆಸಿ ಶ್ರೀಮನ್ಮಹಾರಾಜರು ಕೂಡಲೇ ಜವಾಬ್ದಾರೀ ಸರ್ಕಾರವನ್ನು ಘೋಷಿಸಬೇಕೆಂದೂ, ದಿವಾನರು ಇದಕ್ಕೆ ತಕ್ಕ ಸಲಹೆ ನೀಡಬೇಕೆಂದೂ ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದೂ ಪ್ರಾರ್ಥಿಸಿ ನಿರ್ಣಯವನ್ನು ಮಾಡಿದರು. ಸಂಘಗಳ ಸಭೆ ಏಕಮನಸ್ಸಾಗಿ ಸಮಿತಿಯೊಂದನ್ನು ನೇಮಿಸಿದರು

* ಗಣಿಗಳವರ ಮುಷ್ಕರವು ... ದಿನವೂ ಮುಂದುವರಿಯುತ್ತಿದೆ

ಸತ್ಯಾಗ್ರಹ ಪ್ರಚಾರ ಭಾಷಣಗಳು

ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ನಾಯಕರ ವಿವರಣೆ

ಮೈಸೂರು ೨೮

ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಸತ್ಯಾಗ್ರಹ ಪ್ರಚಾರದ ಭಾಷಣಗಳು ಆರಂಭವಾದುವು. ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಕೆ ಎಸ್. ಕುಮಾರ್, ಎ. ಜಿ ಬಂಡೀಗೌಡ, ಎಂ ಎಲ್ ನಂಜುಂಡೇ ಅರಸ್, ಪಾಲಹಳ್ಳಿ ಸೀತಾರಾಮಯ್ಯ ಮತ್ತು ಎಸ್ ಚೆನ್ನಯ್ಯನವರುಗಳು ಭಾಷಣ ಮಾಡಿದರು.

ಭಾರತಕ್ಕೆ ಬಂದಿರುವ ಸ್ವಾತಂತ್ರ್ಯ ಮೈಸೂರಿನ ಪ್ರಜೆಗಳಿಗೆ ಇಲ್ಲದಂತಾಗಿದೆ. ಜವಾಬ್ದಾರೀ ಸರ್ಕಾರದ ಸ್ಥಾಪನೆಯ ನಮ್ಮ ಬೇಡಿಕೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಇದುವರೆಗೆ ಎಲ್ಲ ಬಗೆಯ ಪ್ರಾರ್ಥನೆ, ಸಂಧಾನಗಳನ್ನೂ ನಡೆಸಿದ್ದಾಯಿತು. ಆದರೆ ಅವುಗಳಲ್ಲೊಂದೂ ಕೈಗೂಡದೆ ಈಗ ಅನಿವಾರ್ಯವಾಗಿ ಸತ್ಯಾಗ್ರಹವನ್ನು ಹೂಡಬೇಕಾಗಿದೆ. ಜವಾಬ್ದಾರೀ ಸರ್ಕಾರ ದೊರಕಿಸುವುದು ಇಂದಿನ ಯುವಕರಿಗೆ. ಸರ್ಕಾರದವರು ನಮ್ಮ ಹೋರಾಟವನ್ನು ಹತ್ತಿಕ್ಕಲು ನಾಯಕರನ್ನು ಬಂಧಿಸಬಹುದು. ಆಗ ಯುವಕರೇ ಮುಂದೆ ಬಂದು ನಾಯಕತ್ವವನ್ನು ವಹಿಸಿಕೊಳ್ಳಬೇಕು. ಈ ಬಾರಿ ನಾವು ಗುಂಡಿನ ಬಾಯಿಗೆ ತುತ್ತಾಗಲೂ ಸಹ ಸಿದ್ಧರಾಗಿದ್ದೇವೆ. ಮಾಡು ಅಥವಾ ಮಡಿ ಎಂಬುದೇ ನಮ್ಮ ಕಾರ್ಯನೀತಿಯಾಗಿದೆ-ಎಂಬುದಾಗಿ ಶ್ರೀ ಎಸ್ ಚೆನ್ನಯ್ಯನವರು ತಮ್ಮ ಭಾಷಣದಲ್ಲಿ ಹೇಳಿದರು. ಅಕಾಲ ಮರಣಕ್ಕೀಡಾದ ವಿದ್ಯಾರ್ಥಿ ಕಾಂಗ್ರೆಸ್ಸಿನ ನಾಯಕರಾದ ಶ್ರೀ ಶಿವನಪ್ಪ ಭೂಪಾಲರ ನಿಧನಕ್ಕಾಗಿ ಸಂತಾಪವನ್ನು ವ್ಯಕ್ತಗೊಳಿಸಿದರು.

ಕಾಂಗ್ರೆಸ್ಸಿನ ಹೋರಾಟವು ಜನತೆಯ ಆಂದೋಲನ. ನಾವು ಶ್ರೀಮನ್ಮಹಾರಾಜರವರ ಛತ್ರಚ್ಛಾಯೆಯಲ್ಲಿ ಜವಾಬ್ದಾರೀ ಸರ್ಕಾರ ಬೇಕೆಂದು ಕೇಳುತ್ತಿದ್ದೇವೆ. ಅದಕ್ಕೆ ಯಾವ ಬಗೆಯ ಪ್ರತಿಕ್ರಿಯೆಯೂ ಬಂದಿರುವುದಿಲ್ಲ. ಬ್ರಿಟಿಷರ ಪರಮಾಧಿಕಾರವು ಮುಕ್ತಾಯಗೊಂಡಮೇಲೆ ನಿಜವಾಗಿ ನೋಡಿದರೆ ಸ್ವಾತಂತ್ರ್ಯ ಬಂದಿರುವುದು ನಮ್ಮ ಶ್ರೀಮನ್ಮಹಾರಾಜರವರಿಗೆ. ಸ್ವಾತಂತ್ರ್ಯ ದಿನಾಚರಣೆಯ ದಿನ ಅವರು ಅದನ್ನು ಆಚರಿಸಲಿಲ್ಲವೆಂಬುದು ಎಷ್ಟು ವಿಷಾದದ ವಿಷಯ. ವೈಸರಾಯರಾಗಲೀ ಅಥವಾ ಯಾರಾದರೂ ಉನ್ನತ ಅಧಿಕಾರಿಗಳಾಗಲೀ ಸಂಸ್ಥಾನಕ್ಕೆ ಬಂದಾಗ ಪ್ರಭುತ್ವದವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಅವರಿಗೆ ಪೋಷಾಕು ಗಳನ್ನು ಮಾಡುತ್ತಿದ್ದರು. ನಮ್ಮ ಅವಿಶ್ರಾಂತ ಹೋರಾಟದಿಂದ ಆ ಗುಲಾಮಗಿರಿಯಿಂದ ಅವರುಗಳು ಇಂದು ಬಿಡುಗಡೆ ಹೊಂದಿದ್ದಾರೆ. ನಮ್ಮ ನೆರೆಯ ಪ್ರಾಂತಗಳ ಪ್ರಜೆಗಳಿಗೆ ದೊರೆತಿರುವ ಸ್ವಾತಂತ್ರ್ಯ ನಮಗೂ ಬೇಕೆಂದು ಕೇಳುವುದು ನಮ್ಮ ಹಕ್ಕು ಅದಕ್ಕಾಗಿಯೇ ಸತ್ಯಾಗ್ರಹ-ಎಂಬುದಾಗಿ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ತಮ್ಮ ಭಾಷಣದಲ್ಲಿ ನುಡಿದರು.

ಭಾರತದ ದಾಸ್ಯ ವಿಮೋಚನೆಗಾಗಿ ತಮ್ಮ ತನು, ಮನ, ಧನಗಳನ್ನು ತೆತ್ತು ಭಾರತದಿಂದ ಬ್ರಿಟಿಷರನ್ನು ಓಡಿಸಿದವರು ಕಾಂಗ್ರೆಸ್ಸಿನವರು-ಎಂದರೆ ಪ್ರಜೆಗಳು ಅದರ ಫಲವನ್ನು ಉಪಭೋಗಿಸುತ್ತಿರುವವರು ಬ್ರಿಟಿಷರ ಸಂತತಿ ದೇಶದಂತಿಪ್ಪ ಐ.ಸಿ.ಎಸ್. ಜನ ರಾಜರುಗಳು. ಈಗಿನ ರಾಜಕೀಯ ಪರಿಸ್ಥಿತಿಯು ಈ ಬಿಸಿ ವಾತಾವರಣ ರಾಜರ ಶನಿದೆಸೆಯನ್ನು ಸೂಚಿಸುತ್ತದೆಯೋ ಅಥವಾ ಗುರು ದೆಸೆಯನ್ನೋ-ಎಂಬುದನ್ನು ನಾವು ಕಾದು ನೋಡಬೇಕಾಗಿದೆ-ಎಂಬುದಾಗಿ ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ನುಡಿದರು. ರಾಜರುಗಳ ವರ್ತನೆ ಪ್ರಜಾಭಿಪ್ರಾಯಕ್ಕೆ ವಿರೋಧವಾಗಿದೆ. ನಮ್ಮಲ್ಲಿ ಗುಲಾಮಗಿರಿಯು ಬೇರೂರಿ ಮುಂದೆ ನಾವು ಶಕ್ತಿಹೀನರಾದೇವೆಂಬ ಶಂಕೆಯಿಂದ ಈಗ ಸತ್ಯಾಗ್ರಹವನ್ನು ಹೂಡಬೇಕಾಯಿತು. ಕಳೆದ ೧೦ ವರ್ಷಗಳಿಂದ ಜವಾಬ್ದಾರೀ ಸರ್ಕಾರಕ್ಕಾಗಿ ಪ್ರಾರ್ಥನೆ, ಬೇಡಿಕೆ, ಬಿನ್ನವತ್ತಳೆ, ಸಂಧಾನಗಳ ಮೂಲಕ ಯತ್ನಿಸಿ ನೋಡಿದ್ದಾಯಿತು. ಅವುಗಳಿಂದ ಪ್ರಜೆಗಳ ಅಪೇಕ್ಷೆ ಈಡೇರಲಿಲ್ಲ-ಎಂದು ಅವರು ಮುಂದುವರಿದು ತಿಳಿಸಿದರು.

ಅಖಿಲ ಭಾರತ ಕಾಂಗ್ರೆಸ್ಸಿನವರು ಕ್ವಿಟ್ ಇಂಡಿಯಾ ಎಂದು ಹೇಳಿ ಚಳುವಳಿಯನ್ನು ಆರಂಭಿಸಿ ಬ್ರಿಟಿಷರನ್ನು ಭಾರತದಿಂದ ತೊಲಗಿಸಿದರು. ನಾವು ಯಾರನ್ನೂ ಬಿಟ್ಟು ಹೊರಡಿರೆಂದು ಹೇಳಿಲ್ಲ. ಶ್ರೀಮನ್ಮಹಾರಾಜರವರ ಛತ್ರಚ್ಛಾಯೆಯಲ್ಲಿ ಜವಾಬ್ದಾರೀ ಸರ್ಕಾರದ ಸ್ಥಾಪನೆ ...ಲಿ-ಎಂದು ಕೇಳುತ್ತಿದ್ದೇವೆ. ಆದರೆ ...ಕ್ಕೆ ಮನ್ನಣೆ ದೊರೆತಿಲ್ಲ. ಐ.ಸಿ.ಎಸ್. ...ನಾಧೀಶರುಗಳ ಮೇಲೆ ಅಧಿಕಾರವನ್ನು ...ಲಾಯಿಸುತ್ತಿದ್ದ ಚಕ್ರವರ್ತಿಯು ...ಕೇಳುವವರಿಲ್ಲದಂತಾಯಿತೆಂಬುದನ್ನು ...ಜರುಗಳು ಗಮನದಲ್ಲಿಡಬೇಕು. ...ರಿಗೆ ಸರ್ ಅರ್ಕಾಟರು ದಿವಾನರಾಗಿ ...ಮೇಲಂತೂ ಸಂಸ್ಥಾನದ ಸ್ಥಿತಿ ಬಹಳ ...ನಾಯವಾಗಿದೆ. ಕಾಳ ಸಂತೆ, ಲಂಚ ...ಮುವತ್ತುಗಳು ಕೋಮುವಾರು ವಿಷ...ಹ, ಮೊದಲಾದುವು ಬೆಳೆಯುತ್ತಿವೆ.

(ಮೊದಲನೆಯ ಪುಟವನ್ನು ನೋಡಿ)

WOODLANDS

Morning shows for 4 days from 29-8-47 daily at 10-30 a. m.

WarnerBrother'sProduction

Destination Tokyo

with Cary Grand and Jhon Garfield

Bengal Silk

Sarees in most attractive Colours and in 6, 7, 8 and 9 yards

Bahusar Company, Mysore

ರಾಜಕಮಲ್

ತಾ|| 29-8-47 ರಿಂದ

ಪ್ರತಿ ದಿನ ಮೂರು ಆಟಗಳು

ಬಾಂಬೆ ಟಾಕೀಸಿನವರ ಅತ್ಯುತ್ತಮ ಚಿತ್ರ

ಝೂಲಾ

—: ಭೂಮಿಕೆ :—

ಅಶೋಕ ಕುಮಾರ್, ಲೀಲಾಚಿಟ್ನಿಸ್

From 29-8-47 for 4 days daily at 10-30 a. m.

Hit Parade of 1947

Featuring Eddie Albert, Edwards constance Moore, Joan

ವುಡ್‌ಲ್ಯಾಂಡ್ಸ್

ಕಡೇ ದಿನ

ಪೀರ್ ಕುನಾಲ್

(ಹಿಂದಿ)

—: ಪಾತ್ರ :—

ಕಿಶೋರ್ ಸಾಹು, ಶೋಭನಾ ಸಮರ್ಥ, ದುರ್ಗಾ ಖೋಟೆ

೨೯-೮-೪೭ ರಿಂದ

ವಾಮಿಕ್ ಅ...

—: ತಾರಾಗಣ :—

ಸ್ವರ್ಣಲತಾ ಮತ್ತು ನಾಜೀರ್

Distributors Contact HANSA PICTURES Chickpet, Bangalore C...

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಜೀವನೋಪಾಯವನ್ನು ಸಂಪಾದಿಸಿ ಕೊಟ್ಟಿರ... ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ ಬೆಂಗಳೂರು

ಮೈಸೂರು ಸಿಟಿ ರೇಷನಿಂಗ್

ನಂ. K 6 81 17

ಎಂ. ಶ್ರೀನಿವಾಸಲು ನಾಯಡು

ಚಾಮುಂಡೇಶ್ವರಿ ಟಾಕೀಸ್

29-8-47 ರಿಂದ

ದಿನವಹಿ 3 ಆಟಗಳು

ಜಗಬೀತಿ

(ಹಿಂದಿ)

—: ಪಾತ್ರ :—

Edited printed and published by A. K. Nagarajan at the Sadhvi Press D. Subbaiah Road Mysore

ಪೌ — ॥ ಸಂಘಂ ಶರಣಂ ॥ ಅಂದಿನ ಪತ್ರಿಕೆ ೩ ಕಾಸು

ಸಂಪುಟ ೬] ಶುಕ್ರವಾರ ೨೯-೮-೪೭ [ಸಂಚಿಕೆ ೩೩

ಫ್ರಾನ್ಸ್-ಭಾರತಗಳ — ಜಂಟಿ ಪ್ರಕಟಣೆ —

ದೇಶಾಭಿಮಾನಿಗಳು ಮುಂದೆ ಬರಬೇಕು

ಎಂ. ಪಿ. ಲಿಂಗಪ್ಪಯ್ಯನವರ ಹೇಳಿಕೆ

ಮೈಸೂರು ೨೮

ರಾಜಧಾನಿಯ ಗೃಹ ಕೈಗಾರಿಕೆ ಸಂಸ್ಥೆಯ ಸಂಚಾಲಕರಾದ ಶ್ರೀ ಎಂ. ಪಿ. ಲಿಂಗಪ್ಪಯ್ಯನವರು ಈರೀತಿ ಬರೆಯುತ್ತಾರೆ:-

ಪ್ರಜೆಗಳು ತಮ್ಮ ಹಕ್ಕು, ಬಾಧ್ಯತೆಗಳನ್ನು ಕೇಳುವುದೂ ಸರ್ಕಾರದವರು ಅದನ್ನು ಪರಿಶೀಲಿಸಿ ಮೇಲಿಂದ ಮೇಲೆ ಸುಧಾರಣೆಗಳನ್ನು ಜಾರಿಗೆ ತರುವುದೂ ಪ್ರತಿಯೊಂದು ದೇಶದಲ್ಲಿಯೂ ರೂಢಿಯಲ್ಲಿರುವ ವಾಡಿಕೆಯಾಗಿದೆ. ಪ್ರತಿಯೊಂದು ಸರ್ಕಾರಕ್ಕೂ ಪ್ರತಿಭಟನೆಯು ಇದ್ದೇ ಇರುವುದು. ಮೈಸೂರಿನ ಕಾಂಗ್ರೆಸ್ಸಿನವರೂ, ನ್ಯಾಷನಲ್ ಕಾಂಗ್ರೆಸ್ಸಿನವರೂ ಸತ್ಯಾಗ್ರಹವನ್ನು ಹೂಡಲು ನಿರ್ಧರಿಸಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿರುತ್ತದೆ. ಮೈಸೂರಿನ ಪ್ರಜೆಗಳಿಗೆ ರಾಜಭಕ್ತಿಯು ಯಾರೂ ಹೇಳಿಕೊಡಬೇಕಾಗಿಲ್ಲ. ನಮ್ಮ ಪ್ರಭುಗಳಿಗೆ ತಮ್ಮ ಪ್ರಜೆಗಳಲ್ಲಿ ಪೂರ್ಣ ನಂಬಿಕೆಯೂ, ಅಸದೃಶವಾದ ಪ್ರೀತಿಯೂ ಇರುವುದರಿಂದಲೇ ಮೈಸೂರಿನ ಸುದಿನಗಳು ಪ್ರಜಾ ಪ್ರಭುತ್ವದ ತತ್ವವನ್ನು ಒಪ್ಪಿಸಿರುತ್ತವೆ-ಎಂಬ ಘೋಷಣೆಯು ಮಾಡಿರುವರು.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರು ಪ್ರಜೆಗಳಿಗೂ, ಸರ್ಕಾರದವರಿಗೂ ಇದ್ದ ಅಂತರವನ್ನು ಹೆಚ್ಚಿಸುವಂತಹ ಯಾವ ಪ್ರಯತ್ನವನ್ನೂ ಮಾಡಲೇ ಇಲ್ಲ. ಈಗಿರುವ ದೇಶಾಭಿಮಾನಿಗಳು ಈಗ ಮೈಸೂರಿನಲ್ಲಿ ಒದಗಿರುವ ಸನ್ನಿವೇಶದಲ್ಲಿ ತಮ್ಮ ಮೇಲೆ ಯಾವ ಕಠಿನವಾದ ಬಂದರೂ ವೆಂಕಟಕೃಷ್ಣಯ್ಯನವರಂತೆ ಮುಂದಾಳುಗಳಾಗಿ ಧೈರ್ಯದಿಂದ ದಿವಾನರಲ್ಲಿಯೂ, ಕಾಂಗ್ರೆಸ್ ನಾಯಕರಲ್ಲಿಯೂ ಸಮಾಲೋಚನೆಯನ್ನು ನಡೆಸಿ ಈಗಿರುವ ಪರಿಸ್ಥಿತಿಯು ಸಮಾಧಾನಕ್ಕೆ ತರಲು ಪ್ರಯತ್ನಿಸದಿದ್ದರೆ ಶಾಂತಿ ಭಂಗವಾಗಿ, ಅನೇಕ ತೊಂದರೆಗಳು ನಡೆದು ಈಗಿನ ಕಷ್ಟಕಾಲದಲ್ಲಿ ಅನಾವಶ್ಯಕವಾಗಿ ಬಡಬಗ್ಗರು ನಾನಾ ವಿಧ ತೊಂದರೆಗಳಿಗೆ ಈಡಾಗಬೇಕಾಗುತ್ತದೆ. ಅಶಾಂತಿಯನ್ನು ಹೆಚ್ಚುವುದು ಸುಲಭ, ತಡೆಯುವುದು ಕಷ್ಟ. ಯೂನಿಯನ್ನಿಗೆ ಸೇರದೆ ಮೈಸೂರಿನಲ್ಲಿ ಶಾಂತಿಗೆ ಭಂಗ ತರುವಂತೆ ಪ್ರಯತ್ನಿಸುವುದು ಸರ್ವರ ಕರ್ತವ್ಯವಾಗಿದೆ.

ಕಾಂಗ್ರೆಸ್ ಕೆಲಸಗಾರರ ಸಭೆ

ನಂಜೆ ೫ ಗಂಟೆಗೆ ಸಯ್ಯಾಜೀರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆ ನಡೆಯುವುದು, ಕೆಲಸಗಾರರೆಲ್ಲರೂ ಬಂದೇ ಬರಬೇಕಾಗಿದೆ. ಅನಂತರ ೬ ಗಂಟೆಗೆ ಸುಭಾಷ್ ಮೈದಾನದಲ್ಲಿ ಬಹಿರಂಗ ಸಭೆ. ಶ್ರೀ ಟಿ. ಸಿದ್ದಲಿಂಗಯ್ಯ ಮತ್ತು ಇತರ ಮುಖಂಡರು ಭಾಷಣ ಮಾಡುವರು.

ಸಂಜೆ ೬ ಗಂಟೆಗೆ ನಂಜನಗೂಡಿನ ಮೈದಾನದಲ್ಲಿ ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಕೆ. ಎಸ್. ಕುಮಾರ್, ಕಾಂಗ್ರೆಸ್ ನಾಯಕರು, ಕಾಂಗ್ರೆಸ್, ನಗರ ಸಂಘ, ಹೆಚ್. ಸಿ. ದಾಸಪ್ಪನವರು ಬಹಿರಂಗ ಸಭೆಯಲ್ಲಿ ಮಾತನಾಡುವರು.

ಸಂಸ್ಥಾನದಲ್ಲಿ ಜರೂರು ಶಾಸನ

ಶಾಂತಿ, ಶಿಸ್ತುಗಳ ರಕ್ಷಣೆಗೆ ವಿಶೇಷಾಧಿಕಾರ

ಬೆಂಗಳೂರು ೨೮

ಸರ್ಕಾರದವರು ನಿನ್ನೆ ದಿನ ಒಂದು ವಿಶೇಷ ಜರೂರು ಶಾಸನವನ್ನು ಜಾರಿ ಮಾಡಿದ್ದಾರೆ. ಸಾಮೂಹಿಕವಾಗಿ ನಡೆಯುವ ಶಾಸನ ವಿರುದ್ಧವಾದ ಕಾರ್ಯಗಳನ್ನು ತಡೆಗಟ್ಟಿ ನ್ಯಾಯ ಮತ್ತು ಶಿಸ್ತುಗಳನ್ನು ಸಂರಕ್ಷಿಸುವುದೇ ಇದರ ಉದ್ದೇಶವೆಂದು ಹೇಳಲಾಗಿದೆ. ಕ್ರಿಮಿನಲ್ ಲಾ ತಿದ್ದುಪಡಿ ಜರೂರು ಶಾಸನವೆಂದು ಇದಕ್ಕೆ ಹೆಸರು. ಯೂನಿಫಾರಮ್ಮುಗಳನ್ನೂ ಶಸ್ತ್ರಗಳನ್ನೂ ಧರಿಸುವುದು, ಸಿಡಿ ಮದ್ದುಗಳನ್ನು ಉಪಯೋಗಿಸುವುದು ಇವೇ ಮುಂತಾದುವನ್ನು ಈ ಶಾಸನದ ಪ್ರಕಾರ ಪ್ರತಿಬಂಧಿಸಲಾಗುವುದು. ಉದ್ರೇಕಕರವಾದ ಸುದ್ದಿಗಳನ್ನೂ ಟೀಕೆಗಳನ್ನೂ ತಡೆಗಟ್ಟಲಾಗುವುದು. ವಿನಾಶ ಕೃತ್ಯಗಳನ್ನೂ, ಪೋಲೀಸಿನವರಲ್ಲಿ ಅವಿಧೇಯತೆಯನ್ನುಂಟುಮಾಡುವುದನ್ನೂ ಅಪರಾಧವೆಂದು ಗೊತ್ತುಮಾಡಲಾಗಿದೆ. ಸರ್ಕಾರ ಆಜ್ಞೆಗಳನ್ನು ಉಲ್ಲಂಘಿಸುವವರನ್ನು ಗುಂಡುಹಾರಿಸಿಕೊಲ್ಲಲೂ ಸಹ ಅಜ್ಞೆ ಮಾಡಲಾಗಿದೆ.

ಸರ್ಕಾರದವರು ಜರೂರು ಪರಿಸ್ಥಿತಿಯು ಒದಗಿದೆಯೆಂದು ಸಾರಿದ ನಂತರವೇ ಕ್ಲಿಷ್ಟವಾದ ಪ್ರದೇಶದಲ್ಲಿ ಈ ಕಾನೂನನ್ನು ಚಲಾಯಿಸಲಾಗುವುದು.

ಈ ಶಾಸನದ ಯಾವ ಕಲಮುಗಳನ್ನೂ ಉಪಯೋಗಿಸುವ ಪರಿಸ್ಥಿತಿಯು ಒದಗದಿರಲೆಂಬುದಾಗಿ ಸರ್ಕಾರದವರು ಆಶಿಸಿದ್ದಾರೆ.

ಟಿ. ಮರಿಯಪ್ಪನವರ ಟೀಕೆ

ಇಂತಹ ಶಾಸನವನ್ನು ಜಾರಿಗೆ ತಂದಿರುವುದರಿಂದ ಸರ್ಕಾರದವರು ವೃಥಾ ಕಳವಳಕ್ಕೂ, ಗಾಬರಿಗೂ ಅವಕಾಶಕೊಟ್ಟಿರುವರಲ್ಲದೆ, ಮಹಾಜನರು ಯಾವ ಕೋಲಾಹಲಗಳಿಗೂ ಅವಕಾಶವೀಯದೆ ಶಾಂತಿಯಿಂದ ವರ್ತಿಸಬೇಕೆಂದೂ ಶ್ರೀ ಟಿ. ಮರಿಯಪ್ಪನವರು ಒಂದು ಹೇಳಿಕೆಯಲ್ಲಿ ಸೂಚಿಸಿರುತ್ತಾರೆ.

ಶಾಲಾ ಕಾಲೇಜುಗಳಲ್ಲಿ ಹರತಾಳ

ಮೈಸೂರು ಕಾಂಗ್ರೆಸ್ ಮತ್ತು ವಿದ್ಯಾರ್ಥಿ ಕಾಂಗ್ರೆಸ್ಸುಗಳ ಕಾರ್ಯಕ್ರಮದಂತೆ ರಾಜಧಾನಿಯ ಎಲ್ಲ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳು ಸಪ್ಟೆಂಬರ್ ೧ ಕ್ಕೆ ಹರತಾಳವನ್ನು ಆಚರಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ರಾಮಕೃಷ್ಣರವರು ತಿಳಿಸಿರುವರು.

ಫ್ರೆಂಚ್ ಸ್ವಾಸ್ತ್ಯಗಳ ಬಗ್ಗೆ ಜಂಟಿ ಹೇಳಿಕೆ

ಹಿಂದೂಸ್ತಾನದಲ್ಲಿರುವ ಫ್ರೆಂಚ್ ಪ್ರದೇಶಗಳ ಭವಿಷ್ಯದ ಬಗ್ಗೆ ಅಲ್ಲಿನ ಪ್ರಜೆಗಳ ಅಪೇಕ್ಷೆಗಳನ್ನೂ, ಫ್ರಾನ್ಸ್ ದೇಶದೊಡನೆ ಅವರು ಇಟ್ಟುಕೊಂಡಿದ್ದ ಸಂಬಂಧವನ್ನೂ ಪರಿಶೀಲಿಸಿ ಅವುಗಳ ಭವಿಷ್ಯವನ್ನು ನಿರ್ಧರಿಸಿ ಉಭಯ ರಾಷ್ಟ್ರಗಳಿಗೂ ಸ್ನೇಹ ಸೌಹಾರ್ದಗಳನ್ನುಂಟುಮಾಡಲು ಫ್ರಾನ್ಸ್ ಮತ್ತು ಇಂ. ಯೂ. ಸರ್ಕಾರಗಳು ನಿರ್ಧರಿಸಿರುವುದಾಗಿ ಉಭಯ ಸರ್ಕಾರಗಳ ಜಂಟಿ ಹೇಳಿಕೆಯೊಂದು ತಿಳಿಸುತ್ತದೆ.

ಕಾಲ್ನಡಿಗೆ ಸತ್ಯಾಗ್ರಹಿಗಳಿಗೆ ಊಟ ವಸತಿ

ಸ್ವಂ. ವ.] ಶ್ರೀರಂಗಪಟ್ಟಣ ೨೮

ಮೊನ್ನೆ ಸಂಜೆ ಕಾಂಗ್ರೆಸ್ ನಾಯಕರಾದ ಶ್ರೀ ಟಿ. ಸಿದ್ದಲಿಂಗಯ್ಯ, ಕೆ. ಎಸ್. ಕುಮಾರ್ ಮತ್ತು ಶ್ರೀ ಎ. ಜಿ. ಬಂಡೀಗೌಡರು ಇಲ್ಲಿನ ಗಾಂಧೀ ಮೈದಾನದಲ್ಲಿ ಸತ್ಯಾಗ್ರಹದ ಪ್ರಚಾರ ಭಾಷಣ ಮಾಡಿದರು. ಬೆಂಗಳೂರಿನಿಂದ ಅರಮನೆಯ ಮುಂದೆ ಸತ್ಯಾಗ್ರಹ ಹೂಡಲು ಕಾಲ್ನಡಿಗೆಯಲ್ಲಿ ಬರುವ ಸತ್ಯಾಗ್ರಹಿಗಳ ತಂಡಗಳಿಗೆ ತಾವು ಊಟ ವಸತಿಗಳನ್ನು ಏರ್ಪಡಿಸುವುದಾಗಿ ಸಾಹುಕಾರ್ ಶ್ರೀ ಎಸ್. ವಿ. ಚಂದ್ರಶೇಖರಯ್ಯನವರು ತಿಳಿಸಿದರು.

ವಿದ್ಯಾರ್ಥಿಗಳು ಸತ್ಯಾಗ್ರಹವನ್ನು ಮುಂದಕ್ಕೆ ಹಾಕಬೇಕು

ಶ್ರೀ ಎಸ್. ಚೆನ್ನಯ್ಯನವರ ಸೂಚನೆ

ಮೈಸೂರು ೨೮

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರು ಈ ಕೆಳಗೆ ಕಂಡಂತೆ ಒಂದು ಹೇಳಿಕೆ ಪ್ರಕಟಿಸಿದ್ದಾರೆ:—

ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸು ಸೆಪ್ಟೆಂಬರ್ ೧ ನೇ ತಾರೀಖಿನಿಂದ ಅರಮನೆಯ ಮುಂದೆ ಸತ್ಯಾಗ್ರಹವನ್ನು ಹೂಡಲು ನಿರ್ಧರಿಸಿದೆಯಷ್ಟೆ. ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಸತ್ಯಾಗ್ರಹವನ್ನು ನಡೆಸಲಿರುವುದರಿಂದ ಮಿಕ್ಕೆಲ್ಲಾ ಸಮಸ್ಯೆಗಳೂ ಅದರಿಂದ ಪರಿಹಾರವಾಗುವುದು. ಆದ್ದರಿಂದ ವಿದ್ಯಾರ್ಥಿ ಕಾಂಗ್ರೆಸ್ಸಿನವರು ೧ ನೇ ತಾರೀಖಿನಿಂದ ಪ್ರಾರಂಭಿಸಲಿರುವ ಸತ್ಯಾಗ್ರಹವನ್ನು ಮುಂದಕ್ಕೆ ಹಾಕಿ ಕಾಂಗ್ರೆಸ್ಸಿನೊಡನೆ ಸಹಕರಿಸಬೇಕೆಂದು ಕೋರುತ್ತೇನೆ.

ಯಜುರುಪಾಕರ್ಮ

ಮೈಸೂರು

ಡಿ. ಸುಬ್ಬಯ್ಯನವರ ರಸ್ತೆಯಲ್ಲಿ ಸಾಧ್ವಿ ಕಛೇರಿಯಲ್ಲಿ ನಾಳೆದ್ದು ಬೆಳಗ್ಗೆ ೬ ಗಂಟೆಗೆ ವೇದರತ್ನಂ ವೆಂಕಟರಾಮಾಚಾರ್ಯರ ಮುಖಾಂತರ ಯಜುರುಪಾಕರ್ಮವು ನಡೆಸಲ್ಪಡುವುದು. ೯ ಗಂಟೆಗೆ ಅವರಿಂದಲೇ ಸಂಸ್ಕೃತ ಪಾಠ ಶಾಲೆಯಲ್ಲಿ ನಡೆಸಲು ಏರ್ಪಾಡಾಗಿದೆ.

ಸುಬ್ಬರಾಯನಕೆರೆಯ ಬಳಿ ಇರುವ ಶ್ರೀ ಗೋಪಾಲಕೃಷ್ಣ ಸ್ವಾಮಿಯವರ ದೇವಾಲಯದಲ್ಲಿ ನಾಳಿದ್ದು ಬೆಳಗ್ಗೆ ೮ ಗಂಟೆಯಿಂದ ಮಧ್ಯಾಹ್ನದವರೆಗೆ ಜೆಬ್ಬಾರ್ ಶ್ರೀ ವೈಷ್ಣವ ಸಂಘದವರು ಏರ್ಪಡಿಸಿರುವರು.

ನಾಳಿದ್ದು ಬೆಳಗ್ಗೆ ೮ ಗಂಟೆಗೆ ಸಂಕೇತಿ ಸಂಪ್ರದಾಯದವರು, ವೈಷ್ಣವರು ಮತ್ತು ಬೋಧಾಯನರಿಗೆ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯುವುದು. ೧೬ನೇ ತಾರೀಖು ಅಲ್ಲೇ ಸಾಮುಗೋಪಾಕರ್ಮವು ಜರುಗುವುದು.

ಸಂತಾಪ ಸೂಚನಾ ಸಭೆಗಳು

ಮೊನ್ನೆ ಒಂಟಿಕೊಪ್ಪಲಿನ ತಿಲಕ ಸಂಘದವರು ಶ್ರೀ ಅನಂತರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದಿವಂಗತ ಭೂಪಾಲ್‌ರವರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ದೇಶೀಯ ವಿದ್ಯಾಶಾಲೆಯಲ್ಲಿಯೂ ಸಹ ಭೂಪಾಲರ ಮರಣದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಲಾಯಿತು.

ಪ್ರಸಿದ್ಧ ಪತ್ರಿಕೆ

ನನ್ನ ಬಟ್ಟೆಯನ್ನು ಹೊಲಿಯುವ E. C. 721675 ನೇ ನಂಬರ್ ಸಿಂಗರ್ ಸೂಯಿಂಗ್ ಮೆಷೀನ್ ಕಳುವಾಗಿರುತ್ತದೆ. ಅದನ್ನು ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುವುದು. ಸಿಕ್ಕಿದರೆ ಈ ಕೆಳಗೆ ಕಂಡ ವಿಳಾಸಕ್ಕೆ ತಿಳಿಯಪಡಿಸಬೇಕು.

B. N. K. Murthy,
Tailor,
1523, Krishnamurthypuram
Mysore.

UNIVERSITY OF MYSORE

Office of the University of Mysore,
Mysore, Dated 20th Aug 47
No Ex 3-193/47-48

NOTIFICATION

UNIVERSITY EXAMINATIONS OF OCTOBER, 1947

It is hereby notified that the October 1947 Examinations will not begin on the dates already notified in this Office Notification No. Ex 3-193/47-48, d[illegible] 5th Aug 1947.

The revised dates on which the Examinations begin will be notified in due course.

By Order,
D. S. GORDON,
Registrar

ಸಾಧ್ವಿ

ತಾ|| ೨೯-೮-೪೭ ಶುಕ್ರವಾರ

ನಿರಾಶಾ ಪರಿಸ್ಥಿತಿ

ಕಾಂಗ್ರೆಸ್ಸಿನವರು ಸತ್ಯಾಗ್ರಹ ಹೂಡಲು ಗೊತ್ತುಮಾಡಿರುವ ಕಾಲವು ಸಮೀಪಿಸಿದಂತೆಲ್ಲಾ ಸರ್ಕಾರದವರ ವಜ್ರಮುಷ್ಟಿಯು ಬಲವಾಗುತ್ತಿರುವಂತೆಯೇ ಕಂಡುಬರುತ್ತಿದೆ. ಪ್ರಜಾವರ್ಗದ ಸಕಲ ಭಾಗಗಳಿಂದಲೂ ಬರುತ್ತಿರುವ ಸಂಧಾನದ ಬೇಡಿಕೆಗಳಿಗೆ ಯಾವ ಪ್ರತಿಕ್ರಿಯೆಯೂ ಆಗಿರುವುದಿಲ್ಲ. ಅದಕ್ಕೆ ಬದಲಾಗಿ ಉಗ್ರಶಾಸನ ಬಾಣವೇ ಪ್ರಯೋಗಿಸಲ್ಪಟ್ಟಿರುತ್ತದೆ. ಸರ್ಕಾರದವರು ನಿರ್ಧರಿಸಿರುವ ತಮ್ಮ ಮುಂದಿನ ವರ್ತನೆಗೆ ಇದೇ ಸೂಚನೆಯಾಗಿದ್ದರೆ ಮುಂದೆ ಸಂಸ್ಥಾನದ ಸಕಲ ನಿವಾಸಿಗಳೂ ಬಹಳ ವಿಷಾದ ಪಡಬೇಕಾದ ಪರಿಸ್ಥಿತಿಯು ಸಂಭವಿಸೀತು.

ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ಹೂಡುವುದಾಗಿ ನಿರ್ಧರಿಸಿರುವುದೇನೋ ನಿಜ; ಇದರ ಹಿನ್ನೆಲೆಯು ಈಗ ಸರ್ವರಿಗೂ ವೇದ್ಯವಾಗಿರುತ್ತದೆ. ಶ್ರೀಮನ್ಮಹಾರಾಜರವರಿಂದಲೇ ಘೋಷಿಸಲ್ಪಟ್ಟ ದಿವಾನರಿಂದ ಇತ್ತೀಚೆಗೆ ಸೂಚಿಸಲ್ಪಟ್ಟು ಸಕಲ ಪ್ರಜೆಗಳಿಂದಲೂ ಬೇಡಲ್ಪಟ್ಟಿರುವ ಪ್ರಜಾಪ್ರಭುತ್ವದ ಸಾಧನೆಗಾಗಿಯೇ ಕಾಂಗ್ರೆಸ್ಸಿನವರು ಕಾತುರರಾಗುತ್ತಿರುವರು. ಈ ಗುರಿಯ ಸಾಧನೆಯಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರುವುದಿಲ್ಲ.

ಪ್ರಜೆಗಳಿಗೂ, ಪ್ರಭುತ್ವದವರಿಗೂ ಧ್ಯೇಯದ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲದಿರೆ ಅದರ ಸಾಧನೆಗಾಗಿ ಒಂದು ದೊಡ್ಡ ಚಳುವಳಿಯು ನಡೆಯುವ ಪರಿಸ್ಥಿತಿಯು ಅಗತ್ಯವಾಗಬಹುದೇ? ಇಂದಿಲ್ಲ, ನಾಳೆ ಆ ಗುರಿಯನ್ನು ಸಾಧಿಸುವುದಾಗಿ ಸರ್ವರೂ ಹೇಳುತ್ತಿರುವರು. ಆದರೆ ಯಾವ ಅನರ್ಥವೂ, ಹಿಂಸೆಯೂ, ಕಷ್ಟ, ನಷ್ಟಗಳೂ ಇಲ್ಲದಂತೆ ಪಡೆಯಿಸಿ ಕೊಡುವುದು ಶ್ರೀಮನ್ಮಹಾರಾಜರವರ, ಅವರ ಸಲಹೆಗಾರರ ಮತ್ತು ಅಧಿಕಾರ ವರ್ಗದವರ ಕೈಯ್ಯಲ್ಲಿರುತ್ತದೆ.

ತಮ್ಮ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ, ತಮ್ಮಲ್ಲಿ ಸಂಪೂರ್ಣ ರಾಜಭಕ್ತಿ ವಿಶ್ವಾಸಗಳನ್ನು ಹೊಂದಿರುವ ಪ್ರಜೆಗಳ ಈ ಬೇಡಿಕೆಯನ್ನು ನೆರವೇರಿಸಲು ಶ್ರೀಮನ್ಮಹಾರಾಜರವರು ಶೀಘ್ರವಾಗಿ ಗಮನ ಕೊಟ್ಟು ಅದನ್ನು ಬಗೆ ಹರಿಸುವುದೇ ಈಗ ಉಳಿದಿರುವ ಮಾರ್ಗ. ಈ ಮಾರ್ಗದಲ್ಲಿ [illegible]ವನ್ನು ಭಗವಂತನು ಪ್ರೇರೇಪಿಸಲೆಂಬುದೇ ನಮ್ಮ ಪ್ರಾರ್ಥನೆ

WOODLANDS

Morning shows for 4 days from 29-8-47 daily at 10-30 a. m.

WarnerBrother's Production

Destination Tokyo

with Cary Grand and Jhon Garfield

Ptd. printed and published by A. R. Nagarajan at the Sadhvi Press D Subbaiah Road Mysore

ವುಡ್‌ಲ್ಯಾಂಡ್ಸ್

೨೯-೮-೪೭ ರಿಂದ

ದಿನವಹಿ ಮೂರು ಆಟಗಳು

ವಾಮಿಕ್ ಅಜ್ರಾ

(ಹಿಂದಿ)

—: ತಾರಾಗಣ :—

ಸ್ವರ್ಣಲತಾ ಮತ್ತು ನಾಜೀರ್

Distributors Contact
HANSA PICTURES
Chickpet, Bangalore City

ರಾಜಕಮಲ್

ತಾ|| 29-8-47 ರಿಂದ

ಪ್ರತಿ ದಿನ ಮೂರು ಆಟಗಳು

ಬಾಂಬೆ ಟಾಕೀಸಿನವರ ಅತ್ಯುತ್ತಮ ಚಿತ್ರ

ಝೂಲಾ

—: ಭೂಮಿಕೆ :—

ಅಶೋಕ ಕುಮಾರ್, ಲೀಲಾಚಿಟ್ನಿಸ್

From 29-8-47 for 4 days daily at 10-30 a. m.

Hit Parade of 1947

Featuring Eddie Albert, Edwards constance Moore, Joan

ಜೀವಿತದಲ್ಲಿ ನವಚೇತನ

ಪಂಡಿತ ಡಿ. ಗೋಪಾಚಾರ್ಲುರವರ

ಅರುಣಾ

ಗರ್ಭಾಶಯ ರೋಗ ನಿವಾರಿಣಿ

ಸದಾ ಮನೆಗೆಲಸದಲ್ಲಿಯೇ ಉಳಿಯುವಂತೆ ನಿರ್ಬಂಧಪಡಿಸಿದ್ದ ತನ್ನ ಗರ್ಭಾಶಯ ಯಾತನೆಗಳನ್ನೆಲ್ಲಾ ನಿವಾರಿಸಿಕೊಂಡು ಎಂದಿನಂತೆ ಸಂತೋಷಸಮಾರಂಭಗಳಲ್ಲಿ ಭಾಗಿಯಾಗಲು ಆಕೆಯು ಇದಿರು ನೋಡುತ್ತಿದ್ದಾಳೆ

ಆಯುರ್ವೇದಾಶ್ರಮಂ ಲಿಮಿಟೆಡ್ ಮದ್ರಾಸು 17

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್, ಮೈಸೂರು

ನೋಟೀಸು

ಈ ನೋಟೀಸು ಮೂಲಕ ತಿಳಿಸುವುದೇನೆಂದರೆ —

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್ಡಿನ ಷೇರುದಾರರ ಇಪ್ಪತ್ತೊಂದನೆಯ ಸಾಮಾನ್ಯ ಮಹಾ ಸಭೆಯು ಮೈಸೂರು ಸಿಟಿ ಚಾಮರಾಜ ರಸ್ತೆಯಲ್ಲಿರುವ ಕೋ-ಆಪರೇಟಿವ್ ಯೂನಿಯನ್ ಕಟ್ಟಡದಲ್ಲಿ ಈ ಕೆಳಗೆ ಕಾಣಿಸಿರುವ ಕಾರ್ಯಕ್ರಮಗಳನ್ನು ವ್ಯವಹರಿಸಲು ೧೯೪೭ ನೇ ಅಕ್ಟೋಬರ್ ಮಾಹೆ ೪ ನೇ ತಾರೀಖು ಶನಿವಾರ ಮಧ್ಯಾಹ್ನ ೪ ಘಂಟೆಗೆ ನಡೆಯುತ್ತದೆ.

೧) ೧೯೪೭ ನೇ ಜೂನ್ ೩೦ ನೇ ತಾರೀಖಿಗೆ ಅಂತ್ಯವಾದ ವರ್ಷದ ಪರಿಶೋಧಿತವಾದ ಲೆಕ್ಕ ಪತ್ರಗಳನ್ನೂ ಮತ್ತು ಡೈರೆಕ್ಟರುಗಳ ವರದಿಯನ್ನೂ ಸಹ ಅಂಗೀಕರಿಸುವುದು.

೨) ಡಿವಿಡೆಂಡ್ ಮತ್ತು ಬೋನಸ್ಸನ್ನು ನಿರ್ಧರಿಸುವುದು

೩) ಸರದಿ ಮೇರೆಗೆ ನಿವೃತ್ತರಾಗುವ ಶ್ರೀಮಾನ್ ಸಿ. ಹನುಮಂತಯ್ಯನವರು, ದಿವಾನ್ ಬಹದ್ದೂರ್ ರಾಜಕಾರ್ಯ ಪ್ರಸಕ್ತ ಶ್ರೀಮಾನ್ ಕೆ. ರಾಮಸ್ವಾಮಿಯವರು ಮತ್ತು ಶ್ರೀಮಾನ್ ಬಿ. ಸಂಜೀವಯ್ಯನವರು ಇವರ ಸ್ಥಾನಗಳಿಗೆ ಮೂವರು ಡೈರೆಕ್ಟರುಗಳನ್ನು ಚುನಾಯಿಸುವುದು

೪) ಪ್ರಸ್ತುತ ವರ್ಷಕ್ಕೆ (ಅಂದರೆ ೧೯೪೭ ನೇ ಜುಲೈ ೧ ರಿಂದ ೧೯೪೮ ನೇ ಜೂನ್ ೩೦ ನೇ ತಾರೀಖಿನ ವರೆಗೆ) ಆಡಿಟರುಗಳನ್ನು ನೇಮಿಸಿ ಅವರ ಸಂಭಾವನೆಯನ್ನು ನಿರ್ಧರಿಸುವುದು.

ಕಂಪೆನಿಯ ಷೇರ್ ಟ್ರಾನ್ಸ್‌ಫರ್ ಪುಸ್ತಕಗಳು ೧೯೪೭ ನೇ ಸೆಪ್ಟೆಂಬರ್ ೧೯ರಿಂದ ಅಕ್ಟೋಬರ್ ೪ ನೇ ತಾರೀಖಿನ ವರೆಗೆ, ಈ ಎರಡು ದಿನಗಳೂ ಸೇರಿ ಮುಚ್ಚಲ್ಪಡುತ್ತವೆ.

ಬೋರ್ಡಿನ ಅಪ್ಪಣೆ ಪ್ರಕಾರ,
ಬಿ. ಎಸ್. ವಿಶ್ವೇಶ್ವರಯ್ಯ,
ಸೆಕ್ರೆಟರಿ

ಮೈಸೂರು
೨೪ ಆಗಸ್ಟ್ ೧೯೪೭

ಸೂಚನೆ.— ೧ ಡಿವಿಡೆಂಡ್ ಮತ್ತು ಬೋನಸ್ ನಿರ್ಧರಿಸಿದ ನಂತರ ಅವುಗಳನ್ನು ಮೈಸೂರು ಸಿಟಿಯಲ್ಲಿರುವ "ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್" ನ ಮುಖಾಂತರ ೧೯೪೭ ನೇ ಅಕ್ಟೋಬರ್ ೧೧ ನೇ ತಾರೀಖಿನ [illegible] ಪಾವತಿ ಮಾಡಲಾಗುವುದು. ಡಿವಿಡೆಂಡ್ ಮತ್ತು ಬೋನಸ್ [illegible] ೧೯೪೭ ನೇ ಸೆಪ್ಟೆಂಬರ್ ೧೮ ನೇ ತಾರೀಖಿನ ದಿನ ಕಂಪೆನಿಯ ಷೇರುದಾರರ ಪಟ್ಟಿಯಲ್ಲಿ [illegible] ಷೇರುದಾರರಿಗೆಲ್ಲಾ ಸಲ್ಲಿಸಲಾಗುವುದು.

೨ ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ೧೦೩ ನೇ ನಿಯಮದ ಪ್ರಕಾರ ಡೈರೆಕ್ಟರ ಸ್ಥಾನಕ್ಕೆ ಉಮೇದುವಾರಿ ನೋಟೀಸನ್ನು [illegible] ೧೯೪೭ ನೇ ಸೆಪ್ಟೆಂಬರ್ ೨೭ ನೇ ತಾರೀಖು ಮಧ್ಯಾಹ್ನ ೪ ಘಂಟೆಯ ಒಳಗಾಗಿ ಕಂಪೆನಿಯ ರಿಜಿಸ್ಟರ್ಡ್ ಆಫೀಸಿಗೆ ಲಿಖಿತ [illegible] ಕೊಡತಕ್ಕದ್ದು.

೩ [illegible] ತಮ್ಮ ವಿಳಾಸದಲ್ಲಿ ಬದಲಾವಣೆ [illegible] ಕಂಪೆನಿಗೆ [illegible]

ಚಾಮುಂಡೇಶ್ವರಿ ಟಾಕೀಸ್

29-8-47 ರಿಂದ

ದಿನವಹಿ ೩ ಆಟಗಳು

ಬೆಂಗಳೂರು

ಪ್ರಭಾತ್ ಟಾಕೀಸಿನಲ್ಲಿ

ಪ್ರೇಕ್ಷಕರು ಕಿಕ್ಕಿರಿದು

ನೋಡುತ್ತಿರುವ

[illegible]

(ಹಿಂದಿ)

—: ಪಾತ್ರ :—

ಸುರೈಯ್ಯಾ

[illegible]

[illegible]

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೩೦-೮-೪೭ [ಸಂಚಿಕೆ ೩೪

ಸುಧಾರಣೆ ಬಗ್ಗೆ ದಿವಾನರ ಹೇಳಿಕೆ

ವಿಜಯ ಪತ್ರಿಕೆಗೆ ಠೇವಣಿ ನೋಟೀಸು

ಮೈಸೂರು ೩೦

ರಾಜಧಾನಿಯಲ್ಲಿ ಪ್ರಕಟವಾಗುತ್ತಿರುವ ವಿಜಯ ಪತ್ರಿಕೆಯ ಸಂಪಾದಕರಾದ ಶ್ರೀ ...ರಾಮಣ್ಣನವರೂ, ಮುದ್ರಣಕಾರರಾದ ...ಮಳ ಪ್ರೆಸ್ಸಿನವರೂ ಸಹ ವೃತ್ತ ಪತ್ರಿಕಾ ಶಾಸನದ ಪ್ರಕಾರ ತಲಾ ೨೫೦ ರೂ ...ವಣಿ ಕೊಡಬೇಕೆಂದು ಜಿಲ್ಲಾಧಿಕಾರಿಗಳವರಿಗೆ ನೋಟೀಸು ಕೊಟ್ಟಿರುವರು

ಸಂಗೀತ

ನಾಳೆ ರಾತ್ರಿ ೯ ಗಂಟೆಗೆ ಡಿ ಸುಬ್ಬಯ್ಯನವರ ರಸ್ತೆಯಲ್ಲಿರುವ ಸಾಧ್ವಿ ಕಛೇರಿಯ ವಿದ್ವಾನ್ ಎಂ. ಎಸ್. ವೆಂಕಟರಾಮಯ್ಯನವರಿಂದ ಸಂಗೀತವು ನಡೆಯುವುದು. ಸರ್ವರಿಗೂ ಸ್ವಾಗತವಿದೆ.

ಇಂದಿನ ರಾಜಕೀಯದ ಬಿಕ್ಕಟ್ಟು

ಸಿ. ನರಸಿಂಹಯ್ಯನವರ ಸಲಹೆ

ಮೈಸೂರು ೨೯

ರಾಜಧಾನಿಯ ವಕೀಲರಾದ ರಾಜಸೇವಾ ಪ್ರಸಕ್ತ ಶ್ರೀ ಸಿ. ನರಸಿಂಹಯ್ಯನವರು ಕಾಂಗ್ರೆಸ್ಸಿನ ಹೋರಾಟದ ಬಗ್ಗೆ ಒಂದು ದೀರ್ಘವಾದ ಹೇಳಿಕೆಯನ್ನಿತ್ತಿದ್ದಾರೆ. ಸ್ಥಳಾಭಾವದಿಂದ ಅದನ್ನು ಪೂರ್ತಿಯಾಗಿ ಪ್ರಕಟಿಸಲಾಗಲಿಲ್ಲ. ಅದರಲ್ಲಿ ಅವರು ಈ ರೀತಿ ಹೇಳಿರುತ್ತಾರೆ :—

ಸರ್ಕಾರದವರಿಗೆ ಆಗಸ್ಟ್ ೧೫ರ ವರೆಗೆ ... ವಿಶೇಷ ಬೆಂಬಲ ಈಗ ತಪ್ಪಿ... ಇನ್ನು ಮುಂದೆ ಅವರಿಗೆ ಪ್ರಜಾ ವಿ...ನವೇ ಪೂರ್ಣ ಬೆಂಬಲ ಅದರ ಸಾ...ನೆಗೆ ನಿಷ್ಪಕ್ಷಪಾತವಾದ ವರ್ತನೆಯೇ ಸ...ವಾದ ಮಾರ್ಗ ಕೋಮುವಾರು ...ನೆಯಿಂದ ನಡೆಸುವ ಯಾವ ಸರ್ಕಾರವೂ ಯಶಸ್ವಿಯಾಗಲಾರದು. ನಮ್ಮ ಸಂಸ್ಥಾನದಲ್ಲಿ ಕೋಮುವಾರು ಭಾವನೆ ಬೆಳೆದಿದೆ. ವಿಶ್ವವಿದ್ಯಾಲಯದ ಆಡಳಿತದಲ್ಲಂತೂ ಇದು ಚೆನ್ನಾಗಿ ಎದ್ದು ಕಾಣುತ್ತದೆ. ಇದರಿಂದ ರಾಜ್ಯಾಡಳಿತ ಸಡಿಲಗೊಳ್ಳಬಹುದು. ಶ್ರೀಮನ್ಮಹಾರಾಜರವರು ಸುಧಾರಣೆಗಳ ಬಗ್ಗೆ ಸಲಹೆ ಕೊಡಲು ... ಹೊರಡಿಸಿ ಎಂಟು ತಿಂಗಳುಗಳಾದವು. ಅದನ್ನು ಕಾರ್ಯರೂಪಕ್ಕೆ ... ಅಧಿಕಾರಿಗಳಿಗಿರುವ ಅಡಚಣೆಯೇನೆಂಬುದು ಗೊತ್ತಿಲ್ಲ. ಅಥವಾ ಹಾಗಿನ ... ಅವುಗಳ ನಿವಾರಣೆಗಾಗಿ ... ಕಾರ್ಯಕ್ರಮವನ್ನೂ ಕೈಗೊಂಡಂತೆ ಕಾಣುವುದಿಲ್ಲ. ಈ ರೀತಿ ಮುಂದುವರಿಸುವುದರಿಂದ ಪ್ರಜೆಗಳು ಬೇಸತ್ತು ... ಹೋಗುವುದು ಸ್ವಾಭಾವಿಕವಾದುದು. ಕಾಂಗ್ರೆಸ್ಸಿನವರ ಸತ್ಯಾಗ್ರಹದ ನಿರ್ಧಾರವಾ... ಸಹ ಇದರಿಂದಲೇ ಆಗಿದೆ. ಆದುದರಿಂದ ಅಧಿಕಾರಿಗಳು ಪ್ರಭು ಘೋಷಣೆ... ಕಾರ್ಯರೂಪಕ್ಕೆ ಬರುವಂತೆ ತೀವ್ರ ... ಕ್ರಮ ಕೈಗೊಳ್ಳುವುದು ಅವಶ್ಯಕ. ಕಾಂಗ್ರೆಸ್ಸಿನವರೂ ಸಹ ತಮ್ಮ ಈ ನಿರ್ಧಾರವನ್ನು ಬದಿಗೊತ್ತಿ ಮೊದಲು ಶ್ರೀಮನ್ಮಹಾರಾಜರವರ ಘೋಷಣೆಯು ಇನ್ನೂ ಕಾರ್ಯರೂಪಕ್ಕೆ ಬಂದಿರದಿರುವುದರ ಕಾರಣವನ್ನು ತಿಳಿಯಬೇಕು. ಅದರ ನಿವಾರಣೆಗೆ ಯತ್ನಿಸುವುದು ಒಳ್ಳೆಯದು.

ವಿದ್ಯಾರ್ಥಿ ಕಾಂಗ್ರೆಸ್ಸಿನ ಕರೆ

ಮೈಸೂರು ಕಾಂಗ್ರೆಸ್ಸಿನವರು ಸೆಪ್ಟೆಂಬರ್ ೧ ನೇ ತಾ|| ಜವಾಬ್ದಾರೀ ಸರ್ಕಾರಕ್ಕಾಗಿ ಹೂಡುವ ಹೋರಾಟಕ್ಕೆ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳೆಲ್ಲರೂ ಸಂಪೂರ್ಣ ಬೆಂಬಲವನ್ನು ತೋರಿಸಲು ಆ ದಿನ ಶಾಲಾ ಕಾಲೇಜುಗಳಿಗೆ ಹೋಗದೆ ಹರತಾಳವನ್ನು ಶಾಂತಿ, ಶಿಸ್ತು ಮತ್ತು ಅಹಿಂಸಾತ್ಮಕವಾಗಿ ಆಚರಿಸಬೇಕು

ಜವಾಬ್ದಾರೀ ಸರ್ಕಾರವು ಇಡೀ ಮೈಸೂರು ಜನತೆಗಾಗಿ-ಎಂಬುದನ್ನು ವಿದ್ಯಾರ್ಥಿಗಳೆಲ್ಲರೂ ಗಮನಿಸಿ ಈ ಮಹಾಕಾರ್ಯ ಸಾಧನೆಗಾಗಿ ಎಲ್ಲರೂ ದುಡಿಯಬೇಕು; ಅಗತ್ಯವಾದರೆ ಅದಕ್ಕಾಗಿ ಮಡಿಯಲೂ ಸಿದ್ಧರಾಗಿರಬೇಕು ಸರ್ಕಾರದ ದಯೆ, ದಾಕ್ಷಿಣ್ಯಗಳಿಗೆ ಒಳಗಾಗದೆ ಕಾಂಗ್ರೆಸ್ಸಿನ ರೀತಿ ನೀತಿಗಳನ್ನು ಟೀಕಿಸುತ್ತಿರುವವರ ಮಾತನ್ನು ಗಮನಿಸದೆ ಜನತೆಯ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಇದೇ ಅಂತ್ಯ ಹೋರಾಟವಾಗಿ ಪರಿಣಮಿಸುವಂತೆ ಈ ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಿ, ಜಯವನ್ನು ಗಳಿಸಬೇಕು

ಸೆಪ್ಟೆಂಬರ್ ೧ ನೇ ತಾರೀಖು ಬೆಳಗ್ಗೆ ೮ ಗಂಟೆಗೆ ವಿದ್ಯಾರ್ಥಿಗಳೆಲ್ಲರೂ ಸುಬ್ಬರಾಯನ ಕೆರೆಯಲ್ಲಿ ನಡೆಯುವ ರಾಷ್ಟ್ರ ಧ್ವಜಾರೋಹಣ ಸಮಾರಂಭದಲ್ಲಿ ಭಾಗವಹಿಸಬೇಕು. ಅನಂತರ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳೆಲ್ಲರೂ ಶಾಲಾ ಕಾಲೇಜುಗಳಿಗೆ ಹೋಗದೆ ಸಂಪೂರ್ಣ ಮುಷ್ಕರವನ್ನು ಹೂಡಿ ತಮ್ಮ ತಮ್ಮ ಶಾಲೆಗಳಿಂದ ನೆರವಣಿಗೆಯ ಮೂಲಕ ೧೧|| ಗಂಟೆಗೆ ಮಹಾರಾಜ ಕಾಲೇಜ್ ಮುಂಭಾಗದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಗವಹಿಸಬೇಕು-ಎಂದು ಕಾರ್ಯದರ್ಶಿಗಳಾದ ಶ್ರೀ ಶಾಮಸುಂದರ್‌ರವರು ಪ್ರಾರ್ಥಿಸಿದ್ದಾರೆ.

ಪೌರಸಭೆಯಲ್ಲಿ ಸಭಾ ಪರಿತ್ಯಾಗ

ಮೈಸೂರು ೩೧

ಸರ್ಕಾರದವರು ಜಾರಿಮಾಡಿರುವ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ತಿದ್ದುಪಡಿ ...ವನ್ನು ಪ್ರತಿಭಟಿಸುವುದಕ್ಕಾಗಿ ಈ ದಿನ ಪುರಸಭೆಯು ಮುಂದೆ ಬಂದ ನಿರ್ಣಯವನ್ನು ಅಧ್ಯಕ್ಷರು ತಳ್ಳಿ ಹಾಕಿದುದರಿಂದ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭಾ ಪರಿತ್ಯಾಗ ಮಾಡಿದರು.

ಸೂಚನೆ

ಅವತ್ತಂಭ ಉಪಾಕರ್ಮದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

ನಾಳಿದ್ದೂ ಸಹ ಹರತಾಳದ ಪ್ರಯುಕ್ತ ಸಾಧ್ವಿ ಪತ್ರಿಕೆ ಪ್ರಕಟವಾಗುವುದಿಲ್ಲ.

—ವ್ಯವಸ್ಥಾಪಕ

೧ ನೇ ತಾರೀಖು ಹರತಾಳ ಆಚರಿಸಬೇಕು.

ಚೌಡಯ್ಯನವರ ಸೂಚನೆ

ಮೈಸೂರು ೩೦

ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಈ ರೀತಿ ಒಂದು ಹೇಳಿಕೆ ಇತ್ತಿದ್ದಾರೆ:—

ಸೆಪ್ಟೆಂಬರ್ ೧ ನೇ ತಾರೀಖು ಕಾಂಗ್ರೆಸ್ಸಿನವರೂ, ವಿದ್ಯಾರ್ಥಿಗಳೂ ಹೂಡುವ ಸತ್ಯಾಗ್ರಹದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಲು ಆ ದಿನ ಎಲ್ಲ ವರ್ತಕರೂ, ಹೋಟೆಲ್ ಮಾಲೀಕರೂ ತಮ್ಮ ಅಂಗಡಿಗಳನ್ನು ಮುಚ್ಚಿ ವ್ಯಾಪಾರ ವ್ಯವಹಾರಗಳನ್ನು ನಿಲ್ಲಿಸಬೇಕು. ಮತ್ತು ಆ ದಿನ ಬೆಳಗ್ಗೆ ೯ ಗಂಟೆಗೆ ಸುಬ್ಬರಾಯನ ಕೆರೆ ಮೈದಾನದಲ್ಲಿ ನಡೆಯುವ ಧ್ವಜಾರೋಹಣ ಸಮಾರಂಭದಲ್ಲಿಯೂ, ಸಂಜೆ ೬-೩೦ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಸೇರುವ ಬಹಿರಂಗ ಸಭೆಯಲ್ಲಿಯೂ ಭಾಗವಹಿಸಬೇಕು.

ಸೆಪ್ಟೆಂಬರ್ ೧ ನೇ ತಾರೀಖು ಹರತಾಳ

ರಾಜಧಾನಿಯಲ್ಲಿ ಕಾರ್ಯಕ್ರಮ

ಸೆಪ್ಟೆಂಬರ್ ೧ ನೇ ತಾರೀಖು ಸೋಮವಾರ ನಗರದ ಎಲ್ಲಾ ವರ್ತಕರೂ, ವಿದ್ಯಾರ್ಥಿಗಳೂ, ಕೆಲಸಗಾರರೂ ಮತ್ತು ಇತರರೂ ಸಂಪೂರ್ಣ ಹರತಾಳವನ್ನು ಶಾಂತಿಯಿಂದಲೂ, ಶಿಸ್ತಿನಿಂದಲೂ ಆಚರಿಸಬೇಕು

ಬೆಳಗ್ಗೆ ೯ ಗಂಟೆಗೆ ಸುಬ್ಬರಾಯನ ಕೆರೆ ಮೈದಾನದಲ್ಲಿ ಧ್ವಜಾರೋಹಣ.

೯-೩೦ ಗಂಟೆಯಿಂದ ಮೆರವಣಿಗೆ

ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ

ಪುರ ನಿವಾಸಿಗಳೆಲ್ಲರೂ ಭಾಗವಹಿಸಬೇಕಾಗಿ ವಿನಂತಿ.

ನಗರ ಕಾಂಗ್ರೆಸ್ ಸಮಿತಿ
ಮೈಸೂರು

ದಿವಾನರ ಮನವಿ

ಸುಧಾರಣೆ ಬಗ್ಗೆ ವಿವರಣೆ

ಸ್ವಂ ಸು. ಪು. (ಿ) [ಬೆಂಗಳೂರು ೩೦

ಬೆಂಗಳೂರು ವರ್ತಕರ ನಿಯೋಗದವರು ನಿನ್ನೆ ರಾತ್ರಿ ದಿವಾನರನ್ನು ಕಂಡು ಪ್ರಕೃತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಜವಾಬ್ದಾರೀ ಸರ್ಕಾರದ ಘೋಷಣೆಯ ಬಗ್ಗೆ ಒತ್ತಾಯಪಡಿಸಿದ ಮೇಲೆ ದಿವಾನರು ಈ ದಿನ ಒಂದು ಹೇಳಿಕೆಯನ್ನಿತ್ತಿರುವರು ಶ್ರೀ ಮನ್ಮಹಾರಾಜರವರಿಗೆ ತಮ್ಮ ಸಲಹೆಗಳನ್ನು ಒಪ್ಪಿಸಲು ಅವಕಾಶವಾದುದಕ್ಕೆ ತಾವು ಉತ್ತರವಾದಿಗಳಲ್ಲವೆಂದು ಅವರು ಹೇಳಿರುವರು.

ಅವರು ಹೇಳಿಕೆಯಲ್ಲಿ ಈ ರೀತಿ ತಿಳಿಸುವರು:-

ರಾಜ್ಯಾಂಗ ಸಭೆ ಮತ್ತು ಡೊಮಿನಿಯನ್ನುಗಳಲ್ಲಿ ಮೈಸೂರಿನ ಪ್ರವೇಶಕ್ಕೆ ಸಂಬಂಧಪಟ್ಟ ವಿಷಯವಾಗಿ ಭಾರತ ಡೊಮಿನಿಯನ್ ಮಂತ್ರಿಗಳೊಡನೆ, ಸಮಾಲೋಚನೆ ನಡೆಸಬೇಕಾಗಿದ್ದಿತು ಜೊತೆಗೆ ಸುಧಾರಣಾ ಸಲಹಾ ಸಮಿತಿಯನ್ನು ರಚಿಸಲಾಯಿತು ಅದರಲ್ಲಿ ಕಾಂಗ್ರೆಸ್ಸಿನವರು ಸೇರದಿರುವುದು ವಿಷಾದಕರ. ಕಾಲಹರಣ ಅಥವಾ ಕುಂಠಿತ ನೀತಿಯಿಂದ ಈ ಸಮಿತಿಯನ್ನು ರಚಿಸಿಲ್ಲ. ಅತ್ಯಧಿಕ ಪ್ರಮಾಣದ ಒಪ್ಪಂದದಿಂದ ಸುಧಾರಣೆಗಳನ್ನು ಸೂಚಿಸುವುದೇ ಇದರ ಉದ್ದೇಶ ಈಗಲೂ ಕಾಂಗ್ರೆಸ್ಸಿನವರು ಈ ಸಮಿತಿಯಲ್ಲಿ ಸೇರಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಸೆಪ್ಟೆಂಬರ್ ತಿಂಗಳಲ್ಲಿ ಸಮಿತಿಯ ಕೆಲಸಗಳು ಮುಗಿಯುವುವು ಅಕ್ಟೋಬರ್ ಆರಂಭದಲ್ಲಿ ವರದಿಯನ್ನು ನಾನು ಒಪ್ಪಿಸುತ್ತೇನೆ ಸಂಸ್ಥಾನದ ರಾಜಕೀಯ ಪ್ರಗತಿಯನ್ನು ತಡೆಗಟ್ಟಲು ಯಾವ ಕಡೆಯಿಂದಲೂ ಪ್ರಯತ್ನಗಳು ನಡೆಯುತ್ತಿಲ್ಲವೆಂದು ನಾನು ಭರವಸೆ ಕೊಡುತ್ತೇನೆ

ಜನರ ಅಪೇಕ್ಷೆಗೆ ಅನುಗುಣವಾದ ಒಂದು ಬಗೆಯ ಜವಾಬ್ದಾರೀ ಸರ್ಕಾರವನ್ನು ಶಿಫಾರಸು ಮಾಡುವುದೇ ನನ್ನ ಉದ್ದೇಶ. ಉಗ್ರತರವಾದ ಘೋಷಣೆಗಳನ್ನು ಎಬ್ಬಿಸಿ ರಕ್ತವನ್ನು ಕುದಿಸುವ ಭಾಷೆಗಳನ್ನು ಉಪಯೋಗಿಸುವುದು ವಾಸ್ತವವಾಗಿ ಇಲ್ಲದಿರುವ ಊಹಾ ರಾಜ್ಯದ ಶತ್ರುಗಳ ಮೇಲೆ ಸಮರವನ್ನು ಹೂಡಿದಂತೆಯೇ ಸರಿ

ಕಾಲವು ಕಠಿಣವಾಗಿರುತ್ತದೆ. ದುಷ್ಟ ಶಕ್ತಿಗಳು ಇತರ ಕಡೆಗಳಲ್ಲಿ ಪ್ರಚೋದಿಸಲ್ಪಟ್ಟಿರುತ್ತವೆ ಇಲ್ಲಿಯೂ ಅಂತಹ ಶಕ್ತಿಗಳಿಗೆ ಎಡೆಕೊಡುವುದು ಸರಿಯಲ್ಲ ಇನ್ನು ಕೆಲವು ದಿನಗಳಲ್ಲಿಯೇ ನನ್ನ ಅಭಿಪ್ರಾಯಗಳನ್ನು ಹೊರಗೆಡಹುವುದರಿಂದ ಅನಂತರ ಯಾರು ಬೇಕಾದರೂ ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದು. ಕೇವಲ ಆಂದೋಳನವನ್ನೆಬ್ಬಿಸುವುದರಿಂದ ಯಾವ ಲಾಭವೂ ಇಲ್ಲ; ಕೆಲವು ವಾರ ಕಾಲ ಕಾದು ನೋಡುವುದರಿಂದ ಯಾವ ನಷ್ಟವೂ ಇಲ್ಲ ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಸಕಲರೂ ಶಾಂತಿಯಿಂದ ವರ್ತಿಸಿ ಯಾವ ಕೋಲಾಹಲಕ್ಕೂ ಅವಕಾಶವಾಗದಂತೆ ನಡೆಯಬೇಕೆಂದು ನಾನು ಬೇಡುತ್ತೇನೆ.

ದಿವಾನರು ಮೈಸೂರಿಗೆ

ದಿವಾನರು ನಿನ್ನೆ ಸಂಜೆ ಬೆಂಗಳೂರಿನಿಂದ ಹೊರಟು ಇಂದು ಈ ದಿನ ಮಧ್ಯಾಹ್ನ ೧೨-೩೦ ಗಂಟೆಗೆ ರಾಜಧಾನಿಗೆ ಆಗಮಿಸಿದರು.

ಸಾಧ್ವಿ

ತಾ॥ ೩೦-೮-೪೭ ಶನಿವಾರ

ಪ್ರಭುಗಳಲ್ಲಿ ಮೊರೆ

ಸಂಸ್ಥಾನದಲ್ಲಿ ಇಂದಿನ ಗೊಂದಲ ಸ್ಥಿತಿಯು ಬ… ನಾವು ನಮ್ಮ ಶ್ರೀಮನ್ಮಹಾರಾಜರವ…ಲ್ಲಿ ಈ ನಮ್ಮ ಸ್ವತಸ್ಸ್ಪೂರ್ತವಾದ ಮನ…ಯನ್ನು ಅತ್ಯಂತ ರಾಜಭಕ್ತಿ ವಿಶ್ವಾಸ ಪೂರ್ವಕವಾಗಿ ಬಿನ್ನೈಸಿಕೊಳ್ಳಲು ಬಯಸು…ತ್ತೇವೆ. ಇಂದಿನ ಪರಿಸ್ಥಿತಿಯನ್ನು ಶಾಂತ…ಗೊಳಿಸಿ ಸಮುಕ್ತರಲ್ಲಿಯೂ ಸಮಾಧಾನವ…ನ್ನು, ಸಂತೃಪ್ತಿಯನ್ನೂ ಉಂಟುಮಾಡು…ವ ಶಕ್ತಿಯು ಮಹಾಪ್ರಭುಗಳಲ್ಲಿ ಮಾತ್ರ…ವಿರುತ್ತದೆ. ಆದುದರಿಂದ ಎಷ್ಟೆತ್ತಿಂದು ಲಕ್ಷ…ಪ್ರಜೆಗಳ ಅಭ್ಯುದಯದಲ್ಲಿ ಅವರು ಸಂಪೂ…ರ್ಣ ಅಭಿಮಾನವನ್ನಿಟ್ಟು ಶೀಘ್ರವಾಗಿಯೇ… ಬುದ್ಧಾಗಿ ಎಲ್ಲ ವಿಷಯಗಳನ್ನೂ ಪರಿಶೀಲಿ…ಸಿ ಅಗತ್ಯವಾದ ಕಾರ್ಯಕ್ರಮಗಳನ್ನು ಕೈ…ಗೊಳ್ಳಬೇಕೆಂದು ನಾವು ಬೇಡುತ್ತೇವೆ.

ಕಾಂಗ್ರೆಸ್ಸಿನವರು ಹೂಡಲು ನಿರ್ಧರಿಸಿ…ರುವ ಸತ್ಯಾಗ್ರಹ ಚಳುವಳಿಗೆ ಇನ್ನು ಕೇವಲ ಎರಡು ದಿನಗಳು ಮಾತ್ರ ಉಳಿದಿವೆ. ಇದರ ಬಗ್ಗೆ ಈಗಾಗಲೇ ದೇಶದಲ್ಲೆಲ್ಲಾ ಬೇಕಾದಷ್ಟು ಪ್ರಚಾರಗಳು ನಡೆದಿವೆ. ಕಾಂಗ್ರೆಸ್ಸಿನವರು ಮಾತ್ರವೇ ಅಲ್ಲದೆ ಇತರ ಸಮಸ್ತ ವರ್ಗಗಳ ಜನರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಿದ್ದಾರೆ. ಹೊಸದಾಗಿ ಹೇಳಬೇಕಾದ ಅಂಶವು ಏನೂ ಇರುವುದಿಲ್ಲ.

ಪ್ರಜೆಗಳ ರಾಜಕೀಯ ಗುರಿಯ ವಿಷಯದಲ್ಲಿ ಎಲ್ಲಿಯೂ ಭಿನ್ನಾಭಿಪ್ರಾಯವಿಲ್ಲದಿರುವುದು ಒಂದು ಪ್ರಾಮುಖ್ಯ ವಿಷಯ. ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವು ಸ್ಥಾಪಿತವಾಗಬೇಕೆಂಬ ವಿಷಯದಲ್ಲಿ ಸಕಲರೂ ಒಪ್ಪಿಗೆ ಇತ್ತಿರುತ್ತಾರೆ. ಮಹಾಪ್ರಭುಗಳವರ ಪಟ್ಟಕ್ಕೆ ಬಂದಾಗಲೇ ಈ ತತ್ವವನ್ನು ಸಾರಿರುತ್ತಾರೆ. ದಿವಾನರೂ ಸಹ ಇತ್ತೀಚೆಗೆ ಇದನ್ನೇ ಸೂಚಿಸಿರುತ್ತಾರೆ. ಎಲ್ಲರಿಂದಲೂ ಅಂಗೀಕೃತವಾಗಿರುವ ಧ್ಯೇಯದ ಸಾಧನೆಗೆ ಇಷ್ಟು ತಾಮಸವೇಕೆ? ಎಂಬುದೇ ಈಗ ಪ್ರತಿಯೊಬ್ಬರ ಬಾಯಲ್ಲಿಯೂ ಇರುವ ಪ್ರಶ್ನೆ.

ರಾಜಕೀಯ ಸ್ವಾತಂತ್ರ್ಯ ಸಾಧನೆಯಿಂದ ನೆರೆಯ ಪ್ರಾಂತಗಳು ಸಂತೋಷ ಸಾಗರದಲ್ಲಿ ನಲಿಯುತ್ತಿರುವಾಗ ಮೈಸೂರಿನ ಪ್ರಜೆಗಳು ಮಾತ್ರ ಇನ್ನೂ ಏಕೆ ಹಿಂದೆ ಬಿದ್ದಿರಬೇಕೆಂಬುದೇ ಎಲ್ಲರಿಗೂ ಇರುವ ಕೊರಗು. ಇದಕ್ಕಾಗಿಯೇ ಕಾಂಗ್ರೆಸ್ಸಿನವರು ಘೋರ ಸತ್ಯಾಗ್ರಹ ವ್ರತವನ್ನೂ ಸಹ ಕೈಗೊಂಡಿದ್ದಾರೆ. ಅದಕ್ಕಾಗಿ ಸಕಲ ತ್ಯಾಗಗಳಿಗೂ, ಕಷ್ಟ ನಷ್ಟಗಳಿಗೂ ಸಿದ್ಧತೆಯನ್ನೂ ಮಾಡಿಕೊಂಡಿದ್ದಾರೆ. ಸತ್ಯಾಗ್ರಹಕ್ಕೆ ಸಾಮಾನ್ಯವಾಗಿ ಎಲ್ಲ ಕಡೆಗಳಿಂದಲೂ ಸಹಾನುಭೂತಿಯು ದೊರೆಯುತ್ತಿದೆ. ಕಾಂಗ್ರೆಸ್ ಮುಖಂಡರುಗಳ ಪ್ರವಾಸಗಳಲ್ಲಿ ಜನರಿಂದ… ಪ್ರಚಂಡ ಸ್ವಾಗತಗಳನ್ನು ಪಡೆಯುತ್ತಿರುವುದನ್ನು ಕಂಡಾಗ … ಜನರ ಮನೋಭಾವನೆಯನ್ನು ಕಣ್ಣಿಗೆ ಕಟ್ಟಿದಂತೆ ಕಾಣುತ್ತದೆ.

ಸಾಮಾನ್ಯ ಮುಂದೆ ಸತ್ಯಾಗ್ರಹವನ್ನು … ಮಾತ್ರ ಹಲವರಿಗೆ … … ಜನಪ್ರತಿನಿಧಿಗಳಿಗೆ ಅಂತ …ಪವರಿಂದ ಬೆಂಬಲವನ್ನು ಕೊಟ್ಟಿರುತ್ತಾರೆ. ಹಿಂದೆ ನಮ್ಮ ಸಂಸ್ಥಾನದಲ್ಲಿ ಚಳುವಳಿಗಳು ನಡೆದಾಗ ಅವುಗಳನ್ನು ಪ್ರತಿಭಟಿಸಿದಂತೆ ಈಗ ಯಾರೂ ಮಾಡುತ್ತಿಲ್ಲ. ಬೆಂಗಳೂರು ಪುರಭವನದಲ್ಲಿ ನಡೆಸಬೇಕೆಂದಿದ್ದ ಕಾಂಗ್ರೆಸ್ ವಿರೋಧಿ ಸಭೆಯೊಂದು ಮೂರು ಬಾರಿ ಮುಂದುವರಿದು ಕಡೆಗೂ ಹಾಗೆಯೇ ತಣ್ಣಗಾಯಿತು. ಪ್ರಮುಖ ನಗರವಾದ ಬೆಂಗಳೂರು ಪೌರಸಭೆಯಲ್ಲಿ ಕ್ರಮಬದ್ಧವಾಗಿ ಸತ್ಯಾಗ್ರಹದ ವಿಷಯವು ಪ್ರಸ್ತಾಪಕ್ಕೆ ಬಂದು ಮೊದಲು ೯-೮ ಓಟುಗಳಿಂದ ಅಂಗೀಕರಿಸಲ್ಪಟ್ಟು ಮತ್ತೆ ಎಣಿಸಿದಾಗ ೯-೯ ಕ್ಕೆ ನಿಂತು ಅಧ್ಯಕ್ಷರ ಓಟಿನಿಂದ ಬಿದ್ದುಹೋದರೂ ಗಾಳಿಯು ಎತ್ತ ಕಡೆ ಬೀಸುತ್ತಿರುವುದೆಂಬುದನ್ನು ಸೂಚಿಸುತ್ತದೆ.

ಸತ್ಯಾಗ್ರಹವು ಇನ್ನೂ ಆರಂಭವಾಗಿರುವುದಿಲ್ಲ. ತಾ ೪ ರಂದು ಕೇವಲ ಅದರ ಆರಂಭೋತ್ಸವವು ಮಾತ್ರ ನಡೆಯುವುದಾಗಿ ತಿಳಿದುಬಂದಿದೆ. ಪ್ರಜೆಗಳ ಅಭಿಪ್ರಾಯವನ್ನು ಪ್ರದರ್ಶಿಸಲು ಹರತಾಳ, ಧ್ವಜಾರೋಹಣ, ಸಭೆ, ಮೆರವಣಿಗೆ ಮುಂತಾದುವುಗಳು ಮಾತ್ರ ನಡೆಯುವುವು. ಇಷ್ಟು ಮಾತ್ರದಿಂದಲೇ ಶಾಸನ ಭಂಗದ ಕಾರ್ಯಕ್ರಮವೂ ಆರಂಭವಾದಂತೆ ಅಲ್ಲವೆಂದು ಹೇಳಲಾಗಿದೆ. ಶಾಸನಭಂಗ, ಆಜ್ಞೋಲ್ಲಂಘನೆ, ಪ್ರತಿಭಟನೆ ಮುಂತಾದುವುಗಳು ಸರ್ಕಾರದವರ ಮುಂದಿನ ನೀತಿಯನ್ನೇ ಅವಲಂಬಿಸುವುವೆಂದೂ ಸಹ ಹೇಳಲಾಗಿದೆ.

ಹಿಂದೆ ಗಲಭೆಗಳಲ್ಲಿ ಸರ್ಕಾರದವರು ಸುಮ್ಮನೆ ಕುಳಿತಿದ್ದವರನ್ನೆಲ್ಲಾ ನಿಷ್ಕಾರಣವಾಗಿ ಬಂಧಿಸಿದಂತೆ ಈ ಸಾರಿ ಮಾಡಿರುವುದಿಲ್ಲ. ಕಾಂಗ್ರೆಸ್ಸಿನವರ ಪ್ರಚಾರ ಕಾರ್ಯಗಳಿಗೂ, ಸಭೆ ಮೆರವಣಿಗೆಗಳಿಗೂ ಇದುವರೆಗೆ ಅಡ್ಡಿಯನ್ನು ತಂದಿರುವುದಿಲ್ಲ. ಇದರಿಂದ ಸತ್ಯಾಗ್ರಹದ ಪ್ರಚಾರಕ್ಕೆ ವಿಶೇಷ ಅವಕಾಶವು ದೊರಕುವುದೇನೋ ನಿಜ. ಆದರೂ ಸರ್ಕಾರದವರು ಈ ಸಾರಿ ಆಕ್ರೋಶದಿಂದ ವರ್ತಿಸಿ ಚಳುವಳಿಗೆ ತಾವೇ ಆರಂಭೋತ್ಸವವನ್ನು ಮಾಡಿದರೆಂಬ ಅಪವಾದನೆಯಿಂದ ಮುಕ್ತರಾಗಿದ್ದಾರೆ. ಇದೇ ನೀತಿಯನ್ನೇ ಅವರು ಮುಂದುವರಿಸಿ ನಾಳಿದ್ದು ನಡೆಯಲಿರುವ ಹರತಾಳ ಮತ್ತು ಇತರ ಸಮಾರಂಭಗಳಲ್ಲಿಯೂ ಘಟಿಸ್ಸರಾಗಿರಲೆಂದು ನಾವು ಹಾರೈಸುತ್ತೇವೆ.

ಇತ್ತೀಚೆಗೆ ಸರ್ಕಾರದವರು ಹೊರಡಿಸಿರುವ ಅವಸರ ಶಾಸನದ ಬಾಣವು ಮಾತ್ರ ಕಳವಳಕ್ಕೆ ಕಾರಣವನ್ನುಂಟುಮಾಡಿರುತ್ತದೆ. ಇದು ಸಮರ ಸಿದ್ಧತೆಯನ್ನು ಸೂಚಿಸುವುದಾದರೆ ಅದೊಂದು ದುರ್ದೈವವೇ ಸರಿ. ಈ ಬಾಣ ಪ್ರಯೋಗದ ಅವಶ್ಯಕತೆಯು ಬಾರದಿರಲೆಂದೇ ಸರ್ಕಾರದವರೇ ಮಾಡಿಕೊಳ್ಳುವ ಪ್ರಾರ್ಥನೆಯು … ದಾದರೆ … ಪ್ರಜೆಗಳ ಸೌಭಾಗ್ಯವೇ ಸರಿ. ಬ್ರಿಟಿಷ ಭಾರತದಲ್ಲಿ … ನಮ್ಮ ಸುತ್ತಮುತ್ತಲಲ್ಲಿ … ಹಿಂದೆ ನಡೆದಂತಹ … ತೆರನ … … ಮೇಲಿ ಭಯಸಾಸಿಗಳ … …

ಈಗಲೂ ಕಾಲವು ಮಿಂಚಿಹೋಗಿಲ್ಲ. … ದಿನ ಸನ್ನಿವೇಶವನ್ನು ಶಾಂತಿ ಸೌಹಾರ್ದಗಳಿಂದ ಬಗೆಹರಿಸಬೇಕೆಂದು ಸಕಲ ವ್ಯಕ್ತಿಗಳೂ … ಕಾತರಿಸುತ್ತಿದ್ದಾರೆ. … ಮಹಾಪ್ರಭು … ಗಳಲ್ಲಿಯೂ … ಅಂಗಿಯ ನಿಯೋಗ ಮೊ…

ಭಾರತ ಡೊಮಿನಿಯನ್ನಿಗೆ ಭೂಪಾಲ್ ಸಂಸ್ಥಾನ

ಭಾರತ ಯೂನಿಯನ್ನಿಗೆ ಭೂಪಾಲ್ ಸಂಸ್ಥಾನವು ಸೇರಿದೆಯೆಂದು ಅಲ್ಲಿನ ಸಂಸ್ಥಾನವು ಪ್ರಕಟಿಸಿರುತ್ತದೆ. ಮತ್ತು ತಾತ್ಕಾಲಿಕ ಒಪ್ಪಂದಕ್ಕೂ ಸಹ ಆ ಸಂಸ್ಥಾನವು ರುಜು ಹಾಕಿರುತ್ತದೆ. ಅಲ್ಲಿನ ಪ್ರಧಾನಿಗಳು ಒಂದು ಹೇಳಿಕೆಯನ್ನು ಹೊರಡಿಸಿ ಇಂದಿನ ಸನ್ನಿವೇಶದಲ್ಲಿ ಯಾವ ಸಂಸ್ಥಾನಗಳೂ ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

ಮದರಾಸ್ ಗೌರ್ನರರಿಂದ ೪೬೦೦೦೦ ರೂ. ಉಳಿತಾಯ

ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ತಲೆದೋರಿರುವುದರಿಂದ ಮಿತವ್ಯಯ ಅಗತ್ಯವೆಂದು ಹೇಳಿ ಮದರಾಸ್ ಗೌರ್ನರರು ತಮ್ಮ ಸ್ವಂತ ಸಿಬ್ಬಂದಿಯನ್ನು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿರುವರೆಂದು ವರದಿಯಾಗಿದೆ. ಅವರ ಸೆಕ್ರೆಟರಿ, ಸೆಕ್ರೆಟೇರಿಯೆಟ್, ಬ್ಯಾಂಡ್ ಮತ್ತು ಅಂಗರಕ್ಷಕರುಗಳನ್ನು ತೆಗೆದುಹಾಕಲಾಗುವುದು. ಅದರಿಂದ ವರ್ಷ ಒಂದಕ್ಕೆ ೪ ಲಕ್ಷದ ೬೦ ಸಾವಿರ ರೂ. ಉಳಿತಾಯವಾಗುವುದು.

ಭಾಷಣ

ನಂಜನಗೂಡು ೨೯

ನಾಳಿದ್ದು ಸಂಜೆ ೫-೩೦ ಗಂಟೆಗೆ ಇಲ್ಲಿನ ಶ್ರೀ ಶಂಕರ ಮಠದಲ್ಲಿ ಶ್ರೀ ಗೌರೀವಲ್ಲಭ ಕೃಷ್ಣಶಾಸ್ತ್ರಿಗಳು ಉಪಾಕರ್ಮ ಮತ್ತು ಗಾಯತ್ರಿ-ಜಪ ವಿಷಯವಾಗಿ ಭಾಷಣ ಮಾಡುವರು.

ವಿದ್ಯಾರ್ಥಿ ನಿಲಯಕ್ಕೆ ಸಹಾಯ

ಇಲ್ಲಿನ ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ಅರಮನೆ ಕಂಟ್ರಾಕ್ಟರ್ ಶ್ರೀ ಟಿ. ಚಲುವಾಚಾರ್ಯರು ೧೦೦ ರೂ. ಅವರ ಸಹೋದರರಾದ ಶ್ರೀ ಟಿ ಯಾಲಕ್ಕ್ಯಾಚಾರ್ಯರು ೧೦೦ ರೂ ಶ್ರೀ ಸಿ ಚಲುವಾಚಾರ್ಯರು ೫೦ ರೂ ಗಳನ್ನು ಗ್ರಾಮಾಂತರಗಳಿಂದ ಅನೇಕ ಮಹನೀಯರು ೩೫೦ ರೂ. ಗಳನ್ನೂ ಕೊಟ್ಟಿರುವರು

ಗಳಿದ್ದಾರೆ. ಇವರೆಲ್ಲರ ಮನವಿಯನ್ನೂ ಮಹಾಸ್ವಾಮಿಯವರು ಚಿತ್ತಕ್ಕೆ ತಂದುಕೊಂಡು ಮೈಸೂರಿನ ಕೀರ್ತಿಗೌರವಗಳಿಗೆ ಅನುಗುಣವಾದ ರೀತಿಯಲ್ಲಿ ವರ್ತಿಸಿ ಕೂಡಲೇ ರಾಜಘೋಷಣೆಯನ್ನು ಹೊರಡಿಸಿ ಸಂಸ್ಥಾನದಲ್ಲಿ ನವಯುಗದ ಆರಂಭೋತ್ಸವಕ್ಕೆ ಅಂಕುರಾರ್ಪಣವನ್ನು ಮಾಡಬೇಕೆಂಬುದೇ ನಮ್ಮ ವಿನಯಪೂರ್ವಕವಾದ ವಿನಂತಿ

WOODLANDS

Morning shows for 4 days from 29-8-47 daily at 10.30 a. m.

WarnerBrother's Production

Destination Tokyo

with

Cary Grand

and

Jhon Garfield

Printed, printed & published by A. P. … at the Sadhvi Press, … Subbaiah Road, Mysore

ಕೊಚ್ಚಿ ಸಂಸ್ಥಾನಕ್ಕೆ ಇನ್ನು ಮುಂದೆ ದಿವಾನರು ಇಲ್ಲ

ಕೊಚ್ಚಿ ಸಂಸ್ಥಾನದಲ್ಲಿ ಪ್ರಜೆಗಳಿಗೆ ಜವಾಬ್ದಾರೀ ಸರ್ಕಾರವನ್ನು ಕೊಡಲು ಆ…ಡಳಿತಾಂಗದಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ಮಾಡಲು ಅಲ್ಲಿನ ಮಹಾರಾಜರು ಸ…ಮ್ಮತಿಸಿರುವುದಾಗಿ ವರದಿಯಾಗಿದೆ. ಇನ್ನು ಮುಂದೆ ಆ ಸಂಸ್ಥಾನದಲ್ಲಿ ದಿವಾನರ ಬದಲು ಚುನಾಯಿತ ಪ್ರಧಾನ ಮಂತ್ರಿಯನ್ನು ನೇಮಿಸಲಾಗುವುದು.

ವಿದ್ಯಾರ್ಥಿಗಳ ಸತ್ಯಾಗ್ರಹ ಮುಂದುವರೆಯಿತು

ಮೈಸೂರು ೩೦

ವಿದ್ಯಾರ್ಥಿಗಳು ನಾಳಿದ್ದು ಅರಮನೆಯ ಮುಂದೆ ಆರಂಭಿಸಬೇಕಾಗಿದ್ದ ಸತ್ಯಾಗ್ರಹವನ್ನು ಮುಂದುವರಿಸಿ ಸೆಪ್ಟೆಂಬರ್ ೧೦ ಕ್ಕೆ ಆರಂಭವಾಗುವ ಮೈಸೂರು ಕಾಂಗ್ರೆಸ್ಸಿನ ಕಾರ್ಯಕ್ರಮಗಳೊಡನೆಯೇ ತ ಮ್ಮ… ನ್ನೂ ಸೇರಿಸಿಕೊಳ್ಳಬೇಕೆಂದು ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಮಾಡಿದ್ದ ಸಲಹೆಯನ್ನು ವಿದ್ಯಾರ್ಥಿ ಕ್ರಿಯಾ ಸಮಿತಿಯು ಈ ದಿನ ಪರಿಶೀಲಿ…ಅವರ ಸಲಹೆಯಂತೆಯೇ ವರ್ತಿಸಲು … ರ್ಧರಿಸಿರುತ್ತದೆ

● ಕೊಲಂಬೋ ಪ್ರಾಂತದ ಬಿಂಡಿ ಜಿ…ಯಲ್ಲಿ ಮಿತಿಮೀರಿದ ಪ್ರವಾಹದಿಂದ ೧…ಮಂದಿ ಮರಣ ಹೊಂದಿ ೨೦ ಸಹಸ್ರ ಜ…ನಿರಾಶ್ರಿತರಾಗಿ… ವರೆಂದು ವರದಿಯಾಗಿ…ಮೂರು ಹಳಗಿದ ಆನೆಗಳೂ ಸಹ ಪ್ರವಾ…ದಲ್ಲಿ ಕೊಚ್ಚಿಹೋಗಿವೆ.

ವುಡ್‌ಲ್ಯಾಂಡ್ಸ್

೨೯-೮-೪೭ ರಿಂದ

ದಿನವೂ ಮೂರು ಆಟಗಳು

ಮಾಮಿಕ್ ಆಜ್

(ಹಿಂದಿ)

—: ತಾರಾಗಣ :—

ಸ್ವರ್ಣಲತಾ ಮತ್ತು ನಾಜೀರ್

Distributors Contact

HANSA PICTURES

Chickpet, Bangalore City

ರಾ ಜ ಕ ಮ ಲ್

ತಾ॥ 29-8-47 ರಿಂದ

3-15 6-15 9 15

ಬಾಂಬೆ ಟಾಕೀಸಿನವರ ಅತ್ಯುತ್ತಮ …

ಝೂಲಾ

—: ಭೂಮಿಕೆ :—

ಅಶೋಕ ಕುಮಾರ್, ಲೀಲಾಚಿಟ್ನಿಸ್

From 29-8-47 for 4 days daily at 10-30 a. m.

Hit Parade of 1947

Featuring

Eddie Albert,

Edwards Moore,

john constance

ಫೋ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೨-೯-೪೭ [ಸಂಚಿಕೆ ೪೫

ನಿನ್ನೆ ರಾತ್ರಿಯಿಂದ ಮಹಾತ್ಮರ ಉಪವಾಸ

ಹೈದರಾಬಾದಿಗೆ ಭಾರತ ಸರ್ಕಾರದ ಎಚ್ಚರಿಕೆ

ಸಾಮಗ್ರಿಗಳ ಸರಬರಾಜನ್ನು ತಡೆಗಟ್ಟಲಾಗುವುದು

ಭಾರತ ಡೊಮಿನಿಯನ್ನಿಗೆ ಹೈದರಾಬಾದು ಸೇರುವ ಬಗ್ಗೆ ಮಾತುಕತೆಗಳು ಬರುವ ವಾರದ ವೇಳೆಗೆ ಆರಂಭವಾಗುವುದೆಂದು ಹೇಳಲಾಗಿದೆ. ನಿಜಾಮರ ನಿರ್ಧಾರಕ್ಕಾಗಿ ಅನಿರೀಕ್ಷಿತ ಕಾಲದವರೆಗೆ ತಾವು ಕಾಯಲು ಸಾಧ್ಯವಿಲ್ಲವೆಂದೂ, ಭಾರತೀಯರ ರಕ್ಷಣೆಗಾಗಿ ಅವಶ್ಯವಾದ ಕಾರ್ಯಕ್ರಮಗಳನ್ನು ತಾವು ತೆಗೆದುಕೊಳ್ಳಬೇಕಾಗುವುದೆಂದೂ ಭಾರತ ಸರ್ಕಾರದವರು ನಿಜಾಮರ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್‌ಟನ್ನರಿಗೆ ತಿಳಿಸಿರುವರು. ಹೈದರಾಬಾದಿನೊಡನೆ ಮಾಡಿಕೊಂಡಿರುವ ತಾತ್ಕಾಲಿಕ ಒಪ್ಪಂದಗಳನ್ನು ರದ್ದು ಮಾಡುವುದು; ರೈಲ್ವೆ ಅಥವಾ ಭೂ ಮಾರ್ಗವಾಗಿ ಅಲ್ಲಿಗೆ ಹೋಗುತ್ತಿರುವ ಆಹಾರ ಧಾನ್ಯಗಳು, ಬಟ್ಟೆ, ಸಕ್ಕರೆ, ಸೀಮೆ ಎಣ್ಣೆ, ಪೆಟ್ರೋಲ್ ಇರುವ ಕಡ್ಡಿ-ಮೊದಲಾದುವುಗಳನ್ನೂ, ತಂತಿ ವಾರ್ತಾ ವ್ಯವಸ್ಥೆಯನ್ನೂ ಪ್ರತಿಬಂಧಿಸುವುದು-ಈ ಕಾರ್ಯಕ್ರಮಗಳನ್ನು ಮೊದಲು ಭಾರತ ಸರ್ಕಾರವು ಕೈಗೊಳ್ಳುವುದೆಂದು ಹೇಳಲಾಗಿದೆ. ಹೈದರಾಬಾದಿನ ಸ್ವಾತಂತ್ರ್ಯವನ್ನು ಅಂಗೀಕರಿಸುವ ಬಗ್ಗೆ ಭಾರತ ಸರ್ಕಾರದವರು ಈಗಾಗಲೇ ತಮ್ಮ ವಿರೋಧವನ್ನು ವ್ಯಕ್ತ ಪಡಿಸಿದ್ದಾರೆ.

ಪತ್ರಿಕೆಗಳ ಮೇಲೆ ನಿರ್ಬಂಧ

ಬೆಂಗಳೂರು ೧

ಸಾಧ್ವೀನಾಡು, ಡೇಲಿನ್ಯೂಸ್, ಪಾರ್ಲಿ ಪ್ರಬಂಧ, ಸ್ವಾತಂತ್ರ್ಯೋದಯ, ವಿಶ್ವ ಕರ್ನಾಟಕ ವಾರ ಪತ್ರಿಕೆ, ಪೌರವಾಣಿ, ರಾಜಧಾನಿಯಿಂದ ಪ್ರಕಟವಾಗುತ್ತಿರುವ ಈ ಪತ್ರಿಕೆಗಳ ಸಂಪಾದಕರು ಮತ್ತು ಮುದ್ರಣಕಾರರು ತಮ್ಮ ಪತ್ರಿಕೆಗಳಲ್ಲಿ ಕಾಂಗ್ರೆಸ್ಸಿನ ಸತ್ಯಾಗ್ರಹದ ಚಳುವಳಿಗೆ ಸಂಬಂಧಪಟ್ಟ ಸುದ್ದಿಗಳು, ಟೀಕೆಗಳು, ಭಾಷಣಗಳು, ಮೊದಲಾದುವನ್ನು ಪ್ರಕಟಿಸುವ ಮೊದಲು ಸರ್ಕಾರದ ಪ್ರೆಸ್ ಅಡ್ವೈಸರಿಗೆ ಕಾರ್ಯದರ್ಶಿಗಳ ಅಪ್ಪಣೆ ಪಡೆಯಬೇಕೆಂದು ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಜರೂರು ಶಾಸನದ ಪ್ರಕಾರ ಸರ್ಕಾರದವರು ಅವರ ಮೇಲೆ ಆಜ್ಞೆಗಳನ್ನು ಜಾರಿ ಮಾಡಿರುವರು.

ರಾಜಧಾನಿಯಲ್ಲಿ ಹರತಾಳ

ಮೈಸೂರು ೩

ನಿನ್ನೆ ರಾಜಧಾನಿಯ ವರ್ತಕರೂ, ಕಾರ್ಮಿಕರೂ, ವಿದ್ಯಾರ್ಥಿಗಳೂ ತಮ್ಮ ದಿನನಿತ್ಯದ ಕೆಲಸಕಾರ್ಯಗಳನ್ನು ತೊರೆದು ಶಾಂತಿಯುತವಾಗಿ ಹರತಾಳವನ್ನಾಚರಿಸಿದರು. ಬೆಳಗ್ಗೆ ಸುಬ್ಬರಾಯನಕೆರೆಯಲ್ಲಿ ಧ್ವಜಾರೋಹಣವೂ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯೂ ನಡೆದುವು. ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಸೇರಿದ್ದ ಪ್ರಚಂಡ ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ನಾಯಕರು ಜವಾಬ್ದಾರೀ ಸರ್ಕಾರವನ್ನು ಒತ್ತಾಯಿಸುವ ಭಾಷಣಗಳನ್ನು ಮಾಡಿದರು. ನಂತರ ಕಾಂಗ್ರೆಸ್ಸಿನ ಅಂಗಸಂಸ್ಥೆಗಳ ರದ್ದು ಮಾಡಿ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಸತ್ಯಾಗ್ರಹದ ಸರ್ವಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡರೆಂದು ತಿಳಿಸಲಾಯಿತು.

ಮಹಾತ್ಮರು ಉಪವಾಸ ಕೈಗೊಂಡಿರುವರು

ಕೋಮುವಾರು ಶಾಂತಿಯಿಂದಿದ್ದ ಕಲ್ಕತ್ತೆಯಲ್ಲಿ ಮತ್ತೆ ಗಲಭೆಯು ತಲೆದೋರಿ ೨೮ ಮಂದಿ ಮರಣ ಹೊಂದಿರುವರೆಂದೂ, ೨೦೦ ಜನರಿಗೆ ಘಾಯಗಳಾಗಿವೆಯೆಂದೂ ವರದಿಯಾಗಿದೆ. ಅಲ್ಲಿ ಮತ್ತೆ ಶಾಂತಿಯನ್ನು ತರಲು ಮಹಾತ್ಮ ಗಾಂಧಿಯವರು ನಿನ್ನೆ ರಾತ್ರಿಯಿಂದ ಉಪವಾಸವನ್ನು ಆರಂಭಿಸಿರುವರು. ಪಶ್ಚಿಮ ಪಂಜಾಬಿನ ವಿದ್ಯಮಾನಗಳನ್ನು ಕೇಳಿ ಕಲ್ಕತ್ತೆಯ ಹಿಂದೂಗಳೂ, ಸಿಕ್ಕರೂ ಉದ್ರೇಕಗೊಂಡಿರುವರೆಂದೂ, ಆದರೆ ಈ ಬಗೆಯ ಕೃತ್ಯಗಳಿಂದ ದೇಶದ ಸ್ವಾತಂತ್ರ್ಯವನ್ನು ಸಂರಕ್ಷಿಸಲು ಸಾಧ್ಯವಿಲ್ಲವೆಂದೂ ಮಹಾತ್ಮರು ಹೇಳಿರುವರು. ಕೋಮುವಾರು ಶಾಂತಿಯು ಪುನಃ ನೆಲೆಸುವವರೆಗೆ ತಾವು ಉಪವಾಸ ಮಾಡುವುದಾಗಿ ಅವರು ತಿಳಿಸಿರುವರು.

ಪತ್ರಿಕೋದ್ಯೋಗಿಗಳ ಸಭೆ

ಮೈಸೂರು ೨

ವಿಶೇಷ ಶಾಸನದ ಪ್ರಕಾರ ಪತ್ರಿಕೆಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಪತ್ರಿಕಾ ನೀತಿಯನ್ನು ಪರಿಶೀಲಿಸಲು ನಾಳೆ ಸಂಜೆ ೬ ಗಂಟೆಗೆ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದಲ್ಲಿ ಸಭೆಯು ನಡೆಯುವುದು. ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿರುವರು.

ಬೆಂಗಳೂರಿನಲ್ಲಿ ಹರತಾಳ

ಸ್ವಂ. ಸು. ಫೋ] ಬೆಂಗಳೂರು ೨

ನಿನ್ನೆ ಬೆಂಗಳೂರು ನಗರ ಮತ್ತು ದಂಡಿನಲ್ಲಿ ಹರತಾಳವು ಶಾಂತಿಯಿಂದ ನಡೆಯಿತು. ವರ್ತಕರೂ, ವಿದ್ಯಾರ್ಥಿಗಳೂ, ಕಾರ್ಮಿಕರೂ ಭಾಗವಹಿಸಿದ್ದರು. ಬೆಳಗ್ಗೆ ಸುಭಾಷ್ ನಗರದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ರಾಷ್ಟ್ರಧ್ವಜಾರೋಹಣವನ್ನು ಮಾಡಿದರು. ಅನಂತರ ಭಾರಿ ಮೆರವಣಿಗೆಯು ಮುಖ್ಯ ಬೀದಿಗಳಲ್ಲಿ ನಡೆಯಿತು. ದಂಡಿನ ಇಂಪೀರಿಯಲ್ ಟೊಬ್ಯಾಕೊ ಕಂಪೆನಿಯ ಬಳಿ ಸ್ವಲ್ಪ ಗಲಭೆಯಾಗಿ ಪೋಲೀಸಿನವರು ಲಾಠಿ ಪ್ರಯೋಗ ಮಾಡಿ ನಾಲ್ಕು ಜನರನ್ನು ದಸ್ತಗಿರಿ ಮಾಡಿದರು. ಅನಂತರ ಇನ್ನೂ ಕೆಲವರನ್ನು ದಸ್ತಗಿರಿ ಮಾಡಲಾಯಿತು.

ಸಂಜೆ ಬನಪ್ಪ ಪಾರ್ಕಿನಲ್ಲಿ ಭಾರಿ ಸಭೆ ಜರುಗಿತು. ಶ್ರೀ ಚೆಂಗಲರಾಯ ರೆಡ್ಡಿಯವರು ಭಾಷಣ ಮಾಡಿ ಸತ್ಯಾಗ್ರಹದ ವಿಚಾರವನ್ನು ವಿವರಿಸಿದರು. ಕಾಂಗ್ರೆಸ್ ಸಂಸ್ಥೆಯ ಅಂಗರಚನೆಯನ್ನು ರದ್ದು ಮಾಡಿ ತಾವು ಸರ್ವಾಧಿಕಾರವನ್ನು ವಹಿಸಿರುವುದಾಗಿ ತಿಳಿಸಿದರು. ಜವಾಬ್ದಾರೀ ಸರ್ಕಾರದ ಸ್ಥಾಪನೆಗೆ ಎಲ್ಲರ ಸಹಕಾರವನ್ನೂ ಕೋರಿದರು. ನಗರ ಕಾಂಗ್ರೆಸ್ ಸಮಿತಿಯ ಪರವಾಗಿ ಅವರಿಗೆ ೧೦೦೧ ರೂ ನಿಧಿಯನ್ನು ಅರ್ಪಿಸಲಾಯಿತು. ಶ್ರೀ ಹೆಚ್. ಎಸ್. ಗಂಗಾಧರ ಸ್ವಾಮಿಯವರು ೫೦೧ ರೂ. ಗಳನ್ನು ಒಪ್ಪಿಸಿದರು. ಸಭೆಯಲ್ಲಿದ್ದ ಪರೊಬ್ಬರು ಕೊಟ್ಟ ಒಂದು ಚಿನ್ನದ ಉಂಗುರವನ್ನು ಹರಾಜು ಮಾಡಿದಾಗ ೨೧೦ ರೂ ಗಳು ಬಂದುವು. ಪೋಲೀಸರೂ, ಮಿಲಿಟರಿಯವರೂ ಶಾಂತಿಯಿಂದಲೂ, ಶಿಸ್ತಿನಿಂದಲೂ ವರ್ತಿಸುತ್ತಿದ್ದರು. ಸಾರ್ವಜನಿಕ ಶಾಂತಿಗೆ ಭಂಗ ಬಾರದಿದ್ದರೆ ಪೋಲೀಸಿನವರು ಯಾವುದರಲ್ಲೂ ಪ್ರವೇಶಿಸಬಾರದೆಂದು ಕಟ್ಟಾಜ್ಞೆಯಾಗಿರುವುದಾಗಿ ತಿಳಿದುಬಂದಿದೆ.

ಹಿಂದೂಮಹಾಸಭೆಯ ಪ್ರಾರ್ಥನೆ

ಸಂಸ್ಥಾನದ ಹಿಂದೂ ಮಹಾಸಭೆಯ ಕಾರ್ಯಕಾರೀ ಸಮಿತಿಯವರು ಸಭೆ ಸೇರಿ ಪ ಎಂದೆ ಬರಲಿರುವ ಸುಧಾರಣೆಗಳಲ್ಲಿ ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ಜವಾಬ್ದಾರೀ ಸರ್ಕಾರವು ಸ್ಥಾಪಿಸಲ್ಪಡುವುದೆಂಬ ಘೋಷಣೆಯನ್ನು ಶ್ರೀಮನ್ಮಹಾರಾಜರವರು ಹೊರಡಿಸಬೇಕೆಂದು ಕೋರುವ ನಿರ್ಣಯವನ್ನು ಅಂಗೀಕರಿಸಿದರು. ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ತ್ಯಜಿಸಬೇಕೆಂದೂ ಕರೆ ಕೊಡಲಾಯಿತು.

ಒಂದು ವಾರ ಪತ್ರಿಕೆಗಳನ್ನು ನಿಲ್ಲಿಸಲಾಗುವುದು

ಸ್ವಂ. ಸು. ಫೋ] [ಬೆಂಗಳೂರು ೨

ಪ್ರತಿಬಂಧಕಕ್ಕೆ ಒಳಗಾಗಿರುವ ಪತ್ರಿಕೆಗಳ ಪ್ರಕಾಶಕರು ಈ ದಿನ ಸಭೆ ಸೇರಿ ತಮ್ಮ ಪ್ರತಿಭಟನೆಯನ್ನು ಸೂಚಿಸಲು ಇನ್ನು ಒಂದು ವಾರ ಕಾಲ ತಮ್ಮ ಪತ್ರಿಕೆಗಳನ್ನು ನಿಲ್ಲಿಸುವಂತೆ ನಿರ್ಧರಿಸಿರುತ್ತಾರೆ.

ದಂಡಿನಲ್ಲಿ ದಸ್ತಗಿರಿಗಳು

ನಿನ್ನೆ ನಡೆದ ಹರತಾಳ ಮತ್ತು ಮೆರವಣಿಗೆಗೆ ಸಂಬಂಧವಾಗಿ ಪೋಲೀಸಿನವರು ದಂಡಿನಲ್ಲಿ ೪೦ ಜನರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿದುಬಂದಿದೆ.

* ಕ್ರಿಮಿನಲ್ ಲಾ ವಿಶೇಷ ತಿದ್ದುಪಡಿ ಶಾಸನವನ್ನು ಬೆಂಗಳೂರು ದಂಡಿನ ಪ್ರದೇಶಕ್ಕೂ ಅನ್ವಯಿಸಲಾಗಿರುತ್ತದೆ.

* ನಾಳೆ ಬೆಳಗ್ಗೆ ೧೦-೩೦ ಗಂಟೆಗೆ ಮಂತ್ರಿ ಮಂಡಲದ ಸಭೆಯನ್ನು ಕರೆಯಲಾಗಿದೆ.

ಕೊಚ್ಚಿಯಲ್ಲಿ ಜವಾಬ್ದಾರೀ ಸರ್ಕಾರ

ಮೊನ್ನೆ ದಿನದಿಂದ ಕೊಚ್ಚಿ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವು ಜಾರಿಗೆ ಬಂದಿರುತ್ತದೆ. ಅಲ್ಲಿನ ರಾಜರು ಹೊರಡಿಸಿದ್ದ ಘೋಷಣೆಯಂತೆ ಅರಮನೆ, ದೇವಸ್ವತ್ತುಗಳು ಮತ್ತು ಹಿಂದೂ ಧರ್ಮಸ್ವತ್ತುಗಳು ವಿನಃ ಉಳಿದ ಎಲ್ಲಾ ಇಲಾಖೆಗಳನ್ನು ಚುನಾಯಿತ ಮಂತ್ರಿಗಳ ಅಧಿಕಾರಕ್ಕೆ ಒಳಪಡಿಸಲಾಗಿದೆ. ಶಾಸನ ಸಭೆಯ ಚ ನಾಯಕ ಪದದಿಂದ ಶ್ರೀ ಗೋವಿಂದ ಮೇನನ್ನರು ಪ್ರಧಾನಿಗಳಾಗಿರುವರು. ಅವರು ತಮ್ಮ ಇತರ ಮಂತ್ರಿಗಳೊಡನೆ ಶಾಸನ ಸಭೆಗೆ ಜವಾಬ್ದಾರರಾಗಿರುವರು. ಇದ ವರೆಗೆ ದಿವಾನರಾಗಿದ್ದ ಶ್ರೀ ಸಿ.ಪ್ರಾಕರ ಮೇನನ್ನರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರು. ಅವರಿಗೆ ಮೇಲ್ಕಂಡ ಇಲಾಖೆಗಳ ಮೇಲ್ವಿಚಾರಣೆಯನ್ನು ಖಾಸಗಿಯಾಗಿ ಮಹಾರಾಜರು ವಹಿಸಿರುವರು.

ಡಾ॥ ಮೂಂಜೆಯವರ ದಸ್ತಗಿರಿ ಮತ್ತು ಬಿಡುಗಡೆ

ನಾಗಪುರದ ಹಿಂದೂ ಮಹಾಸಭೆಯವರು ಮೊನ್ನೆ ಏರ್ಪಡಿಸಿದ್ದ ಲಾಹೋರ್ ದಿನಾಚರಣೆಯ ಸಭೆಗೆ ಮಧ್ಯಪ್ರಾಂತ ಸರ್ಕಾರದವರು ಹಾಕಿದ್ದ ಪ್ರತಿಬಂಧಕವನ್ನು ಉಲ್ಲಂಘಿಸಿ ಸಭೆ ನಡೆಸಿದರೆಂದು ಹಿಂದೂಮಹಾ ಸಭೆಯ ಮಾಜಿ ಅಧ್ಯಕ್ಷರಾದ ಡಾ॥ ಬಿ. ಎಸ್. ಮೂಂಜೆ ಮತ್ತು ೧೪ ಜನರನ್ನು ನಾಗಪುರದಲ್ಲಿ ದಸ್ತಗಿರಿ ಮಾಡಿ ಅನಂತರ ಬಿಡುಗಡೆ ಮಾಡಲಾಯಿತೆಂದು ವರದಿಯಾಗಿದೆ.

ಕುದುರೆ ಬಾಲಕ್ಕೆ ದೀಪ ಕಟ್ಟಬೇಕು

ಗ್ಲೋಬ್] [ನ್ಯೂಯಾರ್ಕ್ ೩೧

ಲಾಂಗ್ ದ್ವೀಪದ ಹೆಮ್‌ಸ್ಟೆಡ್ ನಗರದ ಕುದುರೆಗಳ ಬಾಲಕ್ಕೆ ರಾತ್ರಿ ಹೊತ್ತು ಕೆಂಪು ದೀಪವೊಂದನ್ನು ಕಟ್ಟಬೇಕೆಂದು ಆಜ್ಞೆಯಾಗಿದೆ. ಈ ದೀಪವು ೨೦೦ ಅಡಿ ದೂರಕ್ಕೆ ಕಾಣುವಂತಿರಬೇಕು. ಈ ಆಜ್ಞೆಯನ್ನು ಉಲ್ಲಂಘಿಸಿದರೆ ಐದು ಪೌಂ ಜುಲ್ಮಾನೆ ವಿಧಿಸಲಾಗುವುದು.

ಸಾಧ್ವಿ

ತಾ|| ೨-೯-೪೭ ಮಂಗಳವಾರ

ಪತ್ರಿಕೆಗಳಿಗೆ ಪ್ರತಿಬಂಧಕ

ಸಂಸ್ಥಾನದಲ್ಲಿ ಜಾರಿಗೆ ತರಲಾಗಿರುವ ರೂರು ಶಾಸನದ ಪ್ರಥಮ ಪ್ರಹಾರವು ಲವು ಪತ್ರಿಕೆಗಳ ಮೇಲೆ ಬಿದ್ದಿರುತ್ತದೆ ಗಳಿಂದಲ್ಲಿ ಸರ್ಕಾರದವರು ಅನುಸರಿಸಿದ ಕ್ರಮಗಳಲ್ಲೇ ಈಗಲೂ ತೊಡಗಿರುವುದು ತ್ಯಂತ ವಿಷಾದಕರವಾಗಿದೆ. ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳನ್ನು ತಡೆಗಟ್ಟು ವುದರಿಂದ ಎಷ್ಟು ಅನರ್ಥಗಳು ಸಂಭವಿಸು ತ್ತವೆಂಬುದು ಸರ್ವರಿಗೂ ವೇದ್ಯವಾಗಿರುವ ವಿಷಯ. ಹೀಗಿದ್ದರೂ ಸತ್ಯಾಗ್ರಹ ಚಳು ವಳಿಗೆ ಸಂಬಂಧಪಟ್ಟ ಸಮಸ್ತ ವಿಷಯಗಳ ನ್ನೂ ಪೂರ್ವಭಾವಿಯಾಗಿ ಸರ್ಕಾರದ ಪ್ರಾ ಮಾಂಗ ಕಾರ್ಯದರ್ಶಿಗಳ ವಿಮರ್ಶೆಗೆ ಕ ಳುಹಿಸಿಕೊಡಬೇಕೆಂದು ಹೇಳುವುದು ಸ್ವ ಲ್ಪವೂ ದೂರದೃಷ್ಟಿಯಿಂದ ಕೂಡಿದ ವರ್ತ ನೆಯಲ್ಲ.

ಸಂಸ್ಥಾನದಲ್ಲಿ ಸಮಸ್ತರ ಗಮನವನ್ನೂ ಸೆಳೆದಿರುವ ವಿಷಯದ ವಿವರಗಳನ್ನು ಕೊ ಡಲು ಅವಕಾಶವಿಲ್ಲದಿರುವಾಗ ಪತ್ರಿಕೆಯ ನ್ನು ನಡೆಸುವುದು ಪ್ರಯೋಜನವಿಲ್ಲವೆಂದು ಭಾವಿಸಿ ಪೌರವಾಣಿಯು ಪ್ರಕಟಣೆಯನ್ನೇ ನಿಲ್ಲಿಸಬೇಕಾಗಿರುತ್ತದೆ. ಮಹಾಜನರಿಗೆ ಸಂ ಸ್ಥಾನದ ವಿದ್ಯಮಾನಗಳು ಸಂಪೂರ್ಣವಾ ಗಿ ತಿಳಿಯಬೇಕಾಗಿರುವುದು ಅತ್ಯಗತ್ಯವಾ ಗಿರುವ ಈ ಸಮಯದಲ್ಲಿ ವಾರ್ತಾಪ್ರಸಾರಗಳ ನ್ನು ಪ್ರತಿಬಂಧಿಸುವುದು ಅತ್ಯಂತ ಅಪಾ ಯಕರವೇ ಸರಿ.

ಪತ್ರಿಕೆಗಳಲ್ಲಿ ಬರುವ ವಿಷಯಗಳು ಅ ಸತ್ಯದಿಂದ ಕೂಡಿದ್ದರೆ ಅವುಗಳನ್ನು ಒಪ್ಪಿ ಕೊಳ್ಳಬೇಕೆಂದು ಯಾರೂ ಹೇಳುವುದಿಲ್ಲ. ಆದರೆ ಸತ್ಯವಾದ ವಿಷಯಗಳ ಪ್ರಕಟಣೆ ಯಿಂದ ಕೋಲಾಹಲವುಂಟಾಗಬಹುದೆಂಬ ಭೀತಿಯಿಂದ ಅವುಗಳನ್ನು ತಡೆಗಟ್ಟುವುದು ಇನ್ನೂ ಹೆಚ್ಚಿನ ಅನರ್ಥಗಳಿಗೆ ಅವಕಾಶ ವುಂಟುಮಾಡುವುದೆಂಬ ಅಂಶವು ಅನುಭ ವದಿಂದಲೇ ವೇದ್ಯವಾಗಿರುತ್ತದೆ. ಸತ್ಯಾಂ ಶವನ್ನು ಮರೆಮಾಚುವುದರಿಂದ ಇಲ್ಲದ ಸ ಲ್ಲದ ಊಹಾಪೋಹಗಳೂ, ಸುಳ್ಳು ವದಂ ತಿಗಳೂ ಸಾರ್ವಜನಿಕರಲ್ಲಿ ಹರಡಿ ಅನವ ಶ್ಯಕವಾದ ಕಳವಳಕ್ಕೆ ಕಾರಣವನ್ನುಂಟು ಮಾಡುವುವು. ಯಾವ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಹಲವು ಭಯಂಕರವಾ ದ ವದಂತಿಗಳು ಹಿಂದೆ ನಮ್ಮ ಸಂಸ್ಥಾನ ದಲ್ಲಿಯೇ ಹರಡಿಕೊಂಡು ಪ್ರತಿಯೊಬ್ಬರ ಬಾಯಲ್ಲಿಯೂ ಪ್ರಚಾರವಾಗುತ್ತಿದ್ದ ನಿದ ರ್ಶನಗಳು ನೆನಪಿನಲ್ಲಿರುತ್ತವೆ. ಇದಿ ಯು ಬಂತೆಂದರೆ ಹುಲಿಯೇ ಬಂತೆಂಬ ವ ದಂತಿಗಳು ಹೊರಟು ಸಮಾಜದಲ್ಲಿ ವಿಪ ರೀತ ಹಾವಳಿಯನ್ನುಂಟುಮಾಡಿರುತ್ತವೆ ಕೋಮುವಾರು ಅಶಾಂತಿ, ಆಹಾರದ ಅ ಭಾವ, ಸರಬರಾಜಿನ ದುಸ್ಥಿತಿ ಮುತ್ತ ಶಾಂತಿಭಂಗ ಪ್ರಸಂಗಗಳ ಕಾಲಗಳಲ್ಲಿ ಸುಳ್ಳು ಸುದ್ದಿಗಳು ಹರಡಿಕೊಂಡು ಮಹಾ ಜನರ ನೆಮ್ಮದಿಗೆ ಭಂಗವನ್ನುಂಟುಮಾಡಿ ರುತ್ತವೆ. ಅಂತಹ ಕಾಲಗಳಲ್ಲೆಲ್ಲಾ ಸರ್ಕಾ ರದವರು ಪತ್ರಿಕೆಗಳವರ ನೆರವನ್ನು ಬೇಡಿ ಸಮರ್ಪಕ ಪ್ರಕಟಣೆಗಳನ್ನು ಕೊಟ್ಟು ಸತ್ಯಾಂಶವನ್ನು ತಿಳಿಸಿರುತ್ತಾರೆ. ಈ ತರ ಸಂದರ್ಭ ಗಳಲ್ಲಿ ಪತ್ರಿಕೆಗಳ ಪ್ರಚಾರದ ಸಹಾಯವು ಅತ್ಯಂತ ಅವಶ್ಯವಾದ ಮ

ಸತ್ಯ, ಸಂಪೂರ್ಣ ಸತ್ಯ ಮತ್ತು ಸತ್ಯವ ಲ್ಲದ ಬೇರಾವುದಕ್ಕೂ ಅವಕಾಶ ಕೊಡದಿ ರುವುದು-ಇವೇ ಪತ್ರಿಕಾ ಪ್ರಕಟಣೆಗೆ ಮೂಲ ಮಂತ್ರ. ಸಮಾಜದಲ್ಲಿ ಅಲ್ಲೋಲಕಲ್ಲೋ ಲವನ್ನುಂಟುಮಾಡಲು ಸತ್ಯವನ್ನು ಮರೆ ಮಾಚುವುದಕ್ಕಿಂತ ಬೇರೆ ಅಪಾಯಕರವಾ ದ ಮಾರ್ಗವಿಲ್ಲವೆಂದು ಎಲ್ಲರೂ ಮನಗಂಡಿ ರುವರು. ಈಗ ನಮ್ಮ ಸರ್ಕಾರದವರು ಸತ್ಯಾಂಶದ ಪ್ರಕಟಣೆಯನ್ನು ತಡೆಗಟ್ಟಲು ತೊಡಗಿರುವುದು ಸರಿಯಲ್ಲ.

ಇಂದಿನ ಪರಿಸ್ಥಿತಿಯು ಬಹಳ ವಿಷಮ ವಾಗುತ್ತ ಬರುತ್ತಿದೆ. ಸಂಸ್ಥಾನದಲ್ಲಿ ದೊ ಡ್ಡ ಬಿಕ್ಕಟ್ಟಿನ ಪ್ರಸಂಗವು ಒದಗಿರುತ್ತದೆ. ಈ ಸಮಯದಲ್ಲಿ ಅನೇಕ ಘಟನೆಗಳು ನಡೆ ಯುವ ಸಂಭವಗಳಿವೆ. ಹರತಾಳ, ಮೆರವ ಣಿಗೆ, ಸಭೆ, ಭಾಷಣ, ಪ್ರದರ್ಶನಗಳ ವರ್ಣ ನೆಯು ವಿಶೇಷವಾಗಿ ಪತ್ರಿಕೆಗಳಲ್ಲಿ ಪ್ರಕಟ ವಾಗದಿದ್ದರೆ ಹೆಚ್ಚು ಬಾಧಕವಾಗದಿರಬಹು ದು. ಆದರೆ ಒಂದು ವೇಳೆ ದುರದೃಷ್ಟವಶ ದಿಂದ ಮುತ್ತಿಗೆಯೇ ಮುಂತಾದ ದುರ್ಘಟನೆಗಳು ಒದಗಿದರೆ ಅವುಗಳ ವಿವರಗಳು ಪ್ರಕಟವಾ ಗುವುದು ಅತ್ಯಗತ್ಯ. ಇಲ್ಲದಿದ್ದರೆ ಒಂದಕ್ಕೆ ನಾಲ್ಕರಷ್ಟು ಸುಳ್ಳು ಸಮಾಚಾರಗಳು ಹೊ ರಟು ಕೋಲಾಹಲವನ್ನುಂಟುಮಾಡುವುದ ರಲ್ಲಿ ಸಂಶಯವಿಲ್ಲ.

ಸತ್ಯಾಗ್ರಹಕ್ಕೆ ಸಂಬಂಧಪಟ್ಟ ಸಮಸ್ತ ಸುದ್ದಿಗಳನ್ನೂ, ಟೀಕೆಗಳನ್ನೂ ತಮಗೆ ಕ ಳ್ಳಿಸಬೇಕೆಂದು ಸರ್ಕಾರದವರು ಹೇಳಿ ದ್ದಾರೆ. ಸತ್ಯಾಗ್ರಹವನ್ನು ಖಂಡಿಸಿ ಬರೆ ಯುವ ಲೇಖನಗಳಿಗೂ ಇದು ಅನ್ವ ಯಿಸುತ್ತದೆ. ವಿದ್ಯಾರ್ಥಿಗಳು ಆರಮನೆಯ ಮುಂದೆ ನಡೆಸಬೇಕೆಂದಿದ್ದ ಸತ್ಯಾಗ್ರಹವ ನ್ನು ೧೫ ದಿವಸ ಮುಂದೆ ಹಾಕಿದ್ದಾರೆಂಬ ಸುದ್ದಿಯನ್ನೂ ಸಹ ನ್ಯಾಯಾಂಗ ಕಾ ರ್ಯದರ್ಶಿಗಳ ಪರಿಶೀಲನೆಗೆ ಕಳುಹಿಸಿಕೊಡ ಬೇಕಾಗುತ್ತದೆ. ಅವರು ಅದನ್ನು ಪರಿಶೀ ಲಿಸಿ ಕಳುಹಿಸಿಕೊಡಲು ಎಷ್ಟುಕಾಲ ಹಿಡಿ

ಯುವುದೋ ಹೇಳಲಾಗುವುದಿಲ್ಲ. ರಜಾ ದಿನಗಳಲ್ಲಿ ಇನ್ನೂ ತಾಮಸಕ್ಕೆ ಕಾರಣ ವಾಗುವುದು. ರಾಜಧಾನಿಯಲ್ಲಿ ಹೊರಡು ವ ವಿಷಯ ಪತ್ರಿಕೆಯವರು ಸತ್ಯಾ ಗ್ರಹದ ಸುದ್ದಿಯನ್ನು ಬೆಂಗಳೂರು ಅರಮ ನೆ ಕಛೇರಿಗೆ ಕಳುಹಿಸಿ ಅದನ್ನು ತರಿಸಿ ಕೊಂಡು ಮುದ್ರಣ ಮಾಡಲು ಎಷ್ಟು ತಾ ಮಸವಾಗಬಹುದು. ಅಷ್ಟುಹೊತ್ತಿಗೆ ಆ ಸುದ್ದಿಯು ಬೆಲೆಯಾದರೂ ಏನಿದ್ದೀತು?

ಸಂಸ್ಥಾನದ ಪತ್ರಿಕೆಗಳ ಮೇಲೆ ಸರ್ಕಾ ರದವರು ಈ ರೀತಿ ಪ್ರತಿಬಂಧಗಳನ್ನು ಪ್ರ ಯೋಗಿಸಲು ಅವಕಾಶವನ್ನು ಇಟ್ಟುಕೊಂ ಡಿರುತ್ತಾರೆ. ಆದರೆ ಹೊರಗಿನಿಂದ ಬರುವ ನೂರಾರು ಪತ್ರಿಗಳಲ್ಲಿ ಈ ಸುದ್ದಿಗಳು ಬ ರುವುದನ್ನು ಅವರು ತಡೆಗಟ್ಟಲು ಸಾಧ್ಯವಿ ಲ್ಲ. ಆ ಪತ್ರಿಕೆಗಳಿಗೆಲ್ಲಾ ಬಹಿಷ್ಕಾರ ಹಾ ಕುವುದೂ ಸಹ ಸಲ್ಲದ ಮಾತು. ಮೇಲಾ ಗಿ ಅಖಿಲ ಭಾರತ ರೇಡಿಯೋವಿನಲ್ಲಿ ಮೈ ಸೂರು ಸತ್ಯಾಗ್ರಹದ ವಿಚಾರವು ಪ್ರತಿ ದಿನ ವೂ ಪ್ರಕಟವಾಗುತ್ತಲೇ ಇದೆ. ಇದನ್ನು ನಮ್ಮ ಸರ್ಕಾರದವರು ತಡೆಗಟ್ಟಲು ಸಾ ಧ್ಯವೇ?

ಹೀಗೆ ಮಹಾಜನರು ಸಂಸ್ಥಾನದ ವಿದ್ಯ ಮಾನಗಳ ಸಮಸ್ತ ವಿವರಗಳನ್ನೂ ಸಂಪೂ ರ್ಣವಾಗಿ ತಿಳಿದುಕೊಳ್ಳುವ ಅವಶ್ಯಕತೆಯು ವಿಶೇಷವಾಗಿರುವ ಈ ಸಮಯದಲ್ಲಿ ಸುದ್ದಿ ಗಳನ್ನು ತಡೆಗಟ್ಟಲು ಸರ್ಕಾರದವರು ಕೈ ಗೊಂಡಿರುವ ಈ ಕಾರ್ಯಕ್ರಮವನ್ನು ಪ್ರತಿ ಯೊಬ್ಬ ನಾಗರಿಕನೂ ಖಂಡಿಸಲೇಬೇಕು. ಈಗಲೂ ಈ ಆಜ್ಞೆಯನ್ನು ಹಿಂದಕ್ಕೆ ತೆಗೆ ದುಕೊಂಡು ಸತ್ಯಾಂಶದ ಪ್ರಕಟಣೆಗೆ ಸರ್ಕಾ ರದವರು ಅವಕಾಶವನ್ನು ಕಲ್ಪಿಸುವುದು ಶ್ರೇಯಸ್ಕರವಾಗಿರುತ್ತದೆ.

ಸತ್ಯಾಗ್ರಹಕ್ಕೆ ಸಹಾನುಭೂತಿ

ಬೆಳಗೊಳ

ಇಲ್ಲಿನ ಕೆಮಿಕಲ್ಸ್ ಮತ್ತು ಫರ್ಟಿಲೈ ಜರ್ಸ್ ಕಾರ್ಖಾನೆಯ ಕೆಲಸಗಾರರ ಸಂಘ ದವರು ಕಂಪೆನಿಯ ಕಾರ್ಮಿಕ ಮತ್ತು ವೆ ಲ್‌ಫೇರ್ ಅಧಿಕಾರಿಗಳಾದ ಶ್ರೀ ಎಲ್. ಜ ನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಈ ದಿ ನ ಸಭೆ ಸೇರಿ ಶ್ರೀಮನ್ಮಹಾರಾಜರವ ಕ್ಷತ್ರಾಯದಲ್ಲಿ ಜವಾಬ್ದಾರಿ ಸರ್ಕಾರ ನ್ನು ಸ್ಥಾಪಿಸುವ ಸಲುವಾಗಿ ಮೈಸೂರು ಕಾಂಗ್ರೆಸ್ ಹೂಡಲಿರುವ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲವನ್ನು ನೀಡಿ, ಸಹಕಾ ವನ್ನು ಸೂಚಿಸುವ ನಿರ್ಣಯವನ್ನು ಅ ಗೀಕರಿಸಿದರು.

ಕೋತಿಗಳ ಹಾವಳಿ

ಬೆಳಗೊಳ ಗ್ರಾಮದಲ್ಲಿ ಕೋತಿಗಳ ಹಾ ವಳಿ ವಿಪರೀತವಾಗಿದೆ. ಮನೆಗಳಿಗೆ ಅ ಗುಂಪು ಗುಂಪಾಗಿ ನುಗ್ಗಿ ಪದಾರ್ಥಗಳ ನ್ನೆಲ್ಲಾ ನಾಶ ಮಾಡುತ್ತಿವೆ. ಮನೆಗ ಹೆಂಗಸರು ಇವುಗಳ ಹಾವಳಿಯಿಂ ಹೊರ ಹೋಗುತ್ತಿವೆ. ಸಂಬಂಧಪಟ್ಟ ವರು ಇವಕ್ಕೆ ಕೂಡಲೇ ಗಮನಕೊಟ್ಟು ಈ ಹಾವಳಿಯನ್ನು ತಪ್ಪಿಸಬೇಕೆಂದು ದಾಗಿ ಶ್ರೀ ಬಿ. ಸಿ. ವೀರಯ್ಯನವರು ಕೇ ರಿದ್ದಾರೆ.

೨೭ ವರ್ಷಗಳಲ್ಲಿ ೨೪ ಮಕ್ಕಳ

ಗ್ಲೋಬ್] ಪ್ಯಾರಿಸ್

ಬೆಕ್ಸ್ಲಾ ಎಂಬಲ್ಲಿನ ಕಸಿ ಎಂಬು ಯು ತನ್ನ ೨೭ ವರ್ಷಗಳ ವಿವಾಹ ಜೀ ವದಲ್ಲಿ ೨೪ ಜನ ಮಕ್ಕಳನ್ನು ಹೆತ್ತಿರ ಳು. ಅವಳು ನಾಲ್ಕು ಬಾರಿ ವಿವಾಹ ಗಿರುವಳು. ಅಕೆಗೆ ೭೧ ಜನ ಮೊಮ್ಮ ಳಿರುವರು.

ಬಸವನ ಹುಳು ಗಂಟೆಗೆ ೬ ಗಜ ಹೋಗುವುದು

ಗ್ಲೋಬ್] ನ್ಯೂಯಾರ್ಕ್

ಬಸವನ ಹುಳುವು ಗಂಟೆ ಒಂದಕ್ಕೆ ಗಜ ೧ ಅಡಿ ೩ ಅಂಗುಲದ ವೇಗದಲ್ಲಿ ಲಿಸುವುದೆಂದು ಅಮೇರಿಕದ ವಿಶ್ವವಿದ್ಯಾ ಯದವರು ಕಂಡು ಹಿಡಿದಿರುವರು.

ಜೈ ಹಿಂದ್!

ಅಂಗಡಿ ಬದಲಾವಣೆ

ತ್ಯಾಗರಾಜಾ ರಸ್ತೆಯಲ್ಲಿದ್ದ ಜಯದೇವ ರೆಡಿಮೇಡ್ ಡ್ರೆಸಸ್ ಅಂಗಡಿಯನ್ನು ದೇ ವರಾಜಾ ಮಾರ್ಕೆಟ್ಟಿನ ಒಳಭಾಗದಲ್ಲಿರುವ 342 ನೇ ನಂ ಮಳಿಗೆಗೆ ಬದಲಾಯಿಸಿರು ತ್ತದೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಪಿ. ರುದ್ರಪ್ಪ ರಾವ್ ಅಂಡ್ ಬ್ರದರ್ಸ್

ವುಡ್‌ಲ್ಯಾಂಡ್ಸ್

೨೯-೮-೪೭ ರಿಂದ

ಪ್ರತಿಪಾತ್ರ ಪಾತ್ರದಲ್ಲಿ ...

ವಾಂಪೈರ್ ರಾಜ

(ಹಿಂದಿ)

— ಪಾತ್ರಗಳು :—

... ನಾಜೀರ್

Distributors Contact
HANSA PICTURES
Chickpet, Bangalore City

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply I. N. D. Basavanagudi, Bangalore.

ರಾಜಕಮಲ್

ತಾ|| ೨೯-೮-47 ರಿಂದ

3-15 6-15 9-15

ಬಾಂಬೆ ಟಾಕೀಸಿನವರ ಹೊಸ ಚಿತ್ರ

ಝೂಲಾ

— ಭೂಮಿಕೆ :—

ಅಶೋಕ ಕುಮಾರ್, ಲೀಲಾಚಿಟ್ನೀಸ್

ಮೈಸೂರು ವಿನಾಯಕ...

ನಾರಾಯಣ ಶಾಸ್ತ್ರಿ ರಸ್ತೆ, ...

ಅಂಗಡಿ ಮಳಿಗೆ ಮಾರಾಟ

...

ಬಿ. ಎಸ್. ...

Bengal Silk

Sarees in most attractive Colours and in 6, 7, 8 and 9 yards

Bahusar Company, Mysore

There are Radios and Radios
Please see and hear the new
Beethoven Receiver
before you make your choice
Distributor for Mysore State:—
B. N. Mahadeva Rao, B.
Show Room: 1376/1
Narayana Sastry Road
(Near Old Bamboo Bazaar)
Mysore

Edited, printed and published by A. R. Nagarajan at the Sadhvi ... D. Subbaiah Road Mysore

ಫೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಬುಧವಾರ ೩-೯-೪೭ [ಸಂಚಿಕೆ ೩೬

ಇಂಡಿಯಾ ಚಕ್ರವರ್ತಿ ಎಂಬ ಹೆಸರಿನ ರದ್ದು

ಕೇಂದ್ರ ಸರ್ಕಾರಕ್ಕೆ ಪತ್ರಿಕಾ ಕರ್ತರ ತಂತಿ

ಸರ್ದಾರ್ ಪಟೇಲರ ಬೆಂಬಲಕ್ಕಾಗಿ ಪ್ರಾರ್ಥನೆ

ಸು.ಫೋ॥] [ಬೆಂಗಳೂರು ೩

ತಾಯಿನಾಡು, ಡೇಲಿ ನ್ಯೂಸ್, ವಾರ್ತಾಬಂಧು, ವಿಶ್ವಕರ್ನಾಟಕ ವಾರಪತ್ರಿಕೆ, ಜನವಾಣಿ, ಸ್ವಾತಂತ್ರ್ಯೋದಯ ಮತ್ತು ಇತರ ಪತ್ರಿಕೆಗಳ ಮೇಲೆ ಸರ್ಕಾರದವರು ಹಾಕಿರುವ ಪ್ರತಿಬಂಧಕವನ್ನು ಪ್ರತಿಭಟಿಸಿ ಆ ವಿಧ ಪತ್ರಿಕೆಗಳ ಸಂಪಾದಕರು ನಿನ್ನೆ ಭಾರತ ಡೊಮಿನಿಯನ್ ಸರ್ಕಾರಕ್ಕೆ ಈ ರೀತಿ ತಂತಿಯನ್ನು ಕಳುಹಿಸಿದ್ದಾರೆ:—

ಮೈಸೂರು ಸಂಸ್ಥಾನದಲ್ಲಿ ಇನ್ನೂ ಸತ್ಯಾಗ್ರಹವು ಆರಂಭವೇ ಆಗಿಲ್ಲ; ಹಿಂಸಾತ್ಮಕ ಕೃತ್ಯಗಳಾಗಲೀ ಅಥವಾ ಅಂಜಾಬಕರ ಘಟನೆಗಳಾಗಲೀ ನಡೆದಿರುವುದೆಂದು ಸಂದೇಹಪಡಲು ಆಸ್ಪದವಿಲ್ಲ; ಹೀಗಿರುವಾಗ ಮೈಸೂರು ಸರ್ಕಾರವು ಜವಾಬ್ದಾರೀ ಸರ್ಕಾರದ ಸ್ಥಾಪನೆಗಾಗಿ ಆರಂಭವಾಗಿರುವ ಪ್ರಜಾ ಚಳವಳಿಗೆ ಸಂಬಂಧಪಟ್ಟ ಸುದ್ದಿಗಳ ಮೇಲೆ ನಿರ್ಬಂಧವನ್ನು ಹಾಕಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದೆ. ಅಲ್ಲದೆ ಸ್ವತಂತ್ರ ಅಭಿಪ್ರಾಯ ಪ್ರದರ್ಶನೆ ಮತ್ತು ಪ್ರಜಾ ಸತ್ತಾತ್ಮಕ ಹಕ್ಕುಗಳನ್ನು ಧ್ಯೇಯವಾಗಿಟ್ಟುಕೊಂಡಿರುವ ಕೆಲವು ಪತ್ರಿಕೆಗಳ ಮೇಲೆ ಮಾತ್ರ ಆಜ್ಞೆಯನ್ನು ಜಾರಿ ಮಾಡಿ ಅಲ್ಲೂ ಪಕ್ಷಪಾತವನ್ನು ವ್ಯಕ್ತಪಡಿಸಲಾಗಿದೆ; ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವುದೇ ಈ ನಿರ್ಬಂಧದ ಉದ್ದೇಶವಾಗಿದೆ. ಮೈಸೂರು ಸರ್ಕಾರವು ಈ ನಿರ್ಬಂಧವನ್ನು ರದ್ದುಗೊಳಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸುವಂತೆ ಮೈಸೂರು ದರ್ಬಾರಿಗೆ ಸಲಹೆ ಮಾಡಬೇಕು.

ತಾಯಿನಾಡು, ವಾರ್ತಾ ಮತ್ತು ವಿಶ್ವಕರ್ನಾಟಕ ವಾರ ಪತ್ರಿಕೆಗಳ ಸಂಪಾದಕರು ಸ್ವದೇಶಗಳ ಶಾಖಾ ಸಚಿವರಾದ ಸರ್ದಾರ್ ವಲ್ಲಭ ಭಾಯಿ ಪಟೇಲರಿಗೆ ಒಂದು ಪತ್ರವನ್ನು ಬರೆದು ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಈ ನಿರ್ಬಂಧದ ಆಜ್ಞೆಯು ಜಾರಿ ಹಲವು ಸ್ಥಳೀಯ ಪತ್ರಿಕೆಗಳ ಮೇಲೆ ಜಾರಿ ಮಾಡಿಲ್ಲ; ಸಂಸ್ಥಾನದ ಹೊರಗಡೆಯಿಂದ ಬರುವ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಟೈಂಸ್ ಆಫ್ ಇಂಡಿಯಾ ಮೊದಲಾದ ಪತ್ರಿಕೆಗಳಿಗಂತೂ ಈ ನಿರ್ಬಂಧಾಜ್ಞೆಯು ಅನ್ವಯಿಸುವುದೇ ಇಲ್ಲ. ಸರ್ಕಾರದವರ ಈ ಪಕ್ಷಪಾತದ ನೀತಿಯಿಂದ ಸ್ಥಳೀಯ ರಾಷ್ಟ್ರೀಯ ಪತ್ರಿಕೆಗಳು ಒಂದು ಇಕ್ಕಟ್ಟಿನ ಪರಿಸ್ಥಿತಿಯು ಉಂಟಾಗಿರುತ್ತದೆ; ಅಲ್ಲದೆ ನಿರ್ಬಂಧಕ್ಕೊಳಗಾಗಿರುವ ಈ ಪತ್ರಿಕೆಗಳಿಗೆ ಅನ್ಯಾಯವುಂಟಾಗಿದೆ. ಸತ್ಯಾಗ್ರಹದ ಚಳವಳಿಗೆ ಸಂಬಂಧಪಟ್ಟ ಘಟನೆಗಳು, ಭಾಷಣಗಳು, ಹೇಳಿಕೆಗಳು ಮೊದಲಾದವುಗಳಿಗೆ ಆಜ್ಞೆಯು ಅನ್ವಯಿಸುತ್ತದೆ. ಸತ್ಯಾಗ್ರಹದ ಚಳುವಳಿ-ಸಂಬಂಧಕ್ಕೆ ಈ ಪದದ ಅರ್ಥವನ್ನು ಸರ್ಕಾರದವರು ತಿಳಿಸಿಲ್ಲ; ಬೇರಾವ ಕಡೆಯೂ ಸಹ ಇದರ ಅರ್ಥ ವಿವರಣೆಯನ್ನು ಕೊಟ್ಟಿಲ್ಲ. ಇದರಿಂದ ರಾಜಕೀಯ ಚಳವಳಿಗೆ ಸಂಬಂಧಪಟ್ಟಂತೆ ಸತ್ಯಾಗ್ರಹದ ವಿಷಯವಾಗಿ ಯಾವ ಸುದ್ದಿಗಳು ಅಥವಾ ... ಸೇರುವುವೆಂಬುದನ್ನು ನಿರ್ಧರಿ...

ಪತ್ರಿಕೆಗಳ ಆಹುತಿ

ಇದರಿಂದ ಪತ್ರಿಕೆಗಳ ಮತ್ತು ಪ್ರಜೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ

ಮೈಸೂರು ೩

ಪತ್ರಿಕೆಗಳ ಮೇಲೆ ಹಾಕಿರುವ ಪ್ರತಿಬಂಧಕವನ್ನು ಕುರಿತು ರಾಜಧಾನಿಯ ವಕೀಲರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಈ ರೀತಿ ಬರೆದಿರುತ್ತಾರೆ:—

ಪತ್ರಿಕೆಗಳು ಅಂಜಾಬಕವಾದ ಮತ್ತು ಅಪಕ್ಷಿಗೋಪಡಿಸುವ ಅವಹೇಳನ ಮಾಡಿದರೆ ಅಥವಾ ಪ್ರಕಟಣೆ ಪ್ರಕಟಿಸಿದರೆ ಅವನ್ನು ಶಿಕ್ಷಿಸಲು ನಾಡಿನ ಸಾಧಾರಣ ಕಾನೂನು ಇರುವಾಗ, ಈ ಹೊಸ ಗದಾ ಪ್ರಹಾರಕ್ಕೆ ಕಾರಣವೇ ಇಲ್ಲ. ಇದರಿಂದ ಅವರ ಗುರಿ ಸಾಧನೆ ಯಾದರೂ ಅಪೇಕ್ಷೆ? ಹೊರ ಪ್ರಾಂತಗಳ ಪತ್ರಿಕೆಗಳು ಇದೇ ವಿಷಯವನ್ನೇ ಪ್ರಕಟಿಸುತ್ತವೆ ಅವು ನಮಗೆ ಬರುತ್ತಿಲ್ಲವೆ? ಆಖಿಲ ಭಾರತ ರೇಡಿಯೋವಿನಿಂದ ಇದೇ ವಿಷಯ ಪ್ರಕಟವಾಗುತ್ತಿಲ್ಲವೆ? ಅಂದ ಮೇಲೆ ನಮ್ಮ ಪತ್ರಿಕೆಗಳ ಮೇಲೆ ಏಕೆ ಈ ಆರ್ಭಟ? ಇದರಿಂದ ಪತ್ರಿಕೆಗಳಿಗಿಂತ ಪ್ರಜೆಗಳಿಗೇ ನಷ್ಟ. ಅವರಿಗೆ ಪತ್ರಿಕೆಗಳ ಮುಖೇನ ವಿಷಯವು ತಿಳಿಯುವ ಹಕ್ಕು ಹೋಯಿತು. ಪತ್ರಿಕಾ ಮತ್ತು ಪ್ರಜಾ ಸ್ವಾತಂತ್ರ್ಯ ಅಳಿಯಿತು. ಮೈಸೂರು ದೇಶದ ಪತ್ರಿಕಾ ಸಂಘ ಇದನ್ನು ಪ್ರತಿಭಟಿಸಲೇಬೇಕು ಮತ್ತು ಇತರ ಪತ್ರಿಕೆಗಳೂ ತಮ್ಮ ಪತ್ರಿಕೆಯನ್ನು ನಿಲ್ಲಿಸಬೇಕು. ಜನರು ಆರ್ಭಟಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ಪುನಃ ಗಳಿಸಬೇಕು.

ಸುಪುಪುಮ ಆತ್ಮೀಕ ಕರಣವಾಗಿದೆ; ಸತ್ಯಾಗ್ರಹದ ವಿಷಯದಲ್ಲಿ ಸರ್ಕಾರದವರ ನಿರಂಕುಶವಾದ ನೀತಿಗೆ ಪತ್ರಿಕೆಗಳವರು ಬಲಿಯಾಗುವ ಪರಿಸ್ಥಿತಿಯು ಬಂದಿರುತ್ತದೆ. ಎಲ್ಲ ವಿಷಯಗಳನ್ನೂ ಸರ್ಕಾರದವರ ಪ್ರೀ ಸೆನ್ಸಾರ್‌ಷಿಪ್ ವ್ಯವಸ್ಥೆಗೆ ಒಳಪಡಿಸುವುದಾದರೆ ಅದು ಪತ್ರಿಕಾ ಸ್ವಾತಂತ್ರ್ಯಕ್ಕೇ ಧಕ್ಕೆ ತಂದಂತಾಗುತ್ತದೆ; ಈ ಕಾರಣದಿಂದ ನಾವು ನಮ್ಮ ಪತ್ರಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲು ನಿರ್ಣಯ ಮಾಡಿದ್ದೇವೆ. ಎಂದು ಪತ್ರದಲ್ಲಿ ಬರೆಯಲಾಗಿದೆ. ಕೇಂದ್ರ ಸರ್ಕಾರದ ಬೆಂಬಲವನ್ನು ಸಹ ಕೋರಲಾಗಿದೆ. ಈ ಪತ್ರದ ಜೊತೆಗೆ ಸರ್ಕಾರದ ಆಜ್ಞೆಯ ನಕಲನ್ನೂ ಕಳುಹಿಸಿ ಕೊಡಲಾಗಿದೆ.

ಪ್ಯಾಸೆಂಜರ್ ರೈಲುಗಳ ಸಂಚಾರ ರದ್ದು

ಸ್ವಂ.ಸು.ಫೋ॥] ಬೆಂಗಳೂರು ೩

ಮೈಸೂರು ರೈಲ್ವೆ ಕೆಲಸಗಾರರು ಮುಷ್ಕರ ಹೂಡುವ ಸಂಭವವಿರುವುದರಿಂದ ಈ ತಿಂಗಳು ೬ ನೇ ತಾರೀಖು ಶನಿವಾರ ಕೆಲವು ಪ್ಯಾಸೆಂಜರ್ ರೈಲುಗಳನ್ನೂ ಅನಂತರ ಎಲ್ಲಾ ಪ್ಯಾಸೆಂಜರ್ ರೈಲುಗಳನ್ನೂ ನಿಲ್ಲಿಸುವ ಸಂಭವವಿರುವುದಾಗಿ ಅಧಿಕಾರಯುತವಾದ ಪ್ರಕಟಣೆ ಹೊರಟಿರುತ್ತದೆ.

ಹನುಮಂತಯ್ಯನವರು ಕೋಲಾರಕ್ಕೆ

ಶ್ರೀ ಹನುಮಂತಯ್ಯನವರನ್ನು ಕೋಲಾರ ಜಿಲ್ಲಾ ಜೈಲಿಗೆ ವರ್ಗಾಯಿಸಲಾಗಿದೆ.

* ತಮಿಳುನಾಡು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕಾಮರಾಜ ನಾದರ್‌ರವರು ಈ ದಿನ ಬೆಳಗ್ಗೆ ೧೦-೩೦ ಗಂಟೆಗೆ ಇಲ್ಲಿಗೆ ಆಗಮಿಸಿರುವರು.

ಪಂಜಾಬಿನಲ್ಲಿ ಪಂಡಿತ ನೆಹರೂ

ಭಾರತ ಮತ್ತು ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ನೆಹರೂ ಮತ್ತು ಲಿಯಾಖತ್ ಅಲಿ ಖಾನರು ಪಂಜಾಬಿನ ಗಲಭೆಗೀಡಾದ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದಾರೆ. ಅಲ್ಪಸಂಖ್ಯಾತರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಬೇಕೆಂದು ಮಂತ್ರಿಗಳನ್ನು ಕೋರಲಾಗಿದೆ. ಪಂಜಾಬ್ ಪ್ರಾಂತದಲ್ಲಿ ಸಾವು ದೀರ್ಘಕಾಲ ಇದ್ದು ಶಾಂತಿ ಸ್ಥಾಪನೆಗಾಗಿ ಹತ್ತಿಕ್ಕುವುದಾಗಿ ಪಂಡಿತ ನೆಹರೂರವರು ಭರವಸೆ ಇತ್ತಿದ್ದಾರೆ. ನಿರ್ದೋಷಿಗಳನ್ನು ಕೊಲ್ಲುವುದು ಇಸ್ಲಾಂ ತತ್ವಕ್ಕೆ ವಿರೋಧವೆಂದು ಲಿಯಾಖತ್‌ರವರು ಮುಸ್ಲಿಮರಿಗೆ ಹಿತೋಪದೇಶ ಮಾಡಿದ್ದಾರೆ. ಲೀಗಿನವರು ಶಾಂತಿಗಾಗಿ ಯತ್ನಿಸುತ್ತಿದ್ದರೂ ಸಹ ಮುಸ್ಲಿಂ ನ್ಯಾಷನಲ್ ಗಾರ್ಡಿನವರು ಗಲಭೆ ನಡೆಸುತ್ತಿರುವರೆಂದು ಹೇಳಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್ಸಿನ ಆತುರದ ಸಭೆ

ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯು ನಾಳೆ ಬೆಳಗ್ಗೆ ೮ ಗಂಟೆಗೆ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಾಲಯದಲ್ಲಿ ನಡೆಯುವುದು. ಸದಸ್ಯರೆಲ್ಲರೂ ತಪ್ಪದೆ ಬರಬೇಕೆಂದು ಕಾರ್ಯದರ್ಶಿಗಳಾದ ಶ್ರೀ ನಾರಾಯಣ್‌ರವರು ಕೋರಿರುತ್ತಾರೆ.

ಸತ್ಯಾಗ್ರಹ ಯಾತ್ರೆ

ಕಾಲ್ನಡಗೆ ಪ್ರವಾಸದ ಕಾರ್ಯಕ್ರಮ

ಸ್ವಂ.ಸು.ಫೋ॥] ಬೆಂಗಳೂರು ೩

ಈ ದಿನ ಬೆಳಗ್ಗೆ ಮತ್ತು ನಿನ್ನೆ ಕಾಂಗ್ರೆಸ್ ನಾಯಕರು ಸೇರಿ ಸತ್ಯಾಗ್ರಹದ ಕಾರ್ಯಕ್ರಮಗಳನ್ನು ಪರಿಶೀಲಿಸಿದರು. ನಾಳೆ ಬೆಳಗ್ಗೆ ೯ ಗಂಟೆಗೆ ಅವರು ಪ್ರಥಮ ಸರ್ವಾಧಿಕಾರಿಗಳಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರ ನಾಯಕತ್ವದಲ್ಲಿ ಬೆಂಗಳೂರಿನಿಂದ ಕಾಲ್ನಡಗೆಯಲ್ಲಿ ಹೊರಡುವರು. ಮಧ್ಯಾಹ್ನ ನಾಯಂಡಹಳ್ಳಿಯಲ್ಲಿ ಸಭೆ, ರಾತ್ರಿ ಕೆಂಗೇರಿ ೫ ನೇ ತಾ॥ ಕುಂಬಳಗೋಡಿನಲ್ಲಿ ಸಭೆ: ರಾತ್ರಿ ಬಿಡದಿ. ೬ ನೇ ತಾ॥ ಮಾಯಗಾನಹಳ್ಳಿಯಲ್ಲಿ ಸಭೆ; ರಾತ್ರಿ ಕ್ಲೋಸ್‌ಪೇಟೆ, ೭ ನೇ ತಾ॥ ಹನುಮಂತರಾಯನ ಗುಡಿಯಲ್ಲಿ ಸಭೆ; ರಾತ್ರಿ ಬೈರಾಪಟ್ಟಣ ೮ ನೇ ತಾ॥ ನಿಡಘಟ್ಟದಲ್ಲಿ ಸಭೆ; ರಾತ್ರಿ ಮದ್ದೂರು. ೯ ನೇ ತಾ॥ ಹನಕೆರೆಯಲ್ಲಿ ಸಭೆ; ರಾತ್ರಿ ಮಂಡ್ಯ. ೧೦ ನೇ ತಾ॥ ಕೂಡಿಯಾಲದಲ್ಲಿ ಸಭೆ; ರಾತ್ರಿ ಅರಕೆರೆ ೧೧ ನೇ ತಾ॥ ದೊಡ್ಡಪಾಳ್ಯದಲ್ಲಿ ಸಭೆ; ರಾತ್ರಿ ಶ್ರೀರಂಗಪಟ್ಟಣ. ೧೨ ನೇ ತಾ॥ ಸಿದ್ಧಲಿಂಗಪುರದಲ್ಲಿ ಸಭೆ; ರಾತ್ರಿ ಮೈಸೂರು. ೧೩-ನೇ ತಾ॥ ಮೈಸೂರಿನಲ್ಲಿ ವಿಶ್ರಾಂತಿ. ೧೪ ನೇ ತಾ॥ ಬೆಳಗ್ಗೆ ೧೦ ಗಂಟೆಗೆ ಅರಮನೆಯ ಮುಂದೆ ಸತ್ಯಾಗ್ರಹ.

ರೈಲ್ವೆ ಸಂಧಾನ ವಿಫಲವಾಯಿತು

ದಿವಾನರ ಆಹ್ವಾನವನ್ನಂಗೀಕರಿಸಿ ರೈಲ್ವೆ ಕೆಲಸಗಾರರ ಸಂಘದ ಪ್ರತಿನಿಧಿಗಳು ನಿನ್ನೆ ಸಂಜೆ ದಿವಾನರನ್ನು ಭೇಟಿಮಾಡಿದರು. ಅವರು ಸರ್ಕಾರಕ್ಕೆ ೧೭೫ ಲಕ್ಷ ರೂ ನಷ್ಟ ಉಂಟಾಗುತ್ತಿರುವುದರಿಂದ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಬಹುದೆಂದು ತಿಳಿಸಿದರು. ದಿವಾನರು ಆ ಅಂಕಿಅಂಶಗಳು ಸರಿಯಲ್ಲವೆಂದು ಹೇಳಿ ಕೆಲಸಗಾರರ ಬೇಡಿಕೆಗಳಿಗೆ ಒಪ್ಪಲಿಲ್ಲವೆಂದು ಗೊತ್ತಾಗಿದೆ. ಸಂಧಾನ ವಿಫಲವಾದುದರಿಂದ ಕೆಲಸಗಾರರ ಸತ್ಯಾಗ್ರಹವು ೬-೭ ರ ಮಧ್ಯರಾತ್ರಿಯಿಂದ ಆರಂಭವಾಗುವುದೆಂದು ರೈಲ್ವೆ ಪ್ರಜಾ ಕಾಂ ... ಕಾರ್ಯದರ್ಶಿಗಳು ತಿಳಿಸಿರುವರು.

ಸತ್ಯಾಗ್ರಹಕ್ಕೆ ಆಂಧ್ರ ದೇಶದ ಕಾಂಗ್ರೆಸ್ ಸಮಿತಿಯ ಬೆಂಬಲ

ಆಂಧ್ರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಓಬುಳರೆಡ್ಡಿಯವರು ಶ್ರೀ ಕೆ. ಚೆಂಗಲರಾಯ ರೆಡ್ಡಿಯವರಿಗೆ ಪತ್ರವೊಂದನ್ನು ಬರೆದು ಮೈಸೂರು ಕಾಂಗ್ರೆಸ್ಸಿನ ಸತ್ಯಾಗ್ರಹಕ್ಕೆ ತಾವು ಪೂರ್ಣ ಬೆಂಬಲವನ್ನು ಕೊಡುವುದಾಗಿ ತಿಳಿಸಿರುವರು.

ಚಕ್ರವರ್ತಿ ಎಂಬ ಹೆಸರು ನಿಷೇಧ

ಆಗಸ್ಟ್ ೧೫ ರ ನಂತರ ಎಲ್ಲಾ ಸರ್ಕಾರೀ ಪತ್ರ ವ್ಯವಹಾರಗಳಲ್ಲಿಯೂ, ಕೋರ್ಟು ಕಛೇರಿಗಳ ಆಗದ ಪತ್ರಗಳಲ್ಲಿಯೂ "ಇಂಡಿಯಾ ಚಕ್ರವರ್ತಿ" ಎಂಬ ಪದಗಳನ್ನು ಉಪಯೋಗಿಸಕೂಡದೆಂದು ಎಲ್ಲಾ ಪ್ರಾಂತೀಯ ಸರ್ಕಾರಗಳಿಗೂ ಅಧಿಕಾರಯುತವಾಗಿ ಸೂಚನೆಗಳನ್ನು ಕಳುಹಿಸಿ ಕೊಡಲಾಗಿದೆ. ಇದಕ್ಕೆ ಚಕ್ರವರ್ತಿಯವರ ಸಮ್ಮತಿಯೂ ಸಹ ದೊರೆತಿರುತ್ತದೆ.

ಸಾಧ್ವಿ

ತಾ|| ೩-೯-೪೭ ಬುಧವಾರ

ಮಹಾತ್ಮರ ಉಪವಾಸ

ಕಲ್ಕತ್ತೆಯಲ್ಲಿ ಪತ್ತೆ ಕೋಮುವಾರು ಗಲಭೆಗಳು ಆರಂಭವಾಗಿ ಹಲವಾರು ಸಾವು ನೋವುಗಳುಂಟಾಗಿರುವುದರಿಂದ ಮಹಾತ್ಮ ಗಾಂಧಿಯವರು ಮೊನ್ನೆಯಿಂದ ಘೋರ ಉಪವಾಸ ವ್ರತವನ್ನು ಕೈಗೊಂಡಿರುತ್ತಾರೆ. ಆ ನಗರದಲ್ಲಿ ಇತ್ತೀಚೆಗೆ ಕಂಡು ಬಂದಿದ್ದ ಕೋಮುವಾರು ಐಕ್ಯತೆಯು ನೀರ್ಗುಳ್ಳೆಯು ಒಡೆದು ಪುನಃ ಕಲಹಗಳು ಆರಂಭವಾಗಿರುವುದೇ ಇದಕ್ಕೆ ಕಾರಣವೆಂದು ಅವರು ಹೇಳಿರುವರು.

ಈಚೆಗೆ ಗಾಂಧೀಜಿಯವರು ಕಲ್ಕತ್ತೆಗೆ ತೆರಳಿ ಬಂಗಾಳದ ಮಾಜಿ ಮುಖ್ಯ ಮಂತ್ರಿ ಮಿ|| ಸುಹ್ರವರ್ದಿಯವರೊಡನೆ ಗಲಭೆ ಪ್ರದೇಶಗಳಿಗೆ ಭೇಟಿಯಿತ್ತು ಸಕಲ ಪಂಗಡಗಳಲ್ಲಿಯೂ ಸೌಹಾರ್ದವನ್ನುಂಟುಮಾಡಿದ್ದರು. ಸ್ವಾತಂತ್ರ್ಯ ದಿನಾಚರಣೆಯ ದಿವಸದಿಂದ ಕಲ್ಕತ್ತೆಯಲ್ಲಿ ಅಪೂರ್ವವಾದ ಹಿಂದೂ ಮುಸ್ಲಿಂ ಐಕಮತ್ಯವು ಬೆಳೆದು ಇಡೀ ರಾಷ್ಟ್ರಕ್ಕೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿತು. ಇಪ್ಪತ್ತಾರು ವರ್ಷಗಳ ಹಿಂದೆ ಖಿಲಾಫತ್ ಚಳುವಳಿಯ ಕಾಲದಲ್ಲಿ ಉಂಟಾಗಿದ್ದ ಏಕಮತ್ಯವು ಈಗಲೂ ಮತ್ತೆ ಮೂಡಿರುವುದೆಂದು ಮಹಾತ್ಮರು ಸಂತೋಷದಿಂದ ಹೇಳತೊಡಗಿದರು. ಮಹಾತ್ಮರು ಒಂದು ದೊಡ್ಡ ಯಶಸ್ಸನ್ನೇ ಮಾಡಿರುವರೆಂದು ಎಲ್ಲರೂ ಹೊಗಳಿದರು. ಅಲ್ಲದೆ ಬಂಗಾಳದ ಉಭಯ ಭಾಗಗಳಲ್ಲಿಯೂ ಮಿಶ್ರ ಮಂತ್ರಿಮಂಡಲಗಳನ್ನೂ ಸ್ಥಾಪಿಸುವ ಪ್ರಯತ್ನಗಳು ಜರುಗಿರುವುವು. ಆದರೆ ಈಗ ಆ ಆಶೋತ್ತರಗಳಿಗೆಲ್ಲಾ ಭಂಗವುಂಟಾಗಿರುತ್ತದೆ.

ಬಂಗಾಳದಲ್ಲಿ ಶಾಂತಿಯನ್ನು ಸ್ಥಾಪಿಸಿರುವುದರಿಂದ ಮಹಾತ್ಮರು ಪಂಜಾಬಿಗೆ ಸಹ ಹೋಗಿ ಅಲ್ಲಿಯೂ ಶಾಂತಿ ಸ್ಥಾಪನೆ ಮಾಡಲು ನೆರವಾಗಬೇಕೆಂಬ ಮೊರೆಗಳು ಬರುತ್ತಿದ್ದುವು. ಬಂಗಾಳದಲ್ಲಿ ತಮ್ಮ ಪ್ರಯತ್ನವು ಭಂಗವಾಗಿರುವುದರಿಂದ ಪಂಜಾಬಿಗೆ ಯಾವ ಮುಖದಿಂದ ತಾವು ಹೋಗುವುದೆಂದು ಮಹಾತ್ಮರು ಕೇಳಿದ್ದಾರೆ.

ಗಾಂಧೀಜಿಯವರು ಇದುವರೆಗೆ ಅನೇಕಾವರ್ತಿ ಉಪವಾಸ ವ್ರತಗಳನ್ನು ಕೈಗೊಂಡಿರುವುದೇನೋ ನಿಜ. ಹಿಂದೆ ಎರವಾಡಾ ಸೆರೆಮನೆಯಲ್ಲಿ ಘೋರ ನಿರಶನವನ್ನು ಆರಂಭಿಸಿ ವೈದ್ಯರುಗಳೂ, ನಾಯಕರುಗಳೂ ಅವರ ಜೀವದ ಆಸೆಯನ್ನೇ ತೊರೆದಿದ್ದಾಗ ಮಹಾತ್ಮರು ತಮ್ಮ ಆತ್ಮಶಕ್ತಿಯಿಂದ ಯಶಸ್ವಿಯಾಗಿ ಉಪವಾಸ ವ್ರತವನ್ನು ಸಾಂಗಗೊಳಿಸಿದರು.

ಈಗ ಅವರ ದೇಹಸ್ಥಿತಿಯು ಬಹಳ ದುರ್ಬಲವಾಗಿರುತ್ತದೆ. ಮೊಟ್ಟ ಮೊದಲ [illegible] ಉಪವಾಸಗಳಿಂದಲೂ, ಪ್ರವಾಸಗಳಿಂದಲೂ [illegible] ವರ [illegible] ಬಂದಿದೆ [illegible] ವೈದ್ಯರು ಹೇಳಿದ್ದಾರೆ [illegible] ಮಹಾತ್ಮಾ [illegible] ದೇಶ ಪತ್ರಿಕೆಯನ್ನು [illegible] [illegible] ಕಲ್ಪಿತದಲ್ಲಿ [illegible] [illegible] ವೈದ್ಯಕೀಯ [illegible] ಮಾತ್ರವಲ್ಲ, ಅವರ [illegible]

ಒಂದು ಪೆನ್ನಿಗೆ ಒಂದು ಕತ್ತೆ

ಗ್ಲೋಬ್] [ಲಂಡನ್ ೨೭

ದಕ್ಷಿಣ ಆಫ್ರಿಕದ ಕೇಪ್ ಪ್ರಾಂತ್ಯದಲ್ಲಿ ಕತ್ತೆಗಳನ್ನು ಪೆನ್ನಿಗೆ ಒಂದರಂತೆ ಮಾರಲಾಗುತ್ತಿದೆ. ಕ್ಷಾಮದಿಂದ ಅವುಗಳಿಗೆ ಆಹಾರವನ್ನೊದಗಿಸಲಾಗದಿರುವುದೇ ಇದಕ್ಕೆ ಕಾರಣ.

ಸಂತಾಪ ಸಭೆ

ಸ್ವಂ. ಸು.] [ಚೆನ್ನರಾಯಪಟ್ಟಣ ೨೯

ಇಲ್ಲಿನ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಈ ದಿನ ಸಭೆ ಸೇರಿ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ತವನಪ್ಪ ಭೂಪಾಲ್‌ರವರ ನಿಧನಕ್ಕಾಗಿ ಸಂತಾಪವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಸ್ವಾತಂತ್ರ್ಯಕ್ಕಾಗಿ ದೀಕ್ಷೆ

ಸ್ವಂ. ಸು.] [ಬಿಂದಿಗಾನವಿಲೆ ೩೦

ಈ ಗ್ರಾಮದ ತಾತಯ್ಯ ಎಂಬಾತನು ಈಗ್ಗೆ ೫ ವರ್ಷಗಳ ಹಿಂದೆ ಭಾರತಕ್ಕೆ ಸ್ವರಾಜ್ಯ ಬರುವವರೆಗೆ ತಾನು ದೀಕ್ಷಾ ಬದ್ಧನಾಗಿರುವುದಾಗಿ ಪ್ರತಿಜ್ಞೆ ಮಾಡಿದ್ದನು. ಕಳೆದ ೧೫ ನೇ ತಾ|| ಆತನು ತನ್ನ ಜಟೆ ಮತ್ತು ಗಡ್ಡಗಳನ್ನು ತೆಗೆಯಿಸಿರುವನು.

ರಾಗಿ ಪತ್ತೆ

ಕಳೆದ ೨೦ ನೇ ತಾರೀಖು ಬೆಳಗ್ಗೆ ಈ ಗ್ರಾಮದ ಬಳಿ ತುಮಕೂರು ಜಿಲ್ಲೆಯಿಂದ ಚೆನ್ನರಾಯಪಟ್ಟಣದ ಕಡೆಗೆ ಸಾಗುತ್ತಿದ್ದ ಒಂದು ಲಾರಿ ರಾಗಿಯನ್ನು ಪೋಲೀಸರು ಪತ್ತೆ ಹಚ್ಚಿರುವರು. ಮುಂದಿನ ಕಳಿಪಿ ಕ್ರಮ ನಡೆಯುತ್ತಿದೆ.

ಕ್ಷೇತ್ರಗಳ ಮೂರ್ತಿ ಸ್ವರೂಪರು. ದಗತ್ತಿಗೇ ಅವರು ಶಾಂತಿ ಸಂದೇಶವನ್ನು ನೀಡಿರುವರು. ಅವರ ಪ್ರಾಣವು ಪ್ರಪಂಚಕ್ಕೇ ಒಂದು ಅಮೂಲ್ಯ ನಿಧಿ. ಸರ್ವ ವಿಧದಿಂದಲೂ ಅದನ್ನು ಸಂರಕ್ಷಿಸುವುದು ಸಕಲ ಮಾನವರ ಕರ್ತವ್ಯ.

ನೂರ ಇಪ್ಪತ್ತೈದು ವರ್ಷ ಬದುಕಬೇಕೆಂಬ ತಮ್ಮ ಆಪೇಕ್ಷೆಯನ್ನು ಮಹಾತ್ಮರು ಈ ಮೊದಲೇ ಸಾರಿದ್ದಾರೆ. ಅವರ ಈ ಉದ್ದೇಶ ಸಾಧನೆಗೆ ಕೋಮುವಾರು ಸೌಹಾರ್ದವೇ ಮುಖ್ಯವಾದ ಸಾಧನ. ಕಲ್ಕತ್ತೆಯಲ್ಲಿ ಈಗ ಉದ್ಭವಿಸಿರುವ ಅಂತಃಕಲಹಗಳನ್ನು ಬೇಗನೆ ನಿವಾರಿಸಿ ಮಹಾತ್ಮರು ತಮ್ಮ ಉಪವಾಸವನ್ನು ಪರ್ಯವಸಾನಗೊಳಿಸುವಂತೆ ಮಾಡಿ ಅವರು ಇನ್ನೂ ಚಿರಾಯುವಾಗಿ ನಮ್ಮ ನಾಡಿನ ಏಳಿಗೆಗೆ ಮಾರ್ಗ ದರ್ಶನ ಮಾಡುವಂತೆ ಅವಕಾಶವನ್ನು ಕಲ್ಪಿಸುವುದು ಸಕಲ ಭಾರತೀಯರ ಪವಿತ್ರ ಕರ್ತವ್ಯವಾಗಿರುತ್ತದೆ.

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply I. N. D Basavangudi Bangalore

Edited, printed and published by A. [illegible] Narayanan at the Sadhvi Press D[illegible] Road, Mysore

ಅತ್ಯಂತ ಹೆಚ್ಚು ವೇತನದ ನಟ ನಟಿಯರು

ಗ್ಲೋಬ್] [ನ್ಯೂಯಾರ್ಕ್ ೨೭

ಅಮೇರಿಕ ಸಂಯುಕ್ತ ಸಂಸ್ಥಾನಗಳ ಚಲನ ಚಿತ್ರ ನಟ ನಟಿಯರಾದ ಜೇಮ್ಸ್ ಕ್ಯಾರಿ ಮತ್ತು ಬೆಟ್ಟಿ ಗೇಬ್ರಿಯಲ್ಲರು ಪ್ರಪಂಚದ ನಟರಲ್ಲೇ ಅತ್ಯಂತ ಹೆಚ್ಚಿನ ವೇತನ ಪಡೆಯುತ್ತಿರುವರು. ೧೯೪೫ರಲ್ಲಿ ಸಂಯುಕ್ತ ಸಂಸ್ಥಾನಗಳ ಚಲನ ಚಿತ್ರ ಸಂಸ್ಥೆಯವರಿಂದ ಕ್ಯಾರಿಗೆ ೩೬೪೦೦೦ ಮತ್ತು ಗೇಬ್ರಿಯಲ್ಲಿಗೆ ೭೭೬೦೦೦ ರೂ ಗಳನ್ನು ಕೊಡಲಾಗಿದೆ.

ಕರಾಚಿಯು ಪಾಕಿಸ್ತಾನ್ ಮಿಲಿಟರಿ ಕೇಂದ್ರ

ಪಾಕಿಸ್ತಾನ್ ಡೊಮಿನಿಯನ್ನಿನ ಭೂ, ವಿಮಾನ ಮತ್ತು ನೌಕಾ ಪಡೆಗಳಿಗೆ ಕರಾಚಿಯು ಮುಖ್ಯ ಕೇಂದ್ರವಾಗಿರುವುದೆಂದು ಹೇಳಲಾಗಿದೆ. ಲಾಹೂರಿನಲ್ಲಿ ಮಿಲಿಟರಿ ಅಕೆಡೆಮಿಯನ್ನು ಏರ್ಪಡಿಸಲಾಗುವುದು. ಸದ್ಯದಲ್ಲೇ ಪಂಜಾಬಿನಿಂದ ೫೦ ಸಹಸ್ರ ಮತ್ತು ಗಡಿನಾಡಿನಿಂದ ೨ ಲಕ್ಷ ಜನರನ್ನು ಸೇನೆಗೆ ಸೇರಿಸಿಕೊಳ್ಳಲಾಗುವುದು.

ಪಶ್ಚಿಮ ಬಂಗಾಳದಲ್ಲಿ ಮಿಶ್ರ ಮಂತ್ರಿಮಂಡಲ

ಪಶ್ಚಿಮ ಬಂಗಾಳದಲ್ಲಿ ಮಿಶ್ರ ಮಂತ್ರಿಮಂಡಲವನ್ನು ಸ್ಥಾಪಿಸುವ ಬಗ್ಗೆ ಸಮಾಲೋಚನೆಗಳು ನಡೆಯುತ್ತಿರುವುದರಿಂದ ಲೀಗ್ ಸದಸ್ಯರಿಗೆ ಸ್ಥಾನವನ್ನೊದಗಿಸುವ ಸಲುವಾಗಿ ಅಲ್ಲಿನ ಮಂತ್ರಿಮಂಡಲದ ಇಬ್ಬರು ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರೆಂದು ವರದಿಯಾಗಿದೆ.

ಕೈರೋವಿನಲ್ಲಿ ಭೂತಗಳ ಚೇಷ್ಟೆ

ಗ್ಲೋಬ್] [ಕೈರೋ ೨೭

ಕೈರೋ ನಗರದ ಸುಬ್ರ ಎಂಬಲ್ಲಿನ ಮನೆಯೊಂದರಲ್ಲಿ ಭೂತಗಳ ಚೇಷ್ಟೆ ವಿಪರೀತವಾಗಿದೆಯೆಂದು ಇಸ್ಮಾಯಿಲ್ ಬಿಸಪ್ಪರು ತಿಳಿಸಿರುವರು. ಮನೆಕೆ ಪಾತ್ರೆ ಮೊದಲಾದುವು ವಾಯುಮಂಡಲದಲ್ಲಿ ಹಾರಾಡುತ್ತವೆಯೆಂದೂ ಮಣ್ಣಿನಿಂದ ಮಾಡಲ್ಪಟ್ಟ ಸಾಮಾನುಗಳು ಒಡೆದು ಹಾಕಲ್ಪಡುತ್ತವೆಯೆಂದೂ, ಮೇಜುಗಳು ತಲೆಕೆಳಗಾಗುತ್ತಿರುವುದಾಗಿಯೂ ವರದಿಯಾಗಿದೆ.

ವುಡ್‌ಲ್ಯಾಂಡ್ಸ್

೨೮-೮-೪೭ ರಿಂದ

ದಿನವೂ ಮೂರು ಆಟಗಳು

ಮಿರ್ಜಾ [illegible]

(ಹಿಂದಿ)

—: ತಾರಾಗಣ :—

[illegible] ಮತ್ತು [illegible]

[illegible] Contact HANSA PICTURES Chickpet, Bangalore City

ಸ್ವಾತಂತ್ರ್ಯ-ದ್ವೈವಾರ ಪತ್ರಿಕೆ

ಶ್ರೀ ಎಸ್. ಎಸ್. ನಂಜುಂಡಸ್ವಾಮಿಯವರು ಸ್ವಾತಂತ್ರ್ಯ ಎಂಬ ಕನ್ನಡ ದ್ವೈವಾರ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರಾಗಿ ಸಿನ್ಹೆ ಡಿಕ್ಲೇರ್ ಮಾಡಿಕೊಂಡಿರುವರು. ಸ್ವಾತಂತ್ರ್ಯೋದಯ ಪತ್ರಿಕೆಯ ಸಂಪಾದಕರಾದ ಶ್ರೀ ಪಿ. [illegible] ಪ್ಪನವರೇ ಇದರ ವ್ಯವಸ್ಥಾಪಕರು ಮತ್ತು ಸಹ ಸಂಪಾದಕರಾಗಿರುವರು.

ಆಯುರ್ವೇದ ಪರೀಕ್ಷೆ

ಅಭಯ ಆಯುರ್ವೇದ ಸಂಸ್ಥೆಯು ವಿದ್ಯಾಪೀಠದಿಂದ ಅಖಿಲ ಭಾರತ ಪರೀಕ್ಷೆಗೆ ಕಳುಹಿಸಿದ್ದ ಪ್ರಥಮ ವರ್ಷದ ಭಿಷಕ್ ಪರೀಕ್ಷೆಯಲ್ಲಿ ಆರು ಮಂದಿಯೂ ಮತ್ತು ದ್ವಿತೀಯ ಪರೀಕ್ಷೆಯಲ್ಲಿ ಇಬ್ಬರೂ ತೇರ್ಗಡೆ ಹೊಂದಿದ್ದಾರೆ. ಈ ವರ್ಷದ [illegible] ಕ್ಷೆಯ ತರಗತಿಗಳು ಮೊನ್ನೆಯಿಂದ ಆರಂಭವಾಗಿವೆ. ತರಗತಿಗಳಿಗೆ ಸೇರಬೇಕೆಂದಿರುವವರು ಅಭಯ ಸಂಸ್ಥೆಗೆ ಬಂದು ವಿವರಗಳನ್ನು ಪಡೆಯಬಹುದೆಂದು ಕಾರ್ಯದರ್ಶಿಗಳು ಸೂಚಿಸಿರುವರು.

ಕಪಿಗಳ ಹಾವಳಿ

ರಾಜಧಾನಿಯ ಅನೇಕ ಭಾಗಗಳಲ್ಲಿ ಕಪಿಗಳ ಆವಾಂತರವು ಬಹಳವಾಗಿರುವುದಾಗಿ ಪುಕಾರುಗಳು ಬರುತ್ತಿವೆ. [illegible] ಮೊದಲ್ಗೊಂಡು ಕಸಬಾ ಗೋಪಾಲಯ್ಯನ ಛತ್ರದಿಯಲ್ಲಿ ಕಪಿಗಳು ಬೆಂಗಿನ ಮರಗಳನ್ನು [illegible] ಲೆ ಬಿನಾರ ಹಾಳುಮಾಡಿಕೊಂಡು ಮನೆಗಳಿಗೆ ನುಗ್ಗಿ ಅಡಿಗೆ ಪದಾರ್ಥಗಳನ್ನೆಲ್ಲಾ [illegible] ಹೆಂಗಸರು ಮಕ್ಕಳಿಗೆ ಭಯೋತ್ಪಾದನೆಯನ್ನುಂಟುಮಾಡುತ್ತಿರುವುದಾಗಿ [illegible] ಬಂದಿದೆ. ಅಧಿಕಾರಿಗಳು ಕೂಡಲೇ [illegible] ನ ಕೊಟ್ಟು ತಕ್ಕ ಬಂದೋಬಸ್ತು ಮಾಡಬೇಕಾಗಿ ಕೋರಲಾಗಿದೆ.

ರಾಜಕಮಲ್

ತಾ|| 29-8-47 ರಿಂದ

ಪ್ರತಿ ದಿನ ಮೂರು ಆಟಗಳು

1 ನೇ ಆಟ 3-15, 2 ನೇ ಆಟ [illegible]

3 ನೇ ಆಟ 9-15 ಕ್ಕೆ

ಬಾಂಬೆ ಟಾಕೀಸಿನವರ ಅತ್ಯುತ್ತಮ

ಝೂಲಾ

—: ಭೂಮಿಕೆ :—

ಅಶೋಕ ಕುಮಾರ್, ಲೀಲಾಚಿಟ್ಣಿಸ್

ರತ್ನ ಕಂಬಳಿಗಳು

1½ × 1½ ಅಡಿ	ಬೆಲೆ	ರೂ	[illegible]
1½ × 3	,,	,,	[illegible]
2½ × 4½	,,	,,	[illegible]
3 × 6	,,	,,	[illegible]
4 × 7	,,	,,	[illegible]
6 × 9	,,	,,	[illegible]

ಚಿಕ್ಕ ಸ್ವಜಾ ಕುರ್ಚಿ, ಸೋಫಾ [illegible] ಗಳಿಗೂ, ದೊಡ್ಡ [illegible] ನೆ, ಬಂಗಲೆಗಳಿಗೂ ಅನುಕೂಲ [illegible]

ಬಾಪೂಸಾಬ್ ಕಂಪೆನಿ, ಮೈಸೂರು

ಸಂ॥ ೧ ಅಂ. ೮೨೩ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಗುರುವಾರ ೪-೯-೪೭ [ಸಂಚಿಕೆ ೩೭

ಮೈಸೂರು ಕಾಂಗ್ರೆಸ್ ಮುಖಂಡರ ದಸ್ತಗಿರಿ

...ಸೂರು ರೈಲ್ವೆ ಮುಷ್ಕರ

...ಸೂರು ರೈಲ್ವೆ ಸಂಘಕ್ಕೂ ಮತ್ತು ...ರದವರಿಗೂ ನಡೆದ ಸಂಧಾನ ಮುರಿ...ದಿದ್ದಿರುವುದು ಸಂಸ್ಥಾನದ ರೈಲ್ವೆಯಲ್ಲಿ ...ಪರಿಸ್ಥಿತಿ ಉಂಟಾಗುವ ಭೀತಿ ತಲೆ...ದೆ, ಎಂದು ಅಖಿಲ ಭಾರತ ರೈಲ್ವೆ ...ಗಾರರ ಸಂಘದ ಕಾರ್ಯದರ್ಶಿಗಳಾದ ...ಗುರುಸ್ವಾಮಿಯವರು ಹೇಳಿಕೆ ಇತ್ತ...

ಮೈಸೂರು ರೈಲ್ವೆ ಕೆಲಸಗಾರರ ...ಖಿಲ ಭಾರತ ರೈಲ್ವೆ ಕೆಲಸಗಾರರ ಮತ್ತು ಅದಕ್ಕೆ ಸಂಬಂಧಪಟ್ಟ ಸಂ... ಸಂಪೂರ್ಣ ಸಹಾನುಭೂತಿ ಇದೆ. ರೈಲ್ವೆಯವರು ಒಪ್ಪಿರುವ ಷರತ್ತುಗ... ಮೈಸೂರು ರೈಲ್ವೆಯವರು ಒಪ್ಪದಿ...ವು ತುಂಬಾ ಅನ್ಯಾಯ. ಕಾಲಮೀ...ರಿಗುವುದಕ್ಕೆ ಮುಂಚೆ ಮೈಸೂರು ...ರು ರೈಲ್ವೆ ಕೆಲಸಗಾರರೊಡನೆ ಒ...ಮಾಡಿಕೊಳ್ಳುವುದು ಒಳ್ಳೆಯದೆಂ...ಪ್ರಾರ್ಥಿಸಿದ್ದಾರೆ

...ಚೆ ನೌಕರರ ಮುಷ್ಕರ

...ಂಬಾಯಿನ ಹತ್ತುಸಾವಿರ ಅಂಚೆ ...ರು ಮೊನ್ನೆ ದಿನ ಮುಷ್ಕರ ಹೂಡಿ... ಕಲಹಾ ಸಮಿತಿಯವರ ಕಲಹೆ ಬ...ತಿಭಟನೆ ಸೂಚಿಸಿದರು

ಗೋಪಾಲರಾಯರ

...ಶಾಸನದ ಅರ್ಜಿ ವಜಾ

...ಗಳೂರಿನ ಧರ್ಮರಕ್ಷಾಕರ ಟಿ ಎ... ...ಲರಾಯರು ತಮಗೆ ೪೦೦ ರೂ. ...ಶಣವನ್ನು ಮತ್ತು ತಮ್ಮ ಪತ್ನಿಗೆ ...ೂ ಮಾಸಾಶನವನ್ನೂ ಕೊಡಬೇ... ಕೋರಿದ ಅರ್ಜಿಯನ್ನು ಜಿಲ್ಲಾ ...ಧಿಕಾರಿಯಾದ ಶ್ರೀಕಂಠಸ್ವಾಮಿ ಪಿಳ್ಳೈ... ...ತಳ್ಳಿಹಾಕಿದರು.

...ದ್ಯಾರ್ಥಿಗಳ ಮುಷ್ಕರ

...ಧಾನಿಯ ವಿದ್ಯಾರ್ಥಿ ಮುಖಂಡ...ದ ಶ್ರೀ ಶಾಂತರಾಜ್ ಮೊದಲಾದ ...ಸ್ತಗಿರಿ ಬಗ್ಗೆ ಸಹಾನುಭೂತಿ ಕೋರಿ ...ದಿನ ಮಹಾರಾಜಾ ಮತ್ತು ಇಂ... ...ಕಾಲೇಜಿನ ವಿದ್ಯಾರ್ಥಿಗಳೇನೇನಗು ...ರಿಗ ಹೋಗದ ಮೆರವಣಿಗೆ ಪ್ರದ...ಡೆಸಿದರು

ತ್ರಿಶಾ ಕರ್ತರುಗಳ ಪ್ರತಿಭಟನೆ

ಬೆಂಗಳೂರು ೪

...ಸಂಜೆ ಬನಪ್ಪ ಪಾರ್ಕಿನಲ್ಲಿ ನಡೆ...ದ ಸಭೆಯಲ್ಲಿ, ಶ್ರೀ ಟಿ.ಟಿ. ಮಾಲೆ...ರ್ಯರ್ಶರ್ಮರವರು ಮೈಸೂರು ...ರವರು ಕೆಲವು ಪತ್ರಿಕೆಗಳ ಮೇಲೆ ...ವ ಪ್ರಿಸೆನ್ಸಾರ್‌ಷಿಪ್ ಆಜ್ಞೆಯು ...ತ್ರವಾಗಿ ಟೀಕಿಸಿದರು ಶ್ರೀಯು ...ಜನಗೂ ಪ್ರಜೆಗಳಿಗೂ ಇರತಕ್ಕ ...ಬಾಂಧವ್ಯಕ್ಕೆ ಅಡ್ಡಿ ತರುತ್ತಿರುವ ...ಚ್ಚುಟನೆಯನ್ನು ಹೋಗಲಾಡಿಸಿ ...ರನ್ನು ಪವಿತ್ರ ಕೇಂದ್ರವನ್ನಾಗಿ ...ಡೇ ಮೈಸೂರಿನ ಪತ್ರಿಕಾ ಕ್ಷೇತ್ರ...ಪ್ಯ-ಎಂದು ತಿಳಿಸಿದರು

...ವಾದ ಪಿ ಆರ್. ರಾಮಯ್ಯ, ಸಿ ...ಕೃಷ್ಣಶರ್ಮ ಮತ್ತು ಬ...ಚಟರ್ಜಿರವರುಗಳೂ ಭಾಷ...ದರು.

...ಶ್ನೀರದ ರಾಜಧಾನಿಯಾದ ಜ... ...ಸಿಂ ಸಾವಿರ ನಿರಾಶ್ರಿತರು ಬಂ... ...ಬಂದಿದ್ದಾರೆ.

ಸ್ವಂ ಸು.ಪ್ರೋ॥] ಬೆಂಗಳೂರು ೪

ನಿನ್ನೆ ಮಧ್ಯರಾತ್ರಿಯಲ್ಲಿ ಸಾರ್ವಜನಿಕ ರಕ್ಷಣಾ ಶಾಸನದ ಸೆ॥ ೩ ನೇ ರೀತ್ಯಾ ಮೈಸೂರು ಪೋಲೀಸಿನವರು ಕಾಂಗ್ರೆಸ್ ಕಛೇರಿಯ ಆವರಣದಲ್ಲಿ ಶ್ರೀಗಳಾದ ಕೆ ಚೆಂಗಲರಾಯ ರೆಡ್ಡಿ, ಕೆ ಟಿ ಭಾಷ್ಯಂ, ಟಿ ಸುಬ್ರಹ್ಮಣ್ಯಂ, ಎಚ್ ಸಿದ್ದಯ್ಯ, ಕೆ ಆರ್ ಮಾಧವರಾವ್, ಕೆ ಎಸ್ ಕುಮಾರ್, ಹೆಚ್ ಕೆ ವೀರಣ್ಣಗೌಡ, ಎ ಜಿ ರಾಮಚಂದ್ರರಾವ್, ಎಸ್ ಚನ್ನಯ್ಯ, ಹೆಚ್ ಸಿದ್ದಯ್ಯ, ಎ ಜಿ ಬಂದೀಗೌಡ, ಎಂ ಎಲ್ ಸಂಜೀವಬೇ ಅರಸ್, ಎಂ ಎ ಸೀತಾರಾಮಯ್ಯ, ಲಕ್ಷ್ಮಣರಾವ್, ಸಿದ್ದವನಹಳ್ಳಿ ಕೃಷ್ಣಶರ್ಮ, ಸ್ವಯಂ ಸೇವಕರಾದ ಕೃಷ್ಣಮೂರ್ತಿ, ಬನ್ನಿ ಗರಡಿ ಫೆಡರೇಷನ್ನಿನ ನಾರಾಯಣನ್-ಮೊದಲಾದ ೩೦ ಮಂದಿಯನ್ನು ದಸ್ತಗಿರಿ ಮಾಡಿ ಸೆಂಟ್ರಲ್ ಜೈಲಿಗೆ ಕರೆದೊಯ್ಯದರು. ಸೆರೆಮನೆಗೆ ಹೋಗುವ ಮುನ್ನ ಎಲ್ಲ ನಾಯಕರೂ ಹಸನ್ಮುಖಿದಿಂದಿದ್ದರು

ಪೌರವಾಣಿ ಕಛೇರಿಗೆ ಇತ್ತೀಚೆ ಟೆಲಿಫೋನ್ ವ್ಯವಸ್ಥೆಯನ್ನು ಒದಗಿಸಲಾಗಿದೆ ಕಾಂಗ್ರೆಸ್ ಕಛೇರಿಯನ್ನು ಸಶಸ್ತ್ರ ಪೋಲೀಸರು ಕಾಯುತ್ತಿದ್ದಾರೆ

ರಾಜಧಾನಿಯಲ್ಲಿ ದಸ್ತಗಿರಿ

ಮೈಸೂರು ೪

ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ, ಆಗರಂ ರಂಗಯ್ಯ, ಎಸ್ ರಂಗರಾಮಯ್ಯ, ಜೆ. ಜನಾರ್ದನನಯ್ಯ, ರಾಜಶೆಟ್ಟಿ, ಎ.. ರಾಕಯ್ಯ, ಟಿ ಮರಿಯಪ್ಪ, ಬಾಹುಬಲಿ ಕಂಪೆನಿಯ ವೆಂಕಟರಾವ್, ಕುಮಾರಸ್ವಾಮಿ, ಟಿ ನಾರಾಯಣಸ್ವಾಮಿ ಸೂರ್ಯನಾರಾಯಣ ಪಂಡಿತ್, ಪ್ರಾಣೇಶರಾವ್, ಮತ್ತು ಶಾಂತರಾಜ್‌ರವರುಗಳನ್ನು ನಿನ್ನೆ ಮಧ್ಯರಾತ್ರಿ ಪೋಲೀಸರು ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿ ಮಾಡಿದರು.

ಈ ದಿನ ಬೆಳಗ್ಗೆ ೧೦ ಗಂಟೆಗೆ ಶ್ರೀ ಟಿ ನರಸಿಂಹಯ್ಯಂಗಾರ್ಯರನ್ನು ದಸ್ತಗಿರಿ ಮಾಡಲಾಯಿತು

† ಸಯಾಮಿನ ಭಾರತ ಪ್ರತಿನಿಧಿ ಕಛೇರಿಯನ್ನು ರಾಯಭಾರಿ ಕಛೇರಿಯ ಸ್ಥಾನಕ್ಕೆ ಏರಿಸಲಾಗಿದೆ

• ಬೊಂಬಾಯಿ. ನಿನ್ನೆ ದಿನ ಗಲಭೆ ನಡೆದು ಜನ್ನೆರಡು ಜನರಿ ಇಪತ ಗಲಭೆ ಉತ್ತರ ಬೊಂಬಾಯಿ ನಲ್ಲಿ ...ಬಾರಿಗೆ ತರಲಾಗಿದೆ

ವಾರ್ತಾ ವಾಹಿನಿ

● ಭಾರತದ ರಾಜ್ಯಾಂಗ ಸಭೆಯನ್ನು ಅಕ್ಟೋಬರ್ ೬ ರಿಂದ ೧೯ ನೇ ತಾ॥ ವರೆಗೆ ಶಾಸನ ಸಭೆಯಾಗಿ ಪರಿವರ್ತಿಸಿ ನಡೆಸಲಾಗುವುದು ಶ್ರೀ ಜಿ ವಿ ಮಾವಲಂಕರ್‌ರವರನ್ನು ಅದರ ಅಧ್ಯಕ್ಷರನ್ನಾಗಿ ಚುನಾಯಿಸಲಾಗುವುದೆಂದು ಹೇಳಲಾಗಿದೆ

● ಪೂರ್ವ ಮತ್ತು ಪಶ್ಚಿಮ ಪಂಜಾಬಿನ ಪರಿಸ್ಥಿತಿಯು ಉಲ್ಬಣಗೊಂಡಿದೆ ಪೂರ್ವ ಪಂಜಾಬಿನ ಸಿಕ್ಖರೆಲ್ಲರೂ ತಮ್ಮ ಮನೆಗಳನ್ನು ಬಿಡುವರ್, ತಮ್ಮ ಹಳ್ಳಿಗಳನ್ನು ಬಿಟ್ಟು ಹೋಗುತ್ತಿದ್ದಾರೆಂದು ಹೇಳಲಾಗಿದೆ

† ಅಮೃತಸರ್ ಜಿಲ್ಲೆಯಲ್ಲಿದ್ದ ೬ ಸಾವಿರ ಮುಸ್ಲಿಂ ನಿರಾಶ್ರಿತರನ್ನು ಮಾಸ್ಟರ್ ತಾರಾ ಸಿಂಗ್‌ರವರ ಸಹಾಯದಿಂದ ಪಾಕಿಸ್ತಾನ್ ಭಾಗಕ್ಕೆ ಕಳುಹಿಸಲಾಗಿದೆ

× ಭಾರತಕ್ಕೆ ೯ ಸಾವಿರ ಟನ್ ಗೋಧಿಯನ್ನು ಅಕ್ಟೋಬರ್ ತಿಂಗಳಿನಲ್ಲಿ ಕಳುಹಿಸಲು ಆಸ್ಟ್ರೇಲಿಯಾ ಒಪ್ಪಿದೆ.

§ ಆಯ್ಯೂಬ್ ಅಲಿ ಬಹೀರ್‌ರವರನ್ನು ಇಂಗ್ಲೆಂಡಿನಲ್ಲಿ ಭಾರತದ ರಾಯಭಾರಿಗಳಾಗಿ ನೇಮಿಸಲಾಗಿದೆ.

§ ಒರಿಸ್ಸಾದ ಪೋಲೀಸ್ ದಳದ ಬಗ್ಗೆ ಪ್ರಿಸೆನ್ಸಾರ್ ಇಲ್ಲದೆ ಸುದ್ದಿಗಳನ್ನು ಪ್ರಕಟಿಸಬಾರದೆಂಬ ನಿಷೇಧ ಆಜ್ಞೆಯನ್ನು ಸರ್ಕಾರದವರು ರದ್ದುಗೊಳಿಸಿದ್ದಾರೆ.

ಕಲ್ಕತ್ತ ನಗರದ ಪೋಲೀಸ್ ಸ್ಪೆಷಲ್ ಭಾಗದಲ್ಲಿ ಜಾರಿಯಲ್ಲಿದ್ದ ಕರ್ಫ್ಯೂ ಆಜ್ಞೆಯನ್ನು ಇನ್ನೂ ಒಂದು ವಾರ ಮುಂದುವರಿಸಲಾಗಿದೆ

ಬಹಿರಂಗ ಸಭೆ

ಮೈಸೂರು ೪

ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಈ ದಿನ ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯುವುದು

LATEST NEWS

ಮೈಸೂರು ೪

ಪೋಲೀಸ್ ಶಾಸನದ ೪೫ ನೇ ಕಲಂ ಪ್ರಕಾರ ರಾಜಧಾನಿಯಲ್ಲಿ ಇಂದಿನಿಂದ ೩ ತಿಂಗಳ ಕಾಲ ಲೈಸೆನ್ಸ್ ಇಲ್ಲದೆ ಸಭೆ, ಮೆರವಣಿಗೆಗಳನ್ನು ನಡೆಸಕೂಡದೆಂದು ಜಿಲ್ಲಾಧಿಕಾರಿಗಳು ಈ ದಿನ ಆಜ್ಞೆ ಮಾಡಿರುವರು.

○ ಈ ದಿನ ಸಂಜೆ ೫ ಗಂಟೆಯಲ್ಲಿ ವಿಜಯ ಸಂಪಾದಕರಾದ ಶ್ರೀ ಎ. ರಾಮಣ್ಣನವರು ಬಂಧಿತರಾಗಿರುವರು

ಮೆರವಣಿಗೆ ಪ್ರದರ್ಶನ

ಸ್ವಂ ಸು.ಪ್ರೋ॥] [ಬೆಂಗಳೂರು

ಮೈಸೂರು ಕಾಂಗ್ರೆಸ್ ಮುಖಂಡರ ದಸ್ತಗಿರಿ ಬಗ್ಗೆ ಈ ದಿನ ಬೆಂಗಳೂರಿನ ಹರತಾಳ ನಡೆಯಿತು ನಗರದ ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ಬಿನ್ನಿ ಮಿಲ್ ಕೆಲಸಗಾರರು ಮಾತ್ರ ಮುಷ್ಕರ ಹೂಡಿ ಮೆರವಣಿಗೆ ನಡೆಸಿದರು ಕಾಲೇಜು ಮತ್ತು ಕಾಲೇಜ್ ವಿದ್ಯಾರ್ಥಿಗಳನೇಕರೂ ತರಗತಿಗಳಿಗೆ ಹೋಗದೆ ಪ್ರದರ್ಶನ ನಡೆಸಿದರು ಪೋಲೀಸ್ ಟ್ರೈನಿಂಗ್ ಸ್ಕೂಲಿನ ಮೈದಾನದಲ್ಲಿ ನೆರೆದಿದ್ದ ಗುಂಪನ್ನು ಪೋಲೀಸರು ಲಾಠಿ ಛಾರ್ಜ್ ಮಾಡಿ ಚದುರಿಸಿದರು ಆಗ ೩-೪ ಜನಗಳಿಗೆ ಗಾಯವಾಯಿತು ಶ್ರೀ ತಾತಾಚಾರ್ಯಶರ್ಮರವರ ಮಕ್ಕಳಾದ ಶ್ರೀರಂಗ ಎಂಬುವರಿಗೂ ಸ್ವಲ್ಪ ಗಾಯವಾಗಿದೆ ಸೆಂಟ್ರಲ್ ಜೈಲಿನ ಮುಂದೆ ಬಿನ್ನಿಮಿಲ್ಲಿನ ಕೆಲಸಗಾರರ ಮೆರವಣಿಗೆಯು ಒಂದು ಪ್ರದರ್ಶನ ನಡೆಸಲಾಗಿ ಅವರನ್ನು ಚದುರಿಸಲಾಯಿತು

ಈದಿನ ಮಧ್ಯಾಹ್ನ ಅಠಾರಾ ಕಛೇರಿಯ ಮುಂದೆ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ ಭವನದ ಸುತ್ತಲೂ ಮೆರವಣಿಗೆ ಹೋಗಬೇಕೆಂದು ತಡೆಹಿಡಿದರು ಪೋಲೀಸರು ಎಷ್ಟು ಶಾಂತರೀತಿಯಿಂದ ವಾಪಸು ಹೋಗುವಂತೆ ಹೇಳಿಕೊಂಡರೂ ವಿದ್ಯಾರ್ಥಿಗಳು ಒಪ್ಪಲಿಲ್ಲ. ಆದುದರಿಂದ ಅವರುಗಳನ್ನು ಲಾಠಿ ಛಾರ್ಜ್ ಮಾಡಿ ಚದುರಿಸಲಾಯಿತು ವಿದ್ಯಾರ್ಥಿಗಳು ಕಲ್ಲುಗಳನ್ನು ಬೀರಿದರು ಅದರಿಂದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಕೂಡಾವಣಿ ಮತ್ತು ಒಬ್ಬ ಪೋ॥ ಕಾನ್ಸ್‌ಟೇಬಲ್ಲಿಗೆ ಗಾಯವಾಯಿತು

ಸರ್ಕಾರಿ ಭವನದ ಮುಂದೆ ಪಿಕೆಟಿಂಗ್ ನಡೆಸಬೇಕು

ಕಾಂಗ್ರೆಸ್ಸು ಸತ್ಯಾಗ್ರಹವನ್ನು ಯಶಸ್ವಿಯಾಗಿ ಮುಂದುವರಿಸಬೇಕಾದರೆ ವಿದ್ಯಾರ್ಥಿಗಳ ಸಹಕಾರ ಅತ್ಯಗತ್ಯ ಅವರುಗಳು ಅಠಾರಾ ಕಛೇರಿಯ ಮುಂದೆ ಹೋಗಿ ಪಿಕೆಟಿಂಗ್ ನಡೆಸಬೇಕು—ಎಂಬುದಾಗಿ ಶ್ರೀ ಕೆ ಚೆಂಗಲರಾಯರೆಡ್ಡಿಯವರು ಬಸವನ ಗುಡಿ ಯುವಕ ಸಂಘದ ಆಶ್ರಯದಲ್ಲಿ ನಿನ್ನೆ ಭಾಷಣ ಮಾಡುತ್ತಾ ತಿಳಿಸಿರುವರು

ಸರ್ಕಾರದ ಪ್ರಕಟಣೆ

ಮೈಸೂರು ಸರ್ಕಾರದವರು ಈ ದಿನ ಮಧ್ಯಾಹ್ನ ಒಂದು ಪ್ರಕಟಣೆಯನ್ನು ಹೊರಡಿಸಿ, ಮೈಸೂರು ಕಾಂಗ್ರೆಸ್ಸಿನವರು ಹೂಡಿರುವ ಸತ್ಯಾಗ್ರಹವು ಸಂಸ್ಥಾನದಲ್ಲಿ ಸಾರ್ವಜನಿಕ ಶಾಂತತೆಗೆ ಭಂಗ ಬರುವುದರಿಂದ ಆವರ ಸತ್ಯಾಗ್ರಹಿಗಳೆಲ್ಲರನ್ನು ಬಂಧನದಲ್ಲಿಡಬೇಕಾದ ಪರಿಸ್ಥಿತಿ ಒದಗಿತೆಂದೂ, ಸರ್ಕಾರದವರಿಗೆ ಬಲಪ್ರಯೋಗ ಮಾಡಿ ಜನಗಳ ಆಕಾಂಕ್ಷೆಯನ್ನು ತುಳಿಯಬೇಕೆಂಬ ಭಾವನೆ ಇಲ್ಲವೆಂದೂ, ಸಂಸ್ಥಾನದಲ್ಲಿ ಸಧ್ಯದಲ್ಲೇ ರಾಜಕೀಯ ಸುಧಾರಣೆಯನ್ನು ಜಾರಿಗೆ ತರಲಾಗುವುದೆಂದೂ, ಆದ್ದರಿಂದ ಪ್ರತಿಯೊಬ್ಬ ಪ್ರಜೆಯೂ ಸರ್ಕಾರದೊಡನೆ ಸಹಕರಿಸಬೇಕೆಂದು ಅವರು ಪ್ರಾರ್ಥಿಸಿದ್ದಾರೆ.

* ಜಾಟ್‌ರ್ ಅಮೆರಿಕಾ ರಕ್ಷಣಾ ಸಭೆಯಲ್ಲಿ ಅಧ್ಯಕ್ಷ ಟ್ರೂಮನ್‌ರವರು ಮಾತನಾಡುತ್ತ, ವಿಶ್ವದ ಶಾಂತತೆಗಾಗಿ ಪಶ್ಚಿಮ ಗೋಳದವರು ಅಮೆರಿಕದೊಡನೆ ಸಂಪೂರ್ಣವಾಗಿ ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ

* ಬ್ರಿಟನ್ನಿನ ಹತ್ತು ಲಕ್ಷ ಜನಗಳು ಬಿಟಿಷ್ ಡೊಮಿನಿಯನ್‌ಗಳಿಗೆ ಹೋಗಲಿದ್ದಾರೆ

ಸಾಧ್ವಿ
ತಾ|| ೪-೯-೪೭ ಗುರುವಾರ

ಹರತಾಳ

ಸ್ವಂ.ವ.] [ಗುಂಡ್ಲುಪೇಟೆ ೨

ನಿನ್ನೆ ಇಲ್ಲಿ ಶಾಂತಿಯುತವಾಗಿ ಹರತಾಳವನ್ನಾಚರಿಸಲಾಯಿತು. ಎಲ್ಲ ವರ್ತಕರು ಅಂಗಡಿಗಳನ್ನು ಮುಚ್ಚಿ ಅದರಲ್ಲಿ ಭಾಗಿಗಳಾಗಿದ್ದರು. ಮುಸ್ಲಿಮರೂ ಸಹ ಅಂಗಡಿಗಳನ್ನು ಮುಚ್ಚಿ ಹರತಾಳದಲ್ಲಿ ಸಹಕರಿಸಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುವಂತೆ ಮಾಡಿದರು. ೧೦ ಗಂಟೆಗೆ ಶ್ರೀ ಜಿ. ಎಸ್. ನಾರಾಯಣರವರಿಂದ ರಾಷ್ಟ್ರ ಧ್ವಜಾರೋಹಣ ಮತ್ತು ಧ್ವಜವಂದನೆಗಳು ನಡೆದುವು. ಸುಮಾರು ೮೦೦ ಮಂದಿ ಭಾಗಿಗಳಾಗಿದ್ದರು.

ಹೋಟೆಲುಗಳು ಬಂದು

ನಿನ್ನೆ ನಡೆದ ಹರತಾಳದಲ್ಲಿ ಹೋಟೇಲು ನೌಕರರೂ, ಮಾಲೀಕರೂ ಭಾಗವಹಿಸಿದ್ದರೆಂದು ಹೇಳಿ ಸ್ಥಳೀಯ ಲೇಸನ್ಸಿಂಗ್ ಅಧಿಕಾರಿಗಳು ಅವರಿಗೆ ಕೊಡುತ್ತಿದ್ದ ಪಡಿತರವನ್ನು ನಿಲ್ಲಿಸಿರುವರು. ಇದರ ಪರಿಣಾಮವಾಗಿ ಇಲ್ಲಿನ ಹೋಟೆಲುಗಳೆಲ್ಲಾ ಮುಚ್ಚಿವೆ

ವುಡ್‌ಲ್ಯಾಂಡ್ಸ್
೫-೯-೪೭ ರಿಂದ
ಅಮೋಘ ೨ ನೇ ವಾರ
ವಾಮಿಕ್ ಅಜ್ರ
(ಹಿಂದಿ)
—: ತಾರಾಗಣ :—
ಸ್ವರ್ಣಲತಾ ಮತ್ತು ನಾಜೀರ್
Distributors Contact
HANSA PICTURES
Chickpet, Bangalore City

Printed printed and published by A. R. Nagarajan at the Sadhvi Press D. Subbaiah Road Mysore

ಶಾಂತಿಯುತವಾದ ಹರತಾಳ

ಸ್ವಂ ವ] [ಚಾಮರಾಜನಗರ ೨

ನಿನ್ನೆ ಕಾಂಗ್ರೆಸ್ಸಿನವರು ಏರ್ಪಡಿಸಿದ್ದ ಹರತಾಳದಲ್ಲಿ ವರ್ತಕರು ಯಾರೂ ಸಹಕರಿಸಕೂಡದೆಂದೂ ತಪ್ಪಿದರೆ ಅವರ ಮೇಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಾಗಿಯೂ ಸ್ಥಳೀಯ ಅಧಿಕಾರಿಗಳು ಇಲ್ಲಿನ ವರ್ತಕರಿಗೆ ಬೆದರಿಸಿದ್ದರು. ಆದರೆ ಎಲ್ಲ ಮತದ ವರ್ತಕರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿ ಸ್ಥಳೀಯ ಕಾಂಗ್ರೆಸ್ಸಿನವರು ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿ ಕಾರ್ಯಕ್ರಮವನ್ನು ಶಾಂತರೀತಿಯಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿರುವರು

ಖಾನ್ ಸಹೋದರರ ದಸ್ತಗಿರಿ

ಗಡಿನಾಡು ಮಂತ್ರಿಮಂಡಲದ ಮಾಜಿ ಪ್ರಧಾನಿಗಳಾದ ಡಾ|| ಖಾನ್ ಸಾಹೇಬರೂ ಮತ್ತು ಗಡಿನಾಡಿನಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರೂ ದಸ್ತಗಿರಿಯಾಗಿರುವರು.

ನಿಯತ ಸಂತಾನ
ಸ್ವಾಭಾವಿಕ ಮತ್ತು ಶಾಸ್ತ್ರೋಕ್ತ ಸಂತಾನವನ್ನು ಮಿತವಾಗಿಟ್ಟುಕೊಳ್ಳಬಹುದು.
ಸಲಹೆ: ಡಾ|| ಟಿ ಎಸ್ ಟಿ ಆಚಾರ್ಯ
L. H. M. S, L. A. M. S
142-ಕಾಲೇಜ್ ರೋಡ್, ಮೈಸೂರು.

ರತ್ನ ಕಂಬಳಿಗಳು

$1\frac{1}{2} \times 1\frac{1}{2}$ ಅಡಿ	ಬೆಲೆ	ರೂ	1-2-0
$1\frac{1}{2} \times 3$	,,	,,	2-0-0
$2\frac{1}{2} \times 4\frac{1}{2}$	,,	,,	4-12-0
3×6	,,	,,	8-8-0
4×7	,,	,,	13-4-0
6×9	,,	,,	25-0-0

ಚಿಕ್ಕ ಸೈಜು ಟೇಬಲ್, ಸೋಫಾ, ಮೋಟಾರು ಕಾರುಗಳಿಗೂ, ದೊಡ್ಡ ಸೈಜು ಮನೆ, ಬಂಗಲೆಗಳಿಗೂ ಅನುಕೂಲವಾಗಿವೆ.
ಬಾಬುಸಾಬ್ ಕಂಪೆನಿ, ಮೈಸೂರು

ಪ್ಯಾಲೆಸ್ಟೈನಿನ ವಿಭಜನೆ: ಅರಬ್ಬರ ಪ್ರತಿಭಟನೆ

ಪ್ಯಾಲೆಸ್ಟೈನಿನ ವಿಭಜನೆ ಯಾರಿ ಬೇಡವಾಗಿದೆ. ಅದು ಅರಬ್ಬರಿಗೇ ಬೇಕು ಇದಕ್ಕಾಗಿ ಅವರು ಕೊನೆ ರೆಗೂ ಹೋರಾಡುವರು-ಎಂಬುದಾಗಿ ಬ್ ಹೈಯ್ಯರ್ ಕಮಿಟಿಯ ಅಧ್ಯಕ್ಷ ವಿ|| ಜಮಾಲ್ ಹುಸೇನಿಯವರು ದ್ದಾರೆ

ಆಹಾರದ ಬಿಕ್ಕಟ್ಟು

ಭಾರತದಲ್ಲಿ ಈಗಿನಿಂದ ಹೊಸ ಬೆ ರುಪವರೆಗೂ (ನವೆಂಬರ್‌ವರೆಗೆ) ರ ಪರಿಸ್ಥಿತಿಯು ಬಹಳ ತೀವ್ರವಾಗಿ ದೆಂದು ಕೇಂದ್ರ ಸರ್ಕಾರದ ಆಹಾರ ಖ್ಯ ಕಾರಿಗಳು ತಿಳಿಸಿದ್ದಾರೆ

ಪ್ರಿಸೆನ್ಸಾರ್ ಷಿಪ್ ಆಜ್ಞೆ ಪ್ರತಿಭಟನೆ

ಮೈಸೂ

ರಾಜಧಾನಿಯ ಪತ್ರಿಕೋದ್ಯೋಗಿ ಖವರು ನಿನ್ನೆ ಸಂಜೆ ಒಂದು ವಿ ಸಭೆ ನಡೆಸಿ, ಸರ್ಕಾರದವರು ಸಂಸ್ಥಾ ಕೆಲವು ಪತ್ರಿಕೆಗಳ ಮೇಲೆ ಪ್ರಿಸೆನ್ಸಾರ್ ಪ್ ಆಜ್ಞೆಯನ್ನು ಜಾರಿ ಮಾಡಿರ ನ್ನು ತೀವ್ರವಾಗಿ ಖಂಡಿಸಿ ಅದನ್ನು ಲೇ ಸರ್ಕಾರದವರು ವಾಪಸ್ಸು ತೆಗೆದ ಕೈಬೇಕೆಂದು ಸೂಚಿಸುವ ನಿರ್ಣಯ ಮಾಡಿದರು.

ರಾಜಕಮಲ
ತಾ|| 5-9-47 ರಿಂದ
೨ ನೇ ವಾರ
ಬಾಂಬೆ ಟಾಕೀಸಿನವರ ಅತ್ಯುತ್ತಮ
ಝೂಲಾ
—: ಭೂಮಿಕೆ :—
ಅಶೋಕ ಕುಮಾರ್, ಲೀಲಾ ಚಿ
ವಿ ಎಚ್. ದೇಸಾಯಿ,
ಮುಮ್ತಾಜ್ ಅಲಿ

Form 5-9-47 for 4 da
daily at 10-30 a m
HEROES OF T
WEST
thrilling serial with
stolar cast like
Noah Bury (jr) Will
Desmond, Francis Fo
Diana Duval

WOODLANE
Morning Shows for 4
from 5-9 47
Blue Dahlia
action Thriller
—: Starring :—
Alen Ladd, Vronica L
and
William Bendix

ಅಮೇರಿಕದಿಂದ ಭಾರತಕ್ಕೆ ಆಹಾರ ಧಾನ್ಯ

ಈ ತಿಂಗಳು ಮತ್ತು ಬರುವ ತಿಂಗಳುಗಳಲ್ಲಿ ಅಮೇರಿಕವು ಭಾರತಕ್ಕೆ ೯೨೫೦೦ ಟನ್ ಗೋಧಿ ೧೨೦೦೦ ಟನ್ ಗೋಧಿ ಹಿಟ್ಟು ಮತ್ತು ೩೪೮೦೦ ಟನ್ ಇತರ ಧಾನ್ಯಗಳನ್ನು ಕಳುಹಿಸಲು ನಿಗದಿ ಮಾಡಿದೆ. ಇದನ್ನು ಭಾರತ ಮತ್ತು ಪಾಕಿಸ್ತಾನಗಳಿಗೆ ಹಂಚಲಾಗುವುದು.

ಗಾಂಧೀಜಿಯವರ ಸ್ಥಿತಿ ಚಿಂತಾಜನಕವಾಗಿದೆ

ಮಹಾತ್ಮ ಗಾಂಧಿಯವರು ಕೈಗೊಂಡಿರುವ ಉಪವಾಸದಿಂದ ಅವರ ಸ್ಥಿತಿ ಚಿಂತಾಜನಕವಾಗಿದೆಯೆಂದು ವರದಿಯಾಗಿದೆ.

ಏನೇ ಆಗಲಿ ಮಹಾತ್ಮರ ಜೀವನವನ್ನು ರಕ್ಷಿಸಲೇಬೇಕು — ಎಂದು ಬಂಗಾಳದ ಮಾಜಿ ಪ್ರಧಾನಿ ಮಿ|| ಸುಹ್ರವರ್ದಿಯವರು ಪ್ರಜೆಗಳಲ್ಲಿ ಒಂದು ಮನವಿ ಮಾಡಿಕೊಂಡಿದ್ದಾರೆ. ಗಾಂಧೀಜಿಯವರ ಪ್ರಾಣವನ್ನುಳಿಸುವ [illegible] ಮತ್ತು ನಗರದಲ್ಲಿ ಶಾಂತಿಯುತ ವಾತಾವರಣವನ್ನು ನೆಲೆಗೊಳಿಸುವ ಭಾರವು ಕಲ್ಕತ್ತಾ ನಾಗರಿಕರ ಮೇಲೆ ಬಿದ್ದಿದೆ ಎಂದು ನಗರದ ಕೇಂದ್ರ ಶಾಂತಿ ಸಮಿತಿಯವರು ತಿಳಿಸಿದ್ದಾರೆ.

THE MYSORE DASARA EXHIBITION 1947

Will be held from 17th October 1947 to 26th October 1947, both days inclusive

Last date for reservation of stalls-10th September 1947

Pictures intended for the FINE ARTS SECTION accompanied with the necessary fees will be received form 20th Sept 47 to 5th October 1947

Exhibits intended for LADIES SECTION will be received from 20th Sept 47 to 5th October, 1947.

Varied items of interesting and instructive entertainments and amusements will be arranged during the period.

For [illegible] particulars, please apply to :—

THE SECRETARY,
Dasara Exhibition Committee,
Mysore

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೫-೯-೪೭ [ಸಂಚಿಕೆ ೩೨

ತಿರುವಾಂಕೂರಿನಲ್ಲಿ ಜವಾಬ್ದಾರೀ ಸರ್ಕಾರ

...ಂಗಳೂರಿನಲ್ಲಿ ಗೋಳೀಬಾರು

ಸು ಫೋನ್] [ಬೆಂಗಳೂರು ೫

ಬೆಂಗಳೂರು ನಗರದಲ್ಲಿ ನಿನ್ನೆ ಸಂಜೆ ೬ ...ಟೆಯಿಂದ ನಾಳೆ ಬೆಳಗ್ಗೆ ೬ ಘಂ ...ಟೆಗೆ ಜಿಲ್ಲಾ ಮ್ಯಾಜಿಸ್ಟ್ರೇಟರು ಕರ್ಫ್ಯೂ ...ವನ್ನು ಜಾರಿ ಮಾಡಿದ್ದಾರೆ. ನಗರ ...ಧ್ಯ ಭಾಗದಲ್ಲಿರುವ ಹಲವು ರಸ್ತೆಗಳ ... ಆಜ್ಞೆ ಅನ್ವಯಿಸುವುದು.

...ನ್ನೆ ಮಧ್ಯಾಹ್ನ ಸೆಂಟ್ರಲ್ ಪೋಲೀಸ್ ... ಬಳಿ ವಿದ್ಯಾರ್ಥಿಗಳ ಅಸಾಧ್ಯ ಸಂ ...ರ್ಣಿತ್ತು. ಅವರು ಚದುರಲಿಲ್ಲವಾ ...ಯಾಕ್ತ ಪೋಲೀಸರು ಗುಂಡು ಹಾರಿ ... ೫ ಜನರಿಗೆ ಗಾಯವಾಯಿತೆಂದೂ, ...ವು ಸತ್ತನೆಂದೂ ಗೊತ್ತಾಗಿದೆ. ಬಸ ...ಗುಡಿಯಲ್ಲೂ ನಿನ್ನೆ ಮಧ್ಯಾಹ್ನ ವಿ ...ರ್ಥಿಗಳ ಗುಂಪಿನ ಮೇಲೆ ಪೋಲೀಸರು ...ಡು ಹಾರಿಸಿದರು. ಇಬ್ಬರಿಗೆ ಗಾಯ ...ದೆ.

...ರ್ಫ್ಯೂ ಆಜ್ಞೆ ಜಾರಿಗೆ ಬಂದ ನಂತರ ...ವಿನ್ಯೂ ರಸ್ತೆಯಲ್ಲಿ ಜನ ಸಂದಣಿ ಇ ...ರಿಂದ ಅವರನ್ನು ಚದುರಿಸಲು ಟಿಯ ...ರ್ ಗ್ಯಾಸ್ ಉಪಯೋಗಿಸಿದರು.

...ಂಜೆ ಕೋಟೆಯಲ್ಲಿ ನೆರೆದಿದ್ದ ವಿದ್ಯಾ... ಮತ್ತು ಸಾರ್ವಜನಿಕರ ಮೇಲೆ ಪೋ ...ರು ಗುಂಡು ಹಾರಿಸಿದರು. ೪೬ ಜ... ಗಾಯಗೊಳಗಾಗಿವೆ.

...ರಡು ತಿಂಗಳ ಕಾಲ ನಗರದಲ್ಲಿ ೩೫ ...ತ್ತು ೪೫ ನೇ ಪೋಲೀಸ್ ಆಕ್ಟನ್ನು ಜಾ ...ರಿಲಾಗಿದೆ.

...ಂಗಳೂರು ದಂಡಿನ ಜಿಲ್ಲಾ ಕಾಂಗ್ರೆ... ...ಧ್ಯಕ್ಷರಾದ ಶ್ರೀ ನರಸಯ್ಯ ಮತ್ತು ...ರನ್ನು ನಿನ್ನೆ ದಸ್ತಗಿರಿ ಮಾಡಲಾ ...ದೆ.

...ಂಗ್ರೆಸ್ ಕಛೇರಿಯ ಮುಂದೆ ಇದ್ದ ...ಹಿಳೆಯರ ಜಾಥಾಗಳ ಪೈಕಿ, ೪ ಮ... ...ರನ್ನೂ ಮತ್ತು ೬೦ ಗಂಡಸರನ್ನೂ ...ಗಿರಿ ಮಾಡಲಾಗಿದೆ.

[illegible]

...ಗೃಹಕೃತ್ಯದ ನೋಟೀಸ್

... ಮೂಲಕ ಸಮಸ್ತರಿಗೂ ತಿಳಿಯ ...ಪಡಿಸುವುದೇನೆಂದರೆ:—

...ನ್ನ ಗಂಡ ಪ್ರೇಂಚ್‌ರಾಕ್ಸ್ ಕಾಲೋ... ...ಲುಕೋಟೆ ಹೋಬಳಿ ಹೊಸಕೋ... ...ಮದ ಜವರ ಉರುಫ್ ಪುರಲನು ...ನ್ನ ಮತ್ತು ನನ್ನ ಸಣ್ಣ ಎರಡು ಹೆ... ...ಮಕ್ಕಳನ್ನೂ ಸುಮಾರು ಒಂದು ತಿಂ... ...ಮನೆ ಬಿಡಿಸಿ ಹೊಡೆದು ಅಟ್ಟಿದು ...ದ್ದಾನೆ ಮತ್ತು ಆಸ್ತಿಯನ್ನೆಲ್ಲಾ ...ರಿ ಮಾಡುವುದರಲ್ಲಿರುತ್ತಾನೆ. ಸ... ...ಸ್ತಿಯಲ್ಲಿ ನನಗೂ ನನ್ನ ಮಕ್ಕಳಿಗೂ ...ಹೇಳ್ಯಂಡವನಿಂದ ಯಾರೂ ...ಆಸ್ತಿಯನ್ನು ಯಾವ ವಿಧದಲ್ಲೂ ಖ... ...ಮಾಡಿಕೊಳ್ಳಕೂಡದೇಂದೂ ಆ ರೀ... ...ಡಿಸಿಕೊಂಡಲ್ಲಿ ಅದಾವುದೂ ನಮ್ಮ... ...ಬದ್ಧಪಡಿಸುವುದಿಲ್ಲವೇದೂ ಈ ...ನ ಎಚ್ಚರಿಸಿದೆ.

ಈ ಎಡಗೈ ಹೆಬ್ಬೆಟ್ಟಿನ ಗುರ್ತ... ...ರುದ್ರಮ್ಮ ಪೇಜಮ್ಮನವರು

[illegible]

ಮೈಸೂರಿನಲ್ಲಿ ಗೋಳೀಬಾರು

ವಿದ್ಯಾರ್ಥಿಗಳ ಪ್ರದರ್ಶನ

ಮೈಸೂರು ೫

ಈ ದಿನ ಮಧ್ಯಾಹ್ನ ೧-೩೦ ಗಂಟೆ ಸ ಮಯದಲ್ಲಿ ನೂರಡಿರಸ್ತೆಯ ಐದು ದೀಪದ ಹತ್ತಿರ ಪೋಲೀಸರು ವಿದ್ಯಾರ್ಥಿಗಳ ಗುಂಪ ನ್ನು ಚದುರಿಸಲು ೩ ಬಾರಿ ಗುಂಡುಹಾರಿಸಿ ದರು. ೩-೪ ವಿದ್ಯಾರ್ಥಿಗಳಿಗೆ ಗಾಯವಾ ಗಿದೆಯೆಂದು ಹೇಳಲಾಗಿದೆ.

ರಸ್ತೆಯನ್ನು ಸಶಸ್ತ್ರ ಪೋಲೀಸರು ಕಾಯುತ್ತಿದ್ದಾರೆ. ಈ ದಿನ ಬೆಳಗ್ಗೆ ೧೦ ಗಂಟೆಗೆ ಸಮಯದಲ್ಲಿ ಮಹಾರಾಜಾ ಕಾ ಲೇಜಿನ ಮುಂಭಾಗದಲ್ಲಿ ವಿದ್ಯಾರ್ಥಿಗಳ ಸಭೆಯೊಂದು ಸೇರಿ, ತಮ್ಮ ನಾಯಕರುಗ ಳನ್ನು ಕೂಡಲೇ ಬಿಡಬೇಕೆಂದು ಸರ್ಕಾರಕ್ಕೆ ಅಲ್ಟಿಮೇಟಂ ಕೊಟ್ಟಿತು. ಅಲ್ಲಿಗೆ ಪೋಲೀಸ್ ಮುಖ್ಯಾಧಿಕಾರಿಗಳು ಬಂದು ನಗರದಲ್ಲಿ ೪೫ ನೇ ಪೋಲೀಸ್ ಆಕ್ಟ್ ಜಾರಿಯಲ್ಲಿರುವುದರಿಂದ ಸಭೆಯನ್ನು ಬರ ಖಾಸ್ತು ಮಾಡಬೇಕೆಂದು ಎಚ್ಚರಿಕೆ ಕೊ ಟ್ಟರು. ತದನಂತರ ಪೋಲೀಸರು ಲಾಠಿ ಪ್ರ ಯೋಗ ಮಾಡಿ ವಿದ್ಯಾರ್ಥಿಗಳನ್ನು ಚದು ರಿಸಿದರು. ಹಲವು ಮಂದಿ ವಿದ್ಯಾರ್ಥಿ ವಿ ದ್ಯಾರ್ಥಿನಿಯರಿಗೆ ಏಟು ಬಿದ್ದಿರುವುದಾಗಿ ಗೊ ತ್ತಾಗಿದೆ. ಐದು ದೀಪದ ಕಡೆ ಒಂದು ಗುಂಪು ಸೇರಿ ಗಲಾಟೆ ಮಾಡುತ್ತಿದ್ದರು. ಪೋಲೀಸರು ವ್ಯಾನಿನಲ್ಲಿ ಪೆಟ್ರೋಲ್ ಮಾ ಡುತ್ತಾ, ಅನೇಕರನ್ನು ವ್ಯಾನಿನಲ್ಲಿ ತುಂ ಬುತ್ತಿದ್ದರು. ಮಧ್ಯಾಹ್ನ ೧-೩೦ ಗಂಟೆ ಸಮಯದಲ್ಲಿ ಪೋಲೀಸರು ಎರಡು ಬಾರಿ ಗುಂಡು ಹಾರಿಸಿದರು.

ಬನುಮಯ್ಯ ಹೈಸ್ಕೂಲು ಮತ್ತು ಕೃ ಷ್ಣರಾಜೇಂದ್ರ ಗಿರಣಿ ಸಮೀಪದಲ್ಲೂ ಪೋ ಲೀಸರು ಲಾಠಿ ಪ್ರಯೋಗ ಮಾಡಿದರು.

ರಾಜರಿಂದ ಜವಾಬ್ದಾರೀ ಸರ್ಕಾರದ ಘೋಷಣೆ

ಬೇರಾವ ಸಂಸ್ಥಾನಗಳಲ್ಲಿಯೂ ಪ್ರಜೆ ಗಳಿಗೆ ದೊರಕದಿರುವ ವಿಶೇಷ ರಿಯಾ ಯಿತಿಗಳನ್ನೊಳಗೊಂಡ ಜವಾಬ್ದಾರೀ ಸ ರ್ಕಾರವನ್ನು ನಿನ್ನೆ ತಿರುವಾಂಕೂರಿನ ರಾಜ ರು ಘೋಷಿಸಿದ್ದಾರೆ. ಘೋಷಣೆಯು ಈ ರೀತಿ ಇದೆ:—ನಮ್ಮ ಹಕ್ಕು ಬಾಧ್ಯತೆ ಗಳಿಗೆ ಕುಂದುಂಟಾಗದಂತೆ ಪ್ರಜೆಗಳಿಗೆ ಪೂರ್ಣವಾದ ಆಡಳಿತದ ಜವಾಬ್ದಾರಿಯ ನ್ನು ವಹಿಸುವುದೇ ನಮ್ಮ ಧ್ಯೇಯವಾಗಿ ದೆ. ಆದುದರಿಂದ ಜವಾಬ್ದಾರೀ ಸರ್ಕಾರ ದ ಸ್ಥಾಪನೆಯ ಸಂಬಂಧವಾಗಿ ಈಗಿರುವ ರಾಜ್ಯಾಂಗದಲ್ಲಿ ಸುಧಾರಣೆಗಳನ್ನೂ, ಬದ ಲಾವಣೆಗಳನ್ನೂ ಮಾಡಲು ನಿಯುಕ್ತರ ಮತದಾನ ಪದ್ಧತಿಯಂತೆ ಸಮಿತಿಯೊಂದ ನ್ನು ರಚಿಸಲು ಆಜ್ಞೆ ಮಾಡಿದ್ದೇವೆ. ಅರ ಮನೆ, ರಾಜ ಮನೆತನ, ದೈವಸ್ವತ್ತುಗಳು ಹಿಂದೂ ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿ ಷಯಗಳನ್ನು ಹೊಸ ಶಾಸನದಲ್ಲಿ ನಿರ್ಣಯಿ ಸಲಾಗುವುದು. ಈ ಘೋಷಣೆಯನ್ನು ಕಾ ರ್ಯರೂಪಕ್ಕೆ ತರಲು ಅಗತ್ಯವಾದ ಕಾ ರ್ಯಕ್ರಮಗಳನ್ನು ನಮ್ಮ ಸರ್ಕಾರವು ಕೈ ಗೊಳ್ಳುವುದು; ೧೯೪೮ ನೇ ಜನವರಿ ೧ ನೇ ತಾರೀಖಿನೊಳಗಾಗಿ ಮಂತ್ರಿ ಮಂಡಲ ದ ರಚನೆಯಾಗಿ ಅಧಿಕಾರವನ್ನು ವಹಿಸಿ ಕೊಳ್ಳುವಂತಾಗಲೆಂಬುದೇ ನಮ್ಮ ಹಾರೈ ಕೆಯಾಗಿದೆ.

ಮೈಸೂರಿನಲ್ಲಿ ದಸ್ತಗಿರಿಗಳು

ಶ್ರೀಯುತರಾದ ಹೆಚ್. ಸಿ. ದಾಸಪ್ಪ, ಬಿ. ಪಿ. ನಂಜಪ್ಪ, ಮುಳವಳ್ಳಿ ವೀರಪ್ಪ, ನಾ. ಭದ್ರಯ್ಯ, ಶ್ರೀಮತಿ ಲಕ್ಷ್ಮಮ್ಮ ಮತ್ತು ಆನಂದಮ್ಮನವರುಗಳನ್ನು ಪೋ ಲೀಸರು ಈ ದಿನ ದಸ್ತಗಿರಿ ಮಾಡಿದರು.

ಶ್ರೀ
ಗಣೇಶ ಟಾಕೀಸ್
5-9-47 ರಿಂದ
ದಿನವಹಿ ಮೂರು ಆಟಗಳು
ಪಂಚೋಲಿ ಆರ್ಟ್ಸ್‌ರವರ
ಖಾಕ್ ದಾಕ್ [?]
—: ಪಾತ್ರ :—
ನೂರ್‌ಜಹಾನ್, ಮನೋರಮಾ, ಗುಲಾಂ ಮಹಮ್ಮದ್
Morning Shows on
5, 6, 7 & 8th at 10-15 a m
IT'S LOVE I'M AFTER

ಶ್ರೀ
ಚಾಮುಂಡೇಶ್ವರೀ ಟಾಕೀಸ್
ತಾ|| 5-9-47 ರಿಂದ
ಅಮೋಘವಾದ ೨ ನೇ ವಾರ
ಜಗಬೀತಿ
(ಹಿಂದಿ)
—: ಪಾತ್ರ :—
ಸುರೇಯ್ಯಾ, ಸುಲೋಚನಾ ಚಟರ್ಜಿ
ಸಾದಿಕ್, ಅಲಿ

ರೈಲ್ವೆ ನೌಕರರ ಸಂಬಳದ ಬಗ್ಗೆ ಸರ್ಕಾರಿ ಪ್ರಕಟಣೆ

ಸ್ವಂ. ಸು. ಫೋನ್] [ಬೆಂಗಳೂರು ೫

ಪುನರ್ವಿಮರ್ಶೆಯಾಗಿರುವ ರೈಲ್ವೆ ನೌಕರರ ಸಂಬಳವು ೧೯೪೭ ನೇ ಜನವರಿ ತಿಂಗಳಿನಿಂದ ಜಾರಿಗೆ ಬರುವುದೆಂದೂ ಅದ ರಿಂದ ಸರ್ಕಾರಕ್ಕೆ ೧೬|| ಲಕ್ಷ ರೂ. ಹೆಚ್ಚು ವೆಚ್ಚವಾಗುವುದೆಂದೂ ಸರ್ಕಾರದವರು ಪ್ರ ಕಟಿಸಿರುವರು. ರೈಲ್ವೆಯ ಕೆಳದರ್ಜೆ ನೌ ಕರರಿಗೆ ಪಟ್ಟಣ ಕಟ್ಟಿಭತ್ಯ ಮತ್ತು ೫ ರೂ ಗಳ ವಿಶೇಷ ಭತ್ಯವನ್ನು ಕೊಡಲಾಗುವು ದೆಂದೂ ಸಹ ಅದರಲ್ಲಿ ಸೂಚಿಸಲಾಗಿದೆ.

ಪ್ರಥಮ ಸರ್ವಾಧಿಕಾರಿಯ ವಿರೋಧ

ರೈಲ್ವೆ ಸತ್ಯಾಗ್ರಹಿಗಳ ಪ್ರಥಮ ಸರ್ವಾ ಧಿಕಾರಿಗಳಾದ ರಾಘವ ರಾಜುರವರು ಒಂ ದು ಹೇಳಿಕೆಯನ್ನಿತ್ತು ಸರ್ಕಾರದವರ ರಿ ಯಾಯಿತಿಯನ್ನು ತಾವು ಅಂಗೀಕರಿಸಲಾ ಗುವುದಿಲ್ಲವೆಂದೂ, ತಮ್ಮ ಹಿಂದಿನ ಬೇಡಿ ಕೆಗಳಲ್ಲಿ ಯಾವ ಬದಲಾವಣೆಯೂ ಆಗು ವುದಿಲ್ಲವೆಂದೂ, ನಾಳೆ ಮಧ್ಯ ರಾತ್ರಿಯಿಂ ದ ಸತ್ಯಾಗ್ರಹವನ್ನು ಆರಂಭಿಸಲಾಗುವು ದೆಂದೂ ತಿಳಿಸಿರುವರು.

ವಾರ್ತಾ ಸಂಗ್ರಹ

* ಸೆಪ್ಟೆಂಬರ್ ಎರಡನೇ ವಾರದಲ್ಲಿ ಮ ದರಾಸಿಗೆ ಭೇಟಿ ಕೊಡಲಿರುವ ಶ್ರೀ ಶರತ್ ಚಂದ್ರ ಬೋಸರಿಗೆ ಮಾನಪತ್ರವನ್ನು ಅ ರ್ಪಿಸಬೇಕೆಂದು ಮದರಾಸು ಕಾರ್ಪೊರೇ ಷನ್ ತೀರ್ಮಾನಿಸಿದೆ.

ಗಡಿನಾಡು ಗಾಂಧಿ ಮತ್ತು ಡಾ|| ಖಾನ್ ಸಾಹೇಬ್ ಇವರುಗಳನ್ನು ದಸ್ತಗಿರಿ ಮಾಡಿಲ್ಲವೆಂದು ಪಾಕಿಸ್ತಾನ್ ಸರ್ಕಾರ ತಿ ಳಿಸಿದೆ.

ಷೇಕ್ ಅಬ್ದುಲ್ಲರವರನ್ನು ಬಿಡುಗಡೆ ಮಾಡಬೇಕೆಂದು ಕಾಶ್ಮೀರ್ ಸಂಸ್ಥಾನದ ಸಾವಿರಾರು ಹಿಂದೂ ಮುಸ್ಲಿಮರ ಸಹಿ ಯಾದ ಅರ್ಜಿಯನ್ನು ಮಹಾರಾಜರಿಗೆ ಅ ರ್ಪಿಸಲಾಗಿದೆ.

* ಆಗ್ರಾ ಜಿಲ್ಲೆಯ ಮುಟೋಲ ಎಂಬ ಗ್ರಾಮದಲ್ಲಿ ಹರಿಜನ ಮಹಿಳೆಯೊಬ್ಬಳಿಗೆ ಆನೆಯಂತೆ ರೂಪವುಳ್ಳ ಮಗುವೊಂದು ಹುಟ್ಟಿ, ಕೇವಲ ಸ್ವಲ್ಪ ಗಂಟೆಗಳ ಕಾಲ ಜೀ ವಿಸಿತ್ತೆಂದೂ, ಇದನ್ನು ನೋಡಲು ಅನೇಕ ರು ಬಂದು ಹೋಗುತ್ತಿರುವರೆಂದೂ ಹೇಳ ಲಾಗಿದೆ.

○ ಕಲ್ಕತ್ತಾ ನಗರದ ೫೦೦ ಜನ ಪೋಲೀ ಸರು ಗಾಂಧೀಜಿಯವರ ಉಪವಾಸದ ಬಗ್ಗೆ ಸಹಾನುಭೂತಿ ತೋರಿಸಲು ನಿನ್ನೆ ರಾತ್ರಿ ಯಿಂದ ಉಪವಾಸ ಕೈಗೊಂಡಿದ್ದಾರೆ.

ಗಾಂಧೀಜಿ ಉಪವಾಸ ನಿಲ್ಲಿಸಿದರು

ನಿನ್ನೆ ರಾತ್ರಿ ೯-೪೫ ಗಂಟೆಗೆ ಮಹಾತ್ಮ ಗಾಂಧೀಜಿಯವರು ತಮ್ಮ ಉಪವಾಸವನ್ನು ನಿಲ್ಲಿಸಿದರು.

ಪುನಃ ಗೋಳೀಬಾರು

ಸ್ವಂ. ಸು. ಫೋನ್] ಬೆಂಗಳೂರು ೫

ಬೆಂಗಳೂರಿನಲ್ಲಿ ಈ ದಿನ ಬೆಳಗ್ಗೆ ಕ ರ್ಫ್ಯೂ ಆಜ್ಞೆ ಜಾರಿ ಇಲ್ಲದ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು.

ಮಲ್ಲೇಶ್ವರದ ಹೈಸ್ಕೂಲು, ಮತ್ತು ಸಿಟಿ ಮಾರ್ಕೆಟ್, ರಾಯರ ಮನೆ ಮುಂ ಭಾಗಗಳಲ್ಲಿ ವಿದ್ಯಾರ್ಥಿಗಳು ಪ್ರದರ್ಶನ ನ ಡೆಸಿದರು. ಅವರುಗಳನ್ನು ಚದುರಿಸಲು ಪೋಲೀಸರು ಮೂರು ಪ್ರದೇಶಗಳಲ್ಲೂ ಗುಂಡು ಹಾರಿಸಿದರು. ಯಾರಿಗೂ ಗಾ ಯವಾಗಿಲ್ಲವೆಂದು ಹೇಳಲಾಗಿದೆ.

ಹುಡುಗಿಯ ಬೆಲೆ ೧೫೦ ರೂ.

[ಪಾಟ್ನಾ ೨ ಸೆಪ್ಟೆಂಬರ್]

ಪಾಟ್ನಾ ಜಿಲ್ಲೆಯಲ್ಲಿ ಸಿಫಾರ್ ಎಂಬ ಹಳ್ಳಿಯ ೧೧ ವರ್ಷದ ಚಿಂಗುರುಳಿ ಎಂಬ ಹುಡುಗಿಯೊಬ್ಬಳನ್ನು ಕೇವಲ ೧೫೦ ರೂಗಳಿಗೆ ಮಾರಿದ ಅಶ್ಲೀಲ ಸಂಗತಿ ಹೊರಬಿದ್ದಿದೆ.

ಪಕ್ಕದ ಮನೆಯ ಗಂಡಸರಿಬ್ಬರು ಆಕೆಯನ್ನು ಪುಸಲಾಯಿಸಿ, ಅದೇ ಎಂಬ ಹಳ್ಳಿಗೆ ಕರೆದುಕೊಂಡು ಹೋಗಿ ಹರನಾಥ್ ಪ್ರಸಾದ್ ಎಂಬುವನಿಗೆ ಮಾರಿದರಂತೆ. ಪೊಲೀಸರಿಗೆ ಫಿರ್ಯಾದ್ ಬಂದ ಮೇಲೆ ಒಬ್ಬಳ ಸೆ... ವೇಶ್ಯಾ ವೃತ್ತಿಗೆ ಎಳೆಯುವ ಆಪಾದನೆ ಮೇಲೆ ಮೊಕದ್ದಮೆ ಹೂಡಿದರು. ಆದರೆ ಆಕೆಯನ್ನು ಕೊಂಡವನು ತಾನು ಮದುವೆಮಾಡಿಕೊಳ್ಳುವ ಇಚ್ಛೆಯಿಂದ ಕೊಂಡುದಾಗಿ ತಿಳಿಸಿದುದರಿಂದ ಆತನನ್ನು ಬಿಡುಗಡೆ ಮಾಡಲಾಯಿತು.

ಪ್ರಸಾದ್-ನಿಜಲಿಂಗಪ್ಪನವರ ಮಾತುಕತೆ

ಅಖಿಲ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಮತ್ತು ಶ್ರೀ ದಿವಾಕರ್‌ರವರು ದಹಲಿಯಲ್ಲಿ ಡಾ॥ ರಾಜೇಂದ್ರ ಪ್ರಸಾದರನ್ನು ಭೇಟಿ ಮಾಡಿ, ಮೈಸೂರು ಸತ್ಯಾಗ್ರಹ ಮತ್ತು ಪ್ರಾಂತೀಯ ರಚನೆ ಬಗ್ಗೆ ಮಾತುಕತೆ ನಡೆಸಿದರು.

• ಪ್ರತ್ಯೇಕ ಸಿಖ್ ಸಂಸ್ಥಾನವು ಪಾಟಿಯಾಲ ಸಂಸ್ಥಾನಾಧೀಶರ ಅಧ್ಯಕ್ಷತೆಯಲ್ಲಿ ರಚನೆಯಾಗಬೇಕೆಂದು ಸಿಖ್ ನಾಯಕರುಗಳ ಚಳುವಳಿ ಪ್ರಾರಂಭಿಸಿದ್ದಾರೆ.

WOODLANDS

Morning Shows for 4 days from 5-9-47

Blue Dahlia

action Thriller

—: Starring :—

Alen Ladd, Vronica Lake and William Bendix

ರಾ ಜ ಕ ಮ ಲ್

ತಾ॥ 5-9-47 ರಿಂದ

೨ ನೇ ವಾರ

ಬಾಂಬೆ ಟಾಕೀಸಿನವರ ಅತ್ಯುತ್ತಮ ಚಿತ್ರ

ಝೂಲಾ

—: ಭೂ ಮಿ ಕೆ :—

ಅಶೋಕ ಕುಮಾರ್, ಲೀಲಾಚಿಟ್ನಿಸ್, ವಿ. ಎಚ್. ದೇಸಾಯಿ, ಮುಮ್ತಾಜ್ ಅಲಿ

From 5-9-47 for 4 days daily at 10-30 a m

HEROES OF THE WEST

thrilling serial with a stel cast like Noah Bury (jr) William Desmond, Francis Ford, Diana Duval

ಬಹಿರಂಗ ಸಭೆ

ಮೈಸೂರು ೫

ಮೈಸೂರು ಕಾಂಗ್ರೆಸ್ ಮುಖಂಡರುಗಳ ದಸ್ತಗಿರಿ ಬಗ್ಗೆ ಪ್ರತಿಭಟನೆ ಸೂಚಿಸಲು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಸಾವಿರಾರು ಜನರು ನೆರೆದಿದ್ದರು. ಶ್ರೀಯುತರಾದ ಹೆಚ್. ಸಿ. ದಾಸಪ್ಪ, ಮಳವಳ್ಳಿ ವೀರಪ್ಪ ಶ್ರೀಮತಿ ಲಕ್ಷ್ಮಮ್ಮ, ಮತ್ತು ಇತರರು ಭಾಷಣ ಮಾಡಿ, ಈ ಕೊನೆಯ ಹೋರಾಟಕ್ಕೆ ಜನಗಳ ಸಂಪೂರ್ಣ ಸಹಕಾರ ಮತ್ತು ಸಹಾಯವನ್ನು ಬೇಡಿದರು. ಸರ್ಕಾರದವರ ವರ್ತನೆಯನ್ನು ಖಂಡಿಸಿದರು. ಮುಖಂಡರುಗಳ ದಸ್ತಗಿರಿ ಆದ ಮಾತ್ರಕ್ಕೆ ಸತ್ಯಾಗ್ರಹ ನಿಂತಿಲ್ಲವೆಂದೂ, ಪ್ರತಿಯೊಬ್ಬನೂ ಸತ್ಯಾಗ್ರಹಿಯೆಂದು ಭಾವಿಸಿ ಮುಂದೆ ಬರಬೇಕೆಂದೂ ಕೋರಿದರು.

ಮೆರವಣಿಗೆ ಪ್ರದರ್ಶನ

ಮುಖಂಡರುಗಳ ದಸ್ತಗಿರಿ ಬಗ್ಗೆ ಸಹಾನುಭೂತಿ ತೋರಿಸಲು, ಮೈಸೂರು ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರು ನಿನ್ನೆ ಮಧ್ಯಾಹ್ನ ಮುಷ್ಕರ ಹೂಡಿ, ಅಲ್ಲಿಂದ ಟೌನ್ ಹಾಲಿಗೆ ಮೆರವಣಿಗೆಯಲ್ಲಿ ಬಂದರು.

ಮೈಸೂರು ವಿದ್ಯಾರ್ಥಿಗಳು ಸಹ ಮುಷ್ಕರ ಹಿಡಿದು ಪ್ರಚಂಡ ಮೆರವಣಿಗೆ ನಡೆಸಿದರು. ಮಹಾರಾಜಾ ಕಾಲೇಜಿನಿಂದ ಮೆರವಣಿಗೆ ಹೊರಟು ಅನೇಕ ಶಾಲಾ ಭಾಗದಲ್ಲಿ ಪಿಕೆಟ್ ... ಡಿ, ನಂತರ ಮೈಸೂರು ಬೈಲಿನ ಮುಂದೆ ಪ್ರಚಾರ ಮಾಡಿ, ಅಲ್ಲಿಂದ ವಾಪಸು ಬಂದರು.

• ಅಮೆರಿಕ ಹಿಂದಿನ ಮಹಾ ಯುದ್ಧದಲ್ಲಿ ಸೋಲಿಸಲಾಗದಾಗಿತ್ತೆಂದು ಮಾಜಿ ಅಧ್ಯಕ್ಷ ಮಿ॥ ಹೂವರ್‌ರವರು ತಿಳಿಸಿದ್ದಾರೆ. ಜಪಾನನ್ನು ಬೆದರಿಸದಿದ್ದರೆ, ಅವರು ನಮ್ಮ ಮೇಲೆ ಯುದ್ಧ ಮಾಡುತ್ತಲೇ ಇರಲಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

§ ದೆಹಲಿಯಿಂದ ಕರಾಚಿಗೆ ಪಾಕಿಸ್ತಾನ್ ಅಧಿಕಾರಿಗಳು ಮತ್ತು ಅವರ ಸಂಸಾರಗಳನ್ನು ಸಾಗಿಸಲು ೨೦ ಬ್ರಿಟಿಷ್ ವಿಮಾನಗಳನ್ನು ಏರ್ಪಡಿಸಲಾಗಿದೆ.

ಕ್ರ ಯ ಕ್ಕಿ ದೆ

ಡೋರ್ ನಂ.103, ದಿವಾನ್ಸ್ ರೋಡ್ ಮಹಡಿ ಮನೆ ಸಂಸಾರಕ್ಕೆ ಯೋಗ್ಯವಾಗಿದೆ ಕೂಡಲೆ ವಿಚಾರಿಸಿ

ಆರ್. ಗುಂಡೂರಾವ್,

ಮನೆ, ಜಮೀನು, ಸಾಲ, ಕೊಡಿಸುವ ಏಜೆಂಟರು,

ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್

ಮೈಸೂರು.

ವುಡ್‌ಲ್ಯಾಂಡ್ಸ್

೫-೯-೪೭ ರಿಂದ

ಅಪೋಲೋ ೨ ನೇ ವಾರ

ವಾಮಿಕ್ ಅಜ್ರ

(ಹಿಂದಿ)

—: ತಾರಾಗಣ :—

ಸ್ವರ್ಣಲತಾ ಮತ್ತು ನಾಜೀರ್

Distributors Contact

HANSA PICTURES

Chickpet, Bangalore City

Edited printed and published by A. R. Nagarajan at the Sadhvi Press D. Subbaiah Road Mysore

ವಿದ್ಯಾರ್ಥಿ ಕಾಂಗ್ರೆಸ್

ಕೃಷ್ಣರಾಜನಗರ

ಇಲ್ಲಿನ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ, ಸತ್ಯಾಗ್ರಹ ಪ್ರಚಾರಕ್ಕಾಗಿ ಗಾಂಧಿ ಮೈದಾನದಲ್ಲಿ, ಬಹಿರಂಗ ಸಭೆ ಸೇರಿತ್ತು. ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸಿನ ಕ್ರಿಯಾ ಸಮಿತಿ ಸದಸ್ಯರಾದ, ಶ್ರೀ ಎ. ವಿ. ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಕಾರ್ಯಕರ್ತರಾದ, ಶ್ರೀ ಚಿ... ಮಲ್ಲಶೆಟ್ಟರು ಮತ್ತಿತರ ವಿದ್ಯಾರ್ಥಿಗಳು ಭಾಷಣ ಮಾಡಿದರು, ಅನಂತರ ಅಧ್ಯಕ್ಷರು ಭಾಷಣ ಮಾಡುತ್ತಾ, ವಿದ್ಯಾರ್ಥಿಗಳ ಸ್ವಾತಂತ್ರ್ಯಕ್ಕಾಗಿ, ಕನ್ನಡ ಪ್ರಾಂತ ರಚನೆಗಾಗಿ ಮತ್ತು ಜವಾಬ್ದಾರಿ ಸರ್ಕಾರ ರಚನೆಯ ಕಡೆಗೆ ಓಟು ಕೊಟ್ಟು, ಸಿದ್ಧರಾಗಬೇಕೆಂದು ಕೋರಿದರು.

‡ ೩,೭೦೦ ಪೌಂಡ್ ಬೆಲೆ ಬಾಳುವ ರೋಲ್ಸ್‌ರಾಯಿಸ್ ಮೋಟಾರು ಕಾರು ಸಧ್ಯದಲ್ಲೆ ಇಂಗ್ಲೆಂಡಿನಿಂದ ಭಾರತದ ಗೌವರ್ನರ್ ಜನರಲ್ ಲಾರ್ಡ್ ಮೌಂಟ್‌ಬ್ಯಾಟನ್‌ರಿಗೆ ಬರಲಿದೆಯಂತೆ.

ಆಹಾರ ಸರಬರಾಜು ಇಲಾಖೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :—

ಮೈಸೂರು ಸಂಸ್ಥಾನದಲ್ಲಿ ತಲೆದೋರುವ ಆಹಾರದ ಅಭಾವ ಪರಿಸ್ಥಿತಿಯಿಂದ ಬೆಂಗಳೂರು, ಮೈಸೂರು ಮತ್ತು ಕೋಲಾರ ನಗರಗಳಿಗೆ ಹೊರಗಡೆಯಿಂದ ಬರುವವರಿಗೆ ರೇಷನ್ ಕಾರ್ಡುಗಳನ್ನಾಗಲೀ ರೇಷನ್ನನ್ನಾಗಲೀ ಒದಗಿಸಲಾಗುವುದಿಲ್ಲ. ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ವಿನಃ ಉಳಿದ ಸಂದರ್ಭಗಳಲ್ಲಿ ಹೊರಗಡೆಯಿಂದ ಬರುವವರಿಗೆ ಪಡಿತರವನ್ನು ನೀಡಲಾಗುವುದಿಲ್ಲವೆಂದು ಸೂಚಿಸಲಾಗಿದೆ.

ಕೆ. ಗುರುದತ್,

ಆಹಾರ ಸರಬರಾಜು ಡೈರೆಕ್ಟರ್,

ಬೆಂಗಳೂರು.

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ವಾರ್ಷಿಕ ಮಹಾ ಸಭೆ

ತಾ॥ ೨೮-೯-೧೯೪೭ ನೆಯ ಭಾನುವಾರ ಸಾಯಂಕಾಲ ೩-೩೦ ಗಂಟೆಗೆ

ರಾವ್ ಬಹದ್ದೂರ್ ಧರ್ಮಪ್ರಕಾಶ ಲೇಟ್ ಡಿ. ಬಸಮುಯ್ಯನವರ ಹೈಸ್ಕೂಲಿನಲ್ಲಿ

ಮೇಲ್ಕಂಡ ಸಂಘದ 46-47 ನೇ ಸಾಲಿನ ವಾರ್ಷಿಕ ಮಹಾ ಸಭೆಯು ನಡೆಯಲು ಏರ್ಪಡಿಸಿರುತ್ತೆ.

ರಿಪೋರ್ಟಿನ ಪ್ರತಿಗಳನ್ನು ಸಪ್ಟೆಂಬರ್ 7 ನೇ ತಾರೀಖಿನಿಂದ 10 ನೇ ತಾರೀಖು ಪೂರ್ತಿ ಸೊಸೈಟಿಯ ಆಫೀಸಿನಲ್ಲಿ ಆಫೀಸ್ ಕಾಲದಲ್ಲಿ ಮುದ್ದಾಂ ವಿತರಣೆ ಮಾಡಲಾಗುತ್ತೆ. ... ಇತ್ಯರ್ಥಗಳನ್ನು 11 ನೇ ತಾರೀಖಿನ ಬೆಳಗ್ಗೆ ಪ್ರೊಸ್ಸೀಡಿಂಗ್ ರವಾನಿಸಲಾಗುತ್ತೆ ... ಡೈರೆಕ್ಟರುಗಳ ಚುನಾವಣೆಗೆ ನಾಮಿನೇಷನ್ ಪತ್ರಗಳನ್ನು ತಾರೀಖು 24-9-1947 ನೇ ಸೋಮವಾರ ಸಾಯಂಕಾಲ 8 ಗಂಟೆಯೊಳಗೂ ರಿಪೋರ್ಟಿನಲ್ಲಿ ಪ್ರಕಟಿಸಲಾದ ಇತರ ವಿಷಯಗಳ ಪತ್ರಗಳನ್ನು ತಾರೀಖು 26-9-1947 ರ ಸಾಯಂಕಾಲ 8 ಗಂಟೆಯೊಳಗೂ ಲಿಖಿತ ಮೂಲಕ ಸಂಘದ ಕಛೇರಿಗೆ ತಲುಪುವಂತೆ ಕಳುಹಿಸಬೇಕಾಗಿರುತ್ತದೆ.

ಡೈರೆಕ್ಟರುಗಳ ಚುನಾವಣೆಗೆ ... ಸಭೆಗೆ ಹಾಜರಾಗಿ ಸಂಘದ ಮೀಟಿಂಗಿಗೆ ದಯಮಾಡಿಸಬೇಕಾಗಿ ಪ್ರಾರ್ಥನೆ

ಎಂ. ಎನ್. ರಾಮಸ್ವಾಮಿ, ಬಿ. ಎ.,

ಮೈಸೂರು — ಎಂ. ಗಂಗಾಧರ ಶಾಸ್ತ್ರಿ, ಬಿ. ಎ.,

ಗೌರವ ಕಾರ್ಯದರ್ಶಿಗಳು

ರತ್ನ ಕಂಬಳಿಗಳು

1½ × 1½	ಅಡಿ	ಬೆಲೆ	ರೂ.	1-
1½ × 3	,,	,,	,,	2-
2¼ × 4½	,,	,,	,,	4-1½
3 × 6	,,	,,	,,	8
4 × 7	,,	,,	,,	13-
6 × 9	,,	,,	,,	25-

ಚಿಕ್ಕ ದೈಜು ಟಿಬಲ್, ಸೋಫಾ, ಕುರ್ಚಿ ಮುಂತಾದುವುಗಳಿಗೂ, ದೊಡ್ಡ ಹಾಲ್ ನೆ, ಬಗೆಬಗೆಗಳಿಗೂ ಅನುಕೂಲವಾಗಿ,

ಬಾಬು ಸಾಬ್ ಕಂಪನಿ, ಮೈಸೂರು

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೬] ಶನಿವಾರ ೬-೯-೪೭ [ಸಂಚಿಕೆ ೪೯

ರಾಜಧಾನಿಯಲ್ಲಿ — ೪೮ ಗಂಟೆ ಕರ್ಫ್ಯೂ

ಮತ್ತೆ ೫೦ ಗಂಟೆ ಕರ್ಫ್ಯೂ

ಇದುವರೆಗೆ ೩ ಜನರ ಮರಣ

...ಫೋನ್] [ಬೆಂಗಳೂರು ೬

...ಜಿಲ್ಲಾಧಿಕಾರಿಗಳು ಒಂದು ಆಜ್ಞೆಯ ಹೊರಡಿಸಿ ಈ ದಿನ ಬೆಳಗ್ಗೆ ೭ ಗಂಟೆ...ದ ನಾಳಿದ್ದು ಬೆಳಗ್ಗೆ ೯ ಗಂಟೆಯವರೆಗೆ ...೫೦ ಗಂಟೆಗಳ ಕರ್ಫ್ಯೂ ಆಜ್ಞೆಯ ಮುಂದುವರಿಸಿದ್ದಾರೆ.

...ನಗಳ ಗುಂಪು ನ್ಯಾಷನಲ್ ಹೈಸ್ಕೂ... ಮುಂಭಾಗದಲ್ಲಿರುವ ಲೈಟ್ ಕಂಭ... ಉರುಳಿಸಿದೆ. ಇದುವರೆಗೆ ನಡೆದ ...ಬಾರಿನಿಂದ ೩ ಜನ ಮೃತರಾಗಿರು... ವರದಿಯಾಗಿದೆ

ವಿದ್ಯಾ ಶಾಲೆಗಳಿಗೆ ರಜಾ

...ಗ ತಲೆದೋರಿರುವ ಪರಿಸ್ಥಿತಿಯಿಂದ ...ಶಾಲಾ ಕಾಲೇಜುಗಳಿಗೂ ಇಂದಿನಿಂದ ...ವಾರ ಕಾಲ ರಜಾ ಕೊಡಲಾಗಿದೆ.

...ಲೀ ಬಾರಿನಿಂದ ಮೂವರ ಮರಣ

ಮೈಸೂರು ೬

...ನ್ನೆ ಮಧ್ಯಾಹ್ನ ನೂರಡಿ ರಸ್ತೆಯಲ್ಲಿ ... ಗೋಲೀಬಾರಿನ ಪರಿಣಾಮವಾಗಿ ...ಯಲ್ಲಿ ಮೂವರು ಮಡಿದರು. ಆ... ೨೧ ವರ್ಷದ ರಾಮಸ್ವಾಮಿ ಎಂಬ ... ಸಜ್ಜನು. ಮತ್ತೊಬ್ಬನಿಗೆ ಗುಂ...ತಿ. ಬಿದ್ದಿದೆ ಮತ್ತು ೪ ಜನರಿಗೆ ಲಾ...ಟು ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ...ದ್ದಾರೆ.

...ನ್ನೆ ಸಂಜೆ ಟೌನ್ ಹಾಲಿನ ಆವರಣದ ...ಲೀಸ್ ಕಾವಲನ್ನು ಹಾಕಿ, ಜನ ಸೇ...ರಲು ಅವಕಾಶ ಕೊಡಲಿಲ್ಲ. ಯೊ... ...ಗಲ್ಲಿದ್ದ ಗುಂಪನ್ನು ಲಾಠಿ ಛಾರ್ಜು ...ಚದುರಿಸಿದರು.

...ರ್ಕೆಟ್ ಚೌಕದಲ್ಲಿ ಸೇರಿದ್ದ ಜನರ...ನ್ನು ಚದುರಿಸಲು ಪೊಲೀಸರು ಲಾ... ...ಯೋಗ ಮಾಡಿ ನಂತರ ... ...ಹಾರಿಸಿದರು. ನೊಂದವರ ವಿವರ ...

...ಹಾರಾಜಾ ಕಾಲೇಜ್ ಹಾಸ್ಟಲಿನ ...ವಿದ್ಯಾರ್ಥಿಗಳ ಪೈಕಿ ೬೦ ಮಂದಿಯ... ಬೆಳಗ್ಗೆ ವಿಶೇಷ ಮೋಟಾರ್ ವ್ಯ... ...ಮಾಡಿ ಬೆಂಗಳೂರು ಮತ್ತು ಹಾಸ... ಕಳುಹಿಸಲಾಯಿತು. ಮಿಕ್ಕ ೬೦ ...ರ್ಥಿಗಳನ್ನೂ ನಾಳೆ ಅವರವರ ಸ್ಥಳ... ...ಹಿಸಲಾಗುವುದು.

...ದಿನ ಬೆಳಗ್ಗೆ ನಗರದಿಂದ ಯಾವ ...ಡಿಯೂ ಹೊರಡಲಿಲ್ಲ.

ಕರ್ಫ್ಯೂ ಆಜ್ಞೆ

...ಫೋನ್] [ಬೆಂಗಳೂರು ೬

...ಳೂರು ನಗರದ ಮುನಿಸಿಪಲ್ ಸ...ಲ್ಲಿ ೮ ನೇ ತಾ|| ಸೋಮವಾರ ... ಗಂಟೆ ವರೆಗೂ ಕರ್ಫ್ಯೂ ಆಜ್ಞೆ ಮುಂದುವರಿಸಲಾಗಿದೆ.

ಮಲ್ಲೇಶ್ವರದಲ್ಲಿ ಗಲಭೆ

...ಶ್ವರಂ ಪೊಲೀಸ್ ಸ್ಟೇಷನ್ ಮುಂ... ಈ ದಿನ ಬೆಳಗ್ಗೆ ಜನಗಳ ಗುಂಪು ...ಕ್ರಮಿಸಿದ್ದು, ಅವನ್ನು ಚದುರಿಸ... ...ಲೀಸರು ಎರಡು ಬಾರಿ ಗುಂಡು ... ಇಬ್ಬರು ಸತ್ತು ಮೂವರಿಗೆ ...ಗಿವೆ

...ತ್ಮ ಗಾಂಧೀಜಿಯವರು ನಾಳೆ ದಿ...ಬಿಗೆ ಪ್ರಯಾಣ ಮಾಡುವರು... ...ಯ ಪ್ರಯಾಣವನ್ನು ಅವರು ... ...ದ್ದಾರೆ.

ಮೈಸೂರಿನಲ್ಲಿ ೪೮ ಗಂಟೆ ಕಾಲ ಕರ್ಫ್ಯೂ

ಮೈಸೂರು ೬

ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಈ ದಿನ ಒಂದು ಆಜ್ಞೆಯನ್ನು ಹೊರಡಿಸಿ, ಈ ಕೆಳಗೆ ಕಂಡ ಪ್ರದೇಶಗಳಲ್ಲಿ ಈ ದಿನ ಮಧ್ಯಾಹ್ನ ೧೨ ಗಂಟೆಯಿಂದ ನಾಳಿದ್ದು ಮಧ್ಯಾಹ್ನ ೧೨ ಗಂಟೆ ವರೆಗೆ ಕರ್ಫ್ಯೂ ಜಾರಿ ಮಾಡಲಾಗಿದೆಯೆಂದು ತಿಳಿಸಿದ್ದಾರೆ. ಈ ಆಜ್ಞೆ ಜಯ ಚಾಮರಾಜೇಂದ್ರ ಸರ್ಕಲ್, ಇಲವಾಲ್ ರಸ್ತೆ, ವೈಸರಾಯ್ ರೋಡ್, ಇರ್ವಿನ್ ರೋಡ್, ಅಶೋಕಾ ರಸ್ತೆ, ಸೇಂಟ್ ಫಿಲೋಮಿನ ಸರ್ಕಲ್, ಹೈದರಾಲಿ ರಸ್ತೆ, ಕಾಲ್ಲೋರ್ ಆಫೀಸ್ ರಸ್ತೆ, ಮಿರ್ಜಾ ರಸ್ತೆ, ಸಂತೆ ರೋಡ್, ನ್ಯೂ ಸಯ್ಯಾಜಿರಾವ್ ರಸ್ತೆ, ಮಾಧವರಾವ್ ಸರ್ಕಲ್, ವಾಣೀವಿಲಾಸ ರಸ್ತೆ, ಮತ್ತು ಶ್ರೀ ಕಂಠೇಶ್ವರ ಸರ್ಕಲ್ಲಿನಿಂದ ಮಾನಸವಾಡಿ ರಸ್ತೆ, ಮಧ್ವಚಾರ್ ರಸ್ತೆಯಿಂದ ಕಾರಾಪುರ ಕಡೆಗೆ ಹೋಗುವ ರಸ್ತೆ ಇವುಗಳಿಗೆ ಒಳಪಟ್ಟ ಪ್ರದೇಶಗಳಿಗೂ ಕೈಲ್ಸ್ ಕಾಲೋನಿ ಮತ್ತು ವರ್ತಾವ್ ಮತ್ತು ಇತರ ಭಾಗಗಳು-ಇವುಗಳಿಗೆ ಅನ್ವಯಿಸುವುದು. ಈ ಮೇಲ್ಕಂಡ ಪ್ರದೇಶಗಳಲ್ಲಿ ಯಾರೂ ಓಡಾಡಕೂಡದು. ಈ ಆಜ್ಞೆಯನ್ನು ಉಲ್ಲಂಘಿಸಿದವರನ್ನು ಶಿಕ್ಷೆಗೆ ಒಳಪಡಿಸಲಾಗುವುದು.

ತಮ್ಮ ತಮ್ಮ ಅಧಿಕಾರಿಗಳಿಂದ ಗುರುತಿನ ಚೀಟಿಯನ್ನು ಪಡೆದಿರುವ ಎಲ್ಲ ಸರಕಾರಿ ಮತ್ತು ಮುನಿಸಿಪಲ್ ನೌಕರರಿಗೂ, ಆಸ್ಪತ್ರೆಗಳಿಗೆ ಹೋಗುವವರಿಗೂ ಗುರುತಿನ ಕಾರ್ಡನ್ನು ಪಡೆದಿರುವ ಆಸ್ಪತ್ರೆ ನೌಕರರಿಗೂ, ಮಿಲಿಟರಿ ಮತ್ತು ಪೊಲೀಸ್ ಅಧಿಕಾರಿಗಳಿಗೂ, ಅವರುಗಳಿಂದ ಗುರುತಿನ ಚೀಟಿ ಪಡೆದಿರುವವರಿಗೂ ಈ ಆಜ್ಞೆಯು ಅನ್ವಯಿಸುವುದಿಲ್ಲ.

ತಿರುವಾಂಕೂರು ಕಾಂಗ್ರೆಸ್ ಬಂದಿಗಳ ಬಿಡುಗಡೆ

ತಿರುವಾಂಕೂರಿನಲ್ಲಿ ಜವಾಬ್ದಾರಿ ಸರ್ಕಾರದ ಘೋಷಣೆ ಆದ ಒಡನೆಯೇ ಜೈಲಿನಲ್ಲಿ ಇಡಲಾಗಿದ್ದ ಎಲ್ಲಾ ಕಾಂಗ್ರೆಸ್ ಬಂದಿಗಳನ್ನು ಬಿಡುಗಡೆ ಮಾಡಲಾಗಿದೆ. ತಿರುವಾಂಕೂರು ಮಹಾರಾಜರ [illegible]ವನೆಯನ್ನು ಅತಿ ಶೀಘ್ರದಲ್ಲೇ ಜಾರಿಗೆ ತರುವ ಸಲುವಾಗಿ ಸರ್ಕಾರದವರು ಎಲ್ಲ ಪಕ್ಷದ ಸಮಿತಿಯೊಂದನ್ನು ರಚಿಸಿದ್ದಾರೆ.

ವಿಶ್ವಕರ್ನಾಟಕ ದಿನಪತ್ರಿಕೆ

ಬೆಂಗಳೂರಿನಿಂದ ಪ್ರಕಟವಾಗುವ ವಿಶ್ವಕರ್ನಾಟಕ ದಿನಪತ್ರಿಕೆಯ ಮೇಲೆ ಸರ್ಕಾರದವರು ಪ್ರಿಸೆನ್ಸಾರ್ ಶಿಪ್ ಹಾಕಿರುವುದರಿಂದ ಆ ಪತ್ರಿಕೆಯು ನಾಳೆಯಿಂದ ಹೊರಡುವುದಿಲ್ಲ.

ನೆಹರೂರವರಿಗೆ ತಂತಿ

ಭಾರತದ ಪ್ರಧಾನ ಮಂತ್ರಿ ನೆಹರೂರವರಿಗೆ ವಿಶ್ವಕರ್ನಾಟಕ ಪತ್ರಿಕೆಯ ಮಾಜಿ ಸಂಪಾದಕರಾದ ಶ್ರೀ ಟಿ. ಟಿ. ಶರ್ಮರವರು ಒಂದು ತಂತಿಯನ್ನು ಕಳುಹಿಸಿ "ಕಾಂಗ್ರೆಸ್ ನಾಯಕರೆಲ್ಲರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಮೈಸೂರು ಮಾರ್ಷಲ್ ಲಾ ಆಜ್ಞೆಗೆ ಒಳಗಾಗಿದೆ. ದಯವಿಟ್ಟು ಡೊಮಿನಿಯನ್ ಸರ್ಕಾರದ ಪರವಾಗಿ ಮಹಾರಾಜರಲ್ಲಿ ಮಧ್ಯಸ್ಥಿಕೆ ನಡೆಸಿ" ಎಂದು ತಿಳಿಸಿದ್ದಾರೆ.

ಸತ್ಯಾಗ್ರಹಕ್ಕೆ ಪೂನಾ ವಿ|| ಸಂಘದ ಸಹಾನುಭೂತಿ

ಪ್ರಜೆಗಳ [illegible]ವನ್ನು ಪ್ರತಿಬಿಂಬಿಸುವ ಕಾಂಗ್ರೆಸ್ ಸಂಸ್ಥೆಯ ನ್ಯಾಯಬದ್ಧ ಬೇಡಿಕೆಯಾದ ಜವಾಬ್ದಾರಿ ಸರ್ಕಾರವ[illegible] ರೂಪಿಸುವುದರ ಬದಲು ಮೈಸೂರು ಸರ್ಕಾರವು ಕಾಂಗ್ರೆಸ್ಸಿನ ಸತ್ಯಾಗ್ರಹಕ್ಕೆ [illegible]ರುವುದು ಅತ್ಯಂತ ವಿಷಾದದ ಸಂಗತಿಯಾಗಿರುತ್ತದೆ-ಎಂದು ಪೂನಾ ಲಾ ಕಾಲೇಜಿನ ವಿದ್ಯಾರ್ಥಿ ಸಂಘವು ನಿರ್ಣಯವನ್ನು ಮಾಡಿರುತ್ತದೆ. ಸರ್ಕಾರದವರು ತಮ್ಮ ನೀತಿಯನ್ನು ಬದಲಾಯಿಸಿ ಪ್ರಜೆಗಳ ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ-ಎಂಬ ನಿರ್ಣಯವೂ ಸಹ ಅಂಗೀಕೃತವಾಯಿತು.

ಹರಿಜನ ದೇವಾಲಯ ಪ್ರವೇಶಕ್ಕೆ ಪ್ರತಿಭಟನೆ

ಬೊಂಬಾಯಿ ಶಾಸನ ಸಭೆಯಲ್ಲಿ ಬರುವ ಹರಿಜನ ದೇವಾಲಯ ಪ್ರವೇಶದ ಮಸೂದೆಯನ್ನು ಪ್ರತಿಭಟಿಸಲು ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದವರು ೧೦ ನೇ ತಾರೀಖು ಪೂನಾದ ಶಾಸನ ಸಭೆಯ ಮುಂದೆ ವಿರೋಧ ಪ್ರದರ್ಶನ ನಡೆಸುವರೆಂದು ವರದಿಯಾಗಿದೆ

ಭಾರತಕ್ಕೆ ಅಕ್ಕಿ

ಭಾರತಕ್ಕೆ ೪ ಸಾವಿರ ಟನ್ ಅಕ್ಕಿಯನ್ನು ಎರವಲಾಗಿ ಕೊಡಲು ಫಿಲಿಪ್ಪೈನ್ಸ್ ಒಪ್ಪಿದೆ

ದಸ್ತಗಿರಿ

ಮೈಸೂರು

ಮೈಸೂರು ಪೊಲೀಸರು ನಿನ್ನೆ ರಾತ್ರಿ ಶ್ರೀಯುತರಾದ ಹೆಚ್. ಎಂ. ಚೆನ್ನಬಸ[illegible], ಚಂದ್ರಶೇಖರಗೌಡ, ಪಿ ಗೋಪಾಲಕೃಷ್ಣ ಶೆಟ್ಟಿ ಮತ್ತು ಶಿವಣ್ಣ ಇವರುಗಳನ್ನು ದಸ್ತಗಿರಿ ಮಾಡಿರುವರು.

ಉಪನ್ಯಾಸ

ಮೈಸೂರು ವಾಣೀವಿಲಾಸ ಮೊಹಲ್ಲಾದ ಶ್ರೀ ರಾಮಕೃಷ್ಣಾಶ್ರಮದಲ್ಲಿ ಶ್ರೀ ಕೃಷ್ಣ [illegible] ಪ್ರಯುಕ್ತ ನಾಳೆ ಸಂಜೆ ೭ ಗಂಟೆ[illegible] ಭಜನೆ, ಭಾಷಣಗಳು ನಡೆಯುವುವು.

ಗಾಂಧೀಜಿಯವರಿಗೆ ಬ್ರಿಟಿಷ್ ದೊರೆಗಳ ಸಂದೇಶ

ಬ್ರಿಟಿಷ್ ದೊರೆಗಳು ಗಾಂಧೀಜಿಯವರಿಗೆ ಒಂದು ಸಂದೇಶವನ್ನು ಕಳುಹಿಸಿ, ಅವರ ಉಪವಾಸದ ಬಗ್ಗೆ ತಮ್ಮ ಸಹಾನುಭೂತಿ ಮತ್ತು ವ್ಯಾಕುಲವನ್ನು ವ್ಯಕ್ತಪಡಿಸಿದ್ದಾರೆ.

ಮತ್ತೆ [illegible] ಹತೋಟಿ

ಈಗ ವರ್ತಕರು ಪಡೆಯುತ್ತಿರುವ ವಿಪರೀತವಾದ ಲಾಭವನ್ನು ತಡೆಗಟ್ಟಲು ಭಾರತ ಸರ್ಕಾರದವರು ಪುನಃ ಸಾಮಾನುಗಳ ಬೆಲೆಯನ್ನು ಹತೋಟಿ ಮಾಡಲು ಯೋಚಿಸುತ್ತಿರುವುದಾಗಿ ವರದಿಯಾಗಿದೆ.

[illegible]

ಹಲವಾರು ಪತ್ರಿಕೆಗಳ ಮೇಲೆ ಪ್ರತಿಬಂಧಾಜ್ಞೆಯನ್ನು ಜಾರಿ ಮಾಡುವುದಕ್ಕೆ ತಮ್ಮ ಸಹಾನುಭೂತಿಯನ್ನು ತೋರಿಸುವುದರ ನಿಮಿತ್ತ ತಾ|| ೬-೯-೪೭ ನೇ ವಾರ ಪತ್ರಿಕೆಯನ್ನು ನಿಲ್ಲಿಸುತ್ತಿರುವುದಾಗಿ ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಹೈದರಾಬಾದ್ ಕಾಂಗ್ರೆಸ್ ನಾಯಕರೂ ಮತ್ತು ಕಸ್ತೂರಿ ಬಾಯಿ ರಾಷ್ಟ್ರೀಯ ಶಿಕ್ಷಣ ಶಿಬಿರದ ಏಜೆಂಟರೂ ಆದ ಶ್ರೀಮತಿ ಬ್ರಹ್ಮನ ಕುಮಾರಿ ಪೆಗ್ಗಯರನ್ನು ಹೈದರಾಬಾದ್ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿ ಮಾಡಲಾಗಿದೆ.

ಶ್ರೀ ಗಾಂಧೀಜಿಯವರು ತಮ್ಮ ಉಪವಾಸ ವ್ರತವನ್ನು ಮುಕ್ತಾಯಗೊಳಿಸುವೊಡನೆಯೇ ಅನೇಕ ಯುವಕರು ಶಸ್ತ್ರಗಳನ್ನು ಮತ್ತು ಇತರ ವಸ್ತುಗಳನ್ನು ಅವರಿಗೆ ತಂದು ಒಪ್ಪಿಸಿದರು.

ಜುನಾಗಢ ಸಂಸ್ಥಾನದ ಅನೇಕ ಮಂದಿ ಜಹಗೀರುದಾರರು ಭಾರತ ಸರ್ಕಾರದ ಸಂಸ್ಥಾನಗಳ ಶಾಖೆಗೆ ಪತ್ರ ಬರೆದು, [illegible] ಸೇರಿರುವುದರಿಂದ ಭಾರತ ಸರ್ಕಾರವು ತಮ್ಮನ್ನು ಸ್ವತಂತ್ರರೆಂದು [illegible], ತಾವು ಭಾರತ ಯೂನಿಯನ್ನಿಗೆ ಸೇರುವುದಾಗಿಯೂ ತಿಳಿಸಿರುವರು.

ಸೂಚನೆ

ರಾಜಧಾನಿಯಲ್ಲಿನ ಪ್ರಸ್ತುತ ಪರಿಸ್ಥಿತಿಯಿಂದ ಕರ್ಫ್ಯೂ ಜಾರಿ ಮಾಡಿರುವುದರಿಂದ ಆ ಆಜ್ಞೆಯು ಜಾರಿಯಲ್ಲಿರುವ ವರೆಗೆ ನಮ್ಮ ಪತ್ರಿಕೆಯು ನಾಳೆಯಿಂದ ಪ್ರಕಟವಾಗುವುದಿಲ್ಲ.

—ವ್ಯವಸ್ಥಾಪಕ

ಮಹಾ ಪ್ರಭುಗಳ ಘೋಷಣೆ, ಅನಪೇಕ್ಷಿತ

ರಾಜಗೋಪಾಲಯ್ಯಂಗಾರ್ಯರ ಹೇಳಿಕೆ

ಮೈಸೂರು ೬

ರಾಜಧಾನಿಯ ವಕೀಲರಾದ ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರು ಈ ರೀತಿ ಬರೆದಿದ್ದಾರೆ:—

ಕಾಂಗ್ರೆಸ್ ಮುಂದಾಳುಗಳನ್ನು ಬಿಡುಗಡೆ ಮಾಡಿದ ಬಳಿಕ ೮-೯ ನೇ ತಾ॥ ಗೆ ನಡೆಯುವ ಸಲಹಾ ಸಮಿತಿಯನ್ನೇ ಒಂದು ಸಲಕ್ಕೆ ಹಾಕಿಕೊಂಡು ತಮ್ಮ ಶಿಫಾರಸು ಪ್ರಜಾ ಸತ್ತಾತ್ಮಕ ಸರ್ಕಾರವೆಂದು ದಿವಾನರು ೪ ನೇ ತಾ॥ ನೊಳಗೆ ಹೇಳಿದ್ದರೆ, ಈ ಅವ್ಯವಸ್ಥೆಗೆ ಕಾರಣವೇ ಆಗುತ್ತಿರಲಿಲ್ಲ. ರಾಜಕೀಯದಲ್ಲಿ ಪ್ರತಿಷ್ಠೆಯ ಪ್ರಶ್ನೆ ನಿಂತು ಪ್ರವಾಹವನ್ನು ಗಟ್ಟಿಯಾಗಿ ಹಾಗೆ ಮಾಡಿಕೊಳ್ಳುವುದು ರಾಜಕಾರಣ ಪಟುತ್ವವಲ್ಲ. ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದಿಂದ ಕಾಂಗ್ರೆಸ್ಸಿನವರಿಗೆ ಮಾತ್ರವಲ್ಲ; ಎಲ್ಲ ಪ್ರಜೆಗಳಿಗೂ ಶಿಕ್ಷೆಯಾಗಿದೆ. ಪತ್ರಿಕಾ ಸ್ವಾತಂತ್ರ್ಯ ಕಸಿಯಿತು. ಬೆಂಗಳೂರಿನಲ್ಲಿ ಕರ್ಫ್ಯೂ, ಮೈಸೂರಿನಲ್ಲಿ ಪ್ರತಿಬಂಧಕಾಜ್ಞೆ ಇವುಗಳಿಂದ ಪೌರಸ್ವಾತಂತ್ರ್ಯಕ್ಕೆ ಧಕ್ಕೆ ಬಂತು. ಈ ಜಾ ಸ್ವಾತಂತ್ರ್ಯದಾಹ ದಬ್ಬಾಳಿಕೆಯಿಂದ ನಿಲ್ಲುವುದಿಲ್ಲ. ಸಾಮರಸ್ಯಬೇಕು. [illegible] ಬೇಕು

ದೇಶದ ಎಲ್ಲ ಪಕ್ಷಗಳೂ ಪ್ರಮುಖ ಜನ ಪ್ರಜಾ ಸಂಸ್ಥೆಗಳ [illegible] ಅವಶ್ಯಕತೆಯನ್ನು [illegible] ಹೇಳಿದ್ದಾರೆ. ಎಲ್ಲ ಪಕ್ಷಗಳೂ ಒಪ್ಪಿಗೆಯಾಗುವಂಥ ಒಂದು ಜನಪ್ರತಿನಿಧಿ ಸರ್ಕಾರವನ್ನು ಏರ್ಪಡಿಸುವ ಶಿಫಾರಸು ಮಾಡುವುದೇ ತಮ್ಮ ಈಗಿನ ಉದ್ದೇಶವೆಂದು ದಿವಾನರು ಹೇಳಿದ್ದಾರೆ. ಆದರೆ ಪ್ರಜೆಗಳಿಗೆ ಬೇಕಾದ್ದನ್ನು ರೂಪಿಸಿಕೊಳ್ಳುವುದು ಪ್ರಜೆಗಳ ಪ್ರತಿನಿಧಿಗಳ ಕರ್ತವ್ಯವೇ ವಿನಹ ದಿವಾನರದಲ್ಲ. ಅದಕ್ಕೆ ಒಂದು ರಾಜ್ಯಾಂಗ ಸಮಿತಿ ರೂಪುಗೊಳ್ಳಬೇಕು. ಆದುದರಿಂದ ದಿವಾನರು ಕಾಲಹರಣ ಮಾಡದೆ ಪ್ರಜಾ ಸತ್ತಾತ್ಮಕ ಸರ್ಕಾರದ ಘೋಷಣೆಯ ಶಿಫಾರಸು ಮಾಡಿ ಅಂತಹ ಘೋಷಣೆಯನ್ನು ಶ್ರೀಮನ್ಮಹಾರಾಜರವರು ಹೊರಡಿಸುವುದೇ ಈಗ ಬೇಕಾದುದು. ಅದೇ ಘೋಷಣೆಯಲ್ಲೇ ಶ್ರೀಮನ್ಮಹಾರಾಜರವರು ಅರಮನೆ ಮತ್ತು ತಮ್ಮ ರಾಜಮನೆತನಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸುವ ಅಧಿಕಾರವು ರಾಜ್ಯಾಂಗ ಸಮಿತಿಗಿಲ್ಲವೆಂದೂ ಆ ಸಮಿತಿ ಒಂದು ನಿರ್ದಿಷ್ಟ ಕಾಲದಲ್ಲಿ ರಾಜ್ಯಾಂಗವನ್ನು ರೂಪುಗೊಳಿಸಬೇಕೆಂದೂ ಆ ಘೋಷಣೆಯಲ್ಲಿ ಹೇಳುವುದು ಉಚಿತವಾಗಿದೆ.

ಕಾಂಗ್ರೆಸ್ಸಿನವರನ್ನು ಹದಿನೈದು ದಿನಗಳು ಮಾತ್ರ ಬಂಧನದಲ್ಲಿ [illegible] ವಿಚಾರಣೆಯಿಲ್ಲದೆ [illegible] [illegible] ರಾಜಕೀಯ [illegible] [illegible] [illegible] ಪ್ರಜೆಗಳ [illegible] ಶ್ರೀ [illegible] [illegible] [illegible]

ಪೌರ ಸಭೆಯಲ್ಲಿ ಪ್ರತಿಭಟನೆ

ಕಾಂಗ್ರೆಸ್ ಪಕ್ಷದವರ ಸಭಾ ಪರಿತ್ಯಾಗ

ಮೈಸೂರು ೬

ಮುಂದುವರಿದ ಪುರಸಭೆಯ ಅಧಿವೇಶನವು ನಿನ್ನೆ ಸಂಜೆ ಶ್ರೀ ಎಂ. ಎಸ್. ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಮುಂದುವರಿಯಿತು.

ಲಾಠೀ ಪ್ರಯೋಗ, ಗೋಲೀಬಾರು ಮತ್ತು ಕಲ್ಲೇಟುಗಳಿಂದ ನೊಂದವರಿಗೆ ಈ ಸಭೆಯು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ-ಎಂಬ ನಿರ್ಣಯವನ್ನು ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಮಂಡಿಸಿದರು. ಶ್ರೀ॥ ಪುಟ್ಟಸ್ವಾಮಿಯವರು ಬೆಂಬಲವಿತ್ತರು. ಚರ್ಚೆಯಾದನಂತರ ಅಧ್ಯಕ್ಷರು ಅದನ್ನು ತಳ್ಳಿಹಾಕಿದರು. ಕಾಂಗ್ರೆಸ್ ನಾಯಕರನ್ನೂ, ರಾಜಧಾನಿಯ ಪೌರ ಸಭಾ ಸದಸ್ಯರನ್ನೂ, ಅದರಲ್ಲೂ ಈ ಪುರ ಸಭೆಯ ಮಾಜಿ ಮತ್ತು ಈಗಿನ ಉಪಾಧ್ಯಕ್ಷರುಗಳನ್ನೂ ಮತ್ತು ಮಹಿಳಾ ಸದಸ್ಯರಾದ ಶ್ರೀಮತಿ ಲಕ್ಷ್ಮಮ್ಮನವರನ್ನೂ ಬಂಧಿಸಿರುವುದನ್ನೂ ಮತ್ತು ಸಂಸ್ಥಾನದಲ್ಲಿ ಲಾಠಿ ಪ್ರಯೋಗ, ಗೋಲೀಬಾರು ಮೊದಲಾದ ದಬ್ಬಾಳಿಕೆಯ ಕಾರ್ಯಕ್ರಮ ಕೈಗೊಂಡಿರುವ ಸರ್ಕಾರದ ನೀತಿಯನ್ನೂ ಈ ಸಭೆಯು ಖಂಡಿಸುತ್ತದೆ ಮತ್ತು ಅದನ್ನು ಪ್ರತಿಭಟಿಸಲು ಈ ಸಭೆಯನ್ನು ೧೫ ನೇ ತಾರೀಖಿಗೆ ಮುಂದೆ ಹಾಕಬೇಕೆಂದು ಒತ್ತಾಯಪಡಿಸುತ್ತದೆ- ಎಂಬ ಮತ್ತೊಂದು ನಿರ್ಣಯವೂ ಸಹ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರಿಂದ ಮಂಡಿಸಲ್ಪಟ್ಟಿತು. ಸದಸ್ಯರೆಲ್ಲರೂ ಬೆಂಬಲವಿತ್ತರು. ಆದರೂ ಅದಕ್ಕೆ ಅವಕಾಶವಿಲ್ಲವೆಂದು ಹೇಳಿ ಅಧ್ಯಕ್ಷರು ಅದನ್ನೂ ತಳ್ಳಿಹಾಕಿದರು. ಇದನ್ನು ಪ್ರತಿಭಟಿಸಲು ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾ ತ್ಯಾಗ ಮಾಡಿದರು. ಕೋರಂ ಇಲ್ಲದಿದ್ದುದರಿಂದ ಸಭೆಯನ್ನು ೧೫-೯-೪೭ಕ್ಕೆ ಮುಂದುವರಿಸಲಾಯಿತು.

ಯುಪಾಲಿಸುವುದರಿಂದ ಪ್ರಭು ಮತ್ತು ಪ್ರಜೆಗಳ ಸೌಹಾರ್ದ ಮತ್ತಷ್ಟು ಹೆಚ್ಚುವುದರಲ್ಲಿ ಸಂದೇಹವಿಲ್ಲ

ಪೋಲೀಸರಿಗೆ ಬೂದಿ ಟೋಪಿ

ಈಗ ಪೋಲೀಸರು ಧರಿಸುತ್ತಿರುವ ಶಿರಸ್ತ್ರಾಣಗಳನ್ನು ರದ್ದು ಮಾಡಿ ಅದರ ಬದಲು ಬಿಳಿಯ ಅಥವಾ ಇತರ ಬಣ್ಣದ ಬೂದಿ ಟೋಪಿಯನ್ನು ಧರಿಸುವಂತೆ ಆಜ್ಞೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುವ ನಿರ್ಣಯವು ನೆಲ್ಲೂರು ಪುರಭವನದಲ್ಲಿ ಅಂಗೀಕೃತವಾಯಿತು

ರಾ ಜ ಕ ಮ ಲ್

ತಾ॥ 5-9-47 ರಿಂದ

೨ ನೇ ವಾರ

ಬಾಂಬೆ ಟಾಕೀಸಿನವರ ಅತ್ಯುತ್ತಮ ಚಿತ್ರ

ಝೂಲಾ

—: ಭೂಮಿಕೆ :—

ಅಶೋಕ ಕುಮಾರ್, ಲೀಲಾಚಿಟ್ನಿಸ್

ವಿ ಎಚ್. ದೇಸಾಯಿ,

ಮುಮ್ತಾಜ್ ಅಲಿ

Form 5-9-47 for 4 days daily at 10-30 a m.

HEROES OF THE WEST

thrilling serial with a stelar cast like

Noah Bury (jr) William Desmond, Francis Ford, Diana Duval

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು.

ವುಡ್‌ಲ್ಯಾಂಡ್ಸ್

೫-೯-೪೭ ರಿಂದ

ಅಪೋಲೋ ೨ ನೇ ವಾರ

ವಾಮಿಕ್ ಅಜ್[illegible]

(ಹಿಂದಿ)

—: ತಾರಾಗಣ :—

ಸ್ವರ್ಣಲತಾ ಮತ್ತು ನಾಜೀರ್

Distributors Contact

HANSA PICTURES

Chickpet, Bangalore Ci[illegible]

ಕ್ರ ಯ ಕ್ಕಿ ದೆ

ಡೋರ್ ನಂ.103, ದಿವಾನ್ಸ್ ರೋ[illegible] ಮಹಡಿ ಮನೆ ಸಂಸಾರಕ್ಕೆ ಯೋಗ್ಯವಾಗಿದೆ. ಕೂಡ್ಲೆ ವಿಚಾ[illegible]

ಆರ್. ಗುಂಡೂರಾವ್,

ಮನೆ, ಜಮೀನು, ಸಾಲ, ಕೊಡಿ[illegible] ಏಜೆಂಟರು,

ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್, ಮೈಸೂರು

ಮಿತ ಸಂತಾನ

ಸ್ವಾಭಾವಿಕ ಮತ್ತು ಶಾಸ್ತ್ರೀಯ [illegible] ವನ್ನು ಮಿತವಾಗಿಟ್ಟುಕೊಳ್ಳಬಹುದ[illegible] ನೋಡಿ. ಡಾ॥ ಟಿ ಎಸ್ ಟಿ [illegible]

L. H. M. S, L. A M[illegible]

148-ಕಾಲೇಜ್ ರೋಡ್, ಮೈಸೂ[illegible]

WOODLAND[illegible]

Morning Shows for 4 d[illegible] from 5-9-47

Blue Dahlia

action Thriller

—: Starring :—

Alen Ladd, Vronica La[illegible] and William Bendix

ಮೈಸೂರು ಶ್ರೀಮನ್ಮಹಾರಾ[illegible] ಮುಮ್ಮಡಿ ಕೃಷ್ಣರಾಜ ಒಡೆ[illegible] ಖಾಸ್ ವೈದ್ಯ - ಅಂಬಳೆ ನರಸಿಂಹ ಪಂಡಿತರ ಮನೆತನ[illegible]

ಸಂತಾನ ಸಿಂಧೂ[illegible]

ಬಟ್ಟೆ ಸಂಬಂಧದ ಹೊಟ್ಟೆ ನೋ[illegible] ದೆಸೆಯಿಂದ ಮಕ್ಕಳಾಗದೇ ಇರತಕ್[illegible] ಗ್ಯಾರಂಟೀ ಔಷಧವೆಂದು ಎಂಬ[illegible] ವರ್ಷಗಳಿಂದ ಪ್ರಖ್ಯಾತವಾದ ಈ [illegible] ಮಕ್ಕಳುವೇನು ? ಎಲ್ಲೆಲ್ಲಿ ಪ್ರ[illegible] ಬಂದಿದೆ ? ಎಂಥೆಂಥಾ ವೈದ್ಯರ[illegible] ನೆ ಪಡೆದಿದೆ ? ಇತ್ಯಾದಿ ವಿಷಯ[illegible] ಗಿರವಳ್ಳಿ ಪನ್ನೆರಡು ಪ್ರತಿಗಳ [illegible] ತಾವು ನೋಡಿರೇ ಬೇಕಾದ್ದು. [illegible] ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯರ್[illegible] ರ್ ಪ್ರೈಟರ್, ೧ ಸಂತಾನ ಸಿಂ[illegible] ಆಫೀಸ್, ಅಂಚೆ, ದುಂಡುದೊರ[illegible]

ಗರ್ಭ ರಕ್ಷಿಣಿ

ಆರ್ವೇದ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ ಪಂಡಿತ ಕೆ. ವಿ. ವೆಂಕಟರಾಮಯ್ಯ

[illegible]

ಸಾಧ್ವಿ

ಬಿ

[illegible]

(2 [illegible] ಮತ್ತು

DIRECTORY

Boost your business by advertising in INDIAN NATIONAL DIRECTORY, (The All-India Business [illegible] Telephone Directory). [illegible] All-India coverage. For particulars apply I. N. D. Basavangudi, Bangalore

Edited, printed and published by A. S. Nagarajan at the Sadhvi [illegible] D. Subbaiah Road, Mysore

ರಿ. ನಂ. 92 WEEKLY EDATION ಇಂದಿನ ಪತ್ರಿಕೆ...



ಸಂಪುಟ ೭] ಭಾನುವಾರ ೭-೯-೪೭ [ಸಂಚಿಕೆ ೧೨

ಸಾಧ್ವಿ ಪತ್ರಿಕೆಗೆ ಸರ್ಕಾರದ ಆಜ್ಞೆ

ಸಾಧ್ವಿ ದಿನ ಪತ್ರಿಕೆಯ ಸಂಪಾದಕರು, ಮುದ್ರಕಾರರು, ಮತ್ತು ಪ್ರಕಟಣಕಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ಮೈಸೂರು ಕಾಂಗ್ರೆಸ್ಸಿನ ಸತ್ಯಾಗ್ರಹ ಚಳುವಳಿಗೆ ಸಂಬಂಧಿಸಿದಂತೆ ನಡೆಯುವ ಘಟನೆಗಳು, ಭಾಷಣಗಳು, ಟೀಕೆಗಳು, ಚಿತ್ರಪಟಗಳು, ಮತ್ತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅದಕ್ಕೆ ಸಂಬಂಧಿಸಿದಂತ ನಿಜವಾದ ವಿಷಯಗಳನ್ನಾಗಲೀ ಅಥವಾ ವಿಚಾರಗಳನ್ನಾಗಲೀ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸುವ ಮೊದಲು, ಈ ಆಜ್ಞೆಯು ನಿಮ್ಮ ಮೇಲೆ ಜಾರಿ ಮಾಡಲ್ಪಟ್ಟ ದಿನದಿಂದ, ಸದರಿ ವಿಷಯಗಳನ್ನು ಮೈಸೂರು ಸರ್ಕಾರದ ೧೯೪೭ ನೇ ಪ್ರೆಸ್ ಎಮರ್ಜೆನ್ಸಿ ಅಮೆಂಡ್‌ಮೆಂಟ್ (ಜರೂರು) ಶಾಸನದ ೧೧ ನೇ ನಿಯಮದ (೩೭/೧೯೪೭) ಪ್ರಕಾರ ಬೆಂಗಳೂರಿನಲ್ಲಿರುವ ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿಗಳ ಪರಿಶೀಲನೆಗೆ ಕಳುಹಿಸಿ ಅವರ ಅನುಮತಿ ಪಡೆದ ನಂತರ ಪ್ರಕಟಿಸಬೇಕೆಂದು ಸೂಚಿಸಲಾಗಿದೆ

ವಿ. ವೇದವ್ಯಾಸಾಚಾರ್ಯ, ಮೈಸೂರು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು.

---

§ ಮೈಸೂರಿನ ಪ್ರಜೆಗಳು ಹೂಡಿರುವ ಹೋರಾಟಕ್ಕೆ ಭಾರತದ ಎಲ್ಲ ಪ್ರಜೆಗಳೂ ಬೆಂಬಲ ಕೊಡಬೇಕು ಎಂಬುದಾಗಿ ... ಸಮಾಜವಾದಿ ಪಕ್ಷದ ... ಜೈ ಪ್ರಕಾಶ ನಾರಾಯಣರವರು ... ದ್ದಾರೆ

ಸಾಧ್ವಿ ದಿನ ಪತ್ರಿಕೆಗೆ ಪ್ರಿ ಸೆನ್ಸಾರ್‌ಷಿಪ್ ಆಜ್ಞೆ

ಸಂಸ್ಥಾನದಲ್ಲಿ ನಡೆಯುತ್ತಿರುವ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಪ್ರಕಟಿಸುವ ಎಲ್ಲ ವಿಷಯಗಳನ್ನೂ ಮೊದಲು ಸರ್ಕಾರದ ನ್ಯಾಯಾಂಗ ಶಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸಿ ಅವರ ಅನುಮತಿ ಪಡೆದು ಪ್ರಕಟಿಸಬೇಕೆಂಬ ಆಜ್ಞೆಯನ್ನು ಈ ದಿನ ನಮ್ಮ ದಿನ ಪತ್ರಿಕೆಯ ಮೇಲೆ ಜಾರಿ ಮಾಡಲಾಗಿದೆ ಈ ಆಜ್ಞೆಯು ರದ್ದಾಗುವವರೆಗೆ ನಮ್ಮ ದಿನ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿದ್ದೇವೆ.

ಹೋಟೆಲ್, ಸಿನಿಮಾಗಳಿಗೆ ಪ್ರತಿಬಂಧಕ

ಮೈಸೂರು ೭

ರಾಜಧಾನಿಯಲ್ಲಿ ಈಗ ತಲೆದೋರಿರುವ ಪರಿಸ್ಥಿತಿಯಿಂದ ಎಲ್ಲಾ ಹೋಟೆಲ್ ಮತ್ತು ಸಿನಿಮಾ ಮಂದಿರಗಳನ್ನೂ ಇಂದಿನಿಂದ ಒಂದು ವಾರ ಕಾಲ ತೆರೆಯಬಾರದೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುವುದಾಗಿ ತಿಳಿದುಬಂದಿದೆ.

ಈ ದಿನದಿಂದ ಎಲ್ಲಾ ರೈಲುಗಳು ಬಂದು

ಸ್ವಂ ಸು ಫೋ] [ಬೆಂಗಳೂರು ೭

ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ತಮಗೂ, ರೈಲ್ವೆ ನೌಕರರ ಸಂಘದವರಿಗೂ ನಡೆದ ಸಂಧಾನಗಳು ವಿಫಲವಾದುದರ ಪರಿಣಾಮವಾಗಿ ನಿನ್ನೆ ಮಧ್ಯ ರಾತ್ರಿಯಿಂದ ರೈಲ್ವೆ ಕೆಲಸಗಾರರು ಕೆಲಸಗಳಿಗೆ ಹಾಜರಾಗದೆ ಸತ್ಯಾಗ್ರಹ ಹೂಡಿರುವುದರಿಂದ ಎಲ್ಲ ಸ್ಟೇಟ್ ರೈಲ್ವೆಗಳನ್ನೂ ಇಂದಿನಿಂದ ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆಯೆಂದು ತಿಳಿಸಿದ್ದಾರೆ

ಖಾಸಗೀ ವಾಹನಗಳಿಗೆ ಪೆಟ್ರೋಲ್ ಇಲ್ಲ

ರೈಲು ಸಂಚಾರ ನಿಂತಿರುವುದರಿಂದ ಆಹಾರ ಪದಾರ್ಥಗಳ ಆಮದು ರಫ್ತುಗಳನ್ನು ಸರ್ಕಾರಿ ಲಾರಿಗಳ ಮೂಲಕ ಆಮದು ಮತ್ತು ರಫ್ತು ಮಾಡಿಕೊಳ್ಳಬೇಕಾಗಿರುವುದರಿಂದ ಖಾಸಗೀ ವಾಹನಗಳಿಗೆ ಇನ್ನು ಮುಂದೆ ಪೆಟ್ರೋಲ್ ಒದಗಿಸಲಾಗುವುದಿಲ್ಲವೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಕೆಳ ದರ್ಜೆ ನೌಕರರ ಸಂಬಳ

ಸರ್ಕಾರದ ಪ್ರಕಟಣೆ

ಸ್ವಂ ಸು.ಫೋ] ಬೆಂಗಳೂರು

ಸಂಬಳ ಸಮಿತಿಯವರ ವರದಿಯನ್ನು ಪರಿಶೀಲಿಸಿ ಸರ್ಕಾರದವರು ಎಲ್ಲ ಇಲಾಖೆಯ ಕೆಳ ದರ್ಜೆಯ ನೌಕರರ ಸಂಬಳವನ್ನು ಈ ಕೆಳಗೆ ಕಾಣಿಸಿದಂತೆ ಹೆಚ್ಚಿಸಿದ್ದಾರೆ ಇದು ೧೯೪೭ ನೇ ಜನವರಿ ೧ ನೇ ತಾರೀಖಿನಿಂದ ಜಾರಿಗೆ ಬರುವುದು:—ನಗರದಲ್ಲಿರುವ ಜವಾನರಿಗೆ ೧೮-½-೨೨ ರೂ. ಜಿಲ್ಲೆಗಳಲ್ಲಿರುವವರಿಗೆ ೧೬-½-೨೦, ತಾಲ್ಲೂಕುಗಳವರಿಗೆ ೧೪-½-೧೮ ದಫೇದಾರರುಗಳಿಗೆ ನಗರಗಳಲ್ಲಿ ೨೨-೧-೨೭, ಜಿಲ್ಲೆಗಳಲ್ಲಿ ೨೦-೧-೨೫, ತಾಲ್ಲೂಕುಗಳಲ್ಲಿ ೧೮-೧-೨೩. ಎಲ್ಲ ಕಡೆಗಳಲ್ಲಿಯೂ ಜಮೇದಾರರುಗಳಿಗೆ ೩೦-೧-೩೫, ಅಟೆಂಡರುಗಳು, ಮುನ್ಷಿಗಳ ಮತ್ತು ದಫ್ತರ್ ಬಂದಿಗಳಿಗೆ ೨೫-೧-೩೦ ತಾಲ್ಲೂಕು ಖಜಾನೆಗಳಲ್ಲಿ ಗೊಲ್ಲರುಗಳಿಗೆ ೨೫-೧-೩೦, ಸರಾಫರುಗಳಿಗೆ ೩೦-೧½-೪೫, ಜಿಲ್ಲಾ ಖಜಾನೆಗಳಲ್ಲಿ ಗೊಲ್ಲರುಗಳಿಗೆ ೩೦-೧-೩೫, ಸರಾಫರುಗಳಿಗೆ ೩೫-೨-೪೫, ಬೆಂಗಳೂರಿನ ಸ್ಟೇಟ್ ಹುಜೂರ್ ಖಜಾನೆಯಲ್ಲಿ ಗೊಲ್ಲರುಗಳಿಗೆ ೩೦-೧-೪೦, ಸರಾಫರುಗಳಿಗೆ ೪೦-೨½-೬೫ ಎರಡನೇ ದರ್ಜೆಯ ನೌಕರರಿಗೆ ೪೦-೨-೫೦, ಎಫಿಷಿಯೆನ್ಸಿ ಬಾರ್ ೩-೬೦ ಮೊದಲನೇ ದರ್ಜೆಯವರಿಗೆ ೬೦-೫-೯೦ ಎಫಿಷಿಯೆನ್ಸಿ ಬಾರ್ ೬-೧೨೦.

ದಸ್ತಗಿರಿ

ಮೈಸೂರು ೭

ರಾಜರಾಜೇಶ್ವರೀ ಶಾಲಿನ ಮಾಲೀಕರೂ, ಭಾವಸಾರ ಕ್ಷತ್ರಿಯ ಮಂಡಲಿಯ ಅಧ್ಯಕ್ಷರೂ ಆದ ಶ್ರೀ ಯು. ಎಲ್. ರಾಮಚಂದ್ರರಾಯರು ನಿನ್ನೆ ದಸ್ತಗಿರಿ ಮಾಡಲ್ಪಟ್ಟಿರುವರು.

... ಕಾರಣಗೆ ಸಹಿಸಲಾಗುವುದಿಲ್ಲ ... ಮಂತ್ರಿಮಂಡಲದ ರಚನೆಯು ಬಹಳ ಒಪ್ಪಿತವಾಗಿದೆಯೆಂದು ಹೇಳ...

ಪಂಡಿತ ಹೃದಯನಾಥ ಕುಂಜ್ರು ಅಧ್ಯಕ್ಷತೆಯಲ್ಲಿ ಶಾಸನ ಸಭೆಯ ಚುನಾಯಿತ ಸದಸ್ಯರಿಂದ ಕೂಡಿದ ... ಸಮಿತಿಯನ್ನು ಸದ್ಯದಲ್ಲೇ ... ಗುವುದೆಂದೂ ಸಹ ತಿಳಿದುಬಂ...

ರೈಲ್ವೆ ಮುಷ್ಕರ

... ರೈಲ್ವೆ ಕೆಲಸಗಾರರ ಮುಷ್ಕರ ಕೊನೆಗಾಣಿಸಲು ಸರ್ಕಾರದವರು ನಡೆಸುತ್ತಿದ್ದಾರೆ. ಮೈಸೂರು ...ಲಿನಲ್ಲಿಡಲಾಗಿದ್ದ ಪ್ರಥಮ ಡಿಕ್ಟೇಟರ್ ಶ್ರೀ ಹೆಚ್. ಡಿ ರಾಜ್‌ರವರನ್ನು ... ಬೆಂಗಳೂರಿಗೆ ಸಂಧಾನ ...ಸಲಾಗಿದೆ,

...ದ ಗಣಿಯಲ್ಲಿ ಗುಂಡಿನೇಟು

...ರ ಪೇಟೆಯ ಪೋಲೀಸ್ ಲೈನ್... ಮಾಡಲು ಪ್ರಯತ್ನಿಸಿದ ... ಗುಂಪಿನ ಮೇಲೆ ... ಪೋಲೀಸರು ಗುಂಡು ಹಾರಿಸಿ ಅನೇಕರಿಗೆ ಗಾಯಗಳಾಗಿವೆ ತಿಳಿದುಬಂದಿದೆ. ಸಂದೇಹದ ...ರನ್ನು ದಸ್ತಗಿರಿ ಮಾಡಲಾ... ೭ನೇ ತಾರೀಖು ... ಕಛೇರಿಗೆ ... ...ವನ್ನು ನಾಶಗೊಳಿಸಲು ...

...ನ್ನು ಓದಿಸಿದರೆಂದೂ ಅದರಿಂದ ಸಂತುಷ್ಟಿ ಪಟ್ಟ ಆಪಾದಿಗಳು ವಾಪಸು ತಿರುಗಿದರೆಂದೂ ಹೇಳಲಾಗಿದೆ

ಆರಮನೆ ಸತ್ಯಾಗ್ರಹಕ್ಕಾಗಿ ಹೋಗಿ ಬಂಧಿತರಾಗಿ ಸೆರೆಮನೆಯಲ್ಲಿದ್ದ ಕೋಣನೂರಿನ ಶ್ರೀ ಕೆ ರಾಮಶೆಟ್ಟಿ ಎಂಬುವವರು ಈ ದಿನ ಬೆಳಗ್ಗೆ ವಾಂತಿ ಬೇಧಿಯಿಂದ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಕಡೆಯವರು ಅಧಿಕಾರಿಗಳ ಅನುಮತಿ ಪಡೆದು ಶವವನ್ನು ತಮ್ಮ ಸ್ವಾಧೀನಕ್ಕೆ ಪಡೆದಿರುವರು

ಬೆಂಗಳೂರಿನ ಸಮೀಪದಲ್ಲಿರುವ ಕೃಷ್ಣರಾಜಪುರಂ ಜೈಲಿನಲ್ಲಿಡಲಾಗಿದ್ದ ೪೩ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಾಗಿದೆ

× ತುಮಕೂರು ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಮರುಳಪ್ಪನವರು ಚಿಕ್ಕನಾಯಕನಹಳ್ಳಿಯಲ್ಲಿ ನಡೆದ ಬೋರ್ಡಿನ ಸಭೆಯಲ್ಲಿ ಭಾಗವಹಿಸಲು ಹೋದಾಗ, ಅವರನ್ನು ಜನಗಳು ಸುತ್ತಿಕೊಂಡು ಗಲಬೆ ನಡೆಸಿದರೆಂದೂ, ನಂತರ ಅವರನ್ನು ಸುರಕ್ಷಿತವಾಗಿ ಅಲ್ಲಿಂದ ಕರೆದುಕೊಂಡು ಹೋಗಲಾಯಿತೆಂದೂ ಹೇಳಲಾಗಿದೆ ಅವರು ಕೆಲವು ದಿವಸಗಳ ಹಿಂದೆ ಮೈಸೂರು ಆಕಾಶವಾಣಿಯಲ್ಲಿ ಭಾಷಣ ಮಾಡಿ ಕಾಂಗ್ರೆಸ್ ಸತ್ಯಾಗ್ರಹ ಬಗ್ಗೆ ಕಟುತರ ಟೀಕೆಮಾಡಿದುದೇ ಈ ಪ್ರದರ್ಶನಕ್ಕೆ ಕಾರಣವೆಂದು ಹೇಳಲಾಗಿದೆ

... ತಾಲ್ಲೂಕು ಕಛೇರಿಗೆ ೨೨ ನೇ ... ಬೆಂಕಿಯನ್ನು ಇಡಲಾಯಿತೆಂದೂ, ... ದಾಖಲೆಗಳು ಸುಟ್ಟು ಹೋದವೆಂದೂ ವರದಿಯಾಗಿದೆ.

...ಯ ಸದಸ್ಯರೂ ಆದ ಶ್ರೀ ಕೆ ಸಿ ಸುಬ್ಬಣ್ಣನವರ ಅಕಾಲ ಮರಣದಿಂದ ಸಂಸ್ಥಾನಕ್ಕೆ ಉಂಟಾದ ಅಪಾರ ನಷ್ಟವನ್ನೂ, ಅನುಕಂಪವನ್ನೂ ವ್ಯಕ್ತಪಡಿಸಲು ನಿನ್ನೆ ಸಂಜೆ ಕಬ್ಬನ್ ಪೇಟೆಯ ... ಹಾಸ್ಟಲಿನಲ್ಲಿ, ರಾಜಸೇವಾ ಪ್ರಸಕ್ತ ಶ್ರೀ ... ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಂತಾಪ ಸೂಚಕ ಸಭೆಯೊಂದು ನಡೆಯಿತು.

ಪ್ರೀ ಸೆನ್ಸಾರ್‌ಷಿಪ್ ರದ್ದಾಯಿತು

ಸ್ವಂ ಸು.ಫೋ] ಬೆಂಗಳೂರು ೫

ಸತ್ಯಾಗ್ರಹದ ಸಂಬಂಧವಾಗಿ ... ಪತ್ರಿಕೆಗಳು ಪ್ರಕಟಿಸುವ ಮುನ್ನ ನ್ಯಾಯಾಂಗ ಕಾರ್ಯದರ್ಶಿಗಳಿಗೆ ಸುದ್ದಿಗಳನ್ನು ಸೆನ್ಸಾರಿಗಾಗಿ ಕಳುಹಿಸಬೇಕೆಂದು ಸಂಸ್ಥಾನದ ಕೆಲವು ಪತ್ರಿಕೆಗಳ ಮೇಲೆ ಹಾಕಿದ್ದ ಪ್ರೀ ಸೆನ್ಸಾರ್‌ಷಿಪ್ ಆಜ್ಞೆಯನ್ನು ಸರ್ಕಾರದವರು ನಿನ್ನೆ ವಾಪಸು ತೆಗೆದುಕೊಂಡಿರುವರು.

ಶಿವಮೊಗ್ಗಾ ಜಿಲ್ಲೆ ತೀರ್ಥಹಳ್ಳಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ... ಕಛೇರಿ ಮೇಲೆ ಭಾರತದ ಡೊಮಿನಿಯನ್ ಧ್ವಜವನ್ನು ಹಾರಿಸಿದರೆಂಬ ಆಪಾದನೆ ಮೇಲೆ ಶ್ರೀ ಡಿ. ಮಾಸಪ್ಪ ಮತ್ತು ಇತರ ಮೂವರಿಗೆ ಶಿವಮೊಗ್ಗಾ ಮ್ಯಾಜಿಸ್ಟ್ರೇಟರು ... ಗಳ ಸಾದಾ ಶಿಕ್ಷೆಯನ್ನು ವಿಧಿಸಿದ್ದಾರೆ

ಶಿವಮೊಗ್ಗಾ ಸಬ್ ಜೈಲಿನಿಂದ ೬೦ ರಾಜಕೀಯ ಬಂಧಿಗಳನ್ನು ಸಾಗರಕ್ಕೆ ವರ್ಗಾಯಿಸಲಾಗಿದೆ

ಕೋಮುವಾರು ಸಮಸ್ಯೆ ಬಗೆಹರಿಸಲು ಬ್ರಿ॥ ಸಹಾಯ

ಭಾರತದ ಕೋಮುವಾರು ಸಮಸ್ಯೆ ಬಗೆ ಹರಿಸಲು ಬ್ರಿಟನ್ ಮತ್ತು ಇತರ ಸರ್ಕಾರಗಳ ಬೆಂಬಲವನ್ನು ಪಾಕೀಸ್ತಾನ ಬೇಡಿದೆ

ಆಂಗ್ಲ ತರುಣಿಯೊಡನೆ ಭಾವಲ್‌ಪುರ ರಾಜಕುಮಾರನ ವಿವಾಹ

ಭಾವಲ್‌ಪುರ ನವಾಬರ ೨೩ ವರ್ಷದ ರಾಜಕುಮಾರ ಮೇಜರ್ ಅಬ್ಬಾಸಿ ಎಂಬುವರು ಲಂಡನ್ನಿನ ರೈಲ್ವೆ ಕೆಲಸಗಾರನ ಪುತ್ರಿ ೧೭ ವರ್ಷದ ಕ್ಯಾಥರೀನ್ ಎಂಬಾಕೆಯನ್ನು ಲಂಡನ್ನಿನಲ್ಲಿ ಮದುವೆ ಆದರು.

ದೆಹಲಿಯ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ಹೈದರಾಬಾದ್ ವರದಿಗಾರರಾದ ಶ್ರೀ ಎಲ್ ಡಿ ನಟರಾಜನ್‌ರವರನ್ನು ನಿಜಾಂ ಸರ್ಕಾರದವರು ಗಡೀಪಾರು ಮಾಡಿದ್ದಾರೆ

ನಾಗಪುರದಲ್ಲಿ ನಾಳೆ ಸೇರಲಿರುವ ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯನಿರ್ವಾಹಕ ಸಮಿತಿಯಲ್ಲಿ ಮೈಸೂರು ರೈಲ್ವೆ ಕೆಲಸಗಾರರ ಮುಷ್ಕರದ ವಿಚಾರವನ್ನು ಪರಿಶೀಲಿಸಲಾಗುವುದೆಂದು ಶ್ರೀ ಗುರುಸ್ವಾಮಿಯವರು ಬೆಂಗಳೂರಿಗೆ ಮೊನ್ನೆ ಆಗಮಿಸಿದ್ದಾಗ ತಿಳಿಸಿದ್ದಾರೆ.

ಪಂಜಾಬ್ ಮತ್ತು ಇತರ ಪಾಕೀಸ್ತಾನ ಪ್ರದೇಶಗಳಿಂದ ಹಿಂದೂ ನಿರಾಶ್ರಿತರನ್ನು ಸಾಗಿಸಲು ೧೦ ಬ್ರಿಟಿಷ್ ವಿಮಾನಗಳ ಸಹಾಯವನ್ನು ಭಾರತ ಸರ್ಕಾರ ಕೋರಿದೆ

[illegible] ದಿಯಾಗಿದೆ.

[illegible]

ಮಿರುವ ಶಿಫಾರಸು ಮಾಡುತ್ತವೇ ಶಿಷ್ಟ [illegible] ಈಗಿನ ಉದ್ಯಮವೆಂದು ದಿವಾನರು ಹೇಳಿದ್ದಾರೆ. ಆದರೆ ಪ್ರಜೆಗಳಿಗೆ ಜವಾಬ್ದಾರಿ [illegible] ರೂಪಿಸಿಕೊಳ್ಳುವುದು ಪ್ರಜೆಗಳ ಪ್ರತಿನಿಧಿಗಳ ಕರ್ತವ್ಯವೇ ವಿನಹ ದಿವಾನರದಲ್ಲ. ಅದಕ್ಕೆ ಒಂದು ರಾಜ್ಯಾಂಗ ಸಮಿತಿ ರಚಿಸಿಕೊಳ್ಳಬೇಕು. ಆದುದರಿಂದ ದಿವಾನರ [illegible] ಪ್ರಜಾ ಸತ್ತಾತ್ಮಕ ಸರ್ಕಾರದ ಘೋಷಣೆಯ ಶಿಫಾರಸು [illegible] ಅಂತಹ ಘೋಷಣೆಯನ್ನು ಶ್ರೀಮನ್ಮಹಾರಾಜರವರು ಹೊರಡಿಸುವುದೇ ಈಗ ಬೇಕಾದುದು. ಅದೇ ಘೋಷಣೆಯಲ್ಲಿ ಶ್ರೀಮನ್ಮಹಾರಾಜರವರು [illegible] ಮತ್ತು ತಮ್ಮ ರಾಜಮನೆತನಕ್ಕೆ ಸಂಬಂಧಿಸಿದ ವಿಷಯಗಳನ್ನು [illegible] ರಾಜ್ಯಾಂಗ ಸಮಿತಿಗಿಲ್ಲವೆಂದೂ [illegible] ಒಂದು ನಿರ್ದಿಷ್ಟ ಕಾಲದಲ್ಲಿ ರಾಜ್ಯಾಂಗವನ್ನು ರೂಪುಗೊಳಿಸಬೇಕೆಂದೂ ಆ ಘೋಷಣೆಯಲ್ಲಿ ಹೇಳುವುದು ಉಚಿತವಾಗಿದೆ.

ಆಂಗ್ಲ [illegible] ಯದಿಸ್ಯದು [illegible]

[illegible]

ವ್ಯವಹಾರ.

[illegible]

ವೆಂದು ಹೇಳಿ ಅಧ್ಯಕ್ಷರು ಅದನ್ನು [illegible] ಹಾಕಿದರು. ಇದನ್ನು ಪ್ರತಿಭಟಿಸಲು ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾ ತ್ಯಾಗ ಮಾಡಿದರು. ಕೋರಂ ಇಲ್ಲದಿದ್ದುದರಿಂದ ಸಭೆಯನ್ನು [illegible] ಮುಂದುವರಿಸಲಾಯಿತು.

ಯುಪಾಲಿಸುವುದರಿಂದ ಪ್ರಭು ಮತ್ತು ಪ್ರಜೆಗಳ [illegible] ಮತ್ತಷ್ಟು ಹೆಚ್ಚುವದರಲ್ಲಿ ಸಂದೇಹವಿಲ್ಲ

ಗರ್ಭ ರಕ್ಷಿಣಿ

ಅನೇಕ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು [illegible] ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ [illegible] ವಾಗುವದು.

ಆಯುರ್ವೇದ ವೈದ್ಯ [illegible] ಪಂಡಿತ [illegible]

[illegible]

[illegible]

[illegible]

[illegible]

ರಾವ್ ರವರುಗಳನ್ನು ಬಂಧನದಲ್ಲಿಡಲಾಗಿದೆ

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

[illegible]

DIRECTORY

Bu[illegible] your bu[illegible]ess by advertising in INDIAN NATIONAL DIRECTORY, (Ti[illegible] All India Post[illegible] Telephone [illegible] For [illegible] B[illegible]

[illegible]

[illegible] printed and published [illegible] A. S. Nagaraja[illegible] at the Sadhvi [illegible] D. Subbaiah Road Mysore

WOODLANDS

Morning Shows for 4 d[illegible]

from 5-9-47

Blue Dahlia

action Thriller

—: Starring :—

Alen Ladd, Vronica L[illegible]

and

William Bendix

ಮೈಸೂರು ಶ್ರೀಮನ್ಮಹಾರಾ[illegible] ಮುಮ್ಮಡಿ ಕೃಷ್ಣರಾಜ [illegible] ಖಾಸ್ ವೈದ್ಯ ಆಂಬ[illegible] ನರಸಿಂಹ ಪಂಡಿತರ ಮನೆತ[illegible]

ಸಂತಾನ ಸಿಂಧು[illegible]

ಬಹುಷ್ಟೆ ಸಂಬಂಧದ ಹೊಟ್ಟೆ [illegible] ದೆಯಿಂದ ಮಕ್ಕಳಾಗದೇ ಇರು[illegible] ಗ್ಯಾರಂಟೀ ಔಷಧವೆಂದು [illegible] ವರ್ಷಗಳಿಂದ ಪ್ರಖ್ಯಾತವಾದ [illegible] ಮುಪತ್ತನೇನು? ಎಲ್ಲೆಲ್ಲಿ [illegible] ಬಂದಿದೆ? ಎಂಥೆಂಥಾ ವೈ[illegible] ಸೆ ಪಡೆದಿದೆ? ಇತ್ಯಾದಿ [illegible] ಗಳನ್ನು ಪುಸ್ತಕದ ಪ್ರತಿಗಳ [illegible] ತಾವು ನೋಡಲೇ ಬೇಕಾದ್ದು. ಬೆಲೆ [illegible]

ಎ. ರಾಮಸ್ವಾಮಿ [illegible]

[illegible]

[illegible] ಮೈಸೂರು.

[illegible] printed and publ[illegible] A. S. Nagaraja[illegible] at the Sadh[illegible] D. Subbaiah Road Mysore

ಫೋ॥ ನಂ. ೬೦೩ ॥ ವಂದೇ ಮಾತರಂ ॥ ಬಿಡಿ ಪ್ರತಿ ೩ ಕಾಸು

ಸಂಪುಟ ೬] ಸೋಮವಾರ ೨೯-೯-೪೭ [ಸಂಚಿಕೆ ೪೦

ಸರ್ಕಾರಿ ಭವನಗಳ ಮೇಲೆ ಭಾರತ ರಾಷ್ಟ್ರಧ್ವಜ

...ಬುಧವಾರ ರಾಜಕೀಯ ...ದಿಗಳ ಬಿಡುಗಡೆಯೇ ?

...ು ಫೋ॥] ಬೆಂಗಳೂರು ೨೮
...ಸ್ಥಾನದ ಎಲ್ಲ ಪ್ರಮುಖ ರಾಜಕೀ...ಕ್ಷಗಳೂ ಕಾಂಗ್ರೆಸ್ ನಾಯಕರ ಬ...ಗೆ ಒತ್ತಾಯಪಡಿಸಿವೆ. ಬರುವ ...ವಾರ(ಖು ಬುಧವಾರ ಸಂಜೆ ಕಾಂ...ಕಾರ್ಯಕಾರಿ ಸದಸ್ಯರೆಲ್ಲರನ್ನೂ ಖು...ಮಾಡಲಾಗಬಹುದೆಂದು ಖಚಿತವಾ...ನು ಬಂದಿದೆ

ಡಿಫೆನ್ಸ್ ಕೌನ್ಸಿಲ್

...ಸನ್ನಿನಲ್ಲಿರುವ ಕಾಂಗ್ರೆಸ್ಸಿನವರ ...ಸರ್ಕಾರದವರು ಕೋರ್ಟಿನಲ್ಲಿ ವ್ಯ... ಹೂಡಿದರೆ ಅವರ ಪರವಾಗಿ ವಾ...ಲಾ ಅಸೋಸಿಯೇಷನ್ನಿನವರು ಡಿಫೆನ್ಸ್ ಕೌನ್ಸಿಲ್ಲನ್ನು ರಚಿಸಿಕೊಂ...

...ಯಲ್ಲಿ ಜವಾಬ್ದಾರೀ ಸರ್ಕಾರ

...ಸಂಸ್ಥಾನದ ಶ್ರೀಮನ್ಮಹಾರಾಜ ...ಅಲ್ಲಿನ ಕಾಂಗ್ರೆಸ್ಸಿಗೂ ನಡೆದ ಸಂ...ಧಾನದ ಫಲವಾಗಿ ತಮ್ಮ ಸಂಸ್ಥಾನ ...ಜವಾಬ್ದಾರೀ ಸರ್ಕಾರವನ್ನು ಸ್ಥಾಪಿ...ಸಲು ಅರಸರು ನಿರ್ಧರಿಸಿರುವ ...ವರದಿಯಾಗಿದೆ. ಸಂಧಾನದ ಫಲ...ವಾಗಿ ಶಾಸನ ಸಭೆಯಿಂದ ಮೂವ...ರನ್ನು ಆರಿಸಲಾಗುವುದು ; ದಿವಾ...ನರು ರಾಜರಿಂದಲೇ ನೇಮಿಸಲ್ಪಟ್ಟ...ವರು. ಶಾಸನ ಸಭೆಗೆ ಜವಾಬ್ದಾರರಾ...ರಕ್ಷಣೆ, ವಿದೇಶಾಂಗ ಮತ್ತು ...ನ್ಯಾಯಾಸ್ಥಾನ ಇವು ಮಹಾರಾಜ...ರಲ್ಲಿ ಒಳಪಟ್ಟಿರುವುವು. ಇತರ ...ಖಾತೆಗಳನ್ನೂ ಮಂತ್ರಿಮಂಡಲದ ...ಹೊಣೆಗೆ ವಹಿಸಲಾಗುವುದು. ಈ ...ಮಂತ್ರಿಮಂಡಲದ ರಚನೆಯು ಬ...ಒಪ್ಪಂದವಾಗಿದೆಯೆಂದು ಹೇಳ... ಹುಡಿಕ ಹೃದಯನಾಥ ಕುಂ...ಅಧ್ಯಕ್ಷತೆಯಲ್ಲಿ ಶಾಸನ ಸಭೆಯ ...ನಾಯಿಕ ಸದಸ್ಯರಿಂದ ಕೂಡಿ...ದ ಸಮಿತಿಯನ್ನು ಸದ್ಯದಲ್ಲೇ ...ಗುವುದೆಂದೂ ಸಹ ತಿಳಿದುಬಂ...

...ರೈಲ್ವೆ ಮುಷ್ಕರ

...ದ ರೈಲ್ವೆ ಕೆಲಸಗಾರರ ಮುಷ್ಕ...ರ ನಿಗಾ ನಡೆಸಲು ಸರ್ಕಾರದವರು ...ನಡೆಸುತ್ತಿದ್ದಾರೆ. ಮೈಸೂರು ...ನಲ್ಲಿರಲಾಗಿದ್ದ ಪ್ರಥಮ ಡಿಕ್ಟೇ...ಟರ್ ಹೆಚ್. ಡಿ. ರಾಜಾರವರನ್ನು ...ಷ್ಟು ಬೆಂಗಳೂರಿಗೆ ಸಂಧಾನ...ಕ್ಕೆ ಕರೆಯಲಾಗಿದೆ.

...ಷ್ಟದ ಗಣಿಯಲ್ಲಿ ...ಗುಂಡಿನೇಟು

...ರ್ಜ ಪೇಟೆಯ ಪೊಲೀಸ್ ಠಾಣೆ...ಯ ಮೇಲೆ ಧಾಳಿ ಮಾಡಲು ಪ್ರಯತ್ನಿಸಿದ ...ರ ಗುಂಪಿನ ಮೇಲೆ ...ದ ಪೊಲೀಸರು ಗುಂಡು ಹಾರಿಸಿ... ಅನೇಕರಿಗೆ ಗಾಯಗಳಾಗಿವೆ ...ಗೆ ಸಂಬಂಧಿಸಿದ ಸಂದೇಹದ ...ಮೇಲೆ ಅನೇಕರನ್ನು ದಸ್ತಗಿರಿ ಮಾಡಲಾ...ಗಿದೆ. ೨೮ ನೇ ತಾರೀಖು ಅಲ್ಲಿನ ...ಇ ಪಂಚಾಯತಿ ಕಛೇರಿಗೆ ಬೆಂ...ಕಿ ಹಚ್ಚಿ ದಫ್ತರವನ್ನು ನಾಶಗೊಳಿಸಲು...

ಸತ್ಯಾಗ್ರಹ ಸುದ್ದಿಗಳು

ಶ್ರೀಯುತ ಸುಬ್ಬಮ್ಮ ಜೋಯಿಸರವರು ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರ ನಿಷೇಧ ಆಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದರೆಂಬ ಅಪಾದನೆ ಮೇಲೆ ಅವರಿಗೆ ೧೫ ದಿವಸಗಳ ಸಾದಾ ಸಜಯನ್ನು ವಿಧಿಸಲಾಗಿದೆ.

ಪಿರಿಯಾಪಟ್ಟಣದ ೮ ಸತ್ಯಾಗ್ರಹಿಗಳು ಜಿಲ್ಲಾ ಮ್ಯಾಜಿಸ್ಟ್ರೇಟರ ನಿಷೇಧ ಆಜ್ಞೆಯನ್ನು ಉಲ್ಲಂಘಿಸಿದರೆಂದು ಅವರುಗಳಿಗೆ ೩ ತಿಂಗಳ ಶಿಕ್ಷೆಯನ್ನು ವಿಧಿಸಲಾಗಿದೆ.

ಕೊಡಗಿನಿಂದ ಮೈಸೂರು ಅರಮನೆ ಮುಂದೆ ಸತ್ಯಾಗ್ರಹ ಹೂಡಲು ಪಿರಿಯಾಪಟ್ಟಣಕ್ಕೆ ೩ ಸತ್ಯಾಗ್ರಹಿಗಳು ಮೊನ್ನೆ ದಿವಸ ಬಂದಿದ್ದರೆಂದೂ, ಮೈಸೂರು ಜಿಲ್ಲಾಧಿಕಾರಿಗಳು ಆ ಸ್ಥಳಕ್ಕೆ ಭೇಟಿಕೊಟ್ಟು ಅವರುಗಳಿಗೆ ಶ್ರೀಮನ್ಮಹಾರಾಜರವರ ಘೋಷಣೆಯನ್ನು ಓದಿಸಿದರೆಂದೂ ಅದರಿಂದ ಸಂತುಷ್ಟರಾಗಿ ಅವರುಗಳು ವಾಪಸು ತಿರುಗಿದರೆಂದೂ ಹೇಳಲಾಗಿದೆ.

ಅರಮನೆ ಸತ್ಯಾಗ್ರಹಕ್ಕಾಗಿ ಹೊರಟು ಬಂಧಿತರಾಗಿ ಸೆರೆಮನೆಯಲ್ಲಿದ್ದ ಕೋಣನೂರಿನ ಶ್ರೀ ಕೆ ರಾಮಶೆಟ್ಟಿ ಎಂಬುವವರು ಈ ದಿನ ಬೆಳಿಗ್ಗೆ ಶಾಂತಿ ಬೀದಿಯಿಂದ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಕಡೆಯವರು ಅಧಿಕಾರಿಗಳ ಅನುಮತಿ ಪಡೆದು ಶವವನ್ನು ತಮ್ಮ ಸ್ವಾಧೀನಕ್ಕೆ ಪಡೆದಿದ್ದಾರೆ.

ಬೆಂಗಳೂರಿನ ಸವಿಾಪದಲ್ಲಿರುವ ಕೃಷ್ಣರಾಜಪುರಂ ಜೈಲಿನಲ್ಲಿಡಲಾಗಿದ್ದ ೪೩ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಾಗಿದೆ

× ಕೋಲಾರ ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಮರುಳಪ್ಪನವರು ಚಿಕ್ಕಹಾಗಳೂರಿನಲ್ಲಿ ನಡೆದ ಬೋರ್ಡಿನ ಸಭೆಯಲ್ಲಿ ಭಾಗವಹಿಸಲು ಹೋದಾಗ, ಅವರನ್ನು ಜನಗಳು ಸುತ್ತಿಕೊಂಡು ಗಲಭೆ ನಡೆಸಿದರೆಂದೂ, ನಂತರ ಅವರನ್ನು ಸುರಕ್ಷಿತವಾಗಿ ಅಲ್ಲಿಂದ ಕರೆದುಕೊಂಡು ಹೋಗಲಾಯಿತೆಂದೂ ಹೇಳಲಾಗಿದೆ. ಅನೇಕ ಕೆಲವು ದಿವಸಗಳ ಹಿಂದೆ ಮೈಸೂರು ಆಕಾಶವಾಣಿಯಲ್ಲಿ ಭಾಷಣ ಮಾಡಿ ಕಾಂಗ್ರೆಸ್ ಸತ್ಯಾಗ್ರಹದ ಬಗ್ಗೆ ಕಟುವಾಗಿ ಟೀಕೆಮಾಡಿದುದೇ ಈ ಪ್ರದರ್ಶನಕ್ಕೆ ಕಾರಣವೆಂದು ಹೇಳಲಾಗಿದೆ

× ... ಕಛೇರಿಗೆ ... ನೇ ... ಇಡಲಾಯಿತೆಂದೂ, ... ಗಳು ಹುಟ್ಟು ಹೋದವೆಂದೂ ವರದಿಯಾಗಿದೆ

ಸರ್ಕಾರಿ ಭವನಗಳ ಮೇಲೆ ಡೊಮಿನಿಯನ್ ಧ್ವಜ

ಸ್ವಂ. ಸು ಫೋ॥] ಬೆಂಗಳೂರು ೨೮

ಅಕ್ಟೋಬರ್ ೨ ನೇ ತಾ॥ ಗುರುವಾರ ಮಹಾತ್ಮ ಗಾಂಧೀಜಿಯವರ ಜನ್ಮದಿನದ ಪ್ರಯುಕ್ತ ಸಂಸ್ಥಾನದ ಎಲ್ಲ ಸರ್ಕಾರೀ ಭವನಗಳ ಮೇಲೆಯೂ ಮೈಸೂರು ಧ್ವಜದ ಜೊತೆಗೆ ಭಾರತ ಡೊಮಿನಿಯನ್ ಧ್ವಜವನ್ನೂ ಹಾರಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಅಂದು ಎಲ್ಲ ಸರ್ಕಾರಿ ಶಾಲೆ ಮತ್ತು ಸಂಸ್ಥೆಗಳಿಗೂ ರಜಾ ಕೊಡಲಾಗಿದೆ

ಸಂತಾಪ ಸೂಚಕ ಸಭೆ

ಮೈಸೂರು ೨೮

ಮೈಸೂರು ಜಿಲ್ಲಾಬೋರ್ಡಿನ ಮಾಜಿ ಅಧ್ಯಕ್ಷರೂ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರೂ ಆದ ಶ್ರೀ ಕೆ ಸಿ ಸುಬ್ಬಣ್ಣನವರ ಅಕಾಲ ಮರಣದಿಂದ ಸಂಸ್ಥಾನಕ್ಕೆ ಉಂಟಾದ ಅಪಾರ ನಷ್ಟವನ್ನೂ, ಅನುಕಂಪವನ್ನೂ ವ್ಯಕ್ತಪಡಿಸಲು ನಿನ್ನೆ ಸಂಜೆ ಟೌನ್ ಹಾಲಿನಲ್ಲಿ, ರಾಜಸೇವಾ ಪ್ರಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಂತಾಪ ಸೂಚಕ ಸಭೆಯೊಂದು ನಡೆಯಿತು.

ಶ್ರೀ ಸೆನ್ಸಾರ್‌ಷಿಪ್ ರದ್ದಾಯಿತು

ಸ್ವಂ ಸು. ಫೋ॥] ಬೆಂಗಳೂರು ೨೮

ಸತ್ಯಾಗ್ರಹದ ಸಂಬಂಧವಾದ ಸುದ್ದಿಗಳನ್ನು ಪ್ರಕಟಿಸುವ ಮುನ್ನ ಜಿಲ್ಲಾಧಿಕಾರಿಗಳಿಗೆ ಸುದ್ದಿಗಳನ್ನು ಸೆನ್ಸಾರಿಗಾಗಿ ಕಳುಹಿಸಬೇಕೆಂದು ಸಂಸ್ಥಾನದ ಹಲವು ಪತ್ರಿಕೆಗಳ ಮೇಲೆ ಹಾಕಿದ್ದ ಶ್ರೀ ಸೆನ್ಸಾರ್‌ಷಿಪ್ ಆಜ್ಞೆಯನ್ನು ಸರ್ಕಾರದವರು ನಿನ್ನೆ ವಾಪಸು ತೆಗೆದುಕೊಂಡಿರುವರು

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ಟಾಲ್ಲೂಕು ಕಛೇರಿ ಮೇಲೆ ಭಾರತದ ಡೊಮಿನಿಯನ್ ಧ್ವಜವನ್ನು ಹಾರಿಸಿದರೆಂಬ ಅಪಾದನೆ ಮೇಲೆ ಶ್ರೀ ಡಿ. ಮಾನಪ್ಪ ಮತ್ತು ಇತರ ೫ ಜನರಿಗೆ ಶಿವಮೊಗ್ಗ ಮ್ಯಾಜಿಸ್ಟ್ರೇಟರು ೬ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದ್ದಾರೆ

ಶಿವಮೊಗ್ಗ ಸಬ್ ಜೈಲಿನಲ್ಲಿದ್ದ ೩೦ ರಾಜಕೀಯ ಬಂಧಿಗಳನ್ನು ಸಾಗರಕ್ಕೆ ವರ್ಗಾಯಿಸಲಾಗಿದೆ.

ಗುರುಸ್ವಾಮಿಯವರಿಗೆ ದಿವಾನರ ಭೇಟಿ ಇಲ್ಲ

ಸ್ವಂ. ಸು ಫೋ॥] ಬೆಂಗಳೂರು ೨೮

ರೈಲ್ವೆ ಕೆಲಸಗಾರರ ಮುಷ್ಕರದ ಬಗ್ಗೆ ಸಂಧಾನ ನಡೆಸಿ ಒಪ್ಪಂದವನ್ನುಂಟುಮಾಡುವ ಸಲುವಾಗಿ ಆಗಮಿಸಿದ್ದ ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರು ದಿವಾನರ ಭೇಟಿ ಮಾಡಲಿಲ್ಲವೆಂದು ತಿಳಿದುಬಂದಿದೆ.

ಶ್ಯಾನುಭೋಗ, ಪಟೇಲರಿಗೆ ಹೆಚ್ಚಿನ ಪೋಟಿಗೆ

ಸದ್ಯದ ಜೀವನದ ವೆಚ್ಚವನ್ನು ಪರಿಶೀಲಿಸಿ ಸರ್ಕಾರದವರು ಶ್ಯಾನುಭೋಗರ ಮತ್ತು ಪಟೇಲರ ಪೋಟಿಗೆಯಲ್ಲಿ ಈಗ ಕೊಡುತ್ತಿರುವುದರ ಜೊತೆಗೆ ವಾರ್ಷಿಕ ೨೫ ಲಕ್ಷವನ್ನು ಹೆಚ್ಚಿಸಿ ಆಜ್ಞೆ ಮಾಡಿದ್ದಾರೆ. ಈ ಹೆಚ್ಚಿನ ಪೋಟಿಗೆಯನ್ನು ೪೬-೪೭ನೇ ಸಾಲಿನಿಂದ ಕೊಡತಕ್ಕದ್ದೆಂದು ಸೂಚಿಸಲಾಗಿದೆ

ಶಿವಮೊಗ್ಗೆಯಲ್ಲಿ ಸಕ್ಕರೆ ಕಾರ್ಖಾನೆ

ಶಿವಮೊಗ್ಗ ಅಥವಾ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ಇತ್ತಿದ್ದಾರೆ. ಅದಕ್ಕಾಗಿ ೫೦ ಲಕ್ಷ ರೂ ಬಂಡವಾಳದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಯೊಂದನ್ನು ಸ್ಥಾಪಿಸಲಾಗುವುದು.

ಆಸ್ಟ್ರೇಲಿಯಾಕ್ಕೆ ರಾಜೇಂದ್ರ ಬಾಬು

ಭಾರತಕ್ಕೆ ಹೆಚ್ಚಿನ ಗೋಧಿ ಪಡೆಯಲು, ಬಾಬು ರಾಜೇಂದ್ರ ಪ್ರಸಾದರವರ ನಾಯಕತ್ವದಲ್ಲಿ ಒಂದು ನಿಯೋಗವು ಅಕ್ಟೋಬರ್ ೨ ನೇ ವಾರದಲ್ಲಿ ಆಸ್ಟ್ರೇಲಿಯಾಕ್ಕೆ ಭೇಟಿ ಕೊಡಲಿರುವುದೆಂದು ಗೊತ್ತಾಗಿದೆ.

ಕೋಮುವಾರು ಸಮಸ್ಯೆ ಬಗೆಹರಿಸಲು ಬ್ರಿ॥ ಸಹಾಯ

ಭಾರತದ ಕೋಮುವಾರು ಸಮಸ್ಯೆ ಬಗೆಹರಿಸಲು ಬ್ರಿಟನ್ ಮತ್ತು ಇತರ ಸರ್ಕಾರಗಳ ಬೆಂಬಲವನ್ನು ಪಾಕೀಸ್ತಾನ ಬೇಡಿದೆ

ಆಂಗ್ಲ ತರುಣಿಯೊಡನೆ ಭಾವಲ್‌ಪುರ ರಾಜಕುಮಾರನ ವಿವಾಹ

ಭಾವಲ್‌ಪುರ ನವಾಬರ ೩೩ ವರ್ಷದ ರಾಜಕುಮಾರ ಮೇಜರ್ ಅಬ್ಬಾಸಿ ಎಂಬುವನು ಲಂಡನ್ನಿನ ರೈಲ್ವೆ ಕೆಲಸಗಾರನ ಪುತ್ರಿ ೧೬ ವರ್ಷದ ಕ್ಯಾಥರೀನ್ ಎಂಬಾಕೆಯನ್ನು ಲಂಡನ್ನಿನಲ್ಲಿ ಮದುವೆ ಆದರು.

ದೆಹಲಿಯ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ಹೈದರಾಬಾದ್ ಸುದ್ದಿಗಾರರಾದ ಶ್ರೀ ಎಲ್ ವಿ. ನಟರಾಜರವರನ್ನು ನೈಜಾಂ ಸರ್ಕಾರದವರು ಗಡೀಪಾರು ಮಾಡಿದ್ದಾರೆ

ನಾಗಪುರದಲ್ಲಿ ನಾಳೆ ಸೇರಲಿರುವ ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯನಿರ್ವಾಹಕ ಸಮಿತಿಯಲ್ಲಿ ಮೈಸೂರು ರೈಲ್ವೆ ಕೆಲಸಗಾರರ ಮುಷ್ಕರದ ವಿಚಾರವನ್ನು ಪರಿಶೀಲಿಸಲಾಗುವುದೆಂದು ಶ್ರೀ ಗುರುಸ್ವಾಮಿಯವರು ಬೆಂಗಳೂರಿಗೆ ಮೊನ್ನೆ ಆಗಮಿಸಿದ್ದಾಗ ತಿಳಿಸಿದ್ದಾರೆ.

ಪಂಜಾಬ್ ಮತ್ತು ಇತರ ಪಾಕೀಸ್ತಾನ ಪ್ರದೇಶಗಳಿಂದ ಹಿಂದೂ ನಿರಾಶ್ರಿತರನ್ನು ಸಾಗಿಸಲು ೪೨ ಬ್ರಿಟಿಷ್ ವಿಮಾನಗಳ ಸಹಾಯವನ್ನು ಭಾರತ ಸರ್ಕಾರ ಕೋರಿದೆ

ನ್ಯಾಯಾಂಗ ಕಾರ್ಯದರ್ಶಿಗಳ ಪತ್ರಿಕಾ ಸಮ್ಮೇಳನ

ಬೆಂಗಳೂರು ೨೯

ಸಂಸ್ಥಾನದ ಬಹುಪಾಲು ಪತ್ರಿಕೆಗಳ ಮೇಲೆ ಸರ್ಕಾರದವರು ಹಾಕಿದ್ದ ಪ್ರೀ ಸೆನ್ಸಾರ್‍ಷಿಪ್ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಪತ್ರಿಕಾ ಸಂಪಾದಕರುಗಳು ಮಾಡಿದ್ದ ಒತ್ತಾಯವನ್ನು ಪರಿಶೀಲಿಸಲು ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿಗಳಾದ ಶ್ರೀ ಎಸ್. ಕನಕರತ್ನರಾಜುರವರು ಮೊನ್ನೆ ಪತ್ರಿಕಾ ಸಂಪಾದಕರ ಸಮ್ಮೇಳನವನ್ನು ಕರೆದಿದ್ದರು. ನಿರಾಧಾರವಾದ ಸುದ್ದಿಗಳ ಮೇಲೆ ಕಾರ್ಯಕ್ರಮ ಕೈಗೊಳ್ಳಲು ಪತ್ರಿಕಾ ಶಾಸನದ ಪ್ರಕಾರವೇ ಅವಕಾಶವಿರುವುದರಿಂದ ಪ್ರೀ ಸೆನ್ಸಾರ್‍ಶಿಪ್ಪಿನ ಅವಶ್ಯಕತೆ ಇಲ್ಲವೆಂದೂ ಪತ್ರಿಕೋದ್ಯೋಗಿಗಳ ಮತ್ತು ಸರ್ಕಾರದವರ ಮಧುರ ಬಾಂಧವ್ಯವು ಬೆಳೆಯಬೇಕಾದರೆ ಮೊದಲಿಂದ ಪ್ರೀ ಸೆನ್ಸಾರ್ ಷಿಪ್ ಆಜ್ಞೆಯನ್ನು ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂದೂ, ಪ್ರಕಟಣೆಯ ಬಗ್ಗೆ ಸೂಕ್ತ ವಿಚಾರ ನಡೆಸಲು ಸಂಪಾದಕರುಗಳ ಸಮಿತಿಯೊಂದನ್ನು ರಚಿಸಿ ಅದು ಸರ್ಕಾರಕ್ಕೂ ಮತ್ತು ಸಂಪಾದಕರುಗಳಿಗೂ ಮಧ್ಯವರ್ತಿಯಾಗಿ ವರ್ತಿಸುವಂತೆ ಮಾಡಬಹುದಾಗಿ[illegible] ಶ್ರೀ[illegible] ಮತ್ತು ರಾಜನ ನಿಕಟವರ್ತಿಗೂ ಅಗೌರವ ಉಂಟುಮಾಡುವಂಥ (ಅಂಥ ವಿಷಯಗಳನ್ನು ಪ್ರಕಟಿಸುವುದಿಲ್ಲವೆಂದು) ಟೀಕೆಗಳನ್ನು, ಕೋಮುವಾರು ದ್ವೇಷವನ್ನು ಹುಟ್ಟಿಸುವಂತಹ ವಿಷಯಗಳನ್ನು ಪ್ರಕಟಿಸುವುದಿಲ್ಲವೆಂದೂ ಮತ್ತು ಸತ್ಯಾಗ್ರಹಕ್ಕೆ ಸಂಬಂಧಪಟ್ಟ ವಿಷಯಗಳ ಸತ್ಯಾಂಶವನ್ನೇ ಪ್ರಕಟಿಸುವುದಾಗಿಯೂ ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷರಾದ ಶ್ರೀ|| ಎಂ. ಎಲ್. ಶ್ರೀಕಂಠಯ್ಯನವರು ತಿಳಿಸಿ ನೀಲ್ಲದ ಸಲಹೆಗಳನ್ನೊಳಗೊಂಡ ಮನವಿಯೊಂದನ್ನು ಕಾರ್ಯದರ್ಶಿಗಳಿಗೆ ಒಪ್ಪಿಸಿದರು

ಮೈಸೂರು ಶ್ರೀಮನ್ಮಹಾರಾಜ
ಮುಮ್ಮಡಿ ಕೃಷ್ಣರಾಜ ಒಡೆಯರು
ಪಾಸ್ ವೈದ್ಯ ಕಂಬಳಿ
ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಒಬ್ಬರ್ಗೆ ಸಂಬಂಧದ ಹೊಟ್ಟೆ ನೋವಿನ ಜೀವಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧವೆಂದು ಎಂಭತ್ತೈದು ವರ್ಷಗಳಿಂದ ಪ್ರಖ್ಯಾತವಾದ ಈ ಭಸ್ಮದ ಮಹತ್ವವೇನು? ಎಷ್ಟೆಷ್ಟು ಪ್ರಯಾಸ, ಕ್ಲೇಶ ಒಂದಿವೆ? ಎಷ್ಟೆಷ್ಟು ವೈದ್ಯರ ಪ್ರಿಸ್ಕಿಪ್ಷನ್? ಇತ್ಯಾದಿ ವಿಷಯಗಳು [illegible]

[illegible]

ಜವಾಬ್ದಾರಿ ಸರ್ಕಾರದ ಘೋಷಣೆ

ಮೊನ್ನೆ ಶ್ರೀ ಮಹಾರಾಜರವರು ಘೋಷಿಸಿದ ಸುಧಾರಣೆಗಳನ್ನು ಶ್ರೀಗಳಾದ ನ್ಯಾಲಗಿರಿ ಸಂಜೀವಯ್ಯ, ಭೂಪಾಳಂ ಚಂದ್ರಶೇಖರಯ್ಯ, ಬಿ ಟಿ ರಾಮಯ್ಯ, ಮೊದಲಾದವರೂ ಹಲವು ಪತ್ರಿಕೆಗಳೂ ಸ್ವಾಗತಿಸಿವೆ. ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯ, ಸಂಸ್ಥಾನದ ಕಾಂಗ್ರೆಸ್ ಸಮಿತಿಯ ಸಂಚಾಲಕರಾದ ರುದ್ರಪ್ಪ ಮೊದಲಾದವರೂ, ಹಿಂದೂ, ಫ್ರೀಪ್ರೆಸ್ ಸಂಡೇ ಟೈಂಸ್-ಮೊದಲಾದ ಪತ್ರಿಕೆಗಳೂ ಟೀಕಿಸಿ ಆ ಘೋಷಣೆಯು ನಿಸ್ಸಾರವಾದುದೆಂದೂ, ಇದರಲ್ಲಿ ಜವಾಬ್ದಾರೀ ಸರ್ಕಾರದ ಹೆಸರು ಒಂದು ಇರುವುದರ ಹೊರತು ಪ್ರಜೆಗಳ ಧ್ಯೇಯವು ಈಡೇರುವುದಿಲ್ಲವೆಂದೂ, ಆದ್ದರಿಂದ ಇದು ಅಂಗೀಕಾರಾರ್ಹವಾಗಿಲ್ಲವೆಂದೂ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ.

ಗಡಿ ಪ್ರದೇಶದಲ್ಲಿ ದರೋಡೆ ಕೋರರ ಧಾಳಿ

ಸ್ವಂ ಸು ಫ್ರೋ] ಬೆಂಗಳೂರು ೨೯

ಶನಿವಾರ ಜಿಲ್ಲೆಯ ಕೆಲವು ದರೋಡೆ ಕೋರರು ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡೀ ಪ್ರದೇಶಗಳ ಮೇಲೆ ರಿವಾಲ್ವರ್ ಮತ್ತು ಬಂದೂಕಗಳ ಸಮೇತರಾಗಿ ಧಾಳಿ ನಡೆಸಿದರೆಂದೂ, ಅದರಿಂದ ಗಡಿ ಗ್ರಾಮಗಳ ವಾಸಿಗಳು ಹಲವರಿಗೆ ಘಾಯಗಳಾಗಿವೆಯೆಂದೂ ಸರ್ಕಾರದವರು ಒಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಅವರಲ್ಲಿ ಹಲವರನ್ನು ದಸ್ತಗಿರಿ ಮಾಡಲಾಗಿದೆಯೆಂದೂ, ಆ ಪ್ರದೇಶವನ್ನು ಜರೂರು ಕಾರ್ಯಕ್ರಮ ಕೈಗೊಳ್ಳಬೇಕಾದ ಅವಶ್ಯಕತೆಯಿರುವ ಪ್ರದೇಶವೆಂದು ಸರ್ಕಾರದವರು ತೀರ್ಮಾನಿಸಿರುವುದಾಗಿಯೂ ಆ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಚಿತ್ರದುರ್ಗ, ಚಳ್ಳಕೆರೆಗ ಗೋಳೀಬಾರು

ಚಿತ್ರದುರ್ಗ ಮತ್ತು ಚಳ್ಳಕೆರೆ ತಾಲ್ಲೂಕು ಕಛೇರಿ ಭವನಗಳನ್ನು[illegible]ದ ಗುಂಪಿನ ಮೇಲೆ ಕಳೆದ ಬುಧವಾರ[illegible] ಪೋಲೀಸರು ಗುಂಡುಹಾರಿಸಿದರೆಂದೂ [illegible]ರಿಯಲ್ಲಿ ಒಬ್ಬನು ಸತ್ತನೆಂದೂ, [illegible]ಗ[illegible]ದಲ್ಲಿ ಎಂಟು ಜನರಿಗೆ ಘಾಯ[illegible]ವೆಯೆಂದೂ ವರದಿಯಾಗಿದೆ

× ಕಳೆದ ಬುಧವಾರ ಕೋಲಾರ[illegible]ದ ಮುನಿಸಿಪಲ್ ಹೈಸ್ಕೂಲ್ ಭ[illegible]ಬೆಂಕಿ ಇಡಲಾಯಿತೆಂದೂ, ಅದರ [illegible] ಮುಖ್ಯವಾಗಿ ಭವನದ ಒಂದು ಭಾಗವು [illegible]ವಾಗಿ ನಾಶವಾಗಿದೆಯೆಂದೂ, ೫ ಮ[illegible] ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡ[illegible]ಯೆಂದೂ ತಿಳಿದು ಬಂದಿದೆ

§ ಡಿಟೆನ್ಯೂಗಳಲ್ಲಿರುವ ಶ್ರೀ[illegible] ಎಚ್. ಸೀತಾರಾಮಯ್ಯ ಮತ್ತು [illegible]ನ್ನು ಕೃಷ್ಣರಾಜಪುರ ಡಿಟೆನ್ಯೂ ಕ್ಯಾಂಪಿಗೆ ವರ್ಗಾಯಿಸಲಾಗಿದೆ

§ ಸರ್ಕಾರದವರು ಒಂದು ಪ್ರ[illegible]ಯನ್ನು ಹೊರಡಿಸಿ ಪೌರಸಭಾ ಕಾ[illegible] ಶಾಸನಗಳು ತಾತ್ಕಾಲಿಕವಾಗಿ ಮುಂದು[illegible]ಲು ಕಳೆದ ೨೬ ನೇ ತಾರೀಖಿನಿಂದ [illegible]ಗಳ ಕಾಲ ಸಾಧಾರಣ ಅಧಿವೇಶನ[illegible]ವಂದಿ ಸದಸ್ಯರೂ, ಮುಂದುವರೆದ[illegible] ವೇತನಕ್ಕೆ ೫ ಮುನಿಸಿಪಾಲ್ ರಾಜ[illegible] ಕೋರಂ ಇದೆಯೆಂದು ಭಾವಿಸಿ ಕಾ[illegible] ಕಲಾಪಗಳನ್ನು ನಡೆಸಬಹುದೆಂದು[illegible] ರುತ್ತಾರೆ.

ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್ ಮೈಸೂರು

ಪ್ರಕಟಣೆ

ಮೇಲ್ಕಂಡ ಸೊಸೈಟಿಯು ಸದಸ್ಯರಿಗೆ [illegible]ದ ೫೦೦೦ ಅಡಿ ಮರವನ್ನು (ಸಾಗ[illegible] ವಿನಾ) ಬಾಕಿ ಜಾತಿಯ ಮರಗಳನ್ನು ಟೆಂಡರ್ ದರದಲ್ಲಿ ಪಡೆಯಲು ಏ[illegible]ರುತ್ತೆ. ಸಂಘದ ಮೆಂಬರುಗಳು ಸೈಟಿನಲ್ಲಿ ಮನೆಯನ್ನು ಕಟ್ಟಲು ಬೇ[illegible]ವ ಮರವನ್ನು ಸೊಸೈಟಿ ಇಂದ [illegible]ಲು ಅರ್ಜಿಗಳನ್ನು ಹಾಕಿಕೊಳ್ಳ[illegible] ಮತ್ತು ಅರ್ಜಿಯಲ್ಲಿ ಯಾವ [illegible]ಮರ ಮತ್ತು ಎಷ್ಟು ಅಡಿ ಬೇಕು[illegible]ದನ್ನು ತಿಳಿಸಿ ಮನೆಯ ಲೈಸೆನ್ಸ್ [illegible] ಪ್ಲಾನು ಸಹಾ ಹಾಜರು ಮಾಡಿ[illegible] ಮತ್ತು ಸೈಟನ್ನು ಸೊಸೈಟಿ ಇಂದಲು ಸ್ಯಾಂಕ್ಷನ್ ಮಾಡಿಸಿದ್ದಾರೆ[illegible]ವನ್ನು ತಿಳಿಸತಕ್ಕದ್ದು.

(ಸಹಿ) ಎ. ವಿ. ಶ್ರೀನಿವಾಸಮೂ[illegible]
ಆನರರಿ ಸೆಕ್ರೆಟರಿ.

DIRECTORY

Build your business by advertising in INDIAN NATIONAL DIRECTORY, (The All-India Businessman's Telephone Directory) which guarantees All-India coverage. For particulars, apply I. N. D. Basavanagudi, Bangalore.

ವುಡ್‍ಲ್ಯಾಂಡ್ಸ್
26-9-47 ರಿಂದ
ಅಪೂರ್ವ ಪ್ರಾರಂಭ
ಪ್ರತಿ ದಿನ ೩ ಆಟಗಳು
ಪ್ರಕಾಶ್ ಪಿಕ್ಚರ್ಸ್‌ರವರ
ಅಮೋಘವಾದ ಚಲನ ಚಿತ್ರ

ಸಮೀಮಾ
(ಹಿಂದಿ)
—: ತಾರಾಗಣ :—
ರಂಜನ ಮತ್ತು ಜೀವನ

ಗೋವಾ ಸಿಸ್ಟಂ

೩ ನೇ ಡ್ರಾಯಿಂಗ್, ಡಂಬ್ ಅನಿಮಲ್ ಛಾರಿಟಿ
ಡ್ರಾ ನಡೆದ ತಾರೀಖು 20-9-47
೧ ನೇ ಪ್ರೈಜು ನಂ [illegible] ರೂ ೧೦೦-೦-೦ ಮೈಸೂರು ಸಿಟಿ
೨ ನೇ ಪ್ರೈಜು ನಂ [illegible] ರೂ [illegible] ಮೈಸೂರು ಸಿಟಿ
೩ ನೇ ಪ್ರೈಜು ನಂ [illegible] ರೂ. [illegible] ಮೈಸೂರು ಸಿಟಿ
೪ ನೇ ಪ್ರೈಜು ನಂ [illegible] ರೂ [illegible] [illegible]
೫ ನೇ ಪ್ರೈಜು ನಂ. [illegible] ರೂ. [illegible] [illegible] (N Coorg)
ಇತರ ಸ್ಮಾಲ್ ಪ್ರೈಜು ನಂಬರುಗಳು :- [illegible]

ಈ ಎಲ್ಲಾ ಡ್ರಾಯಿಂಗ್ ಟಿಕೇಟುಗಳು [illegible]

[illegible] ಅನರರಿ ಸೆಕ್ರೆಟರಿ

[illegible] ಡಂಬ್ ಅನಿಮಲ್ ಛಾರಿಟಿ ಫಂಡ್ ಆಫೀಸ್,
[illegible] ಮೈಸೂರು

ರಾಜಕಮಲ
ತಾ|| 24-9-47 ರಿಂ[illegible]
ಅಪೂರ್ವ ಪ್ರಾರಂಭ[illegible]
ಫಿಲ್ಮಿಸ್ತಾನ್ ಕಂಪೆನಿಯವರ

೩ ದಿನಗಳು
(ಹಿಂದಿ)
—: ಪಾತ್ರ :—
ಅಶೋಕ ಕುಮಾರ್,
[illegible] ಮಿಸ್. ದೇವಿಕಾರಾಣಿ[illegible]
[illegible]

[illegible] printed and published by [illegible] Press [illegible] Mysore

ಫೋನ್ ನಂ. 608 ॥ ವಂದೇ ಮಾತರಂ ॥ ಬಿಡಿ ಪ್ರತಿಗೆ 3 ಕಾಸು



ಸಂಪುಟ ೬] ಮಂಗಳವಾರ ೩೦-೯-೪೭ [ಸಂಚಿಕೆ ೪೧

ಷೇಕ್ ಅಬ್ದುಲ್ಲಾರವರು ಬಿಡುಗಡೆಯಾದರು

ಸತ್ಯಾಗ್ರಹದ ಸುದ್ದಿ

ಜವಾಬ್ದಾರೀ ಸರ್ಕಾರಕ್ಕಾಗಿ ಮೈಸೂರು ಕಾಂಗ್ರೆಸ್ಸು ಹೂಡಿರುವ ಸತ್ಯಾಗ್ರಹವು ನಾಲ್ಕನೆಯ ವಾರವನ್ನು ಮುಟ್ಟಿದೆ.

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಆಪಾದನೆಯ ಮೇಲೆ ದಂಡಿನ ನ್ಯಾಯಾಧೀಶರು ಶ್ರೀ ನಾರಾಯಣರೆಡ್ಡಿ ಮತ್ತು ಇತರ ೯ ಮಂದಿ ಸತ್ಯಾಗ್ರಹಿಗಳಿಗೆ ೩ ತಿಂಗಳ ಕಠಿಣ ಸಜಾ ವಿಧಿಸಿದ್ದಾರೆ.

ಶಿವಮೊಗ್ಗೆಯಿಂದ ಮೈಸೂರಿಗೆ ಬಂದ ... ಜನ ಸತ್ಯಾಗ್ರಹಿಗಳನ್ನು ವಾಪಸು ಕಳುಹಲಾಗಿದೆ.

ಮೇಲಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆಯ ಮೇಲೆ ಶೀರ್ಘ... ನಾಲ್ಕು ಜನ ಪೋಲೀಸರನ್ನು ದಸ್ತಗಿರಿ ಮಾಡಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ವರ್ಗಾಯಿಸಲಾಗಿದೆ.

ದೊಡ್ಡಬಳ್ಳಾಪುರದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಪ್ರತಿದಿನವೂ ಪ್ರಭಾತಫೇರಿ, ಸಭೆ, ಮೆರವಣಿಗೆಗಳು ನಡೆಯುತ್ತಿವೆ. ಸ್ಥಳೀಯ ಕಾಂಗ್ರೆಸ್ ಕೆಲಸಗಾರರಾದ ಆರ್. ಸರಭಣ್ಣನವರಿಗೆ ನ್ಯಾಯಾಧೀಶರು ೩ ತಿಂಗಳ ಸಾದಾ ಸಜಾ ವಿಧಿಸಿದ್ದಾರೆ. ಸ್ಥಳೀಯ ತಾಲ್ಲೋಕು ಕಛೇರಿ ಮುಂದೆ ಪಿಕೆಟಿಂಗ್ ನಡೆಯುತ್ತಿದೆ. ಸಂಬಂಧವಾಗಿ ಶ್ರೀ ಮುನಿಯಪ್ಪ ... ಇತರ ನಾಲ್ಕು ಮಂದಿಗೆ ೫ ವಾರ ಸಜಾ ಮತ್ತು ೩೦ ರೂ. ಜುಲ್ಮಾನೆ ... ಮತ್ತೊಂದು ವಾರ ಸಜಾ ವಿಧಿಸಿದೆ.

...ಕೆರೆಯಲ್ಲಿ ಕೆಲವು ಅಂಗಡಿಗಳನ್ನು ... ಮಾಡಲಾಗುತ್ತಿದೆಯೆಂದು ಗೊತ್ತಾಗಿ... ನಾಯಕರನ್ನು ದಸ್ತಗಿರಿ ಮಾಡಿರುವ ...ದವರ ನೀತಿಯನ್ನು ವಿರೋಧಿಸಿ ... ಪುಟ್ಟನ್ನ ಎಂಬ ಅಧ್ಯಾಪಕರು ... ಕೆಲಸಕ್ಕೆ ರಾಜೀನಾಮೆ ಇತ್ತಿದ್ದಾರೆ.

ಶಿವಮೊಗ್ಗೆಯ ಶ್ರೀಮತಿ ಇಂದಿರಾಬಾಯಿ, ಲಕ್ಷ್ಮೀಬಾಯಿ ಮತ್ತು ಮನೋರಮಾಬಾಯಿ ಮೊದಲಾದ ಮಹಿಳಾ ಸತ್ಯಾಗ್ರಹಿಗಳಿಗೆ ಒಂದು ತಿಂಗಳ ಸಾದಾ ಸಜಾ ವಿಧಿಸಲಾಗಿದೆ.

ಸ್ಥಾನದ ಸತ್ಯಾಗ್ರಹದಲ್ಲಿ ಭಾಗವಹಿಸಲು ತಿರುವಾಂಕೂರು ಮತ್ತು ತಮಿಳು ನಾಡಿನಿಂದ ತಿರುವಾಂಕೂರು ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪ್ರಭಾಕರನ್ ನಾಯಕತ್ವದಲ್ಲಿ ೧೫ ಜನ ಸತ್ಯಾಗ್ರಹಿಗಳ ತಂಡವು ಮದರಾಸಿನಿಂದ ಹೊರಟಿದೆ ಎಂದು ಗೊತ್ತಾಗಿದೆ.

ಷೇಕ್ ಅಬ್ದುಲ್ಲಾರವರ ಬಿಡುಗಡೆ

...ವರೆಗೆ ಬಂಧನದಲ್ಲಿದ್ದ ಕಾಶ್ಮೀರದ ಪ್ರಜಾ ಸಮ್ಮೇಳನದ ಅಧ್ಯಕ್ಷರೂ, ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧ್ಯಕ್ಷರೂ ಆದ ಷೇಕ್ ಅಬ್ದುಲ್ಲಾರವರನ್ನೂ ಮತ್ತು ಇತರ ರಾಜಕೀಯ ಬಂದಿಗಳನ್ನೂ ಯಾವ ಷರತ್ತೂ ಇಲ್ಲದೆ ಕಾಶ್ಮೀರ ಸರ್ಕಾರವು ಬಿಡುಗಡೆ ಮಾಡಿದೆಯೆಂದು ವರದಿಯಾಗಿದೆ.

...ಕಿಂಗ್ ಕಮಿಟಿ ಸದಸ್ಯರ ಬಿಡುಗಡೆಯೇ?

...ಪೋನ್] [ಬೆಂಗಳೂರು ೨೯

...ದಲ್ಲಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನೆಲ್ಲಾ ಈ ದಿನ ಬಿಡುಗಡೆ ಮಾಡುವ ನಿರೀಕ್ಷೆ ಇದೆ.

ಬಂದೂಕ-ಮದ್ದು ಗುಂಡುಗಳನ್ನು ವಶಪಡಿಸಬೇಕು

ಮೈಸೂರು ೨೯

ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರು ನಿನ್ನೆ ಮಧ್ಯಾಹ್ನ, ಮೈಸೂರು ಕ್ರಿಮಿನಲ್ ಲಾ ಎಮರ್ಜೆನ್ಸಿ ಅಮೆಂಡ್‌ಮೆಂಟ್ ಶಾಸನದ ೧೪ ನೇ ಸೆಕ್ಷನ್ ರೀತ್ಯಾ ಒಂದು ಆಜ್ಞೆಯನ್ನು ಹೊರಡಿಸಿ, ಬಂದೂಕ ಮತ್ತು ಮದ್ದು ಗುಂಡುಗಳನ್ನಿಟ್ಟುಕೊಂಡಿರುವವರೆಲ್ಲರೂ ತಮ್ಮ ತಮ್ಮ ಪೋಲೀಸ್ ಸ್ಟೇಷನ್ನಿಗೆ ವಹಿಸಿಕೊಟ್ಟು, ರಶೀತಿ ಪಡೆಯಬೇಕೆಂದೂ, ಮತ್ತು ಈ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ೫ ವರ್ಷ ಕಠಿಣ ಶಿಕ್ಷೆ ಅಥವ ದಂಡ ಅಥವ ಎರಡನ್ನೂ ವಿಧಿಸಲಾಗುವುದೆಂದೂ ತಿಳಿಸಿದ್ದಾರೆ. ಈ ಆಜ್ಞೆಯನ್ನು ಜಾರಿಮಾಡಿದ ಐದು ದಿವಸಗಳ ಒಳಗೆ ಅವುಗಳನ್ನು ವಶಪಡಿಸಬೇಕು.

ಆದರೆ ಈ ಆಜ್ಞೆಯು ಅರಮನೆ, ಸರ್ಕಾರಿ, ಮಿಲಿಟರಿ ಮತ್ತು ಬ್ರಿಟಿಷ್ ಪ್ರಜೆಗಳಿಗೆ ಅನ್ವಯಿಸುವುದಿಲ್ಲ.

ರೈಲ್ವೆ ಕೆಲಸಗಾರರ ಮನವಿ

ಮೈಸೂರು ರೈಲ್ವೆ ಮುಷ್ಕರಕಾರರಿಗೆ ಸರ್ಕಾರದವರು ರೇಷನ್ ನಿಲ್ಲಿಸಿರುವುದನ್ನು ಖಂಡಿಸಿ, ಮಹಾಜನಗಳು ತಮ್ಮ ಉದಾರ ಸಹಾಯವನ್ನು ನೀಡಬೇಕೆಂದು ಮೈಸೂರು ರೈಲ್ವೆ ಫೆಡರೇಷನ್ ಮೈಸೂರು ನಗರ ಶಾಖೆಯ ಅಧ್ಯಕ್ಷರಾದ ರಾಜಾರಾಯರು ಒಂದು ಮನವಿಯನ್ನು ಹೊರಡಿಸಿದ್ದಾರೆ.

ವೀಣಾವಾದನ

ಚಾಮರಾಜ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಾಯಂಕಾಲ ೭ ಗಂಟೆಗೆ ಆರ್ ಎನ್ ದೇಟ್ ... ವಿದ್ವಾನ್ ಲಕ್ಷ್ಮೀನಾರಾಯಣಪ್ಪನವರ ಮಕ್ಕಳು ಆರ್ ಎಸ್ ಎಲ್ ಗೋಪಾಲರಾಯರಿಂದ ವೀಣಾವಾದನವು ನಡೆಯುತ್ತದೆ.

ಜಯಪುರದ ರಾಜರಿಗೆ ಬ್ರಿಟನ್ನಿನಲ್ಲಿ ಎಸ್ಟೇಟು

ಜಯಪುರದ ಮಹಾರಾಜರು ಬ್ರಿಟನ್ನಿನಲ್ಲಿ ಒಂದು ಎಸ್ಟೇಟನ್ನು ೪೦ ಸಹಸ್ರ ಪೌಂಡುಗಳಿಗೆ ಕೊಂಡುಕೊಂಡಿರುವರೆಂದು ವರದಿಯಾಗಿದೆ.

ಎ. ಐ. ಸಿ. ಸಿ. ಅಧಿವೇಶನ

ಬರುವ ನವೆಂಬರ್ ತಿಂಗಳಿಗೆ ಮುಂಚೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಸೇರುವುದಿಲ್ಲವೆಂದು ವರದಿಯಾಗಿದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರೊಡನೆ ಭೇಟಿ

ಸ್ವಂ.ಸು ಪೋ] ಬೆಂಗಳೂರು ೨೯

ಚಿಕ್ಕಮಗಳೂರು ಜೈಲಿನಲ್ಲಿ ಬಂಧನದಲ್ಲಿಡಲಾಗಿರುವ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯರೆಡ್ಡಿ ಮತ್ತು ಇತರ ವರ್ಕಿಂಗ್ ಕಮಿಟಿ ಸದಸ್ಯರುಗಳನ್ನು ಬೆಂಗಳೂರು ಪೌರಸಭೆಯ ಅಧ್ಯಕ್ಷರಾದ ಮಿ॥ ಎ. ಜೆ. ಪಟೇಲ್ ಮತ್ತು ಶ್ರೀ ಕೀಲಗಿರಿ ಕಂಜೀವಯ್ಯನವರು ಭೇಟಿ ಮಾಡಿ, ನಾಲ್ಕು ಗಂಟೆಗಳ ಕಾಲ ಸಂಭಾಷಣೆ ನಡೆಸಿದರೆಂದು ಗೊತ್ತಾಗಿದೆ.

ಮಿ॥ ಪಟೇಲ್ ಮತ್ತು ಶ್ರೀ ಸಂಜೀವಯ್ಯನವರು ನಿನ್ನೆ ದಿನ ಒಂದು ಹೇಳಿಕೆಯನ್ನು ಇತ್ತು ಈ ರೀತಿ ತಿಳಿಸಿದ್ದಾರೆ:- "ನಾವುಗಳು ಕಳೆದ ಎರಡು ದಿವಸಗಳಲ್ಲಿ ಬಂಧನದಲ್ಲಿರುವ ಕಾಂಗ್ರೆಸ್ ನಾಯಕರುಗಳನ್ನು ಭೇಟಿ ಮಾಡಿ, ಮಹಾಪ್ರಭುಗಳ ಘೋಷಣೆಯನ್ನು ವಿವರಿಸಿ ತಿಳಿಸಿದೆವು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರುಗಳನ್ನು ಕೂಡಲೆ ಬಿಡುಗಡೆ ಮಾಡಿದರೆ ಶಾಂತ ವಾತಾವರಣವು ಈಗ ನೆಲಸುವುದರಲ್ಲಿ ಸಂದೇಹವಿಲ್ಲವೆಂದು ನಂಬಿದ್ದೇವೆ. ಆದ್ದರಿಂದ ಸರ್ಕಾರದವರು ಅವರುಗಳನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ."

ವಿದೇಶೀಯರ ಪ್ರವೇಶಕ್ಕೆ ಭಾರತದ ವಿರೋಧ

ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳ ಪ್ರದೇಶಗಳಲ್ಲಿ ನಡೆಯುತ್ತಿರುವ ಕೋಮು ಗಲಭೆಗಳಿಗೆ ನಿಷ್ಪಕ್ಷಪಾತವಾದ ವಿಚಾರಣಾ ಸಮಿತಿಯನ್ನು ನೇಮಕ ಮಾಡುವುದನ್ನು ತಾತ್ವಿಕ ಅಂಗೀಕರಿಸುವುದಾಗಿಯೂ, ಆದರೆ ಸಂಯುಕ್ತ ರಾಷ್ಟ್ರಸಂಸ್ಥೆಯವರಿಗೆ ಇಲ್ಲಿನ ವಾಸ್ತವಿಕ ವಿದ್ಯಮಾನಗಳ ಅರಿವಿಲ್ಲದಿರುವುದರಿಂದ ವಿದೇಶೀಯರ ವಿಚಾರಣಾ ಸಮಿತಿಗೆ ಅಂಗೀಕಾರವೀಯುವುದಿಲ್ಲವೆಂದೂ ಭಾರತ ಸರ್ಕಾರವು ಪ್ರಕಟಿಸಿರುವುದಾಗಿ ವರದಿಯಾಗಿದೆ.

ಭೇಟಿ

ಮೈಸೂರು ೨೯

ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀ ಟೀ... ಶ್ರೀನಿವಾಸ ... ಅಯ್ಯಂಗಾರ್ಯರು ... ಫ್ರೀ ಪ್ರೆಸ್ ... ಇಂಡಿಯಾ ... ಪತ್ರಿಕೆಯ ಸಂಪಾದಕರಾದ ಶ್ರೀ ... ಶ್ರೀಕಂಠಯ್ಯನವರು ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿ ... ದಯಪಾಲಿಸಿದ್ದರೆಂದು ಗೊತ್ತಾಗಿದೆ.

ಸತ್ಯಾಗ್ರಹಿಗಳ ದಸ್ತಗಿರಿ

ಸ್ವಂ ಸು ಪೋ] ಬೆಂಗಳೂರು

ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಇಲ್ಲಿಗೆ ಬಂದು ಸತ್ಯಾಗ್ರಹಿಗಳನ್ನು ಸೇರಿಸಿಕೊಳ್ಳಲು ಪ್ರಯತ್ನಿಸಿದ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾದ ಶ್ರೀ ಎಸ್. ಜೋಷಿ, ತಿರುವಾಂಕೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಆರ್. ವಿ. ಉಸ್ತಾಕ, ಶ್ರೀ ಪ್ರಭಾಕರನ್ ಮತ್ತಿತರರನ್ನು ... ಠಾಣೆಯಲ್ಲಿ ನಿನ್ನೆ ದಸ್ತಗಿರಿ ಮಾಡಲಾಗಿದೆ. ... ಸತ್ಯಮಂಗಲದಿಂದ ಸತ್ಯಾಗ್ರಹದಲ್ಲಿ ಭಾಗವಹಿಸಲು ಬಂದ ೫ ಮಂದಿಯೂ ದಸ್ತಗಿರಿಯಾಗಿದ್ದಾರೆ.

ಜಿಲ್ಲಾ ನ್ಯಾಯಾಸ್ಥಾನದ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದ ಹಲವು ಹುಡುಗರೂ ಸೇರಿ ೨೦ ಜನರನ್ನು ಈ ದಿನ ಬಂಧಿಸಲಾಗಿದೆ.

ವಕೀಲರುಗಳು ಕೋರ್ಟಿಗೆ ಹೋಗಬಾರದೆಂದು ಪ್ರಾರ್ಥಿಸಿದ್ದರೂ ವಕೀಲರುಗಳು ಹೋಗುತ್ತಿರುವುದನ್ನು ಪ್ರತಿಭಟಿಸಲು ಶ್ರೀಗಳಾದ ಎ. ಎಸ್. ಶ್ರೀನಿವಾಸಮೂರ್ತಿ, ... ಎಸ್. ಎ ಸ್ವಾಮಿ, ಬಿ. ಸಿ. ರಾಮಸ್ವಾಮಿ ... ಸಿ. ರಾಮ ನಾಥನ್, ಸಿ. ಕೆ. ಹನುಮಂತರಾವ್, ಎಂ. ವಿ. ಸೇತುರಾವ್ ಮೊದಲಾದವರು ಬಾರ್ ಅಸೋಸಿಯೇಷನ್ನಿನ ಮುಂದೆ ಉಪವಾಸ ಹೂಡಿದ್ದಾರೆ.

— ಸಂಸ್ಥಾನದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಸಂಬಂಧದಿಂದ ಕೋರ್ಟುಗಳನ್ನು ... ಮಾಡಲಾಗಿದೆ ... ಕೋರ್ಟಿನ ... ಸಿದೆ.

... ಹಲವರು ತಮ್ಮ ಬೇಡಿಕೆಗಳನ್ನು ಪೂರೈಸಲಿಲ್ಲವೆಂದು ಹೇಳಿ ಮಿಲ್ ... ಗಿರಣಿಯ ಕೆಲಸಗಾರರು ನಿನ್ನೆ ರಾತ್ರಿಯಿಂದ ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದ್ದಾರೆ.

• ಮಹಾರಾಜರವರಿಂದ ... ನ್ ಆಹಾರ ಧಾನ್ಯವು ಬಂದಿದೆ. ಇದರಿಂದ ಆಹಾರದ ಅಭಾವ ತಾತ್ಕಾಲಿಕವಾಗಿ ನಿವಾರಣೆಯಾದಂತಿದೆ.

ಸತ್ಯಾಗ್ರಹದ ಸುದ್ದಿ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಬಳಿ ನೆನ್ನೆ ಪೋಲೀಸರು ಗುಂಪನ್ನು ಚದುರಿಸಲು ಗುಂಡು ಹಾರಿಸಿದರಿಂದ ನಾಲ್ಕು ಮಂದಿಗೆ ಗಾಯವಾಗಿ ಒಬ್ಬನು ಆಸ್ಪತ್ರೆಯಲ್ಲಿ ಸತ್ತನೆಂದೂ ವರದಿಯಾಗಿದೆ. ನೆನ್ನೆ ಬೆಳಗ್ಗೆ ಕೆಲವು ಸತ್ಯಾಗ್ರಹಿಗಳು ಕಾರ್ಖಾನೆಯ ಭವನದ ಮೇಲೆ ಭಾರತದ ರಾಷ್ಟ್ರ ಧ್ವಜವನ್ನು ಹಾರಿಸಿ, ... ಪೋಲೀಸರು ... ಪ್ರಯೋಗ ಮಾಡಿದರೆಂದೂ, ಜನಗಳು ಕಲ್ಲುಗಳನ್ನು ಎಸೆಯಲು ಪ್ರಾರಂಭಿಸಿದ್ದರೆಂದೂ ಹೇಳಲಾಗಿದೆ.

... ಸ್ಥಾನದ ಮಾಜಿ ... ಶ್ರೀ ಎಂ. ಎಸ್. ಮೂರ್ತಿ ... ಅರಮನೆ ಮುಂದೆ ಸತ್ಯಾಗ್ರಹ ಮಾಡಲು ಬಂದಿದ್ದ ಸತ್ಯಾಗ್ರಹಿ ... ದಸ್ತಗಿರಿ ಮಾಡಲಾಯಿತು.

... ದಸ್ತಗಿರಿ ಮಾಡಿದ್ದ ... ಚಿಕ್ಕಮಗಳೂರಿನಲ್ಲಿ ... ಶ್ರೀ ವಿ ... ಇತರ ನಾಲ್ಕು ... ದಸ್ತಗಿರಿ ಮಾ...

ಹೈದರಾಬಾದಿನ ಸತ್ಯಾಗ್ರಹ

ಹೈದರಾಬಾದ್ ಸಂಸ್ಥಾನದ ಸಿರಸಿಲ್ಲ ತಾಲ್ಲೂಕಿನ ೨೧ ಹಳ್ಳಿಗಳ ಸರ್ಕಾರಿ ಅಧಿಕಾರಿಗಳು ತಮ್ಮ ಹುದ್ದೆಗೆ ರಾಜೀನಾಮೆ ಇತ್ತಿದ್ದಾರೆ. ಅಲ್ಲಿನ ಆಹಾರ ಸಮಿತಿಯ ೨೦೦ ಸದಸ್ಯರು [illegible] ಹುಜೂರ್‌ನಗರ್ ತಾಲ್ಲೂಕಿನ ಕೆಲವು ಗ್ರಾಮಾಂತರ ಅಧಿಕಾರಿಗಳೂ ಸಹ ರಾಜೀನಾಮೆ ಸಲ್ಲಿಸಿದ್ದಾರೆ.

ವಾರಂಗಲ್ ಜಿಲ್ಲೆಯಲ್ಲಿ ಶ್ರೀಯುತ ಆರ್. ನರಸಿಂಹ ರೆಡ್ಡಿಯವರ ನಾಯಕತ್ವದಲ್ಲಿ ಈಚಲು ಮತ್ತು ಗಂಧದ ಮರಗಳನ್ನು ಕಡಿದು ಹಾಕುವ ಚಳುವಳಿ ಮುಂದುವರೆಯುತ್ತಿದೆ.

ಮಾಂಗಳ ಎಂಬ ಪ್ರದೇಶದ ಗಣಪವರಂ ಎಂಬ ಹಳ್ಳಿಯಲ್ಲಿ ತನ್ನ ಮನೆ ಮೇಲೆ ಭಾರತದ ರಾಷ್ಟ್ರ ಧ್ವಜವನ್ನು ಹಾರಿಸಿದ್ದರಿಂದ ೬೦ ವರ್ಷದ ಶ್ರೀ ಕಿಲೇರು ಪಾಪಯ್ಯ ಎಂಬುವರನ್ನು ದಸ್ತಗಿರಿ ಮಾಡಲಾಗಿದೆ.

ವಾರಂಗಲ್ ಜೈಲಿನಲ್ಲಿ ಸೆಪ್ಟೆಂಬರ್ ೧೩ನೇ ತಾ॥ ನಿಂದ ಪ್ರಾರಂಭವಾದ ೭೦೦ ರಾಜಕೀಯ ಬಂಧಿಗಳ ಉಪವಾಸ ವ್ರತವು ಈಗ ಕೊನೆಗೊಂಡಿದೆ.

ಭಾರತದ ಡೊಮಿನಿಯನ್ ಧ್ವಜವನ್ನು ಹಾರಿಸಿದರೆಂದು ೪ ಕಾಂಗ್ರೆಸ್ ನಾಯಕರುಗಳನ್ನು ಧರ್ಮಾವರಂನಲ್ಲಿ ದಸ್ತಗಿರಿ ಮಾಡಲಾಗಿದೆ.

ಔರಂಗಾಬಾದಿನ ಸೆಂಟ್ರಲ್ ಜೈಲಿನಲ್ಲಿರುವ ರಾಜಕೀಯ ಬಂದಿಗಳು ಕಳೆದ ಎರಡು ದಿವಸಗಳಿಂದ ಉಪವಾಸ ಮಾಡುತ್ತಿದ್ದಾರೆ. ಈ ಬಗ್ಗೆ ಸಹಾನುಭೂತಿ ತೋರಿಸಲು ಅಲ್ಲಿನ ಅಂಗಡಿಗಳೆಲ್ಲಾ ಮುಚ್ಚಲಾಗಿತ್ತು ಮತ್ತು ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು.

ಆರು ಕಣ್ಣುಗಳ ಮಗುವಿನ ಜನನ

ಒರಿಸ್ಸಾ ಪ್ರಾಂತದ ಗಂಜಾಂ ಜಿಲ್ಲೆ [illegible] ಆರು ಕಣ್ಣಿನ ಮಗುವೊಂದು ಜನಿಸಿದೆಯೆಂದು ವರದಿಯಾಗಿದೆ. ಅದರ ಹಣೆಯಲ್ಲಿ ೬ ಕಣ್ಣುಗಳನ್ನು ರೆಪ್ಪೆಗಳಿರಲಿಲ್ಲವೆಂದೂ, ಅದರ ಮೂಗು ಅತ್ಯಂತ ಭಾರಿಯಾಗಿತ್ತೆಂದೂ, ಜನಿಸಿದ ೩ ದಿನಗಳ ನಂತರ ಸತ್ತಿತೆಂದೂ ಹೇಳಲಾಗಿದೆ.

ಐದು ಮಕ್ಕಳ ಜನನ

ರಷ್ಯದ ಮಹಿಳೆ ಒಬ್ಬಳಿಗೆ ೩ ಗಂಡು ಮತ್ತು ೨ ಹೆಣ್ಣು ಶಿಶುಗಳು ಏಕಕಾಲದಲ್ಲಿ ಜನನವಾಗಿವೆಯೆಂದೂ, ತಾಯಿ ಮಕ್ಕಳು ಸುಖವಾಗಿದ್ದಾರೆಂದೂ ವರದಿಯಾಗಿದೆ.

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ [illegible]

[illegible]

ಕೊಚ್ಚಿಯಲ್ಲಿ ಪಾನನಿರೋಧ

ಕೊಚ್ಚಿ ನ್ಯಾಯವಿಧಾಯಕ ಸಭೆಯಲ್ಲಿ ಅಂಗೀಕೃತವಾದ ಪಾನ ನಿರೋಧ ಮಸೂದೆಗೆ ಅಲ್ಲಿನ ಸಂಸ್ಥಾನಾಧೀಶರ ಅನುಮತಿ ದೊರೆತಿದೆ. ಅಕ್ಟೋಬರ್ ೧ನೇ ತಾ॥ ನಿಂದ ಸಂಸ್ಥಾನಕ್ಕೆ ಸೇರಿದ ಚಿತ್ತೂರು ತಾಲ್ಲೂಕಿನಲ್ಲಿ ಸಂಪೂರ್ಣ ಪಾನ ನಿರೋಧ ಜಾರಿಗೆ ಬರುವುದರಲ್ಲಿದೆ.

ಗ್ವಾಲಿಯರ್‌ರಾಜರು ಜೂಜಿನ ಕುದುರೆ ಮಾರುವರು!

ಬ್ರಿಟನ್ನಿನಲ್ಲಿರುವ ತಮ್ಮ ಎಲ್ಲ ಜೂಜಿನ ಕುದುರೆಗಳನ್ನೂ ಗ್ವಾಲಿಯರಿನ ಮಹಾರಾಜರು ಹರಾಜು ಮಾಡುವರೆಂದು ವರದಿಯಾಗಿದೆ. ಅವರಲ್ಲಿರುವ ಕುದುರೆಗಳು ಸುಮಾರು ೧೫ ಲಕ್ಷ ಪೌಂಡುಗಳ ಬೆಲೆ ಬಾಳಬಹುದೆಂದು ಅಂದಾಜು ಮಾಡಲಾಗಿದೆ.

೯ ಅಡಿ ಎತ್ತರದ ಮನುಷ್ಯರ ಅಸ್ಥಿ ಪಂಜರ

ಅಮೆರಿಕದ ಕೊಲೊರೇಡೋ ಮರುಭೂಮಿಯಲ್ಲಿ ೪೦ ಸಹಸ್ರ ವರ್ಷಗಳ ಹಿಂದಿನವೆಂದು ಹೇಳಲಾದ ಮನುಷ್ಯರ ಅಸ್ಥಿಪಂಜರಗಳನ್ನು ಸಂಶೋಧಕರು ಪತ್ತೆಹಚ್ಚಿದ್ದಾರೆ. ಇವುಗಳು ೯ ಅಡಿ ಎತ್ತರವಿರುವುವೆಂದು ಹೇಳಲಾಗಿದೆ. ಅದೇ ಪ್ರದೇಶದಲ್ಲಿಯೇ ಅತ್ಯಂತ ಭಾರಿ ಪ್ರಾಣಿ[illegible]ತನೆ, ಹುಲಿ ಮೊದಲಾದವುಗಳ ಅಸ್ಥಿಪಂಜರಗಳೂ ದೊರೆತಿವೆ.

ಹೆಣದ ಪೆಟ್ಟಿಗೆಯಲ್ಲಿ ಹಣ!

ಇಟಲಿ-ಸ್ವಿಸ್ ಗಡಿ ಪ್ರದೇಶದಿಂದ [illegible] ಹೆಣದ ಪೆಟ್ಟಿಗೆಯನ್ನು ರವಾನಿಸಲು ಒಬ್ಬ ಯುವಕನು ಅಧಿಕಾರಿಗಳ ಅನುಮತಿಯನ್ನು ಬೇಡಿದನೆಂದೂ, ಪೆಟ್ಟಿಗೆಯನ್ನು ತೆಗೆದು ನೋಡಿದಾಗ ಅದರಲ್ಲಿ ಹೆಣದ ಬದಲು ೩ ಲಕ್ಷ ರೂ ಬೆಲೆ ಬಾಳುವ ಆಭರಣಗಳು ಇದ್ದುವೆಂದು ವರದಿಯಾಗಿದೆ.

ಐರೋಪ್ಯರು ಸೀರೆ ಉಡುವರು!

ಭಾರತವು ಸ್ವತಂತ್ರವಾದ ದಿನದಿಂದ ಆಂಗ್ಲ ಮಹಿಳೆಯರು ಬಟ್ಟೆ, ಒಡವೆಗಳಲ್ಲಿ ಭಾರತೀಯ ಸ್ತ್ರೀಯರ ಅನುಕರಣ ಮಾಡುತ್ತಿದ್ದಾರೆ. ಸಣ್ಣ ವಯಸ್ಸಿನ ತರುಣಿಯರು ತಮ್ಮ ಸಂಜೆಯ ಉಡುಪಿಗೆ ಸೀರೆಯನ್ನು ಉಪಯೋಗಿಸುತ್ತಿದ್ದಾರೆ.

ವುಡ್‌ಲ್ಯಾಂಡ್ಸ್

26-9-47 ರಿಂದ

ಅಪೂರ್ವ ಪ್ರಾರಂಭ

ಪ್ರತಿ ದಿನ ೩ ಆಟಗಳು

[illegible] ಪಿಕ್ಚರ್ಸ್‌ರವರ

[illegible] ಚಿತ್ರ

ನಯೀಮಾ

(ಹಿಂದಿ)

ಪಾತ್ರಗಳು:—

[illegible]

ನಿರಾಶ್ರಿತರ ರಕ್ಷಣೆಗಾಗಿ ನಿಜಾಮರಿಂದ ೬ ಲಕ್ಷ ರೂ.

ನಿರಾಶ್ರಿತರ ರಕ್ಷಣೆ ಮತ್ತು ವಸತಿಗಳಿಗಾಗಿ ಹೈದರಾಬಾದ್ ಸರ್ಕಾರವು ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ ತಲಾ ೩ ಲಕ್ಷ ರೂ ಇತ್ತಿದೆಯೆಂದು ವರದಿಯಾಗಿದೆ.

ಬಿಹಾರ್ ಪ್ರಧಾನಿಯ ರಜತಮಹೋತ್ಸವ

ಅಕ್ಟೋಬರ್ ೨೦ನೇ ತಾರೀಖು ನಡೆಯುವ ಬಿಹಾರಿನ ಪ್ರಧಾನಿ ಶ್ರೀ ಕೃಷ್ಣಸಿನ್ಹರವರ ರಜತಮಹೋತ್ಸವದ ದಿನ ಅವರಿಗೆ ಚಿನ್ನದಲ್ಲಿ ತಯಾರಿಸಿದ ಭಾರತದ ಭೂಪಟವನ್ನು ಅರ್ಪಿಸಲಾಗುವುದೆಂದು ಒಂದು ವರದಿಯು ತಿಳಿಸುತ್ತದೆ. ಭಾರತದ ರಾಜಧಾನಿಯಾದ ದೆಹಲಿಯನ್ನು ವಜ್ರದಿಂದ ಕೆತ್ತಲಾಗುವುದೆಂದೂ, ಬಿಹಾರ್ ಪ್ರಾಂತವಿರುವ ಭಾಗದಲ್ಲಿ ಶ್ರೀ ಸಿನ್ಹರ ಪ್ರತಿಮೆಯನ್ನು ಕೆತ್ತಲಾಗುವುದೆಂದೂ ವರದಿಯಾಗಿದೆ. ಇದು ೬೦ ತೊಲ ತೂಕವಿರುವುದೆಂದು ಗೊತ್ತಾಗಿದೆ.

ಮಳೆ ಬೀಳಿಸಲು ಅಮೆರಿಕದಲ್ಲಿ ಸಂಶೋಧನೆ

ಮೋಡದ ಮೇಲೆ ಒಣಗಿದ ಮಂಜಿನ ಗೆಡ್ಡೆಯನ್ನು ಸುರಿದು ಮಳೆ ಬರುವಂತೆ ಮಾಡುವ ಸಲುವಾಗಿ ಸಂಶೋಧನೆ ನಡೆಸಲು ಒಂದು ಮಿಲಿಯನ್ ಡಾಲರುಗಳನ್ನು ಸರ್ಕಾರವು ವೆಚ್ಚ ಮಾಡಬೇಕೆಂದು ಅಮೆರಿಕ ಸಂಸ್ಥಾನದ ಸೆನೆಟರಾದ ಮಿ॥ ಸಿಡ್ ಸಿಮ್ಸನ್‌ರವರು ಒಂದು ಮಸೂದೆಯನ್ನು ತರಲಿದ್ದಾರೆ.

ನ್ಯಾಯಾಲಯದ ತೀರ್ಪು ಹಿಂದಿಯಲ್ಲಿ!

ಸಂಯುಕ್ತ ಪ್ರಾಂತದಲ್ಲಿ ವ್ಯವಹಾರಗಳಲ್ಲಿ ಉಪಯೋಗಿಸಲಾಗುತ್ತಿರುವ ಇಂಗ್ಲಿಷ್ ಮತ್ತು ಉರ್ದು ಭಾಷೆಗಳ ಬದಲು ಸದ್ಯದಲ್ಲೇ ಹಿಂದಿಯು ಉಪಯೋಗಿಸಲ್ಪಡುವುದೆಂದೂ, ನ್ಯಾಯಾಲಯದ ತೀರ್ಪುಗಳನ್ನು ಮುಂದೆ ಹಿಂದೀ ಭಾಷೆಯಲ್ಲೇ ಕೊಡಲಾಗುವುದೆಂದೂ ವರದಿಯಾಗಿದೆ.

ದರೋಡೆಕೋರರಿಗೆ ಮರಣ ದಂಡನೆ

ಬರ್ಮಾದಲ್ಲಿ ಇನ್ನು ಮುಂದೆ ದರೋಡೆ ಮತ್ತು ಕಳ್ಳತನ ಮಾಡುವವರಿಗೆ ಮರಣ ದಂಡನೆ ವಿಧಿಸಲಾಗುವುದೆಂದು ಅಲ್ಲಿನ ಸರ್ಕಾರ ಎಚ್ಚರಿಕೆ ಕೊಟ್ಟಿದೆ.

ರಾಜಕಮಲ್

ತಾ॥ 1-10-47 ರಿಂದ

೨ನೇ ವಾರ

ಫಿಲ್ಮಿಸ್ತಾನ್ ಕಂಪೆನಿಯವರ

8 ದಿನಗಳು

(ಹಿಂದಿ)

—ಪಾತ್ರ:—

ಅಶೋಕ ಕುಮಾರ್,

[illegible] ದೇವಾನಂದ್,

[illegible]

ಪೋಲೀಸರು ಹಿಂದಿ ಕಲಿಯಬೇಕು

ಪೋಲೀಸ್ ಠಾಣೆಗೆ ಬರತಕ್ಕ ದೂರುಗಳನ್ನು ಹಿಂದೀ ಭಾಷೆಯಲ್ಲೇ ಬರೆದಿಡಬೇಕೆಂದು [illegible] ಸರ್ಕಾರವು ಅಲ್ಲಿನ ಅಧಿಕಾರಿಗಳಿಗೆ ಆಜ್ಞೆ ಇತ್ತಿದೆಯೆಂದು ವರದಿಯಾಗಿದೆ. ಮೂರು ತಿಂಗಳುಗಳೊಳಗೆ ಪೋಲೀಸ್ ಕಾನಸ್ಟೇಬಲ್ಲುಗಳೂ ಹಿಂದೀ ಭಾಷೆಯನ್ನು ಓದಲೂ ಮತ್ತು ಬರೆಯಲೂ ತಯಾರಾಗಬೇಕೆಂದೂ ಸಹ ಸೂಚಿಸಲಾಗಿದೆ.

ಚೀನಾ-ಭಾರತ ಎಣ್ಣೆ ಲೈನ್

ಕಳೆದ ಯುದ್ಧಕಾಲದಲ್ಲಿ ಚೀನಾದಿ ಭಾರತಕ್ಕೆ ಹಾಕಲಾಗಿದ್ದ ಎಣ್ಣೆ ಸಂಬ[illegible]ಯ ಪೈಪು ಲೈನುಗಳನ್ನು ಈಗ ಉಪಯೋಗಕ್ಕೆ ತೆರೆಯಲಾಗುವುದೆಂದು ಹೇಳಲಾಗಿದೆ.

×ಕಲ್ಲೀಕೋಟೆಯ ಸಮುದ್ರದಲ್ಲಿ ಬೇಟೆಯಾಡುತ್ತಿದ್ದ ಬೆಸ್ತನೊಬ್ಬನನ್ನು ಒಂದು ದೊಡ್ಡ ಮೀನು ಹಿಡಿದು ಒಳಕ್ಕೆ ಎಳೆದುಕೊಂಡಿತೆಂದೂ, ಅವನ ಶರೀರವನ್ನು ತೆಗೆಯಲು ಅವನ ಸಹೋದ್ಯೋಗಿಗಳು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾದುವೆಂದೂ ತಿಳಿದು ಬಂದಿದೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಜನರಲ್ ಏಜೆನ್ಸೀಸ್ ಮೈಸೂರು

ಚಂದಾದಾರರಲ್ಲಿ ವಿನಂತಿ

ಶ್ರೀ [illegible] ಪ್ರಯುಕ್ತ ವಿಶೇಷ ಸಾಧ್ವಿ ಪತ್ರಿಕೆಯನ್ನು ಇದೇ ಅಕ್ಟೋಬರ್ ಮೊದಲನೇ ತಾರೀಖಿನಿಂದ ರಾಜಧಾನಿಯಲ್ಲಿರುವ ನಮ್ಮ ಚಂದಾದಾರರೆಲ್ಲರಿಗೆ ಹಂಚುವ ವ್ಯವಸ್ಥೆ ಮಾಡಿದೆ. ಚಂದಾದಾರರುಗಳು ಮೂರು ತಿಂಗಳ ಅಡ್ವಾನ್ಸ್ ಕೊಟ್ಟು ರಶೀದಿಯನ್ನು ಪಡೆದು ತಮ್ಮ [illegible] ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಶ್ರೀಕಂಠಸ್ವಾಮಿ,
ಏಜೆಂಟ್
ಸಾಧ್ವಿ ಮೈಸೂರು

Edited printed and published by A. [illegible] ... the Sadhvi ... [illegible]

ಫೋನ್ ನಂ. 508 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು



ಸಂಪುಟ ೭] ಬುಧವಾರ ೧-೧೦-೪೭ [ಸಂಚಿಕೆ ೪೨

ರೈಲ್ವೆ ಕೆಲಸಗಾರರ ಖುಲಾಸೆಯಾಯಿತು

ಪೊಲೀಸ್ ವ್ಯಾನಿನ ಮೇಲೆ ದ್ರಾವಕ

ಮೈಸೂರು ೧

ನಿನ್ನೆ ರಾತ್ರಿ ನೂರಡಿ ರಸ್ತೆಯಲ್ಲಿ ಸುಬ್ಬ[illegible]ನಕಟ್ಟೆಯ ಬಳಿ ಹಲವರು ವಿದ್ಯುಚ್ಛ[illegible] ಬಲ್ಬುಗಳಲ್ಲಿ ಗಂಧಕದ ದ್ರಾವಕವ[illegible] ತುಂಬಿ ರಸ್ತೆಯಲ್ಲಿ ಹೋಗುತ್ತಿದ್ದ ಪೊ[illegible] ವ್ಯಾನಿನ ಮೇಲೆ ಎಸೆದರೆಂದೂ, ಇ[illegible]ದ ಇಬ್ಬರು ಪೊಲೀಸರಿಗೆ ಗಾಯಗಳಾ[illegible]ವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆಯೆಂ[illegible] ಗೊತ್ತಾಗಿದೆ. ಈ ಸಂದರ್ಭದಲ್ಲಿ ಇ[illegible] ಹುಡುಗರನ್ನು ಬಂಧಿಸಲಾಗಿದೆ. ೮ [illegible]ಪುರಂ ಆವರಣದಲ್ಲಿರುವ ದ್ವಿತೀಯ ನ್ಯಾಯಾಧೀಶರಾದ ಶ್ರೀ ಕೆ ಗೋಪಾ[illegible] ಅರಸ್ ಮತ್ತು ಇತರ ಹಲವು [illegible]ಗಿಯವರ ಮನೆಗಳ ಮೇಲೆ ಕಲ್ಲುಗಳ[illegible]ರೆಂದು ಹಲವರನ್ನು ದಸ್ತಗಿರಿ ಮಾ[illegible]ಗಿದೆ. ಪೊಲೀಸ್ ವ್ಯಾನಿನ ಮೇಲೆ [illegible]ವನ್ನೆಸೆದ ಸಂದರ್ಭದಲ್ಲಿ ಸುಬ್ಬ[illegible]ನಕಟ್ಟೆಯ ಅಕ್ಕಪಕ್ಕದ ೧೦-೧೫ ಮ[illegible]ನ್ನು ಪೊಲೀಸರು ನಿನ್ನೆ ರಾತ್ರಿ ಶೋಧಿ[illegible]

[illegible]ರ್ಷ ಘೋಷಣೆ ಇಲ್ಲ

[illegible] ಕೊಡುತ್ತಿರುವ ೮ ಔನ್ಸ [illegible] ಘೋಷಿಸುವುದಿಲ್ಲವೆಂದು ಮ[illegible] ಸರ್ಕಾರ ತಿಳಿಸಿದೆ

[illegible]ನ ನಷ್ಟದ ಮೊಕದ್ದಮೆ

[illegible] ರೈಲ್ವೆ ಆಡಿಟ್ ಆಫೀಸಿನಲ್ಲಿ [illegible] ಎಸ್. ವೈಥಾರೈಯ್ಯನೆಂಬುವ [illegible] ರಾಜರಾಜೇಶ್ವರಿ ಮಿಲಿಟರಿ [illegible] ಶ್ರೀ ಬಿ ನಂಜಪ್ಪನವರು ಮ[illegible] ಗುಮಾಸ್ತರು ಶ್ರೀ ಶೇಷಾದ್ರಿ[illegible]ವರ ಮೇಲೂ ಮೈಸೂರು ಸಿಟಿ [illegible]ಸ್ಟ್ರೇಟರವರ ಕೋರ್ಟಿನಲ್ಲಿ ಮಾನ[illegible] ಮೊಕದ್ದಮೆ ಹೂಡಿದ್ದರು. ಸದರಿ [illegible] ಮೇಲೆ ಕೇಸು [illegible] ಸಿಟಿ ಮ್ಯಾಜಿಸ್ಟ್ರೇಟರವ[illegible] ದಿನ ೩೫೦ ರೂ. ಜುಲ್ಮಾನೆ, ತಪ್ಪಿ[illegible] ತಿಂಗಳು ಕಠಿಣ ಸಜಾ ವಿಧಿಸಿಯೂ [illegible] ಮೊಬಲಗು ವಸೂಲಾದಲ್ಲಿ ಪಿ[illegible] ರೂ. ಪರಿಹಾರ ಕೊಡುವಂ[illegible] ತೀರ್ಪು ಇತ್ತಿರುತ್ತಾರೆ. ಶ್ರೀ ನಂ[illegible]ವರನ್ನು ಖುಲಾಸೆ ಮಾಡಲಾಯಿ[illegible] ಪರ ಅಡ್ವೊಕೇಟ್ ಮ॥ [illegible] ಮೈಸೂರು ಪಾಲಾಕ್ಷರೂ [illegible] ಮ॥ ರಾ॥ ಎಂ [illegible]ಗಪ್ಪನವರೂ ನಡೆಸಿದ್ದರು [illegible]

ಗಾಂಧಿ ಜಯಂತಿ

[illegible] ನಡೆಯಲಿರುವ ಗಾಂಧಿ ಜಯಂತಿ [illegible]ದಲ್ಲಿ ಈ ಕೆಳಗೆ ಕಂಡ ಕಾರ್ಯಕ್ರಮ [illegible]ಚರಿಸಬೇಕೆಂದು ಮೈಸೂರು [illegible]ಂಗ್ರೆಸ್ ಸಮಿತಿಯವರು ಕೋರು[illegible] ಪ್ರತಿ ಅಂಗಡಿ ಮನೆಗಳಿಗೂ [illegible]ಗಳನ್ನು ಕಟ್ಟಿ ಬಾವುಟಗಳ[illegible] ಎಲ್ಲಾ ದೇವಸ್ಥಾನ, [illegible] ಚರ್ಚುಗಳಲ್ಲೂ ವಿಶೇಷ [illegible] ನಡೆಸಿ ಮಹಾತ್ಮರ ಪ್ರೀಯ[illegible] ವಾಚಿಸುವುದು ಮತ್ತು [illegible] ಕೇರಿಯಲ್ಲಿ ನಾಳೆ ಬೆಳ[illegible] [illegible]ಗಳಲ್ಲಿ ಭಾಗವಹಿಸಿ ಇದ[illegible] ಹೊಡ್ಡ ಹಬ್ಬದಂತೆ ಆಚರಿ[illegible]

ತಲೆ ೧ ಕ್ಕೆ ೮ ಔನ್ಸ್ ರೇಷನ್

ಸ್ವಂ. ಸು ಫೋ॥] ಬೆಂಗಳೂರು ೧

ಸಂಸ್ಥಾನದಲ್ಲಿ ತಲೆದೋರಿರುವ ಆಹಾರದ ಅಭಾವದಿಂದ ಈಗ ಕೊಡಲಾಗುತ್ತಿರುವ ೧೦ ಔನ್ಸ್ ಪಡಿತರವನ್ನು ಸರ್ಕಾರದವರು ಇಂದಿನಿಂದ ೮ ಔನ್ಸುಗಳಿಗೆ ಇಳಿಸಿರುತ್ತಾರೆ

ಪಡಿತರದ ಹಂಚಿಕೆಯ ವಿವರವು ಈ ರೀತಿ ಇದೆ.—

ಎ ತರಗತಿಯವರಿಗೆ ಅಕ್ಕಿ ೬ ೪ ಔನ್ಸು, ಮತ್ತು ಗೋಧಿ ಅಥವಾ ಒಟ್ಟು ೧ ೬ ಔನ್ಸು. ಬಿ ತರಗತಿಯವರಿಗೆ ಅಕ್ಕಿ ೧ ೩ ಔನ್ಸು, ಮತ್ತು ರಾಗಿ ಅಥವಾ ಜೋಳ ೬ ೮ ಔನ್ಸು, ಸಣ್ಣ ಕಾರ್ಮಿಕರಿಗೆ ಅಕ್ಕಿ ೧ ೩ ಔನ್ಸು ಮತ್ತು ಇತರ ಧಾನ್ಯಗಳು ೧೦ ೮ ಔನ್ಸು (ಒಟ್ಟು ೧೩ ಔನ್ಸು)

ಸತ್ಯಾಗ್ರಹಿಗಳಿಗೆ ಸಜಾ

ಸತ್ಯಾಗ್ರಹದಲ್ಲಿ ಭಾಗ ವಹಿಸಲು ಸಂಸ್ಥಾನದ ಹೊರಗಿನಿಂದ ಬಂದ ೫೦ ಮಂದಿಗೆ ನಗರ ನ್ಯಾಯಾಧೀಶರು ಶಿಕ್ಷೆ ವಿಧಿಸಿದ್ದಾರೆ. ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೋದರೆಂದು [illegible] ಕೋಲಾರದ ೧೦ ಮಂದಿ ಸತ್ಯಾಗ್ರಹಿಗಳಿಗೆ ೧ ತಿಂಗಳ ಸಾದಾ ಸಜಾ ಮತ್ತು ಸತ್ಯಮಂಗಲದ ೧೭ ಜನ ಮತ್ತು ಕವಿಕಾನಹಳ್ಳಿಯ ೩೦ ಮಂದಿ ಸತ್ಯಾಗ್ರಹಿಗಳಿಗೆ ತಲಾ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ

ಮುಷ್ಕರ ಹೂಡಿದ್ದ ಜಾಡಮಾಲಿಗಳಿಗೆ ಸಂಬಳ

ನಿನ್ನೆ ನಡೆದ ಪೌರಾಧಿಕಾರಿಗಳ ಸಭೆಯಲ್ಲಿ, ಮುಷ್ಕರ ಹೂಡಿದ್ದ ಜಾಡಮಾಲಿಗಳಿಗೆ ಮುಷ್ಕರದ ಅವಧಿಯಲ್ಲೂ ಸಂಬಳ ಕೊಡಬೇಕೆಂದು ತೀರ್ಮಾನಿಸಲಾಗಿದೆ.

ಈ ದಿನ ಬಂದಿಗಳ ಬಿಡುಗಡೆ

ಸ್ವಂ ಸು ಫೋ॥] [ಬೆಂಗಳೂರು ೧

ಈ ದಿನ ಮಧ್ಯ ರಾತ್ರಿಯೊಳಗೆ ಬಂಧನದಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ ಬಿಡುಗಡೆಯಾಗಲಿ[illegible]. ಉಳಿದ ನಾಯಕರುಗಳನ್ನೂ [illegible] ತಂಡಗಳಾಗಿ ಬಿಡುಗಡೆ ಮಾಡಲಾಗುವುದು. [illegible]ಉಪವಾಸ ಮುಷ್ಕರದ [illegible]ಯ

ನಿನ್ನೆ [illegible] ವಕೀಲರುಗಳ ಸಭೆ ಸೇರಿ[illegible] ಕಾರ್ಯ[illegible]ಗಳಿಗೆ ಹೋಗದೆ ಸತ್ಯಾಗ್ರಹದಲ್ಲಿ ಭಾಗವಹಿಸುವ ಬಗ್ಗೆ ತೀರ್ಮಾನಿಸುವುದಾಗಿ ಭರವಸೆ ಇತ್ತಿದ್ದರಿಂದ [illegible] ದಿನ ಕೆಲಸಕ್ಕೆ [illegible] [illegible]ಯ ವಿದ್ಯಾರ್ಥಿಗಳು ಹೂಡಿದ್ದ ಉಪವಾಸ ಮುಷ್ಕರವು ನಿನ್ನೆ ಸಂಜೆ ಮುಕ್ತಾಯ[illegible]

ಹೊಸದುರ್ಗದಲ್ಲಿ ಗುಂಡಿನೇಟು

೫ ಜನರ ಮರಣ

ಸ್ವಂ ಸು ಫೋ॥] [ಬೆಂಗಳೂರು ೧

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದ ಹಲವರನ್ನು ಪೊಲೀಸರು ದಸ್ತಗಿರಿ ಮಾಡಿದ[illegible]. ದಸ್ತಗಿರಿ ಆದವರನ್ನು ಬಿಡಿಸಿಕೊಳ್ಳಲು ಪ್ರಯತ್ನಪಟ್ಟ ಜನರ ಗುಂಪಿನ ಮೇಲೆ ಪೊಲೀಸರು ಗುಂಡು ಹಾರಿಸಿದ್ದರಿಂದ ೫ ಜನರು ಮರಣಗೊಂಡು [illegible] ಗಾಯಗೊಂಡಿದ್ದಾರೆ

ಸತ್ಯಾಗ್ರಹಿಗಳ ದಸ್ತಗಿರಿ

ಹೊಸಕೋಟೆಯ ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದ [illegible] ಮಂದಿ ಸತ್ಯಾಗ್ರಹಿಗಳನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ.

ಪ್ರತಿಬಂಧಕಾಜ್ಞೆಯನ್ನು ತೆಗೆಯಲಾಗುವುದಿಲ್ಲ

ಜಿಲ್ಲಾಧಿಕಾರಿಗಳ ಉತ್ತರ

ಮೈಸೂರು ೧

ನಾಳೆ ಮಹಾತ್ಮ ಗಾಂಧಿಯವರ ಜಯಂತಿ. ಪ್ರಯುಕ್ತ ರಾಜಧಾನಿಯಲ್ಲಿ ಸಭೆ ಮೆರವಣಿಗೆಗಳ ಮೇಲೆ ಹಾಕಿರುವ ನಿರ್ಬಂಧಾಜ್ಞೆಗಳನ್ನು ನಾಳೆ ಮಟ್ಟಿಗಾದರೂ ವಾಪಸು ತೆಗೆದುಕೊಳ್ಳಬೇಕೆಂದು ರಾಜಧಾನಿಯ [illegible] ಶ್ರೀ ಟಿ ಎಸ್ [illegible] ಜಿಲ್ಲಾಧಿಕಾರಿಗಳನ್ನು [illegible] ಪತ್ರ ಬರೆದಿದ್ದರು.

ಪ್ರತಿಬಂಧಕಾಜ್ಞೆಗಳನ್ನು ವಾಪಸು ತೆಗೆದುಕೊಳ್ಳಲಾಗುವುದಿಲ್ಲವೆಂದೂ, ಆದರೆ ಅರ್ಜಿಗಳನ್ನು ಹಾಕಿಕೊಂಡವರಿಗೆ ಸಭೆ, ಮೆರವಣಿಗೆಗಳನ್ನು ನಡೆಸಲು ಲೈಸೆನ್ಸ್ ಕೊಡುವುದಾಗಿಯೂ ಜಿಲ್ಲಾಧಿಕಾರಿಗಳು ಉತ್ತರಿಸಿರುವರೆಂದು ಗೊತ್ತಾಗಿದೆ.

ಪ್ರಾರ್ಥನೆಗಳ ವಜಾ

ಜಿಲ್ಲಾಧಿಕಾರಿಗಳ ಆಜ್ಞೆ

ಮೈಸೂರು ೧

ಜಿಲ್ಲಾಧಿಕಾರಿಗಳು [illegible] ಹೊರಡಿಸಿರುವ [illegible] ಪ್ರಾರ್ಥನೆಗಳು, ಜಾಥಾಗಳು, ಮತ್ತು [illegible] ಸಭೆಗಳನ್ನು ಪೊಲೀಸರು ವಜಾ [illegible]

ಶ್ರೀ॥ ಹೆಚ್.ಡಿ. ರಾಜ್‌ರವರ ಖುಲಾಸೆ

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಪ್ರಥಮ ಡಿಕ್ಟೇಟರಾದ ಶ್ರೀ ಹೆಚ್. ಡಿ. ರಾಜ್‌ರವರನ್ನು ಇಂದು ಬೆಳಿಗ್ಗೆ ಖುಲಾಸೆ ಮಾಡಲಾಯಿತು

ಮೈಸೂರು ಸಬ್ ಜೈಲಿನಲ್ಲಿದ್ದ ೪೦ ಮಂದಿ ರೈಲ್ವೆ ಕೆಲಸಗಾರರನ್ನೂ ಸಹ ಈ ದಿನ ಬಿಡುಗಡೆ ಮಾಡಲಾಗಿದೆ.

ಪೊ॥ ಠಾಣೆಯಿಂದ ಮದ್ದು ಗುಂಡುಗಳ ಅಪಹರಣ

ಮಧುಗಿರಿಯ ಬಳಿ ಸಂಸ್ಥಾನದ ಗಡಿ ಪ್ರದೇಶದ ಪೊಲೀಸ್ ಔಟ್ ಪೋಸ್ಟಿನ ಮೇಲೆ ಶಸ್ತ್ರ ಸಜ್ಜಿತರಾದ ಹಲವರು ಧಾಳಿ ನಡೆಸಿ ಅಲ್ಲಿದ್ದ ಬಂದೂಕುಗಳನ್ನೂ, ಮದ್ದು ಗುಂಡುಗಳನ್ನೂ ಅಪಹರಿಸಿಕೊಂಡು ಹೋಗಿರುವರೆಂದು ತಿಳಿದುಬಂದಿದೆ.

ಶ್ರೀ ಡಿ. ವಿ. ಗುಂಡಪ್ಪನವರ ಹೇಳಿಕೆ

ಶ್ರೀ ಡಿ. ವಿ. ಗುಂಡಪ್ಪನವರು ಶ್ರೀಮನ್ಮಹಾರಾಜರವರ ಇತ್ತೀಚಿನ ಘೋಷಣೆ ಬಗ್ಗೆ ಒಂದು ದೀರ್ಘ ಹೇಳಿಕೆಯನ್ನಿತ್ತು, ಅದು ಸಮಾಧಾನಕರವಾಗಿಲ್ಲವೆಂದು ತಿಳಿಸಿದ್ದಾರೆ.

ಈ ಘೋಷಣೆಯು ದಿವಾನರ ಸಲಹೆಗಾರ ಸಮಿತಿಯು ಮಾಡಿದ ವಿಲಕ್ಷಣ ಸೂಚನೆಗಳ ಪುನರವತಾರವಾಗಿದೆ. ಇದು ಕಾರ್ಯ ಸಾಧ್ಯವೇ ಅಲ್ಲವಾಗಿದೆ. ಆದ್ದರಿಂದ ಪ್ರಜೆಗಳು ಮುಂದಿನ ರಾಜ್ಯ ವ್ಯವಸ್ಥೆಯನ್ನು ರಚಿಸಲು ಒಂದು ಸ್ವತಂತ್ರ [illegible] ಮತ್ತು ಪ್ರಜಾ ನಿಯೋಜಿತವಾದ [illegible] ವಿರ್ಮಾಣವಾಗಬೇಕು ಮತ್ತು ಶಾಸನ ಸಭೆಗಳು ಹೊಸದಾಗಿ ಚುನಾಯಿಸಲ್ಪಡಬೇಕು. ಈ ಏರ್ಪಾಡು ಸಾಂಗವಾಗಿ ನೆರವೇರಬೇಕಾದರೆ ಈಗಿರುವ ಸರ್ಕಾರ ಮಾರ್ಪಾಡಾಗಬೇಕು. ಹೊಸದಾಗಿ ಪ್ರಜಾ ಸಮ್ಮತವಾದ ನಾಯಕರಿಂದ ಕೂಡಿದ ಮಂತ್ರಿ ಮಂಡಲವು ಒಡನೆಯೇ ಏರ್ಪಡಬೇಕು, ರಾಜಕೀಯ ಬಂದಿಗಳನ್ನೆಲ್ಲಾ ಬಿಡುಗಡೆ ಮಾಡಿ, ಅವರುಗಳೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದು ಸೂಚಿಸಿದ್ದಾರೆ

ಸಂಗೀತ

ಮೈಸೂರು ೧

ಈ ದಿನ ರಾತ್ರಿ ೯ ಗಂಟೆಗೆ ಸಾಧ್ವಿ ಆಫೀಸಿನ ಮಹಡಿ ಮೇಲೆ ಮ॥ ರಾ॥ ಶ್ರೀ॥ ಹೆಚ್ [illegible] ಅವರ ಸಂಗೀತವನ್ನು ಏರ್ಪಡಿಸಲಾಗಿದೆ. ಸರ್ವರಿಗೂ ಆಹ್ವಾನವುಂಟು

ಒತ್ತಾಯದಿಂದ ದವಸದ ಸ್ವಾಧೀನ

ಮಂಡ್ಯದ ಸಮೀಪದಲ್ಲಿರುವ ಹಳ್ಳಿಯೊಂದರಲ್ಲಿ ರೈತರು ತಮ್ಮ ಹೆಚ್ಚಿನ ದಾಸ್ತಾನು ದವಸವನ್ನು ಸರ್ಕಾರಕ್ಕೆ ಕೊಡಲು [illegible], ಆದ್ದರಿಂದ ಅವುಗಳನ್ನು [illegible] ಮಿಲಿಟರಿಯವರ ಸಹಾಯದಿಂದ ವಶಪಡಿಸಿಕೊಳ್ಳಲಾಯಿತೆಂದು ವರದಿಯಾಗಿದೆ.

○ [illegible] ಸಂಸ್ಥಾನಾಧೀಶರಾದ ದಾ[illegible] ಶ್ರೀ [illegible] ಬಹದ್ದೂರ್ ಅವರು. ತಮ್ಮ ಪ್ರಜೆಗಳಿಗೆ [illegible] ಸರ್ಕಾರವನ್ನು [illegible] ವರದಿಯಾಗಿದೆ

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ೧

ಮಹಾತ್ಮ ಗಾಂಧಿಯವರ ಜನ್ಮೋತ್ಸವವನ್ನು ಆಚರಿಸಲು ಸಂಘದ ವಿಶೇಷ ಸಭೆಯು ಅಕ್ಟೋಬರ್ ೨ ನೇ ತಾರೀಖು ಗುರುವಾರ ಬೆಳಿಗ್ಗೆ ೮ ಗಂಟೆಗೆ ಸಂಘದಲ್ಲಿ ನಡೆಯುತ್ತದೆ ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ

ಗಾಂಧೀಜಿ ಜಯಂತಿ

ಅಕ್ಟೋಬರ್ ೨ ನೇ ತಾ॥ ಗುರುವಾರ ಪೂಜ್ಯ ಬಾಪೂಜಿಯವರ ೭೮ ನೇ ಜನ್ಮ ಜಯಂತಿಯು ನಡೆಯುವ ಪ್ರಯುಕ್ತ ಆ ಯಾ ವೊಹಲ್ಲಾ ವಿದ್ಯಾರ್ಥಿ ಸಂಸ್ಥೆಗಳೂ ಮತ್ತು ನಾಗರೀಕರೂ ಅಂದು ಬೆಳಿಗ್ಗೆ ಪ್ರಭಾತ ಫೇರಿ ನಡೆಯಿಸಿ ೮ ಗಂಟೆಗೆ ಸುಬ್ಬರಾಯನಕೆರೆಯಲ್ಲಿ ನಡೆಯುವ ಧ್ವಜಾರೋಹಣಕ್ಕೆ ಬಂದು ಅಲ್ಲಿಂದ ಬಾಪೂಜಿಯವರ ಭಾವಚಿತ್ರದ ಮೆರವಣಿಗೆಯಲ್ಲಿ ಎಲ್ಲರೂ ಭಾಗವಹಿಸಿ ಪೂಜ್ಯ ಬಾಪೂರವರಿಗೆ ಯಶಸ್ಸನ್ನು ಕೋರಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಕೋಶಾಧ್ಯಕ್ಷರು ಪ್ರಾರ್ಥಿಸಿರುತ್ತಾರೆ.

ಶ್ರೀ ಕೃಷ್ಣರಾಜೇಂದ್ರ ವಿ ಕ್ಲಬ್ಬಿನ ಆವರಣದಲ್ಲಿ ಗಾಂಧಿ ಜಯಂತಿ ಆಚರಣೆ ಪ್ರಯುಕ್ತ ನಾಳೆ ಬೆಳಿಗ್ಗೆ ೯ ಘಂಟೆಗೆ ಧ್ವಜಾರೋಹಣವೂ ಮತ್ತು ಸಂಜೆ ಬಹಿರಂಗ ಸಭೆಯೂ ನಡೆಯುವುವು.

ಯುವಕರ ಸಂಘ, ಇಟ್ಟಿಗೆಗೂಡು

ಮೇಲ್ಕಂಡ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ 'ಗಾಂಧಿ ಜಯಂತಿ'ಯನ್ನು ಎಸ್. ಬಿ. ರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಸುತ್ತೇವೆ. ಎಲ್ಲರೂ ಭಾಗವಹಿಸಬೇಕಾಗಿ ಕೋರಿದೆ.

ಕೋಮುವಾರು ಗಲಭೆ ಅಂತ್ಯಕ್ಕೆ ಜಿನ್ನಾ ಘೋಷಣೆ ಅಗತ್ಯ

ದೇಶದಲ್ಲಿ ಈಗ ತಲೆದೋರಿರುವ ಕೋಮುವಾರು ಹತ್ಯಾಕಾಂಡವು ಮುಕ್ತಾಯಗೊಂಡು ಶಾಂತಿ ನೆಲೆಸಬೇಕಾದರೆ ಪಾಕಿಸ್ತಾನವು ಮತೀಯ ಸರ್ಕಾರವಲ್ಲವೆಂದೂ, ಇಸ್ಲಾಂ ತತ್ವದ ಆಧಾರದ ಮೇಲೆ ಸರ್ವರಿಗೂ ಸಮಾನಾವಕಾಶವಿತ್ತು ಮುಸ್ಲಿಮೇತರರ ಹಿತರಕ್ಷಣೆ ಮಾಡುವುದೇ ತಮ್ಮ ಸರ್ಕಾರದ ಧ್ಯೇಯವೆಂದೂ ಮಿ॥ ಜಿನ್ನಾರವರು ಕೂಡಲೇ ಘೋಷಿಸಬೇಕೆಂದು ಪಾಕಿಸ್ತಾನದಲ್ಲಿ ಭಾರತದ ಹೈ ಕಮೀಷನರಾಗಿರುವ ಶ್ರೀ ಶ್ರೀ ಪ್ರಕಾಶರವರು ಜಿನ್ನಾರವರನ್ನು ಒತ್ತಾಯಪಡಿಸಿರುವರು.

ಜನರಲ್ ಸರ್ವೀಸಸ್ ಮೈಸೂರು

ಚಂದಾದಾರರಲ್ಲಿ ವಿನಂತಿ

ಶ್ರೀ ಸೇವಾ ಪ್ರಯುಕ್ತ ... ಸಾಧ್ವಿ ಪತ್ರಿಕೆಯನ್ನು ಇದೇ ಅಕ್ಟೋಬರ್ ಮೊದಲನೇ ತಾರೀಖಿನಿಂದ ರಾಜಧಾನಿಯಲ್ಲಿರುವ ನಮ್ಮ ಚಂದಾದಾರರೆಲ್ಲರಿಗೂ ... [illegible]

... [illegible]

ಷೇಖ್ ಅಬ್ದುಲ್ಲಾರವರಿಗೆ ಪ್ರಜಾ ಸಮ್ಮೇಳನದ ಅಧ್ಯಕ್ಷತೆ

ಜಮ್ಮು ಕಾಶ್ಮೀರ ಸರ್ಕಾರವು ಷೇಖ್ ಅಬ್ದುಲ್ಲಾರವರನ್ನು ಬಿಡುಗಡೆ ಮಾಡಿರುವುದನ್ನು ಸ್ವಾಗತಿಸಿ ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧ್ಯಕ್ಷತೆಯನ್ನು ಮಿ॥ ಅಬ್ದುಲ್ಲಾರವರಿಗೇ ವಹಿಸುವುದಾಗಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುವರು.

ಪುದುಕೋಟೆಗೆ ರಾಜ್ಯಾಂಗ ಸಭೆ

ಪುದುಕೋಟೆ ಸಂಸ್ಥಾನದಲ್ಲಿ ಜಾರಿಗೆ ತರಬೇಕಾಗಿರುವ ಸುಧಾರಣೆಗಳನ್ನು ಪರಿಶೀಲಿಸಿ ಸಲಹೆ ನೀಡಲು ಅಲ್ಲಿನ ಮಹಾರಾಜರು ಒಂದು ರಾಜ್ಯಾಂಗ ಸಭೆಯನ್ನು ನೇಮಿಸಲು ನಿರ್ಧರಿಸಿರುವರೆಂದು ವರದಿಯಾಗಿದೆ

ಚರ್ಚಿಲ್ಲರಿಗೆ ಗಾಂಧೀಜಿ ಆಹ್ವಾನ

ಭಾರತದಲ್ಲಿ ಈಗ ನಡೆಯುತ್ತಿರುವ ಕೋಮುವಾರು ಗಲಭೆ ಬಗ್ಗೆ ಮಿ॥ ಚರ್ಚಿಲ್ಲರು ಮಾಡಿರುವ ಕಟುತರವಾದ ಟೀಕೆಯನ್ನು ಗಾಂಧೀಜಿಯವರು ಖಂಡಿಸಿ, ಪರಿಸ್ಥಿತಿಯನ್ನು ತಾವೇ ಖುದ್ದಾಗಿ ಬಂದು ಪರಿಶೀಲಿಸಬೇಕೆಂದು ಮಿ॥ ಚರ್ಚಿಲ್ಲರಿಗೆ ಗಾಂಧೀಜಿ ಆಹ್ವಾನ ಕೊಟ್ಟಿದ್ದಾರೆ

ಪಾಟ್ನಾ ವಿದ್ಯಾರ್ಥಿಗಳ ಪ್ರತಿಭಟನೆ

ಪಾಟ್ನಾ ವಿಶ್ವವಿದ್ಯಾನಿಲಯದ ಎಂ. ಎ. ಪರೀಕ್ಷೆಯ ೩೦ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಗಳ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು, ಪರೀಕ್ಷಾ ಭವನದಿಂದ ಹೊರಗೆ ಬಂದರೆಂದು ವರದಿಯಾಗಿದೆ

'ಟವರಿನಲ್ಲಿ ಬೇಸರಗೊಂಡ ಸೇಪಿ ಟೌನಿನ ಮಹಿಳೆಯೊಬ್ಬಳು ಮರಣಹೊಂದಲು ಒಂದು ಚೀಲ ಮೊಳೆಗಳನ್ನು ನುಂಗಿದಳೆಂದೂ ಆದರೆ ಜೀವಿಸುವ ಆಸೆಯಿಂದ ಮರುಕ್ಷಣವೇ ಆಸ್ಪತ್ರೆಗೆ ಹೋಗಿ ಆಪರೇಷನ್ ಮೂಲಕ ಹೊಟ್ಟೆಯಲ್ಲಿದ್ದ ಸುಮಾರು ೨ ಪೌಂಡು ಮೊಳೆಗಳನ್ನು ತೆಗೆಸಿದಳೆಂದೂ ವರದಿಯಾಗಿದೆ

OPERA TALKIES

Daily 3 Shows

Tarzan's Adventures

— with —

Hermon Brix

Morning shows from 3-10-47 for 4 days

Daily at 10-30 a m

How Green WAS My Valley

— with —

Walter Pidgeon, Maureen O'hara Donald Crisp

ಹೈದರಾಬಾದಿನಲ್ಲಿ ದಸ್ತಗಿರಿ

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷರು ಕಾರ್ಯದರ್ಶಿಗಳಾದ ಶ್ರೀ ರಂಗನೇಕರ್‌ರವರನ್ನು ಹೈದರಾಬಾದ್ ರಕ್ಷಣಾ ಶಾಸನ ರೀತ್ಯಾ ಬಂಧಿಸಲಾಗಿದೆ.

ಸುಲ್ತಾನ್ ಬಜಾರಿನಲ್ಲಿ ಸತ್ಯಾಗ್ರಹ ಹೂಡಿದ್ದರೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದ ಶ್ರೀ ಎಂ. ಎಸ್. ರಾಮರೆಡ್ಡಿ ರವರನ್ನು ದಸ್ತಗಿರಿ ಮಾಡಲಾಗಿದೆ.

ಮುರ್ಷಿದಾಬಾದಿನಲ್ಲಿ ಸತ್ಯಾಗ್ರಹ ಹೂಡಿದರೆಂದು ತ್ರಿಮುಲಗಿರಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀಧರರಾಯರು ಮತ್ತು ಇತರ ನಾಲ್ಕು ಸದಸ್ಯರನ್ನೂ ಬಂಧಿಸಲಾಗಿದೆ.

ಪಾಕಿಸ್ತಾನದಲ್ಲಿ ಕಾಡು ಹಂದಿಗಳ ಬೇಟೆ

ಸಿಂಧ್ ಪ್ರಾಂತ್ಯದ ಅನೇಕ ಪ್ರದೇಶಗಳಲ್ಲಿ ಕಾಡು ಹಂದಿಗಳು ಪೈರುಗಳನ್ನು ನಾಶಪಡಿಸುತ್ತಿವೆಯೆಂದು ಅವುಗಳನ್ನು ಕೊಂದು ಹಾಕಲು ಪಾಕಿಸ್ತಾನ ಸರ್ಕಾರ ಕಾರ್ಯಕ್ರಮ ತೆಗೆದು ಕೊಳ್ಳಲಿದೆ

ರೈಲ್ವೆ ಕೆಲಸಗಾರರ ಸಹಾಯ

ಸೌತ್ ಇಂಡಿಯನ್ ರೈಲ್ವೆಯ ೧೧೮ ಮಂದಿ ಕೆಲಸಗಾರರು ಪಂಜಾಬ್ ನಿರಾಶ್ರಿತರನ್ನು ಸಾಗಿಸುವ ರೈಲುಗಳಲ್ಲಿ ಕೆಲಸ ಮಾಡಲು ಮಧುರೆಯಿಂದ ಸಧ್ಯದಲ್ಲಿ ದೆಹಲಿಗೆ ಹೋಗಲಿದ್ದಾರೆ

ಭಾರತಿ ಸ್ಮಾರಕ ಸಮಾರಂಭ

ಮದರಾಸ್ ಪ್ರಾಂತ್ಯದ ಎಟ್ಟಿಯಾಪುರಂನಲ್ಲಿ ಅಕ್ಟೋಬರ್ ೧೬ ನೇ ತಾ॥ ನಡೆಯಲಿರುವ ಭಾರತಿ ಸ್ಮಾರಕ ಸಮಾರಂಭಕ್ಕೆ ಸಂಯುಕ್ತ ಪ್ರಾಂತ್ಯದ ಗವರ್ನರಾದ ಶ್ರೀಮತಿ ಸರೋಜಿನಿ ನಾಯ್ಡುರವರು ಬರಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ

ವುಡ್‌ಲ್ಯಾಂಡ್ಸ್

26-9-47 ರಿಂದ

ಅಪೋಲೋ ಪ್ರಾರಂಭ

ಪ್ರತಿ ದಿನ ೩ ಆಟಗಳು

ಪ್ರಕಾಶ್ ಪಿಕ್ಚರ್ಸ್‌ರವರ

ಅಪೂರ್ವವಾದ ಚಲನ ಚಿತ್ರ

ನಮೂನಾ

(ಹಿಂದಿ)

—: ತಾರಾಗಣ :—

ರಂಜನ್ ಮತ್ತು ಜೀವನ್

ರಾಜಕಮಲ್

ತಾ॥ 1-10-47 ರಿಂದ

೨ ನೇ ವಾರ

ಫಿಲ್ಮಿಸ್ತಾನ್ ಕಂಪೆನಿಯವರ

8 ದಿನಗಳು

(ಹಿಂದಿ)

—: ಪಾತ್ರ :—

ಅಶೋಕ ಕುಮಾರ್, ವಿ. ಹೆಚ್. ದೇಸಾಯಿ, ವೀರಾ, ನ್ಯಾರೋ

ಭಾರತ ವಿದ್ಯಾರ್ಥಿಗಳ ಪರದಾಟ

ಲಂಡನ್ನಿಗೆ ಭಾರತದಿಂದ ವಿದ್ಯಾಭ್ಯಾಸಕ್ಕಾಗಿ ಬಂದಿರುವ ಅನೇಕ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಸ್ಥಳವಿಲ್ಲದೆ, ಬೀದಿಗಳಲ್ಲಿ ಸುಮ್ಮನೆ ತಿರುಗಾಡುತ್ತಿದ್ದಾರಂತೆ.

ಬ್ರಿಟಿಷ್ ವಿಶ್ವವಿದ್ಯಾನಿಲಯಗಳಲ್ಲಿ ಶೇ. ೯೦ ರಷ್ಟು ಸ್ಥಾನಗಳನ್ನು ಯುದ್ಧದಿಂದ ಹಿಂತಿರುಗುವವರಿಗೆ ಮೀಸಲಾಗಿಟ್ಟಿರುವುದರಿಂದ, ಭಾರತದಿಂದ ಹೊರಡಲಿರುವ ವಿದ್ಯಾರ್ಥಿಗಳು ತಮಗೆ ಮೊದಲು ಸ್ಥಾನ ದೊರೆತಿದೆಯೆಂದು ತಿಳಿದುಕೊಂಡು, ನಂತರ ಪ್ರಯಾಣ ಮಾಡಬೇಕೆಂದು ಅಧಿಕಾರಿಗಳು ಎಚ್ಚರಿಕೆ ಕೊಟ್ಟಿದ್ದಾರೆ

ಪಶ್ಚಿಮ ಪಂಜಾಬಿನಿಂದ ಹಿಂದೂಗಳ ರವಾನೆ

ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೆ ಈ ಕಳೆದ ೧೫ ದಿವಸಗಳಲ್ಲಿ ೫ ಲಕ್ಷ ಹಿಂದೂಗಳೂ, ಮತ್ತು ೫ ಲಕ್ಷ ಮುಸ್ಲಿಮರು ಪಾಕಿಸ್ತಾನ ಪ್ರದೇಶಕ್ಕೂ ತೆರಳಿದ್ದಾರೆ.

ಆಹಾರದಲ್ಲಿ ದುಂದು ವೆಚ್ಚ

ಅಮೇರಿಕದ ಜನಗಳು ತಾವು ಕೊಂಡ ಆಹಾರದಲ್ಲಿ ಶೇಕಡ ೧೫ ರಷ್ಟು ಭಾಗವನ್ನು ವ್ಯರ್ಥ ಹಾಳು ಮಾಡುವರೆಂದು ಅಮೇರಿಕದ ವ್ಯವಸಾಯ ರಾಜಕೀಯವರು ತಿಳಿಸಿದ್ದಾರೆ

ಪಾಕಿಸ್ತಾನದಿಂದ ಅಕ್ಕಿ

ಪಶ್ಚಿಮ ಪಾಕಿಸ್ತಾನದಿಂದ ಪೂರ್ವ ಬಂಗಾಳಕ್ಕೆ ೭ ಸಾವಿರ ಟನ್ ಅಕ್ಕಿಯನ್ನು ಕಳುಹಿಸಲಾಗಿದೆ

೭೧ ದಿವಸಗಳ ಕರ್ಫ್ಯೂ ರದ್ದು

ರಂಗೂನ್ ನಗರದ ಮೇಲೆ ಜುಲೈ ೧೯ ನೇ ತಾ॥ ನಿಂದ ಹಾಕಲಾಗಿದ್ದ ೭೧ ದಿವಸಗಳ ಕರ್ಫ್ಯೂವನ್ನು ರದ್ದು ಮಾಡಲಾಗಿದೆ.

ಮದರಾಸಿಗೆ ೯ ಸಾವಿರ ಟನ್ ಅಕ್ಕಿ

ಮದರಾಸ್ ಪ್ರಾಂತ್ಯಕ್ಕೆ ೯ ಸಾವಿರ ಟನ್ ಅಕ್ಕಿಯನ್ನು ಭಾರತ ಸರ್ಕಾರ ಕೊಟ್ಟಿದೆ ಅದರ ಪೈಕಿ ೩ ಸಾವಿರ ಟನ್ ಒರಿಸ್ಸಾ ಅಕ್ಕಿಯನ್ನು ವೈಜಾಗ್ ಪಟ್ಟಣಕ್ಕೂ, ೫ ಸಾವಿರ ಟನ್ ಹೊರಗಿನ ಅಕ್ಕಿಯನ್ನು ಮಲಬಾರಿಗೂ ವಿಂಗಡಿಸಲಾಗಿದೆ

ಉತ್ಸಾಹಿಗಳಾದ ಉಪಾಧ್ಯಾಯರು ಬೇಕಾಗಿದ್ದಾರೆ

ತಿರುಮಕೂಡಲು ನರಸೀಪುರದಲ್ಲಿರುವ ವಿದ್ಯೋದಯ ಗ್ರಾಮ ಪ್ರೌಢಶಾಲೆಯಲ್ಲಿ ಕೆಲಸ ಮಾಡಲು ಸೈನ್ಸ್ ಮತ್ತು ಆರ್ಟ್ಸ್ ಪದವೀಧರರು ಬೇಕಾಗಿದ್ದಾರೆ, ವೇತನ ಬಿ. ಟಿ. ಶಿಕ್ಷಣ ಪಡೆದವರಿಗೆ ... [illegible] ಪ್ರಾರಂಭ ವೇತನವನ್ನು ಕೊಡಲಾಗುವುದು. ನಿವೃತ್ತರೂ ಅನುಭವಿಗಳೂ ಇದ್ದರೆ ಉತ್ತಮ. ಈ ಮಾಹೆ ೧೫ ರ ವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು.

Apply to :- Box No 3 C/o ಸಾಧ್ವಿ, ಮೈಸೂರು

Edited printed and published by A. K. Nagarajan at the Sadhvi Press D. S. Lab road Mysore

ರೋ೯ ನಂ. 508 ॥ ವಂದೇ ಮಾತರಂ ॥ ಅಂದಿನ ಪತ್ರಿಕೆ 3 ಕಾಸು



ಸಂಪುಟ ೭] ಗುರುವಾರ ೨-೧೦-೪೭ [ಸಂಚಿಕೆ ೪೩

ರೈಲ್ವೆ ಸತ್ಯಾಗ್ರಹ ಮುಕ್ತಾಯಗೊಂಡಿತು

ಪ್ರೊ ಲೀಸರ ಮೇಲೆ ಮೆಣಸಿನ ಪುಡಿ ಎರಚಲು ಯತ್ನ

ಮೈಸೂರು ೨

ರಾಜಧಾನಿಯ ಸೂರಡಿ ರಸ್ತೆಯಲ್ಲಿ ನಿನ್ನೆ ಸಂಜೆ ಪೋಲೀಸ್ ವ್ಯಾನು ಹೋಗುತ್ತಿರುವಾಗ ವಿದ್ಯಾರ್ಥಿಗಳ ಗುಂಪೊಂದು ಮೆಣಸಿನ ಪುಡಿ ಮತ್ತು ಸೀಗೆಪುಡಿಯನ್ನು ವ್ಯಾನಿನ ಮೇಲೆ ಎರಚಲು ಯತ್ನಿಸಿತೆಂದೂ, ಆದಕ್ಕಾಗಿ ಸುಮಾರು ೨೦-೨೫ ವಿದ್ಯಾರ್ಥಿಗಳನ್ನು ಬಂಧಿಸಿದರೆಂದೂ ಹೇಳಲಾಗಿದೆ.

ಹೈದರಾಬಾದಿಗೆ ಹೊಸ ರಾಜ್ಯಾಂಗ ಸಲಹೆಗಾರರು

ಹೈದರಾಬಾದಿನ ನಿಜಾಮರ ರಾಜ್ಯಾಂಗ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್‌ಟನ್ನರ ಸ್ಥಾನದಲ್ಲಿ ಸರ್ ಸುಲ್ತಾನ್ ಅಹ ಮುದ್‌ರವರು ನಿಜಾಮರ ರಾಜ್ಯಾಂಗ ಸಲಹೆಗಾರರಾಗಿ ಆರಿಸಲ್ಪಡಬಹುದೆಂದು ವರ್ತಮಾನ ವಿದಿತವಾಗಿದೆ.

ಮೈಸೂರು ವಕೀಲರ ಸಂಘ

ಮೈಸೂರು ೨

ರಾಜಧಾನಿಯ ವಕೀಲ ಸಂಘದವರು ಶ್ರೀ ಎಂ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ವಿಶೇಷ ಸಭೆ ನಡೆಸಿ ಇತ್ತೀಚಿನ ಶ್ರೀಮನ್ಮಹಾರಾಜರವರ ಘೋಷಣೆ ಬಗ್ಗೆ ಒಂದು ನಿರ್ಣಯವನ್ನು ಮಾಡಿದ್ದಾರೆ.

ನೂತನ ರಾಜ್ಯಾಂಗ ಸಮಿತಿಗೆ ಶಾಸನ ಸಭೆಗಳಿಂದ ಚುನಾಯಿತ ಸದಸ್ಯರುಗಳು ಮಾತ್ರ ಇರಬೇಕೆಂದೂ, ಆ ಸಮಿತಿಗೆ ಚುನಾಯಿತ ಅಧ್ಯಕ್ಷರಿರಬೇಕೆಂದೂ, ದಿವಾನರ್ ಕೈವಾಡವಿರಕೂಡದೆಂದೂ, ಈಗಿನ ಸರ್ಕಾರ ಹೋಗಿ, ನೂತನ ತಾತ್ಕಾಲಿಕ ಸರ್ಕಾರ ಏರ್ಪಾಡಾಗಬೇಕೆಂದೂ ಸಲಹೆ ಮಾಡಿದ್ದಾರೆ.

ಚಲನಚಿತ್ರ ತಯಾರಿಕೆ

ನಂಜನಗೂಡು ಶಾರದಾ ಟಾಕೀಸ್ ಮಾಲೀಕರಾದ ವಿ. ಕೆ. ಮೋಹನವೇಲುರವರು ಚಲನಚಿತ್ರ ತಯಾರಿಸಲು ಶ್ರೀ ಪಿಕ್ಚರ್ಸ್ ಎಂಬ ಸಂಸ್ಥೆಯನ್ನು ಆ ದಿನ ಶುಭ ಮುಹೂರ್ತದಲ್ಲಿ ಸ್ಥಾಪಿಸಿ, ಹರಿಶ್ಚಂದ್ರ ಕಥೆಯನ್ನು ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ತಯಾರಿಸಲು ಕಥೆಗೆ ಸಂಬಂಧಪಟ್ಟ ತಿರುಪತಿ, ಪಂಡರಾಪುರ, ಕಂಚಿ ಮೊದಲಾದ ಕ್ಷೇತ್ರಗಳಿಗೆ ಕೆಲವು ನಟರೊಡನೆ ಶೀಘ್ರದಲ್ಲಿಯೇ ಹೋಗುವವರಾಗಿದ್ದಾರೆ. ಇದರ ಇಷ್ಟಾರ್ಥವನ್ನು ದೇವರು ಅತಿ ಶೀಘ್ರದಲ್ಲಿ ಈಡೇರಿಸಿ ಶೀರ್ಘಯಶಸ್ವಿಯಾಗಿ ಮಾಡಲೆಂದು ಹಾರೈಸುವೆ.

ಜನರಲ್ ಏಜೆನ್ಸೀಸ್ ಮೈಸೂರು.
ಚಂದಾದಾರರಲ್ಲಿ ವಿನಂತಿ

ಶ್ರೀ ಸೇವಾರ್ ಓವ್. ಪ್ರಯುಕ್ತ ನಿಮ್ಮ ಸಾಧ್ವಿ ಪತ್ರಿಕೆಯನ್ನು ಇದೇ ಅಕ್ಟೋಬರ್ ಮೊದಲನೇ ತಾರೀಖಿನಿಂದ ರಾಜಧಾನಿಯಲ್ಲಿರುವ ನಮ್ಮ ಚಂದಾದಾರರೆಲ್ಲರಿಗೂ ಕಳುಹಿಸುವ ವ್ಯವಸ್ಥೆ ಮಾಡಿದೆ. ಚಂದಾದಾರರುಗಳು ಮೂರು ತಿಂಗಳ ಅಡ್ವಾನ್ಸನ್ನು ರಶೀತಿಯನ್ನು ಪಡೆದು ಕಳುಹಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಶ್ರೀಕಂಠಸ್ವಾಮಿ,
ಏಜೆಂಟ್
ಸಾಧ್ವಿ ಮೈಸೂರು

ರೈಲ್ವೆ ಸತ್ಯಾಗ್ರಹ ಮುಕ್ತಾಯ

ಮೈಸೂರು ೨

ಸೆಪ್ಟೆಂಬರ್ ೭ ನೇ ತಾರೀಖು ಮಧ್ಯರಾತ್ರಿಯಿಂದ ಪ್ರಾರಂಭವಾದ ಮೈಸೂರು ರೈಲ್ವೆ ಮುಷ್ಕರವು ಇಂದಿಗೆ ಮುಕ್ತಾಯಗೊಂಡಿತು.

ರೈಲ್ವೆ ಸತ್ಯಾಗ್ರಹದ ಪ್ರಥಮ ಡಿಕ್ಟೇಟರಾದ ಶ್ರೀ ಹೆಚ್. ಡಿ. ರಾಜ್‌ರವರು ಈ ದಿನ ಬೆಳಗ್ಗೆ ರೈಲ್ವೆ ಇನ್ಸ್ಟಿಟ್ಯೂಟಿನಲ್ಲಿ ಸಭೆ ನಡೆಸಿ ರೈಲ್ವೆ ಮುಷ್ಕರವು ಕೊನೆಗೊಂಡಿತೆಂದೂ, ನಾಳೆಯಿಂದ ಎಲ್ಲರೂ ಕೆಲಸಕ್ಕೆ ಹಿಂತಿರುಗಬೇಕೆಂದೂ ತಿಳಿಸಿದರು.

ಮೈಸೂರು ರೈಲ್ವೆಯ ಲೋಕೊ, ಟ್ರಾಫಿಕ್ ಮತ್ತು ಇಂಜನಿಯರಿಂಗ್ ಶಾಖೆಯ ನೌಕರರುಗಳು ಈ ದಿನ ಕೆಲಸಕ್ಕೆ ಹಿಂತಿರುಗಿದರು.

ಅವರುಗಳು ಈ ದಿನ ರೈಲ್ವೆ ಸ್ಟೇಷನ್ನಿನಲ್ಲಿ ಗಾಂಧೀಜಿಯವರ ಜನ್ಮೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಅಧಿಕಾರಿಗಳೂ ಅದರಲ್ಲಿ ಭಾಗವಹಿಸಿದ್ದರು.

ಸರ್ಕಾರಿ ಭವನಗಳ ಮೇಲೆ ರಾಷ್ಟ್ರಧ್ವಜ

ಮೈಸೂರು ೨

ಪೂಜ್ಯ ಗಾಂಧೀಜಿಯವರ ವರ್ಧಂತಿಯ ಸಂಬಂಧವಾಗಿ ಈ ದಿನ ರಾಜಧಾನಿಯ ಎಲ್ಲಾ ಸರ್ಕಾರಿ ಭವನಗಳ ಮೇಲೆಯೂ ಮೈಸೂರು ಧ್ವಜದ ಜೊತೆಗೆ ಭಾರತ ಡೊಮಿನಿಯನ್ ಧ್ವಜವನ್ನು ಹಾರಿಸಿ ಮಹಾತ್ಮರಿಗೆ ಗೌರವವನ್ನು ಸಲ್ಲಿಸಲಾಯಿತು.

ಹ್ಯಾಮಿಲ್ಟನ್ ಭವನದ ಮೇಲೂ ಈ ದಿನ ಭಾರತ ಡೊಮಿನಿಯನ್ ಧ್ವಜವು ಹಾರಾಡುತ್ತಿದ್ದಿತು.

ಜಿಲ್ಲಾ ಟ್ರಾಫಿಕ್ ಬೋರ್ಡ್ ಸಮಿತಿಯ ಸಭೆ

ಮೈಸೂರು ಜಿಲ್ಲೆಯ ಟ್ರಾಫಿಕ್ ಬೋರ್ಡ್ ಸಲಹಾ ಸಮಿತಿಯ ಸಭೆಯು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹುಣಸೂರು-ಚನಗೋಡು ಮತ್ತು ಹೊಸ ಅಗ್ರಹಾರ-ಕೊಣನೂರುಗಳಿಗೆ ಹೊಸದಾಗಿ ಬಸ್ಸುಗಳನ್ನು ನಡೆಸಲು ಅನುಮತಿ ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಪಾಕಿಸ್ತಾನ್ ನಿರಾಶ್ರಿತರು

ಪಾಕೀಸ್ತಾನಕ್ಕೆ ೧೦,೦೦೦ ಸಾವಿರ ನಿರಾಶ್ರಿತರು ಬಂದಿದ್ದಾರೆ. ಅವರ ಪೈಕಿ, ೬೦ ಸಾವಿರ ಮಂದಿ ಹೈದರಾಬಾದಿನಲ್ಲೂ, ೧೫ ಸಾವಿರ ಜನರನ್ನು ಕರಾಚಿಯಲ್ಲೂ ಇಡಲಾಗಿದೆ.

ಗಾಂಧಿ ಜಯಂತಿ

ಮೈಸೂರು ೨

ಮಹಾತ್ಮಾಗಾಂಧಿಯವರ ೭೮ ನೇ ಜನ್ಮೋತ್ಸವದ ಸಂಬಂಧವಾಗಿ ಈ ದಿನ ಬೆಳಗ್ಗೆ ನಗರದ ನಾನಾ ಭಾಗಗಳಲ್ಲಿ ಧ್ವಜಾರೋಹಣಗಳಾದುವು.

ಸುಬ್ಬರಾಯನ ಕೆರೆಯ ಮೈದಾನದಲ್ಲಿ ಡಾ॥ ಪಾರ್ಥಸಾರಥಿ ಅ. ಪಂಡಿತರು ಭಾರತ ರಾಷ್ಟ್ರಧ್ವಜವನ್ನು ಹಾರಿಸಿದರು. ಮಹಾತ್ಮಾಗಾಂಧಿಯವರಿಂದ ಸ್ಥಾಪಿತವಾದ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಂಗವಾದ ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರ್ಕಾರಕ್ಕಾಗಿ ನಡೆಸುತ್ತಿರುವ ಸತ್ಯಾಗ್ರಹದಲ್ಲಿ ಪ್ರತಿಯೊಬ್ಬರೂ ಸಿಪಾಯಿಗಳಾಗಿ ಭಾಗವಹಿಸಬೇಕೆಂದೂ, ಎಲ್ಲರೂ ಕಾಂಗ್ರೆಸ್ಸಿನ ತತ್ವವಾದ ಶಾಂತಿ, ಶಿಸ್ತು, ಸತ್ಯ ಮತ್ತು ಅಹಿಂಸೆಗಳನ್ನು ಪರಿಪಾಲಿಸಬೇಕೆಂದೂ ಶ್ರೀ ಪಂಡಿತರು ನುಡಿದರು. ಮೊನ್ನೆ ಹಲವರು ವಿದ್ಯಾರ್ಥಿಗಳ ಸಭೆಯ ಪ್ರಸಂಗವನ್ನು ಸೂಚಿಸಿ ಯಾರೂ ಆ ರೀತಿ ಹಿಂಸಾ ವೃತ್ತಿಗೆ ಇಳಿಯಬಾರದೆಂದು ವಿದ್ಯಾರ್ಥಿಗಳನ್ನು ಎಚ್ಚರಿಸಿದರು. ಈಗ ಭಾರತ ಡೊಮಿನಿಯನ್ನಿನ ಅಧ್ಯಕ್ಷಸ್ಥಾನವನ್ನಲಂಕರಿಸಿರುವವರು ನಮ್ಮವರೇ ಆಗಿದೆ; ಆದ್ದರಿಂದ ಮೈಸೂರಿನ ಜನ ಕ್ರಿಯಾಶೀಲರಾಗಬೇಕು. ಅದು ಬರಿ ಮಾತಲ್ಲ. ಕಾರ್ಯರೂಪಕ್ಕೆ ತರಬೇಕು. ನಮ್ಮ ಸಂಸ್ಥಾನದ ಪ್ರತಿಯೊಬ್ಬರಿಗೂ ಆಸ್ಥಾನ ಸಿಗಬೇಕು ಎಂಬ ವಿದ್ಯಾರ್ಥಿಗಳಿಗೆ ಮಹಾತ್ಮರು ಇತ್ತಿರುವ ಸಂದೇಶವನ್ನು ಸಭೆಯಲ್ಲಿ ಓದಿದರು. ಅನಂತರ ಶ್ರೀಮತಿ ಇಂದಿರಾದೇವಿಯವರಿಂದ ಭಾಷಣವಾದ ಬಳಿಕ ಸಭೆಯು ಮುಕ್ತಾಯವಾಗಿ ಎಲ್ಲರೂ ಮೆರವಣಿಗೆ ಹೊರಟರು.

ಮನುವನದಲ್ಲಿ ಮಹಿಳೆಯರು ಶ್ರೀಮತಿ ರಾಮೇಶ್ವರಮ್ಮನವರ ಅಧ್ಯಕ್ಷತೆಯಲ್ಲಿ ಭಾರತ ಧ್ವಜವನ್ನು ಹಾರಿಸಿ ಬಾಪೂಜಿಯವರಿಗೆ ಗೌರವವನ್ನು ವ್ಯಕ್ತಪಡಿಸಿದರು.

ರಾಜಧಾನಿಯ ಪತ್ರಿಕೋದ್ಯೋಗಿಗಳು ತಮ್ಮ ಸಂಘದ ಕಛೇರಿಯಲ್ಲಿ ಜಯಂತಿಯನ್ನು ಆಚರಿಸಿದರು.

ಹೈದರಾಬಾದ್ ಸಂಸ್ಥಾನದಲ್ಲಿ ಬೆಳೆಯು ಅಭಾವವಾಗಿರುವುದರಿಂದ ನಿಜಾಮರ ಸರ್ಕಾರ ಕೆಲವು ಕಾನೂನುಗಳನ್ನು ಜಾರಿಗೆ ತರಲಾಗುವುದು. ಈ ಬಗ್ಗೆ ಶಾಸನ ಸಭೆಯು ಅನುಮತಿಯೂ ದೊರೆತಿದೆ.

ಗಾಂಧೀಜಿ ಮೆರವಣಿಗೆ

ಮೈಸೂ[ರು]

ಮಹಾತ್ಮಾ ಗಾಂಧಿಜಿಯವರ ಜನ್ಮೋತ್ಸವದ ಅಂಗವಾಗಿ ಈ ದಿನ [ಬೆಳಗ್ಗೆ] ನಗರದ ಮುಖ್ಯ ಬೀದಿಗಳಲ್ಲಿ ಭಾರಿ ಮೆರವಣಿಗೆ ನಡೆಯಿತು. ಸಾವಿರಾರು ಜನ ಅದರಲ್ಲಿ ಭಾಗವಹಿಸಿದ್ದರು.

ಒಂದು ಜೋಡಿ ಎತ್ತುಗಳಿಂದ ಎಳೆಯಲ್ಪಟ್ಟ ರಥದಲ್ಲಿ ಗಾಂಧಿಯವರ ಚಿತ್ರವನ್ನು ಅಲಂಕರಿಸಿ ಸುಬ್ಬರಾಯನ ಕೆರೆಯಿಂದ ಹೊರಟು ನಾರಾಯಣಶಾಸ್ತ್ರಿ ರಸ್ತೆ, ರಾಮವಿಲಾಸ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆಯಿಂದ ಹ್ಯಾಮಿಲ್ಟನ್ ಭವನದ ಮುಂದೆ ಹಾದು, ಅಶೋಕ ರಸ್ತೆಯಿಂದ ದೊಡ್ಡಗಡಿಯಾರ, ಕೃಷ್ಣರಾಜೇಂದ್ರ ವೃತ್ತದಿಂದ ಸಯ್ಯಾಜಿರಾವ್ ರಸ್ತೆಯ ಮೂಲಕ ಮೆರವಣಿಗೆ ಬಂದು ಪುರಭವನದ ಆವರಣದಲ್ಲಿ ಮುಕ್ತಾಯವಾಯಿತು. ಯಾವ ಗಲಭೆಯೂ ಇಲ್ಲದೆ ಶಾಂತರೀತಿಯಿಂದ ಮೆರವಣಿಗೆ ನಡೆಯಿತು. ಪೋಲೀಸರು ಅಡ್ಡಿಮಾಡಲಿಲ್ಲ.

ಸತ್ಯಾಗ್ರಹಿಗಳ ಬಂಧನ

ಮೈಸೂರು

ಕೊಡಮತ್ತೂರು ಜಿಲ್ಲೆಯ ಭವಾನಿ ಕಾಂಗ್ರೆಸ್ ಸಮಿತಿಯ ಪರವಾಗಿ ಅವರು ಇಲ್ಲಿಗೆ ಸತ್ಯಾಗ್ರಹ ಹೂಡಲು ಬಂದಿದ್ದ ನವರು ಸತ್ಯಾಗ್ರಹಿಗಳನ್ನು ಮುತ್ತಿಕೊಂಡು ಊರಿನಿಂದ ಬಂದಿದ್ದ ಶ್ರೀ ಕೃಷ್ಣನ್ ಮತ್ತು ನಿನ್ನೆ ಸಂಜೆ ದೊಡ್ಡ ಗಡಿಯಾರದ ಆವರಣದಲ್ಲಿ ಪೋಲೀಸರು ದಸ್ತಗಿರಿ ಮಾಡಿದರು.

ಸತ್ಯಾಗ್ರಹಿಗಳಿಗೆ ಶಿಕ್ಷೆ

ಬೆಂಗಳೂರು

ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಲು ಸತ್ಯಮಂಗಲದಿಂದ ಬಂದಿದ್ದ ಗೋವಿಂದ ಮತ್ತು ಕೊಯಮತ್ತೂರಿನಿಂದ ಬಂದ ೨೪ ಮಂದಿಗೆ ತಲಾ ೩ ತಿಂಗಳ ಕಠಿಣ ಶಿಕ್ಷೆಯನ್ನು ಬೆಂಗಳೂರು ನ್ಯಾಯಾಧೀಶರು ವಿಧಿಸಿದ್ದಾರೆ.

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಎಸ್. ಡಿ. ಜೋಷಿ ಮತ್ತು ತಿರುವಾಂಕೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಶ್ರೀ ಉನ್ನಿನಾಥನವರಿಗೆ ಒಂದು ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ.

ಮೆರವಣಿಗೆ ನಡೆಸಿದರೆಂಬ ಅಪಾದನೆ ಮೇಲೆ ಇಪ್ಪತ್ತು ಹುಡುಗಿಯರಿಗೆ ಕೋರ್ಟು ಏಳುವ ವರೆಗೂ ಶಿಕ್ಷೆ ವಿಧಿಸಲಾಯಿತು.

ದೆಹಲಿಯಲ್ಲಿ ಸಾಮೂಹಿಕ ದಂಡ

ದೆಹಲಿ ಪ್ರಾಂತದಲ್ಲಿ ಉಂಟಾಗಿರುವ ಅರಾಜಕತೆಯನ್ನು ತಡೆಗಟ್ಟಲು ಉಪಯೋಗಿಸಲಾಗುತ್ತಿರುವ ಪೋಲೀಸ್ ಮತ್ತು ಮಿಲಿಟರಿ ಪಡೆಗಳ ವೆಚ್ಚವನ್ನು ಪ್ರಜೆಗಳ ಮೇಲೆ ಹೊರಿಸಿ ಸಾಮೂಹಿಕ ದಂಡವನ್ನು ವಸೂಲು ಮಾಡುವ ಬಗ್ಗೆ ಭಾರತ ಸರ್ಕಾರವು ಆಲೋಚಿಸುತ್ತಿದೆಯೆಂದು ವರದಿಯಾಗಿದೆ.

Edited printed and published by A. R. Nagarajan at the Sadhvi

ಸಾಧ್ವಿ

ತಾ|| ೨-೧೦-೪೭ ಗುರುವಾರ

ಸ್ವತಂತ್ರ ಭಾರತದ ನಿರ್ಮಾಪಕ ಬಾಪೂಜಿ

ಇಂದು ಜಗದ್ವಂದ್ಯ ಮೋಹನದಾಸ ಕರಮಚಂದ ಗಾಂಧೀಜಿಯವರಿಗೆ ಎಪ್ಪತ್ತೆಂಟು ವರ್ಷಗಳು ತುಂಬಿ ಎಪ್ಪತ್ತೊಂಭತ್ತನೇ ಜಯಂತಿಯು ಭಾರತದ ಅಷ್ಟೇ ಅಲ್ಲ ಎಲ್ಲ ಮತದವರಿಂದಲೂ ನಾಡ ಹಬ್ಬದಂತೆ ಆಚರಿಸಲ್ಪಡುತ್ತದೆ. ಮಹಾತ್ಮರು ಆ ದಿನ ಸಾರ್ವತ್ರಿಕವಾಗಿ ಪ್ರಾರ್ಥನೆ ಮತ್ತು ನೂಲುವುದರಲ್ಲಿ ನಿರತರಾಗುವುದಾಗಿ ಹೇಳಿದ್ದಾರೆ. ಭಾರತದಲ್ಲಿ ಉನ್ನತ ಅಧಿಕಾರವನ್ನು ಗಳಿಸಬೇಕೆಂಬ ಆಸೆಯಿಂದ ವಿದೇಶಕ್ಕೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭಾರತಕ್ಕೆ ಹಿಂದಿರುಗಿದರು. ಆದರೆ ಭಾರತಕ್ಕೆ ಹಿಂದಿರುಗಿದ ಅವರು ಕೆಲವು ಕಾಲಾನಂತರ ದಕ್ಷಿಣ ಆಫ್ರಿಕಕ್ಕೆ ತೆರಳಿ ವಕೀಲಿ ವೃತ್ತಿಯನ್ನವಲಂಬಿಸಿದರು. ಅಲ್ಲಿನ ಬಿಳಿಯರು ಭಾರತೀಯರ ವಿಷಯದಲ್ಲಿ ತೋರುತ್ತಿದ್ದ ದಬ್ಬಾಳಿಕೆ, ಅನ್ಯಾಯಗಳಿಂದ ಅವರು ಭಾರತೀಯರ ಉನ್ನತಿಗಾಗಿ ಶ್ರಮಿಸಲು ಟೊಂಕಕಟ್ಟಿ ನಿಂತು ಅಲ್ಲಿನ ಭಾರತೀಯರನ್ನು ಸಂಘಟಿತರನ್ನಾಗಿ ಮಾಡಿ ಅವರ ಸ್ಥಿತಿಗಳನ್ನು ಉತ್ತಮಗೊಳಿಸಿದರು.

ಈ ವೇಳೆಗೆ ಭಾರತದಲ್ಲಿಯೂ ಸ್ವಾತಂತ್ರ್ಯದಾಹ ತಲೆದೋರಿತ್ತು. ಗಾಂಧೀಜಿ ಹಿಂದಿರುಗಿ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ತಮ್ಮ ಮೇಧಾಶಕ್ತಿ ಮತ್ತು ಪ್ರಭಾವಾತಿಶಯದಿಂದ ಜನರನ್ನು ಎಚ್ಚರಗೊಳಿಸಿದರು. ರಕ್ತದಿಂದ ಸ್ವಾತಂತ್ರ್ಯ ದೊರಕುವುದಿಲ್ಲ; ಹಾಗೆ ದೊರೆತ ಸ್ವಾತಂತ್ರ್ಯ ಶಾಶ್ವತವಾಗುವುದಿಲ್ಲ, ಎಡೆಬಿಡದ ಸ್ವಾರ್ಥ ತ್ಯಾಗಗಳಿಂದ ನಮ್ಮ ಗುರಿಯನ್ನು ಸಾಧಿಸಬೇಕು. ಸತ್ಯ ಅಹಿಂಸೆಗಳು ಸ್ವಾತಂತ್ರ್ಯ ಸಮರದ ಸೂತ್ರಗಳಾಗಬೇಕು—ಎಂಬ ತತ್ವವನ್ನು ಜನಸಮುದಾಯಕ್ಕೆ ಸಾರಿದರು.

ಮೊದಲನೆಯ ಮಹಾ ಸಂಗ್ರಾಮದ ಸಮಯದಲ್ಲಿ ತಮ್ಮ ಎದುರಾಳಿಗಳಾದ ಬ್ರಿಟಿಷರಿಗೆ ಪೂರ್ಣ ನೆರವನ್ನೂ ನೀಡಿದರು. ಅವರ ಸ್ನೇಹ, ಸೌಹಾರ್ದಗಳಿಂದ ಸ್ವಾತಂತ್ರ್ಯಗಳಿಸಬೇಕೆಂದು ಹೇಳುತ್ತಿದ್ದರು. ಯುದ್ಧ ಮುಕ್ತಾಯಗೊಂಡೊಡನೆಯೇ ಅವರನ್ನೂ, ಇತರ ನಾಯಕರನ್ನೂ ಸರ್ಕಾರದವರು ಬಂಧಿಸಿದರು. ದೇಶದ್ಯಂತ ಗಲಭೆಯಾದುವು. ಜನರ ಪ್ರತಿಭಟನೆಯನ್ನು ತಾಳಲಾರದೆ ಸರ್ಕಾರವು ನಾಯಕರನ್ನು ಬಿಡುಗಡೆ ಮಾಡಿತು.

ನಾಯಕರುಗಳು ಬಿಡುಗಡೆಯಾದನಂತರ ಪುನಃ ಸಂಧಾನವನ್ನು ಆರಂಭಿಸಿದರು. ಅದು ಪುನಃ ವಿಫಲವಾಯಿತು. ಗಾಂಧೀಜಿಯವರು ಸಾವಿರದ ಒಂಭೈನೂರ ಇಪ್ಪತ್ತೆಂಟರಲ್ಲಿ ಉಪ್ಪಿನ ಸತ್ಯಾಗ್ರಹ ಚಳವಳಿಯನ್ನು ಹೂಡಿದರು. ವಿಶೇಷವಾದ ಪರಿವರ್ತನೆ ಭಾರತದ ಸ್ವಾತಂತ್ರ್ಯ ಸಮರ[illegible] ... ಅವರೂ ಸಹ ... [illegible]

[illegible]

ಭಾಗಗಳಿಂದಲೂ ಒತ್ತಾಯಗಳು ಬಂದ ಮೇಲೆ ಮತ್ತೆ ಸರ್ಕಾರದವರ ಸಂಧಾನ ನಡೆಯಿತು. ಭಾರತೀಯರ ಸ್ವಾಸ್ಥ್ಯ, ಮಾನಗಳು ಹಿಚುಕಿದವು. ಅನೇಕ ಬಾರಿ ಅವರನ್ನು ಬಂಧನದಲ್ಲಿಡಲಾಗಿತ್ತು. ಉಪವಾಸಗಳಂತೂ ಲೆಕ್ಕವಿಲ್ಲದಷ್ಟು ದಿನಗಳು ನಡೆದುವು. ಕಾಂಗ್ರೆಸ್ಸಿನ ಧ್ಯೇಯವಾದ ಸ್ವಾತಂತ್ರ್ಯ ಸಾಧನೆಯು ಮಾತ್ರ ನೆರವೇರಲಿಲ್ಲ. ಎಲ್ಲ ಬಗೆಯ ಅಹಿಂಸಾಸ್ತ್ರಗಳನ್ನೂ ಪ್ರಯೋಗಿಸಿದ ಅವರು ಕ್ವಿಟ್ ಇಂಡಿಯಾ-ಚಳವಳಿಯನ್ನು ಹೂಡಿದರು. ವಿಶ್ವಸಮರ ನಡೆಯುತ್ತಿದ್ದ ಕಾಲವದು. ಬ್ರಿಟಿಷರಿಗೆ ಹೊರಗಡೆಯಿಂದಲೂ, ಒಳಗಡೆಯಿಂದಲೂ ತೊಂದರೆಗಳು ಸಂಭವಿಸಿತು. ಭಾರತದ ಎಲ್ಲ ಭಾಗಗಳಲ್ಲಿಯೂ ಆಂದೋಳನ ತಲೆದೋರಿತು. ಸರ್ಕಾರಕ್ಕೆ ತಲೆಕೆಟ್ಟಿತು. ಗುಂಡಿನೇಟುಗಳ ಸುರಿಮಳೆ-ಮರಣಗಳು ಸಂಭವಿಸಿದವು. ಆಗಲೂ ಜನರು ಅಹಿಂಸಾ ತತ್ವವನ್ನು ಅನುಸರಿಸಬೇಕೆಂದು ಬಾಪೂಜಿ ನುಡಿದರು. ಎಲ್ಲ ನಾಯಕರುಗಳನ್ನೂ ಸರ್ಕಾರ ಬಂಧಿಸಿತು. ಪತ್ನಿ ಕಸ್ತೂರಿಬಾಯಿ ಗಾಂಧಿ, ಮಹಾದೇವ ದೇಸಾಯ್‌-ಮೊದಲಾದವರು ಕಾರಾಗೃಹದಲ್ಲೇ ಮೃತರಾದರು. ಚಳುವಳಿಯು ನಿಲ್ಲಲಿಲ್ಲ. ಕಡೆಗೆ ಬೇರೆ ದಾರಿಗಾಣದೆ ಸರ್ಕಾರ ನಾಯಕರನ್ನು ಬಿಡುಗಡೆ ಮಾಡಿ ಸಂಧಾನ ಮಾಡಿಕೊಂಡಿತು. ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲಗಳೇರ್ಪಟ್ಟವು. ಯುದ್ಧ ಮುಕ್ತಾಯವಾದನಂತರ ಬ್ರಿಟಿಷ್ ಕ್ಯಾಬಿನೆಟ್ ನಿಯೋಗವು ಬಂದಿತು. ಸಂಧಾನ ವಿಫಲವಾಯಿತು. ಬ್ರಿಟಿಷ್ ಲೇಬರ್ ಸರ್ಕಾರದವರು ಸಮಸ್ಯೆಯನ್ನು ಬಿಡಿಸಲೆತ್ನಿಸಿದರು. ಭಾರತದ ವಿಭಜನೆಯಾಗಬೇಕೆಂಬ ಬೇಡಿಕೆಯನ್ನು ಮಿ|| ಜಿನ್ನಾರವರ ಮೂಲಕ ಹೂಡುವಂತೆ ಮಾಡಿದರು. ಹೇಗಾದರೂ ಬ್ರಿಟಿಷರು ಭಾರತವನ್ನು ಬಿಟ್ಟುಹೋಗಬೇಕೆಂದು ಹೇಳಿ ಪಾಕಿಸ್ತಾನ ಬೇಡಿಕೆಗೂ ಸಮ್ಮತಿಸಲಾಯಿತು. ಭಾರತ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳ ನಿರ್ಮಾಣವಾಯಿತು.

ಭಾರತದ ವಿಭಜನೆಯನ್ನು ಗಾಂಧೀಜಿ ಅಂಗೀಕರಿಸಲಿಲ್ಲ. ತಾವು ಪಾಕಿಸ್ತಾನದ ಪ್ರಜೆಯೆಂದೂ, ತಾವು ಅಲ್ಲೇ ಹೋಗಿ ನೆಲಸುವುದಾಗಿಯೂ ಅವರು ಹೇಳತೊಡಗಿದರು. ಅಷ್ಟರಲ್ಲೇ ಪಂಜಾಬಿನಲ್ಲಿ ಕೋಮುವಾರು ಗಲಭೆ ತಲೆದೋರಿತು. ಅದೇ ವೇಳೆಗೆ ಕಲ್ಕತ್ತೆಯಲ್ಲಿ ಹಿಂದೂಗಳು ಮುಸ್ಲಿಮರ ಕೊಲೆ ಮಾಡತೊಡಗಿದರು. ಗಾಂಧೀಜಿ ಕಲ್ಕತ್ತೆಗೆ ತೆರಳಿ ಅಲ್ಲಿ ಶಾಂತಿ ಸ್ಥಾಪನೆಗೆ ಯತ್ನಿಸಿದರು. ಬಂಗಾಳದ ಮಾಜಿ ಪ್ರಧಾನಿಯಾದ ಎ.|| ಸುಹ್ರವರ್ದಿಯವರೂ ಸಹ ಅವರೊಡನೆ ಶಾಂತಿ ಸ್ಥಾಪನೆಗೆ ತೊಡಗಿದರು. ಗಾಂಧೀಜಿ ಕಲ್ಕತ್ತೆಯಲ್ಲಿ ಮತ್ತೆ ಉಪವಾಸವನ್ನೂ ಸಹ ಹೂಡಬೇಕಾಯಿತು. ಕೊನೆಗೆ ಅಲ್ಲಿ ಶಾಂತಿ ನೆಲೆಸಿತು. ಈಗ ಅವರು ದೆಹಲಿಗೆ ತೆರಳಿದ್ದಾರೆ.

ತಮ್ಮ ಜೀವಮಾನ ಪರ್ಯಂತ ಸತತವಾಗಿ ಶ್ರಮಿಸಿದ ಮಹಾತ್ಮರು ಈಗ ಭಾರತದ ವಿಭಜನೆಯಾಗಿರುವುದಕ್ಕಾಗಿ ವಿಷಾದಿಸುವಂತೆ ... ಭಾರತದ ಕಣ್ಮಣಿಯಾಗಿ ದೇವರಂತೆ ಎಲ್ಲರಿಂದಲೂ ಸನ್ಮಾನಿಸಲ್ಪಡುತ್ತಿರುವ ಗಾಂಧೀಜಿಯವರ ಸ್ವಾತಂತ್ರ್ಯದ ಕನಸು ... ಸಾರ್ಥಕವಾದ ಜೀವನ ... ಪೂರ್ಣಗೊಳಿಸಲೆಂದು ನಾವು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ.

|| ಶ್ರೀ ಮೋಹನದಾಸ ಕರಮಚಂದ ಗಾಂಧಿಕಿ ಜೈ ||

ಶ್ರೀ ಹರಿಚರಣ ಕಮಲವನು ನಂಬಿರುವ
ಗಾಂಧಿ
ಸ್ನೇಹ ಲೋಭ ಮದಮತ್ಸರವ ತೊರೆದಿಹ ಗಾಂಧಿ
ಹಂಭಕ್ತ ಮೋಹ್‌ ಸ್ವದೇಶಿ ಭಕ್ತ ಎನಿಸಿ
ಗಾಂಧಿ
ಸರ್ವನ್ನದೊಳ್‌ ಮಾತೃಶಿರೋಮಣಿ
ಗಾಂಧಿ
ದಾನವಾಂತರರೊಳು ಶ್ರೇಷ್ಠ ಮೋಹನ
ಗಾಂಧಿ
ಸರ್ವಕಾಲವಿಳಿತ ಸತ್ಯಾಗ್ರಹ ಮಹಿಮ
ಗಾಂಧಿ
ಕರ್ಮಶೀಲರ ನರವರ ಹಿಂಸ ಬಾಹಿರ ಗಾಂಧಿ
ಧರಾಧೀಶರ ನಿರತನ ವ್ರತದಲಿ ಜ
ಗಾಂಧಿ
ಮಹಿಮ ದಾರುಣ ಸ್ವಾತಂತ್ರ್ಯದ ಲಮ
ಗಾಂಧಿ
ಚಂದ್ರ ಸಾಕ್ಷಿಯಲಹಿಂಸಾ ಸಾಧಿಸಿದ
ಗಾಂಧಿ
ವರುಣನವೆ ಲೇಸು ದುಷ್ಟನ ಮುರಿ ಗ
ಗಾಂಧಿ
ಗಾಂಭೀರ್ಯ ಸುಖ ಸಂಪದ ವೀರ ಮ
ಹಿಮ ಗಾಂಧಿ
ಧೀರೋದಾರ ಶಾಂತಾತ್ಮಕ ಕಾರುಣಿಕ
ಗಾಂಧಿ
ಕೀರ್ತಿವಂತ ಸುಮಹಿಮ ಬಲವರ್ಧಿತ
ಗ
ಜೈ ಶ್ರೀ ಮೋಹನದಾಸ ಕರಮಚಂದ
ಗಾಂಧಿಕಿ ||

ಮೈಸೂರು ೨-೧೦-೪೭ ಯೋಚಲನ

WOOD LAN[D]
Morning shows f[rom]
3.10.47 for 4 da[ys]
Daily at 10.30 a.[m]
Going My W[ay]
—: With :—
Bing Crosby
ವುಡ್‌ಲ್ಯಾಂ[ಡ್]
26-9-47 ರಿಂ[ದ]
ಅಪೋಲೋ ಪ್ರಾರ[ಂಭ]
ಪ್ರತಿ ದಿನ ೩ ಆಟ
ಅಪೂರ್ವವಾದ ಚಲನ
ನಯೀ ವ
(ಹಿಂದಿ)
—: ಪಾತ್ರಗಳು :—
ರಂಜನ್ ಮತ್ತು ಜೀವ

OPERA TALKI[ES]
Daily 3 Show[s]
Tarzan's
Advent[ures]
— with —
Hermon Bri[x]
Morning shows f[rom]
3-10-47 for 4 d[ays]
Daily at 10-30
How Gree[n]
WAS
My Valle[y]
— with —
Walter Pidgeo[n]
Maureen O'H[ara]
Donald Crisp

ರಾಜಕಮ[ಲ್]
ತಾ|| 1-10-47 ರ
೨ ನೇ ವಾರ
ಫಿಲ್ಮಿಸ್ತಾನ್ ಕಂಪೆನಿಯ
8 ದಿನಗ[ಳು]
(ಹಿಂದಿ)
—: ಪಾತ್ರ :—
ಅಶೋಕ ಕುಮಾ[ರ್]
ವಿ. ಹೆಚ್. ದೇಸಾ[ಯಿ]
ವೀರಾ, ಸ್ವಾರೋ[ಜ್]
Morning shows fro[m]
3-10-47 for 4 days a[t]
at 10.30 a m
Oklahoma K[id]
Featuring
Humphrey Bogart J[ames]
Cagney, Rosemary L[ane]

ಫೋನ್ ನಂ. 508 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೩-೧೦-೪೭ [ಸಂಚಿಕೆ ೪೪

ರೈಲ್ವೆ ಪರಿಸ್ಥಿತಿ ಇನ್ನೂ ಸಂದಿಗ್ಧವಾಗಿದೆ

ಗಾಂಧೀಜಿಯವರ ಮೆರವಣಿಗೆ

ಮೈಸೂರು ೩

ನಿನ್ನೆ ಬೆಳಿಗ್ಗೆ ಕನ್ನೇಗೌಡನ ಕೊಪ್ಪಲಿನಲ್ಲಿ ಶ್ರೀ ಕೆ. ಬೋರಯ್ಯನವರಿಂದ ಧ್ವಜಾರೋಹಣ ಮತ್ತು ಧ್ವಜವಂದನೆ ನಡೆಯಿತು. ಮಧ್ಯಾಹ್ನ ೩-೩೦ ಗಂಟೆಗೆ ಜೋಡಿ ಎತ್ತುಗಳಿಂದ ಎಳೆಯಲ್ಪಡುವ ರಥದಲ್ಲಿ ದಿವ್ಯವಾಗಿ ಅಲಂಕೃತವಾಗಿದ್ದ ಗಾಂಧೀಜಿಯವರ ಭಾವಚಿತ್ರದ ಮೆರವಣಿಗೆಯು ಹೊರಟು ನೂರಡಿ ರಸ್ತೆಯಿಂದ ನಾರಾಯಣ ಶಾಸ್ತ್ರಿ ರಸ್ತೆಯ ಮೂಲಕ ಇರ್ವಿನ್ ರಸ್ತೆ, ಸಯ್ಯಾಜೀರಾವ್ ರಸ್ತೆಯ ಮಾರ್ಗವಾಗಿ ಮ್ಯಾಜೆಸ್ಟಿಕ್ ಭವನವನ್ನು ಹಾದು ಚಾಮರಾಜೇಂದ್ರ ರಸ್ತೆಯನ್ನು ಸೇರಿ ಜಯಘೋಷಪೂರ್ವಕ ತಿಲಕ್ ನಗರದ ಮಾರ್ಗವಾಗಿ ರಾತ್ರಿ ೧೧ ಘಂಟೆಗೆ ಕನ್ನೇಗೌಡನ ಕೊಪ್ಪಲನ್ನು ಸೇರಿತು. ಅನಂತರ ಶ್ರೀ ... ಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ... ಗ ಸಭೆಯಲ್ಲಿ ಶ್ರೀಗಳಾದ ಕೆ. ಬೋರಯ್ಯ ಮತ್ತು ನರಸಯ್ಯನವರುಗಳು ಭಾಷಣ ಮಾಡಿದರು.

... ವಿದ್ಯಾರ್ಥಿನಿಯರ ಸಂಘದ ಆಶ್ರಯದಲ್ಲಿ ನಿನ್ನೆ ಶ್ರೀ ಎಸ್. ಭದ್ರಯ್ಯನವರ ... ಮಹಾತ್ಮರ ಜಯಂತಿಯನ್ನು ... ಲಾಯಿತು. ಶ್ರೀ ಎಸ್. ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ... ಎಂ. ಹೆಚ್. ಸೋಮಸುಂದರಂ, ... ಹೆಚ್. ಆರ್. ಕೃಷ್ಣಮೂರ್ತಿ ... ರವರು ಭಾಷಣ ಮಾಡಿದರು.

ಗಾಂಧೀಜಿ ಜಯಂತಿ

... ಸೂರು ಇಟ್ಟಿಗೆಗೂಡು ಯುವಕ ... ದ ಆಶ್ರಯದಲ್ಲಿ ನಿನ್ನೆ ಮಧ್ಯಾಹ್ನ ... ಗಾಂಧೀ ಜಯಂತಿ'ಯು ಆಕುಶಲಿ ... ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ... ಮಹಾತ್ಮರ ಜೀವನ ಚರಿತ್ರೆಯ ... ರವರ ಮುಖ್ಯ ಆಯುಧಗಳಂತಿರುವ ಸತ್ಯ, ಅಹಿಂಸೆ ಮತ್ತು ಶಾಂತಿಯನ್ನು ... ವಹಿಸಿ ಯುವಕರೂ ಅದನ್ನು ಅನುಸರಿಸಿ ಮುಂದಿನ ಭಾರತದ ಏಳಿಗೆಗಾಗಿ ದುಡಿಯಬೇಕೆಂದು ತಿಳಿಸಿ ತಾವು ರಚಿಸಿದ ... ವಾರಿಕೆಯನ್ನು ಓದಿದರು. ... ನಡೆದ ನಂತರ ಎಲ್ಲರಿಗೂ ಸಿಹಿ ... ನ್ನು ಹಂಚಲಾಯಿತು.

... ಸೂರು ಚಾಮುಂಡಿ ಪುರದಲ್ಲಿರುವ ... ಸಂಘದ ಕಾರ್ಯಾಲಯದಲ್ಲಿ ಮಹಾತ್ಮಾ ಗಾಂಧೀಜಿಯವರ ೭೯ ನೇ ಜಯಂತ್ಯುತ್ಸವವನ್ನು ನಡೆಸಲಾಯಿತು. ಬೆಳಿಗ್ಗೆ ಧ್ವಜಾರೋಹಣ, ಸಂಜೆ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ... ದೆಯಿತು.

ನಗರದಲ್ಲಿ ಹಂಗಾಮಿ ಸರ್ಕಾರ

... ನಗರ ಸಂಸ್ಥಾನವು ಪಾಕಿಸ್ತಾನಕ್ಕೆ ... ದನ್ನು ಪ್ರತಿಭಟಿಸಲು ಅಲ್ಲಿ ಗೊಂ... ವಾಗಿದೆ. ಜುನಾಘಡದ ... ಮಂತ್ರಿಮಂಡಲವು ರಾಜಕೋಟೆ... ನಲ್ಲಿ ತಮ್ಮದೇ ಹಂಗಾಮಿ ಸರ್ಕಾರ ... ರಚಿಸಿದೆ. ಈ ಸರ್ಕಾರದ ... ಸ್ವಯಂಸೇವಕರುಗಳು ರಾಜಕೋಟೆಯಲ್ಲಿನ ಜುನಾಘಡ ಭವನವನ್ನು ವಶಪಡಿಸಿಕೊಂಡು, ಸಶಸ್ತ್ರ ಯುವಕರು ... ನ್ನು ಕಾಯುತ್ತಿದ್ದಾರೆ. ಅದಕ್ಕೆ ... ಜುನಾಘಡ್ ಹೌಸ್" ... ನಾಮಕರಣ ಮಾಡಲಾಗಿದೆ.

ಸತ್ಯಾಗ್ರಹಿಗಳ ದಸ್ತಗಿರಿ

ಮೈಸೂರು ೩

ಅರಮನೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಗೋಪಿಚೆಟ್ಟಿಪಾಳ್ಯದಿಂದ ಬಂದ ಇಬ್ಬರು ಮತ್ತು ಮೂಡಿಗೆರೆಯಿಂದ ಬಂದ ಕೃಷ್ಣೇಗೌಡ ಮತ್ತು ಇತರ ನಾಲ್ಕು ಮಂದಿ ವಿದ್ಯಾರ್ಥಿ ಕಾಂಗ್ರೆಸ್ ಸತ್ಯಾಗ್ರಹಿಗಳನ್ನು ಬಸ್ ಸ್ಟ್ಯಾಂಡ್ ಬಳಿ ದಸ್ತಗಿರಿ ಮಾಡಲಾಯಿತು.

ಸತ್ಯಾಗ್ರಹ ಸಮಾಚಾರ

ಹತ್ತು ಮಂದಿ ಸತ್ಯಾಗ್ರಹಿಗಳಿಂದ ಕೂಡಿ ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಹೊರಟ ಸತ್ಯಾಗ್ರಹಿಗಳ ೩ ತಂಡವನ್ನು ಮೊನ್ನೆ ಪೋಲೀಸರು ಬೆಂಗಳೂರಿನಲ್ಲಿ ದಸ್ತಗಿರಿ ಮಾಡಿದ್ದಾರೆ.

ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಶಾಸನದ ಪ್ರಕಾರ ಆಪಾದಿತರಾದ ಶ್ರೀ ಕೆ. ಆರ್. ವೆಂಕಟರಾಮಯ್ಯ ಮತ್ತು ಇತರ ೧೪ ಮಂದಿಗಳಿಗೆ ಜಿಲ್ಲಾ ನ್ಯಾಯಾಧೀಶರು ೩ ತಿಂಗಳ ಕಠಿಣ ಸಜಾ, ೩೦ ರೂ. ದಂಡ, ತಪ್ಪಿದರೆ ಮತ್ತೊಂದು ವಾರ ಕಠಿಣ ಸಜಾ ವಿಧಿಸಿದ್ದಾರೆ.

ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಆಪಾದಿತರಾದ ಶ್ರೀ ನಾರಾಯಣರಾವ್, ರಂಗಸ್ವಾಮಿ ಮತ್ತಿತರ ೧೭ ಜನರಿಗೆ ತಲಾ ಎರಡು ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಶಿವಮೊಗ್ಗೆಯ ನ್ಯಾಷನಲ್ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಕೆ. ಕೃಷ್ಣರಾವ್ ಭದ್ರಾವತಿಯಲ್ಲಿ ದಸ್ತಗಿರಿಯಾಗಿದ್ದಾರೆ. ಧಾರವಾಡದ ಕಡೆಯಿಂದ ಶಸ್ತ್ರಸಜ್ಜಿತರಾಗಿ ಬರುತ್ತಿದ್ದ ನಾಲ್ಕು ಜನರ ತಂಡವೊಂದನ್ನು ಚಿತ್ರದುರ್ಗ ಜಿಲ್ಲೆಯ ಹಡದಿ ಎಂಬಲ್ಲಿ ಬಂಧಿಸಲಾಗಿದೆ. ಶಿವಮೊಗ್ಗೆಯ ಇಬ್ಬರು ಪೋಲೀಸ್ ಕಾನ್ಸ್ಟೇಬಲ್ಲುಗಳನ್ನೂ ಮತ್ತು ಒಬ್ಬ ದಫೇದಾರರನ್ನೂ, ಭಾರತದ ಗಡಿ ಪ್ರದೇಶದವರೆಗೆ ಎಳೆದುಕೊಂಡು ಹೋಗಲಾಗಿತ್ತೆಂದೂ, ಆದರೆ ಅಷ್ಟರಲ್ಲೇ ಮೈಸೂರು ಪೋಲೀಸರು ಅವರುಗಳನ್ನು ಬಿಡಿಸಿಕೊಂಡರೆಂದೂ ತಿಳಿದು ಬಂದಿದೆ.

ತಾಯಿ ಮಕ್ಕಳ ಆತ್ಮಹತ್ಯೆ

ಮದರಾಸಿನ ಕಾಂಬರಂನಲ್ಲಿ ೩೪ ವರ್ಷದ ಕನ್ನಮ್ಮಾಳ್ ಎಂಬಾಕೆಯು ತನ್ನನ್ನು ಸಂರಕ್ಷಿಸುವವರೂ ಇಲ್ಲವೆಂದು ತನ್ನ ಎರಡು ಮಕ್ಕಳೊಡನೆ ಬಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಳೆಂದು ವರದಿಯಾಗಿದೆ.

ಮೈಸೂರು ರೈಲ್ವೆ ಮುಷ್ಕರ ಪರಿಸ್ಥಿತಿ

ಮೈಸೂರು ೩

ಮೈಸೂರು ರೈಲ್ವೆ ಮುಷ್ಕರ ಪರಿಸ್ಥಿತಿಯು ಈಗ ಅತಿ ಸಂದಿಗ್ಧ ಪರಿಸ್ಥಿತಿಗೆ ಒಳಗಾಗಿದೆ. ರೈಲ್ವೆ ಸತ್ಯಾಗ್ರಹದ ಪ್ರಥಮ ಸರ್ವಾಧಿಕಾರಿಯಾದ ಶ್ರೀ ಜೆಚ್. ಡಿ. ರಾಜ್‌ರವರು ಕೆಲಸಗಾರರೆಲ್ಲರೂ ಈ ದಿನದಿಂದ ಕೆಲಸಕ್ಕೆ ಹಿಂತಿರುಗಬೇಕೆಂದು ಮನವಿ ಮಾಡಿದ್ದರೂ ಸಹ, ಕೇವಲ ಸ್ವಲ್ಪ ಜನರು ಮಾತ್ರ ಕೆಲಸಕ್ಕೆ ಹಾಜರಾಗಿದ್ದಾರೆ. ರೈಲ್ವೆ ಆಫೀಸು ಮತ್ತು ಸ್ಟೇಷನ್ನಿನ ನೌಕರರುಗಳು, ವರ್ಕ್‌ಶಾಪಿನಲ್ಲಿ ಮೂರು ಜನರು ಹೊರತು, ಮತ್ತಾರೂ ಕೆಲಸಕ್ಕೆ ಹಿಂತಿರುಗಿಲ್ಲ. ಈಗ ನಡೆದಿರುವ ಒಪ್ಪಂದವು ಕೆಲಸಗಾರರಿಗೆ ಸಮಾಧಾನವುಂಟು ಮಾಡಿಲ್ಲವೆಂದೂ, ಅದು ಕೇವಲ ಬಲಾತ್ಕಾರಕ್ಕೆ ಒಳಗಾದುದೆಂದೂ, ತಮ್ಮ ಬೇಡಿಕೆಗಳಾವುವೂ ಈಡೇರಿಲ್ಲವೆಂದೂ ಕೆಲಸಗಾರರು ಹೇಳುತ್ತಿದ್ದಾರೆ. ಈಗ ಬಂಧನದಲ್ಲಿರುವ ತಮ್ಮ ನಾಯಕರುಗಳ ಬಿಡುಗಡೆಯಾಗಿ ಎಲ್ಲರೂ ಒಟ್ಟಿಗೆ ಕಲೆತು, ತೀರ್ಮಾನಿಸುವವರೆಗೂ ಕೆಲಸಗಾರರು ಹಿಂತಿರುಗಕೂಡದೆಂದು ಒಂದು ಮನವಿ ಹೊರಡಿಸಿದ್ದಾರೆ.

ಡಿಟೆನ್ಯೂಗಳ ಬಿಡುಗಡೆ

ಮೈಸೂರು ೩

ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿಯಾಗಿ ಮೈಸೂರು ಜೈಲಿನಲ್ಲಿದ್ದ ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯ, ಶ್ರೀ ಶ್ರೀ ಸಭಾ ಸದಸ್ಯರಾದ ಸಾಲಿಗ್ರಾಮದ ತಮ್ಮಯ್ಯ ಮತ್ತು ಕೃಷ್ಣರಾಜನಗರದ ಮೂವರನ್ನು ಈ ದಿನ ಬಿಡುಗಡೆ ಮಾಡಲಾಗಿದೆ.

ಮುಸ್ಲಿಮರು ಬೊಂಬಾಯಿ ಬಿಟ್ಟಿಲ್ಲ

ಬೊಂಬಾಯಿ ಮತ್ತು ಇತರ ಕೈಗಾರಿಕೆ ನಗರಗಳಿಂದ ಅನೇಕ ಮುಸ್ಲಿಮರು ಪಾಕಿಸ್ತಾನಕ್ಕೆ ಬಂದಿದ್ದಾರೆಂದು ಪಾಕಿಸ್ತಾನ ಸರ್ಕಾರದ ಮಿ|| ಗಜ್ನಫರ್ ಆಲಿಖಾನರವರು ತಿಳಿಸಿರುವ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ಬೊಂಬಾಯಿ ಸರ್ಕಾರದವರು ತಿಳಿಸಿದ್ದಾರೆ.

ಪರ್ಷಿಯಾದೇಶದಲ್ಲಿ ಭೂಕಂಪ

ಪರ್ಷಿಯದ ಕೊರಸಾನ್ ಪ್ರಾಂತ್ಯದಲ್ಲಿ ಭೂಕಂಪವಾಗಿ ೪೦೦ ಜನರು ಸತ್ತರೆಂದೂ ಹತ್ತು ನೂರಾರು ಜನಗಳಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ.

ಡಿಟೆನ್ಯೂಗಳ ಬಿಡುಗಡೆ

ಸ್ವಂ. ಮು. ಫೋ.] ಬೆಂಗಳೂರು ೩

ನಿನ್ನೆ ರಾತ್ರಿ ೪೦ ಜನ ಡಿಟೆನ್ಯೂಗಳ ಬಿಡುಗಡೆಯಾಗಿದೆ. ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ, ಪಿ. ಪಿ. ಕಟಪ್ಪ ಮತ್ತು ಸಿ. ಮಾದಯ್ಯಗೌಡರನ್ನು ಈ ದಿನ ಬಿಡುಗಡೆ ಮಾಡಲಾಗಿದೆ. ಬಂಧನದಲ್ಲಿರುವ ಎಲ್ಲ ಮಹಿಳಾ ಸತ್ಯಾಗ್ರಹಿಗಳನ್ನೂ ಬಿಡುಗಡೆ ಮಾಡಬೇಕೆಂದು ಸೂಚಿಸಲಾಗಿದೆ.

ರೈಲ್ವೆ ಮುಷ್ಕರ ಬಗೆಹರಿದಿಲ್ಲ

ಸುಮಾರು ೩೦೦ ಮಂದಿ ಕೆಲಸಗಾರರು ಮಾತ್ರ ಕೆಲಸಕ್ಕೆ ಹೋಗಿರುವರೆಂದು ತಿಳಿದುಬಂದಿದೆ. ಆದರೆ ಈ ದಿನ ಯಾವ ರೈಲುಗಳೂ ಇಲ್ಲಿಂದ ಹೊರಟಿಲ್ಲ. ಮುಷ್ಕರ ಮುಕ್ತಾಯಗೊಂಡಿಲ್ಲವೆಂದೂ, ಯಾರೂ ಹೋಗಬಾರದೆಂದೂ ಕೆಲಸಗಾರರು ಪ್ರಚಾರ ಮಾಡುತ್ತಿದ್ದಾರೆ.

ಕಾಂಗ್ರೆಸ್ ನಾಯಕರ ಬಿಡುಗಡೆಗೆ ಸಂಧಾನವಷ್ಟೇ?

ಸ್ವಂ. ಮು. ಫೋ.] ಬೆಂಗಳೂರು ೩

ಯಾವ ರಾಜಕೀಯ ಪಕ್ಷಗಳಿಗೂ ಸೇರದ ಬೆಂಗಳೂರಿನ ಹಲವು ಗಣ್ಯಮಹನೀಯರು ಕಾಂಗ್ರೆಸ್ ನಾಯಕರ ಬಿಡುಗಡೆಗಾಗಿ ದೇಶದಲ್ಲಿ ಮಧುರ ವಾತಾವರಣ ಏರ್ಪಡುವಂತೆ ಮಾಡಲು ಸಂಧಾನ ನಡೆಸುತ್ತಿರುವರೆಂದು ಗೊತ್ತಾಗಿದೆ. ಸಂಸ್ಥಾನದ ವಿವಿಧ ಕಾರಾಗೃಹಗಳಲ್ಲಿರುವ ಎಲ್ಲ ಕಾಂಗ್ರೆಸ್ ನಾಯಕರನ್ನೂ ಬೆಂಗಳೂರಿಗೆ ಕರೆತಂದು ಸಂಧಾನ ನಡೆಸುವ ಸಂಭವವು ಕಂಡು ಬರುತ್ತಿದೆ. ಬರುವ ಮೂರು ನಾಲ್ಕು ದಿನಗಳು ಮಹತ್ವದ ಬದಲಾವಣೆಗಳಾಗಬಹುದೆಂದು ನಿರೀಕ್ಷಿಸಲಾಗಿದೆ.

ಸಾರ್ವಜನಿಕ ಸಭೆ

ಮೈಸೂರು ೩

ಮಹಾತ್ಮಾ ಗಾಂಧೀಜಿಯವರ ಜನ್ಮೋತ್ಸವದ ಸಂಬಂಧದಲ್ಲಿ ನಿನ್ನೆ ಸಂಜೆ ಸುಬ್ಬರಾಯನಕೆರೆಯಲ್ಲಿ ಭಾರಿ ಸಾರ್ವಜನಿಕ ಸಭೆ ನಡೆಯಿತು. ಸಾವಿರಾರು ಜನರು ಬಂದಿದ್ದರು. ಡಾ|| ಪಾರ್ಥಸಾರಥಿ ಪಂಡಿತ್, ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸದಸ್ಯರೂ, ಮದರಾಸಿನ ವಕೀಲರೂ ಆದ ಶ್ರೀ ... ಮತ್ತು ಇತರರು ಭಾಷಣ ಮಾಡಿ ಎಲ್ಲರೂ ಗಾಂಧೀಜಿಯವರ ಅಹಿಂಸಾ ತತ್ವವನ್ನು ಪರಿಪಾಲಿಸಬೇಕೆಂದು ತಿಳಿಸಿದರು.

ಸತ್ಯಾಗ್ರಹಿಗಳಿಗೆ ಶಿಕ್ಷೆ

ಮೈಸೂರು ೩

ಕೊಯಮತ್ತೂರು ಜಿಲ್ಲೆಯ ಗೋಪಿಚೆಟ್ಟಿಪಾಳ್ಯಂ ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಜಿ. ಎಸ್. ವೇಲುಮಣಿ, ನೇತಾಜಿ ಯೂತ್ ಲೀಗ್ ಕಾರ್ಯದರ್ಶಿ ಕೆ. ಜಿ. ರಾಜ್ ಮತ್ತು ಮೂಡಿಗೆರೆಯ ಹೆಚ್. ಪಿ. ಕೃಷ್ಣಗೌಡ ಮೊದಲಾದ ಏಳು ಮಂದಿ ಈ ದಿನ ಬೆಳಿಗ್ಗೆ ಅರಮನೆ ಮುಂದೆ ಸತ್ಯಾಗ್ರಹ ಹೂಡಲು ಗಡಿಯಾರದ ಚೌಕದ ಹತ್ತಿರ ಮೆರವಣಿಗೆ ಹೋಗುತ್ತಿದ್ದರೆಂದು ಅವರುಗಳಿಗೆ ೩ ನೇ ನಗರ ನ್ಯಾಯಾಧೀಶರು ತಲಾ ೧೧ ತಿಂಗಳು ಸಾದಾ ಸಜಾವನ್ನು ವಿಧಿಸಿದ್ದಾರೆ.

* ಗಾಂಧೀಜಿ ಜಯಂತಿ ಪ್ರಯುಕ್ತ ನಿನ್ನೆ ರಾತ್ರಿ ಅರಮನೆಯಲ್ಲಿ ದೀಪೋತ್ಸವ ಮಾಡಲಾಗಿತ್ತು.

ಗಾಂಧೀಜಿಯವರ ಜಯಂತಿ

ನಿನ್ನೆ ಮಹಾತ್ಮ ಗಾಂಧೀಜಿಯವರ ಜಯಂತಿಯು ವಿಶ್ವದ ನಾನಾ ಭಾಗಗಳಲ್ಲಿಯೂ ವೈಭವದಿಂದ ಆಚರಿಸಲ್ಪಟ್ಟಿತು. ಭಾರತಕ್ಕೆ ರಾಜಭಕ್ತಿ ಮತ್ತು ಗಾಂಧೀಜಿಯವರಲ್ಲಿ ಶ್ರದ್ಧೆಯನ್ನು ಸೂಚಿಸಿ ದೆಹಲಿಯ ೫೦ ಮಂದಿ ಹಿಂದೂ, ಸಿಖ್ ಮತ್ತು ಮುಸ್ಲಿಂ ನಾಯಕರು ಸಹಿ ಮಾಡಿದ್ದ ಬಿನ್ನವತ್ತಳೆಯನ್ನು ಸಮಾಜವಾದಿ ಪಕ್ಷದ ನಾಯಕರಾದ ಡಾ|| ರಾಮ ಮನೋಹರಲೋಹಿಯಾರವರು ಗಾಂಧೀಜಿಯವರಿಗೆ ಅರ್ಪಿಸಿದರು. ಪಂಡಿತ ನೆಹರೂ, ಸರ್ದಾರ್ ಪಟೇಲರು ಬಹಿರಂಗ ಸಭೆಗಳಲ್ಲಿ ಭಾಷಣ ಮಾಡಿ ಗಾಂಧೀಜಿಯವರ ತತ್ವವನ್ನು ಪ್ರಶಂಸಿಸಿ ಅವರಿಗೆ ಗೌರವವನ್ನು ಸಲ್ಲಿಸಿದರು. ಕಗ್ಗತ್ತಲಿನಲ್ಲಿ ಜನತೆಗೆ ಬೆಳಕು ತೋರಿದ ಮಹದ್ವ್ಯಕ್ತಿಯೆಂದರೆ ಗಾಂಧೀಜಿಯೊಬ್ಬರೇ. ಅವರ ಅಹಿಂಸಾಯುಕ್ತವಾದ ಸಂದೇಶಕ್ಕೆ ಗೌರವ ಸಲ್ಲಿಸಬೇಕಾದುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ದೇಶದಲ್ಲಿ ತಲೆದೋರಿರುವ ಕೋಮುವಾರು ಗಲಭೆಗೆ ನೀತಿ, ಕಾನೂನುಗಳಿಂದ ಯಾವ ಉಪಯೋಗವೂ ಆಗುವುದಿಲ್ಲ. ಅದಕ್ಕೆ ಬಲಯಾದ ಉಪಯೋಗವೂ ಆಗುವುದಿಲ್ಲ ಅದಕ್ಕೆ ಸರಿಯಾದ ಮದ್ದೆಂದರೆ ಗಾಂಧೀಜಿಯವರ ಸತ್ಯಾಗ್ರಹ ಸಂದೇಶ ಎಂಬುದಾಗಿ ಹೇಳಿ ರಾಷ್ಟ್ರಪತಿ ... ನಾಯುಡುವರು ಗಾಂಧೀಜಿಯವರನ್ನು ಪ್ರಶಂಸಿಸಿದರು. ಬೀದಾರಿನ ಮುಸ್ಲಿಂ ಲೀಗ್ ಅಧ್ಯಕ್ಷರು ಬಾಪೂಜಿಯ ಬಗ್ಗೆ ಕೃತಜ್ಞತೆಯನ್ನು ಸಲ್ಲಿಸುವುದಕ್ಕಾಗಿ ಮನವಿಯನ್ನು ಎಲ್ಲ ಹಿಂದೂ ಮತ್ತು ಮುಸ್ಲಿಮರೂ ಮಾಡಬೇಕೆಂದು ನುಡಿದು ಅವರಿಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ.

ಮಹಾತ್ಮ ಗಾಂಧೀಜಿಯವರ ಜೀವನದಲ್ಲಿ ಮಹತ್ವದ ಘಟನೆಗಳು ನಡೆಯದಿರುವ ದಿನವೊಂದೂ ಇಲ್ಲವೆಂದು ಚೀಣದ ರಾಯಭಾರಿ ಪ್ರಶಂಸಿಸಿದ್ದಾರೆ. ಬರ್ಮಾ, ಕರಾಚಿ, ಲಂಡನ್, ನ್ಯೂಯಾರ್ಕುಗಳಲ್ಲಿ ಧ್ವಜಾರೋಹಣ ಮಾಡಿ ಗಾಂಧೀಜಿಯವರಿಗೆ ಅಲ್ಲಿರುವ ಭಾರತೀಯ ನಾಯಕರು ಗೌರವವನ್ನು ಸಲ್ಲಿಸಿದ್ದಾರೆ. ವಿಶ್ವದ ನಾನಾ ಭಾಗಗಳಿಂದ ಬಾಪೂಜಿಯವರಿಗೆ ದೀರ್ಘಾಯುಸ್ಸನ್ನು ಕೋರಿ ನಾಯಕರುಗಳು ಸಂದೇಶ ಕಳಿಸಿದ್ದಾರೆ

ಮುಸ್ಲಿಂ ನೌಕರನ ಮನೆಯಲ್ಲಿ ಶಸ್ತ್ರಗಳ ಪತ್ತೆ

ಕಾನ್‌ಪುರದ ಟ್ರಾನ್ಸ್‌ಪೋರ್ಟ್ ಕಛೇರಿಯ ಮುಸ್ಲಿಂ ನೌಕರನೊಬ್ಬನ ಮನೆಯಲ್ಲಿ ಲೈಸೆನ್ಸ್ ಇಲ್ಲದೆ ಇದ್ದ ಬಂದೂಕ, ಪಿಸ್ತೂಲು, ಮದ್ದುಗುಂಡುಗಳು, ಭರ್ಜಿ ಮತ್ತು ೧೨ ಖಡ್ಗಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ.

-- ಪ್ರಯುಕ್ತಿ: —

೧ ಫಟ್ ಬೋಲ್ಟಿಗೆ ಮಿಸ್ಟ್, ೧ ಬಟೀಂಗ್ ಪರಿಗೆ ೩ ೧೪೦ ಕೂಡಲೇ ... ಬೇಕಾಗುವವರ ... ದಸ್ತೆಯಲ್ಲಿ ವಿಚಾರಿಸಿ

ಬಿ ಎಸ್ ಆನಂದ್

Edited printed and published by ... at the Sadhvi Press ... Road Mysore

ಪಾಟಿಯಾಲ ಗಲಭೆ ಪ್ರದೇಶ

ಪಾಟಿಯಾಲ ಸಂಸ್ಥಾನವೆಲ್ಲಾ ಗಲಭೆ ಪ್ರದೇಶವೆಂದು ಅಲ್ಲಿನ ಸರ್ಕಾರವು ಘೋಷಿಸಿದೆ. ವಿನಾಶ ಕೃತ್ಯಗಳನ್ನು ನಡೆಸುವವರಿಗೆ ಮರಣ ದಂಡನೆ ವಿಧಿಸಲಾಗುವುದೆಂದೂ ಯಾರೂ ಬಂದೂಕ ಮತ್ತು ಇತರ ಅಸ್ತ್ರಗಳನ್ನು ಇಟ್ಟುಕೊಂಡಿರಕೂಡದೆಂದೂ ಅಲ್ಲಿನ ಮಹಾರಾಜರವರು ಎಚ್ಚರಿಕೆ ಕೊಟ್ಟಿದ್ದಾರೆ.

ಲಕ್ನೋ ಕಾಲೇಜುಗಳ ಮುಚ್ಚುವಿಕೆ

ಲಕ್ನೋ ವಿಶ್ವವಿದ್ಯಾಲಯದವರು ಶಿಕ್ಷಣ ಫೀಸನ್ನು ಹೆಚ್ಚಿಸಿದ್ದನ್ನು ಪ್ರತಿಭಟಿಸಿ, ವಿದ್ಯಾರ್ಥಿಗಳು ಪ್ರದರ್ಶನ ಚಳುವಳಿ ನಡೆಸಿದ ಕಾರಣ, ಕಾಲೇಜುಗಳನ್ನು ಒಂದು ತಿಂಗಳ ಕಾಲ ಮುಚ್ಚಲು ಆಜ್ಞೆಯಾಗಿದೆ. ಅಲ್ಲದೆ ಚಳುವಳಿಯಲ್ಲಿ ಭಾಗ ವಹಿಸಿದ ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ತೀರ್ಮಾನಿಸಲಾಗಿದೆ.

ಗ್ರೀಕ್ ಆಲ್‌ಬೇನಿಯಾ ಕದನ

ಗ್ರೀಕ್-ಅಲ್‌ಬೇನಿಯಾ ಗಡಿ ಸಮೀಪದ ಕೊಮಿಸ್‌ಬಾಲ್ ಎಂಬಲ್ಲಿ ಗ್ರೀಕ್ ಸೈನಿಕರಿಗೂ ಅಲ್‌ಬೇನಿಯಾ ಸೈನಿಕರಿಗೂ ಘರ್ಷಣೆ ಆಗಿ, ೩೦ ನಿಮಿಷಗಳ ವರೆಗೆ ಕದನ ನಡೆಯಿತೆಂದು ಹೇಳಲಾಗಿದೆ

ಬ್ರಿಟಿಷ್ ಮತ್ತು ಮುಸ್ಲಿಂ ಅಧಿಕಾರಿಗಳ ದಸ್ತಗಿರಿ

ಜಬ್ಬಲ್‌ಪುರದ ಇಬ್ಬರು ಮುಸ್ಲಿಂ ಮಿಲಿಟರಿ ಅಧಿಕಾರಿಗಳ ಮನೆಗಳನ್ನು ಪೋಲೀಸರು ಶೋಧಿಸಿ, ಅಲ್ಲಿದ್ದ ಅನೇಕ ಅಸ್ತ್ರಗಳನ್ನು ವಶಪಡಿಸಿಕೊಂಡು, ಅವರುಗಳನ್ನು ದಸ್ತಗಿರಿ ಮಾಡಿದ್ದಾರೆ. ಜಬ್ಬಲ್‌ಪುರಕ್ಕೆ ೧೦೦ ಮೈಲಿ ದೂರವಿರುವ ಗಾವರ್‌ವಾಡದಲ್ಲಿ ಇಬ್ಬರು ಮುಸ್ಲಿಂ ಪೋಲೀಸ್ ಅಧಿಕಾರಿಗಳನ್ನು ಮತ್ತು ನಾಲ್ಕು ಬ್ರಿಟಿಷ್ ಅಧಿಕಾರಿಗಳನ್ನೂ ಸಹ ದಸ್ತಗಿರಿ ಮಾಡಲಾಗಿದೆ.

ಗಾಂಧೀಜಿ ಬಗ್ಗೆ ಮುಸ್ಲಿಂ ಲೀಗಿನವರ ಪ್ರಶಂಸೆ

ಮಹಾತ್ಮಾ ಗಾಂಧೀಜಿಯವರ ಸೇವೆಯನ್ನು ಪ್ರಶಂಸಿಸಿ, ಭಾರತದಲ್ಲಿರುವ ಮುಸ್ಲಿಮರು ಅವರಿಗೆ ಚಿರ ಋಣಿಗಳಾಗಿರಬೇಕೆಂದು ಮಧ್ಯ ಪ್ರಾಂತ್ಯದ ಮುಸ್ಲಿಂ ಲೀಗ್ ನಾಯಕರಾದ ಮಿ|| ಚೌಧ್ರಿ ಖಾಲಿಕ್ ಉಜ್ಜಮಾನರವರು ತಿಳಿಸಿದ್ದಾರೆ

ವುಡ್‌ಲ್ಯಾಂಡ್ಸ್

3-10-47 ರಿಂದ

೨ ನೇ ವಾರ

ಪ್ರತಿ ದಿನ ೩ ಆಟಗಳು

ಪ್ರಕಾಶ್ ಪಿಕ್ಚರ್ಸ್‌ರವರ ಅಮೋಘವಾದ ಚಲನ ಚಿತ್ರ

ಸಮೀರಾ

(ಹಿಂದಿ)

- - ತಾರಾಗಣ :—

ರಂಜನ್ ಮತ್ತು ಬೀನಾ

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟಿಫಿಕೇಷನ್

ನಂ R 1-472/45-46

Dated 5th September 1947

ಮೈಸೂರು ಸಿಟಿಯಲ್ಲಿರತಕ್ಕ ರೇಟ್ ಪೇಯರ್‌ಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ಸರ್ಕಾರದವರು ತಮ್ಮ ೧-೧೧-೪೬ ನೇ ಮುಕ್ಕಾಂ E 8 3422 Edn.155-41 ನೇ ನಂಬರು ಆರ್ಡರಿನಲ್ಲಿ ೧೯೪೧ ನೇ ಇಸವಿ ಪ್ರಾಥಮಿಕ ವಿದ್ಯಾಭ್ಯಾಸದ ಆಕ್ಟು (Elementary Education Act of 1941) ಅನುಸರಿಸಿ ರೂವಾಯಿಗೆ ಎರಡಾಣೆಯಂತೆ ಕಟ್ಟಡಗಳ ಮತ್ತು ಖಾಲಿ ನಿವೇಶನಗಳ ಮೇಲೆ ವಿಧಿಸಿರುವ ವಿದ್ಯಾಭ್ಯಾಸ ತೆರಿಗೆಯು ಆಯಾಯ ಕಟ್ಟಡಗಳು ಮತ್ತು ನಿವೇಶನಗಳಿಗೆ ನಿಗದಿ ಮಾಡಿರುವ Annual Letting Value ಯ ಶೇಕಡ ೯ ಭಾಗವಲ್ಲವೆಂದೂ, ಈ ತೆರಿಗೆಯು ೪೪-೪೫ ನೇ ಸಾಲಿನಿಂದ ಕಟ್ಟಡಗಳು ಮತ್ತು ಖಾಲಿ ನಿವೇಶನಗಳಿಗೆ ಗೊತ್ತು ಮಾಡಿರುವ Annual Letting Value ಯ ಶೇಕಡ ೫ ಭಾಗವೆಂದೂ ಹುಕ್ಕುಂ ಮಾಡಿದ್ದಾರೆ. ಆದ್ದರಿಂದ ಆ ಹುಕುಂ ಅನುಸರಿಸಿ ೧-೭-೪೪ ರಿಂದ ವಿದ್ಯಾಭ್ಯಾಸ ತೆರಿಗೆಯನ್ನು ಮೇಲೆ ಹೇಳಿದಂತೆ ಕಟ್ಟಡಗಳು ಮತ್ತು ಖಾಲಿ ನಿವೇಶನಗಳಿಗೆ (Taxes on Buildings and Lands) ಗೊತ್ತಾದ Annual Letting Value ಮೇಲೆ ಶೇಕಡ ೫ ರಂತೆ ವಸೂಲಿ ಮಾಡಲಾಗುತ್ತೆ. ಈ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದ್ದುದರಿಂದ ೪೪-೪೫, ೪೫-೪೬ ಮತ್ತು ೪೬-೪೭ ನೇ ಸಾಲುಗಳಲ್ಲಿ ವಸೂಲ್ ಆಗಬೇಕಾಗಿದ್ದ ವಿದ್ಯಾಭ್ಯಾಸ ತೆರಿಗೆಯನ್ನು ಪೂರ್ತಿ ವಸೂಲ್ ಮಾಡಲು ಸಾಧ್ಯವಾಗಲಿಲ್ಲ. ಸರ್ಕಾರದ ಹುಕುಂ ಇತ್ತೀಚೆಗೆ ಬಂದಿದ್ದರಿಂದಲೂ, ೪೪-೪೫ ರಿಂದ ಜಾರಿಗೆ ಕೊಟ್ಟಿದ್ದರಿಂದಲೂ ಮೇಲ್ಕಂಡ ಸಾಲುಗಳ ವಿದ್ಯಾಭ್ಯಾಸ ತೆರಿಗೆ ವಸೂಲಿಯನ್ನು ಚಾಲ್ತಿ ಸಾಲು ಕಂದಾಯದೊಂದಿಗೆ ಮಾಡಬೇಕಾಗಿದೆ. ಚಾಲ್ತಿ ಸಾಲಿನ (ಅಂದರೆ ೪೭-೪೮ ರ) ಎರಡು ತಿಂಗಳ ಕಾಲವು ಆಗಲೇ ಕಳೆದಿರುವುದರಿಂದಲೂ ಪ್ರತಿ ರೇಟ್‌ಪೇಯರುಗಳಿಗೂ ಇದಕ್ಕಾಗಿ ಪ್ರತ್ಯೇಕ ಬಿಲ್ಲನ್ನು ಕಳೆದ ಮೂರು ಸಾಲುಗಳಿಗೂ ಮತ್ತು ಚಾಲ್ತಿ ಸಾಲಿಗೂ (ಅಂದರೆ ೧೯೪೪-೪೫, ೪೫-೪೬, ೪೬-೪೭ ಮತ್ತು ೪೭-೪೮ ನೆಯ) ಪ್ರತ್ಯೇಕ ಬಿಲ್ಲನ್ನು (Bill) ಕಳುಹಿಸಲು ಸಾಧ್ಯವಿಲ್ಲವಾಗಿರುತ್ತೆ. ಆದಕಾರಣ ಈ ಮೊಬಲಗನ್ನು ಪಾವತಿ ಮಾಡಬೇಕಾಗಿರುವ ಪುರಜನರೆಲ್ಲ ಈ ಪ್ರಕಟಣೆಯನ್ನೇ ಕಾನೂನು ರೀತ್ಯ ನೋಟೀಸ್ ಎಂದು ಭಾವಿಸಿ ಹಾಲಿ ಹಿಂದಿನ ಸಾಲುಗಳಿಗೆ ಕೊಡಬೇಕಾದ ಬಾಕಿಯೊಡನೆ ಈ ಸಾಲಿನ ಮೊಬಲಗನ್ನೂ ಸೇರಿಸಿ ಕೊಡಲು ಪಾವತಿ ಮಾಡಬೇಕಾಗಿ ಕೋರುತ್ತೆ. ಅಲ್ಲದೆ, ವಸೂಲಿ ಮಾಡುವ ಚಾಲ್ತಿ ಸಾಲು ಮನೆ ಕಂದಾಯದ ಬಿಲ್ಲಿನಲ್ಲಿ ವಿದ್ಯಾಭ್ಯಾಸದ ತೆರಿಗೆಯನ್ನು ನಾಲ್ಕು ಸಾಲುಗಳಿಗೂ ವಸೂಲ್ ಮಾಡುವಂತೆ ಈ ಆಫೀಸಿನ ಬಿಲ್ ಕಲೆಕ್ಟರುಗಳಿಗೆ ತಕ್ಕ ಸೂಚನೆಗಳನ್ನು ಕೊಟ್ಟಿದೆ. ಅವರುಗಳೊಡನೆ ಪುರಜನರು ಸಹಕರಿಸಬೇಕಾಗಿ ಕೋರುತ್ತೆ.

ಯಾವ ರೇಟ್ ಪೇಯರೇ ಆಗಲಿ ೪೪-೪೫, ೪೫-೪೬ ಮತ್ತು ೪೬-೪೭ ನೇ ಸಾಲುಗಳಲ್ಲಿ ವಿದ್ಯಾಭ್ಯಾಸ ತೆರಿಗೆಯನ್ನು ಪ್ರಕಟಣೆಯಲ್ಲಿ ಮೇಲೆ ಹೇಳಿರುವ ಪ್ರಮಾಣಕ್ಕಿಂತ ಹೆಚ್ಚಾಗಿ ಕೊಟ್ಟಿದ್ದಲ್ಲಿ ಎಷ್ಟಿಗೆ ಇದೆಯೆಂದು ತಿಳಿದು ಬಂದಲ್ಲಿ ಆ ಮೊಬಲಗನ್ನು ಮುಂದಿನ ಸಾಲುಗಳಿಗೆ ಜಮಾ ತೆಗೆದುಕೊಳ್ಳಲಾಗುತ್ತೆ.

N. S Hirannayya
President
City Municipal Council
Mysore

OPERA TALKIES

From 4-10-47

Daily 3 Shows

PHANTOM

(Full Serial)

— with —

TOM TYLER

Morning shows from 3-10-47 for 4 days

Daily at 10-30 a.m.

How Green WAS My Valley

— with —

Walter Pidgeon, Maureen O'Hara, Donald Crisp

ರಾಜಕಮಲ

ತಾ|| 4-10-47 ರಿಂದ

ಅಮೋಘ ಪ್ರಾರಂಭ

ಮಹಾಕವಿ ಕಾಳಿದಾಸ

(ಹಿಂದಿ)

—: ಭೂಮಿಕೆ :—

ಮಧುರಿ ಸನ್ಯಾಲ್, ಸ್ನೇಹ ಪ್ರಭಾ ... ವನಮಾಲಾ, ಮತ್ತು ಉಲ್ಲಾಸ್

Morning shows from 3-10-47 for 4 days daily at 10-30 a.m

Oklahoma Kid

- : Featuring :—

Humphrey Bogart, James Cagney, Rosemary Lane

WOODLANDS

Morning shows from 3-10-47 for 4 days

Daily at 10-30 a. m.

Going My Way

—: With :—

Bing Crosby

ಫೋನ್ ನಂ. 608 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೪-೧೦-೪೭ [ಸಂಚಿಕೆ ೪೫

ಕೆಲಸಕ್ಕೆ ಹೋಗಿದ್ದ ರೈಲ್ವೆ ನೌಕರರ ವಾಪಸು

ದಸ್ತಗಿರಿ

ಮೈಸೂರು ೪

ನೂರಡಿ ರಸ್ತೆಯ ಏಮ ಟಾಂದ್ರದ ಕಂಬದ ಬಳಿ ಸಭೆ ನಡೆಸಿ ಮೆರವಣಿಗೆ ಹೋಗಲು ನೂರಾರು ಬಾಲಕ ಬಾಲಕಿಯರು ನಿನ್ನೆ ಸಂಜೆ ಸಭೆ ಸೇರಿದ್ದರು. ಗುಂಪನ್ನು ಚದುರಿಸಲು ಪೊಲೀಸರು ಲಾಠೀ ಛಾರ್ಜ್ ಮಾಡಿ ಹಲವರನ್ನು ದಸ್ತಗಿರಿ ಮಾಡಿದರು. ಒಯ್ಯುತ್ತಿದ್ದ ಪೊಲೀಸ್ ವ್ಯಾನಿನ ಮೇಲೆ ಹುಡುಗರು ಕಲ್ಲುಗಳನ್ನೆಸೆದುದರಿಂದ ಲಾಠಿ ಛಾರ್ಜ್ ಮಾಡಲಾಯಿತೆಂದು ಹೇಳಲಾಗಿದೆ.

ಮೈಸೂರು ರೈಲ್ವೆ ಕೆಲಸಗಾರರ ದಿನಾಚರಣೆ

ಮೈಸೂರು ರೈಲ್ವೆ ಕೆಲಸಗಾರರ ಬಗ್ಗೆ ತಮ್ಮ ಸಹಾನುಭೂತಿ ಮತ್ತು ಬೆಂಬಲವನ್ನು ವ್ಯಕ್ತಪಡಿಸಲು ಅಕ್ಟೋಬರ್ ೯ ನೇ ತಾ॥ ಮೈಸೂರು ರೈಲ್ವೆ ಕೆಲಸಗಾರರ ದಿನಾಚರಣೆಯನ್ನು ಭಾರತದ ರೈಲ್ವೆ ಕೆಲಸಗಾರರೆಲ್ಲರೂ ಆಚರಿಸಬೇಕೆಂದು ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ರೈಲ್ವೆ ಫೆಡರೇಷನ್ ಜನರಲ್ ಕೌನ್ಸಿಲ್ ಸಭೆಯು ತೀರ್ಮಾನಿಸಿದೆ.

ಮೈಸೂರು ರೈಲ್ವೆ ಕೆಲಸಗಾರರ ಬೇಡಿಕೆಯನ್ನು ಈಡೇರಿಸಲು ಸರ್ಕಾರದವರು ಅಕ್ಟೋಬರ್ ೫ ನೇ ತಾರೀಖಿನೊಳಗಾಗಿ ಪೂರ್ತಿ ಕಾರ್ಯಕ್ರಮ ಕೈಗೊಂಡು ೬ ನೇ ತಾ॥ ನೊಳಗೆ ಮುಷ್ಕರ ಹೂಡಿರುವವರಿಗೆ ರಿಪೋರ್ಟ್ ಕೊಡದಿದ್ದ ಪಕ್ಷದಲ್ಲಿ ಮೈಸೂರು ಸಂಸ್ಥಾನಕ್ಕೆ ಹೋಗುವ ಯಾವ ಸಾಮಗ್ರಿಗಳನ್ನೂ ಸಾಗಿಸ ಕೂಡದೆಂದೂ ನಿರ್ಧರಿಸಲಾಯಿತು.

ದುಂಡುಮೇಜು ಪರಿಷತ್ತು ನಡೆಯಬೇಕು

ಶ್ರೀ॥ ಸಿ ಆರ್. ರೆಡ್ಡಿಯವರ ಸಲಹೆ

ಈಗಿನ ಪರಿಸ್ಥಿತಿಯು ಕಾರಣದಿಂದ ಮೈಸೂರಿಗೆ ದೊರೆತಿರುವ ಮಾದರಿ ಸಂಸ್ಥಾನವೆಂಬ ಹೆಸರು ಅಳಿಯುತ್ತಿದೆ. ಬಂಧನದಲ್ಲಿರುವ ನಾಯಕರೆಲ್ಲರನ್ನೂ ಕೂಡಲೇ ಬಿಡುಗಡೆ ಮಾಡಬೇಕು. ಕಾಂಗ್ರೆಸ್ ನಾಯಕರನ್ನೂ, ಇತರ ಪ್ರಮುಖ ಪಕ್ಷಗಳವರನ್ನೂ ಕರೆದು ದುಂಡುಮೇಜಿನ ಪರಿಷತ್ತೊಂದನ್ನು ಸೇರಿಸಬೇಕು. ಶಾಸನ ಸಭೆಗಳಿಗೆ ಹೊಸ ಚುನಾವಣೆ ನಡೆಯಬೇಕು. ಅಧಿಕಾರಿಗಳಿಗೂ, ನಾಮಕರಣದವರಿಗೂ ಶಾಸನ ಸಭೆಗಳಲ್ಲಿ ಸ್ಥಾನವಿರಕೂಡದು. ಈ ಹೊಸ ಶಾಸನ ಸಭೆಯಿಂದ ಒಂದು ಸಮಿತಿಯು ರಚಿಸಲ್ಪಟ್ಟು ಅದು, ಮಹಾರಾಜರ ಘೋಷಣೆಯನ್ನು ಪರಿಶೀಲಿಸಬೇಕು. ಅದರ ಸಲಹೆಗಳಂತೆ ಘೋಷಣೆಯಲ್ಲಿ ಸೂಕ್ತ ತಿದ್ದುಪಡಿ ಆಗಿ ನೂತನ ರಾಜ್ಯಾಂಗದ ನಿರ್ಮಾಣವಾಗಬೇಕು. ಇವು ನಡೆದರೆ ಮಾತ್ರ ಮೈಸೂರಿಗೆ ಗೌರವವು ಸಲ್ಲುತ್ತದೆ-ಎಂಬುದಾಗಿ ಮದರಾಸಿನ ಡಾ॥ ಸಿ ರಾಮಲಿಂಗರೆಡ್ಡಿಯವರು ಮಹಾರಾಜರ ಘೋಷಣೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇಂಡಿಯನ್ ಫುಟ್ ಬಾಲ್ ಕ್ಲಬ್ಬಿನವರು ಗಾಂಧೀ ಜಯಂತಿಯನ್ನು ಮೊನ್ನೆ ಮೈಸೂರು ಕಾರಮ್ಮನ ಗ... ಇಂಡಿಯನ್ಸ್ ಸ್ಪೆಶಲ್ ಪಾರ್ಟಿ ... ನಡೆಯಿಸಿದರು. ಕುಮಾರಿ ಲೀಲಾ ... ಅವರ ಆವೇಶಭರಿತವಾದ ಭರತನಾಟ್ಯ ... ಸಂಗೀತವು ನಡೆದ ಮೇಲೆ ಸರ್ವ ... ಕಡಿ ಉಪಹಾರ ನಡೆಯಿತು.

ಮೈಸೂರು ರೈಲ್ವೆ ಪರಿಸ್ಥಿತಿ

ಮೈಸೂರು ೪

ಮೈಸೂರು ರೈಲ್ವೆ ಮುಷ್ಕರದ ಪರಿಸ್ಥಿತಿಯು ಉತ್ತಮಗೊಂಡಿಲ್ಲ. ರೈಲ್ವೆ ಮತ್ತು ಆಡಿಟ್ ಆಫೀಸು ಮತ್ತು ಟ್ರಾಫಿಕ್ ಶಾಖೆಯ ನೌಕರರುಗಳು ಹೊರತು ಲೋಕೋ, ವರ್ಕ್‌ಷಾಪ್ ಮತ್ತು ಇನ್ನಿತರ ಶಾಖೆಗಳ ಯಾವ ಕೆಲಸಗಾರರೂ ಕೆಲಸಕ್ಕೆ ಹಿಂದಿರುಗಿಲ್ಲ. ಇಲ್ಲಿಯವರೆಗೆ ಮೈಸೂರಿನಿಂದ ಯಾವ ರೈಲೂ ಹೋಗಿಲ್ಲ.

ಬೆಂಗಳೂರು ಮತ್ತು ಇತರ ಪ್ರದೇಶಗಳಲ್ಲೂ ಕೇವಲ ಸ್ವಲ್ಪ ಜನ ಮಾತ್ರ ಕೆಲಸಕ್ಕೆ ಹಿಂದಿರುಗಿದ್ದಾರೆ.

ಹಿಂಸಾಕೃತ್ಯಗಳ ಖಂಡನೆ

ಕಳೆದ ಒಂದು ತಿಂಗಳಿಂದಲೂ ವಿದ್ಯಾರ್ಥಿಗಳು ಸತ್ಯಾಗ್ರಹವನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ಹಲವರು ಪೊಲೀಸ್ ವ್ಯಾನುಗಳಿಗೆ ಕಲ್ಲು ಹೊಡೆಯುವುದೇ ಮುಂತಾದ ಹಿಂಸಾಕೃತ್ಯಗಳಲ್ಲಿ ತೊಡಗಿರುವರು. ಇವನ್ನು ನಾನು ಖಂಡಿಸುತ್ತೇನೆ. ಯಾವ ವಿದ್ಯಾರ್ಥಿಯೂ ಇಂತಹ ಅಕೃತ್ಯಗಳಲ್ಲಿ ತೊಡಗದೆ ಮಹಾತ್ಮರು ಹಾಕಿಕೊಟ್ಟಿರುವ ಅಹಿಂಸೆ ಮತ್ತು ಶಿಸ್ತಿನಿಂದ ಕೂಡಿದ ಕಾರ್ಯಮಾರ್ಗದಲ್ಲಿ ತೊಡಗಿ ಗಳಿಸಿದ ಕೀರ್ತಿಯನ್ನು ಉಳಿಸಿಕೊಳ್ಳಬೇಕು-ಎಂದು ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಧ್ಯಕ್ಷರಾದ ಶ್ರೀ॥ ಎನ್. ಸಿ. ಚಿಕ್ಕಣ್ಣನವರು ಪ್ರಾರ್ಥಿಸುತ್ತಾರೆ.

ಗಾಂಧಿ ಜಯಂತಿ

ಮೈಸೂರು ಲಾ ಕೋರ್ಟ್ ರೆಸ್ಟೋರೆಂಟಿನ ಮ್ಯಾನೇಜರ್ ಬಿ. ಭೋಜರಾಯರು ನಿನ್ನೆ ತಮ್ಮ ಮನೆಯಲ್ಲಿ ಸುಬ್ಬರಾವ್ ಭಾಸ್ಕರರಾವ್ ಇವರುಗಳಿಂದ "ಕೃಷ್ಣ ಜನ್ಮ" ಎಂಬ ಭಾರತ ವಾಚನವನ್ನು ಏರ್ಪಡಿಸಿ ಗಾಂಧಿ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದರು.

ಮೊನ್ನೆ ಒಂಟಿಕೊಪ್ಪಲಿನ ತಿಲಕ ಸಂಘದಲ್ಲಿ ಗಾಂಧೀಜಿಯವರ ಜಯಂತಿಯು ಪ್ರಯುಕ್ತ ಬೆಳಗ್ಗೆ ಪ್ರಭಾತ್‌ಫೇರಿ, ಶ್ರೀ ಎಂ. ಎಸ್. ರಾಮಚಂದ್ರ ಜೋಯಿಸರಿಂದ ಧ್ವಜಾರೋಹಣ, ಮಧ್ಯಾಹ್ನ ಸಾಮೂಹಿಕ ನೂಲುವಿಕೆ ಮತ್ತು ಗಾಂಧಿ ಸಾಹಿತ್ಯಗಳ ಪಾರಾಯಣ, ಸಂಜೆ ಮೆರವಣಿಗೆ ಮತ್ತು ಬಹಿರಂಗ ಸಭೆಗಳು ನಡೆದುವು.

ರಾಜಧಾನಿಯಲ್ಲಿ ಖೂನಿ

ಮೈಸೂರು ೪

ರಾಜಧಾನಿಯ ದೇವರಾಜ ಮೊಹಲ್ಲಾ ಬೆಳ್ಳಿಕಟ್ಟೆಗೆ ಸಮೀಪದಲ್ಲಿರುವ ನರಸಿಂಹಯ್ಯ ಎಂಬುವರನ್ನು ನಿನ್ನೆ ರಾತ್ರಿ ಇರಿದು ಕೊಲೆಮಾಡಿರುವ ಪ್ರಸಂಗವು ವರದಿಯಾಗಿದೆ. ಪೊಲೀಸರು ಈ ಸಂಬಂಧದಲ್ಲಿ ಮೋಟಾರ್ ಡ್ರೈವರ್ ಶಿವಯ್ಯ ಎಂಬಾತನನ್ನು ದಸ್ತಗಿರಿ ಮಾಡಿದ್ದಾರೆಂದು ಗೊತ್ತಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್

ಮಹಾತ್ಮ ಗಾಂಧಿಯವರ ಜಯಂತಿ ಸಂದರ್ಭದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಮೊನ್ನೆ ದಿವಸದಿಂದ ಮೊದಲ್ಗೊಂಡು ಇದೇ ತಿಂಗಳು ೧೧ ನೇ ತಾರೀಖಿನವರೆಗೆ ಪ್ರತಿದಿನವೂ ಪ್ರಭಾತಫೇರಿ ಮತ್ತು ಸಭೆಗಳನ್ನು ನಡೆಸಲು ತೀರ್ಮಾನಿಸಿರುತ್ತಾರೆ. ಮಹಾಜನರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬಾಪೂಜಿಯವರಿಗೆ ಗೌರವವನ್ನು ತೋರಬೇಕೆಂದು ಪ್ರಾರ್ಥಿಸಲಾಗಿದೆ.

ರಾಜಕೀಯ ಬಂದಿಗಳ ಬಿಡುಗಡೆ ?

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧಿಕಾರಿವರ್ಗದವರು ವಿನಹ ಮಿಕ್ಕ ರಾಜಕೀಯ ಬಂದಿಗಳನ್ನು ಬಿಡಲು ಆಯಾ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸಾಧಕ ಬಾಧಕಗಳನ್ನು ಪರಿಶೀಲಿಸಿ ಬಿಡುಗಡೆ ಮಾಡಲು ಹಕ್ಕನ್ನು ಸರ್ಕಾರದವರು ಕೊಟ್ಟಿದ್ದಾರೆಂದು ತಿಳಿದು ಬರುತ್ತದೆ.

೨೫೦ ಡೆಟಿನ್ಯೂಗಳ ಬಿಡುಗಡೆ

ಮೈಸೂರು ಸಂಸ್ಥಾನದಲ್ಲಿರುವ ಹಲವು ಜೈಲುಗಳಲ್ಲಿದ್ದ ಒಟ್ಟು ೨೫೦ ಡೆಟಿನ್ಯೂಗಳನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ೫೦ ಮಹಿಳಾ ರಾಜಕೀಯ ಬಂದಿಗಳನ್ನೂ ಖುಲಾಸೆ ಮಾಡಲಾಗಿದೆ.

ಗವರ್ನರ್ ಪುತ್ರಿಯ ದಸ್ತಗಿರಿ

ಹೈದರಾಬಾದಿನ ಸುಲ್ತಾನ್ ಬಜಾರಿನಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ಸಾರ್ವಜನಿಕ ಸಭೆ ನಡೆಸಲು ಯತ್ನಿಸಿದರೆಂದು, ಸಂಯುಕ್ತ ಪ್ರಾಂತ್ಯದ ಗವರ್ನರಾದ ಶ್ರೀಮತಿ ಸರೋಜಿನಿನಾಯ್ಡುರವರ ಪುತ್ರಿ ಶ್ರೀಮತಿ ಪದ್ಮಜನಾಯ್ಡುರವರನ್ನು ಮತ್ತು ಇತರ ನಾಲ್ಕು ಮಂದಿ ಮಹಿಳೆಯರನ್ನೂ ದಸ್ತಗಿರಿ ಮಾಡಲಾಗಿದೆ.

ಡೇಲಿ ಪೋಸ್ಟ್ ಕಛೇರಿ ಬಳಿ ಬಾಂಬ್ ಸಿಡಿತ

ಸ್ವಂ ವ. ಫೋ.] ಬೆಂಗಳೂರು

ಕಂಟೋನ್ಮೆಂಟಿನ ಮದ್ರಾಸ್ ರಸ್ತೆಯಲ್ಲಿರುವ ಡೇಲಿಪೋಸ್ಟ್ ಪತ್ರಿಕಾ ಕಛೇರಿಯ ಕಾಂಪೌಂಡ್ ಗೋಡೆಯ ಬಳಿ ನಿನ್ನೆ ರಾತ್ರಿ ಎರಡು ಬಾಂಬುಗಳನ್ನು ಎಸೆದಿದ್ದು ಒಂದು ಬಾಂಬು ಸಿಡಿದು ಗೋಡೆಗೆ ಅಪಾಯವಾಗಿದೆ. ಇನ್ನೊಂದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮೆರವಣಿಗೆಗೆ ಅಡ್ಡಿ

ಚಾಮರಾಜಪೇಟೆಯ ಪಟೇಲ್ ... ದ ಬಳಿ ಮೆರವಣಿಗೆ ಹೋಗಲು ಹಲವು ವಿದ್ಯಾರ್ಥಿಗಳು ಪ್ರಯತ್ನಿಸಿದಾಗ ಪೊಲೀಸರು ಹಲವರನ್ನು ದಸ್ತಗಿರಿಮಾಡಿ ಗುಂಪನ್ನು ಚದುರಿಸಿದ್ದಾರೆ.

ರೈಲ್ವೆ ಅಧಿಕಾರಿಗಳಿಗೆ ನೌಕರರ ಷರತ್ತು

ಮೈಸೂರು

ನಿನ್ನೆಯಿಂದ ಕೆಲಸಕ್ಕೆ ಹಿಂದಿರುಗಿದ ಮೈಸೂರು ರೈಲ್ವೆ ಕೇಂದ್ರ ಕಛೇರಿಯ ನೌಕರರೆಲ್ಲರೂ ಈ ದಿನ ಜನರಲ್ ಮ್ಯಾನೇಜರವರಿಗೆ ಒಂದು ಅರ್ಜಿ ಬರೆದು, ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸುವವರೆಗೆ ತಾವು ಕೆಲಸಕ್ಕೆ ಬರುವುದಿಲ್ಲವೆಂದು ತಿಳಿಸಿ ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ವಾಪಸು ಹಿಂದಿರುಗಿದರು. ೧) ಬಂಧನದಲ್ಲಿರುವ ತಮ್ಮ ನಾಯಕರುಗಳನ್ನೆಲ್ಲಾ ಬಿಡುಗಡೆ ಮಾಡಬೇಕು. ೨) ಗ... ಬೋನಸ್ ಮತ್ತು ಫಸ್ಟ್‌ಕ್ಲಾಸ್ ರೈಲ್ವೆ ಸಂಬಳ ಈ ಬಗ್ಗೆ ಸರ್ಕಾರದವರು ಯಾವ ರೀತಿ ತೀರ್ಮಾನಿಸಿದ್ದಾರೆ ಎಂಬುದಕ್ಕೆ ಸಕಾರಣವಾದ ಉತ್ತರ.

೩) ರೈಲ್ವೆ ಆಡಿಟ್ ಶಾಖೆಯನ್ನು ರೈಲ್ವೆ ಆಡಿಟ್ ಎಂದು ಪರಿವರ್ತನೆ ಮಾಡುವುದು. ೪) ಡಿಕ್ಟೇಟರು ಸತ್ಯಾಗ್ರಹವನ್ನು ವಾಪಸು ತೆಗೆದುಕೊಂಡ ಬಗ್ಗೆ ಇಲ್ಲಿಯವರೆಗೆ ಸರ್ಕಾರದವರು ಯಾವ ಪ್ರಕಟನೆ ಹೊರಡಿಸದಿರುವುದು ಸಂಶಯಕ್ಕೆ ಎಡೆಗೊಟ್ಟಿದೆ. ೫) ನಾಯಕರುಗಳು ಬಿಡುಗಡೆಯಾದ ಕೂಡಲೆ ಸಂಘದ ವಿಶೇಷ ಸಭೆಯನ್ನು ಸೇರಿಸಲು ಅವಕಾಶ ಕೊಡಬೇಕು.

ಕೋರ್ಟಿನ ಬಳಿ ಪಿಕೆಟಿಂಗ್

ಸ್ವಂ ವ ಫೋ.] ಬೆಂಗಳೂರು ೪

ಈ ದಿನ ಜಿಲ್ಲಾ ಕೋರ್ಟಿನ ಬಳಿ ವಿದ್ಯಾರ್ಥಿಗಳು ಕೋರ್ಟಿನ ಒಳ ಭಾಗಗಳಿಗೂ ಹೋಗಿ ಪಿಕೆಟಿಂಗ್ ನಡೆಸುತ್ತಿದ್ದಾರೆ. ಇದುವರೆಗೆ ಪೊಲೀಸರು ೧೪ ಮಂದಿ ಹುಡುಗಿಯರೂ ಸೇರಿ ೪೧ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಲಾ ಅಸೋಸಿಯೇಷನ್ ಬಳಿ ಉಪವಾಸ ಮುಷ್ಕರ

ಪಿಕೆಟಿಂಗ್ ನಡೆಯುತ್ತಿರುವುದರಿಂದ ೧೫ ದಿನಗಳು ಕೋರ್ಟುಗಳನ್ನು ಮುಚ್ಚಬೇಕೆಂದು ನಿನ್ನೆ ವಕೀಲರುಗಳ ಸಭೆಯಲ್ಲಿ ಬಂದ ನಿರ್ಣಯವು ಅಂಗೀಕಾರವಾಗದುದನ್ನು ಪ್ರತಿಭಟಿಸಿ, ಈ ದಿನ ಬೆಳಗಿನಿಂದ ೪ ಜನ ಹುಡುಗಿಯರೂ, ೬ ಜನ ವಿದ್ಯಾರ್ಥಿಗಳೂ ಲಾ ಅಸೋಸಿಯೇಷನ್ ಬಳಿ ಉಪವಾಸ ಮುಷ್ಕರ ಹೂಡಿದ್ದಾರೆ.

ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಎಸ್. ವೆಂಕಟನರಸಿಂಹಾಚಾರ್ಯರನ್ನು ಕೆಮಿಸ್ಟ್ರಿ ಪ್ರೊಫೆಸರನ್ನಾಗಿ ನೇಮಿಸಲಾಗಿದೆ.

ಸತ್ಯಾಗ್ರಹದ ಸುದ್ದಿ

ಚಿಕ್ಕಮಗಳೂರಿನ ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಅನಂತರಾಮಯ್ಯನವರನ್ನು ಬಂಧನದಲ್ಲಿಡಲಾಗಿದೆ.

ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಚಿಕ್ಕಮಗಳೂರಿನಲ್ಲಿ ಶ್ರೀಗಳಾದ ಶಿವಾನಂದ, ಕುಮಾರಸ್ವಾಮಿ., ದೇವದಾಸ್, ಬಾದರಾಯಣ ಮತ್ತು ಕರೀಂಖಾನ್ ಮೊದಲಾದ ೫ ಮಂದಿ ಕಾಂಗ್ರೆಸ್ ನಾಯಕರನ್ನು ಬಂಧಿಸಲಾಗಿದೆ

ಹೊಸಕೋಟೆ ತಾಲ್ಲೂಕು ಕಛೇರಿ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರೆಂದು ಟಿ. ಸಿ. ರುದ್ರಪ್ಪ, ಜಗನ್ನಾಥರಾವ್ ಮೊದಲಾದ ೧೮ ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

[illegible]ಪೇಟೆಯ ಬಾಲಮಂಗಳದ [illegible] ಗಳು ಸುತ್ತಮುತ್ತಲ ಗ್ರಾಮಗಳಿಗೆ ಹೋಗಿ ಜನರಿಗೆ ಕಾಂಗ್ರೆಸ್ಸಿನ ತತ್ವಗಳನ್ನು ಬೋಧಿಸಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವವರೆಗೆ ಸರ್ಕಾರಕ್ಕೆ ಯಾರೂ ಕಂದಾಯ ಮತ್ತು ಇತರ ಶುಲ್ಕಗಳನ್ನು ಕೊಡಬಾರದೆಂದು, ಪಿಕೆಟಿಂಗ್ ನಡೆಸುತ್ತಿರುವರೆಂದು ತಿಳಿದು ಬಂದಿದೆ

ಚಿಕ್ಕನಾಯಕನಹಳ್ಳಿಯ ಪೇಟೆಯ ವಿದ್ಯಾಪೀಠ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಅಯ್ಯರ್, ಉಪಾಧ್ಯಾಯರಾದ ಶ್ರೀ ಕೃಷ್ಣರಾಯರನ್ನೂ ಮತ್ತಿತರ ಮೂವರನ್ನು ಬಂಧಿಸಲಾಗಿದೆ

ವಡಗೇನಹಳ್ಳಿಯಲ್ಲಿ ಸತ್ಯಾಗ್ರಹಿಗಳು ಅರಣ್ಯ ಸತ್ಯಾಗ್ರಹ ನಡೆಸುತ್ತಿದ್ದಾರೆ ಹಲವು ಗಂಧದ ಮರಗಳನ್ನು ಕಡಿದು ಹರಾಜು ಮಾಡಲಾಗಿದೆ.

ಬೆಂಗಳೂರಿನ ಆನಂದ್ ಬ್ರದರ್ಸ್ ಅಂಗಡಿಯ ಮ್ಯಾನೇಜರಾದ ಶ್ರೀ ಅನಂತಕೃಷ್ಣರವರನ್ನು ಮಂಗಳವಾರ ದಸ್ತಗಿರಿ ಮಾಡಿ ಮಾವಳ್ಳಿಯಲ್ಲಿದ್ದ ಅವರ ಮನೆಯನ್ನು ಶೋಧಿಸಲಾಗಿದೆ.

ಸತ್ಯಾಗ್ರಹದಲ್ಲಿ ಭಾಗವಹಿಸಲು ಮಧುರೆಯಿಂದ ಬಂದಿದ್ದ ಶ್ರೀ ಎಂ ತಂಗವೇಲು ಎಂ. ಸೋಮನಾಥ ಮತ್ತು ೯ ಮಂದಿಯನ್ನು ಮಂಗಳವಾರ ದಂಡಿನಲ್ಲಿ ಬಂಧಿಸಲಾಗಿದೆ.

ಸತ್ಯಾಗ್ರಹಕ್ಕಾಗಿ ಹಾಸನ ಹೊರಟಿದ್ದರೆಂದು ಮೊನ್ನೆ ಆಲೂರಿನ ಬಳಿ ೬ ಜನರನ್ನು ಬಂಧಿಸಲಾಗಿದೆ.

ಚಿತ್ರದುರ್ಗದ ಪ್ರಮುಖ ವಕೀಲರಾದ ಶ್ರೀ ಹೆಚ್. ಎಸ್. ವೆಂಕಟಾಚಲಯ್ಯ, ವರ್ತಕರಾದ ಶ್ರೀ ಸಿ. ಹೆಚ್. ರುದ್ರಪ್ಪ, ವಿದ್ಯಾರ್ಥಿ ನಾಯಕರಾದ ಜಿ. ಎಂ. ರಾಜಶೇಖರಯ್ಯನವರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಸತ್ಯಾಗ್ರಹಿಗಳಿಗೆ ಶಿಕ್ಷೆ

[illegible] ಎಲ್. ವಿ. ರಾಜಾರಾಂ, ಎಸ್. ಎಸ್. ಮೂರ್ತಿ, ಎ. ಆರ್. ಕೃಷ್ಣ, ಮತ್ತು ಕೋಲಾರದ ಕೃಷ್ಣಯ್ಯ ಎಂಬುವರಿಗೆ ೧ ನೇ ತಾ|| [illegible] ಸಜೆ ವಿಧಿಸಲಾಗಿದೆ.

[illegible]

ಪ್ರತಿಗಾಮಿಗಳು ಅಧಿಕಾರಕ್ಕೆ ಬರಲಾಗದು

ರಾಮಾಚಾರ್ಯರ ಸೂಚನೆ

ರಾಜ ಘೋಷಣೆಯು ಕಾರ್ಯಗತವಾಗಲು ಮಂತ್ರಿ ಮಂಡಲ ಪುನರ್ವ್ಯವಸ್ಥಿತವಾಗಬೇಕು; ಅದರಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸಲು ತೊಡಕನ್ನುಂಟುಮಾಡಬಾರದು, ಪ್ರತಿಗಾಮಿಗಳಾದವರು ಅಧಿಕಾರಕ್ಕೆ ಬರುವುದು ತಡೆಗಟ್ಟಲ್ಪಡಬೇಕು—ಎಂಬುದಾಗಿ ಹಿಂದೂ ಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ ಜಿ. ವಿ. ರಾಮಾಚಾರ್ಯರು ಸೂಚಿಸಿದ್ದಾರೆ. ಕಾಂಗ್ರೆಸ್ ನಾಯಕರ ಬಿಡುಗಡೆಯಾಗುವವರೆಗೆ ಮಹಾರಾಜರ ಘೋಷಣೆಯನ್ನು ಸಾರ್ವಜನಿಕರು ವಿಮರ್ಶಿಸಬಾರದೆಂದು ಅವರು ಪ್ರಾರ್ಥಿಸಿದ್ದಾರೆ

ಬಂಗಾಳದಲ್ಲಿ ಬಂಗಾಳಿಯು ರಾಜಭಾಷೆ

ಇನ್ನೆರಡು ವರ್ಷಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಬಂಗಾಳಿಯನ್ನೇ ಸರ್ಕಾರದ ವ್ಯವಹಾರಗಳಲ್ಲಿ ಉಪಯೋಗಿಸಬೇಕೆಂದೂ ಆದುದರಿಂದ ಈಗಿನಿಂದಲೇ ಸರ್ಕಾರದ ಕಾಗದ ಪತ್ರಗಳನ್ನು ಬಂಗಾಳಿಯಲ್ಲಿ ತಯಾರಿಸಬೇಕೆಂದೂ ಅಲ್ಲಿನ ಸರ್ಕಾರವು ಆಜ್ಞೆ ಇತ್ತಿದೆ

ಹಿಂದೀ ಪರಿಣತರಿಗೆ ಹೆಚ್ಚಿನ ಉದ್ಯೋಗ

ಗ್ಲೋಬ್] ಕಾಶಿ ೧

ಹಿಂದೀ ಪ[illegible]ಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕೆಲಸವನ್ನಪೇಕ್ಷಿಸುವವರ ಪಟ್ಟಿಯನ್ನು ತಯಾರಿಸಿ ಕಳುಹಿಸಿಕೊಡಬೇಕೆಂದು ಸಂಯುಕ್ತ ಪ್ರಾಂತ ಸರ್ಕಾರವು ಅಲ್ಲಿನ ಎಲ್ಲ ಸಮಿತಿಗಳಿಗೂ ಸೂಚನೆ ಇತ್ತಿದೆ ಸರ್ಕಾರದ ವಿದ್ಯಾಭ್ಯಾಸ ಮೊದಲಾದ ಇಲಾಖೆಗಳಲ್ಲಿ ಅವರುಗಳಿಗೆ ನೌಕರಿಯನ್ನೂ ದಗಿಸಲಾಗುವುದೆಂದು ಗೊತ್ತಾಗಿದೆ.

● ವಾಯುವ್ಯ ಸರಹದ್ದಿನ ಪ್ರಾಂತವು ಪಾಕಿಸ್ತಾನದಲ್ಲಿ ಸೇರಬೇಕೇ ಅಥವಾ ಸ್ವತಂತ್ರವಾಗಿರಬೇಕೇ-ಎಂಬ ವಿಷಯವು ಇನ್ನೂ ಇತ್ಯರ್ಥವಾಗಿಲ್ಲ ಅದರ ಭವಿಷ್ಯದ ನಿರ್ಧಾರವನ್ನು ತಿಳಿಯುವ ವರೆಗೆ ಪಾಕಿಸ್ತಾನಕ್ಕೆ ಭದ್ರತಾ ಸಮಿತಿಯಲ್ಲಿ ಸ್ಥಾನ ಕೊಡಬಾರದಾಗಿತ್ತು—ಎಂಬುದಾಗಿ ಅಫ್ಘಾನಿಸ್ತಾನದ ಮಂತ್ರಿ ಹುಸೇನ್ ಅಜೀಜ್ ಅಬ್ದುಲ್‌ರವರು ಭದ್ರತಾ ಸಮಿತಿಯಲ್ಲಿ ಹೇಳಿರುವರು

ವುಡ್‌ಲ್ಯಾಂಡ್ಸ್
3-10-47 ರಿಂದ
೨ ನೇ ವಾರ
ಪ್ರತಿ ದಿನ ೩ ಆಟಗಳು
ಪ್ರಕಾಶ್ ಪಿಕ್ಚರ್ಸ್‌ರವರ
ಅಮೋಘವಾದ ಚಲನ ಚಿತ್ರ
ನಯೀ ಮಾ
(ಹಿಂದಿ)
—: ಪಾತ್ರಗಳು :—
ರಂಜನ್ ಮತ್ತು ಜೀವನ್

ಖಾದಿ ಟೋಪಿ ಧಾರಣೆಗೆ ಪೋಲೀಸರ ಪ್ರತಿಬಂಧಕ

ಜನರು ಖಾದಿ ಟೋಪಿಯನ್ನು ಧರಿಸಿದರೆ ಅವರ ಮೇಲೆ ದುಷ್ಪರಿಣಾಮವುಂಟಾಗುವುದೆಂದು ಹೈದರಾಬಾದಿನ ಗುಲ್ಬರ್ಗಾ ಜಿಲ್ಲೆಯ ಜನರನ್ನು ಅಲ್ಲಿನ ಪೋಲೀಸರು ಹೆದರಿಸುತ್ತಿರುವರೆಂದು ವರದಿಯಾಗಿದೆ.

ಮಧ್ಯಪ್ರಾಂತದಲ್ಲಿ ನಿರಾಶ್ರಿತರ ಹಾಜೆ

ಗ್ಲೋಬ್] ನಾಗಪುರ ೧

ನಿರಾಶ್ರಿತರ ಹಿತರಕ್ಷಣೆಗಳಿಗೆ ಗಮನ ಕೊಡಲು ಪ್ರತ್ಯೇಕವಾದ ಖಾತೆಯನ್ನು ಮಧ್ಯಪ್ರಾಂತದಲ್ಲಿ ಸದ್ಯದಲ್ಲೇ ತೆರೆಯಲಾಗುವುದು

ಪಾಕಿಸ್ತಾನ ಡೊಮಿನಿಯನ್ನಿಗೆ ಬಟ್ವಾ ಸಂಸ್ಥಾನ

ಗ್ಲೋಬ್] ಸೂರತ್ ೧

ಅನೇಕ ಜನ ವಾರಸುದಾರರಿಂದ ಕೂಡಿದ ಕಾಥೇವಾಡಿನ ಬಾಟ್ವಾ ಸಂಸ್ಥಾನವು ಪಾಕಿಸ್ತಾನ ಡೊಮಿನಿಯನ್ನಿಗೆ ಸೇರುವುದಾಗಿ ಹೇಳಿ ಕರಾರು ಪತ್ರಕ್ಕೆ ರುಜು ಹಾಕಿದೆ.

ಬಹಿರಂಗ ಹರಾಜು

ತಾರೀಖು ೧೧—೧೦—೪೭ ನೇ ಶನಿವಾರ ಸಾಯಂಕಾಲ ೪ ಗಂಟೆಗೆ ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ ಹೆಲ್ತ್ ಆಫೀಸಿಗೆ ಸಂಬಂಧಪಟ್ಟ ಹಳೇ ಮೋಟಾರು ಟೈರುಗಳು, [illegible] ಸಾಮಾನುಗಳು, ಖಾಲಿ ಪೆಟ್ಟಿಗೆಗಳು ಪ ಸ್ಟೋರ್ ಆಫೀಸ್ ನೋಟೀಸ್ ಬೋರ್ಡಿನಲ್ಲಿ ನಮೂದಿಸಿರುವಂತೆ ಬಹಿರಂಗವಾಗಿ ಹರಾಜು ಮಾಡುತ್ತಿದ್ದರಿಂದ ಇಷ್ಟವುಳ್ಳವರು ಖುದ್ದು ಹಾಜರಾಗಿ ಮೇಲ್ಕಂಡ ಹರಾಜಿನಲ್ಲಿ ಭದಸವಾಲ್ ಮಾಡಿ ಕೂಡಲೆ ಹಣ ಪಾವತಿಮಾಡಿ ಸಾಮಾನುಗಳನ್ನು ಪಡೆಯಬಹುದು,

E. ANANTHA ROW,
೧-೧೦-೪೭, Health Officer
Mysore City

OPERA TALKIES
From 4-10-47
Daily 3 Shows
PHANTOM
(Full Serial)
— with —
TOM TYLER

Morning shows from
3-10-47 for 1 days
Daily at 10-30 a. m.
How Green
WAS
My Valley
— with —
Walter Pidgeon,
Maureen O'hara
Donald Crips

Printed, printed and published by A. P. Nagaraj[illegible] at the Sadhvi Press D. Subbaiah Road Mysore

ಪ್ರಜಾದ್ರೋಹ ಮಾಡುವ ರಾಜರು ಇರಕೂಡದು

ಮೊನ್ನೆ ನಡೆದ ಹೈದರಾಬಾದು ದಿನಾಚರಣೆಯಲ್ಲಿ ಭಾಷಣ ಮಾಡುತ್ತಾ ಹೈದರಾಬಾದು ನಿಜಾಮರು ತೊಲಗಬೇಕೆಂದು ಹೇಳುವುದಕ್ಕೆ ಅವರು ಮುಸ್ಲಿಮರಾಗಿರುವುದು ಕಾರಣವಲ್ಲವೆಂದೂ, ಪ್ರಜಾದ್ರೋಹಿಗಳಾದ ಯಾವ ರಾಜರಿಗೂ ಉಳಿಗಾಲವಿರಕೂಡದೆಂದೂ ಶ್ರೀ ಜೈಪ್ರಕಾಶ್ ನಾರಾಯಣ್‌ರವರು ತಿಳಿಸಿರುವರು

WOODLANDS
Morning shows from
3-10-47 for 4 days
Daily at 10-30 a. m.
Going My Way
—: With :—
Bing Crosby

ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ರಾಜಕಮಲ್
ತಾ|| 4-10-47 ರಿಂದ
ಅಮೋಘ ಪ್ರಾರಂಭ
ಮಹಾಕವಿ
ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಪಹರಿ ಸನ್ಯಾಲ್, ಸ್ನೇಹ ಪ್ರಭಾ,
ವನಮಾಲ, ಮತ್ತು, ಉಲ್ಲಾಸ್

Morning shows from
3-10-47 for 4 days daily
at 10.30 a m
Oklahoma Kid
Featuring :—
Humphrey Bogart, James
Cagney, Rosemary Lane

ಫೋನ್ ನಂ. 608 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ 2] ಭಾನುವಾರ ೫-೧೦-೪೭ [ಸಂಚಿಕೆ ೧೪

ಜುನಘಡ ಸರಹದ್ದಿಗೆ ಭಾರತದ ಸೇನೆ

೧೨೫ ವರ್ಷ ಬದುಕಲು ಇಷ್ಟವಿಲ್ಲವೆಂದು ಗಾಂಧೀಜಿ

ಮೊನ್ನೆ ದಿನ ತಮ್ಮ ಜಯಂತಿಯ ದಿನ ನಡೆಸಿದ ಪ್ರಾರ್ಥನಾ ಸಭೆಯಲ್ಲಿ ತಮಗೆ ನೂರಿಪ್ಪತ್ತೈದು ವರ್ಷ ಬಾಳಬೇಕೆಂಬ ಆಸೆ ಇಲ್ಲವೆಂದು ಗಾಂಧೀಜಿ ನುಡಿದಿದ್ದಾರೆ. ಹಿಂದೆ ತಾವು ಹೇಳಿದ ಮಾತನ್ನು ಎಲ್ಲರೂ ಕೇಳುತ್ತಿದ್ದರೆಂದೂ ಆದರೆ ಈಗ ತಮ್ಮೊಬ್ಬರ ದನಿಯೇ ಬೇರೆಯಾಗಿದೆಯೆಂದೂ ಬಾಪು ನುಡಿದಿದ್ದಾರೆ. ದೇಶದಲ್ಲಿ ಈಗ ನಡೆಯುತ್ತಿರುವ ನರಹತ್ಯೆ ಮತ್ತು ದ್ವೇಷಾಸೂಯೆಗಳ ನಡುವೆ ಅಷ್ಟು ದೀರ್ಘಕಾಲ ಬಾಳಲು ತಮಗೆ ಆಸೆಯಿಲ್ಲದಂತಾಗಿದೆಯೆಂದು ಅವರು ಹೇಳಿದ್ದಾರೆ.

ರಾಮದಾಸ್ ಹಡಗಿನ ದುರಂತದ ವಿಚಾರಣೆ

ಈಗ್ಗೆ ಕೆಲವು ತಿಂಗಳ ಕೆಳಗೆ ಬೊಂಬಾಯಿ ಬಳಿ ಮುಳುಗಿದ ರಾಮದಾಸ್ ಹಡಗಿನ ದುರಂತದ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ನಡೆಸಲು ಬೊಂಬಾಯಿ ಪ್ರೆಸಿಡೆನ್ಸಿ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರದವರು ಒಂದು ಮೆರೀನ್ ವಿಚಾರಣಾ ನ್ಯಾಯಾಸ್ಥಾನವನ್ನು ನೇಮಿಸಿರುವರು

ಭಾರತದ ಬ್ರಿಟಿಷ್ ಸೈನಿಕರಿಗೆ ಬರ್ತ್‌ಫ಼ರ್ಡ್

ಭಾರತ ಮತ್ತು ಪಾಕಿಸ್ತಾನದಲ್ಲಿರುವ ಬ್ರಿಟಿಷ್ ಸೈನ್ಯದ ಅಧಿಕಾರಿಗಳು ಮತ್ತು ಇತರರನ್ನು ಈ ವರ್ಷದ ಅಂತ್ಯದೊಳಗಾಗಿ ಕೆಲಸದಿಂದ ವಜಾ ಮಾಡಲು ಎರಡು ಸರ್ಕಾರದವರು ಒಪ್ಪಿದ್ದಾರೆ. ಸದ್ಯದಲ್ಲೇ ಭಾರತಕ್ಕೆ ಪ್ರತ್ಯೇಕ ಭಾರತೀಯ ದಂಡನಾಯಕರನ್ನು ನೇಮಿಸಲಾಗುವುದಂತೆ.

ಭಾರತೀಯರೇ ಸೇನಾ ನಾಯಕರಾಗಬೇಕು

ಭಾರತ ಡೊಮಿನಿಯನ್ನಿನ ಸೇನಾ ಪಡೆಗೆ ೧೯೪೮ ನೇ ಜನವರಿಯಿಂದ ಭಾರತೀಯರನ್ನೇ ಪ್ರಧಾನ ನಾಯಕರನ್ನಾಗಿ ನೇಮಿಸಬೇಕೆಂದು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ವರದಿಯಾಗಿದೆ. ತತ್ಪರಿಣಾಮ ಇದು ಅನಿವಾರ್ಯವೆಂದು ಭಾವಿಸಿ ಈ ವರ್ಷಾಂತ್ಯದೊಳಗೆ ಭಾರತ ಸೇನೆಯಲ್ಲಿರುವ ಬ್ರಿಟಿಷ್ ಅಧಿಕಾರಿಗಳು ನಿವೃತ್ತರಾಗಬೇಕೆಂದು ಭಾರತ ಸರ್ಕಾರವು ಅವರಿಗೆ ನೋಟೀಸು ಕೊಟ್ಟಿದೆ.

ಹೈದರಾಬಾದಿಗೆ ಭಾರತ ಸರ್ಕಾರದ ಸೂಚನೆ

ಅಕ್ಟೋಬರ್ ೧೫ ನೇ ತಾರೀಖಿನ ವೇಳೆಗೆ ಹೈದರಾಬಾದ್ ಸಂಸ್ಥಾನವು ಭಾರತ ಡೊಮಿನಿಯನ್ನಿಗೆ ಸೇರಬೇಕು ಅಥವಾ ಬಗ್ಗೆ ಜನಾಭಿಪ್ರಾಯ ಪಡೆಯಲಾದರೂ ಸಿದ್ಧವಾಗಿರಬೇಕು-ಎಂದು ಭಾರತ ಸರ್ಕಾರವು ಕೊನೆಯದಾಗಿ ಹೈದರಾಬಾದಿಗೆ ಸೂಚನೆ ಇತ್ತಿದೆಯೆಂದು ವರದಿಯಾಗಿದೆ. ಹೈದರಾಬಾದು ಈ ಸೂಚನೆಗೆ ಒಪ್ಪದಿದ್ದಲ್ಲಿ ಎಲ್ಲ ಸ್ಟಾಂಪ್ ಸ್ಟೀಲ್ ಒಪ್ಪಂದಗಳನ್ನು ರದ್ದು ಮಾಡುವುದು; ಅಂಚೆ ಮತ್ತು ವಾಣಿಜ್ಯ ಸೌಲಭ್ಯಗಳನ್ನು ನಿಲ್ಲಿಸುವುದು, ಗ್ರಾಂಡ್ ಟ್ರಂಕ್ ಎಕ್ಸ್‌ಪ್ರೆಸ್ಸನ್ನು ನಿಲ್ಲಿಸುವುದು ಅಥವಾ ಬೇರೆ ಮಾರ್ಗವಾಗಿ ಬೇರೆ ಕಡೆ ಓಡಿಸುವುದು-ಮೊದಲಾದ ಕಾರ್ಯಗಳನ್ನು ಕೈಗೊಳ್ಳಲಾಗುವುದೆಂದು ತಿಳಿದಿದೆ.

ಹೈದರಾಬಾದ್ ಸೈನ್ಯಾಧಿಕಾರಿಯಿಂದ ರಾಷ್ಟ್ರಧ್ವಜಾರೋಹಣ

ಹೈದರಾಬಾದಿನ ಇಂಪೀರಿಯಲ್ ಪೋಸ್ಟಾಫೀಸ್ ಭವನದ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಲು ತೊಡಗಿದುದನ್ನು ಅಲ್ಲಿ ಕಾವಲಿದ್ದ ಸಿಪಾಯಿಯು ಪ್ರತಿಭಟಿಸಿದನೆಂದೂ, ಅಧಿಕಾರಿಗಳು ಮದರಾಸಿನಲ್ಲಿರುವ ಅಧಿಕಾರಿಗಳಿಗೆ ಈ ವಿಷಯದಲ್ಲಿ ತಂತಿ ಕಳುಹಿಸಿದನಂತರ ಹೈದರಾಬಾದ್ ಸೇನೆಯ ಅಧಿಕಾರಿಗಳೇ ಬಂದು ಧ್ವಜಾರೋಹಣ ನಡೆಸಿದರೆಂದೂ ವರದಿಯಾಗಿದೆ

ಏಪ್ರಿಲಿನಲ್ಲಿ ಸುಭಾಷರು ಭಾರತಕ್ಕೆ ಹಿಂದಿರುಗುವರು

ನೇತಾಜಿ ಬೋಸರು ಜೀವಂತರಾಗಿರುವ ಭರವಸೆಯು ತಮಗಿರುವುದಾಗಿಯೂ ಬಾಬು ಸುಭಾಷರು ೧೯೪೮ ನೇ ಏಪ್ರಿಲ್ ತಿಂಗಳಲ್ಲಿ ಪೂರ್ವ ಭಾರತಕ್ಕೆ ವಾಪಸು ಬರುವರೆಂದೂ ಲಂಡನ್ನಿನ ಸುಭಾಷ್ ಸಂಘದ ಕಾರ್ಯದರ್ಶಿ ಶ್ರೀ ನಿರ್ಮಲ ಘೋಷರು ತಿಳಿಸಿರುವರು

ಸತ್ಯಾಗ್ರಹ ಸುದ್ದಿ

ದೊಡ್ಡ ಬಳ್ಳಾಪುರದ ತಾಲ್ಲೂಕು ಕಛೇರಿ ಮುಂದೆ ಪಿಕೆಟ್ ನಡೆಸಿದರೆಂದು ಗುರುಲಿಂಗಯ್ಯ, ಅಣ್ಣಯ್ಯ ಮತ್ತು ಇತರ ಮೂವರಿಗೆ ತಲಾ ೩ ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಲಾಗಿದೆ

ಚಿಕ್ಕಮಗಳೂರಿನ ಕಾಂಗ್ರೆಸ್ ಕೆಲಸಗಾರರಾದ ಶ್ರೀ ನಂಜಯ್ಯ ಎಂಬುವರನ್ನು ಪಬ್ಲಿಕ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ದಸ್ತಗಿರಿ ಮಾಡಲಾಗಿದೆ. ಆಜಾದ್ ಪಾರ್ಕಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀಮತಿ ಕೆ. ಆರ್ ಸುಬ್ಬಮ್ಮ ಎಂಬುವರು ಭಾಷಣಮಾಡಿ, ಇತ್ತೀಚಿನ ರಾಜಕೀಯ ಸುಧಾರಣೆಗಳ ಬಗ್ಗೆ ಮಾಡಿರುವ ಘೋಷಣೆಯನ್ನು ತೀವ್ರವಾಗಿ ಖಂಡಿಸಿದರು

ಹುತಾತ್ಮರ ಸ್ಮಾರಕ

ಮೈಸೂರು ೫

ಈ ದಿನ ಮಧ್ಯಾಹ್ನ ವಿದ್ಯಾರ್ಥಿಗಳು ...ಗಿ ರಸ್ತೆಯಲ್ಲಿರುವ ಐದು ಅಂಗಡಿಗಳ ಬಳಿ ಈಗ ಒಂದು ತಿಂಗಳ ಹಿಂದೆ ಮೃತರಾದ ವಿದ್ಯಾರ್ಥಿಗಳ ಮತ್ತು ೧೯೪೨ ರಲ್ಲಿ ಮೃತರಾದ ರಂಗಪ್ಪನವರ ನೆನಪಿಗಾಗಿ ಸ್ಮಾರಕ ಫಲಕವೊಂದನ್ನು ಇಟ್ಟು ಪೂಜೆ ಮತ್ತು ಪ್ರಾರ್ಥನೆಗಳನ್ನು ನಡೆಸಿ ಗೌರವಿಸಿದರು.

ಮದರಾಸ್ ವಕೀಲರ ದಸ್ತಗಿರಿ

ಮೈಸೂರು ೫

ರಾಜಧಾನಿಗೆ ಆಗಮಿಸಿರುವ ಮದರಾಸಿನ ವಕೀಲರಾದ ಶ್ರೀ ಕೆ. ಎಸ್. ಚಕ್ರವರ್ತಿ ರಾಯರವರು ನಿನ್ನೆ ಸಂಜೆ ಸುಬ್ಬರಾಯನಕೆರೆಯಲ್ಲಿ ಭಾಷಣ ಮಾಡಲು ಯತ್ನಿಸಿದರೆಂದು ಅವರನ್ನೂ ಮತ್ತು ಒಬ್ಬ ವಿದ್ಯಾರ್ಥಿಯನ್ನೂ ಪೋಲೀಸರು ದಸ್ತಗಿರಿ ಮಾಡಿರುವರು

ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರ್ಕಾರಕ್ಕಾಗಿ ಹೂಡಿರುವ ಅಹಿಂಸಾಯುತವಾದ ಹೋರಾಟ ಜಯಪ್ರದವಾಗಲೇಬೇಕು. ಪ್ರಜೆಗಳ ಈ ಹೋರಾಟವನ್ನು ತುಳಿಯಲು ಸರ್ಕಾರದವರು ಅನುಸರಿಸುತ್ತಿರುವ ಮಾರ್ಗ ಖಂಡನೀಯವಾದುದು ಮೈಸೂರು ಜನತೆಯು ಈ ಹೋರಾಟಕ್ಕೆ ಮುದಾಸಿನವರೆಲ್ಲರೂ, ಪ್ರತಿಯೊಬ್ಬ ಭಾರತೀಯನೂ ನೆರವು ನೀಡಿ ಈ ಹೋರಾಟ ಜಯಪ್ರದವಾಗುವಂತೆ ಮಾಡಬೇಕು-ಎಂಬುದಾಗಿ ಶ್ರೀ ಚಕ್ರವರ್ತಿರಾಯರವರು ಬಂಧಿತರಾಗುವ ಮುನ್ನ ಒಂದು ಹೇಳಿಕೆಯನ್ನಿತ್ತು ತಿಳಿಸಿರುವರು

ಗಾಂಧಿ ಜಯಂತಿ

ರಾಜಧಾನಿಯ ಮೈಸೂರು ಬ್ರದರ್ಸ್‌ರವರ ಶ್ರೀವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ಕಳೆದ ಗುರುವಾರ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಈ ಉತ್ಸವಕ್ಕೆ ಅನೇಕ ಮಾನ್ಯ ಮಹಿಳೆಯರೂ ಮತ್ತು ಮಹನೀಯರೂ ದಯಮಾಡಿಸಿದ್ದರು ರಾಷ್ಟ್ರೀಯ ಗೀತೆಗಳು ಮತ್ತು ಮಹಾತ್ಮರವರ ಜೀವನವನ್ನು ಕುರಿತು ಭಾಷಣಗಳಾದ ವೇಲೆ ಸಭೆಯು ರಾಷ್ಟ್ರಗೀತೆ ಮತ್ತು ಜೈಕಾರಗಳೊಡನೆ ಮುಕ್ತಾಯವಾಯಿತು

ರೈಲ್ವೆ ಕೆಲಸಗಾರರ ಮಹಿಳೆಯರಿಂದ ಪ್ರದರ್ಶನ

ಸ್ವ.ಸು.ಫೋ] [ಬೆಂಗಳೂರು ೫

ತಮ್ಮಗಳಿಗೆ ಕೊಡಬೇಕಾದ ರೇಷನ್ ಕೊಟ್ಟಿಲ್ಲವೆಂದು ಹೇಳಿ ದಿವಾನರ ಭವನದ ಮುಂದೆ ಪ್ರದರ್ಶನ ನಡೆಸಲು ಸುಮಾರು ೧೫೦ ಮಂದಿ ರೈಲ್ವೆ ಕೆಲಸಗಾರರ ಮಹಿಳೆಯರು ನಿನ್ನೆ ಸಂಜೆ ೭ ಗಂಟೆಯಲ್ಲಿ ಮೆರವಣಿಗೆ ಹೊರಟರು. ಅವರನ್ನು ಪೋಲೀಸರು ಸೆಂಟ್ರಲ್ ಜೈಲಿನ ಬಳಿ ತಡೆದು ವಾಪಸು ಕಳುಹಿಸಿರುವರು

ಗುರುಸ್ವಾಮಿಯವರ ಆಗಮನ

ಸ್ವಂ ಸು ಫೋ] ಬೆಂಗಳೂರು

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯದರ್ಶಿಗಳಾದ ಶ್ರೀ ಗುರುಸ್ವಾಮಿಯವರು ಈ ದಿನ ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು ಬಂಧಿತರಾಗಿರುವ ರೈಲ್ವೆ ನಾಯಕರನ್ನು ಭೇಟಿ ಮಾಡಲು ಅವರು ಪ್ರಯತ್ನಿಸಿದರು.

ದಸರಾ ಅತಿಥಿಗಳು

ಈಗಿರುವ ಪರಿಸ್ಥಿತಿಯಿಂದಲೂ ಮತ್ತು ಆಹಾರದ ಅಭಾವದಿಂದಲೂ ಈ ಸಲದ ದಸರಾ ದರ್ಬಾರಿಗೆ ದಿವಾನರು; ಆಪ್ತ ಕಾರ್ಯದರ್ಶಿಗಳು, ಶ್ರೇಷ್ಠ ನ್ಯಾಯಾಧೀಶರು, ಸಚಿವರುಗಳು, ಶಾಸನ ಸಭಾಧ್ಯಕ್ಷರು ಮತ್ತು ವೈಸ್ ಛಾನ್ಸಲರುಗಳಿಗೆ ಮಾತ್ರ ಆಹ್ವಾನವನ್ನು ಕೊಡಲಾಗಿದೆ

● ಲಾ ಅಸೋಸಿಯೇಷನ್ನಿನ ಮುಂದೆ ನಿನ್ನೆಯ ದಿನ ಪ್ರಾರಂಭವಾದ ವಿದ್ಯಾರ್ಥಿಗಳ ಉಪವಾಸ ಸತ್ಯಾಗ್ರಹವು ಮುಂದುವರಿಯುತ್ತಿದೆ

ಸತ್ಯಾಗ್ರಹಿಗಳ ದಸ್ತಗಿರಿ

ಮೆರವಣಿಗೆ ಹೊರಟ ತಮಿಳುನಾಡು ಕಾಂಗ್ರೆಸ್ಸಿನ ೧೦ ಮಂದಿ ಸತ್ಯಾಗ್ರಹಿಗಳನ್ನು ನಿನ್ನೆ ದಸ್ತಗಿರಿ ಮಾಡಲಾಯಿತು.

ಜುನಗಡಕ್ಕೆ ಡೊಮಿನಿಯನ್ ಸೈನ್ಯ

ಬಂಟ್ವಾ, ಸರದಾರ್‌ಗಡ ಸಂಸ್ಥಾನಗಳ ಅರಸರ ಪ್ರಾರ್ಥನೆಯನ್ನು ಮನ್ನಿಸಿ ಭಾರತ ಸರ್ಕಾರವು ರಾಜಕೋಟೆಯಲ್ಲಿದ್ದ ಸೈನ್ಯಗಳನ್ನು ಆ ಪ್ರದೇಶಗಳಿಗೆ ಸಾಗಿಸಲು ಅನುಮತಿ ಇತ್ತಿದೆ ಇವುಗಳು ಭಾರತ ಅಥವಾ ಪಾಕಿಸ್ತಾನ್ ಡೊಮಿನಿಯನ್ನುಗಳ ಸೇರುವ ಬಗ್ಗೆ ಇನ್ನೂ ನಿರ್ಧರಿಸಿರುವುದಿಲ್ಲ. ಇವು ಜುನಗಡದ ಗಡಿ ಪ್ರದೇಶಗಳಲ್ಲಿರುವುದೂ, ಜುನಗಡವು ಪಾಕಿಸ್ತಾನ್ ಡೊಮಿನಿಯನ್ನಿಗೆ ಸೇರುವುದೂ ಅವರ ಈ ಪ್ರಾರ್ಥನೆಗೆ ಕಾರಣವೆಂದು ಹೇಳಲಾಗಿದೆ

ರೈಲುಗಳ ಸಂಚಾರ

ಮೈಸೂರು ೫

ರಾಜಧಾನಿಯಿಂದ ಚಾಮರಾಜನಗರಕ್ಕೂ ಮತ್ತು ಬೆಂಗಳೂರಿಗೂ ಒಂದೊಂದು ಗೂಡ್ಸ್‌ಗಾಡಿಗಳು ಈ ಬೆಳಿಗ್ಗೆ ಹೊರಟವು

ಚಿಕ್ಕಮಗಳೂರು ಜೈಲಿಗೆ ಕಾಂಗ್ರೆಸ್ ನಾಯಕರು

ರಾಜಘೋಷಣೆಯ ಪರಿಶೀಲನೆಗೆ ಅವಕಾಶ

ಸ್ವಂ ಸು ಫೋ] ಬೆಂಗಳೂರು ೫

ಬಂಧಿತರಾಗಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಸದಸ್ಯರಾದ ಶ್ರೀಗಳಾದ ಕೆ.ಟಿ. ಭಾಷ್ಯಂ, ರಾಮಚಂದ್ರ ರಾವ್, ಟಿ ಸುಬ್ರಹ್ಮಣ್ಯಂ, ಚನ್ನಬಸಪ್ಪ ಮತ್ತಿತರ ೧೫ ಮಂದಿಯನ್ನು ಚಿಕ್ಕಮಗಳೂರು ಜೈಲಿಗೆ ವರ್ಗಾಯಿಸಲಾಗಿದೆ ಅವರುಗಳೆಲ್ಲರೂ ಒಟ್ಟಿಗೆ ಕಲೆತು ಇತ್ತೀಚಿನ ರಾಜಘೋಷಣೆಯನ್ನು ಪರಿಶೀಲಿಸಲೆಂಬುದೇ ಈ ವರ್ಗಾವಣೆಯ ಉದ್ದೇಶ್ಯವೆಂದು ಹೇಳಲಾಗಿದೆ.

ದಸ್ತಗಿರಿ

ಬನ್ನೂರು ೪

ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ರಂಗಯ್ಯ ಮತ್ತು ಇತರ ೮ ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿ ಮೈಸೂರಿಗೆ ಕರೆದುಕೊಂಡು ಹೋಗಿರುತ್ತಾರೆ.

ವಾರ ಭವಿಷ್ಯ

(ಶ್ರೀ ಸತ್ಯಾನಂದ ಸ್ವಾಮಿಗಳಿಂದ)
ತಾ|| ೫-೧೦-೪೭ ರಿಂದ ೧೧-೧೦-೪೭ ರ ವರೆಗೆ

ಮೇಷ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ತಾ|| ೭ ಲಾಭ, ಶಾಂತಿ.

ವೃಷಭ—ಪ್ರಾಕೃತಿಕ ಸ್ಥಿತಿ ಉತ್ತಮ, ಆರ್ಥಿಕ ಲಾಭ ಕಡಿಮೆ, ಧನವ್ಯಯ ಅಧಿಕ, ಪ್ರವಾಸದಿಂದ ಅಪಘಾತ, ವ್ಯಾಪಾರಾದಿಗಳಲ್ಲಿ ಶತ್ರುಗಳ ಕಿರುಕುಳ, ನೌಕರಿಯಲ್ಲಿ ಅಧಿಕಾರಿಗಳಿಂದ ತಿರಸ್ಕಾರ, ಮಂಗಳ ಕಾರ್ಯಗಳಿಗಾಗಿ ಅಧಿಕ ಧನವ್ಯಯ ಬಂಧುಗಳ ಆಗಮನದಿಂದ ಸಂತೋಷ, ತಾ|| ೬, ೧೦, ೧೧ ಚಿಂತೆ.

ಮಿಥುನ—ದೇಹಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಖರ್ಚು ಕಡಿಮೆ, ವ್ಯಾಪಾರದಲ್ಲಿ ಲಾಭ, ಮಿತ್ರರಿಂದ ಸಹಾಯ, ಕೌಟುಂಬಿಕ ಆರೋಗ್ಯ ಕೆಟ್ಟು ಧನವ್ಯಯ, ರಾಜಕೀಯ ವ್ಯವಹಾರಗಳಲ್ಲಿ ಪ್ರವೇಶ, ಮತ್ತು ಅಧಿಕಾರಿಗಳಿಂದ ತಿರಸ್ಕಾರ, ಧಾರ್ಮಿಕ ಕಾರ್ಯಗಳಿಗಾಗಿ ಧನವ್ಯಯ, ತಾ|| ೯, ೧೦ ಲಾಭ, ಶಾಂತಿ.

ಕಟಕ—ಪ್ರಾಕೃತಿಕ ಸ್ಥಿತಿ [illegible]ತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಡಿಮೆ, ಖರ್ಚು ಅಧಿಕ ವ್ಯಾಪಾರದಲ್ಲಿ ನಷ್ಟ, ಮಿತ್ರರಿಂದ ತಿರಸ್ಕಾರ, ಪ್ರವಾಸದಿಂದ ಅಪಘಾತ, ಕೆಲಸ ಕಾರ್ಯಗಳಲ್ಲಿ ಅಡಚಣೆ, ತಾ|| ೮, ೧೧ ಸಾಧಾರಣ, ಶಾಂತಿ.

ಸಿಂಹ—ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ನೌಕರಿಯಲ್ಲಿ ಅಧಿಕಾರಿಗಳ ಮನ್ನಣೆ, ಮಂಗಳ ಕಾರ್ಯಗಳಿಗಾಗಿ ಬಂಧುಗಳ ಆಗಮನ ಮತ್ತು ಧನವ್ಯಯ, ಪ್ರವಾಸದಿಂದ ಧನಲಾಭ, ತಾ|| ೭, ೧೦, ೧೧ ಲಾಭ, ಮಿತ್ರದರ್ಶನ.

ಕನ್ಯಾ—ಆರೋಗ್ಯ ಉತ್ತಮ, ಧನಲಾಭ ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಂದ ಮನ್ನಣೆ, ಶತ್ರುಗಳ ಕಿರುಕುಳದ ಮುಕ್ತಾಯ, ಮೇಲ್ಪಟ್ಟವರಿಂದ ಸಹಾಯ, ತಾ|| ೭, ೮ ಲಾಭ, ಶಾಂತಿ.

ತುಲಾ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಅಧಿಕ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರ ಸ್ನೇಹದಿಂದ ಯತ್ನಿಸಿದ ಕಾರ್ಯಗಳಲ್ಲಿ ಯಶ ಬಂಧು ಮಿತ್ರರ ಆಗಮನ, ತಾ|| ೭, ೧೦ ನಷ್ಟ, ವ್ಯಥೆ

ವೃಶ್ಚಿಕ—ಶಾರೀರಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರಾದಿಗಳಲ್ಲಿ ಶತ್ರುಗಳ ಕಿರುಕುಳ, ಉದ್ಯೋಗದಲ್ಲಿ ಅಧಿಕಾರಿಗಳ ತಿರಸ್ಕಾರ, ಧನಾದಾಯ ಕಡಿಮೆ, ಖರ್ಚು ಹೆಚ್ಚು ನುಗ್ಗಟ್ಟು ಸಂಭವ ಇರುವುದು, ತಾ|| ೯, ೧೦, ೧೧ ಲಾಭ, ಶಾಂತಿ

ಧನಸ್ಸು—ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಕಡಿಮೆ, ಧನಾದಾಯ ಸಾಧಾರಣ, ಖರ್ಚು ಹೆಚ್ಚು, ವ್ಯಾಪಾರಾದಿಗಳಲ್ಲಿ ಶತ್ರುಗಳಿಂದ ಕಿರುಕುಳ, ಮಿತ್ರರಿಂದಲೂ ಬಂಧುಗಳಿಂದಲೂ ತಿರಸ್ಕಾರ, ಪ್ರವಾಸದಿಂದ ಅಪಘಾತ, ತಾ|| ೯, ೧೧ ಲಾಭ, ಶಾಂತಿ.

ಮಕರ—ಪ್ರಾಕೃತಿಕ ಸ್ಥಿತಿ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ಮಾನಸಿಕ ಚಿಂತೆ ಕಡಿಮೆ, ಧನಲಾಭ ಉತ್ತಮ ವ್ಯಾಪಾರಾದಿಗಳಲ್ಲಿ ಪ್ರಗತಿ, ಪ್ರವಾಸದಿಂದ ಸನ್ಮಾನ, ಮಿತ್ರರಿಂದ ಮನ್ನಣೆ, ಧಾರ್ಮಿಕ ಕಾರ್ಯಗಳಿಗಾಗಿ ಧನವ್ಯಯ, ತಾ|| ೭, ೯ ನಷ್ಟ, ಚಿಂತೆ

ಕುಂಭ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ವ್ಯಾಪಾರದಲ್ಲಿ ನಷ್ಟ, ಉದ್ಯೋಗದಲ್ಲಿ ಅಧಿಕಾರಿ ವರ್ಗದವರಿಂದ ಪ್ರೋತ್ಸಾಹ, ಕೋರ್ಟು ವ್ಯವಹಾರಗಳಲ್ಲಿ ಪ್ರತಿಸ್ಪರ್ಧಿಗಳ ಕಿರುಕುಳ, ತಾ|| ೯, ೧೧ ಲಾಭ, ಪ್ರವಾಸ.

ಮೀನ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಕೌಟುಂಬಿಕ ಆರೋಗ್ಯ ಬಿಗಡಾಯಿಸಿ ವೆಚ್ಚ ಅಧಿಕವಾಗುವುದು, ತಾ|| ೭, ೮ ಲಾಭ, ಸಂತೋಷ.

ಸತ್ಯಾಗ್ರಹ ಸಮಾಚಾರ

ಸಂಚಾರಕ್ಕೆ ಅಡ್ಡಿ ಮಾಡಿದರೆಂದು ಹೊನ್ನಾಳಿಯ ೯ ಮಂದಿಗೂ, ತುಮಕೂರಿನ ೫ ಮಂದಿಗೂ, ಅಧಿಕಾರಿಗಳ ಕೆಲಸಕ್ಕೆ ಅಡ್ಡಿ ಪಡಿಸಿದರೆಂದು ತೀರ್ಥಹಳ್ಳಿಯ ೬ ಜನರಿಗೂ ತಲಾ ಒಂದು ತಿಂಗಳ ಶಿಕ್ಷೆಯನ್ನು ವಿಧಿಸಲಾಗಿದೆ. ಚಿತ್ರದುರ್ಗದ ೨೬ ಮಂದಿ ಸತ್ಯಾಗ್ರಹಿಗಳಿಗೆ ತುಮಕೂರು ನ್ಯಾಯಾಧೀಶರು ತಲಾ ೩ ತಿಂಗಳ ಸಜಾ ವಿಧಿಸಿದ್ದಾರೆ

ಹೊಸಕೋಟೆಯಲ್ಲಿ ನೂರಾರು ಜನರನ್ನು ಬಂಧಿಸಲಾಗಿದೆ ಚಳುವಳಿ ಬಿರುಸಾಗಿ ಸಾಗುತ್ತಿದೆ.

ಅರಣ್ಯ ಸತ್ಯಾಗ್ರಹ ನಡೆಸಿದರೆಂದು ತಿಪಟೂರಿನ ೩ ಮಂದಿಗೆ ತಲಾ ೪ ತಿಂಗಳ ಸಜಾ ಕೊಡಲಾಗಿದೆ.

ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಯುತ್ತಿದ್ದರೆಂದು ಕಾನಕಾನಹಳ್ಳಿಯ ೧೭ ಜನರನ್ನು ದಸ್ತಗಿರಿ ಮಾಡಲಾಗಿದೆ

ಗಾಂಧೀಜಯಂತಿಯ ಸಂಬಂಧವಾಗಿ ಭಾಷಣ ಮಾಡಲು ಮಂಡ್ಯದಲ್ಲಿ ಯತ್ನಿಸಿದ ೧೨ ಮಂದಿಯನ್ನು ಕಳೆದ ಬುಧವಾರ ದಸ್ತಗಿರಿ ಮಾಡಲಾಯಿತು

ಶ್ಯಾಮಗೊಂಡ್ಲದಲ್ಲಿ ಅರಣ್ಯ ಸತ್ಯಾಗ್ರಹ ನಡೆಸಲು ಹೊರಟ ೧೩ ಜನರನ್ನು ಬಂಧಿಸಿ ಬೆಂಗಳೂರಿಗೆ ಸಾಗಿಸಲಾಗಿದೆ.

ಚಿಕ್ಕನಾಯಕನಹಳ್ಳಿ, ಹುಳಿಯಾರು, ಮತಿಘಟ್ಟ-ಮೊದಲಾದ ಕಡೆಗಳಲ್ಲಿ ಅರಣ್ಯ ಸತ್ಯಾಗ್ರಹ ನಡೆಸಿ ಗಂಧದ ಮತ್ತು ಈಚಲ ಮರಗಳನ್ನು ಕಡಿದು ಹಾಕಲಾಗುತ್ತಿದೆ

ಮೈಸೂರು ಅರಮನೆ ಮುಂದೆ ಸತ್ಯಾಗ್ರಹ ನಡೆಸಲು ದಾವಣಗೆರೆಯಿಂದ ಹೊರಟ ೨೦ ಮಂದಿ ತುಮಕೂರಿನಲ್ಲಿ ಬಂಧಿತರಾಗಿದ್ದಾರೆ

ಭದ್ರಾವತಿಯಲ್ಲಿ ಪೋಲೀಸರು ಗುಂಡು ಹಾರಿಸಿದ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕೆಂದು ಅಲ್ಲಿನ ಕಾರ್ಮಿಕರ ಸಂಘವು ನಿರ್ಣಯವನ್ನು ಮಾಡಿರುತ್ತದೆ

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆ ನಡೆಸಲು ಯತ್ನಿಸಿದರೆಂದು ಭದ್ರಾವತಿಯ ೩೦ ಜನ ಮುಖಂಡರ ದಸ್ತಗಿರಿಯಾಗಿದೆ.

ಅರಸೀಕೆರೆಯಿಂದ ಹಾಸನಕ್ಕೆ ಬಂದ ೩೪ ಮಂದಿ ಸತ್ಯಾಗ್ರಹಿಗಳಿಗೆ ಅಲ್ಲಿನ ನ್ಯಾಯಾಧೀಶರು ತಲಾ ೩ ತಿಂಗಳ ಕಠಿಣ ಸಜಾ ವಿಧಿಸಿದ್ದಾರೆ.

ಉತ್ಸಾಹಿಗಳಾದ ಉಪಾಧ್ಯಾಯರು
ಬೇಕಾಗಿದ್ದಾರೆ

ತಿರುಮಕೂಡಲು ನರಸೀಪುರದಲ್ಲಿರುವ ವಿದ್ಯೋದಯ ಗ್ರಾಮ ಪ್ರೌಢಶಾಲೆಯಲ್ಲಿ ಕೆಲಸ ಮಾಡಲು ಸೈನ್ಸ್ ಮತ್ತು ಆರ್ಟ್ಸ್ ಪದವೀಧರರು ಬೇಕಾಗಿದ್ದಾರೆ, ವೇತನ-ಬಿ. ಟಿ. ಶಿಕ್ಷಣ ಪಡೆದವರಿಗೆ ೫೫+೧೫ ರೂ. ಇತರರಿಗೆ ೫೦+೧೫ ರೂ. ಪ್ರಾರಂಭ ವೇತನವನ್ನು ಕೊಡಲಾಗುವುದು. ನಿವೃತ್ತರೂ, ಅನುಭವಿಗಳೂ ಇದ್ದರೆ ಉತ್ತಮ. ಈ ಮಾಹೆ ೧೫ ರ ವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು.

Apply to :— Box No 3
C/o ಸಾಧ್ವಿ, ಮೈಸೂರು

ರಾಜಕಮಲ್
ತಾ|| 4-10-47 ರಿಂದ
ಅಮೋಘ ಪ್ರಾರಂಭ
ಮಹಾಕವಿ
ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಮಧುರಿ ಸನ್ಯಾಲ್, ಸ್ನೇಹ ಪ್ರಭಾ, ವನಮಾಲ, ಮತ್ತು ಉಲ್ಹಾಸ್

Morning shows from
3 10 47 for 4 days daily
at 10.30 a.m
Oklahoma Kid
Featuring :—
Humphrey Bogart, James Cagney, Rosemary Lane

ವುಡ್‌ಲ್ಯಾಂಡ್ಸ್
3-10-47 ರಿಂದ
೨ ನೇ ವಾರ
ಪ್ರತಿ ದಿನ ೩ ಆಟಗಳು
ಪ್ರಕಾಶ್ ಪಿಕ್ಚರ್ಸ್‌ರವರ
ಅಮೋಘವಾದ ಚಲನ ಚಿತ್ರ
ನಯೀಯಾ
(ಹಿಂದಿ)
—: ತಾರಾಗಣ :—
ರಂಜನ್ ಮತ್ತು ಜೀವನ್

WOODLANDS
Morning shows from
3-10-47 for 4 days
Daily at 10-30 a. m.
Going My Way
—: With :—
Bing Crosby

ಮೈಸೂರು ಸಿಟಿ
ಮುನಿಸಿಪಾಲಿಟಿ

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಇಲಾಖೆಗೆ ಕಚಡಾ ಗಾಡಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲೀಕರುಗಳು ಪುಷ್ಟಿಕರವಾದ ಮತ್ತು ಸರಿಯಾದ ವಯಸ್ಸಿನ ಎತ್ತುಗಳನ್ನು ಬಿಕರಿಗಾಗಿ ತಾ|| 16-10-47 ಗುರುವಾರ ಸಾಯಂಕಾಲ ಮುನಿಸಿಪಲ್ ಆಫೀಸಿಗೆ ಹಾಜರ್ ಮಾಡಬಹುದು. ಬೆಲೆ ನಿಷ್ಕರ್ಷೆಯಾದ ಕೂಡಲೇ ಹಣವನ್ನು ಪಾವತಿಮಾಡಲಾಗುತ್ತದೆ.

2-10-47 ಇ. ಅನಂತರಾವ್
ಮೈಸೂರು ಸಿಟಿ. ಹೆಲ್ತ್ ಆಫೀಸರ್.

OPERA TALKIES
From 4-10-47
Daily 3 Shows
PHANTOM
(Full Serial)
— with —
TOM TYLER

Morning shows from
3-10-47 for 4 days
Daily at 10-30 a. m
How Green
WAS
My Valley
— with —
Walter Pidgeon,
Maureen O'ha
Donald Crips

ಚಾಮುಂಡೇಶ್ವರೀ ಟಾಕೀಸ್
5 10-47 ರಿಂದ
ಪ್ರತಿ ದಿನ ೩ ಆಟಗಳು
ಟಾಜ್‌ಮಹಲ್ ಪಿಕ್ಚರ್ಸ್‌ರವರ
ಬೇಗಂ
(ಹಿಂದಿ)
— ಭೂಮಿಕೆ :—
ನಾಸೀಂ, ಅಶೋಕ್ ಕುಮಾರ್
ವಿ. ಹೆಚ್. ದೇಸಾಯಿ

Edited, printed and published by … Nagarajan at the Sadhvi Press D. Subbaiah Road Mysore

ಫೋನ್ ನಂ. 508 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಸೋಮವಾರ ೬-೧೦-೪೭ [ಸಂಚಿಕೆ ೪೬

ವರ್ಕಿಂಗ್ ಕಮಿಟಿ ಸದಸ್ಯರ ಬಿಡುಗಡೆ

ಪೋಲೀಸ್ ಅಧಿಕಾರಿಗಳು ಬಿದ್ದರು

ಮೈಸೂರು ೬

ನ್ನೆ ಸಂಜೆ ನೂರಡಿ ರಸ್ತೆಯ ಕಡೆ ದ ಕಮ್ಯಾಂಡೀರಾವ್ ರಸ್ತೆಯ ಕಡೆಗೆ ಗುತ್ತಿದ್ದ ಪೋಲೀಸ್ ವ್ಯಾನು ಸಂಸ್ಕೃ ತಶಾಲೆಯ ಬಳಿ ತಿರುಗಿದಾಗ ಅದು ಗದ ರಭಸಕ್ಕೆ ಬಾಗಿಲು ಕಳಚಿ ಒಳ ಕುಳಿತಿದ್ದ ಪೋ॥ಸ॥ ಇನ್ಸ್‌ಪೆಕ್ಟರ್ ಸೈಯ್ಯ ಲಿಯವರು ಹೊರಗೆಸೆಯಲ್ಪಟ್ಟು ಸ್ಥಾ ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿ ಈ ನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ

ಹೈದರಾಬಾದಿನಲ್ಲಿ ಗುಂಡಿನೇಟು

ಸ್ವಧ್ವಜವನ್ನು ಹಾರಿಸಲು ಹೊರ ಂದೇಡ ಜಿಲ್ಲೆಯ ೩೦೦ ಮಂದಿಯ ರೆ ಪೋಲೀಸರು ಗುಂಡುಹಾರಿಸಿದರೆಂ ಪರಿಂದ ೧೩ ಮಂದಿ ಮರಣ ಹೊಂ ೦ ಜನರಿಗೆ ಘಾಯಗಳಾಗಿವೆಯೆಂದೂ ಯಾಗಿದೆ ಹಡಗೋವಾ ತಾಲ್ಲೂ ೫೦೦೦ ಈಚಲ ಮರಗಳನ್ನೂ ಅಂ ತಾಲ್ಲೂಕಿನಲ್ಲಿ ೩೦೦೦ ಮರಗಳ ಕಡಿದು ಹಾಕಲಾಗಿದೆ.

ಒಪ್ಪಂದಕ್ಕಾಗಿ ಶಾಸನ ಧ್ಯಕ್ಷರಿಂದ ಸಂಧಾನ

ಯ ವಿಧಾಯಕ ಸಭೆಯ ಅಧ್ಯಕ್ಷ ಶ್ರೀ ಹೆಚ್. ಬಿ ಗುಂಡಪ್ಪಗೌಡ ಭಾರತ ರಾಜ್ಯಾಂಗ ಸಭಾ ಸದಸ್ಯರಾ ಭಾಪಾಳಂ ಚಂದ್ರಶೇಖರಯ್ಯನವ ರ ದಿವಾನರನ್ನು ಭೇಟಿ ಮಾಡಿ ಈ ಪರಿಸ್ಥಿತಿಯನ್ನು ಕುರಿತು ಚರ್ಚಿಸಿ ಲೋಚನೆ ನಡೆಸಿರುವರು. ಈಗಿರು ಸ್ತುತ ಪರಿಸ್ಥಿತಿಯನ್ನು ನಿವಾರಿಸಿ ಸ್ನೇಹ ಸೌಹಾರ್ದಗಳು ನೆಲೆಗೊ ರಾಜಕೀಯ ಬಂದಿಗಳನ್ನು ಬಿಡು ಡಬೇಕೆಂದು ಸಲಹೆಯಿತ್ತಿರುವರು.

ಹರತಾಳ

...] ಚಾಮರಾಜನಗರ ೪ ಸಕರ ಬಂಧನವಾಗಿ ಇಂದಿಗೆ ೩೦ ಗುವುದರಿಂದಲೂ ಶ್ರೀಮನ್ಮಹಾರಾಜ ನೋಷಣೆಯಲ್ಲಿ ಅತೃಪ್ತಿಯನ್ನು ವ್ಯ ಸುವ ಸಲುವಾಗಿಯೂ ಈ ದಿನ ಎ ಪಾರಿಗಳೂ ಅಂಗಡಿಗಳನ್ನು ಮುಚ್ಚಿ ತಾಳವನ್ನಾಚರಿಸಿದರು.

ಇರಾನಿಗೆ ಭಾರತದ ರಾಯಭಾರಿ

ದ ತಾತ್ಕಾಲಿಕ ಸರ್ಕಾರದ ಮಾಜಿ ರು, ಪಿಯಾ ಪಂಗಡದ ನಾಯಕ ವ ಪಿ॥ ಸೈಯ್ಯದ್ ಅಲಿ ಜಹೀರ್ ಇರಾನಿನಲ್ಲಿ ಭಾರತ ಸರ್ಕಾರದ ಭಾರಿಯಾಗಿ ನೇಮಿಸಲಾಗಿದೆ.

STOP PRESS

ಬಂಧನದಲ್ಲಿದ್ದ ರೈಲ್ವೆ ನಾಯಕರ ಬಿಡುಗಡೆ

ಪೋ॥] ಬೆಂಗಳೂರು ೬ ಜೈಲಿನಲ್ಲಿದ್ದ ರೈಲ್ವೆ ಕೆಲಸ ಗಾರರನ್ನೆಲ್ಲಾ ಈ ಮಧ್ಯಾಹ್ನ ಬಿಡುಗಡೆ ಮಾಡಲಾಗಿದೆ. ಅವರ ಗಳು ಸ್ವಾಮಿಯವರೊಡನೆ ಸಮಾ ನಡೆಸುತ್ತಿದ್ದಾರೆ.

ಮಾರ್ಕೆಟ್ ಬಳಿ ಲಾಠಿ ಛಾರ್ಜು

ಮೈಸೂರು ೬

ನಿನ್ನೆ ಸಂಜೆ ಪೋಲೀಸರು ದೇವರಾಜ ಮಾರ್ಕೆಟ್ ಬಳಿ ಕೊಡುವುದುತ್ತೂರಿನ ಕಡೆ ಯಿಂದ ಬಂದ ೪ ಮಂದಿ ಸತ್ಯಾಗ್ರಹಿಗಳ ನ್ನು ಬಂಧಿಸಿದರು. ಮಾರ್ಕೆಟ್ ಬಳಿ ಸೇರಿದ್ದ ಜನರ ಗುಂಪನ್ನು ಚದುರಿಸಲು ಪೋಲೀಸರು ಲಾಠಿ ಛಾರ್ಜು ಮಾಡಿದರು

ಗಾಂಧಿ ಜಯಂತಿ ಸಪ್ತಾಹ

ರಾಜಧಾನಿಯ ಚಾಮರಾಜಪೇಟೆ ... ನಗುಡಿ ಬೀದಿ ಯಲ್ಲಿರುವ ಆಜಾದ್ ಹಿಂದ್ ಸೈಕಲ್ ಷಾಪಿನಲ್ಲಿ ಇಂಡಿಯನ್ ಫುಟ್‌ಬಾಲ್ ಕ್ಲಬ್ಬಿ ನವರಿಂದ ಇದೇ ೧೧ ನೇ ತಾ॥ ನ ವರೆಗೆ ಪ್ರತಿ ದಿನ ಸಂಜೆ ಸಂಗೀತಗಳನ್ನು ಏರ್ಪಡಿ ಸಲಾಗಿದೆ. ಸುಮಾರು ೩೦೦ ರೂ. ಬೆಲೆ ಬಾಳುವ ಭಾರತ ಮಾತೆಯ ಮಾಡಲ್ ಒಂದನ್ನು ಟವಾರ್ ಬಸಪ್ಪನವರ ಗರಡಿ ಯವರೂ ಮತ್ತು ಸಿದ್ದಪ್ಪಾಜೀ ಮಠದವ ರೂ ಸಂಘಕ್ಕೆ ನಿನ್ನೆ ಬಹುಮಾನವಾಗಿ ಕೊಟ್ಟಿದ್ದಾರೆ.

ಗಣಪತಿ ಮಂಗಳಾರತಿ

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನವರು ನಿನ್ನೆ ಗಣಪತಿ ಮಂಗಳಾರ ತಿಯನ್ನು ನೆರವೇರಿಸಿದರು. ಈ ಸಂದರ್ಭ ದಲ್ಲಿ ವಿದ್ವಾನ್ ಎಸ್. ಸುಬ್ಬಕೃಷ್ಣಯ್ಯನವ ರ ಸಂಗೀತವನ್ನು ಏರ್ಪಡಿಸಲಾಗಿತ್ತು.

ರಾಜಕೀಯ ಬಂದಿಗಳಿಗೆ ಸೌಲಭ್ಯ ಇಲ್ಲ

ಕೇಶವಯ್ಯಂಗಾರ್ಯರ ಪತ್ರ

ಬೆಂಗಳೂರು ೬

ಕೃಷ್ಣರಾಜಪುರದ ರಾಜಕೀಯ ಬಂದಿಗ ಳ ಶಿಬಿರದಲ್ಲಿ ಸಮರ್ಪಕವಾದ ವ್ಯವಸ್ಥೆಯ ನ್ನು ಮಾಡಿಲ್ಲವೆಂದು ಬಂದಿಗಳ ಪರವಾಗಿ ಶ್ರೀ ಎನ್ ಕೇಶವಯ್ಯಂಗಾರ್ಯರು ಶಿಬಿರದ ಮುಖ್ಯಾಧಿಕಾರಿಗಳ ಮುಖಾಂತರ ಸರ್ಕಾರದ ಪ್ರಧಾನಕಾರ್ಯದರ್ಶಿಗಳಿಗೆ ಕಳೆದ ಗುರುವಾರ ಪತ್ರವೊಂದನ್ನು ಕಳುಹಿಸಿರುವರೆಂದು ತಿಳಿ ದುಬಂದಿದೆ

ಇಲ್ಲಿ ೩೦೦ ಬಂದಿಗಳನ್ನು ಇಡಲಾಗಿದೆ. ಸ್ಥಳಸಾಲದು. ಶಾಸನ ಪ್ರಕಾರ ಜೈಲಧಿ ಕಾರಿಗಳು ಬಂದಿಗಳ ಯೋಗ ಕ್ಷೇಮ ವಿಚಾರಿಸಬೇಕಾಗಿದ್ದರೂ ಸಹ ಅವ ರು ಇದುವರೆಗೆ ಬಂದೇ ಇಲ್ಲ. ಮುಂದಾಗಿ ಬರೆದು ಇವು ಸರಿಪಡದಿದ್ದರೆ ಬಂದಿಗಳೆಲ್ಲ ... ರೀತಿ ಕ್ರಮ ಕೈಗೊಳ್ಳಬೇಕಾಗುತ್ತದೆ ವೆಂದು ಅವರು ತಮ್ಮ ಪತ್ರದಲ್ಲಿ ತಿಳಿಸಿರು ವರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ಬಿಡುಗಡೆ

ಸ್ವಂ. ಸು. ಪೋ॥] ಬೆಂಗಳೂರು ೬

ಬಂಧನದಲ್ಲಿರುವ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರುಗಳನ್ನೆಲ್ಲಾ ಬಿಡುಗಡೆ ಮಾಡಲು ಆಜ್ಞೆ ಆಗಿದೆ. ಈ ದಿನದವೊಳಗಾಗಿ ಅವರುಗಳು ಬಿಡುಗಡೆ ಯಾಗಬಹುದೆಂದು ಗೊತ್ತಾಗಿದೆ

ಜುನಗಢದ ಬಗ್ಗೆ ಪ್ರಜಾಭಿಪ್ರಾಯ ಬೇಕು

ಜುನಗಢದ ನವಾಬರು ಪಾಕಿಸ್ತಾನ ಡೊಮಿನಿಯನ್ನಿಗೆ ಸೇರುವುದನ್ನು ಭಾರ ತ ಸರ್ಕಾರವು ಖಂಡಿಸಿದೆ. ಆ ಬಗ್ಗೆ ಆ ಪ್ರಜೆಗಳ ವಿರೋಧವಿರುವುದರಿಂದ ಪ್ರ ಜಾಭಿಪ್ರಾಯ ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ. ಜನಮತವು ತನ್ನ ನಿರ್ಣಯವನ್ನು ಬದಲಾಯಿಸದಿದ್ದರೆ ಪರಿಸ್ಥಿತಿ ಕಠಿಣವಾಗುವುದೆಂದು ಇಂಡಿಯಾ ಡೊ ಮಿನಿಯನ್ ಸರ್ಕಾರ ಎಚ್ಚರಿಕೆಯನ್ನಿತ್ತಿದೆ

ಪಾಕಿಸ್ತಾನ ನಿರ್ಮಾಣದಿಂದ ಮುಸ್ಲಿಮರಿಗೆ ಹಾನಿಯಾಗಿದೆ

ಮಿ॥ ಜಿನ್ನಾರವರ ಪಾಕಿಸ್ತಾನ ಬೇಡಿಕೆ ಗೆ ಬೆಂಬಲವಿತ್ತು ಭಾರತವನ್ನು ಇಬ್ಭಾಗ ಮಾಡಿರುವುದರಿಂದ ಮುಸ್ಲಿಮರು ತಮ್ಮ ಹಿತರಕ್ಷಣೆಗಳಿಗೆ ಧಕ್ಕೆ ತಂದುಕೊಂಡಿದ್ದಾ ರೆ. ಪಾಕಿಸ್ತಾನ ಬೇಡಿಕೆಗೆ ಬೆಂಬಲವಿತ್ತು ಘೋರ ಅಪರಾಧವನ್ನು ಮಾಡಿದಂತಾಗಿ ದೆ. ಮುಸ್ಲಿಮರು ತಮ್ಮ ರಕ್ಷಣೆ ಮಾಡಿ ಕೊಳ್ಳಬೇಕಾದರೆ ಸಂಯುಕ್ತ ಭಾರತದ ನಿರ್ಮಾಣ ಅನಿವಾರ್ಯ ಎಂಬುದಾಗಿ ಅ ಖಿಲ ಭಾರತ ಮೋಮಿನ್ ಪಕ್ಷದ ನಾಯಕ ರಾದ ಮ. ಹಮ್ಮದ್ ಶ್ಯಾಂ ಅನ್ಸಾರಿಯ ವರು ತಿಳಿಸಿದ್ದಾರೆ.

ಸತ್ಯಾಗ್ರಹದ ಸಹಾನುಭೂತಿಗಾಗಿ ೯ ದಿನಗಳ ಉಪವಾಸ

ಬೆಂಗಳೂರು ೬

ಬಂಧನದಲ್ಲಿರುವ ಎಲ್ಲ ಕಾಂಗ್ರೆಸ್ ನಾ ಯಕರನ್ನೂ ಬಿಡುಗಡೆ ಮಾಡುವುದು ಈಗ ಅತ್ಯಗತ್ಯವೆಂದೂ, ಪ್ರಜೆಗಳ ನ್ಯಾಯಬದ್ಧ ವಾದ ಬೇಡಿಕೆಗಳನ್ನು ಈಡೇರಿಸಿಕೊಡುವು ದು ಸಾಧುವೆಂದೂ ಸರ್ಕಾರದವರು ಮನ ಗಾಣುವಂತೆ ಮಾಡಲು ದಂಡಿನ ಸುಬ್ಬ ಯ್ಯಚೆಟ್ಟಿ ಛತ್ರದಲ್ಲಿ ಶ್ರೀಮತಿ ಪಾರ್ವತಿ ಅಮ್ಮಾಳ್‌ರವರು ಮೊನ್ನೆಯಿಂದ ೯ ದಿನ ಗಳ ಉಪವಾಸವನ್ನು ಆರಂಭಿಸಿರುವರು

ರೈಲ್ವೆ ಪರಿಸ್ಥಿತಿಯಲ್ಲಿ ಬದಲಾವಣೆ ಇಲ್ಲ

ಮೈಸೂರು ೬

ಮೈಸೂರು ರೈಲ್ವೆ ಮುಷ್ಕರ ಪರಿಸ್ಥಿತಿ ಯಲ್ಲಿ ಯಾವ ಬದಲಾವಣೆಯೂ ಕಂಡು ಬಂದಿಲ್ಲ. ವರ್ಕ್‌ಷಾಪಿಗೆ ಯಾರೂ ಕೆಲಸ ಕ್ಕೆ ಹಿಂದಿರುಗಿಲ್ಲ.

ಮೈಸೂರು ರೈಲ್ವೆ ಮುಷ್ಕರವನ್ನು ಕೊ ನೆಗಾಣಿಸಿ, ಒಂದು ಸಂಧಾನಕ್ಕೆ ತರಲು ಅ ಖಿಲ ಭಾರತ ರೈಲ್ವೆ ಫೆಡರೇಷನ್ ಸೆಕ್ರೆಟರಿಗ ಳಾದ ಶ್ರೀ ಗುರುಸ್ವಾಮಿಯವರು ನಿನ್ನೆ ದಿವ ಬೆಂಗಳೂರಿಗೆ ಆಗಮಿಸಿದ್ದಾರಷ್ಟೆ. ಅವರು ಇಲ್ಲಿಯವರೆಗೆ ಯಾವ ರೈಲ್ವೆ ನಾಯಕರುಗ ಳನ್ನು ಕಂಡಿಲ್ಲವೆಂದೂ, ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಕಂಡುಬಂದಿಲ್ಲ ವೆಂದೂ, ಆದರೆ ತಾವು ಈ ದಿನ ಬಂಧನದ ಲ್ಲಿರುವ ನಾಯಕರುಗಳನ್ನು ನೋಡುವ ನಿ ರೀಕ್ಷಣೆ ಇದೆಯೆಂದೂ ಹೇಳಲಾಗಿದೆ.

ಭಾವಚಿತ್ರ ಅನಾವರಣ

ನಿನ್ನೆ ಸಂಜೆ ಐದು ಗಂಟೆಯಲ್ಲಿ ಚಾಮ ರಾಜರಸ್ತೆಯಲ್ಲಿರುವ ಕೋ-ಆಪರೇಟಿವ್ ಹೋಮಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಸ್ ಕೃಷ್ಣಸ್ವಾಮಿರಾವ್, ಮಾಜಿ ಉಪಾಧ್ಯಕ್ಷರಾದ ಶ್ರೀ ಎಂ ಎಸ್ ರಾಮ ಸ್ವಾಮಿ ಮತ್ತು ಮಾಜಿ ಕಾರ್ಯದರ್ಶಿಗ ಳಾದ ಶ್ರೀ ಎಂ. ಸಿ ನಂಜರಾಜೇ ಅರಸಿನ ವರುಗಳ ಭಾವಚಿತ್ರಗಳ ಅನಾವರಣೋ ತ್ಸವವು ನೆರವೇರಿತು. ಪ್ರೊಫೆಸರ್ ... ರಾದ ಶ್ರೀ ಎನ್. ಎಸ್. ಹಿರಣ್ಣಯ್ಯನವ ರ ಅಧ್ಯಕ್ಷತೆ ವಹಿಸಿದ್ದರು.

ಮೈ॥ ಪೋಲೀಸರಿಗೆ ಸಹಾಯ ಮಾಡಲಾಗದೆಂದು ಪ್ರಾರ್ಥನೆ

ಚಿತ್ತೂರು ಗಡಿಗೆ ಬರುವ ಮೈಸೂರು ಪೋಲೀಸರಿಗೆ ಯಾವ ಬಗೆಯ ಸಹಾಯವ ನ್ನು ಗಡಿಯ ಪೋಲೀಸರು ಮಾಡದಂತೆ ಸೂಚನೆ ಕೊಡಬೇಕೆಂದು ಪ್ರ॥ ಪ್ರ॥ ಸಭೆ ಯ ಕಾಂಗ್ರೆಸ್ ಪಕ್ಷದ ಚೀಫ್ ವಿಪ್ ಆ ದ ಶ್ರೀ ಎಂ. ಎ. ಕೃಷ್ಣಪ್ಪನವರು ಮದರಾ ಸ್ ಪ್ರಾಂತ ಸರ್ಕಾರದ ಗೃಹಸಚಿವರಾದ ಡಾ॥ ಪಿ ಸುಬ್ಬರಾಯನ್‌ರವರಿಗೆ ತಂತಿ ಕಳು ಹಿಸಿರುವರು.

LATEST NEWS

ಜಿಲ್ಲಾ ಕೋರ್ಟಿನೊಳಗೆ ಲಾಠಿ ಛಾರ್ಜು

ಸ್ವಂ ಸು ಪೋ॥] [ಬೆಂಗಳೂರು ೬

ಕೋರ್ಟಿನ ಮುಂಭಾಗದಲ್ಲಿ ಪಿಕೆಟಿಂಗ್ ನಡೆಸುತ್ತಿದ್ದ ೫ ತಂಡಗಳ ಒಟ್ಟು ೭೦ ಜನ ಹುಡುಗರನ್ನು ದಸ್ತಗಿರಿ ಮಾಡಲಾಗಿದೆ. ಅವರಲ್ಲಿ ೩೦ ಮಂದಿ ಹುಡುಗಿಯರೂ ಇ ದ್ದಾರೆ. ಕೋರ್ಟಿನೊಳಗೆ ಘೋಷಣೆ ಕೂ ಗಿದುದಕ್ಕಾಗಿ ಹುಡುಗರ ಮೇಲೆ ಲಾಠಿ ಛಾ ರ್ಜು ಮಾಡಲಾಗಿದೆ. ಹೊರಗಡೆ ಸೇರಿದ್ದ ಗುಂಪನ್ನು ಚದುರಿಸಲೂ ಸಹ ಪೋಲೀಸರು ಲಾಠಿ ಪ್ರಯೋಗ ಮಾಡಿದರು. ಕೋರ್ಟಿ ನ ಸುತ್ತಲೂ ಬಲವಾದ ಕಾವಲನ್ನಿಡಲಾ ಗಿದೆ

ಬಾಲಕಿಯರ ... ಒಂದು ಧ್ವಜವನ್ನು ಹಾರಿಸಲು ... ಮಾ ೨ ನೆ ... ಹೊರಡಿಸಲಾಗಿದೆ. ನಿನ್ನೆ ರಾತ್ರಿ ಹೋಟೆಲ್ ... ಟಿಯರ್‌ಗ್ಯಾಸ್ ಪ್ರಯೋಗಿಸಲಾಗಿದೆ.

ಸತ್ಯಾಗ್ರಹ ಸುದ್ದಿ

ಕಾಂಗ್ರೆಸ್ಸಿನ ಸರ್ವಾಧಿಕಾರಿಗಳಾದ ಶ್ರೀ ಕೆ. ಚೆಂಗಲರಾಯ ರೆಡ್ಡಿ ಮತ್ತು ಇತರ ನಾಯಕರನ್ನು ಬಂಧಿಸಿ ಒಂದು ತಿಂಗಳಾದ ಪ್ರಯುಕ್ತ ಮೊನ್ನೆ ಬೆಂಗಳೂರಿನಲ್ಲಿ ನಾನಾ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಆಚರಿಸಲಾಯಿತು. ನಗರದ ನಾನಾ ಭಾಗಗಳಲ್ಲಿ ಧ್ವಜಾರೋಹಣ ಮತ್ತು ಮೆರವಣಿಗೆಗಳು ನಡೆದುವು. ಬಸವನಗುಡಿ ಮತ್ತು ಚಾಮರಾಜಪೇಟೆಗಳಲ್ಲಿ ವಿಶೇಷ ಚಟುವಟಿಕೆಗಳು ಕಂಡುಬರುತ್ತಿದ್ದುವು. ಅನೇಕರನ್ನು ಈ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ. ಚಾಮರಾಜಪೇಟೆಯಿಂದ ಮೆರವಣಿಗೆ ಹೊರಟ ೬ ಜನ ಸತ್ಯಾಗ್ರಹಿಗಳನ್ನು ಬಂಧಿಸಲಾಗಿದೆ. ಚಾಮರಾಜಪೇಟೆಯ ವ್ಯಾಯಾಮ ಸಂಘದ ಬಳಿ ಮೊನ್ನೆ ಧ್ವಜಾರೋಹಣ ಮಾಡಲು ಅನುಮತಿ ಕೊಡದಿದ್ದುದನ್ನು ಉಲ್ಲಂಘಿಸಿದರೆಂದು ಶ್ರೀ ಬಿ. ಆರ್. ಶ್ರೀನಿವಾಸರಾಯರನ್ನೂ ೨೨ ಮಂದಿ ಬಾಲಕಿಯರನ್ನೂ ಬಂಧಿಸಿ ಸೆಂಟ್ರಲ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಲಾಯಿತು.

ಮಲ್ಲೇಶ್ವರದ ಸೇವಾದಳದ ಮೈದಾನದಲ್ಲಿ ಮೊನ್ನೆ ಧ್ವಜಾರೋಹಣ ಮಾಡಲು ಯತ್ನಿಸಿದಾಗ ಪೋಲೀಸರು ಧ್ವಜವನ್ನು ಕಸಿದುಕೊಂಡಿದ್ದಾರೆ. ಧ್ವಜಾರೋಹಣ ಮಾಡಲಾಗದೆಂದೂ ವಿದ್ಯಾಧಿಕಾರಿಗಳ ಅನುಮತಿ ಇಲ್ಲದೆ ಮೈದಾನಕ್ಕೆ ಹೊರಗಿನ ಪ್ರವೇಶವಿಲ್ಲವೆಂದೂ ಪೋಲೀಸರು ವಿದ್ಯಾರ್ಥಿಗಳಿಗೆ ತಿಳಿಸಿದರು. ಅನಂತರ ಬಂದ ಅಧಿಕಾರಿಗಳು ಕೊಡಹಿಸಿ ವಿದ್ಯಾರ್ಥಿನಿಯರು ವಾಗ್ವಾದ ನಡೆಸಿದ ಬಳಿಕ ಕಡೆಗೆ ಧ್ವಜಾರೋಹಣಕ್ಕೆ ಅನುಮತಿ ಕೊಡಲ್ಪಟ್ಟಿತು.

ತರೀಕೆರೆಯಲ್ಲಿ ಶಾಂತರೀತಿಯಿಂದ ಪಿಕೆಟಿಂಗ್ ನಡೆಯುತ್ತಿದೆ. ತರೀಕೆರೆಯ ಮಾರ್ಗವಾಗಿ ಶಿವಮೊಗ್ಗೆಗೆ ಹೋಗುವ ಹೆಂಡದ ಲಾರಿಯನ್ನು ಅಗಾಗ್ಗೆ ತಡೆದು ಹೆಂಡವನ್ನು ನಾಶ ಮಾಡಲಾಗುತ್ತಿದೆಯೆಂದು ತಿಳಿದುಬಂದಿದೆ. ಮಾಗಡಿಯಲ್ಲಿರುವ ಹೆಂಡದಂಗಡಿಯನ್ನು ಸುಡಲಾಗಿದೆ.

ಶಿವಮೊಗ್ಗೆಯಲ್ಲಿ ಜಿಲ್ಲಾಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿ ಮಾಡಿ ಸಭೆ ನಡೆಸಲು ಯತ್ನಿಸಿದರೆಂದು ಕಳೆದ ಶುಕ್ರವಾರ ೩೧ ಜನರನ್ನು ದಸ್ತಗಿರಿ ಮಾಡಿದ್ದಾರೆ. ಗುಂಪನ್ನು ಚದುರಿಸಲು ಪೋಲೀಸರು ಮುನ್ನೆಚ್ಚರಿಕೆ ಕೊಡದೆ ಲಾಠೀ ಛಾರ್ಜು ಮಾಡಿದ್ದಾರೆ. ಅನೇಕರಿಗೆ ಘಾಯಗಳಾಗಿವೆ.

ರಾ ಜ ಕ ಮ ಲ್

ತಾ|| 4-10-47 ರಿಂದ

ಉಪಯೋಗ ಪ್ರಾರಂಭ

ಮಹಾ ಕವಿ

ಕಾಳಿದಾಸ

(ಹಿಂದಿ)

ಪಾತ್ರಗಳು

ವಸಂತ ಸಂಪ್ಯಾಲ್, ಸ್ನೇಹ ಪ್ರಭಾ,

ಶಾಂತಾರಾಮ್, ಮನ್ನು ಪಲ್ಸ್ಯಾಸ್

ಮಹಾರಾಜರ ಘೋಷಣೆಗೆ ಪಟ್ಟಾಭಿಯವರ ಟೀಕೆ

ಅಖಿಲ ಭಾರತ ಸಂಸ್ಥಾನಗಳ ಪ್ರಜಾಸಮ್ಮೇಳನದ ಸಂಗಾಮಿ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಮೈಸೂರು ಮಹಾರಾಜರವರು ಹೊರಡಿಸಿರುವ ಘೋಷಣೆಯನ್ನು ಟೀಕಿಸಿದ್ದಾರೆ. ಘೋಷಣೆಯಲ್ಲಿ ಸೂಚಿಸಲಾಗಿರುವ ಸುಧಾರಣೆಗಳು ಅತ್ಯಂತ ಅತೃಪ್ತಿಕರವಾಗಿವೆ. ಅದರಲ್ಲಿ ಪ್ರಜಾ ಸಚಿವ ಸರ್ಕಾರ ತತ್ವಕ್ಕೆ ಅನುರೂಪವಾದ ಯಾವ ಅಂಶವೂ ಇರುವುದಿಲ್ಲ; ಪ್ರಜಾ ಸರ್ಕಾರಕ್ಕಿರಬೇಕಾದ ಮುಖ್ಯ ಅಧಿಕಾರಗಳಾವುವೂ ಮಂತ್ರಿಮಂಡಲಕ್ಕೆ ಈಯಲ್ಪಟ್ಟಿರುವುದಿಲ್ಲ; ಇದು ಮೈಸೂರಿನ ಜನತೆಗೆ ತೃಪ್ತಿಕರವಾಗಬಹುದಾಗಿಲ್ಲ-ಎಂದು ಡಾ|| ಪಟ್ಟಾಭಿ ತಿಳಿಸಿದ್ದಾರೆ.

ಶಿವಮೊಗ್ಗೆಯಲ್ಲಿ ಪಿಕೆಟಿಂಗ್ ನಡೆಯುತ್ತಿದೆ. ಜಿಲ್ಲಾಧಿಕಾರಿಗಳು ಪೋಲೀಸ್ ಶಾಸನದ ೭೫ ಮತ್ತು ೭೯ ನೇ ನಿಯಮಗಳಂತೆ ೫ ತಿಂಗಳು ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದ್ದಾರೆ.

ತುಮಕೂರಿನಲ್ಲಿ ಪ್ರತಿ ದಿನವೂ ಮಹಿಳೆಯರು ಮೆರವಣಿಗೆ ಮತ್ತು ಬಹಿರಂಗ ಸಭೆಗಳನ್ನು ನಡೆಸುತ್ತಿದ್ದಾರೆ. ಮಿಲಿಟರಿ ಮತ್ತು ರಿಜರ್ವ್ ಪಡೆಗಳನ್ನಿಡಲಾಗಿದೆ.

ಬೇಲೂರಿನಲ್ಲಿ ವಕೀಲರಾದ ಶ್ರೀ ಕೃಷ್ಣಸ್ವಾಮಿಯವರ ನೇತೃತ್ವದಲ್ಲಿ ತಾಲ್ಲೂಕು ಕಛೇರಿಯ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಲಾಗಿದೆ.

ಮೊನ್ನೆ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ನಡೆಸಿದರೆಂದು ಚಿತ್ರದುರ್ಗದ ಪೋಲೀಸರು ದಸ್ತಗಿರಿ ಮಾಡಿದ ೨೦ ಮಂದಿ ವಿದ್ಯಾರ್ಥಿಗಳಲ್ಲಿ ನಾಲ್ಕು ಜನರನ್ನು ನ್ಯಾಯಸ್ಥಾನದಲ್ಲಿ ಹಾಜರು ಮಾಡಲಾಯಿತು. ಅವರಿಗೆ ತಲಾ ೬ ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

ಬೆಂಗಳೂರಿನಲ್ಲಿ ಕಲ್ಲಚ್ಚಿನ ಪ್ರತಿಗಳನ್ನು ತಯಾರಿಸುತ್ತಿದ್ದರೆಂದು ಶ್ರೀಗಳಾದ ಕೆ. ನಂಜಯ್ಯ ಮತ್ತು ರಂಗಯ್ಯ ಎಂಬುವರನ್ನೂ ಮಹಿಳಾಸಿನ ಬಹಿಷ್ಕೃತ ಪತ್ರಿಕೆಯೊಂದನ್ನು ಮಾರುತ್ತಿದ್ದರೆಂದು ಶ್ರೀ ಅನಂತಕೃಷ್ಣ ಎಂಬುವರನ್ನೂ ದಸ್ತಗಿರಿ ಮಾಡಿ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ.

ವುಡ್‌ಲ್ಯಾಂಡ್ಸ್

3-10-47 ರಿಂದ

೨ ನೇ ವಾರ

ಪ್ರತಿ ದಿನ ೩ ಆಟಗಳು

ಪ್ರಭಾತ್ ಪಿಕ್ಚರ‍್ಸ್‌ರವರ

ಮನೋಹರವಾದ ಚಲನ ಚಿತ್ರ

ಸಮ್ಮೀಪ

(ಹಿಂದಿ)

—: ಪಾತ್ರಗಳು :—

ರಂಜನ್ ಮತ್ತು ನೀನಾ

ಕಳುವಿಗಾಗಿ ಮಾಜಿ ಪ್ರಧಾನಿಯ ಸಹೋದರನ ದಸ್ತಗಿರಿ

ಜಪಾನಿನ ಯುದ್ಧ ಕಾಲದ ಪ್ರಧಾನಿ ಡಾ|| ಟೋಜೋರವರ ಸಹೋದರರಾದ ಶಿಕರೂ ಟೋಜೋರವರನ್ನು ಕಳುವಿನ ಆಪಾದನೆಯ ಮೇಲೆ ಬಂಧಿಸಿರುವುದಾಗಿ ವರದಿಯಾಗಿದೆ. ಟೋಕಿಯೋವಿನಲ್ಲಿ ಹೋಗುತ್ತಿದ್ದ ರೈಲೊಂದರಲ್ಲಿ ಒಂದು ಸಣ್ಣ ಚೀಲವನ್ನು ಕದಿಯುತ್ತಿದ್ದಾಗ ಅವರನ್ನು ದಸ್ತಗಿರಿ ಮಾಡಲಾಗಿದೆ.

ಸದ್ಯದಲ್ಲೇ ಮತ್ತೊಂದು ಸಮರ ಅನಿವಾರ್ಯ

ಮತ್ತೊಂದು ಸಮರವು ಅನಿವಾರ್ಯವೆಂದು ಜರ್ಮನರು ದೃಢವಾಗಿ ನಂಬಿದ್ದಾರೆಂದೂ ಅವರಲ್ಲಿ ಕೆಲ ಮಂದಿ ಅದು ಸದ್ಯದಲ್ಲೇ ನಡೆಯುವುದು ಅನಿವಾರ್ಯವೆಂದು ಭಾವಿಸಿರುವುದಾಗಿಯೂ ವರದಿಯಾಗಿದೆ.

ಭಾರತೀಯರೊಡನೆ ರಷ್ಯನ್ ತರುಣಿಯ ವಿವಾಹ

ಮಿಸ್ ಜೋನ್ ಎಂಬ ರಷ್ಯನ್ ತರುಣಿಯು ಹಿಂದೂ ಮತವನ್ನು ಸೇರಿ ನಾಗಪುರದ ಪ್ರಖ್ಯಾತರಾದ ಡಾ|| ಶಿನೋಲಿಕರರನ್ನು ಶಾಸ್ತ್ರ ವಿವಾಹವಾಗಲು ಬಯಸಿರುವುದಾಗಿ ತಿಳಿಸಿರುವರೆಂದು ವರದಿಯಾಗಿದೆ.

ನೀತಿ ಮೀರಿ ಬದುಕುವ ವಧುಗಳಿಗೆ ಜುಲ್ಮಾನೆ

ಕಾಲದಲ್ಲಿ ವಿವಾಹವಾಗಲು ಚರ್ಚುಗಳಿಗೆ ಬರುವುದು ಅಪರಾಧವೆಂದು ಸ್ತ್ರೀಯರು ನಂಬಿದ್ದಾರೆ. ಅಂತಹವರು ವಿವಾಹವಾಗಲು ಚರ್ಚುಗಳಿಗೆ ಪ್ರವೇಶಿಸಕೂಡದು-ಎಂದು ಹೇಳಿ ಇಂಗ್ಲೆಂಡಿನ ಲಾಫ್‌ಬರೋವಿನಲ್ಲಿರುವ ಚರ್ಚಿನ ಪಾದ್ರಿಗಳು ನಿಗದಿಯಾದ ಕಾಲದ ನಂತರ ೫ ನಿಮಿಷಗಳಿಗಿಂತ ಹೆಚ್ಚಾಗಿ ಬರುವ ತರುಣಿಯರು ಐದು ಷಿಲಿಂಗ್ ಜುಲ್ಮಾನೆ ಕೊಡಬೇಕೆಂದು ತಿಳಿಸಿದ್ದಾರೆ.

ಘಂಟೆಗೆ ೧೩೦ ಮೈಲಿ ವೇಗದ ರೈಲು

ಘಂಟೆಯೊಂದಕ್ಕೆ ೧೩೦ ಮೈಲಿ ವೇಗದಲ್ಲಿ ಹೋಗತಕ್ಕ ರೈಲೊಂದನ್ನು ಸಂಯುಕ್ತ ಸಂಸ್ಥಾನಗಳ ರೈಲ್ವೆ ಸಂಸ್ಥೆಯೊಂದು ತಯಾರಿಸುತ್ತಿದೆಯೆಂದು ವರದಿಯಾಗಿದೆ.

ಮೈ ಸೂ ರು ಸಿ ಟಿ ಮುನಿಸಿಪಾಲಿಟಿ

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿಗೆ ಆರೋಗ್ಯ ಗಾಡಿ ... ಬೇಕಾಗಿರುವುದರಿಂದ ನಾಲಿಕೆಯುಗಳು ಸ್ವಾಸ್ಥ್ಯಕರವಾದ ಮತ್ತು ಸರಿಯಾದ ವಯಸ್ಸಿನ ಎತ್ತುಗಳನ್ನು ಇಟ್ಟುಕೊಂಡು ತಾ|| 16-10-47 ನೇ ಗುರುವಾರ ಸಾಯಂ ಕಾಲ ಮುನಿಸಿಪಲ್ ಆಫೀಸಿಗೆ ಹಾಜರ್ ಮಾಡಬೇಕು. ... ರೀತಿ ನಿಶ್ಚಯಿಸಿದ ಕೂಡಲೇ ಮೊಬಲಗನ್ನು ಪಾವತಿಮಾಡಲಾಗುತ್ತದೆ.

..-10-47 ಇ. ಅನಂತರಾಮ್,

ಮೈಸೂರು ಸಿಟಿ ಪ್ರೆಸಿಡೆಂಟ್

ಪ್ರತಿ ಮುಸ್ಲಿಮರೂ ಶಸ್ತ್ರ ಪ್ರಯೋಗ ಅರಿತಿರಬೇಕು

ಭಾರತದಲ್ಲಿರುವ ಮುಸ್ಲಿಮರು ಈಗ ಕಠಿಣ ಪರಿಸ್ಥಿತಿಗೊಳಗಾಗಿದ್ದಾರೆ. ಆ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬನೂ ... ಗಾಗಿ ಸಿದ್ಧನಾಗಿರಬೇಕಾದುದು ಅ... ಇನ್ನೆರಡು ತಿಂಗಳುಗಳೊಳಗಾಗಿ ... ಸ್ತಾನದಲ್ಲಿರುವ ೧೮ ರಿಂದ ೫೦ ... ಳೊಳಗಿರುವ ಎಲ್ಲ ಮುಸ್ಲಿಮರೂ ... ಮಹಿಳೆಯರೂ ಸಹ ಶಸ್ತ್ರ ಪ್ರಯೋ... ನ್ನು ಕಲಿತು ಸಮರಕ್ಕೆ ಸಿದ್ಧರಾಗಿರಬೇ... ಈ ಬಗ್ಗೆ ಸರ್ಕಾರ ತಕ್ಕ ಕಾರ್ಯ... ಕೈಗೊಳ್ಳಬೇಕು-ಎಂದು ಸಿಂಧು ಸರ... ಸಲಹೆಗಾರರಾದ ಪಿ|| ಎಂ ... ದಾರರು ಒಂದು ಹೇಳಿಕೆಯಲ್ಲಿ ... ದ್ದಾರೆ.

ಹತ್ತು ವರ್ಷಗಳ ತನಕ ಯುದ್ಧವಿಲ್ಲ

ಇನ್ನು ಹತ್ತು ವರ್ಷಗಳ ಕಾಲ ... ನಡೆಯುವ ಸಂಭವವಿಲ್ಲವೆ... ರಕ್ಷಣಾ ಸಚಿವ... ಅಭಿಪ್ರಾಯ... ದ್ದಾರೆ. ಈ ಅಭಿಪ್ರಾಯದ ಮೇ... ಪ್ಯಾಲೆಸ್ಟೈನಿನಿಂದ ಬ್ರಿಟಿಷ್ ಸೈನ... ವಾಪಸು. ಮೊದಲು ಬ್ರಿಟಿಷ್ ... ದಲ ತೀರ್ಮಾನಿಸಿ... ಸೇಳು...

ಸ್ತ್ರೀಯರ ಕೈಬಳೆಗಳು ತಾ... ಗಿಯೇ ಮಾಯವಾಗಿ...

ಬೆಟಲ್ ... ಮುಲ್ಲಾ ... ರದ ವಕೀಲ ... ನಗಲು ನಡೆಯುತ್ತ... ಗಿದೆ ... ಪ್ರವಾಗಿ ... ಬೆಂಕಿ ... ಸ್ಫರ ... ಗಳ ಅದೃಶ್ಯವಾ... -ಎಂದು ... ರಾಗಿದೆ ... ಲೀಸರು ನಡೆಸಿದ ಪ್ರಯತ್ನಗಳೆಲ್ಲ ... ಲವಾಗಿವೆಯೆಂದು ತಿಳಿದು ಬಂದಿ...

DIRECTORY

Build your busine... advertising in INDI... NATIONAL DI... CTORY, (The All I... Businessman's Telep... Directory) which gu... tees All-India coverage... particulars, apply I. N... Basavanagudi, Bangalo...

OPERA TALKIE...

From 3-10-47

Daily 3 Shows

PHANTO...

(Full Serial)

— with —

TOM TYLER

Edited, printed and p... by A. S. Nagaraja Rao at the ... Press, D. Subbaiah Road, M...

ಫೋನ್ ನಂ. 608 || ವಂದೇ ಮಾತರಂ || ಬಿಡಿಪ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೭-೧೦-೪೭ [ಸಂಚಿಕೆ ೪೫

ರೈಲ್ವೆ ಸಮಸ್ಯೆಯು ಬಗೆಹರಿಯಿತು

...ಲ್ವೆ ಕೆಲಸಗಾರರಿಗೆ ಹೆಚ್ಚಿನ ಸಂಬಳ

...ಸು ಫೋ೯] ಬೆಂಗಳೂರು ೬

ಮೈಸೂರು ರೈಲ್ವೆ ಕೆಲಸಗಾರರಿಗೂ ಮ... ಸರ್ಕಾರದವರಿಗೂ ನಿನ್ನೆ ಒಪ್ಪಂದವಾ... ...ಲ್ವೆ ಮುಷ್ಕರವು ಮುಕ್ತಾಯಗೊಂಡಿ... ಇದರ ಪರಿಣಾಮವಾಗಿ ರೈಲ್ವೆ ಕೆಲಸ... ...ರನ್ನು ಬಂಧನದಿಂದ ಬಿಡುಗಡೆಮಾಡ...ಗಿದೆ.

ಒಪ್ಪಂದದ ಅಂಶಗಳು ಈ ರೀತಿ ಇವೆ:-

೧) ರೈಲ್ವೆ ನೌಕರರಿಗೆ ಪುನರ್ವಿಮರ್ಶಿತ ...ಬಳದ ಮೇಲೆ ಶೇಕಡ ೨೦ ರಷ್ಟು ಸಂಬ...ನ್ನು (ಅರ್ಟಿಸಾನ್‌ಗಳಿಗೆ) ಹೆಚ್ಚಿಸಲಾಗು...ದೆ.

೨) ಮುಷ್ಕರದ ಅವಧಿಯ ಸಂಬಳವ...ನ್ನೂ ಸಹ ಕೊಡಲಾಗುತ್ತದೆ

೩) ಮುಷ್ಕರಗಾರರಿಗೆ ಯಾವ ವಿಧವಾದ ...ದಂಡವನ್ನೂ ವಿಧಿಸಲಾಗುವುದಿಲ್ಲ.

೪) ಮತ್ತು ರೈಲ್ವೆ ಆದಾಯವು ಹೆಚ್ಚಿದ ...ನ್ನೆರಡು ವರ್ಷಗಳ ನಂತರ ಇತರ ಮೊ...ನೇ ದರ್ಜೆಯ ರೈಲ್ವೆಯಲ್ಲಿರುವಂತೆಯೇ ...ಬಳದ ಸ್ಕೇಲುಗಳನ್ನು ಕೊಡಲಾಗು...ದೆ.

ಮೇಲ್ಕಂಡ ಮೇರೆ ಒಪ್ಪಂದವಾಗಿ ರೈಲ್ವೆ ...ಮಂದರ ಖುಲಾಸೆಯಾಗಿರುವುದರಿಂದ ...ದ. ನಾಳೆಯೊಳಗೆ ಎಲ್ಲಾ ರೈಲ್ವೆ ನೌಕರ... ಕೆಲಸಕ್ಕೆ ಹಿಂದಿರುಗುವ ನಿರೀಕ್ಷಣೆ ಇ... ಇಷ್ಟರಲ್ಲೇ ರೈಲ್ವೆ ಸಂಚಾರಗಳೂ ಆ...ರಂಭವಾಗಲಿವೆ

ಅಖಿಲ ಭಾರತ ರೈಲ್ವೆ ಫೆಡರೇಷನ್ ಸೆಕ್ರೆ...ಗಳಾದ ಶ್ರೀ ಎಸ್. ಗುರುಸ್ವಾಮಿಯವ... ಈ ದಿನ ಬೆಳಗ್ಗೆ ರೈಲ್ವೆ ಕೆಲಸಗಾರರೊ...ಗನೆ ಮಾತುಕತೆ ನಡೆಸಿ, ಈಗಿನ ಕಠಿಣ ...ಸ್ಥಿತಿಯಲ್ಲಿ ಮುಖಂಡರುಗಳಿಗೂ ಸರ್ಕಾ...ರಕ್ಕೂ ಒಂದು ಒಪ್ಪಂದವಾಗಿ ಮುಷ್ಕರವ...ನ್ನು ಕೊನೆಗಾಣಿಸಬೇಕೆಂದು ತೀರ್ಮಾನಿ...ಸಿರುವುದನ್ನು ಮನ್ನಿಸಿ, ಕೆಲಸಗಾರರೆಲ್ಲರೂ ...ಹಿಂದಿರುಗಬೇಕೆಂದು ಸಲಹೆ ಇತ್ತರೆಂದೂ ...ತಿಳಿದುಬಂದಿದೆ.

ಕಾಂಗ್ರೆಸ್ ನಾಯಕರ ಖುಲಾಸೆ

...ಸ. ಫೋ೯] ಬೆಂಗಳೂರು ೭

ಸೆಂಟ್ರಲ್ ಜೈಲಿನಲ್ಲಿದ್ದ ಶ್ರೀಗಳಾದ ...ಎ. ಕೆ. ವೀರಣ್ಣಗೌಡ ಹುಚ್ಚೇಗೌಡ ...ಸ್ತ್ರ ಹುಸೇನ್ ಸಾಬರನ್ನು ನಿನ್ನೆ ಸಂಜೆ ...ಬಿಡುಗಡೆ ಮಾಡಲಾಯಿತು. ಮೈಸೂರು ...ಜೈಲಿನಲ್ಲಿದ್ದ ಶ್ರೀ ನಿಜಲಿಂಗಪ್ಪನವ...ರನ್ನು ಇಲ್ಲಿಗೆ ಕರೆದು ತಂದು ಬಿಡುಗಡೆ ಮಾಡಲಾಗಿದೆ

ಸಂಸ್ಥಾನದ ಇತರ ಸೆರೆಮನೆಗಳಲ್ಲಿರುವ ...ಕಾ|| ಕಾರ್ಯಕಾರೀ ಸಮಿತಿಯ ಸದಸ್ಯ...ರನ್ನು ಬಿಡುಗಡೆ ಮಾಡಲಾಗಿದೆ. ಅವ...ರು ಈ ಸಂಜೆ ಇಲ್ಲಿಗೆ ಬರುವರೆಂದು ನಿ...ರೀಕ್ಷಿಸಲಾಗಿದೆ

ರಾಜಕಮಲ್
ತಾ|| 4-10-47 ರಿಂದ
ಅಮೋಘ ಪ್ರಾರಂಭ
ಮಹಾಕವಿ
ಕಾಳಿದಾಸ್
(ಹಿಂದಿ)
—: ಭೂಮಿಕೆ :—
...ರಾಮ ಸನ್ಯಾಲ್, ಸ್ನೇಹಪ್ರಭಾ,
...ನವಮಾಲ, ಮತ್ತು ಉಲ್ಲಾಸ್

ಕಾಂಗ್ರೆಸ್ ಕೆಲಸಗಾರರ ಸಭೆ

ಮೈಸೂರು ೭

ಈ ದಿನ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಅಧ್ಯಕ್ಷತೆಯಲ್ಲಿ ನಗರ ಕಾಂಗ್ರೆಸ್ ಕೆಲಸಗಾರರ ಸಭೆಯು ನಡೆಯಿತು. ಕಾಂಗ್ರೆಸ್ಸಿನ ನಿರ್ಧಾರದಂತೆ ಜವಾಬ್ದಾರೀ ಸರ್ಕಾರ ಸ್ಥಾಪನೆಗಾಗಿ ನಡೆಯುತ್ತಿರುವ ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಪ್ರಾಣ ತೆತ್ತ ಸತ್ಯಾಗ್ರಹಿಗಳ ಆತ್ಮಕ್ಕೆ ಶಾಂತಿಯನ್ನೂ, ನೊಂದವರಿಗೆ ಸಹಾನುಭೂತಿಯನ್ನೂ ವ್ಯಕ್ತಪಡಿಸಿ ನಿರ್ಣಯವನ್ನು ಮಾಡಲಾಗಿದೆ.

ರಾಜ ಘೋಷಣೆಯಲ್ಲಿ ಸೂಚಿಸಲಾಗಿರುವ ರಾಜಕೀಯ ಸುಧಾರಣೆಗಳು ಬಹಳ ಅತೃಪ್ತಿಕರವಾಗಿವೆ ಈಗಿನ ಪರಿಸ್ಥಿತಿಯಲ್ಲಿ ಈ ಘೋಷಣೆಯನ್ನೇ ಆಧಾರವಾಗಿಟ್ಟುಕೊಂಡು ಸಂಧಾನ ನಡೆಸಲು ಕಾಂಗ್ರೆಸ್ಸಿಗೆ ಸಾಧ್ಯವಿಲ್ಲ; ಬಂಧವಿಮುಕ್ತರಾಗಿರುವ ಕಾರ್ಯಕಾರಿ ಸಮಿತಿಯವರು ರಾಜಕೀಯ ಸುಧಾರಣೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಅ|| ಮೈ|| ಕಾಂ|| ಸಮಿತಿಯು ಸತ್ಯಾಗ್ರಹದ ಬಗ್ಗೆ ಮಾಡಿರುವ ತೀರ್ಮಾನ ಮತ್ತು ಘೋಷಣೆಗಳನ್ನು ಗಮನದಲ್ಲಿಡಬೇಕೆಂದು ಕೋರುವುದು, ಸತ್ಯಾಗ್ರಹ ಚಳುವಳಿಯ ಎಲ್ಲಾ ನಾಯಕರ ಬಿಡುಗಡೆಯು ಯಾವ ಬದಲಾವಣೆಯನ್ನೂ ಸೂಚಿಸುವುದಿಲ್ಲ ನಾಯಕರ ಎದುರಿನಲ್ಲಿ ಅರಮನೆ ಸತ್ಯಾಗ್ರಹವನ್ನು ನಡೆಸಿಕೊಂಡು ಬರಲು ಸತ್ಯಾಗ್ರಹ ಸಮಿತಿಯವರನ್ನು ಪ್ರಾರ್ಥಿಸುವುದು ಮುಂತಾದ ನಿರ್ಣಯಗಳೂ ಅಂಗೀಕೃತವಾದುವು

§ ಶ್ರೀರಂಗಪುರ ಮತ್ತು ಥಾವಲ್ಪುರ ಸಂಸ್ಥಾನಗಳು ಪಾಕಿಸ್ತಾನ ಡೊಮಿನಿಯನ್ನಿಗೆ ಸೇರಲು ನಿರ್ಧರಿಸಿವೆ

Sri
GANESHA TALKIES
From 8-10-47
Daily 3 Shows
Saratoga Trunk
(Techni Colour)
:— Starring :—
Gary Cooper, Ingrid Bergman
Flora Robson
Showing for the first time
in Mysore

ಉಪವಾಸ ಮುಷ್ಕರದ ಮುಕ್ತಾಯ

ಸ್ವಂ ಸು ಫೋ೯] ಬೆಂಗಳೂರು ೭

ಬಾರ್ ಅಸೋಸಿಯೇಷನ್ನನ್ನು ೧೫ ದಿನಗಳ ಕಾಲ ಮುಚ್ಚಬೇಕೆಂದೂ, ಅನೇಕ ವಕೀಲರುಗಳು ತಿಂಗಳ ಕೊನೆಯವರೆಗೆ ಪ್ರಾಕ್ಟೀಸ್ ನಿಲ್ಲಿಸುವುದಾಗಿಯೂ, ನಿರಪರಾಧಿಗಳ ಮೇಲೆ ಪೋಲೀಸರು ನಡೆಸಿದ ದಬ್ಬಾಳಿಕೆಯನ್ನು ಖಂಡಿಸಿ ವಕೀಲ ಸಂಘದವರು ಮಾಡಿದ ನಿರ್ಣಯಗಳನ್ನು ಮನ್ನಿಸಿ ವಿದ್ಯಾರ್ಥಿಗಳು ಉಪವಾಸವನ್ನು ಮುಕ್ತಾಯಗೊಳಿಸಿದ್ದಾರೆ

ನಿಜಲಿಂಗಪ್ಪನವರ ಹೇಳಿಕೆ

ಶ್ರೀ ಎಸ್. ನಿಜಲಿಂಗಪ್ಪನವರು ಬಿಡುಗಡೆಯಾದ ನಂತರ ಒಂದು ಹೇಳಿಕೆಯನ್ನಿತ್ತು ಶ್ರೀಮನ್ಮಹಾರಾಜರವರ ಘೋಷಣೆಯು ಸಮಾಧಾನಕರವಾಗಿಲ್ಲವೆಂದೂ, ಅತಿ ಶೀಘ್ರದಲ್ಲೇ ವರ್ಕಿಂಗ್ ಕಮಿಟಿಯು ಸೇರಿ ಅದನ್ನು ಪರಿಶೀಲಿಸುವುದೆಂದೂ ತಿಳಿಸಿದ್ದಾರೆ.

ಪ್ರ|| ಪ್ರ|| ಸಭಾಧಿವೇಶನ ಮುಂದುವರೆಯಿತು

ಇದೇ ೨೦ ನೇ ತಾರೀಖು ರಾಜಧಾನಿಯಲ್ಲಿ ಸೇರಬೇಕಾಗಿದ್ದ ಪ್ರ|| ಪ್ರ|| ಸಭೆಯ ದಸರಾ ಅಧಿವೇಶನವನ್ನು ಮುಂದುವರಿಸಲಾಗುವುದಾಗಿಯೂ ಮತ್ತೆ ಅಧಿವೇಶನವು ಸೇರುವ ದಿನವನ್ನು ಮುಂದೆ ಪ್ರಕಟಿಸುವುದಾಗಿಯೂ ಸರ್ಕಾರದವರು ಪ್ರಕಟಿಸಿದ್ದಾರೆ

ಹೊಸ ನಾಟಕ ! ಹೊಸ ನಾಟಕ !!
ಹಾಲಸಿದ್ಧೇಶ್ವರ ನಾಟಕ ಮಂಡಳಿ
ದ ಓ ಗೇ ರಿ ಇವರು
ಮೈಸೂರು ಶಿವರಾಂಪೇಟೆ
ರತ್ನಾವಳೀ
ಥಿಯೇಟರಿನಲ್ಲಿ
ತಾ|| 11-10-47 ನೇ ಶನಿವಾರ ರಾತ್ರಿ
೧೦-೩೦ ಕ್ಕೆ ಮತ್ತು 12-10-47
ಭಾನುವಾರ ಸಂಜೆ ೬-೩೦ ಕ್ಕೆ
ಅರ್ಧಾಂಗಿ
ಎಂಬ ಸಾಮಾಜಿಕ ನಾಟಕವನ್ನು
ಆಡುವರು
ಕೆ. ಪಿ. ಚಿಟ್ಟಪ್ಪ,
ಪ್ರೊಪ್ರೈಟರ್

ಮದರಾಸ್ ವಕೀಲರಿಗೆ ಸಜಾ

ಮೈಸೂರು ೭

ಕಳೆದ ಶನಿವಾರ ಸುಬ್ಬರಾಯನಕೆರೆಯಲ್ಲಿ ಮೆರವಣಿಗೆ ಮಾಡಿ ಭಾಷಣ ಮಾಡಲು ಪ್ರಯತ್ನಿಸಿದರೆಂದು ಮದರಾಸಿನ ಹೈಕೋರ್ಟ್ ವಕೀಲರೂ, ಮತ್ತು ಆಂಧ್ರ ನಗರ ಕಾಂಗ್ರೆಸ್ ಸಮಿತಿ ಸದಸ್ಯರೂ ಆದ ಶ್ರೀ ಕೆ. ಎಸ್. ಜಯರಾಮ ಮತ್ತು ಭಾರತೀ ಕರವರುಗಳಿಗೆ ದ್ವಿತೀಯ ನಗರ ನ್ಯಾಯಾಧೀಶರು ತಲಾ ೨೫ ರೂ ಜುಲ್ಮಾನೆ ತಪ್ಪಿದರೆ ೧೫ ದಿನ ಸಾದಾ ಸಜಾ ಮತ್ತು ೨ ತಿಂಗಳು ಸಾದಾ ಸಜಾ ವಿಧಿಸಿದರು. ಆಪಾದಿತರು ದಂಡ ಕೊಡಲೊಪ್ಪದೆ ಸೆರೆಮನೆಗೆ ಹೋದರು.

ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಕೆಲಸಗಾರರ ಸಭೆಯು ಈ ದಿನ ನಡೆದು, ಶ್ರೀಮನ್ಮಹಾರಾಜರವರ ಘೋಷಣೆಯಿಂದಾಗಲೀ ಸತ್ಯಾಗ್ರಹದ ಮೂಲ ಉದ್ದೇಶಗಳಲ್ಲಿ ಒಂದಾದರೂ ಪೂರ್ಣವಾಗಿ ದೊರಕದಂತಾಗಲಿಲ್ಲವಾದ್ದರಿಂದ ಗುರಿಸಾಧಿಸುವವರೆಗೂ ಸತ್ಯಾಗ್ರಹವನ್ನು ಮುಂದುವರಿಸಬೇಕೆಂದು ಕಾರ್ಯಕಾರೀ ಸಮಿತಿಯನ್ನು ಒತ್ತಾಯಪಡಿಸುತ್ತದೆ ಎಂದು ನಿರ್ಣಯಮಾಡಲಾಯಿತು

ಆಜ್ಞೋಲ್ಲಂಘನೆಗಾಗಿ ಶಿಕ್ಷೆ

ಮೈಸೂರು ೭

ಜಿಲ್ಲಾಧಿಕಾರಿಗಳ ಆಜ್ಞೆಯನ್ನೂ ಮತ್ತು ಕರ್ಫ್ಯೂ ಆಜ್ಞೆಯನ್ನೂ ಮೀರಿದರೆಂದು ಶ್ರೀಗಳಾದ ವೀರಪ್ಪ, ವೀರಭದ್ರಪ್ಪ, ಸತ್ಯನಾರಾಯಣಶೆಟ್ಟಿ, ಬಿ ಎಂ ನಂಜುಂಡ [illegible] ಸಿ ಆರ್. ಗಂಗೋಜಿರಾವ್-ಮೊದಲಾದವರಿಗೆ ನಗರದ ದ್ವಿತೀಯ ನ್ಯಾಯಾಧೀಶರು ೧೫ ದಿನ ಮತ್ತು ೨ ತಿಂಗಳ ಸಾದಾ ಸಜವನ್ನು ವಿಧಿಸಿರುವರು.

ಪಿಕೆಟಿಂಗ್ ನಡೆಸಿದುದಕ್ಕೆ ಸಜಾ

ಕೋರ್ಟ್ ಮುಂಭಾಗದಲ್ಲಿ ಪಿಕೆಟಿಂಗ್ ನಡೆಸಿದರೆಂದು ಶ್ರೀಗಳಾದ ಕೃಷ್ಣೇಗೌಡ, ಸದಾಶಿವರಾವ್, ವೆಂಕಟಾಚಾರ್, ರಾಮಾನುಜಂ, ವಿವೇಕಾನಂದ, ಬಿ. ಕೆ. ಕೃಷ್ಣಯ್ಯ, ನೀಲಕಂಠರಾವ್ ಮತ್ತು ಕೃಷ್ಣ ಶರ್ಮರುಗಳಿಗೆ ೩ ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ

ಮೆರವಣಿಗೆ ನಡೆಸಿದುದಕ್ಕೆ ಸಜಾ

ಮೊನ್ನೆ ಮೆರವಣಿಗೆ ನಡೆಸಿದರೆಂದು ಕೊಪ್ಪಲಿನ ಶ್ರೀಗಳಾದ ವೆಂಕಟಾಚಲ, ನಂಜಪ್ಪ, ಲಿಂಗಪ್ಪ ಮತ್ತು ಚಲುವಯ್ಯರವರುಗಳಿಗೆ ತಲಾ ೩ ತಿಂಗಳ ಸಾದಾ ಸಜಾ ವಿಧಿಸಲಾಗಿದೆ

ವುಡ್‌ಲ್ಯಾಂಡ್ಸ್
3-10-47 ರಿಂದ
೨ ನೇ ವಾರ
ಪ್ರತಿ ದಿನ ೩ ಆಟಗಳು
[illegible]
ಅಪೇಕ್ಷೆಪಡುವ ಚಲನ ಚಿತ್ರ
ನಯೀಮಾ
(ಹಿಂದಿ)
: ತಾರಾಗಣ :—
[illegible]

SRI KRISHNARAJENDRA MILLS, LTD., MYSORE

Abstract Proceedings of the 27th Ordinary General Meeting of the shareholders of the Company held on Saturday the 4th October 1947 at 4 p.m., Rajasevaprasakta Mr M S. Ramachandra Rao, B.A., Chairman, presiding :—

In the course of his opening remarks, the Chairman said :

Out of the total assets of Rs. 67.05 lakhs, Rs 9.37 lakhs or 14% is represented by fixed assets fully depreciated to date, and Rs 57.68 lakhs or 86% is held in the form of floating assets After allowing for current liabilities of Rs 24·34 lakhs, the net worth of the assets of the Company is Rs. 42.75 lakhs, and this is more than twice the paidup share capital. I may, however, point out that the fixed assets, though appearing in the Balance Sheet at only Rs. 9.37 lakhs, are worth very much more even on a modest valuation, as they have been maintained in efficient working condition.

During the past 6½ years the company has been able to completely wipe off the debit balance in the profit and loss account, discharge in full the heavy debt burden which operated as a serious stranglehold on the concern, make full provision for current and arrears of depreciation on the fixed assets and also build up reserves amounting to Rs 22.50 lakhs as against the paid up share capital of Rs. 18.35 lakhs Nearly two-thirds of all the profits made has thus been ploughed back into the concern Further, the reserve of Rs 22.50 lakhs is backed by cash investments to the extent of Rs 30.76 lakhs.

About two years ago a comprehensive blue print for the modernisation of our Mills' plant and expansion of production was prepared and orders were placed for new plant and machinery. A few of them have been received and installed, but the remaining bulk can only be expected to be delivered here in driblets in the course of the next few years, due to the man-power shortage and other economic troubles which the United Kingdom is now faced with. In the meantime no effort is being spared to get the best results out of the existing plant and machinery in spite of the several limitations as regards working hours etc., imposed by statute and otherwise.

We are now being warned that we will shortly have to face a worse crisis than the one we have all ready been passing through, due to more acute shortage of food, clothing and other consumer goods. Today it is a people's government that is functioning at the centre, and that government is calling for more production and yet more production to meet the crisis. The Central Government after many conferences and expert consultations appear to have now decided upon a scheme of standardisation of products and adjustment of prices which, while the poorer section of consumers are not to be taxed with any increase in the price of cloth, is expected to provide incentives both to the mills and their employees to achieve the target of increased production which they desire When the scheme is finalised it is hoped that marginal mills like ours will get at least some relief to offset the steadily mounting production costs which have been adversely affecting the earning capacity of the mills.

We have always readily and scrupulously followed the directions of the government and done every thing in our power to create conditions which will lead to increased production. But such endeavour can meet with no success without the co-operative effort on the part of the workers also. If only our workers will realise that they, too, are part of the community and that the community looks to them for relieving the present distress, much can certainly be accomplished. But until the workers are imbued with that spirit of service, and refrain from doing anything by way of holding the employers and the community to ransom, whatever the employer may do by way of meeting legitimate demands for increased wages and other amenities—and this your directors have been doing and will continue to do in the most sympathetic manner—will bear no fruit and may even prove harmful by encouraging inflationary conditions. We look, therefore, to labour for whole hearted response to the urgent call of the times and hope we shall not have appealed to them in vain.

Several members offered remarks on the affairs of the Mills in general as well as on the accounts They requested the Chairman to secure, with the assistance of the Government, some relief to the shareholders in the matter of the acute shortage of cloth which they have been experiencing for making some portion of the Mills' products available to them as a special case After requests for information were complied with and questions answered by the Chairman, the Meeting passed and adopted NEM CON the Balance Sheet as at 30th June 1947 and the Profit & Loss Account for the year ended 30th June 1947.

The Meeting also passed a resolution declaring a final dividend of 6 percent and a bonus of 2 percent (both free of Mysore incometax) making in all a dividend of 12 percent and a bonus of 4 percent for the year.

Mr. P. Hanumanthaiya, Mr. H. Nanjundia and Dewan Bahadur Rajakaryaprasakta Mr. K. Ramaswamy were re-elected as Directors for the year 1947-48.

Messrs. B. K. Ramadhyani & Co., and Mr. S. R. Mandre, were reappointed auditors of the Company for the year 1947-48 on the existing remuneration.

With a vote of thanks to the chair proposed by one of the members the meeting terminated.

Mysore, 4th Oct. 1947

By Order of the Board
B. S. VISWESWARAIYA.
Secretary.

ಸಂಯುಕ್ತ ಪ್ರಾಂತದಲ್ಲಿ ಆಂಗ್ಲಭಾಷೆ ರದ್ದು

ಸಂಯುಕ್ತ ಪ್ರಾಂತ ಸರ್ಕಾರದವರು ಆಂಗ್ಲ ಭಾಷೆಯನ್ನು ತಮ್ಮ ಪ್ರಾಂತದಲ್ಲಿ ರದ್ದು ಮಾಡಲು ನಿರ್ಧರಿಸಿದ್ದಾರೆ ಇದರ ಅಂಗವಾಗಿ ಸರ್ಕಾರದ ಗೆಜೆಟ್ಟನ್ನು ಹೊರಲು ಆಂಗ್ಲ ಮತ್ತು ಹಿಂದೀ ಭಾಷೆಗಳಲ್ಲಿ ಪ್ರಕಟಿಸಿ ಕೆಲವು ಕಾಲಾನಂತರ ಕೇವಲ ಹಿಂದಿಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪ್ರಾಂತ ಭಾಷೆಯು ಸರ್ಕಾರದ ಭಾಷೆ

ಅಸ್ಸಾಮಿನ ಪ್ರಾಂತ ಭಾಷೆಯಾ ಸ್ಸಾಮಿ ಭಾಷೆಯನ್ನೇ ಇನ್ನು ಮು ಸರ್ಕಾರದ ವ್ಯವಹಾರಗಳಲ್ಲಿ ಉಪಯೋ ಸಲಾಗುವುದೆಂದು ಅಲ್ಲಿನ ಪ್ರಧಾನಿ ಗೋಪೀನಾಥ ಬಾರ್ಡೋಲಾಯ್‌ರವ ತಿಳಿಸಿರುವರು.

Edited, printed and publi by A. R. Nagarajan at the Sa Press D Subbaiah Road Mysore

ಫೋನ್ ನಂ. 508 ॥ ವಂದೇ ಮಾತರಂ ॥ ಬಿಡಿ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೮-೧೦-೪೭ [ಸಂಚಿಕೆ ೪೭

ಕಾಂಗ್ರೆಸ್ ಅಧ್ಯಕ್ಷರಿಗೆ ದಿವಾನರ ಆಹ್ವಾನ

ಹನುಮಂತಯ್ಯನವರ ಬಿಡುಗಡೆ

(ಫೋನ್) ಬೆಂಗಳೂರು ೮

ರಾಜದ್ರೋಹಕರವಾದ ಭಾಷಣ ಮಾಡಿದ ಆಪಾದನೆಯ ಮೇಲೆ ಒಂದೂವರೆ ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿ ೭ ತಿಂಗಳಿನಿಂದಲೂ ಶಿಕ್ಷೆ ಅನುಭವಿಸುತ್ತಿದ್ದ ಕೋಲಾರದ ಸೆರೆಮನೆಯಲ್ಲಿದ್ದ ಪ್ರಜಾಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಹನುಮಂತಯ್ಯನವರನ್ನು ಬಿಡುಗಡೆ ಮಾಡಲಾಗಿದೆ.

ಗಾಂಧೀಜಿಯವರ ಜಯಂತಿ

(…) ಗುಂಡ್ಲುಪೇಟೆ ೫

ಕಳೆದ ಗುರುವಾರ ಇಲ್ಲಿ ಮಹಾತ್ಮಗಾಂಧಿಯವರ ಜಯಂತ್ಯುತ್ಸವವನ್ನು ವೈಭವದಿಂದ ಆಚರಿಸಲಾಯಿತು. ಬೆಳಿಗ್ಗೆ ಧ್ವಜಾರೋಹಣವೂ, ಮಧ್ಯಾಹ್ನ ೭ ಜೋಡಿ ಎತ್ತುಗಳಿಂದಲಂಕರಿಸಲ್ಪಟ್ಟ ರಥದಲ್ಲಿ ಬಾಪೂಜಿಯವರ ಮೆರವಣಿಗೆಯೂ ನಡೆದು ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಶ್ರೀಯುತರಾದ ಜಿ. ಬಿ. ಚಿಕ್ಕಣ್ಣ, ಕೃಷ್ಣಸ್ವಾಮಿ, ಎಸ್. ನಾರಾಯಣ್ ಮೊದಲಾದವರು ಭಾಷಣ ಮಾಡಿದರು.

ವಿದ್ಯಾರ್ಥಿಗಳಿಗೆ ಸಜಾ

ಮೈಸೂರು ೮

ರಾಜಧಾನಿಯ ಆರಾಂ ಕಛೇರಿಯ ಬಳಿ ಪಿಕೆಟಿಂಗ್ ನಡೆಸುತ್ತಿದ್ದರೆಂದು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಾದ ದಾಸೇಗೌಡ, ಕೆ. ಎಲ್. ಪ್ರಸನ್ನ ಕುಮಾರ್, ಎಂ. ಆರ್. ನಾರಾಯಣ್‌ರವರಿಗೆ ನಗರದ ದ್ವಿತೀಯ ನ್ಯಾಯಾಧೀಶರು ೩ ತಿಂಗಳ ಸಾದಾ ವಿಧಿಸಿರು(ತ್ತಾರೆ).

ಕಾಂಗ್ರೆಸ್ ಕೆಲಸಗಾರರ ಸಭೆ

ಮೈಸೂರು ನಗರದ ಕಾಂಗ್ರೆಸ್ ಕೆಲಸಗಾರರು ಸಭೆಯನ್ನು ೯ ನೇ ತಾರೀಖು (…)ವಾರ ಸಂಜೆ ೫॥ ಗಂಟೆಗೆ ಕಾಂಗ್ರೆಸ್ (ಕಚೇರಿ)ಯಲ್ಲಿ ಕರೆಯಲಾಗಿದೆ. ಕೆಲಸಗಾರರು ತಪ್ಪದೆ ದಯಮಾಡಿಸಬೇಕಾಗಿ (ಕೋರ)ಲಾಗಿದೆ.

ಕಾಂಗ್ರೆಸ್ ಅಧ್ಯಕ್ಷರ ಆಗಮನ

ಕಾರ್ಯಕಾರಿ ಸಮಿತಿಯ ಸಭೆ

(…ಫೋನ್) ಬೆಂಗಳೂರು ೮

ದೇವನಗರದ ಸೆರೆಮನೆಯಲ್ಲಿ ಬಂಧಿಸಲ್ಪಟ್ಟಿದ್ದ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಚೆಂಗಲರಾಯರೆಡ್ಡಿಯವರೂ ಇತರ ಕಾರ್ಯಕಾರೀ ಸಮಿತಿಯ ಸದಸ್ಯರೂ ರಾತ್ರಿ ಇಲ್ಲಿಗೆ ಆಗಮಿಸಿದರು. ಈ ದಿನ ಮಧ್ಯಾಹ್ನ ೪ ಗಂಟೆಗೆ ಕಾರ್ಯಕಾರಿ ಸಮಿತಿಯ ಸಭೆ ಸೇರಲಿದೆ.

ನಾಯಕರ ದಸ್ತಗಿರಿಯಾದಾಗ ಪೊಲೀಸರು ವಶಪಡಿಸಿಕೊಂಡಿದ್ದ ಕಾಂಗ್ರೆಸ್ ಕಛೇರಿಯನ್ನು ಬಿಟ್ಟುಕೊಡಲಾಗಿದೆ.

STOP PRESS

(…ಫೋನ್) ಬೆಂಗಳೂರು ೮

ನಾಳೆ ಬೆಳಿಗ್ಗೆ ೭॥ ಗಂಟೆಗೆ ಮತ್ತು ೧೧॥ ಗಂಟೆಗೆ ಒಂದೊಂದು ರೈಲುಗಳು ಮೈಸೂರಿನಿಂದ ಬೆಂಗಳೂರಿಗೂ, ಬೆಂಗಳೂರಿನಿಂದ ಎರಡು ರೈಲುಗಳು ಮೈಸೂರಿಗೂ ಮತ್ತು ಅರಸೀಕೆರೆಗೂ ಹೊರಡುವುದಾಗಿ ಹೇಳಲಾ(ಗಿದೆ).

ಕೋರ್ಟುಗಳ ಬಳಿ ಪಿಕೆಟಿಂಗ್

ಮೈಸೂರು ೮

ಈ ದಿನ ರಾಜಧಾನಿಯ ಎಲ್ಲಾ ಕೋರ್ಟುಗಳ ಮುಂದೆ ೧೦ ಜನ ಮಹಿಳೆಯರೂ ೮ ಮಂದಿ ವಿದ್ಯಾರ್ಥಿಗಳೂ ಪಿಕೆಟಿಂಗ್ ನಡೆಸಿದರು. ಬಾರ್ ಅಸೋಸಿಯೇಷನ್, ಸಬ್ ಕೋರ್ಟು, ಅಡಿಷನಲ್ ಸಬ್ ಕೋರ್ಟು ಮತ್ತು ದ್ವಿತೀಯ ಮುನ್ಸೀಫರ ಕೋರ್ಟುಗಳ ಬಾಗಿಲುಗಳ ಮುಂದೆ ಮಹಿಳೆಯರು ನಿಂತುಕೊಂಡು ಒಳಕ್ಕೆ ಹೋಗುವ ಎಲ್ಲ ವಕೀಲರು ಮತ್ತು ಕಕ್ಷಿಗಾರರುಗಳನ್ನೂ ತಡೆದು ಕೋರ್ಟಿಗೆ ಹೋಗಬಾರದೆಂದೂ, ಸತ್ಯಾಗ್ರಹ ಚಳುವಳಿಗೆ ಬೆಂಬಲ ನೀಡಬೇಕೆಂದೂ ಪಿಕೆಟಿಂಗ್ ನಡೆಸಿದರು. ವಿದ್ಯಾರ್ಥಿಗಳೂ ಸಹ ಹೊರಗಡೆ ನಿಂತು ಪಿಕೆಟ್ ಮಾಡುತ್ತಿದ್ದರು. ಶ್ರೀಮತಿ ಪ್ರಫುಲ್ಲ ಕೃಷ್ಣಯ್ಯಂಗಾರ್‌ರವರು ಪಿಕೆಟಿಂಗಿನ ನಾಯಕತ್ವವನ್ನು ವಹಿಸಿದ್ದರು. ಪಿಕೆಟಿಂಗ್ ನಡೆಸುತ್ತಿದ್ದವರು ೧೧ ಘಂಟೆಯಿಂದ ೧೨॥ ಘಂಟೆಯವರೆಗೂ ಕೆಲಸಕಾರ್ಯಗಳು ನಡೆಯಲು ಅವಕಾಶವೀಯಲಿಲ್ಲ.

ಗಣಪತಿ ಮಂಗಳಾರತಿ

ರಾಜಧಾನಿಯ ಬ್ಲ್ಯಾಕ್ ಫುಟ್‌ಬಾಲ್ ಕ್ಲಬ್ಬಿನವರು ಶಿವರಾಂಪೇಟೆಯ ಶಾರದಾ ವಿಲಾಸ ಪ್ರಾಥಮಿಕ ಶಾಲೆಯಲ್ಲಿರುವ ಕಟ್ಟಡದ ಸಂಘದ ಆವರಣದಲ್ಲಿ ನಿನ್ನೆ ಸಂಜೆ ಗಣಪತಿ ಮಂಗಳಾರತಿಯನ್ನು ನಡೆಸಿದರು. ಇದರ ಅಂಗವಾಗಿ ನಿನ್ನೆ ವಿ॥ ನಾರಾಯಣ ಶಾಸ್ತ್ರಿಗಳಿಂದ ಸುಶ್ರಾವ್ಯವಾದ ಸಂಗೀತವನ್ನೇರ್ಪಡಿಸಿದ್ದರು.

ಈ ದಿನ ಕೋರ್ಟುಗಳು ಮುಚ್ಚಲ್ಪಟ್ಟವು

ಮೈಸೂರು ೮

ಕನ್ನಂಬಾಡಿಯಲ್ಲಿಯೇ ಪಿಕೆಟಿಂಗ್ ನಡೆಸುತ್ತಿದ್ದ ಮಹಿಳೆಯರನ್ನು ಪೊಲೀಸರು ದಸ್ತಗಿರಿ ಮಾಡಿದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ವಕೀಲರುಗಳ ವಿಶೇಷ ಸಭೆಯು ನಡೆದು ಈ ದಿನ ಬಾರ್ ಅಸೋಸಿಯೇಷನನ್ನು ಮುಚ್ಚಬೇಕೆಂದು ನಿರ್ಣಯಿಸಿತು. ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣರಾಯರು ಎಲ್ಲ ಕೋರ್ಟುಗಳನ್ನು ಈ ದಿನದಮಟ್ಟಿಗೆ ಮುಚ್ಚಬೇಕೆಂದು ಮಾಡಿಸಿದ ಮೇರೆಗೆ ೧೨-೩೦ ಗಂಟೆಯಲ್ಲಿ ಸಿವಿಲ್ ಕೋರ್ಟುಗಳೂ ಮತ್ತು ಬಾರ್ ಅಸೋಸಿಯೇಷನ್ನೂ ಸಹ ಮುಚ್ಚಲ್ಪಟ್ಟವು.

ಸ್ಫೋಟಕ ಪದಾರ್ಥಗಳನ್ನು ಸರ್ಕಾರದ ವಶಪಡಿಸಬೇಕು

ಮೈಸೂರು ೮

ಮೈಸೂರು ಜಿಲ್ಲೆಯಲ್ಲಿ ಡೈನಾಮೈಟ್, ಪ್ಲಾಸ್ಟಿಕ್ ಮೊದಲಾದ ಸ್ಫೋಟಕ ಪದಾರ್ಥಗಳನ್ನಿಟ್ಟುಕೊಂಡಿರುವವರೆಲ್ಲರೂ ಅವುಗಳನ್ನು ಕೂಡಲೇ ಸಮೀಪದಲ್ಲಿರುವ ಪೊಲೀಸ್ ಸ್ಟೇಷನ್ನುಗಳಿಗೆ ವಶಪಡಿಸಬೇಕೆಂದೂ, ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟರ ಲಿಖಿತ ಅನುಮತಿ ಇಲ್ಲದೆ ಮದ್ದನ್ನು ತಯಾರಿಸಲಾಗದೆಂದೂ, ನಿನ್ನೆ ದಿನ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ. ಇದು ಪೊಲೀಸ್, ಪಿ. ಡಬ್ಲ್ಯು. ಡಿ., ಅರಮನೆ ಮತ್ತು ಮುನಿಸಿಪಾಲಿಟಿ ಶಾಖೆಗಳಿಗೆ ಅನ್ವಯವಾಗುವುದಿಲ್ಲ. ಮದ್ದು ಮತ್ತು ಶಾಖೆಯವರು ಅವುಗಳನ್ನು ಖಾಸಗೀ ಕಂಟ್ರಾಕ್ಟರುಗಳಿಗೆ ಕೊಡುವ ಮುನ್ನ ಪೊಲೀಸ್ ಸೂಪರಿಂಟೆಂಡೆಂಟರ ಲಿಖಿತ ಅನುಮತಿ ಪಡೆಯಬೇಕು. ಈ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ೫ ವರ್ಷಗಳ ಶಿಕ್ಷೆ ವಿಧಿಸಲಾಗುವುದು. ಇದು ನಿನ್ನೆಯಿಂದ ಒಂದು ತಿಂಗಳ ಕಾಲ ಜಾರಿಯಲ್ಲಿರುತ್ತದೆ.

ಪಿಕೆಟ್ ನಡೆಸುತ್ತಿದ್ದ ಮಹಿಳೆಯರ ದಸ್ತಗಿರಿ

ಮೈಸೂರು ೮

ಲಾ ಕೋರ್ಟುಗಳ ಪಿಕೆಟಿಂಗ್ ನಡೆಸುತ್ತಿದ್ದ ಶ್ರೀಮತಿ ಪ್ರಫುಲ್ಲ ಕೃಷ್ಣಯ್ಯಂಗಾರ್, ಎಸ್. ಎನ್. ನಾಗಮ್ಮ, ಪದ್ಮಾವತಿ ಭಾವಸಾರ ದೇವಿ ಮೊದಲಾದ ೧೨ ಜನ ಮಹಿಳೆಯರನ್ನೂ ಹಲವರು ವಿದ್ಯಾರ್ಥಿಗಳನ್ನೂ ಅವರ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿದ್ದ ಪೊಲೀಸರು ೧೨॥ ಗಂಟೆಯಲ್ಲಿ ದಸ್ತಗಿರಿ ಮಾಡಿದ್ದಾರೆ.

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆ

ಮೈಸೂರು ೮

ಜಿಲ್ಲಾಧಿಕಾರಿಗಳ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ನಿನ್ನೆ ಸಂಜೆ ದೇವರಾಜ ಮಾರ್ಕೆಟ್ ಬಳಿ ಶ್ರೀಮತಿ ಪ್ರಫುಲ್ಲ ಕೃಷ್ಣಯ್ಯಂಗಾರ್‌ರವರು ಭಾಷಣ ಮಾಡಿ, ಪೊಲೀಸಿನವರು ನಡೆಸುತ್ತಿರುವ ಕ್ರೂರ ಕೃತ್ಯಗಳನ್ನು ಖಂಡಿಸಿ, ಸಾರ್ವಜನಿಕರು ಬೆಂಬಲವಿತ್ತು ಸತ್ಯಾಗ್ರಹವನ್ನು ಯಶಸ್ವಿಯಾಗಿ ಮುಂದುವರಿಸುವಂತೆ ಮಾಡಬೇಕೆಂದು ತಿಳಿಸಿದರು. ಪೊಲೀಸರು ಬಂದಿರಲಿಲ್ಲ. ಸಭೆಯು ಶಾಂತರೀತಿಯಲ್ಲಿ ಬರಖಾಸ್ತಾಯಿತು.

ದಿವಾನರಿಂದ ರೆಡ್ಡಿಯವರಿಗೆ ಭೇಟಿಗಾಗಿ ಕರೆ

ಸ್ವಂ. ವ. ಫೋನ್] ಬೆಂಗಳೂರು ೮

ನಿನ್ನೆ ಬಂಧವಿಮುಕ್ತರಾದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರನ್ನು ದಿವಾನರು ಆಹ್ವಾನಿಸಿದ್ದಾರೆ. ಆದರೆ ಅವರು ಇದನ್ನು ಅಂಗೀಕರಿಸುವುದು ಸಂದೇಹವಾಗಿದೆಯೆಂದು ಗೊತ್ತಾಗಿದೆ.

ನ್ಯಾಯಾಧೀಶರ ಮೇಜಿನ ಮೇಲೆ ಬಳೆ

ಮೊನ್ನೆ ಬೆಂಗಳೂರು ಜಿಲ್ಲಾ ಕೋರ್ಟಿನ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದ ಮಹಿಳೆಯರಲ್ಲಿ ಹಲವರು ಕೋರ್ಟಿನ ಒಳಭಾಗಕ್ಕೆ ಹೋಗಿ ಹಲವು ವಕೀಲರುಗಳಿಗೆ ಎರಡೆರಡು ಗಾಜಿನ ಕೈಬಳೆಗಳನ್ನು ಕೊಟ್ಟು ನ್ಯಾಯಾಧೀಶರ ಮೇಜಿನ ಮೇಲೆಯೂ ಸಹ ಒಂದು ಜೊತೆ ಗಾಜಿನ ಕೈಬಳೆಗಳನ್ನು ಇಟ್ಟರೆಂದು ತಿಳಿದುಬಂದಿದೆ.

ಸತ್ಯಾಗ್ರಹ ಮುಂದುವರೆಯಬೇಕು

ಚೆಂಗಲರಾಯರೆಡ್ಡಿಯವರ ಹೇಳಿಕೆ

ಈ ದಿನ ಬೆಂಗಳೂರಿನಲ್ಲಿ ಸೇರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವವರೆಗೆ ಸತ್ಯಾಗ್ರಹ ಚಳವಳಿಯನ್ನು ನಡೆಸಬೇಕು ಎಂಬುದಾಗಿ ನಿನ್ನೆ ಚಿಕ್ಕಮಗಳೂರು ಸೆರೆಮನೆಯಿಂದ ಬಿಡುಗಡೆ ಹೊಂದಿದಾಗ ತಮ್ಮನ್ನು ಸ್ವಾಗತಿಸಲು ನೆರೆದಿದ್ದ ಭಾರಿ ಸಭೆಯಲ್ಲಿ ಶ್ರೀ॥ ಚೆಂಗಲರಾಯರೆಡ್ಡಿಯವರು ಭಾಷಣ ಮಾಡುತ್ತ ತಿಳಿಸಿದರು.

ಇಂಡಿಯಾ-ಪಾಕಿಸ್ತಾನ ಸೈನ್ಯಗಳಿಗೆ ಘರ್ಷಣೆ

ಪೂರ್ವ ಪಂಜಾಬಿನ ಗುರುದಾಸಪುರ ಜಿಲ್ಲೆಯ ಬಟಾಲ ಎಂಬಲ್ಲಿ ಮುಸ್ಲಿಂ ನಿರಾಶ್ರಿತರನ್ನು ಸಾಗಿಸುತ್ತಿದ್ದ ಲಾರಿಗಳ ಕಾವಲಿನಲ್ಲಿದ್ದ ಪಾಕಿಸ್ತಾನ ಸೈನಿಕರು ಮಾರ್ಗದಲ್ಲಿ ಹೋಗುತ್ತಿದ್ದ ಇಬ್ಬರು ಸಿಕ್ಖರನ್ನು ಗುಂಡಿನಿಂದ ಹೊಡೆದು ಕೊಂದರು. ಇದರ ಪರಿಣಾಮವಾಗಿ ಹಿಂದೂಸ್ತಾನ ಪಾಕಿಸ್ತಾನ ಸೈನ್ಯಗಳಿಗೆ ಪರಸ್ಪರ ಘರ್ಷಣೆಯುಂಟಾಗಿ ಬಂದೂಕಗಳಿಂದ ಹೊಡೆದಾಡಿದರೆಂದೂ ಹೇಳಲಾಗಿದೆ.

ರೈಲ್ವೆ ಮುಷ್ಕರದ ಪರಿಸ್ಥಿತಿ

ಮೈಸೂರು ೮

ಮೊನ್ನೆ ದಿನ ರೈಲ್ವೆ ಕೆಲಸಗಾರರಿಗೂ, ಅಧಿಕಾರ ವರ್ಗದವರಿಗೂ ಒಪ್ಪಂದವಾಗಿ ಮುಷ್ಕರವನ್ನು ಮುಕ್ತಾಯಗೊಳಿಸಬೇಕೆಂದು ನಾಯಕರು ಹೇಳಿದ್ದಾಗ್ಯೂ ಸಹ ನಿನ್ನೆ ದಿನ ರಾಜಧಾನಿಗೆ ಬಂದು ಸಮಾಲೋಚನೆ ನಡೆಸಬೇಕಾಗಿದ್ದ ರೈಲ್ವೆ ಕೆಲಸಗಾರರ ನಾಯಕರು ಬಾರದಿರುವುದು ಗೊಂದಲಕ್ಕೆ ಅವಕಾಶವಾಗಿದೆ. ಕೆಲಸಗಾರರಲ್ಲಿ ಬಹುಮಂದಿ ಕೆಲಸಕ್ಕೆ ಹಿಂತಿರುಗಿರುವುದಿಲ್ಲ.

ಆತ್ಮಹತ್ಯೆ

ನಜರ್‌ಬಾದ್ ಮೊಹಲ್ಲೆಯ ನಾರಾಯಣ … ವರ್ಷದ ಶ್ರೀ … ನಿನ್ನೆ ಸಂಜೆ ಕೊಠಡಿಯ ಬಾಗಿಲನ್ನು ಹಾಕಿಕೊಂಡು … ತನ್ನ ಕತ್ತನ್ನು ಕತ್ತರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನೆಂದು ವರದಿಯಾಗಿದೆ.

ಸ್ತ್ರೀ ಪ್ರಾತಿನಿಧ್ಯದ ರಾಜ್ಯಾಂಗ ಸಮಿತಿ ನಿರ್ಮಿಸಬೇಕು

ಮೈಸೂರು ೮

ಮೊನ್ನೆ ಮಧ್ಯಾಹ್ನ ಶ್ರೀಮತಿ ಎಚ್. ನೈ ಸಂಸ್ಕೃತಿಯವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಮಹಿಳಾಮಂಡಲಿಯವರು ವಿಶೇಷ ಸಭೆ ಸೇರಿ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಸತ್ಯಾಗ್ರಹ ಸಮರ ಆರಂಭವಾದಂದಿನಿಂದ ಇಂದಿನವರೆಗೆ ಸಾವುನೋವುಗಳಿಗೊಳಗಾದವರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಶ್ರೀಮನ್ಮಹಾರಾಜರವರ ೩ ಶ್ರೀ ೮ ನ ಘೋಷಣೆಯ ಪ್ರಕಾರ ಪೂರ್ಣ ಜವಾಬ್ದಾರೀ ಸರ್ಕಾರದ ಸ್ಥಾಪನೆಗೆ ಅವಕಾಶವಿಲ್ಲದುದರಿಂದ ಅದರ ಸ್ಥಾಪನೆಯಾಗಬೇಕಾದರೆ ಜವಾಬ್ದಾರೀ ಸರ್ಕಾರ ಸ್ಥಾಪನೆಗೆ ಸೂಕ್ತವಾದ ರಾಜ್ಯಾಂಗವನ್ನು ರಚಿಸಲು ಪ್ರಜಾ ವರ್ಗದವರಿಂದ ಚುನಾಯಿತರಾದ ಸ್ತ್ರೀ ಪ್ರಾತಿನಿಧ್ಯವುಳ್ಳ ರಾಜ್ಯಾಂಗ ಸಮಿತಿಯು ರಚನೆಯಾಗಬೇಕು, ಜವಾಬ್ದಾರೀ ಸರ್ಕಾರ ಸ್ಥಾಪನೆಯಾಗುವವರೆಗೆ ಆಡಳಿತವನ್ನು ನಿರ್ವಹಿಸಲು ಪ್ರಜಾ ಸತ್ತಾತ್ಮಕ ತತ್ವದ ಆಧಾರದ ಮೇಲೆ ಆಡಳಿತ ನಿರ್ವಹಿಸಲು ಹಂಗಾಮಿ ಸರ್ಕಾರದ ಸ್ಥಾಪನೆಯಾಗಬೇಕು, ಅದರಲ್ಲಿ ಸ್ತ್ರೀಯರಿಗೆ ಪ್ರಾತಿನಿಧ್ಯವಿರಬೇಕು ಮತ್ತು ಸಕಲ ರಾಜಕೀಯ ಬಂದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ನಿರ್ಣಯ ಮಾಡಿದ್ದಾರೆ. ಸಂಸ್ಥಾನದ್ಯಂತವೂ ಪೊಲೀಸರ ದಬ್ಬಾಳಿಕೆಯನ್ನು ಖಂಡಿಸಿದ್ದಾರೆ.

ಮುಸ್ಲಿಮೇತರರು ಪಶ್ಚಿಮ ಪಾಕಿಸ್ತಾನದಲ್ಲಿ ಬಾಳಲಾರರು

ಪಶ್ಚಿಮ ಪಾಕಿಸ್ತಾನದಲ್ಲಿ ವಾಸವಾಗಿರುವ ಮುಸ್ಲಿಮೇತರರನ್ನು ಹಿಂದೂಸ್ಥಾನಕ್ಕೆ ಸಾಗಿಸಲು ಭಾರತ ಸರ್ಕಾರವು ಸರಿಯಾದ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಭಾರತದ ವಿಭಜನೆಯಾದ ನಂತರ ಪಶ್ಚಿಮ ಪಂಜಾಬ್, ಸಿಂಧ, ವಾಯುವ್ಯ ಸರಹದ್ದಿನ ಪ್ರಾಂತಗಳು, ಮತ್ತು ಬಲೂಚಿಸ್ತಾನದಲ್ಲಿರುವ ಅಲ್ಪ ಸಂಖ್ಯಾತರ ಸ್ಥಿತಿ ಚಿಂತಾಜನಕವಾಗಿದೆ. ಪಾಕಿಸ್ತಾನವು ಅವರಿಗೆ ರಕ್ಷಣೆ ಕೊಡುವುದೆಂದು ಮಿ|| ಗಜ್ನಫರ್ ಅಲಿಖಾನರು ಇತ್ತ ಭರವಸೆ ಬರಿಯ ಭ್ರಮೆಯಾಗಿದೆ-ಎಂದು ಅನೇಕ ಜನ ಹಿಂದೂ ಮತ್ತು ಸಿಖ್ ನಾಯಕರು ಭಾರತ ಸರ್ಕಾರಕ್ಕೆ ತಂತಿ ಕಳುಹಿಸಿರುವರೆಂದು ವರದಿಯಾಗಿದೆ.

ರಾಜಕಮಲ್

ತಾ|| 4-10-47 ರಿಂದ

ಅಮೋಘ ಪ್ರಾರಂಭ

ಮಹಾ ಕವಿ

ಕಾಳಿದಾಸ್

(ಹಿಂದಿ)

—: ಭೂಮಿಕೆ :—

ಸೆಹ್ ..., ಸ್ನೇಹ ಪ್ರಭಾ, ಮನಮೋಹನ್, ಮತ್ತು ...

ರಾಜಘೋಷಣೆ ಸಮರ್ಪಕವಾಗಿಲ್ಲ

ಶ್ರೀಮನ್ಮಹಾರಾಜರವರಿಂದ ಘೋಷಿಸಲ್ಪಟ್ಟಿರುವ ರಾಜ್ಯಾಂಗ ಸುಧಾರಣೆಯು ಸಮರ್ಪಕವಾಗಿಲ್ಲವೆಂದೂ, ಸಂಧಾನವು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲೇ ನಡೆಯತಕ್ಕದ್ದೆಂದೂ, ಪ್ರಜಾ ಬೆಂಬಲ ಪಡೆದ ತಾತ್ಕಾಲಿಕ ಸರ್ಕಾರ ಏರ್ಪಡಬೇಕೆಂದೂ ರಾಜ್ಯಾಂಗ ಘಟನಾ ಸಮಿತಿ ಭಾರತದ ರಾಜ್ಯಾಂಗ ಸಭೆಯ ಮಾದರಿಗೆ ಕೂಡಲೇ ಏರ್ಪಡಿಸಬೇಕೆಂದೂ ಮೈಸೂರು ಜೈಲಿನಲ್ಲಿರುವ ರಾಜಕೀಯ ಬಂದಿಗಳು ಅಭಿಪ್ರಾಯಪಟ್ಟಿದ್ದಾರೆಂದು ಗೊತ್ತಾಗಿದೆ

ಬಟೇವಿಯದಲ್ಲಿ ಭಾರತದ ರಾಯಭಾರಿ ಕಛೇರಿ

ಬಟೇವಿಯದಲ್ಲಿ ಈ ತಿಂಗಳ ಮಧ್ಯ ಭಾಗದ ವೇಳೆಗೆ ರಾಯಭಾರಿ ಕಛೇರಿಯನ್ನು ತೆರೆಯಲು ಭಾರತ ಸರ್ಕಾರವು ನಿರ್ಧರಿಸಿರುತ್ತದೆ. ಪಾಕಿಸ್ತಾನದಲ್ಲಿ ಭಾರತದ ಹೈ ಕಮಿಷನರ ಕಛೇರಿಯ ಸಹಾಯ ಸೂಪರಿಂಟೆಂಡೆಂಟರಾದ ಗೋಪಾಲದಾಸರು ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವ ಸಲುವಾಗಿ ನೇಮಿಸಲ್ಪಟ್ಟಿರುವರು.

ಸಹಕಾರ ಸಂಘಗಳ ನೌಕರರ ಸಂಬಳ

ರಾಜಧಾನಿಯ ಸಹಕಾರ ಸಂಘಗಳ ಸ್ಟಾಫ್ ಅಸೋಸಿಯೇಷನ್ನಿನವರು ಮೊನ್ನೆ ನಡೆದ ಸಭೆ ಸೇರಿ ಸಹಕಾರ ಸಂಘಗಳಲ್ಲಿರುವ ನೌಕರರಿಗೆ ಈಗಿನ ಸಂಬಳಗಳನ್ನು ಪುನರ್ವಿಮರ್ಶಿಸಿ ಸಲಹೆ ಮಾಡಿದ್ದಾರೆ.

ಮೇಲ್ದರ್ಜೆಯ ನೌಕರರಿಗೆ ೪೦-೨-೬೦-೩ ೭೫-೧೦೦ ಎಸ್ಟಿಮೇಟ್ ... ೧೦-೧೫೦ ರೂ ಕೆಳದರ್ಜೆಯ ನೌಕರರಿಗೆ ೨೫-೧-೩೦-೧-೩೫ ರೂ. ಕೊಡಲೇಬೇಕೆಂದು ತೀರ್ಮಾನಮಾಡಿ ಎಲ್ಲ ಸಹಕಾರ ಸಂಘಗಳ ಕಾರ್ಯಾಧಿಕಾರಿ ಸಮಿತಿಗೂ ಮತ್ತು ಸಂಘಗಳ ರಿಜಿಸ್ಟ್ರಾರವರಿಗೂ ಅವುಗಳ ಸಲಹೆಗಳನ್ನು ಕಳುಹಿಸಿದ್ದಾರೆ. ಅಲ್ಲದೆ ಈ ಪುನರ್ವಿಮರ್ಶಿತ ಸಂಬಳಗಳು ೧-೬-೪೭ ರಿಂದ ಜಾರಿಗೆ ಬರಬೇಕೆಂದೂ ಸಹ ಸೂಚಿಸಿದ್ದಾರೆ.

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಇಲಾಖೆಗೆ ಕಸದ ಗಾಡಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲೀಕರುಗಳು ಪುಷ್ಟಿಯಾದ ಮತ್ತು ಸರಿಯಾದ ವಯಸ್ಸಿನ ಎತ್ತುಗಳನ್ನು ಬಿಕರಿಗಾಗಿ ತಾ|| 16-10-47 ನೇ ಗುರುವಾರ ಸಾಯಂಕಾಲ ಮುನಿಸಿಪಲ್ ಆಫೀಸಿನ ಮುಂದೆ ಹಾಜರುಪಡಿಸಬಹುದು. ಖರೀದಿ ನಿಶ್ಚಯವಾದ ಕೂಡಲೇ ಮೊಬಲಗನ್ನು ಪಾವತಿಮಾಡಲಾಗುತ್ತದೆ.

?-10-47 ಜಿ. ಅನಂತರಾವ್,
ಮೈಸೂರು ಸಿಟಿ ಹೆಲ್ತ್ ಆಫೀಸರ್.

ಸತ್ಯಾಗ್ರಹ ಸಮಾಚಾರ

ಅರಸೀಕೆರೆಯಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದ ಸತ್ಯಾಗ್ರಹಿಗಳಿಗೆ ೨ ತಿಂಗಳ ಕಠಿಣ ಸಜಾ, ೨೦ ರೂ. ಜುಲ್ಮಾನೆ ತಪ್ಪಿದರೆ ಮತ್ತೆ ೧೫ ದಿನ ಸಜಾ

ಹಾಸನದ ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿದುದಕ್ಕಾಗಿ ೧೯ ಜನರಿಗೆ ೩ ತಿಂಗಳು ಕಠಿಣ ಶಿಕ್ಷೆ.

ದಾವಣಗೆರೆಯಿಂದ ತುಮಕೂರಿಗೆ ಬಂದಿದ್ದ ೨೩ ಜನ ಸತ್ಯಾಗ್ರಹಿಗಳಿಗೆ ತಲಾ ೨೦೦ ರೂ ಜುಲ್ಮಾನೆ ತಪ್ಪಿದರೆ ೩ ತಿಂಗಳ ಸಾದಾ ಶಿಕ್ಷೆ

ಕಳೆದ ೨೫ ರಿಂದ ಇದುವರೆಗೆ ಶ್ರೀನಿವಾಸಪುರದಲ್ಲಿ ಪ್ರತಿಬಂಧಕಾಜ್ಞೆ ಉಲ್ಲಂಘಿಸಿದುದಕ್ಕಾಗಿ ೩೦ ಜನರ ಬಂಧನ

ಹಿರಿಯೂರಿನಲ್ಲಿ ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಯುತ್ತಿದೆ ಕಛೇರಿ ಕೆಲಸ ನಡೆಯುತ್ತಿಲ್ಲ.

ಬೈರಮಂಗಲದಲ್ಲಿ ಪಿಕೆಟಿಂಗ್ ನಡೆಸುತ್ತಿದ್ದರೆಂದು ಹಲವರಿಗೆ ೨ ತಿಂಗಳು ಕಠಿಣ ಶಿಕ್ಷೆ

ಪೋಲೀಸ್ ಭವನದ ಮೇಲೆ ರಾಷ್ಟ್ರ ಧ್ವಜ

[ಸ್ವಂ ವ.] [ಆಗರ ೬

ಮಹಾತ್ಮ ಗಾಂಧಿಯವರ ಜಯಂತಿಯ ಪ್ರಯುಕ್ತ ಕಳೆದ ಗುರುವಾರ ಇಲ್ಲಿನ ಪೋಲೀಸ್ ಸ್ಟೇಷನ್ನಿನ ಮೇಲೆ ಯೂನಿಯನ್ ಧ್ವಜವನ್ನು ಹಾರಿಸಲಾಗಿತ್ತು

ನಗರ ಪರೀಕ್ಷೆ

ಅಮಲ್ದಾರರಾದ ಶ್ರೀ ಕೆ. ಸಿದ್ದೇಗೌಡರು ಈ ಗ್ರಾಮದ ಬೀದಿ ಬೀದಿಗಳಲ್ಲೂ ಸಂಚರಿಸಿ ಜನರ ಕುಂದುಕೊರತೆಗಳನ್ನು ವಿಚಾರಿಸಿದರು.

ಉಪಾಧ್ಯಕ್ಷರು

ಈ ದಿನ ಪುರಸಭೆಯ ಅಧಿವೇಶನವು ನಡೆದು ಇದೇ ೨೦ ನೇ ತಾ|| ದಿನ ಉಪಾಧ್ಯಕ್ಷರ ಚುನಾವಣೆಯು ನಡೆಯಬೇಕೆಂದು ತೀರ್ಮಾನಿಸಿತು

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು

ಸ್ಯಾಂಡಲ್

ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ದಿವಾನರು ಭಾರತೀಯರಾಗಿ ವರ್ತಿಸಬೇಕಾಗಿತ್ತು

ಮೈಸೂರು ಸಂಸ್ಥಾನವು ಬಹಳ ಕಾಲದಿಂದಲೂ ಭಾರತದ ಸಂಸ್ಥಾನಗಳಲ್ಲಿ ಉನ್ನತ ಸ್ಥಾನವನ್ನು ಪಡೆದು ಇತರ ಸಂಸ್ಥಾನಗಳಿಗೆ ಮಾರ್ಗದರ್ಶಿಯಾಗಿತ್ತು. ವಿದ್ಯಾಭ್ಯಾಸ ಮತ್ತು ಇತರ ಅಭಿವೃದ್ಧಿ ಕಾರ್ಯಗಳಲ್ಲಿ ಮಾರ್ಗದರ್ಶಿಯಾಗಿರುವುದರಿಂದ ಸರ್ ಆರ್ಕಾಟರು ಸುಸಂಸ್ಕೃತ ಭಾರತೀಯರೆಂದು ಹೆಸರು ಪಡೆದಿದ್ದಾರೆ. ವಿಷಯಗಳಲ್ಲೂ ಸಹ ಉತ್ತಮವಾದ ಭಾಷಣಗಳನ್ನು ಮಾಡಿ ಕೀರ್ತಿಗಳಿಸಿದ್ದಾರೆ. ಇವರು ಮೈಸೂರಿನ ಜನತೆಗೆ ಸ್ವಾತಂತ್ರ್ಯವನ್ನು ಕೊಟ್ಟು ನಿಜವಾದ ಭಾರತೀಯರಾಗಿ ವರ್ತಿಸಬೇಕಾಗಿತ್ತು. ಅದನ್ನು ಬಿಟ್ಟು ದಿವಾನರು ಅಲ್ಲಿನ ಜನರು ಸ್ವಾತಂತ್ರ್ಯ ಸಾಧನೆಗಾಗಿ ಚಳುವಳಿ ಹೂಡಲು ಅವಕಾಶವಿತ್ತಿರುವುದು ಅತ್ಯಂತ ವಿಷಾದದ ಸಂಗತಿ ಎಂಬುದಾಗಿ ಬೊಂಬಾಯಿ ಪ್ರಾಂತ ಕಾಂಗ್ರೆಸ್ ಸಮಿತಿಯ ನಾಯಕರಾದ ಶ್ರೀ ಕೆ. ಎಸ್. ಪಾಟೀಲರು ಕಳೆದ ಶನಿವಾರ ನಡೆದ ತುಂಗದಲ್ಲಿ ಸೇರಿದ್ದ ಮೈಸೂರು ದಿನಾಚರಣೆಯ ಸಭೆಯಲ್ಲಿ ಹೇಳಿರುವರು

ಗುಬ್ಬಿ ತಾಲ್ಲೂಕಿನ ಸರದಾರ್ ... ಯಲ್ಲಪ್ಪ ಮೊದಲಾದವರಿಗೆ ಶೇಂದಿ ಅಂಗಡಿ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರು ತಲಾ ೧೦೦ ರೂ ಜುಲ್ಮಾನೆ ತಪ್ಪಿದರೆ ೩ ತಿಂಗಳ ಸಾದಾ ಸಜಾ

ಹೊಸ ನಾಟಕ! ಹೊಸ ನಾಟಕ!

ಹಾಲುಸಿದ್ದೇಶ್ವರ ನಾಟಕ ಮಂಡಳಿ

ಹಲಗೇರಿ ಇವರು

ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ

ತಾ|| 11-10-47 ನೇ ಶನಿವಾರ ರಾತ್ರಿ ೧೦-೩೦ ಕ್ಕೆ ಮತ್ತು 12-10-47 ಭಾನುವಾರ ಸಂಜೆ ೬-೩೦ ಕ್ಕೆ

ಅರ್ಧಾಂಗಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಕೆ. ಸಿ ಚೆಟ್ಟಪ್ಪ,
ಪ್ರೊಪ್ರೈಟರ್

ವುಡ್‌ಲ್ಯಾಂಡ್ಸ್

3-10-47 ರಿಂದ

೨ ನೇ ವಾರ

ಪ್ರತಿ ದಿನ ೩ ಆಟಗಳು

ಪ್ರಕಾಶ್ ಪಿಕ್ಚರ್ಸರವರ ಅಮೋಘವಾದ ಚಲನ ಚಿತ್ರ

ನಯೀ ಮಾ

(ಹಿಂದಿ)

—: ಭೂಮಿಕೆ :—

ರಂಜನಾ ಮತ್ತು ಜೀವನ್

Printed and published by ... Nagaraj ... at the Sadhvi Press D. Subbaiah Road Mysore

ಫೋನ್ ನಂ. 608 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಂಪುಟ ೬] ಗುರುವಾರ ೯-೧೦-೪೭ [ಸಂಚಿಕೆ ೪೮

ಭಾರತದ ಮುಸ್ಲಿಮರಿಗೆ ಪಾಕಿಸ್ತಾನ್ ಪ್ರವೇಶವಿಲ್ಲ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ

ಸ್ವಂ.ಸು.ಫೋ] ಬೆಂಗಳೂರು ೯

ನಿನ್ನೆ ಸಂಜೆ ಶ್ರೀ ಕೆ. ಚೆಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ದಿವಾನರು ಕಾಂಗ್ರೆಸ್ಸಿಗೆ ಇತ್ತಿರುವ ಆಹ್ವಾನವನ್ನೂ, ಶ್ರೀ ಮನ್ಮಹಾರಾಜರವರ ಇತ್ತೀಚಿನ ಘೋಷಣೆಯನ್ನೂ ಮತ್ತು ಪ್ರಸ್ತುತ ರಾಜಕೀಯ ಸ್ಥಿತಿಯನ್ನೂ ಪರಿಶೀಲಿಸಿತು. ಇನ್ನೂ ಯಾವ ನಿರ್ಧಾರವೂ ಆಗಿಲ್ಲ. ಸಭೆ ಇಂದು ಮತ್ತೆ ಸೇರಿದೆ— ಶ್ರೀಗಳಾದ ಹೆಚ್. ಸಿ. ದಾಸಪ್ಪ, ಟಿ. ಮರಿಯಪ್ಪ ಮತ್ತು ಎ. ಪಿ. ಕೃಷ್ಣಮೂರ್ತಿರಾಯರುಗಳು ದಿವಾನರ ಆಹ್ವಾನದ ಮೇಲೆ ಬಿಡುಗಡೆ ಹೊಂದಿ ಸಭೆಗೆ ಆಗಮಿಸಿದ್ದರು.

ಕಾಸನದ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಿದ್ದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ. ಚಾಮರಾಜನಾಯರ್‌ರೂ ಸಹ ಸಭೆಗೆ ಆಗಮಿಸಿದ್ದರು.

ಮೂರೇ ತಿಂಗಳಲ್ಲಿ ನಮ್ಮ ಗುರಿ ಸಾಧಿಸಲಾಗಿದೆ

ಮೈಸೂರು ೯

ನಿನ್ನೆ ಸಂಜೆ ರೈಲ್ವೆ ಕೆಲಸಗಾರರ ಸಂಘದ ನಾಯಕರಾದ ಶ್ರೀ ರಾಜು ಮೊದಲಿಯಾರ್ ಮೊದಲಾದವರು ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸಿದರು.

ರೈಲ್ವೆ ಸತ್ಯಾಗ್ರಹಿಗಳು ಕೆಲಸಕ್ಕೆ ಹೋಗಿ ನಾವು ಹೇಳುವವರೆಗೆ ಕಾದಿದ್ದುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅಖಿಲ ಭಾರತ ರೈಲ್ವೆ ಸಂಘದವರು ೩೦ ವರ್ಷಗಳ ಅವಿಶ್ರಾಂತ ಹೋರಾಟ ನಡೆಸಿ ಸಾಧಿಸಿದ್ದನ್ನು ನಾವು ಕೇವಲ ಮೂರೇ ತಿಂಗಳಲ್ಲಿ ಸಾಧಿಸಿದ್ದೇವೆ. ಸರ್ಕಾರವು ನಮ್ಮ ಎಲ್ಲ ಬೇಡಿಕೆಗಳನ್ನೂ ಅಂಗೀಕರಿಸಿದೆ. ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯದರ್ಶಿಗಳಾದ ಶ್ರೀ ಗುರುಸ್ವಾಮಿಯವರೂ ಸಹ ನಮ್ಮ ಈ ಜಯವನ್ನು ಹೊಗಳಿದ್ದಾರೆ. ನಮ್ಮ ಬೇಡಿಕೆಗಳೆಲ್ಲ ಈಡೇರಿ ಸರ್ಕಾರದವರಿಗೂ ನಮಗೂ ಒಪ್ಪಂದವಾಗಿರುವುದರಿಂದ ಕೆಲಸಗಾರರೆಲ್ಲ ನಾಳೆಯಿಂದ ಕೆಲಸಕ್ಕೆ ಹಿಂದಿರುಗಬೇಕೆಂದು ಪ್ರಾರ್ಥಿಸುತ್ತೇನೆ-ಎಂಬುದಾಗಿ ಶ್ರೀ ರಾಜು ಮೊದಲಿಯಾರರು ನಿನ್ನೆ ಸಂಜೆ ರೈಲ್ವೆ ಇನ್‌ಸ್ಟಿಟ್ಯೂಟಿನ ಬಳಿ ಸೇರಿದ್ದ ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡಿದರು.

ಸತ್ಯಾಗ್ರಹಿಗಳ ದಸ್ತಗಿರಿ

ಅರಮನೆ ಮುಂದೆ ಸತ್ಯಾಗ್ರಹ ನಡೆಸಲು ಮಲಬಾರಿನಿಂದ ಬಂದ ಕೇರಳ ಸೋಷಲಿಸ್ಟ್ ಪಕ್ಷದ ಸದಸ್ಯರಾದ ಶ್ರೀ ಜೋಸ್ ಮತ್ತು ೫ ಜನರನ್ನೂ ಮೈಸೂರಿನ ಭಾರತಿ ಶಂಕರ್ ಎಂಬುವರನ್ನೂ ನಿನ್ನೆ ದೇವರಾಜ ಮಾರ್ಕೆಟ್ ಬಳಿ ಪೊಲೀಸರು ದಸ್ತಗಿರಿ ಮಾಡಿದ್ದಾರೆ.

STOP RPESS

ಸ್ವಂ.ಸು.ಫೋ] ಬೆಂಗಳೂರು ೯

ಶ್ರೀಗಳಾದ ಕೆ. ಚೆಂಗಲರಾಯರೆಡ್ಡಿಯವರೂ, ಎ. ಜಿ. ರಾಮಚಂದ್ರರಾಯರೂ ದಿವಾನರನ್ನು ಭೇಟಿ ಮಾಡಬೇಕೆಂದು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದೆ. ಅವರಿಬ್ಬರೂ ದಿವಾನರ ಬಳಿ ಮಾತುಕತೆ ನಡೆಸುತ್ತಿದ್ದಾರೆ.

ಬೇಗನೇ ತೀರ್ಮಾನಕ್ಕೆ ಬರುತ್ತೇವೆ

ಕೆ. ಸಿ. ರೆಡ್ಡಿಯವರ ಸೂಚನೆ

ಸ್ವಂ.ಸು.ಫೋ] ಬೆಂಗಳೂರು ೯

ನಿನ್ನೆ ಕಾಂಗ್ರೆಸ್ ಕಛೇರಿಯ ಆವರಣದ ಒಳ ಹೊರಭಾಗಗಳಲ್ಲಿ ಸಹಸ್ರಾರು ಮಂದಿ ವಿಧವಿಧವಾದ ಪ್ಲಕಾರ್ಡುಗಳನ್ನಿಟ್ಟುಕೊಂಡು ನಿಂತಿದ್ದರು. ಸಾವಿರಾರು ಸುಧಾರಣೆಗಳನ್ನು ಒಪ್ಪಬೇಡಿ, ತಿರಸ್ಕರಿಸಿ, ರಿಜೆಕ್ಟ್ ಡೈಲ್ಯೂಟೆಡ್ ಫಾರಂಸ್-ಎಂದು ಜನಸಮುದಾಯ ಘೋಷಿಸುತ್ತಿತ್ತು. ನಾವು ಬೇಗನೇ ತೀರ್ಮಾನಕ್ಕೆ ಬರುತ್ತೇವೆ ಶಾಂತರಾಗಿರಿ-ಎಂದು ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಕಛೇರಿಯೊಳಕ್ಕೆ ತೆರಳಿದರು.

ಪಿಕೆಟಿಂಗ್ ಮತ್ತು ದಸ್ತಗಿರಿ

ಮೈಸೂರು ೯

ರಾಜಧಾನಿಯ ಅಡಿಷನಲ್ ಸಬ್ ಜಡ್ಜರ ಕೋರ್ಟಿನ ಮುಂದೆ ಶ್ರೀಮತಿ ಇಂದಿರಾ, ಸಬ್ ಜಡ್ಜ್ ಕೋರ್ಟಿನ ಮುಂದೆ ಸತ್ಯವತಿ, ಮಾಲಾ, ಬಾರ್ ಅಸೋಸಿಯೇಷನ್ ಮುಂಭಾಗದಲ್ಲಿ ಆನ ಸೂಯಾ, ಇಂದಿರಾಬಾಯಿ, ಟೆಂಡರ್ ಅಡಿಷನಲ್ ಸಬ್ ಕೋರ್ಟಿನ ಮುಂದೆ ಪ್ರಫುಲ್ಲ ಕೃಷ್ಣಯ್ಯಂಗಾರ್, ಸುಂದರಮ್ಮ ಕೆ. ಜೆ. ದಾಸ್, ಎರಡನೇ ಕೋರ್ಟಿನ ಮುಂದೆ ಸ್ವಮಂತಕಮಣಿ ೮ ವರ್ಷ ವಯಸ್ಸಿನ ಕಾಂತಾದೇವಿ, ವಾಸಂತಿ, ಮೊದಲನೇ ಕೋರ್ಟಿನ ಮುಂದೆ ಅಲಕಗಂಗ, ರಾಧ, ಸಂಧ್ಯಾವಳಿ, ಚಂಪಕಲಕ್ಷ್ಮಿ ಮೊದಲಾದವರು ಪಿಕೆಟಿಂಗ್ ನಡೆಸುತ್ತಿದ್ದರು. ಪೊಲೀಸರು ಈ ೧೯ ಜನ ಮಹಿಳೆಯರನ್ನೂ ದಸ್ತಗಿರಿ ಮಾಡಿ ಸ್ವಲ್ಪ ಹೊತ್ತಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಅನಂತರ ೭ ೮ ಜನ ಮಹಿಳೆಯರು ಬಾರ್ ಅಸೋಸಿಯೇಷನ್ ಮುಂಭಾಗದಲ್ಲಿ ಪಿಕೆಟ್ ನಡೆಸಿ ಲಾಯರುಗಳಾರಿಗೂ ಹೊರಗೆ ಬರಲು ಅವಕಾಶವೇ ಇಲ್ಲ. ಲಾಯರುಗಳಿಗೂ ಅವರಿಗೂ ವಾಗ್ವಾದ ನಡೆದನಂತರ ಮಹಿಳೆಯರು ೧೧ ನೇ ತಾ|| ವರೆಗೆ ಯಾರೂ ಪಿಕೆಟ್ ಮಾಡಬಾರದೆಂದೂ, ಆ ದಿನ ತಮ್ಮ ನಿರ್ಧಾರವನ್ನು ತಿಳಿಸುವುದಾಗಿಯೂ ಭರವಸೆ ಇತ್ತ ನಂತರ ಎಲ್ಲರೂ ಹಿಂದಿರುಗಿದರು.

ಪಂಜಾಬ್ ಮುಸ್ಲಿಮರಿಗೆ ಪಾಕಿಸ್ತಾನದಲ್ಲಿ ಪ್ರವೇಶ

ಪೂರ್ವ ಪಂಜಾಬ್ ಮತ್ತು ಅದಕ್ಕೆ ಸೇರಿದ ಪಾಟಿಯಾಲ ಜಿಂದ್ ಫರೀದ್ ಕೋಟ್ ಮತ್ತು ನಾಭಾ ಸಂಸ್ಥಾನಗಳಿಂದ ಬರುವ ಮುಸ್ಲಿಂ ನಿರಾಶ್ರಿತರಿಗೆ ಮಾತ್ರ ಪಾಕಿಸ್ತಾನದಲ್ಲಿ ಪ್ರವೇಶಿಸಲು ಅವಕಾಶ ಕೊಡಲಾಗುವುದೆಂದು ವಿದೇಶಾಂಗ ಮಂತ್ರಿ ಮಿ|| ಲಿಯಾಖತ್ ಅಲಿ ಖಾನರು ಭಾರತ ಸರ್ಕಾರಕ್ಕೆ ತಿಳಿಸಿರುವರೆಂದು ವರದಿಯಾಗಿದೆ. ಭಾರತದ ಇತರ ಪ್ರದೇಶಗಳಿಂದ ಪಾಕಿಸ್ತಾನಕ್ಕೆ ಬರಲು ಪ್ರಯತ್ನ ಮಾಡುವ ಯಾವ ಮುಸ್ಲಿಮರಿಗೂ ಅವಕಾಶ ಕೊಡಲಾಗುವುದಿಲ್ಲವೆಂದು ಅವರು ಭಾರತದ ಪ್ರತಿನಿಧಿಗಳಿಗೆ ತಿಳಿಸಿರುವರು. ಇದರಿಂದ ಪಾಕಿಸ್ತಾನ್ ಸರ್ಕಾರವು ಭಾರತದ ಮುಸ್ಲಿಮರನ್ನು ಕೈ ಬಿಟ್ಟಿತೆಂದು ಭಾಸವಾಗುತ್ತದೆ. ಪಾಕಿಸ್ತಾನವನ್ನು ತ್ಯಜಿಸಿರುವ ಮುಸ್ಲಿಮೇತರ ನಿರಾಶ್ರಿತರ ಆಸ್ತಿಪಾಸ್ತಿಗಳನ್ನು ಹಲವು ಕಾಲ ರಕ್ಷಣೆ ಮಾಡಲಾಗುವುದೆಂದೂ ಲಿಯಾಖತ್‌ರವರು ಭರವಸೆ ನೀಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಸ್ವಂ.ಸು.ಫೋ] ಬೆಂಗಳೂರು ೯

ಪ್ರಸ್ತುತ ಪರಿಸ್ಥಿತಿಯಲ್ಲಿ ಶ್ರೀಮನ್ಮಹಾರಾಜರ ಸಂದೇಶದಿಂದ ಕಾಂಗ್ರೆಸ್ಸಿನ ಎಲ್ಲ ಬೇಡಿಕೆಗಳೂ ಪೂರೈಸಲಾಗುವುದಿಲ್ಲ. ಸತ್ಯಾಗ್ರಹ ಹೂಡಿದಾಗ ಕಾಂಗ್ರೆಸ್ಸು ಮುಂದಿಟ್ಟ ಬೇಡಿಕೆಗಳು ಪೂರ್ಣಗೊಳ್ಳುವವರೆಗೆ ಸತ್ಯಾಗ್ರಹವು ಮುಂದುವರಿಯಬೇಕೆಂದು ಹೇಳುವುದು ಸಹಜವೂ, ಸ್ಪಷ್ಟವೂ ಆಗಿದೆ-ಎಂಬುದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ನಿನ್ನೆ ಪತ್ರಿಕಾ ಪ್ರತಿನಿಧಿಗಳೊಬ್ಬರಿಗೆ ಕೊಟ್ಟ ಭೇಟಿಯಲ್ಲಿ ತಿಳಿಸಿರುವರು.

ಸತ್ಯಾಗ್ರಹದ ಸಂಬಂಧವಾಗಿ ಸಮಸ್ತ ಅಧಿಕಾರವನ್ನು ಪಡೆದಿದ್ದರೂ ಸಹ ಅದನ್ನು ನಾವು ಹಿಂತೆಗೆದುಕೊಳ್ಳುವಂತಿಲ್ಲವೆಂದೂ, ಅದನ್ನು ಮುಂದೆ ನಡೆಸಿಕೊಂಡು ಬಂದು ವಿಜಯ ಗಳಿಸಲು ಮಾತ್ರ ತಮಗೆ ಅಧಿಕಾರವಿರುವುದಾಗಿಯೂ, ತಮ್ಮ ಬೇಡಿಕೆಯು ಈಡೇರದೇ ಇರುವಾಗ ಕಾರ್ಯಕಾರಿ ಸಮಿತಿಯೂ ಸಹ ಸತ್ಯಾಗ್ರಹವನ್ನು ನಿಲ್ಲಿಸಲಾರದೆಂದೂ ಶ್ರೀ ರೆಡ್ಡಿಯವರು ನುಡಿದರು. ಜನರು ಸ್ವಲ್ಪವೂ ಹಿಂತೆಗೆಯದೆ ಅಹಿಂಸಾತ್ಮಕವಾಗಿ ಸತ್ಯಾಗ್ರಹವನ್ನು ನಡೆಸಿಕೊಂಡು ಬರಬೇಕೆಂದು ಪ್ರಾರ್ಥಿಸಿದರು.

ದಿವಾನರಿಗೆ ಕಾಂಗ್ರೆಸ್ ಅಧ್ಯಕ್ಷರ ಪತ್ರ ?

ಸ್ವಂ.ಸು.ಫೋ] ಬೆಂಗಳೂರು ೯

ಈದಿನ ಬೆಳಗ್ಗೆ ೮-೩೦ ಗಂಟೆಗೆ ಪುನಃ ಆರಂಭವಾದ ಕಾ|| ಕಾ|| ಸಮಿತಿಯ ಸಭೆಯು ಇನ್ನೂ ನಡೆಯುತ್ತಿದೆ. ಕಾಂಗ್ರೆಸ್ ಅಧ್ಯಕ್ಷರನ್ನು ದಿವಾನರು ಭೇಟಿಗಾಗಿ ಆಹ್ವಾನಿಸಿರುವುದನ್ನು ಮಹಾರಾಜರ ಘೋಷಣೆಯನ್ನೂ ಪರಿಶೀಲಿಸುತ್ತಿದೆ. ಶ್ರೀ ರೆಡ್ಡಿಯವರು ದಿವಾನರ ಆಹ್ವಾನವನ್ನಂಗೀಕರಿಸುವುದಿಲ್ಲವೆಂದೂ ಅದರ ಭೇಟಿಗಾಗಿ ಕರೆದಿರುವುದರ ಉದ್ದೇಶ, ಚರ್ಚಿಸಬೇಕಾದ ವಿಷಯಗಳು ಇವುಗಳನ್ನು ತಿಳಿಸಬೇಕೆಂದು ಅವರಿಗೆ ಪತ್ರ ಬರೆಯಬಹುದೆಂದೂ ಸಹ ಭಾವಿಸಲಾಗಿದೆ. ಶ್ರೀಮನ್ಮಹಾರಾಜರವರ ಘೋಷಣೆಯ ಬಗ್ಗೆ ನಾಯಕರೆಲ್ಲರೂ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿ ಪ್ರತ್ಯೇಕವಾಗಿ ಹೇಳಿಕೆಗಳನ್ನಿತ್ತಿದ್ದಾರೆ.

ನಗರದ ಪರಿಸ್ಥಿತಿ

ಮಲ್ಲೇಶ್ವರದ ಬಳಿ ೨೦೦, ೩೦೦ ಜನ ಬಾಲಕಿಯರು ಮೆರವಣಿಗೆ ನಡೆಸಿ ಹಿಂದಿರುಗಿದ್ದಾರೆ. ಪೊಲೀಸರು ಅಡ್ಡಿ ಪಡಿಸಿಲ್ಲ.

ಮೆರವಣಿಗೆ ನಡೆಸಲು ಯತ್ನಿಸಿದ ೯ ಜನ ವಿದ್ಯಾರ್ಥಿಗಳನ್ನು ಬಸವನಗುಡಿಯಲ್ಲಿ ಬಂಧಿಸಲಾಗಿದೆ.

ಜಿಲ್ಲಾ ಕೋರ್ಟುಗಳ ಆವರಣಕ್ಕೆ ಯಾರೂ ಪ್ರವೇಶಿಸದಂತೆ ಬಲವಾದ ಕಾವಲನ್ನಿಡಲಾಗಿದೆ. ರಸ್ತೆಯಲ್ಲೇ ಪಿಕೆಟಿಂಗ್ ನಡೆಸಲು ಹೊರಟ ೪೦ ಮಂದಿ ಮಹಿಳೆಯರನ್ನೂ ೧೧ ಜನ ವಿದ್ಯಾರ್ಥಿಗಳನ್ನೂ ಬಂಧಿಸಲಾಗಿದೆ.

ಮೈಸೂರು ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಬಂದ ತಮಿಳುನಾಡು ಕಾಂಗ್ರೆಸ್ಸಿನ ೨೦ ಜನ ಸತ್ಯಾಗ್ರಹಿಗಳು ಚಿಕ್ಕಪೇಟೆಯಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ರೈಲ್ವೆ ವರ್ಕ್‌ಷಾಪಿನಲ್ಲಿ ಸಭೆ

ಮೈಸೂರು ೯

ಈ ದಿನ ರೈಲ್ವೆ ವರ್ಕ್‌ಷಾಪಿನ ಬಳಿ ಸೇರಿದ್ದ ಕೆಲಸಗಾರರ ಸಭೆಯನ್ನುದ್ದೇಶಿಸಿ ಕೆಲಸಗಾರರ ನಾಯಕರಾದ ಶ್ರೀ ರಾಜು ಮೊದಲಿಯಾರರೂ ಮತ್ತು ಅಸಿಸ್ಟೆಂಟ್ ಲೇಬರ್ ಕಮಿಷನರಾದ ಶ್ರೀ ಮಹಲಿಂಗಯ್ಯನವರೂ ಭಾಷಣ ಮಾಡಿ ಕೆಲಸಗಾರರೆಲ್ಲರೂ ಹಿಂದಿರುಗಬೇಕೆಂದು ತಿಳಿಸಿದರು. ಕೆಲಸಗಾರರು, ಈ ದಿನ ಬಹಳ ಹೊತ್ತಾಗಿ, ಯಾವಾರೂ ಊಟ ಮಾಡಿಲ್ಲವೆಂದೂ ಈ ದಿನ ಅವರುಗಳು ವಾಪಸು ಹಿಂದಿರುಗಲು ಅನುಮತಿ ಕೊಡಬೇಕೆಂದೂ ನಾಳೆಯಿಂದ ಕೆಲಸದ ವೇಳೆ ಹಾಜರಾಗುವುದಾಗಿಯೂ ತಿಳಿಸಿದರು. ಅಧಿಕಾರಿ ವರ್ಗದವರು ಇದಕ್ಕೆ ಸಮ್ಮತಿಸಿದ ನಂತರ ಕೆಲಸಗಾರರೆಲ್ಲರೂ ವಾಪಸು ತೆರಳಿ ಹೋದರು.

ರಾಜಧಾನಿಯಲ್ಲಿ ಎಂ. ಎನ್. ಜೋಯಿಸ್

ಮೈಸೂರು ೯

ರಾಜಧಾನಿಯ ವಕೀಲರೂ, ಪ್ರ|| ಪ್ರ|| ಸಭಾಸದಸ್ಯರೂ, ಕಾಂಗ್ರೆಸ್ಸಿನ ಮುಂದಾಳುಗಳೂ ಆದ ಶ್ರೀ ಎಂ. ಎನ್. ಜೋಯಿಸರೂ ಮತ್ತು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ, ಕಾ|| ಕಾರ್ಯಕಾರಿ ಸಮಿತಿಯ ಸದಸ್ಯರೂ ಆದ ಶ್ರೀ ಎಸ್. ಚನ್ನಯ್ಯನವರೂ ಇದೇ ನಿನ್ನೆ ಎಂದು ರಾಜಧಾನಿಗೆ ಆಗಮಿಸಿ ಕಾಂಗ್ರೆಸ್ ಕಾರ್ಯಗಾರರೊಡನೆ ಸಮಾಲೋಚನೆ ನಡೆಸಿ ಬೆಂಗಳೂರಿಗೆ ಹಿಂದಿರುಗಿದರೆಂದು ತಿಳಿಸಲಾಗಿದೆ.

ಸತ್ಯಾಗ್ರಹ ಸಮಾಚಾರ

ಶಿವಮೊಗ್ಗೆಯ ೨೦ ಜನರಿಗೆ ೨ ತಿಂಗಳ ಸಾದಾ ಸಜಾ, ಶ್ರೀ ದ್ಯಾವಪ್ಪ-ಎಂಬುವರಿಗೆ ೧ ತಿಂಗಳು ಕಠಿಣ ಸಜಾ ಮತ್ತು ೫ ಜನರಿಗೆ ೨ ತಿಂಗಳು ಕಠಿಣ ಸಜಾ ವಿಧಿಸಲಾಗಿದೆ

ಹೊಳೇಹೊನ್ನೂರಿನ ೯ ಜನರನ್ನು ಬಂಧಿಸಲಾಗಿದೆ.

ಮಂಡ್ಯದ ಸ್ಕೂಲುಗಳಲ್ಲಿ ಪಿಕೆಟಿಂಗ್ ನಡೆಯುತ್ತಿದೆ ಅನೇಕರನ್ನು ಅದಕ್ಕಾಗಿ ದಸ್ತಗಿರಿ ಮಾಡಲಾಗಿದೆ.

ಚಿಕ್ಕಮಗಳೂರಿನ ಜಿಲ್ಲಾ ಕಛೇರಿಯ ಬಳಿ ಪಿಕೆಟಿಂಗ್ ನಡೆದಿದೆ.

ಮಾಗಡಿಯಲ್ಲಿ ೫ ಮಂದಿ ವಿದ್ಯಾರ್ಥಿಗಳಿಗೆ ೨ ತಿಂಗಳು ಸಜಾ ವಿಧಿಸಿದ್ದಾರೆ.

ಚಿತ್ರದುರ್ಗದ ೪ ಮಂದಿ ಮುಖಂಡರಿಗೆ ೨ ತಿಂಗಳು ಕಠಿಣಶಿಕ್ಷೆ ವಿಧಿಸಲಾಗಿದೆ.

ಕಾನಕಾನಹಳ್ಳಿಯ ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರೆಂದು ೮ ಜನರಿಗೆ ೨ ತಿಂಗಳು ಕಠಿಣ ಶಿಕ್ಷೆ ವಿಧಿಸಿದ್ದಾರೆ.

ಬೆಂಗಳೂರು ಜಿಲ್ಲಾ ಕೋರ್ಟಿನ ಬಳಿ ಪಿಕೆಟಿಂಗ್ ನಡೆಸುತ್ತಿದ್ದ ೫೦ ಜನರನ್ನೂ ಸಹ ಪೊಲೀಸರು ಬಂಧಿಸಿದ್ದಾರೆ.

ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರೆಂದು ಕಾನಕಾನಹಳ್ಳಿಯ ೮ ಜನ ಸತ್ಯಾಗ್ರಹಿಗಳಿಗೆ ೨ ತಿಂಗಳು ಕಠಿಣ ಸಜಾ.

ನಂಜನಗೂಡು ತಾಲ್ಲೂಕು ಹೆಮ್ಮರಗಾಲದಲ್ಲಿ ಧ್ವಜಾರೋಹಣ [illegible] ಮತ್ತು ಬಹಿರಂಗ ಸಭೆಗಳು ಜರುಗಿದುವು.

ಮಸೀದಿಯ ಕೆಳಗೆ

ಶಸ್ತ್ರಾಸ್ತ್ರಗಳ ತಯಾರಿ

ದೆಹಲಿಯ ಮಸೀದಿಯೊಂದರ ನೆಲಮಾಳಿಗೆಯಲ್ಲಿ ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಯಿರುವುದು ಪತ್ತೆಯಾಗಿರುವುದಾಗಿ ವರದಿಯಾಗಿದೆ ಮದ್ದು ಗುಂಡುಗಳು, ಬಂದೂಕ, ವೈರ್‌ಲೆಸ್ ಟ್ರಾನ್ಸ್‌ಮಿಟರ್, ಚಾಕುಗಳು ಮೊದಲಾದ ಇತರ ಶಸ್ತ್ರಾಸ್ತ್ರಗಳನ್ನು ಪೊಲೀಸರು ಕಂಡುಹಿಡಿದ್ದಾರೆ ಮಸೀದಿಯ ಮೇಲ್ಭಾಗದಲ್ಲಿ ಸಂಶಯಕ್ಕೆ ಆಸ್ಪದವಾಗದಂತೆ ಪ್ರಾರ್ಥನಾಗೃಹವು ಕಂಡುಬರುತ್ತದೆ ಆದರೆ ನೆಲಭಾಗಕ್ಕೆ ಹೋಗಿ ವೀಕ್ಷಿಸಿದರೆ ಫೈರ್ ಪ್ರೂಫ್ ಇಟ್ಟಿಗೆಯಿಂದ ನಿರ್ಮಿತವಾಗಿ ಇಂಗಾಲಾಮ್ಲದಿಂದ ಕೂಡಿದ ಸಿಲಿಂಡರುಗಳನ್ನಿಟ್ಟ ಗ್ಯಾಸ್ ಪೈಪುಗಳಿಂದ ಕೂಡಿದ ಕೊಠಡಿಗಳು ಕಂಡುಬರುತ್ತವೆ. ಅವುಗಳಲ್ಲಿ ಬಸ್ ಮತ್ತು ಬಿಸ್ಕತ್ತುಗಳನ್ನು ತಯಾರಿಸಲಾಗುತ್ತಿದೆಯೆಂದು ಹೇಳಲಾಗುತ್ತಿದ್ದರೂ ಸಹ ತನಿಖೆ ನಡೆಸಿದ ನಂತರ ಅಲ್ಲಿ ಅವುಗಳ ತಯಾರಿ ನಡೆಯುತ್ತಿದೆಯಾದರೂ ಶಸ್ತ್ರಾಸ್ತ್ರಗಳ ತಯಾರಿ ವಿಶೇಷವಾಗಿ ಆಗುತ್ತಿದೆಯೆಂದು ತಿಳಿದು ಬಂದಿದೆ [illegible] [illegible] [illegible] ಬಾಗಿ ವರದಿಯಾಗಿದೆ

[illegible]

[illegible] by [illegible] [illegible] press [illegible] Mysore

ದಿವಾನರ ಅಧಿಕಾರಕ್ಕಿಂತ ಪ್ರಜೆಗಳ ಅಧಿಕಾರವೇ ಹೆಚ್ಚು

ಡಿ ವಿ ಗುಂಡಪ್ಪನವರ ಭಾಷಣ

ಕಳೆದ ನಾಲ್ಕನೇ ತಾರೀಖು ಬೆಂಗಳೂರಿನ ಸಾಹಿತ್ಯ ಮತ್ತು ಗಾಂಧಿ ಸೇವಾ ಸಮಿತಿಯ ಆಶ್ರಯದಲ್ಲಿ ನಡೆದ ಮಹಾತ್ಮರ ಜಯಂತ್ಯುತ್ಸವದ ಅಧ್ಯಕ್ಷತೆ ವಹಿಸಿದ್ದ ಶ್ರೀ ಡಿ ವಿ ಗುಂಡಪ್ಪನವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ:—

ನಮ್ಮ ಸಂಸ್ಥಾನಕ್ಕೆ ಜವಾಬ್ದಾರಿ ಸರ್ಕಾರವನ್ನು ಕೊಡುವುದಾಗಿ ಮಹಾರಾಜರವರು ಹೇಳಿರುವುದು ಅಭಿನಂದನೀಯವಾದ ವಿಷಯ ಅದರಲ್ಲಿರುವ ಸಣ್ಣ ಸಣ್ಣ ತೊಡಕುಗಳು ಬಗೆಹರಿಯಬಲ್ಲುವೆಂದು ಭಾವಿಸುತ್ತೇನೆ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗುವುದು ಖಂಡಿತ. ದಿವಾನರ ಅಧಿಕಾರಕ್ಕಿಂತ ಯಾವಾಗಲೂ ಪ್ರಜೆಗಳ ಅಧಿಕಾರವೇ ಹೆಚ್ಚು. ದಿವಾನರಾಗಲೀ ಅಥವಾ ಪ್ರಧಾನಿಯಾಗಲೀ ಶಾಸನ ಸಭೆಯ ಚುನಾಯಿತ ಸದಸ್ಯರ ನಂಬಿಕೆ ಮತ್ತು ವಿಶ್ವಾಸಕ್ಕೆ ಪಾತ್ರರಾಗಿರಬೇಕು. ಶಾಸನ ಸಭೆಯ ನಂಬಿಕೆ ಪಡೆದಿರುವ ಮತ್ತು ಪ್ರಜಾಭಿಪ್ರಾಯಕ್ಕೆ ಬೆಲೆ ಕೊಡುವ ಮಂತ್ರಿಮಂಡಲದಿಂದೊಡಗೂಡಿದ ಪ್ರಜಾ ಸತ್ತಾತ್ಮಕ ಸರ್ಕಾರವನ್ನು ರಚಿಸುವುದು ಮಹಾರಾಜರ ಕರ್ತವ್ಯ-ವೆಂಬುದಾಗಿ ಶ್ರೀ ಡಿ ವಿ ಗುಂಡಪ್ಪನವರು ನುಡಿದಿರುವರು.

ಪಂಜಾಬಿನಿಂದ ಕಾಶ್ಮೀರದಲ್ಲಿ ನಿರಾಶ್ರಿತರು

ಲಕ್ಷಾಂತರ ಮಂದಿ ಜನರಿಂದ ಕೂಡಿ ೫೦ ಮೈಲಿ ಉದ್ದವಿರುವ ನಿರಾಶ್ರಿತರ ಪ್ರವಾಹವು ಕಾಶ್ಮೀರದಲ್ಲಿ ಪಶ್ಚಿಮ ಪಂಜಾಬಿನಿಂದ ಭಾರತಾಭಿಮುಖವಾಗಿ ಹೊರಟಿದೆಯೆಂದು ವರದಿಯಾಗಿದೆ

ಭಾರತಕ್ಕೆ ಫ್ರೆಂಚರಿಗೆ ಸೇರಿದ್ದ ಪ್ರದೇಶ

೧೬೭೪ ರಿಂದ ಫ್ರೆಂಚರ ಸ್ವಾಧೀನದಲ್ಲಿದ್ದ ಮಚಲೀಪಟ್ಟಣದ ಸಮೀಪದಲ್ಲಿರುವ ಹಲವು ಪ್ರದೇಶಗಳನ್ನು ಮೊನ್ನೆ ಭಾರತ ಸರ್ಕಾರವು ತನ್ನ ಸ್ವಾಧೀನಕ್ಕೆ ಪಡೆದಿದೆಯೆಂದು ವರದಿಯಾಗಿದೆ.

ಮಿತ ಸಂತಾನ

ಸ್ವಭಾವಿಕ ಮತ್ತು ಶಾಸ್ತ್ರೀಯ ಸಂತಾನ ನಿಮ್ಮ ಹಿತವಾಗಿಟ್ಟುಕೊಳ್ಳುವುದು

ಸಲಹೆ: ಡಾ|| ಟಿ ಎಸ್. ಟಿ ಆಚಾರ್ಯ

L. H M. S, L. A M. S

142-ಕಾಲೇಜ್ ರೋಡ್, ಮೈಸೂರು

COTTON GENTS' SOCKS

(Superfine & Durable)

Available in

Assorted colours

and standard sizes

—. Apply to :—

The National Enterprises

448 Victory Road Mysore

ಸಹಕಾರ ಶಿಕ್ಷಣ ಸಮಿತಿ

ಮೈಸೂರು ೯

ಮೇಲ್ಕಂಡ ಸಮಿತಿಯ ಆಶ್ರಯದಲ್ಲಿ ತಾ|| ೧೩-೧೦-೪೭ ನೇ ಭಾನುವಾರ ಸಂಜೆ ೬ ಗಂಟೆಗೆ ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಸಭಾಂಗಣದಲ್ಲಿ ಶ್ರೀ|| ವೈ ಶ್ರೀನಿವಾಸಯ್ಯನವರು "ಸಹಕಾರ ಅಭಿವೃದ್ಧಿಗೆ ಇರುವ ಪ್ರತಿಬಂಧಕಗಳು ಮತ್ತು ಅವುಗಳಿಗೆ ಸೂಕ್ತವಾದ ಪರಿಹಾರಗಳು" ಎಂಬ ವಿಷಯದಲ್ಲಿ ಉಪನ್ಯಾಸ ಮಾಡುವರು ಸರ್ವರಿಗೂ ಆಹ್ವಾನವುಂಟು.

ಗಣಪತಿ ಮಂಗಳಾರತಿ

ಜಗನ್ಮೋಹನ ಬಂಗ್ಲೆ ರಸ್ತೆಯಲ್ಲಿರುವ ಶ್ರೀನಿವಾಸ ಟೈಲರಿಂಗ್ ಹಾಲ್ ಮಾಲೀಕರಾದ ಶ್ರೀ ವೆಂಕಟರಾಮಯ್ಯನವರು ನೆನ್ನೆ ಶ್ರೀ ಗಣಪತಿ ಮಂಗಳಾರತಿ ನಡೆಸಿ ಆಹ್ವಾನಿತರಿಗೆ ಪ್ರಸಾದ ವಿನಿಯೋಗ ಮಾಡಿದರು.

ಹಿಂದೀ ತರಗತಿಗಳು

ಅನಿರೀಕ್ಷಿತ ಕಾಲದವರೆಗೆ ನಿಲ್ಲಿಸಲಾಗಿದ್ದ ಕಾಂಗ್ರೆಸ್ ಕಛೇರಿಯ ಹಿಂದೀ ತರಗತಿಗಳನ್ನು ಕಳೆದ ಸೋಮವಾರದಿಂದ ತೆರೆಯಲಾಗಿದೆ ಹಿಂದಿನಂತೆಯೇ ವಿದ್ಯಾರ್ಥಿಗಳ ಪ್ರೋತ್ಸಾಹಿಸಬೇಕಾಗಿ ಮುಖ್ಯೋಪಾಧ್ಯಾಯರು ಪ್ರಾರ್ಥಿಸಿಕೊಂಡಿದ್ದಾರೆ. (ಕಾಲ.—೬ ರಿಂದ ೭ ರ ವರೆಗೆ)

ನಿಧನ

ರಾಜಧಾನಿಯ ದೇವಾಂಗ ಕೋಮಿನ ಪ್ರಮುಖರೂ, ಉದಾರಿಗಳೂ ಆದ ಸಾಹುಕಾರ್ ಲಾಲ್‌ದೊಡ್ಡ ನಾಗಪ್ಪನವರು ಮೊನ್ನೆ ಪ್ರಾತಃಕಾಲ ದಿವಂಗತರಾದರೆಂಬುದನ್ನು ತಿಳಿಸಲು ಬಹಳ ವಿಷಾದವಾಗುತ್ತದೆ.

WOODLANDS

Morning shows from 10-10-47 for 4 days daily at 10-30 a m

Till we Meet Again

—Starring :—

Ray Millang, Barbara Britton

ಹೊಸ ನಾಟಕ ! ಹೊಸ ನಾಟಕ !!

ಹಾಲಸಿದ್ದೇಶ್ವರ ನಾಟಕ ಮಂಡಳಿ

ಹಲಗೇರಿ ಇವರು

ಮೈಸೂರು ಶಿವರಾಂಪೇಟೆ ರತ್ನಾವಳೀ

ಥಿಯೇಟರಿನಲ್ಲಿ

ತಾ|| 11-10-47 ನೇ ಶನಿವಾರ ರಾತ್ರಿ ೧೦-೩೦ ಕ್ಕೆ ಮತ್ತು 12-10-47 ಭಾನುವಾರ ಸಂಜೆ ೬-೩೦ ಕ್ಕೆ

ಅರ್ಧಾಂಗಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಕೆ ಕೆ ಶೆಟ್ಟಪ್ಪ, ಪ್ರೊಪ್ರೈಟರ್

[illegible]

ಮಹಿಳಾ ಪಿಕೆಟರುಗಳ ಬಿಡುಗಡೆ

ಮೈಸೂರು

ನೆನ್ನೆ ದಿನ ರಾಜಧಾನಿಯ [illegible] ಟುಗಳ ಬಳಿ ಪಿಕೆಟ್ ಮಾಡುತ್ತಿದ್ದ [illegible] ಮಂದಿ ಮಹಿಳೆಯರನ್ನೂ ದಸ್ತಗಿರಿ ಮಾ[illegible] ೪ ಜನ ವಿದ್ಯಾರ್ಥಿಗಳನ್ನೂ ಸಂಜೆಯ [illegible] ಗೂ ಪೊಲೀಸ್ ಸ್ಟೇಷನ್ನಿನಲ್ಲಿ ಇಟ್ಟಿದ್ದು ನಂತರ ಬಿಟ್ಟುಬಿಟ್ಟರು.

ಕಮ್ಯೂನಿಸ್ಟ್ ಪಾರ್ಟಿ ಸಭೆ

ಮಹಾರಾಜರ ಈ ದಿನ ಘೋ[illegible] ಯಿಂದಾಗಿ ಮೈಸೂರಿನ ಜನತೆಯ ಕೋ[illegible] ಗಳಾವುವೂ ಈಡೇರುವುದಿಲ್ಲವಾದ್ದ[illegible] ಕಾಂಗ್ರೆಸ್ಸು ಹೂಡಿರುವ ಸತ್ಯಾಗ್ರಹವ[illegible] ಮೈಸೂರು ಕಾಂಗ್ರೆಸ್ಸಿನ ನಾಲ್ಕು ಕೋ[illegible] ಳೂ ಈಡೇರುವವರೆಗೆ ಮುಂದುವರೆ[illegible] ಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿ[illegible] ಯನ್ನು ಒತ್ತಾಯಪೂರ್ವಕವಾಗಿ ಪ್ರಾ[illegible] ಸುವ ನಿರ್ಣಯವು ಕಮ್ಯೂನಿಸ್ಟ್ ಪ[illegible] ಮೈಸೂರು ಸಮಿತಿಯ ಸಭೆಯಲ್ಲಿ [illegible] ಕೃತವಾಯಿತು. ಸದರಿ ನಿರ್ಣಯವ[illegible] ಅಂತಿಯ ಮೂಲಕ ಕಾಂಗ್ರೆಸ್ ಅಧ್ಯಕ್ಷ[illegible] ಕಳುಹಿಸಲಾಗಿದೆ.

ಕಾಂಗ್ರೆಸ್ ಸಂಸ್ಥೆಗೆ ಮುಸ್ಲಿಮರು ಸೇರಬೇಕು

ದೇಶದಲ್ಲಿ ನಿಜವಾದ ಪ್ರಜಾಪ್ರಭುತ್ವ[illegible] ತತ್ವದ ಮೇಲೆ ರಾಷ್ಟ್ರೀಯ ಸರ್ಕಾರ[illegible] ನ್ನು ಸ್ಥಾಪಿಸಲು ಕಾಂಗ್ರೆಸ್ ಸಂಸ್ಥೆಯಿಂ[illegible] ಮಾತ್ರ ಸಾಧ್ಯ ಇದಕ್ಕಾಗಿ ಮುಸ್ಲಿ[illegible] ರು ಹೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್ಸಿಗೆ [illegible] ರಬೇಕು-ಎಂಬ [illegible] ೯ ಮಂದಿ ಮುಸ್ಲಿಂ ಪ್ರಮುಖರು [illegible] ಸಿದ್ದಾರೆ

ಹೈದರಾಬಾದಿಗೆ ಭಾರತದ[illegible] ನಿಯೋಗ ಇಲ್ಲ

ನಿಜಾಮರೊಡನೆ ಭವಿಷ್ಯ ರಾಜ್ಯಾಂಗ[illegible] ಬಗ್ಗೆ ಸಮಾಲೋಚನೆ ನಡೆಸಲು [illegible] ಶ್ರೀ ವಿ. ಪಿ ಮೆನನ್ನರ ನಾಯಕತ್ವದ[illegible] ಹೈದರಾಬಾದಿಗೆ ಹೋಗಬೇಕಾಗಿದ್ದ [illegible] ಯೋಗವು ತೆರಳುವುದಿಲ್ಲವೆಂದೂ, [illegible] ರಾಬಾದಿನ ಪ್ರಧಾನಿ ಛತ್ತಾರಿ ನವಾಬ[illegible] ದಿಹಲಿಗೆ ಸದ್ಯದಲ್ಲೇ ತಮ್ಮ ನಿಯೋಗದ[illegible] ಡನೆ ತೆರಳಲಿರುವರೆಂದೂ ವರದಿಯಾಗಿ[illegible]

ರಾಜಕಮಲ್

ತಾ|| 4-10-47 ರಿಂದ

ಅಮೋಘ ಪ್ರಾರಂಭ

ಮಹಾಕವಿ ಕಾಳಿದಾಸ

(ಹಿಂದಿ)

—: ಭೂಮಿಕೆ :—

ಮಧು ಸೆಹ್ಗಲ್, ಸ್ನೇಹ ಪ್ರಭಾ, ವನಮಾಲಾ, ಮತ್ತು ಉಲ್ಹಾಸ್

Morning shows for 4 days from 10-10-47 daily at 10.30 a m.

It's a pleasure

(In Technicolor)

—: Starring :—

Sonji Henie, Michael O'hue

ಫೋನ್ ನಂ. 508 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೧೦-೧೦-೪೭ [ಸಂಚಿಕೆ ೪೪

ತಾತ್ಕಾಲಿಕ ಸರ್ಕಾರಕ್ಕೆ ರೆಡ್ಡಿಯವರ ಒತ್ತಾಯ

ದಿವಾನ್-ರೆಡ್ಡಿಯವರ ಭೇಟಿ

ಸ್ವಂ ಸು ಪ್ರೋ॥] ಬೆಂಗಳೂರು ೧೦

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಅಧ್ಯಕ್ಷರೂ ಸತ್ಯಾಗ್ರಹದ ಪ್ರಥಮ ಸರ್ವಾಧಿಕಾರಿಗಳೂ ಆದ ಶ್ರೀ ಕೆ ಚೆಂಗಲರಾಯರೆಡ್ಡಿಯವರು ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರರಾಯರೊಡನೆ ಸಂಸ್ಥಾನದ ದಿವಾನರಾದ ಸರ್. ಆರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ನಿನ್ನೆ ಸಂಜೆ ಕಾರ್ಲ್‌ಟನ್ ಭವನದಲ್ಲಿ ಭೇಟಿ ಮಾಡಿ ಮಾತುಕತೆ ನಡಸಿದರು. ಸಂಭಾಷಣೆ ಸಂಜೆ ೫-೩೦ ರಿಂದ ೭-೩೦ರ ವರೆಗೆ ೨ ಘಂಟೆಗಳ ಕಾಲ ಅವಿಚ್ಛಿನ್ನವಾಗಿ ನಡೆಯಿತು. ಶ್ರೀ ರೆಡ್ಡಿಯವರು ಸಮಾಲೋಚನೆ ನಡೆಸಿ ಹೊರಗೆ ಬಂದಾಗ ದಿವಾನರ ಭವನದ ಹೊರಗಡೆ ಇದ್ದ ಪತ್ರಿಕಾ ಪ್ರತಿನಿಧಿಗಳು ಮಾತುಕತೆಗಳ ವಿವರಗಳನ್ನು ಕುರಿತು ಪ್ರಶ್ನಿಸಿದರು.

ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರೀ ಸರ್ಕಾರದ ಸ್ಥಾಪನೆಯಾಗಬೇಕು, ಜವಾಬ್ದಾರೀ ಸರ್ಕಾರದ ಶಾಸನಗಳನ್ನೂ ರೂಪಿಸಲು ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾ ಸಭೆಯು ಸೇರಬೇಕಾಗಿದೆ, ಅದಕ್ಕೆ ಅನುಕೂಲಿಸುವಂತೆ ಈಗಿರುವ ಮಂತ್ರಿಮಂಡಲ ರದ್ದಾಗಬೇಕು, ಜವಾಬ್ದಾರೀ ಸರ್ಕಾರದ ಸ್ಥಾಪನೆಯಾಗಿ ಅದು ಆಡಳಿತ ಸೂತ್ರವನ್ನು ವಹಿಸುವವರೆಗೆ ಪ್ರಜಾ ವಿಶ್ವಾಸ ಪಡೆದ ಶಾಸನ ಸಭೆಗಳಿಂದ ಆರಿಸಲ್ಪಟ್ಟ ತಾತ್ಕಾಲಿಕ ಮಂತ್ರಿಮಂಡಲದ ರಚನೆಯಾಗಬೇಕು-ಎಂಬ ಕಾಂಗ್ರೆಸ್ಸಿನ ಬೇಡಿಕೆಗಳನ್ನೇ ಮತ್ತೆ ಪುನಃ ದಿವಾನರಿಗೆ ತಾವು ಒತ್ತಿ ಹೇಳುವ ಸಲುವಾಗಿ ಹೋಗಿದ್ದುದಾಗಿಯೂ ಮತ್ತೆ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಅವುಗಳನ್ನು ಪರಿಶೀಲಿಸುವುದೆಂದೂ, ತಾವು ಈ ದಿನ ಒಂದು ಹೇಳಿಕೆಯನ್ನು ಕೊಡುವುದಾಗಿಯೂ ರೆಡ್ಡಿಯವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಸತ್ಯಾಗ್ರಹಿಗಳಿಗೆ ಶಿಕ್ಷೆ

ಮೈಸೂರು ೧೦

ಮೆರವಣಿಗೆ ಹೋಗುತ್ತಿದ್ದರೆಂಬ ಆಪಾದನೆಯ ಮೇಲೆ ಕೊಟ್ಟಿಯ ಶ್ರೀಗಳಾದ ಆರ್ ಕಾರ್ಲೇಕರ್, ಎ. ಜಿ. ಚಿನ್ನಪ್ಪ, ಎಸ್. ನೀಲಕಂಠ, ತಿರುಮಾಂಕರೂರಿನ ಕೆ ದೇವಿಡ್ ಮುಟಾರ್ ಎ ದಾಮೋದರ ಮತ್ತು ಎ. ಎಂ ಕರಿಷ್ಯ ಇವರುಗಳನ್ನು ನಗರದ ದ್ವಿತೀಯ ನ್ಯಾಯಾಧೀಶರು ೬ ತಿಂಗಳ ಸಾದಾ ಸಜಾ ವಿಧಿಸಿರುತ್ತಾರೆ.

ಕಾಂಗ್ರೆಸ್ ಕೆಲಸಗಾರರ ಸಭೆ

ರಾಜಧಾನಿಯ ಕಾಂಗ್ರೆಸ್ ಕೆಲಸಗಾರರು ನಿನ್ನೆ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ಸೇರಿದ್ದರು. ಶ್ರೀಮತಿ ಎಂ ಆರ್ ... ಅವರು ಅಧ್ಯಕ್ಷತೆ ವಹಿಸಿದ್ದರು. ... ಸ್ಸಿನ ಸೂಚನೆ ಸಾಗುವವರೆಗೆ ... ಮುಂದುವರಿಸಬೇಕು, ೧೧ ರ ಶನಿವಾರ ಹಿಂದೂ ಶಾಸ್ತ್ರ ರೀತ್ಯಾ ಗಾಂಧಿಯವರ ೭೯ ನೆಯ ಜನ್ಮದಿನವಾಗುವುದರಿಂದ ಅಂದು ಪೂಜ್ಯರವರ ಜಯಂತಿಯನ್ನು ಪತ್ಯೇಕ ... ಆಚರಿಸಬೇಕು-ಎಂಬ ನಿರ್ಣಯ ... ಸಭೆ ಅಂಗೀಕರಿಸಿತು.

ಕೋರ್ಟಿನ ಬಳಿ ಪಿಕೆಟಿಂಗ್

ಮೈಸೂರು ೧೦

ಈ ದಿನವೂ ಲಾ ಕೋರ್ಟುಗಳ ಬಳಿ ಪಿಕೆಟಿಂಗ್ ನಡೆದು ಶ್ರೀಮತಿ ಪ್ರಫುಲ್ಲ ಕೃಷ್ಣ ಯಂಗಾರ್, ಎಸ್ ಎನ್. ನರಸಮ್ಮ, ಪದ್ಮ, ಸತ್ಯಭಾಮಾದೇವಿ ಮೊದಲಾದ ೩೬ ಮಹಿಳೆಯರನ್ನೂ ಮತ್ತು ೩೪ ಜನ ವಿದ್ಯಾರ್ಥಿಗಳೂ ಸೇರಿ ಒಟ್ಟು ೭೦ ಜನರನ್ನು ಪೋಲೀಸರು ಬಂಧಿಸಿದ್ದಾರೆ.

ಪ್ರದೋಷ ಸಂಗೀತ

ರಾಜಧಾನಿಯ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಾಯಂಕಾಲ ೬॥ ಗಂಟೆಗೆ ಶ್ರೀಮತಿ ಶ್ಯಾಮಲಮ್ಮನವರಿಂದ ಸೋಲೋ ಪಿಟೀಲು ವಾದನವೂ ವಿದ್ವಾನ್ ವಿ. ವಿ. ರಂಗನಾಥನವರ ಮೃದಂಗದೊಡನೆ ನಡೆಯುವುದು.

ಜಿಲ್ಲಾ ಬೋರ್ಡು ಸಭೆ

ನಾಳೆ ನಡೆಯಬೇಕಾಗಿದ್ದ ಜಿಲ್ಲಾ ಬೋರ್ಡ್ ಅಧಿವೇಶನವನ್ನು ಅನಿರ್ದಿಷ್ಟಕಾಲದವರೆಗೆ ಮುಂದುವರಿಸಲಾಗಿದೆಯೆಂದು ಉಪಾಧ್ಯಕ್ಷರಾದ ಶ್ರೀ ಟಿ ಪಿ ಬೋರಯ್ಯನವರು ತಿಳಿಸಿರುತ್ತಾರೆ.

ಪ್ರಾರಂಭೋತ್ಸವ

ನಾಳೆ ಸಂಜೆ ೬-೩೦ ಗಂಟೆಗೆ ಶಿವರಾಮ ಪೇಟೆಯಲ್ಲಿರುವ ಹಿಂದೂ ಮಹಾಸಭಾ ಕಛೇರಿಯಲ್ಲಿ ಶ್ರೀ ಕೆ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಹಿಂದೀ ತರಗತಿಗಳ ಆರಂಭೋತ್ಸವವು ಜರುಗುವುದು. ಪಂಡಿತ ನಂಜುಂಡನಾಥ್‌ರವರು ಹಿಂದೀ ಭಾಷೆಯ ಆವಶ್ಯಕತೆ-ಎಂಬ ವಿಷಯವಾಗಿ ಭಾಷಣ ಮಾಡುವರು.

ನಿಧನ

ದಿವಂಗತ ಡಾ॥ ಆರ್. ಶ್ಯಾಮಶಾಸ್ತ್ರಿಗಳ ಸಹೋದರರಾದ ಶ್ರೀ ಬಿ ಗೋಪಾಲಯ್ಯನವರು ಮೊನ್ನೆ ತಮ್ಮ ೭೬ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಅರಣ್ಯ ಶಾಖೆಯ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ನಿವೃತ್ತರಾಗಿದ್ದರು.

ರಫಿ ಅಹಮ್ಮದ್ ಕಿದ್ವಾಯಿಯವರ ಸಹೋದರರ ಕೊಲೆ

ಭಾರತ ಸರ್ಕಾರದ ಕಮ್ಯೂನಿಕೇಷನ್ಸ್ ಸಚಿವರಾದ ಮಿ॥ ರಫಿ ಅಹಮ್ಮದ್ ಕಿದ್ವಾಯಿಯವರ ಸಹೋದರರಾದ ಮಿ॥ ರಫಿ ... ಮಹಮ್ಮದ್ ಕಿದ್ವಾಯಿಯವರನ್ನು ಮುಸ್ಸೂರಿಯ ... ಬಳಿ ಜನರಿಂದ ಇರಿದು ಕೊಲ್ಲಲಾಗಿದೆಯೆಂದು ವರದಿಯಾಗಿದೆ.

ಸತ್ಯಾಗ್ರಹಿಗಳ ತಂಡ ರಾಜಧಾನಿಗೆ ಹೊರಡುವುದು

ಟಿಲಿಗ್ರಾಂ ಹುಬ್ಬಳ್ಳಿ ೧೦

ಸತ್ಯಾಗ್ರಹಿಗಳು ತಮ್ಮ ನಾಯಕರ ಶೀ ... ಮಾನೆಸ್ವಾಮಿ ಕಾದಿರದೆ ಅವರು ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಹೇಳುವವರೆಗೂ ಹೋರಾಟವನ್ನು ಮುಂದುವರಿಸಬೇಕು.

ಕಾಲ್ನಡಿಗೆಯ ಸತ್ಯಾಗ್ರಹದ ಜೊತೆಗೆ ರೈಲಿನಲ್ಲಿ ಟಿಕೆಟು ಇಲ್ಲದೆ ಮೈಸೂರ್ ಚಲೋ-ಪ್ರಯಾಣವೂ ನಡೆದಿದ್ದು ಕಾರ್ಯಕ್ರಮವನ್ನು ೫, ೧೦, ೨೦ ಸತ್ಯಾಗ್ರಹಿಗಳ ... ಕೂಡಿದ ತಂಡಗಳು ಅನುಸರಿಸುತ್ತಿವೆ ... ನಡೆಯುತ್ತಿದೆ. ಸತ್ಯಾಗ್ರಹಿಗಳ ... ಅವಶ್ಯಕ ... ಸತ್ಯಾಗ್ರಹ ಸಮಿತಿಯ ... ಹೆಸರಿನಲ್ಲಿ ಹಲವು ತುಚ್ಛವಾದ ಹಸ್ತ ಪತ್ರಿಕೆಗಳು ಹಂಚಲ್ಪಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಜೀವಾವರ ಸತ್ಯಾಗ್ರಹ ಸಮಿತಿಯಿಂದ ಹೊರಡುವ ಪತ್ರಿಕೆಗಳನ್ನು ಮಾತ್ರ ... ನಂಬಬೇಕೆಂದು ಪ್ರಾರ್ಥಿಸುತ್ತದೆ, ಕ್ರಮವಾಗಿ ಸತ್ಯಾಗ್ರಹದ ಸಮಾಚಾರವನ್ನು ಪ್ರಕಟಿಸಬೇಕೆಂದು, ಪ್ರಾರ್ಥನಾಸ್ಪದ ವಿವರಗಳನ್ನು ಸಮಿತಿಯಿಂದ ಬರುವ ಸತ್ಯಾಗ್ರಹಿಗಳಿಂದ ಪಡೆಯಬಹುದು ಎಂಬುದಾಗಿ ಹುಬ್ಬಳ್ಳಿಯಲ್ಲಿರುವ ಮೈಸೂರು ಸತ್ಯಾಗ್ರಹ ಸಮಿತಿಯ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಯೂನಿಯನ್ ಸಾ ರವರ ವಿಚಾರಣೆ ಆರಂಭ

ಬರ್ಮಾದ ನಾಯಕರಾದ ಯು ಆಂಗ್ ಸಾನ್ ಮತ್ತು ಅವರ ೬ ಜನ ಸಹೋದ್ಯೋಗಿಗಳ ಕೊಲೆ ಸಂಬಂಧವಾಗಿ ದಸ್ತಗಿರಿಯಾಗಿದ್ದ ಬರ್ಮಾದ ಮಾಜಿ ಪ್ರಧಾನಿ ಯು ಸಾ ರವರ ವಿಚಾರಣೆಯು ಮೊನ್ನೆ ಪ್ರಾರಂಭವಾಯಿತೆಂದು ವರದಿಯಾಗಿದೆ. ಯೂ ಸಾ ರವರ ವಕೀಲರು ಇಂಗ್ಲೆಂಡಿನಿಂದ ಬರಬೇಕೆಂದೂ ಅವರಿಗಾಗಿ ವಿಚಾರಣೆಯನ್ನು ಬುಧವಾರಕ್ಕೆ ಮುಂದುವರಿಸಲಾಗಿದೆಯೆಂದು ಗೊತ್ತಾಗಿದೆ.

ಡಾ॥ ಪಾರ್ಥಸಾರಥಿಯವರ ಪಂಡಿತರ ದಸ್ತಗಿರಿ

ಮೈಸೂರು ೧೦

ಲಾ ಕೋರ್ಟಿನ ಬಳಿ ಪಿಕೆಟಿಂಗ್ ನಡೆಸುತ್ತಿದ್ದ ಡಾ॥ ಪಾರ್ಥಸಾರಥಿಯವರ ಪುತ್ರರನ್ನು ಈ ದಿನ ದಸ್ತಗಿರಿ ಮಾಡಲಾಗಿದೆ.

ವಕೀಲರ ದಸ್ತಗಿರಿ

ಸ್ವಂ ಸು ಪ್ರೋ॥] ಬೆಂಗಳೂರು ೧೦

ಈಗ ಕೆಲವು ದಿನಗಳ ಹಿಂದೆ ಪೋಲೀಸರು ಮುಷ್ಕರ ಹೂಡಿದ್ದ ಸಂದರ್ಭದಲ್ಲಿ ಅವರಿಗೆ ಆಕ್ಷೇಪಣೀಯವಾದ ಹೇಳಿಕೆಗಳನ್ನು ಬರೆದುಕೊಟ್ಟಿದ್ದರೆಂದು ಇಂಡಿಯನ್ ಪೀನಲ್ ಕೋಡ್ ೧೩೧ ನೇ ನಿಯಮದ ಪ್ರಕಾರ ಇಲ್ಲಿನ ವಕೀಲರಾದ ಶ್ರೀ ಶಿವಪ್ಪ ಮತ್ತು ಶ್ರೀ ನಾಭಿರಾಜಯ್ಯನವರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಬಾಂಬು ತುಳಿದು ಗಾಯ

ಮಲ್ಲೇಶ್ವರದಲ್ಲಿರುವ ಮ ... ಮಿಲ್ಲಿನ ರಸ್ತೆಯಲ್ಲಿ ಇಡಲಾಗಿದ್ದ ನಾಡು ಬಾಂಬೊಂದನ್ನು ನಿನ್ನೆ ರಾತ್ರಿ ೯ ಗಂಟೆಯ ವೇಳೆಯಲ್ಲಿ ಹೋಗುತ್ತಿದ್ದ ರೈಲ್ವೆ ಕೆಲಸಗಾರರಾದ ಮುನಿಸ್ವಾಮಿರೆಡ್ಡಿ-ಎಂಬುವರು ಆಕಸ್ಮಾತ್ ತುಳಿದುದರಿಂದ ಅದು ಸಿಡಿದು ಅವರಿಗೆ ವಿಪರೀತ ಗಾಯಗಳಾಗಿವೆ. ಅವರನ್ನು ಕೂಡಲೇ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ.

ರುದ್ರಯ್ಯನವರ ಮನೆ ಬಳಿ ಬಾಂಬು

ಚಾಮರಾಜಪೇಟೆಯ ೩ ನೇ ಕ್ರಾಸಿನಲ್ಲಿರುವ ಎಂ ಡಿ ರುದ್ರಯ್ಯನವರ ಮನೆ ಹಿಂಭಾಗದಲ್ಲಿ ನಿನ್ನೆ ರಾತ್ರಿ ಒಂದು ನಾಡು ಬಾಂಬು ಸಿಡಿಯಿತು. ಅಪಾಯ ಏನೂ ಆಗಿಲ್ಲ.

ನಿನ್ನೆ ಹೈಕೋರ್ಟಿನ ಬಳಿ ಪಿಕೆಟಿಂಗ್ ನಡೆದುದರಿಂದ ಈ ದಿನ ಅಲ್ಲಿ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ... ಬಳಿ ಪಿಕೆಟ್ ಮಾಡಲು ಹೊರಟ ೧೦ ಜನರನ್ನು ದಸ್ತಗಿರಿ ಮಾಡಲಾಗಿದೆ.

ಸಂಸ್ಥಾನಗಳ ಬಗ್ಗೆ ಪಾಕಿಸ್ತಾನ್ ಪ್ರಕಟಣೆ

ಜುನಾಘಡವನ್ನು, ಕಾಶ್ಮೀರವನ್ನು ... ಸಂಸ್ಥಾನಗಳೂ ಪಾಕಿಸ್ತಾನಕ್ಕೆ ಸೇರಲು ಅವಕಾಶ ಪಡೆದಿವೆ. ಅವುಗಳ ಈ ಹಕ್ಕನ್ನು ಮುರಿಯಲು ಯಾರು ಪ್ರಯತ್ನಿಸಿದರೂ ಸಹ ಪಾಕಿಸ್ತಾನವು ಅದನ್ನು ಸಹಿಸಲಾರದು-ಎಂಬುದಾಗಿ ಪಾಕಿಸ್ತಾನ್ ಸರ್ಕಾರವು ಪ್ರಕಟಪಡಿಸಿದೆ.

ಸಂಸ್ಥಾನಿಕರಿಗೆ ಸಂಬಂಧಿಸಿದವರಿಗೆ ಸಜಾ

ಮೈಸೂರು ೧೦

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದರೆಂದು ಶ್ರೀಮತಿ ಕರಿಸ್ವ ... ಗಾಂಧಿ ಮತ್ತು ಶ್ರೀಮತಿ ಭಾಗ್ಯವತಿಗೆ ... ಸಾದಾ ಸಜಾ ವಿ ... ಪಿಕೆಟಿಂಗ್ ನಡೆಸಲು ಹೊರಟಿದ್ದರಿಂದ ಒಂಟಿಕೊಪ್ಪಲಿನ ಚಿಕ್ಕರಂಗಮ್ಮ ಎಂಬುವರಿಗೆ ೨॥ ತಿಂಗಳು ಸಾದಾ ಸಜಾ ವಿಧಿಸಲಾಗಿದೆ.

ರೆಡ್ಡಿಯವರಿಂದ ತಾತ್ಕಾಲಿಕ ಸರ್ಕಾರಕ್ಕೆ ಒತ್ತಾಯವೇ ?

ಸ್ವಂ ಸು ಪ್ರೋ॥] ಬೆಂಗಳೂರು ೧೦

ದಿವಾನರ ಭೇಟಿಯ ನಂತರ ನಿನ್ನೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸೇರಿದ್ದು ಈ ದಿನ ೧೧ ಗಂಟೆಗೆ ಮತ್ತೆ ಸೇರಿದೆ. ಇದರಲ್ಲಿ ... ಮಾಲೋಚನೆ ನಡೆಯಿತು. ... ತಾತ್ಕಾಲಿಕ ಸರ್ಕಾರದ ಬಗ್ಗೆ ... ಗಳನ್ನು ರೂಪಿಸಲು ಈಗಿರುವ ಶಾಸನ ಸಭೆಗಳ ಜೊತೆ ಆರಿಸಲ್ಪಟ್ಟ ಸದಸ್ಯರ ... ರಾಜ್ಯಾಂಗ ಸಭೆಯ ... ವಿಷಯವಾಗಿ ಶ್ರೀ ಚೆಂಗಲರಾಯ ರೆಡ್ಡಿಯವರ ... ದಿವಾನರನ್ನು ಒತ್ತಾಯ ... ಪಡಿಸಲಾಗಿದೆ.

ರೈಲ್ವೆ ಕೆಲಸಗಾರರಿಗೆ ಮನವಿ

ಮೈಸೂರು ೧೦

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಮೈಸೂರು ನಗರದ ಶಾಖೆಯ ಅಧ್ಯಕ್ಷರಾದ ಶ್ರೀ ಬಿ ಎಸ್. ರಾಚಪ್ಪರಾಯರು ನೆನ್ನೆ ಸಂಜೆ ವರ್ಕ್‌ಷಾಪ್ ಆವರಣದಲ್ಲಿ ಕೆಲಸಗಾರರ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ, ಈ ದಿನದಿಂದ ಕೆಲಸಗಾರರೆಲ್ಲರೂ ಕೆಲಸಕ್ಕೆ ಹಿಂದಿರುಗಬೇಕೆಂದು ಮನವಿ ಮಾಡಿಕೊಂಡರು.

ರೈಲ್ವೆ ಸಂಘಕ್ಕೂ ಮತ್ತು ಸರ್ಕಾರದವರಿಗೂ ಇದೇ ೬ ನೇ ತಾ॥ ನಡೆದ ಸಂಧಾನವನ್ನು ವಿವರಿಸಿ, ಇದರಿಂದ ಕೆಲಸಗಾರರ ಬೇಡಿಕೆಗಳೆಲ್ಲಾ ಈಡೇರಿದಂತಾಗಿ, ಮುಷ್ಕರವು ಜಯಪ್ರದವಾಗಿರುವುದೆಂದು ತಿಳಿಸಿದರು. ಈ ಸಂದರ್ಭದಲ್ಲಿ, ಸತ್ಯಾಗ್ರಹವನ್ನು ಜಯಪ್ರದವಾಗಿ ಮಾಡಿದ ಕೆಲಸಗಾರರು ಮತ್ತು ಸ್ವಯಂಸೇವಕರೆಲ್ಲರಿಗೂ ತಮ್ಮ ಅಭಿನಂದನೆಯನ್ನು ಸಲ್ಲಿಸುವುದಲ್ಲದೆ, ಈ ಬಗ್ಗೆ ಸಹಾನುಭೂತಿಯಿಂದ ವರ್ತಿಸಿ, ಮುಷ್ಕರ ಕೊನೆಗಾಣಿಸಲು ಸಹಾಯಕರಾದ ಸರ್ಕಾರದ ಲೇಬರ್ ಕಮಿಷನರ್ ಮತ್ತು ಪೊಲೀಸ್ ಅಧಿಕಾರಿಗಳಾದ ಶ್ರೀ ಸೋಮಪ್ಪನವರಿಗೂ ಅಭಿನಂದನೆಯನ್ನು ಸಲ್ಲಿಸಿದರು.

ಹೆಚ್ಚಿನ ಪ್ರಮಾಣಕ್ಕೆ ಕೆಲಸಗಾರರೆಲ್ಲರೂ ತಮ್ಮ ಕೆಲಸದಲ್ಲಿ ಆಸಕ್ತಿ ತೋರಿಸಿ ರೈಲ್ವೆಯಲ್ಲಿ ಹೆಚ್ಚಿನ ದಕ್ಷತೆ ತೋರಿಸಿ, ಮೊದಲನೇ ದರ್ಜೆ ರೈಲ್ವೆಯನ್ನಾಗಿ ಮಾಡಲು ಶೀಘ್ರದಲ್ಲಿಯೇ ಪಡೆಯುವಂತೆ ಮಾಡಲು ಸಹಾಯಮಾಡಬೇಕೆಂದು ಕೋರಿದರು.

ಗ್ರಾಮಾಧಿಕಾರಿಗಳ ಸಭೆ

ಚನ್ನಪಟ್ಟಣ ೬

ಚನ್ನರಾಯಪಟ್ಟಣದ ಗ್ರಾಮಾಧಿಕಾರಿಗಳ ಸಭೆಯು ನೆನ್ನೆ ಶಿವರಾಮನ ಗುಡಿಯಲ್ಲಿ ಸೇರಿದ್ದಿತು. ಸಂಘದ ಉಪಾಧ್ಯಕ್ಷರಾದ ಶ್ರೀ ಬಿ ರಾಮಚಂದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕಿನ ಅನೇಕ ಗ್ರಾಮಾಧಿಕಾರಿಗಳು ಸಭೆಯಲ್ಲಿ ನೆರೆದಿದ್ದು ತಮ್ಮ ಕುಂದುಕೊರತೆಗಳ ಬಗ್ಗೆ ಚರ್ಚಿಸಿದರು. ನೆನ್ನೆ ಸಂಜೆ ಸಂಘದ ಆಶ್ರಯದಲ್ಲಿ ಶ್ರೀ ನಂಜುಂಡಯ್ಯನವರ ಭಾರತ ಹರಿಕಥೆ ನಡೆಯಿತು.

ಪಾಕಿಸ್ತಾನಕ್ಕೆ ಭಾವಲ್ಪುರ

ಪ್ರವೇಶ ಪತ್ರಕ್ಕೆ ರುಜು ಹಾಕಿ ಭಾವಲ್ಪುರ ಸಂಸ್ಥಾನವು ಪಾಕಿಸ್ತಾನ ಡೊಮಿನಿಯನ್ನಿಗೆ ಸೇರುವುದೆಂದು ಪಾಕಿಸ್ತಾನದ ವಿದೇಶಾಂಗ ಶಾಖೆಯು ಪ್ರಕಟಿಸುತ್ತದೆ

ಪ್ರತಿ ದಿನ ೩ ಆಟಗಳು

10-10-47 ನೇ

ಶುಕ್ರವಾರದಿಂದ

ನವಯುಗದವರ

ರಾಂನಗರ್

: ಪಾತ್ರ :—

ಗೀತಾನಿಜಾಮಿ, ಪ್ರೇಮ್,

ಕೆ. ಎನ್. ಸಿಂಗ್ ಮುಂತಾದವರು

ನಾಯಕರಿಗೆ ಒದಗಲು ಬಸ್ಸು

ಚಿಕ್ಕಮಗಳೂರಿನಿಂದ ಬಿಡುಗಡೆ ಹೊಂದಿ ಬೆಂಗಳೂರಿಗೆ ಹೋದ ಕಾಂಗ್ರೆಸ್ ನಾಯಕರಿಗೆ ಉತ್ತಮವಾದ ವಾಹನಗಳನ್ನು ಒದಗಿಸಲಿಲ್ಲವೆಂದು ತಿಳಿದು ಬಂದಿದೆ. ಅವರು ಪ್ರಯಾಣ ಮಾಡಿದ ಬಸ್ಸಿನ ವೇಗವು ಗಂಟೆಗೆ ೧೦-೧೨ ಮೈಲಿಗಳಿದ್ದವೆಂದೂ ಹಾಸನದಲ್ಲಿ ಊಟ ಮುಗಿಸಿ ಮುಂದೆ ಹೊರಟಾಗ ದಾರಿಯಲ್ಲಿ ಬಸ್ಸು ಕೆಟ್ಟುಹೋಗಿ ಬಹಳ ಕಾಲ ದಾರಿಯಲ್ಲೇ ನಿಂತುಹೋಗಿದ್ದಿತೆಂದೂ ಬೆಳಗ್ಗೆ ೮ ಗಂಟೆಗೆ ಹೋದ ಅವರು ರಾತ್ರಿ ೧ ಗಂಟೆಗೆ ಬೆಂಗಳೂರು ತಲುಪಿದರೆಂದೂ ತಿಳಿದುಬಂದಿದೆ

ಪ್ರವಾಹದಿಂದ ನಷ್ಟಪಟ್ಟವರಿಗೆ ಪರಿಹಾರ

ವಿಯಟ್‌ನಾಂ ರಿಪಬ್ಲಿಕ್ಕಿನ ಅಧ್ಯಕ್ಷರಾದ ಡಾ॥ ಹೋ ಚಿ ಮಿನ್‌ರವರು ಭಾರತದಲ್ಲಿ ಪ್ರವಾಹದಿಂದ ನಷ್ಟಗೊಂಡವರ ಪರಿಹಾರಾರ್ಥವಾಗಿ ಒಂದು ಮಿಲಿಯನ್ ಫ್ರಾಂಕುಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಈ ಅಂಶವನ್ನು ಡಾ॥ ಹೋ ಚಿ ಮಿನ್‌ರವರು ಪಂಡಿತ ನೆಹರೂರವರಿಗೆ ತಿಳಿಸಿ ವಿಯಟ್ನಾಂ ಸರ್ಕಾರ ಮತ್ತು ಪ್ರಜೆಗಳ ಪರವಾಗಿ ನಿರಾಶ್ರಿತರಿಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸಿದ್ದಾರೆ.

ಕಾಠೇವಾಡದ ರಾಜರುಗಳಿಗೆ ಜುನಾಘಡದ ರಾಜರ ಪ್ರಾರ್ಥನೆ

ಜುನಾಘಡ ಸಂಸ್ಥಾನವು ಪಾಕಿಸ್ತಾನ ಡೊಮಿನಿಯನ್ನಿಗೆ ಸೇರುವುದರಿಂದ ಉದ್ಭವಿಸಿರುವ ಬಿಕ್ಕಟ್ಟನ್ನು ಬಗೆಹರಿಸಲು ಅಲ್ಲಿನ ರಾಜರು ನವನಗರದ ಜಾಂ ಸಾಹೇಬರು ಮೊದಲಾದ ಕಾಠೇವಾಡದ ಇತರ ಸಂಸ್ಥಾನಾಧೀಶರುಗಳನ್ನು ನೆರವು ನೀಡಲು ಪ್ರಾರ್ಥಿಸಿರುವರೆಂದು ವರದಿಯಾಗಿದೆ.

ಬರೋಡೆಯಲ್ಲಿ ನಾಳೆ ಸಾರ್ವಜನಿಕ ರಜಾ

ಹಿಂದೂ ಪಂಚಾಂಗ ರೀತ್ಯಾ ನಾಳೆಯ ದಿನ ಮಹಾತ್ಮ ಗಾಂಧೀಜಿಯವರ ೭೯ನೆಯ ಜನ್ಮೋತ್ಸವವಾಗುವುದರಿಂದ ಬರೋಡಾ ಸಂಸ್ಥಾನದ ಎಲ್ಲ ಸರ್ಕಾರೀ ಶಾಖೆಗಳಿಗೂ ನಾಳೆ ಸಾರ್ವಜನಿಕ ರಜಾ ಕೊಡಲಾಗಿದೆಯೆಂದು ವರದಿಯಾಗಿದೆ.

OPERA TALKIES

PHANTOM

(Full Serial)

2nd Week, from 11-10-47

— with —

TOM TYLER

Morning Shows from 10-10-47 for 4 days daily at 10-30 a. m.

Home in Indiana

(Tech. Color)

—: With :—

Walter Brennan, Jeanne Crain, June Haver

Edited and published by ... at the Sadhvi press D. Subbaiah Road Mysore

ಗಂಟೆ ಬಾರಿಸುವ ವಿಚಿತ್ರ ಪಿಯಾನೋ

ಪ್ರತಿ ಗಂಟೆ, ಅರ್ಧ ಗಂಟೆಗಳಿಗೂ ಗಡಿಯಾರದಂತೆ ಇದ್ದಕ್ಕಿದ್ದಂತೆ ಗಂಟೆ ಬಾರಿಸುವ ವಿಚಿತ್ರ ಪಿಯಾನೋ ಒಂದು ಇಂಗ್ಲೆಂಡಿನಲ್ಲಿದೆ. ಆ ಊರಿನ ಒಬ್ಬರು ಅದನ್ನು ೩೦ ಶಿಲಿಂಗಿಗೆ ಕೊಂಡುಕೊಂಡಿರುವರೆಂದು ತಿಳಿದುಬಂದಿದೆ. ಅದನ್ನು ಅನೇಕ ಬಾರಿ ಬಿಚ್ಚಿ ನೋಡಿದರೂ ಸಹ ಅದು ಗಂಟೆ ಬಾರಿಸುವ ಕಾರಣವು ತಿಳಿದುಬಂದಿಲ್ಲ.

ಮೈಸೂರು ಸರ್ಕಾರಕ್ಕೆ ಮದ್ರಾಸ್ ಸರ್ಕಾರದ ಪತ್ರ?

ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಸಂಬಂಧವಾಗಿ ದಸ್ತಗಿರಿ ಮಾಡುವ ಸತ್ಯಾಗ್ರಹಿಗಳನ್ನು ಪೊಲೀಸರು ಮದರಾಸ್ ಪ್ರಾಂತದ ಗಡಿಯಲ್ಲಿ ಬಿಟ್ಟು ಬರುತ್ತಿರುವುದರಿಂದ ಆ ಪ್ರದೇಶಗಳ ಪಡಿತರದ ವ್ಯವಸ್ಥೆಯಲ್ಲಿ ಬಹಳ ಬಿಕ್ಕಟ್ಟು ಉಂಟಾಗಿದೆಯೆಂದೂ, ಈ ಬಗ್ಗೆ ಮದರಾಸ್ ಪ್ರಾಂತ ಸರ್ಕಾರವು ಮೈಸೂರು ಸರ್ಕಾರಕ್ಕೆ ಸದ್ಯದಲ್ಲೇ ಪತ್ರ ಬರೆಯುವುದೆಂದೂ ವರದಿಯಾಗಿದೆ

ಹೊಸ ನಾಟಕ ! ಹೊಸ ನಾಟಕ !!

ಹಾಲಸಿದ್ದೇಶ್ವರ ನಾಟಕ ಮಂಡಳಿ

ಕಲಗೇರಿ ಇವರು

ಮೈಸೂರು ಶಿವರಾಂಪೇಟೆ

ರತ್ನಾವಳೀ

ಥಿಯೇಟರಿನಲ್ಲಿ

ತಾ॥ 11-10-47 ನೇ ಶನಿವಾರ ರಾತ್ರಿ ೧೦-೩೦ ಕ್ಕೆ ಮತ್ತು 12-10-47 ಭಾನುವಾರ ಸಂಜೆ ೬-೩೦ ಕ್ಕೆ

ಅರ್ಧಾಂಗಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಕೆ ಸಿ ಚಟ್ಟೆಪ್ಪ, ಪ್ರೊಪ್ರೈಟರ್

ರಾಜಕಮಲ್

ತಾ॥ 4-10-47 ರಿಂದ

ಅಪೋಲೋ ಪ್ರಾರಂಭ

ಮಹಾಕವಿ ಕಾಳಿದಾಸ್

(ಹಿಂದಿ)

—: ಭೂಮಿಕೆ :—

ಮಹರಿ ಸನ್ಯಾಲ್, ಸ್ನೇಹಪ್ರಭಾ, ಸನಮಾಲ, ಮತ್ತು ಉಲ್ಹಾಸ್

Morning shows for 4 days from 10-10-47 daily at 10-30 a. m.

It's a pleasure

(In Technicolor)

—: Starring :—

Sonji Henie, Michael O'Shea

ನಾಯಕರುಗಳ ಹೇಳಿಕೆಗಳು

ಎಂ. ಎಲ್. ನಂಜರಾಜೇ ಅರಸ್

ಈಗಿನ ಬಿಕ್ಕಟ್ಟಿನ ಪರಿಸ್ಥಿತಿಗೆ ಶ್ರೀ ಮನ್ಮಹಾರಾಜರವರ ಸಲಹೆಗಾರರೇ ಜವಾಬ್ದಾರರು. ಹೊರಗಿನಿಂದ ಸಂಸ್ಥಾನಕ್ಕೆ ಬಂದು ಮೈಸೂರಿನ ಜನತೆಗಿಂತಲೂ ಹೆಚ್ಚಿನ ರಾಜಭಕ್ತಿಯು ತಮಗೆ ಇದೆಯೆಂದು ಹೇಳಿ ಪ್ರಜೆಗಳಿಗೂ ಮಹಾರಾಜರಿಗೂ ಇದ್ದ ಬಾಂಧವ್ಯವನ್ನು ದೂರಗೊಳಿಸಿದ ಜವಾಬ್ದಾರಿ ದಿವಾನರಾದ ಸರ್ ... ಕಾರಿಗೆ ಸೇರಿದ್ದು. ಇದು ತಪ್ಪಿ ... ಗಳಿಗೂ ಪ್ರಭುತ್ವದವರಿಗೂ ನಿಕಟ ಬಾಂಧವ್ಯವು ಬೆಳೆಯಲು ಬುದೇ ಕಾಂಗ್ರೆಸ್ಸಿನ ... ಯಾಗಿದೆ

ಕೆ. ಟಿ. ಭಾಷ್ಯಂರವರ ಹೇಳಿಕೆ

ಬಿಡುಗಡೆ ಹೊಂದಿ ಇಲ್ಲಿಗೆ ಆಗಮಿಸಿದ ಶ್ರೀ ಕೆ ಟಿ ಭಾಷ್ಯಂರವರನ್ನು ಸ್ವಾಗತಿಸಲು ನೆನ್ನೆ ಬೆಳಿಗ್ಗೆ ಅವರ ಮನೆಯ ಮುಂದೆ ಅನೇಕ ಜನರು ಸೇರಿದ್ದರು. ನಾವು ಇ... ರಿಗೆ ಅಗಾಧವಾದ ಹೋರಾಟವನ್ನು ನಡೆಸಿದ್ದೇವೆ. ಈಗ ಅದರ ಫಲವನ್ನು ಪಡೆಯಬೇಕಾಗಿದೆ-ಎಂದು ಶ್ರೀ ಭಾಷ್ಯಂರವರು ನುಡಿದಿರುವರು

ಟಿ ಸುಬ್ರಹ್ಮಣ್ಯಂ

ಕಳೆದ ೪ ನೇ ತಾರೀಖಿನಿಂದ ಇದುವರೆಗೆ ನಡೆದ ಚಳುವಳಿಯ ಸಂಬಂಧ ... ಯಾರೂ ಅವಹೇಳನ ಮಾಡಬಾರದು ... ಸಲ್ಲದ ದುಷ್ಕೃತ್ಯಗಳನ್ನೆಸಗಿದ ಎಲ್ಲ ... ಸರೂ ಒಂದಲ್ಲ ಒಂದು ದಿನ ನ್ಯಾಯದ ಮುಂದೆ ಬಂದು ನಿಲ್ಲಲೇಬೇಕು ... ಕ್ಷದ ಈ ಪ್ರಜಾ "ಕಾರರ ಸ್ವಾ... ಯುದ್ಧದಲ್ಲಿ ಆಹುತಿಯಾಗಿರುವವರನ್ನು ನಾವು ಜ್ಞಾಪಿಸಬೇಕು

ಶ್ರೀ ಬಂದೀಗೌಡ

ಈಗ ಜೇತಾದ್ಯಂತವೂ ನಡೆದಿರುವ ದುಷ್ಕೃತ್ಯಗಳೆಲ್ಲಾ ಸರ್ಕಾರದ ಆಡಳಿತವೇ ಮುಖ್ಯ ಕಾರಣ. ಈಗ ಇದನ್ನು ಬಿಟ್ಟು ದೇಶದಲ್ಲಿ ಶಾಂತಿ, ಸುಖ, ಸ... ಗಳು ನೆಲಸುವಂತೆ ಮಾಡುವುದು ರಾಜರ ಕೈಯಲ್ಲಿದೆ.

ಶ್ರೀ ಹುಸೇನ್ ಸಾಬ್

ಕಾಂಗ್ರೆಸ್ಸಿನ ಗುರಿಸಾಧನೆಗಾಗಿ ಮುಸಲ್ಮಾನರೂ, ಕಾರ್ಮಿಕರೂ ವಿದ್ಯಾರ್ಥಿಗಳೂ ಸಹ ಬೆಂಬಲವಿತ್ತಿದ್ದಾರೆ ಮು... ಪ್ರತ್ಯೇಕತೆಯ ಮನೋಭಾವವನ್ನು ... ಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರು ಕಾಂಗ್ರೆಸ್ಸಿನೊಡನೆ ಭುಜ ... ಹೋರಾಟವನ್ನು ನಡೆಸಬೇಕು

ಶ್ರೀ ರಾಜಶೇಖರ ಹಿರೇವ...

ಜಗತ್ತಿನಲ್ಲೇ ಜನತಾ ಶಕ್ತಿ... ಸುವ ಬೇರೊಂದು ಶಕ್ತಿ ಇಲ್ಲವೆಂ... ಸೂರು ಸರ್ಕಾರ ಮೊದಲೇ ಅರಿ... ನೇಕ ಪ್ರಾಣಗಳು ಉಳಿಯುತ್ತಿ...

WOODLANDS

Morning shows fr... 10-10-47 for 4 days at 10-30 a.m

Till we Meet Aga...

—: Starring :—

Ray Milland, Barbara Britt...

ಫೋನ್ ನಂ. 508 WEEKLY EDITION ಇಂದಿನ ಪತ್ರಿಕೆ 3 ಆಣೆ

ಸಂಪುಟ ೧೨] ಭಾನುವಾರ ೧೭-೧೦-೪೭ [ಸಂಚಿಕೆ ೧೪

ಕಾಂಗ್ರೆಸ್ಸಿನ ಬೇಡಿಕೆಗೆ ದಿವಾನರ ಸಮ್ಮತಿ

ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ಒಪ್ಪಂದವಾಯಿತು

[ಸ್ವಂ ಸು ಫೋ] ಬೆಂಗಳೂರು ೧೩

ನಿನ್ನೆ ಮಧ್ಯಾಹ್ನ ೩ ಗಂಟೆಯಿಂದ ೬ ಗಂಟೆಯ ವರೆಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯ ರೆಡ್ಡಿಯವರಿಗೂ, ಸಂಸ್ಥಾನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೂ ಭೇಟಿ ನಡೆಯಿತು. ತಾತ್ಕಾಲಿಕ ಸರ್ಕಾರದ ಮಂತ್ರಿಮಂಡಲ ರಚನಾ ಸಭೆಯ ಬಗ್ಗೆ ಚರ್ಚೆ ನಡೆದು ದಿವಾನರು ಕೆಲವು ಸೂಚನೆಗಳನ್ನಿತ್ತರು. ಶ್ರೀ ರೆಡ್ಡಿಯವರು ಮತ್ತೆ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಆ ಸಲಹೆಗಳನ್ನು ಮಂಡಿಸಿ ಪರಿಶೀಲನೆ ನಡೆಸಿದರು. ಮೂರನೆಯ ಬಾರಿ ೭ ಗಂಟೆಗೆ ದಿವಾನರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿ ೮ ಗಂಟೆಗೆ ಒಪ್ಪಂದ ಬಂದರು. ಅನಂತರ ಮತ್ತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ಕರೆದು ಶ್ರೀ ಚೆಂಗಲರಾಯ ರೆಡ್ಡಿಯವರು ಈ ಒಪ್ಪಂದವನ್ನು ಸದಸ್ಯರಿಗೆ ತಿಳಿಸಿದರು.

[illegible] ಗಿರಣಿ ಕೆಲಸಗಾರರ ಮುಷ್ಕರ ಬಹುಮತ ವರ್ಗದವರು ಕೊಡುತ್ತಿದ್ದ [illegible] ಒಂದು ತಿಂಗಳ ಬೋನಸ್ಸನ್ನು [illegible] ಕೆಲಸಗಾರರು ಕೆಲಸ ಮಾಡದೆ ಮುಷ್ಕರ ನಡೆಸಿದರು

ಸೂಚನೆ

ಮುಖಲಿಯ ಅಮಾವಾಸ್ಯೆ ಪ್ರಯುಕ್ತ ಪತ್ರಿಕೆಗೆ ನಾಳೆ ರಜಾ [illegible]

ವ್ಯವಸ್ಥಾಪಕ

ದಿವಾನ್-ರೆಡ್ಡಿ ಭೇಟಿ ಬಗ್ಗೆ ಪತ್ರಿಕಾ ಸ್ಪಷ್ಟನೆ

[ಸ್ವಂ.ಸು.ಫೋ] ಬೆಂಗಳೂರು ೧೩

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರವಾಗಿ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯರೆಡ್ಡಿಯವರಿಗೂ, ದಿವಾನರು ಸರ್ಕಾರದ ಪರವಾಗಿ ಮಹಾಸ್ವಾಮಿ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೂ ಕಳೆದ ಎರಡು ದಿನಗಳಿಂದ ನಡೆದ ಮಾತುಕತೆಗಳ ಪರಿಣಾಮವಾಗಿ ದೊಡ್ಡ ಮಂತ್ರಿಮಂಡಲದ ರಚನೆ ಮತ್ತು ಅದಕ್ಕೆ ಅನುಸರಿಸಬೇಕಾದ ಪದ್ಧತಿಗಳ ಬಗ್ಗೆ ಒಪ್ಪಂದವಾಗಿದೆ [illegible] ಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆ

ದಿವಾನರು ರಾಜಧಾನಿಗೆ

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಈ ದಿನ ಮಧ್ಯಾಹ್ನದ ವೇಳೆಗೆ ರಾಜಧಾನಿಗೆ ಆಗಮಿಸುವರು. ಸಂಜೆ ೬ ಗಂಟೆಯ ವೇಳೆಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ದಿವಾನರನ್ನು ಭೇಟಿ ಮಾಡುವರು.

[illegible] ರಾಜ್ಯಾಂಗ [illegible] ರಚನಾ ಸಭೆ [illegible] ನಿರ್ಮಿಸುವ [illegible] ಒಪ್ಪಂದವಾಗಿದೆ. [illegible] ಸಲಹೆಗಳು ಶ್ರೀಮನ್ಮಹಾರಾಜರ [illegible] ಗೆ ಅನುಮತಿಗೆ ಕಳುಹಿಸಲ್ಪಟ್ಟಿದೆ.

ರಾಜಧಾನಿಗೆ ಕಾರ್ಯಕಾರಿ ಸಮಿತಿ ಸದಸ್ಯರು

ಸ್ವಂ ಸು.ಫೋ] ಬೆಂಗಳೂರು ೧೩

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರು ಶ್ರೀ ಚೆಂಗಲರಾಯ ರೆಡ್ಡಿಯವರೊಡನೆ ಈ ದಿನ ಮಧ್ಯಾಹ್ನ ೧ ಗಂಟೆಗೆ ರಾಜಧಾನಿಗೆ ತೆರಳುವರು

ಮಹಾರಾಜರಿಗೆ ರೆಡ್ಡಿಯವರಿಂದ ಕಾಂ|| ಸದಸ್ಯರ ಸೂಚನೆ

ಸ್ವಂ ಸು.ಫೋ] ಬೆಂಗಳೂರು ೧೩

ಈ ದಿನ ಸಂಜೆ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಮಹಾರಾಜರವರನ್ನು ಭೇಟಿ ಮಾಡಿದಾಗ ಹೊಸ ಸರ್ಕಾರದ ಕಾಂಗ್ರೆಸ್ ಸಚಿವರುಗಳ ಹೆಸರುಗಳನ್ನು ಸೂಚಿಸುವರೆಂದು ಹೇಳಲಾಗಿದೆ

ನೂತನ ಮಂತ್ರಿಮಂಡಲ

ಸ್ವಂ ಸು.ಫೋ] ಬೆಂಗಳೂರು ೧೩

ತಾತ್ಕಾಲಿಕ ಸರ್ಕಾರವಿರುವ ವರೆಗೂ ದಿವಾನರ ಸ್ಥಾನವು ಇರುತ್ತದೆ. ಅವರ ಅಧಿಕಾರ ಮಿತಗೊಳಿಸಲ್ಪಟ್ಟಿರುತ್ತದೆ. ಮಂತ್ರಿಮಂಡಲಿಯಲ್ಲಿ ೧೦ ಮಂದಿ ಸಚಿವರಿರುತ್ತಾರೆ. ಆ ಪೈಕಿ ಕಾಂಗ್ರೆಸ್ ಸಂಸ್ಥೆಯಿಂದ ಐದು ಮಂದಿ ಆರಿಸಲ್ಪಡುವರು. ದಿವಾನರ ಜೊತೆಗೆ ಮಿಕ್ಕ ಸಚಿವರನ್ನು ಶ್ರೀಮನ್ಮಹಾರಾಜರವರು ಕಾಂಗ್ರೆಸ್ಸಿನೊಡನೆ ಪರ್ಯಾಲೋಚನೆ ನಡಿಸಿ ನೇಮಿಸುವರು. ಎಂದು ದಿವಾನರೊಡನೆ ಒಪ್ಪಂದವಾಗಿದೆ.

Edited printed and published by [illegible] Ragaraja[illegible] at the Sadhvi Press D. Subbaiah Road Mysore

[illegible] ಪದ್ಧತಿಯನ್ನು ಜಾರಿಗೆ ತಂದಿರುವುದು ತಪ್ಪು. ಇದು ವ್ಯಾಪಾರ ಮತ್ತು [illegible] ಧರ್ಮವಲ್ಲ. ಇದರಿಂದ ಪ್ರಜೆಗೆ ಅಹಾರಾಭಾವವಿದೆ. ಇದು ತಪ್ಪಿ ಪ್ರಜೆಗಳೆಲ್ಲರೂ ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಸುಗಮವಾಗಿ ಪಡೆಯುವಂತಾಗಬೇಕು ಎಂಬುದಾಗಿ ಮಹಾತ್ಮಾ ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಸಂಡೂರರು ರಾಜೀನಾಮೆ ಕೊಡುವರೇ?

[illegible] ಪದ್ಧತಿಯನ್ನು ತಮ್ಮ [illegible] ರದ್ದು ಮಾಡಿದ ಬಗ್ಗೆ ಅದಕ್ಕೆ [illegible] ಮತ್ತು ದೇವಸ್ಥಾನಗಳಿಗೆ ಸೇರಿದ [illegible] ಜಮೀನುಗಳಿಗೂ ಆ [illegible] ಅನ್ವಯವಾಗಬೇಕೆಂದು [illegible] ಹಲವು ಸದಸ್ಯರು ಹೇಳಿ [illegible] ಉಂಟಾಗಿರುವುದರಿಂದ ಶ್ರೀ ಓವಂಡೂರು ರಾಮಸ್ವಾಮಿ [illegible] ತಮ್ಮ ಸ್ಥಾನಕ್ಕೆ ರಾಜೀನಾಮೆ [illegible] ಹೇಳುತ್ತಿರುವರೆಂದು [illegible]

ತಲಚೇರಿಯಿಂದ ಸತ್ಯಾಗ್ರಹಿಗಳು

[illegible] ಆರಮನೆ ಸತ್ಯಾಗ್ರಹದಲ್ಲಿ [illegible] ಶ್ರೀ ಎಂ ಪಿ ನಾರಾಯಣ [illegible] ನಾಯಕತ್ವದಲ್ಲಿ [illegible] ನಿವೃತ್ತ ಸೈನಿಕರು ತಲಚೇರಿಯಿಂದ [illegible] ಹೊರಟಿರುವರೆಂದು ವರದಿ [illegible]

ಸತ್ಯಾಗ್ರಹವನ್ನು ಮುಂದುವರಿಸಬೇಕು

ಚೌಡಯ್ಯನವರ ಹೇಳಿಕೆ

ಮೈಸೂರು ೧೧

ರಾಜಧಾನಿಯ ಕಾಂಗ್ರೆಸ್ ಕೆಲಸಗಾರರೂ ಪೌರಸಭಾ ಸದಸ್ಯರೂ ಆದ ಶ್ರೀ ಚೌಡಯ್ಯನವರು ನಿನ್ನೆ ಒಂದು ಹೇಳಿಕೆಯನ್ನಿತ್ತು ಈ ರೀತಿ ತಿಳಿಸಿದ್ದಾರೆ:—

ಸಂಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗ ವವರೆಗೆ ಸತ್ಯಾಗ್ರಹವನ್ನು ಮುಂದುವರಿಸಬೇಕು. ಶ್ರೀ ಮನ್ಮಹಾರಾಜರವರು ಹೊರಡಿಸಿರುವ ಘೋಷಣೆಯು ತೃಪ್ತಿಕರವಾಗಿಲ್ಲ. ಸಂಪೂರ್ಣ ಜವಾಬ್ದಾರಿ ಸರ್ಕಾರವು ಮಾತ್ರ ನಮ್ಮನ್ನು ತೃಪ್ತಿಪಡಿಸಬಲ್ಲುದು. ಲಾಠಿ ಛಾರ್ಜ್, ಗೋಲಿಬಾರುಗಳಿಂದ ಆಡಳಿತ ನಡೆಸುತ್ತಿರುವ ಈಗಿನ ಬೇಜವಾಬ್ದಾರಿ ಸರ್ಕಾರವು ಹೋಗುವವರೆಗೂ ನಮ್ಮ ಹೋರಾಟವನ್ನು ನಡೆಸಲೇಬೇಕು. ಇದು ಸರ್ಕಾರದವರಿಗೂ ನಮಗೂ ಕೊನೆಯ ಹೋರಾಟವಾದ ಕಾರಣ ಮಹನೀಯರೂ, ಮಹಿಳೆಯರೂ ತಮ್ಮ ಪೂರ್ಣ ಬೆಂಬಲವನ್ನೂ ಈ ಹೋರಾಟದಲ್ಲಿ ನೀಡಬೇಕು.

ಸಿಕ್ಕರ ಬೇಡಿಕೆಗಳ ಬಗ್ಗೆ ಪಾಟಿಯಾಲ ಮಹಾರಾಜರು ಮಾಡಿದ್ದ ಮನವಿಗಳ ಬಗ್ಗೆ [illegible] ನಡೆಸಲು ಫರೀದ್‌ಕೋಟೆಯ ರಾಜರು ಬ್ರಿಟನ್ನಿಗೆ ತೆರಳುವರೆಂದು ವರದಿಯಾಗಿದೆ.

[illegible] ಮುಂಭಾಗದಲ್ಲಿ ಸೇರಿದ್ದ ಪ್ರದರ್ಶನಕಾರರೊಡನೆ ಅನೇಕ ವಕೀಲರ ಸಮೇತ ಮೆರವಣಿಗೆ ಹೊರಟರು.

ಮೆರವಣಿಗೆಯು ಕೋರ್ಟಿನಿಂದ ಹೊರಟು ಐದು ಲಾಂದ್ರಕಂಬದ ಮಾರ್ಗವಾಗಿ ಮೈಸೂರು ಬ್ಯಾಂಕ್ ರೋಡಿನ ಮುಖಾಂತರ [illegible] ಕೋರ್ಟಿನ ಕಾಂಪೌಂಡಿನೊಳಕ್ಕೆ ಹೋಗಿ ಬೆಳಗ್ಗೆ ಹಾರಿಸಲಾಗಿದ್ದ ರಾಷ್ಟ್ರಧ್ವಜದ ಕಟ್ಟೆಯಲ್ಲಿ ಸಭೆ ಸೇರಿ ಶ್ರೀ [illegible] ಸ್ವಾಮಿ ಅಯ್ಯಂಗಾರ್ ಮತ್ತು ಶ್ರೀಮತಿ ಎಂ. ಎಲ್. ಸೀತಮ್ಮನವರುಗಳು ಭಾಷಣ ಮಾಡಿದರು. ಅನಂತರ ವಂದೇ ಮಾತರಂ ಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಐದುಲಾಂದ್ರದ ಕಂಬದ ಬಳಿ ಮೆರವಣಿಗೆಯವರು ಒಂದು ನಿಮಿಷ ಮೌನವಾಗಿ ನಿಂತು ಹುತಾತ್ಮರಿಗೆ ಗೌರವವನ್ನು ಸಲ್ಲಿಸಿದರು.

ಸರಸ್ವತೀ ಪೂಜೆ

ಕನ್ನೇಗೌಡನಕೊಪ್ಪಲಿನ ಬಾಲಕ ಸಂಘದವರು ಈ ದಿನ ಬೆಳಗ್ಗೆ ಸರಸ್ವತೀ ಪೂಜೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಭಾರತ ರಾಷ್ಟ್ರಧ್ವಜಾರೋಹಣ ಧ್ವಜವಂದನೆಗಳು ನಡೆದುವು. ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ಎಸ್. ನಾರಾಯಣ ಸ್ವಾಮಿಯವರು ಭಾಷಣಮಾಡಿ ಪ್ರತಿ ಶುಕ್ರವಾರವೂ ಈ ಪೂಜೆಯನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದರು.

ಗ್ರಾಮಸ್ಥರಿಗೆ ಪಡಿತರವಿಲ್ಲ

ಮೈಸೂರು ಕಾಂಗ್ರೆಸ್ಸು ಹೂಡಿರುವ ಸತ್ಯಾಗ್ರಹಕ್ಕೆ ನೆರವು ನೀಡಿದರೆಂಬ ಕಾರಣದಿಂದ [illegible] ಜಿಲ್ಲೆಯ [illegible] ಗ್ರಾಮದ ಮತ್ತು ಅದರ ಸುತ್ತಮುತ್ತಲಿನ ಜನರಿಗೆ ಆಹಾರ ಪಡಿತರವನ್ನೊದಗಿಸಲಿಲ್ಲವೆಂದು ವರದಿಯಾಗಿದೆ.

[illegible] ತ್ತಿದ್ದರು. ಶ್ರೀ ರೆಡ್ಡಿಯವರು ಬಾಲ್ಕನಿಯ ಮೇಲೆ ನಿಂತು ಪ್ರಜೆಗಳ ಹಿತರಕ್ಷಣೆಗೆ ಪೂರ್ಣ ಗಮನ ಕೊಡುವುದಾಗಿ ಹೇಳಿದರು. ಆಹ್ವಾನ ಬಂದರೆ ಅದಕ್ಕೆ ಮನ್ನಣೆ ಕೊಟ್ಟು ಭೇಟಿ ಮಾಡುವುದು ಸತ್ಯಾಗ್ರಹಿಯ ಲಕ್ಷಣವೆಂದೂ ಸಹ ರೆಡ್ಡಿಯವರು ನುಡಿದರು.

ಮಂತ್ರಿಮಂಡಲಿಯ ಸಭೆ

ಮಂತ್ರಿಮಂಡಲಿಯ ಸಭೆಯು ಬೆಳಗ್ಗೆ ೧೦|| ಘಂಟೆಗೆ ಕಾರ್ಲ್‌ಟನ್ ಭವನದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಬೃಂದಾವನದಲ್ಲಿ ದೀಪೋತ್ಸವ

ನವರಾತ್ರಿಯ ಪ್ರಯುಕ್ತ ಇದೇ ೧೫ನೇ ಬುಧವಾರದಿಂದ ೨೧ನೇ ಶುಕ್ರವಾರ ಪೂರ್ತಿ ಪ್ರತಿ ದಿನ ಸಂಜೆ ೭|| ಗಂಟೆಯಿಂದ ರಾತ್ರಿ ೧೦ ಗಂಟೆಯ ವರೆಗೆ ಬೃಂದಾವನದಲ್ಲಿ ವಿದ್ಯುದ್ದೀಪಾಲಂಕಾರವು ನಡೆಯುವುದು.

ಸುಬ್ಬಮ್ಮ ಜೋಯಿಸ್‌ರವರ ಬಿಡುಗಡೆ

ಮೈಸೂರು ೧೧

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ೧೫ ದಿನ ಸಾದಾ ಶಿಕ್ಷೆಗೆ ಗುರಿಯಾಗಿದ್ದ ಶ್ರೀಮತಿ ಸುಬ್ಬಮ್ಮ ಜೋಯಿಸ್‌ರವರನ್ನು ಈ ದಿನ ಮೈಸೂರು ಜೈಲಿನಿಂದ ಬಿಡುಗಡೆ ಮಾಡಲಾಯಿತು

● ಹೈದರಾಬಾದ್ ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸುವ ಬಗ್ಗೆ ಸಮಾಲೋಚನೆ ನಡೆಸಲು ಅಲ್ಲಿನ ಪ್ರಧಾನಿ ಛತ್ತಾರಿ ನವಾಬರೊಡನೆ ನಿಯೋಗವೊಂದು ದೆಹಲಿಗೆ ತೆರಳಿ ಲಾರ್ಡ್ ಮೌಂಟ್ ಬ್ಯಾಟನ್ನರೊಡನೆ ಸಮಾಲೋಚನೆ ನಡೆಸುತ್ತಿದೆಯೆಂದು ವರದಿಯಾಗಿದೆ.

ರಾಜಕೀಯ ಬಂದಿಗಳ ಬಿಡುಗಡೆ

ಸ್ಪೆಂ ಸು ಫೋ] ಬೆಂಗಳೂರು ೧೨

ಬಂಧನದಲ್ಲಿರುವ ಎಲ್ಲ ರಾಜಕೀಯ ಬಂದಿಗಳ ಬಿಡುಗಡೆಯು ಇನ್ನೆರಡು ದಿನ ನಡೆಯಬಹುದೆಂದು ನಿರೀಕ್ಷಿಸಲಾಗಿದೆ.

ಚಳುವಳಿಯ ಮುಕ್ತಾಯ

ಕಾಂಗ್ರೆಸ್ಸು ಜವಾಬ್ದಾರೀ ಸರ್ಕಾರದ ಸ್ಥಾಪನೆಯಾಗಬೇಕೆಂಬುದಕ್ಕಾಗಿ ಹೂಡಿದ್ದ ಸತ್ಯಾಗ್ರಹದ ಗುರಿಯು ಕೈಗೂಡುವುದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಾಳೆ ಸತ್ಯಾಗ್ರಹವನ್ನು ಮುಕ್ತಾಯಗೊಳಿಸುವುದೆಂದು ನಿರೀಕ್ಷಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ಸ್ವಾಗತ

ನಗರ ಕಾಂಗ್ರೆಸ್ ಸಮಿತಿಯ ಕಾರ್ಯಕ್ರಮ

೪ ಗಂಟೆಗೆ ಶ್ರೀರಂಗಪಟ್ಟಣದ ಟೋಲ್ ಗೇಟ್ ಬಳಿ ಸ್ವಾಗತ

ದೊಡ್ಡಪೇಟೆಯ ಮಾರ್ಗವಾಗಿ ಮೆರವಣಿಗೆ

ಸಂಜೆ ೬ ಗಂಟೆಗೆ ಸುಬ್ಬರಾಯನ ಕೆರೆಯಲ್ಲಿ ಸಾರ್ವಜನಿಕ ಭಾಷಣ

ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಚೆನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ಮಹಾಜನರು ಭಾಗ ವಹಿಸಬೇಕೆಂದು ಕೋರಲಾಗಿದೆ.

ನಗರ ಕಾಂಗ್ರೆಸ್ ಸಮಿತಿ
ಮೈ ಸು

ಗಾಂಧೀ ಜಯಂತಿ ಸಪ್ತಾಹ

ಮೈಸೂರು ೧೨

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಇಂಡಿಯನ್ ಫುಟ್‌ಬಾಲ್ ಕ್ಲಬ್ಬಿನವರು ಕಳೆದ ೨ನೇ ತಾರೀಖಿನಿಂದ ಏರ್ಪಡಿಸಿದ್ದ ಗಾಂಧೀಜಿಯವರ ಜಯಂತಿ ಸಪ್ತಾಹವು ನಿನ್ನೆ ಮುಕ್ತಾಯಗೊಂಡಿತು.

ನಿನ್ನೆ ಮಧ್ಯಾಹ್ನ ಮಹಾತ್ಮ ಗಾಂಧಿಯವರ ಭಾವ ಚಿತ್ರವನ್ನು ಭಾರತ ಮಾತೆಯ ಭಾವ ಚಿತ್ರದೊಡನೆ ಅಲಂಕರಿಸಿ ಎರಡು ಜೊತೆ ಎತ್ತುಗಳನ್ನು ಕಟ್ಟಿದ ರಥದಲ್ಲಿ ಮೆರವಣಿಗೆ ಮಾಡಲಾಯಿತು. ದಾರಿಯುದ್ದಕ್ಕೂ ಉತ್ಸಾಹೀ ತರುಣರ ಜಯ ಘೋಷಗಳು ನಭೋ ಮಂಡಲವನ್ನು ಭೇದಿಸುತ್ತಿದ್ದುವು. ನಗರದ ಮುಖ್ಯ ಬೀದಿಗಳನ್ನು ದಾಟಿ ಮೆರವಣಿಗೆಯು ರಾತ್ರಿ ೧೧ ಗಂಟೆಯ ವೇಳೆಗೆ ಸಂಘವನ್ನು ತಲುಪಿತು.

ಅನಂತರ ಸೇವಾದಳ ಸಂಘದ ನಾಯಕರಾದ ವಿದ್ಯಾರ್ಥಿ ಶ್ರೀ|| ಎಸ್. ನರಸಿಂಹ ಅಯ್ಯಂಗಾರ್ಯರು ಮಹಾತ್ಮರ ಜೀವನವನ್ನು ಕುರಿತು ಭಾಷಣ ಮಾಡಿದರು. ಮಂಗಳ, ರಾಷ್ಟ್ರ ಗೀತೆ ಮತ್ತು ಪ್ರಸಾದ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಈ ದಿನವೇ ರಾಜಘೋಷಣೆಯೋ ?

ಮೈಸೂರು ೧೨

ನಮ್ಮ ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಈ ದಿನದೊಳಗಾಗಿಯೇ ರಾಜಘೋಷಣೆಯೊಂದನ್ನು ದಯಪಾಲಿಸುವ ನಿರೀಕ್ಷಣೆ ಇದೆ.

ಅರಬ್ಬರು ಯುದ್ಧ ಹೂಡಲು ಸಿದ್ಧರಾಗಿದ್ದಾರೆ

ಬ್ರಿಟಿಷರು ತಮ್ಮ ಹೇಳಿಕೆಯಂತೆ ಪ್ಯಾಲೆಸ್ಟೈನನ್ನು ತ್ಯಜಿಸಿದರೆ ಆಗ ಅದನ್ನು ರಕ್ಷಿಸಿಕೊಳ್ಳಲು ಯಹೂದ್ಯರ ವಿರುದ್ಧವಾಗಿ ಯುದ್ಧ ಹೂಡಲೂ ಸಹ ಅರಬ್ಬರು ಸಿದ್ಧತೆಗಳನ್ನು ಮಾಡಿಕೊಂಡಿರುವರೆಂದು ವರದಿಯಾಗಿದೆ. ಲೆಬನಾನಿನಲ್ಲಿ ಸೇರಿದ್ದ ಅರಬ್ ರಾಷ್ಟ್ರಗಳ ಮುಖ್ಯ ಮಂತ್ರಿಗಳ ಪ್ರ... ಸಮ್ಮೇಳನದಲ್ಲಿ ಇದನ್ನು ನಿರ್ಧರಿ... ಗಿದೆ. ಪ್ಯಾಲೆಸ್ಟೈನ್ ಗಡಿಗೆ ಈಜಿಪ್ಟ್... ರಿಯದ ಸೇನಾ ಪಡೆಗಳು ಹೊರಟಿವೆ... ದು ಅರಬ್ ಲೀಗಿನ ಕಾರ್ಯದರ್ಶಿ... ಅಜಾಂಪಾಷಾರವರು ತಿಳಿಸಿದ್ದಾರೆ.

ಪ್ರತಿ ದಿನ ೩ ಆಟಗಳು
10-10-47 ನೇ
ಶುಕ್ರವಾರದಿಂದ
ನವಯುಗ್‌ರವರ
ರೂಂ ನಂ 9
—: ಪಾತ್ರ :—
ಗೀತಾನಿಜಾಮಿ, ಶ್ಯಾಮ್,
ಕೆ.ಎನ್.ಸಿಂಗ್ ಮತ್ತಿತರರು
ಒಲಂಪಿಯಾ ಟಾಕೀಸ್

WOODLANDS
Morning shows from 10-10-47 for 4 days daily at 10-30 a.m
Till we Meet Again
—: Starring :—
Ray Millang,
Barbara Britton

ರಾಜಕಮಲ್
ತಾ|| 11-10-47 ರಿಂದ
ಅಮೋಘ ೨ನೇ ವಾರ
ಮಹಾಕವಿ ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಪಹರಿ ಸನ್ಯಾಲ್, ಸ್ನೇಹಪ್ರಭಾ, ವನಮಾಲ, ಮತ್ತು ಉಲ್ಹಾಸ್
ಮುಂದಿನ ಬದಲಾವಣೆ
ಫಿಲ್ಮಿಸ್ತಾನ್‌ರವರ
ಸಿಂಧೂರ್
Morning shows for 4 days from 10-10-47 daily at 10.30 a m.
It's a pleasure
(In Technicolor)
—: Starring :—
Sonji Henie,
Michael O'ae

ಗ್ರಾಮಾಧಿಕಾರಿಗಳ ಸಭೆ

ಹಿರೀಸಾವೆ ೬

ಚನ್ನರಾಯಪಟ್ಟಣದ ಗ್ರಾಮಾಧಿಕಾರಿಗಳ ಸಭೆಯು ನೆನ್ನೆ ಹಿರೀಸಾವೆಯಲ್ಲಿ ಸೇರಿತ್ತು. ಸಂಘದ ಉಪಾಧ್ಯಕ್ಷರಾದ ಶ್ರೀ ಬಿ ರಾಮಚಂದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕಿನ ಅನೇಕ ಗ್ರಾಮಾಧಿಕಾರಿಗಳು ಸಭೆಯಲ್ಲಿ ನೆರೆದಿದ್ದು ತಮ್ಮ ಕುಂದುಕೊರತೆಗಳ ಬಗ್ಗೆ ಚರ್ಚಿಸಿದರು. ನೆನ್ನೆ ಸಂಜೆ ಸಂಘದ ಆಶ್ರಯದಲ್ಲಿ ಶ್ರೀ ನಂಜುಂಡಯ್ಯನವರ ಭಾಷಣವು ನಡೆಯಿತು.

ಪಾಕಿಸ್ತಾನಕ್ಕೆ ಭಾವಲ್ಪುರ

ಪ್ರವೇಶ ಪತ್ರಕ್ಕೆ ರುಜು ಹಾಕಿ ಭಾವಲ್ಪುರ ಸಂಸ್ಥಾನವು ಪಾಕಿಸ್ತಾನ್ ಡೊಮಿನಿಯನ್ನಿಗೆ ಸೇರಿರುವುದೆಂದು ಪಾಕಿಸ್ತಾನದ ವಿದೇಶಾಂಗ ಶಾಖೆಯು ಪ್ರಕಟಿಸುತ್ತದೆ.

ಪ್ರತಿ ದಿನ ೩ ಆಟಗಳು
10-10-47 ನೇ
ಶುಕ್ರವಾರದಿಂದ
ನವಯುಗ್‌ರವರ
ರೂಂ ನಂ 9
ಪಾತ್ರ :—
ಗೀತಾನಿಜಾಮಿ, ಶ್ಯಾಮ್,
ಕೆ.ಎನ್.ಸಿಂಗ್ ಮತ್ತಿತರರು
ಒಲಂಪಿಯಾ ಟಾಕೀಸ್

ಮೊದಲಾದ ರಾಷ್ಟ್ರನಾಯಕರು ಇತರ ಸಂಸ್ಥಾನಾಧೀಶರುಗಳನ್ನು ಸೇರಲು ಪ್ರಾರ್ಥಿಸಿರುವರೆಂದು ವರದಿಯಾಗಿದೆ.

ಬರೋಡೆಯಲ್ಲಿ ನಾಳೆ ಸಾರ್ವಜನಿಕ ರಜಾ

ಹಿಂದೂ ಪಂಚಾಂಗ ರೀತ್ಯಾ ನಾಳೆಯ ದಿನ ಮಹಾತ್ಮ ಗಾಂಧೀಜಿಯವರ ಜನ್ಮದಿನೋತ್ಸವವಾಗುವುದರಿಂದ ಬರೋಡಾ ಸಂಸ್ಥಾನದ ಎಲ್ಲ ಸರ್ಕಾರೀ ಕಚೇರಿಗಳಿಗೂ ನಾಳೆ ಸಾರ್ವಜನಿಕ ರಜಾ ಕೊಡಲಾಗಿದೆಯೆಂದು ವರದಿಯಾಗಿದೆ.

OPERA TALKIES
PHANTOM
(Full Serial)
2nd Week, from 11-10-47
— with —
Tom Tyler

Morning Shows from 10-10-47 for 4 days daily at 10-30 a. m.
Home in Indiana
(Tech Color)
—: With :—
Walter Brennan, Jeanne Crain, June Haver

Printed and published by A. ... at the Sadhvi press ... Subbaiah Road Mysore

ಥಿಯೇಟರಿನಲ್ಲಿ
ತಾ|| 11-10-47 ನೇ ಶನಿವಾರ ರಾತ್ರಿ ೧೦-೩೦ ಕ್ಕೆ ಮತ್ತು 12-10-47 ಭಾನುವಾರ ಸಂಜೆ ೬-೩೦ ಕ್ಕೆ
ಅರ್ಧಾಂಗಿ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು
ಕೆ. ಸಿ. ಚೆಟ್ಟಪ್ಪ,
ಪ್ರೊಪ್ರೈಟರ್

ರಾಜಕಮಲ್
ತಾ|| 4-10-47 ರಿಂದ
ಅಮೋಘ ಪ್ರಾರಂಭ
ಮಹಾಕವಿ ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಪಹರಿ ಸನ್ಯಾಲ್, ಸ್ನೇಹಪ್ರಭಾ, ವನಮಾಲ, ಮತ್ತು ಉಲ್ಹಾಸ್
Morning shows for 4 days from 10-10-47 daily at 10.30 a m.
It's a pleasure
(In Technicolor)
—: Starring :—
Sonji Henie,
Michael O'hae

ಈಗ ದೇಶಾದ್ಯಂತವೂ ನಡೆದಿರುವ ದುರ್ಘಟನೆಗಳೆಲ್ಲಾ ಸರ್ಕಾರದ ಆಡಳಿತದ ... ದೇ ಮುಖ್ಯ ಕಾರಣ ಈಗ ಇದನ್ನು ... ಷ್ಟ್ರ ದೇಶದಲ್ಲಿ ಶಾಂತಿ, ಸುಖ, ಸೌ... ಗಳು ನೆಲಸುವಂತೆ ಮಾಡುವುದು ಮ... ರಾಜರ ಕೈಯಲ್ಲಿದೆ.

ಶ್ರೀ ಹುಸೇನ್ ಸಾಬ್

ಕಾಂಗ್ರೆಸ್ಸಿನ ಗುರಿಸಾಧನೆಗಾಗಿ ... ಮರೂ, ಕಾರ್ಮಿಕರೂ ವಿದ್ಯಾರ್ಥಿ... ಸಹ ಬೆಂಬಲವಿತ್ತಿದ್ದಾರೆ ಮುಸ್ಲಿ... ಪ್ರತ್ಯೇಕತೆಯ ಮನೋಭಾವವನ್ನು ... ಬೇಕು. ಹೆಚ್ಚಿನ ಸಂಖ್ಯೆಯಲ್ಲಿ ... ಮರು ಕಾಂಗ್ರೆಸ್ಸಿನೊಡನೆ ಭುಜ ... ಹೋರಾಟವನ್ನು ನಡೆಸಬೇಕು.

ಶ್ರೀ ರಾಜಶೇಖರ ಹಿರೇಮ...

ಜಗತ್ತಿನಲ್ಲೇ ಜನತಾ ಶಕ್ತಿಯ... ಸುವ ಬೇರೊಂದು ಶಕ್ತಿ ಇಲ್ಲವೆಂದ... ಸದು ಸರ್ಕಾರ ಮೊದಲೇ ಅರಿತ... ನೇಕ ಪ್ರಾಣಗಳು ಉಳಿಯುತ್ತಿದ್ದು...

WOODLANDS
Morning shows from 10-10-47 for 4 days at 10-30 a.m
Till we Meet Again
—: Starring :—
Ray Millang,
Barbara Britton

ಫೋನ್ ನಂ. 508 ॥ ವಂದೇ ಮಾತರಂ ॥ ಅಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೧೧-೧೦-೪೭ [ಸಂಚಿಕೆ ...

ಮಹಿಳೆಯರ ಪಿಕೆಟಿಂಗ್

ವಕೀಲರ ಹರತಾಳ

ಮೈಸೂರು ೧೧

ಈ ದಿನವೂ ಸಹ ರಾಜಧಾನಿಯ ಸಿವಿಲ್ ಕೋರ್ಟುಗಳ ಬಳಿಯೂ, ವಕೀಲರ ಸಂಘದಲ್ಲಿಯೂ ಮಹಿಳೆಯರಿಂದ ಬಲವಾದ ಪಿಕೆಟಿಂಗ್ ನಡೆಯಿತು. ೧೧ ಗಂಟೆಯ ವೇಳೆಗೆ ಶ್ರೀಮತಿ ಸುಶೀಲಾಬಾಯಿ, ಎಂ. ಎಲ್. ಸೀತಮ್ಮ ಮೊದಲಾದ ಮಹಿಳೆಯರು ಬಾರ್ ಅಸೋಸಿಯೇಷನ್ನಿನೊಳಕ್ಕೆ ಪ್ರವೇಶಿಸಿ ವಕೀಲರುಗಳೆಲ್ಲರೂ ಕೋರ್ಟಿಗೆ ಹಾಜರಾಗಬಾರದೆಂದೂ, ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದೂ ಪ್ರಾರ್ಥಿಸಿದರು. ವಕೀಲ ಸಂಘದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣರಾಯರು ಕೋರ್ಟುಗಳಿಗೆ ಹೋಗಿ ವಕೀಲರಾರೂ ಈ ದಿನ ಕೋರ್ಟಿಗೆ ಹಾಜರಾಗುವುದಿಲ್ಲವೆಂದೂ, ಮೊಕದ್ದಮೆಗಳನ್ನು ಮುಂದಕ್ಕೆ ಹಾಕಬೇಕೆಂದೂ ತಿಳಿಸಿ ನಂತರ ಕೋರ್ಟಿನ ಮುಂಭಾಗದಲ್ಲಿ ಸೇರಿದ್ದ ಪ್ರದರ್ಶನಕಾರರೊಡನೆ ಅನೇಕ ವಕೀಲರ ಸಮೇತ ಮೆರವಣಿಗೆ ಹೊರಟರು.

ಮೆರವಣಿಗೆಯು ಕೋರ್ಟಿನಿಂದ ಹೊರಟು ಏದು ಚಂದ್ರಶೇಖರ ಮಾರ್ಗವಾಗಿ ಮೈಸೂರು ಹೋಟೆಲ್ ಮುಖಾಂತರ ವ ... ಕೋರ್ಟಿನ ಕಾಂಪೌಂಡಿನೊಳಕ್ಕೆ ಹೋಗಿ ಬೆಳಗ್ಗೆ ಹಾರಿಸಲಾಗಿದ್ದ ರಾಷ್ಟ್ರಧ್ವಜದ ಕೆಳಯಲ್ಲಿ ಸಭೆ ಸೇರಿ ಶ್ರೀ ... ಸ್ವಾಮಿ ಅಯ್ಯಂಗಾರ್ ಮತ್ತು ಶ್ರೀಮತಿ ಎಂ. ಎಲ್. ಸೀತಮ್ಮನವರುಗಳು ಭಾಷಣ ಮಾಡಿದರು. ಅನಂತರ ವಂದೇ ಮಾತರಂ ಗೀತೆಯೊಡನೆ ಸಭಾಕಾರ್ಯ ಮುಕ್ತಾಯವಾಯಿತು.

ವಿದ್ಯಾರ್ಥಿಗಳ ಕೆಲವು ... ಮೆರವಣಿಗೆದಾರರು ಹಿಂದೂ ... ಪರವಾಗಿ ನಿಂತು ಮಹಾತ್ಮರಿಗೆ ಗೌರವವನ್ನು ಸಲ್ಲಿಸಿದರು

ಸರಸ್ವತೀ ಪೂಜೆ

ಕನ್ನಿಂಗ್ ಹ್ಯಾಂ ರಸ್ತೆಯ ಬಾಲಕ ಸಂಘದವರು ಈ ದಿನ ಬೆಳಗ್ಗೆ ಸರಸ್ವತೀ ಪೂಜೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಭಾರತ ರಾಷ್ಟ್ರಧ್ವಜಾರೋಹಣ ಧ್ವಜ ವಂದನೆಗಳು ನಡೆದುವು. ಸಂಘದ ಕಾರ್ಯದರ್ಶಿಗಳಾದ ಶ್ರೀ ಎಲ್ ಎಸ್. ನಾರಾಯಣಸ್ವಾಮಿಯವರು ಭಾಷಣಮಾಡಿ ಪ್ರತಿ ಶುಕ್ರವಾರವೂ ಈ ಪೂಜೆಯನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದರು

ಗ್ರಾಮಸ್ಥರಿಗೆ ಪಡಿತರವಿಲ್ಲ

ಮೈಸೂರು ಕಾಂಗ್ರೆಸ್ಸು ನಡೆಸುತ್ತಿರುವ ಸತ್ಯಾಗ್ರಹಕ್ಕೆ ನೆರವು ನೀಡುವರೆಂದು ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಗ್ರಾಮದ ಮತ್ತು ಅದರ ಸುತ್ತಮುತ್ತಲಿನ ಜನರಿಗೆ ಆಹಾರ ಪಡಿತರವನ್ನೂ ದಗಿಸಲಿಲ್ಲವೆಂದು ವರದಿಯಾಗಿದೆ.

ಪಿಕೆಟಿಂಗ್ ನಡೆಸಿದವರ ಮೇಲೆ ಮೊಕದ್ದಮೆ

ಮೈಸೂರು ೧೧

ನಿನ್ನೆ ಲಾ ಕೋರ್ಟುಗಳ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರೆಂದು ಡಾ॥ ಪಾರ್ಥನಾರಾಯಣ ಪಂಡಿತ್ ಮತ್ತು ೩೪ ವಿದ್ಯಾರ್ಥಿಗಳನ್ನೂ, ಶ್ರೀಮತಿ ಸರಸ್ವತಿ ಯೋಗಾನರಸಿಂಗಯ್ಯಂಗಾರ್, ಪ್ರಫುಲ್ಲ ಕೃಷ್ಣಯ್ಯಂಗಾರ್ ಮೊದಲಾದ ೩೬ ಜನ ಮಹಿಳೆಯರನ್ನೂ ಪೋಲೀಸರು ದಸ್ತಗಿರಿ ಮಾಡಿದ್ದರಷ್ಟೆ. ಅವರ ಮೇಲೆ ಮೊಕದ್ದಮೆ ಹೂಡುವ ಸಲುವಾಗಿ ನಿನ್ನೆ ಸಂಜೆ ೬ ಗಂಟೆಯಲ್ಲಿ ನ್ಯಾಯಾಧೀಶರ ಮುಂದೆ ಅವರನ್ನು ಹಾಜರ್ಪಡಿಸಿ ರಿಮ್ಯಾಂಡ್ ಪಡೆದು ಮೈಸೂರು ಜೈಲಿಗೆ ಕರೆದುಕೊಂಡು ಹೋಗಿ ಬಿಟ್ಟಿರುವರು. ಮೊಕದ್ದಮೆ ೧೬ ನೇ ತಾರೀಖು ನಡೆಯಲಿದೆ.

ಸತ್ಯಾಗ್ರಹವನ್ನು ಮುಂದುವರಿಸಲೇಬೇಕು

ಚೌಡಯ್ಯನವರ ಹೇಳಿಕೆ

ಮೈಸೂರು ೧೧

ರಾಜಧಾನಿಯ ಕಾಂಗ್ರೆಸ್ ಕೆಲಸಗಾರರೂ ಪೌರಸಭಾ ಸದಸ್ಯರೂ ಆದ ಶ್ರೀ ಚೌಡಯ್ಯನವರು ನಿನ್ನೆ ಒಂದು ಹೇಳಿಕೆಯನ್ನಿತ್ತು ಈ ರೀತಿ ತಿಳಿಸಿದ್ದಾರೆ:—

ಸಂಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗ ವರೆಗೆ ಸತ್ಯಾಗ್ರಹವನ್ನು ಮುಂದ ವರಿಸಲೇಬೇಕು. ಶ್ರೀ ಮಲ್ಲ ... ಅವರು ಹೊರಡಿಸಿರುವ ಘೋಷಣೆಯು ತೃಪ್ತಿಕರವಾಗಿಲ್ಲ. ಸಂಪೂರ್ಣ ಜವಾಬ್ದಾರೀ ಸರ್ಕಾರವು ಮಾತ್ರ ನಮ್ಮನ್ನು ತೃಪ್ತಿಪಡಿಸಬಲ್ಲುದು. ಲಾಠೀ ಛಾರ್ಜ್, ಗೋಲೀಬಾರುಗಳಿಂದ ಆಡಳಿತ ನಡೆಸುತ್ತಿರುವ ಈಗಿನ ಬೇಜವಾಬ್ದಾರೀ ಸರ್ಕಾರವು ಹೋಗುವವರೆಗೂ ನಮ್ಮ ಹೋರಾಟವನ್ನು ನಡೆಸಲೇಬೇಕು. ಇದು ಕೊನೆಯವರೆಗೂ ನಮಗೂ ಕೊನೆಯ ಹೋರಾಟವಾದ ಕಾರಣ ಮಹನೀಯರೂ, ಮಹಿಳೆಯರೂ ತಮ್ಮ ಪೂರ್ಣ ಬೆಂಬಲವನ್ನೂ ಈ ಹೋರಾಟದಲ್ಲಿ ನೀಡಬೇಕು.

ಸಿಕ್ಕರ ಬೇಡಿಕೆಗಳ ಬಗ್ಗೆ ಪಾಟಿಯಾಲಾ ರಾಜರು ಮಾಡಿದ್ದ ಸೂಚನೆಗಳ ಬಗ್ಗೆ ಮಾತುಕತೆ ನಡೆಸಲು ಫರೀದ್‌ಕೋಟಿಯ ರಾಜರು ಬ್ರಿಟನ್ನಿಗೆ ತೆರಳಿರುವರೆಂದು ವರದಿಯಾಗಿದೆ.

ಸುಬ್ಬರಾಯನ ಕೆರೆಯಲ್ಲಿ ರಾಷ್ಟ್ರಧ್ವಜಾರೋಹಣ

ಮೈಸೂರು ೧೧

ಈ ದಿನ ಬೆಳಗ್ಗೆ ೯ ಗಂಟೆಗೆ ಮಹಾತ್ಮಗಾಂಧಿಯವರ ಜಯಂತಿಯ ಪ್ರಯುಕ್ತ ಸುಬ್ಬರಾಯನಕೆರೆ ಮೈದಾನದಲ್ಲಿ ಜಿಲ್ಲಾಧಿಕಾರಿಗಳ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಶ್ರೀಮತಿ ಬಿ. ಕಾಮೇಶ್ವರಮ್ಮನವರಿಂದ ಭಾರತ ರಾಷ್ಟ್ರಧ್ವಜಾರೋಹಣವಾಯಿತು. ಬೆಳಗ್ಗೆ ೮ ಗಂಟೆಗೆ ವಿದ್ಯಾರ್ಥಿಗಳಿಂದ ಪ್ರಭಾತಫೇರಿ ನಡೆದ ನಂತರ ಕೆರೆ ಮೈದಾನದಲ್ಲಿ ರಾಷ್ಟ್ರಗೀತೆ ಮತ್ತು ಭಾಷಣಗಳು ನಡೆದುವು.

ರಾಷ್ಟ್ರಧ್ವಜದ ಮಹತ್ವ, ಅದರ ಸ್ಥಾನಮಾನಗಳು—ಮಹಾತ್ಮರ ಸಂದೇಶಗಳನ್ನು ಕುರಿತು ಶ್ರೀಮತಿ ಕಾಮೇಶ್ವರಮ್ಮನವರು ಮಾತನಾಡಿದರು. ಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ್ಯವನ್ನೂ, ಆತ್ಮಗೌರವವನ್ನೂ ಗಳಿಸಿಕೊಟ್ಟ ಮಹದ್ವ್ಯಕ್ತಿ. ಅವರು ವಿಶ್ವಕ್ಕೇ ಮಹತ್ತರವಾದ ಸಂದೇಶವನ್ನು ಸಾರಿದ್ದಾರೆ. ಅವರ ಉಪದೇಶದಂತೆ ವರ್ತಿಸುವುದು ನಮ್ಮೆಲ್ಲರ ಕರ್ತವ್ಯವಾದುದಾಗಿ ಶ್ರೀ ಚೌಡಯ್ಯನವರು ತಿಳಿಸಿದರು. ಮೆರವಣಿಗೆಯು ನೂಗಡಿ ರಸ್ತೆಯಿಂದ ಹೊರಟು ಸಂತೇಪೇಟೆ ಮಾರ್ಗವಾಗಿ ಲ್ಯಾನ್ಸ್‌ಡೌನ್ ಬಜಾರಿನ ಮೂಲಕ ... . ಅಗ್ರಹಾರವನ್ನು ಹಾದು ಸುಬ್ಬರಾಯನ ಕೆರೆಯನ್ನು ಸೇರಿತು.

ಕಂಟ್ರೋಲ್ ಪದ್ಧತಿ ತಪ್ಪಬೇಕು

ಪ್ರಜೆಗಳಿಗೆ ಆಹಾರವನ್ನೊದಗಿಸಲು ಕಂಟ್ರೋಲ್ ಪದ್ಧತಿಯನ್ನು ಜಾರಿಗೆ ತಂದಿರುವುದು ತಪ್ಪು. ಇದು ವ್ಯಾಪಾರ ಮತ್ತು ವಹಿವಾಟದ ಧರ್ಮವಲ್ಲ. ಇದರಿಂದ ಪ್ರಜೆಗೆ ಅನಾನುಕೂಲವಾಗಿದೆ. ಇದು ತಪ್ಪಿ ಪ್ರಜೆಗಳೆಲ್ಲರೂ ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಸುಗಮವಾಗಿ ಪಡೆಯುವಂತಾಗಬೇಕೆಂಬುದಾಗಿ ಮಹಾತ್ಮಾ ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ಹೇಳಿರುವುದು ವರದಿಯಾಗಿದೆ.

ಮುಂದೂರರು ರಾಜೀನಾಮೆ ಕೊಡುವರೇ?

ಜಮೀನ್ದಾರಿ ಪದ್ಧತಿಯನ್ನು ತಮ್ಮ ರಾಜ್ಯದಲ್ಲಿ ರದ್ದು ಮಾಡಿದ ಬಗ್ಗೆ ಅದಕ್ಕೆ ... ಮತ್ತು ದೇವಸ್ಥಾನಗಳಿಗೆ ಸೇರಿದ ... ಜಮೀನುಗಳಿಗೂ ಅನ್ವಯವಾಗಬೇಕೆಂದು ಶಾಸನಸಭೆಯ ಹಲವು ಸದಸ್ಯರು ಹೇಳಿ ಭಿನ್ನಾಭಿಪ್ರಾಯವುಂಟಾಗಿರುವುದರಿಂದ ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ಹೇಳುತ್ತಿರುವರೆಂದು ವರದಿಯಾಗಿದೆ.

ತಲಚೇರಿಯಿಂದ ಸತ್ಯಾಗ್ರಹಿಗಳು

... ಅಂದಿನ ಸತ್ಯಾಗ್ರಹದಲ್ಲಿ ... ಶ್ರೀ ಎಂ ಪಿ ನಾರಾಯಣ ... ನಾಯಕತ್ವದಲ್ಲಿ ... ನಿವೃತ್ತ ಸೈನಿಕರು ತಲಚೇರಿಯಿಂದ ... ಹೊರಟಿರುವರೆಂದು ವರದಿಯಾಗಿದೆ

ಹೊಸ ಮಂತ್ರಿಮಂಡಲದಲ್ಲಿ ಕಾಂಗ್ರೆಸ್ಸಿಗೆ ೪ ಸ್ಥಾನಗಳೇ?

ಸ್ವಂ. ಸು ಫೋ॥] ಬೆಂಗಳೂರು ೧೧

ಕಾರ್ಯಕಾರಿ ಸಮಿತಿಯು ಸಭೆ ಬೆಳಗ್ಗೆ ೧೧ ಗಂಟೆಯಿಂದ ೧॥ ಗಂಟೆಯ ವರೆಗೆ ಸೇರಿದ್ದಿತು. ಮತ್ತೆ ಸಂಜೆ ೫ ಗಂಟೆಗೆ ರೆಡ್ಡಿಯವರು ದಿವಾನರನ್ನು ಭೇಟಿ ಮಾಡಿ ಹಿಂದಿರುಗಿದ್ದ ನಂತರ ಸೇರಲಿದೆ.

ಈ ದಿನ ಮತ್ತೆ ಸೇರಲಿದ್ದ ಕಾರ್ಯಕಾರಿ ಸಮಿತಿಯಲ್ಲಿ ತಾತ್ಕಾಲಿಕ ಸರ್ಕಾರದ ವಿಷಯವಾಗಿ ಚರ್ಚೆ ನಡೆಯಿತೆಂದು ಹೇಳಲಾಗಿದೆ. ಈಗಿರುವ ಶಾಸನ ಸಭೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ಶಾಸನಾಂಗ ಸಭೆಯನ್ನು ನಿರ್ಮಿಸುವ ಬಗ್ಗೆ ಒಂದು ಕಲಂ ಸೇರಿಸಲಾಗಿದೆ. ಮುಂದೆ ರಚಿಸಲ್ಪಡುವ ಮಂತ್ರಿಮಂಡಲದಲ್ಲಿ ಕಾಂಗ್ರೆಸ್ಸಿಗೆ ನಾಲ್ಕು ಸ್ಥಾನಗಳನ್ನು ಕೊಡುವುದಾಗಿ ದಿವಾನರು ಹೇಳಿದರೆಂದೂ ರೆಡ್ಡಿಯವರು ೬ ಸ್ಥಾನಗಳಿಗೆ ಒತ್ತಾಯ ಪಡಿಸಿದರೆಂದೂ ಮತ್ತು ದಿವಾನರು ಯಾವ ಒಂದು ಖಾತೆಯ ಅಧಿಕಾರವೂ ಇಲ್ಲದವರಾಗಿರಬೇಕೆಂದು ಸೂಚಿಸಿದರಾಗಿಯೂ ಸಹ ಹೇಳಲಾಗಿದೆ.

ಕಾಂಗ್ರೆಸ್ ಕಛೇರಿಯ ಮುಂದೆ ಪ್ರದರ್ಶನ

ಸ್ವಂ ಸು ಫೋ॥] ಬೆಂಗಳೂರು ೧೧

ಜನಗಳ ಹಿತವನ್ನು ಬಿಡಕೂಡದು, ದಿವಾನರನ್ನು ನಂಬಿ ಮೋಸಹೋಗಬೇಕು—ಎಂದು ಬರೆದ ಪ್ಲಕಾರ್ಡುಗಳನ್ನು ಹಿಡಿದು ಸುಮಾರು ೨೦೦ ಜನ ಪ್ರದರ್ಶನಕಾರರು ಈ ದಿನ ಬೆಳಗ್ಗೆ ಕಾಂಗ್ರೆಸ್ ಕಛೇರಿಯ ಮುಂದೆ ಘೋಷಣೆಗಳನ್ನು ಕೂಗುತ್ತಿದ್ದರು. ಶ್ರೀ ರೆಡ್ಡಿಯವರು ಬಾಲ್ಕನಿಯ ಮೇಲೆ ನಿಂತು ಪ್ರಜೆಗಳ ಹಿತರಕ್ಷಣೆಗೆ ಪೂರ್ಣ ಗಮನ ಕೊಡುವುದಾಗಿ ಹೇಳಿದರು. ಆಹ್ವಾನ ಬಂದರೆ ಅದಕ್ಕೆ ಮನ್ನಣೆ ಇತ್ತು ಭೇಟಿ ಮಾಡುವುದು ಸತ್ಯಾಗ್ರಹಿಯ ಲಕ್ಷಣವೆಂದೂ ಸಹ ರೆಡ್ಡಿಯವರು ನುಡಿದರು.

ಮಂತ್ರಿಮಂಡಲಿಯ ಸಭೆ

ಮಂತ್ರಿಮಂಡಲಿಯ ಸಭೆಯು ಬೆಳಗ್ಗೆ ೧೧॥ ಘಂಟೆಗೆ ಕಾರ್ಲ್‌ಟನ್ ಭವನದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಬೃಂದಾವನದಲ್ಲಿ ದೀಪೋತ್ಸವ

ನವರಾತ್ರಿಯ ಪ್ರಯುಕ್ತ ಇದೇ ೧೫ ನೇ ಬುಧವಾರದಿಂದ ೩೧ ನೇ ಶುಕ್ರವಾರ ಪೂರ್ತಾ ಪ್ರತಿ ದಿನ ಸಂಜೆ ೬॥ ಗಂಟೆಯಿಂದ ರಾತ್ರಿ ೧೦ ಗಂಟೆಯ ವರೆಗೆ ಬೃಂದಾವನದಲ್ಲಿ ವಿದ್ಯುದ್ದೀಪಾಲಂಕಾರವು ನಡೆಯುವುದು

ಸುಬ್ಬಮ್ಮ ಜೋಯಿಸ್‌ರವರ ಬಿಡುಗಡೆ

ಮೈಸೂರು ೧೧

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ೧೫ ದಿನ ಸಾದಾ ಶಿಕ್ಷೆಗೆ ಗುರಿಯಾಗಿದ್ದ ಶ್ರೀಮತಿ ಸುಬ್ಬಮ್ಮ ಜೋಯಿಸ್‌ರವರನ್ನು ಈ ದಿನ ಮೈಸೂರು ಸಬ್ ಜೈಲಿನಿಂದ ಬಿಡುಗಡೆ ಮಾಡಲಾಯಿತು

● ಹೈದರಾಬಾದ್ ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸುವ ಬಗ್ಗೆ ಸಮಾಲೋಚನೆ ನಡೆಸಲು ಅಲ್ಲಿನ ಪ್ರಧಾನಿ ... ನವಾಬರು ... ದೆಹಲಿಗೆ ತೆರಳಿ ಲಾರ್ಡ್ ಮೌಂಟ್ ಬ್ಯಾಟನ್ನರೊಡನೆ ಸಮಾಲೋಚನೆ ನಡೆಸುತ್ತಿದೆಯೆಂದು ವರದಿಯಾಗಿದೆ.

ಸತ್ಯಾಗ್ರಹಿಗಳ ದಸ್ತಗಿರಿ

ಮೈಸೂರು ೧೧

ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಲು ನೀಲಗಿರಿಯಿಂದ ಬಂದಿದ್ದ ೧೨ ಮಂದಿ ಸತ್ಯಾಗ್ರಹಿಗಳನ್ನು ನಿನ್ನೆ ಸಂಜೆ ದೇವರಾಜ ಮಾರ್ಕೆಟ್ಟಿನ ಬಳಿ ಪೊಲೀಸರು ದಸ್ತಗಿರಿ ಮಾಡಿದ್ದಾರೆ.

ಪ್ರಾರಂಭೋತ್ಸವ

ನಾಳೆ ಸಂಜೆ ೬-೩೦ ಗಂಟೆಗೆ ಶಿವರಾಂಪೇಟೆಯಲ್ಲಿರುವ ಹಿಂದೂ ಮಹಾ ಸಭಾ ಕಛೇರಿಯಲ್ಲಿ ಶ್ರೀ ಕೆ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಹಿಂದೀ ತರಗತಿಗಳ ಆರಂಭೋತ್ಸವವು ಜರುಗುವುದು. ಪಂಡಿತ ಮಂಜುನಾಥ್‌ರವರು ಹಿಂದೀ ಭಾಷೆಯ ಆವಶ್ಯಕತೆ-ಎಂಬ ವಿಷಯವಾಗಿ ಭಾಷಣ ಮಾಡುವರು

ದೇವಾಂಗ ಸಂಘ

ಮೈಸೂರು ದೇವಾಂಗ ಸಂಘದ ೮ ನೇ ಸಾಮಾನ್ಯ ಸಭೆಯು ನಾಳೆ ಸಂಜೆ ೫ ಗಂಟೆಗೆ ಶ್ರೀ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಸೇರುವುದರಿಂದ ಮಹಾಭಾವಿಗಳೆಲ್ಲರೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಸತ್ಯಾಗ್ರಹಿಗಳಿಗೆ ಸಜಾ

ನಂಜನಗೂಡು ೧೦

ಚಾಮರಾಜ ನಗರದಿಂದ ಅರಮನೆ ಸತ್ಯಾಗ್ರಹದಲ್ಲಿ ಭಾಗ ವಹಿಸಲು ಮೈಸೂರಿಗೆ ಹೊರಟಿದ್ದ ಸಿ. ವಿ. ಕೃಷ್ಣಮೂರ್ತಿ, ಕೆ. ಎಸ್. ಶಿವರಾಂ ಮುಂತಾದ ೨೭ ಮಂದಿಗೆ ಈ ದಿನ ಇಲ್ಲಿನ ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟರು ತಲಾ ಒಂದು ತಿಂಗಳು ಸಾದಾ ಸಜಾ ವಿಧಿಸಿದ್ದಾರೆ

ಮದ್ಯಪಾನವು ಅಪರಾಧ

ಇತ್ತೀಚೆಗೆ ನಡೆದ ಮದರಾಸಿನ ಮಂತ್ರಿಮಂಡಲದ ಸಭೆಯಲ್ಲಿ, ಪಾನ ನಿಷೇಧವು ಜಾರಿಯಲ್ಲಿರುವ ಜಿಲ್ಲೆಗಳಲ್ಲೆಲ್ಲಾ ಮತ್ತತೆಯಿಂದಿರುವುದು ಅಪರಾಧವೆಂದು ಪರಿಗಣಿಸಲಾಗಿದೆ. ಯಾರಾದರೂ ಸಾರ್ವಜನಿಕ ಪ್ರದೇಶದಲ್ಲಾಗಲೀ ಖಾಸಗಿಯಾಗಲೀ ಮದ್ಯಪಾನ ಮಾಡಿ ಮತ್ತರಾಗಿದ್ದಲ್ಲಿ ಅವರಿಗೆ ೬ ತಿಂಗಳ ಸಜಾ ಅಥವಾ ಒಂದು ಸಾವಿರ ರೂ ಜುಲ್ಮಾನೆ ಅಥವಾ ಎರಡು ಶಿಕ್ಷೆಯನ್ನೂ ವಿಧಿಸಲಾಗುವುದು

ಕಾಶ್ಮೀರ್ ಸಾದಾ ಶಾಲುಗಳು, ಬೆಂಗಳೂರ್ ಸಿಲ್ಕ್, ಧರ್ಮಾವರಂ, ಪೂನಾ ಸೀರೆಗಳು ಬಂದಿವೆ.

ಎಂ. ಪಿ. ಭೋಜಯ್ಯ ಬಿ. ಎ.
ಅಂಡ್ ಬ್ರದರ್ಸ್
(ಇಂಡಿಯನ್ ಬ್ಯಾಂಕ್ ಎದುರು)
ಶಿವರಾಂಪೇಟೆ, ಮೈಸೂರು.

GENT'S SOCKS
(Cotton,
(Superfine & Durable)
Available in
Assorted colours
and Standard sizes
Apply to :—
The National Enterprises
[illegible]

ಮತ್ತೆ ದಿವಾನ್-ರೆಡ್ಡಿ ಭೇಟಿ

ಸ್ವಂ.ಸು ಪ್ರೋ] [ಬೆಂಗಳೂರು ೧೧

ದಿವಾನರಿಗೂ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರಿಗೂ ಮೊನ್ನೆ ನಡೆದ ಮಾತುಕತೆಗಳನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪರಿಶೀಲಿಸಿ ಹೆಚ್ಚಿನ ವಿವರಗಳನ್ನು ಪಡೆಯಲು ಈ ದಿನ ಮತ್ತೆ ರೆಡ್ಡಿಯವರು ದಿವಾನರನ್ನು ಭೇಟಿ ಮಾಡಿ ಮಾತುಕತೆ ನಡೆಸಬೇಕೆಂದು ತೀರ್ಮಾನಿಸಿತು. ಅದರಂತೆ ರೆಡ್ಡಿಯವರು ಈ ದಿನ ಮಧ್ಯಾಹ್ನ ೩ ಗಂಟೆಗೆ ಸರ್ ಆರ್ಕಾಟರನ್ನು ಕಾರ್ಲ್‌ಟನ್ ಭವನದಲ್ಲಿ ಭೇಟಿ ಮಾಡಿದರು.

ಗಾಂಧೀಜಿಯವರಿಂದ ೨೪ ಗಂಟೆ ಉಪವಾಸ

ಹಿಂದೂ ಪಂಚಾಂಗ ರೀತ್ಯಾ ಇಂದು ತಮ್ಮ ಜನ್ಮ ದಿನವಾದುದರಿಂದ ಮಹಾತ್ಮ ಗಾಂಧಿಯವರು ನಿನ್ನೆ ಸಂಜೆಯಿಂದ ೨೪ ಗಂಟೆ ಉಪವಾಸ ಕೈಗೊಂಡಿರುವ ವರದಿಯಾಗಿದೆ

ಕಾಶ್ಮೀರ್ ಅರಸರಿಗೆ ಬೆಳ್ಳಿಯ ವಿಮಾನ

ಗ್ಲೋಬ್] ಲಂಡನ್ ೮

ಕಾಶ್ಮೀರ ಸಂಸ್ಥಾನದ ರಾಜರು ಬೆಳ್ಳಿಯಿಂದ ತಯಾರಿಸಿ ಒಳಗಡೆ ಆಭರಣಗಳನ್ನಿಟ್ಟು ಕಟ್ಟಿರುವ ವಿಮಾನವೊಂದನ್ನು ಸಿದ್ಧಮಾಡಿಸಿಕೊಂಡಿರುವರೆಂದು ವರದಿಯಾಗಿದೆ. ಕಾಶ್ಮೀರದ ಪ್ರಜೆಗಳ ಹೋರಾಟವು ಉಗ್ರಗೊಂಡರೆ ತಮ್ಮ ಸುರಕ್ಷತೆಗಾಗಿ ಅವರು ಇದನ್ನು ಉಪಯೋಗಿಸಿಕೊಳ್ಳುವರು. ಅವರ ವಾರ್ಷಿಕ ವರಮಾನ ೨೦ ಲಕ್ಷ ಪೌಂಡುಗಳೆಂದು ಹೇಳಲಾಗಿದೆ.

OPERA TALKIES
PHANTOM
(Full Serial)
2nd Week, from 11-10-47
— with —
TOM TYLER

Morning Shows from
10-10-47 for 4 days
daily at 10-30 a. m.
Home in Indiana
(Tehni Color)
—: With :—
Walter Brennan, Jeanne Crain, June Haver

ಡಾನ್ ಪತ್ರಿಕೆಗೆ ಪ್ರಿ ಸೆನ್ಸಾರ್ ಷಿಪ್ ಆಜ್ಞೆ

ದೆಹಲಿಯ ಮುಸ್ಲಿಂ ಪತ್ರಿಕೆಯಾದ "ಡಾನ್" ಪತ್ರಿಕೆಗೆ ಸರ್ಕಾರದವರು ಪ್ರಿ ಸೆನ್ಸಾರ್ ಷಿಪ್ ಆಜ್ಞೆಯನ್ನು ಜಾರಿ ಮಾಡಿದ್ದಾರೆ ಅಲ್ಲದೆ ಇತರ ಏಳು ಮುಸ್ಲಿಂ ಲೀಗ್ ಪತ್ರಿಕೆಗಳನ್ನೂ ಠೇವಣಿ ಕೊಡಬೇಕೆಂದೂ ಸರ್ಕಾರವು ಕೇಳಿರುವುದಾಗಿ ಗೊತ್ತಾಗಿದೆ.

ಪತ್ರಿಕೆಗೆ ಬಹಿಷ್ಕಾರ

ಸ್ವಂ.ಸು.] [ಬೆಂಗಳೂರು ೧೦

ಆಕ್ಷೇಪಣೀಯಕರವಾದ ಲೇಖನಗಳನ್ನು ಪ್ರಕಟಿಸುತ್ತಿತ್ತೆಂದು ಬೊಂಬಾಯಿನಿಂದ ಪ್ರಕಟವಾಗುತ್ತಿರುವ ಫ್ರೀ ಪ್ರೆಸ್ ಜರ್ನಲ್-ಎಂಬ ಆಂಗ್ಲ ಪತ್ರಿಕೆಯು ಸಂಸ್ಥಾನದೊಳಕ್ಕೆ ಬರಕೂಡದೆಂದು ಸರ್ಕಾರದವರು ಈ ದಿನ ಅದನ್ನು ಬಹಿಷ್ಕರಿಸಿರುತ್ತಾರೆ

ಸೇಲಮ್ಮಿಗೆ ಮೈಸೂರು ಕ್ರಿಕೆಟ್ ಆಟಗಾರರು

ಮೈಸೂರಿನ ಕ್ರಿಕೆಟ್ ಟೀಮಿನವರು ನಾಳೆ ಮತ್ತು ನಾಳಿದ್ದು ಸೇಲಮ್ಮಿನಲ್ಲಿ ಆಟವಾಡಿ ೧೪ ಮತ್ತು ೧೫ ನೇ ತಾರೀಖುಗಳಲ್ಲಿ ತಿರುಚನಾಪಳ್ಳಿಯಲ್ಲಿ ಆಟವಾಡುವರೆಂದು ಗೊತ್ತಾಗಿದೆ

ರಾಜಕಮಲ್
ತಾ|| 11-10-47 ರಿಂದ
ಅಪೋಹೆಷ್ ೩ನೇ ವಾರ
ಮಹಾಕವಿ ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಪಹರಿ ಸನ್ಯಾಲ್, ಸ್ನೇಹಪ್ರಭಾ, ವನಮಾಲ, ಮತ್ತು ಉಲ್ಲಾಸ್

ಮುಂದಿನ ಬದಲಾವಣೆ
ಫಿಲ್ಮಿಸ್ತಾನರವರ
ಸಿಂಧೂರ್

Morning shows for 4 days
from 10-10-47 daily at
10.30 a m.
It's a pleasure
(In Technicolor)
—: Starring :—
Sonji Henie,
Michael O'hae

ಬಾರ್ ಅಸೋಸಿಯೇಷನ್ ಮೇಲೆ ರಾಷ್ಟ್ರಧ್ವಜ

ಮೈಸೂರು ೧[illegible]

ಇಂದು ಬೆಳಿಗ್ಗೆ ರಾಜಧಾನಿಯ ಬಾರ್ ಅಸೋಸಿಯೇಷನ್ ಭವನದ ಮೇಲೆ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣರಾಯರು ಗಾಂಧಿ ಜಯಂತಿ ಪ್ರಯುಕ್ತ ಭಾರತ ರಾಷ್ಟ್ರಧ್ವಜವನ್ನು ಹಾರಿಸಿದರು. ಸಂಜೆ ಅಸೋಸಿಯೇಷನ್ ಆವರಣದಲ್ಲಿ ಭಾಷಣಗಳನ್ನು ಏರ್ಪಡಿಸಲಾಗಿದೆ

○ ಕೋಮುವಾರು ಅಭಿಪ್ರಾಯದ ಮೇ[illegible] ಕಾಶ್ಮೀರ ಸಂಸ್ಥಾನವು ಯಾವ ಡೊಮಿ[illegible]ಯನ್ನನ್ನು ಸೇರುವುದೆಂದು ತೀರ್ಮಾನಿ[illegible]ವುದೆಂದು ಹೇಳುವುದು ತಪ್ಪು. ಯಾ[illegible] ಡೊಮಿನಿಯನ್ ಸರ್ಕಾರವು ಕಾಶ್ಮೀರದ ಸ್ವಾತಂತ್ರ್ಯವನ್ನು ಅಂಗೀಕರಿಸಿ ಅದರ ಅ[illegible]ವೃದ್ಧಿಗಾಗಿ ಸಹಕರಿಸುವುದೋ ಆ ಡೊ[illegible]ನಿಯನ್ನಿಗೆ ಕಾಶ್ಮೀರ ಸಂಸ್ಥಾನವು ಸೇರು[illegible]ದು-ಎಂಬುದಾಗಿ ಷೇಕ್ ಅಬ್ದುಲ್ಲಾರವ[illegible] ತಿಳಿಸಿರುವರು

ಪ್ರತಿ ದಿನ ೩ ಆಟಗಳು
10-10-47 ನೇ
ಶುಕ್ರವಾರದಿಂದ
ನವಯುಗ್‌ರವರ
ರೂಂ ನಂ[illegible]
—: ಪಾತ್ರ :—
ಗೀತಾನಿಜಾಮಿ, ಶ್ಯಾಮ್,
ಕೆ.ಎನ್.ಸಿಂಗ್ ಮುಂತಾದವರು
ಒಲಂಪಿಯಾ ಟಾಕೀಸ್

WOODLANDS
Morning shows from
10-10-47 for 4 days dai[ly]
at 10-30 a.m.
Till we Meet Again
—: Starring :—
Ray Millang,
Barbara Britton

ಹೊಸ ನಾಟಕ ! ಹೊಸ ನಾಟ[ಕ]
ಹಲಗೇರಿ ನಾಟಕ ಮಂ[illegible]
ಇವರು
ಮೈಸೂರು ರತ್ನಾವಳೀ
ಥಿಯೇಟರಿನಲ್ಲಿ
ತಾ|| 11-10-47 ನೇ ಶನಿವಾರ [illegible]
೧೦-೩೦ ಕ್ಕೆ ಮತ್ತು 12-10-47
ಭಾನುವಾರ ಸಂಜೆ ೬-೩೦ ಕ್ಕೆ
ಅಧಿಕಾರ್
ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು
ಕೆ ಸಿ ಚೆಟ್ಟಿಪ್ಪ,
ಪ್ರೊಪ್ರೈಟರ್

MYSORE CITY MUNICIPALITY
(Works Department)

NOTIFICATION

Sealed tenders will be received up to 4 p m on 17-10-47 by the Municipal Engineer for the construction of Maternity Hospital at Nazarbad Mohalla, Mysore

Each tender must be accompanied with a challan for having remitted Rs 3000 in the Municipal Treasury as earnest money. For full particulars please see the detailed notification on the notice board.

S Narayana Swamy.
Municipal Engineer.

Printed and published by A. N. [illegible] at the Sadhvi [illegible] Road Mysore

ಫೋನ್ ನಂ. 608 WEEKLY EDITION ಬಿಡಿ ಪ್ರತಿ: 6 ಕಾಸು

ಸಂಪುಟ ೧೨] ಭಾನುವಾರ ೧೨-೧೦-೪೭ [ಸಂಚಿಕೆ ೧೪

ಪ್ರಭುಗಳವರೊಡನೆ ಕಾಂ॥ ಅಧ್ಯಕ್ಷರ ಭೇಟಿ?

ರಾಜಧಾನಿಗೆ ಕಾರ್ಯಕಾರಿ ಸಮಿತಿ ಸದಸ್ಯರು

ಸ್ವಂ. ಸು. ಫೋ॥] ಬೆಂಗಳೂರು ೧೨

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರು, ಶ್ರೀ ಚೆಂಗಲರಾಯ ರೆಡ್ಡಿಯವರ ಜೊತೆ ಈ ದಿನ ಮಧ್ಯಾಹ್ನ ೧ ಗಂಟೆಗೆ ರಾಜಧಾನಿಗೆ ತೆರಳುವರು.

ಮಹಾರಾಜರಿಗೆ ರೆಡ್ಡಿಯವರಿಂದ ಕಾಂ॥ ಸದಸ್ಯರ ಸೂಚನೆ

ಸ್ವಂ. ಸು. ಫೋ॥] ಬೆಂಗಳೂರು ೧೨

ಈ ದಿನ ಸಂಜೆ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಮಹಾರಾಜರವರನ್ನು ಭೇಟಿ ಮಾಡುವರೆಂದು ಹೇಳಲಾಗಿದೆ. ಆಗ ಅವರು ಹೊಸ ಸರ್ಕಾರದ ಕಾಂಗ್ರೆಸ್ ಸಚಿವರುಗಳ ಹೆಸರುಗಳನ್ನು ಸೂಚಿಸುವರೆಂದು ನಿರೀಕ್ಷಿಸಲಾಗಿದೆ.

ನೂತನ ಮಂತ್ರಿಮಂಡಲ

ಸ್ವಂ. ಸು. ಫೋ॥] ಬೆಂಗಳೂರು ೧೨

ತಾತ್ಕಾಲಿಕ ಸರ್ಕಾರವಿರುವ ಪರ್ಯಂತವೂ ದಿವಾನರ ಸ್ಥಾನವು ಇರುತ್ತದೆ. ಅವರ ಅಧಿಕಾರ ಮಿತಗೊಳಿಸಲ್ಪಟ್ಟಿರುತ್ತದೆ. ಮಂತ್ರಿಮಂಡಲಿಯಲ್ಲಿ ೧೦ ಮಂದಿ ಸಚಿವರಿರುತ್ತಾರೆ. ಆ ಪೈಕಿ ಕಾಂಗ್ರೆಸ್ ಸಂಸ್ಥೆಯಿಂದ ಐದು ಮಂದಿ ಆರಿಸಲ್ಪಡುವರು. ದಿವಾನರ ಜೊತೆ ಮಿಕ್ಕ ನಾಲ್ವರನ್ನು ಶ್ರೀಮನ್ಮಹಾರಾಜರವರು ಕಾಂಗ್ರೆಸ್ಸಿನೊಡನೆ ಪರ್ಯಾಲೋಚನೆ ನಡೆಸಿ ನೇಮಿಸುವರು ಎಂದು ದಿವಾನರೊಡನೆ ಒಪ್ಪಂದವಾಗಿದೆ.

ದಿವಾನರು ರಾಜಧಾನಿಗೆ

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಈ ದಿನ ಮಧ್ಯಾಹ್ನದ ವೇಳೆಗೆ ರಾಜಧಾನಿಗೆ ಆಗಮಿಸುವರು. ಸಂಜೆ ೬ ಗಂಟೆಯ ವೇಳೆಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ದಿವಾನರನ್ನು ಭೇಟಿ ಮಾಡುವರು.

ಚಳುವಳಿಯ ಮುಕ್ತಾಯ

ಕಾಂಗ್ರೆಸ್ಸು ಜವಾಬ್ದಾರೀ ಸರ್ಕಾರದ ಸ್ಥಾಪನೆಯಾಗಬೇಕೆಂಬುದಕ್ಕಾಗಿ ಹೂಡಿ ಸತ್ಯಾಗ್ರಹದ ಗುರಿಯು ಈಡೇರುತ್ತದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಾಳೆ ಸತ್ಯಾಗ್ರಹವನ್ನು ಮುಕ್ತಾಯಗೊಳಿಸುವುದೆಂದು ನಿರೀಕ್ಷಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ಸ್ವಾಗತ

ನಗರ ಕಾಂಗ್ರೆಸ್ ಸಮಿತಿಯ ಕಾರ್ಯಕ್ರಮ

೪ ಗಂಟೆಗೆ ಶ್ರೀರಂಗಪಟ್ಟಣದ ಟೋಲ್ ಬಳಿ ಸ್ವಾಗತ

ದೊಡ್ಡಪೇಟೆಯ ಮಾರ್ಗವಾಗಿ ಮೆರವಣಿಗೆ

ಸಂಜೆ ೬ ಗಂಟೆಗೆ ಸುಬ್ಬರಾಯನ ಕೆರೆ ಮೈದಾನದಲ್ಲಿ ಭಾಷಣ

ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಚೆನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ಸಾರ್ವಜನಿಕರು ಭಾಗವಹಿಸಬೇಕೆಂದು ಕೋರಲಾಗಿದೆ.

ನಗರ ಕಾಂಗ್ರೆಸ್ ಸಮಿತಿ
ಮೈಸೂರು

ಸೂಚನೆ

ವಿಜಯದಶಮಿಯ ಪ್ರಯುಕ್ತ ಪತ್ರಿಕೆಗೆ ನಾಳೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ

ಕಾಂಗ್ರೆಸ್ಸಿಗೂ ಸರಕಾರಕ್ಕೂ ಒಪ್ಪಂದವಾಯಿತು

ಸ್ವಂ. ಸು. ಫೋ॥] ಬೆಂಗಳೂರು ೧೨

ನಿನ್ನೆ ಮಧ್ಯಾಹ್ನ ೩ ಗಂಟೆಯಿಂದ ೪॥ ಗಂಟೆಯ ವರೆಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರಿಗೂ, ಮೈಸೂರಿನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೂ ಭೇಟಿ ನಡೆಯಿತು. ತಾತ್ಕಾಲಿಕ ಸರ್ಕಾರ ಮತ್ತು ರಾಜ್ಯಾಂಗ ರಚನಾ ಸಭೆಯ ಬಗ್ಗೆ ಚರ್ಚೆ ನಡೆದು ದಿವಾನರು ಹಲವು ಸ್ಪಷ್ಟ ಸಲಹೆಗಳನ್ನಿತ್ತರು. ಶ್ರೀ ರೆಡ್ಡಿಯವರು ಮತ್ತು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಆ ಸಲಹೆಗಳನ್ನು ಮಂಡಿಸಿ ಪರಿಶೀಲನೆ ನಡೆಸಿದ ನಂತರ ಮೂರನೆಯ ಬಾರಿ ೭॥ ಗಂಟೆಗೆ ಮತ್ತೆ ದಿವಾನರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿ ೮ ಗಂಟೆಗೆ ಒಪ್ಪಂದಕ್ಕೆ ಬಂದರು. ಅನಂತರ ಮತ್ತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದು ಶ್ರೀ ಚೆಂಗಲರಾಯ ರೆಡ್ಡಿಯವರು ಈ ಒಪ್ಪಂದವನ್ನು ಸದಸ್ಯರಿಗೆ ತಿಳಿಸಿದರು.

ಬಿನ್ನಿ ಗಿರಣಿ ಕೆಲಸಗಾರರ ಮುಷ್ಕರ

ಆಡಳಿತ ವರ್ಗದವರು ಕೊಡುವುದಾಗಿ ಹೇಳಿದ್ದ ಒಂದು ತಿಂಗಳ ಬೋನಸ್ಸನ್ನು ಕೊಡಲಿಲ್ಲವೆಂದು ಹೇಳಿ ನಿನ್ನೆ ಬಿನ್ನಿ ಗಿರಣಿಯ ಕೆಲಸಗಾರರು ಕೆಲಸ ಮಾಡದೆ ಮುಷ್ಕರ ನಡೆಸಿದರು.

ಅರಬ್ಬರು ಯುದ್ಧ ಹೂಡಲು ಸಿದ್ಧರಾಗಿದ್ದಾರೆ

ಬ್ರಿಟಿಷರು ತಮ್ಮ ಹೇಳಿಕೆಯಂತೆ ಪ್ಯಾಲೆಸ್ಟೈನನ್ನು ತ್ಯಜಿಸಿದರೆ ಆಗ ಅದನ್ನು ರಕ್ಷಿಸಿಕೊಳ್ಳಲು ಯೆಹೂದ್ಯರ ವಿರುದ್ಧವಾಗಿ ಯುದ್ಧ ಹೂಡಲೂ ಸಹ ಅರಬ್ಬರು ಸಿದ್ಧತೆಗಳನ್ನು ಮಾಡಿಕೊಂಡಿರುವರೆಂದು ವರದಿಯಾಗಿದೆ. ಲೆಬನಾನಿನಲ್ಲಿ ಸೇರಿದ್ದ ೫ ಅರಬ್ ರಾಷ್ಟ್ರಗಳ ಮುಖ್ಯ ಮಂತ್ರಿಗಳ ಗುಪ್ತ ಸಮ್ಮೇಳನದಲ್ಲಿ ಇದನ್ನು ನಿರ್ಧರಿಸಲಾಗಿದೆ. ಪ್ಯಾಲೆಸ್ಟೈನ್ ಗಡಿಗೆ ಈಜಿಪ್ಟ್ ಸಿರಿಯದ ಸೇನಾ ಪಡೆಗಳು ಹೊರಟಿವೆಯೆಂದು ಅರಬ್ ಲೀಗಿನ ಕಾರ್ಯದರ್ಶಿಗಳಾದ ಅಜಾಂಪಾಷಾರವರು ತಿಳಿಸಿದ್ದಾರೆ.

ರಾಜಕೀಯ ಬಂದಿಗಳ ಬಿಡುಗಡೆ

ಸ್ವಂ. ಸು. ಫೋ॥] ಬೆಂಗಳೂರು ೧೨

ಬಂಧನದಲ್ಲಿರುವ ಎಲ್ಲ ರಾಜಕೀಯ ಬಂದಿಗಳ ಬಿಡುಗಡೆಯ ಆಜ್ಞೆಯೂ ಈ ದಿನ ಹೊರಬೀಳುವುದೆಂದು ನಿರೀಕ್ಷಿಸಲಾಗಿದೆ.

ದಿವಾನ್-ರೆಡ್ಡಿ ಭೇಟಿ ಬಗ್ಗೆ ಪತ್ರಿಕಾ ಪ್ರಕಟನೆ

ಸ್ವಂ. ಸು. ಫೋ॥] ಬೆಂಗಳೂರು ೧೨

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರವಾಗಿ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರೂ, ಮೈಸೂರು ಸರ್ಕಾರದ ಪರವಾಗಿ ಸಂಸ್ಥಾನದ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರೂ ಕಳೆದ ಎರಡು ದಿನಗಳಿಂದ ನಡೆದ ಮಾತುಕತೆಗಳ ಪರಿಣಾಮವಾಗಿ ಹೊಸ ಮಂತ್ರಿಮಂಡಲದ ರಚನೆ ಮತ್ತು ಅದಕ್ಕಾಗಿ ಅನುಸರಿಸಬೇಕಾದ ಪದ್ಧತಿಗಳ ಬಗ್ಗೆ ಒಮ್ಮತವಾದ ನಿರ್ಧಾರಕ್ಕೆ ಬಂದಾಗಿದೆ. ಪೂರ್ಣ ಜವಾಬ್ದಾರೀ ಸರ್ಕಾರದ ಸ್ಥಾಪನೆಗೆ ಬೇಕಾದ ರಾಜ್ಯಾಂಗ ಮಸೂದೆಯನ್ನು ರಚಿಸಲು ರಾಜ್ಯಾಂಗ ರಚನಾ ಸಮಿತಿಯನ್ನು ನಿರ್ಮಿಸುವ ವಿಷಯವಾಗಿಯೂ ಸಹ ಒಪ್ಪಂದವಾಗಿದೆ. ಈ ಅಂಗೀಕೃತವಾದ ಸಲಹೆಗಳು ಶ್ರೀಮನ್ಮಹಾರಾಜರವರ ಪರ್ಯಾಲೋಚನೆ ಮತ್ತು ಅಂಗೀಕಾರಕ್ಕಾಗಿ ಕಾದಿರಿಸಲ್ಪಟ್ಟಿವೆ.

The Dewan and the President on behalf of the Working Committee had talks during last two days and as a result has come to certain agreed Conclusions regarding constitution of a fresh ministry and the method of constituting it Agreement has also been reached on the method of setting up of a Constituent Assembly to frame a draft Constitution BILL for providing full Responsible Government. Agreed Proposals now await His Highness' Consideration and approval.

ಈ ದಿನವೇ ರಾಜಘೋಷಣೆಯೇ?

ಮೈಸೂರು ೧೨

ನಮ್ಮ ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಈ ದಿನದೊಳಗಾಗಿಯೇ ರಾಜಘೋಷಣೆಯೊಂದನ್ನು ದಯಪಾಲಿಸುವ ನಿರೀಕ್ಷೆ ಇದೆ.

ಗಾಂಧೀ ಜಯಂತಿ ಸಪ್ತಾಹ

ಮೈಸೂರು ೧೧

ರಾಜಧಾನಿಯ ಕಾಳಮ್ಮನ ಗುಡಿ ಬಳಿ ಇರುವ ಇಂಡಿಯನ್ ಫುಟ್‌ಬಾಲ್ ಕ್ಲಬ್ಬಿನವರು ಕಳೆದ ೩ ನೇ ತಾರೀಖಿನಿಂದ ಏರ್ಪಡಿಸಿದ್ದ ಗಾಂಧೀಜಯಂತಿ ಉತ್ಸವವು ಇಂಡಿಯನ್ಸ್ ಫುಟ್‌ಬಾಲ್ ಕ್ಲಬ್ ಪ್ರೆಸಿಡೆಂಟರಾದ ಶ್ರೀ ಇ. ಪಿ. ಸಚ್ಚಿದಾನಂದ ಗಿರಿಯವರ ಮುಂದಾಳತ್ವದಲ್ಲಿ ನಿನ್ನೆ ಮುಕ್ತಾಯಗೊಂಡಿತು.

ನಿನ್ನೆ ಮಧ್ಯಾಹ್ನ ಮಹಾತ್ಮ ಗಾಂಧಿಯವರ ಭಾವ ಚಿತ್ರವನ್ನು ಭಾರತ ಮಾತೆಯ ಭಾವ ಚಿತ್ರದೊಡನೆ ಅಲಂಕರಿಸಿ ಎರಡು ಜೋಡಿ ಎತ್ತುಗಳನ್ನು ಕಟ್ಟಿದ ರಥದಲ್ಲಿ ಮೆರವಣಿಗೆ ಮಾಡಲಾಯಿತು. ದಾರಿಯುದ್ದಕ್ಕೂ ಉತ್ಸಾಹೀ ತರುಣರ ಜಯ ಘೋಷಗಳು ನಭೋ ಮಂಡಲವನ್ನು ಭೇದಿಸುತ್ತಿದ್ದುವು. ನಗರದ ಮುಖ್ಯ ಬೀದಿಗಳನ್ನು ಹಾದು ಮೆರವಣಿಗೆಯು ರಾತ್ರಿ ೧೧ ಗಂಟೆಯ ವೇಳೆಗೆ ಸಂಘವನ್ನು ತಲುಪಿತು.

ಅನಂತರ ನೇತಾಜಿ ಸಂಘದ ನಾಯಕರಾದ ವಿದ್ಯಾರ್ಥಿ ಶ್ರೀ॥ ಎಸ್. ನರಸಿಂಹ ಅಯ್ಯಂಗಾರ್ಯರು ಮಹಾತ್ಮರ ಜೀವನವನ್ನು ಕುರಿತು ಭಾಷಣ ಮಾಡಿದರು. ಮಂಗಳ, ರಾಷ್ಟ್ರ ಗೀತೆ ಮತ್ತು ಪ್ರಸಾದ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಪೋಲೀಸ್ ಅಧಿಕಾರಿಗಳನ್ನು ವಿಚಾರಣೆಗೆ ಗುರಿಪಡಿಸಬೇಕು

ಚೌಡಯ್ಯನವರ ಭಾಷಣ

ಮೈಸೂರು ೧೨

ಪೂಜ್ಯ ಬಾಪೂಜಿಯವರ ಜನ್ಮೋತ್ಸವದ ಪ್ರಯುಕ್ತ ನಿನ್ನೆ ಸಂಜೆ ಪಟ್ಟಣದ ಕೆರೆಯಲ್ಲಿ ಭಾರಿ ಬಹಿರಂಗ ಸಭೆಯು ಸೇರಿತ್ತು.

ಕಾಂಗ್ರೆಸ್ಸಿನವರು ಜವಾಬ್ದಾರೀ ಸರ್ಕಾರವನ್ನು ಪಡೆಯುವ ಸಲುವಾಗಿ ಅಹಿಂಸಾತ್ಮಕವಾದ ಹೋರಾಟವನ್ನು ನಡೆಸುತ್ತಿದ್ದಾರೆ. ಈ ನಿರಪರಾಧಿಗಳಾದ ಸತ್ಯಾಗ್ರಹಿಗಳ ಬಗ್ಗೆ ಸರ್ಕಾರದವರೂ ಪೋಲೀಸಿನವರೂ ಅನುಸರಿಸುತ್ತಿರುವ ವರ್ತನೆ ಖಂಡನೀಯ. ನಿರಪರಾಧಿಗಳಾದ ಅನೇಕ ಮಂದಿ ಪೋಲೀಸರ ಲಾಠೀ ಛಾರ್ಜು, ಗೋಲೀಬಾರುಗಳಿಗೀಡಾಗಿ ಮರಣಗೊಂಡಿದ್ದಾರೆ. ಉಳಿದವರು ಗಾಯಗೊಂಡಿದ್ದಾರೆ. ಇಂದಲ್ಲ ನಾಳೆ ಅವರು ತಮ್ಮ ಈ ದೌರ್ಜನ್ಯ ಕೃತ್ಯಕ್ಕಾಗಿ ನ್ಯಾಯಾಲಯದಲ್ಲಿ ವಿವರಣೆ ಕೊಡಬೇಕಾಗುತ್ತದೆ. ಜವಾಬ್ದಾರೀ ಸರ್ಕಾರದ ಸ್ಥಾಪನೆಯಾದೊಡನೆಯೇ ಅವರುಗಳನ್ನು ನ್ಯಾಯಾಲಯದ ಮುಂದೆ ನಿಲ್ಲಿಸುವುದು ನಮ್ಮ ಪ್ರಥಮ ಕರ್ತವ್ಯವೆಂಬುದಾಗಿ ಶ್ರೀ ಚೌಡಯ್ಯನವರು ಭಾಷಣ ಮಾಡುತ್ತಾ ತಿಳಿಸಿದರು. ಶ್ರೀ ಕೆ. ರಾಮಸ್ವಾಮಿ-ಮೊದಲಾದವರು ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಯ ಮಹತ್ವವನ್ನು ವಿವರಿಸಿದರು. ಅನಂತರ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯಗೊಂಡಿತು.

ನಿನ್ನೆ ಸಂಜೆ ಗಾಂಧೀಜಿಯವರ ಜಯಂತಿಯ ಪ್ರಯುಕ್ತ ಪಟೇಲರುಗಳ ಸಂಘದ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು. ವಕೀಲರಾದ ಶ್ರೀ॥ ಕೆ. ಎಸ್. ನಾರಾಯಣರಾವ್-ಮೊದಲಾದವರು ಗಾಂಧೀಜಿಯವರು ಭಾರತ ಸ್ವಾತಂತ್ರ್ಯಕ್ಕಾಗಿ ನಡೆಸಿದ ಸಂಸ್ಮರಣೀಯವಾದ ಹೋರಾಟ, ಹರಿಜನರ ಉನ್ನತಿಗಾಗಿ ಕೈಗೊಂಡ ಕಾರ್ಯಗಳನ್ನು ಕುರಿತು ಭಾಷಣ ಮಾಡಿದರು.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೧೨-೧೦-೪೭ ರಿಂದ ೧೮-೧೦-೪೭ ರ ವರೆಗೆ

ಮೇಷ — ಆರೋಗ್ಯ ಸಾಧಾರಣ ಧನಲಾಭ ಉತ್ತಮ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ಪ್ರಗತಿ ಅಧಿಕಾರಿ ವರ್ಗದವರಿಂದ ಸನ್ಮಾನ, ಮಂಗಳ ಕಾರ್ಯಗಳಿಗಾಗಿ ಖರ್ಚು, ತಾ|| ೧೪, ೧೫ ಲಾಭ, ಪ್ರವಾಸ

ವೃಷಭ — ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಕಡಿಮೆ, ಧನಲಾಭ ಚೆನ್ನಾಗಿರುತ್ತದೆ ವ್ಯವಹಾರಗಳಲ್ಲಿ ಶತ್ರುಗಳಿಂದ ತೊಂದರೆ. ತಾ|| ೧೫, ೧೭ ಚಿಂತೆ ನಷ್ಟ.

ಮಿಥುನ — ದೇಹಸ್ಥಿತಿ ಚೆನ್ನಾಗಿರುತ್ತದೆ, ಆರ್ಥಿಕ ಬಿಕ್ಕಟ್ಟು ಹೆಚ್ಚು, ಖರ್ಚು ಅಧಿಕ, ಉದ್ಯೋಗ, ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸಹಾಯ, ತಾ|| ೧೪, ೧೮ ಲಾಭ, ಸಂತೋಷ.

ಕಟಕ — ಆರೋಗ್ಯ ಕೆಡುತ್ತದೆ, ಧನಲಾಭ ಉತ್ತಮ, ವೈದ್ಯರಿಗೆ ಹೆಚ್ಚು ಖರ್ಚು, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಮಿತ್ರದರ್ಶನ ತಾ|| ೧೬, ೧೭ ಚಿಂತೆ, ಕಲಹ

ಸಿಂಹ — ದೇಹ ಸ್ಥಿತಿ ಉತ್ತಮ, ಧನಲಾಭ ಚೆನ್ನಾಗಿರುತ್ತದೆ, ವ್ಯಾಪಾರಾದಿಗಳಲ್ಲಿ ವಿಶೇಷ ಸಹಾಯ, ಬಂಧುಗಳ ಆಗಮನದಿಂದ ಧನವ್ಯಯ, ತಾ|| ೧೪ ೧೭ ಲಾಭ, ಪ್ರವಾಸ

ಕನ್ಯಾ — ಆರೋಗ್ಯ ಉತ್ತಮ, ಧನಲಾಭ ಕಡಿಮೆ, ಉದ್ಯೋಗದಲ್ಲಿ ಮನ್ನಣೆ, ಮಿತ್ರ ದರ್ಶನ, ಮೇಲ್ವಿಚಾರಕರಿಂದ ಸನ್ಮಾನ, ವಿಶೇಷ ಧನವ್ಯಯ, ತಾ|| ೧೩, ೧೫ ಲಾಭ, ಸಂತೋಷ,

ತುಲಾ — ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ಪ್ರಗತಿ, ಬಂಧು ವರ್ಗದವರಿಂದ ಸನ್ಮಾನ, ತಾ|| ೧೬, ೧೭ ಚಿಂತೆ, ನಷ್ಟ.

ವೃಶ್ಚಿಕ — ದೇಹಸ್ಥಿತಿ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಡಿಮೆ, ಉದ್ಯೋಗ ವ್ಯವಹಾರಗಳಲ್ಲಿ ತೊಡಕುಗಳು, ಮಿತ್ರರೊಡನೆ ಕಲಹ, ತಾ|| ೧೫ ೧೮ ಲಾಭ, ಸನ್ಮಾನ

ಧನಸ್ಸು — ಮಾನಸಿಕ ಚಿಂತೆ ಕಡಿಮೆ, ಧನವ್ಯಯ ಹೆಚ್ಚು ಶತ್ರುಗಳಿಂದ ತೊಡಕುಗಳು, ಮಂಗಳ ಕಾರ್ಯಗಳಿಗಾಗಿ ಬಂಧುಗಳ ಆಗಮನ, ತಾ|| ೧೪, ೧೭ ನಷ್ಟ ಚಿಂತೆ.

ಮಕರ — ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಪ್ರವಾಸದಿಂದ ಲಾಭ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ|| ೧೫, ೧೮ ಚಿಂತೆ, ಅಪಘಾತ.

ಕುಂಭ — ಸಾಧಾರಣ ದೇಹಾರೋಗ್ಯ, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ಧನಾದಾಯ ಉತ್ತಮ, ತಾ|| ೧೭, ೧೮ ಲಾಭ, ಶಾಂತಿ

ಮೀನ — ಆರೋಗ್ಯ ಕೆಡುತ್ತದೆ, ಖರ್ಚು ಹೆಚ್ಚು, ಅಧಿಕಾರಿಗಳಿಂದ ಸನ್ಮಾನ, ಬಂಧುಗಳಿಂದ ತಿರಸ್ಕಾರ, ತಾ|| ೧೫, ೧೭ ಪ್ರವಾಸ, ಕಲಹ

WOODLANDS

Morning shows from 10-10-47 for 4 days daily at 10-30 a.m

Till we Meet Again

—: Starring :—
Ray Millang,
Barbara Britton

GENT'S SOCKS
(Cotton)
(Superfine & Durable)
Available in
Assorted colours
and Standard Sizes
Apply to :-
The National Enterprises
448 Viceroy Road Mysore

ಚಾಮುಂಡೇಶ್ವರೀ ಟಾಕೀಸ್
12-10-47 ರಿಂದ
ಪ್ರತಿದಿನ 3 ಪ್ರದರ್ಶನಗಳು
● ನವರಾತ್ರಿ, ಹಬ್ಬದ ಪ್ರಯುಕ್ತ ●
★ದೈವನೀತಿ★
(ತಮಿಳು)
—: ಮುಖ್ಯ ಪಾತ್ರ :—
ಪಿ ಕಣ್ಣಾಂಬ, ಕಳಾಂತಲಾ,
ಪಿ ಎ ಚೆಲ್ಲಪ್ಪ, ಡೊರೈ ರಾಜ್.

ರಾಜಕಮಲ್
ತಾ|| 11-10-47 ರಿಂದ
ಅಮೋಘ ೨ನೇ ವಾರ
ಮಹಾಕವಿ ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಪಟುರಿ ಸನ್ಯಾಲ್, ಸ್ನೇಹಪ್ರಭಾ,
ವನಮಾಲಾ, ಮುತ್ತು ಉಲ್ಲಾಸ್

17-10-47 ರಿಂದ
ರಾಜಕಮಲ್ ಕಲಾಮಂದಿರದವರ
ಜೀವನ್ ಯಾತ್ರ

Morning shows for 4 days from 10-10-47 daily at 10-30 a m.
It's a pleasure
(In Technicolor)
—: Starring :—
Sonji Henie,
Michael O'ae

ಪ್ರತಿ ದಿನ ೩ ಆಟಗಳು
10-10-47 ನೇ
ಶುಕ್ರವಾರದಿಂದ
ನವಯುಗದವರ
ರೂಂ ನಂ 9
—: ಪಾತ್ರ :—
ಗೀತಾನಿಜಾಮಿ, ಶ್ಯಾಮ್,
ಕೆ.ಎಸ್. ಸಿಂಗ್ ಮತ್ತಿತರರು
ಒಲಂಪಿಯಾ ಟಾಕೀಸ್

Edited printed and published by A. R. Nagarajan at the Sadhvi Press D Subbaiah Road Mysore

೧೮೦ ಜನರಿಗೆ ೧ ತಿಂಗಳ ಶಿಕ್ಷೆ

ನಂಜನಗೂಡು

ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ-ಈ ಗ್ರಾಮಗಳ ಸ... ಗಳಿಗೆ ಇಲ್ಲಿನ ನ್ಯಾಯಸ್ಥಾನದಲ್ಲಿ ಒಂದು ತಿಂಗಳ ಸಾದಾ ಶಿಕ್ಷೆ ವಿಧಿಯಿತು. ಮತ್ತು ಚಾಮರಾಜನಗರ ಜನಗೂಡಿನ ೩೦ ಜನರು ಮಾತ್ರ ಗಳ ಮೇಲೆ ಹಾಕಿರುವ ಚಾರ್ಜ್ ... ಸುಳ್ಳೆಂದು ತಪ್ಪು ಒಪ್ಪದಿಲ್ಲವಾಗಿ ... ಕದ್ದಮೆಯನ್ನು ಈ ಮಾಹೆ ೨೦-... ಮುಂದುವರಿಸಲಾಗಿದೆ.

ಬಚ್ಚಿಟ್ಟ ಸಾರಾಯಿ

ನೆನ್ನೆ ಇಲ್ಲಿನ ಎಕ್ಸೈಜು ಇಲಾ... ಶ. ಆರ್ ಶ್ರೀಕಂಠಯ್ಯನವರು ... ಕೇಂದ ಕಂಟ್ರಾಕ್ಟರ ಮನೆಯಲ್ಲಿ ... ದ್ದ ೨೦೦ ಗ್ಯಾಲನ್ನಿನಷ್ಟು ಸಾರಾ... ನ್ನು ಪತ್ತೆ ಮಾಡಿರುವರೆಂದು ತಿಳಿ... ದಿದೆ

ಸಾಧ್ವಿ
ಈಗ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ

ಗರ್ಭ ರಕ್ಷಿಣಿ
ಅನೇಕರು ಅನುಭವ ಸಿದ್ಧ ಔಷಧಿ
ಇದರಿಂದ ಗರ್ಭದಲ್ಲಿರುವ ... ದೃಢವಾಗಿ ಬೆಳೆದು ಗರ್ಭಸ್ರಾವವನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ತೊಂದರೆಯೂ ಇಲ್ಲದೆ ಸರಾಗವಾಗಿ ಆಗುತ್ತದೆ.
ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾವ
ಡಿ|| ಬೋರ್ಡ್ ವೈದ್ಯ, ಅರಕಲ...
ಚಾಮರಾಜನಗರ ತಾ||

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.

ಮೈಸೂರು ಅಡಿಷನಲ್ ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ

ನಂ 521/47-48

ವಾದಿ :— ಎಸ್ ಶ್ರೀರಂಗಾಚಾರ್,
V/S ಪ್ರತಿವಾದಿ: ಸಿ. ಎಸ್. ರಾವ್

ಪ್ರತಿವಾದಿಯಿಂದ ವಾದಿಗೆ ಬರಬೇಕಾಗಿರುವ ... ಬಾಕಿಗಾಗಿ ... ದಾಖಲಿಸಿದ್ದ ... ತಾ|| ೧೭-೧೦-೪೭ ... [illegible] ... ಸದರಿಗಳು ... [illegible]

ಶ್ರೀ ಗಣೇಶ ಟಾಕೀಸ್
೧೨-೧೦-೪೭ ರಿಂದ
ಪ್ರತಿ ದಿನ ೩ ಪ್ರದರ್ಶನಗಳು



○ ನವರಾತ್ರಿ ಹಬ್ಬದ ಪ್ರಯುಕ್ತ ○
ದೇವತೆ (?)
(ತಮಿಳು)
—: ಮುಖ್ಯ ಭೂಮಿಕೆಯಲ್ಲಿ :—
ಸೂರ್ಯಕುಮಾರಿ
ಜೇಮ್ಸ್ ...
ಟಿ. ...

ಫೋನ್ ನಂ. 508 || ವಂದೇ ಮಾತರಂ || ಅಂದಿನ ಪತ್ರಿಕೆ:3 ಕಾಸು

ಸೋಮವಾರ] ೧೪-೧೦-೪೭ [ವಿಶೇಷ ಸಂಚಿಕೆ

ಮೈಸೂರು ಸತ್ಯಾಗ್ರಹವು ಮುಕ್ತಾಯವಾಯಿತು

ಕಾಂಗ್ರೆಸ್ ಅಧ್ಯಕ್ಷರಿಗೆ ಅದ್ಭುತ ಸ್ವಾಗತ

ಮೈಸೂರು ೧೩

ಮೊದಲೇ ತಿಳಿಸಿದ್ದಂತೆ ನಿನ್ನೆ ಸಂಜೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಚೆಂಗಲರಾಯರೆಡ್ಡಿಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೊಡಗೂಡಿ ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸಿದರು. ಅಧ್ಯಕ್ಷರಿಗೆ ಮೈಸೂರು ಟೋಲುಗೇಟಿನ ಬಳಿ ಅದ್ಭುತವಾದ ಸ್ವಾಗತವನ್ನು ನೀಡಲಾಯಿತು.

ಅನಂತರ ಅಧ್ಯಕ್ಷರ ಮೆರವಣಿಗೆಯು ...ಪೇಟೆಯ ಮಾರ್ಗವಾಗಿ ... ವರೆಗೆ ಬಂದು ಶ್ರೀ|| ಎಸ್. ಚ...ಪ್ಪನವರ ಮನೆಯನ್ನು ತಲಪಿತು. ದಾರಿಯುದ್ದಕ್ಕೂ ಅನೇಕ ಗಣ್ಯ ಮಹನೀಯರೂ, ವರ್ತಕರೂ ಅಧ್ಯಕ್ಷರಿಗೆ ಹಾರವನ್ನು ಹಾಕಿದರು. ಜನ ಸಂದಣಿಯು ಅಪರಿಮಿತವಾಗಿ ನೆರೆದಿತ್ತು.

ಶ್ರೀಮನ್ಮಹಾರಾಜರೊಡನೆ ಏರ್ಪಡಿಸಲಾಗಿದ್ದ ಭೇಟಿಗಾಗಿ ಅಧ್ಯಕ್ಷರು ನಿನ್ನೆ ಸಂಜೆ ೬-೩೦ ಘಂಟೆಗೆ ದಿವಾನರೊಡನೆ ಅರಮನೆಗೆ ತೆರಳಿದರು. ಅವರೊಡನೆ ಭೇಟಿಯಲ್ಲಿ ಭಾಗವಹಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರೂ ತೆರಳಿದ್ದರು. ಅರಮನೆಯ ಬಳಿಯೂ ಸಹ ಜನಸ್ತೋಮವು ಕಿಕ್ಕಿರಿದು ನೆರೆದಿತ್ತು.

ಪ್ರಭುಗಳವರೊಡನೆ ಅಧ್ಯಕ್ಷರ ಭೇಟಿಯು ಸುಮಾರು ೩೦ ನಿಮಿಷಗಳ ಕಾಲ ನಡೆಯಿತು. ಅನಂತರ ಶ್ರೀ|| ರೆಡ್ಡಿಯವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರನ್ನು ಪ್ರಭುಗಳವರಿಗೆ ಪರಿಚಯ ಮಾಡಿಕೊಟ್ಟರು. ಶ್ರೀಮನ್ಮಹಾರಾಜರು ಪ್ರತಿಯೊಬ್ಬರಿಗೂ ಹಸ್ತಲಾಘವವಿತ್ತು ನಾಡಿ... ಕಷ್ಟಪಟ್ಟದ್ದಕ್ಕಾಗಿ ರಾಜಭಕ್ತಿಗಾಗಿ ಅವರನ್ನು ಅಭಿನಂದಿಸಿದರು. ಭೇಟಿಯನ್ನು ಮುಕ್ತಾಯಗೊಳಿಸುವುದಕ್ಕಾಗಿ ಶ್ರೀ|| ಎಚ್. ಸಿ. ದಾಸಪ್ಪನವರು ಮಹಾಪ್ರಭುಗಳವರನ್ನು ಅಭಿನಂದಿಸಿದರು.

"ಸಮಸ್ತರಿಗೂ ಸುಖ, ಶಾಂತಿ, ಸಂತೋಷವು ದೊರಕಬೇಕಾದರೆ ಪ್ರಜಾ ಬೆಂಬಲವು ಸರ್ಕಾರಕ್ಕೆ ಮುಖ್ಯ" ಎಂದು ಶ್ರೀಮನ್ಮಹಾರಾಜರು ತಿಳಿಸಿ ಪ್ರಜಾನಾಯಕರಲ್ಲಿ ತಮಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವ್ಯಕ್ತಪಡಿಸಿದರು. ಮುಖಂಡರು ಅರಮನೆಯಿಂದ ಹೊರಬಿದ್ದನಂತರ ವರ್ಕಿಂಗ್ ಕಮಿಟಿ ಅಧಿವೇಶನವು ನಡೆಯಿತು.

ಬಹಿರಂಗ ಸಭೆ

ನಿನ್ನೆ ರಾತ್ರಿ ೮|| ಘಂಟೆ ವೇಳೆಗೆ ...ಯ ನ ಕೆರೆಯಲ್ಲಿ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆಗೆ ಅಧ್ಯಕ್ಷರು ತಮ್ಮ ಅನುಯಾಯಿಗಳೊಡನೆ ತೆರಳಿದರು. ... ಅಂಗಳವೆಲ್ಲಾ ಭರ್ತಿಯಾಗಿ ಸುಮಾರು ೩೦ ಸಾವಿರ ಪ್ರೇಕ್ಷಕರು ಅಧ್ಯಕ್ಷರ ಭಾಷಣವನ್ನು ಕೇಳಲು ನೆರೆದಿದ್ದರು. ಲೌಡ್ ಸ್ಪೀಕರ್ ವ್ಯವಸ್ಥೆಯನ್ನು ಮಾಡಲಾಗಿತ್ತು. ಅಧ್ಯಕ್ಷರು ಸಭೆಗೆ ಆಗಮಿಸುತ್ತಲೇ ಸಭಿಕರು ಅವರನ್ನು ಜಯಘೋಷದೊಡನೆ ಸ್ವಾಗತಿಸಿದರು. ಸಭಾಧ್ಯಕ್ಷತೆಯನ್ನು ಮೈಸೂರು ನಗರ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ|| ಎಚ್. ಚನ್ನಯ್ಯನವರು ವಹಿಸಿದ್ದರು.

ಶ್ರೀ|| ಚನ್ನಯ್ಯನವರು ಮೈಸೂರು ... ಇಂದು ಗಳಿಸಿರುವ ಜಯವನ್ನು ಸೂಕ್ಷ್ಮವಾಗಿ ವಿವರಿಸಿ ಕಾಂಗ್ರೆಸ್ ಅಧ್ಯಕ್ಷ ಶ್ರೀ|| ಚೆಂಗಲರಾಯರೆಡ್ಡಿಯವರಿಗೆ ಹಾರವನ್ನರ್ಪಿಸಿ, ಅವರು ಭಾಷಣ ಮಾಡಬೇಕೆಂದು ಪ್ರಾರ್ಥಿಸಿದರು. ಅನಂತರ ಅಧ್ಯಕ್ಷರು ವೇದಿಕೆಯ ಮೇಲೆ ಎದ್ದು ನಿಂತರು. ಮೈಸೂರು ವಿದ್ಯಾರ್ಥಿ ಕಾಂಗ್ರೆಸ್, ಮಹಿಳಾ ಸಂಘ, ಕಾರ್ಮಿಕರ ಸಂಘ ಮೊದಲಾದ ಅನೇಕ ಸಾರ್ವಜನಿಕ ಸಂಸ್ಥೆಗಳ ಪರವಾಗಿ ಅಧ್ಯಕ್ಷರಿಗೆ ಹಾರವನ್ನರ್ಪಿಸಿ ಗೌರವಿಸಲಾಯಿತು.

ಅಧ್ಯಕ್ಷರ ಭಾಷಣ

ಅನಂತರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಚೆಂಗಲರಾಯರೆಡ್ಡಿಯವರು ಭಾಷಣ ಮಾಡುತ್ತಾ ಹೀಗೆ ತಿಳಿಸಿದರು:-

ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಅನೇಕ ದಿವಸಗಳಿಂದಲೂ ಹೋರಾಟ ನಡೆಸಿ, ಕೊನೆಗೆ ಅನಿವಾರ್ಯವಾಗಿ ಈ ಸತ್ಯಾಗ್ರಹ ಸಮರವನ್ನು ಹೂಡಿತು. ಈಗ್ಗೆ ಸುಮಾರು ಒಂದು ತಿಂಗಳ ಹಿಂದೆ ಘೋಷಿಸಲಾದ "ಚಲೋ ಮೈಸೂರ್" ಚಳುವಳಿಯು ಇಂದು ಯಶಸ್ವಿಯಾಗಿ ನಡೆದು ಮೈಸೂರಿನ ೭೩ ಲಕ್ಷ ಪ್ರಜೆಗಳ ಅಪೇಕ್ಷೆಯು ಕೈಗೂಡಿದೆ. ಇದರಲ್ಲಿ ಸಹಕರಿಸಿದ ಸಂಸ್ಥಾನದ ಒಳಗಿನ ಮತ್ತು ಹೊರಗಿನ ಪ್ರಜಾ ವರ್ಗದವರೆಲ್ಲರಿಗೂ ನನ್ನ ಕೃತಜ್ಞತೆಗಳು. ಈ ಸಂದರ್ಭದಲ್ಲಿ ಪೊಲೀಸರ ಅತ್ಯಾಚಾರಗಳಿಗೆ ಗುರಿಯಾಗಿ ಕಷ್ಟನಷ್ಟಗಳನ್ನು ಹೊಂದಿದವರಿಗೂ, ಮತ್ತು ಹುತಾತ್ಮರಿಗೂ ನನ್ನ ಅನುಕಂಪವನ್ನು ವ್ಯಕ್ತಪಡಿಸುತ್ತೇನೆ. ಅಲ್ಲದೆ ಹುತಾತ್ಮರ ನೆನಪಿಗಾಗಿ ಒಂದು ಶಾಶ್ವತವಾದ ಸ್ಮಾರಕವನ್ನು ಸಹ ಏರ್ಪಡಿಸಲಾಗುವುದು.

ಮುಂದುವರಿದು, "ಶ್ರೀಮನ್ಮಹಾರಾಜರೊಡನೆ ಈ ದಿನ ನಡೆದ ಭೇಟಿಯು ಬಹಳ ಸೌಹಾರ್ದಯುತವಾಗಿಯೂ ಮತ್ತು ಪ್ರೇಮಯುತವಾಗಿಯೂ ಇದ್ದಿತು. ಪ್ರಭುಗಳವರು ತಮ್ಮ ಪ್ರಜೆಗಳ ವಿಚಾರದಲ್ಲಿ ಇಂದಿಗೂ ನಿಷ್ಕಳಂಕವಾದ ಪ್ರೇಮವನ್ನಿಟ್ಟಿದ್ದಾರೆ. ಅವರ ವಿಚಾರದಲ್ಲಿ ಇದುವರೆಗೆ ನಮಗಿದ್ದ ಅಭಿಪ್ರಾಯಗಳನ್ನು ಮಾರ್ಪಡಿಸಬೇಕಾಗಿದೆ" ಎಂದು ನುಡಿದರು.

ಮೈಸೂರು ಚಲೋ ಘೋಷಣೆಯನ್ನು ಈಗ ೪೦ ದಿನಗಳ ಹಿಂದೆ ಮಾಡಿ ... ತಿಂಗಳು ನಾಲ್ಕನೇ ತಾ|| ನ ದಿನ ನಾವು ... ಹೋಗಿ ... ದೆ ನಮ್ಮ ಬೇಡಿಕೆಗಳನ್ನು ... ತಿಳಿಸಿದ್ದೆವು ... ಆಗ ಅವರ ಕಿವಿಗೆ ಮುಟ್ಟಲಿಲ್ಲವೆಂಬ ಶಂಕೆಯೇ ಈ ಘೋಷಣೆಗೆ ಮುಖ್ಯ ಕಾರಣವಾಗಿತ್ತು. ನಗರದ ಪುರಜನರು ... ನನಗೆ ನೀಡಿದ ಸ್ವಾಗತ ಅಭೂತಪೂರ್ವವಾದುದು. ಇದು ಸಂಸ್ಥಾನದ ಪ್ರಜೆಗಳು ಕಾಂಗ್ರೆಸ್ ಸಂಸ್ಥೆಯಲ್ಲಿ ಇಟ್ಟಿರುವ ಅಚಲವಾದ ಪ್ರೀತಿ ವಿಶ್ವಾಸ ಮತ್ತು ನಂಬಿಕೆಗಳನ್ನು ವ್ಯಕ್ತಪಡಿಸುತ್ತದೆ.

ಮೈಸೂರು ಕಾಂಗ್ರೆಸ್ಸು ಈಗ ೧೦ ವರ್ಷಗಳ ಹಿಂದೆ ಪ್ರಜಾಸತ್ತಾತ್ಮಕವಾದ ಸರ್ಕಾರದ ಸ್ಥಾಪನೆಯ ಹೋರಾಟಕ್ಕಾಗಿ ಮೈಸೂರು ನಗರದಲ್ಲಿ ಸ್ಥಾಪಿತವಾಯಿತು. ಸತ್ಯಾಗ್ರಹ ಸಮರದ ಗುರಿಯು ರಾಜಧಾನಿಯಾದ ಮೈಸೂರಿಗೇ ಇತ್ತು; ಇಂದು ಸಂಸ್ಥಾನದ ೭೩ ಲಕ್ಷ ಪ್ರಜೆಗಳ ಧ್ಯೇಯವಾದ ಸಂಪೂರ್ಣ ಜವಾಬ್ದಾರಿ ಸರ್ಕಾರವು ಶ್ರೀಮನ್ಮಹಾರಾಜರವರಿಂದ ಅಂಗೀಕೃತವಾಗಿದೆಯೆಂದು ಮೊಟ್ಟ ಮೊದಲು ಮೈಸೂರಿನ ನಾಗರಿಕರ ಮುಂದೆ ಸಾರುವ ಸುಯೋಗ ಬಂದಿರುವುದು ಅತ್ಯಂತ ಸಂತೋಷದ ಸಂಗತಿ. ಇಂದಿನ ದಿನ ಮೈಸೂರಿನ ಇತಿಹಾಸದಲ್ಲಿ ಚಿರಸ್ಮರಣೀಯವಾದ ಸುವರ್ಣಾಕ್ಷರಗಳಲ್ಲಿ ಕೆತ್ತಬೇಕಾದ ಪವಿತ್ರ ದಿನ. ಇಂದಿನಿಂದ ಸಂಸ್ಥಾನದಲ್ಲಿ ಹೊಸ ಯುಗವು ಆರಂಭವಾಗಿದೆ-ಎಂಬುದಾಗಿ ಮಹಾಪ್ರಭುಗಳವರು ಸಾರಿದ್ದಾರೆ. ಇದುವರೆಗೆ ಕಾಂಗ್ರೆಸ್ಸು ಹೋರಾಟದಲ್ಲಿ ಮಗ್ನವಾಗಿತ್ತು. ಉಳಿದ ಸಮಸ್ಯೆಗಳು ಅದರ ಗಮನಕ್ಕೆ ಬಂದಿರಲಿಲ್ಲ. ಈಗ ಕಾಂಗ್ರೆಸ್ಸಿನ ಆಧಾರ ಪ್ರಜೆಗಳ ಜವಾಬ್ದಾರಿ ಗುರುತರವಾಗಿದೆ; ಇನ್ನು ಮುಂದೆ ನಾವೆಲ್ಲರೂ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕಾಗಿದೆ. ಎಂದಿನ ವರೆಗೆ ಬಡವರಿಗೆ ತಿನ್ನಲು ಆಹಾರವನ್ನೂ ಉಡಲು ಬಟ್ಟೆಯನ್ನೂ ದೊರಕಿಸಿಕೊಳ್ಳುವ ಶಕ್ತಿಯು ಉಂಟಾಗುವುದಿಲ್ಲವೋ, ಅಂದಿನ ವರೆಗೆ ನಮ್ಮ ರಚನಾತ್ಮಕ ಕಾರ್ಯ ಅವಿಚ್ಛಿನ್ನವಾಗಿ ನಡೆಯಬೇಕು.

ಸೆಪ್ಟೆಂಬರ್ ೧ ನೇ ತಾ|| ಮೈಸೂರು ಚಲೋ ಘೋಷಣೆಯನ್ನು ಸಾರಿದ ನಂತರ ನಮ್ಮನ್ನು ೩ ನೇ ತಾ|| ಮಧ್ಯರಾತ್ರಿಯಲ್ಲಿ ದಸ್ತಗಿರಿ ಮಾಡಲಾಯಿತು. ಈಗ ನನಗೆ ಜಯ ಲಭಿಸಿದೆ. ಕಾಂಗ್ರೆಸ್ಸಿನ ಸ್ಥಾಪನೆಯಾದಾಗ ಮಹಿಳೆಯರ ಪಾತ್ರ ವಿಶೇಷವಾಗಿತ್ತು. ಆದರೆ ಇತ್ತೀಚೆಗೆ ಅವರು ಚಳವಳಿಯಲ್ಲಿ ವಿಶೇಷವಾಗಿ ಭಾಗವಹಿಸುತ್ತಿರಲಿಲ್ಲ. ಈ ದಿನ ... ಹಿಂದಿಗಿಂತಲೂ ಅವರು ಅಗಣಿತವಾಗಿ ಇಲ್ಲಿ ನೆರೆದಿರುವುದು ಅವರ ಉತ್ಸಾಹ, ಧೈರ್ಯಗಳನ್ನೂ ಗಂಡಸರಿಗಿಂತ ಹೋರಾಟದಲ್ಲಿ ತಾವು ಹಿಂದಿಲ್ಲವೆಂಬ ಅವರ ದಿಟ್ಟತನವನ್ನೂ ವ್ಯಕ್ತಗೊಳಿಸುತ್ತದೆ.

ಈಸೂರು ಬಂದಿಗಳ ಬಿಡುಗಡೆ

೧೯೪೨ ರ ಚಳುವಳಿಯಲ್ಲಿ ಆಜೀವ ಶಿಕ್ಷೆಗೆ ಗುರಿಯಾಗಿರುವ ಶ್ರವಣಬೆಳಗೊಳ ಮತ್ತು ಈಸೂರು ಬಂದಿಗಳೂ ಬಿಡುಗಡೆ ಹೊಂದುವರು. ಸಂಸ್ಥಾನದಲ್ಲಿ ಜಾರಿಯಲ್ಲಿರುವ ಎಲ್ಲ ಪ್ರತಿಬಂಧಕಾಜ್ಞೆಗಳೂ ಸಹ ಸದ್ಯದಲ್ಲೇ ರದ್ದಾಗುವುವು. ನಮ್ಮ ಸತ್ಯಾಗ್ರಹ ಹೋರಾಟಕ್ಕೆ ಬೆಂಬಲವಿತ್ತು ಸುದ್ದಿಗಳನ್ನು ಪ್ರಕಟಿಸಿದ ಮದರಾಸಿನ ಹಲವು ಪತ್ರಿಕೆಗಳು ಬಹಿಷ್ಕೃತವಾಗಿರುವುದು ವಿಷಾದಕರ.

ನಮ್ಮ ಚಲೋ ಮೈಸೂರ್-ಘೋಷಣೆಯೊಡನೆಯೇ ಧ್ವಜ ಸತ್ಯಾಗ್ರಹವನ್ನೂ ಸಹ ಆರಂಭಿಸಿದ್ದೆವು. ಆಗಸ್ಟ್ ೧೫ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ದಿನ ಭಾರತ-ಡೊಮಿನಿಯನ್ ರಾಷ್ಟ್ರಧ್ವಜಕ್ಕೆ ಪ್ರಭುಗಳವರು ಗೌರವವನ್ನು ಸಲ್ಲಿಸದುದರಿಂದ ನಮ್ಮ ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪಿತವಾಗುವ ವರೆಗೆ ಮೈಸೂರು ಧ್ವಜಕ್ಕೆ ಗೌರವವನ್ನು ಸಲ್ಲಿಸಲಾಗುವುದಿಲ್ಲವೆಂದು ಸಾರಿದ್ದೆವು. ಸ್ವಾತಂತ್ರ್ಯ ದಿನಾಚರಣೆಯ ದಿನ ರಾಷ್ಟ್ರಧ್ವಜಕ್ಕೆ ಪ್ರಭುಗಳವರಿಂದ ಸಲ್ಲದಿದ್ದ ಗೌರವ ಮತ್ತು ಪುರಸ್ಕಾರಗಳು ಅಕ್ಟೋಬರ್ ೨ ನೇ ತಾರೀಖು ಪೂಜ್ಯ ಬಾಪೂಜಿಯವರ ಜನ್ಮೋತ್ಸವದ ದಿನ ಸಂದಿತು. ಎಲ್ಲ ಪ್ರಭುತ್ವ ಭವನಗಳ ಮೇಲೆಯೂ ರಾಷ್ಟ್ರಧ್ವಜ ಮೆರೆಯಿತು. ಮಹಾಪ್ರಭುಗಳವರು ಇಂದು ನಮ್ಮ ಧ್ಯೇಯವಾದ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಅಂಗೀಕರಿಸಿದ್ದಾರೆ. ಆದುದರಿಂದ ನಮ್ಮ ಮೈಸೂರು ಚಲೋ ಘೋಷಣೆಯೊಂದಿಗೆಯೇ ಧ್ವಜ ಸತ್ಯಾಗ್ರಹವೂ ಸಹ ಜಯಗಳಿಸಿದೆ.

ಜವಾಬ್ದಾರಿ ಸರ್ಕಾರವು ೧೯೪೮ ನೇ ಜುಲೈ ಒಂದನೇ ತಾರೀಖು ಅಥವಾ ಅದಕ್ಕಿಂತ ಮುಂಚಿತವಾಗಿಯೇ ಜಾರಿಗೆ ಬರುತ್ತದೆ. ಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಅಗತ್ಯವಾದ ರಾಜ್ಯಾಂಗದ ಕರಡು ಮಸೂದೆಯನ್ನು ಸಿದ್ಧಗೊಳಿಸುವ ಸಲುವಾಗಿ ರಾಜ್ಯಾಂಗ ರಚನಾ ಸಮಿತಿಯನ್ನು ರಚಿಸಲು ಶ್ರೀಮನ್ಮಹಾರಾಜರವರು ಸಮ್ಮತಿಸಿದ್ದಾರೆ. ಈಗಿರುವ ಶಾಸನ ಸಭೆಗಳಿಂದಲೇ ಅಥವಾ ಹೊಸದಾಗಿ ಚುನಾವಣೆಗಳನ್ನು ನಡೆಸಿ ರಾಜ್ಯಾಂಗ ಸಮಿತಿಗೆ ಸದಸ್ಯರನ್ನು ಆರಿಸುವ ಅಧಿಕಾರವು ಇನ್ನೊಂದು ವಾರದೊಳಗಾಗಿಯೇ ಸ್ವೀಕೃತವಾಗಲಿರುವ ನೂತನ ಮಂತ್ರಿಮಂಡಲಕ್ಕೆ ಕೊಡಲ್ಪಟ್ಟಿದೆ.

ಸೆಪ್ಟೆಂಬರ್ ೨೯ ನೇ ತಾರೀಖು ಹೊರಡಿಸಿದ ಘೋಷಣೆಯಲ್ಲಿ ಸೂಚಿಸಲಾಗಿರುವ ೧ ನೇ ಷೆಡ್ಯೂಲಿನಲ್ಲಿ ಬದಲಾವಣೆ ಮತ್ತು ಅವಶ್ಯಕತೆಗನುಗುಣವಾಗಿ ೨ ನೇ ಷೆಡ್ಯೂಲಿನಲ್ಲಿ ಶ್ರೀಮನ್ಮಹಾರಾಜರವರು ತಮ್ಮ ವಶದಲ್ಲಿಟ್ಟುಕೊಂಡಿರುವ ಅಧಿಕಾರಗಳಲ್ಲಿ ನಡೆಸಬೇಕಾದ ಮಾರ್ಪಾಟುಗಳನ್ನು ನಡೆಸುವ ಅಧಿಕಾರವನ್ನು ಸಹ ಮಹಾಪ್ರಭುಗಳು ರಾಜ್ಯಾಂಗ ಸಮಿತಿಗೆ ಇತ್ತಿದ್ದಾರೆ. ತಿರುವಾಂಕೂರು-ಮೊದಲಾದ ಸಂಸ್ಥಾನಗಳು ಜವಾಬ್ದಾರಿ ಸರ್ಕಾರವನ್ನು ಪಡೆದಾಗ ಹಲವು ಇಲಾಖೆಗಳ ಅಧಿಕಾರವನ್ನು ಅಲ್ಲಿನ ರಾಜರುಗಳು ತಮ್ಮ ವಶದಲ್ಲೇ ಇಟ್ಟುಕೊಂಡಿದ್ದಾರೆ. ನಮ್ಮ ಮಹಾಪ್ರಭುಗಳು "ಸಂಸ್ಥಾನದ ಎಲ್ಲ ಇಲಾಖೆಗಳ ಆಡಳಿತ ಸಂಪೂರ್ಣಾಧಿಕಾರ

(ಹಿಂದಿನ ಪುಟಕ್ಕೆ ಮುಂದುವರಿದಿದೆ)

ಸದ್ಯದಲ್ಲೇ ಅಖಂಡ ಕರ್ನಾಟಕದ ಸ್ಥಾಪನೆ

ನಿಜಲಿಂಗಪ್ಪನವರ ಭಾಷಣ

ಮೈಸೂರು ೧೩

ಇಂದು ಬೆಳಗ್ಗೆ ೯ ಗಂಟೆಗೆ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಸುಬ್ಬರಾಯನ ಕೆರೆಯ ಮೈದಾನದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ರಾಷ್ಟ್ರ ಧ್ವಜವನ್ನು ಹಾರಿಸಿದರು.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯರೆಡ್ಡಿ ಮತ್ತು ಇತರ ಕಾರ್ಯಕರ್ತರ ಸಮಿತಿಯವರಿಗೆ ನಿನ್ನೆ ಸಂಜೆ ಪ್ರಭುಗಳವರು ಭೇಟಿ ಇತ್ತು ಸಂಪೂರ್ಣ ಜವಾಬ್ದಾರೀ ಸರ್ಕಾರವನ್ನು ದಯಪಾಲಿಸಿದ ಕಾರ್ಯವನ್ನು ವಿವರಿಸಿ ಕಾಲದ ಮಹತ್ವವನ್ನು ವಿವರಿಸಿ ಶ್ರೀ ನಿಜಲಿಂಗಪ್ಪನವರು ಭಾಷಣ ಮಾಡಿದರು

ಸದ್ಯದಲ್ಲೇ ಹೊಸ ಮಂತ್ರಿಮಂಡಲದ ಸ್ಥಾಪನೆಯಾಗಲಿದೆ. ಕಾಳಸಂತೆ ಮತ್ತು ಲಂಚ ರುಷುವತ್ತುಗಳನ್ನು ಮಟ್ಟ ಹಾಕಲು, ಅದು ಪ್ರಥಮ ಗಮನ ಕೊಡಬೇಕಾಗಿದೆ. ಹೊಸ ಮಂತ್ರಿಮಂಡಲವು ಸಾಮಾನ್ಯ ಮನುಷ್ಯನಿಗೆ ಆಹಾರ ಮತ್ತು ವಸ್ತ್ರ ಯನ್ನೊದಗಿಸುವ ಬಗ್ಗೆ ನಿಗಾ ಕೊಡುವುದು. ಸದ್ಯದಲ್ಲೇ ಅಖಂಡ ಕರ್ನಾಟಕದ ಸ್ಥಾಪನೆಯು ಆಗಲಿದೆ, ಪೊಲೀಸಿನವರು ಈಚೆಗೆ ನಡೆಸಿದ ವರ್ತನೆ ವಿಷಾದಕರವಾದುದು, ಯುವಕರು, ಮುದುಕರು, ಹೆಂಗಸರು, ಮಕ್ಕಳೇ ಆದಿಯಾಗಿ ಎಲ್ಲರೂ ಸತ್ಯಾಗ್ರಹದಲ್ಲಿ ಭಾಗ ವಹಿಸಿದುದು ಮೆಚ್ಚತಕ್ಕದ್ದು; ಸಂಸ್ಥಾನದಲ್ಲಿ ಶಾಂತಿ ಸುವ್ಯವಸ್ಥೆ ಕಾರ್ಯವು ನೆರವೇರಲು ಎಲ್ಲರೂ ಸಹಕರಿಸಬೇಕು ಎಂದು ಶ್ರೀ ನಿಜಲಿಂಗಪ್ಪನವರು ನುಡಿದರು

ಶ್ರೀ ಪದ್ಮರಾಜಯ್ಯನವರು ಮೈಸೂರಿನ ನಾಗರಿಕರು ತೋರಿಸಿದ ಉತ್ಸಾಹಕ್ಕೆ ಅಭಿನಂದನೆಯನ್ನು ಸಲ್ಲಿಸಿದರು. ವಂದನಾರ್ಪಣೆಯೊಡನೆ ಸಮಾರಂಭ ಮುಕ್ತಾಯಗೊಂಡಿತು

WOODLANDS

Morning shows from 14-10-47 for 3 days daily at 10-30 a.m

A Medal For Benny

Featuring:- DOROTHY LAMOUR and ARTURO DE CORDOBA

ಈ ದಿನ ಮಂತ್ರಿಮಂಡಲದ ಕೊನೆಯ ಸಭೆ

ಸ್ವಂ. ಸು. ಫೋ] ಬೆಂಗಳೂರು ೧೩

ಈಗಿನ ಮಂತ್ರಿಮಂಡಲದ ಕೊನೆಯ ಸಭೆಯು ಈ ದಿನ ೩ ಗಂಟೆಗೆ ಕಾರ್ಲ್‌ಟನ್ ಭವನದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸೇರಿದ್ದಿತು

ಮುರಾಮತ್ತು ಸಚಿವರಾದ ಸಿದ್ದಪ್ಪನವರ ರಾಜೀನಾಮೆ

ಮುರಾಮತ್ತು ಶಾಖಾ ಸಚಿವರಾದ ಶ್ರೀ ಎಲ್ ಸಿದ್ದಪ್ಪನವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರೆಂದು ತಿಳಿದು ಬಂದಿದೆ.

ರಾಜಕೀಯ ಬಂದಿಗಳ ಬಿಡುಗಡೆಗೆ ಆಜ್ಞೆ

ಸ್ವಂ. ಸು. ಫೋ] ಬೆಂಗಳೂರು ೧೩

ಕಾಂಗ್ರೆಸ್ಸು ಘೋಷಿಸಿದ ಸತ್ಯಾಗ್ರಹದ ಸಂಬಂಧವಾಗಿ ಈಗ ಬಂಧನದಲ್ಲಿರುವ ಎಲ್ಲ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಲು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಪ್ರತಿಬಂಧಕಾಜ್ಞೆಗಳೆಲ್ಲಾ ರದ್ದಾಗಿವೆ ಸಂಸ್ಥಾನದ ಒಳಗಿನ ಮತ್ತು ಹೊರಗಿನ ಪತ್ರಿಕೆಗಳ ಮೇಲೆ ಹಾಕಿದ್ದ ಬಹಿಷ್ಕಾರವನ್ನೂ ಸಹ ಸರ್ಕಾರದವರು ವಾಪಸು ತೆಗೆದುಕೊಂಡಿದ್ದಾರೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

(ಹಿಂದಿನ ಪುಟದಿಂದ ಮುಂದುವರಿದುದು)

ವನ್ನೂ ಪ್ರಜಾಪ್ರತಿನಿಧಿಗಳ ಅಧಿಕಾರಕ್ಕೊಳಪಡಿಸಿ ಇಡೀ ಭರತ ಖಂಡದ ಸಂಸ್ಥಾನಗಳಲ್ಲೆಲ್ಲಾ ಮೈಸೂರು ಸಂಸ್ಥಾನವು ಮಾದರಿಯಾಗುವ ಹಾಗೆ ಮಾಡಿದ್ದಾರೆ ಈ ಬಗ್ಗೆ ಪ್ರಭುಘೋಷಣೆಯೂ ಸಹ ಕೂಡಲೇ ಹೊರಬೀಳಲಿದೆ

ಜುಲೈ ೧ ರ ವರೆಗೆ ದಿವಾನರ ಅಧಿಕಾರ

ಸದ್ಯದಲ್ಲೇ ತಾತ್ಕಾಲಿಕ ಮಂತ್ರಿಮಂಡಲದ ಸ್ಥಾಪನೆಯಾಗಲಿದೆ ಈಗಿರುವ ಸಚಿವರು ರಾಜೀನಾಮೆ ಕೊಡುತ್ತಾರೆ ಹೊಸ ಮಂತ್ರಿಮಂಡಲದಲ್ಲಿ ೯ ಕ್ಕೆ ಕಡಿಮೆಯಿಲ್ಲದೆ ಸಚಿವರಿರುತ್ತಾರೆ ಆ ಪೈಕಿ ೬ ಕ್ಕಿಂತ ಕಡಿಮೆಯಿಲ್ಲದೆ ಕಾಂಗ್ರೆಸ್ ಸಚಿವರಿರುತ್ತಾರೆ ಉಳಿದವರನ್ನು ಅವಶ್ಯಕವಾದ ಇತರ ಪಕ್ಷಗಳಿಂದ ಕಾಂಗ್ರೆಸ್ಸು ಆರಿಸುತ್ತದೆ ಕಾಂಗ್ರೆಸ್ ಸಚಿವರ ಪೈಕಿ ಒಬ್ಬರು ಪ್ರಧಾನ ಮಂತ್ರಿಯಾಗುತ್ತಾರೆ ಜುಲೈ ೧ ರ ವರೆಗೆ ದಿವಾನರ ಅಧಿಕಾರವಿರುತ್ತದೆ. ಅವರ ಅಧಿಕಾರದ ವ್ಯಾಪ್ತಿ ಮಿತ ಗೊಳಿಸಲ್ಪಟ್ಟಿದೆ. ಮಂತ್ರಿಮಂಡಳವು ಪ್ರಭುಗಳಿಗೂ ಶಾಸನ ಸಭೆಗಳಿಗೂ ಸಂಯುಕ್ತವಾಗಿ ಜವಾಬ್ದಾರಿಯಾಗಿರುತ್ತದೆ. ಶಾಸನ ಸಭೆಯ ಬಹುಮತ ಸದಸ್ಯರು ಅವಿಶ್ವಾಸ ತೋರಿಸಿದರೆ ಮಂತ್ರಿಮಂಡಲವು ರದ್ದಾಗುತ್ತದೆ.

ವಿದ್ಯಾರ್ಥಿಗಳ ಮೇಲೆ ಕೈಗೊಂಡಿರುವ ಶಿಸ್ತಿನ ಕ್ರಮವು ವಿಶ್ವವಿದ್ಯಾಲಯದ ಹಸ್ತಾಂತರಿಸಲ್ಪಟ್ಟಿದೆ ಈಗ ವಾತಾವರಣವು ಬದಲಾಯಿಸಿದೆ. ಈಗಿರುವ ಸಚಿವರೇ ಆ ಆಜ್ಞೆಗಳನ್ನು ವಾಪಸು ತೆಗೆದುಕೊಂಡರೆ ಅವರಿಗೆ ಹೆಚ್ಚಿನ ಗೌರವವು ಸಲ್ಲುತ್ತದೆ. ಇಲ್ಲದಿದ್ದರೆ ಕಾಂಗ್ರೆಸ್ ಮಂತ್ರಿಮಂಡಲವು ಅಧಿಕಾರವನ್ನು ವಹಿಸಿದ ನಂತರ ಈ ಆಜ್ಞೆಗಳು ವಾಪಸಾಗುವುವು.

ಸತ್ಯಾಗ್ರಹವು ಆರಂಭವಾದಾಗಿನಿಂದ ಪೊಲೀಸರು ನಡೆಸಿರುವ ದುಷ್ಕೃತ್ಯಗಳ ವಿಚಾರವನ್ನು ಪತ್ರಿಕೆಗಳಲ್ಲಿ ಓದಿ ನನಗೆ ಅತ್ಯಂತ ವಿಷಾದವಾಯಿತು. ಅವರು ತಾವು ಪ್ರಜಾ ಸೇವಕರೆಂದೂ, ಪ್ರಜೆಗಳ ಮೇಲ್ವಿಚಾರಣೆ ತಮ್ಮ ಕರ್ತವ್ಯವೆಂದೂ ಅರಿತು ವರ್ತಿಸಬೇಕಾಗಿತ್ತು

ಇಂದು ಸಂತೋಷದ ದಿನ. ಎಲ್ಲ ಸಾರ್ವಜನಿಕರೂ, ಅಧಿಕಾರಿಗಳೂ ಸಹ ಸಂತೋಷದಿಂದ ನಲಿಯಬೇಕಾಗಿದೆ. ನನಗೆ ಯಾರ ಮನಸ್ಸನ್ನೂ ನೋಯಿಸಲು ಇಷ್ಟವಿಲ್ಲ. ಇಂದಿನ ಸುಸಂಧಿಯನ್ನು ತಂದು ಕೊಟ್ಟುದಕ್ಕಾಗಿ ನಾವು ಭಗವಂತನಿಗೆ ಅನನ್ಯ ಭಕ್ತಿಯಿಂದ ನಮ್ಮ ಕೃತಜ್ಞತೆಯನ್ನು ಸಲ್ಲಿಸೋಣ.

ಬಹಿರಂಗ ಸಭೆ

ಮೈಸೂರು

ನಾಳೆ ಸಂಜೆ ೬ ಗಂಟೆಗೆ ರಾಜಧಾ… ಟೌನ್ ಹಾಲ್ ಮೈದಾನದಲ್ಲಿ ನಗರ ಕಾಂ… ಸ್ ಸಮಿತಿಯ ಆಶ್ರಯದಲ್ಲಿ ಬಹಿರಂ… ಭೆ ನಡೆಯುವುದು.

ಬಂದಿಗಳ ಖುಲಾಸೆ

ಮೈಸೂರು

ಸತ್ಯಾಗ್ರಹದ ಸಂಬಂಧವಾಗಿ ಹಿ… ಕೃತ್ಯಗಳನ್ನೆಸಗಿದವರ ಹೊರತು ಮೈ… ರೂ ಸಬ್ ಜೈಲಿನಲ್ಲಿದ್ದ ಎಲ್ಲ ರಾಜಕೀ… ಬಂದಿಗಳೂ ಈ ದಿನ ಸಂಜೆ ೫ ಗಂಟೆ… ವೇಳೆಯಲ್ಲಿ ಬಿಡುಗಡೆ ಹೊಂದಿದ್ದಾರೆ

ನಮ್ಮ ಸಂಸ್ಥಾನದಲ್ಲಿ ಕೋಮುವಾ… ವಿಷಬೀಜ ಈಗ ವಿಶದೀಕವಾಗಿ ಕಂಡ… ರುತ್ತಿದೆ. ಅದು ತಪ್ಪು. ನನ್ನ ಸ್ವಂ… ಭಿಪ್ರಾಯವನ್ನು ಹೇಳಬೇಕಾದರೆ ಪ… ತ್ಮ ಗಾಂಧೀಜಿಯವರು ಹೇಳಿರುವ… ಲ್ಲ ಜಾತಿ ಮತಗಳೂ ಹೋಗಿ ಗುಂಪು… ಲ್ಲದೆ ಎಲ್ಲರಿಗೂ ಒಂದೇ ಆದ ಸರ… ರಚನೆ ಅವಶ್ಯಕ.

ಸತ್ಯಾಗ್ರಹ ವಾಪಸು

ಸತ್ಯಾಗ್ರಹದ ಗುರಿಯು ಈಡೇರಿ… ದರಿಂದ ಸತ್ಯಾಗ್ರಹವನ್ನು ವಾಪಸು… ದುಕೊಳ್ಳಲು ಕಾರ್ಯಕಾರಿ ಸಮಿತಿ… ನಿರ್ಧರಿಸಿದೆ ಆದ್ದರಿಂದ ಈಗಿನಿಂದ… ದರೆ ಈ ರಾತ್ರಿ ೯-೩೦ ರಿಂದ ಸತ್ಯಾಗ್ರ… ನ್ನು ವಾಪಸು ತೆಗೆದುಕೊಂಡಿದ್ದೇವೆ

ಸದ್ಯದಲ್ಲೇ ತಾತ್ಕಾಲಿಕ ಮಂತ್ರಿಮ… ಲವು ಅಧಿಕಾರಕ್ಕೆ ಬರುತ್ತದೆ ಅದ… ಲ್ಲಕ್ಕಿಂತ ಮುಖ್ಯವಾಗಿ ಆಹಾರ ವ… ಬಟ್ಟೆಯ ಸಮಸ್ಯೆಯನ್ನು ಮೊದಲು… ದ ರಿಸಬೇಕು. ನಾವೂ ಸಹ ಹಳ್ಳಿ… ಗಳಿಗೂ ಹೋಗಿ ಬೇಡಿದರೆ ಆಹಾರ… ಕ್ಕಟ್ಟು ಬಗೆಹರಿಯುವುದರಲ್ಲಿ ಸಂ… ವಿಲ್ಲ.

ಜೈ ಹಿಂದ್

ಅನಂತರ ರಾಷ್ಟ್ರಗೀತೆ ಮತ್ತು … ಕಾರಗಳೊಡನೆ ಸಭೆ ಮುಕ್ತಾಯ… ದಿತು

ರಾಜಕಮಲ್

ತಾ|| 11-10-47 ರಿಂದ

ಅಮೋಘ ೨ನೇ ವಾರ

ಮಹಾ ಕವಿ ಕಾಳಿದಾ…

(ಹಿಂದಿ)

—: ಭೂಮಿಕೆ :—

ಸಹರಿ ಸನ್ಯಾಲ್, ಸ್ನೇಹಪ್ರಭ… ವನಮಾಲ, ಮತ್ತು ಉಲ್ಹಾಸ…

17—10—47 ರಿಂ…

ರಾಜಕಮಲ್ ಕಲಾಮಂದಿರ…

ಜೀವನ್ ಯಾ…

ಶ್ರೀ ಗಣೇಶ ಟಾಕೀಸ್

೧೨-೧೦-೪೭ ರಿಂದ ಪ್ರತಿ ದಿನ ೩ ಪ್ರದರ್ಶನಗಳು



○ ನವರಾತ್ರಿ ಹಬ್ಬದ ಪ್ರಯುಕ್ತ ○

★ ಕಡಗಂ ★

(ತಮಿಳು)

—: ಮುಖ್ಯ ಭೂಮಿಕೆಯಲ್ಲಿ :—

ಸೂರ್ಯಕುಮಾರಿ

○ ಬೇಬಿಕಮಲ ○

○ ಟಿ. ಆರ್ ರಾಮಚಂದ್ರ ○

ಚಾಮುಂಡೇಶ್ವರೀ ಟಾಕೀಸ್

12—10—47 ರಿಂದ

ಪ್ರತಿದಿನ 3 ಪ್ರದರ್ಶನಗಳು,

ನವರಾತ್ರಿ ಹಬ್ಬದ ಪ್ರಯುಕ್ತ

★ ದೈವನೀತಿ ★

—: ಮುಖ್ಯ ಪಾತ್ರ

ಪಿ ಕನ್ನಾಂಬ, ಶಕುಂತಲಾ, ವಿ. ಎ. ಚೆಲ್ಲಪ್ಪ, ದೊರೆರಾಜ್

Edited printed and publi… by A. R. Nagarajan at the …

ಫೋನ್ ನಂ. 608 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೧೪-೧೦-೪೭ [ಸಂಚಿಕೆ ೫೧

ಪೊಲೀಸ್ ದೌರ್ಜನ್ಯಗಳ ಪರಿಶೀಲನೆಗೆ ಸಮಿತಿ

ಹುತಾತ್ಮರ ಮನೆಗಳಿಗೆ ರೆಡ್ಡಿಯವರ ಭೇಟಿ

ಮೈಸೂರು ೧೪

ನಿನ್ನೆ ದಿನ ಕಾಂ|| ಅಧ್ಯಕ್ಷರಾದ ಶ್ರೀ|| ಚೆಂಗಲರಾಯ ರೆಡ್ಡಿಯವರು ಈಗ ನಡೆದ ಚಳುವಳಿಯಲ್ಲಿ ಮಡಿದ ತರುಣ ವಿದ್ಯಾರ್ಥಿ ಶ್ರೀ|| ರಾಮಸ್ವಾಮಿಯವರ ಮನೆಗೆ ಭೇಟಿ ಕೊಟ್ಟು ಮೃತರ ಮಾತಾಪಿತೃಗಳನ್ನು ಸಂತೈಸಿ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದರು "ಶ್ರೀ ರಾಮಸ್ವಾಮಿ ಸ್ಮಾರಕ ಸಂಘ"ಕ್ಕೆ ಪ್ರೋತ್ಸಾಹ ಕೊಟ್ಟು ತಮ್ಮ ಸಹಾನುಭೂತಿಯನ್ನು ಸಹಿ ಮೂಲಕ ಇತ್ತರು. ಈ ಸಂಘಕ್ಕೆ ಮಹಾ ಜನರ ಉದಾರ ಸಹಾಯವನ್ನು ಕೋರಲಾಗಿದೆ.

ಚಿನ್ನದ ಗಣಿ ಮುಷ್ಕರದ ಮುಕ್ತಾಯ

ಕಾಂಗ್ರೆಸ್ ನಾಯಕರ ಬಿಡುಗಡೆ ಆಗಿದೆ, ಜವಾಬ್ದಾರೀ ಸರ್ಕಾರದ ಸ್ಥಾಪನೆಗಾಗಿ ಪ್ರಜೆಗಳು ಅನುಸರಿಸಬೇಕಾದ ನಿರ್ಧಾರವನ್ನು ಅವರು ಮಾಡುತ್ತಾರೆ-ಆದುದರಿಂದ ಮುಷ್ಕರ ಹೂಡಿರುವ ಕೆಲಸಗಾರರೆಲ್ಲ ಕೆಲಸಗಳಿಗೆ ಹಿಂದಿರುಗಬೇಕು-ಎಂಬ ... ಚಾಂಪಿಯನ್ ರೀಫ್ ಚಿನ್ನದ ಗಣಿ ... ಕಾರ್ಮಿಕರ ನಾಯಕರಾದ ಮಾರ್ಕ... ಗೋವಿಂದರವರು ಇತ್ತ ಅಪ್ಪಣೆಯನ್ನು ಮನ್ನಿಸಿ ಕೆಲಸಗಾರರು ಕಳೆದ ... ವಾರದಿಂದ ತಮ್ಮ ಮುಷ್ಕರವನ್ನು ಮುಕ್ತಾಯಗೊಳಿಸಿದ್ದಾರೆ.

ಇವಮೂರಿನ ರಾಜರಿಂದ ರಾಷ್ಟ್ರಧ್ವಜಾರೋಹಣ

ಗಾಂಧೀಜಿಯವರ ಜಯಂತ್ಯುತ್ಸವದ ಪ್ರಯುಕ್ತ ಕಳೆದ ಶನಿವಾರ ಇವಮೂರಿನ ... ಹೋಳ್ಕರ್‌ರವರು ಎಡ್ವರ್ಡ್ ... ಭವನದ ಮುಂದೆ ಭಾರತ ರಾಷ್ಟ್ರಧ್ವಜವನ್ನು ಆರೋಹಿಸಿದರೆಂದು ವರದಿಯಾಗಿದೆ. ಭಾರತದ ಜನಾಂಗಕ್ಕೆ ಮಹಾತ್ಮಜಿ, ಪಂಡಿತ ನೆಹರೂ, ಸರ್ದಾರ್ ಪಟೇಲರು ಸಲ್ಲಿಸುತ್ತಿರುವ ಸೇವೆಯನ್ನು ... ಇನ್ನು ಮುಂದೆ ಎಡ್ವರ್ಡ್ ಭವನವನ್ನು ಗಾಂಧಿ ಭವನವೆಂದು ಕರೆಯಲಾಗುವುದೆಂದೂ, ಸದ್ಯದಲ್ಲೇ ಅಲ್ಲಿ ಗಾಂಧೀಜಿಯವರ ಪ್ರತಿಮೆಯನ್ನು ನಿರ್ಮಿಸಲಾಗುವುದೆಂದೂ ತಿಳಿಸಿರುವರು.

ತಿರುವಾಂಕೂರಿಗೆ ಸರ್. ಸಿ. ಪಿ.

ತಿರುವಾಂಕೂರಿನ ಮಾಜಿ ಪ್ರಧಾನಿಗಳಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ ... ಬರುವ ಜನವರಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ತೆರಳುವರೆಂದು ... ಅವರು ಈಗ ಹಲವು ... ಹಿಂದೆಯೇ ಇದನ್ನು ನಿರ್ಧರಿಸಿ ... ಅಲ್ಲಿ ಪ್ರವಾಸ ಮಾಡಿ ವೇದಾಂತ ... ಭಾಷಣಗಳನ್ನು ಮಾಡುವರೆಂದು ಗೊತ್ತಾಗಿದೆ.

ಮುಲಾಖತೆ

ಕೃಷ್ಣರಾಜನಗರ ೧೪

ನಿನ್ನೆ ಮೈಸೂರು ಜೈಲಿನಿಂದ ಬಿಡುಗಡೆಯಾದ ಈ ಊರಿನ ೪೫ ಮಂದಿ ಸತ್ಯಾಗ್ರಹಿಗಳನ್ನು ಇಲ್ಲಿನ ಕಾಂಗ್ರೆಸ್ ಪ್ರೇಮಿಗಳು ... ಸ್ವಾಗತಿಸಿ ... ಮೆರವಣಿಗೆ ... ತೆರಳಿದರು.

... ಆಗಮಿಸಿದ್ದ ಕಾಂಗ್ರೆಸ್ ... ಈ ದಿನ ಬೆಂಗಳೂರಿಗೆ ಹಿಂದಿರುಗಿದರು.

ದಿವಾನರ ಪತ್ರಿಕಾ ಪ್ರಕಟಣೆ

ಸ್ವಂ. ಸು.] ಬೆಂಗಳೂರು ೧೩

ಈಗಿರುವ ಮಂತ್ರಿಮಂಡಲವನ್ನು ರದ್ದು ಮಾಡುವುದು, ಹೊಸ ಮಂತ್ರಿಮಂಡಲದ ರಚನೆ, ತಾತ್ಕಾಲಿಕ ಸರ್ಕಾರದ ಸ್ಥಾಪನೆ, ರಾಜ್ಯಾಂಗ ರಚನಾ ಸಭೆ-ಮೊದಲಾದ ವಿಷಯಗಳಲ್ಲಿ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಮಾಡಿದ ಭಾಷಣಕ್ಕನುಗುಣವಾಗಿ ಸಂಸ್ಥಾನದ ದಿವಾನರಾದ ಸರ್. ಆರ್ಕಾಟ್ ರಾಮಸ್ವಾಮಿ-ಮೊದಲಿಯಾರರು ಈ ದಿನ ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿರುವರು.

೩೦ ಮೂಟೆ ರಾಗಿ ಪತ್ತೆ

ನಂಜನಗೂಡು ೧೨

ಇಲ್ಲಿನ ಎಕ್ಸೈಜು ಇಲಾಖೆಯ ಶ್ರೀ|| ... ಶ್ರೀಕಂಠಯ್ಯನವರು ಕೆಂದಿ ಕಂಟ್ರಾಕ್ಟರು ಕೆಂಚೇಗೌಡರ ಮನೆಯಲ್ಲಿ ಬಚ್ಚಿಟ್ಟಿದ್ದ ೩೦ ಮೂಟೆ ರಾಗಿಯನ್ನು ಪತ್ತೆ ಮಾಡಿರುತ್ತಾರೆ.

ಪರಿಶೀಲನಾ ಸಮಿತಿಯ ನೇಮಕ

ಮೈಸೂರು ೧೪

ಮೈಸೂರು ಕಾಂಗ್ರೆಸ್ಸು ಜವಾಬ್ದಾರೀ ಸರ್ಕಾರಕ್ಕಾಗಿ ಹೂಡಿದ್ದ ಸತ್ಯಾಗ್ರಹದ ಸಂಬಂಧವಾಗಿ ಸಂಸ್ಥಾನಾದ್ಯಂತವೂ ಪೊಲೀಸರು ನಡೆಸಿದ ದೌರ್ಜನ್ಯ ಕೃತ್ಯಗಳನ್ನು ಪರಿಶೀಲಿಸುವುದಕ್ಕಾಗಿ ಕಾಂಗ್ರೆಸ್ ಕಾರ್ಯ ಸಮಿತಿಯ ಶ್ರೀ|| ಗಳಾದ ಎಸ್. ಚೆನ್ನಯ್ಯ, ಎಂ. ಚಿಕ್ಕಣ್ಣ, ... ಸಮಿತಿಯೊಂದನ್ನು ನಿನ್ನೆ ರಚಿಸಲಾಗಿದೆ.

ಇಂಡಿಯನ್ ಫುಟ್‌ಬಾಲ್ ಕ್ಲಬ್

ಮೇಲ್ಕಂಡ ಕ್ಲಬ್ಬಿನವರು ಶ್ರೀಮನ್ಮಹಾರಾಜರವರು ಪೂರ್ಣ ಜವಾಬ್ದಾರಿ ಸರ್ಕಾರವನ್ನು ಪ್ರಜೆಗಳಿಗೆ ದಯಪಾಲಿಸಿರುವುದಕ್ಕಾಗಿ ತಾ|| ೧೫-೧೦-೪೭ ನೇ ದಿವಸ ೩ ಗಂಟೆಗೆ ಕಾಳಮ್ಮನಗುಡಿ ಚೌಕದಿಂದ ಮಹಾರಾಜರವರ ಭಾವಚಿತ್ರದ ಮೆರವಣಿಗೆಯನ್ನು ಮುಖ್ಯ ಬೀದಿಗಳಲ್ಲಿ ನಡೆಸುತ್ತಾರಾದ್ದರಿಂದ ಸರ್ವರೂ ಭಾಗವಹಿಸಬೇಕಾಗಿ ಕೋರಲಾಗಿದೆ.

ನಿಧನ

ಕಳೆದ ೧೫ ವರ್ಷಗಳಿಂದಲೂ ರಾಜಧಾನಿಯ ಕಂಟೆಂಟಿಗರ ಸಂಘದ ಗೌರವ ಕಾರ್ಯದರ್ಶಿಗಳಾಗಿದ್ದು ಸೇವೆ ಸಲ್ಲಿಸಿದ ಶ್ರೀ|| ಎಂ. ಸಿ. ವೆಲ್ಲಯ್ಯನವರು ತಮ್ಮ ೭೦ನೇ ವಯಸ್ಸಿನಲ್ಲಿ ನಿನ್ನೆ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಕಾಂಗ್ರೆಸ್ ಸಚಿವರ ಕರ್ತವ್ಯ ಗುರುತರವಾದುದು

ಎಂ. ವಿ. ರಾಜಗೋಪಾಲ್‌ರವರ ಭಾಷಣ

ಮೈಸೂರು ೧೪

ನಿನ್ನೆ ಸಂಜೆ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಸುಬ್ಬರಾಯನ ಕೆರೆಯಲ್ಲಿ ಬಹಿರಂಗ ಸಭೆ ನಡೆಯಿತು. ಮಹಾರಾಜಾ ಕಾಲೇಜಿನ ಲೆಕ್ಚರರಾಗಿದ್ದ ಶ್ರೀ ಎಂ. ವಿ. ರಾಜಗೋಪಾಲ್‌ರವರು ಅಧ್ಯಕ್ಷತೆ ವಹಿಸಿದ್ದರು

ಈಗ ಜೊಕ್ಕಟ ಬಿದ್ದಿದೆ. ಕಾಂಗ್ರೆಸ್ ಸಚಿವರ ಕರ್ತವ್ಯ ಅತ್ಯಂತ ಗುರುತರವಾದುದು; ಅವರ ಕರ್ತವ್ಯ ನಿರ್ವಹಣೆಗೆ ಎಲ್ಲರೂ ಪೂರ್ಣ ಬೆಂಬಲ ನೀಡಬೇಕು-ಎಂದು ಶ್ರೀ ರಾಜಗೋಪಾಲ್‌ರವರು ನುಡಿದರು. ತಾವು ಶ್ರೀ ಎಸ್. ನಿಜಲಿಂಗಪ್ಪನವರ ಸೂಚನೆಯಂತೆ ಮದರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಪ್ರತಿನಿಧಿಯಾಗಿ ಸಂಸ್ಥಾನದ ಮೂಲೆ ಮೂಲೆಗಳಲ್ಲಿಯೂ ಸಂಚರಿಸಿ ಅಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಗಳನ್ನು ಕೂಲಂಕಷವಾಗಿ ಪಂಕ್ತಿಗೆ ... ತಿಳಿಸಿದರು

ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದರೆಂದು ಹೇಳುವುದು ಸಾಧುವಲ್ಲವೆಂದೂ, ತಾವು ಮೈಸೂರು ಕಾಂಗ್ರೆಸ್ಸಿನ ಅನುಯಾಯಿಗಳಾದುದರಿಂದ ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದಾಗಲೇ ವಿದ್ಯಾರ್ಥಿಗಳ ಹೋರಾಟವೂ ಅಂತ್ಯವಾಗಿದೆಯೆಂದೂ ವಿದ್ಯಾರ್ಥಿ ನಾಯಕರಾದ ಶ್ರೀ ಚಿಕ್ಕಯ್ಯನವರು ಹೇಳಿದರು

ಚಾಮರಾಜನಗರದ ಕಾಂಗ್ರೆಸ್ ಮುಖಂಡರಾದ ಶ್ರೀ ಸಿ. ಗೋಪಾಲರಾಯರೂ, ವಿದ್ಯಾರ್ಥಿ ನಾಯಕರಾದ ಶ್ರೀ ಪುಟ್ಟಸ್ವಾಮಿಯವರ ಮಾತನಾಡಿದ ನಂತರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯಗೊಂಡಿತು.

ಶಿವಮೊಗ್ಗೆಯಲ್ಲಿ ಬಂದಿಗಳ ಬಿಡುಗಡೆ

ಸ್ವಂ. ಸು. ತಂತಿ] ಬೆಂಗಳೂರು ೧೪

ಇಲ್ಲಿನ ಜೈಲಿನಲ್ಲಿದ್ದ ಎಲ್ಲ ಡೆಟೆನ್ಯೂಗಳನ್ನೂ ನಿನ್ನೆ ಬಿಡುಗಡೆ ಮಾಡಲಾಯಿತು. ಈ ದಿನ ರಾಜಕೀಯ ಬಂದಿಗಳನ್ನು ಬಿಡಲಾಯಿತು. ಇಲ್ಲಿನ ನಾಗರಿಕರು ಬಿಡುಗಡೆ ಹೊಂದಿದವರೆಲ್ಲರಿಗೂ ಅಭೂತಪೂರ್ವಕವಾದ ಸ್ವಾಗತವನ್ನು ನೀಡಿ ಸತ್ಕರಿಸಿ ಬೀಳ್ಕೊಟ್ಟರು. ಸತ್ಯಾಗ್ರಹವು ಯಶಸ್ವಿಯಾಗಿ ಮುಕ್ತಾಯಗೊಂಡುದರಿಂದ ಎಲ್ಲರೂ ಸಂತೋಷಭರಿತರಾಗಿದ್ದಾರೆ.

ರಥಕ್ಕೆ ಐನೇ ಚಕ್ರ ಬೇಕಿಲ್ಲ

ಡಿ. ವಿ. ಗುಂಡಪ್ಪನವರ ಹೇಳಿಕೆ

ಸ್ವಂ. ಸು. ಫೋ||] ಬೆಂಗಳೂರು ೧

ಶ್ರೀಮನ್ಮಹಾರಾಜರವರು ಪೂರ್ಣ ಜವಾಬ್ದಾರೀ ಸರ್ಕಾರವನ್ನು ದಯಪಾಲಿಸಿದುದಕ್ಕಾಗಿ ಅಭಿನಂದಿಸಿ ಶ್ರೀ ಡಿ. ವಿ. ಗುಂಡಪ್ಪನವರು ಒಂದು ಹೇಳಿಕೆಯನ್ನಿತ್ತಿದ್ದಾರೆ

ಮಹಾರಾಜರು ಪೂರ್ಣ ಜವಾಬ್ದಾರಿ ಸರ್ಕಾರವನ್ನು ದಯಪಾಲಿಸಿದುದು ತೃಪ್ತಿಕರವಾದುದು, ಆದರೆ ದಿವಾನರ ಬಗ್ಗೆ ಖಚಿತವಾಗಿ ತಿಳಿಸದಿರುವುದು ಮಾತ್ರ ಸ್ವಲ್ಪ ಅತೃಪ್ತಿಕರವಾಗಿದೆ. ನೂತನ ಮಂತ್ರಿಮಂಡಲದಲ್ಲಿ ೯ ಮಂದಿ ಸಚಿವರಿರಬೇಕೆಂದು ನಿರ್ಧರವಾಗಿದೆ. ಅದು ಸಾಲದು. ಆದರೆ ಹೊಸ ರಾಜ್ಯಾಂಗವನ್ನು ರೂಪಿಸುವಾಗ ದಿವಾನರ ಸ್ಥಾನವೇ ಇಲ್ಲದಂತಾಗುತ್ತದೆ. ರಥಕ್ಕೆ ನಾಲ್ಕೇ ಚಕ್ರ ಸಾಕು-ಐದನೆಯದು ಬೇಕಿಲ್ಲ-ಎಂದು ಅವರು ಹೇಳಿದ್ದಾರೆ.

ಪತ್ರಿಕಾ ಶಾಸನದ ರದ್ದು

ಪತ್ರಿಕೆಗಳನ್ನು ಪ್ರಕಟಿಸುವ ಮೊದಲು ಸರ್ಕಾರದ ಅನುಮತಿ ಪಡೆಯಬೇಕೆಂದು ಜಾರಿದ್ದ ಶಾಸನವನ್ನು ಸರ್ಕಾರದವರು ವಾಪಸು ತೆಗೆದುಕೊಂಡಿದ್ದಾರೆ

ಪತ್ರಿಕಾ ಸಮ್ಮೇಳನ

ನಾಳೆ ದಿನ ಸಂಜೆ ೪|| ಗಂಟೆಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಪತ್ರಿಕಾ ಸಮ್ಮೇಳನವೊಂದನ್ನು ಕರೆದಿರುವರು.

ಕೃಷ್ಣರಾಜಪುರಂ ಡೆಟೆನ್ಯೂ ಕ್ಯಾಂಪಿನಲ್ಲಿದ್ದ ಶ್ರೀಗಳಾದ ಟಿ. ಟಿ. ಶರ್ಮ, ಕೃಷ್ಣ ಶರ್ಮ-ಮೊದಲಾದ ೨೦ ಜನ ಡೆಟೆನ್ಯೂಗಳನ್ನು ಈ ದಿನ ಬಿಡುಗಡೆ ಮಾಡಲಾಗಿದೆ

ಕಾಂಗ್ರೆಸ್ ಅಧ್ಯಕ್ಷರಿಗೆ ಪಟೇಲರ ತಂತಿ

ನವದೆಹಲಿ ೮ ೧೦

ತಾರೀಖು: ೧೪-೩೦ ಘಂಟೆ

ಶ್ರೀ|| ಕೆ. ಚೆಂಗಲರಾಯರೆಡ್ಡಿ, ಮೈಸೂರು ಸ್ಟೇಟ್ ಕಾಂ|| ಅಧ್ಯಕ್ಷರು, ಮೈಸೂರು

ಹೋರಾಟದಲ್ಲಿ ಜಯ ಗಳಿಸಿದುದಕ್ಕಾಗಿ ನಿಮಗೂ, ನಿಮ್ಮ ಸಹೋದ್ಯೋಗಿಗಳಿಗೂ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು. ಪ್ರಜಾ ಬೆಂಬಲವೂ, ಸಾಧನವೂ ಒಪ್ಪಂದವನ್ನು ಗಳಿಸಿಕೊಟ್ಟಿವೆ. ನಿಮ್ಮಲ್ಲಿ ಸವಾದ ರೀತಿಯಿಂದ ಅದನ್ನು ಅನುಸರಿಸಿದರೆ ವ್ಯವಹಾರಗಳಿಗೆ ಅಭ್ಯುದಯವೂ, ಶಾಂತಿಯೂ ಲಭಿಸುವುದೆಂದು ನಾನು ನಂಬುತ್ತೇನೆ. ಯಾವ ವಿಷಯವಾಗಿಯೂ ದ್ವೇಷವೂ ... ಇರುವುದಿಲ್ಲವೆಂದು ನಂಬುತ್ತೇನೆ.

ವಲ್ಲಭಭಾಯಿ ಪಟೇಲ್,

(ಸಂಸ್ಥಾನದ ಒಳಗಿನಿಂದಲೂ ಹೊರಗಿನಿಂದಲೂ ಇಂತಹ ಅನೇಕ ಅಭಿನಂದನಾ ತಂತಿಗಳು ಬಂದಿವೆ.)

ನವರಾತ್ರಿ ದರ್ಬಾರ್

ನಾನಾಮೂಲೆಗಳಿಂದ ... ನವರಾತ್ರಿ ಕಾರ್ಯಕ್ರಮಗಳು ನಾಳೆ ಬೆಳಿಗ್ಗೆ ... ಗಂಟೆಗೆ ದರ್ಬಾರಿನೊಡನೆ ಆರಂಭವಾಗುವುವು ಈ ಕಾರ್ಯಕ್ರಮಗಳು ... ತಾ|| ೨೭ ನೇ ತಾ|| ನ ವರೆಗೂ ನಡೆಯುವುವು.

ರಾಜರಿದ್ದರೂ ಅಧಿಕಾರವು ಪ್ರಜೆಗಳದಾಗಿರಬೇಕು.

ಷೇಕ್ ಅಬ್ದುಲ್ಲಾರವರ ಹೇಳಿಕೆ

ಕಾಶ್ಮೀರ ಸಂಸ್ಥಾನವು ಭಾರತ ಡೊಮಿನಿಯನ್ನಿಗೇ ಸೇರಬೇಕೇ ಅಥವಾ ಪಾಕಿಸ್ತಾನಕ್ಕೇ ಎಂಬ ಬಗ್ಗೆ ಸದ್ಯದಲ್ಲೇ ಸೇರಲಿರುವ ಸಮ್ಮೇಳನವು ತೀರ್ಮಾನಿಸುತ್ತದೆ. ಡೊಮಿನಿಯನ್ನಿಗೆ ಅಂತರ್ಗತವಾಗುವ ತೀರ್ಮಾನವನ್ನು ರಾಜರುಗಳಾಗಲೀ, ನವಾಬರುಗಳಾಗಲೀ ನಿರ್ಧರಿಸುವರೆಂಬ ಅಂಶಕ್ಕೆ ನಾವು ಬೆಲೆ ಕೊಡುವುದಿಲ್ಲ. ಅದನ್ನು ತೀರ್ಮಾನಿಸಬೇಕಾದ ಪೂರ್ಣ ಜವಾಬ್ದಾರಿ ಪ್ರಜೆಗಳಿಗೆ ಸೇರಿದ್ದು—ಎಂಬುದಾಗಿ ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಮಿ॥ ಷೇಖ್ ಅಬ್ದುಲ್ಲಾರವರು ಹೇಳುವರು. ಕಾಶ್ಮೀರವನ್ನು ಬಿಟ್ಟು ಹೊರಡಿ-ಎಂಬ ಘೋಷಣೆಯನ್ನು ನಾವು ಮಾಡುದುದು ಆಕ್ಷೇಪ ರಾಜರನ್ನು ಪದಭ್ರಷ್ಟಗೊಳಿಸಬೇಕೆಂದು ಅಲ್ಲವೆಂದೂ, ರಾಜ್ಯದ ನಿಜವಾದ ಆಡಳಿತಾಧಿಕಾರ ಪ್ರಜೆಗಳಿಗೆ ಸೇರಿದ್ದು ರಾಜರುಗಳು ಪ್ರಜಾಸತ್ತಾತ್ಮಕನುಗುಣವಾಗಿ ಆಡಳಿತ ನಿರ್ವಹಣೆಯ ಮೇಲ್ವಿಚಾರಕರಾಗಿರಬೇಕೆಂಬುದು ಅದರ ತಾತ್ಪರ್ಯವೆಂದೂ ಅಬ್ದುಲ್ಲಾ ಹೇಳುವರು. ಸಂಸ್ಥಾನಗಳ ಪ್ರಜೆಗಳು ನಿರೀಕ್ಷಿಸಬೇಕಾದನ್ನು ನಿರ್ವಾಹಗೊಳಿಸಿ ಪ್ರಜಾ ಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಲು ಬದ್ಧಕಂಕಣರಾಗಿದ್ದಾರೆ ರಾಜರ ... ಪರಿಬಹುದು, ಆದರೆ ಅವರು ಸರ್ವಾಧಿಕಾರಿಗಳಾಗಿರಲು ಸಾಧ್ಯವಿಲ್ಲ-ಎಂದು ಅಬ್ದುಲ್ಲಾರವರು ನುಡಿದಿರುವರು

ಭಾರತಕ್ಕೆ ಜರ್ಮನ್ ವೈಜ್ಞಾನಿಕ ನಿಪುಣರು

ಜರ್ಮನಿಯ ಹಲವಾರು ರಾಸಾಯನಿಕ ಶಾಸ್ತ್ರಗಳ ಪ್ರವೀಣರು ರಾಸಾಯನಿಕ ಕಾರ್ಯದಲ್ಲಿ ನೆರವು ನೀಡಲು ಭಾರತಕ್ಕೆ ಬರಲು ಸಿದ್ಧರಾಗಿದ್ದಾರೆಂದು ವಿಶ್ವರಾಷ್ಟ್ರ ಸಂಸ್ಥೆಯ ಆಹಾರ ಸಮ್ಮೇಳನಕ್ಕೆ ತೆರಳಿದ್ದ ನಿಯೋಗದ ನಾಯಕರಾದ ಶ್ರೀ॥ ಅನ ಗ್ರಹ ನಾರಾಯಣ ಸಿನ್ಹಾರವರು ತಿಳಿಸಿರುವರು

ರಾಜಕಮಲ್

ತಾ॥ 11-10-47 ರಿಂದ

ಅಮೋಘ 3ನೇ ವಾರ

ಮಹಾಕವಿ ಕಾಳಿದಾಸ್

(ಹಿಂದಿ)

—: ಭೂಮಿಕೆ :—

ಸಪರು ಸನ್ಯಾಲ್, ಸ್ನೇಹಪ್ರಭಾ, ವನಮಾಲಾ, ಮತ್ತು ಉಲ್ಹಾಸ್

17—10—47 ರಿಂದ

ರಾಜಕಮಲ್ ಥಿಯೇಟರಿನಲ್ಲಿ

ಜಿಸ್ನಿ ಪವಾರ್ ಸ್ವಾತ್ರ

Printed and published at ... the Sadhvi, D. Subbaiah Road Mysore

ಭೂಗರ್ಭದಲ್ಲಿ ಅಸ್ತ್ರ ಶಸ್ತ್ರಗಳು

ಭೂಮಿಯ ಒಳಭಾಗದಲ್ಲಿ ಹೇರಳವಾಗಿ ಮುಚ್ಚಿಡಲಾಗಿದ್ದ ಅನೇಕ ಬಗೆಯ ಮದ್ದುಗುಂಡುಗಳನ್ನು, ಅಸ್ತ್ರಶಸ್ತ್ರಗಳನ್ನು, ಸ್ಫೋಟಕ ವಸ್ತುಗಳನ್ನೂ ಪಾಟ್ನಾ ನಗರದ ಪೋಲೀಸರು ಪತ್ತೆ ಹಚ್ಚಿರುವರೆಂದು ವರದಿಯಾಗಿದೆ

ಭಾರತ ಡೊಮಿನಿಯನ್ ಮುಸ್ಲಿಮರಿಗೆ ಜಿನ್ನಾರ ಹಿತನುಡಿ

ಭಾರತದಲ್ಲಿರುವ ಮುಸ್ಲಿಮರು ಭಾರತ ಸರ್ಕಾರಕ್ಕೆ ತಮ್ಮ ಪೂರ್ಣ ರಾಜಭಕ್ತಿಯನ್ನು ಅರ್ಪಿಸಬೇಕು ಅಲ್ಪ ಸಂಖ್ಯಾತರ ವರ್ಗಾವಣೆಯು ಅನಿವಾರ್ಯವಾದರೆ ಅದನ್ನು ಸರ್ಕಾರಗಳು ವಹಿಸಿಕೊಳ್ಳಬೇಕೇ ವಿನಃ ಪ್ರಜೆಗಳೇ ತೊಡಗಬಾರದು-ಎಂಬುದಾಗಿ ಪಾಕಿಸ್ತಾನ ಗೌರ್ನರ್ ಜನರಲ್ ಶ್ರೀ ಮಹಮ್ಮದ್ ಅಲಿ ಜಿನ್ನಾರವರು ತಿಳಿಸಿರುವರು

ಬೆಳಗಿನ ಆಟಗಳು

ದಸರಾ ಹಬ್ಬದ ಪ್ರಯುಕ್ತ

15-10-47 ರಿಂದ

ಪ್ರತಿ ದಿನ 10 ಘಂಟೆಗೆ

ಪ್ರಭಾತ್‌ರವರ

ಗೋಪಾಲ್ ಕೃಷ್ಣ

ಪಾತ್ರ :— ಶಾಂತ ಆಪ್ಟೆ

ಒಲಿಂಪಿಯ ಟಾಕೀಸ್

ಶ್ರೀ ಎಂ. ವಿ. ರಾಜಗೋಪಾಲ್

ಕಳೆದ ತಿಂಗಳು ಪೋಲೀಸಿನವರು ನಡೆಸಿದ ದೌರ್ಜನ್ಯ ವರ್ತನೆಯನ್ನು ಖಂಡಿಸಿ ರಾಜೀನಾಮೆ ಇತ್ತ ಮಹಾರಾಜಾ ಕಾಲೇಜಿನ ಲೆಕ್ಚರರಾದ ಶ್ರೀ ಎಂ. ವಿ ರಾಜಗೋಪಾಲ್‌ರವರು ಮದರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾಲಯದಲ್ಲಿ ಉಪ ಸಂಪಾದಕರಾಗಿದ್ದಾರೆಂದು ತಿಳಿದು ಬಂದಿದೆ

ಚಾಮುಂಡೇಶ್ವರೀ ಟಾಕೀಸ್

12—10—47 ರಿಂದ

ಪ್ರತಿ ದಿನ 3 ಪ್ರದರ್ಶನಗಳು

● ನವರಾತ್ರಿ ಹಬ್ಬದ ಪ್ರಯುಕ್ತ ●

★ದೈವನೀತಿ★

(ತಮಿಳು)

—: ಮುಖ್ಯ ಪಾತ್ರ :—

ಪಿ. ಕಣ್ಣಾಂಬ, ಶಕುಂತಲಾ, ವಿ. ಎ. ಚೆಲ್ಲಪ್ಪ, ಡೊರರಾಜ್.

WOODLANDS

Morning shows from 14-10-47 for 3 days daily at 10-30 a.m

A Medal For Benny

Featuring:- Dorothy Lamour and Arturo De Cordoba

ಕ್ರಿಮಿನಲ್ ಖೈದಿಗಳಿಗೆ ರಿಯಾಯಿತಿ ಇಲ್ಲವೆ ?

ಸಂಸ್ಥಾನದಲ್ಲಿ ಸತ್ಯಾಗ್ರಹ ಮುಗಿದು ಗೊಂಡು ಜವಾಬ್ದಾರಿ ಸರ್ಕಾರವು ಇಲ್ಲೀ ಸ್ಥಾಪನೆಯಾಗಲಿದೆ ಇದೇ ... ರ್ಭದಲ್ಲಿ ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ... ಪ್ಪಂದವಾಗಿ ರಾಜಕೀಯ ಬಂದಿಗಳ ಬಿಡುಗಡೆಯಾಗಿದೆ

ಹಿಂದೆ, ಭಾರತಸ್ವರಾಜ್ಯ ಸ್ಥಾಪನೆಯ ... ಗ ಭಾರತದ ಅದ್ಯಂತವೂ ಅನೇಕ ಕ್ರಿಮಿನಲ್ ಖೈದಿಗಳು ಬಿಡುಗಡೆ ಹೊಂದಿದರು ... ಅತ್ಯಗ್ರತರವಾದ ಹೀನ ಕೃತ್ಯಗಳನ್ನೆಸಗಿದ ಅನೇಕರಿಗೂ ಶಿಕ್ಷೆಯನ್ನು ಕಡಿಮೆ ... ಡಲಾಯಿತು.

ಮೈಸೂರು ಸಂಸ್ಥಾನದಲ್ಲಿ ಶ್ರೀಮನ್ ಮಹಾರಾಜರವರಿಗೆ ರಾಜಕುಮಾರಿಯು ಜನನವಾದಾಗಲೂ ಅನೇಕ ಖೈದಿಗಳಿಗೆ ಶಿಕ್ಷೆಯನ್ನು ಇಳಿಸಲಾಯಿತು, ಅಲ್ಲದೆ ಹಲವರನ್ನು ಬಿಡುಗಡೆ ಮಾಡಲಾಯಿತು

ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಿರುವ ಇಂದಿನ ಸಂತೋಷ ಸನ್ನಿವೇಶದಲ್ಲಿಯೂ ಸಹ ಕ್ರಿಮಿನಲ್ ಖೈದಿಗಳ ಬಗ್ಗೆ ಮೊದಲಿನಂತೆಯೇ ಅನುಕಂಪೆಯನ್ನು ತೋರಿ ಶಿಕ್ಷೆಯಲ್ಲಿ ರಿಯಾಯಿತಿಯನ್ನು ಕೊಡುವುದು ಯುಕ್ತವಾಗಿದೆ.

ಹಿತೈಷಿ

ವಿದ್ಯಾರ್ಥಿಗಳ ಮುಷ್ಕರ

ಆಗ್ರಾ ನಗರದ ಐದು ವಿದ್ಯಾಲಯ ಮತ್ತು 10 ಸ್ಕೂಲುಗಳ ಒಟ್ಟು ... ಸ್ರ ಮಂದಿ ವಿದ್ಯಾರ್ಥಿಗಳು ಮುಷ್ಕರ ... ದಿರುವರೆಂದು ವರದಿಯಾಗಿದೆ

ಶ್ರೀ ಗಣೇಶ ಟಾಕೀಸ್

13-10-47 ರಿಂದ

ಪ್ರತಿ ದಿನ 4 ಪ್ರದರ್ಶನಗಳು

○ನವರಾತ್ರಿ ಹಬ್ಬದ ಪ್ರಯುಕ್ತ○

ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ ಚಲನ ಚಿತ್ರ



★ಕಡಗಂ★

(ತಮಿಳು)

—: ಮುಖ್ಯ ಭೂಮಿಕೆಯಲ್ಲಿ :—

● ಸೂರ್ಯಕುಮಾರಿ ●

○ ಟೀ. ಪಿ. ಮುತ್ತುಲಕ್ಷ್ಮಿ ○

○ ಟಿ. ಆರ್. ರಾಮಚಂದ್ರ ○

MYSORE CITY MUNICIPALITY

(Works Department)

NOTIFICATION

Sealed tenders will be received up to 4 p m on 17-10-47 by the Municipal Engineer for the construction of Maternity Hospital at Nazarbad Mohalla, Mysore

Each tender must be accompanied with a challan for having remitted Rs 3000/ in the Municipal Treasury as earnest money. For full particulars please see the detailed notification on the notice board,

S Narayana Swamy,
Municipal Engineer

Office of the President, City Municipal Council Mysore, dated 11th Oct.

NOTIFICATION

Notice is hereby giv... that sealed tenders will ... received at the office ... the President, City Mu... cipal Council, Mysore, up ... 4 p m. on Thursday the 30 Oct 1947, for running (a) decent Brahmin Restaura... and (b) a decent stall f... fruit, Pan-Supari Etc., ... the New Bus Terminus Buildings, Mysore City, ... lease running for a peri... of three years from ... November 47 or from ... date of handing over pos... ssion of the building.

For further particula... refer to this office n... tification dated 10th O... 1947, on he subject, and ... quire in the Municipal Office, Revenue Section during working hours

(Sd) N S. Hirannay...
President

ಫೋನ್ ನಂ. 608 ॥ ವಂದೇ ಮಾತರಂ ॥ ಬಿಡಿಪ್ರತಿ 3 ಕಾಸು

ಸಂಪುಟ ೭] ಬುಧವಾರ ೧೫-೧೦-೪೭ [ಸಂಚಿಕೆ ೫೨

ಭಾರತ ಯೂನಿಯನ್‌ಗೆ ಹೈದ್ರಾಬಾದ್ ಸಂಸ್ಥಾನ

ಬಂದಿಗಳ ಬಿಡುಗಡೆ

ಮೈಸೂರು ೧೫

ಸತ್ಯಾಗ್ರಹದ ಸಂಬಂಧದಲ್ಲಿ ದಸ್ತಗಿರಿಯಾಗಿರುವ ಕಮ್ಯೂನಿಸ್ಟ್ ಪಕ್ಷದ ಶ್ರೀ ಕರ್ನಲ್ ವೆಂಕಟರಾಯರ ಹೊರತು ಮೈಸೂರು ಜೈಲಿನಲ್ಲಿದ್ದ ಉಳಿದ ಎಲ್ಲ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಲಾಗಿದೆ.

ಹಿಂದೀ ತರಗತಿಗಳು

ಮೈಸೂರು ನಗರದ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ತಾ|| ೨೦-೧೦-೪೭ ರ ಸೋಮವಾರದಿಂದ ಹಿಂದೀ ತರಗತಿಗಳು ಈ ಕೆಳಗೆ ಕಂಡ ಕೇಂದ್ರಗಳಲ್ಲಿ ಪ್ರತಿನಿತ್ಯವೂ ಸಾಯಂಕಾಲ ೬ ರಿಂದ ೭ ರ ವರೆಗೆ ನಡೆಯುವುವು. ಮಹಾಜನರು ಈ ಅವಕಾಶವನ್ನು ಸದ್ವಿನಿಯೋಗಿಸಿಕೊಳ್ಳಬೇಕಾಗಿ ಕೋರಲಾಗಿದೆ.

೧ ಹಿಂದೀ ಪ್ರಚಾರ ಸಭಾ ಕಾರ್ಯಾಲಯ, ಕೋ-ಆಪರೇಟಿವ್ ಹೋಂ, ನಾರಾಯಣ ಶಾಸ್ತ್ರಿ ರಸ್ತೆ.

೨ ಕಾಂಗ್ರೆಸ್ ಆಫೀಸ್, ಸಯ್ಯಾಜಿರಾವ್ ರಸ್ತೆ.

ದಂಡಿನವರಿಗೆ ಸರಿಯಾದ ಸ್ಥಾನ ಬೇಕು

ನರಸಯ್ಯನವರ ಹೇಳಿಕೆ

ಜರುಗಿದ ಜನತಾ ಹೋರಾಟದಲ್ಲಿ ಬೆಂಗಳೂರು ದಂಡೂ ಸಹ ತನ್ನ ಕಾಣಿಕೆಯನ್ನು ಸಲ್ಲಿಸಿದೆ. ಇಲ್ಲಿನ ಗಂಡಸರು ಹೆಂಗಸರು, ಹುಡುಗರು ಮಕ್ಕಳೂ ಸಹ ಪೊಲೀಸರ ದೌರ್ಜನ್ಯಗಳಿಗೆ ಈಡಾಗಿದ್ದಾರೆ. ಸಾರ್ವಜನಿಕ ವಿಚಾರಣಾ ಸಮಿತಿಯೊಂದರ ಮುಂದೆ ತಪ್ಪಿತಸ್ಥರ ವಿಚಾರಣೆ ನಡೆಯಬೇಕಾಗಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ದಂಡನ್ನು ಯಾರೂ ಪ್ರತಿನಿಧಿಸುತ್ತಿಲ್ಲ. ಈಗಿನ ಮಂತ್ರಿಗಳ ಸಂಬಂಧದಲ್ಲಿಯೂ ಸಹ ದಂಡಿನವರನ್ನು ಮರೆಸಿ ಎರಡೂವರೆ ಲಕ್ಷ ಪ್ರಜೆಗಳ ಹಕ್ಕು ಬಾಧ್ಯತೆಗಳ ರಕ್ಷಣೆಯ ದೃಷ್ಟಿಯಿಂದ ದಂಡಿನ ಪ್ರತಿನಿಧಿಗಳಿಗೆ ಹೆಚ್ಚು ಪ್ರಾತಿನಿಧ್ಯ ಅಗತ್ಯವೆಂಬುದಾಗಿ ದಂಡಿನ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ|| ಸಿಟಿ. ಎಸ್. ನರಸಯ್ಯನವರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಕೀಲರ ಅಭಿನಂದನೆ

ಮೈಸೂರು ೧೪

ರಾಜಧಾನಿಯ ವಕೀಲರು ಈ ದಿನ ಸಭೆ ಸೇರಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ದಯಪಾಲಿಸಿದುದಕ್ಕಾಗಿ ಶ್ರೀಮನ್ ಮಹಾರಾಜರನ್ನೂ, ಹೋರಾಟದಲ್ಲಿ ಜಯಗಳಿಸಿದುದಕ್ಕಾಗಿ ಕಾಂಗ್ರೆಸ್ಸಿನವರನ್ನೂ ಅಭಿನಂದಿಸಿ ನಿರ್ಣಯ ಮಾಡಿರುವರು.

ಶ್ರೀ ದೇವೀ ಯಜ್ಞ

ರಾಜಧಾನಿಯ ಚಾಮುಂಡಿ ಬಡಾವಣೆ ಮನೆ ೧೦೬೩/೧೫ ನೇ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರೀ ಸನ್ನಿಧಾನದಲ್ಲಿ ಮಾಮೂಲಿನಂತೆ ಇಂದಿನಿಂದ ೨೫-೧೦-೪೭ ರ ವರೆಗೆ ಪೂಜಾದಿಗಳೂ, ೨೫ ನೇ ತಾ|| ಶ್ರೀ ದೇವೀ ಯಜ್ಞ ಪ್ರತಿಪತ್ ದುರ್ಗಾ ಸ್ವಾಹಾಕಾರ ಪೂರ್ಣಾಹುತಿಯೂ ನಡೆಯುವುವು.

STOP PRESS

ಮೈಸೂರು ೧೫

ರಾಜಧಾನಿಯ ಸೆಂಟ್ರಲ್ ಜೈಲಿನಲ್ಲಿದ್ದ ಈ ಎಲ್ಲ ಬಂದಿಗಳೆಲ್ಲರನ್ನೂ ಈಗ ತಾನೆ ಬಿಡುಗಡೆ ಮಾಡಲಾಯಿತು. (6 30 P M)

ಬಹಿರಂಗ ಸಭೆ

ಮೈಸೂರು ೧೫

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಿನ್ನೆ ಟೌನ್‌ಹಾಲ್ ಮೈದಾನದಲ್ಲಿ ನಡೆಯಬೇಕಾಗಿದ್ದ ಬಹಿರಂಗ ಸಭೆಯು ಕೆಲವು ಕಾರಣದಿಂದ ನಡೆಯಲಿಲ್ಲ. ಈ ದಿನ ಸಂಜೆ ೬-೩೦ ಗಂಟೆಗೆ ಅದೇ ಸ್ಥಳದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

ಕೊಲೆ ಮೊಕದ್ದಮೆಯಲ್ಲಿ! ೪ ವರ್ಷ ಕಠಿಣ ಶಿಕ್ಷೆ

ನಂಜನಗೂಡು ತಾ|| ಹಲ್ಲಯ್ಯನಪುರದ ಪುಟ್ಟಸ್ವಾಮಿ, ಚಿಕ್ಕಣ್ಣ, ಅಪ್ಪಾಜಿ, ಆರು ಬೆಳಕಪ್ಪ ಎಂಬುವರುಗಳು ಸದರಿ ಗ್ರಾಮದ ದ್ಯಾವಪ್ಪನ ಮಗ ಪುಟ್ಟಸ್ವಾಮಿ ಎಂಬುವನನ್ನು ಜಮೀನು ವ್ಯಾಜ್ಯದ ಸಂಬಂಧದಲ್ಲಿ ಹೊಡೆದು ಸಾಯಿಸಿದರೆಂದು ನಂಜನಗೂಡು ಪೊಲೀಸಿನವರು ನಂಜನಗೂಡು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯು ಸೆಷನ್ಸಿಗೆ ಕಮಿಟ್ ಮಾಡಲ್ಪಟ್ಟಿತ್ತು. ಸೆಷನ್ ವಿಚಾರಣೆಯಲ್ಲಿ ಅಪರಾಧಿಗಳಿಗೆ ತಲಾ ೪ ವರ್ಷ ಕಠಿಣ ಸಜಾ ವಿಧಿಸಲಾಗಿದೆ. ಅಪರಾಧಿಗಳ ಪರ ಶ್ರೀ|| ಗಳಾದ ಬಿ. ಎಸ್. ಆರಾಧ್ಯ ಮತ್ತು ಎಂ. ಎಸ್. ಮಹಂತದೇವರು ರವರುಗಳೂ, ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ|| ಜಿ. ಶಂಕರಶೆಟ್ಟಿಯವರೂ ವಕಾಲತ್ತು ವಹಿಸಿದ್ದರು.

ಶಿಕ್ಷೆಗೊಳಗಾದ ೩೦೦ ಜನ ಬಂದಿಗಳ ಬಿಡುಗಡೆ

ಸ್ವಂ ಸು. ಫೋ] ಬೆಂಗಳೂರು ೧೫

ಸತ್ಯಾಗ್ರಹದ ಸಂಬಂಧವಾಗಿ ಶಿಕ್ಷೆಗೊಳಗಾಗಿ ಸೆಂಟ್ರಲ್ ಜೈಲಿನಲ್ಲಿದ್ದ ೩೦೦ ಜನ ರಾಜಕೀಯ ಬಂದಿಗಳನ್ನೂ ನಿನ್ನೆ ಬಿಡುಗಡೆ ಮಾಡಲಾಗಿದೆ.

ಚಚ್ಚೌಕವಾದ ಮೊಟ್ಟೆಗಳು

ಚಪ್ಪಟ್ಟೆಯಿಂದ ಕೋಳಿಗಳನ್ನು ತಯಾರಿಸಿ ಮೊಟ್ಟೆಗಳಲ್ಲಿರುವ ಸಾರವನ್ನು ಅವಕ್ಕೆ ತುಂಬಲು ಅಮೆರಿಕದ ಡೇವಿಡ್ ಅರ್ನಾಲ್ಡ್ ಎಂಬುವರು ಪ್ರಯತ್ನ ನಡೆಸುತ್ತಿರುವರೆಂದು ವರದಿಯಾಗಿದೆ. ಈ ರೀತಿ ಮಾಡುವುದರಿಂದ ಮೊಟ್ಟೆಗಳು ಒಡೆಯುವುದಕ್ಕೇ ಆಗಲೀ ಅಥವಾ ಉರುಳುವುದಕ್ಕೇ ಆಗಲಿ ಅವಕಾಶವಿರದೆ ಅವು ದೀರ್ಘಕಾಲ ಬಾಳಿಕೆ ಬರುವುವೆಂದು ಹೇಳಲಾಗಿದೆ.

ದರ್ಬಾರ್ ಕಾರ್ಯಕ್ರಮಗಳು

ಮೈಸೂರು ೧೫

ಶ್ರೀಮನ್ಮಹಾರಾಜರವರು ಈ ದಿನ ಬೆಳಗ್ಗೆ ೭-೫೫ ಗಂಟೆಗೆ ದರ್ಬಾರ್ ಹಾಲಿಗೆ ದಯಮಾಡಿಸಿ ೮-೩೫ ಗಂಟೆಗೆ ಸಿಂಹಾಸನಾರೋಹಣ ಮಾಡಿದರು. ೨೧ ಕುಶಾಲತೋಪುಗಳು ಹಾರಿಸಲ್ಪಟ್ಟವು. ಅನಂತರ ದಿವಾನರೂ, ಆಪ್ತ ಕಾರ್ಯದರ್ಶಿಗಳೂ, ಶ್ರೇಷ್ಠ ನ್ಯಾಯಾಧೀಶರೂ, ಸಚಿವರುಗಳೂ, ಶಾಸನ ಸಭಾಧ್ಯಕ್ಷರೂ, ಸರದಾರರುಗಳೂ, ಹುಜೂರ್ ಕಾರ್ಯದರ್ಶಿಗಳೂ, ಸ್ವಿಸ್ ಭಾನ್ಸಲರೂ ಸಮರ್ಪಿಸಿದ ನಜರುಗಳನ್ನು ಸ್ವೀಕರಿಸಿದರು.

ಸಂಜೆ ೬ ಗಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆಗಳು ಸೋಮೇಶ್ವರ ದೇವಾಲಯಕ್ಕೆ ಬಿಜಯ ಮಾಡುವುವು. ೭ ಗಂಟೆಗೆ ದರ್ಬಾರ್, ಸಿವಿಲ್ ಅಧಿಕಾರಿಗಳೂ ಅರಸುಗಳೂ ನಜರನ್ನರ್ಪಿಸುವರು.

ನಾಳೆಯಿಂದ ೨೩ ನೇ ಗುರುವಾರ ಪೂರ್ತಿ ಪ್ರತಿನಿತ್ಯ ಬೆಳಗ್ಗೆ ೮ ಗಂಟೆ ಮತ್ತು ಸಂಜೆ ೬ ಗಂಟೆಗೆ ಪಟ್ಟದ ಆನೆ ಮುಂತಾದುವು ಸೋಮೇಶ್ವರ ದೇವಾಲಯಕ್ಕೆ ಬಿಜಯ ಮಾಡುವುವು. ಪ್ರತಿ ದಿನ ಸಂಜೆ ೭ ಗಂಟೆಗೆ ದರ್ಬಾರ್ ಮತ್ತು ನಜರು ಸ್ವೀಕರಿಸುವರು. ಗುರುವಾರ ಬೆಳಗ್ಗೆ ೮-೩೦ ಗಂಟೆಗೆ ಆಯುಧ ಮತ್ತು ಗಜಾಶ್ವಾದಿಗಳ ಪೂಜೆ ನಡೆಯುವುದು.

೨೪ ನೇ ಶುಕ್ರವಾರ ಬೆಳಗ್ಗೆ ಪೂಜೆ ನಡೆದ ನಂತರ ೮ ಗಂಟೆಗೆ ಆಯುಧ ಮತ್ತು ಗಜಾಶ್ವಗಳು ಬನ್ನೀ ಮಂಟಪಕ್ಕೆ ಬಿಜಯ ಮಾಡುವುವು. ಅನಂತರ ಜಟ್ಟಿ ಕಾಳಗವು ನಡೆಯುವುದು.

ರಾಜಕುಮಾರಿ ವಿವಾಹಕ್ಕೆ ಪಿಂಡಾರಿಗೆ ಆಹ್ವಾನವಿಲ್ಲ

ಮುಂದಿನ ತಿಂಗಳು ನಡೆಯಲಿರುವ ರಾಜಕುಮಾರಿ ಎಲಿಜಬೆತ್ ರವರ ವಿವಾಹಕ್ಕೆ ಪಿಂಡ್ಸರರಿಗೆ ಆಹ್ವಾನ ಬಂದಿಲ್ಲವೆಂದು ಅವರ ಸೆಕ್ರೆಟರಿಗಳು ತಿಳಿಸಿದ್ದಾರೆ.

ಹೈದರಾಬಾದಿನಲ್ಲಿ ಎಕ್ಸ್‌ಪ್ರೆಸ್ ಪತ್ರಿಕೆಗೆ ಬಹಿಷ್ಕಾರ

ಆರು ತಿಂಗಳ ಕಾಲ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಹೈದರಾಬಾದ್ ಸಂಸ್ಥಾನದೊಳಕ್ಕೆ ಬರಕೂಡದೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿದ್ದಾರೆಂದು ವರದಿಯಾಗಿದೆ.

ಭಾರತ ಯೂನಿಯನ್ ಮತ್ತು ಹೈದರಾಬಾದ್

ದೆಹಲಿಯಿಂದ ಹಿಂದಿರುಗಿದ ಹೈದರಾಬಾದಿನ ನಿಯೋಗದವರು ನಿಜಾಮರೊಡನೆ ಸಂಧಾನದ ವಿವರಗಳನ್ನು ಪರಿಶೀಲಿಸುತ್ತಿದ್ದಾರೆಂದು ವರದಿಯಾಗಿದೆ. ಅವರು ನಿಜಾಮರೊಡನೆ ಹೆಚ್ಚಿನ ಸಮಾಲೋಚನೆಗಳನ್ನು ನಡೆಸಿ ಮತ್ತೆ ದೆಹಲಿಗೆ ಹೋಗುವರು. ಇನ್ನು ೮-೧೦ ದಿನಗಳಲ್ಲೇ ಹೈದರಾಬಾದಿಗೂ ಭಾರತ ಸರ್ಕಾರಕ್ಕೂ ಒಪ್ಪಂದವಾಗಬಹುದೆಂದು ಹೇಳಲಾಗಿದೆ. ಒಪ್ಪಂದವು ಸಮಾನತ್ವದ ಆಧಾರದ ಮೇಲೆ ಆಗಬಹುದೆಂದು ತಿಳಿದುಬಂದಿದೆ. ಅಂತೆ ವ್ಯವಹಾರಗಳ ಬಗ್ಗೆ ನಿರ್ಧಾರವಾಗಿದೆ. ಪಿ ದೇಶಾಂಗದ ಬಗ್ಗೆ ಮಾತ್ರ ಒಪ್ಪಂದವಾಗಬೇಕಾಗಿದೆ. ಒಪ್ಪಂದದ ಮೇರೆ ಹೈದರಾಬಾದು ಹೊರದೇಶಗಳಲ್ಲಿ ಟ್ರೇಡ್ ಕಮಿಷನರುಗಳನ್ನು ನೇಮಿಸುವುದೇ ವಿನಾ ರಾಜಕೀಯ ವ್ಯವಹಾರಗಳಿಗಾಗಿ ರಾಯಭಾರಿಗಳನ್ನು ನೇಮಿಸುವಂತಿಲ್ಲ. ಆದರೆ ಬ್ರಿಟನ್ ಮತ್ತು ಪಾಕಿಸ್ತಾನಗಳಲ್ಲಿರುವ ನಿಜಾಮರ ರಾಯಭಾರಿಗಳು ಭಾರತದ ರಾಯಭಾರಿಗಳೊಡನೆ ಕಲೆತು ಕೆಲಸ ಮಾಡಲು ಅವಕಾಶವಾಗುವಂತೆ ಹೈದರಾಬಾದು ಪ್ರಯತ್ನಿಸಬಹುದೆಂದು ಹೇಳಲಾಗಿದೆ.

ಕಾಶ್ಮೀರದ ಭವಿಷ್ಯ

ಭಾರತದ ಗವರ್ನರ್ ಜನರಲ್ ಆದ ಲಾರ್ಡ್ ಮೌಂಟ್ ಬ್ಯಾಟನ್, ಪ್ರಧಾನಿ ಪಂಡಿತ ನೆಹರೂ ಮತ್ತು ಸರ್ದಾರ್ ಪಟೇಲರ ಜೊತೆ ಕಾಶ್ಮೀರ ಸಂಸ್ಥಾನದ ಪ್ರಧಾನಿ ಮಹಾಜನರು ಮಾತುಕತೆ ಪ್ರಾರಂಭಿಸಿದ್ದಾರೆ. ಆದರೆ ಕಾಶ್ಮೀರ ಸಂಸ್ಥಾನವು ಪಾಕಿಸ್ತಾನದ ಒಪ್ಪಂದಕ್ಕೆ ಬಂದಿದ್ದರೂ ಕೂಡ, ಅದರಿಂದ ಹೆಚ್ಚಿನ ಪ್ರಯೋಜನ ಕಂಡುಬಂದಿಲ್ಲ. ಕಳೆದ ಅನೇಕ ತಿಂಗಳುಗಳಿಂದ ರೈಲು ಸಂಚಾರವೇ ನಿಂತುಹೋಗಿದೆ. ಇದಲ್ಲದೆ ಪಾಕಿಸ್ತಾನ ರೇಡಿಯೋ ಮತ್ತು ಅದರ ನಾಯಕರುಗಳು ಪಾಕಿಸ್ತಾನಕ್ಕೆ ಕಾಶ್ಮೀರ ಸೇರಬೇಕೆಂದು ಪ್ರಚಾರ ನಡೆಸುತ್ತಿದ್ದಾರೆ. ಸಂಸ್ಥಾನದ ಒಳಗೆ ಮುಸ್ಲಿಂ ಕಾನ್ಫರೆನ್ಸಿನವರು ಸಹ ಪ್ರಚಾರ ನಡೆಸುತ್ತಿದೆ.

ಹಜಾರ ಮತ್ತು ಗಡಿ ಪ್ರಾಂತ್ಯದ ಅನೇಕ ಗುಡ್ಡಗಾಡು ನಾಯಕರುಗಳು ಗಡಿ ಪ್ರದೇಶಗಳಲ್ಲಿ ಸಜ್ಜುಗೊಳಿಸುತ್ತಿದ್ದಾರೆ. ಜಲಿಟ್ ಗಡಿ ಪ್ರದೇಶದಿಂದ ಕಾಶ್ಮೀರಕ್ಕೆ ಸಂಚಾರ ಸಂಬಂಧವಿರುವುದು ಮುಂದಕ್ಕೆ ಅಂತರರಾಷ್ಟ್ರೀಯ ಗೊಂದಲಕ್ಕೆ ಕಾರಣವಾಗಬಹುದು.

ದೆಹಲಿಯಲ್ಲಿ ನಿರಾಶ್ರಿತ ಕರಡಿಗಳ ಹಾವಳಿ

ದೆಹಲಿಯನ್ನು ಬಿಟ್ಟು ಹೋದ ನಿರಾಶ್ರಿತರ ಸ್ವತ್ತುಗಳನ್ನು ಕಾಪಾಡುವುದು ಅಧಿಕಾರಿಗಳಿಗೆ ಹೆಚ್ಚಿನ ತಲೆನೋವನ್ನುಂಟುಮಾಡಿದೆ.

ಹಮಾಯೂನ್ ಗೋರಿ ಕ್ಯಾಂಪಿನಲ್ಲಿದ್ದ ಮುಸ್ಲಿಂ ನಿರಾಶ್ರಿತನೊಬ್ಬನು ತನ್ನ ಎರಡು ಕರಡಿಗಳನ್ನು ಮಾರಲಾರದೆ, ಅವುಗಳಿಗೆ ಸ್ವಾತಂತ್ರ್ಯ ದಯಪಾಲಿಸಿ, ತಾನು ಪಾಕಿಸ್ತಾನಕ್ಕೆ ಹೊರಟು ಹೋದನು. ನಂತರ ಸ್ವಾತಂತ್ರ್ಯ ಪಡೆದ ಕರಡಿಗಳು ತಮ್ಮ ಚೇಷ್ಟೆ ಪ್ರಾರಂಭಿಸಿ, ಹೊಸ ನಿವಾಸಿಗಳಿಗೆ ತೊಂದರೆ ಕೊಡಲು ಪ್ರಾರಂಭಿಸಿದವು. ಒಂದು ಕರಡಿಯು ಅಲ್ಲಿನ ಕಾವಲುಗಾರನನ್ನು ಹಿಡಿದು ಅವನನ್ನು ಕೊಂದಿತು. ಅಧಿಕಾರಿಗಳು ಕರಡಿಗಳನ್ನು ಗುಂಡಿನಿಂದ ಹೊಡೆದು ಸಾಯಿಸಬೇಕಾಯಿತು.

ಒಪ್ಪಂದದ ಬಗ್ಗೆ ಪ್ರಮುಖರ ಹೇಳಿಕೆ

ಡಿ. ಹೆಚ್. ಚಂದ್ರಶೇಖರಯ್ಯ

ಮೈಸೂರು ಕಾಂಗ್ರೆಸ್ಸು ಕಳೆದ ಹಲವು ವರ್ಷಗಳಿಂದಲೂ ಅಸಾಧಾರಣವಾದ ತ್ಯಾಗ, ನಿಷ್ಠೆ ಮತ್ತು ಧೈರ್ಯಸ್ಥೈರ್ಯಗಳಿಂದ ಹೋರಾಡಿ ತನ್ನ ಧ್ಯೇಯವನ್ನು ಸಾಧಿಸಿ ದೇಶದ ಸಮಸ್ತ ಪ್ರಜೆಗಳ ಕೃತಜ್ಞತೆಗೂ, ಅಭಿನಂದನೆಗೂ ಪಾತ್ರವಾಗಿದೆ. ಈ ಪ್ರಯತ್ನದಲ್ಲಿ ಕಷ್ಟನಷ್ಟಗಳಿಗೆ ಗುರಿಯಾದ ಮತ್ತು ಪ್ರಾಣಗಳನ್ನೇ ನೀಡಿದವರೆಲ್ಲರೂ ಚಿರಸ್ಮರಣೀಯರು.

ಮುಂದಿನ ಜವಾಬ್ದಾರಿ ಅತ್ಯಂತ ಗುರುತರವಾದುದು. ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ನ್ಯಾಯ, ನೀತಿ ಮತ್ತು ಧರ್ಮಗಳ ಅಡಿಗಲ್ಲಿನ ಮೇಲೆ ಆಡಳಿತವನ್ನು ರೂಪಿಸುವ ಜವಾಬ್ದಾರಿಯು ಕಾಂಗ್ರೆಸ್ಸಿನ ಮತ್ತು ಇತರ ಮುಂದಾಳುಗಳಿಗೆ ಸೇರಿದೆ. ಪ್ರಜಾಪ್ರಮುಖರೆಲ್ಲರೂ ಐಕಮತ್ಯದಿಂದ ಸಹಕರಿಸಿ ಸಂಸ್ಥಾನದ ಏಳಿಗೆಗೆ ದುಡಿಯಲೆಂದು ಹಾರೈಸುತ್ತೇನೆ.

ಶ್ರೀ ಎಸ್.ಎಸ್. ಗುಬ್ಬಿ

ಕಾಂಗ್ರೆಸ್ಸಿನ ಪ್ರತಿನಿಧಿಗಳು ಮಾತ್ರ ಅಂದಿನ ಸೂಚಿತರಾದವರನ್ನು ಮಾತ್ರ ಮಂತ್ರಿಮಂಡಲದಲ್ಲಿ ಸೇರಿಸುವಂತೆ ಆಗಿರುವ ಒಪ್ಪಂದವನ್ನು ನೋಡಿದರೆ ಪ್ರಜೆಗಳನ್ನು ಪ್ರತಿನಿಧಿಸುವ ಸಂಸ್ಥೆಯೆಂದರೆ ಕಾಂಗ್ರೆಸ್ ಒಂದೇ ಎಂದು ಖಚಿತವಾಗಿ ಗೊತ್ತಾಗಿದೆ. ಒಬ್ಬ ಹರಿಜನರನ್ನೂ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಾಗುವುದೆಂದು ವರದಿಯಾಗಿರುವುದು ಅಲ್ಪಸಂಖ್ಯಾತರ ಬಗ್ಗೆ ಕಾಂಗ್ರೆಸ್ಸಿಗೆ ಇರುವ ಪ್ರೀತಿ ಸ್ಪಷ್ಟವಾಗುತ್ತದೆ. ರಾಜ್ಯಾಂಗ ರಚನಾ ಸಭೆಗೆ 3 ನೇ ಷೆಡ್ಯೂಲಿನಲ್ಲಿರುವ ಅಂಶಗಳ ಬಗ್ಗೆಯೂ ಸಹ ಶಿಫಾರಸು ಮಾಡಲು ಅವಕಾಶವಿತ್ತಿರುವುದರಿಂದ ಕಾಂಗ್ರೆಸ್ಸು ತನ್ನ ಚಳುವಳಿಯಲ್ಲಿ ಪೂರ್ಣ ಜಯಗಳಿಸಿದೆಯೆಂದು ವೇದ್ಯವಾಗುತ್ತದೆ. ಜವಾಬ್ದಾರೀ ಸರ್ಕಾರದ ಸ್ಥಾಪನೆಯಾಗುವುದರಿಂದ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಅಖಂಡ ಕರ್ನಾಟಕದ ಸ್ಥಾಪನೆಗೆ ಯಾವ ಅಡಚಣೆಯೂ ಉಂಟಾಗಲಾರದು ಎಂಬುದಾಗಿ ಬೊಂಬಾಯಿನ ಮೈಸೂರು ಸಹಾಯ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಎಸ್. ಗುಬ್ಬಿಯವರು ತಿಳಿಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷದ ಹೇಳಿಕೆ

ಆರು ವಾರಗಳಿಂದ ನಡೆಯುತ್ತಿದ್ದ ಮಹಾ ಸಮರ ಮುಕ್ತಾಯಗೊಂಡಿತು. ಆದರೆ ಸರ್ ಅರ್ಕಾಟರೂ, ಹಿಂಬಾಲಕರೂ ಆಡಳಿತದಲ್ಲಿ ಉಳಿದಿರುವುದು ವಿಷಾದಕರ ಮತ್ತು ನಮ್ಮ ಬಲಿದಾನಗಳಿಗೆ ಅವಮಾನ. ಈ ಸಮರದಲ್ಲಿ ಪಾತ್ರವಹಿಸಿದ ಅನೇಕ ಕಮ್ಯೂನಿಸ್ಟ್ ನಾಯಕರು ಬಂಧನದಲ್ಲಿದ್ದಾರೆ. ಅವರುಗಳನ್ನು ಬಿಡುಗಡೆ ಮಾಡಲಾಗುವುದಿಲ್ಲವೆಂದು ಸುದ್ದಿಗಳು ಬರುತ್ತಿವೆ. ಈ ರೀತಿಯ ವ್ಯತ್ಯಾಸಗಳನ್ನು ಕಮ್ಯೂನಿಸ್ಟ್ ಪಕ್ಷ ಖಂಡಿಸುತ್ತದೆ. ದೌರ್ಜನ್ಯ ನಡೆಸಿದ ಪೋಲೀಸ್ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ಕೊಡಲು ಕಾಂಗ್ರೆಸ್ ಸರ್ಕಾರವು ಮುಂದೆ ಬರಬೇಕು. ಕಾಂಗ್ರೆಸ್ ಸರ್ಕಾರ ಕೈಗೊಳ್ಳಬಹುದಾದ ಎಲ್ಲ ಕಾರ್ಯಕ್ರಮಗಳಲ್ಲಿಯೂ ಕಮ್ಯೂನಿಸ್ಟ್ ಪಕ್ಷ ತನ್ನ ಪೂರ್ಣ ಬೆಂಬಲವನ್ನೂ ನೀಡುತ್ತದೆ. ಎಂಬುದಾಗಿ ಬೆಂಗಳೂರಿನ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳು ಒಂದು ಹೇಳಿಕೆ ಇತ್ತಿದ್ದಾರೆ.

ಭಾರತವು ಹಿಂದೂರಾಜ್ಯವೆಂದು ಘೋಷಿಸಬೇಕು

ಹಿಂದೂ ಸಂಸ್ಥಾನಗಳನ್ನು ಸೇರಿಸಿ ಭಾರತವು ಹಿಂದೂ ರಾಜ್ಯವೆಂದು ಸಾರುವುದೇ ಇಂಡಿಯನ್ ಯೂನಿಯನ್ನಿನ ಸರಿಯಾದ ಕರ್ತವ್ಯ-ಎಂಬುದಾಗಿ ಪೂನಾದಲ್ಲಿರುವ ಗೋಖಲೆ ಆರ್ಥಿಕ ಮತ್ತು ರಾಜಕೀಯ ಸಂಸ್ಥೆಯ ಡೈರೆಕ್ಟರಾದ ಡಾ|| ಗಾಡ್ಗಿಲ್ ರವರು ಸೂಚಿಸಿರುವರು. ಈ ಘೋಷಣೆಗೆ ಸಾತ್ವಿಕ ಬೆಂಬಲವಿರುತ್ತದೆ. ಅಂತೆಯೇ ಇಂಗ್ಲೆಂಡ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಕ್ರೈಸ್ತ ರಾಷ್ಟ್ರಗಳೆಂದು ಹೇಳಲ್ಪಡುತ್ತಿವೆ-ಎಂದು ಅವರು ತಿಳಿಸಿರುವರು.

ರೇವಾದಲ್ಲಿ ಪ್ರಜಾನಾಯಕರ ದಸ್ತಗಿರಿ

ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ರೇವಾ ಸಂಸ್ಥಾನದಲ್ಲಿ ನಾಲ್ವರು ಪ್ರಜಾಮಂಡಲದ ನಾಯಕರನ್ನು ದಸ್ತಗಿರಿ ಮಾಡಿ ಅವರ ಜನ್ಮಸ್ಥಾನದಿಂದ ಗಡೀಪಾರು ಮಾಡಲಾಗಿದೆಯೆಂದು ವರದಿಯಾಗಿದೆ.

ಪಂಜಾಬ್ ಮತ್ತು ಗಡಿನಾಡಿನಿಂದ ಮಾತ್ರ ಪ್ರಜಾ ವರ್ಗ

ಭಾರತದಲ್ಲಿರಲು ಅಪೇಕ್ಷಿಸುವ ಯಾವ ಮುಸ್ಲಿಮರನ್ನೂ ಪಾಕಿಸ್ತಾನಕ್ಕೆ ಕಳುಹಿಸಿಕೊಡಲು ಭಾರತಸರ್ಕಾರವು ಸಿದ್ಧವಾಗಿಲ್ಲ. ಪ್ರಜಾ ವರ್ಗಾವಣೆಯು ಪಂಜಾಬ್, ಗಡಿನಾಡು ಮತ್ತು ಬೆಲೂಚಿಸ್ಥಾನದಲ್ಲಿರುವ ಅಲ್ಪಸಂಖ್ಯಾತರಿಗೆ ಅನ್ವಯವಾಗುವುದೇ ಹೊರತು ಇಡೀ ಭಾರತಕ್ಕಲ್ಲ-ಎಂದು ಪಂಡಿತ ನೆಹರೂರವರು ತಿಳಿಸಿರುವರೆಂದು ವರದಿಯಾಗಿದೆ.

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನ

ಅಕ್ಟೋಬರ್ 30 ಮತ್ತು ನವೆಂಬರ್ 1 ನೇ ತಾರೀಖುಗಳಲ್ಲಿ ಚಿತ್ರದುರ್ಗದಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆಯನ್ನು ಕರೆಯಲಾಗಿದೆ. ಈಗ ಆಗಿರುವ ರಾಜಕೀಯ ಒಪ್ಪಂದವನ್ನು ಸಮಿತಿಯ ಮುಂದೆ ಅಂಗೀಕಾರಕ್ಕಾಗಿ ಈ ಅಧಿವೇಶನದಲ್ಲಿ ಇಡಲಾಗುವುದು. ಮಂತ್ರಿಮಂಡಲದಲ್ಲಿ ದಿವಾನರು ಉಳಿದಿರುವ ಬಗ್ಗೆ ಪ್ರಬಲವಾದ ವಿರೋಧವು ತಲೆದೋರಬಹುದು. ಕಾಂಗ್ರೆಸ್ ಪಕ್ಷಪಾತಿಗಳಾದ ಸ್ವತಂತ್ರ ಪ್ರಮುಖರು ಉನ್ನತ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಪೋಲೀಸರು ನಡೆಸಿದರೆಂದು ಹೇಳಲಾಗಿರುವ ದೌರ್ಜನ್ಯಗಳನ್ನು ವಿಚಾರಿಸಲು ವಿಚಾರಣಾ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಒತ್ತಾಯಪಡಿಸಿದ್ದಾರೆ-ಎಂಬುದಾಗಿ ತಿಳಿದುಬಂದಿದೆ.

ಸಪ್ಲಿಮೆಂಟರಿ ಪರೀಕ್ಷೆಗಳು ಮುಂದೆ ಹೋಗಬೇಕು

ಸತ್ಯಾಗ್ರಹದ ಕಾರಣದಿಂದ ಕಳೆದ ಒಂದೂವರೆ ತಿಂಗಳಿನಿಂದ ಶಾಲಾ ಕಾಲೇಜುಗಳೆಲ್ಲವೂ ಮುಚ್ಚಲ್ಪಟ್ಟಿವೆ. ಅನೇಕ ಜನ ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ. ಅವರುಗಳು ತಮ್ಮ ಅಭ್ಯಾಸದ ಕಡೆ ವಿಶೇಷ ಗಮನವಿತ್ತಿಲ್ಲ. ಆದುದರಿಂದ ನವೆಂಬರ್ 3ನೇ ತಾರೀಖಿನಿಂದ ನಡೆಯಬೇಕಾಗಿದ್ದ ಬಿ.ಎಸ್‌ಸಿ. ಬಿ.ಎ. ಮೊದಲಾದ ಪರೀಕ್ಷೆಗಳನ್ನು ಒಂದು ತಿಂಗಳು ಮುಂದೆ ಹಾಕಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮಾತುಕತೆ ನಡೆಸಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ತಮ್ಮ ಬೇಡಿಕೆಯನ್ನು ಪೂರೈಸಬೇಕು-ಎಂಬುದಾಗಿ ವಿದ್ಯಾರ್ಥಿಗಳ ಪರವಾಗಿ ಶ್ರೀ ಹೆಚ್. ಆರ್. ಬಾಲಕೃಷ್ಣನವರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರನ್ನು ಪ್ರಾರ್ಥಿಸಿದ್ದಾರೆ.

ಪೂಜಾ ಸಾಮಗ್ರಿ ದೊರೆಕಿದೆ

ಮಾಧ್ವರು ಉಪಯೋಗಿಸುವ ಪೂಜಾ ಸಾಮಗ್ರಿಗಳನ್ನೊಳಗೊಂಡ ಕೃಷ್ಣಾಜಿನದ ಚೀಲ ದೊರೆತಿದೆ. ವಾರಿಸುದಾರರು ಸರಿಯಾದ ಮಾಹಿತಿಯೊಡನೆ "ಸಾಧ್ವಿ" ಕಛೇರಿಯಲ್ಲಿ ವಿಚಾರಿಸಿ ಪಡೆಯಬಹುದು.

ಜಮ್ಮು-ಕಾಶ್ಮೀರ ವಿಭಜನೆ

ಕಾಶ್ಮೀರವು ಯೂನಿಯನ್ನಿಗೆ ಸೇರುವುದಕ್ಕೆ ಜನಾಭಿಪ್ರಾಯ ಪಡೆಯಬೇಕೆಂದು ಕಾಶ್ಮೀರ ಸರ್ಕಾರವನ್ನು ಪಾಕಿಸ್ತಾನ ಸರ್ಕಾರವು ಒತ್ತಾಯಪಡಿಸಿದೆಯೆಂದು ತಿಳಿದು ಬಂದಿದೆ. ಹಿಂದೂ ಬಹುಸಂಖ್ಯಾತರಿರುವ ಜಮ್ಮು ಪ್ರದೇಶವನ್ನು ಕಾಶ್ಮೀರದಿಂದ ಪ್ರತ್ಯೇಕಗೊಳಿಸಿ ಅದು ಯೂನಿಯನ್ನಿಗೆ ಸೇರಬೇಕೆಂಬ ಜನಾಭಿಪ್ರಾಯವನ್ನು ಪಡೆಯಬೇಕೆಂದು ಭಾರತ ಸರ್ಕಾರವು ಒತ್ತಾಯಪಡಿ[illegible] ಈ ಮಧ್ಯೆ ಅಲ್ಲಿನ ಪ್ರಧಾನಿ ಒಂದು [illegible]ಕೆಯನ್ನಿತ್ತು ಕಾಶ್ಮೀರವು ಏಷ್ಯಾ ಖಂಡದ ಸ್ವಿಟ್ಜರ್‌ಲೆಂಡಿನಂತೆ ಸ್ವತಂತ್ರವಾಗಿರಬೇಕೆಂದು ನುಡಿದಿದ್ದಾರೆ.

ಜನಸಾಮಾನ್ಯರ ಜೀವನಮಟ್ಟ ಹೆಚ್ಚಬೇಕು.

ಜನಸಾಮಾನ್ಯರ ಜೀವನ ಮಟ್ಟವನ್ನು ಹೆಚ್ಚಿಸಿ ಅವರು ಸುಖ ಮತ್ತು ಗೌರವದಿಂದ ಜೀವಿಸುವಂತೆ ಮಾಡುವುದೇ ಜವಾಬ್ದಾರೀ ಸರ್ಕಾರದ ಗುರಿ-ಎಂಬುದಾಗಿ ಕೆ. ಟಿ. ಭಾಷ್ಯಂರವರು ಹೇಳುತ್ತಾ ದೇಶದಲ್ಲಿ ಎಲ್ಲ ರೀತಿಯಲ್ಲಿಯೂ [illegible]ಯೂ ಪುರೋಭಿವೃದ್ಧಿಯೂ ಉತ್ತಮ[illegible]ದಲ್ಲಿ ಮಾತ್ರ ಇದು ಸಾಧ್ಯ-ಎಂದೂ ಅವರು ನುಡಿದಿರುವರು.

ಮದರಾಸ್ ಪ್ರಾಂತದಲ್ಲಿ ಪಡಿತರ ಹೆಚ್ಚಿದೆ.

ಆಹಾರ ಸಂಗ್ರಹಣೆಯು ಕಾರ್ಯರೂಪಗೊಂಡಿರುವುದರಿಂದ ಮದರಾಸ್ [illegible]ತದಲ್ಲಿ ಮುಂದೆ ಆಹಾರದ ಪಡಿತರ ಹೆಚ್ಚಿಸಲಾಗುವುದೆಂದು ವರದಿಯಾ[illegible]

ಜುನಗಡಕ್ಕೆ ಪಾಕಿಸ್ತಾನ ಸೈನಿಕರು

ಪಾಕಿಸ್ತಾನ ಡೊಮಿನಿಯನ್ನಿನ ಮುಂದೆ ಸೈನಿಕರು ಜುನಗಡಕ್ಕೆ ಬಂದಿರುವರೆಂದು ವರದಿಯಾಗಿದೆ. ಜುನಗಡವು ಅವರಿಗೆ ಆಯುಧಗಳನ್ನೊದಗಿಸಲು ತೀರ್ಮಾನಿಸಿದೆಯೆಂದು ತಿಳಿದಿದೆ.

ಶ್ರೀ ಶ್ರೀಮನ್ಮಹಾರಾಜರು ಪ್ರಕಟಿಸಿದ ಸಂಪೂರ್ಣ ಜವಾಬ್ದಾರೀ ಸರ್ಕಾರ ದಯಪಾಲಿಸಿ ಶಾಂತಿ ಸ್ಥಾಪನೆ[illegible] ಸಂತೋಷಾರ್ಥವಾಗಿ ಮೊನ್ನೆ [illegible] ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ವಿಶೇಷ[illegible] ನಡೆಯಿತು.

ಬೆಳಗಿನ ಆಟಗಳು
ದಸರಾ ಹಬ್ಬದ ಪ್ರಯುಕ್ತ
15-10-47 ರಿಂದ
ಪ್ರತಿ ಹಗಲು 10 ಘಂಟೆಗೆ
ಪ್ರದರ್ಶನದ
ಗೋಪಾಲ್ ಕೃಷ್ಣ
ನಿತ್ಯ — [illegible]
ಒಲಿಂಪಿಯಾ ಟಾಕೀಸ್

ವುಡ್‌ಲ್ಯಾಂಡ್ಸ್
17-10-47 ರಿಂದ
4 ನೇ ವಾರ
ಪ್ರಕಾಶ್ ಪಿಕ್ಚರ್ಸ್‌ರವರ
ಅಮೋಘವಾದ ಚಲನ ಚಿತ್ರ
ನಯೀಮಾ
(ಹಿಂದಿ)
—: ತಾರಾಗಣ :—
ರಂಜನ್ ಮತ್ತು ಜೀವನ್

ರಾಜಕಮಲ್
ತಾ|| 11-10-47 ರಿಂದ
ಅಮೋಘ 2ನೇ ವಾರ
ಮಹಾಕವಿ ಕಾಳಿದಾಸ್
(ಹಿಂದಿ)
—: ಭೂಮಿಕೆ :—
ಪಹಾರಿ ಸನ್ಯಾಲ್, ಸ್ನೇಹಪ್ರಭಾ, ವನಮಾಲಾ, ಮತ್ತು ಉಲ್ಹಾಸ್
17-10-47 ರಿಂದ
[illegible]
ಜೀವನ್ ಯಾತ್ರಾ

WOODLANDS
Morning shows from 14-10-47 for 3 days d[illegible] at 10-30 a.m
A Medal For Ben[illegible]
Featuring:- Dorothy Lamour and Arturo De Corbo[illegible]

Printed and published by A. R. Nagarajan at the [illegible]

ಫೋನ್ ನಂ. 508 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು



ಸಂಪುಟ ೬] ಗುರುವಾರ ೧೬-೧೦-೪೭ [ಸಂಚಿಕೆ ೫೩

ಈಸೂರು ಬಂದಿಗಳೂ ಬಿಡುಗಡೆಯಾದರು

ಮಹಾರಾಜರು ಕರ್ನಾಟಕದ ರಾಜಪ್ರಮುಖರಾಗಬೇಕು

ಪಟ್ಟಾಭಿ ಸೀತಾರಾಮಯ್ಯನವರ ಭಾಷಣ

ಮೈಸೂರು ಸಂಸ್ಥಾನವು ಬ್ರಿಟಿಷರ ಆ... ಮತ್ತು ದಕ್ಷರಾದ ದಿವಾನರುಗಳ ... ದಲ್ಲಿ ಅಭಿವೃದ್ಧಿಯಾಗಿದೆ ಎಂಬು ... ಡಾ|| ಪಟ್ಟಾಭಿ ಸೀತಾರಾಮಯ್ಯನ ... ನೆನ್ನೆ ರಾತ್ರಿ ಬೊಂಬಾಯಿಯ ... ನರು ಸಂಘದವರು ಏರ್ಪಡಿಸಿದ್ದ ಸ... ದ ಭಾಷಣ ಮಾಡುತ್ತಾ ತಿಳಿಸಿದ...

ಮೈಸೂರಿನ ಪ್ರಜೆಗಳು ರಾಜಕೀಯ ... ವ್ಯವಸ್ಥೆ, ಆರ್ಥಿಕ ಮತ್ತು ಶೈಕ್ಷ... ವಿಷಯಗಳಲ್ಲಿ ಭಾರತದ ಇತರ ಯಾ... ಪ್ರಾಂತಗಳವರಿಗೂ ಕಡಿಮೆಯಾ... ಮೈಸೂರಿನ ರಾಜ್ಯಾಂಗವನ್ನು ... ರಿನವರೇ ವಹಿಸಬೇಕೆಂಬ ಅಂಶ ... ದಿವಾನರಾದ ಸರ್. ಆರ್ಕಾಟರು ... ದ್ದಂತೆ ಕಾಣುತ್ತದೆ. ಕಾಶ್ಮೀರ, ... ಸೂರು, ಬರೋಡಾ, ಜೋಧಪುರ, ತಿ... ರುವಾಂಕೂರು, ಜಯಪುರ, ಹೈದರಾಬಾ... ಇಂತಹ ದೊಡ್ಡ ದೊಡ್ಡ ಸಂಸ್ಥಾನಗ... ಮಾತ್ರ ಪ್ರತ್ಯೇಕವಾಗಿ ಪ್ರಾಂತಗಳ ... ಪಲ್ಲಿ ಉಳಿಯಬೇಕು; ಉಳಿದ ... ಸಣ್ಣ ಪುಟ್ಟ ಸಂಸ್ಥಾನಗಳೂ ಪ್ರಾಂತ ... ಜೊತೆ ಐಕ್ಯವಾಗಬೇಕು. ಮೈಸೂರಿ... ಮಹಾರಾಜರವರು ಸಂಪೂರ್ಣ ... ಜವಾಬ್ದಾರಿ ಸರ್ಕಾರವನ್ನು ಮಂಜೂರು ... ಮಾಡುವುದರಿಂದ ಇತರ ಕರ್ನಾಟಕ ... ಭಾಗ, ಕೊಡಗು, ದಕ್ಷಿಣ ದರ್ಬಾ ಸಂ... ಸ್ಥಾನಗಳೂ ಮೈಸೂರಿಗೆ ಸೇರಿಸಲ್ಪಡಬೇ... ಸೂಚನೆಗಳು ಕಂಡುಬರುತ್ತಿವೆ; ... ಸೂರಿನ ಆ ದಿನಗಳ ಆವಿಶ್ರಾಂತ ... ಹೋರಾಟದ ಪರಿಣಾಮವಾಗಿ ವಿಶಾಲವಾ... ಮತ್ತು ಉದಾರವಾದ ಕ್ಷೇತ್ರವು ಏರ್ಪ... ಇಡೀ ಕರ್ನಾಟಕದ ಜನರು ಏಕಛ... ಧಿಪತಿಯ ಅಧೀನಕ್ಕೆ ಒಳಗಾಗಬೇಕು... ಬುದಾಗಿ ಡಾ|| ಪಟ್ಟಾಭಿ ನುಡಿದರು. ... ತಾವು ಆಗಸ್ಟ್ ೩೦ನೇ ತಾ|| ದಿ... ವಾನರಾದ ಸರ್ ಆರ್ಕಾಟರನ್ನು ಭೇಟಿ ... ಮಾಡಿದ್ದಾಗ ಯಾವುದಕ್ಕೂ ಕಾಂಗ್ರೆಸ್ಸು ... ಶ್ರೇಷ್ಠವಾದ ಸಂಸ್ಥೆಯೆಂದು ಅವರಿಗೆ ತಿ... ಳಿವಾಗಿಯೂ ಸಹ ಅವರು ಹೇಳಿದ...

ಈಸೂರು ಬಂದಿಗಳ ಬಿಡುಗಡೆ

ಮೈಸೂರು ೧೬

... ರಾಜಕೀಯ ಚಳುವಳಿಯ ... ವಾವಧಿ ಶಿಕ್ಷೆಗೆ ಒಳಗಾಗಿದ್ದ ಈಸೂ... ಶ್ರೀಗಳಾದ ಆದಪ್ಪಾಚಾರಿ, ಗುರು... ಪ್ಪ, ವೀರಭದ್ರಪ್ಪ, ಸಿದ್ಧರಾಮಪ್ಪ, ... ಚಾರಿ, ನೀಲಕಂಠಪ್ಪ, ಮತ್ತು ... ಕಂಠಪ್ಪನವರುಗಳನ್ನು ನಿನ್ನೆ ಸಂಜೆ ... ಸಬ್ ಜೈಲಿನಿಂದ ಬಿಡುಗಡೆ ... ಲಾಯಿತು.

... ಬಿನ ಜೇಲ್ನ ಅವರುಗಳನ್ನು ನಗರ ... ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ... ಕರೆದೊಯ್ಯಲಾಯಿತು.

... ಯಾದಲ್ಲಿ ಭೂಕಂಪ

... ರ್ ಪರ್ವತಿಯಾದ ಕೋರಿಕಾ ಪ್ರಾಂ... ದಲ್ಲಿ ಭೂಕಂಪವಾಗಿ ಐದು ಹಳ್ಳಿಗ... ಹಾನಿಯಾದುವು

ಆಹಾರ ಸಮಸ್ಯೆಗೆ ಗಮನ ಕೊಡಬೇಕು

ಬಹಿರಂಗ ಸಭೆಯಲ್ಲಿ ಭಾಷಣಗಳು

ಮೈಸೂರು ೧೬

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಟೌನ್‌ಹಾಲ್ ಮೈದಾನದಲ್ಲಿ ನಿನ್ನೆ ಸಂಜೆ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್ ಚೆನ್ನಯ್ಯನವರು ವಹಿಸಿದ್ದರು. ಮೈಸೂರು ಆಂದೋಲನೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಶಿಕ್ಷೆಗೊಳಗಾಗಿದ್ದ ಮದರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ಕೆ ಎಸ್ ಜಯರಾಂ ಕೇರಳ ಪ್ರಾಂತದಿಂದ ಬಂದಿದ್ದ ಶ್ರೀ ನೀಲಕಂಠ ಕ... ಮಳುನಾಡಿನ ವೇಲುಪಿಳ್ಳೆ, ಆಂಧ್ರದ ವೇಣಾನಂದ, ಸೌರಾಷ್ಟ್ರದಲ್ಲಿದ್ದ ಡಾ|| ದಾವೂದ್ ಷರೀಫ್, ರೈಲ್ವೆ ಕೆಲಸಗಾರರಾಗ ರೇವಣ್ಣ, ಶ್ರೀಮತಿ ಎಂ ಆರ್ ಲಕ್ಷ್ಮಮ್ಮ, ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್ ಎಂ. ಚೆನ್ನಬಸಪ್ಪ, ಶ್ರೀ ಎಂ ಎನ್ ಜೋಯಿಸ್‌ರವರುಗಳು ಭಾಷಣಮಾಡಿದರು.

ಶ್ರೀ ಚೆನ್ನಯ್ಯನವರು ಮೊದಲು ಭಾಷಣ ಮಾಡಿ, ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲವಿತ್ತ ಮಹಾಜನಗಳಿಗೂ, ಅದರಲ್ಲೂ ವಿದ್ಯಾರ್ಥಿಗಳು, ಮಹಿಳೆಯರು ಮತ್ತು ಬಾಲಕ ಬಾಲಕಿಯರಿಗೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪರವಾಗಿ ವಂದನೆಯನ್ನು ಅರ್ಪಿಸಿದರು.

ಸಂಪೂರ್ಣ ಜವಾಬ್ದಾರಿ ಸರ್ಕಾರ ಗಳಿಸಿದ ಮಹಾಜನಗಳ ಮೇಲೆ ಹೆಚ್ಚಿನ ಜವಾಬ್ದಾರಿ ಬಿದ್ದಿದೆ. ಎಲ್ಲರೂ ಸಹನೆ ಮತ್ತು ಶಿಸ್ತಿನಿಂದ ವರ್ತಿಸಿ, ತಮ್ಮ ಪ್ರಜಾ ಸರ್ಕಾರಕ್ಕೆ ಸಹಕಾರ ನೀಡಬೇಕೆಂದು ಕೋರಿದರು. ಸತ್ಯಾಗ್ರಹಿಗಳ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರಗಳ ಬಗ್ಗೆ ಕಾಂಗ್ರೆಸ್ಸಿನವರು ರಚಿಸಿರುವ ಸಮಿತಿಯು ಕಾರ್ಯಕ್ರಮವನ್ನು ವಿವರಿಸಿ, ಆಕ್ರೋಶಕರವಾದ ಭಾವನೆಯಿಂದಾಗಲೀ ಅಥವ ವ್ಯಕ್ತಿಗತ ನಿಂದನೆಯಿಂದಾಗಲೀ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಿಳಿಸಿ, ಎಲ್ಲರೂ ಸಮಿತಿಯ ವಿಚಾರಣೆಯಲ್ಲಿ ಸಹಕರಿಸಬೇಕೆಂದು ಪ್ರಾರ್ಥಿಸಿದರು. ಸಂಸ್ಥಾನದ ಆಹಾರದ ವಿಷಮ ಪರಿಸ್ಥಿತಿಯನ್ನು ವಿವರಿಸಿ, ಹೆಚ್ಚು ... ದಾಸ್ತಾನಿರುವವರೆಲ್ಲರೂ ಅದನ್ನ ಸಮ್ಮ... ರಕ್ಕೆ ಕೊಟ್ಟು ಕರಿಣಪರಿಸ್ಥಿತಿಯನ್ನು ನಿವಾರಿಸಲು ಸಹಾಯ ಮಾಡಬೇಕೆಂದ, ಕರೀರ, ನಗರದ ಶ್ರೀ ರಾಮ...

ಸ್ವಾಮಿ ಸ್ಮಾರಕಕ್ಕೆ ಉದಾರ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದರು.

ಶ್ರೀಮತಿ ಲಕ್ಷ್ಮಮ್ಮನವರು ಭಾಷಣ ಮಾಡಿ, ಸತ್ಯಾಗ್ರಹದಲ್ಲಿ ಭಾಗವಹಿಸಿ, ನೊಂದ ಎಲ್ಲ ಮಹಿಳೆಯರಿಗೂ ತಮ್ಮ ವಂದನೆಯನ್ನು ಅರ್ಪಿಸಿ, ನೂತನವಾಗಿ ರಚಿಸಲಾಗಿರುವ ಮಹಿಳಾ ಮಂಡಲಿಯು ಜವಾಬ್ದಾರಿ ಸರ್ಕಾರಕ್ಕೆ ಸತತವಾಗಿ ಶ್ರಮಿಸುವುದೆಂದು ಭರವಸೆ ಇತ್ತು, ಮಹಾಜನಗಳು ಮಂಡಲಿಗೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದರು.

ಮೈಸೂರು ಕಾಂಗ್ರೆಸ್ಸು ಜವಾಬ್ದಾರೀ ಸರ್ಕಾರಕ್ಕಾಗಿ ಹೂಡಿದ ಅಹಿಂಸಾತ್ಮಕವಾದ ಹೋರಾಟ ಯಶಸ್ವಿಯಾಗ ವುದೆಂದು ದಿವಾನರು ಅರಿಯದಿದ್ದುದು ವಿಷಾದಕರ. ಅವರು ಕಾಲಗತಿಯನ್ನನುಸರಿಸಿ ಪ್ರಜೆಗಳ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸಿಕೊಡುವಂತೆ ಶ್ರೀಮನ್ಮಹಾರಾಜರವರಿಗೆ ಸಲಹೆ ನೀಡುವುದರ ಬದಲು ಚಳುವಳಿಯನ್ನ ಮಟ್ಟ ಹಾಕುವುದಾಗಿ ಹೇಳಿ ಹಸುಳೆಗಳ ಮೇಲೆಯೂ, ಅಬಲೆಯರ ಮೇಲೆಯೂ ಪೋಲೀಸರಿಂದ ದೌರ್ಜನ್ಯ ಕೃತ್ಯಗಳನ್ನೆಸಗಿಸಿದುದು ಖಂಡನೀಯ. ಜನತಾ ಹೋರಾಟವು ನಿರೀಕ್ಷಿಸಿದಂತೆ ಯಶಸ್ವಿಯಾಗಿದೆ. ಪ್ರದಾನಾಯಕರು ದೇಶದಲ್ಲಿ ... ಶಾಂತಿಗಳು ನೆಲೆಗೊಳ್ಳುವಂತೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹಾರೈಸುತ್ತೇನೆ ಎಂಬುದಾಗಿ ಶ್ರೀ ... ತಮ್ಮ ಭಾಷಣದಲ್ಲಿ ತಿಳಿಸಿದರು.

ಆಹಾರ ಪರಿಸ್ಥಿತಿ ಭೀಕರವಾಗಿದೆ. ಇದುವರೆಗೆ ನಾವು ಜವಾಬ್ದಾರೀ ಸರ್ಕಾರ ಬೇಕೆಂದು ಹೋರಾಟ ನಡೆಸಿದೆವು. ಅದು ಈಡೇರಿದೆ. ಈಗ ನಮ್ಮ ಸಾಮುದಾಯಿಕ ಪ್ರಜೆಗಳಿಗೆ ಆಹಾರವನ್ನೊದಗಿಸುವ ಗುರುತರವಾದ ಜವಾಬ್ದಾರಿ ಬಿದ್ದಿದೆ. ಅದಕ್ಕೆ ಎಲ್ಲರೂ ಸಹಕಾರ ನೀಡಬೇಕು. ನಮ್ಮ ಮೈಸೂರು ಜಿಲ್ಲಾ ಬೋರ್ಡಿನಲ್ಲಿರುವ ೩೦ ಮಂದಿ ಸದಸ್ಯರೂ ಆಹಾರ ಸಂಗ್ರಹಣೆಯ ಕಾರ್ಯದಲ್ಲಿ ತೊಡಗುತ್ತೇವೆ ಎಂಬುದಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷರೂ, ಶಾಸನ ಸಭಾ ಸದಸ್ಯರೂ ಆದ ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ಹೇಳಿದರು.

ಶ್ರೀ ಎಂ. ಎನ್. ಜೋಯಿಸರು ಮಾತನಾಡಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಅದು ಯಶಸ್ವಿಯಾಗುವಂತೆ ಮಾಡಿದ ಸಂಸ್ಥಾನದವರಿಗೂ, ಹೊರಗಿನವರಿಗೂ ಧನ್ಯವಾದಗಳನ್ನರ್ಪಿಸಿದರು.

ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಹೊಸ ಮಂತ್ರಿಮಂಡಲದ ರಚನೆ

ಯೋಗ್ಯತೆಗೆ ಪೂರ್ಣ ಪುರಸ್ಕಾರ

ಸ್ವಂ.ಸು.ಪೋ.] ಬೆಂಗಳೂರು ೧೬

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿದರು. ತಾತ್ಕಾಲಿಕ ಮಂತ್ರಿಮಂಡಲ ಮತ್ತು ರಾಜ್ಯಾಂಗ ಸಭೆಯ ವಿಷಯಗಳನ್ನು ವಿವರಿಸಿದರು. ರಾಜ್ಯಾಂಗ ಸಭೆಯನ್ನು ರಚಿಸುವ ವಿಷಯದಲ್ಲಿ ಮಾಡಬೇಕಾದ ವ್ಯವಸ್ಥೆಗಳ ಬಗ್ಗೆ ಹೊಸ ಮಂತ್ರಿಮಂಡಲಕ್ಕೆ ಸಂಪೂರ್ಣ ಅಧಿಕಾರವಿರುವುದೆಂದು ಅವರು ಹೇಳಿದರು. ರಾಜ್ಯಾಂಗ ಸಭೆಗೆ ಚುನಾಯಿತ ಅಧ್ಯಕ್ಷರಿರುವರು. ಇಂದಿನ ಪರಿಸ್ಥಿತಿಯಲ್ಲಿ ಅತ್ಯಂತ ಅರ್ಹರಾದವರಿಗೇ ಮಂತ್ರಿ ಪದವಿಯನ್ನು ಕೊಡಲಾಗುವುದು. ಮಂತ್ರಿಮಂಡಲದ ಸಭೆಗಳಲ್ಲಿ ದಿವಾನರು ಅಧ್ಯಕ್ಷತೆ ವಹಿಸುವರು. ಅವರಿಗೆ ಒಂದು ಇಲಾಖೆಯ ಪೋರ್ಟ್‌ಫೋಲಿಯೋ ವಹಿಸಲ್ಪಡುವುದು. ಇಬ್ಬರಿಗೆ ಕಡಿಮೆ ಇಲ್ಲದಂತೆ ಶಾಸನ ಸಭೆಗಳಿಂದಲೂ, ಇತರರನ್ನು ಹೊರಗಿನಿಂದಲೂ ಮಂತ್ರಿಗಳಾಗಿ ಆರಿಸಲಾಗುವುದು. ಇತರ ಪಂಗಡಗಳ ಸಲಹೆಗಳನ್ನು ಪೂರ್ಣವಾಗಿ ಪಡೆಯಲಾಗುವುದು. ದಿವಾನರು ಯಾವ ವಿಷಯದಲ್ಲೂ ಮಧ್ಯೆ ಪ್ರವೇಶಿಸುವುದಿಲ್ಲ. ಇನ್ನು ಎರಡು ಮೂರು ದಿನಗಳಲ್ಲೇ ಮಂತ್ರಿಮಂಡಲವನ್ನು ನಿರ್ಧರಿಸಲಾಗುವುದು ಎಂದು ಶ್ರೀ ರೆಡ್ಡಿಯವರು ಹೇಳಿದರು.

ನೀವೂ ಒಬ್ಬ ಮಂತ್ರಿಗಳಾಗುವಿರಾ? ಎಂದು ಕೇಳಿದಾಗ ರೆಡ್ಡಿಯವರು ನಕ್ಕುಬಿಟ್ಟರು.

ಪ್ರಜಾಭಿಪ್ರಾಯದ ವಿಜಯ

ಕೆ ಸಿ ರೆಡ್ಡಿಯವರ ಭಾಷಣ

ಸ್ವಂ.ಸು.ಪೋ.] ಬೆಂಗಳೂರು ೧೬

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯರೆಡ್ಡಿಯವರು ನಿನ್ನೆ ಸಂಜೆ ಸುಭಾಷ್ ನಗರದಲ್ಲಿ ಸೇರಿದ್ದ ಸುಮಾರು ಒಂದು ಲಕ್ಷ ಜನರ ಭಾರಿ ಸಭೆಯಲ್ಲಿ ಮಾತನಾಡಿ ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಆಗಿರುವ ಒಪ್ಪಂದಗಳನ್ನು ವಿವರಿಸಿದರು. ಅತ್ಯಲ್ಪ ಕಾಲದಲ್ಲಿ ಪ್ರಜೆಗಳ ಗುರಿಯು ಸಾಧಿಸಲ್ಪಟ್ಟಿರುವುದಕ್ಕಾಗಿ ಎಲ್ಲರೂ ಹೆಮ್ಮೆ ಪಡಬೇಕೆಂದು ಹೇಳಿದರು. ಕಾಂಗ್ರೆಸ್ಸಿನ ಎಲ್ಲ ಬೇಡಿಕೆಗಳೂ ಈಡೇರಿಸಲ್ಪಟ್ಟಿವೆ. ಹೊಸ ಯುಗವು ಆರಂಭವಾಗಿದೆ. ಇನ್ನು ಮುಂದೆ ಸರ್ಕಾರಕ್ಕೂ ಪ್ರಜೆಗಳಿಗೂ ಯಾವ ಭೇದವೂ ಇರುವುದಿಲ್ಲ. ಎಲ್ಲ ಭಿನ್ನಭಾವಗಳನ್ನೂ ತೊರೆದು ಸಕಲರೂ ಸರ್ಕಾರದೊಡನೆ ಸಹಕರಿಸಬೇಕು. ಇನ್ನು ಮುಂದೆ ಪ್ರಜೆಗಳ ಸರ್ಕಾರವು ಸ್ಥಾಪಿಸಲ್ಪಡುವುದು. ಪ್ರಜಾಭಿಪ್ರಾಯಕ್ಕೆ ಸಂಪೂರ್ಣ ಮನ್ನಣೆ ದೊರೆಯುವುದು. ಆಹಾರ, ಬಟ್ಟೆ, ಲಂಚ ರುಷುವತ್ತುಗಳ ನಿವಾರಣೆ ... ಕಡೆ ಮುಖ್ಯ ಗಮನಕೊಡಲಾಗುವುದು. ದಿವಾನರಿಗೆ ಯಾವ ಸ್ವತಂತ್ರಾಧಿಕಾರವೂ ಇರುವುದಿಲ್ಲ. ಅವರ ನಿಷ್ಪಕ್ಷಪಾತವನ್ನು ಸಂಪೂರ್ಣವಾಗಿ ಒದಗಿಸುವುದು. ಅವರು ಬೇಗ ಹೊರಟು ಹೋಗುತ್ತಾರೆ. ಅಲ್ಲಿಯವರೆಗೆ ಅವರನ್ನು ಅನಿವಾರ್ಯವಾಗಿ ಉಳಿಸಿಕೊಳ್ಳಬೇಕಾಗಿದೆ ಎಂದು ಶ್ರೀ ರೆಡ್ಡಿಯವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ ಟಿ. ಭಾಷ್ಯಂ ಅವರು ಪ್ರಜಾಪ್ರಭುತ್ವ ಸ್ಥಾಪನೆಯಾದ ಕಾಲದಲ್ಲಿ ಶಾಂತಿ, ಶಾಂತಿಗಳು ನೆಲೆಸಬೇಕೆಂದು ಹೇಳಿದರು.

ಜಂಬೂ ಸವಾರಿ ಅತ್ಯವಶ್ಯಕ

ಆಹಾರದ ಅಭಾವದಿಂದ ಈ ಸಾರಿ ದಸರಾ ಮಹೋತ್ಸವದಲ್ಲಿ ಜಂಬೂ ಸವಾರಿಯು ನಡೆಯುವುದಿಲ್ಲವೆಂದು ಪ್ರಭುತ್ವದ ಆಜ್ಞೆ ಆಗಿರುತ್ತೆ. ಆದರೆ ಪ್ರಭುಗಳವರು ಪ್ರಜಾ ಸರ್ಕಾರದ ಸ್ಥಾಪನೆಗೆ ಅಪ್ಪಣೆ ಕೊಟ್ಟಿರುವುದರಿಂದ ಸದ್ಯದಲ್ಲಿಯೇ ಹೊಸ ಮಂತ್ರಿ ಮಂಡಲವು ಏರ್ಪಾಡಾಗುತ್ತದೆ. ಇಂಥಹ ಸುಸಮಯದಲ್ಲಿ ಅನೂಚಾನವಾಗಿ ನಡೆಯುತ್ತ ಬಂದಿರುವ ಜಂಬೂಸವಾರಿಯನ್ನು ನಡೆಸಿದಲ್ಲಿ ಮಹಾಜನಗಳು ಮತ್ತು ಮುಖ್ಯವಾಗಿ ಕಾಂಗ್ರೆಸ್ಸಿನವರು, ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಹ ತಮ್ಮ ರಾಜಭಕ್ತಿಯನ್ನು ಮತ್ತು ದೇಶ ಭಕ್ತಿಯನ್ನು ಪ್ರದರ್ಶಿಸುವುದಕ್ಕೆ ಅವಕಾಶವಾಗುತ್ತೆ. ಪಟ್ಟಣಿಗರು ಮಾತ್ರ ಈ ಸಮಾರಂಭದಲ್ಲಿ ಭಾಗವಹಿಸುವುದರಿಂದ ಆಹಾರದ ಅಭಾವವಿದ್ದರೂ ಅಷ್ಟೇನೂ ತೊಂದರೆಯಾಗುವುದಿಲ್ಲ. ಈ ಸೂಚನೆಯನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಕಾರ್ಯಕಾರಿ ಸಮಿತಿಯವರೂ ಅಂಗೀಕಾರ ಮಾಡಿ ಪ್ರಭುಗಳಿಂದ ಅಪ್ಪಣೆ ಪಡೆದು ಜಂಬೂ ಸವಾರಿಯನ್ನು ಕಾಂಗ್ರೆಸ್ಸಿನವರ ಮತ್ತು ಮಹಾಜನಗಳ ಸಹಕಾರ ಪಡೆದು ಅತ್ಯಂತ ವೈಭವದಿಂದ ನಡೆಸಬೇಕು-ಎಂದು ಶ್ರೀ ಎಸ್. ರಂಗಸ್ವಾಮಯ್ಯನವರು ಕೋರಿರುತ್ತಾರೆ.

ವೃತ್ತಿ ಪತ್ರಿಕಾ ಜರೂರು ಶಾಸನ ರದ್ದು

ಮೈಸೂರು ಸರ್ಕಾರದವರು ಸೆಪ್ಟೆಂಬರ್ ೧ ತಾ॥ ಹೊರಡಿಸಿದ್ದ 'ಮೈಸೂರು ವೃತ್ತಿ ಪತ್ರಿಕಾ ಜರೂರು ಶಾಸನ'ವನ್ನು ಈಗ ರದ್ದು ಮಾಡಿದ್ದಾರೆ.

ಹಿಂದಿ ಅಧಿಕೃತ ಭಾಷೆ

ಸಂಯುಕ್ತ ಪ್ರಾಂತ್ಯದಲ್ಲಿ ಇನ್ನು ಮುಂದೆ ದೇವನಾಗರಿ ಅಕ್ಷರದಲ್ಲಿ ಬರೆಯುವ ಹಿಂದಿಯು ಸರ್ಕಾರದ ಅಧಿಕೃತ ಭಾಷೆಯಾಗುವುದೆಂದು ಸರ್ಕಾರದ ಆಜ್ಞೆಯಾಗಿದೆ

WOODLANDS

Morning shows from 17-10-47 for 4 days daily at 10-30 a.m.

Warner Brothers Presents

Three Strangers

—: with :—

Sydney Green Street, Fitz Gerald and Peter Lorre

ACCOUNTS HIGHER

Questions & Answers

Standard Book Depot, Avenue Road, Bangalore City

J. Nanumall and Sons, Lansdowne Bldgs., Mysore.

H. Venkataramiah and Sons, 100 Ft. Road, Mysore.

Printed and published by A. R. Nagaraja at the ... Press, P. Subbarao Road, Mysore

ಮೈಸೂರು ಜಿಲ್ಲೆಯವರ ಪಾತ್ರ ಮಹತ್ತರವಾದುದು

ಜವಾಬ್ದಾರೀ ಸರ್ಕಾರಕ್ಕಾಗಿ ಕಾಂಗ್ರೆಸ್ ಸಂಸ್ಥೆಯು ಹೂಡಿದ ಚಳುವಳಿಯಲ್ಲಿ ಅಮೋಘವಾದ ಜಯವನ್ನು ಗಳಿಸಿದೆ. ಈ ಚರಿತ್ರಾರ್ಹವಾದ ಹೋರಾಟದಲ್ಲಿ ಮೈಸೂರು ಜಿಲ್ಲೆಯ ಪ್ರಜೆಗಳ ಪಾತ್ರ ಮಹತ್ತರವಾದುದು. ಮೈಸೂರು ಜೈಲಿನ ಸೂಪರಿಂಟೆಂಡೆಂಟರಾದ ಶ್ರೀ ಟಿ. ಎಂ. ಅಮಿರ್ ಮತ್ತು ಚೀಫ್ ವಾರ್ಡನ್‌ರಾದ ಶ್ರೀ ಡಿ. ಎಸ್. ಲಕ್ಷ್ಮೀನಾರಾಯಣ್‌ರವರುಗಳು ಬಂಧನದಲ್ಲಿದ್ದ ರಾಜಕೀಯ ಖೈದಿಗಳ ಬಗ್ಗೆ ತೋರಿಸಿದ ಆದರ, ಪ್ರೀತಿ ಮತ್ತು ಗೌರವಗಳು ಅತ್ಯಂತ ಶ್ಲಾಘನೀಯವಾಗಿದ್ದವು. ಅವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ-ಎಂಬುದಾಗಿ ನಂಜನಗೂಡು ತಾಲ್ಲೂಕು ಕಾಂ॥ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಹೆಗ್ಗಡೆ ಲಿಂಗಣ್ಣ ಮತ್ತು ನರಸೀಪುರದ ಕಾರ್ಯದರ್ಶಿ ಶ್ರೀ ಪುಟ್ಟ ಹೊನ್ನಪ್ಪನವರು ಒಂದು ಹೇಳಿಕೆಯನ್ನಿತ್ತು ತಿಳಿಸಿರುವರು

ಇಂಗ್ಲೆಂಡ್ ಮಂತ್ರಿಯ ಕೊಲೆ ಪ್ರಯತ್ನ

ಬ್ರಿಟನ್ನಿನ ವಿದೇಶಾಂಗ ಮಂತ್ರಿಗಳಾದ ಮಿ॥ ಬೆವಿನ್‌ರವರನ್ನು ಅಲ್ಲಿನ ಕ್ರಾಂತಿಕಾರರು ಕೊಲೆ ಮಾಡಲು ಸಂಚು ಮಾಡುತ್ತಿರುವರೆಂದು ಲಂಡನ್ನಿನ ಪತ್ರಿಕೆಗಳು ಪ್ರಕಟಿಸಿವೆ.

ದೆಹಲಿಗೆ ಹೆಚ್. ಸಿ. ದಾಸಪ್ಪನವರು

ಮೈಸೂರು. ೧೬.

ನಾಡಿದ್ದು ದೆಹಲಿಯಲ್ಲಿ ನೇರಲಿರುವ ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಪರಿಷತ್ತಿನ ಸ್ಥಾಯೀ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಶ್ರೀ ಹೆಚ್. ಸಿ ದಾಸಪ್ಪನವರಿಗೆ ಆಹ್ವಾನವು ಬಂದಿದೆಯೆಂದೂ, ಅವರು ಸ್ವಲ್ಪ ಅನಾರೋಗ್ಯದಿಂದ್ದರೂ ನಾಡಿದ್ದು ದೆಹಲಿಗೆ ವಿಮಾನದ ಮೂಲಕ ತೆರಳಲಿರುವರೆಂದೂ ತಿಳಿದು ಬಂದಿದೆ.

ಬಿಡುಗಡೆ.

ಬೆಂಗಳೂರು ೧೬.

ಕಮ್ಯೂನಿಸ್ಟ್ ಪಕ್ಷದ ಶ್ರೀ ಎನ್. ಡಿ. ಶಂಕರ್ ಮತ್ತು ಶ್ರೀ ಉಪಾಧ್ಯಾಯರವರುಗಳನ್ನು ನಿನ್ನೆ ಸಂಜೆ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು

ವುಡ್‌ಲ್ಯಾಂಡ್ಸ್

17-10-47 ರಿಂದ

೪ ನೇ ವಾರ

ಪ್ರಭಾತ್ ಪಿಕ್ಚರ್ಸ್‌ನವರ ಅಮೋಘವಾದ ಚಲನ ಚಿತ್ರ

ಸಯಿಯಾನ್

(ಹಿಂದಿ)

—: ತಾರಾಗಣ :—

ಶಂಕರ್ ಮತ್ತು ಜೀವನ್

ಗೌ॥ ಆ॥ ಯು॥ ಕಾಲೇಜು ಪದವೀಧರರ ಸಂಘ

ಮೇಲ್ಕಂಡ ಸಂಘದ ಸ್ಥಾಯೀ ಸಮಿತಿಯು ಬೆಂಗಳೂರಿನಲ್ಲಿ ಇದೇ ೧೨ ನೇ ತಾ॥ ಸಭೆ ನಡೆಸಿ, ಸರ್ಕಾರದವರು ಆಯುರ್ವೇದ ಮತ್ತು ಯುನಾನಿ ವೈದ್ಯರ ರಿಜಿಸ್ಟ್ರೇಷನ್ ಕೂಡಲೇ ಜಾರಿಗೆ ತರಬೇಕೆಂದೂ, ಈ ಸಂಬಂಧವಾದ ಎಲ್ಲಾ ಸರ್ಕಾರೀ ಮತ್ತು ಸ್ಥಳೀಯ ಸಂಸ್ಥೆಗಳ ವೈದ್ಯಶಾಲೆಗಳು, ಮತ್ತು ಇಲ್ಲಿಯ ವೈದ್ಯ ಪರೀಕ್ಷೆಗಳ ವಿಷಯವಾದ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸಲು ಪ್ರತ್ಯೇಕ ಇಲಾಖೆಯೊಂದನ್ನು ಏರ್ಪಡಿಸಬೇಕೆಂದೂ, ಇದುವರೆವಿಗೆ ಈಗ ೩-೪ ಕಾರ್ಯದರ್ಶಿಗಳಲ್ಲಿ ಹಂಚಿ ಹೋಗಿರುವ ಈ ಸಂಬಂಧವಾದ ಅಧಿಕಾರಗಳನ್ನು ಕೇಂದ್ರೀಕೃತ ಮಾಡಿ ಒಬ್ಬ ಉಪಕಾರ್ಯದರ್ಶಿಯ ವಶಕ್ಕೆ ಒಪ್ಪಿಸಬೇಕೆಂದೂ ಮತ್ತು ಈ ಹಿಂದೆ ಜಿಲ್ಲಾಬೋರ್ಡುಗಳಲ್ಲಿರುವ ವೈದ್ಯ ಪರೀಕ್ಷೆಗಳ ಸಂಬಳವನ್ನು ಪುನರ್ವ್ಯವಸ್ಥೆಗೊಳಿಸಬೇಕೆಂದೂ ಒತ್ತಾಯಪಡಿಸುವ ನಿರ್ಣಯಗಳಾದುವು

ನಿರಾಶ್ರಿತರಿಗೆ ಸಹಾಯ

ಪಶ್ಚಿಮ ಪಂಜಾಬ್ ಮತ್ತು ಗಡಿನಾಡಿನಿಂದ ಭಾರತಕ್ಕೆ ಬರಲಿರುವ ೧೫ ಲಕ್ಷ ನಿರಾಶ್ರಿತರ ಪುನರ್ವಸತಿಗೆ ೬೫ ಕೋಟಿ ರೂ. ಬೇಕಾಗುವುದೆಂದು ಹೇಳಲಾಗಿದೆ.

ನಿ ಧ ನ

ಮಹಾರಾಷ್ಟ್ರದ ಸುಪ್ರಸಿದ್ಧ ನಾಯಕರಾದ ಶ್ರೀ ಎನ್. ಸಿ ಕೇಳ್ಕರ್‌ರವರು ತಮ್ಮ ೭೬ ನೇ ವಯಸ್ಸಿನಲ್ಲಿ ಪೂನಾದಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ

ಹುತಾತ್ಮರ ದಿನಾಚರಣೆ

ನಾಳೆ ದಿನ ಸಾಯಂಕಾಲ ೬ ಗಂಟೆಗೆ ರಾಜಧಾನಿಯ ೫ ಲಾಂದ್ರದ ಬಳಿ ಮಂಡ್ಯದ ಸುಪ್ರಸಿದ್ಧ ವಕೀಲರಾದ ಶ್ರೀಮಾನ್ ಜಯರಾಂ ರವರು ನೇತಾಜಿ ಸಂಘದ ಆಶ್ರಯದಲ್ಲಿ ಭಾಷಣ ಮಾಡುವರು ಶ್ರೀಮಾನ್ ಬಿ. ಎಸ್. ನಾರಾಯಣ್‌ರವರು ಅಧ್ಯಕ್ಷತೆ ವಹಿಸುವರು.

ರಾಜಕಮಲ್

17—10—47 ರಿಂದ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ್‌ರವರ

ಜೀವನ್ ಯಾತ್ರ

(ಹಿಂದಿ)

—: ಭೂಮಿಕೆ :—

ನಯನತಾರೆ, ಶಾಂತರಿ, ಬಾಬುರಾವ್ ಪೆಂಡಾರ್ಕರ್, ಯಾಕೂಬ್

ತಾ॥ 17-10-47 ರಿಂದ

4 ದಿನಗಳು ಪ್ರತಿ ದಿನ ಪ್ರಾತಃಕಾಲ ೧೦-೩೦ ಕ್ಕೆ

ಗುಲ್‌ಬಕ್ಷ್

ಸಪ್ರೂ ಅಕ್ತರ್, ಅಂಜಲಿದೇವಿ, ಮಜರ್ ಖಾನ್

ದೇಶಪ್ರೇಮಿ ಸಂಘ

ರಾಜಧಾನಿಯ ದೇಶಪ್ರೇಮಿ ಸಂಘದ ಕಾರ್ಯಕಾರಿ ಸಮಿತಿಯು ಚಾಮುಂ... ರಂನಲ್ಲಿರುವ ಸಂಘದ ಕಾರ್ಯಾಲಯ... ಸೇರಿ ಮೊನ್ನೆ ದಿನ ಮೈಸೂರು ಕಾಂ... ಹೂಡಿದ್ದ ಸತ್ಯಾಗ್ರಹಕ್ಕೆ ಬೆಂಬಲ... ಕೊಟ್ಟ ಎಲ್ಲಾ ದೇಶಭಕ್ತರನ್ನು ಅ... ದಿಸಲಾಯಿತು. ಸತ್ಯಾಗ್ರಹದ ಹೋ... ಟದಲ್ಲಿ ನೊಂದವರಿಗೆ ಅನುಕಂಪ... ಸೂಚಿಸಲಾಯಿತು. ಮೃತರಾದ... ಗೌರವಾರ್ಥವಾಗಿ ೨ ನಿಮಿಷ... ಕಾಲ ಮೌನವನ್ನು ಆಚರಿಸಲಾಯಿ... ವಿದ್ಯಾರ್ಥಿಗಳು ಈ ಹೋರಾಟದಲ್ಲಿ ... ವ್ಯಾಸಂಗವನ್ನು ಬಿಟ್ಟು ಬಂಧನ... ತೆರಳಿದ್ದರಿಂದ ಅವರ ವ್ಯಾಸಂಗಕ್ಕೆ ತೊ... ರೆಯಾಗದಂತೆ ನವೆಂಬರ್ ತಿಂಗಳಿನಲ್ಲಿ ... ಡೆಯಲಿರುವ ಎಲ್ಲಾ ವಿಶ್ವವಿದ್ಯಾನಿಲಯ... ಪರೀಕ್ಷೆಗಳನ್ನೂ ಕಡೆಯ ಪಕ್ಷ ... ತಿಂಗಳು ಮುಂದುವರಿಸಬೇಕೆಂದು ವಿ... ದ್ಯಾನಿಲಯದವರನ್ನು ಒತ್ತಾಯ ಪ... ಬೇಕೆಂದೂ ತೀರ್ಮಾನಿಸಲಾಯಿತು

ಬೆಳಗಿನ ಆಟಗಳ...

ದಸರಾ ಹಬ್ಬದ ಪ್ರಯುಕ್ತ...

15-10-47 ರಿಂದ

ಪ್ರತಿ ದಿನ ೧೦ ಗಂಟೆಗೆ

ಪ್ರಭಾತ್‌ರವರ

ಗೋಪಾಲ್ ಕೃ...

ಪಾತ್ರ :— ಶಾಂತ ಆಪ್ಟೆ, ಒಲಿಂಪಿಯ ಪ್ರಾಕಿಕ್...

Office of the Rationing Office... Mysore City, Dated 9th October 4...

NOTIFICATION

Applications in C. R. ... Forms are invited fro... Backward community ca... didates possessing minimu... S. S. L. C. qualificati... with Typewriting an... Shorthand for the post... a Steno-typist in this offic...

The post carries a pa... of Rs. 50/- with usual Dea... ness Allowance Intendin... candidates may apply to th... undersigned on or befo... 20th October 1947.

M. Srinivasalu Naidu, Rationing Officer Mysore City

ಫೋ: ನಂ. 608 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೧೭-೧೦-೪೭ [ಸಂಚಿಕೆ ೫೪

ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ವಿಜಯ

…ತನ ಮಂತ್ರಿಮಂಡಲಿಯ ರಚನೆ

…ರ್ಯಕಾರಿ ಸಮಿತಿಯ ಪರಿಶೀಲನೆ

…ಮ ಫೋ:] ಬೆಂಗಳೂರು ೧೭. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು … ಮಧ್ಯಾಹ್ನ ೧೨॥ ಯಿಂದ ೩॥ ಮ… ೪॥ ಯಿಂದ ೬॥ ಗಂಟೆಗಳವರೆಗೆ ಎರ…ಡಾವರಿ ಸೇರಿ ಮಂತ್ರಿಮಂಡಲವನ್ನು ರ…ಪ ಬಗ್ಗೆ ಸಮಾಲೋಚನೆ ನಡೆಸಿತು. …ಯಾವ ನಿರ್ಧಾರಕ್ಕೂ ಬಂದಿಲ್ಲ …ಈ ದಿನ ೩ ಗಂಟೆಗೆ ಸಭೆ ಸೇರ… ನಾಳೆ ದಿನ ಸೇರುವ ಸಭೆಯಲ್ಲಿ ಅ…ತೀರ್ಮಾನಕ್ಕೆ ಬರುವುದೆಂದು ನಿ…ಸಲಾಗಿದೆ.

…ಚಿವರ ನೇಮಕದ ಬಗ್ಗೆ ಕಾಂಗ್ರೆಸ್ಸಿ…ತ್ತು ಯಾವ ನಿರ್ಧಾರಕ್ಕೂ ಬಂದಿರುವು… . ಕಾರ್ಯಕಾರಿ ಸಮಿತಿಯು ಚುನಾ…ಯ ನೀತಿ ಮತ್ತು ಚುನಾವಣೆಯ ಕ್ರ… ಬಗ್ಗೆ ಪರ್ಯಾಲೋಚಿಸುತ್ತಿದೆ. ನಿ…ಕೇಂದ್ರ ಸಭೆಯಲ್ಲಿ ಚುನಾವಣೆಯ ನೀ…ನ್ನು ಮಾತ್ರ ಪರಿಶೀಲಿಸಲಾಯಿತು. …ಕಾಂಗ್ರೆಸ್ಸಿನ ಆರು ಸ್ಥಾನಗಳಲ್ಲಿ ಶ್ರೀಗ… ಕೆ ಚೆಂಗಲರಾಯರೆಡ್ಡಿ, ಕೆ ಟಿ. …ಂ, ಹೆಚ್. ಸಿದ್ದಯ್ಯ ಮತ್ತು ಶ್ರೀ …ಚೆನ್ನಿಗರಾಮಯ್ಯನವರು ಆರಿಸಲ್ಪ…ನು ಖಂಡಿತ. ಇನ್ನುಳಿದ ೩ ಸ್ಥಾನ…ಶ್ರೀಗಳಾದ ಹೆಚ್. ಸಿ. ದಾಸಪ್ಪ, …ನ.ಮುತಯ್ಯ ಮತ್ತು ಶ್ರೀ ಟಿ. ಮ…ಪ್ಪ ಇವರುಗಳ ಹೆಸರುಗಳು ಕೇಳಿಬ…ತ್ತಿವೆ.

…ಂಗ್ರೆಸ್ಸೇತರ ಮಂತ್ರಿಗಳ ಸ್ಥಾನಕ್ಕೆ …ರಾದ ಹೆಚ್. ಬಿ. ಗುಂಡಪ್ಪಗೌಡ, …ಚ್. ಚಂದ್ರಶೇಖರಯ್ಯ, ಬಾಲಕೃ… ಮತ್ತು ಮಿ॥ ಮಹಮ್ಮದ್ ಷರೀ…ಸರುಗಳನ್ನು ಹೇಳಲಾಗುತ್ತಿದೆ

…ಗ್ ಕಾರ್ಯವಾಹಿಯ ಭೇಟಿ

…ಸೂರು ಮುಸ್ಲಿಂ ಲೀಗಿನ ಕಾರ್ಯ…ದರ್ಶಿಯಾದ ಶ್ರೀ ಅಬ್ದುಲ್ ಗಫಾರ್‌ರವ…ನ್ನೆ ದಿನ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ …ಚೆಂಗಲರಾಯ ರೆಡ್ಡಿಯವರನ್ನು ಭೇಟಿ… ಮಾತುಕತೆ ನಡೆಸಿದರು. ರೆಡ್ಡಿ…ಯು ಇತರ ಪಕ್ಷಗಳ ನಾಯಕರುಗ…ನೆಯೂ ಸಹ ಸಮಾಲೋಚನೆ ನಡೆ…ಸ್ತಾರೆ.

ರೈತ ಪಕ್ಷದ ಬೆಂಬಲ

…ಪ್ರತಿನಿಧಿ ಸಭೆಯ ರೈತ ಪಕ್ಷದ …ಕರಾದ ಶ್ರೀ ಮುಳ್ಳ ಗೋವಿಂದ…ರವರು ರೈತ ಪಕ್ಷವು ಕಾಂಗ್ರೆಸ್ಸಿಗೆ ಬೆಂಬಲವನ್ನೂ ನೀಡುವುದೆಂದು …

ಮೊಕದ್ದಮೆ ವಾಪಸು

…ನ ನ್ಯಾಯಾಸ್ಥಾನದಲ್ಲಿ ಸತ್ಯಾಗ್ರ…ಹಿಗಳ ಮೇಲೆ ಹೂಡಲಾಗಿದ್ದ ಎಲ್ಲ ಮೊಕ…ಗಳನ್ನೂ ವಾಪಸು ತೆಗೆದುಕೊಳ್ಳಬೇ…ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಗಾಂಧಿ ಬಜಾರಿನಲ್ಲಿ ಸಭೆ

…ಧಿ ಬಜಾರಿನಲ್ಲಿರುವ ಯುವಕ ಸಂ…ಘದಲ್ಲಿ ಕರ್ನಾಟಕ ಪ್ರಾಂತ ಕ…ಸ್ಟ್ ಪಕ್ಷದ ಶ್ರೀ ಉಪಾಧ್ಯಾಯ …ಎಂ. ಎಸ್. ಕೃಷ್ಣನ್‌ರವರು ಭಾಷ…ಸಿದರು. ಸಭಿಕರ ಮಧ್ಯೆ ಪೋ…ತ್ತ ಬಾರದಿದ್ದುದು ಕಂಡು ಬಂ…ಧಿಸಿದರು ಅನಂತರ ಪೋ…ಜನ …ವನ್ನು ಚದುರಿ… …ಪದಲ್ಲೇ ನಾನಾ ಬಾಂಬೊಂ… ಮತ್ತು ಹೇಳಲಾಗಿದೆ

ಬರ್ಮಾ ಮಂತ್ರಿಗಳ ಕೊಲೆ ಮೊಕದ್ದಮೆ

ಬರ್ಮಾ ಮುಖ್ಯ ಮಂತ್ರಿ ಅಂಗಸಾನ್ ಮೊದಲಾದ ೫ ಮಂತ್ರಿಗಳ ಕೊಲೆ ಮೊಕದ್ದಮೆಯು ನಿನ್ನೆ ದಿನ ರಂಗೂನಿನಲ್ಲಿ ಪ್ರಾರಂಭವಾಯಿತು.

ಬರ್ಮಾದ ಮಾಜಿ ಪ್ರಧಾನಿ ಯು ಸಾ ರವರೇ ಕೊಲೆಯ ಪಿತೂರಿಗೆ ಮುಖ್ಯ ಕಾರಣರೆಂದು ಅಡ್ವೋಕೇಟ್ ಜನರಲ್‌ರು ಆಪಾದಿಸಿ, ಕೊಲೆಪಾತಕರು ಯು ಸಾ ರವರ ಮನೆಯಿಂದ ಸೆಕ್ರೆಟೇರಿಯಟ್ಟಿಗೆ ಹೋಗಿ, ಸಭಾ ಭವನದೊಳಗೆ ಹೇಗೆ ನುಗ್ಗಿ ಗುಂಡು ಹಾರಿಸಿ, ಕೊಲೆ ನಡೆಸಿದರೆಂಬುದನ್ನು ವಿವರಿಸಿದರು. ಕೊಲೆಪಾತಕರು ಯು ಸಾ ರವರ ಮನೆಗೆ ಹಿಂತಿರುಗಿದಾಗ, ಕೆಲಸವನ್ನೆಲ್ಲಾ ಪೂರೈಸಲಾಯಿತೆ-ಎಂದು ಅವರು ಕೇಳಿದಾಗ, ಆಯಿತೆಂದು ಕೊಲೆಪಾತಕರು ಉತ್ತರವಿತ್ತರೆಂದೂ, ಆಗ ಯು ಸಾ ರವರು ವಿಜಯ ವಿಜಯ ಎಂದು ಕೂಗುತ್ತಾ ಅವರುಗಳನ್ನು ತಬ್ಬಿಕೊಂಡರೆಂದೂ ಕೋರ್ಟಿನಲ್ಲಿ ತಿಳಿಸಿದರು ಯು ಸಾ ರವರ ಮನೆಯ ಬಳಿ ಸರೋವರದಲ್ಲಿ ಪತ್ತೆಯಾದ ಪಿಸ್ತೂಲುಗಳೇ ಈ ಕೊಲೆಯಲ್ಲಿ ಉಪಯೋಗಿಸಲ್ಪಟ್ಟವೆಂದು ಅಡ್ವೋಕೇಟ್ ಜನರಲ್‌ರು ವಾದಿಸಿದರು

ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆ ವಾಪಸು

ಮೈಸೂರು ೧೭.

ಮೈಸೂರು ಜಿಲ್ಲೆಯಲ್ಲಿ ಯಾರೂ ಬಂದೂಕ ಮತ್ತು ಮದ್ದುಗುಂಡುಗಳು ಮತ್ತು ಗಂಧಕ ಬ್ಯಾವಕಗಳನ್ನು ಇಟ್ಟುಕೊಂಡಿರಕೂಡದೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಡಿಸಿದ್ದ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಲಾಗಿದೆ.

ಗಣಪತಿ ಮಂಗಳಾರತಿ

ಮೊನ್ನೆ ರಾಜಧಾನಿಯ ಮೈಸೂರು ಕೋಆಪರೆಟಿವ್ ಸೊಸೈಟಿಯವರು ಗಣಪತಿ ಮಹಾ ಮಂಗಳಾರತಿಯನ್ನು ನೆರವೇರಿಸಿದರು ದರ ಅಂಗವಾಗಿ ಶ್ರೀ ರಾಜಗೋಪಾಲಯ್ಯಂಗಾರ್‌ರ ಸಹೋದರಿಯವರಾದ ಶ್ರೀಮತಿ ರುಕ್ಮಿಣಿಯವರ ಸಂಗೀತವೂ, ಶ್ರೀಗಳಾದ ಟಿ ಎಸ್ ರಾಜಗೋಪಾಲಯ್ಯಂಗಾರ್, ಎಸ್ ರಾಜಗೋಪಾಲಯ್ಯಂಗಾರ್ ಮೊದಲಾದವರಿಂದ ಇಂದಿನ ರಾಜಕೀಯ ಮತ್ತು ಸಹಕಾರ ತತ್ವಗಳ ಮೇಲೆ ಭಾಷಣಗಳೂ ಆದವು. ಅನಂತರ ಮಂಗಳಾರತಿ, ಪ್ರಸಾದ ವಿನಿಯೋಗಗಳೂ, ಭೋಜನ ಕೂಟವೂ ಜರುಗಿದುವು

ಪರೀಕ್ಷೆಗಳನ್ನು ಒಂದೂವರೆ ತಿಂಗಳು ಮುಂದೆ ಹಾಕಬೇಕು

ಈಗ ನಡೆದ ಸತ್ಯಾಗ್ರಹದ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ತೊರೆದು ಹೋರಾಟ ಈಗ ಲಭಿಸಿರುವ ಆನಂದದಲ್ಲಿ ಭಾಗಿಗಳಾಗಿರಲು ಅವಕಾಶವಿಲ್ಲವಾಗಿದೆ. ಇಂಟರ್ ಮೀಡಿಯಟ್ ಮತ್ತು ಡಿಗ್ರಿ ಪರೀಕ್ಷೆಗಳು ನಡೆಯಲಿರುವುದೇ ಅವರ ಈ ನಿರುತ್ಸಾಹಕ್ಕೆ ಕಾರಣವಾಗಿದೆ. ವಿದ್ಯಾರ್ಥಿಗಳು ಸ್ವಲ್ಪ ಓದಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಾಗುವಂತೆ ಸಂಬಂಧಪಟ್ಟ ಅಧಿಕಾರಿಗಳು ಏರ್ಪಡಿಸಿದ ಪರೀಕ್ಷೆಗಳನ್ನು ಇನ್ನು ಒಂದೂವರೆ ತಿಂಗಳು ದೂಡಿ ಮುಂದೆ ಹಾಕಬೇಕು-ಎಂದು ಪ್ರಾರ್ಥಿಸಿ ಪ್ರಾಂತೀಯ ವಿದ್ಯಾರ್ಥಿ ಕೂಟದವರು ಪತ್ರ ಬರೆದಿದ್ದಾರೆ

ಮುಸ್ಲಿಮರು ಹೊರಹೊರಡುವುದನ್ನು ತಡೆಗಟ್ಟಬೇಕು

ಮಧ್ಯಪ್ರಾಂತ, ಮದರಾಸು, ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತಗಳಲ್ಲಿರುವ ಮುಸ್ಲಿಮರು ಹೈದರಾಬಾದಿಗೆ ಹೋಗಿ ನೆಲಸುತ್ತಿದ್ದಾರೆಂದು ವರದಿಯಾಗಿದೆ. ಪ್ರಾಂತಗಳನ್ನು ತ್ಯಜಿಸಿ ಹೈದರಾಬಾದಿಗೆ ತೆರಳಲು ಪ್ರಯತ್ನಿಸುವ ಮುಸ್ಲಿಮರನ್ನು ತಡೆಗಟ್ಟುವುದು ಅಗತ್ಯವೆಂದು ಪ್ರಾಂತ ಸರ್ಕಾರಗಳಿಗೆ ಭಾರತ ಸರ್ಕಾರವು ಸೂಚಿಸಿದೆಯೆಂದು ತಿಳಿದು ಬಂದಿದೆ ಪ್ರಾಂತ ಸರ್ಕಾರಗಳು ಈಗಾಗಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಪ್ರಯಾಣ ಸೌಕರ್ಯಗಳನ್ನು ನಿಲ್ಲಿಸಿವೆ

ಸಂಯುಕ್ತ ರಾಷ್ಟ್ರಗಳ ಸಂಸ್ಥೆಯಲ್ಲಿ ಭಾರತಕ್ಕೆ ಜಯ

ನೈರುತ್ಯ ಆಫ್ರಿಕದ ಮ್ಯಾಂಡೇಟ್ ಪ್ರದೇಶಗಳನ್ನು ಸಂಯುಕ್ತ ರಾಷ್ಟ್ರಗಳ ಅಧಿಕಾರಕ್ಕೆ ದಕ್ಷಿಣ ಆಫ್ರಿಕ ಒಪ್ಪಿಸಬೇಕೆಂಬ ಭಾರತ ಸರ್ಕಾರದ ನಿರ್ಣಯವು ಸಂಯುಕ್ತ ರಾಷ್ಟ್ರಗಳ ಟ್ರಸ್ಟಿಷಿಪ್ ಸಮಿತಿಯಲ್ಲಿ ಅಂಗೀಕಾರವಾಯಿತು.

ಪದವೀಧರರಿಗೆ ಗೈರುಹಾಜರಿಯಲ್ಲಿ ಪ್ರಶಸ್ತಿ

ಮೈಸೂರು ೧೭.

ಈ ಸಾರಿ ವಿಶ್ವವಿದ್ಯಾಲಯದ ಘಟಿಕೋತ್ಸವ ನಡೆಯುವುದಿಲ್ಲವೆಂದೂ, ಪದವೀಧರರ ಪ್ರಶಸ್ತಿಗಳನ್ನು ಅವರವರ ವಿಳಾಸಕ್ಕೇ ಕಳುಹಿಸಲಾಗುವುದೆಂದೂ ತಿಳಿಸಲಾಗಿದೆ

ಮಧ್ಯಪ್ರಾಂತದಿಂದ ಹೈದರಾಬಾದಿಗೆ ಮುಸ್ಲಿಮರ ಪ್ರವೇಶ

ಮಧ್ಯಪ್ರಾಂತದಲ್ಲಿರುವ ಮುಸ್ಲಿಮರು ಹೈದರಾಬಾದಿಗೆ ವಲಸೆ ಹೋಗುವಂತೆ ಪ್ರೋತ್ಸಾಹಿಸಲಾಗುತ್ತಿದೆಯೆಂದೂ, ಅದರಂತೆ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಹೈದರಾಬಾದನ್ನು ಪ್ರವೇಶಿಸುತ್ತಿರುವರೆಂದೂ ವರದಿಯಾಗಿದೆ. ಹೈದರಾಬಾದಿನಲ್ಲಿ ಮುಸ್ಲಿಂ ಪ್ರಜಾ ಸಂಖ್ಯೆಯು ಹೆಚ್ಚುವಂತೆ ಮಾಡಲು ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಪಂಜಾಬಿನಿಂದ ಬರುವ ಮುಸ್ಲಿಮರಿಗಲ್ಲದೆ ಮತ್ಯಾರಿಗೂ ಪಾಕಿಸ್ತಾನದಲ್ಲಿ ಸ್ಥಳವಿಲ್ಲವೆಂದು ಅಲ್ಲಿನ ಪ್ರಧಾನಿ ಮಿ॥ ಲಿಯಾಕತ್ ಅಲಿ ಖಾನರು ಹೇಳಿರುವುದೂ ಸಹ ಮೇಲಿನ ಸಂದೇಹಕ್ಕೆ ಬೆಂಬಲ ನೀಡುತ್ತದೆ

ಪುದುಕೋಟೆಯಲ್ಲಿ ಸತ್ಯಾಗ್ರಹ

ಪುದುಕೋಟಾ ಸಂಸ್ಥಾನದ ಕಾಂಗ್ರೆಸ್ ಸಮಿತಿಯು ನವಂಬರ್ ೧೫ ನೇ ತಾ॥ ನಿಂದ ಶಾಂತಿಯುತ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದೆ. ರಾಜ ಘೋಷಣೆ ಮೇರೆ ರಚಿಸಲಾಗಿರುವ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಬಗ್ಗೆ ಅಧಿಕಾರಿಗಳ ಅವಗಣನೆ ಮತ್ತು ಧೋರಣೆ ಮತ್ತು ಕಾಂಗ್ರೆಸ್ಸಿನವರಲ್ಲಿ ಅಧಿಕಾರಿಗಳ ಅಸಹಕಾರ-ಭಾವನೇ ಇದಕ್ಕೆ ಕಾರಣಗಳೆಂದು ತಿಳಿಸಲಾಗಿದೆ

೪೦ ದಿನಗಳ ಏಕಾಂಗಿ ಕಾರಾಗೃಹವಾಸ

ಮೈಸೂರು ೧೭.

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ದೇವೇಂದ್ರ ವರ್ಮಾರವರು ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಭಾಷಣ ಮಾಡುತ್ತಾ ತಮ್ಮ ವಿಚಿತ್ರ ಕಾರಾಗೃಹದ ಅನುಭವವನ್ನು ವಿವರಿಸಿದರು ೪೦ ದಿನಗಳವರೆಗೆ ಏಕಾಂಗಿಯಾಗಿ ತಮ್ಮನ್ನು ದಂಡಿನಪೋಲೀಸ್ ಸ್ಟೇಷನ್ನಿನ ಲಾಕಪ್ಪಿನಲ್ಲಿ ಇಟ್ಟರೆಂದೂ ತಿಳಿಸಿದರು. ತಾವು ಹೊರಗಿನವರಾದ್ದರಿಂದ ಮೈಸೂರು ದೇಶ ಬಿಟ್ಟುಹೋಗುವುದಾದರೆ ತಮ್ಮನ್ನು ಬಿಡುಗಡೆ ಮಾಡುವುದಾಗಿ ಪೋಲೀಸ್ ಅಧಿಕಾರಿಗಳಾದ ಶ್ರೀ ಬಾಬುರೆಡ್ಡಿಯವರು ತಿಳಿಸಿದರೆಂದೂ ಅದಕ್ಕೆ ಸರ್ ಆರ್ಕಾಟರೂ ಸಹ ಹೊರಗಿನವರಾದ್ದರಿಂದ ಅವರನ್ನೂ ಸಹ ಮೈಸೂರು ಬಿಟ್ಟು ಕಳುಹಿಸುವುದಾದರೆ ತಾವು ಅವರ ಸಂಗಡ ಹೊರಟುಹೋಗುವುದಾಗಿ ಉತ್ತರವಿತ್ತರೆಂದೂ ಶ್ರೀ ವರ್ಮಾರು ಸಭೆಯಲ್ಲಿ ತಿಳಿಸಿದರು.

ಗ್ರಾಮಸೇವಾ ಕೇಂದ್ರ

ಹಾಸನದ ಜಿಲ್ಲೆಯ ಚೆನ್ನರಾಯಪಟ್ಟಣದ ತಾಲ್ಲೂಕು ಶಾಂತರಾಜಪುರದಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರು ಕಸ್ತೂರಿಬಾಯಿ ಟ್ರಸ್ಟಿನ ಆಶ್ರಯದಲ್ಲಿ ಗ್ರಾಮಸೇವಾ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸಿದರು … ಶ್ರೀ ಲಕ್ಷ್ಮೀಗೌಡರು ಕೇಂದ್ರದ ಭವನಕ್ಕಾಗಿ ಒಂದು ಸಹಸ್ರ ರೂ. ದಾನ ಮಾಡಿದರು ಗ್ರಾಮದ … ಸಹ ಸುಮಾರು ೩೦೦ ರೂ ಗಳ ವರೆಗೆ ದಾನ ಮಾಡಿರುವರೆಂದು ಟ್ರಸ್ಟಿನ ಕಾರ್ಯದರ್ಶಿ ಶ್ರೀ ಸ ಪಿ ಕೇಶವನಾಥ್‌ರವರು ತಿಳಿಸುತ್ತಾರೆ.

ನೂತನ ಮಂತ್ರಿಗಳು ದೂರ ದರ್ಶಿತ್ವ ಹೊಂದಿರಬೇಕು

ರವೀಂದ್ರ ವರ್ಮರ ಭಾಷಣ

ಮೈಸೂರು ೧೭.

ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು. ಅಖಿಲ ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಬಿ ಶ್ರೀಕಂಠಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ರವೀಂದ್ರ ವರ್ಮ, ಮದರಾಸಿನ ವಕೀಲರಾದ ಶ್ರೀ ಕೆ. ಎಸ್. ಜಯರಾಂ, ಶ್ರೀಗಳಾದ ವ್ಯಾಸರಾವ್, ಜಿ ಪಿ ಕೃಷ್ಣರಾವ್, ಕೆ ಪುಟ್ಟಸ್ವಾಮಿ ಮೊದಲಾದವರು ಭಾಷಣ ಮಾಡಿದರು.

ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರ್ಕಾರವನ್ನು ಪಡೆಯುವ ಸಲುವಾಗಿ ಹೂಡಿದ ಹೋರಾಟದಲ್ಲಿ ತನ್ನ ಎಲ್ಲ ಬೇಡಿಕೆಗಳನ್ನೂ ಈಡೇರಿಸಿಕೊಂಡು ಅಖಂಡವಾದ ವಿಜಯವನ್ನು ಗಳಿಸಿದೆ. ಸತ್ಯಾಗ್ರಹವನ್ನು ಹೂಡಿದ ಅಲ್ಪ ದಿನಗಳಲ್ಲಿಯೇ ಜಯ ಲಭಿಸಿರುವುದು ಮೈಸೂರು ಕಾಂಗ್ರೆಸ್ಸಿನ ರಾಜನೀತಿ ನೈಪುಣ್ಯತೆ ಮತ್ತು ಕ್ರಿಯಾ ಭಾವಗಳನ್ನು ಸ್ಪಷ್ಟಪಡಿಸುತ್ತದೆ. ಇದು ಮೈಸೂರಿನ ಇತಿಹಾಸದಲ್ಲೇ ಸುವರ್ಣಾಕ್ಷರಗಳಲ್ಲಿ ಬರೆದಿಡತಕ್ಕುದಾದ ಅಂಶ.

ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಅವಶ್ಯಕ ಸೂತ್ರಗಳನ್ನು ರಚಿಸಲು ರಾಜ್ಯಾಂಗ ಸಭೆಗೆ ಪ್ರಾತಿನಿಧ್ಯವಿರುವುದೂ, ಮತ್ತು ಶ್ರೀ ತ. ಸ್ವಾಮಿ ... ಪ್ರೊಫೆಸರು ೩ ನೇ ಷೆಡ್ಯೂಲಿನಲ್ಲಿ ಸಹ ಬೇಕಾದ ಬದಲಾವಣೆಗಳನ್ನು ಮಾಡಲು ರಾಜ್ಯಾಂಗ ಸಭೆಗೆ ಅವಕಾಶವಿರುವುದೂ ಕಾಂಗ್ರೆಸ್ಸಿನ ವಿಜಯವನ್ನೂ ಮತ್ತು ಸಿಂ... ಟುಬಾರ್ಡ್ ನಡೆಸುತ್ತಿದ್ದ ಸರ್ಕಾರದ ಪರಾಭವವನ್ನೂ ವ್ಯಕ್ತ ಪಡಿಸುತ್ತದೆ. ಸತ್ಯಾಗ್ರಹದ ಸಮಯದಲ್ಲಿ ಅಧಿಕಾರಿಗಳು ಜನರ ಮೇಲೆ ನಡೆಸಿದ ದರ್ಪನೆ ಖಂಡನೀಯವಾದುದು. ಕಾಂಗ್ರೆಸ್ ಸರ್ಕಾರವು ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು. ಇಂದಿನ ವಿದ್ಯಾರ್ಥಿಗಳೇ ಮುಂದಿನ ಜನಾಂಗ. ಅವರ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ಆದ್ದರಿಂದ ವಿದ್ಯಾರ್ಥಿಗಳು ಶಾಂತ್ಯಿಯಿಂದಲೂ ಸಹಕಾರ ಮನೋಭಾವದಿಂದಲೂ ವರ್ತಿಸಬೇಕಾಗಿದೆ.

ಹೋರಾಟ ಹೂಡಿದ ಅಲ್ಪ ಕಾಲದಲ್ಲೇ ಮೈಸೂರು ಕಾಂಗ್ರೆಸ್ ಗಳಿಸಿರುವ ಜಯ ಭಾರತದ ಮತ್ತು ಇಡೀ ವಿಶ್ವದ ಇತಿಹಾಸದಲ್ಲೇ ಕಂಡು ಬರದ ವಿಷಯ. ಕಾಂಗ್ರೆಸ್ ವ...ಗ್ರೆಸ್ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ಅವರು ದೂರದರ್ಶಿತ್ವದಿಂದಲೂ, ಶಾಂತಿಯಿಂದಲೂ, ಸಹಕಾರ ಮನೋಭಾವದಿಂದಲೂ ವರ್ತಿಸಿ ಈಗ ಗಳಿಸಿರುವ ಕೀರ್ತಿ ಅಖಂಡವಾಗಿ ಉಳಿಯುವಂತೆ ಮಾಡಬೇಕಾಗಿದೆ.

ದಿವಾನರನ್ನು ಅಧಿಕಾರದಲ್ಲೇ ಉಳಿಸಿಕೊಂಡಿರುವ ಬಗ್ಗೆ ಅನೇಕರು ಕಟುತರವಾಗಿ ಟೀಕಿಸುತ್ತಿದ್ದಾರೆ. ಅವರನ್ನು ಕಳುಹಿಸಿ ಬಿಡದೆ ಅಧಿಕಾರದಲ್ಲಿರಲು ಅವಕಾಶವಿತ್ತಿರುವುದು ಕಾಂಗ್ರೆಸ್ಸಿನ ದೌರ್ಬಲ್ಯವೆಂದೂ ಸಹ ಹೇಳುತ್ತಿದ್ದಾರೆ. ಸರ್ ಆರ್ಕಾಟರನ್ನು ಪದಚ್ಯುತರನ್ನಾಗಿ ಮಾಡುವುದು ಕಾಂಗ್ರೆಸ್ಸಿಗೆ ಅತ್ಯಂತ ಸುಲಭವಾಗಿತ್ತು. ಆದರೆ ಹಾಗೆ ಮಾಡದೆ ಅವರನ್ನು ಅಧಿಕಾರದಲ್ಲುಳಿಸಿಕೊಂಡಿರುವುದು ಕಾಂಗ್ರೆಸ್ಸಿನ ಸೌಜನ್ಯತೆಯನ್ನು ವ್ಯಕ್ತ ಪಡಿಸುತ್ತದೆ. ದಿವಾನರು ಅಧಿಕಾರದಲ್ಲಿದ್ದರೂ ಅವರಿಗೆ ಯಾವ ವಿಷಯದಲ್ಲಿಯೂ ಸ್ವಾತಂತ್ರ್ಯವಿಲ್ಲದಂತಾಗಿದೆ. ಅವರು ಅಧಿಕಾರದಲ್ಲಿರುವುದು ಅವರ ಅಧಿಕಾರವೆಲ್ಲವನ್ನೂ ಕತ್ತರಿಸಿ ಅವರು ವರ್ತಿಸಿದ ಬೇಜವಾಬ್ದಾರಿ ವರ್ತನೆಯನ್ನು ಅವರು ಅರಿಯುವಂತೆ ಮಾಡಲು ಕಾಂಗ್ರೆಸ್ಸು ಹೂಡಿರುವ ತಂತ್ರ ಎಂಬುದಾಗಿ ಶ್ರೀ ರವೀಂದ್ರ ವರ್ಮರು ತಮ್ಮ ಭಾಷಣದಲ್ಲಿ ಹೇಳಿದರು.

Office of the Rationing Officer, Mysore City.

Dated 9th October 47.

NOTIFICATION

Applications in C. R. B. Forms are invited from Backward community candidates possessing minimum S. S. L. C. qualification with Typewriting and Shorthand for the post of a Steno typist in this office.

The post ca... a pay of R. 50 - with usual Dearness Allowance. Intending candidates may app... to the undersigne... on or befo... 2... ...ober 1947.

... Sriniv... ...lu Naidu,
...ationing Office...,
...y... C...

ರಾಜಕಮಲ್

17-10-47 ರಿಂದ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ್‌ರವರ

ಜೀವನ್ ಯಾತ್ರ

(ಹಿಂದಿ)

—: ಭೂಮಿಕೆ :—

ನಯನತಾರ, ಶಾಂತರ್ಣಿ, ಬಾಬುರಾವ್ ಪೆಂಢಾರ್ಕರ್, ಯಾಕೂಬ್

ತಾ॥17-10-47 ರಿಂದ

4 ದಿನಗಳು ಪ್ರತಿ ದಿನ ಪ್ರಾತಃಕಾಲ

೧೦-೩೦ ಕ್ಕೆ

ಉಲ್ ಜನ್

ಸದ್ದಾರ್ ಅಕ್ತರ್, ಅಂಜಲಿದೇವಿ, ಮಜಹರ್ ಖಾನ್

Edited printed and published by A. R. Nagarajan at the Sadhvi Press D. Subbaiah Road Mysore.

ವುಡ್‌ಲ್ಯಾಂಡ್ಸ್

17-10-47 ರಿಂದ

೪ ನೇ ವಾರ

ಪ್ರಕಾಶ್ ಪಿಕ್ಚರ್ಸ್‌ರವರ

ಅಮೋಘವಾದ ಚಲನ ಚಿತ್ರ

ನಯೀಮಾ

(ಹಿಂದಿ)

—: ತಾರಾಗಣ :—

ರಂಜನ ಮತ್ತು ಜೀವನ್

Sri GANESHA TALKIES

Morning Shows on 17, 18, 19, and 20 at 10-15 a m.

Cinderella Jones

—: Starring :—

Joan Leslie, Robert Alda

Showing for the first time in Mysore

WOODLANDS

Morning shows from 17-10-47 for 4 days daily at 10-30 a.m.

Warner Brothers Present

Three Strangers

—: with :—

Sydney Green Street, Fitz Gerald and Peter Lorre

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ ಬೆಂಗಳೂರು

OPERA TALKIES

From 17-10-47 daily 3 shows

Roop-Nagar

—: Starring :—

JAYANT, RAJA RANI

Morning Shows from 17-10-47

Greenwich Ville

(Technicolor)

—: Starring :—

CARMEN MIRANDA, DON AMECHE, WILLIAM BENDIX

20th Century fox Produc...

ಶ್ರೀ ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆ
ಸೆಕ್ರೆಟರಿಯವರ ಆಫೀಸು, ಮೈಸೂರು

ಟೆಂಡರ್ ನೋಟೀಸು

ಮೈಸೂರು ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆಗಳಿಗೆ 1948ನೇ ಇಸವಿ ಜನವರಿ 1 ನೇ ತಾರೀಖು ಆರಂಭವಾಗಿ 1948 ನೇ ಇಸವಿ ಡಿಸೆಂಬರ್ 31 ಕ್ಕೆ ಅಂತ್ಯವಾಗುವ ಒಂದು ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳಿಗೆ ನಾಲ್ಕು ಪ್ರತಿಗಳುಳ್ಳ (ಫೂಲ್ಸ್ ಕ್ಯಾಪ್ ಸೈಜ್) ಮೊಹರಾದ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆಗಳ ಸೆಕ್ರೆಟರಿಯವರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ತಮ್ಮ ಆಫೀಸಿನಲ್ಲಿ 1947 ನೇ ಇಸವಿ ನವಂಬರ್ ಮಾಹೆ 3 ನೇ ತಾರೀಖು ಸೋಮವಾರ ದಿವಿ ೧೧ ಗಂಟೆಗೆ ತೆಗೆದುಕೊಳ್ಳುತ್ತಾರೆ.

೧) ಮೇಲ್ಕಂಡ ಆಸ್ಪತ್ರೆಗಳಿಗೆ ಬೇಕಾಗುವ ಆಹಾರ ಸಾಮಾನುಗಳು ಮತ್ತು ಇತರ ಆಸ್ಪತ್ರೆ ಸಾಮಾನುಗಳು.

೨) ಮೇಲ್ಕಂಡ ಆಸ್ಪತ್ರೆಗೆ ಬೇಕಾಗುವ ಬಿಳಿ ಬಟ್ಟೆ

೩) ಕೃಷ್ಣರಾಜೇಂದ್ರ ಆಸ್ಪತ್ರೆಗೆ ಬೇಕಾಗುವ ಆಸ್ಪತ್ರೆ ... ...

ಇದಕ್ಕೆ ವಿವರವಾಗಿ 1947 ನೇ ಇಸವಿ ಅಕ್ಟೋಬರ್ 9 ನೇ ತಾರೀಖು ಮೈಸೂರು ಗೆಜೆಟ್ 6 ನೇ ಭಾಗದ 76 ನೇ ಪುಟದಲ್ಲಿ ಪ್ರಕಟವಾಗಿರುವ ಟೆಂಡರ್ ನೋಟಿಫಿಕೇಷನ್ ನೋಡಬಹುದು ಮತ್ತು ಸೆಕ್ರೆಟರಿಯವರ ಆಫೀಸಿನಲ್ಲಿ ಟೆಂಡರ್ ನೋಟಿಫಿಕೇಷನ್ ಮತ್ತು ಇತರ ವಿವರಗಳನ್ನು ಪಡೆಯಬಹುದು.

(ಸಹಿ) ಎಸ್ ... ಸೆಕ್ರೆಟರಿ,
ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆ, ಮೈಸೂರು.

ಫೋನ್ ನಂ. 508 ॥ ವಂದೇ ಮಾತರಂ ॥ ಬಿಡಿಪ್ರತಿಗೆ 3 ಕಾಸು

ಸಂಪುಟ ೬] ಶನಿವಾರ ೧೮-೧೦-೪೭ [ಸಂಚಿಕೆ ೫೫

ಮೈಸೂರು ಜೈಲಿನ ಮುಂದೆ ಸತ್ಯಾಗ್ರಹವೇ?

...ರ್ಥಿಗಳಿಗೆ ರಿಯಾಯಿತಿ ತೋರಬೇಕು

ಬಿರಂಗ ಸಭೆಯಲ್ಲಿ ಭಾಷಣ

ಮೈಸೂರು ೧೮

...ಸಂಜೆ ಸುಬ್ಬರಾಯನ ಕೆರೆ ಮೈ...ಲ್ಲಿ ನೇತಾಜಿ ಸಂಘದ ಆಶ್ರಯದಲ್ಲಿ ...ಗ ಸಭೆ ನಡೆಯಿತು. ಶ್ರೀ ಜಿ. ನಾರಾಯಣ್‌ರವರು ಅಧ್ಯಕ್ಷತೆ ವ...ರು. ಶ್ರೀಗಳಾದ ಎಂ. ಎನ್. ಜೋ..., ಅಗರಂ ರಂಗಯ್ಯ ಮತ್ತು ಕೆ. ಜಯರಾಂರವರು ಭಾಷಣ ಮಾಡಿ...

...ರ್ಥಿಗಳ ಮೇಲೆ ಪೋಲೀಸರು ನ...ದೌರ್ಜನ್ಯ ಖಂಡನೀಯವಾದುದು ...ನಿಷ್ಪಕ್ಷಪಾತವಾದ ವಿಚಾರಣೆ ನ...ಕಾನೂನಿನ ಪ್ರಕಾರ ಅವರ ಮೇಲೆ ...ಕ್ರಮ ಕೈಗೊಳ್ಳಬೇಕು ...ನಿಸ್ಟ್ ನಾಯಕರಾದ ರಾಮನಾಥ್ ಕರ್ಪೂರ್ ವೆಂಕಟರಾಯರುಗಳ...ನ್ನೂ ಬಿಡುಗಡೆ ಮಾಡಿಲ್ಲ. ಅವ...ನ್ನು ಕೂಡಲೇ ಬಿಡದಿದ್ದರೆ ನಾವು ...ಸೆಯ ಮುಂದೆ ಅವರ ಬಿಡುಗಡೆಗಾ...ತ್ಯಾಗ್ರಹ ಹೂಡಬೇಕಾಗುತ್ತದೆ. ವಿ...ರ್ಥಿಗಳಿಗೆ ೩ ತಿಂಗಳ ಫೀಜನ್ನು ಮನ್ನಾ...ಬೇಕು. ಮತ್ತು ಅವರಿಗೆ ಡಬ್ಬಲ್ ...ರ್ಮ್ ಕೊಡಬೇಕು. ವ್ಯಾಸರಾದ ...ರಾಮಸ್ವಾಮಿಯ ಜ್ಞಾಪಕಾರ್ಥವಾಗಿ ...ಸ್ಮಾರಕವನ್ನು ಏರ್ಪಡಿಸಬೇಕು-...ವಾಗಿ ಶ್ರೀ ಎಂ. ಎನ್. ಜೋಯಿಸ...ಳಿಸಿದರು.

...ಂಗ್ರೆಸ್ ಮಂತ್ರಿಮಂಡಲವು ದಕ್ಷತೆ...ದ ವಹಿಸಿ ಪ್ರಜಾಪ್ರೀತಿ ಗಳಿಸಬೇ...ಕೋಮುವಾರು ಭಿನ್ನಾಭಿಪ್ರಾಯಗ...ತೊರೆದ ನೂತನ ರಾಜ್ಯಾಂಗವನ್ನು ...ವಾಗ ಸರ್ ಎಂ. ವಿಶ್ವೇಶ್ವರಯ್ಯನ...ತಹ ಮೇಧಾವಿಗಳ ನೆರವನ್ನು ಪಡೆ...ಯಬೇಕು. ಪೋಲೀಸರ ದೌರ್ಜನ್ಯಗಳ ವಿಚಾರಣೆ ನಡೆಯಬೇಕು-ಎಂದು ...ಕೆ. ಎಸ್. ಜಯರಾಂರವರು ಹೇಳಿ...

...ರ್ ಆರ್ಕಾಟ್ ಮತ್ತು ಸರ್ ತಂಬೂ...ರಿಂದ ನಿರ್ವಹಿತವಾಗಿರುವ ಕಲ್ಮಷ ...ವರಣವನ್ನು ಅವರಿಂದಲೇ ಶುದ್ಧಿಗೊ...ವ ಸಲುವಾಗಿ ಅವರುಗಳನ್ನು ಅಧಿಕಾ...ರ್ಪಲಾಗಿದೆ. ಇದುವರೆಗೆ ಅರಮನೆಯ ...ಸ್ಥಾನವಮಿಯ ದಿನ ನಡೆಯುತ್ತಿದ್ದ ...ದರ್ಬಾರನ್ನು ಶ್ರೀಮನ್ಮಹಾರಾಜ...ಮುಂದೂಡಿಸಿ ಆ ದಿನ ಗಾಂಧೀ...ಯಿಂದ ಕೂಡಿದ ನಮ್ಮ ನಾಯಕ...ರ ದರ್ಬಾರನ್ನು ನಡೆಸಲೆಂದು ಶ್ರೀಮ...ರಾಜರವರಲ್ಲಿ ಅಂಗಲಾಚುತ್ತೇನೆ-...ಶ್ರೀ ಅಗರಂ ರಂಗಯ್ಯನವರು ಹೇ...ಪೋಲೀಸರು ನಡೆಸಿದ ದೌರ್ಜ...ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ...ಬೇಕು ಎಂದೂ ಸಹ ಅವರು ನುಡಿ...

...ಹಾಚಾರ್ಯರ್ ಶರ್ಮರು ...ಮ್ಮೇಳನದ ಅಧ್ಯಕ್ಷರು

...ಗಡಿಯಲ್ಲಿ ಇದೇ ಡಿಸೆಂಬರ್ ...ಲ್ಲಿ ನಡೆಯಲಿರುವ ಕರ್ನಾಟಕ ...ಸಮ್ಮೇಳನದ ೩೧ ನೇ ಅಧಿವೇಶ...ಸ್ವಾತಂತ್ರ್ಯ ಕರ್ನಾಟಕ ವಾರ ಪತ್ರಿಕೆಯ ...ದಕರಾದ ಶ್ರೀ ...ಸಾಚಾರ್ಯ ಶರ್ಮರವರ ...ಧ್ಯಕ್ಷರಾಗಿ ಚು...ಸಲಾಗಿದ್ದಾರೆ.

ಜಂಬೂ ಸವಾರಿ ಇಲ್ಲ

ಮೈಸೂರು ೧೮

ಮಹಾನವಮಿ ವಿಜಯದಶಮಿಯ ದಿನ ನಡೆಯಬೇಕಾಗಿದ್ದ ಶ್ರೀ ಮನ್ಮಹಾರಾಜರವರ ಜಂಬೂಸವಾರಿಯು ಈವರ್ಷ ನಡೆಯುವುದಿಲ್ಲವೆಂದು ಅಧಿಕಾರಯುತವಾಗಿ ತಿಳಿದುಬಂದಿದೆ.

ಶ್ರೀ ದೇವೀಯಜ್ಞ ರುದ್ರಸ್ವಾಹಾಕಾರ

ಚಾಮುಂಡಿಪುರಂ ಬಡಾವಣೆಯ ೧೦೬೩/೧೫ ನೇ ನಂಬರ್ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರೀ ಸನ್ನಿಧಿಯಲ್ಲಿ ನಡೆಯುತ್ತಿರುವ ಶರನ್ನವರಾತ್ರಿ ಉತ್ಸವದ ಅಂಗವಾಗಿ ಇದೇ ೨೪ ನೇ ತಾ॥ ನಡೆಯುವ ಮಹಾಪೂರ್ಣಾಹುತಿ ಮತ್ತು ೩೦ ನೇ ತಾ॥ ನಡೆಯುವ ಪ್ರತಿಪತ್ತು ರುದ್ರ ಸ್ವಾಹಾಕಾರ ಪೂರ್ಣಾಹುತಿಗಳಿಗಾಗಿ ಹಿರೀಸಾವೆ ಗ್ರಾಮದ ಶ್ಯಾನುಭೋಗರಾದ ಶ್ರೀ ನರಸಿಂಹಯ್ಯನವರು ೨೫ ರೂ. ಗಳನ್ನು ಸೇವೆಗಾಗಿ ಇತ್ತಿದ್ದಾರೆ. ಮಹಾಜನರು ಇದೇ ರೀತಿ ಸಹಾಯ ನೀಡಿ ಪ್ರೋತ್ಸಾಹಿಸಬೇಕು ಎಂದು ವ್ಯವಸ್ಥಾಪಕರು ಪ್ರಾರ್ಥಿಸುತ್ತಾರೆ.

ಸ್ವಾತಂತ್ರ್ಯ ದಿನಾಚರಣೆ

ರಾಜಧಾನಿಯ ಬಾಲಸೇವಾ ಸಮಾಜದ ಆಶ್ರಯದಲ್ಲಿ ನಿನ್ನೆ ಸಂಜೆ ಸ್ವಾತಂತ್ರ್ಯ ದಿನೋತ್ಸವವು ಶ್ರೀ॥ ಎಂ. ಎನ್. ಜೋಯಿಸರ ಅಧ್ಯಕ್ಷತೆಯಲ್ಲಿ ನೆರವೇರಿತು.

ಶ್ರೀಮತಿ ಸರಸ್ವತಿ ಗಾಂಧಿ ಮತ್ತು ಶ್ರೀಮತಿ ದುರ್ಗಾಂಬಾರವರಿಂದ ಸುಶ್ರಾವ್ಯವಾದ ಗಾನವಾದ ನಂತರ, ಶ್ರೀಗಳಾದ ಜಯರಾಂ, ಗಂಗಾಧರ ಶರ್ಮ, ಮತ್ತು ಶ್ರೀಮತಿ ಎಂ. ಎನ್. ಸೀತಮ್ಮನವರುಗಳು ಭಾಷಣಮಾಡಿದರು. ಜಾತಿ, ಮತ, ದ್ವೇಷರಹಿತವಾಗಿ ಇಡೀ ಐಕ್ಯತೆ ಮೂಡಿರುವ ಸರ್ಕಾರದ ಸ್ಥಾಪನೆ ಆಗಬೇಕೆಂದು ತಿಳಿಸಿದರು.

ಮಹಾತ್ಮ ರಾಮಸ್ವಾಮಿಯವರ ಸ್ಮರಣೆ

ರಾಜಧಾನಿಯ ನೇತಾಜಿ ಸಂಘದವರು ಮಹಾತ್ಮ ರಾಮಸ್ವಾಮಿಯ ಜ್ಞಾಪಕಾರ್ಥವಾಗಿ ಕುರುಕ್ಷೇತ್ರದ ಏಮ ಅರಸ್ತ್ರ ಕಂಬದ ಮೇಲೆ ನಿನ್ನೆ ಧ್ವಜಾರೋಹಣ ಮಾಡಿ, ಅವರು ಆತ್ಮಕ್ಕೆ ಶಾಂತಿದೊರೆಯಲೆಂದು ನಿಮಿಷ ಮೌನವನ್ನು ಆಚರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಸ್. ನರಸಿಂಹಯ್ಯಂಗಾರ್ಯರು ಮಿತ್ರರಿಗೆ ಮನಮುಟ್ಟುವಂತೆ ಪರಿಣಾಮಕಾರಿಯಾಗಿ ಭಾಷಣ ಮಾಡಿದರು.

ಮಂತ್ರಿಮಂಡಲದ ರಚನೆಯ ಬಗ್ಗೆ ಸಮಾಲೋಚನೆ

ಕಾಂಗ್ರೆಸ್ ಕಛೇರಿಯ ಬಳಿ ಪ್ರದರ್ಶನ

[ನಮ್ಮ ಸ್ವಂತ ವರದಿಗಾರರಿಂದ] ಬೆಂಗಳೂರು ೧೮

ನಿನ್ನೆ ರಾತ್ರಿ ಮತ್ತು ಈ ದಿನ ಮಧ್ಯಾಹ್ನ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಮಂತ್ರಿಮಂಡಲದ ರಚನೆಯ ಬಗ್ಗೆ ಸಮಾಲೋಚನೆ ನಡೆಸಿತು. ಈ ದಿನ ರಾತ್ರಿಯೊಳಗೆ ಒಂದು ನಿರ್ಧಾರಕ್ಕೆ ಬರಬಹುದೆಂದು ಹೇಳಲಾಗಿದೆ. ಶ್ರೀಗಳಾದ ಹೆಚ್. ಸಿ. ದಾಸಪ್ಪ, ಟಿ. ಸುಬ್ರಹ್ಮಣ್ಯ, ಕೆ. ಟಿ. ಭಾಷ್ಯಂ, ಕೆ. ಹನುಮಂತಯ್ಯ, ಟಿ. ಮರಿಯಪ್ಪ, ಕೆ. ಸಿ. ರೆಡ್ಡಿ, ಎಚ್. ಕೆ. ವೀರಣ್ಣಗೌಡ, ಎ. ಜಿ. ರಾಮಚಂದ್ರರಾವ್, ಎಸ್. ಆರ್. ರಾಮಯ್ಯ, ಕೆ. ಹೆಚ್. ಟಿ. ಗುಂಡಪ್ಪಗೌಡ, ಎನ್. ಬಾಲಕೃಷ್ಣಯ್ಯ ಮುಂತಾದವರ ಹೆಸರುಗಳು ಪತ್ರಿಕೆಗಳಲ್ಲಿ ಸೂಚಿಸಲ್ಪಟ್ಟಿದ್ದರಿಂದ ಅವರುಗಳಿಗೆ ವಿರೋಧವಾಗಿ ೨೦೦-೩೦೦ ಜನ ಯುವಕರು ಕಾಂಗ್ರೆಸ್ ಕಛೇರಿಯ ಬಳಿ ಬೋರ್ಡುಗಳನ್ನು ಹಿಡಿದು ಪ್ರದರ್ಶನ ನಡೆಸಿದರು. ಶ್ರೀ ಕೆ. ಟಿ. ಭಾಷ್ಯಂರವರು ಅವರುಗಳನ್ನು ಸಮಾಧಾನಪಡಿಸಿ ನಿಮ್ಮ ಬೇಡಿಕೆಗೆ ಆರ್ಹವಾದ ಮನ್ನಣೆ ಕೊಡಲಾಗುವುದೆಂದು ತಿಳಿಸಿದರು.

ತಮ್ಮ ಪಂಗಡದಿಂದ ಮಂತ್ರಿ ಸ್ಥಾನಕ್ಕೆ ನಾಲ್ಕು ಜನರನ್ನು ತೆಗೆದುಕೊಳ್ಳಬೇಕೆಂದು ಪ್ರಜಾಪಕ್ಷದವರು ದಿವಾನರಿಗೆ ಕಳುಹಿಸಿದ ಪತ್ರವನ್ನು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಗೆ ಕಳುಹಿಸಲಾಗಿದೆ.

ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗಿನ ನಾಯಕರುಗಳು ಕಾಂಗ್ರೆಸ್ ಅಧ್ಯಕ್ಷರೊಡನೆ ಮಾತುಕತೆ ನಡೆಸಿದರು. ನವರಾತ್ರಿಯ ಕಡೆ ೩ ದಿವಸಗಳಲ್ಲಿ ದರ್ಬಾರಿಗೆ ಬರಬೇಕೆಂದು ಕಾಂಗ್ರೆಸ್ ಅಧ್ಯಕ್ಷರಿಗೂ ಕಾರ್ಯಕಾರಿ ಮಂಡಲಿಯ ಸದಸ್ಯರಿಗೂ ಆಹ್ವಾನವು ಬಂದಿರುತ್ತದೆ.

ಪರೀಕ್ಷೆಗಳು ಮುಂದೆ ಹೋಗಿವೆ

ನವೆಂಬರ್ ೩ ನೇ ತಾರೀಖಿನಿಂದ ಆರಂಭವಾಗಬೇಕಾಗಿದ್ದ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಡಿಸೆಂಬರ್ ೧೧ ನೇ ತಾರೀಖಿನಿಂದ ಪ್ರಾರಂಭಿಸಬೇಕೆಂದು ನಿನ್ನೆ ಸೇರಿದ್ದ ಯೂನಿವರ್ಸಿಟಿ ಕೌನ್ಸಿಲ್ ಸಭೆಯು ತೀರ್ಮಾನಿಸಿದೆ.

೭ ಲಕ್ಷ ನಿರಾಶ್ರಿತರ ರವಾನೆ

ಪಶ್ಚಿಮ ಪಂಜಾಬಿನಿಂದ ೭ ಲಕ್ಷ ಮಂದಿ ಹಿಂದೂ ಮತ್ತು ಸಿಖ್ ನಿರಾಶ್ರಿತರನ್ನು ಅಕ್ಟೋಬರ್ ೪ ರಿಂದ ೧೧ ನೇ ತಾ॥ ವರೆಗೆ ಭಾರತಕ್ಕೆ ಸಾಗಿಸಲಾಗಿದೆ. ಪೂರ್ವ ಪಂಜಾಬಿನಿಂದ ಪಶ್ಚಿಮ ಪಂಜಾಬಿಗೆ ೧೦ ಲಕ್ಷ ಮುಸ್ಲಿಂ ನಿರಾಶ್ರಿತರನ್ನು ಕಳುಹಿಸಲಾಗಿದೆ.

ಜೈಲಿನ ಮುಂದೆ ಸತ್ಯಾಗ್ರಹ

ಮೈಸೂರು ೧೮

ರಾಜಧಾನಿಯ ಸಬ್ ಜೈಲಿನಲ್ಲಿ ಇನ್ನೂ ಬಂಧನದಲ್ಲಿರುವ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ರಾಮನಾಥ್ ಮತ್ತು ಕರ್ಪೂರ್ ವೆಂಕಟರಾಯರನ್ನು ಕೂಡಲೇ ಬಿಡುಗಡೆ ಮಾಡದಿದ್ದರೆ ನಾಳೆ ಬೆಳಗ್ಗೆ ತಮ್ಮ ಸಂಘದ ಸದಸ್ಯರು ಮೆರವಣಿಗೆ ಹೊರಟು ಜೈಲಿನ ಮುಂದೆ ತಾವು ಸತ್ಯಾಗ್ರಹ ಹೂಡುವುದಾಗಿ ನೇತಾಜಿ ಸಂಘದ ಅಧ್ಯಕ್ಷರಾದ ಶ್ರೀ ನರಸಿಂಹಯ್ಯಂಗಾರ್ಯರು ತಿಳಿಸಿದ್ದಾರೆ.

ಧಾರಿ ಹಸುವಿನ ಮರಣ

ಈ ದಿನ ಬೆಳಗ್ಗೆ ೧೨ ಗಂಟೆಯಲ್ಲಿ ರಾಜಧಾನಿಯ ಹಸುವಿನ ಕರುಹಟ್ಟಿಯಿಂದ ಸ್ವಲ್ಪ ಮುಂದೆ ರಂಗಾ ಮುಕ್ಕೆ ಹೋಗುವ ರಸ್ತೆಯಲ್ಲಿ ಎರಡು ಧಾರಿ ಹಸುಗಳು ಕೊಂಬು ಕೋಡುಗಳಿಂದ ಜಗಳವಾಗಿ ಒಂದರ ಕೊಂಬಿನ ತಿವಿತಕ್ಕೆ ಮತ್ತೊಂದು ಹಸುವು ಸಿಕ್ಕಿ ಮೃತ್ಯುವಿನ ಪಾಲಾಯಿತು.

ಮೈಸೂರಿಗೆ ಗಾಂಧೀಜಿಯ ಅಭಿನಂದನೆ

ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಗಳಿಸಿದ ಮೈಸೂರು ಕಾಂಗ್ರೆಸ್ಸನ್ನು ಅಭಿನಂದಿಸಿ ಮೈಸೂರಿನ ಆದರ್ಶವು ಇತರ ಸಂಸ್ಥಾನಗಳಿಗೆ ಅನುಕರಣೀಯವಾಗಿದೆಯೆಂದು ಮಹಾತ್ಮ ಗಾಂಧಿಯವರು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಮೇಲಿನ ಶಿಸ್ತಿನ ಕ್ರಮ ರದ್ದು

ಮೈಸೂರು ೧೮

ಸೆಂಟ್ರಲ್ ಕಾಲೇಜಿನ ಶ್ರೀ ಜಿ. ಪಿ. ಕೃಷ್ಣರಾವ್ ಮತ್ತು ಇತರ ಮೂರು ವಿದ್ಯಾರ್ಥಿಗಳು ಬೆಂಗಳೂರು ಯೂನಿವರ್ಸಿಟಿ ದಿನಾಚರಣೆಯ ದಿನ ಅಸಭ್ಯ ರೀತಿಯಲ್ಲಿ ವರ್ತಿಸಿದರೆಂಬ ಆಪಾದನೆಯ ಮೇಲೆ ವಿಶ್ವವಿದ್ಯಾನಿಲಯದ ಕೌನ್ಸಿಲ್ ಸಭೆಯವರು ಹಿಂದೆ ತೆಗೆದುಕೊಂಡಿದ್ದ ಶಿಸ್ತಿನ ಕ್ರಮವನ್ನು ನಿನ್ನೆ ಮೈಸೂರಿನಲ್ಲಿ ನಡೆದ ಕೌನ್ಸಿಲ್ ಸಭೆಯು ರದ್ದು ಮಾಡಿದೆ.

ಮೈಸೂರಿನ ಶ್ರೀ ಸರಸ್ವತೀ ಸಂಗೀತ ಸಮಾಜದ ಆಶ್ರಯದಲ್ಲಿ

20-10-47 ನೇ ಸೋಮವಾರ

ಸಂಜೆ ೫-೩೦ ಗಂಟೆಗೆ

ಸಾ॥ ಡಿ. ಬನುಮಯ್ಯನವರ ಹೈಸ್ಕೂಲ್ ಹಾಲಿನಲ್ಲಿ

ತಿರುಪತ್ತೂರಿನ

ಶ್ರೀಮತಿ ಕಲ್ಲಮ್ಮಾಳ್‌ರವರ ಸಂಗೀತವನ್ನು

ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಿದೆ. ಮೊಬಲಗಳು ದಯವಿಟ್ಟು ಈ ಪ್ರಕಟಣೆಯನ್ನೇ ಆಹ್ವಾನವೆಂದು ತಿಳಿದು ಬರಬೇಕೆಂದು ಕೋರಿದೆ.

ಮೆಂಬರ್‌ಗಳಿಗೆ ಟಿಕೆಟು ಮತ್ತು ಬ್ಯಾಡ್ಜ್ ಪ್ರವೇಶ

ಟಿಕೆಟ್ ದರ —

ಗಂಡಸರಿಗೆ .- 1-0-0, 0-8-0

ಹೆಂಗಸರಿಗೆ .- 0-3-0

ಮಕ್ಕಳಿಗೆ .- 0-1-0

ಬಂಧನದಲ್ಲಿರುವ ಕಮ್ಯೂನಿಸ್ಟರ ಬಿಡುಗಡೆಯಾಗಬೇಕು

ರಾಜಧಾನಿಯಲ್ಲಿ ಬಂಧನದಲ್ಲಿರುವ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಕಪ್ಪರ್ ವೆಂಕಟೇಶ ಮತ್ತು ರಾಮರಾಘವರನ್ನೂ ಮತ್ತು ಸಂಸ್ಥಾನದ ಇತರ ಸೆರೆಮನೆಯಲ್ಲಿರುವ ನಾಯಕರನ್ನೂ ಇನ್ನೂ ಬಂಧನದಿಂದ ಬಿಟ್ಟಿಲ್ಲ. ಕೂಡಲೇ ಅವರುಗಳ ಬಿಡುಗಡೆಯಾಗಬೇಕು ಎಂಬುದಾಗಿ ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಸಂಸ್ಥಾನದಲ್ಲಿ ಹಾ[illegible] ಸರ್ಕಾರದ ಸ್ಥಾಪನೆಯಾಗಿರುವುದನ್ನು ಜವಾಬ್ದಾರೀ ಸರ್ಕಾರದ ಘೋಷಣೆಯನ್ನೂ ಕಮ್ಯೂನಿಸ್ಟ್ ಪಕ್ಷ ಸ್ವಾಗತಿಸುವುದಾದರೂ ದಿವಾನರು ಆ ಸರ್ಕಾರದಲ್ಲಿರುವುದಕ್ಕಾಗಿ ಸಂಸ್ಥೆಯು ಕಳವಳಪಡುತ್ತದೆ. ಆಹಾರ, ಬಟ್ಟೆಗಳ ಅಭಾವ ಮುತ್ತು ಜನತೆಯ ಇತರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ನೂತನ ಸರ್ಕಾರ ಕೈಗೊಳ್ಳಬೇಕಾದ ಎಲ್ಲ ಕಾರ್ಯಕ್ರಮಗಳಿಗೂ ಈ ಪಕ್ಷ ಬೆಂಬಲ ನೀಡುತ್ತದೆ. ಕಮ್ಯೂನಿಸ್ಟರ ಮೇಲೆ ಚಳುವಳಿಯ ಕಾಲದಲ್ಲಿ ಅಧಿಕಾರಿಗಳು [illegible] ಪೊಲೀಸರು ನಡೆಸಿದ ದೌರ್ಜನ್ಯದ ಬಗ್ಗೆ ವಿಚಾರಣೆ ನಡೆಯಲು ನೇಮಕವಾಗಿ[illegible] ಈ ಕೂಡಲೇ ತನ್ನ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ತಪ್ಪಿತಸ್ಥರನ್ನು ಒಡನೆಯೇ ಶಿಕ್ಷಿಸಬೇಕೆಂದು [illegible] ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿರುವರು.

ಉಪಾಧ್ಯಾಯರ ಸಭೆ

ನಂಜನಗೂಡು ೧೫

ನಂಜನಗೂಡು ಉಪಾಧ್ಯಾಯ ವೃಂದದವರು ಈ ದಿನ ಜರುಗಿದ ಸಭೆ ಸೇರಿ ಶ್ರೀ ಮಹಾರಾಜರವರು ಜವಾಬ್ದಾರೀ ಸರ್ಕಾರವನ್ನು ದಯಪಾಲಿಸಿದುದಕ್ಕಾಗಿ ಅಭಿನಂದಿಸಿಯೂ, ಮತ್ತು ಸ್ವಾತಂತ್ರ್ಯದ ಹೋರಾಟದಲ್ಲಿ ವಿಜಯ ಗಳಿಸಿದ ಕಾಂಗ್ರೆಸ್ಸಿನವರನ್ನು ಅಭಿನಂದಿಸಿಯೂ ನಿರ್ಣಯಗಳನ್ನು ಮಾಡಿದರು. ನೂತನ ಸರ್ಕಾರ ರಚನೆಯಾದ ಮೇಲೆ ಅತ್ಯಂತ ಕಷ್ಟದೆಸೆಯಲ್ಲಿರುವ ಈ ವರ್ಗದವರಿಗೆ ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೊಡಿಸಿಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನೂ ಮಾಡಿದರು.

ವುಡ್‌ಲ್ಯಾಂಡ್ಸ್

17-10-47 ರಿಂದ

೪ ನೇ ವಾರ

ಪ್ರಕಾಶ್ ಪಿಕ್ಚರ್ಸ್‌ರವರ

[illegible] ಚಿತ್ರ

[illegible]

(ಹಿಂದಿ)

: ತಾರಾಗಣ :—

[illegible]

[illegible] Sub. [illegible] Road Mysore,

ಭೂಪಾಲ್ ಪ್ರಜಾನಾಯಕರಿಗೆ ಗಡೀಪಾರು

ಕೇಂದ್ರ ಭಾರತ ಸಂಸ್ಥಾನಗಳ ಪ್ರಜಾಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ ಚತುರ್‌ನಾರಾಯಣ ಮಾಳವೀಯರು ಭೂಪಾಲ್ ಪೌರಸಭೆಯ ಎಲ್ಲೆಕಟ್ಟಿನೊಳಕ್ಕೆ ಕಾಲಿಡಕೂಡದೆಂದು ಅಲ್ಲಿನ ಸರ್ಕಾರವು ಅವರ ಮೇಲೆ ಗಡೀಪಾರು ಆಜ್ಞೆಯನ್ನು ಜಾರಿ ಮಾಡಿದೆಯೆಂದು ವರದಿಯಾಗಿದೆ.

೫ ತಿಂಗಳಿಂದ ಬಾಡದ ಗುಲಾಬಿ

ಗ್ಲೋಬ್] ಲಂಡನ್ ೧೩

ಫೆಸ್ಟಿರನ ಸ್ವಾನ್‌ಫೋರ್ಟ್ ಎಂಬಲ್ಲಿರುವ ಡೋವರ್ ಕ್ಯಾಥೊಲಿಕ್ ಚರ್ಚು ಈಗ ಒಂದು ದೊಡ್ಡ ಯಾತ್ರಾಸ್ಥಳವಾಗಿ ಪರಿಣಮಿಸಿದೆ. ಕಳೆದ ಮೇ ೪ ನೇ ತಾರೀಖು ಅಲ್ಲಿರುವ ಮೇರಿ ಪ್ರತಿಮೆಗೆ ಹಾಕಿದ್ದ ಗುಲಾಬಿ ಹೂವಿನ ಹಾರವು ಇಂದಿಗೂ ಬಾಡದೆ ಅಚ್ಚ ಹೊಸದಾಗಿರುವುದೇ ಇದಕ್ಕೆ ಕಾರಣ. ಈ ವಿಚಿತ್ರವನ್ನು ನೋಡಲು ಜನರು ತಂಡೋಪತಂಡವಾಗಿ ಅಲ್ಲಿಗೆ ತೆರಳುತ್ತಿದ್ದಾರೆ.

WOODLANDS

Morning shows from 17-10-47 for 4 days daily at 10-30 a.m.

Warner Brothers Present

Three Strangers

—: with :—

Sydney Green Street, Fitz Gerald and Peter Lorre

ಮಿತ ಸಂತಾನ

ಸ್ವಾಭಾವಿಕ ಮತ್ತು ಶಾಸ್ತ್ರೀಯ ಸಂತಾನವನ್ನು ಮಿತವಾಗಿಟ್ಟುಕೊಳ್ಳಬಹುದು

ಸಲಹೆ: ಡಾ|| ಟಿ. ಎಸ್. ಟಿ. ಆಚಾರ್ಯ

L. H. M. S, L. A. M. S.

142-ಕಾರ್ಲೆಟನ್ ರೋಡ್, ಮೈಸೂರು.

ರಾಜಕಮಲ್

17-10-47 ರಿಂದ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ್‌ರವರ

ಜೀವನ್ ಯಾತ್ರ

(ಹಿಂದಿ)

—: ಭೂಮಿಕೆ :—

ನಯನತಾರಾ, ಶಾಂತರಾಂ, ಬಾಬುರಾವ್ ಪೆಂಢಾರ್ಕರ್, ಯಾಕೂಬ್

ತಾ|| 17-10-47 ರಿಂದ

೭ ದಿನಗಳು ಪ್ರತಿ ದಿನ ಪ್ರಾತಃಕಾಲ

೧೦-೩೦ ಕ್ಕೆ

[illegible]

ಸರ್ದಾರ್ ಅಕ್ತರ್, ಅಂಜಲಿದೇವಿ,

[illegible]

ಬಹಿರಂಗ ಸಭೆ

ನಾಳೆ ಸಂಜೆ ೪ ಗಂಟೆಗೆ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದಲ್ಲಿ ಶ್ರೀ ಎಂ. ಎಗ್. ಬೋಯಿಸರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುವುದು. ಶ್ರೀಮತಿ ಸುನಂದಮ್ಮನವರು ಭಾಷಣ ಮಾಡುವರು. ನಾಳಿದ್ದು ಕೊಪ್ಪ ಹೋಬಳಿ ಕಾಡ್ಲೆ ಗ್ರಾಮದಲ್ಲಿ ಶ್ರೀಮತಿ ಸುನಂದಮ್ಮನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು.

ಹರಿಜನರ ಸಹಕಾರ

ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಸ್ಥಾಪಿತವಾಗಿರುವ ಪೂರ್ಣ ಜವಾಬ್ದಾರಿ ಸರ್ಕಾರದಲ್ಲಿ ಹರಿಜನರ ಸಮಸ್ಯೆಗಳೆಲ್ಲಾ ಕೇವಲ ಅಲ್ಪ ಕಾಲದಲ್ಲಿ ಬಗೆಹರಿಯುವುದೆಂದು ದೃಢವಾಗಿ ನಂಬಿದ್ದೇವೆ. ಈ ಸರ್ಕಾರಕ್ಕೆ ಎಲ್ಲ ಹರಿಜನರೂ ಪೂರ್ಣ ಸಹಕಾರವನ್ನು ನೀಡಬೇಕೆಂದೂ ಮತ್ತು ಹರಿಜನ ಏಳಿಗೆಯ ಬಗ್ಗೆ ಒಂದು ನಿರ್ದಿಷ್ಟ ಯೋಜನೆಯನ್ನು ತಯಾರಿಸಬೇಕೆಂದೂ ಮೈಸೂರು ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಎಸ್. ಎಂ. ಸಿದ್ದಯ್ಯನವರು ತಿಳಿಸುತ್ತಾರೆ.

ಏಷ್ಯ ರಾಷ್ಟ್ರಗಳ ಸಮ್ಮೇಳನ

ದೆಹಲಿಯಲ್ಲಿ ಅಕ್ಟೋಬರ್ ೨೭ ನೇ ತಾ|| ನಡೆಯಲಿರುವ ಏಷ್ಯಾ ರಾಷ್ಟ್ರಗಳ ಪ್ರಾದೇಶಿಕ ಸಮ್ಮೇಳನದ ಆರಂಭೋತ್ಸವವನ್ನು ಗಾಂಧೀಜಿಯವರು ನಡೆಸಲಿದ್ದಾರೆ. ಈ ಸಮ್ಮೇಳನದಲ್ಲಿ ಪಾಕೀಸ್ತಾನ, ಅಫ್ಘಾನಿಸ್ಥಾನ, ಬರ್ಮಾ, ಸಿಲೋನ್, ಮಲಯಾ, ಸಯಾಂ, ಚೀನಾ, ಫಿಲಿಪ್ಪೈನ್, ಆಸ್ಟ್ರೇಲಿಯಾ, ನ್ಯೂಜೀಲೆಂಡ್ ಮೊದಲಾದ ೨೦ ರಾಷ್ಟ್ರಗಳು ಭಾಗವಹಿಸುವುವು.

Sri

GANESHA TALKIES

Morning Shows on 17, 18, 19, and 20 at 10-45 a.m.

Cinderella Jones

—: Starring :—

Joan Leslie, Robert Alda

Showing for the first time in Mysore

OPERA TALKIES

From 17-10-47 daily 3 shows

Roop-Nagar

—: Starring :—

JAYANT, RAJA RANI

Morning Shows from 17-1[illegible]

Greenwich Village

(Technicolor)

—: Starring :—

CARMEN MIRANDA, DON AMECHE, WILLIAM BENDIX

20th Century Fox Production

ದೇಶ ಸೇವಕರ ಪಟ್ಟಿ

ಮೈಸೂರು ಕಾಂಗ್ರೆಸ್ಸಿನ "ಮೈಸೂರು ಚಲೊ" ಚಳುವಳಿಯಲ್ಲಿ ಶಿಕ್ಷಿತರಾದ[illegible] ಮತ್ತು ಪೊಲೀಸರ ಗೋಲೀಬಾರಿನ ದುರಂತ[illegible] ಕಾಲದಲ್ಲಿ ದಸ್ತಗಿರಿಯಾದವರ ಬಿಡುಗಡೆಯು ಇನ್ನೂ ಆಗಿರುವುದಿಲ್ಲ. ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕು ಕಾಂಗ್ರೆಸ್ ಸಮಿತಿಯವರೂ ಮತ್ತು ಸಂಬಂಧಪಟ್ಟ ಇತರರು ಬಿಡುಗಡೆಯಾದವರ ಹೆಸರು, ವಿಳಾಸ ಮತ್ತು ದಸ್ತಗಿರಿಯಾದ ತಾರೀಖು ಮುಂತಾದ ವಿವರಗಳನ್ನೂ, "ಮೈಸೂರು ಚಲೊ" ಚಳುವಳಿಯಲ್ಲಿ ಬಂಧಿಸಲ್ಪಟ್ಟು ದೂರ[illegible] ದೇಶದಲ್ಲಿ ಬಿಡುಗಡೆ ಮಾಡಲ್ಪಟ್ಟವರ [illegible]ರು, ವಿಳಾಸಗಳನ್ನೂ ಇದೇ ೨೫ ನೇ [illegible] ಒಳಗಾಗಿ ತಮಗೆ ತಿಳಿಸಬೇಕೆಂದು [illegible]ಟ್ಟಣದಲ್ಲಿರುವ ಹಾಸನ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಆ[illegible] ಎಸ್. ಗುಂಡೂರಾವ್‌ಯ್ಯನವರು ಕೋ[illegible]ರುತ್ತಾರೆ.

ಸ್ವಾಭಿಮಾನಿಗಳ ಅಪಪ್ರಚಾರ ನಿಲ್ಲಲಿ

ಜವಾಬ್ದಾರಿ ಸರ್ಕಾರವು ಯಾವದೇ ಕೋಮಿನ ಉನ್ನತಿ ಅಥವಾ ಸ್ವಾರ್ಥ[illegible]ಗಲ್ಲ. ಎಲ್ಲಾ ಜನಗಳ ಅಭ್ಯುದಯ[illegible] ನಿಸ್ವಾರ್ಥತೆಯಿಂದ ದೇಶಸೇವೆ ನಡೆಸಿ, ಲೋಕದ ತಿಯನ್ನು ಗಳಿಸುವುದಕ್ಕೆಂದು ಸ್ವಾಭಿಮಾನಿಗಳು ಸ್ವಾಭಿಮಾನದಿಂದ ಪ್ರಚಾರ ಸಾಧಿಸಿದ ಪ್ರಾಂತೀಯ ವಿರೋಧ ತಿಳಿದುಕೊಳ್ಳಲಿ ಎಂದು ರಾಜಧಾನಿಯ ಡಿಸ್ಟ್ರಿಕ್ಟ್ ಬೋರ್ಡ್ ಶ್ರೀ ಎ. ಲಿಂಗಪ್ಪಯ್ಯರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅವಶ್ಯವಾಗಿ ಕಷ್ಟಪಟ್ಟು ಹೋರಾ[illegible]ಲ್ಲಿ ಭಾಗಿಗಳಾದ ವಿದ್ಯಾರ್ಥಿಗಳಿಗೆ ಹ[illegible] ವಿದ್ಯಾಭ್ಯಾಸ ಸೌಕರ್ಯ ಒದಗಿಸಬೇಕೆಂ[illegible] ಪರೀಕ್ಷೆಗಳನ್ನು ಒಂದೂ ವರೆ ತಿಂ[illegible]ಗಳವರೆಗೆ ಮುಂದಕ್ಕೆ ಹಾಕಬೇಕೆಂದೂ ಅವರು [illegible]ದ್ದಾರೆ

ಶ್ರೀ ಕೃಷ್ಣರಾಜೇಂದ್ರ ಮಿ[illegible] ಲಿಮಿಟೆಡ್, ಮೈಸೂರು

17 ನೇ ಅಕ್ಟೋಬರ್ 1947

ಟೆಂಡರು ನೋಟೀಸು

ಗಿರಣಿಯ ಲೇಬರ್ ಕಾಲೊನಿಯ[illegible]ವ ನಿವೇಶನದಲ್ಲಿ ಕೋಮುವಾರು [illegible] ಘಟ್ಟಗಳನ್ನು ಕಟ್ಟುವ ಬಗ್ಗೆ ಮೊ[illegible] ಟೆಂಡರುಗಳು 1947 ನೇ ಇಸವಿ ಅ[illegible]ಬರ್ ಮಾಹೆ 30 ನೇ ತಾರೀಖು [illegible]ಹ್ನ 4 ಗಂಟೆಯ ವರೆಗೆ ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಜನರಲ್ ಮ್ಯಾನೇಜರವರಿಂದ ಅಂಗೀಕರಿಸಲ್ಪಡುತ್ತವೆ.

ಟೆಂಡರುಗಳೊಡನೆ 60 ರೂ [illegible] ಠೇವಣಿಯಾಗಿ ಕೊಡಬೇಕು.

ವಿವರವಾದ ಅಳತೆ ಮತ್ತು ಪ್ಲ[illegible] ಪಟ್ಟಿಗಳನ್ನೂ ಮತ್ತು ಷರತ್ತುಗಳನ್ನೂ ಗಿರಣಿಯ ಕಛೇರಿಯ[illegible] ಮಾಡುವ ದಿನಗಳಲ್ಲಿ ಕಛೇರಿ ವೇಳೆ[illegible] ಪಡೆಯಬಹುದು.

ಟೆಂಡರು ಅಂಗೀಕಾರವಾದ ದಿ[illegible] ಎರಡು ತಿಂಗಳುಗಳೊಳಗಾಗಿ [illegible] ಪೂರೈಸ್ಬೇಕು.

೨೦ ಆರ್. ಶ್ರೀನಿವಾಸಯ್ಯ[illegible]

ಜನರಲ್ ಮ್ಯಾನೇಜರ್.

ಫೋನ್ ನಂ. 508 **WEEKLY EDITION** ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೨] ಭಾನುವಾರ ೧೯-೧೦-೪೭ [ಸಂಚಿಕೆ ೧೫

ಪಾಕಿಸ್ತಾನ್ ಪುಂಡರಿಂದ ಕಾಶ್ಮೀರದಲ್ಲಿ ಧಾಳಿ

ದೇಶಭಕ್ತರುಗಳ ದರ್ಬಾರನ್ನು ನಡೆಸಬೇಕು

ಮೈಸೂರು, ೧೯

ಶ್ರೀ ಅಗರಂ ರಂಗಯ್ಯನವರು ಈ ರೀತಿ ಬರೆಯುತ್ತಾರೆ -

ಈ ಸಾರಿ ಜಂಬೂ ಸವಾರಿ ಉತ್ಸವವ ನಿಲ್ಲಿಸಲಾಗಿದೆಯೆಂದು ಪ್ರಕಟವಾಗಿ ಇದು ಸಮಯೋಚಿತವಾದ ನಿರ್ಧಾರವು ಸಂಸ್ಥಾನದಲ್ಲಿ ಹೊಸ ಯುಗವು ಆರಂ ಭವಾಗುವ ಈ ಸಮಯದಲ್ಲಿ ಕರ್ನಾಟಕ ದ ನಾಡಹಬ್ಬದ ಅಂಗವಾದ ಈ ಉ ತ್ಸವವನ್ನು ಹೊಸ ರೀತಿಯಲ್ಲಿ ಆಚರಿಸು ವುದು ಯುಕ್ತವಾಗಿದೆ ನವರಾತ್ರಿ ಮ ಹೋತ್ಸವಕ್ಕೆ ಈ ಸಾರಿ ಒಂದು ಹೊಸ ಪ್ರ ಭಾವವು ಉಂಟಾಗಿರುತ್ತದೆ. ಆಹಾರದ ಅಭಾವ-ಮುಂತಾದ ಅಡಚಣೆಗಳಿರುವುದೇ ನಿಜ, ಆದರೂ ಕೇವಲ ಒಂದು ದಿನ ದ ಮಟ್ಟಿಗೆ ಉತ್ಸವವನ್ನು ನಡೆಸುವುದರಿಂ ದ ವಿಶೇಷ ತೊಂದರೆಯು ಆಗಲಾರದು.

ಈ ಉತ್ಸವವನ್ನು ಅತ್ಯಂತ ಸರಳ ರೀ ತಿಯಲ್ಲಿ ಆಚರಿಸಬಹುದು ಮಾಮೂಲಿ ನಲ್ಲಿ ನಡೆಯುತ್ತಿದ್ದ ಆಡಂಬರಗಳನ್ನು ಬಿಟ್ಟು ಮಾಡಿ ಅತ್ಯವಶ್ಯಕವಾದ ಏರ್ಪಾ ಡನ್ನು ಮಾಡಬಹುದು ಅದೇ ದಿನ ದ ಜವಾಬ್ದಾರಿಯನ್ನು ವಹಿಸುವ ಕಾಂಗ್ರೆಸ್ ನಾ ಯಕರುಗಳು ಉತ್ಸವದ ನೇತೃತ್ವದ ಹೊಣೆ ಯನ್ನು ವಹಿಸಿಕೊಳ್ಳಬೇಕು ಇದರಿಂದ ಪ್ರಜಾರಾಜ್ಯಾಂಗವು ಏರ್ಪಡಲಿರುವ ಈ ಸಮಯದಲ್ಲಿ ಪ್ರಜೆಗಳು ಪ್ರಭುಗಳಿಗೆ ತ ಮ್ಮ ಕೃತಜ್ಞತೆಯನ್ನೂ, ರಾಷ್ಟ್ರ ನಾಯಕ ರುಗಳ ಮೇಲಿನ ಒಲವನ್ನೂ ಪ್ರದರ್ಶಿಸಲು ಬಹಳ ಅನುಕೂಲವಾಗುವುದು

ವಿಜಯದಶಮಿಯು ವಿಜಯೋತ್ಸವದ ಸಂಕೇತಾರ್ಥವಾಗಿ ಆಚರಿಸಲ್ಪಡುವ ಹಬ್ಬ ಈ ಬಾರಿ ಸಂಸ್ಥಾನದಲ್ಲಿ ಇಂದು ಪ್ರಜಾ ಪ್ರಭುತ್ವಕ್ಕೆ ದಿಗ್ವಿಜಯವು ಲಭಿಸುತ್ತದೆ. ಶ್ರೀ ಮನ್ಮಹಾರಾಜರವರು ಸಾಂಕುಶ ಪ್ರಭು ತ್ವಕ್ಕೆ ಬದಲಾಗಿ ನೂತನ ಪ್ರಥೆಯಿಂದ ಶೋಭಿಸು ತ್ತಿದ್ದಾರೆ. ಈ ಶುಭ ಸಮಾರಂಭವನ್ನು ಸ್ಮರಣೀಯವಾಗಿ ನೆರವೇರಿಸುವ ಜವಾಬ್ದಾರಿ ಅದೇ ದಿನದಿಂದ ಜಾರಿಗೆ ಬರಲಿರುವ ಹೊಸ ಮಂತ್ರಿಮಂಡಳದ ಮೇಲೆ ಬಿದ್ದಿರು ತ್ತದೆ. ಈ ವಿಷಯಕ್ಕೆ ಕಾಂಗ್ರೆಸ್ ನಾ ಯಕರು ಕೂಡಲೇ ಗಮನ ಕೊಟ್ಟು ತಕ್ಕ ವ್ಯವಸ್ಥೆಯನ್ನು ಮಾಡುವುದು ಯುಕ್ತವಾ ಗಿದೆ.

ಇನ್ನೊಂದು ಅತಿ ಮುಖ್ಯವಾದ ವಿ ಷಯ. ಇದುವರೆಗೆ ನವರಾತ್ರಿ ಉತ್ಸವದ ಮಹಾನವಮಿಯ ದಿವಸ ಯೂರೋಪಿ ಯನ್ ದರ್ಬಾರು ನಡೆಯುತ್ತಿತ್ತು ಇದು ಈ ಪ್ರಭುತ್ವಕ್ಕೆ ಸಂಸ್ಥಾನವು ಅಧೀನವಾ ಗಿ ಪರಾವಲಂಬನದ ಚಿಹ್ನೆಯಾಗಿದ್ದಿತು ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಿ ರುವುದರಿಂದ ಸಂಸ್ಥಾನಗಳ ಪರಾವಲಂಬನೆ ತಪ್ಪಿ ಸಂಸ್ಥಾನಗಳಿಗೆ ಸ್ವತಂತ್ರ ಸ್ಥಾನವು ದೊರೆತಿ ದೆ. ಆದುದರಿಂದ ಈ ಸಾರಿ ಯೂ ರೋಪಿಯನ್ ದರ್ಬಾರು ನಡೆಯಬೇಕಾದ ಅವಶ್ಯಕತೆಯಿಲ್ಲ ಇದರ ಬದಲು ಆ ದಿನ ಶ್ರೀ ಮನ್ಮಹಾರಾಜರವರು ದೇಶಭಕ್ತರುಗಳ ದ ರ್ಬಾರನ್ನು ನಡೆಸಬೇಕೆಂಬುದೇ ನನ್ನ ನ ಮ್ರವಾದ ವಿನಂತಿ.

ಸಂಸ್ಥಾನಗಳ ಗುಲಾಮಗಿರಿಯನ್ನು ನಿ ರ್ಮೂಲಮಾಡಲು ಅಖಿಲ ಭಾರತದ ಕಾಂಗ್ರೆಸ್ಸಿ ನವರು, ತಮ್ಮ ಇಂದಿನ ಸ್ವತಂತ್ರ ಪ ಡೆಗಾಗಿ ಸಕಲ ರಾಜರುಗಳೂ ಅವರುಗ ಳಿಗೆ ಕೃತಜ್ಞರಾಗಿರಬೇಕು ಇಂದು ನ ಮ್ಮ ಸಂಸ್ಥಾನದಲ್ಲಿ ಪ್ರಭುತ್ವದವರಿಗೂ, ಪ್ರಜಾ ವರ್ಗದವರಿಗೂ ಉಂಟಾಗಿರುವ ಮಧುರ ಬಾಂಧವ್ಯದ ಒಪ್ಪಂದಕ್ಕೆ ಕಾರಣ ಕರ್ತರಾದವರು ಕಾಂಗ್ರೆಸ್ಸಿನವರು ಮತ್ತು ಕಾಂಗ್ರೆಸ್ಸಿಗೆ ಬೆಂಬಲಕೊಟ್ಟು ತ್ಯಾಗ ಮಾ ಡಿದ ವೀರ ದೇಶಭಕ್ತರು ಶ್ರೀಮನ್ಮಹಾ ರಾಜರವರಿಗೆ ಸಹಜವಾಗಿ ಇರಬೇಕಾದ ಸ್ಥಾನಮಾನಗಳನ್ನು ನೂತನ ರೀತಿಯಲ್ಲಿ ಪುನಃ ಪ್ರತಿಷ್ಠೆ ಮಾಡಿರುವವರು ಇವರು. ಇಂತಹ ಸಮಾಧಾನಕರವಾದ ಶುಭಪ್ರಸಂಗ ದ ಸನ್ನಿವೇಶವನ್ನು ಯೋಗ್ಯವಾದ ರೀತಿ ಯಲ್ಲಿ ಆಚರಿಸುವುದು ಅಗತ್ಯವಾಗಿದೆ.

ಮಹಾನವಮಿಯ ದಿನ ಯೂರೋಪಿ ಯನ್ ದರ್ಬಾರ್ ನಡೆಯುತ್ತಿದ್ದುದಕ್ಕೆ ಬದ ಲು ಈ ಸಾರಿ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ ರಾಷ್ಟ್ರವೀರರ ದರ್ಬಾರನ್ನು ಪ್ರ ಭುಗಳು ನಡೆಸಲಿ; ನವರಾತ್ರಿಯ ಕಡೆ ಯ ಮೂರು ದಿನಗಳಲ್ಲಿ ದರ್ಬಾರಿಗೆ ಬರು ವಂತೆ ಕಾಂಗ್ರೆಸ್ ಅಧ್ಯಕ್ಷರಿಗೂ, ನಾಯ ಕರುಗಳಿಗೂ ಆಹ್ವಾನವನ್ನು ಕಳುಹಿಸಲಾ ಗಿದೆ. ಇದೇ ರೀತಿ ಕಾಂಗ್ರೆಸ್ಸಿನ ಶಾಖಾ ಸಂಸ್ಥೆಗಳ ಪ್ರತಿನಿಧಿಗಳಿಗೂ ಮತ್ತು ಪ್ರಜಾ ಪ್ರತಿನಿಧಿ ಸಭೆ, ಶಾಸನ ಸಭೆ, ಸ್ಥಳೀಯ ಸಂಸ್ಥೆಗಳೇ ಮುಂತಾದುವುಗಳಲ್ಲಿರುವ ಕಾಂ ಗ್ರೆಸ್ ಸದಸ್ಯರುಗಳಿಗೂ ಮತ್ತು ಸತ್ಯಾಗ್ರ ಹ ಚಳುವಳಿಯಲ್ಲಿ ಪಾತ್ರವಹಿಸಿದ ವಿದ್ಯಾ ರ್ಥಿ, ಕಾರ್ಮಿಕ ಮತ್ತು ಇತರ ವರ್ಗಗಳ ಪ್ರತಿನಿಧಿಗಳಿಗೂ ಆಹ್ವಾನವನ್ನು ಕಳುಹಿಸ ಬೇಕು, ಅವರುಗಳೆಲ್ಲರೂ ಶುದ್ಧವಾದ ಖಾದಿ ಉಡುಪಿನಲ್ಲಿಯೇ ಬರಲು ಅವಕಾಶ ವನ್ನು ಕಲ್ಪಿಸಬೇಕು; ಹಳೇ ಮಾಮೂ ಲಿನ ದರ್ಬಾರ್ ಉಡುಪನ್ನು ಒತ್ತಾಯ ಪಡಿಸದೆ ಅವರಿಗೆ ವಿನಾಯಿತಿಯನ್ನು ಕೊ ಡಬೇಕು, ಈಗಾಗಲೇ ಕಾಂಗ್ರೆಸ್ ನಾ ಯಕರು ಪ್ರಭುಗಳೊಡನೆ ಭೇಟಿ ನಡೆಸಿ ದಾಗ ಉಡುಪಿನ ನಿರ್ಬಂಧದ ಹಳೆಯ ಪ ದ್ಧತಿಯು ಸಡಿಲಿಸಲ್ಪಟ್ಟು ಖಾದಿ ಬಟ್ಟೆಯ ಲ್ಲಿಯೇ ಅವರು ಅರಮನೆಗೆ ಹೋಗಿದ್ದರು. ಇದರಿಂದ ಹೊಸ ಪ್ರಕರಣವೇ ಸರಿ ಅದನ್ನೇ ಅನುಸರಿಸಿ ಖಾದಿ ಉಡುಪಿನಲ್ಲಿ ಯೇ ಬರಲು ಅವಕಾಶ ಕಲ್ಪಿಸುವುದು ವಿಹಿ ತವಾಗಿರುತ್ತದೆ ಐರೋಪ್ಯರಿಗೆ ಸಲ್ಲುತ್ತಿ ದ್ದ ವಿಶೇಷ ರಿಯಾಯಿತಿಯು ದೇಶಭಕ್ತ ರಿಗೆ ... ವುದು ಯುಕ್ತವಾಗಿರುತ್ತದೆ. ಹಾಗೆ ಮಾಡಿದರೆ ಇಡೀ ಪ್ರಜಾ ಕೋಟಿ ಯು ಮೆಚ್ಚುವುದರಲ್ಲಿ ಸಂದೇಹವಿಲ್ಲ.

ಇನ್ನೂ ಬಂಧನದಲ್ಲಿರುವವರ ಬಿಡುಗಡೆಗೆ ಒತ್ತಾಯ

ಕಮ್ಯೂನಿಸ್ಟ್ ನಾಯಕರಾದ ರಾಮನಾ ಥ್ ಮತ್ತು ಕಪೂರ್ ವೆಂಕಟರಾಯರುಗ ಳನ್ನು ಬಿಡುಗಡೆ ಮಾಡದಿರುವುದನ್ನು ಪ್ರ ತಿಭಟಿಸಿ ಹಲವು ವಿದ್ಯಾರ್ಥಿಗಳು ಮೊನ್ನೆ ಸುಬ್ಬರಾಯನ ಕೆರೆಯಲ್ಲಿ ನಡೆದ ಬಹಿರಂ ಗಸಭೆಯಲ್ಲಿ ಮಾಡಿದ ನಿರ್ಧಾರದಂತೆ ಆ ದಿನ ಬೈರಿನ ಮುಂದೆ ಪ್ರದರ್ಶನ ನಡೆಸುವ ಸಲುವಾಗಿ ಮಧ್ಯಾಹ್ನ ೩ ಗಂಟೆಗೆ ಸುಬ್ಬರಾ ಯನ ಕೆರೆಯಿಂದ ಜಿಲ್ಲಾಧಿಕಾರಿಗಳ ಮನೆ ಯ ಮಾರ್ಗಾಂತರ ಮೆರವಣಿಗೆ ಹೊರ ಡುವರು

ಮೇಲ್ಕಂಡ ಮುಖಂಡರ ಬಿಡುಗಡೆಯ ಬಗ್ಗೆ ವಿದ್ಯಾರ್ಥಿಗಳು ಸರ್ಕಾರದ ಶ್ರೀ ಕಾರ್ಯದರ್ಶಿಗಳಿಗೆ ಪತ್ರವೊಂದನ್ನು ಕೊ ಟ್ಟರೆಂದೂ, ಅವರ ತಮಗೆ ಸರಿ ವಿಚಾ ರವೇ ಗೊತ್ತಿಲ್ಲವೆಂದು ಹೇಳಿ ಆ ಬಗ್ಗೆ ಗ ಮನ ಕೊಡುವುದಾಗಿ ಉತ್ತರವಿತ್ತರೆಂದೂ ತಿಳಿದುಬಂದಿದೆ

ಆ ದಿನ ಸಂಜೆ ೬ ಗಂಟೆಗೆ ಟೌನ್ ಹಾ ಲಿನಲ್ಲಿ ಶ್ರೀ ಎಂ. ಎಸ್. ಶೇಷಯ್ಯನವರ ಅ ಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನೇರ್ಪ ಡಿಸಲಾಗಿದೆ ಶ್ರೀಗಳಾದ ಅಗರಂ ರಂಗಯ್ಯ ನವರು ... ನಾರಾಯಣ ಶೆಟ್ಟರು ಮತ್ತು ವಿಶ್ವವಾಣಿ ಪತ್ರಿಕೆಯ ಸಂಪಾ ದಕರಾದ ಶ್ರೀ ಜೆ. ಎಸ್. ಕೋಟ್ರಸ್ವಾ ಮಿಯವರು ಭಾಷಣ ಮಾಡುವರು.

ರಾಷ್ಟ್ರ ಧ್ವಜವಿಲ್ಲವೇ?

ಶ್ರೀರಂಗಪಟ್ಟಣ ೧೭

ದಸರಾ ಮಹೋತ್ಸವದ ಸಂಬಂಧವಾಗಿ ಎಲ್ಲ ಸರ್ಕಾರಿ ಭವನಗಳಮೇಲೆಯ ಮೈ ಸೂರು ಧ್ವಜದ ಜೊತೆಗೆ ಹಿಂದೂಸ್ಥಾನ ಧ್ವಜವನ್ನು ಹಾರಿಸಲಾಗುತ್ತಿದೆ. ಆದರೆ ಇಲ್ಲಿಯ ತಾಲ್ಲೂಕ ಕಛೇರಿಯ ಭವನದ ಮೇಲೆ ಮೈಸೂರು ಧ್ವಜವನ್ನು ಮಾತ್ರ ಹಾರಿಸಲಾಗಿದೆ ಅಧಿಕಾರಿಗಳು ಇದನ್ನು ಗಮನಿಸಿ ಇನ್ನಾದರೂ ಭಾರತ ಯೂನಿಯನ್ ಧ್ವಜವನ್ನು ಹಾರಿಸಲಿ-ಎಂದು ಕಾಂ ಗ್ರೆಸ್ ಸಮಿತಿಯವರು ಸೂಚಿಸಿದ್ದಾರೆ

ಇಂದಿನ ಆಡಳಿತ ಮಂಡಲಿಯವರೂ, ಮುಂದೆ ಬರಲಿರುವ ಕಾಂಗ್ರೆಸ್ ಪ್ರಭುತ್ವ ದವರೂ ಮೇಲ್ಕಂಡ ಅಂಶಗಳ ಬಗ್ಗೆ ಪ್ರ ಭುಗಳಿಗೆ ಸೂಕ್ತ ಸಲಹೆಗಳನ್ನು ಕೊಟ್ಟು ದರ್ಬಾರು ಸಮಾರಂಭವು ನಡೆಯುವಂತೆಯೂ ಮತ್ತು ದೇಶಭಕ್ತರುಗಳ ದರ್ಬಾರು ಜರು ಗುವಂತೆಯೂ ತಕ್ಕ ವ್ಯವಸ್ಥೆ ಮಾಡಬೇಕೆಂ ದು ಕೋರುತ್ತೇನೆ.

ಕಾಶ್ಮೀರದಲ್ಲಿ ಪಾಕಿಸ್ತಾನದವರ ಹಾವಳಿ

ಹೊಸ ರೀತಿಯ ಅಸ್ತ್ರ ಶಸ್ತ್ರಗಳಿಂದ ಸ ಜ್ಜಿತರಾದ ಪಾಕಿಸ್ತಾನದ ಸಹಸ್ರಾರು ಜನ ಕಾಶ್ಮೀರದ ಪೂಂಚ್ ಮತ್ತು ಮಿರ್‌ಪುರ ಮೊದಲಾದ ಉಪ ಸಂಸ್ಥಾನಗಳ ಮೇಲೆ ಧಾಳಿ ನಡೆಸಿದರೆಂದು ಕಾಶ್ಮೀರ ಸರ್ಕಾರದ ಪ್ರಕಟಣೆಯು ತಿಳಿಸುತ್ತದೆ ರಾವಲ್ಪಿಂಡಿ ಮತ್ತು ಸಯಾಲ್‌ಕೋಟೆಗಳಿಂದ ಕಾಶ್ಮೀ ರಕ್ಕೆ ಆಮದಾಗುತ್ತಿದ್ದ ಉಪ್ಪು, ಗೋಧಿ ಮತ್ತು ಪೆಟ್ರೋಲುಗಳನ್ನು ತಡೆಗಟ್ಟಲಾ ಗಿದೆ ಪಾಕಿಸ್ತಾನ್ ಸರ್ಕಾರವೂ ಮತ್ತು ಅ ದರ ರೇಡಿಯೋಗಳೂ ಸಂಸ್ಥಾನದ ವಿರು ದ್ಧವಾಗಿ ಅಪಪ್ರಚಾರ ಮಾಡುತ್ತಿವೆಯೆಂ ದೂ ಸಹ ಸೂಚಿಸಲಾಗಿದೆ. ಈ ಬಗ್ಗೆ ಭಾರತ ಸರ್ಕಾರದೊಡನೆ ಸಮಾಲೋಚನೆ ನಡೆಸಲು ಕಾಶ್ಮೀರದ ಪ್ರಧಾನಿಗಳು ಈ ದಿ ನ ದೆಹಲಿಗೆ ತೆರಳಿರುವರು.

ಹೈದರಾಬಾದಿನಲ್ಲಿ ಪಾಕಿಸ್ತಾನವೆ?

ಭಾರತ ಯೂನಿಯನ್ನಿನಿಂದ ಲಕ್ಷಾಂತ ರ ಸಂಖ್ಯೆಯಲ್ಲಿ ಮುಸ್ಲಿಮರು ಹೈದರಾಬಾ ದಿಗೆ ಬರುತ್ತಿದ್ದಾರೆ ಕಾಂಗ್ರೆಸ್ಸಿನ ಸತ್ಯಾ ಗ್ರಹದ ಕೇಂದ್ರಗಳಾದ ಪ್ರತಿಯೊಂದು ಪ್ರ ದೇಶವನ್ನು ಹೈದರಾಬಾದಿನ ಸೇನಾ ಪಡೆ ಯವರು ಧಾಳಿ ನಡೆಸಿ ಸ್ವಾಧೀನಪಡಿಸಿ ಕೊಳ್ಳುತ್ತಿದ್ದಾರೆ ಭಾರತ ಯೂನಿಯ ನ್ನಿನಿಂದ ಬರುವ ಮುಸ್ಲಿಮರನ್ನು ತಡೆಗ ಟ್ಟಬೇಕೆಂದೂ, ಮತ್ತು ಜವಾಬ್ದಾರೀ ಸ ರ್ಕಾರದ ಹೋರಾಟಕ್ಕೆ ನೆರವು ನೀಡಬೇ ಕೆಂದೂ ಹೈದರಾಬಾದ್ ಕಾಂಗ್ರೆಸ್ಸು ಕೇಂ ದ್ರ ಸರ್ಕಾರವನ್ನು ಪ್ರಾರ್ಥಿಸಿದೆ

LATEST NEWS

ಬಿಡುಗಡೆಯಾಯಿತು

ಮೈಸೂರು ೧೯

ಬಂಧನದಲ್ಲಿದ್ದ ಕಮ್ಯೂನಿಸ್ಟ್ ನಾಯಕ ರಾದ ಶ್ರೀಗಳು ಕಪೂರ್ ವೆಂಕಟರಾವ್ ಮತ್ತು ಬಿ. ಎಲ್. ರಾಮನಾಥರವರನ್ನು ಈ ದಿನ ಸಂಜೆ ೩ 30 ಗಂಟೆಗೆ ಖುಲಾಸೆ ಮಾಡಲಾಯಿತು

ದೇವರಿಗೆ ಹಂಡದ ನೈವೇದ್ಯ

ಹಾನಿನಿರೋಧವನ್ನು ಮದರಾಸ್ ಪ್ರಾಂತ ದಲ್ಲಿ ಜಾರಿಗೆ ತಂದಿರುವುದರಿಂದ ಮಲಬಾ ರಿನ ಹಲವು ದೇವಾಲಯಗಳಲ್ಲಿ ದೇವರಿಗೆ ಮಾಡುತ್ತಿದ್ದ ಹೆಂಡದ ನೈವೇದ್ಯಕ್ಕೆ ಅಡ ಚಣೆಯುಂಟಾಗಿದೆಯೆಂದು ವರದಿಯಾಗಿ ದೆ ದೇವಾಲಯಗಳಿಗೆ ಮಾತ್ರ ಏಗದಿ ಯಾದ ಪ್ರಮಾಣದಲ್ಲಿ ಪೂಜೆಗೆ ಬೇಕಾಗು ವ ಮದ್ಯವನ್ನು ಕೊಡಬಹುದೆಂದು ಜಿಲ್ಲಾ ಕಲೆಕ್ಟರುಗಳಿಗೆ ಪ್ರಾಂತ ಸರ್ಕಾರವು ಆಜ್ಞೆ ಮಾಡಿದೆ ಅದರಂತೆ ಉತ್ತರ ಮಲಬಾ ರಿನ ಪ್ರಖ್ಯಾತ ಪರಿಶಿನಿಕಡವು ದೇವಾಲಯ ಕ್ಕೆ ದಿನವೊಂದಕ್ಕೆ ಒಂದು ಸೀಸೆ ಮದ್ಯವ ನ್ನೂ ಮತ್ತು ಒಂದು ತೆಂಗಿನ ಮರದಿಂದ ಬರುವ ಹೆಂಡವನ್ನೂ ಕೊಡುವಂತೆ ಆಜ್ಞೆ ಮಾಡಲಾಗಿದೆ

ಸಂಗೀತ ಕಛೇರಿ

ನಾಳೆ ಸಂಜೆ ೫-೩೦ ಗಂಟೆಗೆ ಸಾಲಿಗ್ರಾ ಮದ ಮಹಾರಾಜಾ ಹೈಸ್ಕೂಲ್ ಹಾಲಿನಲ್ಲಿ ತಿರುಪತ್ತೂರಿನ ಶ್ರೀಮತಿ ಶೆಲಮ್ಮಾಳ್‌ರವರ ಹರಿಕಥೆಯನ್ನು ಸಾಕ್ತ ಪಕ್ಕವಾದ್ಯಗ ಳೊಡನೆ ಏರ್ಪಡಿಸಲಾಗಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ, ತಾ|| ೧೯-೧೦-೪೭ ರಿಂದ ೨೫-೧೦-೪೭ ರ ವರೆಗೆ

ಮೇಷ—ಆರೋಗ್ಯ ಕೆಡುತ್ತದೆ, ಮಾನಸಿಕ ಮತ್ತು ವ್ಯವಹಾರಿಕ ತೊಂದರೆ ಹೆಚ್ಚು, ವ್ಯಾಪಾರಾದಿಗಳಲ್ಲಿ ತೆರುಕುಳ ಹೆಚ್ಚು, ಅಧಿಕಾರಿ ವರ್ಗದವರಿಂದ ತಿರಸ್ಕಾರ, ಧನಾದಾಯ ಕಡಿಮೆ, ಖರ್ಚು ಹೆಚ್ಚು, ತಾ|| ೨೧, ೨೩ ಲಾಭ, ಪ್ರವಾಸ,

ವೃಷಭ—ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಸಾಧಾರಣ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸಹಾಯ, ಪ್ರವಾಸದಿಂದ ಅಗಘಾತ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ|| ೨೩, ೨೫ ಚಿಂತೆ, ನಷ್ಟ.

ಮಿಥುನ—ದೇಹಾರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಕಡಿಮೆ, ಧನಲಾಭ ಉತ್ತಮ, ಖರ್ಚು ಕಡಿಮೆ, ಔಷಧೋಪಚಾರಗಳಿಗಾಗಿ ಖರ್ಚು, ಬಂಧುಗಳ ಆಗಮನದಿಂದ ಸಂತೋಷ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ತಾ|| ೨೨, ೨೪ ಚಿಂತೆ ನಷ್ಟ

ಕಟಕ—ಆರೋಗ್ಯ ಉತ್ತಮ, ಧನಾದಾಯ ಚೆನ್ನಾಗಿರುತ್ತದೆ, ಉದ್ಯೋಗ, ವ್ಯಾಪಾರ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಖರ್ಚು, ಮಿತ್ರರ ಸಹಾಯದಿಂದ ಕೆಲಸಕಾರ್ಯಗಳಲ್ಲಿ ಜಯ, ತಾ|| ೨೧, ೨೪ ಅಶುಭವಾರ್ತೆ, ಕಲಹ, ಖರ್ಚು.

ಸಿಂಹ—ಆರೋಗ್ಯ ಸಾಧಾರಣ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳ ತೆರುಕುಳ ಹೆಚ್ಚು, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ಆರ್ಥಿಕ ಸ್ಥಿತಿ ಕೆಡುತ್ತದೆ, ಮಾನಸಿಕ ಚಿಂತೆ ಅಧಿಕವಾಗುವುವು, ತಾ|| ೨೨, ೨೪ ಅಕಸ್ಮಿಕ ಧನವ್ಯಯ. ಕುಟುಂಬದಲ್ಲಿ ಕಲಹ.

ಕನ್ಯಾ—ಆರೋಗ್ಯ ಉತ್ತಮ, ಧನಲಾಭ ಚೆನ್ನಾಗಿರುತ್ತದೆ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಜಯ, ಮೇಲ್ಪಟ್ಟವರಿಂದ ನೌಕರಿಯಲ್ಲಿ ಸನ್ಮಾನ, ಪ್ರವಾಸದಿಂದ ಮಿತ್ರ ದರ್ಶನ, ಪರೋಪಕಾರಕ್ಕಾಗಿ ಧನವ್ಯಯ, ತಾ|| ೨೧, ೨೪ ಲಾಭ, ಶಾಂತಿ

ತುಲಾ—ಆರೋಗ್ಯ ಸಾಧಾರಣ, ಆರ್ಥಿಕ ಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ನೌಕರಿಯಲ್ಲಿ ಅಧಿಕಾರಿಗಳಿಂದ ಮನ್ನಣೆ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೨೩, ೨೫ ಖರ್ಚು, ಚಿಂತೆ

ವೃಶ್ಚಿಕ—ಪ್ರಾಕೃತಿಕಸ್ಥಿತಿ ಸಾಧಾರಣ, ವ್ಯಾಪಾರ, ವ್ಯವಹಾರಗಳಲ್ಲಿ ತೆರುಕುಳ ಮತ್ತು ಮೋಸ, ಖರ್ಚು ಅಧಿಕ, ಅಧಿಕಾರಿ ವರ್ಗದವರಿಂದ ತಿರಸ್ಕಾರ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೨೦, ೨೨ ಲಾಭ, ಶಾಂತಿ.

ಧನುಸ್ಸು—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಮಾನಸಿಕ ಚಿಂತೆ ಕಡಿಮೆ, ಕೆಲಸಕಾರ್ಯಗಳಲ್ಲಿ ಅಡಚಣೆ, ವ್ಯಾಪಾರ,ವ್ಯವಹಾರಗಳಲ್ಲಿ ಶತ್ರುಗಳಿಂದ ತೆರುಕುಳ, ಖರ್ಚು ಮಿತಿಮೀರುವುದು, ತಾ|| ೨೧, ೨೪ ಲಾಭ, ಬಂಧು ದರ್ಶನ

ಮಕರ—ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಕಡಿಮೆ, ಖರ್ಚು ಅಧಿಕ,ಉದ್ಯೋಗ,ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರ ತಿರಸ್ಕಾರ, ನೌಕರಿಯಲ್ಲಿ ವಿಶೇಷ ತೆರುಕುಳ, ತಾ|| ೨೨, ೨೪ ಲಾಭ, ಪ್ರವಾಸ

ಕುಂಭ ಪ್ರಾಕೃತಿಕ ಸ್ಥಿತಿ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ವ್ಯಾಪಾರ, ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ತಾ|| ೨೩, ೨೫ ಚಿಂತೆ, ಅಪಘಾತ

ಮೀನ—ಆರೋಗ್ಯ ಚೆನ್ನಾಗಿರುತ್ತದೆ ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರ ಮತ್ತು ಮಿತ್ರರ ಸಹಾಯದಿಂದ ನೌಕರಿಯಲ್ಲಿ ಮನ್ನಣೆ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೨೧, ೨೪ ಖರ್ಚು, ಸಂತೋಷ

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಚೆಲ್ಡ್ರನ್ಸ್ ಪಾರ್ಕಿಗೆ ಬಿಚ್ಚಾ ಗಾಡಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲಿಕರುಗಳು ಪುಷ್ಟಿಕರವಾದ ಮತ್ತು ಸರಿಯಾದ ವಯಸ್ಸಿನ ಎತ್ತುಗಳನ್ನು ಬೆಲೆಗಾಗಿ ತಾ|| 31-10-47 ನೇ ಶುಕ್ರವಾರ ಸಾಯಂಕಾಲ 1 ಗಂಟೆಗೆ ಮುನಿಸಿಪಲ್ ಆಫೀಸಿಗೆ ಹಾಜರ್ ಮಾಡಬಹುದು ಮಿತಿಮಿ ನಿಸ್ಪರ್ಧೆಯಾದ ಕೂಡಲೇ ಮೊಬಲಗನ್ನು ಪಾವತಿ ಮಾಡಲಾಗುತ್ತದೆ

17-10-47 ಇ. ಅನಂತರಾವ್,
ಮೈಸೂರು ಸಿಟಿ ಪ್ರೆಸಿಡೆಂಟ್, ಚೀಫ್ ಆಫೀಸರ್

ರಾಜಕಮಲ್
17–10–47 ರಿಂದ
ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್‌ರವರ
ಜೀವನ್ ಯಾತ್ರ
(ಹಿಂದಿ)
—: ಭೂಮಿಕೆ —
ನಯನತಾರ, ಶಾಂತರೀ, ಬಾಬುರಾವ ಪೆಂಡಾರ್ಕರ್, ಯಾಕೂಬ್

ತಾ||17-10-47 ರಿಂದ
4 ದಿನಗಳು ಪ್ರತಿ ದಿನ ಪ್ರಾತಃಕಾಲ ೧೦ ೩೦ ಕ್ಕೆ
ಉಲ್‌ಝನ್
ಸರ್ದಾರ್ ಅಕ್ತರ್, ಅಂಜಲಿದೇವಿ, ಮುಜಹರ್ ಖಾನ್

ಹೈದರಾಬಾದ್ ಬೀರಾರ್ ಗಡಿ ಬಂದು

ಮಧ್ಯಪ್ರಾಂತ ಸರ್ಕಾರವು ಹೈದರಾಬಾದ್ ಮತ್ತು ಬೀರಾರ್‌ಗಡಿ ಪ್ರದೇಶವನ್ನು ಮುಚ್ಚಲು ಆಜ್ಞೆ ಮಾಡಿದೆಯೆಂದು ವರದಿಯಾಗಿದೆ ಅಕೋಲ ಜಿಲ್ಲೆಯಿಂದ ೧೬ ಮೈಲಿ ದೂರದಲ್ಲಿರುವ ಬಸೀಂ ಪ್ರದೇಶದಿಂದ ಜನ ಸಂಚಾರಕ್ಕೆ ಅಸ್ಪದವಿಲ್ಲದಾಗಿದೆ ಅಕೋಲ-ಬಾಸೀಂ ರಸ್ತೆಯು ಹೈದರಾಬಾದ್ ಸಂಸ್ಥಾನದ ನಾಂದೇಡ ಜಿಲ್ಲೆಯ ರಸ್ತೆಯನ್ನು ಸಂಧಿಸುವ ಗಡಿ ರಸ್ತೆಯಾಗಿದೆ

ಹೈದರಾಬಾದ್ ಬಗ್ಗೆ ಬಿಕ್ಕಟ್ಟು

ಮೊನ್ನೆ ಗೌರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರು ದೆಹಲಿಯಲ್ಲಿ ಹೈದರಾಬಾದ್ ನಿಯೋಗದವರೊಡನೆ ಸಮಾಲೋಚನೆ ನಡೆಸಿದರೆಂದು ವರದಿಯಾಗಿದೆ, ಹೈದರಾಬಾದು ಭಾರತ ಯೂನಿಯನ್ನಿಗೆ ಸೇರಕೂಡದೆಂದು ಅಲ್ಲಿಯ ಒಂದು ಮುಸ್ಲಿಂ ಸಂಸ್ಥೆಯು ವಿರೋಧವನ್ನು ವ್ಯಕ್ತಪಡಿಸಿದೆಯೆಂದೂ, ಆದರಿಂದ ಸಂಧಾನದಲ್ಲಿ ಬಿಕ್ಕಟ್ಟು ತಲೆದೋರಿದೆಯೆಂದೂ ತಿಳಿದು ಬಂದಿದೆ

ಜನವರಿ ೬ ನೇ ತಾ|| ಬರ್ಮಾ ರಿಪಬ್ಲಿಕ್ಕಿನ ಉದಯ

೧೯೪೮ ನೇ ಜನವರಿ ೬ ನೇ ತಾರೀಖು ಬರ್ಮಾ ಯೂನಿಯನ್ನಿನ ರಿಪಬ್ಲಿಕ್ ಸರ್ಕಾರದ ಆರಂಭವಾಗುವುದೆಂದು ಮೊನ್ನೆ ರಂಗೂನಿನಲ್ಲಿ ಸೇರಿದ್ದ ಬರ್ಮಾ ಮಂತ್ರಿ ಮಂಡಲವು ತಿಳಿಸಿದೆ ಬ್ರಿಟಿಷರಿಂದ ಅಧಿಕಾರವನ್ನು ವಾಪಸು ಪಡೆಯಲು ಈ ತಾರೀಖನ್ನು ಗೊತ್ತುಮಾಡಲಾಗಿದೆ

WOODLANDS
Morning shows from
17-10-47 for 4 days daily
at 10 30 a.m.
Warner Brothers Present
Three Strangers
—: with :—
Sydney Green Street,
Fitz Gerald and
Peter Lorre

OPERA TALKIES
From 17 10-47
daily 3 shows
Roop-Nagar
—: Starring :—
JAYANT, RAJA RANI

Morning Shows
from 17-10-47
Greenwich
Village
(Technicolor)
—. Starring :—
CARMEN MIRANDA,
DON AMCHE
WILLIAM BENDIX
20th Century fox Production

ಸಾರ್ವಭೌಮತ್ವವು ಇರುವುದು ಜನತೆಯಲ್ಲಿ

ಸಾರ್ವಭೌಮತ್ವವಿರುವುದು ಜನತೆಯಲ್ಲಿ ಅದು ಅವರಲ್ಲೇ ಶಾಶ್ವತವಾಗಿರಬೇಕೆಂದು ಸದ್ಯದಲ್ಲೇ ಮೈಸೂರಿನಲ್ಲಿ ನಿಯಮವಾಗಲಿರುವ ರಾಜ್ಯಾಂಗ ಸಭೆಯು ಘೋಷಿಸಬೇಕು ಎಂಬುದಾಗಿ ಆ|| ಭಾ|| ಸಂಸ್ಥಾನ ಪ್ರಜಾ ಪರಿಷತ್ತಿನ ಸ್ಟಾಂಡಿಂಗ್ ಕಮಿಟಿ ನಿರ್ಣಯ ಮಾಡಿದೆ. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪಿತವಾಗಿರುವುದನ್ನು ಸ್ವಾಗತಿಸಿ ನಿರ್ಣಯಮಾಡುತ್ತದೆ. ಆ ರೀತಿ ಘೋಷಿಸುವ ವರೆಗೆ ಪ್ರಜೆಗಳ ಆದರ್ಶವು ಸಂಪೂರ್ಣವಾಗಿ ಸಾಧಿಸಿದಂತಾಗುವುದಿಲ್ಲವೆಂದೂ ಸಹ ಆ ನಿರ್ಣಯದಲ್ಲಿ ತಿಳಿಸಲಾಗಿದೆ.

ಪುದುಕೋಟೆಯಲ್ಲಿ ಸತ್ಯಾಗ್ರಹ

ಪ್ರಜಾ ಸತ್ತಾತ್ಮಕ ರಾಜ್ಯಾಂಗವ ರೂಪಿಸುವ ತಮ್ಮ ಬೇಡಿಕೆಗೆ ಪುದುಕೋಟೆಯ ಮಹಾರಾಜರಿಂದ ಪ್ರತ್ಯುತ್ತರ ಬಾರದಿರುವುದರಿಂದ ನವೆಂಬರ್ ೧೫ ತಾರೀಖಿನಿಂದ ಅಹಿಂಸಾತ್ಮಕ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಪುದುಕೋಟೆ ಸಂಸ್ಥಾನದ ಕಾಂಗ್ರೆಸ್ ನಿರ್ಧರಿಸಿರುತ್ತ

ಎ. ಎಂ. ಸಿ. ಸಿ. ಅಧಿವೇಶನಕ್ಕೆ ಸಿದ್ಧತೆ

ಸತ್ಯಾಗ್ರಹದ ವಿಜಯಕ್ಕೆ ಯೋಗ್ಯವಾದ ರೀತಿಯಲ್ಲಿ ಎ. ಎಂ ಸಿ ಸಿ. ಯನ್ನು ಚಿತ್ರದುರ್ಗದಲ್ಲಿ ಸೇರಿಸಲು ಸಿದ್ಧತೆಗಳಾಗುತ್ತಿವೆ ನೂರಾರು ಸ್ವಯಂಸೇವಕ, ಸೇವಕಿಯರಿಗೆ ತರಪೇತಿ ಕೊಡಲಾಗುತ್ತಿದೆ. ಹೊಸದುರ್ಗದ ಮುಖಂಡರು ಅಧಿವೇಶನಕ್ಕೆ ೬ ಸಾವಿರ ರೂಪಾಯಿಗಳನ್ನು ಕೊಡುವುದಾಗಿ ವಚನ ನೀಡಿದ್ದಾರೆ

ವುಡ್‌ಲ್ಯಾಂಡ್ಸ್
17-10-47 ರಿಂದ
೪ ನೇ ವಾರ
ಪ್ರಕಾಶ್ ಪಿಕ್ಚರ್ಸ್‌ರವರ
ಅಮೋಘವಾದ ಚಲನ ಚಿತ್ರ
ನಯೀಮ್
(ಹಿಂದಿ)
—: ತಾರಾಗಣ :—
ರಂಜನ್ ಮತ್ತು ಜೀವನ್

ಬೇಕಾಗಿದೆ
ಇಂಗ್ಲಿಷು, ಕನ್ನಡ, ತೆಲುಗು, ಮತ್ತು ಸಂಸ್ಕೃತ ಭಾಷೆಗಳಲ್ಲಿ ಜ್ಞಾನವುಳ್ಳ ಅನುಭವವಿರುವ ಕಂಪಾಜಿಟರ್ ಬೇಕಾಗಿದ್ದಾರೆ
ಮೊಖ್ತಾ ವಿಚಾರಿಸಿ:—
ಪ್ರೊಪ್ರೈಟರ್,
ಶ್ರೀ ಕೃಷ್ಣ ಪವರ್ ಪ್ರೆಸ್,
ಲ್ಯಾನ್ಸ್‌ಡೌನ್ ಬಜಾರ್,
ಮೈಸೂರು

Edited printed and pub by A. R. Nagarajan at the

ಫೋನ್ ನಂ. ೮೮೮ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಸೋಮವಾರ ೨೦-೧೦-೪೭ [ಸಂಚಿಕೆ ೫೪

ಲೋಕಪಾವನಿ ನದಿ ಸೇತುವೆ ಕುಸಿಯಿತು

ನೂತನ ಮಂತ್ರಿಗಳ ಪಟ್ಟಿ

(ನಮ್ಮ ಫೋನ್) ಬೆಂಗಳೂರು ೨೦

ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಪೂರ್ಣವಾಗಿ ಪರ್ಯಾಲೋಚನೆ ನಡೆಸಿ ಹೊಸ ಮಂತ್ರಿಮಂಡಲದ ಪಟ್ಟಿಯನ್ನು ಸಿದ್ಧಪಡಿಸುವುದಾಗಿ ತಿಳಿದುಬಂದಿದೆ. ಕಾಂಗ್ರೆಸ್ಸಿನ ಪರವಾಗಿ ಶ್ರೀಗಳಾದ ಕೆ. ಸಿ ರೆಡ್ಡಿ, ಟಿ. ಭಾಷ್ಯಂ, ಹೆಚ್. ಸಿ. ದಾಸಪ್ಪ, ಹೆಚ್. ...ಯ್ಯ, ಟಿ. ಮರಿಯಪ್ಪ ಮತ್ತು ಆರ್. ...ಗರಾಮಯ್ಯನವರೂ, ಸ್ವತಂತ್ರರ ಪರವಾಗಿ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರೂ ಮತ್ತು ಮಿ॥ ಮಹಮ್ಮದ್ ಷರೀಫರೂ ಆರಿಸಲ್ಪಟ್ಟಿರುವರೆಂದು ಖಚಿತವಾಗಿ ತಿಳಿದುಬಂದಿದೆ.

ಇನ್ನು ಒಂದು ಸ್ಥಾನಕ್ಕೆ ಶ್ರೀಗಳಾದ ವಿ. ಡಿ. ಸುಬ್ಬರಾಮಶೆಟ್ಟಿ, ವಾಣಿಜ್ಯಸಂಘ ಅಧ್ಯಕ್ಷರಾದ ಎಂ. ರಾಮಯ್ಯ ಮತ್ತು ... ರಕ್ಷ ಮೈಬಾಸ್-ಇವರುಗಳ ... ಒಬ್ಬರನ್ನು ಆರಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಗಿದೆಯೆಂದು ಹೇಳಲಾ...

ಈ ದಿನ ಮಧ್ಯಾಹ್ನ ಕಾರ್ಯಕಾರಿ ಮಂಡಲಿಯು ಸೇರಿ ಕಾಂಗ್ರೆಸ್ಸಿನ ಅಂಗರಚನೆ ವಿಚಾರಗಳನ್ನು ಪರಿಶೀಲಿಸುತ್ತಿದೆ.

ಈ ದಿನ ಸಂಜೆ ಅಥವ ನಾಳೆ ಬೆಳಿಗ್ಗೆ ಕಾಂಗ್ರೆಸ್ ನಾಯಕರುಗಳು ರಾಜಧಾನಿಗೆ ...ವರು.

ರಾಜಧಾನಿಗೆ ಖಾಸಗೀ ಅಧ್ಯಕ್ಷರು

ಮೈಸೂರು ನಗರದ ಪೌರಸಭೆಗೆ ಚುನಾಯಿತ ಅಧ್ಯಕ್ಷರನ್ನು ಹೊಂದುವ ಬಗ್ಗೆ ಈ ... ಸರ್ಕಾರದವರು ಆಜ್ಞೆಯನ್ನು ಹೊರಡಿಸುವರೆಂದು ನಿರೀಕ್ಷಿಸಲಾಗಿದೆ.

...ಪ್ರದೇಶ ಎ ಎಂ ಸಿ ಸಿ ಅಧಿವೇಶನವು ಒಂದು ವಾರ ಮುಂದೆ ಹಾಕಲಾ...

...ಸಂಸ್ಥಾನದಲ್ಲಿ ಹೋರಾಟದ ತೆರಿಗೆಯನ್ನು ವಿಧಿಸಲು ಸರ್ಕಾರದವರು ಏರ್ಪಾಡು ಮಾಡುತ್ತಿದ್ದಾರೆ.

...ತನ ಸರ್ಕಾರಕ್ಕೆ ಬೆಂಬಲ

ಮೈಸೂರು ೨೦

ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀ ಎಂ ... ಜೋಯಿಸರ ಅಧ್ಯಕ್ಷತೆಯಲ್ಲಿ ಸೇರಿದ್ದ ...ಗ ಸಭೆಯಲ್ಲಿ ಬಂಧನದಿಂದ ಬಿಡುಗಡೆ ಹೊಂದಿದ ಕಮ್ಯೂನಿಸ್ಟ್ ನಾಯಕ ಶ್ರೀಗಳು ಬಿ ಎಲ್ ರಾಮನಾಥ, ... ವೆಂಕಟರಾವ್, ಹೆಚ್ ಎಸ್. ...ಸ್ವಾಮಿ ಮತ್ತು ಅಗರಂ ಸೂರ್ಯ...ಯಣ ಪಂಡಿತರೂ ಭಾಷಣ ಮಾಡಿ ... ಸತ್ಯಾಗ್ರಹದ ಹೋರಾಟ ಆರಂಭ... ಬಗ್ಗೆ, ಜನತೆಯು ಕೈಗೊಂಡ ಎಲ್ಲ ...ಯರ್ಕ್ರಮಗಳನ್ನು, ವಿದ್ಯಾರ್ಥಿಗ...ತ್ಯಾಗ, ಕಾರ್ಮಿಕರು ಮತ್ತು ಮಹಿ...ರು ವಹಿಸಿದ ಪಾತ್ರಗಳನ್ನೂ ಪ್ರಶಂ...ಈಗ ಲಭಿಸಿರುವ ಜವಾಬ್ದಾರೀ ಸರ್ಕಾ...ಪರಸ್ಪರವಾಗಿ ಕೆಲಸ ಮಾಡುವಂ...ಗೀರಿಂದರೆ ಪ್ರಜೆಗಳು ಎಚ್ಚರಿಕೆಯಿಂ... ಪ್ರತಿನಿಧಿಗಳು ತಪ್ಪು ದಾರಿಯಲ್ಲಿ ...ಗದಂತೆ ನೋಡಬೇಕೆಂದು ಅವರು ... ಜನೋಪಯೋಗಿ ಕೆಲಸಗಳಲ್ಲಿ ... ಬೆಂಬಲವನ್ನೂ ನೀಡಬೇಕು ಎಂ... ಹೇಳಿದರು. ... ...ಂದ ಸ್ವಾಮಿಯ ... ...ವೆಂದು ಪ್ರಾರ್ಥಿಸಿ...

ಏಷ್ಯಾ ರಾಷ್ಟ್ರಗಳ ಸಮ್ಮೇಳನ

ಮೈಸೂರು ಪ್ರತಿನಿಧಿ

ಮೈಸೂರು ೨೦

ಇದೇ ೨೭ ನೇ ತಾ॥ ದೆಹಲಿಯಲ್ಲಿ ನಡೆಯಲಿರುವ ಏಷ್ಯಾ ರಾಷ್ಟ್ರಗಳ ಪ್ರಾದೇಶಿಕ ಸಮ್ಮೇಳನಕ್ಕೆ ಮೈಸೂರು ಸರ್ಕಾರದ ಪರವಾಗಿ ವಾಣಿಜ್ಯ ಮತ್ತು ಕೈಗಾರಿಕಾ ಡೈರೆಕ್ಟರಾದ ಶ್ರೀ ಅಪ್ಪಾ ಡೆಸಿರೆ ಮೊದಲಿಯಾರ್‌ರವರು ಪ್ರತಿನಿಧಿಗಳಾಗಿ ಹೋಗುವರು

ಬ್ರಾಹ್ಮಣೇತರರಿಗೆ ಭೋಜನ

ನವರಾತ್ರಿ ಪ್ರಯುಕ್ತ ರಾಜಧಾನಿಯ ಹಲವು ಮೊಹಲ್ಲಾಗಳಲ್ಲಿ ಸಾರ್ವಜನಿಕ ಇದೇ ಮಾಹೆ ೨೧, ೨೩, ೨೫ ಮತ್ತು ೨೮ ನೇ ತಾ॥ ಗಳಲ್ಲಿ ಬ್ರಾಹ್ಮಣೇತರರಿಗೆ ಭೋಜನವನ್ನು ಕೋಮುವಾರು ವರ್ಗಗಳ ಪ್ರಕಾರ ಪೌರಸಭೆಯವರು ಏರ್ಪಡಿಸಿದ್ದಾರೆ.

೧೦ ವರ್ಷದ ಮಗುವಿನ ವಿಷಾದ ಮರಣ

ಮೈಸೂರು ೨೦

ನೆನ್ನೆ ರಾತ್ರಿ ಮೈಸೂರು ವಾಣಿವಿಲಾಸ ರಸ್ತೆಯಲ್ಲಿರುವ ಶ್ರೀ ಎಂ ಲಕ್ಷ್ಮೀನಾರಾಯಣಾಚಾರ್ಯರವರ ಹಿಂಭಾಗದ ಒಂದು ಮನೆಯಲ್ಲಿ ಶ್ರೀ ವಿಶ್ವೇಶ್ವರಭಟ್ಟರೆಂಬುವರ ೧೦ ವರ್ಷದ ಹೆಣ್ಣು ಮಗುವು ಬೊಂಬೆ ಆರತಿ ಮಾಡುವ ಸಂದರ್ಭದಲ್ಲಿ ಬಟ್ಟೆ ಹತ್ತಿಕೊಂಡು ಮೈ ಸುಟ್ಟಿತು. ಮಗುವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಗುಣವಾಗದೆ ಮಗುವು ಮೃತಪಟ್ಟಿತು

ವುಡ್‌ಲ್ಯಾಂಡ್ಸ್

17-10-47 ರಿಂದ

೪ ನೇ ವಾರ

ಪ್ರಕಾಶ್ ಪಿಕ್ಚರ್ಸ್‌ರವರ

ಅಮೋಘವಾದ ಚಲನ ಚಿತ್ರ

ನಯೀಮಾ

(ಹಿಂದಿ)

—: ತಾರಾಗಣ :—

ರಂಜನ್ ಮತ್ತು ವೀರಾ

ಲೋಕಪಾವನಿ ನದಿ ಸೇತುವೆ ಕುಸಿಯಿತು

ಮೈಸೂರು ೨೦

ಮೈಸೂರು ಬೆಂಗಳೂರು ರೈಲ್ವೆ ಲೈನಿನ ಫ್ರೆಂಚ್‌ರಾಕ್ಸ್-ಬ್ಯಾಡರಹಳ್ಳಿ ಮಧ್ಯೆ ಇರುವ ಲೋಕಪಾವನಿ ನದಿಯ ಸೇತುವೆಯು ವಿಪರೀತ ಮಳೆಯ ದೆಸೆಯಿಂದ ನಿನ್ನೆ ಮಧ್ಯರಾತ್ರಿ ಕುಸಿಯಿತು. ಮಧ್ಯದ ಕಂಬವೊಂದು ಕುಸಿದು ಬಿದ್ದು ರೈಲ್ವೆ ಸಂಚಾರಕ್ಕೆ ಅಡ್ಡಿಯಾಗಿದೆ. ಪ್ರಮಾದವು ಒದಗಿದಾಗ ಯಾವ ರೈಲೂ ಸೇತುವೆ ದಾಟುತ್ತಿರಲಿಲ್ಲವೆಂದೂ ರೈಲು ಓಡಾಡಲು ಒಂದು ವಾರವಾದರೂ ಆಗಬಹುದೆಂದೂ ರೈಲ್ವೆ ಅಧಿಕಾರಿಗಳು ತಿಳಿಸುತ್ತಾರೆ.

ಬೆಂಗಳೂರಿನಿಂದ ಮೈಸೂರಿಗೆ ಬರತಕ್ಕ ರೈಲಿನಲ್ಲಿ ಮಂಡ್ಯದವರಿಗೆ ಓಡಾಟಕ್ಕೆ ಅವಕಾಶವಿದೆಯೆಂದೂ ಟಪಾಲನ್ನು ಮಂಡ್ಯದಿಂದ ಆಚೆಗೆ ರವಾನಿಸಲು ಬೇರೆ ವ್ಯವಸ್ಥೆ ಮಾಡಲಾಗಿದೆಯೆಂದೂ ಹೇಳಲಾಗಿದೆ

ನಿನ್ನೆ ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ಕಡೆ ಹೊರಟ ರೈಲು ಸೇತುವೆಯ ಬಳಿ ಬರುತ್ತಲೇ ಅಲ್ಲಿದ್ದ ಕಾವಲುಗಾರನು ಕೆಂಪು ದೀಪವನ್ನು ಹಿಡಿದು ರೈಲನ್ನು ನಿಲ್ಲಿಸಿದನು. ನೋಡುವಲ್ಲಿ ಸೇತುವೆಯು ಕುಸಿದಿತ್ತು. ಈ ದಿನ ಮೈಸೂರಿನಿಂದ ಫ್ರೆಂಚ್ ರಾಕ್ಸ್‌ವರೆಗೆ ಮಾತ್ರ ರೈಲ್ವೆ ಓಡಾಟದ ವ್ಯವಸ್ಥೆ ಮಾಡಲಾಗಿದೆ.

UNIVERSITY OF MYSORE

No G 4. 277/47-48

Office of the University of Mysore,

Mysore, dated 17th Oct. 47

CIRCULAR

RE-OPENING OF COLLEGES

University Colleges and the Medical School will re-open on Monday the 27th October 1947, after the Dasara Holidays

BY ORDER,

(Sd) D. S. GORDON.

Registrar.

ಖೈದಿಗಳಿಗೆ ರಿಯಾಯಿತಿ ತೋರಬೇಕು

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ. ಚನ್ನಬಸಪ್ಪನವರು ಈ ರೀತಿ ಹೇಳಿಕೆಯನ್ನಿತ್ತಿದ್ದಾರೆ :-

ಸಂಸ್ಥಾನದ ಮೂಲೆ ಮೂಲೆಯಲ್ಲೂ ಹಬ್ಬವು, ಉತ್ಸಾಹಗಳ ವಾತಾವರಣವು ಎದ್ದು ಕಾಣುತ್ತಿದೆ. ಹಲವಾರು ವರ್ಗಗಳಿಂದ ವಿವಿಧ ಸಂತೋಷಗಳು ... ಮುಂದೆಯೂ ... ಪ್ರಜಾ ಸರ್ಕಾರದ ಈ ಸುಪ್ರಭಾವವು ಯಾರನ್ನು ತಾನೇ ಹುರಿದುಂಬಿಸುವುದಿಲ್ಲ? ಬಡವರು, ಭಾಗ್ಯವಂತರು, ರೈತರು, ಕೂಲಿಕಾರರು, ಹೆಂಗಸರು ಮತ್ತು ಗಂಡಸರೇ ಮೊದಲಾದ ದೇಶದ ಬಾಲವೃದ್ಧರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿದ್ದಾರೆ. ಪ್ರತಿಯೊಬ್ಬರ ಮುಖದಲ್ಲೂ ಆನಂದದ ಪ್ರಫುಲ್ಲವಾಗಿ ಸಂತೋಷವನ್ನು ಹೊರಸೂಸುತ್ತಿದೆ.

ಸ್ವಪಕ್ಷದವರೊಳ, ಅನೇಕ ವೈದಿಗ... ದಿಯಾಗಿ ಎಲ್ಲ ರಾಜಕೀಯ ಬಂದಿಗಳ ಬಿಡುಗಡೆ ಆಯಿತು. ಪ್ರತಿಬಂಧಕಾಜ್ಞೆಗಳೆಲ್ಲಾ ಹೊರಟುಹೋದುವು. ಪ್ರಜಾ ಸರ್ಕಾರ ಸ್ಥಾಪಿತವಾಗಿದೆ. ದೇಶಾದ್ಯಂತವೂ ಜನ ಸಂತೋಷಕ್ಕೆ ಪಾರವೇ ಇಲ್ಲ.

ಹೀಗಿರುವಾಗ ಒಂದು ಕಡೆಯ ಜನ ಮಾತ್ರ ಈ ಸಂತೋಷದಲ್ಲಿ ತಮಗೇನಾದರೂ ಭಾಗವುಂಟೇ ? ಎಂದು ಕಣ್ಣು ಕಣ್ಣು ಬಿಟ್ಟು ಎವೆ ಇಕ್ಕದೆ ನೋಡುತ್ತಲಿದ್ದಾರೆ. ಅವರೇ ನಮ್ಮ ನಾಡಿನ ನಿರ್ಭಾಗ್ಯ ಜನರು. ಜೈಲುಗಳಲ್ಲಿ ಕೊಳೆಯುತ್ತಿರುವ ಖೈದಿಗಳು. ಅವರೂ ನಮ್ಮವರೇ. ಅವರು ಇಂದು ಆ ಸ್ಥಿತಿಯಲ್ಲಿರುವುದಕ್ಕೆ ಸಂಪೂರ್ಣವಾಗಿ ಅವರೇ ಕಾರಣರಲ್ಲ. ನಮ್ಮ ದೇಶದ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಯೂ ಬಹು ಮಟ್ಟಿಗೆ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಇವರನ್ನು ಸಮಾಜಕ್ಕೆ ಅರ್ಹರನ್ನಾಗಿ ಮಾಡುವುದು ಭಾವಿ ಮೈಸೂರಿನ ಕರ್ತವ್ಯ.

ಈ ಸಂತೋಷದ ಮುಂಬೆಳಗಿನಲ್ಲಿ "ನಮಗೇನಾದರೂ ಕಿಂಚಿತ್ತು ಭಾಗವುಂಟೇ?" ಎಂಬ ಆರ್ತಧ್ವನಿ ಸೆರೆಮನೆಗಳ ಹಿಂದಿರುವ ಈ ದೌರ್ಭಾಗ್ಯ ಜನರಿಂದ ಕೇಳಬರುತ್ತಿದೆ. ಶ್ರೀಮನ್ಮಹಾರಾಜರೂ ಮತ್ತು ನಡುಗಾಲ ಸರ್ಕಾರದ ಮುಖ್ಯ ಮಂತ್ರಿಗಳೂ ಸಹ ಇತ್ತ ಕಡೆ ದೃಷ್ಟಿ ಗಮನಕೊಡುವುದು ಧರ್ಮ. ದೇಶದಲ್ಲಿ ನಡೆಯುವ ಮಹತ್ಕಾರ್ಯಗಳ ಸಮಾರಂಭದಲ್ಲಿ ಇಂತಹ ದೌರ್ಭಾಗ್ಯ ಜನರ ವಿಷಯದಲ್ಲಿ ಸಹಾನುಭೂತಿಯು ದಯಾಭಿಕ್ಷೆ ಮಾಡುವುದು ಒಂದು ಸಂಪ್ರದಾಯ. ಇದು ಮೈಸೂರಿಗೇನೂ ಹೊಸದಲ್ಲ. ಶ್ರೀಮನ್ಮಹಾರಾಜರೂ, ಹೊಸ ಸರ್ಕಾರದ ಮುಖ್ಯ ಮಂತ್ರಿಗಳೂ ಈ ವಿಷಯವನ್ನು ಪರ್ಯಾಲೋಚಿಸಿ ಕೂಡಲೇ ಅವರಿಗೆ ಸೂಕ್ತ ರೀತಿಯ ದಯಾಭಿಕ್ಷೆ ಮತ್ತು ರಿಯಾಯಿತಿಯನ್ನು ತೋರಿ ದೇಶದಲ್ಲಿ ಒದಗಿರುವ ಸಂತೋಷದಲ್ಲಿ ಅವರನ್ನೂ ಭಾಗಿಗಳನ್ನಾಗಿ ಮಾಡಬೇಕೆಂದು ... ಪ್ರಾರ್ಥಿಸುತ್ತೇನೆ.

ಮುಂದಿನ ವರ್ಷದ ಅಂತ್ಯದವರೆಗೂ ರೇಷನ್

... ನೇ ... ವರೆಗೂ ... ರೇಷನ್ ಪದ್ಧತಿಯನ್ನು ... ಮುಂದುವರಿಸಬೇಕೆಂದು ... ನಡೆದ ... ಭಾರತ ... ನಿರ್ಧರಿಸಿದ್ದಾರೆ.

ಕರ್ನಾಟಕ ಏಕೀಕರಣ ಸುಗಮವಾಯಿತು

(ಕೀರ್ತನ ಕೇಸರಿ ಶ್ರೀ ಬೇಲೂರು ಕೇಶವದಾಸರಿಂದ)

ಅನೇಕ ವರ್ಷಗಳಿಂದ ಕರ್ನಾಟಕದ ಏಕೀಕರಣಕ್ಕೆ ಬಾಧಕವಾಗಿದ್ದ ಜಟಿಲ ಸಮಸ್ಯೆ ಪರಿಹಾರವಾಯಿತು. ಮೈಸೂರು ಮಹಾರಾಜರು ಪ್ರಜೆಗಳಿಗೆ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ವಹಿಸಿ ಶಾಶ್ವತ ಗೌರವವನ್ನು ಸಂಪಾದಿಸಿದರು. ಮೈಸೂರು ಸಿಂಹಾಸನದಲ್ಲಿ ನಿಖಿಲ ಕರ್ನಾಟಕಕ್ಕೆ [illegible] ಪ್ರಾಶ್ಯಭಾವನೆಯುಂಟಾಯಿತು. ಮಹಾತ್ಮಾ ಗಾಂಧಿ ಮೊದಲಾದ ರಾಜಕೀಯ ಧುರೀಣರು ಮಹಾರಾಜರನ್ನು ಕೊಂಡಾಡಿದರು. ಗಣ್ಯರಲ್ಲಿ ಗಣ್ಯರಾದ ಆಂಧ್ರ ಶಿರೋಮಣಿ ಡಾ|| ಪಟ್ಟಾಭಿಯವರ ಬಾಯಿಂದ ನಿಖಿಲ ಕರ್ನಾಟಕಕ್ಕೂ ಮೈಸೂರು ಮಹಾರಾಜರನ್ನು ಸಾರ್ವಭೌಮರನ್ನಾಗಿ ಮಾಡುವೆವೆಂಬ ಉದ್ಗಾರ ಹೊರಟಿತು. ಇದಕ್ಕಿಂತ ಮಹಾರಾಜರಿಗಾಗಲೀ, ಅವರ ಪ್ರಜೆಗಳಿಗಾಗಲಿ ಹೆಮ್ಮೆಯ ವಾರ್ತೆಯಾವುದು?

೨೫೦ ಮೈಲಿ ಉದ್ದದ ಕರಾವಳಿ ಕರ್ನಾಟಕದ ಕರಾವಳಿಯಲ್ಲಿ ಮಲ್ಪೆ, ಭಟ್ಕಳ, ಕಾರವಾರಗಳಂಥ ಬಂದರು ಪಟ್ಟಣಗಳಾದ ಸ್ಥಳಗಳಿವೆ. ೩೦೦ ಮೈಲಿ ಉದ್ದ, ಸುಮಾರು ೧೦೦ ಮೈಲಿ ಅಗಲದ ಸಹ್ಯಾದ್ರಿಯ ಅರಣ್ಯ ಸಂಪತ್ತು ಕರ್ನಾಟಕದ್ದು. ಕೋಲಾರ ಮೊದಲಾದ ಸ್ಥಳಗಳಲ್ಲಿ ಬಂಗಾರ, ಭದ್ರಾವತಿಯಲ್ಲಿ ಕಬ್ಬಿಣ ದೊರೆಯುತ್ತಿರುವಂತೆ [illegible] ಪ್ರದೇಶ [illegible] ವಸ್ತುಗಳಲ್ಲಿ [illegible] ಗಳು ಹೇರಳವಾಗಿ ಗರ್ಭಗತವಾಗಿವೆ. ಮೈಸೂರಿಗಿಂತ ಅಧಿಕವಾದ ಅರಣ್ಯ ಸಂಪತ್ತು ಉತ್ತರ ಕರ್ನಾಟಕದಲ್ಲಿದೆ. ಅಲ್ಲಿ ಭೂಗರ್ಭದಲ್ಲಿ ಅಡಗಿರುವ ಖನಿಜ ಸಂಪತ್ತುಗಳ ಸಂಶೋಧನೆ ನಡೆಯಬೇಕಾಗಿದೆ. ಕೃಷ್ಣಾ, ಕಾವೇರಿ, ತುಂಗಭದ್ರೆಗಳಂಥ ಮಹಾ ನದಿಗಳೂ ಅನೇಕ ಉಪ ನದಿಗಳೂ ಕರ್ನಾಟಕದಲ್ಲಿವೆ. ಕಟ್ಟಬಹುದಾದ ಅಣೆಕಟ್ಟುಗಳನ್ನು ಕಟ್ಟಿ, ರಾಷ್ಟ್ರೀಯ ವ್ಯವಸಾಯವನ್ನು ರೂಢಿಗೆ ತಂದರೆ ಇರುವ ಪ್ರಜೆಗಳ ಜೊತೆಗೆ ಮತ್ತೊಂದು ಕೋಟಿ ಪ್ರಜಾ ಸಂಖ್ಯೆ ಬೆಳೆದರೂ ಅನ್ನಾಭಾವ ಕರ್ನಾಟಕಕ್ಕೆ ಆಗುವ ಸಂಭವವಿಲ್ಲ. ರೇಷ್ಮೆ, ಹತ್ತಿ ಮತ್ತು ಉಣ್ಣೆ ಬಟ್ಟೆಗಳ ಕಾರ್ಖಾನೆಗಳು ಹೇರಳವಾಗಿ ಬೆಳೆಯುತ್ತಿರುವುದರಿಂದ ವಸ್ತ್ರಾಭಾವ ಕರ್ನಾಟಕಕ್ಕಾಗುವ ಸಂಭವವೇ ಇಲ್ಲ. ಇಂತಹ ಪ್ರಾಕೃತಿಕ ಸಂಪತ್ತು ಭರತಖಂಡದ ಯಾವ ಪ್ರಾಂತಕ್ಕೂ ಇಲ್ಲ.

ರಾಜಕೀಯ ದೃಷ್ಟಿಯಿಂದ ನೋಡುವುದಾದರೆ ನಿಖಿಲ ಕರ್ನಾಟಕಕ್ಕೂ ಅಧಿರಾಜರಾಗಲಿರುವ ಮೈಸೂರು ಮಹಾರಾಜರು, ಯಾದವ ವಂಶದ ಅರಸರಾಗಿರುತ್ತಾರೆ. ಯದುವಂಶದ ಅರಸರು ಚಂದ್ರವಂಶೀಯರೆಂಬುದು ಪುರಾಣ ಪ್ರಸಿದ್ಧವಾಗಿದೆ. ಉತ್ತರ ಭಾರತದಲ್ಲಿ ಸೂರ್ಯ ವಂಶದ ಉದಯಪುರದ ಮಹಾರಾಜರಿಗಿರುವ ಗೌರವ, ದಕ್ಷಿಣ ಭಾರತದಲ್ಲಿ ಮೈಸೂರು ಮಹಾರಾಜರಿಗಿದೆ. ವಿಕ್ರಮಾರ್ಕಾದಿ ಸಾರ್ವಭೌಮರೂ, ವಿಜಯನಗರದ ಚಕ್ರೇಶ್ವರರೂ ಆರೋಹಣ ಮಾಡಿದ ಪವಿತ್ರ ಸಿಂಹಾಸನ ಮೈಸೂರಿನದಾಗಿದೆ. ಅದಕ್ಕೋಸ್ಕರವಾಗಿಯೇ ಕರ್ನಾಟಕಸ್ಥರೆಲ್ಲರೂ ಮೈಸೂರು ಮಹಾರಾಜರನ್ನು "ನಮ್ಮ ಅರಸರು" ಎಂದು ಹೆಮ್ಮೆಯಿಂದ ಅಭಿಮಾನ ತೋರಿಸುತ್ತಿದ್ದಾರೆ. ಇದಕ್ಕಿಂತ ಮಹಾರಾಜರಿಗೆ ಹೆಚ್ಚಿನ ಭಾಗ್ಯವಿನ್ಯಾವುದು?

ಧಾರ್ಮಿಕ ದೃಷ್ಟಿಯಿಂದ ನೋಡಿದರೆ ಭರತ ಖಂಡವನ್ನು ಕರ್ಮ ಪವಿತ್ರ ಭೂಮಿಯೆಂದು ತಿಳಿಯುವ ವಿವಿಧ ಮತಗಳ ಧರ್ಮ ಪೀಠಗಳೂ ಕರ್ನಾಟಕದಲ್ಲಿವೆ. ನಿಖಿಲ ಭಾರತಕ್ಕೂ ತತ್ವ ಶಾಸ್ತ್ರವನ್ನು ಕೊಟ್ಟ ದೇಶ ಕರ್ನಾಟಕವಾಗಿದೆ. ಉಡುಪಿ, ಗೋಕರ್ಣ, ಬೇಲೂರು, ಮೇಲುಕೋಟೆ, ನಂಜನಗೂಡು ಬಿಳಿಗಿರಿಗಳಂಥ ಪುಣ್ಯಕ್ಷೇತ್ರಗಳು ಕರ್ನಾಟಕದಲ್ಲಿವೆ.

ಭರತ ಖಂಡದ ಹಿಂದೂಸ್ಥಾನಿ, ಕರ್ನಾಟಕ ಸಂಗೀತ ಕಲೆಗಳೆರಡಕ್ಕೂ ಜನ್ಮದಾತರು ಕನ್ನಡಿಗರಾಗಿರುತ್ತಾರೆ. ಯಾವ ಭಾಷೆಯ ಕಾವ್ಯ ಸಂಪತ್ತಿನಂತಲೂ ಕರ್ನಾಟಕ ಕಾವ್ಯ ಸಂಪತ್ತು ಕಡಿಮೆಯಾಗಿಲ್ಲ. ಶಿಲ್ಪಕಲೆಯ ಪರಮಾವಧಿಯನ್ನು ತೋರಿಸುವ ಬೇಲೂರು, ಹಳೆಬೀಡು, ಶ್ರವಣಬೆಳಗೊಳಗಳಂತಹ ಪ್ರದರ್ಶನ ಸ್ಥಾನಗಳು ಕರ್ನಾಟಕದಲ್ಲಿದ್ದು ಕನ್ನಡಿಗರ ಹೆಮ್ಮೆ [illegible]ನಿಸಿವೆ.

ಎಲ್ಲದ್ದರೂ ಕನ್ನಡಿಗರು ಸ್ವಭಾವ [illegible]ರಿಸಿಕೊಂಡಿದ್ದಾರೆ. ಕನ್ನಡಿಗರ [illegible] ಔದಾರ್ಯಗಳು ದೇಶ ದೇಶಗಳಲ್ಲಿ [illegible]ದಂತೆ ಗಾಢದೆಯಾಗಿ [illegible].

ಶಾಂತಿಯುತ ಸತ್ಯಾಗ್ರಹದಿಂದ [illegible] ಗಳಾದ ದೇಶಧುರೀಣರೇ! ವಿಜಯದ [illegible]ಯೆಂದು ನೀವು ರಾಜ್ಯ ಸೂತ್ರವಹಿಸುವ [illegible]ಲೇ ನಿಮ್ಮ ಪೀಠಯೋನೆಂಬುದನ್ನು [illegible] ಮಹಾತ್ಮಾ ಗಾಂಧಿಯವರ ಜಾತಿರಹಿತ [illegible]ವಾದದಲ್ಲಿ ಮಾತ್ರ ಜಾತಿಯು ಶ್ರ[illegible]ನ್ನು ಕಡಬೇಡಿರಿ. ಆಡಳಿತದ ಜವಾಬ್ದಾರಿ [illegible]ಂ ಬಹಳವಾಗಿರುವುದರಿಂದ ಅರ್ಹ[illegible] ಅಧಿಕಾರದಾತೆಯೆಂಬುದನ್ನು ತಿಳಿಯಿರಿ. ರಾಷ್ಟ್ರಕ್ಕಾಗಿ ವಿಶೇಷ ಬಲಿ[illegible] ಮಾಡಿದ ಯುವಕರೇ, ಕಾರ್ಮಿಕರೇ [illegible] ರಕ್ತದ ಉತ್ಸಾಹ ಉದ್ರೇಕಕ್ಕೊಳ[illegible] ಭಾವೀ ಸರ್ಕಾರಕ್ಕೆ ಸಹಕಾರ ನೀಡಿರಿ.

ಭರತ ಮಾತೆಯ ಸೌಂದರ್ಯ [illegible] ಪದಂತಿರುವ ಕರ್ನಾಟಕವು ಏಕ[illegible] ಗಬೇಕು. ಬೃಹತ್ಕರ್ನಾಟಕದ [illegible] ಭೌಮರು ಮೈಸೂರು ಮಹಾರಾಜರಾಗ ಬೇಕು. 'ಅಶಿ, ಮೋಹ, ಭಯ' [illegible] ಬ ಅವರಣತ್ರಯಗಳಿಂದ ಆಚ್ಛಾದಿತ[illegible]ವ್ವ ಮಹಾರಾಜರ ಪ್ರಥಮಾವರ[illegible] ದ್ವಿತೀಯ ತೃತೀಯ ಆವರಣಗಳ [illegible] ಕೆಯಾಗಬೇಕು. ರಾಜರು ಮುಕ್ತ[illegible]ದ್ಧ ದರ್ಶನದಂತೆ [illegible] ಪ್ರಜೆಗಳಿಗಾಗಬೇಕು. [illegible] ಧಾರಿ [illegible]

ರಾಜಕಮಲ್

17—10—47 ರಿಂದ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ್‌ರವರ

ಜೀವನ್ ಯಾತ್ರ

(ಹಿಂದಿ)

—: ಭೂಮಿಕೆ :—

ನಯನತಾರೆ, ಶಾಂತರಿ, ಬಾಬುರಾವ ಪೆಂಡಾರ್ಕರ್, ಯಾಕೂಬ್

From 21-10-47 for 4 days

Daily at 10.30 a. m.

"Bowery to Broadway"

—: WITH :—

Maria Montez, Susanna Foster, Jack Oakie, Turhan Bey

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ವೆಲ್ಫ ಇಲಾಖೆಗೆ ಕಚಡಾ ಗಾಡಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲೀಕರುಗಳು ಪುಷ್ಟಿಕರವಾದ ಮತ್ತು ಸರಿಯಾದ ವಯಸ್ಸಿನ ಎತ್ತುಗಳನ್ನು ಬೀಕರಿಗಾಗಿ ತಾ|| 31-10-47 ನೇ ಶುಕ್ರವಾರ ಸಾಯಂಕಾಲ 4 ಗಂಟೆಗೆ ಮುನಿಸಿಪಲ್ ಆಫೀಸಿಗೆ ಹಾಜರ್ ಪಡಿಸಬಹುದು. ಖರೀದಿ ನಿಷ್ಕರ್ಷೆಯಾದ ಕೂಡಲೇ ಮೊಬಲಗನ್ನು ಪಾವತಿಮಾಡಲಾಗುತ್ತದೆ.

17-10-47 ಇ. ಅನಂತರಾವ್,

ಮೈಸೂರು ಸಿಟಿ ಹೆಲ್ತ್ ಆಫೀಸರ್.

ಬೇಕಾಗಿದೆ

ಇಂಗ್ಲಿಷು, ಕನ್ನಡ, ತೆಲುಗು, [illegible] ಮತ್ತು ಸಂಸ್ಕೃತ ಭಾಷೆಗಳಲ್ಲಿ ಕಾಂ[illegible]ಸಗಳ ಅನುಭವವಿರುವ ಕಂಪಾಜಿಟರ್ ಬೇಕಾಗಿದ್ದಾರೆ.

ಮೊಖ್ತಾ ವಿಚಾರಿಸಿ :—

ಪ್ರೊಪ್ರೈಟರ್,

ಶ್ರೀ ಕೃಷ್ಣಾ ಪವರ್ ಪ್ರೆಸ್,

ಅಶೋಕ ರೋಡ್ ಬಜಾರ್,

ಮೈಸೂರು

Edited printed and pub[lished] by A. R. Nagarajan at the [P]ress P. Subbaiah Road Mysor[e]

ಶ್ರೀ ಕೃಷ್ಣರಾಜೇಂದ್ರ, ಮತ್ತು ಚೆಲುವಾಂಬಾ ಆಸ್ಪತ್ರೆ ಸೆಕ್ರಟರಿಯವರ ಆಫೀಸು, ಮೈಸೂರು

ಟೆಂಡರ್ ನೋಟೀಸು

ಮೈಸೂರು ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆಗಳಿಗೆ 1948ನೇ ಇಸವಿ ಜನವರಿ 1 ನೇ ತಾರೀಖು ಮೊದಲ್ಗೊಂಡು 1948 ನೇ ಇಸವಿ ಡಿಸೆಂಬರ್ 31 ಕ್ಕೆ ಅಂತ್ಯವಾಗುವ ಒಂದು ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳಿಗೆ ನಾಲ್ಕು ಪ್ರತಿಗಳುಳ್ಳ (ಫೂಲ್ಸ್ ಕ್ಯಾಪ್ ಸೈಜ್) ಮೊಹರಾದ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆಗಳ ಸೆಕ್ರೆಟರಿಯವರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ತಮ್ಮ ಆಫೀಸಿನಲ್ಲಿ 1947 ನೇ ಇಸವಿ ನವೆಂಬರ್ ಮಾಹೆ 3 ನೇ ತಾರೀಖು ಸೋಮವಾರ ದಿವಸ ೧೧ ಗಂಟೆಗೆ ತೆಗೆದುಕೊಳ್ಳುತ್ತಾರೆ.

೧) ಮೇಲ್ಕಂಡ ಆಸ್ಪತ್ರೆಗಳಿಗೆ ಬೇಕಾಗುವ [illegible] ಸಾಮಾನುಗಳು ಮತ್ತು [illegible] ಸಾಮಾನುಗಳು.

೨) ಮೇಲ್ಕಂಡ ಆಸ್ಪತ್ರೆಗೆ ಬೇಕಾಗುವ ಬಿಳಿ ಬಟ್ಟೆ

೩) [illegible] ಆಸ್ಪತ್ರೆಗೆ ಬೇಕಾಗುವ ಹಸುವಿನ ಹಾಲು.

[illegible] 1947 ನೇ ಇಸವಿ ಅಕ್ಟೋಬರ್ 9 ನೇ ತಾರೀಖು [illegible] 6 ನೇ ಭಾಗದ [illegible] ನೇ ಪುಟದಲ್ಲಿ ಪ್ರಕಟವಾಗಿರುವ [illegible] ನೋಟಿಫಿಕೇಶನ್ ನೋಡಬಹುದು. ಸದರಿ ಸೆಕ್ರೆಟರಿಯವರ ಆಫೀಸಿನಲ್ಲಿ [illegible] ನೋಟಿಫಿಕೇಷನ್ ಮತ್ತು ಇತರ ವಿವರಗಳನ್ನು ಪಡೆಯಬಹುದು.

(ಸಹಿ) ಪಿ. ಮೂರ್ತಿ, ಸೆಕ್ರೆಟರಿ,

ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆ, ಮೈಸೂರು.

University of Mysore

Notification No G 4. 1180/46-47

Office of the Univers[ity]
of Mysore, Mysore
Dated 8th October 1[947]

CONVOCATION, 1947.

In modification of this office Notification No 1180/46-47 dated 15th July, 1947, it is hereby no[tified] that under Statute 78 degrees will be conferred [this y]ear in absentia without the holding of a C[onvo]cation.

A separate communication will be addres[sed to] the candidates who have applied for degrees this [year].

By Order,

D. S. GORDON

Registr[ar]

ಫೋನ್ ನಂ. 508 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೨೧-೧೦-೪೭ [ಸಂಚಿಕೆ ೫೭

ಈ ದಿನ ಪ್ರಭುಗಳಿಗೆ ಸಚಿವರ ಪಟ್ಟಿ ಅರ್ಪಣೆ

ಕಾಂಗ್ರೆಸ್ ಅಧ್ಯಕ್ಷರ ಆಗಮನ

ಮೈಸೂರು ೨೧

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಶ್ರೀಗಳಾದ ಎಸ್. ಚೆನ್ನಯ್ಯ ಮತ್ತು ಕೆ. ಆರ್. ಪೂರ್ಣಯ್ಯ (?) ನವರ ನಿನ್ನೆ ರಾತ್ರಿ ರಾಜಧಾನಿಗೆ ಆಗಮಿಸಿದರು. ಶ್ರೀಗಳಾದ ಹೆಚ್. ಸಿ. ದಾಸಪ್ಪ, ಮಂಜಪ್ಪ ಮತ್ತು ಎಂ. ಎಲ್. ನಂಜುಂಡ ಅರಸಿನವರು ಬಂದಿರುವರು. ಈ ದಿನ ಬೆಳಿಗ್ಗೆ ೧೧-೩೦ ಗಂಟೆಗೆ ಅಧ್ಯಕ್ಷರು ದಿವಾನರನ್ನು ಭೇಟಿ ಮಾಡಿ, ಮಂತ್ರಿಮಂಡಲ ರಚನೆ ಬಗ್ಗೆ ಮಾತುಕತೆ ನಡೆಸಿದರು. ಮಂತ್ರಿಮಂಡಲದ ಪಟ್ಟಿಯನ್ನು ಈ ದಿನ ಶ್ರೀ ಪ್ರಭುಗಳಿಗೆ ಒಪ್ಪಿಸಬಹುದೆಂದು ಹೇಳಲಾಗಿದೆ.

ಕಾಂಗ್ರೆಸ್ ಅಧ್ಯಕ್ಷರು ಈ ದಿನ ರಾತ್ರಿ ಬೆಂಗಳೂರಿಗೆ ವಾಪಸು ತೆರಳುವರು.

ವಯಸ್ಕರ ಶಿಕ್ಷಣ ಸಮಿತಿ

ಮೇಲ್ಕಂಡ ಸಮಿತಿಯ ಆಶ್ರಯದಲ್ಲಿ ಹರಿಜನ ಜನಾಂಗದವರಿಗೆ ವಯಸ್ಕರ ಶಿಕ್ಷಣ ವಿಷಯದಲ್ಲಿ ಒಂದು ಶಿಬಿರವನ್ನು ಈ ತಿಂಗಳ ೮ ಮತ್ತು ೧೯ ನೆಯ ತಾ॥ ಏರ್ಪಡಿಸಲಾಗಿತ್ತು. ಶ್ರೀಗಳಾದ ಟಿ. ಕೃಷ್ಣಮೂರ್ತಿ, ಎಸ್. ವಿ. ಶ್ರೀನಿವಾಸರಾವ್, ಆರ್. ನಾಗಪ್ಪ, ಶ್ರೀಮತಿ ಸೀತಮ್ಮನವರು ಮತ್ತು ಇನ್ನೂ ಅನೇಕರು ಭೇಟಿಯಿತ್ತು ಶಿಬಿರವಾಸಿಗಳಿಗೆ ಸೂಕ್ತವಾದ ಹಿತವಚನಗಳನ್ನಿತ್ತರು. ಶ್ರೀ ಚಿಕ್ಕಲಿಂಗಯ್ಯನವರು ಜನಾರ್ದನ ಸರ್ಕಾರದಲ್ಲಿ ವಯಸ್ಕರ ಶಿಕ್ಷಣದ ಆವಶ್ಯಕತೆ ಮತ್ತು ಹರಿಜನರು ವಹಿಸಬೇಕಾಗಿರುವ ಪಾತ್ರವನ್ನು ವಿವರಿಸಿದರು.

ಸಹಕಾರ ನೌಕರರ ಸಮ್ಮೇಳನ

ಮೈಸೂರು ನಗರದ ಸಹಕಾರ ಸಂಘಗಳ ನೌಕರರು ಇದೇ ೨೬ ನೇ ತಾ॥ ಶುಕ್ರವಾರ ತಮ್ಮ ಸಮ್ಮೇಳನವೊಂದನ್ನು ಸಹಕಾರ ಭವನದಲ್ಲಿ ಏರ್ಪಡಿಸಿದ್ದಾರೆ. ಶ್ರೀ ಆರ್. ನರಸಿಂಹ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸುವರು.

ಭಾಷಣ

ಮಳವಳ್ಳಿ ತಾಲ್ಲೂಕು ಪ್ರೋಗ್ರೆಸಿವ್ ಫ್ರೆಂಡ್ಸ್ ಕೂಟದ ಆಶ್ರಯದಲ್ಲಿ ೨೬ ನೇ ಭಾನುವಾರ ಸಂಜೆ ಶ್ರೀಗಳಾದ ಎಂ. ಜೋಯಿಸ್ ಮತ್ತು ಬಾಲಹಳ್ಳಿ ಸೀತಾರಾಮಯ್ಯನವರು "ಈಗಿನ ಪರಿಸ್ಥಿತಿಯಲ್ಲಿ ಮಾನವನ ಕರ್ತವ್ಯವೇನು ?" ಎಂಬ ವಿಷಯದಲ್ಲಿ ಭಾಷಣ ಮಾಡುವರು.

ರಾಷ್ಟ್ರ ಧ್ವಜವೇಕಿಲ್ಲ ?

ಮೈಸೂರು ಪೌರಸಭೆಯ ಕಟ್ಟಡದ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಿಲ್ಲವೇಕೆ? ಎಲ್ಲರೂ ಕಾಂಗ್ರೆಸ್ ಸದಸ್ಯರೇ ಇದ್ದರೂ ದೀಪಾವಳಿ ಸಂತೋಷದ ಉತ್ಸವದಲ್ಲಿ ಇ... ಮರೆತಂತೆ ಕಾಣುತ್ತದೆ. ಒಬ್ಬರ ಸ್ಥಿತಿಯೂ ಹೀಗೆಯೇ ಆಗುವುದು ಎಂದು ಶ್ರೀ ಎಸ್. ಜಿ. ಶನ್ನರಾಜಯ್ಯ... ಪ್ರಶ್ನಿಸಿರುತ್ತಾರೆ.

ಧ್ವಜಾರೋಹಣ

ನಿನ್ನೆ ನಡೆದ ನವಯುವಕ ಪ್ರಗತಿ ಸೇವಾ ಸಮಾಜದ ಆಶ್ರಯದಲ್ಲಿ ... ಬೆಳಿಗ್ಗೆ ಟೌನ್‌ಹಾಲ್ ಮೈದಾನದಲ್ಲಿ ... ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ನಿಟ್ಟೂರು ಎಂ. ಚೆನ್ನಬಸಪ್ಪನವರಿಂದ ... ಧ್ವಜಾರೋಹಣ, ಕಾಂಗ್ರೆಸ್ ಮಂ... ಶ್ರೀ ಎಂ. ಎನ್. ಜೋಯಿಸರಿಂದ ... ಧ್ವಜವೂ ಹಾರಿಸಲ್ಪಟ್ಟವು.

ಪೋಲೀಸು ನೌಕರರ ವೇತನ

ನಮ್ಮ ಸರ್ಕಾರದವರು ಸಂಸ್ಥಾನದ ಕೆಳದರ್ಜೆ ನೌಕರರ ಸಂಬಳ ಸಾಧನೆಗಳನ್ನು ಹೆಚ್ಚಿಸಿ ಕೀರ್ತಿಶಾಲಿಗಳಾಗಿರುತ್ತಾರಷ್ಟೆ. ಈಗಿರುವ ರೀತ್ಯಾ ಗ್ರಾಜುಯೇಟುಗಳು ಯಾವುದೇ ಇಲಾಖೆಯಲ್ಲಾದರೂ ೬೦-ರೂ ನಿಂದ ಪ್ರಾರಂಭಿಸಲ್ಪಟ್ಟು ೬೦-೫-೯೦-EB ೬೦-೧೫೦ ರೂ. ಗ್ರೇಡಿನಲ್ಲಿರುವರು. ಮತ್ತು ಸರ್ಕಾರದಲ್ಲಿ ಪ್ರತಿ ಇಲಾಖಾವಾರು S S L C ವಿದ್ಯಾ ಅರ್ಹತೆಯನ್ನು ಪಡೆದಿರುವವರನ್ನೇ ಪ್ರತ್ಯೇಕವಾಗಿ ಪರಿಶೀಲಿಸಿ ೪೦-೩-೫೦—E B ೬-೮೦ ಗ್ರೇಡು ಕೊಡಲ್ಪಟ್ಟಿದೆ. ಇದರಿಂದ ಎಲ್ಲಾ ಇಲಾಖೆಗಳಲ್ಲೂ ಸಾಮಾನ್ಯವಾಗಿ S S L.C. ಅರ್ಹತೆಯುಳ್ಳವರು ಈ ಗ್ರೇಡನ್ನು ಪಡೆಯುವರೆಂದು ಭಾಸವಾಗುತ್ತದೆ. ಆದರೆ ಪೋಲೀಸು ಇಲಾಖೆಯಲ್ಲಿ ಮಾತ್ರ ಈ ಬಗ್ಗೆ ವ್ಯತ್ಯಾಸ ಕಂಡು ಬರುತ್ತದೆ. ಇಲ್ಲಿ ಮಿನಿಸ್ಟೀರಿಯಲ್ ಶಾಖೆಯಲ್ಲಿರುವವರು S,S,L,C. ಅರ್ಹತೆಯುಳ್ಳವರು ೪೦-೩-೫೦—E,B, ೩-೮೦ ಗ್ರೇಡನ್ನು ಹೊಂದುತ್ತಾರೆ. ಆದರೆ ವಿದ್ಯಾ ಅರ್ಹತೆಯುಳ್ಳ ಎಗ್ಸಿಕ್ಯೂಟಿವ್ ಶಾಖೆಯವರು (ಪೋಲೀಸ್ ದಫೇದಾರರುಗಳು) ಈ ಗ್ರೇಡನ್ನು ಪಡೆಯುವುದಿಲ್ಲ. ಅವರಿಗೆ ಕೇವಲ ರೂ ೩೫ ಮಾತ್ರ ಸಂಬಳ, ೧೯೩೩ ರಿಂದ ೧೯೪೬ ರ ವರೆಗೆ ಪೋಲೀಸು ದಫೇದಾರಿ ಕೆಲಸಕ್ಕೆ S,S,L,C, ಯೇ ಕನಿಷ್ಠ ಅರ್ಹತೆಯಾಗಿತ್ತು, ೧೯೪೬ ರಿಂದ ಈ ಕೆಲಸಕ್ಕೆ M,S, ಅರ್ಹತೆಯೇ ಸಾಕೆಂಬುದಾಗಿ ಮಾರ್ಪಡಿಸಲ್ಪಟ್ಟಿತು, ಇದರಿಂದ ೧೯೪೬ ರಿಂದೀಚೆಗೆ ಸೇರಿರುವ M,S, ವಿದ್ಯಾ ಅರ್ಹತೆಯ ಪೋಲೀಸು ದಫೇದಾರರಿಗೂ ಮತ್ತು ಈಗಾಗಲೇ ೧೫ ವರ್ಷ ಸರ್ವೀಸು ಮಾಡಿರುವ S.S L.C ವಿದ್ಯಾ ಅರ್ಹತೆಯುಳ್ಳ ದಫೇದಾರರಿಗೂ, ಇಬ್ಬರಿಗೂ ಸಮ ರೂ, ೩೫ ಸಂಬಳ ! ೧೫ ವರ್ಷಗಳ ಕಾಲ ದುಡಿದಿದ್ದರೂ ಇವರಿಗೆ ಇಂಕ್ರಿಮೆಂಟಿಲ್ಲದಾಗಿರುತ್ತದೆ, ಸಾಲದುದಕ್ಕೆ ವಿದ್ಯಾರ್ಹತೆ ನಿಗದಿಯೇ ಇಲ್ಲದೆ ಕಾನ್ಸ್ಟೇಬಲ್‌ನಿಂದ ಬಡ್ತಿಯಾಗಿ ದಫೇದಾರರಾಗಿ ಬಂದವರಿಗೂ ಇದೇ ರೀತಿ ಸಂಬಳವಾಗಿದ್ದು, ಪೋಲೀಸು ಇಲಾಖೆಯ ಈ ಒಂದು ಶಾಖೆಯವರಿಗೆ ಮಾತ್ರ (S,S,L,C, ದಫೇದಾರರಿಗೆ) ಕೇವಲ ಅನ್ಯಾಯವಾಗಿರುತ್ತದೆ.

ಸರ್ಕಾರದ ಇತರ ಎಲ್ಲಾ ಶಾಖೆಯ

ಮಿಲಿಟರಿ ಶಿಕ್ಷಣ

ಬೊಂಬಾಯಿ ಪ್ರಾಂತ್ಯದಲ್ಲಿ ಮಿಲಿಟರಿ ಶಿಕ್ಷಣ ಕೊಡುವ ವಿಚಾರದಲ್ಲಿ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಬೊಂಬಾಯಿ ಪ್ರಧಾನಿ ಶ್ರೀ ಬಿ. ಜಿ. ಖೇರ್‌ರವರು ಪೂನಾದಲ್ಲಿ ಸೇರಿರುವ ಶಾಸನ ಸಭೆಯಲ್ಲಿ ತಿಳಿಸಿರುವರು.

ಸಹಕಾರ ಸಂಘ

ನಂಜನಗೂಡು ೧೯

ನಂಜನಗೂಡು ಸಹಕಾರ ಸಂಘಕ್ಕೆ ಶ್ರೀ ಆರ್. ಗುರುರಾಜರಾಯರು ಅಧ್ಯಕ್ಷರಾಗಿಯೂ, ಶ್ರೀ ಜಿ. ಕೆ. ಹುಚ್ಚಪ್ಪನವರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಬಿ. ಮಹದೇವಪ್ಪನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

S S.L C. ವಿದ್ಯಾ ಅರ್ಹತೆಯುಳ್ಳವರಿಗೆ ೮೦ ರೂ ವರೆವಿಗೂ ಇರುವ ಗ್ರೇಡು ಮತ್ತು ಸರ್ವಿಸ್ಸಿಗೆ ತಕ್ಕಂತೆ ಇಂಕ್ರಿಮೆಂಟೂ ಸಹ ಪಡೆಯುತ್ತಿರುವಲ್ಲಿ, ಹಗಲಿರುಳೆನ್ನದೆ ದುಡಿಯುತ್ತಿರುವ ಮತ್ತು ವಿದ್ಯಾ ಅರ್ಹತೆಯನ್ನು ಉಳ್ಳ ಈ ಪೋಲೀಸು ದಫೇದಾರರಿಗೇಕೆ ಅನ್ಯಾಯ? ಗ್ರಾಜುಯೇಟ್ ಸಬ್ ಇನ್ಸ್‌ಪೆಕ್ಟರುಗಳಿಗೆ ೬೦ ರೂ ಸಂಬಳ; ವಿದ್ಯಾ ಅರ್ಹತೆ ನಿಗದಿಯೇ ಇಲ್ಲದೆ (ಅಂದರೆ S,S L,C ವಿದ್ಯಾ ಅರ್ಹತೆ ಇಲ್ಲದಿದ್ದರೂ) ಪೋಲೀಸು ಜಮೇದಾರರಿಗೆ ರೂ ೫೦- M,S, ವಿದ್ಯಾ ಅರ್ಹತೆಯುಳ್ಳ ದಫೇದಾರರಿಗೆ (ಇತ್ತೀಚೆಗೆ ಸೇರಿದವರು) ರೂ, ೩೫ ಸಂಬಳ, ಆದರೆ ೧೫ ವರ್ಷಗಳಿಂದ ದುಡಿದು S,S,L,C, ವಿದ್ಯಾ ಅರ್ಹತೆಯನ್ನೂ ಪಡೆದಿರುವ ಪೋಲೀಸು ದಫೇದಾರರುಗಳಿಗೂ ರೂ ೩೫. ಇಂಕ್ರಿಮೆಂಟ್ ಸಹ ಇಲ್ಲ.

ಈಗ ಇವರೆ ಪೋಲೀಸ್ ಕಾನ್ಸ್‌ಟೇಬಲ್ಲುಗಳಿಗೆ ಸಂಬಳ ಮತ್ತಷ್ಟು ಬಡ್ತಿಮಾಡಿ ಅವರವರ ಸರ್ವೀಸಿಗನುಗುಣವಾಗಿ ಇಂಕ್ರಿಮೆಂಟುಗಳನ್ನೂ ಕೊಟ್ಟು ಸುಮಾರು ರೂ ೩೩ ವರೆವಿಗೂ ಸಂಬಳ ಹೊಂದಿರುತ್ತಾರೆ. ಈಗಲಾದರೂ ನಮ್ಮ ಸರ್ಕಾರದವರು ಈ SSLC ವಿದ್ಯಾ ಅರ್ಹತೆಯುಳ್ಳ ಪೋಲೀಸ್ ದಫೇದಾರರಿಗೂ ಸಹ ೪೦-೩-೫೦ EB ೩-೮೦ ಗ್ರೇಡನ್ನೂ ಮತ್ತು ಅವರ ಸರ್ವೀಸಿಗೆ ಅನುಗುಣವಾಗಿ ಇಂಕ್ರಿಮೆಂಟನ್ನೂ ದಯಪಾಲಿಸಿ ಬಡ ನೌಕರರ ಕಷ್ಟ ನಿವಾರಣೆ ಮಾಡುವರೆಂದು ನಿರೀಕ್ಷಿಸಬಹುದೇ?

ನೊಂದ ನೌಕರರ ಪರವಾಗಿ.

ಕಾಂಗ್ರೆಸ್ ಅಧ್ಯಕ್ಷರ ರಾಜೀನಾಮೆ

ಸ್ವಂ ಸು. ಫೋ] ಬೆಂಗಳೂರು ೨೧

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ ರೆಡ್ಡಿಯವರು ಮಂತ್ರಿ ಪದವಿಯನ್ನು ಸ್ವೀಕರಿಸಲಿರುವುದರಿಂದ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯನ್ನಿತ್ತಿರುವರು. ಅವರ ಬದಲು ಬೇರೊಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಲಾಗುವುದು. ಇದಕ್ಕೆ ಹೆಸರುಗಳನ್ನು ಸೂಚಿಸಲು ಮೈಸೂರು ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಚಿತ್ರದುರ್ಗದಲ್ಲಿ ಬರುವ ... ತಾ॥ ನಡೆಯುವ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಹೊಸ ಅಧ್ಯಕ್ಷರ ಚುನಾವಣೆ ನಡೆಯುವುದು.

ಹೈದರಾಬಾದಿಗೆ ಬೆಂಬಲ

ಹೈದರಾಬಾದಿನ ಸತ್ಯಾಗ್ರಹಕ್ಕೆ ಸರ್ವವಿಧದಲ್ಲೂ ಸಹಾಯ ನೀಡಲು ಶ್ರೀಗಳಾದ ಎಸ್. ನಿಜಲಿಂಗಪ್ಪ, ಹೆಚ್. ಕೆ. ವೀರಣ್ಣಗೌಡ, ಮತ್ತು ಕೆ. ಎಸ್. ಕುಮಾರನ್‌ರವರೊಳಗೊಂಡ ಒಂದು ಉಪಸಮಿತಿಯನ್ನು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ರಚಿಸಿರುತ್ತದೆ. ಮತ್ತು ಕಾಂಗ್ರೆಸ್ಸಿನ ಸಂಘಟನೆಯಲ್ಲಿ ಬದಲಾವಣೆಗಳನ್ನು ಸೂಚಿಸಲು ಮತ್ತೊಂದು ಉಪಸಮಿತಿಯನ್ನು ರಚಿಸಲಾಗಿದೆ.

ಈ ದಿನ ಬೆಳಿಗ್ಗೆ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಗರ ಕಾಂಗ್ರೆಸ್ ಸಮಿತಿಯ ಸಭೆಯು ನಡೆದು ಸತ್ಯಾಗ್ರಹದಲ್ಲಿ ಆತ್ಮಾರ್ಪಣೆ ಮಾಡಿದವರಿಗೆ ಸ್ಮಾರಕವನ್ನು ನಿರ್ಮಿಸಬೇಕೆಂದೂ, ಬರಲಿರುವ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸು ಸ್ಪರ್ಧಿಸಬೇಕೆಂದೂ ಮತ್ತು ಹೊಸ ಮಂತ್ರಿಮಂಡಲವು ಅಧಿಕಾರವನ್ನು ಸ್ವೀಕರಿಸುವ ದಿವಸವನ್ನು ವೈಭವದಿಂದ ಆಚರಿಸಬೇಕೆಂದೂ ನಿರ್ಧರಿಸಲಾಯಿತು.

ಅಕ್ಷರದ ಸೀನ್ ಕಲಿಯಿರಿ

ಸ್ವತಂತ್ರ ಭಾರತದಲ್ಲಿ ಅಧಿಕಾರಕ್ಕೆ ಬಂದಿರುವ ನಾಯಕರ ಮುಂದೆ ಅನಕ್ಷರತೆಯನ್ನು ಹೋಗಲಾಡಿಸುವ ಸಮಸ್ಯೆಯು ಬಲವತ್ತರವಾಗಿ ಎದ್ದು ನಿಂತಿರುತ್ತದೆ. ಅಕ್ಷರವನ್ನು ಏಕೆ ಕಲಿಯಬೇಕು, ಎಂಬ ಬಗ್ಗೆ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಸುಲಭ ಶೈಲಿಯಲ್ಲಿ ದೇವತುಕ್ಲ್ಯಯ (?) ಶ್ರೀ ಜಿ. ನಾರಾಯಣರವರು ಅಕ್ಷರದ ಸೀನ್ ಕಲಿಯಿರಿ—ಎಂಬ ಪುಸ್ತಕವನ್ನು ಪದ್ಯರೂಪದಲ್ಲಿ ರಚಿಸಿದ್ದಾರೆ. ಪುಸ್ತಕದ ಬೆಲೆ ಮೂರಾಣೆ. ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು

WOODLANDS

Morning shows from 21-10-47

Let's Face it

— Featuring .—

Bob-hop Betty Hutton

ವಾನರನ್ನು ಉಳಿಸಿಕೊಂಡ ವಿಚಾರ

ದಿವಾನರ ವಿಷಯದಲ್ಲಿ ಈಗಾಗಲೇ ಹಲವಾರು ಅಭಿಪ್ರಾಯಗಳು ಕೇಳಬರುತ್ತಿವೆ. ದಿವಾನರು ಮಂತ್ರಿಮಂಡಲದಲ್ಲಿ ಉಳಿದುಕೊಂಡಿರುವುದು ಸಮ್ಮತವಲ್ಲವೆಂದು ಹಲವಾರು ರಾಜಕೀಯ ನಿಪುಣರೂ ಮತ್ತು ಪತ್ರಿಕಾ ಕರ್ತರೂ ಅಭಿಪ್ರಾಯಪಡುತ್ತಿದ್ದಾರೆ. ಅವರುಗಳ ಹೇಳಿಕೆಯನ್ನು ಪರಿಶೀಲಿಸುವುದಾದರೆ ಅವುಗಳೆಲ್ಲಾ ನಿರಾಧಾರವಾದವುಗಳೆಂದು ತಿಳಿದು ಬರುತ್ತದೆ.

ಮೈಸೂರು ಕಾಂಗ್ರೆಸ್ಸಿನವರು ಹೂಡಿದ ಹೋರಾಟವಾದರೂ ದಿವಾನರನ್ನು ಪದಚ್ಯುತರನ್ನಾಗಿ ಮಾಡಬೇಕೆಂದಲ್ಲ. ಪ್ರಜಾಧಿಪತ್ಯಕ್ಕೆ ಮನ್ನಣೆ ಕೊಟ್ಟು ಪ್ರಜಾಧಿಪತ್ಯಕ್ಕೆ ತಕ್ಕಂತೆ ನಡೆದುಕೊಳ್ಳುವ ಸರ್ಕಾರವನ್ನು ರಚಿಸುವುದಕ್ಕೆ. ದಿವಾನರ ವಿಷಯದಲ್ಲಿ ಕಾಂಗ್ರೆಸ್ ಮುಖಂಡರುಗಳು ಸೂಕ್ತ ವಿವರಣೆಗಳನ್ನು ಕೊಟ್ಟಿರುತ್ತಾರೆ. ಶ್ರೀಮನ್ಮಹಾರಾಜರಿಗೂ, ಕಾಂಗ್ರೆಸ್ ನಾಯಕರಿಗೂ ನೇರವಾದ ಸಂಪರ್ಕವಿರಲಾರದೆಂಬುದೇ ಹಲವಾರು ಜನರಲ್ಲಿ ಮೂಡಿರುವ ಭೀತಿ. ಆದರೆ ನಮ್ಮ ನಾಯಕರಿಗೆ ಈ ವಿಷಯದಲ್ಲಿ ನಮ್ಮ ಮಹಾರಾಜರು ನೇರವಾಗಿ ಸಂಪರ್ಕವಿಟ್ಟುಕೊಳ್ಳಲು ಭರವಸೆ ಕೊಟ್ಟಿರುವುದಾಗಿ ತಿಳಿದುಬಂದಿದೆ. ದಿವಾನರ ಅಧಿಕಾರ ವ್ಯಾಪ್ತಿಯನ್ನೂ ಸಹ ಕಾಂಗ್ರೆಸ್ ನಾಯಕರುಗಳು ವಿವರಿಸಿ[ದ್ದಾರೆ]. ಈ ವಿಷಯದಲ್ಲಿ ಇಷ್ಟೆಲ್ಲಾ ವಿವರಣೆಗಳು ದೊರೆತಾಗ್ಯೂ ಕೆಲವು ಮಹನೀಯರುಗಳು ದಿವಾನರು ಮಂತ್ರಿಮಂಡಲದಲ್ಲಿರಕೂಡದೆಂದು ವಾದ ಹೂಡುವುದರಲ್ಲಿ ಯಾವ ಅರ್ಥವೂ ಇರುವುದಿಲ್ಲ.

ಬಿ. ಎನ್. ಸೂಂತಣ್ಣ,
ಲಾಯರ್, ಶ್ರೀರಂಗಪಟ್ಟಣ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊ[ಡು]ತ್ತದೆ.

ಗವರ್ನ್ಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಮನೆಗಳ ಮಧ್ಯೆ ತಿಪ್ಪೆ ಗುಂಡಿ

ರಾಜಧಾನಿಯ ವಿ... ರಸ್ತೆಯ ಪೂರ್ವಭಾಗಕ್ಕೆ ಒಂದು ದೊಡ್ಡ ಕನ್ಸರ್ವೆನ್ಸಿ ಗಲ್ಲಿ ಇರುತ್ತದೆ. ಇದರ ಎರಡು ಪಾರ್ಶ್ವಗಳಲ್ಲೂ ಬಿಡಾರ ಮನೆಗಳಿರುತ್ತವೆ. ಕನ್ಸರ್ವೆನ್ಸಿಗೆ ಚರಂಡಿ ವ್ಯವಸ್ಥೆ ಇರುವುದಿಲ್ಲ. ಈಗ ಹಲವು ದಿನಗಳಿಂದಲೂ ಈ ಕನ್ಸರ್ವೆನ್ಸಿಯಲ್ಲಿ ಕಸದ ರಾಶಿಯನ್ನು ವಿಶೇಷವಾಗಿ ಶೇಖರಿಸಲಾಗುತ್ತಿದೆ. ಹಲವು ದಿನಗಳ ನಂತರ ಅದನ್ನು ಲಾರಿಗಳಲ್ಲಿ ಸಾಗಿಸಲಾಗುತ್ತಿದೆ. ಒಂದೊಂದು ವೇಳೆ ಲಾರಿಯು ೩-೪ ದಿನಗಳಾದರೂ ಬರದೆ ಮಳೆಯ ಹನಿಯಿಂದ ಕಸವಷ್ಟೂ ಅಲ್ಲಿಯೇ ಕೊಳೆಯುತ್ತಿರುತ್ತದೆ. ಈ ರಾಶಿಯಲ್ಲಿ ಅನೇಕ ಸತ್ತ ನಾಯಿ, ಬೆಕ್ಕುಗಳು ಕೊಳೆತು ನಾರುತ್ತಿರುತ್ತವೆ.

ನಗರದ ಆರೋಗ್ಯ ಇಲಾಖೆಯವರು ಈ ಕಡೆ ಗಮನ ಕೊಟ್ಟು ಇಲ್ಲಿನ ನಿವಾಸಿಗಳ ತೊಂದರೆಯನ್ನು ತಪ್ಪಿಸುವುದು ಅಗತ್ಯವಾಗಿದೆ.

ಪುರನಿವಾಸಿ

ಬೇಕಾಗಿದೆ

ಇಂಗ್ಲಿಷು, ಕನ್ನಡ, ತೆಲುಗ, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ಜಾಬ್ ಕೆಲಸಗಳ ಅನುಭವವಿರುವ ಕಂಪಾಜಿಟರುಗಳು ಬೇಕಾಗಿದ್ದಾರೆ.

ಮೊಖ್ತಾ ವಿಚಾರಿಸಿ:—
ಪ್ರೊಪ್ರೈಟರ್,
ಶ್ರೀ ಕೃಷ್ಣ ಪವರ್ ಪ್ರೆಸ್,
ಲ್ಯಾನ್ಸ್‌ಡೌನ್ ಬಜಾರ್,
ಮೈಸೂರು

ಅಪೇರಾ ಟಾಕೀಸ್
ತಾರೀಖು ೨೪-೧೦-೪೭ ರಿಂದ
ಪ್ರತಿ ದಿನ ಮೂರು ಆಟಗಳು
ಮ್ಯಾಡ್ ಮ್ಯಾಕ್ಷ್
(ಹುಚ್ಚು ಮನುಷ್ಯ)
ಎನ್. ಎಸ್. ಕೃಷ್ಣನ್,
ಟಿ. ಎ. ಮಧುರಂ ನಟಿಸಿರುವ
● ತಮಿಳು ಚಿತ್ರ ●

ರಷ್ಯಾ-ಇರಾನ್ ಘರ್ಷಣೆ?

ಎಣ್ಣೆ ಸೌಲಭ್ಯದ ವಿಷಯದಲ್ಲಿ ರಷ್ಯವು ಇರಾನಿನ ಮೇಲೆ ಅನುಸರಿಸುತ್ತಿರುವ ನೀತಿಯು ಘರ್ಷಣೆಗೆ ಕಾರಣವಾಗಬಹುದೆಂದು ತಿಳಿಯಲಾಗಿದೆ. ಈಗಾಗಲೇ ರಷ್ಯದ ಗಡಿಯಲ್ಲಿ ಪರ್ಷಿಯದ ಸೈನ್ಯಗಳು ರಾಜ್ಯಗಳನ್ನು ಏರ್ಪಡಿಸಿಕೊಂಡಿವೆ ಮತ್ತು ಅಲ್ಲಿನ ಎರಡು ಪ್ರದೇಶಗಳಲ್ಲಿ ಮಾರ್ಷಲ್ ಲಾ ಜಾರಿಗೆ ಬಂದಿದೆ.

ಅಭಿನಂದನೆ

ರಾಜಧಾನಿಯ ಇಟ್ಟಿಗೆಗೂಡಿನ ಯುವಕರ ಸಂಘದವರು ಮೊನ್ನೆ ದಿನ ಸಭೆ ನಡೆಸಿ, ಸತ್ಯಾಗ್ರಹದಲ್ಲಿ ಮಡಿದ ವೀರ ಸ್ವರ್ಗಗಳ ಗೌರವಾರ್ಥವಾಗಿ ಎರಡು ನಿಮಿಷ ಮೌನವನ್ನು ಆಚರಿಸಿ, ಅಲ್ಪ ಕಾಲದಲ್ಲಿ ಅಖಂಡ ಜಯವನ್ನು ಗಳಿಸಿದ ಮೈಸೂರು ಕಾಂಗ್ರೆಸ್ಸನ್ನು ಮತ್ತೂ ಜವಾಬ್ದಾರಿ ಸರ್ಕಾರವನ್ನು ದಯಪಾಲಿಸಿದ ಮಹಾಪ್ರಭುಗಳನ್ನೂ ಅಭಿನಂದಿಸಿದರು.

ಬೆಳಗಿನ ಪ್ರದರ್ಶನ
ಒಲಂಪಿಯಾ ಟಾಕೀಸ್
22-10-47 ರಿಂದ ಮೂರು ದಿವಸಗಳ
ಪ್ರಭಾತ್‌ರವರ
ಗೋಪಾಲ ಕೃಷ್ಣ
ಪಾತ್ರ:- ಶಾಂತಾ ಆಪ್ಟೆ

ವುಡ್‌ಲ್ಯಾಂಡ್ಸ್
17-10-47 ರಿಂದ
೪ ನೇ ವಾರ
ಪ್ರಕಾಶ್ ಪಿಕ್ಚರ್ಸ್‌ರವರ
ಅಮೋಘವಾದ ಚಲನ ಚಿತ್ರ
ನಯೀಮಾ
(ಹಿಂದಿ)
—: ತಾರಾಗಣ :—
ರಂಜನ್ ಮತ್ತು ಜೀವನ್

ರಕ್ಷಣಾ ಕೇಂದ್ರದಿಂದ ಶಸ್ತ್ರಾಸ್ತ್ರಗಳ ದರೋಡೆ

ದೆಹಲಿಯಲ್ಲಿರುವ ಭಾರತ ರಕ್ಷಣಾ ಕೇಂದ್ರಕ್ಕೆ ೬ ಮಂದಿ ಶಸ್ತ್ರ ಸಜ್ಜಿತರಾದ ದರೋಡೆಕೋರರು ನುಗ್ಗಿ ಅಲ್ಲಿದ್ದ ಕಾವಲುಗಾರರನ್ನು ಬೆದರಿಸಿ ೨೦ ರಿವಾಲ್ವರುಗಳು, ಗ... ರೈಫಲ್ಲುಗಳು ಮತ್ತು ಹಲವು ಮದ್ದು ಗುಂಡುಗಳನ್ನು ಅಪಹರಿಸಿಕೊಂಡು ಪರಾರಿಯಾಗಿರುವರೆಂದು ವರದಿಯಾಗಿದೆ.

ಕೆಲಸಗಾರರಿಗೆ ಅಭಿನಂದನೆ

ಸ್ವಂ.ವ.] ಕೃಷ್ಣರಾಜನಗರ

ಈ ತಾಲ್ಲೂಕಿನ ಕಾಂಗ್ರೆಸ್ ಕೆಲಸಗಾರರೂ, ವಿದ್ಯಾರ್ಥಿಗಳೂ ಈಗಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಅನೇಕ ಕಷ್ಟ, ನಷ್ಟಗಳಿಗೆ ಗುರಿಯಾಗಿ ವಿಜಯಿಗಳಾಗಿ ಹಿಂದಿರುಗಿರುವುದಕ್ಕಾಗಿ ಅವರೆಲ್ಲರನ್ನೂ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ವೈ. ಎನ್. ... ಜುಂಡಪ್ಪನವರು ಅಭಿನಂದಿಸಿದ್ದಾರೆ.

ರಾಜಕಮಲ್
17-10-47 ರಿಂದ
ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್‌ರವ[ರ]
ಜೀವನ್ ಯಾತ್ರ[ಾ]
(ಹಿಂದಿ)
—: ಭೂಮಿಕೆ :—
ನಯನತಾರ, ಶಾಂತರೀ, ಬಾಬುರಾ[ವ್]
ಪೆಂಢಾರ್ಕರ್, ಯಾಕೂಬ್

From 21-10-47 for 4 da[ys]
Daily at 10-30 a. m.
"Bowery to Broadway"
—: WITH :—
Maria Montez, Susann[a] Foster, Jack Oakie, Turhan Bey

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ... ಇಲಾಖೆಗೆ ಕಸದ ಗಾಡಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲೀಕರುಗಳು ಪುಷ್ಟಿಕರವಾದ ಮತ್ತು ಸರಿಯಾದ ವಯಸ್ಸಿನ ಎತ್ತುಗಳನ್ನು ಬೆಲೆಗಾಗಿ ತಾ|| 31-10-47 ಶುಕ್ರವಾರ ಸಾಯಂಕಾಲ 4 ಗಂಟೆಗೆ ಮುನಿಸಿಪಲ್ ಆಫೀಸಿಗೆ ಹಾಜರ್ ಮಾಡ... ಬೇಕು. ... ಹೆಚ್ಚಿನ ಮೊಬಲಗನ್ನು ಕೊಡಲಾಗುತ್ತದೆ.

17-10-47 ಪ. ಅನಂತರಾ[ಮ್]
ಮೈಸೂರು ಸಿಟಿ. ಚೇರ್ಮನ್

University of Mysore

No. Ex 3. 193—47-48.

Office of the University
of Mysore, Mysore,
Dated 17th October 1947.

NOTIFICATION

Postponement of University Examinations to be held on 3rd November 1947

It is hereby notified that the following * * Examinations notified to be held from 3rd November 1947, will be held from Thursday the 11th December 1947. The detailed time-table will be published in the Mysore Gazette

* * 1 Intermediate in Arts 2 Intermediate in Science. 3 Intermediate in Commerce 4 B A Degree 5 B Sc Degree 6 B A (Hons) Preliminary. 7 B Sc. (Hons) Preliminary 8 L M P Examinations

By Order,
D. S. GORDON, Registrar.

ಫೋ ನಂ. 608 ‖ ವಂದೇ ಮಾತರಂ ‖ ಬಿಡಿಪ್ರತಿ ೩ ಕಾಸು

ಸಂಪುಟ ೩] ಬುಧವಾರ ೨೨-೧೦-೪೭ [ಸಂಚಿಕೆ

ಜಿನ್ನಾರವರಿಗೆ ಕಾಶ್ಮೀರದ ಎಚ್ಚರಿಕೆ

ಲೀಗಿನವರಿಗೆ ಮಂತ್ರಿ ಪದವಿಯೇ ?

ಸಂಸ್ಥಾನ ಮಹಾ ಸಭಾ ಕಾರ್ಯದರ್ಶಿಯ ಪ್ರತಿಭಟನೆ

ಮೈಸೂರಿನ ನೂತನ ತಾತ್ಕಾಲಿಕ ಸರಕಾರಕ್ಕೆ ಸಂಸ್ಥಾನದ ಮುಸ್ಲಿಂ ಲೀಗ್ ಅಧ್ಯಕ್ಷರಾದ ಖಾನ್ ಮಹಮದ್ ಷರೀಫರವರನ್ನು ಕಾಂಗ್ರೆಸ್ ಕಾರ್ಯಕಾರಿ ಮಂಡಲದವರು ಸೂಚಿಸಿರುವುದು ತುಂಬಾ ವಿಷಾದಕರ. ... ಸ್ಥಾಪನೆಗೆ ತಮ್ಮ ಪೂರ್ಣ ಬೆಂಬಲವನ್ನು ಕೊಟ್ಟು ಅದಕ್ಕಾಗಿ ಅನೇಕ ರೀತಿಯಲ್ಲಿ ದುಡಿದು ಪ್ರಚಾರ ಮಾಡಿ, ಕಾಂಗ್ರೆಸ್ ಸತ್ಯಾಗ್ರಹದಲ್ಲಿ ಭಾಗವಹಿಸಿದವರಿಗಿಲ್ಲದ ಸೌಲಭ್ಯಗಳನ್ನು ಕೊಡುವುದು ಯಾವ ನ್ಯಾಯ ? ಮುಸ್ಲಿಮರಿಗೆ ಇನ್ನು ಮುಂದೆ ಯಾವ ವಿಧವಾದ ವಿಶೇಷ ಸ್ಥಾನಗಳನ್ನೂ ಕೊಡಕೂಡದೆಂಬುದೇ ನನ್ನ ಅಭಿಪ್ರಾಯವಾಗಿದೆ. ಮುಸ್ಲಿಮರನ್ನು ಪ್ರತಿನಿಧಿಸುವ ಮನೋಭಾವನೆಯನ್ನು ... ಸ್ಥಾನವನ್ನು ಕೋರುವವರು ... ಭಾವನೆಯಿಲ್ಲದ ಹಿಂದುವಿಗೇ ಕೊಡಬೇಕೆಂದು ಕೋರುತ್ತೇನೆ-ಎಂದು ಮೈಸೂರು ಸಂಸ್ಥಾನ ಮಹಾಸಭಾ ನಗರ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಂ. ಕೆ. ಲಿಂಗಣ್ಣನವರು ತಿಳಿಸುತ್ತಾರೆ.

ಐದು ವರ್ಷಗಳಲ್ಲಿ ಪಾಕಿಸ್ತಾನದ ಅಂತ್ಯ

ಪಾಕಿಸ್ತಾನವು ಐದು ವರ್ಷಗಳೊಳಗಾಗಿ ಹೇಳಹೆಸರಿಲ್ಲದೆ ಹೆಸರು ಅಳಿಸಿ ಹೋಗಿ ಮತ್ತೆ ಭಾರತವು ಒಂದಾಗುವುದು-ಎಂಬುದಾಗಿ ಅಖಿಲ ಭಾರತ ಸಮಾಜವಾದಿ ಪಕ್ಷದ ನಾಯಕರಾದ ಡಾ|| ರಾಮಮನೋಹರ ಲೋಹಿಯಾರವರು ಹೇಳಿರುವರು. ಪಾಕಿಸ್ತಾನ ಪ್ರಜೆಗಳು ಲೀಗ್ ಸರ್ಕಾರವನ್ನು ಕಿತ್ತೆಸೆದು ಪ್ರತಿ ಸರ್ಕಾರವನ್ನು ರಚಿಸಿ ಭಾರತದ ಜತೆ ಐಕ್ಯವಾಗುವರು, ಪಾಕಿಸ್ತಾನದ ಲೀಗ್ ನಾಯಕರು ವಿಭಜನೆಯ ದುಷ್ಪರಿಣಾಮವನ್ನು ಮನಗಂಡು ಭಾರತದೊಡನೆ ಮೈತ್ರಿಯ ಒಪ್ಪಂದ ಮಾಡಿಕೊಂಡು ... ದ ಭಾರತವಾಗಲು ಯತ್ನಿಸುವರು ... ಭಾರತಕ್ಕೂ, ಪಾಕಿಸ್ತಾನಕ್ಕೂ ಯುದ್ಧ ಸಂಭವಿಸಿ ಪಾಕಿಸ್ತಾನದ ಅಂತ್ಯವಾಗುವುದು-ಎಂದು ಅವರು ಸೂಚಿಸಿರುವರು.

ಉದಯಪುರದಲ್ಲಿ ಸುಧಾರಣೆ

ಸಂಸ್ಥಾನದ ವಿವಿಧ ರಾಜಕೀಯ ಪಕ್ಷಗಳ ಆಂದೋಲನೆಯಿಂದಾಗಿ ಉದಯಪುರದ ಮಹಾರಾಣರವರು ತಮ್ಮ ಸಂಸ್ಥಾನದ ರಾಜ್ಯಾಂಗದಲ್ಲಿ ಹಲವು ತಿದ್ದುಪಡಿಗಳನ್ನು ಮಾಡಿರುವುದು ವರದಿಯಾಗಿದೆ. ... ಸಮಿತಿ ಎಂಬುದನ್ನು ರದ್ದುಗೊಳಿಸಿ ಆ ಹೊಣೆಗಾರಿಕೆಯನ್ನು ಸಂಸ್ಥಾನದ ... ಸಭೆಗೆ ವಹಿಸಲಾಗಿದೆ. ... ಮತದಾನವು ಜಾರಿಗೆ ಬರುತ್ತದೆ. ... ಪ್ರಜೆಗಳಿಗೆ ಒಟ್ಟು ಪ್ರತಿನಿಧಿತ್ವವನ್ನು ಅಂಗೀಕರಿಸುವುದರ ಬದಲು ಒಂದೇ ಒಟ್ಟು ... ನ್ನು ಚುನಾಯಿಸಲಾಗು...

ಬೆಂಗಳೂರ್ ಶಿಲ್ಕ್ ಸೀರೆಗಳು
ಧರ್ಮವರಂ, ಮೈಸೂರು ಶಿಲ್ಕು
ಫ್ಯಾನ್ಸಿ ಸೀರೆಗಳಿಗೆ
V ... ರಾಜಯ್ಯ ಬಿ. ಎ.
... ಬ್ಯಾಂಕ್ ಎದುರು ಅಂಗಡಿನೋಡಿ

ಸೂಚನೆ

ಆಯುಧ ಪೂಜೆಯ ಪ್ರಯುಕ್ತ ನಾಳೆ ದಿನ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಜಿನ್ನಾರವರಿಗೆ ಕಾಶ್ಮೀರ ಸರ್ಕಾರದ ಪ್ರತಿಭಟನೆ

ಕಾಶ್ಮೀರಕ್ಕೂ, ಪಾಕಿಸ್ತಾನಕ್ಕೂ ಆಗಿರುವ ಸ್ಟ್ಯಾಂಡ್ ಸ್ಟಿಲ್ ಒಪ್ಪಂದವನ್ನು ಪಾಕಿಸ್ತಾನ ಸರ್ಕಾರವು ಮುರಿದು ಸಂಸ್ಥಾನಕ್ಕೆ ಬರುವ ಅವಶ್ಯಕವಾದ ಆಹಾರ ವಸ್ತುಗಳೇ ಮುಂತಾದುವನ್ನು ತಡೆಗಟ್ಟುತ್ತಿದೆಯೆಂದೂ, ಪಾಕಿಸ್ತಾನದ ಪ್ರಜೆಗಳೂ ಮತ್ತು ಅಧಿಕಾರಿಗಳೂ ಶಸ್ತ್ರ ಸಜ್ಜಿತರಾಗಿ ಕಾಶ್ಮೀರದ ಮುಸ್ಲಿಮೇತರರ ಮೇಲೆ ಧಾಳಿ ನಡೆಸುತ್ತಿರುವರೆಂದೂ ಇವನ್ನು ಕೂಡಲೇ ನಿಲ್ಲಿಸಬೇಕೆಂದೂ ಕಾಶ್ಮೀರ ಸರ್ಕಾರವು ಮಿ|| ಜಿನ್ನಾರವರಿಗೂ, ಮತ್ತು ವಿದೇಶಾಂಗ ಮಂತ್ರಿ ಮಿ|| ಲಿಯಾಖತ್ ಅಲಿಖಾನರಿಗೂ ಪತ್ರ ಬರೆದಿದೆಯೆಂಬು ವರದಿಯಾಗಿದೆ. ಪಾಕಿಸ್ತಾನದ ಈ ವರ್ತನೆಯು ಶತ್ರುತ್ವವನ್ನು ಸೂಚಿಸುವಂತಹುದಾಗಿದೆಯೆಂದೂ, ಇದು ನಿಲ್ಲದಿದ್ದರೆ ತನ್ನ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಕಾಶ್ಮೀರವು ಇತರರ ಸಹಾಯವನ್ನು ಪಡೆಯಬೇಕಾಗುವುದೆಂದೂ ಸಹ ಆ ಪತ್ರದಲ್ಲಿ ಸೂಚಿಸಲಾಗಿದೆ.

ಹೈದರಾಬಾದಿನೊಡನೆ ತಾತ್ಕಾಲಿಕ ಒಪ್ಪಂದ

ದೆಹಲಿಯಲ್ಲಿ ಗೌರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರಿಗೂ, ಹೈದರಾಬಾದಿನ ನಿಯೋಗದವರಿಗೂ ನಡೆದ ಮಾತುಕತೆಗಳ ಪರಿಣಾಮವಾಗಿ ಭಾರತ ಯೂನಿಯನ್ನಿನೊಡನೆ ೧೨ ತಿಂಗಳ ತಾತ್ಕಾಲಿಕ ಒಪ್ಪಂದವಾಗಿದೆಯೆಂದು ಹೇಳಲಾಗಿದೆ. ಒಪ್ಪಂದದ ವಿವರಗಳು ಗುಪ್ತವಾಗಿಡಲ್ಪಟ್ಟಿವೆ. ಈ ಒಪ್ಪಂದಕ್ಕೆ ನಿಜಾಮರ ಅಂಗೀಕಾರವಾಗಬೇಕಾಗಿದೆ.

ರಣರಂಗದಿಂದ ಹಿಮ್ಮೆಟ್ಟುವುದಿಲ್ಲವೆಂದು ಪಂ|| ನೆಹರೂ

ಸ್ವರಾಜ್ಯ ಸಾಧನೆಗಾಗಿ ಹೋರಾಡಿ ಕೈಗೊಂಡ ತತ್ವವು ನಾಶವಾಗುವ ಸ್ಥಿತಿಯುಂಟಾದಾಗ ತಾನು ರಾಜೀನಾಮೆ ಇತ್ತು ರಣಕ್ಷೇತ್ರದಿಂದ ಹಿಂದಿರುಗುವುದಿಲ್ಲವೆಂದು ಪಂಡಿತ ನೆಹರೂರವರು ಲಕ್ನೋ ನಗರದಲ್ಲಿ ಭಾಷಣ ಮಾಡುತ್ತ ತಿಳಿಸಿರುವರು.

ಮಾಧ್ಯಮಿಕ ಶಾಲಾ ಉಪಾಧ್ಯಾಯರ ಕುಂದುಕೊರತೆ

ಸರ್ಕಾರದವರು ಕೆಳ ದರ್ಜೆಯ ನೌಕರರ ಸಂಬಳ ಸಾರಿಗೆಗಳನ್ನು ಪುನರ್ವಿಮರ್ಶಿಸಿ ಆಜ್ಞೆ ಹೊರಡಿಸಿರುವುದು ಸರಿಯಷ್ಟೆ. ಅದರ ಬಿ. ಟಿ. ಆಗಿರತಕ್ಕ ಹೈಸ್ಕೂಲ್ ಉಪಾಧ್ಯಾಯರಿಗೆ ಮೂರು ಬಡ್ತಿ ಕೊಡಬೇಕೆಂತಲೂ, ಮಾಧ್ಯಮಿಕ ಶಾಲೆಯಲ್ಲಿ ಯು. ಜಿ. ಟಿ. ಆಗಿ ತಕ್ಕ ಉಪಾಧ್ಯಾಯರಿಗೆ ಎರಡು ಬಡ್ತಿ ಮಾತ್ರ ಕೊಡಬೇಕೆಂತಲೂ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಬಿ. ಟಿ. ಮತ್ತು ಯು. ಜಿ. ಟಿ. ಶಿಕ್ಷಣದ ಅವಧಿ ಒಂದು ವರ್ಷ ಮಾತ್ರ ಅಲ್ಲದೆ ಹೈಸ್ಕೂಲ್ ಉಪಾಧ್ಯಾಯರಿಗೆ ಬಡ್ತಿ ದರವು ವರ್ಷ ೧ಕ್ಕೆ ೫ ಮತ್ತು ೭ ರೂಪಾಯಿಗಳು ಆಗಿರುತ್ತವೆ. ಮಾಧ್ಯಮಿಕ ಶಾಲಾ ಉಪಾಧ್ಯಾಯರಿಗೆ ವಾರ್ಷಿಕ ಬಡ್ತಿ ಕೇವಲ ೨ ಮತ್ತು ೩ ರೂಪಾಯಿಗಳು ಮಾತ್ರ, ಇದರಿಂದ ಮಾಧ್ಯಮಿಕ ಶಾಲಾ ಉಪಾಧ್ಯಾಯರಿಗೆ ಬಡ್ತಿ ದರದಲ್ಲಿ ಬಹಳ ಅನ್ಯಾಯವಾಗಿರುತ್ತದೆ. ಆದ ಕಾರಣ ಮುಂದೆ ಬರಲಿರುವ ನೂತನ ಮಂತ್ರಿ ಮಂಡಲದವರು ಟ್ರೈನಿಂಗ್ ಆಗಿರತಕ್ಕ ಮಾಧ್ಯಮಿಕ ಶಾಲಾ ಉಪಾಧ್ಯಾಯರಿಗೆ ಹೈಸ್ಕೂಲಿನಲ್ಲಿ ಬಿ. ಟಿ. ಆಗಿರತಕ್ಕ ಉಪಾಧ್ಯಾಯರಿಗೆ ಕೊಟ್ಟಿರುವಂತೆ ಟ್ರೈನಿಂಗ್ ಅರ್ಹತೆಗಾಗಿ ಈಗ ಕೊಟ್ಟಿರುವ ೨ ಇಂಕ್ರಿಮೆಂಟ್ ಬದಲು ೩ ಇಂಕ್ರಿಮೆಂಟುಗಳನ್ನು ಕೊಟ್ಟು ಈ ಬಡ ಮಾಧ್ಯಮಿಕ ಶಾಲಾ ಉಪಾಧ್ಯಾಯರ ತೊಂದರೆಯನ್ನು ನೀಗಿಸುವರೆಂದು ನಂಬಿದ್ದೇನೆ.

ಶ್ರೀಕಂಠಯ್ಯ.

ಸಮಾಧಿ ಮಹೋತ್ಸವ

ರಾಜಧಾನಿಯ ಗಣ್ಯವ್ಯಕ್ತಿ ಚೌಕದ ಬಳಿಯಿರುವ ಶ್ರೀ ಸಾಯಿ ಭಕ್ತ ಮಂಡಳಿಯವರು ಕೆ. ಆರ್. ಆಸ್ಪತ್ರೆ ರೋಡಿನಲ್ಲಿರುವ ಪೌರಸಭಾ ಸದಸ್ಯರಾದ ಶ್ರೀ ಟಿ. ಸಿ. ಗೌಡ "ಶ್ರೀ ಸಾಯಿ ಸದನದಲ್ಲಿ" ಶ್ರೀ ಸಾಯಿ ಬಾಬಾರವರ ಸಮಾಧಿಯ ಮಹೋತ್ಸವವನ್ನು ೨೪-೧೦-೪೭ ರಿಂದ ೩೦-೧೦-೪೭ ರ ವರೆವಿಗೆ ಶ್ರೀ ನಾರಾಯಣ್ ಮಹಾರಾಜರ ಕೃಪಾಶ್ರಯದಲ್ಲಿ ನಡೆಸುತ್ತಾರೆ. ಪ್ರತಿ ದಿವಸವೂ ಶ್ರೀ ಸಾಯಿ ಸಪ್ತರಾತ್ರಿ ನಡೆಸಿ, ಕೊನೆಯ ದಿವಸ ರಥೋತ್ಸವವು ಜರುಗುತ್ತದೆ. ಭಕ್ತಾದಿಗಳು ಪ್ರತಿ ದಿವಸದ ಸೇವೆಯಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷರು

ಮೈಸೂರು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ. ಸಿ. ರೆಡ್ಡಿಯವರು ಇನ್ನೂ ದೆಹಲಿಯಲ್ಲೇ ಇದ್ದಾರೆ. ಈ ದಿನ ಸಂಜೆ ಸರ್ದಾರ್ ಮತ್ತು ದಿವಾನರನ್ನು ಭೇಟಿ ಮಾಡುವರೆಂದು ಹೇಳಲಾಗಿದೆ. ಅನಂತರ ಬೆಂಗಳೂರಿಗೆ ತೆರಳಬಹುದು.

ಕಮರ್ಷಿಯಲ್ ಪರೀಕ್ಷೆಗಳು ಮುಂದುವರೆಯಬೇಕು

ಬರುವ ತಿಂಗಳು ೩ ಮತ್ತು ೪ ನೇ ದಿನಗಳಲ್ಲಿ ಆರಂಭವಾಗಲಿರುವ ಸರ್ಕಾರದ ಕಮರ್ಷಿಯಲ್ ಪರೀಕ್ಷೆಗಳನ್ನು ಮುಂದುವರಿಸಬೇಕೆಂದು ತಿಳಿದುಬಂದಿದೆ. ಈ ವಿಷಯದಲ್ಲಿ ವಿದ್ಯಾರ್ಥಿಗಳು ಕಾಂಗ್ರೆಸ್ ನಾಯಕರಿಗೆ ಮನವಿ ಮಾಡಿಕೊಂಡಿರುವರೆಂದೂ, ... ರುಗಳು ಈ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವುದಾಗಿ ಭರವಸೆ ಇತ್ತಿರುವರೆಂದೂ ಗೊತ್ತಾಗಿದೆ.

ನಿರಾಶ್ರಿತರ ಪರಿಹಾರ ನಿಧಿ

ಪಶ್ಚಿಮ ಪಂಜಾಬಿನಲ್ಲಿ ದುರಂತಗಳಿಗೀಡಾಗಿ ಕಷ್ಟ, ನಷ್ಟಗಳಿಗೆ ಗುರಿಯಾಗಿರುವ ಹಿಂದೂ ಮತ್ತು ಸಿಖ್ ಜನರಿಗೆ ಸಹಾಯ ನೀಡುವ ಸಲುವಾಗಿ ರಾಜಧಾನಿಯ ... ಸಮಾಜದವರು ಪಂಜಾಬ್ ನಿರಾಶ್ರಿತರ ಪರಿಹಾರ ನಿಧಿಯನ್ನೇರ್ಪಡಿಸಿರುವರು. ... ದಾನಿಗಳು ಅದಕ್ಕೆ ನೆರವು ನೀಡಬೇಕೆಂದೂ, ಸಹಾಯ ಮಾಡಬಯಸುವವರು ... ಚೌಕದಲ್ಲಿರುವ ... ಸಮಾಜದ ಕಾರ್ಯಾಲಯದಲ್ಲಿ ಹಣವನ್ನು ಪಾವತಿ ಮಾಡಬೇಕೆಂದೂ ಕಾರ್ಯದರ್ಶಿಗಳು ಕೋರಿರುವರು.

ನಿಧನ

ಪ್ರಸಂಗತ ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಕುಮಾರರಾದ ಶ್ರೀ ಬಿ. ... ರವರು ಮೊನ್ನೆ ದಿನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಕೇವಲ ... ವರ್ಷ ವಯಸ್ಸಾಗಿದ್ದಿತು.

ಪ್ರತ್ಯಕ್ಷ ಹೋರಾಟಕ್ಕೆ ಜುನಾಗಢ ತಾತ್ಕಾಲಿಕ ಸರ್ಕಾರ

ಭಾರತ ಗಡಿ ಪ್ರದೇಶವಾದ ಜುನಾಗಢದ ಮೇಲೆ ಪಾಕಿಸ್ತಾನವು ನಡೆಸಿರುವ ತಂತ್ರವನ್ನು ಎದುರಿಸಲು ಜುನಾಗಢ ತಾತ್ಕಾಲಿಕ ಪ್ರಜಾ ಸರ್ಕಾರವು ಸಿದ್ಧವಾಗಿದೆಯೆಂದು ಪ್ರಧಾನಿ ಶ್ಯಾಮಲದಾಸ ಗಾಂಧಿಯವರು ತಿಳಿಸಿದ್ದಾರೆ. ಜುನಾಗಢದ ನವಾಬರು ... ಪ್ರಜೆಗಳ ... ವನ್ನು ... ಭಾರತ ಸರ್ಕಾರವು ... ವನ್ನು ... ದಿಂದ ... ತಾತ್ಕಾಲಿಕ ಪ್ರಜಾ ಸರ್ಕಾರವು ... ರಾಜ್ಯದಲ್ಲಿ ... ದೆ, ನವಾಬರ ನೀತಿಯನ್ನು ವಿರೋಧಿಸುವ ಎಲ್ಲ ಮುಸ್ಲಿಮರಿಗೂ ಒಂದೇ ಸಮನಾದ ... ಭರವಸೆ ನೀಡಿದ್ದಾರೆ.

ಕಾಶ್ಮೀರದ ಮಾಜಿ ಪ್ರಧಾನಿ ಮೇಲೆ ಪ್ರತಿಬಂಧಕಾಜ್ಞೆ

ಕಾಶ್ಮೀರದ ಮಾಜಿ ಪ್ರಧಾನಿ ಶ್ರೀ|| ರಾಮಚಂದ್ರ ಕಾಕ್ ... ಕಾಶ್ಮೀರ ಸಂಸ್ಥಾನವನ್ನು ಬಿಟ್ಟು ಹೋಗಬಾರದೆಂದು ... ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆ. ಅವರು ತಮ್ಮ ಕುಟುಂಬದೊಡನೆ ... ಹೊರಟಿದ್ದಾಗ ಅವರ ಮೇಲೆ ಈ ಆಜ್ಞೆಯನ್ನು ಜಾರಿ ಮಾಡಲಾಗಿದೆ. ಅವರ ಮೇಲೆ ಬರುವ ವಿವಿಧ ಆಪಾದನೆ ... ವಿಚಾರಣೆ ... ಲಿದೆ.

University of Mysore

Notification No G 4. 1180/46-47

Office of the University
of Mysore, Mysore.
Dated 8th October 1947

CONVOCATION, 1947.

In modification of this office Notification No G 4 1180 46-47 dated 15th July, 1947, it is hereby notified that under Statute 78 degrees will be conferred this year **in absentia** without the holding of a Convocation.

A separate communication will be addressed to the candidates who have applied for degrees this year

By ORDER,
D. S. GORDON,
Registrar

ಶ್ರೀ ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆ
ಸೆಕ್ರೆಟರಿಯವರ ಆಫೀಸು, ಮೈಸೂರು

ಟೆಂಡರ್ ನೋಟೀಸು

ಮೈಸೂರು ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆಗಳಿಗೆ 1948ನೇ ಇಸವಿ ಜನವರಿ 1 ನೇ ತಾರೀಖು ಮೊದಲುಗೊಂಡು 1948 ನೇ ಇಸವಿ ಡಿಸೆಂಬರ್ 31 ಕ್ಕೆ ಅಂತ್ಯವಾಗುವ ಒಂದು ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳಿಗೆ ನಾಲ್ಕು ಪ್ರತಿಗಳಲ್ಲಿ (ಫೋರ್ ಕ್ವಾಡ್ರುಪ್ಲಿಕೇಟ್) ಮೊಹರಾದ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆಗಳ ಸೆಕ್ರೆಟರಿಯವರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ತಮ್ಮ ಆಫೀಸಿನಲ್ಲಿ 1947 ನೇ ಇಸವಿ ನವಂಬರ್ ಮಾಹೆ 3 ನೇ ತಾರೀಖು ಸೋಮವಾರ ದಿವಸ ೧೧ ಗಂಟೆಗೆ ತೆಗೆದುಕೊಳ್ಳುತ್ತಾರೆ

೧) ಮೇಲ್ಕಂಡ ಆಸ್ಪತ್ರೆಗಳಿಗೆ ಬೇಕಾಗುವ ಆಹಾರ ಸಾಮಾನುಗಳು ಮತ್ತು ಇತರ ಆಸ್ಪತ್ರೆ ಸಾಮಾನುಗಳು.

೨) ಮೇಲ್ಕಂಡ ಆಸ್ಪತ್ರೆಗೆ ಬೇಕಾಗುವ ಬಿಳಿ ರೊಟ್ಟಿ

೩) ಕೃಷ್ಣರಾಜೇಂದ್ರ ಆಸ್ಪತ್ರೆಗೆ ಬೇಕಾಗುವ ಅಪ್ಪಟ ಹಸುವಿನ ಹಾಲು.

ಹೆಚ್ಚಿಗೆ ವಿವರಗಳಿಗೆ 1947 ನೇ ಇಸವಿ ಅಕ್ಟೋಬರ್ 9 ನೇ ತಾರೀಖು ಮೈಸೂರು ಗೆಜೆಟ್ 6 ನೇ ಭಾಗದ 766 ನೇ ಪುಟದಲ್ಲಿ ಪ್ರಾಯಿಸ್ ಆಗಿರುವ ಟೆಂಡರ್ ನೋಟಿಫಿಕೇಷನ್ ನೋಡಬಹುದು. ಮತ್ತು ಸೆಕ್ರೆಟರಿಯವರ ಆಫೀಸಿನಲ್ಲಿ ಟೆಂಡರ್ ನೋಟಿಫಿಕೇಷನ್ ಮತ್ತು ಇತರ ವಿವರಗಳನ್ನು ಪಡೆಯಬಹುದು

(ಸಹಿ) ಎಂ ಚೂಡಪ್ಪ, ಸೆಕ್ರೆಟರಿ,
ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆ, ಮೈಸೂರು.

ಚೆಲುವಾಂಬಾ ಆಸ್ಪತ್ರೆ, ಮೈಸೂರು.

ತಾ॥ ೪-೧೦-೪೭.

ಟೆಂಡರ್ ನೋಟೀಸು

ಮೈಸೂರು ಚೆಲುವಾಂಬಾ ಆಸ್ಪತ್ರೆಗೆ ೧೯೪೮ ನೇ ಜನವರಿ ೧ ನೇ ತಾರೀಖು ಮೊದಲ್ಗೊಂಡು ೧೯೪೮ ನೇ ಡಿಸೆಂಬರ್ ೩೧ ರ ವರೆಗೆ ಎಲ್ಲಾ ದಿನವೂ ನಿಂತ ಬೇಕಾಗುವ ಅಪ್ಪಟ ಹಸುವಿನ ಹಾಲಿನ ಸಪ್ಲೈ ಬಗ್ಗೆ ಮೂರು ಪ್ರತಿಗಳಲ್ಲಿ ಸೀಲುದ ಟೆಂಡರುಗಳನ್ನು ಸೆಕ್ರೆಟರಿಯವರು ಆವರ ಆಫೀಸಿನಲ್ಲಿ ತಾ॥ ೧—೧೧-೧೯೪೭ ನೇ ಶನಿವಾರದ ದಿನ ೧೧ ಘಂಟೆಗೆ ತೆಗೆದುಕೊಳ್ಳುತ್ತಾರೆ.

ಹೆಚ್ಚಿನ ವಿವರಗಳಿಗೆ ೧೯೪೭ ನೇ ಅಕ್ಟೋಬರ್ ತಾರೀಖು ೯ ನೇ ಮೈಸೂರು ಗೆಜೆಟ್ಟಿನಲ್ಲಿ ನಮೂದಿಸಿರುವ ನೋಟೀಸನ್ನು ನೋಡಬಹುದು [illegible] ಆಫೀಸಿನಲ್ಲಿ ಪಡೆಯಬಹುದು.

(ಸಹಿ) ಎಂ. ಚೂಡಪ್ಪ,
ಸೆಕ್ರೆಟರಿ.

ಮೈಸೂರು ಸಿಟಿ ಮುನಿಸಿಪಲ್
ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೆರಣಿಗಳನ್ನು ತಟ್ಟುತ್ತಿರುವುದು ಕಂಡು ಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಕೋರಿದೆ ಹಾಗೆ ನಿಲ್ಲಿಸದಿದ್ದಲ್ಲಿ ಮುನಿಸಿಪಲ್ ಬೈಲಾ ರೀತ್ಯಾ ಕ್ರಮಗಳು ತೆಗೆದುಕೊಳ್ಳಲಾಗುತ್ತೆ.

ಎಂ. ಎಸ್. ಹಿರಣ್ಣಯ್ಯ,
ಪ್ರೆಸಿಡೆಂಟ್,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು.

ಪ್ರತಿ ದಿನ ೩ ಆಟಗಳು
ಇದೇ 22-10-47 ನೇ ಬುಧವಾರದಿಂದ
— ಫೇಮಸ್ ಪಿಕ್ಚರ್ಸ್‌ರವರ —
ಮೇರಾ - - ಸೊಹಾಗ್
—: ಪಾತ್ರ : —
ಕಮಲಾಕೊಟ್ನಿಸ್, ಅರೂಣ್,
ಸುಲೋಚನಾ ಚಟರ್ಜಿ,
● ಮತ್ತಿತರರು ●
ಒಲಿಂಪಿಯಾ ಟಾಕೀಸ್

ಆಪೇರಾ ಟಾಕೀಸ್
ತಾರೀಖು ೨೪-೧೦-೪೭ ರಿಂದ
ಪ್ರತಿ ದಿನ ಮೂರು ಆಟಗಳು
ಮ್ಯಾಡ್ ಮ್ಯಾನ್
(ಹುಚ್ಚು ಮನುಷ್ಯ)
ಎಂ. ಎಸ್ ಕೃಷ್ಣನ್,
ಟಿ. ಎ. ಮಧುರಂ ನಟಿಸಿರುವ
● ತಮಿಳು ಚಿತ್ರ ●

ಬೆಳಗಿನ ಪ್ರದರ್ಶನ
ಒಲಿಂಪಿಯಾ ಟಾಕೀಸ್
22-10-47 ರಿಂದ ಮೂರು ದಿವಸಗಳು
ಪ್ರಭಾತ್‌ರವರ
ಗೋಪಾಲ ಕೃಷ್ಣ
ಪಾತ್ರ:— ಶಾಂತಾ ಆಪ್ಟೆ

WOODLANDS
Morning shows from 24-10-47
Let's Face it
—: Featuring :—
Bob-hop Betty Hutton

ಶ್ರೀ
ಗಣೇಶಾ ಟಾಕೀಸ್
23-10-47 ರಿಂದ
ಪ್ರತಿ ದಿನ ೩ ಆಟಗಳು
ಅರುಂಧತಿ
(ತಮಿ
—: ಪಾತ್ರ :—
ಹೊನ್ನಪ್ಪ ಭಾಗವತರ್,
ಯು. ಆರ್. ಜೀವರತ್ನಂ,
ಎನ್. ಎಸ್ ಕೃಷ್ಣನ್,
ಟಿ ಎ. ಮಧುರಂ.

Morning Shows on 24, 25 26 and 27th at 10-45 a m
MAN IN GREY
—: Starring :—
MARGARET LOCKWOOD,
JAMES MASON
Showing for the first time in Mysore

ರಾಜಕಮಲ್
17—10—47 ರಿಂದ
ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್‌ರವ
ಜೀವನ್ ಯಾತ್ರ
(ಹಿಂದಿ)
—: ಭೂಮಿಕೆ :—
ನಯನತಾರ, ಶಾಂತಾರಾಂ, ಬಾಬುರಾ
ಹೆಂಡಾರ್ಕರ್, ಯಾಕೂಬ್

From 21-10-47 for 4 d
Daily at 10-30 a m.
"Bowery to Broadway"
—: WITH :—
Maria Montez, Susan Foster, Jack Oakie, Turhan Bey

UNIVERSITY OF MYSO

No. G 4. 277/47-48

Office of the Univers
of Mysore,
Mysore, dated 11th Oct

CIRCULAR

RE-OPENING OF COLLEGES

University Colleges the Medical School re-open on Monday 27th October 1947, the Dasara Holidays

BY ORDER
(Sd) D. S. GORD
Registr

Printed and published by A. K. Natarajan at the Sadhvi Press D. Subbaiah Road ... Mysore.

★ ಮೈಸೂರಿನ ನೂತನ ಸ್ವತಂತ್ರ ಮಂತ್ರಿ ಮಂಡಳ ★

ಶ್ರೀ|| ಹೆಚ್. ಸಿ. ದಾಸಪ್ಪ

— —



ಶ್ರೀ|| ಹೆಚ್. ಸಿದ್ದಯ್ಯ

— —

ಮಹಮ್ಮದ್ ಷರೀಫ್

ಫೋನ್ ನಂ. 508 || ವಂದೇ ಮಾತರಂ ||

ವಿಶೇಷ ಸಂಚಿಕೆ | ೨೪-೧೦-೪೭ | ಶುಕ್ರವಾರ

ಪ್ರಧಾನ ಮಂತ್ರಿ

ಶ್ರೀ|| ಕೆ. ಚೆಂಗಲರಾಯ ರೆಡ್ಡಿ

ಶ್ರೀ|| ಆರ್ ಚೆನ್ನಿಗರಾಮಯ್ಯ

ಶ್ರೀ|| ಡಿ. ಹೆಚ್. ಚಂದ್ರಶೇಖರಯ್ಯ

ಶ್ರೀ|| ಕೆ. ಟಿ. ಭಾಷ್ಯಂ

—

ಶ್ರೀ|| ಟಿ. ಮರಿಯಪ್ಪ

—

ಶ್ರೀ|| ಪಾಮಿಡಿ ಸುಬ್ಬರಾಮಶೆಟ್ಟಿ

ಸಾಧ್ವಿ

ತಾ|| ೨೪-೧೦-೪೭ ಶುಕ್ರವಾರ

ಪ್ರಜಾ ಪ್ರಭುತ್ವಕ್ಕೆ ವಿಜಯವಾಗಲಿ!

ಇದು ಸಂಸ್ಥಾನದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿವಸ. ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ರಾಷ್ಟ್ರನಾಯಕರು ಸಂಸ್ಥಾನದ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿರುವ ಸುದಿನ. ಸಂಪೂರ್ಣ ಪ್ರಜಾ ಪ್ರಭುತ್ವಕ್ಕೆ ಬೇಕಾದ ಸ್ಥಾಪನೆಯನ್ನು ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಮಯ ಕಾಲ.

ಇಂತಹ ಸುದಿನ ಆಗಮನವನ್ನು ಸಂಸ್ಥಾನದ ಪ್ರಜೆಗಳು ಬಹುಕಾಲದಿಂದಲೂ ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದರು. ಅದಕ್ಕಾಗಿ ಅಪಾರವಾದ ಕಷ್ಟ, ನಷ್ಟಗಳನ್ನು ಅನುಭವಿಸಿದರು. ಅದರ ಫಲವಾಗಿ ಇಂದು ಪ್ರಜಾ ವರ್ಗದವರು ಹೊಣೆಯ ಜವಾಬ್ದಾರೀ ಸರ್ಕಾರವನ್ನು ಗಳಿಸಿರುವರು. ಸಂಸ್ಥಾನದ ಪ್ರಮುಖ ಸಾರ್ವಜನಿಕ ಸಂಸ್ಥೆಯಾದ ಕಾಂಗ್ರೆಸ್ ಮಹಾ ಸಭೆಗೂ, ಪ್ರಭುತ್ವದವರಿಗೂ ಸಮಾಧಾನಕರವಾದ ಒಪ್ಪಂದವಾಗಿ ಶ್ರೀಮನ್ಮಹಾರಾಜರವರು ಪಟ್ಟಕ್ಕೆ ಬಂದಾಗ ಪ್ರಕಟಿಸಿದ ಪ್ರಜಾಪ್ರಭುತ್ವ ಧ್ಯೇಯವು ಈಡೇರಿರುವುದು.

ರಾಜಕೀಯ ಜೀವನದ ಉನ್ನತ ಧ್ಯೇಯವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಹಕರಿಸಿದ ಮಹಾಪ್ರಭುಗಳನ್ನೂ, ಪ್ರಜಾಕೋಟಿಯನ್ನೂ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಸಂಸ್ಥಾನದಲ್ಲಿ ಇಂದಿನಿಂದ ಹೊಸ ಯುಗವು ಆರಂಭವಾಗಿ ಸುಖ, ಶಾಂತಿಗಳು ನೆಲೆಸಲೆಂದು ಹಾರೈಸುತ್ತೇವೆ. ನೂತನ ಮಂತ್ರಿಮಂಡಲದವರು ತಮ್ಮ ಉದಾತ್ತ ಧ್ಯೇಯ ಸಾಧನೆಯಲ್ಲಿ ಯಶಸ್ವಿಯಾಗಿ ತಮ್ಮ ಸಂಸ್ಥೆಯ ಮತ್ತು ಸಂಸ್ಥಾನದ ಕೀರ್ತಿಯನ್ನು ಇತರೀ ಪ್ರಕಾಶಮಾನವಾಗಿ ಬೆಳಗಲೆಂದು ಕೋರುತ್ತೇವೆ. ಸಕಲರಿಗೂ ಭಗವಂತನು ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಪ್ರತಿ ದಿನ ೩ ಆಟಗಳು

ಇದೇ 24-10-47 ನೇ ಶುಕ್ರವಾರದಿಂದ

— ಫೇಮಸ್ ಪಿಕ್ಚರ್ಸ್‌ರವರ —

ಮೀರಾ - - ಸೊಹಾಗ್

—: ಪಾತ್ರ :—

ಕಮಲಾಕೊಟ್ನೀಸ್, ಅರೀಣ, ಸುಲೋಚನಾ, ಚಿಟ್ನೀಸ್,

● ಮತ್ತಿತರರು ●

ಒಲಿಂಪಿಯಾ ಟಾಕೀಸ್

ಧ್ವಜಾರೋಹಣ

ಮೈಸೂರು ೨೪

ಈ ದಿನ ಬೆಳಗ್ಗೆ ಟೌನ್‌ಹಾಲ್ ಮೈದಾನದಲ್ಲಿ ನೂತನ ಮಂತ್ರಿಗಳಾದ ಶ್ರೀ ಹೆಚ್. ಸಿ. ದಾಸಪ್ಪನವರು ಬಾಲಸೇವಾ ಸಮಾಜದ ಆಶ್ರಯದಲ್ಲಿ ಮೈಸೂರಿನ ಧ್ವಜವನ್ನು ಆರೋಹಣ ಮಾಡಿದರು. ಶ್ರೀ ಎಂ. ಎಲ್. ನಂಜರಾಜೇ ಅರಸಿನವರು ರಾಷ್ಟ್ರಧ್ವಜವನ್ನು ಹಾರಿಸಿದರು. ಈಗ ಸಂಸ್ಥಾನಕ್ಕೆ ಸಂಪ್ರಾಪ್ತವಾಗಿರುವ ಸ್ವಾತಂತ್ರ್ಯದ ವಿಷಯವನ್ನು ವಿವರಿಸಿ, ಸಕಲರೂ ಮಹಾಜನರ ಸೇವೆಗೆ ನೆರವು ನೀಡಬೇಕೆಂದು ಅವರು ಕೋರಿದರು.

ಶ್ರೀ ಎಂ. ಎನ್. ಜೋಯಿಸರು ಈ ದಿನ ಬೆಳಗ್ಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಸೇವಾದಳ ಸಂಘದ ಆಶ್ರಯದಲ್ಲಿ ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದರು.

ಬಹಿರಂಗ ಸಭೆ

ಈ ದಿನ ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯುತ್ತದೆ. ಕಾಂಗ್ರೆಸ್ ನಾಯಕರುಗಳೂ, ಇತರ ಮುಖಂಡರುಗಳೂ ಇಂದಿನ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಭಾಷಣ ಮಾಡುವರು.

WOODLANDS

From 24-10-47

Daily 3 Shows

Dick Tracy

V/S

Crime Inc.

(Full Serial)

Fifteen Parts

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯ ವಿದ್ದಾಗ್ಯೂ ಸಹಾ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಔಟ್ಲೆಟ್ ಕಕ್ಕಸುಗಳು ಕಟ್ಟಿಸುವುದಿಲ್ಲ ಮತ್ತು ಬಚ್ಚಲು ವಗೈರೆ ನೀರು ಸಹ ಚರಂಡಿ ಹರಿಯುವ ಹಾಗೆ ಮಾಡಿಸುವುದಿಲ್ಲ. ಮನೆ ಮಾಲೀಕರುಗಳು ಕೂಡ್ಲೆ ಡ್ರೈನೇಜು ಸೌಲಭ್ಯವಿರುವ ಚರಂಡಿ ನಳಕ್ಕೆ ಫ್ಲಷಿಂಗ್ ಕಕ್ಕಸುಗಳನ್ನು ವಗೈರೆ ಕಟ್ಟಿಸಬೇಕಾಗಿ ಕೋರಿದೆ. ತಪ್ಪಿದರೆ ಕಾನೂನಿನ ಪ್ರಕಾರ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆಯಲಾಗುತ್ತೆ.

ಎಸ್. ಎಸ್. ಓಡಣ್ಣಯ್ಯ,

ಪ್ರೆಸಿಡೆಂಟ್

ಸಿಟಿ ಮುನಿಸಿಪಲ್ ಕೌನ್ಸಿಲ್,

ಮೈಸೂರು

ಬೆಂಗಾಲ್ ಶಿಲ್ಕ ಸೀರೆಗಳು

ಧರ್ಮಾವರಂ, ಮೈಸೂರು ಶಿಲ್ಕು

ಪಂಚೆ, ಶೀರೆಗಳಿಗೆ

M V ಭೋಜಯ್ಯ ಬಿ. ಎ

ಇಂಡಿಯಾ ಬ್ಯಾಂಕ್ ಮಹಡಿಯಿಂದ ನೋಡಿ

ನೂತನ ಮಂತ್ರಿ ಮಂಡಳ

ಈ ದಿನ ಅಧಿಕಾರ ಸ್ವೀಕಾರ

ಸ್ವಂ. ವು. ಫೋನ್] [ಬೆಂಗಳೂರು ೨೪

ಈ ದಿನ ಮಧ್ಯಾಹ್ನ ಹೊಸ ಮಂತ್ರಿ ಮಂಡಳದ ಸದಸ್ಯರು ಅಠಾರಾ ಕಛೇರಿಯಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಈ ಬಗ್ಗೆ ವಿಶೇಷ ಗೆಜೆಟ್ ಪ್ರಕಟಣೆಯೊಂದು ಹೊರಟಿದೆ. ಹೊಸ ಸಚಿವರುಗಳು ಬುಧವಾರ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸುವರೆಂದು ತಿಳಿದು ಬಂದಿದೆ.

ಈ ದಿನ ಬೆಳಗ್ಗೆ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ರಾಷ್ಟ್ರಧ್ವಜವನ್ನು, ಶ್ರೀ ಕೆ ಟಿ ಭಾಷ್ಯಂರವರು ಮೈಸೂರು ಧ್ವಜವನ್ನೂ ಹಾರಿಸಿದರು.

ಸಂಜೆ ಬಸಪ್ಪಾ ಪಾರ್ಕಿನಲ್ಲಿ ನೂತನ ಮಂತ್ರಿಗಳ ಗೌರವಾರ್ಥವಾಗಿ ಬಹಿರಂಗ ಸಭೆಯನ್ನೇರ್ಪಡಿಸಲಾಗಿದೆ

ಪ್ರಭುಗಳೊಡನೆ ರೆಡ್ಡಿಯವರ ಭೇಟಿ

ನಿನ್ನೆ ಬೆಳಗ್ಗೆ ೧೧-೩೦ ಗಂಟೆಯದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯ ರೆಡ್ಡಿಯವರು ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಸಂದರ್ಶನವನ್ನು ಪಡೆದುಕೊಂಡರು. ಅರ್ಧ ಗಂಟೆ ಕಾಲ ಸಂಭಾಷಣೆ ನಡೆಯಿತು. ಮಂತ್ರಿ ಮಂಡಲವು ಯಶಸ್ವಿಯಾಗಿ ಕೆಲಸ ಮಾಡಲೆಂದು ಪ್ರಭುಗಳು ಹಾರೈಸಿ ರೆಡ್ಡಿಯವರನ್ನು ಬೀಳ್ಕೊಟ್ಟರೆಂದು ತಿಳಿದು ಬಂದಿದೆ.

ಶ್ರೀ|| ರೆಡ್ಡಿಯವರು ಕರಿಯ ಸಿಲ್ಕ್ ಬಿಳಿಯ ಪಂಚೆ ಮತ್ತು ಖಾದಿ ಟೋಪಿಯನ್ನು ಧರಿಸಿ ಅರಮನೆಗೆ ತೆರಳಿದ್ದರು. ಅವರು ನಿನ್ನೆ ಸಂಜೆ ಬೆಂಗಳೂರಿಗೆ ಪ್ರಯಾಣ ಮಾಡಿದರು.

WOODLANDS

Morning shows from 24-10-47

Let's Face it

—: Featuring :—

Bob-hop Betty Hutton

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸ್

ಸಾಮಾನುಗಳ ಹರಾಜು

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಆಕ್ವೈರಾಗಿರುವ ಮನೆಗಳ ಬಾಲ್ಕು, ಬಾಗಿಲು, ಕಿಟಕಿ, ಮತ್ತು ಜಂತಿಗಳು ವಗೈರೆ ಸಾಮಾನುಗಳನ್ನು ಪ್ರತಿ ಭಾನುವಾರವೂ ಲ್ಯಾನ್ಸ್‌ಡೌನ್ ಬಜಾರಿನ ಹಿಂಭಾಗದಲ್ಲಿ ಬಹಿರಂಗವಾಗಿ ಬೆಳಗ್ಗೆ ೮ ಗಂಟೆ ಜಾಗಾಯ್ತು ಹರಾಜು ಮಾಡಲ್ಪಡುತ್ತೆ. ಸದರಿ ಸಾಮಾನುಗಳನ್ನು ಪಡೆಯಲು ಅಪೇಕ್ಷೆಯುಳ್ಳವರು ಹರಾಜು ಕಾಲದಲ್ಲಿ ಹಾಜರಾಗಿ ಭಿಡ್ ಮಾಡಿ ಸಾಮಾನುಗಳನ್ನು ಪಡೆಯಬಹುದು.

ಕೆ ಜಿ ಶೆಟ್ಟಿ,

ಮೈಸೂರು — ಛಾರ್ ಛೇರ್ಮನ್

೧೦-೧೦-೪೭ — ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್

ವುಡ್‌ಲ್ಯಾಂಡ್ಸ್

24-10-47 ರಿಂದ

ಪ್ರತಿ ದಿನ ೩ ಆಟಗಳು

ಡಿಕ್ ಟ್ರೇಸಿ

ವರ್ಸಸ್

ಕ್ರೈಂ ಇಂಕ್

(ಪೂರ್ತಿ ಸೀರಿಯಲ್)

15 ಭಾಗಗಳು

ರಾಜಕಮಲ್

24-10-47 ರಿಂ

2 ನೇ ವಾರ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ

ಜೀವನ್ ಯಾ

(ಹಿಂದಿ)

—: ಭೂಮಿಕೆ :—

ನಯನತಾರೆ, ಶಾಂತರಿ, ಬಾಬು, ಜೆಂಕಾರ್ನ್ನರ್, ಯಾಕೂಬ್

Morning Shows from 25-10-47 for 4 days da at 10-30 a m.

Pardon My Sorong

—: with :—

Abbott & Costello, Virgnia Bruce, Robert Paige.

ಎಸ್. ಎನ್. ಪಂಡಿತ್ ಅ ಸನ್ಸ್ ರವರ ಸಿದ್ಧೌಷಧ

ಸ್ಥಾನಕ್ಕೆ — ಮಹಾಂಗ-ಧಾ ಮಹಾಚಂದನಾ

ಸಂಜೀವಿನಿ ತೈಲ— ಸಕಲ ರೋ ಗಾ ಸಂಜೀವನ : ಸೀಸೆ

ಪಂಚಾಮೃತ—ಮಲೇರಿಯಾ ನ್ನು ಕರಗಿಸುವ ಅಮೃತ ಸೀಸೆ

ದ್ರಾಕ್ಷಾದಿಪಾಕ ಪಂಚಾಂಗ್ನಿ ಬಿ ಸಿಕ್ಷಾಜೀರ್ಣಗಳಿಗೆ ರಾಮ ಎರಡರಿಂದ ಬೆಲೆ 1-12-0

ವಾಸಾದಿಪಾಕ, ಶ್ವಾಸ ಕ ದಮ್ಮು ಉಬ್ಬಸಗಳಿಗೆ ಕೈಗೊಂಡ ಪಥ — ಎರಡು ಬೆಲೆ

ಮೈಸೂರು. ಆಯುರ್ವೇದಿಕ 90 ಲ್ಯಾನ್ಸ್‌ಡೌನ್ ಬಜಾರ್, ಮೈ

Edited printed and pu by A. R. Nagarajan at the Press D. Subbaiah Road My

ಫೋನ್ ನಂ. 508 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೬] ಶನಿವಾರ ೨೫-೧೦-೪೭ [ಸಂಚಿಕೆ ೫೯

ಕರ್ಣಾಟಕ ನಾಯಕರಿಗೆ ಪ್ರಭುಗಳ ಭೇಟಿ

ವಿಜಯೋತ್ಸವದ ಸಭೆ

ಟೌನ್‌ಹಾಲ್ ಮೈದಾನದಲ್ಲಿ ಭಾಷಣಗಳು

ಮೈಸೂರು ೨೪

ಪ್ರಜಾಮುಖಂಡರಾಗಳ್ಳೆ ಜವಾಬ್ದಾರಿ ಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡ ಸಂಬಂಧದಲ್ಲಿ ವಿಜಯೋತ್ಸವವನ್ನು ಆಚರಿಸಲು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಒಂದು ಬಹಿರಂಗ ಸಭೆ ನಡೆಯಿತು. ಸುಮಾರು ೩೦ ಸಹಸ್ರ ಜನರು ಸೇರಿದ್ದರು. ಶ್ರೀ ಎಂ. ಎಸ್. ಜೋಯಿಸರು ಅಗ್ರಾಸನವನ್ನು ವಹಿಸಿದ್ದರು. ರಾಷ್ಟ್ರಗೀತೆ ಮತ್ತು ಊವಣಿಗೆ ನಂತರ ಶ್ರೀಗಳಾದ ತಗಡೂರು ರಾಮಚಂದ್ರರಾವ್, ಪಾಲಹಳ್ಳಿ ಸೀತಾರಾಮಯ್ಯ, ನಾರಾಯಣಸ್ವಾಮಿ, ಅಗರಂ ಸೂರ್ಯನಾರಾಯಣ ಪಂಡಿತ್, ಹೆಚ್. ಕೆ. ಕುಮಾರಸ್ವಾಮಿ ಮತ್ತು ಎಸ್. ರಂಗರಾಮಯ್ಯನವರು ಭಾಷಣಮಾಡಿದರು.

ಸಂಸ್ಥಾನದಲ್ಲಿ ಈಗ ಸ್ಥಾಪಿತವಾಗಿರುವ ೨೫ ಪ್ರಭುತ್ವಕ್ಕಾಗಿ ಅಟಲವ್ಯದ್ದರೂ ಸಲ್ಲಿಸಿದ ಅಪಾರವಾದ ಸೇವೆಯನ್ನು ಭಾಷಣಕಾರರು ಕೊಂಡಾಡಿ ಪ್ರಜಾಪ್ರಭುತ್ವವು ಯಶಸ್ವಿಯಾಗಿ ಸಾಗಲು ಸಕಲರೂ ಸಹಕಾರವನ್ನು ನೀಡಬೇಕೆಂದು ಕೋರಿದರು. ಮಹಾರಾಜರವರು ಕಾಲಗತಿಯನ್ನರಿತು ಪ್ರಜೆಗಳಿಗೆ ಸಂಪೂರ್ಣ ಅಧಿಕಾರವನ್ನು ವರ್ಗಾಯಿಸಿರುವುದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿದರು. ಇದುವರೆಗೆ ನಿರಂಕುಶ ಪದ್ಧತಿಯಿಂದ ಉಂಟಾಗಿದ್ದ ಸ್ವಾರ್ಥ, ಲಂಚಕೋರತನ, ಪಕ್ಷಪಾತ ಮತ್ತು ಆಡಳಿತದ ದೌರ್ಬಲ್ಯಗಳು ಮುಂದೆ ನಿಯಮವಾಗಿ ಸತ್ಯ ಮತ್ತು ಧರ್ಮಗಳ ಆಧಾರದ ಮೇಲೆ ರಾಜ್ಯಭಾರವು ನಡೆಯಲೆಂದು ಹಾರೈಸಿದರು.

ಸಂಸ್ಥಾನದ ನೂತನ ರಾಜ್ಯಾಂಗವನ್ನು ರಚಿಸುವ ಕಾರ್ಯವು ಹೊಸ ಮಂತ್ರಿಮಂಡಲದ ಮುಂದೆ ಇರುವ ಅತ್ಯಂತ ಪ್ರಾಮುಖ್ಯದ ಪ್ರಶ್ನೆಯೆಂದೂ ಅದಕ್ಕಾಗಿ ಸದ್ಯದಲ್ಲೇ ನಡೆಯಲಿರುವ ಚುನಾವಣೆಗಳಲ್ಲಿ ತಕ್ಕ ಯೋಗ್ಯತೆಯುಳ್ಳ ಪ್ರಜಾಪ್ರತಿನಿಧಿಗಳನ್ನು ಆರಿಸಿ ಬಂದು ಆದರ್ಶಪ್ರಾಯವಾದ ರಾಜ್ಯಾಂಗವನ್ನು ನಿರ್ಮಿಸುವಂತೆ ಮಾಡಲು ಸಾರ್ವಜನಿಕರು ನೆರವು ನೀಡಬೇಕೆಂದೂ ಪ್ರಾರ್ಥಿಸಲಾಯಿತು.

ದೇಶದಲ್ಲೆಲ್ಲಾ ಘೋರವಾಗಿ ಕವಿದಿರುವ ಆಹಾರದ ದುಃಸ್ಥಿತಿಯನ್ನು ಬಗೆಹರಿಸಲು ಹೊಸ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡುವರೆಂದೂ, ಅದು ಯಶಸ್ವಿಯಾಗಬೇಕಾದರೆ ಬೆಳೆಯುವವರೂ, ಮಾರುವವರೂ, ಕೊಳ್ಳುವವರೂ ಪ್ರಭುತ್ವದೊಡನೆ ಸಂಪೂರ್ಣವಾಗಿ ಸಹಕರಿಸಬೇಕೆಂದೂ ಸಹ ಕೋರಲಾಯಿತು. ಈಗ ದೊರೆತಿರುವ ಸ್ವಾತಂತ್ರ್ಯದಲ್ಲಿ ಪ್ರತಿಯೊಬ್ಬರೂ ಭಾಗಿಯೆಂಬುದನ್ನು ಅರಿತು ಅದರ ನಿರ್ವಹಣೆಯಲ್ಲಿ ಸಂಪೂರ್ಣವಾದ ಶ್ರದ್ಧೆಯನ್ನು ವಹಿಸಿ ಸಂಸ್ಥಾನದ ಶ್ರೇಯೋಭಿವೃದ್ಧಿಯಾಗುವಂತೆ ಸಕಲ ಪ್ರಜೆಗಳೂ ನಡೆಯಬೇಕೆಂದು ಕೋರಲಾಯಿತು.

ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

॥ ಶುಭಮಸ್ತು ॥

ಮಂತ್ರಿಮಂಡಲ ಶುಭಾಶಂಸನಂ

ಜಗದೆ ಗುರುವೆನೆ ಮೆರೆದ ಗಾಂಧಿಜಿ
ಬಗೆದ ಮಾರ್ಗದೆ ಶಾಂತಿ ಲಭಿಸಿದ
ಸೊಗಸ ವರ್ಣಿಸಲರಿದು ನಿಜವೆನೆ ಮತ್ತೆ
ಪೇಳ್ವೆನು ॥

ಹಗೆಗಳೆಲ್ಲರು ಮಿತ್ರರಾದರು
ಬಗೆಯು ಶಾಂತಿಯು ಖಡ್ಗದಪ್ಪುಗೆ
ಮಿಗುವ ಶಾಂತಿಯು ಕಿರುಳ ನಂಬಿಹ
ಮಹಿಮ ಜಯ ಜಯತು ॥

ವಿಜಯದಶಮಿಯು ಭಾರ್ಗವಾರದೆ
ರುಜೆಯಡಗಿ ಮೈಸೂರ ಶಾಂತಿಯು
ನಿಜದೆ ನವ ಮಂತ್ರಿಗಳ ಸೂತ್ರದೆ
ನಡೆವುದೆಂದೆನಲು ॥

ವಿಜಯವಲ್ಲವೆ ಮತ್ತೆ ನಮಗಿದೆ
ಭುಜ ವಿಜಯನಾಯ್ತು ಮಂಗಳ
ವಿಜಯ ವರ ನವರತ್ನವಲ್ಲವೆ ಮಂತ್ರಿ
ಮಂಡಲವು ॥

ಹಿಂದೆಸೆದ ನೃಪ ಭೋಜ ಭೂಪನ
ಮುಂದೆ ಮೆರೆದಾ ಮಂತ್ರಿ ನವಮಣಿ
ಯಂದದಿವರೀಡಿ ಮತ್ತೆ ಸುಗ್ರಹ
ನವವಿದೆಂಬಂತೆ ॥

ಚಂದದಿಂ ಶಾಸನಕ್ಕೆ ಕೀರ್ತಿಯು
ಹೊಂದಿ ಬಾಳಲಿ ಮಂತ್ರಿಮಂಡಲ
ಮುಂದೆ ಸದ್ಗುರು ಯೋಗದಿಂ ಸಿರಿ
ವಿಜಯ ಪೊಂದಲಿ ॥

-ಆಶುಕವಿರತ್ನಂ ಭಾರತೀ

ನೇತಾಜಿ ಸಂಘ

ನೇತಾಜಿ ಸಂಘದ ಆಶ್ರಯದಲ್ಲಿ ನಿನ್ನೆ ದಿನ ಬೆಳಗ್ಗೆ ಸುಬ್ಬರಾಯನಕೆರೆಯಲ್ಲಿ ಶ್ರೀ ಮರ್ಗ ಎಂ. ಎಸ್. ಜೋಯಿಸರವರಿಂದ ಧ್ವಜಾರೋಹಣ ನಡೆಯಿತು. ಸಂಜೆ ಸಂಘದ ಆರಂಭೋತ್ಸವವು ಸಾಧ್ವೀ ಆಫೀಸ್ ಮಹಡಿಯ ಮೇಲೆ ಶ್ರೀ ವರ್ಮ ಅಗರಂ ರಂಗಯ್ಯನವರು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಎಸ್. ದೇಶಿಕಾಚಾರ್ಯರವರು ಸಭಿಕರಿಗೆ ಸ್ವಾಗತ ನೀಡಿದ ನಂತರ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ನರಸಿಂಹಯ್ಯಂಗಾರ್ಯರು ವರದಿಯನ್ನು ಓದಿದರು. ತರುವಾಯ ಶ್ರೀಗಳಾದ ಅಗರಂ ಸೂರ್ಯನಾರಾಯಣ ಪಂಡಿತರು ಮತ್ತು ಬಿ. ನಾರಾಯಣಸ್ವಾಮಿಯವರು ನೇತಾಜಿಯವರ ಆದರ್ಶದಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಯಶಸ್ವಿಯಾಗಿ ನಡೆಯುವಂತೆ ಭಗವಂತನನ್ನು ಪ್ರಾರ್ಥಿಸಿದರು. ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಕರ್ಣಾಟಕದ ನಾಯಕರಿಗೆ ಶ್ರೀಮನ್ಮಹಾರಾಜರ ಭೇಟಿ

ನವೆಂಬರ್ ೧ ನೇ ತಾರೀಖು ಶ್ರೀಮನ್ಮಹಾರಾಜರು ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲಿಯ ಸದಸ್ಯರಿಗೆ ಭೇಟಿ ಕೊಡುವುದಾಗಿ ತಿಳಿಯಪಡಿಸಿರುವರೆಂದು ಗೊತ್ತಾಗಿದೆ.

ಅಭಿನಂದನೆ

ಸಂಸ್ಥಾನದ ಸಕಲ ವಿದ್ಯಾ ಕೆಲಸಗಾರರ ಸಂಸ್ಥೆಯ ಸಭೆ ಶ್ರೀ ಎಂ. ಟಿ. ಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ದಯಪಾಲಿಸಿದುದಕ್ಕಾಗಿ ಪ್ರಭುಗಳನ್ನೂ, ಪ್ರಜೆಗಳ ಪರವಾಗಿ ಹೋರಾಟ ನಡೆಸಿ ಜಯಗಳಿಸಿದುದಕ್ಕಾಗಿ ಕಾಂಗ್ರೆಸ್ ಸಂಸ್ಥೆಯವರನ್ನೂ ಅಭಿನಂದಿಸಿ ನಿರ್ಣಯ ಮಾಡಿರುವರು.

ಹರಿಕಥೆ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ರಾಮಸೇವಾ ಸಂಘದ ಆಶ್ರಯದಲ್ಲಿ ವಿಜಯದಶಮಿ ಪ್ರಯುಕ್ತ ಈ ದಿನ ರಾತ್ರಿ ೯ ಗಂಟೆಗೆ ಶ್ರೀ ಹರಿಸರ್ವೋತ್ತಮದಾಸರಿಂದ ಶಶಿರೇಖಾ ಪರಿಣಯ ಎಂಬ ಹರಿಕಥೆ ನಡೆಯುತ್ತದೆ.

ಪಂಜಾಬ್ ನಿರಾಶ್ರಿತರಿಗೆ ಸಹಾಯ

ಪಶ್ಚಿಮ ಪಂಜಾಬಿನಿಂದ ಭಾರತಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಬರುತ್ತಿರುವ ನಿರಾಶ್ರಿತರಿಗೆ ಬಟ್ಟೆ, ಹಣ-ಮೊದಲಾದ ಸಹಾಯವನ್ನು ನೀಡಲು ರಾಜಧಾನಿಯ ವಕೀಲ ಸಂಘದವರು ನಿರ್ಧರಿಸಿದ್ದಾರೆ. ಇವುಗಳ ಸಂಗ್ರಹಕ್ಕಾಗಿ ಬರುವ ಸ್ವಯಂ ಸೇವಕರಿಗೆ ಮಹಾಜನರು ಸಹಾಯ ನೀಡಬೇಕೆಂದು ಸಂಚಾಲಕರಾದ ಶ್ರೀ ಎಂ. ಆರ್. ನರಸಿಂಹ ಮೂರ್ತಿಯವರು ಪ್ರಾರ್ಥಿಸಿರುತ್ತಾರೆ.

ಹೋಟೆಲ್ ಕೆಲಸಗಾರರ ಸಂಘ

ಮೈಸೂರು ನಗರದ ಹೋಟೆಲ್ ಕೆಲಸಗಾರರ ಸಂಘದ ಸಭೆಯು ಈ ದಿನ ೮-೩೦ ಗಂಟೆಗೆ ಲಕ್ಷ್ಮೀಪುರಂ ಮುಂಭಾಗದ ಮೈದಾನದಲ್ಲಿ ಸೇರುವುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಆದರಣೆ

ಪತ್ರಿಕೋದ್ಯೋಗಿಗಳೂ, ಕಾಂಗ್ರೆಸ್ ಸೇವಕರೂ ಆದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರ ಸಂಪಾದಕತ್ವದಲ್ಲಿ ನಿನ್ನೆಯಿಂದ ಆರಂಭವಾಗಿರುವ ಜನತಾ ದಿನಪತ್ರಿಕೆಯನ್ನು ನಾವು ಆದರದಿಂದ ಸ್ವಾಗತಿಸುತ್ತೇವೆ. ಪತ್ರಿಕೆಯು ಈ ಉದ್ಯಮವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಅಧಿಕಾರಿಗಳ ದೌರ್ಜನ್ಯವನ್ನು ಮರೆಯಿರಿ; ಕ್ಷಮಿಸಿರಿ

ನೂತನ ಮಂತ್ರಿಗಳ ಭಾಷಣ

ಸ್ವಂ ವ. ಫೋ.] ಬೆಂಗಳೂರು ೨೪

ನಿನ್ನೆ ಸಂಜೆ ಬನಪ್ಪ ಪಾರ್ಕಿನಲ್ಲಿ ೬೫ ಸಹಸ್ರ ಜನರು ಸೇರಿದ್ದ ಭಾರಿ ಬಹಿರಂಗ ಸಭೆಯಲ್ಲಿ ನೂತನ ಮಂತ್ರಿಮಂಡಲದ ಎಲ್ಲ ಸಚಿವರೂ ಭಾಷಣಮಾಡಿದರು. ಶ್ರೀ ಕೆ. ಟಿ. ಭಾಷ್ಯಂರವರು ಅಗ್ರಾಸನವನ್ನು ವಹಿಸಿದ್ದರು.

ಪ್ರಜೆಗಳು ತಮಗೆ ನೀಡಿದ ಸ್ವಾಗತಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿ ತಮ್ಮ ಮಂತ್ರಿಮಂಡಲಿಯವರು ಸದಾಕಾಲದಲ್ಲಿಯೂ ಪ್ರಜೆಗಳ ಸೇವೆಗೆ ಸಿದ್ಧರಾಗಿರುವುದಾಗಿ ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಭಾಷಣಮಾಡುತ್ತ ತಿಳಿಸಿದರು. ಸತ್ಯಾಗ್ರಹದ ಸಮಯದಲ್ಲಿ ಪೋಲೀಸರು ನಡೆಸಿದ ದೌರ್ಜನ್ಯಗಳ ಬಗ್ಗೆ ಪರಿಶೀಲನಾ ಸಮಿತಿಯೊಂದನ್ನು ನೇಮಿಸಲಾಗಿದೆ. ಆದರೆ ಸಾರ್ವಜನಿಕರು ಅವರನ್ನು ಶಿಕ್ಷಿಸಲು ಒತ್ತಾಯಪಡಿಸದೆ ಮರೆಯಿರಿ ಮತ್ತು ಕ್ಷಮಿಸಿರಿ-ಎಂಬ ನೀತಿಯನ್ನು ಅನುಸರಿಸಬೇಕು-ಎಂದು ಅವರು ಪ್ರಾರ್ಥಿಸಿದರು. ವರ್ತಕರು ಕಾಳಸಂತೆಯ ವ್ಯಾಪಾರವನ್ನು ತ್ಯಜಿಸಿ ಸರ್ಕಾರದೊಡನೆ ಸಹಕರಿಸಬೇಕೆಂದು ಕೋರಿದರು.

ಕಾಂಗ್ರೆಸ್ ಕಛೇರಿಗೆ ಸಭ್ಯರಿಂದ ಪ್ರತಿದಿನ ಪೂರೈಕೆ ಬಂದ. ತಮ್ಮ ಕೈಲಿರುವ ದಾಸ್ತಾನುಗಳನ್ನು ಕೆಲವರು ಹೇಳುತ್ತಿರುವರೆ ದಿನ, ಇದು ಈಗಿನ ಆಹಾರದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಭ ಸೂಚಕವೆಂದೂ ಶ್ರೀ ರೆಡ್ಡಿಯವರು ಹೇಳಿದರು. ನಾವು ಹಿಂದೂ ಮುಸ್ಲಿಂ ಐಕಮತ್ಯದ ಅವಶ್ಯಕತೆಯನ್ನು ಒತ್ತಾಯಪಡಿಸಿದರು. ಶ್ರೀ ಹಾಮಾಡಿ ಸುಬ್ರಾಯ, ಶೆಟ್ಟರು ಆಹಾರದ ಸಮಸ್ಯೆಯು ಬಗೆಹರಿಯಬೇಕಾದರೆ ಉತ್ಪಾದನೆ ಹೆಚ್ಚಾಗಬೇಕೆಂದು ಹೇಳಿದರು. ಈಗ ನಾವು ಗಳಿಸಿರುವ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಶಾಂತಿ ಮತ್ತು ಶಿಸ್ತು ಅಗತ್ಯವೆಂದು ಅಧ್ಯಕ್ಷರಾದ ಶ್ರೀ ಭಾಷ್ಯಂರವರು ನುಡಿದರು.

ಮಂತ್ರಿಮಂಡಲದ ಸಭೆ

ಈ ದಿನ ಬೆಳಗ್ಗೆ ಮಂತ್ರಿಮಂಡಲದ ಸಭೆಯು ಕ್ರೆಸೆಂಟ್ ಹೌಸ್ ಭವನದಲ್ಲಿ ಮೊದಲನೆಯದಾಗಿ ಶ್ರೀ ಕೆ. ಚಂಗಲರಾಯ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳು

ಶ್ರೀ ಹೆಚ್. ಆರ್. ಗುರುವಾ ರೆಡ್ಡಿಯವರ ಮಕ್ಕಳಾದ ಶ್ರೀ ಹೆಚ್. ಟಿ. ವಿಜಯರಾಘವ ರೆಡ್ಡಿ, ಶ್ರೀ ಜೆ. ಅಪ್ಪಾಜಿಗೌಡರ ಮಕ್ಕಳಾದ ಶ್ರೀ ಎ. ಮ. ನಿಸ್ಸಾಮಿ ಗೌಡ, ದಿವಂಗತ ಸರ್ ಪುಟ್ಟಣ್ಣಚೆಟ್ಟಿಯರ ಮೊಮ್ಮಕ್ಕಳಾದ ಶ್ರೀ ಬಿ. ಎಸ್. ರಾಜಶೇಖರಪ್ಪ, ಎಡತೊರೆ ಶ್ರೀ ಬಿ. ಕೆ. ಬಸಪ್ಪಸೆಟ್ಟರ ಮಕ್ಕಳಾದ ಶ್ರೀ ಬಿ. ಎಸ್. ಮಹದೇವಪ್ಪನವರುಗಳನ್ನು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳಾಗಿ ನೇಮಿಸಲಾಗಿದೆ. ಕರ್ನಲ್ ಗೋಪಾಲರಾಯರ ಮಕ್ಕಳಾದ ಶ್ರೀ ಎಸ್. ಜಿ. ನೀಲಕಂಠ ಅರಸರನ್ನು ಪ್ರೊ. ಪ್ರೊ. ಅಸಿಸ್ಟೆಂಟ್ ಹೆಲ್ತ್ ಆಫೀಸರನ್ನಾಗಿಯೂ, ಶ್ರೀ ಆರ್. ಪಿ. ಶಿವಣ್ಣನವರನ್ನು ಪಾರೆಸ್ಟ್ ಪ್ರೊಬೇಷನರಾಗಿಯೂ, ಶ್ರೀಗಳಾದ ಎಸ್. ಕೆ. ಸಿಂಗೇಗೌಡ ಮತ್ತು ಪಿ. ರುದ್ರಪ್ಪನವರನ್ನು ಸರ್ಕಾರದ ಸಂಸ್ಥೆಗಳ ಪ್ರೊಬೇಷನರುಗಳಾಗಿಯೂ ನೇಮಿಸಿ ಸರ್ಕಾರದ ಆಜ್ಞೆಯಾಗಿದೆ.

ರಸ್ತೆಗಳಿಗೆ ಪುನರ್ನಾಮಕರಣ

ಆಗ್ರಾ ನಗರದ ಜುಮ್ಮಾ ಮಸೀದಿಯ ಬಳಿ ಇರುವ ಮಾರ್ಕೆಟ್ಟಿಗೆ ನೇತಾಜಿ ಸುಭಾಷ್ ಚಂದ್ರ ಮಾರ್ಕೆಟ್ ಎಂದು ಕರೆದು ನಗರಸಮಿತಿಯು ನಿರ್ಣಯಮಾಡಿರುತ್ತದೆ. ಅಲ್ಲಿನ ರಸ್ತೆಗಳಿಗಿರುವ ಆಂಗ್ಲ ಹೆಸರುಗಳನ್ನು ರದ್ದುಗೊಳಿಸಿ ರಾಷ್ಟ್ರನಾಯಕರ ಹೆಸರುಗಳನ್ನಿಡಬೇಕೆಂದೂ ಈ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ

ಗ್ರಾಮಾಧಿಕಾರಿಗಳ ಸಂಘ

ಸ್ವಂ ವ.] ಚೆನ್ನರಾಯಪಟ್ಟಣ ೨೦ ಕಳೆದ ಗುರುವಾರ ಗ್ರಾಮಾಧಿಕಾರಿಗಳ ಸಂಘದ ಸಭೆಯು ಸೇರಿ ಅವರುಗಳ ಕುಂದುಕೊರತೆಗಳ ಬಗ್ಗೆ ಸಮಾಲೋಚನೆ ನಡೆಸಿತು. ಶ್ರೀ ಬಿ ರಾಮಚಂದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು

WOODLANDS
From 24-10-47
Daily 3 Shows
Dick Tracy
V/S
Crime Inc.
(Full Serial)
Fifteen Parts

ಪ್ರತಿ ದಿನ ೩ ಆಟಗಳು
ಇದೇ 24-10-47 ನೇ ಬುಧವಾರದಿಂದ
— ಫೇಮಸ್ ಪಿಕ್ಚರ್ಸ್‌ರವರ —
ಮೇರಾ - ಸುಹಾಗ್
—: ಪಾತ್ರ :—
ಕಮಲಾಕೊಟ್ನಿಸ್, ಅರುಣ್,
ಸುಲೋಚನಾ ಚಟರ್ಜಿ,
ಮುಂತಾದವರು
ಒಲಿಂಪಿಯಾ ಟಾಕೀಸ್

Edited printed and published by A. R. Nagarajan at the Sadhvi Press D. Subbaiah Road Mysore.

ಕಾಥೇವಾಡಿನ ತೀರದಲ್ಲಿ ಬಂದರು

ಕರಾಚಿ ಬಂದರು ಪಾಕಿಸ್ತಾನಕ್ಕೆ ಸೇರಿರುವುದರಿಂದ ಉತ್ತರ ಭಾರತದ ಆಮದು ರಫ್ತುಗಳಿಗೆ ಅನುಕೂಲವಾಗುವಂತಹ ಆಧುನಿಕ ರೀತಿಯ ಸೌಲಭ್ಯಗಳಿಂದ ಕೂಡಿದ ಬಂದರೊಂದನ್ನು ಕಾಥೇವಾಡಿನ ಸಮುದ್ರ ತೀರದಲ್ಲಿ ನಿರ್ಮಿಸಲು ಭಾರತ ಸರ್ಕಾರವು ಪರ್ಯಾಲೋಚಿಸುತ್ತಿದೆಯೆಂದು ವರದಿಯಾಗಿದೆ

ರಾಜಕಮಲ್
24-10-47 ರಿಂದ
2 ನೇ ವಾರ
ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್‌ರವರ
ಜೀವನ್ ಯಾತ್ರಾ
(ಹಿಂದಿ)

—: ಭೂಮಿಕೆ :—
ನಯನತಾರೆ, ಶಾಂತರಿ, ಬಾಬುರಾವ್ ಪೆಂಡಾರ್ಕರ್, ಯಾಕೂಬ್

Morning Shows from
25-10-47 for 4 days daily
at 10-30 a m.
Pardon My Sorong
—: with :—
Abbott & Costello,
Virgnia Bruce,
Robert Paige.

ಮುಸ್ಲಿಮರಿಗೇ ಪ್ರತ್ಯೇಕ ರೈಲು ಗಾಡಿ

ಪ್ರಯಾಣಿಕರಿಗೆ ರಕ್ಷಣೆಯನ್ನೊದಗಿಸುವ ಸಲುವಾಗಿ ಸಂಯುಕ್ತ ಪ್ರಾಂತ ಸರ್ಕಾರವು ವಿಶೇಷ ವ್ಯವಸ್ಥೆಗಳನ್ನು ಕೈಗೊಂಡಿದೆ. ಚಲಿಸುತ್ತಿರುವ ರೈಲಿನಿಂದ ಜನರನ್ನು ಹೊರಗೆಸೆಯಲಾಗುತ್ತಿರುವುದನ್ನು ತಪ್ಪಿಸಲು ಮುಸ್ಲಿಮರಿಗೇ ಪ್ರತ್ಯೇಕವಾದ ರೈಲು ಗಾಡಿಗಳನ್ನು ಉಪಯೋಗಿಸಲಾಗುತ್ತಿದೆ. ಮತ್ತು ಸಶಸ್ತ್ರರಾದ ರಕ್ಷಕರೂ ಸಹ ಈ ಗಾಡಿಗಳಲ್ಲಿ ಪ್ರಯಾಣ ಮಾಡುವರು

ವುಡ್‌ಲ್ಯಾಂಡ್ಸ್
ಡಿಕ್ ಟ್ರೇಸಿ
ವರ್ಸಸ್
ಕ್ರೈಂ ಇಂಕ್
೨೪—೧೦—೪೭ ರಿಂದ
ಪ್ರತಿ ದಿನ ೩ ಆಟಗಳು
(ಪೂರ್ತಿ ಸೀರಿಯಲ್)
15 ಭಾಗಗಳು

WOODLANDS
Morning shows from
24-10-47
Let's Face it
—: Featuring :—
Bob-hop-Betty Hutton

ಬೆಂಗಾಲ್ ಶಿಲ್ಕ್ ಸೀರೆಗಳು
ಧರ್ಮಾವರಂ, ಮೈಸೂರು ಶಿಲ್ಕು
ಪೂನಾ ಸೀರೆಗಳಿಗೆ
M. V. ಭೋಜಯ್ಯ ಬಿ. ಎ
ಇಂಡಿಯಾಬ್ಯಾಂಕಿನ ಎದುರು ಬಂದು ನೋಡಿ

Morning Shows At
Sri GANESHA TALKIES
on 26th, 27th and 28th
at 10-45 a. m.
Metro's
Son of Lassic
—: Starring :—
Peter Lawford,
Donald Crisp.
(Technicolour)

ಮೈಸೂರು ಸಿಟಿ ಇಂಪ್ರೂವ್‌ಮೆಂ
ಟ್ರಸ್ಟ್ ಬೋರ್ಡ್ ಆಫೀಸ್

ಸಾಮಾನುಗಳ ಹರಾಜು
ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಇಂಪ್ರೂವ್‌ಮೆ
ಟ್ರಸ್ಟ್ ಬೋರ್ಡಿಗೆ ಅಕ್ವಯರಾಗಿರು
ಸೆಗಳ ಬಾಬ್ತು ಬಾಗಿಲು, ಕಿಟಕಿ, ಪ
ಜಂತಿಗಳು ವಗೈರೆ ಸಾಮಾನುಗಳನ್ನು
ಧಾನುಮಾಂಪೂ ಲ್ಯಾನ್ಸ್‌ಟೌ
ರಿನ ಹಿಂಭಾಗದಲ್ಲಿ ಬಹಿರಂಗವಾಗಿ ಬೆ
ಗಂಟೆ ಲಾಗಾಯ್ತು ಹರಾಜು ಮಾ
ಡುತ್ತೆ. ಸದರಿ ಸಾಮಾನುಗಳನ್ನು
ಯಲು ಅಪೇಕ್ಷೆಯುಳ್ಳವರು ಹರಾಜಿ
ಲದಲ್ಲಿ ಹಾಜರಾಗಿ ಭಾಗವಹಿಸಿ
ಸಾಮಾನುಗಳನ್ನು ಪಡೆಯಬಹುದು

ಕೆ. ಜಿ. ಕಾಟೆ
ಮೈಸೂರು, ಛೇರ್ಮನ್
೧೦ - ೧೦ - ೪೭. ಮೈಸೂರು ಸಿ
ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋ

ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

University of Mysore

No. Ex 3. 193—47-48.

Office of the University
of Mysore, Mysore,
Dated 17th October 1947

NOTIFICATION

Postponement of University Examinations to be held on 3rd November 1947

It is hereby notified that the following * * Examinations notified to be held from 3rd November 1947, will be held from Thursday the 11th December 1947. The detailed time-table will be published in the Mysore Gazette.

* * 1 Intermediate in Arts. 2 Intermediate in Science. 3 Intermediate in Commerce 4 B A. Degree 5 B Sc Degree 6 B A (Hons) Preliminary. 7 B S [illegible] Preliminary 8 L M. P. Examinations.

By Order,
D. S. GORDON, Registrar.

University of Mysore

Notification No G 4. 1180/46-47

Office of the Universit
of Mysore, Mysore.
Dated 8th October 194

CONVOCATION, 1947.

In modification of this office Notification No. C 1180/46-47 dated 15th July, 1947, it is hereby notif that under Statute 78 degrees will be conferred year in absentia without the holding of a Con cation.

A separate communication will be addressed the candidates who have applied for degrees this ye

By Order,
D. S. GORDON,
Registrar

ಫೋನ್ ನಂ. 508 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೨] ಭಾನುವಾರ ೨೬-೧೦-೪೭ [ಸಂಚಿಕೆ ೧೬

ಭಾರತದ ಐಕ್ಯತೆಯಲ್ಲಿ ಮಹಾತ್ಮರ ನಂಬಿಕೆ

ಹುಜೂರು ಸೆಕ್ರೆಟೆರಿಯವರಿಗೆ ಜೀವದಾನ

(ಸ್ವಂ. ವ. ಪ್ರೋ.) [ಬೆಂಗಳೂರು ೨೬

ಹುಜೂರು ಸೆಕ್ರೆಟರಿಯವರಾದ ಶ್ರೀ॥ ಟಿ. ನಿರಂಜನರಾಜೇ ಅರಸಿನವರಿಗೆ ಡಿ ಸೆಂಬರ್ ತಿಂಗಳಿಂದ ೨ ವರ್ಷಗಳ ಅಧಿಕದ ಬಡ್ತಿಯನ್ನು ಶ್ರೀಮನ್ಮಹಾರಾಜರು ದಯಪಾಲಿಸಿರುವುದಾಗಿ ತಿಳಿದು ಬಂದಿದೆ.

ಪೋಲೀಸ್ ಇನ್ಸ್‌ಪೆಕ್ಟರುಗಳಿಗೆ ಬಡ್ತಿ

ಪೋಲೀಸ್ ಇನ್ಸ್‌ಪೆಕ್ಟರುಗಳಾದ ಶ್ರೀಗಳ್ ಪುಟ್ಟವೀರಯ್ಯ, ಎ ವೆಂಕೋಜಿರಾವ್ ಮತ್ತು ಟಿ ಬಿ ಆದಿನಾರಾಯಣರವರುಗಳ ಸುಪರಿಂಟೆಂಡೆಂಟರುಗಳನ್ನಾಗಿ ಬಡ್ತಿ ಕೊಟ್ಟು ತುಮಕೂರು, ದಾವಣಗೆರೆ ಮತ್ತು [illegible]ಗಳಿಗೆ ವರ್ಗಮಾಡಲಾಗಿದೆ.

ಶ್ರೀ ಟಿ. ಚಾಂಡಿಯವರನ್ನು ಸೀನಿಯ ಸೂಪರಿಂಟೆಂಡೆಂಟರಾಗಿ ನೇಮಿಸಲಾದೆ

ಮಾಜಿ ಮಂತ್ರಿಗಳ ವೇತನ

ಮಂತ್ರಿಗಳಾಗಿದ್ದ ಶ್ರೀಗಳು ಡಿ. ಹುಚ್ಚ ಗೌಡ ಮತ್ತು ಎಂ. ಶೇಷಾದ್ರಿಯವರಿಗೆ ಮನ್ಮಹಾರಾಜರವರು ಆರು ತಿಂಗಳು ವೇತನವನ್ನು ಪೂರ್ಣ ಸಂಬಳದ ಮೇಲೆ ಮಂಜೂರು ಮಾಡಿರುವುದಾಗಿ ತಿಳಿದು ಬಂದಿದೆ.

ಮತ್ತು ಮಾಜಿ ಖಾಸಗಿ ಮಂತ್ರಿಗಳಾದ ಡಾ॥ ರಾಯರ್, ಮಿ॥ ಪರೀಫ್ ಮತ್ತು ಶ್ರೀ ಎಲ್. ಸಿದ್ದಪ್ಪನವರಿಗೆ ೭೦೦ ರೂ. ನಿಂತೆ ವೇತನವನ್ನು ಮಂಜೂರು ಮಾಡಲಾಗಿದೆ.

ಮಂತ್ರಿಗಳ ಪೋರ್ಟ್‌ಫೋಲಿಯೊ

ಇದುವರೆಗೆ ನಡೆದಿರುವ ಸಮಾಲೋಚನೆಯ ಪ್ರಕಾರ ನೂತನ ಮಂತ್ರಿಗಳಿಗೆ ಈ ಕೆಳಕಂಡಂತೆ ಇಲಾಖೆಗಳು ವಹಿಸಲ್ಪಡಬಹುದೆಂದು ಹೇಳಲಾಗಿದೆ:—

ಶ್ರೀ ಕೆ ಚೆಂಗಲರಾಯ ರೆಡ್ಡಿ - ಆಹಾರ ಮತ್ತು ರೆವಿನ್ಯೂ, ಶ್ರೀ ಕೆ ಟಿ ಭಾಷ್ಯಂ - ಹೋಂ, ಶ್ರೀ ಹೆಚ್ ಸಿದ್ದಯ್ಯ - ಮುನ್ಸಿಪಲ್ ವ್ಯವಹಾರ ಮತ್ತು, ಶ್ರೀ ಟಿ ಮರಿಯಪ್ಪ - ಕೈಗಾರಿಕೆ [illegible], ಶ್ರೀ ಹೆಚ್ ಸಿ ದಾಸಪ್ಪ - ವ್ಯವಸಾಯ, ಶ್ರೀ ಆರ್ ಚೆನ್ನಿಗರಾಮಯ್ಯ - ಗ್ರಾಮಾಭಿವೃದ್ಧಿ, ಶ್ರೀ॥ ಡಿ ಹೆಚ್ ಚಂದ್ರಶೇಖರಯ್ಯ - ವಿದ್ಯಾಭ್ಯಾಸ, ಟಿ ಸುಬ್ರಹ್ಮಣ್ಯ ಶೆಟ್ಟಿ - ಕೈಗಾರಿಕೆ ಮತ್ತು ವ್ಯಾಪಾರ, ಮತ್ತು ಡಾ॥ ಮಹಮ್ಮದ್ ಷರೀಫ್ - ಹಣ ಕಾಸು

ಬುಧವಾರ ಮಂತ್ರಿಗಳು ರಾಜಪ್ರಮಾಣವನ್ನು ಸ್ವೀಕರಿಸಿದ ಮೇಲೆ [illegible]ಸ್ಥಾನದಲ್ಲೆಲ್ಲಾ ಒಂದು ದಿವಸ ಸಾರ್ವಜನಿಕ ರಜಾ ಕೊಡಲಾಗುವುದೆಂದು ತಿಳಿದು ಬಂದಿದೆ

ಸಚಿವರ ರಾಜೀನಾಮೆಗಳಿಗೆ ಮಹಾರಾಜರ ಅಂಗೀಕಾರ

ಮಂತ್ರಿ ಪದವಿ[illegible] ಡಾ॥ ರಾಯರ್, ಮಿ॥ ಪಿ ಎ ಪರೀಫ್, ಶ್ರೀ ಎಲ್ ಸಿದ್ದಪ್ಪ [illegible] ಶೇಷಾದ್ರಿ ಮತ್ತು ಶ್ರೀ ಗೌಡ [illegible] ರಾಜೀನಾಮೆಗಳನ್ನು ಶ್ರೀಮನ್ಮ[illegible] ಅಂಗೀಕರಿಸಿರುವರೆಂದು [illegible] ವಿಶೇಷ ಗೆಜೆಟ್ ಪ್ರಕಟ[illegible] [illegible]

ಸೂಚನೆ

ಚಾಮುಂಡೇಶ್ವರೀ ರಥೋತ್ಸವದ ಪ್ರಯುಕ್ತ ನಾಳೆ ದಿನ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ ವ್ಯವಸ್ಥಾಪಕ

ಜಿಲ್ಲಾ ಸತ್ಯಾಗ್ರಹಿಗಳ ಸಭೆ

ಮೈಸೂರು ೨೬

ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಇದೇ ೩೦ ನೇ ತಾ॥ ಗುರುವಾರ ಬೆಳಿಗ್ಗೆ ೮-೩೦ ಗಂಟೆಗೆ ಜಿಲ್ಲಾ ಬೋರ್ಡ್ ಕಛೇರಿಯ ಆವರಣದಲ್ಲಿ ಮೈಸೂರು ಜಿಲ್ಲಾ ಸತ್ಯಾಗ್ರಹಿಗಳ ದಿನವನ್ನು ಆಚರಿಸಲಾಗುತ್ತದೆ ಈ ಸಮಾರಂಭಕ್ಕೆ ಕಾಂಗ್ರೆಸ್ ಅಧ್ಯಕ್ಷರೂ, ನಾಯಕರೂ, ಎಲ್ಲ ಸಚಿವರೂ ದಯಮಾಡಿಸುವವರಾಗಿದ್ದಾರೆ ಮೈಸೂರು ಜಿಲ್ಲೆಯ ಎಲ್ಲ ಕಾಂಗ್ರೆಸ್ ಕೆಲಸಗಾರರೂ, ಸತ್ಯಾಗ್ರಹಿಗಳೂ ಈ ಸಮಾರಂಭಕ್ಕೆ ಬರಬೇಕೆಂದು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ ಎಚ್ ಗುಂಡರಾಜೇ ಅರಸಿನವರು ಕೋರುತ್ತಾರೆ

ದೇವಿ ಯಜ್ಞ

ಚಾಮುಂಡಿಪುರಂ ಬಡಾವಣೆಯಲ್ಲಿರುವ ೧೧೦೬ನೇ ನಂಬರ್ ಮನೆಯ ಶ್ರೀ ರಾಜರಾಜೇಶ್ವರೀ ಸನ್ನಿಧಿಯಲ್ಲಿ ನಾಳೆ ಸತ್ಯನಾರಾಯಣ ವ್ರತವೂ ಸೋಮವಾರ ಕ್ಷೀರಾಭಿಷೇಕ ಮತ್ತು ಅರ್ಚನೆಗಳೂ, ಬುಧವಾರ ಶ್ರೀ ದೇವಿಯಜ್ಞ ಪೂರ್ಣಾಹುತಿಯೂ, ಗುರುವಾರ ಸಂತರ್ಪಣೆಯೂ ನಡೆಯುವುವು. ಎಲ್ಲರೂ ಇದರಲ್ಲಿ ಭಾಗಿಗಳಾಗಬೇಕೆಂದು ಕೋರಲಾಗಿದೆ

ಸೇವಾ ಸಂಘ

ಶಿವರಾಂಪೇಟೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರೀ ದೇವಾಲಯದಲ್ಲಿ ಮೊನ್ನೆ ಶ್ರೀ ಎಂ ಎನ್ ಜೋಯಿಸರು ಸೇವಾ ಸಂಘದ ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀಗಳಾದ ಗಂಗಾಧರವರ್ಮ ಮತ್ತು ಚೌಡಯ್ಯನವರು ಭಾಷಣ ಮಾಡಿದರು

—

ಡೀಸೆಲ್ ಇಲ್ಲದೆ ತೊಂದರೆ

ಸ್ವಂ. ವ.] ಇದರಲ್ಲಿಗೂ ೨೧

ಇಲ್ಲಿನ ಜನರಿಗೆ ಡೀಸೆಲ್ ಸಿಕ್ಕದ [illegible] ತೊಂದರೆ ಪಡುತ್ತಿದ್ದಾರೆ ಈ ಬಗ್ಗೆ ಜನರು ಪಟೇಲರಿಗೆ ಡೀಸೆಲ್ ಕೊಡಬೇಕೆಂದು ಅರ್ಜಿ ಕೊಟ್ಟರೂ ಏನೂ ಪ್ರಯೋಜನ ನಡೆಯದು [illegible] ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಇತ್ತು ಇಲ್ಲಿ ದಾಸ್ತಾನನ್ನು ಪರೀಕ್ಷಿಸಿ [illegible] ಕಳುಹಿಸುವುದಾಗಿ ಭರವಸೆ ಇತ್ತರು

ಸತ್ಯಾಗ್ರಹಿಗಳಿಗೆ ಸ್ವಾಗತ

ನಂಜನಗೂಡು ೨೦

ಸತ್ಯಾಗ್ರಹದ ಹೋರಾಟದಲ್ಲಿ ಭಾಗಿಗಳಾಗಿ ಬಂಧನದಲ್ಲಿದ್ದು ಬಿಡುಗಡೆಯಾದ ಸತ್ಯಾಗ್ರಹಿಗಳನ್ನು ರೈಲ್ವೆ ನಿಲ್ದಾಣದ ಬಳಿ ಸ್ವಾಗತಿಸಿ ಮೆರವಣಿಗೆಯ ಮುಖಾಂತರ ಕರೆದುಕೊಂಡು ಹೋಗಲಾಯಿತು ಸಂಜೆ ಶ್ರೀ ಪೆಪ್ಪರ್‌ಮಿಂಟ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು

ಬಿಡುಗಡೆ ಹೊಂದಿದ ಎಲ್ಲ ಊರಿನ ಬಂದಿಗಳನ್ನೂ ಇಲ್ಲಿಗೆ ಬರಮಾಡಿಕೊಂಡು ಅವರುಗಳ ಮೆರವಣಿಗೆ ಮಾಡಲಾಯಿತು ಶ್ರೀ ಪಿ. ಮಹದೇವಯ್ಯನವರು ಕಳೆದ ಶನಿವಾರ ಊರಿನವರಿಗೆ ಸತ್ಕಾರವನ್ನೇರ್ಪಡಿಸಿದ್ದರು.

ಸತ್ಯಾಗ್ರಹಿ ಪತ್ತೆಯಿಲ್ಲ

ಬೆಳಗೊಳದ ಶ್ರೀ ಬಿ ರಾಮೇಗೌಡರು ಈ [illegible] ತಿಳಿಸುತ್ತಾರೆ:—

ಬೆಳಗೊಳದ ಶ್ರೀ ಎಸ್ ಎಂ ಗೋಪಾಲ್ ಎಂಬ ಸತ್ಯಾಗ್ರಹಿಯು ಶ್ರೀರಂಗಪಟ್ಟಣದಲ್ಲಿ ಶಿಕ್ಷೆ ಹೊಂದಿ ಬಿಡುಗಡೆಯಾದ ನಂತರ ಮಂಡ್ಯದ ಜೈಲಿನಲ್ಲಿದ್ದ ನನ್ನನ್ನು ನೋಡಿ ಬಿಟ್ಟು ಹೊರಟು ಹೋದವರು ಇದುವರೆಗೂ [illegible]ವಾಗಿರುವುದಿಲ್ಲ ಪೋಲೀಸ್ ಅಧಿಕಾರಿಗಳನ್ನು ವಿಚಾರಿಸಲಾಗಿ ಮಾಗಡಿಯಲ್ಲಿ [illegible] ಹೋಗಿ ಬಿಟ್ಟಿರುವುದಾಗಿ ತಿಳಿಸಿದ್ದಾರೆ ಆದರೆ ಅವರು ಇನ್ನೂ ವಾಪಸು ಬಂದಿರುವುದಿಲ್ಲ. ಅವರ ವಿಚಾರ ಗೊತ್ತಿದವರು ತಿಳಿಸಬೇಕಾಗಿ ಕೋರುತ್ತೇನೆ. ಅವರ ಹೆಸರು ಎಸ್ ಎಂ ಗೋಪಾಲ್, ವಯಸ್ಸು ೨೧ ವರ್ಷ, ಕೆಂಪುಮಿಶ್ರ ಬಿಳುಪು ಕ್ರಾಪ್ ತಲೆ, ಕನ್ನಡ ಭಾಷೆಯಾಡ ಬಲ್ಲರು.

ಪೌರಸಭಾಧ್ಯಕ್ಷರ ಚುನಾವಣೆ

ಸ್ವಂ. ವ.] ಕೃಷ್ಣರಾಜನಗರ ೨೬

ಇಲ್ಲಿನ ಪೌರಸಭೆಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಬರುವ ಗುರುವಾರ ನಡೆಯಲಿದೆ. ಶ್ರೀಗಳಾದ ಬಿ. ಬಸವರಾಜಪ್ಪ, ವೈ. ಎಸ್. ಶ್ರೀನಿವಾಸರಾವ್ ಮತ್ತು ವೈ. [illegible] ತಿಮ್ಮಪ್ಪಯ್ಯನವರುಗಳು ಉಮೇದುವಾರರಾಗಿ ನಿಂತಿದ್ದಾರೆ

—

ಸಂಗೀತ ಕಛೇರಿ

ಪ್ರತಿ ಸೋಮವಾರದ ಪ್ರಯುಕ್ತ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ವಿದ್ವಾನ್ ಚಿಂತಲಪಲ್ಲಿ [illegible] ವೀಣಾ ವಾದನವನ್ನೇರ್ಪಡಿಸಿದೆ.

ಪಾಕಿಸ್ತಾನ ಮತ್ತು ಭಾರತಗಳು ಮತ್ತೆ ಒಂದಾಗುವುವು

ಈಗ ಇಬ್ಭಾಗವಾಗಿರುವ ಭರತ ಖಂಡವು ಪುನಃ ಒಂದುಗೂಡಿ ಅಖಂಡ ರಾಷ್ಟ್ರವಾಗುವುದೆಂಬ ಭರವಸೆಯನ್ನು ಮ. ಗಾಂಧಿಯವರು ಹೊಂದಿದ್ದಾರೆ ಬಲ ಪ್ರಯೋಗದಿಂದ ಇದು ಆಗುವುದಿಲ್ಲವೆಂದೂ, ಹೃದಯ ಪರಿವರ್ತನೆಯಿಂದ ಮಾತ್ರವೇ ಸಾಧ್ಯವೆಂದೂ ಅವರು ಹೇಳಿರುವರು

ಸೇವಾ ಸಂಘ

ಚಾಮರಾಜನಗರದ ತಾಲ್ಲೂಕು [illegible] ವಾಡಿಯ ಜನರು ಕಳೆದ ಬುಧವಾರ ಸೇವಾದಳದ ಸಂಘವನ್ನು ಸ್ಥಾಪಿಸಿಕೊಂಡಿರುವರು ಶ್ರೀಗಳಾದ ಡಿ. ಎಂ. ಸಿದ್ದಯ್ಯ ಮತ್ತು ಟಿ. ಎಸ್ ಸುಬ್ಬಣ್ಣನವರು ಸಂಘದ ವಿಷಯವಾಗಿ ಗ್ರಾಮಸ್ಥರಿಗೆ ಸೂಕ್ತ ಸಲಹೆಗಳನ್ನಿತ್ತರು.

ಉಪಾಧ್ಯಾಯರ ಉಡುಪಿನ ನಿರ್ಬಂಧ ಹೋಗಬೇಕು

[ನಂಜನಗೂಡು ೨

ಇಲ್ಲಿನ ಉಪಾಧ್ಯಾಯರ ಸಂಘದವರು [illegible] ದಿನ ನಡೆಸಿದ ಸಭೆಯಲ್ಲಿ ನೂತನ ಮಂತ್ರಿಗಳಿಗೆ ಅಭಿನಂದನೆಗಳನ್ನು ಕೋರಿ, ಹೊಸ ಸರ್ಕಾರಕ್ಕೆ ಬೆಂಬಲಕೊಡುವ ನಿರ್ಣಯಗಳನ್ನು ಮಾಡಿದರು. ಉಪಾಧ್ಯಾಯರಿಗೆ ಇರುವ ಉಡುಪಿನ ನಿರ್ಬಂಧವನ್ನು ತೆಗೆದು ಹಾಕಬೇಕು; ಉಪಾಧ್ಯಾಯ ವರ್ಗದವರಿಗೆ ಕೇಂದ್ರ ಸರಕಾರದಷ್ಟೇ ವೇತನ [illegible] ಸಂಬಳ [illegible] ಕೊಡಬೇಕೆಂದು [illegible] ಸರ್ಕಾರದವರನ್ನು ಪ್ರಾರ್ಥಿಸಿ ನಿರ್ಣಯಗಳನ್ನು ಸಭೆ ಮಾಡಲಾಯಿತು.

ಮಹಿಳಾ ಮಂಡಲಿ

ಮೊನ್ನೆ ದಿನ ರಾಜಧಾನಿಯ ಮಹಿಳಾ ಮಂಡಲಿಯವರು ಮಹಿಳಾ ಸದನದಲ್ಲಿ ಶ್ರೀಮತಿ ರಂಗನಾಯಕಮ್ಮನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು ಮಹಾರಾಜರ ಕೃಪಾಶ್ರಯದಲ್ಲಿ ಸ್ಥಾಪಿತವಾಗಿರುವ ಜವಾಬ್ದಾರಿ ಮಂತ್ರಿ ಮಂಡಲವು ಯಶಸ್ವಿಯಾಗಿ ಸಂಸ್ಥಾನದ ಕೀರ್ತಿಯು ಬೆಳಗಲೆಂದು ಹಾರೈಸಿ, ಪ್ರಧಾನ ಮಂತ್ರಿ ಮುಂತಾದವರು ಕೈಗೊಳ್ಳುವ ಎಲ್ಲಾ ದೇಶಾಭಿವೃದ್ಧಿ ಕಾರ್ಯಗಳಲ್ಲಿಯೂ ಮಂಡಲಿಯು ಸಹಕರಿಸುವುದು, ಸ್ತ್ರೀಯರಿಗೆ ಎಲ್ಲ ವಿಧದಲ್ಲೂ ಸಹಾಯ ನೀಡಲು ಹಣ, ಬಟ್ಟೆ ಔಷಧಿಗಳನ್ನು ಸಂಗ್ರಹಿಸಲು ಕಾರ್ಯಸಮಿತಿಯ ಪುನರ್ ಕಾರ್ಯಕ್ರಮ ಕೈಗೊಳ್ಳುವುದು ಇವೇ ಮುಂತಾದ ನಿರ್ಣಯಗಳ ಸ್ವೀಕೃತ. ಪ್ರತಿ ಸಂಗೀತ್ಯೋತ್ಸವದಲ್ಲೂ ಮಂಡಲಿಯು ಕಾರ್ಯನಿರ್ವಹಣೆಗಾಗಿ ಎಲ್ಲ ಮಂಡಲಿಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ಸೇರಿಸಲಾಯಿತು.

ಜಾನ್ ಹೇನ್ಸ್ ಹೋಮ್ಸ್‌ನವರ ಭಾಷಣ

ಅಮೇರಿಕದಲ್ಲಿ ಮಹಾತ್ಮ ಗಾಂಧಿಯವರ ಪ್ರಸಿದ್ಧ ರಾಜಯೋಗಿಯೂ, ಶಾಂತಿ ಪ್ರಿಯರೆನ್ನಿಸಿ [illegible] ಪ್ರೊಫೆಸರ್ [illegible] ಹೋಮ್ಸ್ [illegible] [illegible] "ಅಮೇರಿಕದ [illegible] ಅರಿಯಬೇಕೇನು?" [illegible] ವಿಷಯವಾಗಿ ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೨೬-೧೦-೪೭ ರಿಂದ ೨-೧೧-೪೭ ರ ವರೆಗೆ

ಮೇಷ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ತೊಡಕುಗಳು, ಪ್ರವಾಸದಿಂದ ಅಸಮಾಧಾನ, ತಾ|| ೨೭, ೩೦ ಲಾಭ, ಶಾಂತಿ,

ವೃಷಭ—ಶಾರೀರಿಕ ಸ್ಥಿತಿ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಉತ್ತಮ, ವ್ಯಾಪಾರಾದಿಗಳಲ್ಲಿ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಧನವ್ಯಯ, ತಾ|| ೨೮, ೧ ಲಾಭ, ಪ್ರವಾಸ

ಮಿಥುನ—ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಕಡಿಮೆ, ಧನಾದಾಯ ಸಾಧಾರಣ, ವ್ಯಾಪಾರಾದಿಗಳಲ್ಲಿ ಶತ್ರುಗಳ ತೊಡಕುಗಳ ಹೆಚ್ಚು, ತಾ|| ೨೯, ೩೦, ೩೧ ಚಿಂತೆ, ನಷ್ಟ

ಕಟಕ—ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸಹಾಯ, ಧಾರ್ಮಿಕ ಕಾರ್ಯಗಳಿಗಾಗಿ ಧನವ್ಯಯ, ತಾ|| ೨೯, ೩೦ ೧ ಲಾಭ, ಪ್ರವಾಸ

ಸಿಂಹ—ಆರೋಗ್ಯ ಉತ್ತಮ, ಧನಲಾಭ ಅಧಿಕ, ಖರ್ಚು ಕಡಿಮೆ, ವ್ಯಾಪಾರಾದಿಗಳಲ್ಲಿ ಶತ್ರುಗಳ ತೊಡಕುಗಳು, ಮಂಗಳಕಾರ್ಯಗಳಿಗಾಗಿ ಪ್ರವಾಸ, ಮಿತ್ರರಿಂದ ಸಹಾಯ, ತಾ|| ೨೭, ೨೮, ೧ ನಷ್ಟ, ಅಪಘಾತ.

ಕನ್ಯಾ—ಶಾರೀರಿಕ ಸ್ಥಿತಿ ಉತ್ತಮ, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಅಧಿಕಾರಿಗಳ ಸಹಾಯ, ತಾ|| ೨೮ ೩೧, ೧ ಲಾಭ, ಶಾಂತಿ

ತುಲಾ—ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಕೌಟುಂಬಿಕ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು, ಬಂಧುಗಳ ಆಗಮನದಿಂದ ವಿಶೇಷ ಖರ್ಚು, ತಾ|| ೨೮, ೩೦ ಚಿಂತೆ, ನಷ್ಟ.

ವೃಶ್ಚಿಕ—ಶಾರೀರಿಕ ಸ್ಥಿತಿ ಸಾಧಾರಣ, ಆರ್ಥಿಕ ಸ್ಥಿತಿ ಉತ್ತಮ. ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ವ್ಯಾಪಾರಾದಿಗಳಲ್ಲಿ ಪ್ರಗತಿ ಮಂಗಳ ಕಾರ್ಯಗಳಿಗಾಗಿ ಪ್ರವಾಸ ತಾ|| ೨೮, ೩೦ ಲಾಭ, ಶಾಂತಿ

ಧನು—ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಕಡಿಮೆ, ವ್ಯಾಪಾರಾದಿಗಳಲ್ಲಿ ಅಧಿಕಾರಿಗಳ ತೊಡಕುಗಳು ನೌಕರಿಯಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ. ಮಿತ್ರರಿಂದ ಸಹಾಯ, ತಾ|| ೨೭, ೩೧ ಲಾಭ ಶಾಂತಿ

ಮಕರ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ ಖರ್ಚು ಕಡಿಮೆ ಕೌಟುಂಬಿಕ ಆರೋಗ್ಯ ಕೆಟ್ಟು ಧನವ್ಯಯ ಅಧಿಕವಾಗುತ್ತದೆ ಮಿತ್ರರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ ತಾ|| ೨೭, ೩೦ ಚಿಂತೆ, ನಷ್ಟ

ಕುಂಭ—ಆರೋಗ್ಯ ಉತ್ತಮ ಧನಲಾಭ ಸಾಧಾರಣ ವ್ಯಾಪಾರಾದಿಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ, ಅಧಿಕಾರಿವರ್ಗದವರಿಂದ ಸನ್ಮಾನ, ತಾ|| ೩೦, ೧ ನಷ್ಟ, ಶತ್ರುಗಳ ತೊಡಕುಗಳು.

ಮೀನ—ಶಾರೀರಿಕ ಸ್ಥಿತಿ ಉತ್ತಮ. ಆರ್ಥಿಕ ಸ್ಥಿತಿ ಸಾಧಾರಣ, ವ್ಯಾಪಾರಾದಿಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂ[illegible]ನ್ಮಾನ, ಮಂಗಳ ಕಾರ್ಯಗಳಿಗಾಗಿ [illegible]ಸ, ತಾ|| ೨೭, ೩೦, ಸಾಧಾರಣ, ನಷ್ಟ

Morning Shows At
Sri GANESHA TALKIES
on 26th, 27th and 28th
at 10 45 a. m.
Metro's
Son of Lassie
(Technicolour)
—: Starring :—
Peter Lawford,
Donald Crisp.

WOODLANDS
Morning shows from
24-10-47
Let's Face it
—: Featuring :—
Bob-hop Betty Hutton

ಬೆಂಗಾಲ್ ಶಿಲ್ಕ್ ಸೀರೆಗಳು
ಧರ್ಮಾವರಂ, ಮೈಸೂರು ಶಿಲ್ಕ್
ಪೂನಾ ಸೀರೆಗಳಿಗೆ
M V ಭೋಜಯ್ಯ ಬಿ ಎ
ಇಂಡಿಯನ್ ಬ್ಯಾಂಕ್ ಎದುರುಬಂದ ನೋಡಿ

ಪ್ರಭಾತ್ ಪ್ರಸಂಟ್ಸ್
ಡಿರಕ್ ಟ್ರೇಸಿ
ವರ್ಸಸ್
ಕ್ರೈಂ ಇಂಕ್
(ಫುಲ್ ಸೀರಿಯಲ್)
೧೫ ಭಾಗಗಳು

ರಾಜಕಮಲ್
24—10—47 ರಿಂದ
2 ನೇ ವಾರ
ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್‌ರವರ
ಜೀವನ್ ಯಾತ್ರ
(ಹಿಂದಿ)



—: ಭೂಮಿಕೆ :—
ನಯನತಾರ, ಶಾಂತರೀ, ಬಾಬುರಾವ್
ಪೆಂಡಾರ್ಕರ್, ಯಾಕೂಬ್

Morning Shows from
25-10-47 for 4 days daily
at 10-30 a. m.
Pardon My
Sorong
—: with :—
Abbott & Costello,
Virgnia Bruce,
Robert Paige.

WOODLANDS
From 21-10-47
Daily 3 Shows
Dick Tracy
VS
Crime Inc.
(Full Serial)
Fifteen Parts

Edited printed and published by ... at the Sadhvi Press ... Mysore

ಮೈಸೂರು ಸಿಟಿ ಇಂಪ್ರೂವ್‌ಮೆಂ[ಟ್] ಟ್ರಸ್ಟ್ ಬೋರ್ಡ್, ಮೈಸೂ[ರು]

ಅಂಗಡಿ ಸೈಟುಗಳ ಹರಾ[ಜು]

ಈ ಕೆಳಗೆ ನಮೂದಿಸಿರುವ ಅಂಗ[ಡಿ ಸೈ]ಟುಗಳನ್ನು ಬಹಿರಂಗವಾಗಿ ಹರಾಜು [ಮಾ]ಡಲಾಗುತ್ತೆ. ಬಾಕಿ ವಿವರಗಳನ್ನು [ಬೋರ್ಡಿನ] ಆಫೀಸಿನಲ್ಲಿ ತಿಳಿಯಬಹುದು

ಹರಾಜಾಗುವ ಸೈಟುಗಳು	ಹರಾಜು ತಾ[ರೀಖು]
೧ ಮೋತಿಲಾಲ್ ಟಾಕೀಸ್ ಬಳಿ ೮ ಸೈಟುಗಳು	೩-೧೧ ಬೆಳಿಗ್ಗೆ ೧೦
೨ ಒಲಿಂಪಿಯಾ ಟಾಕೀಸ್ ಹತ್ತಿರ ೧ ಸೈಟು	೩-೧೧ ಬೆಳಿಗ್ಗೆ ೧೦

(ಸಹಿ) ಕೆ. ಜಿ. ಶಾಸ್ತ್ರಿ
ಫಾರ್ ಛೇರ್‌ಮ[ನ್]

ಮೈಸೂರು ಸಿಟಿ ಮುನಿಸಿಪಾಲಿಟಿ.

ಆರೋಗ್ಯ ಪ್ರಚಾರ ಸಮಿತಿಯ ಪ್ರಕಟನೆ.

ಜನಾರೋಗ್ಯ ಪರಿಪಾಲನೆಗೆ ಆಚರಿಸಬೇಕಾದ ನಿಯಮಗಳು:—

1 ಮನೆಯ ಕಸಕಡ್ಡಿಯನ್ನು ಬೀದಿಯಲ್ಲಿ ಸಿಕ್ಕಿದೆಡೆಯಲ್ಲಿ ಬಿಸಾಡದೆ ತೊಟ್ಟಿಗಳಿಗೆ ಹಾಕಬೇಕು.

2 ಮಕ್ಕಳನ್ನು ಮನೆಯ ಮುಂಭಾಗದಲ್ಲಿ ಮತ್ತು ಬೀದಿಗಳ ಅಂಚಿನಲ್ಲಿ ಮಲವಿಸರ್ಜನೆಗಾಗಿ ಕೂಡಿಸುವ ಅಭ್ಯಾಸವನ್ನು ಕೂಡಲೇ ತಪ್ಪಿಸಬೇಕು

3 ಎಂಜಲು ಎಲೆಗಳನ್ನು, ಬೂದಿಯನ್ನು ಬೀದಿಗೆ ಬಿಸಾಡದೆ ತೊಟ್ಟಿಗೇ ಹಾಕಬೇಕು

4 ಕೊಳೆ ಬಟ್ಟೆಗಳನ್ನು ಬೀದಿಯ ನಲ್ಲಿಗಳ ಹತ್ತಿರ ಒಗೆಯಬಾರದು

5 ಬೀದಿಯಲ್ಲಿ ಮಾರಾಟವಾಗುವ ಧೂಳು, ನೊಣ ಇವುಗಳಿಂದ ಅಂಟುವ ಕೊಳೆತ ಹಣ್ಣು ಕಂಪಲುಗಳು, ಸಿಹಿ ತಿಂಡಿ, ವಡೆ, ಚಕ್ಕುಲಿ ಮೊದಲಾದ ಆಹಾರ ಪದಾರ್ಥಗಳನ್ನು ತಿನ್ನಬಾರದು.

6 ಮನೆ ಕಕ್ಕಸುಗಳನ್ನು ಸರಿಯಾದ 'ಫ್ಲಷಿಂಗ್' ಕಕ್ಕಸುಗಳಾಗಿ ಮಾರ್ಪಡಿಸಬೇಕು

7 ಸರಿಯಾದ ಗಾಳಿ ಬೆಳಕು ಇಲ್ಲದ ಮನೆಗಳಲ್ಲಿ ವಾಸಿಸಬಾರದು.

8 ಮನೆಯಲ್ಲಿಯಾಗಲಿ, ಹಿತ್ತಲು ಮತ್ತು ಸಾರ್ವಜನಿಕ ರಸ್ತೆಗಳು ಪ್ರದೇಶಗಳಲ್ಲಿಯಾಗಲಿ ಸಿಕ್ಕಿದೆಡೆ ಉಗುಳಬಾರದು

9 ಮನೆಯ ಹಿತ್ತಲು ಅಂಗಳಗಳಲ್ಲಿಯೂ ಬಚ್ಚಲು ವಗ್ಗೆರೆಗಳಲ್ಲಿ ನಿಂತು ದುರ್ವಾಸನೆಯಾಗಿ ಮತ್ತು ಸೊಳ್ಳೆಗಳು ಉತ್ಪತ್ತಿಯಾಗದಂತೆ ನೋಡಬೇಕು

10 ಬೀದಿಯಲ್ಲಿ ಮತ್ತು ಫುಟ್‌ಪಾತುಗಳಲ್ಲಿ, ಚರಂಡಿಗಳ ಬಳಿ ಯಾವೂ ಅಂಗಡಿಗಳನ್ನು ಇಟ್ಟು, ಆಹಾರ ಪದಾರ್ಥಗಳನ್ನು ಮಾರಬಾರದು

11 ಪ್ರತಿಯೊಬ್ಬರೂ ಅವರ ಮಕ್ಕಳಿಗೆಲ್ಲಾ ಸಕಾಲದಲ್ಲಿ ದೇವಿ ಹಾಕಿಸ

12 ಪ್ರತಿಯೊಬ್ಬರೂ ಅಂಟುಜಾಡ್ಯಗಳು ಬಾರದಂತೆ ಸಕಾಲದಲ್ಲಿ ಎಕ್ರಮ ತೆಗೆದುಕೊಳ್ಳಬೇಕು ಪ್ಲೇಗು, ಕಾಲರಾ, ವಿಷಮಶೀತಜ್ವರ ತಗಲದಂತೆ ಇನಾಕ್ಯುಲೇಷನ್ ಹಾಕಿಸಿಕೊಳ್ಳತಕ್ಕದ್ದು.

13 ಸಿಡುಬು ಉಪದ್ರವವು ಹರಡದಂತೆ ತಡೆಗಟ್ಟಲು ಎಲ್ಲರೂ ದೇವಿ ಹಾಕಿಸಿಕೊಳ್ಳಬೇಕು

14 ಸಾರ್ವಜನಿಕ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಫುಟ್‌ಪಾತುಗಳ ಮೇಲೆಯೂ ಮೂತ್ರವಿಸರ್ಜನೆ ಮಾಡಬಾರದು

15 ಸಾರ್ವಜನಿಕ ಆರೋಗ್ಯದೃಷ್ಟಿಯಿಂದ ಸಕಲರೂ ಸಕಾಲದಲ್ಲಿ ಆರೋಗ್ಯ ಇಲಾಖೆಗೆ ಅಂಟುಜಾಡ್ಯದ ಸಮಾಚಾರವನ್ನು ಕೂಡಲೇ ತಿಳಿಸಬೇಕು. ಇದರಿಂದ ಕೂಡಲೇ ತಕ್ಕ ಕ್ರಮ ಕೈಗೊಳ್ಳಲು ಸಹಾಯವಾಗುವುದು

16 ಸಾರ್ವಜನಿಕ ಆರೋಗ್ಯ ನಿಯಮಗಳನ್ನು ಪಾಲಿಸುವುದರ ಮೂಲಕ ಪ್ರತಿಯೊಬ್ಬರೂ ಪೌರಸಮಿತಿಯೊಂದಿಗೆ ಸಹಕರಿಸಬೇಕು.

(ಸಹಿ) N S. ಹಿರಣ್ಣಯ್ಯ,
ಪ್ರೆಸಿಡೆಂಟ್,
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈ[ಸೂರು]

1-10-1947

ಫೋನ್ ನಂ. 508 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೨೮-೧೦-೪೭ [ಸಂಚಿಕೆ ೨೦

ಕಾಶ್ಮೀರ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ

ಅಮೇರಿಕದ ವೈಶಿಷ್ಟ್ಯ

ಹೋಮ್ಸ್‌ರವರ ಭಾಷಣ

ಮೈಸೂರು ೨೮

ಅಮೇರಿಕದ ಸುಪ್ರಸಿದ್ಧ ಪಾದ್ರಿಗಳೂ ಮಹಾತ್ಮ ಗಾಂಧಿಯವರ ಮಿತ್ರರೂ ಆದ ಜಾನ್ ಹೇನ್ಸ್ ಹೋಮ್ಸ್‌ರವರು ನಿನ್ನೆ ಮಹಾರಾಣಿ ಕಾಲೇಜಿನಲ್ಲಿ ಭಾಷಣ ಮಾಡಿ ಅಮೇರಿಕ ದೇಶದ ಇತಿಹಾಸವನ್ನು ವರ್ಣಿಸಿದರು. ಅಮೇರಿಕಕ್ಕೆ ಪ್ರಾಚೀನವಾದ ಇತಿಹಾಸವಿಲ್ಲ. ಪುರಾತನವಾದ ಪರಂಪರೆಯಿಲ್ಲ. ಪೂಜ್ಯವೆನಿಸಿಕೊಂಡ ಯಾವುದೊಂದು ಪದ್ಧತಿಯೂ ಇರುವುದಿಲ್ಲ. ಆಯಾ ಕಾಲಕ್ಕೆ ಸೂಕ್ತ ತೋರಿದಂತೆ ಅಮೇರಿಕನರು ನಡೆದುಕೊಳ್ಳುತ್ತಾರೆ. ಸಕಲ ದೇಶಗಳ ಪ್ರಜೆಗಳೂ ಅಮೇರಿಕದಲ್ಲಿ ಬಂದು ನೆಲಸಿ ತಮ್ಮ ಪ್ರತ್ಯೇಕ ಸ್ವಭಾವಗಳನ್ನು ತ್ಯಜಿಸಿ ನೂತನ ಜನಾಂಗವನ್ನು ಸೃಷ್ಟಿಸಿರುತ್ತಾರೆ. ಹಳೆಯದಾದ ಸಂಸ್ಕೃತಿಯಾಗಲೀ ಪರಂಪರೆ ಇಲ್ಲದಿರುವುದರಿಂದಲೂ, ಹಲವು ಗೊಂಡಾರಣ್ಯವಾಗಿದ್ದ ದೇಶವನ್ನು ಮಾನವ ಜೀವನಕ್ಕೆ ಅನುಕೂಲವಾಗುವಂತೆ ಮಾಡಬೇಕಾಗಿದ್ದುದರಿಂದಲೂ, ಅಮೇರಿಕನರು ಇನ್ನೂ ಐಹಿಕ ಸಾಧನೆಯಲ್ಲಿಯೇ ಹೆಚ್ಚು ಆಸಕ್ತರಾಗಿರುತ್ತಾರೆ. ಇನ್ನು ಮುಂದೆ ಆಧ್ಯಾತ್ಮಿಕ ಜೀವನದಲ್ಲಿ ಸಹ ಅವರು ಸ್ವತಂತ್ರ ಮಾರ್ಗವನ್ನು ಅವಲಂಬಿಸಿ ಆದರ್ಶ ಪ್ರಾಯವಾದ ಜೀವನಗಳನ್ನು ನಡೆಸುವರು-ಎಂಬುದಾಗಿ ಭಾಷಣಕಾರರು ತಿಳಿಸಿದರು.

LATEST NEWS

ಪೋರ್ಟ್‌ಫೋಲಿಯೋ ಹಂಚಿಕೆ

ಮುಖ್ಯ ಮಂತ್ರಿ-ದಿವಾನರ ಭಿನ್ನಾಭಿಪ್ರಾಯ

ಸ್ವಂ. ಸು. ಫೋನ್] ಬೆಂಗಳೂರು ೨೮

ಈ ದಿನ ಮಧ್ಯಾಹ್ನ ೧೧ ರಿಂದ ೨ ಗಂಟೆಯವರೆಗೆ ನೂತನ ಮಂತ್ರಿಮಂಡಳದ ಸಭೆ ಸೇರಿ ಪೋರ್ಟ್‌ಫೋಲಿಯೋಗಳ ಹಂಚಿಕೆ ಬಗ್ಗೆ ದೀರ್ಘ ಚರ್ಚೆ ಆಯಿತು. ಪೋರ್ಟ್‌ಫೋಲಿಯೋ ಹಂಚಿಕೆ ಬಗ್ಗೆ ಮುಖ್ಯ ಮಂತ್ರಿಗಳಿಗೂ, ದಿವಾನರಿಗೂ ಭಿನ್ನಾಭಿಪ್ರಾಯ ಉಂಟಾಗಿದೆಯೆಂದೂ, ಹೇಳಲಾಗಿದೆ.

ಮುಖ್ಯ ಮಂತ್ರಿಗಳು ಪೋರ್ಟ್‌ಫೋಲಿಯೋ ಹಂಚಿಕೆಯ ಪಟ್ಟಿಯನ್ನು ನಾಳೆ ಶ್ರೀಮನ್ಮಹಾರಾಜರವರಿಗೆ ಒಪ್ಪಿಸುವರೆಂದು ತಿಳಿದುಬಂದಿದೆ.

Rajkamal

Morning shows from 29-10-47 daily at 10-30 a.m.

EDDIE CANTOR in ROMAN SCANDAL

—: with :—

Goldwyn Girls

ಅರಮನೆ ವೆಚ್ಚಕ್ಕೆ ೪೦ ಲಕ್ಷ ರೂ.

ಸ್ವಂ. ಸು] [ಬೆಂಗಳೂರು ೨೮

ಇದುವರೆಗೆ ಅರಮನೆ ವೆಚ್ಚಕ್ಕಾಗಿ ಸಂಸ್ಥಾನದ ಆಯವ್ಯಯ ಪಟ್ಟಿಯಲ್ಲಿ ಮಂಜೂರಾಗುತ್ತಿದ್ದ ೨೭ ಲಕ್ಷ ರೂಪಾಯಿಗಳನ್ನು ವರ್ಷಂಪ್ರತಿ ೪೦ ಲಕ್ಷಕ್ಕೆ ಹೆಚ್ಚಿಸಿ ಹಿಂದಿನ ಮಂತ್ರಿಮಂಡಲದವರು ನಿರ್ಣಯ ಮಾಡಿರುತ್ತಾರೆಂದು ತಿಳಿದು ಬಂದಿದೆ.

ವಿವಿಧ ಇಲಾಖೆಗಳ ಮುಖ್ಯಾಧಿಕಾರಿಗಳ ಸಂಬಳಗಳನ್ನು ೧೪೦೦ ರೂ. ನಿಂದ ೧೬೦೦ ಕ್ಕೆ ಹೆಚ್ಚಿಸಲಾಗಿದೆಯೆಂದೂ ಸಹ ತಿಳಿದು ಬಂದಿದೆ.

ಅಸಿಸ್ಟೆಂಟ್ ಕಮಿಷನರುಗಳ ಸಂಬಳಗಳು ೨೫೦-೪೦-೪೫೦ ಇರುವುದನ್ನು ೩೦೦-೨೫-೫೦೦ ಕ್ಕೆ ಹೆಚ್ಚಿಸಲಾಗಿದೆಯೆಂದೂ ಸಹ ಹೇಳಲಾಗಿದೆ.

ನೂತನ ಮಂತ್ರಿಗಳಿಗೆ ಸ್ವಾಗತ

ನಾಳೆ ದಿನ ಬಹಿರಂಗ ಸಭೆ

ಮೈಸೂರು ೨೮

ನೂತನ ಮಂತ್ರಿಗಳಿಗೆ ಪುರನಿವಾಸಿಗಳ ಪರವಾಗಿ ಸ್ವಾಗತವನ್ನು ನೀಡಲು ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ನಗರ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿರುವರು. ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚೆನ್ನಯ್ಯನವರು ಅಗ್ರಾಸನವನ್ನು ವಹಿಸುವರು. ಮಹಾಜನರೆಲ್ಲರೂ ದಯಮಾಡಿಸಿ ಸಹಕರಿಸಬೇಕೆಂದು ಕೋರಲಾಗಿದೆ

ಕರಾಚಿಗೆ ಜುನಾಗಢದ ನವಾಬರ ಪಲಾಯನ

ಜುನಾಗಢದ ನವಾಬರು, ಅವರ ಪತ್ನಿಯವರೂ ಮತ್ತು ರಾಜ್ಯದ ಉತ್ತರಾಧಿಕಾರಿಯೂ ಕರಾಚಿಗೆ ಓಡಿದ್ದಾರೆಂದು ವರದಿಯಾಗಿದೆ ಅಲ್ಲಿನ ಹಂಗಾಮಿ ಸರ್ಕಾರವು ಸಂಸ್ಥಾನದ ೧೯ ಗ್ರಾಮಗಳನ್ನು ವಶಪಡಿಸಿಕೊಂಡಿವೆ

ರಾಜಭಕ್ತಿ ಪ್ರಮಾಣ ಸ್ವೀಕಾರ

ಮೈಸೂರು ೨೮

ಹೊಸ ಮಂತ್ರಿಗಳು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸಲು ನಾಳೆ ಬೆಳಗ್ಗೆ ೧೦ ಗಂಟೆಗೆ ಅರಮನೆಯ ಅಂಬಾವಿಲಾಸದಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿದೆ (ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಈ ಸಮಾರಂಭವು ಅರಮನೆಯ ಸಜ್ಜೆಯಲ್ಲಿ ನಡೆಯುವುದಿಲ್ಲ)

ಮಂತ್ರಿಗಳು ನಾಳೆ ಬೆಳಗ್ಗೆ ೯ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಿಂದ ಅರಮನೆಗೆ ತೆರಳುವರು.

ಕಾಂಗ್ರೆಸ್ ಕೆಲಸಗಾರರೆಲ್ಲರೂ ನಾಳೆ ಬೆಳಗ್ಗೆ ೮-೩೦ ಗಂಟೆಗೆ ಕಾಂಗ್ರೆಸ್ ಕಛೇರಿಗೆ ಬರಬೇಕಾಗಿ ಕೋರಲಾಗಿದೆ.

ಕಾಶ್ಮೀರವು ಭಾರತ ಡೊಮಿನಿಯನ್ನಿಗೆ ಸೇರಿತು

ಷೇಕ್ ಅಬ್ದುಲ್ಲಾರವರ ನೇತೃತ್ವದಲ್ಲಿ ತಾತ್ಕಾಲಿಕ ಸರ್ಕಾರ

ಕಾಶ್ಮೀರ ಸಂಸ್ಥಾನದ ಗಡಿ ಪ್ರದೇಶದಲ್ಲಿ ಪಾಕೀಸ್ತಾನದ ಸಹಾಯವಿದ್ದ ಹಲವು ಪುಂಡರು ಶಸ್ತ್ರ ಸಜ್ಜಿತರಾಗಿ ಧಾಳಿ ನಡೆಸಿದ ನವ ಪರಿಣಾಮವಾಗಿ, ಸಂಸ್ಥಾನವು ಭಾರತ ಡೊಮಿನಿಯನ್ನಿಗೆ ಸೇರಲು ನಿಶ್ಚಯಿಸಿದೆ. ಸಂಸ್ಥಾನದ ಮೇಲೆ ನಡೆಸುತ್ತಿರುವ ಪುಂಡರ ಹಾವಳಿಯನ್ನು ತಡೆಯಲು ಕಾಶ್ಮೀರ ಸರ್ಕಾರದವರು ಭಾರತ ಸರ್ಕಾರಕ್ಕೆ ಮಿಲಿಟರಿ ಸಹಾಯವನ್ನು ಅಪೇಕ್ಷಿಸಿದ್ದ ಮೇಲೆ ಭಾರತ ಸರ್ಕಾರದವರು ಅದನ್ನು ಕಳುಹಿಸಿದ್ದಾರೆ. ಅಲ್ಲಿನ ರಾಜರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಒಪ್ಪಿ, ರಾಷ್ಟ್ರೀಯ ಸಮ್ಮೇಳನದ ನಾಯಕರಾದ ಶ್ರೀ ಷೇಕ್ ಅಬ್ದುಲ್ಲರವರಿಗೆ ತಾತ್ಕಾಲಿಕ ಸರ್ಕಾರ ರಚಿಸಲು ಆಹ್ವಾನ ಕೊಟ್ಟಿದ್ದಾರೆ.

ಕಾಶ್ಮೀರ ಸಂಸ್ಥಾನವನ್ನು ಆಕ್ರಮಿಸಲು ಪಾಕೀಸ್ತಾನ ನಡೆಸುತ್ತಿರುವ ಪ್ರಯತ್ನಗಳನ್ನು ಖಂಡಿಸಿ, ಭಾರತ ಯೂನಿಯನ್ನಿನಲ್ಲಿ ಸೇರುವುದರಿಂದಲೇ ಕಾಶ್ಮೀರಕ್ಕೆ ಸೌಖ್ಯ ಉಂಟಾಗುವುದೆಂದು ಶ್ರೀ ಷೇಕ್ ಅಬ್ದುಲ್ಲರವರು ತಿಳಿಸಿದ್ದಾರೆ.

ರಾಜಧಾನಿಗೆ ಸಚಿವರುಗಳು

ಸ್ವಂ. ಸು. ಫೋನ್] [ಬೆಂಗಳೂರು ೨೮

ನೂತನ ಮಂತ್ರಿಮಂಡಳದ ಸಚಿವರು ನಾಳೆ ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸಲು ಈ ದಿನ ಸಂಜೆ ರಾಜಧಾನಿಗೆ ತೆರಳುವರು.

ನವೆಂಬರ್ ೧ ನೇ ತಾರೀಖು ವಿಜಯೋತ್ಸವ

ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಿರುವುದರಿಂದ ಸಂಸ್ಥಾನಾದ್ಯಂತವೂ ನವೆಂಬರ್ ೧ ನೇ ತಾರೀಖು ವಿಜಯೋತ್ಸವವನ್ನು ಆಚರಿಸಬೇಕೆಂದೂ ಆ ದಿನ ಬೆಳಗ್ಗೆ ಪ್ರಭಾತಭೇರಿ, ಮೈಸೂರು ಮತ್ತು ಡೊಮಿನಿಯನ್ ಧ್ವಜಗಳ ಆರೋಹಣ, ಮೆರವಣಿಗೆ ಮತ್ತು ಸಂಜೆ ಬಹಿರಂಗ ಸಭೆಗಳನ್ನು ನಡೆಸಬೇಕೆಂದೂ ಕಾಂ|| ಕಾ|| ಕಾ|| ಸಮಿತಿಯು ಸೂಚಿಸಿರುತ್ತದೆ.

ರೀಜನಲ್ ಸಮ್ಮೇಳನಕ್ಕೆ ಶ್ರೀ|| ಕೆ. ಟಿ. ಭಾಷ್ಯಂ

ದೆಹಲಿಯಲ್ಲಿ ನಡೆಯುತ್ತಿರುವ ಏಷ್ಯಾ ರೀಜನಲ್ ಸಮ್ಮೇಳನಕ್ಕೆ ಸಚಿವರಾದ ಶ್ರೀ ಕೆ ಟಿ ಭಾಷ್ಯಂ ರವರು ತೆರಳಲಿರುವರೆಂದು ಗೊತ್ತಾಗಿದೆ

ದೆಹಲಿಗೆ ಕೆ. ಸಿ. ರೆಡ್ಡಿ

ನವೆಂಬರ್ ೫ ನೇ ತಾರೀಖಿನಿಂದ ದೆಹಲಿಯಲ್ಲಿ ಆರಂಭವಾಗಲಿರುವ ಅ. ಭಾ. ಕಾ ಸಮ್ಮೇಳನಕ್ಕೆ ಪ್ರಧಾನಿ ಶ್ರೀ|| ಕೆ. ಸಿ ರೆಡ್ಡಿಯವರು ತೆರಳುವರೆಂದು ತಿಳಿದು ಬಂದಿದೆ

ಭಾಷಣದ ಕಾಲ ಹೋಗಿ ಯಿತು; ಕೆಲಸದ ಕಾಲ ಬಂತು

ಕೆ. ಸಿ ರೆಡ್ಡಿಯವರ ಭಾಷಣ

ಸ್ವಂ. ಸು.] [ಬೆಂಗಳೂರು ೨೭

ಪ್ರಧಾನ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಗೆಳೆಯರ ಬಳಗದ ಪರವಾಗಿ ವಿಶ್ವೇಶ್ವರಪುರದಲ್ಲಿ ಭಾಷಣ ಮಾಡಿದರು. ಪ್ರಜೆಗಳ ಗುರಿಯಾದ ಜವಾಬ್ದಾರಿ ಸರ್ಕಾರವನ್ನು ಗಳಿಸಿರುವುದರಿಂದ ಇನ್ನು ಮುಂದೆ ಭಾಷಣಗಳ ಕಾಲವು ಕಳೆದುಹೋಯಿತೆಂದೂ, ಜನಗಳ ಉನ್ನತಿಗಾಗಿ ಎಲ್ಲರೂ ದುಡಿಯಬೇಕೆಂದೂ ಹೇಳಿದರು. ನವೆಂಬರ್ ೧ ನೇ ತಾ|| ನಡೆಸಲ್ಪಡುವ ಜವಾಬ್ದಾರಿ ಸರ್ಕಾರ ದಿನಾಚರಣೆಯೇ ಸತ್ಯಾಗ್ರಹ ಸಂಬಂಧದ ಭಾಷಣಗಳಿಗೆ ಕಟ್ಟಕಡೆಯದಾಗಲೆಂದು ತಿಳಿಸಿದರು. ಆಹಾರ ಸಂಗ್ರಹದ ವಿಷಯದಲ್ಲಿ ಎಲ್ಲರೂ ಗವರ್ನಮೆಂಟಿಗೆ ನೆರವಾಗಬೇಕೆಂದು ಕೋರಿದರು. ಹರಿಜನರ ದೇವಾಲಯ ಪ್ರವೇಶದ ಬಗ್ಗೆ ಮಸೂದೆಯೊಂದನ್ನು ತರಲಾಗುವುದೆಂದು ಸೂಚಿಸಿದರು. ಮಹಾತ್ಮರ ಸಲಹೆಯಂತೆ ನೂತನ ಮಂತ್ರಿಮಂಡಲವು ವಿನಮ್ರತೆಯಿಂದ ಸೇವೆಯಲ್ಲಿ ತೊಡಗುವುದೆಂದೂ ಅಧಿಕಾರ ಲಾಲಸೆಯಿಂದ ವರ್ತಿಸುವುದಿಲ್ಲವೆಂದೂ ಹೇಳಿದರು. ಜನರು ಮಂತ್ರಿಮಂಡಲದ ಕಾರ್ಯಕಲಾಪಗಳಲ್ಲಿ ಸಂಪೂರ್ಣ ಆಸಕ್ತಿ ವಹಿಸಿ ರಚನಾತ್ಮಕವಾದ ಸಲಹೆಗಳನ್ನು ಕೊಡಬೇಕೆಂದು ಕೋರಿದರು

ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರ ಶಿಕ್ಷಣ

ಅಕೆಡೆಮಿಕ್ ಕೌನ್ಸಿಲ್ಲಿನ ಒಪ್ಪಿಗೆ

ಮೈಸೂರು ೨೮

ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಸಭೆಯು, ನ್ಯಾಯಮೂರ್ತಿಗಳಾದ ಮಿ॥ ಎಂ ಸುಬ್ರಾಯ ಮೊಹಿಯುದ್ದೀನರವರ ಅಧ್ಯಕ್ಷತೆಯಲ್ಲಿ ನಿನ್ನೆ ಮಧ್ಯಾಹ್ನ ನಡೆಯಿತು

ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರ ಶಿಕ್ಷಣ ತರಗತಿ ಆರಂಭಿಸಬೇಕೆಂಬ ವಿಶ್ವವಿದ್ಯಾನಿಲಯದ ಕೌನ್ಸಿಲ್ ಸಭೆಯವರ ತೀರ್ಮಾನವನ್ನು ಅಂಗೀಕರಿಸಲಾಯಿತು

ದಾವಣಗೆರೆಯ ಧರ್ಮಪ್ರವರ್ತಕ ಜನಗಮಾಡಿ ಮಠದ ಮುರುಗಪ್ಪಯ್ಯನವರು ಬಿ. ಎ ಆನರ್ಸ್ ಪಾಲಿಟಿಕ್ಸ್ ತರಗತಿಯ ವಿದ್ಯಾರ್ಥಿ ವೇತನಕ್ಕಾಗಿ ಕೊಟ್ಟಿರುವ ೧೦೪೦ ರೂ, ಶ್ರೀಮತಿ ಅಯಿಷ ಬೀಬಿಯವರು ಮೆಡಿಕಲ್ ಕಾಲೇಜಿನ ಮಹಿಳಾ ವಿದ್ಯಾರ್ಥಿನಿಯ ವೇತನಕ್ಕಾಗಿ ಕೊಟ್ಟಿರುವ ಮೈಸೂರು ಬ್ಯಾಂಕಿನ ೧೦ ಶೇರುಗಳೂ, ಚಿನ್ನದ ಪಾರಿತೋಷಕಕ್ಕಾಗಿ ಕಿಡ್ಡಪ್ಪನವರ ಶ್ರೀ ರಾಮರಾಯರ ಮತ್ತು ಡಾ॥ ಎ ಸುಬ್ಬರಾಯರ ೩ ಸಾವಿರ ರೂ ಗಳೂ ಸಹ ಸ್ವೀಕರಿಸಲ್ಪಟ್ಟವು.

ಸಂಸ್ಥಾನದ ಮಹಿಳಾ ಸಮಾಜದವರು ಬಿ. ಎಸ್. ಸಿ ಪರೀಕ್ಷೆಯಲ್ಲಿ ಮೊದಲನೆಯ ಸಂಖ್ಯೆ ಪಡೆದ ವಿದ್ಯಾರ್ಥಿನಿಗೆ ಸಿಕೆ ಪಿ.ಟಾರ್ನರ ಹೆಸರಿನಲ್ಲಿ ಬಹುಮಾನ ಕೊಡಲು ಒಪ್ಪಿಸಿರುವ ೧ ಸಾವಿರ ರೂ ಗಳನ್ನೂ ಅಂಗೀಕರಿಸಲಾಯಿತು.

ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗಕ್ಕೆ ತೃತೀಯ ತರಗತಿಯ ಆನರ್ಸ್ ಪದವಿಯನ್ನು ಪಡೆದ ಹಿಂದುಳಿದ ಪಂಗಡದವರನ್ನು ಅತ್ಯಾವಶ್ಯಕ ಸಂದರ್ಭಗಳಲ್ಲಿ ನೇಮಿಸಿಕೊಳ್ಳಲು ಸ್ವಾತಂತ್ರ್ಯಗಳಿಗೆ ಅವಕಾಶ ಕೊಡಬೇಕೆಂಬ ನಿರ್ಣಯವನ್ನು ಸಭೆಯ ಮುಂದೆ ಅಧ್ಯಕ್ಷರು ಮಂಡಿಸಿದರು

ಶ್ರೀ ಎಚ್ ಶ್ರೀನಿವಾಸ ಮೂರ್ತಿಯವರು ಅದನ್ನು ವಿರೋಧಿಸಿದರು. ಹಿಂದುಳಿದ ಪಂಗಡದವರನ್ನು ಅಭಿವೃದ್ಧಿ ಪಡಿಸಬೇಕೆಂಬುದಕ್ಕೆ ಎಲ್ಲರ ಸಂಪೂರ್ಣ ಬೆಂಬಲವಿದೆ ಆದರೆ ವಿಶ್ವವಿದ್ಯಾನಿಲಯದಲ್ಲಿನ ಅಧ್ಯಾಪಕರಿಗೆ ಮೊದಲನೆಯ ಯೋಗ್ಯತೆ ಇರಬೇಕು, ತೃತೀಯ ತರಗತಿಯ ಪದವೀಧರರನ್ನು ನೇಮಿಸಿಕೊಳ್ಳಬೇಕೆಂಬ ಸಂಪ್ರದಾಯ ಇದರಲ್ಲಿ ಕೋಮುವಾರು ಭಾವನೆಯು ವಿಶ್ವವಿದ್ಯಾನಿಲಯದಲ್ಲಿರಕೂಡದು. ಸಂಸ್ಥಾನದಲ್ಲಿ ಈಗ ಆಗಿರುವ ಬದಲಾವಣೆಯನ್ನು ಗಮನದಲ್ಲಿಡಬೇಕು. ಇನ್ನು ಮುಂದೆ ಜಾತಿ ಮತ ಭೇದವಿಲ್ಲದ ಸಮಾಜ ಇರಬೇಕೆಂದು ಮುಖ್ಯ ಮಂತ್ರಿಗಳಾದ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುವ ಉದಾತ್ತ ಧ್ಯೇಯವನ್ನು ವಿಶ್ವವಿದ್ಯಾನಿಲಯದವರು ಗಮನದಲ್ಲಿಟ್ಟು, ಒಂದು ಪಂಗಡದವರಿಗೆ ಮಾತ್ರ ಪ್ರತ್ಯೇಕ ಉತ್ತೇಜನ ಕೊಡುವ ಭಾವನೆಯನ್ನು ತೊಲಗಿಸಬೇಕು ಎಂದು ಅವರು ತಿಳಿಸಿದರು

ಶ್ರೀ ಎಂ ಎಸ್ ರಾಮಸ್ವಾಮಿಯವರು ಸಹ ನಿರ್ಣಯವನ್ನು ವಿರೋಧಿಸಿ, ವಿಶ್ವವಿದ್ಯಾಲಯದ ಗೌರವ ಪ್ರತಿಷ್ಠೆಗಳನ್ನು ರಕ್ಷಿಸುವ ಸಲುವಾಗಿ ದರ್ಜೆಯನ್ನು ಇಳಿಸಕೂಡದೆಂದೂ, ಹೊರಗಿನವರನ್ನು ತಂದರೂ ಕೂಡ ಅಡ್ಡಿಯಿಲ್ಲವೆಂದೂ ತಿಳಿಸಿದರು

ಶ್ರೀ ನಾಗಪ್ಪನವರು ವಿಶ್ವವಿದ್ಯಾನಿಲಯದಲ್ಲಿ ಕೋಮುವಾರು ಭಾವನೆ ಇರಕೂಡದೆಂದು ತಿಳಿಸಿ ಎಲ್ಲ ಪಂಗಡದವರಿಗೂ ಈ ಅವಕಾಶವಿರಬೇಕೆಂಬ ಒಂದು ತಿದ್ದುಪಡಿಯನ್ನು ಸೂಚಿಸಿದರು. ತಿದ್ದುಪಡಿಯನ್ನು ಡಾ॥ ರಾಮಚಂದ್ರರಾಯರು ಅನುಮೋದಿಸಿದ್ದರು ತಿದ್ದುಪಡಿಯಾದ ನಿರ್ಣಯವು ೨೬-೭ ಓಟುಗಳಿಂದ ಅನುಮೋದಿಸಲ್ಪಟ್ಟಿತು

ವಿಶ್ವವಿದ್ಯಾನಿಲಯದಲ್ಲಿ ಪುಸ್ತಕ ಭಂಡಾರದ ಡಿಪ್ಲೊಮಾ ಶಿಕ್ಷಣವನ್ನು ತೆರೆಯಬೇಕೆಂದು ಶ್ರೀ ಡಿ, ಸುಬ್ಬಾರಾವ್ ಒಂದು ನಿರ್ಣಯವನ್ನು ಮಂಡಿಸಿದರು ನಿರ್ಣಯವು ಚರ್ಚೆ ಇಲ್ಲದೆ ಅಂಗೀಕೃತವಾಯಿತು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು.

ಅಂಗಡಿ ಸ್ಟಾಲುಗಳ ಹರಾಜು

ಈ ಕೆಳಗೆ ನಮೂದಿಸಿರುವ ಅಂಗಡಿ ಸ್ಟಾಲುಗಳನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಬಾಕಿ ವಿವರಗಳನ್ನು ಮೇಲ್ಕಂಡ ಆಫೀಸಿನಲ್ಲಿ ತಿಳಿಯಬಹುದು

ಹರಾಜಾಗುವ ಸ್ಟಾಲುಗಳು — ಹರಾಜು ತಾರೀಖು

೧ ಪ್ಯಾಲೇಸ್ ಟಾಕೀಸ್ ಬಳಿ ೮ ಸ್ಟಾಲುಗಳು — ೨-೧೧-೪೭ ಬೆಳಿಗ್ಗೆ ೧೧ ಗಂಟೆಗೆ

೨ ಒಲಿಂಪಿಯಾ ಟಾಕೀಸ್ ಹತ್ತಿರ ೧ ಸ್ಟಾಲು — ೩-೧೧-೪೭ ಬೆಳಿಗ್ಗೆ ೧೧ ಗಂಟೆಗೆ

(ಸಹಿ) ಕೆ. ಜಿ. ಶಾಸ್ತ್ರಿ, ಛಾರ್ಜ್ ಛೇರ್‌ಮನ್.

Edited, printed and published by A. R. Nagarajan, at the Sadhvi Press D. Subbaiah Road Mysore.

ರಚನಾತ್ಮಕ ಕಾರ್ಯವು ವಿದ್ಯಾರ್ಥಿಗಳ ಗುರಿ

ಶ್ರೀರಂಗಪಟ್ಟಣ ೨೨

ಇಲ್ಲಿನ ಸ್ಟೂಡೆಂಟ್ಸ್ ಯೂನಿಯನ್ನಿನವರು ಬೆಳಕು ಪತ್ರಿಕೆಯ ಸಂಪಾದಕರಾದ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ತಮ್ಮ ಸಂಘದ ತೃತೀಯ ವಾರ್ಷಿಕೋತ್ಸವವನ್ನು ನೆರವೇರಿಸಿದರು ಇನ್ನು ಮುಂದೆ ರಚನಾತ್ಮಕ ಕಾರ್ಯವೇ ವಿದ್ಯಾರ್ಥಿಗಳ ಏಕೈಕ ಗುರಿಯಾಗಿರಬೇಕು ಸ್ತ್ರೀಯರು ನಾಡಿನ ಏಳಿಗೆಗಾಗಿ ಪುರುಷರೊಂದಿಗೆ ಸಹಕರಿಸಿ ದುಡಿಯಬೇಕು ಎಂದು ಶ್ರೀಮತಿ ಲಕ್ಷ್ಮಮ್ಮನವರು ತಮ್ಮ ಭಾಷಣದಲ್ಲಿ ಹೇಳಿದರು.

ಬೆಂಗಾಲ್ ಸಿಲ್ಕ್ ಸೀರೆಗಳು

ಧರ್ಮಾವರಂ, ಮೈಸೂರು ಸಿಲ್ಕು ಪೂನಾ ಸೀರೆಗಳಿಗೆ

M. V. ಭೋಜಯ್ಯ ಬಿ. ಎ.

ಇಂಡಿಯನ್ ಬ್ಯಾಂಕ್ ಎದುರುಗಡೆ, ಮೈಸೂರು

ಅಪೇರಾ ಟಾಕೀಸ್

ತಾರೀಖು ೨೪-೧೦-೪೭ ರಿಂದ

ಪ್ರತಿ ದಿನ ಮೂರು ಆಟಗಳು.

ಮ್ಯಾಡ್ ಮ್ಯಾನ್

(ಹುಚ್ಚು ಮನುಷ್ಯ)

ಎಂ. ಎಸ್ ಕೃಷ್ಣನ್,

ಟಿ. ಎ. ಮಧುರಂ ನಟಿಸಿರುವ

● ತಮಿಳು ಚಿತ್ರ ●.

WOODLANDS

From 24-10-47

Daily 3 Shows

Dick Tracy

V/S

Crime Inc.

(Full Serial)

Fifteen Parts

ವಿವಾಹ ಮಹೋತ್ಸವ

ರಾಜಧಾನಿಯ ವಕೀಲರೂ, ಕಾಂಗ್ರೆಸ್ ಮುಂದಾಳುಗಳೂ ಆದ ಶ್ರೀ ಎಸ್. ... ರಾಮಯ್ಯನವರು ತಮ್ಮ ಸಹೋದರ ... ಪ್ರತಿಭಾ ಸದಸ್ಯರೂ ಆದ ಶ್ರೀ ಎ ... ಮೂರ್ತಿರಾಯರ ಕುಮಾರಿ ಸೌ॥ ... ರಮ್ಮನನ್ನು ಆರಕೆರೆ ಶ್ರೀ ರಾಮ... ನವರ ಕುಮಾರ ಡಾ॥ ಎ. ಆರ್. ... ರಾವ್‌ರವರಿಗೆ ಕೊಟ್ಟು ನಿನ್ನೆ ವಿವಾಹ... ನ್ನು ನೆರವೇರಿಸಿದರು. ಅನೇಕ ... ಬಂಧು ಮಿತ್ರರು ಆಹ್ವಾನಿತರಾಗಿ ... ಲ್ಪಟ್ಟರು. ಕಾಂಗ್ರೆಸ್ ನಾಯಕರುಗ... ಶ್ರೀಗಳು ಎಸ್. ನಿಜಲಿಂಗಪ್ಪ, ಎ. ... ಮಚಂದ್ರರಾವ್ ಮತ್ತು ಕೆ. ಆರ್. ... ವರಾಯರು ವಧೂವರರಿಗೆ ಶುಭಾಶಯ... ನ್ನು ಕೋರಿ ಅವರಿಗೆ ಸಂದೇಶಗಳನ್ನು ಕಳುಹಿಸಿರುತ್ತಾರೆ.

ರಾಜಕಮಲ್

24—10—47 ರಿಂ...

2 ನೇ ವಾರ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ...

ಜೀವನ್ ಯಾತ್ರಾ

(ಹಿಂದಿ)

—: ಭೂಮಿಕೆ :—

ನಯನತಾರ, ಶಾಂತರೀ, ಬಾಬು... ಸೆಂಡಾರ್ಕರ್, ಯಾಕೂಬ್

ವುಡ್‌ಲ್ಯಾಂಡ್ಸ್

ಡಿಕ್ ಟ್ರೇಸಿ

ವರ್ಸಸ್

ಕ್ರೈಂ ಇಂ...

೨೪—೧೦—೪೭ ರಿಂದ

ಪ್ರತಿ ದಿನ ೩ ಆಟಗಳು

(ಪೂರ್ತಿ ಸೀರಿಯಲ್)

15 ಭಾಗಗಳು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗ... ಆರೋಗ್ಯ ನಿಯಮಗಳಿಗೆ ವಿರೋಧ... ಮನೆಗಳ ಗೋಡೆಗಳ ಮೇಲೆ ಜನರು ... ಣಗಳನ್ನು ಹಚ್ಚುತ್ತಿರುವುದು ಕಂಡು... ದೆ. ಈ ಅಭ್ಯಾಸವನ್ನು ಕೂಡಲೇ ... ಕಬೇಕಾಗಿ ಕೋರಿದೆ. ಹಾಗೆ ನಿಲ್ಲಿಸ... ಮುನಿಸಿಪಲ್ ಬೈಲಾ ರೀತ್ಯಾ ಕ್ರಮ... ಗಳು ತೆಗೆದುಕೊಳ್ಳಲಾಗುತ್ತೆ.

ಎಚ್ ಎಸ್ ಹಿರಣ್ಣ...

ಪ್ರೆಸಿಡೆಂಟ್,

ಸಿಟಿ ಮುನಿಸಿಪಲ್ ಕೌನ್ಸಿ...

ಮೈಸೂರು.

University of Mysore.

No. Ex 3. 193—47-48.

Office of the University of Mysore, Mysore,

Dated 17th October 1947.

NOTIFICATION

Postponement of University Examinations to be held on 3rd November 1947

It is hereby notified that the following * * Examinations notified to be held from 3rd November 1947, will be held from Thursday the 11th December 1947. The detailed time-table will be published in the Mysore Gazette.

* * 1 Intermediate in Arts. 2 Intermediate in Science. 3 Intermediate in Commerce 4 B A., Degree 5 B. Sc Degree 6 B. A (Hons) Preliminary. 7 B Sc. (Hons) Preliminary 8 L. M. P. Examinations.

By Order,

D. S GORDON, Registrar.

ಫೋನ್ ನಂ. 508 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಬುಧವಾರ ೨೯-೧೦-೪೭ [ಸಂಚಿಕೆ ೬೧

ಕಾಶ್ಮೀರ ರಾಜರ ಸಿಂಹಾಸನ ತ್ಯಾಗವೇ ?

ರಾಜಭಕ್ತಿ ಪ್ರಮಾಣ ಸ್ವೀಕಾರ

ನೂತನ ಮಂತ್ರಿಗಳಿಗೆ ಅದ್ಭುತ ಸ್ವಾಗತ

ಮೈಸೂರು ೨೯

ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸ ಲು ಈ ದಿನ ಬೆಳಿಗ್ಗೆ ಹೊಸ ಮಂತ್ರಿಗಳು ಗ್ರೆಸ್ ಕಛೇರಿಯಿಂದ ಅರಮನೆಗೆ ತೆರ ಗ ಸಹಸ್ರಾರು ಜನರು ಸೇರಿ ಅವರಿಗೆ ತವಾದ ಸ್ವಾಗತವನ್ನು ನೀಡಿದರು. ಯುದ್ದಕ್ಕೂ ಜನಸ್ತೋಮವು ಅಪಾರ ಸೇರಿ ಜಯ ಧ್ವನಿಗೈಯುತ್ತಿದ್ದಿತು. ರ್ ಮಹಮದ್ ಷರೀಫರು ವಿನಹ ವ ಮಂತ್ರಿಗಳೆಲ್ಲರೂ ಕಾಂಗ್ರೆಸ್ ಕಛೇ ಮೇಲುಭಾಗದಿಂದ ಜನರಿಗೆ ದರ್ಶನ ರು.

ನಂತರ ಶ್ರೀಮಾನ್ ಎಸ್. ಚೆನ್ನಯ್ಯ ರು ಮಂತ್ರಿಗಳಿಗೆ ಕಾಂಗ್ರೆಸ್ ಕೆಲಸಗಾ ರವಾಗಿ ಶುಭಾಶಯಗಳನ್ನು ಕೋರಿ, ಬೆಂಬಲವೂ ಮಂತ್ರಿಮಂಡಳದವರಿ ಸಂಪೂರ್ಣವಾಗಿ ದೊರೆಯುವುದೆಂದು ದರು. ಶ್ರೀ ಕೆ. ಸಿ ರೆಡ್ಡಿಯವರು ನಾದವನ್ನು ಅರ್ಪಿಸಿ, ಮಹಾತ್ಮರ ನೆಯಂತೆ ತಾವು ಪ್ರಜೆಗಳ ಸೇವೆಯ ಪೂರ್ವಕವಾಗಿ ತಿಳಿಸಿದರು.

ಹಿಳೆಯರು ಮಂತ್ರಿಗಳಿಗೆ ಆರತಿಯ ಟೆಗಿ ಮಂಗಳ ಗೀತೆಗಳನ್ನು ಹಾಡಿ ಗೆ ತಿಲಕವನ್ನು ಇಟ್ಟು ಬೀಳ್ಕೊಟ್ಟರು

ಅರಮನೆಯಲ್ಲಿ ಸಮಾರಂಭ

ಬೆಳಿಗ್ಗೆ ೧೦ ಗಂಟೆಗೆ ಸರಿಯಾಗಿ ಶ್ರೀ ಹಾರಾಜರವರು ಅರಮನೆಯ ಅಂಬಾ ಕ್ಕೆ ದಯಮಾಡಿಸಿ ಪೀಠವನ್ನು ಅ ರಿಸಿದರು. ಸರ್ಕಾರದ ಪ್ರಧಾನ ಕಾ ರ್ಯದರ್ಶಿಗಳಾದ ಶ್ರೀ ವೇದವ್ಯಾಸಾಚಾರ್ಯರು ಮಂತ್ರಿಗಳನ್ನು ಒಬ್ಬೊಬ್ಬರನ್ನಾಗಿ ಪ್ರಭು ಸನ್ನಿಧಿಗೆ ಕರೆದುಕೊಂಡು ಹೋದರು. ಮಂತ್ರಿಗಳು ಆಂಗ್ಲ ಭಾಷೆಯಲ್ಲಿ ಪ್ರಮಾಣ ವನ್ನು ಸ್ವೀಕರಿಸಿದರು. ಶ್ರೀಮನ್ಮ ಹಾರಾಜರವರಲ್ಲಿ ರಾಜಭಕ್ತಿಯನ್ನು ಸೂ ಚಿಸುವಲ್ಲಿಯೂ, ಅವರ ಆಡಳಿತದಲ್ಲಿ ಮತ್ತು ಪ್ರಜಾಕೋಟಿಯಲ್ಲೂ ಗೌರವ ಶ್ರದ್ಧಾಭಕ್ತಿಗಳನ್ನಿಟ್ಟು ಸ್ವಾರ್ಥ ಸಂಗಡಗಳ ಹಿತವನ್ನು ಲಕ್ಷಿಸದೆ ಸ್ಥಾನದ ಸೇವೆಗಾಗಿ ಬದ್ಧಕಂಕಣರಾಗಿ ರುವುದಾಗಿಯೂ ಮತ್ತು ತಮಗೆ ವಹಿಸುವ ಸಂಗದ ವಿಷಯಗಳನ್ನು ರಹಸ್ಯವಾಗಿ ಡುವುದಾಗಿಯೂ ಮತ್ತು ಆತ್ಮಸಾಕ್ಷಿಗೆ ಅನುಸಾರವಾಗಿ ಪ್ರಭುಗಳ ನಿಜವಾದ ಸೇ ವಕರಂತೆ ನಡೆದುಕೊಳ್ಳುವುದಾಗಿಯೂ ಸ ಚಿವರುಗಳು ತಮ್ಮ ಪ್ರಮಾಣದಲ್ಲಿ ಘೋ ಷಿಸಿದರು. ಸಮಾರಂಭವು ಅತ್ಯಂತ ಸರ ಳರೀತಿಯಲ್ಲಿ ಕೇವಲ ಅರ್ಧಗಂಟೆಯೊಳ ಗೆ ಮುಕ್ತಾಯವಾಯಿತು. ಸುಮಾರು ಜನರು ಆಹ್ವಾನಿಸಲ್ಪಟ್ಟಿದ್ದರು

ಸಾರ್ವಜನಿಕ ಸಭೆ ಮತ್ತು ಮೆರವಣಿಗೆ

ಈ ದಿನ ಸಂಜೆ ೫॥ ಗಂಟೆಗೆ ನೂತನ ಮಂತ್ರಿಗಳ ಮೆರವಣಿಗೆಯು ಪುರಸಭಾ ಭವ ನದಿಂದ ಹೊರಟು ಟೌನ್‌ಹಾಲ್ ಮೈದಾನ ದವರೆಗೆ ಏರ್ಪಾಡಾಗಿದೆ. ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಮಂತ್ರಿಗಳ ಗೌರವಾರ್ಥವಾಗಿ ಬಹಿರಂಗ ಸಭೆಯು ನಡೆಯುತ್ತದೆ.

ಕಾಶ್ಮೀರ ರಾಜರು ಸಿಂಹಾಸನ ತ್ಯಜಿಸುವರೇ ?

ಲಾಹೋರಿನಲ್ಲಿ ತಾತ್ಕಾಲಿಕ ಕಾಶ್ಮೀರ ಸರ್ಕಾರವೇ ?

ಕಾಶ್ಮೀರ ಸಂಸ್ಥಾನದ ಮಹಾರಾಜರಾದ ಸರ್ ಹರಿಸಿಂಗ್‌ರವರು ಸಿಂಹಾಸನವನ್ನು ತ್ಯಜಿಸಿ ಸಂಸ್ಥಾನವನ್ನು ಬಿಟ್ಟು ಹೋಗಿದ್ದಾರೆಂದೂ, ಲಾಹೋರಿನಲ್ಲಿ ತಾತ್ಕಾಲಿಕ ಕಾಶ್ಮೀರದ ಸರ್ಕಾರವೊಂದನ್ನು ಸ್ಥಾಪಿಸಲಾಗಿದೆಯೆಂದೂ, ರಾಯಿಟರ್ಸ್ ಸುದ್ದಿ ಸಂಸ್ಥೆಯು ಪ್ರಸಾರಮಾಡಿದೆ

ಕಾಶ್ಮೀರ ಸಂಸ್ಥಾನದ ಅನೇಕ ಪ್ರದೇಶಗಳನ್ನು ದಾಳಿಕಾರರು ಆಕ್ರಮಿಸಿರುವುದಾಗಿಯೂ ಮಹಾರಾಜರೂ ಮತ್ತು ಮುಖ್ಯ ಮಂತ್ರಿಗಳೂ ಸಂಸ್ಥಾನವನ್ನು ಬಿಟ್ಟು ಎಲ್ಲಿಯೋ ಪರಾರಿ ಆಗಿರುವರೆಂದೂ ತಾತ್ಕಾಲಿಕ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ.

ಈ ಸುದ್ದಿಗೆ ಯಾವ ಸಮರ್ಥನೆಯೂ ದೊರೆತಿರುವುದಿಲ್ಲ

ಮೈಸೂರಿನ ಮಾದರಿಯ ಅನುಕರಣೆ

ಕಾಶ್ಮೀರದಲ್ಲಿ ಜನಾನುರಾಗಿ ಸರ್ಕಾರ ಏರ್ಪಟ್ಟು, ಷೇಕ್ ಅಬ್ದುಲ್ಲಾರವರ ನೇತೃತ್ವದಲ್ಲಿ ಹೊಸ ಸರ್ಕಾರದ ರಚನೆಯಾಗಲಿದೆಯಷ್ಟೆ. ಈ ಹೊಸ ಸರ್ಕಾರವನ್ನು ರಚಿಸುವಾಗ ಮೈಸೂರಿನ ಮೇಲ್ಪಂಕ್ತಿಯನ್ನೇ ಅನುಸರಿಸಲಾಗುವುದೆಂದು ಹೇಳಲಾಗಿದೆ

ಪಾಕಿಸ್ತಾನ್-ಕಾಶ್ಮೀರಗಳ ಒಪ್ಪಂದ ಭಗ್ನವಾಯಿತು

ಪಾಕಿಸ್ತಾನದೊಡನೆ ಕಾಶ್ಮೀರ ಸಂಸ್ಥಾನವು ಪೆಟ್ರೋಲು, ಬಟ್ಟೆ ಮುಂತಾದ ಪದಾರ್ಥಗಳ ಸರಬರಾಜಿನ ಬಗ್ಗೆ ಒಂದು ಸ್ಟ್ಯಾಂಡ್‌ಸ್ಟಿಲ್ ಒಪ್ಪಂದವನ್ನು ಮಾಡಿಕೊಂಡಿತ್ತು. ಇತ್ತೀಚೆಗೆ ಪಾಕಿಸ್ತಾನವು ಈ ಒಪ್ಪಂದವನ್ನು ಮುರಿದು ಕಾಶ್ಮೀರ ಸಂಸ್ಥಾನಕ್ಕೆ ಬಟ್ಟೆ, ಸಕ್ಕರೆ, ಪೆಟ್ರೋಲು ಮುಂತಾದವುಗಳ ಸರಬರಾಜನ್ನು ನಿಲ್ಲಿಸಿರುವುದರಿಂದ ಸಂಸ್ಥಾನವು ಭಾರತ ಯೂನಿಯನ್ನಿನೊಡನೆ ಹೊಸ ಒಪ್ಪಂದವನ್ನು ಮಾಡಿಕೊಂಡು, ಆ ಯೂನಿಯನ್ನಿಗೆ ಸೇರಬೇಕಾದುದಾಗಿ ಕಾಶ್ಮೀರ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷತೆ

ಮೈಸೂರು ೨೯

ಮೈಸೂರು ಕಾಂಗ್ರೆಸ್ ಸದಸ್ಯರು ಶ್ರೀಗಳಾದ ಎಂ ಎನ್ ಜೋಯಿಸ್, ಹಾ.ಟಿ ನಂಜಪ್ಪ, ಎ ಎನ್ ಸೂರ್ಯನಾರಾಯಣರಾವ್, ಕೆ ಎಸ್. ಸತ್ಯನಾರಾಯಣರಾವ್ ಮೊದಲಾದವರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ಶ್ರೀ ಕೆ ಹನುಮಂತಯ್ಯನವರ ಹೆಸರನ್ನು ಸೂಚಿಸಿರುವರೆಂದು ಗೊತ್ತಾಗಿದೆ

ನಿರಾಶ್ರಿತರಿಗೆ ಸಹಾಯ

ರಾಜಧಾನಿಯ ದೇಶೀಯ ವಿದ್ಯಾಶಾಲೆಯ ಸ್ವಯಂಸೇವಕರು ಪಂಜಾಬ್ ನಿರಾಶ್ರಿತರ ಸಹಾಯವಾಗಿ ಇದುವರೆಗೆ ರಾಜಧಾನಿಯ ವಿವಿಧ ಮೊಹಲ್ಲೆಗಳಿಗೆ ಹೋಗಿ ಸುಮಾರು ೨೦೦ ಬಟ್ಟೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ದೆಹಲಿಗೆ ಕಳುಹಿಸಲು ಮರ್ಕೆಂಟೈಲ್ ಸಂಘಕ್ಕೆ ಕೊಡಲಾಗಿದೆ.

ಕೌಶಿಕ ಸಂಕೇತಿ ಬ್ರಾಹ್ಮಣ ಸಭೆ

ರಾಜಸೇವಾಪ್ರಸಕ್ತ ಡಾ॥ ಬಿ. ಕೆ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ಸೇರಿದ್ದ ಸಭೆಯು ವಾರ್ಷಿಕೋತ್ಸವವನ್ನಾಚರಿಸಿತು. ೩೩ ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವೇತನಗಳನ್ನು ಕೊಡಲಾಗಿದೆಯೆಂದು ಕಾರ್ಯದರ್ಶಿಗಳು ತಿಳಿಸಿದರು. ನಿಧಿಯನ್ನು ಹೆಚ್ಚಿಸುವ ಬಗ್ಗೆ ಶ್ರೀ॥ ತಿಪ್ಪಯ್ಯನವರೂ, ಪ್ರಜಾ ಸರ್ಕಾರ ಏರ್ಪಟ್ಟಿರುವಾಗ ಸಮಾಜವು ಮಾಡಬೇಕಾದ ಕಾರ್ಯಗಳನ್ನು ಕುರಿತು ಶ್ರೀ॥ ಕೆ ಅನಂತಸುಬ್ಬರಾಯರೂ ಭಾಷಣ ಮಾಡಿದರು

ನಗರ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರು

ಬೆಂಗಳೂರು ೨೮

ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಕೆ. ಟಿ ಭಾಷ್ಯಂರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರಿಂದ ಅವರ ಸ್ಥಾನಕ್ಕೆ ಶ್ರೀ ಕೆ. ರಾಮಾಂಜಯ್ಯಂಗಾರ್‌ರವರನ್ನು ಚುನಾಯಿಸಲಾಗಿದೆ.

ಗೆಜೆಟೆಡ್ ನೌಕರರ ಸಂಬಳ

ಸ್ವಂ ಸು ಪ್ರೋ] ಬೆಂಗಳೂರು ೨೮

ಸರ್ಕಾರದವರು ಎಲ್ಲಾ ಗೆಜೆಟೆಡ್ ಅಧಿಕಾರಿಗಳ ಸಂಬಳಗಳನ್ನೂ ಪುನರ್ವಿಮರ್ಶಿಸಿ ಆಜ್ಞೆ ಮಾಡಿದ್ದಾರೆ. ಇದು ಸೆಪ್ಟೆಂಬರ್ ೧ನೇ ತಾರೀಖಿನಿಂದ ಜಾರಿಗೆ ಬರುವುದು. ಅಸಿಸ್ಟೆಂಟ್ ಕಮಿಷನರುಗಳ ದರ್ಜೆಯ ಎಲ್ಲ ಅಧಿಕಾರಿಗಳ ಸಂಬಳಗಳನ್ನೂ ೩೦೦-೨೫-೫೦೦ ರೂ. ಮಾಡಲಾಗಿದೆ. ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರಿಗೆ ೬೦೦-೫೦-೨೫-೮೦೦ ಇದ್ದುದನ್ನು ೮೦೦-೨೫-೯೦೦ ಮಾಡಲಾಗಿದೆ ಸೀನಿಯರ್ ಪೋಲೀಸ್ ಸೂಪರಿಂಟೆಂಡೆಂಟರಿಗೆ ೫೦೦-೫೦/೩-೬೦೦ ಇದ್ದುದ ೬೦೦-೨೫-೮೦೦ ಕ್ಕೆ ಹೆಚ್ಚಿಸಲಾಗಿದೆ ಸೂಪರಿಂಟೆಂಡೆಂಟರುಗಳಿಗೆ ೩೦೦-೨೫-೫೦೦ ಅಮುಲ್ದಾರರುಗಳ ಸಂಬಳವನ್ನು ೨೦೦-೨೦-೩೦೦ ರೂ ಮಾಡಲಾಗಿದೆ

ಕಾಶ್ಮೀರಕ್ಕೆ ಭಾರತದ ಸೈನ್ಯ ರವಾನೆ

ಕಾಶ್ಮೀರದ ಮೇಲೆ ಪುಂಡರು ನಡೆಸುತ್ತಿರುವ ದಾಳಿಗಳನ್ನು ತಡೆಗಟ್ಟಲು ಭಾರತ ಸರ್ಕಾರದವರು ವಿಮಾನಗಳ ಮೂಲಕ ಸೈನ್ಯಗಳನ್ನು ಕಳುಹಿಸಿ ದಾಳಿಕಾರರನ್ನು ಹಿಮ್ಮೆಟ್ಟಿಸುತ್ತಿರುವರೆಂದು ವರದಿಯಾಗಿದೆ.

ಕೊಚ್ಚಿ ಸಂಸ್ಥಾನದಲ್ಲಿ ನೂತನ ಮಂತ್ರಿ ಮಂಡಳ

ಕೊಚ್ಚಿ ಸಂಸ್ಥಾನದಲ್ಲಿ ಶ್ರೀ ಟಿ ಕೆ. ನಾಯರ್‌ರವರ ಮುಖಂಡತ್ವದಲ್ಲಿ ನೂತನ ಮಂತ್ರಿಮಂಡಳ ಏರ್ಪಡಾಗಿದೆ. ರಾಷ್ಟ್ರೀಯ ಪಕ್ಷದ ನಾಯಕರಾದ ಶ್ರೀ ಟಿ. ಕೋದಂಡರಾಮರವರು ಮತ್ತು ಶ್ರೀ ಕೆ ಬಾಲಕೃಷ್ಣ ಮೆನನ್‌ರವರು ಸಚಿವರುಗಳನ್ನಾಗಿ ನೇಮಿಸಲಾಗಿದೆ

ಸತ್ತ ಹೆಂಗಸು ಬದುಕಿದಳು

ಗ್ಲೋಬ್] ತಿರುವನಂತಪುರ ೨೭

ತಿರುವನಂತಪುರಕ್ಕೆ ೨೫ ಮೈಲಿ ದೂರದಲ್ಲಿರುವ ಆಟ್ಟಿಂಗಲ್-ಎಂಬಲ್ಲಿ ಸತ್ತ ೬೦ ವಯಸ್ಸಿನ ಮುದುಕಿಯೊಬ್ಬಳು ಪದ್ಧತಿಯ ಪ್ರಕಾರ ಹೂಳುವ ಮುನ್ನ ಶವವನ್ನು ನೀರಿನಲ್ಲಿ ಅದ್ದಿ ಮೇಲಕ್ಕೆತ್ತಿದ ಮೇಲೆ ಉಸಿರಾಡಲು ಆರಂಭಿಸಿ ಬದುಕಿದಳು.

ವಿದ್ಯಾರ್ಥಿಗಳ ಪ್ರತಿಭಟನೆ

ರಾಜಧಾನಿಯ ಸೆಂಟ್ ಫಿಲೋಮಿನಾ ಕಾಲೇಜಿನ ಇಂಗ್ಲಿಷ್ ಅಧ್ಯಾಪಕರಾದ ಶ್ರೀ ಪಿಂಟೋರವರು ಸತ್ಯಾಗ್ರಹದ ಕಾಲದಲ್ಲಿ ತಾಂಡವಾಡಿದ ಲಾಠಿ ಪ್ರಹಾರವನ್ನು ಹೊಗಳಿದರೆಂದು ಆ ಕಾಲೇಜಿನ ವಿದ್ಯಾರ್ಥಿಗಳು ಈ ದಿನ ತರಗತಿಗಳ ದ ಹೊರಗೆ ಬಂದರು.

ನವೆಂಬರ್ ೧ ನೇ ತಾರೀಖು ಸಾರ್ವಜನಿಕ ರಜಾ

ಸ್ವಂ.ಸು.ಪ್ರೋ] ಬೆಂಗಳೂರು ೨೮

ವಿಜಯೋತ್ಸವದ ಪ್ರಯುಕ್ತ ನವೆಂಬರ್ ೧ ನೇ ತಾ॥ ಸಾರ್ವಜನಿಕ ರಜಾ ದಿನವೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ನೂತನ ಮಂತ್ರಿಮಂಡಲಕ್ಕೆ
ಪುರಸಭೆಯ ಅಭಿನಂದನೆ

ಮೈಸೂರು: ೨೯

ನಿನ್ನೆ ಸಂಜೆ ಮೈಸೂರು ಪುರಸಭೆಯ ಸಾಧಾರಣ ಮಿಟಿಂಗು ಶ್ರೀ|| ಎಸ್. ಎಸ್. ಹೊಣ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕೆ ಮುಂಚೆ, ಶ್ರೀಮತಿ ಎಂ. ಆರ್. ಲಕ್ಷಮ್ಮನವರು ಈ ಕೆಳಗೆ ಕಂಡ ನಿರ್ಣಯವನ್ನು ಮಂಡಿಸಿದರು.

ಮೈಸೂರು ದೇಶದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವ ದೃಢ ಸಂಕಲ್ಪದಿಂದ ಲೋಕಪೂಜ್ಯ ಮಹಾತ್ಮ ಗಾಂಧೀಜಿಯವರ ಮಾರ್ಗದರ್ಶಿತ್ವದಲ್ಲಿ ಕಳೆದ ಹತ್ತು ವರ್ಷಗಳಿಂದ ಸತತವಾಗಿ ಹೋರಾಡಿ, ಈಗಿನ ಸತ್ಯಾಗ್ರಹ ಸಮರದಲ್ಲಿ ಅದ್ಭುತ ವಿಜಯಗಳಿಸಿ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಜನತಾ ಸರ್ಕಾರವನ್ನು ಸ್ಥಾಪಿಸಿ ಕೀರ್ತಿಶಾಲಿಯಾದ ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತದೆ ಮತ್ತು ಈ ಮಹಾಸಾಧನೆಯಲ್ಲಿ ಕಷ್ಟನಷ್ಟಗಳಿಗೆ ಗುರಿಯಾದ, ಮತ್ತು ಪ್ರಾಣಾರ್ಪಣೆ ಮಾಡಿದ ಅಸಂಖ್ಯಾತ ವೀರರಿಗೆ ಕೃತಜ್ಞತೆ ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತದೆ.

ಶ್ರೀ ... ಸೀತಾರಾಮಯ್ಯನವರು ಅದನ್ನು ಅನುಮೋದಿಸಿದರು. ನಿರ್ಣಯವು ಅಂಗೀಕಾರವಾಯಿತು.

ಅನಂತರ ಶ್ರೀ ಕೆ. ಪುಟ್ಟಸ್ವಾಮಿಯವರು ಮತ್ತೊಂದು ನಿರ್ಣಯವನ್ನು ಮಂಡಿಸಿ, ಪ್ರಜಾಭಿಪ್ರಾಯವನ್ನು ಮನ್ನಿಸಿ ದೇಶದಲ್ಲಿ ಜನಪ್ರಿಯ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿ, ಸಾಂಕುಶಪ್ರಭುವಾಗಿರುವ ಶ್ರೀಮನ್ಮಹಾರಾಜರವರಿಗೆ ರಾಜಭಕ್ತಿ ಪುರಸ್ಸರವಾದ ಅಭಿನಂದನೆಗಳನ್ನು ಅರ್ಪಿಸುತ್ತದೆ ಎಂದು ತಿಳಿಸಿದರು. ಶ್ರೀ ಬಿ. ನಾರಾಯಣಸ್ವಾಮಯ್ಯನವರು ಅದನ್ನು ಅನುಮೋದಿಸಿದರು. ಮಿ|| ಮಿರ್ ನೂರ್ ಹುಸೇನ್ ಮತ್ತು ಶ್ರೀ ಸಿದ್ದಯ್ಯನವರು ಸಹ ಅದಕ್ಕೆ ಬೆಂಬಲವಿತ್ತರು. ನಿರ್ಣಯವು ಅಂಗೀಕಾರವಾಯಿತು.

ಶ್ರೀ ಅಗರಂ ರಂಗಯ್ಯನವರು ನಂತರ ಈ ಕೆಳಗೆ ಕಂಡ ನಿರ್ಣಯವನ್ನು ಮಂಡಿಸಿದರು. ನಾಡ ಹಬ್ಬವಾದ ಈ ಸಲದ ವಿಜಯದಶಮಿಯ ಶುಭ ದಿನದಿಂದ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರ ಮುಂದಾಳುತನದಲ್ಲಿ ದೇಶದ ಆಡಳಿತ ನಿರ್ವಹಣೆಯ ಭಾರವನ್ನು ಹೊತ್ತಿರುವ ನೂತನ ಮಂತ್ರಿಮಂಡಲವನ್ನು ಈ ಸಭೆಯು ಅಭಿನಂದಿಸುತ್ತದೆ ಮತ್ತು ಈ ಸಭೆಯು ಮಂತ್ರಿಮಂಡಲಕ್ಕೆ ಸಂಪೂರ್ಣ ಸಹಾಯ ಸಹಕಾರಗಳನ್ನು ನೀಡುತ್ತದೆ.

ಶ್ರೀ ಗೋಪಾಲಕೃಷ್ಣ ಶೆಟ್ಟರು ಅದನ್ನು ಅನುಮೋದಿಸಿದರು. ನಿರ್ಣಯವು ಯಾವ ಚರ್ಚೆಯಿಲ್ಲದೆ ಅಂಗೀಕೃತವಾಯಿತು.

ಮೈಸೂರು ದೇಶದಲ್ಲಿ ಸ್ಥಾಪಿತವಾಗಿರುವ ನೂತನ ಮಂತ್ರಿಮಂಡಲದಲ್ಲಿ ಮಾಜಿ ಪುರಸಭಾ ಸದಸ್ಯರಾಗಿದ್ದ ಶ್ರೀ ಹೆಚ್. ಸಿ. ದಾಸಪ್ಪನವರೂ ಮತ್ತು ಹಾಲಿ ಸದಸ್ಯರಾಗಿರುವ ಶ್ರೀ ಟಿ. ಮರಿಯಪ್ಪನವರೂ ಸಚಿವರಾಗಿರುವುದಕ್ಕಾಗಿ ಸಭೆಯು ಅಭಿನಂದಿಸುತ್ತದೆ ಎಂಬ ಶ್ರೀ ಬೇಲೂರಯ್ಯನವರ ನಿರ್ಣಯವು ಅಂಗೀಕೃತವಾಯಿತು. ಶ್ರೀ ಇ. ಪಿ. ನಂಜಪ್ಪನವರು ಅದನ್ನು ಅನುಮೋದಿಸಿದರು.

ರೇಷನ್ ಡಿಪೋ ಮುಚ್ಚಲಾಗಿದೆ

ಬೇಗೂರಿನ ಜನರು ಸತ್ಯಾಗ್ರಹದಲ್ಲಿ ಭಾಗವಹಿಸಿದ ಪರಿಣಾಮವಾಗಿ ಅಲ್ಲಿನ ರೇಷನ್ ಡಿಪೋವನ್ನು ತೆಗೆದುಹಾಕಿ ಒಂದು ತಿಂಗಳ ಮೇಲಾಯಿತು. ಸಾವಿರಾರು ಜನರು ಹೊಟ್ಟೆಗಿಲ್ಲದೆ ತುಂಬಾ ತೊಂದರೆ ಪಡುತ್ತಿದ್ದಾರೆ. ಸತ್ಯಾಗ್ರಹ ಮುಗಿದು ಒಪ್ಪಂದವಾಗಿದ್ದರೂ ಕೂಡ, ಇನ್ನೂ ರೇಷನ್ ಡಿಪೋವನ್ನು ತೆರೆಯದಿರುವುದು ಶೋಚನೀಯ. ಇದನ್ನು ಕೂಡಲೆ ಸರಿಪಡಿಸಬೇಕೆಂದು ಶ್ರೀ ಬಿ. ದಾಸೇಗೌಡರು ಕೋರುತ್ತಾರೆ.

ರತ್ಲಂನಲ್ಲಿ ಜವಾಬ್ದಾರಿ ಸರ್ಕಾರ

ರತ್ಲಂ ಸಂಸ್ಥಾನದ ರಾಜರು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ಮತ್ತು ದೇಶದ ದೇವಾಲಯಗಳಿಗೆ ಹರಿಜನರ ಪ್ರವೇಶಕ್ಕೆ ಅನುಮತಿ ಕೊಟ್ಟಿದ್ದಾರೆ.

ಕೃಷ್ಣರಾಜನಗರ ೨೮

ಇಲ್ಲಿನ ರೈಲ್ವೆ ಸ್ಟೇಷನ್ ಬುಕಿಂಗ್ ಆಫೀಸಿನ ಹತ್ತಿರ ಹಳೇ ಟಿಕೆಟ್ಟುಗಳನ್ನು ಮಾರುತ್ತಿದ್ದ ಮುನಿಸ್ವಾಮಿ ಎಂಬುವನನ್ನು ಹಿಡಿದು ಪೋಲೀಸರ ವಶಕ್ಕೆ ಕೊಟ್ಟಿರುತ್ತಾರೆ.

ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ವಿಜಯೋತ್ಸವ !!!

ಸ್ವತಂತ್ರ ಮೈಸೂರಿನವರಾಗಲು ಹೆಮ್ಮೆಪಡಿರಿ !
ಆಕರ್ಷಣೀಯವಾದ ಮತ್ತು ಸುಂದರವಾದ ಆರು ಬಣ್ಣಗಳಿಂದ ಅಲಂಕೃತವಾದ
ಮೈಸೂರು ನ್ಯಾಷನಲ್
ಬ್ಯಾಡ್ಜುಗಳನ್ನು
ಧರಿಸಿ ಹೆಮ್ಮೆ ಪಡಿರಿ ಇಂದೇ
ಒಂದಾಣೆಯೊಡನೆ ನಮ್ಮಲ್ಲಿ ಓಡಿ ಬನ್ನಿ
ಪಡಕೇಸ ಜಯಾ ಸ್ಟೋರ್ಸ್,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

ಬೆಂಗಾಲ್ ಸಿಲ್ಕ್ ಸೀರೆಗಳು
ಧರ್ಮಾವರಂ, ಮೈಸೂರು ಸಿಲ್ಕ್
ಪೂನಾ ಸೀರೆಗಳಿಗೆ
M. V ಭೋಜಯ್ಯ ಬಿ. ಎ.
ಇಂಡಿಯಾ ಬ್ಯಾಂಕ್ ಎದುರು ಬಂದು ನೋಡಿ

Rajkamal
Morning shows from
29-10-47
daily at 10-30 a m.
EDDIE CANTOR
in
ROMAN SCANDALS
—: with :—
Goldwyn Girls

ರಾಜಕಮಲ್
24-10-47 ರಿಂದ
2 ನೇ ವಾರ
ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್ ರವರ
ಜೀವನ್ ಯಾತ್ರ
(ಹಿಂದಿ)
—: ಭೂಮಿಕೆ :—
ನಯನತಾರಾ, ಶಾಂತರಿ, ಬಾಬೂರಾವ್
ಪೆಂಡಾರ್ಕರ್, ಯಾಕೂಬ್

ಅಪೇರಾ ಟಾಕೀಸ್
ತಾರೀಖು ೨೪-೧೦-೪೭ ರಿಂದ
ಪ್ರತಿ ದಿನ ಮೂರು ಆಟಗಳು
ಮ್ಯಾಡ್ ಮ್ಯಾನ್
(ಹುಚ್ಚು ಮನುಷ್ಯ)
ಎನ್. ಎಸ್. ಕೃಷ್ಣನ್,
ಟಿ. ಎ. ಮಧುರಂ ನಟಿಸಿರುವ
ತಮಿಳು ಚಿತ್ರ

ಮೈಸೂರು ಸಿಟಿ ರೇಷನಿಂಗ್

ನಂ. R 6-31-47

1947 ನೇ ಇಸವಿ ಅಕ್ಟೋಬರ್ ಮಾಹೆ 31 ನೇ ತಾ|| ನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

ಮೈಸೂರು, 23-10-47.
ರೇಷನಿಂಗ್ ಆಫೀಸರ್, ಮೈಸೂರು ಸಿಟಿ.

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ
ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೆರಣಿಗಳನ್ನು ತಟ್ಟುತ್ತಿರುವುದು ಕಂಡುಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಕೋರಿದೆ. ಹಾಗೆ ನಿಲ್ಲಿಸದಿದ್ದರೆ ಮುನಿಸಿಪಲ್ ಬೈಲಾ ರೀತ್ಯಾ ಕಾರ್ಯಕ್ರಮಗಳು ತೆಗೆದುಕೊಳ್ಳಲಾಗುತ್ತೆ.

ಎನ್. ಎಸ್. ಹಿರಣ್ಣಯ್ಯ,
ಪ್ರೆಸಿಡೆಂಟ್,
ಸಿಟಿ ಮುನಿಸಿಪಲ್ ಕೌನ್ಸಿಲ್
ಮೈಸೂರು.

Office of the Municipal Engineer
City Municipal Council,
Mysore, dated 11-10-47

NOTIFICATION

Sealed tenders will be received up to 4 P.M. on 30th October 47 by the Municipal Engineer for Constructing a Dispensary Building in Chamundipuram, Mysore.

Each tender must be accompanied with a chellan for having remitted Rs 160 in Municipal Treasury as earnest money. For full particulars please see the detailed notification on the Notice Board.

S. Narayanaswamy,
Municipal Engineer,
Mysore

Edited printed and published by A. S. Rangaswamy at the Sadhvi Press D. Subbaiah Road Mysore

ಫೋನ್ ನಂ. 508 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಗುರುವಾರ ೩೦-೧೦-೪೭ [ಸಂಚಿಕೆ ೬೨

ಶ್ರೀಮನ್ಮಹಾರಾಜರ ಘೋಷಣೆ

ನೂತನ ರಾಜ್ಯಾಂಗದ ಬಗ್ಗೆ ಸೂಚನೆ

ಮೈಸೂರು ೩೦

ನಿನ್ನೆ ಶ್ರೀಮನ್ಮಹಾರಾಜರವರು ಈ ರೀತಿ ಒಂದು ಘೋಷಣೆಯನ್ನು ಅಪ್ಪಣೆ ಕೊಡಿಸಿದ್ದಾರೆ:—

೧೯೪೭ ನೇ ಅಕ್ಟೋಬರ್ ೨೯ ನೇ ತಾರೀಖಿನ ಈ ದಿನ, ನಮ್ಮ ಆಳ್ವಿಕೆಯ ಎಂಟನೇ ವರ್ಷದಲ್ಲಿ ಈ ರೀತಿ ಅಪ್ಪಣೆ ಮಾಡುತ್ತೇವೆ. ೧೯೪೭ ನೇ ಸೆಪ್ಟೆಂಬರ್ ೨೪ ನೇ ತಾರೀಖು ನಾವು ಒಂದು ಘೋಷಣೆಯನ್ನು ಹೊರಡಿಸಿ ಕೆಲವು ಮೂಲ ತತ್ವಗಳ ಆಧಾರದ ಮೇಲೆ ಜವಾಬ್ದಾರೀ ಸರ್ಕಾರದ ಮಸೂದೆಯನ್ನು ರಚಿಸಿ ಕೊಡಲು, ನಮ್ಮ ಪ್ರಜೆಗಳ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಉಚಿತವಾದ ವಿಷಯಗಳನ್ನು ಅಧಿಕಾರವನ್ನು ವಹಿಸುವ ಮಂತ್ರಿಮಂಡಲಕ್ಕೆ ವಹಿಸುವ ಬಗ್ಗೆ ಇಚ್ಛೆ ವ್ಯಕ್ತಪಡಿಸಿದ್ದೆವು.

೧೯೪೭ನೇ ಅಕ್ಟೋಬರ್ ೧೨ ನೇ ತಾ॥ ರಾಜ್ಯಾಂಗ ಸಭೆಯ ರಚನೆ ಮತ್ತು ತಾತ್ಕಾಲಿಕ ಮಂತ್ರಿಮಂಡಲದ ಸ್ಥಾಪನೆಗಳ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರಿಗೂ ನಮ್ಮ ದಿವಾನರಿಗೂ ಆದ ಒಪ್ಪಂದಕ್ಕೆ ನಮ್ಮ ಅಂಗೀಕಾರವನ್ನಿತ್ತೆವು. ಅದಕ್ಕೆ ಅನುಸಾರವಾಗಿ ನಮಗೆ ಒಪ್ಪಿಸಲ್ಪಟ್ಟ ಮಂತ್ರಿಗಳ ಹೆಸರುಗಳನ್ನು ನಾವು ಅಂಗೀಕರಿಸಿದ್ದೇವೆ. ಈಗ ನಾವು ಈ ರೀತಿ ಅಪ್ಪಣೆ ಮಾಡುತ್ತೇವೆ.

ಮಂತ್ರಿಮಂಡಲಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ದಿವಾನರೂ, ಇತರ ಸಚಿವರೂ ಒಟ್ಟಿಗೆ ಕಲೆತು ಸಂಯುಕ್ತ ಜವಾಬ್ದಾರಿಯ ಮೇಲೆ ಕೆಲಸ ಮಾಡಬೇಕು. ಮಂತ್ರಿಮಂಡಲವು ಬಹು ಮತಾಭಿಪ್ರಾಯದ ಮೇಲೆ ನಿರ್ಧಾರಗಳನ್ನು ಮಾಡಬೇಕು. ಶಾಸನ ಸಭೆಯ ವಿಶ್ವಾಸ ಪಡೆದಿರುವವರೆಗೆ ಮಂತ್ರಿಮಂಡಲ ಅಧಿಕಾರದಲ್ಲಿರಬೇಕು. ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ರಾಜ್ಯಾಂಗ ರಚನಾ ಸಭೆಯೊಂದನ್ನು ಮಂತ್ರಿಮಂಡಲವು ರಚಿಸಬೇಕು. ನಮ್ಮ ಆಶ್ರಯದಲ್ಲಿ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸಲು ಅಗತ್ಯವಾದ ರಾಜ್ಯಾಂಗವನ್ನು ರಚಿಸುವ ಕರ್ತವ್ಯವನ್ನು ಆ ಸಭೆಗೆ ವಹಿಸಬೇಕು. ಸೆಪ್ಟೆಂಬರ್ ೨೪ ರಲ್ಲಿ ನಾವು ಹೊರಡಿಸಿದ ಘೋಷಣೆಯ ೧ ನೇ ಷೆಡ್ಯೂಲಿನ ಮೂಲ ತತ್ವಗಳಲ್ಲಿ ಅಗತ್ಯವಾದ ಮಾರ್ಪಾಡುಗಳನ್ನೂ, ಅದೇ ಘೋಷಣೆಯ ೨ ನೇ ಷೆಡ್ಯೂಲಿನಲ್ಲಿ ಅವಶ್ಯಕವಾದ ಬದಲಾವಣೆಗಳನ್ನೂ ಮಾಡಿ ರಾಜ್ಯಾಂಗ ಮಸೂದೆಯನ್ನು ಸಿದ್ಧಗೊಳಿಸುವ ಅಧಿಕಾರ ಈ ಸಭೆಗೆ ಇರುತ್ತದೆ. ಕರಡು ಮಸೂದೆಯು ನಮ್ಮ ಅವಗಾಹನೆಗೆ ಒಪ್ಪಿಸಲ್ಪಡಬೇಕು. ನಾವು ಅವಶ್ಯಕವೆಂದು ತೋರಿ ಬರುವ ಬದಲಾವಣೆಗಳನ್ನು ಮಾಡಿ ಆ ರಾಜ್ಯಾಂಗವನ್ನು ಜಾರಿಗೆ ತರುತ್ತೇವೆ. ನಮ್ಮ ಪ್ರಜೆಗಳಿಗೆ ಈಗ ದೊರೆಯುವ ಈ ಮಹದವಕಾಶವನ್ನು ಅರಿತು ಅವರು ವರ್ತಿಸುವರೆಂದು ನಾವು ನಂಬಿದ್ದೇವೆ. ನಮ್ಮ ಸಚಿವರು ತಮ್ಮ ಕರ್ತವ್ಯವನ್ನರಿತು ದೇಶದ ಶಾಂತಿ, ಉನ್ನತಿ ಮತ್ತು ಅಭಿವೃದ್ಧಿಗಳಿಗಾಗಿ ಯತ್ನಿಸುವರೆಂದು ನಾವು ಭರವಸೆ ಹೊಂದಿದ್ದೇವೆ.

ನೂತನ ಮಂತ್ರಿಗಳಿಗೆ ಪುರಸಭೆಯ ಸತ್ಕಾರ

ಮೈಸೂರು ೩೦

ಮೈಸೂರು ಪೌರಸಭೆಯವರು ನಿನ್ನೆ ನೂತನ ಮಂತ್ರಿಗಳಿಗೆ ಪುರಭವನದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಉಪಾಹಾರವಾದನಂತರ ಪೌರಾಧ್ಯಕ್ಷರಾದ ಶ್ರೀ॥ ಎ. ಎಸ್. ಹಿರಣ್ಣಯ್ಯನವರು ಪೌರಸಭೆಯ ಪರವಾಗಿ ಸಚಿವರುಗಳಿಗೆ ಸ್ವಾಗತವನ್ನು ಬಯಸಿದರು. ನೂತನ ಮಂತ್ರಿ ಮಂಡಳದಲ್ಲಿ ಪುರಸಭಾ ಸದಸ್ಯರಾಗಿದ್ದ ಇಬ್ಬರು ಮಹನೀಯರುಗಳಿರುವುದು ಹೆಮ್ಮೆಯ ವಿಷಯವೆಂದು ತಿಳಿಸಿ, ನಮ್ಮ ಮಹಾಪ್ರಭುಗಳ ಆಶ್ರಯದಲ್ಲಿ ಇಷ್ಟು ಬೇಗ ಜವಾಬ್ದಾರೀ ಸರ್ಕಾರ ದೊರೆತಿರುವುದು ಅತ್ಯಂತ ಆನಂದದಾಯಕವಾದ ಸಂಗತಿಯೆಂದು ಹೇಳಿದರು. ನೂತನ ಮಂತ್ರಿ ಮಂಡಲಕ್ಕೆ ಎಲ್ಲ ಸಂಸ್ಥೆಗಳೂ ಭಕ್ತಿ ಗೌರವಗಳು ಸಲ್ಲುವುವೆಂದು ತಿಳಿಸಿದರು.

ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಮಂತ್ರಿಗಳಿಗೆ ಅಭಿನಂದನೆಯನ್ನು ಅರ್ಪಿಸಿ ಪುರಸಭೆಯು ಮಂತ್ರಿಗಳ ತವರು ಕೇಂದ್ರವಾಗಿದೆಯೆಂದು ಹೇಳಿದರು. ಎ.॥ ಮಿರ್ಜಾ ನೂರ್ ಹುಸೇನ್ ರವರು ಸಚಿವರಿಗೆ ಸ್ವಾಗತವನ್ನಿತ್ತರು. ಸಚಿವರಾದ ಶ್ರೀ॥ ಟಿ. ಮರಿಯಪ್ಪನವರು ಪುರಸಭಾ ಕಾಂಗ್ರೆಸ್ ಪಕ್ಷದ ಪರವಾಗಿ ಎಲ್ಲ ಮಂತ್ರಿಗಳಿಗೂ ಸ್ವಾಗತವನ್ನು ಬಯಸಿದರು.

ಶ್ರೀ॥ ಕೆ. ಸಿ. ರೆಡ್ಡಿಯವರು ಈ ಸತ್ಕಾರಕ್ಕಾಗಿ ಎಲ್ಲ ಮಂತ್ರಿಗಳ ಪರವಾಗಿ ವಂದನೆಯನ್ನರ್ಪಿಸಿದರು.

ಪ್ರಜಾ ಪ್ರಭುತ್ವವು ಒಂದು ಪವಿತ್ರವಾದ ಆದರ್ಶ. ಅದನ್ನು ಪ್ರತಿಯೊಬ್ಬರೂ ಅರಿತು ಎಚ್ಚರಿಕೆಯಿಂದಿದ್ದು ನೂತನ ಸರ್ಕಾರದ ಉದ್ದೇಶದಿಂದ ಕೂಡಿದ ಸಲಹೆಗಳನ್ನು ಕೊಡುತ್ತಿರಬೇಕೆಂದು ಶ್ರೀ॥ ರೆಡ್ಡಿಯವರು ತಿಳಿಸಿದರು. ಸರ್ಕಾರ ಬೇರೆ, ಸಚಿವರುಗಳು ಬೇರೆ, ಪ್ರಜೆಗಳು ಬೇರೆ ಎಂದು ಯಾರೂ ಭಾವಿಸಬಾರದು. ಮಂತ್ರಿಗಳು ಜನಗಳಿಂದ ಆರಿಸಿ ಬಂದವರು. ದೇಶವನ್ನು ಅಭಿವೃದ್ಧಿಪಡಿಸಲು ಎಲ್ಲರೂ ಸೇರಿ ಕೆಲಸ ಮಾಡಬೇಕು — ಎಂದು ಅವರು ಹೇಳಿದರು.

ಮೈಸೂರು ಪೌರಸಭೆಯು ಉತ್ತಮವಾದ ಕೆಲಸ ಮಾಡುತ್ತಿದೆ. ಚುನಾಯಿತರಾದವರೇ ಅಧ್ಯಕ್ಷರಿರಬೇಕೆಂಬ ಒಂದು ಕೊರತೆ ಅವರಿಗೆ ಇತ್ತು. ಆದರೆ ಹಿಂದಿನ ಮಂತ್ರಿಮಂಡಲದವರೇ ಆ ಕೋರಿಕೆಯನ್ನು ನಡೆಸಿದುದರಿಂದಾಗಿ ಅವರುಗಳನ್ನು ಅಭಿನಂದಿಸುತ್ತೇನೆ—ಎಂದು ಹೇಳಿ ಇನ್ನು ಮುಂದಿನ ಸ್ವಾಗತ ಸಮಾರಂಭ. ತಿಂಡಿ ತೀರ್ಥಗಳು, ಭಾಷಣಗಳು ಕಡಿಮೆಯಾಗಬೇಕೆಂದು ಶ್ರೀ ರೆಡ್ಡಿಯವರು ತಿಳಿಸಿದರು.

ಸಂಸ್ಥಾನದಲ್ಲಿ ಊಟಗಳ ಕಠಿಣ ಪರಿಸ್ಥಿತಿಯನ್ನು ವಿವರಿಸಿ, ಧಾನ್ಯ ದ ಕಾರ್ಯದಲ್ಲಿ ನಗರದಲ್ಲಿರುವ ಜಮೀನುದಾರರು ಸ್ವಂತ ಖರ್ಚಿಗೆ ಮಿಕ್ಕಿರುವ ಧಾನ್ಯವನ್ನು ಕೊಟ್ಟು ಸರ್ಕಾರದೊಡನೆ ಸಹಕರಿಸಬೇಕೆಂದು ಕೋರಿದರು.

ಶ್ರೀ ಬಿ. ನಾರಾಯಣ ಸ್ವಾಮಿಯವರು ಎಲ್ಲರಿಗೂ ವಂದನೆಯನ್ನು ಅರ್ಪಿಸಿದರು.

ಪ್ರವೇಶ ಪರೀಕ್ಷೆ ಮುಂದಕ್ಕೆ ಹಾಕಲಾಯಿತು

ಮೈಸೂರು ಎಸ್. ಎಸ್. ಎಲ್. ಸಿ. ತರಗತಿಗಳ ಪ್ರವೇಶ ಪರೀಕ್ಷೆಗಳು ಇದೇ ನವಂಬರ್ ೩ ನೇ ತಾರೀಖು ಆರಂಭವಾಗಬೇಕಾಗಿದ್ದುದನ್ನು ಡಿಸೆಂಬರ್ ೩ ಕ್ಕೆ ಮುಂದೆ ಹಾಕಲಾಗಿದೆ.

ನೂತನ ಮಂತ್ರಿಗಳಿಗೆ ಸತ್ಕಾರ

ಮೈಸೂರು ೩೦

ನಿನ್ನೆ ಸಂಜೆ ನಗರ ಕಾಂಗ್ರೆಸ್ ಸಮಿತಿಯವರು ನೂತನ ಮಂತ್ರಿಗಳನ್ನು ಸತ್ಕರಿಸಲು ಟೌನ್ ಹಾಲ್ ಮೈದಾನದಲ್ಲಿ ಸಭೆಯನ್ನು ಏರ್ಪಡಿಸಿದ್ದರು. ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಚಿವರುಗಳಾದ ಶ್ರೀಗಳು ಕೆ. ಚೆಂಗಲರಾಯರೆಡ್ಡಿ, ಕೆ. ಟಿ. ಭಾಷ್ಯಂ, ಹೆಚ್. ಸಿ. ದಾಸಪ್ಪ, ಟಿ. ಮರಿಯಪ್ಪ, ಆರ್. ಚನ್ನಿಗರಾಮಯ್ಯ, ಹೆಚ್. ಸಿದ್ದಯ್ಯ, ಡಿ. ಹೆಚ್. ಚಂದ್ರಶೇಖರಯ್ಯ, ಪಿ. ಸುಬ್ಬರಾಮಶೆಟ್ಟಿ ಮತ್ತು ಹ॥ಮಹಮದ್ ಶರೀಫರು ಭಾಷಣ ಮಾಡಿದರು. ಸುಮಾರು ೪೦ ಸಹಸ್ರ ಮಂದಿ ಪ್ರೇಕ್ಷಕರು ನೆರೆದಿದ್ದರು. ನಿನ್ನೆ ಸಭೆಯಲ್ಲಿ ಭಾಗವಹಿಸಿದ್ದಷ್ಟು ಮಂದಿ ಮಹಿಳೆಯರು ಇದುವರೆಗೆ ಎಂದೂ ಸೇರಿರಲಿಲ್ಲ. ರಾಷ್ಟ್ರಗೀತೆ ಮತ್ತು ಸರಸ್ವತಿ ಭಾರತಿಯವರಿಂದ ನೂತನ ಸಚಿವರುಗಳ ಶ್ರೇಯಃ ಪ್ರಾರ್ಥನೆ ಆದ ನಂತರ ಸಚಿವರುಗಳು ಭಾಷಣ ಮಾಡಿ ತಾವು ಕೈಗೊಳ್ಳುವ ಎಲ್ಲ ಕಾರ್ಯಗಳಲ್ಲಿಯೂ ಪ್ರಜೆಗಳು ಸಹಕಾರವನ್ನು ನೀಡಬೇಕೆಂದು ಕೋರಿದರು.

ಹಿಂದೂ ಮುಸ್ಲಿಂರ ಐಕಮತ್ಯಕ್ಕಾಗಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ ಗಾಂಧಿ ... ತಿಳಿಸಿದರು. ನಂತರ ಹಲವಾರು ಸಂಸ್ಥೆಗಳು, ಮಂತ್ರಿಗಳಿಗೆ ಅರ್ಪಿಸಿದ ಹಾರಗಳನ್ನು ಹರಾಜ್ ಹಾಕಿ ... ನಿಧಿಗಾಗಿ ಕೊಡಲಾಯಿತು. ಹರಾಜು ಮಾಡಲಾಯಿತು. ನರ್ಸಿಂಗ್ ಹೋಮಿನ ಡಾ॥ ಆನಂದರಾವ್ ರವರು ಹಾರಗಳನ್ನು ೫೦೧ ರೂ. ಕೊಟ್ಟು ಪಡೆದರು. ವಂದೇಮಾತರಂ ಗೀತೆಯೊಡನೆ ಸಭೆ ಮುಕ್ತಾಯಗೊಂಡಿತು.

ಮೈದಾನವು ವಿಶೇಷ ವಿದ್ಯುದ್ದೀಪಗಳಿಂದ ಅಲಂಕೃತವಾಗಿದ್ದಿತು.

ಮುಸ್ಲಿಮರ ಸಭೆ

ಬೆಂಗಳೂರಿನ ಮುಸ್ಲಿಮರು ನೂತನ ಸಚಿವರಿಗೆ ಮಿಲಿಂದ್ ಹೋಟೆಲಿನಲ್ಲಿ ಸತ್ಕಾರ ಸಭೆಯನ್ನು ಏರ್ಪಡಿಸಿದ್ದರು. ಎಲ್ಲ ಸಚಿವರೂ ಭಾಷಣ ಮಾಡಿದರು. ಮೊದಲು ಕೊರಾನ್ ಪಠಣ ಮತ್ತು ಕವಿ ಮಹಮದ್ ಇಕ್ಬಾಲರ ಹಮಾರಾ ಹಿಂದೂಸ್ತಾನ್ ಗೀತೆಯ ನಂತರ ಎ.॥ ಸರೀಫರು ಸಭಿಕರಿಗೆ ಎಲ್ಲ ಸಚಿವರನ್ನೂ ಪರಿಚಯ ಮಾಡಿಕೊಟ್ಟು ನಂತರ ಹಿಂದೂಗಳೂ, ಮುಸ್ಲಿಮರೂ ಒಗ್ಗಟ್ಟಿನಿಂದ ವರ್ತಿಸಲು ಎಲ್ಲ ಮುಸ್ಲಿಮರೂ ಬದ್ಧ ಕಂಕಣರಾಗಬೇಕು—ಎಂದು ಭಾಷಣ ಮಾಡುತ್ತಾ ತಿಳಿಸಿದರು.

ಸತ್ಯಾಗ್ರಹಿಗಳ ಸಮ್ಮೇಳನ

ಈ ದಿನ ಜಿಲ್ಲಾ ಬೋರ್ಡ್ ಕಛೇರಿಯ ಆವರಣದಲ್ಲಿ ಮೈಸೂರು ಜಿಲ್ಲಾ ಸತ್ಯಾಗ್ರಹಿಗಳ ಸಮ್ಮೇಳನವು ನಡೆಯಿತು. ಜಿಲ್ಲಾ ಬೋರ್ಡ್ ಕಛೇರಿಯಲ್ಲಿ ಸಚಿವರುಗಳನ್ನು ಸತ್ಕರಿಸಲಾಯಿತು. ಕನ್ನೇಗೌಡನ ಕೊಪ್ಪಲಿನಲ್ಲಿ ಸಚಿವರುಗಳ ಗೌರವಾರ್ಥವಾಗಿ ಸತ್ಕಾರ ಸಭೆ ನಡೆಯಿತು. ಅನಂತರ ಜಲಪುರಿ ಬಡಾವಣೆಯಲ್ಲಿ ಸತ್ಕರಿಸಲಾಯಿತು. ಸಚಿವರು ಬಾಲಸೇವಾ ಸಮಾಜಕ್ಕೆ ಭೇಟಿ ಇತ್ತರು. ರಾಜಧಾನಿಯ ವರ್ತಕರ ಸಂಘದವರು ಸಚಿವರುಗಳನ್ನು ಆಹ್ವಾನಿಸಿ ಗೌರವಿಸಿದರು.

ವಿದ್ಯಾರ್ಥಿಗಳಿಗೆ ೨ ತಿಂಗಳು ಫೀಜಿನ ರಿಯಾಯಿತಿ

ಮು. ಖ್ಯ ಮಂತ್ರಿಗಳ ಸೂಚನೆ

ಮೈಸೂರು ೩೦

ರಾಜಧಾನಿಯ ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯವರು ನಿನ್ನೆ ಮಧ್ಯಾಹ್ನ ಕೃಷ್ಣರಾಜ ಭವನದಲ್ಲಿ ನೂತನ ಮಂತ್ರಿಗಳಿಗೆ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು ಸಹಸ್ರಾರು ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಮಾರಂಭದಲ್ಲಿ ಭಾಗವಹಿಸಿದ್ದರು ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಸಭಿಕರಿಗೆ ಎಲ್ಲ ಮಂತ್ರಿಗಳ ಪರಿಚಯವನ್ನು ಮಾಡಿಕೊಟ್ಟರು. ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಶಂಕರ್‌ರವರು ಸಚಿವರುಗಳಿಗೆ ಅಭಿನಂದನಾ ಪತ್ರವನ್ನು ಅರ್ಪಿಸಿದರು

ಮುಖ್ಯ ಮಂತ್ರಿಗಳಾದ ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ಎಲ್ಲ ಸಚಿವರ ಪರವಾಗಿ ಮಾತನಾಡಿದರು. ಸತ್ಯಾಗ್ರಹ ಸಮರದ ಕಡೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಧಾನವಾದುದೆಂದು ತಿಳಿಸಿ ಅವರುಗಳನ್ನು ಅಭಿನಂದಿಸಿದರು. ವಿದ್ಯಾರ್ಥಿಗಳ ಜವಾಬ್ದಾರಿ ಗುರುತರವಾದುದು. ಹೋರಾಟದ ಕಾಲ ಮುಗಿಯಿತು ಸ್ವಾತಂತ್ರ್ಯವು ಲಭಿಸಿರುವುದರಿಂದ ಇನ್ನು ಮುಂದೆ ವಿದ್ಯಾರ್ಥಿಗಳು ತಮ್ಮ ಪಾಠ ಪ್ರವಚನಗಳಲ್ಲಿ ಹೆಚ್ಚು ಗಮನವಿಡಬೇಕು. ರಚನಾತ್ಮಕ ಕಾರ್ಯಕ್ಕಾಗಿ ದಕ್ಷರಾದ ಯೋಧರ ಸೈನ್ಯ ಬೇಕಾಗಿದೆ. ಅದಕ್ಕೆ ವಿದ್ಯಾರ್ಥಿಗಳೆಲ್ಲರೂ ಸಿದ್ಧತೆಯನ್ನು ಮಾಡಿ

ಕನ್ನೇಗೌಡನ ಕೊಪ್ಪಲಿನ ಅಭಿವೃದ್ಧಿಗಾಗಿ ೨೫ ಸಾ|| ರೂ

ಮೈಸೂರು ೩೦

ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ನಿವಾಸಿಗಳು ನೂತನ ಮಂತ್ರಿಗಳಿಗೆ ಏರ್ಪಡಿಸಿದ್ದ ಸತ್ಕಾರ ಸಭೆಯಲ್ಲಿ ಪ್ರಧಾನ ಮಂತ್ರಿ ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ಕನ್ನೇಗೌಡನ ಕೊಪ್ಪಲಿನ ಅಭಿವೃದ್ಧಿಗಾಗಿ ಹೊಸ ಸರ್ಕಾರವು ೨೫ ಸಹಸ್ರ ರೂ ಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿರುವರು

ಕೊಳ್ಳಬೇಕು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನ ಕಾಲೇಜ್ ಫೀಜನ್ನು ಮನ್ನಾ ಮಾಡಲಾಗುವುದು. ಚುನಾಯಿತ ವೈಸ್ ಛಾನ್ಸಲರ ವಿಚಾರವನ್ನು ಸರ್ಕಾರವು ಪರಿಶೀಲಿಸುವುದು-ಎಂಬುದಾಗಿ ಶ್ರೀ ರೆಡ್ಡಿಯವರು ಹೇಳಿ ಕರುಣರೆಲ್ಲರೂ ಒಂದಾಗಿ ಸೇರಿ ನೂತನ ಸಮಾಜವನ್ನು ಕಟ್ಟಲು ಯತ್ನಿಸಲೆಂದು ಆಶಿಸಿದರು

ಮಂತ್ರಿಗಳ ಪೋರ್ಟ್ ಫೋಲಿಯೋ

ಸ್ವಂ ಸು] ಬೆಂಗಳೂರು ೩೦

ಮೈಸೂರು ಸರ್ಕಾರದ ನೂತನ ಮಂತ್ರಿಗಳಿಗೆ ಆಡಳಿತದ ಪೋರ್ಟ್‌ಫೋಲಿಯೋಗಳನ್ನು ಈ ರೀತಿ ಹಂಚಲಾಗಿದೆ: –

ದಿವಾನರಿಗೆ-ಅರಮನೆ, ಹೈಕೋರ್ಟ್, ಆರ್ಥಿಕ ಸಮ್ಮೇಳನ.

ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೆ-ರೆವಿನ್ಯೂ, ಆಹಾರ, ಸೆಕ್ರೆಟೇರಿಯೆಟ್ ಮತ್ತು ಸಂಚಾರ.

ಶ್ರೀ ಹೆಚ್. ಸಿ ದಾಸಪ್ಪನವರಿಗೆ-ಹಣಕಾಸು, ಕೈಗಾರಿಕೆ ಮತ್ತು ನಗರಾಭಿವೃದ್ಧಿ.

ಶ್ರೀ ಕೆ. ಟಿ. ಭಾಷ್ಯಂರವರಿಗೆ ನ್ಯಾಯಾಂಗ, ಶಾಸನಾಂಗ, ಕೂಲಿಗಾರ ಶಾಖೆ ಮತ್ತು ವಿದ್ಯುಚ್ಛಕ್ತಿ.

ಶ್ರೀ ಹೆಚ್. ಸಿದ್ದಯ್ಯನವರಿಗೆ-ಮರಾಮತ್ತು ಮತ್ತು ವ್ಯವಸಾಯ

ಶ್ರೀ ಟಿ. ಮರಿಯಪ್ಪನವರಿಗೆ-ಪೋಲೀಸ್, ಕ್ಷೇಮ, ಮಿಲಿಟರಿ, ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತಿ.

ಶ್ರೀ ಆರ್. ಚೆನ್ನಿಗರಾಮಯ್ಯನವರಿಗೆ ಹರಿಜನೋದ್ಧಾರ ಮತ್ತು ಸ್ಥಳೀಯ ಸಂಸ್ಥೆಗಳು.

ಶ್ರೀ ಎ. ಜೆ. ಚಂದ್ರಶೇಖರಯ್ಯನವರಿಗೆ-ಶಿಕ್ಷಣ, ವಿಶ್ವವಿದ್ಯಾನಿಲಯ, ಜ್ಞಾನ ಸಭೆಗಳು

ಹಾ|| ಮಹಮದ್ ಷರೀಫ್-ವೈದ್ಯಕೀಯ ಸಾರ್ವಜನಿಕ ಆರೋಗ್ಯ.

ಶ್ರೀ ಪಾಪಣ್ಣ ಸುಬ್ಬರಾಮಶೆಟ್ಟಿ-ನಗರ ಸಭೆಗಳು, ಸಹಕಾರ ಮತ್ತು ವಾಣಿಜ್ಯ.

ಆಪೇರಾ ಟಾಕೀಸ್

ತಾರೀಖು ೨೪-೧೦-೪೭ ರಿಂದ

ಪ್ರತಿ ದಿನ ಮೂರು ಆಟಗಳು

ಮ್ಯಾಡ್ ಮ್ಯಾನ್

(ಹುಚ್ಚು ಮನುಷ್ಯ)

ಎನ್. ಎಸ್ ಕೃಷ್ಣನ್,

ಟಿ ಎ. ಮಧುರಂ ನಟಿಸಿರುವ

ತಮಿಳು ಚಿತ್ರ

ರಾಜಕಮಲ್

24—10—47 ರಿಂದ

2 ನೇ ವಾರ

ಪ್ರತಿ ದಿನ ೩ ಆಟಗಳು

ರಾಜಕಮಲ್ ಕಲಾಮಂದಿರ ರವರ

ಜೀವನ್ ಯಾತ್ರ

(ಹಿಂದಿ)

—: ಭೂಮಿಕೆ :—

ನಯನತಾರೆ, ಶಾಂತಾರಾಮ್, ಬಾಬುರಾವ್ ಪೆಂಡಾರ್ಕರ್, ಯಾಕೂಬ್

Morning shows from 29-10-47

daily at 10-30 a m

EDDIE CANTOR

in

ROMAN SCANDALS

—: with :—

Goldwyn Girls

ಘನವಾದ ಸಂಗೀತ ಕಛೇರಿ

ಬಿಡಾರಂ ಕೃಷ್ಣಪ್ಪನವರ

ಪ್ರಸನ್ನ ಸೀತಾರಾಮ ಮಂದಿರಂ

ಮೈಸೂರು.

2—11—47 ನೇ ಭಾನುವಾರ

ಸಂಜೆ 5 30 ಗಂಟೆಗೆ

ನಾಗರ್‌ಕೋಯಿಲ್

ಎಸ್. ಹರಿಹರಯ್ಯರ್‌ರವರ

– ಹಾಡುಗಾರಿಕೆ –

ಮದರಾಸಿನ ವಿದ್ವಾನ್

ರಾಘವನ್‌ರವರ ಪಿಟೀಲು

ನಾಗರ್‌ಕೋಯಿಲ್

ಎಸ್. ಗಣೇಶ ಅಯ್ಯರ್‌ರವರ ಮೃದಂಗ

ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ

— ಪ್ರವೇಶ —

ಗಂಡಸರಿಗೆ ೧-೦-೦; ಹೆಂಗಸರಿಗೆ ೦-೧೨-೦

ಹುಡುಗರಿಗೆ ೦-೮-೦

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯವಿದ್ದಾಗ್ಯೂ ಸಹಾ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಔಟ್ಲೆಟ್ ಕಕ್ಕಸ್ಸುಗಳನ್ನು ಕಟ್ಟಿರುವುದಿಲ್ಲ ಮತ್ತು ಬಚ್ಚಲು ಮನೆ ನೀರು ಪಳಚರಂಡಿ ಹರಿಯುವಂತೆ ಮಾಡಿರುವುದಿಲ್ಲ. ಮನೆ ಮಾಲೀಕರುಗಳು ಡ್ರೈನೇಜು ಸೌಲಭ್ಯವಿರುವ ಜಾಗಗಳಲ್ಲಿ ಫ್ಲಷಿಂಗ್ ಕಕ್ಕಸುಗಳನ್ನು ಕಟ್ಟಬೇಕಾಗಿ ಕೋರಿದೆ ತಪ್ಪಿದರೆ ಶಾಸನ ರೀತ್ಯಾ ಸೂಕ್ತವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತೆ

ಎನ್ ಎಸ್ ಹಿರಣ್ಣಯ್ಯ,

ಪ್ರೆಸಿಡೆಂಟ್

ಸಿಟಿ ಮುನಿಸಿಪಲ್ ಕೌನ್ಸಿಲ್,

ಮೈಸೂರು

ಬೆಂಗಾಲ್ ಸಿಲ್ಕ್ ಸೀರೆಗಳು

ಧರ್ಮಾವರಂ, ಮೈಸೂರು ಸಿಲ್ಕ್

ಪೂನಾ ಸೀರೆಗಳಿಗೆ

M. V ಭೋಜಯ್ಯ ಬಿ. ಎ.

ಇಂಡಿಯನ್ ಬ್ಯಾಂಕ್ ಎದುರುಬದುರು

Edited printed and published by A. R. Nagarajan at the Sadhvi Press D Subbaiah Road Mysore,

Office of the Municipal Engineer,
City Municipal Council,
Mysore, dated, 11-10-47

NOTIFICATION

Sealed tenders will be received up to 4 p m. on 3rd November 1947 by the municipal Engineer for Extending Verandah and construction of bath and latrine at Nanjaraja Bahadur Chatram Building, Mysore

Each tender must be accompanied with a chellan for having remitted Rs. 25 in the Municipal Treasury as earnest money For full particulars please see the detailed notification on the Notice Board.

S. Narayanaswamy,
Municipal Engineer,
Mysore.

Office of the Municipal Engineer
City Municipal Council,
Mysore, dated, 11-10-47

NOTIFICATION

Sealed tenders will be received up to 4 p.m. on 31st October 1947 by the Municipal Engineer for (1) Repairs to the terrace on the Northern side of the Municipal Office, (2) Urgent repairs to the ceiling of the terrace in the Northern wing of the Municipal Office.

Each tender must be accompanied with a chellan for having remitted Rs (1) 115 and (2) 60 in the Municipal Treasury as earnest money For full particulars please see the detailed notification on the Notice Board

S. Narayanaswamy,
Municipal Engineer
Mysore.

ಫೋನ್ ನಂ. 508 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೩೧-೧೦-೪೭ [ಸಂಚಿಕೆ ೬೪

ಹೈದರಾಬಾದಿಗೆ ಬ್ರಿಟನ್ನಿನಿಂದ ಶಸ್ತ್ರಾಸ್ತ್ರ

...ತರೇ ದೇಶದ ಬೆನ್ನುಮೂಳೆ

ಕನ್ನೇಗೌಡನಕೊಪ್ಪಲಿನಲ್ಲಿ ಮಂತ್ರಿಗಳ ಭಾಷಣ

ಮೈಸೂರು ೩೧

ರಾಜಧಾನಿಯ ಕನ್ನೇಗೌಡನ ಕೊಪ್ಪಲಿ ...ಚಿವರುಗಳು ನಿನ್ನೆ ಬೆಳಗ್ಗೆ ಭೇಟಿ ಕೊ ...ಗ ಅವರುಗಳಿಗೆ ಗ್ರಾಮಮಂದಿರದಲ್ಲಿ ...ಕ ಸ್ವಾಗತವನ್ನು ನೀಡಲಾಯಿತು. ಶ್ರೀ ಅಗರಂ ರಂಗಯ್ಯನವರು ಸಚಿವರು ...ನ್ನು ಸ್ವಾಗತಿಸಿ, ಹಳ್ಳಿಯಂತಿರುವ ಈ ...ದೇಶಕ್ಕೆ ಹೆಚ್ಚು ಸೌಕರ್ಯಗಳನ್ನು ಕಲ್ಪಿ ...ಡಬೇಕೆಂದು ಕೋರಿದರು.

ಶ್ರೀ ಬಿ ನಾರಾಯಣಸ್ವಾಮಿಯವರು ...ರಿಗೆ ಸಚಿವರುಗಳನ್ನು ಪರಿಚಯ ...ಡಿಕೊಟ್ಟರು.

ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ...ಡ್ಡಿ ಯವರು ಎಲ್ಲ ಮಂತ್ರಿಗಳ ಪರವಾಗಿ ...ತ್ತರವಿತ್ತರು. ರೈತಾಪಿ ಜನಗಳು ದೇ... ಬೆನ್ನುಮೂಳೆ. ಅದು ಈಗ ಬಾಗಿ ...ಗಿದೆ. ಅದಕ್ಕೆ ಹೆಚ್ಚು ಶಕ್ತಿ ಬರು ...ತೆ ಮಾಡಬೇಕಾದುದು ಅವರ ಪ್ರಥಮ ...ನ್ನ ಸರ್ಕಾರದವರು ಬೇರೆ ಜಾತಿ ...ವರೆಂದೂ, ಅವರು ಆಳುವುದಕ್ಕೆ ಬಂದಿ ...ರೆಂದೂ ಭಾವಿಸಕೂಡದು.

ಮೈಸೂರು ನಗರಕ್ಕೆ ಸೇರಿದ ೧೩ ಗ್ರಾ... ಗಳೂ ನಗರದಷ್ಟೆ ಸುಂದರವಾಗಿರಬೇಕು ... ಮುಂದೆ ಸರ್ಕಾರದವರು ಹಳ್ಳಿಗಳ ...ವೃದ್ಧಿಗಾಗಿ ಹೆಚ್ಚು ಹಣ ಖರ್ಚು ...ಡುವರು. ಈಗ ಕೊಪ್ಪಲನ್ನು ಅಭಿ ...ವೃದ್ಧಿಪಡಿಸಲು ೬೫ ಸಾವಿರ ರೂ. ಮಂ... ...ರು ಮಾಡಲಾಗಿದೆ. ಅದು ಹೆಚ್ಚು ...ಯೋಜನಕಾರಿ ಆಗಿರುವಂತೆ ಸಹಕರಿಸಿ, ...ಕ್ಷಿರಹಿತವಾದ ಪಾರ್ಟಿ ಮತ್ತು ಪಂ... ...ಗಗಳನ್ನು ಬಂದು ಗೂಡಿಸಿ, ಸರ್ಕಾರ ಅ... ...ವರೊಡನೆ ನೆರವಾಗಬೇಕೆಂದು ಕೋರಿ...

...ತ್ರಿಕೋದ್ಯೋಗಿ ಸಂಘಕ್ಕೆ ಭೇಟಿ

...ನ್ನೆ ಮಧ್ಯಾಹ್ನ ಸಚಿವರುಗಳು ಮೈ... ...ನಗರದ ಪತ್ರಿಕೋದ್ಯೋಗಿ ಸಂಘ... ಭೇಟಿ ಇತ್ತರು. ಸಂಘದ ಅಧ್ಯಕ್ಷರಾ... ...ಆರ್ ಗೋಪಾಲ ಕೃಷ್ಣರಾಯರು ...ತ್ರಿಗಳಿಗೆ ಸ್ವಾಗತ ಬಯಸಿ, ನಗರದ ...ಕೋದ್ಯೋಗಿಗಳಿರುವ ಹಲವಾರು ...ವರೆಗಳನ್ನು ವಿವರಿಸಿ, ಮೈಸೂರು ನ... ...ಲ್ಲಿ ಸರ್ಕಾರದ ಪ್ರಕಟನಾ ಇಲಾಖೆ ...ಖೆಯೊಂದನ್ನು ತೆರೆಯಬೇಕೆಂದು ...ರಿಸಿದರು.

...ಕೆ. ಸಿ. ರೆಡ್ಡಿಯವರು ಪತ್ರಿಕೋ... ...ಗಿಗಳ ಸ್ವಾಗತಕ್ಕಾಗಿ ವಂದಿಸಿದರು. ...ರಿಯವರಿಗೆ ಇನ್ನು ಮುಂದೆ ಎಲ್ಲ ಸೌ... ...ಗಳನ್ನೂ ಕಲ್ಪಿಸಲಾಗುವುದು-ಎಂದು ...ಕೊಟ್ಟು, ಪತ್ರಿಕೆಯವರು ಮತ್ತು ...ದವರೂ ಒಟ್ಟಿಗೆ ಸೇರಿ ನೂತನ ...ವನ್ನು ಸ್ಥಾಪಿಸಲು ಯತ್ನಿಸಬೇಕೆಂ... ...ರಿದರು. ಈಗಿನ ಸರ್ಕಾರವು ಕೇ... ...ಲ್ಪ ಕಾಲ ಮಾತ್ರ ಇರುವ ತಾತ್ಕಾ... ...ರ, ದೇಶಕ್ಕೆ ನೂತನ ರಾಜ್ಯಾಂ... ...ರ್ಪಡಿಸುವುದೇ ಅದರ ಪ್ರಥಮ ...ವ್ಯ. ಅದಕ್ಕೆ ಪತ್ರಿಕೆಯವರು ಹೆ... ...ಹಾಯ ನೀಡಬೇಕು-ಎಂದು ಶ್ರೀ ...ಯವರು ಕೋರಿದರು.

ವಿವಿಧ ಜಿಲ್ಲೆಗಳಿಗೆ ಮಂತ್ರಿಗಳ ಪ್ರಯಾಣ

ಸ್ವಂ ಸು ಫೋ] ಬೆಂಗಳೂರು ೩೧

ನಾಳೆ ನಡೆಯಲಿರುವ ವಿಜಯೋತ್ಸವದಲ್ಲಿ ಭಾಗಿಗಳಾಗಲು ಮಂತ್ರಿಗಳೆಲ್ಲರೂ ಈ ಕೆಳಗೆ ಕಂಡಂತೆ ಬೇರೆ ಬೇರೆ ಜಿಲ್ಲೆಗಳಿಗೆ ತೆರಳಿರುವರು :—

ಶಿವಮೊಗ್ಗ— ಶ್ರೀಗಳಾದ ಹೆಚ್. ಸಿದ್ದಯ್ಯ, ಟಿ ಮರಿಯಪ್ಪ ಮತ್ತು ಮಹಮದ ಷರೀಫ್, ಕೋಲಾರ—ಶ್ರೀ ಕೆ. ಸಿ ರೆಡ್ಡಿ, ಬೆಂಗಳೂರು — ಶ್ರೀ ಕೆ. ಟಿ ಭಾಷ್ಯಂ, ತುಮಕೂರು —ಶ್ರೀ ಆರ್. ಚೆನ್ನಿಗರಾಮಯ್ಯ, ಹಾಸನ — ಶ್ರೀ ಹೆಚ್ ಸಿ. ದಾಸಪ್ಪ, ಮಂಡ್ಯ—ಶ್ರೀ ಡಿ. ಹೆಚ್. ಚಂದ್ರಶೇಖರಯ್ಯ ಮತ್ತು ಶ್ರೀ ಪಾಪಣ್ಣ ಸುಬ್ಬರಾಮಶೆಟ್ಟರು ಚಿಕ್ಕಮಗಳೂರು

ಪ್ರಭುಗಳೊಡನೆ ನಿಜಲಿಂಗಪ್ಪನವರ ಭೇಟಿ

ಮೈಸೂರು ೩೧

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ, ಭಾರತದ ರಾಜ್ಯಾಂಗ ಸಮಿತಿಯ ಸದಸ್ಯರೂ, ಮಾಜಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರೂ ಆದ ಶ್ರೀ ಎಸ್ ನಿಜಲಿಂಗಪ್ಪನವರು ನಾಳೆ ರಾಜಧಾನಿಗೆ ಆಗಮಿಸಿ, ಪ್ರಭುಗಳನ್ನು ಭೇಟಿ ಮಾಡುವರು. ಕರ್ನಾಟಕ ಪ್ರಾಂತ್ಯ ನಿರ್ಮಾಣದ ವಿಷಯವನ್ನು ಅರಿಕೆ ಮಾಡುವರು

ದೇವರಾಜೇ ಅರಸಿನವರು ಆಕಾಶವಾಣಿ ಡೈರೆಕ್ಟರು

ಮೈಸೂರ ಪೌರಸಭೆ ಮತ್ತು ಪ್ರಜಾಪ್ರತಿನಿಧಿ ಸಭೆ ಸದಸ್ಯರಾದ ಶ್ರೀ ಎಫ್ ಸಿ ದೇವರಾಜೇ ಅರಸಿನವರನ್ನು ಆಕಾಶವಾಣಿ ಡೈರೆಕ್ಟರನ್ನಾಗಿ, ತಿಂಗಳಿಗೆ ೩೫೦ ರೂ ಸಂಭಾವನೆ ಮೇರೆ ನೇಮಿಸಲಾಗಿದೆಯೆಂದು ತಿಳಿದುಬಂದಿದೆ

ಹೈದರಾಬಾದಿಗೆ ಬ್ರಿಟನ್ನಿನಿಂದ ಆಯುಧಗಳ ಆಮದು

ಬ್ರಿಟನ್ನಿನಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳಲು ಹೈದರಾಬಾದ್ ಸರ್ಕಾರವು ಲಂಡನ್ನಿನಲ್ಲಿರುವ ತನ್ನ ಏಜೆಂಟ್ ಜನರಲ್ಲರಿಗೆ ಸೂಚಿಸಿದೆ. ಸದ್ಯದಲ್ಲೇ ಒಂದು ಕೋಟಿ ರೂ. ಬೆಲೆಯ ಆಯುಧಗಳು ಹೈದರಾಬಾದಿಗೆ ಬರಲಿವೆ.

ಸೇವೆಯೇ ನಮ್ಮ ಗುರಿ

ಬಹಿರಂಗ ಸಭೆಯಲ್ಲಿ ಮಂತ್ರಿಗಳ ಭಾಷಣ

ಮೈಸೂರು ೩೧

ಮೊನ್ನೆ ನಗರ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಎಲ್ಲ ಸಚಿವರೂ ಭಾಷಣ ಮಾಡಿದರು.

ಬಾಪೂಜಿಯವರ ಆಶೀರ್ವಾದದಿಂದ ಸೇವೆಯೇ ನಮ್ಮ ಗುರಿಯಾಗಿದೆ ಎಂಬುದಾಗಿ ಶ್ರೀ ಕೆ ಸಿ ರೆಡ್ಡಿಯವರು ಹೇಳಿದರು. ನಮಗೆ ದೊರೆತ ವಿಜಯಕ್ಕಾಗಿ ಜನತೆ ಈಗ ತೋರಿಸುತ್ತಿರುವ ಅಪೂರ್ವ ಉತ್ಸಾಹವನ್ನು ನಾವು ನಿಸ್ಪೃಹರಾಗಿ ಸೇವೆಗೈದು ಕೋರಿಸಿದರೆ ಅದೇ ನಮ್ಮ ಭಾಗ್ಯ-ಎಂದು ಶ್ರೀ ಹೆಚ್ ಸಿ ದಾಸಪ್ಪನವರು ನುಡಿದರು. ಕಲಿಯುಗ ಮುಗಿದು ಕೃತಯುಗಾರಂಭವಾಗಿದೆ. ಇಂದು ನಮ್ಮೆಲ್ಲರಿಗೂ ಲಭಿಸಿರುವ ಸಂತೋಷ ಶಾಶ್ವತವಾಗಿ ಉಳಿಯಲಿ-ಎಂಬುದಾಗಿ ಶ್ರೀ ಕೆ ಟಿ ಭಾಷ್ಯಂ ಪ್ರಾರ್ಥಿಸಿದರು. ಪ್ರತಿಯೊಬ್ಬರೂ ದುಡಿದು ಸೌಖ್ಯವನ್ನು ಪಡೆಯಬೇಕು. ಇದೇ ನಮ್ಮ ಧ್ಯೇಯ-ಎಂದು ಶ್ರೀ ಹೆಚ್ ಸಿದ್ದಯ್ಯನವರು ತಿಳಿಸಿದರು. ಮಂತ್ರಿಯಾಗಿರುವುದರ ಅಂಪೇ ತಮಗೆ ಇಲ್ಲವೆಂದೂ, ಸೇವೆಯೇ ತಮ್ಮ ಧ್ಯೇಯವೆಂದೂ ಶ್ರೀ ಮರಿಯಪ್ಪನವರು ಹೇಳಿದರು. ಸಂಸ್ಥಾನಕ್ಕೆ ಸೇವೆ ಸಲ್ಲಿಸಲು ತಮಗೆ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ಕಾಂಗ್ರೆಸ್ ಸಂಸ್ಥೆಯನ್ನು ಅಭಿನಂದಿಸಿದರು. ಮಂತ್ರಿಮಂಡಲದಲ್ಲಿ ಹರಿಜನರಿಗೆ ಸ್ಥಾನವನ್ನೊದಗಿಸಿ ಕೊಟ್ಟುದಕ್ಕಾಗಿ ಕಾಂಗ್ರೆಸ್ಸಿಗೆ ಹರಿಜನರ ಪರವಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿ ಹರಿಜನ ದೇವಾಲಯ ಪ್ರವೇಶಕ್ಕೆ ಮಸೂದೆಯನ್ನು ತರುವುದಾಗಿ ಶ್ರೀ ಆರ್ ಚೆನ್ನಿಗರಾಮಯ್ಯನವರು ಹೇಳಿದರು ಹರಿಜನರಲ್ಲಿರುವ ಸವರ್ಣ, ಅವರ್ಣಗಳೆಂಬ ಭೇದಗಳು ನಶಿಸಬೇಕೆಂದು ಶ್ರೀ ಪಾಪಣ್ಣ ಸುಬ್ಬರಾಮಶೆಟ್ಟರು ಹೇಳಿದರು ಇಂದಿನ ಸ್ವಾತಂತ್ರ್ಯಕ್ಕಾಗಿ ತಾವು ತಮ್ಮ ಜೀವನವನ್ನೇ ಬಲಿದಾನವಾಗಿತ್ತಿರುವುದಾಗಿ ಹೇಳಿ ಸತ್ಯಾಗ್ರಹದಲ್ಲಿ ಭಾಗವಹಿಸಿದ ಮಹಿಳೆಯರು, ಮತ್ತು ವಿದ್ಯಾರ್ಥಿಗಳನ್ನು ಜ॥ ಷರೀಫರು ಅಭಿನಂದಿಸಿದರು

ವಿಜಯೋತ್ಸವದ ಕಾರ್ಯಕ್ರಮ

ನಾಳೆ ದಿನದ ಸಮಾರಂಭಗಳು

ಮೈಸೂರು ೩೧

ವಿಜಯೋತ್ಸವ ದಿನಾಚರಣೆಯ ಪ್ರಯುಕ್ತ, ನಗರ ಕಾಂಗ್ರೆಸ್ ಸಮಿತಿಯವರು ನಾಳೆ ಬೆಳಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣವನ್ನು ಏರ್ಪಡಿಸಿರುವರು. ಸಂಜೆ ೬-೩೦ ಗಂಟೆಗೆ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುತ್ತದೆ.

ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ಅಧ್ಯಕ್ಷರೂ, ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರೂ ಆದ ಶ್ರೀ ಎಸ್ ನಿಜಲಿಂಗಪ್ಪನವರೂ, ಇತರ ಮುಖಂಡರುಗಳೂ ಭಾಷಣ ಮಾಡುವರು.

ರಾಜಧಾನಿಯಲ್ಲಿರುವ ಎಲ್ಲ ಸಂಘಗಳ ಸದಸ್ಯರೂ ಬೆಳಗ್ಗೆ ೭॥ ಗಂಟೆಗೆ ಸೂರಿಡ ರಸ್ತೆಯ ಕುರುಕ್ಷೇತ್ರದಿಂದ ಮೆರವಣಿಗೆ ಹೊರಟು ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಡೆಯುವ ಧ್ವಜಾರೋಹಣದಲ್ಲಿ ಭಾಗವಹಿಸುವರು.

ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಒಲಿಂಪಿಯಾ ಟಾಕೀಸಿನ ಬಳಿ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯದ ಮುಂದೆ ಬೆಳಗ್ಗೆ ೧೦॥ ಗಂಟೆಗೆ ಬಹಿರಂಗ ಸಭೆ ನಡೆಯುತ್ತದೆ.

ಮಧ್ಯಾಹ್ನ ೩ ಗಂಟೆಗೆ ರಾಜಧಾನಿಯ ಕಟ್ಟಿಗೇರಿಯ ಯುವಕ ಸಂಘದಲ್ಲಿ ಶ್ರೀ ಎಸ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ವಿಜಯೋತ್ಸವವು ಜರುಗುತ್ತದೆ.

ಸಂಜೆ ೬ ಗಂಟೆಗೆ ಬೇಡಾಡಗೆ ಸಮೀಪದಲ್ಲಿರುವ ಕೂರ್ಗಳ್ಳಿಗ್ರಾಮದಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರು ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನೋತ್ಸವ ಸಮಾರಂಭವು ನಡೆಯುವುದು

ಬೆಳಗ್ಗೆ ೬ ಗಂಟೆಗೆ ಎಲ್ಲ ಬೆಂಡರ್ಗಳ ... ಪ್ರಭಾತಫೇರಿ ಹೊರಟು ಮೆರವಣಿಗೆಗಳು ಧ್ವಜಾರೋಹಣಕ್ಕೆ ಟೌನ್‌ಹಾಲಿಗೆ ಬಂದು ಸೇರುವುವು ೧೦ ರಿಂದ ೧೩ ರವರೆಗೆ ದೇವಸ್ಥಾನ, ಮಸೀದಿ, ಚರ್ಚು ಮುಂತಾದ ಮಂದಿರಗಳಲ್ಲಿ ವಿಶೇಷ ಪ್ರಾರ್ಥನೆ.

ಮೋತೀಲಾಲ್ ಟಾಕೀಸ್ ಮುಂಭಾಗದ ಮೈದಾನದಲ್ಲಿ ಬೆಳಗ್ಗೆ ೮ ಗಂಟೆಗೆ ಧ್ವಜಾರೋಹಣ ಮತ್ತು ಸಂಜೆ ೬ ಗಂಟೆಗೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಕಿಲ್ಲೆ ಮೊಹಲ್ಲ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿದ್ದಾರೆ

ಸಾರ್ವಜನಿಕರು ತಮ್ಮ ಮನೆ ಮತ್ತು ಅಂಗಡಿಗಳನ್ನು ಅಲಂಕರಿಸಿ ರಾಷ್ಟ್ರಧ್ವಜ ಮತ್ತು ಮೈಸೂರು ಧ್ವಜಗಳನ್ನು ಹಾರಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿ ... ಕಾರ್ಯದರ್ಶಿಗಳು ಕೋರಿರುತ್ತಾರೆ

ಸಹಕಾರ ದಿನೋತ್ಸವ

ನಾಳೆ ಸಂಜೆ ೬ ಗಂಟೆಗೆ ಸಹಕಾರ ಉತ್ಸವ ಸಮಿತಿಯವರು ಶ್ರೀ ಎಂ ಎಸ್ ಶಿವಣ್ಣನವರ ಅಧ್ಯಕ್ಷತೆಯಲ್ಲಿ ಸಹಕಾರ ಭವನದಲ್ಲಿ ಅಖಿಲ ರಾಜ್ಯದ ಸಹಕಾರ ಮಹಾದಿನೋತ್ಸವವನ್ನು ಏರ್ಪಡಿಸಿದ್ದಾರೆ.

ವಿದ್ಯಾರ್ಥಿಗಳು ನಾಡಿನ ಪತ್ರ್ರಜೆಗಳಾಗಬೇಕು

ಇಂಟರ್ ಕಾಲೇಜಿನಲ್ಲಿ ಸಚಿವರ ಭಾಷಣ

ಮೈಸೂರು ೩೧ ರಾಜಧಾನಿಯ ಇಂಟರ್ ಕಾಲೇಜಿನ [illegible]ದ್ಯಾರ್ಥಿ ಸಂಘದವರು ಸಚಿವರುಗಳನ್ನು [illegible]ನ್ನೆ ಸಂತೋಷ ಉಪಾನ್ಯಾಸ ಸತ್ಕರಿಸಿದರು. [illegible]ದ್ಯಾ ಮಂತ್ರಿಗಳಾದ ಶ್ರೀ ಡಿ ಹೆಚ್. [illegible]ಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿ [illegible]ರು ವಿಶ್ವವಿದ್ಯಾಲಯ, ಮತ್ತು ವಿ[illegible]ದ್ಯಾಭ್ಯಾಸ ಪದ್ಧತಿಯ ಪುನರ್ರಚನೆ, ವಿ[illegible]ದ್ಯಾರ್ಥಿಗಳಲ್ಲಿ ತರಬೇಕಾದ ಶಿಸ್ತುಗಳ ಬ[illegible] ಅವರು ಪ್ರಾಥಮಿಕ ಶಾಲೆಯ ಮ[illegible]ತ್ತು ಹೈಸ್ಕೂಲುಗಳ ೩ ತಿಂಗಳ ಫೀಜನ್ನು [illegible] ಮಾಡಿರುವುದಾಗಿಯೂ, ಪರೀಕ್ಷೆ [illegible]ಕ್ಷೆಗಳನ್ನು ಒಂದು ತಿಂಗಳ ಕಾಲ [illegible]ಂದುವರಿಸಿರುವುದಾಗಿಯೂ ತಿಳಿಸಿದ[illegible] ಈಗ ಗಳಿಸಿರುವ ಸ್ವಾತಂತ್ರ್ಯವನ್ನು [illegible]ಳಿಸಿಕೊಳ್ಳಲು ದಕ್ಷತೆ, ಶಿಸ್ತಿನಿಂದ ಕೂ[illegible]ಡವಲೂ ಅದ ಪ್ರಜೆಗಳು ಅಗತ್ಯವೆಂದೂ, [illegible]ದಿನಿಂದಲೇ ವಿದ್ಯಾರ್ಥಿಗಳು ಶಿಸ್ತಿನಿಂದ [illegible]ದ್ಯಾಭ್ಯಾಸವನ್ನು ನಡೆಸಿ ನಾಡಿನ ಸತ್ಪ್ರ[illegible]ಜೆಗಳಾಗಬೇಕೆಂದೂ ವಿದ್ಯಾ ಮಂತ್ರಿ ಶ್ರೀ [illegible] ಸಿ. ರೆಡ್ಡಿಯವರು ಹೇಳಿದರು.

ಜಂಪುರಿಯಲ್ಲಿ ಸಭೆ

ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಜಂಪುರಿಯಲ್ಲಿ ನಡೆದ ಅದಿಜಾಂಬವರ ಸಂಘದ ಆಶ್ರಯದಲ್ಲಿ ಹೊಸ ಮಂತ್ರಿಗಳ ಸನ್ಮಾನ ಸಭೆಯು ನಿನ್ನೆ ಜರುಗಿತು. ತಮ್ಮ ಜನಾಂಗದ ಕುಂದು ಕೊರತೆಗಳನ್ನು ಮಂತ್ರಿಗಳಿಗೆ ವಿವರಿಸಿ ತಮ್ಮನ್ನು ಉದ್ಧರಿಸಬೇಕೆಂದು ಶ್ರೀ ಎಂ. ಸಿದ್ದಯ್ಯನವರು ಸಚಿವರನ್ನು ಪ್ರಾರ್ಥಿಸಿದರು. ಮಹಾತ್ಮ ಗಾಂಧೀಜಿಯವರು ಯಾರ ಉದ್ಧಾರಕ್ಕಾಗಿ ದುಡಿಯುತ್ತಿರುವರೋ ಅವರಿಗಾಗಿ ತಾವೂ ಮತ್ತು ತಮ್ಮ ಮಂತ್ರಿಮಂಡಲದವರೂ ಸಹ ಶ್ರಮಿಸುವುದಾಗಿ ಶ್ರೀ ಕೆ. ಸಿ ರೆಡ್ಡಿಯವರು ಉತ್ತರವಿತ್ತರು. ತಮ್ಮ ಕೋಮಿನವರೆಲ್ಲರೂ ಒಗ್ಗಟ್ಟಾಗಿ ಈಗಿನ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಪೂರ್ಣ ಬೆಂಬಲ ಮತ್ತು ಸಹಕಾರಗಳನ್ನು ನೀಡಬೇಕೆಂದು ಶ್ರೀ ಟಿ ಚೆನ್ನಿಗರಾಮಯ್ಯನವರು ತಿಳಿಸಿದರು.

ಗುಬ್ಬಿ ವಜ್ರೋತ್ಸವ ಸಮಿತಿ

ಗುಬ್ಬಿ ನಾಟಕ ಸಂಸ್ಥೆಯ ವಜ್ರೋತ್ಸವ ಸಮಿತಿಯವರು ನಿನ್ನೆ ನೂತನ ಸಚಿವರನ್ನು ಆಹ್ವಾನಿಸಿ ಸತ್ಕರಿಸಿದರು. ಸಂಸ್ಥೆಯ ಮ್ಯಾನೇಜರರಾದ ಶ್ರೀ ಮಹದೇವಸ್ವಾಮಿಯವರು ಮಂತ್ರಿಗಳಿಗೆ ಸ್ವಾಗತ ವಿತ್ತರು ಶ್ರೀ ರಾಮರಾಜು ಅರಸರು ನವ ಮಂತ್ರಿಗಳಿಗೂ ಶುಭಾಶಯಗಳನ್ನು ಕೋರಿ ಸಂಸ್ಥೆಯ ಕಾರ್ಯಕಲಾಪಗಳನ್ನು ವಿವರಿಸಿ ಕಲಾಭಿವೃದ್ಧಿಗೆ ಸಚಿವರುಗಳು ಪ್ರೋತ್ಸಾಹವನ್ನು ನೀಡಬೇಕೆಂದು ಪ್ರಾರ್ಥಿಸಿದರು. ಸಂಸ್ಥೆಯ ಕೆಲಸ ಕಾರ್ಯಗಳಿಗೆ ಯಶಸ್ಸನ್ನು ಕೋರಿ ತಾವು ಸಾಧ್ಯವಾದಷ್ಟು ಕಲೆಗೆ ಪ್ರೋತ್ಸಾಹವೀಯುವುದಾಗಿ ಪ್ರಧಾನ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಭರವಸೆ ಇತ್ತರು ಶ್ರೀ ಕಂಬಳಿ ಸುಬ್ರಹ್ಮಣ್ಯ ಅಯ್ಯಂಗಾರರು ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಪ್ರೋಟೆಸ್ಟ್ರೋಲಿಯೊ ಹಂಚಿ[illegible]

ಸ್ವಂ ಸು ೭ ೯] ಬೆಂಗಳೂರು [illegible]

ಮಂತ್ರಿಮಂಡಲದ ಪೋರ್ಟ್‌ಫೋ[illegible]ಯೋ ಹಂಚಿಕೆಗಳ ಬಗ್ಗೆ ಈ ದಿನ ಅಧಿ[illegible] ಪ್ರಕಟನೆ ಹೊರಬಿದ್ದಿದೆ. ಈ ಹಂಚಿಕೆ[illegible] ವಿವರಗಳು ನಿನ್ನೆಯ ನಮ್ಮ ಪತ್ರಿಕೆಯ[illegible] ಪ್ರಕಟವಾಗಿವೆ. ಪ್ರಧಾನ ಮಂತ್ರಿ [illegible] ರೆಡ್ಡಿಯವರಿಗೆ ರಾಜಕೀಯ ಮತ್ತು ಸ[illegible]ಚಾರ ಶಾಖೆಗಳೂ ಸಹ ಸೇರಿವೆ

ಪಂಜಾಬು ನಿರಾಶ್ರಿತರ ಸಹಾಯ ಸಮಿತಿ

ಮೈಸೂರು [illegible]

ಪಂಜಾಬು ನಿರಾಶ್ರಿತರ ಸಹಾಯಕ್ಕಾ[illegible] ಸಂಸ್ಥಾನದಲ್ಲಿ ಒಂದು ನಿರಾಶ್ರಿತರ ಸ[illegible]ಯ ನಿಧಿ ಸಮಿತಿಯನ್ನು ಏರ್ಪಡಿಸಲಾ[illegible]ವುದೆಂದು ಮುಖ್ಯ ಮಂತ್ರಿಗಳಾದ ಶ್ರೀ [illegible] ಸಿ ರೆಡ್ಡಿಯವರು ತಿಳಿಸಿದ್ದಾರೆ

ಪಾಮಿಡಿಯವರಿಗೆ ಖಾದಿ ಟೋಪಿ

ನಿನ್ನೆ ಸಚಿವರುಗಳು ಜಗನ್ಮೋಹನ ಭವನಕ್ಕೆ ಬಂದಾಗ ಗುಂಪಿನಲ್ಲಿದ್ದ ವಿ[illegible]ರ್ಥಿಯೊಬ್ಬನು ಮಂತ್ರಿಗಳಾದ ಶ್ರೀ ಪಾ[illegible]ಡಿ ಸುಬ್ಬರಾಮಶೆಟ್ಟರಿಗೆ ಖಾದಿ ಟೋ[illegible]ಯೊಂದನ್ನು ಕೊಟ್ಟು ಅವರ ತಲೆಯ[illegible]ವ ಜರೀ ಪೇಟದ ಬದಲು ಟೋಪಿಯನ್ನ[illegible] ಧರಿಸಬೇಕೆಂದು ಹೇಳಿದಾಗ ಶ್ರೀ ಪಾಮಿ[illegible]ಯವರು ಅದನ್ನು ಸ್ವೀಕರಿಸಿದರು

ಪ್ರತಿ ದಿನ ೩ ಆಟಗಳು

31-10-47 ರಿಂದ

ಮಧ್ಯಾಹ್ನ ೩ ಕ್ಕೆ.
ಸಂಜೆ ೬-೧೫ಕ್ಕೆ, ರಾತ್ರಿ ೯-೩೦ಕ್ಕೆ,

ಸತಿ ಸುಕನ್ಯ

(ತಮಿಳು)

—: ಪಾತ್ರ :—
ರಾಜಕುಮಾರಿ, ಹೊನ್ನಪ್ಪ ಭಾಗವತರ್.

ಒಲಿಂಪಿಯಾ ಟಾಕೀಸ್

Edited printed and published by A. R. Nagarajan at the Sadhvi Press, D. Subbaiah Road Mysore.

'ದೇವಲ್'

ಪೂನಾ ಪಾತ್ರೆಗಳು

ಮನೆಯಲ್ಲಿ ಉಪಯೋಗಿಸುವುದಕ್ಕೂ ಮತ್ತು ಹಬ್ಬ ಸಮಾರಂಭಗಳಲ್ಲಿ ಉಡುಗೊರೆ ಕೊಡುವುದಕ್ಕೂ ಮನಮೆಚ್ಚುವ ಆಕರ್ಷಣೀಯವಾದ ಪಾತ್ರೆಗಳು ಸ್ವಚ್ಛತೆಗೂ, ಆರೋಗ್ಯಕ್ಕೂ 'ದೇವಲ್' ಪಾತ್ರೆಗಳನ್ನೇ ಉಪಯೋಗಿಸಿರಿ.

ದೊರೆಯುವ ಸ್ಥಳ:—

ಮಹಾರಾಷ್ಟ್ರ ಏಜೆನ್ಸೀಸ್,
1225 ಕೃಷ್ಣಮೂರ್ತಿಪುರಂ, ಮೈಸೂರು

ಆಪೇರಾ ಟಾಕೀಸ್

ಶುಕ್ರವಾರ ೩೧-೧೦-೪೭ ರಿಂದ
೨ ನೇ ವಾರ

ಮ್ಯಾಡ್ ಮ್ಯಾನ್

(ಹುಚ್ಚು ಮನುಷ್ಯ)

ಎನ್. ಎಸ್. ಕೃಷ್ಣನ್,
ಟಿ. ಎ. ಮಧುರಂ ನಟಿಸಿರುವ
● ತಮಿಳು ಚಿತ್ರ ●

ರಾಜಕಮಲ್

31—10—47 ರಿಂದ
3 ನೇ ವಾರ

ಪ್ರತಿ ದಿನ ೩ ಆಟಗಳು
ರಾಜಕಮಲ್ ಕಲಾಮಂದಿರ್‌ರವರ

ಜೀವನ್ ಯಾತ್ರ

(ಹಿಂದಿ)

—: ಭೂಮಿಕೆ :—
ನಯನತಾರ, ಶಾಂತರ್ಕ, ಬಾಬುರಾವ್ ಪೆಂಡಾರ್ಕರ್, ಯಾಕೂಬ್

Morning shows from 29-10-47
daily at 10-30 a.m.
EDDIE CANTOR
in
ROMAN SCANDALS
—: with :—
Goldwyn Girls

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯ ಏರ್ಪಾಡಾಗ್ಯೂ ಸಹಾ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಔಟ್ಲೆಟ್ ಕಕ್ಕಸ್ಸುಗಳು ಕಟ್ಟಿರುವುದಿಲ್ಲ ಮತ್ತು ಬಚ್ಚಲು ನಲ್ಲಿ ನೀರು ಪಳಚರಂಡಿ ಹರಿಯುವಂತೆ ಮಾಡಿಸಿರುವುದಿಲ್ಲ. ಮನೆ ಮಾಲೀಕರುಗಳು ಕೂಡಲೆ ಡ್ರೈನೇಜು ಸೌಲಭ್ಯವಿರುವ ಚರಂಡಿಗಳಿಗೆ ಫ್ಲಷಿಂಗ್ ಕಕ್ಕಸುಗಳನ್ನು ಜಗ್ಗಿತ್ ಕಟ್ಟಿ ಬೇಕಾಗ [illegible] ತಪ್ಪಿದರೆ ಕಾನೂನು ರೀತ್ಯಾ [illegible] ಆವಶ್ಯಕ ಕ್ರಮಗಳು ನಡೆಸಲಾಗುತ್ತೆ.

ಎ[illegible] ಎಸ್ ಹಿರಣ್ಣಯ್ಯ,
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು

ಶ್ರೀ

ಗಣೇಶಾ ಟಾಕೀಸ್

ದೀಪಾವಳಿಯ ಶುಭಾರಂಭವನ್ನು ನೀಡಲು[illegible]
ಶಕ್ತಿರಾಜ ಫಿಲಂಸ್‌ರವರ ಮನೋ[illegible]
● ಚಿತ್ರ ●

ಕನ್ನಿಕಾ [illegible]

(ತಮಿಳು)

ಪ್ರಾರಂಭದ ದಿವಸವನ್ನು ಎದುರು ನೋ[illegible]

—: ಮುಖ್ಯ ಪಾತ್ರ :—
M. S. ಸರೋಜಿನಿ,
T. E. ವರದನ್ B. Sc,
N S ಕೃಷ್ಣನ್, T A ಮಧು[illegible]
ಕಾಳಿ ಎನ್ ರತ್ನಂ

ಚಾಮುಂಡೇಶ್ವರೀ ಟಾಕೀ[illegible]

7-11-47 ರಿಂದ
ಪ್ರತಿ ದಿನ ೩ ಪ್ರದರ್ಶನಗ[illegible]

ನೀವುಗಳು ಬಹು ದಿನದಿಂದ ನಿರೀಕ್ಷಿಸುತ್ತಿರುವ
○ ಶಾಹಿನಿಯವರ ○

ಯೋಗಿ ವೇಮ[illegible]

(ತೆಲುಗು)

—: ಮುಖ್ಯ ಭೂಮಿಕೆ :—
ನಾಗಯ್ಯ, ಎಂ ವಿ ರಾಜಮ್ಮ, ಲಿಂಗಮೂರ್ತಿ ಮತ್ತು ಇನ್ನಿ[illegible]

Office of the Municipal Engineer,
City Municipal Council.
Mysore, dated, 11-10-47

NOTIFICATION

Sealed tenders will be received up to 4 p.m. on 3rd November 1947 by the municipal Engineer for Extending Verandah and construction of bath and latrine at Nanjaraja Bahadur Chatram Building, Mysore.

Each tender must be accompanied with a chellan for having remitted Rs. 20/- in the Municipal Treasury as earnest money. For full particulars please see the detailed notification on the Notice Board.

S. Narayanaswamy,
Municipal Engineer,
Mysore.